ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಕು 4—6—1943 [ಸಂಚಿಕೆ 23]

ಕಂಡದನ್ನು ಹೇಳಿದರೆ ಕೆಂಡದಂಥಾ ಕೋಪ!

ಭಾರತದ ಸತ್ಯಸಂಗತಿ ಹೇಳುವುದೆಂತು?

ಮಾರ್ಗರೇಟ್ ಪೋಪ್ ತಿಳಿಸುತ್ತಾರೆ!

ನಾನು ಬೊಂಬಯಿಗೆ ಬಂದಂದಿನಿಂದ ಹಲವರು ನನ್ನೊಡನೆ ಹೇಳುತ್ತಾರೆ 'ನೀವು ಭಾರತದ ಕುರಿತು ಇಂಗ್ಲೆಂಡಿಗೆ ನಿಜ ಸಂಗತಿ ತಿಳಿಸುವುದಿಲ್ಲ' ಎಂದು ನನಗೆ ನಿಜ ಸಂಗತಿ ತಿಳಿದಿದೆ, ಆದರೆ, ಯುದ್ಧ ಕಾಲದಲ್ಲಿ, ತಿಳಿದಿರುವುದಕ್ಕೂ, ತಿಳಿಸುವುದಕ್ಕೂ ವ್ಯತ್ಯಾಸವುಂಟು ಭಾರತದ ಕುರಿತು ಸತ್ಯ ಸಂಗತಿ ತಿಳಿಸುವ ವಿಷಯ ವರ್ಣಭೇದವೇನೂ ಇಲ್ಲ ನನಗೆ, ಆದರೆ ಇರುವುದು ಬಾಯಿಗೆ ಬೀಗಮುದ್ರೆ, ಬಹಿಷ್ಕಾರ! ಭಾರತದಲ್ಲಿ ನಾನು ಎರಡು ವರ್ಷ ಕೆಲಸಮಾಡಿದ್ದೇನೆ ಇತರ ಪತ್ರಿಕಾ ಪ್ರತಿನಿಧಿಗಳು ಹತ್ತು ವರ್ಷದಲ್ಲಿ ತಿಳಿದುಕೊಳ್ಳಲಾರದಷ್ಟು ಸಂಗತಿಗಳನ್ನು ನಾನು ತಿಳಕೊಂಡಿದ್ದೇನೆ ಆ ಪ್ರಭುತ್ವದ ಒಳ ಹೊರ ಹೊಕ್ಕು ನೋಡಿದ್ದೇನೆ. ಸಾಮ್ರಾಜ್ಯಶಾಹೀ ವಿರೋಧ ನಿಂತಿದ್ದೇನೆ ಸತ್ಯಸಂಗತಿ ತಿಳಿಯಲು ಪ್ರಯತ್ನಿಸುವಾಗ ಆತಂಕ ತರುವ ಎಡರುಗಳನ್ನು ಎದುರಿಸಲೂ ಅಂಜಲಿಲ್ಲ ಸತ್ಯಕ್ಕೆ ನಾನು ಅನ್ಯಾಯ ಮಾಡಿಲ್ಲ

ಆದರೆ ಬೇರೆಯ ಪತ್ರಿಕಾ ಪ್ರತಿನಿಧಿಗಳಿಗೆ ನನಗಿರದ ಒಂದು ಅನುಕೂಲವಿದೆ ಅವರು ಬರೆದದ್ದನ್ನೆಲ್ಲಾ ವೇದವಾಕ್ಯವೆಂದು ನಂಬಿ ಓದುವ ಜನ ಬಹಳ ಇದ್ದಾರೆ ಅವರು ಬರೆದದಕ್ಕೆಲ್ಲಾ ಅವರ ಯಜಮಾನರು ಮೆಚ್ಚುತ್ತಾರೆ ಎಲ್ಲದಕ್ಕಿಂತಲೂ ವಿಶೇಷ ವಿಷಯವೆಂದರೆ, ಅವರ ಬರೆವಣಿಗೆಗಳಿಗೆ ಕತ್ತರಿ ಪ್ರಯೋಗ ಆಗುವುದಿಲ್ಲ ಆದರೆ ನನ್ನ ಅವಸ್ಥೆ ಹಾಗಿಲ್ಲ. ನಾನು ಬರೆವ ಸುದ್ದಿ, ನಾನು ನೋಡಿದ ಫ್ಯಾಸಿಸ್ಟ್ ವಿರೋಧಿ ಭಾರತದ ಸುದ್ದಿ, ನಾನಿದನ್ನು ಪ್ರಮಾಣ ಮಾಡಿ ಹೇಳುತ್ತೇನೆ ಆದರೆ ನಾನು ಆ ಸುದ್ದಿಯನ್ನು ಎಲ್ಲಿಗೂ ಕಳುಹಿಸಲಾರೆ, ಭಾರತದಿಂದ ಹೊರಗೆ ಸಾಗಿಸಲಾರೆ ಭಾರತದಲ್ಲಿರುವ ಬ್ರಿಟಿಷರಿಗೆ ಹೇಳಿದರೆ ಅವರೂ ಇದನ್ನು ನಂಬುವುದಿಲ್ಲ ಬರ್ಮಾ ಹಾಂಕಾಂಗ್‌ಗಳ ವಿಷಯವನ್ನೂ ಅಂದು ಅವರು ನಂಬಿರಲಿಲ್ಲ ಸೆರೆಮನೆಯಿಂದ ಹೊರಗೆ ಬರಲು ಆತುರಪಡುವ ಭಾರತೀಯರಿಗೆ ತಿಳಿಸಿದರೆ ಅವರೂ ಮುಖ ತಿರುಗಿಸುವವರೇ! ಅವರಿಗಿದು ಸತ್ಯವೆಂದು ಗೊತ್ತಿದ್ದರೂ ಅದನ್ನು ತಿಳಿದು ಆಗುವ ಪ್ರಯೋಜನವೇನೂ ಇಲ್ಲ. ಬ್ರಿಟಿಷರಿಗೆ ಇಲ್ಲಿ ಬಹಳ ಗೌರವವಿರಬಹುದು ಆದರೆ ಅವರ ಸಂಗಡ ಸಹಕರಿಸುವ ಭಾರತೀಯರ ಹೊಟ್ಟೆ ಉರಿಯುತ್ತಿದೆ

ಅಂಬಡೇಕರ್ ಅದೃಷ್ಟ ನೋಡಿ! ಇದೀಗ ದ್ವಿತೀಯ ಶ್ರೇಣಿಯ ಮುಂದಾಳುಗಳ ಕಾಲ ಅಂಬಡೇಕರನ ಅದೃಷ್ಟದ ಗಾಳಿ ಈಗ ಬೀಸುತ್ತಿದೆ ಗಾಳಿ ಬೀಸಿದತ್ತ ಆತ ಕೊಡೆಹಿಡಿಯುತ್ತಾನೆ. ತನಗೆ ಈಗ ಎದುರಾಳಿಯೇ ಇಲ್ಲವೆಂಬಂತೆ ಹಾರಾಡುತ್ತಾನೆ ನಿರ್ಭಯನಾಗಿದ್ದಾನೆ, ಮಹತ್ವಾಕಾಂಕ್ಷಿಯಾಗಿದ್ದಾನೆ ಸಂದರ್ಭಗಳು ಅನುಕೂಲವೊದಗಿದಾಗ ಯಾರು ತಾನೇ ಹಾಗಿರುವುದಿಲ್ಲ? ಗಾಳಿಬಂದತ್ತ ಕೊಡೆಹಿಡಿದು ಕೆಲಸ ಸಾಧಿಸಿಕೊಳ್ಳುವ ಜನ ಅಂಬ್ಡೇಕರ್ ಈ ಸತ್ಯ ಸಂಗತಿಯನ್ನು ಯಾರಾದರೂ ಆತನಿಗೆ ತಿಳಿಸಬಾರದೆ? ಸಂದರ್ಭವೊದಗಿದ್ದರೆ, ಯಾರೊಡನೆ ಸಹಕರಿಸಿ ಕೆಲಸ ಮಾಡುತ್ತಿದ್ದನೋ ಅಂಥಾ ರಾಷ್ಟ್ರದ ಮುಂದಾಳುಗಳನ್ನೇ ಈಗ ಆತ ಬಾಯಿಗೆ ಬಂದಂತೆ ಅನ್ನುತ್ತಾನೆ ಜಿನ್ನಾ ಗಾಂಧಿಯವರನ್ನು ಹಳಿಯುತ್ತಾನೆ ಸೆರೆಮನೆಯಲ್ಲಿರುವವರ ಕುರಿತು ಯಾರು ಏನು ಬೇಕಾದರೂ ಈಗ ಹೇಳಿಕೊಳ್ಳಬಹುದು ಕಾಂಗ್ರೆಸಿಗಿಂತ ಕಡಿಮೆ ತರಗತಿಯವರಲ್ಲಿ ತನ್ನನ್ನು ಹೋಲಿಸುವುದು ಜಿನ್ನಾಗೆ ಸೇರುವುದಿಲ್ಲ ಅಂಬ್ಡೇಕರ್ ಒಬ್ಬ ಚಳವಳಿಗಾರ ಅದಾಗಿಯೇ ಜನರಿಗೆ, 'ಈಗ ನಿಜವಾದ ಕೂಲಿ ಪಕ್ಷ ಸ್ಥಾಪಿಸಿ ಬಂದು ಬೋಧಿಸುತ್ತಾನೆ ಇಂಗ್ಲೆಂಡಿನಲ್ಲಿ ಎಷ್ಟೋ ವರ್ಷಗಳ ಹಿಂದೆಯೇ 'ನಿಜವಾದ ಕೂಲಿಗಾರ ಪಕ್ಷ' ಇದೆ ಅದಕ್ಕೂ ಅಂಬ್ಡೇಕರನಂಥಾ ನಾಯಕರೇ ಇದ್ದರು ಯುದ್ಧ ಅವರನ್ನು ತುಳಿದುಹಾಕುವ ತನಕವೂ ಅವರು ಇಂಗ್ಲೆಂಡಿನಲ್ಲಿ ಫ್ಯಾಸಿಸಂ ಬೆಳೆಸುತ್ತಿದ್ದರು ಅಂಬ್ಡೇಕರನಂಥಾ ಭಾರತೀಯರೇ ದೇಶವನ್ನು ಫೇಸಿಸಂ ಭೂತಕ್ಕೆ ಬಲಿಗೊಡಲು ಅವಕಾಶಮಾಡುತ್ತಿದ್ದಾರೆ ಅಂಬ್ಡೇಕರ್ ಹಿಟ್ಲರ್ ಆಗಲಾರ. ಆದರೆ ಆಸ್ವಲ್ಡ್ ಮೊಸ್ಲೆಯ ಲಕ್ಷಣಗಳೆಲ್ಲಾ ಆತನಲ್ಲಿವೆ.

ಈ ಸತ್ಯ ಸಂಗತಿಯನ್ನು ಲೋಕಕ್ಕೆ ಯಾರು ತಾನೇ ಹೇಳಬಲ್ಲರು? ನನಗಂತೂ ಸಾಧ್ಯವಿಲ್ಲ ಹೆಚ್ಚು ಸಂಬಳ ತಿನ್ನುವ ಪತ್ರಿಕಾ ಬಾತ್ಮೀದಾರರು ಈ ಕಾರ್ಯ ಕೈಕೊಳ್ಳಬಹುದು ಆದರೇನೋ ಅವರು ಆ ಕೆಲಸಕ್ಕೆ ಕೈಹಾಕುವುದೇ ಇಲ್ಲ ಇಂಥಾ ಗೊಂದಲವೆಬ್ಬಿಸುವುದಕ್ಕಿಂತ ಓಗಾಗ ಅಂಬ್ಡೇಕರ್‌ರಂಥವರ ಬೇಟಿಮಾಡಿ ಬರುವುದೇ ಅವರಿಗೆ ಪ್ರಯೋಜನಕರವೆನಿಸುತ್ತದೆ ಅಲ್ಲದೆ, ಸೆರೆಮನೆಯೊಳಗೆ ಕೊಳೆಯುವವರ ಸುದ್ದಿ ತಿಳಿದಾದರೂ ಏನು ಲಾಭ? ಅದವಾ ಅವರಿಂದ ಏನು ಸುದ್ದಿ ತಿಳಿಯಬಹುದು? 'ನ್ಯೂಯಾರ್ಕ್ ಟ್ರಿಬ್ಯೂನಿ'ನ ಸೋನಿಯಾ ಟಮಾರಾಳ ಹಾಗೆ ಕಣ್ಣು ಮುಚ್ಚಿ ಒಂದು ಮಾತು ಬರೆದು ಅವರ ಕತೆ ಮುಗಿಸಿಬಿಟ್ಟರಾಯಿತು 'ಕಾಲು ಶತಮಾನದಿಂದ ಭಾರತದ ರಾಜಕೀಯದಲ್ಲಿ ಗಾಂಧಿಜಿ ಪ್ರಭಾವವಿತ್ತು ಮುಂದಕ್ಕೆ ಗಾಂಧಿಜಿಗಿಲ್ಲ ಸ್ಥಾನ ಸಿಗುವುದಿಲ್ಲ ಭಾರತದ ಜನತಾ ಕೋಟಿಗೆ ಇಂದು ಗಾಂಧಿ ವಿಚಾರವೇನೂ ಉಳಿದಿಲ್ಲ ಗಾಂಧಿಜಿ ಉಪವಾಸ ಮಾಡಿದ್ದರಿಂದ ಅವರಲ್ಲಿ ಏನೂ ಪರಿಣಾಮವಾಗಲಿಲ್ಲ' ಇದು ಆಕೆ ತಿಳಿಸುವ ಸತ್ಯ ಸಂಗತಿ!

ಸೋನಿಯಾ ಡಿಲ್ಲಿಯಲ್ಲಿ ಮುಖಂಡರ ಸಮ್ಮೇಳನವಾದಾಗ ಹಾಜರಿದ್ದಳು, ಗಾಂಧಿಜಿ ಉಪವಾಸ ಮಾಡುವಾಗ ಪೂನದಲ್ಲಿದ್ದಳು, ಆದ್ದರಿಂದಲೇ ಆಕೆ ಈ ಸತ್ಯ ಸಂಗತಿ ಹೇಳಿರಬಹುದು! ಈ ಪತ್ರಿಕೆಗಳು, ಈ ಸಭೆಗಳು ಇವೆಲ್ಲಾ ಜನರದ್ದಲ್ಲ ವಿದ್ಯಾವಂತರ ವಿದ್ಯೆಯೆಂದು ಆಕೆ ತಿಳಿದಿರಬಹುದು, ಆಕೆ ಮಿದ್ನಾಪುರದಲ್ಲಿಯೂ ಕೆಲದಿನ ಇದ್ದಳು ಆದರೆ ನಾನು ಡಿಲ್ಲಿಗೂ ಹೋಗಲಿಲ್ಲ, ಪೂನದಲ್ಲೂ ಇರಲಿಲ್ಲ, ನಾನು ಬಂಗಾಳದಲ್ಲಿದ್ದೆ ನಿರಕ್ಷರ ಕುಕ್ಷಿಗಳಾದ ಸಾವಿರಾರು ಮಂದಿ ಸಭೆ ಸೇರಿಸುವುದನ್ನು ನೋಡಿದೆ ಅಲ್ಲಿ ರಾಜಕೀಯ ಭಾಷಣಗಳನ್ನು ಕೇಳಿದೆ ನನಗೆ ಅಲ್ಲಿ ಎಲ್ಲದಕ್ಕಿಂತಲೂ ಹೆಚ್ಚು ಸ್ಪಷ್ಟವಾದುದು ಆ ಸಭೆಗಳಿಗೆ ಬಂದ ಹಳ್ಳಿಯ ಹೆಣ್ಣು ಗಂಡು ಜನ ಗಾಂಧಿಜಿ ಪಟ ಹಿಡಿದುಕೊಂಡ, ಆ ಜನಸಂದೋಹ ಮೆರವಣಿಗೆ ಹೊರಟಾಗ ಬಿಕ್ಕಿ ಬಿಕ್ಕಿ ಅಳುತ್ತಿದ್ದರು! ಗಾಂಧಿಜಿ ಆಗ ಉಪವಾಸ ಕೈಕೊಂಡಿದ್ದರು. ಅಲ್ಲಿಂದ ನಾನು ಬಿಹಾರ್, ಸಂಯುಕ್ತ ಪ್ರಾಂತಗಳಿಗೆ ಹೋದೆ ಅಲ್ಲೂ ಅದೇ ದೃಶ್ಯ ಅದಕ್ಕಿಂತಲೂ ಹೃದಯ ದ್ರಾವಕ ಚಿತ್ರ ಜನರ ದುಃಖ, ಅಳು ಇದನ್ನೇ ಕಂಡೆ, ಗಾಂಧಿಜಿಗಾಗಿ ಅವರು ಕಂಬನಿಯ ಕೋಡಿ ಹರಿಸಿ ಪ್ರಾರ್ಥಿಸುತ್ತಿದ್ದರು! ಇಂಥಾ ದೃಶ್ಯ ನನ್ನ ಇಡೀ ಜೀವಮಾನದಲ್ಲಿ ಬೇರೆ ನೋಡಿಲ್ಲ ಗಾಂಧಿಜಿಯನ್ನು ಎಲ್ಲೋ ಒಮ್ಮೆ ದೂರದಿಂದ ನೋಡಿದ್ದೆ ಮಾತ್ರ. ಆದರೆ ಗಾಂಧಿಜಿಯ ನಿಜ ಮೂರ್ತಿಯನ್ನು ನಾನು ಈ ಜನರಲ್ಲಿ ತೀರ ದರಿದ್ರ ಜನರಲ್ಲಿ ಕಂಡೆ. ಆದ್ದರಿಂದ ಸೋನಿಯಾಳ ಮಾತನ್ನು ನಾನು ಒಪ್ಪಲಾರೆ ವಿದ್ಯಾವಂತರು ಗಾಂಧಿಜಿಯ ಮಾರ್ಗದಲ್ಲಿಯೇ ಈಗ ಮುಂದುವರಿಯುತ್ತಿದ್ದಾರೆ ಅಷ್ಟ ಆದರೆ ಓದು ಬರಹ ಬರೆದ ಜನರದು ಹಾಗಲ್ಲ ಅವರಿಗೆ ಗಾಂಧಿಜಿಯಲ್ಲಿಯೇ ವಿಶ್ವಾಸ, ಅವರೇ ಅವರಿಗೆ ದೇವರು ಅವರು ಹೇಳಿದ್ದೇ ವೇದವಾಕ್ಯ ಗಾಂಧಿಜಿ ಪ್ರಾಣವೇ ಅವರ ಉಸಿರು ಭವಿಷ್ಯದಲ್ಲಿ ಗಾಂಧಿಜಿಯ ಸ್ಥಾನ ಯಾವುದೆಂದು ನಾನೀಗ ಹೇಳಲಾರೆ ನಾನಿಷ್ಟು ಮಾತ್ರ ಹೇಳಬಲ್ಲೆ, ರಾಷ್ಟ್ರೀಯ ಸರಕಾರ ಸ್ಥಾಪಿತವಾಗುವುದಿದ್ದರೆ ಗಾಂಧಿಜಿಯಂಥಾ ಪ್ರಭಾವಶಾಲೀ ಮುಖಂಡರನ್ನು ಬಿಟ್ಟು ಆಗುವ ಹಾಗಿಲ್ಲ. 'ಭಾರತ ಬ್ರಿಟಿಷರನ್ನು ನಿಂದಿಸುತ್ತದೆ. ಬ್ರಿಟಿಷರು ಭಾರತವನ್ನು ನಿಂದಿಸುತ್ತಾರೆ. ಇಬ್ಬರೂ ಸರಿ' ಹೀಗೆ ಬರೆದರೆ ಯಾರಿಗೆ ಲಾಭವೇನು? ಅಡ್ಡ ಗೋಡೆಯ ಮೇಲೆ ದೀಪವಿಟ್ಟರೆ ಯಾರಿಗೆ ಬೆಳಕು ಬೀಳುತ್ತದೆ?

ಇಂಥಾ ಭಾವನೆಯನ್ನೇ [illegible] ಪೆಲಿಸ್ಟೈನಿನಲ್ಲೂ ಅನುಸರಿಸಿ, ಯುದ್ಧ ಆರಂಭವಾಗುವ ತನಕವೂ ಅಲ್ಲಿ ರಕ್ತದ ಹೊಳೆ ಹರಿಸಿದರು. ಇದೊಂದು ಮಹಾ ಅನ್ಯಾಯ ಈ ಅನ್ಯಾಯದಲ್ಲಿ ಪತ್ರಿಕೋದ್ಯೋಗಿಗಳ ಪಾಲೂ ಬಹಳ ಇದೆ. ಅಂತೂ ಸುಮ್ಮನೆ ನಾನಿದನ್ನೆಲ್ಲಾ ಹೇಳಿ ಏನು ಪ್ರಯೋಜನ?

ಜಿನ್ನಾ–ಗಾಂಧಿ ಭೇಟಿಗೆ

ಸರಕಾರದ ನಕಾರ!

ಮಹಾತ್ಮಾ ಗಾಂಧಿಯವರು, ಜಿನ್ನರಿಗೆ ಒಂದು ಪತ್ರ ಬರೆದಿದ್ದು, ಆ ಪತ್ರದಲ್ಲಿ ಜಿನ್ನರನ್ನು ಭೇಟಿಯಾಗಲು ತಮ್ಮ ಅಪೇಕ್ಷೆಯಿರುವುದಾಗಿ ತಿಳಿಸಿದ್ದಾರೆ. ಸರಕಾರವು ಜಿನ್ನರಿಗೆ ಮಹಾತ್ಮರು ಬರೆದಾ ಪತ್ರವನ್ನು ಮುಟ್ಟಿಸಲಿಲ್ಲ. ಅದರ ಬದಲು ಸರಕಾರವು ಒಂದು ಹೇಳಿಕೆಯಿತ್ತಿದೆ. ಆ ಹೇಳಿಕೆಯಲ್ಲಿ ಹೀಗಿದೆ:

'ತನ್ನ ಧೋರಣೆಯಂತೆ, ಸೆರೆಮನೆಯಲ್ಲಿರುವ ಗಾಂಧಿಯವರ ಪತ್ರವ್ಯವಹಾರ ಹಾಗೂ ಭೇಟಿಯಾಗಲು ಸಾಧ್ಯವಿಲ್ಲವೆಂದು ಭಾರತ ಸರಕಾರವು ಗಾಂಧಿ ಹಾಗೂ ಜಿನ್ನರಿಗೆ ತಿಳಿಸಿದೆ. ಅಕ್ರಮವಾದ ಸಾಮೂಹಿಕ ಆಂದೋಲನ ನಡೆಸಲು ಪ್ರಯತ್ನಿಸಿ, ಅದರಿಂದ ಯುದ್ಧ ಪ್ರಯತ್ನಕ್ಕೆ ತಡೆಮಾಡಲು ಯತ್ನಿಸಿ ಸೆರೆಮನೆ ಸೇರಿರುವ ಗಾಂಧಿಯವರೊಡನೆ ಯಾವುದೇ ರಾಜಕೀಯ ಪತ್ರ ವ್ಯವಹಾರ ಹಾಗೂ ಭೇಟಿಗೆ ಅವಕಾಶ ಕಲ್ಪಿಸಿಕೊಡಲಾಗುವುದಿಲ್ಲ. ಈ ಚಳವಳದಲ್ಲಿ ತಮ್ಮ ಸಂಬಂಧವಿಲ್ಲವೆಂದು ಗಾಂಧಿಜಿ ಸ್ಪಷ್ಟಪಡಿಸಿದ್ದರಿಂದ, ಈ ಸಂದಿಗ್ಧಕಾಲದಲ್ಲಿ ಯುದ್ಧ ಪ್ರಯತ್ನಕ್ಕೆ ತೊಂದರೆಯಾಗಿದೆಯೆಂದು ಭಾರತ ಸರಕಾರದ ಅಭಿಪ್ರಾಯ. ಆದ್ದರಿಂದ, ರಾಷ್ಟ್ರದ ಸಾರ್ವಜನಿಕ ಕೆಲಸವನ್ನು ತೊಂದರೆಯಿಲ್ಲದೆ ತಾವು ಸಾಗಿಸುವೆವೆಂಬ ಭರವಸೆಯನ್ನು ಸರಕಾರಕ್ಕೆ ಉಂಟುಮಾಡುವುದು ಗಾಂಧಿಜಿ ಹೊಣೆಯಿದೆ. ಈ ರೀತಿ ಸರಕಾರವನ್ನು ಅವರು ಸಮಾಧಾನಪಡಿಸುವ ವರೆಗೆ, ಅವರ ಮೇಲಿರುವ ನಿರ್ಬಂಧಗಳು ಸ್ವಕ್ರಿಯೆಯಿಂದ ಅವರೇ ಆರಿಸಿಕೊಂಡವಿರುತ್ತವೆ.'

ಭಾರತ ಸರಕಾರದ ಈ ಪ್ರಕಟಣೆಯನ್ನು ಲಂಡನಿನ ಅಧಿಕಾರಿಗಳು ಸಮ್ಮತಿಸಿದರೆಂದೂ, ಫಿಲಿಪ್ಸ, ಸಪ್ರು ಮೊದಲಾದವರಿಗೆ ಗಾಂಧಿಜಿ ಭೇಟಿಯಾಗಲು ಇದೇ ಕಾರಣದಿಂದ ತಡೆಯಾಯಿತೆಂದೂ, ಚರ್ಚಿಲ್ಲರು ಅಮೆರಿಕನ್ ಕಾಂಗ್ರೆಸಿನಲ್ಲಿ ಹೇಳಿದ ತಳಹದಿ ಮೇಲೆ ಭಾರತ ಸರಕಾರವು ಈ ಕೆಲಸ ಮಾಡಿತೆಂದೂ ರಾಯಿಟರ್ ಸುದ್ದಿ.

ಗಾಂಧಿಜಿ ಜಿನ್ನರಿಗೆ ಹೀಗೆ ಭೇಟಿಯಾಗಲು ಬರೆದ ಪತ್ರದ ಸಂದರ್ಭವಾಗಿ, ಜಿನ್ನರು ಕಳೆದ ತಿಂಗಳು ಡಿಲ್ಲಿಯಲ್ಲಿ ಸೇರಿದ ಮುಸ್ಲಿಂಲೀಗ್ ಅಧಿವೇಶನದ ಅಧ್ಯಕ್ಷ ಭಾಷಣದ ಮಾತುಗಳನ್ನು ನಾವು ನೆನಪಿಗೆ ತರುವುದು ಅವಶ್ಯ. 'ಹಿಂದು ಮುಸ್ಲಿಂ ಐಕ್ಯವಾದರೆ ಆ ದಿನವು ನಿಜವಾಗಿ ಸುದಿನ. ನಾನೂ ಅದನ್ನೇ ಹಾರೈಸುವೆನು. ಗಾಂಧಿಜಿಗೆ ನಿಜವಾಗಿ ಹಿಂದೂ ಮುಸ್ಲಿಂ ಐಕ್ಯವಾಗಬೇಕೆಂದಿದ್ದರೆ, ಬೇರೆ ಬೇರೆ ದಾರಿಗಳಲ್ಲಿ ಹೋಗುವುದಕ್ಕಿಂತ ನೇರಾಗಿ ನನ್ನೊಡನೆ ಯಾಕೆ ಮಾತುಕತೆ ಮಾಡಲು ಪತ್ರ ಬರೆಯಬಾರದು. ಗಾಂಧಿಜಿ ಹಾಗೆ ಹಿಂದೂ ಮುಸ್ಲಿಂ ಐಕ್ಯ ವಿಚಾರ ಮಾತನಾಡಲು ಅಪೇಕ್ಷೆ ತೋರಿಸಿ ನನಗೆ ಪತ್ರ ಬರೆದರೆ, ಆ ಪತ್ರವನ್ನು ತಡೆಯಲು ಈ ಭೂಮಿಯಲ್ಲಿ ಯಾರಿಗೆ ತಾನೇ ಶಕ್ತಿಯಿದೆ. ಸರಕಾರ ಅದಕ್ಕೂ ಆತಂಕ ಮಾಡುವುದೇ? ಸರಕಾರವು ಬಲಾಢ್ಯವಿದೆ ನಿಜ. ಆದರೆ ನನಗೆ ಬರೆದ ಪತ್ರವನ್ನು ಸರಕಾರ ತಡೆಯಲಾರದು. ತಡೆದ ಪಕ್ಷ ಅದರಿಂದ ವಿಶೇಷ ಪರಿಸ್ಥಿತಿಯು ಉದ್ಭೂತವಾಗುವುದು' ಎಂದು ಜಿನ್ನರು ಆ ಭಾಷಣದಲ್ಲಿ ಹೇಳಿದ್ದರು! ಜಿನ್ನ ಸಾಹೇಬರು ಹೀಗೆ ಹೇಳಿದರೂ ಸರಕಾರವು ಪತ್ರವನ್ನು ತಡೆದೇ ಬಿಟ್ಟಿದೆ!

ಗಾಂಧಿಜಿಯ ಪತ್ರವನ್ನು ಜಿನ್ನರಿಗೆ ತಲುಪಿಸದ ವಿಷಯ ಈಗಲೇ ದೇಶದ ವಿದೇಶದ ಪತ್ರಿಕೆಗಳು ಮುಂದಾಳುಗಳೂ ಸರಕಾರದ ಧೋರಣವನ್ನು ಖಂಡಿಸಿದ್ದಾರೆ. ಈ ಪತ್ರದಿಂದ ಹಲವು ವಿಚಾರಗಳು ಹೊರಬಿದ್ದವು. ಗಾಂಧಿಜಿಗೆ ಹಿಂದು ಮುಸ್ಲಿಂ ಐಕ್ಯದಲ್ಲಿರುವ ಆಸೆ; ಸರಕಾರಕ್ಕೆ ಅದನ್ನು ತಡೆಗಟ್ಟುವ ಆಸೆ; ಜಿನ್ನರಿಗೆ ಅಂಥಾ ಪತ್ರವನ್ನು ತಡೆಗಟ್ಟಿದರೂ ಏನೂ ಮಾಡಲಾರದಿರುವ ನಿರಾಸೆ. ಆದಾಗಿಯೇ ಜಿನ್ನರು ತನ್ನ ನಿರಾಸೆಯ ಕೂಗನ್ನು ಹೀಗೆಂದು ಹೇಳತೊಡಗಿದ್ದಾರೆ: "ಮುಸ್ಲಿಂ ಲೀಗಿಗೂ ಸರಕಾರಕ್ಕೂ ಘರ್ಷಣೆಯನ್ನುಂಟುಮಾಡುವುದೇ ಗಾಂಧಿಜಿಯವರ ಉಪಾಯ. ಗಾಂಧಿಜಿ ಹೃದಯ ಪರಿವರ್ತನೆಯಾಗಲಿ, ಅವರ ನೀತಿಯಲ್ಲಿ ಬದಲಾವಣೆಯಾಗಲಿ ಆದಂತೆ ಏನೂ ತೋರುವುದಿಲ್ಲ. ಗಾಂಧಿಜಿ ಪಾಕಿಸ್ತಾನಕ್ಕೆ ಒಪ್ಪಿ ಸಂಧಾನವಾಗಲು ಪತ್ರ ಬರೆಯಲಿ. ಮುಸ್ಲಿಂ ಲೀಗಿನೊಡನೆ ಒಪ್ಪಂದ ಮಾಡಿಕೊಳ್ಳುವ ನಿಜವಾದ ಮನೋಭಾವನೆ ಇದರಲ್ಲಿಲ್ಲ"— ಹೀಗೆಂದರೆ ಜಿನ್ನರಿಗೆ ಎಷ್ಟು ನಾಲಿಗೆ?

'ಮೆಂಚೆಸ್ಟರ್ ಗಾರ್ಡಿಯನ್' ಎಂಬ ಬ್ರಿಟಿಷ್ ಪತ್ರಿಕೆ ಈ ಕುರಿತು ಹೀಗೆ ಬರೆಯುತ್ತದೆ: 'ರಾಷ್ಟ್ರ ನಾಯಕರನ್ನು ಬಂಧನದಲ್ಲಿಡುವ ಧೋರಣವನ್ನು ಸರಕಾರವು ಕಡೆತನಕ ಅನುಸರಿಸುವುದೋ? ಒಂದೇ ಧೋರಣವನ್ನು ಕಡೆತನಕ ಅನುಸರಿಸುವುದು ಆಡಳಿತದ ಜಾಣತನವಲ್ಲ. ಮುಸ್ಲಿಂಲೀಗು ಐಕ್ಯ ಪ್ರಯತ್ನ ಮಾಡಿತೆಂದೂ, ಸರಕಾರವು ಅದಕ್ಕೆ ಆತಂಕ ತಂದಿತೆಂದೂ ಜಿನ್ನರು ಈಗ ಹೇಳಬಹುದು. ಅಂತೆ, ಗಾಂಧಿಜಿಯೂ ಸರಕಾರವನ್ನು ದೂರಬಹುದು. ಹೀಗೆ ಪ್ರತಿಯೊಬ್ಬ ಭಾರತೀಯನೊಡನೆ ದ್ವೇಷ ಕಟ್ಟಿಕೊಳ್ಳುವುದು ಜಾಣತನವೆ? ಗಾಂಧಿಜಿಯನ್ನು ಕಾಣಲು, ಜಿನ್ನರಿಗೂ ಇನ್ನಿತರ ಭಾರತದ ಮುಖಂಡರಿಗೂ ಸರಕಾರವು ಸಮ್ಮತಿ ಒದಗಿಸಬಾರದೇಕೆ?" ಎಷ್ಟೋ ಮಂದಿ ಮುಸ್ಲಿಂಲೀಗ್ ಮುಖಂಡರೂ ಸರಕಾರದ ಈ ಧೋರಣವನ್ನು ಖಂಡಿಸಿದ್ದಾರೆ. "ಕುತಂತ್ರ ನಿಪುಣರಾದ ಜಿನ್ನರು ಬಹಳ ಕಾಲದಿಂದ ತಾವು ಆಡಿ ತೋರಿಸುತ್ತಿರುವ ಕಣ್ಣುಮುಚ್ಚಾಲೆಯಾಟವನ್ನು ಈ ಸಾರಿ ಬಹಳ ಆಡಂಬರದಿಂದ ಆಡುತ್ತಿದ್ದಾರೆ. ರಾಜಕೀಯ ರಂಗದಿಂದ ಕಾಂಗ್ರೆಸು ಕಳೆದ ಒಂದು ವರ್ಷದಿಂದ ಕಣ್ಮರೆಯಾದ ಮೇಲೆ ಜಿನ್ನರು ಅಲ್ಲಿ ತಮ್ಮ ಪ್ರಭಾವ ಬೀರಲು ಯತ್ನಿಸುತ್ತಿದ್ದಾರೆ; ಅದಕ್ಕಾಗಿ ಭಾರತೀಯರ ಗೌರವವನ್ನು ಪೂರ್ಣ ಬಲಿಗೊಡುತ್ತಿದ್ದಾರೆ. ಆ ಮೂಲಕ ತಮ್ಮ ಸ್ವಪ್ನದೃಶ್ಯವಾದ 'ಪಾಕಿಸ್ತಾನ'ದ ಬೊಬ್ಬೆ ಮಾಡುತ್ತಾರೆ.' ಎಂದು ಅಬ್ದುರ್ ರಹಿಮಾನ್ ಮೀರಾ ಇವರು ಜಿನ್ನರ ಅಭಿಪ್ರಾಯದ ಕುರಿತು ಹೇಳಿಕೆ ಕೊಟ್ಟಿರುವರು. ಅವರು ತಮ್ಮ ಹೇಳಿಕೆಯಲ್ಲಿ, ಜಿನ್ನರು ಮುಸ್ಲಿಂ ಲೀಗ್ ಅಧಿವೇಶನದ ಭಾಷಣದಲ್ಲಿ ಮಾಡಿದ ಗೊಡ್ಡು ಬೆದರಿಕೆ, ಅದಕ್ಕೆ ಸರಕಾರ ಬೆಲೆ ಕೊಡದಿರುವುದು, ಈಗ ಜಿನ್ನರಿಗೆ ಒದಗಿರುವ ಅಪಹಾಸ್ಯ, ಇವುಗಳನ್ನು ಬಯಲಿಗೆಳೆದು ನಿಜವಾಗಿ ನೋಡಿದರೆ ಕಾಂಗ್ರೆಸಿನವರ ಬಿಡುಗಡೆ ಜಿನ್ನರಿಗೆ ಮನಸ್ಸಿಲ್ಲವೆಂದೂ, ಈ ಆರ್ಡಿನೆನ್ಸ್ ಕಾಲದಲ್ಲಿ ತಮ್ಮ ಪಾಕಿಸ್ಥಾನದ ಆಟ ಆಡಿಕೊಳ್ಳುವುದರಲ್ಲಿಯೇ ಜಿನ್ನರು ಮಗ್ನರಿದ್ದಾರೆಂದೂ ಸಾರಿದ್ದಾರೆ. ಜಿನ್ನರ ಈ ಹುಚ್ಚಾಟಕ್ಕೆ ದೇಶವನ್ನು ಬಲಿ ಕೊಡಬಾರದೆಂದೂ ಎಚ್ಚರಿಸಿರುವರು.

'ತಾವೇನೂ ಮಾಡುವ ಹಾಗೂ ಇಲ್ಲ. ಪರರನ್ನೇನೂ ಮಾಡಬಿಡುವುದೂ ಇಲ್ಲ. ಇದು ಸರಕಾರದ ಧೋರಣೆಯೆ?' ಎಂದು ಪ್ರಶ್ನಿಸುತ್ತಾ, ಮುಸ್ಲಿಂ ಲೀಗಿನ ಮುಖಪತ್ರ 'ಡಾನ್' ಒಂದು ಅಗ್ರಲೇಖ ಬರೆದು, ಸೆರೆಮನೆಯಲ್ಲಿದ್ದವರೊಡನೆ ಹೊರಗಿನವರ ಪತ್ರವ್ಯವಹಾರ ಮಾಡಬಿಟ್ಟರೆ ಅದರಿಂದೇನೂ ವ್ರತ ಭಂಗವಾಗುವುದಿಲ್ಲೆಂದೂ, ಹಿಂದೆ ಐರ್ಲೆಂಡಿನಲ್ಲಿ ಇಂಥಾ ಸೌಕರ್ಯ ಕಲ್ಪಿಸಿದ ಉದಾಹರಣೆಗಳಿಂಟೆಂದೂ ಬರೆದಿದೆ. 'ಡಾನ್' ಮತ್ತೂ ಹೀಗನ್ನುತ್ತದೆ: 'ಗಾಂಧಿಜಿ ಜಿನ್ನರ ಭೇಟಿಯನ್ನು ಬಯಸಿ ಬರೆದ ಪತ್ರಕ್ಕೆ ಸರಕಾರವು ನಕಾರಾತ್ಮಕ ಉತ್ತರವಿತ್ತುದನ್ನು ದೊಡ್ಡ ಗೂಢ ವಿಷಯವೆಂದು ಸರಕಾರ ತಿಳಿದಿರಬಹುದು. ಈ ಪತ್ರವನ್ನೂ ಪ್ರಕಟಪಡಿಸದೆ ಗಾಂಧಿಜಿಗೂ ಜಿನ್ನರಿಗೂ ಅದನ್ನು ಮುಟ್ಟಿಸಲಾಗುವುದಿಲ್ಲವೆಂದು ತಿಳಿಸಿದೆಯಂತೆ! ಭಾರತದ ಭಾಗ್ಯವು ಗಾಂಧಿ–ವೈಸರಾಯ್ ಮಧ್ಯದ ರಾಜಕೀಯ ಕಲಹವನ್ನು ಅವಲಂಬಿಸಿರಬೇಕೆ? ಅವರಿಬ್ಬರನ್ನುಳಿದು ಬೇರೆ ಯಾರಿಗೂ ಮಹತ್ವವಿಲ್ಲವೆ? ಜಿನ್ನರಿಗಾ ಪತ್ರವನ್ನು ತಲಪಿಸಿದ್ದರೆ ಏನೂ ನಷ್ಟವಾಗುತಿರಲಿಲ್ಲ. ಸೆರೆಮನೆಯ ಹೊರಗಿನ ರಾಜಕೀಯ ಮುಖಂಡರೊಡನೆ ಪತ್ರವ್ಯವಹಾರವಾಗಗೊಟ್ಟರೆ ಏನೂ ವ್ರತ ಭಂಗವಾಗುತ್ತಿರಲಿಲ್ಲ. ಐರ್ಲೆಂಡಿನ ಇತಿಹಾಸವು ಇದಕ್ಕೆ ಆಧಾರವಾಗಿದೆ. ಸೆರೆಮನೆಯಲ್ಲಿರುವ ಗಾಂಧಿ ಹಾಗೂ ಸಾರ್ವಭೌಮರ ಪ್ರತಿನಿಧಿ ಇವರ ನಡುವೆ 'ಪ್ರಿಯ ಗಾಂಧಿ' 'ಪ್ರಿಯ ಲಿನ್‌ಲಿತ್‌ಗೋ' ಹೀಗೆ ಸಂಭಾಷಿಸಿ ಪತ್ರವ್ಯವಹಾರವಾಗಬೇಕಾದರೆ, ಸರಕಾರ ಹೇಳುವಂತೆ ಗಾಂಧಿಜಿ ಬಂಡಾಯಗಾರರಾಗಿರಲು ಸಾಧ್ಯವಿಲ್ಲ; ಗಾಂಧಿ–ವೈಸರಾಯರಿಗಿದ್ದಂತೆ ರಾಜಕೀಯ ಪತ್ರ ವ್ಯವಹಾರ ಸೌಲಭ್ಯವನ್ನು ಜಿನ್ನಾ ಗಾಂಧಿಯವರಿಗೂ ಕಲ್ಪಿಸಿಕೊಟ್ಟಿದ್ದರೆ ಆಕಾಶವೇನೂ ಕಳಚಿ ಬೀಳುತ್ತಿದ್ದಿಲ್ಲ."

"ಹಜ್ಜೆ ಹಜ್ಜೆಗೂ ಭಾರತದ ಸಾರ್ವಜನಿಕ ಅಭಿಪ್ರಾಯಗಳನ್ನು ಮೂಲೆಗೊತ್ತುತ್ತಿರುವ ಬ್ರಿಟಿಷ್ ಸರಕಾರದ ಪ್ರತಿನಿಧಿ ಭಾರತ ಸರಕಾರಕ್ಕೆ ಬುದ್ಧಿ ಹೇಳಲು ನಮ್ಮಲ್ಲಿ ಶಬ್ದಗಳೇ ಉಳಿದಿಲ್ಲ. ಮಿತ್ರ ರಾಷ್ಟ್ರದ ಯಾವುದೇ ರಾಷ್ಟ್ರವನ್ನಾದರೂ ಕಿಳಾಗಿ ನಡೆಸಿಕೊಂಡರೆ ಅದರಿಂದ ತಮಗೆ ಅಪಾಯವಿದೆಯೆಂಬುದನ್ನು ಸರಕಾರ ಮರೆತುಬಿಟ್ಟಿದೆ. ಭಾರತದ ಭಾವೀ ಆಡಳಿತೆಗೆ ಹಿಂದೂ ಮುಸ್ಲಿಂ ಮೊದಲಾದ ಜಾತಿ ಪಂಗಡಗಳ ಐಕ್ಯವೇ ಮೊದಲಾಗಿ ಆಗಬೇಕೆಂದು ಸರಕಾರವೇ ಹೇಳುತ್ತದೆ. ಹೀಗಿರುತ್ತಾ ಭಾರತದ ಮುಖಂಡರಲ್ಲಿ ಪ್ರಮುಖರಾದ ಇಬ್ಬರ ಭೇಟಿಗೆ ಅವಕಾಶ ಕಲ್ಪಿಸಿ ಕೊಡುವುದಿಲ್ಲ. ಗಾಂಧಿಜಿ ಪತ್ರವನ್ನು ಜಿನ್ನರಿಗೆ ಕೊಟ್ಟಿದ್ದರೆ ಆಕಾಶ ಪಾತಾಳ ಒಂದಾಗುತ್ತಿರಲಿಲ್ಲ. ಗಾಂಧಿಜಿ ಬಿನ್ನಹವು ಸಮಯೋಚಿತವಿದೆ. ಬಿಕ್ಕಟ್ಟನ್ನು ಬಿಡಿಸಲು ಅವರ ಆತುರತೆ ವ್ಯಕ್ತವಾಗುತ್ತದೆ. ಜಿನ್ನರೊಡನೆ ಮಹಾತ್ಮರು ಮತ್ತೂ ಒಮ್ಮೆ ಸ್ನೇಹದ ಕೈನೀಡಿದರು. ಆದರೆ ಸರಕಾರ ಮತ್ತೂ ಒಮ್ಮೆ ಪ್ರಮಾದ ಮಾಡಿತು' ಹೀಗೆಂದು ಪಾಟ್ನಾದ 'ಸರ್ಚ್‌ಲೈಟ್' ಪತ್ರಿಕೆ ತನ್ನ ಅಗ್ರಲೇಖದಲ್ಲಿ ಬರೆದಿದೆ.



ಯುದ್ಧದ ದೆಸೆಯಿಂದಾಗಿ, ಎಂಡ್ರೂಸ ಲಿವರ್ ಸಾಲ್ಟ್ ಈಗ ದೊರಕುವುದಿಲ್ಲವೆಂಬುದು ವಿಷಾದಕರವಿದೆ. ಆದರೆ ಅಂತರ್ರಾಷ್ಟ್ರೀಯ ಪರಿಸ್ಥಿತಿ ಸುಧಾರಿತವಾದ ಕೂಡಲೇ ಇದು ಪುನಃ ದೊರಕುವುದು.

ಸಮರಭೂಮಿಯ ಸಂಚಾರ

ರಶ್ಯದಲ್ಲಿ ಸದ್ಯ ಸ್ತಬ್ಧತೆ ಕಂಡುಬರುತ್ತದೆ. ಆದರೆ ಬೇಗನೇ ಭೀಕರ ಯುದ್ಧ ಪ್ರಾರಂಭವಾಗುವ ಸಕಲ ಲಕ್ಷಣಗಳೂ ಇವೆ. ಏಕೆಂದರೆ ಈಗ ಉಭಯಪಕ್ಷದವರೂ ಅಗಣಿತ ಸೈನ್ಯ ಸಾಧನಗಳ ಸಿದ್ಧತೆಯಲ್ಲಿಯೇ ತೊಡಗಿರುವರು. ಜರ್ಮನಿಯು ಆಕ್ರಮಣ ಧೋರಣ ಸ್ವೀಕರಿಸಬಹುದೋ, ಅಲ್ಲ, ಕೇವಲ ಆತ್ಮರಕ್ಷಣ ಮಾತ್ರ ಮಾಡಿಕೊಳ್ಳುವುದೋ ಈ ವಿಚಾರದಲ್ಲಿ ಈಗಲೂ ಊಹಾಪೋಹಗಳುಂಟು. ಅಂತೂ ಈ ಸಲ ಜರ್ಮನಿ ಆಕ್ರಮಣ ಧೋರಣ ಕೈಕೊಂಡರೆ ಅದೇನೋ ಭೀಷಣವಾಗುವುದೆಂದು ನಮಗೆ ತೋರುತ್ತದೆ. ಏಕೆಂದರೆ ಇನ್ನು ಮುಂದೆ ಹೀಗೆಯೇ ಯುದ್ಧವನ್ನು ಮತ್ತು ಮತ್ತೂ ಉದ್ದ ಎಳೆಯಲು ಸಾಧ್ಯವಿಲ್ಲ, ಬಹುಕಾಲ ಸಾಗಿದರೆ ಸೈನಿಕರಾದರೂ ಯುದ್ಧ ಮಾಡಲು ತಿರಸ್ಕರಿಸುವರು, ಸಾಧನ ಸಾಮಗ್ರಿಗಳೂ ಮುಗಿಯುತ್ತಾ ಹೋಗುವವು. ಆದ್ದರಿಂದ ಇನ್ನು ಮುಂದೆ ಆಕ್ರಮಣ ಕೈಕೊಳ್ಳುವವರು ಕೊನೆಯ ಆಕ್ರಮಣವನ್ನೇ—ಸೋಲಾಗಲಿ ಜಯವಾಗಲಿ—ಮಾಡಬೇಕಾಗಿದೆ! ರಶ್ಯವೂ ಈ ತರದ ಹೋರಾಟಕ್ಕೆ ಸಿದ್ಧವಾಗಿದೆ, ರಶ್ಯನ್ ರಣಭೂಮಿಯಲ್ಲಿ ಲೆನಿನ್‌ಗ್ರಾಡಿನಿಂದ ಕಪ್ಪು ಸಮುದ್ರದ ವರೆಗೆ ರಶ್ಯನ್ ಹಾಗೂ ಜರ್ಮನರ ಸೈನ್ಯ ಸಂಗ್ರಹವು ಒಟ್ಟು ೮೦ ಲಕ್ಷ ಆಗಬಹುದೆಂದೂ, ಬರುವ ಧಾಳಿಗಾಗಿ ಪ್ರತಿಯೊಂದು ಪಕ್ಷದವರೂ ಕನಿಷ್ಠಪಕ್ಷ ೨೦೦ ದಳಗಳನ್ನಾದರೂ ಇಟ್ಟುಕೊಳ್ಳಬೇಕೆಂದೂ ರೋಮ್ ರೇಡಿಯೋದಲ್ಲಿ ಹೇಳಲಾಗಿದೆ ಈ ರೀತಿ ಭೀಮ ಬಯಾನಕವಾಗಿ ಜರ್ಮನರೂ ರಶ್ಯನರೂ ಮುಂದಿನ ಯುದ್ಧಕ್ಕೆ ಸಕಲ ಸಿದ್ಧತೆಗಳನ್ನು ಮಾಡುತ್ತಿರುವರು.

'ಕಮಿಂಟರ್ನ್' ರದ್ದಾಯಿತು!

ರಶ್ಯಾದಲ್ಲಿರುವ ಅಂತರ್‍ರಾಷ್ಟ್ರೀಯ ಕಮುನಿಸ್ಟ್ ಸಂಸ್ಥೆ ಕಮಿಟರ್ನನ್ನು ಸ್ಟಾಲಿನ್ ಈಗ ರದ್ದುಗೊಳಿಸಿದ್ದಾರೆ ಹೀಗೆ ಮಾಡಿದುದರ ಕಾರಣವೇನೆಂದು ಸ್ಟಾಲಿನರೇ ಹೀಗೆ ವಿವರಿಸುತ್ತಾರೆ (೧) ಅಂತರ್‍ರಾಷ್ಟ್ರೀಯ ಕಮುನಿಸ್ಟ್ ಸಂಸ್ಥೆಯನ್ನು ರದ್ದುಗೊಳಿಸಿದ್ದರಿಂದ, ಎಲ್ಲಾ ರಾಷ್ಟ್ರಗಳೂ ಒಂದಾಗಿ ಹಿಟ್ಲರ್ ವಿರುದ್ಧ ಯುದ್ಧ ಹೂಡಲು ಅನುಕೂಲವಾಯಿತು, ಹಿಟ್ಲರ್ ಕಡೆಯವರು, ಯಾವಾಗಲೂ ಅಪಪ್ರಚಾರ ಮಾಡಿ, ಪ್ರತಿಯೊಂದು ದೇಶದಲ್ಲಿಯೂ ರಶ್ಯವು ಕೈಹಾಕಿ ಬೊಲ್ಶೆವಿಸಂ ತತವನ್ನು ಬೇರೂರಿಸುವುದೆಂದು ಹೇಳುತ್ತಿದ್ದರು, ಆ ಅಪಪ್ರಚಾರವೀಗ ಕೊನೆಗೊಂಡಿತು. (೨) ಬೇರೆಬೇರೆ ದೇಶಗಳಲ್ಲಿರುವ ಕಮುನಿಸ್ಟರು, ತಮ್ಮ ದೇಶದ ಜನರ ಹಿತದ ಸಲುವಾಗಿ ದುಡಿಯುತ್ತಿಲ್ಲ, ಅವರು ಹೊರಗಿನ ಆಜ್ಞೆಗನುಸಾರ ವರ್ತಿಸುತ್ತಾರೆಂಬ ಆರೋಪವಿತ್ತು, ಅದೂ ಈಗ ರದ್ದಾದ ಹಾಗಾಯಿತು. (೩) ಸ್ವಾತಂತ್ರ್ಯಪ್ರಿಯ ರಾಷ್ಟ್ರಗಳ ಬೇರೆ ಬೇರೆ ಪ್ರಗತಿಪರ ಪಕ್ಷಗಳು ಜಾತಿ, ಮತ ಮುಂತಾದ ಸಂಕುಚಿತ ಭಾವನೆಗಳನ್ನು ಬಿಟ್ಟು ಒಂದಾಗಿ, ಫೇಸಿಸಂ ವಿರುದ್ಧ ಹೋರಾಡಿ ಬಿಡುಗಡೆ ಮಾಡಿಕೊಳ್ಳಲು ಅನುಕೂಲವಾಯಿತು. (೪) ಎಲ್ಲಾ ದೇಶಗಳ ರಾಷ್ಟ್ರಭಕ್ತರೂ ಒಂದಾಗಿ, ಜಗತ್ತನ್ನೇ ನುಂಗುತ್ತಿರುವ ಹಿಟ್ಲರಿಸಮನ್ನು, ಒಂದೇ ಜನಾಂಗವಾಗಿ ನಿಂತು, ನಾಶಮಾಡಲು ಸಹಾಯವಾಗುವುದು

"ಹೀಗಾಗರೆ ಮುಂಧಿನ ಜಗತ್ತಿನಲ್ಲಿ ಪ್ರತಿಯೊಂದು ರಾಷ್ಟ್ರವು ಸಮತಾ ಭಾವನೆಯ ತಳಹದಿಯಲ್ಲಿ ಜೀವಿಸಲು ಸಾಧ್ಯವಾಗುವುದು ಕೊಬ್ಬಿ ಬರುವ ಫೇಸಿಸ್ಟ್ ಶಕ್ತಿಯನ್ನು ಮರ್ದಿಸಲು ಹೀಗೆ ಅಂತರ್‍ರಾಷ್ಟ್ರೀಯ ಸಂಸ್ಥೆಯನ್ನು ರದ್ದು ಮಾಡಬೇಕಾಯಿತು, ಇದು ಕಾಲೋಚಿತವೂ ಆಯಿತು." ಹೀಗೆಂದು ಸ್ಟಾಲಿನರು ವಿವರಿಸಿ ಹೇಳಿದ್ದಾರೆ ಅಂತೂ ಸ್ಟಾಲಿನರ ಈ ನಿರ್ಧಾರವು ಪ್ರಶಸ್ತವೆನಬೇಕು ಇದರಿಂದ ಅಮೆರಿಕ ಬ್ರಿಟನ್ ಮೊದಲಾದ ಭಂಡವಾಳ ಶಾಹೀ ಮಿತ್ರ ರಾಷ್ಟ್ರಗಳ ಸಂಶಯವೂ ಕೊಂಚ ಕಡಿಮೆಯಾದೀತು, ಶತ್ರುವಿನ ಅಪಪ್ರಚಾರಕ್ಕೂ ತಡೆಯಾದೀತು. ಬೇರೆಬೇರೆ ದೇಶಗಳಲ್ಲಿರುವ ಕಮುನಿಸ್ಟರಿಗೆ ಸ್ವಬುದ್ಧಿಯನ್ನುಪಯೋಗಿಸಿ ರಾಷ್ಟ್ರಹಿತಕಾರ್ಯ ಮಾಡಲುಸಂದರ್ಭವೊದಗಿದಂತೆಯೂ ಆಯಿತು ಕಮುನಿಸ್ಟರು ತಮ್ಮ ಆದರ್ಶ ಸಂಸ್ಥೆಯಿದನ್ನು ಹೀಗೆ ವಿಸರ್ಜಿಸಬೇಕಾಗಿ ಬಂದದ್ದನ್ನು ನೋಡಿದರೆ, ರಶ್ಯನರು ಎಷ್ಟರಮಟ್ಟಿಗೆ ಜರ್ಜರಿತರಾಗಿ ಮಿತ್ರ ರಾಷ್ಟ್ರಗಳ ನೆರವನ್ನು ಹಾರೈಸುತ್ತಿರುವರೆಂಬುದು ವಿದಿತವಾಗುತ್ತಿದೆ. ತಮ್ಮ ಆದರ್ಶವನ್ನಾದರೂ ಬದಿಗಿಟ್ಟು ವರ್ತಿಸಿದ ರಶ್ಯನರ ಮೇಲೆ ಮಿತ್ರರಿಗೆ ಇನ್ನಾದರೂ ದಯೆ ಒಂದೀತೇ ನೋಡಬೇಕು

ಟುನಿಸಿಯಾ ಜಯದ ಗುಟ್ಟು

ಟುನಿಸಿಯಾದಲ್ಲಿ ಇಂಥಾ ವಿಜಯ ದೊರೆತ ಬಗ್ಗೆ ಎಲ್ಲರಿಗೂ ಆಶ್ಚರ್ಯ! ಜರ್ಮನಿಯ ಈ ಸೋಲಿಗೆ ಕಾರಣವಾದರೂ ಏನು? ಎಂದು ನಾವು ತುಸು ವಿಚಾರಿಸಬೇಕು. ಟುನಿಸಿಯಾ ಸೋಲಿನಿಂದಲೇ ಜರ್ಮನಿ ದುರ್ಬಲವಾಯಿತೆಂದು ಹೇಳುವುದೂ ಅಷ್ಟು ಸಮಂಜಸವಲ್ಲ, ರೊಮೆಲನು ಸಮರ ನೀತಿಯನ್ನು ಬದಲಾಯಿಸಿದ್ದೇ ಕಾರಣವೆಂದು ನಮಗನಿಸುತ್ತದೆ. ಏಕೆಂದರೆ, ಮೊತ್ತಮೊದಲು ಜರ್ಮನ್ ಸೇನೆ ಬ್ರಿಟಿಷರನ್ನು ಅಲೆಗ್ಝಾಂಡ್ರಿಯದ ವರೆಗೆ ಹೊಡೆದೋಡಿಸಿತು, ಆಗ ಜರ್ಮನರು ಆಕ್ರಮಣ ಧೋರಣೆ ಕೈಕೊಂಡಿದ್ದರು ಆದರೆ ಬ್ರಿಟಿಷ್ ಅಷ್ಟಮದಳ ತಿರುಗಿ ಬಿದ್ದ ಮೇಲೆ ಎಲ್ ಅಲೆಮನ್ ಬಳಿಯಿಂದ ರೊಮೆಲ್ ಹಿಂತಿರುಗಿದ, ಆಗ ಮೇಲ್ಗೈ ಬ್ರಿಟಿಷರಿಗಾಯಿತು, ಆಕ್ರಮಣಗಾರರು ಬ್ರಿಟಿಷರಾದರು. ಮುಂದೆ ಮಾರೆಥ್ ಕೋಟೆಗೆ ಓಡಿಬಂದು ಅಲ್ಲಿ ನಿಂತು ಹೋರಾಡಬೇಕೆಂದು ರೋಮೆಲ್ ಬಯಸಿದ ಅಲ್ಲಿಯೂ ಆತನಿಗೆ ಪ್ರತಿಭಟಿಸುವುದಾಗಲಿಲ್ಲ, ರಕ್ಷಣೆ ಮಾಡಿಕೊಳ್ಳುವುದೂ ಪೂರೈಸಲಿಲ್ಲ ಬ್ರಿಟಿಷ್ ಸೈನ್ಯವು ಒಂದೇ ಸವನೆ ಆಕ್ರಮಣ ಮಾಡುತ್ತಾ ಹೊಡೆದೋಡಿಸುತ್ತಾ ಬಂತು. ಇದನ್ನು ನಿರೀಕ್ಷಿಸಿದರೆ ಇಂದಿನ ಯುದ್ಧದಲ್ಲಿ ಆಕ್ರಮಣ ಧೋರಣೆ ಕೈಕೊಂಡವನೇ ಗೆಲ್ಲುತ್ತಾನೆ, ರಕ್ಷಣಾ ಧೋರಣೆ ಕೈಕೊಂಡವ ಸೋಲುತ್ತಾನೆ. ಎಂಬುದು ಸ್ಪಷ್ಟವಾಗುತ್ತದೆ, ಅಂತ್ಯ ಜಯವು ಯಾವುದನ್ನು ಹೊಂದಿಕೊಂಡಿದೆಯೆಂಬ ವಿಚಾರ ಬೇರೆ, ಆದರೆ ಇಂದಿನ ಸಂಗತಿ ಹೀಗೆ ನಿಂತಿದೆ 'ಅಡಿಯ ಮುಂದಿಡೆ ಸ್ವರ್ಗ, ಅಡಿಯ ಹಿಂದಿಡೆ ನರಕ' ಇದು ನಿಜವಾಗಿಯೂ ಸಾವಿರ ಸತ್ಯ! ರೊಮೆಲನು ಅಡಿಯನ್ನು ಹಿಂದಿಟ್ಟೇ ಸೋತು ಹೋದ' ಟುನಿಸಿಯಾ ವಿಜಯದ ಗುಟ್ಟು ಇಲ್ಲಿದೆ

ಮುಂದಿನ ವಿಚಾರವೇನಂತೆ?

ಟುನಿಸಿಯವನ್ನು ಗೆದ್ದು, ಗೆದ್ದ ಬಗ್ಗೆ ಊಟ ಉತ್ಸವಗಳನ್ನು ಮಾಡಿಯೂ ಆಯಿತು! ಆದರೆ ಮುಂದೇನು ಎಂಬುದೇ ಎಲ್ಲರ ಪ್ರಶ್ನೆ? ಈ ಕುರಿತು ಇದುವರೆಗೆ ಯಾರೂ ನಿಶ್ಚಯ ಹೇಳುವುದೇ ಇಲ್ಲ ವಾಶಿಂಗ್‌ಟನಿನಲ್ಲಿ ಮಹಾ ಮುಖಂಡರು ಚರ್ಚಿಲ್ ರೂಸ್‌ವೆಲ್ಟರು ದೀರ್ಘ ಚರ್ಚೆ ಮಾಡಿದ್ದಾರೆ ಅವರ ಚರ್ಚೆಯ ವಿವರವೂ ಹೊರಬಿದ್ದಿಲ್ಲ 'ಎಲ್ಲಾ ರಣರಂಗಗಳಲ್ಲಿಯೂ ಮುಂದ ಕೈಕೊಳ್ಳಬೇಕಾದ ಕಾರ್ಯಕ್ರಮಗಳ ಬಗ್ಗೆ ಸಂಪೂರ್ಣ ಒಮ್ಮತವಾಯಿತು' ಎಂದಿಷ್ಟೇ ವಿವಯ ಪ್ರಕಟವಾಗಿದೆ ಈ ಒಂದು ವಾಕ್ಯದಿಂದವನೂ ವಿವರ ತಿಳಿಯುವೊಲ್ಲದು ಹಾಗಾಗಿ ಮುಂದಿನ ವಿಚಾರವು ಇನ್ನೂ ಸಮಸ್ಯೆಯಾಗಿಯೇ ಉಳಿದಿದೆ ಯೂರೋಪಿನ ಮೇಲೆ ಧಾಳಿಯಿಡುವುದು ಮಿತ್ರರ ಮುಂದಿನ ಉದ್ದೇಶವೆಂದು ಕೆಲವರು ಹೇಳುತ್ತಾರೆ ಟುನಿಸಿಯಾ ವಿಜಯದಿಂದ, ಈ ಮರುಭೂಮಿಯ ಹೋರಾಟದಿಂದ ಇನ್ನೇನೂ ಪ್ರಯೋಜನ ದೊರಕದಿದ್ದರೂ, ಯೂರೋಪಿಗೆ ಧಾಳಿಯಿಡಲು ಮುಕ್ತದ್ವಾರವಾಯಿತೆಂದು ಮಿತ್ರಪಕ್ಷದವರ [illegible]ಬೋಣ ಹೀಗಾಗಿ ಕೂಡಲೇ ಇಟಲಿಗೆ ಧಾಳಿಯಿಡಲಾಗುವುದೆಂದೂ, ಇಟಲಿಯು ಬೇಗನೇ ಜರ್ಜರಿತವಾಗುವುದೆಂದೂ, ಮಿತ್ರರ ಪೆಟ್ಟಿನಿಂದ ಇಟಲಿಯನ್ನು ರಕ್ಷಿಸುವುದೇ ಸಾಧ್ಯವಿಲ್ಲವೆಂದೂ ದಿನಹೋದಂತೆ ಇಟಲಿಯನ್ನು ಬೆದರಿಸುವ ಕಾರ್ಯಕ್ರಮ ನಡೆದಿದೆ ಬೆದರಿಸಿಯೇ ಶತ್ರುವಿನ ಧೈರ್ಯಗೆಡಿಸುವುದೂ ಒಂದು ಸಮರ ನೀತಿ ಇಟಲಿಯಲ್ಲಿ ಇದು ಫಲಕಾರಿಯಾಗಲಿಕ್ಕಿಲ್ಲವೆಂದಾದರೂ ಹೇಗೆ ಹೇಳುವುದು? ಇಟಲಿಯನರು ಪುಕ್ಕರಾದರೆ ಖಂಡಿತ ಫಲಕಾರಿಯಾದೀತು ಈ ಬೆದರಿಕೆಯು ಫಲಕಾರಿಯಾಗುವಂತೆ ಇತ್ತೀಚೆಗೆ ಇಟಲಿಯ ಕೆಲವು ಭಾಗಗಳ ಮೇಲೆ, ಸಿಸ್ಲಿ ಮೊದಲಾದ ಕಡೆಗಳಿಗೆ ಮಿತ್ರರು ಬಾಂಬು ಸುರಿಸಿಯೂ ಬಿಟ್ಟಿದ್ದಾರೆ. ಇನ್ನೊಂದು ಸುದ್ದಿ ಇಟಲಿಯ ರಣ ಭಾರವಿಳಿಸುವಂತೆ ದ್ವಿತೀಯ ರಂಗವನ್ನು ತೆರೆಯಲಾಗುವುದೆಂದು! ಅಂತೂ ಈ ಯುದ್ಧವನ್ನುಗೆಲ್ಲಬೇಕಾದರೆ ಇಂದಲ್ಲ ನಾಳೆಯಾದರೂ ದ್ವಿತೀಯ ರಂಗ ತೆರೆಯಲೇಬೇಕು; ಈಗಲೇ ದ್ವಿತೀಯ ರಂಗ ತೆರೆದರಂತೂ ಒಳ್ಳೆಯದೇ. ಏಕೆಂದರೆ ಅದರಂತೆ ರಶ್ಯನರಲ್ಲಿ ಹೋರಾಟದ ಶಕ್ತಿ ಇರುವಾಗಲೇ, ಇನ್ನೊಂದೆಡೆ ಮಿತ್ರರೂ ಶತ್ರುವನ್ನು ಬಲವಂತವಾಗಿ ಪ್ರತಿಭಟಿಸಿ ಬಿಟ್ಟರೆ, ಶತ್ರುವನ್ನು ಇಕ್ಕಳದಲ್ಲಿ ಕೆಡವಿದಂತೆ ಆಗುವುದು ಹಾಗಾಗಿ ದ್ವಿತೀಯ ರಂಗ ತೆರೆಯಲು ತಡಮಾಡಿದಷ್ಟೂ ಯುದ್ಧ ವಿಜಯವನ್ನು ಸಾವಕಾಶ ಮಾಡಿದಂತಾಗುತ್ತದೆ. ಯೂರೋಪಿನ ಧಾಳಿಯನ್ನಾದರೆ, ಯಾವ ಕಡೆ ಸುರುಮಾಡುತ್ತಾರೆ, ದ್ವಿತೀಯ ರಂಗವನ್ನಾದರೂ ಹೇಗೆ ಪ್ರಾರಂಭಿಸುತ್ತಾರೆ, ರಶ್ಯದ ಹೊರೆಯನ್ನು ಹೇಗೆ ಇಳಿಸುತ್ತಾರೆ, ಇದೊಂದೂ ಸದ್ಯ ನಮಗೆ ತಿಳಿಯುವೊಲ್ಲದು'

ಚೀನಾ ಮತ್ತು ಜಪಾನು

ಚೀನಾ ಜಪಾನುಗಳೊಳಗೆ ನಿರಂತರ ಯುದ್ಧ ಸಾಗುತ್ತಲೇ ಇದೆ ಯಾಂಗ್‌ಟ್ಸೀ ನದೀ ತೀರದಲ್ಲಿ ಭೀಕರ ಹೋರಾಟವಾಗಿದೆ— ಚುಂಕಿಂಗನ್ನು ವಶಪಡಿಸಿಕೊಳ್ಳುವ ಸಾಹಸವನ್ನು ಜಪಾನರು ಮಾಡುತ್ತಿರುವರು. ಅಲ್ಲದೆ ಚಿಟಗಾಂಗವನ್ನು ಸ್ವಾದೀನಮಾಡಿಕೊಳ್ಳುವ ಪ್ರಯತ್ನವನ್ನೂ ಜಪಾನರು ಬಿಟ್ಟಿಲ್ಲ ಭಾರತಕ್ಕು ಆ ಮೂಲಕ ಜಪಾನಿನ ಬೆದರಿಕೆ ಇದ್ದೇ ಇದೆ ಅಟು ದ್ವೀಪವನ್ನು ಮಾತ್ರ ಜಪಾನರು ಬಿಟ್ಟುಕೊಡಬೇಕಾಯಿತು ಅಲ್ಲಿ ಅಮೆರಿಕಕ್ಕೆ ಮೇಲುಗೈದೊರಕಿದೆ ಜಪಾನು ಒಂದೆಡೆ ಚೀನದೊಡನೆ ಯುದ್ಧ ಮಾಡುತ್ತಿದ್ದಂತೆಯೇ ಇನ್ನೊಂದು ಕಡೆ ಒಪ್ಪಂದ ಕರಾರುಗಳನ್ನು ಕಳುಹಿಸಿದೆಯೆಂಬ ಸುದ್ದಿಯಿದೆ ಚೀನರು ಮಿತ್ರರ ಸಹಾಯ ಬಿಟ್ಟುಬಿಡುವುದು, ೧೯೩೭ರಲ್ಲಿದ್ದ ಪ್ರಾದೇಶಿಕ ಸ್ಥಳಗಳನ್ನು ಜಪಾನು ಚೀನಕ್ಕೆ ತಿರುಗಿ ಕೊಡುವುದು, ಮುಂದ ಕ್ರೋಚೀನ ಜಪಾನು ಎರಡರ ಒಡೆತನದಲ್ಲಿರುವುದು, ಚೀನಕ್ಕೆ ಜಪಾನು ಸಾಲಕೊಡುವುದು ಇವೇ ಮೊದಲಾದವುಗಳು ಕರಾರುಗಳ ಶರತಗಳೆಂದು ಕೇಳಿಬರುತ್ತವೆ ಈ ಸುದ್ದಿಯೆಷ್ಟರ ಮಟ್ಟಿಗೆ ಸತ್ಯವೋ ಹೇಳಬರುವುದಿಲ್ಲ ಹೇಗಿದ್ದರೂ, ಜಪಾನು ಬೇರೆ ಬೇರೆ ರಣರಂಗಗಳಲ್ಲಿ ಸಿದ್ಧತೆಮಾಡಿಕೊಂಡೇ ಇದೆ ಆಸ್ಟ್ರೇಲಿಯದ ಹತ್ತಿರ ಜಪಾನಿನ ಸಮರ ಸನ್ನಾಹ ನಡೆದಿದೆ ನೈಋತ್ಯ ಪೆಸಿಫಿಕ್ಕಿನಲ್ಲಿ ಜಪಾನು ಅಸಂಖ್ಯ ಸೈನ್ಯ ಸಂಗ್ರಹ ಮಾಡಿದೆಯೆಂದು ಪ್ರಸಿದ್ಧವಾಗಿದೆ ಈ ರೀತಿ ಜಪಾನರು ಆಸ್ಟ್ರೇಲಿಯದ ಮೇಲೇರಿ ಹೋಗುವ ಸಿದ್ಧತೆ ಮಾಡುತ್ತಿರುವಾಗಲೇ ರಶ್ಯಕ್ಕೂ ಧಾಳಿಯ ಬೆದರಿಕೆ ಹಾಕಿದ್ದಾರೆ. ಸೈಬೇರಿಯದಲ್ಲಿ ಮಿತ್ರಪಕ್ಷದವರಿಗೆ ಧಾಳಿಯಿಡಲು ಆಸ್ಪದ ಕೊಟ್ಟರೆ, ನಿಮ್ಮ ಮೇಲೆ ಬಲವಂತವಾದ ಪೆಟ್ಟು ಹಾಕುವೆವೆಂದು ಜಪಾನು ರಶ್ಯವನ್ನು ಬೆದರಿಸುತ್ತದೆ ಹಾಗಾದರೆ, ರಶ್ಯವು ಜಪಾನ್ ಜರ್ಮನಿ ಈ ಎರಡು ಪ್ರಬಲ ಶತ್ರುಗಳನ್ನೂ ಏಕ ಕಾಲದಲ್ಲಿಯೇ ಎದುರಿಸುವ ಪೇಚಾಟಕ್ಕೆ ಬೀಳಬೇಕಾಗುವುದು!

ಸ್ವದೇಶಾಭಿಮಾನಿ

ತಾರೀಕು 4—6—1943

ಅಕ್ಕಿಕ್ರಯನಿಯಂತ್ರಣ ಏನಾಯಿತು?

ನಮ್ಮ ಜಿಲ್ಲೆಯಲ್ಲಿ ಅಕ್ಕಿಯ ಕ್ರಯ ನಿಯಂತ್ರಣವು ಜಾರಿಗೆ ಬಂತು—ಎಂದರೆ ಹಾಗೆಂದು ಪತ್ರಿಕೆಗಳಲ್ಲಿ ಪ್ರಕಟವಾಯಿತು; ಆಗ ಕೆಲವು ಅಂಗಡಿಗಳ ಜಪ್ತಿಯೂ ಆಯಿತು. ಆದರೆ ಕ್ರಯ ನಿಯಂತ್ರಣ ಮಾಡಿದ ಫಲವಾಗಿ, ನಿಯಂತ್ರಿತ ಕ್ರಯದಲ್ಲಿ ಎಷ್ಟು ಜನರಿಗೆ ಅಕ್ಕಿ ಸಿಕ್ಕಿದೆ, ಸಿಕ್ಕುತ್ತದೆ? ಈ ವಿಚಾರ ಮಾಡುವಾಗ ತುಂಬಾ ಖೇದವಾಗುತ್ತದೆ.

ಕ್ರಯನಿಯಂತ್ರಣ ಮಾಡಿದ ಕೆಲವು ದಿನಗಳಲ್ಲಿ ಮಾತ್ರ, ಏನೋ ಒಂದು ತರದ, ಊಟಮಾಡಲು ಸಾಧ್ಯವೇ ಇಲ್ಲದ ಅಕ್ಕಿ ನಿಯಂತ್ರಿತ ಕ್ರಯಕ್ಕೆ ದೊರಕುತಿತ್ತು. ಆ ಸಮಯದಲ್ಲಾದರೂ, ಒಳ್ಳೆಯ ಅಕ್ಕಿಗೆ, ಎಂದರೆ ಊಟ ಮಾಡಬಹುದಾದಂಥ ಅಕ್ಕಿಗೆ ಕ್ರಯ ಹೆಚ್ಚೇ ಇತ್ತು. ಅದಾದ ಮೇಲೆ ಕೆಲ ದಿನಗಳ ನಂತರ 'ರಿಕ್ವಿಸಿಶನ್ ಅಕ್ಕಿ ಇಲ್ಲ; ವರ್ಗದಾರರ ಅಕ್ಕಿ ಇರುವುದು, ಅದಕ್ಕೆ ಕ್ರಯ ಹೆಚ್ಚು' ಎಂದು ವ್ಯಾಪಾರಸ್ಥರು ಹೇಳತೊಡಗಿದರು; ಆ ಹೇಳಿಕೆಯಂತೆ ಹೆಚ್ಚಿಗೆ ಕ್ರಯದಲ್ಲಿ ಬಹಿರಂಗವಾಗಿಯೇ ಮಾರತೊಡಗಿದರು. ಈ ಸಂದರ್ಭದಲ್ಲಿಯೂ ಒಮ್ಮೆ ಅಧಿಕಾರಿಗಳು ಬಂದು ಕೆಲ ಅಂಗಡಿಗಳನ್ನು ಜಪ್ತಿಮಾಡಿ, ವರ್ಗದಾರರ ಅಕ್ಕಿಯನ್ನಾದರೂ ಹೆಚ್ಚು ಕ್ರಯದಲ್ಲಿ ಮಾರಾಟಮಾಡಲು ಅಧಿಕಾರವಿಲ್ಲವೆಂದು ಹೆದರಿಸಿ ಹೋಗಿದ್ದರು. ಆದರೆ ಆ ಹೆದರಿಕೆಯ ನಂತರ ಏನು ಕಾರ್ಯಕ್ರಮ ಕೈಕೊಂಡರೋ ನಮಗೆ ತಿಳಿಯದು. ಅಂತೂ ಒಂದೆರಡೇ ದಿನಗಳಲ್ಲಿ ವರ್ಗದಾರರ ಅಕ್ಕಿ ಮುಡಿಗೆ ಹತ್ತುವರೆ ರೂಪಾಯಿ ಕ್ರಯದಲ್ಲಿ,—ಅಧಿಕಾರಿಗಳು ಒಪ್ಪಿದ ಕ್ರಯವೋ ಎಂಬಂತೆ—ಅಕ್ಕಿಯು 'ರಾಜಮರ್ಜಿ'ಯಲ್ಲಿ ಮಾರಾಟವಾಯಿತು. ಇದಾಗಿ ಕೆಲದಿನಗಳೂ ದಾಟಲಿಲ್ಲ; ವರ್ಗದಾರರ ಅಕ್ಕಿಯಾದರೂ ಊಟಮಾಡುವ ಅಕ್ಕಿ ಸಿಗಬೇಕಾದರೆ ಕ್ರಯ ಮತ್ತೂ ಹೆಚ್ಚು ಕೊಡಬೇಕಾಗಿದೆ. ಹೀಗೆ ಹೆಚ್ಚಿದ ಕ್ರಯವು ಈಗಲೂ ದಿನಂಪ್ರತಿ ಹೆಚ್ಚುತ್ತಲೇ ಇದೆ. ಅಕ್ಕಿ ಮುಡಿ ಒಂದರ ರೂಪಾಯಿ ಹನ್ನೆರಡಕ್ಕಿಂತ ಮಿಕ್ಕಿ ಈಗ ಕೊಡಬೇಕಾಗಿದೆ. ಇನ್ನೂ ಹೆಚ್ಚಾಗುವ ಲಕ್ಷಣಗಳೇ ಇವೆ.

ಇದೆಲ್ಲಾ ನೋಡುವಾಗ ಅಕ್ಕಿ ಕ್ರಯ ನಿಯಂತ್ರಣವು 'ಏನಾಯಿತು? ಎಂಬ ಪ್ರಶ್ನೆ ಹುಟ್ಟುತ್ತದೆ. ಅಧಿಕಾರಿಗಳು 'ರಿಕ್ವಿಸಿಶನ್' ಮಾಡಿದ ಅಕ್ಕಿಗೆ ಮಾತ್ರ ಕ್ರಯ ನಿಯಂತ್ರಣವಾದರೆ, ಎಲ್ಲಾ ಅಕ್ಕಿಯನ್ನೂ ಯಾಕೆ 'ರಿಕ್ವಿಸಿಶನ್' ಮಾಡಬಾರದಿತ್ತು ಎಂಬುದು ನಮ್ಮ ಪ್ರಶ್ನೆ? 'ರಿಕ್ವಿಸಿಶನ್ ಅಕ್ಕಿ' 'ವರ್ಗದಾರರ ಅಕ್ಕಿ' ಎಂಬೀ ಭೇದದಿಂದ ವ್ಯಾಪಾರ ಮಾಡಲು ಬಿಟ್ಟದ್ದೇ ಹೀಗೆ ಕ್ರಯ ಏರಲು ಅನುಕೂಲವಾಗಿದೆ. ಅಥವಾ ವರ್ಗದಾರರ ಅಕ್ಕಿಗಾದರೂ ಒಂದು ಮಿತಿಯ ಕ್ರಯ ನಿರ್ಧರಿಸಿದ್ದರೆ ಅದಾದರೂ ಸಹಿಸಬಹುದಿತ್ತಲ್ಲಾ? ಇಂದಿನೀ ಪರಿಸ್ಥಿತಿಯೇ ಕೆಲದಿನ ಮುಂದುವರಿದರೆ ಜನತೆಯ ಕಳವಳ ಖಂಡಿತ ಹೆಚ್ಚಾಗದಿರದು. ಅಧಿಕಾರಿಗಳು, ಸಾರ್ವಜನಿಕರು ಇದನ್ನು ನೋಡಿ ಕಣ್ಣುಮುಚ್ಚಿಕೊಂಡಿರಬಾರದು. ಈಗಾಗಲೇ ತಕ್ಕ ಕಾರ್ಯಕ್ರಮ ಕೈಕೊಂಡರೆ ಪರಿಸ್ಥಿತಿಯನ್ನು ಸಮಾಧಾನಕ್ಕೆ ತರಬಹುದು. 'ರೋಗ ಬಂದ ಮೇಲೆ ಮದ್ದು ಮಾಡುವುದಕ್ಕಿಂತ ರೋಗ ಬರದಂತೆ ನಿವಾರಿಸುವುದೇ ಉತ್ತಮ'ವಲ್ಲವೆ?

ಗಾಂಧಿಜಿ ಪತ್ರ

ಗಾಂಧಿಜಿ ಜಿನ್ನರನ್ನು ಭೇಟಿಯಾಗಬೇಕೆಂದು ಸೂಚಿಸಿಪತ್ರವೊಂದನ್ನು ಬರೆದರು; ಸರಕಾರವು ತನ್ನ 'ಧೋರಣೆಯಂತೆ' ಅದನ್ನು ಜಿನ್ನರಿಗೆ ತಲಪಿಸಲಿಲ್ಲ. ಮಾತ್ರವಲ್ಲದೆ ಈ ವಿಷಯವನ್ನು ಜಿನ್ನರಿಗೂ ಗಾಂಧಿಜಿಗೂ ತಿಳಿಸಿದೆ. ಸದ್ಯ ಈ ವಿಚಾರವು ದೇಶದಲ್ಲಿ ಕೋಲಾಹಲವನ್ನುಂಟುಮಾಡಿದ ವಾರ್ತೆಯಿರುತ್ತದೆ.

ಹಿಂದು ಮುಸ್ಲಿಂ ಒಪ್ಪಂದವಾಗದೆ, ಸ್ವರಾಜ್ಯ ಕೊಡಲು ಸಾಧ್ಯವಿಲ್ಲವೆಂದು ಸರಕಾರ ಸಾರುತ್ತಿದೆ. ಹಿಂದೂ ಮುಸ್ಲಿಂ ಒಪ್ಪಂದಕ್ಕೆ ದೇಶದ ಪ್ರಮುಖ ಮುಖಂಡರಾದ ಗಾಂಧಿ ಜಿನ್ನಾ ಭೇಟಿಯಾಗಿ ಮಾತುಕತೆ ನಡೆಸುವುದು ಅವಶ್ಯವಲ್ಲವೆ? ಅದಕ್ಕೆ ಅನುಕೂಲ ಮಾಡಿಕೊಡದ ಸರಕಾರವು, ಭಾರತದ ಸ್ವಾತಂತ್ರ್ಯದ ವಿಷಯ ಹಿಂದೂ ಮುಸ್ಲಿಂ ಬಿಕ್ಕಟ್ಟಿನ ಕಡೆಗೆ ಬೆರಳೆತ್ತಿ ತೋರಿಸುವುದರಲ್ಲಿ ಸ್ವಾರಸ್ಯವೇನಿದೆ?

'ಹಿಂದು ಮುಸ್ಲಿಂ ಐಕ್ಯವಾಗುವುದು ನನಗೂ ಬೇಕಾಗಿದೆ. ಗಾಂಧಿಜಿಗೆ ಆ ವಿಷಯದಲ್ಲಿ ನಿಜವಾಗಿ ಪ್ರಯತ್ನ ಮಾಡಬೇಕೆಂದು ಮನಸ್ಸಿದ್ದರೆ, ವೈಸರಾಯರಿಗೆ, ಅವರಿವರಿಗೆ ಪತ್ರ ಬರೆದು ಏನು ಪ್ರಯೋಜನ? ನನಗೆ ಸೀದಾ ಬರೆಯಲಿ, ಹಾಗೆ ನನಗೆ ಗಾಂಧಿ ಪತ್ರ ಬರೆದರೆಂದರೆ ಅದನ್ನು ತಡೆಗಟ್ಟುವ ಶಕ್ತಿ ಯಾರಿಗಿದೆಯೋ ನೋಡುತ್ತೇನೆ' ಹೀಗೆಂದು ಜಿನ್ನಾ ಸಾಹೇಬರೇ ಮೊನ್ನೆ ತಾನೆ ಕೂಗೆಬ್ಬಿಸಿದ್ದರು! ಗಾಂಧಿಜಿ ಪತ್ರವನ್ನೂ ಬರೆದರು; ಸರಕಾರದವರದನ್ನು ತಡೆಗಟ್ಟಿಯೂ ಬಿಟ್ಟರು! ಜಿನ್ನಾಸಾಹೇಬರ ಆರ್ಭಟೆಗೆ ಬೆಲೆಯೇನು?

ಗಾಂಧಿಜಿ ಸಾವಿರಾರು ಸಲವಾದರೂ ಜಿನ್ನಾ ಸಾಹೇಬರನ್ನು ಕಾಣುವವರೇ; ಎಷ್ಟೇ ಪ್ರಯಾಸವಾದರೂ ಹಿಂದೂ ಮುಸ್ಲಿಂ ಐಕ್ಯ ಪ್ರಯತ್ನ ಮಾಡುವವರೇ; ಸರಕಾರವಾದರೂ ಸದ್ಯ 'ತನ್ನ ಧೋರಣೆಯಂತೆ' ಗಾಂಧಿ ಜಿನ್ನಾ ಭೇಟಿಗೆ ಅವಕಾಶ ಕೊಡುವುದಿಲ್ಲವೆಂಬುದೂ ಖಂಡಿತ. ಜಿನ್ನಾ ಸಾಹೇಬರು ಈಗಲೂ 'ಪಾಕಿಸ್ಥಾನವೆನ್ನುತ್ತಾ ಅರಚುತ್ತಿದ್ದರೆ ಸಾಕೆ?

ಸ್ವದೇಶ ಸಮಾಚಾರ

ಗ್ಯಾಯರ ಬಾಯಿಗೂ ಬೀಗಮುದ್ರೆ!

ಭಾರತದ ಆಕಾಶವಾಣಿ ಸಂಸ್ಥೆ ಬ್ರಿಟಿಷರ ಬಾಯಿ ಬಡಾಯಿ ಸಂಸ್ಥೆ! ಕಾಂಗ್ರೆಸ್ಸು, ಗಾಂಧಿ ಈ ಹೆಸರು ಬಂದರೆ, ಈ ಆಕಾಶವಾಣಿಯವರ ಮೈ ಸುಟ್ಟಂತೆ ಆಗುತ್ತದೆ. ಮೊನ್ನೆ ಮೊನ್ನೆ ಆಕಾಶವಾಣಿಯಲ್ಲಿ ಸರ್ ಮೋರಿಸ್ ಗ್ವಾಯರರ ಭಾಷಣವೊಂದು ಏರ್ಪಟ್ಟಿತ್ತು. ಸರ್ ಗ್ವಾಯರರು ಭಾಷಣವನ್ನು ಬರೆದು ಕಳುಹಿಸಿದರು. ಅವರ ಭಾಷಣದ ಮಾತುಗಳನ್ನು ಕೆಲವನ್ನು ಕತ್ತರಿಸಬೇಕೆಂದರು ಆಕಾಶವಾಣಿಯವರು. ಮಾತು ಕತ್ತರಿಸಿ ಭಾಷಣ ಕೊಡಲಾರೆನೆಂದರು ಗ್ವಾಯರು. ಸರ್ ಗ್ವಾಯರರು ಯುರೋಪಿಯನರಾದರೂ, ಉಚ್ಚ ಅಧಿಕಾರಿಗಳಾದರೂ, ಮೊನ್ನೆ ಮೊನ್ನೆ ಫೆಡರಲ್ ಕೋರ್ಟು ನ್ಯಾಯಾಧೀಶ ಸ್ಥಾನದಿಂದ ಭಾರತ ರಕ್ಷಣಾ ಶಾಸನದ ೨೬ನೇ ಕಲಮು ನ್ಯಾಯಬಾಹಿರವೆಂದು ಸಾರಲಿಲ್ಲವೆ? ಆ ಅಪರಾಧಕ್ಕೆ ಇದು ಪ್ರತೀಕಾರ?

ಗಾಂಧಿಜಿ ಬಂಧನ— ಮೂರ್ಖತನ!

ಬರ್ನಾರ್ಡ್‌ಶಾ ಹೇಳಿಕೆ!

ಬರ್ನಾರ್ಡ್‌ಶಾ ಪ್ರಸಿದ್ಧ ಆಂಗ್ಲಲೇಖಕರು; ನಾಟಕಕಾರರು ಜಗತ್ತಿನಲ್ಲಿಯೇ ಕೀರ್ತಿವಂತ ಮೇಧಾವಿಗಳು. ಚರ್ಚಿಲ್ ರೂಸ್‌ವೆಲ್ಟ್ ಸ್ಟಾಲಿನರಷ್ಟೇ ಜಗತ್ಪ್ರಸಿದ್ಧರು. ಗಾಂಧಿಜಿಯವರನ್ನು ಬಂಧಿಸಿದ ವಿಷಯ ಅವರು ಏನೆನ್ನುತ್ತಾರೆ ಕೇಳುತ್ತೀರಾ? 'ಎಂದೂ ಸರಿದಾರಿಗೆ ಬ್ಬರದ ಸುಧಾರಣಾ ವಿರೋಧಿಗಳ ಮಾತು ಕೇಳಿ, ಗಾಂಧಿಜಿಯನ್ನು ಬಂಧಿಸಿ, ಭಾರತ ಸರಕಾರವು ಕೇವಲ ಮೂರ್ಖತನ ಮಾಡಿತು. ಈ ಬಂಧನ, ಇದರ ಜೊತೆಗೆ ನಡೆದ ಚಾಟಿ ಏಟಿನ ಶಿಕ್ಷೆ, ಈ ಅಕ್ಷಮ್ಯ ಅಪರಾಧಗಳು ನಮ್ಮನ್ನೂ ಹಿಟ್ಲರನ ಮಟ್ಟಕ್ಕೆ ಮುಟ್ಟಿಸಿವೆ. ಸಾರ್ವಭೌಮರು, ಕೂಡಲೇ ತಮ್ಮ ಮಂತ್ರಿಗಳ ಈ ಹುಚ್ಚು ಕೆಲಸಕ್ಕಾಗಿ, ಗಾಂಧಿಜಿಯ ಕ್ಷಮೆ ಕೇಳಿ, ಅವರನ್ನು ಬಿಡುಗಡೆ ಮಾಡಬೇಕು! ಇದು ಒಂದು ಧೋರಣೆಯೆಂದಲ್ಲ; ತಪ್ಪು ತಿದ್ದಿಕೊಳ್ಳಲು ಇದೊಂದೇ ದಾರಿ.' ಶಾ ಯಾವಾಗಲೂ ನಿಷ್ಠುರ ಸತ್ಯವಾದಿ!

ಸಾಮ್ರಾಟರಿಂದ ವೈಸರಾಯರಿಗೆ ಸಂದೇಶ!

ಸದ್ಯ ವೈಸರಾಯ್ ಮಂತ್ರಿಮಂಡಳ ಮಂಡಿತರಾಗಿರುವ, ಸರ್ ಅಜೀಜುಲ್ ಹಕ್ಕರು, ಬ್ರಿಟನಿನಿಂದ ಭಾರತಕ್ಕೆ ಮರಳುವಾಗ, ಸಾರ್ವಭೌಮರನ್ನು ಭೇಟಿಯಾದರು, ಬಕಿಂಗ್ ಹೇಮ್ ಅರಮನೆಯಲ್ಲಿ. ಭೇಟಿಯಾದ ಕೋಣೆಯಲ್ಲಿ ಏನೇನೂ ಅಲಂಕಾರವಿಲ್ಲ. ಕುರ್ಚಿ ಮೇಜುಗಳ ಆಡಂಬರವಿಲ್ಲ. ಅಗ್ಗಿಷ್ಟಿಕೆಯಲ್ಲಿ ಬೆಂಕಿ ಉರಿಯುತ್ತಿತ್ತು. ರಾಜ ದಂಪತಿಗಳು ಮೈಕಾಯಿಸುತ್ತಿದ್ದರು. ಮಾತುಕತೆ ಮುಗಿದ ಮೇಲೆ ಸರ್ ಹಕ್ಕರು ಎದ್ದರು. ಬಾಗಿಲಿಗೆ ಬಂದಿರಲಿಲ್ಲ; ಸಾಮ್ರಾಟರು ಕರೆದು, ಸರ್ ಅಜೀಜ್, ನಾನಿಲ್ಲಿ ಹೇಗಿದ್ದೇನೆಂದು ಲಿನ್‌ಲಿತ್ ಗೋಗೆ ತಿಳಿಸಿ, ಮರೆಯಬೇಡಿ' ಎಂದರು! ಮೊಗಲದರ್ಬಾರನ್ನೇ ಇಂದೂ ನಡೆಸುತ್ತಿರುವ ವೈಸರಾಯರಿಗೆ ಸಾರ್ವಭೌಮರದು ಇದು ಸಂದೇಶ!

"ಖರೆ ಮುರ್ದಾಬಾದ್"

ಡಾ। ಖರೆಯವರು ವೈಸರಾಯ್ ಕಾರ್ಯಕಾರೀ ಮಂಡಳಕ್ಕೆ ಸೇರಿದ್ದ ಮೇಲೆ ಹೊಸಡಿಲ್ಲಿಯಲ್ಲಿ ಇದೇ ಮೊದಲನೆಯ ಸಲ, ಸಾವರ್ಕರರ ೬೧ನೇ ಜನ್ಮ ದಿನೋತ್ಸವದ ಸಭೆಯಲ್ಲಿ ಅಧ್ಯಕ್ಷಸ್ಥಾನ ವಹಿಸಿದರು. ಸಭಾಂತ್ಯದಲ್ಲಿ ಕೆಲವರು ಸಭಾತ್ಯಾಗ ಮಾಡಿದರು. 'ಖರೆಮುರ್ದಾಬಾದ್' 'ಕಾರ್ಯಕಾರೀ ಮಂಡಳಕ್ಕೆ ರಾಜಿನಾಮೆ ಕೊಡಿ' ಎಂಬ ಘೋಷವೆದ್ದಿತು. ಅವರು ಕಣ್ಮರೆಯಾಗುವ ವರೆಗೂ ಘೋಷ ನಿಲ್ಲಲಿಲ್ಲ!

'ಭಾರತದ ಪ್ರಶ್ನೆಯಲ್ಲಿ ಅಮೆರಿಕ ಕೈಹಾಕುವುದಿಲ್ಲ'

ಪಿಲಿಪ್ಸರು ಇನ್ನು ಕೆಲವೇ ವಾರಗಳಲ್ಲಿ ಪುನಃ ಭಾರತಕ್ಕೆ ಬರುವರು. 'ಪಿಲಿಪ್ಸರು ಕೇವಲ ವರದಿಯೊಪ್ಪಿಸಲು ಬಂದವರು: ಬರಲಿರುವರು. ಸೆರೆಯಲ್ಲಿರುವ ಕಾಂಗ್ರೆಸ್ ಮುಖಂಡರನ್ನೂ ಭೇಟಿಯಾಗಿ ಭಾರತದ ರಾಜಕೀಯ ಪರಿಸ್ಥಿತಿಯನ್ನು ಪೂರ್ಣ ತಿಳಕೊಳ್ಳಬೇಕೆಂದು ಅವರ ಇಚ್ಛೆ. ಪಿಲಿಪ್ಸರಿಗೆ ಆ ಅವಕಾಶ ಕಲ್ಪಿಸಿಕೊಡಬೇಕೆಂದೂ ಭಾರತೀಯರದೂ ಕೇಳಿಕೆ. ಆದರೆ ಇದರಿಂದ ಏನೂ ಪರಿಣಾಮವಾಗಲಿಲ್ಲ. ಈ ಪ್ರಶ್ನೆಯನ್ನು ಬ್ರಿಟನು ಭಾರತಗಳೇ ಪರಿಹರಿಸಬೇಕು, ಯುದ್ಧವು ಯಶಸ್ವಿಯಾಗುವಂತೆ ನೋಡುವುದೇ ಅಮೆರಿಕದ ಕರ್ತವ್ಯ' ಎಂದು ಅಮೆರಿಕದ ಅಧಿಕಾರೀ ಮಂಡಳದ ಅಭಿಪ್ರಾಯವಿದೆ.

ಶ್ರೀಮತಿ ಪಂಡಿತರ ಬಂಧನ

ಶ್ರೀಮತಿ ವಿಜಯ ಲಕ್ಷ್ಮಿ ಪಂಡಿತರನ್ನು ಮೇ ತಾ. ೧೩ಕ್ಕೆ ಅನಿರ್ಬಂಧ ಬಿಡುಗಡೆ ಮಾಡಿ, ಸೆರೆಮನೆಯಿಂದ ಹೊರಬರುವಾಗಲೇ ಕೆಲ ನಿರ್ಬಂಧ ಹಾಕಲಾಗಿ, ಅದರಂತೆ ನಡಕೊಳ್ಳಲು ಸಾಧ್ಯವಿಲ್ಲವೆಂದು ಅವರು ಹೇಳಿದ್ದರಿಂದ ಪುನಃ ತಾ. ೨೬ಕ್ಕೆ ಅವರ ಬಂಧನವಾಗಿದೆ.

ಗಡಿನಾಡಿನ ಮಂತ್ರಿಮಂಡಳ ಬಾಳಲಾರದು.

ಗಡಿನಾಡಿನಲ್ಲಿ ಸರ್‌ದಾರ್ ಔರಂಗಜೇಬ್ ಖಾನರ ಮಂತ್ರಿಮಂಡಳವು ಬಹುದಿನ ಬಾಳಲಾರದೆಂದೂ, ಅದು ಬದುಕಬೇಕಾದರೆ ಡಾ। ಖಾನ್‌ಸಾಹೇಬ್ ಹಾಗೂ ತಮ್ಮನ್ನು ಸೆರೆಮನೆಗೆ ಹಾಕಬೇಕಾಗುವುದೆಂದೂ, ಈ ಮಂತ್ರಿಮಂಡಳವು ಕೇವಲ ಸರಕಾರದ ಸಹಾಯದಿಂದ ಸ್ಥಾಪಿತವಾಗಿದ್ದು, ಜನರ ಬೆಂಬಲವಿಲ್ಲವೆಂದೂ ರಾಯ್ ಬಹದ್ದೂರ್ ಮೆಹರ್‌ಚಂದ ಖನ್ನಾ ಇವರು ಹೇಳಿಕೆ ಕೊಟ್ಟಿರುವರು.

ಜಿಲ್ಲಾ ಸಮಾಚಾರಗಳು

ಮಂಗಳೂರು

ಅಕಾಲ ವೃಷ್ಟಿ

ಈ ವರ್ಷ ಮೇ ತಿಂಗಳಲ್ಲಿಯೇ ನಮ್ಮ ಜಿಲ್ಲೆಯಲ್ಲಿ ಬಹಳ ಮಳೆ ಬರಲು ತೊಡಗಿದ್ದರಿಂದ ಅಲ್ಲಲ್ಲಿ ಕೆಲವು ಅನಾಹುತಗಳುಂಟಾಗಿವೆ. ಹಲವು ಕಟ್ಟಡಗಳು ಕುಸಿದುಬಿದ್ದಿವೆ, ಕೆಲವು ಕಡೆ ಸಿಡಿಲ ಬಡಿತವಾಗಿದೆ ಕೆಲವು ಕಡೆ ನೆರೆ ಬಂದು ಗದ್ದೆ ಕಟ್ಟಹುಣಿಗೆಳೆಲ್ಲಾ ಹೋಗಿವೆ. ಕಡಲಿನಲ್ಲಿ ತುಫಾನುಂಟಾಗಿ ಜಿಲ್ಲೆಯ ಹಲವು ಮಚ್ವೆಗಳು ಸಮುದ್ರದಲ್ಲಿ ಒಡೆದುಹೋಗಿ ತುಂಬಾ ಧನ, ಜನ ನಷ್ಟಗಳುಂಟಾಗಿದೆ. ನೇಜಿ ಹಾಳಾಗಿದೆ. ಕೃತ್ತಿಕಾ ನಕ್ಷತ್ರದಲ್ಲಿಯೂ ಭೂಮಿ ಕಾಯಲೇ ಇಲ್ಲ. ಇಂಥಾ ಅಕಾಲ ವೃಷ್ಟಿಯಿಂದ ಬರುವ ಬೆಳೆಗೆ ತುಂಬಾ ಹಾನಿಯುಂಟೆಂದು ಖಂಡಿತ ಹೇಳಬಹುದು

ಮುನ್ಸಿಪಲ್ ಸಭೆ

...ಯು ತಾ. ೬ರಂದು ಸಂಜೆ ೫ ಘಂಟೆಗೆ ಅದರ ಕಚೇರಿಯಲ್ಲಿ ಜರಗುವುದು

ಜಿಲ್ಲಾ ಬೋರ್ಡು ಅಧ್ಯಕ್ಷಸ್ಥಾನ

ಡಾ। ಪಿಟ್ಟಲಶೆಟ್ರ ನಿಧನದಿಂದ ಉಂಟಾದ ದ. ಕ. ಜಿಲ್ಲಾ ಬೋರ್ಡಿನ ಅಧ್ಯಕ್ಷಸ್ಥಾನಕ್ಕೆ ಶ್ರೀಗಳಾದ ಅರೂರು ಲಕ್ಷ್ಮೀನಾರಾಯಣರಾಯರು ಡಾ। ಅಡ್ಯಂತಾಯರು, ಚಮ್ನಾಡ್ ಸಾಹೇಬರು ಮತ್ತು ಮೂಸಬ್ಬನವರು ಹೀಗೆ ನಾಲ್ವರು ಉಮೇದ್ವಾರರಿರುವರೆಂದು ಸುದ್ದಿಯಿದೆ. ತಾ. ೧೧ರಂದು ಪೂರ್ವಾಹ್ನ ೧೧ ಗಂಟೆಗೆ ಜಿಲ್ಲಾಬೋರ್ಡು ಸಭೆಯಿದೆ. ಅದರಲ್ಲಿ ಅಧ್ಯಕ್ಷರ ಆಯ್ಕೆಯೂ ಆಗುವುದು

ರೇಶನಿಂಗ್ ವಿಚಾರ

ಒಂದು ಮನೆಯಲ್ಲಿ ಸರಾಸರಿ ಮಂದಿಗೆ ಹತ್ತು ರೂಪಾಯಿಗಿಂತ ಕಡಿಮೆ ಸಂಪಾದನೆಯಿದ್ದಲ್ಲಿ, ಅಂಥವರಿಗೆ ಅಕ್ಕಿ ಮೊದಲಾದ ಜೀವನಾವಶ್ಯಕ ವಸ್ತುಗಳ 'ರೇಶನಿಂಗ್' ಕಾರ್ಯ ಆಲೋಚನೆ ನಡೆಯುತ್ತಿದೆ

ನೇಮಕ

ಮಂಗಳೂರಿನ ಗವರ್ನಮೆಂಟು ಟ್ರೈನಿಂಗ್ ಶಾಲೆಯಲ್ಲಿ ಹಿಂದೆ ಹೆಡ್ಮಾಸ್ತರರಾಗಿದ್ದ ಶ್ರೀ. ಎನ್ ಸುಬ್ಬರಾಯರು ದ ಕ ವಿದ್ಯಾಧಿಕಾರಿಗಳಾಗಿ ನೇಮಕ ಹೊಂದಿ ಚಾರ್ಜು ವಹಿಸಿಕೊಂಡಿರುವರು ಈ ಮೊದಲು ಇಲ್ಲಿ ವಿದ್ಯಾಧಿಕಾರಿಗಳಾಗಿದ್ದ ಮಿ ಉಸ್ಮಾನ್ ಸಾಹೇಬ್ ಇವರಿಗೆ ತಿರುಚಿನಾಪಳ್ಳಿಗೆ ವರ್ಗವಾಯಿತು

ಮಂಗಳೂರಿನ ಡಿ ಕಲೆಕ್ಟರರಾಗಿದ್ದ ಶ್ರೀ ಜೋಗಪ್ಪನವರು ರಜೆಯ ಮೇಲಿರುವ ಪ್ರಯುಕ್ತ ಅವರ ಸ್ಥಾನಕ್ಕೆ ಶ್ರೀ ಪಿ ವಿ ಮಾಧವರಾಯರನ್ನು ನೇಮಿಸಲಾಗಿದೆ

ಶ್ರೀ ಸಿ. ಕುಂಞಿರಾಮ ಮೆನೊನ್ ಇವರು ದ. ಕ. ಜಿಲ್ಲಾ ಎಡಿಶನಲ್ ಸಬ್ ಜಡ್ಜರಾಗಿ ನಿಯಮಿಸಲ್ಪಟ್ಟಿದ್ದಾರೆ.

ಕಾರ್ಕಳದ ತಹಶೀಲ್ದಾರರಾದ ಮಿ ಸೊಲೊಮನ್ ಜೋಶ್ವ ಅವರು ಮಂಗಳೂರಿಗೆ ವರ್ಗಾಯಿಸಲ್ಪಟ್ಟು ಆಹಾರ ಸಾಮುಗ್ರಿಗಳ ಸ್ಟೆಟಿಸ್ಟಿಕಲ್ ಅಸಿಸ್ಟೆಂಟರಾಗಿ ನೇಮಿಸಲ್ಪಟ್ಟಿರುವರು.

ಇಲ್ಲಿಯ ಪೋಲೀಸ್ ಡಿ ಸುಪರಿಂಟೆಂಡೆಂಟರಾಗಿ ಶ್ರೀ ಶೃಂಗಾರವೇಲು ಅವರು ನೇಮಿಸಲ್ಪಟ್ಟಿದ್ದಾರೆ.

ವರ್ಧಂತಿ ಬಿರುದುಗಳು

ಚಕ್ರವರ್ತಿಗಳ ವರ್ಧಂತಿ ಬಿರುದುಗಳಲ್ಲಿ ಈ ಕೆಳಗಿನವುಗಳು ಮುಂದೆ ಹೇಳುವ ಮಹನೀಯರಿಗೆ ಕೊಡಲ್ಪಟ್ಟಿವೆ,—ಮಿ ಅಲಿಪ್ಪಿ ಸಾಹೇಬ್, ಜಿಲ್ಲಾ ಜಡ್ಜ, ದ ಕನ್ನಡ ಅವರಿಗೆ 'ಖಾನ್ ಬಹದೂರ್', ಶ್ರೀ ಬಿ ಎಸ್ ಬಾಳಿಗ, ಕ್ಯೂರೇಟರ್, ಮದ್ರಾಸ್, ರಿಕಾರ್ಡ್ ಆಫೀಸ್, ಅವರಿಗೂ, ಶ್ರೀ ಬಿ ಸಿತಾರಾಮರಾವ್, ಎಡ್ವೋಕೇಟ್, ಹೈಕೋರ್ಟ್, ಮದ್ರಾಸ್ ಅವರಿಗೂ 'ರಾವ್ ಬಹದೂರ್' ಬಿರುದು, ಶ್ರೀ. ಎಂ. ಕೃಷ್ಣನ್ ನಂಬಿಯಾರ್, ಬ್ಯಾರಿಸ್ಟರ್, ಪಬ್ಲಿಕ್ ಪ್ರೊಸಿಕ್ಯುಟರ್ ಅವರಿಗೂ, ಶ್ರೀ. ಕೆ. ಕೆ. ಶೆಟ್ಟಿ, ಹೆಲ್ತ್ ಆಫೀಸರ್, ಮದ್ರಾಸ್ ಅವರಿಗೂ 'ರಾವ್ ಸಾಹೇಬ್' ಬಿರುದೂ ಕೊಡಿಸಲ್ಪಟ್ಟಿವೆ.

ಪದ್ಮಸಾಲಿ ವೈಶ್ಯ ಸಮಾಜ

ದ ಮಹಾಸಭೆಯೊಂದು ತಾ. ೨೪, ೨೫ರಲ್ಲು ಬೋಳೂರಿನ ವೀರಭದ್ರ ನಿಲಯದಲ್ಲಿ ಜರಗಿತು. ಮಂಗಳೂರಲ್ಲಿಯೂ ಈ ಸಮಾಜದ ಸಂಘವೊಂದು ಸ್ಥಾಪಿತವಾಯಿತು.

ರಜಕ ಕುಲೋದ್ಧಾರಕ

ಸಂಘದ ಸಾಮಾನ್ಯ ಸಭೆಯು ಕದ್ರಿಯ ಆಫೀಸಿನಲ್ಲಿ ಶ್ರೀ ದೇಜಪ್ಪರ ಅಧ್ಯಕ್ಷತೆಯಿಂದ ಜರಗಿತು.

ದ. ಕ ಜಿಲ್ಲೆಯ ಕಥೋಲಿಕ ಕಾಫಿ ತೋಟ ಮ್ಹಾಲೀಕರ

ಅನೇ ವಾರ್ಷಿಕ ಯಾತ್ರೆಯು ಮೇ ತಾ. ೨೭ರಂದು ಜರಗಿತು ಮೆರವಣಿಗೆಯು ಉರ್ವದ ಬೇಡಿಷಾಂಪ್ಸೆ ಪವಿತ್ರ ಮಂದಿರಕ್ಕೆ ತೆರಳಿ, ಮಿಲಾಗ್ರಿಸ್ ಚರ್ಚಿನ ರೆ ಫಾ. ಡಿ ಜೆ ಡಿಸೋಜರ ನೇತೃತ್ವದಲ್ಲಿ ಪ್ರಾರ್ಥನಾದಿಗಳಾದವು

ಅನಂತರ ಸಂಟ್ ಎಲೊಸಿಯಸ್ ಹಾ ಎ ಶಾಲಾ ಕಟ್ಟಡದಲ್ಲಿ ಶ್ರೀ ಜೆ ಸೆಡ್. ಸಲ್ಡಾನ್ಹರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು

ಶ್ರೀ ಕೆಲಿಸ್ಟಸ್ ಸಲ್ಡಾನ್ಹರು ಕಾಫಿ ವ್ಯವಸಾಯದ ಕುರಿತು ಮಾತನಾಡುತ್ತಾ 'ಕಳೆದ ಅಕ್ಟೋಬರದಲ್ಲಿ ಕಾಫಿಗೆ ಗಿರಾಕಿಗಳಿಲ್ಲದೆ ನಾವು ಕಂಗೆಟ್ಟಿದ್ದೆವು. ಬೆಲೆಯು ರೂ ೭೫ಕ್ಕೆ (ಹಂಡ್ರೆಡ್ ವೇಯಿಗೆ) ಇಳಿದಿತ್ತು ಆದರೆ, ಭಾರತದ ಕಾಫಿ ಬೋರ್ಡಿನವರು ಕೊಟ್ಟ ಉತ್ತೇಜನದಿಂದಾಗಿ ಬೆಲೆಯು ಏರತೊಡಗಿತು ಈ ಏರಾಟವು ಸರಕಾರವು ಬೆದರಿಕೆ ಹಾಕುವ ವರೆಗೂ ಏರುತ್ತ ಸಾಗಿತು ೪೦ ರೂ ಗೆ ಮಾರಾಟವಾಗುತ್ತಿದ್ದ ಕಾಫಿಯ ಬೆಲೆಯು ರೂ ೧೮೫ರ ವರೆಗೂ ಏರಿತು'

ಕಾಫಿ ಕಂಟ್ರೋಲ್ ಬೋರ್ಡಿನವರು ತಾವೆ ಕಾಫಿಯನ್ನೆಲ್ಲಾ ಕೊಂಡುಕೊಂಡು ಮಾರಾಟ ಮಾಡಿಕೊಡುವುದಾಗಿ ಇತ್ತಿರುವ ಸೂಚನೆಯ ವಿಷಯವಾಗಿ ಮಾತನಾಡುತ್ತ ಶ್ರೀ ಸಲ್ಡಾನ್ಹರು ಹೀಗೆಂದರು —'ಪ್ರಕೃತದ ಕಾಫಿ ಬೆಲೆಯ ಏರಿಕೆಗೆ ಬೋರ್ಡೇ ಕಾರಣವಾದುದರಿಂದ, ಅದರ ಸೂಚನೆಯನ್ನು ನಾವು ಅಂಗೀಕರಿಸಬೇಕು, ಮತ್ತು ಈ ವ್ಯವಸ್ಥೆಯಿಂದ ನಮಗೆ ಎಷ್ಟೋ ತೊಂದರೆಗಳು ಕಡಿಮೆಯಾಗುವುವು. ಹಣವಂತು ಕಂತುಗಳ ಮೂಲಕ ಸಿಗುವುದು—'ಎಂದರು

ನಿಧನ

ಅರಣ್ಯ ಇಲಾಖೆಯ ನಿವೃತ್ತ ಹೆಡ್‌ಕ್ಲಾರ್ಕ್‌ರಾದ ಶ್ರೀ ಎಂ ವಾಮನ ಕಿಣಿಯವರು ತಾ ೧ರಂದು ವಿದ್ಯುತ್ ಬೀಸಣಿಗೆಯನ್ನು ಸರಿಪಡಿಸುತ್ತಿರುವಾಗ, ವಿದ್ಯುತ್ಸಂಚಾರವಾಗಿ ನಿಧನಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ ಮೃತರ ಆತ್ಮಕ್ಕೆ ಶಾಂತಿಯಿರಲಿ!

ಮಡಿಕೇರಿಯಲ್ಲಿ ಸಬ್ ಜಡ್ಜರಾಗಿದ್ದ ಶ್ರೀ ಎಂ ಭುಜಂಗರಾಯರ ಪುತ್ರ ಶ್ರೀ ಗೋಪಾಲರಾಯರು (ಇವರು ಮಡಿಕೇರಿಯಲ್ಲಿ ವಕೀಲರಾಗಿದ್ದರು) ಇತ್ತೀಚೆಗೆ ಮಂಗಳೂರಲ್ಲಿ ದಿವಂಗತರಾದರೆಂದು ತಿಳಿಸಲು ವಿಷಾದಿಸುತ್ತೇವೆ ಮೃತರ ಆತ್ಮಕ್ಕೆ ಶಾಂತಿಯಿರಲಿ

ಉಡುಪಿ

ನಗರ ವ್ಯವಹಾರ ಕ್ಷೇತ್ರದಲ್ಲಿ ದನಕರು ಆಡುಗಳನ್ನು ತಿರುಗ ಡಲು ಬಿಡುವುದರಿಂದ ಸಾರ್ವಜನಿಕ ಆರೋಗ್ಯಕ್ಕೆ ಹಾಗೂ ವಾಹನ ಸಂಚಾರಕ್ಕೆ ತೊಂದರೆಯುಂಟಾಗುತ್ತದೆಂದು, ಮುನ್ಸಿಪಲ್ ಅಧಿಕಾರಿಗಳನ್ನು, ಅಂಥಾ ದನಕರು ಆಡುಗಳನ್ನು ಹಿಡಿದು ದೊಡ್ಡಿಗೊಯ್ಯುವರು

ವಿವಾಹ

'ನವಯುಗ' ಮತ್ತು ಮತ್ತು 'ಅಂತರಂಗ' ಪತ್ರಿಕೆಗಳ ಸಂಪಾದಕರಾದ ಶ್ರೀ. ಕೆ ಹೊನ್ನಯ್ಯ ಶೆಟ್ರು ಡಾ। ಕೆ. ಮಂಜುನಾಥ ಪೈಗಳ ಸೊಸೆ ಶ್ರೀಮತಿ ಪದ್ಮಾವತಿಯನ್ನು ತಾ. ೬ನೇ ಆದಿತ್ಯವಾರ ರಾತ್ರಿ ೯-೩೦ಕ್ಕೆ ಉಡುಪಿ ಮೊಡರ್ನ್ ಹಯ್ಯರ್ ಎಲಿಮೆಂಟರಿ ಶಾಲೆಯಲ್ಲಿ ವಿವಾಹವಾಗಿಕೊಳ್ಳುವರು.

ಇನ್ನಂಜೆ

ಹೈಸ್ಕೂಲ್ ಉದ್ಘಾಟನೆ

ತಾ. ೪ರಂದು ಅಪರಾಹ್ನ ೩ ಗಂಟೆಗೆ ಉಡುಪಿ ತಾಲೂಕು ಇನ್ನಂಜೆ ಗ್ರಾಮದಲ್ಲಿ ಶ್ರೀ. ವಿಷ್ಣುಮೂರ್ತಿ ಹಯವದನ ಸ್ವಾಮಿ ಹೈಸ್ಕೂಲಿನ ಉದ್ಘಾಟನಾ ಸಮಾರಂಭವು ಶ್ರೀ ಶ್ರೀ ಪಾದಂಗಳವರ ಸಮ್ಮುಖದಲ್ಲಿ ಶ್ರೀ ಅರೂರು ಲಕ್ಷ್ಮೀನಾರಾಯಣ ರಾಯರಿಂದ ನೆರವೇರಿಸಲ್ಪಡುವುದು

ಕಾಸರಗೋಡು

ಮೊನ್ನೆಯ ತುಫಾನಿನಿಂದ ಕಾಸರಗೋಡಿನ ನಾಲ್ಕು ಮಚ್ವೆಗಳು ಸಮುದ್ರ ಪಾಲಾಗಿವೆಯೆಂದು ತಿಳಿಯುತ್ತದೆ.

ಕಳೆದ ಸಪ್ಟಂಬರಿನಲ್ಲಿ ಡಿಫೆನ್ಸ್ ಕಾನೂನಿನನ್ವಯ ಬಂಧಿತರಾದ ಶ್ರೀ ಎಂ ಉಮೇಶರಾಯರ ಪುತ್ರ ಶ್ರೀ ಎಂ ರಾಮಮೋಹನರಾಯರು ತಮ್ಮ ಸಜೆಯ ಅವಧಿ ಮುಗಿಸಿ ಬಿಡುಗಡೆಯಾಗಿ ಬಂದಿರುವರು

ಕಾರ್ಕಳ

ದೇವಿ ಪೂಜೆಗೆ ಕೋಣನ ಬಲಿ!

ಸ್ಥಳೀಯ ಮಾರಿಗುಡಿಯಲ್ಲಿ ಈ ವರ್ಷವೂ ಅಸಂಖ್ಯಾತ ಕೋಳಿ, ಆಡು, ಕುರಿ, ಹಂದಿ ಮೊದಲಾದ ಮೂಕ ಪ್ರಾಣಿಗಳ ಬಲಿಯಾದದು ಮಾತ್ರವಲ್ಲದೆ ಕೋಣನ ಬಲಿಯೂ ಆಗಿದೆ ಈ ಅನಾಗರಿಕ ಬರ್ಬರ ಹಿಂಸಾತ್ಮಕ ಕೃತ್ಯವು ಇನ್ನೂ ಜಿಲ್ಲೆಯ ಬೇರೆ ಬೇರೆ ಕಡೆಗಳ ಮಾರಿಗುಡಿಗಳಲ್ಲಿ ನಡೆಯುತ್ತಿರುವುದು ವಿಷಾದಕರ

ಪುತ್ತೂರು

ಶ್ರೀ ಸುಬ್ರಹ್ಮಣ್ಯ ದೇವಸ್ಥಾನ

ದ ಟ್ರಸ್ಟಿಗಳಾಗಿ ಈ ಕೆಳಗಿನ ಮಹನೀಯರನ್ನು ಎಂಡೋಮೆಂಟ್ ಬೋರ್ಡಿನವರು ಆರಿಸಿದ್ದಾರೆ:—ಶ್ರೀ. ಉಚ್ಚಿಂಗಿ ನರಸಿಂಹಯ್ಯ, ಶ್ರೀ ಬಿ. ಮಂಗೇಶರಾವ್. ಶ್ರೀ. ಕೆ. ವೆಂಕಟ್ರಮಣ ಗೌಡ, ಶ್ರೀ। ಎನ್. ವಿ. ಕೊಳತ್ತಾಯ ಶ್ರೀ. ಫುಲ್ಲಡ್ಕ ಸುಬ್ರಾಯರು, ಗುತ್ತಿಗಾರು.

ಪಡ್ನೂರು

ತಾ. ೨೨-೫-೪೩ನೇ ಶನಿವಾರ ಅಪರಾಹ್ನ ಘಂ. ೩ಕ್ಕೆ ಇಲ್ಲಿಯ ಶಾಲಾ ಕಟ್ಟಡದಲ್ಲಿ ತಾಲಾ ಬಾಲಕರ ಹೆತ್ತವರ ಕೂಟವೂ, ಹರಿಕಥೆಯೂ ವಿಜೃಂಭಣೆಯಿಂದ ಜರಗಿತು.

ಮಂಗಳೂರು

ಶಾಲಾ ಕೊಲೇಜುಗಳು

ಮಂಗಳೂರಲ್ಲಿ ಜೂನ್ ಪ್ರಥಮವಾರದಿಂದ ಪ್ರಾರಂಭವಾಗಿದೆ. ಈ ವರ್ಷ ಹೊಸದಾಗಿ ಮಂಗಳೂರಲ್ಲಿ ಹೆಂಗುಸರಿಗೆ ಎಲ್ ಟಿ ಕ್ಲಾಸು ತೆರೆಯಲ್ಪಡುವುದು ಮಂಗಳೂರಲ್ಲಿ ಮುಸ್ಲಿಂ ಮಹಿಳಾ ಹೈಸ್ಕೂಲೊಂದು ಪ್ರಾರಂಭವಾಗುವುದೆಂಬ ಸುದ್ದಿಯಿದೆ ಬಿಸೆಂಟ್ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯಲ್ಲಿ ಈ ವರ್ಷ VI ಫಾರ್ಮು ತೆರೆಯಲ್ಪಟ್ಟಿರುವುದು

ಸಿನೆಮಾ ವಿಮರ್ಶಕ ಸಂಘ

ದ ಸ್ಥಾಪನೆ ಬಗ್ಗೆ ತಾ ೬ರಂದು 'ಪ್ರಭಾತ' ಆಫೀಸಿನಲ್ಲಿ ಒಂದು ಸಭೆ ಜರಗಲಿದೆ

ಕೆಮ್ಮಣ್ಣು

ಶಾಲಾ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ತಾ ೨೩ರಲ್ಲಿ ಶ್ರೀ ಎಸ್ ಆರ್ ಕೊರಡ್ಕಲ್ಲರ ಅಧ್ಯಕ್ಷತೆಯಲ್ಲಿ ಜರಗಿತು.

ಕರ್ನಾಟಕ

ಬೆಳಗಾವಿ

ಶ್ರೀ ಬಿದರಿ ರಾಮರಾಯರನ್ನು ಹಿಡಿವುದಕ್ಕಾಗಿ ಪೋಲೀಸರು ಬಿದರಿ ಮತ್ತು ಕಾಪಿಂಡಕಿಗಳಲ್ಲಿ ಶೋಧ ಮಾಡಿದರು ಸಂಕೇಶ್ವರದ ಅಪ್ಪಣ್ಣ ಪಾಟೀಲರ ಮನೆ ಮುತ್ತಿಗೆ ಹಾಕಿ ಜಪ್ತಿಮಾಡಿ ಅಲ್ಲಿನ ದನಕರು ಹಾಗೂ ಬೇಸಾಯದ ಸಾಮುಗ್ರಿಗಳನ್ನೊಯ್ದರು ಸಂಕೇಶ್ವರದ ಶ್ರೀ. ಶಂಕರ ಸಾರೂಡೆಯವರನ್ನು ಬಂಧಿಸಲಾಗಿದೆ ಬೆಳಗಾವಿ ಪೋಲೀಸರು ಸಾಂಗಲಿಯ ಒಂದು ಕೋಣೆ ಮುತ್ತಿ ಶ್ರೀಗಳಾದ ರಾಮ ಪೋತದಾರ, ಬಾಳಕೃಷ್ಣ ಮಗದ ಇವರನ್ನು ಬಂಧಿಸಿರುವರು. ಪಾಚ್ಛಾಪುರದಲ್ಲಿ ಶ್ರೀಗಳು ಬಸಲಿಂಗಪ್ಪ ಮತ್ತು ಸತ್ತೆಪ್ಪಾ ಹುಚ್ಚುಗಡಿಯವರನ್ನು ಬಂಧಿಸಲಾಗಿದೆ ಶಿತ್ತೂರಲ್ಲಿ ಶ್ರೀಗಳು ರಾಮರಾವ್ ಧವಳಿ ಮತ್ತು ಶಂಕರ ದೊಡ್ಡಮನಿಯವರನ್ನು ಸೆರೆಹಿಡಿದು, ಶ್ರೀಗಳು ಹಣಮಂತ ಕಟ್ಟಿ, ರಂಗನಾಥ ಮೊಸಳಿ ಇವರ ಮನೆ ಶೋಧಿಸಿದರು. ಬೆಳಗಾವಿಯಲ್ಲಿ ಗಾಂಧಿ ಜಯಂತಿ ದಿನ ಮೆರವಣಿಗೆ ತೆಗೆದ ಬಗ್ಗೆ ಶ್ರೀರಾಮಭಾವೂ ಜೋಶಿಕಾಡಿ ಇವರಿಗೆ ದಂಡ ವಿಧಿಸಲಾಗಿದೆ ಬೆಳಗಾವಿಯ ಶ್ರೀಗಳು ತುಕಾರಾಮ ಕಾದ್ರೋಳಕರ, ಕೆ ಸಿ ಪಾಟಣಕರ ಮತ್ತು ಬಾಳಕೃಷ್ಣ ಪಾಟಣೇಕರ ಇವರನ್ನು ಸೆರೆಹಿಡಿದಿದ್ದು ವಿಚಾರಣೆಯಾಗುತ್ತಿದೆ ನಿಪ್ಪಾಣಿಯಲ್ಲಿ ಶ್ರೀ ಮುರಲೀಧರ ಸಾಝಿರೆ ಇವರ ಬಂಧನವಾಗಿದೆ. ಬೆಳಗಾವಿಯ ಶ್ರೀಮತಿಯರು ಶಾಂತಾಬಾಯಿ ಮರ್ದದ ಮತ್ತು ಸೀತಾಬಾಯಿ ಕುಲಕರ್ಣಿ ಇವರು ಅಪ್ಪಣೆಯಿಲ್ಲದೆ ಮಾಮಲೇದಾರ ಕಚೇರಿ ಮುಂದೆ ಮೆರವಣಿಗೆ ತೆಗೆದದ್ದಲ್ಲದೆ, ಶಿರಸ್ತೇದಾರರನ್ನು ರಾಜಿನಾಮೆ ಕೊಡಲು ಕೇಳಿದ ಬಗ್ಗೆ ಅವರಿಗೆ ಶಿಕ್ಷೆ ದಂಡಗಳು ವಿಧಿಸಲ್ಪಟ್ಟಿವೆ ಬೆಳಗಾವ್ ಸಮಾಚಾರ ಪತ್ರಿಕೆಯ ಸಂಪಾದಕರು ಡಿಫೆನ್ಸ್ ಕಾನೂನಿನಂತೆ ಬಂಧಿತರಾದ್ದರಿಂದ ಅರು ವಾರಗಳ ನಂತರ ಈಗ ಪ್ರಕಟಿತವಾಗಿದೆ ಮೆರವಣಿಗೆ ತೆಗೆದ ಆರೋಪದಲ್ಲಿ ಗೋಕಾಕದ ಕೆಲ ತರುಣರಿಗೆ ಶಿಕ್ಷೆಯಾಗಿದೆ. ಕೆಲರು ಅಜ್ಞಾತವಾಸದಲ್ಲಿದ್ದಾರೆ

ಧಾರವಾಡ

ಹೊಸರಿತ್ತಿ ಗಾಂಧಿ ಆಶ್ರಮದ ಹನುಮಣ್ಣ ಭಂಗಳಿ ಹಾಗೂ ನಿಂಗಪ್ಪ ಕುರಗಂದ ಇವರು ೨೫ನೇ ತಾರೀಕಿನಂದು ಅಧಿಕಾರಿಗಳ ಮುಂದೆ ಹಾಜರಾದರು ಶ್ರೀಮತಿ ಸಿದ್ದಮ್ಮ ಮೈಲಾರಲರು ಆಮರಣ ಉಪವಾಸ ಕೈಕೊಂಡಿರುವರೆಂಬ ಸುದ್ದಿ ನಿರಾಧಾರವಾದುದು

ವಿಜಾಪುರ

ಬರಗಾಲದ ಸಂಕಷ್ಟ ಪರಿಹಾರಕ್ಕಾಗಿ ಹಲವರು ಸಾರ್ವಜನಿಕ ಕಾರ್ಯಕರ್ತರು ಅಧಿಕಾರಿಗಳೊಡನೆ ಸಹಕರಿಸಿ ದುಡಿಯುತ್ತಿದ್ದಾರೆ ಶ್ರೀಮತಿ ಧನವಂತಿ ಬಾಯಿ ರಾಮರಾಯರು ವಿಜಾಪುರ ಸಂಚಾರ ಮಾಗಿಸಿದರು ಗುಳೇದಗುಡ್ಡದಲ್ಲಿ ಹೊಟ್ಟೆಗಿಲ್ಲದೆ ಓರ್ವನು ಮೃತನಾದನು, ಆಹಾರ ಸಾಮುಗ್ರಿಗಾಗಿ ಬದಾಮಿಗೆ ಬಂದ ಬೇಲೂರು ರೈತರಿಗೆ ನದಿ ಅಡ್ಡವಾಗಿ ದಾಟಲು ಹರಗೋಲು ಇಲ್ಲದೆ ನಾಲ್ಕಾರು ದಿನ ಅನೇಕರು ಉಪವಾಸ ಬೀಳಬೇಕಾಯಿತು ಹೈದರಾಬಾದಿಗೆ ಹೋದ ವಿಜಾಪುರ ಕಲೆಕ್ಟರರು ಮರಳಿ ಬಂದಿರುವರು ಅಲ್ಲಿಂದ ಆಹಾರ ಸಾಮುಗ್ರಿ ದೊರಕಿದೆ ಆಹಾರವಿಲ್ಲದೆ ಕೆರೂರಲ್ಲಿ ಒಬ್ಬನು ಮೃತನಾದನು

ಉತ್ತರ ಕನ್ನಡ

ತಂತಿ ಕತ್ತರಿಸಿದ ಆರೋಪದ ಮೇಲೆ ಹಾವೇರಿ ಮೋಟರ್ ಮಾಲಕ ಶ್ರೀಗಳು ಎನ್ ವಿ ಪಾಟೀಲ, ತಿಪ್ಪಾಜಿ ಸಂಗಣ್ಣವರ, ಹಣಮಂತಪ್ಪ ಬಳ್ಳಾರಿ, ಮೊದಲಾದ ಐದು ಜನರನ್ನು ಸೆರೆ ಹಿಡಿದಿರುವರು ಹಿರೇಕೆರೂರ್ ಪೌಜುದಾರರು ಅಜ್ಞಾತವಾಸದಲ್ಲಿರುವ ಶ್ರೀಗಳು ಅಣ್ಣಾಜಿ ಗೌಡ ಮತ್ತು ದೇವೇಗೌಡ ಮತ್ತು ಉಳಿದವರ ಒಗ್ಗೆ ಹೊಸೂರಲ್ಲಿ ಶೋಧನಮಾಡಿದರು ಆಲೀಗಢದ ಮಹಾತ್ಮಾ ಗಾಂಧಿ ವೀವಿಂಗ್ ಕಂಪನಿಯ ಬಟ್ಟೆಗಳನ್ನು ಶುದ್ಧ ಖಾದಿಯೆಂದು ಹೇಳಿ ಶಿವನೊಗ್ಗಿಯ ಒಬ್ಬರು ಊರೂರು ತಿರುಗುತ್ತಿರುವರೆಂದೂ ಅದು ಶುದ್ಧ ಖಾದಿಯಲ್ಲವೆಂದೂ ತಿಳಿದುಬರುತ್ತದೆ

ಬಳ್ಳಾರಿ

ಹೊಸಪೇಟೆಯಲ್ಲಿ ಶ್ರೀ ಲಕ್ಷ್ಮಣ ಮೂರ್ತಿಯವರ ಬಂಧನವಾಗಿದೆ ಶ್ರೀ ವರ್ಧಮಾನರಿಗೆ ಆಕ್ಷೇಪಾರ್ಹ ಪತ್ರವಿಟ್ಟುಕೊಂಡ ಬಗ್ಗೆ ಶಿಕ್ಷೆಯಾಯಿತು ಬಳ್ಳಾರಿ ಜಿಲ್ಲೆಯಲ್ಲಿಯೂ ಆಹಾರ ಸಾಮುಗ್ರಿ ಸಿಗುವುದು ಕಷ್ಟವಾಗಿದೆ; ಬರಗಾಲವಿದೆ

ಸಿನೆಮಾ ಸುದ್ದಿ

ಚುಂಬಿಸಿದರಲ್ಲಾ?

ಶಾಹು ಮೋಡಕ್ ಮತ್ತು ಸ್ನೇಹಪ್ರಭಾ ಇವರು ಮೊದಲನೆಯ ಸಲ ಬಹಿರಂಗವಾಗಿ! ಆದರೆ ಪೂನದ ಸನಾತನಿಗಳ ಆರ್ಭಟೆ ತಡೆಯಲಾರದಾಯಿತಂತೆ! ಹೋಯಿತು ಧರ್ಮ, ಹಾಳಾಯಿತು ಸನಾತನ ಸಂಸ್ಕೃತಿಯೆಂದು ಅವರು ಆಂದೋಲನ ಹಚ್ಚಿಬಿಟ್ಟರು. ಹಾಗಾಗಿ, ನಿಜವಾದ ಚುಂಬನದ ಅಂಶವನ್ನು ತೆಗೆದು ಕೇವಲ ಛಾಯಾ ಚುಂಬನ ಮಾತ್ರ 'ಪಹಿಲೀ ಮಂಗಲ್ ಗೌರ್'ನಲ್ಲೀಗ ಪ್ರದರ್ಶಿತವಾಗುತ್ತಿದೆಯೆಂಬುದಾಗಿ ಕೆಲವರು ಹೇಳುತ್ತಾರೆ.

ನಿತಿನ್ ಬೋಸರು

ಬೊಂಬಯಿಗೆ ಬಂದು ಇದೀಗ ತಮ್ಮ ಮೊದಲನೆಯ ಚಿತ್ರ ತಯಾರಿಸಿದ್ದಾರೆ. ಅದರ ಹೆಸರು 'ಪರಾಯಧಾನ್' ಬಂಗಾಳೀ ಹಿಂದೀ ಉಭಯ ಭಾಷೆಗಳಲ್ಲಿ ಈ ಚಿತ್ರ ತಯಾರಾಗಿದೆ. ಹಿಂದಿಯಲ್ಲಿ ಲೀಲಾ ದೇಸಾಯಿ, ಮಾಯಾ ಬೆನರ್ಜಿ, ಬಲವಂತ ಸಿಂಗ್ ಇವರೂ, ಬಂಗಾಳಿಯಲ್ಲಿ ಲೀಲಾ ದೇಸಾಯಿ, ಎಲೀತ್ ರೋಸ್, ಮಾಯಾ ಬೆನರ್ಜಿ ಇವರೂ ನಟಿಸುವರು.

ನೀನಾ ಜಯರಾಜ್

ಇವರೀಗ 'ಪ್ರೇಮ ಸಂಗೀತ'ದಲ್ಲಿದ್ದಾರೆ. ಇದು ಶಾಲಿಮಾರ್ ಪಿಕ್ಚರ್ಸ್ ಕೃತಿ. ಇದರ ಮುಂದೆ 'ಮನ್ ಕೀ ಜೀತ್' ಎಂಬ ಅವರ ಚಿತ್ರ ತಯಾರಾಗುತ್ತದೆ. ನೀನಾ ಶ್ಯಾಮರು ಇದರಲ್ಲಿ ಜತೆಯಾಗುತ್ತಾರೆ.

'ಬಾದಲ್ತಿ ದುನಿಯಾ'

ಒಂದು ಉತ್ತಮ ಚಿತ್ರ. ಮುರಾರಿ ಪಿಕ್ಚರ್ಸಿನವರ ತಯಾರಿ. ಮುಮ್ತಾಜ್ ಶಾಂತಿ ಇದರಲ್ಲಿ ಹಾಡುತ್ತಾಳೆ; ಕುಣಿಯುತ್ತಾಳೆ. ತ್ರಿಲೋಕ್ ಕಾಪೂರ್, ಕೆ. ಸಿ. ಡೆ, ಶಾಜಾದಿ, ಮೊದಲಾದ ನಟವರ್ಗವೂ ಇದೆ.

ಜಾನಕ್ ಚಿತ್ರ

ದವರು 'ಮಾಸ್ಟರ್ ಜಿ' 'ಅಂಗೋಠಿ' 'ಸಾವಿತ್ರಿ' ಮೊದಲಾದ ಚಿತ್ರಗಳನ್ನು ತಯಾರಿಸುವರು. ಅಶೋಕ್ ಕುಮಾರ್, ಚಂದ್ರ ಪ್ರಭಾ, ಸರ್ದಾರ್ ಅಖ್ತಾರ್, ಹರೀಶ್, ವೀಣಾ ಕುಮಾರಿ, ಮೊದಲಾದವರು ಇದರಲ್ಲಿ ನಟಿಸುವರು.

ಪೂರ್ಣಿಮಾ

ಪ್ರೊಡಕ್ಷನಿನವರು, ಕಿಶೋರ್ ಶಾಹು, ಪ್ರತಿಮಾದಾಸ ಗುಪ್ತೆ ಇವರ ನಟನೆಯುಳ್ಳ 'ರಾಜಾ' ಚಿತ್ರ ತಯಾರಿಸಿದ್ದಾರೆ. ಸ್ವತಃ ಕಿಶೋರ ಶಾಹು ಇದರ ಕಥಾ ಲೇಖಕರು, ನಿರ್ದೇಶಕರೂ ಆಗಿದ್ದಾರೆ. 'ಬ್ರಹ್ಮಚಾರಿ ಪಿತಾ'ದಲ್ಲಿ ಶಾಹು ಪ್ರತಿಮಾ ಜತೆಯಾಗಿದ್ದಾಳೆ; ಸ್ನೇಹ ಪ್ರಭಾಳ ಜತೆ ಬಿಟ್ಟ ನಂತರದ ಜತೆ!

'ನಾಜ್ ಮಾ'

ಎಂಬುದು ಮೆಹಬೂಬ್ ಪ್ರೊಡಕ್ಷನ್ ಚಿತ್ರ. ಅಶೋಕ ಕುಮಾರ್, ಲೀಲಾ, ಸಿತಾರಾ, ಕುಮಾರ್, ಯಾಕೂಬ್ ಮೊದಲಾದ ಪ್ರಸಿದ್ಧ ತಾರಾಗಣವನ್ನು ಇದರಲ್ಲಿ ಕಾಣಬಹುದು. ಸ್ವತಃ ಮೆಹಬೂಬ್ ನಿರ್ದೇಶಕರು.

ರೇಣುಕಾದೇವಿ

ವಾಸ್ವಾನಿ ಆರ್ಟ್ ಪ್ರೊಡಕ್ಷನಿನ 'ಸಹಾರಾ' ಚಿತ್ರದಲ್ಲಿ ನಟಿಸುತ್ತಾಳೆ. ನಾರಂಗ್, ಪ್ರಾಣ್, ಮೀನಾ, ರಜಿಯಾ ಬೇಗಂ ಮೊದಲಾದವರು ಇದರ ನಟವರ್ಗ.

ನೋಟಗಳು...

ಗಾಂಧಿಜಿ ಜಿನ್ನರಿಗೆ ಬರೆದ ಪತ್ರವನ್ನು ಸರಕಾರವು ತಡೆದುಬಿಟ್ಟಿತು!

ಜಿನ್ನರಿಗೂ ಅದು ಒಪ್ಪಿಗೆಯೇನೊ? 'ಗಾಂಧಿಜಿ ನನಗೆ ಪತ್ರ ಬರೆದರೆ ಅದನ್ನು ತಡೆಯುವ ಶಕ್ತಿ ಯಾರಿಗಿದೆ?' ಎಂದು ಜಿನ್ನರೇ ಮೊನ್ನೆ ಮೊನ್ನೆ ಬೊಬ್ಬೆಬಿಟ್ಟರಲ್ಲಾ?

ಹೀಗಿದ್ದರೂ ಗಾಂಧಿಜಿ ಜಿನ್ನರಿಗೆ ಬರೆದ ಪತ್ರವನ್ನು ತಡೆಯುವ ಶಕ್ತಿ ಸರಕಾರಕ್ಕೆ ಹೇಗೆ ಬಂತೊ?

ಜಿನ್ನರ ಒಪ್ಪಿಗೆಯಿಂದಲೇ ಸರಕಾರವು ಆ ಪತ್ರವನ್ನು ತಡೆಯಿತು ಎಂದು ನಾವು ಹೇಳಿದ್ದರೆ ಜಿನ್ನರಿಗಾದರೂ ಬೆಲೆಯೇನು?

ಗಾಂಧಿಜಿಗೂ ಅದೇ ಬೇಕಾಗಿತ್ತೇನೊ!

ಇಲ್ಲದಿದ್ದರೆ, ಸರಕಾರದ ನಿರ್ಬಂಧದ ವಿಷಯ ಗೊತ್ತಿರುತ್ತಾ, ಜಿನ್ನರಿಗೆ ಗಾಂಧಿಜಿ ಪತ್ರ ಬರೆಯುವ ಸಾಹಸ ಮಾಡಬೇಕೇಕೆ?

ಅಂತೂ ಗಾಂಧಿಜಿಗೆ ಹೀಗೊಂದು ಪತ್ರ ಬರೆಯಬೇಕಾಗಿತ್ತು; ಜಿನ್ನರಿಗೂ ಅದನ್ನು ಸರಕಾರವು ತಡೆಯಬೇಕಾಗಿತ್ತು; ಸರಕಾರಕ್ಕಾದರೂ ಸಧ್ಯ ಗಾಂಧಿ ಜಿನ್ನಾ ಭೇಟಿ ಮಾಡಿಸುವುದು ಬೇಡವಾಗಿತ್ತು!

ಹಿಂದು-ಮುಸ್ಲಿಂ ಐಕ್ಯವಾಗದೆ ಸ್ವರಾಜ್ಯವೇ ಕೊಡುವುದಿಲ್ಲವೆಂದ ಸರಕಾರವು ಗಾಂಧಿ-ಜಿನ್ನಾ ಭೇಟಿ ಮಾಡಿಸುವುದಾದರೂ ಹೇಗೆ ಸಾಧ್ಯ?

'ರಾಷ್ಟ್ರದ ಗೌರವ ಸ್ವಾತಂತ್ರ್ಯಗಳನು ಗಾಂಧಿಜಿ ತನಗೆ ಶರಣುಗೊಳಿಸಬೇಕೆಂದು ಜಿನ್ನರ ಹಂಬಲವೆ?' ಎಂದು ಬೊಂಬಯಿಯ ಮುಸ್ಲಿಂ ಮುಖಂಡರಾದ ಅಬ್ದುಲ್ ರಹಿಮಾನರು ಪ್ರಶ್ನಿಸುತ್ತಾರೆ.

'ಇದರಿಂದೆಲ್ಲಾ—ಗಾಂಧಿಜಿಯ ಘನಸ್ತಿಕೆಯೇ ಹೆಚ್ಚಿತು' ಎಂದು ಇನ್ನೋರ್ವ ಮುಸ್ಲಿಂ ಮುಂದಾಳು ಹೇಳುತ್ತಾರೆ.

ಹಲವು ಮುಸ್ಲಿಂ ಲೀಗ್ ಮುಖಂಡರಿಗೂ ಜಿನ್ನರ ಕುರಿತು ಈಗ ನಿರಾಶೆಯುಂಟಾಗಿದೆ!

ಹೇಗೂ ಇದರಿಂದ ಜಿನ್ನರ ಸಾಮರ್ಥ್ಯ ಬಯಲಾಯಿತು! ಗಾಂಧಿಜಿ ಘನಸ್ತಿಕೆ ಹೆಚ್ಚಿತು! ಸರಕಾರದ ಅಂತರಂಗ ಬಹಿರಂಗವಾಯಿತು!

ಇಂಗ್ಲೆಂಡಿನಲ್ಲಿ, ಪೆನ್ನರ್ ಬ್ರಾಕ್‌ವೇಯವರ ತನ್ನ ಮುಂದಾಳುತನದಲ್ಲಿ ಒಂದು ಮೆರವಣಿಗೆ ಹೊರಟಿತು. 'ಭಾರತವನ್ನು ಸ್ವತಂತ್ರ ಮಾಡಿರಿ' ಎಂದು ಅವರ ಘೋಷಣೆ!

ಇಂಗ್ಲೆಂಡಿನಲ್ಲಿ ಗಳಲನೇ ಸೆಕ್ಷನ್ ಜಾರಿಯಲ್ಲಿಲ್ಲವೇನೊ? ಅಲ್ಲ, ಅಲ್ಲಿನ ಗಳಲನೇ ಸೆಕ್ಷನಿನಲ್ಲಿ ಲಾಠೀ ಪ್ರಯೋಗ ಸೇರಿಲ್ಲವೊ? ಅಂತೂ ಆ ಮೆರವಣಿಗೆಗಾರರ 'ಮಂಡೆ' ಒಡೆಯಲಿಲ್ಲವೆಂಬುದಿದು ಖಂಡಿತ!

ಗಾಂಧಿಜಿ ಉಪವಾಸ ಕಾಲದಲ್ಲಿ ವಾಶಿಂಗ್‌ಟನಿನ ಬ್ರಿಟಿಷ್ ರಾಯಭಾರೀ ಕಚೇರಿಯ ಮುಂದೆಯೂ ಒಂದು ಪಿಕೆಟಿಂಗ್ ನಡೆಯಿತು. ವಿಲಿಯಂ ಬಿಶೋಪರೆಂಬವರು, ಗಾಂಧಿಜಿ ಉಪವಾಸದಲ್ಲಿ ಸಹಾನುಭೂತಿ ತೋರಿಸಿ ಇಪ್ಪತ್ತೊಂದು ದಿನಗಳ ಉಪವಾಸವನ್ನೂ ಮಾಡಿಬಿಟ್ಟರು.

ಹೀಗಾದರೂ, ನಮ್ಮ ಬಂಧು ಜಿನ್ನಾ ಸಾಹೇಬರ ಹೃದಯ ಪರಿವರ್ತನೆ ಆಗಲೊಲ್ಲದು!

ಪುನಃ ೨೬ನೇ ಕಲಮು

ನ್ಯಾಯಬಾಹಿರವೆಂದು ತೀರ್ಮಾನವಾಯಿತು!

ಫೆಡರಲ್ ಕೋರ್ಟಿನ ಅಭಿಪ್ರಾಯ

ಫೆಡರಲ್ ಕೋರ್ಟಿನವರು ಶ್ರೀ ಕೇಶವರಾವ್ ತಳಪಡೆಯವರ ಖಟ್ಲೆಯಲ್ಲಿ ೨೬ನೇ ಕಲಮು ಅಕ್ರಮವಾದುದೆಂದು ಮಾಡಿದ ನಿರ್ಣಯವನ್ನು ಕುರಿತು ಸ್ಪಷ್ಟೀಕರಿಸಬೇಕೆಂದು ಮುಂಬಯಿ ಹೈಕೋರ್ಟಿನವರು ಕೇಳಿದ್ದರು. ಫೆಡರಲ್ ಕೋರ್ಟಿನಲ್ಲಿ ಅದರ ವಿಚಾರಣೆ ನಡೆದು ಏಪ್ರಿಲ್ ೨೨ರ ಹುಕುಮಿನಂತೆ ಫೆಡರಲ್ ಕೋರ್ಟಿನವರು ಪುನಃ ಹುಕುಮು ಕೊಟ್ಟು ಕಾಗದ ಪತ್ರಗಳನ್ನು ಮುಂಬಯಿ ಹೈಕೋರ್ಟಿಗೆ ಕಳುಹಿಸುವಂತೆ ಹುಕುಮ್ಮು ಮಾಡಿದರು. ಅಲ್ಲದೆ ಫೆಡರಲ್ ಕೋರ್ಟಿನ ತೀರ್ಮಾನಕ್ಕನುಸರಿಸಿ ತೀರ್ಮಾನಿಸುವುದು ಮುಂಬಯಿ ಕೋರ್ಟಿನ ಕೆಲಸವೆಂದೂ ತೀರ್ಮಾನಿಸಿದ್ದಾರೆ.

ಡಿಫೆನ್ಸ್ ಓಫ್ ಇಂಡಿಯಾ ಕಾನೂನಿನ ೨೬ನೇ ಕಲಮು ಅಕ್ರಮವೆಂದು ಶ್ರೀ ಕೇಶವರಾವ್ ತಲಪಡೆಯವರ ಖಟ್ಲೆಯಲ್ಲಿ ಫೆಡರಲ್ ಕೋರ್ಟಿನವರು ಮಾಡಿದ ತೀರ್ಮಾನದ ಕುರಿತು ಮುಂಬಯಿ ಹೈಕೋರ್ಟಿನವರ ಕೇಳಿಕೆಯನ್ನು ಮೇ ತಾ. ೩೧ರಂದು ಫೆಡರಲ್ ಕೋರ್ಟಿನ ನ್ಯಾಯಾಧೀಶರು ವಿಚಾರಣೆ ನಡೆಸಿದರು. ಹಿಂದುಸ್ತಾನದ ಅಡ್ವೊಕೇಟ್ ಜನರಲರಾದ ಶ್ರೀ. ಬಿ. ಎಲ್. ಮಿತ್ತರ್ ಮುಂಬಯಿ ಹೈಕೋರ್ಟಿನ ಪರವಾಗಿ ವಾದಿಸಿದರು. ಅಲ್ಲದೆ, ಫೆಡರಲ್ ಕೋರ್ಟಿನ ನಿರ್ಣಯದ ನಂತರ ಹೊರಟ ಆರ್ಡಿನೆನ್ಸ್ ಕಡೆಗೆ ನ್ಯಾಯಾಧೀಶರ ಲಕ್ಷವನ್ನೆಳೆದರು. ಫೆಡರಲ್ ಕೋರ್ಟಿನ ನಿರ್ಣಯದಂತೆ, ಶ್ರೀ ತಳಪಡೆಯವರ ಬಿಡುಗಡೆಯಾಗಬೇಕು; ಆರ್ಡಿನೆನ್ಸಿನಂತೆ ಅವರ ಬಿಡುಗಡೆ ಆಗಬೇಕಾಗಿಲ್ಲ, ಇವು ಒಂದಕ್ಕೊಂದು ವಿರೋಧವಿರುವುದರಿಂದ ಹೊಸ ಆರ್ಡಿನೆನ್ಸನ್ನು ಊರ್ಜಿತದಲ್ಲಿಟ್ಟುಕೊಂಡು ಇನ್ನೂ ಖಟ್ಲೆಯ ತೀರ್ಮಾನವಾಗಿಲ್ಲವೆಂದರು. ಅಲ್ಲದೆ ಏಪ್ರಿಲ್ ತಾ. ೨೨ರ ತೀರ್ಮಾನವನ್ನೆ ಗಟ್ಟಿ ಮಾಡಿ ಅನಂತರ ಆದ ಪರಿಸ್ಥಿತಿಯನ್ನು ಕುರಿತು ತಾವು ವಿಚಾರಿಸುವ ಅವಶ್ಯವಿಲ್ಲವೆಂದರೆ ಪ್ರಿವಿಕೌನ್ಸಿಲಿಗೆ ಅರ್ಜಿ ಮಾಡಲು ತಮಗೆ ಮುಂಬಯಿ ಸರಕಾರದ ಸಲಹೆಯಿದೆಯೆಂದೂ ವಾದಿಸಿದರು.

ಫೆಡರಲ್ ಕೋರ್ಟಿನವರು ಈ ರೀತಿ ತೀರ್ಮಾನವಿತ್ತರು. "ಮೊದಲು ಕೊಡಲಾದ ಏಪ್ರಿಲ್ ೨೨ರ ಹುಕುಮಿನಂತೆ ಈಗ ಹುಕುಮ್ಮು ಕೊಡಲಾಗುವುದು. ಅಲ್ಲದೆ ಡಿಫೆನ್ಸ್ ಓಫ್ ಇಂಡಿಯಾ ಕಾನೂನಿನ ೨೮೦ನೆಯ ಕಲಮಿನಂತೆ ಮೊದಲಿನ ಹುಕುಮಿಗಿಂತ ಬೇರೆಯಾದ ಇನ್ನೊಂದು ಹುಕುಮ್ಮು ಕೊಡಲು ಆಗುವುದಿಲ್ಲ. ಹೇಬಸ್ ಕಾರ್ಪಸ್ ಅರ್ಜಿಯಲ್ಲಿ ಕೊನೆಯ ತೀರ್ಮಾನ ಮಾಡುವ ಹಕ್ಕು ಹೈಕೋರ್ಟಿನವರಿಗಿವೆ. ಆದಕಾರಣ ಫೆಡರಲ್ ಕೋರ್ಟಿನವರ ತೀರ್ಮಾನಕ್ಕೆ ಸರಿಯಾಗಿ ತೀರ್ಮಾನ ಮಾಡುವುದು ಮುಂಬಯಿ ಹೈಕೋರ್ಟಿನವರ ಕೆಲಸ. ಆದ್ದರಿಂದ ಈ ಖಟ್ಲೆಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳೂ ಮುಂಬಯಿ ಹೈಕೋರ್ಟಿಗೆ ಕಳುಹಿಸಲ್ಪಡುವವು. ಹಿಂದಿನ ತೀರ್ಮಾನದಲ್ಲಿ ತಮ್ಮ ಭಾಗವಿಲ್ಲದಿದ್ದರಿಂದ, ಈ ತೀರ್ಮಾನಕ್ಕೆ ತಮ್ಮ ಸಮ್ಮತಿಯಿದೆಯೆಂದು ನ್ಯಾಯಾಧೀಶ ರೌಲಂಡರೂ ಅಭಿಪ್ರಾಯವಿತ್ತರು.

KALPAKA WASHING SOAPS

ಕಲ್ಪಕಾ ಸಾಬೂನು

ಕಲ್ಪಕಾ ಸಾಬೂನು ತಯಾರಿಸುವವರು ತಮ್ಮ ಸಾಬೂನಿನ ಕ್ರಯವನ್ನು ಏರಿಸಿಲ್ಲವೆಂದು ತಿಳಿಸಲು ನಾವು ತುಂಬಾ ಸಂತೋಷಪಡುತ್ತೇವೆ.

ಸಾಬೂನಿನ ರಖಂ ಮತ್ತು ಚಿಲ್ಲರೆ ದರವು ಈ ಕೆಳಗಿನಂತಿದೆ.

	ರಖಂ ದರ.	ಚಿಲ್ಲರೆ ದರ.
ಸ್ಪೆಷಲ್ ಬಾರ್ 1¼ ರಾತ್ತಿನ 60 ಬಾರು.	35–0–0	0–10–0.
ಕಲ್ಪಕಾ ಬಾರ್ 1¼ ರಾತ್ತಿನ 60 ಬಾರು.	34–0–0	0–9–6.
ಸ್ಪೆಷಲ್ ದೊಡ್ಡ ಎರಡುತುಂಡು 100	31–4–0	0–5–9.
ಸ್ಪೆಷಲ್ ದೊಡ್ಡ ತುಂಡು 200	25–0–0	0–2–3.
ಸ್ಪೆಷಲ್ ಸಣ್ಣ ತುಂಡು 400	25–0–0	0–1–3.
ಕಲ್ಪಕಾ ಸಾಬೂನು 1 ಔನ್ಸು, 8 ಗ್ರೋಸ್	27–0–0	0–0–6.

ಎಲ್ಲಾ ಕಡೆಗಳಲ್ಲಿಯೂ ದೊರಕುತ್ತದೆ.

ನಮ್ಮ ಗಿರಾಕಿಗಳ ಪ್ರಯೋಜನಕ್ಕಾಗಿ ಜಾಹೀರು ಮಾಡಲ್ಪಟ್ಟಿದೆ.

ಹೆಚ್ಚಿನ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳಿರಿ.

ದಕ್ಷಿಣ ಕನ್ನಡದ ವಿತರಣಾಕಾರರು:

ಹುಂಡಿ ವೆಂಕಟೇಶ ಕಾಮತ್,

ಬಂದರ್–ಮಂಗಳೂರು.

ಹೊಗೆಸೊಪ್ಪು ವ್ಯಾಪಾರಿಗಳ ಅವಗಾಹನೆಗಾಗಿ

ಇಂಡಿಯಾ ಸರಕಾರದ ಹೊಸ ಕಾನೂನು

ತಾ. ೨ರಂದು, ಮದ್ರಾಸ್ ಎಕ್ಸೈಸಸ್‌ಎಡಿ. ಕಲೆಕ್ಟರರು ಮಂಗಳೂರಿಗೆ ಬಂದಿದ್ದು, ಇಲ್ಲಿನ ಹೊಗೆಸೊಪ್ಪು ವ್ಯಾಪಾರಿಗಳ ಸಭೆ ಕರೆಸಿ, ಅವರ ಅವಗಾಹನೆಗಾಗಿ, ಇಂಡಿಯಾ ಸರಕಾರದ ಹೊಸ ಕಾನೂನಿನ ವಿಷಯ ವಿವರಿಸಿದರು. ಅದರ ಸಾರಾಂಶವನ್ನು ಇಲ್ಲಿ ಕೊಡಲಾಗಿದೆ:

ಇಂಡಿಯಾ ಸರಕಾರದ ೧೯೪೩ನೇ ಇಸವಿಯ ಎಕ್ಸೈಸ್ ತೆರಿಗೆ ಕಾನೂನು ಮತ್ತು ೧೯೪೩ನೇ ಇಸವಿಯ ಹೊಗೆಸೊಪ್ಪು (ಎಕ್ಸೈಸ್) ರೂಲ್ಸುಗಳು, ೧೯೪೩ನೇ ಇಸವಿ ಎಪ್ರಿಲ್ ಒಂದರಿಂದ ಜಾರಿಗೆ ಬಂದಿವೆ. ಚಿಲ್ಲರೆ ಹೊಗೆಸೊಪ್ಪು ಮಾರಾಟ ಮಾಡುವವರು ಮದ್ರಾಸ್ ಏಕ್ಟಿನ ಪ್ರಕಾರ ಲೆಸನ್ಸು ಪಡೆಕೊಂಡರೆ ಸಾಕು ಎಂದು ಸಾಮಾನ್ಯವಾಗಿರುವ ತಪ್ಪಭಿಪ್ರಾಯವನ್ನು ಸರಿಗೊಳಿಸುವ ಬಗ್ಗೆ ಹಾಗೂ, ಈಗ ಜಾರಿಗೆ ಬಂದಿರುವ ಇಂಡಿಯಾ ಸರಕಾರದ ಕಾನೂನನ್ನು ತಪ್ಪಿ ವರ್ತಿಸುವುದರಿಂದ ಹೊಗೆಸೊಪ್ಪು ವ್ಯಾಪಾರಿಗಳಿಗೆ ಆಗಬಹುದಾದ ಶಿಕ್ಷೆ ಜುಲ್ಮಾನೆ ಮೊದಲಾದ ಸಂಕಷ್ಟಗಳನ್ನು ತಪ್ಪಿಸುವ ಬಗ್ಗೆ ನಾವು ಈ ಕೆಳಗಿನ ಸುದ್ದಿಯನ್ನು ಪ್ರಕಟಿಸುತ್ತೇವೆ.

ಇಂಡಿಯಾ ಸರಕಾರದ, ಇಂಪೀರಿಯಲ್ ಕಾನೂನಿನಂತೆ, ಯಾವುದೇ ಜಾತಿಯ ಹೊಗೆಸೊಪ್ಪನ್ನಾಗಲಿ, ಯಾವನೇ ಹೊಗೆಸೊಪ್ಪು ವ್ಯಾಪಾರಿ ಹಾಗೂ ತಯಾರಿಸುವವನು, ವರ್ಷ ಒಂದರ ಸ್ಟೇಂಡಾರ್ಡ್ ಮಣ ಐದಕ್ಕಿಂತ ಮೀರಿದ್ದಲ್ಲಿ ಎಂದರೆ ದಿನಒಂದರ 1¼ಪೌಂಡು ಅಥವಾ 48ತೊಲೆಗಳಿಗೆ ಮೀರಿ ವ್ಯಾಪಾರ ಮಾಡುವಲ್ಲಿ ಇಲ್ಲವೇ ತಯಾರಿಸ್ಸುವಲ್ಲಿ, ಈ ಕಾನೂನಿನಂತೆ ಲೈಸನ್ಸು ಪಡಕೊಳ್ಳತಕ್ಕದ್ದು. ಅಂಥಾ ಲೈಸನ್ಸುಗಳಿಗೆ ಕನಿಷ್ಟ ಮಿತಿಯ ದರವು ಕಾನೂನಿನಂತೆ ರೂ. 5/- ಹೀಗೆ ಲೈಸನ್ಸು ಪಡಕೊಂಡದ್ದಾದರೆ ಹೊಗೆಸೊಪ್ಪು ವ್ಯಾಪಾರವನ್ನು ಸಾಗಿಸಬಹುದು, ತಯಾರಿಸಬಹುದು, ಇಲ್ಲವೆ ಹೊಸತಾಗಿ ಪ್ರಾರಂಭಿಸಲೂಬಹುದು.

1934ರ ಮದ್ರಾಸ್ ಹೊಗೆಸೊಪ್ಪು ಕಾನೂನಿನಂತೆ ಯಾವತರದ ಲೈಸನ್ಸುಪಡಕೊಂಡವರೂ, ಇಂಡಿಯಾ ಸರಕಾರದ 1943ನೇ ಇಸವಿಯ ಈ ಇಂಪಿರಿಯಲ್ ಏಕ್ಟಿನಂತೆ ಲೈಸೆನ್ಸು ಪಡಕೊಳ್ಳಲೇಬೇಕು. ಏಕೆಂದರೆ ಮದ್ರಾಸ್ ಹೊಗೆಸೊಪ್ಪು ಕಾನೂನು ಬರೇ ಪ್ರಾಂತಿಕ ಶಾಸನ ಸಭೆಯ ಕಾನೂನು. ಆದ್ದರಿಂದ ಮದ್ರಾಸ್ ಹೊಗೆಸೊಪ್ಪಿನ ಕಾನೂನು ಪ್ರಕಾರ ಲೈಸನ್ಸು ಪಡಕೊಂಡವರೆಲ್ಲರೂ, ಈ ಕೆಳಗೆ ಕಾಣಿಸಿದಲ್ಲಿ ಆಫೀಸುಗಳಿರುವ ಸೆಂಟ್ರಲ್ ಎಕ್ಸೈಸ್ ಡಿಪಾರ್ಟ್‌ಮೆಂಟಿನವರಿಂದ ಲೈಸೆನ್ಸು ಪಡಕೊಳ್ಳುವುದು ಅವಶ್ಯವಾಗಿದೆ.

1. ಸಬ್ ಇನ್‌ಸ್ಪೆಕ್ಟರ್, ಟೊಬೆಕೋ ಎಕ್ಸೈಸ್‌ಸ್, ಮಂಗಳೂರು ಕಸ್ಟಮ್ ಹೌಸ್ (ಮಂಗಳೂರು ಮತ್ತು ಕಾರ್ಕಳ ತಾಲೂಕುಗಳಿಗೆ)

2. ಸಬ್ ಇನ್‌ಸ್ಪೆಕ್ಟರ್, ಟೊಬೆಕೋ ಎಕ್ಸೈಸಸ್, ಪುತ್ತೂರು. (ಪುತ್ತೂರು ತಾಲೂಕಿಗೆ)

3. ಸಬ್ ಇನ್‌ಸ್ಪೆಕ್ಟರ್, ಟೊಬೆಕೋ ಎಕ್ಸೈಸಸ್, ಉಡುಪಿ. (ಉಡುಪಿ ಮತ್ತು ಕುಂದಾಪುರ ತಾಲೂಕುಗಳಿಗೆ)

4. ಸಬ್ ಇನ್‌ಸ್ಪೆಕ್ಟರ್, ಟೊಬೆಕೋ ಎಕ್ಸೈಸಸ್, ಕಾಸರಗೋಡು ಮತ್ತು ಹೊಸದುರ್ಗ (ಕಾಸರಗೋಡು ತಾಲೂಕಿಗೆ)

ಇಂಪೀರಿಯಲ್ ಕಾನೂನು ಜಾರಿಗೆ ಬಂದು ಈಗಾಗಲೇ ಎರಡು ತಿಂಗಳು ದಾಟಿ ಹೋದದ್ದರಿಂದ, ಯಾರು ತಪ್ಪಭಿಪ್ರಾಯ ಮಾಡಿಕೊಂಡು, ಇಂಡಿಯಾ ಸರಕಾರದ 1943ನೇ ಇಸವಿಯ ಕಾನೂನಿನಂತೆ ಲೈಸನ್ಸು ಪಡಕೊಳ್ಳಲಿಲ್ಲವೊ, ಅವರೆಲ್ಲರೂ ಕೂಡಲೇ ಅವರವರ ತಾಲೂಕಿಗೆ ಸಂಬಂಧಪಟ್ಟ ಟೊಬೊಕೋ ಎಕ್ಸೈಸಸ್ ಸಬ್ ಇನ್‌ಸ್ಪೆಕ್ಟರರಿಗೆ ಬರೆದು ಲೈಸನ್ಸು ಪಡಕೊಳ್ಳಬೇಕಾಗಿದೆ.

ರೈಲು ಬಂಡಿಗಳ ಸಮಯ

ಎಪ್ರಿಲ್ ತಾ. ೧೫ರಿಂದ ವ್ಯತ್ಯಸ್ಥವಾದ ಪ್ರಕಾರ.

	ಹೊರಡುವುದು.	ಬರುವುದು.
ಮೈಲ್	೭-೪೦ ಪ್ರಾ.	೬-೩೫ ಅಪ.
ಶಟ್ಲ್	೬-೩೦ ಅಪ.	೧೦-೫೫ ಪ್ರಾ.

ಸ್ವದೇಶಾಭಿಮಾನಿಗೆ ಜಾಹೀರಾತು ಕೊಡಿರಿ

ಮೃದುವಾದ ಚರ್ಮವನ್ನು ಬಹಳ ಜಾಗ್ರತೆಯಿಂದ ಕಾಪಾಡಬೇಕು

ಕುಟಿಕೂರಾ ಸಾಬೂನು ಮಗುವಿನ ಮೃದುಚರ್ಮವನ್ನು ರಕ್ಷಿಸಲಿ!

ಕುಟಿಕೂರಾ ಸೋಪು

CUTICURA SOAP.

Wanted Graduates

APPLY FOR TERMS

CANARA BANK LTD.,

Ested: 1906

THE CANARA BANKING CORPORATION Ltd

(Incorporated in British India with limited liability).

STATEMENT OF AFFAIRS AS ON 31ST DECEMBER 1942.

Capital & Liabilities	Rs.	As.	Ps.	Property & Assets	Rs.	As.	Ps.
Paid up Capital	6,36,890	0	0	Office premises, furniture, etc.	91,659	0	0
Reserve & other funds	3,71,882	13	11	Advances	31,28,612	4	9
Deposits	41,83,873	4	1	Investment on Govt. Securities etc. at cost	15,34,538	14	3
Due to Bankers	5,08,546	12	1	Sundries	74,183	5	7
Bills per contra	3,59,357	12	1	Bills for Collection	3,59,357	12	1
Sundries including branch adjustments & undisbursed profits	2,83,736	6	9	Cash on Hand & with bankers	12,05,397	14	8
Profit for the year 1942	49,461	3	5				
Total Rs.	63,93,747	3	4	Total Rs.	63,93,747	3	4



ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ 3 ಔನ್ಸ್, 6 ಔನ್ಸ್ ಮತ್ತು 12 ಔನ್ಸಗಳ ಬಾಟ್ಲಿಗಳು ರೂ. 2-12-0, ರೂ. 4-8-0, ರೂ. 8 ಕ್ರಯಕ್ಕೆ ದೊರಕುವುದು.

ತಯಾರಿಸುವವರು: ಡಾಕ್ಟರ್ ಪುರೋಹಿತ ಫಾರ್ಮಸಿ ಕೊಲ್ಹಾಪುರ.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದುದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು. ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

The Bank of Mangalore Limited, Mangalore.
ESTD. 1931

HEAD OFFICE Mangalore.
BRANCHES Moodabidri & Padubidri.

The Bank Undertakes to Collect Cheques, Demand and Documentary Bills at Most Competitive Rates.
ISSUES DRAFTS ON ALL IMPORTANT TOWNS IN THE DISTRICT
and also on
BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.
at very favourable rates
All kinds of inland banking business undertaken

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ ಉಪದ್ರವ, ಕರಿ ಹುಣ್ಣು, ವ್ರಣ ಮೊದಲಾದ ಎಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪ್ರೋ,
ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರಿಯುವುದು.

ನೀವೀವರೆಗೆ ವಿಮೆಯನ್ನು ಇಳಿಸದಿದ್ದರೆ, ಯಾ ಸಾಕಷ್ಟು ವಿಮೆಯನ್ನು ಮಾಡಿಲ್ಲವಾದರೆ

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡಿನಲ್ಲಿ

ಈಗಲೇ ವಿಮೆ ಇಳಿಸಿರಿ.

ಏಕೆಂದರೆ

1. ಜೀವವಿಮೆಯು ಒಬ್ಬನ ವೃದ್ಧಾಪ್ಯದ ಮತ್ತು ಸಮೀಪದ ಹಾಗೂ ಪ್ರೀತಿಯ ಸಂಬಂಧಿಕರ ಜೀವನವನ್ನು ಸುರಕ್ಷಿತಗೊಳಿಸುತ್ತದೆ.
2. ನೀವಿಂದು ವಿಮೆಯನ್ನಿಳಿಸಬಲ್ಲಿರಾದರೆ ನಾಳೆ ಹಾಗೆ ಮಾಡಲು ಶಕ್ತರಾಗದೆ ಹೋಗಬಹುದು.
3. ಆರೋಗ್ಯವು ಅನಿಶ್ಚಿತವೆಂದಾದರೆ ಮೃತ್ಯುವು ಯಾರನ್ನೂ ಬಿಡುವಂತಿಲ್ಲ.
4. ಮೃತ್ಯು ಮತ್ತು ಮುಪ್ಪು ಎಂಬುದು ಅಮೂಲ್ಯವಾದೊಂದು ನಿಶ್ಚಿತ.
5. ಜೀವವಿಮೆಯು ಮರಣದ ಕ್ರೂರತೆಯನ್ನು ಹೋಗಲಾಡಿಸುವುದೊಂದೇ ಅಲ್ಲ; ಅದರ ಸಂಕಷ್ಟವನ್ನೂ ದೂರೀಕರಿಸುತ್ತದೆ.

ಆದುದರಿಂದ ಇಂದೇ ಜೀವವಿಮೆ ಮಾಡುವುದು ಲಾಭಕರವಾಗಿದೆ.

ವಿಶೇಷ ಮಾಹಿತಿಗೆ ದಯಮಾಡಿ ಬರೆಯಿರಿ:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

—: ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ :—

ಮಂಗಳೂರು ಕಲ್ಲಿಕೋಟೆ ಸೇಲಂ ತಿರುವಾಂಕೂರು ಬೆಂಗಳೂರು ನಗರ ಮತ್ತು ಬೊಂಬಾಯಿ

'Bhuvanendra Products Limited
Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯೌಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ್ ವ ಏಜೆಂಟರು:—
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಪೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.
ಡಿಪೊ:—1. ವಂದಾಲ ಗಲ್ಲಿ ಹುಬ್ಬಳ್ಳಿ.
2. 36 ಫ್ಯಾಕ್ಟ್ರೀಸ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.
ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಬೇಧಿಗೆ ಉತ್ತಮೌಷಧ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಖು 11—6—1943 [ಸಂಚಿಕೆ 24]

ಪಿಲಿಪ್ಸರು ಪುನಃ ಭಾರತಕ್ಕೆ ಬರುತ್ತಾರೆ!

ಫಿಲಿಪ್ಸರು ಭಾರತಕ್ಕೆ!

ಅಮೆರಿಕದ ಅಧ್ಯಕ್ಷರ ರಾಯಭಾರಿ ಫಿಲಿಪ್ಸರು ತಮ್ಮ ಒಂದು ಸಲದ ವರದಿಯನ್ನು ಅಧ್ಯಕ್ಷರಿಗೊಪ್ಪಿಸಿ, ಈಗ ಎರಡನೆಯ ವರದಿ ತಯಾರಿಸಲು ಭಾರತಕ್ಕೆ ಮರಳಿ ಬರುವವರಿದ್ದಾರೆ ಜೂನ್ ಅಂತ್ಯದೊಳಗೇ ಇವರು ಭಾರತಕ್ಕೆ ಬರುವರೆಂದೂ, ಅವರು ಈ ಸಲ ಗಾಂಧಿಜಿ ಮೊದಲಾದ ಸೆರೆಮನೆಯಲ್ಲಿರುವ ರಾಷ್ಟ್ರದ ಮುಂದಾಳುಗಳನ್ನು ಸಂದರ್ಶಿಸಲಿರುವರೆಂದೂ ತಿಳಿದು ಬರುತ್ತದೆ

ರೈಲ್ವೆ ಅವಘಡ

ಅಕೋಲದಿಂದ ೭ ಮೈಲುಗಳ ಈಚೆಗೆ ಜಿ. ಐ ಪಿ. ರೈಲ್ವೆಯಲ್ಲಿ ಒಂದು ಅವಘಡ ಈಚೆಗೆ ನಡೆಯಿತು ಕಲ್ಕತ್ತೆಗೆ ಹೊರಟ ಬೊಂಬಯಿ ಮೈಲು ಕೆಲವು ಗುಡ್ಸ್ ವೇಗಿನುಗಳಿಗೆ ಡಿಕ್ಕಿ ಹೊಡೆದು, ಇಂಜಿನೂ ಮೂರು ಪ್ರಯಾಣಿಕರ ಗಾಡಿಗಳೂ ಚೂರುಚೂರಾದುವು ಇದರಲ್ಲಿ ೭೫ ಮಂದಿ ಮೃತರಾದರೆಂದೂ, ೧೪೮ ಮಂದಿ ಗಾಯಗೊಂಡಿರುವರೆಂದೂ ಸುದ್ದಿ ಈ ಅವಘಡವು ಸಹಜವಾಗಿ ಉಂಟಾಗಿದೆ, ಯಾರೂ ಕೆಡವಿದುದಲ್ಲ

ಲೂಯಿ ಫಿಶರರ ಲೇಖನ ಪ್ರತಿಬಂಧ!

ಅಮೆರಿಕದ ಪತ್ರ ಲೇಖಕ ಹಾಗೂ ಗ್ರಂಥಕಾರ ಲುಯಿ ಫಿಶರರ ಲೇಖನ ಭಾಷಣಾದಿತ್ಯಾದಿ (ಭಾರತಕ್ಕೆ ಸಂಬಂಧಿಸಿದುವು) ಅವುಗಳ ಭಾಷಾಂತರಗಳು ಇವುಗಳನ್ನು ಭಾರತದಲ್ಲಿನ ಪತ್ರಿಕೆಗಳು ಪ್ರಕಟಿಸುವ ಬಗ್ಗೆ ನಿರ್ಬಂಧ ಹಾಕಲಾಗಿದೆ

ಅಖಿಲಭಾರತ ಪ್ರಗತಿಶೀಲ ಲೇಖಕರು

ಬೊಂಬಯಿಯಲ್ಲಿ ತಮ್ಮ ನಾಲ್ಕನೆ ಅಧಿವೇಶನ ಕೂಡಿಸಿದರು, ಬೇರೆ ಬೇರೆ ಪ್ರಾಂತಗಳಿಂದ ೧೨೦ರಷ್ಟು ಪ್ರತಿನಿಧಿಗಳು ಬಂದಿದ್ದರು ಶ್ರೀ ಕು ಶಿ ರಾಯರು ಮಂಗಳೂರಿಂದ ಹೋಗಿದ್ದರು. ಸ್ವಾಗತ ಸಮಿತಿ ಅಧ್ಯಕ್ಷ ಶ್ರೀ ಕೆ ಎ ಅಬ್ಬಾಸರು ಸ್ವಾಗತ ಭಾಷಣ ಮಾಡಿದರು. ಶ್ರೀ. ಹರೀಂದ್ರನಾಥ ಚಟ್ಟೋಪಾಧ್ಯಾಯ, ವಿಶ್ವಭಾರತಿಯ ಪ್ರೊ। ಟಾನ್‌ಯುನ್ ಶಾ, 'ಆಶ್ಯ ಮತ್ತು ಅಮೆರಿಕ' ಪತ್ರ ಸಂಪಾದಕ ರಿಚಾರ್ಡ್ ವಾಲ್, ಕಮ್ಯುನಿಸ್ಟ ಮುಖಂಡ ಪಾಮಿದತ್ತ್, ಮುಲ್ಕಾರಾಜ್ ಆನಂದ, ಕೃಷ್ಣ ಮೆನನ್ ಶೆಲ್ವಂಕರ್, ಫರ್ಲಾಂಗ್ ಮೊದಲಾದವರು ಸಂದೇಶ ಕಳುಹಿಸಿದ್ದರು. ಬಂಗಾಳದ ಪ್ರತಿನಿಧಿಗಳು ಠಾಗೂರರ ಗೀತ ಹಾಡಿದರು ಮರಾಠಿ ಅಧ್ಯಕ್ಷ ಶ್ರೀ. ಎಸ್, ವಿ. ಡಾಂಗೆ, ಗುಜರಾಥಿ ಅಧ್ಯಕ್ಷ ಶ್ರೀ. ಜಿತುಬ್ಬಾ ಮೆಹತಾ, ತೆಲುಗು ಅಧ್ಯಕ್ಷ ಧರ್ಮರಾಯರು, ಇವರುಗಳು ಭಾಷಣಗಳನ್ನಿತ್ತರು, ಕನ್ನಡದ ಅಧ್ಯಕ್ಷ ಪ್ರೊ। ಜಾಗೀರ್ದಾರರು ಭಾಷಣವೀಯುತ್ತಾ 'ಈ ಯುದ್ಧ ಜಗತ್ತಿನ ಭವಿತವ್ಯವನ್ನು ನಿರ್ಧರಿಸುವುದು, ಆ ಕುರಿತು ನಮ್ಮ ಧ್ಯೋರಣೆ ಸ್ಪಷ್ಟವುದಿಸುವುದು ಅಗತ್ಯ'ವೆಂದು ಸಾರಿದರು ಆ ಮೇಲೆ ಬೇರೆ ಬೇರೆ ಪ್ರಾಂತಗಳ ಪ್ರತಿನಿಧಿಗಳು ವರದಿಯೊಪ್ಪಿಸಿದರು. 'ಧುರೀಣರನ್ನು ಬಿಡಬೇಕು, ಪ್ರಗತಿಶೀಲ ಲೇಖಕರನ್ನು ಸೆರೆಯಿಂದ ಮುಕ್ತಮಾಡಬೇಕು ಎಂದೂ ಲೇಖಕ, ಸಂಪಾದಕ, ಪ್ರಕಾಶಕರನ್ನು ಶಿಕ್ಷಿಸುವ ಸರಕಾರದ ನೀತಿ ಖಂಡನೆ, ನಿಷ್ಪ್ರಯೋಜಕ ಭಾರತೀಯ ಚಿತ್ರಗಳ ಖಂಡನೆ, ಕಾಗದ ಅಭಾವ ಪರಿಹಾರ ಪ್ರಾರ್ಥನೆ, ಜನತಾ ರಂಗಭೂಮಿ ಸ್ಥಾಪನೆ, ಲೇಖಕರಿಗೆ ಸರಿಯಾದ ಪ್ರತಿಫಲ ಕೊಡಬೇಕೆಂಬ, ಚೀನದ ಪ್ರಗತಿಶೀಲ ಲೇಖಕರನ್ನು ಅಭಿನಂದಿಸುವ ಗೊತ್ತುವಳಿಗಳಾದವು 'ಸಾಮ್ರಾಜ್ಯಶಾಹೀ, ಫ್ಯಾಸಿಸ್ಟ್‌ವಾದ, ಭಂಡವಾಳ ಶಾಹಿ ಮತ್ತಿತರ ಎಲ್ಲಾ ಪ್ರತಿಕೂಲ ಶಕ್ತಿಗಳನ್ನು ಪ್ರತಿಭಟಿಸಬೇಕೆಂದೂ, ಸ್ವತಂತ್ರ ಜಗತ್ತಿನಲ್ಲಿ ಸ್ವತಂತ್ರ ಭಾರತಕ್ಕಾಗಿ ದುಡಿಯಬೇಕೆಂದೂ' ಪ್ರಧಾನ ನಿರ್ಣಯ ಅಂಗೀಕೃತವಾಯಿತು ಕೊನೆಯ ದಿನ ಶ್ರೀ ಮಾಮಾ ವರೇರಕರ ಅಧ್ಯಕ್ಷತೆಯಲ್ಲಿ ಶ್ರೀ. ಕು ಶಿ ರಾಯರು ಕನ್ನಡದ ವಿಚಾರ ಮಾತನಾಡಿದರು ತಮಿಳು ಪ್ರತಿನಿಧಿ ವರದಿಯೊಪ್ಪಿಸಿದರು ಕೊನೆಗೆ ಅ ಭಾ ಪ್ರಗತಿಶೀಲ ಲೇಖಕ ಸಂಘದ ಹೊಸ ಕಾರ್ಯಕಾರೀ ಸಮಿತಿ ರಚಿತವಾಯಿತು

ಚುನಾವಣೆಯಲ್ಲಿ ಕಾಂಗ್ರೆಸಿಗೆ ಪ್ರಚಂಡ ವಿಜಯ!

—ಪ್ರಗತಿಶೀಲ ಲೇಖಕರ ಸಮ್ಮೇಳನ—

ಟಾಗೂರ ಬಹುಮಾನ

ನೋಬೆಲ್ ಬಹುಮಾನದ ಮಾದರಿಯಲ್ಲಿ ಟಾಗೂರ ಬಹುಮಾನವೊಂದನ್ನು ಭಾರತದ ಯಾವುದೇ ಭಾಷೆಯಲ್ಲಿ ಬರೆದ ಉತ್ತಮ ಗ್ರಂಥಕಾರರಿಗೆ ಕೊಡಬೇಕೆಂದು ಟಾಗೂರ ಸ್ಮಾರಕ ಸಮಿತಿಯವರು ನಿರ್ಧರಿಸಿರುತ್ತಾರೆ ಇದನ್ನು ಪ್ರತಿ ವರ್ಷ ಕೊಡಲಾಗುವುದು. ಟಾಗೋರರ ಅಪ್ರಸಿದ್ಧವಾಗದ ಪುಸ್ತಕಗಳನ್ನೂ ಪ್ರಸಿದ್ಧಿಸಲಾಗುವುದು ಅವರ ಭಾವಗೀತೆ, ಕಲೆ, ರಾಷ್ಟ್ರೀಯ ಹಾಗೂ ಅಂತರ್ ರಾಷ್ಟ್ರೀಯ ವಿಚಾರಗಳನ್ನು ವಿವರಿಸಿ ಅವರ ಜೀವನ ಚರಿತ್ರವೊಂದನ್ನು ಪ್ರಕಟಪಡಿಸಲಾಗುವುದು 'ವಿಶ್ವಭಾರತಿ' ಸಂಸ್ಥೆಗೆ ೨೦ ಲಕ್ಷ ರೂಪಾಯಿ ಸಂಗ್ರಹಿಸಲು ನಿಶ್ಚಯವಾಗಿದೆ

ರಾಜಕೀಯ ಕೈದಿಗಳ ಉಪವಾಸ

ಮೈಸೂರು ಜೈಲಿನಲ್ಲಿ ಸುಮಾರು ೭೦ ಮಂದಿ ರಾಜಕೀಯ ಕೈದಿಗಳು ಜೂನ್ ೧ನೇ ತಾರೀಕಿನಿಂದ ಉಪವಾಸ ಕೈಕೊಂಡಿರುವ ವಿಷಯ ಚರ್ಚೆ ಮಾಡಲು ಅವಕಾಶ ಕೊಡಬೇಕೆಂದು ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ಶ್ರೀ. ಭೂಪಾಳಂ ಚಂದ್ರಶೇಖರಯ್ಯನವರು ಕೇಳಿದರು. ಅದಕ್ಕೆ ದಿವಾನ್ ಅಧ್ಯಕ್ಷರು ಆ ಕುರಿತು ತನಿಖೆ ನಡೆಸಲು ತಾನು ಅಜ್ಞೆಮಾಡಿರುವುದಾಗಿ ಹೇಳಿದರು

ಕಾಂಗ್ರೆಸಿಗೆ ಪ್ರಚಂಡ ವಿಜಯ

ಶ್ರೀ ಸತ್ಯಮೂರ್ತಿಯವರ ನಿಧನದಿಂದುಂಟಾದ ಕೇಂದ್ರ ಎಸೆಂಬ್ಲಿ ಸ್ಥಾನಕ್ಕೆ ಉಮೇದ್ವಾರರಾಗಿ ನಿಂತ ಶ್ರೀ. ರಂಗಯ್ಯ ನಾಯ್ಡು ಇವರು ಜಸ್ಟಿಸ್ ಪಾರ್ಟಿ ಉಮೇದ್ವಾರರನ್ನು ಸೋಲಿಸಿ ವಿಜಯಿಗಳಾದರು ಕಾಂಗ್ರೆಸು ಮುಂದಾಳುಗಳು ಸೆರೆಮನೆಯಲ್ಲಿದ್ದು ಕಾಂಗ್ರೆಸಿನ ಪ್ರಭಾವ ಮತದಾರರ ಮೇಲೆ ಬೀಳಲು ಅಸ್ಪದವಿಲ್ಲದಿರುವಾಗ, ಜಸ್ಟಿಸ್ ಪಾರ್ಟಿ ಉಮೇದ್ವಾರರಿಗೆ ಸಭೆ ಮೆರವಣಿಗೆ ಮಾಡಲು ಅಸ್ಪದವಿತ್ತು, ಶ್ರೀ ರಂಗಯ್ಯ ನಾಯುಡುರವರಿಗೆ ಅದನ್ನು ಅಧಿಕಾರಿಗಳು ತಿರಸ್ಕರಿಸಿದ ಈ ಸಂದರ್ಭದಲ್ಲಿಯೂ ಕಾಂಗ್ರೆಸಿಗೆ ಈ ವಿಜಯ ದೊರಕಿದೆಯೆಂಬುದು ಗಮನೀಯವಿದೆ ಕಾಂಗ್ರೆಸನ್ನು ಹತ್ತಿಕ್ಕಲು ಪ್ರಯತ್ನಿಸಿದ ಅಧಿಕಾರಿಗಳಿಗೆ ಮತದಾರರ ಉತ್ತರ ಇದು' ಶ್ರೀ ರಂಗಯ್ಯ ನಾಯ್ಡುರವರಿಗೆ ೪ ಸಾವಿರಕ್ಕೆ ಮಿಕ್ಕಿದ ಓಟು, ಜಸ್ಟಿಸ್ ಪಾರ್ಟಿಯವರಿಗೆ ಕೇವಲ ೧ ಸಾವಿರ ಓಟು'

ರಣರಂಗ

ಯೂರೋಪಿನ ಧಾಳಿಯನ್ನು ನಾವೀಗ ಪ್ರಾರಂಭ ಮಾಡಲು ನಿರ್ಧರಿಸಿದ್ದೇವೆಂದು ಮಿತ್ರರು ಸಾರುತ್ತಲಿದ್ದಾರೆ ಭೂಮಧ್ಯ ಸಾಗರವು ಮುಂದಿನ ರಣರಂಗವಾಗುವುದಂತೆ! ಮೊನ್ನೆ ಮೊನ್ನೆ ಕೆಲ ಜರ್ಮನ್ ವಿಮಾನುಗಳು ಬ್ರಿಟನಿಗೆ ಬಂದು ಬಾಂಬಿಟ್ಟು ಹೋದವು! ಇಟಲಿಯನ್ನು ಏಕಾಂಗಿಯಾಗಿ ಹೋರಾಡುವಂತೆ ಮಾಡಿ, ಒಂದೇ ಪೆಟ್ಟಿನಿಂದ ಅದನ್ನು ಹೊಡದು ಬಿಡಬೇಕೆಂದು ಮಿತ್ರರ ಯೋಚನೆಯಿದೆಯೆಂದು ಹೇಳಲಾಗುತ್ತದೆ ಚರ್ಚಿಲರೀಗ ಬ್ರಿಟನಿಗೆ ಮರಳಿ ಬಂದಿದ್ದಾರೆ. ಅಮೆರಿಕದಲ್ಲಿ ರೂಸ್‌ವೆಲ್ಟರೊಡನೆ ಈ ಸಲ ದೀರ್ಘ ಮಾತುಕತೆ ಮಾಡಿ ಬಂದಿದ್ದಾರೆ ಯೂರೋಪಿನಲ್ಲಿ ಪ್ರಚಂಡ ಯುದ್ಧ ಸಿದ್ಧತೆ ಮಾಡುವ, ರಶ್ಯ ಅಮೆರಿಕ ಬ್ರಿಟನುಗಳೊಂದಾಗಿ ಹಿಟ್ಲರ್ ಶಾಹಿಯನ್ನು ಮರ್ದಿಸುವ ಹಂಚಿಕೆ ಹೂಡಿ ಚರ್ಚಿಲರು ಮರಳಿರುವರೆಂದು 'ಟೈಮ್ಸ್' ಪತ್ರಿಕೆ ಬರೆಯುತ್ತದೆ ಚರ್ಚಿಲರು ಬಂದವರೇ ಯುದ್ಧ ಮಂತ್ರಿಮಂಡಳದ ಸಭೆ ಕರೆದಿರುವರು

ರಶ್ಯಾ ರಣರಂಗದಲ್ಲೀಗ ಪುನಃ ಪ್ರಕ್ಷೋಭವುಂಟಾಗಿದೆ. ನೂರಾರು ಜರ್ಮನ್ ವಿಮಾನುಗಳು ಗೋರ್ಕಿ ಎಂಬಲ್ಲಿಗೆ ಧಾಳಿಯಿಟ್ಟವು ರಣರಂಗದ ಹಲವು ಕಡೆಗಳಲ್ಲೀಗ ಜರ್ಮನರು ಆಕ್ರಮಣ ಕೈಕೊಂಡಿದ್ದಾರೆ. ರಶ್ಯರಣರಂಗದ ಎಲ್ಲಾ ಕಡೆಗಳಲ್ಲಿಯೂ ಒಂದೇ ಸಲ ಆಕ್ರಮಣ ಮಾಡಬೇಕೆಂದು ಜರ್ಮನರು ಆಲೋಚಿಸಿದಂತಿದೆ ಜರ್ಮನರು ಪ್ರಬಲ ಟ್ಯಾಂಕುದಳಗಳನ್ನು ಸಂಘಟಿಸಿದ್ದಾರೆ ರಶ್ಯನರು ಗೋರಿಲ್ಲಾ ಸೇನೆ ಬಹಳ ಪರಾಕ್ರಮದಿಂದ ಹೋರಾಡುತ್ತಿದೆ

ಬರ್ಮಾ ರಣರಂಗದಲ್ಲಿ, ಬೂಥಿಡಾಂಗ್ ಬಳಿ ತಿಕ್ಕಾಟವುಂಟು ಮಾಯೂ ದ್ವೀಪದ ಮೇಲೆ ಮಿತ್ರ ವಿಮಾನಗಳು ಧಾಳಿಯಿಟ್ಟವು ಚೀನದಲ್ಲಿಯೂ ಕಾದಾಟ ಆಗುತ್ತಲೇ ಇದೆ. ಚುಕಿಂಗ್‌ನಲ್ಲಿ ಜಪಾನರ ವಿಮಾನಧಾಳಿ ಆಯಿತು ಕಳೆದ ಕೆಲವು ವಾರಗಳಿಂದ ಚೀನೀಯರಿಗೆ ಗೆಲವಾಗುತ್ತಾ ಬರುತ್ತದೆ ಅವರಿಗೀಗ ವಿಮಾನ ಸಹಾಯ ದೊರಕಿರುವುದರಿಂದ ಯಾಂಗ್ಟ್ಸೀ ಕ್ಷೇತ್ರದಲ್ಲಿ ಜಪಾನರನ್ನು ಹಿಂದಟ್ಟಿದ್ದಾರೆ ಹೂಪೆ, ಹುನಾನ್ ಪ್ರಾಂತಗಳಲ್ಲೂ ಚೀನೀಯರೇ ಗೆಲ್ಲುತ್ತಾರೆ ಗ್ರೀಸ್ ಒಳ ಏಜಿಯನ್ ಸಮುದ್ರದಲ್ಲಿ ಮತ್ತು ಕ್ರೆಟನಿಯಾ ಬಂದರದಲ್ಲಿ ನೌಕಾ ಕಾಳಗವಾಯಿತು

ಭಾರತದ ಮೇಲೆ ಇದು ವರೆಗ ಜಪಾನರು ಮಾಡಿದ ಬಾಂಬಿನ ಧಾಳಿಯಿಂದ ೭೭೬ ಜನರು ಸತ್ತು ೮೭೮ ಜನ ಗಾಯಗೊಂಡರೆಂದು ಅಧಿಕೃತವಾರ್ತೆಯಿದೆ ಜಪಾನರು ಅಸ್ಸಾಮ್, ಬಂಗಾಳ, ಮದ್ರಾಸ್, ತ್ರಿಪುರಾ, ಮಣಿಪುರಗಳ ಮೇಲೆ ಬಾಂಬು ಸುರಿಸಿದರು

NOTICE

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S C 106 1943

ಪೇಜಾವರ ನಾರ್ಣಪ್ಪ— ವಾದಿ

ಮತ್ತು

ಸಂಕು ಮೊಲ್ಯ ಸಹಾ— ಪ್ರತಿವಾದಿರು

ಇವರೊಳಗೆ

2ನೇ ಪ್ರತಿವಾದಿ ನಾರಾಯಣ ಮೊಲ್ಯ—ಸಂಕು ಮೊಲ್ಯನ ಅಳಿಯ—ಮಂಗಳೂರು ತಾಲೂಕು ಸೂರಿಂಜ ಗ್ರಾಮದಲ್ಲಿರುವವ

ಇವನಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ —

ವಾದಿಯು ನಿಮ್ಮಿಂದ ತಾ 31-3-1943ಕ್ಕೆ ಬರತಕ್ಕ ಒಂದು ವರ್ಷದ ಚಾಲಗೇಣಿ ವಸೂಲು ಮಾಡುವ ಬಗ್ಗೆ ದಾಖಲು ಮಾಡಿದ ಮೇಲಿನ ವ್ಯಾಜ್ಯವು ತಾ 26-6-1943ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಇಟ್ಟಿರುತ್ತದೆ ಆದ್ದರಿಂದ ಸದ್ರಿ ತಾ 26 6 1943ಕ್ಕೆ ಹಗಲು ಘಂಟೆ 10 30ಕ್ಕೆ ಈ ಕೋರ್ಟಿನ ಮುಂದೆ ನೀವು ಖುದ್ದಾಗಿಯಾಗಲಿ ವಕೀಲರ ಮುಖಾಂತರವಾಗಲೀ ಹಾಜರಾಗಿ ಉತ್ತರಿಸುವರೆ ತಪ್ಪಿದ್ದಲ್ಲಿ ಸದ್ರಿ ವ್ಯಾಜ್ಯವು ನಿಮ್ಮ ಗೈರ ಹಾಜರಿಯಲ್ಲಿ ತೀರ್ಮಾನಿಸಲ್ಪಡುವುದು ತಿಳಿದಿರಲಿ

Mangalore, Dated 9 6 43 — M Janardana Malya, Pleader for Plaintiff

ಜಿಲ್ಲಾ ಸಮಾಚಾರಗಳು

ಮಂಗಳೂರು

ಮುಸ್ಲಿಂ ಮಹಿಳಾ ಹೈಸ್ಕೂಲ್

ಮುಸ್ಲಿಂ ಬಾಲಿಕೆಯರಿಗಾಗಿ, ಮಂಗಳೂರು ರಥಬೀದಿಯ ಮು॥ ಹ್ಯಾ॥ ಎ॥ ಶಾಲೆಯ ಮಹಾರದಲ್ಲಿ ತಾ॥ ೫ರಲ್ಲಿ ಒಂದು ಗವರ್ನಮೆಂಟ್ ಸೆಕೆಂಡರಿ ಶಾಲೆ ತೆರೆಯಲ್ಪಟ್ಟಿತು. ಆಗ ಅಲ್ಲಿ ವಿದ್ಯಾಭಿಮಾನಿಗಳ ಸಭೆ ಮು. ಚೇರ್‌ಮೆನ್ ಶ್ರೀ ಪುತ್ತೂರು ಹುಸೇನ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿತು. ಈ ಶಾಲೆಗಾಗಿ ಒಂದು ವಿದ್ಯಾರ್ಥಿನಿ ಭವನ ಅಗತ್ಯವೆಂದೂ, ಅಲ್ಲಿ ವಾಸಿಸತಕ್ಕ ವಿದ್ಯಾರ್ಥಿನಿಯರಿಗಾಗಿ ವಿದ್ಯಾರ್ಥಿನಿ ವೇತನಗಳು ಏರ್ಪಡಬೇಕೆಂದೂ, ಶಾಲೆಗೊಂದು ಕಟ್ಟಡ ಬೇಕೆಂದೂ, ರಥಬೀದಿಯಲ್ಲಿರುವ ಡಿ. ಇ. ಒ. ಆಫೀಸನ್ನು ಅದಕ್ಕಾಗಿ ಕೊಟ್ಟರಾಗಬಹುದೆಂದೂ, ಈ ಶಾಲೆಯನ್ನು ಬರುವ ವರ್ಷ ಹ್ಯಾಸ್ಕೂಲಿನ ತರಗತಿಗೇರಿಸಿ IV ಫಾರ್ಮನ್ನು ತೆರೆಯಬೇಕೆಂದೂ ನಿರ್ಣಯಗಳಾದುವು. ಶ್ರೀ ಯು. ಹಮ್ಮಬ್ಬರು ವಂದನಾರ್ಪಣೆ ಮಾಡಿದರು.

ಮಂಗಳೂರು ರಥಬೀದಿಯ ಮುನಿಸಿಪಲ್ ಹ್ಯಾಯರ್ ಎಲಿಮೆಂಟರಿ ಶಾಲೆಯ ಮಹಾರದಲ್ಲಿ ಈ ಹೊಸ ಶಾಲೆಯನ್ನು ಕಳೆದ ಶನಿವಾರ ಸಂಜೆ ತೆರೆಯಲ್ಪಟ್ಟಿತು. ಜಿಲ್ಲಾ ಕಲೆಕ್ಟರರ ಪತ್ನಿ ಬೇಗಂ ಕರಮುತುಲ್ಲರಿಂದ ಇದರ ಪ್ರಾರಂಭೋತ್ಸವ ನೆರವೇರಿಸಲ್ಪಟ್ಟಿತು. ಮಿಸ್. ಸಿ. ಡಿ. ಸೋಜಾ ಶಾಲಾ ಇನಸ್ಪೆಕ್ಟ್ರೆಸ್, ಬೇಗಂ ಟಿ. ಅಸಫ್ ಆಲಿ ಬೇಗ್ ಸಾಹೇಬ್, ಶ್ರೀಗಳಾದ ಯಂ. ಹಮ್ಮಬ್ಬ ಸಾಹೇಬ್, ಎಂ. ಅಬ್ದುಲ್ ರಹೀಂ ಸಾಹೇಬ್, ಎಂ. ಕರಮುತುಲ್ಲಾ (ಜಿಲ್ಲಾ ಕಲೆಕ್ಟರ್) ಅಬ್ದುಲ್ ಅಜೀಜ್ ಸಾಹೇಬ್ ಮೊದಲಾದವರ ಭಾಷಣಗಳಿದ್ದುವು. ಮುಖ್ಯೋಪಾಧ್ಯಾಪಿಕೆ ಮಿಸ್. ಇ. ಬ್ರಿಟ್ಟೋ ವಂದನಾರ್ಪಣೆ ಮಾಡಿದರು.

ಮಂಗಳೂರು ಕೋ-ಒಪರೇಟಿವ್ ಸ್ಟೋರ್ಸ್

ಇದರ ವಾರ್ಷಿಕಾಧಿವೇಶನವು ಶ್ರೀ ಪಿ ವ್ಯಾಸರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಯು ಗೋವಿಂದರಾಯರು, "ಅಕ್ಕಿ ದೊರೆಯುವುದು ದುರ್ಲಭವಾಗುತ್ತಿದೆ, ಕೂಡಲೆ ತಕ್ಕ ಪ್ರತಿಬಂಧಕವನ್ನು ಕೈಕೊಳ್ಳದಿದ್ದರೆ, ಪರಿಸ್ಥಿತಿಯು ಇನ್ನೂ ಕೆಡುವುದರಲ್ಲಿ ಸಂದೇಹವಿಲ್ಲ" ಎಂದರು, ಸ್ಟೋರ್ಸಿನ ಕಾರ್ಯದರ್ಶಿಗಳಾದ ಶ್ರೀ ಎಸ್ ನರಸಪ್ಪಯ್ಯನವರು 'ಅಕ್ಕಿಯ ಬೆಲೆಯು, ಇತ್ತೀಚೆಗೆ ಮಿತಿಮೀರಿ ಏರಿದುದರಿಂದ ಪರಿಸ್ಥಿತಿಯು ಕೆಟ್ಟದುವುದಾದರೂ, ಸ್ಟೋರ್ಸ್ ಬಡ ಜನರಿಗೆ ತನ್ನಿಂದಾದ ಸೇವೆಯನ್ನು ಸಲ್ಲಿಸಲು ಸಿದ್ಧವಿದೆಯೆಂದು ಎಂದರು ಅನಂತರ ಸ್ಟೋರ್ಸಿನ ಲೆಕ್ಕ ಪತ್ರಗಳೂ ವರದಿಯೂ ಅಂಗೀಕರಿಸಲ್ಪಟ್ಟಿತು ಹಿಂದಿನ ವರ್ಷಗಳ ನಷ್ಟ ಭರ್ತಿಯಾಗಿ ಈ ವರ್ಷ ಡಿವಿಡೆಂಡನ್ನೂ ಕೊಡಲಿದ್ದಾರೆ

ಈ ಸ್ಟೋರ್ಸಿನ ಒಂದು ಹೊಸ ಶಾಖೆ ಸರಕಾರಿ ನೌಕರರ ಅನ್ನ ಸಾಮಗ್ರಿಗಳ ಪೂರೈಕೆಗಳನ್ನು ಮಾತ್ರವೇ ಪ್ರತ್ಯೇಕವಾಗಿ ನೋಡಿಕೊಳ್ಳುವ ಉದ್ದೇಶದಿಂದ ಸ್ಥಳೀಯ ಫೆಲಿಕ್ಸ್ ಪೈ ಬಜಾರಿನಲ್ಲಿ ತೆರೆಯಲ್ಪಟ್ಟಿತು ಜಿಲ್ಲಾ ಕಲೆಕ್ಟರ್ ಎಂ ಕರಮತುಲ್ಲಾ ಅವರು ಈ ಶಾಖೆಯ ಉದ್ಘಾಟನೆ ನೆರವೇರಿಸಿದರು.

ಡಿಸ್ಟ್ರಿಕ್ಟ್ ಬೋರ್ಡು ಅಧ್ಯಕ್ಷಸ್ಥಾನ

ಶ್ರೀ ಆರೂರು ಲಕ್ಷ್ಮೀನಾರಾಯಣ ರಾಯರು ತಾ ೧೧ರಲ್ಲಿ ಆದ ಡಿ॥ ಬೋ॥ ಅಧ್ಯಕ್ಷಸ್ಥಾನದ ಚುನಾವಣೆಯಲ್ಲಿ ಬಹುಮತದಿಂದ ಗೆದ್ದು ಬಂದರು. ಡಾ॥ ಮಹಾಬಲ ಅಡ್ಯಂತಾಯರು ೫ ಓಟುಗಳಿಗೆ ಸೋತುಹೋದರು.

ರಂಗಿನ ಕೆಲಸಗಾರರ ಮುಷ್ಕರ

ಜೆ. ಸಿ ಸಿಕ್ವೇರರ ರಂಗಿನ ಕಾರ್ಖಾನೆ ಕೆಲಸಗಾರರು ಮುಷ್ಕರ ಹಿಡಿದು ಎರಡು ವಾರಗಳಾದವು. ಯಾವ ಕಾರಣವೂ ಇಲ್ಲದೆ ಐದು ಮಂದಿಯನ್ನು ಕೆಲಸದಿಂದ ತೆಗೆದು ಹಾಕಿದರೆಂದೂ, ಆರು ಮಂದಿಯಿಂದ ಖಾಲಿ ಕಾಗದದಲ್ಲಿ ದಸ್ಕತು ತೆಗೆದುಕೊಂಡರೆಂದೂ, ಇದುವರೆಗೆ ಯುದ್ಧಭತ್ತೆ ಕೊಡದಿದ್ದು ಮಜೂರರು ಶೇಕಡಾ ೫೦| ರಷ್ಟು ಯುದ್ಧಭತ್ತೆ ಕೇಳಲು ಅದನ್ನು ನಿರಾಕರಿಸಿದರೆಂದೂ, ವಾರದಲ್ಲಿ ಆರು ದಿನ ಕೆಲಸ ಕೊಡಬೇಕೆಂದು ಕೇಳಿದ್ದನ್ನು ಮನ್ನಿಸಲಿಲ್ಲವೆಂದೂ, ಮಜೂರರು ಈ ಬಗ್ಗೆ ತಮ್ಮ ಸಂಕಷ್ಟಗಳನ್ನು ಸರಕಾರದ ಮುಂದಿಟ್ಟು ವಿಫಲರಾಗಲು, ಗ್ರಾಮಸ್ಥರ ಮಧ್ಯಸ್ಥಿಕೆಗೊಪ್ಪಲು ಅದಕ್ಕೂ ಮಾಲಕರು ತಪ್ಪಿಸಿದ್ದರಿಂದ ಕೊನೆಗೆ ನಿರುಪಾಯರಾಗಿ ಮುಷ್ಕರ ಹೂಡಿದರೆಂದೂ ಕೆಲಸಗಾರರ ಹೇಳಿಕೆಯಿರುವುದು. ಮುಷ್ಕರವು ಶಾಂತರೀತಿಯಿಂದ ನಡೆಯುತ್ತಿದ್ದರೂ, ಅವರ ಮೇಲೆ ಪೋಲಿಸರ ಆಘಾತ ಪ್ರಾರಂಭವಾಗಿದ್ದು, ಮಜೂರರು ವಾಸಮಾಡುತ್ತಿರುವ ಮನೆಯೊಂದನ್ನು ಜಪ್ತಿಮಾಡಿ ಐದು ಮಂದಿಯನ್ನು ಕೈದು ಮಾಡಿದ್ದು, ಈಗಾಗಲೇ ಈ ಕುರಿತು ಎಂಟು ಮಂದಿಯ ದಸ್ತಗಿರಿಯಾಗಿದ್ದು, ಆ ಪೈಕಿ ಇಬ್ಬರು ಮಜೂರರು ಬಂಧನದಲ್ಲಿರುವರಾಗಿಯೂ ಮುಷ್ಕರ ಸಮಿತಿಯವರು ಪ್ರಕಟಿಸಿದ್ದಾರೆ.

ಹೆಣ ತೂಗಾಡುತ್ತಿತ್ತು!

ಮಂಗಳೂರು ಫೆಲಿಕ್ಸ್ ಪೈಬಜಾರಿನ ಹಿಂಬದಿಯ ಮಾರ್ಕೆಟಿನಲ್ಲಿ ತಾ. ೧೧ರಂದು ಬೆಳಗ್ಗೆ ನೋಡುವಾಗ ಒಂದು ಹೆಣ ತೂಗಾಡುತಿತ್ತು. ಸತ್ತವನು ಹಿಂದು ಜಾತಿಯಿಂದ ಮತಾಂತರ ಹೊಂದಿದ ಕ್ರಿಶ್ಚಿಯನ್ ಸಮಗಾರನೆಂದು ತಿಳಿದು ಬರುತ್ತದೆ. ಪೋಲೀಸರು ಬಂದು ತನಿಖೆ ನಡೆಸಿ ಹೆಣ ತೆಗೆಯಲಾಯಿತು.

ತೇರ್ಗಡೆ

ಡಿಲ್ಲಿಯಲ್ಲಿ ಜರಗಿದ ಐ. ಸಿ. ಎಸ್. ಪರೀಕ್ಷೆಯಲ್ಲಿ ಉತ್ತೀರ್ಣರಾದ ನಮ್ಮ ಜಿಲ್ಲೆಯ ಶ್ರೀ। ಎಂ ಕೆ. ಶ್ಯಾಮಭಟ್ಟರು, 'ಇಂಡಿಯನ್ ಎಕೌಂಟ್ಸ್ ಸರ್ವಿಸ್' ಪರೀಕ್ಷೆಯಲ್ಲಿಯೂ ತೇರ್ಗಡೆ ಹೊಂದಿರುವರು. ಈ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ೫೦ ಮಂದಿಗಳಲ್ಲಿ ಶ್ರೀ ಭಟ್ಟರು ೧೧ ನೆಯವರು.

ದ. ಕ. ಜಿಲ್ಲಾ ಗಾಣಿಗರಯಾನೆ ಸಫಲ್ಯರ ಸಮಾಜ ಸುಧಾರಕ ಸಂಘ, ಮಂಜೇಶ್ವರ

ಈ ಸಂಸ್ಥೆಯ ಪರವಾಗಿ ಜನರಲ್ಲಿ ಪ್ರಚಾರಗೊಳಿಸಿದ ಮೇರೆಗೆ ಯೀ ಸಂಘವು ಜಿಲ್ಲಾ ರಿಜಿಸ್ಟ್ರಿಯಲ್ಲಿ ರಿಜಿಸ್ಟ್ರಿ ಮಾಡಲಾಗಿಯದೆ.

ಕಾರ್ಕಳ

ಕಲೆಕ್ಟರರಿಗೆ ಮನವಿ

ಅಲ್ಪ ವೇತನ ದೊರೆಯುವ ಶಾಲಾ ಪ್ರಾಥಮಿಕ ಉಪಾಧ್ಯಾಯರು ಇಂದಿನ ಅಕ್ಕಿಯ ಏರಿದ ಕ್ರಯದಿಂದ, ಸಂಕಷ್ಟಕ್ಕೊಳಗಾಗಿರುವರೆಂದೂ, ಸರಕಾರದವರು ಅವರ ಸಂಕಷ್ಟ ಪರಿಹರಿಸಬೇಕೆಂದೂ ವಿನಂತಿಸಿ ಕಾರ್ಕಳ ಕೇಂದ್ರದ ಪ್ರಾಥಮಿಕ ಶಾಲಾ ಉಪಾಧ್ಯಾಯರು ದ. ಕ. ಜಿಲ್ಲಾ ಕಲೆಕ್ಟರರಿಗೆ ಮನವಿ ಮಾಡಿದ್ದಾರೆ.

ನಗರ ಸಭೆ

ಯ ಅಧಿವೇಶನವು ತಾ. ೭ರಂದು ಚೇರ್‌ಮೇನ್ ಪುತ್ತೂರ್ ಹುಸೆನ್ ಸಾಹೇಬರ ಅಧ್ಯಕ್ಷತೆಯಿಂದ ಜರಗಿ, ಹಿಂದಿನ ಚೇರ್‌ಮೇನರಾಗಿದ್ದ ಡಾ। ವಿಟ್ಠಲ್ ಶೆಟ್ರ ನಿಧನದ ಬಗ್ಗೆ ಸಂತಾಪ ಸೂಚನೆಯ ಠರಾವು ಮಾಡಿ ಕೆಲ ನಿಮಿಷ ಸಭಾಕಾರ್ಯ ಮುಂದುವರಿಸಲಾಯಿತು. ಮುನ್ಸಿಪಲ್ ಗಡಿ ವಿಸ್ತರಣೆಯಾದ್ದರಿಂದ, ಮುನ್ಸಿಪಾಲಿಟಿ ಕೆಲಸ ಹೆಚ್ಚಿದ್ದು ಹೆಚ್ಚಿಗೆ ಸಿಬಂಧಿ ಬೇಕೆಂದು ತೀರ್ಮಾನವಾಯಿತು. ಲಾಟೀನುಗಳ ಬಗ್ಗೆ ರೂ ೩೪೦-೦-೦ ಸೇಂಕ್ಷನ್ ಆಯಿತು ಕಮಿಶನರರ ವರದಿಯಲ್ಲಿ ಮುನ್ಸಿಪಾಲಿಟಿಗೆ ವರ್ಷಕ್ಕೆ ರೂ. ೧ ಲಕ್ಷ ೪೫ ಸಾವಿರ ಆದಾಯವಿದೆಯೆಂದು ತಿಳಿಸಲಾಗಿದೆ ಮುನ್ಸಿಪಲ್ ಲಾರಿಯನ್ನು ಫೆಯರ್ ಸರ್ವಿಸ್ ವಶಕೊಡಬೇಕಾದರೆ ಸರಕಾರವು ಪ್ರತಿಫಲ ಕೊಡಬೇಕೆಂದಾಯಿತು. ಮುನ್ಸಿಪಾಲಿಟಿ ಅಕ್ಕಿ ಸಮಸ್ಯೆ ವಿಚಾರವಾಗಿ ಒಂದು ನಿರ್ಣಯ ಮಂಡಿಸಲಿದ್ದು, ಕಲೆಕ್ಟರರೇ ಅಕ್ಕಿ ವಿಚಾರದ ಸಮಸ್ಯೆ ಪರಿಹರಿಸುವ ಭರವಸೆ ತನಗಿತ್ತುದರಿಂದ ಆ ನಿರ್ಣಯ ಮಂಡಿಸುವುದಿಲ್ಲವೆಂದರು. ಟುನಿಸಿಯಾ ಜಯದಿಂದ ಆದ ಸಂತೋಷವನ್ನು ಕೌನ್ಸಿಲು ಒಪ್ಪಿಕೊಂಡಿತು. ಮುನ್ಸಿಪಾಲಿಟಿ ಕೆಲಸಗಾರರಿಗೆ ತುಟ್ಟಿಭತ್ತೆ ಕೊಡಬೇಕೆಂದಾಯಿತು.

ಜಿಲ್ಲಾ ಜಡ್ಜರು

... ಅಕ್ಟೋಬರಿನ ಜಿಲ್ಲಾ ಜಡ್ಜರಾದ ಶ್ರೀ. ಯಂ. ಕೆ. ಸಿ. ಯಂ. ಕೋರ್ಮನ್ ಅವರು ಮಂಗಳೂರಿಗೆ ವರ್ಗಾಯಿಸಲ್ಪಟ್ಟಿದ್ದಾರೆ. ಶ್ರೀ। ಚೌದುರಿಯವರ ನೇಮಕವನ್ನು ರದ್ದು ಮಾಡಿದೆ. ಶ್ರೀ ಆಲಿಪ್ಪಿ ಸಾಹೇಬರು ನಿವೃತ್ತರಾಗುವರು.

ಉಡುಪಿ

ಮುನ್ಸಿಪಲ್ ಸಭೆ

ಉಡುಪಿ ಮುನಿಸಿಪಲ್ ಕೌನ್ಸಿಲಿನ ಸಭೆ ಶ್ರೀ. ಎ. ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿ ಇಬ್ಬರು ಸದಸ್ಯರ ರಾಜೀನಾಮೆಯ ದೆಸೆಯಿಂದಾಗಿ ಖಾಲಿಬಿದ್ದ ಕೌನ್ಸಿಲಿನ ಉಪ ಸಮಿತಿಗಳಿಗೆ ಸದಸ್ಯರನ್ನು ಆರಿಸಲಾಯಿತು. ಮುನಿಸಿಪಲ್ ತೆಂಕಣ ಬಾಲಿಕಾ ಪಾರ ಶಾಲೆಯನ್ನು ಮುನಿಸಿಪಲ್ ಕಾರ್ಯಾಲಯಕ್ಕೆ ವರ್ಗಾಯಿಸಿ ಮುನಿಸಿಪಲ್ ಆಫೀಸನ್ನು ಇನ್ನೊಂದೆಡೆಗೆ ಒಯ್ಯುವುದೆಂದಾಯಿತು. ಮುನಿಸಿಪಲ್ ಪುಸ್ತಕ ಭಂಡಾರಕ್ಕೆ ಸರಕಾರದಿಂದ ನಾಲ್ಕುನೂರು ರೂಪಾಯಿಗಳ ಸಹಾಯ ದ್ರವ್ಯವು ಸಿಕ್ಕುವಂತೆ ಪ್ರಾರ್ಥಿಸುವ ನಿರ್ಣಯವಾಯಿತು. ಬಿಲ್ಡಿಂಗ್ ರೂಲ್ಸುಗಳ ಪರಿಪಕ್ವ ಜ್ಞಾನವಿಲ್ಲದೆ ಕಟ್ಟಡಗಳನ್ನು ಕಟ್ಟಿಸಿತದನಂತರ ಪಶ್ಚಾತ್ತಾಪ ಪೂರ್ವಕ ಕೌನ್ಸಿಲಿಗೆ ಮಾಡಿದ ಅಪೀಲು ಅರ್ಜಿಗಳನೇಕ ಡಿಸ್‌ಮಿಸ್ ಮಾಡಲಾದುವು

ಬದಿಯಡ್ಕ

ಸಹಕಾರಿ ಸ್ಟೋರ್ಸ್

ನಂಬ್ರ L 474ನೇ ಬದಿಯಡ್ಕ ಸಹಕಾರಿ ಸ್ಟೋರ್ಸ್ ಸಂಘದ ಪ್ರಾರಂಭದ ಸಭೆಯು ತಾ 7ರಲ್ಲು ಸ್ಥಳೀಯ ಶಾಲಾ ಕಟ್ಟಡದಲ್ಲಿ ಡಾ ಪಿ. ಎಸ್. ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಜರಗಿತು ಸಂಘಗಳ ಸೂಪರ್ ವ್ಯಾಜರ್ ಶ್ರೀ. ಬಿ ವಾಮನ ರಾಯರು ಡಿಪ್ಯುಟಿ ರಿಜಿಸ್ಟ್ರಾರವರಿಂದ ಬಂದ ರಿಜಿಸ್ಟ್ರಿ ಸರ್ಟಿಫಿಕೇಟು ಮತ್ತು ಉಪನಿಬಂಧನೆಗಳನ್ನು ವಿವರಿಸಿದರು ಕೃಷಿಕರ ಸಂಘದ ಆಡಿಟರ್ ಶ್ರೀ. ಎ. ರಾಮಕೃಷ್ಣನವರೂ ಭಾಷಣವಿತ್ತರು ಸ್ಟೋರ್ಸಿಗೆ 9 ಮಂದಿ ಆಡಳ್ತೆ ಮೆಂಬರರನ್ನು ಚುನಾಯಿಸಿದಲ್ಲದೆ, ಅವರ ಪೈಕಿ ಶ್ರೀ ಎಮ್. ರಾಮಕೃಷ್ಣರಾಯರನ್ನು ಅಧ್ಯಕ್ಷರನ್ನಾಗಿಯೂ ಶ್ರೀ. ಯಂ ಜಿ. ಮಹಾಲಿಂಗ ಭಟ್ಟರನ್ನು ಕಾರ್ಯದರ್ಶಿಯರನ್ನಾಗಿಯೂ ಆರಿಸಲಾಯಿತು.

ನೋಟೀಸು

ಕಾಸರಗೋಡು ತಾಲೂಕು ಮಂಗಲ್ಪಾಡಿ ಗ್ರಾಮದಲ್ಲಿರುವ ಕೃಷ್ಣ ಕಣ್ಣಾರಾಯರ ಹೆಂಡ್ತಿ ಸತ್ಯಭಾಮೆಯಮ್ಮನು ಈ ಮೂಲಕ ಸಕಲರಿಗೂ ತಿಳಿಯಪಡಿಸುವುದೇನೆಂದ್ರೆ —

ನನ್ನ ಮೃತಪಟ್ಟ ಮಗ ಲಕ್ಷ್ಮೀನಾರಾಯಣನ ಹೆಂಡ್ತಿ ದೇವಕಿಯಮ್ಮನು ಕಾ. ಡಿ. ಮುಕೋರ್ಟಿನಲ್ಲಿ ನನ್ನ ಗಂಡ ಕೃಷ್ಣಕಣ್ಣಾರಾಯರ ಮೇಲೆ ಹೂಡಿದ ಅಶನಾರ್ಥ ನಂಬ್ರದಲ್ಲಿ, ನನ್ನ ಗಂಡನ ದೂರದ ಅಳಿಯನಾಗುವ ವಾಸುದೇವ ಕುಬಣೂರಾಯರ ಮಗ ನಾರಾಯಣ ಕುಬಣೂರಾಯರು ಸದ್ರಿ ವ್ಯಾಜ್ಯದಲ್ಲಿ ಮುಂದೆ ನನಗೇನೂ ತೊಂದರೆಗಳು ಬರದಂತೆ ಮಾಡುವರೆ ನಾನು ಆ ವ್ಯಾಜ್ಯದಲ್ಲಿ ಕಕ್ಷಿಯಲ್ಲಿ ಸೇರಿ ಸ್ಟೇಟ್‌ಮೆಂಟು ವಗೈರೆ ಕೊಡುವುದು ಅಗತ್ಯವೆಂತ ನನ್ನನ್ನು ಒತ್ತಾಯಿಸಿ ನನ್ನ ಅಫಿದಾವಿತು ಸ್ಟೇಟ್‌ಮೆಂಟು ವಗೈರೆಗೆಂತ ನನ್ನಿಂದ ಸುಮಾರು ಮೂರು ನಾಲ್ಕು ಖಾಲಿ ಕಾಗದಕ್ಕೆ ನನ್ನ ಹೆಬ್ಬೆಟ್ಟು ತೆಗೆದುಕೊಂಡಿರುತ್ತಾರೆ. ಹಾಗೆ ತೆಗೆದುಕೊಂಡು ಈಗ ಸುಮಾರು ಮೂರು ವರ್ಷಗಳಾಯಿತು. ಆದರೆ ಸದ್ರಿ ಹೆಬ್ಬೆಟ್ಟಿನ ಕಾಗದವನ್ನು ಸದ್ರಿ ನಾರಾಯಣ ಕುಬಣೂರಾಯರು ಮೇಲೆ ನಮೂದಿಸಿದ ಕೆಲಸಗಳಿಗೆ ಉಪಯೋಗಿಸದೆ, ದುರುದ್ದೇಶದಿಂದಲೂ ನನ್ನನ್ನು ಅನಾವಶ್ಯಕ ನಷ್ಟಪಡಿಸುವ ಇರಾದೆಯಿಂದ ತನ್ನಲ್ಲಿ ಇಟ್ಟುಕೊಂಡಿರುತ್ತಾರೆಂದು ತಿಳಿದುಬಂದಿರುತ್ತದೆ ಆದರೆ ನನಗೆ ಸ್ವಂತ ಆಸ್ತಿಯಿದ್ದು ವೆಚ್ಚಕ್ಕೆ ಕಕ್ಕನಗದಿಯು ಇರುವುದರಿಂದ ನನಗೆ ಯಾರಿಗಾದರೂ ಪ್ರೋನೋಟು ಇತ್ಯಾದಿಯನ್ನು ಬರೆದುಕೊಡುವ ಅವಶ್ಯ ಇರುವುದಿಲ್ಲ. ಮತ್ತು ಈ ತನಕ ಅವರಿಗೆ ನೋಟು ವಗೈರೆ ಏನೊಂದನ್ನು ಬರಕೊಟ್ಟದ್ದೂ ಇಲ್ಲ. ಹೀಗಿರುವಲ್ಲಿ ಸದ್ರಿ ನಾರಾಯಣ ಕುಬಣೂರಾಯರೆ ಇನ್ನಿತರ ಯಾರಾದರೂ ನನ್ನ ಮೇಲೆ ಸದ್ರಿ ಹೆಬ್ಬೆಟ್ಟಿನ ಕಾಗದದ ಆಧಾರದಿಂದ ವ್ಯಾಜ್ಯ ವಗೈರೆಯನ್ನು ತಂದಲ್ಲಿ ಸದ್ರಿಯವು ನನ್ನನ್ನು ಬಾಧಿಸತಕ್ಕವುಗಳಲ್ಲವೆಂತ ಈ ಮೂಲಕ ತಿಳಿಸೋಣಾಗುತ್ತದೆ.

ಸ್ವದೇಶಾಭಿಮಾನಿ

ತಾರೀಕು 4—6—1943

ಬೀಗಮುದ್ರೆ!

ಅಮೆರಿಕದ ಪ್ರಸಿದ್ಧ ಗ್ರಂಥಕರ್ತರೂ, ಪತ್ರಿಕಾ ಲೇಖಕರೂ, ವಿಶ್ವ ವಿಖ್ಯಾತ ರಾಜಕೀಯ ವಿಚಾರವಂತರೂ ಆದ ಲೂಯಿ ಫಿಶರರು ಭಾರತದ ಕುರಿತು ಬರೆದ ಲೇಖನಗಳನ್ನು ಪ್ರಕಟಪಡಿಸಲು ಸರಕಾರ ಬೀಗ ನಿರ್ಬಂಧ ಹಾಕಿದೆ, ಇದರಿಂದ ಭಾರತದ ಪತ್ರಿಕೆಗಳ ಮುಖಕ್ಕೆ ಇನ್ನೊಂದು ಭದ್ರವಾದ ಬೀಗಮುದ್ರೆ ಹಾಕಲಾಗಿಯಿತು ಪತ್ರಿಕಾ ಸ್ವಾತಂತ್ರ್ಯವು ಹೀಗೆ ಅಪಹರಿಸಲ್ಪಟ್ಟಿದೆ.

ಭಾರತದ ಪತ್ರಿಕೆಗಳ ಸ್ವಾತಂತ್ರ್ಯ ಸಹಾರವಾಗುತ್ತಿರುವ ವಿಷಯದಲ್ಲಿ, ಪತ್ರಿಕಾಕರ್ತರಿಗೂ, ಸರಕಾರಕ್ಕೂ ಮೊದಲಿಂದಲೇ ತಿಕ್ಕಾಟವಾಗುತ್ತಲಿದೆ. ಅಂತೂ ಮೊನ್ನೆ ಮೊನ್ನೆ ಸರಕಾರದ ಧೋರಣದ ನಿಷೇಧಾರ್ಥವಾಗಿ ಅಖಿಲಭಾರತ ಪತ್ರಿಕಾ ಸಂಪಾದಕ ಪರಿಷತ್ತಿನ ನಿರ್ಣಯದಂತೆ, ಭಾರತದ ಹಲವು ಪ್ರಮುಖ ದಿನ ಪತ್ರಿಕೆಗಳು ಹಾಗೂ ವಾರ ಪತ್ರಿಕೆಗಳು ಹರತಾಳ ಮಾಡಿದ ನಿಮಿತ್ತ, ಸರಕಾರವು ಸುದ್ದಿಯನ್ನು ಪೂರ್ಣ ಪರಿಶೀಲನೆ ಮಾಡುವುದಿಲ್ಲವೆಂಬ ಒಪ್ಪಂದಕ್ಕೆ ಬಂದಿದೆ. ಹೀಗಿರುತ್ತಾ, ಅದಾಗಿ ಕೇವಲ ಆರು ತಿಂಗಳು ದಾಟುವಲ್ಲಿಯೇ ಹೀಗೆ ಪುನಃ ಭಾರತದ ಪತ್ರಿಕೆಗಳ ಮುಖಕ್ಕೆ ಇನ್ನೊಂದು ಬೀಗ ಮುದ್ರೆ ಬಿದ್ದದ್ದು ಆಶ್ಚರ್ಯಕರವಿದೆ.

ಲೂಯಿ ಫಿಶರರು, ಪ್ರಪಂಚ ವಿಖ್ಯಾತ ಮೇಧಾವಿ, ಸತ್ಯವನ್ನು ಮರೆಮಾಚದ ಪತ್ರಿಕೋದ್ಯೋಗಿ; ಜಗತ್ತಿನ ರಾಜಕಾರಣವನ್ನು ಬಲ್ಲ ವಿಚಾರವಂತ. ಭಾರತದ ವಸ್ತುಸ್ಥಿತಿಯನ್ನು ಮನನ ಮಾಡಿದ ಮಹನೀಯರು ಇಂಥಾ ಯೋಗ್ಯ ವ್ಯಕ್ತಿಗಳು ಬರೆದದ್ದನ್ನು ಪ್ರಕಟಿಸಲು ಸರಕಾರವು ಏಕೆ ಹೆದರಬೇಕೋ? ಪತ್ರಿಕೆಗಳ ಸ್ವಾತಂತ್ರ್ಯವನ್ನೇಕೆ ಹೀಗೆ ಅಪಹರಿಸಬೇಕೋ ನಮಗೆ ಗೊತ್ತಾಗುವುದಿಲ್ಲ. ಅಖಿಲ ಭಾರತ ಪತ್ರಿಕಾ ಸಂಪಾದಕ ಸಮಿತಿಯವರು ಈ ಕುರಿತು ಗಂಭೀರ ಆಲೋಚನೆ ಮಾಡುವುದು ಅಗತ್ಯವಿದೆ



ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ 3 ಔನ್ಸ್, 6 ಔನ್ಸ್ ಮತ್ತು 12 ಔನ್ಸ್‌ಗಳ ಬಾಟ್ಲಿಗಳು ರೂ 2-12-0, ರೂ 4-8-0, (ರೂ. 8 ಕ್ರಯಕ್ಕೆ ದೊರಕುವುದು

ತಯಾರಿಸುವವರು ಡಾಕ್ಟರ್ ಪುರೋಹಿತ ಫಾರ್ಮಸಿ ಕೊಲ್ಹಾಪುರ.

Wanted Graduates

APPLY FOR TERMS

CANARA BANK LTD.,

Ested: 1906

THE CANARA BANKING CORPORATION Ltd

(Incorporated in British India with limited liability).

STATEMENT OF AFFAIRS AS ON 31ST DECEMBER 1942.

Capital & Liabilities	Rs.	As.	Ps.	Property & Assets	Rs.	As.	Ps.
Paid up Capital	6,36,890	0	0	Office premises, furniture, etc.	91,659	0	0
Reserve & other funds	3,71,882	13	11	Advances	31,28,612	4	9
Deposits	41,83,873	4	1	Investment on Govt. Securities etc. at cost	15,34,536	14	3
Due to Bankers	5,08,545	12	1	Sundries	74,183	5	7
Bills per contra	3,59,357	12	1	Bills for Collection	3,59,357	12	1
Sundries including branch adjustments & undisbursed profits	2,83,736	5	9	Cash on Hand & with bankers	12,05,397	14	8
Profit for the year 1942	49,461	3	5				
Total Rs.	63,93,747	3	4	Total Rs.	63,93,747	3	4

ನಿಮ್ಮ ನೌಕರರಿಗೊಂದು ವಾಚು ಅಗತ್ಯವಿದೆ.

ನೌಕರರು ಮಾತ್ರವಲ್ಲ, ಎಲ್ಲಾ ಉದ್ಯೋಗದವರೂ, ಒಂದು ಒಳ್ಳೇ ವಾಚು ಬೇಕೆನ್ನುವವರೇ. ಕೀಯಿಲ್ಲದ, ಕೇವಲ 28 ರೂಪಾಯಿ ಬೆಲೆಯ ಈ ಗಟ್ಟಿಮುಟ್ಟಾದ ವಾಚು ಸಕಲರಿಗೂ ಅತ್ಯುತ್ತಮವಾದುದಿದೆ.

ವೆಸ್ಟ್ ಎಂಡ್ ವಾಚ್ ಕಂಪೆನಿಯ ಹೆಸರುಳ್ಳ ವಾಚೊಂದನ್ನು ರೂ. 28ಕ್ಕೆ ಪಡಕೊಳ್ಳುವುದು ವಿಹಿತ. ಏಕೆಂದರೆ, ಇದರ ಬೆಲೆಗೆ ತಕ್ಕ ಪ್ರಯೋಜನ ಗ್ಯಾರಂಟಿ. ಇತರ ವಾಚುಗಳು ಇದಕ್ಕಿಂತ ಕಡಿಮೆ ಕ್ರಯಕ್ಕೆ ದೊರಕುವುದಾದರೂ, ಈ ಕಂಪೆನಿಯ ತಯಾರಿ, ಬಾಳುವಿಕೆ, ಗಟ್ಟಿಮುಟ್ಟು ಅವುಗಳಿಗಿರುವುದಿಲ್ಲ. ಅವು ಎಷ್ಟೋ ಕೀಳು ದರ್ಜೆಯವಿದ್ದು ಕಡಿಮೆ ಕ್ರಯಕ್ಕೆ ಪಡಕೊಂಡರೂ ಪ್ರಯೋಜನವಿಲ್ಲ.

ಸೆಕುಂಡಸ್ ಪೋಕೆಟ್

15" ಸೈಜ್ ನಿಕ್ಕಲ್ ಕೇಸ್ ಸಾದಾ ರೋಮನ್ ಯಾ ಅರೇಬಿಕ್ ಅಂಕೆಯವು ರೂ. 28 ರೇಡಿಯಂ ಡಯಲ್ ರೂ. 3 ಹೆಚ್ಚು.

ವೆಸ್ಟ್ ಎಂಡ್ ವಾಚ್ ಕಂಪೆನಿ

ಬೊಂಬಾಯಿ — ಕಲ್ಕತ್ತ

WEST END WATCH Co

BOMBAY CALCUTTA

ರೈಲು ಬಂಡಿಗಳ ಸಮಯ

ಎಪ್ರಿಲ್ ತಾ. ೧೫ರಿಂದ ವ್ಯತ್ಯಸ್ಥವಾದ ಪ್ರಕಾರ.

	ಹೊರಡುವುದು.	ಬರುವುದು.
ಮೈಲ್	೭-೪೦ ಪೂ.	೬-೨೫ ಅಪ.
ಕಟ್ ಲ್	೬-೩೦ ಅಪ.	೧೦-೫ ಪೂ.

ರಾಷ್ಟ್ರೀಯ ವಾರ ಪತ್ರಿಕೆ ಸ್ವದೇಶಾಭಿಮಾನಿಗೆ — ಇಂದೇ — ಚಂದಾದಾರರಾಗಿರಿ.

ಸ್ವದೇಶಾಭಿಮಾನಿಗೆ ಜಾಹೀರಾತು ಕೊಡಿರಿ



ದೇಹದೊಳಗಿನ ಸ್ವಚ್ಛತೆಯನ್ನೂ

ANDREWS LIVER SALT

ಏಂಡ್ರೂಸರ ಲಿವರ್ ಸೊಲ್ಟು

ಆರೋಗ್ಯವನ್ನೂ ರ ಪಾಡುತ್ತದೆ.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆ ಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಗೆಯೇ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. **ಆದುದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.**

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

The Bank of Mangalore Limited, Mangalore.

ESTD: 1931

HEAD OFFICE Mangalore.

BRANCHES Moodabidri & Padubidri.

The Bank Undertakes to Collect Cheques, Demand and Documentary Bills at Most Competitive Rates.

ISSUES DRAFTS ON ALL IMPORTANT TOWNS IN THE DISTRICT

and also on

BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.

at very favourable rates

All kinds of inland banking business undertaken

(Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೋಡಿಸು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. —ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ನೀವೀವರೆಗೆ ವಿಮೆಯನ್ನು ಇಳಿಸದಿದ್ದರೆ, ಯಾ ಸಾಕಷ್ಟು ವಿಮೆಯನ್ನು ಮಾಡಿಲ್ಲವಾದರೆ

ದಿ ಬಾಂಬೆ ಲೈಫ್ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡಿನಲ್ಲಿ

ಈಗಲೇ ವಿಮೆ ಇಳಿಸಿರಿ.

ಏಕೆಂದರೆ

1. ಜೀವವಿಮೆಯು ಒಬ್ಬನ ವೃದ್ಧಾಪ್ಯದ ಮತ್ತು ಸಮೀಪದ ಹಾಗೂ ಪ್ರೀತಿಯ ಸಂಬಂಧಿಕರ ಜೀವನವನ್ನು ಸುರಕ್ಷಿತಗೊಳಿಸುತ್ತದೆ.
2. ನೀವಿಂದು ವಿಮೆಯನ್ನಿಳಿಸಬಲ್ಲಿರಾದರೆ ನಾಳೆ ಹಾಗೆ ಮಾಡಲು ಶಕ್ತರಾಗದೆ ಹೋಗಬಹುದು.
3. ಆರೋಗ್ಯವು ಅನಿಶ್ಚಿತವೆಂದಾದರೆ ಮೃತ್ಯುವು ಯಾರನ್ನೂ ಬಿಡುವಂತಿಲ್ಲ.
4. ಮೃತ್ಯು ಮತ್ತು ಮುಪ್ಪು ಎಂಬುದು ಅಮೂಲ್ಯವಾದೊಂದು ನಿಶ್ಚಿತ.
5. ಜೀವವಿಮೆಯು ಮರಣದ ಕ್ರೂರತೆಯನ್ನು ಹೋಗಲಾಡಿಸುವುದೊಂದೇ ಅಲ್ಲ; ಅದರ ಸಂಕಷ್ಟವನ್ನೂ ದೂರೀಕರಿಸುತ್ತದೆ.

ಆದುದರಿಂದ ಇಂದೇ ಜೀವವಿಮೆ ಮಾಡುವುದು ಲಾಭಕರವಾಗಿದೆ.

ವಿಶೇಷ ಮಾಹಿತಿಗೆ ದಯಮಾಡಿ ಬರೆಯಿರಿ:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

—: ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ : —

ಮಂಗಳೂರು ಕಲ್ಲಿಕೋಟೆ ಸೇಲಂ ತಿರುವಾಂಕೂರು ಬೆಂಗಳೂರು ನಗರ ಮತ್ತು ಬೊಂಬಾಯಿ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯೌಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು:—

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಷೈ, ರಥಬೀದಿ. (3) ದಿ ಕರ್ನಾಟಕ ಸ್ಟೈಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೊ:—1. ಮಂಗಾರಗಲ್ಲಿ ಹುಬ್ಬಳ್ಳಿ.
2. 36 ಪ್ಯಾಕ್ರೋಪ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.

ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.

ಸದ್ವೈದ್ಯಶಾಲಾ, ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಕು 18—6—1943 [ಸಂಚಿಕೆ 25]

ಆಫ್ರಿಕಾ ಜಯದಲ್ಲಿ ಭಾರತದ ಬಲಿದಾನವೆಷ್ಟು!

ಆಫ್ರಿಕಾ ವಿಜಯದಲ್ಲಿ ಭಾರತ ಮಾಡಿದ ಸಹಾಯವನ್ನು ಅಮೆರಿಕದ ಯುದ್ಧವಾರ್ತಾ ಪ್ರಚಾರ ಸಂಘವು ಅತ್ಯಂತ ವಿಶೇಷವಾಗಿ ಹೊಗಳಿದೆ.

"ಉತ್ತರ ಆಫ್ರಿಕಾ ಯುದ್ಧದ ಮೊದಲನೆಯ ಎರಡುವರೆ ವರ್ಷಗಳ ಯುದ್ಧ ಕಾಲದಲ್ಲಿ ಭಾರತವು ಅಲ್ಲಿಗೆ ಅಗಣಿತ ಸಾಮಗ್ರಿ ಕಳುಹಿಸಿತು. ಈ ಸಮಯದಲ್ಲಿಯೇ ಭಾರತೀಯ ಚತುರ್ಥ ದಳವು ಮುಸಲನಿಯ ಆಫ್ರಿಕಾ ಸಾಮ್ರಾಜ್ಯದ ಬೇರನ್ನು ಕಿತ್ತೊಗೆಯಲು ಬಹಳ ನೆರವಾಯಿತು. ಭಾರತದ ಚತುರ್ಥ ದಳವನ್ನು ಸೇನಾಪತಿ ವೇವಲರೇ ವಿಜಯೀ ದಳವೆಂದು ಹೊಗಳಿದ್ದಾರೆ. ಏಕೆಂದರೆ ಆಫ್ರಿಕದ ಪ್ರತಿಯೊಂದು ವಿಜಯದ ಬಹುಭಾಗದ ಕೀರ್ತಿ ಇವರದು. ಭಾರತ ಸೇನೆಯು ಅಬಿಸೀನಿಯದಿಂದ ಮುಸಲನಿ ಬಲವನ್ನು ಹೊಡೆದೋಡಿಸಿತು, ರೊಮೆಲನನ್ನು ಎಲಾಮೆನಿನಿಂದ ಟುನಿಸ್ ವರೆಗೆ ಬೆನ್ನಟ್ಟಿತು, ಮಾರೆಥ್ ವ್ಯೂಹವನ್ನು ಭೇದಿಸಿತು, ಕೊನೆಗೆ ನಾಜಿದಳಪತಿ ವಾನ್ ಆರ್ನಿಮನನ್ನೇ ಕೈಸೆರೆ ಹಿಡಿದು ಜಯನಾದ ಮೊಳಗಿಸಿತು!

"ಎಲಾಮೆನ್ ವರೆಗೆ ಚತುರ್ಥ ಭಾರತ ದಳವು 15,000ರ ಜನ ಹಾನಿಹೊಂದಿದೆ. ಆದರೆ ಭಾರತವು ಯೋಧರನ್ನು ನಿರಂತರ ಕಳುಹಿಸಿ ಈ ನಷ್ಟವನ್ನು ತಿಳಿಯಗೊಡದೆ, ಕೊನೆಗೆ ಒಂದು ಲಕ್ಷ ಜರ್ಮನರು ಮತ್ತು ಇಟಲಿಯನರನ್ನು ಭಾರತೀಯರು ಸೆರೆಹಿಡಿದರು. ಅಮೆರಿಕದಿಂದ ಸಾಮಗ್ರಿ ಬರುವ ತನಕ ಮತ್ತು ಆ ಮೇಲೂ ಮಿತ್ರ ಸೇನೆಯನ್ನು ಬದುಕಿಸಿದ್ದೇ ಭಾರತದ ಅನ್ನಾಹಾರ ಸಾಮಗ್ರಿಗಳು! ಮನೆಗಳಿಗೆ, ಸೇನೆ ನಿವಾಸಕ್ಕೆ ವಿಮಾನವಿಡಲಿಕ್ಕೆ, ಆಸ್ಪತ್ರೆಗಳಿಗೆ ಹೀಗೆ ಸರ್ವ ವಿಧದ ಸಾಮಗ್ರಿಗಳು ಭಾರತದಲ್ಲಿ ತಯಾರಾಗಿ ಆಫ್ರಿಕಕ್ಕೆ ಸಾಗಿದವು. ಮರುಭೂಮಿಯಲ್ಲಿ ನೀರು ಸಾಗಿಸಲು ಬೇಕಾದ ಸಾಧನಗಳು ಭಾರತದಿಂದ ಹೋದವು. ವಿಜಯೀ ಅಷ್ಟಮ ದಳವು ಮುಂದುವರಿಯುತ್ತಿದ್ದಂತೆ ಅದರ ಹಿಂದಿನಿಂದ ಭಾರತದ ಎಂಜಿನಿಯರು, ಕರ್ಮ ಕುಶಲರು ಸೇರಿಕೊಂಡು ಮೆರ್ಸಾ ಮಾತ್ರುಹಾದಿಂದ ತೋಬ್ರುಕಿನ ವರೆಗಿನ ರೈಲ್ವೆ ದಾರಿ ಸರಿಗೊಳಿಸುತ್ತಿದ್ದರು; ಶತ್ರು ಸೇನೆಗೆದುರಾಗಿ ನಿಂತು!

"ಭಾರತವು ಮೋಟರುಗಳನ್ನು, ಟ್ರಕ್ಕುಗಳನ್ನು, ವೇಗನುಗಳನ್ನು ಹಾಗೂ ಅದಕ್ಕೆ ಬೇಕಾದ ಸಾಮಾನುಗಳನ್ನೆಲ್ಲಾ ಕಳುಹಿಸಿತು. ಆ ಮೇಲೆ ರೈಲ್ವೇ ಸ್ಲೀಪರ್‌ಗಳನ್ನು ತಯಾರಿಸಲು ಮರಗಳು, ಜೆಟ್ಟಿಗಳು, ಲಾರಿಗಳು ಮತ್ತು ಇತರ ವಾಹನ ಸಾಧನಗಳು, ಯುದ್ಧ ಸಾಮಗ್ರಿ ಪೆಟ್ಟಿಗೆಗಳು, ಟೆಲಿಗ್ರಾಫ್ ಕಂಬಗಳು ಮತ್ತು ಸಾವಿರಾರು ಇತರ ಯುದ್ಧೋಪಯೋಗೀ ಸಾಧನಗಳೂ ಭಾರತದಿಂದಲೇ ಸಾಗಿದವು. ಭಾರತ ನೌಕಾ ನಿರ್ಮಾಣ ಕೇಂದ್ರದಿಂದಲೂ ಬೇಕು ಬೇಕಾದ ಸಹಾಯ ಸಾಮಗ್ರಿಗಳು ಆಫ್ರಿಕಕ್ಕೆ ಹೋದವು. ಎಲೆಕ್ಟ್ರಿಕ್ ಕೇಬ್‌ಲ್, ಎಲೆಕ್ಟ್ರಿಕ್ ಫೇನ್, ವಾಟರ್ ವಾಲ್ವ್ಸ್ ಮತ್ತು ಪಂಪುಗಳನ್ನೂ ಭಾರತ ಕಳುಹಿಸಿತು. ಬೇರೆ ಬೇರೆ ತರದ ಪಾತ್ರೆಗಳೂ ಅಲ್ಲಿಗೆ ಸಾಗಿದವು. ಬೆಟ್ರಿ ಮತ್ತು ಸೆಲ್ಲುಗಳನ್ನು ಭಾರತವು ಕಳುಹಿಸಿದ್ದು ಒಂದು ಗಣನೀಯ ವಿಚಾರ. ವಿಮಾನ ಮತ್ತು ನೆಲ ಸೇನೆಗಳೊಳಗಿನ ಮಾತುಕತೆ ವ್ಯವಹಾರ ಪ್ರಾಮುಖ್ಯವಾಗಿ ಇದನ್ನೇ ಹೊಂದಿಕೊಂಡಿದೆ. ಭಾರತವು 1941ರಿಂದಲೇ ಇದನ್ನು ನಿರ್ಮಿಸತೊಡಗಿತ್ತು. ಅದು ಮೊದಲ್ಗೊಂಡು ಭಾರತವು ಆರ್. ಎ. ಎಫ್ ದಳ ಒಂದಕ್ಕೇ 50,00,000 ಸೆಲ್ಲುಗಳನ್ನು ಕಳುಹಿಸಿದೆ. ಇವುಗಳನ್ನೆಲ್ಲಾ ಒಟ್ಟುಮಾಡಿಟ್ಟದ್ದರೆ ಅವುಗಳಿಂದ 60,00,000 ವೋಲ್ಟುಗಳ ವಿದ್ಯುಚ್ಛಕ್ತಿ ತಯಾರಿಸಬಹುದಿತ್ತು.

"ಶತ್ರುವಿನ ದೃಗ್ಗೋಚರವಾಗದಂತೆ ಮೋಟರು ಮೊದಲಾದುವುಗಳನ್ನು ಅಡಗಿಸಲು ಬೇಕಾದ ಬಣ್ಣಗಳು, ಬಲೆಗಳು, ಭಾರತದಲ್ಲಿ ತಯಾರಾಗಿ ಆಫ್ರಿಕಕ್ಕೆ ಸಾಗಿಸಲ್ಪಟ್ಟವು. ಇಲ್ಲಿಂದ ಸಾಗಿಸಿದ ಒಂದು ತರದ 'ಪರ್ವತ ಟೋಪಿ'ಗಳು ಸೈನಿಕರಿಗೆ ವಿಶೇಷ ಪ್ರಯೋಜನಕರವಾಯಿತು. ಜನರನ್ನು ಬಿಸಿಲಿನ ಬೇಗೆಯಿಂದ ತಪ್ಪಿಸಿದ ಮೋಟರು, ವಿಮಾನ ಮೊದಲಾದುವುಗಳನ್ನು ಉರಿಬಿಸಿಲಿನಿಂದ ನಿವಾರಿಸಿದ ಶೇಕಡಾ 90ರಷ್ಟು ಡೇರೆಗಳು ಭಾರತದಿಂದ ಹೋದವು. ಮಧ್ಯಪೂರ್ವದ ಮಿತ್ರ ಸೈನ್ಯಕ್ಕೆ ಉಡಲು ಬಟ್ಟೆಯೂ ಭಾರತದಿಂದ ಸಾಗಿದ್ದೇ; ಜೋಡುಗಳು, ಬೂಟ್ಸುಗಳೂ ಇಲ್ಲಿಂದ ಸಾಗಿದವು. ಅವರು ಉಂಡ ಆಹಾರದ ಬಹುಪಾಲು ಭಾರತ ಕಳುಹಿಸಿದ್ದು; ಆಫ್ರಿಕಾ ದಳದ ಆರೋಗ್ಯಕ್ಕಾಗಿ ಭಾರತವು 50,000 ಸ್ಟ್ರೆಚರುಗಳನ್ನೂ, 10,00,000 ಕಂಬಳಿಗಳನ್ನೂ, 2,50,000 ನುಸಿ ಪರದೆಗಳನ್ನೂ, 15,00,000 ನೀರು ಪರೀಕ್ಷಿಸುವ ಪಾತ್ರೆಗಳನ್ನೂ, 1,60,000 ಟನ್ ನುಸಿ ವಿರೋಧಕ ಕ್ರೀಮುಗಳನ್ನೂ, 3,36,000 ಔನ್ಸು ಹರಳೆಣ್ಣೆಯನ್ನೂ ಕಳುಹಿಸಿದೆ. ಒಟ್ಟು 1500 ಬೇರೆ ಬೇರೆ ಬಗೆಯ ವೈದ್ಯಕೀಯ ಸ್ಟೋರುಗಳು ಭಾರತದಿಂದ ಹೋಗಿವೆ.

ಎಲ್ಲದಕ್ಕಿಂತಲೂ ಮಿಗಿಲಾಗಿ ಮತ್ತು ಮರೆಯಲಾರದ ಒಂದು ವಿಚಾರವೆಂದರೆ, ರಶ್ಯಕ್ಕೆ ಸಾಮಾನು ಕಳುಹಿಸಲು ಭಾರತದ ಹಡಗಗಳಿಂದಾಗಿ ಉಂಟಾದ ಸೌಲಭ್ಯ ಸೌಕರ್ಯಗಳು. ಇದೆಲ್ಲವೂ ಬ್ರಿಟನಿನಿಂದ ಸಾಗಬೇಕಾಗಿದ್ದರೆ ಎಷ್ಟು ಪರಿಶ್ರಮ ಬೀಳುತ್ತಿತ್ತೋ, ಅಷ್ಟು ಪರಿಶ್ರಮ ಬಿದ್ದರೂ, ರಶ್ಯಕ್ಕೆ ಅಷ್ಟು ಬ್ರಿಟನು ಸಾಮಗ್ರಿ ಕಳುಹಿಸಲಾಗುತಿತ್ತೋ ಎಂಬುದು ಸಂಶಯವಿದೆ. ಭಾರತವು ತೊಂದರೆಯಿಲ್ಲದೆ ಆಫ್ರಿಕಕ್ಕೆ 15,00,00 ಟನ್ ಸ್ಟೋರುಗಳನ್ನು ಕಳುಹಿಸಿದೆ.

ಬ್ರಿಟನು ಅಮೆರಿಕಗಳಿಂದ ಆಫ್ರಿಕಕ್ಕೆ ಕಳುಹಿಸಲಾದ ಸಾಮಗ್ರಿಗಳು ಮಧ್ಯದಾರಿಯಲ್ಲಿ ನಾಶವಾದ ಎಷ್ಟೋ ಸಂದರ್ಭಗಳಲ್ಲಿ ಭಾರತವು ಆ ನಷ್ಟವನ್ನು ತುಂಬಿದೆ. ಒಮ್ಮೆ ಮಧ್ಯಪೂರ್ವಕ್ಕೆ 7,000 ಟನ್ ಉಕ್ಕಿನ ತಗಡುಗಳು ಟೇಂಕ್ ಮೈನ್‌ಗಳನ್ನುಮಾಡಲು ಕಳುಹಿಸಲ್ಪಟ್ಟಿವೆ. ಬ್ರಿಟನಿನಿಂದ ಇದನ್ನು ಉಪಾಯವಿಲ್ಲದೆ ತರಿಸುವುದೇ ಸಾಧ್ಯವಿಲ್ಲ. ಭಾರತದಿಂದ ಬಂದ ಉಕ್ಕು ಆಫ್ರಿಕಾ ಯುದ್ಧದ ಜಯಕ್ಕೆ ಹೆಚ್ಚಿನ ಬಲವನ್ನು ಕೊಟ್ಟಿದೆ. ಹೀಗೆ ಆಫ್ರಿಕಾ ವಿಜಯದಲ್ಲಿ ಭಾರತದ ಉಪಕಾರ ಅಗಣಿತವಿದೆ; ಮರೆಯಲಾರದಿದೆ.' ಇಂತು ಅಮೆರಿಕದ ಯುದ್ಧ ಪ್ರಚಾರ ಸಂಘದವರೇ ಕೊಂಡಾಡುತ್ತಾರೆ.

USOWI

'ಹೊಸ ಆರ್ಡಿನೆನ್ಸು ನ್ಯಾಯಬಾಹಿರವಿದೆ' — ಗಾಂಧಿಜಿ ಸುದ್ದಿಯೇನು? —

ಗಾಂಧಿಜಿ ಸುದ್ದಿಯೇನಿದೆ?

"ಯರವಾಡಾ ಸೆರಮನೆಯಿಂದ ಗಾಂಧಿಜಿಯನ್ನಿಟ್ಟ ಆಗಾಖಾನ ಅರಮನೆಗೆ ಸುಮಾರು ಎರಡು ಮೈಲು ಅಂತರ. ನಾವು ಯರವಾಡದಿಂದ ಬಿಡುಗಡೆಯಾಗಿ ಬರುವಾಗ, ಆ ಹಾದಿ ಹಾದು ಬಂದೆವು. ಆದರೆ ನಮಗೆ ಅಲ್ಲಿ ಏನನ್ನೂ ನೋಡಲಾಗಲಿಲ್ಲ; ಯಾರಿಗೂ ಅಲ್ಲಿ ಪ್ರವೇಶವಿಲ್ಲ. ಮಹಾತ್ಮರ ಬಳಿ ಹೋಗಬೇಕಾದರೆ ನಿಜವಾಗಿ ಮಹಾಭಾಗ್ಯವಂತನೇ ಆಗಿರಬೇಕು. ಅಲ್ಲಿ ಸುಮಾರು ೬೦ ಜನ ಸಶಸ್ತ್ರಸೈನಿಕರು ಹಾಗೂ ಪೋಲೀಸರು ಕಾವಲು ನಡೆಸುತ್ತಾರೆ. ಪೋಲೀಸರೂ ಮಹಾತ್ಮರಿರುವ ಸ್ಥಳಕ್ಕೆ ಹೋಗುವುದಿಲ್ಲ. ಮಹಾತ್ಮರು ಅರಮನೆಯ ಉಪ್ಪರಿಗೆ ಮೇಲಿರುತ್ತಾರೆ. ಆ ಅರಮನೆಯ ಕಸ ಗುಡಿಸಲು ನಮ್ಮ ಸೆರೆಮನೆಯಿಂದ ಕೆಲವು ಕ್ರಿಮಿನಲ್ ಕೈದಿಗಳು ಹೋಗುತ್ತಾರೆ. ಇವರಿಗೆ ಗಾಂಧಿಜಿ ಇರುವ ಉಪ್ಪರಿಗೆ ಮೇಲೆ ಪ್ರವೇಶವುಂಟು, ಆ ಭಾಗ್ಯಹೀನರದ್ದು ಇದೊಂದು ಭಾಗ್ಯ! ಮಹಾತ್ಮರು ಮಿತಭಾಷಿ; ಆದಷ್ಟು ಮಾತನಾಡುವ ಸಂದರ್ಭ ತಪ್ಪಿಸಿಕೊಳ್ಳುವರು. ಹೆಚ್ಚಾಗಿ ಮೌನವೇ. 'ಬಾಪುಜಿ ಬರ್ತನ್ ಕಿದರ್ ರಖ್‌ನಾ?' ಹೀಗೆ, ಗುಡಿಸ ಹೋದ ಕೈದಿಗಳು ಪಾತ್ರೆಗಳನ್ನಿಡುವ ಸ್ಥಳದ ಕುರಿತು ಅಪ್ಪಣೆ ಕೇಳಲು ಗಾಂಧಿಜಿ ಬರೆ ಕೈಸನ್ನೆಯಿಂದ ಸ್ಥಳ ತೋರಿಸುವರು; ಅಲ್ಲದೆ ಏನೂ ಮಾತೆತ್ತುವುದಿಲ್ಲ. ಸಂಜೆ ಗಾಂಧಿಜಿ ತಿರುಗಾಡಲು ಹೋಗುವುದುಂಟು; ಹೋಗುವುದೆಂದರೆ ದಿವಂಗತ ಮಹಾದೇವ ದೇಸಾಯಿಯವರ ಅಂತ್ಯಸಂಸ್ಕಾರದ ಸ್ಥಳಕ್ಕೆ. ಆ ಹೊತ್ತಾದ ಕೂಡಲೇ ಗಾಂಧಿಜಿ ದಂಟುಗೋಲನ್ನು ಉಪ್ಪರಿಗೆ ಮೇಲೆ ಎರಡು ಸಲ ಹೊಡೆಯುತ್ತಾರೆ. ಆ ಶಬ್ದ ಕೇಳಿದೊಡನೆ ಮೀರಾ ಬೆನ್, ಸುಶೀಲಾ ನಾಯರ್ ಉಪ್ಪರಿಗೆಗೆ ಹೋಗಿ ಗಾಂಧಿಜಿಯನ್ನು ಕರಕೊಂಡು ಹೋಗುತ್ತಾರೆ. ಮಹಾದೇವ ದೇಸಾಯಿ ಅಂತ್ಯ ಸಮಾಧಿ ಸ್ಥಳದಲ್ಲಿ ಗಾಂಧಿಜಿ ಹೂಗಳನ್ನರ್ಪಿಸುತ್ತಾರೆ; ದೀಪ ಹಚ್ಚುತ್ತಾರೆ; ಮೌನವಾಗಿ ಕುಳಿತುಕೊಳ್ಳುತ್ತಾರೆ. ಇಂಥಾ ಕೆಲವು ಸುದ್ದಿಗಳನ್ನು ಹೇಳಿ, ಅಲ್ಲಿಗೆ ಗುಡಿಸಲು ಹೋದ ಕ್ರಿಮಿನಲ್ ಕೈದಿಗಳು ತಮ್ಮ ದುಃಖವನ್ನು ಮರೆತುಬಿಡುತ್ತಾರೆ" ಹೀಗೆಂದು ಯರವಾಡದಿಂದ ಬಿಡುಗಡೆಯಾಗಿ ಬಂದ ಶ್ರೀ ಮಂಜುನಾಥ ಪಾಂಡುರಂಗ ಶ್ಯಾನಭಾಗರು 'ಕಾನಡಾವೃತ್ತ' ಪತ್ರಿಕೆಯಲ್ಲಿ ತಿಳಿಸುತ್ತಾರೆ.

"ಆರ್ಡಿನೆನ್ಸುಗಳು ನ್ಯಾಯಬಾಹಿರವಿವೆ"

ಡಿಫೆನ್ಸ್ ಆಫ್ ಇಂಡಿಯಾ ಕಾನೂನಿನ ೨೬ನೇ ಕಲಮು ನ್ಯಾಯಬಾಹಿರವೆಂದು ಫೆಡರಲ್ ಕೋರ್ಟಿನ ಮುಖ್ಯ ನ್ಯಾಯಾಧೀಶರು ಸಾರಿದ್ದರಿಂದ, ವೈಸರಾಯರು ಮತ್ತೊಂದು ಆರ್ಡಿನೆನ್ಸ್ ಹೊರಡಿಸಿದರು. ಆದರೆ ಆ ಆರ್ಡಿನೆನ್ಸೂ ನ್ಯಾಯಬಾಹಿರವೆಂದು ಈಗ ವಾದವುಂಟಾಗಿದೆ. ಅದೇ ಪ್ರಕಾರ ಡಿಫೆನ್ಸು ಕಾನೂನಿನಂತೆ ಏರ್ಪಟ್ಟ ಸ್ಪೆಶಲ್ ಕೋರ್ಟು ನ್ಯಾಯಬಾಹಿರವೆಂದು ವಾದಿಸಲಾಗಿದ್ದ, ಬಂಗಾಳ ಹೈಕೋರ್ಟಿನವರು ಸ್ಪೆಶಲ್ ಕೋರ್ಟು ನ್ಯಾಯಬಾಹಿರವೆಂದು ಸಾರಿದರು. ಸರಕಾರದವರು ಆ ತೀರ್ಪಿನ ವಿರುದ್ಧ ಫೆಡರಲ್ ಕೋರ್ಟಿಗೆ ಅರ್ಜಿ ಮಾಡಿದರು. ಫೆಡರಲ್ ಕೋರ್ಟಿನವರಾದರೂ ಬಂಗಾಳ ಹೈಕೋರ್ಟಿನ ತೀರ್ಮಾನವನ್ನು ಸಮ್ಮತಿಸಿದ್ದಾರೆ. ಯಾವ ಆರ್ಡಿನೆನ್ಸಿನಿಂದ ಈ ಸ್ಪೆಶಲ್ ಕೋರ್ಟುಗಳು ಹುಟ್ಟಿಬಂದವೋ ಆ ಆರ್ಡಿನೆನ್ಸೇ ನ್ಯಾಯಬಾಹಿರವೆಂದು ನಿರ್ಣಯಿಸಲಾಯಿತು. ಹೀಗೆ ಫೆಡರಲ್ ಕೋರ್ಟಿನ ಇಬ್ಬರು ಮುಖ್ಯ ನ್ಯಾಯಾಧೀಶರೂ, ವರದಾಚಾರಿ ಮತ್ತು ಜಫ್ರುಲ್ಲಾರು ಅಭಿಪ್ರಾಯ ಕೊಟ್ಟಿದ್ದಾರೆ.

ಈ ರೀತಿ ಸ್ಪೆಶಲ್ ಕೋರ್ಟಿನ ಆರ್ಡಿನೆನ್ಸು ನ್ಯಾಯಬಾಹಿರವಾದ್ದರಿಂದ, ವೈಸರಾಯರು ೨೬ನೇ ಕಲಮು ನ್ಯಾಯಬಾಹಿರವೆಂದು ಸಾರಿದಾಗ ಮಾಡಿದಂತೆ ಮಾಡದೆ, ಅದನ್ನು ಹಿಂತೆಗೆದುಕೊಂಡದ್ದು ಮಾತ್ರವಲ್ಲದೆ ಹೊಸ ಆರ್ಡಿನೆನ್ಸಿನಪ್ರಕಾರ ಆದ ಶಿಕ್ಷೆಗಳೆಲ್ಲಾ ಸಾದಾ ಕೋರ್ಟಿನಲ್ಲಿ ಆದವುಗಳೆಂದು ಭಾವಿಸಿ ಅಪೀಲು ಮಾಡಬಹುದು; ಈಗ ಸ್ಪೆಶಲ್ ಕೋರ್ಟಿನಲ್ಲಿ ನಡೆದ ಖಟ್ಲೆಗಳೆಲ್ಲಾ ಮುಂದೆ ಸಾದಾ ಕೋರ್ಟಿನಲ್ಲಿ ನಡೆಯುವವು. ಹಿಂದೆ ಸ್ಪೆಶಲ್ ಕೋರ್ಟಿನಿಂದ ಆದ ಶಿಕ್ಷೆಯನ್ನು ಅನುಭೋಗಿಸುತ್ತಿದ್ದವರಿಗೆ ಅಪೀಲು ಮಾಡಬಹುದೇನೋ ನಿಜ; ಆದರೆ ಸ್ಪೆಶಲ್ ಕೋರ್ಟು ತೀರ್ಮಾನದಂತೆ ಗಲ್ಲಿಗೇರಿಸಲ್ಪಟ್ಟವರ ಗತಿಯೇನು?

ವೈಸರಾಯರು, ಡಿ ಕಾನೂನಿನ ೨೬ನೇ ಕಲಮು ನ್ಯಾಯವೆಂದು ಸಾರಲು ಹೊರಡಿಸಿದ ಹೊಸ ಆರ್ಡಿನೆನ್ಸು ಅಕ್ರಮವಿದೆಯೆಂದು ಬಂಗಾಳ ಹೈಕೋರ್ಟಿನವರು ವಿಧಿಸಿ ಶ್ರೀ. ನಿಹರೇಂದುದತ್ತ ಮಜುಮದಾರ ಮೊದಲಾದ ೬ ಮಂದಿ ರಾಜಕೀಯ ಕೈದಿಗಳ ಬಿಡುಗಡೆಯಾಜ್ಞೆಯಿತ್ತರು. ಆದರೆ ಪೋಲೀಸಿನವರು ಆ ೬ ಮಂದಿಯನ್ನು ಕೋರ್ಟಿನ ಬಾಗಿಲಲ್ಲೇ ಪುನಃ ಸೆರೆಹಿಡಿದರು. ಇದು ಹೈಕೋರ್ಟಿನ ಅವಮಾನವೆಂದು ಹೈಕೋರ್ಟಿನವರು ಪೋಲೀಸರು ಮಾಡಿದ ಹೈಕೋರ್ಟು ಅವಜ್ಞೆಯ ಕುರಿತು ಕಾರಣ ತಿಳಿಸಲು ಕೇಳಿದ್ದಾರೆ. ಈ ರೀತಿ ಆರ್ಡಿನೆನ್ಸುಗಳು ಒಂದರಮೇಲೊಂದಾಗಿ ನ್ಯಾಯಬಾಹಿರವೆಂದು ಹೈಕೋರ್ಟು ಫೆಡರಲ್ ಕೋರ್ಟುಗಳವರು ತೀರ್ಮಾನಿಸುತ್ತಿರುವಾಗ, ಈ ಆರ್ಡಿನೆನ್ಸುಗಳಂತೆ ಕಳೆದ ಆಗಸ್ಟ್ ತಿಂಗಳಿಂದ ಮೊದಲ್ಗೊಂಡು ಸೆರೆಹಿಡಿದವರಿಗೆ ಏನು ನ್ಯಾಯದಾನ ಮಾಡಲಾಗುವುದು?

ಒಂದು ಸಣ್ಣ ಕತೆ:

ಕುಡುಕ!

—ಕುವಾರ.

"ಅವನೋರ್ವ ಕುಡುಕ . . ."—ಜನರು ಅವನನ್ನು ತುಚ್ಛೀಕರಿಸುವರು.

"ಅಗಲೆಲ್ಲ ದೆವರ್ ಅರ್ಸಿ,
ತಂದದ್ರಲ್ ಒಸಿ ಮುಸ್ಕಿ,
ಸಂಜೇಲಿ ವುಳಿಯೊಂಡ ಕೊಂಚ,
ಯೊರ್ತ ಮೈ ಝುಂ ಅಂದ್ರೆ,
ವಾಸ್ನೆ ಘಂ ಘಂ ಅಂದ್ರೆ
ತುಂಭೋಯ್ತು ನನ್ನಪರ್ವಂಚ"—ಇದು ಆ ಕುಡುಕನ ಆಶೆಅಪೇಕ್ಷೆಗಳ ಹಾಡು!

ಹಗಲೆಲ್ಲ ದುಡಿದುಡಿದು ದಣಿಯುವನು, ಹೆಂಡವನ್ನು ಕುಡಿದು ತನ್ನ ದಣುವನ್ನು ತಣಿಸುವನು.

ಅವನು ಕುಡಿಯುವುದು ತನಿಯನ ಹೆಂಡದಂಗಡಿಯಿಂದ.

"ಪಕ್ಕಾ ಖಂಡಾ ನೀರ್ ಮಾಡಾದು' ತನಿಯನ ರೀತಿ, "ಕಾಸು ಇಸ್ಕೊಂಡು ಕಸ ಕೊಡೋದು" ತನಿಯನ ನೀತಿ. ಆ ಕುಡುಕನಂತಹ ಕೂಲಿಕಾರರು-'ಜೀತಾ ಮಾಡಿ ಕಾಸ್ ಕೆರ್ಕೊಂಡು, ಅಟ್ಟೇಲಿ ಎಂಡ್ತಿನ್ ಮೋಸೋಸ್ಕಂಡು ಏನೋ ಕುಡಿಯಾನ್ ಬಂದ್ರೆ-ಸೇರಿಗ್ ಸೇರ್ ನೀರ್ನಿ ಬೆರಸಿ ಕಾಸ್ ಕೇಳುವ ಮೋಸಗಾರನು'ಹೆಂಡದಂಗಡಿ ತನಿಯ. ಅವನು ಕುಡಿಯುವನು; ಕುಡಿಕುಡಿದು ಮನೆಕಡೆಗೆ ನಡೆಯುವನು. ಮನೆಯನ್ನು ಸೇರುವಾಗ ತಲೆಗೇರಿದ ಹೆಂಡದ ಅಮಲು ಇಳಿಯುವುದು – ತನಿಯನ ಹೆಂಡದ ಪ್ರಭಾವ-ಅಷ್ಟೆ!

ಮನೆಯಲ್ಲಿ ತಂಗಳನ್ನ ತಿಂದು ತೇಗುವನು, ತೃಪ್ತನಾಗಿ ತನ್ನ ಹರಕು ಮುರುಕು ಚಾಪೆ ಒಂದರಲ್ಲಿ ಮಲಗುವನು: "ಸುಖಜೀವಿ"—ಚೆನ್ನಾಗಿ ನಿದ್ರಿಸುವನು! ಬೆಳಗಾಗಲು ಕಾರಖಾನೆಯಲ್ಲಿ ದುಡಿಯಬೇಕು; ಸಾಯಂಕಾಲ ತನಿಯನ ಹೆಂಡದಂಗಡಿಯಲ್ಲಿ ಕುಡಿಯಬೇಕು. ಅದಿಷ್ಟು ಕುಡುಕನ ದಿನಚರಿ . . . . . .

ತಾನು ಬೆವರಿಳಿಸಿ ದುಡಿದ ಹಣದಿಂದ ಕುಡಿಯುವನು ಅವನು . . . ". . ಛೀ! ಅವನೋರ್ವ ಕುಡುಕ" . . . –ಜನರು ಅವನನ್ನು ತುಚ್ಛೀಕರಿಸುವರು.

* * *

ವಿದ್ಯುದ್ದೀಪಗಳಿಂದ ಸುಸಜ್ಜಿತವಾದ, ಆ ಊರಿನ 'ಕ್ಲಬ್' ಮಹಾ ಸದನದಲ್ಲಿ–ಶ್ರೀಮಂತ ಸ್ತ್ರೀಪುರುಷರು ಸೇರಿರುವರು. ಇಲ್ಲಿ ಸೇರಿದ ಜನರು ಕುಡಿಯುವವರಲ್ಲ–ಬೇರೆಯವರ ಆರೋಗ್ಯಕ್ಕೆ ಆಂಗ್ಲೇಯ ದ್ರವ ಪದಾರ್ಥಗಳನ್ನು ಪಾನಮಾಡುವವರು! ತನಿಯನಲ್ಲಿ ಕೇಳಿ ಬರುವ 'ತುಚ್ಛ' ತುಳುವಿನ ಬದಲು ಅವರ 'ಉಚ್ಚ' ಆಂಗ್ಲೇಯ ಭಾಷೆಯ ಮಧುರ ಮಾತುಗಳು (ಆ ಭಾಷೆಯಲ್ಲಿ ಕೆಲವೊಮ್ಮೆ ಕ್ರಿಯಾಪದಗಳ ಅಭಾವ, ಕಾಲ ನಿಯಮಾವಳಿಗಳ ಗಲಿಬಿಲಿ ತಲೆದೋರುತ್ತಿವೆಯಂತೆ) ಫ್ರಾನ್ಸಿನ ವ್ಯಾನ್, ಇಂಗ್ಲೀಷ್ ಬೀರ್, ಅಮೇರಿಕನ್ ಮರ್ಸಾಲಾ ಇವುಗಳ 'ನಾತ'ದೊಡನೆ ಮನಸ್ಸನ್ನು ಆಹ್ಲಾದಿಸುವವು.

ಮಿಸ್ ಅನುಸೂಯಯ ಆರೋಗ್ಯಕ್ಕಾಗಿ ಮಿಸ್ಟರ್ ಸೋಜಾ ಬೀರ್ ಕುಡಿಯುವನು!

ಮಿಸ್ಟರ್ ಕೇಶವ್‌ನು ಮಿಸ್ ಸೋಜಾಳ ಆರೋಗ್ಯಕ್ಕಾಗಿ ವ್ಯಾನ್‌ನ್ನು ಕುಡಿಯುವನು!

ಹೀಗೆ ಒಬ್ಬನ ಪತ್ನಿಯ ಆರೋಗ್ಯಕ್ಕಾಗಿ ಇನ್ನೊಬ್ಬನ ಹೆಂಡತಿಯ ಗಂಡನು ಕುಡಿಯುವನು. . . . ಇವರಲ್ಲಿ ಹೆಚ್ಚಿನವರು ತಂದೆ ಶೇಖರಿಸಿಟ್ಟ ಹಣವನ್ನು ಖರ್ಚು ಮಾಡುವವರು. . . . . ಕಕ್ಷಿಗಾರರಿಲ್ಲದ ವಕೀಲರು, ಕ್ಲಬ್‌ನ್ನು ಆಸ್ಪತ್ರೆಯೆಂದು ಭಾವಿಸಿದ ಡಾಕ್ಟರರು, ವ್ಯಾಪಾರ ಮಾಡದ ಸಾಹುಕಾರರು, ಸಮಾಜದ ಸ್ತಂಭಗಳೆಂದೆನಿಸಿಕೊಂಡವರು, 'ರಾಷ್ಟ್ರ ಹಿತೈಷಿಗಳು'!–ಎಲ್ಲರೂ ಸಮಾಜದಲ್ಲಿ ಅಗ್ರಗಣ್ಯ ಮಹನೀಯರೇ! . . " . . ಛೀ! ಅವನು ಓರ್ವ ಕುಡುಕ . . ." ಎಂದು ಆ ಬಡ ಕೂಲಿಕಾರನನ್ನು ಹಳಿಯುವವರಲ್ಲಿ ಇವರೆಲ್ಲರೂ ಮುಂದಾಳುಗಳು.

ಕಾರಣ;–ಅವನು ಬಡವ, ಕೂಲಿಕಾರ; ಇವರು ಶ್ರೀಮಂತರು; ಮಾಲಕರು. ಅವನು ಸ್ವತಃ ಕಷ್ಟಪಟ್ಟು ದುಡಿದ ಹಣದಿಂದ ಕುಡಿಯುವನು, ಇವರು . . . ? ಅವನು 'ಗುತ್ತಿಗೆ'ಯ ಗುಡಿಸಲಿನಲ್ಲಿ ಕುಡಿಯುವನು; ಇವರು 'ಕ್ಲಬ್'ನ ಮಹಾಸದನದಲ್ಲಿ ಅಥವಾ ವ್ಯಾನ್ ಸ್ಟಾಲ್‌ಗಳಲ್ಲಿ!

ಅವನು ಕುಡಿಯುವುದು ಈ ಬಡ ದೇಶೀಯ ಹೆಂಡ, ಇವರು ಪಾನಮಾಡುವುದು (ಅದೂ, ಬೇರೆಯವರ ಆರೋಗ್ಯಕ್ಕೆ!) ಸಂಪನ್ನ ಮಹಾ ರಾಷ್ಟ್ರಗಳ ಪಾನೀಯಗಳು, ಬೀರ್, ವ್ಯಾನ್ . . . !

" . . . ಅವನೋರ್ವ ಕುಡುಕನು." ಸಮಾಜವು ಅವನನ್ನು ಪತನದ ಕಂದಕದಲ್ಲಿ ತಳ್ಳಿದೆ, ತಳ್ಳುತ್ತಲಿದೆ, ಮುಂದಕ್ಕೂ ತಳ್ಳುವುದು!

ಇವರು 'ಸಮಾಜದ ಆಧಾರಸ್ತಂಭ'ಗಳಾಗಿ ಮೆರೆಯುತ್ತಿರುವರು.

* * *

ಎಂದಿನಂತೆ ಒಂದು ದಿನ, ಕುಡುಕನು ಸುರಾದೇವತೆಯ ಆರಾಧನೆ ಮಾಡಿ ಮಾರ್ಗದ 'ಸರ್ವೆ'ಯನ್ನು ಮಾಡುತ್ತಾ ಬರುತ್ತಿದ್ದಾನೆ. ಎದುರಲ್ಲಿ ಅದಾಗಲೇ ಬೀರ್ ದೇವತೆಯ ದರ್ಶನ ಮಾಡಿದ್ದ ಮಿಸ್ ಅನುಸೂಯಾ ಮತ್ತು ಮಿಸ್ಟರ್ ಸೋಜಾರವರು ಕಾರಿನಲ್ಲಿ ಬರುತಿದ್ದರು. ಮಿಸ್ ಅನುಸೂಯಾಳೊಡನೆ ಸರಸ ಸಲ್ಲಾಪ ಮಾಡಿಯೇ ಮಿಸ್ಟರ್ ಸೋಜನು ಕಾರನ್ನು ಚಲಿಸುತ್ತಿದ್ದನು. . . . ಕಾರು ಕುಡುಕನ ಮೇಲಿನಿಂದ ಹಾದು ಹೋಯ್ತು!

. . . . ಆಸ್ಪತ್ರೆಗೆ ಕೊಂಡೊಯ್ಯುವ ಮೊದಲೇ ಕುಡುಕನು ಪ್ರಾಣವನ್ನು ತ್ಯಜಿಸಿದನು! " . . . ಛೀ ಅವನೋರ್ವ ಕುಡುಕ. ಕುಡಿದುದರಿಂದ ಕಾರಿನಡಿಯಲ್ಲಿ ಬಿದ್ದನು. ಮಿಸ್ಟರ ಸೋಜನು ನಿರಪರಾಧಿ . . . ." ಜ್ಯೂರಿಗಳ ನಿರ್ಧಾರ.

ವಿವೇಚನಾಶಕ್ತಿಯನ್ನು ನಿರ್ಮೂಲಗೊಳಿಸಲು ಬೀರ್ ಕುಡಿದ ನ್ಯಾಯಾಧೀಶರು ತೀರ್ಮಾನವಿತ್ತರು:–"ಕುಡುಕನು ಕುಡುಕನ ಮರಣವನ್ನೇ ಹೊಂದಿದನು. ಡ್ರೈವರನ ತಪ್ಪಿಲ್ಲ. ಕುಡುಕರಿಗೆ ಜಾಗ್ರತೆ. . ."

* * *

"ನನ್ನೀ ಹೆಂಡಕ್ಕೆ ಇಷ್ಟು ಅಮಲೇ!" –ಎಂದು ತನಿಯನು ಮೂಗಿನ ಮೇಲೆ ಕೈ ಬೆರಳಿಟ್ಟನು.

"ಸೇರಿಗ್ ಎರಡ್ ಸೇರ್ ನೀರ್ನಿ ಬೆರಸಿ ಕಾಸ್ ಕೇಳುವ ಮೋಸಗಾರ, ತನಿಯ" ಎಂದು ತನಿಯನ ಗಿರಾಕಿಗಳು ಇನ್ನೂ ಅದೇ ಹಾಡು ಹಾಡುತ್ತಿದ್ದಾರೆ!

ಮುಂಬಯಿಯಲ್ಲಿ

ಅ. ಭಾ. ಪ್ರಥಮ 'ಕಮ್ಯುನಿಸ್ಟ್' ಸಮ್ಮೇಳನ

ಕಯ್ಯೂರ ಮೃತಾತ್ಮರ ಸಮಾಧಿಗಾನ!

ರಾಷ್ಟ್ರೀಯ ಐಕ್ಯ ಸಂದೇಶ

ಕಳೆದ ಮೇ ಕೊನೆಯ ವಾರದಲ್ಲಿ ಅಖಿಲ ಭಾರತ ಕಮ್ಯುನಿಸ್ಟ್ ಪಕ್ಷವು ಬೊಂಬಯಿಯಲ್ಲಿ ತನ್ನ ಪ್ರಥಮ ಸಮ್ಮೇಳನ ಜರಗಿಸಿತು. ೧೯೩೪ರಲ್ಲಿ ಸರಕಾರವು ಕಮ್ಯುನಿಸ್ಟ್ ಪಕ್ಷವನ್ನು ಅಕ್ರಮ ಕೂಟವೆಂದು ಸಾರಿದಾಗ ಕೇವಲ ೨೦೦ ಮಂದಿ ಸದಸ್ಯರಿದ್ದರು. ೧೯೪೨ ರಲ್ಲಿ ಆ ನಿರ್ಬಂಧವು ಹೋಗಲು ೫,೦೦೦ ಮಂದಿ ಸದಸ್ಯರಾದರು. ಆಗಲೂ ಪಕ್ಷದ ಮೇಲೆ ದಬ್ಬಾಳಿಕೆ ನಡೆದೇ ಇತ್ತು. ೭೦೦ ಮಂದಿ ಪಕ್ಷದ ಸದಸ್ಯರು ಸೆರೆಯಮರೆಯಲ್ಲಿಯೇ ಇದ್ದಾರೆ. ೧೦೫ ಜನ ಆ ಜೀವ ಸೆರೆಮನೆ ಸೇರಿದ್ದಾರೆ. ಆ ಮೇರೆ ಪಕ್ಷದ ಸದಸ್ಯರು ೧೫,೦೦೦ ಮೀರಿ ಆದರು. ಸರಕಾರ ತಡೆದರೂ, ಕಮ್ಯುನಿಸ್ಟರು ಜನತಾ ಹೃದಯದಲ್ಲಿ ಸೇವೆಯ ಸಂದೇಶ ಸಾರುತ್ತಿದ್ದರು; ಬೇರೂರುತ್ತಿದ್ದರು. ಈ ಪ್ರಥಮ ಸಮ್ಮೇಳನದಲ್ಲಿ ಕಮ್ಯುನಿಸ್ಟರು ತಮ್ಮ ವಿಚಾರ ವಿನಿಮಯ ಮಾಡಿಕೊಂಡರು.

ಭಾರತ ರಕ್ಷಣೆ, ಕಾಂಗ್ರೆಸ್‌ಲೀಗ್ ಐಕ್ಯ ಸಾಧನೆ ಮುಂತಾದ ರಾಷ್ಟ್ರೀಯ ವಿಚಾರಗಳನ್ನೆಲ್ಲ ವಿಮರ್ಶಿಸಲಾಯಿತು. ೧೩೯ ಮಂದಿ ಪ್ರತಿನಿಧಿಗಳು ಭಾರತದ ಬೇರೆ ಬೇರೆ ಪ್ರಾಂತಗಳಿಂದ ಇದಕ್ಕೆ ಬಂದಿದ್ದರು. ಅವರಲ್ಲಿ ೮೬ ಜನರು ವಿಚಕ್ಷಣರಿದ್ದರು. ಅವರಲ್ಲಿ ಹಲವರು ತೀವ್ರ ಚಳವಳಗಾರರು, ಪ್ರಚಾರವೀರರು, ಸಂಘಟನಾ ಚತುರರು. ೩೨ ಜನ ಕೂಲಿಗಾರರವರಲ್ಲಿ, ಅವರೆಲ್ಲರೂ ಟ್ರೇಡ್ ಯೂನಿಯನ್ ರಾಜಕೀಯ ಮುಖಂಡರು; ೨೫ ಮಂದಿ ರೈತರು, ರಾಷ್ಟ್ರದ ರೈತರ ಪ್ರತಿನಿಧಿಗಳು. ಮೂರು ಮಂದಿ ಜಮೀನ್ದಾರರು; ಇಬ್ಬರು ಸಣ್ಣ ಭೂಮಾಲೀಕರು. ಇವರಲ್ಲಿ ೧೩ ಮಂದಿ ಮಹಿಳೆಯರೂ ಸೇರಿದ್ದರು. ಕಮ್ಯುನಿಸ್ಟ್ ಪಕ್ಷದಲ್ಲಿ ಶೇಕಡಾ ೫ ರಷ್ಟು ಮಹಿಳಾ ಸದಸ್ಯರಿದ್ದಾರೆ. ೧೩ ಮಂದಿ ಮುಸ್ಲಿಮರು, ೪ ಮಂದಿ ಸಿಕ್ಕರು, ೩ ಹರಿಜನರು, ಓರ್ವ ಕ್ರಿಶ್ಚನ್, ಓರ್ವ ಜೈನ್ ಹೀಗೆ ಎಲ್ಲಾ ಅಲ್ಪಸಂಖ್ಯಾಕರೂ ಇದ್ದರು. ಈ ಪ್ರತಿನಿಧಿಗಳಲ್ಲಿ ಶೇಕಡಾ 70 ಮಂದಿ ಸೆರೆಮನೆಯ 'ಸುಖ' ನೋಡಿದವರೇ; ಇವರಲ್ಲಿ ೨೭ ವರ್ಷಗಳನ್ನು ಸೆರೆಮನೆಯಲ್ಲಿ ಸವೆದ ಬಾಬಾ ಸೋಹನ್ ಸಿಂಗರೂ ಇದ್ದರು.

ಶ್ರೀಮತಿಯರಾದ ಕಲ್ಪನಾದತ್ತ್ ಮತ್ತು ಕಮಲಾ ಚಟರ್ಜಿ ಈ ಇಬ್ಬರು ಮಹಿಳೆಯರು ಅನುಕ್ರಮವಾಗಿ ೭ ಮತ್ತು ೬ ವರ್ಷ ಸೆರೆಮನೆಯಲ್ಲಿ ಸವೆದವರು. ಶೇಕಡಾ ೫೩ ಮಂದಿ ಗುಪ್ತಕಾರ್ಯ ನಡೆಸಿದ ವಿಚಕ್ಷಣರು. ೧೦ ವರ್ಷಗಳ ಅಜ್ಞಾತ ವಾಸದ ಅನುಭವದವರು ಹಲವರಿದ್ದರು.

ಒಂದು ಕಡೆಯಲ್ಲಿ ೮೦ ವರ್ಷದ ಮುದುಕ ಪಂಜಾಬಿನ ಬಾಬಾ ಮತ್ತು ಮೋಹನ್ ಸಿಂಗ ಭಕ್ನಾ ಮತ್ತೊಂದೆಡೆಯಲ್ಲಿ ೧೬ ವರ್ಷದ ಕೇರಳದ ಕುಂಞನಂದನ್ ಹೀಗೆ ಎಲ್ಲಾ ವಯಸ್ಸಿನವರೂ ಸೇರಿದ್ದರು. ೧೯೨೧ರ ಮೊದಲಿಂದ ಪಕ್ಷವನ್ನು ಸೇರಿದವರೂ ೧೯೪೨ ರಲ್ಲಿ ಸೇರಿದವರೂ ಇದ್ದರು. ಇವರಲ್ಲಿ ಎಷ್ಟೋ ಮಂದಿ ಕ್ರಾಂತಿಕಾರರು, ಕಾಂಗ್ರೆಸ್ ಕೆಲಸಗಾರರು, ಕೂಲಿಗಾರ ಮುಖಂಡರು. ಹೀಗೆ ಅಖಿಲ ಭಾರತ ಕಮ್ಯುನಿಸ್ಟರು ಮುಂಬಯಿಯಲ್ಲಿ ಸೇರಿ ತಮ್ಮ ಪ್ರಥಮ ಸಮ್ಮೇಳನ ಜರಗಿಸಿದರು.

ಈ ಕಮ್ಯುನಿಸ್ಟ ಸಮ್ಮೇಳನಕ್ಕೆ ಶ್ರೀಗಳು ಹಾರಿ ಪಾಲಿಟ್, ಆರ್. ಪಾಮೆದತ್, ಮಿಳಿಯಂ ರಸ್ಟ್, ವಿಲಿಯಂ ಗೆಲಚರ್, ಇವರ ಸಹಿಯಿಂದ ಗ್ರೇಟ್ ಬ್ರಿಟನಿನ ಕಮ್ಯುನಿಸ್ಟ್ ಪಕ್ಷವು, ಒಂದು ಸಂದೇಶ ಕಳುಹಿಸಿ, ರಾಷ್ಟ್ರರಕ್ಷಣೆಗೆ ಐಕ್ಯಸಾಧಿಸಿರೆಂದೂ, ಭಾರತದ ಬಿಕ್ಕಟ್ಟು ಬಗೆ ಹರಿಸಲು ತಾವು ಯತ್ನಿಸುವೆವೆಂದೂ ತಿಳಿಸಿತ್ತು. ಅಮೆರಿಕದ ಕಮ್ಯುನಿಸ್ಟ್ ಪಕ್ಷವು ಶ್ರೀಗಳು ವಿಲಿಯಂ; ಜಡ್. ಫೋಸ್ಟರ್, ಅರ್ಲ್‌ಬ್ರೌಡರ್ ಇವರ ಸಹಿಯಿಂದ, ಸ್ವತಂತ್ರ ಜಗತ್ತಿನಲ್ಲಿ ಭಾರತ ಸ್ವತಂತ್ರ ಸಾಧಿಸಿರಿ ಎಂದು ಸಂದೇಶ ಕಳುಹಿಸಿತ್ತು. ಅಂತೆಯೇ ಕೆನಡಾ, ದಕ್ಷಿಣ ಆಫ್ರಿಕಾ, ಚೀಲ್, ಕ್ಯೂಬಾ ಮೊದಲಾದ ಪರದೇಶಗಳ ಕಮ್ಯುನಿಸ್ಟ್ ಪಕ್ಷಗಳೂ ಸಂದೇಶ ಕಳುಹಿಸಿದ್ದವು. ಹಾಗೆಯೇ ದೇಶದ ಬೇರೆ ಬೇರೆ ಕಮ್ಯುನಿಸ್ಟ್ ಮುಖಂಡರಿಂದಲೂ ವಿವಿಧ ಸಂದೇಶಗಳು ಬಂದಿದ್ದವು.

ಮೇ ೨೩ರಿಂದ ಜೂನ್ ೨ರ ವರೆಗೆ ಈ ಪರಿಷತ್ತು ಬೆಳಗ್ಗೆ ೯ ಗಂಟೆಯಿಂದ ತೊಡಗಿದ್ದು ರಾತ್ರಿ ೧೧ರ ವರೆಗೆ ಆರ್. ಎಮ್. ಭಟ್ಟ ಸಭಾಭವನದಲ್ಲಿ ನಡೆಯಿತು. ಈ ಸಭಾಭವನವು ಕಾಮಗಾರ್ ಮೈದಾನಿನ ಸಮೀಪ ಇದೆ. ಸಭಾತೀರದ ಮುಂದೆ ಜಿನ್ನಾ ನೆಹರುಗಳ ಭಾವಚಿತ್ರಗಳು ಕಾಂಗ್ರೆಸ್ ಲೀಗ್ ಧ್ವಜಗಳ ಹಿನ್ನೆಲೆಯಿಂದ ತೂಗಾಡುತ್ತಿದ್ದವು. ಮಹಾತ್ಮರ ಪಟವೂ ಅಲಂಕೃತವಾಗಿತ್ತು. ಅದರ ಹಿಂದೆ ಕಮ್ಯುನಿಸ್ಟ್ ತತ್ವದ ಮೂಲಪುರುಷರಾದ ಮಾರ್ಕ್ಸ್, ಎಂಜೆಲ್ಸ್, ಲೆನಿನ್ ಮತ್ತು ಸ್ಟಾಲಿನ್ ಇವರ ವಿಶಾಲ ಭಾವಚಿತ್ರಗಳು ಅಲಂಕೃತವಾಗಿದ್ದವು. ಅಖಿಲಭಾರತ ಕಮ್ಯುನಿಸ್ಟ್ ಪಕ್ಷದ ಜನರಲ್ ಸೆಕ್ರೆಟರಿ ಶ್ರೀ ಪಿ. ಸಿ. ಜೋಶಿಯವರು ಸಂದೇಶಗಳನ್ನೋದಿದರು. ಲಂಕೆ, ಬರ್ಮಾ, ಬ್ರಿಟನುಗಳಿಂದಲೂ 'ಕಾಮ್ರೇಡು'ಗಳು ಬಂದಿದ್ದರು.

ಬಲಿದಾನವಿತ್ತ ವೀರರ ಪುಣ್ಯಸ್ಮರಣೆಯನ್ನು ಪ್ರಾರಂಭದಲ್ಲಿ ಮಾಡಲಾಯಿತು. ಗಲ್ಲಿನ ಶಿಕ್ಷೆಯನ್ನು ತಪ್ಪಿಸಿಕೊಂಡ, ಹಾಗೂ ತನ್ನ ಎಷ್ಟೋ ಮಂದಿ ಗೆಳೆಯರು ಗಲ್ಲಿಗೇರುವುದನ್ನು ಕಂಡ, ಇನ್ನೂ ಕಮ್ಯುನಿಸ್ಟ್ ತತ್ವಕ್ಕಾಗಿ ಹೋರಾಡುವ ವೃದ್ಧ ಬಾಬಾಸೋಹನ್ ಸಿಂಗರು ಮೃತರ ಆತ್ಮಗಳಿಗೆ ಶಾಂತಿಸಂದೇಶ ಸೂಚಿಸುವ ನಿರ್ಣಯ ಮುಂದಿಟ್ಟರು. ಅವರು ಮಾತನಾಡುತ್ತಾ 'ನಾನು ಸತ್ತ ಮೇಲೆ ನನ್ನ ಚಿತೆಯು ರಕ್ತವರ್ಣರಂಜಿತ ಸಮಾಧಿಯಾಗಲಿ' ಎಂದು ಹಾರೈಸಿದರು. ಆ ಮೇಲೆ ಕಯ್ಯೂರಮೃತಾತ್ಮರ ಕುರಿತು, ಕಯ್ಯೂರಿನ ಮೃತರಲ್ಲೊಬ್ಬರ ಸೋದರ ಶ್ರೀ. ಕೇಳುನಾಯರರು ಮಾತನಾಡಿದರು. ಮಾತನಾಡುತ್ತಿದ್ದಂತೆ ಅವರಿಗೆ ಕಂಠ ಗದ್ಗದಿಸುತಿತ್ತು; ಕೊರಳ ಸೆರೆ ಬಿಗಿದು ಬಂತು. ಕೇರಳದ 'ಕಾಮ್ರೇಡ'ರು ಕಯ್ಯೂರ ಮೃತಾತ್ಮರ ಕುರಿತು ಸಮಾಧಿ ಗಾನ ಹಾಡಿದರು. ಎಲ್ಲರೂ ಎದ್ದು ನಿಂತು ಆ ನಿರ್ಣಯ ಮಂಜೂರಾಯಿತು.

ಇನ್ನೂ ಸೆರೆಮನೆಯಲ್ಲಿರುವ ೬೯೫ ಮಂದಿ ಕಮ್ಯುನಿಸ್ಟ್ ನಾಯಕರ, ಹಾಗೂ ಅವರಲ್ಲಿ ೧೦೫ ಮಂದಿ ಜೀವಾವಧಿ ಸೆರೆಮನೆ ವಿಧಿಸಲ್ಪಟ್ಟವರ ಕುರಿತು, ಅವರ ಬಿಡುಗಡೆಮಾಡಬೇಕೆಂದು ಒಂದು ನಿರ್ಣಯವಾಯಿತು. ರಶ್ಯದ ರಕ್ತದಲವನ್ನು ಅಭಿನಂದಿಸುವ ಠರಾವನ್ನು ಮಂಡಿಸಿ ಕಾ॥ ಕೃಷ್ಣನ್ ಉಜ್ವಲ ಭಾಷಣವಿತ್ತರು. ಭಾರತ ಯೋಧರನ್ನು ಪ್ರಶಂಸಿಸಿ ಒಂದು ಠರಾವಾಯಿತು. ಆ ಮೇಲೆ ಪರಿಷತ್ತಿನ ಮುಖ್ಯ ನಿರ್ಣಯವನ್ನು ಭಾರತದ ರಾಜಕೀಯದ ಕುರಿತು ಕಾ॥ ಪಿ. ಸಿ. ಜೋಶಿ ಮಂಡಿಸಿದರು. ಅದರಲ್ಲಿ ಅಂತರ್‌ರಾಷ್ಟ್ರೀಯ, ರಾಷ್ಟ್ರೀಯ ವಿಚಾರಗಳನ್ನು ವಿಮರ್ಶಿಸಿ, ಭಾರತದ ಬಿಕ್ಕಟ್ಟಿನ ಬಗೆಗೆ ಕಮ್ಯುನಿಸ್ಟ್ ನಿರ್ಧಾರಗಳನ್ನು ವಿವರಿಸಿತ್ತು. ಅದರಲ್ಲಿ ಸರಕಾರದ ದಬ್ಬಾಳಿಕೆ ಖಂಡಿಸಲಾಗಿತ್ತು. ಭಾರತದ ಗಂಡಾಂತರ ಸೂಚಿಸಲಾಗಿತ್ತು. ರಾಷ್ಟ್ರದ ಆರ್ಥಿಕಸ್ಥಿತಿ ವಿವೇಚಿಸಲಾಗಿತ್ತು; ಆಹಾರ ಸಮಸ್ಯೆ ತಿಳಿಸಲಾಗಿತ್ತು; ರಾಷ್ಟ್ರೀಯ ಐಕ್ಯದ ಅವಶ್ಯಕತೆ ಸಾರಲಾಗಿತ್ತು; ರಾಷ್ಟ್ರಧುರೀಣರ ಬಿಡುಗಡೆ ಮಾಡಬೇಕೆಂದು ಸೂಚಿತವಾಗಿತ್ತು. ನಂತರ ಆ ಪ್ರಾಂತಿಕ ವರದಿಗಳೋದಲ್ಪಟ್ಟವು. ಆ ಮೇಲೆ ಬೇರೆ ಬೇರೆ ವರದಿಗಳಾಗಿ, ಮುಂದೆ ಕಮ್ಯುನಿಸ್ಟ್ ಪಕ್ಷವನ್ನು ಬಲಗೊಳಿಸುವ ವಿಚಾರ ವಿಮರ್ಶೆಯಾಯಿತು. ಕೊನೆಗೆ ಅಭಿನಂದನೆಗಳಾಗಲು ಅಖಿಲಭಾರತ ಕಮ್ಯುನಿಸ್ಟ್ ಪಕ್ಷದ ಪ್ರಥಮ ಸಮ್ಮೇಳನವು ಹೀಗೆ ಅತ್ಯಂತ ಯಶಸ್ವಿಯಾಗಿ ಕೊನೆಗೊಂಡಿತು.

—'ಪೀಪಲ್ಸ್ ವಾರ್.'

ಸಮರಭೂಮಿಯ ಸಂಚಾರ

ಟುನಿಸಿಯಾ ವಿಜಯದ ನಂತರ ಮಿತ್ರರು ಮುಂದುವರಿಯುತ್ತಲೇ ಇದ್ದಾರೆ. ಮೆಡಿಟರೇನ್ನಿಯನ್ ದ್ವೀಪಗಳು ಕೆಲವನ್ನು ಮುತ್ತಿ ಸ್ವಾಧೀನ ಮಾಡಿಕೊಂಡಿರುವರು. ಪಾಂಟೆಲೇರಿಯವನ್ನು ಸ್ವಾಧೀನ ಮಾಡಿದ ೩೬ ತಾಸುಗಳಲ್ಲಿಯೇ ಲಾಂಪೆಡೂಸ್ ಶರಣುಬಂತು. ಪಾಂಟಲೇರಿಯಾ ಎರಡು ವಾರ ಬಾಂಬಿನ ಹೊಡೆತ ಸಹಿಸಿದೆ. ಇವೆರಡೂ ಈಗ ಸ್ವಾಧೀನವಾದ ಮೇಲೆ ಮಿತ್ರರು ಸಿಸಿಲಿ ಸಾರ್ಡಿನೀಯ ಕಾರ್ಸಿಕಾಗಳ ಮೇಲೆ ಬೀಳುವರೆಂದು ಖಂಡಿತ ಹೇಳಬಹುದು ಲಾಂಪೆಡೂಸಾ ಮತ್ತು ಪೆಂಟಲೇರಿಯಾ ಈ ಎರಡು ದ್ವೀಪಗಳನ್ನುಕಳಕೊಂಡದ್ದರಿಂದಇಟಲಿಯು ತನ್ನ ಹೊರವಲಯದಲ್ಲಿ ಧಾಳಿಯ ವಿರುದ್ಧದ ಎರಡು ಕೇಂದ್ರಗಳನ್ನು ಕಳಕೊಂಡ ಹಾಗಾಯಿತು ಸಿಸಿಲಿಯು ಇಷ್ಟು ಬೇಗ ಮಿತ್ರರ ಸ್ವಾದೀನವಾಗುವಂತಿಲ್ಲ, ಅದು ಭದ್ರವಾದ ಕೋಟೆಯಾಗಿದ್ದು ಅದರ ಸಂರಕ್ಷಣೆಗೆ ಸಾಕಷ್ಟು ಸೈನಿಕರು ಸಜ್ಜಿತರಾಗಿದ್ದಾರೆ

ಇಟಲಿಗೆ ಗಂಡಾಂತರ

ಇಟಲಿಗೆ ಈಗ ಗಂಡಾಂತರ ಬಂದಿದೆ, ಪಾಂಟಲೇರಿಯಾ, ಲಾಪೆಂಡೂಸಾ ಮೊದಲಾದ ದ್ವೀಪಗಳೀಗ ಕೈ ಬಿಟ್ಟಿರುವುದಲ್ಲದೆ, ಸಿಸಿಲಿ, ನಾರ್ಡೀನಿಯಗಳ ಮೇಲೆ ಮಿತ್ರರು ಬಾಂಬು ಸುರಿಸುತ್ತಿದ್ದಾರೆ, ಇನ್ನೇನು ಇದೇ ಭರದಲ್ಲಿ ಮುಂದುವರಿದರೆ, ಇಂದಲ್ಲ ನಾಳೆ ಇಟಲಿಗೆ ಮುತ್ತಿಗೆ ಬೀಳುವುದು ಖಂಡಿತ. ಮೆಡಿಟರೇನಿಯನ್ ಅಧೃಷ್ಟದ ಸಮುದ್ರವೆಂದು ಇತಿಹಾಸದಲ್ಲಿ ಪ್ರಸಿದ್ಧವಾಗಿದೆ ಮುಸಲನಿಯೋನೋ ಇದು ವರೆಗೆ ಇದನ್ನು ವಿಹಾರ ಸರೋವರವಾಗಿ ಮಾಡಿದ್ದು, ಆದರೆ ಇಂದಿನ ಪರಿಸ್ಥಿತಿ ನೋಡುವಾಗ, ಇದು ಮುಸಲನಿಯ ಸಮಾಧಿಸ್ಥಳವಾಗುವುದೋ ಎಂಬ ಅಂಜಿಕೆ ಹುಟ್ಟುತ್ತದೆ ಮೆಡಿಟರೇನಿಯನಿನಲ್ಲಿ ಇಟಲಿಯ ಹಿಂದಿನ ಆ ನೌಕಾಭದ್ರತೆ ಈಗ ಸಡಿಲಾದಂತೆ ತೋರುವುದು, ಅದರ ಪರಿಣಾಮವೆಂದು ಮಿತ್ರರು ಈಗ ಅಲ್ಲಿನ ದ್ವೀಪಗಳೊಂದೊಂದನ್ನೇ ಹಿಡಿದುಕೊಳ್ಳುತ್ತಿರುವರು ಮಿತ್ರರು ಯುರೋಪಿನ ಧಾಳಿಗೆ ಯೋಜನೆ ಮಾಡಿರುವರೆಂದು ಪ್ರಬಲ ವಾರ್ತೆ ಇದೆ ಅದು ಅಲ್ಲವಾದರೂ ಇಟಲಿ ಧಾಳಿ ಖಂಡಿತವಾಗಿ ಆದಲಿದೆಯೆಂದು ನಮ್ಮ ಕಣ್ಣಮುಂದೆಯೇ ಕಾಣುತ್ತಿದ್ದೇವೆ

ಇದು ದ್ವಿತೀಯರಂಗವೆ?

ಮಿತ್ರರು ಇಟಲಿಯ ದ್ವೀಪಗಳನ್ನು ಆಕ್ರಮಿಸಿದ್ದು, ಇಟಲಿಯ ಕಡೆ ಧಾವಿಸುತ್ತಿರುವುದಾಗೀಗ ಹೇಳುವುದು ಇದು ದ್ವಿತೀಯರಂಗವೇ ಎಂದು ಪ್ರಶ್ನೆ ಹುಟ್ಟುವುದು ಸಹಜ ದ್ವಿತೀಯರಂಗದ ಯೋಜನೆಗಳೆಲ್ಲ ಇಳಿವಟ್ಟಿವೆ, ಇನ್ನು ರಣಭೇರಿ ಹೊಡೆಯುವುದೊಂದೇ ತಡ ಎಂಬುದಾಗಿ, ವಾಶಿಂಗ್ಟನ್ ಪರಿಷತ್ತಿನಿಂದ ಚರ್ಚಿಲರು ಮರಳಿದ ಬಳಿಕ ಆ ಕಡೆಯಿಂದ ಸುದ್ದಿಗಳು ಹಾರಿಬರುತ್ತಿವೆ ಈ ಸುದ್ದಿಯನ್ನು ಕೇಳಿಕೊಂಡೇ, ದ್ವಿತೀಯ ರಂಗದ ಕುರಿತು ಆಗ್ರಹಗೊಂಡವರು ತಾವು ಸಮಾಧಾನಪಟ್ಟುಕೊಳ್ಳಬಹುದು, ಆದರೆ ಇಟಲಿಯ ಕೆಲವೇ ನಿಷ್ಪ್ರಯೋಜಕ ದ್ವೀಪಗಳನ್ನು ಹಿಡಿದುಕೊಂಡದ್ದರಿಂದ ಇದು ದ್ವಿತೀಯ ರಂಗವೆಂದು ಭಾವಿಸಿಕೊಳ್ಳುವುದು ಅಧಿಕ ಸಾಹಸವಾಗುವುದು. ಮಿತ್ರರು ಟುನಿಸಿಯ ಜಯದ ನಂತರ ಉತ್ತರ ಆಫ್ರಿಕದ ಕರಾವಳಿಯಲ್ಲಿ ಸಕಲ ಯುದ್ಧ ಸಿದ್ಧತೆ ಮಾಡಿರುವರೆಂದು ಹೇಳಲಾಗುತ್ತದೆ. ಮೂರು ಸಾವಿರ ಮೈಲು ವಿಸ್ತೀರ್ಣದ ಈ ಕರಾವಳಿಯಲ್ಲಿ ಅಟಲಾಸ್ ಗುಡ್ಡಗಳ ಬದಿಯಿಂದ ಓರಾಣಿನ ವರೆಗೆ ಪ್ರಬಲ ಸೇನೆ ಸಿದ್ಧವಾಗಿವೆಯಂತೆ! ಆದರೆ ಕೇವಲ ಸಿದ್ಧತೆಯಿಂದೆಯೆಂದ ಮಾತ್ರಕ್ಕೆ ದ್ವಿತೀಯ ರಂಗ ತೆರೆಯಿತೆಂದು ಹೇಗೆ ಹೇಳುವುದು?

ರಶ್ಯ ರಣರಂಗದಲ್ಲಿ

ಕಳೆದ ಮೂರು ತಿಂಗಳಿಂದ ಇದ್ದ ಮೌನವಿಂದು ಮುರಿದಿದೆ ಸಾವಿರ ಮೈಲು ವಿಸ್ತೀರ್ಣದ ರಣಭೂಮಿಯಲ್ಲಿ ರಶ್ಯ ಜರ್ಮನ್ ಸೇನೆಗಳ ಪ್ರಚಂಡ ಸಿದ್ಧತೆ ನಡೆದಿದೆ ರಶ್ಯ ವಿಮಾನ ಪಡೆಯು ಬಹಳ ರಭಸದಿಂದ ಕೆಲಸ ಮಾಡುತ್ತಿದೆ ಜರ್ಮನರೇನೂ ತಮ್ಮ ಮೂರು ತಿಂಗಳ ಸ್ತಬ್ಧತೆಗೆ ಕಾರಣವನ್ನು ಬೇರೆಯೇ ಹೇಳುತ್ತಿದ್ದಾರೆ, ಮುಂದಿನ ಮಹಾ ಯುದ್ಧಕ್ಕಾಗಿ ಸಿದ್ಧತೆ ಮಾಡಲು ಸಮಯಾವಕಾಶ ಬೇಕಂತೆ ಅವರಿಗೆ, ಆದ್ದರಿಂದ ರಶ್ಯ ರಣರಂಗದಲ್ಲಿ ಯುದ್ಧ ಮಾಡದೆ ಮುಂದುವರಿಸಿದ ಪ್ರತಿಯೊಂದು ನಿಮಿಷವೂ ತಮಗೆ ವಿಜಯವನ್ನು ತರುತ್ತದೆಯೆಂದು ಅವರ ಹೇಳಿಕೆ ಆದರೆ ರಶ್ಯನರ ವೀರಾವೇಶದೆದುರು ಜರ್ಮನರಿಗೆ ತಟಸ್ಥರಾಗದೆ ಉಪಾಯ ಬೇರಿರಲಿಲ್ಲವೆಂಬರೆ ಅದೂ ತಪ್ಪೆನಲಾಗುವುದಿಲ್ಲ ರಶ್ಯದ ರಕ್ತಸೇನೆಯು ಕೊನೆಯ ಹೋರಾಟ ಕೊಡಲು ಈಗ ಸಿದ್ಧವಾಗಿರುವುದು ಕಳೆದ ವಾರ ಕಲಿನಿನ್, ಕರ್ಸ್ಕ್, ಲಿಸಿಂಚಾನ್ಸ್ ಈ ಕಡೆಗಳಲ್ಲಿ ಜರ್ಮನರನ್ನು ರಶ್ಯನರು ಪ್ರಬಲರಾಗಿ ಪ್ರತಿಭಟಿಸಿದ್ದಾರೆ. ಜರ್ಮನರು ಕೂಬಾನ್ ರಣರಂಗದಲ್ಲಿ ೧,೦೦೦ ವಿಮಾನ ಸಹಿತರಾಗಿ ಬಂದು ಮಾಡಿದ ದಾಳಿಯನ್ನು ಹಿಮ್ಮೆಟ್ಟಿಸಿದ್ದಾರೆ. ರಶ್ಯನರು ಮುಂದೊತ್ತಿಬಂದ ಜರ್ಮನರನ್ನು ಹಿಂದಟ್ಟಿ, ಈಗ ತಾವೇ ಮುಂದೊತ್ತುವ ಕಾರ್ಯಕ್ರಮ ಕಲಿತಿದ್ದಾರೆ. ಮಿತ್ರರು ತಮ್ಮ ಸಾಹಸಕ್ಕೆ ಅನುಕೂಲವಾಗಿ, ಯುರೋಪಿನಲ್ಲಿ ದ್ವಿತೀಯ ರಣರಂಗ ತೆರೆಯುವರೆಂದು ಅವರ ಹಾರೈಕೆಯೂ ಇದೆ. ಮಿತ್ರರ, ಇಟಲಿ ಆಕ್ರಮಣ, ಯುರೋಪು ಧಾಳಿಗಳ ಆರ್ಭಟೆ, ಮೆಡಿಟರೇನಿಯನ್ ದ್ವೀಪಗಳಲ್ಲಿ ದೊರಕಿದ ಜಯ ಇವುಗಳಿಂದ ರಶ್ಯನರೀಗ ನಿಜವಾಗಿ ಹಿಗ್ಗಿರಲೇ ಬೇಕು!

ಸದ್ಯದ ಸುದ್ದಿಗಳು

ಲಿಪೆಂಡುಸಾದಿಂದ ೩೦ ಮೈಲು ದೂರವಿರುವ ಲಿನೋಸಾ ಎಂಬ ಇನ್ನೊಂದು ಇಟಲಿಯ ದ್ವೀಪವೂ ಲಿಪೆಂಡುಸಾದಿಂದ ಹತ್ತು ಮೈಲು ವಾಯುವ್ಯಕ್ಕಿರುವ ಲೆಂಪಿಯೋನಾ ದ್ವೀಪವೂ ಮಿತ್ರರ ವಶವಾಯಿತು ಸಿಸಿಲಿಯ ಮೇಲೆ ಭಯಂಕರ ಧಾಳಿ ನಡೆಯುತ್ತಿದೆ ಇಂಗ್ಲಂಡಿನ ಪೂರ್ವ ಕರಾವಳಿ ಪಟ್ಟಣಗಳ ಮೇಲೆ ಶತ್ರು ದಾಳಿ ನಡೆಯುತ್ತಿದೆ 'ಹ್ಯೂಪೆ ಮತ್ತು ಹುನಾನ್ ಪ್ರಾಂತಗಳಿಗೆ ಚೀನೀಯರಿಗೆ ವಿಜಯ ದೊರಕಿದೆ ಜರ್ಮನಿಯ ಕೈಗಾರಿಕೆಯ ಕೇಂದ್ರವಾದ ರ್ಹೂರ್ ಪ್ರದೇಶದ ಮೇಲೆ ಮಿತ್ರರು ಧಾಳಿಯಿಟ್ಟ ಫಲವಾಗಿ ಜರ್ಮನ್ ಪ್ರಚಾರ ಮಂತ್ರಿ ಡಾ। ಗೊಬೆಲ್ಸನ ನಿವಾಸವು ಮತ್ತು ಇತರ ಕಟ್ಟಡಗಳು ಧ್ವಂಸವಾಗಿವೆಯೆಂದು ಹೇಳಲಾಗುತ್ತದೆ ರಶ್ಯಾ ಮತ್ತು ಪಶ್ಚಿಮ ಚೀನಾದಿಂದ ಸ್ವತಂತ್ರ ಚೀನದ ರಾಜಧಾನಿ ಚುಂಗ್‌ಕಿಂಗನ್ನು ಬೇರ್ಪಡಿಸಲೆಂದು ಜಪಾನಿಯರು ಮಂಗೋಲಿಯವನ್ನು ಆಕ್ರಮಿಸಬಹುದೆಂಬುದಾಗಿ ನ್ಯೂಯಾರ್ಕ್ ಹೆರಾಲ್ಡ್ ಟ್ರಿಬ್ಯೂನ್ ಪತ್ರಿಕೆ ಬರೆಯುತ್ತದೆ ಜಪಾನು ಸೈಬೀರಿಯಾ ಆಕ್ರಮಿಸಲು ಯೋಚಿಸಬಹುದೆಂದೂ, ಸೈಬೀರಿಯಾಕ್ಕೆ ಜಪಾನು ಧಾಳಿಯಿಟ್ಟರೆ ರಶ್ಯವು ಅದನ್ನು ಪ್ರತಿಭಟಿಸದಿರಲಾರದೆಂದೂ ಅದರಲ್ಲಿ ಹೇಳಲಾಗಿದೆ ಬರ್ಮಾ ಕ್ಷೇತ್ರದಲ್ಲಿ ಮಿತ್ರ ವಿಮಾನಗಳು ಅಕ್ಯಾಬಿನ ಮೇಲೆ ಧಾಳಿ ನಡೆಸಿದವು ರಶ್ಯ ರಣಭೂಮಿಯಲ್ಲಿ ಈಗ ಸ್ತಬ್ಧತೆ ನಿಂತಿದೆ; ಯುದ್ಧ ಚಟುವಟಿಕೆ ಪ್ರಾರಂಭವಾಗಿರುವುದು ರೋಸ್ತೋವಿನ ಬಳಿ ಜರ್ಮನರು ಆಕ್ರಮಣವೊಂದನ್ನು ಕೈಕೊಂಡರು. ಇದು ಜರ್ಮನರ ತೀವ್ರ ಧಾಳಿಯ ಪೂರ್ವ ಸೂಚನೆಯೆಂದು ಹೇಳಲಾಗಿದೆ



ಇದು ಮಗುವಿನ ಚರ್ಮವನ್ನು
ತಂಪಾಗಿಯೂ, ಮೃದುವಾಗಿಯೂ,
ಇಡುವುದು
ಮಕ್ಕಳಿಗೆ ಕುಟಿಕೂರ ಟಾಲ್ಕಮ್ ಪೌಡರನ್ನೇ
ಉಪಯೋಗಿಸಿರಿ ಅಷ್ಟು ಸುಖಕರ- ಅಷ್ಟು
ಚರ್ಮ ಮೃದುಕರ-

ಕುಟಿಕೂರ ಟಾಲ್ಕಮ್ ಪೌಡರ್.

CUTICURA TALCUM POWDER

WANTED

for

The Srimath Anantheshwar Temple, Manjeshwar.

A qualified Accountant on the revised scale of pay Rs. 35-2-45-1-50 Probationary period 2 years. Security of Rs. 300 required.

Applications with testimonials to reach the undersigned before 30-6-43

(Sd.) B. N. Baliga,
Manager.

NOTICE

In the Court of the District Munsiff Mangalore

S C 127/43.

Between —
M Vaman Nayak—*Plaintiff*
and
N Upendra Nayak – *Defendant*

To the Defendant —

Sri N Upendra Nayak, Agent New Guardian of India Insurance Co, Panemangalore, P O S. Kanara

Take notice that the plaintiff has filed a suit against you for realisation of a sum of Rs 95-1-1 with interest and costs of this suit, which stands posted to 24 6 1943 at 11 A m You are hereby required to appear before this Court on that day and contest the suit, failing which it will be disposed off exparte

(By order)

Mangalore 5-6-1943 M Gopalakrishna, *Advocate for Plaintiff*

NOTICE

In the Court of the District Munsif of Kasaragod.

O P No 123/1943

Between
Narayana Kamada—*Petitioner*
and
Seethama and another
—*Respondents*

Notice to all those whom it may concern

The aforesaid petitioner has applied to the Court for the issue of a Succession Certificate in his favour for recovering the balance amount due under the decree in O S No 605/1938 obtained by the now deceased Devaki Amma, widow of Gopala Munnooraja of Muttathodi village, Kasaragod Taluk, in pursuance of a will left by the deceased in favour of the petitioner The petition stands posted to 21-6-1943 for final disposal. Those who propose to oppose the grant of the Succession Certificate may appear in court on that day in person or through duly authorized pleader, failing which the matter will proceed ex-parte.

Kasaragod 15-6-1943 B. S. Kakkilaya, Advocate for Petitioner

ಸ್ವದೇಶಾಭಿಮಾನಿ

ತಾರೀಕು 18—6—1943

ವ್ಯರ್ಥ ಪ್ರಯತ್ನ

ಭಾರತದ ಕೆಲವೊಂದು ಪಕ್ಷ, ಸಂಗಡಗಳನ್ನು ಹಿಡಿದು, 'ಕಾಂಗ್ರೆಸ್ ವಿರುದ್ಧ' ನಿಲ್ಲಿಸುವ ವ್ಯರ್ಥ ಪ್ರಯತ್ನವೊಂದು ನಡೆಯುತ್ತಿದೆ; ಆ ಮೂಲಕ ಅಧಿಕಾರವನ್ನು ಬ್ರಿಟನು ತನ್ನ ಕೈಯ್ಯಲ್ಲಿಯೇ ಉಳಿಸಿಕೊಳ್ಳಲು ಯತ್ನಿಸುತ್ತಿದೆ. ಕಾಂಗ್ರೆಸ್ ಬಹುಮತವುಳ್ಳ ಪ್ರಾಂತಗಳಲ್ಲಿ, ಕಾಂಗ್ರೆಸ್ ಮಂತ್ರಿಮಂಡಳವಿದ್ದ ಪ್ರಾಂತಗಳಲ್ಲಿ ಬಹುಮತದ ಕಾಂಗ್ರೆಸನ್ನು ಬಿಟ್ಟು, ಅಲ್ಪಸಂಖ್ಯಾಕ ಪಕ್ಷಗಳನ್ನು ಹಿಡಿದು ಮಂತ್ರಿಮಂಡಳಗಳೇರ್ಪಡುತ್ತಿವೆ.

ಭಾರತದ ಬಿಕ್ಕಟ್ಟು ಇದರಿಂದ ಪರಿಹಾರವಾದೀತೆಂದು ಬ್ರಿಟನು ಬಗೆದಿದೆಯೆ? ಭಾರತದ ರಾಜಕೀಯ ಬಿಕ್ಕಟ್ಟನ್ನು ತಾವಾಗಿ ಬಗೆಹರಿಸುವುದಿಲ್ಲವೆಂದು ದೃಢನಿಶ್ಚಯ ಮಾಡಿದ ಅಮೆರಿ ಕಂಪೆನಿಯವರ ಸಾಹಸವು ರಾಷ್ಟ್ರೀಯ ವಿಚಾರವಾಹಿನಿಯೆದುರು ತಲೆಬಗ್ಗಿಸಬೇಕಾಯಿತು; ಗವರ್ನರರ ಆಡಳಿತವನ್ನು ನಡೆಸುವ ಸಂದರ್ಭದಲ್ಲಿ ಅಮೆರಿಕಾ ಮೊದಲಾದಡೆಗಳಿಂದ ಬಂದ ಟೀಕೆಗಳಿಗೆ ಕಿವಿಗೊಡಬೇಕಾಯಿತು. ಕಾಂಗ್ರೆಸ್ಸನ್ನು ಸೇರಿಸಿ ರಾಷ್ಟ್ರೀಯ ಸರಕಾರ ಸ್ಥಾಪಿಸಬೇಕೆಂಬ ಮಾತಿಗೆ ಮನ್ನಣೆ ಕೊಡಬೇಕಾಯಿತು. ಈ ಒತ್ತಾಯಕ್ಕೆ ಬಗ್ಗಿ, ಬ್ರಿಟನು ಇಂದು ಈ ತರದ ಹೊಸ ವೇಷವನ್ನು ತಳೆದಿದೆ. ಹೀಗೆ, ಅಂತರಾಷ್ಟ್ರೀಯ ಜಗತ್ತಿನಲ್ಲಿ ಭಾರತವು ಭಾರತೀಯರಿಂದ ಆಳಲ್ಪಡುತ್ತಿದೆಯೆಂದು ಅಭಿಪ್ರಾಯ ಸ್ಥಾಪಿಸುವ ವ್ಯರ್ಥ ಪ್ರಯತ್ನ ಮಾಡಲ್ಪಟ್ಟಿದೆ. ಈ ಮೂಲಕ ಅಧಿಕಾರವನ್ನು ತನ್ನ ಕೈಯ್ಯಲ್ಲಿಯೇ ಇಟ್ಟುಕೊಳ್ಳಲೂ ಆಗುತ್ತದೆ.

ದೌರ್ಭಾಗ್ಯದಿಂದ ಮುಸ್ಲಿಂ ಲೀಗು ಇಂದು ಈ ಮಾಟಕ್ಕೆ ತಲೆದೂಗಿಸಿದೆ, ರಾಷ್ಟ್ರೀಯ ಮುಖಂಡರನ್ನು ಸೆರೆಮನೆಗೆ ಸೇರಿಸುವುದರಲ್ಲಿ, ಆ ಮೂಲಕ ಜನತಾಭಿಪ್ರಾಯವನ್ನು ರಾಷ್ಟ್ರರಕ್ಷಣೆಗೆ ಬೆಂಬಲ ಕೊಡುವಂತೆ ಮಾಡದಿರುವ ಕಾರ್ಯದಲ್ಲಿ ಮುಸ್ಲಿಂ ಲೀಗೂ ಭಾಗವಹಿಸಿದಂತಾಗಿದೆ. ಪ್ರಾಂತೀಯ ಆಡಳಿತವನ್ನು ಕೈಗೆತೆಗೆದುಕೊಂಡ ಮುಸ್ಲಿಂ ಲೀಗು, ವಿವೇಕವುಳ್ಳದ್ದಾದರೆ, ಎದೆಗಾರಿಕೆಯಿದ್ದರೆ ರಾಷ್ಟ್ರಮುಖಂಡರನ್ನು ಬಿಡುಗಡೆ ಮಾಡಿಸಿ ರಾಷ್ಟ್ರೀಯ ಐಕ್ಯ ಸಾಧಿಸಿ, ಭಾರತದ ಬಿಕ್ಕಟ್ಟನ್ನು ಬಗೆ ಹರಿಸಲು ನೆರವಾಗಿ, ಆ ಮೂಲಕ ಜನತಾಭಿಪ್ರಾಯವನ್ನು ರಾಷ್ಟ್ರರಕ್ಷಣೆಗಾಗಿ ಹುರಿದುಂಬಿಸುವ ಕೆಲಸ ಮಾಡಬೇಕಿತ್ತು; ಅದು ನಿಜವಾದ ಪೌರುಷವಿತ್ತು.

ಬ್ರಿಟನು, ಅಂತರಾಷ್ಟ್ರೀಯ ವಿಚಾರವಂತರ ಕಣ್ಣಿಗೆ ಮಣ್ಣೆರಚುವ ಈ ವ್ಯರ್ಥಪ್ರಯತ್ನಮಾಡುವುದರಲ್ಲಿ ಅರ್ಥವಿಲ್ಲ. ಜನತೆಯ ಬೆಂಬಲವಿಲ್ಲದ ಮಂತ್ರಿಮಂಡಳಗಳೇರ್ಪಟ್ಟು ಪ್ರಯೋಜನವಿಲ್ಲ. ಕಾಂಗ್ರೆಸಿನಂಥಾ ಪ್ರಬಲ ರಾಜಕೀಯ ಪಕ್ಷವನ್ನು ಹೊರಹಾಕಿ ಭಾರತದ ಬಿಕ್ಕಟ್ಟನ್ನು ಬಗೆಹರಿಸುವುದೂ ಸಾಧ್ಯವಿಲ್ಲ. ಹಿಂದು ಮಹಾಸಭೆಯೂ ಇಂಥಾ ಮಂತ್ರಿಮಂಡಳದಲ್ಲಿ ಮುಸ್ಲಿಂ ಲೀಗಿನೊಡನೆ ಸಹಕರಿಸಿ ಸೇರುತ್ತಿರುವುದು ವಿಚಿತ್ರವಾಗಿದೆ. ಇಂಥಾ ವ್ಯರ್ಥ ಪ್ರಯತ್ನವನ್ನು, ಕೇವಲ ಕಣ್ಣಿಗೆ ಮಣ್ಣೆರಚುವ ಕಾರ್ಯವನ್ನು ಯಾರು ಮಾಡಿದರೂ, ಅದರಿಂದ ಜನತೆಯ ವಿಶ್ವಾಸ ಪಾತ್ರರಾಗಲು ಸಾಧ್ಯವಿಲ್ಲ.

ಕರುಳಿನ ಕೂಗು!

ನಮ್ಮ ನೆರೆಕರೆಯ ಜಿಲ್ಲೆಗಳಿಂದ ಬರಗಾಲದ, ಕ್ಷಾಮ ಪೀಡಿತರ, ಕರುಳಿನ ಕೂಗು ಕೇಳಿಬರುತ್ತಿದೆ. ಬಿಜಾಪುರದಲ್ಲಿ ಭೀಕರ ಬರಗಾಲ ಬಂತು; ಊರಿಗೆ ಊರೇ ಕಂಗೆಟ್ಟಿತು; ಈಗಲೂ ಕಂಗೆಡುತ್ತಲೇ ಇದೆ. ಜನ, ಜಾನುವಾರುಗಳು ಹೊಟ್ಟೆಗಿಲ್ಲದೆ ಹಸಿವಿನ ಬೆಂಕಿಗೆ ಬೆಂದು ಸತ್ತು ಹೋದ ದೃಶ್ಯ ಅಲ್ಲಿನದು. ಅಷ್ಟರಲ್ಲಿ ಅಧಿಕಾರಿಗಳೂ, ಅನಧಿಕಾರಿಗಳೂ ಅಲ್ಲಿಗೆ ಧಾವಿಸಿ ತಮ್ಮಿಂದ ಸಾಧ್ಯವಾದ ಸಹಾಯ ಮಾಡಿದರು, ಮಾಡುತ್ತಿದ್ದಾರೆ.

ಈಗ ನಮ್ಮ ಸಮೀಪದ ಜಿಲ್ಲೆ ಮಲಬಾರಿನಿಂದ ಪುನಃ ಕರುಳಿನ ಕೂಗು ಬಂದಿದೆ. ಅಕ್ಕಿಯಿಲ್ಲದೆ, ಅನ್ನವಿಲ್ಲದೆ ಜನ ಕಂಗಾಲಾಗಿದ್ದಾರೆ; ಆಹಾರ ಸಿಗದೆ, ಎಲೆ ಹುಲ್ಲುಗಳನ್ನೇ ತಿಂದು ಕೆಲವು ಕಡೆಗಳಲ್ಲಿ ಜೀವನ ಧಾರಣೆ ಮಾಡುತ್ತಿದ್ದಾರೆಂಬೀ ಹೃದಯದ್ರಾವಕ ವಾರ್ತೆ ಬಂದಿದೆ; ಇದೇ ರೀತಿ ಎಷ್ಟು ದಿನ ಜೀವಿಸಿರಬಹುದು? ಇದಕ್ಕೆ ನಿವೃತ್ತಿಯಾದರೂ ಏನು?

ಬಳ್ಳಾರಿ ಜಿಲ್ಲೆಯಿಂದಲೂ ಇದೇ ತರದ ವರದಿ ಬಂದಿತ್ತು. ಅಲ್ಲಿಯೂ ಆಹಾರ ಸಿಗದೆ ಜನ ನರಳುತ್ತಿದ್ದಾರೆ. ಇನ್ನು ನಮ್ಮ ಜಿಲ್ಲೆಯ ಪಾಡಾದರೂ ಏನು? ಅಕ್ಕಿಗೆ ಕ್ರಯ ಹೆಚ್ಚಾಗುತ್ತಾ ಹೋದಂತೆ, ಬಡವರು ಒಪ್ಪೊತ್ತು ಕೂಡಾ ಊಟಮಾಡುವುದಿಲ್ಲವೆಂದೇ ಅರ್ಥವಲ್ಲವೆ? ಬಡವರೂ ಕೂಲಿಗಾರರು ಹೀಗೆ ಆಹಾರ ಸಾಮಗ್ರಿಗಳಿಗೆ ಬೆಲೆ ಏರಿದರೆ ಒಪ್ಪೊತ್ತಿನ ಗಂಜಿಯನ್ನಾದರೂ ಹೇಗೆ ಕುಡಿದಾರು?

ನಮ್ಮ ಸುತ್ತುಮುತ್ತು ಕರುಳಿನ ಕೂಗು ಭೀಷಣ ಭಯಾನಕವಾಗಿ ಎದ್ದಿದೆ. ಹಲವು ಮಂದಿ ರಾಷ್ಟ್ರದ ಮುಂದಾಳುಗಳು ಸೆರೆಮನೆ ಸೇರಿದ್ದಾಗ, ಇಂಥಾ ಸಂಕಷ್ಟ ಕಾಲ ಬಂದಿದೆ. ಇಂಥಾ ಸಂದರ್ಭದಲ್ಲಿ ಯಾರೂ ಸುಮ್ಮಗಿರಬಾರದು? ಮನುಷ್ಯನು ಹೊಟ್ಟೆಗಿಲ್ಲದೆ ನರಳಿ ಸಾಯುವ ದೃಶ್ಯ ನೋಡುವುದು ಸಾಧ್ಯವಿಲ್ಲ; ಇದಕ್ಕೆ ತಕ್ಕ ಪರಿಹಾರ ಕಾರ್ಯ, ಮುಂಜಾಗ್ರತೆ ವಹಿಸಿಕೊಳ್ಳಲೇಬೇಕು. ರಾಷ್ಟ್ರದ ಮುಂದಾಳುಗಳು ಸೆರೆಮನೆ ಸೇರಿರುವೀ ಸಂದರ್ಭದಲ್ಲಿ, ಪರಿಹಾರ ಕಾರ್ಯದ ಕುರಿತು ಅಧಿಕಾರೀ ವರ್ಗದವರ ಜವಾಬ್ದಾರಿ ಬಹಳವಿದೆ. ಸಾರ್ವಜನಿಕ ಸೇವೆ ಮಾಡಲು ಯಥಾರ್ಥ ಮನಸ್ಸಿದ್ದವರಿಗೆ ಇದೊಂದು ಪುಣ್ಯ ಸಂಧಿಯಾಗಿದೆ.

ಸ್ವದೇಶ ಸಮಾಚಾರ

ಜೈಲುಗಳ ಲಾಠೀ ಪೆಟ್ಟು

ಕೊಟ್ಟ ವಿಚಾರವಾಗಿ, ಮೈಸೂರಿನ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಸದಸ್ಯರು ಪ್ರಶ್ನೆ ಕೇಳಿದರು, ಬೆಂಗಳೂರು ಸೆಂಟ್ರಲ್ ಜೈಲು, ಮೈಸೂರು ಸಬ್ ಜೈಲು, ಚಿಕ್ಕ ಮಂಗಳೂರು ಈ ಮೂರು ಕಡೆಗಳಲ್ಲಿ ರಾಜಕೀಯ ಕೈದಿಗಳಿಗೆ ಲಾಠೀ ಪ್ರಯೋಗ ಮಾಡಲಾಗಿದೆಯೆಂದು ಸರಕಾರದ ಪರವಾಗಿ ಲಾ ಸೆಕ್ರೆಟರಿಯವರೇ ಒಪ್ಪಿಕೊಂಡರು. ೧೯೪೩ನೇ ಎಪ್ರಿಲ್ ೨೬ರಂದು ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಲಾಠೀ ಪ್ರಯೋಗವಾಗಿ ೭ ಜನರಿಗೆ ಬಹಳ ಗಾಯವಾಗಿದೆಯೆಂದೂ ಮೈಸೂರು ಜೈಲಿನಲ್ಲಿ ೧೯೪೨ನೇ ಅಕ್ಟೋಬರ ೨೭ಕ್ಕೆ ಲಾಠೀ ಪ್ರಯೋಗವಾಗಿ ೨೨ ಮಂದಿಗೆ ಗಾಯವಾಗಿದೆಯೆಂದೂ, ಚಿಕ್ಕಮಗಳೂರಲ್ಲಿ ೧೯೪೨ ಅಕ್ಟೋಬರ್ ೨೮ಕ್ಕೆ ಮತ್ತು ಆ ತಾರೀಖಿನ ಹಿಂದಿನ ಎರಡು ದಿನಗಳಲ್ಲಿ ಲಾಠೀ ಪ್ರಯೋಗವಾಗಿ ಇಬ್ಬರಿಗೆ ಗಾಯವಾಗಿತ್ತೆಂದೂ ಸರಕಾರ ಹೇಳಿಕೆಯಿತ್ತಿದೆ!

ಈಸೂರು ಕೊಲೆ ಮೊಕದ್ದಮೆ

ಯಲ್ಲಿ ಕೆಲವರನ್ನು ಹಿಂದೆಯೇ ನೇಣಿಗೇರಿಸಿಬಿಟ್ಟದಷ್ಟೆ? ಆ ಮೇಲೆ ಕೆಲವರನ್ನು ಬಂಧಿಸಿ ವಿಚಾರಣೆ ನಡೆಯಿತು. ಅವರಲ್ಲಿ ಸಾಹುಕಾರ ರುದ್ರಪ್ಪರನ್ನು ಬಿಟ್ಟು, ಶಾಂತ ವೀರಪ್ಪ, ಕೊಳೆ ಬಸಯ್ಯ, ರಂಗಪ್ಪ, ಇವರಿಗೆ ಕ್ರಮವಾಗಿ ೪, ೬, ೧೦ ವರ್ಷಗಳ ಶಿಕ್ಷೆ ವಿಧಿಸಿರುವರು

ಅಮೆರಿ ಮೇಲೆ ದಾವೆ

ತಮ್ಮನ್ನು ಐ. ಸಿ. ಎಸ್. ಕೆಲಸದಿಂದ ತೆಗೆದು ಹಾಕಿದ್ದು ನ್ಯಾಯವಲ್ಲವೆಂದು ಶ್ರೀ. ಐ. ಎಂ. ಲಾಲ್, ಐ. ಸಿ. ಎಸ್, ಇವರು ಭಾರತ ಮಂತ್ರಿ ಅಮೆರಿಯವರ ಮೇಲೆ ದಾವೆ ಹೂಡಿರುವರು. ಲಾಹೋರ್ ಹೈಕೋರ್ಟಿನ ಡಿವಿಜನಲ್ ಬೆಂಚ್ ಕೋರ್ಟಿನಲ್ಲಿ ಇದಕ್ಕೆ ಸಂಬಂಧಪಟ್ಟ 'ಇಶ್ಯು'ಗಳನ್ನು 'ಫ್ರೇಮ್' ಮಾಡಲಾಯಿತು.

"ಕಾಂಗ್ರೆಸೆಂದರೆ ಭಾರತ: ಭಾರತವೆಂದರೆ ಕಾಂಗ್ರೆಸು"

ಜಫರುಲ್ಲರಿಗೆ ಚಿಯಾಂಗರ ಉತ್ತರ

ಸರ್ ಜಫರುಲ್ಲರು, ಹಿಂದೆ ಚೀನದಲ್ಲಿ ಭಾರತದ ರಾಯಭಾರಿಯಾಗಿದ್ದರು. ಒಮ್ಮೆ ಚೀನದ ದಳಪತಿ ಚಿಯಾಂಗ್ ಕೈಶೇಕರೊಡನೆ, ಭಾರತದ ವಿಚಾರ, ಗಾಂಧಿ, ನೆಹರು, ಜಿನ್ನಾ ಮೊದಲಾದವರುವಿಚಾರ ಮಾತನಾಡುತ್ತಾ ಇರುವಾಗ, ಜಫರುಲ್ಲರು ಹೇಳಿದರು: 'ಕಾಂಗ್ರೆಸು ಭಾರತದಲ್ಲಿ ದೊಡ್ಡ ರಾಜಕೀಯ ಪಕ್ಷವಾಗಿದ್ದರೂ, ಅದೊಂದೇ ಪಕ್ಷ ಅಲ್ಲಿರುವುದಲ್ಲ, ಮುಸ್ಲಿಂ ಲೀಗು, ಹಿಂದು ಮಹಾಸಭೆ ಇವುಗಳೂ ಇವೆ' ಎಂದು. ಚೀನದ ದಳಪತಿ ಈ ಮಾತನ್ನು ಶಾಂತ ರೀತಿಯಿಂದ ಕೇಳಿ ಕೊನೆಗೆ ನಗುತ್ತಾ ಹೇಳಿದರು. 'ನನ್ನ ಅಂತರ್ಯದಲ್ಲಿ ಕಾಂಗ್ರೆಸು ಎಂದರೆ ಭಾರತ; ಭಾರತವೆಂದರೆ ಕಾಂಗ್ರೆಸು ಎಂದು ಇರುವುದು' ಎಂದು. ಚೀನದ ದಳಪತಿಗೆ ಕಾಂಗ್ರೆಸಿನ ವಿಷಯ, ಗಾಂಧಿಜಿ, ನೆಹರು ಮೊದಲಾದ ರಾಷ್ಟ್ರವೀರರ ವಿಷಯ ಉನ್ನತಾಭಿಪ್ರಾಯವಿದೆ.

ಹೊಸ ಮಂತ್ರಿಮಂಡಳಗಳಲ್ಲಿ ಹಿಂದು ಮಹಾಸಭೆ

ಯ ಧೋರಣವೇನೆಂದು ವೀರ ಸಾವರ್ಕಾರರು ಸ್ಪಷ್ಟಪಡಿಸುತ್ತಾರೆ. 'ಹಿಂದು ಅಲ್ಪ ಸಂಖ್ಯಾಕ ಪ್ರಾಂತಗಳಲ್ಲಿ ಮುಸ್ಲಿಂ ಮಂತ್ರಿಮಂಡಳ ಸ್ಥಾಪನೆಯು ಖಂಡಿತ ಆಗುವುದಿದ್ದರೆ, ಹಿಂದು ಮಹಾ ಸಭೆಯವರು ಹಿಂದು ಹಿತ ಸಂರಕ್ಷಣೆಯ ದೃಷ್ಟಿಯಿಂದ ಅದರಲ್ಲಿ ಸೇರಬೇಕು; ಅದಷ್ಟು ಹೆಚ್ಚು ಸ್ಥಳ ದೊರಕಿಸಿಕೊಳ್ಳಬೇಕು. ಆದರೆ ಪಾಕಿಸ್ತಾನ ಮತ್ತು ಸ್ವಯಂನಿರ್ಣಯ ತತ್ವಗಳಿಗೊಪ್ಪಬಾರದು; ಇದಕ್ಕಾಗಿ ರಾಜಿ ಕೊಡಬೇಕಾಗಿಲ್ಲ. ಮುಖ್ಯ ಮಂತ್ರಿ ಅಥವಾ ಹೆಚ್ಚು ಮಂದಿ ಮುಸ್ಲಿಂ ಮಂತ್ರಿಗಳಿದ್ದ ಮಾತ್ರದಿಂದ ಅದು ಮುಸ್ಲಿಂ ಲೀಗ್ ಮಂತ್ರಿಮಂಡಳವಾಗುವುದಿಲ್ಲ; ಸಮ್ಮಿಶ್ರ ಮಂತ್ರಿಮಂಡಳವಾಗುವುದು. ಹಾಗೆಯೇ ಹಿಂದು ಬಹುಸಂಖ್ಯಾಕ ಪ್ರಾಂತಗಳಲ್ಲಿ ಹಿಂದು ಮಹಾಸಭೆಯವರು ಹಾಗೂ ಇತರರು ಮಂತ್ರಿಮಂಡಳ ರಚಿಸಿ ಅದರಲ್ಲಿ ಸೇರಲು ಮುಸ್ಲಿಂ ಲೀಗಿನವರನ್ನು ಕೇಳಿಕೊಳ್ಳಬೇಕು.'' ಹೀಗೆಂದು ಸಾವರ್ಕಾರ್ ವಿಶದಪಡಿಸುವರು.

ಗಾಂಧಿ—ಜಿನ್ನಾ ಭೇಟಿ ಪ್ರತಿಬಂಧ ಖಂಡನೆ

ನಿವೃತ್ತ ಐ. ಸಿ. ಎಸ್. ಅಧಿಕಾರಿ

ನಿವೃತ್ತ ಐ. ಸಿ. ಎಸ್. ಅಧಿಕಾರಿ ಶ್ರೀ. ಪರ್ಸೀವ್ಯಾಕ್ವೀನರು ಒಂದು ಪ್ರಕಟಣೆ ಹೊರಡಿಸಿ, ಗಾಂಧಿ ಜಿನ್ನಾಭೇಟಿಯಾಗಲು ಸರಕಾರವು ತಡೆದ ವಿಷಯ ಖಂಡಿಸಿದ್ದಾರೆ. 'ಗಾಂಧಿಜಿ ಕ್ರಾಂತಿಕಾರರೆಂದು ಹೇಳುವುದಾದರೂ, ಜಿನ್ನರು ಸಂಶಯವಿಲ್ಲದ 'ದೇಶಭಕ್ತ'ರಿರುವಾಗ ಅವರೊಡನೆ ಭೇಟಿಯಾಗಲು ಯಾಕೆ ನಿರಾಕರಿಸಬೇಕೋ? ಸರಕಾರವು ಸಂಧಾನ ಮಾಡಲು ಆಯಶಸ್ವಿಯಾದಲ್ಲಿ ಜಿನ್ನಾರು ಆಗುತ್ತಿರಲಿಲ್ಲವೆ? ಸರಕಾರವೀಗ ತನ್ನ ಪ್ರತಿಷ್ಠೆಯ ಅಹಂಕಾರವನ್ನೀಗ ಸ್ವಲ್ಪ ಬಿಡಬೇಕು. ಹಿಂದುಸ್ಥಾನ ಸರಕಾರದವರು, ವಿಶೇಷತ ಹಿಂದೀ ಸದಸ್ಯರು ಬಿಕ್ಕಟ್ಟು ಬಿಡಿಸಲು ಏನಾದರೂ ಯತ್ನಿಸುವರೆಂದು ವಿಶ್ವಾಸ ಹುಟ್ಟಬೇಕಾದರೆ, ಅವರು ತಾವಾಗಿಯೇ ಏನಾದರೂ ಮಾಡಬೇಕು, ಅಲ್ಲವಾದರೆ ಬೇರೆಯವರನ್ನೇನಾದರೂ ಮಾಡಬಿಡಬೇಕು. ಇಲ್ಲದಿದ್ದರೆ ಇಡೀ ಆಡಳಿತವೇ ಕುಸಿದು ಬೀಳುವುದು' ಎಂದು ಅವರು ಹೇಳುತ್ತಾರೆ.

ಕರ್ನಾಟಕ

ಚನ್ನಪ್ಪವಾಲಿಯವರ ಬಂಧನ!

೫ ಸಾವಿರ ರೂಪಾಯಿ ಇನಾಮಿತ್ತು!

ಸಂಪಗಾವಿಯ ಶ್ರೀ ಚನ್ನಪ್ಪವಾಲಿಯವರನ್ನು ಬೆಂಗಳೂರಿನ ಅರಳೀ ಪೇಟೆಯಲ್ಲಿ ತಾ. ೧೧ ರಂದು, ಅಲ್ಲಿನ ಫೊಟೋಗ್ರಾಫರ್ ಗುರುಲಿಂಗಪ್ಪರ ಮನೆಯಲ್ಲಿ ಇನ್‌ಸ್ಪೆಕ್ಟರು ನಾರಾಯಣಯ್ಯರು ಮತ್ತು ಕೆಂಟೋನ್‌ಮೆಂಟ್ ಸಿ. ಐ. ಡಿ. ಯವರು ಸೆರೆಹಿಡಿದರು. ಅವರನ್ನು ಸೆಂಟ್ರಲ್ ಜೈಲಿನಲ್ಲಿಟ್ಟಿದ್ದು ಇವರೊಂದಿಗೆ ಶ್ರೀ. ಎಲ್. ಎನ್. ಚಂದೂರರೂ ಬಂಧಿಸಲ್ಪಟ್ಟಿದ್ದಾರೆ. ವಾಲಿಯವರನ್ನು ಹಿಡಿದುಕೊಟ್ಟವರಿಗೆ ರೂ. ೫೦೦೦ ಇನಾಮು ಇಡಲಾಗಿತ್ತು.

'ವಿಶ್ವಕರ್ನಾಟಕ'ಕ್ಕೆ ನೋಟೀಸು!

ಬೆಂಗಳೂರಿನ 'ವಿಶ್ವಕರ್ನಾಟಕ'ದ ಎಪ್ರಿಲ್ 2 ಹಾಗೂ 6ನೇ ತಾರೀಕಿನ ಸಂಚಿಕೆಗಳಲ್ಲಿ ಮೈಸೂರು ಮಂತ್ರಿಮಂಡಳ ರಚನೆಯ ವಿಷಯ ಆಕ್ಷೇಪಾರ್ಹ ಲೇಖನ ಪ್ರಸಿದ್ಧಿಸಿದರೆಂಬ ಆರೋಪದಲ್ಲಿ, ಈಗ ಠೇವು ಇರುವ ರೂ. ೧೦೦೦ನ್ನು ಜಪ್ತಿಮಾಡಿ ಹೊಸ ಠೇವು ಯಾಕೆ ಕೇಳಬಾರದೆಂದು ಅದಕ್ಕೆ ನೋಟೀಸು ಕೊಡಲಾಗಿದೆ.

ಮಂಗಳೂರು

ಹರಿಕಥಾ—ಸಪ್ತಾಹ

ಸ್ಥಳೀಯ ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ಶ್ರೀ. ಬಿ. ಲಕ್ಷ್ಮಣದೇವ ವಿದ್ಯಾರ್ಥಿಯವರು 7 ದಿನಗಳ ತನಕ 'ಹರಿಕಥೆ ಸಪ್ತಾಹ'ವನ್ನು ಜರಗಿಸಿ ಹಿಂದೂ ಸಂಘಟನೆಯ ಅವಶ್ಯಕತೆ, ಹಿಂದೂ ಮಹಾಸಭೆಯ ಧ್ಯೇಯ ಮೊದಲಾದ ವಿಷಯಗಳನ್ನು ಸವಿಸ್ತಾರವಾಗಿ ವಿವರಿಸಿದರು. ತಾ. 11ರಲ್ಲಿ ಶ್ರೀ. ವಿಠೋಭಾ ಮಂದಿರದಲ್ಲಿಯೂ 'ಕೈಕೇಯಿ ಸಾಮ್ರಾಜ್ಯ'ವೆಂಬ ಕಥೆಯನ್ನು ಮಾಡಿದರು.

ಮೂಲ್ಕಿ

ಇಲ್ಲಿಯ ಯೂನಿಯನ್ ಕ್ಲಬ್ಬಿನ ೨೬ನೇ ವಾರ್ಷಿಕೋತ್ಸವವು ಮತ್ತು ದಿವಂಗತ ಡಾ. ಬೋಳ ಶ್ಯಾಮರಾಯರ ಭಾವಚಿತ್ರ ಅನಾವರಣೋತ್ಸವವು ತಾ. ೧೬ರಂದು ಜರಗಿತು.

ಜಿಲ್ಲಾ ಸಮಾಚಾರಗಳು

ಮಂಗಳೂರು

ಕೋರ್ಟು ಕಚೇರಿ

ಜಿಲ್ಲಾ ಜಡ್ಜರಾದ ಶ್ರೀ. ಕೋಮನ್ ಐ. ಸಿ. ಎಸ್. ಇವರು ತಾ. ೧೪ ರಂದು ಮಂಗಳೂರಿಗೆ ಬಂದು ತಮ್ಮ ಅಧಿಕಾರ ವಹಿಸಿರುವರು. ಎಡಿಶನಲ್ ಸಬ್‌ಕೋರ್ಟು, ಪ್ರಿನ್ಸಿಪಲ್ ಸಬ್‌ಕೋರ್ಟು, ಜಡ್ಜರ ಕೋರ್ಟು ಇವು ಸೆಕೆರಜೆ ಮುಗಿದು ತಾ. 15 ರಂದು ತೆರೆಯಲ್ಪಟ್ಟವು.

ಜಿಲ್ಲಾ ಬೋರ್ಡು ಸಭೆ

ಯು ತಾ. ೧೧ ರಂದು ಪ್ರಾತಃ ೧೦ ಗಂಟೆಗೆ ಉಪಾಧ್ಯಕ್ಷ ಶ್ರೀ. ಆರೂರು ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಗೈರು ಹಾಜರಿಯಿಂದ ಸದಸ್ಯತೆ ಕಳೆದುಕೊಂಡ ಶ್ರೀಗಳಾದ ಉರ್ದಿಲ ರಾಮಣ್ಣರೈ ಮತ್ತು ಮೀರ್ ಸಾಹೇಬರ ಸದಸ್ಯತ್ವವು ಊರ್ಜಿತಗೊಳಿಸಲ್ಪಟ್ಟಿತು. ಕುಂದಾಪುರ ಮತ್ತು ಪುತ್ತೂರು ಎಕ್ಸೈಸ್ ಎಡ್ವೈಸರಿ ಬೋರ್ಡಿಗೆ ಶ್ರೀಗಳಾದ ಸುಬ್ಬಣ್ಣ ಶೆಟ್ಟಿ ಮತ್ತು ಐತಪ್ಪರೈ ಇವರ ರಾಜೀನಾಮೆಯಿಂದ ಖಾಲಿಬಿಟ್ಟ ಸ್ಥಾನಗಳಿಗೆ ಶ್ರೀಗಳಾದ ಕೋಟಿ ಮಂಜುನಾಥ ಶ್ಯಾನಭೋಗ ಮತ್ತು ನಾಗಪ್ಪಯ್ಯನನ್ನು ಆರಿಸಲಾಯಿತು. ಬೆಳ್ವಾರೆ ಪಂಚಾಯತ ಬೋರ್ಡಿನ ಸದಸ್ಯರು ರಾಜಿನಾಮೆ ಕೊಟ್ಟ ನಿಮಿತ್ತ ಅದನ್ನು ಕರಗಿಸಿ ಪುನರ್ರಚಿಸುವ ವಿಷಯು ಸ್ಥಳೀಯ ಸಂಸ್ಥೆಗಳ ಇನ್ಸ್‌ಪೆಕ್ಟರರು ಬರೆದ ಪತ್ರವು ರಿಕಾರ್ಡು ಮಾಡಲಾಯಿತು. ಬಡ ಮಹಮ್ಮಡನ್ ಮತ್ತು ದಳಿತ ವರ್ಗದ ಮಕ್ಕಳಿಗೆ ಬೋರ್ಡಿನಿಂದ ಪುಸ್ತಕ ಸ್ಲೇಟುಗಳನ್ನೊದಗಿಸಲು ಆಲೋಚಿಸಲಾಯಿತು. ವೆಲ್ಲೂರು ಸೆಂಟ್ರಲ್ ಸೆರೆಮನೆಯಲ್ಲಿ ಸ್ಥಾನಬದ್ಧರಾಗಿರಿಸಲ್ಪಟ್ಟ ಶ್ರೀ. ರಾಘವನ್ ನಂಬಿಯಾರರಿಂದ, ತಾನು ಸ್ಥಾನಬದ್ಧನಾಗಿರುವುದರಿಂದ ಜಿಲ್ಲಾ ಬೋರ್ಡಿನ ಸದಸ್ಯತ್ವವನ್ನು ಕಳಕೊಳ್ಳುವುದಿಲ್ಲವೆಂದು ಬಂದ ಪತ್ರ ಜಿಲ್ಲಾ ಜಡ್ಜರ ನಿಷ್ಕರ್ಷೆಗೆ ಕಳುಹಿಸಲಾಯಿತು.

ಜಿಲ್ಲಾ ಬೋರ್ಡು ಅಧ್ಯಕ್ಷ ಚುನಾವಣೆ

ಯು (ಡಾ| ವಿಟ್ಠಲ ಶೆಟ್ಟಿರ ನಿಧನದಿಂದ ಖಾಲಿ ಬಿದ್ದ ಸ್ಥಾನಕ್ಕೆ) ತಾ. ೧೧ ರಂದು ಪೂರ್ವಾಹ್ನ ೧೧ ಗಂಟೆಗೆ ಶ್ರೀ. ಜೆಫ್ರಿಸರ ಅಧ್ಯಕ್ಷತೆಯಿಂದ ನೆರವೇರಿತು. ಅಧ್ಯಕ್ಷ ಸ್ಥಾನಕ್ಕೆ ಉಮೇದ್ವಾರರಾಗಿ ಶ್ರೀಗಳಾದ ಆರೂರು ಲಕ್ಷ್ಮೀನಾರಾಯಣ ರಾವ್, ಡಾ| ಎನ್. ಮಹಾಬಲ ಅದ್ಯಂತಾಯ, ಮೊಹಮ್ಮದ್ ಶಮ್ನಾಡ್ ಎಂ. ಎಲ್. ಎ ಇವರು ಮೂವರಿದ್ದರು. ಶ್ರೀ ಆರೂರರ ಹೆಸರನ್ನು ಶ್ರೀ. ಎಚ್. ಸರ್ವೋತ್ತಮ ಪೈಯವರು ಸೂಚಿಸಿ ಶ್ರೀ. ಕೆ. ಮಹಾಲಿಂಗ ಶೆಟ್ಟರು ಅನುಮೋದಿಸಿದರು. ಡಾ| ಅದ್ಯಂತಾಯರ ಹೆಸರನ್ನು ಶ್ರೀ. ಮೀರ್ ಹೈದರ್ ಸಾಹೇಬರು ಸೂಚಿಸಿ ಶ್ರೀ. ರಾಮಣ್ಣರೈಗಳು ಅನುಮೋದಿಸಿದರು. ಶ್ರೀ ಶಮ್ನಾಡರ ಹೆಸರನ್ನು ಶ್ರೀ. ನಾಗಪ್ಪಯ್ಯನವರು ಸೂಚಿಸಿ ಶ್ರೀ ರಘುಚಂದ್ರ ಬಲ್ಲಾಳರು ಅನುಮೋದಿಸಿದರು. ಶ್ರೀ. ಶಮ್ನಾಡರು ಚುನಾವಣೆಯ ಮೊದಲು ತಮ್ಮ ಉಮೇದ್ವಾರಿಕೆಯನ್ನು ಹಿಂತೆಗೆದುಕೊಂಡರು. ಬಳಿಕ ಚುನಾವಣೆ ನಡೆಯಲು ಶ್ರೀ. ಆರೂರರಿಗೆ ೧೨ ಓಟುಗಳೂ ಡಾ| ಅದ್ಯಂತಾಯರಿಗೆ ೭ ಓಟುಗಳೂ ದೊರಕಿ ಶ್ರೀ. ಆರೂರರು ಅಧ್ಯಕ್ಷರಾಗಿ ಚುನಾಯಿತರಾದರು. ನೆರೆದವರನ್ನು ವಿಜಯಿಗಳಾದ ಶ್ರೀ. ಆರೂರರು ಟೀಪಾರ್ಟಿಕೊಟ್ಟು ಸತ್ಕರಿಸಿದರು.

ದ. ಕ. ಜಿಲ್ಲಾ ಬೋರ್ಡಿನ ಹಲವು ಮಂದಿ ಕಾಂಗ್ರೆಸ್ ಪಕ್ಷದ ಸದಸ್ಯರು ರಾಜಿನಾಮೆಯಿತ್ತಿದ್ದು ಕೇವಲ ೨೧ ಮಂದಿ ಸದಸ್ಯರು ಮಾತ್ರ ಈಗ ಇರುತ್ತಾರೆ.

ಸಂಬಳ ಹೆಚ್ಚಿಸಿದರು

ಮದ್ರಾಸ್ ಸರಕಾರದವರು ಸಹಕಾರೀ ಇಲಾಖೆಯ ಜೂನಿಯರ್ ಮತ್ತು ಸೀನಿಯರ್ ಇನ್ಸ್‌ಪೆಕ್ಟರ್, ಹಾಗೂ ಸಬ್‌ರಿಜಿಸ್ಟ್ರಾರರ ಸಂಬಳದ ಸ್ಕೇಲು ಹೆಚ್ಚಿಸಿರುವರು. ಜೂನಿಯರ್ ಇನ್ಸ್‌ಪೆಕ್ಟರರಿಗೆ ರೂ. ೫೫ರಿಂದ ರೂ. ೮೫, ಸೀನಿಯರ್ ಇನ್ಸ್‌ಪೆಕ್ಟರರಿಗೆ ರೂ. ೮೦ರಿಂದ ರೂ. ೧೩೦, ಸಬ್ ರಿಜಿಸ್ಟ್ರಾರರಿಗೆ ರೂ. ೧೩೦ರಿಂದ ರೂ. ೧೭೫.

ಧಾರ್ಮಿಕವಿದ್ಯಾಭ್ಯಾಸ

ಈ ಕುರಿತು, ಶ್ರೀ. ಬಿ. ಸಂಜೀವ ರಾಯರು ಸ್ಥಳೀಯ ಬಿಸೆಂಟ್ ಬಾಲಿಕಾ ಪಾಠಶಾಲೆಯಲ್ಲಿ ಪ್ರತಿ ಆದಿತ್ಯವಾರ ಸಂಜೆಗೆ ಭಾಷಣ ಮಾಡುತ್ತಾರೆ.

ಸಾಹಿತ್ಯ ಸಂಘ

ಬಿಸೆಂಟ್ ಬಾಲಿಕಾ ಪಾಠಶಾಲೆಯ ಕಿರಿಯ ಸಾಹಿತ್ಯ ಸಂಘದ ಉದ್ಘಾಟನೆಯನ್ನು ಶ್ರೀ. ಮತಿ. ಕಲ್ಯಾಣಿ ಶೆಟ್ಟಿಯವರು ನೆರವೇರಿಸಿದರು. ಕುಮಾರಿ ದೇವಯಾನಿ ಕೃತಜ್ಞತೆ ಹೇಳಿದರು.

ಮಿತ್ರಮಂಡಳಿ

ಇದರ ಕಾರ್ಯಕಾರೀ ಸಮಿತಿ ಸಭೆಯು ತಾ. ೧೫ ರಂದು ಸಂಜೆ ಸೇರಿ, ಹೊಸ ವರ್ಷದಲ್ಲಿ ಈ ಕೆಳಗಿನ ಕಾರ್ಯಕ್ರಮಗಳನ್ನು ಕೈಕೊಳ್ಳುವರೆ ನಿಶ್ಚಯಿಸಿದೆ (೧) 'ಆಂದಿನ ಅಪ್ರೂಪ' ಪುಸ್ತಕದ ಕುರಿತು ಸೀನಿಯರ್ ಇಂಟರ್ ಮೀಡಿಯೆಟ್ ಮತ್ತು ವಿದ್ವಾನ್ ಎಂಟ್ರನ್ಸ್ ಪರೀಕ್ಷೆಯ ವಿದ್ಯಾರ್ಥಿಗಳು ಬರೆದ ಉತ್ತಮ ಪ್ರಬಂಧಕ್ಕೆ ಸ್ಪರ್ಧೆ ಬಹುಮಾನವನ್ನೇರ್ಪಡಿಸುವುದು. (೨) ಸಾಹಿತ್ಯಪರಿಷತ್ತಿನ ತರಗತಿಗಳನ್ನೇರ್ಪಡಿಸುವುದು. (೩) ಸಾಹಿತ್ಯಗೋಷ್ಠಿಯನ್ನೇರ್ಪಡಿಸುವುದು. (೪) ವಿದ್ಯಾರ್ಥಿ ಲೇಖಕರು ಬರೆದ ಕತೆ, ಕವಿತೆ, ಪ್ರಬಂಧಗಳನ್ನು ಒಟ್ಟುಮಾಡಿ, ಅವುಗಳಿಂದ ಆರಿಸಿದ ಲೇಖನಗಳನ್ನು ಪ್ರಕಟಣೆಗೆ ಕಳುಹಿಸುವುದು. (೫) ಬೇಗನೇ, ಕನ್ನಡದ ಹಿರಿಯ ಸಾಹಿತಿಗಳೊಬ್ಬರನ್ನು ಆಮಂತ್ರಿಸಿ ಮಿತ್ರಮಂಡಳಿಯ ಪ್ರಾರಂಭ ಭಾಷಣ ಏರ್ಪಡಿಸುವುದು.

ಜಿಲ್ಲಾ ಪತ್ರಿಕೋದ್ಯಮಿಗಳ ಸಂಘ

ಇದರ ವಾರ್ಷಿಕ ಮಹಾಸಭೆಯು ತಾ. ೧೬ ರಂದು ಸಂಜೆ ಡಿ. ಸಿ. ಯಂ. ಕಟ್ಟಡದಲ್ಲಿ ಶ್ರೀ. ಹುರುಳಿ ಭೀಮರಾಯರ ಅಧ್ಯಕ್ಷತೆಯಲ್ಲಿ ಜರಗಿತು. ದಿವಂಗತ ಡಾ| ಕೆ. ವಿಟ್ಠಲ ಶೆಟ್ಟರ ನಿಧನದಲ್ಲಿ ಸಂತಾಪವನ್ನು ಸೂಚಿಸಿಕೊಂಡು ಒಂದು ನಿರ್ಣಯವು ಸ್ವೀಕರಿಸಲ್ಪಟ್ಟ ಬಳಿಕ ಸಂಘದ ಕಾರ್ಯದರ್ಶಿ ಶ್ರೀ. ಕುಳುಕುಂದ ಶಿ. ರಾಯರು ವಾರ್ಷಿಕ ವರದಿಯನ್ನೂ ಲೆಕ್ಕ ಪತ್ರಗಳನ್ನೂ ಒಪ್ಪಿಸಿದರು. ಅನಂತರ ಹೊಸ ವರ್ಷದ ಕಾರ್ಯಕಾರಿ ಸಮಿತಿಯ ಆಯ್ಕೆ ನಡೆಯಿತು. ಶ್ರೀ. ಹು. ಭೀಮರಾವ್ [ಕಂಠೀರವ] ಅಧ್ಯಕ್ಷರು; ಶ್ರೀ. ಕಯ್ಯಾರ ಕಿಂಞಣ್ಣ ರೈ [ಸ್ವದೇಶಾಭಿಮಾನಿ] ಉಪಾಧ್ಯಕ್ಷರು; ಶ್ರೀ. ಕುಳುಕುಂದ ಶಿ. ರಾ. [ರಾಷ್ಟ್ರಬಂಧು] ಕಾರ್ಯದರ್ಶಿ ಮತ್ತು ಕೋಶಾಧಿಕಾರಿ; ಶ್ರೀಯುತರು ಎಂ. ವೆಂಕಟೇಶ ಪ್ರಭು, ಕುಡ್ಪಿ ವಾಸುದೇವ ಶೆಣೈ, ಯಂ. ಎಸ್. ಮಾಧವರಾವ್, ಕೆ. ಕೃಷ್ಣರಾವ್, ಯು. ಗೋವಿಂದರಾವ್ ಮತ್ತು ಹಿ. ರಾಮರಾಯ ಮಲ್ಯ—ಇವರು ಕಾರ್ಯಕಾರಿ ಸಮಿತಿಯ ಸದಸ್ಯರು.

ಸಂಘದ ಕಳೆದ ವರ್ಷದ ವರದಿಯಲ್ಲಿ ಈ ಕೆಳಗಿನ ಪ್ರಧಾನ ಅಂಶಗಳಿವೆ: ಕಯ್ಯೂರಿನ ನಾಲ್ವರು ಕೈದಿಗಳಿಗೆ ಜೀವದಾನ ಕೊಡಿಸಲು ಆರಂಭವಾಗಿದ್ದ ಚಳವಳದಲ್ಲಿ ಸಂಘವು ಭಾಗವಹಿಸಿದೆ. ಶ್ರೀಯುತರು ಮಹದೇವ ದೇಸಾಯಿ, ತಾರಾನಾಥಜಿ, ಸತ್ಯಮೂರ್ತಿ, ಬೆನಗಲ್ ರಾಮರಾವ್ ಇವರ ನಿಧನಗಳ ಕುರಿತು ಸಂತಾಪಸೂಚಕ ಸಭೆಗಳನ್ನು ಜರಗಿಸಿದೆ. ಸಂಘದ ಆಶ್ರಯದಲ್ಲಿ ನಡೆದ ಎರಡು ಸಭೆಗಳಲ್ಲಿ ಶ್ರೀ. ಸತ್ಯನಾರಾಯಣರು ರಾಷ್ಟ್ರೀಯ ಯುದ್ಧ ಸನ್ನಾಹದ ಯೋಜನೆಯನ್ನೂ, ಶ್ರೀ. ಯಂ. ಶಿವರಾಯರು ಬಡವರಿಗೆ ಅಕ್ಕಿ ದೊರಕಿಸಲಿಕ್ಕಿದ್ದ ತಮ್ಮ ಯೋಜನೆಯನ್ನೂ ವಿವರಿಸಿರುವರು. 'ಬಾಂಬೆ ಕ್ರಾನಿಕಲ್' ಪತ್ರಿಕೆಯ ಸಂಪಾದಕ ಮಂಡಳಿಯ ಶ್ರೀ. ಆರ್. ಕೆ. ಪ್ರಭು ಅವರು ವರ್ಷದ ಪ್ರಧಾನ ಅತಿಥಿಯಾಗಿದ್ದರು. ಕೆಲ ಕಾಲದ ಮಟ್ಟಿಗೆ ಮದ್ರಾಸಿಗೆ ತೆರಳಿದ ಶ್ರೀ. ಕೆ. ಕೃಷ್ಣರಾಯರನ್ನು ಬೀಳ್ಕೊಡುವುದಕ್ಕಾಗಿ ಸಂಘವು ಒಂದು ಸತ್ಕಾರಕೂಟವನ್ನೇರ್ಪಡಿಸಿತ್ತು. ಮಿಡ್ನಾಪುರದ ನಿರಾಶ್ರಿತರಿಗೆ ನೆರವಾಗಲು ಒಂದು ನಿಧಿಯು ಸಂಘದ ಆಶ್ರಯದಲ್ಲಿ ಆರಂಭಿಸಲ್ಪಟ್ಟಿತು. ಸ್ಥಳೀಯ ಕ್ಯಾರಿಕ ಸಂಘದವರು ಸಂಗ್ರಹಿಸಿ ಕೊಟ್ಟ ರೂ. ೫-೧-೦ನ್ನು ಕಲ್ಕತ್ತದ ನಿಧಿಗೆ ಕೊಡಲಾಗಿದೆ. ಜನವರಿ ತಾ. ೬ರಂದು ಪತ್ರಿಕೆಗಳೆಲ್ಲ ಹರತಾಳವನ್ನಾಚರಿಸಿದಾಗ ಮಂಗಳೂರಿನ 'ರಾಷ್ಟ್ರಬಂಧು' ಮತ್ತು 'ನವಭಾರತ' ಪತ್ರಿಕೆಗಳೂ ಅದರಲ್ಲಿ ಭಾಗವಹಿಸಿದ್ದುವು. ಮಹಾತ್ಮ ಗಾಂಧಿಯವರು ನಿರಶನ ವ್ರತವನ್ನು ಕೈಕೊಂಡಾಗ. 'ಅವರನ್ನು ಬಿಡಬೇಕೆ'ಂದು ಕೇಳಿಕೊಂಡು ಸಂಘವು ವೈಸರಾಯರಿಗೆ ತಂತಿಕೊಟ್ಟಿದೆ. ಕೊನೆಯದಾಗಿ ಸಂಘವು ತನ್ನ ಕಾರ್ಯದರ್ಶಿಯನ್ನು ಮುಂಬಯಿಯಲ್ಲಿ ಜರಗಿದ ಅ. ಭಾ. ಪ್ರಗತಿಶೀಲ ಲೇಖಕರ ಸಮ್ಮೇಳನ ಮತ್ತು ಜನತಾ ರಂಗಭೂಮಿಯ ಸಮ್ಮೇಳನಗಳಲ್ಲಿ ಭಾಗವಹಿಸಲು ಪ್ರತಿನಿಧಿಯಾಗಿ ಕಳುಹಿಸಿಕೊಟ್ಟಿದೆ.

ಸಂಘಕ್ಕಾಗಿ ಒಂದು ಆಫೀಸನ್ನೂ ಪತ್ರಿಕೋದ್ಯಮಿಗಳಿಗಾಗಿಯೇ ಒಂದು ಲೈಬ್ರರಿಯನ್ನೂ ತೆರೆಯುವುದು ಅತ್ಯವಶ್ಯವೆಂದು ಸಂಘವು ಮನಗಂಡಿರುವುದು. ಕಳೆದ ವರ್ಷಕ್ಕಿಂತಲೂ ಹೆಚ್ಚು ಸಂಖ್ಯೆಯಲ್ಲಿ ಮಂಗಳೂರಿನ ಹೊರಗಿರುವ ಪತ್ರಿಕೋದ್ಯಮಿಗಳೂ ಸಂಘವನ್ನು ಸೇರುವುದು ಅಗತ್ಯವಿದೆ.

ಚಲಚಿತ್ರ ವಿಮರ್ಶಕ ಸಂಘ

ಈ ಹೆಸರಿನ ಸಂಸ್ಥೆಯೊಂದು, ಮಂಗಳೂರಲ್ಲಿ ಸ್ಥಾಪಿತವಾಗುವುದಾಗಿ ನಿಶ್ಚಯವಾಗಿದೆ; ಪತ್ರಿಕೋದ್ಯಮಿಗಳೂ ಚಲಚಿತ್ರಪ್ರೇಮಿಗಳೂ ಸೇರಿ ಈ ಸಂಘ ಸ್ಥಾಪಿಸುತ್ತಾರೆ. ಈ ಸಂಘದ ಸದಸ್ಯರು ಪ್ರತಿ ಆದಿತ್ಯವಾರ ಸೇರಿ ಚಲಚಿತ್ರಕ್ಕೆ ಸಂಬಂಧಿಸಿದ ವಿಚಾರ ವಿನಿಮಯ ಮಾಡುವರು. ಈ ಸಂಘದ ಉದ್ಘಾಟನಾ ಸಮಾರಂಭವು ಬೇಗನೇ ಜರಗಲಿದೆ.

ಕಾಸರಗೋಡು

ಬಿಡುಗಡೆ

ಕಳೆದ ಸಪ್ಟಂಬರ ತಿಂಗಳಲ್ಲಿ ಡಿ. ಕಾನೂನಿನಂತೆ ಬಂಧಿತರಾಗಿ ಆಲಿಪುರಂ ಸೆರೆಮನೆಯಲ್ಲಿಡಲ್ಪಟ್ಟ ಶ್ರೀ. ದೇವಪ್ಪ ಆಳ್ವರು ತಮ್ಮ ಸಜೆಯ ಅವಧಿ ಮುಗಿಸಿ ಬಿಡುಗಡೆಯಾಗಿ ಬಂದಿರುವರು. ಸೆರೆಮನೆಯಲ್ಲಿರುವವರೆಲ್ಲ ಹರ್ಷಚಿತ್ತರಾಗಿರುವರೆಂದು ಇವರು ತಿಳಿಸುತ್ತಾರೆ.

ಪೆರಡಾಲ

ಭಾವಚಿತ್ರ ಅನಾವರಣ

ಮಹಾಜನ ಸಂಸ್ಕೃತ ಕಾಲೇಜಿನ ಹಿರಿಯ ಕನ್ನಡ ಪಂಡಿತ ಶ್ರೀ. ಪೆರಡಾಲ ಕೃಷ್ಣಯ್ಯರ ತೈಲಚಿತ್ರವನ್ನು ತಾ. ೧೪ ರಂದುಸಂಜೆ ಮಂಗಳೂರು ಸೈಂಟ್ ಅಲೋಸಿಯಸ್ ಕೋಲೇಜಿನ ಹಿರಿಯ ಕನ್ನಡ ಪಂಡಿತ ಶ್ರೀ. ಮುಳಿಯ ತಿಮ್ಮಪ್ಪಯ್ಯರು ಅನಾವರಣಗೊಳಿಸಿದ್ದರು. ಶ್ರೀ ಪೆರಡಾಲ ಕೃಷ್ಣಯ್ಯರ ಪಾಂಡಿತ್ಯ ಮೊದಲಾದವುಗಳ ವಿಷಯ ಪ್ರಶಂಸಾ ಭಾಷಣಗಳಿದ್ದುವು.

ಉಡುಪಿ

'ಸೈಕಲ್ ಸರ್ವಿಸ್'

ಉಡುಪಿಯ ಕೆಲವು ವ್ಯಾಪಾರಿಗಳು ಸೇರಿ, ಉಡುಪಿ ಕುಂಭಾಪುರ ವರೆಗೆ 'ಸೈಕಲ್ ಸರ್ವಿಸ್' ಪ್ರಾರಂಭಿಸಿರುವರೆಂದು ತಿಳಿಯುತ್ತದೆ.

ಸಾವರ್ಕರರ ಜನ್ಮದಿನೋತ್ಸವ ಜರಗಲಿಲ್ಲ

ಹಿಂದು ಮಹಾಸಭೆಯವರು ವೀರ ಸಾವರ್ಕರರ ಜನ್ಮದಿನೋತ್ಸವವನ್ನು ಉಡುಪಿಯಲ್ಲಿ ತಾ. ೨೮ ರಂದು ಜರಗಿಸಬೇಕೆಂದು ನಿಶ್ಚಯಿಸಿದ್ದರೂ ಸಭೆ ಸೇರಿಸಲು ಅಧಿಕಾರಿಗಳ ಅಪ್ಪಣೆ ದೊರಕದ್ದರಿಂದ ಅವರಿಗೆ ಜರಗಿಸಲಾಗಲಿಲ್ಲವೆಂದು ತಿಳಿದು ಬರುತ್ತದೆ.

ಕಾರ್ಕಳ

ಶಿಕ್ಷೆ

ಇಲ್ಲಿನ ಬಾಬು ಉರ್ಫ್ ಶಂಕರಲಾಲ್ ಇವರಿಗೆ ಮೈಸೂರಿನ ಮೆಜಿಸ್ಟ್ರೇಟರು ಡಿ. ಕಾನೂನಿನಂತೆ ೪ ತಿಂಗಳ ಸಜೆಯ ಶಿಕ್ಷೆ ವಿಧಿಸಿರುವರಾಗಿ ತಿಳಿಯುತ್ತದೆ.

ಉಪಾಧ್ಯಾಯಿನಿಯರ ಸಭೆ

ಕಾರ್ಕಳ ಕೇಂದ್ರದ ಬಾಲಿಕಾ ಪಾಠಶಾಲೆಗಳ ಉಪಾಧ್ಯಾಯಿನಿಯರ ಸಭೆಯೊಂದು, ಬಿ. ಇ. ಎಂ. ಬಾಲಿಕಾ ಪಾಠಶಾಲೆಯಲ್ಲಿ ಮಿಸ್. ಕೆ. ಎನ್. ರತ್ನಾಬಾಯಿಯವರ ಅಧ್ಯಕ್ಷತೆಯಿಂದ ಜರಗಿತು.

ಶಿಕ್ಷಣ ಸಮಿತಿ

ಕಾರ್ಕಳ ತಾಲೂಕು ಎಡ್ಯುಕೇಶನ್ ಕಮಿಟಿ ಅಧ್ಯಕ್ಷ ಸ್ಥಾನಕ್ಕೆ ಜನಾಬ್ ಎಸ್. ಹುಸೇನ ಸಾಹೇಬ್ ಎಂ. ಎಲ್. ಎ. ಇವರು ರಾಜಿನಾಮೆಯಿತ್ತದ್ದರಿಂದ ಶ್ರೀ. ಡಿ. ವೆಂಕಟೇಶ ಭಟ್ಟರನ್ನು ಅಧ್ಯಕ್ಷರಾಗಿ ನೇಮಿತರಾಗಿದ್ದಾರೆ.

ಬೈಂದೂರು

ಮೇ ತಿಂಗಳ ಮೊದಲನೆಯ ವಾರದಲ್ಲಿ ಬೈಂದೂರಿನ ಶ್ರೀ. ಮಹಾಲಿಂಗ ಶೆಟ್ಟಿ ಎಂಬವರು, ಬಳ್ಳಾರಿಯ ಆಲಿಪುರಂ ಸೆನಿಟೋರಿಯಂ ಸೆರೆಮನೆಯಲ್ಲಿ ಕ್ಷಯರೋಗದಿಂದ ನಿಧನ ಹೊಂದಿರುವರಾಗಿ ತಿಳಿದು ಬರುತ್ತದೆ. ಇವರಿಗೆ ತಂತಿ ಕಡಿದ ಆರೋಪದಲ್ಲಿ ಶಿಕ್ಷೆವಿಧಿಸಲಾಗಿತ್ತು.

Wanted Graduates

APPLY FOR TERMS

CANARA BANK LTD.,

Ested: 1906

ನಂಬಿ ನಂಬಿ ತೆಗೆದು ಕೊಳ್ಳಲು

ದಮ್ಮಿನ ಮೇಲೆ ಒಂದೇ ಉಪಾಯ

ಪುರೋಹಿತ ಶ್ವಾಸಹಾರಿ

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ 3 ಔನ್ಸ್, 6 ಔನ್ಸ್ ಮತ್ತು 12 ಔನ್ಸ್‌ಗಳ ಬಾಟ್ಲಿಗಳು ರೂ. 2-12-0, ರೂ. 4-8-0, ರೂ. 8 ಕ್ರಯಕ್ಕೆ ದೊರಕುವುದು.

ತಯಾರಿಸುವವರು: ಡಾಕ್ಟರ್. ಪುರೋಹಿತ ಫಾರ್ಮಸಿ ಕೊಲ್ಲಾಪುರ.

ಕರ್ನಾಟಕ

ಬೆಳಗಾವಿ

ಇಲ್ಲಿನ ಶ್ರೀಮತಿಯರು ಲಳಿತಾಬಾಯಿ ಬಳವಂತರಾಟಕರ ಮತ್ತು ತಾರಾಬಾಯಿ ಇವರು ಮನೆಯಲ್ಲಿ ಸೈಕ್ಲೊಸ್ಟೈಲ್ ಇಟ್ಟಿದ್ದರೆಂದು ಪ್ರತಿಯೊಬ್ಬರಿಗೆ ರೂ.೨೫ ದಂಡವಿಧಿಸಿದ್ದಾರೆ. ಇಲ್ಲಿನ ವ್ಯಾಪಾರಿ ಶ್ರೀ ಕೃಷ್ಣರಾವ್ ಘಟಣೀಕರರನ್ನು ಡಿ. ಐ. ಕಾನೂನಿನನ್ವಯ ಬಂಧಿಸಿ ಜಾಮೀನ ಮೇಲೆ ಬಿಟ್ಟಿದ್ದಾರೆ. ಅಥಣಿ ವಕೀಲ್ ಶ್ರೀ ಅನಂತರಾವ್ ಕುಲಕರ್ಣಿಯವರು ಹಾಜರಾಗಲಿಲ್ಲವೆಂದು ಅವರ ಆಸ್ತಿ ಜಪ್ತಾಯಿತು. ಬೆಳಗಾವಿಯ ಶ್ರೀ. ಕೆ. ಪಿ. ಪಾಟಣೇಕರರಿಗೆ ಗಾಂಧಿಜಯಂತಿಗೆ ಹರತಾಳ ಮಾಡಿದರೆಂದು ೫೦ ರೂ. ದಂಡ ವಿಧಿಸಲಾಯಿತು. ತಂತಿ ಕತ್ತರಿಸಿದ ಆರೋಪದ ಮೇಲೆ ಬಂಧಿತರಾದ ಸತ್ತಿಯ ಪ್ರಹ್ಲಾದ ಕುಲಕರ್ಣಿ, ಪಂಡಿತ ಕುಲಕರ್ಣಿ ಮೊದಲಾದ ೧೨ ಆರೋಪಿಗಳ ವಿಚಾರಣೆಯಾಗಿ ಎಲ್ಲರೂ ನಿರ್ದೋಷಿಗಳೆಂದು ಬಿಡಲ್ಪಟ್ಟರು. ಆಕ್ರಮಕೂಟದಲ್ಲಿ ಭಾಗವಹಿಸಿಧರೆಂದು ಬೆಳಗಾವಿಯ ಕುಮಾರಿ ಇಂದುಮತಿ ಇವರಿಗೆ ಶಿಕ್ಷೆ ದಂಡಗಳಾಗಿದ್ದು ಅಪೀಲಿನಲ್ಲಿ ಗುಣ ಸಿಕ್ಕಿದೆ. ಬೆಳಗಾವಿ ಜಿಲ್ಲೆಗೆ ಸೇರಿದ ಅಸಂತ ರಾಮಚಂದ್ರ ಮಂಗಳವೇಡೆಕರ ಮತ್ತು ಬಸವನ ಗೌಡ ಧಾಮು ಗೌಡ ಈ ಇಬ್ಬರು ಪೋಲೀಸರ ಆಸ್ತಿ ಪುಂಡರಿಂದ ಹಾಳಾಯಿತೆಂದು ಅವರಿಗೆ ಪರಿಹಾರ ಕೊಡಲಾಗಿದೆ.

ಸಂಕೇಶ್ವರದಲ್ಲಿ ಶ್ರೀ. ಅಣ್ಣಪ್ಪಾ ಪಾಟೀಲರ ಮನೆಮುತ್ತಿ ಶ್ರೀ. ಅಣ್ಣಪ್ಪರನ್ನು ಸೆರೆಹಿಡಿದರು. ಚಿಡಕೀ ಹಾಳದಲ್ಲಿ ಶ್ರೀ. ಖಂಡು ಪಾಂಡುರಂಗ ಪೋತದಾರರನ್ನು ಬಂಧಿಸಿರುವರು. ಅಥಣಿಯ ಸತ್ತಿನಲ್ಲಿ ಅಜ್ಞಾತವಾಸದಲ್ಲಿರುವ ಶ್ರೀ. ಭಾನೂ ಹನುಮಂತ ಕುಲಕರ್ಣಿಯವರ ಮನೆ ಜಪ್ತಿಯಾಗಿದೆ. ಸತ್ತಿಯಲ್ಲಿ ಗುಮಾನಿ ಮೇಲೆ ಬಿಂದು ವಾಸುದೇವ ಕುಲಕರ್ಣಿಯವರ ಬಂಧನವಾಗಿದೆ. ಕಣಬರಗಿ ಹತ್ತಿರ ತಾರ ತಂತಿ ಕತ್ತರಿಸಿದರೆಂದು ಶ್ರೀ. ಬಾಬುರಾವ್ ಕಾಮತ್ ಮೊದಲಾದ ೧೦ ಜನ ವಿದ್ಯಾರ್ಥಿಗಳ ಮೇಲೆ ಹಾಕಿದ ಖಟ್ಲೆಯ ವಿಚಾರಣೆ ಮುಗಿದು ಶ್ರೀ ಕಾಮತರಿಗೆ ೧೮ ತಿಂಗಳು ಮರಕಟ್ಟಿ ಮತ್ತು ಅಂಕಲಿ ಇವರಿಗೆ ೯, ೯ ತಿಂಗಳು ಉಳಿದವರಿಗೆ ೩೫ ರೂ. ದಂಡ ಮತ್ತು ೬ ತಿಂಗಳ ಶಿಕ್ಷೆ ವಿಧಿಸಲಾಗಿದೆ. ಬೆಳಗಾವಿ ಸಮಾಚಾರದ ಶ್ರೀ. ಸಿ. ಪರುಳೇಕರರಿಗೆ ಆಕ್ಷೇಪಾರ್ಹ ವಾಙ್ಮಯದ ಬಗ್ಗೆ ೩೦ ರೂ. ದಂಡ ಮತ್ತು ೩ ತಿಂಗಳ ಶಿಕ್ಷೆಯಾಯಿತು. ಬಾಬು ಎಂಬವನಿಗೆ ೩೦ ರೂ. ದಂಡ ಇಲ್ಲವೇ ೩ ತಿಂಗಳ ಶಿಕ್ಷೆಯಾಗಿದೆ. ಬೈಲಹೊಂಗಲದಲ್ಲಿ ಶ್ರೀ. ವೀರಪ್ಪ ದೀಕ್ಷಿತ ಇವರಿಗೆ ಆಕ್ಷೇಪಾರ್ಹ ಭಾಷಣದ ಬಗ್ಗೆ ೩ ತಿಂಗಳ ಶಿಕ್ಷೆಯಾಗಿದೆ.

ವಿಜಾಪುರ

ಧಾರವಾಡ ಮತ್ತು ವಿಜಾಪುರ ಪೋಲೀಸಧಿಕಾರಿಗಳು 40, 50 ಜನ ಪೋಲೀಸರೊಂದಿಗೆ ರಾತ್ರಿ ೨ ಗಂಟೆಗೆ ಅರ್ಜಣಗಿಗೆ ನುಗ್ಗಿ ಮುತ್ತಿಗೆ ಹಾಕಿ ಹಲವು ಮನೆಗಳ ಜಪ್ತಿ ಮಾಡಿದರು. ಚನ್ನ ಬಸಪ್ಪ ಅಂಬಲಿಯವರನ್ನು ಹುಡುಕುವುದು ಅವರ ಉದ್ದೇಶವಾಗಿತ್ತೆಂದು ತಿಳಿದುಬರುತ್ತದೆ. ಕೆರೂರಲ್ಲಿ ಒಂದು ತಿಂಗಳಿಂದ ಕಾಮುಗಾರಿ ನಡೆದಿದೆ. ಒಟ್ಟು ೪೦೦೦ ಮೇಲ್ಪಟ್ಟು ಕಾಮಗಾರಿಗಳಿವೆ. ೩೦೦೦ ಕೂಲಿಗಾರರಿರುವರು. ಕುಡಿವ ನೀರಿನ ಅವ್ಯವಸ್ಥೆಯಿಂದ ಕಾಲರಾ ಪ್ರಾರಂಭವಾಗಿದೆ. ಬಾಗಲ ಕೋಟೆ ನಗರ ಸಭೆಯವರೂ ಬರಗಾಲ ನಿವಾರಣೆ ಕೆಲಸ ಪ್ರಾರಂಭಿಸುವುದಕ್ಕಾಗಿ ಸರಕಾರದ ಸಹಾಯ ಕೇಳಿರುವರು. ಸಿಂದಗಿ ತಾಲೂಕಿನ ಕಲಕೇರಿಯಲ್ಲಿ ಬಡವರ ಗೋಳು ಮಿತಿಮೀರಿದೆ. ಪ್ರತಿದಿನ ಉಪವಾಸ ಬೀಳುವವರ ಸಂಖ್ಯೆ ಹೆಚ್ಚುತ್ತಿದೆ.

ಧಾರವಾಡ

ತಾಯಿಯ ಅಂತ್ಯಕ್ರಿಯೆಗೆ ಬಂದಿದ್ದ ಶ್ರೀ. ಲಿಂಗರಾಜ ಮುದ್ದಣ್ಣನವರನ್ನು ಡಿ. ಕಾನೂನಿನಂತೆ ಬಂಧಿಸಲಾಯಿತು. ಅವರು ಚಿತ್ತಶುದ್ಧಿಗಾಗಿ ೫ ದಿನ ಉಪವಾಸ ಕೈಕೊಂಡಿರುವರು. ಗದಗಿನ ಶ್ರೀ. ಶ್ರೀನಿವಾಸಾಚಾರ್ಯ ಮುಳಗುಂದ ವಕೀಲ ಮತ್ತು ಅವರ ತಮ್ಮ ಶ್ರೀ. ಜಯರಾಮಾಚಾರ್ಯ ಇವರನ್ನು ತಾಯಿಯ ಅಸೌಖ್ಯದ ಬಗ್ಗೆ ಪೆರೋಲ್ ಬಿಡುಗಡೆಯಾಗಿದೆ. ಧಾರವಾಡ ಜಿಲ್ಲಾ ಸ್ಕೂಲ ಬೋರ್ಡ ವೈಸ್ ಚೇರ್‌ಮೇನ್ ಶ್ರೀ ಕರಿಯಪ್ಪ ಹುಚ್ಚಣ್ಣವರ ಇವರನ್ನು ಡಿ. ಕಾನೂನಿನಂತೆ ಬಂಧಿಸಲಾಗಿದೆ. ನೊಬಳದಲ್ಲಿ ಮೆರವಣಿಗೆ ತೆಗೆದರೆಂದು ಶ್ರೀ. ದುಂದೂರ ವಕೀಲ ಮೊದಲಾದವರ ಮೇಲೆ ಹಾಕಿದ ಖಟ್ಲೆ ಬಿಡಲ್ಪಟ್ಟಿದ್ದು ವಕೀಲರನ್ನು ಸ್ಥಾನಬದ್ಧರಾಗಿಡಲಾಗಿದೆ. ಧಾರವಾಡ ಜಿಲ್ಲಾ ಸ್ಕೂಲ್‌ಬೋರ್ಡ ಚೇರ್‌ಮೇನ್ ಶ್ರೀ. ಕೆ. ಎಸ್. ಪಾಟೀಲರು ಸೆರೆಮನೆ ಸೇರಿದ್ದರಿಂದ ಶ್ರೀ. ಎ. ಎಸ್. ಪಾಟೀಲರು ಆ ಸ್ಥಾನಕ್ಕೆ ಬಂದಿದ್ದಾರೆ. ಹಾವೇರಿ ತಾಲೂಕಿನ ಕೆಲವು ಹಳ್ಳಿಗಳ ಚಾವಡಿ ಸುಟ್ಟು, ತಂತಿ ಕಡಿದದ್ದಾಗೂ ಸಂಕ ಮುರಿದ ಆರೋಪದ ಮೇಲೆ ಬಸಪ್ಪ ಜಂಗಿ, ಶಂಕರ ಮೋಟೆ ಬೆನ್ನೂರ, ಗಂಗಪ್ಪಾ ಅರ್ಕಸಾಲ, ವರೀರಪ್ಪ ಹತ್ತಿಮತ್ತೂರ, ಶಿವಪ್ಪ ಉಪ್ಪಿನ, ರಾಚಪ್ಪ ಕೋಳಣವ, ಬಸಪ್ಪಾ ಸಿಂಧಿ, ಶಿದ್ಧಿಂಗಪ್ಪ ಹೊಸಮನೆ, ರಾಮಪ್ಪ ಸುಣಗಾರ, ಸುದರ್ಶನ ಜಿಕಲಾಲ, ಪುಂಡ್ಲೀಕಪ್ಪ ದಾಸರ, ಪಂಚಪ್ಪ ವಳಸಂಗಡ, ಮತ್ತು ತೋಟದ ಯಲ್ಲಾಪುರದ 4–5 ಜನರನ್ನೂ ಬಂಧಿಸಲಾಗಿದೆ.

ಗದಗ ಶ್ರೀ ಬಿಂದೂರಾವಯಾವಗಲ್ಲ ಕಷ್ಣರಾವ ಕುಲಕರ್ಣಿ ಮತ್ತು ಪ್ರಹ್ಲಾದ ನೈಲವರ ಇವರನ್ನು ಸೆರೆಹಿಡಿದರು.

ಕನ್ನಡ ಸಂಸ್ಥಾನಗಳು

ಶಿಕಾರಿ ಪುರದ ಶ್ರೀ. ಎನ್. ಆರ್. ಗಿರಿಮಾಜಿಯವರ ಬಂಧನವಾಗಿದೆ. ಭದ್ರಾವತಿ ಗೋಲಿಬಾರ ಖಟ್ಲೆ ಸಂಬಂಧ. ಕೂಲಿಗಾರರ ಮೇಲೆ ಹಾಕಿದ ಖಟ್ಲೆಯನ್ನು ಸರಕಾರ ಹಿಂತೆಗೆವುದೆಂದು ಸುದ್ದಿ. ಶಿವಮೊಗ್ಗದಲ್ಲಿ ಕಳೆದ ವಾರದಲ್ಲಿ ಸುಮಾರು ೪೦ ಜನ ರಾಜಕೀಯ ಕೈದಿಗಳನ್ನು ಬಿಟ್ಟಿರುವರು. ತೊರಗಲ್ಲಿ ಜಹಾಗಿರಿಯ ಅಂಚೆ ಕಚೇರಿ ಮತ್ತು ಕಳ್ಳಿನಂಗಡಿ ಧಾಳಿಯಿಡಲಾಗಿದೆ. ಚಂದದಾಗಿಯ ಪಿ. ಡಬ್ಲ್ಯು. ಡಿ. ಕಚೇರಿಗೆ ಬೆಂಕಿ ಹಚ್ಚಿದ ಖಟ್ಲೆಯಲ್ಲಿ ೧೧ ಜನರ ಬಂಧನವಾಗಿದೆ.

ಶಿವಮೊಗ್ಗೆಯ ಶ್ರೀಗಳಾದ ರಘುರಾಮ ಭಟ್ಟ ಹಾಗೂ ನಾಗಭೂಷಣರಾವ್ ಇವರಿಗೆ ೬, ೬ ತಿಂಗಳ ಶಿಕ್ಷೆ, ಶ್ರೀಗಳು ಶಾಮು ಪತಾಳೆ, ನಾರಾಯಣ ಶೆಟ್ಟಿ, ಕೃಷ್ಣಪ್ಪ ಗೌಡ ಹಾಗೂ ಗೋಪಾಳ ಗೌಡ ಇವರಿಗೆ ೩, ೩, ತಿಂಗಳ ಶಿಕ್ಷೆ ವಿಧಿಸಲಾಗಿದೆ. ಬೆಂಗಳೂರು ಸೆರೆಮನೆಯಲ್ಲಿ ರಾಜಕೀಯ ಕೈದಿಗಳ ಬೇಡಿಕೆ ಮನ್ನಿಸದ್ದರಿಂದ ಆ ಮರಣ ಉಪವಾಸವನ್ನವರು ಪ್ರಾರಂಭಿಸಿದ್ದು, ಈಗವರ ಬೇಡಿಕೆ ಮನ್ನಿಸಲು ಮೂರು ದಿನಗಳ ನಂತರ ಉಪವಾಸ ನಿಂತಿತು. ಶಿಕಾರಪುರದ ಶ್ರೀ. ಎ. ಎಸ್. ಶಿವಪ್ಪರು ಗಡಗಣಿಯಲ್ಲಿ ಬಂಧಿತರಾಗಿರುವರು. ಇವರು ಕಣ್ಮರೆಯಾಗಿದ್ದರು.

ಉತ್ತರ ಕನ್ನಡ

ಕುಮಟೆಯಲ್ಲಿ ಶ್ರೀ. ಗೋವಿಂದ ಕೇಶವ ಶ್ಯಾನಭಾಗರು ಮತ್ತು ವೈಕುಂಠ ಭಟ್ಟರು ಪುಂಡುಗಂದಾಯ ಕೊಡಲು ನಿರಾಕರಿಸಿದ್ದರಿಂದ ಅವರ ಮನೆ ಜಪ್ತಿ ಮಾಡಿ ಅಕ್ಕಿ ಹಣಗಳನ್ನು ಜಪ್ತಿ ಮಾಡಿದರು. ಕುಮಟಾ ತಾಲೂಕು ಮೊಬರದ ಪಟೇಲ ಶ್ರೀ. ನಾರಾಯಣ ಪಟಗಾರರ ಮನೆಯ ಶ್ರೀ. ನಿಂಗಪ್ಪ ಪಟಗಾರ ಇವರು ಮಾಜಿಸ್ಟ್ರೇಟರ ಮುಂದೆ ಹಾಜರಾಗದ್ದರಿಂದ ಅವರ ಮನೆಯಲ್ಲಿದ್ದ ರೂ. ೧೫೦೦ರ ಆಸ್ತಿಯನ್ನು ಜಪ್ತಿ ಮಾಡಿದರು. ಪಟೇಲರನ್ನು ಸೆರೆಹಿಡಿಯಲಾಗಿದೆ. ಗೋಕರ್ಣದ ಶ್ರೀ. ರಾಮಕೃಷ್ಣ ಗಾಯತ್ರಿ ಮತ್ತು ರಾಮುಭಟ್ಟ ಇವರ ಮನೆಯನ್ನು ಪುಂಡುಗಂದಾಯದ ಸಲುವಾಗಿ ಜಪ್ತಿ ಮಾಡಿದರು. ಶ್ರೀ. ಜೈರಾಮಕೃಷ್ಣ ಭಟ್ಟ ಇವರ ಶೋಧನೆಗಾಗಿ ಗೋಕರ್ಣದಲ್ಲಿ ಕೆಲ ಮನೆ ಶೋಧಿಸಿದರು. ತಂತಿ ಕಡಿದ ಆರೋಪದ ಶ್ರೀಗಳಾದ ಶಿವಪ್ಪ, ವೆಂಕಪ್ಪ ಇವರಿಗೆ ಕ್ರಮಶಃ ೬, ಮತ್ತು ೪ ತಿಂಗಳ ಶಿಕ್ಷೆಯಾಯಿತು. ಸಿರ್ಸಿಯ ಶ್ರೀ ಕೃಷ್ಣ ಸುಬ್ಬಣ್ಣ ಭಟ್ಟರು ಕಲೆಕ್ಟರರಿಗೆ ಪತ್ರ ಬರೆದು ಪುಂಡುಗಂದಾಯ ಅನ್ಯಾಯದ್ದೆಂದು ತಿಳಿಸಿದ್ದರು. ಇವರ ಮನೆ ಜಪ್ತಿಮಾಡಿಕೊಂಡು ಹೋದರು.

ನೋಟಗಳು...

ಮಿತ್ರರು ದಿನದಿಂದ ದಿನಕ್ಕೆ ಗೆಲ್ಲುತ್ತಾ ಇದ್ದಾರೆ; ವೀರರಂತೆ ಹೋರಾಡಿದರೆ ಗೆಲ್ಲುವುದೇನೋ ಸಹಜವೆ. ಸಣ್ಣ ಸಣ್ಣವಾದರೂ, ಇಟಲಿಯ ಕೆಲವು ದ್ವೀಪಗಳು ಮಿತ್ರರಿಗೆ ಈಗ ಶರಣಾಗಿವೆ; ಮಿತ್ರರಾಷ್ಟ್ರಗಳಲ್ಲಿ ಈ ಬಗ್ಗೆ ಸಂತೋಷವೇ ಸಂತೋಷ!

ನಮ್ಮ ಜಿಲ್ಲೆಯಲ್ಲಿ ಇತ್ತೀಚೆಗೆ ದಿನದಿನಕ್ಕೆ ಮಳೆ ಜೋರಾಗಿ ಬೀಳುತ್ತಲೇ ಇದೆ. ಮಳೆಗಾಲವಾದ್ದರಿಂದ ಇದೂ ಕೂಡಾ ಸಹಜವೆ. ಮಳೆಗಾಲ ಹೆಚ್ಚಿದಂತೆ ಅಕ್ಕಿಯ ಕ್ರಯವೂ ಹೆಚ್ಚುತ್ತಿದೆ. ಈಗಾಗಲೇ ಕೆಲವರು–ಸಣ್ಣ ಪ್ರಮಾಣದಲ್ಲಾದರೂ ಮುಡಿ ಒಂದರ ಹದಿನಾಲ್ಕು ರೂಪಾಯಿ ವರೆಗಿನ ಕ್ರಯಕ್ಕೆ ಮಾರಾಟಮಾಡುತ್ತಿದ್ದಾರೆ. ನಮ್ಮೂರ ಭೂಮಾಲಕರಿಗೆ ಮತ್ತು ಸಾಹುಕಾರರಿಗೆ ಈಗ ಸಂತೋಷವೇ ಸಂತೋಷ!

ಮಿತ್ರರು ಇಟಲಿಯನ್ನು ಬೇಗನೇ ಆಕ್ರಮಿಸುವರಿದ್ದಾರೆಂದು ಕೇಳುತ್ತೇವೆ; ಇದರೊಡನೆ ಯೂರೋಪ್ ಧಾಳಿಯೂ ತೊಡಗುವುದೆಂದು ಕೆಲವರು ಹೇಳುತ್ತಾರೆ. ದ್ವಿತೀಯರಂಗವೆಂದರೆ ಇದೆ ಏನೋ ಎಂದು ಕೆಲವರ ಕುತೂಹಲವಾಗಿದೆ.

ಮಾರ್ಗದ ಬದಿಯಲ್ಲಿ ಮನೆ ಅಂಗಡಿಗಳಿದ್ದವರು ಮುನ್ಸಿಪಲ್ ಸ್ಥಳವನ್ನು 'ಅತಿಕ್ರಮ' ಮಾಡುತ್ತಾರೆ. ಹಾಗೆ 'ಅತಿಕ್ರಮ' ಮಾಡುವುದು ತಪ್ಪಾದರೂ, ಅತಿಕ್ರಮಗಳು ನಡೆಯುತ್ತಲೇ ಇವೆ. ಆದ್ದರಿಂದ 'ಅತಿಕ್ರಮಿಸಿದವರು ಆ ಸ್ಥಳಗಳನ್ನು ಸ್ವತಃ ಸರಿಪಡಿಸಬೇಕು, ಇಲ್ಲದಿದ್ದರೆ ಮುನ್ಸಿಪಾಲಿಟಿಯವರೇ ತೆಗಿಸಿ, ಆ ಖರ್ಚನ್ನು ಸಂಬಂಧಪಟ್ಟವರಿಂದ ವಸೂಲು ಮಾಡುವರು' ಎಂಬ ನೋಟೀಸು ಹೊರಟಿದೆ.

ಹಿಟ್ಲರನು ಪೋಲೆಂಡ್ ಮೊದಲ್ಗೊಂಡು ಹದಿಮೂರು ಹದಿನ್ನಾಲು ರಾಷ್ಟ್ರಗಳನ್ನು ಯೂರೋಪಿನಲ್ಲಿ ಅತಿಕ್ರಮಿಸಿದ್ದಾನೆ. ಎರಡು ಮೂರು ವರ್ಷಗಳಾದರೂ ಆವನು ತನ್ನ 'ಅತಿಕ್ರಮ'ವನ್ನು ಹಿಂದೆಗೆದು ಕೊಳ್ಳುವಂತೇನೂ ತೋರುವುದಿಲ್ಲ. ಆದ್ದರಿಂದ ಮಿತ್ರರೇ ಈಗ ಯುರೋಪು ಧಾಳಿಗೆಮುನಮಾಡಿದ್ದಾರೆ.

ಭಂಡಷಾಳ ಶಾಹೀರಾಷ್ಟ್ರದ ನಾಯಕರು, ರೂಸ್‌ವೆಲ್ಟ್, ಚರ್ಚಿಲರು ಸಮತಾವಾದೀ ಮುಖಂಡ ಸ್ಟಾಲಿನರೊಡನೆ ಸದ್ಯ ಸ್ನೇಹದಿಂದಿದ್ದಾರೆ; ಸಮಾನಶತ್ರು ನಾಜಿ ಹಿಟ್ಲರನೆದುರು ಹೋರಾಡುವಲ್ಲಿ ಎಲ್ಲರೂ ಈಗ ಮಿತ್ರರಾಗಿದ್ದಾರೆ.

'ಪಾಕಿಸ್ಥಾನ'ದ ಸ್ವಪ್ನಸಾಮ್ರಾಟರಾದ ಜಿನ್ನಾ ಸಾಹೇಬರ ವಿಷಯದಲ್ಲಿ ಭಾರತದ ಕಮ್ಯುನಿಸ್ಟ್ ಧುರೀಣ ಕಾಮ್ರೇಡ್ ಪಿ. ಸಿ. ಜೋಶಿಯವರು ಪ್ರೇಮಪೂರ್ಣರಾಗಿದ್ದಾರೆ; ಗಾಂಧಿಜಿ, ಜಿನ್ನರ ಬೇಟಿಗಾಗಿ ಬರೆದ ಪತ್ರದ ವಿಷಯ ಜಿನ್ನರ ಹೇಳಿಕೆ ಸರಿಯಾದದ್ದೆಂದು ಅವರು ಬೆನ್ನು ತಟ್ಟುತ್ತಾರೆ! ಇಲ್ಲಿ ಸಮಾನಶತ್ರು ಕಾಂಗ್ರೆಸೋ, ಗಾಂಧಿಜಿಯೋ?

ಅಂತೂ ಮಿತ್ರರ ಇಟಲಿ ಆಕ್ರಮಣ, ಯೂರೋಪ್ ಧಾಳಿ, ದ್ವಿತೀಯ ರಂಗ, ರೂಸ್‌ವೆಲ್ಟ್–ಚರ್ಚಿಲ್–ಸ್ಟಾಲಿನರ ಮೈತ್ರಿಯ ಫಲಿತಾಂಶ ಇವುಗಳೆಲ್ಲಾ ಅತ್ಯಂತ ಗಮನಾರ್ಹವಾದ ವಿಷಯಗಳು. ಅಂತೆಯೇ ಅಕ್ಕಿಯ ಕ್ರಯ, ಮುನ್ಸಿಪಾಲಿಟಿಯವರ ಅತಿಕ್ರಮಾಜ್ಞೆ, ಜೋಶಿ–ಜಿನ್ನಾ ಪ್ರೇಮ ಇವುಗಳೂ ಗಮನಿಸದಿರತಕ್ಕ ಸಂಗತಿಗಳೇನೂ ಅಲ್ಲ!

THE CANARA BANKING CORPORATION Ltd

(Incorporated in British India with limited liability).

STATEMENT OF AFFAIRS AS ON 31ST DECEMBER 1942.

Capital & Liabilities	Rs.	As.	Ps.	Property & Assets	Rs.	As.	Ps.
Paid up Capital	6,36,890	0	0	Office premises,			
Reserve & other funds	3,71,882	13	11	furniture, etc.	91,659	0	0
Deposits	41,83,873	4	1	Advances	31,28,612	4	9
Due to Bankers	5,08,545	12	1	Investment on			
Bills per contra	3,59,357	12	1	Govt. Securities			
Sundries including				etc. at cost	15,34,536	14	3
branch adjustments &				Sundries	74,183	5	7
undisbursed profits	2,83,736	5	9	Bills for Collection	3,59,357	12	1
Profit for the year 1942	49,461	3	5	Cash on Hand &			
				with bankers	12,05,397	14	8
Total Rs.	63,93,747	3	4	Total Rs.	63,93,747	3	4

ಸಿನೆಮಾ ಸುದ್ದಿ

ಚೀನದ ಕುರಿತು

ಕೆಲವು ಹೊಸ ಚಿತ್ರಗಳನ್ನು ತಯಾರಿಸುವುದಾಗಿ, ಹೋಲಿವುಡ್ ನಿರ್ಮಾಪಕರು ಪ್ರಚಾರ ಮಾಡುತ್ತಿದ್ದಾರೆ. ಅಲ್ಲಿನ ಇತ್ತೀಚಿಯ ಸುದ್ದಿಯೊಂದು, ಪರ್ಲ್ ಬಕ್ಕ್ ಬರೆದ ದಳಪತಿ ಚಿಯಾಂಗರ ಜೀವನ ಚರಿತೆಯನ್ನು ಟ್ವೆಂಟಿಯೆತ್ ಸೆಂಚುರಿ ಫೋಕ್ಸ್‌ನವರು ತಯಾರಿಸುವರೆಂದು. ಚೀನದ ಮಹಾವೀರ ಸನ್‌ಯಾಟ್‌ಸೇನ್ ಇವರ ಜೀವನವನ್ನು ಚಿತ್ರೀಕರಿಸುವರೆಂದೂ, ಬಹಳ ಕಾಲದಿಂದ ಸಿನೆಮಾರಂಗದಿಂದ ದೂರಿದ್ದ ಕೆತರಿನ್ ಕಾರ್ನೆಲ್ ಶ್ರೀಮತಿ ಸನ್‌ಯಾಟ್ ಸೇನರ ಪಾತ್ರ ಅಭಿನಯಿಸುವಳೆಂದೂ ಬೇರೊಂದು ಸುದ್ದಿ. 'ಚೀನಾಗರ್ಲ್' ಎಂದು ಇತ್ತೀಚೆಗೆ ಹೋಲಿವುಡ್ ಚಿತ್ರವೊಂದು ತಯಾರಾಗಿದೆ. ಈ ಚಿತ್ರದಲ್ಲಿ ಓರ್ವ ಭಾರತೀಯನ ಪಾತ್ರವೂ ಇದೆ. ವಿಮರ್ಶಕರೆನ್ನುತ್ತಾರೆ 'ಹೋಲಿವುಡ್ ಇದೇ ಪ್ರಥಮ ಸಲ ಭಾರತೀಯರಿಗೆ ಅನ್ಯಾಯ ಮಾಡದೆ ಒಂದು ಪಾತ್ರ ಸೃಷ್ಟಿ ಮಾಡಿದ್ದು'' ಎಂದು! ಹಾಗಾದರೆ 'ಚೀನಾಗರ್ಲ್'ನ್ನು ನಾವು ನೋಡಿಯೇ ತೀರಬೇಕು!

ಹೊಸ ಕನ್ನಡ ತಾರೆ

ಕುಮಾರಿ ಪಂಢರೀಬಾಯಿ, ಇದೀಗ ಸಿನೆಮಾ ರಂಗದಲ್ಲಿ ಪ್ರಥಮ ಪದಾರ್ಪಣ ಮಾಡಿದ್ದಾಳೆ. 'ವಾಣಿ' ಚಿತ್ರದಲ್ಲಿ ಇವಳು ನಟಿಸುವಳು. ಪಂಢರೀಬಾಯಿ ಕರ್ನಾಟಕದ ಪ್ರಸಿದ್ಧ ಕೀರ್ತನಕಾರರೂ ಅಭಿನಯಕಾರರೂ ಎನಿಸಿದ ಶ್ರೀ ಎಂ. ವಿಮಲಾನಂದ ದಾಸರ ಸಹೋದರಿ, ಕೇವಲ ಹನ್ನೆರಡು ವರ್ಷದ ಕುಮಾರಿ. ಇಷ್ಟು ಚಿಕ್ಕ ವಯಸ್ಸಿನಲ್ಲಿಯೇ ಹಿಂದಿ, ಮರಾಠಿ, ಕನ್ನಡ ಭಾಷೆಗಳಲ್ಲಿ ಕೀರ್ತನೆಗಳನ್ನು ಮಾಡಿ ಪಂಡಿತ ಪಾಮರರ ಮನ ಮೆಚ್ಚಿಸಿದ್ದಾಳೆ. ಅನೇಕ ಸುವರ್ಣ ಪದಕ ಪ್ರಶಸ್ತಿ ಪತ್ರ ಪಡೆದಿರುವಳು. ಈ ಉದಯೋನ್ಮುಖ ತಾರೆ ಕನ್ನಡ ಸಿನೆಮಾರಂಗದಲ್ಲಿ ನವನೂತನ ಪ್ರಭೆಯಿಂದ ಬೆಳಗಲಿ!

ಬರುವಾರ 4 ಚಿತ್ರಗಳು?

ಈಗ ತಯಾರಾಗಲಿವೆಯೆಂದು ಸುದ್ದಿ ಕೇಳುತ್ತೇವೆ, ರಮಣೀಕಲಾಲ ಮೋಹನಲಾಲ ಕಂಪನಿಯವರ ಬಗ್ಗೆ. ಈ ಚಿತ್ರಗಳನ್ನವರು ತಯಾರಿಸುವರಂತೆ! ನಿದುಲಕ್ಷರೂಪಾಯಿಗೆ ಈ ಕರಾರು ಮಾಡಿಕೊಂಡಿದ್ದಾರಂತೆ. ಚಿತ್ರಗಳ ಹೆಸರು ಪಾತ್ರವರ್ಗಗಳಾವುವೂ ಇನ್ನೂ ಪ್ರಕಟವಾಗಿಲ್ಲ. ಆದರೆ ಮೊನ್ನೆ ಮೊನ್ನೆ ಭಾರತೀಯ ಚಲಚ್ಚಿತ್ರಲೋಕದಲ್ಲಿ ಕಲೆಯ ಕೊಲೆಯಾಗುತ್ತಿರುವುದನ್ನು ಕಂಡು, ಇದಕ್ಕಾಗಿ ಹೇಸಿ, ಗುರುದೇವ ರವೀಂದ್ರರ ಸಂದೇಶವನ್ನು ಮನ್ನಿಸಿ, ಆತ್ಮಸಾಕ್ಷಿಗೆ ಅನುಸರಿಸಿ, 'ನಾ ಸಿನೆಮಾಲೋಕದಿಂದ ಹಿಂದೆಗೆಯುತ್ತೇನೆ' ಎಂದು ಎದೆ ತಟ್ಟಿ ಹೇಳಿದ ಇವರು ಪುನಃ ಸಿನೆಮಾರಂಗಕ್ಕೆ ಬರುವರೇ ಎಂಬುದಿದು ನಮ್ಮ ಪ್ರಶ್ನೆಯಾಗಿದೆ!

ನರಿಮೆನ್ ಸಿನೆಮಾ

ತಯಾರಿಸಿದ್ದರು! ರಾಷ್ಟ್ರೀಯ ನಾಯಕ, ಉಗ್ರಗಾಮಿ ರಾಜನೀತಿಜ್ಞ, ಲಲಿತಕಲೆ ಕಡೆಗೆ ಸಂದಿದ್ದ ಸುದ್ದಿ ಕೇಳಿ ಯಾರಾದರೂ ಬೆರಗಾಗಬಹುದು. ಆದರೆ ಅವರೇ ತಮ್ಮ ಸಾಹಸವನ್ನು 'ಫಿಲ್ಮಿಂಡಿಯಾ' ಬಾತ್ಮೀದಾರನೊಡನೆ ಹೇಳಿದರು. ಅವರು ತಯಾರಿಸಿದ ಸಿನೆಮಾ ಆದರೂ ಕಾಂಗ್ರೆಸಿನ ವಿಷಯವೇ, ಕಾಂಗ್ರೆಸಿನ ಕೀರ್ತಿ ಗೌರವ ಪ್ರಚಾರ ಚಿತ್ರ ಅದು. ಅದನ್ನು ಪ್ರದರ್ಶಿಸುವ ಥಿಯೇಟರುಗಳು ದೊರಕದೆ ಹೋಗಲು, ಸ್ವತಃ ನರಿಮನರೇ ಬೊಂಬಾಯಿ 'ಜಿನ್ನಾ ಮೆಮೋರಿಯಲ್ ಹಾಲ್'ನಲ್ಲಿ ಸಾವಿರಾರು ಮಂದಿಗೆ ಅದನ್ನು ತೋರಿಸಿದರು. ಆ ಚಿತ್ರದಲ್ಲಿ, ರಾಷ್ಟ್ರದ ತರುಣ ತರುಣಿಯರು, ತ್ರಿವರ್ಣರಂಜಿತ ರಾಷ್ಟ್ರಧ್ವಜವನ್ನು ಹಿಡಿದುಕೊಂಡು ಹಳ್ಳಿಗಳಿಗೆ ಹೋಗಿ ರಾಷ್ಟ್ರದ ಸ್ವಾತಂತ್ರ್ಯ ಸಂದೇಶ ಸಾರುವ, ರಾಷ್ಟ್ರದ ಅಭಿಮಾನ ಗೌರವಗಳನ್ನು ಉಳಿಸುವಂತೆ ಬೋಧಿಸುವ, ಪ್ರಭಾತಫೇರಿ ಧ್ವಜವಂದನೆ ಮಾಡುವ, ಸ್ವಯಂಸೇವಕ ಡ್ರಿಲ್, ಹಾಗೂ ರಾಷ್ಟ್ರಾಭಿಮಾನವನ್ನು ಉಕ್ಕಿಸುವ ಮಾತುಗಳೇ ಇದ್ದುವು.

ಇಂಡಿಯನ್ ಪೆನಲ್ ಕೋಡಿಗೆ ವಿರೋಧವಾದ ದ್ದು ಅದರಲ್ಲಿ ಏನೂ ಇರದಿದ್ದರೂ, ಸೆನ್ಸರ್ ಬೋರ್ಡಿನವರು, ಆ ಚಿತ್ರವನ್ನು ಪ್ರದರ್ಶಿಸಲು ಅಪ್ಪಣೆ ಕೊಡಲಿಲ್ಲ, ಆದಾಗಿ ಯಾವ ಥಿಯೇಟರಿನವರೂ ಅದನ್ನು ಪ್ರದರ್ಶಿಸಲ್ಕೊಪ್ಪಲಿಲ್ಲ. ಆದರೆ, ನರಿಮೆನ್ ಸುಮ್ಮಗಿರುವವರೇ? ಅಧಿಕಾರಿಗಳಿಗೆ ಮುಂಚಿತವಾಗಿ ನೋಟೀಸು ಕೊಟ್ಟು, ಬಂದದ್ದಕ್ಕೆ ಎದೆಗೊಡಲು ಸಿದ್ಧರಾಗಿ, ನರಿಮೆನ್, ಬೊಂಬಯಿ 'ಜಿನ್ನಾ ಮೆಮೋರಿಯಲ್ ಹಾಲ್'ನಲ್ಲಿ ಸಾವಿರಾರು ಮಂದಿಮುಂದೆ ಇದನ್ನು ಪ್ರದರ್ಶಿಸಿದ್ದರು ಏಕೋ, ಅಧಿಕಾರಿಗಳು ನರಿಮನರನ್ನು ಅದಕ್ಕಾಗಿ ಬಂಧಿಸಲಿಲ್ಲ. ವೀರ ನರಿಮನರ ಸಿನೆಮಾವೀರ ಇಹಾತಿಸದ ಸಿನೆಮಾ!

ಆಫ್ರಿಕಾ ಜಯದಲ್ಲಿ

ಭಾರತದ ವೀರಯೋಧರ ಸಾಹಸ, ಆಧರಲ್ಲೂ ಚತುರ್ಥ ದಲದವರ ಪರಾಕ್ರಮ ಹೆಚ್ಚಿನದೆಂದು, ಬ್ರಿಟಿಷರಿಗೂ ಗೊತ್ತು, ಭಾರತೀಯರಿಗೂ ಗೊತ್ತು! ವೇವೆಲರೂ ಬಲ್ಲರು, ವೈಸರಾಯರೂ ಬಲ್ಲರು, ಅಮೆರಿಕವೂ ಭಾರತದ ಈ ಸಹಾಯವನ್ನು ಮುಕ್ತಕಂಠ ಹೊಗಳಿದೆ. ಆದಾಗಿ ಈ ವಿಷಯವಿಂದು ಜಗತ್ತಿಗೇ ಗೊತ್ತಿದೆ! ಆದರೆ ಬ್ರಿಟಿಷ್ ವಾರ್ ಪ್ರಚಾರ ಚಿತ್ರ, 'ಡೆಸರ್ಟ್ ವಿಕ್ಟರಿ' ಎಂಬ ಆಫ್ರಿಕಾ ವಿಜಯವನ್ನು ವಿವರಿಸುವ ಚಿತ್ರದಲ್ಲಿ ಭಾರತೀಯ ಯೋಧರಿಗೆ ಏನೇನೂ ಪ್ರಾಧಾನ್ಯತೆ ಕೊಟ್ಟಿಲ್ಲ ಮಾತ್ರವಲ್ಲದೆ ಭಾರತೀಯರನ್ನು ಬಹಳ ಅಪ್ರಧಾನವಾಗಿ ತೋರಿಸಿ, ಅವರಿಂದ ಏನೇನೂ ಉಪಕಾರ ಆಗಿಲ್ಲವೆಂಬಂತೆ ತೋರಿಸಲಾಗಿದೆ, ಇದರಿಂದಾಗಿ, ಭಾರತದ ಹಲವಾರು ಪತ್ರಿಕೆಗಳು, 'ರೂಪವಾಣಿ' 'ಸೆಂಟಿನಲ್' ಮೊದಲಾದವುಗಳು ಬ್ರಿಟಿಷ್ ವಾರ್ ಪ್ರಚಾರಕರ ಈ ದುರ್ಬುದ್ಧಿಯನ್ನು ಖಂಡಿಸಿ ಬರೆದಿವೆ.

ಅ. ಭಾ. ಪ್ರಾಗತಿಕ ಲೇಖಕರು

ಬೊಂಬಯಿಯಲ್ಲಿ ಮೊನ್ನೆ ತಮ್ಮ ನಾಲ್ಕನೆಯ ಸಮ್ಮೇಳನ ಸೇರಿದಲ್ಲಿ ಭಾರತ ಚಲಚ್ಚಿತ್ರದ ಕುರಿತು ಒಂದು ನಿರ್ಣಯ ಮಾಡಿದ್ದಾರೆ, ಬರೇ ದುಡ್ಡು ಮಾಡುವ ಸಲುವಾಗಿ, ಜನರ ಮನಸ್ಸನ್ನು ಸುಲಿಗೆ ಮಾಡಲು ಹೊಲಸು ಚಿತ್ರಗಳನ್ನಾದರೂ ತಯಾರಿಸುವ ಕೆಲ ಸಿನೆಮಾ ನಿರ್ಮಾಪಕರ ಬುದ್ಧಿಯನ್ನು ಉಗ್ರವಾಗಿ ಟೀಕಿಸಿದ್ದಾರೆ. ಇತರ ಸಾಹಿತ್ಯಾಂಗಗಳಂತೆ, ಚಲಚ್ಚಿತ್ರವಾದರೂ ರಾಷ್ಟ್ರದ ಮುನ್ನಡೆಯಲ್ಲಿ ನೆರವಾಗುವ ರೀತಿಯಲ್ಲಿ ತಯಾರಾಗಬೇಕೆಂದೂ, ಆ ಮೂಲಕ ಸಮಾಜಕ್ರಾಂತಿ ಸಾಧಿಸಬೇಕೆಂದೂ ಅವರು ಹಾರೈಸಿದ್ದಾರೆ. ಆದಾಗಿ, ಭಾರತೀಯ ಚಲಚ್ಚಿತ್ರಗಳನ್ನು ರಾಷ್ಟ್ರೀಯ ಪ್ರಗತಿಪರ ಮಾರ್ಗದಲ್ಲಿ ಮುನ್ನಡೆಸುವಂತೆ ಅ. ಭಾ. ಪ್ರಾಗತಿಕ ಲೇಖಕರು ಸಾಹಸ ಮಾಡಬೇಕೆಂದು ನಿರ್ಣಯಿಸಿದ್ದಾರೆ.

ಜಿಂಜರ್ ರೋಜರ್ ಮದುವೆ

ಆಗುತ್ತಾಳೆ. ಅಮೆರಿಕದ ನೌಕಾಪಾತೆಯ ಜೇಕ್ ಬ್ರಿಗ್ಸ್‌ವರ, ಆಕೆಯ ಹಲಗಾಲದ ಕನಸುಗಾರ! ಆರಡಿ, ಎರಡಿಂಚು ಎತ್ತರದ, ಬೂದು ಕೂದಲಿನ, ಬೂದುಗಣ್ಣಿನ, ಒಳ್ಳೆ ಜತೆಗಾರ, ಚುರುಕಿನವ, ಬುದ್ಧಿಶಾಲಿ, ಜೇಕನನ್ನು ನಾನು ಮೊದಲಸಲ ಸಾನ್‌ಡಿಗೋದಲ್ಲಿ ಭೇಟಿಯಾದೆ. ಮರುದಿನವೇ ಆತನಿಗೆ ಪ್ರೇಮ ಪತ್ರ ಬರೆದೆ; ಮುಂದೆ ನಾವು ಹತ್ತು ಸಲ ಸಂಧಿಸಿದೆವು'' ಎಂದು ಆಕೆ ಆತನ ಕುರಿತು ಬರೆಯುತ್ತಾಳೆ. ಜೇಕ್, ಹಿಂದೆ ಹೋಲಿವುಡ್ ನಟ, 'ದಿ ನೇವಿ ಕಮ್ಸ್ ಥ್ರೂ' ದಲ್ಲಿ ನಟಿಸಿದ್ದಾನೆ.

'ತೋ–ತೀ–ತೇ'

ಇದೂ ಒಂದು ಸಿನೆಮದ ಹೆಸರು! ಕೇಳಿದರೆ ವಿಚಿತ್ರವೆನಿಸುತ್ತದೆ. ವಿನಾಯಕ–ಮೀನಾಕ್ಷಿ ಮತ್ತು ಲೀಲಾ ಇದರಲ್ಲಿ ನಟಿಸುವರು. 'ಕೋಕಿಲ'ದ ಈ ಕಥಾಲೇಖಕರು 'ತೋ–ತೀ–ತೇ' ಎಂದರೆ 'ಅವನು–ಅವಳು–ಅದು' ಎಂದು ಅರ್ಥ! ಏನಾದರೂ ಒಂದು ಹೆಸರಿಡಬೇಕು! ಶೇಕ್‌ಸ್ಪೀಯರ್ ಹೇಳಲಿಲ್ಲವೇ, ಹೆಸರನೆಲ್ಲೇನಿದೆ!

NOTICE

ಪುತ್ತೂರು ಡಿ. ಮು. ಕೋರ್ಟಿನಲ್ಲಿ

S. C 80/43

ಮೋಂಟುಕಾನ ಗೋವಿಂದಯ್ಯ—ವಾದಿ

N S ಕೊರಗಪ್ಪ ಪೂಜಾರಿ–ಪ್ರತಿವಾದಿ

ಪ್ರತಿವಾದಿಯಿಂದ ವಾದಿಗೆ ಬರ ಬಾಲಗೇಣಿಯ ಗೇಣಿ ಬಾಕಿ ರೂ 253–4–10ಕ್ಕೆ ದಾವೆ ಮಾಡಿ ಅದರ ನೋಟೀಸಿನ ವ್ಯಾದೆ ತಾರೀಕು 24—6–1943ಕ್ಕೆ ಇಟ್ಟಿರುವದ್ರಿಂದ ಆ ವ್ಯಾದೆಗೆ ಪ್ರತಿವಾದಿಯು ತನ್ನ ಆಕ್ಷೇಪಗಳೇನಾದರೂ ಹೇಳುವದಿದ್ದರೆ ಆ ವ್ಯಾದೆಗೆ ತಪ್ಪದೆ 11 ಘಂಟೆಗೆ ಈ ಕೋರ್ಟಿನ ಮುಂದೆ ಹಾಜ್ರಾಗಿ ಒರಹಮೂಲಕ ಹೇಳಿಕೊಳ್ಳತಕ್ಕದ್ದು ತಪ್ಪಿದ್ರೆ ಆತನಸ್ಥಿ ಶಿವಾಯಿ ಎಂತ ಮಾಡಿ ಈ ದಾವೆಯನ್ನು ಮುಂದಿನ ತನ್ಖಿಯಿಂದ ತೀರ್ಮಾನಿಸೋಣಾಗುತ್ತವೆ ಎಂತ ಈ ಕೋರ್ಟಿನವರ ಹುಕುಂ ಪ್ರಕಾರ ಈ ನೋಟೀಸು ಮಾಡಿಸಿಯದೆ

ತಾರೀಕು 8-6-'43 } **B Ramachandra Rao**
Pleader for plaintiff

ನೋಟೀಸು

ಪುತ್ತೂರು ತಾಲ್ಲೂಕು ಕೇಪು ಗ್ರಾಮದ ಅಡ್ಯನಡ್ಕದಲ್ಲಿರ್ವ ಉಳಯದ ಚೆರಿಯಪ್ಪ ಮಣಿಯಾಣಿ ಆಳಿಯ ಕುಟುಂಬದ ಯಜಮಾನ ವ ಆಡಳ್ತೆದಾರ ಕೋಚಪ್ಪ ಮಣಿಯಾಣಿಯು ಈ ಮೂಲ್ಕ ಸರ್ವರಿಗೆ ಶ್ರುತಪಡಿಸುವದೇನಂದ್ರೆ:—

ನಮ್ಮ ಕುಟುಂಬದ ಆಸ್ತಿಯನ್ನು ಎತ್ತಿಹಾಕುವ ದುರಾಗ್ರಹದಿಂದ ಯಾ ನನ್ನ ಆಢಳ್ತೆಯನ್ನು ವಿನಾಕಾರಣವಾಗಿ ಬಲೋದ್ಧಾರದಿಯಿಂದ್ಲೂ ದುರಾಶೆಯಿಂದ್ಲೂ ತಾವು ನೋಡಬೇಕೆಂಬ ದುಸ್ವಾರ್ಥನೆಯಿಂದ ಕುಟುಂಬಕ್ಕೆ ಹಾನಿಕರವಾದ ಕೃತ್ಯಗಳನ್ನು ಮಾಡಿ ಉಪದ್ರಹಿಂಸೆ ಕೊಡುವ ನನ್ನ ತಮ್ಮ ಬೆಳಿಯಪ್ಪ ಮಣಿಯಾಣಿ ವ ನೆಟ್ಟಣಿಗೆ ಗ್ರಾಮದ ಕೃಷ್ಣಮಣಿಯಾಣಿ ಆಳಿಯಂದಿರು ನಾರಾಯಣ ಕುಂಞಿಕಣ್ಣ ವ ಇನ್ನಿತರ ನಮ್ಮ ಶತ್ರುಗಳು ನನ್ನ ತಂಗಿ ಕರ್ತಮ್ಮ ವ ಸೊಸೆ ಬೆಳ್ತಿಯಮ್ಮಳನ್ನು ದುರ್ಬುದ್ಧಿ ಬಲಾತ್ಕಾರದಿಂದ ಸ್ವಾಧೀನ ಪಡ್ಸಿ ಕುಟುಂಬದ ಮನೆಯಿಂದ ಕೊಂಡುಹೋಗಿ ಆಕ್ರಮ ತಡೆಯಲ್ಲಿಟ್ಟಿರುತ್ತಾರೆ. ಸದ್ರಿ ಕರ್ತಮ್ಮ ವ ಬೆಳ್ತಮ್ಮಳು ಅಳಿಯಕಟ್ಟು ಕುಟುಂಬದ ಕಿರೇ ಮೆಂಬರ್‌ರಾದ್ರಿಂದ ಕುಟುಂಬಕ್ಕಾಗಿ ಯಾವ ಸಾಲ ಮಾಡಲು ವ ಆಸ್ತಿಗಳ ಮೇಲೆ ಸಾಲ ಹೊಣೆಪಡಿಸಲು ಕಾನೂನುಮೇರೆಗೂ ಕರಾರುಮೇರೆಗೂ ಅಧಿಕಾರಿಗಳಲ್ಲ. ಆಸ್ತಿ ಬಾಬ್ತು ಯಾವದೊಂದು ರಿಕಾರ್ಡು ಬರಕೊಡಲು ಅವರಿಗಂತೂ ಏನು ಅವಕಾಶ ವ ಹಕ್ಕಿಲ್ಲ. ಅಂಥ ಸಾಲಗಳು ಅವರೀವರ್ಗರೇ ಮಾಡಿದ್ರೆ ಕುಟುಂಬಕ್ಕಾಗಲಿ ಆಸ್ತಿಗಾಗ್ಲಿ ಬಾಧಿಸುವಂಥಾದ್ದಲ್ಲ. ಯಾವ ತನು ಅವರಿಗೆ ಸಾಲಕೊಟ್ಟರೆ ವ ದಸ್ತಾವೇಜುಗಳನ್ನು ಒಪ್ಪಿಕೊಂಡರೆ ಅವ್ರು ಸಿಂಥಲ್ಲ ಬರಕೊಟ್ಟವರೇ ಸ್ವಂತ ನೆಲೆಯಲ್ಲಿ ಒಪ್ಪದ್ದು. ಯಾರೊಬ್ಬರು ಮೋಸಕ್ಕೆ ತುತ್ತಾಗದಂತೆ ವ ಸಾಲಕೊಡದಂತೆ ಮುಂದಾಗಿ ಈ ಪ್ರಕಟಣೆ ಹೊರಡಿಸಿರುವದೆ ತಿಳಿದಿರಲಿ.

31 5 43 } ಕೋಚಪ್ಪ ಮಣಿಯಾಣಿ
ದಸ್ಕತು.

ರೈಲು ಬಂಡಿಗಳ ಸಮಯ

ಎಪ್ರಿಲ್ ತಾ ೧೫ರಿಂದ ವ್ಯವಸ್ಥವಾದ ಪ್ರಕಾರ.

	ಹೊರಡುವುದು	ಬರುವುದು
ಮೈಲ್	೭ ೪೦ ಪೂ.	೬–೨೫ ಅಪ.
ಶಟ್ಲ್	೬ ೩೦ ಅಪ.	೧೦ ೫ ಪೂ.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ.

ಆದುದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE. | **The Joint Booking Office,** KODIALBAIL.

The Bank of Mangalore Limited, Mangalore.

ESTD: 1931

HEAD OFFICE Mangalore. *BRANCHES* Moodabidri & Padubidri.

The Bank Undertakes to Collect Cheques, Demand and Documentary Bills at Most Competitive Rates.

ISSUES DRAFTS ON ALL IMPORTANT TOWNS IN THE DISTRICT

and also on

BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.

at very favourable rates

All kinds of inland banking business undertaken

ಹುಳುಕಡ್ಡಿ ಮದ್ದು



ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿತ್ತ ಉಪದ್ರವ, ತಲೆಹುಣ್ಣು, ವೃಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ನೀವೀವರೆಗೆ ವಿಮೆಯನ್ನು ಇಳಿಸದಿದ್ದರೆ, ಯಾ ಸಾಕಷ್ಟು ವಿಮೆಯನ್ನು ಮಾಡಿಲ್ಲವಾದರೆ

ದಿ ಬಾಂಬೆ ಲೈಫ್ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡಿನಲ್ಲಿ

ಈಗಲೇ ವಿಮೆ ಇಳಿಸಿರಿ.

ಏಕೆಂದರೆ:

1. ಜೀವವಿಮೆಯು ಒಬ್ಬನ ವೃದ್ಧಾಪ್ಯದ ಮತ್ತು ಸವಿೂಪದ ಹಾಗೂ ಪ್ರೀತಿಯ ಸಂಬಂಧಿಕರ ಜೀವನವನ್ನು ಸುರಕ್ಷಿತಗೊಳಿಸುತ್ತದೆ.
2. ನೀವಿಂದು ವಿಮೆಯನ್ನಿಳಿಸಬಲ್ಲಿರಾದರೆ ನಾಳೆ ಹಾಗೆ ಮಾಡಲು ಶಕ್ತರಾಗದೆ ಹೋಗಬಹುದು.
3. ಆರೋಗ್ಯವು ಅನಿಶ್ಚಿತವೆಂದಾದರೆ ಮೃತ್ಯುವು ಯಾರನ್ನೂ ಬಿಡುವಂತಿಲ್ಲ.
4. ಮೃತ್ಯು ಮತ್ತು ಮುಪ್ಪು ಎಂಬುದು ಅಮೂಲ್ಯವಾದೊಂದು ನಿಶ್ಚಿತ.
5. ಜೀವವಿಮೆಯು ಮರಣದ ಕ್ರೂರತೆಯನ್ನು ಹೋಗಲಾಡಿಸುವುದೊಂದೇ ಅಲ್ಲ; ಅದರ ಸಂಕಷ್ಟವನ್ನೂ ದೂರೀಕರಿಸುತ್ತದೆ.

ಆದುದರಿಂದ ಇಂದೇ ಜೀವವಿಮೆ ಮಾಡುವುದು ಲಾಭಕರವಾಗಿದೆ.

ವಿಶೇಷ ಮಾಹಿತಿಗೆ ದಯಮಾಡಿ ಬರೆಯಿರಿ:

ಕೊಟ್ಟಿಕಾರ್ಥ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

—: ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ :—

ಮಂಗಳೂರು ಕಲ್ಲಿಕೋಟೆ ಸೇಲಂ ತಿರುವಾಂಕೂರು ಬೆಂಗಳೂರು ನಗರ ಮತ್ತು ಬೊಂಬಾಯಿ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವ ವಿಧದ ದೋಷಗಳನ್ನು ಗುಣಪಡಿಸುವ ದಿವ್ಯ ಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ್ ವ ಏಜೆಂಟರು:—

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಪೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೋ:—1. ಮರಾಠ ಗಲ್ಲಿ ಹುಬ್ಬಳ್ಳಿ.

2. 36 ಪ್ಯಾಕ್ರಾಫ್ಟ್ಸ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.

ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಕು 25—6—1943 [ಸಂಚಿಕೆ 26]

ಸೇನಾಪತಿ ವೇವೆಲರು ಮುಂದಿನ ವೈಸರಾಯರು!

ಬರುವ ಅಕ್ಟೋಬರಿನಲ್ಲಿ, ವೈಸರಾಯರಾಗಿರುವ ಲಿನ್‌ಲಿತ್‌ಗೋ ನಿವೃತ್ತರಾಗುತ್ತಾರೆ ಆದಾಗಿ ಅವರ ಸ್ಥಾನಕ್ಕೆ ಈಗ ಫೀಲ್ಡ್ ಮಾರ್ಶಲ್ ಆರ್ಚಿಬಾಲ್ಡ್ ವೇವಲರನ್ನು ನೇಮಿಸಲಾಗಿದೆ. ವೇವಲರ ಸ್ಥಾನದಲ್ಲಿ ಮುಖ್ಯ ಸೇನಾಪತಿ ಸ್ಥಾನಕ್ಕೆ ಸರ್ ಕ್ಲಾಡ್ ಜಾನ್ ಆಚಿನಲೆಕರು ನಿಯಮಿತರಾಗಿರುವರು ಇವರು ವೈಸರಾಯರ ಕಾರ್ಯಕಾರೀ ಮಂಡಳ ಮಂಡಿತರೂ ಆಗುವರು ವೇವಲರೀಗ ಇಂಗ್ಲೆಂಡಿನಲ್ಲಿರುವರು, ಅವರು ತಮ್ಮ ಹುದ್ದೆಯನ್ನು ಬಿಟ್ಟು ಬೇಗನೇ ಭಾರತಕ್ಕೆ ಬರುವರು ಭಾರತದ ವೈಸರಾಯರಾಗಿ ಓರ್ವ ಸೇನಾಪತಿಯನ್ನು ನಿಯಮಿಸಿದ್ದು ಇದೇ ಮೊದಲನೆಯ ಸಲ. ವೇವಲರು ಮೂರು ವರ್ಷಗಳಿಂದ ಭಾರತದ ಸೇನಾಪತಿಯಾಗಿರುವರು

ಪತ್ರಿಕೆಗಳ ಅಸಮಾಧಾನ

ಸೇನಾಪತಿ ವೇವಲರನ್ನು ವೈಸರಾಯರಾಗಿ ನೇಮಿಸಿದ್ದರಿಂದ ಭಾರತದಲ್ಲಿ ಅಸಮಾಧಾನವುಂಟಾಗಿದೆ. ಬೊಂಬಾಯಿ ಕ್ರಾನಿಕಲ್ ಪತ್ರಿಕೆ ಬರೆಯುತ್ತಾ, 'ಹಿಂದೆ 1882 ರಲ್ಲಿ ಇಜಿಪ್ಟಿನ ಸೇನಾಪತಿ ಲಾರ್ಡ್ ಅಲ್ಲೆನ್ ಬೀ ಯವರನ್ನು ಅಲ್ಲಿನ ಹೈಕಮಿಶನರನ್ನಾಗಿ ಮಾಡಲಾಗಿತ್ತು ವೇವಲರೂ ಭಾರತದಲ್ಲಿ ಅಲ್ಲೆನ್‌ಬೀಯವರು ಮಾಡಿದ ಪ್ರಮಾದ ಮಾಡದಿರಲಿ ಎಂದಿದೆ. 'ಲಿನ್‌ಲಿತ್‌ಗೋ ಮಾಡಿದ ಗೇಡಿಕೆಯನ್ನು ತೊಳೆಯಲು ಇಂಗ್ಲೆಂಡಿನಿಂದ ಯೋಗ್ಯ ಮನುಷ್ಯರಾರೂ ಬರಲಿಲ್ಲವೆಂದು ತೋರುತ್ತದೆ ಹಿಂದಿನ ಹಿಡಿತವನ್ನು ಸೈನಿಕ ಬಲದಿಂದ ಮತ್ತಷ್ಟು ಬಲಗೊಳಿಸಲು ಸೇನಾಪತಿ ವೇವಲರನ್ನು ವೈಸರಾಯರಾಗಿ ಮಾಡಲಾಗಿದೆ' ಎಂದು ಹಿಂದುಸ್ಥಾನ್ ಟೈಮ್ಸ್' ಉಲ್ಲೇಖಿಸಿದೆ 'ಭಾರತೀಯರಿಗೆ ವೈಸರಾಯ್ ಬದಲಾದ್ದರಿಂದ ಏನೂ ವ್ಯತ್ಯಾಸ ತೋರುವುದಿಲ್ಲ ಬ್ರಿಟಿಷ್ ಸರಕಾರವೇ ಬದಲಾದರೂ ಭಾರತೀಯರ ಪಾಡು ಒಂದೇ' ಎಂದು 'ಇಂಡಿಯನ್ ಎಕ್ಸ್‌ಪ್ರೆಸ್' ಸಾರಿದೆ 'ರಾಷ್ಟ್ರೀಯ ಸರಕಾರ ಯೋಜನೆಗೆ ವಿರುದ್ಧವಿದ್ದವರೆಂದು ಹೇಳಲಾದ ಸೇನಾಪತಿಯೊಬ್ಬರನ್ನು ವೈಸರಾಯರಾಗಿ ನೇಮಿಸಿದ್ದರಿಂದ ಭಾರತದಲ್ಲಿ ಸೈನ್ಯದ ಸರ್ವಾಧಿಕಾರ ಘೋಷಿಸಿದಂತಾಯಿತು' ಎಂದು 'ಫ್ರೀಪ್ರೆಸ್' ಬರೆದಿದೆ 'ಹಿರಿತನದ ಸೈನಿಕರಾಗಿದ್ದ ವೇವಲರನ್ನು ವೈಸರಾಯರಾಗಿ ನೇಮಿಸಿದ್ದು ಭಾರತದ ಇತಿಹಾಸದಲ್ಲಿಯೇ ಮೊದಲನೆಯದು ಪ್ರಜಾ ಪ್ರಭುತ್ವ ರಾಷ್ಟ್ರಗಳಲ್ಲಿ ಸೈನಿಕರಿಗೆ ಸರಕಾರವನ್ನು ಯಾರೂ ಒಪ್ಪಿಸುವುದಿಲ್ಲ ಸೈನ್ಯವು 'ನಾಗರಿಕರಿಗರ ಒಳಗಿರಬೇಕೆಂಬುದು ರಾಜನೀತಿ ಹೀಗಿದ್ದರೂ ಪರತಂತ್ರವಾದ ಭಾರತೀಯರ ಆಡಳಿತ ಮಾಡಲು ಸೇನಾಧಿಕಾರಿಯನ್ನು ನೇಮಿಸುವಾಗ ಈ ಪ್ರಶ್ನೆಯೇ ಹುಟ್ಟಲಿಲ್ಲ ಭಾರತಕ್ಕೆ ಸ್ವಾತಂತ್ರ್ಯ ಬರುತ್ತದೆ ಎಂದು ಹೇಳುತ್ತಿರುವೀ ಕಾಲಕ್ಕೆ ಸೇನಾಪತಿಯೊಬ್ಬರನ್ನು ವೈಸರಾಯರಾಗಿ ನೇಮಿಸುವುದು ಯಾವ ನ್ಯಾಯ? ಅದೂ ಕೂಡ ವೈಸರಾಯ್ ಎಂಬ ಓರ್ವ ವ್ಯಕ್ತಿಗೆ ಸರ್ವಾಧಿಕಾರ ಕೊಡಲ್ಪಟ್ಟಿರುವಾಗ? ಯುದ್ಧದ ನೆವನದಿಂದ ಇಂಥವರನ್ನು ನೇಮಿಸುವುದು ಹಿತವಾದೀತೆ?' ಎಂದು 'ಹಿಂದು' ಪತ್ರಿಕೆ ಟೀಕಿಸಿದೆ ಹೀಗೆ ಭಾರತದ ಜನಮತವನ್ನು ಸಾರುವ ಪತ್ರಿಕೆಗಳು ತಮ್ಮ ಅಸಮಾಧಾನ ತಿಳಿಸಿವೆ

ಚಳವಳಕ್ಕೆ ಲಿನ್ಲಿತ್ಗೋ ಅಮೆರಿ ಚರ್ಚಿಲ್ ಕಾರಣರು

ಗಾಂಧೀಜಿಯಲ್ಲ—ಚರ್ಚಿಲ್ ಅಪರಾಧಿ!

ಮುಖಂಡರ ಅತೃಪ್ತಿ

'ವೇವಲರನ್ನು ವೈಸರಾಯರಾಗಿ ಮಾಡಿದ್ದರಿಂದ ಭಾರತವನ್ನು ಸೈನಿಕರು ವಶಪಡಿಸಿಕೊಂಡರೆಂದು ಒಪ್ಪಿಕೊಂಡ ಹಾಗಾಗುವುದು ಮತ್ತು ಐದು ವರ್ಷಗಳ ಯುದ್ಧಕ್ಕೆ ಭಾರತವು ಮುಖ್ಯ ರಾಣ್ಯವಾಗಿರಲು ಸಿದ್ಧವಾಗಿರಬೇಕೆಂದಾಯಿತು, ಕೊನೆಯದಾಗಿ, ಭಾರತದ ಸಮಸ್ಯೆಯು ಭಾರತೀಯರ ಇಷ್ಟದಂತೆ ಬಗೆಹರಿಯಲಾರದೆಂದೂ ಖಚಿತವಾಯಿತು ಆದರೆ ಕೆಲ ಸಲ ವಿಚಿತ್ರ ಸಂಭವಿಸುವುದುಂಟು ಆತ್ಮವಿಶ್ವಾಸವುಳ್ಳ ದೃಢ ಸೈನಿಕನು ಚಂಚಲ ವೃತ್ತಿಯ ನಾಗರಿಕನಿಗೆ ಸಾಧ್ಯವಾಗದ ಬಿಕ್ಕಟ್ಟು ಬಿಡಿಸಬಲ್ಲನು' ಎಂದು ಶ್ರೀ ಕನ್ಹಯಾಲಾಲ ಮುನ್ಷಿಯವರು ಹೇಳುತ್ತಾರೆ 'ಭಾರತವನ್ನು ಯಾವ ವಿಧದಲ್ಲಿ ಆಳುತ್ತಾರೋ, ಆ ರೀತಿಯಲ್ಲಿ ಈ ನೇಮಕವೂ ಆಗಿದೆ ಇಂದು ಆರ್ಡಿನೆನ್ಸ್ ರಾಜ್ಯಭಾರ ಭಾರತದು, ಹಾಗೆಂದರೆ ಸೈನಿಕ ಶಾಸನ ನಮ್ಮ ಮೇಲೆ ಸೈನಿಕರಾಡಳಿತವನ್ನು ಚನ್ನಾಗಿ ನಡೆಸಬೇಕಾದರೆ ಸೇನಾಪತಿಯೇ ವೈಸರಾಯ್ ಅಗುವುದು ಯೋಗ್ಯ' ಎಂದು ಶ್ರೀ ಕಿರಣ ಶಂಕರ ರಾಯ್ ತಿಳಿಸುತ್ತಾರೆ 'ಈ ನೇಮಕದಿಂದ ಇದು ವರೆಗೆ ಅನುಸರಿಸುತ್ತ ಬಂದ ಸಂಪ್ರದಾಯವನ್ನು ಸರಕಾರವು ಬಿಟ್ಟುಗೊಟ್ಟಿರುವುದು ಆದರೆ ಭಾರತವು ಸೇನಾಪತಿಯಿಂದ ಆಳಲ್ಪಡುವುದೆಂದು ಯಾರೂ ನಿರೀಕ್ಷಿಸಿರಲಿಲ್ಲ ಯುದ್ಧಾನಂತರ ಭಾರತಕ್ಕೆ ಸ್ವರಾಜ್ಯ ಸಿಗುವುದೆಂದು ಎಲ್ಲರೂ ನಿರೀಕ್ಷಿಸುತ್ತಿದ್ದೀ ಸಂದರ್ಭದಲ್ಲಿ ಯಾರೂ ಇಂಥ ಆಜ್ಞೆಯನ್ನು ಹಾರೈಸಿರಲಿಲ್ಲ' ಎಂದು ಒರಿಸದ ಅರ್ಥ ಸಚಿವರಾದ ಶ್ರೀ ಗೋದಾವರಿ ಮಿಶ್ರರು ಬರೆಯುತ್ತಾರೆ 'ವೇವಲರು ಲಿನ್‌ಗೋ ಆಡಳಿತದಲ್ಲಿ ಒಟ್ಟಿಗಿದ್ದವರು, ಭಾರತಕ್ಕೆ ಬೇಕಾದುದೆಂದರೆ ಅವರ ಗಾಯವನ್ನು ಗುಣಪಡಿಸುವ ವ್ಯಕ್ತಿ ಭಾರತದ ಬಿಕ್ಕಟ್ಟು ಬಿಡಿಸುವ ವ್ಯಕ್ತಿ ಆದರೆ ವೇವಲರ ನೇಮಕದಿಂದ ಭಾರತೀಯರಾರೂ ಉತ್ಸಾಹಗೊಳ್ಳುವ ಹಾಗಿಲ್ಲ' ಎಂದು ಅಮೆರಿಕದ ಇಂಡಿಯನ್ ಲೀಗಿನ ಅಧ್ಯಕ್ಷ ಶ್ರೀ ಜೆ ಜೆ ಸಿಂಗರು ಹೇಳುತ್ತಾರೆ 'ವೇವೆಲರನ್ನು ಬ್ರಿಟಿಷ್ ಮಂತ್ರಿಮಂಡಳ ವೈಸರ್‌ಯ್ ಆಗಿ ನೇಮಿಸಿದ್ದು ನೋಡಿದರೆ, ಬ್ರಿಟನಿನ ಯಾವುದೇ ಘನ ವ್ಯಕ್ತಿ ಈ ಅಧಿಕಾರ ಒಪ್ಪಿಕೊಳ್ಳಲು ಮುಂದೆ ಬರಲಿಲ್ಲವೆಂದು ಖಂಡಿತವಾಗುತ್ತದೆ ಸೇನಾಧಿಕಾರಿ ಭಾರತದ ವೈಸರಾಯ್ ಆಗುವುದು ಒಂದು ದೊಡ್ಡ ಪ್ರಶ್ನೆ ಆಫ್ರಿಕ ಜಯದಿಂದ ಬ್ರಿಟಿಷರ ಹೃದಯ ಇನ್ನಷ್ಟು ಕಠಿಣವಾದದ್ದು ಇದರಿಂದ ವ್ಯಕ್ತವಾಗುತ್ತದೆ' ಹೀಗೆ ಪಂಡಿತ ಕುಂಜ್ರು ಬರೆಯುತ್ತಾರೆ 'ಭಾರತದ ಬಿಕ್ಕಟ್ಟು ಬಿಡಿಸಲು ಬ್ರಿಟಿಷ್ ಭಾರತ ಬಾಂಧವ್ಯ ಬೆಳಗಲು ನಮಗೆ ಬೇಕಾದದ್ದು ಸಿಪಾಯಿಯಲ್ಲ, ತಂತ್ರಗಾರನಲ್ಲ ಉಚ್ಚ ರಾಜನೀತಿ ನಿಪುಣ ಲಿನ್‌ಲಿತ್‌ಗೋ ಹೋದ ಮೇಲೆ ಹೊಸ ವ್ಯಕ್ತಿ ಬಂದು ಭಾರತದ ಬಿಕ್ಕಟ್ಟು ಬಗೆಹರಿದೀತೆಂದು ನಾವು ಬಗೆದದ್ದು ಈಗ ಬಯಲಾಸೆಯಾಯಿತು ಎಂದು ಶ್ರೀ ಪಿ ಎನ್ ಸಪ್ರು ಸಾರುತ್ತಾರೆ

ಕಾಂಗ್ರೆಸ್ ಚಳವಳಕ್ಕೆ ಲಿನ್ಲಿತ್ಗೋ ಅಮೆರಿ ಚರ್ಚಿಲ್ ಕಾರಣರು

'ಬ್ರಿಟಿಷರ ವಿರುದ್ಧ ಬಂಡಾಯ ಹೂಡಿ, ವಿನಾಶಕ ಕಾರ್ಯಕ್ರಮ ಕೈಕೊಂಡರೆಂದು ಮತ್ತು ಜಪಾನೀ ಪರರಾದರೆಂದೂ ಮಹಾತ್ಮಾಜಿಯವರ ಮೇಲೆ ಹೊರಿಸಲಾದ ದೊಡ್ಡ ಆರೋಪಕ್ಕೆ ಸಾಕಷ್ಟು ಆಧಾರಗಳು ಕಂಡುಬರುವುದಿಲ್ಲ ಹಾಗೂ ಆಧಾರ ಸಿಗುವುದೂ ಶಕ್ಯವಿಲ್ಲವೆಂದೇ ತೋರುತ್ತದೆ ಜಪಾನಿಗೆ ಹೋಗಿ ಶಾಂತಿ ಸಾರುವುದೇ ಮಹಾತ್ಮರ ಉದ್ದೇಶವಾಗಿತ್ತು ಅವರ ಈ ಧೋರಣ ತಪ್ಪಿರಬಹುದು ಆದರೆ ಅದು ದೊಡ್ಡ ಅಪರಾಧವಾಗುವುದಿಲ್ಲ ಕಾಂಗ್ರೆಸಿನ ಚಳವಳಕ್ಕೆ ಲಿನ್‌ಲಿತ್‌ಗೋ ಅಮೆರಿ ಚರ್ಚಿಲರೇ ಕಾರಣರು, ಚರ್ಚಿಲರು ಗಾಂಧಿಗಿಂತ ದೊಡ್ಡ ಅಪರಾಧಿಗಳು' ಹೀಗೆಂದು ಇಂಗ್ಲೆಂಡಿನ 'ನ್ಯೂ ಸ್ಟೇಟ್ಸ್‌ಮೆನ್ ಎಂಡ್ ನೇಶನ್' ಪತ್ರಿಕೆಯು 'ಬ್ರಿಟಿಷ್ ಸರಕಾರವು ಕಾಂಗ್ರೆಸ್ ಚಳವಳದ ವಿಷಯ ಹೊರಡಿಸಿದ 'ಶ್ವೇತಪತ್ರದ' ಕುರಿತು ಒಂದು ಲೇಖ ಬರೆದಿದೆ ಅದರಲ್ಲಿ ಮತ್ತೂ ಹೀಗೆ ಹೇಳಲಾಗಿದೆ

ನಿಂದ್ಯ ಅಪಪ್ರಚಾರ

'ಗಾಂಧಿಜಿ ಮೇಲೆ ವೈಯುಕ್ತಿಕ ಆರೋಪ ಹೊರಿಸುವ 76 ಪುಟಗಳ ಈ ಶ್ವೇತಪತ್ರ ಹೊರಡಿಸಿ ಸರಕಾರದವರು ನಿಂದನೀಯ ಕಾರ್ಯ ಮಾಡಿರುವರು ಅಮೆರಿಕದಲ್ಲಿ ಮಹಾತ್ಮರ ಹೆಸರು ಕೆಡಿಸಲು ಇಂಥಾ ನಿಂದ್ಯ ಅಪಪ್ರಚಾರವಾಡಲಾಗಿದೆ ಬ್ರಿಟಿಷರ ಮಟ್ಟಿಗೆ, ಮಹಾತ್ಮರ ವಿಷಯ ತುಂಬಾ ಆದರವಿದೆ ಆದರೆ ಬ್ರಿಟಿಷರ ಮುಂದಾಳುತನವು ಇಂದು ವಿಷಾತುಕವಾಗಿ ಪರಿಣಮಿಸಿರುವುದು ಶ್ವೇತಪತ್ರದಲ್ಲಿ ಮಹಾತ್ಮರ ಮೇಲೆ ಹೊರಿಸಿದ ಆರೋಪಗಳನ್ನು ನೋಡಿ ಹೃದಯ ತಲ್ಲಣಿಸುತ್ತದೆ. ಪ್ರಪಂಚದ ಓರ್ವ ವಿಭೂತಿಪುರುಷನ ಮೇಲೆ ಇಂಥಾ ಆರೋಪ ಹೊರಿಸಲಾಗಿದೆ ಆತ್ಮ ಸಮರ್ಥನ ಮಾಡಿಕೊಳ್ಳಲೂ ಇಂದು ಅವರಿಗೆ ಸಂದರ್ಭ ಕೊಟ್ಟಿಲ್ಲ ಇಂಥಾ ದೊಡ್ಡ ಆರೋಪಗಳಿಗೆ ಸಾಕಷ್ಟು ಆಧಾರಗಳಿದ್ದರೆ ಸರಕಾರದವರು ಅವರನ್ನು ಸೆರೆಮನೆಯಲ್ಲಿಯೇ ಕೊಳೆಯ ಬಿಡದೆ ನ್ಯಾಯಸ್ಥಾನಕ್ಕೆ ತಂದು ವಿಚಾರಣೆ ನಡೆಸಬಹುದಲ್ಲವೇ?

ತ್ರಿಮೂರ್ತಿಗಳು ಕಾರಣರು

'ಶ್ವೇತಪತ್ರವನ್ನೇ ಸಂಪೂರ್ಣ ಓದಿದರೆ ತಪ್ಪು ಯಾರದೆಂದು ಹೊಳೆಯುತದೆ ಕ್ರಿಪ್ಸ್ ಸಂಧಾನದ ನಂತರ ಮಹಾತ್ಮರ ಶಾಂತಿತತ್ವವು ಈ ರೀತಿ ಕ್ರಾಂತಿ ಮಾರ್ಗವನ್ನು ಹಿಡಿದುದಕ್ಕೆ ಲಿನ್‌ಲಿತ್‌ಗೋ, ಅಮೆರಿ, ಚರ್ಚಿಲರೇ ಕಾರಣರೆಂದು ಸ್ಪಷ್ಟವಾಗುತ್ತದೆ ಕಾಂಗ್ರೆಸಿನಲ್ಲಿ ಯಾವಾಗಲೂ ಗಾಂಧಿಜಿಯವರೇ ಪ್ರಭಾವ ಬೀರಿದೆಯೆನ್ನುವುದು ತಪ್ಪು ಅನೇಕ ಸಲ ಗಾಂಧಿಜಿ ಕಾಂಗ್ರೆಸಿನಿಂದ ದೂರ ನಿಂತು ಬೇರೆಯವರಿಗೆ ಸ್ಥಾನ ಮಾಡಿಕೊಟ್ಟಿದ್ದಾರೆ ಈ ಯುದ್ಧ ಪ್ರಾರಂಭವಾದ ಮೇಲೆ ಗಾಂಧಿಜಿ ಮತ್ತು ನೆಹರು ಮುಂದಿನ ಧೋರಣದ ಬಗ್ಗೆ ದ್ವಂದ್ವ ಹೋರಾಟ ಹೂಡಿದ್ದಾರೆ ಹಾಗೆ ಅವರಲ್ಲಿ ಭಿನ್ನಾಭಿಪ್ರಾಯವಿದ್ದರೂ ಗಾಂಧಿಜಿ ಬಗ್ಗೆ ನೆಹರ ಅವರಿಗೆ ಅಚಲ ಭಕ್ತಿಯಿದೆ ಯುದ್ಧ ಪ್ರಾರಂಭವಾದಂದಿನಿಂದ ಮೊನ್ನೆ ಅಗಸ್ಟ್ ವರೆಗೆ ಕಾಂಗ್ರೆಸಿನ ಅಧಿಕಾರ ಸೂತ್ರ ಹಲವು ಕೈ ಬದಲಾಗಿದೆ ಭಾರತದ ಗೌರವಕ್ಕೆ ಸರಿಯಾಗುವಂಥಾ ಒಪ್ಪಂದವಾದರೆ ಭಾರತವು ತನುಮನ ಧನದಿಂದ ಸಹಾಯ ಮಾಡಬೇಕೆಂದು ನೆಹರು ಯಾವಾಗಲೂ ಹೇಳುತ್ತಿದ್ದಾರೆ ಗಾಂಧಿಜಿ ಧೋರಣ ಇದಕ್ಕೆ ವಿರುದ್ಧವಿದೆ ಅವರದು ಶಾಂತಿ ತತ್ವವಾದರೂ ಅವರ ವಿಚಾರಗಳು ಇಂದಿರುವ ಪ್ರಜಾಪ್ರಭುತ್ವಕ್ಕೆ ಸರಿಹೋಗುವುದಿಲ್ಲ ಆದರೆ ಈ ವಿಚಾರ ಮಂಥನದಲ್ಲಿ ಪಂಡಿತ ನೆಹರೂಗೆ ಜಯದೊರಕಿತು ಆಗ ನಮಗೆ ಸಂತೋಷವೂ ಆಯಿತು ಆದರೆ ಅವರು ನೀಡಿದ ಸ್ನೇಹ ಹಸ್ತವನ್ನು ನಾವು ಹಿಂದು ಮುಂದಿನ ವಿಚಾರಮಾಡದೆ ನಿರಾಕರಿಸಿದೆವು ಆಗ ಅವರು ನಿರಾಶರಾಗಿ ಹಿಂದೆ ಸರಿದರು ಗಾಂಧಿಜಿ ಪುನಃ ಕಾಂಗ್ರೆಸ್ ಮುಂದಾಳುತನ ವಹಿಸಿದರು ಇದಕ್ಕೆ ಮೂಲಕಾರಣ ಕ್ರಿಪ್ಸ್ ಯೋಜನೆ ಅದರಲ್ಲಿ ಅನೇಕ ನ್ಯೂನತೆಗಳಿದ್ದವು, ಅದು ಉಕ್ಕಿನ ಕವಚವಾಗಿತ್ತು ಎಷ್ಟು ಪ್ರಯತ್ನಿಸಿದರೂ ಬಾಗಿಸಲು ಬಾರದಂತಿತ್ತು ಬ್ರಿಟಿಷರಿಂದ ಎಳ್ಳಷ್ಟು ಅಧಿಕಾರ ಸಿಗುವುದಿಲ್ಲವೆಂದು ಭಾರತೀಯರು ಮನಗಂಡರು ಈ ನಿರಾಶಾಮಯ ವಾತಾವರಣವು ಗಾಂಧಿಜಿಯನ್ನು ಆಹ್ವಾನಿಸಿತು

ಚರ್ಚಿಲರು ತಪ್ಪುಗಾರರು

'ಚಳವಳ ಪ್ರಾರಂಭವಾದ ಕೂಡಲೇ ರಾಷ್ಟ್ರದ ಮುಂದಾಳುಗಳನ್ನು ಸೆರೆಮನೆಗೆ ಒಮ್ಮೆಲೇ ಗೊತ್ತುಗುರಿಯಿಲ್ಲದೆ ಕಳುಹಿಸಿದ್ದರಿಂದ ತರುಣರು ಮತ್ತು ಕ್ರಾಂತಿಕಾರಕ ಸಮತಾವಾದಿಗಳೂ ಮುಂದಿನ ಹೊಣೆ ಹೊರಬೇಕಾಯಿತು ಭಾರತೀಯರ ಮುಂದಿನ ಹೋರಾಟವು ಅಹಿಂಸಾತತ್ವದಲ್ಲಿ ಖಂಡಿತ ನಡೆಯಲಿಕ್ಕಿಲ್ಲ. ಅದು ಭೀಷಣ ಕ್ರಾಂತಿ ಆಂದೋಲನದ ರೂಪವಾಗಬಹುದು ಅಥವಾ ವಿಚಾರವಿಲ್ಲದ ಮುಖಂಡರ ಮುಂದಾಳುತನದಲ್ಲಿ ಅಂತರ್ಯುದ್ಧವೂ ಆಗಬಹುದು ಶ್ವೇತಪತ್ರದಲ್ಲಿ ವಾದಿಪಕ್ಷ ವಕೀಲರ ಹೇಳಿಕೆ ಆಗಿರುವುದು ಭಾರತದ ಆಧುನಿಕ ಮುಂದಾಳುಗಳ ಸ್ನೇಹ ಹಸ್ತವನ್ನು ವಿಚಾರವಿಲ್ಲದೆ ಚರ್ಚಿಲರು ತಿರಸ್ಕರಿಸಿದ್ದರಿಂದ ಚರ್ಚಿಲರಿಗೆ ಗಾಂಧಿಜಿಗಿಂತ ಹೆಚ್ಚಿನ ಶಿಕ್ಷೆ ವಿಧಿಸುವುದು ನ್ಯಾಯವಾಗಿದೆಯೆಂದು ಪ್ರತಿವಾದೀ ಪಕ್ಷದ ವಕೀಲರು ಕೇಳುವುದು ಸ್ವಾಭಾವಿಕವಿದೆ'

ಗಾಂಧೀ ಕತೆಗಳು

ಹೆಂಗುಸು ಅಬಲೆಯೇನು?

—ಸಿದ್ಧವನಹಳ್ಳಿ ಕೃಷ್ಣ ಶರ್ಮ

ಕೆಂಬನಿಯಿಂದ ಕನ್ನಡ ನಾಡನ್ನು ತೊಯಿಸಿ ಹೋದ ಕೊಡಗಿನ ಗೌರಮ್ಮನ ಹೆಸರು ಎಲ್ಲರಿಗೂ ಗೊತ್ತಿರಬೇಕು. ಆಕೆ ಗಾಂಧೀಜಿಯನ್ನು ಒಮ್ಮೆ ಗೆದ್ದಳು. ಆಕೆಯ ಹಟವನ್ನಾರಿತನಕ್ಕೆ ಬಾಪೂ ಸೋತು ಹೋದರು. ಅದು ನಡೆದುದು ಹೀಗೆ.

ಒಂದು ದಿನ ಸಂಜೆಗೆ ಗಾಂಧೀಜೀ ಗುಂಡಗುಟ್ಟೆಯಲ್ಲಿ ತಂಗಿದ್ದರು. ಅದು ಬಹಳ ರಮಣೀಯವಾದ ಪ್ರದೇಶ. ಅವರು ಇಳಿದ ಮನೆಗೆ ನೆರೆಯದೇ ಗೌರಮ್ಮನ ಮನೆ. ಗಾಂಧೀಜಿಯನ್ನು ತಮ್ಮ ಮನೆಗೆ ಕರೆದು ತರಬೇಕೆಂದು ಆಕೆಯ ಆಸೆ. ಆ ಊರಿನ ಸ್ವಾಗತಮಂಡಲಿಯವರು ಅದಕ್ಕೆ ಗಮನ ಕೊಡಲಿಲ್ಲ. ಈಕೆಗೆ ತುಂಬ ನೋವಾಯಿತು. ಅನ್ನ ನೀರೇ ಮುಟ್ಟಲಿಲ್ಲ. ಬೆಳಗಿನಿಂದ ಉಪವಾಸ. ಈ ಸುದ್ದಿ ಹೇಗೋ ಗಾಂಧೀಜಿಗೆ ತಿಳಿಯಿತು. ಗೌರಮ್ಮ ಅವರು ಇದ್ದಲ್ಲಿಗೆ ಬಂದಳು. ಬಂದವಳೇ ಅಳತೊಡಗಿದಳು. ಕುತ್ತಿಗೆ ಬಿಗಿದು ಬಂತು. ಮಾತೇ ಆಡಲಾಗಲಿಲ್ಲ.

'ಉಪವಾಸ ಏಕಮ್ಮ ತಾಯಿ' ಎಂದರು ಬಾಪು.

'ನೀವು ನಮ್ಮ ಮನೆಗೆ ಬರಲಿ ಅಂತ' ದುಃಖದಿಂದ ಕೊರಳು ಉಬ್ಬಿ ಬಂದಿತ್ತು. 'ನಿಮಗಾಗಿ ಕೆಲವು ಒಡವೆ ತೆಗೆದಿಟ್ಟಿದೀನಿ.'

'ಬಹಳ ಚಲೋದು. ಆದರೆ ಮೊದಲು ನಿನ್ನ ಉಪವಾಸ ಮುಗಿಸಬೇಕು.'

'ನೀವು 'ಬರುತ್ತೀನಿ' ಅಂತ ಮಾತುಕೊಟ್ಟರೆ—'

'ಮಾತು ಕೇಳಬೇಡ ತಂಗೀ. ತೆಗೆದುಕೋ. ಈ ಕಿತ್ತಲೆ ಹಣ್ಣು ತಿನ್ನು ಮೊದಲು. ಹಾಗೆಲ್ಲ ವ್ಯಾಪಾರ ಮಾಡುತ್ತಾರೆಯೇ? ನನ್ನ ಮೇಲೆ ನಂಬಿಗೆ ಇರಲಿ. ನಿನ್ನ ಪ್ರೇಮದ ದುರ್ವಾರಶಕ್ತಿಯಲ್ಲಿ ನಿನಗೆ ನಂಬಿಗೆ ಇರಲಿ.'

ಅಲ್ಲಿಗೂ ಆಕೆ ಹಣ್ಣು ಮುಟ್ಟಲಿಲ್ಲ. ಮಾತು ಆಗಲೇ ಕೊಟ್ಟು ಆಯಿತು ಎಂದು ಆಕೆಗೆ ಅರ್ಥವಾಗಲಿಲ್ಲ. ಮೀರಾಬೇನ್ ಹಣ್ಣು ಸುಲಿದರು. ಗೌರಮ್ಮನಿಗೆ ಇನ್ನೂ ಅನುಮಾನ. 'ನೀವು ಬರುತೀರಾ ಹಾಗಾದರೆ' ಎಂದಳು.

'ಬರುತ್ತಾರೆ ತಗೋ ತಾಯಿ' ಮೀರಾಬೇನ್ ಹೇಳಿದರು. ನಗುತ್ತ ಗೌರಮ್ಮ ಹಣ್ಣು ತಿಂದಳು. ಗಾಂಧಿಜಿ-ಪಾದವು ಗೌರಮ್ಮನ ಮನೆಯನ್ನು ಪಾವನಮಾಡಿತು. ಗೌರಮ್ಮ ತನ್ನ ಆಭರಣಗಳನ್ನು 'ದರಿದ್ರನಾರಾಯಣ'ನಿಗೆ ಅರ್ಪಿಸಿಬಿಟ್ಟಳು. ಅಲ್ಲಿಗೇ ಗಾಂಧೀಜೀ ಬಿಟ್ಟಾರೆ? ಕೊಟ್ಟ ಆಭರಣ ಮತ್ತೆ ಇಡಬಾರದು ಎಂದು ನಿಯಮ ಮಾಡಿದರು. ಅದಕ್ಕೆ ಆಕೆ ಒಪ್ಪಿದಳು. ಗೌರಮ್ಮನಿಗೆ ಆಗ ಇಪ್ಪತ್ತೊಂದು ವರ್ಷ. ಮದುವೆಯಾಗಿತ್ತು. ಆಕೆಯ ಗಂಡ ಗೋಪಾಲಕೃಷ್ಣಯ್ಯನೂ ಜೊತೆಯಲ್ಲಿ ಇದ್ದರು. ಆತನನ್ನು ಕೇಳಿದರು ಗಾಂಧೀಜೀ: 'ಒಡವೆ ಕೊಡಬೇಕೆಂದು ಈಕೆಗೆ ಯಾರು ಹೇಳಿದರು?'

'ಯಾರೂ ಇಲ್ಲ. ಆಕೆಯದೇ ಇಚ್ಛೆ. ನಾನೂ ಒಪ್ಪಿಗೆ ಕೊಟ್ಟೆ.'

ಗಾಂಧೀಜಿಯ ದರ್ಶನಕ್ಕಾಗಿ ಆಸೆ ಪಡದವರು ಯಾರು....?

* *

ಸಂಯುಕ್ತ ಪ್ರಾಂತದಲ್ಲಿ ಗಾಂಧಿಜೀ ಪ್ರವಾಸ ಮಾಡುತ್ತಿದ್ದರು. ಬಿರುಗಾಳಿಯಂತೆ ಗಂಟೆಗೆ ಒಂದು ಹಳ್ಳಿ ದಾಟುತ್ತ ಪ್ರಯಾಣ ನಡೆದಿತ್ತು. ದಾರಿಯಲ್ಲಿ ಒಂದು ಬಯಲು ಬಂತು. ಆಗ ಮೋಟಾರಿನ ವೇಗ ಹೆಚ್ಚಿಸಿದರು. ಕೊಂಚ ದೂರ ಹೋದ ಮೇಲೆ ಛಟ್ಟನೆ ಟೈರು ಹರಿಯಿತು ಆಗ ಸಣ್ಣಾಗಿ ಮಳೆ ಹನಿ ಉದುರುತ್ತಿತ್ತು. ಟೈರು ಸರಿಮಾಡಬೇಕಾಗಿದ್ದುದರಿಂದ ಗಾಡಿಯಲ್ಲಿ ಇದ್ದವರೆಲ್ಲ ಇಳಿದರು. ಆಗ ಒಬ್ಬ ಮುಪ್ಪಿನ ಮುದುಕಿ ಕೈಯಲ್ಲಿ ಕೊಡೆ ಹಿಡಿದು, ಕೋಲು ಊರಿಕೊಂಡು ಮೆಲ್ಲಗೆ-ಹೆಜ್ಜೆ ಇಡುತ್ತ 'ಮಗು, ನಿಮ್ಮಲ್ಲಿ ಯಾರು ಮಹಾತ್ಮಾ ಗಾಂಧಿ?' ಎಂದು ಕೇಳುತ್ತ ಬಂದಳು. ಯಾರೂ ಉತ್ತರ ಕೊಡಲಿಲ್ಲ. ಆಕೆ ಮತ್ತೆ ಕೇಳಿದಳು. ಆಗ ಗಾಂಧೀಜಿಯೇ ಕೇಳಿದರು: 'ಏಕೆ ತಾಯಿ, ಆತನನ್ನು ಯಾಕೆ ಹುಡುಕುತ್ತೀಯಮ್ಮ?'

ಆಕೆ ಹೇಳಿದರು. ಅಯ್ಯಾ! 'ನನಗೆ ಈಗ ನೂರಾನಾಲ್ಕಾಯಿತು. ಕಣ್ಣು ಮಂದವಾಗಿದೆ. ನಾನು ಅನೇಕ ತೀರ್ಥಯಾತ್ರೆ ಮಾಡಿದೇನೆ. ಬದರಿಕಾಶ್ರಮಕ್ಕೂ ಹೋಗಿದ್ದೆ. ನನ್ನ ಮನೆಯಲ್ಲೇ ಎರಡು ಗುಡಿ ಕಟ್ಟಿಸಿ ಅವಕ್ಕೆ ಹೊಲಮನೆ ದತ್ತಿ ಬಿಟ್ಟು ನಡೆಸುತ್ತಿದೇನೆ. ರಾಮ-ಕೃಷ್ಣರ ಅವತಾರವಿದ್ದಂತೆ ಈಗ ಮಹಾತ್ಮಾ ಗಾಂಧಿ ಅವತಾರ ಆಗಿದೆಯಂತೆ. ಆತನ ದರ್ಶನ ಆಗುವ ತನಕ ನನಗೆ ಸಾವು ಬಾರದಪ್ಪ' ಮಾತಾಡುವಾಗ ಆಕೆಯ ಕಣ್ಣಿನಲ್ಲಿ ಹನಿತುಂಬಿತು. ಇದುರಿಗೆ ನಿಂತಿದ್ದಾತನೇ ಆತ-ಎಂಬುದು ಆಕೆಗೆ ಹೊಳೆಯಿತು. ತಾನು ಯಾರ ದರ್ಶನ ಬಯಸಿದಳೋ ಆತನೇ ಆಕೆಯೊಡನೆ ಮಾತಾಡುತ್ತಿದ್ದ. ಆಕೆಯ ಆನಂದಕ್ಕೆ ಮೇರೆ ಉಂಟೆ? ಇಂಥ ಹೊತ್ತಿನಲ್ಲಿ ಅಲ್ಲದೆ ಮತ್ತೆ ಯಾವಾಗ ತನ್ನ ಬಾಳಿನ ಮಹಾ ಸಮಸ್ಯೆ ಬಿಡಿಸಬೇಕು? 'ಸ್ವಾಮಿ, ಈ ಆಸೆ, ಈ ದಾಹವನ್ನು ಶಮನಮಾಡುವುದು ಹೇಗೆ?' ಎಂದು ಕೇಳಿದಳು. ಆ ನೂರಾನಾಲ್ಕು ವರ್ಷದ ಮುದುಕಿಯೂ ಈ ಪ್ರಶ್ನೆ ಕೇಳಬೇಕೆ! ಗಾಂಧೀಜೀ ನಕ್ಕರು. 'ಹೌದು ತಾಯಿ. ಸುಖದ ಆಸೆ ಸಾಯದೆ ಕರ್ಮಬಂಧನ ತಪ್ಪದು' ಎಂದು ಆಕೆಯ ಸ್ವಂತ ಸುದ್ದಿ ವಿಚಾರಿಸಿದರು. ಆಕೆ ಹನ್ನೆರಡನೆ ವಯಸ್ಸಿಗೇ ವಿಧವೆಯಾದಳಂತೆ. ಆಗನಿಂದಲೂ ನಿಯಮವಾಗಿ ಬಾಳಿದಳು. ಆ ನೇಮ—ಆ ತಪಸ್ಸು ಎಲ್ಲಾ ಹೇಳಿದಳು. ಸದ್ಯ ದಿನಕ್ಕೊಂದು ಸಲ ದರ್ಭೆ ಹುಲ್ಲಿನ ರಸದ ಪಾನಕ ಒಂದು ಲೋಟ ಕುಡಿಯುತ್ತಿದ್ದಳು.

ಆ ದಿನ ಬೆಳಗಿನಿಂದ ಅದೇ ಮರದ ಕೆಳಗೆ ಗಾಂಧಿಜೀಯ ದರ್ಶನಕ್ಕಾಗಿಯೆ ಆಕೆ ಕಾದು ನಿಂತಿದ್ದಳು. ಓಡಾಡಲು ಆಕೆಗೆ ಬಲವಿರಲಿಲ್ಲ. ಕೊಡೆ ಹಿಡಿದು ಹಾಗೆ ನಿಂತಿದಾಳೆ. ಗಾಂಧೀಜಿಯ ಮೋಟಾರು ಅಂಬಿನ ವೇಗದಿಂದ ಹೋಗುತ್ತಿತ್ತು. ಟೈರು ಹರಿಯದಿದ್ದರೆ ಗಾಡಿ ನಿಲ್ಲುವ ಸಂಭವವೇ ಇರಲಿಲ್ಲ. ಆ ಮರದ ಅಡಿಯಲ್ಲಿ ಹರಿಯದೆ ಸ್ವಲ್ಪ ದೂರದಲ್ಲಿ ಹರಿದಿದ್ದರೂ ಆ ಮುದುಕಿಗೆ ದರ್ಶನ ಆಗುತ್ತಿರಲಿಲ್ಲ. ಹತ್ತೇ ಹೆಜ್ಜೆಯಾದರೂ ನಡೆದು ಅಲ್ಲಿಗೆ ಹೋಗಲು ಆಕೆಗೆ ಸಾಧ್ಯವಾಗುತ್ತಿರಲಿಲ್ಲ. ಆಕೆಯ ನಿರ್ಮಲ ಭಾವನೆಯ ಬಲವೇ ಆಕೆಗೆ ಆ ಭಾಗ್ಯ ಕೊಟ್ಟಿತು. ಯಾದೃಶೀ ಭಾವನಾ ಯತ್ರಸಿದ್ಧಿರ್ಭವತಿ ತಾದೃಶೀ—ಅಲ್ಲವೆ!......

* * *

ಬಡಗರ ಎಂಬುದು ಮಲಬಾರಿನಲ್ಲಿ ಒಂದೂರು. ಅಲ್ಲಿ ಒಂದು ಬಹಿರಂಗ ಸಭೆ. ಜನ ಬಹಳ ನೆರೆದಿದ್ದರು. ಗಾಂಧೀಜೀ ತಮ್ಮ ಮೋಡಿಹಾಕಿದರು; ಹಾಕಿ ಒಡವೆ ಕೊಡಿರೆಂದು ಸೆರಗೊಡ್ಡಿ ಬೇಡಿದರು. ಮಳೆ ಸುರಿದಂದಾಯಿತು ಒಂದು ಗಳಿಗೆ. ಕೌಮುದಿ, ಹದಿನಾರು ವರುಷದ ಹುಡುಗಿ. ಬಾಪೂಜಿಯ ಬಳಿಗೆ ಬಂದು ತನ್ನ ಕೈಯ ಬಂಗಾರದ ಬಳೆ ತೆಗೆದು ಅವರಿಗೆ ಕೊಟ್ಟು ಅವರ ಹಸ್ತಾಕ್ಷರ ಬೇಡಿದಳು. ಬಾಪೂ ಬರೆಯ ತೊಡಗಿದಾಗ ಕೌಮುದಿಯ ಇನ್ನೊಂದು ಕೈಯೂ ಬರಿದಾಯಿತು. ಆಕೆಯ ಕೈಗೆ ಇದ್ದುದೇ ಒಂದೊಂದು ಬಳೆ. ಬಾಪೂ ನೋಡಿದರು. 'ಒಂದೇ ಸಾಕಮ್ಮ. ಒಂದಕ್ಕೇ ಹಸ್ತಾಕ್ಷರ ಕೊಡುತ್ತೇನೆ ತಾಯಿ' ಎಂದರು. ಅದಕ್ಕೆ ಉತ್ತರವಾಗಿ ತನ್ನ ಕೊರಳಿಗೆ ಕೈ ಹಾಕಿದಳು ಹುಡುಗಿ. ಕೊರಳಲ್ಲಿದ್ದ ಬಂಗಾರದ ಸರ ತೆಗೆಯುವುದು ಸುಲಭವಾಗಿರಲಿಲ್ಲ. ಆಕೆಯ ನಿಡಿದಾದ ಜಡೆಯಿಂದ ಅದನ್ನು ಬಿಡಿಸಿ ತೆಗೆಯಬೇಕಾಗಿತ್ತು. ಆ ಮಲಬಾರೀ ಮಗು ಅಷ್ಟು ಜನಸಂದಣಿಯಲ್ಲಿಯೂ ನಾಚದೆ ಅದನ್ನು ತೆಗೆದೇ ಬಿಟ್ಟಳು. ಜನ ಹರುಷದಲ್ಲಿ ಓಲಾಡಿದರು.

ಬಾಪುಗೆ ಅಚ್ಚರಿಯಾಯಿತು. 'ಅಲ್ಲಮ್ಮ; ನಿಮ್ಮ ತಂದೆ ತಾಯಿಯನ್ನು ಕೇಳಬೇಡವೆ ಮಗು?' ಎಂದರು. ಕೌಮುದಿ ಮರುಮಾತೇ ಆಡಲಿಲ್ಲ. ಆಕೆಯ ತ್ಯಾಗ ಇನ್ನೂ ಮುಗಿದಿರಲಿಲ್ಲವೋ ಏನೋ! ಕಿವಿಗೆ ಕೈ ಹಾಕಿದಳು. ಜನಕ್ಕೆ ಇದೆಲ್ಲ ಮಿಂಚಿನಂತೆ. ಕಣ್ಣು ಕುಕ್ಕಿತು. ಕಲ್ಲುಗೊಂಬೆಗಳಾದರು. ಸಭೆಯೆಲ್ಲ ಒಂದೇ ಉಸಿರು. ಕೌಮುದಿ ಕಿವಿಯ ಓಲೆಯನ್ನೂ ಕಳಚಿದಳು. ಜನಸ್ತೋಮವೆಲ್ಲ ಒಂದೇ ಸಲ ಹೋ ಎಂದರು. ಆನಂದದ ಉಬ್ಬರ ತಡೆಯಲಾಗಲಿಲ್ಲ! ಕುಣಿದಾಡಿದರು. ಬಾಪೂಗೆ ಯಾರೋ ಹೇಳಿದರು. ಆ ಒಡವೆಗಳನ್ನೆಲ್ಲ ಹರಾಜು (ಲಿಲಾವು) ಮಾಡುತ್ತ ನಿಂತಿದ್ದಾತನೇ ಕೌಮುದಿಯ ತಂದೆ. ಮಗಳ ಒಡವೆ ಒಂದೊಂದಾಗಿ ಆತನೇ ಹರಾಜು ಮಾಡುತ್ತಿದ್ದ. ಆತನ ಕಣ್ಣಿನಲ್ಲಿ ಒಂದು ಅಲೌಕಿಕಾನಂದದ ಹೊಳಪು ಮಿನುಗುತ್ತಿತ್ತು. ಬಾಪೂಗೆ ತಡೆಯಲಾಗಲಿಲ್ಲ, ಆದರೂ ಕೌಮುದಿಗೆ ಹೇಳಿದರು 'ಈಗ ಒಡವೆಯೇನೋ ಕೊಟ್ಟೆ ಕೌಮುದಿ. ಮತ್ತೆ ಅವನ್ನು ಎಂದೂ ಇಡದಿದ್ದರೆ ಈ ತ್ಯಾಗಕ್ಕೆ ಬೆಲೆ ತಾಯಿ' ಕೌಮುದಿಗೆ ವಯಸ್ಸು ಎಳದು, ಆದರೂ ಹೃದಯ ಬೆಳೆದದ್ದು, ದೃಢಕಂಠದಿಂದ ಆ ದೇವತೆ 'ತಥಾಸ್ತು' ಎಂದಳು.

ಇಲ್ಲಿಗೆ ಬಾಪೂಜಿಯ ಮನಸಿನ ಆಣೆಕಟ್ಟು ಒಡೆದು ಹೋಯಿತು. ಹಸ್ತಾಕ್ಷರದ ಪುಸ್ತಕ ಕೌಮುದಿಗೆ ಕೊಡುವಾಗ ಎದೆ ತುಂಬಿಬಂತು. 'ಕೌಮುದಿ, ನೀನು ಕಳಚಿಕೊಟ್ಟ ಒಡವೆಗಿಂತ ನಿನ್ನ ತ್ಯಾಗವೇ ಹಿರಿಯ ಒಡವೆ, ತಂಗೀ' ಎಂದರು.

ಹೆಂಗುಸನ್ನು ಹೇಡಿ ಎಂದು ಗಾಂಧೀಜೀ ತಿಳಿದಿಲ್ಲ ಎಂದೇ ಈ ವಿಲಕ್ಷಣ ಜಾಗೃತಿ ಸಾಧ್ಯವಾಗಿದೆ......

('ಪರ್ಣಕುಟಿ'ಯಿಂದ)

ವೃದ್ಧಿಯಿಂದ ಅಭಿವೃದ್ಧಿ.

ಗತ ೧೯೪೬ನೇ ವರ್ಷದಿಂದ ಚಾಲು ೧೯೪೭ನೇ ಪ್ರಾರಂಭದ ಮಾಸಗಳು ಬಹು ಅಪಾಯಗಳಿಂದಲೂ ಹಾಗೂ ಸುಯೋಗಗಳಿಂದಲೂ ತುಂಬಿ ತುಳುಕಿದ್ದವು. ಜಾಣತೆಯಿಂದ ವ್ಯವಸ್ಥೆ ಮಾಡಲ್ಪಟ್ಟ ಸಂಸ್ಥೆಗಳು ಈ ಅಪಾಯಗಳನ್ನು ತಳ್ಳಿ ಸುಸಂದರ್ಭಗಳನ್ನು ಉಪಯೋಗಿಸಿ ಶೀವ್ರನೆ ಮುಂದುವರಿದವು.

೧೯೪೦, ೪೧ರಲ್ಲಿ ಕೆನರಾ ಬೇಂಕು ೬೦ ಲಕ್ಷ ಠೇವಣಿಗಳ ಮತ್ತು ಒಂದು ಕೋಟಿ ಸಾಂಪತ್ತಿಕ ಸ್ಥಿತಿಯಲ್ಲಿದ್ದು ಅಂದು ಸಹ ಅದು ವಿಸ್ತೃತ ಸ್ಥಿತಿಯ ಸಂಸ್ಥೆಯಾಗಿತ್ತು. ಇಂದು ಠೇವಣಿಗಳು ಇಮ್ಮಡಿಯಾಗಿವೆ. ಸಾಂಪತ್ತಿಕ ಸ್ಥಿತಿಯು ಎರಡುವರೆ ಕೋಟಿಗೆ ಮಿಕ್ಕಿದೆ. ಹಾಗೂ ತೆತ್ತ ಮೂಲಧನವು ನಾಲ್ಮಡಿಯಾಗಿದೆ.

ಜಾಣತನದ ವ್ಯವಸ್ಥೆಯ ಏರ್ಪಾಟಿನಿಂದಲೂ, ಆತ್ಮ ವಿಶ್ವಾಸದಿಂದಲೂ, ದೃಢ ಬುದ್ಧಿಯಿಂದಲೂ, ಯೋಗ್ಯ ಸೇವೆಯನ್ನು ಸಲ್ಲಿಸಿದರಿಂದಲೂ, ಇಂದಿನ ಈ ಪ್ರಗತಿಗೆ ಕಾರಣಭೂತರಾದ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರರಾಗಿ ಇನ್ನು ಮುಂದಕ್ಕೂ ಮಹತ್ವದ ಸೇವೆಯನ್ನು ಒಪ್ಪಿಸಲು ಸಮರ್ಥರಾಗಲು ನಾವು ಹಾರೈಸುವೆವು.

Canara Bank Limited.

ಕೆನರಾ ಬೇಂಕ್ ಲಿಮಿಟೆಡ್,

ಸ್ಥಾಪನೆ 1906.

ಸಮರಭೂಮಿಯ ಸಂಚಾರ

ಹಿಟ್ಲರನೆದುರು ಹೋರಾಡಿದ ಸಾಹಸಮಯ ಸಂಗ್ರಾಮದ ಕುರಿತು ಇಡೀ ಜಗತ್ತೇ ಇಂದು ರಶ್ಯವನ್ನು ಅಭಿನಂದಿಸುತ್ತಿದೆ. ಜರ್ಮನರೇನೋ ಹಿಂದಿನಿಂದಲೇ ರಶ್ಯದೊಡನೆ ಕಲಹಕ್ಕೆ ಇಳಿದಿರಲಿಲ್ಲ. ಕಳೆದ ಮಹಾ ಯುದ್ಧದಲ್ಲಿ ಜರ್ಮನಿಗಾದ ಸೋಲಿಗೆ ರಶ್ಯವು ಕಿಂಚಿತ್ತಾದರೂ ಹೊಣೆಯಲ್ಲ. ಹೀಗಿದ್ದರೂ ಹಿಟ್ಲರನು ತನ್ನ ಸಾಮ್ರಾಜ್ಯ ದಾಹದಿಂದಾಗಿ, ಬೆದರಿಸಿಯೇ ಗೆದ್ದು ಬಿಟ್ಟೇನೆಂಬ ಹೆಮ್ಮೆಯಿಂದ ಒಮ್ಮೆಲೇ, ರಶ್ಯದ ಮೇಲೇರಿ ಹೋದನು. ಮಿತ್ರಪಕ್ಷದಲ್ಲಿಯೂ ಕೂಡ ಹಲವರು ರಾಜತಂತ್ರವಿಶಾರದರೂ, ಜರ್ಮನಿಯ ಬಾಯಿಗೆ ರಶ್ಯವು ಇನ್ನೇನು ತುತ್ತಾಗಿಬಿಟ್ಟಿತೆಂದೇ ಹೇಳಿದ್ದರು. ಆದರೆ ಕಳೆದೆರಡು ವರ್ಷಗಳ ಭೀಷಣ ಸಂಗ್ರಾಮದ ಇತಿಹಾಸವು ವಿಚಿತ್ರವನ್ನು ತೋರಿಸಿದೆ. ಹಿಟ್ಲರನನ್ನು ಸದೆಬಡಿಯಬಲ್ಲ, ಸಮರ್ಥ ಏಕಾಂಗೀ ವೀರ ಸ್ಟಾಲಿನನೆಂದು ಇಂದು ಜಗತ್ತೇ ತಿಳಿದಿದೆ. ಇಂದಿನ ಯುದ್ಧದ ನಿರ್ಣಯವು ರಶ್ಯದ ಸಂಗ್ರಾಮದಲ್ಲಿ ಆಗುವುದೆಂದು ಎಲ್ಲರೂ ತಿಳಿದಿದ್ದಾರೆ ರಶ್ಯವು ಜರ್ಮನಿಯನ್ನು ಎದುರಿಸಿ ಹೋರಾಡಿದ ಯುದ್ಧನೀತಿಯಿಂದ ಜಗತ್ತಿನ ಸಹಾನುಭೂತಿ ಇಂದು ರಶ್ಯದ ಕಡೆಗೆ ತಿರುಗಿದೆ.

ಇಂಥಾ ಇತಿಹಾಸಪ್ರಸಿದ್ಧ ಸಂಗ್ರಾಮದ ರಶ್ಯದ ರಕ್ತಸೈನಿಕರನ್ನು ಅವರ ದ್ವಿತೀಯ ವಾರ್ಷಿಕೋತ್ಸವದ ಸಂದರ್ಭದಲ್ಲಿ ಜಗತ್ತೇ ಅಭಿನಂದಿಸುವುದರೊಡನೆ ನಾವೂ ನಮ್ಮ ಹಾರ್ದಿಕ ಸಂತೋಷವನ್ನು ವ್ಯಕ್ತಪಡಿಸುತ್ತೇವೆ ಇದುಮಿಲಿಯಕ್ಕಿಂತ ಮಿಕ್ಕಿದ ಜರ್ಮನ್ ಯೋಧರನ್ನು ರಶ್ಯನರು ನೆಲಸಮ ಮಾಡಿದ್ದಾರೆ ಇದರಲ್ಲಿ ರಶ್ಯವೂ ಅತುಲ ಬಲಿದಾನವಿತ್ತಿದೆ ಎದೆಯ ರಕ್ತವನ್ನು ಪ್ರವಾಹವಾಗಿ ಹರಿಸಿದೆ. ಸ್ವಾತಂತ್ರ್ಯಕ್ಕಾಗಿ ಜೀವವನ್ನು ತೃಣಸಮವಾಗೆಣಿಸಿ ಹೋರಾಡಿದೆ. ಪರರ ದಾಸ್ಯದಿಂದ ನರಳುವುದಕ್ಕಿಂತ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಾ ಸರ್ವರುಸತ್ತರೂ ಅದು ಮೇಲೆಂದು ರಶ್ಯನ್ ವೀರರು ಬಲ್ಲರು.

ಕಳೆದ ವಸಂತದಲ್ಲಿ ಮಿತ್ರಪಕ್ಷದವರ ಬಲ ತುಸು ಬಗ್ಗಿದಂತಾಗಿತ್ತು. ಜರ್ಮನರು ಸ್ಟಾಲಿನ್‌ಗ್ರಾಡ್ ನುಗ್ಗಿದ್ದರು. ಹಾಗೆ ಮುಂದೊತ್ತಿ ಕಾಕಸಸ್ ಎಣ್ಣೆ ಕಣಿವೆ ಸ್ವಾಧೀನಮಾಡಿದ್ದರೆ ಮುಂದೆ ಗಂಡಾಂತರವೇ ಇತ್ತು. ಟರ್ಕಿಯ ತಾಟಸ್ಥ್ಯವೂ ಮತ್ತೆ ಉಳಿಯುತ್ತಿರಲಿಲ್ಲ. ಅಷ್ಟರಲ್ಲಿ ಇತ್ತ ಜಪಾನೂ ವಿಜೃಂಭಿಸುತ್ತಾ ಬಂತು! ಮಧ್ಯಪೂರ್ವವು ಆಕ್ರಮಿಸಲ್ಪಟ್ಟು ಭಾರತಕ್ಕೂ ಆ ಮೇಲೆ ಗಂಡಾಂತರ ಒದಗುತಿತ್ತು. ಆದರೆ ಇಂದಾ ವಿಷಮುವನುವನ್ನು ರಶ್ಯನ್ ವೀರರು ನಿವಾರಿಸಿದರು. ಜರ್ಮನರನ್ನು ಹಿಮ್ಮೆಟ್ಟಿಸಿದರು. ಮಿತ್ರರನ್ನು ಕಾಪಾಡಿದರು. ಮಿತ್ರರಿಗೆ ಮಹಾಸಿದ್ಧತೆ ಮಾಡಲು ಇದರಿಂದ ಬೇಕಾದಷ್ಟು ಅನುಕೂಲವಾಯಿತು.

ಆದರೆ ಕೊನೆಯ ಪೆಟ್ಟು ಬೇಗನೇ ಬೀಳಬೇಕಾಗಿದೆ. ರಶ್ಯವು ಆದಿಯಿಂದಲೇ ಮಿತ್ರರೊಡನೆ, 'ಯೂರೋಪಿನಲ್ಲಿ ಎಲ್ಲಾದರೂ ಒಂದು ದ್ವಿತೀಯ ರಂಗ ತೆರೆಯಿರಿ' ಎಂದು ಬೊಬ್ಬಿಡುತ್ತದೆ ರಶ್ಯವೊಂದೇ ಕಡೆಗೆ ತನ್ನ ಗಮನವನ್ನು ಹರಿಸಿ ಹೋರಾಡುವ ಹಿಟ್ಲರನನ್ನು ಇನ್ನೊಂದೆಡೆಗೆ ದೃಷ್ಟಿ ಹರಿಯಿಸಬೇಕಾದರೆ—ಹೀಗೆ ಮಾಡಿದರೆ ಮಾತ್ರ ಬೇಗನೇ ಯುದ್ಧವನ್ನು ಗೆಲ್ಲಬಹುದು—ದ್ವಿತೀಯ ರಂಗ ತೆರೆಯಲೇಬೇಕೆಂದು ರಶ್ಯ ಮಾತ್ರವಲ್ಲ ಜಗತ್ತಿನ ವಿಚಾರವಂತರೆಲ್ಲರೂ ಹೇಳುತ್ತಾರೆ. ಹಾಗಿದ್ದರೂ ಮಿತ್ರರು ಇನ್ನೂ ಏನು ಮಾಡುತ್ತಾರೆಂದು ತಿಳಿಯುವುದಿಲ್ಲ. ಚರ್ಚಿಲ್ ರೂಸ್‌ವೆಲ್ಟರ ಮಾತುಕತೆಯ ವಿವರವೆಲ್ಲಾ ಊಹನೆಯ ಗರ್ಭದಲ್ಲಿಯೇ ಉಳಿದಿವೆ ಯೂರೋಪ್ ಧಾಳಿ, ದ್ವಿತೀಯ ರಂಗ ಇವೆಲ್ಲ ಇನ್ನು ಯಾವಾಗಲೋ ನೋಡಬೇಕು!

ಜಪಾನು, ವಾಶಿಂಗಟನ್ ಮಾತುಕತೆಯನ್ನು ಕುತೂಹಲದಿಂದ ನಿರೀಕ್ಷಿಸುತಿತ್ತು, ತನ್ನ ಮೇಲೆ ಯಾವ ಮೂಲಕವಾಗಿ ಮಿತ್ರರು ಬೀಳುತ್ತಾರೋ ಎಂದು ಅದರ ಅಂಜಿಕೆ ಹಿರೋಹಿಟೋನ ರಾಜಧಾನಿಗೆ ಮುತ್ತಿಗೆ ಹಾಕಲು ಮಿತ್ರರಿಗೆ ಮೂರು ಮಾರ್ಗಗಳಿವೆ ಇವುಗಳಲ್ಲಿ ಒಂದರಲ್ಲಿ ಅಥವಾ ಮೂರರಲ್ಲಿಯೂ ಆಕ್ರಮಣ ಕಾರ್ಯ ಬೇಗನೇ ಪ್ರಾರಂಭಿಸಬಹುದು; ಈ ಮೂರು ಮಾರ್ಗಗಳಲ್ಲಿಯೂ ಜನ, ಟೇಂಕು, ವಿಮಾನಗಳು ಹೋಗಬಹುದು; ಜಪಾನು ಎಲ್ಲದಕ್ಕಿಂತಲೂ ಅಧಿಕವಾಗಿ ಅಂಜುವುದು ವಿಮಾನಗಳಿಗೆ! ಏಕೆಂದರೆ ವಿಮಾನಗಳು ವಿಧ್ವಂಸಕಗಳು!

ಅಮೆರಿಕನರು ಈಗಾಗಲೇ ಮೊದಲನೆಯ ಮಾರ್ಗ ಹಿಡಿದು ಮುಂದುವರಿದಿದ್ದಾರೆ. ಇದು ಅಲ್ಯೂಶಿಯನ್ ದ್ವೀಪದ ಹಾದಿ; ಅಮೆರಿಕ ಮತ್ತು ಏಶ್ಯಾ ಖಂಡಗಳಿಗಿದು ಭೂಸಂಧಿ, ಉತ್ತರ ಪೆಸಿಫಿಕ್ಕಿನಲ್ಲಿ ಇದು ಜಪಾನಿನ ಕೊರಳ ಸುತ್ತು ತಿರುಗುವ ಕಠಾರಿಯಂತಿದೆ ಅಮೆರಿಕನ್ ಸೇನೆಗಳು ಈಗಾಗಲೆ ಈ ದ್ವೀಪಗಳಲ್ಲಿ ತೀರ ಪಶ್ಚಿಮದ ಅಟ್ಟು ದ್ವೀಪವನ್ನು ಪೂರ್ಣ ಹಿಡಿತದಲ್ಲಿಟ್ಟುಕೊಂಡಿವೆ. ಹಿಂಗಡೆ ಸಿಪಾಯಿಗಳು, ಕೆಲಸಗಾರರು ಸೇರಿ ವಿಮಾನ ಕೇಂದ್ರವೊಂದನ್ನು ಇಲ್ಲಿ ನಿರ್ಮಿಸುತ್ತಿದ್ದಾರೆ. ಇದರಿಂದ ಈಗಾಗಲೇ ಅಮೆರಿಕವು ಸ್ವಭೂಮಿಯನ್ನು ಬಿಟ್ಟು ಶತ್ರು ರಾಜ್ಯದ ಗಡಿಯನ್ನು ಸೇರಿದಂತಾಗಿದೆ. ಈ ಕಾರ್ಯಕ್ರಮ ಯಾವಾಗ ಫಲಕಾರಿಯಾಗುವುದೋ ತಿಳಿದಿಲ್ಲ. ಏಕೆಂದರೆ ಅಮೆರಿಕನ್ ವಿಮಾನಗಳು ಇನ್ನೂ ಜಪಾನಿನ ರಾಜಧಾನಿಯಿಂದ ೧,೭೫೦ ಮೈಲು ದೂರದಲ್ಲಿವೆ.

ಟೋಕಿಯೋಗೆ ಎರಡನೆಯ ಮಾರ್ಗವು, ಚೆಕಿಯಾಂಗಿನಿಂದ ಮತ್ತು ಚೀನದ ಆಗ್ನೇಯ ಪ್ರಾಂತಗಳಿಂದ ಪ್ರಾರಂಭಿಸುತ್ತದೆ. ಮಿತ್ರರ ಉಪಯೋಗಕ್ಕಾಗಿ ರಚಿತವಾದ ಠಾಣ್ಯಗಳು ಜಪಾನರ ಲಕ್ಷ್ಯದಿಂದ ೧,೦೦೦ ಮೈಲು ಅಂತರದಲ್ಲಿವೆ. ಆದರೆ ಯಾವಾಗ ಚೀನಕ್ಕೆ ಸಹಾಯ ಸಾಮಗ್ರಿ ಕಳುಹಿಸುವ ಬರ್ಮಾ ಮಾರ್ಗವು ಮುಚ್ಚಲ್ಪಟ್ಟಿತೋ, ಆಗ ಈ ಮಾರ್ಗವೂ ಮುಚ್ಚಿ ಹೋಗಿದೆ. ಇನ್ನು—ಜಪಾನು ಹೆಚ್ಚಾಗಿ ಹೆದರುವ ಮೂರನೆಯ ದಾರಿ, ವೈಟ್ ಹೌಸ್ ಮಾತುಕತೆಯ ಸಂದರ್ಭ ರೂಸ್‌ವೆಲ್ಟ್ ಚರ್ಚಿಲರು ಸೂಚಿಸಿದ, ರಶ್ಯಾದ ದಾರಿ. ಸೈಬೇರಿಯಾದಲ್ಲಿ ಮಿತ್ರರು ವಿಮಾನ ಕೇಂದ್ರವನ್ನು ಪಡೆದರೆ, ಅಲ್ಲಿಂದ ಟೋರಿಯೋ, ಒಸಾಕಾ, ನಗೋಯಾ ಮತ್ತು ಯೊಕೋಹಾಮಾಗಳೆಲ್ಲಾ ಸುಲಭ ಆಕ್ರಮಣವಾಗುವವು. ವಾಡಿವೋಸ್ಟೋಕಿನಿಂದ ಟೋಕಿಯೊಗೆ ಕೇವಲ ೭೫೦ ಮೈಲು ಅಂತರ ಕಮಾಡಟ್ಟದಿಂದ ಇದು ಇನ್ನು ಹತ್ತಿರ. ಹಾಗಾಗಿ ಈ ಹಾದಿ ಅಪಾಯದ ಹಾದಿಯೆಂದು ಜಪಾನು ತಿಳಿದಿದೆ.

ಫ್ರಾನ್ಸ್ ಜರ್ಮನಿಯ ಸ್ವಾಧೀನವಾದ ಮೇಲೆ, ಕೆಲವರು ಅಲ್ಲಿಂದ ತಲೆತಪ್ಪಿಸಿ ಹೋದರು. ಅಂದವರಲ್ಲಿ ಡಿಗೋಲೆ ಒಬ್ಬ, ಜಿರಾಡ್ ಇನ್ನೊಬ್ಬ. ಸ್ವತಂತ್ರ ಫ್ರಾನ್ಸಿನ ಸರ್ವಾಧಿಕಾರ ಯಾರಿಗೆ ಎಂಬ ವಿಷಯವಾಗಿಯೋ ಏನೋ ಈಗ ಇರುವ ಕಲಹ ಬೆಳೆಯುತ್ತಾ ಬಂದಿದೆ. ಇದರಿಂದ ಸ್ವತಂತ್ರ ಫ್ರೆಂಚ್ ಸರಕಾರವನ್ನು ಸ್ಥಾಪಿಸುವರೆ ಪ್ರತಿಬಂಧವುಂಟಾಗಿದೆ. ಸೈನ್ಯ ಸಂಘಟನೆಯ ಕಾರ್ಯವು ಜಿರಾಡ್ ವಶವಿರಬೇಕೋ, ಡಿಗೋಲೆ ವಶವಿರಬೇಕೋ ಎಂಬ ಬಗ್ಗೆ ಹೆಚ್ಚಿನ ತಿಕ್ಕಾಟವುಂಟಾಗಿರುವುದು. ಈ ಫ್ರೆಂಚ್ ಬಿಕ್ಕಟ್ಟಿನಲ್ಲಿ ಮಿತ್ರರು ಮಧ್ಯಸ್ಥಿಕೆ ವಹಿಸಿ ಜಾಣತನದಿಂದ ಈ ಅಂತಃಕಲಹದ ಬೀಜವನ್ನು ಕಿತ್ತೊಗೆಯುವುದು ಉಚಿತ.

ಭಂಡವಾಳಶಾಹೀ ರಾಷ್ಟ್ರವಾದ ಅಮೆರಿಕದಲ್ಲಿ ಇತರ ಬಂಡವಾಳಶಾಹೀ ರಾಷ್ಟ್ರಗಳಂತೆ ಕೆಲಸಗಾರರ ಸಂಕಷ್ಟಗಳು ಬೇಕಾದಷ್ಟಿವೆ ಆದರೆ ಇಂದಿನೀ ಯುದ್ಧ ಪ್ರಯತ್ನದ ಕಾಲದಲ್ಲಿ ಕಾರ್ಖಾನೆಗಳ ಕೆಲಸಗಾರರು ಸಾವಿರ ಸಾವಿರ ಸಂಖ್ಯೆಯಿಂದ ಮುಷ್ಕರ ಹಿಡಿದರೆ ಬಲವಾದ ಪೆಟ್ಟುಂಟು. ಹಾಗೆಂದು ಅಮೆರಿಕದ ಮಿಲಿಯಾಧಿಪತಿಗಳು ಅವರ ಸಂಕಷ್ಟನಿವಾರಣೆಗೆ ಏನೇನೂ ಗಮನ ಕೊಡುವುದಿಲ್ಲ ರೂಸ್‌ವೆಲ್ಟ್ ಸರಕಾರವೂ ಕೆಲಸಗಾರರನ್ನು ಬಗ್ಗಿಸುವುದರಲ್ಲಿಯೇ ಇದೆ. ಒಮ್ಮೆ ಪ್ರಾರಂಭವಾದ ಮುಷ್ಕರವು ಬಹಳ ಕಾಲ ನಡೆದು ಈ ಗಲೀಗ ಕೊನೆಗೊಂಡಿತೆಂದು ಸುದ್ದಿ ಬಂದಿರಲು, ಪುನಃ ೩೦ ಸಾವಿರ ಕೆಲಸಗಾರರು ಮುಷ್ಕರ ಹಿಡಿದ ವಾರ್ತೆ ಬಂದಿರುವುದು

ನಿಮ್ಮ ನೌಕರರಿಗೊಂದು, ವಾಚು ಅಗತ್ಯವಿದೆ,

ನೌಕರರು ಮಾತ್ರವಲ್ಲ, ಎಲ್ಲಾ ಉದ್ಯೋಗದವರೂ, ಒಂದು ಒಳ್ಳೇ ವಾಚು ಬೇಕೆನ್ನುವವರೇ. ಕೀಯಿಲ್ಲದ, ಕೇವಲ 28 ರೂಪಾಯಿ ಬೆಲೆಯ ಈ ಗಟ್ಟಿಮುಟ್ಟಾದ ವಾಚು ಸಕಲರಿಗೂ ಅತ್ಯುತ್ತಮವಾದುದಿದೆ.

ವೆಸ್ಟ್ ಎಂಡ್ ವಾಚ್ ಕಂಪೆನಿಯ ಹೆಸರುಳ್ಳ ವಾಚೊಂದನ್ನು ರೂ 28ಕ್ಕೆ ಪಡಕೊಳ್ಳುವುದು ವಿಹಿತ ಏಕೆಂದರೆ, ಇದರ ಬೆಲೆಗೆ ತಕ್ಕ ಪ್ರಯೋಜನ ಗ್ಯಾರಂಟಿ ಇತರ ವಾಚುಗಳು ಇದಕ್ಕಿಂತ ಕಡಿಮೆ ಕ್ರಯಕ್ಕೆ ದೊರಕುವುದಾದರೂ,ಈ ಕಂಪೆನಿಯ ತಯಾರಿ, ಬಾಳಿಕೆ, ಗಟ್ಟಿಮುಟ್ಟು ಅವುಗಳಿಗಿರುವುದಿಲ್ಲ ಅವು ಎಷ್ಟೋ ಕೀಳು ದರ್ಜೆಯದಿದ್ದು ಕಡಿಮೆ ಕ್ರಯಕ್ಕೆ ಪಡಕೊಂಡರೂ ಪ್ರಯೋಜನವಿಲ್ಲ

ಸೆಕುಂಡಸ್ ಪೋಕೆಟ್

15″ಸೈಜ್ ನಿಕ್ಕಲ್‌ಕೇಸ್ ಸಾದಾ ರೋಮನ್ ಯಾ ಅರೇಬಿಕ್ ಅಂಕೆಯವು ರೂ. 28

ರೇಡಿಯಂ ಡಯಲ್ ರೂ 3 ಹೆಚ್ಚು

ವೆಸ್ಟ್ ಎಂಡ್ ವಾಚ್ ಕಂಪೆನಿ

ಬೊಂಬಾಯಿ — ಕಲ್ಕತ್ತ

WEST END WATCH Co

BOMBAY CALCUTTA

ಸ್ವದೇಶಾಭಿಮಾನಿ

ತಾರೀಕು 25—6—1943

ಯಾರಾದರೇನಂತೆ?

ಲಾರ್ಡ್ ಲಿನ್‌ಲಿತ್‌ಗೋರವರ ಸ್ಥಾನದಲ್ಲಿ, ಭಾರತದ ಮುಂದಿನ ವೈಸರಾಯರಾಗಿ ಫೀಲ್ಡ್ ಮಾರ್ಶಲ್ ಆರ್ಚಿಬಾಲ್ಡ್ ವೇವಲರು ನೇಮಕ ಹೊಂದಿದ್ದಾರೆ. ಚರ್ಚಿಲ್ ಅಮೆರಿ ಕಂಪನಿಯವರು, ಬ್ರಿಟಿಷ್ ಮಂತ್ರಿಮಂಡಳದವರು ಇದಕ್ಕೆ ಯೋಗ್ಯತೆಯುಳ್ಳವರೊಬ್ಬರನ್ನು ಎಲ್ಲೆಲ್ಲೂ ಹುಡುಕಿ, ಬ್ರಿಟನಿನಲ್ಲೆಲ್ಲಾ ಸಂಶೋಧಿಸಿ, ಕೊನೆಗೆ ಕಳೆದ ಐದು ವರ್ಷಗಳಿಂದಲ್ಲೂ ಭಾರತದಲ್ಲೇ ಇದ್ದ ಭಾರತದ ಸೇನಾಪತಿಯಾಗಿ 2 ವರ್ಷಗಳಿಂದಲೂ ನಮ್ಮಲ್ಲಿಯೇ ವಾಸಿಸಿಕೊಂಡಿದ್ದ ವೇವಲರನ್ನೀಗ ಭಾರತದ ವೈಸರಾಯರಾಗಿ ಪಟ್ಟಕಟ್ಟಿದ್ದಾರೆ.

ವೇವಲರ ನೇಮಕದ ಕುರಿತು ಈಗಾಗಲೇ ಭಾರತದ ಪತ್ರಿಕೆಗಳು, ಮುಖಂಡರು ಅಭಿಪ್ರಾಯ ವ್ಯಕ್ತಮಾಡಿದ್ದಾರೆ. ಹೆಚ್ಚಿನ ಅಭಿಪ್ರಾಯಗಳಲ್ಲಿ ಈ ನೇಮಕದ ಕುರಿತು ಅಷ್ಟೊಂದು ತೃಪ್ತಿಯಿದ್ದಂತೆ ತೋರುವುದಿಲ್ಲ. ಪ್ರಜಾಪ್ರಭುತ್ವ ರಾಷ್ಟ್ರಕ್ಕೆ ಸೇನಾಪತಿಯೊಬ್ಬರನ್ನು ಸರ್ವಾಧಿಕಾರಿ ಮಾಡುವುದೇ ಎಂದು ಕೆಲವರು ಪ್ರಶ್ನಿಸಿದ್ದಾರೆ; ಸೇನಾಪತಿ ಕೈಗೆ ಭಾರತದ ಸರ್ವಾಧಿಕಾರ ಕೊಟ್ಟರೆ ಭಾರತದಲ್ಲಿ ಮಿಲಿಟರಿ ಆಡಳಿತವೇ ಜರಗೀತಲ್ಲಾ ಎಂದು ಕೆಲವರು ಕಳವಳಗೊಂಡಿದ್ದಾರೆ; ಇದುವರೆಗೂ ಸೇನಾಪತಿಯೊಬ್ಬನನ್ನು ನಮ್ಮ ವೈಸರಾಯರಾಗಿ ನೇಮಿಸದೆ ಈಗ ಆ ಸಂಪ್ರದಾಯ ಭಂಗ ಮಾಡಿದರೇಕೋ ಎಂದು ಕೆಲವರ ಚಿಂತೆ. ಇಷ್ಟು ಸಮಯದಿಂದ, ಇಷ್ಟೊಂದು ಹುಡುಕಾಡಿ ಹುಡುಕಾಡಿದರೂ ಚರ್ಚಿಲರಿಗೆ ವೇವಲರಲ್ಲದೆ ಬೇರಾರೂ ಸಿಗಲಿಲ್ಲವೇ ಎಂದು ಉಳಿದವರ ಪ್ರಶ್ನೆ. ಹೀಗೆ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಅಂತೂ ಹಲವರು ತಮ್ಮ ಅತೃಪ್ತಿ ನಿರಾಶೆಗಳನ್ನೇ ಸೂಚಿಸಿದ್ದಾರೆ.

ವೇವಲರ ನೇಮಕದ ವಿಷಯ ಇಷ್ಟೊಂದು ಅತೃಪ್ತಿಯಾದರೂ ಏಕೆ? ಅವರು ಬರೇ ಸೇನಾಪತಿಯೆಂದೆ? ಅಥವಾ ಸೇನಾಪತಿಯಲ್ಲದೆ ಇನ್ನು ಬೇರೆ ಯಾರು ಬರುತ್ತಿದ್ದರೆ, ಒಳ್ಳೆಯದಿತ್ತು? ಭಾರತವನ್ನು ಉದ್ಧಾರಮಾಡಲು ಬ್ರಿಟನಿನಲ್ಲಿ ಹುಟ್ಟಿದವರು ಯಾರೋ ನಮಗೆ ತಿಳಿಯಲಾರದು. ಅಮೆರಿ ಚರ್ಚಿಲ್ ಕಂಪನಿ ಇರುವ ತನಕ, ಕನ್ಸರ್ವೇಟಿವ್ ಮಂತ್ರಿಮಂಡಳ ಆಳುವ ತನಕ, ಅಥವಾ ಈಗಿದ್ದ ಮಂತ್ರಿಮಂಡಳ ಬದಲಾದರೂ, ಬ್ರಿಟಿಷರು, ಪರಕೀಯರು ನಮ್ಮನ್ನು ಆಳುತ್ತಿರುವ ತನಕ ಯಾರು ವೈಸರಾಯರಾದರೇನಂತೆ? ಲಿನ್‌ಲಿತ್‌ಗೋ ಅಧಿಕಾರಕ್ಕೆ ಜೀವದಾನ ಮಾಡಲಿ; ಸೇನಾಪತಿ ವೇವಲರು ವೈಸರಾಯರಾಗಿ ಬರಲಿ, ಅಥವಾ ಸೇನಾಪತಿಯಲ್ಲದ ಉತ್ತಮ ಬ್ರಿಟಿಷ್ ನಾಗರಿಕನೊಬ್ಬನು ಯಾವನೇ ಬರಲಿ ಭಾರತದ ಬಗ್ಗೆ ಬ್ರಿಟಿಷರ ಅಭಿಪ್ರಾಯ ಧೋರಣಗಳನ್ನೆಲ್ಲಾ ಕಳೆದ ನೂರೈವತ್ತು ವರ್ಷಗಳಿಂದಲೂ ಭಾರತೀಯರು ಕಂಡದ್ದು, ಕೇಳಿದ್ದು ಉಂಡದ್ದೂ ಅಲ್ಲವೆ?

'ಮಿಲಿಟರಿ ರಾಜ್ಯಭಾರ ಮಾಡುವುದು ನನ್ನ ಉದ್ದೇಶವಲ್ಲ; ಭಾರತದ ಮಿತ್ರ ನಾನು; ಭಾರತದಲ್ಲಿ ನನ್ನ ಯೌವನದ ಐದು ವರ್ಷಗಳನ್ನು ಕಳೆದಿದ್ದೇನೆ; ಆ ಋಣವನ್ನು ನನ್ನಿಂದ ಸಾಧ್ಯವಿದ್ದಷ್ಟು ತೀರಿಸುತ್ತೇನೆ' ಹೀಗೆಂದು ವೇವಲರು ಈಗಾಗಲೇ ಹೇಳತೊಡಗಿದ್ದಾರೆ. ಭಾರತೀಯರ ಅಂತರಂಗದಲ್ಲಿ ತಮ್ಮ ನೇಮಕದಿಂದಾಗಿ ಹುಟ್ಟುವ ಭೀತಿಯನ್ನು ಪರಿಹರಿಸಲು ಪ್ರಯತ್ನಿಸಿದ್ದಾರೆ; ಭಾರತೀಯರ ಸಂದೇಹ ನಿವಾರಿಸಲು ಸಾಹಸ ಮಾಡಿದ್ದಾರೆ. ಭಾರತವನ್ನು 'ಉದ್ಧಾರ' ಮಾಡುವ ಭರವಸೆ ಸೂಚಿಸಿದ್ದಾರೆ. ಆದರೆ ಶಬ್ದಗಳಿಗೆ ವಾಕ್ಯಗಳಿಗೆ, ಭರವಸೆ ಪ್ರತಿಜ್ಞೆಗಳಿಗೆಲ್ಲಾ ಈಗೀಗ ಏನೇನೂ ಬೆಲೆಯಿಲ್ಲದೆ ಆಗುತ್ತಿರುವುದನ್ನು ನಾವು ನೋಡಿದ್ದೇವೆ. ವೇವಲರು ಭರವಸೆ ಕೊಡಲಿ, ಕೊಡದಿರಲಿ ಭಾರತೀಯರ ವೈಚಮರ್ಯವು ಇವೆಲ್ಲವನ್ನು ಸಹಿಸುವಷ್ಟು ಕಳೆದ ನೂರೈವತ್ತು ವರ್ಷಗಳಿಂದಲೂ ಒರಟಾಗುತ್ತಾ ಬಂದಿದೆ. ಯಾರು ವೈಸರಾಯರಾದರೇನು ಬ್ರಿಟಿಷ್ ಜನತಾ ಹೃದಯ ಬದಲಾಗುವ ವರೆಗೆ?

ನೋಟಗಳು . . . .

'ರಾಜಕಾರಣವು ಪ್ರಣಯದಂತೆ' ಎಂದು ಮೇಡಮ್ ಚಿಯಾಂಗ್ ಕೈಶೇಕರು ಹೇಳುತ್ತಾರೆ.

ಪ್ರಣಯವೆಂದರೆ ಪಾಶ್ಚಾತ್ಯರ ಪ್ರಣಯ!

ಪಾಶ್ಚಾತ್ಯರ ಪ್ರಣಯ ಸ್ವಲ್ಪ ವಿಪರೀತದ್ದೇ.

ಇಂದು ಪ್ರಣಯ, ನಾಳೆ ವಿವಾಹ, ನಾಳಿದು ವಿಚ್ಛೇದ—ಹೀಗೆಲ್ಲಾ ನಡೆದು ಹೋಗುವುದುಂಟು ಅವರಲ್ಲಿ.

ಪಾಶ್ಚಾತ್ಯ ಸಂಪ್ರದಾಯ ಇದನ್ನು ಒಪ್ಪುತ್ತದೆ; ಪಾಶ್ಚಾತ್ಯ ಸಮಾಜ ಇದನ್ನು ಸಹಿಸುತ್ತದೆ; ಪಾಶ್ಚಾತ್ಯ ಪ್ರಣಯಿ ಪ್ರಣಯಿನಿಯರೂ ಇದಕ್ಕೆ ತಯಾರಿರುತ್ತಾರೆ!

ಅಂತೂ ಪಾಶ್ಚಾತ್ಯರ ಪ್ರಣಯ ಸ್ವಲ್ಪ ವಿಪರೀತದ್ದು; ಹಾಗಾಗಿ ಮೇಡಂ ಹೇಳುತ್ತಾರೆ 'ರಾಜಕಾರಣ ಪ್ರಣಯದಂತೆ' ಎಂದು!

ರಾಜಕಾರಣಕ್ಕೂ ಪ್ರಣಯಕ್ಕೂ ಸಂಬಂಧ ಮಾಡುವುದು ನಮಗೆ ವಿಚಿತ್ರವೆನಿಸಬಹುದು. ಆದರೆ ಅಮೆರಿಕದಲ್ಲಿ ಹುಟ್ಟಿ ಚೀನದವರನ್ನು ಮದುವೆಯಾದ ಮೇಡಮರಿಗೆ ಅದೇನೂ ವಿಚಿತ್ರವಲ್ಲ.

ಹತ್ತಿರದ ಜಪಾನಿನೊಡನೆ ದ್ವೇಷ, ದೂರದ ಅಮೆರಿಕದೊಡನೆ ಪ್ರೇಮ, ಚೀನದ ದಳಪತಿ ಚಿಯಾಂಗ್ ಕೈಶೇಕರಿಗೆ! 'ರಾಜಕಾರಣ ಪ್ರಣಯದಂತೆ!'

ಚೀನಕ್ಕೆ ಜಪಾನರು ಸಾಮಾನು ಕಳುಹಿಸಕೂಡದು; ಅಮೆರಿಕ ಸಾಮಗ್ರಿ ಮಾರಬಹುದು. ರಾಜಕಾರಣದಲ್ಲಿ ಪ್ರಣಯವಿದೆ!

ಚಿಯಾಂಗ್ ಕೈಶೇಕರು ಜಪಾನಿನಲ್ಲಿ ವಿದ್ಯಾಭ್ಯಾಸ ಪಡೆದರೂ, ಅಮೆರಿಕದಿಂದ ಮದುವೆಯಾದರು.

ರಾಜಕಾರಣಕ್ಕೂ ಪ್ರಣಯಕ್ಕೂ ನಿಜವಾಗಿಯೂ ನಿಕಟ ಸಂಬಂಧವಿದೆ!

ರಾಜಕಾರಣವು ಪ್ರಣಯದಂತೆ—ಪಾಶ್ಚಾತ್ಯರ ಪ್ರಣಯದಂತೆ—ವಿಚಿತ್ರವಲ್ಲವಾದರೆ, ಭಾರತಕ್ಕೆ ವೈಸರಾಯರಾಗಿ ವೇವಲರು ನೇಮಕವಾಗುತ್ತಿದ್ದರೆ?

ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ನಾಗರಿಕರನ್ನು ಸೇನಾಪತಿ ಆಳುವುದೆಲ್ಲಿಯಾದರೂ ಉಂಟೆ?

ಆರ್ಡಿನೆನ್ಸು ಮೂಲಕ ಎಲ್ಲಿಯಾದರೂ ಪ್ರಜಾಪ್ರಭುತ್ವ ಸಾಗುತ್ತಿರುವುದನ್ನು ಯಾರಾದರೂ ಕೇಳಿದ್ದಾರೊ?

ಬಹುಸಂಖ್ಯಾಕ ಪಕ್ಷ—ಕಾಂಗ್ರೆಸ್ಸು—ಜೈಲಿಗೆ ಸೇರಿಸಲ್ಪಟ್ಟು, ಅಲ್ಪಸಂಖ್ಯಾಕ ಪಕ್ಷ ಮಂತ್ರಿಮಂಡಳ ನಿರ್ವಹಿಸುವುದು ಯಾವುದಾದರೂ ಪ್ರಜಾಪ್ರಭುತ್ವದಲ್ಲಿ ಇದೆಯೊ?

ನಿಜವಾಗಿಯೂ ರಾಜಕಾರಣವು ಪ್ರಣಯದಂತೆ; ಪಾಶ್ಚಾತ್ಯರ ಪ್ರಣಯದಂತೆ.

ಸ್ವದೇಶ ಸಮಾಚಾರ

ಪಾರ್ಲಿಮೆಂಟ್ ಚುನಾವಣೆಗೆ ಭಾರತೀಯರು

ಸುಪ್ರಸಿದ್ಧ ಬಂಗಾಳಿ ಬ್ರಾಹ್ಮಣ ಮನೆತನಕ್ಕೆ ಸೇರಿದ ರೆವರೆಂಡ್ ಪ್ರಿಟ್ ಬೆನರ್ಜಿಯವರನ್ನು ಪಾರ್ಲಿಮೆಂಟ್ ಸದಸ್ಯತ್ವದ ಚುನಾವಣೆಗೆ ನಿಲ್ಲಿಸಬೇಕೆಂದು ಪ್ರಾಗತಿಕ ಪಕ್ಷದವರು ನಿರ್ಣಯಿಸಿದ್ದಾರೆ. ಇವರು ಬ್ರಿಟಿಷ್ ಇಂಡಿಯಾ ಕಾಮನ್ಸ್‌ವೆಲ್ತ್ ಲೀಗ್ ಕಾರ್ಯದರ್ಶಿಗಳು. ಕಳೆದ ೩೦ ವರ್ಷಗಳಿಂದ ಇವರು ಲಂಡನಿನಲ್ಲಿದ್ದಾರೆ. ಆಂಗ್ಲ ಮಹಿಳೆಯನ್ನು ಮದುವೆಯಾಗಿದ್ದಾರೆ. ಇವರ ಹಿರಿಯರೊಬ್ಬರು ಹಿಂದೆ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು. ಇವರ ಮಗ ಸ್ಟೀಫನ್ ಬೆನರ್ಜಿ ಯುದ್ಧಕ್ಕೆ ಸೇರುವ ಮೊದಲು ಮೆಂಚೆಸ್ಟರ್ ಗಾರ್ಡಿಯನ್ ಪತ್ರಿಕೋದ್ಯಮಿಯಾಗಿದ್ದ.

"ಕಿರ್ಲೋಸ್ಕರ ವಾಡಿಯಲ್ಲಿ ಪಿಸ್ತೂಲ್ ತಯಾರಿಸುವುದಿಲ್ಲ"

ಎಂಬುದಾಗಿ, ಪೋಲೀಸರು ಕಿರ್ಲೋಸ್ಕರವಾಡಿಯ ಮೇಲೆ ಮಾಡಿದ ಮುತ್ತಿಗೆಯ ಕುರಿತು ಕಿರ್ಲೋಸ್ಕರ ಬಂಧುಗಳಲ್ಲೊಬ್ಬರಾದ ಶ್ರೀ. ಎಸ್. ವಿ. ಕಿರ್ಲೋಸ್ಕರರು ಪ್ರಕಟಿಸಿದ್ದಾರೆ. ಸಾತಾರಾ ಪೋಲೀಸರು ಮಾರ್ಚ್ ೧೩ಕ್ಕೆ ಕಿರ್ಲೋಸ್ಕರವಾಡಿಗೆ ಮುತ್ತಿಗೆ ಹಾಕಿ, ಕಬ್ಬಿಣ ಕಾರ್ಖಾನೆ ಶೋಧಿಸಿ, ಒಂದು ಕಡೆ ಎರಡು ಕೈಯಿಂದ ಮಾಡಿದ ಪಿಸ್ತೂಲನ್ನು ವಶಪಡಿಸಿಕೊಂಡಿದ್ದರು. ಆದರೆ ವಿಚಾರಣೆ ನಡೆದು, ಅದು ಕಾರ್ಖಾನೆ ಮೇಲೆ ಮತ್ಸರವಿದ್ದವರ ಕೃತಿಯೆಂದು ಹೇಳಲಾಗಿದೆ.

'ಇದು ಅವಿವೇಕ ಮತ್ತು ಹೇಡಿತನ' ಪೋಲೀಸ್ ಗುಂಡು ಹಾರಿಸಿದ್ದು!

ಪೋಲೀಸರು ಓಡಿ ಹೋಗುತ್ತಿರುವ ಜನರ ಗುಂಪಿನ ಮೇಲೆ, ಸಿಕ್ಕಿ ಸಿಕ್ಕಿದವರ ಮೇಲೆ ಗುಂಡು ಹಾರಿಸಿದರು ದೂರದ ವರೆಗೂ ಹೋಗಿ ಬೆನ್ನಟ್ಟಿ ಗುಂಡು ಹಾರಿಸಿದರು. ಪೋಲೀಸ್ ಠಾಣ್ಯದ ದಕ್ಷಿಣದಲ್ಲಿ ಒಂದು ಹೆಣ ಸಿಕ್ಕಿತು. ಹೊರಗೆ ಚೆರಂಡಿಯಲ್ಲಿ ಇನ್ನೊಂದು ಹೆಣ ಸಿಕ್ಕಿತು. ಪಿ. ಡಬ್ಲ್ಯು. ಕಚೇರಿ ಬಳಿ ಓರ್ವ ಹುಡುಗಿ ಸತ್ತು ಬಿದ್ದಿದ್ದಳು. ಪೋಲೀಸ್ ಠಾಣ್ಯದಿಂದ ಒಂದು ಮೈಲು ದೂರ ಇನ್ನೊಂದು ಹೆಣವಿತ್ತು. ಸತ್ತವರಲ್ಲಿ ಒಬ್ಬನು ಬಿಕ್ಷುಕನು. ಈ ಎಲ್ಲಾ ಕಾರಣಗಳಿಂದ ಪೋಲೀಸರು ಗುಂಡುಹಾರಿಸಿದ್ದು, ಅವಿವೇಕ, ಹೇಡಿತನದೆಂದು ಸ್ಪಷ್ಟವಾಗುತ್ತದೆ. ಈ ರೀತಿ ದಿಬ್ರುಗರದ ಫೇಕಿಯ ಜುಲಿಯಲ್ಲಿ ಪೋಲೀಸರು ಗುಂಡು ಹಾರಿಸಿ ಕೆಲವರನ್ನು ಕೊಂದ ಖಟ್ಲೆಯಲ್ಲಿ ಸ್ಪೆಶಲ್ ಮೇಜಿಸ್ಟ್ರೇಟ್ ಶ್ರೀ. ಎನ್. ಕೆ. ದಾಸರು ತೀರ್ಮಾನ ಕೊಡುತ್ತಾ ಬರೆದಿದ್ದಾರೆ.

ಅಮೆರಿಕದಲ್ಲಿ ಭಾರತೀಯ ಕೆಲಸಗಾರ

ಚಾರ್ಲಿನ್ ಸಿಂಗನೆಂಬವನು, ಡೆಟ್ರೋಯಿಟಿನ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಾನೆ. ಆತನು ಯುನೈಟೆಡ್ ನೇಶನ್ಸ್ ದಿನಾಚರಣೆಯಲಿ ಭಾಷಣ ಮಾಡುತ್ತಾ ಹೀಗೆನ್ನುತ್ತಾನೆ: "ಅಲ್ಲಿ ಭಾರತೀಯರು ಟೇಂಕು ವಿಮಾನಗಳನ್ನು ತಯಾರಿಸುತ್ತಾರೆ. ನಾವು ಕುಶಲಕರ್ಮಕಾರರು; ನಮಗೆ ನಮ್ಮ ಜನ್ಮಭೂಮಿಯ ಅಭಿಮಾನವಿದೆ; ಸಂಯುಕ್ತ ರಾಜ್ಯದ ವಿಜಯದಲ್ಲಿ ಅಭಿಮಾನವಿದೆ, ಆಫ್ರಿಕದಲ್ಲಿ ವಿಜಯಿಗಳಾಗಿ ಹೋರಾಡಿದ ಚತುರ್ಥ ದಳದ ವಿಷಯ ಅಭಿಮಾನವಿದೆ. ಭಾರತವಿಂದು ಪ್ರತಿ ವರ್ಷ ನಾಲ್ಕು ಮಿಲಿಯ ಜೋಡು ಬೂಟ್ಸು ತಯಾರಿಸುತ್ತಿದೆ. ಭಾರತವು ಕಬ್ಬಿಣ ಉಕ್ಕುಗಳಿಂದ ಯುದ್ಧ ಸಾಧನಗಳನ್ನು ಮಾಡುತ್ತವೆ. ಭಾರತವು ಪ್ರತಿ ತಿಂಗಳಿಗೆ ೧೦ ಮಿಲಿಯ ಸೈನಿಕ ಉಪಕರಣ ಮಾಡುತ್ತಿದೆ. ಡೆಟ್ರೋಯಿಟಿನ ಕಾರ್ಖಾನೆಯಲ್ಲಿ ೧೫೦ ಭಾರತೀಯ ಕುಶಲ ಕರ್ಮಕಾರರಿದ್ದಾರೆ."

—USOWI

ಮುಖಂಡರನ್ನು ಬಿಡುಗಡೆ ಮಾಡಿರಿ

ಪೂನದಲ್ಲಿ ಸೇರಿದ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಕಾರ್ಯಕಾರೀ ಮಂಡಳವು ಒಂದು ನಿರ್ಣಯದಲ್ಲಿ ಹೀಗೆ ಸಾರುತ್ತದೆ. ಆಗಸ್ಟ್ ನಿರ್ಣಯವನ್ನು ಕಾಂಗ್ರೆಸಿನವರು ಹಿಂತೆಗೆಯಬೇಕೆಂದು ಅನೇಕರು ಹೇಳುವುದಾದರೂ, ಅವರನ್ನು ಬಿಡುಗಡೆ ಮಾಡದೆ, ಅವರ ಭೇಟಿಗೂ ಅಸ್ಪದವೂ ಕೊಡದೆ ಇರುವುದನ್ನು, ಈ ಸಭೆಯು ನಿಷೇಧಿಸುತ್ತದೆ. ಅನಿರ್ಬಂಧ ಕಾಂಗ್ರೆಸ್ ಮುಖಂಡರ ಬಿಡುಗಡೆಯಾದರೆ ಅದರಿಂದ ದೇಶದ ಹಿತವುಂಟಾಗುವುದೆಂದು ತಿಳಿಸುತ್ತದೆ. ಇನ್ನೊಂದು ನಿರ್ಣಯದಲ್ಲಿ ಗವರ್ನರರ ಆಡಳಿತವಿದ್ದ ಪ್ರಾಂತ್ಯಗಳಲ್ಲಿ ಅಲ್ಪ ಸಂಖ್ಯಾತ ಮಂತ್ರಿ ಮಂಡಳವೇರ್ಪಡಿಸುವ ಪ್ರಯತ್ನಗಳನ್ನು ಟೀಕಿಸಲಾಗಿದೆ. ಸರಕಾರದ ಬೆಂಬಲವಿದ್ದಾಗ್ಯೂ, ಕಾಂಗ್ರೆಸ್ ಮುಖಂಡರು ಸೆರೆಮನೆಯಲ್ಲಿದ್ದಾಗ ಮಾತ್ರ ಇಂಥ ಮಂತ್ರಿ ಮಂಡಳಗಳುಳಿಯಬಹುದಲ್ಲದೆ, ಇದಕ್ಕೆ ಜನತೆಯ ಬೆಂಬಲವಿಲ್ಲವೆಂದು ಭಾರತದಲ್ಲಿ ಪ್ರಜಾಪ್ರಭುತ್ವ ನಡೆಯುತ್ತದೆಯೆಂದು ಇಂಥಾ ಪ್ರಹಸನಗಳಿಂದ ವಿದೇಶಗಳನ್ನು ವಂಚಿಸುವುದು ನ್ಯಾಯವಲ್ಲವೆಂದೂ ಅದರಲ್ಲಿ ಸಾರಲಾಗಿದೆ. ಕೊನೆಯದಾಗಿ ಸರಕಾರವು ಇಂದು ಸುದ್ದಿಗಳನ್ನು ನಿಯಂತ್ರಿಸುವ ರೀತಿಯಲ್ಲಿ ಅಡ್ಡದಾರಿ ಹಿಡಿಯಲಾಗಿದೆಯೆಂದು ತಿಳಿಸಲಾಗಿದೆ.

ಶಾರ್ದೂಲ ಸಿಂಗರಿಗೆ ಚಿತ್ರಹಿಂಸೆ!

ಫಾರ್ವರ್ಡ್ ಬ್ಲಾಕಿನ ಅಧ್ಯಕ್ಷ ಸರ್ದಾರ ಶಾರ್ದೂಲ ಸಿಂಗ್ ಕವೀಶ್ವರಿಗೆ ಪೋಲೀಸರು ಚಿತ್ರಹಿಂಸೆಕೊಟ್ಟರೆಂದು ಲಾಹೋರ್ ಹೈ ಕೋರ್ಟಿನಲ್ಲಿ, ಅವರ ಕಡೆ ವಕೀಲರು ವಾದಿಸಿ, ಆ ಆರೋಪದ ವಿಚಾರಣೆಗಾಗಿ ಶಾರ್ದೂಲ ಸಿಂಗರನ್ನು ಕೋರ್ಟಿಗೆ ತರಬೇಕೆಂದು ಕೇಳಿಕೊಂಡಿರುವರು.

4. ಮಕ್ಕಳನ್ನು ಹೆತ್ತಳು!

ಅಮೃತಸಾರದಲ್ಲಿ ಸುಮಾರು ೨೫ ವರ್ಷದ ಓರ್ವ ಹೆಂಗುಸು ತಾ ೧೬ರಂದು ಬೆಳಗ್ಗೆ ಒಮ್ಮೆಗೇ ೪ ಮಕ್ಕಳನ್ನು ಹಡೆದಳು. ಒಂದು ಮಗು ಕೂಡಲೇ ಸತ್ತು ಹೋಯಿತು. ಉಳಿದ ಮೂರು ಜೀವಂತ ಇವೆ!

3 ಕಾಲಿನ ಮನುಷ್ಯ

ಒಬ್ಬನು ದರ್ಬಾನಿನಲ್ಲಿದ್ದಾನೆ. ಇತರ ಮನುಷ್ಯರಂತೆ ಅವನೂ ನಡೆಯುತ್ತಾನೆ. ಮೂರನೆಯ ಕಾಲು ಉಳಿದ ಎರಡು ಕಾಲುಗಳಿಗಿಂತ ತುಸು ಗಿಡ್ಡ. ನೂರಾರು ಡಾಕ್ಟರರು ಈ ಮೂರನೆಯ ಕಾಲಿನ ಕುರಿತು ಪರೀಕ್ಷೆ ಸಂಶೋಧನೆ ನಡೆಸಿದ್ದಾರೆ; ನಡೆಸುತ್ತಿದ್ದಾರೆ. ಇದರ ಕುರಿತು ಸಂಶೋಧನಾ ಲೇಖನಗಳು ಬ್ರಿಟನು ಅಮೆರಿಕಾಗಳಿಗೂ ಹೋಗಿವೆ.

NOTICE

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R. I. A. No. 140/43.

O. S. No. 568/1941.

ವಾದಿಳು—ನೇತ್ರಾವತಿ ಅಮ್ಮ, ವಿಶ್ವೇಶ್ವರಯ್ಯರವರ ವಿಧವೆ. ಕುಂದಾಪುರ ತಾಲೂಕು ಕುಂದಬಾರಂದಡಿ ಗ್ರಾಮದಲ್ಲಿರುತ್ತಾಳೆ.

ಪ್ರತಿವಾದಿರು—ಗಣಪಯ್ಯ ಕೂಡಾ

8 ನೇ ಪ್ರತಿವಾದಿಳಾದ ಕುಂದಾಪುರ ತಾಲೂಕು ಹೇರೂರು ಗ್ರಾಮದ ಕಲ್ಲುಮಕ್ಕಿಯಲ್ಲಿರುವ ಅಬ್ಬಕ್ಕ ಶೆಟ್ಟರ ಮಗಳು ಮುತ್ತಕ್ಕ ಯಾನೆ ಗಣಪಿ ಶೆಟ್ಟರಿಗೆ ತಿಳುಹಿಸುವುದೇನೆಂದರೆ—

ಸದರಿ ವ್ಯವಹಾರದಲ್ಲಿ ಕೊಡಲ್ಪಟ್ಟ ಪ್ರಿಲಿಮಿನರಿ ಡಿಕ್ರಿ ಪ್ರಕಾರ ಎಷ್ಟಸ್ತಾದರೂ ಹಣವನ್ನು ವಾದಿಳಿಗೆ ಯಾರೂ ಕೊಡದಿರುವುದರಿಂದ ಫೈನಲ್ ಡಿಕ್ರಿ ಕೊಡಿಸಬೇಕೆಂತ ವಾದಿಳು ದಾಖಲು ಮಾಡಿದ ಸದರೀ ಅರ್ಜಿಯನ್ನು ತಾ. 8-7-1943ಕ್ಕೆ ಇಟ್ಟಿರುವುದರಿಂದ ಆ ಕುರಿತು ನಿಮ್ಮ ಆಕ್ಷೇಪವಿದ್ದರೆ ತಕ್ಕ ಸಮಯದಲ್ಲಿ ಕೋರ್ಟಿನ ಮುಂದೆ ಹಾಜರು ಮಾಡಬೇಕಾಗಿ ಈ ಮೂಲಕ ತಿಳುಹಿಸಿಯದೆ.

Coondapoor, 21-6-43. } **M. M. Ural,** Advocate for Pltf.

ಮಂಗಳೂರು

ಮುನ್ಸಿಪಾಲಿಟಿಯ ಆಡಳಿತದ ವರದಿ

ಕಾಂಗ್ರೆಸ್ ಕೌನ್ಸಿಲರ ಆಡಳಿತ ಪ್ರಶಂಸೆ

ಮುನ್ಸಿಪಲ್ ಸಭೆ

ತಾ. ೨೨ರಂದು ಸಂಜೆ ಚೇರ್‌ಮೇನ್ ಜನಾಬ್ ಪುತ್ತೂರ್ ಸಾಹೇಬರ ಅಧ್ಯಕ್ಷತೆಯಿಂದ ಜರಗಿತು. ಕುಷ್ಠರೋಗಿಗಳ ವಸತಿಗೆ ರೂ. ೨೦೦ ಸೇಂಕ್ಷನ್ ಆಯಿತು. ಸೆಂಟ್ರಲ್ ಮೈದಾನಿನಲ್ಲಿ ಅಗ್ನಿನಿರೋಧಕ ಸಂಸ್ಥೆಯವರಿಗೆ ಕಟ್ಟಡ ಕಟ್ಟಲು ಸಮ್ಮತಿ ಕೊಡಲಿಲ್ಲ. ೧೯೪೨-೪೩ರ ಆಡಳಿತದವರದಿ ಸ್ವೀಕಾರವಾಯಿತು. ಮುಂದಿನ ವರ್ಷ ನಗರ ಸಭೆಯು ಮಾಡಬೇಕಾದ ಕಾರ್ಯಕಲಾಪಗಳ ಕುರಿತು ಹಲವು ಸದಸ್ಯರು ಹಲವು ಸೂಚನೆಗಳನ್ನಿತ್ತರು: ವಾರ್ಡಿಗೊಂದರಂತೆ ವಾಚನಾಲಯ ಮತ್ತು ಆಟದ ಬಯಲು ಬೇಕೆಂದರು ಮಿ.ಶ್ರೀಷ್ಠರು. ವಸತಿಗೃಹ ಉದ್ಯಾನಗಳ ಅವಶ್ಯಕತೆಯ ಕುರಿತು ಶ್ರೀ ರಂಗನಾಥ ಪೂಂಜರು ಮಾತನಾಡಿದರು. ಭಿಕ್ಷುಕರ ಸಮಸ್ಯೆ ಪರಿಹಾರದ ಕುರಿತು ಮಿ। ಹಮ್ಮಬ್ಬರು ಸೂಚನೆಯಿತ್ತರು. ಹೀಗೆ ಅನೇಕರು ಅನೇಕ ಸಲಹೆಗಳನ್ನು ಒಂದರ ಮೇಲೊಂದಾಗಿ ಕೊಡುತ್ತಾ ಬಂದರು. ಅದಕ್ಕೆ ಕಮಿಶನರ್ ಶ್ರೀ. ಕೆ. ರಾಮಸ್ವಾಮಿ ಮುದಲಿಯಾರರು ಸಮರ್ಪಕ ಉತ್ತರವಿತ್ತರು. ಆ ಮೇಲೆ ಹೊಸ ಕೌನ್ಸಿಲರವರು ಚಾಜಿನಾಮೆಯಿತ್ತ ಕೌನ್ಸಿಲಿನವರ ಆಡಳಿತವನ್ನು ಪ್ರಶಂಸಿಸುವ ಮತ್ತು ಕಮಿಶನರನ್ನು ಹೊಗಳುವ ನಿರ್ಣಯಗಳನ್ನು ಮಾಡಿದರು.

೧೯೪೨—೪೩ರ ಆಡಳಿತದ ವರದಿ

೧೯೪೨—೪೩ರಲ್ಲಿ ಮಂಗಳೂರು ಮುನ್ಸಿಪಾಲಿಟಿಯಲ್ಲಾದ ಒಂದು ಗಮನೀಯ ವಿಚಾರವೆಂದರೆ, ಗಡಿ ವಿಸ್ತರಣೆಯಾದದ್ದು. ಇದರಿಂದ ೨-೬೭ ಚದುರ ಮೈಲುಗಳ ಸ್ಥಳ ಮುನ್ಸಿಪಾಲಿಟಿಗೆ ಸೇರಿಸಲ್ಪಟ್ಟಿತು. ಎಂದರೆ ಒಟ್ಟು ಈಗಿನ ವಿಸ್ತೀರ್ಣವು ೭-೯೦ ಚದುರಳತೆಯಾಯಿತು. ೧೯೪೧ರ ಜನಗಣತಿಯಲ್ಲಿ ಮಂಗಳೂರಿನ ಜನಸಂಖ್ಯೆ ೮೧,೦೬೯ ಇತ್ತು. ಈಗ ಹೊಸತಾಗಿ ಸೇರಿದ ಭಾಗದ ಅಂದಾಜು ಜನಸಂಖ್ಯೆ ೧೭,೯೯೧ ಆಗಬಹುದು. ಹೀಗಾಗಿ ಒಟ್ಟು ಜನ ಸಂಖ್ಯೆ ೯೯,೦೬೦.

೧೯೪೨ ಆಗಸ್ಟದ ವರೆಗೆ ಚುನಾಯಿತ ಕೌನ್ಸಿಲರಿಂದ ಮುನ್ಸಿಪಾಲಿಟಿ ಆಡಳಿತ ನಡೆಯುತ್ತಿತ್ತು. ರಾಷ್ಟ್ರ ಧುರೀಣರ ಬಂಧನದ ನಂತರ ಕಾಂಗ್ರೆಸ್ ಪಕ್ಷದ ೨೬ ಮಂದಿ ಕೌನ್ಸಿಲರೂ (ಒಟ್ಟು ೩೨ರಲ್ಲಿ) ೧೯೪೨ ಸಪ್ಟಂಬರದಲ್ಲಿ ರಾಜಿನಾಮೆ ಕೊಡಲು, ೧೯೪೨ನೇ ನವಂಬರ ೫ರಂದು ಕೌನ್ಸಿಲನ್ನು ಸರಕಾರವು ಕರಗಿಸಿತು. ಈ ಸಂದರ್ಭದಲ್ಲಿ ಶ್ರೀ. ಕೆ. ರಾಮ ಸ್ವಾಮಿ ಮುದಲಿಯಾರರು ಸ್ಪೆಶಲ್ ಆಫೀಸರಾಗಿ ಕಾರ್ಯ ನಿರ್ವಹಿಸಿದ್ದರು. ಈ ಮಧ್ಯೆ ಮಂಗಳೂರು ರಿವೆನ್ಯೂ ಡಿವಿಜನಲ್ ಆಫೀಸರರು ಎಕ್ಸ್ ಒಫಿಸಿಯೋ ಚೇರ್‌ಮೇನರಾಗಿದ್ದರು. ಆ ಮೇಲೆ ಸರಕಾರದವರೇ ಕೌನ್ಸಿಲರನ್ನು ನೇಮಿಸಲು ಹಾಗೆ ಸರಕಾರದಿಂದ ನೇಮಿಸಲ್ಪಟ್ಟ ಕೌನ್ಸಿಲರು ೧೯೪೩ ಜನವರಿ ೧೧ರಿಂದ ಜನಾಬ್ ಹಸೇನ್ ಪುತ್ತೂರ್ ಸಾಹೇಬ್ ಬಹದ್ದೂರರನ್ನು ಚೇರ್‌ಮೇನರಾಗಿ ಆರಿಸಿಕೊಂಡು ಆಡಳಿತ ನಿರ್ವಹಿಸುತ್ತಾರೆ.

ಕಮಿಶನರ ಸಂಬಳ ಮತ್ತು ಭತ್ತೆ ಹೊರತು ಮುನ್ಸಿಪಾಲಿಟಿಯ ಖರ್ಚು ರೂ. ೨೧,೮೨೨ ಎಂದರೆ ನಿಯಮಿತ ಆದಾಯದ ಶೇಕಡಾ ೮-೭ರಷ್ಟು. ಕೌನ್ಸಿಲು ರೂ. ೩ ಮತ್ತು ೫ರಂತೆ ರೂ. ೩೯, ಮತ್ತು ರೂ. ೮೦ರ ಒಳಗಿನ ಸಂಬಳದವರಿಗೆ ೧೯೪೨ ಆಗಸ್ಟಿನಿಂದ ತುಟ್ಟಿಭತ್ತೆ ಕೊಟ್ಟಿದೆ. ಬಿಲ್ಲ್ ಕಲೆಕ್ಟರರಿಗೆ ರೂ. ೪೬೪ ಬೋನೆಸ್ ಹಂಚಿದೆ. ಪ್ರಿಂಟಿಂಗ್ ಖರ್ಚು ರೂ. ೧,೬೪೩-೮-೦ ಆಗಿದೆ.

ಮಾರ್ಗಗಳನ್ನು ಮುನ್ಸಿಪಾಲಿಟಿ ಚನ್ನಾಗಿಟ್ಟಿರುವುದೆಂದು ಅಧಿಕಾರಿಗಳು ಶಿಫಾರಸು ಕೊಟ್ಟಿದ್ದಾರೆ. ಆದರೆ ಮಾರ್ಗಗಳ ಧೂಳನ್ನು ಪರಿಹರಿಸಲು ನೀರು ಹಾಕುವ ಲೋರಿಯನ್ನು ಸರಕಾರವು ಸ್ವಾಧೀನ ಮಾಡಿಕೊಂಡದ್ದರಿಂದ, ಆ ಬಗ್ಗೆ ಎಷ್ಟು ಪ್ರಯತ್ನ ಮಾಡಿದರೂ ಅದು ಪುನಃ ಸಿಗದ ಕಾರಣ ನಾಗರಿಕರು ಇಡೀ ಬೇಸಿಗೆಯಲ್ಲಿ ಧೂಳು ತಿನ್ನಬೇಕಾಗ ಬಂದಿದೆ.

ವಿಮಾನ ಧಾಳಿ ಭೀತಿಯಿಂದ್ಧ, ಎ. ಆರ್. ಪಿ. ಎಚ್ಚರಿಕೆಯಿಂದ ಪ್ರಕಾಶ ಮಂದಮಾಡಬೇಕಾಗಿ ಬಂದರೂ ಒಟ್ಟು ವಿದ್ಯುದ್ದೀಪದ ತೆರಿಗೆಯ ಆದಾಯ ರೂ. ೨೬,೭೩೮. ಕಳೆದ ವರ್ಷ ಕೇವಲ ರೂ. ೧೩,೧೦೩ ಮಾತ್ರ. ಮುನ್ಸಿಪಾಲಿಟಿ ಶಾಲೆಗಳಲ್ಲಿ ಒಟ್ಟು ೫೧೭೧ ಮಂದಿ ಹುಡುಗರೂ, ೪೨೮೪ ಮಂದಿ ಹುಡುಗಿಯರೂ ವಿದ್ಯಾಭ್ಯಾಸ ಹೊಂದುತ್ತಿದ್ದಾರೆ. ಇದು ಕೂಡಾ ಕಳೆದ ವರ್ಷದ ಸಂಖ್ಯೆಗಿಂತ ಹೆಚ್ಚೇ. ಮುನ್ಸಿಪಾಲಿಟಿ ಶಾಲೆಗಳಲ್ಲಿ ಧರ್ಮಾರ್ಥ ವಿದ್ಯಾಭ್ಯಾಸ ಕೊಡಲಾಗುತ್ತದೆ. ಕಡ್ಡಾಯ ಶಿಕ್ಷಣದ ಕುರಿತು ಮುನ್ಸಿಪಾಲಿಟಿಯವರು ಆಲೋಚಿಸಿದ್ದು ಜಿಲ್ಲಾ ವಿದ್ಯಾಧಿಕಾರಿಗಳು ಇದು ಅಗತ್ಯವಿಲ್ಲವೆಂದೂ, ಇದ್ದ ಶಾಲೆಗಳನ್ನು ಇನ್ನಷ್ಟು ಅಭಿವೃದ್ಧಿಗೆ ತರುವುದು ಯೋಗ್ಯವೆಂದೂ ಸಲಹೆಯಿತ್ತಿರುವರು. ಒಟ್ಟು ೧೦ ಹುಡುಗರ ಶಾಲೆ ೮ ಹುಡುಗಿಯರ ಶಾಲೆಗಳಿವೆ. ಇದರಲ್ಲಿ ನಾಲ್ಕು ಶಾಲೆಗಳು ಹ. ಎ. ಶಾಲೆಗಳು (ಇದರಲ್ಲಿ ಒಂದು ಮುಸ್ಲಿಂ ಹುಡುಗರ ಹೈ. ಎ. ಶಾಲೆ, ಇನ್ನೊಂದು ಮುಸ್ಲಿಂ ಹುಡುಗಿಯರ ಹೈ. ಎ. ಶಾಲೆಯೂ ಸೇರಿದೆ.) ಇದರಲ್ಲಿ ಮುನ್ಸಿಪಲ್ ಹುಡುಗಿಯರ ಹೈ. ಎ. ಶಾಲೆಯನ್ನು ಸೆಕೆಂಡರಿ ಶಾಲೆಯಾಗಿ ೧೯೪೩-೪೪ರಲ್ಲಿ ಮಾರ್ಪಡಿಸುವ ಉದ್ದೇಶದಿಂದ ಕೌನ್ಸಿಲು ಸರಕಾರಕ್ಕೆ ಬಿಟ್ಟುಕೊಟ್ಟಿದೆ.

ಸರಕಾರೀ ಆಸ್ಪತ್ರೆ, ಕಂಕನಾಡಿ ಆಸ್ಪತ್ರೆಗಳು ಮುನ್ಸಿಪಾಲಿಟಿ ಒಳಗೆ ಇರುವುದರಿಂದ ಮುನ್ಸಿಪಾಲಿಟಿ ಯುನಾನಿ ಮತ್ತು ಆಯುರ್ವೇದಿಕ್ ಡಿಸ್ಪೆನ್ಸರಿಗಳನ್ನು ಇಟ್ಟಿದೆ. ಕಂಕನಾಡಿ ಕುಷ್ಟ ರೋಗಿಗಳ ಆಸ್ಪತ್ರೆಗೆ ಕೌನ್ಸಿಲು ರೂ. ೬೦೦ ಕೊಟ್ಟಿದೆ. ಒಟ್ಟು ವೈದ್ಯಕೀಯ ಖರ್ಚು ರೂ. ೮,೪೬೭. ಮುನ್ಸಿಪಾಲಿಟಿಯು ಒಂದು ಮೋಟರ್ ಎಂಬುಲೆನ್ಸನ್ನು ಇಟ್ಟುಕೊಂಡಿದೆ. ಮುನ್ಸಿಪಾಲಿಟಿ ಡಿಸ್ಪೆನ್ಸರಿಗಳಲ್ಲಿ ೫೨,೬೮೮ ಮಂದಿ ರೋಗಿಗಳ ಶುಶ್ರೂಷೆ ಆಗಿದೆ. ಹೆಲ್ತ್ ಆಫೀಸರ್, ಮಹಿಳಾ ಮೆಡಿಕಲ್ ಆಫೀಸರ್, ಆರು ಮಂದಿ ಸೆನಿಟರಿ ಇನ್‌ಸ್ಪೆಕ್ಟರರು, ಮೂವರು ಜನನ ಮರಣ ರಿಜಿಸ್ಟ್ರಾರರು, ಮೂವರು ವೇಕ್ಸಿನೇಟರರು, ಎಂಟು ಮಿಡ್‌ವೈಫ್‌ಗಳು, ಮೊದಲಾದವರಿಂದ ಕೂಡಿ ಸಾರ್ವಜನಿಕ ಆರೋಗ್ಯ ರಕ್ಷಣಾ ಖಾತೆಯು ಕೆಲಸ ಮಾಡುತ್ತಿದೆ. ಜನನ ಸಂಖ್ಯೆ ೨೨೮೦ರಿಂದ ೨೪೬೩ಕ್ಕೆ ಹೆಚ್ಚಿದೆ. ಶಿಶು ಮರಣ ಸಂಖ್ಯೆ ೮೭—೮%ರಿಂದ ೯೦%ಕ್ಕೆ ಇಳಿದಿದೆ. ಮರಣ ಸಂಖ್ಯೆಯು ೧೪೮೬ರಿಂದ ೧೬೨೨ಕ್ಕೆ ಹೆಚ್ಚಿದೆ. ಹೆಚ್ಚಾಗಿ ಅತಿಸಾರ ಮತ್ತು ಶ್ವಾಸಕೋಶಗಳ ರೋಗದಿಂದಾದ ಮರಣಗಳು. ಆನೆಕಾಲು ರೋಗವನ್ನು ನಿವಾರಿಸುವ ಬಗ್ಗೆಯೂ ಗಮನ ಕೊಡಲಾಗಿದೆ. ಕೋಲೆರಾ, ಸ್ಮಾಲ್ ಪಾಕ್ಸ್, ಪ್ಲೇಗುಗಳಿಂದ ಮರಣವಿಲ್ಲ.

ಕೌನ್ಸಿಲು ೧೦ ಮಾರ್ಕೆಟುಗಳನ್ನಿಟ್ಟಿದೆ. ಅದರ ಉತ್ಪತ್ತಿ ರೂ. ೩೩,೨೬೫. ಕಳೆದ ವರ್ಷಕ್ಕಿಂತ ಕಡಿಮೆ. ಗುಜ್ಜರ ಕೆರೆ ಹತ್ತಿರದಲ್ಲಿ ಬಸ್ಸು ಟೇಕ್ಸಿಗಳಿಗೊಂದು ಶೆಡ್ ಆಗಿದೆ. ಹೂ ಮಾರ್ಕೆಟ್ ದುರಸ್ತಿಯಾಗಿದೆ. ಮುನ್ಸಿಪಲ್ ಮಹಮ್ಮದನ್ ಹ. ಎ. ಶಾಲೆಯ ವಿಸ್ತರಿಸಲ್ಪಟ್ಟಿದೆ. ಉರ್ವ ಮೈದಾನಿನಲ್ಲಿ ಮನೆಗಾಗಿ ಸ್ಥಳ ತೆಕ್ಕೊಳ್ಳಲಾಗಿದೆ. ಬ್ಲಾಕ್ ನಂ. ೧೦ ಟೌನ್ ಪ್ಲೇನಿಂಗ್ ಸ್ಕೀಮಿನಂತೆ ಅಂಗಡಿ ಸ್ಥಳ ಮಾರಾಟ ಮಾಡಲಾಗಿದೆ. ಮಂಗಳೂರು ಮಡಿಕೇರಿ ಟ್ರಂಕ್ ರೋಡಿನ ದುರಸ್ತಿಯಾಗಿದೆ. ಕದ್ರಿಯ ವಿದ್ಯಾರ್ಥಿ ಓಣಿ ವಿಸ್ತರಣೆಗಾಗಿ ಸ್ಥಳ ತೆಕ್ಕೊಳ್ಳಲಾಗಿದೆ. ಒಂದು ಫೈರ್ ಫೈಟರನ್ನು ಪಡೆಕೊಂಡಿದೆ. (ಅದನ್ನು ಸರಕಾರ ಸ್ವಾಧೀನ ಮಾಡಿಕೊಂಡಿತು.) ನಗರ ಭವನವನ್ನು ಕಟ್ಟಲು ಗವರ್ನರರಿಂದ ಶಂಖುಸ್ಥಾಪನೆ ಮಾಡಿಸಲಾಗಿದೆ. ಬೊಕ್ಕಪಟ್ಣದಲ್ಲಿ ಒಂದು ಹೊಸ ಮಾರ್ಗ ಮಾಡಿದೆ. ಮಾತ್ರವಲ್ಲದೆ ಚುನಾಯಿತ ಸದಸ್ಯರು ರಾಜಿನಾಮೆ ಕೊಟ್ಟು ಸರಕಾರದಿಂದ ನೇಮಿತ ಸದಸ್ಯರು ಅಧಿಕಾರ ವಹಿಸಿದ್ದಾರೆ. ಇವು ಕೆಲವು ಪ್ರಧಾನ ವಿಷಯಗಳು ವರದಿಯಲ್ಲಿವೆ.

೧೬೮ ಮಂದಿ ಸತ್ಯಾಗ್ರಹಿಗಳು

ದಕ್ಷಿಣ ಕನ್ನಡ ಜಿಲ್ಲೆಯಿಂದ ಅಲಿಪುರಂ ಜೈಲಿಗೆ ಕಳುಹಿಲ್ಪಟ್ಟ ಕಾಂಗ್ರೆಸ್ ಸತ್ಯಾಗ್ರಹಿಗಳ ಸಂಖ್ಯೆ ಸುಮಾರು ೧೬೮ ಎಂದೂ ಅವರಲ್ಲಿ ಇನ್ನೂ ಸುಮಾರು ೭೦ ಮಂದಿ ಬಿಡುಗಡೆಯಾಗಲು ಬಾಕಿಯಿರುವರೆಂದೂ ತಿಳಿದುಬರುತ್ತದೆ.

ಜಿಲ್ಲಾ ಬೋರ್ಡಿನ ಚುನಾವಣೆಗಳು

ಜಿಲ್ಲಾ ಬೋರ್ಡಿನಲ್ಲಿ, ಶ್ರೀ. ಆರೂರರವರು ಬೋರ್ಡಿನ ಅಧ್ಯಕ್ಷರಾದುದರಿಂದ ಖಾಲಿಬಿದ್ದ ವೈಸ್ ಪ್ರೆಸಿಡೆಂಟರ ಸ್ಥಾನದ ಚುನಾವಣೆಯೂ, ಶ್ರೀ. ಕೆ. ವಿಟ್ಠಲ ಸೆಟ್ಟರ ನಿಧನದಿಂದ ಖಾಲಿಬಿದ್ದ ಮದ್ರಾಸ್ ಸೆನೆಟಿನ ಸದಸ್ಯತ್ವದ ಈ ಒಂದು ಸ್ಥಾನದ ಚುನಾವಣೆಯೂ ಎರಡೂ ಇದೇ ಬರುವ ಜುಲೈ ತಾ. ೩ರಲ್ಲಿ ನಡೆಯಲಿದೆ. ವೈಸ್ ಪ್ರೆಸಿಡೆಂಟರ ಸ್ಥಾನದ ಉಮೇದುವಾರರಾಗಿ ಶ್ರೀ. ಸರ್ವೋತ್ತಮ ಪೈಗಳೂ (ಕುಂದಾಪುರ) ಸೆನೆಟ್ ಮೆಂಬರಿಕೆಯ ಉಮೇದುವಾರರಾಗಿ ಡಾ। ಪಿ. ಜಿ. ಆಚಾರ್ಯರೂ (ಉಡುಪಿ) ಮುಂದೆ ಬರಬಹುದೆಂದು ಸುದ್ದಿಯಿದೆ. ಇದೇ ದಿನ ಜಿಲ್ಲಾ ಬೋರ್ಡಿನ ಸಾಮಾನ್ಯ ಸಭೆಯೊಂದು ಸೇರಲಿದೆ.

"ಪಿರಿಯಾಡಿಕಲ್ ಕಾನ್ಫರೆನ್ಸ್"

ಇದರ ಅಧಿವೇಶನ ಈಚೆಗೆ ಜಿಲ್ಲಾ ಕಲೆಕ್ಟರರ ಆಫೀಸಿನಲ್ಲಿ ಕಲೆಕ್ಟರ್ ಮಿ। ಎಂ. ಕರಮತುಲ್ಲಾ ಐ. ಸಿ. ಎಸ್. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಮೈಸೂರು ಸಂಸ್ಥಾನದಿಂದ ಈ ಜಿಲ್ಲೆಗೆ ಜಾನುವಾರುಗಳನ್ನು ಸಾಗಿಸಕೂಡದೆಂಬ ಆ ಸರಕಾರದ ಆಜ್ಞೆ ರದ್ದು ಮಾಡುವ ಹಾಗೆ ಆ ಪ್ರಭುತ್ವದವರನ್ನು ವಿನಂತಿಸಿಕೊಳ್ಳಬೇಕೆಂದಾಯಿತು. ರೈತರು ಖಾಲಿಬಿದ್ದ ಹಾಗೂ ಬಂಜರು ಸ್ಥಳಗಳಲ್ಲಿ ಕೃಷಿಮಾಡಲು ಪ್ರೋತ್ಸಾಹಿಸುವ ಕುರಿತು, ಒಮ್ಮುಖದ ಭೂಮಿಯನ್ನು ಹತ್ತು ವರ್ಷಗಳ ಅವಧಿಗೆ ಅವರಿಗೆ ಗೇಣಿಗೆ ಕೊಡಬೇಕೆಂದೂ, ಅಂತೆ ಗೇಣಿಗೆ ಪಡೆದವರು ಪ್ರತಿ ವರ್ಷ ಆ ಭೂಮಿಯ ಒಟ್ಟು ವಿಸ್ತೀರ್ಣದಲ್ಲಿ ಮೂರನೇ ಒಂದಂಶದಷ್ಟು ಕೃಷಿಮಾಡಿ, ಒಟ್ಟು ಇಡೀ ಭೂಮಿಯಲ್ಲಿ ಮೂರು ವರ್ಷಗಳಲ್ಲಿ ಆಹಾರ ಯೋಗ್ಯವಾದ ಬೆಳೆ ಬೆಳೆಸುವ ಕಾರ್ಯವನ್ನು ಪೂರೈಸಬೇಕೆಂದೂ ನಿರ್ಧಾರವಾಯಿತು. ಇದನ್ನು ವ್ಯವಸ್ಥೆಗೊಳಿಸಲು ಜಿಲ್ಲಾ ಕಲೆಕ್ಟರ್, ಪಿ. ಡಬ್ಲ್ಯು. ಡಿ. ಅಸಿ॥ ಇಂಜಿನಿಯರ್, ಜಿಲ್ಲಾ ಕೃಷಿ ಶಾಖೆಯ ಆಫೀಸರ್, ಸಹಕಾರಿ ಸಂಘಗಳ ಡೆ. ರಿಜಿಸ್ಟ್ರಾರ್, ರಾಷ್ಟ್ರೀಯ ಯುದ್ಧ ಮುಖರಂಗದ ಆರ್ಗನೈಜರ್, ಶ್ರೀ. ಧರ್ಮಸ್ಥಳ ಮಂಜಯ್ಯ ಹೆಗ್ಗಡೆ ಎಂ. ಎಲ್. ಸಿ. ಇವರಿಷ್ಟು ಮಂದಿಯುಳ್ಳ ಒಂದು ಸಮಿತಿ ಸ್ಥಾಪಿಸಲ್ಪಟ್ಟಿತು.

ಸಭೆ ಸೇರಿಸಕೂಡದು

ಅಕ್ಷಿಯ ಸಮಸ್ಯೆ ಮತ್ತು ಕಮ್ಯುನಿಸ್ಟ್ ಕಾಂಗ್ರೆಸ್‌ನಲ್ಲಿ ಕೈಕೊಂಡ ನಿರ್ಣಯಗಳನ್ನು ಜನತೆಗೆ ತಿಳಿಸಲು ಹಾಗೂ ರಶ್ಯವು ಯುದ್ಧದಲ್ಲಿ ಸೇರಿದ ಷರಡನೆಯ ವಾರ್ಷಿಕೋತ್ಸವವನ್ನು ಆಚರಿಸಲು, ಸಾರ್ವಜನಿಕ ಸಭೆ ಜರಗಿಸುವರೆ ತಮಗೆ ಅನುಮತಿ ಕೊಡಬೇಕೆಂದು ನಗರದ ಕಮ್ಯುನಿಸ್ಟ್ ಪಕ್ಷದವರು ಜಿಲ್ಲಾ ಕಲೆಕ್ಟರರೊಡನೆ ಕೇಳಲು ಅದಕ್ಕೆ ಸಮ್ಮತಿ ಕೊಡಲಿಲ್ಲವೆಂದು ತಿಳಿದುಬರುತ್ತದೆ.

ಬಿಸೆಂಟ್ ಬಾಲಿಕಾ ಪಾಠಶಾಲೆ

ಇವರ ೩೬ನೇ ಸ್ಥಾಪನಾ ದಿನಾಚರಣೆ ತಾ. ೧೮ರಲ್ಲಿ ಶ್ರೀ. ಬೆನಗಲ್ ಸಂಜೀವರಾಯರ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀ. ಎಂ. ಎಸ್. ಮಾಧವರಾವ್ ಅವರು ಈ ಶಾಲೆಯ ರಜತಮಹೋತ್ಸವ ಸಮಿತಿಯವರು ನಡೆಸಿದ ಕಾರ್ಯಕಲಾಪಗಳನ್ನು ತಿಳಿಸಿದರು. ಅಧ್ಯಕ್ಷರು ರಾಷ್ಟ್ರೀಯ ಶಿಕ್ಷಣದ ಆದರ್ಶಗಳನ್ನು ವಿವರಿಸಿದರು. ಶಾಲಾ ಬಾಲಕಿಯರಿಂದ ಸಂಗೀತವೂ ಇತ್ತು. ಶ್ರೀ. ಎಂ. ಎಸ್. ಮಾಧವ ರಾಯರು ವಂದನಾರ್ಪಣೆ ಮಾಡಿದರು.

ಶಿಕ್ಷಣದ ಉದ್ದೇಶ

ಎಂಬೀ ವಿಷಯ ಬಿಸೆಂಟ ಬಾಲಿಕಾ ಪಾಠಶಾಲೆಯ ಸಾಹಿತ್ಯ ಚರ್ಚಾ ಸಂಘದಲ್ಲಿ ಶ್ರೀಮತಿ ಬಿ. ಪದ್ಮಾವತಿ ಬಿ. ಎಸ್. ರಾವ್ ಇವರು ಭಾಷಣವಿತ್ತರು.

ಚಲಚ್ಚಿತ್ರ ವಿಮರ್ಶಕ ಸಂಘ

ಇದರ ಸಭೆಯೊಂದು ತಾ. ೨೧ರಂದು 'ಪ್ರಭಾತ' ಆಫೀಸಿನಲ್ಲಿ ಸೇರಿ, ಕೆಳಗಿನ ಕಾರ್ಯಕಾರೀ ಮಂಡಳಿಯ ಚುನಾವಣೆ ಆಯಿತು. ಶ್ರೀಗಳಾದ ಕುಡ್ವಿ ವಾಸುದೇವ ಶೆಣೈ (ಅಧ್ಯಕ್ಷ) ಕು. ಶಿ. ರಾವ್ (ಉಪಾಧ್ಯಕ್ಷ) ಎಂ. ವೆಂಕಟೇಶ ಪ್ರಭು ಮತ್ತು ಕೆ. ವಿ. ಭಟ್ (ಕಾರ್ಯದರ್ಶಿಗಳು) ಜಿ. ಎನ್. ಶೆಣೈ (ಕೋಶಾಧಿಕಾರಿ) ಬಿ. ವಿ. ಬಾಳಿಗ, ಪಿ. ಎನ್. ರಾವ್, ಎಂ. ನರಸಿಂಹ, ಎಚ್. ರಾಮಚಂದ್ರ ಪೈ, (ಸದಸ್ಯರು)

ಶ್ರೀ. ಎಚ್. ವಿ. ಪೈಗಳನ್ನು ಬೀಳ್ಕೊಡುವ ವಿದಾಯ ಕೂಟವೊಂದು ಈ ಸಂದರ್ಭದಲ್ಲಿ ಜರಗಿತು.

ಮಂಗಳೂರು ವಿದ್ಯಾರ್ಥಿ ಸಂಘ

ದ ಜತೆ ಕಾರ್ಯದರ್ಶಿಯವರು, ಸಂಘದ ಪರವಾಗಿ, ನೀಲೇಶ್ವರ ರಾಜಾಸ್ ಹೈಸ್ಕೂಲಿನ ಮುಖ್ಯೋಪಾಧ್ಯಾಯರಿಗೆ, ಒಂದು ತಂತಿಬಿಟ್ಟು, ಪ್ರವೇಶ ನಿರಾಕರಿಸುವ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳಬೇಕಾಗಿ ಕೇಳಿಕೊಂಡಿರುವರೆಂದು ತಿಳಿಯುತ್ತೇವೆ.

ಹೊಸ ಪ್ರಿನ್ಸಿಪಾಲರು

ಶ್ರೀ. ಕೆ. ಐ. ವರ್ಗೀಸ್ (ಚಿತ್ತೂರಿನ ಡಿ. ಇ. ಓ) ಇವರು ಮಂಗಳೂರು ಗವರ್ನ್‌ಮೆಂಟ್ ಕಾಲೇಜಿನ ಪ್ರಿನ್ಸಿಪಾಲರಾಗಿ ನೇಮಕ ಹೊಂದಿದ್ದಾರೆ.

ಮುಂಬಯಿ

ಬಿಲ್ಲವರ ಎಸೋಸಿಯೇಶನ್ ಮುಂಬಯಿ

ವಿದ್ಯಾರ್ಥಿ ವೇತನ

ಇದು ಬಿಲ್ಲವ ಜಾತಿಯ ಬಡ ವಿದ್ಯಾರ್ಥಿಗಳಿಗೆ ಮಾತ್ರ. ಬರುವ ತಾ. 15-7-43ರ ಒಳಗೆ ಈ ಕೆಳಗೆ ನಮೂದಿಸಿದ ಪ್ರಶ್ನೆಗಳಿಗೆ ಉತ್ತರ ಸಮೇತ ಈ ಕೆಳಗಿನ ವಿಳಾಸಕ್ಕೆ ಬರೆಕೊಂಡಲ್ಲಿ, ವೇತನವನ್ನು ಪಡೆಯಲು ಅರ್ಹರೆಂದು ಕಂಡು ಬಂದವರಿಗೆ ವೇತನವನ್ನು ಕೊಡಲಾಗುವುದು. ಕಾಲೇಜು ವಿದ್ಯಾಭ್ಯಾಸಕ್ಕೆ ವೇತನವನ್ನು ಕೊಡಲಾಗುವುದಿಲ್ಲ. 1. ವಿದ್ಯಾರ್ಥಿಯ ಸಂಪೂರ್ಣ ಹೆಸರು 2. ತಂದೆ ಯಾ ರಕ್ಷಕನ ಹೆಸರು ಮತ್ತು ವಿಳಾಸ. 3. ಇತರ ಸಂಬಂಧಿಕರ ಹೆಸರು, ವಿಳಾಸ ಮತ್ತು ವೃತ್ತಿ. 4. ಕಲಿಯತಕ್ಕ ದರ್ಜೆ ಮತ್ತು ಶಾಲೆಯ ಹೆಸರು. 5. ಕಳೆದ ಪರೀಕ್ಷೆಯ ಮಾರ್ಕು ಪಟ್ಟಿ. 6. ಶಾಲಾ ಸಂಬಳ. 7. ವಿದ್ಯಾರ್ಥಿಯ ಗುಣನಡತೆಯ ವಿಷಯ ಶಾಲಾ ಮುಖ್ಯೋಪಾಧ್ಯಾಯರ ಶಿಫಾರಸು ಪತ್ರ. 8. ವೇತನವನ್ನು ಪಡೆಯಲು ಅರ್ಹನೆಂಬುದರ ಕುರಿತು, ಊರಿನ ಮೆಜಿಸ್ಟ್ರೇಟರ, ಪ್ರಸಿದ್ಧ ವಕೀಲರ ಯಾ ಗ್ರಾಮ ಪಟೇಲರ ಪತ್ರ.

ಎಸೋಸಿಯೇಶನಿನಿಂದ ಗತವರ್ಷ ವಿದ್ಯಾರ್ಥಿ ವೇತನ ಪಡೆದ ವಿದ್ಯಾರ್ಥಿಗಳು, ಈ ವರ್ಷ ಸಹ ವಿದ್ಯಾರ್ಥಿ ವೇತನ ಪಡೆಯಬಿಚ್ಛಿಸುವುದಾದರೆ ತಾ. 15-7-43ರ ಒಳಗೆ ಅರ್ಜಿ ಕಳುಹಿಸಿ ಕೊಡತಕ್ಕದ್ದು. ವಿಳಾಸ: ಮಾನಾರ್ಹ ಜನರಲ್ ಕಾರ್ಯದರ್ಶಿ ಬಿಲ್ಲವರ ಎಸೋಸಿಯೇಶನ್ 17, ರಘುನಾಥ್ ದಾದಾಜಿ ರಸ್ತೆ, 4ನೇ ಮಾಳಿಗೆ, ಕೋಟೆ, ಮುಂಬಯಿ.





ನಂಬಿ ನಂಬಿ ತೆಗೆದು ಕೊಳ್ಳಲು ದಮ್ಮಿನ ಮೇಲೆ ಒಂದೇ ಉಪಾಯ

ಪುರೋಹಿತ ಶ್ವಾಸಹಾರಿ

ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ 3 ಔನ್ಸ್, 6 ಔನ್ಸ್ ಮತ್ತು 12 ಔನ್ಸ್‌ಗಳ ಬಾಟ್ಲಿಗಳು ರೂ. 2-12-0, ರೂ. 4-8-0, ರೂ. 8 ಕ್ರಯಕ್ಕೆ ದೊರಕುವುದು.

ತಯಾರಿಸುವವರು: ಡಾಕ್ಟರ್ ಪುರೋಹಿತ ಫಾರ್ಮಸಿ ಕೊಲ್ಲಾಪುರ.

'ಮಿಲಿಟರಿ ರಾಜ್ಯಭಾರ ನನ್ನ ಉದ್ದೇಶವಲ್ಲ'

'ನಾನು ಭಾರತದ ಮಿತ್ರ'

ವೇವಲರು ಭರವಸೆ ಕೊಡುತ್ತಾರೆ!

'ಭಾರತದ ಅತ್ಯಂತ ಮಿತ್ರ ನಾನು. ಅಲ್ಲಿನ ರಾಜಕೀಯ ಅಭ್ಯುದಯ ವಿಷಯ, ಭಾರತೀಯರ ಆಶೆ ಆಕಾಂಕ್ಷೆಗಳ ಕುರಿತು ನನಗೆ ಸಹಾನುಭೂತಿಯಿದೆ. ಭಾರತದ ಭವ್ಯ ಭವಿಷ್ಯತ್ತಿನ ಬಗ್ಗೆ ನನಗೆ ಪೂರ್ಣ ವಿಶ್ವಾಸವಿದೆ. ನನ್ನ ತಾರುಣ್ಯದ ಐದು ವರ್ಷ ಭಾರತದಲ್ಲಿ ಕಳೆದೆನು. ಭಾರತದ ಋಣ ತೀರಿಸಲು ನನ್ನಿಂದ ಸಾಧ್ಯವಿರುವುದನ್ನು ಮಾಡುವೆನು' ಎಂದು ಮುಂದಿನ ವೈಸರಾಯರಾಗಿ ನೇಮಕ ಹೊಂದಿದ ಸೇನಾಪತಿ ವೇವಲರು ಲಂಡನಿನಲ್ಲಿ ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ಹೇಳಿದರು. ಮತ್ತೆ ಮುಂದುವರಿಸಿ ಹೀಗಂದರು:

'ಭಾರತದ ಏಳಿಗೆ ಆಗಬೇಕಾದರೆ ತೊಂದರೆಯಿಲ್ಲದೆ ಯುದ್ಧ ಪ್ರಯತ್ನ ಸಾಗಬೇಕು. ಜಪಾನಿನ ಗಂಡಾಂತರದಿಂದ ಭಾರತವನ್ನು ತಪ್ಪಿಸದೆ ಭಾರತದ ಏಳಿಗೆ ಆಗದು. ಪೂರ್ವದಿಕ್ಕಿನಲ್ಲಿ ಭಾರತವು ಮಿತ್ರರ ಮುಖ್ಯ ಕೇಂದ್ರ. ಭಾರತದ ಮೇಲೆ ಸುಳಿಯುತ್ತಿರುವ ಗಂಡಾಂತರದ ನೆರಳು ಮಾಯವಾದಂತೆ ಅದು ಸ್ವಾತಂತ್ರ್ಯವನ್ನೂ ಪಡೆಯುವುದು. ಹೀಗೆ ಹೇಳಿದ್ದರಿಂದ ನಾನು ಸೈನಿಕನಾಗಿ ಅಲ್ಲಿಗೆ ಹೋಗುವೆನೆಂದು ತಿಳಿಯಬಾರದು. ಅಥವಾ ಯುದ್ಧ ಮುಗಿವ ಮೊದಲು ಅಲ್ಲಿ ಯಾವ ರಾಜಕೀಯ ಪ್ರಗತಿಯೂ ಆಗದೆಂದು ಅರ್ಥಮಾಡಿಕೊಳ್ಳಬಾರದು.

'ನಾನು ಬಹಳ ದುಃಖದಿಂದ ನನ್ನ ಸೈನಿಕ ಉಡುಪನ್ನು ತೆಗೆದಿಟ್ಟಿದ್ದೇನೆ. ನಾಗರಿಕನಾಗಿ ಭಾರತದ ಹಾಗೂ ನಮ್ಮ ದೇಶದ ಸೇವೆಮಾಡಲು ನನ್ನ ಮಿಲಿಟರಿ ಜೀವನವನ್ನು ಕೊನೆಗಾಣಿಸಿದ್ದೇನೆ. ಮಿಲಿಟರಿ ರಾಜ್ಯಭಾರವನ್ನು ಭಾರತದಲ್ಲಿ ಜಾರಿಗೆ ತರಬೇಕೆಂದು ನನ್ನ ಉದ್ದೇಶವಲ್ಲ, ಅಥವಾ ಭಾರತದ ಬಗ್ಗೆ ನಮ್ಮ ಸರಕಾರವು ಕೊಟ್ಟ ಭರವಸೆಗಳನ್ನು ಹಿಂತಿರುಗಿಸಿಕೊಳ್ಳಬೇಕೆಂದೂ ನನ್ನ ಉದ್ದೇಶವಲ್ಲ. ಉಡುಪನ್ನು ಬದಲಾಯಿಸಿದ ಮಾತ್ರದಿಂದ ಮಿಲಿಟರಿ ಮನೋಭಾವನೆಯನ್ನು ಒಮ್ಮೆಯೇ ಬದಲಾಯಿಸಲು ಸಾಧ್ಯವಿಲ್ಲವೆಂದು ನೀವು ತರ್ಕಿಸಬಹುದು. ಸೈನಿಕರ ಮನಸ್ಸು ನಿರಂತರ ಯುದ್ಧದಲ್ಲಿಯೇ ಆಸಕ್ತವಾಗಿದೆಯೆಂದು ತಿಳಿವುದು ತಪ್ಪು. ಬೇರೆ ಬೇರೆ ದೇಶಗಳ ಆಡಳಿತದ ಅನುಭವ ನನಗೆ ಸ್ವಲ್ಪಮಟ್ಟಿಗೆ ಆಗಿದೆ. ವೈಸರಾಯರ ಕೌನ್ಸಿಲು ಸದಸ್ಯನಾಗಿ ಭಾರತದ ಆಡಳಿತದ ತುಸು ಅನುಭವಮಾಡಿಕೊಂಡಿದ್ದೇನೆ. ಆ ವಿಸ್ತಾರ ದೇಶದ ಬಗ್ಗೆ ನನಗೆ ಗೊತ್ತಿರುವುದು ಬಹು ಕಡಿಮೆಯೆಂದೂ ನನಗೆ ಗೊತ್ತಿದೆ.

'ಆದರೆ ಅಲ್ಲಿ ಹೋಗುವ ಮೊದಲು, ಅಲ್ಲಿನ ಪರಿಸ್ಥಿತಿ ತಿಳಿದವರಿಂದ ಅಭಿಪ್ರಾಯ ತೆಗೆದುಕೊಂಡು ನಿರ್ಮಲ ಮನಸ್ಸಿನಿಂದ ಅಲ್ಲಿನ ವಿಷಯ ಅಭ್ಯಾಸಮಾಡುವೆನು. ಭಾರತದ ರಾಜಕೀಯದ ಕುರಿತು ಹೆಚ್ಚಿನ ಗಮನ ಕೊಡಲಾಗದಿದ್ದರೂ ಇದುವರೆಗೆ ಬಹಳ ಕೆಲಸ ಆಗಿದೆ. ಇನ್ನೂ ಬಹಳ ಆಗಲಿದೆ. ಮುಖ್ಯವಾಗಿ ಇದು ಭಾರತೀಯತರದೇ ಕೆಲಸ. ಆದರೆ ಅಂಥ ಪ್ರಗತಿಗೆ ನನ್ನ ಸಹಾನುಭೂತಿ ಯಾವಾಗಲೂ ಇದೆ. ನಾನು ಭಾರತದಲ್ಲಿ ಸೈನಿಕರನ್ನೇ ಹೆಚ್ಚಾಗಿ ಕಂಡದ್ದು. ಆದ್ದರಿಂದ ಕೂಡಲೇ ನನ್ನ ದಳಪತಿ ಕಚೇರಿಯನ್ನು ಮುಚ್ಚುವಂತೆ ಸಂದೇಶ ಕಳುಹಿಸುತ್ತೇನೆ.

'ಯುದ್ಧದಲ್ಲಿ ಭಾರತೀಯ ಸೈನಿಕರು ಅಸದೃಶ ಶೌರ್ಯ ತೋರಿಸಿದ್ದಾರೆ. ನನ್ನ ಗೆಲವಿಗೆ ಅವರ ಪರಾಕ್ರಮವೇ ಕಾರಣ. ನನ್ನ ಭಾರತೀಯ ಸೈನಿಕರ ಹಿತದ ಬಗ್ಗೆ ನನ್ನ ಹೆಂಡತಿಯೂ ದುಡಿದಿದ್ದಾಳೆ. ನನ್ನ ಮುಂದಿರುವ ವಿಷಮ ಸಮಸ್ಯೆಗಳ ತಿಳುವಳಿಕೆ ನನಗೆ ಚೆನ್ನಾಗಿದೆ. ಭಾರತೀಯ ಮುಂದಾಳುಗಳು, ಹಾಗೂ ಅಲ್ಲಿನ ಅಂತಃಕರಣವುಳ್ಳ ಜನರು, ಅವರ ಯೋಗ್ಯತೆ, ಗೌರವ, ಇವುಗಳಿಂದ ನನ್ನ ಕೆಲಸಕ್ಕೆ ಅವರ ದಯೆಗೆ ತಕ್ಕುದಾದ ಸ್ಥಾನವನ್ನು ನನಗೆ ಗಳಿಸಿಕೊಡಲು ಅವರು ನೆರವಾಗುವರೆಂದು ನನಗೆ ನಂಬಿಕೆಯಿದೆ. ಭಾರತದ ಇತಿಹಾಸದಲ್ಲಿ ಅತ್ಯಂತ ಗಂಡಾಂತರ ಮತ್ತು ಗಂಭೀರ ಕಾಲದ ಹೊಣೆ ನನ್ನ ಮೇಲಿದೆಯೆಂಬುದನ್ನು ನಾನು ಬಲ್ಲೆ'. ಹೀಗೆ ವೇವಲರು ಹೇಳಿದ ನಂತರ ಅಮೆರಿಯವರು ವೇವಲರ ನೇಮಕ ವಿಷಯ ಹೇಳುತ್ತಾ, ಅವರು ಬಹಳ ದಯಾಶೀಲರೆಂದರು.

THE CANARA BANKING CORPORATION Ltd

(Incorporated in British India with limited liability).

STATEMENT OF AFFAIRS AS ON 31ST DECEMBER 1942.

Capital & Liabilities	Rs.	As.	Ps.	Property & Assets	Rs.	As.	Ps.
Paid up Capital	6,36,890	0	0	Office premises, furniture, etc.	91,659	0	0
Reserve & other funds	3,71,882	13	11	Advances	31,28,612	4	9
Deposits	41,83,273	4	1	Investment on Govt. Securities etc. at cost	15,34,536	14	3
Due to Bankers	5,08,545	12	1	Sundries	74,183	5	7
Bills per contra	3,59,357	12	1	Bills for Collection	3,59,357	12	1
Sundries including branch adjustments & undisbursed profits	2,83,736	5	9	Cash on Hand & with bankers	12,05,397	14	8
Profit for the year 1942	49,461	3	5				
Total Rs.	63,93,747	3	4	Total Rs.	63,93,747	3	4

ಸಿನೆಮಾ ಸುದ್ದಿ

ಕನ್ನಡದ 'ಸೌಭಾಗ್ಯ'

ಏನ್ನು ಹೇಳುವುದೇನು? ಕನ್ನಡದ ರೈತರು, ಕನ್ನಡದ ವ್ಯಾಪಾರಿಗಳು, ಉದ್ಯಮಶೀಲರು, ಪತ್ರಿಕಾ ವ್ಯವಸಾಯಿಗಳು, ಲೇಖಕರು ಇವರೆಲ್ಲರ 'ಸೌಭಾಗ್ಯ'ವನ್ನು ಹೇಳ ಹೋದರೆ, ಕೇಳುವವರ ಕಣ್ಣುಗಳಲ್ಲಿ ಕಂಬನಿಯ ಬದಲು ರಕ್ತ ಸುರಿಯಬೇಕು! ಕನ್ನಡದಲ್ಲಿ, 'ಸೌಭಾಗ್ಯ'ವೆಂಬ ಚಿತ್ರವೊಂದನ್ನು 'ಆರ್. ಎಮ್. ಎ'ಯವರು ತಯಾರಿಸುವರೆಂದು ಕೇಳುತ್ತೇವೆ. ಮೈಸೂರಲ್ಲಿ ಸ್ಥಾಪಿತವಾದ ರಾಘವೇಂದ್ರ ಸೌಂಡ್ ಸ್ಟುಡಿಯೋದಲ್ಲಿ ಇದರ ರಚನೆಯಾಗುತ್ತಿದೆಯಂತೆ. ಈ ಚಿತ್ರವು ನಿಜವಾದ ಕನ್ನಡದ 'ಸೌಭಾಗ್ಯ'ವನ್ನು ಚಿತ್ರಿಸಬಹುದೆ?

"ವಂದೇ ಮಾತರಂ"

ಗಟ್ಟಿ ಹೇಳಬೇಡಿ 'ರಾಜದ್ರೋಹ'ವಾದೀತು! ಡಿಫೆನ್ಸ್ ಓಫ್ ಇಂಡಿಯಾ ಕಾನೂನಿನಲ್ಲಿ 'ವಂದೇ ಮಾತರಂ' ಆಕ್ಷೇಪಾರ್ಹವೆಂದು ಉಲ್ಲೇಖಿತರಬೇಕು; ತಮ್ಮ ತಾಯ್ನಾಡನ್ನು, ಪರರ ಆಕ್ರಮಣದಿಂದ ತಪ್ಪಿಸಲು ಹೋರಾಡುವ ವೀರರಿಗೆ ಇದು ಕರ್ಣ ಕರ್ಕಶವಾಗಬಹುದು! ಇದು 'ಪಂಚಮ ದಳದ'ವರ ಕಾರ್ಯಕ್ಕೆ ಪ್ರೋತ್ಸಾಹ ಕೊಡುವಂಥಾದ್ದಿರಲೇ ಬೇಕು. ಮರಾಠಿ ಚಿತ್ರ 'ನನ್ನ ಮಗು', ಇದರಲ್ಲಿನ 'ವಂದೇಮಾತರಂ' ಹಾಡನ್ನು ಬೊಂಬಾಯಿ ಫಿಲ್ಮ್ ಸೆನ್ಸರ್ ಬೋರ್ಡಿನವರು ಕತ್ತರಿಸಿದ್ದರಿಂದ ಇಂಥಾ ಸಂಶಯಗಳು ತಲೆದೋರಿವೆ!

ಗಾಂಧಿ ಎಂದರೂ?

ಗಾಂಧಿಜಿ ಮತ್ತು ಗಾಂಧೀವಾದ ಇದೂ ಕೂಡಾ ಭಾರತೀಯರಿಗೆ ತೋರಿಸಲಾಗದ ತಿಳಿಸಲಾಗದ್ದ, ತಿಳಿಸಿದರೆ 'ರಾಜದ್ರೋಹವಾಗುವ ವಿಷಯವೇನೊ? ಹಿಂದುಸ್ಥಾನಿ ಚಿತ್ರ 'ರಾಜಾ'ದಲ್ಲಿ ಗಾಂಧಿ ಮತ್ತು ಅವರ ತತ್ತ್ವಗಳಿಗನ್ವಯಿಸುವ ಭಾಗವು ಕತ್ತರಿಸಲ್ಪಟ್ಟಿದೆ ಸೆನ್ಸರ್ ಬೋರ್ಡಿನವರಿಂದ! ಚಲಚ್ಚಿತ್ರ ಕಾರ್ಯಕ್ಕಾಗಿ ಏರ್ಪಟ್ಟ ಈ ಇಲಾಖೆ, ಈಗ ರಾಜಕೀಯ ಕಾರ್ಯವನ್ನೂ ಮಾಡುತ್ತದೆ.

ಕಣ್ಣು ಕುರುಡಾಗಿತ್ತೇನು?

ಭಾರತದ ರಾಜಕೀಯಕ್ಕೆ ತೊಂದರೆಯಾದೀತೆಂದು ಭಾರತವನ್ನು ರಕ್ಷಿಸುವ ವೀರರಿಗೆ 'ವಂದೇ ಮಾತರಂ' ಗಾಂಧೀಸುದ್ದಿಗಳೆಲ್ಲಾ ಕರ್ಕಶವಾದೀತೆಂದು ಹೀಗೆ ಮಾಡಿದ್ದರೆ, ಹಾಗೆ ಆಳುವ ಸರಕಾರವೇ "ಬುದ್ಧಿಪೂರ್ವಕ ಮಾಡಿದ್ದರೆ ಅದಕ್ಕೆ ಆಕ್ಷೇಪವೆತ್ತುವರಾರು? ಆದರೆ, 'ವೈಟ್ ಕಾರ್ಗೋ' ಎಂಬ ಅಮೆರಿಕ ಚಿತ್ರವು ಭಾರತಕ್ಕೆ ಅನ್ಯಾಯ ಮಾಡುವಾಗ, ಭಾರತದ ಮಹಿಳೆಯರು "ಕೇವಲ ಬಳೆಗಳಿಗಾಗಿ, ಸೀರೆಗಳಿಗಾಗಿ, ಮದುವೆಯಾಗುತ್ತಾರೆ" ಎಂದು ಅಪಪ್ರಚಾರ, ಅನ್ಯಾಯ ಪ್ರಚಾರ ಮಾಡುತ್ತಿರುವಾಗ, ಅದನ್ನು ತಡೆಯಲು ಎಡ್ವೈಸರಿ ಬೋರ್ಡಿಗೆ ಅಧಿಕಾರವಿರಲಿಲ್ಲವೇ? ಅಥವಾ ಅದನ್ನು ನೋಡಲು ಕಣ್ಣು ಕುರುಡಾಗಿತ್ತೇನು?

ದಂಪತಿಗಳು ಚುಂಬಿಸಿದರೆ?

ಅದರಲ್ಲೇನು ತಪ್ಪುಂಟು? 'ಪಹಿಲಿ ಮಂಗಲ್ ಗೌರ್' ಚಿತ್ರದಲ್ಲಿ ಮದುವೆಯಾದ ಯುವಕ ಯುವತಿಯರು ಚುಂಬಿಸಿದ ದೃಶ್ಯವೊಂದಿತ್ತು'. (ಅದೂ ಸಹಜವಲ್ಲ, ಕೇವಲ ಕೆಮರಾ ಚಾತುರ್ಯದ್ದು ಎಂದು ಈಗ ಹೇಳಲಾಗುತ್ತದೆ) ಅದು ಅನ್ಯಾಯವಾಯಿತು ಎಂದು ಕೆಲವರು ಆಕ್ಷೇಪಿಸಿದರಂತೆ! ಅದಕ್ಕಾಗಿ ಸೆನ್ಸರ್ ಬೋರ್ಡಿನವರು ತಮ್ಮ ಕತ್ತರಿ ಎತ್ತಿದರೆಂದು ತಿಳಿಯುತ್ತದೆ. ಆದರೆ ನಮ್ಮ ಊರಿಗೆ ಎಷ್ಟೋ ಅಮೆರಿಕ, ಬ್ರಿಟಿಷ್ ಚಿತ್ರಗಳು ಬರುತ್ತವೆ; ಅವುಗಳಲ್ಲಿ ಇನ್ನೂ ಮದುವೆಯಾಗದ ಯುವಕ ಯುವತಿಯರು, ಒಬ್ಬನ ಹೆಂಡತಿ ಇನ್ನೊಬ್ಬಳ ಗಂಡನನ್ನು ಚುಂಬಿಸುವ ದೃಶ್ಯಗಳು ಸಾವಿರಾರು ಇವೆಯಲ್ಲಾ! ಅವುಗಳನ್ನೇಕೆ ಸೆನ್ಸರ್ ಬೋರ್ಡಿನವರು ಕತ್ತರಿಸಲು ಕೈ ಎತ್ತುವುದಿಲ್ಲ?

ಬರುವಾರ 'ರಾಣಿ'

ತಯಾರಾಗಿದ್ದಾಳೆ! 'ದೇವದಾಸ್' 'ಜಿಂದಗಿ' 'ಜವಾಬ್' ಕೃತಿರತ್ನಗಳಿಂದ ಕಲಾಪ್ರೇಮಿಗಳನ್ನು ತಲೆದೂಗಿಸಿದವರು ಬರುವಾರು. ರಾಣಿ ಮತ್ತು ರಾಣಿ ಇವರ ಪ್ರೇಮಗೀತೆಯುಳ್ಳ 'ದೇವದಾಸ'ದಂತೆ ಇದರಲ್ಲಿ ಪ್ರಣಯದ ಹಾದಿ ಹಿಂದಿದೆ. ಆದರೆ ಇದು ವಿಷಾದಾಂತವಲ್ಲ. ಪ್ರೇಮಭಗ್ನನಾದವನು, ದುರ್ವ್ಯಸಂಗಕ್ಕೆ ಬಲಿಬಿದ್ದು, ಕೊನೆಗೆ ಆಸ್ಪತ್ರೆಯ ದಾದಿಯಾಗಿದ್ದ ತನ್ನ ಮೊದಲಿನ ಪ್ರೇಯಸಿಯ ಶುಶ್ರೂಷೆಯಿಂದ ಗುಣಹೊಂದಿ, ಸುಖದಾಂಪತ್ಯದಿಂದ ಜೀವನ ಸಾಗಿಸುವನು! 'ಬಂಗಾಳಿ'ಯ ಗಾಳಿ ಇದರಲ್ಲಿಯೂ ಚೆನ್ನಾಗಿದೆ. ಬರುವಾರ 'ರಾಣಿ'ಯನ್ನು ನೋಡಲೇಬೇಕು.

ಸಾಬೂ ಸೈನ್ಯಕ್ಕೆ

ಸೇಂದ್ಹಾನ್ಸ್ ಜೂಲ್ಮಾ ಹಿರಂದು. ಅವನಿಗೆ ಹದಿನೆಂಟು ವರ್ಷ ಪ್ರಾಯ. ಅಮೆರಿಕದಲ್ಲಿರುವ ಭಾರತೀಯ ನಟ ಈತ. ಆನೆಯ ಹುಡುಗ ಎಂದು ಇವನಿಗೆ ಪ್ರಸಿದ್ಧಿ. ಸಾಬು ಮೈಸೂರಿನವ. ಸಾಬು ಸೇರಿದ ಮೇಲೆ ೧೭ ವರ್ಷ ಪ್ರಾಯದ ಆತನ ತಮ್ಮ ಶೇಕ್ ಕೂಡಾ ಸೈನ್ಯಕ್ಕೆ ಸೇರುವನೆಂದು ತಿಳಿದಿದೆ. ಇದರಿಂದ ಅವರಿಬ್ಬರೂ (ಬದುಕಿ ಉಳಿದರೆ) ಮುಂದೆ ಅಮೆರಿಕದ ನಾಗರಿಕರಾಗಿ ಗಣಿಸಲ್ಪಡುವವರಂತೆ! ಕರಿಯ ಕೋತಿಯಾದ ತನಗೆ ಇದು ದೊಡ್ಡ ಬಹುಮಾನವೆಂದು ಎಣಿಸಿದನೇನೋ ಸಾಬು ಸಾಯ್ಬು!

ಸ್ಥಳೀಯ ಸಿನೆಮಗಳು

ಸ್ಥಳೀಯ ಸೆಂಟ್ರಲ್ ಟೋಕೀಸಿನಲ್ಲಿ ರಣಜಿತ್ ಸಾಮಾಜಿಕ ಚಿತ್ರರತ್ನ 'ದೀಪಾವಳಿ' ಪ್ರದರ್ಶಿತವಾಗುತ್ತಿದೆ. ಮಾಧುರಿ, ವಾಸಂತಿ, ಈಶ್ವರಲಾಲ್, ದಿಕ್ಷಿತ್, ಇಂದು ಬಾಲಾ, ಮೋತಿಲಾಲ್, ಸುರೇಶ್, ಕೇಶವರಾವ್ ದಾತೆ ಮೊದಲಾದ ಸಿನೆಮಾಲೋಕದ ಪ್ರಸಿದ್ಧ ನಟನಟಿಯರು ಇದರಲ್ಲಿ ಅಭಿನಯಿಸುತ್ತಾರೆ; ಅಮರ ಸಂಗೀತ, ಹಾಸ್ಯತರಂಗ, ಅಪೂರ್ವ ಅಭಿನಯಗಳನ್ನಿಲ್ಲಿ ಕಾಣಬಹುದು.

ಸ್ಥಳೀಯ ಬಾಲಾಜಿ ಟಾಕೀಸಿನಲ್ಲಿ ಮಿನೆರ್ವಾದವರ ಪ್ರಸಿದ್ಧ ಚಿತ್ರ 'ಫಿರ್ ಮಿಲೇಂಗೆ' ಪ್ರದರ್ಶಿತವಾಗುತ್ತಿರುವುದು. ಸರ್ದಾರ್ ಅಖ್ತರ್, ಸಾದಿಕ್ ಆಲಿ ಮೊದಲಾದ ಪ್ರಖ್ಯಾತ ನಟನಟಿಯರು ಅಭಿನಯಿಸುತ್ತಾರೆ. ಮಿನೆರ್ವಾದ ಸೊಹ್ರಾಬ್ ಮೋದಿಯವರು ಭಾರತದ ಚಲಚ್ಚಿತ್ರ ಲೋಕಕ್ಕೆ ಅತ್ಯುತ್ತಮ ಕಾಣಿಕೆಗಳನ್ನಿತ್ತವರು.



ಯುದ್ಧದ ದೆಸೆಯಿಂದಾಗಿ ಏಂಡ್ರೂಸ್ ಲಿವರ್ ಸಾಲ್ಟ್ ಈಗ ದೊರಕುವುದಿಲ್ಲವೆಂಬುದು ವಿಷಾದಕರವಿದೆ. ಆದರೆ ಅಂತರ್‍ರಾಷ್ಟ್ರೀಯ ಪರಿಸ್ಥಿತಿ ಸುಧಾರಿತವಾದ ಕೂಡಲೇ ಇದು ಖಂಡಿತ ದೊರಕುವುದು.

ವ್ಯಂಗಲೇಖನ

ಚರ್ಚಿಲ್ ರೂಸ್‌ವೆಲ್ಟ್ ಮಾತುಕತೆ!

ಕದ್ದು ಕೇಳಿದವರು. ಡಿ. ಎಫ್. ಕಾರಕಾ.

ವಾಶಿಂಗ್‌ಟನ್ ಭವನದಲ್ಲಿ ಮೂರು ಗಂಟೆ ಹೊಡೆದಿದೆ. ರೂಸ್‌ವೆಲ್ಟರು ತಮ್ಮ ಪ್ರೀತಿಯ ಕೋಣೆಯಲ್ಲಿ, ಪ್ರೀತಿಯ ಕುರ್ಚಿ ಮೇಲೆ, ಪ್ರೀತಿಯ ನಾಯಿ, 'ಫಲ್ಲಾ'ದೊಡನೆ ಕುಳಿತಿದ್ದಾರೆ.

ಆಗ ತಾನೇ ಚರ್ಚಿಲರನ್ನು ಹೊತ್ತು ತಂದ ಹಡಗು ಬಂದರ್‌ನಲ್ಲಿ ಲಂಗರು ಹಾಕಿತೆಂದು ನೌಕಾಧಿಕಾರಿ ತಿಳಿಸಿದ. ಅದನ್ನು ಮೊದಲನೆಯವನು, ಎರಡನೆಯವನಿಗೆ, ಎರಡನೆಯ ಮೂರನೆಯವನಿಗೆ, ನಾಲ್ಕನೆಯವ । ಆಗ ತಾನೇ ಫಲಾಹಾರಕ್ಕೆ ಹೋದದ್ದರಿಂದ ಸ್ವಲ್ಪ ತಡವನಾಗಿ ಮೂರನೆಯವ ನಾಲ್ಕನೆಯವನಿಗೆ, ಕೊನೆಗೆ ರೂಸ್‌ವೆಲ್ಟರ ಕಾರ್ಯದರ್ಶಿಗೆ ತಿಳಿಸುವಾಗ ಗಂಟೆ ಮೂರಾಯಿತು. ಅಂತೂ ಸ್ಟೇಂಡಾರ್ಡ್ ಗಂಟೆ ಮೂರಕ್ಕೆ ಚರ್ಚಿಲ್ ರೂಸ್‌ವೆಲ್ಟರ ಐತಿಹಾಸಿಕ ಭೇಟಿ ಸಿದ್ಧವಾಯಿತು.

ಚರ್ಚಿಲ್ ಪ್ರವೇಶಿಸಿದರು. ನೂರಾರು ಜನ ಪತ್ರಿಕಾ ಪ್ರತಿನಿಧಿಗಳು ಕಾದು ನಿಂತಿದ್ದರು. ಕೆಮರಾದವರು ತಯಾರಾಗಿದ್ದರು. ಫೇಸಿಫಿಕ್ಕಿನಲ್ಲಿ ಮಿತ್ರ ಸೈನಿಕರು ತೋರಿಸಿದ ಸಾಹಸಕ್ಕೆ ಅಭಿನಂದನೆ ತೋರಿಸುವಂತೆ ಚರ್ಚಿಲರು ಹವಾನಾ ಸಿಗ್ಗರೇಟು ಸೇದುತ್ತಿದ್ದರು.

ರೂಸ್‌ವೆಲ್ಟರ ಕೈಯಲ್ಲಿ ಚರ್ಚಿಲ್ ಬರೆದ 'ಮಾರ್ಲ್‌ಬರೋ'ನ ಜೀವನ ಕಥೆಯ ಎರಡನೆಯ ಭಾಗವಿದೆ. ಮುಂದಿನ ತಮ್ಮ ಸಂಯುಕ್ತ ಹೇಳಿಕೆಗೆ ರೂಸ್‌ವೆಲ್ಟರು ಆ ಪುಸ್ತಕದ ಅದ್ಭುತ ಭಾಷಣವೊಂದನ್ನು ಬಾಯಿಪಾಠ ಮಾಡುತ್ತಿದ್ದಾರೆ.

'ಏನು ಗೆಳೆಯಾ' ಎಂದರು ರೂಸ್‌ವೆಲ್ಟರು 'ತಮ್ಮ ನಾಯಿಯನ್ನು ತೊಡೆಯಿಂದ ಕೆಳಗಿಳಿಸುತ್ತಾ, 'ಓ ನನ್ನ ಪ್ರಿಯ ರೂಸ್‌ವೆಲ್ಟ್' ಎಂದರು ಚರ್ಚಿಲ್, ಸಿಸಿರೋ ರೀತಿಯಲ್ಲಿ ಉತ್ತರವೀಯುತ್ತಾ 'ವಿಜಯ ನಮ್ಮದು'? 'ಅದಿರಲಿ ಈ ಸಲದ ಹೇಳಿಕೆಗೆ ತಮ್ಮ ರುಜು ಮಾತ್ರ ಸಾಕೆಂದು ಹೇಳಿದಿರಂತೆ, ಅದೇನು?' ರೂಸ್‌ವೆಲ್ಟ್ ಪ್ರಶ್ನೆ ತೊಡಗಿದರು. 'ಅರ್ಥವಾಗಲಿಲ್ಲವೇ, ಅಟ್ಲಾಂಟಿಕ್ ಘೋಷಣೆಗೆ ನಾವಿಬ್ಬರೂ ರುಜು ಹಾಕಿ ಆದ ಅನರ್ಥ ಗೊತ್ತಿಲ್ಲವೆ?' ಚರ್ಚಿಲ್ ಸಂದೇಹ ಪರಿಹರಿಸಿದರು

'ಅದು ಸರಿ ಈ ಸಲದ ಪ್ರಯಾಣದ ಉದ್ದೇಶ?' 'ಅದೋ, ದ್ವಿತೀಯ ರಂಗ, ಆಫ್ರಿಕದಿಂದ ಜರ್ಮನಿ ಇಟಲಿ ಧಾಳಿ, ನೀಲ ಮಡಿಟರೇನಿಯನ್ ನೀರು ಎಷ್ಟು ಪಾವನವಾಗಬೇಕೆಂದರೆ.' 'ಗಂಗಾ ನದಿಯಂತೆ' 'ಗಂಗಾನದಿ ನಮ್ಮ ಇಂಡಿಯಾದಲ್ಲಿದೆ, ಅದು ನಮ್ಮ ಖಾಸಗಿ ಆಸ್ತಿ, ಅದರ ಸುದ್ದಿ ನಿಮಗೆ ಯಾಕೆ'? 'ಸರಿ, ಆದರೂ' 'ಸಾಮ್ರಾಜ್ಯ ಶಾಹಿಯ ಶ್ರಾದ್ಧದ ಪುರೋಹಿತನಾಗಲು ನಾನು ಪ್ರಧಾನಮಂತ್ರಿಯಾಗಿಲ್ಲ' 'ಆದರೂ—' 'ಆದರೂ ಏನು? ಯುದ್ಧಾನಂತರ ಇಂಡಿಯಾಕ್ಕೆ ಸ್ವರಾಜ್ಯ ಕೊಡುತ್ತೇವೆಂದು ಹೇಳಿದ್ದೇವೆ. ನೀವಲ್ಲ, ಯಾರೂ ಹೇಳಿದರೂ ಅದಲ್ಲದೆ ಬೇರೆ ಮಾತಿಲ್ಲ' 'ಆದರೂ —' 'ನನಗೆಲ್ಲಾ ಗೊತ್ತುಂಟು ನೀವೂ, ಲೂಯಿ ಫಿಶರ್ ಲೇಖನಗಳನ್ನು 'ಟೈಂ,' 'ಲೈಫ್'ನಂಥ ಪತ್ರಿಕೆಗಳಲ್ಲಿ ಓದುತ್ತೀರಿ, ನನಗೆಲ್ಲಾ ಗೊತ್ತು ವೆಂಡಲ್ ವಿಲ್ಕಿ ನಿಮ್ಮ ಕಿವಿಗೆ ಗಾಳಿ ಹಾಕಿದ್ದಾನೆ' 'ಆದಿರಬಹುದು' 'ಇರಬಹುದೇನು ಅದೆಲ್ಲಾ ಸುಳ್ಳು ಕಂತೆ. ನಿಜವಾದ ಸುದ್ದಿ ಬೇಕಾದರೆ ನಾವು 'ಇಂಡಿಯಾದ ಕುರಿತು ಪ್ರಕಟಿಸಿದ ೫೦ ಸತ್ಯ ಸಂಗತಿಗಳು' ಪುಸ್ತಕ ಓದಿ. ನಿಮ್ಮ ರಾಯಭಾರಿಯನ್ನಾದರೂ ಕರೆಸಿ ಕೇಳಬಾರದೆ? ಇಂಡಿಯಾ ಸಮಾಚಾರ ಸಾಮ್ರಾಜ್ಯ ಭೂಪತಿ ಜೋಸೆಫ್ ಹನ್ನೆಸಿಯನ್ನಾದರೂ ಕೇಳಬಾರದೆ?'

'ಆದರೂ' 'ಮತ್ತು ಅದೇ ' ಈ ಯುದ್ಧ ಗೆದ್ದವ ನಾನು; ಭಯಂಕರ ಸ್ಫೂರ್ತಿಮಯ ಭಾಷಣ ಮಾಡಿದವ ನಾನು. ಸೇನಾಪತಿಗಳನ್ನು ಬದಲು ಮಾಡಿದವ ನಾನು. ಮಿತ್ರ ವ್ಯೂಹ ರಚನೆ ಮಾಡಿದ್ದು ನಾನು. ಎಲ್ಲಾ ನಾನೇ. ಹಾಗಿರುವಾಗ, ಈ ಸ್ವಾತಂತ್ರ್ಯದ ವಿಚಾರ ನಿಮಗೆ ಯಾಕೆ? ನನ್ನ ಪ್ರತಿ ಭಾಷಣದಲ್ಲಿಯೂ ಸ್ವಾತಂತ್ರ್ಯ ಇಲ್ಲವೆ? ಕಾಮನ್ಸ್‌ನಲ್ಲಿ ಭಾಷಣ ಮಾಡುವಾಗ ಆಗಾಗ ಈ ಶಬ್ದ ಪ್ರಯೋಗಿಸುವಂತೆ ಅಮೇರಿಗೂ ಹೇಳಿರುವೆನು. ಇಷ್ಟು ಸಾಲದೇ? ಇನ್ನೇನು ಮಾಡಬೇಕು?' 'ಅದೇನೋ ನಿಜ.' 'ಮತ್ತೂ ಮಾತಾಡುತ್ತೀರಲ್ಲ, ಈ ಯುದ್ಧ ತೊಡಗಿಸಿದವ ನಾನು. ನಮಗೂ ನಿಮಗೂ ರಕ್ತ ಸಂಬಂಧವುಂಟೆಂದು ಹೇಳಿದ್ದೇನೆ. ಆಕ್ಸ್‌ಫರ್ಡ್ ವಿಶ್ವ ವಿದ್ಯಾಲಯದವರಾಡುವ ಭಾಷೆ ಕರಡು ಭಾಷೆಯೆಂದರೂ ನಾವಿಬ್ಬರಾಡುವ ಭಾಷೆ ಒಂದೇ ಎಂದೂ ಘೋಷಿಸಿದ್ದೇನೆ.'

'ಮತ್ತೇನೂ ಅಲ್ಲ' 'ಹಾಗಾದರೆ ನಿಮ್ಮ ಮನಸ್ಸಿನಲ್ಲೇನುಂಟೋ ಹೇಳಿ. 'ನೀವು ಹೇಳಿದ್ದೆಲ್ಲಾ ಸರಿ, ಆದರೆ ಇದು ಸ್ವಾತಂತ್ರ್ಯಕ್ಕಾಗಿ ಸಮರವಲ್ಲವೆ? ಇಂಡಿಯಾದಲ್ಲಿರುವ ನಮ್ಮ ಯುದ್ಧ ವಾರ್ತಾ ಕಚೇರಿಯವರು ೪೦ ಕೋಟಿ ಜನಗಳಿಗೆ ಹಾಗೆಂದು ಹೇಳಿಬಿಟ್ಟಿದ್ದಾರೆ' 'ಹೇಳಿಬಿಟ್ಟರೇನಂತೆ? ನಾವೂ ಕಳೆದ ಯುದ್ಧ ಮೊದಲ್ಗೊಂಡು ಇದೇ ಮಾತು ಹೇಳುತ್ತಾ ಇದ್ದೇವೆ. ಅದರಿಂದೇನಾಯಿತು?'

'ನನಗೆ ಆತ್ಮವಿದೆ ಚರ್ಚಿಲ್' 'ಇರಬಹುದು ಆದರೆ ಜಯ ಸಮೀಪಿಸುತ್ತಿರುವಾಗ ಸುಮ್ಮನೇ ಈ ತಲೆ ಹರಟೆ ಏಕೆ?' 'ಸಮಸ್ತರಿಗೂ ಸ್ವಾತಂತ್ರ್ಯ ಸಿಗದೆ ಹೋದರೆ ಜಯ ದೊರೆತರೇನು? ನಾವು ಅಟ್ಲಾಂಟಿಕ್ ಘೋಷಣೆಯಲ್ಲಿ ಅದೇ ಮಾತು ಹೇಳಿದೆವಲ್ಲಾ?' 'ಅದೆಲ್ಲಾ ಸಂಕಟ ಕಾಲದ ವೆಂಕಟರಮಣ. ಅಂಥಾ ಕಾಲದಲ್ಲಿ ಏನು ಬೇಕಾದರೂ ಹೇಳುವುದೇ. ನಾನು ಫ್ರಾನ್ಸಿಗೆ ಸಮಾನ ನಾಗರಿಗೆ ಹಕ್ಕು ಕೊಡುತ್ತೇವೆಂದು ಹೇಳಲಿಲ್ಲವೇ? ಗೋಟಡಿಕೆಯಷ್ಟು ಕೊಡದಿದ್ದರೂ ಗೌರೀ ಶಂಖರದಷ್ಟು ಆಶೆ ತೋರಿಸುವುದು ನಮ್ಮ ಸ್ವಭಾವ, ಡಿಪ್ಲೊಮೆಸಿ, ಗೊತ್ತಿಲ್ಲವೇ ನಿಮಗೆ?'

ಅಷ್ಟರಲ್ಲಿ ಶ್ರೀಮತಿ ರೂಸ್‌ವೆಲ್ಟ್ ಡೈರಿ ಹಿಡಿದು ಪ್ರವೇಶಿಸಿದ್ದರಿಂದ ಅಲ್ಲಿ ಮಾತುಕತೆ ಮುರಿಯಿತು ಮುಂದೆ ಸತ್ಕಾರ ಉಪಚಾರಗಳು. ಅನಂತರ ಮಾತುಕತೆ ಮುಕ್ತಾಯವಾಯಿತೆಂದು ಮುಖ್ಯ ಕಾರ್ಯದರ್ಶಿ ಪ್ರಕಟಣೆ ಹೊರಡಿಸಿದರು

—ಬೊಂಬೇ ಕ್ರಾನಿಕಲ್

ಸ್ವದೇಶಾಭಿಮಾನಿಗೆ
ಜಾಹೀರಾತು ಕೊಡಿರಿ

ಕರ್ನಾಟಕ

ಬೆಳಗಾವಿ

ವಾಚ್ಛಾಪುರದ 'ಇಂಗ್ಲಿಷ್' ತರಗತಿ ಉಪಾಧ್ಯಾಯ ಶ್ರೀ. ಜಿ. ಎಸ್. ಯಳ್ಳುಂಡಿಯವರು ಸ್ಥಾನಬದ್ಧತೆಯಲ್ಲಿರುವುದರಿಂದ, ಆ ವರ್ಗದ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿ ಅವರನ್ನು ಕೆಲಸದಿಂದ ತೆಗೆದು ಹಾಕಲಾಗಿದೆ. ಸವದತ್ತಿಯ ಶ್ರೀ. ಚನ್ನಪ್ಪ ಭುಜಂಗ ಮೊದಲಾದವರಿಗೆ ಅಲ್ಲಿನ ತಾಲೂಕು ಕಚೇರಿ ಸುಡುವ ಪ್ರಯತ್ನ ಮಾಡಿದ ಆರೋಪದಲ್ಲಿ ೧||ಯಿಂದ ೨ ವರ್ಷಗಳ ವರೆಗೆ ಶಿಕ್ಷೆ ಆಗಿದೆ. ಜಿಲ್ಲಾ ಮೆಜಿಸ್ಟ್ರೇಟ್, ಡಿ. ಎಸ್, ಜಡ್ಜ್, ಮುನ್ಸಿಪಾಲಿಟಿ ಅಧ್ಯಕ್ಷ ಶ್ರೀ ಬೆಳವಿ ಇವರು ಬೆಳಗಾವಿ ಹಿಲ್ಲಿ ಜೈಲನ್ನು ಸಂದರ್ಶಿಸಿ ಕೈದಿಗಳ ತೊಂದರೆ ಕೇಳಿದರು. ಕೆಲವರಿಗೆ ಹೊಡದದ್ದು ತೋರಿಸಲಾಯಿತು. ಶಾಲೆ ಕಾಲೇಜ್ ಸುರುವಾದದ್ದರಿಂದ ವಿದ್ಯಾರ್ಥಿಗಳನ್ನು ಬೇಗ ಬಿಡುಗಡೆ ಮಾಡಬೇಕೆಂದು ಶ್ರೀ ಬೆಳವಿಯವರ ವಿನಂತಿಯಿದೆ ಶ್ರೀ. ಚಿಕ್ಕೋಡಿ ಅನಂತರಾಯರನ್ನು ಅನಿರ್ಬಂಧ ಬಿಡುಗಡೆ ಮಾಡಲಾಗಿದೆ. ಹೊನ್ನಾಪುರದ ಒಂದು ಹೊಲದಲ್ಲಿ ೨ ಬಂದೂಕುಗಳು ಸಿಕ್ಕಿವೆ. ಪೋಲೀಸರು ಶಿವನೂರಿಗೆ ಮುತ್ತಿ ಅಲ್ಲಿಯ ಪಾಟೀಲರು ಸಹಿತ ೫ ಜನರನ್ನು ಕೈದು ಮಾಡಿರುವರು. ತುರುಕರ ಶೀಗ ಹಳ್ಳಿಯ ದಪ್ತರ ಶಾಲೆ ಸುಟ್ಟ ವಿಚಾರಣೆಗೆ ಬಂದ ಪೋಲೀಸರ ಮೇಲೆ ಏರಿ ಹೋದ ಆರೋಪದಲ್ಲಿ ಅಲ್ಲಿನ ೬ ಮಂದಿಯ ಕೈದಾಗಿದೆ. ಕೆಲವರನ್ನು ಮತ್ತೆ ಬಿಟ್ಟಿದ್ದಾರೆ

ಉತ್ತರ ಕನ್ನಡ

ಕೈನೂಲಿನ ಬಟ್ಟೆಯ ವ್ಯವಸ್ಥೆ ಮಾಡಲಾಗಿದೆ. ಹಲ್ಯಾಳದಲ್ಲಿ ಶ್ರೀ. ವೆಂಕಟೇಶ ಆನೆಗುಂದಿಯವರಿಗೆ ೧ವರ್ಷ ಶಿಕ್ಷೆ ರೂ ೩೦೦ರ ದಂಡ ವಿಧಿಸಲಾಯಿತು. ೪೦ ಪೋಲೀಸರು ಪೌಜುದಾರ ಸಮೇತ ಸುವರ್ಣ ಭಾಸ್ಕೋಡ ಹಳ್ಳಿಗೆ ಮುತ್ತಿ ಫರಾರಿ ಜನರ ಪತ್ತೆ ಹಚ್ಚಲು ಪ್ರತಿಮನೆಯನ್ನು ಹುಡುಕಿದರು. ಹೆಚ್ಚಡ ಗ್ರಾಮದಲ್ಲಿಯೂ ಇದೇ ರೀತಿ ಶೋಧನ ನಡೆದಿದೆ. ತಂತಿ ಕತ್ತರಿಸಿದ ಆರೋಪದಲ್ಲಿ ಗೋಕರ್ಣ ಪೌಜುದಾರರು ೨ ಜನರ ಸೆರೆ ಹಿಡಿದಿರುವರು ಸಿರ್ಸಿ ಪೌಜುದಾರ ಶ್ರೀ. ಕೈ ಸೆರೆಯವರು ತನಗೆ ಹೊಡೆದರೆಂದು ಶ್ರೀ ರಾಮಚಂದ್ರ ದೇವರೆ ಇವರು ಫಿರ್ಯಾದು ಮಾಡಿದ್ದರು. ಆದರೆ ಅದಕ್ಕೆ ಆಧಾರವಿಲ್ಲವೆಂದು ಮೆಜಿಸ್ಟ್ರೇಟರು ತೀರ್ಪಿತ್ತರು. ಭಟ್ಕಳಿಗಿಯಲ್ಲಿ ಪೋಲೀಸರು ಶ್ರೀ ಮಡಗಾಂವಕರರ ಮನೆ ಶೋಧಿಸಿದ್ದಾರೆ, ಫರಾರಿಯಾದವರ ಪತ್ತೆಗಾಗಿ, ಸಾಗರ ಸಿದ್ದಾಪುರ ರಸ್ತೆಯ ಅಕ್ಕಂಡೆ ಎಂಬಲ್ಲಿ ತನ್ನರನ ಟಪಾಲು ಚೀಲವನ್ನು ಯಾರೋ ಕಸಕೊಂಡು ಹೋದರು.

ವಿಜಾಪುರ

ಬರಗಾಲ ನಿವಾರಣಾ ಕೆಲಸ ಸಾಗುತ್ತಿದೆ. ಕೆರೆ ಕೆಲಮಟ್ಟಿಯಲ್ಲಿ ದನ ಮೇಯಿಸುವ ಕೇಂದ್ರ ತೆರೆದಿದೆ. ಇಲ್ಲಿ ಸ್ವಲ್ಪ ಮಳೆ ಬಂದಿತು. ವಿಜಾಪುರದಲ್ಲಿ ರೇಶನಿಂಗ್ ಪದ್ಧತಿ ಜಾರಿಯಲ್ಲಿದೆ. ಬಾಗಲ ಕೋಟೆ ತಾಲೂಕಿನ ಕೆಲ ಹಳ್ಳಿಗಳಲ್ಲಿ ಆಹಾರ ಸಿಗದೆ ಜನರು ಸೊಪ್ಪು ಸೊದೆ ತಿನ್ನುತ್ತಿರುವರು. ವಿಜಾಪುರ ಚರಕಾ ಸಂಘದ ಎಲ್ಲಾ ಕೇಂದ್ರಗಳಲ್ಲಿ ಮೇ ತಿಂಗಳಲ್ಲಿ ರೂ ೨೦ ಸಾವಿರ ಕೂಲಿ ಕೊಟ್ಟಿರುವರು. ಗುಳೇದ ಗುಡ್ಡದಲ್ಲಿ ಕಾಲೆರಾ ಪ್ರಾರಂಭವಾಗಿದೆ ಬರಗಾಲ ನಿವಾರಣೆಗಾಗಿ ಸರಕಾರದವರು ಕೆಲಕೇರಿಗೆ ಇದುವರೆಗೆ ಸಹಾಯ ಮಾಡಿಲ್ಲ. ಶ್ರೀ ಥಕ್ಕರ್ ಬಾಪಾ ಮತ್ತು ಅವರ ಸಂಗಡಿಗರು ಎರಡನೆಯ ಸಲ ವಿಜಾಪುರ ಯಾತ್ರೆ ಮಾಡಿದರು ಕೆರೂರಿಗೆ ಅವರು ಹೋಗಿದ್ದಾಗ ಜನರು ಗುಂಪು ಕಟ್ಟಿ ತಮ್ಮ ದೂರು ಹೇಳಿಕೊಂಡರು ಕಾಲಗಿ, ಮುಳವಾಡ, ಹಲಕುರ್ಕಿ, ಮತ್ತು ಬಟಕುರ್ಕಿ ಈ ಊರುಗಳಲ್ಲಿ ಬರಗಾಲ ಕಾಮಗಾರಿಗಳಲ್ಲಿ ದುಡಿಯುತ್ತಿರುವ ಕೂಲಿಗಾರರಿಗೆ ಮೂರು ವಾರಗಳಿಂದ ಕೂಲಿ ಕೊಟ್ಟಿರುವುದಿಲ್ಲವಂತೆ, ಕೂಲಿಗಾರರು ಉಪವಾಸ ಬೀಳುತ್ತಿದ್ದಾರೆ.

ಧಾರವಾಡ

ತಾಯಿಗೆ ಅಸ್ವಸ್ಥವಿರುವುದರಿಂದ ಶ್ರೀ ಪರಮಣ್ಣ ಹೊಸ ಮನೆಯವರನ್ನು ೨೧ ದಿನ ಪೆರೋಲ ಬಿಡುಗಡೆ ಮಾಡಿದ್ದಾರೆ 'ಜಯಕರ್ನಾಟಕ' ಸಂಪಾದಕ ಶ್ರೀ ಬೆಳಗಾವಿ ರಾಮಚಂದ್ರ ರಾಯರು ಇಂದೂರು ಸಂಸ್ಥಾನದ ಸುದ್ದಿ ಖಾತೆ ಅಧಿಕಾರಿಗಳಾಗಿ ಹೋದದ್ದರಿಂದ ಶ್ರೀ ಬಸವನಾಳ ಎಸ್ ಎಸ್ ಇವರು ಮುಂದೆ ಅದರ ಸಂಪಾದಕತ್ವ ವಹಿಸುವರು

ಗಾಂಧಿಜಿ ಆಸ್ತಿ ಜಪ್ತಿ!

ಅಹಮ್ಮದಾಬಾದಿನಲ್ಲಿರುವ ಗಾಂಧಿಜಿಯವರ 'ನವಜೀವನ' ಕಾರ್ಯದಲ್ಲಿರುವ ಸೊತ್ತುಗಳನ್ನು, ಈ ಸಂಸ್ಥೆಗೆ ಸೇರಿದ ಭೂಮಿಯ ಬಗ್ಗೆ ಸಲಬೇಕಾದ ೧೯೮ ರೂಪಾಯಿ ಕಂದಾಯ ಬಾಕಿಯಿದ್ದುದರಿಂದ ಅಧಿಕಾರಿಗಳು ಜಪ್ತಿಮಾಡಿ ಕೊಂಡೊಯ್ದಿರುವರು

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಆಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ.

ಆದುದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE. The Joint Booking Office, KODIALBAIL.

The Bank of Mangalore Limited, Mangalore.

ESTD. 1931

HEAD OFFICE Mangalore. *BRANCHES* Moodabidri & Padubidri.

The Bank Undertakes to Collect Cheques, Demand and Documentary Bills at Most Competitive Rates.

ISSUES DRAFTS ON ALL IMPORTANT TOWNS IN THE DISTRICT

and also on

BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.

at very favourable rates

All kinds of inland banking business undertaken

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾ ಬೇನೆ, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ, ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರಿಯುವುದು.

ನೀವೀವರೆಗೆ ವಿಮೆಯನ್ನು ಇಳಿಸದಿದ್ದರೆ, ಯಾ ಸಾಕಷ್ಟು ವಿಮೆಯನ್ನು ಮಾಡಿಲ್ಲವಾದರೆ

ದಿ ಬಾಂಬೆ ಲೈಫ್ ಅಷ್ಶೂರೆನ್ಸ್ ಕಂಪೆನಿ ಲಿಮಿಟೆಡಿನಲ್ಲಿ

ಈಗಲೇ ವಿಮೆ ಇಳಿಸಿರಿ.

ಏಕೆಂದರೆ

1. ಜೀವವಿಮೆಯು ಒಬ್ಬನ ವೃದ್ಧಾಪ್ಯದ ಮತ್ತು ಸಮೀಪದ ಹಾಗೂ ಪ್ರೀತಿಯ ಸಂಬಂಧಿಕರ ಜೀವನವನ್ನು ಸುರಕ್ಷಿತಗೊಳಿಸುತ್ತದೆ.
2. ನೀವಿಂದು ವಿಮೆಯನ್ನಿಳಿಸಬಲ್ಲಿರಾದರೆ ನಾಳೆ ಹಾಗೆ ಮಾಡಲು ಶಕ್ತರಾಗದೆ ಹೋಗಬಹುದು.
3. ಆರೋಗ್ಯವು ಅನಿಶ್ಚಿತವೆಂದಾದರೆ ಮೃತ್ಯುವು ಯಾರನ್ನೂ ಬಿಡುವಂತಿಲ್ಲ.
4. ಮೃತ್ಯು ಮತ್ತು ಮುಪ್ಪು ಎಂಬುದು ಅಮೂಲ್ಯವಾದೊಂದು ನಿಶ್ಚಿತ.
5. ಜೀವವಿಮೆಯು ಮರಣದ ಕ್ರೂರತೆಯನ್ನು ಹೋಗಲಾಡಿಸುವುದೊಂದೇ ಅಲ್ಲ; ಅದರ ಸಂಕಷ್ಟವನ್ನೂ ದೂರೀಕರಿಸುತ್ತದೆ.

ಆದುದರಿಂದ ಇಂದೇ ಜೀವವಿಮೆ ಮಾಡುವುದು ಲಾಭಕರವಾಗಿದೆ.

ವಿಶೇಷ ಮಾಹಿತಿಗೆ ದಯಮಾಡಿ ಬರೆಯಿರಿ:

ಕೊಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

— : ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ : —

ಮಂಗಳೂರು ಕಲ್ಲಿಕೋಟೆ ಸೇಲಂ ತಿರುವಾಂಕೂರು ಬೆಂಗಳೂರು ನಗರ ಮತ್ತು ಬೊಂಬಾಯಿ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯೌಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು:—

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಪೈ, ರಥಬೀದಿ. (3) ದಿ ಕರ್ನಾಟಿಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೊ:—1. ಮರಾಠ ಗಲ್ಲಿ ಹುಬ್ಬಳ್ಳಿ.
2. 36 ಫ್ಯಾಕ್ರೋಪ್ಸ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೊಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.

ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಕು 2—7—1943 [ಸಂಚಿಕೆ 27]

ವೈಸರಾಯರಿಗೆ ಪುನಃ ಮಹಾತ್ಮರ ಪತ್ರ?

ವೈಸರಾಯರಿಗೆ ಪುನಃ ಮಹಾತ್ಮರ ಪತ್ರ?

ಮಹಾತ್ಮ ಗಾಂಧಿಯವರು ಪುನಃ ವೈಸರಾಯರೊಡನೆ ಪತ್ರ ವ್ಯವಹಾರ ನಡೆಸುತ್ತಿದ್ದು, ತಮ್ಮ ಮೇಲೆ ಮತ್ತು ಕಾಂಗ್ರೆಸಿನ ಮೇಲೆ ಹೊರಿಸಲಾದ ಆರೋಪಗಳಿಗೆ ಈ ವರ್ಷದೊಳಗೆ ರುಜುವಾತು ಕೊಡಬೇಕೆಂಬದಾಗಿ ಕೇಳಿರುವರೆಂದು ತಿಳಿದುಬರುತ್ತದೆಂದು 'ಹಿತವಾದ' ಪತ್ರಿಕೆಯ ರಾಜಕೀಯ ಸುದ್ದಿಗಾರನು ಬರೆಯುತ್ತಾನೆ. ಈ ಬೇಡಿಕೆಗೆ ಸಮಾಧಾನಕರ ಉತ್ತರ ಬರದಿದ್ದರೆ ಮಹಾತ್ಮರು ಏನಾದರೊಂದು ಉಗ್ರೋಪಾಯ ಕೈಕೊಳ್ಳುವರೆಂದೂ, ಬಹುಶಃ ಮಹೋಪವಾಸ ಪ್ರಾರಂಭಿಸಿ ಈ ಪ್ರಶ್ನೆ ಬಿಡಿಸುವರೆಂದೂ ಆತನ ಊಹನೆಯಾಗಿದೆ.

'ವೇವಲ್ ಗಾಂಧಿಜಿಯನ್ನು ಕಾಣಬೇಕು'

ರಾಜಕೀಯ ಕೈದಿಗಳನ್ನು ಬಿಡಬೇಕು

ಲಂಡನ್ ಪತ್ರಿಕೆಯ ಸೂಚನೆ

'ಭಾರತದ ರಾಜಕೀಯ ಬಿಕ್ಕಟ್ಟನ್ನು ಬಿಡಿಸಲು, ಯುದ್ಧಪ್ರಯತ್ನಕ್ಕೆ ಭಾರತೀಯರ ಬೆಂಬಲ ದೊರಕಿಸಲು ಹೊಸ ವೈಸರಾಯರಿಗೆ ಸುಸಂಧಿ ದೊರಕಿದೆ. ಈ ಉದ್ದೇಶ ಸಾಧಿಸಲು ಒಂದೇ ಉಪಾಯವೆಂದರೆ ಗಾಂಧಿಜಿಯನ್ನವರು ಕೂಡಲೇ ಕಾಣಬೇಕು; ರಾಜಕೀಯ ಕೈದಿಗಳ ಬಿಡುಗಡೆ ಮಾಡಬೇಕು ಮತ್ತು ಬಿಕ್ಕಟ್ಟು ಬಿಡಿಸಲು ಯತ್ನಿಸುವವರಿಗೆ ಸೆರೆಮನೆಯೊಳಗಿದ್ದವರ ಭೇಟಿಯಾಗಲು ಆಸ್ಪದ ಕೊಡಬೇಕು.' ಹೀಗೆಂದು ಲಂಡನಿನ ಪ್ರಮುಖ ಪತ್ರಿಕೆ 'ನ್ಯೂ ಸ್ಟೇಟ್ಸ್‌ಮೆನ್ ಎಂಡ್ ನೇಶನ್' ಉಪಯುಕ್ತ ಸೂಚನೆಗಳಿತ್ತಿದೆ. ವೇವಲರಿದನ್ನು ಕಿವಿಗೆ ಹಾಕಿಕೊಂಡಾರೆ?

ಗಾಂಧಿಜಿ ಪತ್ರದ ವಿಷಯ ಪಾರ್ಲಿಮೆಂಟಿನಲ್ಲಿ ವಿವಾದ

ಅಮೆರಿ ಸೊನ್ಸನ್ ರೆರಲ್ಲಿ

ಕೂಲಿಗಾರ ಸದಸ್ಯ ಸೊರೆನ್ಸನರು ಪಾರ್ಲಿಮೆಂಟಿನ ಕಾಮನ್ಸ್ ಸಭೆಯಲ್ಲಿ 'ಗಾಂಧಿಜಿಯವರು ವೈಸರಾಯರಿಗೆ ೧೯೪೨ನೆಯ ಸಪ್ಟಂಬರ ೨೩ಕ್ಕೆ ಪತ್ರ ಬರೆದಿದ್ದರು, ಅವರು ವಿಧ್ವಂಸಕ ಕಾರ್ಯಗಳನ್ನು ಖಂಡಿಸಿದ್ದಾರೆ. ಅದನ್ನೇಕೆ ಪ್ರಕಟಿಸಲಿಲ್ಲ?' ಎಂದು ಕೇಳಿದರು. ಅಮೆರಿಯವರು ಅದಕ್ಕೆ ಈ ರೀತಿ ಉತ್ತರವಿತ್ತರು. 'ಸೊರೆನ್ಸನರ ಅಭಿಪ್ರಾಯ ತಪ್ಪು, ಸಪ್ಟಂಬರದಲ್ಲಿ ಗಾಂಧಿಜಿ ವೈಸರಾಯರಿಗೆ ಪತ್ರ ಬರೆದಿಲ್ಲ. ಅವರು ಭಾರತ ಸರಕಾರದ ಗೃಹ ಮಂತ್ರಿಗಳಿಗೊಂದು ಪತ್ರ ಬರೆದಿದ್ದರು. ಆ ಪತ್ರ ೨೩—೯—೪೨ಕ್ಕೆ ಬರೆಯಲಾಗಿತ್ತು. ಅದರಂತೆ ಭಾರತದ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಗಾಂಧಿಜಿ ತಮ್ಮ ಪತ್ರದಲ್ಲಿ ವರದಿ ಮಾಡಿದ ಶೋಚನೀಯ ಚಟುವಟಿಕೆಗೆಂಗೆ ಸರಕಾರವೇ ಕಾರಣವಾಗಿದೆ. ಅದರ ಹೊಣೆ ಕಾಂಗ್ರೆಸಿನ ಮೇಲಿಲ್ಲವೆಂದು ಬರೆದಿರುವರು. ಅವರೇನೂ ಹಿಂಸಾತ್ಮಕ ವರ್ತನೆಗಳನ್ನು ಸ್ಪಷ್ಟವಾಗಿ ಖಂಡಿಸಿಲ್ಲ.' ಸೊರೆನ್ಸನರು ಮತ್ತೆ ಹೀಗೆಂದರು: "ಹಿಂಸಾತ್ಮಕ ಚಟುವಟಿಕೆಗಳನ್ನು ಖಂಡಿಸಿ ಗಾಂಧಿಜಿ ಪತ್ರ ಬರೆದಿದ್ದರೆಂದು ರಾಜಾಜಿ ಹೇಳಿದ್ದಾರೆ. ಈ ಸಂಗತಿ ವೈಸರಾಯರಿಗೆ ಗೊತ್ತಿದ್ದರೆ ಗಾಂಧಿಜಿ ಮೇಲೆ ಟೀಕೆ ನಡೆದ ಸಂದರ್ಭದಲ್ಲಿ ಅವರು ಆ ಬಗ್ಗೆ ಏನೂ ಹೇಳದಿರಲು ಕಾರಣವೇನು?" ಅಮೆರಿ ಉತ್ತರವಿತ್ತರು: "ಸೊರೆನ್ಸನರು ಅಥವಾ ರಾಜಾಜಿ ಇವರಿಬ್ಬರಲ್ಲಿ ಒಬ್ಬರ ಅಭಿಪ್ರಾಯ-ಗಾಂಧಿಜಿ ಪತ್ರ ಬರೆಯುವಾಗ ಆದ ಹಸ್ತದೋಷದ ಮೂಲಕ ತಪ್ಪಾಗಿರಬೇಕು." ಅಂತೂ ಅಮೆರಿ ಅಭಿಪ್ರಾಯದಂತೆ ತಪ್ಪು ಯಾವಾಗಲೂ ಗಾಂಧಿಜಿ ಮತ್ತು ಕಾಂಗ್ರೆಸಿನವರದ್ದೇ!

ಜೋಹಾನ್ಸ್‌ಬರ್ಗಿನಲ್ಲಿ ಭಾರತೀಯನಿಗೆ ಶಿಕ್ಷೆ!

ಪಾರ್ಲಿಮೆಂಟಿನಲ್ಲಿ ಭಾರತದ ವಿಷಯ ವಿವಾದ

ಪುನಃ ತಳಪಡೆ ಅರ್ಜಿ ವಿಚಾರಣೆ

'ಬಿಡುಗಡೆ ಆಜ್ಞೆ ಮಾಡಲು ಸಾಧ್ಯವಿಲ್ಲ.'

ಮುಂಬಾಯಿ ಹೈಕೋರ್ಟ ತೀರ್ಪು

ಮುಂಬೈ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರು ಮುಂಬಯಿ ಹೈಕೋರ್ಟಿನ ಫುಲ್ ಬೆಂಚಿನಲ್ಲಿ ಶ್ರೀ. ಕೇಶವರಾವ್ ತಳಪಡೆಯವರ 'ಹೇಬಸ್ ಕಾರ್ಪಸ್' ಅರ್ಜಿಯನ್ನು ಮೂರನೇ ಬಾರಿ ವಿಚಾರಣೆ ನಡೆಸಿ, ಡಿ। ಇ। ಕಾನೂನಿನ ೨೬ನೇ ಕಲಮಿನನ್ವಯ ಸ್ಥಾನಬದ್ಧರಾಗಿರಿಸಿದ ಅವರನ್ನು ಬಿಡುಗಡೆ ಮಾಡಲು ಆಜ್ಞೆ ಮಾಡಲು ತಮಗೆ ಸಾಧ್ಯವಿಲ್ಲವೆಂದು ಅಭಿಪ್ರಾಯಪಟ್ಟರು. ಇನ್ನೊಂದು ಸಂದರ್ಭದಲ್ಲಿ ತಮ್ಮ ಈ ಬಗೆಯ ನಿರ್ಣಯಕ್ಕೆ ಕಾರಣ ತಿಳಿಸುವುದಾಗಿ ಫುಲ್ ಬೆಂಚಿನಲ್ಲಿ ನಿಶ್ಚಯವಾಯಿತು. ಶ್ರೀ. ತಳಪಡೆಯವರ 'ಹೇಬಸ್ ಕಾರ್ಪಸ್' ಅರ್ಜಿ ಮೊತ್ತಮೊದಲು ೧೦-೩-೪೩ರಲ್ಲಿ ವಿಚಾರಣೆ ಮಾಡಿ ತೆಗೆದು ಹಾಕಲಾಗಿತ್ತು. ಅನಂತರ ಫೆಡರಲ್ ಕೋರ್ಟಿಗೆ ಅರ್ಜಿದಾರರು ಅಪೀಲು ಮಾಡಿದ್ದು ೨೬ನೇ ಕಲಮು ಅಕ್ರಮವೆಂದಾದ್ದರಿಂದ ಶ್ರೀ ತಳಪಡೆಯವರನ್ನು ಸ್ಥಾನಬದ್ಧರಾಗಿರಿಸಿದ್ದು ಅನ್ಯಾಯವೆಂದು ಫೆಡರಲ್ ಕೋರ್ಟು ತೀರ್ಮಾನಿಸಿತು. ಆ ಮೇಲೆ ಆ ಖಟ್ಲೆಯನ್ನು ಪುನಃ ಮುಂಬಯಿ ಹೈಕೋರ್ಟಿಗೆ ಫೆಡರಲ್ ಕೋರ್ಟಿನ ಅಭಿಪ್ರಾಯದಂತೆ ತೀರ್ಮಾನಕ್ಕೆ ಕಳುಹಿಸಲಾಯಿತು. ಮೇ ತಾ. ೭ಕ್ಕೆ ಮುಂಬಯಿ ಹೈಕೋರ್ಟಿನ ಫುಲ್ ಬೆಂಚಿನಲ್ಲಿ ಆ ಬಗ್ಗೆ ವಿಚಾರಣೆಯಾಯಿತು. ಆಗ ನ್ಯಾಯಾಧೀಶರ ಬಹುಮತ ನಿರ್ಣಯದಂತೆ ಪುನಃ ನಿರ್ದಿಷ್ಟವಾದ ಸಲಹೆಯನ್ನು ಡಿ। ಇ। ಕಾನೂನಿನ ೨೦ನೇ ಕಲಮು ೧೦ ಪಾರಾದಲ್ಲಿರುವ ಅಭಿಪ್ರಾಯವನ್ನು ಸ್ಪಷ್ಟಮಾಡಿ ತಕ್ಕ ಸಲಹೆ ಕೊಡುವಂತೆ ಫೆಡರಲ್ ಕೋರ್ಟಿಗೆ ಕಳುಹಿಸಲಾಯಿತು. ಫೆಡರಲ್ ಕೋರ್ಟಿನವರು ಪುನಃ ವಿಚಾರಣೆ ಮಾಡಿ ಮುಂಬಯಿ ಹೈಕೋರ್ಟಿಗೆ ಆ ಅರ್ಜಿಯನ್ನು ತೀರ್ಮಾನದ ಬಗ್ಗೆ ಕಳುಹಿಸಿಕೊಟ್ಟರು. ಈ ಅರ್ಜಿಯ ವಿಷಯ ತೀರ್ಪು ಕೊಡುತ್ತಾ ಈಗ ಮುಂಬಯಿ ಹೈಕೋರ್ಟು ಮುಖ್ಯಾಧೀಶರು, ಶ್ರೀ. ತಳಪಡೆಯವರನ್ನು ಸ್ಥಾನಬದ್ಧರಾಗಿರಿಸಿದ್ದು, ಅಕ್ರಮವಾದುದೆಂದು ಈ ಕೋರ್ಟಿಗೆ ಸಮಾಧಾನವಾಗುವ ವರೆಗೆ ಬಿಡುಗಡೆ ಹುಕುಂ ಕೊಡಲಾಗುವುದಿಲ್ಲವೆಂದು ಬರೆದಿದ್ದಾರೆ.

ಜೋಹಾನ್ಸ್‌ಬರ್ಗಿನಲ್ಲಿ ಭಾರತೀಯನಿಗೆ ಶಿಕ್ಷೆ!

ವರ್ಣದ್ವೇಷದ ಅವತಾರ!

ಜೋಹಾನ್ಸ್‌ಬರ್ಗ್‌ನ ಫೋರ್ಡ್ಸ್ ಬರ್ಗ್ ಜಿಲ್ಲೆಯ ಮಿ. ಯೂಸುಫ್ ಬರೋದ್ದೀನ್ ಎಂಬ ಭಾರತೀಯ ಬಂಧುವೊಬ್ಬರು, ಯೂರೋಪಿಯನ್ ಪ್ರದೇಶದಲ್ಲಿ ಒಂದು ಅಂಗಡಿಯನ್ನು ತೆರೆದರೆಂದು ಮಾಡಲಾದ ಖಟ್ಲೆಯಲ್ಲಿ, ಆಫ್ರಿಕದ ಇತಿಹಾಸದಲ್ಲಿಯೇ ಇದು ಮೊದಲನೆಯ ಸಲವಾಗಿ, ಮಿ. ಯೂಸುಫ್ ಬರೋದ್ದೀನರಿಗೆ ಮೆಜಿಸ್ಟ್ರೇಟರು ೧೦ ಪವನು ದಂಡ ಅಥವಾ ೧ ತಿಂಗಳ ಶಿಕ್ಷೆ ವಿಧಿಸಿದರು. 'ಆಫ್ರಿಕದಲ್ಲಿ ಇತ್ತೀಚೆಗೆ ಭಾರತೀಯರಿಗೆ ಹಾಗೂ ಕರಿಬಣ್ಣದವರಿಗೆ ಕೆಲವು ಪ್ರದೇಶಗಳಿಗೆ—ಎಂದರೆ ಯೂರೋಪಿಯನರು ವಾಸಮಾಡುವ ಸ್ಥಳಗಳಿಗೆ—ಪ್ರವೇಶವಿಲ್ಲ. ಅಂಥಾ ಸ್ಥಳದಲ್ಲಿ ಮಿ. ಬರೋದ್ದೀನರು ಅಂಗಡಿ ತೆರೆದದ್ದು ಶಾಸನವಿರುದ್ಧವೆಂದು ಆರೋಪ ಮಾಡಲಾಗಿತ್ತು. ಪೋಲೀಸನೊಬ್ಬನು ಆರೋಪಿವಿರುದ್ಧ ಸಾಕ್ಷಿ ಕೊಡುತ್ತಾ ಅಂಗಡಿ ತೆರೆಯುವ ಬಗ್ಗೆ ತನಗೆ ಲೈಸನ್ಸಿಗೆ ಅರ್ಜಿಮಾಡಿರುವುದಾಗಿ ಹೇಳಿದನು. 'ಇತ್ತೀಚೆಯ ಈ ವರ್ಣದ್ವೇಷದ ಕಾನೂನಿಂದಾಗಿ ಬಹಳ ಗೊಂದಲದ ಪರಿಸ್ಥಿತಿ ಹುಟ್ಟಿದೆ, ಭಾರತೀಯರಿಗಿಂಥಾ ಪರಿಸ್ಥಿತಿಯೇನೆಂದು ಗೊತ್ತಾಗದ ಅವಸ್ಥೆ ಬಂದಿದೆ'ಯೆಂದು ಆರೋಪಿ ಕಡೆಯಿಂದ ವಾದಿಸಲಾಯಿತು. ಪ್ರಾಸಿಕ್ಯೂಟರು ಸಂಕ್ಷೋಭ ಪರಿಸ್ಥಿತಿಯ ನೆವಮಾಡಿ ಭಾರತೀಯರು ಬಿಳಿಯರಿದ್ದ ಸ್ಥಳಕ್ಕೆ ಬರಕೂಡದೆಂದೂ, ಇದು ಮೊದಲನೆಯ ಖಟ್ಲೆಯಾದರೂ ಇಂಥಾ ಅನೇಕ ಖಟ್ಲೆಗಳು ಇನ್ನು ಮುಂದೆ ಬರಲಿವೆಯೆಂದೂ ಹೇಳಿದರು.

'ಭಾರತದ ಸಮಸ್ಯೆಯಲ್ಲಿ ಕೈ ಹಾಕಲು ಅಮೆರಿಕಕ್ಕೆ ಮನಸ್ಸಿಲ್ಲ'

ಎಡ್ಗರ್ ಸ್ನೊ ತಿಳಿಸುತ್ತಾರೆ

'ಭಾರತದ ರಾಜಕೀಯ ಸಮಸ್ಯೆಯಲ್ಲಿ ಕೈ ಹಾಕಿ ಅದನ್ನು ಬಿಡಿಸುವರೆ, ಹಾಗೂ ಭಾರತೀಯರಿಗೆ ಸ್ವರಾಜ್ಯ ಕೊಡುವಂತೆ ಬ್ರಿಟಿಷ್ ಸರಕಾರವನ್ನು ಒತ್ತಾಯಪಡಿಸುವರೆ ಅಮೆರಿಕನರಿಗೆ ಸ್ವಲ್ಪವೂ ಮನಸ್ಸಿಲ್ಲ. ಭಾರತದ ಸ್ವಾತಂತ್ರ್ಯದ ಪ್ರಶ್ನೆ ತಮಗೆ ಸಂಬಂಧಿಸಿದ್ದಲ್ಲವೆಂದು ಅವರು ತಿಳಿಯುತ್ತಾರೆ. ಇದು ಭಾರತ ಬ್ರಿಟನುಗಳ ನಡುವಿನ ಹೋರಾಟವೆಂದು ಅವರ ಅಭಿಪ್ರಾಯ. ಭಾರತೀಯರಲ್ಲಿಯೇ ಭಿನ್ನಾಭಿಪ್ರಾಯ ಹೆಚ್ಚಿದ್ದು ಅಮೆರಿಕದೀ ಧೋರಣ ಬಿಗಿಯಾಗಲು ಮತ್ತಷ್ಟು ಅವಕಾಶವಾಗಿದೆ. ಅಮೆರಿಕನರಿಗೆ ಭಾರತೀಯರ ಬಗ್ಗೆ ಸಹಾನುಭೂತಿಯೇನೋ ಇದೆ. ಆದರೆ ಕ್ರಿಪ್ಸ್ ಯೋಜನೆಯನ್ನು ಭಾರತೀಯರು ತಿರಸ್ಕರಿಸಿದ್ದರಿಂದ ಅವರಿಗೆ ಏನೂ ತಿಳಿಯದಾಗಿದೆ' ಹೀಗೆಂದು ಅಮೆರಿಕದ ಪ್ರಸಿದ್ಧ ಲೇಖಕರಾದ ಎಡ್ಗರ್ ಸ್ನೊ ಒಂದು ಲೇಖನದಲ್ಲಿ ಬರೆಯುತ್ತಾರೆ. ಅಂತೂ ಅಮೆರಿಕನರ ಮುಖಕ್ಕೆ ಬ್ರಿಟಿಷರು ಚೆನ್ನಾಗಿ ಮಸಿ ಹಚ್ಚಿದ್ದಾರೆಂಬುದು ಇದರಿಂದ ವ್ಯಕ್ತವಾಗುತ್ತದೆ. ಇಲ್ಲದಿದ್ದರೆ ಭಾರತವನ್ನು ರಕ್ಷಿಸಲು ತಮ್ಮ ಸೈನಿಕರನ್ನು ಕಳುಹಿಸಿದ ಅಮೆರಿಕ ಭಾರತದ ಆಂತರಿಕ ಶಾಂತಿಯ ಕುರಿತು ಕೈ ಹಾಕುವುದಿಲ್ಲವೆಂದರೆ ಇದಕ್ಕಿಂತ ದೊಡ್ಡ ರಾಜಕೀಯ ಆತ್ಮಹತ್ಯೆ ಬೇರೇನಿದೆ?

> **'ಧೋರಣೆಯಲ್ಲಿ ಬದಲಾವಣೆಯಿಲ್ಲ'**
>
> **ಅಮೆರಿ ಹಾಡು**
>
> ವೇವಲರನ್ನು ಭಾರತದ ವೈಸರಾಯರಾಗಿ ನೇಮಿಸಿದ್ದರಿಂದ, ಭಾರತದ ಸಂಬಂಧದಲ್ಲಿ ಬ್ರಿಟಿಷ ಸರಕಾರದ ಧೋರಣದಲ್ಲಿ ಯಾವುದೇ ಬದಲಾವಣೆಯಾಗಿಲ್ಲವೆಂದು ಭಾರತ ಮಂತ್ರಿ ಅಮೆರಿಯವರು ಕಾಮನ್ಸ್ ಸಭೆಯಲ್ಲಿ ಹೇಳಿದರು.

'ಒರಿಸಾವನ್ನು ಸುಲಿಯಬೇಡಿ'

ಗೋದಾವರಿ ಮಿಶ್ರರ ಬಿನ್ನಹ

'ಇಂದು ಭಾರತ ಸರಕಾರವು ಒಂದೇ ರೀತಿಯಲ್ಲಿ ಒರಿಸಾದಿಂದ ಅಕ್ಕಿ ಸಾಗುತ್ತಿದೆ. ನಿರ್ಭಾಗ್ಯ ಒರಿಸ್ಸಾ ನಿತ್ಯ ಕ್ಷಾಮದ ನಾಡು. ತಾನು ಬೆಳೆದುಕೊಂಡು ತಿಂದು ಬದುಕಿದರೆ ಸಾಕಾಗಿದೆ. ಅದಕ್ಕೂ ಈಗ ಭಿಕ್ಷೆ ಬೇಡಬೇಕು. ಅಂಥ ದೇಶದಿಂದ ಇದ್ದದ್ದನ್ನು ಹೊರಗೆ ಸಾಗಿಸುವುದರ ಅರ್ಥವೇನು? ಅಕ್ಕಿಯಿಲ್ಲದೆ ನಮ್ಮ ಕಡೆ ಜನರು ಸಾಯುತ್ತಿದ್ದಾರೆ. ಇದ್ದೂ ಸತ್ತರೆ ಯಾರಿಗೆ ಈ ಅಪಮಾನ? ಈ ಅಪಮಾನ ಅಕೀರ್ತಿ, ಜನತೆಗೆ ಜವಾಬ್ದಾರಿಯಾದ ಸರಕಾರಕ್ಕಲ್ಲ ನಮಗೇ ಅಂತೆ! ಹೆಚ್ಚು ಅಕ್ಕಿ ಇದ್ದರೆ ನಾವೇ ಹೊರಗೆ ಕಳುಹಿಸುತ್ತೇವೆ. ಇಟ್ಟುಕೊಳ್ಳುವುದಿಲ್ಲ. ಹಾಗಿರಲು ದೋಚಿಕೊಂಡು ಹೋಗುವುದು ಬೇಡ. ನಾನಿಂದು ಒರಿಸಾದ ಜನರಿಗೆ ಕೈಮುಗಿದು ಬೇಡುತ್ತೇನೆ. ಹಣಕ್ಕಾಗಿ ನಮ್ಮಲ್ಲಿದ್ದ ಅಕ್ಕಿ ಹೊರಗೆ ಕಳುಹಿಸಬೇಡಿ. ಅದರಿಂದ ನಿಮ್ಮ ಜನರ ಪ್ರಾಣ ತೆಗೆಯುತ್ತೀರಿ. ಈ ಧನಪಿಶಾಚಿ ಬೇಡ. ಸರಕಾರಕ್ಕೂ ಸಾರುತ್ತೇನೆ. ಬಡ ಒರಿಸಾವನ್ನು ಸುಲಿಯಬೇಡಿ' ಹೀಗೆಂದು ಒರಿಸಾದ ಅರ್ಥಿಕ ಮಂತ್ರಿ ಶ್ರೀ. ಗೋದಾವರಿ ಮಿಶ್ರರು ಒಂದು ಪ್ರಕಟಣೆ ಕೊಟ್ಟಿದ್ದಾರೆ.

'ಅನ್ನ ಇಲ್ಲ; ಬಟ್ಟೆ ಇಲ್ಲ!'

ಇದಿಂದು ನಮ್ಮ ಜನತೆಯ ಕೂಗು!

—ಕಯ್ಯಾರ.

'ಅನ್ನ ಇಲ್ಲ; ಬಟ್ಟೆಯಿಲ್ಲ!' ಎಂಥಾ ಕರುಣಾಕ್ರಂದನ ನಮ್ಮ ಜನರದ್ದು! ಎಂಥಾ ಹೃದಯದ್ರಾವಕ ಚಿತ್ರ ನಮ್ಮ ನಾಡಿನದು! ಹಾಗೆಂದು ಅನ್ನ ಇಲ್ಲದೆ, ಬಟ್ಟೆಯಿಲ್ಲದೆ ನರಳುವ ಈ ದಾರುಣ ಪರಿಸ್ಥಿತಿಯೊದಗಿದ್ದಕ್ಕೆ ನಮ್ಮ ಜನರು ನಮ್ಮ ನಾಡು ಕಿಂಚಿತ್ತಾದರೂ ಕಾರಣವಿತ್ತೇನು?

ನಮ್ಮ ಭೂಮಿ ಸ್ವರ್ಣಭೂಮಿ! ಶತಶತಮಾನಗಳಿಂದ ಪರಕೀಯರು ನಮ್ಮ ನಾಡನ್ನು ಸುಲಿಯುತ್ತಾ ಬಂದರು. ನಾಡು ಬಡವಾಗುತ್ತಾ ಬಂತು; ಜನತೆ ಕಂಗಾಲಾಗುತ್ತಾ ಇತ್ತು!

ಯುದ್ಧದಿಂದ ಈ ಸಂಕಷ್ಟ ಹೆಚ್ಚಾಯಿತು. ಯುದ್ಧ ಯುರೋಪಿನಲ್ಲಿ ಹುಟ್ಟಿತು; ವಿಶ್ವಕ್ಕೂ ಅದರ ಜ್ವಾಲೆ ದಿನದಿನಕ್ಕೆ ಹರಡುತ್ತಾ ಬಂತೇನೊ ನಿಜ, ಆದರೆ ಕೆಲ ಸರ್ವಾಧಿಕಾರಿಗಳ, ಕೆಲ ಸಾಮ್ರಾಜ್ಯಶಾಹಿಗಳ ಸ್ವಾರ್ಥ, ದರ್ಪ. ದುರಹಂಕಾರ ಫಲವಾಗಿ ಇಂದು ಜಗತ್ತಿನ ಜನತೆ ಹೀಗೆ 'ಅನ್ನ ಇಲ್ಲ; ಬಟ್ಟೆಯಿಲ್ಲ!' ಎಂದು ಕರುಳೊಡೆಯುವಂತೆ ಕೂಗಿಡುತ್ತದೆ! ನಮ್ಮ ನಾಡಿನ ಮಂದಿಯೂ ಈ ಮಹಾಕ್ರಂದನದಲ್ಲಿ ತಮ್ಮ ಕೊರಳ ದನಿ, ಕರುಳ ದನಿ ಕೂಡಿಸಿದ್ದಾರೆ!

ಕೆಲವರು ಮಾಡಿದ ಅನ್ಯಾಯದ ಫಲವನ್ನು ಹಲವರು ಅನುಭವಿಸುವುದರಲ್ಲಿ ಏನು ನ್ಯಾಯವುಂಟು? ಆದರೆ ಇಂದು ಈ ಕೋಲಾಹಲದಲ್ಲಿ ಯಾರ ನ್ಯಾಯವನ್ನು ಯಾರು ಕೇಳಬೇಕು? ನಾವು ಹೊಣೆಗಾರರಲ್ಲವೆಂದರೆ ಯಾರು ಕಿವಿಗೆ ಹಾಕಿಕೊಳ್ಳಬೇಕು? ನಾವು ನಿರಾಪರಾಧಿಗಳೆಂದರೂ ನಮ್ಮ ತಲೆಗೆ ಬೀಳುವ ಬಾಂಬು ತಪ್ಪುವುದಿಲ್ಲ ನಮ್ಮ ಹಸಿವು ಅಡಗುವುದಿಲ್ಲ, ನಮ್ಮ ಮಾನ ಮುಚ್ಚುವುದಿಲ್ಲ.

ಇದು ಎಂಥಾ ನಿಸ್ಸಹಾಯ ಪರಿಸ್ಥಿತಿ! ಇದೆಂಥಾ ಕರುಣಾಜನಕ ಚಿತ್ರ!

* * *

ಒಂದು ಮುಡಿ ಅಕ್ಕಿಗೆ ನಾಲ್ಕು ರೂಪಾಯಿ ಕ್ರಯವಿತ್ತು. ಒಂದು ವಸ್ತ್ರ ಆರಾಣೆ ಏಳಾಣೆಗೆ ದೊರಕುತಿತ್ತು. ಇಂದು ಅಕ್ಕಿ ಮುಡಿಗೆ ರೂ ೧೨ಕ್ಕಿಂತ ಕ್ರಯ ಏರಿದೆ! ವಸ್ತ್ರಕ್ಕೆ ಎರಡು ರೂಪಾಯಿ ಆಗಿದೆ! ನಾಲ್ಕು ಪಾಲು ಹೆಚ್ಚು! ಹಾಗೆಂದು ಅಕ್ಕಿಗೆ ಅಷ್ಟು ಕಡಿಮೆ ಕ್ರಯ ಇರುವಾಗ, ಬಟ್ಟೆ ಅಷ್ಟು ಕಡಿಮೆ ಬೆಲೆಗೆ ದೊರೆಯುವಾಗಲೂ ನಮ್ಮ ಜನ ಸಂಪತ್ಸಮೃದ್ಧರಾಗಿರಲಿಲ್ಲ ಹೊಟ್ಟೆ ಬಟ್ಟೆಗಳಿಗೆ ಅವರ ದುಡಿತ ಸಾಕಾಗುತ್ತಿರಲಿಲ್ಲ. ನಾನಿಲ್ಲಿ ಹೇಳುವುದು ಬಡವರ ಜೀವನ; ಕೂಲಿಗಾರರ ಜೀವನ. ದೊಡ್ಡವರ ವಿಷಯ ಬೇರೆ; ನಮ್ಮಲ್ಲಿ ದೊಡ್ಡವರು ಸಾವಿರಕ್ಕೆ ಒಬ್ಬರಂತಿದ್ದಾರೋ ಇಲ್ಲವೊ! ಆಗಲೇ ಹಾಗಿದ್ದರೆ ಈಗ ಬಡವರು ಹೇಗೆ ಜೀವಿಸಬೇಕು? ಹಾಗೆಂದು ಅವರ ದುಡಿತದಲ್ಲಿ ಆ ರೀತಿ ಸಂಪಾದನೆ ಹೆಚ್ಚಿದೆಯೇನು? ಕಷ್ಟಕಾಲವೆಂದು ಕೆಲವು ಕಾರ್ಖಾನೆಯವರು ರೂಪಾಯಿಯಲ್ಲಿ ಒಂದಾಣೆ ಎರಡಾಣೆ ಹೆಚ್ಚಿದ್ದರೆ ನಾಲ್ಕಾಣೆ-ಇವರು ಯುದ್ಧ ಸಾಮಗ್ರಿ ತಯಾರಿಸುವ ಕಾರ್ಖಾನೆಯವರು—ಕೂಲಿ ಹೆಚ್ಚು ಕೊಡುತ್ತಾರೆ! ಇದು ಸಾಕೇನು? ಹೀಗಾದರೆ ನಮ್ಮ ಜನ, ಬಹುಮಂದಿ ಈಗ ಉಪವಾಸ ಬೀಳುವುದೇ ಅವಸ್ಥೆಯಲ್ಲವೇ? ಮಾನ ಮುಚ್ಚಲಾಗದೆ ನಾಚಿಕೆ ಜೀವನಮಾಡುವುದೇ ಅಲ್ಲವೆ?

ಇದು ಕೆಲಸಗಾರರ ಜೀವನವಾಯಿತು. ಇನ್ನು ಮಧ್ಯಮ ವರ್ಗದವರು. ಯುದ್ಧ ಪ್ರಾರಂಭವಾಗುವ ಮುನ್ನ ಇವರದು ನಿಕೃಷ್ಟ ಜೀವನವಲ್ಲ. ನಾಳೆಗೇನು ಎಂಬ ಚಿಂತೆಯಿದ್ದರೂ, ಇಂದು ಉಪವಾಸ ಬಿದ್ದು ನರಳುವಂತಿಲ್ಲ. ಇಪ್ಪತ್ತೊ, ಮೂಹತ್ತೊ, ನಲ್ವತ್ತೊ ರೂಪಾಯಿ ಸಂಬಳದಲ್ಲಿ ಹಸಿವು ಅಡಗುವಷ್ಟು ಊಟ, ಮಾನ ಮುಚ್ಚುವಷ್ಟು ಬಟ್ಟೆ ಮಾಡಿಕೊಂಡು ಜೀವನ ಸಾಗಿಸುತ್ತಿದ್ದರು. ಇಂಥಾ ಮಧ್ಯಮ ತರಗತಿಯ ಜನ ಬಹಳ ಇದ್ದಾರೆ. ಕೆಲಸಗಾರರೇನೋ ಇವರನ್ನೂ ಶ್ರೀಮಂತರೆಂದೇ ತಿಳಕೊಂಡಿದ್ದರು. ಆದರೆ ಈಗ ಅವರ ಪಾಡು ಗೊತ್ತಾಗಿದೆ. ಅವರ ನಿಜಸ್ವರೂಪ ಬಯಲಿಗೆ ಬಂದಿದೆ. ಕೆಲಸಗಾರರಿಗಿಂತ ಕೂಲಿಯವರಿಗಿಂತ ಕಡಿಮೆ ತರಗತಿಗೆ ಅವರು ಇಳಿದಿದ್ದಾರೆ. ಏಕೆಂದರೆ ಕೆಲಸಗಾರರಿಗಾದರೂ ಒಮ್ಮೊಮ್ಮೆ ಉಪವಾಸ ಬಿದ್ದು ಗೊತ್ತು, ಹರಕುಬಟ್ಟೆ ಹಾಕಿ ಅನುಭವ. ಆದರೆ ಈ ಮಂದಿ ಹಾಗೆ ಮಾಡಿದವರಲ್ಲ. ಹಾಗೆಂದು ಮೊದಲಿನ ಅಭ್ಯಾಸ-ಬಹು ಕಾಲದ ಅಭ್ಯಾಸ-ಬಿಡುವ ಹಾಗಿಲ್ಲ, ಇವರ ಅವಸ್ಥೆ ಹೇಳತೀರದ ಅವಸ್ಥೆ. ಕೂಲಿಗಾರರಾದರೂ ತಮ್ಮ ಕಷ್ಟವನ್ನು ನುಂಗಿಕೊಳ್ಳುತ್ತಾರೆ ಆದರೆ ಇವರ ಈ ಮಧ್ಯಮ ವರ್ಗದವರ-ನರಳಾಟ ಗೋಳಾಟ ಹೇಳತೀರದು;

* * *

ವಿಸ್ತಾರವಾದ ಒಂದು ದೇಶದಲ್ಲಿ ಎಲ್ಲಾದರೂ ಒಂದು ಕಡೆ ಬರಗಾಲ ಬಂದೇ ಬರುತ್ತದೆ, ಮಳೆ ಬೀಳದೆಯೋ, ಬೆಳೆ ಹಾಳಾಗಿಯೋ, ನೆರೆ ಬಂದೋ ಜನ ಸಂಕಷ್ಟಪಡುತ್ತಾರೆ. ಆದರೆ ಆಗ ಇಡೀ ದೇಶದವರೇ—ಬೇರೆ ಬೇರೆ ಪ್ರಾಂತಗಳವರು ಅಲ್ಲಿಗೆ ಸಹಾಯ ಸಾಮಗ್ರಿ ಕಳುಹಿಸಿ, ಅವರ ಸಂಕಷ್ಟದಲ್ಲಿ ಪಾಲುವಹಿಸಿ, ಆ ಜನರ ದುಃಖವನ್ನು ಕಡಿಮೆ ಮಾಡುತ್ತಾರೆ. ಆದರೆ ಈ ಸಲದ ಬರಗಾಲ ಭೀಷಣವಾದುದು! ದೇಶದ ಯಾವ ಮೂಲೆಗೆ ಹೋದರೂ, ಹಿಮಾಲಯದಿಂದ ಕನ್ಯಾಕುಮಾರಿ ವರೆಗೆ ಎಲ್ಲಿ ಸಂಚರಿಸಿದರೂ ಎಲ್ಲೆಲ್ಲಿಯೂ-ಬರಗಾಲದ ತಾಂಡವ ನೃತ್ಯ! ಹತ್ತಿರದ ಜಿಲ್ಲೆ ದೂರದ ಜಿಲ್ಲೆ, ತಮ್ಮದೇ ಜಿಲ್ಲೆ ಹೀಗೆ ಎಲ್ಲಿ ನೋಡಿದರಲ್ಲಿ ಒಂದೇ ಕೂಗು: 'ಅನ್ನಯಿಲ್ಲ ಬಟ್ಟೆಯಿಲ್ಲ.'

ಬಿಜಾಪುರ ಬರಗಾಲದಿಂದ ನರಳುವದು ಎಷ್ಟು ಸಮಯ ಆಯಿತು? ಇಂದಿಗೂ ಮಂದಿ ಅಲ್ಲಿ ಹೊಟ್ಟೆ ಬಟ್ಟೆಗಿಲ್ಲದೆ ಸಾಯುತ್ತಿದ್ದಾರಲ್ಲಾ? ಏಕೆ ಇಷ್ಟು ಕಾಲವೂ ಅವರು ಹಾಗೆಯೇ ಸಂಕಟಪಡಬೇಕು? ನೆರೆಕರೆಯವರು ಇದನ್ನು ನೋಡಿಕೊಂಡೂ ಏಕೆ ಸುಮ್ಮಗಿರಬೇಕು? ಆದರೆ, ನೆರೆಕರೆಯವರ ಪಾಡು ಅವರಿಗಿಂತ ಉತ್ತಮವೆಂದೇನು? ತಮ್ಮ ಮನೆಗೇ ಬೆಂಕಿ ಬಿದ್ದಿರುವಾಗ, ಪರರ ಮನೆ ಸುಟ್ಟುಹೋಗುತ್ತದೆಂದರೆ ಆಗ ಯಾರೇನು ಮಾಡುವುದು? ಅತ್ತ ಬಳ್ಳಾರಿಯಲ್ಲಿ! ಅಲ್ಲಿಯೂ 'ಜೋಳವಿಲ್ಲ, ಅಕ್ಕಿಯಿಲ್ಲ!' ಕರ್ನಾಟಕದ ಯಾವ ಕಡೆಗಾದರೂ ನೋಡಿ! ಮಂಗಳೂರು, ಬೆಂಗಳೂರು, ಧಾರವಾರ, ಕಾರವಾರ ಎಲ್ಲಿಯಾದರೂ ಯಾರಾದರೂ ಹೊಟ್ಟೆ ಬಟ್ಟೆಗೆ ಸಾಕಷ್ಟು ತಿಂದು ಜೀವಿಸುತ್ತಾರೋ? ದಕ್ಷಿಣ ಕನ್ನಡದಲ್ಲಾದರೂ ಅನ್ನ ಬಟ್ಟೆ ಬೇಕಾದಷ್ಟು ಎಲ್ಲಿದೆ? ಗವರ್ನರರಿಗೆ, ಕಲೆಕ್ಟರರಿಗೆ ಎಷ್ಟು ಮನವಿಗಳು ಇಲ್ಲಿಂದ ಹೋಗಿಲ್ಲ? ಭಗವಂತನಿಗೆ ಎಷ್ಟು ಮಂದಿ ಮೊರೆಯಿಡುತ್ತಾರೆ ತಮ್ಮ ಸಂಕಷ್ಟ ಒಮ್ಮೆ ಪರಿಹರಿಸೆಂದು!

ಇನ್ನು ನೆರೆಯ ಮಲಬಾರಿನ ಸುದ್ದಿ ಎದೆ ನಡುಗಿಸುವಂಥಾದ್ದು! ಮನುಷ್ಯ ಜಾತಿ ಮೃಗದಂತೆ ಎಲೆಹುಲ್ಲು ತಿಂದು ಜೀವನ ಮಾಡುತ್ತಾರೆಂದರೆ ಇನ್ನೇನು ಆಗಬೇಕು? ಎಷ್ಟು ರೂಪಾಯಿ ಕೊಟ್ಟರೂ ಒಂದು ಮುಡಿ ಅಕ್ಕಿ ದೊರಕುವುದಿಲ್ಲ ಅಲ್ಲಿ ಕೆಲವು ಕಡೆ. ಜನ ಉಪವಾಸ ಬಿದ್ದು ಹುಲ್ಲು ಸೊಪ್ಪು ತಿಂದು ಈಗ ಮಾರಿ ರೋಗಕ್ಕೆ ಬಲಿಯಾಗಿದ್ದಾರೆ. ಶರೀರ ಶಕ್ತಿ ಕುಂದುತ್ತಾ ಬಂದಂತೆ ರೋಗಗಳು ಸ್ವತಃ ಹುಟ್ಟುತ್ತವೆ. ಅದರಲ್ಲಿಯೂ ತಾಳಲಾರದ ಹಸಿವಿನಲ್ಲಿ ಸಿಕ್ಕಾಬಟ್ಟೆ ತಿನ್ನಬೇಕಾಗಿ ಬಂದಾಗ ಮತ್ತೆ ರೋಗಗಳ ಪೈಶಾಚಿಕ ನೃತ್ಯ ನಡೆಯಲೇಬೇಕು! ಕಾಲೆರಾ, ಈ ಭಯಂಕರ ಸಾಂಕ್ರಾಮಿಕ ರೋಗ ಕೇರಳವನ್ನು ಇಂದು ನುಂಗುತ್ತಿದೆ! ದಿನ ದಿನಕ್ಕೆ ನಿಮಿಷ ನಿಮಿಷಕ್ಕೆ ಎಷ್ಟೋ ಮಂದಿ ಇಹಲೋಕದ ಸಂಕಷ್ಟವನ್ನು ಕೊನೆಗಾಣಿಸಿ ಭೂಮಿತಾಯಿಯ ಮಡಿಲಲ್ಲಿ ಮಲಗುತ್ತಾರೆ!

* * *

ಇನ್ನು ಆಂಧ್ರದೇಶ, ತಮಿಳುನಾಡು ಎಲ್ಲಾ ಕಡೆ ಇದೇ ಪಾಡು. ಮದ್ರಾಸು, ಬೊಂಬಯಿ, ಕಲ್ಕತ್ತಾ ಎಲ್ಲೆಲ್ಲೂ ಇದೇ ಸಂಕಷ್ಟ. ಬಂಗಾಲದಲ್ಲಿ ಬರಗಾಲದ ಭೀಷಣ ತಾಂಡವ ನಡೆದಿದೆ! ಪಾಪ! ಬಂಗಾಳೀಯರು ಎಲ್ಲರಿಗಿಂತಲೂ ದುರ್ದೈವಿಗಳು! ಜಪಾನರ ಬಾಂಬಿನ ಪೆಟ್ಟು ತಿಂದ ನಮ್ಮ ಸೋದರರು ಅವರು! ಸಾಲದ್ದಕ್ಕೆ ಈಗ ಈ ಬರಗಾಲ, 'ಅನ್ನವಿಲ್ಲ, ಬಟ್ಟೆಯಿಲ್ಲ'—ಮೇಲಿನಿಂದ ವೈರಿಗಳ ಬಾಂಬಿನ ಬೆಂಕಿ, ಒಳಗಿಂದ ಹಸಿವಿನ ಜ್ವಾಲೆ ಇವೆರಡನ್ನೂ ಸಹಿಸಿಕೊಂಡು ಜೀವಿಸುವುದು ಮಾನವನ ಶಕ್ತಿಗೆ ಅಸಾಧ್ಯ! 'ಬಂಗಾಳವನ್ನು ಬರಗಾಲ ಪ್ರದೇಶವೆಂದು ಸಾರಿರಿ' ಎಂದು ಸರಕಾರದೊಡನೆ ಅಲ್ಲಿನ ಜನ ಮೊರೆಯಿಡುತ್ತಿದ್ದಾರೆ!

ನಿರ್ಭಾಗ್ಯ ಒರಿಸಾದ ಸಂಕಷ್ಟ ಹೇಳುವುದೇ ಬೇಡ. ಅದಿ ಯಾವಾಗಲೂ ಕ್ಷಾಮವೇ! ಈ ಸಲವಂತೂ ಗಾಯಕ್ಕೆ ಬರೆ ಸೆಳೆದಂತೆ ಆಗಿದೆ. ಅಲ್ಲಿನ ಮಂತ್ರಿ ಶ್ರೀ. ಗೋದಾವರಿ ಮಿಶ್ರರು ಒಂದು ವಿನಂತಿ ಹೊರಡಿಸಿದ್ದರಲ್ಲಿ ಅಲ್ಲಿನ ಕರುಣಾಜನಕ ಚಿತ್ರವನ್ನು ತಿಳಿಸಿದ್ದಾರೆ. 'ಮೊದಲೇ ಬಡವಾದ ದೇಶದಿಂದ ಅಕ್ಕಿ ಹೊರಗೆ, ಕಳುಹಿಸಿ ಒರಿಸಾವನ್ನು ಸುಲಿಯಬೇಡಿ' ಎಂದು ಸರಕಾರವನ್ನು ಬೇಡಿಕೊಂಡಿದ್ದಾರೆ 'ಅಧಿಕ ಲಾಭದ ಆಸೆಯಿಂದ, ಅಕ್ಕಿಯನ್ನು ಹೊರಗೆ ಮಾರಿ ಒರಿಸಾದ ಜನರ ಪ್ರಾಣ ಹಿಂಡಬೇಡಿ' ಎಂದು ವ್ಯಾಪಾರಿಗಳೊಡನೆ ಅಂಗಲಾಚಿಕೊಂಡಿದ್ದಾರೆ. ಒರಿಸಾದಲ್ಲಿ ಎಂದೇನು? ಎಲ್ಲಾ ಕಡೆಗಳಲ್ಲಿಯೂ ಜನತೆ, ಸರಕಾರದೊಡನೆ ಸಾಹುಕಾರರೊಡನೆ ಇದೇ ಬಿನ್ನಹ ಮಾಡಿಕೊಳ್ಳುತ್ತದೆ!

* * *

ಜನತೆಯ ಮುಖಂಡರು ಈಗ ಸೆರೆಮನೆ ಸೇರಿದ್ದಾರೆ. ಅವರೊಡನೆ ಮಂದಿ ಮೊರೆಯಿಡುವಂತಿಲ್ಲ. ಹೊರಗಿನ ಕೂಗು ಅವರಿರುವ ಕತ್ತಲೆ ಕೋಣೆಗೆ ಕೇಳುವಂತೆಯೂ ಇಲ್ಲ. ಇಂಥಾ ಸಂದರ್ಭದಲ್ಲಿ ಸರಕಾರದ—ಆಳುವ ಅಧಿಕಾರಿಗಳ ಹೊಣೆಗಾರಿಕೆ ಹೆಚ್ಚಿನದು! ಅವರ ಕಡೆಗೆ ಜನ ಈಗ ಕರುಣೆಯ ದೃಷ್ಟಿ ಬೀರಿದ್ದಾರೆ! 'ಅನ್ನ ಇಲ್ಲ; ಬಟ್ಟೆಯಿಲ್ಲ' ಎಂದು ಅವರ ಮುಖನೋಡಿ ಕೂಗುತ್ತಾರೆ! 'ಸ್ಟೆಂಡಾರ್ಡ್ ಬಟ್ಟೆ' ಬರುತ್ತದೆಂದು ಸರಕಾರಗಳವರಿಂದಲೇ ಹೇಳತೊಡಗಿದೆ. ವಿನಾಯಕನ ಮದುವೆಯಂತೆ ಇದುವರೆಗೂ ಅದರ ಅವಸ್ಥೆ! ಸ್ಟೆಂಡಾರ್ಡ್ ಬಟ್ಟೆ ಬರುವುದಾದರೆ ಬೇಗನೇ ಬರಬೇಕು; ಆಹಾರ ಸಮಸ್ಯೆ ಪರಿಹರಿಸಲು ಸರಕಾರದವರು ಪರಿಷತ್ತು ಒಂದನ್ನು ಕರೆಯುತ್ತಾರೆಂದೂ ಸುದ್ದಿಯಿದೆ. ಆದರೆ ಪರಿಷತ್ತು ಸೇರಿಸಿ ನಿರ್ಣಯಗಳು ಮಾಡಿದ ಮಾತ್ರದಿಂದ ಏನೂ ಪ್ರಯೋಜನವಿಲ್ಲ; ಹೊಟ್ಟೆ ಹಸಿವಿಗೆ, ಸುಡುತ್ತಿರುವ ಬೆಂಕಿಗೆ ಬೇಗನೇ ನಿವೃತ್ತಿ ಆಗಬೇಕು, ಅಂಥಾ ಕಾರ್ಯ, ಅವಸರದ ಕಾರ್ಯ ಅವಸರವಸರವಾಗಿಯೇ ಆಗಬೇಕು. ಇದು ಇಂದು ನಮ್ಮ ನಾಡಿನ ಜನತೆಯ ಕೂಗು!

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟು

O. S. No. 208/43

ಅಬ್ದುಲ್ ರಹಿಮಾನ್ ಮುಸ್ರಿ—ವಾದಿ

ಮತ್ತು

ಹಮ್ಮಬ್ಬ ಬ್ಯಾರಿ—ಪ್ರತಿವಾದಿ.

ಪ್ರತಿವಾದಿ ಹಮ್ಮಬ್ಬ ಬ್ಯಾರಿ ಹಸನ ಬ್ಯಾರಿ ಮಗ—ಮಂಗ್ಳೂರು ತಾಲ್ಲೂಕು ಉಳ್ಳಾಲ ಗ್ರಾಮದ ಕೋಟೆ ಎಂಬಲ್ಲಿರುವವರು—ಇವರಿಗೆ ಈ ಮೂಲಕ ತಿಳಿಯಪಡಿಸುವುದೇನಂದರೆ:—

ಮೇಲ್ಕಂಡ ನಂಬ್ರದಲ್ಲಿ ವಾದಿಯು ನಿಮ್ಮ ಮೇಲೆ ರೂಪಾ 110 ಕ್ಕೆ ಮಾಡಿದ ದಾವೆಯು ತನ್ನಿ ಬಗ್ಗೆ ತಾ 9–7–43ಕ್ಕೆ ಇಟ್ಟು ಇರುತ್ತಾರೆ. ಆ ದಿವಸ ನೀವು ಖುದ್ದು ಆಗಲೀ ವಕೀಲ್ ಮುಖಾಂತರವಾಗಲೀ ಹಾಜರಾಗದೆ ಇದ್ದಲ್ಲಿ ನಿಮ್ಮ ಗೈರ ಹಾಜರಿಯಲ್ಲಿ ಮೇಲ್ಕಂಡ ದಾವಾವು ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು ತಿಳಿದಿರುವದು.

(By order of Court)

Mangalore, } S. Hammabba, M.A.,B.L.
28–6–1943 } 43

ಸಮರಭೂಮಿಯ ಸಂಚಾರ

"ಯೂರೋಪಿಗೆ ಧಾಳಿಯಿಡುತ್ತೇವೆ, ದ್ವಿತೀಯ ರಂಗ ತೆರೆದೇ ಬಿಡುವೆವು, ಹಿಟ್ಲರನನ್ನು ಸದೆಬಡಿವೆವು, ಮುಸಲನಿ ಸೊಂಟ ಮುರಿಯಿತು, ಅಕ್ಷ ಪಕ್ಷಗಳು ವಿಪಕ್ಷವಾದುವು'' ಹೀಗೆಲ್ಲಾ ಏನೇನೋ ಎಂಥೆಂಥಾದ್ದೊ ದೊಡ್ಡದೊಡ್ಡ ಮಾತುಗಳನ್ನು ಮಿತ್ರರು ಹೇಳುತ್ತಾ ಬಂದು ಕೆಲವು ವಾರಗಳೇ ಆಗಿ ಹೋದವು! ಆದರೆ ಬರೀ ಮಾತಿನ ಆಡಂಬರ ವಿನಾ ಏನೇನೂ ಇದುವರೆಗೆ ಹೊರಬರುವ ಪ್ರಸಂಗ ತೋರುವುದಿಲ್ಲ. ಇದೇ ರೀತಿ ಸುಮ್ಮ ಸುಮ್ಮಗೆ ಗಾಳಿಯೊಡನೆ ಯುದ್ಧ ಮಾಡುವ ಕ್ರಮವನ್ನೇ ಮುಂದುವರಿಸಿದರೆ ಮತ್ತೆ ಮಾತಿಗೆ ಏನೇನೂ ಬೆಲೆ ಬರಲಿಕ್ಕಿಲ್ಲ. ಹಿಂದೆ ಹಿಟ್ಲರನೂ ಇದೇ ರೀತಿ ಮಾತನಾಡಿ ಮಾನ ಕಳೆದುಕೊಂಡ. ಫ್ರಾನ್ಸು ಪೊಲೆಂಡ್ ಮೊದಲಾದ ಹತ್ತು ಹದಿಮೂರು ರಾಷ್ಟ್ರಗಳನ್ನು ಒಂದೇ ಪೆಟ್ಟಿನಲ್ಲಿ ಸ್ವಾಧೀನ ಮಾಡಿಕೊಂಡು ಆತನು ರಶ್ಯಕ್ಕೆ ಮುತ್ತಿಗೆ ಹಾಕಿದವನೇ ಹತ್ತು ವಾರಗಳಲ್ಲಿ ರಶ್ಯವನ್ನು ನಿರ್ನಾಮನಮಾಡಿ ಬಿಡುತ್ತೇನೆಂದು ಅರಚಿದ; ಇಂಗ್ಲೆಂಡನ್ನು ನೆಲಸಮ ಮಾಡುವುದಾಗಿ ಬೆದರಿಸಿದ. ಆದರೆ ಅವನದೂ ಬರಿಯ ಗಾಳಿ ಯುದ್ಧವೇ ಆಯಿತು. ರಶ್ಯವಿನ್ನೂ ಹಿಟ್ಲರನೆದುರು ಅಪ್ರತಿಹತ ಪರಾಕ್ರಮದಿಂದ ಕಾದಾಡಿ ತನ್ನ ಸ್ವಾತಂತ್ರ್ಯಶಕ್ತಿ ಮೆರೆಸುತ್ತಿದೆ; ಬ್ರಿಟನು ಇನ್ನೂ ಬಗ್ಗದಿದೆ. ಅಂತೆಯೇ ಮಿತ್ರರಾದರೂ ಆಫ್ರಿಕಾ ಕದನದಲ್ಲಿ ಜಯ ಪಡೆದದ್ದೇ, ಟುನಿಸ್, ಬಿಜರ್ಟಾ, ಪೆಂಟೆಲೇರಿಯಾ, ಲಿಪೆಂಡೂಸಾ, ಲಿನೋಸಾ ಒಂದೊಂದೇ ದ್ವೀಪ ರಾಶಿಗಳನ್ನು ಸ್ವಾಧೀನ ಮಾಡಿದವರು ಮುಂದೆ ಯೂರೋಪಿಗೇ ಮುತ್ತಿ ಮುಕ್ಕಿ ಬಿಡುತ್ತೇವೆಂದರು. ಇಟಲಿಯನ್ನು ಬೆದರಿಸಹೋದರು; ಸದ್ಯ ನೋಡುವಾಗ, ಹಿಂದೆ ಹಿಟ್ಲರನು ಮಾಡಿದ ಮಾತಿನ ಮಲ್ಲತನಕ್ಕೂ ಮಿತ್ರರು ಇತ್ತೀಚೆಗೆ ಮಾಡಿದ ಈ ಗಾಳಿಯುದ್ಧಕ್ಕೂ ಏನೂ ವ್ಯತ್ಯಾಸವಿಲ್ಲವೆಂದು ಜಗತ್ತು ತಿಳಕೊಳ್ಳುವಂತೆ ಆಗಿದೆ. ಹಾಗಾಗಿ ಶೂರರಾದವರು, ವಿಜಯಾ ಕಾಂಕ್ಷಿಗಳು ಎದೆಗೊಟ್ಟು ಹೋರಾಡುವುದನ್ನುಳಿದು, ಬಾಯ್ಬಿಟ್ಟು ಬೊಬ್ಬಿಡುವುದು ಯೋಗ್ಯವಲ್ಲ, ಮರ್ಯಾದೆಯುಲ್ಲವೆಂದು ನಮ್ಮ ಗನಿಸುತ್ತದೆ.

ವಸಂತ ಧಾಳಿಯಿಲ್ಲ?

ಸುಮಾರು ೧,೫೦೦ ಮೈಲು ಉದ್ದವಿರುವ ರಣಭೂಮಿಯಲ್ಲಿ ತಮ್ಮ ವ್ಯೂಹವನ್ನು ಭದ್ರಪಡಿಸಿಕೊಳ್ಳಲು ರಶ್ಯನರು ಕಳೆದ ಮೂರು ತಿಂಗಳಿಂದ ಪ್ರಯತ್ನ ಮಾಡುತ್ತಿರುವರು. ಈಗ ಆ ವ್ಯೂಹಗಳು ಬಲವಾಗಿವೆಯಂತೆ. ಮಿತ್ರರು ಮುಂದೇನು ಮಾಡುವರೆಂಬುದು ಗೊತ್ತಿಲ್ಲದ್ದರಿಂದಲೂ ಹಾಗೂ ರಶ್ಯನರ ವಿಮಾನ ಧಾಳಿಯ ಪೆಟ್ಟಿನಿಂದಲೂ ಹಿಟ್ಲರನ ಯೋಜನೆಗಳೆಲ್ಲ ತಲೆಕೆಳಗಾದವೆಂದು ಕೆಲವರು ಹೇಳುತ್ತಾರೆ. ಈಗ ಜರ್ಮನರ ವಶ ೧೧,೦೦೦ ವಿಮಾನ ಬಲವಿದ್ದರೂ ರಶ್ಯನರ ವೈಮಾನಿಕ ಶಕ್ತಿಗಿಂತ ಮಿಗಿಲಿಲ್ಲವೆಂದು ಹೇಳಲಾಗುತ್ತದೆ. ಜರ್ಮನಿ ಮಿಲಿಟರಿ ವಕ್ತಾರನಾದ ಜನರಲ್ ಡಿಟ್ಮಾರನು ರಶ್ಯ ಯುದ್ಧದ ವಿಚಾರವಾಗಿ ಮಾತನಾಡುತ್ತಾ, 'ಮೊದಲು ರಶ್ಯ ಯುದ್ಧದ ವಿಚಾರ ನಮ್ಮದು ಬೇರೆ ಯೋಜನೆಯಿತ್ತು; ಈಗ ಅದು ಬೇರೆಯಾಗಿದೆ. ಅನುಭವದಿಂದ ನಾವು ಇದನ್ನು ಕಲಿತಿದ್ದೇವೆ. ರಶ್ಯವನ್ನು ಸೋಲಿಸಲು ಯಾವ ತಂತ್ರ ಹೂಡಬೇಕೆಂದು ನಮಗೆ ಗೊತ್ತು. ಈ ರೀತಿ ನಡೆಯಲು ಜರ್ಮನ್ ಪ್ರಜೆಗಳೆಲ್ಲಾ ಸಿದ್ಧರಿದ್ದಾರೆ' ಎಂದನು. 'ಮೊದಲು ಜರ್ಮನ್ ರಣಭೂಮಿಯಲ್ಲಿ ಸಂಗ್ರಹಿಸಿದ್ದ ಸೈನ್ಯವನ್ನು ಜರ್ಮನರು ಇಟಲಿ ಮತ್ತು ಫ್ರಾನ್ಸ್‌ಗಳ ಸಂರಕ್ಷಣೆಗಾಗಿ ಸಾಗಿಸುತ್ತಿರುವುದರಿಂದ ಈಗ ರಶ್ಯ ರಣರಂಗದಲ್ಲಿ ಶಾಂತತೆ ನೆಲಸಿದೆ' ಎಂದು ಅಮೇರಿಕದ ಯುದ್ಧ ಮಂತ್ರಿ ಸ್ಟಿಮ್‌ಸನ್ ಹೇಳುತ್ತಾನೆ. ಅಂತೂ ಹಿಟ್ಲರನ ವಸಂತ ದಾಳಿ ಸದ್ಯ ಪ್ರಾರಂಭವಾಗುವುದಿಲ್ಲವೇನೆಂಬ ಸಂಶಯ ಇದರಿಂದ ತಲೆದೋರಿದೆ. 'ಯೂರೋಪಿನ ಮೇಲೆ ಮಿತ್ರಧಾಳಿಯಾಗುವುದು ಖಂಡಿತವೆಂದು ತೋರಿದ್ದರಿಂದ, ಹಿಟ್ಲರನು ರಶ್ಯದಲ್ಲಿ ಸದ್ಯಕ್ಕೆ ಯುದ್ಧ ನಿಲ್ಲಿಸಿ, ಮಿತ್ರರನ್ನೆದುರಿಸಲು ಸಿದ್ಧನಾಗುತ್ತಿರುವನೆಂದು ರಾಜಕಾರಣಿಗಳು ಹೇಳುತ್ತಿದ್ದಾರೆ.

ಮುಸಲನಿಗೆ ಅನಾರೋಗ್ಯವೆ?

ಇಟಲಿ ಸರ್ವಾಧಿಕಾರಿ ಮುಸಲನಿಗೆ ಕಠಿಣ ಅನಾರೋಗ್ಯವಿರುವುದೆಂದು ಹಂಗೇರಿಯಿಂದ ಸುದ್ದಿ ಬಂದಿದೆ. ಅವನು ಇಟಲಿಯ ಯಾವುದೋ ಒಂದು ಗುಪ್ತ ಸ್ಥಳದಲ್ಲಿ ಇರುವನಂತೆ! ಆದರೆ ಇಟಲಿಯಲ್ಲಿ, ಈ ಸಂದರ್ಭ ನೋಡಿಕೊಂಡು ಫೆಸಿಸ್ಟ್ ವಿರೋಧಿಗಳು ದಂಗೆಯೇಳಬಹುದೆಂಬ ಭೀತಿಯಿಂದ ಈ ಅನಾರೋಗ್ಯದ ವಿಷಯ ಬಹಳ ಗುಪ್ತವಾಗಿಡಲಾಗಿದೆಯೆಂದು ಹೇಳಲಾಗುತ್ತದೆ. ಆದರೆ ಈ ಸುದ್ದಿ ಬಂದಂತೆಯೇ, ರೋಮು ನಗರದಲ್ಲಿ ನಡೆದ ವರಿಷ್ಠ ಅಧಿಕಾರಿಗಳ ಸಭೆಯಲ್ಲಿ ಮುಸಲನಿ ಹಾಜರಿದ್ದನೆಂದು ಇಟಲಿಯ ಸುದ್ದಿ ಸಂಸ್ಥೆ ತಿಳಿಸಿದೆ. ಅಂತೂ ಇದೊಂದು ರಹಸ್ಯ ಸಮಸ್ಯೆಯಾಗಿದೆ. ನಿಜವಾಗಿಯೂ ಮುಸಲನಿಗೆ ಅಸ್ವಸ್ಥತೆಯಿದ್ದು, ಸದ್ಯ ಮಿತ್ರರು ಯುರೋಪು ಧಾಳಿಯನ್ನು ಇಟಲಿಯ ಮುತ್ತಿಗೆಯಿಂದ ಪ್ರಾರಂಭಿಸಲಿರುವರೆಂದು ಹೆದರಿಸುತ್ತಿರುವಾಗ, ಸರ್ವಾಧಿಕಾರಿಗೆ ಅನಾರೋಗ್ಯ ಕಠಿಣವಿದೆಯೆಂದು ಪ್ರಕಟಪಡಿಸಿದರೆ ಎಲ್ಲಿಯಾದರೂ ಜನರು ಎದೆಗುಂದಿಯಾರು, ಇಲ್ಲವೇ ಸಮಯ ಸಾಧಿಸಿ ವಿರೋಧಿಗಳು ಕ್ರಾಂತಿಎಬ್ಬಿಸಿಯಾರೆಂದು ಆ ಸುದ್ದಿ ಗುಪ್ತವಾಗಿಡಲೂ ಸಂಭವವಿದೆ. ಹಾಗಿರದೆ, ಬೇಕುಬೇಕೆಂದೇ ಇಟಲಿಯನರನ್ನು ಮುತ್ತಿಗೆ ಇಡುತ್ತೇವೆಂದು ಬೆದರಿಸುವುದರೊಡನೆ, ಮುಸಲನಿ ಕಠಿಣ ಕಾಹಿಲೆ ಬಿದ್ದಿರುವನೆಂದೂ ಸುದ್ದಿಯೂ ಹುಟ್ಟಿಸಿ, ಜನರು ಧೈರ್ಯಗೆಡಿಸುತ್ತಾ ಅಲ್ಲಿ ದಂಗೆಯೇಳಲು ಗಾಳಿಹಾಕುವ ಮಿತ್ರರ ಚಾಣಕ್ಯತಂತ್ರ ಇದ್ದರೂ ಇರಬಾರದೇಕೆ?

ರಶ್ಯ ಇಂಗ್ಲೆಂಡು ವಿವಾದ

ಯುದ್ಧ ಮುಗಿದ ಕೂಡಲೇ ಆಗಲಿಕ್ಕಿದೆಯೆಂದು, ಭವಿಷ್ಯ ಜಗತ್ತಿನ ವಿಚಾರ ಮಾತನಾಡುತ್ತಾ ಇಂಗ್ಲೆಂಡಿನ ಪ್ರಸಿದ್ಧ ಗ್ರಂಥಕರ್ತ ಹಾಗೂ ಮೇಧಾವಿ ಬರ್ನಾರ್ಡ್ ಶಾ ಹೇಳುತ್ತಾರೆ. 'ಇಂಗ್ಲೆಂಡು ರಶ್ಯದೊಡನೆ ಸದ್ಯ ಕೆಲವು ಶರ್ತಗಳನ್ನು ಮಾಡಿಕೊಂಡಿದೆ. ಆದರೆ ಅದು ಯಾವುದೆಂದು ಯಾರಿಗೂ ಗೊತ್ತಿಲ್ಲ. ತಮ್ಮ ತಮ್ಮ ರಾಷ್ಟ್ರಗಳಲ್ಲಿ ಯುದ್ಧ ಮುಗಿದೊಡನೇ ಪೂರ್ವ ಪರಿಸ್ಥಿತಿಗೇ ತಿರುಗಿ ಬರಬೇಕೆಂದು ಸ್ಟಾಲಿನ್ ಚರ್ಚಿಲರೊಳಗೆ ಒಮ್ಮತವಾಗಿರಬೇಕೆಂದು ಊಹಿಸಲಾಗಿದೆ. ಏಕೆಂದರೆ ರಶ್ಯದ ತತ್ವ ಸಮತಾವಾದ, ಇಂಗ್ಲೆಂಡಿನದ್ದು ಮೊದಲಿದ್ದಂತೆಯೇ ಇರಬೇಕೆಂಬ ಬಂಡವಾಳ ಶಾಹೀ ನಿರೂಪಿತ ಸಾಮ್ರಾಜ್ಯ ಶಾಹಿತ್ವ. ಇಂಥಾ ಭಿನ್ನ ತತ್ವಗಳೊಳಗೆ ರಾಜಿಯು ಬೇಗನೇ ಸಾಧ್ಯವಿಲ್ಲ. ಆದ್ದರಿಂದ ಯುದ್ಧ ಮುಗಿದೊಡನೆ ಭವಿಷ್ಯ ಜಗತ್ತಿನ ಕುರಿತು ಆಗಲಿರುವ ಪುನರ್ಘಟನೆಯು ಯಾವ ಯೋಜನೆಯೂ ಅರ್ಥಹೀನವಾಗಲಿದೆ' ಎಂದು ಅವರು ಭಾವಿಸುತ್ತಾರೆ. 'ಭಾವೀ ಜಗತ್ತಿನಲ್ಲಿ ಪ್ರತಿಯೊಂದು ರಾಷ್ಟ್ರಕ್ಕೂ ಸ್ವಯಂ ನಿರ್ಣಯ ಹಕ್ಕು ಇದೆಯೆಂದು ಅಟ್ಲಾಂಟಿಕ್ ಘೋಷಣೆಯಲ್ಲಿ ಹೇಳಿದ್ದರೂ, ಹಿಟ್ಲರನು ಯೂರೋಪಿನ ರಾಷ್ಟ್ರಗಳ ಸ್ವಯಂ ನಿರ್ಣಯ ಹಕ್ಕನ್ನು ಮೂಲೆಗೊತ್ತಿದಂತೆ ನಾವು ಭಾರತದಲ್ಲಿಯೂ ಮಾಡಿದ್ದೇವೆ. ಬರೀ ಕಾಗದದ ಮೇಲಿನ ತತ್ವಗಳಿಗೆ ಏನೂ ಬೆಲೆಯಿಲ್ಲ. ಯಾವಾಗಲೂ ಭೂಮಿ ಮತ್ತು ದುಡ್ಡು ಇದ್ದವರೇ ಆಳುವವರಾಗುತ್ತಾರೆ. ಅದನ್ನವರು ಬಿಟ್ಟುಕೊಡುವುದೇ ಇಲ್ಲ. ಮನುಷ್ಯನ ಸ್ವಾರ್ಥದ ಕೈಯೇ ಮೇಲಾಗುವುದು' ಎಂದೂ ಅವರೇ ನುಡಿಯುತ್ತಾರೆ.

ಮುಷ್ಕರ ವಿರೋಧಿ ಅಮೇರಿಕ

ಅಮೇರಿಕದಲ್ಲಿ ಮುಷ್ಕರ ವಿರೋಧ ಕಾಯಿದೆಯು ಶಾಸನವಾಯಿತು. ಆ ಶಾಸನಕ್ಕೆ ಸಹಿ ಹಾಕಲು ರೂಸ್‌ವೆಲ್ಟರು ನಕಾರ ಮಾಡಿದರು. ಆದರೆ ಕಾಂಗ್ರೆಸು ಅವರ ನಕಾರವನ್ನು ಕಿತ್ತು ಹಾಕಿತು! ಮತಗಣನೆಯ ಕಾಲಕ್ಕೆ ಅನೇಕ ಪ್ರಜಾಪ್ರಭುತ್ವವಾದಿಗಳೇ ರೂಸ್‌ವೆಲ್ಟರ ವಿರುದ್ಧ ಮತಕೊಟ್ಟರು, ಅಮೇರಿಕದಲ್ಲಿ ಕೂಲಿಗಾರರುಮಾಡಿದ ಮುಷ್ಕರವು ಬಹಳ ಮಹತ್ವದ್ದಿದೆ. ಕೂಲಿಗಾರರಿಗೆ ಅಧಿಕ ಸಂಬಳ ಕೊಡಲು ಅಮೇರಿಕದ ಭಂಡವಾಳಗಾರರು ತಯಾರಿಲ್ಲ ಮಾತ್ರವಲ್ಲದೆ ಈಗ ಈರೀತಿ ಮುಷ್ಕರವಿರೋಧಕಶಾಸನವೊಂದನ್ನೂ ಮಾಡಿ ಬಡವರನ್ನು ಬೆನ್ನು ಮುರಿಯಲು ಗದೆಯೆತ್ತಿದ್ದಾರೆ! ಮುಷ್ಕರ ಹೂಡಲು ಜೀವನವೆಚ್ಚವು ಅಧಿಕವಾದದ್ದೇ ಕಾರಣವಾದದ್ದರಿಂದ ಅದಕ್ಕೆ ತಕ್ಕ ಪರಿಹಾರ ಕೈಕೊಳ್ಳಬೇಕೆಂದೂ, ಇಲ್ಲವಾದರೆ ಅತಿ ಪ್ರಸರಣದ ಹಾದಿ ಹಿಡಿಯಬೇಕಾಗುವುದೆಂದೂ, ಹಾಗೆ ಮಾಡಿದರೆ ಉಂಟಾಗುವ ಪರಿಣಾಮಕ್ಕೆ ಕಾಂಗ್ರೆಸೇ ಹೊಣೆಯಾಗಬೇಕೆಂದೂ ರೂಸ್‌ವೆಲ್ಟರು ಕಾಂಗ್ರೆಸನ್ನು ಎಚ್ಚರಿಸಿದ್ದರು. ಬೆಲೆಗಳ್ಳು ತಾವಾಗಿಯೇ ಒಂದು ಸ್ತಿಮಿತಕ್ಕೆ ಬರುವಂತಾಗಲೆಂದು ಕೆಲವರು ಹೇಳುತ್ತಾರೇನೋ ನಿಜ, ಆದರೆ ಅದರಿಂದ ಶ್ರೀಮಂತರಿಗೇನೂ ಹಾನಿಯಾಗದಿದ್ದರೂ ಬಡವರು ಬಹಳ ಕಷ್ಟಕ್ಕೊಳಗಾಗಬೇಕಾಗುತ್ತದೆ; ಇಂಥಾ ಪರಿಸ್ಥಿತಿಯುಂಟಾದರೆ ಎಲ್ಲಿ ತಪ್ಪಿದೆಯೆಂದು ಕೇಳಲು ರಾಷ್ಟ್ರಕ್ಕೆ ಅಧಿಕಾರವಿದೆಯೆಂದೂ ಅವರು ಕಾಂಗ್ರೆಸಿಗೆ ಸಾರಿದ್ದರು. ಅಂತೂ ಮುಷ್ಕರ ವಿರೋಧಕ ಶಾಸನವೊಂದು ರೂಸ್‌ವೆಲ್ಟರ ಅಭಿಪ್ರಾಯ ವಿರುದ್ಧ ಕಾನೂನಾಗಿಯೇ ಬಿಟ್ಟಿತು! ರೂಸ್‌ವೆಲ್ಟರಿಗೆ ಇಂಥ ಪರಿಸ್ಥಿತಿ ಹಿಂದೆಂದೂ ಬಂದಿರಲಿಲ್ಲ. ಒಂದು ಕಡೆ ಕೂಲಿಗಾರರ ಮುಷ್ಕರ, ಇನ್ನೊಂದೆಡೆ, ಅರ್ಧ ಕಲ್ಲಿದ್ದಲು ಕಣಿಗಳಲ್ಲಿ ಕೆಲಸವಿಲ್ಲ, ಹಾಗಾಗಿ ಯುದ್ಧ ಪ್ರಯತ್ನಕ್ಕೆ ಬಾಧೆ, ಹಾಗೆಂದು ಬಡವರಿಗೆ ಯೋಗ್ಯ ಸಂಬಳ ಕೊಡಿಸಬೇಕು, ಶ್ರೀಮಂತರು ಕೇಳಲೊಲ್ಲರು, ಅತಿ ಪ್ರಸರಣ ಆಗದಂತೆ ನೋಡಬೇಕು, ಕಾಂಗ್ರೆಸಿನ ವಿರುದ್ಧ ನಿಲ್ಲಬೇಕು, ನಿಂತರೆ ಸೋಲು, ಹೀಗೆಲ್ಲಾ ಆದದ್ದರಿಂದ ರಿಪಬ್ಲಿಕನ್ ಪಕ್ಷದವರಿಗೆ ಬಹಳ ಸಂತೋಷ ಆಗಿದೆ. ರೂಸ್‌ವೆಲ್ಟರು ನಾಲ್ಕನೆಯ ಸಲ ಅಧ್ಯಕ್ಷರಾಗುವ ಆಶೆಯಿಲ್ಲವೆಂದು ಅವರು ಹೇಳುತ್ತಾರೆ. ಆದರೆ ರೂಸ್‌ವೆಲ್ಟರು ಈ ಸಲ ಬಡವರ ಬೆಂಬಲ ನಿಂತದ್ದರಿಂದ ಅವರ ಕೀರ್ತಿ ಇನ್ನಷ್ಟು ಹೆಚ್ಚೀತೆಂದೇ ನಮಗೆ ಗೊತ್ತಿರುತ್ತದೆ.

THE CANARA BANKING CORPORATION Ltd

(Incorporated in British India with limited liability).

STATEMENT OF AFFAIRS AS ON 31ST DECEMBER 1942.

Capital & Liabilities	Rs.	As.	Ps.	Property & Assets	Rs.	As.	Ps.
Paid up Capital	6,36,890	0	0	Office premises, furniture, etc.	91,659	0	0
Reserve & other funds	3,71,882	13	11	Advances	31,28,612	4	9
Deposits	41,83,873	4	1	Investment on Govt. Securities etc. at cost	15,34,536	14	3
Due to Bankers	5,08,545	12	1	Sundries	74,183	5	7
Bills per contra	3,59,357	12	1	Bills for Collection	3,59,357	12	1
Sundries including branch adjustments & undisbursed profits	2,83,736	5	9	Cash on Hand & with bankers	12,05,397	14	8
Profit for the year 1942	49,461	3	5				
Total Rs.	63,93,747	3	4	Total Rs.	63,93,747	3	4

ಸ್ವದೇಶಾಭಿಮಾನಿ

ತಾರೀಕು 2—7—1943

ಆಫ್ರಿಕದಲ್ಲಿ ಭಾರತೀಯರಿಗೆ ಅನ್ಯಾಯ!

ದಕ್ಷಿಣ ಆಫ್ರಿಕದ ಜೋಹಾನ್ಸ್‌ಬರ್ಗ್‌ನಲ್ಲಿ, ಯೂರೋಪಿಯನ್ ವಸತಿಯಲ್ಲಿ ಅಂಗಡಿಯಿಟ್ಟರೆಂಬ ಮಾತ್ರಕ್ಕೆ ಮಿ. ಬಿರೋದ್ದೀನರೆಂಬ ಭಾರತೀಯರಿಗೆ ಶಿಕ್ಷೆ ವಿಧಿಸಲ್ಪಟ್ಟಿತು. ಈ ಶಿಕ್ಷೆಯ ತೀರ್ಮಾನ ಕೊಡುತ್ತಾ ನ್ಯಾಯಾಧೀಶರು ಇಂಥಾ ಅನೇಕ ಪ್ರಸಂಗಗಳು ಇನ್ನು ಮುಂದೆ ನ್ಯಾಯಸ್ಥಾನದೆದುರು ಬರಲಿದೆಯೆಂದೂ ತಿಳಿಸಿದ್ದಾರೆ. ಆಫ್ರಿಕದ ಇತಿಹಾಸದಲ್ಲಿ ಇದೇ ಮೊದಲನೆಯ ಸಲವಾಗಿ, ವರ್ಣಭೇದದ ಬಗ್ಗೆ ಮಾಡಿದ ಖಟ್ಲೆ ಇದಾಗಿದ್ದು ಇದು ಬಿಳಿಯರು ಭಾರತೀಯರಿಗೆ ಮಾಡಿದ ಒಂದು ಮಹಾ ಅನ್ಯಾಯವೆಂದು ಇತಿಹಾಸದಲ್ಲಿ ಚಿರಸ್ಮರಣೀಯವಾದ ಉಲ್ಲೇಖವಾಗಿ ಉಳಿಯುವುದು!

ಆಫ್ರಿಕದಲ್ಲಿ ಭಾರತೀಯರು ಅಧಿಕಾರವನ್ನೇನೂ ಅಪೇಕ್ಷಿಸುವುದಿಲ್ಲ. ಬದುಕಬೇಕೆಂಬುದು, ಮಾನವ ಮರ್ಯಾದೆಯಿಂದ ಬಾಳಬೇಕೆಂಬುದು ಮಾತ್ರ ಅವರ ಅಪೇಕ್ಷೆ. ಬಿಳಿ ಕರಿಯರಿಗೆ ಭೇದವಿರದೆ ಸಮಾನ ಹಕ್ಕು ದೊರಕಬೇಕೆಂಬುದು ಅವರ ಬೇಡಿಕೆ. ದಕ್ಷಿಣ ಆಫ್ರಿಕದ ಬಿಳಿಗಿಗೆ ಅವರೂ ತಮ್ಮ ಬಾಳುವೆಯನ್ನು ಸವೆಸಿದ್ದಾರೆ. ಆದ್ದರಿಂದಲೇ ಅಲ್ಲಿ ಗೌರವಕರ ಜೀವನ ಮಾಡಬೇಕೆಂದು ಬಯಸುತ್ತಾರೆ. ಆದರೆ ಅವರ ಮೇಲೆ ಆಗಾಗ ವರ್ಣದ್ವೇಷದ ಕಾನೂನುಗಳನ್ನು ಜಾರಿ ಮಾಡಿ, ಅಪಮಾನ ಮಾಡುತ್ತಿರುವುದು ಬಿಳಿಯರ ಹೊಲಸು ಬುದ್ಧಿ! ಮುನ್ಸಿಪಾಲಿಟಿಗಳಲ್ಲಿ, ಇತರ ಸಾರ್ವಜನಿಕ ಸಂಸ್ಥೆಗಳಲ್ಲಿ, ವಿಶ್ರಾಂತಿ ಭವನಗಳಲ್ಲಿ, ಹೋಟಿಲು, ಥಿಯೇಟರು ಮೊದಲಾದ ಕಡೆಗಳಲ್ಲಿಯೂ, ಈ ಬಿಳಿಯರ ವರ್ಣದ್ವೇಷದ ಹೊಲಸು ಬುದ್ಧಿ ಅಲ್ಲಿ ತಾಂಡವವಾಡುತ್ತಿರುವುದನ್ನು ನಾಗರಿಕ ಜಗತ್ತು ಸಹಿಸಲಾರದು; ಸಹಿಸಕೂಡದು!

ದಕ್ಷಿಣಾಫ್ರಿಕದಲ್ಲಿ ಈ ರೀತಿ ಬಿಳಿ ಜನರು ಭಾರತೀಯರ ಮೇಲೆ ವರ್ಣದ್ವೇಷದ ಕಾನೂನು ಮಾಡಿದ್ದರಿಂದ, ಭಾರತದ ಹೃದಯಕ್ಕೆ ಮತ್ತಷ್ಟು ಗೆರೆಯೆಳೆದಂತಾಗಿದೆ. ಅಕ್ಷರಾಷ್ಟ್ರಗಳು ಈ ಸಂದರ್ಭವನ್ನು ಉಪಯೋಗ ಮಾಡಿಕೊಳ್ಳದೆ ಇರಲಾರವು. ಪ್ರಜಾಪ್ರಭುತ್ವ, ಸ್ವಾತಂತ್ರ್ಯ ಸಮಾನತೆಗಳಿಗಾಗಿ ಹೋರಾಡುತ್ತೇವೆನ್ನುವ ಬ್ರಿಟಿಷರು ಇದನ್ನು ಆಲೋಚಿಸಬೇಕು; ಅಮೆರಿಕವೂ ಮಿತ್ರಸಂಗಾತಿಗಳೂ ಈ ಧೋರಣೆ ಕಡೆಗೆ ಗಮನ ಹರಿಸಬೇಕು. ಭಾರತೀಯ ಪ್ರತಿನಿಧಿಯೋರ್ವನೂ ಇಲ್ಲದ ದಕ್ಷಿಣಾಫ್ರಿಕದ ಪಾರ್ಲಿಮೆಂಟಿನಲ್ಲಿ ಈ ಭಾರತೀಯರಿಗೆ ಅಪಮಾನವಾಗುವ ಕಾನೂನು ಆಗಿದೆ; ಮತದಾನದ ಹಕ್ಕಿಲ್ಲದೆ ಈ ಕಾನೂನು ಮಂಜೂರಾಗಿದೆ. ಇಂಥ ಅನ್ಯಾಯ, ಇಂಥ ಹೊಲಸು ಬುದ್ಧಿ ಇತಿಹಾಸದಲ್ಲಿಯೇ ಬೇರೆ ಸಿಗಲಾರದು.

ದಕ್ಷಿಣ ಆಫ್ರಿಕದ ಹದಿನಾರನೇ ಭಾರತೀಯ ಕಾಂಗ್ರೆಸಿನವರು, ಈ ಬಗ್ಗೆ ತಮ್ಮ ವಿರೋಧ ಸೂಚಿಸಿದ್ದಾರೆ. ತಮ್ಮ ಬೆಂಬಲ ನಿಲ್ಲಲು ಭಾರತ ಸರಕಾರಕ್ಕೆ ವಿನಂತಿಸಿಕೊಂಡಿದ್ದಾರೆ. ಭಾರತ ಸರಕಾರವು ತನ್ನ ಕರ್ತವ್ಯ ಮಾಡಲು ಮರೆಯಬಾರದು. ವಿದೇಶಗಳಲ್ಲಿರುವ ಭಾರತದ ಬಂಧುಗಳಿಗಾಗುತ್ತಿರುವ ಅನ್ಯಾಯವನ್ನು ಸಹಿಸಬಾರದು! ಅದಕ್ಕಾಗಿ ತೀವ್ರ ಪ್ರತೀಕಾರ ಕೈಕೊಳ್ಳಬೇಕು.

ಆಹಾರ ಸಮಸ್ಯೆ

ಭಾರತದಲ್ಲಿ ಇಂದು ಆಹಾರ ಸಮಸ್ಯೆ ಉಂಟಾಗಿದೆ. ರಾಷ್ಟ್ರ ಮೂಲೆ ಮೂಲೆಗಳಿಂದ, ಪ್ರತಿಯೊಂದು ಪ್ರಾಂತ್ಯ ಜಿಲ್ಲೆಗಳಿಂದಲೂ ಹೊಟ್ಟೆಯ ಪಾಡಿನ ಕೂಗು ಕರುಣಾಜನಕವಾಗಿ ಕೇಳಿ ಬರುತ್ತಿದೆ. ಬಂಗಾಳವು ಬರಗಾಲ ಪೀಡಿತವಾಗಿದೆ. ಒರಿಸಾದ ಪಾಡು ಕೇಳುವುದೇ ಬೇಡ. ಮಲಬಾರಿನಲ್ಲಿ ಸೊಪ್ಪುಸೊದೆ ತಿನ್ನಲು ತೊಡಗಿದ್ದಾರೆ. ಕರ್ನಾಟಕದಲ್ಲಿ ಬಳ್ಳಾರಿ ಬಿಜಾಪುರ ಮೊದಲಾದ ಕಡೆಗಳಲ್ಲಿ ಆಹಾರ ಇಲ್ಲದೆ ಅನೇಕ ಮಂದಿ ಉಪವಾಸಬಿದ್ದು ದಿನದಿನ ಸಾಯುತ್ತಿದ್ದಾರೆ. ಮುಂಬಯಿಯಲ್ಲಿ ರೂಪಾಯಿಗೊಂದು ಸೇರು ಅಕ್ಕಿ. ಪತ್ರಿಕೆಗಳ ಪುಟಗಳನ್ನು ತಿರುವಿದರೆ ಒಂದೊಂದೇ ಜಿಲ್ಲೆಯ ಪರಿಸ್ಥಿತಿ ಬಹಳ ಹೃದಯದ್ರಾವಕವಿರುತ್ತದೆ. ನಮ್ಮ ದಕ್ಷಿಣ ಕನ್ನಡದಲ್ಲಿಯಾದರೂ, ಅಕ್ಕಿಗೆ ಬಹಳ ಕ್ರಯ ಏರಿದ್ದರಿಂದ ಬಡವರು, ಕೂಲಿಗಾರರು ಮಧ್ಯಮ ವರ್ಗದ ಜನರು ಹಲವರು ಉಪವಾಸ ಬೀಳಲೇ ಬೇಕಾಗಿದೆ!

ಈ ಪ್ರಶ್ನೆ ರಾಷ್ಟ್ರದ ಪ್ರಶ್ನೆ; ಅಂತೆಯೇ ಸರಕಾರದ ಹೊಣೆ ಹೆಚ್ಚು. ಯುದ್ಧ ಪ್ರಾರಂಭ ಮೊದಲ್ಗೊಂಡು, ವಿದೇಶಗಳಿಗೆ ಮಧ್ಯಪೂರ್ವಕ್ಕೆ ಹಾಗೂ ಇತರ ಪ್ರದೇಶಗಳಿಗೆ ಇಲ್ಲಿಂದ ತಡೆಯಿಲ್ಲದೆ ಆಹಾರ ಸಾಗಿಸಲ್ಪಟ್ಟದ್ದರಿಂದ ಆಹಾರ ಸಂಕಷ್ಟ ಉಂಟಾಗಲು ಕಾರಣವಾಗಿದೆಯೆಂದು ಬಲ್ಲವರು ಹೇಳುತ್ತಾರೆ. ಸರಕಾರದವರು ಈ ಆಹಾರ ಸಮಸ್ಯೆ ವಿಚಾರ ಆಲೋಚಿಸಲು ಬೇಗನೇ ಒಂದು ಪರಿಷತ್ತು ಕರೆಯುವರೆಂದು ವಾರ್ತೆ ಕೇಳುತ್ತೇವೆ. ಆದರೆ ಪರಿಷತ್ತು ಕರೆದು ಠರಾವು ಮಾಡುವ ಸಂಗತಿಯಿದಲ್ಲ; ಇದಕ್ಕೆ ಕೂಡಲೇ ನಿವೃತ್ತಿ ಆಗಬೇಕು. ಯುದ್ಧ ಪ್ರಾರಂಭದಲ್ಲಿ ಪರದೇಶಗಳ ಜನರನ್ನು ಬದುಕಿಸಲು ನಮ್ಮಲ್ಲಿಂದ ಬೇಕಾದಷ್ಟು ಆಹಾರ ಸಾಗಿಸಲ್ಪಟ್ಟಂತೆ, ಈಗ ನಮ್ಮಲ್ಲಿ ಆಹಾರ ಕಡಿಮೆಯಾಗಿರುವಾಗ, ಆಸ್ಟ್ರೇಲಿಯದಿಂದ ಗೋಧಿಯನ್ನೂ, ದಕ್ಷಿಣ ಅಮೆರಿಕದ ಸಂಸ್ಥಾನಗಳಿಂದ ಅಕ್ಕಿಯನ್ನೂ ಕೂಡಲೇ ತರಿಸಬೇಕೆಂದು ಹಿಂದಿನ ಮಂತ್ರಿ ಶ್ರೀ. ಎನ್. ಆರ್. ಸರ್ಕಾರ್‌ರವರು ಸೂಚಿಸಿದ್ದಾರೆ. ಸರಕಾರದವರು ಈ ದಾರಿಯಲ್ಲಿ ಕ್ಷಿಪ್ರ ಕಾರ್ಯಕ್ರಮ ಕೈಕೊಳ್ಳುವುದುಚಿತ. ಭಾರತದ ಆಹಾರ ಸಮಸ್ಯೆ ವಿಷಮವಾಗುತ್ತಾ ಬಂದಿರುವಾಗ ಕೇವಲ ಪರಿಷತ್ತನ್ನು ಕರೆದು ಠರಾವುಮಾಡಿ ಸುಮ್ಮಗಿದ್ದರೆ ಅಥವಾ ಗಜಗತಿಯಿಂದ ಕೆಲಸಮಾಡಿದರೆ ಪ್ರಯೋಜನವಿಲ್ಲ.

ಸ್ವದೇಶ ಸಮಾಚಾರ

ವಿಶ್ವೇಶ್ವರಯ್ಯನವರ ಕೈಗಾರಿಕೆ ಯೋಜನೆ

ಶ್ರೀ ವಿಶ್ವೇಶ್ವರಯ್ಯನವರು ಭಾರತದ ಕೈಗಾರಿಕೆ ಬೆಳವಣಿಗೆಗಾಗಿ ಪಂಚ ವಾರ್ಷಿಕ ಯೋಜನೆಯೊಂದನ್ನು ಅಳವಡಿಸಿದ್ದಾರೆ. ಮೂಲ ಕೈಗಾರಿಕೆಗಳ ಬೆಳವಣಿಗೆ ಹಾಗೂ ಸಾರ್ವಜನಿಕ ಉಪಯೋಗಕ್ಕೆ ಹೆಚ್ಚು ಪ್ರಮಾಣದಲ್ಲಿ ಸಾಮಗ್ರಿ ದೊರಕುವ ರೀತಿ ಕೈಗಾರಿಕೆಗಳು ಒಂದನ್ನೊಂದು ಹೊಂದಿಕೊಂಡು ಹೋಗುವ ಯೋಜನೆ ಅದು. ಇದರ ಬಗ್ಗೆ ೧ ಸಾವಿರ ಕೋಟಿ ರೂಪಾಯಿ ಮೂಲಧನ ಬೇಕು. ಯುದ್ಧಾನಂತರ ಐದು ವರ್ಷಗಳಲ್ಲಿ ಅದು ಪೂರ್ಣಕ್ಕೆ ಬಂದು ಯಶಸ್ವಿಯಾಗುವಂತೆ ಮಾಡಬೇಕು. ಭಾರತ ಕೈಗಾರಿಕೆ ಯಶಸ್ವಿಯಾಗಬೇಕಾದರೆ ಕೈಗಾರಿಕೆಯಲ್ಲಿ ನುರಿತ ಓರ್ವನನ್ನು ಮಂತ್ರಿಯನ್ನಾಗಿ ನೇಮಿಸಬೇಕು. ಭಾರತದ ಸರಕಾರವು ಪ್ರತ್ಯೇಕ ಖಾತೆಯನ್ನು ಮಾಡಿ ಅಂಥವನ ಕೈಯಲ್ಲಿ ಕೊಡಬೇಕೆಂದು ಮೊದಲಾಗಿ ಅವರು ತಮ್ಮ ಯೋಜನೆ ವಿಷಯ ವಿವರಿಸಿದ್ದಾರೆ.

ವೇವಲ್ ಕೊನೆಯ ವೈಸರಾಯರು

ಎಂಬುದಾಗಿ ಲಂಡನಿನ 'ಇಕನಮಿಸ್ಟ್' ಪತ್ರಿಕೆ ಉಲ್ಲೇಖಿಸುತ್ತದೆ. ಮಾತ್ರವಲ್ಲದೆ ಇಂಥಾ ಸಂದರ್ಭದಲ್ಲಿ ವೇವಲರು ಬ್ರಿಟಿಷರ ಗೌರವಕ್ಕೆ ಹಾನಿಯಾಗದಂತೆ ಬುದ್ಧಿವಂತಿಕೆಯಿಂದ ವರ್ತಿಸಿ ಭಾರತೀಯರ ಸಹಕಾರ ಪಡೆದುಕೊಳ್ಳಬೇಕೆಂದೂ ಸೂಚಿಸುತ್ತದೆ. ಕಾಂಗ್ರೆಸು ಭಾರತದ ರಾಷ್ಟ್ರೀಯ ಸರಕಾರದ ಜವಾಬ್ದಾರಿ ವಹಿಸುವಂತೆ ವೇವಲರು ಪ್ರಯತ್ನಮಾಡಬೇಕೆಂದು ಅದು ತಿಳಿಸಿದೆ.

ದಕ್ಷಿಣಾಫ್ರಿಕದ ಗಾಂಧಿಜಿ ಶಿಷ್ಯೆ

ಯಪದ ಪೆರಿನಾಯಗಂ ಪಿಳ್ಳೆ ಎಂಬ ೧೦೦ ವರ್ಷ ಪ್ರಾಯದ ಭಾರತೀಯ ಮಹಿಳೆ ಜೋಹಾನ್ಸ್‌ಬರ್ಗ್‌ನಲ್ಲಿ ಮರಣಹೊಂದಿದ ವಾರ್ತೆ ಯಿದೆ. ಗಾಂಧಿಜಿ ಹಿಂದೆ ಅಲ್ಲಿ ಸತ್ಯಾಗ್ರಹ ಹೂಡಿದಾಗ್ಯ ಈಕೆ ಅನೇಕ ಸಲ ಸೆರೆಮನೆವಾಸ ಅನುಭವಿಸಿದ್ದಾರೆ. ಟ್ರಾನ್ಸ್‌ವಾಲ್ ಭಾರತೀಯ ಮಹಿಳಾ ಸಂಘದ ಅಧ್ಯಕ್ಷೆಯಾಗಿದ್ದರು.

'ಹಿಂದುಸ್ತಾನ್ ಟೈಮ್ಸ್' ಪತ್ರಿಕೆಯ ಜಯ!

ದಂಡ ಹಿಂದೆ ಕೊಡಲಾಯಿತು!

ಕೋರ್ಟು ಅಪಮಾನದ ಖಟ್ಲೆಯಲ್ಲಿ ಅಲ್ಲಾಬಾದ್ ಹೈ ಕೋರ್ಟು ತೀರ್ಮಾನದ ವಿರುದ್ಧ ಪ್ರಿವಿ ಕೌನ್ಸಿಲಿಗೆ 'ಹಿಂದುಸ್ಥಾನ್ ಟೈಮ್ಸ್' ಪತ್ರಿಕೆ ಮಾಡಿದ ಅಪೀಲನ್ನು ಪ್ರಿವಿ ಕೌನ್ಸಿಲಿನವರು ಒಪ್ಪಿಕೊಂಡರೆಂಧು ಲಂಡನಿನಿಂದ ಸುದ್ದಿ ಬಂದಿದೆ. ಶಿಕ್ಷೆಯನ್ನು ರದ್ದು ಮಾಡಿ, ಹೈಕೋರ್ಟಿನಲ್ಲಿ ಕಟ್ಟಿದ ದಂಡ ಹಾಗೂ ಖರ್ಚಿನ ಹಣವನ್ನು ಹಿಂದೆ ಕೊಡುವಂತೆ ಹುಕುಮಾಗಿದೆ. ಪ್ರಿವಿ ಕೌನ್ಸಿಲಿನ ಅಪೀಲು ಖರ್ಚು ಹಾಗೂ ಅಲ್ಲಾಬಾದ್ ಹೈಕೋರ್ಟ ವಿರುದ್ಧ ತೀರ್ಮಾನ ಮಾಡಲು ಕಾರಣ ಮುಂತಾದುವುಗಳ ಬಗ್ಗೆ ಹುಕುಮನ್ನು ಮುಂದೊಂದು ತಾರೀಕಿನ ವರೆಗೆ ಕಾದಿಡಲಾಗಿದೆ.

ಇಂಗ್ಲೆಂಡಿನಲ್ಲಿರುವ ಭಾರತದ ಹಣ ಪೆನ್ಶನಿಗಾಗಿ ಉಪಯೋಗ?

ಇಂಗ್ಲೆಂಡಿನಲ್ಲಿ ಪೌಂಡು ರೂಪದಲ್ಲಿರುವ ಭಾರತದ ಹಣವನ್ನು ಬ್ರಿಟಿಷರ ಪೆನ್‌ಶನ್ ಕೊಡಲು ಉಪಯೋಗಿಸುವಂತೆ ಸರಕಾರವು ನಿರ್ಧರಿಸಿ ೩,೪೦೦ ಲಕ್ಷ ಪೌಂಡು ತೆಗೆದಿಟ್ಟ ಸುದ್ದಿಯಿದೆ. ಈ ವಿಷಯ ಭಾರತದ ವಾಣಿಜ್ಯ ಸಂಘದವರು ತಮ್ಮ ನಿಷೇಧ ಸೂಚಿಸಿ, ಈ ಹಣವನ್ನು ಪೆನ್‌ಶನ್‌ಗಳಿಗೆ ಉಪಯೋಗಿಸಬಾರದೆಂದು ತಾವೆಷ್ಟು ಹೇಳಿದರೂ ಸರಕಾರ ಗಮನಿಸದಿರುವ ಕುರಿತು ಆಶ್ಚರ್ಯ ವ್ಯಕ್ತಪಡಿಸಿದ್ದಲ್ಲದೆ, ದೇಶಕ್ಕೆ ಕಲ್ಯಾಣವಾಗುವ ಹಾಗೆ, ಈ ಹಣವನ್ನು ವಿದೇಶೀ, ಸರಕಾರಿ ಮತ್ತು ಖಾಸಗಿ ಉದ್ಯೋಗಗಳಲ್ಲಿ ಉಪಯೋಗಿಸಿದರೆ ದೇಶಕ್ಕೆ ಉಪಯೋಗವುಂಟೆಂದೂ ತಿಳಿಸಿದ್ದಾರೆ. ಆದರೆ ಯಾವುದೇ ಕೆಲಸವನ್ನಾದರೂ ಮಾಡುವಾಗ ಭಾರತದ ಪ್ರತಿನಿಧಿಗಳೊಡನೆ ಕೇಳಬೇಕೆಂದು ಬ್ರಿಟಿಷ್ ಸರಕಾರ ಮೊದಲಿಂದಲೇ ಕ್ರಮ ಇಟ್ಟುಕೊಂಡಂತೆ ಕಾಣುವುದಿಲ್ಲ.

ಆಹಾರ ಸಮಸ್ಯೆ ಬಿಡಿಸಲು ಸರಕಾರದ ಯೋಜನೆ?

ಭಾರತದ ಆಹಾರ ಪರಿಸ್ಥಿತಿಯಲ್ಲಿ ಸರಕಾರದವರು ಕೂಲಂಕಷ ಆಲೋಚನೆ ಮಾಡುತ್ತಿದ್ದಾರೆಂದೂ, ಆ ಆಲೋಚನೆಯಂತೆ ತಮಗಾದ ಅನುಭವದ ಮೇಲೆ ಏನಾದರೂ ಹೊಸ ಧೋರಣೆ ಕೈಕೊಳ್ಳುವರೆಂದೂ ತಿಳಿದು ಬರುತ್ತದೆ. ಈ ಬಗ್ಗೆ ವಿಚಾರಮಾಡಲು ಬೇಗನೇ ಒಂದು ಪರಿಷತ್ತು ಕೂಡುವುದಂತೆ! ಎಲ್ಲಾ ಪ್ರಾಂತಗಳ ಮಂತ್ರಿಗಳೂ, ಸಂಸ್ಥಾನಗಳ ಪ್ರತಿನಿಧಿಗಳೂ ಈ ಪರಿಷತ್ತಿಗೆ ಬರುವರು. ಮುಂದೆ ಯಾವ ಯೋಜನೆ ಮಾಡಬೇಕೆಂದು ನಿಶ್ಚಯಿಸಲು ಸರಕಾರದವರು ಒಂದು ಕಮಿಟಿಯನ್ನು ನೇಮಿಸಿದ್ದಾರೆ. ಕಮಿಟಿಯ ವರದಿಯು ಜುಲೈ ತಿಂಗಳಲ್ಲಿ ಪ್ರಕಟವಾಗುವುದಾಗಿ ತಿಳಿದು ಬರುತ್ತದೆ.

> **ಜಯ ಪ್ರಕಾಶರು ಪುನಃ ತಪ್ಪಿಸಿಕೊಂಡರು!**
>
> ಹಜಾರಿಬಾಗ್ ಸೆಂಟ್ರಲ್ ಜೈಲಿನಿಂದ ತಪ್ಪಿಸಿಕೊಂಡು ಹೋದ ಕಾಂಗ್ರೆಸ್ ಸಮತಾವಾದೀ ಪಕ್ಷದ ಮುಖಂಡ ಶ್ರೀ ಜಯ ಪ್ರಕಾಶ ನಾರಾಯಣರು, ನೇಪಾಳದಲ್ಲಿ ಒಂದು ಕಡೆ ಸರಕಾರದವರ ಕೈಗೆ ಸಿಗುವುದರಲ್ಲಿದ್ದು ಅಲ್ಲಿಂದಲೂ ಬಹಳ ಚಾತುರ್ಯದಿಂದ ತಪ್ಪಿಸಿಕೊಂಡು ಹೋದರೆಂದು ನಂಬಲರ್ಹವಾದ ಕಡೆಯಿಂದ ಸುದ್ದಿ ಬಂದಿದೆಯೆಂಬುದಾಗಿ 'ಇಂಡಿಯನ್ ನೇಶನ್' ಪತ್ರಿಕೆ ಬರೆಯುತ್ತಿದೆ.

ಕವಿ ವೇವಲ್ಲರು!

ಭಾರತದ ವೈಸರಾಯರಾಗಿ ನೇಮಿತರಾದ ವೇವಲರು ಲಂಡನಿನಲ್ಲಿ ಪಾರ್ಲಿಮೆಂಟ್ ಸದಸ್ಯ ಹೆನ್ರಿ ಛಾನ್ನಾರ ಮನೆಯಲ್ಲಿ ಉಳಕೊಂಡಿದ್ದು ವಿಶ್ರಾಂತಿ ಸಮಯದಲ್ಲಿ ಕವಿತೆ ಬರೆಯುತ್ತಿದ್ದರಂತೆ! ವೇವಲ್ ಕೇವಲ ಮಿಲಿಟರಿ ತಜ್ಞನಾದ ಒರಟು ಮನುಷ್ಯರಲ್ಲ, ಸೂಕ್ಷ್ಮ ಹೃದಯದ ಭಾವುಕ ಕವಿಯೂ ಆಗಿದ್ದಾರೆಂದು ಈ ಸುದ್ದಿ ಓದಿ ನೀವು ಅರ್ಥ ಮಾಡಿಕೊಳ್ಳಬೇಕು!

NOTICE

In the Court of the District Munsif of Mangalore.

ORIGINAL SUIT No. 386 of 1941.
R. E. P. No. 96 of 1943.

Piedade Fernandes Bai— Petitioner (*Plaintiff.*)

against

1. Chinnaya Moolya nephew of Thappa Moolya, Kavoor, Mangalore. 2. Seraphine Pauline Lobo wife of Lawrence Martis, Balebail Mangalore.— Respondents (*Defendants.*)

To the Respondents.

Whereas in the above named suit Petitioner the decree-holder has applied for the sale of the immoveable property fully described in due sale papers. You are hereby informed that the 6th day of July 1943 has been fixed for settling the terms of the proclamation of sale.

(By order of Court.)

Mangalore, 30-6-1943. (Sd.) P. D. Souza, B. A. B. L., (Sd.) L. C. Pais, B. A. B. L., Vakils for Petitioner.

ಜಿಲ್ಲಾ ಸಮಾಚಾರಗಳು

ಮಂಗಳೂರು

ಕಲೆಕ್ಟರರ ಪ್ರಕಟಣೆ

ಮೂರು ಸೀಸ (ಸ್ವಂತ ಉಪಯೋಗಕ್ಕಾಗಿ) ಗಳಿಗಿಂತ ಹೆಚ್ಚು ಬೆಲ್ಲವನ್ನು ಪ್ರಾಂತದ ಹೊರಗೆ ಕಳುಹಿಸಕೂಡದೆಂದು ಸರಕಾರವು 1942 ಸಪ್ಟೆಂಬರ ೩ರಿಂದಲೇ ಪ್ರಕಟಿಸಿದೆ. ಆ ಪ್ರಕಾರ ನಮ್ಮ ಜಿಲ್ಲೆಯಿಂದ ಹೊರಗಿನ ಸ್ಥಳಗಳಿಗೆ ಹೋಗದಂತೆ ನೋಡಲು ಗಡಿನಾಡುಗಳಲ್ಲಿ ಜಿಲ್ಲಾ ಕಲೆಕ್ಟರರು, ಈ ಕೆಳಗಿನ ಪೋಲೀಸ್ ಆಫೀಸರರಿಗೆ, ಎಕ್ಸೈಸ್ ಆಫೀಸರರಿಗೆ, ಗ್ರಾಮೋದ್ಯೋಗಸ್ಥರಿಗೆ ಅಧಿಕಾರ ಕೊಟ್ಟಿರುತ್ತಾರೆ. ಅವರು ಆಯಾಯ ಸ್ಥಳಗಳಲ್ಲಿ ಸಾಮಾನು ಬಂಡಿ ಮೊದಲಾದವುಗಳನ್ನು ಶೋಧಿಸಿ ನಿಯಮ ಮೀರದಂತೆ ನೋಡುವರು. ೧. ಕರಾವಳಿ ಮಾರ್ಗ ನಂ. 33ರಲ್ಲು ಉತ್ತರ ಮಂಗಳೂರು ಶೀರೂರು ಮಾರ್ಗದಲ್ಲಿ ಬೈಂದೂರು ಎಕ್ಸೈಸ್ ರೇಂಜ್, ಬೈಂದೂರು ಎಕ್ಸೈಸ್ ಸ್ಟೇಶನ್ ಮತ್ತು ಶೀರೂರು ಗ್ರಾಮ. ೨. ನಾಗೋಡಿ ಗಟ್ಟ ಮಾರ್ಗದಲ್ಲಿ ಬೈಂದೂರು ಎಕ್ಸೈಸ್ ಸ್ಟೇಶನ್ ಅದೇ ಪೋಲೀಸ್ ಸ್ಟೇಶನ್, ಕೊಲ್ಲೂರು, ನಾಗೋಡಿ, ಕೋಟೇಶ್ವರ ಗ್ರಾಮ. ೩ ನಾಗೋಡಿ ಬೆನ್ನೆಟ್ಟಿ ಶಾಖೆಗಳಲ್ಲಿ ಬೈಂದೂರು ಎಕ್ಸೈಸ್ ಸ್ಟೇಶನ್, ಅದೇ ಪೋಲೀಸ್ ಸ್ಟೇಶನ್, ಕೋಟೇಶ್ವರ ಹೆಬ್ಬಿಗೆ ಗ್ರಾಮಗಳು. ೪ ಕಂಡ್ಲೂರು ಹೊಸಂಗಡಿ ಮಾರ್ಗಗಳಲ್ಲಿ ಗಂಗೋಳ್ಳಿ ಎಕ್ಸೈಸ್ ಸ್ಟೇಶನ್, ಕುಂದಾಪುರ ಪೋಲೀಸ್ ಸ್ಟೇಶನ್, ಯಡಮೊಗೆ ಹೊಸಂಗಡಿ ಗ್ರಾಮಗಳು. ೫ ಕಾರ್ಕಳ ಆಗುಂಬೆ ಮಾರ್ಗದಲ್ಲಿ ಹೆಬ್ರಿ ಎಕ್ಸೈಸ್ ಸ್ಟೇಶನ್, ಕಾರ್ಕಳ ಪೋಲೀಸ್ ಸ್ಟೇಶನ್, ನಾಡ್ಪಾಲ್ ಗ್ರಾಮ ೬. ಮಾಣಿ ಮಂಜರಬಾದ್ ಮಾರ್ಗದಲ್ಲಿ ಉಪ್ಪಿನಂಗಡಿ ಎಕ್ಸೈಸ್ ಸ್ಟೇಶನ್, ಗೋಳಿತೊಟ್ಟು ಪೋಲೀಸ್ ಸ್ಟೇಶನ್, ಶಿರಾಡಿ ಗ್ರಾಮ ೭. ಮಂಗಳೂರು ಚಾರ್ಮಾಡಿ ಮಾರ್ಗದಲ್ಲಿ ಬೆಳ್ತಂಗಡಿ ಎಕ್ಸೈಸ್ ಸ್ಟೇಶನ್, ಬೆಳ್ತಂಗಡಿ ಪೋಲೀಸ್ ಸ್ಟೇಶನ್, ಚಾರ್ಮಾಡಿ ಗ್ರಾಮ ೮ ಬಿಸ್ಲಿ ಗಟ್ಟ ಮಾರ್ಗದಲ್ಲಿ ಸುಳ್ಯ ಎಕ್ಸೈಸ್ ಸ್ಟೇಶನ್, ಕಡಬ ಪೋಲೀಸ್ ಸ್ಟೇಶನ್, ಬಿಳಿನೆಲೆ ಗ್ರಾಮ ೯ ಮಂಗಳೂರು ಮಡಿಕೇರಿ ಮಾರ್ಗದಲ್ಲಿ ಸುಳ್ಯ ಎಕ್ಸೈಸ್ ಸ್ಟೇಶನ್ ಅದೇ ಪೋಲೀಸ್ ಸ್ಟೇಶನ್ ಸಂಪಾಜೆ ಗ್ರಾಮ

ಅಕ್ಕಿಯ ಸಂಕಷ್ಟ

ದ ವಿಚಾರವಾಗಿ ಮಿ ಶೈತಾನ್ ಲೋಬೋ ಮದ್ರಾಸ್ ಗವರ್ನರರಿಗೂ ಇತರ ಅಧಿಕಾರಿಗಳಿಗೂ ಒಂದು ವಿನಂತಿ ಕಳುಹಿಸಿ ಇವರು ಅದರಲ್ಲಿ ನಿಯಂತ್ರಣದ ಆಯುಕ್ತಸ್ಥಿತಿ, ಅಕ್ಕಿ ಬೆಲೆ ಏರಿದ ಪರಿಸ್ಥಿತಿ, ಸಾಹುಕಾರರ ಮತ್ತು ವರ್ಗದಾರರ ವಿಶ್ವಾಸವನ್ನು ಸರಕಾರ ಕಳಕೊಂಡಿರುವ ವೊದಲಾದ ವಿಚಾರಗಳು ತಿಳಿಸಲಾಗಿವೆ ಮಳೆಗಾಲ ಬಂದಿದ್ದು ಅಕ್ಕಿಯ ಸಂಕಷ್ಟ ಹೆಚ್ಚುತ್ತಿರುವುದರಿಂದ, ಜಿಲ್ಲೆಯ ಬಡಜನರು ಉಪವಾಸ ಬೀಳದಂತೆ ಮಾಡಬೇಕೆಂದು ಅದರಲ್ಲಿ ವಿನಂತಿಸಿದ್ದಾರೆ.

ನೇಮಕ

ಜಿಲ್ಲಾ ಸೆಶನ್ಸ್ ಕೋರ್ಟಿನ ಶಿರಸ್ತೇದಾರ ಶ್ರೀ ಕೆ ರಾಮಚಂದ್ರ ರಾಯರು ತಮ್ಮ ಉದ್ಯೋಗದಿಂದ ನಿವೃತ್ತರಾಗಿ ತಾ ೨೨ರಿಂದ ೧ ತಿಂಗಳ ೧೯ ದಿನ ರಜೆ ಪಡೆದಿರುವುದರಿಂದ ಅವರ ಸ್ಥಾನಕ್ಕೆ ಮಿ. ಪಿ ಎಫ್. ರೇಗೋ ಬಿ. ಎ ಎಲ್ಎಲ್. ಬಿಯವರು, (ಸಬ್ ಕೋರ್ಟ್ ಶಿರಸ್ತೇದಾರ) ನೇಮಕವಾಗಿದ್ದಾರೆ

ಸತ್ಕಾರ

ಜನಾಬ್ ಅಬ್ದುಲ್ ರಹೀಂ ಅಹಮ್ಮದ್ ಬಿ. ಎ ಬಿ. ಎಲ್ ಇವರು ಮುನ್ಸಿಫ್ ಹುದ್ದೆಗೆ ಚುನಾಯಿತರಾಗಿದ್ದಾರೆ. ಆ ಬಗ್ಗೆ ಮಂಗಳೂರು ಬಾರ್ ಎಸೋಸಿಯೇಶನಿನಲ್ಲಿ ಒಂದು ಸತ್ಕಾರ ಕೂಟವಿತ್ತು.

ಒಂದು ವಿನಂತಿ

ಮಂಗಳೂರು ಕಮ್ಯೂನಿಸ್ಟ್ ಪಕ್ಷ, ಬೀಡಿ ಕೆಲಸಗಾರರ ಸಂಘ, ಪ್ರೆಸ್ ಕೆಲಸಗಾರರ ಸಂಘ, ನೇಕಾರರ ಸಂಘ ಮತ್ತು ವಿದ್ಯಾರ್ಥಿ ಸಂಘದವರು ಒಂದು ಸಂಯುಕ್ತ ಪ್ರಕಟಣೆ ಹೊರಡಿಸಿ ಈಗ ಜಾರಿಯಲ್ಲಿರುವ ಸಭೆ ಮೆರವಣಿಗೆ ಕೂಡದೆಂಬ ಕಲೆಕ್ಟರರ ಆಜ್ಞೆ ಹಿಂತೆಗೆಯಬೇಕೆಂದೂ, ಜನರ ಸಂಕಷ್ಟ ನಿವಾರಣೆಗೆ ಕಾಂಗ್ರೆಸ್ ಪ್ರೇಮಿಗಳು ಮುಂದೆ ಬರಬೇಕೆಂದೂ, ಲೀಗ್ ಬಂಧುಗಳೂ ಪರಿಶ್ರಮಿಸಬೇಕೆಂದೂ ಕೆಲಮಂದಿ ಲಂಭಕಾರರ ದುಷ್ಕಾರ್ಯದ ಫಲದಿಂದ ಆಗುತ್ತಿರುವ ಹಾನಿಯನ್ನು ಸಾಹುಕಾರರೂ ವರ್ಗದಾರರೂ ಆಲೋಚಿಸಬೇಕೆಂದೂ ವಿನಂತಿಸಿಕೊಂಡಿರುವರು

ಆಹಾರ ಸಾಮಗ್ರಿ ವಿಷಯ

ಸಿಗಿ ತಾ ೨೭ ರಂದು ಶ್ರೀ. ವೆಂಕಟರಮಣ ದೇವಾಲಯದಲ್ಲಿ ಮಹಾ ಸಭೆಯೊಂದು ಶ್ರೀ ಸುಕೃತೀಂದ್ರ ಶ್ರೀ. ಪಾದಂಗಳವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ. ಮಣೇಲ ಅಣ್ಣಪ್ಪ ನಾಯ್ಕರು ಜಿಲ್ಲೆಯ ಆಹಾರದ ದುಸ್ಥಿತಿ ವಿವರಿಸಿದರು ಅನಂತರ ಡಾ। ಕೇಶವ ಪೈ, ಎಂ ಸುಬ್ಬರಾವ್ ಮೊದಲಾದವರ ಭಾಷಣವಾಯಿತು ಗೌಡ ಸಾರಸ್ವತ ಸಮಾಜದವರಿಗೆ ಆಹಾರ ಸಾಮಗ್ರಿ ಒದಗಿಸಿ ಕೊಡುವ ವಿಷಯವಾಗಿ ರೂ ೬೫,೦೦೦ ಆಗಲೇ ಸಂಗ್ರಹವಾಯಿತು.

ಟ್ರಸ್ಟಿಗಳ ಸಭೆ

ಶ್ರೀ ವೆಂಕಟ್ರಮಣ ದೇವಸ್ಥಾನದ ಟ್ರಸ್ಟಿಗಳ ಸಭೆಯೊಂದು ತಾ. ೨೮ ರಂದು ಜರಗಿತು. ಶ್ರೀ. ಸುಕೃತೀಂದ್ರ ಶ್ರೀ ಪಾದಂಗಳವರು ಹಾಜರಿದ್ದರು. ದೇವಾಲಯಗಳ ಅಸ್ತಿತ್ವದ ಹಾಗೂ ಅವುಗಳ ಕಾರ್ಯಾಚರಣೆ ಹೊಣೆಗಾರಿಕೆ ಕಾಯಲು ಬೇಕಾಗಿ ಟ್ರಸ್ಟಿಗಳ ಸಂಘವೊಂದು ಇರಬೇಕಾಗಿ ನಿರ್ಧಾರವಾಯಿತು

ಸಿನೇಮಾ ವಿಮರ್ಶಕರ ಸಭೆ

ಯೊಂದು ತಾ. ೨೭ ರಂದು ಶ್ರೀ ಎಸ್ ಆರ್. ಕುಳುಕುಂದರ ಅಧ್ಯಕ್ಷತೆಯಲ್ಲಿ ಜರಗಿ, ನಗರದಲ್ಲಿ ಪ್ರದರ್ಶಿಸಲ್ಪಡುವ ಚಿತ್ರಗಳ ವಿಮರ್ಶೆಯಾಯಿತು 'ಫಿರ್ ಮಿಲೇಂಗೇ'ದಲ್ಲಿ ಯಶಸ್ವಿ ಅಭಿನಯಿಸಿದ ಶ್ರೀಮತಿ ಮೀನಾರನ್ನು ಅಭಿನಂದಿಸಿ ಪತ್ರ ಕಳುಹಿಸಬೇಕೆಂದಾಯಿತು ಹಲವು ಚಿತ್ರಗಳಲ್ಲಿ ಅಭಿನಯಿಸಿದ ಕನ್ನಡಿಗ ನಟ ಶ್ರೀ ಕೆ. ಎಸ್ ಪ್ರಹ್ಲಾದರ ನಿಧನಕ್ಕಾಗಿ ಸಭೆ ಸಂತಾಪ ಸೂಚಿಸಿತು.

ಜಿಲ್ಲಾ ಬೋರ್ಡ್

ಸಾಮಾನ್ಯ ಸಭೆಯೊಂದು ತಾ ೩ರಂದು ಬೆಳಿಗ್ಗೆ ೧೧-೩೦ಕ್ಕೆ ಅದರ ಕಾರ್ಯಾಲಯದಲ್ಲಿ ಜರಗುವುದು. ಬೋರ್ಡ್ ಆಫೀಸ್ ಸಿಬ್ಬಂದಿಗೆ ಹಾಗೂ ಬೋರ್ಡಿನ ಎಲಿಮೆಂಟರಿ ಶಾಲಾ ಉಪಾಧ್ಯಾಯರಿಗೆ ತುಟ್ಟಿಭತ್ತೆ ಕೊಡಲು ಅನುಕೂಲಿಸುವರೆ ಸರಕಾರವು ಸಾಲ ಮಂಜೂರು ಮಾಡುವಂತೆ ಕೇಳಿಕೊಳ್ಳುವ ಇವೇ ಮೊದಲಾದ ೩೦ ವಿಷಯಗಳು ಚರ್ಚಿಸಲ್ಪಡುವವು.

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಇವರ ಹೊಸ 4½%ನ ಪ್ರಿಫರೆನ್ಸ ಶೇರ ಮೂಲಧನಕ್ಕೆ ಬೇಕಾದದಕ್ಕಿಂತಲೂ ಹೆಚ್ಚಾಗಿ ಅರ್ಜಿಗಳು ಬಂದು ೪ ಲಕ್ಷ ರೂಪಾಯಿಯಷ್ಟನ್ನು ಸ್ವೀಕರಿಸಲಾಗಿತ್ತು ಅಷ್ಟನ್ನು ಎಲ್ಲೋಟ ಮಾಡಲು ಸರಕಾರದ ಒಪ್ಪಿಗೆಯೂ ಈಗ ದೊರೆಕಿರುತ್ತದಾಗಿ ಸದ್ರಿ ಬೇಂಕಿನವರು ತಿಳಿಸುತ್ತಾರೆ ಮತ್ತು ಸದ್ರಿ ಪಾಲು ಬಂಡವಾಳವನ್ನು ಸದ್ಯದಲ್ಲಿಯೇ ಎಲ್ಲೋಟ ಮಾಡುವರಾಗಿ ತಿಳಿದುಬರುತ್ತದೆ

ಇಂಡಿಯಾ ಮಿಲಿಟರಿ ಹೋಟೆಲ್

ಈ ಹೆಸರಿನ ಹೊಸ ಉಪಹಾರಗೃಹವೊಂದು ಬಲ್ಮಠ ರಸ್ತೆಯ ಸಿಟಿಬಸ್ ಗೇರೇಜಿನ ಬಳಿ ತೆರೆಯಲ್ಪಡುವುದು ಉತ್ತಮ ರೀತಿಯ ಕಾಪಿ ಊಟಗಳು ಸಮಾರಿಗೂ ಸಾಧ್ಯವಾಗುವ ದರದಲ್ಲಿ ದೊರಕುತ್ತವೆ ಉಡುಪಿಯ ಶ್ರೀ ಎಸ್ ಎಸ್ ರಾಯರು ಇದರ ಮಾಲಕರು. ತಾ ೪ಕ್ಕೆ ಇದರ ಪ್ರಾರಂಭೋತ್ಸವ ಜರಗುವುದು

ಪುರಸ್ಕಾರ

ಮಾರ್ನಮಿ ಕಟ್ಟೆ ಸಿಕೇರಾ ಮುದ್ರಣದ ಕಾರ್ಖಾನೆಯ ಕೆಲಸಗಾರರು ಪುರಸ್ಕಾರದಲ್ಲಿ ಒಂದಿಂಗಳದ ವರ್ತನಬೋನಸ ತಾ ೩ಕ್ಕೆ ಇಟ್ಟಿದೆಯಾಗಿ ತಿಳಿದುಬರುತ್ತದೆ.

ರಾಮಾಯಣ ವಾಚನ

ತಾ. 30ರಿಂದ ಪ್ರತಿದಿನ ಮಧ್ಯಾಹ್ನ ಘಂಟೆ 4ರಿಂದ 6½ರ ವರೆಗೆ, ಸ್ಥಳೀಯ ಬ್ರಾಹ್ಮಣರಕೇರಿ, ಶ್ರೀ ಗೋಪಾಲಕೃಷ್ಣ ದೇವಾಲಯದಲ್ಲಿ ಸಂಸ್ಕೃತ ಅಧ್ಯಾತ್ಮ ರಾಮಾಯಣವನ್ನು ಶ್ರೀ ಕೆ ಶಂಕರನಾರಾಯಣ ಶಾಸ್ತ್ರಿಗಳು ತುಳುಭಾಷೆಯಲ್ಲಿ ವ್ಯಾಖ್ಯಾನ ಮಾಡುವರು. ಸುಸ್ವಾಗತವು.

ಜಿಲ್ಲಾ ದ್ರಾವಿಡ ಬ್ರಾಹ್ಮಣ ಸಂಘ

, ಕೈ ಡಾ ಪಿ. ಆನಂದರಾಯರು ವಿದ್ಯಾರ್ಥಿ ವೇತನ ನಿಧಿಯಾಗಿ ರೂ. ೧,೫೦೦ ಕೊಟ್ಟಿರುವರು.

ಉಚ್ಚಿಲ

ಬಡವರಿಗೆ ಅಕ್ಕಿ

ಕಡಿಮೆ ಕ್ರಯದಲ್ಲಿ ಇಲ್ಲಿನ ಜಮೀನ್ದಾರರೊಬ್ಬರು ಕಳೆದ ದಶಂಬರದಿಂದ ಕೊಡುತ್ತಾ ಇದ್ದು, ಈಗ ಅವರ ಅಕ್ಕಿಯನ್ನು ಸರಕಾರ ರಿಕ್ವಿಸಿಶನ್ ಮಾಡಿದ್ದರಿಂದ ಇನ್ನು ಕೊಡುವರೆ ಇಲ್ಲವೆಂದು ಅವರು ತಿಳಿಸುತ್ತಾರೆ. ಸರಕಾರ ಬಡವರ ಉಪಕಾರಕ್ಕಾಗಿ ರಿಕ್ವಿಸಿಶನ್ ಮಾಡುವುದಾದರೆ ಇಂಥಾ ಉದಾಹರಣೆಗಳೂ ಇರುವವೇ ಎಂದು ಬಾತ್ಮಿದಾರರೊಬ್ಬರ ಪ್ರಶ್ನೆ.

ಕೋಟ

ಭಯಂಕರ ಕೊಲೆ!

ತಾ ೭ನೇ ದಿನ ರಾತ್ರಿ ಕೋಟದಲ್ಲಿ ಭಯಂಕರ ಕೊಲೆಯೊಂದು ನಡೆದ ಸುದ್ದಿಯಿದೆ ಜೈಲಿನ ಶಿಕ್ಷೆ ಅನುಭವಿಸಿ ಬಂದವನೊಬ್ಬನು, ಊರಿಗೆ ತಲುಪಿದ ನಾಲ್ಕೈದು ದಿನಗಳಲ್ಲಿ, ತಾನಿಲ್ಲದಿರುವಾಗ ತನ್ನ ಪತ್ನಿ ವ್ಯಭಿಚಾರ ಮಾಡಲು ಆರಂಭಿಸಿದ್ದಾಳೆಂಬ ಸಂದೇಹದಿಂದ ಅವಳನ್ನು ಕುತ್ತಿಗೆ ಹಿಸುಕಿ ಕೊಂದುಬಿಟ್ಟಿರುವುದಾಗಿ ವಾರ್ತೆ ಅಪರಾಧಿ ತನಗೆ ಸುರಾಪಾನ ಮಾಡುವ ಅಭ್ಯಾಸವಿತ್ತೆಂದು ಹೇಳುತ್ತಾರೆ ಪೋಲೀಸರು ಅವನನ್ನು ಕೈದು ಮಾಡಿದ್ದು, ವಿಚಾರಣೆ ನಡೆಯುತ್ತಿದೆ

ಉಡುಪಿ

ಜಿಲ್ಲಾ ಬೋರ್ಡ್ ಅಧ್ಯಕ್ಷ

ರಾಗಿ ಆರಿಸಲ್ಪಟ್ಟ ಶ್ರೀ ಅರೂರು ಲಕ್ಷ್ಮೀನಾರಾಯಣ ರಾಯರಿಗೆ ಶ್ರೀ ಕೃಷ್ಣಸನ್ನಿಧಾನದ ಭೋಜನ ಶಾಲಾ ಮಹಡಿಯಲ್ಲಿ ಪರ್ಯಾಯದ ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನ ತೀರ್ಥ ಶ್ರೀಪಾದರಂಗಳವರು ಸತ್ಕಾರಕೂಟವೊಂದನ್ನೇರ್ಪಡಿಸಿದರು ಶ್ರೀರೂರು ಮಠದ ಶ್ರೀಪಾದಂಗಳವರೂ ಸತ್ಕಾರ ಮಾಡಿದರು ಬೋರ್ಡ್ ಹೈಸ್ಕೂಲ್ ಅಧ್ಯಾಪಕವೃಂದವೂ 'ಡಿನ್ನರ್ ಪಾರ್ಟಿ' ಯಿಂದ ಸನ್ಮಾನಿಸಿತು

ನೋಟೀಸು

ದಿವಂಗತ ಪುತ್ತೂರು ಕಲ್ಲೆ ಪೂವಣಿ ಹೆಗಡೆರ ಆಸ್ತಿಗಳಿಗೆ ರಿಸೀವರನಾಗಿ ದ ಕ ಸಬ್ ಕೋರ್ಟು ಕ್ರಮ ನಂಬ್ರ 21/1940ನೇ ವ್ಯಾಜ್ಯದಲ್ಲಿ ಕೋರ್ಟಿನಿಂದ ನೇಮಕ ಮಾಡಲ್ಪಟ್ಟ ನಾನು ಸದರಿ ಪೂವಣಿ ಹೆಗಡೆರಿಗೆ ಪುತ್ತೂರು ಕೆನರಾ ಎಂಟರ ಪ್ರೈಸ್ ಲಿಮಿಟೆಡ್ ಬೇಂಕಿನಲ್ಲಿರುವ 25 ಪಾಲುಗಳನ್ನು ಬಹಿರಂಗವಾದ ಏಲಂ ಮೂಲಕ ಮಾರಾಟ ಮಾಡಬೇಕೆಂತ ಕೋರ್ಟಿನವರು ಆಜ್ಞಾಪಿಸಿರುವದರಿಂದ ಇದೇ 1943ನೇ ಜುಲೈ ತಾ 11ನೇ ಆದಿತ್ಯವಾರ ಹ. ಘಂಟೆ 10ಕ್ಕೆ ಪುತ್ತೂರು ನನ್ನ ಆಫೀಸಿನಲ್ಲಿ ಏಲಂ ಮಾಡುತ್ತೇನೆಂದು ಈ ಮೂಲಕ ಪ್ರಕಟಿಸಿದ್ದೇನೆ

ಪುತ್ತೂರು, 29-6-43 } ಮೊಳಹಳ್ಳಿ ಶಿವರಾವ್, ರಿಸಿವರ್.

ವೃದ್ಧಿಯಿಂದ ಅಭಿವೃದ್ಧಿ.

ಗತ ೧೯೦೬ನೇ ವರ್ಷದಿಂದ ಚಾಲು ೧೯೪೩ನೇ ಪ್ರಾರಂಭದ ಮಾಸಗಳು ಬಹು ಅಪಾಯಗಳಿಂದಲೂ ಹಾಗೂ ಸುಯೋಗಗಳಿಂದಲೂ ತುಂಬಿ ತುಳುಕಿದ್ದವು ಜಾಣತೆಯಿಂದ ವ್ಯವಸ್ಥೆ ಮಾಡಲ್ಪಟ್ಟ ಸಂಸ್ಥೆಗಳು ಈ ಅಪಾಯಗಳನ್ನು ತಳ್ಳಿ ಸುಸಂದರ್ಭಗಳನ್ನು ಉಪಯೋಗಿಸಿ ಶೀಘ್ರನೆ ಮುಂದುವರಿದವು

೧೯೪೦, ೪೧ರಲ್ಲಿ ಕೆನರಾ ಬೇಂಕು ೮೦ ಲಕ್ಷ ಠೇವಣಿಗಳ ಮತ್ತು ಒಂದು ಕೋಟಿ ಸಾಂಪತ್ತಿಕ ಸ್ಥಿತಿಯಲ್ಲಿದ್ದು ಅಂದು ಸಹ ಅದು ವಿಸ್ತರ ಸ್ಥಿತಿಯ ಸಂಸ್ಥೆಯಾಗಿತ್ತು. ಇಂದು ಠೇವಣಿಗಳು ಇಮ್ಮಡಿಯಾಗಿವೆ ಸಾಂಪತ್ತಿಕ ಸ್ಥಿತಿಯು ಎರಡುವರೆ ಕೋಟಿಗೆ ಮುಕ್ಕಿದೆ ಹಾಗೂ ಶೇರ ಮೂಲಧನವು ನಾಲ್ಮಡಿಯಾಗಿದೆ.

ಜಾಣತನದ ವ್ಯವಸ್ಥೆಯ ನಿರ್ವಾಹದಿಂದಲೂ, ಆತ್ಮ ವಿಶ್ವಾಸದಿಂದಲೂ, ದೃಢಬುದ್ಧಿಯಿಂದಲೂ, ಯೋಗ್ಯ ಸೇವೆಯನ್ನು ಸಲ್ಲಿಸಿದರಿಂದಲೂ, ಇಂದಿನ ಈ ಪ್ರಗತಿಗೆ ಕಾರಣಭೂತರಾದ ಸಾರ್ವಜನಿಕರ ಮೆಚ್ಚಿಗೆಗೆ ಪಾತ್ರರಾಗಿ ಇನ್ನು ಮುಂದಕ್ಕೂ ಮಹತ್ತರ ಸೇವೆಯನ್ನು ಒಪ್ಪಿಸಲು ಸಮರ್ಥರಾಗಲು ನಾವು ಹಾರೈಸುವೆವು

Canara Bank Limited.

ಕೆನರಾ ಬೇಂಕ್ ಲಿಮಿಟೆಡ್.

ಸ್ಥಾಪನೆ 1906.

ಇಂಡಿಯಾ ಮಿಲಿಟರಿ ಹೋಟೇಲ್

ಬಲ್ಮಠ ರಸ್ತೆ, ಸಿಟಿ ಬಸ್ ಗ್ಯಾರೇಜ್ ಸಮೀಪ, ಹಂಪನಕಟ್ಟೆ.

ಬನ್ನಿರಿ! 4-7-43ರಿಂದ ಅನುಭವ ಪಡೆಯಿರಿ!!

ಉತ್ತಮ ತರಗತಿಯ ಆನಂದ ನಿಲಯ ಇದೆಂದು ಸ್ವತಃ ಪರೀಕ್ಷಿಸಿರಿ!

ಕಾಫಿ ಮತ್ತು ಊಟವು ಸುಲಭ ದರ ಮತ್ತು ಉತ್ಕೃಷ್ಟ ರೀತಿಯಲ್ಲಿ ದೊರಕುವುದು

India Military Hotel

Near City Bus Garrage, Balmatta Road, Hampankatta.

Come! From 4-7-43 Try once!

Coffee and Meals can be had on Moderate Charges

Proprietor: Udipi N. S. Rao, MANGALORE

ಸಿನೆಮಾ ಸುದ್ದಿ

ಕಾಳಿದಾಸನ 'ಮೇಘದೂತ'

ಸಿನೆಮಾ ಅಗುತ್ತದೆಂದು ಕೇಳಿ ಸಂತೋಷಗೊಳ್ಳದ ಭಾರತೀಯನಾರು? ಸ್ವಾಮಿ ಶಾಪಕ್ಕೆ ಗುರಿಯಾದ ಯಕ್ಷನೋರ್ವನು, (ಯಕ್ಷದಂಪತಿಗಳು ಯಾವಾಗಲೂ 'ಅಗಲಿರುವುದೆಂದಿಲ್ಲ) ಒಂದು ವರ್ಷಗಳ ವರೆಗೆ ತನ್ನ ಹೆಂಡತಿಯಿಂದ ಅಗಲಿ ಚಿತ್ರಕೂಟದ ತಪ್ಪಲಲ್ಲಿರಬೇಕಾಯಿತು. ಒಂದು ದಿನ ಕೋಪವು ತಪ್ಪಲನ್ನು ಚುಂಬಿಸುತ್ತಿರಲು, ಆಷಾಢ ಮಾಸದಲ್ಲಿ ಆತನು ವಿರಹ ತಪ್ತನಾಗಿ, ಮೇಘದೊಡನೆ ಬಿನ್ನವಿಸಿಕೊಳ್ಳುತ್ತಾನೆ ತನ್ನ ವಿರಹ ಸಂದೇಶವನ್ನು ಹೆಂಡತಿಗೆ ತಿಳಿಸಬೇಕೆಂದು! ಮೋಡಕ್ಕೆ ದೌತ್ಯಕಾರ್ಯ ಮಾಡಲು ಚೇತನವಿಲ್ಲವೆಂದೂ ಆ ವಿರಹಿಗೆ ಅರಿವಿಲ್ಲ! ಕಾಳಿದಾಸನ ಶೃಂಗಾರ ಕಾವ್ಯಗಳಲ್ಲಿ ಇದು ಅಮರ ಕೃತಿ! ದೇವಕೀ ಬೋಸರು ಈ ಚಿತ್ರ ತಯಾರಿಸುತ್ತಾರೆಂದ ಮೇಲೆ ಇದರ ಕಲಾ ನೈಪುಣ್ಯ ಬೇರೆ ಕೇಳಬೇಡ. ಆರ್. ಡಿ. ಕೆ. ಪ್ರೊಡಕ್ಶನಿನವರು ತಯಾರಿಸುತ್ತಾರಂತೆ. ನಟನಟೀವರ್ಗ ಬೇಗನೇ ಪ್ರಸಿದ್ಧವಾಗಲಿದೆ ಸಂಸ್ಕೃತ ಅಮರ ಕೃತಿಗಳು, ಮೃಚ್ಛಕಟಿಕ, ಶಾಕುಂತಳ ಇವು ಸಿನೆಮಾಕ್ಕೆ ಬಂದಿವೆ, ಬರುತ್ತಿವೆ. ಇನ್ನು ಅನೇಕ ರತ್ನಗಳಿವೆ. ಭವಭೂತಿಯ 'ಮಾಲತೀ ಮಾಧವ' 'ಉತ್ತರ ರಾಮಚರಿತ' ಇವುಗಳನ್ನು ಉತ್ತಮ ಸಿನೆಮಾ ಮಾಡಬಹುದು. ಅಂತೆಯೇ ಕಾಳಿದಾಸನ 'ವಿಕ್ರಮೋರ್ವಶೀಯ' 'ಮಾಲವಿ ಕಾಗ್ನಿಮಿತ್ರ' ಚಲಚ್ಚಿತ್ರವಾದರೆ ಚನ್ನಾದೀತು. ವಿಶಾಖದತ್ತನ 'ಮುದ್ರಾ ರಾಕ್ಷಸ'ವೂ ರಮ್ಯವಾಗದಿರದು ಹೀಗೆ ಇನ್ನೆಷ್ಟೋ ಉಜ್ವಲ ರತ್ನಗಳು ಪ್ರಾಚೀನ ಭಾರತ ವಾಙ್ಮಯ ಗರ್ಭದಲ್ಲಿ ಅಡಗಿವೆ, ಅವುಗಳನ್ನು ಮೇಲೆತ್ತಿ ತೋರಿಸುವುದು ನಮ್ಮ ಸಿನೆಮಾ ನಿರ್ಮಾತೃಗಳ ಕರ್ತವ್ಯ

ಸೂಳೆಯ ಸಂಸಾರ

ವನ್ನು ಸಿನೆಮಾದವರು ಚಿತ್ರಿಸುವ ವಿಷಯ 'ಮಿರರ್' ಪತ್ರಿಕೆ ಒಂದು ಆಕ್ಷೇಪವೆತ್ತುತ್ತದೆ "ಬರುವಾರ 'ದೇವದಾಸ್' ಚಿತ್ರದ ಚಂದ್ರಾಳಂಥಾ ಸೂಳೆ, ನಿಜ ಜೀವನದಲ್ಲಿ ಕಾಣ ಸಿಗುವುದು ದುರ್ಲಭ, ಗಿರಾಕಿಗಳಿಂದ ಒಂದು ಪೈಯನ್ನೂ ತೆಗೆದುಕೊಳ್ಳದೆ ತನ್ನಲ್ಲಿರುವುದನ್ನೆಲ್ಲಾ ಅವರಿಗೆ ಸಮರ್ಪಿಸುತ್ತಾಳೆ. ಅವಳು ಹೃದಯ, ಆತ್ಮದಾನ, ತ್ಯಾಗಜೀವನ ಅದ್ಭುತ! ರಮನಲಾಲರ 'ಪೂರ್ಣಿಮಾ' ಆಧುನಿಕ ಕಾಲದ 'ಸತಿ'ಯಂತಿದ್ದಾಳೆ. ನ್ಯೂಥಿಯೇಟರ್ಸಿನ 'ಸೌಗಂಧ'ದ ಸೂಳೆಯೋರ್ವಳು ತನ್ನಲ್ಲಿಗೆ ಗಿರಾಕಿಗಳನ್ನು ಸೆಳೆಯುವುದನ್ನುಳಿದು, ಅವರ ಕಾಲು ಹಿಡಿದು ಬರಬೇಡಿರೆಂದು ಬೇಡಿಕೊಳ್ಳುತ್ತಾಳೆ! 'ಪ್ರಾರ್ಥನಾ'ದ ವೇಶ್ಯೆ ತನ್ನದೆಲ್ಲವನ್ನೂ ಪ್ರಿಯನ ಪಾದಕ್ಕೆ ಅರ್ಪಿಸುವಾಳೆ, ಉಚ್ಚ ತರಗತಿಯ ಗರತಿ ಇಂಥಾ ಸೂಳೆಯ ಸಂಸಾರವನ್ನು ಚಿತ್ರಿಸುವುದರಿಂದ, ಆಧುನಿಕ ಯುವಕರು, ತಮ್ಮ ಊರಲ್ಲಿ ಯಾದರೂ ಈ ತರದ ಸೂಳೆಯರಿರಬಾರದೇಕೆಂದು ಹುಡುಕಾಡ ಹೋಗುವುದು ಸಂಭವವಿದೆ, ಆದ್ದರಿಂದ ಸಿನೆಮಾ ನಿರ್ಮಾಪಕರು ವೇಶ್ಯಾ ಜೀವನವನ್ನು ಚಿತ್ರಿಸುವಾಗ ಕೃತ್ರಿಮ ಲೋಕಕ್ಕೆ ಹೋಗಬಾರದು" ಈ ಸೂಚನೆ ಸರಿಯೇನೋ ಹೌದು. ಕಥೆಯೆಷ್ಟೆಂದರೂ ಕಥೆಯೇ ಸಿನೆಮಾ' ಲೋಕದ ಶೃಂಗಾರ ಸಹಜ ಜೀವನಕ್ಕಿಂತ ಬೇರೆಯೆಂದು ತಿಳಿಯಲಾರದ ಹುಚ್ಚರು, ಸೂಳೆಯನ್ನು 'ಬಜಾರಿ'ಯಾಗಿ ಚಿತ್ರಿಸಿದರೂ, ಅವರಿಗಾಗಿ ಹುಡುಕಾಡುವವರೇ!

ಪುನಃ ಸ್ನೇಹಪ್ರಭಾ

ಶಾಹು ಮೋದಕನೊಡನೆ ಜತೆಗೂಡಿದ್ದಾಳೆ. 'ಲಡಯೀಕೇ ಬಾದ್' (ಜಗಳದ ನಂತರ) ಚಿತ್ರದಲ್ಲಿ. ಇದು 'ನವಯುಗ'ದ ತಯಾರಿ 'ಜಗಳದ ನಂತರ' ಆಕೆಯದೇ ಕಥೆಯಂತೆ! ಕಿಶೋರ ಸಾಹುವಿನೊಡನೆ 'ಜಗಳದ ನಂತರ'ದ ಕಥೆಯೇನೊ? ಕುಸುಮ ದೇಶಪಾಂಡೆ, ಡೇವಿಡ್, ಪ್ರತಿಮಾ ಮೊದಲಾದವರು ಇತರ ನಟವರ್ಗ. ಮೊನ್ನೆ ಮೊನ್ನೆ 'ಪಹಿಲೀ ಮಂಗಲ್ ಗೌರ್' ಚಿತ್ರವನ್ನು ಸ್ತ್ರೀಯರಿಗಾಗಿಯೇ ಮುಂಬಯಿಯಲ್ಲಿ ಪ್ರದರ್ಶಿಸಿದ ಸಂದರ್ಭ, ಮಹಿಳೆಯರಿಗೆ ಸ್ನೇಹಪ್ರಭಾ ಒಂದು ಭಾಷಣವಿತ್ತಳು, 'ವಧು ಪರೀಕ್ಷೆ'ಯ ವಿಷಯ ಆಕೆ ಉಗ್ರ ಟೀಕೆ ಮಾಡಿದ್ದಾಳೆ, 'ಹೆಂಗುಸಿಗೆ ಸ್ವಾತಂತ್ರ್ಯವಿಲ್ಲ, ಆಕೆ ಗೊಂಬೆ; ಗಂಡನು ಹತ್ತಾರು ಹುಡುಗಿಯರನ್ನು ನೋಡಿ, ಅವರಿಗೊಬ್ಬೊಬ್ಬರಿಗೆ ಒಂದೊಂದು ಕೊರತೆ ಹೇಳಿ, ಬೇಕಾದ ಹೆಂಗುಸನ್ನು ಕೊನೆಗೆ ಆರಿಸಿಕೊಳ್ಳುತ್ತಾನೆ, ಇದು ಅನ್ಯಾಯ, ಶತ ಅನ್ಯಾಯ' ಎನ್ನುತ್ತಾಳೆ ಸ್ನೇಹಪ್ರಭಾ! 'ಹೆಂಗುಸಿಗೆ ತನಗೊಲಿದವನನ್ನೇ ಸ್ವತಃ ಮುಂದೆ ಬಂದು ಮದುವೆಯಾಗುವ ಸ್ವಾತಂತ್ರ್ಯವಿರಬೇಕು, ಸಮಯ ಬಂದರೆ, ತನಗೆ ಸರಿಯಾಗದಿದ್ದರೆ ಆತನನ್ನು ಬಿಟ್ಟುಬಿಡುವ ಸ್ವಾತಂತ್ರ್ಯವೂ ಬೇಕು' ಸ್ನೇಹಪ್ರಭಾ ಆ ಸಭೆಯಲ್ಲಿ ಹೀಗೆ ಹೇಳದಿದ್ದರೂ ಆಕೆಯ ಅಭಿಪ್ರಾಯ ಇದೇ ಎಂಬ ವಿಷಯ ಅಲ್ಲಿ ಸೇರಿದ ಮಹಿಳೆಯರೆಲ್ಲರೂ ಅರ್ಥಮಾಡಿಕೊಂಡಿರಲೇಬೇಕು!

ಭಾರತನೃತ್ಯದ ಕೊಲೆ

ಆಗಿದೆ ನಮ್ಮ ಚಿತ್ರಗಳಲ್ಲಿ ಎನ್ನುತ್ತಾರೆ ಗೋಪೀನಾಥರು. 'ಏನೋ ಒಂದು ವೈಯ್ಯಾರ, ಏನೋ ಒಂದು ವೈಬಣ್ಣ, ಅದರಲ್ಲೂ ನಗ್ನತೆಯಿದ್ದರಾಯಿತು ಇದು ನಮ್ಮ ಸಿನೆಮಾದ ನೃತ್ಯ! ಪಾಶ್ಚಾತ್ಯ ಸಂಪರ್ಕ ಬಹಳ. ಶಾಕುಂತಲಾ ನಾಟಕದಲ್ಲಿ ಒಂದು ನೃತ್ಯ ಬಂತು, ದೇವತಾ ಕನ್ಯೆ ನರ್ತಿಸುತ್ತಾಳೆ ಆಧುನಿಕ ಕಾಲದ ಸುಂದರಿಯಾಗಿ! ಪಾಶ್ಚಾತ್ಯ ಕ್ರಮ ಸೇರಿದ ನಟನೆ! ಇದೆಂಥಾ ಅಭಾಸ! ಇದೆಂಥಾ ಕಲೆಯ ಕೊಲೆ! ಭಾರತದ ನೃತ್ಯವನ್ನು ಕೊಲಬೇಡಿ, 'ರಾಜನರ್ತಕಿ' 'ಕುಂಕುಂ ದಿ ಡಾನ್ಸರ್' ಚಿತ್ರಗಳಂಥಾ ನೃತ್ಯ ಭಾರತೀಯ ನೃತ್ಯ! ಅದರಲ್ಲೇನು ಸೊಬಗಿದೆ! ಎಂಥಾ ಭಾವ ಭಂಗಿಯಿದೆ! ಸುಮ್ಮ ಸುಮ್ಮಗೆ ವೇಶ್ಯಾ ನರ್ತನ, ನಗ್ನ ನರ್ತನ, ಬೆರಕೆಯ ನರ್ತನ, ಪ್ರೇಕ್ಷಕರನ್ನು ವಿಕಾರಗೊಳಿಸುವ ವಿಲಾಸ ನರ್ತನ ಸಾಕುಮಾಡಿ,' ಎಂದು ಅವರು ಟೀಕಿಸುತ್ತಾರೆ, ಗೋಪೀನಾಥ್ ಒಳ್ಳೆಯ ಭಾರತೀಯ ನರ್ತನ ಕುಶಲರು.

ಮೋತಿಲಾಲ್ ಮಾಧುರಿಗೆ ಮುತ್ತಿಡಲಿಲ್ಲವೆ?

ಸ್ನೇಹ ಪ್ರಭಾ ಮತ್ತು ಶಾಹು ಮೊದಕ್ 'ಪಹಿಲೀ ಮಂಗಲ್‌ಗೌರ್' ಚಿತ್ರದಲ್ಲಿ ಚುಂಬಿಸಿಕೊಂಡರು ಎಂಬ ವಿಷಯವೀಗ್ಗ ದೊಡ್ಡ ಕೋಲಾಹಲವನ್ನೇ ಉಂಟುಮಾಡಿದೆ. ಇದು ಬರೀ ಕೆಮರೆದ ಕುತಂತ್ರವೆಂದರೂ ಬೊಬ್ಬೆಯಿನ್ನೂ ಅಡಗಿಲ್ಲ ಆದರೆ 'ದೀಪಾವಳಿ' ಚಿತ್ರದಲ್ಲಿ ಮೋತಿಲಾಲ್ ಮಾಧುರಿಗೆ ಮುತ್ತಿಟ್ಟಿದ್ದಾನಲ್ಲಾ? ಈ ವಿಷಯ ಯಾರ ಗಮನಕ್ಕೂ ಏಕೆ ಬರಲಿಲ್ಲವೋ ನಮಗೆ ತಿಳಿಯದು ಸ್ನೇಹ ಪ್ರಭಾ ಶಾಹು ಮೋದಕರು ತುಟಿತುಟಿ ತಾಗಿಸಿದರಂತೆ! ಮೋತಿಲಾಲ್ ಮಾಧುರಿಯವರು ತುಟಿ ಕೆನ್ನೆ ತಾಗಿಸಿದ್ದು! ಬಹುಶಃ ನಮ್ಮ ಸನಾತನಿಗಳ ಶಾಸ್ತ್ರದಲ್ಲಿ ಸುಂದರಿಯರ ಕೆನ್ನೆಗೆ ಮುತ್ತಿಡಲು (ತಪ್ಪಿ ಎಲ್ಲಿಯಾದರೂ ತುಟಿಗೆ ತಾಗಬಾರದು!) ಸಮ್ಮತಿಯುಂಟೇನೊ?

ಕನ್ನಡಿಗ 'ಪ್ರಹ್ಲಾದ'ರು ಕಣ್ಮರೆಯಾದರು!

ಪ್ರಭಾತ ಕಂಪನಿಯ 'ವಹಾಂ' ಮತ್ತು 'ಗೋಪಾಲಕೃಷ್ಣ' (ಕಂಸನ ಪಾತ್ರ) ಮೊದಲಾದ ಚಿತ್ರಗಳಲ್ಲಿಯೂ, ನೇಶನಲ್ ಸ್ಟುಡಿಯೋದವರ 'ಕಸೋಟಿ' ಚಿತ್ರದಲ್ಲಿಯೂ, ಟೊಂಬೇ ಟಾಕಿಸಿನ 'ಕಿಸ್ಮತ್' ಚಿತ್ರದಲ್ಲಿಯೂ ಅಭಿನಯಿಸಿ ಕೀರ್ತಿ ಪಡೆದ, ಕನ್ನಡಿಗ ಶ್ರೀ ಕೆ. ಎಸ್ ಪ್ರಹ್ಲಾದರು, ತಾ. ೩೦ ರಂದು ಹೃದಯ ವ್ಯಾಧಿಯಿಂದ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಶ್ರೀ ಪ್ರಹ್ಲಾದರು ತಮ್ಮ ಪ್ರತಿಯೊಂದು ಅಭಿನಯದಲ್ಲಿಯೂ ಕೀರ್ತಿಯ ಸೋಪಾನವನ್ನೇರುತಿದ್ದರು ಇವರಿಗೆ ಒಳ್ಳೆಯ ಭವಿಷ್ಯವಿತ್ತು, ಇವರ ಈ ಅಕಾಲದ ನಿಧನದಿಂದ ಕೇವಲ ಕನ್ನಡ ನಾಡು ಮಾತ್ರ ಇಡೀ ಚಲಚ್ಚಿತ್ರ ಲೋಕವೇ ಅಪಾರ ನಷ್ಟಕ್ಕೊಳಗಾಗಿದೆ. ಮೃತರ ಆತ್ಮಕ್ಕೆ ಶಾಂತಿಯಿರಲಿ!

ಕರ್ನಾಟಕ

ಬೆಳಗಾವಿ

ಇಲ್ಲಿನ ಶ್ರೀ. ಎಚ್. ಬಿ. ಫೋತವಾಲ ಇವರಿಗೆ ಗಾಂಧಿ ಜಯಂತಿ ದಿನೆ ಅಂಗಡಿ ಮುಚ್ಚಿದರೆಂದು ರೂ ೪೫೦ ದಂಡ ವಿಧಿಸಲಾಯಿತು. ಡಾ। ವಿ. ಜಿ. ಜೋಶಿಯವರ ಆನಿರ್ಬಂಧ ಬಿಡುಗಡೆಯಾಗಿದೆ ಅಕ್ಕತಂಗೀರಹಾಳದಲ್ಲಿ ಪುಂಡುಗಂದಾಯ ವಸೂಲಾಗುತ್ತಿದೆ. ಜೋತನಟ್ಟಿ ಬಂಗ್ಲೆ ಸುಟ್ಟ ಸಂಶಯದಿಂದ ಸೆರೆಹಿಡಿದ ೧೨ ಜನರ ವಿಚಾರಣೆ ರೆಸಿಡೆಂಟ್ ಮೆಜಿಸ್ಟ್ರೇಟರ ಮುಂದೆ ನಡೆದು ಸರಕಾರಿ ಸಾಕ್ಷಿದಾರ ಸಿದ್ಧಪ್ಪ ಕುರುಬೆಟ್ಟ ಇವರ ಸಾಕ್ಷಿಯಾಯಿತು. ಸಾಕ್ಷಿ ಮುಗಿದ ಮೇಲೆ ಅವರ ಬಂಧನವಾಯಿತು. ಹಿಂಡಲಗಿ ಸೆರೆಮನೆಯಿಂದ ಡಾ ಹರ್ಡೀಕರ್, ಕೆ. ಎಸ್. ಪಾಟೀಲ್, ಶಂಕರ ಕಾಮತ್, ಡಾ. ಹುಯಿಲಗೋಳ, ಎಂ ಆರ್. ಜೋಶಿ, ಬ್ಯಾರಿಸ್ಟರ್ ಜಕಲಿಕರ ಮೊದಲಾದ ೧೦ ಜನರನ್ನು ನಾಸಿಕ ಸೆರೆಮನೆಗೆ ಕೊಂಡೊಯ್ದರು ಬಸ್ತವಾಡದಲ್ಲಿ ೨೦೦ ಬಾಂಬು ಸಿಕ್ಕಿದ ಖಟ್ಲೆಯಲ್ಲಿ ಸೆರೆಹಿಡಿದ್ದ ಪಾರೀಸಪ್ಪ, ಶೇರಿ ಕೃಷ್ಣಮೂರ್ತಿ ಸೇಂಡೋ ಮೊದಲಾದವರ ವಿಚಾರಣೆಯಾಗುತ್ತಿದೆ. ಶ್ರೀ. ರಾಯನ ಗೌಡ ತಲ್ಲೂರ ಮತ್ತು ಚುಳಕಿ ರುದ್ರ ಗೌಡರ ಮೇಲಿನ ಖಟ್ಲೆ ಡಿಸ್ಟ್ರಿಕ್ಟ್ ಜಡ್ಜರ ಮುಂದೆ ನಡೆದಿದೆ ಸಿಟಿ ಮೆಜಿಸ್ಟ್ರೇಟರಲ್ಲಿ ಶ್ರೀ ಕಾಮತರ ಖಟ್ಲೆಯಿದೆ. ಬೆಳಗಾವಿ ದಾಮಲಿಂಗ ಖಂಡದಲ್ಲಿ ಬ್ರಿಟಿಷ್ ಸೈನಿಕರಿಗೆ ಹೊಡೆದ ಮರುದಿನ ಸೆರೆಹಿಡಿದ ಆರ್ ಎಸ್ ನಾಯಿಡು ಇವರ ಹತ್ತಿರ ಕೆಲವು ಕಾಡತೂಸುಗಳು ದೊರೆತದ್ದರಿಂದ ೧೫೦ ರೂಪಾಯಿ ದಂಡ ವಿಧಿಸಲಾಗಿದೆ ಅಂದೇ ಹಿಡಿದ ಜಮಖಂಡಿ, ಅನಗೋಳಕರ ಮೊದಲಾದ ೪ ಜನರ ಬಿಡುಗಡೆಯಾಗಿದೆ ಗಜಪತಿಯ ಶ್ರೀ ಬಾಬೂ ಗೌಡ ಪಾಟೀಲರು ಅಜ್ಞಾತವಾಸದಲ್ಲಿದ್ದು, ಅವರನ್ನು ಹಿಡಿದವರಿಗೆ ೧ ಸಾವಿರ ರೂಪಾಯಿ ಬಹುಮಾನವನ್ನು ಸರಕಾರ ಸಾರಿದ್ದರು ಅವರನ್ನೀಗ ಪೋಲೀಸನೊಬ್ಬನು ಗೋಗಲಾಯಿಯಲ್ಲಿ ಸೆರೆಹಿಡಿದಿದ್ದಾನೆ. ಕಾಣೆಯಾಗಿದ್ದ ಹುದಲಿಯ ಬಸವಗೌಡ ರುದ್ರಗೌಡ ಪಾಟೀಲ ಬಡಸ ಇವರನ್ನು ಧಾರವಾಡ ಸ್ಟೇಶನ್ ಬಳಿ ಹೋಟೇಲಿನಲ್ಲಿ ಊಟಕ್ಕೆ ಕುಳಿತಿರುವಾಗ ಸೆರೆಹಿಡಿದರು ಅಂಕೋಲದ ಕಣಗಿನಹಳ್ಳಿ ಶ್ರೀ ವಿಠೋಬ ಬೀರಣ್ಣನಾಯಕರನ್ನು ಹುಬ್ಬಳ್ಳಿಯಲ್ಲಿ, ನಾರಾಯಣರಾವ್ ನಾಯಕರನ್ನು ಧಾರವಾಡದಲ್ಲಿಯೂ ಸೆರೆಹಿಡಿಯಲಾಗಿದೆ ಬೆಳಗಾವಿ ಶ್ರೀ ಅಣ್ಣಾ ಗುರುಜಿಯವರನ್ನು ತಾ ೧೯ರ ರಾತ್ರಿ ಸೆರೆಹಿಡಿದಿರುವರು ಅವರೊಡನೆ ಇನ್ನೂ ೩-೪ ಜನರ ಬಂಧನವಾಗಿದೆ.

ಕನ್ನಡ ಸಂಸ್ಥಾನ

ಹಾತಕ ಕಣಂಗಲೆ ಪೇರಾವ ಚಂದೂರ ಎಂಬ ಹಳ್ಳಿ ಚಾವಡಿ ಮಧ್ಯ ರಾತ್ರಿ ಜನರು ಮುತ್ತಿ ಚಾವಡಿ, ರಿಕಾರ್ಡು, ಸಾಮಾನು ಮೊದಲಾದವುಗಳಿಗೆ ಬೆಂಕಿ ಹಚ್ಚಿದ್ದಾರೆ ಚಂದೂರು ಪಂಚ ಗಂಗಾನದೀ ತೀರದ ಒಂದು ಹಳ್ಳಿ ಮಿರಜಿಯಲ್ಲಿ ಸ್ಥಾಪಿತವಾಗಲಿರುವ ಹೊಸ ಶಾಸನಮಂಡಳದ ಘಟನೆಯನ್ನು ತಯಾರಿಸಲು ಶ್ರೀಗಳಾದ ಆರ್. ಆರ್. ಬಖಲೆ, ಡಾ। ಡಿ ಪಿ ಗೋರ್ಪಡೆ, ಆರ್. ವಿ. ಅಭ್ಯಂಕರ, ಶಟ್ಟಿ ಲಕ್ಷ್ಮೇಶ್ವರ ಸ ಸ ಸಾರೆ ಮೋಡನಿಂಬ ಇವರಿಂದ ಕೂಡಿದ ಕಮಿಟಿಯೊಂದು ರಚಿತವಾಗಿದೆ ಶ್ರೀ ವಿ ದಾನೇನೇ ಕಾರ್ಯದರ್ಶಿ ಇವರ ವರದಿ ನಂತರ ರಾಜಾಸಾಹೇಬರು ಆ ಕುರಿತು ಆಲೋಚಿಸುವರು ಮಿರಜಿ ಸಂಸ್ಥಾನದ ಪ್ರಜೆಗಳಿಗೆ ಅಧಿಕಾರ ಕೊಡುವ ಇಚ್ಛೆಯಿಂದ ಒಂದು ಕಾರ್ಯಕಾರೀ ಮಂಡಳ ಸ್ಥಾಪಿಸುವುದು, ವ್ಯಾಪಕ ಮತದಾನ ಪದ್ಧತಿ ಹಾಗೂ ಪ್ರಾತಿನಿಧಿಕ ಸ್ವರೂಪದ ಒಂದು ವಿಧಿಮಂಡಳ ಸ್ಥಾಪಿಸುವುದು, ದ್ವಿದಳ ರಾಜಪದ್ಧತಿ ಜಾರಿಗೆ ತರುವುದು ನಿಶ್ಚಯಿಸಲಾಗಿದೆಯೆಂದು ರಾಜಸಾಹೇಬರು ಘೋಷಿಸಿದ್ದಾರೆ ದಕ್ಷಿಣ ಸಂಸ್ಥಾನಗಳಿಗೆಲ್ಲ ಒಂದೇ ಹೈಕೋರ್ಟು ಸ್ಥಾಪಿಸುವ ವಿಚಾರ ನಾಬಡೆ ಕಮಿಟಿ ಯೋಜನೆ ಪ್ರಸಿದ್ಧವಾಗಿದೆ ಈ ಯೋಜನೆ ಆಲೋಚನೆಯಲ್ಲಿದೆ. ಕಾಂಗ್ರೆಸ್ ಪಕ್ಷದ ಸದಸ್ಯರು ಈ ಸಲದ ಮೈಸೂರು ಕೌನ್ಸಿಲ್ ಅಧಿವೇಶನದಲ್ಲಿ ಭಾಗವಹಿಸುತ್ತಿದ್ದಾರೆ. ಮೈಸೂರು ಸಂಸ್ಥಾನದಲ್ಲಿ ೧೪೮೫ ಜನರನ್ನು ಸ್ಥಾನಬದ್ಧ ಮಾಡಿದೆಯೆಂದೂ, ಫೆಡರಲ್ ಕೋರ್ಟಿನ ತೀರ್ಮಾನದಂತೆ ನಡೆಯಲು ಸಿದ್ಧರಿಲ್ಲದ್ದರಿಂದ ಇದ್ದ ಕಾಯಿದೆಯಲ್ಲಿ ಬದಲುಮಾಡುವ ಅಥವಾ ಹೊಸ ಆರ್ಡಿನನ್ಸು ಮಾಡುವ ಅಗತ್ಯವಿಲ್ಲವೆಂದು ಶ್ರೀ. ಕೆ. ವಿ. ಅನಂತರಾಮನರು ಹೇಳಿದರು, ಸೊರಬ ತಾಲೂಕಿನಲ್ಲಿ ಲೈಸನ್ಸು ಪಡೆದು ಇಟ್ಟುಕೊಂಡಿದ್ದ ಕೋವಿ ಪಿಸ್ತೂಲುಗಳನ್ನು ಸರಕಾರದವರು ಸ್ವಾಧೀನಪಡಿಸಿಕೊಂಡಿದ್ದರು. ಅವುಗಳನ್ನು ತಿರುಗಿ ಕೊಡಲು ಈಗ ಆಜ್ಞೆಯಾಗಿದೆ. ಸಾಂಗಲಿ ಬಳಿಯ ಪಾದಮಾಲ್ ಗ್ರಾಮದ ಶ್ರೀ ವಸಂತ ಪಾಟೀಲ ಇವರು ಬಹು ದಿನಗಳಿಂದ ಕಣ್ಮರೆಯಾಗಿದ್ದರು. ಅವರನ್ನು ಸಾತಾರೆಯ ಪೋಲೀಸರು ಸಾಂಗಲಿ ಪೋಲೀಸ್ ಸಹಾಯದಿಂದ ಸೆರೆಹಿಡಿದ್ದು ರೂ. ೧೦೦೦ ಪಾರಿತೋಷಿಕ ಪಡೆದರು.

ಬಳ್ಳಾರಿ

ಬಸಲಿಂಗಪ್ಪ, ಬಸಪ್ಪ, ವೀರಪ್ಪ, ಹನುಮಂತ ಎಂಬ ನಾಲ್ಕು ಜನ ಮುಂಬಯಿ ಕರ್ನಾಟಕದ ಯುವಕರನ್ನು ಹೊಸ ಪೇಟೆ ಪೋಲೀಸರು ಬಂಧಿಸಿ ಸೆರೆಮನೆಯಲ್ಲಿಟ್ಟಿರುವರು. ಹುಬ್ಬಳ್ಳಿಯ ಸಿ. ಐ. ಡಿ ಒಬ್ಬರು ಅಲ್ಲಿನ ಖಟ್ಲೆಗೆ ಸಂಬಂಧಿಸಿದ ಆರೋಪಿಯೊಬ್ಬರನ್ನು ಸೆರೆಹಿಡಿದಿರುವರು ಬಳ್ಳಾರಿ ಜಿಲ್ಲೆಯಲ್ಲಿ ಬರಗಾಲವಿದ್ದು, ಕಂದಾಯ ವಸೂಲಿಯನ್ನು ಮುಂದೆ ಹಾಕಲಾಗಿದೆ ಬಳ್ಳಾರಿ ಮುನ್ಸಿಪಾಲಿಟಿ ರೇಶನಿಂಗ್ ವಿಚಾರ ಆಲೋಚನೆ ಮಾಡುತ್ತದೆ ದತ್ತ ಮಂಡಳ ಜಿಲ್ಲೆಗಳಲ್ಲಿ ಹೊಲಗಳಲ್ಲಿ ಒಂದು ಸಾಲು ಹತ್ತಿ ಬಿತ್ತಿದರೆ, ಎರಡು ಸಾಲು ಆಹಾರ ಬೆಳೆಸಬೇಕೆಂದು ಸರಕಾರದವರು ವಿಧಿಸಿದ್ದಾರೆ ಈ ರೀತಿ ಬಿತ್ತಿದವರಿಗೆ ಎಕರೆಗೆ ರೂ. ೩ ಬೋನಸ್ಸಿದೆ. ಈ ಯೋಜನೆಯಂತೆ ಆಹಾರ ಬೆಳೆಸಲು ೩೩ ಸಾವಿರ ಎಕ್ರೆಭೂಮಿ ದೊರೆಯುತ್ತದೆ

ಕೊಡಗು

ಮೇ ೨೪ರಂದು ಸೆರೆಹಿಡಿದ ಮುಚ್ಚಿಯಂಡ ಅಯ್ಯಪ್ಪನವರ ವಿಚಾರಣೆಯಾಗಿ ಅವರಿಗೆ ೬ ತಿಂಗಳ ಕಠಿಣ ಶಿಕ್ಷೆಯಾಗಿದೆ ಅಗಸ್ಟ್ ಚಳವಳದ ಬಗ್ಗೆ ಸರಕಾರದವರು ಬೀಗ ಹಾಕಿದ್ದ ವೀರರಾಜ ಪೇಟೆ ಸ್ವರಾಜ್ಯ ಭವನ ಯಾ ಭೋಟು ಭವನದ ಬಗ್ಗೆ ತಮ್ಮ ಹುಕುಮು ರದ್ದು ಮಾಡಿದ್ದಾರೆ ಕೊಡಗು ಚೀಫ್ ಕಮಿಶನರು ಕಾಫಿಸೆಸ್ ಸಭೆಗಾಗಿ ಬೆಂಗಳೂರಿಗೆ ಹೋಗಿ..

ಧಾರವಾಡ

ಎಮ್. ಎಸ್ ಎಂ ರೈಲ್ವೆ ಕೆಲಸಗಾರರ ಸಭೆ ೧೬ನೇ ತಾರೀಕಿಗೆ ಸೇರಿ ತುಟ್ಟಿ ಭತ್ತೆ ವಿಷಯವಾಗಿ ಮಾತುಕತೆಗಳಾದವು ತನ್ನಲ್ಲಿಯ ಕಾಳಿನ ಸಂಗ್ರಹದ ವರದಿ ಕೊಡಲಿಲ್ಲವೆಂದು ಶ್ರೀ. ಚನಬಸಪ್ಪ ಕುಂದರಗಿಯವರಿಗೆ ದಂಡ ವಿಧಿಸಲಾಯಿತು

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. No 196/1943

1. ಮರಿಯುಮ್ಮ—ಉಕ್ಕಾಸ್ ಬ್ಯಾರಿ ಹೆಂಡತಿ.
2. ಅಬ್ದುಲ್ ರಹಿಮಾನ್, 3. ಬೀಬಿ, ಸದ್ರಿ ಉಕ್ಕಾಸಬ್ಯಾರಿಯ ಮಕ್ಕಳು—ಅರ್ಜಿದಾರರು

ಕಾಸರಗೋಡು ತಾಲೂಕು ಪಳ್ಳಿಕೆರೆ ಗ್ರಾಮದ ತಿರುವಾಕೋಳಿಯಲ್ಲಿರುವವರು

1ನೇ ಅರ್ಜಿದಾರಳ ಗಂಡ ವ 2 ಮತ್ತು 3 ನೇ ಅರ್ಜಿದಾರರ ತಂದೆ ಯಾ ಸದ್ರಿ ಸಿಂಗಾಪುರದಲ್ಲಿ ಮೃತಪಟ್ಟ ಪಳ್ಳಿಕೆಬ್ಯಾರಿ ಮಗ ಉಕ್ಕಾಸ್ ಬ್ಯಾರಿಗೆ ಸದ್ರಿ ಅರ್ಜಿಯಲ್ಲಿ ವಿವರಿಸಿದ ರೀತಿ ಬರತಕ್ಕ ಹಣ ವಸೂಲ್ ಪಡೆಯುವರೆ ಅರ್ಜಿದಾರರ ಬಗ್ಗೆ 1ನೇ ಅರ್ಜಿದಾಳಳ ಹೆಸರಲ್ಲಿ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ದಾಕ್ಲುಮಾಡಿದ ಸದರಿ ಅರ್ಜಿಯು ತಾ. 20-7-1943 ರಲ್ಲು ಮೇಲ್ಕಂಡ ಕೋರ್ಟಿನಲ್ಲಿ ತನಿಖೆಯಿಟ್ಟಿದೆ. ಆ ಕುರಿತು ಆಕ್ಷೇಪಿಸುವವರು ತಮ್ಮ ಆಕ್ಷೇಪವನ್ನು ಸದ್ರಿ ತಾರೀಕಿನ ಒಳಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರ್ದು ಮಾಡಬಹುದೆಂಬ ಸಂಗತಿ ಈ ಮೂಲಕ ತಿಳಿಸೋಣಾಗುತ್ತದೆ.

ಕಾಸರಗೋಡು ತಾ. 21-6-43 } C. Rama Rao, ಅರ್ಜಿದಾರರ ವಕೀಲ್.

ಯುದ್ಧಾನಂತರ

ಯೂರೋಪ್ ಕಮುನಿಸ್ಟ್‌ರಾಜ್ಯವಾದೀತು!

ಇಂಗ್ಲೆಂಡಿನ ಕೆಲವು ಚಿತ್ರಗಳು

ಶ್ರೀ. ತಾಮಣಕರರ ಭಾಷಣ

"ಈ ಯುದ್ಧದಲ್ಲಿ ಬ್ರಿಟಿಷರು ಗೆದ್ದರೂ, ಮುಂದೆ ಬ್ರಿಟಿಷ್ ಸಾಮ್ರಾಜ್ಯ ಉಳಿಯ ಲಾರದು. ತಮ್ಮ ಸಾಮ್ರಾಜ್ಯವನ್ನು ತಾವು ಕಳೆದುಕೊಳ್ಳಲು ಸಿದ್ಧರಿಲ್ಲವೆಂದು ಚರ್ಚಿಲರು ಎಷ್ಟೋ ಹೇಳಿದರೂ ಅದು ಉಳಿಯುವುದಿಲ್ಲವೆಂದು ಜನತೆಗೆ ಗೊತ್ತಾಗಿದೆ. ಜರ್ಮನಿಯಲ್ಲಿ ಯುದ್ಧಾನಂತರ ಕಮುನಿಸ್ಟ್ ಪಕ್ಷ ಸ್ಥಾಪಿಸಲ್ಪಡುವುದು. ಬ್ರಿಟಿಷ್ ಸರಕಾರದ ಮೇಲೂ ಕಮುನಿಸ್ಟ್ ನೆರಳು ಬಿದ್ದೇ ಬೀಳುವುದು. ಅಂತೂ ಯುದ್ಧಾನಂತರ ಹೊಸ ಜಗತ್ತು ನಿರ್ಮಿತವಾಗುವುದು, ಇಂಗ್ಲಂಡಿನಲ್ಲಿ ರಕ್ತ ಚೆಲ್ಲದೆ ಕ್ರಾಂತಿಯಾಗುವುದು" ಹೀಗೆಂದು ಪುಣೆಯ ಕೇಸರೀ ಪತ್ರದ ಇಂಗ್ಲೆಂಡಿನ ಬಾತ್ಮೀದಾರರಾದ ಶ್ರೀ. ಡಿ ವಿ. ತಾಮಣಕರರು ಬೆಳಗಾವಿಯಲ್ಲಿ ಒಂದು ಭಾಷಣವೀಯುತ್ತಾ ಹೇಳಿದರು ಅವರು ತಮ್ಮ ಭಾಷಣದಲ್ಲಿ ಯುದ್ಧ ಪ್ರಾರಂಭದಲ್ಲಿ ಕಮುನಿಸ್ಟರು ತಳೆದ ಧೋರಣೆ, ಇಂಗ್ಲೆಂಡಿನ ಜೀವನ, ಯೂರೋಪಿನ ಪತ್ರಿಕೋದ್ಯಮ ಮೊದಲಾದ ವಿಷಯಗಳನ್ನು ವಿವರಿಸಿದರು ಅದರ ಸಾರಾಂಶ ಇಂತಿದೆ

'ಅಲ್ಲಿಯ ಪತ್ರಿಕೆಗಳು ಇಂದು ಕೇವಲ ವಾರ್ತಾ ಪ್ರಚಾರ ಪತ್ರಿಕೆಗಳಲ್ಲ. ಈ ಯುದ್ಧವು ತಮ್ಮ ಯುದ್ಧವೆಂದು ತೋರುವಂತೆ ಅವು ಪ್ರಚಾರ ಮಾಡುತ್ತವೆ, ಜನರಲ್ಲಿ ಜಾಗೃತಿ ಹುಟ್ಟಿಸುತ್ತವೆ. ಅದೇ ಅಲ್ಲಿನ ಪತ್ರಿಕೆಗಳ ಮುಖ್ಯ ಕಾರ್ಯ. ಯುದ್ಧ ಪ್ರಾರಂಭವಾದ ಕೂಡಲೇ ಕಮುನಿಸ್ಟರು ತುಂಬಾ ಅಸಮಂಜಸತನ ತೋರಿಸಿದರು. ಹೇರಿಪಾಲಿಟ್ ಎಂಬವರು ಈ ಯುದ್ಧವು ನಮ್ಮ ಯುದ್ಧ, ಇದನ್ನು ನಾವು ಗೆಲ್ಲಲೇಬೇಕೆಂದರು ಮುಂದೆ ಕೆಲವೇ ದಿನಗಳಲ್ಲಿ, ಈ ಯುದ್ಧವು ಸಾಮ್ರಾಜ್ಯಶಾಹೀ ಯುದ್ಧ, ಕೂಲಿಗಾರರಿಗೂ ಇದಕ್ಕೂ ಸಂಬಂಧವಿಲ್ಲವೆಂದು ಹೇಳಿ ತುಂಬಾ ಮೂರ್ಖತ್ವ ತೋರಿದರು ಇಲ್ಲಿ ಯಾರಾದರೂ ಕಮುನಿಸ್ಟರಿದ್ದರೆ ಅವರಿಗೆ ಸಿಟ್ಟು ಬಂದೀತು—ಏಕೆಂದರೆ ಯೂರೋಪಿನ ಆ ಕಮುನಿಸ್ಟ್ ಮುಂದಾಳುಗಳೇ ಮೂರ್ಖರೆಂದ ಮೇಲೆ ಅವರನ್ನು ಹಿಂಬಾಲಿಸುವ ಇವರಿಗೆ ಏನನ್ನಬೇಕೋ ನೀವೇ ಊಹಿಸಿರಿ!

"ಪ್ರಾರಂಭದಲ್ಲಿ ಇಂಗ್ಲೆಂಡಿನಲ್ಲಿ ಯುದ್ಧ ಪ್ರಯತ್ನ ಏನೂ ಇರಲಿಲ್ಲ. ಹಿಟ್ಲರನು ಇಂಗ್ಲೆಂಡಿಗೆ ಮುತ್ತಿಗೆ ಹಾಕಿರಲಿಲ್ಲ. ನಮಗೆ ಒಂದು ರಾತ್ರಿ ಕಳೆಯಬೇಕಾದರೆ ಒಂದು ಶತಮಾನ ಕಳೆದಂತೆ ಆಗುತ್ತಿತ್ತು. ಎಷ್ಟೋ ಸಂದರ್ಭಗಳಲ್ಲಿ ನಮ್ಮ ಕಣ್ಣೆದುರೇ ಆಕಾಶದಲ್ಲಿ ವಿಮಾನ ಯುದ್ಧಗಳಾಗುತಿದ್ದವು. ಆ ಸಮಯ ಜರ್ಮನರ ೫೦,೬೦ ವಿಮಾನಗಳು ಬಂದರೆ ಬ್ರಿಟಿಷರಲ್ಲಿ ಎದುರಿಸಲು ೪-೬ ವಿಮಾನಗಳಿಂತಿದ್ದವು. ಆದರೂ ಅವರು ಸಾಹಸದಿಂದ ಹೋಗಿ ವೈರಿಗಳನ್ನೆದುರಿಸುತ್ತಿದ್ದರು. ಒಮ್ಮೆ ನಾನು ಒಂದು 'ಶೆಲ್ಟರಿ'ನಲ್ಲಿದ್ದೆ. ಅಲ್ಲಿ ಬೇಸತ್ತು ನಾವು ೩೪ ಜನ ಹೊರಗೆ ಬಂದೆವು. ಉತ್ತರ ಕ್ಷಣದಲ್ಲಿಯೇ ಆ ಶೆಲ್ಟರಿಗೆ ಬಾಂಬು ಬಿದ್ದು ಅಲ್ಲಿದ್ದವರೆಲ್ಲಾ ಮಡಿದು ಹೋದರು ಒಮ್ಮೆ ನನ್ನ ಹತ್ತಿರ ೧೦-೧೨ ಯಾರ್ಡು ದೂರ ಒಂದು ಬಾಂಬು ಸಿಡಿಯಿತು. ಆ ಕಾಲದಲ್ಲಿ ಒಬ್ಬರನ್ನೊಬ್ಬರು ಹೆಣ್ಣು ಗಂಡೆಂದಿಲ್ಲದೆ ಗಟ್ಟಿಯಾಗಿ ಅಪ್ಪಿಕೊಳ್ಳುತ್ತಿದ್ದರು ಓರ್ವ ಆಂಗ್ಲ ತರುಣಿ ಆಕೆಯ ಎದುರಿಗಿದ್ದ ಓರ್ವ ನೀಗ್ರೋ ಯುವಕನನ್ನಪ್ಪಿಕೊಂಡಳು. ಅದೇ ಮುಂದೆ ಅವರ ಲಗ್ನವಾಗಿಯೂ ಪರಿಣಮಿಸಿತು!

"ಯುದ್ಧ ಪ್ರಾರಂಭವಾದೊಡನೆಯೇ ಅಲ್ಲಿನ ಮಹಿಳೆಯರನ್ನು ಯುದ್ಧರಂಗಕ್ಕೆ ಕರೆದರು ಸಾವಿರಾರು ತರುಣಿಯರು ನಾಮುಂದೆ ನಾಮುಂದೆ ಎಂದು ಬಂದರು ಇವರೆಲ್ಲ ತರುಣರೊಡನೆ ಭುಜಕ್ಕೆ ಭುಜ ತಾಗಿಸಿ, ಎದೆಗೆ ಎದೆ ತಾಗಿಸಿ ಕೆಲಸಮಾಡಿದರು. ಕೆಲ ಪುರಾಣ ಮತವಾದಿಗಳಿಗದು ಸರಿ ಬೀಳಲಿಲ್ಲ. ಕೆಲವರು ಕೇರಟರ್ಬರಿ ಆರ್ಚ್ ಬಿಶಪರ ಬಳಿ ಹೋದರು 'ಈಗ ರಾಷ್ಟ್ರರಕ್ಷಣೆ ಮುಖ್ಯ ಕಾರ್ಯ, ಅದಕ್ಕೆ ಅನುಕೂಲವಾಗದ ಧರ್ಮ ನೀತಿ ನಮಗೆ ಏಕೆ' ಎಂದು ಅವರು ತರುಣ ತರುಣಿಯರ ಚಲ್ಲಾಟಕ್ಕೆ ಉತ್ತೇಜನವಿತ್ತರು. ಈಗ ನೋಡಿದರೆ ೧೦೦ಕ್ಕೆ ೮೦ ಮಂದಿ ಮಹಿಳೆಯರಿಗೆ ಸ್ಪೆಶಲ್ ರಜೆ ಕೊಟ್ಟು ಆಗಾಗ ಕಳುಹಿಸಬೇಕಾಗಿ ಬರುತದೆ ಕೆಲವರೇನೋ ಮದುವೆ ಮಾಡಿಕೊಳ್ಳುತ್ತಾರೆ. ಕೆಲವರು ಅನಾಥಾಲಯಕ್ಕೆ ಹೋಗಿ, ಹಡದು, ಬಾಣಂತಿತನ ತೀರಿಸಿ, ಮಗುವನ್ನು ಅಲ್ಲೇ ಬಿಟ್ಟು ಪುನಃ ತಮ್ಮ ಕೆಲಸಕ್ಕೆ ಸುರುಮಾಡುತ್ತಾರೆ. ಹೀಗಾದರೂ ಇದನ್ನು ಯಾರೂ ಅಪಮಾನವೆಂದು ಭಾವಿಸುವುದಿಲ್ಲ ನೀತಿ ನಿಯಮಗಳೆಲ್ಲಾ ಮನುಷ್ಯ ಮಾಡಿದ್ದೇ ಹೊರತು ನಿಸರ್ಗ ಮಾಡಿದ್ದಲ್ಲ. ಆದ್ದರಿಂದ ಪ್ರಕೃತಿ ನಿಯಮಕ್ಕನುಸರಿಸಿ ಯುವಕ ಯುವತಿಯರು ಮಿಳನವಾದರೆ ತಪ್ಪೇನಿದೆ? ಇದು ಅವರ ಇಂದಿನ ವಿಚಾರ ಸರಕಾರವೇ ಇದಕ್ಕೆ ಬೇಕಾದ ವ್ಯವಸ್ಥೆ ಮಾಡುತ್ತದೆ.

"ಯುದ್ಧವೆಂಬುವು ಒಂದು ವಿಚಿತ್ರ ವಿಷಯ. ಯಾವ ಕಾಲಕ್ಕೆ ಏನಾದೀತೋ ತಿಳಿಯದು. ನಾಳೆ ರಶ್ಯ ಜರ್ಮನಿ ರಾಜಿಯಾದರೂ ಆದೀತು. ಬ್ರಿಟನು ಗೆದ್ದರೂ ಗೆದ್ದೀತು. ಯಾರಿಗೂ ಅದು ಹೀಗೆಯೇ ಎಂದು ಹೇಳಬರುವುದಿಲ್ಲ."

ಸ್ವದೇಶಾಭಿಮಾನಿಗೆ
ಜಾಹೀರಾತು ಕೊಡಿರಿ



ಯುದ್ಧದ ದೆಸೆಯಿಂದಾಗಿ, ಎಂಡ್ರೂಸ್ ಲಿವರ್‌ಸಾಲ್ಟ್ ಈಗ ದೊರಕುವುದಿಲ್ಲವೆಂಬುದು ವಿಷಾದಕರವಿದೆ ಆದರೆ ಅಂತರ್ರಾಷ್ಟ್ರೀಯ ಪರಿಸ್ಥಿತಿ ಸುಧಾರಿತವಾದ ಕೂಡಲೇ ಇದು ಖಂಡಿತ ದೊರಕುವುದು.

ಚರ್ಮವ್ಯಾಧಿಗಳು ಮೇಜಿಕಿನಂತೆ
ಮಾಯವಾಗುವುವು!
ಕುಟಿಕೂರಾ ಮುಲಾಮು
(Cuticura Ointment)
ಚರ್ಮವ್ಯಾಧಿಗಳನ್ನು ಉಂಟು ಮಾಡುವ ಕ್ರಿಮಿಗಳನ್ನು ನಾಶಗೊಳಿಸುವುದು.

ಕುಟಿಕೂರಾ ಮುಲಾಮು
CUTICURA OINTMENT

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದುದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

The Bank of Mangalore Limited, Mangalore.
ESTD. 1931
HEAD OFFICE Mangalore. *BRANCHES* Moodabidri & Padubidri.
The Bank Undertake to Collect Cheques, Demand and Documentary Bills at Most Competitive Rates.
ISSUES DRAFTS ON ALL IMPORTANT TOWNS IN THE DISTRICT
and also on
BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.
at very favourable rates
All kinds of inland banking business undertaken

ಹುಳುಕಡ್ಡಿ ಮದ್ದು



ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಏಕ್ಸಿ ಉಪದ್ರವ, ಶಶಿ ಹುಣ್ಣು, ವ್ರಣ ಮೊದಲಾದ ಎಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,
ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ನೀವೀವರೆಗೆ ವಿಮೆಯನ್ನು ಇಳಿಸದಿದ್ದರೆ, ಯಾ ಸಾಕಷ್ಟು ವಿಮೆಯನ್ನು ಮಾಡಿಲ್ಲವಾದರೆ

ದಿ ಬಾಂಬೆ ಲೈಫ್ ಅಶ್ಶೂರೆನ್ಸ್ ಕಂಪೆನಿ ಲಿಮಿಟೆಡಿನಲ್ಲಿ

ಈಗಲೇ ವಿಮೆ ಇಳಿಸಿರಿ.

ಏಕೆಂದರೆ

1. ಜೀವವಿಮೆಯು ಒಬ್ಬನ ವೃದ್ಧಾಪ್ಯದ ಮತ್ತು ಸಮೀಪದ ಹಾಗೂ ಪ್ರೀತಿಯ ಸಂಬಂಧಿಕರ ಜೀವನವನ್ನು ಸುರಕ್ಷಿತಗೊಳಿಸುತ್ತದೆ.
2. ನೀವಿಂದು ವಿಮೆಯನ್ನಿಳಿಸಬಲ್ಲಿರಾದರೆ ನಾಳೆ ಹಾಗೆ ಮಾಡಲು ಶಕ್ತರಾಗದೆ ಹೋಗಬಹುದು.
3. ಆರೋಗ್ಯವು ಅನಿಶ್ಚಿತವೆಂದಾದರೆ ಮೃತ್ಯುವು ಯಾರನ್ನೂ ಬಿಡುವಂತಿಲ್ಲ.
4. ಮೃತ್ಯು ಮತ್ತು ಮುಪ್ಪು ಎಂಬುದು ಅಮೂಲ್ಯವಾದೊಂದು ನಿಶ್ಚಿತ.
5. ಜೀವವಿಮೆಯು ಮರಣದ ಕ್ರೂರತೆಯನ್ನು ಹೋಗಲಾಡಿಸುವುದೊಂದೇ ಅಲ್ಲ; ಅದರ ಸಂಕಷ್ಟವನ್ನೂ ದೂರೀಕರಿಸುತ್ತದೆ.

ಆದುದರಿಂದ ಇಂದೇ ಜೀವವಿಮೆ ಮಾಡುವುದು ಲಾಭಕರವಾಗಿದೆ.

ವಿಶೇಷ ಮಾಹಿತಿಗೆ ದಯಮಾಡಿ ಬರೆಯಿರಿ:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ—ದ. ಕನ್ನಡ

—: ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ :—

ಮಂಗಳೂರು ಕಲ್ಲಿಕೋಟೆ ಸೇಲಂ ತಿರುವಾಂಕೂರು ಬೆಂಗಳೂರು ನಗರ ಮತ್ತು ಬೊಂಬಾಯಿ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'.

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು:—
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಷೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.
ಡಿಪೋ:—1. ವೆಂರಾಕ ಗಲ್ಲಿ ಹುಬ್ಬಳ್ಳಿ.
2. 36 ಪ್ಯಾಕ್ರಾಫ್ಟ್ಸ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.
ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಕು 9—7—1943 [ಸಂಚಿಕೆ 28]

‘ಬಂಗಾಳದ ಗವರ್ನರರು ಮನೆಗೆ ಹೋಗಬೇಕು’

ಸುಭಾಸ ಭೋಸರು ಬರ್ಲಿನ್‌ನಲ್ಲಿ?

‘ಸ್ವಾತಂತ್ರ್ಯ ದಿನ’ದ ಭಾಷಣ!

‘ಸುಭಾಸಬೋಸರು ಬರ್ಲಿನಿನಲ್ಲಿ ‘ಸ್ವಾತಂತ್ರ್ಯ ದಿನ’ದಂದು ಭಾಷಣ ಕೊಡುತ್ತಿರುವ ಒಂದು ಫೋಟೋ ಲಂಡನಿನ ‘ಇಲಸ್ಟ್ರೇಟೆಡ್ ನ್ಯೂಸ್’ ಪತ್ರಿಕೆಯಲ್ಲಿ ಪ್ರಕಟವಾದುದನ್ನು ‘ಇದೇ ತಾ. ೩ರ ‘ಹಿಂದೂ’ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. ಆ ಫೋಟೋ ಸುಬಾಸಬೋಸರನ್ನೇ ಸರಿಯಾಗಿ ಹೋಲುತ್ತದೆ. ಜರೂಸಲೇಮಿನ ಮಾಜಿ ಮುಫ್ತಿಯವರು ಬೋಸರ ಭಾಷಣವನ್ನು ಕೇಳುತ್ತಿರುವ ಫೋಟೋ ಕೂಡ್ಲಾ ಆ ಫೋಟೊದ ಬಲಗಡೆಯಲ್ಲಿ ಕೊಡಲಾಗಿದೆ. ಬೋಸರು ಶತ್ರು ರಾಜ್ಯದಲ್ಲಿದ್ದಾರೆಂದು ಚಿತ್ರ ಸಹಿತ ಪ್ರಚಾರಮಾಡುವ ಸಾಹಸದಲ್ಲಿ ಇದು ಬಹುಶಃ ಮೊದಲನೆಯದು!

ಗಾಂಧಿಜಿಯ ಸಪ್ಟಂಬರ ಪತ್ರ ಸರಕಾರ ಯಾಕೆ ಪ್ರಕಟಿಸಲಿಲ್ಲ?

೧೯೪೨ ಸಪ್ಟಂಬರ ೨೩ರಂದು ಗಾಂಧಿಜಿ ವೈಸರಾಯರಿಗೊಂದು ಪತ್ರ ಬರೆದಿದ್ದು ಅದರಲ್ಲಿ ದೇಶದಲ್ಲಿ ಆಗುತ್ತಿರುವ ಹಿಂಸಾತ್ಮಕ ಕಾರ್ಯಗಳನ್ನು ಕುರಿತು ತಮ್ಮ ವಿಷಾದ ವ್ಯಕ್ತಪಡಿಸುತ್ತಾರೆ. ಕಾಂಗ್ರೆಸಿನ ನೀತಿ ಅಹಿಂಸಾತ್ಮಕವಿರುವುದೆಂದು ಸ್ಪಷ್ಟಪಡಿಸಿದ್ದಾರೆ. ಆದರೆ ವೈಸರಾಯರು ಆ ಪತ್ರವನ್ನು ಪ್ರಕಟಿಸಲೇ ಇಲ್ಲ. ಆ ಮೇಲೆ ವೈಸರಾಯರು ರಾಜಾಜಿಗೆ ಭೇಟಿ ಕೊಟ್ಟಾಗಲೂ ಆ ಪತ್ರದ ವಿಷಯ ಏನೂ ತಿಳಿಸಲಿಲ್ಲ. ಗಾಂಧಿಜಿ ಮಹೋಪವಾಸ ತೊಡಗಿದ ಸಂದರ್ಭದಲ್ಲಿ, ಎಂದರೆ ೧೯೪೩ ಸಪ್ಟಂಬರ ೧೪ರಂದು ಆ ಪತ್ರವು ಇತರ ಪತ್ರಗಳೊಂದಿಗೆ ಹೊರಬಿತ್ತು! ಹೀಗಿರುವಾಗ ಈ ಅವಧಿಯ ಐದು ತಿಂಗಳಲ್ಲಿ ದೇಶಸರ್ವತ್ರ ಆದ ಹಿಂಸಾತ್ಮಕ ಕೃತ್ಯಗಳಿಗೆ ಹೊಣೆಗಾರರು ಯಾರು? ಗಾಂಧಿಜಿ ಮೊದಲೇ ತಮ್ಮ ನಿಷೇಧ ತಿಳಿಸಿದ್ದಾರೆ. ವೈಸರಾಯರು ಸಪ್ಟಂಬರದಲ್ಲಿಯೇ ಈ ಪತ್ರವನ್ನು ಪ್ರಕಟಿಸುತ್ತಿದ್ದರೆ, ಹಿಂಸಾ ಕಾರ್ಯದಲ್ಲಿ ನಿರತರಾದವರು ತಾವಾ ಕೆಲಸಗಳನ್ನು ಮಾಡುವಾಗ ಆಲೋಚನೆ ಮಾಡುತ್ತಿದ್ದರು. ಗಾಂಧಿಜಿಗೆ ಇದು ಹಿತವಾಗಿಲ್ಲವೆಂದು ತಿಳಕೊಳ್ಳುತ್ತಿದ್ದರು. ಕಾಂಗ್ರೆಸಿನ ಹೆಸರಲ್ಲಿ ಇಂಥಾ ಹಿಂಸಾತ್ಮಕ ಚಟುವಟಿಕೆ ನಡೆಸುವುದು ನಿಲ್ಲುತ್ತಿತ್ತು. ಉಪವಾಸ ಸಂದರ್ಭ ರಾಜಾಜಿ ಗಾಂಧಿಜಿಯ ಭೇಟಿಯಾದಾಗ ಮಹಾತ್ಮರು ‘ನನ್ನ ಪತ್ರವನ್ನು ಸರಕಾರದವರು ಮೊದಲೇ ಪ್ರಕಟಿಸಬೇಕಿತ್ತು’ ಎಂದಿರುವರು. ಪಾರ್ಲಿಮೆಂಟಿನಲ್ಲಿ ಅಮೆರಿಯೊಡನೆ ಈ ಕುರಿತು ಪ್ರಶ್ನೆ ಕೇಳಿದಾಗ, ಗಾಂಧಿ ಹಾಗೆಂದು ಪತ್ರ ಬರೆಯಲೇ ಇಲ್ಲವೆಂದು ಹೇಳಿಬಿಟ್ಟರು! ಗಾಂಧಿಜಿ ಬರೆದೀ ಪತ್ರವನ್ನು ಲಂಡನ್ ಅಮೆರಿಕ ಪತ್ರಿಕೆಗಳಲ್ಲಿಯೂ ಪ್ರಕಟಿಸಲಿಲ್ಲ. ಮಹಾತ್ಮರ ಮಹೋಪವಾಸದ ಸಂದರ್ಭದಲ್ಲಿ, ಭಾರತದ ಪತ್ರಿಕೆಗಳಲ್ಲಿ ಪ್ರಕಟವಾದ ದೀರ್ಘ ಪತ್ರ ವ್ಯವಹಾರವು ಅಲ್ಲಿಗೆ ಮುಟ್ಟಿದಾಗ ಮಾತ್ರ ಅಲ್ಲಿನವರು ಈ ವಿಷಯ ತಿಳಕೊಳ್ಳುವಂತಾಯಿತು. ‘ಗಾಂಧಿಜಿ ಹಿಂಸಾತ್ಮಕ ಚಟುವಟಿಕೆಯನ್ನು ಖಂಡಿಸಿದ್ದಾರೆಂದು ಈ ಪತ್ರದಿಂದ ಅತ್ಯಂತ ಸ್ಪಷ್ಟವಾಗುತ್ತದೆ. ಇದನ್ನು ಪ್ರಕಟಿಸದೆ ಸರಕಾರವು ಮಹಾಪರಾಧ ಮಾಡಿದೆ’ ಎಂದು ಪಾರ್ಲಿಮೆಂಟ್ ಸದಸ್ಯರಾದ ಸೊರೆನ್ಸನರು ಹೇಳುತ್ತಾರೆ. ರಾಜಾಜಿ ಮೊದಲೇ ಈ ಬಗ್ಗೆ ಸರಕಾರದ ನೀತಿಯನ್ನು ಖಂಡಿಸಿವಾರೆ. ಹಿಂಸಾತ್ಮಕ ಕೃತ್ಯ ಮಾಡಬೇಕಾಗಿದ್ದುದು ಗಾಂಧಿಜಿಗೋ ಅಥವಾ ಸರಕಾರಕ್ಕೋ ಎಂಬುದು ಇದರಿಂದ ಖಚಿತವಾಗುವುದಿಲ್ಲವೆ?

ಬರ್ಲಿನಿನಲ್ಲಿ ಬೋಸರು ಭಾಷಣ ಮಾಡುತ್ತಾರೆ! ಗಾಂಧಿಜಿಯ ಸಪ್ಟಂಬರ ಪತ್ರ ಯಾಕೆ ಪ್ರಕಟಿಸಲಿಲ್ಲ?

‘ಸರ್ ಜಾನ್ ಹರ್ಬರ್ಟರು ಮನೆಗೆ ಹೋಗಬೇಕಿತ್ತು’

ಬಂಗಾಳ ಗವರ್ನರರ ಕಾರಭಾರ

ಪಜುಲುಲ್ ಹಕ್ಕರ ಖಂಡನೆ

ಬಂಗಾಳ ಅಸೆಂಬ್ಲಿ ಅಧಿವೇಶನದಲ್ಲಿ ಅಲ್ಲಿನ ಮಾಜಿ ಮುಖ್ಯಮಂತ್ರಿ ಪಜ್ಲುಲ್ ಹಕ್ಕರು ಬಂಗಾಳ ಗವರ್ನರ ಸರ್ ಜಾನ್ ಹರ್ಬರ್ಟರ ಉದ್ಧಟತನದ ಕಾರಭಾರಿನ ವಿಷಯ ಖಂಡಿಸಿ ಉಲ್ಲೇಖಿಸಿದರು. ಸಂರಕ್ಷಣ ಕಾಯಿದೆಯನ್ನು ಸಿಕ್ಕಾಬಟ್ಟೆ ಉಪಯೋಗಿಸಿದ್ದು, ಕಂಡಕಂಡವರನ್ನು ಕೈಸೆರೆಹಿಡಿದದ್ದು, ಸಿಕ್ಕಸಿಕ್ಕವರ ಮೇಲೆ ಸಾಮೂಹಿಕ ದಂಡವಿಧಿಸಿದ್ದು, ತಾನು ರಾಜಿನಾಮೆ ಕೊಟ್ಟದ್ದು ಇವುಗಳ ವಿಸ್ತಾರ ವಿವರ ಹೇಳಿದರು. ಕಳೆದ ಆರು ವರ್ಷಗಳಿಂದಲೂ ಪಜುಲುಲ್ ಹಕ್ಕರು ಬಂಗಾಳದ ಮುಖ್ಯ ಮಂತ್ರಿಗಳಾಗಿದ್ದು ಈಗ ರಾಜಿನಾಮೆ ಕೊಟ್ಟು ವಿರೋಧಪಕ್ಷದಲ್ಲಿದ್ದಾರೆ. ಅವರ ಸಂಗಡ ಡಾ. ಶ್ಯಾಮಪ್ರಸಾದ ಮುಖರ್ಜಿ, ಸಂತೋಷ ಕುಮಾರಬಸು, ಖ್ವಾಜಾಸೇದ್ದಿನ್ ಮಹಮ್ಮದ್ ಮೊದಲಾದವರಿದ್ದರು. ಇವರೆಲ್ಲ ಹಕ್ಕರ ಮಂತ್ರಿಮಂಡಳದಲ್ಲಿ ಮಂತ್ರಿಗಳಾಗಿದ್ದರು.

ಪ್ರಶ್ನೋತ್ತರ ಮುಗಿದ ನಂತರ ಪಜುಲುಲ್ ಹಕ್ಕರು ಮತ್ತು ಅವರ ಮೂವರು ಸಹೋದ್ಯೋಗಿಗಳು ರಾಜಿನಾಮೆಯಿತ್ತ ವಿಷಯ ಕೇಳಿಕೊಡಬೇಕೆಂದು ಕೇಳಿದರು. ದೀರ್ಘ ಚರ್ಚೆಯ ಬಳಿಕ ಅವರಿಗೆ ಹೇಳಿಕೆ ಕೊಡಲು ಅನುಮತಿ ಸಿಕ್ಕಿತು. ಆಗ ಹಕ್ಕರು ಹೀಗಂದರು:

ಶಾಸನ ಸಭೆ ನಿಯಮದಂತೆ ನಾನು ರಾಜಿನಾಮೆ ಕೊಟ್ಟಿದ್ದೆಂದು ಅಮೆರಿ ಹೇಳುತ್ತಾರೆ. ಆದರೆ ನಾನಿದನ್ನು ಪ್ರತಿಭಟಿಸಿ ಅವರಿಗೆ ತಂತಿ ಕಳುಹಿಸಿದ್ದೇನೆ. ಅದರಂತೆ ಅಮೆರಿಗೆ ಸತ್ಯ ಸಂಗತಿ ತಿಳಿಸಿರೆಂದು ವೈಸರಾಯರಿಗೂ ತಂತಿ ಬಿಟ್ಟಿದ್ದೇನೆ. ಭಾರತವು ಸ್ವತಂತ್ರವಿದ್ದರೆ ಹಾಗೂ ಈ ಸಭೆಯು ನಿಜವಾಗಿ ಪ್ರಜಾಪ್ರತಿನಿಧಿ ಸಭೆಯಾಗಿದ್ದರೆ ಸರ್ ಜಾನ್ ಹರ್ಬರ್ಟರು ಎಂದೋ ಮನೆಗೆ ಹೋಗುತ್ತಿದ್ದರು. ೧೯೪೧ರಿಂದ ನಾನು ಮಂತ್ರಿಮಂಡಳ ಸ್ಥಾಪಿಸಿದಂದಿನಿಂದ ಎಷ್ಟೋ ಸಲ ನನಗೆ ಅವರು ತೊಂದರೆ ಕೊಡುತ್ತಿದ್ದರು. ನನ್ನ ಬಗ್ಗೆ ಸಹಾನುಭೂತಿಯಿಲ್ಲದವರಿದ್ದರು. ನನ್ನ ನಿತ್ಯದ ಕೆಲಸದಲ್ಲಿಯೂ ಅವರು ಕೈಹಾಕುತ್ತಿದ್ದರು. ಅವರ ತೊಂದರೆ ವಿಶೇಷವಾಗುತ್ತಿದ್ದುದರಿಂದ ಶಾಸನ ಸಭಾ ನಿಯಮದಂತೆ ಅವರು ವರ್ತಿಸಬೇಕೆಂದು ನಾನವರಿಗೆ ಪತ್ರ ಬರೆದೆ. ಅದಕ್ಕೆ ಅವರ ಉತ್ತರ ಬರಲಿಲ್ಲ. ಅಗಸ್ಟ್ ೯ರ ನಂತರ ಕಾಂಗ್ರೆಸನ್ನು ಸದೆಬಡೆಯುವ ನೆವನದಿಂದ ಬಂಗಾಳದಲ್ಲಿ ನಿಜವಾದ ದಬ್ಬಾಳಿಕೆಯೇ ಮಿತಿಮೀರಿತು. ಪ್ರಜಾಮುಖಂಡರನ್ನು ಬಂಧಿಸಲು, ಬೇಕಾದಷ್ಟು ಸಾಮೂಹಿಕ ದಂಡ ಹೇರಲು ಕಾನೂನನ್ನು ದುರುಪಯೋಗ ಮಾಡಲಾಯಿತು. ಇಂಥಾ ಹಲವು ಸಂದರ್ಭಗಳಲ್ಲಿ ನನ್ನ ಹಾಗೂ ಪೋಲೀಸರ ಮತ್ತು ನನ್ನ ಹಾಗೂ ಗವರ್ನರರ ಒಮ್ಮತವಿರಲಿಲ್ಲ. ನಾನು ಕೆಲವರನ್ನು ರುಜುವಾತಿಲ್ಲದೆ ಬಂಧಿಸಕೂಡದೆಂದು ಹೇಳಿದ್ದೆ. ಆದರೆ ಇಂದಿನ ಮಂತ್ರಿಮಂಡಳವನ್ನು ಮೇಲೆತ್ತುವ ಉದ್ದೇಶದಿಂದ ಅವರನ್ನೀಗ ಗವರ್ನರರು ಬಿಡುಗಡೆ ಮಾಡಿದ್ದಾರೆ. ಆದರೆ ಜನರಿಗೆ ಈ ಗುಟ್ಟು ಗೊತ್ತಾಗದಿರದು.

‘ಗವರ್ನರರು ನನ್ನೊಡನೆ ರಾಜಿನಾಮೆಕೊಡಲು ಒತ್ತಾಯ ಮಾಡಿದಾಗ ನಾನು ಜೋರಾಗಿ ಪ್ರತಿಭಟಿಸಿದೆ. ಒಂದು ಟೈಪುಮಾಡಿದ ಕಾಗದವನ್ನು ತಂದು ನನ್ನ ಮುಂದಿರಿಸಿ ರಾಜಿನಾಮೆಯ ಸಹಿ ಹಾಕಲು ಹೇಳಿದರು. ನನ್ನ ಪಕ್ಷದವರನ್ನು [illegible]ಬೇಕೆಂದು ಹೇಳಿದೆ. ಅವರ ಒತ್ತಾಯ ಜೋರಾಗುತ್ತಾ ಬಂತು. ನಾನೂ ಜೋರಾಗಿ ಪ್ರತಿಭಟಿಸಿದೆ. ಕೊನೆಗೆ ಅವರು ಈಗ ರಾಜಿನಾಮೆ ಕೊಡಿ, ಅದನ್ನು ಪ್ರಕಟಿಸುವುದಿಲ್ಲ. ಸರ್ವ ಪಕ್ಷಗಳ ಮಂತ್ರಿಮಂಡಳ ಸ್ಥಾಪಿಸಲು ಅನುಕೂಲವಾಗುವಂತೆ ಈ ಕೆಲಸಮಾಡಬೇಕಾಗಿದೆಯೆಂದು ನಯ ನುಡಿದರು. ನಾನದಕ್ಕೆ ಸಮ್ಮತಿಸಿದೆ. ಆದರೆ ರಾಜಿನಾಮೆಯನ್ನುಪಯೋಗಿಸಕೂಡದೆಂದೆ. ಆದರೆ ಗವರ್ನರರು ಮತ್ತೆ ನಾಜಿ ಮುದ್ದೀನ ಮಂತ್ರಿಮಂಡಳ ಸ್ಥಾಪಿಸಲು ಪ್ರಯತ್ನಮಾಡಿದರು. ನಾವು ಮಂತ್ರಿಮಂಡಳದಲ್ಲಿ ೮ ಜನರಿದ್ದಾಗ ಒಬ್ಬನನ್ನು ಹೆಚ್ಚಿಸಲೂ ಅಪ್ಪಣೆಕೊಡದ ಗವರ್ನರರು ಈಗ ೧೩ ಜನ ಮಂತ್ರಿ ಅಷ್ಟೇ ಪಾರ್ಲಿಮೆಂಟರಿ ಸೆಕ್ರೆಟರಿಗಳಿದ್ದ ಮಂತ್ರಿಮಂಡಳ ಸ್ಥಾಪಿಸಲು ಸಮ್ಮತಿಯಿತ್ತಿದ್ದಾರೆ. ನನ್ನ ವಿಷಯ ಸತ್ಯಸಂಗತಿಯನ್ನು ನಾನೀಗ ಜನರಿಗೆ ತಿಳಿಸಿದ್ದೇನೆ’ ಹೀಗೆಂದು ಹಕ್ಕರು ಹೇಳಿ ಈ ಸಂಬಂಧದ ಕೆಲ ಪತ್ರಗಳನ್ನೋದಿದರು. ಆ ಮೇಲೆ ಅವರ ಸಹೋದ್ಯೋಗಿಗಳೂ ಹೇಳಿಕೆಯಿತ್ತರು.

“ಆಹಾರದ ಕೊರತೆಯಿಲ್ಲ”! ‘ಸರಕಾರ ಜವಾಬ್ದಾರವಲ್ಲ’

ಅಮೆರಿ ಹಾಡು

ಭಾರತ ಮಂತ್ರಿ ಅಮೆರಿಯವರು, ಕಾಮನ್ಸ್ ಸಭೆಯಲ್ಲಿ ಮಾತನಾಡುತ್ತಾ ‘ಭಾರತದಲ್ಲಿ ಆಹಾರದ ಕೊರತೆಯಿಲ್ಲ. ಎಲ್ಲಾ ಬೇಕಾದಷ್ಟಿದೆ. ಗೋಧಿ ತುಂಬಾ ಇದೆ. ಆಹಾರ ವಿತರಣೆಯಲ್ಲಿ ತೊಂದರೆಯಾಗಿದೆ. ಇದಕ್ಕೆ ಸರಕಾರ ಜವಾಬ್ದಾರವಲ್ಲ; ಜನರೇ. ಈ ತೊಂದರೆ [illegible] ರತ ಸರಕಾರ ಆಹಾರದ ಸಮಸ್ಯೆ ಕುರಿತು ಮಾಡಿದ ಯೋಜನೆ ಯಶಸ್ವಿಯಾಗಲಿಲ್ಲ. ಆದ್ದರಿಂದ ಈಗ ಬೇರೆ ಯೋಜನೆ ಯೋಚಿಸಲಾಗಿದೆ.’ ಎಂದು ಹೇಳಿದರು.

‘ಭಾರತದಲ್ಲಿ ನೋಟುಗಳ ಅತಿ ಪ್ರಸಾರ ವಿರುದ್ಧ ಕೆಲವು ಉಪಾಯ ಕೈಕೊಳ್ಳಲಾಗಿದೆ. ಅವಶ್ಯವೆಂದು ಕಂಡು ಬಂದರೆ ಇನ್ನೂ ಕೆಲವು ಹಂಚಿಕೆ ಹೂಡಲಾಗುವುದು.’ ಎಂದೂ ಅಮೆರಿ ಹಾಡಿದರು. ‘ಭಾರತದಲ್ಲಿ ಜೀವನ ಖರ್ಚು ಎಷ್ಟರ ಮಟ್ಟಿಗೆ ಹೆಚ್ಚಿದೆಯೆಂಬುದಕ್ಕೆ ಬೇಕಾದ ಅಂಕೆ ಸಂಖ್ಯೆ ದೊರೆತಿಲ್ಲ. ಆದರೆ ಬೊಂಬಾಯಿ ಕೂಲಿಗಾರರ ವರ್ಗದಲ್ಲಿ ೧೦೦ರಿಂದ ೨೨೫ಕ್ಕೆ ಹೆಚ್ಚಿದೆ. ಇದಕ್ಕೆ ಸರಿಯಾಗಿ ಕೂಲಿ ೧೦೦ಕ್ಕೆ ೭೫ರಷ್ಟು ಹೆಚ್ಚಿಸಿದೆ. ಮತ್ತು ಕೂಲಿಗಾರರಿಗೆ ತುಟ್ಟಿಭತ್ತೆ ಕೊಡಲಾಗುತ್ತದೆ” ಎಂದೂ ಅವರು ನುಡಿದರು.

ಯುದ್ಧ ಮುಗಿದ ಹತ್ತು ವರ್ಷಗಳೊಳಗೆ ಭಾರತದ ಎಲ್ಲಾ ಹುಡುಗರಿಗೆ ಶಿಕ್ಷಣದ ಅನುಕೂಲತೆ ಮಾಡಿಕೊಡಬೇಕೆಂದು ಸೊರೆನ್ಸನರು ಹೇಳಿದ್ದಕ್ಕೆ, ನಿರಕ್ಷರತೆಯನ್ನು ನಿವಾರಿಸಲು ಬೇಕಾದ ಯೋಜನೆ ಕೈಕೊಳ್ಳಬೇಕೆಂಬ ವಿಚಾರದಲ್ಲಿ ವಿವಾದವಿಲ್ಲವೆಂದೂ, ಆ ಕುರಿತು ಸಾಧ್ಯವಾದಷ್ಟೆಲ್ಲಾ ಮಾಡಲಾಗುವುದೆಂದೂ ಅಮೆರಿ ತಿಳಿಸಿದರು.

ಭಾರತದ ಕುರಿತು ಚರ್ಚಿಲರು . .

ಕೆಲವರಿಗೆ ಆಶೆಯ ಕಿರಣ!

ಚರ್ಚಿಲ್ ಭಾಷಣವೊಂದರಲ್ಲಿ ಇತ್ತೀಚೆಗೆ ಹೀಗಂದರು: ‘ಭಾರತದಂಥಾ ದೊಡ್ಡ ರಾಷ್ಟ್ರದಲ್ಲಿ ನಾವು ಬೇಗನೇ ಸಂಪೂರ್ಣ ತೃಪ್ತಿಯನ್ನು ಬ್ರಿಟಿಷ್ ಸಾಮ್ರಾಜ್ಯದೊಡನೆ ಅದರ ಸಹಕಾರವನ್ನೂ ಕಾಣುವೆವು’ ಎಂದು. ಹೀಗೆ ಅವರು ಹೇಳಿದ್ದರಿಂದ ಹಲವು ಊಹಾಪೋಹಗಳುಂಟಾಗಿವೆ. ವೇವಲರ ನೇಮಕದ ಮೇಲೆ ಭಾರತದ ಪರಿಸ್ಥಿತಿಯಲ್ಲಿ ಬದಲಾವಣೆಯೇನಾದರೂ ಉಂಟೇ ಎಂದು ಕೆಲವರ ಊಹನೆಯಾಗಿದೆ. ವೇವೆಲರೂ ಇತ್ತೀಚೆಗೆ ಹೀಗೆ ಹೇಳಿದ್ದರು: “ಯುದ್ಧಾಂತದ ವರೆಗೆ ಭಾರತದಲ್ಲಿ ರಾಜಕೀಯ ಅಭ್ಯುದಯವಾಗಲಿಕ್ಕಿಲ್ಲವೆಂದು ಯಾರೂ ಭಾವಿಸಬಾರದು’ ಇದರಿಂದೆಲ್ಲಾ ಕೆಲವರು ಆಶಾವಾದಿಗಳಾಗಿರುವರು!

“ಪತ್ರಿಕೋದ್ಯೋಗ ಬೆಳೆಯಲು ರಾಜಕೀಯ ಬಿಡುಗಡೆಬೇಕು”

ಎಂಬುದಾಗಿ ಮೈಸೂರು ಪ್ರಾಂತ ಕನ್ನಡ ಸಾಹಿತ್ಯ ಪರಿಷತ್ ಸಮಿತಿ ಆಶ್ರಯದಲ್ಲಿ ನಡೆದ ಭಾಷಣದಲ್ಲಿ ಬೆಂಗಳೂರು ‘ತಾಯಿನಾಡು’ ‘ಡೈಲಿ ನ್ಯೂಸ್’ ಪತ್ರಿಕಾ ಸಂಪಾದಕರಾದ ಶ್ರೀ. ಪಿ. ಆರ್. ರಾಮಯ್ಯನವರು ವಿವರಿಸಿ ಹೇಳಿದರು. ಜನತೆಗೆ ಅರ್ಥವಾಗುವ ಸುಲಭ ಮತ್ತು ನೇರಾದ ಶೈಲಿಯಿರಬೇಕು, ಸಮಾಜದಲ್ಲಿ ಪ್ರಗತಿ ಕಾಂಕ್ಷೆ, ಸ್ವಾತಂತ್ರ್ಯಪ್ರೇಮ ಇರಬೇಕು, ಅದಕ್ಕೆ ಇಂಗ್ಲೆಂಡು, ಅಮೆರಿಕ, ಜಪಾನು ಮುಂತಾದ ದೇಶಗಳ ಪತ್ರಿಕೋದ್ಯಮ ಇತಿಹಾಸವೇ ದೃಷ್ಟಾಂತ, ಪತ್ರಿಕಾಭಿವೃದ್ಧಿಗೆ ಆರ್ಥಿಕ ಮೂಲವಲ್ಲ, ರಾಜಕೀಯವೇ ಮೂಲವೆಂದು ಅವರು ಅ

ರೂಸ್‌ವೆಲ್ಟರು 'ತ್ರಿಶಂಕು ಸ್ವರ್ಗ'ದಲ್ಲಿ!

ಕೂಲಿಗಾರ ಭಂಡವಾಳಗಾರರ ನಡುವೆ!

ಅಮೇರಿಕದ ಪ್ರಜಾಪ್ರಭುತ್ವವನ್ನು ಆದರ್ಶ ಪ್ರಜಾಪ್ರಭುತ್ವವೆನ್ನುವುದುಂಟು! ಅಲ್ಲಿನ ಆ ಸರಕಾರವನ್ನು 'ಜನತೆಗಾಗಿ, ಜನತೆಯಿಂದ, ಜನತೆಯ ಸರಕಾರ' ಎಂದು ಹೇಳುವುದು ಪ್ರಸಿದ್ಧ! ಆದರೆ ಇದೆಲ್ಲಾ ಬಾಯಿ ಬಡಾಯಿ! ನಿಜವಾಗಿ ನೋಡಿದರೆ, ಕಾರ್ಯತಃ "ಶ್ರೀಮಂತರಿಗಾಗಿ, ಶ್ರೀಮಂತರಿಂದ ಶ್ರೀಮಂತರ ಸರಕಾರ" ಆದಾಗಿದೆಯೀಗ! ಅಬ್ರಹಾಮ್ ಲಿಂಕನ್ ಗೋರಿ ಮೇಲಿಂದ ಎಲ್ಲಿಯಾದರೂ ತಲೆಯೆತ್ತುವ ಸಾಹಸ ಮಾಡಿದರೆ, ತನ್ನ ಸ್ಥಾಪನೆಯ ಪ್ರಜಾಪ್ರಭುತ್ವವು ಭಂಡವಾಳ ಶಾಹಿಗಳ ಕೈಯಲ್ಲಿ ಹೇಗೆ ಕುಣಿಯುತ್ತಿದೆಯೆಂಬುದನ್ನು ನೋಡಿ ಕಂಬನಿ ಸುರಿಸಲೇಬೇಕು! ಮೊನ್ನೆ ಮೊನ್ನೆಯ "ಮುಷ್ಕರ ವಿರೋಧ ಕಾನೂನು" ಮೇಲಿನ ಮಾತುಗಳಿಗೆ ಸಾಕಷ್ಟು ಆಧಾರವಾಗಿದೆ. ಕೂಲಿಗಾರರು, ಬಡವರು ಮುಷ್ಕರ ಹೂಡಲೇ ಬಾರದೆಂದು ತಾವೆಷ್ಟು ಸಂಪಾದನೆ ಹೆಚ್ಚಿಸಿಕೊಂಡರೂ ತಮ್ಮ ಕೆಲಸಗಾರರು ಅದರಲ್ಲಿ, ಇಂಥಾ ಕಷ್ಟ ಕಾಲದಲ್ಲಾದರೂ ಒಂದಿಷ್ಟು ಪಾಲು ಕೇಳಲೇ ಕೂಡದೆಂದು, ಅಂಥಾ ಕೆಲಸಗಾರರ ಕಿರುಕುಳವನ್ನು ಶಾಸನಮೂಲಕ ನಿರ್ಬಂಧಿಸುವ, ಯಾರಾದರೂ ಮುಷ್ಕರ ಹೂಡಿದ್ದಾದರೆ ಅವರನ್ನು ಬೇಕಾದರೆ ಗುಂಡಿನೇಟಿಗೂ ಬಲಿಗೊಡುವ ಶಾಸನವಿಂದು ಅಮೇರಿಕದಲ್ಲಿ ಮಂಜೂರಾಯಿತೆಂದು ಕೇಳಿ, ಯಾರಿಗೆ ತಾನೇ ಈಗಲಾದರೂ ಈ 'ಜನತೆಯ ಸರಕಾರ'ದ ಸತ್ಯಾಂಶ ತಿಳಿಯದಿರದು? 'ಭಂಡವಾಳಗಾರರನ್ನು ಬೆಳೆಯಬಿಟ್ಟರೆ ಅವರು ಎಂಥಾ ಘನ ತತ್ವವನ್ನಾದರೂ ತಲೆಕೆಳಗು ಮಾಡಿ, ತಮ್ಮ ಸ್ವಾರ್ಥವನ್ನೇ ಸಾಧಿಸಿಕೊಳ್ಳುತ್ತಾರೆಂಬುದಕ್ಕೆ ಇದು ಅತ್ಯುತ್ತಮ ನಿದರ್ಶನವಾಗಿದೆ!

ಅಮೇರಿಕದಲ್ಲಿ ಶ್ರೀಮಂತರ ಸಂಖ್ಯೆ ಜಗತ್ತಿನ ಯಾವುದೇ ರಾಷ್ಟ್ರಕ್ಕಿಂತಲೂ ಬಹಳ. ಅದರಲ್ಲೂ ಇಂದಿನೀ ಮಹಾಯುದ್ಧದ ಸಂದರ್ಭದಲ್ಲಿ ಅಲ್ಲಿನ ಕೈಗಾರಿಕೆಗಳಿಗೆ ಇನ್ನಷ್ಟು ಪ್ರೋತ್ಸಾಹ ದೊರೆತು (ಇದರಿಂದಲೇ ಅಮೇರಿಕದ ಭಂಡವಾಳ ಶಾಹಿಗಳು ಯುದ್ಧ ಇನ್ನಷ್ಟು ವರ್ಷ ಮುಂದುವರಿಯುತ್ತಿರಲಿ ಎಂದು ಪ್ರಾರ್ಥಿಸುತ್ತಾರೆ) ಅವರ ದುಡ್ಡಿಗೆ ಈಗ ಮೇರೆ ಮಿತಿ ಇಲ್ಲ. ಆದರೆ ಅಂತೆಯೇ ಅಲ್ಲಿ ಬಡವರ ಕೂಲಿಗಾರರ ಸಂಕಷ್ಟವೂ ಇದೆ. ಅಲ್ಲಿ ಮುಷ್ಕರ ಮೊದಲಾದವು ಆಗಾಗ ಉಂಟೇ ಉಂಟು. ಕೆಲಸಕ್ಕೆ ಹೋಗದೆ ನಿಂತಾಗ ಕೆಲಸಗಾರರು ಲಕ್ಷ, ಲಕ್ಷ ಸಂಖ್ಯೆಯಿಂದ ಮುಷ್ಕರ ಹೂಡುತ್ತಾರೆ. ಈ ಎರಡು ಪ್ರಬಲ ಶಕ್ತಿಗಳ ಮಧ್ಯ ನಿಂತಿರುವ 'ತ್ರಿಶಂಕು' ಸ್ಥಾನವಿಂದು ಅಮೇರಿಕದ ಅಧ್ಯಕ್ಷ ರೂಸ್‌ವೆಲ್ಟರದು! ರೂಸ್‌ವೆಲ್ಟರು ಜನ್ಮತಃ ಶ್ರೀಮಂತರು, ಉದಾರವಾದ ಮನಸ್ಸಿನವರು, ಅವಶ್ಯವಿದ್ದುದರಿಂ ದಯಾವಾಗಲೂ ಪ್ರಗತಿಪರ ಧೋರಣೆಯವರು!

ರೂಸ್‌ವೆಲ್ಟ್ 1932ರಲ್ಲಿ ಅಧ್ಯಕ್ಷಪೀಠಕ್ಕೇರಿದ್ದಾಗ, ಇಡೀ ಅಮೇರಿಕದ ಭಂಡವಾಳ ಶಾಹಿತ್ವವೇ ಪ್ರಳಯದ ಹಾದಿ ಹಿಡಿದಿತ್ತು. 'ನಿರುದ್ಯೋಗ ಭೀಷಣವಾಗಿತ್ತು, 17 ಮಿಲಿಯ ಮಂದಿ ಕೆಲಸವಿಲ್ಲದೆ ಅಲೆದಾಡುತ್ತಿದ್ದರು. ಬೇಂಕುಗಳೆಲ್ಲ ಮುಚ್ಚಲ್ಪಟ್ಟಿದ್ದವು. ಕೈಗಾರಿಕೆ ಸುಮ್ಮಗಾಗಿತ್ತು. 'ಜನತೆಯಲ್ಲಿ ಭೀತಿ ಬೆದರಿಕೆ ತುಂಬಿತ್ತು; ಎಲ್ಲರೂ ಏನೋ ಒಂದು ತೆರನ ಸಹಾಯ ಬೇಕಾಗಿದೆಯೆಂದು ಆಶಿಸುತ್ತಿದ್ದರು. ಎಲ್ಲರೂ ಹೊಸ ಆಡಳಿತಗಾರರ ಕಡೆಗೆ ಆಶಾದೃಷ್ಟಿಯಿಂದ ನೋಡುತ್ತಿದ್ದರು. ಏಕೆಂದರೆ 1932ರ ಚುನಾವಣೆಯ ಕಾಲದಲ್ಲಿ ಅವರು ಮಾಡಿದ ಪ್ರತಿಜ್ಞೆಗಳು ಸರ್ವರಿಗೂ ಸರ್ವರನ್ನೂ ಕೊಡುವುದಾಗಿತ್ತು! ಇಂಥಾ ಪರಿಸ್ಥಿತಿಯಲ್ಲಿ ರೂಸ್‌ವೆಲ್ಟರು ಅಮೇರಿಕದ ಭಂಡವಾಳ ಶಾಹಿಗಳನ್ನು ಉಳಿಸಿದರು. ಕೂಲಿಗಾರ ಶ್ರೀಮಂತರಲ್ಲಿ ಅವರು ಮಧ್ಯಸ್ಥರಾಗಿ ನಿಂತರು. ಬಡವರ ಹಸಿವು ನಿವೃತ್ತಿಗಾಗಿ, ನಿರುದ್ಯೋಗಿಗಳ ಉದ್ಯೋಗಕ್ಕಾಗಿ, ಅನೇಕ ಹೊಸ ಹೊಸ ಕಾರ್ಯಕ್ರಮಗಳು ಜಾರಿಗೆ ಬಂದವು. ನಿರುದ್ಯೋಗ ಸಮಸ್ಯೆ ಸಾಮಾನ್ಯವಾಗಿ ನಿವಾರಣೆ ಆಯಿತು. ಕೆಲವರು ಹೇಳುವಂತೆ, 'ರೂಸ್‌ವೆಲ್ಟರ ಆಡಳಿತವು ಸಂಭವನೀಯವಿದ್ದ ಒಂದು ಮಹಾಕ್ರಾಂತಿಯನ್ನೇ ತಪ್ಪಿಸಿತು'. ಹೀಗೆ ಬಡವರ ಹಸಿವು ತಣ್ಣಗಾಗುತ್ತಿದ್ದಂತೆ ಶ್ರೀಮಂತರ ಹೊಟ್ಟೆ ಉಬ್ಬೇರುತ್ತಲೂ ಇತ್ತು; ರಾಶಿ ರಾಶಿ ಬಂಗಾರ ಅವರ ಬೊಕ್ಕಸಕ್ಕೂ ಬರತೊಡಗಿತು. ಶ್ರೀಮಂತರು ಬಲವಾಗುತ್ತಾ ಬಂದರು! ಇದರ ಇಂದಿನ ಪರಿಣಾಮವೇನೆಂದರೆ, ರೂಸ್‌ವೆಲ್ಟರು ಕೂಡದೆಂದರೂ, ಅವರ ಅಧಿಕಾರವನ್ನು ತಿರಸ್ಕರಿಸಿ, ಅಮೇರಿಕನ್ ಕಾಂಗ್ರೆಸು 'ಮುಷ್ಕರ ವಿರೋಧ ಶಾಸನ'ವನ್ನು ಮಂಜೂರು ಮಾಡಿಬಿಟ್ಟಿದ್ದು!

ಅಮೇರಿಕದ ಭಂಡವಾಳಶಾಹಿಗಳು ತಮ್ಮ ಗರ್ಭದಲ್ಲಿದ್ದ 'ಫೇಸಿಸಂ' ನೀತಿಯನ್ನು ಈ 'ಮುಷ್ಕರ ವಿರೋಧ ಕಾನೂನಿ'ನ ಮೂಲಕ ಈಗ ಬಹಿರಂಗಪಡಿಸಿದ್ದಾರೆ. ಪ್ರಪಂಚದ ಎಲ್ಲಾ ಕಡೆಯ ಭಂಡವಾಳಶಾಹಿಗಳಂತೆ, ಅಮೇರಿಕದ ಶ್ರೀಮಂತರೂ 'ಬಲವಾದ ರಶ್ಯಾವಿರೋಧಿಗಳು; ಕೂಲಿಗಾರ ದ್ವೇಷಿಗಳು.' ಹಾಗೆಂದೇ ಮುಸಲನಿ ಹಿಟ್ಲರರು ತಮ್ಮ ತಮ್ಮ ರಾಜ್ಯಗಳಲ್ಲಿ, ಅವರ ಅಭ್ಯುದಯದ ಪ್ರಾರಂಭ ಕಾಲದಲ್ಲಿ ಕೈಕೊಂಡ ದಮನ ನೀತಿಯ ಸಮರ್ಥಕರು ಆರಾಧಕರೂ ಇವರು ಆಗಿದ್ದಾರೆ. ಹಾಗಾಗಿ ಈ ಅಮೇರಿಕದ ಶ್ರೀಮಂತರೂ, ಹಿಟ್ಲರ್ ಮುಸಲನಿಗಳು ಮಾಡಿದಂತೆ, ಕೂಲಿಗಾರರ ಚಳವಳವನ್ನು ಹುಟ್ಟಡಗಿಸುವ ಕಾರ್ಯಕ್ರಮವನ್ನೇ ಆಲೋಚಿಸಿದರು. ಅಮೇರಿಕದ ಹೆಚ್ಚಿನ ದೊಡ್ಡ ದೊಡ್ಡ ಉದ್ಯೋಗಿಕಾಧಿಕಾರೀ ಶ್ರೀಮಂತರು ತಮ್ಮದೇ ಆದ ಸೈನ್ಯವನ್ನು ಕೋವಿ, ರಿವಾಲ್ವರುಗಳನ್ನೂ ಇಟ್ಟುಕೊಂಡಿದ್ದಾರೆ. ಉಪ್ಟನ್ ಸಿಂಕ್ಲೇರ್ ಮತ್ತು ಸ್ಟೀನ್‌ಬೇಕ್ ಇವರ ಕಾದಂಬರಿಗಳನ್ನೋದಿದವರಿಗೆ, ಈ ಭಂಡವಾಳಗಾರರು ಹೇಗೆ ಕವಿಡ್ಡ ಆಯುಧಗಳ ಸಹಾಯದಿಂದ ಕೆಲಸಗಾರರನ್ನು ಹದಗೊಳಿಸುತ್ತಿದ್ದರೆಂದು ವಿಶದವಾಗುವುದು. ಈ ಯುದ್ಧಕ್ಕಿಂತ ಮೊದಲು, ಅಮೇರಿಕದ ಎಷ್ಟೋ ಮಂದಿ ಭಂಡವಾಳಗಾರರು, ಫೇಸಿಸ್ಟ್ ಬೆಂಬಲಿಗರು, ಅವರ ಸಹಾಯಿಗಳು ಮತ್ತು ಸಮೀಪದ ಫೇಸಿಸ್ಟರು ಎಂದೇ ಗಣಿಸಲ್ಪಟ್ಟಿದ್ದರು. ಕೂಲಿಗಾರ ಚಳವಳಿಗಾರರನ್ನು ಅವರು ಬಲವಾಗಿ ದ್ವೇಷಿಸುತ್ತಿದ್ದರು. ಇಂಥವರು ಕಮ್ಯೂನಿಸ್ಟರನ್ನು, ಸೋಶಿಯಲಿಸ್ಟರನ್ನು, ರೇಶನಲಿಸ್ಟರನ್ನು, ನಾಸ್ತಿಕರನ್ನು, ನೀಗ್ರೋಗಳನ್ನು ಮತ್ತು ವಿದೇಶಿಯರನ್ನೆಲ್ಲಾ ಕೊನೆಗೆ ರೂಸ್‌ವೆಲ್ಟ್ ಅಧಿಕಾರೀ ವರ್ಗವನ್ನೂ ಕೂಡಾ ಈ ಶ್ರೀಮಂತರು ಪ್ರೀತಿಸುತ್ತಿರಲಿಲ್ಲ. ಎಷ್ಟೋ ಮಂದಿ ಚಳವಳಿಗಾರರು ಇವರ ಹತ್ಯೆಗಳಿಗೊಳಗಾದ ಘಟನೆಗಳಿವೆ! ಈ ಅಪ್ರಾಗತಿಕ ಧೋರಣೆಯ ಶ್ರೀಮಂತರು ತಮ್ಮ ಸ್ವಾರ್ಥ ಮಾತ್ರವನ್ನು ಬಯಸುತ್ತಿರುವವರಾದ್ದರಿಂದ, ಮೆಲ್ಲ ಮೆಲ್ಲಗೆ ಸುಧಾರಣೆ ತರಲು ಪ್ರಯತ್ನಿಸುವ ರೂಸ್‌ವೆಲ್ಟರೂ ಅವರ ಕಣ್ಣಿಗೆ ಸುಣ್ಣದಂತಾದರು!

ಇತ್ತೀಚೆಗೆ ಅಮೇರಿಕದಲ್ಲಾದ ಕೂಲಿಗಾರ ಚಳವಳವು ಫೇಸಿಸ್ಟರಿಂದ ಪ್ರೇರೇಪಿಸಲ್ಪಟ್ಟಿವೆಂದು ಕೆಲವರ ಆರೋಪವಿತ್ತು. ಆದರೆ ಕೂಲಿಗಾರ ಮತ್ತು ಭಂಡವಾಳಶಾಹಿಗಳಲ್ಲಿ ಯಾರು ಫೇಸಿಸ್ಟ್ ಹಾದಿ ಹಿಡಿಯುವರೆಂಬ ವಿಷಯ ಯಾರಿಗೂ ಭಿನ್ನಾಭಿಪ್ರಾಯವಿರಲಾರದು. ಹಿಟ್ಲರ್ ಅಥವಾ ಮುಸಲನಿ ಆಡಳಿತದಲ್ಲಿ ಸಂಘಟಿತ ಕೂಲಿಗಾರ ಸಂಘವು ಖಂಡಿತವಾಗಿ ಬಾಳಲಾರದು. ಅಮೇರಿಕದ ಭಂಡವಾಳಗಾರರಿಗೂ ಇದೇ ಬುದ್ಧಿ. ಎಂದ ಮೇಲೆ ನಾಜಿಗಳ ಹಾಗೂ ಫೇಸಿಸ್ಟರ ಮಿತ್ರರು ಯಾರೆಂದು ಪ್ರತ್ಯೇಕ ಹೇಳಬೇಕೇನು? ಈಗ ಮಂಜೂರಾದ ಮುಷ್ಕರ ವಿರೋಧ ಕಾನೂನು ಇದರ ಪ್ರಬಲ ಪ್ರದರ್ಶನವಲ್ಲವೇನು?

ಫೇಸಿಸ್ಟರಿಗೆ ಆಗಾಗ ಸಹಾಯ ಕಳುಹಿಸುತ್ತಿದ್ದದ್ದು ಕೂಲಿಗಾರರಲ್ಲ; ಭಂಡವಾಳಗಾರರು! ಜಪಾನಿಗೆ ಬೆಂಬಲ ಕೊಡುತ್ತಿದ್ದದ್ದು ಅಮೇರಿಕದ ಶ್ರೀಮಂತರಲ್ಲದೆ ಬಡವರಲ್ಲ. ಇಂಥಾ ಧೋರಣೆಯ ಅಮೇರಿಕದ ಭಂಡವಾಳಗಾರರು, ಇಂದಿನ ಯುದ್ಧದ ನೆವನ ಹೂಡಿ ಕೂಲಿಗಾರರ ಹಿತ ಹಕ್ಕು ಬಾಧ್ಯತೆಗಳೆಲ್ಲವನ್ನೂ ನಿರ್ನಾಮ ಮಾಡುವ ಅಸ್ತ್ರ ತೆಗೆದರು. ಇಂಥಾ ಸಂದರ್ಭದಲ್ಲಿ ಪ್ರೆಸಿಡೆಂಟ್ ರೂಸ್‌ವೆಲ್ಟರು ಉದಾರ ಬುದ್ಧಿ ತೋರಿಸಿದರೇನೋ ಸಹಜ. ಆದರೆ ಅವರ ಮಾತಿಗೆ ಬೆಲೆ ಬರಲಿಲ್ಲ. ಕೂಲಿಗಾರ ಶ್ರೀಮಂತರ ಮಧ್ಯದಲ್ಲಿ ನಿಂತ ಅವರ ಅವಸ್ಥೆ ತ್ರಿಶಂಕುವಿನಂತೆಯೇ ಆಗಿದೆ ಈಗ! ರೂಸ್‌ವೆಲ್ಟ್ ಅಮೇರಿಕದ ಮಹಾ ಅಧ್ಯಕ್ಷರು, ಬಹಳ ಭಾಗ್ಯವಂತ ಅಧಿಕಾರಿ; ತ್ರಿಶಂಕುವೂ ಕೂಡಾ ಒಂದು ಸ್ವರ್ಗಲೋಕದ ಇಂದ್ರ ತಾನೆ? ಬಡವರ ಶ್ರೀಮಂತರ ಅಂತರದಲ್ಲಿ ರೂಸ್‌ವೆಲ್ಟರು ಈಗ ಒಂದು ತ್ರಿಶಂಕು ಸ್ವರ್ಗದಲ್ಲಿ ನೇತಾಡುತ್ತಿರುವರು!

ಕಳೆದ ಮಹಾ ಯುದ್ಧದ ವಿಜಯಕ್ಕೆ ಅಮೇರಿಕದ ಅನುಪಮ ಉತ್ಪಾದನಾಶಕ್ತಿಯೇ ಕಾರಣವಾಗಿತ್ತು. ಈ ಸಲ ಮಿತ್ರರಿಗೆ ವಿಜಯವಾಗುತ್ತಿರುವುದಾದರೂ ಅದರಿಂದಲೇ. ಆದರೆ ಉತ್ಪಾದನೆ ಹೆಚ್ಚಾಗುತ್ತಾ ಹೋಗಬೇಕಾದರೆ, ಕೂಲಿಗಾರರು ಉತ್ಸಾಹದಿಂದ ದುಡಿಯಬೇಕು. ಯುದ್ಧಕಾಲವಾದ್ದರಿಂದ ಈಗ ಜೀವನ ವೆಚ್ಚ ಹೆಚ್ಚಿದೆ. ಭಂಡವಾಳಗಾರರಿಗೆ ವಿಪರೀತ ಲಾಭ ಸಿಕ್ಕಿದೆ. ಹೀಗಾಗಿ ಲಕ್ಷಾಂತರ ಗಣಿ ಕೂಲಿಗಾರರು ಮುಷ್ಕರ ಹಿಡಿದರು. ಅಧ್ಯಕ್ಷ ರೂಸ್‌ವೆಲ್ಟರು ಇವರನ್ನು ಸಮಾಧಾನ ಮಾಡಲೆತ್ನಿಸಿದರು. ಆದರೆ ಅಮೇರಿಕದ ಭಂಡವಾಳಗಾರರು, ಅಧ್ಯಕ್ಷರ ರಾಜಿಯ ವಿರುದ್ಧ ಶಾಸನ ಮಾಡಿ ತಮ್ಮ ಹಟವನ್ನೇ ಸಾಧಿಸಿಬಿಟ್ಟಿದ್ದಾರೆ. ಹೀಗಾದುದರಿಂದ ಅಮೇರಿಕದಲ್ಲಿ ರೂಸ್‌ವೆಲ್ಟರ ವಿರುದ್ಧ ಪಕ್ಷವು ಬಲವಾಗುತ್ತಿದೆಯೆಂದು ಊಹಿಸಬಹುದು. 1940 ನವಂಬರದಲ್ಲಿ ಅಧ್ಯಕ್ಷ ಚುನಾವಣೆಯಾದಾಗಲೇ ರಿಪಬ್ಲಿಕನರು ವೆಂಡೆಲ್ ವಿಲ್ಕಿಯರ ಮುಖಂಡತ್ವದಲ್ಲಿ ರೂಸ್‌ವೆಲ್ಟರಿಗೆ ಪ್ರಬಲ ವಿರೋಧ ಮಾಡಿದರು. ಆದರೆ ರೂಸ್‌ವೆಲ್ಟರು ಗೆದ್ದರು. ಮಾತ್ರವಲ್ಲ ವೆಂಡಲ್ ವಿಲ್ಕಿಯವರ ಮನವೊಲಿಸಿ ಕೆಲಸ ಸಾಗಿಸುತ್ತಿದ್ದರು. ಇಷ್ಟರಲ್ಲಿ ಕೆಲಸಗಾರರಿಗೂ ಪ್ರಿಯರಾಗುತ್ತಾ ಬಂದರು. ಇದು ಭಂಡವಾಳ ಶಾಹಿಗಳಿಗೂ ರಿಪಬ್ಲಿಕನರಿಗೂ ಅಸೂಯೆ ಹುಟ್ಟಿಸಿತು. ಆ ಅಸೂಯೆಯು ಬಹಿರಂಗ ರೂಪ ಈ ಶಾಸನದಲ್ಲಿ ವ್ಯಕ್ತವಾಗಿದೆ. ರೂಸ್‌ವೆಲ್ಟರ ಸ್ವಂತ ಪಕ್ಷದವರೇ ಹಲವು ಮಂದಿಯೇ ಅವರಿಗೆ ವಿರೋಧ ಮತವಿತ್ತಿದ್ದಾರೆ. ಇದು ಪ್ರತ್ಯಕ್ಷವಾಗಿ ಅಧ್ಯಕ್ಷರ ಅಪಮಾನ. ಇದರಿಂದ ಮುಂದಿನ ಚುನಾವಣೆಯಲ್ಲಿ ಮಹತ್ವದ ಬದಲಾವಣೆಯಾಗುವುದು: ಮುಂದೆ ರೂಸ್‌ವೆಲ್ಟರಿಗೆ ಸ್ಥಾನವಿಲ್ಲ' ಎಂದು ಅವರ ವಿರೋಧಿಗಳೀಗ ಸಾರುತ್ತಿದ್ದಾರೆ. ಆದರೆ ರೂಸ್‌ವೆಲ್ಟರೂ ಕೂಲಿಗಾರರ ಬಡವರ ಬೆಂಬಲ ನಿಂತದ್ದರಿಂದ ಜನಪ್ರಿಯತೆ ಕಳೆಕೊಂಡಿಲ್ಲ. ಜಾನ್ ಲೂಯಿಸ್ ಕೂಲಿಗಾರ ಮುಖಂಡರು, ರೂಸ್‌ವೆಲ್ಟ್, ವಿಲ್ಕಿ ಅನಂತರ ಇವರು ಅಮೇರಿಕದ ಅತ್ಯಂತ ಜನಪ್ರಿಯ ಮುಂದಾಳು. ಲುಯಿಸರೊಡನೆ ರೂಸ್‌ವೆಲ್ಟರಿಗೆ ಮಧುರ ಸಂಬಂಧ ಬೆಳೆದಿದೆ. ಹಾಗಾಗಿ ಅವರ ವಿರೋಧಿಗಳ ಹಾರೈಕೆ ಫಲಿಸೀತೆಂದು ಹೇಳಲಾಗುವುದಿಲ್ಲ. ಶ್ರೀಮಂತರಾದರೂ ಇದುವರೆಗೆ ಅವರ ಬೆಂಬಲವಿದ್ದವರು ಈಗ ಒಮ್ಮೆಗೇ ಎಲ್ಲರೂ ಕೈಬಿಟ್ಟುಬಿಟ್ಟಾರೇನು? ಅಂತೂ ಈಗಿನ ರೂಸ್‌ವೆಲ್ಟರ ಸ್ಥಾನ 'ತ್ರಿಶಂಕು'ವಿನದ್ದೆ!

ಸ್ವದೇಶಾಭಿಮಾನಿಗೆ
ಚಂದಾದಾರರಾಗಿರಿ.

ಸಮರ ಭೂಮಿಯ ಸಂಚಾರ

ರಶ್ಯದಲ್ಲಿ ಹಿಟ್ಲರನು ಒಂದು ಪ್ರಚಂಡ ಧಾಳಿ ಪ್ರಾರಂಭಿಸಿದ್ದಾನೆ! ಅವರ ಸೈನ್ಯಗಳು ಸುಮಾರು ೧೮೦ ಮೈಲು ವಿಸ್ತಾರದ ಪ್ರದೇಶದಲ್ಲಿ ಮೂರು ದಿಕ್ಕಿನಿಂದ ಮುತ್ತುತ್ತಿವೆ. ಕಳೆದ ೧೦೦ ದಿನಗಳಿಂದ ಶಾಂತವಾಗಿದ್ದ ರಶ್ಯನ್ ರಣರಂಗದಲ್ಲಿಂದು ಪುನಃ ಅಲ್ಲೋಲ ಕಲ್ಲೋಲವುಂಟಾಗಿದೆ! ಅಸಂಖ್ಯಾತ ಜರ್ಮನ್ ಸೇನೆಗಳೀಗ ಟೇಂಕ್, ವಿಮಾನ ಬಲಗಳೊಡನೆ ಒರೆಲ್, ಕುರ್ಸ್ಕ್ ಮತ್ತು ಬೆಲ್‌ಗೊರೊಡ್ ಗೋರಾಡಗಳಲ್ಲಿ ನುಗ್ಗುತ್ತಿರುವವು. ಜರ್ಮನ್ ಸೈನ್ಯಗಳು ರಶ್ಯನ್ ವ್ಯೂಹಗಳನ್ನು ಈಗಾಗಲೇ 'ಸ್ವಲ್ಪಮಟ್ಟಿಗೆ' ಭೇದಿಸಿರುವವು. ನಿಮಿಷ ನಿಮಿಷಕ್ಕೀಗ ಕಾಳಗವು ಉಗ್ರವಾಗುತ್ತಿದೆ. ಮಧ್ಯರಶ್ಯದಲ್ಲಿ ಘೋರ ಸಂಗ್ರಾಮ ಸುರುವಾಗಿದೆ. ಮಾತೃಭೂಮಿಯನ್ನು ರಕ್ಷಿಸಲು ರಶ್ಯನ್ ವೀರರು ಮುಂಬನ್ನಿರಿ ಎಂದು ರೆಡ್‌ಸ್ಟಾರ್ ಪತ್ರಿಕೆ ಕೆಂಪು ಸೈನಿಕರೊಡನೆ ವಿನಂತಿಸಿಕೊಂಡಿದೆ!

ರಶ್ಯಕ್ಕೆ ಜಪಾನ್ ಒತ್ತಾಯ

ಲಂಡನಿನ 'ರೆನಾಲ್ಡ್ಸ ನ್ಯೂಸ್' ಪತ್ರಿಕೆ ಕೆಳಗಿನ ಒಂದು ಸುದ್ದಿಯನ್ನು ಪ್ರಕಟಪಡಿಸಿದೆ.

"ಸಂಯುಕ್ತ ರಾಷ್ಟ್ರಗಳನ್ನು ಸಂಪೂರ್ಣ ಸೋಲಿಸಿ ಯುದ್ಧದಲ್ಲಿ ವಿಜಯ ಹೊಂದಬೇಕೆಂಬ ಹಿರಿಯಾಸೆಯನ್ನು ಹಿಟ್ಲರನು ಬಿಟ್ಟುಬಿಟ್ಟಿದ್ದಾನೆ. ರಶ್ಯವು ಯುದ್ಧದಲ್ಲಿ ಬಹಳ ಹಣ್ಣಾಗಿರುವುದರಿಂದ ಯೂರೋಪಿನ ಯುದ್ಧವನ್ನು ದೀರ್ಘ ಎಳೆಯಬೇಕೆಂದು ಅವನ ಇಚ್ಛೆ. ಈ ಯುದ್ಧದಲ್ಲಿ ಜಪಾನಿಗೆ ಮುಂದಾಳುತನ ಕೊಡಲಾಗಿದೆ. ೧೯೪೧ರಲ್ಲಿ ಮಾಡಿಕೊಂಡ ಒಪ್ಪಂದಕ್ಕೆ ಸಹಾಯವಾಗುವಂತೆ, ೧೫ ವರ್ಷಗಳ ಅನಾಕ್ರಮಣ ಒಪ್ಪಂದ ಮಾಡಿಕೊಳ್ಳಬೇಕೆಂದು ಜಪಾನು ರಶ್ಯವನ್ನು ಒತ್ತಾಯಮಾಡುತ್ತದೆ. ಸೈಬೇರಿಯ ಮತ್ತು ಮಂಚೂರಿಯ ಗಡಿಯಲ್ಲಿರುವ ಸೈನ್ಯವನ್ನು ಹಿಂತೆಗೆದುಕೊಳ್ಳಲೂ, ಸಕ್ಹಲೀನ ಎಣ್ಣೆ ಕಣಿಯ ದ್ವೀಪದಲ್ಲಿ ಮತ್ತು ಕರಾವಳಿ ಪ್ರಾಂತದಲ್ಲಿ ಒಪ್ಪಂದದ ಅವಧಿ ವರೆಗೆ ಜಪಾನು ಮತ್ತು ರಶ್ಯದ ಅಧಿಕಾರಿಗಳ ನ್ನಿಡಲೂ ಜಪಾನು ಒಪ್ಪಿದೆಯಂತೆ! ಈ ಸೂಚನೆಯ ಗುಟ್ಟು ಇಷ್ಟೆ. ಹಿಟ್ಲರನು ಯೂರೋಪಿನ ದ್ವಿತೀಯ ರಂಗಕ್ಕೆ ಹೆದರಿದಂತೆ ಸ್ಟಾಲಿನ್ ಪೂರ್ವದ ದ್ವಿತೀಯ ರಂಗಕ್ಕೆ ಅಂಜುತ್ತಿದ್ದಾನೆ. ಆದ್ದರಿಂದ ಮೇಲೆ ಹೇಳಿದಂತೆ ಆಶೆ ತೋರಿಸಿದರೆ ಹಾಗೂ ಬ್ರಿಟನು ಅಮೆರಿಕಗಳು ಇನ್ನು ದ್ವಿತೀಯ ರಂಗ ತೆರೆಯಲು ಅವಧಿ ಮುಂದೂಡುತ್ತಿರುವುದರಿಂದ ಗಾಬರಿಯಾಗಿ ಸ್ಟಾಲಿನನು ಜರ್ಮನಿಯೊಡನೆ ಒಪ್ಪಂದ ಮಾಡಿಕೊಳ್ಳುವಂತೆ ಈ ಒತ್ತಾಯವಾಗಿದೆ. ಆದರೆ ರಶ್ಯವು ಜರ್ಮನಿಯೊಡನೆ ಪ್ರತ್ಯೇಕ ಒಪ್ಪಂದ ಮಾಡಿಕೊಳ್ಳುವುದಿಲ್ಲವೆಂದು ಮಿತ್ರರಿಗೆ ಮಾತುಕೊಟ್ಟಿರುವುದು."

ಮೇಲಿನ ಮಾತುಗಳು ಕೆಲವು ಪ್ರಾಮುಖ್ಯ ಸಂಗತಿಗಳನ್ನು, ಹಾಗೂ ಕೆಲವು ಯುದ್ಧ ರಹಸ್ಯವನ್ನು ಹೊರಗೆಡವುತ್ತದೆ. ಜಪಾನಿನ ಈ ಒಪ್ಪಂದದ ಒತ್ತಾಯ, ಅಪ್ರತ್ಯಕ್ಷವಾಗಿ ಜರ್ಮನಿಯೊಡನೆ ಸಂಧಾನಮಾಡಿಕೊಳ್ಳಲು ರಶ್ಯಕ್ಕೆ ಸೂಚನೆಯಾಗಿದೆಯೆಂಬುದರಲ್ಲಿ ಏನೂ ಅತಿಶಯೋಕ್ತಿ ತೋರುವುದಿಲ್ಲ! ಅಂತೂ ಹಿಟ್ಲರನಂಥಾ ಭೀಷಣ ಶತ್ರುವಿನೊಡನೆ ಹೋರಾಡಿ ಸುಣ್ಣವಾದ ಸ್ಟಾಲಿನನಿಗೆ ಜಪಾನಿನೊಡನೆ ಕಲಹ ಬೇಕಾಗಿಲ್ಲವೆಂಬುದೂ ಖಂಡಿತ.

ಫೆಸಿಫಿಕ್ಕಿನಲ್ಲಿ ಜಪಾನರು

ಪ್ರತಿಭಟಿಸುತ್ತಿದ್ದಾರೆ. ದಕ್ಷಿಣ ಫೆಸಿಫಿಕ್ಕಿನಲ್ಲಿ ಜಪಾನರಿನ್ನೂ ಕಾಳಗ ಕೊಡುತ್ತಿದ್ದಾರೆ. ನ್ಯೂಗಿನಿಗೆ ಮಿತ್ರ ವಿಮಾನಗಳು ಬಾಂಬು ಸುರಿಸುತ್ತಿವೆ. ವೆಂಗೂಲೂ ದ್ವೀಪದ ಒಂದು ಹಳ್ಳಿ ಅಮೆರಿಕನರ ವಶವಾಯಿತೆಂದೂ ಸುದ್ದಿ ಬಂದಿದೆ. ಅತ್ತ ರೆಂಡೋವಾ ದ್ವೀಪದಲ್ಲಿಯೂ ವಿಮಾನ ಯುದ್ಧಗಳಾಗುತ್ತಿವೆ. ನ್ಯೂ ಜಾರ್ಜಿಯಾದಲ್ಲಿ ಮಿತ್ರರ ಡೈವ್ ಬಾಂಬರ್ ವಿಮಾನಗಳು ಮುಂಡಾದ ದಕ್ಷಿಣ ಭಾಗಕ್ಕೆ ಬಾಂಬಿಕ್ಕಿದವು. ಕೆಲವು ಅಮೆರಿಕನ್ ವಿಮಾನಗಳು ಈ ದ್ವೀಪದಾಚೆಯಿರುವ ಬಯನಿಕಾ ದ್ವೀಪದ ಮೇಲೂ ಎರಗಿವೆ. ಮುಂಡಾ ವಿಮಾನ ಗೃಹದ ಮೇಲೆ ಆದ ಧಾಳಿ ವಿಷಯ ವರದಿ ಬಂದಿಲ್ಲ. ವೀರೂ ದ್ವೀಪದಲ್ಲಿ ಜಪಾನರ ಪ್ರತಿಭಟನೆ ಕಡಿಮೆಯಾದಂತೆ ತೋರುವುದು. ವೆಂಗೂಲೂ ದ್ವೀಪದಲ್ಲಿ ಮಿತ್ರರು ಬೊಹಾ ಎಂಬ ಹಳ್ಳಿಯನ್ನು ಕೈವಶಮಾಡಿಕೊಂಡರು. ರೆಂಡೂವಾ ದ್ವೀಪದಲ್ಲಿ ಜಪಾನೀ ಬಾಂಬರ್ ವಿಮಾನಗಳು ಮತ್ತು ಯುದ್ಧ ವಿಮಾನಗಳು ನೆಲದ ಮೇಲಿದ್ದ ಮಿತ್ರ ಠಾಣ್ಯಗಳ ಮೇಲೆರಗಿದವು. ನ್ಯೂಗಿನಿಯ ನಾಸೂಬೇಯಲ್ಲಿಳಿದ ಅಮೆರಿಕನರು ಗೆದ್ದ ಪ್ರದೇಶಗಳನ್ನು ಸಂಘಟಿಸುತ್ತಿರುವರು. ಅಲ್ಲಿಯೂ ಯುದ್ಧದ ಉಗ್ರತೆ ಕಡಿಮೆಯಾಗುತ್ತಿದೆ. ಸಲೆಮುವಾ ಮೂಬೊ ರಸ್ತೆಯಲ್ಲಿ ಎರಡೂ ಪಕ್ಷಗಳ ಮುಂದಲಗಳಿಗೆ ಕೈ ಕೈ ಕಾಳಗ ನಡೆಯುತ್ತಿರುವುದು. ಕೆರೊವಳಿಯಲ್ಲಿ ನೌಕಾ ಯುದ್ಧವೂ ಆಗುತ್ತಿದೆ. ದಕ್ಷಿಣ ಫೆಸಿಫಿಕ್ಕಿನಲ್ಲಿ ತೋಬ್ರಿಯಂಡ ಮತ್ತು ಉಡ್‌ಲಾರ್ಕ್ ಇವುಗಳನ್ನು ಸೇನಾಪತಿ ಮೇಕಾರ್ಥರ ಮುಂದಾಳುತನದಲ್ಲಿ ಮಿತ್ರರು ಸ್ವಾಧೀನ ಮಾಡಿಕೊಂಡಿದ್ದಾರೆ. ಅಮೆರಿಕನ್ ವಿಮಾನಗಳು ಎಲ್ಯೂಶಿಯನ್ನ ಕಿಸ್ಕಾ ದ್ವೀಪದ ಮೇಲೆ ಧಾಳಿ ನಡೆಸಿದವು. ಕೆಲವು ವಿಮಾನಗಳು ಗೌರೋ ದ್ವೀಪದಲ್ಲಿರುವ ಜಪಾನೀ ಕೇಂದ್ರಗಳ ಮೇಲೂ ಎರಗಿದವು. ಇದೇ ರೀತಿ ಉತ್ತರ ಫೆಸಿಫಿಕ್ಕಿನಲ್ಲಿಯೂ ಕಾಳಗ ನಡೆಯುತ್ತಿದೆ.

ಜಪಾನರ ಇಲ್ಲಿನ ಆಯಕಟ್ಟಿನ ಸ್ಥಳಗಳಲ್ಲಿ ರಬಾಲವೇ ಮುಖ್ಯವಾಗಿರುವುದರಿಂದ ಅದನ್ನು ವಶಪಡಿಸಿಕೊಳ್ಳಬೇಕೆಂದು ಮಿತ್ರರ ಸಾಹಸವಿದೆ. ಇದನ್ನು ಕೈವಶ ಮಾಡಿಕೊಂಡರೆ ಆಸ್ಟ್ರೇಲಿಯಕ್ಕಿದ್ದ ಅಂಜಿಕೆಯೂ ಕಡಿಮೆಯಾಗುತ್ತದೆ. ಒಂದು ಪಕ್ಷ ರಬಾಲ ಮಿತ್ರರ ವಶವಾದರೂ ಜಪಾನು ಯುದ್ಧ ಕೊನೆಗೊಂಡಂತೆ ಆಗುವುದಿಲ್ಲ. ಆಸ್ಟ್ರೇಲಿಯದ ಉತ್ತರಕ್ಕಿರುವ ದ್ವೀಪಗಳ ಪೂರ್ವಾರ್ಧದಲ್ಲಿ ರಬಾಲವಿದೆ. ಆದರೆ ಜಾವಾದಿಂದ ಟಿಮೋರದ ವರೆಗಿರುವ ಪಶ್ಚಿಮಾರ್ಧವು ಇನ್ನೂ ಬಲವಾಗಿದೆ. ಹಾಗೂ ಜಪಾನಿಗೆ ಇದೇ ಬಹಳ ಮಹತ್ವದ್ದಾಗಿದೆ. ನೌಕಾ ಬಲವು ಕಾರ್ಯಾಚರಣೆ ಮಾಡಲು ಇದಕ್ಕಿಂತ ಅನುಕೂಲ ಕ್ಷೇತ್ರ ಬೇರಿಲ್ಲ.

ಜಪಾನಿನ ಮುಖ್ಯ ಮಂತ್ರಿ ಜನರಲ್ ಟೋಜೋ ಈಗ ಸಿಂಗಾಪುರಕ್ಕೆ ಬಂದಿರುವರೆಂದು ಸುದ್ದಿ ಸಾರುತ್ತದೆ. ದಕ್ಷಿಣ ದಿಕ್ಕಿನಲ್ಲಿ ಹೊಸ ಯುದ್ಧನೀತಿಯನ್ನು ಕೈಕೊಳ್ಳಲು ಸಿದ್ಧತೆ ನಡೆಸುವುದೇ ಈ ಪ್ರವಾಸದ ಉದ್ದೇಶವೆಂದು ತಿಳಿಯಲಾಗಿದೆ. ಈ ಸಂದರ್ಭವನ್ನಾಲೋಚಿಸಿದರೆ, ಜಪಾನಿನ ಗಂಡಾಂತರ ಬಹಳ ಇದೆಯೆಂದು ಅರ್ಥವಾಗದಿರದು. 'ಯೂರೋಪಿನಲ್ಲಿ ಹಿಟ್ಲರನನ್ನು ಮೊದಲು ಸದೆಬಡೆದು ಆ ಮೇಲೆ ಜಪಾನಿಗೆ ಬೀಳೋಣ ಎನ್ನುವವರಿಗೆ ಏಶ್ಯದ ನಿಜವಾದ ಜ್ಞಾನವಿಲ್ಲ' ಎಂದು ಹಿಂದೆ ಜಪಾನಿನಲ್ಲಿ ಅಮೆರಿಕದ ರಾಯಭಾರಿಯಾಗಿದ್ದವರೂ, ಈಗ ವಿದೇಶ ಮಂತ್ರಿಗಳ ಸಹಾಯಕರೂ ಆದ ಜೋಸೆಫ್ ಗ್ರೂರವರು ಹೇಳುತ್ತಾರೆ. 'ಜಪಾನನ್ನು ತಲೆಯೆತ್ತದಂತೆ ನಾಶಗೊಳಿಸದೆ ಸುಮ್ಮಗಿರಬಾರದು. ಇದಕ್ಕಾಗಿ ನಾವು ಅಪಾರ ಬಲಿದಾನ ಮಾಡಬೇಕಾಗುವುದು. ಆದ್ದರಿಂದ ಅಮೆರಿಕವೀಗ ನಿದ್ರೆಯಿಂದ ಎಚ್ಚರಗೊಳ್ಳಬೇಕು'' ಹೀಗೆಂದು ಅವರು ಅಮೆರಿಕರನ್ನು ಎಚ್ಚರಿಸುತ್ತಿದ್ದಾರೆ. ಮಿತ್ರರು ಯೂರೋಪಿನ ಯುದ್ಧವನ್ನೇ ಮಹತ್ವವಾಗಿ ಗಣಿಸಿ ಏಶ್ಯಾದ ಕಡೆ ಅಲಕ್ಷ್ಯಮಾಡಿದರೆ ಜಪಾನು ವಿಜೃಂಭಿಸುವುದೆಂದು ಹಲವರ ಹೆದರಿಕೆಯಿಂದ.

ಜರ್ಮನರ ಪ್ರಸಿದ್ಧ ಕೈಗಾರಿಕಾ ಕೇಂದ್ರ ಸ್ಥಳವಾದ 'ರ್ಹೂರ್' ಪ್ರದೇಶಕ್ಕೆ ಮಿತ್ರರು ಬಾಂಬು ಸುರಿಸುತ್ತಿದ್ದುದರ ಫಲವಾಗಿ ಅಲ್ಲಿಂದ ಲಕ್ಷಾಂತರ ಮಂದಿ ಊರುಬಿಟ್ಟು ಹೋಗಿರುವರೆಂದು ಹೇಳಲಾಗುತ್ತದೆ. ಲಂಡನಿಗೂ ಜರ್ಮನರು ಈಗಾಗ ಬಾಂಬುಹಾಕಲು ಮರೆಯುವುದಿಲ್ಲ.

THE
Canara Industrial & Banking Syndicate, Ltd.
(Incorporated in British India. Liability of Shareholders limited).
Estd.) Head Office: UDIPI, S. India (1925.

Authorised Capital Rs. 56,00,000
Subscribed Capital Rs. 32,10,987
Paid Up Capital Rs. 12,05,796
Reserves Rs. 3,50,461/12
Deposits over 65 Lakhs.
Resources over one Crore.

Savings Bank Accounts are opened and interest allowed. Withdrawals by cheques. Accounts transferred from one Branch to another free of charge. Enquire for rules.

Cheques & Drafts are issued on numerous places and Bills etc. negotiated on terms which will be quoted on enquiry.

Advances made at low rates of interest against gold, Government Securities, approved shares, accepted bills, life insurance policies and marketable goods.

Every business received quick and courteous attention.

ಆರೋಗ್ಯದ ಸೂತ್ರಗಳು ಕೇವಲ ಅಜಮಜ್ಞಾದ್ದಾರ

ಕ್ಷಮಿಸಿರಿ— ಅಂತರ್ಯ ಶುದ್ಧಿ ಎಲ್ಲದಕ್ಕಿಂತಲೂ ಮೊದಲು!



ದೇಹದೊಳಗಿನ ಶುಚಿತ್ವಕೆಯನ್ನೂ
ANDREWS
LIVER SALT
ಎಂಡ್ರೂಸರ ಲಿವರ್‌ಸೊಲ್ಟ್
131 ಆರೋಗ್ಯವನ್ನೂ ರಕ್ಷಿಸುತ್ತದೆ.

ಯುದ್ಧದ ದೆಸೆಯಿಂದಾಗಿ, ಎಂಡ್ರೂಸ್ ಲಿವರ್‌ಸಾಲ್ಟ್ ಈಗ ದೊರಕುವುದಿಲ್ಲವೆಂಬುದು ವಿಷಾದಕರವಿದೆ. ಆದರೆ ಅಂತರ್‌ರಾಷ್ಟ್ರೀಯ ಪರಿಸ್ಥಿತಿ ಸುಧಾರಿತವಾದ ಕೂಡಲೇ ಇದು ಖಂಡಿತ ದೊರಕುವುದು.

ಸ್ವದೇಶಾಭಿಮಾನಿ

ತಾರೀಕು 9—7—1943

ಏಳನೆಯ ವರ್ಷ

ಇದೇ ಜುಲ್ಯೆ ತಿಂಗಳ ಎರಡನೆಯ ತಾರೀಕಿನಂದು ಚೀನವು ಜಪಾನ್ ವಿರುದ್ಧ ಘೋರಾಟ ಹೂಡಿದ ಏಳನೆಯ ವರ್ಷಕ್ಕೆ ಕಾಲಿಟ್ಟಿದೆ. ಒಂದೆರಡು ವರ್ಷಗಳ ಯುದ್ಧದ ಬಿಸಿಯಿಂದಲೇ ನಮ್ಮ ರಾಷ್ಟ್ರ ಎಷ್ಟು ತಳಮಳಗೊಂಡಿತು! ಹಾಗಿರುವಾಗ, ಪ್ರತ್ಯಕ್ಷ ಯುದ್ಧರಂಗಕ್ಕಿಳಿದು ಹೋರಾಡಿದ ಚೀನೀಯರ ಸಂಕಷ್ಟಗಳನ್ನು ಒಮ್ಮೆ ನೆನೆದರೆ ನಮ್ಮ ಮೈಜುಮ್ಮೆನ್ನುವುದು. ಇಂದಿನೀ ಮಹಾ ಯುದ್ಧದಲ್ಲಿ ಚೀನದಷ್ಟು ಸತ್ವ ಪರೀಕ್ಷೆಗೆ ಒಳಪಟ್ಟ, ಅಗ್ನಿಪರೀಕ್ಷೆಗೂ ಗುರಿಯಾದ, ಅತುಲ ಸಾಹಸ ಬಲಿದಾನ ಮಾಡಿದ ರಾಷ್ಟ್ರ ಬೇರೊಂದಿಲ್ಲ ಚೀನದ ಅನೇಕ ಪ್ರಾಮುಖ್ಯ ಗಡಿಗಳನ್ನು ಜಪಾನು ಒಂದರ ಮೇಲೊಂದಾಗಿ ಆಕ್ರಮಿಸಿ ಮುನ್ನುಗ್ಗುತ್ತಿದ್ದರೂ ಚೀನಕ್ಕೆ ಹೊರಗಿನಿಂದ ಯಾವುದೇ ಸಹಾಯಬರದಂತೆ ಜಪಾನು ತಡೆಗಟ್ಟಿದ್ದರೂ, ಏಳು ವರ್ಷಗಳ ತನಕ ಚೀನವು ಯಾವ ವೀರಾವೇಶದಿಂದ ಕಾದಾಡಿದೆಯೋ ಅದು ಸ್ವಾತಂತ್ರ್ಯ ಪ್ರೇಮಿ ಜನಾಂಗಕ್ಕೆ ಭೂಷಣಾಸ್ಪದವಾದ ಒಂದು ಆದರ್ಶವಾಗಿದೆ

ಬಾಂಬಿನ ಪೆಟ್ಟು, ಕೋವಿ ಫಿರಂಗಿಗಳ ಹೊಡೆತ ಮಾತ್ರವಲ್ಲ ಚೀನೀಯರು ಅನುಭವಿಸಿದ ಸಂಕಷ್ಟ, ಆಹಾರದ ಕೊರತೆ ಆರ್ಥಿಕ ಅವ್ಯವಸ್ಥೆ, ಯುದ್ಧ ಸಾಮುಗ್ರಿಗಳ ಅಭಾವ ಇವೆಲ್ಲವುಗಳನ್ನೂ ಅವರು ಅನುಭವಿಸುತ್ತಾ ಬಂದಿದ್ದೂ ಹಾಗಿದ್ದರೂ ಇಂದಿಗೂ ಅವರು ತಮ್ಮ ಆತ್ಮಶಕ್ತಿಯನ್ನು ಕಳಕೊಳ್ಳಲಿಲ್ಲವೆಂಬುದು ಪ್ರಶಂಸನೀಯವಿದೆ.

[illegible] ದರೂ ಕೊನೆಗಾಣಿಸಿ ಬಿಟ್ಟರೆ ಮುಂದೆ ತಾವು ಸ್ಥಾಪಿಸುತ್ತಿರುವ ಹೊಸ ಸಾಮ್ರಾಜ್ಯಕ್ಕೆ ಅಳಿವಿಲ್ಲವೆಂದು ತಿಳಿದು ಜಪಾನೆರು, ಚೀನದ ಮೇಲೆ ಕಳೆದ ವರ್ಷ ಎಷ್ಟು ಸಾಹಸದಿಂದ ಆಕ್ರಮಿಸಿದರೋ, ಅಷ್ಟುಸಾಹಸಗಳನ್ನೂ ಚೀನಿಯರು ನಿಷ್ಫಲಗೊಳಿಸಿದರು. ಕಳೆದ ಆಗಸ್ಟನಲ್ಲಿ ಚೀನೀಯರು ತಮ್ಮ ಹಲವು ನಗರಗಳನ್ನು ಹಿಂತ್ತೆಗೆದುಕೊಂಡುದಲ್ಲದೆ ವಿಮಾನಕೇಂದ್ರಗಳನ್ನು ಕೈವಶಪಡಿಸಿ ಜಪಾನಿಗೆ ಬಲವಾದ ಪೆಟ್ಟುಕೊಟ್ಟರು. ಅದೇ ರೀತಿ, ಟೋಕಿಯೋದಿಂದ ಸಿಂಗಾಪುರ ವರೆಗೆ ಒಂದು ರೈಲ್ವೆ ಏರ್ಪಡಿಸಿ, ಚೀನಾ ಮಾರ್ಗವನ್ನು ಇಂಡೋ ಚೀನಾ ತಾಯಿಲೆಂಡುಗಳೊಡನೆ ಸೇರಿಸಿಬಿಡಬೇಕೆಂಬ ಜಪಾನರ ಸಾಹಸವೂ ವ್ಯರ್ಥವಾಯಿತು. ಚೀನದ ಅನ್ನಕೋಶವೆನಿಸಿದ ಹುಪೆ ಮತ್ತು ಹುನಾನದಲ್ಲಿ ಇನ್ನೊಂದು ಮಹಾ ವಿಜಯವೂ ದೊರಕಿತು ಮೂರನೆಯ ಚೀನಿಯರ ವಿಜಯವೆಂದರೆ ಯುನಾನ್ ಬರ್ಮಾ ಗಡಿಯಲ್ಲಿ ಚೀನದ ರಾಜಧಾನಿಯನ್ನು ಸದೆಬಡೆಯಬೇಕೆಂದು ಜಪಾನರು ಮಾಡಿದ ಪ್ರಯತ್ನವೂ ವ್ಯರ್ಥವಾಯಿತು

ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ, ಮಾತೃಭೂಮಿಯ ರಕ್ಷಣೆಗಾಗಿ ಒಂದು ರಾಷ್ಟ್ರದ ಜನ ಎಂಥಾ ಬಲಿದಾನವಾದೀತು, ಎಷ್ಟು ಸಾಹಸದಿಂದ ಹೋರಾಡೀತು, ಎಷ್ಟು ಕಷ್ಟಗಳನ್ನಾದರೂ ಎಂಥಾ ನಗುಮುಖದಿಂದ ಸಹಿಸೀತು, ಹಾಗೂ ಇದರ ಫಲವಾಗಿ ಶತ್ರುವು ಎಷ್ಟು ಪ್ರಬಲನಿದ್ದರೂ ಆತನಿಗೆ ಆ ರಾಷ್ಟ್ರವನ್ನು ಗೆಲ್ಲುವುದು ಹೇಗೆ ಸಾಧ್ಯವಾಗಲಾರದು ಎಂಬೀ ಸತ್ಯವನ್ನು ಇಂದು ಚೀನವು ಈ ಮೂಲಕ ಜಗತ್ತಿಗೆ ಸಾರಿದೆ. ಭಾರತವನ್ನು ತಮ್ಮ ಕೈಹಿಡಿತದಲ್ಲಿಯೇ ಇಟ್ಟುಕೊಂಡು ಭಾರತೀಯರ ಸಹಾಯವನ್ನು ಬಯಸುವ ಬ್ರಿಟಿಷ್ ಸಾಮ್ರಾಜ್ಯಶಾಹಿಗಳಿಗೆ ಇದು ಒಂದು ಉತ್ತಮ ಪಾಠವಾಗಿದೆ.

ವೃದ್ಧಿಯಿಂದ ಅಭಿವೃದ್ಧಿ.

ಗತ ೧೯೪೨ನೇ ವರ್ಷದಿಂದ ಚಾಲು ೧೯೪೩ನೇ ಪ್ರಾರಂಭದ ಮಾಸಗಳು ಬಹು ಅಪಾಯಗಳಿಂದಲೂ ಹಾಗೂ ಸುಯೋಗಗಳಿಂದಲೂ ತುಂಬಿ ತುಳುಕಿದ್ದವು. ಜಾಣತೆಯಿಂದ ವ್ಯವಸ್ಥೆ ಮಾಡಲ್ಪಟ್ಟ ಸಂಸ್ಥೆಗಳು ಈ ಅಪಾಯಗಳನ್ನು ತಳ್ಳಿ ಸುಸಂದರ್ಭಗಳನ್ನು ಉಪಯೋಗಿಸಿ ಶೀವ್ರನೆ ಮುಂದುವರಿದವು.

೧೯೪೦, ೪೧ರಲ್ಲಿ ಕೆನರಾ ಬೇಂಕು ೯೦ ಲಕ್ಷ ಠೇವಣೆಗಳ ಮತ್ತು ಒಂದು ಕೋಟಿ ಸಾಂಪತ್ತಿಕ ಸ್ಥಿತಿಯಲ್ಲಿದ್ದು ಅಂದು ಸಹ ಅದು ವಿಸ್ತೃತ ಸ್ಥಿತಿಯ ಸಂಸ್ಥೆಯಾಗಿತ್ತು. ಇಂದು ಠೇವಣೆಗಳು ಇಮ್ಮಡಿಯಾಗಿವೆ. ಸಾಂಪತ್ತಿಕ ಸ್ಥಿತಿಯು ಎರಡುವರೆ ಕೋಟಿಗೆ ಮುಟ್ಟಿದೆ ಹಾಗೂ ತೆತ್ತ ಮೂಲಧನವು ನಾಲ್ಮಡಿಯಾಗಿದೆ

ಜಾಣತನದ ವ್ಯವಸ್ಥೆಯ ಏರ್ಪಾಟಿನಿಂದಲೂ, ಆತ್ಮ ವಿಶ್ವಾಸದಿಂದಲೂ, ದೃಢಬುದ್ಧಿಯಿಂದಲೂ, ಯೋಗ್ಯ ಸೇವೆಯನ್ನು ಸಲ್ಲಿಸಿದರಿಂದಲೂ, ಇಂದಿನ ಈ ಪ್ರಗತಿಗೆ ಕಾರಣಭೂತರಾದ ಸಾರ್ವಜನಿಕರ ಮೆಚ್ಚಿಗೆಗೆ ಪಾತ್ರರಾಗಿ ಇನ್ನು ಮುಂದಕ್ಕೂ ಮಹತ್ವದ ಸೇವೆಯನ್ನು ಒಪ್ಪಿಸಲು ಸಮರ್ಥರಾಗಲು ನಾವು ಹಾರೈಸುವೆವು.

Canara Bank Limited.

ಕೆನರಾ ಬೇಂಕ್ ಲಿಮಿಟೆಡ್.

ಸ್ಥಾಪನೆ 1906.

ಸ್ವದೇಶ ಸಮಾಚಾರ

"ಮನೆ ಖಾಲಿಮಾಡಿ ಕೊಡಿ"

ಪೋಲೀಸರ ಬಲಾತ್ಕಾರ

ಮುಂಬಯಿ 'ದಾದಾರ್'ನಲ್ಲಿರುವ 'ಗುಡ್ ಚೇಂಬರ್ಸ್' ಕಟ್ಟಡವನ್ನು ಖಾಲಿಮಾಡಿಕೊಡಬೇಕೆಂದು ಇತ್ತೀಚೆಗೆ ಪೋಲೀಸ್ ಕಮಿಶನರು ಹೊರಡಿಸಿದ ಆಜ್ಞೆಯನ್ನು ನಿರಾಕರಿಸಿದ ಕೆಲ ಜನರನ್ನು ಪೋಲೀಸರು ಬಲಾತ್ಕಾರಿಸಿ ಮನೆ ಬಿಡಿಸಿದರು. ಆಹಾರ ಸಾಮಾನು ಮೊದಲಾದವುಗಳನ್ನೂ ಪೋಲೀಸರು ಬಲಾತ್ಕಾರದಿಂದ ತುಂಬಿಸಿ ಬೇರೆ ಕಡೆಗೆ ಸಾಗಿಸಿದರು ಕೆಲ ಜನ ಅಲ್ಲಿನ ನಿವಾಸಿಕರು ಕೊನೆವರೆಗೂ ಮನೆ ಬಿಡಲೇ ಇಲ್ಲ. ಎಷ್ಟೋ ವರ್ಷಗಳಿಂದ ಅಲ್ಲಿ ಅವರು ಬಂದು ವಾಸಿಸಿದ್ದರು ರಾತ್ರಿವರೆಗೂ ಜನ ಅಲ್ಲೇ ಕುಳಿತಿದ್ದರು

ಕನ್ನಡದಲ್ಲಿ ಪತ್ರಿಕೋದ್ಯಮದ ಬಗ್ಗೆ ವಿದ್ಯಾರ್ಥಿವೇತನ

ಗಳನ್ನು ತಿಂಗಳ ರೂ. ೭೦ರಂತೆ ಕೊಡಲು ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕದವರು ಪ್ರಕಟಿಸಿದ್ದಾರೆ ಕನ್ನಡ ಆನರ್ಸ್ ಪ್ರಥಮ ತರಗತಿಯಲ್ಲಿ ತೇರ್ಗಡೆಯಾದವರಿಗೆ ಇದು ಕೊಡಲ್ಪಡುವುದು ತಾ ೧೫–೭–೪೩ರಿಂದ ವೇತನ ದೊರಕುವುದು. ಸ್ವತ್ತಕ್ಕೆ ಕಾರ್ಯ.

ಭಾರತದಲ್ಲಿ ಛಡೀ ಏಟಿನ ಶಿಕ್ಷೆ! ಅಮೇರಿಗೆ ಗೊತ್ತಿಲ್ಲವಂತೆ!

ಕಾಮನ್ಸ್ ಸಭೆಯಲ್ಲಿ ಕೂಲಿಗಾರ ಪಕ್ಷದ ಸಿಲ್ವರ್‌ಮೇನರು, ರಾಜಕೀಯ ಆರೋಪದ ಮೇಲೆ ಭಾರತದಲ್ಲಿ ಛಡೀ ಏಟಿನ ಅಮಾನುಷ ಶಿಕ್ಷೆ ಕೊಟ್ಟಿರುವ ವಿಷಯ ಮಾತನಾಡುತ್ತಾ ಸಿಂಧ್ ಒಂದರ ಕಡೆಯಲ್ಲಿಯೇ ೪೦೦ಕ್ಕೆ ಮಿಕ್ಕಿದ ಇಂಥಾ ಶಿಕ್ಷೆಗಳಾಗಿರುವ ವಿಷಯ ಅಮೇರಿಯನ್ನು ಪ್ರಶ್ನಿಸಿದರು ತನಗೆ ಆ ವಿಷಯ ಗೊತ್ತಿಲ್ಲವೆಂದು ಅಮೇರಿ ಅದಕ್ಕುತ್ತರವಿತ್ತರು ಅಮೇರಿ ಮುಂದುವರಿಸುತ್ತಾ ಅಖಿಲ ಭಾರತದಲ್ಲಿ ಕಳೆದ ಮೂರು ತಿಂಗಳುಗಳಿಂದ ಒಟ್ಟು ೯೫೮ ಜನರಿಗೆ ಛಡೀ ಏಟಿನ ಶಿಕ್ಷೆ ಕೊಟ್ಟಿದೆ, ಅದು ದೊಡ್ಡದಲ್ಲ ಎಂದರು ಛಡೀ ಏಟಿನ ಶಿಕ್ಷೆಯ ನ್ಯಾಯದ ಕುರಿತು ಪ್ರಶ್ನಿಸಿದ್ದಕ್ಕೆ, ಇದು ನನ್ನ ವಿಚಾರಕ್ಕೊಳಪಟ್ಟದಲ್ಲವೆಂದೂ ಸ್ವತಂತ್ರ ಆಡಳಿತ ಮಾಡುವ ಪ್ರಾಂತಿಕ ಸರಕಾರ ಅದಕ್ಕೆ ಹೊಣೆಯೆಂದೂ ಅಮೇರಿ ತನ್ನ ಜವಾಬ್ದಾರಿ ತಪ್ಪಿಸಿದರು. ಅಖಿಲ ಭಾರತದಲ್ಲಿ ಇದು ದಿನದಿಂದ ದಿನಕ್ಕೆ ಹೆಚ್ಚುತ್ತಿರುವುದು ಸಮ್ಮತವೇ, ಇದರ ಸರಿಯಾದ ಸಂಖ್ಯೆ ತಿಳಿಸಲಾದೀತೇ ಎಂದು ಕೇಳಿದ್ದಕ್ಕೆ ಅದೀಗ ನ್ಯಾಯವಲ್ಲವೆಂದರು ಸೊರೆನ್ಸನರು ಕೇಳಿದ, 'ಇಂಥಾ ಪಾಶವೀ ಶಿಕ್ಷೆಗಳನ್ನು ನಿಲ್ಲಿಸಲು ನಿಮಗೆ ನೈತಿಕ ಜವಾಬ್ದಾರಿಯಿಲ್ಲವೇ' ಎಂಬ ಪ್ರಶ್ನೆಗೆ ಉತ್ತರ ಕೊಡಲಿಲ್ಲ

ರಶ್ಯನ್ ಭಾಷೆಯಲ್ಲಿ 'ಮಹಾಭಾರತ'

ಗ್ರಂಥವು ಭಾಷಾಂತರವಾಗುತ್ತಿದೆ. ಅದರ ಮೊದಲನೆಯ ಸಂಪುಟ ಬೇಗನೇ ಪ್ರಕಟವಾಗಿದೆ ರಶ್ಯದ ದೊಡ್ಡ ಸಂಸ್ಕೃತ ಪಂಡಿತ ಪ್ರೊ। ಕಾಲನೋವ್ ಈ ಕಾರ್ಯವನ್ನು ಮಾಡುತ್ತಾರೆ 'ಪ್ರೇಮ, ದೇಶಾಭಿಮಾನ, ಮಾನವ ಹಕ್ಕುಗಳ ಬಗ್ಗೆ ಹೋರಾಟ ಮಹಾಭಾರತದಲ್ಲಿರುವುದರಿಂದ, ರಶ್ಯನರಿಗೆ ಈ ಗ್ರಂಥವು ಬಹಳ ಪ್ರಿಯವಾಗಿದೆಯೆಂದು ಅವರು ಹೇಳುತ್ತಾರೆ.

'ಬಟ್ಟೆ ಕ್ರಯ ಏರಲು ಸರಕಾರವೇ ಕಾರಣ'

ಶೇಟ್ ಗೋವರ್ಧನದಾಸರ ಆರೋಪ

'ಪರದೇಶದಿಂದ ಬಟ್ಟೆ ಬರುವುದು ನಿಂತು ಹೋದದ್ದು, ಮಿಲಿಟರಿಗಾಗಿ ಬಹಳ ಬಟ್ಟೆಗಳನ್ನು ಸರಕಾರ ತೆಕ್ಕೊಂಡದ್ದು, ನೋಟುಗಳ ಅತಿ ಪ್ರಸರಣವಾದದ್ದು, ಉತ್ಪಾದನೆಯ ಅಧಿಕ ವೆಚ್ಚವಾದುದು, ಸಾಗಿಸುವ ತೊಂದರೆ ಮೊದಲಾದ ಕಾರಣಗಳಿಂದ ಬಟ್ಟೆಯ ಧಾರಣೆ ಇಷ್ಟೊಂದು ಏರಿತು, ಬಟ್ಟೆ ಧಾರಣೆ ಇಷ್ಟೊಂದು ಏರಲು ಕಾರಣ ಯಾರೆಂದು ಕೇಳಿದರೆ ಸರಕಾರದವರೇ ಎಂದು ನಿರ್ಭಯವಾಗಿ ಹೇಳುತ್ತೇನೆ. ಸ್ಟೇಂಡಾರ್ಡ್ ಬಟ್ಟೆ ಸಂಗ್ರಹವನ್ನು ಕೂಡಾ ಸರಕಾರದವರು ಬಡವರಿಗೆ ಸರಿಯಾಗಿ ಹಂಚುತ್ತಿಲ್ಲ. ಅನೇಕ ಸಲ ಈ ಬಟ್ಟೆ ಮುಚ್ಚಿಟ್ಟಿ [illegible] ಹೀಗೆಂದು ಅಖಿಲಭಾರತ ಬಟ್ಟೆ ಮತ್ತು ನೂಲಿನ ವ್ಯಾಪಾರಿಗಳ ಪರಿಷತ್ತಿನ ಅಧ್ಯಕ್ಷ ಶೇಟ್ ಗೋವರ್ಧನದಾಸ ಗೋಕುಲದಾಸ ಮೊರಾರಜಿಯವರು ಹೇಳಿದು

ಭನ್ಸಾಲಿಯವರು ಆಣೆಯವರೊಂದಿಗೆ ಚೀಮೂರು ಸಂದರ್ಶಿಸುವರು?

ಚೀಮೂರಿನ ಮಹಿಳೆಯರ ಮಾನಾಪಹಾರವಾಯಿತೆಂದು ೬೩ ದಿನಗಳ ಮಹೋಪವಾಸ ಮಾಡಿ ಸರಕಾರವನ್ನು ಬಗ್ಗಿಸಿದ ಭನ್ಸಾಲಿಯವರು, ಮಧ್ಯಪ್ರಾಂತ ಸರಕಾರಕ್ಕೂ ಅವರಿಗೂ ಒಪ್ಪಂದವಾದಂತೆ ಬೇಗನೇ ಆಣೆಯವರೊಂದಿಗೆ ಚೀಮೂರನ್ನು ಸಂದರ್ಶಿಸುವ ವಿಚಾರ ಮಾತುಕತೆಗಳಾದವು ಈ ಮಾತುಕತೆಯ ಸಮಯದಲ್ಲಿ ಶ್ರೀಮತಿ ಜಾನಕೀ ಬಾಯಿ ಬಜಾಜ, ಕೆ ಎಂ ಮುನ್ಶಿ ಇವರೂ ಇದ್ದರು ಬನ್ಸಾಲಿಯವರು ಆಣೆಯವರನ್ನು ಚೀಮೂರು ಸಂದರ್ಶಿಸಬೇಕೆಂದು ಹೇಳಿದಾಗ, ಅವರು ವೈಸರಾಯ್ ಮಂತ್ರಿಮಂಡಳ ಮಂಡಿತರಾಗಿದ್ದರು. ಆ ಮೇಲೆ ಗಾಂಧಿಜಿ ಉಪವಾಸ ಸಮಯ ಆಣೆಯವರು ತಮ್ಮ ಅಧಿಕಾರಕ್ಕೆ ರಾಜಿನಾಮೆಯಿತ್ತು ಹೊರಬಂದಿದ್ದಾರೆ ಆದ್ದರಿಂದ ಈಗಿನ ಅವರ ಸಂದರ್ಶನ ಅಧಿಕಾರ ಸಹಿತವಾದುದಲ್ಲ.

ಬ್ರಿಟಿಷ್ ಕಮ್ಯುನಿಸ್ಟರ ಒತ್ತಾಯ ಭಾರತದ ಬಿಕ್ಕಟ್ಟು ಬಿಡಿಸಲು

ಲಂಡನಿನಲ್ಲಿ ಕೂಡಿದ ಬ್ರಿಟಿಷ್ ಕಮ್ಯುನಿಸ್ಟ್ ಪಕ್ಷದ ಕಾಂಗ್ರೆಸಿನಲ್ಲಿ ಭಾರತದ ಸಮಸ್ಯೆಯನ್ನು ಬ್ರಿಟಿಷ್ ಸರಕಾರವು ಕೂಡಲೇ ಬಿಡಿಸಬೇಕೆಂದು ಕಾಂಗ್ರೆಸ್ ಮುಖಂಡರನ್ನು ಸೆರೆಮನೆಯಿಂದ ಬಿಡಬೇಕೆಂದೂ, ತಾತ್ಕಾಲಿಕ ರಾಷ್ಟ್ರೀಯ ಸರಕಾರದ ಬಗ್ಗೆ ಪ್ರಯತ್ನಿಸಬೇಕೆಂದೂ ಒಂದು ಠರಾವಾಯಿತು ವೇವಲರನ್ನು ವೈಸರಾಯರಾಗಿ ನೇಮಿಸಿದರೂ ಬ್ರಿಟಿಷರ ಭಾರತ ಧೋರಣೆ ಬದಲಾಗಿಲ್ಲವೆಂದು ಶ್ರೀ ಕೃಷ್ಣ ಮೆನನರು ಹೇಳಿದರು.

ಮೈಸೂರಲ್ಲಿ ರಾಜಕೀಯ ಬಿಕ್ಕಟ್ಟು ಬಿಡುವ ಪ್ರಯತ್ನ

ದಳಪತಿಗಳಾದ ರಾಜು, ಭೀಮಪ್ಪ ನಾಯಕ ಮೊದಲಾದವರು ಕಾಂಗ್ರೆಸ್ ಮುಖಂಡರೊಡನೆ ಮಾತುಕತೆ ನಡೆಸುತ್ತಿದ್ದಾರೆ ಕಾಂಗ್ರೆಸ್ ಮುಖಂಡರಾದ ಶ್ರೀ ಟಿ. ಸುಬ್ರಹ್ಮಣ್ಯಂ, ಕೆ ಟಿ ಭಾಷ್ಯಂ ಮೊದಲಾದ ೩೨ ಮಂದಿಯನ್ನು ಶಿವಮೊಗ್ಗ ಜೈಲಿನಿಂದ ಸೆಂಟ್ರಲ್ ಜೈಲಿಗೆ ಕರೆತಂದು ಭೇಟಿಯನ್ನು ಸರಕಾರದವರು ಏರ್ಪಡಿಸಿದ್ದಾರೆ ಶ್ರೀ ರಾಜು, ಭೀಮಪ್ಪ ನಾಯಕ ಮೊದಲಾದವರು ಮಂತ್ರಿಗಳನ್ನೂ ಕಾಣುವರು.

ಮಂಗಳೂರು

ಮುನ್ಸಿಪಲ್ ಸಭೆ

ಯು ತಾ ೫ರಲ್ಲು ಸಂಜೆ ಉಪಾಧ್ಯಕ್ಷ ಶ್ರೀ ಸಿ ಎಲ್. ಲೋಬೋರ್ ಅಧ್ಯಕ್ಷತೆಯಲ್ಲಿ ಜರಗಿತು ನಗರ ಸಭೆಯು ಸರಕಾರದೊಡನೆ ೧೨ ರೇಡಿಯೋ ಸೆಟ್ಟು ಕೇಳಲು ನಿರ್ಧರಿಸಿತು. ಹೆಲ್ತ್ ಆಫೀಸರರ ಕಾರ್ಯಗಳನ್ನು ಪ್ರಶಂಸಿಸಿ ಶ್ರೀ. ಎಚ್ ಭೀಮರಾಯರು ತಂದ ನಿರ್ಣಯವು ಸ್ವೀಕೃತವಾಯಿತು.

ನೇಮಕ

ಕನರ್ಾಲಿನ ಡಿ। ಕಲೆಕ್ಟರ್ ಶ್ರೀ. ಜಿ. ಕೊಂಡಯ್ಯರು ನಮ್ಮ ಜಿಲ್ಲೆಯ ಸ್ಪೆಶಲ್ ಡಿ। ಕಲೆಕ್ಟರರಾಗಿ ನೇಮಿಸಲ್ಪಟ್ಟಿದ್ದಾರಾಗಿ ತಿಳಿಯುತ್ತದೆ

ಕುಂಬಳೆ

ಇಲ್ಲಿನ ಶ್ಯಾಮ್ ಭಟ್ಟ ಎಂಬವರು ಮೈಸೂರ್ ಇಂಟರ್ ಕಾಲೇಜ್ ವಿದ್ಯಾರ್ಥಿಯಾಗಿದ್ದು, ಇವರು ಮೈಸೂರಿಗೆ ಕಾಲಿಡಬಾರದೆಂದು ಮೈಸೂರು ಸರಕಾರವು ವಿಧಿಸಿದ ಗಡೀಪಾರು ಆಜ್ಞೆ ಹಿಂತೆಗೆಯಲಾಗಿದೆಯೆಂದು ತಿಳಿಯುತ್ತದೆ.

ಜಿಲ್ಲಾ ಸಮಾಚಾರಗಳು

ಮಂಗಳೂರು

ಜಿಲ್ಲಾ ಪತ್ರಿಕೋದ್ಯಮಿ ಸಂಘ

ಇದರ ಕಾರ್ಯಕಾರಿ ಸಮಿತಿ ಸಭೆಯು ತಾ. ೩ರಂದು ಅದರ ಅಧ್ಯಕ್ಷ ಶ್ರೀ. ಹು. ಭೀಮರಾಯರ ಅಧ್ಯಕ್ಷತೆಯಿಂದ ಜರಗಿ ಶ್ರೀ. ಎನ್. ಎಸ್. ಸುಬ್ಬರಾಯರ ನಿಧನದ ಬಗ್ಗೆ ಸಂತಾಪ ಸೂಚನೆ, ಸಾರ್ವಜನಿಕ ಸಭೆ, ಮೆರವಣಿಗೆ ಕೂಟಗಳಿಗೆ ಹಾಕಿದ ನಿರ್ಬಂಧವನ್ನು ತೆಗೆದುಹಾಕಬೇಕೆಂದೂ, ಆಕ್ಷೇಪ ಕ್ರಿಯವು ಮಿತಿಮೀರದಂತೆ ನಿರ್ಬಂಧಿಸಬೇಕೆಂದೂ ಕಲೆಕ್ಟರರೊಡನೆ ವಿನಂತಿಸುವ ಠರಾವುಗಳಾದವು. ಈ ಸಂಘಕ್ಕೆ ಒಂದು ಆಫೀಸು ಏರ್ಪಡಿಸುವುದು ಅತ್ಯಗತ್ಯವೆಂದಾಗಿ ಆ ವಿಚಾರದಲ್ಲಿ ಸಂಘದ ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿಗಳಿಂದ ಕೂಡಿದ ಸಮಿತಿಯೊಂದು ಏರ್ಪಟ್ಟು ಅವರು ಆ ಬಗ್ಗೆ ಬೇಕಾದ ಕಾರ್ಯಕ್ರಮ ಕೈಕೊಳ್ಳುವುದೆಂದಾಯಿತು.

ಜಿಲ್ಲಾ ಬೋರ್ಡ್ ಸಭೆ:—

ತಾ. ೩ರಂದು ಪ್ರಾತಃ ೧೧ ಗಂಟೆಗೆ ಜಿಲ್ಲಾ ಬೋರ್ಡ್ ಆಫೀಸಿನಲ್ಲಿ ಶ್ರೀ. ಆರೂರು ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಿಂದ ಜರಗಿತು ಈ ಸಭೆಯಲ್ಲಿ ವಿಶೇಷವಾಗಿ ಸುಮಾರು ೧-೩೦ ಗಂಟೆಯ ವರೆಗೆ ಚರ್ಚಿಸಲ್ಪಟ್ಟ ವಿಷಯವೆಂದರೆ ಜಿಲ್ಲಾ ಬೋರ್ಡಿನ ಪ್ರಾಥಮಿಕ ಉಪಾಧ್ಯಾಯರಿಗೆ ತುಟ್ಟಿಭತ್ತೆ ಕೊಡುವ ವಿಚಾರ. ಅಧ್ಯಕ್ಷರು, ಈ ವಿಷಯ ಪ್ರಸ್ತಾಪಿಸುತ್ತಾ ಈಗಾಗಲೇ ಬೋರ್ಡಿನ ವಿದ್ಯಾಖಾತೆಯ ಆರ್ಥಿಕಪರಿಸ್ಥಿತಿ ಚೆನ್ನಾಗಿಲ್ಲದೆ, ಜಿಲ್ಲಾ ಬೋರ್ಡಿನ ವಿದ್ಯಾಖಾತೆ ಕೊರತೆಗೊಂಡಿರುವ ವಿಷಯ ವಿವರಿಸಿ, ಡೈರೆಕ್ಟರರು ಕೂಡಾ ಈ ಕುರಿತು ಬೋರ್ಡನ್ನು ಎಚ್ಚರಿಸಿರುವ ವಿಷಯ ತಿಳಿಸಿ, ನಾವು ಈ ಕೊರತೆಯನ್ನು ಭರ್ತಿಮಾಡಿಕೊಳ್ಳದೆ ನಿರ್ವಾಹವಿಲ್ಲವೆಂದೂ, ಉಪಾಧ್ಯಾಯರಿಗೆ ತಿಂಗಳ ರೂ. ೨ರಂತೆ ತುಟ್ಟಿಭತ್ತೆ ಕೊಡುವುದು ಮತ್ತು ಕೆಲವು ಅತ್ಯಗತ್ಯವಿದ್ದ ಶಾಲೆಗಳಿಗೆ ಹೊಸ ಉಪಾಧ್ಯಾಯರನ್ನು ಕೊಡುವುದು ಅತ್ಯವಶ್ಯವಿರುವುದರಿಂದ ಈ ಬಗ್ಗೆ ಈಗ ರೂಢಿಯಲ್ಲಿ ಇರುವ ವಿದ್ಯಾ ತೆರಿಗೆಯನ್ನು ಇನ್ನೂ ೩" ಪೈ ಏರಿಸಿ ಘೂಷ್ಯಾಗೆ ಒಂದಾಣೆ ಮಾಡಿ ಕೊರತೆ ನೀಗಾಡಿಸುವುದೆಂದೂ ಸೂಚನೆಯಿತ್ತರು. ಈ ಸಂದರ್ಭದಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನ ಆಫೀಸು ಕೆಲಸಗಾರರೂ ಕೂಡ ತಮಗೆ ಹೊಸ ಸರಕಾರೀ ಆಜ್ಞೆಯಂತೆ ತುಟ್ಟಿಭತ್ತೆ ಹೆಚ್ಚಿಸಬೇಕೆಂದೂ (ಹಿಂದೊಮ್ಮೆ ಅವರಿಗೆ ತುಟ್ಟಿಭತ್ತೆ ಕೊಡಲಾಗಿತ್ತು) ಬಿನ್ನವಿಸಿಕೊಂಡ ವಿಷಯವನ್ನು ಹೇಳಿ, ಉಪಾಧ್ಯಾಯರು ಬಹಳ ಕಾಲದಿಂದ ಸಂಕಷ್ಟಪಡುತ್ತಿರುವುದರಿಂದ ಅವರ ವಿಚಾರ ಮೊದಲು ಮಾಡಬೇಕಾಗಿದೆಯೆಂದೂ ಆ ಮೇಲೆ ಡಿಸ್ಟ್ರಿಕ್ಟ್ ಬೋರ್ಡ್ ಸಿಬ್ಬಂದಿ ವಿಚಾರವಮಾಡಬಹುದೆಂದೂ ಹೇಳಿದರು. ಉಪಾಧ್ಯಾಯರಿಗೆ ತುಟ್ಟಿಭತ್ತೆ ಕೊಡುವ ವಿಚಾರ ಎಲ್ಲಾ ಸದಸ್ಯರೂ ಸಹಾನುಭೂತಿಯುಳ್ಳವರಾದರೂ, ಕೆಲವರು ವರ್ಗದಾರರಿಗೆ ಇನ್ನೂ ಹೆಚ್ಚಿನ ತೆರಿಗೆ ಹಾಕುವುದು ಯೋಗ್ಯವಲ್ಲವೆಂದು ಅಭಿಪ್ರಾಯವಿತ್ತರು. ಇವರಲ್ಲಿ ಡಾ. ಪಿ. ಜಿ. ಆಚಾರ್ಯರು ಪ್ರಮುಖರು. ಇವರನ್ನು ಡಾ. ಅಡ್ಯಂತಾಯರು ಅನುಮೋದಿಸಿದರು. ಈ ವಿಷಯ ಬಹಳ ಕಾಲ ವಾದವಿವಾದಗಳು ಮತಗಣನೆಯೂ ಆಯಿತು. ಮತಗಣನೆಯಲ್ಲಿ ತೆರಿಗೆ ಹಾಕುವುದೆಂದು ನಿಶ್ಚಯವಾಯಿತು. ಜುಲೈ ತಾ. ೧ರಿಂದ ಬೋ. ಎ. ಶಾಲಾ ಉಪಾಧ್ಯಾಯರಿಗೆ ತಿಂಗಳಿಗೆ ರೂ. ೨ರಂತೆ ತುಟ್ಟಿಭತ್ತೆ ಕೊಡಲಾಗುವುದು.

ಜಿಲ್ಲಾ ಬೋರ್ಡಿಗೆ ಉಪಾಧ್ಯಕ್ಷರಾಗಿ

ಶ್ರೀ. ಕೆ. ಮಹಾಲಿಂಗ ಶೆಟ್ಟಿಯವರು ಈ ಬಗ್ಗೆ ತಾ. ೩ರಂದು ಸೇರಿದ ಸಭೆಯಲ್ಲಿ ಚುನಾಯಿತರಾದರು. ಹೊಸ ಡಿ. ಬೋ. ಪ್ರೆಸಿಡೆಂಟರಾದ ಶ್ರೀ. ಆರೂರು ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಿಂದ ಸಭೆ ಸೇರಿತು. ಶ್ರೀಗಳಾದ ಕೆ. ಮಹಾಲಿಂಗ ಶೆಟ್ಟಿ ಮತ್ತು ಜನಾಬ್ ಮೀರ್ ಹೈದರ್ ಸಾಹೆಬ್ ಬಹದ್ದೂರ್ ಇವರಿಬ್ಬರು ಉಪಾಧ್ಯಕ್ಷ ಸ್ಥಾನಕ್ಕೆ ಉಮೇದ್ವಾರರಾಗಿದ್ದರು. (ಹಿಂದಿನ ಉಪಾಧ್ಯಕ್ಷರೇ ಹೊಸ ಅಧ್ಯಕ್ಷರಾಗಿ ಆರಿಸಿ ಬಂದದ್ದರಿಂದ ಉಪಾಧ್ಯಕ್ಷ ಸ್ಥಾನ ಖಾಲಿ ಬಿದ್ದಿತ್ತು) ಗುಪ್ತ ಮತದಾನ ಪದ್ಧತಿಯಿಂದ ಮತ ತೆಗೆಯಲಾಗಿ ಇಬ್ಬರಿಗೂ ಎಂಟೆಂಟು ಸಮಾನ ಮತಗಳು ದೊರಕಿದವು. (ಈ ಸಲದ ಸಭೆಗೆ, ರಾಜೀನಾಮೆ ಕೊಟ್ಟು ಉಳಿದಿರುವ ಒಟ್ಟು ೨೨ ಮಂದಿ ಸದಸ್ಯರಲ್ಲಿ ೧೮ ಮಂದಿ ಹಾಜರಿದ್ದರು. ಇಬ್ಬರು ಉಮೇದ್ವಾರರಿಗೆ ಮತದಾನವಿಲ್ಲ) ಆ ಮೇಲೆ ಅಧ್ಯಕ್ಷರು 'ಚೀಟಿ' ತೆಗೆಯಲು ಶ್ರೀ ಕೆ. ಮಹಾಲಿಂಗ ಶೆಟ್ಟರು ಉಪಾಧ್ಯಕ್ಷರಾಗಿ ಆರಿಸಿ ಬಂದರು. ಯಶಸ್ವಿಗಳಾದ ಶ್ರೀ. ಕೆ. ಮಹಾಲಿಂಗ ಶೆಟ್ಟರ ಪರವಾಗಿ ನೆರೆದವರಿಗೆ ಉಪಹಾರವಿತ್ತು.

ಸೆಕೆಂಡರಿ ಶಾಲೆಗಾಗಿ ಡಿ. ಬೋ. ಪ್ರೆಸಿಡೆಂಟರಲ್ಲಿ ಶಿಷ್ಟಮಂಡಳ

ಪೆರಡಾಲ ಬೋರ್ಡು ಹಯ್ಯರ್ ಎಲಿಮೆಂಟರಿ ಶಾಲೆಯನ್ನು ಸೆಕೆಂಡರಿ ಶಾಲೆಯಾಗಿ ಮಾರ್ಪಡಿಸಬೇಕೆಂದು ಅಲ್ಲಿನ ಗ್ರಾಮಸ್ಥರ ಶಿಷ್ಟಮಂಡಳವೊಂದು ತಾ. ೩ರಂದು ಸಂಜೆ ೪-೩೦ ಗಂಟೆಗೆ ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರಾದ ಶ್ರೀ ಆರೂರು ಲಕ್ಷ್ಮೀನಾರಾಯಣ ರಾಯರನ್ನು ಕಂಡು ವಿನಂತಿಸಿಕೊಂಡಿತು. ಮೂರು ವರ್ಷಗಳ ಹಿಂದೆ ಇಲ್ಲಿದ್ದ ಬೋರ್ಡ್ ಎಲಿಮೆಂಟರಿ ಶಾಲೆಯು ಗ್ರಾಮಸ್ಥರ ಚಳವಳ ಮತ್ತು ಪ್ರೋತ್ಸಾಹದಿಂದ ಹಾಗೂ ಡಿಸ್ಟ್ರಿಕ್ಟ್ ಬೋರ್ಡ್ ಮತ್ತು ಸಂಬಂಧಪಟ್ಟ ಅಧಿಕಾರಿಗಳ ಸಹಕಾರದಿಂದ ವಿಶೇಷವಾಗಿ ಕೀ. ಶೇ. ಡಾ. ವಿಟ್ಠಲ ಶೆಟ್ಟರ ಸಾಹಸದಿಂದ ಹಯ್ಯರ್ ಎಲಿಮೆಂಟರಿ ಶಾಲೆಯಾಗಿ ಮಾರ್ಪಟ್ಟಿತು. ಈ ಸಂದರ್ಭದಲ್ಲಿ ಗ್ರಾಮಸ್ಥರು ರೂ. ೪೦೦೦ಕ್ಕೆ ಮಿಕ್ಕಿದ ಧನ ವ್ಯಯಮಾಡಿ ಡಿಸ್ಟ್ರಿಕ್ಟ್ ಬೋರ್ಡಿಗೆ, ಹಯ್ಯರ್ ಎಲಿಮೆಂಟರಿ ಶಾಲೆಗಾಗಿ ಭವ್ಯವಾದ ಕಟ್ಟಡವೊಂದನ್ನು ಕಟ್ಟಿಸಿ ಕೊಟ್ಟಿದ್ದರು. ಪೆರಡಾಲಿನ ಬದಿಯಡ್ಕವೆಂಬ ಕೇಂದ್ರ ಸ್ಥಳದಲ್ಲಿ ಈ ಹಯ್ಯರ್ ಎಲಿಮೆಂಟರಿ ಶಾಲೆಯಿರುವುದರಿಂದ ಆಸುಪಾಸು ಸುಮಾರು ಹತ್ತು ಗ್ರಾಮಗಳ ವಿದ್ಯಾರ್ಥಿಗಳಿಗೆ ಇಲ್ಲಿ ಬಂದು ವಿದ್ಯಾಭ್ಯಾಸ ಮಾಡಲು ಸಂದರ್ಭ ದೊರಕಿದ್ದರಿಂದ ಮೊದಲು ಎಲಿಮೆಂಟರಿ ಶಾಲೆಯಿರುವಾಗ ಕೇವಲ ೭೦-೮೦ ವಿದ್ಯಾರ್ಥಿ ಸಂಖ್ಯೆ ಇದ್ದ ಈ ಶಾಲೆಯಲ್ಲಿ ಈಗಾಗಲೇ ಸುಮಾರು ೪೦೦ರಷ್ಟು ವಿದ್ಯಾರ್ಥಿಗಳ ಸಂಖ್ಯೆ ಇದೆ. ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ ಊರವರು ಬೇಗನೇ ಯೋಗ್ಯವಾದ ವಿದ್ಯಾರ್ಥಿ ಭವನ ಒಂದನ್ನೂ ಏರ್ಪಡಿಸುವ ಯೋಚನೆಯಲ್ಲಿಯೂ ಇರುವರೆಂದು ತಿಳಿಯುತ್ತದೆ. ಹೀಗಿರಲು ಇನ್ನೂ ವಿದ್ಯಾರ್ಥಿಗಳ ಸಂಖ್ಯೆ ಬಹಳವಾಗಿ ಹೆಚ್ಚುವುದೆಂಬುದು ಖಂಡಿತ. ಸದ್ಯ, ಎಂಟನೆಯ ತರಗತಿಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ಹೈಸ್ಕೂಲಿನ IV ಫಾರ್ಮಿಗೆ ಪ್ರವೇಶವಿಲ್ಲದಿರುವುದರಿಂದ ಹಯ್ಯರ್ ಎಲಿಮೆಂಟರಿ ಶಾಲೆಗಳ VIIIನೇ ಕ್ಲಾಸುಗಳ ದುರವಸ್ಥೆ ಎಲ್ಲಾ ಕಡೆಯಲ್ಲಿಯೂ ಒಂದೇ ತರದ್ದಾಗಿದೆ. ಹಾಗಿದ್ದರೂ, ಈ ವರ್ಷ ಜಿಲ್ಲೆಯ ಹಯ್ಯರ್ ಎಲಿಮೆಂಟರಿ ಶಾಲೆಗಳ E. S. L. C. ಪರೀಕ್ಷಾ ಫಲಿತಾಂಶವು ಒಟ್ಟಿನಿಂದ ಅಷ್ಟೊಂದು ತೃಪ್ತಿಕರವಿಲ್ಲದಿದ್ದರೂ, ಇಲ್ಲಿನ E. S. L. C. ಪರೀಕ್ಷಾ ಫಲಿತಾಂಶವು ಕಳೆದ ಎರಡು ವರ್ಷಗಳಲ್ಲಿಯೂ ಉತ್ತಮೋತ್ತಮವಾಗುತ್ತಾ ಬರುತ್ತಿದ್ದು ಈ ವರ್ಷ 90%ರಷ್ಟು ವಿದ್ಯಾರ್ಥಿಗಳು ಇಲ್ಲಿಂದ E. S. L. C ತೇರ್ಗಡೆ ಹೊಂದಿದ್ದಾರೆಂಬುದು ಗಮನೀಯ ವಿಚಾರವಿದೆ. ಈ ಗ್ರಾಮಗಳ ವಿದ್ಯಾರ್ಥಿಗಳು ೧೨ ಮೈಲು ದೂರದ ಕಾಸರಗೋಡಿಗೋ, ಅದಕ್ಕಿಂತಲೂ ದೂರದ ನೀಲೇಶ್ವರಕ್ಕೋ, ಮಂಗಳೂರಿಗೋ ಹೋಗಿ ಸೆಕೆಂಡರಿ ವಿದ್ಯಾಭ್ಯಾಸ ಪಡೆಯುತ್ತಿರುವುದು ಬಹಳ ಅನಾನುಕೂಲವಿರುವುದರಿಂದ ಗ್ರಾಮಸ್ಥರು ಇಲ್ಲಿಯೇ ಡಿ. ಬೋ. ನವರು ಇದ್ದ ಹಯ್ಯರ್ ಎಲಿಮೆಂಟರಿ ಶಾಲೆಯನ್ನು ಸೆಕೆಂಡರಿಯಾಗಿ ಮಾರ್ಪಡಿಸಬೇಕೆಂದು ಡಿ. ಬೋ. ಪ್ರೆಸಿಡೆಂಟರಲ್ಲಿ ವಿನಂತಿಸಿಕೊಂಡರು. ಡಿ. ಬೋ. ಪ್ರೆಸಿಡೆಂಟರು ಶಿಷ್ಟಮಂಡಳದ ವಿನಂತಿಯನ್ನು ಉದಾರಬುದ್ಧಿಯಿಂದ ಕೇಳಿದ್ದಾರೆ. ಪ್ರೆಸಿಡೆಂಟರು ಸದ್ಯದ ಡಿ. ಬೋ. ನ ವಿದ್ಯಾಖಾತೆಯ ಆರ್ಥಿಕ ಪರಿಸ್ಥಿತಿಯ ಮುಗ್ಗಟ್ಟನ್ನು ವಿವರಿಸಿ, ಈ ಬಗ್ಗೆ ಪ್ರಯತ್ನ ಮಾಡಬೇಕಾದರೆ ಗ್ರಾಮಸ್ಥರು ಹೆಚ್ಚಿನ ಸಹಾಯ ಮಾಡಬೇಕೆಂದಿರುವರು. ಗ್ರಾಮಸ್ಥರು ಕಳೆದ ಸರ್ತಿಯಂತೆ ಈ ಸಲವಾದರೂ ತಮ್ಮಿಂದಾಗುವ ಸಹಾಯ ಮಾಡುವುದಾಗಿ ತಿಳಿಸಿದ್ದಾರೆ. ಹಳ್ಳಿಗಳಲ್ಲಿ ವಿದ್ಯಾ ಪ್ರಚಾರವಾಗುವಂತೆ ಇಂಥಾ ಉತ್ತಮ ಗ್ರಾಮ ಕೇಂದ್ರಗಳಲ್ಲಿ ಸೆಕೆಂಡರಿ ಶಾಲೆಯೇರ್ಪಡಿಸುವುದು ಅವಶ್ಯವಿರುವುದರಿಂದ ಡಿಸ್ಟ್ರಿಕ್ಟ್ ಬೋರ್ಡಿನ ಹೊಸ ಅಧ್ಯಕ್ಷರು ಈ ವಿಷಯ ಹೆಚ್ಚಿನ ಪ್ರಯತ್ನ ಮಾಡುವರೆಂದು ಹಾರೈಸಲಾಗಿದೆ.

ಬಟ್ಟೆ ವಿಚಾರ:—

ಮಂಗಳೂರಲ್ಲೀಗ ಬಟ್ಟೆಗೆ ತುಸು ಕ್ರಯ ಕಮ್ಮಿಯಾಗಿದೆ. ಕೆಲವರು ಈಗಾಗಲೇ ಕಡಿಮೆ ದರದ ಮಾರಾಟಕ್ಕೆ ಸುರುಮಾಡಿದ್ದಾರೆ. ಬಹುಶಃ ಬಟ್ಟೆಗೆ ನಿಯಂತ್ರಣ ಬರುತ್ತದೆಂದೋ, ಸ್ಟೆಂಡಾರ್ಡ್ ಬಟ್ಟೆ ಬರುತ್ತದೆಂದೋ ತಿಳಿದು ವಸ್ತ್ರ ವ್ಯಾಪಾರಿಗಳು ದಿಗಿಲುಗೊಂಡಂತೆ ತೋರುತ್ತದೆ.

ಆಹಾರ ಸಮಸ್ಯೆ:—

ವಿಷಮವಾಗುತ್ತಿರುವದರಿಂದ ಆ ಕುರಿತು ಆಲೋಚಿಸುವರೆ ನಗರದ ಕೆಲ ಪ್ರಮುಖ ಗೃಹಸ್ಥರ ಸಭೆಯು ತಾ. ೧ರಂದು ಹಂಪನಕಟ್ಟೆಯ ಸುಧಾರಕ ಸಂಘದ ಕಟ್ಟಡದಲ್ಲಿ ಶ್ರೀ. ಎಸ್. ಎನ್. ಸುವರ್ಣರ ಅಧ್ಯಕ್ಷತೆಯಿಂದ ನೆರವೇರಿತು. 'ಆಹಾರ ಸಾಮಗ್ರಿಗಳ ಬೆಲೆ ಏರುತ್ತಿರುವುದರಿಂದ, ಜನರು ಸಂಕಷ್ಟಕ್ಕೊಳಗಾಗಿದ್ದು, ಬೆಲೆ ತಗ್ಗಿಸಲು ಮತ್ತು ಬೇರೆ ಕಡೆಯಿಂದ ಅಕ್ಕಿ ತರಿಸಲು ಯತ್ನಿಸುವುದು ಅವಶ್ಯ. ಈ ಸಂಬಂಧ ಬೇರೆ ಬೇರೆ ಪಂಗಡಗಳ ಪ್ರತಿನಿಧಿಕ್ವದ ಒಂದು ಸಮಿತಿ ರಚಿಸಿ ಕೆಲಸಮಾಡಬೇಕು' ಎಂಬರ್ಥದ ನಿರ್ಣಯವನ್ನು ಶ್ರೀ. ಜೆರೊಮ್ ಸಾಲ್ಡಾನಾರು ಮುಂಡಿಸಿದರು. ನಿರ್ಣಯ ಮಂಜೂರಾಗಿ, ಶ್ರೀ. ಎಸ್. ಎನ್. ಸುವರ್ಣರು ಅಧ್ಯಕ್ಷರಾಗಿ, ಶ್ರೀ. ಸಿ. ಎಲ್. ಲೋಬೋ ಕಾರ್ಯದರ್ಶಿಯಾಗಿ, ಶ್ರೀಗಳಾದ ಜೆರೊಮ್ ಸಾಲ್ಡಾನಾ, ಯು. ಕಣ್ಣಪ್ಪ, ಆರ್. ಆರ್. ತಲ್ಲೇರಿಕರ್, ಗೋಪಾಲ ನಾಯಕ ಮತ್ತು ಅಮ್ಮಣ್ಣ ಇವರು ಸದಸ್ಯರಾಗಿ ಒಂದು ಸಮಿತಿ ರಚಿತವಾಯಿತು.

ಸತ್ಕಾರ ಕೂಟಗಳು

ಮದ್ರಾಸ್ ಲಾ ಕಾಲೇಜಿನ ಲೆಕ್ಚರರಾದ ಶ್ರೀ. ಬಿ. ಲಕ್ಕಪ್ಪ ರೈಗಳಿಗೆ ಹಂಪನ ಕಟ್ಟೆಯ ಡಾ। ನಾಗಪ್ಪಾಳ್ವರ ಆಸ್ಪತ್ರೆಯಲ್ಲಿ ಒಂದು ಸತ್ಕಾರ ಕೂಟವೇರ್ಪಟ್ಟಿತು. ಶ್ರೀಗಳಾದ ಎ. ಬಿ. ಶೆಟ್ಟಿ, ಎ. ಶಂಕರಾಳ್ವ ಮೊದಲಾದವರು ಶ್ರೀ. ರೈಗಳು ಮದ್ರಾಸಿನಲ್ಲಿ ದಕ್ಷಿಣ ಕನ್ನಡದವರಿಗೆ ಮಾಡುವ ಸಹಾಯದ ಕುರಿತು ಪ್ರಶಂಸೆಯ ಮಾತನಾಡಿದರು. ಶ್ರೀ. ರೈಗಳು ಇದಕ್ಕೆ ಯೋಗ್ಯ ಉತ್ತರವಿತ್ತರು.

ವರ್ಗವಾಗಿ ಹೋಗುವ ಗವರ್ನಮೆಂಟ್ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ. ಎ. ಶಿವಾನಾಥ ಪಿಳ್ಳೆಯವರಿಗೆ ಒಂದು ವಿದಾಯ ಸತ್ಕಾರ ಕೂಟವು ನಡೆಯಿತು.

ಮುಷ್ಕರ:—

ಜೆ. ಸಿ. ಸಿಕೇರರ ರಂಗಿನ ಕಾರ್ಖಾನೆಯ ಕೆಲಸಗಾರರ ಮುಷ್ಕರ ಇನ್ನೂ ಕೊನೆಗೊಂಡಿಲ್ಲ. ಒಪ್ಪಂದದ ಪ್ರಯತ್ನಗಳಾಗುತ್ತಿವೆ. ಆ ಸಂಬಂಧ ಬಂಧಿತರಾದವರ ವಿಚಾರಣೆ ತಾ. ೩ರಿಂದ ಮುಂದುವರಿದಿದೆ.

ನಿಧನ:—

ಬಂದರ ಸಾಹುಕಾರ ಶ್ರೀ. ಸುಜೀರ್ ರಾಮಚಂದ್ರ ನಾಯಕರು ತಾ. ೫ರಂದು ತಮ್ಮ ೩೦ರ ಯ ವಯಸ್ಸಿನಲ್ಲಿ ಮೃತರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಶ್ರೀಯುತರ ಆತ್ಮಕ್ಕೆ ಚಿರಶಾಂತಿಯಿರಲಿ! ಮೃತರ ನಿಧನದ ಬಗ್ಗೆ ಸಂತಾಪ ಸೂಚನೆಯಾಗಿ ಬಂದರದಲ್ಲಿ ಹರತಾಳವಿತ್ತು.

ಕುಸ್ತಿ ಪಂದ್ಯಾಟ:—

ಶ್ರೀ. ಕೇಚರ್‌ಸಿಂಗ್ ಪಹಿಲ್ವಾನರೆಂಬ ಉತ್ತರ ಭಾರತದ ಪ್ರಸಿದ್ಧ ಕುಸ್ತಿ ಪಂದ್ಯಾಟಗಾರರು ಮಂಗಳೂರಿಗೆ ಬಂದಿದ್ದು, ಈ ಜಿಲ್ಲೆಯಲ್ಲಿ ಕುಸ್ತಿಗೆ ನಿಲ್ಲಬೇಕೆಂದು ಆಶಿಸಿಟ್ಟಂತೆ ಉಳ್ಳಾಲದ ಮೊಗವೀರ ಸಮಾಜಕ್ಕೆ ಸೇರಿದ ಶ್ರೀ. ನರಪಪ್ಪ ಪಹಿಲ್ವಾನರು ಅವರೊಡನೆ ಕುಸ್ತಿ ಹಿಡಿಯಲು ಮುಂದೆ ಬಂದಿರುವರೆಂದೂ, ಈ ಪಂದ್ಯಾಟವು ಮಂಗಳೂರಲ್ಲಿ ಬೇಗನೇ ಜರಗಲಿದೆಯೆಂದೂ ಬಂದು ಬಾತ್ಮಿ.

ಧರ್ಮ ಚಿಕಿತ್ಸಾಲಯ:—

ಶ್ರೀ. ಮಿಜಾರ ಕೃಷ್ಣ ಅಣ್ಣಪ್ಪ ಪೈ ಕಂಪೆನಿಯವರು ಇವರ ಗೇರುಬೀಜದ ಕಾರ್ಖಾನೆಯ ಕೆಲಸಗಾರರ ಮತ್ತು ಇವರ ಕುಟುಂಬದ ಉಪಯೋಗಕ್ಕೋಸ್ಕರವಾಗಿ ಇವರ ಕಾರ್ಖಾನೆಯ ವಠಾರದಲ್ಲಿ ಮಿಜಾರ ಅಣ್ಣಪ್ಪ ಅನಂತ ಪೈಯವರ ಹೆಸರಿನ ಧರ್ಮ ಚಿಕಿತ್ಸಾಲಯವೊಂದನ್ನು ಸ್ಥಾಪಿಸಿ ಇದರ ಪ್ರಾರಂಭೋತ್ಸವವು ತಾ. ೪ರಂದು ಡಾ। ಎಮ್. ಕೇಶವ ಪೈಯವರಿಂದ ಜರಗಿಸಲ್ಪಟ್ಟಿತು. ಈ ಚಿಕಿತ್ಸಾಲಯವನ್ನು ನಡೆಸುವ ಕಾರ್ಯವನ್ನು ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ ಸಂಘದವರು ವಹಿಸಿಕೊಂಡಿದ್ದಾರೆ.

ಸೈ। ಎ। ಕಾಲೇಜ್ ಯೂನಿಯನ್:—

ನ ಚುನಾವಣೆ ನಡೆದು ಶ್ರೀ. ಥೋಮಸ್ ಕುಂಞ ಇವರು ಪ್ರೆಸಿಡೆಂಟರಾಗಿಯೂ, ಶ್ರೀ. ಲೋರೆನ್ಸ್ ಬಂಗೇರ ಇವರು ಜನರಲ್ ಸೆಕ್ರಟರಿಯಾಗಿಯೂ ಶ್ರೀ. ಸಿ. ಎನ್. ಗಣಪತಿ ಇವರು ಜೊಯಿಂಟ್ ಸೆಕ್ರೆಟರಿಯಾಗಿಯೂ, ಶ್ರೀ. ಜಯರಾಮ ಶೆಟ್ಟಿ ಇವರು ಅಂಡರ್ ಸೆಕ್ರಟರಿಯಾಗಿಯೂ ಶ್ರೀ. ಯಾದವ ಇವರು ಅಸಿಸ್ಟೆಂಟ್ ಸೆಕ್ರೆಟರಿಯಾಗಿಯೂ ಚುನಾಯಿತರಾಗಿದ್ದಾರೆ.

ನೀರೇಶ್ವಾಲ್ಯ

ಇಲ್ಲಿನ ಆರ್ಯ ಭಜನ ಮಂಡಳಿಯವರು ಈ ವರ್ಷ ಒಂದು ಆರ್ಯ ಸೇವಾದಳವನ್ನು ಸ್ಥಾಪಿಸಿ ಅದಕ್ಕೆ ಸೇರಿದ ಬಾಲಕರಿಗೆ ಪ್ರತಿ ಆದಿತ್ಯವಾರ ಬೆಳಿಗ್ಗೆ ೮-೩೦ರಿಂದ ೧೧ ಘಂಟೆ ತನಕ ವೈದಿಕ ಭಜನೆ, ಸಂಧ್ಯಾವಂದನೆ, ನೀತಿ ಬೋಧನೆ ಮತ್ತು ಶಾರೀರಿಕ ಶಿಕ್ಷಣಗಳನ್ನು ಕೊಡುವ ಏರ್ಪಾಡು ಮಾಡಿರುತ್ತಾರೆ.

ಜನತಾ ರಂಗಭೂಮಿ:—

ಯ ವಿಚಾರ ಮಂಗಳೂರಲ್ಲಿ ಕೆಲವರು ಆಲೋಚಿಸುತ್ತಿದ್ದಾರೆಂದು ತಿಳಿಯುತ್ತೇವೆ. ಜನಜೀವನವನ್ನು ಚಿತ್ರಿಸಿ, ಪ್ರತಿಫಲದಾಶೆಯಿಲ್ಲದೆ ನಾಟಕಗಳನ್ನಾಡುವುದು ಈ ರಂಗಭೂಮಿಯವರ ಉದ್ದೇಶವಿದೆ. ಬೇಗನೇ ಇಂತಹ ನಾಟಕಗಳನ್ನು ಆಡಲಿಕ್ಕಿರುವರೆಂದೂ ಕೇಳುತ್ತೇವೆ.

ನಾಟಕ ಸಂಘ:—

ಮಂಗಳೂರಿನ ಸಾಹಿತ್ಯ ಸುಧಾರಕ ನಾಟಕ ಸಂಘದವರ ಸಾಮಾನ್ಯ ಸಭೆಯೊಂದು ತಾ. ೪ರಂದು ಶ್ರೀ ಬಿ. ಅಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಸೇರಿತು. ಈ ಸಂಘದವರು ಇತ್ತೀಚೆಗೆ ಕೆಲವು ನಾಟಕಗಳನ್ನು ಚಲೋದಾಗಿ ಪ್ರದರ್ಶಿಸಿದ್ದಾರೆ.

ಕರ್ನಾಟಕ

ಶ್ರೀ. ಎನ್. ಎಸ್. ಸುಬ್ಬರಾಯರ ನಿಧನ

ಮೈಸೂರು ವಿಶ್ವವಿದ್ಯಾಲಯದ ವೈಸ್ ಛಾನ್ಸಲರಾಗಿ ನಿವೃತ್ತರಾಗಿದ್ದ ಶ್ರೀ. ಎನ್. ಎಸ್. ಸುಬ್ಬರಾಯರು ತಾ. ೩ರಂದು ಬೆಂಗಳೂರಿನ ತಮ್ಮ ಮನೆಯಲ್ಲಿ ಹೃದಯಸ್ತಂಭನದಿಂದ ಮೃತರಾದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ. ಇವರು ಅತ್ಯಂತ ಮೇಧಾವಿಗಳೂ, ಅರ್ಥಶಾಸ್ತ್ರ ವಿಶಾರದರೂ, ನೂತನ ಭಾರತ ನಿರ್ಮಾಣದಲ್ಲಿ ಅತ್ಯಂತ ಶ್ರದ್ಧೆಯುಳ್ಳವರೂ ಆಗಿದ್ದರು. ಇವರು ಇಂಗ್ಲೆಂಡಿನಲ್ಲಿ ಅರ್ಥಶಾಸ್ತ್ರದ ವಿದ್ಯಾಭ್ಯಾಸ ಪಡೆದು ಎಂ. ಎ. ಆಗಿ 'ಲಾ' ಅಭ್ಯಾಸ ಮಾಡಿದವರು. ಹಲವು ಕಾಲ ಪ್ರೊಫೆಸರರಾಗಿ, ಪ್ರಿನ್ಸಿಪಾಲರಾಗಿ, ಡೈರೆಕ್ಟರರಾಗಿ, ಮತ್ತೆ ವೈಸ್ ಛಾನ್ಸೆಲರಾಗಿ ವಿದ್ಯಾ ಪ್ರಚಾರದಲ್ಲಿಯೇ ತಮ್ಮ ಆಯುಸ್ಸಿನ ಬಹುಭಾಗವನ್ನು ಇವರು ಕಳೆದವರಿದ್ದರು. ಮೈಸೂರು ದೇಶದ ಪ್ರಗತಿಪರ ಅಭಿವೃದ್ಧಿಗೆ ಇವರು ಅಪಾರ ಸೇವೆ ಸಲ್ಲಿಸಿದ್ದಾರೆ. ಕನ್ನಡ ಭಾಷಾ-ಸಾಹಿತ್ಯಕ್ಕೂ ಇವರಿಂದ ಸಹಾಯವಾಗಿದೆ. ಕನ್ನಡವನ್ನು ಬೋಧನ ಭಾಷೆಯನ್ನಾಗಿ ಮಾಡಲು ಇವರು ತುಂಬಾ ಶ್ರಮ ವಹಿಸಿದ್ದಾರೆ. ಇವರ ನಿಧನದಿಂದ ಕನ್ನಡಕ್ಕೆ ಅಪಾರ ನಷ್ಟವಾಗಿದೆ. ಮೃತರ ಆತ್ಮಕ್ಕೆ ಶಾಂತಿಯಿರಲಿ!

ಸಿನೆಮಾ ಸುದ್ದಿ

'ಸಾವನ್‌ಕೆ ನಜಾರೇ . . .

"ಲಿ, ಲಿ, ಲ್ಲಿ, ಲ," ಈ ಜನಪ್ರಿಯ 'ಖಜಾಂಚಿ' ಹಾಡುಕಟ್ಟಿದವರು ಗುಲಾಂ ಹೈದರ್. ಇದು ತೀರಾ ಹೊಸ ರೀತಿಯ ಹಾಡು. ಪಂಜಾಬಿನ ಲಘು ಕುಣಿತದ ಧಾಟಿ ಇದರದು. ಮಹಾರಾಷ್ಟ್ರ ರೀತಿಯ ಶಾಸ್ತ್ರ ನಿಯಮಕ್ಕೆ ಕಟ್ಟುಬಿದ್ದ ಸಂಗೀತವಲ್ಲ, ಬಂಗಾಳಿಯಂತೆ ಭಾವನಾ ಪ್ರಧಾನವೂ ಅಲ್ಲ. ಮನೋಹರ ಕುಣಿತ ಇದರದು, ಅದರ ಮೋಡಿ, ಅದರ ಮಾರ್ದವ ಇದರಿಂದಲೇ ಇದು ಲೋಕ ವಿಖ್ಯಾತವಾಗಿದೆ. ಈ ಹಾಡು ಕಟ್ಟಿದ ಗುಲಾಂ ಹೈದರ್ ಹೊಸಬರು ನಮಗೆ. ಆದರೆ ಅವರ ಹಾಡು ಹಳಬರ ಹಾಡಿಗೀತಲೂ ಹೆಚ್ಚು ಜನಕ್ಕೀಗ ತಿಳಿದಿದೆ. ಇವರ ತಂದೆ ಸಾಧಾರಣ ರಿಸಾಲ್‌ದಾರ್. ಇವರು ಹುಟ್ಟಿದ್ದು ಸಿಂಧದ ಹೈದರಾಬಾದಿನಲ್ಲಿ. ಮೆಟ್ರಿಕ್ಯುಲೇಶನ್ ಪಾಸಾಗಿ, ದಂತ ವೈದ್ಯ ಕಲಿಯಹೋದರು. ಕಲಿತು ಕೆಲಕಾಲ ಉದ್ಯೋಗ ಮಾಡಿದರು. ಆದರೆ ಸಂಗೀತಕ್ಕೆ ಸೋತಿತು ಇವರ ಹೃದಯ. ಹಲ್ಲು ಕಟ್ಟುವ ಕೆಲಸ ಬಿಟ್ಟು ಸಂಗೀತ ಸರಸ್ವತಿಗೆ ಶರಣಾಹೋದರು. ಇವರಿಗೆ ನುಡಿಸಲು ಬಾರದ ವಾದ್ಯವೇ ಇಲ್ಲ. ಗ್ರಾಮಫೋನ್‌ನ 'ಗಾನ ದೋಸ್' ತಯಾರಿಸಿದರು. ಹಲವು ಕಂಪೆನಿಗೆ ಸೇರಿ, ಹಲವು ಊರು ತಿರುಗಿದರು. ಇದೆಲ್ಲಾ ಆದ ಮೇಲೆ ಸಿನೆಮಾ ಕಂಪನಿ ಆಶ್ರಯ ದೊರಕಿತು. ನೇಶನಲ್ ಮುವಿಟೋನಿನವರ 'ಸ್ವರ್ಗಕ್ಕೆ ಸಿಡಿ' ಅವರ ದಿಗ್ದರ್ಶನದಲ್ಲಿ ತಯಾರಾಯಿತು. ಆ ಕಾಲಕ್ಕೆ ಪಾಂಚೋಲಿ ಕಂಪನಿ ಹುಟ್ಟಿತು. ಅಲ್ಲಿ ಸೇರಿಬಿಟ್ಟರು. ಗುಲಾಂ ಹೈದರರಲ್ಲಿ ಅನುಕರಣೆಯಿಲ್ಲ. ಮನಸ್ಸಿನ ತಂತಿ ಮಿಡಿದಂತೆ ಹಾಡುತ್ತಾರೆ. ಇವರು ಶ್ರೀಮತಿ ಉಮ್ರೇಜಿಯಾ ಬೇಗಮರ ಗಂಡ. ಶ್ರೀಮತಿಯವರ ಹಾಡೂ ಪಂಜಾಬಿನ ಜನಕ್ಕೆ ಹುಚ್ಚು ಹಿಡಿಸಿದ್ದು. ಇದೊಂದು ಸರಸ ದಾಂಪತ್ಯ. ಗುಲಾಂ ಹೈದರ್ ಒಳ್ಳೆಯ ರಾಷ್ಟ್ರಾಭಿಮಾನಿ.

ಹಾಲಿವುಡ್ಡಿನ ಕತೆ ಕೇಳಿ!

ನಮ್ಮಲ್ಲಿನ ಹಾಗೋ ಹಾಲಿವುಡ್ಡಿನ ಸಿನೆಮಾ ಜೀವನ? ಹಾಲಿವುಡ್ಡಿನಲ್ಲಿ 30,000 ನಟನಟಿಯರಿದ್ದಾರೆ. ಪ್ರತಿವರ್ಷ ಸಂಬಳಕ್ಕಾಗಿಯೇ ಮೂರು ಕೋಟಿ ಪವನು ಖರ್ಚಾಗುತ್ತದೆ. ಇದಲ್ಲದೆ 30,000 ಕಾಯಂ ಕೆಲಸದವರಿದ್ದಾರೆ; ಮತ್ತೆ 50,000 'ಎಕ್ಸ್ಟ್ರಾ' ಇದ್ದಾರೆ. ನಟರ ಜೀವನವೆಂದರೇನು? ಲುಯಿ ಮೇಯರ್‌ಗೆ ವರ್ಷ ಒಂದರ ಸಾವಿರ ಪವನು ಆದಾಯ ತೆರಿಗೆ ಕೊಡುತ್ತಾನೆ! ಜೋಶಾಂಕಾ ಮೂರು ವರ್ಷದಲ್ಲಿ ಸಂಪಾದಿಸುವುದು 40,0000 ಪವನು! ಫಿಲ್ಮ್ ನಿರ್ದೇಶಕ ಫ್ರೇರಿಕ್ ಕಾಪ್ರಾ 60 ಸಾವಿರ ಪವನು! ಬೈನ್‌ಹೀಟ್ ಈ ಕಥಾ ಲೇಖಕನಿಗೆ 20,000 ಪವನು ಎರಡು ಚಿತ್ರಕ್ಕೆ! ಕಲಾವಿದರ ಒಟ್ಟು ಸಂಬಳ 80,000 ಪವನುಗಳು! ಅವರಾದರೂ ತಮ್ಮ ಹಣವನ್ನು ಸದ್ವಿನಿಯೋಗ ಮಾಡುತ್ತಾರೆ! ರಾಷ್ಟ್ರೋನ್ನತಿಗೆ ವ್ಯಯಿಸುತ್ತಾರೆ! ಆರಾಮ ಜೀವನದ ಬಗ್ಗೆ ಆಸ್ತಿ ಮಾಡಿಕೊಳ್ಳುತ್ತಾರೆ! ಇನ್ನು ಕೆಲವರು ಉದಾರದಾನ ಕೊಡುತ್ತಾರೆ. ನಮ್ಮಲ್ಲಿಯೊ? ಹೆಚ್ಚು ಸಂಬಳದಾಕೆ ಶಾಂತಾ ಆಪ್ಟೆಯಂತೆ! ಆದರೆ ಅವಳ ನಿಜವಾದ ಸಂಬಳ ಯಾರಿಗೂ ಗೊ[illegible] [illegible] ಅವರ [illegible]ಗಳಿಯ [illegible]ಗಾಗಿಯೋ ಹೊರಗೆ ಹೇಳುವ ಸಂಬಳ ಸಹಾ ಹಾರೆ ಒಂದು, ಒಳಗೆ ಇನ್ನೊಂದು ಎನ್ನುತ್ತಾರೆ. ನಿರ್ದೇಶಕ ದೇವಕೀ ಬೋಸರಿಗೆ ವರ್ಷ ಒಂದರ 55 ಸಾವಿರ ರೂಪಾಯಿ! ಇದೂ ಅಷ್ಟೊಂದು ಗಣನೀಯವಲ್ಲ. ಯಾರ ಸಂಬಳವೂ ಎರಡು ದಶಕ ಮೀರುವುದಿಲ್ಲ. ದುಂದುಗಾರಿಗೆ ಮಾಡುವವರೇ ಹೆಚ್ಚು, ಸಿನೆಮಾ ಜೀವನ ಮುಗಿದ ಮೇಲೆ ದಾಂ ಅಳಿಯುತ್ತಾರೆ ನಮ್ಮವರು!

ಕಾನನ್ ದೇವಿ ಎಂ. ಪಿ.

ಪ್ರೊಡಕ್ಶನಿಗೆ ಸೇರಿ ಈಗ ಅವಳ ಕರಾರಿನ ಅವಧಿ ಆಗಿದೆ. ಬೇರೆ ಕಡೆಯಿಂದ ಆಕರ್ಷಕ ಆಮಂತ್ರಣಬಂದರೂ ಆಕೆ ಇನ್ನೊಂದುವರ್ಷವೂ ಈ ಕಂಪನಿಯಲ್ಲಿಯೇ ಇರುವುದಾಗಿ ನಿಶ್ಚಯಿಸಿದ್ದಾಳೆಂದು ಸುದ್ದಿ ಬಂದಿದೆ; ತಿಂಗಳೊಂದರ ೭ ಸಾವಿರ ರೂಪಾಯಿ ಸಂಬಳದಲ್ಲಿ! ಕಾನನಳ ಈ ಒಂದು ವರ್ಷದ ಅವಧಿಯಲ್ಲಿ ಎಂ. ಪಿ. ಯವರು ನಾಲ್ಕು ಚಿತ್ರಗಳನ್ನು ತಯಾರಿಸುವ ನಿರ್ಧಾರದಲ್ಲಿದ್ದಾರಂತೆ! ಕಲ್ಕತ್ತದ ಕಾಳಿ ಸ್ಟುಡಿಯೋವನ್ನು ತಿಂಗಳೊಂದರ ರೂ. ೬,೦೦೦ ದಲ್ಲಿ ಅವರು ಬಾಡಿಗೆಗೆ ಪಡಕೊಂಡಿದ್ದಾರೆ. ಈ ನಾಲ್ಕು ಚಿತ್ರಗಳೂ ಬಂಗಾಳೀ ನಿರ್ದೇಶಕರಾದ ಸುಶೀಲ ಮುಜುಮ್‌ದಾರ್, ಪ್ರೇಮನ್ ಮಿತ್ರ, ಅಜಯ್ ಭಟ್ಟಾಚಾರ್ಯ ಮತ್ತು ಸುಕುಮಾರದಾಸಗುಪ್ತ ಇವರಿಂದ ನಿರ್ದೇಶಿಸಲ್ಪಡುವವು.

ಅಸಿತ್ ಭರಣ್ ಕೂಡಾ

ಕಾನನಳಂತೆ ಬೇರೆ ಬೇರೆ ಕಡೆಗಳಿಂದ ಆಮಂತ್ರಿತನಾಗಿದ್ದರೂ ಅವುಗಳೆಲ್ಲವನ್ನೂ ತಿರಸ್ಕರಿಸಿ ನ್ಯೂಥಿಯೇಟರ್‌ನಲ್ಲಿಯೇ ಕೆಲಸ ಮಾಡಲು ನಿಶ್ಚಯಿಸಿದ ವಾರ್ತೆಯಿದೆ. ನ್ಯೂ ಥಿಯೇಟರ್ಸಿನೊಡನೆ ಹೊಸ ಕರಾರು ಮಾಡಿಕೊಂಡಿದ್ದಾನೆ. ಸದ್ಯ ಆತನು ಹೇಮಚಂದ್ರರು ನಿರ್ದೇಶಿಸುವ 'ವಾಪಾಸ್' ಚಿತ್ರದಲ್ಲಿ ಮುಖ್ಯ ಪಾತ್ರ ವಹಿಸುತ್ತಾನೆ.

ಮಂಗಳೂರು ಚಲಚ್ಚಿತ್ರ ವಿಮರ್ಶಕ ಸಂಘ:-

ಇದರ ವಾರದ ಸಭೆ ಕಳೆದ ಆದಿತ್ಯವಾರ ಶ್ರೀ. ಕಾ. ಶಿ. ರಾಯರ ಅಧ್ಯಕ್ಷತೆಯಲ್ಲಿ ಸೇರಿ, ಚಿತ್ರಗಳೂ ೧೧,೦೦೦ ಅಡಿ ಮಾತ್ರವಿದ್ದರೆ ಸಾಕೆಂಬ ಸರಕಾರದ ಆಜ್ಞೆಯನ್ನು ಸ್ವಾಗತಿಸುವ, ದಕ್ಷಿಣ ಭಾರತದ ಮಟ್ಟಿಗಾದರೂ ಚಿತ್ರದ ಉದ್ದವನ್ನು ಹೆಚ್ಚಿಸಬೇಕೆಂದು ಶ್ರೀ. ಎಸ್. ಎಸ್. ವಾಸನರು ಮಾಡುವ ಪ್ರಯತ್ನವನ್ನು ಖಂಡಿಸುವ, ವಾಸನರ ಪ್ರಯತ್ನಕ್ಕೆ ಬೆಂಬಲ ಕೊಡುವ ಪತ್ರಿಕೆಗಳ ಪ್ರಯತ್ನವನ್ನು ನಿಷೇಧಿಸುವ ನಿರ್ಣಯವಾಯಿತು.

ರಶ್ಯನ್ ಚಿತ್ರ:-

'ಪೀಟರ್ ದಿ ಫಸ್ಟ್' ಎಂಬ ಐತಿಹಾಸಿಕ ಸಿನೆಮಾ, ಮಂಗಳೂರು ಕಮ್ಯುನಿಸ್ಟರಿಂದ ನ್ಯೂ ಚಿತ್ರ ಟಾಕೀಸಿನಲ್ಲಿ ತಾ. ೧೧ರಂದು ಪೂರ್ವಾಹ್ನ ೧೧ ಗಂಟೆಗೆ ಪ್ರದರ್ಶಿಸಲ್ಪಡುವುದು. ಈ ಚಿತ್ರದ ಕಥೆಯು ಟಾಲ್‌ಸ್ಟಾಯ್‌ಯವರ ನಾವೆಲಿನಿಂದೆತ್ತಿದ್ದು. ಭಾರತಕ್ಕೆ ಬಂದ ಮೊದಲನೆಯ ರಶ್ಯನ್ ಚಿತ್ರವಿದು. ರಶ್ಯದ ಮಹಾಚಕ್ರವರ್ತಿ ಜಾರ್ ಪೀಟರ್ ದಿ ಫಸ್ಟ್ ಇವನ ಜೀವನ ಚಿತ್ರವಿದು.

ಸೆಂಟ್ರಲ್ ಟಾಕೀಸಿನಲ್ಲಿ ಸಿಕರೋ ಚಿತ್ರ 'ಸ್ವಾಮಿ' ಪ್ರದರ್ಶಿಸಲ್ಪಡುವುದು

ನೋಟಗಳು . . .

ನಮ್ಮ ಜಿಲ್ಲೆಯಲ್ಲಿ ೧೪೪ನೇ ಸೆಕ್ಶನ್ ಜಾರಿ ಮಾಡಿದ ಮೇಲೆ, ಸಾರ್ವಜನಿಕ ಭಾಷಣವಿಲ್ಲ. ಸೆಕ್ಶನ್ ಮುರಿದ 'ರಾಜದ್ರೋಹಿ'ಗಳಿಗೆ ಸೆರೆಮನೆಯಲ್ಲದೆ ಬೇರೆ ಸ್ಥಾನವೂ ಇಲ್ಲ!

* * *

ರಾಜಕೀಯವಲ್ಲದ, ಸಾಮಾಜಿಕ ಧಾರ್ಮಿಕ ಸಭೆ ಭಾಷಣಗಳಿಗೆ ಅಧಿಕಾರಿಗಳೀಗ ಅಪ್ಪಣೆಯಿತ್ತಿದ್ದಾರೆ. ಏಸುಕ್ರಿಸ್ತನ ಶಿಷ್ಯರು ಮಂಗಳೂರಲ್ಲಿ 'ಕುರಿಮಂದೆ'ಗಳಿಗೆ ಬೋಧಿಸುತ್ತಿದ್ದಾರೆ!

ಹಿಂದೆಲ್ಲಾ ಮಂಗಳೂರಿನ 'ಕುರಿಮಂದೆ'ಗಳಿಗೆ ಉಪದೇಶಿಸುತ್ತಿದ್ದದ್ದು ಅವರಿಗೆ ಅರ್ಥವಾಗುತ್ತಿದ್ದ ಕನ್ನಡದಲ್ಲಿ ಮತ್ತು ತುಳುವಿನಲ್ಲಿ! ಆದರೆ ಈಗ ಅವರು ಹೇಳುತ್ತಿರುವುದು ಅವರಿಗೆ ಅರ್ಥವಾಗದ ಮಲೆಯಾಳದಲ್ಲಿ!

ಮೊದಲೇ 'ಕುರಿಮಂದೆ'ಗಳು, ಅದರ ಮೇಲೆ ಅರ್ಥವಾಗದ್ದ ಮಲೆಯಾಳಿಭಾಷೆ! 'ಕುರಿಮಂದೆ'ಗಳಿಗೆ ಉಪದೇಶಿಸುವವರು ನಿಜವಾಗಿಯೂ ಕುರುಬರಲ್ಲವಷ್ಟೆ?

* * *

ಸಾರ್ವಜನಿಕ ಸಭೆಗಳಲ್ಲಿ 'ಕುರಿಮಂದೆಗಳು' ಮತ್ತು ಕುರುಬರು ಮಾತ್ರ ಮಾತನಾಡುತ್ತಿದ್ದರೂ, ನಮ್ಮ ಸ್ಥಳೀಯ ಸಂಸ್ಥೆಗಳ ಸಭೆಗಳಲ್ಲಿ ಇನ್ನೂ ಮನುಷ್ಯರೇ ಭಾಷಣ ಕೊಡುತ್ತಾರೆ! ಡಿಸ್ಟ್ರಿಕ್ಟ್‌ಬೋರ್ಡು ಮತ್ತು ಮುನ್ಸಿಪಾಲಿಟಿಗಳಲ್ಲಿರುವ ನಮ್ಮ 'ಪ್ರತಿನಿಧಿ'ಗಳಿಗೆ ಇನ್ನೂ 'ಭಾಷಣ ಸ್ವಾತಂತ್ರ್ಯ'ವುಂಟು!

ಮುನ್ಸಿಪಾಲಿಟಿಯ ಮೊನ್ನೆ ಬಜೆಟ್ ಅಧಿವೇಶನದಲ್ಲಿ, ಹಿಂದೆಲ್ಲಾ ಪಕ್ಷಗಳ ಮುಖಂಡರು ಮಾತ್ರ ಒಬ್ಬಿಬ್ಬರು ಭಾಷಣ ಮಾಡುವುದು ಸಂಪ್ರದಾಯವಾಗಿದ್ದರೂ, ಈ ಸಲ ಎಲ್ಲಾ ಕೌನ್ಸಿಲರೆಂಬಂತೆ ಮಾತನಾಡಿದರು!

ಕೆಲವೊಮ್ಮೆ ಎಲ್ಲರೂ ಒಟ್ಟಾಗಿ ಮಾತನಾಡಿದರು! ಅಂತೂ ಹಲವರು ಹಲವು ಸೂಚನೆಗಳನ್ನಿತ್ತು ಹಲವು ಭಾಷಣ ಮಾಡಿದರು!

ಎರಡೇ 'ಪಕ್ಷ'ಗಳಾದರೆ ಇಬ್ಬರು ಮುಖಂಡರು ಮಾತ್ರ ಮಾತನಾಡುತ್ತಾರೆ! ಒಂದೂ 'ಪಕ್ಷ'ವಿಲ್ಲದಿದ್ದರೂ ಯಾರೂ ಮಾತನಾಡದಿರುವುದರಲ್ಲಿ ನ್ಯಾಯವುಂಟೆ? ಅಥವಾ ಒಬ್ಬೊಬ್ಬರಿಗೆ ಒಂದೊಂದು 'ಪಕ್ಷ'ವಿದ್ದರೆ ಎಲ್ಲರೂ ತಮ್ಮ ತಮ್ಮ 'ಪಕ್ಷ'ದ ಪರವಾಗಿ ಮಾತನಾಡಲೇ ಬೇಕು!

ಅಂತೂ ಸಾರ್ವಜನಿಕ ಸಭೆಗಳಲ್ಲಿ ಭಾಷಣವಿಲ್ಲದಿದ್ದರೂ ಒಳಗಿನ ಸಭೆಗಳಲ್ಲಿ ಇನ್ನೂ 'ಭಾಷಣ ಸ್ವಾತಂತ್ರ್ಯ'ವುಂಟು!

* * *

ಜಿಲ್ಲಾ ಬೋರ್ಡು ಸದಸ್ಯರಿಗೂ ಭಾಷಣ ಸ್ವಾತಂತ್ರ್ಯ ಬೇಕಾದಷ್ಟಿದೆ! ಅವರು 'ಕಾಂಗ್ರೆಸ್'ನವರೆಂದು ಅಧಿಕಾರಿಗಳು, ಅವರ ಮೇಲೆ ಪ್ರತ್ಯೇಕ ನಿರ್ಬಂಧವೇನನ್ನೂ ಇದುವರೆಗೂ ಹಾಕಿಲ್ಲ!

ಜಿಲ್ಲಾ ಬೋರ್ಡಿನ ಪ್ರಾಥಮಿಕ ಉಪಾಧ್ಯಾಯರಿಗೆ, ತುಟ್ಟಿಭತ್ತೆ ಕೊಡುವ ವಿಚಾರದಲ್ಲಿ ಮೊನ್ನೆ ಬಹಳ ಭಾಷಣವಾಯಿತು. ಬಹುಮಂದಿ ಸದಸ್ಯರು ಮಾತನಾಡಿದರು, ಬಲವಾಗಿ ವಾಗ್ವಾದಮಾಡಿದರು; ಮತ ತೆಗೆದೇ ನಿರ್ಧಾರವಾಗಬೇಕೆಂದೂ ಹಠಹಿಡಿದರು!

ಹಾಗೆಂದು ಉಪಾಧ್ಯಾಯರಿಗೆ ತುಟ್ಟಿಭತ್ತೆ ಕೊಡಕೂಡದೆಂದು ಯಾರೂ 'ಮನಸಾ' ಇಚ್ಛಿಸುವುದಿಲ್ಲ. ಹಾಗೆಂದೇ ಎಲ್ಲರೂ 'ವಾಚಾ' ಒಪ್ಪಿಕೊಂಡಿದ್ದಾರೆ. ಆದರೆ 'ಕಾಯಾ' ಬಿಸಿಯಾಗಿ ಭಾಷಣ ಮಾಡಿದರು! ಏಕೆಂದರೆ 'ಕಾಂಗ್ರೆಸಿನವರಾಗಿದ್ದರೂ' ಅವರಿಗೆ ಇನ್ನೂ 'ಭಾಷಣ ಸ್ವಾತಂತ್ರ್ಯ'ವುಂಟು!

* * *

'೧೪೪ ಸೆಕ್ಶನನ್ನು ಇನ್ನಾದರೂ ಹಿಂತೆಗೆಯಬೇಕು' ಎಂದು ಜಿಲ್ಲಾಧಿಕಾರಿಗಳೊಡನೆ ಹಲವರು, ಹಲವು ಸಂಘಗಳವರು ವಿನಂತಿಸಿಕೊಂಡಿದ್ದಾರೆ! ಸಾರ್ವಜನಿಕ ಭಾಷಣಗಳಿಗೆ ಇನ್ನೂ ಬಹುಕಾಲ ನಿರ್ಬಂಧ ಹಾಕಿದರೆ,— ಭಾಷಣ ಮಾಡದಿರುವುದಂತೂ ನಮ್ಮ 'ಮುಂದಾಳು'ಗಳಿಗೆ ಸಾಧ್ಯವೇ ಇಲ್ಲದಿರುವಾಗ—ಎಲ್ಲಿ ಹೀಗೆ ಒಳಗಿನ ಸಭೆಗಳಲ್ಲಿ ಹಸ್ತಾಹಸ್ತಿ ಕೇಶಾಕೇಶಿ ನಡೆದುಬಿಟ್ಟೀತೋ ಎಂದು ಹಲವರು ಹೆದರಿರಬೇಕು!

ANDREWS
LIVER SALT
ಆಂಡ್ರೂಸ್ ಲಿವರ್‌ಸಾಲ್ಟ್
ಆರೋಗ್ಯಪಾನೀಯ — ವಿರೇಚಕ

ಯುದ್ಧದ ದೆಸೆಯಿಂದಾಗಿ ಎಂಡ್ರೂಸ್ ಲಿವರ್‌ಸಾಲ್ಟ್ ಈಗ ದೊರಕುವುದಿಲ್ಲವೆಂಬುದು ವಿಷಾದಕರವಿದೆ. ಆದರೆ ಅಂತರ್‌ರಾಷ್ಟ್ರೀಯ ಪರಿಸ್ಥಿತಿ ಸುಧಾರಿತವಾದ ಕೂಡಲೇ ಇದು ಖಂಡಿತ ದೊರಕುವುದು.

ಇಂಡಿಯಾ ಮಿಲಿಟರಿ ಹೋಟೇಲ್
ಬಲ್ಮಠ ರಸ್ತೆ, ಸಿಟಿ ಬಸ್ ಗ್ಯಾರೇಜ್ ಸಮೀಪ, ಹಂಪನಕಟ್ಟೆ.
ಬನ್ನಿರಿ! 4-7-43ರಿಂದ ಅನುಭವ ಪಡೆಯಿರಿ!!
ಉತ್ತಮ ತರಗತಿಯ ಆನಂದ ನಿಲಯ ಇದೆಂದು ಸ್ವತಃ ಪರೀಕ್ಷಿಸಿರಿ!
ಕಾಫಿ ಮತ್ತು ಊಟವು ಸುಲಭ ದರ ಮತ್ತು ಉತ್ಕೃಷ್ಟ ರೀತಿಯಲ್ಲಿ ದೊರಕುವುದು.

India Military Hotel
Near City Bus Garrage, Balmatta Road, Hampankatta.
Come! From 4-7-43 Try once!
Coffee and Meals can be had on Moderate Charges
Proprietor: Udipi N. S. Rao, MANGALORE

THE CANARA BANKING CORPORATION Ltd

(Incorporated in British India with limited liability).

STATEMENT OF AFFAIRS AS ON 31ST DECEMBER 1942.

Capital & Liabilities	Rs.	As.	Ps.	Property & Assets	Rs.	As.	Ps.
Paid up Capital	6,36,890	0	0	Office premises, furniture, etc.	91,659	0	0
Reserve & other funds	3,71,882	13	11	Advances	31,28,612	4	9
Deposits	41,83,873	4	1	Investment on Govt. Securities etc. at cost	15,34,536	14	3
Due to Bankers	5,08,545	12	1	Sundries	74,183	5	7
Bills per contra	3,59,357	12	1	Bills for Collection	3,59,357	12	1
Sundries including branch adjustments & undisbursed profits	2,63,736	5	9	Cash on Hand & with bankers	12,05,397	14	8
Profit for the year 1942	49,461	3	5				
Total Rs.	63,93,747	3	4	Total Rs.	63,93,747	3	4

ಬೇಡುವುದು ಒಂದು ರೋಗ!

ಈ ರೋಗ ಪರಿಹಾರವಾಗಲೇ ಬೇಕು.

ಮೈಸೂರಿನ ಮಾದರಿ ಕಣ್ತೆರೆಯಿಸಲಿ!

—ಕಯ್ಯಾರ.

ಒಂದು ಸಂತೋಷದ ಸುದ್ದಿ ಬಂದಿದೆ! ಮೈಸೂರು ಸರಕಾರ ಭಿಕ್ಷಾವೃತ್ತಿಯನ್ನು ಆ ಪ್ರಾಂತದಲ್ಲಿ ಇಲ್ಲದೆ ಮಾಡುವ ಮಹಾ ನಿರ್ಧಾರವೊಂದ ನ್ನು-ಪೂರ್ಣ್ಕರವಾದ ಯೋಜನೆಯೊಂದನ್ನು-ಅಳವಡಿಸಿದೆ. 'ಮೈಸೂರಲ್ಲಿ ಬೇಡುವವರಿಲ್ಲ' ಎಂದು ಮಾಡಬೇಕೆಂದು ಸರಕಾರ ಈ ಮಹತ್ವದ ಸಾಹಸ ಮಾಡುವುದರಲ್ಲಿದೆ. ಇದು ನಿಜವಾಗಿಯೂ ಸಂತೋಷದ ಸುದ್ದಿ. 'ಮಾದರಿ ಮೈಸೂರಿ'ಗೆ ಇದು ಕೀರ್ತಿ ತರುವ ಕೆಲಸ. ಭಾರತದ ಇತರ ಸಂಸ್ಥಾನಗಳವರು, ಸ್ವತಃ ಭಾರತವನ್ನಾಳುವ ಬ್ರಿಟಿಷ್ ಪ್ರಭುತ್ವದವರೇ ಕಣ್ತೆರೆದು ಒಮ್ಮೆ ಮೈಸೂರಿನ ಕಡೆ ನೋಡುವಂತೆ ಆಗಿದೆ ಇದರಿಂದ! ಮೈಸೂರಿನ ಈ ಮಹಾ ನಿರ್ಧಾರಕ್ಕೆ ನಮ್ಮ ಅಭಿನಂದನೆಗಳು! ಮೈಸೂರಿನ ಈ ಸಾಹಸಕ್ಕೆ ನಮ್ಮದು ಪೂರ್ಣ ಪ್ರೋತ್ಸಾಹ!

* * *

ಬೇಡುವುದು ಮಾನವ ದೌರ್ಬಲ್ಯ; ಬಹಳ ದರಿದ್ರ ದೌರ್ಬಲ್ಯ, ಹೇಯ ದೌರ್ಬಲ್ಯ! ಕೆಲವರನ್ನು ಬೇಡಲು ಬಿಡುವುದು, ಅವರಿಂದ ಅಂಥಾ ಹೀನ ಜೀವನ ನಡೆಸುವುದು ಇದೀ ಸಮಾಜದ ದೌರ್ಬಲ್ಯ; ಆದ್ದರಿಂದಲೇ ಇದರ ಪಾಪ ಇದೀ ಸಮಾಜದ ಮೇಲೆ. ಸಮಾಜದ ಅಧಿಕಾರ ಸರಕಾರದ ಕೈಯ್ಯಲ್ಲಿ; ಸಮಾಜದಲ್ಲಿ ಆಗುವ ಅನ್ಯಾಯವನ್ನು ಸರಕಾರ ತಡೆಯಲೇ ಬೇಕು; ಸಾರಿಸಾರಿ ತಡೆಯಬೇಕು, ಕೇಳದಿದ್ದರೆ ಕಾನೂನು ಮಾಡಿ ನಿರ್ಬಂಧಿಸಬೇಕು; ಅಷ್ಟು ಮಾಡದಿದ್ದರೆ ಆ ಸರಕಾರ ಜವಾಬ್ದಾರೀ ಸರಕಾರ ಆಗುವುದಿಲ್ಲ. ಸಮಾಜದಲ್ಲಿ ನಡೆಯುತ್ತಿರುವಂಥಾ ಅನ್ಯಾಯವನ್ನು-ಪಾಪವನ್ನು-ನೋಡುತ್ತಾ ಕಣ್ಮುಚ್ಚಿ ಕುಳಿತರೆ ಅಂಥಾ ಸರಕಾರ ಇದ್ದೂ ಇರದಂತೆ. ಭಿಕ್ಷೆಯಂಥಾ ಹೀನ ಕಾರ್ಯವು ನಡೆಯುತ್ತಿರುವುದನ್ನು ನೋಡಿ ತಡವಾದರೂ ಈಗ ಮೈಸೂರು ಸರಕಾರ ಕಣ್ತೆರೆದದ್ದು ನಿಜವಾಗಿಯೂ ಅಭಿನಂದನೀಯ, ನಿಜವಾಗಿಯೂ ಇದು ಸರಕಾರದ ಗಂಡುಸುತನ.

ಬೇಡುವುದು ಒಂದು ರೋಗ; ಮಹಾರೋಗ. ಇದು ಸಾಮಾಜಿಕ ರೋಗ. ರೋಗವನ್ನು ಅದು ತಗಲುವುದಕ್ಕಿಂತ ಮೊದಲೇ ತಡೆಗಟ್ಟುವುದು ಬುದ್ಧಿವಂತರ ಲಕ್ಷಣ. ವಿಶೇಷ ಬುದ್ಧಿವಂತರಲ್ಲದಿದ್ದರೂ ಬಂಧ ಮೇಲೆ ಸುಮ್ಮಗಿರುವುದಿಲ್ಲ. ಪಥ್ಯ ಮಾಡುತ್ತಾರೆ. ವೈದ್ಯರಲ್ಲಿ ಹೋಗುತ್ತಾರೆ. ಕಹಿಯಾದರೂ ಔಷಧ ಕುಡಿಯುತ್ತಾರೆ. ರೋಗದಿಂದ ಶರೀರ ದುರ್ಬಲ ದುರ್ಬಲವಾಗುತ್ತಾ ಬಂದಾಗಲಾದರೂ-ತಡವಾಗಿಯಾದರೂ ಮನುಷ್ಯ ಎಚ್ಚತ್ತೇ ಬಿಡುತ್ತಾನೆ. ಇಷ್ಟು ಮಾಡದಿದ್ದರೆ ಆತ ಮನುಷ್ಯನೇ ಅಲ್ಲ. ಅಖಿಲ ಭಾರತದಲ್ಲಿ ಬಹುಶಃ ಇದೇ ಮೊದಲನೆಯ ಸಲವೆಂದು ತೋರುತ್ತದೆ-ಮೈಸೂರು ಸರಕಾರವು ಈ ಭಯಂಕರ ಸಾಮಾಜಿಕ ರೋಗವನ್ನು ತಡೆಗಟ್ಟಲು ನಿರ್ಧಾರ ಮಾಡಿದ್ದು, ಆ ಸರಕಾರದ ಅಂತಃಸತ್ವವನ್ನು ತೋರಿಸುತ್ತದೆ.

ಬೇಡುವುದು ಒಂದು ರೋಗ ಎಂದು ನಾವು ಹೇಳಿದೆವು. ಆದರೆ ಬೇಡುವವರಲ್ಲಿ ನಿಜವಾದ ರೋಗಿಗಳೂ ಕೆಲವರಿರುತ್ತಾರೆ. ಕಣ್ಣಿಲ್ಲದವರು, ಕಾಲಿಲ್ಲದವರು, ಕೈಯಿಲ್ಲದವರು, ಕಿವುಡರು, ಮೂಕರು, ಇನ್ನೂ ಕೆಲತರದ ಅಂಗವಿಕಲರು, ಕುಷ್ಠ, ಕ್ಷಯ ಮೊದಲಾದ ವಿಷಮ ಸಾಂಕ್ರಾಮಿಕ ವ್ಯಾಧಿಪೀಡಿತರೂ ಇರುತ್ತಾರೆ. ಅಂಥಾ ಅಂಗವಿಕಲರೆಂದೂ ರೋಗಿಗಳೆಂದೂ ನಟಿಸಿಕೊಳ್ಳುವವರೂ ಕೆಲವರು. ಇನ್ನು ಸಾಧು ಸನ್ಯಾಸಿಗಳು, ಮಂತ್ರ ಮಾಯಾಜಾಲದವರು, ಬ್ರಹ್ಮಜ್ಞಾನ ತಪೋಧ್ಯಾನ ಪರಾಯಣರೆನ್ನುವ 'ಗೋಮುಖ ವ್ಯಾಘ್ರ'ಗಳು ಕೆಲವರೂ ಈ ಸಾಲಿಗೆ ಸೇರುತ್ತಾರೆ. ಅಂಗಡಿಯಿಟ್ಟು ವ್ಯಾಪಾರ ಮಾಡುವ ಹೆಂಗುಸರೂ ಇದೇ ವರ್ಗದವರಲ್ಲದೆ ಬೇರಲ್ಲ. ಚೆನ್ನಾಗಿ ವಿಚಾರಿಸಿ ನೋಡಿದರೆ ಇದೆಲ್ಲಾ ಸಮಾಜದ ದೌರ್ಬಲ್ಯ, ಅನ್ಯಾಯ, ಪಾಪಗಳಿಂದಲೇ ಉಂಟಾದವುಗಳಲ್ಲವೆ? ಇಂಥಾ ಹೀನ ಕಾರ್ಯವನ್ನು ಮಾಡಬಿಡುವುದು ಸಮಾಜವೇ ಅಲ್ಲವೇ? ಸಮಾಜವು ಇದನ್ನು ಸಹಿಸಬಹುದೆ? ಸಮಾಜಕ್ಕೆ ಜವಾಬ್ದಾರಿಯಾದ ಸರಕಾರ ಇದನ್ನು ನೋಡಿ ಸುಮ್ಮಗಿರಬಹುದೆ?

ಮೈಸೂರು ಸರಕಾರದವರು ಪ್ರಜಾಪ್ರತಿನಿಧಿ ಸಭೆ, ನ್ಯಾಯವಿಧಾಯಕ ಸಭೆ ಇವುಗಳ ನಿರ್ಣಯವನ್ನು ಮನ್ನಿಸಿ ೧೦-೬-೧೯೪೧ರಂದು ಈ ಬಗ್ಗೆ ಹನ್ನೊಂದು ಮಂದಿಯ ಒಂದು ಸಮಿತಿ ರಚಿಸಿದರು. ಸಮಿತಿಯವರು ಇಷ್ಟು ಕಾಲ ಈ ಸಂಬಂಧದಲ್ಲಿ ಬೇಕುಬೇಕಾದ ಅಂಕೆ ಸಂಖ್ಯೆಗಳನ್ನು, ಉಪಾಯ ನಿವೃತ್ತಿಗಳನ್ನು, ಯೋಗ್ಯ ಕಾರ್ಯಕ್ರಮಗಳನ್ನು ತಯಾರಿಸಿ ಈಗ ಸರಕಾರದ ಮುಂದಿಟ್ಟಿದ್ದಾರೆ. ಸರಕಾರ ಅವರ ಸಲಹೆಯಂತೆ ಕಾರ್ಯೋಪಕ್ರಮ ಮಾಡಲಿದೆಯೆಂದು ನಾವು ತಿಳಿಯುತ್ತೇವೆ. ಅವರ ಅಂಕೆಸಂಖ್ಯೆ ಕಾರ್ಯಕ್ರಮಗಳು ಈ ಕೆಳಗಿನಂತಿವೆ:

ಮೈಸೂರಲ್ಲಿ ಒಟ್ಟು ೧೫,೫೦೦ ಭಿಕ್ಷುಕರಿರುವರು. ಬೆಂಗಳೂರು ಮೈಸೂರು ನಗರಗಳಲ್ಲಿಯೇ ೮,೫೦೦ ಮಂದಿ ಬೇಡುವರಿದ್ದಾರೆ. ಇದರಲ್ಲಿ ಮೈಸೂರೇತರರನ್ನು ಗಣನೆಗೆ ತೆಗೆದುಕೊಳ್ಳದಿದ್ದರೆ ಈ ಎರಡು ಪಟ್ಟಣಗಳಲ್ಲಿ ಕೇವಲ ೪,೫೦೦ ಮಂದಿ; ಸಂಸ್ಥಾನದಲ್ಲೆಲ್ಲಾ ೬,೦೦೦ ಮಂದಿ; ಹೀಗೆ ಒಟ್ಟು ೧೦,೫೦೦ ಮಂದಿ ಭಿಕ್ಷುಕರ ಸಂರಕ್ಷಣೆ ಕೆಲಸ ಸರಕಾರದ ಮೇಲೆ ಬೀಳುತ್ತದೆ.

ಭಿಕ್ಷುಕರ ಸಮಸ್ಯೆ ಬಗೆಹರಿಸಲು ಸಮಿತಿಯವರು ಈ ಕೆಳಗಿನ ಸೂಚನೆಯಿತ್ತಿರುವರು. (೧) ಬೇಡುವವರಲ್ಲಿ ಮೈಸೂರಿನವರಲ್ಲದವರನ್ನು ಅವರವರ ಊರಿಗೆ ಕಳುಹಿಸುವುದು. (೨) ಸಾಂಕ್ರಾಮಿಕ ರೋಗಗಳಿಂದ ನರಳುವವರನ್ನು ಅಂಥಾ ಆಸ್ಪತ್ರೆಗಳಿಗೆ ಕಳುಹಿಸಿ ಮದ್ದು ಮಾಡಿಸುವುದು. (೩) ಅಂಗಹೀನರನ್ನು ಸಾಕುವುದು. (೪) ಮೈಕೈ ಗಟ್ಟಿಯಿರುವವರಿಗೆ ಉದ್ಯೋಗಗಳನ್ನು ಕಲಿಸುವುದು. 'ದುಡಿಯದೆ ಅನ್ನವಿಲ್ಲ' ಎಂಬ ತತ್ವವನ್ನು ಅನುಸರಿಸುವುದು. (೫) ಮಕ್ಕಳ ಯೋಗಕ್ಷೇಮಕ್ಕಾಗಿ ಪ್ರತ್ಯೇಕ ವ್ಯವಸ್ಥೆ ಏರ್ಪಡಿಸುವುದು. (೬) ಬೇಡುವವರ ಸಂಸ್ಕೃತಿಯ ಮಟ್ಟಕ್ಕನುಸರಿಸಿ, ಅವರನ್ನು ನಗರಗಳಲ್ಲಿಯೇ ಇರಗೊಡದೆ ಗ್ರಾಮಾಂತರಗಳಲ್ಲಿ 'ಕಾಲನಿ'ಗಳನ್ನು ಏರ್ಪಡಿಸಿ (ಮುನ್ನೂರು ಮಂದಿಗೆ ಒಂದೊಂದರಂತೆ) ಅವರ ವಾಸಕ್ಕೆ ಗುಡಿಸಲುಗಳನ್ನು ಕಟ್ಟಿಸುವುದು. (೭) ಪ್ರತಿಯೊಂದು 'ಕಾಲನಿ'ಗೂ ೨೫,೩೦೦ ಎಕ್ರೆ ಭೂಮಿ ಒದಗಿಸಿ ಗಟ್ಟಿಮುಟ್ಟುಳ್ಳವರಿಂದ ಬೇಸಾಯ ಮಾಡಿಸುವುದು. ಮೊದಲಿನ ಆರು ತಿಂಗಳ ಖರ್ಚನ್ನು ಒದಗಿಸಿಕೊಟ್ಟು ಅನಂತರ ಭೂಮಿಯ ಉತ್ಪತ್ತಿಯನ್ನು ಉಪಯೋಗಿಸುವುದು. ಬೇಸಾಯದೊಡನೆ ಅಲ್ಲಿನ ನಿವಾಸಿಗಳಿಗೆ ಯಾವುದಾದರೂ ಗುಡಿ ಕೈಗಾರಿಕೆ ಕಲಿಸುವುದು. (೮) ಗ್ರಾಮಾಂತರ ಜೀವನ ನಿಶ್ಚಯವಾದ ಮೇಲೆ ಒಬ್ಬೊಬ್ಬ ಭಿಕ್ಷುಕನ ತಿಂಗಳ ವೆಚ್ಚವು ಈಗಿನ ದರದಂತೆ ತಲಾ ೫ ರೂ.ಗಳಾಗುವುದೆಂದು ನಿರ್ಧರಿಸಲಾಗಿದೆ. ಹೀಗಾಗಿ ೪೫೦೦ ಮಂದಿಗೆ ತಿಂಗಳಿಗೆ ೨೨,೫೦೦ ರೂಪಾಯಿಗಳು ಬೇಕಾಗಬಹುದು. (೯) ಈ ವೆಚ್ಚಕ್ಕಾಗಿ ಹೊಸ ಕಂದಾಯ ಹೇರುವುದು ನ್ಯಾಯವಲ್ಲ. ಈ ಭಾರವನ್ನು ಸರಕಾರವು ಸ್ಥಳೀಯ ಸಂಸ್ಥೆಗಳೂ ಹೊರಬೇಕು. ಧಾನಧರ್ಮ ಪರಾಯಣರಾದ ಪ್ರಜೆಗಳು ನೆರವಾಗಬೇಕು. (೧೦) ೪,೫೦೦ ಭಿಕ್ಷುಕರ ಪಾಲನೆಗೆ ೩೦೦ ಕಾಲನಿಗಳಾಗಬೇಕು. ಇದರ ಆರಂಭ ವೆಚ್ಚವು ಕಾಲನಿಗೆ ೩೦೦೦ ರೂಪಾಯಿಗಳಾಗುತ್ತದೆ. ೪೫೦ ಎಕ್ರೆ ಭೂಮಿ ಬೇಕು, ರೂ. ೪೫೦೦೦ ವೆಚ್ಚಕ್ಕೆ ಬೇಕು.

ಈ ಸೂಚನೆಗಳನ್ನು ಸಂಗ್ರಹಿಸಿ ಸಮಿತಿಯವರು ಶಾಸನ ಮಸೂದೆಯನ್ನು ತಯಾರಿಸಿದ್ದಾರೆ. ಸರಕಾರಕ್ಕೊಪ್ಪಿಸಿದ್ದಾರೆ. ಬೇಗನೇ ಈ ಮಸೂದೆ ನ್ಯಾಯವಿಧಾಯಕ ಸಭೆ, ಪ್ರಜಾಪ್ರತಿನಿಧಿ ಸಭೆಗಳಲ್ಲಿ ಮಂಜೂರಾಗಿ ಕಾರ್ಯರೂಪಕ್ಕೆ ಬರಬಹುದೆಂದು ಹಾರೈಸಲಾಗಿದೆ. ನಿಜವಾಗಿಯೂ 'ಮಾದರಿ ಮೈಸೂರಿ'ಗೆ ಇದು ಭೂಷಣವಾದ ಕಾರ್ಯ!

* * *

ಬೇಡುವುದು ನಮ್ಮ ರಾಷ್ಟ್ರದಲ್ಲಿ ಬಹುಶಃ ಪರಮಾವಧಿಗೆ ಮುಟ್ಟಿದೆ! ಸ್ವತಂತ್ರ ರಾಷ್ಟ್ರಗಳಲ್ಲಿ ಇಂಗ್ಲೆಂಡು, ರಶ್ಯ, ಜರ್ಮನಿ, ಅಮೆರಿಕಗಳಲ್ಲಿ ಭಿಕ್ಷುಕರ ಸಮಸ್ಯೆಯಿಲ್ಲ. ಅಲ್ಲಿನ ಸರಕಾರಗಳು ಅದರ ನಿವೃತ್ತಿ ಮಾಡಿವೆ. ಜನ ಅದರೂ ಇದು ಅಗೌರವವೆಂದು ತಿಳಿದಿದ್ದಾರೆ ಅಲ್ಲಿ. ಅಂಗಹೀನರನ್ನು ರೋಗಿಗಳನ್ನು ಸರಕಾರ ಸಾಕುತ್ತದೆ. ಜನರ ತೆರಿಗೆಯ ಒಂದಂಶ. ಅವರನ್ನು ಸಾಕಲು ವೆಚ್ಚವಾದರೆ ಏನಂತೆ? ರೋಗಿಗಳನ್ನು, ಸಾಂಕ್ರಾಮಿಕ ವ್ಯಾಧಿಪೀಡಿತರನ್ನು ಮಾರ್ಗದ ಬದಿಯಲ್ಲಿ ಹೊರಳಾಡ ಬಿಟ್ಟರೆ ರೋಗಗಳನ್ನು ಅಲೆದಾಡ ಬಿಟ್ಟರೆ ಅದರಿಂದ ಆಗುವ ನಷ್ಟ, ಅವರನ್ನು ಸಾಕಲು ಖರ್ಚಾಗುವ ಹಣಕ್ಕಿಂತ ಎಷ್ಟು ಪಾಲಿಗೆ ದೊಡ್ಡದು? ಹೀಗಿದ್ದರೂ ನಮ್ಮನ್ನಾಳುವ ಸರಕಾರ ಇದುವರೆಗೂ ಈ ಬಗ್ಗೆ ಕಣ್ತೆರೆಯದಿರುವುದು ಶೋಚನೀಯ. ಬಹುಶಃ ಪಾರತಂತ್ರ್ಯದ ಪಾಡು ಇದೆಯೋ ಏನೋ?

ಈ ಅಂಗಹೀನರು, ಈ ರೋಗ ಪೀಡಿತರು, ಇವರೆಲ್ಲಾ ಹೀಗೆ ದಿಕ್ಕಿಲ್ಲದೆ, ಗತಿಯಿಲ್ಲದೆ, ಸ್ವರ್ಣಭೂಮಿಯೆನಿಸಿಕೊಂಡ ನಮ್ಮ ಭಾರತ ಭೂಮಿಯಲ್ಲಿ, ಎಲ್ಲಿ ನೋಡಿದರಲ್ಲಿ ಕಣ್ಣಿಗೆ ಕಾಣುತ್ತಿರುವುದು, ಅವರ ನರಳಾಟ ಕೇಳುತ್ತಿರುವುದು ದಾರಿಯುದ್ದಕ್ಕೂ ದೀನ ಮುಖರಾಗಿ ಬೇಡುತ್ತಿರುವುದು ಇದಕ್ಕೆ ನಿಜವಾಗಿಯೂ ನಮ್ಮ ಪಾರತಂತ್ರ್ಯವೇ ಕಾರಣ. ಸ್ವತಂತ್ರ ಜನಾಂಗ ಇದನ್ನು ಸಹಿಸಲಾರದು. ಸಹಿಸುತ್ತಲೂ ಇಲ್ಲ. ಇನ್ನು ಕೆಲವು ಸೋಮಾರಿಗಳು, ದುಡಿದು ಜೀವಿಸಬಲ್ಲವರೂ, ಮನೆಮನೆ ತಿರುಗಿ ಹೊಟ್ಟೆಹೊರೆದುಕೊಳ್ಳುವುದು; ಇದೂ ಸ್ವತಂತ್ರ ಜನಾಂಗ ಪೌರುಷವುಳ್ಳ ಜನಾಂಗ ಸಹಿಸುವಂಥಾದ್ದಲ್ಲ. ಯಾವಾದರೂ ಪರಕೀಯರು ಬಂದಾಗ, ನಮ್ಮ ನಾಡಿನಲ್ಲಿ ಈ ದೃಶ್ಯ ಅವರ ಕಣ್ಣಿಗೆ ಬೀಳಬೇಕೆ? ನಮಗೆ ಅವರು ಏನು ಬೆಲೆ ಕಟ್ಟಿಯಾರು? ಆಳುವ ಸರಕಾರ ಇದನ್ನು ಆಲೋಚಿಸಬೇಕು. ಬೇಡುವ ರೋಗವನ್ನು ಇನ್ನೂ ಬೆಳೆಯಬಿಟ್ಟರೆ ಭಾರತೀಯರ ಮಾನಹಾನಿ, ತೇಜೋವಧೆಯಾಗುತ್ತದೆಂದು ತಿಳಕೊಳ್ಳಬೇಕು. ಜನತೆ ಈ ಬಗ್ಗೆ ತೀವ್ರ ಆಂದೋಲನವನ್ನೇ ಮಾಡಬೇಕು. ಮೈಸೂರಿನ ಮಾದರಿ ಕೆಲಸ ನಮ್ಮ ಕಣ್ತೆರೆಯಿಸಲಿ!

ಮದ್ಯಪಾನ ನಿಷೇಧವನ್ನು ಬಿಹಾರ್ ಸರಕಾರ ತೆಗೆಯುವುದು!

ಕಾಂಗ್ರೆಸ್ ಮಂತ್ರಿಮಂಡಳಗಳ ಕಾಲದಲ್ಲಿ ಜಾರಿಗೆ ಬಂದು, ಕಳೆದ ಐದು ವರ್ಷಗಳಿಂದ ಜಾರಿಯಲ್ಲಿದ್ದ ಮದ್ಯಪಾನ ನಿಷೇಧ ಕಾನೂನನ್ನು ಇಂದಿನ ಬಿಹಾರ ಸರಕಾರವು ಬರುವ ಅಕ್ಟೋಬರಿನಿಂದ ತೆಗೆಯುವುದು! ಜನರಲ್ಲಿ ಮೊದಲು ಮೊದಲಿಗಿದ್ದ ಉತ್ಸಾಹ ಕುಂದುತ್ತಾ ಬಂದು, ಕಳ್ಳತನದಿಂದ ಜನರು ಮದ್ಯಪಾನ ಮಾಡಿದ್ದೇ ಮೊದಲಾದ ಕಾರಣ ಇದಕ್ಕೆ ಕೊಡಲಾಗಿದೆ. ಕಾಂಗ್ರೆಸಿನವರಿರುವಾಗ, ಜನರಿಗೆ ಕಳ್ಳು ಕುಡಿಯಬಾರದೆಂಬ ವಿಶ್ವಾಸವಿತ್ತು, ಈಗ ಅದಿಲ್ಲವೆಂದು ಇದರಿಂದ ಸ್ಪಷ್ಟವಾಗುತ್ತದೆ. ಇದಕ್ಕೆ ಯಾರು ಕಾರಣ ಎಂಬುದು ಇದರಿಂದಲೇ ವ್ಯಕ್ತವಾಗುವುದಿಲ್ಲವೆ?

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಗೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ.

ಆದುದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

The Bank of Mangalore Limited, Mangalore.

ESTD. 1931

HEAD OFFICE Mangalore. *BRANCHES* Moodabidri & Padubidri.

The Bank Undertakes to Collect Cheques, Demand and Documentary Bills at Most Competitive Rates.

ISSUES DRAFTS ON ALL IMPORTANT TOWNS IN THE DISTRICT

and also on

BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.

at very favourable rates

All kinds of inland banking business undertaken

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಬಾತು, ಧಾವು, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೋವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ನೀವೀವರೆಗೆ ವಿಮೆಯನ್ನು ಇಳಿಸದಿದ್ದರೆ, ಯಾ ಸಾಕಷ್ಟು ವಿಮೆಯನ್ನು ಮಾಡಿಲ್ಲವಾದರೆ

ದಿ ಬಾಂಬೆ ಲೈಫ್ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡಿನಲ್ಲಿ

ಈಗಲೇ ವಿಮೆ ಇಳಿಸಿರಿ.

ಏಕೆಂದರೆ,

1. ಜೀವವಿಮೆಯು ಒಬ್ಬನ ವೃದ್ಧಾಪ್ಯದ ಮತ್ತು ಸಮೀಪದ ಹಾಗೂ ಪ್ರೀತಿಯ ಸಂಬಂಧಿಕರ ಜೀವನವನ್ನು ಸುರಕ್ಷಿತಗೊಳಿಸುತ್ತದೆ.
2. ನೀವಿಂದು ವಿಮೆಯನ್ನಿಳಿಸಬಲ್ಲಿರಾದರೆ ನಾಳೆ ಹಾಗೆ ಮಾಡಲು ಶಕ್ತರಾಗದೆ ಹೋಗಬಹುದು.
3. ಆರೋಗ್ಯವು ಅನಿಶ್ಚಿತವೆಂದಾದರೆ ಮೃತ್ಯುವು ಯಾರನ್ನೂ ಬಿಡುವಂತಿಲ್ಲ.
4. ಮೃತ್ಯು ಮತ್ತು ಮುಪ್ಪು ಎಂಬುದು ಅಮೂಲ್ಯವಾದೊಂದು ನಿಶ್ಚಿತ.
5. ಜೀವವಿಮೆಯು ಮರಣದ ಕ್ರೂರತೆಯನ್ನು ಹೋಗಲಾಡಿಸುವುದೊಂದೇ ಅಲ್ಲ; ಅದರ ಸಂಕಷ್ಟವನ್ನೂ ದೂರೀಕರಿಸುತ್ತದೆ.

ಆದುದರಿಂದ ಇಂದೇ ಜೀವವಿಮೆ ಮಾಡುವುದು ಲಾಭಕರವಾಗಿದೆ.

ವಿಶೇಷ ಮಾಹಿತಿಗೆ ದಯಮಾಡಿ ಬರೆಯಿರಿ:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

—: ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ :—

ಮಂಗಳೂರು ಕಲ್ಲಿಕೋಟೆ ಸೇಲಂ ತಿರುವಾಂಕೂರು ಬೆಂಗಳೂರು ನಗರ ಮತ್ತು ಬೊಂಬಾಯಿ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವ ವಿಧದ ದೋಷಗಳನ್ನು ಗುಣಪಡಿಸುವ ದಿವ್ಯೌಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು:–

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಶೈ, ರಥಬೀದಿ. (3) ದಿ ಕರ್ನಾಟಕ ಸ್ನಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೊ:—1. ಮರಾಠ ಗಲ್ಲಿ ಹುಬ್ಬಳ್ಳಿ.
2. 36 ಪ್ಯಾಕ್ರೋಫ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೊಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.

ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ
SWADESHABHIMANI

ESTD. 1906

[ಸಂಪುಟ 37] ತಾರೀಕು 16—7—1943 [ಸಂಚಿಕೆ 29]

ಆಗಸ್ಟ್ ನಿರ್ಣಯವನ್ನು ಗಾಂಧಿಜಿ ಹಿಂತೆಗೆವರೆ?

ವೈಸರಾಯರಿಗೆ ಗಾಂಧಿಜಿ ಪತ್ರ?

ಮಹಾತ್ಮಾ ಗಾಂಧಿಯವರು ವೈಸರಾಯರೊಡನೆ ಪತ್ರವ್ಯವಹಾರ ಮಾಡುತ್ತಿದ್ದಾರೆಂದು ಸುದ್ದಿ ಹಬ್ಬಿದೆ. ಈ ಸಲ ವೈಸರಾಯ್ ಕಾರ್ಯಕಾರೀ ಮಂಡಳ ದೀರ್ಘಕಾಲದ ತನಕ ಸಭೆ ಸೇರಿದೆ. ಕಾರ್ಯಕಾರೀ ಸದಸ್ಯರಾರೂ ಡಿಲ್ಲಿ ಬಿಟ್ಟುಹೋಗಕೂಡದೆಂದು ಅವರಿಗೆ ತಿಳಿಸಲಾಗಿದೆಯಂತೆ. ಗಾಂಧಿಜಿ ಪತ್ರದ ವಿಚಾರವಾಗಿ, ವೈಸರಾಯರು ಲಂಡನಿನ ಸಲಹೆಯನ್ನು ಪಡೆದಿರುವರೆಂದೂ, ಬೇಗನೇ ಅಧಿಕೃತ ಪ್ರಕಟಣೆಯೊಂದನ್ನು ಹೊರಡಿಸಬಹುದೆಂದೂ ನಂಬಲಾಗಿದೆ. ಗಾಂಧಿಜಿಯು ತಮ್ಮ ಮತ್ತು ಕಾಂಗ್ರೆಸಿನವರ ಮೇಲೆ ಹಾಕಿದ 'ಜಪಾನ್ ಮಿತ್ರರು ಎಂಬ ಆರೋಪವನ್ನು ಆಧಾರಸಹಿತ ರುಜುವಾತು ಮಾಡಬೇಕೆಂದು ವೈಸರಾಯರಿಗೆ ಒತ್ತಾಯ ಮಾಡುತ್ತಿದ್ದಾರೆಂದು ಹಿಂದೊಮ್ಮೆ ಸುದ್ದಿ ಬಂದಿತ್ತು.

ನಂಬಲರ್ಹವಾದ ಒಂದು ಸುದ್ದಿಯೇನೆಂದರೆ, ಗಾಂಧಿಜಿಯವರು ವೈಸರಾಯರಿಗೆ ಬರೆದ ಪತ್ರದಲ್ಲಿ ಎ ಐ ಸಿ ಸಿ ಠರಾವನ್ನು ಶರತವಿನಾ ಹಿಂತೆಗೆದಿರುವರೆಂದು. ಅಗಸ್ಟ 8ರ ಒಳಗೆ ತನಗೆ ಈ ಕುರಿತು ಉತ್ತರ ಕೊಡಬೇಕೆಂದೂ ಗಾಂಧಿಜಿ ವೈಸರಾಯರಿಗೆ ತಿಳಿಸಿರುವರಂತೆ. ಇದು ಪ್ರಾಮುಖ್ಯ ವಿಚಾರವಾದ್ದರಿಂದ ವೈಸರಾಯರು ಗಾಂಧಿಜಿಗೆ ಪತ್ರ ಬರೆಯುವ ಮುನ್ನ ಲಂಡನಿನ ಸಲಹೆ ಕೇಳಿರುವರಂತೆ!

ಕಾಂಗ್ರೆಸಿನ ಅಗಸ್ಟ್ ನಿರ್ಣಯ ಹಿಂತೆಗೆಯಬೇಕು

ಶ್ರೀ. ವಾಸ್ತವರ ಸೂಚನೆ

ಸಂಯುಕ್ತ ಪ್ರಾಂತದ ಮಾಜಿ ಪಾರ್ಲಿಮೆಂಟರಿ ಸೆಕ್ರೆಟರಿ ಶ್ರೀ. ಗೋಪೀನಾಥ ವಾಸ್ತವರು, ಜೇಲಿನಿಂದ ಹೊರಬಂದವರು ಕಾಂಗ್ರೆಸಿನ ಅಗಸ್ಟ ನಿರ್ಣಯವನ್ನು ಹಿಂತೆಗೆದುಕೊಳ್ಳಬೇಕೆಂದು ಒಂದು ಪ್ರಕಟಣೆ ಕೊಟ್ಟಿದ್ದಾರೆ. ಈಗ ಎಷ್ಟೋ ಮಂದಿ ಎ ಐ ಸಿ ಸಿ ಸದಸ್ಯರು ಜೈಲಿನಿಂದ ಹೊರಬಂದಿದ್ದಾರೆ. ಅವರೆಲ್ಲರೂ ಒಟ್ಟುಗೂಡಿ, ಕಾಂಗ್ರೆಸಿನ ಅಗಸ್ಟ ನಿರ್ಣಯವನ್ನು ಹಿಂತೆಗೆಯುವ-ನಿರ್ಣಯ ಮಾಡಿದರೆ, ಸರಕಾರವು ಕಾಂಗ್ರೆಸ್ ಮುಖಂಡರನ್ನು ಸೆರೆಮನೆಯಿಂದ ಬಿಡಿಸಿ, ರಾಜಕೀಯ ಬಿಕ್ಕಟ್ಟು ಬಿಡಿಸಲು ದಾರಿಮಾಡಿದಂತೆ ಆಗುತ್ತದೆಯೆಂದು ಅವರ ಅಭಿಪ್ರಾಯ. ಇದಕ್ಕೆ ಶ್ರೀ ಕೆ ಎಂ ಮುನ್ಶಿಯವರೂ ಬೆಂಬಲವಿತ್ತು ಒಂದು ಹೇಳಿಕೆಯಿತ್ತಿರುವರು. ಈಗಿನ ಪರಿಸ್ಥಿತಿ ಬದಲಾಗಿದೆ. ನಾವೀಗ ಸುಮ್ಮನೆ ಕುಳಿತುಕೊಳ್ಳಲು ಸಮಯವಲ್ಲ, ಭಾರತಕ್ಕೆ ಹೊಸ ಗಂಡಾಂತರ ಬಂದಿದೆ. ಜನತೆಯನ್ನು ಒಮ್ಮುಖ ಸಂಘಟನೆಮಾಡುವಂತೆ ನಾವು ಪ್ರಯತ್ನಿಸಬೇಕೆಂದಿದ್ದಾರೆ. ಆದರೆ ಈ ಅಭಿಪ್ರಾಯಕ್ಕೆ ವಿರೋಧವಿಲ್ಲದೆಯೂ ಇಲ್ಲ, ಮದ್ರಾಸಿನ ಕಾಂಗ್ರೆಸ್ ಮುಖಂಡರೊಬ್ಬರು ಒಂದು ಪ್ರಕಟಣೆ ಕೊಡುತ್ತಾ, ಶ್ರೀ ವಾಸ್ತವರ ಸೂಚನೆಯಂತೆ ನಾವು ಮಾಡಿದರೆ, ಕಾಂಗ್ರೆಸು ಸರಕಾರಕ್ಕೆ ಶರಣುಬಂದಂತೆ ಮಾತ್ರ ಆಗುತ್ತದಲ್ಲದೆ ಅದರಿಂದ ಪ್ರಯೋಜನವೇನೂ ಇಲ್ಲವೆಂದೂ ಗಾಂಧಿಜಿಯೇ ವೈಸರಾಯರಿಗೆ ಪತ್ರ ಬರೆದು, ಕಾಂಗ್ರೆಸು ಯಾವುದೇ ತರದ ವಿಧ್ವಂಸಕ ಕಾರ್ಯ ಮಾಡಲು ಸೂಚಿಸಿಲ್ಲವೆಂದು ಸ್ಪಷ್ಟಪಡಿಸಿರುತ್ತಾ, ಅಗಸ್ಟ್ ನಿರ್ಣಯ ಮಂಜೂರಾಗುವ ಮುನ್ನ ಕಾಂಗ್ರೆಸ್ ಮುಖಂಡರನ್ನು ಸರಕಾರವು ಬಂಧಿಸಿರುತ್ತಾ, ಆ ಮೇಲೆ ಸಂಧಾನ ಪ್ರಯತ್ನ ಮಾಡಲು ಗಾಂಧಿಜಿ ವರ್ಕಿಂಗ್ ಕಮಿಟಿ ಸದಸ್ಯರೊಡನೆ ತನ್ನನ್ನು ಕೂಡಿಸಿರಿ ಎಂದು ಕೇಳಿದಕ್ಕೂ ಸರಕಾರ ನಿರಾಕರಿಸಿರುತ್ತಾ, ಗಾಂಧಿಜಿ ಭೇಟಿಗೆ ಯಾರಿಗೂ ಆಸ್ಪದ ಕೊಡದಿರುತ್ತಾ, ಬೇಕುಬೇಕೆಂದೇ ಸಂಧಾನದ ಬಾಗಿಲನ್ನು ಸರಕಾರ ಮುಚ್ಚಿರುವಾಗ, ಕಾಂಗ್ರೆಸಿನವರು ಮುಖಂಡರನ್ನುಳಿದು, ತಾವು ಅಗಸ್ಟ್ ನಿರ್ಣಯವನ್ನು ಹಿಂದೆಗೆಯುವ ಠರಾವು ಮಾಡಿದರೆ ಕಾಂಗ್ರೆಸು ಹಾಗೂ ಗಾಂಧಿಜಿಯವರನ್ನು ಅಪಮಾನಗೊಳಿಸಿದಂತಾಗುತ್ತದೆಂದೂ ಹೇಳುತ್ತಾರೆ.

ಸುಬಾಸಬೋಸರು ಸಿಂಗಾಪುರದಲ್ಲಿ!

'ಭಾರತದ ಋಣ ತೀರಿಸುವೆನು'

ಸುಬಾಸಬೋಸರು ಸಿಂಗಾಪುರದಲ್ಲಿ

ಟೋಜೋ ಕೂಡಾ ಬಂದಿದ್ದರು!

ಮೊನ್ನೆ ಮೊನ್ನೆ ಬರ್ಲಿನಿನಲ್ಲಿ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭ ಸುಬ್ಬಾಸಬೋಸರು ಭಾಷಣ ಕೊಡುತ್ತಿದ್ದಾರೆಂದು ಚಿತ್ರ ಸಹಿತವಾಗಿ ಬಂದ ಸುದ್ದಿಯನ್ನು ನಾವು ಕಳೆದ ಸಂಚಿಕೆಯಲ್ಲಿ ಕೊಟ್ಟಿದ್ದೇವೆ. ಅವರು ಈಗ ಪುನಃ ಸಿಂಗಾಪುರದಲ್ಲಿ ಬಂದಿಳಿದಿರುವರೆಂದು ವರದಿ ಬಂದಿದೆ. ಜಪಾನ್ ಜರ್ಮನಿಗಳೊಳಗೆ ಜಲಾಂತರ್ಗಾಮಿ ಹಡಗು ಸಂಚಾರವಾಗುತ್ತಿದ್ದು ಅವುಗಳಲ್ಲೊಂದರಲ್ಲಿ ಹೀಗೆ ಜರ್ಮನಿಯಿಂದ ಸುಬಾಸಬೋಸರು ಸಿಂಗಾಪುರಕ್ಕೆ ಬಂದಿರಬಹುದೆಂದು ಸುದ್ದಿಗಾರರು ಊಹಿಸುತ್ತಾರೆ. ಈ ವಾರ್ತೆಯಿಂದ ಜಪಾನು, ಜರ್ಮನಿಗೆ ಸಾಧನ ಸಾಮಗ್ರಿ ಸಹಾಯ ಕಳುಹಿಸುತ್ತಿದೆಯೆಂದೂಹಿಸಲು ಆಸ್ಪದವಾಗಿದೆ. ಇಷ್ಟರಲ್ಲಿ ಇನ್ನೊಂದು ಸುದ್ದಿಯೆಂದರೆ, ಅದೇ ಸಂದರ್ಭದಲ್ಲಿ ಜಪಾನಿನ ಮುಖ್ಯ ಮಂತ್ರಿ ಟೋಜೋರವರೂ ಸಿಂಗಾಪುರಕ್ಕೆ ಬಂದದ್ದು. ಅಂತೂ ಬೋಸರೂ ಟೋಜೋರವರೂ ಸಿಂಗಾಪುರದಲ್ಲಿ ಸಂದರ್ಶಿಸಿ ವಿಚಾರ ವಿನಿಮಯ ಮಾಡಿಕೊಳ್ಳಲು ಆಸ್ಪದವಾಗಿರಬಹುದು. ವೇವಲರನ್ನು ವೈಸರಾಯರಾಗಿ ನೇಮಿಸಿದ್ದು ಭಾರತವನ್ನು ಒಂದು ಮುಖ್ಯ ರಣರಂಗವಾಗಿ ಮಾಡಲು, ಎಂದು ಹಲವರು ತರ್ಕಿಸಿದ್ದಾರೆ. ಹಾಗಾದರೆ ಬೋಸರು ಮತ್ತು ಟೋಜೋರವರು ಸಿಂಗಾಪುರದಲ್ಲಿ ಒಟ್ಟು ಕೂಡಿದ್ದು ಮುಂದಿನ ಭಾರತದ ಸಂಗ್ರಾಮ ವಿಚಾರವಿನಿಮಯ ಮಾಡಲು ಏಕಿರಬಾರದು?

ನಾಲ್ವರು ಪೋಲೀಸರಿಗೆ ಫಾಶಿ ಶಿಕ್ಷೆ

ಹುಡುಗರನ್ನು ಗುಂಡಿಕ್ಕಿ ಕೊಂದದ್ದಕ್ಕೆ!

ಡಿಲ್ಲಿಯ ಜಿಲ್ಲೆ ಹಾಗೂ ಸೆಷನ್ಸ್ ಜಡ್ಜರಾದ ಪಾಲಕೋರವರು ಏಸಸರದ ಅಭಿಪ್ರಾಯದ ಮೇರೆಗೆ ಮೂರು ಹುಡುಗರನ್ನು ಗುಂಡಿಕ್ಕಿ ಕೊಂದ ಆರೋಪದಲ್ಲಿ ನಾಲ್ವರು ಪೋಲೀಸರಿಗೆ ಫಾಶಿ ಶಿಕ್ಷೆ ವಿಧಿಸಿದರು. ೧೯೪೨ ಅಕ್ಟಬರ ೩೦ರಂದು ರಾತ್ರಿ ಈ ಸಶಸ್ತ್ರ ಪೋಲೀಸರು ಕಿಶನಗಂಜ ರೈಲ್ವೆರಸ್ತೆ ಕಾಯುತ್ತಿದ್ದು, ಆ ರೈಲ್ವೆ ಲೈನಿನಿಂದ ಕಲ್ಲಿದ್ದಲು ಕೊಂಡುಹೋಗುವ ನಾಲ್ವರು ಬಾಲಕರನ್ನು ಹಿಡಿದು, ಮಿಲಿಟರಿಯವರ ಮುಂದೆ ಹಾಜರುಮಾಡಲು ಕೊಂಡುಹೋಗಿ, ಯಮುನಾ ಸೇತುವೆಯ ಅಡಿಗಿರುವ ತಿಲಾಪುರ ರೈಲ್ವೆ ಕ್ರಾಸಿಂಗಿನ ಬಳಿ ಹೋದ ಕೂಡಲೇ ಹುಡುಗರನ್ನು ಸಾಲಾಗಿ ನಿಲ್ಲಿಸಿ ಗುಂಡಿಟ್ಟುಕೊಂದರು. ಅವರಲ್ಲಿ ಮುಹಮ್ಮದ್ ಉದೀನ್ ಎಂಬ ಹುಡುಗನು ತಪ್ಪಿಸಿಕೊಂಡು ಹೋಗಿ ವಿಚಾರಣೆಯ ಕಾಲದಲ್ಲಿ ಈ ಹೃದಯದ್ರಾವಕ ಕತೆ ಹೇಳಿದನು. 'ಪೋಲೀಸರು ಹಿಡಿದ ಕೂಡಲೇ ನಾವು ಅವರ ಕಾಲಿಗೆ ಬಿದ್ದೆವು, ಜೀವದಾನ ಮಾಡಿರೆಂದು ಬೇಡಿದೆವು. ಆದರೆ ನಿಷ್ಕರುಣೆಯಿಂದ ಪೋಲೀಸರು ಗುಂಡಿಟ್ಟರು. ಇಬ್ಬರು ಆಗಲೇ ಬಿದ್ದು ಸತ್ತರು. ಮೂರನೆಯವನೂ ಮಾಳಿಬಿಟ್ಟ. ನಾನು ಅವನನ್ನು ಮೇಲೆ ಹಾಕಿಕೊಂಡು ಮರೆಯಾದೆ. ನಾನೂ ಸತ್ತಿರುವೆನೆಂದು ತಿಳಿದು ಅವರು ಸುಮ್ಮಗಿದ್ದರು. ಅಷ್ಟರಲ್ಲಿ ಗುಡ್ಸ್ ಗಾಡಿ ಬಂತು. ರೈಲ್ವೆ ಮಾರ್ಗದಲ್ಲೆ ಹೆಣವಿರುವುದರಿಂದ ಅದು ನಿಂತಿತು. ಇಂಜಿನ್ ಡ್ರೈವರನು ಪೋಲೀಸರೊಡನೆ ಮಾತುಕತೆ ಮಾಡುತ್ತಿದ್ದ. ಆ ಸಮಯ ನೋಡಿ ನಾನು ಎದ್ದು ಓಡಿ ಸಮೀಪದ ಹಳ್ಳಿ ಸೇರಿ ನದಿಯಲ್ಲಿ ಈಸಿ ಪಾರಾಗಿ ಹೇಗೋ ನನ್ನೂರಿಗೆ ಬಂದೆ' ಎಂದು ಅವನು ಹೇಳಿದ. 'ಪೋಲೀಸರು 'ಪುಂಡ'ರನ್ನು ಕೊಂದರೆ ಇನಾಮು ಸಿಗುತ್ತದೆ ಹಾಗೂ 'ಪ್ರಮೋಶನ್' ದೊರೆಯುತ್ತದೆಂದು ಹೀಗೆ ಬಾಲಕರನ್ನು ಕೊಲ್ಲಲು ಹೇಸಲಿಲ್ಲವೆಂದು ನ್ಯಾಯಮೂರ್ತಿಗಳು ತೀರ್ಮಾನಿಸಿ ಇವರಿಗೆ ಫಾಶಿ ಶಿಕ್ಷೆ ವಿಧಿಸಿದ್ದಾರೆ! ಹಿಂದೆ ಇದೇ ರೀತಿ ಮಾಡಿದ ಕೆಲ ಪೋಲೀಸರಿಗೆ ಸರಕಾರ ಇನಾಮು ಕೊಟ್ಟದ್ದು ರುಜುವಾಯಿತು!

'ಭಾರತೀಯರ ಫೇಸಿಸ್ಟ್ ವಿರೋಧಿಗಳು'

ಅಮೇರಿಕದಲ್ಲಿ ಕುಮಾರಿ ಪಂಡಿತರ ಭಾಷಣ

ಜವಾಹರಲಾಲರ ಸೊಸೆಯಂದಿರು. ಹಾಗೂ ಶ್ರೀ ಆರ್ ಎಸ್ ಪಂಡಿತ್ ಹಾಗೂ ವಿಜಯಲಕ್ಷ್ಮಿ ಪಂಡಿತರ ಮಕ್ಕಳು ಕುಮಾರಿಯರಾದ ಚಂದ್ರಲೇಖಾ (ವಯಸ್ಸು ೧೯) ಮತ್ತು ನಯನತಾರಾ (ವಯಸ್ಸು ೧೬) ಇವರು ಅಮೇರಿಕಕ್ಕೆ ಉಚ್ಚ ವಿದ್ಯಾಭ್ಯಾಸಕ್ಕೆ ಹೋಗಿ, ನ್ಯೂಯಾರ್ಕಿಗೆ ಈಗ ಬಂದಿಳಿದಿದ್ದಾರೆ. ಅವರು ಅಲ್ಲಿನ ವೆಲೆಸ್ಲಿ ಕಾಲೇಜಿನಲ್ಲಿ ಅಭ್ಯಾಸ ಮಾಡುವರು. (ಶ್ರೀ ಆರ್. ಎಸ್. ಪಂಡಿತ ಇಬ್ಬರು ಸೋದರಿಯರೂ ಅಮೆರಿಕನ್ ಮಿಶನ್ ಹೈಸ್ಕೂಲಲ್ಲಿ ಅಭ್ಯಾಸಮಾಡಿದ್ದರು) ಅವರು ಸುದ್ದಿಗಾರರ ಸಭೆಯಲ್ಲಿ ತಮ್ಮ ಅನುಭವಗಳನ್ನು ಹೇಳಿದರು. ಭಾರತೀಯರು ಬಲವಾಗಿ ಅಕ್ಷರಾಷ್ಟ್ರಗಳ ವಿರೋಧಿಗಳೆಂದರು. ಸತಿ ಚಿಯಾಂಗರ ಸಲಹೆಯಂತೆ ತಾವಿಲ್ಲಿಗೆ ವಿದ್ಯಾಭ್ಯಾಸಮಾಡಲು ಬಂದಿರುವುದಾಗಿ ತಿಳಿಸಿದರು. ಸತಿ ಚಿಯಾಂಗರ ಗೌರವಾರ್ಥ ವೆಲ್ಲೆಸ್ಲಿ ಕಾಲೇಜಿನವರು ಇಟ್ಟಿರುವ (ಅವರೂ ಅಲ್ಲಿ ವಿದ್ಯಾಭ್ಯಾಸ ಪಡೆದವರು) ವೇಲಿಂಗ್ ಸ್ಕೂಲ್ ಸ್ಕೋಲರ್‌ಶಿಪ್ ಚಂದ್ರಲೇಖಾಗೆ ಕೊಡಲು ನಿರ್ಣಯವಾಗಿದೆ. ಮೆಕ್ಸಿಕೋಗೆ ಹೋಗುತ್ತಿದ್ದ ೭೦೦ ಪೋಲಿಸ್ ನಿರಾಶ್ರಿತರಿದ್ದ ಹಡಗಿನಲ್ಲಿ ತಾವು ಪ್ರಯಾಣ ಮಾಡಿದುದಾಗಿ ಅವರು ಹೇಳಿದರು.

'ಭಾರತದ ಋಣ ತೀರಿಸುವೆ'

ವೇವಲರ ಕನಸು!

ಭಾರತದ ವೈಸರಾಯರಾಗಿ ನೇಮಿತರಾದ ವೇವಲರು ಲಂಡನಿನಲ್ಲಿ ಇತ್ತೀಚೆಗೆ ಒಂದು ಭಾಷಣವೀಯುತ್ತಾ, ಭಾರತದ ವಿದ್ಯಾರ್ಥಿಗಳನ್ನುದ್ದೇಶಿಸಿ, ನನ್ನ ಆಯುಷ್ಯದ ಹಲವು ಭಾಗವನ್ನು ನಾನು ಭಾರತದಲ್ಲಿ ಕಳೆದೆನು. ಭಾರತದ ವಿಚಾರ ನನಗೆ ತುಂಬಾ ಪ್ರೀತಿಯಿದೆ. ನನ್ನ ಹೊಸ ಉದ್ಯೋಗದಲ್ಲಿ ಭಾರತದ ಋಣ ತೀರಿಸಲು ನಾನು ಸಾಧ್ಯವಾದಷ್ಟು ಪ್ರಯತ್ನ ಮಾಡುವೆನು. ಭಾರತದ ಜನತೆ ಯಾವಾಗಲೂ ಕಲೆಯಲ್ಲಿ ವಿಶೇಷವಾಗಿ ಲಲಿತಕಲೆಯಲ್ಲಿ ನಿಪುಣರು ಎಂದು ಹೇಳಿದರು. ವೇವಲರ ಈ ಕನಸು ಸತ್ಯವಾಗಲಿ ಎಂದು ನಾವು ಹಾರೈಸುತ್ತೇವೆ! 'ಉಂಡ ಭೂಮಿಗೆ ಎರಡು ಬಗೆಯುವವರು' ಯಾರೂ ಆಗಬಾರದು ಎಂದು ನೀತಿಶಾಸ್ತ್ರವೇ ಸಾರುತ್ತದೆ!

ಆಹಾರ ಪರಿಷತ್ತಿನ ನಿರ್ಣಯಗಳು

ಭಾರತದ ಆಹಾರ ಪರಿಸ್ಥಿತಿಯನ್ನು ಸುಧಾರಿಸುವ ಆಲೋಚನೆಯಿಂದ ಹೊಸ ಡಿಲ್ಲಿಯಲ್ಲಿ ಒಂದು ಪರಿಷತ್ತು ಕೂಡಿತಷ್ಟೇ. ಅದರ ನಿರ್ಣಯಗಳು ಇಂತಿವೆ. 'ಗ್ರಾಮಾಂತರಗಳಲ್ಲಿ ಕೂಡ ರೇಶನಿಂಗ್ ಪದ್ಧತಿಯನ್ನು ಮೊಲ್ಲನೆ ಜಾರಿ ಮಾಡುವುದು. ಈಗಿನ ಪರಿಸ್ಥಿತಿಯ ಆಹಾರಗಳೆ ಪರಮಾವಧಿ ಬೆಲೆ ನಿರ್ಣಯಿಸಲಾಗುವುದಿಲ್ಲ. ಆದರೆ ಧಾರಣೆ ಸಮಾನವಟ್ಟಕ್ಕಿಳಿಯುವಂತೆ ಪ್ರಯತ್ನಮಾಡುವುದು, ಬೆಲೆ ಸಾಮಾನ್ಯ ಪರಿಸ್ಥಿತಿಗೆ ಬಂದ ಹೊರತು ಅನಿರ್ಬಂಧ ವ್ಯಾಪಾರವಿಲ್ಲ, ಆಹಾರಪದಾರ್ಥಗಳನ್ನು ಕೊರತೆಯಿರುವ ಪ್ರಾಂತ ಸಂಸ್ಥಾನಗಳು ಕೊರತೆಯಿಲ್ಲದ ಪ್ರಾಂತ ಸಂಸ್ಥಾನಗಳಿಂದ ಒದಗಿಸಿಕೊಳ್ಳಲು ಕೇಳುವುದು, ಅಂಥಾ ಸಂದರ್ಭದಲ್ಲಿ ವಾಹನ ಸೌಕರ್ಯ ಒದಗಿಸುವುದು, ದೀರ್ಘಾವಧಿ ಯೋಜನೆಯನ್ನು ಸಪ್ಟಂಬರ ನಂತರ ಸಭೆ ಸೇರಿ ನಿರ್ಣಯಿಸುವುದು. ಪ್ರಾಂತಿಕ ಅಧಿಕಾರಿಗಳು ಲಾಭಬಡಕರ ಹಾಗೂ ಸಂಗ್ರಹಕಾರರ ವಿರುದ್ಧ ಉಗ್ರೋಪಾಯ ಕೈಕೊಳ್ಳುವರು. ಈ ನಿರ್ಣಯಗಳನ್ನು ಆದಷ್ಟು ಬೇಗನೇ ಜಾರಿಗೆ ತರಲಾಗುವುದು'.

ವರ್ಣದ್ವೇಷದ ತಾಂಡವ ನೃತ್ಯ!

ಮೂರನೆಯ ಮಹಾಯುದ್ಧಕ್ಕೆ ಬೀಜನ್ಯಾಸ!

ಅಮೆರಿಕದಲ್ಲಿ ಆಫ್ರಿಕದಲ್ಲಿ ಎಲ್ಲೆಲ್ಲಿಯೂ!

ಅಮೆರಿಕದಲ್ಲಿ ವರ್ಣದ್ವೇಷ ತಾಂಡವವಾಡುತ್ತಿರುವ ವಿಚಾರವಾಗಿ ಇತ್ತೀಚೆಗೆ ಹಲವು ಸುದ್ದಿಗಳು ಬರುತ್ತಿವೆ. ಅಲ್ಲಿ ಜಾತಿ ಜಾತಿಗಳೊಳಗೆ ಬಿಳಿ ಕರಿ ಜನಗಳೊಳಗೆ ದಂಗೆಯೆದ್ದ ವಾರ್ತೆಗಳನ್ನು ನಾವೀಗ ಕೇಳುತ್ತಿದ್ದೇವೆ. ಬಿಳಿ ಮಂದೆಗಳು ಕರಿ ಜನರ ಮೇಲೆ ಕುದುರೆ ಸವಾರಿ ಮಾಡುವ ಅನ್ಯಾಯ ಅಲ್ಲಿಯೂ ಮಿತಿಮೀರಿದೆ. "ಜನತೆಗಾಗಿ, ಜನತೆಯಿಂದ ಜನತೆಯ ಸರಕಾರ" ಇರುವಲ್ಲಿಯೂ ಈ ಕೋಲಾಹಲ ಇರುವಾಗ, ಬ್ರಿಟಿಷರು ಆಳುವ ಭಾರತದಲ್ಲಿ ಎಲ್ಲಿಯೋ ಕೆಲ ಕಡೆ ಜಾತಿ ಕಲಹವಾದರೆ, ಯಾರೋ ಬೇಕುಬೇಕೆಂದೇ ಇದನ್ನು ಕೆರಳಿಸುತ್ತಿದ್ದರೆ, ಈ ವಿಷಯವನ್ನು ಭೂತ ಕನ್ನಡಿಯಲ್ಲಿ ದೊಡ್ಡದು ಮಾಡಿ ನೋಡಿ ಹೇಳುತ್ತಾರಲ್ಲಾ ಈ ಬಿಳಿ ಮಂದೆಗಳು ಎಂದು ನಮಗೀಗ ಆಶ್ಚರ್ಯವಾಗುತ್ತದೆ!

ಅಮೆರಿಕದಲ್ಲಿ ನಿಗ್ರೋ ಎಂಬ ಜಾತಿ ಇದೆ. ಅವರು 'ಕಪ್ಪು ಬಣ್ಣದವರು. ಅವರ ವಸತಿಗೆ ನ್ಯೂಯಾರ್ಕಿನಲ್ಲಿ ಬೇರೆ ಒಂದು ಕೇರಿ ಕಟ್ಟಿಸಿದ್ದಾರೆ; ಅದರ ಹೆಸರು ಹಾರ್ಲೆಮ್; ನ್ಯೂಯಾರ್ಕಿನಲ್ಲಿ ಇದರಷ್ಟು ಹೊಲಸು ಸ್ಥಳ ಬೇರೆ ಇಲ್ಲ ಇದು ನರಕವೇ! ಆದರೂ ಇಲ್ಲಿನಷ್ಟು ಬಾಡಿಗೆ ಇನ್ನಾವಲ್ಲಿಯೂ ಇಲ್ಲ! ಇಲ್ಲಿನ ಆಸ್ಪತ್ರೆ, ಶಾಲೆಗಳೆಲ್ಲವೂ ಹೊಲಸು ಹೊಲಸು! ಆದರೂ ಇತರ ಕಡೆಗಳಿಗಿಂತ ವೆಚ್ಚ ಅಧಿಕ ಇಲ್ಲಿ! ಇದು ಒಂದು ರೀತಿಯಿಂದ ಜಾತಿ ಮೇಲೆ ತೆರಿಗೆ ಹಾಕಿದಂತೆ.—ಮೂರ್ಖ ಅವರಂಗಜೇಬ್ ಹಿಂದೆ ಹಿಂದುಗಳ ಮೇಲೆ ಇಂಥಾ ತೆರಿಗೆ ಹಾಕಿದ್ದ. ಆದರೆ ಅವನಾದರೂ ತುಸು ಭೇದ ಏಕೆಂದರೆ ಯಾವನಾದರೂ ಮುಸಲ್ಮಾನನಾಗಿಬಿಟ್ಟರೆ ಮುಂದೆ ತೆರಿಗೆ ಇರಲಿಲ್ಲ! ಆದರೆ ಈ ನಿಗ್ರೋ ಜನ ಬಿಳಿ ಮಂದೆಯಾಗುವ ಹಾಗಿಲ್ಲವಷ್ಟೆ? ಹಾಗಾಗಿ ಅವರ ಮೇಲಿನ ಈ ತರದ ದಂಡ ತೆಗೆವ ಹಾಗೂ ಇಲ್ಲ.

ಅಲ್ಲಿ 'ಕ್ಲುಕ್ಲುಕ್ಸ್ ಕ್ಲಾನ್'ನಂಥಾ ಪುಂಡರಿದ್ದಾರೆ (ಪುಂಡರು ಬಿಳಿ ಜನರಲ್ಲಿಯೂ ಇದ್ದಾರೆ.) ಅವರು ಹಗಲು ಹೊತ್ತಿನಲ್ಲಿಯೇ ನೀಗ್ರೋಗಳನ್ನು ಕೊಂದುಬಿಡಲೂ ಹೇಸುವುದಿಲ್ಲ. ಬಿಳಿಯನ ಬಲಾತ್ಕಾರಕ್ಕೆ ಗುರಿಯಾದ ಕರಿ ಹುಡುಗಿಯನ್ನು ಕಲ್ಲಿನಿಂದ ಹೊಡೆದು ಕೊಂದುಬಿಡುತ್ತಾರೆ ಬಿಳಿ ಹೆಂಗುಸಿನ ಮೋಹದ ಫಲಕ್ಕಾಗಿ ಕರಿ ಯುವಕನನ್ನು ಕಾದ ಎಣ್ಣೆಯಲ್ಲಿ ಕುದಿಸುತ್ತಾರೆ! ಸಿನೇಟ್ ಸಭೆ ನೋಡಲೆಂದು ನೀಗ್ರೋಗಳು ಹೋದಾಗ ನಾಯಿ ಬಂದಂತೆ ಅವರನ್ನು ಹೊರಗಟ್ಟಿದರು! ಹಾಗೆ ಹೊರಗಟ್ಟಿದ ನಿಗ್ರೋಗಳಲ್ಲಿ ಕೆಲವರು ಮಂತ್ರಿಗಳೂ ಇದ್ದರು ನಿಗ್ರೋಗಳು ಅದಕ್ಕಾಗಿ ಅರ್ಜಿ ಮಾಡಿದರೆ, "ಜಗತ್ತೇ ಸರ್ವರದೆಂಬು" ಸಾರಿದ ಅಮೆರಿಕದ ರಾಜಕೀಯ ಮುಂದಾಳುಗಳಿಗೆ ಅದು ನಾಟಲೇ ಇಲ್ಲ! !

ಇತ್ತೀಚೆಗೆ ಡೆಟ್ರೋಯಿಟನಲ್ಲಿ ಇಂಥಾ ವರ್ಣ ದ್ವೇಷದ ಮಹಾ ಕಾಳಗವೊಂದು ನಡೆಯಿತು. ದಂಗೆ ಎದ್ದಿತು. ಅಮೆರಿಕದಲ್ಲಿ ಈ ವರ್ಣದ್ವೇಷದ ಹೊಗೆ ಅಲ್ಲಲ್ಲಿ ಎಲ್ಲಾ ಕಡೆಗಳಲ್ಲಿಯೂ ಇದೆ. ಇದು ಎಂದಾದರೊಂದು ದಿನ ತಲೆ ಬಂದೇ ಬರುತ್ತದೆ— ಇದು ಅಮೆರಿಕವನ್ನೇ ನಾಶಿಸಬಹುದು! ನೀಗ್ರೋ ಜನರನ್ನು ಬಿಳಿ ಮಂದೆಗಳು ಶತ್ರುಗಳಂತೆ ಭಾವಿಸುತ್ತಾರೆ. (ಬಿಳಿ ಮಂದೆಗಳಲ್ಲಿ ಕೆಲವರು ಒಳ್ಳೆಯವರೂ ಇದ್ದಾರೆ) ನೀಗ್ರೋಗಳಲ್ಲಿ ಮಧ್ಯಮ ವರ್ಗದ ಜನ ತುಂಬಾ. ವಿದ್ಯಾವಂತರು, ಲಾಯರು, ಡಾಕ್ಟರರೂ ಬಹಳ ಮಂದಿ ಇರುವರು.

ಡೆಟ್ರೋಯಿಟ್‌ನಲ್ಲಿ ೧೯೨೫ರಲ್ಲಿ ಒಂದು ಘಟನೆ ನಡೆಯಿತು. ಡಾ। ಸ್ವೀಟ್ ಎಂಬಾತ ನೀಗ್ರೋ ಜನ. ಆತ ನಗರದ ಬಡಾವಣೆಯಲ್ಲಿ ಒಂದು ವಸತಿ ಪಡಕೊಂಡ, ಮನೆ ಕಟ್ಟಿ ವಾಸಿಸಲು. ಅಲ್ಲಿ ನೆರೆಕರೆಯಲ್ಲಿ ಬಿಳಿ ಜನ ವಾಸವಾಗಿದ್ದರು. ಅವರು ಈತನನ್ನು ಹೆದರಿಸಿದರು. ಅಲ್ಲಿ ಮನೆ ಮಾಡಿ ಕುಳಿತರೆ ಕೊಂದು ಬಿಡುತ್ತೇವೆಂದರು. ಡಾ। ಸ್ವೀಟ್ ಅದಕ್ಕೆ ಭಯ ಪಡಲಿಲ್ಲ. ಅಮೆರಿಕದ ರಾಜ್ಯ ಶಾಸನದಲ್ಲಿ ಪ್ರತಿಯೊಬ್ಬನಿಗೂ ಮನೆಕಟ್ಟಿರಲು ಸ್ವಾತಂತ್ರ್ಯವುಂಟೆಂದು ಆತನಿಗೆ ಗೊತ್ತು! ಮನೆ ಮಾಡಿ ಉಳಿಕೊಂಡದ್ದೇ ತಡ, ಇಷ್ಟನೇ ತಾರೀಕಿನೊಳಗೆ ಮನೆಬಿಟ್ಟು ಹೋಗದೆ ಇದ್ದರೆ ಕೊಂದುಬಿಡುತ್ತೇವೆಂಬ ಹೆದರಿಕೆ ಬಂತೇ ಬಂತು! ಆದರೆ ಆತ ಅದಕ್ಕೂ ಭಯಪಡಲಿಲ್ಲ ತನ್ನ ಹೆಂಡತಿ ಮಕ್ಕಳನ್ನು ಬೇರೆ ಕಡೆಗೆ ಕಳುಹಿಸಿ, ತಾನು ಕೆಲವು ಮಂದಿ ಗೆಳೆಯರೊಂದಿಗೆ ಕೋವಿ ಹಿಡಿದು ಅಲ್ಲಿಯೇ ಉಳಿಕೊಂಡ ರಾತ್ರೆ ಕೆಲ ಬಿಳಿಯ ಪುಂಡರೊಡನೆ (ಯೂರೋಪಿಯನರಲ್ಲಿಯೂ ಪುಂಡರಿದ್ದಾರೆ ಖಂಡಿತ.) ಆತನ ಮನೆ ಮುತ್ತಿದರು. ಕಲ್ಲು ಬಿಸಾಡಿದರು. ಡಾ। ಸ್ವೀಟ್ ಆತ್ಮ ರಕ್ಷಣೆಯ ಸಲುವಾಗಿ ಗುಂಡು ಹಾರಿಸಿದ. ಒಂದೆರಡು ಜನ ಸತ್ತಿತು. ಇನ್ನು ಕೆಲವರು ಗಾಯಗೊಂಡರು.

ಮುಂದೆ ಡಾ। ಸ್ವೀಟನ ಬಂಧನವಾಯಿತು. ಆತನನ್ನು ಬಂದಿಸಿಟ್ಟ ಸ್ಥಳಕ್ಕೆ ಬಿಳಿಯರು ಮುತ್ತಿ ಆತನನ್ನು ಜೀವಂತ ಹುಗಿದಿಡುವಂತೆ ಸಾಹಸ ಮಾಡುತ್ತಿರುವುದು ಸರಕಾರಕ್ಕೆ ತಿಳಿದು ಆತನ ತಲೆಮರೆಸಿಡಬೇಕಾದರೆ ಸರಕಾರಕ್ಕೇ ಪೇಚಾಟಕ್ಕೆ ಬಂತು! ಮುಂದೆ ವಿಚಾರಣೆ ನಡೆಯಿತು, ಬಿಳಿ ಲಾಯೆರು ಯಾರೂ ಆತನ ಪರ ಹಿಡಿದು ವಾದಿಸಲು ಕೇಳಲೊಲ್ಲರು. ನೀಗ್ರೋ ಲಾಯರು ಅಷ್ಟು ಪ್ರಭಾವಶಾಲಿಗಳಲ್ಲ. ಆದರೆ ನೀಗ್ರೋಗಳು ಬಹಳ ಸಂಪ ಶಕ್ತಿಯವರು. ಎಲ್ಲರೂ ಒಟ್ಟಾಗಿ 'ಚಿಕಾಗೊನಿಂದ ಕ್ಲೆರೆನ್ಸ್ ಡೇರೋ ಎಂಬ ವಕೀಲನನ್ನು ಕರತಂದರು. ಆತ ನೀಗ್ರೋ ಪಕ್ಷ ಹಿಡಿದು ವಾದಿಸುವ ಮೊದಲು ನಗರದಲ್ಲಿ — ಪ್ರತಿಷೇಧ ಬಲವಾಗಿದ್ದರೂ—ಹಲವು ಭಾಗಗಳಲ್ಲಿಯೂ [illegible]ಯಬೇಕಾಯಿತು. ಕರಿಯನ [illegible] ಬಿಳಿ ಮಂದೆಯನ್ನು ಕಾರ್ಯಕಾರಣ ವಿವರಿಸಿ, ನ್ಯಾಯಾನ್ಯಾಯ ವಿವೇಚಿಸಿ ತಣ್ಣಗಿರಿಸಬೇಕಾಯಿತು.

ಮುಂದೆ ನ್ಯಾಯ ಸ್ಥಾನದಲ್ಲಿ ವಿಚಾರಣೆ ನಡೆಯಿತು. ಆಗಲೂ ಬಹಳ ಬಂದೋಬಸ್ತು ಇತ್ತು. ಕೆಳಗಿನ ಕೋರ್ಟಿನಲ್ಲಿ ಜೂರಿಗಳೆಲ್ಲರೂ—ಅವರೂ ಬಿಳಿ ಮಂದೆಗಳು ತಾನೇ—ಡಾ। ಸ್ವೀಟನು ಅಪರಾಧಿಯೆಂದೇ ಹೇಳಿಬಿಟ್ಟರು. ಆದರೆ ಕೊನೆಗೆ ಆತನ ಬಿಡುಗಡೆ ಆಯಿತು! ವರ್ಣದ್ವೇಷದ ವಿಷ ಬೀಜ ಎಷ್ಟು ಬಲವಾಗಿ ಬೇರೂರಿದೆ ಮೇಯೋ ಮಾತೆಯ ರಾಜ್ಯದಲ್ಲಿ!

ಬಿಳಿ ಮಂದೆಗಳು ಕಪ್ಪು ಜನರಿಗೆ ಹೇಗೆ ಬಾಧೆ ಕೊಡುತ್ತಾರೆಂಬುದು ಭಾರತೀಯರಿಗಂತೂ ಚೆನ್ನಾಗಿ ಗೊತ್ತು. ಏಕೆಂದರೆ ಅದು ಅವರ ನಿತ್ಯ ಜೀವನದಲ್ಲಿ ಅನುಭವಿಸುವ ಸತ್ಯ ಕಥೆ. ಬಿಳಿ ಮಂದಿ ಕಪ್ಪು ಜನರೊಡನೆ ಬೆರೆಯಲಾರದ.. ಅವರ ವಸತಿ ಬೇರೆ, ಒಳ್ಳೆ ಒಳ್ಳೆಯ ಸ್ಥಳಗಳಲ್ಲಿ! ಅವರಿಗೆ ಸಂಬಳ ತುಂಬಾ, ಅವರಿಗೆ ಸರಕಾರ ಸಮೀಪ, ಏಕೆಂದರೆ ಅವರದೇ ಸರಕಾರ! ದೇಶ ಬೇರೆಯವರದಾದರೂ ಆಳುವವರು ಅವರು ತಾನೆ? ಹಾಗಿರುವಾಗ, ಭಾರತದಲ್ಲಾದರೂ ಬ್ರಿಟಿಷರಿಗಿದ್ದಷ್ಟು ಗೌರವ, ಭಾರತೀಯರಿಗೆ, ಕಪ್ಪು ಜನರಿಗೆಲ್ಲಿಂದ?

ಇನ್ನು ದಕ್ಷಿಣಾಫ್ರಿಕದ ಕತೆ ಹೇಳುವುದೇ ಬೇಡ ಗಾಂಧಿಜಿ, ತನ್ನ ಸಾರ್ವಜನಿಕ ಜೀವನ ಪ್ರಾರಂಭಿಸಿದ್ದು, ಬಿಳಿ ಮಂದೆಯ ಎದುರು ನಿಂತು ಹೋರಾಡಲು ಪಂಥ ಕಟ್ಟಿದ್ದು ಇಲ್ಲಿನ ವರ್ಣ ದ್ವೇಷವನ್ನು ನೋಡಿ! ಉತ್ತಮ ತರಗತಿಯಲ್ಲಿ ಭಾರತೀಯರು ದುಡ್ಡು ಕೊಟ್ಟರೂ ಹೋಗುವಂತಿಲ್ಲ! ಉತ್ತಮ ಸ್ಥಳಗಳಲ್ಲಿ ದುಡ್ಡಿದ್ದರೂ ಭಾರತೀಯರು ವಾಸಿಸುವಂತಿಲ್ಲ. ದಕ್ಷಿಣಾಫ್ರಿಕದಲ್ಲಿ ಇದಕ್ಕಾಗಿ ನಡೆದ ಸತ್ಯಾಗ್ರಹ ಪ್ರಪಂಚದ ಇತಿಹಾಸದಲ್ಲಿಯೇ ಚಿರಸ್ಮರಣೀಯವಾಗಿ ಉಳಿದೀತು. ಆದರೆ ಆಗೊಮ್ಮೆ ವರ್ಣದ್ವೇಷದ ಹೊಗೆ ಅಲ್ಲಿಗಲ್ಲಿಗೇ ಅಡಗಿತು. ಹಲವರೆಣಿಸಿದ್ದರು ಇನ್ನು ಮುಂದೆ ಆಫ್ರಿಕದಲ್ಲಿ ಅಂಥಾ ಆಕೃತ್ಯ ನಡೆಯಲಾರದ್ದೆಂದು! ಆದರೆ ಈಗ ಆದ ಅವಸ್ಥೆಯೇ ಬೇರೆ. ಮೊನ್ನೆ ಮೊನ್ನೆ ಭಾರತೀಯರ ವಿರುದ್ಧ ದಕ್ಷಿಣ ಆಫ್ರಿಕದ ಸರಕಾರ ಒಂದು ಶಾಸನವನ್ನೇ ಮಾಡಿಬಿಟ್ಟಿತು!

ಭಾರತೀಯರು ಸಾಹಸಿಗಳು. ಒಳ್ಳೆ ಉದ್ಯಮಶೀಲರು. ಸಾವಿರಾರು ವರ್ಷಗಳಿಂದಲೇ ಅವರು ಇಲ್ಲಿಂದ ಹೋಗಿ ದಕ್ಷಿಣ ಆಫ್ರಿಕವನ್ನೇ ತಮ್ಮ ಮನೆಯಾಗಿ ಮಾಡಿಕೊಂಡಿದ್ದಾರೆ. ವ್ಯಾಪಾರೋದ್ಯಮಗಳಲ್ಲಿ ವಿಜಯಿಗಳಾಗಿದ್ದಾರೆ. ಅವರಲ್ಲಿ ಹಲವರಲ್ಲಿ ತುಂಬಾ ಐಶ್ವರ್ಯವೂ ಆಗಿದೆ. ಅವರು ಅಲ್ಲಿ ಆಸ್ತಿ ಕೊಂಡುಕೊಳ್ಳುತ್ತಾರೆ. ಇದನ್ನು ನೋಡಿ ಬಿಳಿ ಮಂದೆಗೆ ಹೊಟ್ಟೆಕಿಚ್ಚು ಸಹಿಸಲಿಲ್ಲ! ಹೀಗೆ ಮಾಡಿದರೆ ಭಾರತೀಯರು ದಕ್ಷಿಣಾಫ್ರಿಕದಲ್ಲಿ ಮುಂದೆ ಪ್ರಭಾವಶಾಲಿಗಳಾಗುತ್ತಾರೆಂದು ಅವರ ಅಂಜಿಕೆ. ಪ್ರಭಾವಶಾಲಿಗಳಾಗಿ ಯಾಕೆ ಆಗಬಾರದೋ ನಮಗೆ ತಿಳಿಯದು. ಈ ಬಿಳಿ ಮಂದೆ ಭಾರತದಲ್ಲಿಯೇ ಬಂದು ನೆಲಸಿ, ಇಲ್ಲಿನ ವ್ಯಾಪಾರೋದ್ಯಮವನ್ನೆಲ್ಲಾ ಕೈಯಲ್ಲಿ ಇಟ್ಟುಕೊಳ್ಳುವುದನ್ನು ಇಲ್ಲಿನ ಭೂಮಿ ಸೊತ್ತು ಪಡೆಯುತ್ತಿರುವುದನ್ನು ಭಾರತೀಯರು ಸಹಿಸುತ್ತಿಲ್ಲೇನು? ಅಥವಾ ತಮ್ಮ ಕೈಯಲ್ಲಿ ಅಧಿಕಾರ ಉಂಟೆಂದು ಹೀಗೆ ಮಾಡುವುದೆ? ಇನ್ನು ಮುಂದೆ ಯೂರೋಪಿಯನ್ ವಸತಿಯಲ್ಲಿ ಭಾರತೀಯರ ಆಸ್ತಿ ಪಡಕೊಳ್ಳಕೂಡದೆಂದು ದಕ್ಷಿಣ ಆಫ್ರಿಕದಲ್ಲೀಗ ಶಾಸನವನ್ನೇ ಮಾಡಿದ್ದಾರೆ! ಇದು ಅನ್ಯಾಯವಾಯಿತೆಂದು ಅಖಿಲ ಭಾರತವೇ ನಿಷೇಧಿಸಿದೆ, ಭಾರತದ ಸರಕಾರವೂ (ಬಾಯಿಯಲ್ಲಿ) ನಿಷೇಧ ಸೂಚಿಸಿದೆ ಆದರೆ ಇಂಥಾ ಶಾಸನ ಮಾಡದಂತೆ, ಮಾಡಿದರೂ ರದ್ದಾಗುವಂತೆ ನಮ್ಮನ್ನಾಳುವ ಬ್ರಿಟಿಷ್ ಸರಕಾರಕ್ಕೆ ಮಾಡಬಹುದಲ್ಲಾ? ಬ್ರಿಟಿಷ್ ಸರಕಾರವಾದರೂ ಬಿಳಿ ಮಂದೆಗಳದು ತಾನೆ?

ಅಂತೂ ಬಿಳಿ ಕರಿ ಬಣ್ಣದ ದ್ವೇಷ ಹೀಗೆ ಎಲ್ಲೆಲ್ಲೂ ತಾಂಡವವಾಡುತ್ತಿರುವಾಗ, ಕರಿ ಜನರ ಅಸ್ತಿತ್ವವನ್ನು ಬಿಳಿ ಮಂದೆ ಸಹಿಸುವುದಿಲ್ಲವಾದರೆ, ಈ ಸಲದ ಯುದ್ಧದಲ್ಲಿ ಶಾಂತಿ ವಿಜಯ ದೊರಕಿದರೂ ಈ ವರ್ಣದ್ವೇಷವೇ ಮುಂದಿನ ಒಂದು ಮಹಾ ಯುದ್ಧಕ್ಕೆ—ಮೂರನೆಯ ಮಹಾಯುದ್ಧಕ್ಕೆ—ಖಂಡಿತವಾಗಿ ವಿಷ ಬೀಜವಾದೀತು ಎಂದು ಪ್ರಪಂಚದ ವಿಚಾರವಂತರು, ಮೇಧಾವಿಗಳು ಹೇಳುತ್ತಿದ್ದಾರೆ!

ಇಂಡಿಯಾ ಮಿಲಿಟರಿ ಹೋಟೇಲ್

ಬಲ್ಮಠ ರಸ್ತೆ, ಸಿಟಿ ಬಸ್ ಗ್ಯಾರೇಜ್ ಸಮೀಪ, ಹಂಪನಕಟ್ಟೆ.

ಬನ್ನಿರಿ! 4-7-43ರಿಂದ ಅನುಭವ ಪಡೆಯಿರಿ!!

ಉತ್ತಮ ತರಗತಿಯ ಆನಂದ ನಿಲಯ ಇದೆಂದು ಸ್ವತಃ ಪರೀಕ್ಷಿಸಿರಿ!

ಕಾಫಿ ಮತ್ತು ಊಟವು ಸುಲಭ ದರ ಮತ್ತು ಉತ್ಕೃಷ್ಟ ರೀತಿಯಲ್ಲಿ ದೊರಕುವುದು.

India Military Hotel

Near City Bus Garrage, Balmatta Road, Hampankatta.

Come! From 4-7-43 Try once!

Coffee and Meals can be had on Moderate Charges.

Proprietor: Udipi N. S. Rao, MANGALORE.

ಸಮರಭೂಮಿಯ ಸಂಚಾರ

ತಟಸ್ಥವಾಗಿದ್ದ, ರುದ್ರ ಶಾಂತವಿದ್ದ ರಣಭೂಮಿಗಳೆಲ್ಲಾ ಒಮ್ಮೆಯೇ ಸಿಡಿದು ನಿಂತಂತೆ ಕಾಣುತ್ತದೆ. ಒಮ್ಮೆಲೇ ಮೂರು ರಣಕ್ಷೇತ್ರಗಳಲ್ಲಿಯೂ ಮಹಾಕಾಳಗವಾಗ ತೊಡಗಿದೆ. ಫೆಸಿಫಿಕ್ಕಿನಲ್ಲಿ ಅಮೆರಿಕನರು ಜಪಾನರನ್ನು ವೀರಾವೇಶದಿಂದ ಎದುರಿಸುತ್ತಾರೆ, ರಶ್ಯನರ ಮೇಲೆ ಜರ್ಮನಿ ಒಮ್ಮೆಗೇ ಧಾಳಿಯಿಟ್ಟಿದೆ. ಭೂಮಧ್ಯ ಸಾಗರದಲ್ಲಿ ಬ್ರಿಟಿಷರು ಇಟಲಿಯ ಕಡೆ ಧಾವಿಸುತ್ತಿದ್ದಾರೆ. ಸಿಸಿಲಿ ದ್ವೀಪಕ್ಕೆ ಮುತ್ತಿಗೆ ಹಾಕಿದ್ದಾರೆ. ಹೀಗೆ ಎಲ್ಲಿ ನೋಡಿದರಲ್ಲಿ ಯುದ್ಧವೇ. ಯುದ್ಧ! ನೌಕಾಯುದ್ಧ, ವಿಮಾನ ಯುದ್ಧ, ಟೇಂಕು ಯುದ್ಧ, ಹಸ್ತಾಹಸ್ತಿ ಕೇಶಾಕೇಶಿಯಾಗಿಯೂ, ಶತ್ರುಸೇನೆ ಮಿತ್ರಸೇನೆಗಳು ಹೋರಾಡುತ್ತವೆ. ಕೆಲಕಾಲ ಸುಮ್ಮಗಿದ್ದು, ಸಾಕಷ್ಟು ವಿಶ್ರಾಂತಿ ಪಡೆದು, ಬೇಕಾದಷ್ಟು ಸಿದ್ಧತೆ ಮಾಡಿ ಉಭಯಪಕ್ಷದವರೂ ಈಗ ಸಂಗ್ರಾಮರಂಗಕ್ಕೆ ಇಳಿದಿರುವರು.

ರಶ್ಯದಲ್ಲಿ ಘೋರ ಸಂಗ್ರಾಮ

ಕೆಲಕಾಲದಿಂದ ರಶ್ಯದ ರಣರಂಗ ತಟಸ್ಥವಿತ್ತು. ಮಿತ್ರರು ಇಟಲಿಯ ಕಡೆಗೆ ಭರದಿಂದ ಮುನ್ನಡೆಯುತ್ತಿರುವುದರಿಂದಲೂ, ಯೂರೋಪಿನ ಪರಿಸ್ಥಿತಿ ವಿಷಮವಿಲ್ಲಬಹುದಾದ್ದರಿಂದಲೂ ಹಿಟ್ಲರನು ಈ ಸಲ ಆ ಕಡೆ ಹೆಚ್ಚು ಗಮನ ಕೊಡಬಹುದೆಂದೂ ರಶ್ಯನ್ ರಣರಂಗ ತೀವ್ರವಾಗುವುದಿಲ್ಲವೆಂದೂ ಹಲವರು ಊಹಿಸಿದ್ದರು. ಈ ಮಧ್ಯೆ ಜಪಾನಿನ ಮೂಲಕ ರಶ್ಯ ಜರ್ಮನಿಗಳೊಳಗೆ ಸಂಧಾನ ಪ್ರಯತ್ನವಾಗುತ್ತದೆಂದೂ ಬಲವಾದ ವಾರ್ತೆಯೊಂದು ಹರಡಿತ್ತು. ಆದರೆ ಜರ್ಮನರು ಕಳೆದ ತಾ. ೫ರಂದು ಒಮ್ಮೆಲೇ ರಶ್ಯದ ಮೇಲೆ ಪ್ರಬಲ ಧಾಳಿ ಕೈಕೊಂಡದ್ದರಿಂದ ಮೇಲಿನ ಊಹಾಪೋಹೆಗಳೆಲ್ಲಾ ಬಯಲಾದವು. ಬಯಲ ಗ್ರಾಡದಲ್ಲಿ ಭೀಷಣ ಟೇಂಕ್ ಕಾಳಗ ನಡೆಯಿತು. ಮೂರು ದಿಕ್ಕಿನಿಂದಲೂ ಜರ್ಮನ್ ಸೈನ್ಯಗಳು ಸುಮಾರು ೨೦೦ ಮೈಲು ವಿಸ್ತಾರದ ರಣಭೂಮಿಯಲ್ಲಿ ಮುನ್ನುಗ್ಗಿದವುದವು. ಒರೆಲ್, ಕುರ್ಸ್ಕ್, ಬೆಲೂಕಿ ಲುಕಿ, ಮತ್ತು ಬಯಲ ಗ್ರಾಡ ಈ ಎಲ್ಲಾ ಭಾಗಗಳಲ್ಲಿಯೂ ಒಮ್ಮೆಲೇ ಸಂಗ್ರಾಮವು ವಿಷಮವಾಗುತ್ತಾ ಬಂತು. ಕಳೆದ ೧೦೧ ದಿನಗಳಿಂದ ಶಾಂತವಾಗಿದ್ದ ರಶ್ಯನ್ ರಣಭೂಮಿಯಿಂದು ಒಮ್ಮೆಗೇ ರುದ್ರವಾಗಿದೆ! ರಶ್ಯನರು ವೀರಾವೇಶದಿಂದ ಶತ್ರುವನ್ನು ಪ್ರಬಲವಾಗಿ ಪ್ರತಿಭಟಿಸುತ್ತಿದ್ದಾರೆ.

'ಯೂರೋಪಿನ ಮೇಲೆ ಧಾಳಿಯಿಡುತ್ತೇವೆ, ಧಾಳಿಯಿಟ್ಟೆವು' ಎಂದು ಮಿತ್ರರು ಬೆದರಿಸುತ್ತಿದ್ದಂತೆ, ಹಿಟ್ಲರನು ರಶ್ಯದ ಆಕ್ರಮಣವನ್ನು ಆರಂಭಿಸಿಯೇ ಬಿಟ್ಟದ್ದನ್ನು ನೋಡಿ ಹಲವರೀಗ ದಿಗಿಲುಗೊಂಡಿದ್ದಾರೆ. ಟ್ಯುನಿಸಿಯಾ ಕಾಳಗ ಮುಗಿಯುವ ಮುನ್ನ ರಶ್ಯವನ್ನು ಕೊನೆಗಾಣಿಸಿ ಮಿತ್ರರನ್ನು ಯೂರೋಪಿನಲ್ಲಿ ಎದುರಿಸಬೇಕೆಂದು ಹಿಟ್ಲರನು ಹವಣಿಸಿದನೇನೋ ಸರಿ. ಆದರೆ ಟ್ಯುನಿಸಿಯಾ ಯುದ್ಧ ಬೇಗನೇ ಮುಗಿಯಿತು. ಹಾಗಾಗಿ ಯೂರೋಪಿಗೆ ಹಿಟ್ಲರನು ತನ್ನ ಸೈನ್ಯದ ಸ್ವಲ್ಪ ಭಾಗವನ್ನು ಕಳುಹಿಸಲೇ ಬೇಕಾಯಿತು. ಹೀಗೆ ಜರ್ಮನ್ ಸೇನೆ ಎರಡು ಕಡೆಗಳಲ್ಲಿ ಹರಿಹಂಚಾಗಿರುವಾಗ, ಮಿತ್ರರು ಇನ್ನಾದರೂ ಯೂರೋಪಿಗೆ ಧಾಳಿಯಿಟ್ಟೇ ತೀರುವೆವೆಂದು ಅಬ್ಬರಿಸುತ್ತಿರುವಾಗ, ಹಿಟ್ಲರನು ರಶ್ಯದ ಮೇಲೆ ಪುನರಾಕ್ರಮಣ ಕೈಕೊಂಡದ್ದು ನ್ಯಾಯವೇ ಎಂದು ಹಲವರು ಸಂಶಯ ಪಡುತ್ತಾರೆ! ಆದರೆ ಎರಡು ಕಡೆಗಳಲ್ಲಿಯೂ ಹೊಡೆತ ಬಿದ್ದರೂ, ಅದನ್ನೆದುರಿಸಲು ಹಿಟ್ಲರನು ತಯಾರಾಗಿಯೇ ಇರುವನೆಂದೂ ಇದರಿಂದ ಅರ್ಥ ಮಾಡಿಕೊಳ್ಳಲೂ ಆಗುತ್ತದೆ.

ಸಿಸಿಲಿ ಮೇಲೆ ಮುತ್ತಿಗೆ

ಬ್ರಿಟಿಷ್, ಅಮೆರಿಕನ್ ಮತ್ತು ಕೆನೆಡಿಯನ್ ಸೈನ್ಯಗಳು ಸಿಸಿಲಿಯಲ್ಲಿ ತಾ. 10ರಂದು ಬಂದಿಳಿದು ಮುತ್ತಿಗೆ ಹಾಕಿ ಮುಂದೊತ್ತುತ್ತಿವೆ. ಸಿಸಿಲಿಯಲ್ಲಿದ್ದ ಜರ್ಮನ್ ಮತ್ತು ಇಟಲಿಯನ್ ಬಲವು ಪ್ರತಿಭಟನೆ ಕೊಡುತ್ತಿರುವುದು. ಮಿತ್ರ ಸೈನ್ಯಗಳು ಮೊದಲು ಸಿಸಿಲಿಯ ಪಶ್ಚಿಮ ಕರಾವಳಿಯಲ್ಲಿ ಬಂದಿಳಿದವು. ಸೇನಾಪತಿ ಐಸೆನ್ ಹಾವರು ಮಿತ್ರಪಕ್ಷದ ಸೇನಾನಿಯಾಗಿದ್ದಾರೆ. ಯೂರೋಪನ್ನು ಬಂಧಮುಕ್ತಮಾಡಲು, ಇದು ಪ್ರಥಮ ಹೆಜ್ಜೆಯೆಂದೂ, ಆದ್ದರಿಂದ ಫ್ರೆಂಚರು ಗಾಬರಿಯಾಗದೆ ಶಾಂತರಾಗಿ ವರ್ತಿಸಬೇಕೆಂದೂ ಐಸೆನಾ ಹಾವರು ಫ್ರೆಂಚರಿಗೆ ಬಿನ್ನವಿಸಿದ್ದಾರೆ. ಇದೇ ರೀತಿ ಗ್ರೀಕ್ ಮತ್ತು ಯುಗಸ್ಲಾವಿಯದ ಜನರಿಗೂ ವಿನಂತಿಸಲಾಗಿದೆ. ಸಿಸಿಲಿಯ ಮೇಲೆ ಧಾಳಿಯಾಗುವುದು ಖಂಡಿತವೆಂದು ಗೊತ್ತಿದ್ದರಿಂದ ಇದನ್ನು ಭದ್ರವಾದ ಕೋಟೆಯಾಗಿ ಮಾಡಿದ್ದಾರೆ. ಆದ್ದರಿಂದ ಇಲ್ಲಿ ಮಿತ್ರರಿಗೆ ಬಲವಾದ ಪ್ರತಿಭಟನೆ ದೊರಕುವುದು.

ಸಿಸಿಲಿ ದ್ವೀಪದ ಪಶ್ಚಿಮ ಕರಾವಳಿ ಮೈದಾನು ಪ್ರದೇಶವಾಗಿದೆ. ಆದರೆ ಒಳಗೆ ಹೋದಂತೆ ಗುಡ್ಡಗಾಡು ಪ್ರದೇಶವಿರುವುದು. ಅತಿ ಮುಖ್ಯವಾದ ಸೈನಿಕ ಕೇಂದ್ರಗಳು, ವಿಮಾನ ನಿಲ್ದಾಣಗಳು ಪಶ್ಚಿಮ ಕರಾವಳಿಯಲ್ಲಿವೆ. ಸಿಸಿಲಿ ಮತ್ತು ಇಟಲಿ ನಡುವೆ ಮೆಸ್ಸಿನಾ ಸಾಮುದ್ರಧಾನಿಯಿದೆ. ಒಂದು ಕಡೆಯಲ್ಲಿ ಇದು ಕೇವಲ ಎರಡು ಮೈಲು ಅಂತರವಿರುವುದು. ಭೂಮಧ್ಯ ಸಮುದ್ರದಲ್ಲಿ ಸಿಸಿಲಿಯೇ ದೊಡ್ಡದ್ವೀಪ. ಅದಾಗಿ ಇದು ಮುಸಲನಿಗೆ ಅತೀವ ಮಹತ್ವದ್ದಾಗಿದೆ. ಇದರ ವಿಸ್ತಾರವು ೧೦,೦೦೦ ಚದರ ಮೈಲು. ೧೮೬೧ರಿಂದಲೂ ಇದು ಇಟಲಿಯ ಅಧೀನವೇ ಇದೆ. ಇಲ್ಲಿ ೪೦ ಲಕ್ಷ ನಿವಾಸಿಕರಿರುವರು. ಇವರೆಲ್ಲ ಒಕ್ಕಲಿಗರು. ಇಟಲಿಗೆ ಬೇಕಾದ ಗಂಧಕಗಳಲ್ಲಿ ನೂರಕ್ಕೆ ೯೦ರಷ್ಟು ಇಲ್ಲಿಂದಲೇ ಹೋಗುತ್ತದೆ.

ಸಿಸಿಲಿಯಲ್ಲಿ ಈಗ ಇಳಿದ ಮಿತ್ರ ಸೈನಿಕರು ಘೋರ ಮತ್ತು ದೀರ್ಘಕಾಲದ ಹೋರಾಟವನ್ನೆದುರಿಸಬೇಕಾಗುವುದು. ಮದ್ದು, ಗುಂಡು, ಆಹಾರ ಸಾಮಗ್ರಿ ಇವುಗಳನ್ನೆಲ್ಲಾ ಶತ್ರು ಪ್ರತಿಭಟನೆಯ ವಿರುದ್ಧ ಒಂದು ಖಂಡದಿಂದ ಇನ್ನೊಂದು ಖಂಡಕ್ಕೆ ಒಯ್ಯುವುದು ಕಠಿಣವಾಗುವುದು. ಸಿಸಿಲಿಯಲ್ಲಿ ಬೆಟ್ಟದ ಪ್ರದೇಶವಿದೆ. ಇಲ್ಲಿ ಸೇನಾಪತಿ ಗುಯೋನಿಯ ಕೈಕೆಳಗೆ ಇಟಲಿಯನರ ಆರನೇ ಸೈನ್ಯವಿದೆ. ಇನ್ನಿಳಿದ ೧೦ ಡಿವಿಜನುಗಳು ಮುಖ್ಯ ಸೈನ್ಯವನ್ನಿದಿರಿಸುವವು. ಜರ್ಮನರ ೧ ಲಕ್ಷ ಸೇನೆ ಇಲ್ಲಿದೆ. ಇದರಲ್ಲಿ ಮುಖ್ಯವಾಗಿ ವೈಮಾನಿಕರು ಹಲವರಿರುವರು. ಸಿಸಿಲಿಗೆ ಶತ್ರುಗಳು ಹೊಸ ಸಹಾಯವನ್ನು ಸಮುದ್ರ ಇಲ್ಲವೇ ವಿಮಾನದಿಂದ ಮಾತ್ರ ತರಬೇಕು. ಸಮುದ್ರದಲ್ಲಿ ಮಿತ್ರ ನೌಕೆಗಳನ್ನೆದಿರಿಸುವ ಸಂಕಷ್ಟ ಇವರಿಗೂ ಇದೆ. ವಿಮಾನ ಮಾರ್ಗವಾಗಿ ತರುವುದು ಮತ್ತಷ್ಟು ಕಠಿಣ. ಆದ್ದರಿಂದ ಈಗಿರುವ ಸಂಗ್ರಹದಲ್ಲಿಯೇ ಸಂಗ್ರಾಮವನ್ನು ಮುಂದುವರಿಸಬೇಕಾಗಿದೆ. ನೇಪಲ್ಸ್‌ನ ದಕ್ಷಿಣದಲ್ಲಿ ಕಾದಿಟ್ಟ ಇಟಲಿಯನ್ ಜರ್ಮನ್ ಸೇನೆಗಳಿವೆಯೆಂದು ಅಧಿಕೃತ ಸುದ್ದಿಯಿದೆ.

WANTED

Secondary Grade Trained Teachers for

1. Belman St. Joseph's H. E. School.
2. Chelur St. Thomas H. E. School.
3. Modankap H. E. School, Bantwal.
4. Kolalgiri St. Xavier's H. E. School.
5. Madantar Guardian Angel's H. E. School.
6. Brahmavar Girls H. E. School.
7. Kallamundkur L.F. Ele. School Niddodi.
8. Paduvery Holy Cross Ele. School Byndoor.
9. Calvary St. Joseph's Ele. School Mangalore.
10. Basrur R. C. Girls' School.
11. Ulla Girls' Ele School Mangalore.

Higher grade Trained Teachers for

1. Iddya Sacred Heart Ele. School.
2. Paduvery Holy Cross Ele. School Byndoor.
3. Agrar Church H. E. School.

THE

Canara Industrial & Banking Syndicate, Ltd.

(Incorporated in British India. Liability of Shareholders limited).

Estd.) — Head Office: UDIPI, S. India. (1925.

Authorised Capital	Rs. 56,00,000
Subscribed Capital	Rs. 32,10,987
Paid Up Capital	Rs. 12,05,796
Reserves	Rs. 3,50,461/12
Deposits	over 65 Lakhs.
Resources	over one Crore.

Savings Bank Accounts are opened and interest allowed. Withdrawals by cheques. Accounts transferred from one Branch to another free of charge. Enquire for rules.

Cheques & Drafts are issued on numerous places and Bills etc. negotiated on terms which will be quoted on enquiry.

Advances made at low rates of interest against gold, Government Securities, approved shares, accepted bills, life insurance policies and marketable goods.

Every business received quick and courteous attention.

ANDREWS
LIVER SALT
ಏಂಡ್ರೂಸ್ ಲಿವರ್‌ಸಾಲ್ಟ್
ಆರೋಗ್ಯಪಾನೀಯ — ವಿರೇಚಕ

ಯುದ್ಧದ ದೆಸೆಯಿಂದಾಗಿ 'ಎಂಡ್ರೂಸ್ ಲಿವರ್‌ಸಾಲ್ಟ್' ಈಗ ದೊರಕುವುದಿಲ್ಲವೆಂಬುದು ವಿಷಾದಕರವಿದೆ, ಆದರೆ ಅಂತರ್ರಾಷ್ಟ್ರೀಯ ಪರಿಸ್ಥಿತಿ ಸುಧಾರಿತವಾದ ಕೂಡಲೇ ಇದು ಖಂಡಿತ ದೊರಕುವುದು.

ಸ್ವದೇಶಾಭಿಮಾನಿ

ತಾರೀಕು 16—7—1943

ಆಗಸ್ಟ್ ನಿರ್ಣಯದ ವಿಚಾರವಾಗಿ

ಬೊಂಬಯಿಯಲ್ಲಿ ಕಳೆದ ಆಗಸ್ಟ್ ತಿಂಗಳಲ್ಲಿ ಅಖಿಲಭಾರತ ಕಾಂಗ್ರೆಸ್ ಕಮಿಟಿಯ ಸಭೆ ಸೇರಿ ಮಾಡಿದ ನಿರ್ಣಯ, ಅದರ ಪ್ರತಿಕ್ರಿಯೆಯಾಗಿ ಎಷ್ಟೋ ಮಂದಿ ಕಾಂಗ್ರೆಸ್ ಮುಖಂಡರು ಸೆರೆಮನೆಗೂ ಸೇರಿಸಲ್ಪಟ್ಟದ್ದು, ಆ ಮೇಲೆ ದೇಶ ಸರ್ವತ್ರ ಉಂಟಾದ ಮಹಾ ಕೋಲಾಹಲ ಇವೆಲ್ಲವೂ ಈಗ ಜಗಜ್ಜಾಹಿರವಾದ ವಿಷಯಗಳಾಗಿವೆ. ಇದರಿಂದೆಲ್ಲಾ ಕಾಂಗ್ರೆಸಿನವರು ಸದ್ಯ ಏನೂ ರಚನಾತ್ಮಕ ಚಟುವಟಿಕೆಯಿಲ್ಲದೆ ಸುಮ್ಮಗಿದ್ದಾರೆ. ಮುಂದೇನು ಮಾಡುವುದೆಂದು ಯಾರಿಗೂ ಗೊತ್ತಿಲ್ಲ. ಆದ್ದರಿಂದ ಸೆರೆಮನೆಗೆ ಹೋಗಿ ಮರಳಿದ ಹಾಗೂ ಸೆರೆಮನೆಯ ಹೊರಗಿರುವ ಎ. ಐ. ಸಿ. ಸಿ. ಸದಸ್ಯರು ಸಾಕಷ್ಟು ಮಂದಿ ಇರುವುದರಿಂದ ಅವರು ಸಭೆ ಕರೆದು ಆಗಸ್ಟ್ ನಿರ್ಣಯವನ್ನು ಹಿಂತೆಗೆಯಬೇಕು ಎಂಬ ವಿಚಾರವಾಗಿ ಈಗ ವಾದ ವಿವಾದಗಳಾಗುತ್ತಿದೆ.

ಆಗಸ್ಟ್ ನಿರ್ಣಯವನ್ನು ಹಿಂತೆಗೆಯದೆ ಕಾಂಗ್ರೆಸಿನವರನ್ನು ಬಿಡುವುದೂ ಇಲ್ಲ; ಸಂಧಾನಕ್ಕೆ ಮಾರ್ಗವನ್ನು ಮಾಡುವುದೂ ಸಾಧ್ಯವಿಲ್ಲವೆಂದು ಸರಕಾರ ಖಂಡಿತ ಮಾಡಿದ್ದರಿಂದಲೂ, ಈಗಿನ ಪರಿಸ್ಥಿತಿ ಬದಲಾಗಿರುವುದರಿಂದಲೂ ಆ ನಿರ್ಣಯವನ್ನು ಹಿಂದೆಗೆದು ಸಂಧಾನ ಮಾರ್ಗವನ್ನು ಕಲ್ಪಿಸಿ ಕಾಂಗ್ರೆಸಿನವರು ರಾಷ್ಟ್ರದ ಆಹಾರ ಸಮಸ್ಯೆ ಮೊದಲಾದ ವಿಷಯಗಳಲ್ಲಿ ಗಂಭೀರ ವಿಚಾರ ಮಾಡಬೇಕಾಗಿದೆಯೆಂದೂ ಇದರಿಂದ ಗಾಂಧಿಜಿ ಹಾಗೂ ಕಾಂಗ್ರೆಸಿನ ವಿರುದ್ಧ ತಾನು ದಂಗೆಯೇಳಲು ಸೂಚನೆಯಿತ್ತುದಲ್ಲವೆಂದೂ ಗಾಂಧಿಜಿಯವರೇ ವೈಸರಾಯರಿಗೆ ಬರೆದ ಪತ್ರದಲ್ಲಿ ಸ್ಪಷ್ಟೀಕರಿಸಿದ್ದನ್ನು ನಾವು ಸೆರೆಮನೆಯಿಂದ ಹೊರಗಿರುವವರು ಈ ಮೂಲಕ ಮಾಡಬೇಕಾಗಿದೆಯೆಂದೂ ಈ ಸೂಚನೆಯನ್ನು ಮಂಡಿಸಿದ ಶ್ರೀ. ವಾತ್ಸವರು ತಿಳಿಸುತ್ತಾರೆ. ಶ್ರೀ. ಮುನ್ಷಿಯವರು ಬೆಂಬಲವೀಯುತ್ತಾ, ಸೆರೆಮನೆಯ ಹೊರಗಿರುವ ರಾಷ್ಟ್ರಾಭಿಮಾನಿಗಳೆಲ್ಲರೂ ಈಗ ಕೈಕಟ್ಟಿರಬಾರದೆಂದೂ, ಆಹಾರ ಸಮಸ್ಯೆ ಮಾತ್ರವಲ್ಲದೆ ಸಂಭವವಿರುವ ಜಪಾನ್ ಆಕ್ರಮಣದ ವಿಚಾರವಾಗಿಯೂ ದೇಶದಲ್ಲಿ ಸಂಘಟನೆ ಬೇಕಾಗಿರುವುದರಿಂದ ಆಗಸ್ಟ್ ನಿರ್ಣಯವನ್ನು ಹಿಂತೆಗೆಯುವುದು ನ್ಯಾಯವೆಂದೂ, ಅದಾಗದಿದ್ದರೆ 'ಸ್ವರಾಜ್ಯ ಪಕ್ಷ'ವನ್ನು ಪುನರುಜ್ಜೀವಿಸಿ ಸದ್ಯದ ಪರಿಸ್ಥಿತಿಗೆ ಬೇಕಾದ ಕಾರ್ಯಕ್ರಮ ಕೈಕೊಳ್ಳಬೇಕೆಂದೂ ವಾದಿಸಿದ್ದಾರೆ.

ಇವರ ವಿರುದ್ಧ ಪಕ್ಷದವರ ವಾದ ಹೀಗಿದೆ. 'ಆಗಸ್ಟ್ ನಿರ್ಣಯವು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಪ್ರಚಂಡ ಬಹುಮತದಿಂದ ಆಗಿದೆ. ಅದರ ಕಾರ್ಯಭಾರ ನಿರ್ವಹಿಸಲು ಗಾಂಧಿಜಿಯವರಿಗೆ ಮುಂದಾಳುತನ ಒಪ್ಪಿಸಿದೆ. ಜಿನ್ನರೂ ವೈಸರಾಯರೂ, ಗಾಂಧಿಜಿಯೊಡನೆ ಆಗಸ್ಟ್ ನಿರ್ಣಯವನ್ನು ಹಿಂತೆಗೆಯಿರಿ ಎಂದು ಹೇಳಿದ್ದರೂ, ಗಾಂಧಿಜಿ ಹಾಗೆ ಮಾಡಿಲ್ಲ. ಅಥವಾ ಆ ನಿರ್ಣಯವನ್ನು ಹಿಂದೆಗೆಯುವುದಾದರೂ, ವರ್ಕಿಂಗ್ ಕಮಿಟಿಯೊಡನೆ ಮಾತುಕತೆ ನಡೆಸಿ ಗಾಂಧಿಜಿ ಒಬ್ಬರು ಮಾತ್ರ ಹಾಗೆ ಮಾಡಬಲ್ಲರು. ಜನತೆಗೆ ಎಂದಿನಂತೆ ಗಾಂಧಿಜಿ ಧುರೀಣತ್ವದಲ್ಲಿ ಇಂದೂ ವಿಶ್ವಾಸವಿದೆ. ದೇಶದಲ್ಲಿ ನಡೆದ ವಿಧ್ವಂಸಕ ಕಾರ್ಯವನ್ನು ತಾನು ಒಪ್ಪುವುದಿಲ್ಲ ಗಾಂಧಿಜಿ ಹೇಳಿದ್ದರೂ, ಪರಿಸ್ಥಿತಿಯನ್ನು ಪುನರ್ವಿಮರ್ಶಿಸಬೇಕಾದರೆ ನನ್ನನ್ನು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರನ್ನು ಜತೆಗೂಡಿಸಿರೆಂದು ಗಾಂಧಿಜಿ ಸೂಚಿಸಿದ್ದರೂ ಸರಕಾರ ಸಂಧಾನದ ದಾರಿ ಮಾಡಿಕೊಡದಿರುವಾಗ, ಆಗಸ್ಟ್ ನಿರ್ಣಯವನ್ನು ನಾವೀಗ, ಹಿಂದಗೆದರೆ ಗಾಂಧಿಜಿಗೆ ಅಪಮಾನ ಮಾಡಿದಂತೆಯೂ ಸರಕಾರಕ್ಕೆ ಕೇವಲ ಶರಣು ಬಂದಂತೆಯೂ ಆಗುತ್ತದೆ.'

ಹೀಗೆ ಎರಡು ಪಕ್ಷಗಳವರು ವಾದವಿವಾದಗಳಿಗೆ ತೊಡಗಿದ್ದಾರೆ. ಗಾಂಧಿಜಿಯವರು ವೈಸರಾಯರೊಡನೆ ಈಗ ಪತ್ರ ವ್ಯವಹಾರ ಮಾಡುತ್ತಿದ್ದು, ಅದರಲ್ಲಿ ಆಗಸ್ಟ್ ನಿರ್ಣಯವನ್ನು ಹಿಂದಗೆದಿರುವುದಾಗಿ ತಿಳಿಸಿರುವರೆಂದು ಡಿಲ್ಲಿಯಿಂದ ಒಂದು ಊಹಾ ವಾರ್ತೆ ಬಂದಿದೆ. ಇದನ್ನು ಎಷ್ಟರ ಮಟ್ಟಿಗೆ ನಂಬಬಹುದೋ ತಿಳಿಯದು. ಹೇಗಿದ್ದರೂ ಮುಂದಿನ ಘಟನೆಗಳು ಗಮನಾರ್ಹವಿವೆ.

ಸ್ವದೇಶ ಸಮಾಚಾರ

'ಸತ್ಯಾರ್ಥ ಪ್ರಕಾಶ'ದ ಮೇಲೆ ಸಿಂಧ್ ಸರಕಾರದ ನಿರ್ಬಂಧ!

ಭಾರತದಲ್ಲಿ ಇದೇ ಮೊದಲನೆಯ ಸಲವಾಗಿ, ಆರ್ಯ ಸಮಾಜ ಸ್ಥಾಪಕರಾದ ಸ್ವಾಮಿ ದಯಾನಂದ ಸರಸ್ವತಿಯವರ 'ಸತ್ಯಾರ್ಥ ಪ್ರಕಾಶ' ಗ್ರಂಥದ ಮೇಲೆ ಸಿಂಧ ಸರಕಾರದವರು ನಿರ್ಬಂಧ ಹಾಕಿದ್ದಾರೆ. ಇದರಿಂದ ಅಲ್ಲಿನ ಆರ್ಯ ಮುಂದಾಳುಗಳನ್ನು ರೇಗಿರುವರು. ಈ ಮೂಲಕ ಸರಕಾರವು ಆರ್ಯ ಸಮಾಜದವರನ್ನು ಹೋರಾಟಕ್ಕೆ ಆಹ್ವಾನಿಸಿದಂತಾಗುತ್ತದೆಂದು, ಸಿಂಧದ ಮುಖ್ಯ ಮಂತ್ರಿಗೆ ಅಲ್ಲಿನ ಆರ್ಯ ಮುಖಂಡರು ತಂತಿ ಕಳುಹಿಸಿ, ನಿರ್ಬಂಧವನ್ನು ಹಿಂತೆಗೆಯಲು ಕೇಳಿಕೊಂಡಿರುವರು.

ಇಂದೋರ ಮಹಾರಾಜರ ಪ್ರಣಯ ಲೀಲೆ!

ಮೊನ್ನೆ ಮೊನ್ನೆ ಅಮೆರಿಕನ್ ಹೆಂಡತಿಯೋರ್ವಳೊಡನೆ ವಿವಾಹ ವಿಚ್ಛೇದ ಮಾಡಿಕೊಂಡ ಇಂದೋರ ಮಹಾರಾಜರು ಮಿಸೆಸ್ ಯು ಫೇಮಿಯಾಕ್ರೇನ್ ಎಂಬ ಇನ್ನೋರ್ವ ಬಿಳಿ ಹೆಂಗುಸಿನೊಡನೆ ವಿವಾಹಮಾಡಿಕೊಂಡಿದ್ದಾರೆ. ಇವಳೂ ಮೊದಲಿನ ಗಂಡನೊಡನೆ ವಿವಾಹವಿಚ್ಛೇದ ಮಾಡಿಕೊಂಡಾಕೆ. ನವ-ದಂಪತಿಗಳು ಪ್ರಣಯ ಲೀಲೆಗಾಗಿ ಈಗ ಕೆಲಿಫೋರ್ನಿಯಕ್ಕೆ ತೆರಳಿದ್ದಾರೆ.

ಮಣಿಲಾಲ ಗಾಂಧಿಯ ಮೇಲೆ ಮಾನಹಾನಿ ಖಟ್ಲೆ

ಟ್ರಾನ್ಸ್‌ವಾಲ್ ಭಾರತೀಯ ಕಾಂಗ್ರೆಸ್ ಕಾರ್ಯದರ್ಶಿ ಸುಲೆಮಾನ್ ಮಹಮ್ಮದರು "ಇಂಡಿಯನ್ ಇಪೀನಿಯನ್" ಪತ್ರಿಕೆಯ ಒಡೆಯರಾದ ಗಾಂಧಿಜಿ ಪುತ್ರ ಶ್ರೀ. ಮಣಿಲಾಲ ಗಾಂಧಿ ಮೇಲೆ ಮಾನಹಾನಿ ಮೊಕದ್ದಮೆ ಹೂಡಿರುವರು.

ಆಣೆಯವರು ಪುನಃ ಸರಕಾರೀ ಕೆಲಸ

ವನ್ನು ಸ್ವೀಕರಿಸಿದ್ದಾರೆ. ಸಿಲೋನಿನಲ್ಲಿ ಭಾರತದ ರಾಯಭಾರಿಯಾಗಿ ಇವರನ್ನು ಸರಕಾರವು ನೇಮಿಸಿದೆ. ಮಹಾತ್ಮರ ಮಹೋಪವಾಸದ ಸಂದರ್ಭ ಇವರು ಮೋಡಿ ಸರಕಾರರೊಂದಿಗೆ ವೈಸರಾಯ್ ಕಾರ್ಯಕಾರೀ ಮಂಡಳದ ಸದಸ್ಯತ್ವಕ್ಕೆ ರಾಜಿಯಿತ್ತು ಹೊರಬಂದವರು.

ಸೈನ್ಯದಲ್ಲಿ ಭಾರತೀಯರು ಅಮೆರಿ ಹೇಳಿಕೆ.

"ಪಂಜಾಬ್ ಶೇಕಡಾ ೫೦, ೫೦. ಪ್ರಾಂತ ಶೇ. ೧೪, ಮದ್ರಾಸ್ ಶೇ. ೧೦, ಮುಂಬೈ ಶೇ. ೧೦, ಗಡಿನಾಡು ಶೇ. ೫, ಅಜಮೀರ್ ಮತ್ತು ಮಾರವಾಡ ಶೇ. ೩, ಬಂಗಾಳ ಶೇ. ೨, ಮಧ್ಯಪ್ರಾಂತ, ಬಿಹಾರ್, ಆಸಾಮ್ ಮತ್ತು ಒರಿಸಾ ಶೇ. ೫, ನೇಪಾಳ ಶೇ. ೮, ಹೀಗೆ ಪ್ರಾಂತಗಳಿಂದ ಸೈನ್ಯಕ್ಕೆ ಸೇರಿದ್ದಾರೆ. ಮುಸಲ್ಮಾನರು ಶೇ. ೩೪, ಘೂರ್ಕರು ಸಹಿತ ಹಿಂದುಗಳು ಶೇ. ೫೦, ಶೀಖರು ಶೇ. ೧೦ ಮತ್ತು ಉಳಿದವರು ಕ್ರಿಶ್ಚಿಯನರು ಸಹ ಶೇ. ೬ ಹೀಗೆ ಸೈನ್ಯದಲ್ಲಿದ್ದಾರೆ" ಎಂದು ಅಮೆರಿ ತಿಳಿಸಿದ್ದಾರೆ. ೧೯೪೨-೪೩ರಲ್ಲಿ ೩,೬೪,೦೦೦ ಪೌಂಡುಗಳನ್ನು ೭೪೦೪ ಬ್ರಿಟಿಷ್ ಸೈನಿಕರಿಗೆ (ನಿವೃತ್ತ ಭಾರತ ನೌಕರರು) ವಿರಾಮ ವೇತನ ಕೊಡಲಾಯಿತು, ಇದಲ್ಲದೆ ಬ್ರಿಟಿಷ್ ಸೈನಿಕರು ಭಾರತದಲ್ಲಿ ಕೆಲಸಮಾಡಿದ ಬಗ್ಗೆ ೧೦ ಲಕ್ಷ ಪೌಂಡು ಕೊಡಲಾಗಿದೆಯೆಂದೂ ಅಮೆರಿ ಹೇಳಿದರು.

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S. C. ನಂಬ್ರ 724/42.
S. E. P. ನಂಬ್ರ 249/43.

1. ಜರ್ಟ್ರೂದ್ ಸಿಲ್ವ — ವಾದಿ
2. ಲೊರೆನ್ಸ್‌ರ ಪಾಯಲ್ ಮಾರ್ತಿನ್ ಸಿಕೇರ, ಅಂತೋನಿ ಸಿಕೇರರ ಮಗ—ಕದ್ರಿ ಗ್ರಾಮದ ಕೆಳಗಿನ ಬೆಂದೂರು. } ಡಿಕ್ರಿದಾರರು } ಅರ್ಜಿದಾರರು

ಮತ್ತು

ಬಾವತ್ತಿಸ್ ಕುಂಞಾ ಅಂತೋನಿ ಜೋನ್ ಕುಂಞಾರ ಮಗ ಕೊಡಿಯಾಲಬೈಲ್ ಗ್ರಾಮದ ಬಿಜೈಯಲ್ಲಿ ಪೆನ್‌ಶ್ಯಂಡ್ ಪೋಲೀಸ್ ಇನ್ಸ್‌ಪೆಕ್ಟರ್ Mr. ಮಾರ್ಸೆಲ್ ಲೋಬೋರ ಮನೆ ಸಮೀಪ. } ಪ್ರತಿವಾದಿ ರೆಸ್ಪೊಂಡೆಂಟು

ಸದ್ರಿ ಪ್ರತಿವಾದಿ, ರೆಸ್ಪೊಂಡೆಂಟ್ ಬಾವತ್ತಿಸ್ ಕುಂಞಾರಿಗೆ—

1942ನೇ ಇಸ್ವಿ ನಂಬ್ರ 724ನೇ ಸ್ಮಾಲ್ ಕೋಜ್ ವ್ಯಾಜ್ಯದ ಡಿಕ್ರಿಯನ್ನು 1ನೇ ಅರ್ಜಿದಾರಳು 2ನೇ ಅರ್ಜಿದಾರಗೆ ಯಸ್ಸಾನ್‌ಮೆಂಟ್ ಮೂಲಕ ವರ್ಗಮಾಡೋಣಾಗಿಯದೆಂಬ ಸಬಬಿನ ಮೇಲೆ ಸದ್ರಿ ಡಿಕ್ರಿಯ ಅಮಲ್‌ಜ್ಯಾರಿ ಬಗ್ಗೆ ಮೇಲ್ಕಂಡ ಅರ್ಜಿದಾರರು ಮೇಲ್ಕಂಡ ಕೋರ್ಟಿಗೆ ಅರ್ಜಿಮಾಡಿಕೊಂಡಿದ್ದಾರೆ. ಆದ್ದರಿಂದ ಅಮಲ್‌ಜ್ಯಾರಿಯನ್ನು ಯಾಕೆ ನಡಿಸಕೂಡದು ಎಂಬುದಕ್ಕೆ ಸಬಬು ತೋರಿಸಲಿಕ್ಕೆ 1943ನೇ ಯಿಸ್ವಿ ಜುಲಾಯಿ 21ನೇ ತಾರೀಕಿನಲ್ಲಿ ಸದ್ರಿ ಮೇಲ್ಕಂಡ ಕೋರ್ಟು ಮುಂದೆ ಸದ್ರಿ ರೆಸ್ಪೊಂಡೆಂಟನು ಹಾಜ್ರಾಗಬೇಕೆಂತ ಇದರಿಂದ ನೋಟೀಸು ಕೊಡೋಣಾಗಿಯದೆ.

ಮಂಗಳೂರು, 14—7—43. } M. A. Shastri, Advocate for Petitioner

ವೃದ್ಧಿಯಿಂದ ಅಭಿವೃದ್ಧಿ.

ಗತ ೧೯೪೨ನೇ ವರ್ಷದಿಂದ ಚಾಲು ೧೯೪೩ನೇ ಪ್ರಾರಂಭದ ಮಾಸಗಳು ಬಹು ಅಪಾಯಗಳಿಂದಲೂ ಹಾಗೂ ಸುಯೋಗಗಳಿಂದಲೂ ತುಂಬಿ ತುಳುಕಿದ್ದವು. ಜಾಣತೆಯಿಂದ ವ್ಯವಸ್ಥೆ ಮಾಡಲ್ಪಟ್ಟ ಸಂಸ್ಥೆಗಳು ಈ ಅಪಾಯಗಳನ್ನು ತಳ್ಳಿ ಸುಸಂದರ್ಭಗಳನ್ನು ಉಪಯೋಗಿಸಿ ತೀವ್ರನೆ ಮುಂದುವರಿದವು.

೧೯೪೦, ೪೧ರಲ್ಲಿ ಕೆನರಾ ಬೇಂಕು ೯೦ ಲಕ್ಷ ಠೇವಣೆಗಳ ಮತ್ತು ಒಂದು ಕೋಟಿ ಸಾಂಪತ್ತಿಕ ಸ್ಥಿತಿಯಲ್ಲಿದ್ದು ಅಂದು ಸಹ ಅದು ವಿಸ್ತೃತ ಸ್ಥಿತಿಯ ಸಂಸ್ಥೆಯಾಗಿತ್ತು. ಇಂದು ಠೇವಣೆಗಳು ಇಮ್ಮಡಿಯಾಗಿವೆ. ಸಾಂಪತ್ತಿಕ ಸ್ಥಿತಿಯು ಎರಡುವರೆ ಕೋಟಿಗೆ ಮಿಕ್ಕಿದೆ. ಹಾಗೂ ತೆತ್ತ ಮೂಲಧನವು ನಾಲ್ಮಡಿಯಾಗಿದೆ.

ಜಾಣತನದ ವ್ಯವಸ್ಥೆಯ ಏರ್ಪಾಟಿನಿಂದಲೂ, ಆತ್ಮ ವಿಶ್ವಾಸದಿಂದಲೂ, ದೃಢಬುದ್ಧಿಯಿಂದಲೂ, ಯೋಗ್ಯ ಸೇವೆಯನ್ನು ಸಲ್ಲಿಸಿದರಿಂದಲೂ, ಇಂದಿನ ಈ ಪ್ರಗತಿಗೆ ಕಾರಣಭೂತರಾದ ಸಾರ್ವಜನಿಕರ ಮೆಚ್ಚಿಗೆಗೆ ಪಾತ್ರರಾಗಿ ಇನ್ನು ಮುಂದಕ್ಕೂ ಮಹತ್ವದ ಸೇವೆಯನ್ನು ಒಪ್ಪಿಸಲು ಸಮರ್ಥರಾಗಲು ನಾವು ಹಾರೈಸುವೆವು.

Canara Bank Limited.
ಕೆನರಾ ಬೇಂಕ್ ಲಿಮಿಟೆಡ್.
... 1906

ಮೃದುವಾದ ಚರ್ಮವನ್ನು ಬಹಳ ಜಾಗ್ರತೆಯಿಂದ ಕಾಪಾಡಬೇಕು

ಕುಟಿಕೂರಾ ಸಾಬೂನು ಮಗುವಿನ ಮೃದುಚರ್ಮವನ್ನು ರಕ್ಷಿಸಲಿ!

ಕುಟಿಕೂರಾ ಸೋಪು
CUTICURA SOAP.

ಜಿಲ್ಲಾ ಸಮಾಚಾರಗಳು

ಮಂಗಳೂರು

ಆಹಾರ ಸರಬರಾಯಿ ವಿಚಾರ

ಮಂಗಳೂರು ಮುನ್ಸಿಪಾಲಿಟಿಯೊಳಗೆ ಅಹಾರ ಸಾಮುಗ್ರಿಗಳು ಸರಿಯಾಗಿ ಸರಬರಾಯಿಯಾಗುವ ಹಾಗೆ ರೇಶನಿಂಗ್ ಹಾಗೂ ವ್ಯಕ್ತಿಪರಿಚಯವನ್ನು ಮಾಡಿಕೊಡುವ ಕಾರ್ಡುಗಳನ್ನು ಹಂಚುವ ಕುರಿತು ಆಲೋಚಿಸಲಿಕ್ಕಾಗಿ ಸ್ಥಳೀಯ ಬೆಂಚ್ ಕೋರ್ಟ್ ಹಾಲಿನಲ್ಲಿ ಈಚೆಗೆ ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಒಂದು ಸಭೆ ನಡೆದ ಹಾಗೂ ಆ ಸಭೆಯಲ್ಲಿ ಸ್ಥಳೀಯ ರೆವಿನ್ಯೂ ಡಿವಿಜನಲ್ ಆಫೀಸರ್, ಸಹಕಾರ ಸಂಘಗಳ ಡೆ॥ ರಿಜಿಸ್ಟ್ರಾರ್, ಜಿಲ್ಲಾ ಕಮರ್ಶಿಯಲ್ ಟ್ಯಾಕ್ಸ್ ಆಫೀಸರ್, ತಹಶಿಲ್ದಾರ್, ಮುನ್ಸಿಪಾಲಿಟಿಯ ಕಮಿಶನರ್, ಮಿಸೆಸ್ ಲೂಸಿ ಕ್ರಿಷ್ಟ ಮೊದಲಾದವರು ಹಾಜರಿದ್ದ ಹಾಗೂ ತಿಳಿದು ಬಂದಿದೆ.

ನೇಮಕಗಳು

ಕುಂದಾಪುರದ ತಹಶಿಲ್ದಾರರಾದ ಮಿ॥ ಜೆ. ಎಲ್. ಡಿ'ಸೋಜ ಅವರು ದ. ಕ. ಕಲೆಕ್ಟರರಿಗೆ ಅಹಾರ ಧಾನ್ಯ (ಫುಡ್‌ಗ್ರೈನ್ಸ್) ಶಾಖೆಯ ಸಹಾಯಕರಾಗಿ ನೇಮಕವಾಗಿರುವರೆಂದು ಹೇಳಲಾಗಿದೆ.

ಜೋಗ್ ಜಲಪಾತದ ಸಂಬಂಧ ಈ ಜಿಲ್ಲೆಗೆ ಶ್ರೀ. ಜಿ. ಕೆಂಪಯ್ಯ ಬಿ ಎ ಅವರನ್ನು ಆರು ತಿಂಗಳಿಗೆ ಸ್ಪೆಶಲ್ ಡೆಪ್ಯುಟಿ ಕಲೆಕ್ಟರರನ್ನಾಗಿ ನೇಮಿಸಲಾಗಿದೆ.

ಇಲ್ಲಿಂದ ವರ್ಗವಾಗಿರುವ ಜಿಲ್ಲಾ ಕೃಷಿ ಶಾಖೆಯ ಆಫೀಸರ್ ಶ್ರೀ ಯು ವಿಠ್ಠಲಾಚಾರ್ಯರ ಸ್ಥಾನಕ್ಕೆ ಕಾರ್ಕಳದ ಡೆಮೋನ್‌ಸ್ಟ್ರೇಟರರಾದ ಶ್ರೀ ಜೆ. ಸಖಾರಾಮರಾಯರನ್ನು ನೇಮಿಸಲಾಗಿದೆ.

ಕುಂದಾಪುರದ ಸಬ್ ಕಲೆಕ್ಟರ್ ಶ್ರೀ ಡಿ ಆರ್. ಸಾತೇ ಐ ಸಿ ಎಸ್ ಅವರು ಮಳೆಗಾಲದ ೩ ತಿಂಗಳಲ್ಲಿ ಮಂಗಳೂರಲ್ಲಿ ವಸತಿ ಮಾಡಿರುತ್ತಾರೆ.

ಪರ್ಮಿಟ್ ಪದ್ಧತಿ ರದ್ದಾಯಿತು?

ರೈಲ್ವೆಗಳಲ್ಲಿ ಅಕ್ಕಿಯನ್ನೊಯ್ಯಲು ಪರ್ಮಿಟ್ ಪದ್ಧತಿ ಆವಶ್ಯವಿಲ್ಲವೆಂದು ದ ಕ ಜಿಲ್ಲಾ ಕಲೆಕ್ಟರರು ಅಪ್ಪಣೆ ಕೊಡಿಸಿದ್ದಾರೆಂದು ಸುದ್ದಿಯಿದೆ. ಈಗ ಅಕ್ಕಿಯ ಕ್ರಯವು ದಿನದಿಂದ ದಿನಕ್ಕೆ ಏರುತ್ತಾ ಹೋಗುತ್ತದೆ ಮುಡಿ ಅಕ್ಕಿಗೆ ರೂ. ೧೬ಕ್ಕಿಂತಲೂ ಏರಿದೆ ಅಕ್ಕಿ ಜಿಲ್ಲೆಯ ಹೊರಗೆ ಹೋಗಲು ನಿರ್ಬಂಧ ಇನ್ನೂ ಇದ್ದರೂ, ರೈಲ್ವೆಗಳ ಮೂಲಕ ಸಾಗಿಸುವರೆ ನಿರ್ಬಂಧ ಹೋಗಿನೆಯಂತೆ!

ಹಿಂದೀ ಪ್ರಚಾರಮಂಡಳ

ಈ ಹೆಸರಿನಿಂದ ಮಂಗಳೂರಲ್ಲಿ ಒಂದು ಸಂಸ್ಥೆ ಪ್ರಾರಂಭವಾಗಿ, ರಾಷ್ಟ್ರಭಾಷೆಯಾದ ಹಿಂದೀಯ ಪ್ರಚಾರ ಕಾರ್ಯ ಮಾಡಲು ನಿರ್ಣಯಿಸಿದೆ ನುರಿತ ಹಿಂದೀ ಪ್ರಚಾರಕರಾದ ಶ್ರೀ ಬಿ. ದೇಪಪ್ಪಳ್ವರು ಸ್ಥಳೀಯ ಮಿಲಾಗ್ರಿಸ್ ಸೆಕೆಂಡರಿ ಶಾಲೆಯಲ್ಲಿ ಈ ಮಂಡಳದ ಆಶ್ರಯದಲ್ಲಿ ಹಿಂದೀ ತರಗತಿಗಳನ್ನು ಪ್ರಾರಂಭಿಸುವರು. ಬಡ ವಿದ್ಯಾರ್ಥಿಗಳಿಗೆ ಧರ್ಮಾರ್ಥ ಹಿಂದೀ ಶಿಕ್ಷಣ ದೊರಕುವಂತೆ ಮಂಡಳಿದವರು ಅಭಿಪ್ರಾಯಪಟ್ಟಿದ್ದಾರೆ ಹಿಂದೀ ಪ್ರೇಮಿಗಳು ಈ ಮಂಡಳದ ಕಾರ್ಯದಲ್ಲಿ ನೆರವಾಗಬೇಕಾಗಿ ಬಿನ್ನಹ

ಕೈಯೂರಿನ ನಿರಾಶ್ರಿತರಿಗಾಗಿ ಲಂಡನಿನಲ್ಲಿ ನಿಧಿ

ನಮ್ಮ ಜಿಲ್ಲೆಯ ಕೈಯ್ಯೂರಿನ ನಿರಾಶ್ರಿತರ ನಿಧಿಗಾಗಿ ಲಂಡನಿನಲ್ಲಿ ಸುಮಾರು ೩೦೦ ಪೌಂಡುಗಳಷ್ಟು ವಂತಿಗೆ ಇದುವರೆಗೆ ಸಂಗ್ರಹವಾಗಿದ್ದು ಅದರಲ್ಲಿ ೨೫೦ ಪೌಂಡುಗಳನ್ನಾಗಲೇ ಶ್ರೀ. ಎನ್. ಎಂ. ಜೋಶಿಯವರಿಗೆ ಕಳುಹಲಾಗಿದೆ ಎಂದೂ, ಬೇಗನೇ ಈ ನಿಧಿ ಒಟ್ಟು ೧೦೦೦ ಪೌಂಡುಗಳಷ್ಟಾಗುವಂತೆ ಪ್ರಯತ್ನಗಳು ನಡೆಯುವುವೆಂದೂ ಪ್ರಕಟವಾಗಿದೆ.

ದ. ಕ. ಜಿಲ್ಲಾ ಗೌಡ ಸಾರಸ್ವತ ಬ್ರಾಹ್ಮಣರ ದೇವಸ್ಥಾನಗಳು

ಅವುಗಳ ಮೊಕ್ತೇಸರರ ಸಭೆ

ಮಂಗಳೂರು ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಶ್ರೀ ಕಾಶೀ ಮಠಾಧೀಶರಾದ ಪರಮಪೂಜ್ಯ ಶ್ರೀಮತ್ ಸುಕೃತೇಂದ್ರ ತೀರ್ಥ ಶ್ರೀಪಾದಂಗಳವರ ರಾಯಸದ ಮೇರೆಗೆ ಶ್ರೀ ಶ್ರೀಯವರ ಅಧ್ಯಕ್ಷತೆಯಲ್ಲಿ ದ. ಕ ಜಿಲ್ಲೆಯ ಗೌ॥ ಸಾ॥ ಬ್ರಾಹ್ಮಣರ ದೇವಸ್ಥಾನಗಳ ಮೊಕ್ತೇಸರರ ಸಭೆ ಜರುಗಿತು. ಜಿಲ್ಲೆಯ ಎಲ್ಲ ಕಡೆಗಳಿಂದಲೂ ಟ್ರಸ್ಟಿಗಳು ಬಂದಿದ್ದರು 'ಹಿಂದೂ ರಿಲಿಜಿಯಸ್ ಎಂಡೋಮೆಂಟ್ ಆಕ್ಟ್'ನಲ್ಲಿ ಬೇಗನೇ ಆಗಬಹುದಾದ ಕೆಲ ತಿದ್ದುಪಡಿಗಳ ವಿಚಾರದಲ್ಲಿ ಆಲೋಚಿಸಿ ಆ ತಿದ್ದುಪಡಿಗಳಿಂದ ಟ್ರಸ್ಟಿಗಳ ಈಗಿರುವ ಹಕ್ಕು ಬಾಧ್ಯತೆಗಳಿಗೂ ಅಧಿಕಾರಕ್ಕೂ ಬಾಧಕ ಬರದಂತೆ ಪ್ರಯತ್ನ ನಡೆಸಲು ಈ ಮೊಕ್ತೇಸರರದೇ ಒಂದು 'ರಿಜಿಸ್ಟರ್ಡ್'ಸಂಸ್ಥೆಯನ್ನು ರಚಿಸಲು ನಿರ್ಧಾರವಾಯಿತು, ಹಾಗೂ ಆ ಸಂಸ್ಥೆಕ್ಕೆ ಸಂಬಂಧಿಸಿದ 'ಮೆಮೊರೇಂಡಮ್' ಮತ್ತು ನಿಧಿನಿಯಮಗಳೂ ರಚಿಸಲ್ಪಟ್ಟುವು. ಈ ಸಂದರ್ಭದಲ್ಲಿ ಈ ಟ್ರಸ್ಟಿಗಳಿಗೆ ಶ್ರೀ ಸ್ವಾಮಿಜಿಯವರು 'ಧರ್ಮರಕ್ಷಣೆ'ಯ ಕುರಿತಾದ ಒಂದು ಸಂದೇಶವನ್ನೂ ಅನುಗ್ರಹಿಸಿರುವರು

ಅಪಘಾತ

ಕುದ್ರೋಳಿ ಬಳಿ ಬಿರುಗಾಳಿಯಿಂದ ಮರ ಬಿದ್ದು-ಆ ಮರ ಒಂದು ವಿದ್ಯುಚ್ಛಕ್ತಿಯ ಕಂಬಕ್ಕೆ ತಗುಲಿ ಅದರ ಸರಿಗೆ ತುಂಡಾದ ಪರಿಣಾಮವಾಗಿ ಆ ಕಂಬದ ಅಡಿಯಲ್ಲಿದ್ದ ಇಬ್ಬರಿಗೆ ವಿದ್ಯುಚ್ಛಕ್ತಿಯ ಸ್ಪರ್ಶವಾಗಿ ಒಬ್ಬ ಸತ್ತ, ಇನ್ನೊಬ್ಬನ ಸ್ಥಿತಿ ಕಠಿಣವಾಗಿದೆ

ನಿಧನ

ಜಿಲ್ಲಾ ಕಲೆಕ್ಟರರ ಕಚೇರಿಯಲ್ಲಿ ಇಂಗ್ಲಿಷ್ ಹೆಡ್ ಕ್ಲಾರ್ಕರಾಗಿದ್ದ ಶ್ರೀ ಗೋವಿಂದಾಚಾರಿ ಅವರು ಕೆಲ ದಿನಗಳಿಂದ ಅನಾರೋಗ್ಯದಲ್ಲಿದ್ದು ಕಳೆದ ಆದಿತ್ಯವಾರ ರಾತ್ರಿ ದೈವಾಧೀನರಾದರೆಂದು ವಿಷಾದವಾಗುತ್ತದೆ

ನಮ್ಮ ಜಿಲ್ಲೆಯವರಾದ ಮದ್ರಾಸಿನ ಡಾ॥ ಯು. ರಾಮರಾಯರ ಅಣ್ಣಂದಿರಾದ ಶ್ರೀ ಯು. ವೆಂಕಟರಾವ್, ನಿವೃತ್ತ ಎಗ್ಜಿಕ್ಯುಟಿವ್ ಇಂಜಿನಿಯರ್, ಅವರು ಈಚೆಗೆ ಉಡುಪಿಯಲ್ಲಿ ತಮ್ಮ ೭೫ನೇ ವರ್ಷ ಪ್ರಾಯದಲ್ಲಿ ದೈವಾಧೀನರಾದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ. ಮೃತರ ಆತ್ಮಕ್ಕೆ ಶಾಂತಿಯಿರಲಿ!

ಡಾಕ್ಟರ್ ಫೆರ್ನಾಂಡಿಸರ ಸ್ಮಾರಕಾರ್ಥ ನಿಧಿ

ಡಾಕ್ಟರ್ ಯಲ್ ಪಿ. ಫೆರ್ನಾಂಡಿಸರು ಕಂಕನಾಡಿ ಫಾದರ್ ಮುಲ್ಲರರ ಆಸ್ಪತ್ರೆಗೆ ಸೇರಿ ೫೦ ವರ್ಷಗಳು ಕಳೆದುವು ಅವರ ನಿಸ್ವಾರ್ಥ ಸೇವೆಯ ಸ್ಮಾರಕಾರ್ಥ ದಕ್ಷಿಣ ಕನ್ನಡ ಜಿಲ್ಲಾ ಕೆಥೊಲಿಕ್ ಸಂಘದವರು, ಕಂಕನಾಡಿ ಆಸ್ಪತ್ರೆಯಲ್ಲಿ ಬಡರೋಗಿಗಳ ಚಿಕಿತ್ಸೆಗಾಗಿಯೆ ಒಂದು ಸ್ಮಾರಕ ವಾರ್ಡನ್ನು ಕಟ್ಟಿಸುವುದೆಂದು ನಿರ್ಣಯಿಸಿರುವರು ಈ ಕಟ್ಟಡದ ಅಂದಾಜು ಖರ್ಚು ರೂ ೬,೦೦೦ ಇದರ ಸಲುವಾಗಿ ರೂ. ೩೦೦೦ ಈ ಮೊದಲೇ ವಸೂಲಾಗಿದೆ. ಡಾಕ್ಟರ್ ಫೆರ್ನಾಂಡಿಸರ ೫೦ ವರ್ಷಗಳ ದೀರ್ಘ ಸೇವೆಯ ಕಾಲದಲ್ಲಿ ಯಾವ ವಿಧದಿಂದಾದರೂ ಪ್ರಯೋಜನ ಹೊಂದಿದ ಮಹಾಜನರು ಈ ಸ್ಮಾರಕದ ಸಲುವಾಗಿ ಉದಾರ ಹಸ್ತದಿಂದ ಶಕ್ತ್ಯನುಸಾರವಾಗಿ ಸಹಾಯ ಮಾಡಬೇಕಾಗಿ ವಿನಂತಿ. ವಂತಿಗೆಯನ್ನು ದಯಮಾಡಿ ಈ ಕೆಳಗಿನ ವಿಳಾಸಕ್ಕೆ ರವಾನಿಸಿರಿ.) ಯು ಕಣ್ಣಪ್ಪ M. A. L T. ನಿವೃತ್ತ ಡಿ ಇ. ಒ. ಮತ್ತು ಗೌರವ ಕಾರ್ಯದರ್ಶಿ ಮಂಗಳೂರು.

ದೇಶ ಭಾಷೆಯಲ್ಲಿ ಪರೀಕ್ಷೆ

ದಿವಾನ್ ಬಹದೂರ್ ಅನಂತಾಚಾರ್ಯ ಬಿ. ಎ. ಬಿ. ಎಲ್., ಪಬ್ಲಿಕ್ ಸರ್ವಿಸ್ ಕಮಿಶನ್ ಮೆಂಬರ್, ಮದ್ರಾಸ್ ಇವರು ಇಲ್ಲಿಯ ಎಗ್ಜಿಕ್ಯೂಟಿವ್ ಆಫೀಸರರುಗಳಿಗೆ ದೇಶಭಾಷಾ ಟೆಸ್ಟಿನ ಪರೀಕ್ಷೆಯನ್ನು ಈಚೆಗೆ ನಡೆಸಿ ಹಿಂತೆರಳಿರುವರು.

ವಿವಾಹಗಳು

ನಂಜನಗೂಡು ಸದ್ವೈದ್ಯಶಾಲಾ ಮಂಗಳೂರು ಶಾಖೆಯ ಮೆನೇಜರ್ ಶ್ರೀ ಕೆ. ವಾಸುದೇವರಾಯರಿಗೆ ಕೊಳಕೆ ಶ್ರೀ. ಕೃಷ್ಣ ಮಯ್ಯರ ಪುತ್ರಿ ಶ್ರೀಮತಿ ಜಲಜಾಕ್ಷಿಯೊಡನೆ ತಾ 20 ರಂದು ವಿವಾಹವಾಯಿತು.

ಕಾಸರಗೋಡಿನ ಕಾರ್ಯಕರ್ತರಾದ ಶ್ರೀಮಾನ್ ಬಾಡೂರು ಜಗನ್ನಾಥರೈಗಳಿಗೆ ಬಂಬ್ರಾಣದ ಶ್ರೀಮತಿ ಸುಗುಣ ಕುಮಾರಿಯೊಡನೆ ವಿವಾಹವಾಯಿತು

ಗಾಳಿ-ನೆರೆ

ಇತ್ತೀಚೆಗೆ ಜೋರಾಗಿ ಗಾಳಿ ಬೀಸುತ್ತದೆ. ಈ ಸಂಬಂಧ ಮೂಡು ದಿಕ್ಕಿಗೆ ಬಹಳ ಮಳೆ ಬಂದು, ನದಿಗಳಲ್ಲಿ ನೆರೆಯೇರಿರುವುದು. ನೇತ್ರಾವತಿ ನದಿಯಲ್ಲಿ ನೆರೆ ತುಂಬಾ ಇದ್ದು ಅಡ್ಯಾರಿನಲ್ಲಿ ಕೆಲ ದಿನ ಮೋಟರು ಸಂಚಾರವೇ ಇರಲಿಲ್ಲ

ಕಾಸರಗೋಡು

ಬಿಡುಗಡೆ

ಕಾಸರಗೋಡಿನ ವಿದ್ಯಾರ್ಥಿ ಮುಖಂಡರಾದ ಶ್ರೀ ಪಿ. ಗೋಪಾಲಕೃಷ್ಣ ಸಲಾಯರು ೯ ತಿಂಗಳ ಸಶ್ರಮ ಸಜೆ ಅನುಭವಿಸಿ ಅಲಿಪುರಂನಿಂದ ಬಿಡುಗಡೆಯಾಗಿ ಬಂದಿದ್ದಾರೆ

ಅಕ್ಕಿಯಿಲ್ಲ

ಎಂದು ಇಲ್ಲಿ ಬೊಬ್ಬೆ ಸುರುವಾಗಿದೆ ಸ್ವಲ್ಪ ಸಮಯದ ತನಕ ಸಹಕಾರ ಸಂಘದವರ ಯೋಜನೆಯಂತೆ ಅಕ್ಕಿದೊರೆಯುತಿತ್ತು. ಈಗ ಅದೂ ದೊರಕದೆ ಬಡವರಿಗೆ ಬಹಳ ಕಷ್ಟವಾಗಿದೆ. ಪೇಟೆಧಾರಣೆ ಬಹಳ ಏರಿದೆ.

ಕರ್ನಾಟಕ

ಶ್ರೀ ಹಳಕಟ್ಟಿಯವರ ವರ್ಧಂತಿ

ಕನ್ನಡದ ಹಿರಿಯ ಸಾಹಿತಿಗಳಾದ ಶ್ರೀಮಾನ್ ಫ. ಗು. ಹಳಕಟ್ಟಿಯವರಿಗೆ, ಇದೇ ಜುಲೈ ೨ ನೇ ತಾರೀಖಿಗೆ ೬೩ ವರ್ಷ ಮುಗಿದು ೬೪ನೇಯ ಜನ್ಮ ದಿನವಿರುವದು. ಅವರ ೬೦ನೇ ವರ್ಷದ ಉತ್ಸವ ನೆರವೇರಿಸಬೇಕೆಂದು ಏರ್ಪಡಿಸಲಾಗಿದ್ದ ಸಮಿತಿಯವರು ಇಂದಿನ ವರೆಗೆ ಮುಂದರಿಸುತ್ತ ಬಂದು ಇದೇ ೨ನೇ ತಾರೀಖಿನ ದಿನ ವಿಜಾಪುರ ಶೆಪರ್ಡ ಹಾಲಿನಲ್ಲಿ ವಿಜೃಂಭಣೆಯಿಂದ ನೆರವೇರಿಸಿದರು, ಆ ಕಾಲದಲ್ಲಿ ಅವರ ಪ್ರೀತಿ ವಿಶ್ವಾಸಿಕರಾದ ಅನೇಕರೂ ಶ್ರೀ ಹರಡೇಕರ ಮಂಜಪ್ಪನವರು, ಶ್ರೀ ಗಜೇಂದ್ರಗಡ ಶಾಮರಾವ ಮೊದಲಾದವರು ಶ್ರೀ ಹಳಕಟ್ಟಿಯವರ ವೀರಶೈವ ವಾಙ್ಮಯ ಸೇವೆ ಮತ್ತು ವಚನಗಳ ಸಂಕಲನದ ಪರಿಶ್ರಮದ ಬಗ್ಗೆ ಅವರ ಗುಣಗಾಯನ ಪರ ಭಾಷಣಮಾಡಿ ಶ್ರೀ ಹಳಕಟ್ಟಿಯವರಿಗೆ ನಿಧಿಯೊಂದಿಗೆ ಮಾನಪತ್ರ ಅರ್ಪಿಸಿ ದೀರ್ಘಾಯುರಾರೋಗ್ಯ ಕೋರಿದರು ಈ ಸಮಾರಂಭದ ಅಧ್ಯಕ್ಷತೆಯನ್ನು ಸರ್ದಾರ ದೇಶಮುಖರು ವಹಿಸಿದ್ದರು.



ಗವರ್ನರರಿಗೆ ಹಕ್ಕರ ಪತ್ರ

ಕೆಲವು ಗಂಭೀರ ಆರೋಪಗಳು!

'ನಿರಂಕುಶಾಧಿಕಾರ ನಡೆಸಿದಿರಿ'

ಬಂಗಾಳ ಅಸೆಂಬ್ಲಿಯಲ್ಲಿ ಮಾಜಿ ಪ್ರಧಾನ ಮಂತ್ರಿ ಫಜಲುಲ್ ಹಕ್ಕರು, ಬಂಗಾಳದ ಗವರ್ನರರು ಹೇಗೆ ಅಕ್ರಮವಾಗಿ, ಅನ್ಯಾಯವಾಗಿ, ನಿರಂಕುಶವಾಗಿ, ಅಧಿಕಾರ ನಡೆಸುತ್ತಿದ್ದಾರೆ, ಹೇಗೆ ತನ್ನಿಂದ ವಂಚನೆ ಮಾಡಿ ರಾಜಿನಾಮೆ ತೆಗೆದುಕೊಂಡರು ಮೊದಲಾದ ವಿಷಯ ವಿವರಿಸಿದ ಮೇಲೆ, ಆಗಸ್ಟ ೨ರಂದು ತಾನು ಗವರ್ನರರಿಗೆ ಬರೆದ ಪತ್ರವನ್ನು ಓದಿ ಹೇಳಿದರು. ಅದರ ಸಾರಾಂಶ ಕೆಳಗೆ ಕೊಡಲಾಗಿದೆ.

'ನೀವು ಪ್ರಾಂತದ ಗವರ್ನರರು, ನಾನು ಪ್ರಾಂತದ ಮುಖ್ಯ ಮಂತ್ರಿ; ನಿಮ್ಮ ಮುಖ್ಯ ಹಿತ ಸೂಚಕ. ಹಾಗಾಗಿ ನೀವು ತಪ್ಪು ದಾರಿ ಹಿಡಿವಾಗ, ಸ್ಪಷ್ಟವಾಗಿ ಹೇಳದಿದ್ದರೆ ನಾನು ನನ್ನ ಕರ್ತವ್ಯ ಮಾಡಿದಂತಾಗುವುದಿಲ್ಲ. ನೀವು ಬಂಗಾಳದಲ್ಲಿ ಮಾಡುವ ವರ್ತನೆ ನೋಡಿದರೆ, ಈ ಪ್ರಾಂತದಲ್ಲಿಯೂ ೯೩ನೇ ನಿಯಮದ ಏಕತಂತ್ರಾಧಿಕಾರ ಮಾಡುವಂತೆ ತೋರುತ್ತದೆ. ಇದು ಸರಿಯಲ್ಲವೆಂದು ನಿಮ್ಮನ್ನು ನಾನು ಹಲವು ಸಲ ಎಚ್ಚರಿಸಿದ್ದೇನೆ. ಕೆಲವು ಮಂದಿ ಜನತಾ ಮುಖಂಡರನ್ನು ನೀವು ಬಂಧಿಸಿದ್ದೀರಿ. ಅವರನ್ನು ಬಂಧನದಲ್ಲಿಡಲು ಕಾರಣವೇನೆಂದು ನನಗೆ ತಿಳಿಯಬೇಕಾಗಿದೆ.

ನೀವು ಎರಡು ವಿಧದಲ್ಲಿ ನಮಗೆ ತೊಂದರೆ ಕೊಡುತ್ತೀರಿ. ಒಂದು ಘಟನಾತ್ಮಕ ರೀತಿಯಲ್ಲಿ: ಅದು ಹೇಗೆಂದರೆ ಆಗಾಗ ನಮ್ಮ ಕಾರ್ಯದಲ್ಲಿ ಕೈಹಾಕುತ್ತೀರಿ. ಗವರ್ನಮೆಂಟ್ ಓಫ್ ಇಂಡಿಯಾ ಏಕ್ಟನ್ನು ತುಸು ಕಣ್ಬಿಟ್ಟು ನೋಡಿದರೆ ನೀವು ಹಾಗೆ ನಮ್ಮ ಕಾರ್ಯದಲ್ಲಿ ಕೈಹಾಕುವುದು ಎಷ್ಟರ ಮಟ್ಟಿಗೆ ಅನವಶ್ಯವೆಂದು ನಿಮಗೆ ಹೊಳೆದೀತು. ಏಕೆಂದರೆ ಮೊದಲೇ ಮಂತ್ರಿಗಳಿಗೆ ಸ್ವಲ್ಪ ಅಧಿಕಾರ. ಅದರಲ್ಲೂ ನೀವು ಕೈಹಾಕಬಾರದು. ನಿಜವಾಗಿ ನೋಡಿದರೆ ಪ್ರಾಂತದ ಆಡಳಿತದ ಹೊಣೆಗಾರಿಕೆ ಮಂತ್ರಿಗಳ ಮೇಲೆ. ಅಧಿಕಾರವೆಲ್ಲಾ ಖಾಯಂ ಅಧಿಕಾರಿಗಳ ಕೈಯಲ್ಲಿ! ಇದು ಮಾಡಕೂಡದ ನ್ಯಾಯ!

'ಎರಡನೆಯ ರೀತಿಯೆಂದರೆ ನೀವು ಖಾಯಂ ಅಧಿಕಾರಿಗಳಿಗೆ ಮಂತ್ರಿಗಳನ್ನು ಗಣ್ಯಮಾಡದೆ ಕೆಲಸ ಮಾಡುವಂತೆ ಪ್ರೇರೇಪಿಸಿದ್ದು. ನೀವು ಇನ್ನು ಮುಂದೆ ಒಳ್ಳೆಯ ಗೃಹಸ್ಥನಂತೆ ನಡೆಯಲು ಪ್ರಯತ್ನಿಸಬೇಕು. ಇದು ಕಠಿಣ ಮಾತಾಗಬಹುದು. ಆದರೆ ಸತ್ಯ ಹೇಳದೆ ನಿರ್ವಾಹವಿಲ್ಲ. ಸತ್ಯ ಹೇಳಿ ನಿಮಗೆ ಈ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ನೆರವಾಗಬೇಕೆಂದು ನನ್ನ ಇಚ್ಛೆ. ನೀವಿದನ್ನು ಕೇಳಿ, ಅಥವಾ ಬಿಡಿ ನಿಮ್ಮಿಷ್ಟ. ಆಧುನಿಕ ಕಾಲದ ಯಾವುದೇ ನಾಗರಿಕ ದೇಶದಲ್ಲೂ ಕೂಡಾ ಇರದ ಭೀಕರ ಪರಿಸ್ಥಿತಿಯನ್ನು ಇಂದು ಭಾರತದಲ್ಲಿ ಬ್ರಿಟಿಷ್ ಅಧಿಕಾರಿಗಳು ಎದುರಿಸಬೇಕಾಗಿ ಬಂದಿದೆ. ಸಾಮ್ರಾಜ್ಯವನ್ನು ತಲೆಕೆಳಗು ಮಾಡುವಂಥಾ ಘಟನೆಗಳು ತಲೆದೋರಿವೆ. ಇದನ್ನು ಅಧಿಕಾರಿಗಳು ಇದಿರಿಸಬೇಕಾಗಿದೆ. ರಾಜ್ಯದ ಆಡಳಿತದಲ್ಲಿ ಮುತ್ಸದ್ಧಿತನ ತೋರಿಸುವ ಸಂದರ್ಭ ಈಗ ಬಂದಿದೆ. ಆದ್ದರಿಂದ ನಿಜವಾಗಿ ಗೃಹಸ್ಥರಂತೆ ವರ್ತಿಸಿರಿ. ರಾಜ್ಯದ ಆಡಳಿತವಿಂದು ಪ್ರಜಾಹಿತಕಾರಿಯಾಗಬೇಕಾಗಿದೆ. ಅಲ್ಲದೆ ನಿರಂಕುಶಾಧಿಕಾರನಡೆಸುವ ಸಾಮ್ರಾಜ್ಯಶಾಹಿಗೆ ಗರಡಸಾಧಕ ದೌರ್ಬಲ್ಯಮನೇ ಪ್ರವೃತ್ತಿಮಾಡಿದರೆ ಮೋಸವಾದೀತು. ನಾನಿದನ್ನು ನಿಮಗೆ ಎಚ್ಚರಿಸುತ್ತೇನೆ.

'ನೀವು ಮಂತ್ರಿಗಳನ್ನುಲಕ್ಷಿಸದ ಉದಾಹರಣೆ ಕೊಡುತ್ತೇನೆ. ಆಹಾರ ವಸ್ತುಗಳ ಧೋರಣದಲ್ಲಿ ನೀವು ವಾಣಿಜ್ಯ ಮತ್ತು ಕೂಲಿಗಾರ ಖಾತೆಯ ಕಾರ್ಯದರ್ಶಿಗಳಿಗೆ ಅಧಿಕಾರ ಕೊಟ್ಟಿರಿ. ಬಂಗಾಳದಲ್ಲಿ ಮಂತ್ರಿಮಂಡಳವೇ ಇಲ್ಲವೆಂದು ನೀವು ತಿಳಕೊಂಡಿರಿ. ಇಂಥ ಅವಸರದ ಸಂದರ್ಭದಲ್ಲಿ ನೀವು ಮಂತ್ರಿಗಳನ್ನು ಕರೆದು ಮಿಲಿಟರಿ ಅಧಿಕಾರಿಗಳ ಕೇಳಿಕೆಯ ಬಗ್ಗೆ ಏನು ಮಾಡುವುದೆಂದು ಆಲೋಚಿಸಬೇಕಿತ್ತು. ಪ್ರಾಂತದಲ್ಲಿ ಅಕ್ಕಿ ಇದೆಯೋ ಇಲ್ಲವೋ ಎಂಬುದನ್ನೂ ವಿಚಾರಿಸದೆ ಅಕ್ಕಿಯನ್ನು ಕೊಂಡುಹೋಗಲು ಅನುಮತಿ ಕೊಟ್ಟಿರಿ. ಇಪ್ಪತ್ತನಾಲ್ಕು ತಾಸುಗಳೊಳಗೆ ಮೂರು ಜಿಲ್ಲೆಗಳಲ್ಲಿದ್ದ ಅಕ್ಕಿಯನ್ನು ಸ್ಥಳಾಂತರಿಸಬೇಕೆಂದು ಕಟ್ಟಾಜ್ಞೆ ಮಾಡಿದಿರಿ. ಬಂಗಾಳದಲ್ಲಿ ಬರಗಾಲ ಬಂದೇ ಬಿಟ್ಟಿತು. ಇದಕ್ಕೆ ಮಂತ್ರಿಗಳ ಆಡಳಿತದಲ್ಲಿ ಕೈಹಾಕಿದ ನೀವೂ ನಿಮ್ಮ ಕೈಕೆಳಗಿನ ಅಧಿಕಾರಿಗಳೂ ಹೊಣೆಗಾರರಿದ್ದೀರಿ. ಸಾರ್ವಜನಿಕರ ನಷ್ಟವನ್ನು ನೀವೂ ನಿಮ್ಮ ಅಧಿಕಾರಿಗಳೂ ತುಂಬಿ ಕೊಡಬೇಕಾಗಿದೆ.

ಮಿಲಿಟರಿ ಅಧಿಕಾರಿಗಳೊಡನೆ ಗುಪ್ತ ಹಂಚಿಕೆ ಮಾಡಿ, ಅಧಿಕಾರಿಗಳೊಡನೆ ಯೋಚಿಸಿ ನೀವು ದೋಣಿಗಳ ಪ್ರತಿಬಂಧ ಮಾಡಿದಿರಿ. ಅಧಿಕಾರಿಗಳು ನಿಮ್ಮ ಒಪ್ಪಿಗೆ, ತಿಳುವಳಿಕೆಯಿಂದಲೇ, ಗಂಗಾನದಿ ಸಂಗಮ ಸ್ಥಳದಲ್ಲಿ ಬೇರೆ ಬೇರೆ ದ್ವೀಪಗಳಲ್ಲಿ ತಿರಳುತ್ತಿದ್ದ ದೋಣಿಗಳನ್ನು ತಡೆದರು. ಇದನ್ನೆಲ್ಲಾ ಮಿಲಿಟರಿಯವರೊಡನೆ ಮಾತನಾಡಿ ಮಾಡಿದಿರಲ್ಲದೆ ಮಂತ್ರಿಗಳನ್ನು ಕೇಳಲಿಲ್ಲ. ಮಂತ್ರಿಗಳ ಹಾಗೂ ಪಾರ್ಲಿಮೆಂಟರಿ ಸೆಕ್ರೆಟರಿಗಳ ನೇಮಕ ನನ್ನ ಅಧಿಕಾರದ್ದು. ನೀವದರಲ್ಲೂ ಕೈಹಾಕಿದಿರಿ. ಇಂಗ್ಲೆಂಡಿನಲ್ಲಿ ಮುಖ್ಯ ಮಂತ್ರಿಯ ಅಪ್ಪಣೆ ನಿರಾಕರಿಸಬಹುದೇನು? ಆದರೆ ಈಗ ಮಾತ್ರ ಸರ್ ನಜಿಮುದ್ದೀನರಿಗೆ ಪಕ್ಷಪಾತ ತೋರಿಸಿ ಮಂತ್ರಿಮಂಡಳ ಬೆಳೆಸಲು ಒಪ್ಪಿಗೆಕೊಟ್ಟಿರಿ. ನನ್ನ ಸಲಹೆ ಅಂದು ನೀವು ಕೇಳದಿದ್ದುದರಿಂದ ಆಡಳಿತದಲ್ಲಿ ಹೊರಲಾರದ ಹೊರೆ ಬಿದ್ದು ಆಡಳಿತಹದಗೆಟ್ಟಿತು.

ಕಳೆದ ಕೆಲಸಮಯದಿಂದ ಸೆಕ್ರೆಟರಿಗಳು ಮಂತ್ರಿಮಂಡಳವನ್ನಲಕ್ಷಿಸಿ ಕೆಲವು ಆಜ್ಞೆ ಮಾಡಿದ್ದಾರೆ. ಇಂಡಿಯಾ ಸರಕಾರದ ಸಹಾಯಕ್ಕಾಗಿ ಬಂಗಾಳದಿಂದ ಕಳುಹಿಸಿದ ಎಲ್ಲಾ ಆಫೀಸರರನ್ನು ಪುನಃ ಬಂಗಾಳಕ್ಕೆ ಕಳಿಸಬೇಕೆಂದಾಜ್ಞೆಯಾಗಿದೆ. ಈ ಸಂಬಂಧ ನನ್ನೊಡನೆ ಒಂದು ಮಾತೂ ಕೇಳಲಿಲ್ಲ. ಮಂತ್ರಿಗಳಿಗೆ ಗೊತ್ತಿಲ್ಲದೆ ಆಜ್ಞೆ ಹೊರಡುತ್ತವೆ. ಇಂಥಾ ಘಟನಾತ್ಮಕ ಅನ್ಯಾಯಕ್ಕಾಗಿ ನಾನು ವಿಷಾದಿಸುತ್ತೇನೆ. ಮತ್ತೆ ವಿರೋಧಿಸುತ್ತೇನೆ. ಹೊಣೆಹೊತ್ತ ನನ್ನ ಹೆಸರಲ್ಲಿ ನೀವು ಹೀಗೆ ಆಜ್ಞೆ ಹೊರಡಿಸುವುದು ಬಲಾತ್ಕಾರ.

ನವಕಾಲೀ ಜಿಲ್ಲೆಯ ಸಾನೋಪ ಎಂಬಲ್ಲಿ ಸ್ತ್ರೀಯರ ಮೇಲೆ ಅತ್ಯಾಚಾರ ನಡೆದ ವಿಷಯ, ಅಲ್ಲಿನ ಸಬ್ ಡಿವಿಜನಲ್ ಆಫೀಸರರು ಜಿಲ್ಲಾ ಮೆಜಿಸ್ಟ್ರೇಟರಿಗೆ ಒಂದು ತಂತಿ ಕಳುಹಿಸಿ, ನಡೆದ ಸಂಗತಿ ತಿಳಿಸಿ ಮುಂದೇನು ಮಾಡಬೇಕೆಂದು ವಿಚಾರಿಸಿದರು. ಆ ಅಧಿಕಾರಿಗಳು ಹೀಗೆ ತಂತಿ ಬಿಟ್ಟದ್ದು ಕೆಲವು ಅಧಿಕಾರಿಗಳಿಗೆ ಹಿತವಾಗಲಿಲ್ಲ. ಅಧಿಕಾರಿಗಳು ತಪ್ಪು ಮಾಡಿದ್ದಾರೆಂಬುದಕ್ಕೆ ಆ ತಂತಿಯೇ ಒಂದು ಆಧಾರವಾಗಿತ್ತು. ಕರ್ತವ್ಯವನ್ನು ನೆರವೇರಿಸಲು ಉದ್ಯುಕ್ತರಾದ ಆ ಆಫೀಸರರನ್ನು ಕೂಡಲೇ ತಂತಿ ಮೂಲಕ ವರ್ಗಾಯಿಸಲ್ಪಟ್ಟಿತು. ಈ ವಿಚಾರವನ್ನು ನನಗೆ ತಿಳಿಸಲೇ ಇಲ್ಲ. ಆ ಮೇಲೆ ಮಾನಿನಿಯರ ಮೇಲೆ ಅತ್ಯಾಚಾರ ನಡೆದುದು ನಿಜವೋ ಸುಳ್ಳೋ ಎಂದು ವಿಚಾರಿಸಲು ನಾನು ಫೇಣಿಗೆ ತೆರಳಿದಾಗ, ಆ ಆಫೀಸರರನ್ನು ವರ್ಗ ಮಾಡಿದ ಕತೆ ತಿಳಿಯಿತು. 'ಡಿ। ಕಲೆಕ್ಟರರು ಅಜಾಗ್ರತೆ ಮಾಡಿದರು' ಎಂದು ಅವರ ಮೇಲೆ ಮಸಿ ಗೀಟು ಎಳೆಯಲಾಗಿದೆ. ಡಿ। ಕಲೆಕ್ಟರರು ರಜೆ ಕೇಳಿದರೂ ಕೊಡಲಿಲ್ಲ. ಮತ್ತೆ ಫೇಣಿಗೆ ನಾನು ಹೋಗುತ್ತೇನೆಂದು ನಿಮಗೆ ತಿಳಿದ ಕೂಡಲೇ ಇದರಿಂದ ಸ್ಥಳಿಕ ಅಧಿಕಾರಿಗಳಿಗೆ ತೊಂದರೆಯಾಗುತ್ತದೆಂದು ನೆವ ಮಾಡಿ ನೀವು ನಾನು ಹೋಗಕೂಡದೆಂದಿರಿ. 'ಅಧಿಕಾರಿಗಳಿಗೆ ತೊಂದರೆ ಕೊಡಲು ನನ್ನ ಇಷ್ಟವಿಲ್ಲ ಜನರ ಸಂಕಷ್ಟವನ್ನು ವಿಚಾರಿಸುವುದು ನನ್ನ ಕರ್ತವ್ಯ'ವೆಂದೆ ಅತ್ಯಾಚಾರದ ಸ್ಥಳಕ್ಕೆ ನಾನು ತೆರಳಿವಂತೆ ಮಾಡಲು ಚಿತಗಾಂಗಿನ ಅಧಿಕಾರಿಗಳೆಲ್ಲಾ ಫೇಣಿಯಲ್ಲಿ ಕೂಡಿದುದು ನನಗೆ ತಿಳಿಯಿತು. ಅಲ್ಲಿಗೆ ಹೋಗದಂತೆ ನನ್ನ ಮನವೊಲಿಸಲು ಸೆಕ್ರೆಟರಿಗಳಿಗೆ ತಂತಿ ಮೂಲಕ ತಿಳಿಸಲಾಗಿತ್ತು. ಅಧಿಕಾರಿಗಳೊಡನೆ ಜಗಳ ತಪ್ಪಿಸಲು ನಾನಲ್ಲಿಗೆ ಹೋಗಲಿಲ್ಲ. ಆದರೆ ಅತ್ಯಾಚಾರಕ್ಕೆ ಬಲಿಯಾದ ಸ್ತ್ರೀಯರ ಸಂಬಂಧಿಕರೂ, ಮರಣಗೊಂಡ ಸ್ತ್ರೀಯರ ಗಂಡಂದಿರೂ, ನನಗೆ ವೃತ್ತಾಂತವೆಲ್ಲಾ ತಿಳಿಸಿದ್ದಾರೆ. ಈ ಬಗ್ಗೆ ಬೇಕಾದ ಆಧಾರಗಳು ನನ್ನಲ್ಲಿವೆ.

'ಡಾ। ಮುಖರ್ಜಿಯವರು ರಾಜಿನಾಮೆ ಕೊಡಲು ಕಾರಣವೇನೆಂದು ಅವರು ಎಸೆಂಬ್ಲಿಯಲ್ಲಿ ಹೇಳಿಕೆ ಕೊಡದಂತೆ ಮಾಡಬೇಕೆಂದು ನೀವು ಸೂಚಿಸಿದಿರಿ. ಆದರೆ ನಾನು ನಿಮ್ಮ ಸೂಚನೆಗೆ ಒಪ್ಪಲು ಸಿದ್ಧನಿರಲಿಲ್ಲ. ಏಕೆಂದರೆ ಮುಖರ್ಜಿಯವರ ಹೇಳಿಕೆಯಲ್ಲಿ ಎಷ್ಟೋ ಸತ್ಯಸಂಗತಿಗಳಿದ್ದುವು. ಇದರಿಂದ ಯೂರೋಪಿಯನ್ ಪಕ್ಷ ರೇಗಿತು. ನನ್ನನ್ನು ಅಧಿಕಾರದಿಂದ ತಳ್ಳಿ ಹಾಕಲು ನನ್ನ ರಾಜಕೀಯ ಪ್ರತಿಸ್ಪರ್ಧಿಗಳೊಡನೆ ಅವರು ಒಳಸಂಚು ನಡೆಸಿದರು. ಮುಂದೆ ಬಂಗಾಳದ ಜನರಿಂದ ಕೂಡಿದ ೧೦೦ ಸಾವಿರ ಯುವಕರ (ಮುಸ್ಲಿಮರು 50% ಹಿಂದುಗಳು 60%) ಒಂದು ರಾಷ್ಟ್ರೀಯ ಸೈನ್ಯ ಮಾಡಬೇಕೆಂದು ನಿಮಗೆ ಸೂಚಿಸಿದೆ. ಮಿಡ್ನಾಪುರದ ದುರಂತದ ವಿಷಯ ಯೂರೋಪಿಯನ್ ಪಕ್ಷವೊಂದುಳಿದು ಎಲ್ಲಾ ಪಕ್ಷಗಳೂ ವಿಚಾರಣಾಮಂಡಳ ಆಗಬೇಕೆಂದು ಅಭಿಪ್ರಾಯವಿತ್ತವು. ಅಲ್ಲಿನ ಅಧಿಕಾರಿಗಳ ಮೇಲೆ ಮಾಡಿದ ಆರೋಪ ಭಯಂಕರವಿದೆ. ಆದ್ದರಿಂದ ಅಧಿಕಾರಿಗಳ ಒಳ್ಳೆದಕ್ಕಾಗಿಯೇ ಸತ್ಯಾಸತ್ಯ ವಿಚಾರಣೆ ಆಗಬೇಕಿತ್ತು. ಆದರೆ ನಾವು ಎಸೆಂಬ್ಲಿಯಲ್ಲಿ ಹೀಗೆ ನಿರ್ಣಯ ಮಾಡಿದ ವಿಷಯ ನೀವು ನನಗೆ ಪತ್ರ ಬರೆದು ವಿಚಾರಣೆ ಆಗಕೂಡದೆಂದು ತಿಳಿಸಿದಿರಿ. ನೀವು ಆ ಪತ್ರದಲ್ಲಿ ಬರೆದಂಥ ಭಾಷೆಯನ್ನು, ಇನ್ನು ಮುಂದೆ ಗವರ್ನರರು ಪ್ರಧಾನ ಮಂತ್ರಿಗೆ ಬರೆಯುವ ಪತ್ರದಲ್ಲಿ ಉಪಯೋಗಿಸಕೂಡದೆಂದು ನಿಮ್ಮನ್ನು ಸೌಮ್ಯವಾಗಿ ಎಚ್ಚರಿಸುತ್ತೇನೆ. ಮಿಡ್ನಾಪುರದಲ್ಲಿಯೂ ಮಹಿಳೆಯರ ಮಾನಾಪಹಾರವನ್ನು ಅಧಿಕಾರಿಗಳು ಮಾಡಿದ ಆರೋಪವಿತ್ತು. ಇಂಥಾ ಗಂಭೀರ ಆರೋಪದ ವಿಷಯ ವಿಚಾರಣೆ ನಡೆಸದಿದ್ದರೆ ನಾವು ಕರ್ತವ್ಯ ಮಾಡಿದಂತಾಗಲಿಲ್ಲ. ಆದ್ದರಿಂದ ನೀವು ವಿಚಾರಣೆ ಬೇಡವೆಂದದ್ದರ ಅರ್ಥ ನನಗೆ ಆಗಲಿಲ್ಲ.''

THE CANARA BANKING CORPORATION Ltd

(Incorporated in British India with limited liability).

STATEMENT OF AFFAIRS AS ON 31ST DECEMBER 1942.

Capital & Liabilities	Rs.	As.	Ps.	Property & Assets	Rs.	As.	Ps.
Paid up Capital	6,36,890	0	0	Office premises, furniture, etc.	91,659	0	0
Reserve & other funds	3,71,882	13	11	Advances	31,28,612	4	9
Deposits	41,83,873	4	1	Investment on Govt. Securities etc. at cost	15,34,536	14	3
Due to Bankers	5,08,545	12	1	Sundries	74,183	5	7
Bills per contra	3,59,357	12	1	Bills for Collection	3,59,357	12	1
Sundries including branch adjustments & undisbursed profits	2,83,736	5	9	Cash on Hand & with bankers	12,05,397	14	8
Profit for the year 1942	49,461	3	5				
Total Rs.	63,93,747	3	4	Total Rs.	63,93,747	3	4

ಸಿನೆಮಾ ಸುದ್ದಿ.

ಇದು ರಾಷ್ಟ್ರಾಪಮಾನ!

ಇದನ್ನು ಪ್ರತಿಭಟಿಸಲೇಬೇಕು. 'ನನ್ನ ಮಗು' ಚಿತ್ರದಲ್ಲಿದ್ದ 'ವಂದೇ ಮಾತರಂ' ಹಾಡನ್ನು ಕತ್ತರಿಸಿ ಬಿಟ್ಟಿದೆಯೆಂದು ತಿಳಿದು ಯಾರು ತಾನೇ ಉದ್ವಿಗ್ನನಾಗಲಾರ! ಇದೀ ರಾಷ್ಟ್ರವೇ ಇಂದು ಕನ್ನಸಿಷೇಧ ತೋರಿಸಿದೆ. ಪತ್ರಿಕೆಗಳು ಇದನ್ನು ಖಂಡಿಸಿವೆ. ರಾಜಕೀಯಸಂಸ್ಥೆಗಳೊಡನೆ ಸರಕಾರಕ್ಕೆ ಯಾವುದೇ ಹೋರಾಟ ಇರಲಿ, ಕಾಂಗ್ರೆಸನ್ನು ಸದೆಯ ಬಡಿಯಬೇಕೆಂದೇ ಸರಕಾರದ ಅಪೇಕ್ಷೆಯಿದ್ದರೂ ಇರಲಿ, ಆದರೆ ಇದೀ ರಾಷ್ಟ್ರಕ್ಕೆ ಅಪಮಾನವಾಗುವಂಥಾ ಕಾರ್ಯವನ್ನು ಸರಕಾರ ಮಾಡಬಾರದು! ಹಾಗೆ ಮಾಡಿದರೆ ರಾಷ್ಟ್ರದವರು ಅದನ್ನು ಸಹಿಸಲೂಕೂಡದು! ಕಳೆದ ಅರ್ಧ ಶತಮಾನಗಳಿಂದ 'ವಂದೇ ಮಾತರಂ' ಭಾರತದ ರಾಷ್ಟ್ರಗೀತೆಯಾಗಿದೆ! ಪ್ರತಿಯೊಂದು ರಾಷ್ಟ್ರಕ್ಕೂ ಅವರವರ ರಾಷ್ಟ್ರಧ್ವಜ, ರಾಷ್ಟ್ರಗೀತೆಗಳೆಂದರೆ ಪ್ರಾಣಕ್ಕೆ ಸಮಾನ! ಯಾರೂ ತಮ್ಮ ಹಕ್ಕಿನಲ್ಲಿ ಕರಣ ಬರಲಾರರು! ಭಾರತದ ರಾಷ್ಟ್ರಾಭಿಮಾನವನ್ನು ಬ್ರಿಟಿಷ್‌ರಿಂದಲೂ ಕಾಪಾಡುವ ಪ್ರತಿಜ್ಞೆ ಮಾಡಿದ್ದಾರೆ! 'ವಂದೇ ಮಾತರಂ' ಹಾಡು ಆ ಸಿನೆಮಾದಲ್ಲಿದ್ದರೆ ಕ್ರಾಂತಿಯಾಗುತ್ತಿತ್ತೇನು? ಬ್ರಿಟಿಷ್ ಸಾಮ್ರಾಜ್ಯ ದಿವಾಳಿಯಾಗುತ್ತಿತ್ತೇನು? ಇಂಥಾ ರಾಷ್ಟ್ರಾಪಮಾನವನ್ನು ಭಾರತೀಯರು ಸಹಿಸಲಾರರು

ಒಂದು ಮುತ್ತಿಗೆ 52 ಸಾವಿರ ಡಾಲರು!

ಅಮೇರಿಕದಲ್ಲಿ ಯುದ್ಧ ನಿಧಿ ಸಂಗ್ರಹಿಸುವ ಹೊಸ ಉಪಾಯ ಒಂದನ್ನು ಕಂಡು ಹಿಡಿದಿದ್ದಾರೆ, ಸುಂದರಿಯರು ಮುತ್ತಿಡುವುದು! ಒಂದು ಸಲ ಮುತ್ತಿಡಲು ಇಷ್ಟು ಹಣ ಕೊಡಬೇಕೆಂದು ನಿಶ್ಚಯ. ಅದರ ಮಿತಿ ಅವರವರ ಸೌಂದರ್ಯ ಹೆಸರು, ವಿಲಾಸ ವಿಭ್ರಮಗಳನ್ನು ಹೊಂದಿಕೊಂಡಿದೆ. ಹೀಗೆ ಮುತ್ತಿಟ್ಟು ಯುದ್ಧನಿಧಿಗೆ ಹಣ ಸಂಗ್ರಹಿಸುವವರಲ್ಲಿ ಸಿನೆಮಾ ನಟಿಯರೇ ಧುರೀಣೆಯರು. ಹಡಿಲೆಮಾರ್‍ರಳ ಒಂದು ಮುತ್ತಿಗೆ ಓರ್ವ ಧನಿಕ ಅಮೇರಿಕದ ದೇಶಭಕ್ತನು ೫೨,೦೦೦ ಡಾಲರು ಕೊಡಲು ಒಪ್ಪಿದ್ದಾನೆ. 'ಎಕ್ಸ್ಟಸಿ' ಚಿತ್ರದಲ್ಲಿ ಮೊದಲನೆಯ ಸಲ ಬತ್ತಲೆಯಾಗಿ ನಟಿಸಿ ಕೀರ್ತಿ ಶಿಖರಕ್ಕೇರಿದ ಲೇಮಾರಳು ಅಮೇರಿಕದ ರೂಪರಾಣಿಯೆನಿಸಿದ್ದಾಳೆ. ತಮ್ಮ ಸ್ವಾತಂತ್ರ್ಯಕ್ಕಾಗಿ ಯುದ್ಧ ನಡೆಯುವುದೆಂದಾದರೆ ನಮ್ಮ ನಾಡಿನ ಸುಂದರಿಯರು—ನಮ್ಮ ಸಿನೆಮಾ ನಟಿಯರು—ಈ ಸ್ವಾರ್ಥತ್ಯಾಗ ಮಾಡಲು ಮುಂದೆ ಬಂದಾರೆ? ಸ್ನೇಹ ಪ್ರಭಾ ಪ್ರಧಾನಳು ಹೇಗಾದರೂ ಇಟ್ಟ 'ಅಡಿಯನ್ನು ಹಿಂದಿಡ'ಲಾಗದು!

ನಿರ್ಮಾಪಕ ಪ್ರದರ್ಶಕರ ಮೇಲೆ ಸರಕಾರದ ಬಲಾತ್ಕಾರವೆ?

ಸಪ್ಟಂಬರ 15, 1943ರಿಂದ, ಸಿನೆಮಾ ನಿರ್ಮಾಪಕರಿಗೆ ಕಚ್ಚಾ ಫಿಲ್ಮು ಕೊಡುವಾಗ, ಅವರು ಅದರಲ್ಲಿ ಕೆಲವಂಶವನ್ನು ಯುದ್ಧ ಪ್ರಚಾರ ಚಿತ್ರತಯಾರಿಸಲು ಉಪಯೋಗಿಸಬೇಕೆಂದು ಶರತ ಹಾಕಿ ಕೊಡಲಾಗುವುದು, ಸಿನೆಮಾ ಪ್ರದರ್ಶಕರಾದರೂ ೨೦೦೦ ಫೀಟು ಉದ್ದದ ಯುದ್ಧ ಪ್ರಚಾರ ಚಿತ್ರ ತೋರಿಸಬೇಕೆಂದು ಶರತ ಹಾಕಲಾಗಿದೆ. ಜಪಾನರನ್ನು ಈ ಅಸ್ತ್ರದಿಂದ ಗೆಲ್ಲಬಹುದೋ ಕೂಡದೋ ಎಂಬ ವಿಷಯ ಸೇನಾಪತಿ ವೈಸರಾಯರಾದ ವೇವಲರೇ ಬಲ್ಲರು! ಸರಕಾರವು ಹೀಗೆ ಮಾಡಲು ಕಾರಣವೆಂದರೆ ಬಹುಶಃ ಇದುವರೆಗೆ ಪ್ರಚಾರ ಚಿತ್ರಗಳನ್ನು ಪ್ರದರ್ಶಕರು ತೋರಿಸಲು ಯಾವಾಗಲೂ ಮುಖ ಸಪ್ಪಗೆ ಮಾಡುತ್ತಿದ್ದುದರಿಂದ ಇರಬೇಕು. ಈ ರೀತಿ ಅಸ್ತ್ರ ತೆಗೆದರೆ ಅವರು ಬಗ್ಗದೆ ನಿರ್ವಾಹವಿಲ್ಲ! ಅಂತೂ ಪ್ರೇಕ್ಷಕರು ಸಹಿಸದಿದ್ದರೂ, ಪ್ರದರ್ಶಕರು ಇನ್ನು ಮುಂದೆ ತೋರಿಸಬೇಕಾಗಿದೆ ಪ್ರಚಾರ ಚಿತ್ರಗಳನ್ನು!

ಮಂಗಳೂರು ರಶ್ಯನ್ ಚಿತ್ರಕ್ಕೆ ತಡೆ!

ರಶ್ಯವು ಬ್ರಿಟಿಷರ ಮಿತ್ರ ರಾಷ್ಟ್ರವಾಗಿ ಯುದ್ಧ ಸಾರಿದ ಮೇಲೆ ಕಮ್ಯುನಿಸ್ಟರಿಗೆ ಭಾರತದಲ್ಲಿ ಹಾಗೂ ಬ್ರಿಟಿಷ್ ರಾಜ್ಯದಲ್ಲಿ ಸ್ವಲ್ಪ ಶ್ವಾಸ ಬಿಡಲು ಸಂದರ್ಭವಾಗುತ್ತದೆ. ಈ ಸಂದರ್ಭವನ್ನು ಕಮುನಿಸ್ಟರು ಚನ್ನಾಗಿಯೇ ಉಪಯೋಗಿಸಿಕೊಳ್ಳುತ್ತಾರೆ. ಕಮುನಿಸ್ಟರು, ರಶ್ಯವು ಯುದ್ಧದಲ್ಲಿ ಸೇರಿದ ಕಾರಣ ಯುದ್ಧಕ್ಕೆ ಬೆಂಬಲ ಕೊಡುವವರಾದ್ದರಿಂದ(ಆ ಮೂಲಕ ಅಪ್ರತ್ಯಕ್ಷ ಕಾಂಗ್ರೆಸ್ ವಿರೋಧಮಾಡುವವರಾದ್ದರಿಂದಲೂ!) ಸರಕಾರ ಈಗ ಅವರನ್ನು ಸಡಿಲು ಬಿಡುತ್ತಲೂ ಇದೆ, ಅಂತೂ ಇತ್ತೀಚೆಗೆ ಅವರ ಪ್ರಚಾರ ಆತಂಕವಿದ್ದರೂ, ಸಾಮಾನ್ಯವಾಗಿ ನಡೆಯುತ್ತಾ ಉಂಟು!

ಅವರ 'ಪಿತೃಭೂಮಿ'ಯಿಂದ, ರಶ್ಯದಿಂದ, ಕಮುನಿಸ್ಟರು ಭಾರತಕ್ಕೆ ಕೆಲವು ಸಿನೆಮಗಳನ್ನೂ ತರಿಸಿದ್ದಾರೆ. ಭಾರತದ ಬೇರೆ ಕಡೆಗಳಲ್ಲಿ, ಮುಂಬಯಿ ಮೊದಲಾದೆಡೆಗಳಲ್ಲಿ ಅವುಗಳು ಪ್ರದರ್ಶಿತವಾಗಿ, ಜನ ನೋಡುತ್ತಿರುವುದು, ಕಮುನಿಸ್ಟರು ಕೊಂಡಾಡುತ್ತಿರುವುದೂ ನಡೆದೇ ಇದೆ. ಇಂಥ ಸಂದರ್ಭದಲ್ಲಿ, ಮಂಗಳೂರಿನ ಕಮುನಿಸ್ಟರೂ ಸುಮ್ಮಗಿರಲಿಲ್ಲ; 'ಪೀಟರ್ ದಿ ಫಸ್ಟ್' ಚಿತ್ರವೊಂದನ್ನು, ರಶ್ಯನ್ ಚಿತ್ರವೊಂದನ್ನು ತರಿಸಿಯೇ ಬಿಟ್ಟರು. ಸ್ಥಳೀಯ ನ್ಯೂ ಚಿತ್ರ ಥಿಯೇಟರಿನಲ್ಲಿ ಪ್ರದರ್ಶಿಸುವ ಏರ್ಪಾಡೂ ಆಯಿತು. ನೋಟೀಸು ಹಂಚಿದರು, ಟಿಕೇಟು ಮಾರಿದರು, ವಾದ್ಯ ಬಾರಿಸಿದರು ಹೀಗೆಲ್ಲಾ ಆದ ಮೇಲೆ ಜನ ಈ ಹೊಸತೇನೋ ನೋಡಬೇಕೆಂದು ಬಂದೇ ಬಂದರು.

ಕಳೆದ ಆದಿತ್ಯವಾರ ನ್ಯೂ ಚಿತ್ರದಲ್ಲಿ 'ಪೀಟರ್ ದಿ ಫಸ್ಟ್' ಪ್ರದರ್ಶಿತವಾಗುವುದಿತ್ತು ಪ್ರಾತಃ ೧೦-೩೦ ಗಂಟೆಗೆ! ಟಿಕೇಟು ಪಡೆಕೊಂಡವರೆಲ್ಲಾ ಸರಿಯಾದ ಸಮಯಕ್ಕೆ ಹಾಜರಿದ್ದರು, ಸುಂಬಾ ಜನ ಸೇರಿದ್ದರು. ಥಿಯೇಟರಿನ ಬಾಗಿಲಲ್ಲಿ ಚಿತ್ರಪ್ರದರ್ಶಿಸಲು ಅಧಿಕಾರಿಗಳು ತಡೆಮಾಡಿದರೆಂದೂ ಮುಂದೆವಿಚಾರಣೆನಡೆಸಿ ಸಮ್ಮತಿ ಕೊಡಲೂ ಬಹುದೆಂದೂ ತಿಳಿಯಿತು. ಕೆಲವರು ರೇಗಿದರು, ಕೆಲವರು ಹಣ ಹಿಂತೆಗೆದುಕೊಂಡರು. ಚಿಲ್ಲರೆಯಿಲ್ಲದೆ ಹಣ ಹಿಂದೆ ಕೊಡುವುದೂ ಕಮ್ಯುನಿಸ್ಟರಿಗೆ ಸಮಸ್ಯೆಯೇ ಆಯಿತು. ಕೆಲವರು ಮುಂದೆ ಸಮ್ಮತಿಯಿತ್ತರೆ ನೋಡೋಣವೆಂದು, ಟಿಕೇಟನ್ನು ತಮ್ಮಲ್ಲಿಯೇ 'ಭದ್ರ'ವಾಗಿಟ್ಟುಕೊಂಡು 'ಬಂದ ದಾರಿಗೆ ಸುಂಕವಿಲ್ಲದೆ' ಹಿಂತೆರಳಿದರು. ಬರುವ ಆದಿತ್ಯವಾರ ಈ ಚಿತ್ರವನ್ನು ಪ್ರದರ್ಶಿಸಲು ಅಧಿಕಾರಿಗಳು ಸಮ್ಮತಿಸಿದ್ದಾರೆಂದು ಈಗ ಸುದ್ದಿಯಿದೆ!

ಚಲಚ್ಚಿತ್ರ ವಿಮರ್ಶಕ ಸಂಘ

ಇದರ ಸಭೆಯು ಕಳೆದ ಆದಿತ್ಯವಾರ ಶ್ರೀ. ಕುಡ್ಪಿ ವಾಸುದೇವ ಶೆಣೈಯವರ ಅಧ್ಯಕ್ಷತೆಯಲ್ಲಿ ಸೇರಿ, ಹಲವು ವಿಚಾರಗಳ ಕುರಿತು ದೀರ್ಘ ಚರ್ಚೆ ನಡೆಸಿತು ಸಂಘಕ್ಕೆ ಒಂದು ಪ್ರತ್ಯೇಕ ಆಫೀಸು ಮಾಡಬೇಕೆಂದೂ ನಿರ್ಣಯವಾಯಿತು. ಸಂಘದ ಪರವಾಗಿ ಗೋಡೆ ಪತ್ರಿಕೆ ಮತ್ತು ಹಸ್ತಾಕ್ಷರ ಮಾಸಪತ್ರಿಕೆಗಳನ್ನು ಮಾಡುವುದೆಂದಾಯಿತು. ಸಂಘದ ಸಹಾಯಾರ್ಥ ಒಂದು ಸಿನೆಮಪ್ರದರ್ಶಿಸುವಂತೆ ಏರ್ಪಡಿಸಲು ಒಂದು ಸಮಿತಿ ರಚಿತವಾಯಿತು. ಸಂಘದ ಪ್ರಾರಂಭ ಭಾಷಣವನ್ನು ಮಾಡಲು ಶ್ರೀ. ರಂ. ರಾ. ತಲ್ಲೇರಿಕರರನ್ನು ಕೇಳಿಕೊಳ್ಳುವುದೆಂದೂ ಮಂಜೂರಾಯಿತು

ನೋಟಗಳು....

ಕಳೆದ ಆದಿತ್ಯವಾರ ಪ್ರದರ್ಶಿಸಲು ಸಿದ್ಧತೆ ಮಾಡಿದ 'ಪೀಟರ್ ದಿ ಫಸ್ಟ್' ರಶ್ಯನ್ ಚಿತ್ರವನ್ನು, ಬರುವ ಆದಿತ್ಯವಾರ ಪ್ರದರ್ಶಿಸಲು ಅಧಿಕಾರಿಗಳೀಗ ಅಪ್ಪಣೆಯಿತ್ತಿದ್ದಾರಂತೆ! ಇದು ನಿಜವಾದರೆ ತಡವಾಗಿಯಾದರೂ, ತೊಂದರೆ ತಾಪತ್ರಯಗಳು ಎಷ್ಟೇ ಒದಗಿದರೂ ಮಂಗಳೂರಿನ ಕಮುನಿಸ್ಟರಿಗೆ ಇದು ಜಯವೇ ಎನ್ನಬೇಕು. ತಮ್ಮ ಪಿತೃಭೂಮಿ ರಶ್ಯಕ್ಕಾದರೂ ಹೀಗೆಯೇ ತೊಂದರೆ ತಾಪತ್ರಯ ಎಷ್ಟು ಉಂಟಾದರೂ ಕೊನೆಗೆ ಜಯವುಂಟೆಂಬ ಶಕುನವಿದೆಂದು ಇದರಿಂದ ಯಾಕೆ ಅವರು ಸಮಾಧಾನ ಮಾಡಿಕೊಳ್ಳಬಾರದು?

ಶಕುನ ಜೋಣಿಷಗಳನ್ನು, ದೇವರು ಪಿಶಾಚಿಗಳನ್ನು ಕಮುನಿಸ್ಟರು ತತ್ವತಃ ನಂಬುವುದಿಲ್ಲವೇನೋ ಸರಿ! ಆದರೆ ತಮಗೆ ತತ್ಕಾಲಕ್ಕೆ ಇದರಿಂದ ಲಾಭವಾಗುವುದಾದರೆ, 'ಫೇಸಿಸ್ಟ್ ರಾಕ್ಷಸನನ್ನು ಮರ್ದಿಸುವ'ವರೆಗಾದರೂ ಕಮುನಿಸ್ಟರು ಇದನ್ನು ಯಾಕೆ ನಂಬಬಾರದು?

ಭಂಡವಾಳಗಾರ ರಾಷ್ಟ್ರದೊಡನೆ, ಸಾಮ್ರಾಜ್ಯಶಾಹೀ ಬ್ರಿಟನು ಅಮೇರಿಕಗಳೊಡನೆ ತತ್ವತಃ ಸಮತಾವಾದೀ ರಶ್ಯವು ಒಮ್ಮತದಿಂದಿರಲು ಸಾಧ್ಯವಿಲ್ಲವೆಂಬುದೇನೋ ನಿಶ್ಚಯ! ಆದರೂ ತನಗೆ ತತ್ಕಾಲಕ್ಕೆ ಇದರಿಂದ ಲಾಭವುಂಟೆಂದು 'ಫೇಸಿಸ್ಟ್ ರಾಕ್ಷಸನನ್ನು ಮರ್ದಿಸ'ಬಹುದೆಂದು ರಶ್ಯವೂ ಬ್ರಿಟನುಅಮೇರಿಕಗಳ ಮಿತ್ರರಾಷ್ಟ್ರವಾಗಿಲ್ಲವೇನು?

ಅತ್ತ ತಮ್ಮ 'ಪಿತೃಭೂಮಿ'ಯ ಮೇಲೆ, ರಶ್ಯದ ಮೇಲೆ ಜರ್ಮನ್ ಫೇಸಿಸ್ಟರು ಒಮ್ಮೆಲೇ ಧಾಳಿಯಿಟ್ಟದ್ದು, ಇತ್ತ ತಮ್ಮ 'ಪಿತೃಭೂಮಿ'ಯಿಂದ ಬಂದ ಚಿತ್ರದ ಮೇಲೆ, ರಶ್ಯನ್ ಚಿತ್ರ 'ಪೀಟರ್ ದಿ ಫಸ್ಟ್'ನ ಮೇಲೆ—ಜಿಲ್ಲಾಧಿಕಾರಿಗಳು ಒಮ್ಮೆಲೇ ತಡೆ ಹಾಕಿದ್ದು ಮಂಗಳೂರಿನ ಕಮುನಿಸ್ಟರಿಗೆ ಸಿಡಿಲು ಬಡಿದಂತಾಗಿರಬೇಕು!

'ವೈರಿಯ ಶಕ್ತಿ ಕುಗ್ಗಿಸಲು ದ್ವಿತೀಯ ರಂಗ ತೆರೆಯಿರಿ' ಎಂದು ಮಿತ್ರರೊಡನೆ ಕಮ್ಯುನಿಸ್ಟರು ಬಹುಕಾಲದಿಂದ ಕೇಳಿಕೊಂಡಿದ್ದರು! ಮಂಗಳೂರಿನ ಕಮುನಿಸ್ಟರೂ ಇದರಲ್ಲಿ ತಮ್ಮ ಕೊರಳ ದನಿ ಕೂಡಿಸಿದ್ದರು! ಎಂಥಾ ವೈರಿಯೇ ಆಗಲಿ, ಒಮ್ಮೆಗೇ ದ್ವಿತೀಯರಂಗ ತೆರೆದರೆ ಎಷ್ಟು ವಿಷಮ ಸಂಕಷ್ಟ ಒದಗುತ್ತದೆಂದು ಮಂಗಳೂರಿನ ಕಮುನಿಸ್ಟರಿಗೆ ಈಗ ಅನುಭವವಾದೀತು!

'ಈ ಮಹಾಯುದ್ಧದ ಪರಿಣಾಮವಾಗಿ ಮುಂದೆ ಹೊಸ ಜಗತ್ತು ನಿರ್ಮಾಣವಾಗಲಿದೆ' ಎಂದು ಪ್ರಪಂಚದ ಮುಂದಾಳುಗಳೆಲ್ಲರೂ ಹೇಳುತ್ತಾರೆ! ಹಿಟ್ಲರನೂ ಹೊಸ ಜಗತ್ತಿನ ನಿರ್ಮಾಣಕ್ಕಾಗಿಯೇ ಹೋರಾಡುತ್ತಾನಂತೆ! ಸ್ಟಾಲಿನನ ಹೊಸ ಜಗತ್ತಿನ ಕನಸು ಯಾವುದೆಂದು ಎಲ್ಲರಿಗೂ ಗೊತ್ತೇ ಇದೆ ಹಾಗೆಯೇ ಚರ್ಚಿಲ್ ರೂಸ್‌ವೆಲ್ಟರಿಗೂ ಹೊಸ ಜಗತ್ತು ನಿರ್ಮಿಸುವ ಅಭಿಪ್ರಾಯವಿದೆ

ಹೊಸ ಜಗತ್ತು ನಿರ್ಮಾಣವಾಗಬೇಕಾದರೆ ಹೊಸ ಹೊಸ ಸಿದ್ಧಾಂತಗಳನ್ನು ಜಗತ್ತಿನ ಜನತೆ ಒಪ್ಪಬೇಕು. ಆ ಸಿದ್ಧಾಂತಗಳಂತೆ ಆಚರಿಸುವ ಉತ್ಸಾಹವೂ ಇರಬೇಕು!

ಈ ಮಹಾಯುದ್ಧದ ಫಲವಾಗಿ ಹೊರಬಿದ್ದ ಒಂದು ಹೊಸ ಸಿದ್ಧಾಂತವೆಂದರೆ 'ಅಂತ್ಯದಲ್ಲಿ ನಮಗೆ ಜಯವಿದೆ ಎಂಬ ವಿಶ್ವಾಸ!' ಫೇಸಿಸ್ಟ್, ಕಮುನಿಸ್ಟ್, ಇಂಪೀರಿಯಲಿಸ್ಟ್ ಹಾಗೂ ಇನ್ನುಯಾವುದೇ 'ಇಸ್ಟ್'ರಿರಲಿ ಎಲ್ಲರಿಗೂ ಈ ಒಂದು ಹೊಸ ಸಿದ್ಧಾಂತದಲ್ಲಿ ಈಗ ಒಮ್ಮತವೇ ಇದೆ!

ಈ ವಿಶ್ವಾಸವು 'ಹೊಸ ಜಗತ್ತಿನ ನಿರ್ಮಾಣವಾಗಲಿದೆ' ಎಂಬ ಭವಿಷ್ಯದ ಶುಭಸೂಚನೆಯಾಗಿದ್ದರೂ ಇರಬಹುದು! 'ಅಂತ್ಯದಲ್ಲಿ ನಮಗೆ ಜಯವಿದೆ' ಎಂದು ನಮ್ಮೂರಿನ ಕಮುನಿಸ್ಟರೂ ಈಗ ವಿಶ್ವಾಸವಿಟ್ಟುಕೊಂಡರೆ ತಪ್ಪೇನು?

'ಪೀಟರ್ ದಿ ಫಸ್ಟ್' ಚಿತ್ರವನ್ನು ಬರುವ ಆದಿತ್ಯವಾರ ನಾವು ನೋಡಬಹುದಾದರೆ 'ಅಂತ್ಯದಲ್ಲಿ ನಮಗೆ ಜಯವಿದೆ'ಯೆಂಬುದು ಖಂಡಿತ! ಇದೇ ಕ್ರಮ ಮುಂದುವರಿದರೆ ಹೊಸ ಜಗತ್ತಿನ ನಿರ್ಮಾಣವಾದರೂ ಆಗಬಹುದು!

ರೈಲು ಬಂಡಿಗಳ ಸಮಯ

ಏಪ್ರಿಲ್ ತಾ. ೧೫ರಿಂದ ವ್ಯತ್ಯಸ್ಥವಾದ ಪ್ರಕಾರ.

	ಹೊರಡುವುದು.	ಬರುವುದು.
ಮೈಲ್	೭-೪೦ ಪೂ.	೬-೩೫ ಅಪ.
ಶಟ್‌ಲ್	೬-೩೦ ಅಪ.	೧೧-೫ ಪೂ.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಉದ್ದೇಶಕ್ಕಾಗಿಯೇ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದುದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು. ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

The Bank of Mangalore Limited, Mangalore.

ESTD. 1931

HEAD OFFICE: Mangalore.

BRANCHES: Moodabidri & Padubidri.

The Bank Undertakes to Collect Cheques, Demand and Documentary Bills at Most Competitive Rates.

ISSUES DRAFTS ON ALL IMPORTANT TOWNS IN THE DISTRICT

and also on

BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.

at very favourable rates

All kinds of inland banking business undertaken



ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಸಿಕ್ಕ, ಹುಣಿದ್ರವ, ಕಲೆ, ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ, ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ನೀವೀವರೆಗೆ ವಿಮೆಯನ್ನು ಇಳಿಸದಿದ್ದರೆ, ಯಾ ಸಾಕಷ್ಟು ವಿಮೆಯನ್ನು ಮಾಡಿಲ್ಲವಾದರೆ

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡಿನಲ್ಲಿ

ಈಗಲೇ ವಿಮೆ ಇಳಿಸಿರಿ.

ಏಕೆಂದರೆ

1. ಜೀವವಿಮೆಯು ಒಬ್ಬನ ವೃದ್ಧಾಪ್ಯದ ಮತ್ತು ಸಮೀಪದ ಹಾಗೂ ಪ್ರೀತಿಯ ಸಂಬಂಧಿಕರ ಜೀವನವನ್ನು ಸುರಕ್ಷಿತಗೊಳಿಸುತ್ತದೆ
2. ನೀವಿಂದು ವಿಮೆಯನ್ನಿಳಿಸಬಲ್ಲಿರಾದರೆ ನಾಳೆ ಹಾಗೆ ಮಾಡಲು ಶಕ್ತರಾಗದೆ ಹೋಗಬಹುದು.
3. ಆರೋಗ್ಯವು ಅನಿಶ್ಚಿತವೆಂದಾದರೆ ಮೃತ್ಯುವು ಯಾರನ್ನೂ ಬಿಡುವಂತಿಲ್ಲ.
4. ಮೃತ್ಯು ಮತ್ತು ಮುಪ್ಪು ಎಂಬುದು ಅಮೂಲ್ಯವಾದೊಂದು ನಿಶ್ಚಿತ.
5. ಜೀವವಿಮೆಯು ಮರಣದ ಕ್ರೂರತೆಯನ್ನು ಹೋಗಲಾಡಿಸುವುದೊಂದೇ ಅಲ್ಲ; ಅದರ ಸಂಕಷ್ಟವನ್ನೂ ದೂರೀಕರಿಸುತ್ತದೆ.

ಆದುದರಿಂದ ಇಂದೇ ಜೀವವಿಮೆ ಮಾಡುವುದು ಲಾಭಕರವಾಗಿದೆ.

ವಿಶೇಷ ಮಾಹಿತಿಗೆ ದಯಮಾಡಿ ಬರೆಯಿರಿ;

ಕೊಟ್ಟಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ.

— : ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ : —

ಮಂಗಳೂರು ಕಲ್ಲಿಕೋಟೆ ಸೇಲಂ ತಿರುವಾಂಕೂರು ಬೆಂಗಳೂರು ನಗರ ಮತ್ತು ಬೊಂಬಾಯಿ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯೌಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು:–

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘವೇಂದ್ರ ಪೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ| ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೋ:–1. ದುರ್ಗಾದಗಲ್ಲಿ ಹುಬ್ಬಳ್ಳಿ.
2. 36 ಫ್ಯಾಕ್ರೋಫ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.

ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ
SWADESHABHIMANI
ESTD. 1906
[ಸಂಪುಟ 37] ತಾರೀಕು 23—7—1943 [ಸಂಚಿಕೆ 30]

'ಗಾಂಧಿಜಿ ಮುಂದಾಳುತನದಲ್ಲಿ ವಿಶ್ವಾಸವಿದೆ'

ಬ್ರಿಟಿಷ್ ಮಿಶನರಿಗಳ ವಿನಂತಿ

ಅಮೆರಿಕದಲ್ಲಿ ಪಂಡಿತ ಕುಮಾರಿಯರು.

ಅಮೆರಿಕದಲ್ಲಿ ಪಂಡಿತ ಸೋದರಿಯರು

'ವಿದ್ಯಾಭ್ಯಾಸದ ಬಳಿಕ ಸಾರ್ವಜನಿಕ ಸೇವೆ!'

ಅಮೆರಿಕದ ಯುದ್ಧ ವಾರ್ತಾ ಪ್ರಚಾರ ಸಂಘವು, ಈ ಇಬ್ಬರು ಭಾರತ ಕುಮಾರಿಯ ವಿಷಯ್ಯು, ನೆಹರು ಸೊಸೆಯಂದಿರು ಹಾಗೂ ಶ್ರೀ. ಅರ್. ಎಸ್. ಪಂಡಿತ್ ಮತ್ತು ವಿಜಯಲಕ್ಷ್ಮಿ ಪಂಡಿತರ ಮಕ್ಕಳು ಚಂದ್ರಲೇಖಾ ಮತ್ತು ನಯನತಾರಾ ಇವರು ಅಮೆರಿಕಕ್ಕೆ ವಿದ್ಯಾಭ್ಯಾಸಕ್ಕಾಗಿ ಬಂದ ವಿಷಯ, ಅವರು ಅಲ್ಲಿ ಇಷ್ಟರಲ್ಲಿಯೇ ಮಾಡುತ್ತಿರುವ ಚಟುವಟಿಕೆಗಳ ವಿಷಯ ಸುದ್ದಿಗಳ ಮೇಲೆ ಸುದ್ದಿಗಳನ್ನು ಒದಗಿಸುತ್ತದೆ. ಅವರ ಪ್ರಾಯ ಅವರ ಬಣ್ಣ, ಅವರ ರಾಜಕೀಯ ಮನೋಭಾವನೆ, ಅವರ ಭವಿಷ್ಯ ವಿಚಾರ ಒಂದೊಂದನ್ನೇ ಬಹಳ ವಿಸ್ತರಿಸಿ ಕೊಡುತ್ತಿದೆ. ಪರ್ಲ್‌ಬಕ್, ಲುಯಿ ಪಿಶರ್, ಶ್ರೀಮತಿ ಗಂಥರ್ ಇವರೊಡನೆ ಇವರು ಸಂಚರಿಸುವ ವಿಚಾರಗಳನ್ನು ಕೊಟ್ಟಿದೆ.

ಇನ್ನೊಂದು ಪ್ರಚಾರವೇನು? ಅವರ ತಂದೆ ಶ್ರೀ. ಅರ್. ಎಸ್. ಪಂಡಿತರು ಸೆರೆಮನೆಯಲ್ಲಿದ್ದಾರೆ; ಅವರ ತಾಯಿ ಸೆರೆಮನೆಯಲ್ಲಿದ್ದರು. ಇತ್ತೀಚೆಗೆ ಬಿಡುಗಡೆ ಆಗಿದೆ. ಅವರ ಮಾವ ನೆಹರು ಬಹುಶಃ ಇದು ಹತ್ತನೆಯ ಸಲ, ಸೆರೆಮನೆಯಲ್ಲಿ ತಳ್ಳಲ್ಪಟ್ಟಿದ್ದಾರೆ. ಸ್ವತಃ ಇವರಲ್ಲಿ ಓರ್ವಳು ಚಂದ್ರಲೇಖಾ ಸೆರೆಮನೆ ರುಚಿ ನೋಡಿದವಳು! ಇವರೆಲ್ಲಾ ಕಾಂಗ್ರೆಸಿನವರು; ಕಾಂಗ್ರೆಸಿನವರು ಜಪಾನೀ ಪಕ್ಷಪಾತಿಗಳೆಂದು ಸರಕಾರ ಆರೋಪಿಸಿ ಸೆರೆಮನೆಗೆ ಮುಖಂಡರನ್ನೆಲ್ಲಾ ಸೇರಿಸಿಬಿಟ್ಟಿದೆ! ಪಂಡಿತ ಕುಮಾರಿಯವರನ್ನು 'ನೆಹರು ಸೊಸೆಯರು' ಎಂದು ಅಮೆರಿಕದ ಯುದ್ಧ ವಾರ್ತಾ ಪ್ರಚಾರ ಶಾಖೆ ಪರಿಚಯ ಮಾಡಿಕೊಟ್ಟಿದೆ! ನೆಹರು, ಯಾರು? ಈಗ ಅವರೆಲ್ಲಿದ್ದಾರೆ? ಯಾಕಾಗಿ ಹಾಗಾಗಿದ್ದಾರೆ? ಈ ಪ್ರಶ್ನೆಯನ್ನು ಅಮೆರಿಕದ ಜನತೆ, ಪ್ರಪಂಚದ ಜನತೆ ಕೇಳದೇನು?

ಇನ್ನೊಂದು ಸುದ್ದಿಯೆಂದರೆ, ಈ ಕುಮಾರಿಯರು ಅಮೆರಿಕದ ಮುಂದೆಗೆ 'ಭಾರತದ ಜನರು ಫೇಸಿಸ್ಟ್ ವಿರೋಧಿಗಳು' ಎಂದು ಹೇಳುತ್ತಾರೆ ಎಂಬುದು! ಹಾಗಾದರೆ ಚಂದ್ರಲೇಖಾ ನಯನತಾರಾ ಇವರ ತಂದೆ,ತಾಯಿ, ಮಾವ ಕೆಲಕಾಲ ಸ್ವತಃ ಅವರಲ್ಲೋರ್ವಳೂ, ಇವರೆಲ್ಲಾ ಯಾಕೆ ಸೆರೆಮನೆಗೆ ತಳ್ಳಲ್ಪಟ್ಟರು ಎಂಬ ಪ್ರಶ್ನೆ ಯಾರ ತಲೆಗೂ ಹೊಳೆಯದೇನು? ನಿಜವಾಗಿ, ಸೆರೆಮನೆ ಸೇರಿಸಲ್ಪಟ್ಟ ಇವರೆಲ್ಲಾ 'ದಂಗೆಗಾರರು' 'ಪಂಚಮ ದಳದವರು' ಆಗಿದ್ದರೆ, ಅಂಥವರ ಸಂಬಂಧಿಕರಿವರನ್ನು, ಸ್ವತಃ 'ದಂಗೆಗಾರಳೂ' 'ಪಂಚಮ ದಳ'ದವಳೂ ಆಗಿದ್ದ ಓರ್ವಳನ್ನು, ಸತೀ ಚಿಯಾಂಗ್ ಕೈಶೇಕ್ ತನ್ನ ಮಾತೃ ವಿದ್ಯಾ ಮಂದಿರದಲ್ಲಿ ವಿದ್ಯಾಭ್ಯಾಸ ಮಾಡಲು ಪ್ರಯತ್ನಿಸಿದ್ದು, ಅವರೀಗ ಅಲ್ಲಿ ಸೇರಿ ಕಲಿಯುತ್ತಿರುವುದು ಇದರಿಂದ ಮಿತ್ರ ರಾಷ್ಟ್ರಗಳ ಯುದ್ಧ ಯತ್ನಕ್ಕೆ ಆತಂಕವಾಗದೇನು! ಏನೋ ಇಂಥಾ ಪ್ರಶ್ನೆಗಳು ಹಲವು ಹುಟ್ಟುತ್ತವೆ. ಯುದ್ಧ ಯತ್ನದಲ್ಲಿ ನಿರತರಾದವರಿಗೆ ಇದು ಇಷ್ಟರವರೆಗೆ ಹೊಳೆದಿರಲೇ ಬೇಕು! ಆದರೆ ಅವರ ಸಮಾಧಾನವೇನೆಂಬುದು ಮಾತ್ರ ನಮಗೆ ಗೊತ್ತಾಗುವುದಿಲ್ಲ!

ಅಮೆರಿಕದಲ್ಲಿರುವ ಈ 'ನೆಹರು ಸೊಸೆಯಂದಿರ ಇತ್ತೀಚೆಯ ಸುದ್ದಿ ಇವು; 'ನ್ಯೂಯಾರ್ಕಿಗೆ ಬಂದ ಮೇಲೆ ಅವರಿಗೆ ಆನಂದವೇ ಎನಿಸಿದೆ. ಚೀನಾ ಜಪಾನಿನೆದುರು ಮಾಡಿದ ಹೋರಾಟದ ಆರನೇ ವಾರ್ಷಿಕ ಸಮಾರಂಭ ಕೂಟಕ್ಕೆ ಅವರು ಹೋಗಿದ್ದರು. ಪರ್ಲ್‌ಬಕ್ ಇವರನ್ನು ಪತ್ರಿಕೋದ್ಯೋಗಿಗಳಿಗೆ ಪರಿಚಯ ಮಾಡಿಸಿದರು. ರೋಕ್ ಫೆಲರ್ ಸೆಂಟರ್ ಮ್ಯುಸಿಕ್ ಹಾಲಿನಲ್ಲಿ ಅವರಿಗಾಗಿ ಕೊಟ್ಟ ಭೋಜನ ಕೂಟದಲ್ಲಿ ಭಾಗಿಗಳಾಗಿದ್ದರು. ಅವರಿಗೆ ಅಮೆರಿಕದ ಸಾಮಾನ್ಯ ಜೀವನ ತಿಳಿವ ಆಶೆ; ಆ ಜನರಿಗೆ ತಮ್ಮ ರಾಷ್ಟ್ರದ ಜನತೆಯ ಸಾಮಾನ್ಯ ಜೀವನ ಸ್ಥಿತಿ ತಿಳಿಸಲೂ ಆಶೆ. ಅನ್ಯೋನ್ಯ ಮೈತ್ರಿ ಬೆಳೆಸುವಾಶೆ. ಏಕೆಂದರೆ ಅದರಿಂದ ಭವಿಷ್ಯ ಜಗತ್ತಿನಲ್ಲಿ ಸುಖವುಂಟೆಂದು ಅವರ ಭರವಸೆ. ವೆಲ್ಲೆಸ್ಲಿ ಕಾಲೇಜಿನಲ್ಲಿ ಅವರು ರಾಜಕೀಯ ವಿಜ್ಞಾನ, ಸಮಾಜ ಶಾಸ್ತ್ರ ಮತ್ತು ಆಧುನಿಕ ಇತಿಹಾಸ ಕಲಿಯಲಿಚ್ಛಿಸುತ್ತಾರೆ. ಅದನ್ನು ಕಲಿತು ಭಾರತಕ್ಕೆ ಬಂದು ಸಾರ್ವಜನಿಕ ಸೇವೆಯಲ್ಲಿ ಜೀವನ ಸವೆಯುವುದು "ಅವರ ಇಂದಿನ ನಿರ್ಧಾರ."

ಗಾಂಧಿಜಿಯಲ್ಲಿ ನಮಗೆ ವಿಶ್ವಾಸವಿದೆ!

ಕಾಂಗ್ರೆಸಿನವರ ಹೇಳಿಕೆ

ಇತ್ತೀಚೆಗೆ ಸೆರೆಮನೆಯಿಂದ ಶರತವಿನಾ ಬಿಡುಗಡೆ ಹೊಂದಿ ಹೊರಬಂದ ಬೊಂಬಾಯಿಯ ಕೆಲವು ಕಾಂಗ್ರೆಸ್ ಮುಂದಾಳುಗಳು (ಇವರಲ್ಲಿ ಮಹಿಳೆಯರೂ ಇರುವರು) ಗಾಂಧಿಜಿಯ ಮುಂದಾಳುತನದಲ್ಲಿ ತಮಗೆ ಅಚಲ ವಿಶ್ವಾಸವಿದೆಯೆಂದೂ, ಕಾಂಗ್ರೆಸಿನ ಕಾರ್ಯಕ್ರಮವನ್ನು ನಿಶ್ಚಯಿಸುವುದು, ಬದಲಿಸುವುದು ಯಾವುದು ಮಾಡುವುದಿದ್ದರೂ, ಗಾಂಧಿಜಿಯೇ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರೊಡನೆ ಆಲೋಚಿಸಿ ಮಾಡಬಲ್ಲರು, ಇತರರು ಮಾಡುವುದು ನ್ಯಾಯವಲ್ಲವೆಂದೂ, ಆದ ಕಾರಣ, ಕೆಲವರು ಎ. ಐ. ಸಿ. ಸಿ. ಸದಸ್ಯರು ಸಭೆ ಸೇರಿ ಅಗಸ್ಟ್ ನಿರ್ಣಯವನ್ನು ಹಿಂದೆಗೆಯಬೇಕೆಂದೂ ಮಾಡಿರುವ ಸೂಚನೆಯು ವಿಷಾದಕರವಿರುತ್ತದೆಂದೂ ತಿಳಿಸಿದ್ದಾರೆ.

ಶ್ರೀ. ಕಮಲನಯನ ಬಜಾಜರು ಒಂದು ಹೇಳಿಕೆಯಲ್ಲಿ ಹೀಗೆಂದಿರುವರು: "ಶ್ರೀ. ವಾಸ್ತವರ ಹೇಳಿಕೆ ಮತ್ತು ಅವರನ್ನು ಅನುಮೋದಿಸುವವರ ಹಾಗೂ ವಿರೋಧಿಸುವವರ ಹೇಳಿಕೆಗಳನ್ನು ನಾನೋದಿದ್ದೇನೆ. ಶ್ರೀ. ವಾಸ್ತವರ ಅಂತರಂಗ ಶುದ್ಧಿ ವಿಚಾರ ಯಾರೂ ಪ್ರಶ್ನಿಸಲಾರರು. ಆದರೆ ಈ ಸಂದರ್ಭದಲ್ಲಿ ಅವರು ಮಾಡಿದ ಸೂಚನೆ ವ್ಯವಹಾರ್ಯ ರಾಜಕೀಯಕ್ಕೆ ಅನುಚಿತವಿದೆ. ಮಹಾತ್ಮಾಜಿ, ಕಾಂಗ್ರೆಸ್ ವರ್ಕಿಂಗ್ ಕಮಿಟಿ ಹಾಗೂ ಅಧಿಕ ಸಂಖ್ಯಾಕ ಎ. ಐ. ಸಿ. ಸಿ. ಸದಸ್ಯರು ಸೆರೆಮನೆಯಲ್ಲಿರುವಾಗ ಎ. ಐ. ಸಿ. ಸಿ. ಸಭೆ ಈಗ ಸೇರುವುದಾದರೂ ಹೇಗೆ? 'ಕೋರಂ' ಸಿಗುವಷ್ಟು ಸದಸ್ಯರು ಈಗ ಇರುವರಾದರೂ ಈ ಸೂಚನೆ ಎಷ್ಟರ ಮಟ್ಟಿಗೆ ಕ್ರಮಬದ್ಧವಾಗುವುದೋ ನನಗೆ ಸಂಶಯವಿದೆ. ಮಾತ್ರವಲ್ಲದೆ ಎ. ಐ. ಸಿ. ಸಿ. ಯವರು ಅಂಥಾ ಸಭೆ ಕರೆದರೆ ಅದರಿಂದ ಬ್ರಿಟಿಷ್ ಸರಕಾರವು ತೃಪ್ತಿಗೊಂಡೀತೆ? ಅದಾಗದಿದ್ದರೆ ಆ ಸಭೆಯ ಉದ್ದೇಶವೇನು? ಇದರಿಂದ ಗಾಂಧಿಜಿಯಲ್ಲಿ ಒಂದು ತರದ ಅವಿಶ್ವಾಸ ವ್ಯಕ್ತಮಾಡಿದಂತಾಗುವುದಿಲ್ಲವೆ? ಇಂದಿನ ಬಿಕ್ಕಟ್ಟನ್ನು ಬಗೆಹರಿಸಲು ಪಾರ್ಲಿಮೆಂಟರಿ ಕಾರ್ಯಕ್ರಮ ಬೇಕೆನ್ನುವ ಜನ ಇನ್ನೂ ನಮ್ಮಲ್ಲಿದ್ದಾರೆಂಬುದನ್ನು ನೋಡಿ ನನಗೆ ಆಶ್ಚರ್ಯವಾಗುತ್ತದೆ. ದಿವಂಗತ ಅಲ್ಲಾಬಖ್ಷರನ್ನು ಒತ್ತಾಯದಿಂದ ರಾಜಿನಾಮೆ ಕೊಡಿಸಿದ್ದು ಇವಾದರೂ ಈ ಜನಗಳ ಕಣ್ತೆರೆಯಿಸಲಿಲ್ಲವೆ? ಪ್ರಾಂತಿಕ ಆಡಳಿತವು ಗವರ್ನರರೊಬ್ಬರ ಇಛ್ಛಾ ಪ್ರಕಾರ ನಡೆಯುವುದಾದರೆ ನಾವು ಎಂಥಾ ಉನ್ನತಾಧಿಕಾರ ಸ್ವೀಕಾರ ಮಾಡಿಕೊಂಡೂ ಪ್ರಯೋಜನವೇನು? ಆಹಾರ ಸಮಸ್ಯೆ ಮೊದಲಾದ ಸಮಸ್ಯೆಗಳು ನಮ್ಮ ಮುಂದಿವೆಯೆಂದು ನಾನು ನಿಜವಾಗಿ ವಿಷಾದಿಸುತ್ತೇನೆ. ಇಂದು ಆ ಸಮಸ್ಯೆಗಳನ್ನು ಸಾಧ್ಯವಾದಷ್ಟು ಬಗೆಹರಿಸಲು ಯತ್ನಿಸಬೇಕು. ಕಾಂಗ್ರೆಸಿನವರಿಗೆ ಅದಕ್ಕಾಗಿ ಸಭೆ ಸೇರಿಸಲು ಕಷ್ಟ ಗಂಡಾಂತರಗಳೊದಗಿದರೆ, ನಿರಾತಂಕವಿರುವ ದಾರಿಯಲ್ಲಿ ಕೆಲಸಮಾಡಲು ತೊಡಗಬೇಕು. ನಾವು ನಿಜವಾಗಿ ಈ ವಿಚಾರಗಳನ್ನು ಗಂಭೀರವಾಗಿ ಮನಸ್ಸಿಗೆ ತೆಕ್ಕೊಂಡರೆ ತುಂಬಾ ಕೆಲಸಮಾಡಲು ಆಗುತ್ತದೆ."

ಭಾರತದ ಬಿಕ್ಕಟ್ಟು ಬಗೆಹರಿಸಲು ಬ್ರಿಟಿಷ್ ಮಿಶನರಿಗಳ ವಿನಂತಿ!

ಭಾರತದ ಕೆಲವು ಬ್ರಿಟಿಷ್ ಮಿಶನರಿಗಳು ಒಂದು ಸಂಯುಕ್ತ ಪ್ರಕಟಣೆ ಹೊರಡಿಸಿ ಭಾರತದ ಎಲ್ಲಾ ಪಕ್ಷಗಳಿಗೂ ರಾಜಕೀಯ ಒಪ್ಪಂದ ಮಾಡಿಕೊಳ್ಳಲು ಹಾಗೂ ರಾಜಕೀಯ ಸಮಸ್ಯೆಯನ್ನು ಹೊಸ ರೀತಿಯಿಂದ ಬಿಡಿಸಲು ವಿನಂತಿಯೊಂದನ್ನು ಮಾಡಿದ್ದಾರೆ. ಈ ವಿನಂತಿಯಲ್ಲಿ ಅವರು ಸರಕಾರಕ್ಕೂ ಹಿಂಸೆಯ ಅಪಾದನೆಯಸಲುವಾಗಿ ಶಿಕ್ಷೆಗೆ ಗುರಿಯಾದವರನ್ನುಳಿದು ಉಳಿದ ಎಲ್ಲಾ ರಾಜಕೀಯ ಕೈದಿಗಳನ್ನೂ ಬಿಡುಗಡೆ ಮಾಡಬೇಕೆಂದು ಕೇಳಿಕೊಂಡಿದ್ದಾರೆ. ಅವರ ಪ್ರಕಟಣೆಯ ಸಾರಾಂಶವಿಂತಿದೆ:

'ಸ್ವತಂತ್ರ ಭಾರತದ ಘಟನೆಯನ್ನು ನಿರ್ಧರಿಸಲು ಭಾರತಕ್ಕೆ ಹಕ್ಕಿದೆಯೆಂದು ಅಧಿಕೃತವಾಗಿ ಸಾರಿದ್ದರೂ, ಈ ಉದ್ದೇಶವನ್ನು ಪೂರ್ತಿ ಮಾಡುವಂತೆ ಆಗಬೇಕಾದದ್ದೊಂದೂ ಆಗದಿರುವುದು ಹಾಗೂ ಭಾರತೀಯರಲ್ಲಿ ಅವಿಶ್ವಾಸ ಮತ್ತು ವಿಷಮತೆ ಉಂಟಾದದ್ದು ವಿಷಾದಕರ. ಭಾರತದಲ್ಲಿರುವ ವಿಚಾರವಂತ ಜನರ ಸಹಕಾರದಿಂದ ಒಂದು ಒಪ್ಪಂದ ಸಾಧ್ಯವಿದೆ. ಆದ್ದರಿಂದ ಎಲ್ಲಾ ಪಕ್ಷದವರೂ ಈ ಸಮಸ್ಯೆ ಬಿಡಿಸುವ ಹೊಸ ದೃಷ್ಟಿಯಿಂದ ವಿಚಾರಿಸಬೇಕು ಹಾಗೂ ಅನ್ಯೋನ್ಯ ಸರಿಯಾಗಿ ಚರ್ಚಿಸಿ ತಮ್ಮಲ್ಲಿರುವ ಮತಭೇದಗಳನ್ನು ಪರಿಹರಿಸಿಕೊಳ್ಳಬೇಕು. ಭಾರತಕ್ಕೆ ಸ್ವತಂತ್ರ ಸಾರುವ ಯಾವುದೇ ಯೋಜನೆಗೆ ಬ್ರಿಟನು ಒಪ್ಪುವುದಿಲ್ಲವೆಂಬ ವಿಷಯ ನಮಗೆ ಗೊತ್ತಿದೆ. ಏನೆಂದರೂ ಬ್ರಿಟನು ಭಾರತಕ್ಕೆ ಕೊಟ್ಟ ಭರವಸೆಗಳು ಅಸ್ಪಷ್ಟವಿರುವುದರಿಂದ ಹಿಂದಿನ ಭರವಸೆಗಳನ್ನು ಪೂರ್ತಿ ಮಾಡಲಿಲ್ಲವೆಂಬುದೂ ನಮಗೆ ಗೊತ್ತು. ಮೊದಲನೆಯ ಆರೋಪದ ಕುರಿತು ಬೇರೆ ಬೇರೆ ಪಂಗಡಗಳ ಮುಖಂಡರು ತಮಗೆ ಅಸ್ಪಷ್ಟವೆಂದು ತೋರಿದ್ದನ್ನು ಸ್ಪಷ್ಟಗೊಳಿಸಲು ಸರಕಾರದೊಡನೆ ಕೇಳಬೇಕು. ಭಾರತವನ್ನು ಸ್ವತಂತ್ರ ಮಾಡುವ ವಿಚಾರದಲ್ಲಿ ಬ್ರಿಟಿಷ್ ಸರಕಾರವು ೧೯೪೦ರಿಂದ ಕೊಟ್ಟ ಮಾತುಗಳನ್ನು ಪುನರ್ವಿಮರ್ಶಿಸಬೇಕು. ಹೀಗೆ ಮಾಡಿದರೆ ಬ್ರಿಟಿಷ್ ಜನರಿಗೂ ಜಗತ್ತಿನ ಇತರ ಜನರಿಗೂ ಆ ಮಾತುಗಳು ತಿಳಿದು ಮುಂದೆ ಬ್ರಿಟಿಷ್ ಸರಕಾರದ ಮಾತು ಮುರಿಯದಂತೆ ಅವರು ಪ್ರಯತ್ನಿಸುವರು. ಭಾರತದಲ್ಲಿಂದು ಅಸಮಾಧಾನವಿರುವುದರಿಂದ ಹೊಸ ಘಟನೆಯನ್ನು ಯುದ್ಧ ಮುಗಿವವರೆಗೆ ಮುಂದುವರಿಸದೆ ಕೂಡಲೇ ಏನಾದರೂ ಮಾಡಬೇಕು. ಭಾವೀ ರಾಜ್ಯಘಟನೆಗೆ ಸಂಬಂಧಿಸಿದ ಎಲ್ಲಾ ವಿಚಾರಗಳನ್ನೀಗ ಇತ್ಯರ್ಥಿಸಬೇಕು. ಇದಕ್ಕಾಗಿ ಹಿಂಸಾಕೃತ್ಯವಲ್ಲದ ಆರೋಪಗಳಿಗೆ ಗುರಿಯಾದ ಎಲ್ಲಾ ರಾಜಕೀಯ ಕೈದಿಗಳ ಬಿಡುಗಡೆಯಾಗಬೇಕು.'

ಗಾಂಧಿಜಿ ಅಮೆರಿಗೆ ಪತ್ರ ಬರೆದಿರುವರೆ?

ಗಾಂಧಿಜಿ ಜಿನ್ನರಿಗೆ ಪತ್ರ ಬರೆದುದನ್ನು ವೈಸರಾಯರು ತಡೆದ ಮೇಲೆ ಅವರು ವೈಸರಾಯರಿಗೆ ಪತ್ರ ಬರೆದಿಲ್ಲವೆಂದೂ, ಈ ಸಲ ನೇರಾಗಿ ಅಮೆರಿಗೆ ಪತ್ರ ಬರೆಯುತ್ತಿದ್ದಾರೆಂದೂ ಇನ್ನೊಂದು ಸುದ್ದಿಯಿದೆ. ಆಗಸ್ಟ್ ಪ್ರಥಮ ವಾರದಲ್ಲಿ ವೈಸರಾಯರು ಕೇಂದ್ರ ಶಾಸನ ಸಭೆಯಲ್ಲಿ ಭಾಷಣ ಮಾಡಬಹುದೆಂದೂ ಅದರಲ್ಲಿ ಧೋರಣೆ ಬದಲಾವಣೆ ವಿಷಯವಿದ್ದರೆ ತಿಳಿಸಬಹುದೆಂದೂ ಸುದ್ದಿ. ಸೇವಾ ಗ್ರಾಮ ನಿವಾಸಿಗಳಿಗೆ ಕಸ್ತೂರ್‌ಬಾ ಬರೆದ ಪತ್ರದಲ್ಲಿ ಗಾಂಧಿಜಿ ಆರೋಗ್ಯದಿಂದಲೂ ಹಸನ್ಮುಖಿಗಳಾಗಿರುವರೆಂದೂ; ತಾನು ಆರೋಗ್ಯ ಹೊಂದುತ್ತಿರುವೆನೆಂದೂ ತಿಳಿಸಿದ್ದಾರೆ.

ಭಾರತದ ಬಿಕ್ಕಟ್ಟು

ಬ್ರಿಟಿಷರಿಂದ ಬಿಗಿಯಿತು!

೧೮೦ ವರ್ಷಗಳ ಆಡಳಿತದಲ್ಲಿ!

ಎಡ್ಗರ್ ಸ್ನೋ ಬರೆಯುತ್ತಾರೆ

ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯ ದುರ್ಬಲವಾಗಿದ್ದು ಇಲ್ಲದಿದ್ದರೆ ಪಕ್ಷದಲ್ಲಿ ಅದರ ಸಂರಕ್ಷಣೆಗೆ ಅಮೇರಿಕದ ಸಹಾಯ ಬೇಕಾಗುತ್ತಿರಲಿಲ್ಲ. ಭಾರತ ೪೦ ಕೋಟಿ ಜನರ ಜನಾಂಗ. ಚೀನ ಜಪಾನುಗಳ ಸಂಯುಕ್ತ ಯುದ್ಧಶಕ್ತಿಗಿಂತ ಹೆಚ್ಚಿನ ಶಕ್ತಿ ಅದರ ಗರ್ಭದಲ್ಲಿದೆ. ಆದರೆ ಅಮೆರಿಕದ ಬೆಂಬಲವಿಲ್ಲದೆ ಭಾರತವನ್ನಾಗಲಿ ಅದರ ಗಡಿಯ ಬರ್ಮಾ ಸಿಂಗಾಪುರವನ್ನಾಗಲಿ ಬ್ರಿಟನಿಗೆ ರಕ್ಷಿಸಲು ಇಂದು ಅಶಕ್ಯವಾಗಿದೆ!

ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯ ತೊಡಗಿದ್ದು 'ಈಸ್ಟ್ ಇಂಡಿಯಾ ಕಂಪೆನಿ' ಯೆಂಬ ಒಂದು ವ್ಯಾಪಾರೀ ಸಂಸ್ಥೆ ಮೂಲಕ. ಈ ಮಾತನ್ನು ಗಮನಿಸಬೇಕು. ಆ ಸಂಧರ್ಭದಲ್ಲಿ ಭಾರತದಲ್ಲಿ ಖಿಲವಾಗುತ್ತಿದ್ದ ಸಂಸ್ಥಾನಿಕರ ಆಡಳಿತ ಪದ್ಧತಿಯ ಉಪಯೋಗ ಮಾಡಿಕೊಂಡು ಈಸ್ಟ್ ಇಂಡಿಯಾ ಕಂಪನಿ ಪಡಕೊಂಡ ಭಾರತದ ಅಧಿಕಾರವನ್ನು ಆ ಮೇಲೆ ಬ್ರಿಟನು ಕಬಳಿಸಿಕೊಂಡಿತು. ಆಧುನಿಕ ವಿಶ್ವದಲ್ಲಿ ಭಾರತ ರಾಷ್ಟ್ರವೊಂದು ರೋಗಿಯಂತಿದೆ. ಬ್ರಿಟನಿನ ರಾಜಕೀಯ ಜೀವನವು ಒಳಗಿಂದೊಳಗೆ ಕೊಳೆಯುತ್ತಾ ಬರಲು ಇದೇ ಮುಖ್ಯ ಕಾರಣ.

ಬ್ರಿಟಿಷರ ಭಾರತದ ಆಡಳಿತ ಅಮೆರಿಕದ ಸಂಯುಕ್ತ ಸಂಸ್ಥಾನಗಳ ಆಡಳಿತಕ್ಕಿಂತಲೂ ಒಂದು ತಲೆಮಾರಿಗೆ ಹಿಂದಿನದು. ೧೮೦ ವರ್ಷಗಳ ಬ್ರಿಟಿಷರ ಆಳುವಿಕೆಯ ಅನಂತರವೂ ಭಾರತಜನ ೧೦೦ಕ್ಕೆ ೯೩ರಷ್ಟು ನಿರಕ್ಷರಿಗಳಾಗಿದ್ದಾರೆ! ಅಮೆರಿಕದ ಆಳ್ವಿಕೆಯ ೪೦ ವರ್ಷಗಳಲ್ಲಿ ಫಿಲಿಫೈನರ ನಿರಕ್ಷರತೆ ೧೦೦ಕ್ಕೆ ೯೮ರಷ್ಟಿದ್ದದ್ದು ೪೫ಕ್ಕೆ ಇಳಿಯಿತು. ೨೦ ವರ್ಷಗಳ ಸೋವಿಯೇಟ್ ಆಡಳಿತದಲ್ಲಿ ನೂರಕ್ಕೆ ೭೮ರ ನಿರಕ್ಷರತೆ ೮ಕ್ಕೆ ಬಂದಿದೆ. ಸೋವಿಯೆಟಿನಲ್ಲಿ ಒಂದೇ ವರ್ಷ ಔದ್ಯೋಗಿಕ ವ್ಯವಸಾಯ ಶಾಲೆಯಿಂದ ೪೯೦೦ ಪದವೀಧರರು ಹೊರಬಂದರು (೧೯೩೭) ಭಾರತದ ಜನಸಂಖ್ಯೆ ರಶ್ಯದಿಮ್ಮಡಿ; ಆದರೆ ಭಾರತದಲ್ಲಿ ಆ ವರ್ಷ ಕೇವಲ ೯೬೦ ಮಂದಿ ಪದವೀಧರರು!

ಭಾರತದಲ್ಲಿ ಉತ್ತಮ ನಿಸರ್ಗ ಸಂಪತ್ತಿದೆ; ಇದನ್ನು ಆಧುನಿಕ ರಾಷ್ಟ್ರದ ಬುನಾದಿಯಾಗಿ ಉಪಯೋಗಿಸಿ, ದೊಡ್ಡ ಉದ್ಯೋಗಗಳನ್ನು ಮಾಡಬಹುದು. ಇದನ್ನು ಮಾಡಲು ತಪ್ಪಿದ್ದು ಬ್ರಿಟಿಷರ ಭಾರತದ ಆಳ್ವಿಕೆಯ ಇನ್ನೊಂದು ದೋಷ. ಭಾರತದಲ್ಲಿ ಬೇಕಾದಷ್ಟು ಕಲ್ಲಿದ್ದಲಿದ್ದರೂ ಇಲ್ಲಿನ ಉತ್ಪನ್ನ ರಶ್ಯದ ಆರನೇ ಒಂದಂಶ. ಕಬ್ಬಿಣದ ಅದುರುಗಳಲ್ಲಿ ಭಾರತ ಜಗತ್ತಿನಲ್ಲಿ ಮೂರನೇ ಸ್ಥಾನಪಡೆವುದಾದರೂ ಉಕ್ಕಿನ ತಯಾರಿ ಹತ್ತು ವರ್ಷಗಳಲ್ಲಿ ಕೇವಲ ೭೯,೦೦೦ ಟನ್ನು! ಅದೇ ವರ್ಷ ರಶ್ಯದಲ್ಲಿ ೧೫ ಲಕ್ಷ ಟನ್ ಇದ್ದ ಉಕ್ಕಿನ ಉತ್ಪತ್ತಿ ೧೬೦ ಲಕ್ಷ ಟನ್ನಿಗೇರಿದೆ. ಸಣ್ಣ ಜಪಾನಿನಲ್ಲಿ ಕಬ್ಬಿಣ ಅದುರೂ ಕಡಿಮೆಯಾಗಿರುವ ಅಲ್ಲಿ, ದಾರಿದ್ರ್ಯದಾ ಊರಿನಲ್ಲಿ ಭಾರತಕ್ಕಿಂತ ಏಳು ಪಾಲು ಉಕ್ಕು ತಯಾರಾಗಿದೆ! ಭಾರತದ ಜಲಶಕ್ತಿ ಅಮೆರಿಕಕ್ಕಿಂತ ದ್ವಿಗುಣ; ಆದರೆ ಅದರ ಸಾಧ್ಯ ಜಲಶಕ್ತಿಯೂ ಶೇಕಡ ಮೂರರಷ್ಟು ಮಾತ್ರ ಉಪಯೋಗಿಸಲ್ಪಡುತ್ತಿದೆ. ಅಮೆರಿಕದಲ್ಲಿ ಶೇಕಡಾ ೪೦ರಷ್ಟು ಉಪಯೋಗಿಸುತ್ತಿದ್ದಾರೆ. ರಶ್ಯದವರು ೨೦ ವರ್ಷಗಳ ಹಿಂದೆ ೧೯೦ ಕೋಟಿ ಕಿಲೋವಾಟ್ ಗಂಟೆಗಳಿದ್ದ ವಿದ್ಯುತ್ತನ್ನು ೧೯೩೭ರಲ್ಲಿ ೩೬೦ ಕೋಟಿಗೆ ಮುಟ್ಟಿಸಿದ್ದಾರೆ! ಭಾರತದ ಅದರ ಸಮಾನ ಸಂಖ್ಯೆ ಕೇವಲ ೨೫೦ ಕೋಟಿ!

ಭಾರತದಲ್ಲಿ ಚೀನದಷ್ಟೇ ಬಲವಾದ ಜಮೀನ್ದಾರ ರೈತ ಬಿಕ್ಕಟ್ಟಿದೆ. ಸಾಲದ್ದಕ್ಕೆ ಬ್ರಿಟಿಷ್ ಸಾಮ್ರಾಜ್ಯಶಾಹಿ ಯಾತನೆಯನ್ನು ಬಲಪಡಿಸುವ ೫೬೩ ಮಂದಿ ಸಂಸ್ಥಾನಿಕ ರಾಜರ ಆಡಳಿತದಲ್ಲಿರುವ ಪ್ರಜೆಗಳು ಪಾಶ್ಚಿಮಾತ್ಯರು ಊಹಿಸಲಾರದಂಥಾ ಅಂಧಕಾರದಲ್ಲಿ ಅದ್ದಿರುತ್ತಾರೆ! ದೇಶದ ಒಟ್ಟು ೧೮,೦೦,೦೦೦ ಚದರ ಮೈಲು ವಿಸ್ತೀರ್ಣದಲ್ಲಿ ಮೂರನೆಯ ಅಂಶ ಈ ರಾಜರ ಆಡಳಿತದಲ್ಲಿದೆ. ಇಷ್ಟು ವಿಸ್ತಾರವಾದ ನೆಲವನ್ನು ಒಂದು ಬಂಜರುಭೂಮಿಯೆಂದೇ ಕರೆಯಬಹುದು. ಅದು ನಿರಂತರ ಕೊಳೆಯುತ್ತಿರುವ ಆಡಳಿತ. ಅನ್ಯರ ಹಂಗಿನಲ್ಲಿ ಬದುಕುವೀ ರಾಜರು ದಬ್ಬಾಳಿಕೆಯೊಂದನ್ನಲ್ಲದೆ ಇನ್ನೇನೂ ಅರಿಯರು, ಪರದೇಶದಿಂದ ಬಂದವರಿಗೆ ಪ್ರದರ್ಶನ ಬೊಂಬೆಗಳಿವರು! ತಮ್ಮ ಭೋಗವಿಲಾಸಗಳಿಗಾಗಿ ತಮ್ಮ ಪ್ರಜೆಗಳನ್ನು ಸುಲಿಯುವರು!

ಇಂಗ್ಲೆಂಡಿನ ಅರಸು ತನ್ನ ಪ್ರಜೆಗಳ ತೆರಿಗೆಯಲ್ಲಿ ೧೬೦೦ಕ್ಕೆ ಒಂದರಷ್ಟು ಕಾಣಿಕೆ ಪಡೆಯುತ್ತಾನೆ. ಭಾರತದಲ್ಲಿ ಪ್ರಜೆಗಳ ತೆರಿಗೆಯ ಅರ್ಧಾಂಶದಷ್ಟು ನುಂಗಿಬಿಡುವ ರಾಜರಿದ್ದಾರೆ. ಅತ್ಯಂತ ಮುಂದುವರಿದವರೆನ್ನುವ ತಿರುವಾಂಕೂರು, ರಾಜರೇ ಏಳರಲ್ಲೊಂದಂಶ ತಿನ್ನುತ್ತಾರೆ. ತಾನು ಕಂಡ ಮಹಾರಾಜರಲ್ಲೆಲ್ಲಾ ಉತ್ತಮರಾಗಿ ತೋರಿದ ಬಿಕಾನೇರ್ ಮಹಾರಾಜರೇ ತನ್ನ ಸ್ವಂತ ಮತ್ತು ರಾಜಮನೆತನದ ವೆಚ್ಚಕ್ಕೆ ವಾರ್ಷಿಕ ರೂ. ೨೨೪೦೦೦ ಇಟ್ಟುಕೊಳ್ಳುತ್ತಾರೆ. ರಾಜ್ಯದ ಪ್ರಜೆಗಳ ವಿದ್ಯಾಭ್ಯಾಸಕ್ಕಾಗಿ ವೆಚ್ಚಮಾಡುವ ಹಣಕ್ಕಿಂತ ಅವನ ಸ್ವಂತ ವೆಚ್ಚ ಹೆಚ್ಚು. ಬಿಕಾನೇರಿನ ಆದಾಯದಲ್ಲಿ, ರಾಜಮನೆತನ, ರಾಜವಿವಾಹ, ರಾಜಸೇವಕರೇ ಮೂರನೇ ಒಂದಂಶ ಮುಕ್ಕುತ್ತಾರೆ. ಭಾರತದ ಈ ಅರಸರು ಮತ್ತೆ ಬ್ರಿಟಿಷರು ಅಲ್ಲಿ ಕಳುಹಿಸುವ ಅಧಿಕಾರಿಗಳು ಮತ್ತು ವ್ಯಾಪಾರಿಗಳು ಇವರೆಲ್ಲರ ಅತುಲ ಸಂಪತ್ತನ್ನು ಅಲ್ಲಿನ ಪ್ರಜೆಗಳ ನಿಕೃಷ್ಟ ದಾರಿದ್ರ್ಯದೊಡನೆ ಹೋಲಿಸಿದರೆ ೧೮೦ ವರ್ಷದ ಬ್ರಿಟಿಷರಾಡಳಿತದ ನಿರರ್ಥಕತೆ ಹೊಳೆಯದಿರದು.

ಭಾರತದ ಮಹಾರಾಜರೆಲ್ಲಾ 'ಶೃಂಗಾರ ರಾವಣರು' ಅವರ ಆರುವಿಕೆಯ [illegible] ಭಾರತದ ಐಕ್ಯ [illegible] ದೊಂದೇ. 'ವಿಭಜಿಸಿ ಆಳಿ' ಎಂಬ ಬ್ರಿಟಿಷ್ ತಂತ್ರಯಂತ್ರದಲ್ಲಿ, ಆ ಮಹಾರಾಜರು ಇನ್ನೂ ಏಕೆ ಉಳಿದಿದ್ದಾರೆ ಎಂಬ ಪ್ರಶ್ನೆಗೆ ಸರಿಯಾದ ಉತ್ತರ ದೊರಕುತ್ತದೆ.

ಸುಲಿಗೆಯಲ್ಲಿ ನಿರತವಾದ ಜಪಾನೀ ಸಾಮ್ರಾಜ್ಯವಾದಕ್ಕೂ ಈಸ್ಟ್ ಇಂಡಿಯಾ ಕಂಪನಿಯು ಪ್ರಥಮ ಶತಮಾನದ ಆಡಳಿತಕ್ಕೂ ಅನೇಕ ವಿಷಯಗಳಲ್ಲಿ ಸಾಮೀಪ್ಯವಿದೆ. ಈಸ್ಟ್ ಇಂಡಿಯಾ ಕಂಪನಿಯ ಸುಲಿಗೆಯಿಂದ ದೊರಕಿದ ಹಣದಿಂದಲೇ ಮುಂದೆ ಬ್ರಿಟನು ಅಭಿವೃದ್ಧಿ ಹೊಂದಿತು. ಈ ಸುಲಿಗೆಯ ಜ್ಞಾನವೇ ಭಾರತದಲ್ಲಿ ರಾಷ್ಟ್ರೀಯ ಚಳವಳವನ್ನು ಪ್ರೇರೇಪಿಸಿತು. ಮಹಾತ್ಮಾ ಗಾಂಧಿ ಒಬ್ಬರಲ್ಲದಿದ್ದರೆ ಇಷ್ಟರಲ್ಲೇ ಭಾರತದಲ್ಲಿ ಸಶಸ್ತ್ರ ಕ್ರಾಂತಿ ಏಳುತ್ತಿತ್ತು. ಬ್ರಿಟನು, ಅದರ ಸಾಮಂತ ರಾಜ್ಯಗಳೊಡನೆ ಐಕ್ಯಶಕ್ತಿಯಿಂದಿರಬೇಕೆಂದು ಬಯಸುವುದಿದ್ದರೆ ಅವುಗಳ ವಿಮೋಚನೆಯಾಗಬೇಕು. ಈಗಾಗಲೇ ವಸಾಹತುಗಳ ವಿಮೋಚನೆಯ ಶರತ್ತ ಮಾತುಕತೆ ಪ್ರಾರಂಭಿಸಬೇಕು. ಅಂಥಾ ವಸಾಹತ್ತುಗಳಿಗೆ ಜಗತ್ತಿನ ಪ್ರಜಾತಂತ್ರ ರಾಷ್ಟ್ರದಲ್ಲಿ ಸಮಾನತೆ ಕೊಡಬೇಕು. ಆಗ ನಾವು ಫೇಸಿಸಂ ವಿರುದ್ಧ ಹೋರಾಡಲು ಅವರೊಡನೆ ವಿನಂತಿಯನ್ನು ಮಾಡಬಹುದು. ಇದೆಲ್ಲ ಅಸಾಧ್ಯವಲ್ಲ. ಇದೊಂದೇ ರೀತಿಯಿಂದ ಬ್ರಿಟನು ತನ್ನ ಸಾಮ್ರಾಜ್ಯದ ಐಕ್ಯಶಕ್ತಿ ಗಳಿಸಿಕೊಳ್ಳಬಹುದಲ್ಲವೇ! 'ಭಾರತದ ವಿಮೋಚನೆ ಬ್ರಿಟಿಷ್ ಐಕ್ಯದ ಹಾದಿ.' ಇಂದು ಬ್ರಿಟನು ಬಲಿಷ್ಠವಾಗುತ್ತದೆ, ಕೆನಡಾ, ಆಸ್ಟ್ರೇಲಿಯಾ, ನ್ಯೂಜಿಲೆಂಡುಗಳಂಥಾ ವಸಾಹತುಗಳ ಬಲದಿಂದ ಆ ವಸಾಹತುಗಳ ಬಲವಿಲ್ಲದಿದ್ದರೆ ಬ್ರಿಟನು ಬದುಕುತ್ತಲೇ ಇರಲಿಲ್ಲ. ಸ್ವತಂತ್ರ ಭಾರತವು ಬ್ರಿಟನಿಗೆ ಸ್ವತಂತ್ರ ಅಮೇರಿಕದಷ್ಟೇ ಬಲಿಷ್ಟ ಮಿತ್ರ ರಾಷ್ಟ್ರವಾಗುವುದು.

ಭಾರತವನ್ನೊಮ್ಮೆ ವಿಮೋಚನೆಗೊಳಿಸಿದರೆ ಬ್ರಿಟಿಷ್ ವಸಾಹತು ಸಮಸ್ಯೆಯೇ ಬಗೆಹರಿಯುತ್ತದೆ. ಭಾರತದ ಜನಸಂಖ್ಯೆ ಬ್ರಿಟಿಷ್ ವಸಾಹತುಗಳು ಶೇಕಡಾ ೮೦ರಷ್ಟಿದೆ. ಬ್ರಿಟನಿನ ಅಸ್ವತಂತ್ರ ವಸಾಹತುಗಳಲ್ಲಿ ಭಾರತೀಯರು ೧೦೦ಕ್ಕೆ ೯೦ರಷ್ಟು. ವಸಾಹತಿನ ಆಡಳಿತದ ಸಮಸ್ಯೆ ಬ್ರಿಟನಿನ ಜನಕ್ಕೆ ಅಷ್ಟೊಂದು ಮಹತ್ವವೆನಿಸುವುದಿಲ್ಲ. ಬ್ರಿಟಿಷ್ ಭಂಡವಾಳಗಾರರಿಗಾದರೂ ಭಾರತವು ಹೀಗೇ ಇದ್ದರೆ ಇನ್ನೂ ಸುಲಿಯಲಾಗುತ್ತದೆಂದು ಅನಿಸಿದೆ. ಒಟ್ಟು ಬ್ರಿಟನಿನ ರಾಷ್ಟ್ರೀಯ ಉತ್ಪನ್ನದ ೫೦%ರಷ್ಟು ಹಣ ಭಾರತದಿಂದ ಅವರಿಗೆ ಸಿಗುತ್ತದೆ.

ಚೀನಕ್ಕಾಗಿ ಹೋರಾಡುವ ನೆವನ ಹೇಳಿ ಭಾರತದಲ್ಲಿ ಸರ್ವಾಧಿಕಾರ ಮಾಡುವುದಾದರೆ ಅದು ನ್ಯಾಯವಲ್ಲ. ಏಕೆಂದರೆ ಚೀನದ ಹೋರಾಟದಲ್ಲಿ ಜಯಬರಬೇಕಾದರೆ ಭಾರತವನ್ನು ಸ್ವತಂತ್ರಮಾಡುವುದೊಂದೇ ಹಾದಿ. ಒಂದು ಪಕ್ಷ ಭಾರತವನ್ನು ಸ್ವತಂತ್ರ ಮಾಡಿದರೆ ಅದರಿಂದ ನಷ್ಟಕ್ಕೀಡಾಗುವವರು. ಕೇವಲ ಬ್ರಿಟನಿನ ಭಂಡವಾಳಗಾರರು. ಇದು ಕಃಪದಾರ್ಥ; ಏಕೆಂದರೆ ಬ್ರಿಟನು ಭಾರತವನ್ನು ಸ್ವತಂತ್ರಮಾಡಲು ಸಹಕಾರಿಯಾಗಿ ಐಕ್ಯವಾದರೆ ಈ ಎರಡು ದೇಶಗಳ ಮಧುರ ಬಾಂಧವ್ಯದ ಪ್ರಯೋಜನ ಅಮೋಘವಾಗುವುದು. ಇಲ್ಲದಿದ್ದರೆ ೧೮೫೭ನೇ ವರ್ಷದ ಪ್ರಮಾದದ ಪುನರಾವರ್ತನೆ ಮಾಡಿ ಬ್ರಿಟನು ಭಾರತದಲ್ಲಿ ಬೇಗನೇ ಒಂದು ಹಿಂಸಾತ್ಮಕ ಕ್ರಾಂತಿಯನ್ನೆದುರಿಸಬೇಕಾಗುವುದು!

ವೃದ್ಧಿಯಿಂದ ಅಭಿವೃದ್ಧಿ.

ಗತ ೧೯೪೨ನೇ ವರ್ಷದಿಂದ ಚಾಲು ೧೯೪೩ನೇ ಪ್ರಾರಂಭದ ಮಾಸಗಳು ಬಹು ಅಪಾಯಗಳಿಂದಲೂ ಹಾಗೂ ಸುಯೋಗಗಳಿಂದಲೂ ತುಂಬಿ ತುಳುಕಿದ್ದವು. ಜಾಣತೆಯಿಂದ ವ್ಯವಸ್ಥೆ ಮಾಡಲ್ಪಟ್ಟ ಸಂಸ್ಥೆಗಳು ಈ ಅಪಾಯಗಳನು ತಳ್ಳಿ ಸುಸಂದರ್ಭಗಳನ್ನು ಉಪಯೋಗಿಸಿ ತೀವ್ರನೆ ಮುಂದುವರಿದವು.

೧೯೪೦, ೪೧ರಲ್ಲಿ ಕೆನರಾ ಬೇಂಕು ೯೦ ಲಕ್ಷ ಠೇವಣಿಗಳ ಮತ್ತು ಒಂದು ಕೋಟಿ ಸಾಂಪತ್ತಿಕ ಸ್ಥಿತಿಯಲ್ಲಿದ್ದು ಅಂದು ಸಹ ಅದು ವಿಸ್ತೃತ ಸ್ಥಿತಿಯ ಸಂಸ್ಥೆಯಾಗಿತ್ತು. ಇಂದು ಠೇವಣಿಗಳು ಇಮ್ಮಡಿಯಾಗಿವೆ. ಸಾಂಪತ್ತಿಕ ಸ್ಥಿತಿಯು ಎರಡುವರೆ ಕೋಟಿಗೆ ಮಿಕ್ಕಿದೆ. ಹಾಗೂ ತೆತ್ತ ಮೂಲಧನವು ನಾಲ್ಮಡಿಯಾಗಿದೆ.

ಜಾಣತನದ ವ್ಯವಸ್ಥೆಯು ಪರ್ಯಾಟನಿಂದಲೂ, ಆತ್ಮವಿಶ್ವಾಸದಿಂದಲೂ, ದೃಢಬುದ್ಧಿಯಿಂದಲೂ, ಯೋಗ್ಯ ಸೇವೆಯನ್ನು ಸಲ್ಲಿಸಿದರಿಂದಲೂ, ಇಂದಿನ ಈ ಪ್ರಗತಿಗೆ ಕಾರಣಭೂತರಾದ ಸಾರ್ವಜನಿಕರ ಮೆಚ್ಚಿಗೆಗೆ ಪಾತ್ರರಾಗಿ ಇನ್ನು ಮುಂದಕ್ಕೂ ಮಹತ್ವದ ಸೇವೆಯನ್ನು ಒಪ್ಪಿಸಲು ಸಮರ್ಥರಾಗಲು ನಾವು ಹಾರೈಸುವೆವು.

Canara Bank Limited.

ಕೆನರಾ ಬೇಂಕ್ ಲಿಮಿಟೆಡ್.

ಸ್ಥಾಪನೆ 1906.

ಸಮರಭೂಮಿಯ ಸಂಚಾರ

ಸಿಸಿಲಿಯಲ್ಲಿ ಮಿತ್ರರು ಆರಂಭಿಸಿದ ಧಾಳಿಯು ದಿನಹೋದಂತೆ ತೀವ್ರವಾಗುತ್ತಾ ಬರುತ್ತದೆ; ಪಶ್ಚಿಮ ಭಾಗದಲ್ಲಿ ಅಮೆರಿಕನರು, ಪೂರ್ವಭಾಗದಲ್ಲಿ ಬ್ರಿಟಿಷರು, ಒಂದು ಬದಿಯಲ್ಲಿ ಕೆನೆಡಿಯನರು, ಇನ್ನೊಂದು ಕಡೆಯಲ್ಲಿ ಸ್ವತಂತ್ರ ಪ್ರೆಂಚರು ಹೀಗೆ ನಾಲ್ಕು ದಿಕ್ಕಿನಿಂದಲೂ ಸಿಸಿಲಿಗೆ ಮುತ್ತಿಗೆ ಹಾಕಲಾಗಿದೆ. ಈಗಾಗಲೇ ಲಿಕಾಸ್ಟಿಕಾ, ರೊಸ್ಸಾಲಿನಿ, ರಾಗೂಸಾ, ಬಿಸ್ಕಾರಿ, ಗೆಲಾ, ಪೇಂಟೆಲಿಯಾಮೊ, ಪ್ಲೊಂಡಾ, ವುಚಿಕಾ, ಸಿರಾಕ್ಯಾಸಾ ಮೊದಲಾದ ಪ್ರಮುಖ ಸ್ಥಳಗಳು ಹಾಗೂ ಬಂದರಗಳು ಮಿತ್ರರ ವಶವಾಗಿವೆ.

ಮುಂದೆ ಬಾಲ್ಕನನ್ನು ವಶಪಡಿಸಿಕೊಂಡು ಇಟಲಿಗೆ ಮುತ್ತಿಗೆಯಿಡುವುದೇ ಮಿತ್ರರ ಉದ್ದೇಶವಿರುವುದು. ಭೂಮಧ್ಯ ಸಮುದ್ರದಲ್ಲಿ ತಮಗೆ ಬೇಕಾದೆಲ್ಲಾ ಸಿದ್ಧತೆ ಮಾಡಿಕೊಂಡೇ ಈಗ ಸಿಸಿಲಿಗೂ ಮುತ್ತಿ ಮುಂದೆ ಇಟಲಿಗೆ ಹಾರುವ ಯೋಚನೆ ಮಾಡಿರುವಂತಿದೆ. ಇಷ್ಟರಲ್ಲಿ ಹಿಟ್ಲರನೂ ತನ್ನ ಯೋಜನೆಯಂತೆ ಇಟಲಿ ಬೆಂಬಲಕ್ಕೆ ಬಂದರೂ ಬರಬಹುದು. ಕೆಲವರು ಊಹಿಸುವುದೇನಂದರೆ ಮಿತ್ರಸೈನಿಕರನ್ನು ತಮ್ಮ ಹತ್ತಿರ ಬರಲು ಬಿಟ್ಟು ಕೊನೆಗೆ ಒಂದೇ ಪೆಟ್ಟಿಗೆ ಅವರನ್ನು ಮುತ್ತಿ, ಯಾವ ದಿಕ್ಕಿನಿಂದಲೂ ಸಾಧನ ಸಾಮಗ್ರಿ ಬರದಂತೆ ಮಾಡುವುದೇ ಇಟಲಿಯ ಏಕಧ್ಯಾನವಿದೆಂದು! ಯಾವ ವಿಷಯವೂ ಈಗ ಇತ್ಯರ್ಥ ಹೇಳಬರುವುದಿಲ್ಲ.

ಹಿಟ್ಲರನು ಸಿಸಿಲಿ ಕಡೆಗೆ ಗಮನಕೊಡಬೇಕಾದರೆ ಅತ್ತ ರಶ್ಯದ ಪರಿಸ್ಥಿತಿ ಸುಧಾರಿಸಿಕೊಳ್ಳಬೇಕು. ಏಸಿಲ್ಲೆಂದರೆ ಅಲ್ಲಿ ಸಂರಕ್ಷಕ ಯುದ್ಧವನ್ನಾದರೂ ಕೊಡುತ್ತಾ ಬರತಕ್ಕದ್ದು ಅವಶ್ಯವಿದೆ. ಹಲವು ಹರ್ಷಗಳ ಪೂರ್ವ ಸಿದ್ಧತೆಯಂತೆ ಯೂರೋಪಿನ ಒಂದೊಂದೇ ರಾಷ್ಟ್ರಗಳನ್ನು ನುಂಗಿ ನೀರ್ಕುಡಿಯುತ್ತಾ ಬಂದ ಹಿಟ್ಲರನು ಇನ್ನೂ ಶಕ್ತಿಸಂಪನ್ನನಾಗಿಯೂ, ಸೈನ್ಯ ಸಾಧನ ಸಮೇತನಾಗಿಯೂ ಇರುವನೆಂದೇ ಹೇಳಬೇಕು. ಏಕೆಂದರೆ ಏನಿಲ್ಲವೆಂದರೂ ರಶ್ಯದಲ್ಲಿ ಆತನು ಮಾಡುವ ರಣರಭಸವನ್ನು ಪರ್ಯಾಲೋಚಿಸಿದರೆ ಜರ್ಮನಿಯ ಶಕ್ತಿ ಇನ್ನೂ ಕುಗ್ಗಿಲ್ಲವೆಂಬುದು ಖಂಡಿತವಾಗುತ್ತದೆ.

ಇತ್ತ ಅಮೆರಿಕವೂ ಜಪಾನು ಆಕ್ರಮಿತ ಬಂದರಗಳ ಮೇಲೆ ಧಾಳಿಯಿಡತೊಡಗಿದ್ದಾರೆ. ಹಾಗಾಗಿ ಪೆಸಿಫಿಕಿನಲ್ಲಿಯೂ ರಣರಭಸ ಚನ್ನಾಗಿಯೇ ಇದೆ. ಮಿತ್ರರಾದರೂ ಈ ಕಡೆ ಕ್ರೀಟವನ್ನೂ ಸಹ ಆಕ್ರಮಿಸಿ ಶತ್ರುವನ್ನು ಸದೆಬಡೆಯುವುದರಲ್ಲಿ ತೊಡಗಿದ್ದಾರೆ. ಮಿತ್ರರ ಇಂದಿನ ನಿರ್ಧಾರಗಳನ್ನು ನೋಡಿದರೆ ಈ ಸಲದ ಯುದ್ಧವು ನಿರ್ಣಾಯಕ ಯುದ್ಧವಾಗುವುದೆಂದು ಹೇಳಲು ಆಸ್ಪದವಿದೆ.

ಮಿತ್ರರು ಆಕ್ರಮಿತ ಸಿಸಿಲಿ ಪ್ರದೇಶದಲ್ಲೀಗ ಮಿಲಿಟರಿ ಆಡಳಿತ ಸ್ಥಾಪಿಸಿರುವರು. ಆಕ್ರಮಿತ ಪ್ರದೇಶದ ಗವರ್ನರರಾಗಿ ಜನರಲ್ ಅಲೆಗ್ಝಾಂಡರರ ನೇಮಕವಾಗಿರುವುದಾಗಿ ತಿಳಿಯುತ್ತದೆ. ಈ ಆಡಳಿದ ಹೆಸರು 'ಅಮ್ ಗೋಟ್' ಎಂದಿಡಲಾಗಿದೆ. ಈ ಹೊಸ ಸರಕಾರವನ್ನು ಸ್ಥಾಪಿಸಲು ಕೆಲವರನ್ನು ಮೊದಲೇ ತರಬೇತು ಮಾಡಲಾಗಿತ್ತು. ಸಿಸಿಲಿಯ ಪಟ್ಟಣಗಳಲ್ಲಿ ಮಿತ್ರ ಕಚೇರಿಗಳು ಸ್ಥಾಪಿಸಲ್ಪಟ್ಟಿವೆ. ಸಿಸಿಲಿಯ ಫೆಸಿಸ್ಟ್ ಪಕ್ಷವನ್ನು ನೆಲಸಮ ಮಾಡುವುದು ಈ ಹೊಸ ಸರಕಾರದ ಉದ್ದೇಶ! ಅಂತೂ ಸದ್ಯಕ್ಕೆ ಅಲ್ಲಿ ಮಿಲಿಟರಿ ಆಡಳಿತವು ನಡೆಸಲ್ಪಡುತ್ತದೆ.

ರೋಮಿನ ಸೇನಾಕೇಂದ್ರದ ಮೇಲೆ ಅಮೆರಿಕದ ವಿಮಾನಗಳು ಬಾಂಬು ಹಾರಿಸಿದವು. ರೋಮಿನ ಇತಿಹಾಸದಲ್ಲಿ ಇದು ಮೊದಲನೆಯ ಧಾಳಿಯಾಗಿದ್ದು; ಮಿತ್ರರ ಸಮರ ಸಾಹಸಗಳಲ್ಲೊಂದಾಗಿದೆ.

ಸಿಸಿಲಿಯಲ್ಲಿ ಮಹೋಗ್ರ ಸಮರ ನಡೆಯುತ್ತಿದೆ. ಸಿಸಿಲಿಯಲ್ಲಿ ಅಕ್ಷರಾಷ್ಟ್ರಗಳ ಪ್ರಮುಖ ಪ್ರತಿಭಟನಾ ಕೇಂದ್ರವಾದ ಕೆಟೇನಿಯವು ಬೇಗನೇ ಮಿತ್ರರ ಕೈವಶವಾಗುವುದೆಂದು ರೂಟರ್ ವಾರ್ತೆ ಸಾರುತ್ತದೆ. 'ಇದನ್ನು ಸ್ವಾಧೀನಪಡಿಸಿಕೊಳ್ಳಲಂತೂ ಮಿತ್ರರು ಅಧಿಕ ಸಾಹಸ ತೋರಿಸುತ್ತಿರುವರು.

ಸಿಸಿಲಿಯ ಮೂರನೆಯ ಒಂದು ಭಾಗವು ಮಿತ್ರರ ಕೈವಶ ಬಂದಿದೆಯೆಂದೂ ಇಷ್ಟರಲ್ಲಿ 30 ಸಾವಿರ ಯುದ್ಧ ಕೈದಿಗಳನ್ನು ಮಿತ್ರರು ಹಿಡಿದಿರುವರೆಂದೂ ಹೇಳಲಾಗುತ್ತದೆ. ಅಂತೂ ಸಿಸಿಲಿಯಲ್ಲಿ ಮಿತ್ರರು ಮುಂದುವರಿಯುತ್ತಿದ್ದಾರೆಂದು ನಾವೀಗ ತಿಳಕೊಳ್ಳಬಹುದು.

ಮೊನ್ನೆ ಮೊನ್ನೆ ಚರ್ಚಿಲರು ಇಟಲಿಯನರನ್ನುದ್ದೇಶಿಸಿ, ನಿಮ್ಮ 'ರಾಷ್ಟ್ರವನ್ನು ಧ್ವಂಸಕಾರ್ಯದಿಂದ ರಕ್ಷಿಸಬೇಕಾದರೆ ನಮಗೆ ಶರಣಾಗಿರಿ' ಎಂಬ ಸಂದೇಶವಿತ್ತಿದ್ದಾರೆ. ಈಗ ಇಟಲಿಯ ಫೆಸಿಸ್ಟ್ ಪಕ್ಷದ ಕಾರ್ಯದರ್ಶಿ ಕಾರ್ಲೋಸ್ಕೋಜಾ 'ವೈರಿಗಳನ್ನು ಕೊನೆಯ ಶ್ವಾಸವಿರುವವರೆಗೂ ಪ್ರತಿಭಟಿಸಿರಿ' ಎಂದು ಹುರಿದುಂಬಿಸುತ್ತಾರೆ. ಅಂತೂ ಇಟಲಿಗೆ ಸದ್ಯ ಗಂಡಾಂತರ ಸನ್ನಿಹಿತವಾಗುತ್ತಾ ಇದೆ.

ಜರ್ಮನ್ ಸೇನಾನಿಯೋರ್ವನನ್ನು ರಶ್ಯದಿಂದ ಸಿಸಿಲಿಗೆ ತಂದಿರುವರೆಂದು ಹೇಳಲಾಗಿದೆ. ಈತನು ರಶ್ಯನ್ ಕಾಳಗದಲ್ಲಿ ಅತ್ಯಂತ ಪ್ರಸಿದ್ಧನಾದವನು. ಇದನ್ನು ನೋಡಿದರೆ ಸಿಸಿಲಿ ಕಾಳಗವನ್ನು ಕೆಲಕಾಲ ಮುಂದುವರಿಸಲು ಅಕ್ಷರಾಷ್ಟ್ರಗಳು ಸಿದ್ಧತೆಮಾಡುತ್ತಿವೆಯೆಂದು ಅರ್ಥವಾಗುತ್ತದೆ.

ಅಮೇರಿಕದವರು ಅಗ್ರಿಜೆಂಟೋವನ್ನು ಹಿಡಿದರು; ಇದುವರೆಗೆ ಮಿತ್ರರು ಸಿಸಿಲಿಯಲ್ಲಿ 20 ಸಾವಿರ ಮಂದಿಯನ್ನು ಕೈದಿಗಳನ್ನಾಗಿ ಮಾಡಿರುವರು; ಸಿಸಿಲಿಯಲ್ಲಿ ಒಟ್ಟು 324000 ಮಂದಿ ಏಕ್ಸಿಸ್ ಸೈನಿಕರು ಇರುವರು. ಅವರಲ್ಲಿ ಇಟಲಿಯವರು 26400 ಮಂದಿ; ಜರ್ಮನರೇ ಮೊದಲಾದವರು 60 ಸಾವಿರ ಮಂದಿ.

ರಶ್ಯದಲ್ಲಿಯೂ ಭೀಷಣ ಸಂಗ್ರಾಮವೇ ನಡೆಯುತ್ತಿದೆ. ಒರೆಲ್ ಪ್ರದೇಶ, ರಶ್ಯದಲ್ಲಿ ಜರ್ಮನರಿಗಿರುವ ಮುಖ್ಯ ಪ್ರದೇಶ. ಈ ಮಾರ್ಗದಿಂದಲೇ ರಶ್ಯದಲ್ಲಿರುವ ಜರ್ಮನ್ ಸೇನೆಗೆ ಸಾಧನ ಸಾಮಗ್ರಿ ಬರಬೇಕು. ಈ ಒರೆಲ್ ನಗರವನ್ನೀಗ ರಶ್ಯನರು ಮೂರು ದಿಕ್ಕುಗಳಿಂದಲೂ ಮುತ್ತಿದ್ದಾರೆ. ಮಾತ್ರವಲ್ಲದೆ ಮುಂದುವರಿದ ರಶ್ಯನ್ ಸೇನೆಗಳು ಹಲವು ಗ್ರಾಮಗಳನ್ನು ಈಗಾಗಲೇ ಕೈವಶ ಮಾಡಿಕೊಂಡಿವೆ. ಜರ್ಮನರು ಉಗ್ರ ಪ್ರತಿಭಟನೆ ಕೊಡುತ್ತಿದ್ದರೂ ಇಲ್ಲಿ ರಶ್ಯನರ ಮುಂದೊತ್ತುವಿಕೆಯನ್ನು ನಿಲ್ಲಿಸುವುದಾಗುವುದಿಲ್ಲ. ಒರೆಲ್ ಸಮರ ಭೀಕರವಿದೆ.

ಕುಬಾನ್ ಭಾಗದಲ್ಲಿಯೂ ಯುದ್ಧವಿದೆ. ರಶ್ಯನರು ಜರ್ಮನರ ವಶವಿದ್ದ ಒಂದು ಮಹತ್ವದ ಪ್ರದೇಶವನ್ನು ಇಲ್ಲಿಯೂ ಸ್ವಾಧೀನಪಡಿಸಿಕೊಂಡಿದ್ದಾರೆ. ಕುಬಾನ್ ಪ್ರದೇಶದಲ್ಲಿ ಗುಡ್ಡೆ ಗಾಡುಗಳೇ ಹೆಚ್ಚಿದ್ದುದರಿಂದ, ಉಭಯ ಪಕ್ಷದವರಿಗೂ ಅಲ್ಲಿಗೆ ಅಧಿಕ ಸೇನೆ ತರಿಸಲು ಅಸಾಧ್ಯವಾಗಿದೆ. ಇದರಿಂದಾಗಿ ಇಲ್ಲಿನ ಸಮರವು ಕೇವಲ ಮಂದಗತಿಯಲ್ಲಿದೆ.

ಫ್ರಾನ್ಸ್, ಹೊಲೆಂಡ್, ಬೆಲ್ಜಿಯಂಗಳಲ್ಲಿನ ಅನೇಕ ಕೇಂದ್ರ ಸ್ಥಳಗಳ ಮೇಲೆ ಹಾಗೂ ರೈಲ್ವೆಗಳ ಮೇಲೆ ಮಿತ್ರರು ಬಾಂಬು ಹಾಕಿದರೆಂದು ಹೇಳಲಾಗುತ್ತದೆ. ಇದಲ್ಲದೆ ಡಚ್ ಕರಾವಳಿಯಲ್ಲಿ ಸಂಚರಿಸುತ್ತಿದ್ದ ಅಕ್ಷಪಕ್ಷದ ಹಡಗಗಳ ಮೇಲೂ ಧಾಳಿಯಾಗಿದೆ. ಅಂತೂ ಯೂರೋಪಿನ ಮೇಲೂ ಮಿತ್ರರು ಮುತ್ತಿಗೆ ಹಾಕುವಂತೆ ತೋರುತ್ತದೆ.

ಇಷ್ಟರಲ್ಲಿ ಬ್ರಿಟನಿನ ಮೇಲೆ ಜರ್ಮನ್ ವಿಮಾನಗಳು ಎಂದಿನಂತೆ ಬಾಂಬು ಸುರಿಸಿದವೆಂದು ಒಂದು ಕುಂಟು ಸುದ್ದಿಯೂ ಕೇಳಿಬರುತ್ತದೆ. ಆದರೆ ಜರ್ಮನಿ ಬ್ರಿಟನಿಗೆ ಮಾಡಿದ ಅಪಾಯವು ಎಂದಿನಂತೆ ಈ ಸಲವೂ ಏನೂ ಗಣನೀಯವಿರುವುದಿಲ್ಲ! ಆದರೆ ಬ್ರಿಟಿಷ್ ವಿಮಾನಗಳು ಈಗಲೂ ಜರ್ಮನಿಯ ಮೇಲೆ ಧಾಳಿಯಿಡುತ್ತಿದ್ದು, ರ್ಹೂರ್ ಪ್ರದೇಶವನ್ನು ಕಂಗಾಲುಗೊಳಿಸಿ ಸದ್ಯ ಜರ್ಮನಿಯ ಕೊಲ್ಹೊನ್ ಎಂಬಲ್ಲಿರುವ ದೊಡ್ಡ ಎರಡು ಜಲಾಂತರ್ಗಾಮಿ ನಾವೆಗಳನ್ನು ನಿರ್ಮಿಸುವ ಕಾರ್ಖಾನೆಗಳನ್ನು ನಾಶಮಾಡಿದವೆಂದು ಹೇಳಲಾಗುತ್ತದೆ. ಇದರಿಂದ ಜರ್ಮನರಿಗೆ ಅಪಾರ ನಷ್ಟವಾಗಿದೆ.

ಶಾಂತಿ ಸಾಗರದಲ್ಲಿ ಗುಡಲಕನಾಲದ ಮೇಲೆ ಪುನಃ ಜಪಾನೀಯರು ಧಾಳಿ ನಡೆಸಿದ್ದಾರೆ. ಸೊಲೊಮನ್ ದ್ವೀಪಗಳ ಬಳಿಯಿರುವ ವೈರಿ ಹಡಗಗಳು ಜಲಸಮಾಧಿ ಹೊಂದಿವೆ. ಶಾಂತಸಾಗರದ ಕೆಲ ದ್ವೀಪಗಳಲ್ಲಿ ಆಸ್ಟ್ರೇಲಿಯನ್ ಯೋಧರು ಕೆಲವು ಪ್ರದೇಶಗಳನ್ನು ಜಪಾನೀಯರಿಂದ ಸೆಳಕೊಂಡಿರುವರಂತೆ!

ಯುದ್ಧದಲ್ಲಿ ಭಾರತದ ಜನಹಾನಿ ೧೨೦,೦೦೦ಕ್ಕೆ ಮೀರಿತು!

ಯುದ್ಧ ಪ್ರಾರಂಭವಾದಂದಿನಿಂದ ಇದುವರೆಗೆ ಅಖಿಲ ಹಿಂದೀಯರ ಹಾನಿಯು ೧೨೦,೦೦೦ಕ್ಕೆ ಮೀರಿರುವುದೆಂದು ಭಾರತ ಮಂತ್ರಿ ಅಮೆರಿಯವರು ಹೇಳಿದರು. ಇವರಲ್ಲಿ ಸುಮಾರು ೧೪,೦೦೦ ಜನರಿಗೆ ಸಾವು ನೋವುಗಳಾದವು. ಕಣ್ಮರೆಯಾದವರಲ್ಲಿ ಹೆಚ್ಚು ಜನರು ಜಪಾನರ ಕೈಯಲ್ಲಿರುವರಂತೆ.

ಅಮೆರಿಕನ್ ಸೈನ್ಯದಲ್ಲಿ ೯೩೭೦೪ ಜನರ ಸಾವು ನೋವು

ಅಮೆರಿಕನ್ ಸಶಸ್ತ್ರ ದಲದಲ್ಲಿ ಇಷ್ಟರವರೆಗೆ ೯೩,೭೦೪ ಜನರು ಸಾವು ನೋವುಗಳಿಗೆ ಈಡಾಗಿರುವರೆಂದು ಯುದ್ಧ ಸುದ್ದಿ ಖಾತೆಯವರು ಪ್ರಕಟಿಸಿದ್ದಾರೆ. ಇವರಲ್ಲಿ ೧೬,೯೯೭ ಜನರು ಮರಣಗೊಂಡರು; ಗಾಯಗೊಂಡವರ ಸಂಖ್ಯೆ ೨೩೩೭೮, ೩೧,೩೮೨ ಜನರು ಕಾಣೆಯಾಗಿರುವರು. ಯುದ್ಧ ಕೈದಿಗಳ ಸಂಖ್ಯೆ ೨೧,೯೪೭ ಜನರೆಂದು ತಿಳಿದಿದೆ.

ಚೀನದಲ್ಲಿ ಜಪಾನರ ಹೊಸ ದಾಳಿ

ಶಾನ್ಸಿ ಪ್ರಾಂತದ ನೈಋತ್ಯ ದಿಕ್ಕಿನಲ್ಲಿರುವ ಲಿಂಚವಾನ ಅಯಕಟ್ಟಿನ ಸ್ಥಳಕ್ಕಾಗಿ ಭೀಕರವಾದ ಬಡಿದಾಟ ನಡೆಯುತ್ತಿದೆಯೆಂದು ಚೀನೀ ಯುದ್ಧ ಕಚೇರಿಯಿಂದ ಪ್ರಕಟಿಸಲಾಗಿದೆ. ಈ ಪ್ರದೇಶದ ತಾಯಿಹಾನ—ಚಾನಗುಡ್ಡದಲ್ಲಿರುವ ಚೀನಿಯರನ್ನು ಹೊಡೆದಟ್ಟಲು ಜಪಾನರು ಒಂದು ಹೊಸ ದಾಳಿಯನ್ನು ಆರಂಭಿಸಿದ್ದಾರೆ.

ಇಂಡಿಯಾ ಮಿಲಿಟರಿ ಹೊಟೇಲ್

ಬಲ್ಮಠ ರಸ್ತೆ, ಸಿಟಿ ಬಸ್ ಗ್ಯಾರೇಜ್ ಸಮೀಪ, ಹಂಪನಕಟ್ಟೆ.

ಬನ್ನಿರಿ! 4-7-43ರಿಂದ ಅನುಭವ ಪಡೆಯಿರಿ!!

ಉತ್ತಮ ತರಗತಿಯ ಆನಂದ ನಿಲಯ ಇದೆಂದು ಸ್ವತಃ ಪರೀಕ್ಷಿಸಿರಿ!

ಕಾಫಿ ಮತ್ತು ಊಟವು ಸುಲಭ ದರ ಮತ್ತು ಉತ್ಕೃಷ್ಟ ರೀತಿಯಲ್ಲಿ ದೊರಕುವುದು.

India Military Hotel

Near City Bus Garage, Balmatta Road, Hampankatta.

Come! **From 4-7-43** **Try once!**

Coffee and Meals can be had on Moderate Charges

Proprietor: Udipi N. S. Rao, MANGALORE

ಸ್ವದೇಶಾಭಿಮಾನಿ

ತಾರೀಕು 28—7—1943

ಪತ್ರಿಕಾ ಸ್ವಾತಂತ್ರ್ಯ

'ಪತ್ರಿಕಾ ಸ್ವಾತಂತ್ರ್ಯವನ್ನು ಕಾಪಾಡುವುದು ನಮ್ಮ ಕರ್ತವ್ಯ. ಅದು ಈಗ ಸಾಧಿಸಿದೆ ಎಂದು ನಾನು ತಿಳಿಯುತ್ತೇನೆ. ಯುದ್ಧದ ಅವಶ್ಯಕತೆಯ ನಿಮಿತ್ತ ಕೆಲವು ತೊಂದರೆಗಳುಂಟಾದರೂ ಒಟ್ಟಿನಿಂದ ಪತ್ರಿಕಾ ಸ್ವಾತಂತ್ರ್ಯಕ್ಕೆ ಭಂಗವುಂಟಾಗಿಲ್ಲ. ಯುದ್ಧ ಸಮಯದಲ್ಲಿಯೂ ಪತ್ರಿಕಾ ಸ್ವಾತಂತ್ರ್ಯವಿರಬೇಕೆಂದು ನಾನೂ ನಿಮ್ಮಂತೆ ಅಭಿಪ್ರಾಯ ಪಡುತ್ತೇನೆ. ಇತರ ಸ್ವಾತಂತ್ರ್ಯಗಳಂತೆ ಪತ್ರಿಕಾ ಸಾತಂತ್ರ್ಯವೂ ಅವಶ್ಯವಾದ ಹಕ್ಕು. ನಿಮ್ಮ ಹಕ್ಕು ರಕ್ಷಣೆ ನನ್ನ ಕರ್ತವ್ಯವಿದೆ. ಪ್ರಚಾರ ಕಾರ್ಯದಲ್ಲಿ ನೀವು ನನಗೆ ಸಹಕರಿಸಬೇಕು.' ಈ ಸಾರಾಂಶದ ಮಾತನ್ನು ಭಾರತ ಸರಕಾರದ ಸುದ್ದಿ ಖಾತೆಯ ಮಂತ್ರಿ ಸರ್ ಸುಲ್ತಾನ್ ಅಹಮ್ಮದರು ಮುಂಬಯಿಯಲ್ಲಿ ಸೇರಿದ ಸಂಪಾದಕರ ಸ್ಥಾಯಿ ಸಮಿತಿ ಸಭೆಯ ಮುಂದೆ ಹೇಳಿದರು.

ಸರ್ ಸುಲ್ತಾನರ ಮಾತಿಗೆ ಸಂಪಾದಕ ಸಮಿತಿ ಅಧ್ಯಕ್ಷರಾದ ಶ್ರೀ. ಕೆ. ಶ್ರೀನಿವಾಸನರು ಯೋಗ್ಯ ಉತ್ತರವಿತ್ತಿದ್ದಾರೆ. ಯುದ್ಧ ಸಮಯದಲ್ಲೂ ಪತ್ರಿಕಾ ಸ್ವಾತಂತ್ರ್ಯವಿರಬೇಕಾದದ್ದು ಅವಶ್ಯವಾದರೂ, ಭಾರತದ ಪತ್ರಿಕೆಗಳಿಗೆ ಆ ಸ್ವಾತಂತ್ರ್ಯವಿರುವುದೆಂದು ಸರ್ ಸುಲ್ತಾನರು ಹೇಳಿದ ಮಾತನ್ನು ಇಲ್ಲಿ ಸೇರಿದ ಸಂಪಾದಕರಾರೂ ಸಮ್ಮತಿಸಲಾರರೆಂದು ಅವರ ಮುಂದುಗಡೆಯೇ ಹೇಳಿದರು. ಪರದೇಶದ ಪತ್ರಿಕೆಗಳ ಸ್ವಾತಂತ್ರ್ಯ, ನಮ್ಮ ದೇಶದ ಪತ್ರಿಕೆಗಳ ದಾಸ್ಯ ಜೀವನವನ್ನು ವಿಸ್ತರಿಸಿ, ಇದುವರೆಗೆ ಸರಕಾರವು ನಮ್ಮ ದೇಶದ ಪತ್ರಿಕೆಗಳನ್ನು ಕೇವಲ ತನ್ನ ಪ್ರಚಾರಕ ಅಂಗವಾಗಿ ಉಪಯೋಗಿಸಿಕೊಂಡಿವೆಯೆಂದು ಸ್ಪಷ್ಟ ತಿಳಿಸಿ ಆ ರೀತಿಯಿಂದು ಮೇರೆ ಮೀರಿದೆಯೆಂದೂ ಎಚ್ಚರಿಸಿದರು. ಆ ಮೇಲೆ ಟರ್ಕಿಯ ಪತ್ರಿಕಾ ಪ್ರತಿನಿಧಿಗಳ ಲೇಖನಗಳನ್ನೆತ್ತಿ, ಟರ್ಕಿಯವರು ಪತ್ರಿಕಾ ಸ್ವಾತಂತ್ರ್ಯವನ್ನು ಆದರ್ಶವಾಗಿಟ್ಟುಕೊಂಡಿಲ್ಲವೆಂದೂ ಆದರೆ ನಾವು ಬ್ರಿಟನ್ ಅಮೆರಿಕನ್ ಪತ್ರಿಕೆಗಳ ಆದರ್ಶವನ್ನಿಟ್ಟುಕೊಂಡಿರುವೆವೆಂದೂ ಆದ್ದರಿಂದ ಭಾರತದ ಪತ್ರಿಕೆಗಳಿಗೆ ಬ್ರಿಟನ್ ಅಮೆರಿಕನ್ ಪತ್ರಿಕೆಗಳಿಗಿರುವಂಥಾ ಸ್ವಾತಂತ್ರ್ಯಬೇಕೆಂದೂ, ಬ್ರಿಟನು ಅಮೆರಿಕಗಳಲ್ಲಿರುವಂತೆ ಡಿಫೆನ್ಸ್ ಕಾನೂನಲ್ಲದೆ ನಮ್ಮ ಪತ್ರಿಕೆಗಳಿಗೆ ಬೇರೆ ಶಾಸನ ನಿರ್ಬಂಧವಾಗಕೂಡದೆಂದೂ ಸಾರಿದರು.

ಪರಿಸ್ಥಿತಿ ಹೀಗಿರುತ್ತಾ, ಸರ್ ಸುಲ್ತಾನರು, ಭಾರತದ ಪತ್ರಿಕೆಗಳಿಗೆ ಪರದೇಶದ ಪತ್ರಿಕೆಗಳಿಗಿರುವಷ್ಟು ಸ್ವಾತಂತ್ರ್ಯವಿದೆಯೆಂದು ಹೇಳಿದ್ದನ್ನು ಕೇಳಿ ಆಶ್ಚರ್ಯವಾಗುತ್ತದೆ. ಅಷ್ಟು ಸ್ವಾತಂತ್ರ್ಯವಿಟ್ಟು ಪರದೇಶದ ಪ್ರಸಿದ್ಧ ಲೇಖಕರು, ಬರೆದ ಲೇಖನಗಳನ್ನು-ಲಾಯಿ ಫಿಶರರಂಥಾ ಪ್ರಸಿದ್ಧ ಗ್ರಂಥಕರ್ತ ಪತ್ರಿಕೋದ್ಯಮಿಗಳ ಬರಹಗಳನ್ನೂ ಮುದ್ರಿಸುವ ಸ್ವಾತಂತ್ರ್ಯ ನಮಗಿಲ್ಲವೆಂಬ ವಿಷಯ ಸರ್ ಸುಲ್ತಾನರ ಗಮನಕ್ಕೆ ಬರದಿರುವುದು ಆಶ್ಚರ್ಯವಿದೆ.

ವಿದೇಶದ ಸುದ್ದಿ ಹಾಗೆ. ಇನ್ನು ಸ್ವದೇಶದ ವಿಚಾರ, ಕಳೆದ ಅಗಸ್ಟ ತಿಂಗಳ ಬಳಿಕ ಭಾರತ ಪತ್ರಿಕೆಗಳು ಪಡುತ್ತಿರುವ ಪಾಡು, ಅವುಗಳ ಮೇಲೆ ಹೇರಿದ ನಿರ್ಬಂಧ ಇವುಗಳಿಂದ ಸತ್ಯಸಂಗತಿಗಳೆಷ್ಟೋ ಪ್ರಕಟಿಸಲು ನಿರ್ಬಂಧವಾಗಿದೆಯೆಂದು ಆಗಾಗ ಸಂಪಾದಕರು ದೂರಿದ್ದುದನ್ನು ಜಗತ್ತೇ ಬಲ್ಲುದು. ಕೆಲ ಕಾಲದ ಹಿಂದೆ ಕಲ್ಕತ್ತದಲ್ಲಾದ ವಿಮಾನ ಧಾಳಿಯ ವಿಷಯ ಸತ್ಯಸುದ್ದಿ ಪ್ರಚಾರಪಡಿಸಲು ಆದ ತೊಂದರೆಯ ಕುರಿತು ಕಲ್ಕತ್ತ ಪತ್ರಿಕೆಗಳು ಕೊಟ್ಟ ದೂರು ಇನ್ನು ಮರೆದಿರಲಾರದು. ಹೀಗಿದ್ದರೂ ಭಾರತದ ಪತ್ರಿಕೆಗಳಿಗೆ ಸಾಕಷ್ಟು ಸ್ವಾತಂತ್ರ್ಯವಿದೆಯೆಂದು ಸರ್ ಸುಲ್ತಾನರು ಹೇಳುವುದನ್ನು ನೋಡಿದರೆ ಯಾರಿಗಾದರೂ ದಿಗ್ಭ್ರಮೆಯಾಗಲೇ ಬೇಕು!

ಇನ್ನು ಪ್ರಚಾರದ ವಿಷಯ. ಭಾರತದ ಪತ್ರಿಕೆಗಳು ಏಕ ಕಂಠದಿಂದ ಅಕ್ಷರಾಷ್ಟ್ರವಿರೋಧ ಪ್ರಚಾರ ಮಾಡುತ್ತಿವೆ; ಮಿತ್ರರಿಗೆ ವಿಜಯ ಹಾರೈಸುತ್ತವೆ. ಲಾಭಬಡುಕರನ್ನು ಖಂಡಿಸುತ್ತವೆ; ಆಹಾರ ಸಮಸ್ಯೆ ಪರಿಹರಿಸಬೇಕೆಂದು ವಿನಂತಿಸುತ್ತಿವೆ. ಹೀಗಿರುತ್ತಾ ಪ್ರಚಾರ ಕಾರ್ಯದಲ್ಲಿ ನೆರವಾಗುವ ವಿಚಾರ ಸರ್ ಸುಲ್ತಾನರು ಚಿಂತೆಗೊಳಗಾಗಬೇಕಾದ ಅವಶ್ಯಕತೆಯೇನೂ ಇರಲಿಲ್ಲ. ಮುಖ್ಯ ಪ್ರಚಾರವಾಗಲಿ, ಪತ್ರಿಕಾಸ್ವಾತಂತ್ರ್ಯವಾಗಲಿ, ಇದಕ್ಕೆ ಮೂಲವಾಗಿ ಸತ್ಯವನ್ನು ಸಾರಲು ಪತ್ರಿಕೆಗಳಿಗೆ ಸ್ವಾತಂತ್ರ್ಯವಿರಬೇಕೆಂದು ಸಂಪಾದಕರು ಬಿನ್ನವಿಸುತ್ತಾರೆ. ಈ ವಿಷಯ ಸರ್ ಸುಲ್ತಾನರು ಗಮನ ಕೊಡುವುದು ಅವಶ್ಯವಿದೆ. ದಿನನಿತ್ಯದ ವ್ಯವಹಾರದಿಂದ ಅನುಭವಶಾಲಿಗಳಾದ ಅವರನ್ನು ಕೇವಲ ಮಾತಿನಿಂದ ಮರುಳುಗೊಳಿಸುವುದು ಇಂದು ಯಾರಿಂದಲೂ ಸಾಧ್ಯವಿಲ್ಲ. ಭಾರತದ ಪತ್ರಿಕೆಗಳ ಸಂಪೂರ್ಣ ಸಹಕಾರವು ಹಾಗೂ ಅದರ ಸತ್ಪ್ರಯೋಜನವು ಸರ್ ಸುಲ್ತಾನರಿಗೆ ದೊರಕಬೇಕಾದರೆ ಅವರು ಸತ್ಯವನ್ನು ಸಾರುವಲ್ಲಿ ಪತ್ರಿಕೆಗಳಿಗೆ ನಿರ್ಬಂಧ ಬೀಳದಂತೆ ಮಾಡಿದರೆ ಮಾತ್ರ ಸಾಕಾಗಿದೆ.

ವಿಶ್ವಕರ್ಣಾಟಕದ ಪ್ರಕಟಣೆಗೆ ಪ್ರತಿಬಂಧ

ಇದೇ ತಿಂಗಳ ೮ನೇ ತಾರೀಕಿನ ಬೆಂಗಳೂರಿನ 'ವಿಶ್ವಕರ್ಣಾಟಕ' ದಿನಪತ್ರಿಕೆಯಲ್ಲಿ 'ಸಿಡಿಲ ಮರಿ' ಎಂಬನಾಮಧೇಯದಲ್ಲಿ 'ಮಿಂಚಿನಬಳ್ಳಿ' ಎಂಬ ಲೇಖನ ಬರೆದು ಅದರಲ್ಲಿ ವೈಸರಾಯರಿಗೆ ಬರೆದ ಬಹಿರಂಗ ಪತ್ರ ಆಕ್ಷೇಪಾರ್ಹವೆಂದು ಇನ್ನು ಮೂರು ತಿಂಗಳ ವರೆಗೆ ಆ ಪತ್ರಿಕೆಯನ್ನು ಪ್ರಕಟಿಸಕೂಡದೆಂದು ಮೈಸೂರು ಸರಕಾರದವರು ವಿಧಿಸಿದ್ದಾರೆ.

ಸ್ವದೇಶ ಸಮಾಚಾರ

ಮದ್ರಾಸಿಗೆ ಸ್ಟಂಡಾರ್ಡ ಬಟ್ಟೆ

ಬರುತ್ತದೆ. ಅದರ ಮಾರಾಟವು ಬೇಗನೇ ಪ್ರಾರಂಭವಾಗುವುದು. ಈ ಬಟ್ಟೆ ಮಾರಲು ಮದ್ರಾಸಿನಲ್ಲಿ ಆರು ಅಂಗಡಿಗಳಿಗೆ ಲೈಸೆನ್ಸ ಸಿಕ್ಕಿದೆ. ಈ ಸಂಖ್ಯೆಯನ್ನು ೧೦ಕ್ಕೆ ಏರಿಸಲಾಗುವುದು. ಪ್ರತಿ ಒಂದು ಅಂಗಡಿಗೆ ಸರಾಸರಿ ತಿಂಗಳೊಂದಕ್ಕೆ ೩೦೦೨೦ ಗಜ ಬಟ್ಟೆ ಕೊಡಲಾಗುವುದು; ಜುಲೈ ತಿಂಗಳಿಗೆ ಕೊಟ್ಟ ಪರಿಣಾಮವು ೨೯೦೦೦೦ ಗಜಗಳು—ಸ್ಟಂಡಾರ್ಡ ಬಟ್ಟೆ ತಯಾರಿಸಲು ಬಕ್ಕಿಂಗ್ ಹೆಮ್ ಮತ್ತು ಕರ್ನಾಟಿಕ ಗಿರಣಿಗಳಿಗೆ ಅನುಮತಿ ಕೊಟ್ಟಿದೆ. ಅವುಗಳ ಸರಬರಾಯಿಯು ಸದ್ಯದಲ್ಲಿಯೇ ಮದ್ರಾಸಿಗೆ ಬಂದು ತಲಪುವುದು. ಮದ್ರಾಸಿನಲ್ಲಿ ಈ ಬಟ್ಟೆಯನ್ನು ಹಂಚುವ ಕಾರ್ಯವನ್ನು ಕಮ್ಶಿಯಲ್ ಟೆಕ್ಸ ಆಫೀಸರರಿಗೆ ಒಪ್ಪಿಸಿ ಕೊಟ್ಟಿದೆ. ಶರ್ಟಿಂಗ್, ಧೋತಿ ಮತ್ತು ಸೀರೆ ಇತ್ಯಾದಿ ಸೇರಿ 14 ಬಗೆಯಲ್ಲಿ ಈ ಸ್ಟಂಡಾರ್ಡ ಬಟ್ಟೆಯು ಮಾರಾಟಕ್ಕೆ ಬರುವುದು. ಈ ವಿವಿಧ ತರದ ಬಟ್ಟೆಯ ಬೆಲೆಯು ಸಾಧಾರಣ ಹೀಗಿದೆ:

ಶರ್ಟಿಂಗ್: ೪೩ ಇಂಚು ಅಗಲ, ೩೮ ಗಜ ಉದ್ದದ ಟಾಕೆಗೆ ರೂ. ೨೪-೧೧-೦; ೩೯ ಇ. ಅಗಲ, ೩೮ ಗ. ಟಾಕೆಗೆ ರೂ. ೨೨-೭-೦; ೩೫ ಇ.×೩೮ ಗ. ಟಾಕೆಗೆ ರೂ. ೨೦-೨-೦; ೨೭ ಇ.×೩೮ ಗ. ಟಾಕೆಗೆ ರೂ. ೧೫-೯-೦; ಊಚು ತರದ್ದು, ೪೯ ಇ.×೩೮ ಗ. ಟಾಕೆಗೆ ರೂ. ೨೧; ೪೩ ಇ.×೩೮ ಗ. ರೂ. ೧೮-೬-೦; ೩೯ ಇ.×೩೮ ಗ. ರೂ. ೧೬-೦೨-೦; ೩೫ ಇ.×೩೮ ಗ. ರೂ. ೧೫-೧-೦; ೨೭ ಇ. × ೩೮ ಗ. ರೂ. ೧೧-೧೦-೦; ಮತ್ತೂ ಊಚು ತರದ್ದು (೪೦ ನಂಬ್ರ ನೂಲು) ೪೯ ಇ. × ೩೮ ಗ. ರೂ. ೨೩; **ಧೋತಿಗಳು**:—೨೦ ವ ೩೦ ನಂಬ್ರ ನೂಲು-೪೯ ಇ.×೧೦/೨ ಗಜ, ೧/೮ ಇ. ಅಗಲ ಅಂಚು-ರೂ. ೫-೧೧-೦; ೩/೮ ಇ. ಅಗಲ ಅಂಚು-ರೂ. ೫-೧೩-೦; **ಸೀರೆಗಳು**:-೪೪ ಇ. × ೭ ಗಜ. ೫/೮ ಇ. ಅಂಚು-ರೂ. ೩-೧೧-೦; ೧ ಇ. ಅಂಚು-ರೂ. ೩-೧೨-೧. ಈ ಎಲ್ಲಾ ಬಟ್ಟೆಯು ಬಿಳಿ ಮತ್ತು ಬೂದು ಬಣ್ಣವಾಗಿದೆ.

ಶ್ರೀಮತಿ ಶರತಬೋಸರು

ಈಗ ಕಾನೂರಲ್ಲಿ ಸ್ಥಾನಬದ್ಧರಾಗಿಡಲ್ಪಟ್ಟ ಶ್ರೀ. ಸುಬಾಸಬೋಸರ ಅಣ್ಣ ಶ್ರೀ. ಶರತಬೋಸರನ್ನು ಕಾಣಲು ಅವರ ಪತ್ನಿಯವರು ತಮ್ಮ ಹಿರಿಯ ಪುತ್ರ ಮತ್ತು ಇಬ್ಬರು ಪುತ್ರಿಯರೊಂದಿಗೆ ಹೊರಟಿದ್ದಾರೆ. ಶ್ರೀಮತಿ ಶರತಬೋಸರು ಕಳೆದ ವರ್ಷ ಮಡಿಕೇರಿಯಲ್ಲಿ ಶರತಬೋಸರಿದ್ದಲ್ಲಿಗೆ ಅವರನ್ನು ಕಾಣಲು ಬಂದಿದ್ದು ಶರತಬೋಸರಿಗೆ ಆಹಾರ ವ್ಯವಸ್ಥೆ ಸರಿಯಾಗಿ ಕೊಡುವುದಿಲ್ಲವೆಂದು ದೂರು ಕೊಟ್ಟಿದ್ದರು.

೨೦ ನಿಮಿಷ ಭಾರತಕ್ಕೆ! ಬ್ರಿಟನಿನ ಕೂಲಿಗಾರರು!

ಬ್ರಿಟನಿನಲ್ಲಿ ಜರಗಿದ ಕೂಲಿಗಾರ ಸಮ್ಮೇಳನದಲ್ಲಿ ಕೇವಲ ೨೦ ನಿಮಿಷ ಭಾರತದ ವಿಚಾರ ಚರ್ಚಿಸಲು ಅವಕಾಶವಿತ್ತುದನ್ನು ಪ್ರೊ। ಲಾಸ್ಕಿಯವರು ಟೀಕಿಸುತ್ತಾ ಮಿಲಿಯಾಂತರ ಮಂದಿಯ ಭವಿಷ್ಯನಿರ್ಣಯಿಸಲು ೨೦ನಿಮಿಷ ಸಾಕಾದೀತೇ ಎಂದು ಕೇಳಿದ್ದಾರೆ: ಬ್ರಿಟನಿನ ಮಜೂರರಿಗೆ ಭಾರತದ ವಿಷಯ ಇಷ್ಟೇ ಸಹಾನುಭೂತಿ!

ಸುಬಾಸ್ ಬೋಸರು ಟೋಕಿಯೋದಲ್ಲಿ?

ಸುಬಾಸಬೋಸರ ಚಟುವಟಿಕೆಯ ಸುದ್ದಿಗಳು ಇತ್ತೀಚೆಗೆ ಬಹಳವಾಗಿ ಬರುತ್ತವೆ. ಮೊನ್ನೆ ಮೊನ್ನೆ ಬರ್ಲಿನಿನಲ್ಲಿ ಸ್ವಾತಂತ್ರ್ಯ ದಿನ ಭಾಷಣ ಮಾಡಿದ ಫೋಟೋ ಬಂತು, ಆ ಮೇಲೆ ಸಿಂಗಾಪುರಕ್ಕೆ ಬಂದ ಸುದ್ದಿ ಸಿಕ್ಕಿತು, ಈಗ ಟೋಕಿಯೋಗೆ ತೆರಳಿದ್ದಾರೆಂದು ಮದ್ರಾಸಿನ 'ವಾರ್ ರಿವ್ಯೂ' ಪತ್ರಿಕೆ ಬರೆಯುತ್ತದೆ. ಅವರು ಅಲ್ಲಿ ಬಂದ ಮೂರು ದಿನಗಳಲ್ಲಿ ಇಂಗ್ಲಿಷ್, ಜರ್ಮನ್, ಹಿಂದಿ, ಬಂಗಾಳಿ ನಾಲ್ಕು ಭಾಷೆಗಳಲ್ಲಿ ಭಾಷಣವಿತ್ತರೆಂದೂ, ಜಪಾನು ಭಾರತದ ಸ್ವಾತಂತ್ರ್ಯಕ್ಕೆ ಬೆಂಬಲವಿದೆಯೆಂದು ಬೋಸರು ಆ ಭಾಷಣದಲ್ಲಿ ಸಾರಿದರೆಂದೂ ಹೇಳಲಾಗಿದೆ.

ಕಾಂಗ್ರೆಸಿಗರನ್ನು ಬಿಡಬೇಕು
ಬಂಗಾಳ ಕೌನ್ಸಿಲ್ ನಿರ್ಣಯ

ಭಾರತದ ಬಿಕ್ಕಟ್ಟು ಬಿಡಿಸುವರೆ, ಗಾಂಧಿಜಿ, ಆಜಾದ್, ನೆಹರು ಮೊದಲಾದ ಕಾಂಗ್ರೆಸಿಗರನ್ನೆಲ್ಲಾ ಬಂಧವಿಮೋಚನೆ ಮಾಡಬೇಕೆಂದು ಬಂಗಾಳ ಲೆಜಿಸ್ಲೆಟಿವ್ ಕೌನ್ಸಿಲ್ ನಿರ್ಣಯಿಸಿ, ಇದನ್ನು ಭಾರತ ಸರಕಾರಕ್ಕೆ ಗವರ್ನರರ ಮೂಲಕ ಕಳುಹಿಸಲು ನಿರ್ಣಯಿಸಿದೆ.

ಎಲ್ಲಾ ರಾಜಕೀಯ ಕೈದಿಗಳ ಬಿಡುಗಡೆ
ತಿರುವಾಂಕೂರಿನ ಮಾದರಿ

ತಿರುವಾಂಕೂರು ಎಸೆಂಬ್ಲಿಯಲ್ಲಿ ಮಾತನಾಡುತ್ತಾ ದಿವಾನ್ ಸರ್ ಸಿ. ಪಿ. ಯವರು ಎಲ್ಲಾ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಲಾಗುವುದೆಂದು ಘೋಷಿಸಿದರು. ಇದರಿಂದ ಸಂಸ್ಥಾನದ ಅಶಾಂತತೆ ಕಡಿಮೆಯಾಗುವುದೆಂದೂ, ಪ್ರಜೆ ಮತ್ತು ಸರಕಾರದಲ್ಲಿ ಸ್ನೇಹಸಂಬಂಧವುಂಟಾಗುವುದೆಂದೂ ಅವರು ಹಾರೈಸುತ್ತಾರೆ. ತಿರುವಾಂಕೂರಿನ ಈ ಮಾದರಿ ಇತರರು ಅನುಸರಿಸತಕ್ಕದ್ದಿದೆ.

ನಿಮ್ಮ ಸೋದರರ ಕೂಗು ಕೇಳಿಸದೆ?
ದಕ್ಷಿಣಾಫ್ರಿಕದಿಂದ

ದಕ್ಷಿಣಾಫ್ರಿಕ ಭಾರತೀಯ ಕಾಂಗ್ರೆಸಿನ ಪ್ರತಿನಿಧಿ ಸ್ವಾಮಿ ಭವಾನಿದಯಾಲರು ಮತ್ತು ಮಹಮ್ಮದ್ ಅಹ್ಮದ್ ಜಾರುತ್ ಇವರೂ ಒಂದು ಜಂಟಿ ಹೇಳಿಕೆಯಿತ್ತು, ದಕ್ಷಿಣ ಆಫ್ರಿಕದ ಭಾರತೀಯರಿಗೆ ಅಲ್ಲಿನ ಬಿಳಿ ಮಂದಿಗಳು ಕೊಡುವ ಕೋಟಲೆ ನಳಿಂದ ನಾಯಿಬಾಳು ಮಾಡುತ್ತಿರುವರೆಂದೂ ಅವರ ಕರುಣೆಯ ಕೂಗು ನಿಮಗೆ ಕೇಳಿಸದೇ ಎಂದೂ ವಿನಂತಿಸಿದ್ದಾರೆ. ಭಾರತದಲ್ಲಿ ದಕ್ಷಿಣಾಫ್ರಿಕ ಸರಕಾರವನ್ನು ಖಂಡಿಸಿ ಎಷ್ಟು ನಿರ್ಣಯ ಮಾಡಿದರೂ ಬೆಲೆಯಿಲ್ಲ, ಕಾರ್ಯರೂಪದಲ್ಲಿ ಮಾತ್ರ ಮಾಡಿದಕ್ಕೆ ನಾವು ಏನಾದರೂ ಕೆಲಸ ಸಾಧಿಸಬಹುದೆಂದು ಅವರು ಕೇಳಿಕೊಂಡಿರುವರು.

ಅಟ್ಲಾಂಟಿಕ ಘೋಷಣೆಯಲ್ಲಿ ತಿದ್ದುಪಡಿ ಮಾಡುವದಿಲ್ಲ!
ಚರ್ಚಿಲ್ಲರ ಉದ್ಗಾರ!

'ಅಟ್ಲಾಂಟಿಕ ಘೋಷಣೆಗೆ ಅಮೇರಿಕನ್ ಕಾಂಗ್ರೆಸು ಒಪ್ಪಿಲ್ಲ. ಅದರ ಕೆಲವು ಕಲಮುಗಳಿಂದ ಬಹಳ ತಪ್ಪು ತಿಳುವಳಿಕೆಯುಂಟಾಗಿದೆ. ಆದ್ದರಿಂದ ಅದರಲ್ಲಿ ತಿದ್ದುಪಡಿ ಮಾಡಲಾಗುವದೆ?' ಎಂದು ಕಾಮನ್ಸ ಸಭೆಯಲ್ಲಿ ಕೇಳಲು ಚರ್ಚಿಲ್ಲರು 'ಸಾಧ್ಯವಿಲ್ಲ' ಎಂಬ ಒಂದೇ ಉತ್ತರ ಕೊಟ್ಟರು. 'ಈ ಘೋಷಣೆಯಲ್ಲಿ ಕೆಲವು ತತ್ವಗಳನ್ನು ಮಾತ್ರ ಹೇಳಲಾಗಿದೆ. ಆದ್ದರಿಂದ ಇದಕ್ಕೆ ಯಾವದೇ ಬಗೆಯ ಘಟನಾತ್ಮಕ ಒಪ್ಪಿಗೆ ಅವಶ್ಯವಿಲ್ಲ' ಎಂದೂ ಅವರು ಅಂದರು.

ಕರ್ನಾಟಕ
ಡಾ। ರಾಮಮನೋಹರ ಲೋಹಿಯ

ಇವರನ್ನು ಹಿಡಿದು ಕೊಟ್ಟವರಿಗೆ ೫೦೦ ರೂ.ಗಳ ಬಹುಮಾನ ಕೊಡುವದಾಗಿ ಸಂಯುಕ್ತ ಪ್ರಾಂತ ಸರಕಾರದವರು ಪ್ರಕಟಣೆ ಹೊರಡಿಸಿದ್ದಾರೆ.

ಜಿಲ್ಲಾ ಸಮಾಚಾರಗಳು

ಮಂಗಳೂರು

ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಪರಿಷತ್ತು

ಈ ವರ್ಷ ಡಿಸಂಬರದೊಳಗೆ ಅಥವಾ ಮುಂದಿನ ವರ್ಷ ಜನವರಿಯ ಆದಿಯಲ್ಲಿ ಮಂಗಳೂರಲ್ಲಿ ಜರಗಿಸಬೇಕೆಂದು ತಾ ೩೧ರಂದು ಜರಗಿದ ಜಿಲ್ಲಾ ಪತ್ರಿಕೋದ್ಯೋಗಿ ಸಂಘದ ಕಾರ್ಯಕಾರಿ ಸಮಿತಿಯ ಸಭೆಯು ನಿರ್ಧರಿಸಿತು. ಸಂಘಕ್ಕೊಂದು ಆಫೀಸನ್ನು ತೆರೆಯುವುದರ ಕುರಿತು ಆಲೋಚಿಸಲು ರಚಿಸಲ್ಪಟ್ಟಿದ್ದ ಸಮಿತಿಯು ತನ್ನ ವರದಿಯನ್ನೊಪ್ಪಿಸಿತು. ಅದರ ಸಲಹೆಗಳು ಸ್ವೀಕರಿಸಲ್ಪಟ್ಟವು. ಸಂಘದ ಹೊಸ ಆಫೀಸಿನ ಉದ್ಘಾಟನೆಯನ್ನು ಆಗಸ್ಟ್ ತಾ. ೧೫ರಂದು ಜರಗಿಸಬೇಕೆಂದೂ ಗೊತ್ತಾಯಿತು.

ನಿರ್ಬಂಧ ಮುಂದುವರಿದಿದೆ

೧೮ನೇ ಕಲಮಿನನ್ವಯ ನಮ್ಮ ಜಿಲ್ಲೆಯಲ್ಲಿ ಭಾಷಣ ಮೆರವಣಿಗೆ ಮುಂತಾದವುಗಳ ಮೇಲಿದ್ದ ನಿರ್ಬಂಧದಾಜ್ಞೆಯು ಪುನಃ ಎರಡು ತಿಂಗಳ ವರೆಗೆ ಮುಂದುವರಿದಿದೆ. ಸಾಮಾಜಿಕ ರಂಜನೆಯ ಕೂಟಗಳಿಗೆ ನಿರ್ಬಂಧವಿಲ್ಲ.

ಅಕ್ಕಿ ಕ್ರಯ

'ಅಕ್ಕಿ ಕ್ರಯವು ಈಗ ಮುಡಿಗೆ ರೂ. ೧೬ಕ್ಕೆ ಏರುತ್ತಿದೆ ಇನ್ನು ಯಾವ ಮಿತಿಗೆ ನಿಲ್ಲುತ್ತದೋ ಎಂಬ ಹೆದರಿಕೆಯೂ ಉಂಟು. ವರ್ಗದಾರರು ಅಕ್ಕಿಯನ್ನು ಮಾರಾಟಮಾಡುವ ಸಮಯ, ಎಂದರೆ ಅವರ ಕೀರ್ವೆ ಕೊಡುವ ಸಮಯದಲ್ಲಿ ಸಾಧಾರಣ ಎಪ್ರಿಲ್ ಮೇ ತಿಂಗಳ ತನಕ ಜಿಲ್ಲಾಧಿಕಾರಿಗಳ ಕ್ರಯ ನಿಯಂತ್ರಣ ಇತ್ತು. ರಿಕ್ವಿಸಿಶನ್ ಮಾಡಿದ್ದರು. ಹೆಚ್ಚಿಗೆ ಕ್ರಯದಲ್ಲಿ ಮಾರಾಟಮಾಡುವವರನ್ನು ಹೋಗಿ ಅಧಿಕಾರಿಗಳು ಹೆದರಿಸಿದ್ದರು. ಆ ಮೇಲೆ ರಿಕ್ವಿಸಿಶನ್ ಆಕ್ಕಿ ಇಲ್ಲವೆಂದಾಗಲೂ ಅಕ್ಕಿ ಮುಡಿಗೆ ಸುಮಾರು ರೂ. ೧೧ರ ಒಳಗೆ ಬೆಲೆ ನಿಯಂತ್ರಿತವಾಗಿತ್ತು. ವರ್ಗದಾರರ ಅಕ್ಕಿಗೆ ಸೇರಿಗೆ ೪ ಆಣೆಯೆಂದು ಸಾಹುಕಾರರು ಮಾರಾಟಮಾಡಿದರು. ಹೀಗಾಗಿ ಬೆಳೆ ಬೀಳುವ ಮುನ್ನವೇ ವರ್ಗದಾರರು ಹೆಚ್ಚು ಮಂದಿಯೂ ತಮ್ಮಲ್ಲಿದ್ದ ಆಕ್ಕಿಯನ್ನು ಇನ್ನು ಬೆಲೆಯೇರುವುದಿಲ್ಲವೆಂದು ತಿಳಿದು ಸಹಜವಾಗಿ ಮಾರಾಟಮಾಡುತ್ತಾರೆ. ಆ ಮೇಲೂ ದಾಸ್ತಾನಿಡುವ ವರ್ಗದಾರರು ಅತ್ಯಂತ ಕಡಿಮೆ. ಇದರಿಂದ ಅಕ್ಕಿಯೆಲ್ಲಾ ಈಗ ವ್ಯಾಪಾರಸ್ಥರ ಕೈಗೆ ಬಂದಿದೆ ಹೀಗೆ ವ್ಯಾಪಾರಸ್ಥರ ಕೈಗೆ ಅಕ್ಕಿ ಬಂದ ಮೇಲೆ ಕ್ರಯ ದಿನದಿಂದ ದಿನಕ್ಕೆ ಏರುತ್ತಾ ಹೋಗುತ್ತದೆ. ಈಗ ಯಾವ ನಿಯಂತ್ರಣವೂ ಇಲ್ಲ. ಸಹಜವಾಗಿ ಯಾರ ಉತ್ಪತ್ತಿಗೆ ಯಾರಿಗೆ ಲಾಭ ಸಿಗಬೇಕಿತ್ತೋ ಅಂಥಾ ಭೂಮಾಲಿಕರಿಗೆ ಅಕ್ಕಿ ಕ್ರಯ ನಿಯಂತ್ರಣವು ಅವರು ಮಾರಾಟ ಮಾಡುವ ಕೊನೆಯ ಅವಧಿ ವರೆಗೂ ಇದ್ದದ್ದರಿಂದ ಪ್ರಯೋಜನ ಸಿಗದೆ, ಈಗ ಎಲ್ಲಾ ಲಾಭವೂ ಸಾಹುಕಾರರಿಗೆ ಸಿಗುತ್ತಿದೆ ಬಡವರಿಗಾದರೂ ಉಪಕಾರವಾಗುತ್ತದೆಂದು ಕ್ರಯ ನಿಯಂತ್ರಿಸಿದರೆ ಅದರಲ್ಲಿ ಯಾರಿಗೂ ಪಶ್ಚಾತ್ತಾಪವಿಲ್ಲ. ಆದರೆ ಈಗ ಸಾಹುಕಾರರಿಗೆ ಲಾಭ ಮಾಡಲು ಅಸ್ಪದವಾಗಿದೆ. ಈಗ ಯಾವುದೇ ತರದ ನಿಯಂತ್ರಣವೂ ಕಾಣುವುದಿಲ್ಲ. ಇದರಿಂದ ಅಧಿಕಾರಿಗಳು ಭೂಮಾಲಿಕರ ಬಾಯಿ ಮುಚ್ಚನ್ನೆಳೆದು, ಸಾಹುಕಾರರಿಗೆ ಲಾಭಮಾಡಲು ಬಿಟ್ಟಂತೆ ಆಯಿತಲ್ಲದೆ ಬಡವರಿಗೆ ಏನು ಪ್ರಯೋಜನವಾಯಿತು? ಈಗಲಾದರೂ ಕ್ರಯ ನಿಯಂತ್ರಿಸುವುದು ಆಗತ್ಯವಲ್ಲವೆ? ಹಾಗೆ ಮಾಡಿದರೆ ಮಾತ್ರ ಬಡವರಿಗೆ ಉಪಕಾರವೂ, ಸರ್ವರಿಗೆ ನ್ಯಾಯವೂ ಮಾಡಿದಂತಾಗುವುದಲ್ಲವೇ' ಎಂದು ಒಂದು ವಾರ್ತೆ.

ಮುನ್ಸಿಪಲ್ ಸಭೆ

ತಾ. ೧೯ರಂದು ಚೇರ್‌ಮೇನ್ ಪುತ್ತೂರು ಹಸೇನ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿತು ಎಮ್. ರಾಮಕೃಷ್ಣರಾವ್ ಎಂಡೋಮೆಂಟ್ ನಿಧಿಯಿಂದ ೧೨೦ ರೂಪಾಯಿ ಬೆಸೆಂಟ್ ಬಾಲಿಕಾ ಪಾಠಶಾಲೆಗೆ ಮಂಜೂರಾಯಿತು. ಮದ್ರಾಸಿನಲ್ಲಿ ೨೦ ದಿನ ನಡೆಯಲಿರುವ ಎ. ಆರ್. ಪಿ. ತರಬೇತು ಶಿಬಿರದಲ್ಲಿ ಭಾಗವಹಿಸಲು ಕಮಿಶನರಿಗೆ ಅನುಮತಿ ಕೊಟ್ಟಿತು. ವಾಚನಾಲಯದ ಬಗ್ಗೆ ಸಹಾಯ ಕೇಳಿದ, ಮಹಿಳಾ ಸಭೆ, ಲೇಡೀಸ್ ಕ್ಲಬ್, ಭಗಿನೀ ಸಮಾಜದವರಿಗೆ, ಸರಕಾರದವೇ ಸಹಾಯ ಕೊಡಬೇಕೆಂದೂ ಅದಕ್ಕೆ ತಾವು ಶಿಫಾರಸು ಮಾಡುತ್ತೇವೆಂದೂ ಕೌನ್ಸಿಲು ನಿರ್ಣಯಿಸಿತು. ಪೆಟ್ಲೆಂಡ್‌ಪೇಟೆ ಮತ್ತು ಸೆಂಟ್ರಲ್ ಮೈದಾನುಗಳನ್ನು ಹಾಕಿ, ಕ್ರಿಕೆಟು ಆಡಲು ಸರಿಗೊಳಿಸುವುದೆಂದಾಯಿತು. ಅಧಿಕಾಹಾರ ಬೆಳೆಸಲು ಮುನ್ಸಿಪಾಲಿಟಿ ವಶವಿರುವ ಕೆಲ ಸ್ಥಳಗಳನ್ನು ಬಾಡಿಗೆಗೆ ಕೊಡುವುದೆಂದಾಯಿತು.

ಮಂಗಳೂರಲ್ಲಿ ಎರಡು ತಲೆಗಳ ಮಗು!

ಮಂಗಳೂರು ರೈಲ್ವೆ ಸ್ಟೇಶನಿನ ಸಮೀಪವಿರುವ ಒಂದು ಗಾಣಿಗ ಜಾತಿಯ ಹೆಂಗುಸು ತಾ. ೨೦ರಂದು ಎರಡು ತಲೆಗಳುಳ್ಳ ಒಂದು ಮಗುವನ್ನು ಹೆತ್ತಿದ್ದಾಳೆ ಮಗು ಹುಟ್ಟಿದ ಕೂಡಲೇ ಸತ್ತು ಹೋಯಿತು. ಭುಜದಿಂದ ಎರಡು ಕಂಠನಾಳಗಳು ಕವಲಾಗಿ ಹೊರಟು ಎರಡು ತಲೆಗಳಿವೆ. ಎರಡು ತಲೆಗಳಿಗೆ ಪ್ರತ್ಯೇಕ ಪ್ರತ್ಯೇಕ ಎರಡೆರಡು ಕಿವಿ, ಕಣ್ಣುಗಳೂ, ಬಾಯಿ, ಮೂಗು ಮೊದಲಾದುವೆಲ್ಲಾ ಇವೆ ಎರಡು ತಲೆಗಳೂ ಪುಷ್ಟಿಯಿಂದಿವೆ. ಮಗುವೂ ಪುಷ್ಟಿಯದಿದೆ. ಮಗುವಿನ ಈ ಎರಡು ಕುತ್ತಿಗೆಗಳ ನಡುವೆ ಒಂದು ಮಾಂಸದ ಮುದ್ದೆ ಇದೆ ಮಗುವಿನ ಎರಡು ಮುಖಗಳೂ ಒಂದೇ ತೆರನಾಗಿದ್ದು ಸುಂದರವಾಗಿವೆ. ಮಗು ಗಂಡು. ಈ ಎರಡು ತಲೆಯ ಮಗುವನ್ನು ನೋಡಲು ನಗರದಿಂದ ಸಾವಿರಾರು ಮಂದಿ ಹೋಗಿದ್ದರು.

ಇದಕ್ಕಿಂತ ಕೆಲಕಾಲಕ್ಕೆ ಮೊದಲು, ಬುಂಗಳೂರಲ್ಲಿ ಎರಡು ತಲೆಗಳುಳ್ಳ ಒಂದು ಕರುವನ್ನು ದನ ಹೆತ್ತಿತ್ತು. ಅದೇ ಅನೇಕರಿಗೆ ಆಶ್ಚರ್ಯವಾಗಿರಲು, ಈಗ ಅದಕ್ಕಿಂತ ಹೆಚ್ಚಿನ ಆಶ್ಚರ್ಯವಿದಾಗಿದೆ.

ಹಿಂದೀ ಪ್ರಚಾರ ಮಂಡಲ

ಪೊಂದು ನಗರದಲ್ಲಿ ಸ್ಥಾಪಿಸಲ್ಪಟ್ಟಿದೆ. ಫಾ! ಎಫ್. ಜೆ. ಎಂ. ಪಿಂಟೋ, ಬಿ ಎ ಎಲ್ ಟಿ, ಅವರು ಮಂಡಲದ ತಾತ್ಕಾಲಿಕ ಕಾರ್ಯಕಾರಿ ಸಮಿತಿಯ ಗೌರವ ಅಧ್ಯಕ್ಷರಾಗಿಯೂ ಕೋಶಾಧಿಕಾರಿಯಾಗಿಯೂ, ಶ್ರೀ ಕೆ. ಕೃಷ್ಣ ರಾವ್ ಅವರು ಉಪಾಧ್ಯಕ್ಷರಾಗಿಯೂ, ಶ್ರೀ ಸಿ. ಶ್ರೀನಿವಾಸ ರಾಯರು ಕಾರ್ಯದರ್ಶಿಯಾಗಿಯೂ ಇರುವರು. ಶ್ರೀಯುತರು ಬಿ. ಆನಂತ ರೈ, ಜೊಸೆಫ್ ಸಾಲ್ಡಾನ್ ಮತ್ತು ದೇವಪ್ಪ ಆಳ್ವ ಇವರು ಸಮಿತಿಯ ಸದಸ್ಯರು.

'ಜನರಲ್ಲಿ ಹಿಂದೀ ಭಾಷೆಯ ಪ್ರಚಾರ ಮಾಡುವುದೇ ಮಂಡಲದ ಉದ್ದೇಶವಾಗಿದೆ. ಸದ್ಯಕ್ಕೆ ಮಿಲಾಗ್ರಿಸ್ ಸೆಕೆಂಡರಿ ಶಾಲೆಯಲ್ಲಿ, ಸೋಮವಾರ, ಬುಧವಾರ ಮತ್ತು ಶುಕ್ರವಾರ ಹೀಗೆ ವಾರದಲ್ಲಿ ಮೂರು ದಿನ ಆಗಸ್ಟ್ ತಾ. ೨ರ ಮೊದಲ್ಗೊಂಡು ಹಿಂದೀ ತರಗತಿಗಳು ಆರಂಭವಾಗುವುವು. ಸಂಜೆ ೭ ಘಂಟೆಯಿಂದ ೮ರ ತನಕ, ೮ರಿಂದ ೯ರ ತನಕ, ಹೀಗೆ ಎರಡು ತರಗತಿಗಳಿರುವುವು. ವಿದ್ಯಾರ್ಥಿಗಳಾಗಿ ಯಾವ ವಯಸ್ಸಿನವರೂ ಸೇರಬಹುದು. ಬಡ ವಿದ್ಯಾರ್ಥಿಗಳಿಂದ ಫೀಸು ತೆಗೆದುಕೊಳ್ಳುವುದಿಲ್ಲ. ಆದರೆ ತರಗತಿಗಳನ್ನು ನಡೆಸುವ ಅಧ್ಯಾಪಕರಿಗೆ ಮಾಸಿಕ ಸಂಭಾವನೆಯನ್ನು ಕೊಡಬೇಕಾಗಿದೆ. ಅದಕ್ಕೊಂದು ನಿಧಿಯೂ ಅವಶ್ಯವಿದೆ. ಮಹಾಜನರು ಉದಾರಿಗಳಾಗಿ ನಿಧಿಕೊಡಿಸುವುದರಲ್ಲಿ ನೆರವಾಗಿ ಹಿಂದೀ ಪ್ರಚಾರವು ಯಶಸ್ವಿಯಾಗುವಂತೆ ಮಾಡಬೇಕು' ಎಂದು ಮಂಡಲದವರು ವಿನಂತಿಸಿದ್ದಾರೆ.

ಜಟ್ಟಿ ಕಾಳಗ

ಕಳೆದ ಆದಿತ್ಯವಾರ ಉಳ್ಳಾಲದ ಶ್ರೀ. ಆನಂದ ಪಹಿಲ್ವಾನ್ ಮತ್ತು ಉತ್ತರ ಭಾರತದ ಶ್ರೀ. ಕೇಹರ್ ಸಿಂಗ್ ಇವರೊಳಗೆ ಮಂಗಳೂರು ಮಿಶನ್ ಹೈಸ್ಕೂಲ್ ಮೈದಾನದಲ್ಲಿ ಜಟ್ಟಿಕಾಳಗವಾಗಿ ಇಬ್ಬರೂ ಸಮಬಲರೆಂದು ನಿರ್ಧಾರವಾಯಿತು.

ಪ್ರೆಸ್ ಮಜೂರರಿಗೆ

ಹಂಚಲು ತಿಂಗಳಿಗೆ ೬ ಪಡ್ಡಿ ಚಿಮ್ಣಿ ಎಣ್ಣೆಯನ್ನು ಕೊಡಿಸಬೇಕೆಂದು ಕಲೆಕ್ಟರರನ್ನು ಕೇಳಿಕೊಳ್ಳುವ ನಿರ್ಣಯವು ಈ ಸಂಘದ ಕಾರ್ಯಕಾರೀ ಸಭೆಯಲ್ಲಿ ಮಂಜೂರಾಗಿದೆ.

ಹರಿಜನಸೇವಾ ಸಂಘ

ಇದರ ಸಭೆ ತಾ. ೧೫ರಲ್ಲಿ ಶ್ರೀ. ಎ. ಬಿ. ಶೆಟ್ಟರ ಅಧ್ಯಕ್ಷತೆಯಿಂದ ಥಿಯೊಸಫಿಕಲ್ ಲಾಜಿನಲ್ಲಿ ಸೇರಿ ಎರಡು ತಿಂಗಳ ವರದಿ ಸ್ವೀಕಾರ, ಹರಿಜನ ವಿದ್ಯಾರ್ಥಿಗಳಿಗೆ ವಸ್ತ್ರ ವೇತನಗಳ ಮಂಜೂರಾತಿಗಳಾದವು.

ಎರಡು ಉತ್ತಮ ಸಿನೆಮಗಳು

ಬೊಂಬಯಿ ಟಾಕೀಸಿನ 'ಬಂಧನ್' ಚಿತ್ರ ಬಾಲಾಜಿಗೆ, ರಣಜಿತ್ ಚಿತ್ರ 'ಪರ್ದೇಶಿ' ಸೆಂಟ್ರಲಿಗೆ ಹೀಗೆ ಎರಡು ಅತ್ಯುತ್ತಮ ಚಿತ್ರಗಳು ಒಂದೇ ಸಲ ಮಂಗಳೂರಲ್ಲೀಗ ಪ್ರದರ್ಶಿತವಾಗುತ್ತಿವೆ. ಸಿನೆಮಾ ಪ್ರಿಯರಿಗೊಂದು ಹಬ್ಬ

ಪ್ರಕಾಶ ಎಸೋಸಿಯೇಶನ್

ಇದರ ಮಹಾಸಭೆಯೊಂದು ತಾ ೧೮ ಸಂಜೆ ಶ್ರೀ. ಸಾಯ್ಸ ಎಸ್ ಜಿ. ಯವರ ಅಧ್ಯಕ್ಷತೆಯಲ್ಲಿ ಜರಗಿತು. ಚುನಾವಣೆ ನಡೆದು ಡಾ ಕೆ. ಗಿರಿಧರ ರಾವ್ ಅಧ್ಯಕ್ಷ, ಶ್ರೀ. ಪಿ ಕೆ ನಾರಾಯಣ ಉಪಾಧ್ಯಕ್ಷ, ನಾಯಕ್ ಎಸ್. ಜಿ ಪ್ರಧಾನ ಕಾರ್ಯದರ್ಶಿ, ಶೆಣೈ ಜೆ. ಎನ್ ಖಜಾಂಜಿ ಮತ್ತು ಶ್ರೀಯುತ ರಾಮಚಂದ್ರ ಭಟ್, ಪಾಂಡುರಂಗ ಭಂಡಾರಿ, ಗೋಪಾಲಕೃಷ್ಣ ಕಾಮತ್, ಬಿ ವಿ. ಕಕ್ಕಿಲಾಯ, ಆನಂದ ಶೆಟ್ಟಿ, ಬಿ ವಿ. ಬಾಳಿಗಾ ಇವರು ಕಾರ್ಯಕಾರಿ ಮಂಡಳಿಯ ಸದಸ್ಯರಾಗಿ ಆರಿಸಲ್ಪಟ್ಟರು. ಶ್ರೀಯುತ ಪಿ ಕೆ ನಾರಾಯಣರು 'ಪ್ರಕಾಶ' ಪತ್ರಿಕೆಯ ಸಂಪಾದಕರಾಗಿ ಆರಿಸಲ್ಪಟ್ಟರು ಜಿಲ್ಲೆಯ ಮೇಲಿನ ಪ್ರತಿಬಂಧಕಾಜ್ಞೆಯನ್ನು ತೆಗೆಯುವಂತೆ ಕಲೆಕ್ಟರರನ್ನು ಕೇಳಿಕೊಳ್ಳುವ ಒಂದು ನಿರ್ಣಯವನ್ನು ಸಭೆಯು ಕೈಕೊಂಡಿತು.

ಕರ್ನಾಟಕ ಥಿಯೇಟರ್ಸ್

ತಾ. ೧೮ರ ಸಾಯಂಕಾಲ ಥಿಯೇಟರ್ಸಿನ ಮಠದಲ್ಲಿ ಈ ಸಂಘದ ಸದಸ್ಯರ ಹಾಗು ಇತರ ಕಲಾಭಿಮಾನಿಗಳ ಸಭೆಯೊಂದು ಜರಗಿ, ಥಿಯೇಟರ್ಸಿನ ಚಟುವಟಿಕೆಗಳನ್ನು ಆರಂಭಿಸುವ ನಿರ್ಣಯವಾಯಿತು. ಅಧಿಕ ಉತ್ಸಾಹದಿಂದ ಥಿಯೇಟರ್ಸು ಕಾರ್ಯರಂಗಕ್ಕಿಳಿಯಬೇಕು ಅಳಿದು ಹೋದ ಲಲಿತ ಕಲೆಗಳನ್ನು ಪುನಃ ಬೆಳಕಿಗೆ ತರಬೇಕು, ೬ ಪ್ರಯುಕ್ತ ಸಂಘವು ಭರದಿಂದ ಕಾರ್ಯಕ್ರಮ ಮುಂದೊತ್ತಬೇಕು ಇತ್ಯಾದಿ ನಿರ್ಣಯಗಳಾದುವು ಸಂಸ್ಥೆಯ ಉದ್ಘಾಟನಾ ಸಮಾರಂಭವನ್ನು ಬರುವ ತಿಂಗಳಲ್ಲಿ ಜರಗಿಸುವುದೆಂದೂ ಆ ಸಂದರ್ಭದಲ್ಲಿ ಉದ್ಘಾಟನಾ ಸಮಾರಂಭದ ಸಲುವಾಗಿ ಒಂದು ನಾಟಕ ಅಭಿನಯಿಸುವುದೆಂದೂ ಗೊತ್ತುಪಡಿಸಲಾಯಿತು. 'ನಾರದಲೀಲಾ' ಮತ್ತು 'ಸಂಸಾರಲೀಲಾ' ನಾಟಕಗಳನ್ನು ಅಭಿನಯಿಸಿ, ಪುರಜನರ ಮೆಚ್ಚಿಗೆಗೆ ಪಾತ್ರವಾದ ಸಾಹಿತ್ಯ ಸುಧಾರಕ ಸಂಗೀತ ನಾಟಕ ಸಭೆಯನ್ನು ಕರ್ನಾಟಕ ಥಿಯೇಟರ್ಸಿಗೆ ಸೇರಿಸಿ ಎಸ್. ಎಸ್. ನಾಟಕ ಸಭಾ ವ್ಯವಸ್ಥಾಪಕರನ್ನು ಥಿಯೇಟರ್ಸಿನ ಸದಸ್ಯರನ್ನಾಗಿ ಸೇರಿಸಿಕೊಳ್ಳಲಾಯಿತು.

ಆಷಾಢಶುಕ್ಲ ಪೂರ್ಣಿಮಾ

ಈ ದಿನ, ಭಗವಾನ್ ಬುದ್ಧನು ಸಂಸಾರವನ್ನು ತ್ಯೊಲಗಿ ಹೋದ ದಿನ. ಈ ದಿನಾಚರಣೆ ಬೆಸೆಂಟ್ ಬಾಲಿಕಾ ಪಾಠಶಾಲೆಯಲ್ಲಿ ಶ್ರೀ ಎಸ್ ಮುಕುಂದರಾಯರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು. ಶ್ರೀ. ಪಿ. ಕೆ. ನಾರಾಯಣರು ಭಾಷಣವಿತ್ತರು.

ನಿಧನಗಳು

ನಮ್ಮ ಜಿಲ್ಲಾ ಜಡ್ಜರಾಗಿ, ವಿಶ್ರಾಂತಿಯ ವೇತನ ರಜೆ ತೆಗೆದುಕೊಂಡಿದ್ದ ಖಾನ್ ಬಹದ್ದೂರ್ ಓ. ಸಿ ಅಲ್ಲಪ್ಪಿ ಕೋಯಿ ಸಾಹೇಬರು ತಾ. ೯ರಲ್ಲು ಕಣ್ಣಾನೂರಿನಲ್ಲಿ ಅಕಸ್ಮಾತ್ ಹೃತ್ಕ್ರಿಯೆ ನಿಂತು ವಿಧಿವಶರಾದರೆಂದು ತಿಳಿದು ಬರುತ್ತದೆ.

ಕಾರ್ಕಳದ ವಕೀಲ ಶ್ರೀ. ಕೆ. ಸದಾಶಿವ ಭಟ್ಟರು ತಾ. ೧೨ರಂದು ನಿಧನಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಕೊಲೊಂಬೋದಲ್ಲಿ ಆನಂದ ಕಾಲೇಜಿನ ವೈಸ್ ಪ್ರಿನ್ಸಿಪಾಲರಾಗಿ ಕೆಲಕಾಲವಿದ್ದು, 'ಬುದ್ಧಿಸ್ಟ್' ಎಂಬ ಇಂಗ್ಲಿಷ್ ಪತ್ರಿಕೆಯ ಸಂಪಾದಕರಾಗಿ, ಆ ಮೇಲೆ ಸಿಲೋನ್, ಬರ್ಮಾ ಮೊದಲಾದಲ್ಲಿ ಹಲವು ರಾಷ್ಟ್ರೀಯ ಶಾಲೆಗಳನ್ನು ಸ್ಥಾಪಿಸಿ, ಅನಂತರ, ಕಾರ್ಕಳ ತಾಲೂಕು ಬೋರ್ಡು ಅಧ್ಯಕ್ಷ, ಜಿಲ್ಲಾ ಬೋರ್ಡು, ಲೆಜಿಸ್ಲೇಟಿವ್ ಎಸೆಂಬ್ಲಿ ಮತ್ತು ಕೌನ್ಸಿಲು ಹಾಗೂ ಕೇಂದ್ರ ಎಸೆಂಬ್ಲಿ ಸದಸ್ಯರಾಗಿ ಜನಸೇವೆ ಮಾಡಿದ್ದರು. ಕಾರ್ಕಳದ ಹೈಸ್ಕೂಲು, ತಾಲೂಕು ಕಚೇರಿ, ಮುನ್ಸಿಫ್ ಕೋರ್ಟುಗಳ ಸ್ಥಾಪನೆಯಲ್ಲಿ ಬಹಳವಾಗಿ ದುಡಿದವರು

ಇಲ್ಲಿಯ ಶ್ರೀ. ಎಚ್ ಸರ್ವೋತ್ತಮ ಪೈ (ಡಿ. ಬೋ. ಮೆಂಬರ) ಇವರ ಪತ್ನಿ ಶ್ರೀ. ಸುಶೀಲಾ ಬಾಯಿ ಪೈಯವರು ತಾ ೧೮ರ ದಿನ ಬೆಳಗ್ಗೆ ಗಂಟೆ ೩ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದ ಪಡುತ್ತೇವೆ ಅವರು ಕೊಲ್ಲೂರ ದೇವಸ್ಥಾನದ ಟ್ರಸ್ಟಿಗಳೂ, ಡಿ ಬೋ. ಮೆಂಬರರೂ ಆಗಿದ್ದರು. ಜನತಾ ಸೇವೆಯಲ್ಲಿ ಮತ್ತು ದೇಶಸೇವೆಯಲ್ಲಿ ಜೈಲುವಾಸವನ್ನು ಅನುಭವಿಸಿರುವರು ಮೃತರ ಆತ್ಮಗಳಿಗೆ ಶಾಂತಿಯಿರಲಿ!

ಪುತ್ತೂರು

ಅಕ್ಕಿ ದರೋಡೆ

ಇತ್ತೀಚೆಗೆ ಉಪ್ಪಿನಂಗಡಿ ಬೆಳ್ತಂಗಡಿ ಮಾರ್ಗದ ಕರಾಯಿಯಿಂದ ಗುರುವಾಯನಕೆರೆ ವರೆಗೆ ಅಲ್ಲಲ್ಲಿ ಅಕ್ಕಿ ದರೋಡೆಗಳೂ ಹಣ ಸುಲಿಗೆಗಳೂ ಆಗುತ್ತಿರುವ ದೂರಿದ್ದು, ಈ ಸಂಬಂಧ ಒಂದು ಗುಂಪಿನ ಕೆಲವರನ್ನು ಪೋಲೀಸ್ ಅಧಿಕಾರಿಗಳು ಸೆರೆಹಿಡಿದಿರುವರೆಂದು ತಿಳಿದುಬರುತ್ತದೆ

ಅಜೆಕಾರು

ಈ ಪ್ರಾಂತದಲ್ಲಿ ಹುಲಿಗಳ ಕಾಟವು ವಿಪರೀತವಾಗಿದೆ ಕಳೆದ ಒಂದು ತಿಂಗಳಲ್ಲೇ ಸುಮಾರು ಏಳೆಂಟು ಜಾನುವಾರುಗಳು ಹಗಲಲ್ಲೇ ಹುಲಿಯ ಬಾಯಿಗೆ ತುತ್ತಾದುವು'

ಪಂಚಾಯ್ತ ಬೋರ್ಡು ಲೈಬ್ರೆರಿಯನ್ನು ಕಾರ್ಕಳ ರೇಂಜ್ ಡಿ. ಇ ಓ. ಯವರಾದ ಶ್ರೀ. ಯು ಕೃಷ್ಣರಾಯರು ಸಂದರ್ಶಿಸಿ, ಅಭಿವೃದ್ಧಿಯ ಬಗ್ಗೆ ಸಲಹೆಗಳನ್ನಿತ್ತಿರುವರು.

ಸ್ಥಳೀಯ ಸೆಂಟರಿನ ಮಿಡ್‌ವೈಫನ್ನು ಬೇರೆ ಕಡೆಗೆ ವರ್ಗಮಾಡಿ ಹದಿನೈದು ದಿವಸಗಳಾದರೂ ಹೊಸ ಮಿಡ್‌ವೈಫ್ ಈ ವರೆಗೆ ಬಂದು ಕೆಲಸಕ್ಕೆ ಹಾಜರಾಗದಿದ್ದ ಪ್ರಯುಕ್ತ ಹಳ್ಳಿಗಳು ತುಂಬಾ ಕಷ್ಟದಲ್ಲಿರುವವು ಅಧಿಕಾರಿಗಳು ಈ ಕೊರತೆಯನ್ನು ಶೀಘ್ರದಲ್ಲೇ ನಿವಾರಿಸುವರಾಗಿ ನಂಬಲಾಗಿದೆ.

ನೋಟೀಸು

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O S 126 of 1943.

ನರ್ಸಿಂಹ ಕೈತಾಳ—ವಾದಿ.

ಕೃಷ್ಣ ಯಳಚಿತ್ತಾಯ—ಕೊಂಚಾಡಿ ಶ್ರೀನಿವಾಸ ಯಳಚಿತ್ತಾಯರ ಮಗ—ಮಂಗ್ಳೂರ ಟೌನ್ ಶರವು ದೇವಸ್ಥಾನದ ಬಳಿಯಲ್ಲಿರುವ

ಪ್ರತಿವಾದಿ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ —

ಪ್ರತಿವಾದಿಯು ಬದ್ದು ಕೋಡಿ ಅನಂತ ಶ್ಯಾನುಭೋಗರಿಗೆ ತಾ 19–5–1937ರಲ್ಲು ಬರಕೊಟ್ಟ ಪ್ರೊ ನೋಟಿನ ಬಾಬು, ಅಸ್ಲು ಬಡ್ಡಿ ಖರ್ಚು ವಸೂಲು ಮಾಡುವರೆ ಪರಭಾರೆ ವಾದಿಯು ದಾಖಲು ಮಾಡಿದ ಮೇಲ್ಕಂಡ ದಾವೆಯು ತಾ. 30–7–1943ಕ್ಕೆ ವಾಯಿದೆ ಆಗಿರುದೆ. ಸದ್ರಿ ವಾಯಿದೆ ದಿವಸ ಪೂರ್ವಾಹ್ನ ಘಂಟೆ 11ಕ್ಕೆ ಈ ಕೋರ್ಟು ಮುಂದೆ ಹಾಜರಾಗಿ ಉತ್ತರಿಸಿಕೊಳ್ಳತಕ್ಕದ್ದು. ಇಲ್ಲವಾದರೆ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

(ಕೋರ್ಟು ಹುಕುಂ ಪ್ರಕಾರ)

ಮೊಕ್ಕಾಂ ಪುತ್ತೂರು, ತಾ. 17–7–1943. | S. Soorappaya Vakil for Plaintif

ಸಿನೇಮಾ ಸುದ್ದಿ

ಸಿನೇಮಾದಿಂದ ವಿದ್ಯಾಭ್ಯಾಸ

[illegible] ಸಾಧ್ಯವುಂಟು. 'ಸಿನೇಮಾ ನೋಡ್ವ ಹುಡುಗ [illegible]' ಎನ್ನುವವರು ನಮ್ಮಲ್ಲಿ ಕೆಲವರಿದ್ದಾರೆ. ಆದರೆ ಇತ್ತೀಚೆಗೆ ವಿದ್ಯಾವಿಶಾರದರು ಸಿನೇಮಾ ಮೂಲಕ ವಿದ್ಯಾ ಪ್ರಚಾರ ಮಾಡಹೊರಟಿದ್ದಾರೆ! ಎಷ್ಟೋ ಮಂದಿಗೆ ಪುಸ್ತಕವೋದಿ ಬರದ ಜ್ಞಾನ, ಸಿನೇಮಾ ಮೂಲಕ ಪ್ರದರ್ಶಿಸಿದರೆ ಬರಬಹುದು. ಅದ್ದರಿಂದಲೇ ಪಾಶ್ಚಾತ್ಯ ದೇಶಗಳಲ್ಲಿ ಈ ಪ್ರಯೋಗ ಮಾಡುತ್ತಿದ್ದಾರೆ. ರಶ್ಯಾ ದೇಶ ಇದರಲ್ಲಿ ಮುಂದುವರಿದಿದೆ. ಅಲ್ಲಿ ವಿದ್ಯಾ ಪ್ರಚಾರ ದೃಷ್ಟಿಯಿಂದಲೇ ಕೆಲಸಮಾಡುವ ಆರು ಸ್ಟುಡಿಯೋಗಳಿವೆ. ಅವರು ಗೋರಕ್ಷಣೆ, ಕೃಷಿ ಮತ್ತು ಇತರ ಉದ್ಯೋಗಿಕ ವೃತ್ತಿ ವಿಷಯ, ಮೋಟಾರು ನಡೆಸುವುದು, ವಿಮಾನ ಸಂಚಾರ ಹಾಗೂ ಫಿಸಿಕ್ಸ್, ಕೆಮಿಸ್ಟ್ರಿ ಇಂಥಾ ವಿಷಯಗಳನ್ನೂ ಸಿನೇಮಾ ಮೂಲಕ ಕಲಿಸುತ್ತಾರೆ. ತರಗತಿಯಲ್ಲಿ ಒಂದು ವರ್ಷ ಕಲಿಯುವ ಪಾಠವನ್ನು ಸಿನೇಮಾದಲ್ಲಿ ವಿದ್ಯಾರ್ಥಿಯು ಕೇವಲ ಮೂರು ತಾಸುಗಳಲ್ಲಿ ಕಲಿಯಬೇಕು. ಸಿನೇಮಾದಲ್ಲಿ ನೈಜ ಜೀವನ ಚಿತ್ರಣವಿರುವುದರಿಂದ ಪ್ರತ್ಯೇಕ ಆಕರ್ಷಣೆಯೊಂದಿದೆ. ಅನೇಕ ಚರಿತ್ರಾರ್ಹ ಸ್ಥಳಗಳನ್ನು ಇದರಲ್ಲಿ ಪ್ರತ್ಯಕ್ಷ ನೋಡಬಹುದು. ಅನೇಕ ಅದ್ಭುತಗಳನ್ನು ಮಾಡಿ ತೋರಿಸಬಹುದು. ಇದರಿಂದ ವಿದ್ಯಾಭ್ಯಾಸ ಪ್ರಚಾರ ಆಗಿಯೇ ಆಗುತ್ತದೆ. ನಮ್ಮ ನಾಡಿನಲ್ಲಿ ಈ ಹಾದಿಯಲ್ಲಿ ಆದ ಪ್ರಯತ್ನ ಏನೂ ಸಾಲದು. ನಮ್ಮ ಸಿನೇಮಾ ನಿರ್ಮಾಪಕರು ಈ ಕಡೆ ಗಮನ ಕೊಡಬೇಕು. ಸಿನೇಮಾ ಮೂಲಕ ವಿದ್ಯಾಭ್ಯಾಸ ಆಗಬೇಕು.

51 ವಾರ 'ಬಸಂತ್'

ಬೊಂಬಾಯಿ ಟಾಕೀಸಿನ ಭಾಗ್ಯ ಇದು! ಇದುವರೆಗೂ ಇಂಥಾ ಕೀರ್ತಿ ಯಾವುದೇ ಹಿಂದಿ ಚಿತ್ರಕ್ಕೂ ಬಂದಿರಲಿಲ್ಲ. ಬೊಂಬಾಯಿಯಲ್ಲಿ 'ಬಸಂತ್' ಒಂದೇ ಥಿಯೇಟರಿನಲ್ಲಿ 51 ವಾರ ಪ್ರದರ್ಶಿತವಾಯಿತು! 'ಸ್ವರ್ಣೋತ್ಸವ' ಆಚರಿಸಿತು! ದೇವಿಕಾ ರಾಣಿಯ ಅದೃಷ್ಟವೂ ಒಳ್ಳೆಯದಿದೆ! 'ಬಸಂತ್' ಬಂದಾಗ ಪತ್ರಿಕೆಗಳವರು ಅಷ್ಟೊಂದು ಹೊಗಳಿರಲಿಲ್ಲ. ಅದರಲ್ಲಿ ಅಶೋಕ ಕುಮಾರ್ ಲೀಲಾ ಚಿಟ್ನಿಸರೂ ಇರಲಿಲ್ಲ. 'ಅಂಜನ್' ನಿರ್ದೇಶಕ, ಅಮಿಯಾ ಚಕ್ರವರ್ತಿ ನಿರ್ದೇಶಕರಿದ್ದರು. ಆದರೂ ಈ ಯಶಸ್ಸು, ಈ ಭಾಗ್ಯ 'ಬಸಂತ್'ಗೆ ಬರಬೇಕಾದರೆ ಇದರ ರಹಸ್ಯವೇನೆಂದು 'ವಿಮರ್ಶಕ'ರು ಈ ಒಗಟನ್ನು ಒಡೆಯಬೇಕು!

ಸ್ನೇಹ ಪ್ರಭಾಳ ದರ್ಶನ

ಆಗಬೇಕೆ? 'ಲಡಾಯಿಕೇ ಬಾದ್' ಚಿತ್ರ ನೋಡಿ! ಅವಳೇ ಬರೆದ ಕತೆ, ಆಕೆಯದೇ ನಟನೆ, ಅವಳೇ ಕಥಾನಾಯಕಿ, ಆಕೆ 'ನೆರೆಮನೆಯ ಹುಡುಗಿ', ಆಕೆ ಟೆನ್ನಿಸ್ ಸಂಗಾತಿ, ಆಕೆ ಪ್ರಣಯಿನಿ, ಅವಳೇ ನರ್ತಕಿ, ಅವಳೇ ನಟಿ, ಅವಳದೇ ಸಂಗೀತ, ಇನ್ನೇನು ಬೇಕು ಹೇಳಿ? ಸ್ನೇಹ ಪ್ರಭಾಮಯ 'ಲಡಾಯಿಕೇ ಬಾದ್'! ಸ್ನೇಹಪ್ರಭಾ ಪ್ರಿಯರು ತಮ್ಮ ಆತ್ಮವನ್ನೂ ತಣ್ಣಗಿರಿಸಿಕೊಳ್ಳಬಹುದು! ಇಷ್ಟಿದ್ದರೆ ಸಾಲದೇನು? ಕಾಲೇಜ್ ಹುಡುಗ ಹುಡುಗಿಯರನ್ನಾಕರ್ಷಿಸಲು? ಕಥೆಯಾದರೂ ಕಾಲೇಜ್ ಜೀವನದ್ದೇ! ಕಾಲೇಜ್ ತರುಣ ತರುಣಿಯರಲ್ಲದವರು ಈ ಚಿತ್ರವನ್ನು ಯಾಕೆ ನೋಡಬೇಕು? ಎಂಬುದು ಒಂದು ದೊಡ್ಡ ಪ್ರಶ್ನಾರ್ಥಕ ಚಿಹ್ನೆ?

ಕಿಶೋರಶಾಹು ಕಂಪೆನಿ

ಕಿಶೋರಶಾಹು ಹೊಸ ಸಿನೇಮಾ ಕಂಪನಿಯೊಂದನ್ನು ಸಂಘಟಿಸುವ ಸಾಹಸದಲ್ಲಿದ್ದಾನೆ. ಹಿಂದುಸ್ತಾನ್ ಚಿತ್ರ ಎಂಬ ಹೆಸರಿನಿಂದ ಅಹಮ್ಮದಾಬಾದ್ ಬೊಂಬಾಯಿಗಳಲ್ಲಿ ಪ್ರಸಿದ್ಧ ವ್ಯಾಪಾರಿ ಸರ್ ಚುನಿಭಾಯಿ ಮಾಧವಲಾಲರು ಇದಕ್ಕೆ ಕೈ ಕೊಡುತ್ತಾರೆ.

ಗುಟ್ಟಿನ ಸುದ್ದಿಗಳು!

ಇದನ್ನು ಯಾರಿಗೂ ಹೇಳಬೇಡಿ! ಕಾನನ್ ಬಾಲಾ, ಖುರ್ಶೀದ್, ನಾಸೀಮ್ ಇವರಿಗೆಲ್ಲಾ [illegible] ವಿವಾಹವಾಗಿದೆ. [illegible] ಪ್ರತ್ಯೇಕ [illegible] ಲೀಲಾ ಯಾಕೂಬ್, ನಾಸೀಮಳು ಮಹಮ್ಮದ್ [illegible] ಅಶೋಕನ ನಿಜವಾದ ಹೆಸರು, ಮಣೀಶ್ವರನಾಥ ಕೌಲ್. ಇನ್ನೂ ಕೆಲವು ಗುಟ್ಟಿನ ಸುದ್ದಿಗಳಿವೆ.

ಮಂಗಳೂರು

ಚಲಚ್ಚಿತ್ರ ವಿಮರ್ಶಕರ ಸಂಘ

ದಿ. ಕೆನರಾ ಸೀನೆ ಕ್ರಿಟಿಕ್ಸ್ ಎಸೋಸಿಯೇಶನ್ ಇದರ ಸಭೆಯೊಂದು ಸಂಜೆ ಶ್ರೀಯುತ ಕಾಳು ಕುಂದ ಶಿ. ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ನಗರದಲ್ಲಿ ಪ್ರದರ್ಶಿಸಲ್ಪಟ್ಟ ಚಿತ್ರಗಳ ವಿಮರ್ಶೆಯಾಯಿತು. ಚಲಚ್ಚಿತ್ರ ಕೈಗಾರಿಕೆಗಾಗಿ ದುಡಿದು ಅಕಾಲ ಮೃತ್ಯುವಶರಾದ ಶ್ರೀ ಎಮ್. ಟಿ. ರಾಜನ್ ಇವರ ನಿಧನಕ್ಕಾಗಿ ಸಭೆ ಸಂತಾಪ ವ್ಯಕ್ತಪಡಿಸಿತು. ಎಸೋಸಿಯೇಶನಿನ ಉದ್ದೇಶಗಳೇನೆಂದು ಸ್ಪಷ್ಟಪಡಿಸಲಾಯಿತು. ಚಲಚ್ಚಿತ್ರ ಕೈಗಾರಿಕೆಯ—ಅದರಲ್ಲೂ ಭಾರತೀಯ ಚಲಚ್ಚಿತ್ರ ಕೈಗಾರಿಕೆಯ ಅಭಿವೃದ್ಧಿಗಾಗಿ ದುಡಿಯುವುದೇ ಸಂಘದ ಉದ್ದೇಶಗಳಲ್ಲೊಂದಾಗಿದೆ. ನಿರ್ಭೀತವಾಗಿ ವಿಮರ್ಶೆಗಳನ್ನು ಕೊಟ್ಟು ಚಲಚ್ಚಿತ್ರ ಪ್ರೇಮಿಗಳನ್ನು ಸದ್ದಾರಿಯಲ್ಲಿ ಒಯ್ಯುವುದು ಸಂಘದ ಇನ್ನೊಂದು ಉದ್ದೇಶವಾಗಿದೆ. ಸಂಘದ ಉದ್ಘಾಟನಾ-ಭಾಷಣವು ತಾ. 31ರಲ್ಲಿ ಶ್ರೀ. ರಂ. ರಾ. ತಲ್ಲೇರಿಕರರಿಂದ ನೆರವೇರುವುದು.

'ಸೆಂಟ್ರಲ್'ನ ದ್ವಿತೀಯ ಸಾಂವತ್ಸರಿಕೋತ್ಸವ

ಸೆಂಟ್ರಲ್ ಟಾಕೀಸಿನ ದ್ವಿತೀಯ ಸಾಂವತ್ಸರಿಕೋತ್ಸವ ತಾ. ೧೬ರಂದು ಆಚರಿಸಲ್ಪಟ್ಟಿತು. 'ಜವಾಬ್' 'ಅಪ್ನಾ ಘರ್' 'ಸಾವಿತ್ರಿ' 'ದೇಟ್ ನೈಟ್ ಇನ್ ರಿಯೋ' ಮೊದಲಾದ ಹಲವು ಉತ್ತಮ ಚಿತ್ರಗಳನ್ನು ಪ್ರದರ್ಶಿಸಿ, ಯುದ್ಧಕಾಲದಲ್ಲಿ ಪ್ರಾರಂಭವಾದರೂ ಈ ಸಂಸ್ಥೆ ಇಂದು ಜನಪ್ರಿಯವಾಗಿರುವುದು ತುಂಬಾ ಸಂತೋಷಕರ. ದ್ವಿತೀಯ ಸಾಂವತ್ಸರಿಕೋತ್ಸವದಂದು ನ್ಯೂ ಥಿಯೇಟರ್ಸಿನ 'ಲಗನ್' ಚಿತ್ರವು ಪ್ರದರ್ಶಿತವಾಯಿತು. ಈ ಸಂಸ್ಥೆಯವರು ಇನ್ನೂ ಒಳ್ಳೆಯ ಚಿತ್ರಗಳನ್ನೇ ತರಿಸಿ ಇತೋಪತಿಶಯ ಜನಪ್ರಿಯವಾಗಲೆಂದು ನಾವು ಹಾರೈಸುತ್ತೇವೆ.

'ಪೀಟರ್ ದಿ ಫಸ್ಟ್'

ಈ ಚಿತ್ರವನ್ನು ಕಳೆದ ಆದಿತ್ಯವಾರವೂ ಪ್ರದರ್ಶಿಸಲಾಗಲಿಲ್ಲವೆಂದು ಮಂಗಳೂರಿನ ಕಮ್ಯುನಿಸ್ಟ್ ಬಂಧುಗಳು ಸಾರ್ವಜನಿಕರಲ್ಲಿ (ವಿಶೇಷವಾಗಿ ಟಿಕೇಟು ತೆಗೆದುಕೊಂಡವರಲ್ಲಿ) ಪುನಃ ವಿನಂತಿಸಿಕೊಂಡಿದ್ದಾರೆ. ಜಿಲ್ಲಾಧಿಕಾರಿಗಳ ಅನುಮತಿ ದೊರೆತರೆ ಮುಂದೆ ಪ್ರದರ್ಶಿಸುವ ಭರವಸೆಯನ್ನು ಕೊಟ್ಟಿದ್ದಾರೆ.

ಈ ಚಿತ್ರವನ್ನು ಮಂಗಳೂರಲ್ಲಿ ಯಾರೂ ಇದು ವರೆಗೆ ನೋಡದಿದ್ದರೂ, ಇದನ್ನು ಪ್ರದರ್ಶಿಸಲು ಎರಡು ಸಲವೂ ಆತಂಕವುಂಟಾದ ಕಾರಣ ಇದರ ಹೆಸರೀಗ ಜನಜನಿತವಾಗಿದೆ. ಇದನ್ನು ಪ್ರದರ್ಶಿಸುವ ಕಮ್ಯುನಿಸ್ಟರು ರಾಜಕೀಯ ಪಕ್ಷದವರು, ರಾಜಕೀಯದಲ್ಲಿ ಪ್ರಚಾರವೂ ಒಂದು ಮುಖ್ಯ ಸಾಧನ. ಕಮ್ಯುನಿಸ್ಟರಿಗೆ ಹಾಗೂ ರಶ್ಯನ್ ಚಿತ್ರಕ್ಕೆ ಇದರಿಂದ, ಈ ನಿರ್ಬಂಧದಿಂದ ಒಳ್ಳೇ ಪ್ರಚಾರ ದೊರಕಿತು. ರಶ್ಯನ್ ಚಿತ್ರವನ್ನು ನೋಡಿ ಜನ, ತಮ್ಮ 'ಪಿತೃಭೂಮಿ' ರಶ್ಯದ ಕುರಿತು ಮೆಚ್ಚಿಗೆ ತೋರಿಸಲಿ ಎಂಬುದು ಈ ಚಿತ್ರವನ್ನು ತೋರಿಸುವುದರಲ್ಲಿ, (ಆದರಿಂದ ಹಣ ಮಾಡುವ ಉದ್ದೇಶವೂ ಇಲ್ಲದಿಲ್ಲ) ಪ್ರಧಾನ ಉದ್ದೇಶವಿರಬೇಕು. ಅಂತೂ ಈಗ ರಶ್ಯನ್ ಚಿತ್ರದ ಪ್ರಚಾರ ಒಳ್ಳೆದೇ ಆಯಿತು. ಒಳ್ಳೆ ಕಾಲ ಬಂದರೆ, ಈ ಚಿತ್ರ ಪ್ರದರ್ಶಿಸಲು ಸಂದರ್ಭ ದೊರಕಿದರೆ, ಅಂತೂ ರಶ್ಯನ್ ಚಿತ್ರಗಳು ನಮ್ಮೂರಿಗೆ ಬರುವುದಾದರೆ ಇನ್ನು ಜನ ಅವುಗಳನ್ನು ನೋಡಲು ಖಂಡಿತ ಮರೆಯಲಾರರು! ಅಧಿಕಾರಿಗಳು ಎರಡು ಸಲ ಮಾಡಿದ ತಡೆಯಿಂದ ಇಷ್ಟೊಂದು ಪ್ರಯೋಜನವಾದರೂ ಆಯಿತೆಂದು ಕಮ್ಯುನಿಸ್ಟರು ಸಮಾಧಾನಪಟ್ಟುಕೊಳ್ಳಬಹುದು!

ನೋಟಗಳು

'ಚಿಕ್ಕಿನ ಬಿಡಾರ ಬೇರೆ' ಎಂದು ನಮ್ಮ ಹಿರಿಯರೊಂದು ಗಾದೆ. ಸಹಜವಾಗಿ ಇದೊಂದು ವಿಡಂಬನದ ಮಾತು.

ನಮ್ಮ ಹಿರಿಯರು ಹೆಚ್ಚಾಗಿ ಅವಿಭಕ್ತ ಕುಟುಂಬದವರು; ಅದರಲ್ಲಿ ವಿಶ್ವಾಸವುಳ್ಳವರು; ಸಾಕಷ್ಟು ಸುಖ ಸಿಗದಿದ್ದರೂ ಅದಕ್ಕೆ ಅಂಟಿಕೊಂಡಿದ್ದವರು!

ಹಾಗಾಗಿ ಒಂದು ಕುಟುಂಬದಲ್ಲಿ ಯಾರಾದರೂ ವಿಭಾಗ ಕೇಳಿದರೆ, ಯಾವನಾದರೂ ಬೇರೆಯಾಗಿ ನಿಂತರೆ 'ಚಿಕ್ಕಿನ ಬಿಡಾರ ಬೇರೆ' ಎಂದು ವಿಡಂಬನ ಮಾಡುತ್ತಿದ್ದರು; ಅಂಥಾ ಮನುಷ್ಯನನ್ನು ಚಿಕ್ಕಿನ ಜಾತಿ ಸೇರುತ್ತಿದ್ದರು!

ಆ ಕಾಲದಲ್ಲಿ ಚಿಕ್ಕಿನ ಬಿಡಾರ ಮಾತ್ರ ಬೇರೆ. ಆದರೆ ಈಗ ಮನುಷ್ಯರಲ್ಲದವರ ಬಿಡಾರ ಮಾತ್ರ ಒಟ್ಟಿಗೆ! ಆಧುನಿಕ ಕಾಲದ ಜನರು ಅವಿಭಕ್ತ ಕುಟುಂಬಕ್ಕೆ ಅಂಟಿಕೊಂಡಿರಲು ಒಪ್ಪುವುದಿಲ್ಲ. ಇದು ಇಂದಿನ ಯುಗಧರ್ಮ!

* * *

ಜಿನ್ನಾ ಸಾಹೇಬರಿಗೆ ಪಾಕಿಸ್ತಾನ, ರಾಮಸ್ವಾಮಿ ನಾಯಕರಿಗೆ ದ್ರಾವಿಡ ಸ್ಥಾನ ಹೀಗೆ ಸಿಕ್‌ಸ್ಥಾನ, ಪಾರ್ಸಿಸ್ಥಾನ, ಹರಿಜನ ಸ್ಥಾನ ಇನ್ನೆಷ್ಟೋ ಸ್ಥಾನಗಳ ಪ್ರಸ್ತಾಪಗಳುಂಟು.

ಮೊದಲಿಗೆ ಭಾರತದಲ್ಲಿ ರಾಜಕೀಯ ಪಕ್ಷ ಕಾಂಗ್ರೆಸು ಮಾತ್ರವಿತ್ತು. ಈಗ ಮುಸ್ಲಿಂಲೀಗು, ಹಿಂದು ಮಹಾಸಭೆ, ಸೋಶಿಯಲಿಸ್ಟರು, ಕಮ್ಯುನಿಸ್ಟರು, ರಾಯಿಸ್ಟರು ಇನ್ನು ಲೆಕ್ಕವಿಲ್ಲದಷ್ಟು ಪಕ್ಷಗಳು ನಮ್ಮಲ್ಲಿ ತಲೆಯೆತ್ತುತ್ತಿವೆ.

ಮೊದಲಿಗೆ ಪ್ರಾಂತೀಯ ಭಾಷೆಗಳಿಗೆ ಒಂದೊಂದು ಸಾಹಿತ್ಯ ಪರಿಷತ್ತು. ಈಗ ಪ್ರಗತಿಶೀಲ ಸಾಹಿತ್ಯ ಪರಿಷತ್ತುಗಳೂ ಹುರಿಯಿಡುತ್ತಿವೆ. ಮರಾಠದ ಪ್ರಗತಿಶೀಲರು ಅವಳಿಜವಳಿಯಾಗಿ ತಲೆಯೆತ್ತಿದ್ದಾರೆ! ಅಲ್ಲಿ ಪ್ರ-ಪ್ರಗತಿಶೀಲರೂ ಹುಟ್ಟಿದ್ದಾರೆ!

* * *

ನಮ್ಮ ಮಂಗಳೂರಲ್ಲಿಯೂ ಮೊದಲಿಗೆ ಕಾಂಗ್ರೆಸು, ಮಿತ್ರಮಂಡಳಿ, ವಿದ್ಯಾರ್ಥಿ ಸಂಘ, ಇವು ಕೆಲವು ಮಾತ್ರ ಇದ್ದವು. ಈಗ ಆರ್. ಎಸ್. ಎಸ್. ಹಿಂದು ಮಹಾಸಭೆ, ಕಮ್ಯುನಿಸ್ಟ್, ರಾಯಿಸ್ಟ್, ಪ್ರಕಾಶ ಸಂಘ, ಪತ್ರಿಕೋದ್ಯಮಿ ಸಂಘ, ಚಲಚ್ಚಿತ್ರ ವಿಮರ್ಶಕ ಸಂಘ, ಪೀಪಲ್ಸ್ ಥಿಯೇಟರ್, ಕ್ವಾರಿಕರ ಸಂಘ, ಇನ್ನು ಎಷ್ಟುಬೇಕೋ ಅಷ್ಟು ಸಂಘಗಳು ಹುಟ್ಟಿವೆ.

ನಮ್ಮೂರ ಪ್ರಗತಿಶೀಲರು ಈಗ ಗರ್ಭದಲ್ಲಿದ್ದಾರಷ್ಟೆ. ವಿದ್ಯಾರ್ಥಿ ಸಂಘದಲ್ಲಿ ಕಮ್ಯುನಿಸ್ಟ್ ರಾಯಿಸ್ಟರು ಜಟ್ಟಿಕಾಳಗ ಮಾಡುತ್ತಿದ್ದಾರೆ!

ಹೊನ್ನೆ ಮಂಗಳೂರಲ್ಲಿ ಇಬ್ಬರು ಪೈಲ್ವಾನರು ಮಾಡಿದ ಜಟ್ಟಿಕಾಳಗದಲ್ಲಿ ಇಬ್ಬರೂ ಸಮಬಲರಾದರು. ವಿದ್ಯಾರ್ಥಿ ಸಂಘದ ಜಟ್ಟಿಕಾಳಗದ ಫಲಿತಾಂಶ ಏನಾಗುತ್ತದೋ ನೋಡತಕ್ಕದ್ದಿದೆ.

'ಚಿಕ್ಕಿನ ಬಿಡಾರ ಮಾತ್ರ ಬೇರೆ'ಯೆಂದು ನಮ್ಮ ಹಿರಿಯರು ಹೇಳಿದರೆ 'ಮನುಷ್ಯರಲ್ಲದವರ ಬಿಡಾರ ಮಾತ್ರ ಒಟ್ಟಿಗೆ' ಎಂದು ನಾವೀಗ ಹೇಳಬೇಕು! ಇದು ಇಂದಿನ ಯುಗಧರ್ಮ!

* * *

'ರಾಯ್‌ಸ್ಟ'ರೆನ್ನುವಾಗ ನೆನಪಾಯಿತು; 'ಕಾಮ್ರೇಡ್ ಎಂ. ಎನ್. ರಾಯ್‌ಗಳೀಗ ಎಲ್ಲಿದ್ದಾರೆ' ಎಂದು ಒಬ್ಬರು ಕುತೂಹಲದಿಂದ ಕೇಳುತ್ತಾರೆ!

ನಾವು ಹಿಮಾಲಯದ ಕಡೆಗೆ ಕೈತೋರಿಸಿದೆವು. ಹಿಮಾಲಯವೊಂದಿಲ್ಲದಿದ್ದರೆ ಭಾರತೀಯರು ಬಹಳ ಪೇಚಾಟಕ್ಕೆ ಬೀಳುತ್ತಿದ್ದರು. ನಮ್ಮಲ್ಲಿ ಯಾರಿಗೆ ಎಷ್ಟು ತಾಪತ್ರಯ ಬರಲಿ, ಯಾರು ಕಾಣೆಯಾಗಲಿ ಹಿಮಾಲಯದ ಕಡೆಗೆ ಕೈ ತೋರಿಸಿದರೆ ನಮಗೆ ಸಮಾಧಾನವಾಗುತ್ತದೆ! [illegible] ಹಿಮಾಲಯಕ್ಕೆ [illegible] ಒಂದೇ ಸಮಾಧಾನ.

[illegible] ರಾಯಿಸ್ಟರು [illegible] ದ್ದಾರೆಯೇ!' ಎಂದು ಹೆದರಿ ಹೆದರಿ ಇನ್ನೊಂದು ಪ್ರಶ್ನೆ! ರಾಯ್‌ಸ್ಟರು ಕೆಲವರಿದ್ದಾರೆಂದು ನಮಗೆ ಗೊತ್ತಿದ್ದರೂ ಇವರು ಅವರಿಗೆ ಇಷ್ಟು ಯಾಕೆ ಹೆದರಿದರೋ ನಮಗೆ ಅರ್ಥವಾಗಲಿಲ್ಲ.

'ರಾಯ್‌ಸಂ ಎಂದರೆ ಒಂದು ರೋಗವಂತೆ!' ಎಂದು ಮೂರನೆಯ ಬಾರಿ ಪ್ರಶ್ನಕಾರರು ಹೇಳಿದರು! ಬಹುಶಃ ರಾಯಿಸ್ಟರಿಗಾಗಿ ಇಷ್ಟಕ್ಕೇ ಅಷ್ಟು ಅಂಜಿಕೊಂಡಿರಬೇಕು!

"ಓಂ ಶ್ರೀ ಪಿಕ್ಚರ್ಸ್"

ಎಂಬ ಹೆಸರಿನಿಂದ, ಪುತ್ತೂರಲ್ಲಿ ಶ್ರೀ ಪದ್ಮನಾಭ ರು. ನೇಮಿರಾಜರು ಒಂದು ಸಂಸ್ಥೆ ಪ್ರಾರಂಭಿಸಿದ್ದು, ಕನ್ನಡ ಮಾತಾಡುವ ಚಲಚ್ಚಿತ್ರಗಳನ್ನು ತಯಾರಿಸುವುದರಲ್ಲಿದ್ದಾರೆಂದು ತಿಳಿದು ಬರುತ್ತದೆ. ನಮ್ಮೂರಿನ ಈ ಹೊಸ ಚಲಚ್ಚಿತ್ರ ಸಂಸ್ಥೆಗೆ ನಮ್ಮ ಸ್ವಾಗತವಿದೆ.

NOTICE

In the Court of the District Munsif of Mangalore

S. C. No. 244/1943.

Between:—

The Jaya Karnataka Banking and Trading Company Limited—Plaintiff.

and

Yekkar Vittappa Bhat and others—Defendants.

To

1st Defendant Yekkar Vittappa Bhat, son of Yekkar Rama Bhat.

2nd Defendant Yekkar Rama Bhat, son of Yekkar Srinivasa Bhat.

3rd Defendant Yekkar Subraya Bhat, son of Yekkar Rama Bhat.

All residing at Mannagudda, Mangalore Town.

Please take notice that the above suit filed by the plaintiff against you for the recovery of the amount of Rs. 93-0-5 being the principal and interest of a demand promissory note executed by you in favour of the plaintiff on 10-9-1940 will come on for hearing on 4-8-1943 at 11 A.M. in the above Court. You may appear either in person or by pleader failing which the suit will be decided in your absence.

Mangalore, 15-7-1943. | **M. A. Kamath,** *Vakil for Platiniff.*

ನೋಟೀಸು

ದಕ್ಷಿಣ ಕನ್ನಡ ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟು

O. S. 254/1943.

ರಾಮಣ್ಣ ಭಟ್ಟ—ಗೋವಿಂದ ಕೋಟಿ ನಾರಾಯಣ ಭಟ್ರ ಮಗ—ಮಂಗಳೂರು ತಾಲ್ಲೂಕು ಪುದುಗ್ರಾಮಸ್ತ—ವಾದಿ.

ಮತ್ತು

ಸೇಸು ಪೂಜಾರಿ—ತಿಮ್ಮ ಪೂಜಾರಿ ಮಗ—ಸದ್ರಿ ಪುದುಗ್ರಾಮಸ್ತ—ಪ್ರತಿವಾದಿ.

ಮೇಲಿನ ವಾದಿಯು ಪ್ರತಿವಾದಿ ಮೇಲೆ ಗೇಣಿ ಬಾಕಿ ಮತ್ತು ಆಸ್ತಿ ಸ್ವಾಧೀನತೆಗೆ ಮಾಡಿದ ಮೇಲಿನ ದಾವೆಗೆ ಆಕ್ಷೇಪ ಹೇಳುವದಿದ್ದರೆ ಪ್ರತಿವಾದಿಯು ತಾ. 28-7-1943ನೇ ದಿನ ಪೂರ್ವಾಹ್ನ 10-30 ಘಂಟೆಗೆ ಮೇಲಿನ ಕೋರ್ಟು ಮುಂದೆ ಸ್ವತಹ ಯಾ ವಕೀಲರ ಮುಖಾಂತರ ಹಾಜರಾಗಿ ಹೇಳಿಕೊಳ್ಳದಿದ್ದರೆ ಸದ್ರಿ ದಾವೆಯು ಆತನ ಗೈರ್ ಹಾಜ್ರಿಯಲ್ಲಿ ತೀರ್ಮಾನಿಸಲ್ಪಡುವದು ಎಂದು ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಸೋಣಾಗಿದೆ.

ಮಂಗಳೂರು, 19-7-'43. | **K. R. Achar,** ವಾದಿಯ ವಕೀಲ್.

ಪುಸ್ತಕಾವಲೋಕನ:

ಹರದ ನೀತಿ

ಹುಲುಗೆರೆಯ ಸಿಂಹರಾಜನೆಂಬ ಜೈನ ಕವಿಯಿಂದ ವಿರಚಿತವಾದ ಹರದ ನೀತಿಯೆಂಬ ಪುಸ್ತಕವನ್ನು 1909ರಲ್ಲಿ ಶ್ರೀ. ಅರ್ಹ ಗುಮ್ಮಣ್ಣ ಶೆಟ್ಟರು ಜೈನ ಪಾಠಶಾಲೆಗಳ ಉಪಯೋಗಾರ್ಥ ಪ್ರಕಟಿಸಿದ್ದು, ಅದರ ಆಧಾರದಿಂದ ಶ್ರೀ. ಬಿ. ಶಂಕರ ಭಟ್ಟರು ತಾತ್ಪರ್ಯವನ್ನು ಬರೆದು ಸಂಪಾದಿಸಿದ್ದನ್ನು, ಮಂಗಳೂರಿನ ವಿವೇಕಾಭ್ಯುದಯ ಕಾರ್ಯಾಲಯದವರು ತಮ್ಮ ಗ್ರಂಥಮಾಲೆಯ ಎರಡನೆಯ ಪುಷ್ಪವಾಗಿ ಈಗ ಪ್ರಕಟಿಸಿದ್ದಾರೆ. ಸೈಜಿನ ಈ ಪುಸ್ತಕದ ಬೆಲೆ ಮೂರಾಣೆ.

ಕವಿಯು ಪ್ರಾರಂಭದಲ್ಲಿ ಆದಿ ಜಿನೇಂದ್ರನನ್ನು ಸ್ಮರಿಸುತ್ತಾನೆ. ಮುಂದೆ ಜಂಬೂ ದ್ವೀಪದ ಭರತ ಖಂಡದ ಅಂಗದೇಶದಲ್ಲಿರುವ ಚಂಪಾ ನಗರದಲ್ಲಿರುವ ಚಂದ್ರಕೀರ್ತಿಯೆಂಬ ವ್ಯಾಪಾರಿಯು ಒಮ್ಮೆ ತನ್ನ ಮಗನಾದ ಶೂರಸೇನನನ್ನು ಕರೆದು ಆತನಿಗೆ ಈ ನೀತಿಬೋಧೆಯನ್ನು ತಿಳಿಸುವಂತೆ ಪ್ರಸ್ತಾವನೆಯಿದೆ.

ಸೂರ್ಯೋದಯ ಕಾಲದಲ್ಲಿ ಸ್ನಾನ ಮಾಡಿ, ಜಿನಾಭಿಷೇಕ ತೀರಿಸಿ, ಜಿನವಂದನೆ ಗೈದು, ಮುನಿಗಳನ್ನು ವಂದಿಸಿ ಆ ಮೇಲೆ ಅಂಗಡಿ ಬಾಗಿಲು ತೆರೆದು ನೋಟಕರ ಕಣ್ಣಿಗೆ ಆನಂದವಾಗುವಂತೆ ವಸ್ತುಗಳನ್ನಿರಿಸಿ ವ್ಯಾಪಾರಕ್ಕೆ ಬಂದವರೊಡನೆ ಮೃದುಮಾತಿನಿಂದ ಮಾತನಾಡಿಕೊಂಡು ಕೊಳ್ಳುವ ವ್ಯವಹಾರಕ್ಕೆ ತೊಡಗಬೇಕೆಂದೂ, ಅಂಥಾ ವ್ಯವಹಾರದಲ್ಲಿ ಯಾವ ಯಾವವು ಮಾಡತಕ್ಕವು, ಮತ್ತು ಮಾಡತಕ್ಕದಲ್ಲವೆಂದೂ ವಿಸ್ತಾರವಾಗಿ ವಿವರಿಸಿದೆ. ವಾಣಿಜ್ಯ ನೀತಿಯಲ್ಲಿ ಕವಿಗಿರುವ ಉತ್ತಮ ಜ್ಞಾನವು ಹಲವು ಕಡೆಗಳಲ್ಲಿ ವ್ಯಕ್ತವಾಗುತ್ತದೆ.

ಮುಂದಿನ ಪ್ರತಿಯೊಂದು ನೀತಿಯೂ ವ್ಯಾಪಾರಿಯಂತೆ ಇತರ ವೃತ್ತಿಯವರಿಗೂ, ಜೈನರಂತೆ ಇತರ ಮತದವರಿಗೂ ಅನ್ವಯಿಸುವ ರೀತಿಯಲ್ಲಿ ಬಹಳ ಸುಲಭ ಶೈಲಿಯಲ್ಲಿ ಹೇಳಲಾಗಿದೆ. ಇದಕ್ಕೂ ತಾತ್ಪರ್ಯವನ್ನು ಬರೆಸಿ ಇನ್ನಷ್ಟು ಸುಲಭ ಗ್ರಾಹ್ಯಮಾಡಿಸಿ ಈ ಚಲೋ ಪುಸ್ತಕವನ್ನು ಪ್ರಕಟಿಸಿದ ಮಂಗಳೂರಿನ ವಿವೇಕಾಭ್ಯುದಯ ಕಾರ್ಯಾಲದವರನ್ನು ನಾವು ಅಭಿನಂದಿಸುವೆವು.

'ಹರದ ನೀತಿ'ಯಿದು ವ್ಯಾಪಾರಿಗಳಿಗೆ ಉಪದೇಶ ಗ್ರಂಥ. ಹಾಗೆಂದು ವ್ಯಾಪಾರಿಗಳಲ್ಲದವರಿಗೂ ಈ ಗ್ರಂಥವು ನೀತಿಬೋಧವೇ ಆಗಿದೆ. ಒಳ್ಳೆಯ ರೀತಿಯಿಂದ ನಡೆಯುವಂತೆ ಮಾಡುವ ನೀತಿಬೋಧೆ ವ್ಯಾಪಾರಿಗಳಂತೆ ಜೈನರಂತೆ ಇತರ ವೃತ್ತಿಯವರಿಗೂ, ಅನ್ಯಮತದವರಿಗೂ ಸಮಾನವಾಗಿ ಅನ್ವಯಿಸುತ್ತದೆ. ಕೊಂಡುಕೊಳ್ಳುವ ವಿಚಾರಗಳಲ್ಲಿ ವಿಶೇಷವಾಗಿ ಇಲ್ಲಿ ಉಲ್ಲಿಖಿತವಾದ ನೀತಿಗಳು ವ್ಯಾಪಾರಿಗಳಿಗೇ ಅನ್ವಯಿಸುತ್ತವೆಂದು ವಾದಿಸಿದರೂ ವ್ಯವಹಾರವಿಲ್ಲದ ಮನುಷ್ಯನೇ ಇಲ್ಲವೆನಬೇಕು. ಕೃಷಿಕನಾಗಲಿ, ಯೋಧನಾಗಲಿ, ವೈದಿಕನಾಗಲಿ ದಿನದಿನದ ವ್ಯವಹಾರ ಮಾಡಲೇ ಬೇಕಾಗುತ್ತದೆ. ಹಾಗಾಗಿ ಈ ಗ್ರಂಥ ವ್ಯಾಪಾರಿಗಳಿಗೆ ಮಾತ್ರ ನೀತಿ ಬೋಧೆಯಾಗಿರದೆ ಸರ್ವರಿಗೂ ಪ್ರಯೋಜನಕಾರಿಯಾಗಿದೆ. ಅಂತೆಯೇ ಇದು ಬಹಳ ಹಿಂದಿನಿಂದಲೇ ತುಳುನಾಡಿನ ಸತ್ಯ ಅಹಿಂಸಾಪರರಾದ ಜೈನಮತದವರಲ್ಲಿ ಜನಪ್ರಿಯ ನೀತಿ ಗ್ರಂಥವಾಗಿ ಇತರ ಮತಸ್ಥರಿಗೂ ಮಾನ್ಯವೂ ಆಗಿದೆ. ಜೈನರು ವ್ಯಾಪಾರ ಕುಶಲರಾಗಿದ್ದಾರೆಂಬುದಕ್ಕೆ ಈ ಪುಸ್ತಕ ಸಾಕ್ಷಿಯಾಗಿದೆ.

ಇಂಥಾ ಇನ್ನೆಷ್ಟೋ ಜೈನ ಗ್ರಂಥಗಳು ನಮ್ಮ ತುಳುನಾಡಿನಲ್ಲಿ ಪ್ರಪಂಚದ ಬೆಳಕನ್ನು ಕಾಣದೆ ಇರಬಹುದು. ಏಕೆಂದರೆ ಹಿಂದೊಮ್ಮೆ ಕಾಲದಲ್ಲಿ ತುಳುನಾಡಿನಲ್ಲಿ ಜೈನರು ಬಹಳ ಉನ್ನತೋನ್ನತಿಗೇರಿದ್ದರು. ಅವರಲ್ಲಿ ಅನೇಕರು ಶ್ರೀಮಂತರು, ವ್ಯಾಪಾರಿಗಳು, ಭೂಮಾಲಿಕರು, ಕವಿಗಳು, ಕಲಾಪ್ರವೀಣರು ಇದ್ದರು. ಅಂಥಾ ಸಮಯದಲ್ಲಿ ಇನ್ನೆಷ್ಟು ಸಾಹಿತ್ಯ ಕೃತಿ ಹುಟ್ಟಿವೆಯೋ ಹೇಳಬರುವುದಿಲ್ಲ. ಅವುಗಳೊಂದೊಂದನ್ನೇ ಶೋಧಿಸಿ ವಿವೇಕಾಭ್ಯುದಯ ಕಾರ್ಯಾಲಯದವರು ಬೆಳಕಿಗೆ ತರುವ ಕೆಲಸ ಮಾಡಿದರೆ ಅದರಿಂದ ಕನ್ನಡ ಸಾಹಿತ್ಯಕ್ಕೂ ಜೈನಮತಕ್ಕೂ ಶ್ರೇಯಸ್ಸು ದೊರಕೀತು.

—ಕಯ್ಯಾರ.

THE CANARA BANKING CORPORATION Ltd

(Incorporated in British India with limited liability).

STATEMENT OF AFFAIRS AS ON 31ST DECEMBER 1942.

Capital & Liabilities	Rs.	As.	Ps.	Property & Assets	Rs.	As.	Ps.
Paid up Capital	6,36,890	0	0	Office premises, furniture, etc.	91,659	0	0
Reserve & other funds	3,71,882	13	11	Advances	31,28,612	4	9
Deposits	41,83,873	4	1	Investment on Govt. Securities etc. at cost	15,34,536	14	3
Due to Bankers	5,08,545	12	1	Sundries	74,183	5	7
Bills per contra	3,59,357	12	1	Bills for Collection	3,59,357	12	1
Sundries including branch adjustments & undisbursed profits	2,83,736	6	9	Cash on Hand & with bankers	12,05,397	14	8
Profit for the year 1942	49,461	3	5				
Total Rs.	63,93,747	3	4	Total Rs.	63,93,747	3	4

NOTICE

In the Court of the District Munsif of Mangalore

O. S. No. 438 of 1942.

Between:—

The Municipal Council, Mangalore— Plaintiff

and

Beepathumma and others— Defendants.

To

The Supplemental 4th defendant Mamu son of Valli Idinabha, residing in Old Fish Bazaar, Mangalore.

Please take notice that the above named plaintiff has filed the above suit for recovery of plaint reliefs and that the said suit stands posted to 28 7-'43 for your appearance. If you fail to appear before the above Court on that date you will be declared exparte and the suit will be decided accordingly.

(By order of Court)

Mangalore, 21-7-1943. (Sd.) P. D'Souza B. A., B. L. Vakil for Plaintiff.

ರೈಲು ಬಂಡಿಗಳ ಸಮಯ

ಎಪ್ರಿಲ್ ತಾ. ೧೫ರಿಂದ ವ್ಯತ್ಯಸ್ತವಾದ ಪ್ರಕಾರ.

	ಹೊರಡುವುದು.	ಬರುವುದು.
ಮೈಲ್	೬-೪೦ ಪ್ರಾ.	೬-೨೫ ಅಪ.
ಶಟ್ಲ್	೬-೩೦ ಅಪ.	೧೦-೫೫ ಪ್ರಾ.



ANDREWS
LIVER SALT
ಏಂಡ್ರೂಸ್ ಲಿವರ್‌ಸಾಲ್ಟ್
ಆರೋಗ್ಯಪಾನೀಯ — ವಿರೇಚಕ

ಯುದ್ಧವು ದೆಸೆಯಿಂದಾಗಿ ಏಂಡ್ರೂಸ್ ಲಿವರ್‌ಸಾಲ್ಟ್ ಈಗ ದೊರಕುವುದಿಲ್ಲವೆಂಬುದು ವಿಷಾದಕರವಿದೆ. ಆದರೆ ಅಂತರ್ರಾಷ್ಟ್ರೀಯ ಪರಿಸ್ಥಿತಿ ಸುಧಾರಿತವಾದ ಕೂಡಲೇ ಇದು ಖಂಡಿತ ದೊರಕುವದು.

ಆಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಆಗತ್ಯ ಬಿದ್ದಿವೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಗೇನೆ ಆಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದುದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರೆ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು. ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

The Bank of Mangalore Limited, Mangalore.

ESTD. 1931

HEAD OFFICE Mangalore. *BRANCHES* Moodabidri & Padubidri.

The Bank Undertakes to Collect Cheques, Demand and Documentary Bills at Most Competitive Rates.

ISSUES DRAFTS ON ALL IMPORTANT TOWNS IN THE DISTRICT

and also on

BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR, HONAVAR etc.

at very favourable rates

All kinds of inland banking business undertaken

(Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುನೋವುಗಳಿಗೂ ಎದೆನೋವು, ಗಾಯ, ಗುಳ್ಳೆ, ಬಾತುಕೊಳ್ಳುವುದು, ಚೇಳು ವಿಷ ಮುಂತಾ ಬೇನೆ, ಪಕ್ಷವಾತ, ನೋವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಎಲ್ಲಾ ಕಂಪೆನಿಯಲ್ಲಿ ದೊರೆಯುವುದು.

ನೀವೀವರೆಗೆ ವಿಮೆಯನ್ನು ಇಳಿಸದಿದ್ದರೆ, ಯಾ ಸಾಕಷ್ಟು ವಿಮೆಯನ್ನು ಮಾಡಿಲ್ಲವಾದರೆ

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡಿನಲ್ಲಿ

ಈಗಲೇ ವಿಮೆ ಇಳಿಸಿರಿ.

ಏಕೆಂದರೆ,

1. ಜೀವವಿಮೆಯು ಒಬ್ಬನ ವೃದ್ಧಾಪ್ಯದ ಮತ್ತು ಸವಿೂಪದ ಹಾಗೂ ಪ್ರೀತಿಯ ಸಂಬಂಧಿಕರ ಜೀವನವನ್ನು ಸುರಕ್ಷಿತಗೊಳಿಸುತ್ತದೆ.
2. ನೀವಿಂದು ವಿಮೆಯನ್ನಿಳಿಸಬಲ್ಲಿರಾದರೆ ನಾಳೆ ಹಾಗೆ ಮಾಡಲು ಶಕ್ತರಾಗದೆ ಹೋಗಬಹುದು.
3. ಆರೋಗ್ಯವು ಅನಿಶ್ಚಿತವೆಂದಾದರೆ ಮೃತ್ಯುವು ಯಾರನ್ನೂ ಬಿಡುವಂತಿಲ್ಲ.
4. ಮೃತ್ಯು ಮತ್ತು ಮುಪ್ಪು ಎಂಬುದು ಅಮೂಲ್ಯವಾದೊಂದು ನಿಶ್ಚಿತ.
5. ಜೀವವಿಮೆಯು ಮರಣದ ಕ್ರೂರತೆಯನ್ನು ಹೋಗಲಾಡಿಸುವುದೊಂದೇ ಅಲ್ಲ; ಅದರ ಸಂಕಷ್ಟವನ್ನೂ ದೂರೀಕರಿಸುತ್ತದೆ.

ಆದುದರಿಂದ ಇಂದೇ ಜೀವವಿಮೆ ಮಾಡುವುದು ಲಾಭಕರವಾಗಿದೆ.

ವಿಶೇಷ ಮಾಹಿತಿಗೆ ದಯಮಾಡಿ ಬರೆಯಿರಿ:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

—: ಅಥವಾ ಅವರ ಈ ಕೆಳಗಿನ ಯಾವುದ್ದಾದರೂ ಶಾಖೆಯಲ್ಲಿ ವಿಚಾರಿಸಿರಿ :—

ಮಂಗಳೂರು ಕಲ್ಲಿಕೋಟೆ ಸೇಲಂ ತಿರುವಾಂಕೂರು ಬೆಂಗಳೂರು ನಗರ ಮತ್ತು ಬೊಂಬಾಯಿ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯೌಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ್ ವ ಏಜೆಂಟರು:—

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಪೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ವಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೋ:—1. ವಂಠಾರ ಗಲ್ಲಿ ಹುಬ್ಬಳ್ಳಿ.
2. 86 ಪ್ಯಾಕ್ರೋಪ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.

ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿ

SWADESHABHIMANI

STD. 1906

[ಸಂಪುಟ 37] ತಾರೀಕು 30—7—1943 [ಸಂಚಿಕೆ 31]

ಲೀಗ್—ಮಹಾಸಭೆಗಳೊಳಗೆ ಒಪ್ಪಂದ?

'ಗಡಿನಾಡಿನ ಗಾಂಧಿ'ಗಳ ಆರೋಗ್ಯ ಚಿಂತಾಜನಕವಾಗಿದೆ!

ಸರಕಾರಕ್ಕೆ ಖಾನ್ ಸಾಹೇಬರ ಎಚ್ಚರಿಕೆ!

'ಗಡಿನಾಡಿನ ಗಾಂಧಿ'ಯೆನಿಸಿದ ಅಬ್ದುಲ್ ಗಫರ್ ಖಾನರ ಆರೋಗ್ಯವು ದಿನೇ ದಿನೇ ಕೆಡುತ್ತಿದೆ. ಆದರೂ ಅವರನ್ನು ಸೆರೆಮನೆಯಿಂದ ಸರಕಾರ ಬಿಟ್ಟಿಲ್ಲ. ಈ ಕುರಿತು ಅವರ ಅಣ್ಣ ಡಾ। ಖಾನ ಸಾಹೇಬರು ಸರಕಾರಕ್ಕೆ ಒಂದು ಎಚ್ಚರಿಕೆಯ ಹೇಳಿಕೆಯಿತ್ತಿದ್ದಾರೆ: 'ನನ್ನ ಸೋದರನ ಆರೋಗ್ಯದ ವಿಚಾರವು ನನ್ನನ್ನು ಸದಾ ಪೀಡಿಸುತ್ತಿದೆ. ಅವನ ಆರೋಗ್ಯ ದಿನೇ ದಿನೇ ಕೆಡುತ್ತಿದೆಯೆಂದು ನಂಬಲರ್ಹವಾದ ಕಡೆಯಿಂದ ಸುದ್ದಿ ಬಂದಿದೆ. ತಲೆನೋವು, ನಿದ್ರಾಭಂಗ, ಶರೀರ ಕ್ಷೀಣತೆಗಳಿವೆಯೆಂದು ಕೇಳಿದ್ದೇನೆ. ಅವನ ಆರೋಗ್ಯ ಇದೇ ರೀತಿ ಕೆಡುತ್ತಾ ಬಂದರೆ ಮುಂದೆ ಯಾವುದೇ ಜನ ಸೇವೆ ಮಾಡಲೂ ಆತನು ಅಸಮರ್ಥನಾಗುವನು. ಭಾರತೀಯರು ಓರ್ವ ರಾಷ್ಟ್ರ ಸೇವಕನನ್ನು ಕಳಕೊಳ್ಳುವಂತಾಗುವುದು. ಇದು ನಿಜವಾಗಿಯೂ ವಿಷಾದಕರ ಘಟನೆಯಾಗುವುದು. ಇಂದು ನನ್ನ ಸೋದರನ ಆರೋಗ್ಯದ ಕುರಿತು ನಾನಿಷ್ಟನ್ನು ಹೇಳುತ್ತೇನೆ. ನಾನು ದ್ವೇಷಿಸುವ ಜನರೊಡನೆ ನಾನು ಕ್ಷಮೆ ಕೇಳಲಾರೆ. ಅದು ನನ್ನಿಂದಾಗದ ಕೆಲಸ. ಆದರೆ ನನ್ನ ಸೋದರನ ಇಂದಿನ ಪರಿಸ್ಥಿತಿಗೆ ಕಾರಣರಾದವರಿಗೆ ನಾನೊಂದು ಎಚ್ಚರಿಕೆಯ ಮಾತು ಹೇಳಬೇಕು. ಪಠಾಣರು ತಮ್ಮ ಮುಂದಾಳುವು ಈ ರೀತಿ ನರಳುತ್ತಿರುವುದನ್ನು ಸಹಿಸಲಾರರು. ಸರಕಾರವು ರಾಜಕೀಯ ಕೈದಿಗಳ ಪರಿಸ್ಥಿತಿ ಸುಧಾರಿಸಲು ಈಗಲೇ ಗಮನ ಕೊಡತಕ್ಕದ್ದು. ಸರಕಾರವು ತಮ್ಮ ಕರ್ತವ್ಯವನ್ನು ಅಲಕ್ಷಿಸಿದರೆ ಇದರ ಪರಿಣಾಮವು ಒಳ್ಳೆಯದಾಗಲಿಕ್ಕಿಲ್ಲ. ನಾನಿದನ್ನು ಇಂದೇ ಸಾರುತ್ತೇನೆ'. ಡಾ। ಖಾನ್ ಸಾಹೇಬರು ಹೀಗೆ ಕಳವಳಗೊಂಡು ಸರಕಾರಕ್ಕೆ ಎಚ್ಚರಿಕೆಯಿತ್ತಿದ್ದಾರೆ. ಡಾ। ಖಾನ್ ಸಾಹೇಬರು ಗಡಿನಾಡಿನ ಮಾಜಿ ಪ್ರಧಾನ ಮಂತ್ರಿ!

'ಮಹಾತ್ಮರು ಅಗಸ್ಟ್ ನಿರ್ಣಯ ಹಿಂತೆಗೆದುಕೊಳ್ಳುವುದಿಲ್ಲ'

ಗಾಂಧಿಜಿ ವೈಸರಾಯರಿಗೆ ಬರೆದ ಪತ್ರದಲ್ಲಿ, ಅಗಸ್ಟ್ ನಿರ್ಣಯವನ್ನು ಹಿಂತೆಗೆದುಕೊಳ್ಳುವ ವಿಚಾರವೂ ಇನ್ನೊಂದು ಉಪವಾಸ ಕೈಕೊಳ್ಳುವ ಸೂಚನೆಯೂ ಇಲ್ಲವೆಂದೂ, ಯುದ್ಧದ ಪರಿಸ್ಥಿತಿಯಿಂದ ದೇಶದಲ್ಲಿ ಉಂಟಾದ ಆರ್ಥಿಕ ಮುಗ್ಗಟ್ಟು, ಬಡಜನರ ಆಹಾರ ಕಷ್ಟ ಇವುಗಳನ್ನು ಗಾಂಧಿಜಿ ಉಲ್ಲೇಖಿಸಿ ಇದನ್ನು ನಿವಾರಿಸಲು ವೈಸರಾಯರು ಯೋಗ್ಯ ಕಾರ್ಯಕ್ರಮ ಕೈಕೊಳ್ಳಬೇಕೆಂದು ತಿಳಿಸಿದ್ದಾರೆಂದೂ, ತಾವು ವೈಸರಾಯರಿಗೆ ಈ ವಿಷಯದಲ್ಲಿ ಯೋಗ್ಯ ಸಹಕಾರ ನೀಡಲು ಸಿದ್ಧರಿರುವುದಾಗಿಯೂ ಮಹಾತ್ಮರು ಹೇಳಿರುವರೆಂದೂ, 'ಟ್ರಿಬ್ಯೂನ' ಪತ್ರಿಕೆಯ ಡಿಲ್ಲಿ ಬಾತ್ಮಿದಾರನ ಅಭಿಪ್ರಾಯ.

'ಮುಂದಿನ ಧೋರಣ ನಾ ಹೇಳಲಾರೆ'

ವೇವಲರ ಮಾತು

ಲಂಡನಿನಲ್ಲಿ ಭಾರತದ ಕೆಲ ಪತ್ರಿಕೋದ್ಯಮಿಗಳು ವೇವಲರನ್ನು ಕಂಡು ಅವರ ಮುಂದಿನ ಭಾರತದ ಧೋರಣದ ವಿಚಾರ ಪ್ರಶ್ನಿಸಿದರು. ಅದಕ್ಕೆ ವೇವಲರು 'ಮುಂದಿನ ಧೋರಣ ನಾನಿಂದು ಹೇಳಲಾರೆ' ಎಂದರು. ಭಾರತದ ಬಹು ಮಂದಿಯಿದ್ದು ಭಾರತ ಮುಖಂಡರು ಕೇಂದ್ರ ಸರಕಾರದಲ್ಲಿ ಅಧಿಕಾರ ವಹಿಸುವುದನ್ನು ನೋಡಲು ಆತುರವುಳ್ಳವರಾಗಿದ್ದಾರೆ ಎಂಬುದಾಗಿ ಅವರೊಡನೆ ಹೇಳಿದಕ್ಕೆ, ವೇವಲರು ಏನೊಂದೂ ಉತ್ತರ ಕೊಡದೆ, ಆ ಮಾತನ್ನಾದರಭಾವದಿಂದ ಆಲಿಸಿದರು ಮಾತ್ರ. ಅಂತೂ ಇಂದು ಬ್ರಿಟಿಷರೂ, ಭಾರತೀಯರೂ ವೇವಲರ ಕಡೆ ನೋಡುತ್ತಾರೆ. ಭಾರತದ ಮುಖಂಡರನ್ನು ಸೇರಿಸಿ ವೇವಲರು ಒಂದು ಪರಿಷತ್ತು ಜರಗಿಸುವರೇ, ಇಂದಿನ ಆಹಾರ ಸಂಕಷ್ಟ ಮೊದಲಾದವುಗಳ ಕುರಿತು ಯೋಗ್ಯ ಉಪಾಯ ಕೈಕೊಳ್ಳುವರೇ ಇದು ಮೊದಲಾಗಿ ಅವರ ಕುರಿತು ಜನತೆಯಿಂದು ಆಶಾತುರವಾಗಿದೆ. ವೇವಲರು ದೂರದರ್ಶಿ, ಧೀರ ಮತ್ತು ಗಂಭೀರ ವ್ಯಕ್ತಿಯಾಗಿರುವುದರಿಂದ ಇದನ್ನೆಲ್ಲಾ ಮಾಡಬಹುದೆಂದು ಹಲವರ ಭಾವನೆ.

ಭನ್ಸಾಲಿ ಚಿಮೂರಿಗೆ ಹೋಗುವರು.

ಚಿಮೂರಿಗೆ ಭನ್ಸಾಲಿ

ಯವರು ಶ್ರೀಮತಿ ಜಾನಕಿ ಬಜಾಜರೊಂದಿಗೆ ತಾ. 21ರಂದು ಹೊರಟಿರುವರು. ಚಿಮೂರಲ್ಲಿ ಸರಕಾರೀ ಅಧಿಕಾರಿಗಳು ಮಾನಿನಿಯರ ಮಾನಾಪಹಾರ ಮಾಡಿದ ವಿಷಯವಾಗಿ ಭನ್ಸಾಲಿಯವರು ೬೩ ದಿನಗಳ ಮಹೋಪವಾಸ ಮಾಡಿ ಕೊನೆಗೆ ಆ ಅತ್ಯಾಚಾರದ ವಿಚಾರಣೆ ಮಾಡಲಾಗುವುದೆಂದು ಸರಕಾರ ಭರವಸೆಯಿತ್ತು ಬಳಿಕ ಉಪವಾಸ ಕೊನೆಗೊಳಿಸಿದ್ದರು. ಆಣೆಯವರು ತನ್ನೊಡನೆ ಚೀಮೂರು ಸಂದರ್ಶಿಸಲು ಬರಬೇಕೆಂದು ಭನ್ಸಾಲಿಯವರು, ಆಣೆ ವೈಸರಾಯರ ಮಂತ್ರಿಮಂಡಳ ಮಂಡಿತರಾಗಿದ್ದಾಗ ಕೇಳಿಕೊಂಡು, ತಿರಸ್ಕೃತರಾಗಿ, ಪುನಃ ಪುರಸ್ಕೃತರಾದ ಪ್ರಕಾರ, ಆಣೆ ಸದ್ಯದ ತನ್ನ ಸಿಲೋನ್ ರಾಯಭಾರಕ್ಕೆ ಹೋಗುವ ಮುನ್ನ ಭನ್ಸಾಲಿಯವರೊಂದಿಗೆ ಚೀಮೂರು ಸಂದರ್ಶಿಸುವರು.

ಭಾರತದ ಸೈನಿಕರಿಗೂ ಬ್ರಿಟಿಷರಷ್ಟೇ ಸಂಬಳ

ಪಂಡಿತ ಕುಂಜ್ರುಗಳ ನಿರ್ಣಯ

ಭಾರತದಲ್ಲಿರುವ ಬ್ರಿಟಿಷ್ ಸೇನಾಧಿಕಾರಿಗಳಿಗೆ ಹಾಗೂ ಸೈನಿಕರಿಗೆ ಕೊಡುವಷ್ಟೇ ಸಂಬಳವನ್ನು ವಿದೇಶದಲ್ಲಿರುವ ಭಾರತದ ಸೇನಾಧಿಕಾರಿ ಮತ್ತು ಸೈನಿಕರಿಗೆ ಕೊಡಬೇಕೆಂದು ನಿರ್ಣಯವನ್ನು ಪಂಡಿತ ಕುಂಜ್ರುಗಳು ಕೌನ್ಸಿಲ್ ಆಫ್ ಸ್ಟೇಟಿನಲ್ಲಿ ತರಲಿರುವರು. ಭಾರತದಲ್ಲಿರುವ ವಿದೇಶೀ ಸೈನಿಕರ ಮಾಂಸಾಹಾರಕ್ಕಾಗಿ ಜಾನುವಾರುಗಳನ್ನು ಕೊಲ್ಲುವುದರಿಂದ ದೇಶದ ಒಕ್ಕಲತನಕ್ಕೆ ಧಕ್ಕೆಯಿರುವುದರಿಂದ, ಅವಶ್ಯವಿದ್ದ ಮಾಂಸವನ್ನು ಅಮೇರಿಕ ಆಸ್ಟ್ರೇಲಿಯಗಳಿಂದ ತರಿಸಬೇಕೆಂದು ಹುಸೇನ್ ಇಮಾಮರ ನಿರ್ಣಯವಿದೆ.

ಲೀಗ್-ಮಹಾಸಭೆ ಒಪ್ಪಂದ

ಡಾ। ಹೇಮನದಾಸರ ಆಶೆ

ಜಿನ್ನಾ ಸಾವರ್ಕಾರರನ್ನು ಭೇಟಿಮಾಡಿಸಿ, ಲೀಗ್ ಮಹಾಸಭೆಗಳಲ್ಲಿ ಒಪ್ಪಂದ ಮಾಡಿಸಬೇಕೆಂದು ಸಿಂಧದ ಮಂತ್ರಿ ಡಾ। ಹೇಮನದಾಸರು ಪ್ರಯತ್ನಿಸುತ್ತಾರೆ. ಈ ಬಗ್ಗೆ ಇವರು ಜಿನ್ನಾ, ಸಾವರ್ಕಾರರನ್ನು ಭೇಟಿಯಾಗಿ ಬಂದು ಅಂಥಾ ಒಪ್ಪಂದ ಆಗುವ ಆಶೆಯಿದ್ದೆಯೆಂದು ಪ್ರಕಟಿಸಿದ್ದಾರೆ. ಭಾರತದ ರಾಜಕೀಯ ಬಿಕ್ಕಟ್ಟು ಬಿಡಿಸುವ ಬಗ್ಗೆ ಹಿಂದು ಮುಸ್ಲಿಂ ಐಕ್ಯವಾಗಬೇಕಾದದ್ದು ಅವಶ್ಯವಿರುವುದರಿಂದ ಈ ಪ್ರಯತ್ನ ಸಫಲವಾದರೆ ಹೇಮನದಾಸರು ಪರಾಕ್ರಮಿಗಳೇ ಎನಬೇಕು. ಜಿನ್ನಾ ಸಾವರ್ಕಾರ್ ಭೇಟಿಯಾಗುವ ಮುಹೂರ್ತವನ್ನು ನಾವು ಎದುರು ನೋಡುವ!

ಇಂಗ್ಲೆಂಡಿಗೆ ಹಿಂದುಸ್ತಾನ ಎಷ್ಟು ಹಣ ಕೊಟ್ಟಿದೆ?

ಇಂಗ್ಲೆಂಡಿನ ಯುದ್ಧ ಖರ್ಚನ್ನು ಕಡಿಮೆ ಮಾಡಲು ಹಿಂದುಸ್ತಾನವು ಇಂಗ್ಲೆಂಡಿಗೆ ಎಷ್ಟು ಹಣ ಕೊಟ್ಟಿದೆ? ಇಂಗ್ಲೆಂಡಿನಲ್ಲಿರುವ ಹಿಂದುಸ್ತಾನದ ಹಣವನ್ನು ಯಾಕೆ ಉಪಯೋಗಿಸಬಾರದು? ಎಂಬದಾಗಿ ಕಾಮನ್ಸ್ ಸಭೆಯಲ್ಲಿ ಸರ್ ಸ್ಟಾನ್ಲೆ ರೀಡರ್ ಒಂದು ಪ್ರಶ್ನೆ ಕೇಳಿದರು.

ನಾತಾಳದ ಭಾರತೀಯರ ಒಮ್ಮತ

ಗಾಂಧಿ ಸ್ಥಾಪಿಸಿದ ಸಂಸ್ಥೆ ಪುನರ್ಜೀವನ

ನಾತಾಳದ ಭಾರತೀಯರಲ್ಲಿ ಐಕ್ಯ ಪ್ರಯತ್ನ ಮಾಡುತ್ತಿದ್ದು ಅದು ಯಶಸ್ವಿಯಾಗುವ ಲಕ್ಷಣ ತೋರುತ್ತದೆ. ನಾತಾಳ ಹಿಂದಿ ಕಾಂಗ್ರೆಸ್ ಮತ್ತು ನಾತಾಳ ಹಿಂದಿ ಸಂಘಗಳೆರಡೂ ವಿಸರ್ಜಿತವಾಗಿ ೧೮೯೪ರಲ್ಲಿ ಮಹಾತ್ಮರು ಸ್ಥಾಪಿಸಿದ ನಾತಾಳ ಹಿಂದಿ ಕಾಂಗ್ರೆಸನ್ನು ಪುನರುಜ್ಜೀವಿಸುವ ಸೂಚನೆಯಾಗಿದೆ. ಇದಕ್ಕೆ ಹಿಂದುಸ್ತಾನದ ಹೈಕಮಿಶನ್ನರ ಬೆಂಬಲವಿದೆಯೆಂದೂ ತಿಳಿದು ಬಂದಿದೆ.

ರಾಜಾಜಿ ಮಾನಹಾನಿ ಖಟ್ಲೆ

'ಸಂಡೇ ಒಬ್ಸರ್ವರ್' ಪತ್ರಿಕಾ ಸಂಪಾದಕ ಹಾಗೂ ಮುದ್ರಕರಿಗೆ ಶಿಕ್ಷೆ

ರಾಜಗೋಪಾಲಾಚಾರ್ಯರ ಕುರಿತು, ದುರಭಿಪ್ರಾಯದ ಲೇಖನ ಬರೆದ 'ಸಂಡೆ ಒಬ್ಸರ್ವರ್' ಪತ್ರಿಕೆಯ ಮೇಲೆ ಅವರು ಮಾನಹಾನಿ ಖಟ್ಲೆ ಹಾಕಿದ್ದು, ಅದರ ವಿಚಾರಣೆ ನಡೆದು, ಆ ಪತ್ರಿಕೆಯ ಸಂಪಾದಕ ಹಾಗೂ ಮುದ್ರಕರಿಗೆ ರೂ. ೧೦೦೦, ಮತ್ತು ರೂ. ೫೦೦, ಇಲ್ಲವೇ ೬ ತಿಂಗಳ ಮತ್ತು ೩ ತಿಂಗಳ ಶಿಕ್ಷೆಗಳು ಅನುಕ್ರಮವಾಗಿ ವಿಧಿಸಲಾಯಿತು. 'ರಾಜಾಜಿಯವರು ಬೇಕೆಂದೇ ಕಾಂಗ್ರೆಸಿನಿಂದ ಹೊರಗೆ ಬಂದಿದ್ದಾರೆ. ಅವರ ಉದ್ದೇಶ ಕಾಂಗ್ರೆಸಿಗೆ ಸಹಾಯ ಮಾಡುವುದು. ಆಂದೋಲನ ಕಾರ್ಯ ಮೊದಲಾದುವುಗಳನ್ನು ಅವರು ಗುಪ್ತ ರೀತಿಯಿಂದ ನಡೆಸುತ್ತಿದ್ದಾರೆ. ಗಾಂಧಿ ಮತ್ತು ರಾಜಾಜಿಯೊಳಗೆ ಈ ರೀತಿ ಒಳಸಂಚು ನಡೆದಿದೆ' ಇತ್ಯಾದಿ ಆರೋಪ ಹಾಕಿ 'ಸಂಡೆ ಒಬ್ಸರ್ವರ್' ಪತ್ರಿಕೆ ಬರೆದಿತ್ತು.

'ಮುಖಂಡರನ್ನು ಬಿಡಿರಿ'

'ರಾಷ್ಟ್ರೀಯ ಸರಕಾರವಾಗಲಿ'

— ಪಕ್ಷರಹಿತ ಪರಿಷತ್ತಿನ ಕೇಳಿಕೆಗಳು —

ನ್ನು ಇಲ್ಲಿಯಲ್ಲಿ ಸೇರಿದ ಪಕ್ಷರಹಿತ ಮುಖಂಡರ ಪರಿಷತ್ತು ಸರಕಾರ ಮತ್ತು ಮಹಾತ್ಮಾ ಗಾಂಧಿಯವರಲ್ಲಿ ಇಂದಿನ ರಾಜಕೀಯ ಬಿಕ್ಕಟ್ಟು ಬಗೆಹರಿಸುವ ಸಲುವಾಗಿ ಒಂದು ವಿನಂತಿ ಮಾಡಿಕೊಂಡಿದೆ. ಅದರಲ್ಲಿ ಈ ಕೆಳಗಿನ ಸೂಚನೆಗಳನ್ನು ಕೊಡಲಾಗಿದೆ:

'(೧) ಮಹಾತ್ಮಾ ಗಾಂಧಿ ಮೊದಲಾದ ಕಾಂಗ್ರೆಸ್ ಮುಂದಾಳುಗಳನ್ನು ಬಿಡುಗಡೆ ಮಾಡಿ, ಅವರಿಗೆ ೧೯೪೨ ಅಗಸ್ಟ್ ೮ರ ನಿರ್ಣಯವನ್ನು ಪುನರ್ವಿಚಾರ ಮಾಡಲು ಆಸ್ಪದವೀಯಬೇಕು. ಮತ್ತು ರಾಷ್ಟ್ರದ ಬೇರೆ ಬೇರೆ ಘರ್ಷಣೆ ಹೊಂದುವ ಪಕ್ಷಪಂಗಡಗಳ ಐಕ್ಯಸಾಧನೆಯ ಪ್ರಯತ್ನಮಾಡುವುದು, ಕಾಂಗ್ರೆಸಿನ ಮುಂದಾಳುಗಳ ಮೇಲೆ ಹಾಕಿದ ಆರೋಪದ ವಿಚಾರಣೆಗಾಗಿ ಒಂದು ನಿಷ್ಪಕ್ಷಪಾತೀ ವಿಚಾರಣಾ ಮಂಡಳವನ್ನೇರ್ಪಡಿಸಿ ಅವರಿಗೆ ತಮ್ಮ ನ್ಯಾಯವನ್ನು ಸಾರಲು ಆಸ್ಪದವಿರಬೇಕು. ೨) ಮುಖಂಡರು ಪ್ರಾಂತಗಳ ಅಧಿಕಾರದಲ್ಲಿ ಸ್ವತಂತ್ರ ವ್ಯಕ್ತಿಗಳಂತೆ ಸಹಕರಿಸಲಿಚ್ಛಿಸುವುದಾದರೆ (ಹಾಗೆ ಇಚ್ಛಿಸಬಹುದೆಂದು ನಮ್ಮ ಆಶೆ) ಯುದ್ಧದಲ್ಲಿ ಸಹಕರಿಸುವ ಪ್ರತಿಜ್ಞೆ ಮಾಡಿದ ಮಿಶ್ರಮಂಡಳಗಳನ್ನೇರ್ಪಡಿಸುವುದು. ೩) ಮುಖಂಡರು ಹಾಗೆ ಮಾಡಲು ಇಚ್ಛಿಸುವುದಿಲ್ಲವಾದರೆ, ಇತರರು ಹಾಗೆ ಮಾಡಲು ಮುಂದೆ ಬರುವುದಿದ್ದರೆ ಅವರಿಗೆ ಚನ್ನಾದ ಆಡಳಿತ ನಡೆಸುವರೆ ಅವರು ಆಸ್ಪದ ಕೊಡಬೇಕು. ೪) ಯುದ್ಧದ ವರೆಗೆ ಮಾತ್ರ ಸಂರಕ್ಷಣಾಧಿಕಾರ ಸೇನಾಪತಿಯ ಕೈಕೆಳಗಿದ್ದು, ಮಿಕ್ಕ ಎಲ್ಲಾ ಅಧಿಕಾರಿಗಳೂ ಭಾರತೀಯರ ಕೈಗೆ ಬರುವಂಥಾ, ಒಂದು ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸುವುದು; ಆ ಸರಕಾರದಲ್ಲಿ ಮಂತ್ರಿಗಳಾಗಿರುವವರೆಲ್ಲರೂ ಜನರ ಪೂರ್ಣ ವಿಶ್ವಾಸಪಾತ್ರರಾಗಿರುವ ಪ್ರತಿನಿಧಿಗಳಾಗಿರಬೇಕು. ಸೇನಾಪತಿಯ ಕೈಕೆಳಗಿರುವ ಸಂರಕ್ಷಣಾ ಖಾತೆಯಲ್ಲಿ ಭಾರತೀಯರನ್ನೂ, ಆತನ ಅಧಿಕಾರಕ್ಕೆ ಅತಂಕ ಬರದಂತೆ ನೋಡಿಕೊಂಡಿರಬೇಕು. (೫) ರಾಷ್ಟ್ರಘಟನೆಯನ್ನು ಸಾಗಿಸುವರೆ ಸಾಮೂಹಿಕ ಜವಾಬ್ದಾರಿಯ ತತ್ವವನ್ನು ನಿಜವಾದ ಆಡಳಿತ ಕಾಲದಲ್ಲಿ ಅನುಸರಿಸಬೇಕು. ಆದರೆ ಯುದ್ಧಾಂತ್ಯದವರೆಗೆ ಸಾಮ್ರಾಟರಿಗೆ ಕೌನ್ಸಿಲೇ ಜವಾಬ್ದಾರಿಯಾಗಿರಬಹುದು.

'ಈ ಮೇಲಿನ ತತ್ವಗಳನ್ನು ಬೇಗನೇ ಜಾರಿಗೆ ತರದಿದ್ದರೆ, ಭಾರತೀಯರೆಲ್ಲರೂ ತಾವು ಬಲಾತ್ಕಾರದಿಂದ ಆಳಲ್ಪಡುತ್ತಿದ್ದೇವೆಂದು ತಿಳಕೊಂಡಾರು. ಇಂಥಾ ವಿಷಮ ಕಾಲದಲ್ಲಿ ಬ್ರಿಟಿಷರು ಭಾರತದ ಅಧಿಕಾರದಲ್ಲಿ ಜನರ ಸಹಕಾರವನ್ನು ಗಳಿಸಿಕೊಳ್ಳಬೇಕಲ್ಲದೆ ದ್ವೇಷವನ್ನಲ್ಲ. ಆದ್ದರಿಂದ ಜನರ ಸಹಕಾರ ಪಡೆದು ಬಲಶಾಲೀ ಗೃಹರಂಗವನ್ನು ರಚಿಸಬೇಕಲ್ಲದೆ, ಜನತೆಯ ಆವೇಶವನ್ನು ಹತ್ತಿಕ್ಕುವುದು ತಪ್ಪಾಗುವುದು. ಆದ್ದರಿಂದ ಸರಕಾರದವರು ಇಂದು ಜನರ ಬೆಂಬಲ ಪಡಕೊಳ್ಳಬೇಕಲ್ಲದೆ, ಇದುವರೆಗೆ ಮಾಡಿದಂತೆ ರಾಜಕೀಯ ಮುತ್ಸದಿತನದ ದಿವಾಳಿಗರಿತನವನ್ನು ಪ್ರದರ್ಶಿಸಬಾರದು. ಸಾರ್ವಜನಿಕರಲ್ಲಿ ವಿಶ್ವಾಸ ಹುಟ್ಟಬೇಕಾದರೆ ಭಾರತದ ಸರ್ವಶ್ರೇಷ್ಠ ನ್ಯಾಯಸ್ಥಾನಕ್ಕೆ ಮನ್ನಣೆ ಕೊಡಬೇಕು. ಇನ್ನು ಕೇಂದ್ರ ಸರಕಾರದ ವಿಷಯ ಹೇಳಬೇಕಾದರೆ, ಕೇವಲ ಕಾರ್ಯಕಾರೀ ಮಂಡಳದ ಸದಸ್ಯರನ್ನು ಹೆಚ್ಚಿಸಿದ ಮಾತ್ರದಿಂದ ಪ್ರಯೋಜನವಿಲ್ಲ. ಅದರಲ್ಲಿ ಭಾರತೀಯರಿಗೆ ಅಧಿಕಾರಿಗಳನ್ನು ಹೆಚ್ಚಿಸಬೇಕು. ಭಾರತದ ದಿನವಹಿ ಆಡಳಿತದಲ್ಲಿ ಭಾರತ ಮಂತ್ರಿಗಳು ಕೈಹಾಕದಂತೆ ಮಾಡಬೇಕು.

'ಆಹಾರ ಪಂಕ್ತಿ ಮತ್ತು ನೋಟುಗಳ ಅತಿಪ್ರಸರಣವು ಜನರ ಜೀವನಕ್ಕೆ ನೇರಾಗಿ ಸಂಬಂಧಿಸುವುದರಿಂದ, ಸರಕಾರವು ಹೆಚ್ಚು ಅಪ್ರಿಯನ್ನಾಗಲು ಇವು ಕಾರಣವಾಗಿದೆ. ಈ ಸಂಬಂಧದಲ್ಲಿ ಜನರಿಗೆ ಬೇಗನೇ ಪರಿಹಾರ ಸಿಗಬೇಕು. ಹಾಗಾದರೆ ಹೊಸದಾಗಿ ಬರುವ ವೈಸರಾಯರ ಕಾರ್ಯವು ಹಗುರವಾಗುವುದು.

'ದಕ್ಷಿಣ ಆಫ್ರಿಕದಲ್ಲಿ ಭಾರತೀಯರಿಗೆ ಅನ್ಯಾಯವಾಗುವಂತೆ ಮಾಡಿದ ಕಾನೂನು ವರ್ಣದ್ವೇಷದ ದುರಭಿಮಾನತೆಯನ್ನು ವ್ಯಕ್ತಪಡಿಸುತ್ತದೆ. ಬ್ರಿಟಿಷ್ ರಾಜಕಾರಣಿಗಳು ತಮ್ಮ ಸಾಮ್ರಾಜ್ಯದ ಬಗ್ಗೆ ಪಟ್ಟ ಅಭಿಪ್ರಾಯಗಳು ಮತ್ತಷ್ಟು ವಿಷಾಕರವಿವೆ. ಇದರಿಂದೆಲ್ಲಾ ಭಾರತದ ಪರಿಸ್ಥಿತಿ ಹದಗೆಟ್ಟಿದೆ.

'ಸರಕಾರದವರು ಕೂಡಲೇ ಕಾಂಗ್ರೆಸ್ ಮುಖಂಡರನ್ನು ಬಿಡುಗಡೆ ಮಾಡಿ ತಮ್ಮ ಕರ್ತವ್ಯ ಮಾಡಬೇಕು; ಹಾಗೆಯೇ ಮಹಾತ್ಮರು ಆಂದೋಲನದ ನೀತಿಯನ್ನು ಹಿಂತೆಗೆದು ತಮ್ಮ ಕರ್ತವ್ಯಮಾಡಬೇಕು. ಇದರಿಂದ ದೇಶದ ವಿವಿಧ ಪಕ್ಷಗಳು ಒಂದಾಗಿ ವಿಚಾರ ವಿನಿಮಯಮಾಡಲು ಆಸ್ಪದವಾಗುವುದು. ಇದರಿಂದ ಪ್ರಾಂತ ಕೇಂದ್ರಗಳಲ್ಲಿ ಸರಕಾರ ಸ್ಥಾಪನೆಯಾಗಿ ಯುದ್ಧ ಪ್ರಯತ್ನಕ್ಕೆ ಜನರ ಬೆಂಬಲ ಪಡೆಯಲು, ಶತ್ರು ಪ್ರಚಾರ ತಡೆಯಲು, ಭದ್ರವಾದ ಗೃಹರಂಗ ನಿರ್ಮಿಸಲು ಅವಕಾಶವುಂಟಾಗುವುದು. ಯುದ್ಧಕಾಲದಲ್ಲಿ ಒಪ್ಪಂದವೇ ಇಲ್ಲವೆಂದು ಬ್ರಿಟಿಷ ಸರಕಾರದವರು ಆಲೋಚಿಸಿರಲಿಕ್ಕಿಲ್ಲವೆಂದು ನಾವು ತಿಳಿಯುತ್ತೇವೆ. ಏಕೆಂದರೆ ಈ ಹಾದಿಯಲ್ಲದೆ ಬೇರೆ ಹಾದಿಯಲ್ಲಿ ಹೋಗುವುದೆಂದರೆ ದೇಶದಲ್ಲಿ ನಿರಂಕುಶಾಧಿಕಾರ ಮಾಡುವುದೇ. ಇಂಥ ಆಡಳಿತದಿಂದ ವಿಷಮತೆ ಹೆಚ್ಚುವುದಲ್ಲದೆ, ಬ್ರಿಟನ ಭಾರತಗಳಲ್ಲಿ ಮಧುರ ಬಾಂಧವ್ಯವಾಗುವುದಿಲ್ಲ ಮತ್ತೆ 'ಒಡಂಬಡಿಕೆಯಾಗುವುವ ಆಶೆಯೆಲ್ಲವೂ ಬಯಲಾಗುವುದು.'

ಈ ಪ್ರಕಟಣೆಯು ಕೆಲವು ವಿಚಾರಗಳನ್ನು ಸ್ಪಷ್ಟಪಡಿಸುತ್ತಾ, ಸರ್ ಸಪ್ರುರವರು ಹೀಗೆಂದರು. 'ದೇಶದ ಅಂತರಿಕ ಆಡಳಿತದಲ್ಲಿ ಭಾರತಮಂತ್ರಿ ಕೈಹಾಕದಂತೆ ಮಾಡುವುದು ಸಾಧ್ಯವಿದೆ. ಪಾರ್ಲಿಮೆಂಟಿನವರು ವಸಾಹತ್ತು ಶಾಸನವನ್ನು ಮಂಜೂರುಮಾಡುವ ಮೊದಲು ವಸಾಹತು ಕಾನೂನಿನಲ್ಲಿ ಈ ಶರತ ಹಾಕಲ್ಪಟ್ಟಿತ್ತು. ಇದಕ್ಕಾಗಿ ಪಾರ್ಲಿಮೆಂಟಿನ ಯಾವುದೇ ಕಾನೂನಿನಲ್ಲಿಯೂ ತಿದ್ದುಪಡಿ ಮಾಡಬೇಕಾಗಿಲ್ಲ. ಯುದ್ಧಕಾಲದಲ್ಲಿ ಸಾರ್ವಭೌಮರ ಮೇಲೆ ಎಲ್ಲಾ ಜವಾಬ್ದಾರಿಯಿದೆ. ನನ್ನ ಅಭಿಪ್ರಾಯದಂತೆ ಇದರ ಅರ್ಥವೆಂದರೆ, ರಚಿತವಾಗುವ ಕೇಂದ್ರ ಸರಕಾರವು ಶಾಸನ ಮಂಡಳದ ಮತದಿಂದ ತಳ್ಳಿಹಾಕಲ್ಪಡತಕ್ಕದಲ್ಲವೆಂದು. ವೇವಲರ ಮಾರ್ಗವನ್ನು ಸುಗಮ ಮಾಡಿಕೊಡಬೇಕು. ಕೂಡಲೇ ಕಾರ್ಯಕ್ಕೆ ತೊಡಗಬೇಕು. ಅವರು ಬಂದಕೂಡಲೇ ವಿಧಾಯಕ ಕಾರ್ಯಕ್ಕೆ ಕೊಳ್ಳಲು ಅವರಿಗಾಗಬೇಕು. ಅವರು ಬರೀ ಸೈನಿಕರೆಂದು ಅವರ ಮೇಲೆ ನನಗೆ ದುರಭಿಪ್ರಾಯವಿಲ್ಲ. ರಾಜಕಾರಣಿಗಳೆಂದು ಹೇಳಿಸಿಕೊಳ್ಳುವವರಿಗಿಂತ ಮುತ್ಸದಿತನವುಳ್ಳ ಸೈನಿಕರನ್ನು ನಾನು ನೋಡಿದ್ದೇನೆ.'

ಡಾ. ಜಯಕರರು ಈ ಕುರಿತು ತಮ್ಮ ಅಭಿಪ್ರಾಯವನ್ನು ಈ ರೀತಿ ಹೇಳಿದರು:

'ಸಾರ್ವಜನಿಕರು ಒತ್ತಾಯ ಮಾಡದಿದ್ದರೆ ಕಾಂಗ್ರೆಸ್ ಮುಖಂಡರನ್ನು ಯುದ್ಧ ಮುಗಿವವರೆಗೆ ಸೆರೆಮನೆಯಲ್ಲಿಯೇ ಇಡುವಂತೆ ತೋರುತ್ತದೆ. ಹಾಗೆ ಮಾಡುವುದು ಅತ್ಯಂತ ಘೋರವಾದುದು. ಸರಕಾರದವರು ಅವರನ್ನು ವಿಚಾರಣೆಗಾದರೂ ಗುರಿಮಾಡಬೇಕು. ಹಾಗೆ ಮಾಡದಿದ್ದರೆ ಅವರನ್ನು ಬಿಡುಗಡೆ ಮಾಡದಿರುವುದರಲ್ಲಿ ನ್ಯಾಯವಿಲ್ಲ. ಈ ಜನರನ್ನು ಅನಿಯಮಿತ ಅವಧಿವರೆಗೆ ಸ್ಥಾನಬದ್ಧತೆಯಲ್ಲಿಟ್ಟರೆ ಎಷ್ಟೋ ಸಾಕ್ಷಿ ಆಧಾರಗಳೆಲ್ಲಾ ಮುಂದೆ ಸಿಗಲಾರವು. ಆದ್ದರಿಂದ ಇವರ ವಿಚಾರಣೆ ನಡೆಸಿರೆಂದು ಸರಕಾರಕ್ಕೆ ಒತ್ತಾಯ ಮಾಡಬೇಕಾಗಿದೆ. ಹಿಂದಿನ ಆಡಳಿತವು ಮಾಡಿದ ರಾಜಕೀಯ ಋಣಪರಿಹಾರಮಾಡಿ ಹೊಸ ಸರಕಾರ ಸ್ಥಾಪಿತವಾಗಬೇಕು. ಸರಕಾರ ಇದಕ್ಕಾಗಿ ಕೂಡಲೇ ಕೆಲಸಮಾಡಲು ತೊಡಗಬೇಕು.'

ವೃದ್ಧಿಯಿಂದ ಅಭಿವೃದ್ಧಿ.

ಗತ ೧೯೪೨ನೇ ವರ್ಷದಿಂದ ಚಾಲು ೧೯೪೩ನೇ ಪ್ರಾರಂಭದ ಮಾಸಗಳು ಬಹು ಅಪಾಯಗಳಿಂದಲೂ ಹಾಗೂ ಸುಯೋಗಗಳಿಂದಲೂ ತುಂಬಿ ತುಳುಕಿದ್ದವು. ಜಾಣತೆಯಿಂದ ವ್ಯವಸ್ಥೆ ಮಾಡಲ್ಪಟ್ಟ ಸಂಸ್ಥೆಗಳು ಈ ಅಪಾಯಗಳನು ತಪ್ಪಿ, ಸುಸಂದರ್ಭಗಳನ್ನು ಉಪಯೋಗಿಸಿ ಶೀವ್ರನೆ ಮುಂದುವರಿದವು.

೧೯೪೦, ೪೧ರಲ್ಲಿ **ಕೆನರಾ ಬೇಂಕು** ೬೦ ಲಕ್ಷ ಠೇವಣೆಗಳ ಮತ್ತು ಒಂದು ಕೋಟಿ ಸಾಂಪತ್ತಿಕ ಸ್ಥಿತಿಯಲ್ಲಿದ್ದು ಅಂದು ಸಹ ಅದು ವಿಸ್ತೃತ ಸ್ಥಿತಿಯ ಸಂಸ್ಥೆಯಾಗಿತ್ತು. ಇಂದು ಠೇವಣೆಗಳು ಇಮ್ಮಡಿಯಾಗಿವೆ. ಸಾಂಪತ್ತಿಕ ಸ್ಥಿತಿಯು ಎರಡುವರ್ರೆ ಕೋಟಿಗೆ ಮಿಕ್ಕಿದೆ. ಹಾಗೂ ತೆತ್ತ ಮೂಲಧನವು ನಾಲ್ಮಡಿಯಾಗಿದೆ.

ಜಾಣತನದ ವ್ಯವಸ್ಥೆಯ ಏರ್ಪಾಟಿನಿಂದಲೂ, ಆತ್ಮವಿಶ್ವಾಸದಿಂದಲೂ, ದೃಢಬುದ್ಧಿಯಿಂದಲೂ, ಯೋಗ್ಯ ಸೇವೆಯನ್ನು ಸಲ್ಲಿಸಿದರಿಂದಲೂ, ಇಂದಿನ ಈ ಪ್ರಗತಿಗೆ ಕಾರಣಭೂತರಾದ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರರಾಗಿ ಇನ್ನು ಮುಂದಕ್ಕೂ ಮಹತ್ವದ ಸೇವೆಯನ್ನು ಒಪ್ಪಿಸಲು ಸಮರ್ಥರಾಗಲು ನಾವು ಹಾರೈಸುವೆವು.

Canara Bank Limited.

ಕೆನರಾ ಬೇಂಕ್ ಲಿಮಿಟೆಡ್.

ಸ್ಥಾಪನೆ 1906.

ಇಂಡಿಯಾ ಮಿಲಿಟರಿ ಹೋಟೇಲ್

ಬಲ್ಮಠ ರಸ್ತೆ, ಸಿಟಿ ಬಸ್ ಗ್ಯಾರೇಜ್ ಸಮೀಪ, ಹಂಪನಕಟ್ಟೆ.

ಬನ್ನಿರಿ! 4-7-43ರಿಂದ ಅನುಭವ ಪಡೆಯಿರಿ!!

ಉತ್ತಮ ತರಗತಿಯ ಆನಂದ ನಿಲಯ ಇದೊಂದು ಸ್ವತಃ ಪರೀಕ್ಷಿಸಿರಿ!

ಕಾಫಿ ಮತ್ತು ಊಟವು ಸುಲಭ ದರ ಮತ್ತು ಉತ್ಕೃಷ್ಟ ರೀತಿಯಲ್ಲಿ ದೊರಕುವುದು.

India Military Hotel

Near City Bus Garage, Balmatta Road, Hampankatta.

Come! From 4-7-43 Try once!

Coffee and Meals can be had on Moderate Charges

Proprietor: Udipi N. S. Rao, MANGALORE.

ಸಮರಭೂಮಿಯ ಸಂಚಾರ

ಫೇಸಿಸಂ ಜನ್ಮದಾತನ ಕಿರೀಟ ಕಳಚಿ ಬಿತ್ತು!

ಹಿಟ್ಲರನ ಬಲಗೈ ಬಂಟನು ಪತನ ಹೊಂದಿದನು!

ಇಟಲಿ ಸರ್ವಾಧಿಕಾರಕ್ಕೆ ಮುಸಲನಿ ರಾಜಿನಾಮೆ!

ಜುಲೈ ೨೫! ಜಗತ್ತಿನ ಇತಿಹಾಸದಲ್ಲಿಯೇ ಒಂದು ಮಹತ್ವದ ದಿನ, ಆಶ್ಚರ್ಯಕರ ಘಟನೆಯೊಂದು ಆದುದು, ಇಟಲಿಯ ಸರ್ವಾಧಿಕಾರಿ ಮುಸಲನಿ ತನ್ನ ಅಧಿಕಾರಕ್ಕೆ ರಾಜಿನಾಮೆಯಿತ್ತುದು ಈ ದಿನ! ಅಕ್ಷ ಪಕ್ಷಗಳು, ಮಿತ್ರರಾಷ್ಟ್ರಗಳು ಮಸಗಿ ಹೋರಾಡುತ್ತಿರುವೀ ಜಗಭೀಷಣ ದ್ವಿತೀಯ ಮಹಾಯುದ್ಧದ ರಭಸದ ಕಾಲದಲ್ಲಿ ಅಕ್ಷಪಕ್ಷದ ಪ್ರಬಲ ಸರ್ವಾಧಿಕಾರಿಯೊಬ್ಬನು ಮುಸಲನಿ ರಾಜಿನಾಮೆಯಿತ್ತನೆಂದರೆ, ಅದೂ ಫೇಸಿಸ್ಟ್ ಸರ್ವಾಧಿಕಾರದ ಮೂಲ ಪುರುಷನೇ ಹೀಗೆ ಕಿರೀಟ ಕಳಚಿ ಕುಳಿತನೆಂದರೆ ಯಾರಿಗೆ ತಾನೇ ವಿಚಿತ್ರವೆನಿಸಲಿಕ್ಕಿಲ್ಲ? ಹಿಟ್ಲರ್ ಮುಸಲನಿ ಎಂದಿನಂತೆ ಸಂಯುಕ್ತ ಯುದ್ಧ ಕಾರ್ಯಕ್ರಮದ ಆಲೋಚನೆಗಾಗಿ ಭೇಟಿಯಾಗಿ ಇನ್ನೂ ಒಂದು ವಾರ ದಾಟಿರಲಿಲ್ಲ, ಅಷ್ಟರಲ್ಲೇ ಮುಸಲನಿ ತನ್ನ ಅಧಿಕಾರವನ್ನು ಕೆಳಗಿಡಬೇಕಾಗಿ ಬರಬಹುದೆಂದು ಯಾರು ತಾನೇ ಯೋಚಿಸಿದ್ದರು? ಇಂದಿನೀ ಮಹಾಯುದ್ಧವು ಎಂಥಾ ಆಶ್ಚರ್ಯಕರ ವ್ಯತ್ಯಾಸದಲ್ಲಿ ಪರಿವರ್ತನೆ ಹೊಂದುವುದೆಂಬುದಕ್ಕೆ ಇದೊಂದು ಪ್ರಬಲ ಸಾಕ್ಷಿಯಾಗಿದೆ

ಮುಸಲನಿಯಿಂದು ರಾಜಿನಾಮೆಯಿತ್ತಿದ್ದಾನೆ ಇಟಲಿಯ ಚಕ್ರವರ್ತಿ ಇಮಾನ್ಯುವೆಲ್ ಈ ರಾಜಿನಾಮೆಯನ್ನಂಗೀಕರಿಸಿ, ಮಾರ್ಶಲ್ ಬಡೋಗ್ಲಿಯನ್ನು ಸರ್ವಾಧಿಕಾರಿಯಾಗಿ ನೇಮಿಸಿದ್ದಾನೆ ಇನ್ನೂ ಕಾಳಗದ ಧೋರಣವೇನೋ ಹಿಂದಿನಂತೆಯೇ ಇದೆ ಇಟಲಿಯನ್ನರು ಶರಣಾಗುವತನಕ ಮಿತ್ರರು ಆಕ್ರಮಣವನ್ನು ಹಿಂದೆಗೆವುದಿಲ್ಲ ಚಕ್ರವರ್ತಿಗಳೂ ಹೊಸ ಸರ್ವಾಧಿಕಾರಿಯೂ ಜನರಿಗೆ, ಈ ಗಂಡಾಂತರ ಕಾಲದಲ್ಲಿ ತಮ್ಮ ಕರ್ತವ್ಯ ಪಾಲಿಸುವಂತೆ, ಒಂದಾಗಿರುವಂತೆ, ಶಿಸ್ತಿನಿಂದ ನಡೆಯುವಂತೆ, ರಾಷ್ಟ್ರದ ಗೌರವವುಳಿಸುವಂತೆ ಬಿನ್ನವಿಸಿಕೊಂಡಿದ್ದಾರೆ. ಇಟಲಿಯಲ್ಲೀಗ ಸೈನಿಕ ಶಾಸನ ಸ್ಥಾಪಿತವಾಗಿದೆ. ಸಂಜೆಯಿಂದ ಮುಂಜಾನೆ ವರೆಗೆ 'ಕರ್ಫ್ಯೂ' ಆಜ್ಞೆ ಇದೆ ಹಳೆ ಸರ್ವಾಧಿಕಾರಿ ಅಧಿಕಾರ ಕೆಳಗಿಟ್ಟು, ಹೊಸ ಸರ್ವಾಧಿಕಾರಿ ಬಂದಾಗ, ಹಳೆ ಆಡಳಿತ ಹೋಗಿ, ಹೊಸ ಆಡಳಿತ ಬಂದಾಗ, ಜನರಲ್ಲಿ ಗೊಂದಲ, ಸಂದೇಹ, ಪ್ರಕ್ಷೋಭೆಗಳುಂಟಾಗದಂತೆ, ಇಟಲಿಗೆ ಅದರಿಂದ ಅಪಾಯವೊದಗದಂತೆ ಈ ಎಚ್ಚರಿಕೆ ಕೈಕೊಳ್ಳಲಾಗಿದೆ

ಮುಸಲನಿಯ ಪತನದಿಂದ ಮಿತ್ರ ಪಕ್ಷದಲ್ಲಿ ಬಹಳ ಆನಂದವಾಗಿದೆ. ಆನಂದ ಆಗುವುದು ಸಹಜವೇ! ಏಕೆಂದರೆ ಹಿಟ್ಲರ್ ಮುಸಲನಿಗಳೆಂದರೆ ರಾವಣ ಮೈರಾವಣರಿದ್ದಂತೆ! ಅವರಲ್ಲಿ ಒಬ್ಬನ ಪತನವಾಯಿತೆಂದರೆ ಇನ್ನೊಬ್ಬನ ಸೊಂಟ ಮುರಿದಂತೆಯೇ. ಇಟಲಿಯಲ್ಲಿ ಫೇಸಿಸ್ಟ್ ಭೂತ ಮೊದಲು ಅವತಾರವಾದದ್ದು. ಮುಸಲನಿಯೇ ಆ ಭೂತವನ್ನು ಸೃಷ್ಟಿಸಿದ ಐಂದ್ರಜಾಲಿಕ ಇಟಲಿಯನ್ನು ಕಳೆದ ಇಪ್ಪತ್ತು ವರ್ಷಗಳಿಂದ ಫೇಸಿಸ್ಟ್ ಭೂತದ ತುಳಿತದಲ್ಲಿ ನರಳಿಸಿದಾತ, ಅಬಿಸೀನಿಯನ್ನು ಆಕ್ರಮಿಸಿ ಇಂದಿನೀ ದ್ವಿತೀಯ ಮಹಾಯುದ್ಧದ ರಣಭೇರಿ ಹೊಡೆದವ, ಆತನ ನಂತರ ಹಿಟ್ಲರ್ ಮೇಲೆ ಬಂದ, ಮುಸಲನಿ ಬಳಿಕ ಹಿಟ್ಲರನು ಫೇಸಿಸಮನ್ನು ಜರ್ಮನಿಯಲ್ಲಿ ಸ್ಥಾಪಿಸಿದ ಮುಸಲನಿಯನ್ನು ಅನುಸರಿಸಿ ಹಿಟ್ಲರ್ ಪೋಲೆಂಡಿಗೆ ಪೆಟ್ಟು ಹೊಡೆದ, ಹೀಗಾಗಿ ಯಾರು ಒಂದು ರೀತಿಯಿಂದ ಈ ಮಹಾಯುದ್ಧದ ನಾಂದೀ ಹಾಡಿದನೋ, ಯಾರು ಲೋಕಶತ್ರುವಾದ ಫೇಸಿಸ್ಟ್ ಪಿಶಾಚಿಗೆ ಜನ್ಮವಿತ್ತನೋ, ಯಾರು ಹಿಟ್ಲರನಿಗೂ ಈ ತತ್ವ ಬೋಧಿಸಿ ಗುರುವಾಗಿದ್ದನೋ, ಕೊನೆಗೆ ಯಾರು ಹಿಟ್ಲರನೊಡಗೂಡಿ ಜಗದ್ವಿನಾಶಕ್ಕೆ ಹೊರಟಿದ್ದನೋ, ಅಂಥಾ ಮುಸಲನಿಯಿಂದು ರಾಜಿನಾಮೆಯಿತ್ತದ್ದು ಅದವಾ ರಾಜಿನಾಮೆ ಕೊಡಬೇಕಾಗಿ ಬಂದದ್ದು, ಅದರಿಂದ ಪತನವಾದದ್ದು ಮಿತ್ರರಿಗೆಂದೇನು, ಸ್ವಾತಂತ್ರ್ಯಪ್ರಿಯ ಲೋಕಕ್ಕೆ ಯಾರಿಗೆ ತಾನೇ ಇದು ಆನಂದದಾಯಕವಾಗಲಿಕ್ಕಿಲ್ಲ?

ಅಧಿಕಾರ ತ್ಯಾಗ ಮಾಡಿದ ಮೇಲೆ ಮುಸಲಿನಿ ಎಲ್ಲಿರುವನೆಂದು ಇನ್ನೂ ತಿಳಿದಿಲ್ಲ ಮುಸಲನಿಯ ಹಾಗೂ ಫೇಸಿಸ್ಟ್ ಪಕ್ಷದ ಕಾರ್ಯದರ್ಶಿಗಳಾದ ಕಾರ್ಮೋಜಾ ಸ್ಕೋರ್ಜಾ ಹಾಗೂ ಖಾಡೀ ಆತನ ಮಂತ್ರಿಮಂಡಳದ ಜೀವಿತವಿಂದು ಗಂಡಾಂತರದಲ್ಲಿರುವುದೆಂದು ಸುದ್ದಿಯಿದೆ ಇಡೀ ಮಂತ್ರಿಮಂಡಳ ಸಹಿತ ಮುಸಲನಿ ಬಂಧನದಲ್ಲಿರುವನೆಂದೂ, ರೋಮಿನಿಂದ ಹೊರಗೆ ಅವರನ್ನು ಸ್ಥಳಾಂತರಿಸಲಾಗಿದೆಯೆಂದೂ, ಅವರನ್ನಿಟ್ಟ ಸ್ಥಳಕ್ಕೆ ಸೈನಿಕರ ಸರ್ಪಕಾವಲಿಡಲಾಗಿದೆಯೆಂದೂ ತಿಳಿಸಲಾಗಿದೆ ಇಟಲಿಯಲ್ಲಿ ಹೊಸ ಸರಕಾರವು ಸ್ಥಾಪಿಸಲ್ಪಟ್ಟಿದ್ದು, ಸದ್ಯಕ್ಕೆ ಅದರ ಕಚೇರಿಯು ಕ್ವಿರಿನಲ್ಲಿರುವದೆಂದೂ ಹೇಳಲಾಗಿದೆ ಮುಸಲಿನಿಯ ಬಂಧನದ ನಂತರ ಫೇಸಿಸ್ಟ್ ಪಕ್ಷದ ಉಲ್ಲೇಖ ಮಾಯವಾಗುತ್ತಿದೆ ರೋಮ್ ರೇಡಿಯೋದಲ್ಲಿ, ಮುಖ್ಯ ಕಾರ್ಯಕ್ರಮಕ್ಕಿಂತ ಮೊದಲು ಫೇಸಿಸ್ಟ್ ಗೀತೆ ಹಾಡುತ್ತಿದ್ದುದರ ಬದಲು ಈಗ ರಾಷ್ಟ್ರಗೀತೆ ಹೇಳಲಾಗುತ್ತದೆ.

ಮುಸಲಿನಿಯ ರಾಜಿನಾಮೆಯ ಕಾರಣಗಳನ್ನು 'ನ್ಯೂಯಾರ್ಕ್ ಟೈಮ್ಸ್' ಪತ್ರಿಕೆಯ ಬರ್ನ್ ಸುದ್ದಿಗಾರನು ಹೀಗೆ ತಿಳಿಸುತ್ತಾನೆ: 'ಈ ಬಿಕ್ಕಟ್ಟು ಆದಿತ್ಯವಾರ ಉಂಟಾಯಿತು. ಸಂರಕ್ಷಣೆ ಮಂತ್ರಿಗಳ ಸಭೆಯಲ್ಲಿ ಮುಸಲನಿ ಹಿಟ್ಲರನಿತ್ತ ಸೂಚನೆ ತಿಳಿಸಿದ ಈ ಸೂಚನೆಯಂತೆ ಇಟಲಿಯಾನಡು ಬಹಳ ಬಲಿದಾನಮಾಡಬೇಕಾಗಿತ್ತು. ಆದ್ದರಿಂದ ಈ ಸೂಚನೆಗಳನ್ನು ಯುದ್ಧ ವಿಮಾನ ನೌಕಾ ಖಾತೆಯ ಮಂತ್ರಿಗಳು ನಿರಾಕರಿಸಿದರು. ಕೊನೆಗೆ ಇದನ್ನು ಚಕ್ರವರ್ತಿಗಳಿಗೆ ತಿಳಿಸಿದಾಗ ಅವರೂ ನಿರಾಕರಿಸಿದರು ಹಾಗಾಗಲು ನಿರುಪಾಯನಾಗಿ ಮುಸಲನಿ ರಾಜಿನಾಮೆ ಕೊಡಬೇಕಾಯಿತು ಮುಸಲಿನಿ ಜರ್ಮನಿಗೆ ಹೋಗಲು ಪ್ರಯತ್ನಿಸುತ್ತಿದ್ದಾಗ ಆತನನ್ನು ಬಂಧಿಸಿ ಸೆರೆಮನೆಯಲ್ಲಿಟ್ಟರು' ಇದು ಒಂದು ಸುದ್ದಿ ನಿಜವಾದ ಕಾರಣ, ಸತ್ಯ ಸಂಗತಿಗಳು ಮುಂದೆ ಗೊತ್ತಾಗಬಹುದು ಹಿಟ್ಲರ್ ಮುಸಲನಿಗಳು ಮೊನ್ನೆ ಮೊನ್ನೆ ಮಂತ್ರಾಲೋಚನೆ ಮಾಡಿದ್ದು ಬೇಕುಬೇಕೆಂದೇ ಈ ಚಾಣಕ್ಯ ತಂತ್ರ ನಡೆಸಿದರೇ ಎಂದೂ ಕೆಲವರು ಊಹಿಸುತ್ತಾರೆ!

ಮುಸಲನಿಯ ಪತನದ ವಾರ್ತೆ ಕೇಳಿ ಹಿಟ್ಲರನಿಗೆ ಸಿಡಿಲು ಬಡಿದಂತಾಗಿರಬಹುದು ಅದಾಗಿಯೇ ಹಿಟ್ಲರ್ ಗಡಿಬಿಡಿಗೊಂಡು ರಶ್ಯದ ರಣಭೂಮಿಯನ್ನು ಬಿಟ್ಟು ಬರ್ಲಿನಿಗೆ ಬಂದಿದ್ದಾನೆಂದು ಲಂಡನಿನ ಸುದ್ದಿ ಈ ಸುದ್ದಿ ನಿಜವಾದರೆ ಮುಸಲನಿ ರಾಜಿನಾಮೆ ಹಿಟ್ಲರನಿಗೆ ಗೊತ್ತಿಲ್ಲವೆಂದಾಗುತ್ತದೆ. ಮಾರ್ಶಲ್ ಬಡೋಗ್ಲಿ ಹೊಸ ಸರಕಾರವನ್ನು ಸ್ಥಾಪಿಸಿದ ಬಳಿಕ ಮುಂದಿನ ಧೋರಣೆಯೇನೆಂದು ಊಹಾಪೋಹೆಗಳುಂಟು ಈ ಬದಲಾವಣೆ ಕೇವಲ ಒಳಾಡಳಿತಕ್ಕೆ ಸಂಬಂಧಿಸಿದ್ದೆಂದೂ ಯುದ್ಧನೀತಿ ಮೊದಲಿನಂತೆಯೇ ಇರುವುದೆಂದೂ ಹೇಳಲಾಗುತ್ತದೆ ಜಗದ್ಗುರು ಪೋಪರು ಹೊಸ ಇಟಲಿಯನ್ ಸರಕಾರವು ಮಿತ್ರರಾಷ್ಟ್ರಗಳೊಡನೆ ರಾಜಿಮಾಡಿಕೊಳ್ಳುವಂತೆ ಪ್ರಯತ್ನಿಸುತ್ತಿರುವರೆಂದೂ ಒಂದು ಸುದ್ದಿಯಿದೆ ಈ ಸಂದರ್ಭದಲ್ಲಿ ಚರ್ಚಿಲರು ಒಂದು ಹೇಳಿಕೆ ಕೊಡುತ್ತಾ ಇದುವರೆಗೆ ಇಟಲಿಯು ಸಂಧಾನದ ಮಾತುಕತೆ ತೆಗೆದಿಲ್ಲವೆಂದೂ, ಜರ್ಮನಿಯ ದಾರಿ ಹಿಡಿದರೆ ಇಟಲಿಯನ್ನು ಧ್ವಂಸಪಡಿಸಿ ಗಾಯಗೊಳಿಸಿ ಸಂಪೂರ್ಣ ಮಾನಭಂಗಮಾಡಿ ಬಿಡುವೆವೆಂದೂ ತಿಳಿಸಿದ್ದಾರೆ. ಇಟಲಿಯ ಮುಂದಿನ ವಿಚಾರಗಳು ಗಮನಾರ್ಹವಿವೆ

ಸಿಸಿಲಿಯಲ್ಲಿ ಸಂಗ್ರಾಮ ಸಾಗುತ್ತಲೇ ಇದೆ ಮುಸಲನಿ ರಾಜಿನಾಮೆಯಿತ್ತ ಕಾರಣದಿಂದ ಸಿಸಿಲಿ ಯುದ್ಧಕ್ಕೆ ಏನೂ ಬಾಧೆ ತಟ್ಟಿಲ್ಲ ಸಾಲದ್ದಕ್ಕೆ ಅಲ್ಲಿ ಅಕ್ಷಪಕ್ಷದವರು ಪ್ರಬಲರಾಗಿಯೇ ಹೋರಾಡುತ್ತಿರುವರು ಕೆಟೆನಿಯಕ್ಕಾಗಿ ಕಾಳಗ ಕಳೆದ ಕೆಲವು ದಿನಗಳಿಂದ ರಭಸದಲ್ಲಿ ಸಾಗುತ್ತಿರುವುದು. ಕೆಟೆನಿಯಾ ಕಾಳಗದಲ್ಲಿ ಸದ್ಯ ವೈರಿಗಳಿಗೆ ಅನುಕೂಲ ಹೆಚ್ಚಿರುವುದು. ಸೈನ್ಯಗಳು ಎಟ್ನಾ ವ್ಯೂಹದ ಉತ್ತರ ಮತ್ತು ಮಧ್ಯ ಭಾಗದ ಕಡೆಗೆ ಮುನ್ನುಗ್ಗುತ್ತಿದ್ದರೂ ದಕ್ಷಿಣದಲ್ಲಿ ಪರಿಸ್ಥಿತಿ ಮೊದಲಿನಂತೆಯೇ ಇದೆ. ಎಂಟನೇ ಸೈನ್ಯಕ್ಕೆ ಮುನ್ನುಗ್ಗಲು ಇದುವರೆಗೂ ಸಾಧ್ಯವಾಗಲಿಲ್ಲ ಕೆಟಾನಿಯದಲ್ಲಿ ಮಿತ್ರರನ್ನು ಎದುರಿಸಬೇಕೆಂಬ ದೃಢ ನಿಶ್ಚಯದಿಂದ ಜರ್ಮನರು ಅಲ್ಲಿ ಭದ್ರವಾದ ವ್ಯೂಹವನ್ನು ರಚಿಸಿದ್ದಾರೆ. ಅಲ್ಲದೆ ಅಲ್ಲಿ ಮಿತ್ರರನ್ನು ತಡೆದರೆ ಇತರ ಎಲ್ಲಾ ಸಂರಕ್ಷಣಾ ಕಾರ್ಯಗಳನ್ನೂ ನೆರವೇರಿಸಿ ಬಿಡಬಹುದೆಂದು ಅವರ ಅಭಿಪ್ರಾಯವಿದೆ ಮಿತ್ರರಿಗೆ ಅಪಾರ ಹಾನಿಯನ್ನುಂಟುಮಾಡಿದರೆ ಅವರು ಮುನ್ನುಗ್ಗಲಾರರೆಂದೂ ಜರ್ಮನರು ತಿಳಿದಿರುವದು ಕೆಟನಿಯ ಮೈದಾನು ವೈರಿಗಳಿಗೆ ಅನುಕೂಲವೂ ಆಗಿದೆ ಅದರ ಸುತ್ತುಮುತ್ತು ಅವರಿಗೆ ಬೇಕಾದೆಲ್ಲ ಅನುಕೂಲತೆಗಳಿವೆ ಅವರು ಇರುವ ಪ್ರದೇಶವೂ ಎತ್ತರದಲ್ಲಿರುವುದರಿಂದ ಮಿತ್ರ ವ್ಯೂಹದಲ್ಲಿ ನಡೆಯುತ್ತಿರುವುದನ್ನೆಲ್ಲಾ ಅವರು ನೋಡುತ್ತಿದ್ದಾರೆ

ಸದ್ಯಕ್ಕೆ ಈಶಾನ್ಯ ಸಿಸಿಲಿಯಲ್ಲಿ ಭಾರೀ ಕಾಳಗ ನಡೆಯುತ್ತಿದೆ ಉತ್ತರದಲ್ಲಿ ಅಮೆರಿಕನರು, ಮಧ್ಯದಲ್ಲಿ ಕೆನೆಡಿಯನರು, ದಕ್ಷಿಣದಲ್ಲಿ ಬ್ರಿಟಿಷ್ ಸೈನಿಕರು ಮುನ್ನುಗ್ಗುತ್ತಿದ್ದಾರೆ ಪಾಲೆರ್ಮೊದಿಂದ ಮೆಸ್ಸಿನಾ ಕಡೆ ಹೊರಟ ಅಮೆರಿಕನ್ ಸೈನಿಕರು ಟರ್ಮಿನಿ ಎಂಬ ಊರನ್ನು ಆಕ್ರಮಿಸಿಕೊಂಡರು. ಈ ವ್ಯೂಹದಲ್ಲಿ ಸಿಕ್ಕಿಬಿದ್ದಿರುವ ಜರ್ಮನ್ ಮತ್ತು ಇಟಲಿಯನ್ ಸೈನಿಕರನ್ನು ಸುತ್ತುಗಟ್ಟಲು ಮಿತ್ರರು ಸಾಹಸಮಾಡುತ್ತಿದ್ದಾರೆ ವೈರಿಗಳ ಉಗ್ರ ಪ್ರತಿಭಟನೆಯನ್ನೆದುರಿಸಿ ಮಿತ್ರರು ಎಟ್ನಾ ವ್ಯೂಹದ ಕಡೆಗೆ ಮುಂದರಿಯುತ್ತಿರುವರು ಈ ವ್ಯೂಹದಲ್ಲಿ ವೈರಿ ಶಕ್ತಿ ದುರ್ಬಲವಾಗಿದ್ದು ಜರ್ಮನ್ ಸೇನೆ ಗಂಡಾಂತರದಲ್ಲಿದೆ ಅಮೆರಿಕನ್ ಸೈನ್ಯವು ಮೆಸ್ಸಿನಾ ಕಡೆಗೆ ಮುಂದುವರಿದರೆ ವೈರಿಗಳು ಸಂಪೂರ್ಣ ಸುತ್ತುಗಟ್ಟಲ್ಪಟ್ಟಂತಾಗುವರು ಪಶ್ಚಿಮ ಸಿಸಿಲಿಯಲ್ಲಿ ಮಿತ್ರರು ಒಂದೊಂದೇ ಸ್ಥಳ ಆಕ್ರಮಿಸಿಕೊಳ್ಳುತ್ತಿದ್ದಾರೆ

ಬ್ರಿಟಿಷ್ ವಿಮಾನಗಳು ಜರ್ಮನಿಯ ಹ್ಯಾಂಬರ್ಗಿನ ಮೇಲೆ ಧಾಳಿಯಿಟ್ಟವು ನಾಲ್ಕು ದೊಡ್ಡ ಕಾರ್ಖಾನೆಗಳು ಈ ದಾಳಿಯಿಂದ ಧ್ವಂಸವಾದುವೆಂದು ಹೇಳಲಾಗಿದೆ ಇದೇ ಸಮಯದಲ್ಲಿ ಇನ್ನು ಕೆಲವು ವಿಮಾನಗಳು ಪಶ್ಚಿಮ ಮತ್ತು ವಾಯುವ್ಯ ಜರ್ಮನಿಯ ಮೇಲೂ ಬಾಂಬುಗಳನ್ನೊಗೆದಿವೆ ಉತ್ತರ ಆಫ್ರಿಕದಿಂದ ಕೆಲವು ವಿಮಾನಗಳು ಹೋಗಿ, ಇಟಲಿಯ ಕರಾವಳಿಯಲ್ಲಿರುವ ಲೆಗ್ ಹಾರ್ನ್ ಬಂದರದ ಮೇಲೆ ಬಾಂಬು ಸುರಿಸಿವೆ. ಓರೆಲ್ ಕ್ಷೇತ್ರದ ಉತ್ತರದಲ್ಲಿರುವ ಜರ್ಮನ್ ಸೇನಾವ್ಯೂಹವನ್ನು ರಶ್ಯನರು ಭೇದಿಸಿರುವರು. ಓಕಾ ನದಿಯ ಪಶ್ಚಿಮ ಕಿನಾರೆಯಲ್ಲಿರುವ ಆಯಕಟ್ಟಿನ ಸ್ಥಳಗಳು ರಶ್ಯನರ ವಶ ಬಂದಿವೆ. ಆರ್ಕ್ಟಿಕ್‌ನಲ್ಲಿರುವ ಫಿನ್ನರ ರಕ್ಷಣಾ ಕ್ಷೇತ್ರವನ್ನು ರಶ್ಯನರು ಭೇದಿಸಿದರು..

ಸ್ವದೇಶಾಭಿಮಾನಿ

ತಾರೀಕು 30—7—1943

ಮುಸಲನಿ ಪತನ

ಇಟಲಿಯ ಸರ್ವಾಧಿಕಾರಿ ಮುಸಲನಿ ಇಂದು ರಾಜಿನಾಮೆಯಿತ್ತಿದ್ದಾನೆ. ಕಳೆದ ಇಪ್ಪತ್ತು ವರ್ಷಗಳಿಂದ ಇಟಲಿಯನ್ನು ಏಕತ್ರಂತ್ರಾಡಳಿತದಿಂದ ಪೀಡಿಸಿದ ಫೇಸಿಸ್ಟ್ ದೊರೆಯಿಂದು ಕಿರೀಟ ಕಳಚಿ ಕುಳಿತಿದ್ದಾನೆ! ಫೇಸಿಸ್ಟ್ ಶಕ್ತಿಯೆದುರು ಮಿತ್ರರಾಷ್ಟ್ರಗಳು ಜೀವನ ಮರಣಗಳ ಸಂಗ್ರಾಮ ಹೂಡಿರುವೀ ಕಾಲದಲ್ಲಿ, ಫೇಸಿಸ್ಟ್ ತತ್ವದ ಜನ್ಮದಾತನೇ, ಹಿಟ್ಲರನಿಗೆ ಒಂದು ರೀತಿಯಿಂದ ಗುರುವೇ ಆಗಿದ್ದ ಮುಸಲನಿ ಇಟಲಿಯ ಸರ್ವಾಧಿಕಾರ ಪಟ್ಟಕ್ಕೆ ರಾಜಿನಾಮೆಯಿತ್ತದ್ದು ಅಥವಾ ರಾಜಿನಾಮೆ ಕೊಡಬೇಕಾಗಿ ಬಂಧದ್ದು ಅತ್ಯಂತ ಆಶ್ಚರ್ಯಕರವಾದ ಘಟನೆಯಾಗಿದೆ. ಅಖಿಲ ಪ್ರಪಂಚವೇ ಮುಸಲನಿಯ ರಾಜಿನಾಮೆಯನ್ನು ಒಂದು ಮಹತ್ವದ ಘಟನೆಯೆಂದು ತಿಳಿದಿದೆ.

ಮುಸಲನಿ ಫೇಸಿಸ್ಟ್ ಭೂಪತಿ; ಫೇಸಿಸಮ್ ತತ್ವ ಆತನಿಂದಲೇ ಹುಟ್ಟಿತು; ಅಂಥವನ ಸೋಲು ಫೇಸಿಸಮಿನ ಸೋಲು ಎಂದು ಮೇಲಿಂದ ಮೇಲೆ ವಿಚಾರಿಸಿದರೆ ಸಣ್ಣ ಶಿಶುವಿಗಾದರೂ ಹೊಳೆದೀತು. ಅಕ್ಷರಾಷ್ಟ್ರಗಳ ಸಂಕೋಲೆಯಲ್ಲಿ ಪ್ರಬಲನಾಗಿದ್ದ ಮುಸಲನಿಯಿಂದು ಅಧಿಕಾರ ಹೀನನಾಗಿರುವುದು ಹಿಟ್ಲರನ ಅಪಜಯವೆಂದು ಯಾವನಿಗಾದರೂ ಅನಿಸದೆ ಇರದು. ಅಬಿಸೀನಿಯದ ಆಕ್ರಮಣವನ್ನು ಕೈಕೊಂಡು ದ್ವಿತೀಯ ಮಹಾಯುದ್ಧದ ರಣಭೇರಿ ಹೊಡೆದ, ಇದರಿಂದಾಗಿ ಇಂದಿನೀ ಮಹಾಯುದ್ಧವನ್ನು ಪ್ರಾರಂಭಿಸಿದವನೇ ಆದ ಮುಸಲನಿಯಿಂದು ಕಿರೀಟ ಕಳಚಿ ಕುಳಿತದ್ದು ಅಕ್ಷಪಕ್ಷಗಳ ಅಪಜಯದ ಸೂಚನೆಯೆಂದು ತಿಳಿವುದರಲ್ಲಿ ಯಥಾರ್ಥತೆಯಿದೆ. ಆದಾಗಿಯೇ ಮಿತ್ರಪಕ್ಷದಲ್ಲಿ ಮುಸಲನಿಯ ರಾಜಿನಾಮೆ ಅತ್ಯಂತ ಆನಂದಕ್ಕೆ ಕಾರಣವಾಗಿದೆ.

ಆದರೆ ರಾಜನೀತಿ ವಕ್ರನೀತಿ; ಚಾಣಕ್ಯನೀತಿಯೂ ರಾಜಕೀಯದಲ್ಲಿ ಇದ್ದೇ ಇದೆ. ಅಂತೆಯೇ ಮುಸಲನಿ ರಾಜಿನಾಮೆ ಕೊಟ್ಟದ್ದರಲ್ಲಿ ಏನಾದರೂ ಕುಟಿಲ ನೀತಿಯಿರಬಹುದೇ ಎಂದು ಹಲವರು ಯೋಚಿಸುತ್ತಿದ್ದಾರೆ. ಮೊನ್ನೆ ಮೊನ್ನೆ ಹಿಟ್ಲರನೊಡನೆ ರಾಜಕೀಯ ಮಾತುಕತೆ ಮಾಡಿ ಬಂದವನು, ಹಿಟ್ಲರನು ಸೂಚಿಸಿದ ಉಪಾಯದಂತೆಯೇ ಹೀಗೆ ಪ್ರದರ್ಶಕವಾಗಿ ರಾಜಿನಾಮೆಯಿತ್ತು, ಏನಾದರೂ ಒಳಸಂಚು ಮಾಡಿರಬಹುದೇ ಎಂದು ಊಹಿಸುವವರೂ ಕೆಲವರಿಲ್ಲದಿಲ್ಲ. ಮುಸಲನಿ ರಾಜಿನಾಮೆಯಿತ್ತರೂ ಇಟಲಿಯ ರಾಜನೀತಿಯಲ್ಲಿ ಫೇಸಿಸಂ ಅಳಿಯಲಾರದೆಂದೂ, ಫೇಸಿಸಮ್ಮನ್ನು ಗರ್ಭದಲ್ಲಿಟ್ಟುಕೊಂಡ ಇಟಲಿಯೊಡನೆ ಮಿತ್ರರಾಷ್ಟ್ರಗಳು ರಾಜಿಮಾಡಿಕೊಂಡರೆ ಅದರಷ್ಟು ಗಂಡಾಂತರ ಬೇರೊಂದಿಲ್ಲವೆಂದೂ ಕೆಲವರು ಯೋಚಿಸುತ್ತಾರೆ. ಇಟಲಿಯು ಶರಣಾದರೆ, ಆ ಸೋಲಿನಿಂದ ಹಿಗ್ಗಿದ ಮಿತ್ರರು, ರಶ್ಯದ ಕಡೆಗೆ ಗಮನಕೊಡುವುದನ್ನು ಕಡಿಮೆಮಾಡುವರೆಂದೂ, ಹಾಗೆ ಮಾಡಿದರೆ ರಶ್ಯ ಮತ್ತು ಇತರ ಮಿತ್ರರಾಷ್ಟ್ರಗಳೊಳಗೆ ಒಡಕೊಂಟಾಗುವುದೆಂದೂ ಇದಕ್ಕಾಗಿ ಹಿಟ್ಲರನು ಈ ಒಳಸಂಚು ಮಾಡಿಸಿರಬಹುದೆಂದೂ ಇನ್ನೊಂದು ತರ್ಕವಿದೆ.

ಹೇಗಿದ್ದರೂ ಸದ್ಯ ಸಂಧಾನದ ಮಾತುಕತೆ ಬಂದಿಲ್ಲ. ಇಟಲಿಯ ಯುದ್ಧನೀತಿ ಹಿಂದಿನಂತೆಯೇ ಇದೆ. ಒಳಾಡಳಿತದಲ್ಲಿ ಮಾತ್ರ ಈ ಭೇದವಾಗಿದೆ. ಬ್ರಿಟಿನಿನಲ್ಲಿ ಈ ಯುದ್ಧಕಾಲದಲ್ಲಿಯೇ ಒಂದು ಮಹತ್ವದ ಪರಿವರ್ತನೆಯಾದದ್ದನ್ನು ನಾವು ನೋಡಿದ್ದೇವೆ. ಚೆಂಬರ್ಲಿನರು ರಾಜಿನಾಮೆಯಿತ್ತು ಚರ್ಚಿಲರು ಅಧಿಕಾರ ಸ್ವೀಕರಿಸಿದರು. ಆದರಿಂದ ಬ್ರಿಟನಿನ ರಾಜನೀತಿ ಬದಲಾಗಲಿಲ್ಲ. ಯುದ್ಧ ಸಾಗಿಸಲು ಚೆಂಬರ್ಲಿನರಿಗಿಂತ ಚರ್ಚಿಲ್ ಸಮರ್ಥರೆಂದು ಈ ಬದಲಾವಣೆ ಆಯಿತು. ಇಟಲಿಯಲ್ಲಾದರೂ ಈ ತರದ ಬದಲಾವಣೆ ಆಗಿದ್ದರೂ ಇರಬಹುದು. ಯುದ್ಧ ಸಾಗಿಸಲು ಮುಸಲನಿಗಿಂತ ಬಡೋಗ್ಲಿ ಸಮರ್ಥನೆಂದು ಅಲ್ಲಿನ ಜನ ಭಾವಿಸಿ ಈ ಬದಲಾವಣೆ ಮಾಡಲು ಒತ್ತಾಯ ಮಾಡಿದ್ದರೂ ಇರಬಹುದು. ಹೀಗಾದರೆ ಇದರಿಂದ ಮಿತ್ರರು ಆನಂದಪಡಬೇಕಾಗಿಲ್ಲ; ಇದರಿಂದ ಇಟಲಿಯಲ್ಲಿ ಫೇಸಿಸಂ ನಿರ್ನಾಮವಾದಂತೆಯೂ ಆಗಲಿಲ್ಲ.

ಅಂತೂ ಭವಿಷ್ಯತ್ತಿನ ವಿಷಯ ಈಗ ಹೇಳುವುದು ಸುಲಭವಲ್ಲ. ಮುಸಲನಿಯ ರಾಜಿನಾಮೆ ಬಹಳ ಮಹತ್ವದ ವಿಷಯವೆಂಬುದರಲ್ಲಿ ಸಂಶಯವಿಲ್ಲ. ಜಗತ್ತೇ ಈ ಮಹತ್ವದ ಕಡೆಗೆ ಈಗ ಕಣ್ಣರಳಿಸಿ ನೋಡುತ್ತದೆ. ಮುಸಲನಿ ರಾಜಿನಾಮೆಯಿಂದ ಈ ಮಹಾಯುದ್ಧದ ಗತಿ ಹೇಗೆ ತಿರುಗುವುದೋ ಎಂಬ ಬಗ್ಗೆ ಎಲ್ಲರೂ ಕುತೂಹಲದಿಂದ ನಿರೀಕ್ಷಿಸುತ್ತಿದ್ದಾರೆ.



ಸ್ವದೇಶ ಸಮಾಚಾರ

ಜಿನ್ನರಿಗೆ ಚೂರಿ ಹಾಕಿದರು!

ಮುಸಲ್ಮಾನನೊಬ್ಬನು!

ಸ್ವಲ್ಪ ಗಾಯ ಮಾತ್ರ

ಮುಂಬಯಿಯಲ್ಲಿ ಜಿನ್ನರನ್ನು ಸಂದರ್ಶಿಸಲು ಬಂದ, ಓರ್ವ ಮುಸಲ್ಮಾನನು ಜಿನ್ನರಿಗೆ ಚೂರಿಹಾಕಿದನು; ಅವರ ಕೈ ಮತ್ತು ಗಲ್ಲಗಳಿಗೆ ಸ್ವಲ್ಪ ಗಾಯ ಮಾತ್ರವಾಗಿದೆ. ಆತನನ್ನು ಪೋಲೀಸರು ಬಂಧಿಸಿದುವರು. ಗಾಯಗೊಳಿಸಿದವನು ಆ ದಿನ ಮುಂಜಾನೆ ಬಂದು ಜಿನ್ನರ ಭೇಟಿ ಅಪೇಕ್ಷಿಸಿದನು; ಸಮಯ ಗೊತ್ತು ಮಾಡದೆ ನೋಡುವುದಾಗುವುದಿಲ್ಲವೆಂದು ಜಿನ್ನರ ಕಾರ್ಯದರ್ಶಿ ತಿಳಿಸಲು, ಅವರೊಳಗೆ ಗುದ್ದಾಟ ನಡೆಯಿತು. ಆಗ ಜಿನ್ನರು ಮಧ್ಯಸ್ತಿಕೆಗೆ ಬರಲು ಅವರ ಕುತ್ತಿಗೆ ಮೇಲೆ ಇರಿಯಲು ಪ್ರಯತ್ನಿಸಿದನು; ಜಿನ್ನರು ಅವನ ಕೈಹಿಡಿದು ಇರಿತ ತಪ್ಪಿಸಿಕೊಂಡರು. ಆಗ ಸ್ವಲ್ಪ ಗಾಯ ಮಾತ್ರ ಆಯಿತು. ಜಿನ್ನರು ಈ ಕುರಿತು ಒಂದು ಹೇಳಿಕೆ ಕೊಡುತ್ತಾ, ನನ್ನ ಮೇಲೆ ಈ ಆಕ್ರಮಣವು ಪೂರ್ವ ಯೋಜನೆಯಂತೆ ಮಾಡಲಾಗಿದ್ದರೂ ಅದು ದೇವರ ದಯೆಯಿಂದ ತಪ್ಪಿತು. ಮುಸಲ್ಮಾನರೆಲ್ಲ ಶಾಂತರಾಗಿರಬೇಕು— ಮುಸಲ್ಮಾನನೊಬ್ಬನು ನನ್ನ ಮೇಲೆ ಈ ರೀತಿ ಆಕ್ರಮಿಸಿ ಬಂದದ್ದು ನನಗೆ ವಿಷಾದಕರವಿದೆ ಎಂದಿರುವರು. ಗಾಯಗೊಳಿಸಿದವನ ಹೆಸರು ಮಹಮ್ಮದ್ ರಫೀಕನೆಂದು. ಆತನು ಕಾಕ್ಸಾರ ಪಂಗಡಕ್ಕೆ ಸೇರಿದವನೆಂದು ಹೇಳಲಾಗಿದೆ. ಆದರೆ ಮುಂಬಯಿ ಕಾಕ್ಸಾರ ಮುಖಂಡರು ಈ ಕೃತ್ಯವನ್ನು ನಿಷೇಧಿಸಿ ಆತನು ಕಾಕ್ಸಾರನೆಂಬುದಾಗಿ ತಾವು ನಂಬುವುದಿಲ್ಲವೆಂದು ತಿಳಿಸಿದ್ದಾರೆ.

ಗಾಂಧಿಜಿ ಪತ್ರದ ವಿಚಾರ ಆಲೋಚನೆ?

ಮುಂಬಯಿ ಗವರ್ನರ್ ಸರ್ ಜಾನ್ ಕೊಲ್ವಿಲ್ಲೆಯವರು ಹೊಸ ಡಿಲ್ಲಿಗೆ ಬಂದಿರುವರು. ವೈಸರಾಯರೊಡನೆ ಅವರು ಮಹತ್ವದ ಮಾತುಕತೆಗಳನ್ನಾಡುವರೆಂದು ತಿಳಿದಿದೆ. ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸದಸ್ಯರನ್ನು ಭೇಟಿಯಾಗಲು ಗಾಂಧಿಜಿ ಅಪೇಕ್ಷಿಸಿದ ವಿಚಾರ ಮಾತುಕತೆ ನಡೆಸಲು ಗವರ್ನರರು ಬಂದಿರಬಹುದೆಂದು ಊಹಿಸಲಾಗಿದೆ.

ಅಣೆ–ಗಾಂಧಿ ಭೇಟಿ

ಸಿಲೋನಿಗೆ ಹೊರಡುವ ಮುನ್ನ ಅಣೆಯವರು ಗಾಂಧಿಜಿಯವರ ಭೇಟಿಯಾಗಬಹುದೆಂದು ಒಂದು ಸುದ್ದಿಯಿದೆ.

ಮೆನನರ ವಕೀಲಿ ರದ್ದು

ಸಂರಕ್ಷಣ ಕಾಯಿದೆಯನ್ವಯ ಶಿಕ್ಷೆಯಾದ ಬಗ್ಗೆ ಶ್ರೀ ಪಿ. ಕೆ. ವಿ. ಮೆನನರ ವಕೀಲಿಯನ್ನು ಮದ್ರಾಸು ಹೈಕೋರ್ಟಿನವರು ರದ್ದು ಮಾಡಿದ್ದಾರೆ.

ಕೇಂದ್ರ ಎಸೆಂಬ್ಲಿ ಸಭೆ

ತಾ. ೨೬ರಂದು ಹೊಸ ಡಿಲ್ಲಿಯಲ್ಲಿ ಪ್ರಾರಂಭವಾಗಿದೆ. ಪ್ರಶ್ನೋತ್ತರಗಳಲ್ಲಿ ಎಪ್ರಿಲ್ ೬ರಿಂದ ಜೂನ್ ೨೬ರ ವರೆಗೆ ವೈರಿಗಳು ಹಿಂದುಸ್ತಾನದ ಮೇಲೆ ೭ ಸಾರಿ, ಸಂಸ್ಥಾನಗಳ ಮೇಲೆ ೩ ಸಾರಿ ಧಾಳಿ ಮಾಡಿದರೆಂದೂ, ಆಗ್ನೇಯ ಬಂಗಾಳದ ಮಿಲಿಟರಿ ಮೇಲೆ ಧಾಳಿ ಹೆಚ್ಚಾಗಿ ನಡೆಯಿತೆಂದೂ ೭೩ ಜನ ಗಾಯಗೊಂಡು ೩೮ ಜನ ಮರಣಹೊಂದಿದರೆಂದೂ ತಿಳಿಯಿತು. ಇದುವರೆಗೆ ೧೨೭೦ ಭಾರತೀಯರು ಜಪಾನರ ಯುದ್ಧ ಕೈದಿಗಳಿದ್ದಾರೆಂದೂ ೬೮೪೯ ಭಾರತೀಯರ ಪತ್ತೆಯಿಲ್ಲವೆಂದೂ, ಅವರಲ್ಲಿ ಬಹು ಸಂಖ್ಯಾಕರು ಜಪಾನ್ ಕೈದಿಗಳಾಗಿರಬೇಕೆಂದೂ ಹೇಳಲಾಯಿತು.

೧೧೭೧೭ ಸ್ಥಾನಬದ್ಧರು

ಜೂನ್ ೧ನೇ ತಾರೀಕಿನ ವರೆಗೆ ೧೧೭೧೭ ಮಂದಿ ಸ್ಥಾನಬದ್ಧರಾಗಿರುವರೆಂದೂ, ಇದರಲ್ಲಿ ಗಡಿನಾಡಿನ ಸಂಖ್ಯೆ ಸೇರಿಲ್ಲವೆಂದೂ ಕೇಂದ್ರ ಎಸೆಂಬ್ಲಿಯಲ್ಲಿ ಹೇಳಲಾಗಿದೆ.

ಗಾಂಧಿ ಜಿನ್ನಾ ಕಾಗದ

ವನ್ನು ಸದಸ್ಯರ ಅವಗಾಹನೆಗೆ ಕೊಡಲು ಸಾಧ್ಯವಿಲ್ಲವೆಂದೂ, ಪಿಲಿಪ್ಸರು ಗಾಂಧಿ ಭೇಟಿಗಾಗಿ ಬರೆದ ಪತ್ರವನ್ನು ಕೊಡಲು ಸಾಧ್ಯವಿಲ್ಲವೆಂದೂ ಕೇಂದ್ರ ಎಸೆಂಬ್ಲಿಯಲ್ಲಿ ಹೇಳಲಾಯಿತು. ಈ ಎರಡು ವಿಷಯಗಳಲ್ಲಿ ಚರ್ಚೆಗೆ ಅವಕಾಶ ಸಿಗಲಿಲ್ಲ.

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ನಂಬರು 419/1939.

ಕ್ರಮ ಅಪ್ಲಿಕ್ಯಾರಿ ಅರ್ಜಿ ನಂಬರು 823/1942.

ಉಳ್ಳಾಲ ಶ್ರೀನಿವಾಸ ನಾಯಕ ಕೂಡಾ—

ಅಪ್ಲಿಕ್ಯಾರಿ ಅರ್ಜಿದಾರರು.

Advocate Mr. U. Subraya Nayak

ಮತ್ತು

ಅಬ್ದುಲ್ ಬ್ಯಾರಿ ವಗೈರೆ ಜಿನರು—

ರೆಸ್ಪೊಂಡೆಂಟರು.

ಇವರೊಳಗೆ

ಮಂಗಳೂರು ಕಸಬಾ ಕುದ್ರೋಳಿಯಲ್ಲಿರುವ ಮ್ಯೊದಿನ (ಕುಂಞ) ಬ್ಯಾರಿಗಳ ಮಗ 3ನೇ ಪ್ರತಿವಾದಿ ಆದ 2ನೇ ರೆಸ್ಪೋಂಡೆಂಟ ಹಸನ್ ಕುಂಞ ಬ್ಯಾರಿರೀಗೆ.

ಮೇಲ್ ಕಂಡ ವ್ಯಾಜ್ಯದ ಡಿಕ್ರಿಗೆ ಜವಾಬ್ದಾರಿ ಉಳ್ಳ ನಿಮ್ಮ ಹಕ್ಕಿನ ಬಾಬ್ತು ಸ್ಥಿರಾಸ್ತಿಗಳನ್ನು ಮಾರಾಟ ಪಡಿಸಬೇಕೆಂತ ಆಪೇಕ್ಷಿಸಿ ಸದ್ರಿ ಅರ್ಜಿದಾರರು ಮೇಲ್ಕಂಡ ಅಪ್ಲಿಕ್ಯಾರಿಯಲ್ಲಿ ಮಾರಾಟದ ಏಲಂ ಇಸ್ತಿಹಾರು ವಗೈರೆ ದಾಖಲು ಮಾಡಿರುತ್ತಾರೆ ಮತ್ತು ಸದ್ರಿ ಏಲಂ ಇಸ್ತಿಹಾರಿನ ಶರ್ತಗಳನ್ನು ನಿರ್ಣಯಿಸುವರೇ ಮೇಲ್ಕಂಡ ಅಪ್ಲಿಕ್ಯಾರಿಯನ್ನು 1943ನೇ ಇಸವಿ ಅಗೋಸ್ತು ತಾರೀಕು 14ನೇ ಶನಿವಾರ ದಿವಸ ಹಗಲು ಘಂಟೆ 10–30ಕ್ಕೆ ತನಿಕೆಗೆ ಇಟ್ಟಿರುತ್ತದೆಯಾದ್ದರಿಂದ ಮೇಲ್ಕಂಡ ತಾರೀಕು 14–7–1943ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ನೀವು ಸ್ವತಃ ಯಾ ವಕೀಲರ ಮುಖಾಂತರ ಹಾಜರಾಗತಕ್ಕದ್ದು. ತಪ್ಪಿದರೆ ನಿಮ್ಮನ್ನು ಗೈರ್ವಾಜರಿ ಮಾಡಿ ಸದ್ರಿ ಅಪ್ಲಿಕ್ಯಾರಿ ಏಲಂ ಮುಂದರಿಸೋಣಾಗುವದು, ತಿಳಿದಿರುವದು.

ಮಂಗಳೂರು, 29–7–'42. Sd) U. Subraya Nayak, Vakil for Petitioners.

ಯುದ್ಧದ ದೆಸೆಯಿಂದಾಗಿ, ಎಂಡ್ರೂಸ್ ಲಿವರ್ ಸಾಲ್ಟ್ ಈಗ ದೊರಕುವುದಿಲ್ಲವೆಂಬುದು ವಿಷಾದಕರವಿದೆ. ಆದರೆ ಅಂತರ್ರಾಷ್ಟ್ರೀಯ ಪರಿಸ್ಥಿತಿ ಸುಧಾರಿಸಿದ ಕೂಡಲೇ ಇದು ಖಂಡಿತ ದೊರಕುವದು.

ಜಿಲ್ಲಾ ಸಮಾಚಾರಗಳು

ಮಂಗಳೂರು

ಅಕ್ಕಿಯ ಕ್ರಯ ತಗ್ಗುತ್ತಿದೆ

ಕಳೆದ ವಾರದಲ್ಲಿ ಅಕ್ಕಿ ಕ್ರಯವು ಮುಡಿಗೆ ರೂ. ೧೬ಕ್ಕೆ ಏರಿದ್ದು, ಪರಿಸ್ಥಿತಿ ಬಹಳ ವಿಷಮಕ್ಕೆ ಬಂದು ಮುಟ್ಟಿತು. ಜನರು ಹೊಟ್ಟೆಗಿಲ್ಲದೆ ಉಪವಾಸ ಬೀಳಲು ತೊಡಗಿದರು ರೋಗಗಳೂ ತಲೆಯೆತ್ತಿದವು. ಕೆಟ್ಟ ಆಹಾರದಿಂದ ಜನರು ಕಂಗೆಡುತ್ತಾ ಬಂದರು. ಒಂದು ಕಡೆ ಒಂದು ಮೊಗವೀರರ ಮನೆಯಲ್ಲಿ ವಾಂತಿಭೇದಿಯಾಗಿ ಕೆಲವರು ಕೂಡಲೇ ಸತ್ತು ಹೋದರೆಂಬ ವಾರ್ತೆಯೂ ಕೇಳಿಬಂತು. ಇಷ್ಟರಲ್ಲಿ ಅಕ್ಕಿಗೆ ಈಗ ತುಸು ಕ್ರಯ ತಗ್ಗಿದೆ ಅಧಿಕಾರಿಗಳು ಅಕ್ಕಿ ಕ್ರಯವನ್ನು ತಗ್ಗಿಸುವ ಹಾಗೂ ಕಂಟ್ರೋಲ್ ಮಾಡುವ ನಿರ್ಧಾರದಲ್ಲಿದ್ದಾರೆಂದು ಕೇಳಿಬರುತ್ತದೆ. ಸದ್ಯ ಮುಡಿ ಒಂದರ ರೂ ೧೩, ೧೪ಕ್ಕೆ ಅಕ್ಕಿ ದೊರಕುತ್ತದೆ. ಈ ಕ್ರಯವಾದರೂ ಕಡಿಮೆ ಕ್ರಯವಲ್ಲ. ಬಡಜನರು ಬದುಕುವ ಕ್ರಯವಲ್ಲ. ಅಧಿಕಾರಿಗಳು ಒಂದು ನಿಶ್ಚಿತ ಕ್ರಯಮಾಡಿ ಅದಕ್ಕಿಂತ ಹೆಚ್ಚಿಗೆ ಕ್ರಯಕ್ಕೆ ಮಾರದಂತೆ ಕಠಿಣ ನಿರ್ಬಂಧ ಮಾಡುವುದು ಒಳ್ಳೆಯದು ಕೆಲ ಜಮೀನ್ದಾರರ ಹಾಗೂ ಕೆಲ ವ್ಯಾಪಾರಿಗಳ ಅತಿ ಲಾಭದ ದುರಾಸೆಯಿಂದ ಊರಿಡೀ ಜನ ಕಂಗಾಲಾಗದಂತೆ ಮಾಡಲು ಕೂಡಲೇ ಒಂದು ನಿಶ್ಚಿತ ತಗ್ಗಿದ ಕ್ರಯದಲ್ಲಿ ಎಲ್ಲರಿಗೂ ಸರಿಯಾಗಿ ಅಕ್ಕಿ ಹಂಚಿ ಸಿಗುವಂತೆ ಅಧಿಕಾರಿಗಳು ಪ್ರಯತ್ನ ಮಾಡಬೇಕು ಈ ಕೆಲಸದಲ್ಲಿ ಸಾರ್ವಜನಿಕ ಸೇವಾತತ್ಪರರು ಸಹಕರಿಸದಿರಲಾರರು ಸಾಹುಕಾರರೂ, ಜಮೀನ್ದಾರರೂ ಇಂಥಾ ಮಾನವೀಯ ಕಾರ್ಯದಲ್ಲಿ ಖಂಡಿತ ಸಹಕರಿಸುವರು.

ಹೊಟ್ಟೆಗಿಲ್ಲದೆ ಮೂರ್ಛೆ ಬಿದ್ದಳು!

ಕೆಲದಿನಗಳ ಹಿಂದೆ, ಓರ್ವ ಹೆಂಗಸು ತನ್ನ ಒಂದೆರಡು ವರ್ಷದ ಮಗುವನ್ನೆತ್ತಿಕೊಂಡು ನೇಡಿಗುಡ್ಡೆ ಕೊಡಿಯಾಲಬೈಲು ಮಾರ್ಗದಲ್ಲಿ ನಡೆದು ಹೋಗುತ್ತಿದ್ದಾಗ ಗಾಳಿ ಮಳೆ ಬಡಿಯಿತು ಆಕೆ ಮೂರ್ಛೆ ಬಿದ್ದು ನೆಲಕ್ಕೆ ಉರುಳಿದಳು. ಮಗು ಮೇಲೆ ಮಾರ್ಗಕ್ಕೆ ಬಿತ್ತು. ಜೋರು ಜೋರು ಜಡಿಮಳೆ ಸುರಿಯುತ್ತಿತ್ತು ಆಕೆಗೆ ಮೂರ್ಛೆ ಬಂದಿತ್ತು. ಸಣ್ಣ ಮಗುವು ಮಳೆಗೆ ನೆನೆಯುತ್ತಾ ಮಾರ್ಗದಲ್ಲಿ ಕೂಗುತ್ತಿತ್ತು. ಅಷ್ಟರಲ್ಲಿ ಓರ್ವ ಕ್ರಿಶ್ಚಿಯನ್ ಸದ್ಗೃಹಸ್ಥರು ಆ ದಾರಿಯಲ್ಲಿ ಬಂದರು. ಮಗುವನ್ನೆತ್ತಿಕೊಂಡು, ಮೂರ್ಛೆ ಬಿದ್ದಿದ್ದ ಆಕೆಗೆ ಶುಶ್ರೂಷೆ ಮಾಡಿ ಎಚ್ಚರಗೊಳಿಸಿದರು. ಕೇಳಿದರೆ ಆಕೆ ಊಟ ಇಲ್ಲದೆ ಅಂದಿಗೆ ನಾಲ್ಕು ದಿನ ಆಗಿತ್ತಂತೆ! ಆ ಸದ್ಗೃಹಸ್ಥರು, ತಮ್ಮ ಮನೆಗೆ ಕರೆದುಕೊಂಡು ಹೋಗಿ ಅವಳಿಗೂ ಮಗುವಿಗೂ ಅನ್ನವಿತ್ತರು ಮಂಗಳೂರಲ್ಲಿ ಹಾಗೂ ಜಿಲ್ಲೆಯ ಬೇರೆ ಬೇರೆ ಕಡೆಗಳಲ್ಲಿ ಇಂಥಾ ಕರುಣಾಜನಕ ದೃಶ್ಯ ಇನ್ನೆಷ್ಟು ಇವೆಯೋ? ಅಕ್ಕಿಗೆ ವಿಪರೀತ ಕ್ರಯ ಏರಿಸಿಯಾದರೂ ತಮಗೆ ಲಾಭ ಸಿಗಲೇ ಬೇಕೆಂದು ಬಯಸುವವರು ಈ ಚಿತ್ರವನ್ನೊಮ್ಮೆ ತಮ್ಮ ಕಣ್ಣ ಮುಂದೆ ತಂದುಕೊಳ್ಳಲಿ! ಉಣ್ಣುವ ಅಹಾರಕ್ಕೆ ವಿಪರೀತ ಕ್ರಯವೆಂದರೆ ಬಡಜನರು ಉಪವಾಸ ಬೀಳುವುದು ಎಂಬ ವಿಷಯವನ್ನು ಆಗಲಾದರೂ ಗಮನಕ್ಕೆ ತಂದುಕೊಳ್ಳಲಾರರೆ?

ಆಹಾರ ಪರಿಸ್ಥಿತಿ

ಸುಧಾರಿಸಲು ಮುನ್ಸಿಪಾಲಿಟಿ ಯತ್ನಿಸಬೇಕೆಂದು, ಮಂಗಳೂರಿನ ಹಲವು ಸಂಘಗಳ ಪ್ರತಿನಿಧಿಗಳು ಮುನ್ಸಿಪಲ್ ಚೇರ್‌ಮೇನರಲ್ಲಿ ಶಿಷ್ಟಮಂಡಳ ಹೋಗಿದ್ದು, ಈ ಕುರಿತು ನಗರ ಸಭೆಗೆ ಏನನ್ನು ಮಾಡಲೂ ಆಗುವುದಿಲ್ಲವೆಂದು, ತಾನು ವೈಯುಕ್ತಿಕವಾಗಿ ಸಾಧ್ಯವಾದ ಕಾರ್ಯಗಳನ್ನು ಮಾಡುವುದಾಗಿಯೂ ಚೇರ್‌ಮೇನರು ಭರವಸೆಯಿತ್ತಿದ್ದಾರೆ.

ಕಮ್ಮಿ ದರದ ಬಟ್ಟೆ

ಯ ಮಾರಾಟದ ವ್ಯವಸ್ಥೆ ಮಂಗಳೂರಿನ ಎಲ್ಲಾ ಜವುಳಿ ವ್ಯಾಪಾರಿಗಳೆಂಬಂತೆ ತೊಡಗಿದ್ದಾರೆ, ಜಿಲ್ಲೆಯ ತಾಲೂಕು ಕೇಂದ್ರಗಳ ಜವಳಿ ವ್ಯಾಪಾರಿಗಳೂ ಈ ವ್ಯವಸ್ಥೆ ಅಲ್ಲಲ್ಲಿ ಮಾಡುತ್ತಿದ್ದಾರೆ. ಬಟ್ಟೆಗೆ ವಿಪರೀತ ಕ್ರಯವಾಗಿದ್ದು, ಬಡವರು ಬಟ್ಟೆಯುಡದೆ ಅಲೆದಾಡುವ ಪರಿಸ್ಥಿತಿಗೆ ಬಂದಿದ್ದರು ಜವಳಿ ವ್ಯಾಪಾರಿಗಳು ಆ ರೀತಿ ಕ್ರಯದಲ್ಲಿ ವಸ್ತ್ರವ್ಯಾಪಾರ ಮಾಡುತ್ತಿದ್ದರು. ಸದ್ಯ, ಬೇಗನೇ ಸ್ಟೇಂಡಾರ್ಡ್ ಬಟ್ಟೆ ಬರುತ್ತದೆಂದೂ, ಅದು ಬಡವರಿಗೂ ತಕ್ಕೊಳ್ಳಲು ಆಗುವ ಕ್ರಯದ್ದೆಂದೂ ಸುದ್ದಿಯಿದೆ. ಸರಕಾರದವರೂ ಜವಳಿ ವ್ಯಾಪಾರಿಗಳೊಡನೆ ಅವರಲ್ಲಿದ್ದ ಸ್ಟೋಕನ್ನು ಖಾಲಿಮಾಡಬೇಕಾಗಿ ಆಜ್ಞೆ ಕೊಟ್ಟಿರುವರೆಂದು ಒಂದು ವದಂತಿ ಅಂತೂ ಜವಳಿ ವ್ಯಾಪಾರಿಗಳು ಈಗ ಕೊನೆಗಾದರೂ ಎಚ್ಚರವಾಗಿದ್ದಾರೆ. ತಾವು ಕಡಿಮೆಗೆ ಕೊಡುತ್ತೇವೆ, ತಾವು ಕಡಿಮೆಗೆ ಕೊಡುತ್ತೇವೆಂದು ಅನೇಕರು ಜಾಹೀರಾತು ಮಾಡಿರುವರು 'ಹೇಗಿದ್ದರೂ ಜವಳಿ ಸಾಹುಕಾರರಿಗೆ, ಯಾವ ಕಾರಣದಿಂದಲೇ ಇರಲಿ, ಕೊನೆಗಾದರೂ ಒಮ್ಮೆ 'ಬಡವರ' ನೆನಪು ಆದದ್ದು ಸಂತೋಷ.

ಜಿಲ್ಲಾ ಬೋರ್ಡು ಸಭೆ

ಆಗಸ್ಟ್ ತಾ ೧೪ರಂದು ಜಿಲ್ಲಾ ಬೋರ್ಡು ಆಫೀಸಿನಲ್ಲಿ ಪೂರ್ವಾಹ್ನ ಗಂಟೆ ೧೧ಕ್ಕೆ ಜರಗುವುದು ಬೋರ್ಡಿನ ೧೯೪೨-೪೩ನೇ ವರ್ಷದ ಆಡಳಿತ ವರದಿ ಆ ದಿನ ಸಭೆಯ ಮುಂದಿಡಲಾಗುವುದು ಅದೇ ದಿನ ಪೂರ್ವಾಹ್ನ ಗಂಟೆ ೧೦ ಕ್ಕೆ ವರ್ಕ್ಸ್ ಎಂಡ್ ಕಮ್ಯುನಿಕೇಶನ್ ಸ್ಟೇಂಡಿಂಗ್ ಕಮಿಟಿಗೆ, ಜನಾಬ್ ಕುಂಞ ಕಳಂದರ್ ಸಾಹೇಬರ ಗೈರುಹಾಜರಿಯಿಂದ ಖಾಲಿಬಿದ್ದ ಸ್ಥಾನಕ್ಕೆ ಹೊಸ ಸದಸ್ಯರನ್ನಾರಿಸುವ ವಿಶೇಷ ಸಭೆ ಸೇರಲಿದೆ

ಮಜೂರರ ಸಂದೇಶ

ಚಿತಗಾಂಗ್ ಜಿಲ್ಲೆಯ ನಿರಾಶ್ರಿತರಿಗೆ ಸಹಾಯ ಮಾಡಲು ಹೋದ ಹಲವು ಯುವಕರು, ಈಗ ಅಲ್ಲಿ ಜ್ವರಪೀಡಿತರಾಗಿರುವರೆಂದು ತಿಳಿದುಬಂದಿದೆ ಅವರಿಗೆ ಮಂಗಳೂರಿನ ಮಜೂರರ ಸಹಾಯ ಕಳುಹಿಸುತ್ತಾ ಚಿತಗಾಂಗು ವೈರಿ ಆಕ್ರಮಣವನ್ನೆದುರಿಸಿದ ಬಗ್ಗೆ ಪ್ರಶಂಸಾತ್ಮಕ ಸಂದೇಶ ಕಳುಹಿಸಿರುವರು.

ಟೀಚರ್ ಗಿಲ್ಡ್

ನ ಟೀಚರ್ಸ್ ಕೌನ್ಸಿಲಿನ ಸಭೆ ಶ್ರೀ ಎ ಎಸ್ ಕಾರಟರ ಅಧ್ಯಕ್ಷತೆಯಲ್ಲಿ ಸೇರಿ 'ವಿದ್ಯೋದಯ' ಪತ್ರಿಕೆಯ ಅಭಿವೃದ್ಧಿ ವಿಷಯ ವರದಿ ವಾಚನವಾಗಿ ವಿದ್ಯಾ ಸಪ್ತಾಹವನ್ನು ಉಡುಪಿಯಲ್ಲಿ ಜರಗಿಸುವ ಹೈಸ್ಕೂಲುಗಳ ಆಫೀಸು ಪರೀಕ್ಷೆಗಳಿಗೆ ಪ್ರಾಂತಿಕ ಅಧಿಕಾರಿಗಳು ಕಾಗದ ಒದಗಿಸಬೇಕೆನ್ನುವ, ಸೆಕೆಂಡರಿ ಶಾಲೆಗಳ ಅಧ್ಯಾಪಕರಿಗೆ ತುಟ್ಟಿ ಭತ್ತೆ ಕೊಡಬೇಕೆನ್ನುವ, ಅದಕ್ಕಾಗಿ ವಿದ್ಯಾಧಿಕಾರಿಗಳು ಗ್ರೇಂಟು ಹೆಚ್ಚಿಸಬೇಕೆನ್ನುವ, ಸ್ಪೆಶಲ್ ಟೀಚಿಂಗ್ ಗ್ರೇಂಟನ್ನು ಪುನಃ ಕೊಡಬೇಕೆನ್ನುವ, ಸೆಕೆಂಡರಿ ಟ್ರೈನಿಂಗ್ಸ್ ಉಪಾಧ್ಯಾಯರ ಅಭಾವ ಹಾಗೂ ಅವರ ಟ್ರೈನಿಂಗ್ ಶಾಲೆಯ ಮುಟ್ಟವನ್ನೇರಿಸುವ ಆವಶ್ಯಕತೆ ಹಾಗೂ ಅವರಿಗೆ ಸ್ಟೈಪೆಂಡ್ ಕೊಡಬೇಕೆನ್ನುವ ನಿರ್ಣಯಗಳಾದುವು ಮಾತೃಭಾಷೆಯಲ್ಲಿ ಶಿಕ್ಷಣ ಕೊಡಲು ಪ್ರಾರಂಭವಾದ ಮೇಲೆ ಕಾಲೇಜ್ ಶಿಕ್ಷಣ ಕೆಡುತ್ತಿದೆಯೆಂಬ ದೂರಿನಲ್ಲಿ ಸತ್ಯಾಂಶವಿದೆಯೋ ಎಂದು ತಿಳಿಯಲು ಮದ್ರಾಸು ಮತ್ತು ಆಂಧ್ರ ವಿಶ್ವವಿದ್ಯಾಲಯಗಳ ಪರೀಕ್ಷಾ ಫಲಿತಾಂಶಗಳ ಪಟ್ಟಿಯನ್ನು ಕೇಳಬೇಕೆಂದೂ ನಿರ್ಣಯವಾಗಿದೆ

ಸಿನೆಟ್ ಮೆಂಬರರಾಗಿ

ದ ಕ ಡಿಸ್ಟ್ರಿಕ್ಟ್ ಬೋರ್ಡಿನಿಂದ ಶ್ರೀ ಯು ರಾಮಚಂದ್ರ (ಹರಿಜನ ಸದಸ್ಯ)ರು ಚುನಾಯಿತರಾಗಿದ್ದಾರೆ

ಪೋಲೀಸ್ ಲೋರಿ ಉರುಳಿತು!

ಅಕ್ಕಿ ತರಲು ಹೋಗಿದ್ದ ಪೋಲೀಸ್ ಲೋರಿಯೊಂದು ಹಿಂದೆ ಬರುತ್ತಿದ್ದಾಗ ಗುರ್ಪುರ ಕೈಕಂಬದ ಬಳಿ ಅಡಿ ಮೇಲಾಗಿ ಉರುಳಿ ಕೆಲ ಪೋಲೀಸರಿಗೆ ಪೆಟ್ಟಾಗಿದ್ದು, ಒಬ್ಬಿಬ್ಬರಿಗೆ ಹೆಚ್ಚಿನ ಪೆಟ್ಟಾಗಿ, ಗಾಯಗೊಂಡವರನ್ನು ವೆನ್‌ಲೋಕ್ ಆಸ್ಪತ್ರೆಗೆ ಸಾಗಿಸಲಾಗಿದೆಯೆಂದು ತಿಳಿದಿದೆ.

ನಿಧನ

ಡಿಪ್ಯುಟಿ ಕಲೆಕ್ಟರರಾಗಿ, ಆ ಮೇಲೆ ಸಹಕಾರ ಸಂಘಗಳ ಅಸಿ ರಿಜಿಸ್ಟ್ರಾರರಾಗಿ ನಿವೃತ್ತರಾದ ಶ್ರೀ ಡಿ. ಆನಂದರಾಯರು ತಮ್ಮ ೬೪ನೇ ವರ್ಷದಲ್ಲಿ ಮೊನ್ನೆ ತಾ. ೩೦ರಂದು ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಆತ್ಮಕ್ಕೆ ಚಿರಶಾಂತಿ ಬಯಸಿ, ಅವರ ಕುಟುಂಬದ ದುಃಖದಲ್ಲಿ ನಾವು ಸಹ ಸಂತಾಪ ಸೂಚಿಸುತ್ತೇವೆ.

ಶ್ರೀ. ಕೆ. ಕೃಷ್ಣ ಶೆಟ್ಟರ ಬಂಧನ

ಧಾರವಾಡ ಕರ್ನಾಟಕ ಹೈಸ್ಕೂಲಿನಲ್ಲಿ ಅಧ್ಯಾಪಕರಾಗಿದ್ದ ಶ್ರೀ ಕೆ ಕೃಷ್ಣ ಶೆಟ್ಟಿ ಇವರನ್ನು ತಾ. ೩೧ರಂದು ಮಂಗಳೂರು ಸರ್ಕಲ್ ಇನ್ಸ್‌ಪೆಕ್ಟರ್ ಶ್ರೀ ಕೆ. ಎಸ್. ಮೆನನರು, ಅವರಿದ್ದ ಮನೆಗೆ ಮುತ್ತಿಗೆ ಹಾಕಿ ಬಂಧಿಸಿ ಸೆರೆಮನೆಗೊಯ್ದರು ಇವರು ಆಗಸ್ಟ್ ಗಲಭೆ ನಂತರ ಅಜ್ಞಾತವಾಸಿಗಳಾಗಿದ್ದು, ಧಾರವಾಡದ ಜಿಲ್ಲಾ ಪೋಲೀಸ್ ಅಧಿಕಾರಿಗಳು ತಮ್ಮ ಮುಂದೆ ಇವರಿಗೆ ಹಾಜರಾಗುವಂತೆ ನೋಟೀಸು ಪ್ರಕಟಿಸಿದ್ದರು

ನೇಮಕ

ಶ್ರೀ ಎಚ್ ನರಸಿಂಹ ಇವರು ಹಜೂರಿನ ಹೆಡ್ ಕ್ಲಾರ್ಕರಾಗಿ, ಶ್ರೀ ವಿ ಸದಾನಂದ ಪೈ ಇವರು ಮಂಗಳೂರಿನ ಸ್ಪೆ. ಸ. ಮೆಜಿಸ್ಟ್ರೇಟರಾಗಿ ಶ್ರೀ. ಕೆ ಹಸನ್ ಸಾಹೇಬ್ ಇವರು ಕಾರ್ಕಳದ ಸ್ಪೆ. ಸ. ಮೆಜಿಸ್ಟ್ರೇಟರಾಗಿ ಶ್ರೀ ಕೆ ವೆಂಕಪ್ಪ ಇವರು ಬಂಟ್ವಾಳದ ಡೆ. ತಹಶಿಲ್ದಾರರಾಗಿ ಶ್ರೀ ಸಿ ಸೀತಾರಾಮ ಶೆಟ್ಟಿ ಇವರು ಕುಂದಾಪುರದ ಸ್ಪೆ. ಸ. ಮೆಜಿಸ್ಟ್ರೇಟರಾಗಿ ಶ್ರೀ ರಾಘವನ್ ಇವರು ಜಿಲ್ಲೆಯ ಕೃಷಿ ಇಲಾಖೆಯ ಅಧಿಕಾರಿಗಳಾಗಿ ನೇಮಿಸಲ್ಪಟ್ಟಿದ್ದಾರೆ

ರಜೆ

ಜಿಲ್ಲೆಯ ಪೋಲೀಸ್ ಸುಪರಿಂಟೆಂಡೆಂಟರಾದ ಮಿ। ಚೆಡ್ವಿಕ್ ಇವರು ಬರುವ ಆಗಸ್ಟ್ ೧೪ರಿಂದ ೭ ವಾರಗಳ ರಜೆ ಅಪೇಕ್ಷಿಸಿರುವರೆಂದು ತಿಳಿಯುತ್ತದೆ

ಪೀಪ್‌ಲ್ಸ್ ಥಿಯೇಟರ್

ಎಂಬ ಹೆಸರಿನಿಂದ ಕಳೆದ ಸೋಮವಾರ ಒಂದು ನಾಟಕ ಸಂಘವು ಸ್ಥಾಪಿತವಾಗಿದೆ ಶ್ರೀ ರಂ ರಾ ತಲ್ಚೇರಿಕರ್ ಅಧ್ಯಕ್ಷರಾಗಿ, ಶ್ರೀ ಎಸ್. ಆರ್ ಕುಳಕುಂದ ಇವರು ಕಾರ್ಯದರ್ಶಿಯಾಗಿ ಹಾಗೂ ಇತರ ಹನ್ನೊಂದು ಮಂದಿ ಕಾರ್ಯಕಾರೀ ಸಮಿತಿ ಸದಸ್ಯರಿಂದೊಡಗೂಡಿದ ಈ ಸಂಘವು ಬೇಗನೇ, ಬಿಜಾಪುರ ಬಳ್ಳಾರಿಗಳ ಕ್ಷಾಮ ಪೀಡಿತರ ಸಹಾಯಾರ್ಥ ಒಂದು ನಾಟಕವನ್ನಾಡಲು ನಿಶ್ಚಯಿಸಿರುವುದು 'ಪೀಪ್‌ಲ್ಸ್ ಥಿಯೇಟರ್'ನವರು ಮುಂದೆ ಧರ್ಮಾರ್ಥವಾಗಿ ಜನ ಜಾಗೃತಿ ಹುಟ್ಟಿಸುವಂಥಾ ನಾಟಕಗಳನ್ನಾಡುವ ಉದ್ದೇಶವುಳ್ಳವರಾಗಿದ್ದಾರೆ.

'ರಶ್ಯನ್ ಚಿತ್ರ'

ಎರಡು ವಾರಗಳಿಂದ ಪ್ರದರ್ಶಿಸಲು ಅಧಿಕಾರಿಗಳ ಒಪ್ಪಿಗೆ ಸಿಗದ ರಶ್ಯನ್ ಚಿತ್ರ 'ಪೀಟರ್ ದಿ ಫಸ್ಟ್' ಕಳೆದ ಆದಿತ್ಯವಾರ ಪ್ರದರ್ಶಿತವಾಯಿತು ಶನಿವಾರ ದಿನ ಅಧಿಕಾರಿಗಳು ಅನುಮತಿಯಿತ್ತರೆಂದು ತಿಳಿಯಿತು ಚಿತ್ರವನ್ನು ನೋಡಲು ಜನ ತುಂಬಾ ಬಂದಿತ್ತು ರಶ್ಯನ್ ಚಿತ್ರದ ಕುರಿತು ಜನರಿಗೆ ಒಳ್ಳೆಯ ಅಭಿಪ್ರಾಯವುಂಟು ಮಂಗಳೂರಿನ ಕಮ್ಯೂನಿಸ್ಟರು ಇನ್ನೂ ಇಂಥಾ ಕೆಲವು ರಶ್ಯನ್ ಚಿತ್ರಗಳನ್ನು ತರಿಸಿ ತೋರಿಸಿದರೆ ಆಗಬಹುದು ಆದರೆ ಈ ಸಲದಂತೆ ಗಲಾಟೆ ಮಾಡಿಕೊಳ್ಳದೆ ಅಧಿಕಾರಿಗಳ ಸರಿಯಾದ ಅನುಮತಿ ಪಡೆದು ಪ್ರದರ್ಶಿಸುವ ಉತ್ಸಾಹ ಮಾಡಬೇಕು.

ಚಲಚ್ಚಿತ್ರ ವಿಮರ್ಶಕ ಸಂಘ

ಉದ್ಘಾಟನಾ ಭಾಷಣ

'ಸಿನೆಮಾವೆಂದರೆ ನೆಟ್ಟಗೆ ನರಕಕ್ಕೆ ಹೋಗುವ ಹೆದ್ದಾರಿ ಎನ್ನುವವರಿದ್ದಾರೆ, ಸಿನೆಮವೇ ಸರ್ವಸ್ವ ಎನ್ನುವವರೂ ಇದ್ದಾರೆ. ಇಂತಹ ಭಿನ್ನಾಭಿಪ್ರಾಯಗಳು ಸಮಾಜದಲ್ಲಿವೆಯಾದರೂ 'ತುಕಾರಾಂ' ನೋಡಿ ತಲೆದೂಗುವ ಸನಾತನಿಗಳೂ 'ಕ್ರಿಸ್ತನ ಜೀವನ' ಚಿತ್ರವನ್ನು ನೋಡಿ 'ಸೈ' ಎನ್ನುವ ಕ್ರಿಸ್ತ ಪಾದ್ರಿಗಳೂ ನಮ್ಮಲ್ಲಿದ್ದಾರೆ. ಮನುಷ್ಯನ ಮನರಂಜನೆಗೆ ಚಲಚ್ಚಿತ್ರವು ಅತ್ಯಗತ್ಯ ಜನಸಾಮಾನ್ಯರ ಶಿಕ್ಷಣಕ್ಕೆ ಚಲಚ್ಚಿತ್ರವು ಅನುಕೂಲವಾಗಬೇಕು. ನ್ಯಾಯವಾದ ವಿಮರ್ಶೆಯನ್ನು ಕೊಟ್ಟು ಪ್ರೇಕ್ಷಕರನ್ನು ಸರಿಹಾದಿಯಲ್ಲೊಯ್ಯುವುದೂ ನಿರ್ಮಾಪಕರನ್ನು ಒಳ್ಳೆಯ ಹಾದಿಗೆ ತರುವುದೂ ವಿಮರ್ಶಕರ ಕೂಟದ ಕೆಲಸವಾಗಬೇಕು' ಎಂದು ಶ್ರೀ. ರಂಗರಾವ್ ತಲ್ಚೇರಿಕರರು ತಾ. ೨೫ರ ಸಂಜೆ ಸ್ಥಳೀಯ ಥಿಯಸಾಫಿಕಲ್ ಲಾಜಿನಲ್ಲಿ ಚಲಚ್ಚಿತ್ರ ವಿಮರ್ಶಕ ಕೂಟದ ಉದ್ಘಾಟನೆಯನ್ನು ಮಾಡುತ್ತಾ ಭಾಷಣವಿತ್ತರು ಶ್ರೀ. ಕುಡ್ಪಿ ವಾಸುದೇವ ಶೆಣೈ ಅವರು ಅಧ್ಯಕ್ಷತೆ ವಹಿಸಿದ್ದರು

ಆರಂಭದಲ್ಲಿ ಲಘುಫಲಾಹಾರವಿತ್ತು ಶ್ರೀ. ಬಿ ವಿ ಜಕ್ಕಂಗಿಯಿಂದ ಪ್ರಾರ್ಥನೆಯಾದ ಬಳಿಕ ಶ್ರೀ ಕುಳುಕುಂದ ಶಿವರಾಯರು ನೆರೆದಿದ್ದವರನ್ನು ಸ್ವಾಗತಿಸಿ ಕೂಟದ ಪರಿಚಯವನ್ನು ಮಾಡಿಕೊಟ್ಟರು ಉದ್ಘಾಟನೆಯ ಬಳಿಕ ಶ್ರೀ ಬೇಲಗದ್ದೆ ಅಪ್ಪಯ್ಯ, ಹಮ್ಮ ಭೀಮರಾಯರು, ಶ್ರೀ ಕೆ. ಕೃಷ್ಣರಾಯರು, ಶ್ರೀ ಎಂ ವೆಂಕಟೇಶ ಪ್ರಭು, ಶ್ರೀ ಎ ಬಿ ರಘುರಾಮ ಪೈ ಇವರು ಭಾಷಣವಿತ್ತರು ಶ್ರೀ ಜೆಫ್ರಿ ಎಸ್ ಶೆಣೈ ಅವರು ಧನ್ಯವಾದಗಳನ್ನರ್ಪಿಸಿದರು

ಉಡುಪಿ

ತುಟ್ಟಿಭತ್ತೆ

ತಿಂಗಳೊಂದರ ೧ ರೂಪಾಯಿಯಂತೆ ಜೋಟಿ ಜಾವಮಾಲೆಗಳಿಗೂ, ಇತರ ನೌಕರರಿಗೆ ತಿಂಗಳಿಗೆ ೩ ರೂಪಾಯಿಯಂತೆಯೂ ಉಡುಪಿ ಮುನ್ಸಿಪಾಲಿಟಿ ಜೂನ್ ತಿಂಗಳಿಂದ ಕೊಡಲು ನಿರ್ಣಯಿಸಿದೆ

ನೋಟೀಸು

ಮಂಗ್ಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಎ C S No 200 of 1943

ಪಸಾರಿ ಅಪ್ಪುನಾಯ್ಕ ಎಂಡ್ ಸನ್—ವಾದಿ.

ಎದುರಾಗಿ

ಕನ್ನನ್ ಕೂಡಾ ಪ್ರತಿವಾದಿರು

ನಾರಾಯಣ, ಕನ್ನಡಾಮ ಪೈದರ ಮಗ, ಕಾಸರಗೋಡು ತಾಲ್ಲೂಕು ಮಂಜೇಶ್ವರದಲ್ಲಿರುವವ.

ವಾದಿಯು ನಿಮ್ಮ ಮೇಲೆ ಪ್ರಸ್ತುತದಲ್ಲಿ ನಡೆಯುವ ನಿವ್ವಶ್ರಿ ಕ್ಲೋಸ್ಕರ ಒಂದು ವ್ಯಾಜ್ಯ ದಾಖಲು ಮಾಡಿದ್ದಾರೆ ಆದಕಾರಣ ಸದರೀ ದಾವೆಗೆ ಉದಾಹರಣೆ ಕೊಡುವ ಬಗ್ಗೆ ಈ ಕೋರ್ಟಿನಲ್ಲಿ ನೀವು ಖುದ್ದಾಗಿಯಾಗಲಿ—ಯಾ—ಕ್ರಮವಾಗಿ ಅಧಿಕಾರ ಹೊಂದಿರುವ ಪ್ಲೀಡರ ಮೂಲಕವಾಗಿಯಾಗಲೀ, 1943ನೇ ಇಸವಿ ಆಗೋಸು ತಿಂಗಳು ತಾರೀಕು 5ನೇ ದಿವಸ ಹಗಲು 11 ಘಂಟೆಗೆ ಹಾಜರಾಗಲಿಕ್ಕೆ ಇದರಿಂದ ಸಮ್ಮನ್ಸ್ ಕೊಡಲ್ಪಡುತ್ತದೆ ಮತ್ತು ನೀವು ಹಾಜರಾಗತಕ್ಕ ದಿವಸವು ವ್ಯಾಜ್ಯದ ಆಖೈರ್ ಫೈಸಲಾತಿಬಗ್ಗೆ ನೇಮಿಸಿರುವುದರಿಂದ, ನಿಮ್ಮ ಡಿಫೆನ್ಸಿಗೆ ಎಲ್ಲಾ ಸಾಕ್ಷಿಗಾರರನ್ನು ಮತ್ತು ದಸ್ತಾವೇಜುಗಳನ್ನು ಆ ದಿವಸ ಹಾಜರುಪಡಿಸಲಿಕ್ಕೆ ನೀವು ತಯಾರಾಗಿರತಕ್ಕದ್ದು.

ಮೇಲೆ ನಮೂದಿಸಲ್ಪಟ್ಟ ದಿವಸ ಹಾಜರಾಗಲಿಕ್ಕೆ ತಪ್ಪಿದ್ದಲ್ಲಿ ಸದರೀ ವ್ಯಾಜ್ಯವನ್ನು ನಿಮ್ಮ ಗೈರುಹಾಜರಿಯಲ್ಲಿ ಕೇಳಿ ಪೈಸಲು ಮಾಡಲ್ಪಡುವುದೆಂತ ನೀವು ತಿಳಿಯತಕ್ಕದ್ದು.

(By order of court)

ಮಂಗ್ಳೂರು 28—7—'43 } U. Krishna Shetty B A B L Advocate for Plaintiff

ಇಟಲಿಯ ಹಿಂದಿನ ಮತ್ತು ಇಂದಿನ ಸರ್ವಾಧಿಕಾರಿಗಳು

ಮುಸಲನಿ ಮತ್ತು ಬಡೋಗ್ಲಿಯೊ

ಬೆನಿಟೋ ಮುಸಲನಿ 1883ನೇ ಇಸವಿ ಜುಲೈ 29ರಲ್ಲಿ ಜನಿಸಿದ. ಕಮ್ಮಾರನ ಮಗನೀತ. ಎಳೆತನದಲ್ಲಿ ಸಮತಾವಾದ ಅವನನ್ನು ಆಕರ್ಷಿಸಿತು. ಸರ್ಕಾರದ ವಕ್ರದೃಷ್ಟಿಗೆ ಬಿದ್ದು ತಲೆತಪ್ಪಿಸಿಕೊಂಡು ಸ್ವಿಝರ್ಲೆಂಡಿಗೆ ತೆರಳಿದ; ಸ್ವಲ್ಪಕಾಲದ ಬಳಿಕ ಪುನಃ ಇಟಲಿ ಪ್ರವೇಶಿಸಿದ. ಸಮತಾವಾದೀ ಪತ್ರಿಕೆ 'ಅವಂತಿ'ಯ ಸೂತ್ರಚಾಲನೆ ಅವನ ಕೈಗೆ ಬಂತು. ಕಳೆದ ಮಹಾಯುದ್ಧದಲ್ಲಿ ಆತನು ರಾಷ್ಟ್ರೀಯ ನೀತಿಯನ್ನು ಪ್ರತಿಪಾದಿಸಿದ. ಇಟಲಿ ಯುದ್ಧಕ್ಕೆ ದುಮುಕಬೇಕು, ಮಿತ್ರರೊಡನೆ ಹೆಗಲಿಗೆ ಹೆಗಲು ಕೊಟ್ಟು ಹೋರಾಡಬೇಕೆಂದು ವಾದಿಸುತ್ತಿದ್ದ. ಸಮತಾವಾದಿಗಳಿಗಿದು ಸರಿತೋರಲಿಲ್ಲ. ಆ ಪಕ್ಷದಿಂದ ಅವನನ್ನು ಉಚ್ಚಾಟನೆಮಾಡಿದರು. ತನ್ನ ಮಾತಿಗೆ ಜನರ ಬೆಂಬಲ ದೊರಕಿಸಿಕೊಳ್ಳಲು ಆತ 'ಪೊಪೊಲೊಡಿ ಇಟಾಲಿಯಾ' ಪತ್ರಿಕೆ ಹೊರಡಿಸಿದ, ತನ್ನ ವಿಚಾರ ಬರೆಯುತ್ತಾ ಬಂದ. 1915ರಲ್ಲಿ ಇಟಲಿ ರಣರಂಗಕ್ಕೆ ದುಮುಕಿದಾಗ, ಮುಸಲನಿ ತನ್ನ ಕೆಲ ಸಂಗಡಿಗರೊಡನೆ ಸೈನಿಕನಾಗಿ ಸೇರಿದ. ಯುದ್ಧದಲ್ಲಿ ಗಾಯಗೊಂಡ, ಪುನಃ ಪತ್ರಿಕಾ ಸಂಪಾದಕನಾಗಿ ನಿಂತ.

ಮಹಾಯುದ್ಧದಲ್ಲಿ ಮಿತ್ರರಿಗೆ ಜಯ ಲಭಿಸಿತು. ಆದರೆ ಇಟಲಿಗೆ ಕೊಳ್ಳೆಯೇನೂ ಸಿಗಲಿಲ್ಲ. ದೇಶದಲ್ಲಿ ಆಂತರಿಕ ಅಶಾಂತಿ ತಲೆದೋರಿತು. ಎಲ್ಲಿ ಹೋದರೂ ಉಗ್ರವಾದಿಗಳೇ ತಲೆಯೆತ್ತಿದರು. ಮುಸಲನಿ ಈ ಸಮಯ ಸಾಧಿಸಿ 1919ರ ಮಾರ್ಚಿಯಲ್ಲಿ ಫೇಸಿಸ್ಟ್ ಪಕ್ಷ ಸ್ಥಾಪಿಸಿದ. ರಾಷ್ಟ್ರೀಯ ಮತ್ತು ಕಮ್ಯುನಿಸ್ಟ್ ತತ್ವ ವಿರೋಧವೇ ತನ್ನ ಧೋರಣವೆಂದು ಸಾರಿದ. ದಿನೇ ದಿನೇ ಈ ಪಕ್ಷ ಪ್ರಬಲವಾಯಿತು. 1922ನೇ ಅಕ್ಟೋಬರ್ 28ರಂದು 40 ಸಾವಿರ ಫೇಸಿಸ್ಟರು ರೋಮ್ ನಗರಕ್ಕೆ ದಂಡಯಾತ್ರೆ ಮಾಡಿದರು. ದುರ್ಬಲ 'ಫಾಕ್ಟ್' ಸರಕಾರ ಕಂಪಿಸಿತು! ಇಟಲಿಯ ಚಕ್ರವರ್ತಿ ಮುಸಲನಿಯನ್ನು ಕರೆದು ಅಧಿಕಾರ ಸ್ವೀಕರಿಸಲು ಹೇಳಿದ. ಮೊದಲು ಮುಸಲನಿ ಸಮ್ಮಿಶ್ರ ಮಂತ್ರಿಮಂಡಳ ಮಾಡಿದ. ಆದರೆ 1925ರಿಂದ ವಿರೋಧಿಗಳನ್ನಪ್ಪಳಿಸಲು ಮುಸೋಲನಿ ಸರ್ವಾಧಿಕಾರಿಯೇ ಆದ.

ಮುಂದೆ ಫೇಸಿಸ್ಟ್ ತತ್ವದ ತಳಹದಿಯ ಮೇಲೆ ಇಟಲಿಯ ಪುನರ್ರಚನೆ ಮಾಡಲು ಮುಸಲನಿ ಸೊಂಟಕಟ್ಟಿದ. ರಾಷ್ಟ್ರೀಯ ಶಿಕ್ಷಣ, ಸೇನಾ ಸಂಘಟನೆ, ಆರ್ಥಿಕ ಅಭಿವೃದ್ಧಿ ಇವುಗಳಿಗಾಗಿ ಆತ ಹಗಲಿರುಳು ದುಡಿದ. ನಾಜಿಗಳ ಯಹೂದಿ ದ್ವೇಷ, ಆಸ್ಟ್ರಿಯ ಆಕ್ರಮಣ ಮೊದಲಾದವು ಆತನಿಗೆ ಸರಿಬೀಳಲಿಲ್ಲ. ಆದರೆ ಮುಂದೆ ಅಬಿಸೀನಿಯ ಆಕ್ರಮಿಸ ಹೋದಾಗ ಪಶ್ಚಿಮದ ರಾಷ್ಟ್ರಗಳು ಮುಸಲನಿಯ ಮೇಲೆ ಮೇಲೆ ಕತ್ತಿಕಟ್ಟಿ ನಿಲ್ಲಲು, ಮುಸಲನಿ ಹಿಟ್ಲರನ ಗೆಳೆತನ ಮಾಡಿಕೊಂಡ. ಈ ಸ್ನೇಹ ಸ್ಪೈನಿನ ಕಲಹದಲ್ಲಿ ಹೆಚ್ಚಿತು. ಮುಂದೆ ಜಪಾನ್, ಇಟಲಿ, ಜರ್ಮನಿಗಳು ಕಮ್ಯುನಿಸಂ ವಿರುದ್ಧ ಒಂದು ಒಪ್ಪಂದ ಮಾಡಿಕೊಂಡವು. ಈ ತ್ರಿರಾಷ್ಟ್ರಗಳ ಸ್ನೇಹಕ್ಕೆ 'ಅಕ್ಷರಾಷ್ಟ್ರಗಳ ಸಂಕೋಲೆ' ಯೆನ್ನುವುದು ೧೯೩೯ನೇ ಮಾರ್ಚಿಯಲ್ಲಿ ಮುಸಲಿನಿ ಸೇನೆ ಅಲ್ಬೇನಿಯನ್ನು ಆಕ್ರಮಿಸಿತು. ಅಂದಿನಿಂದ ಆತ ರೋಮನ್ ಸಾಮ್ರಾಜ್ಯದ ಕನಸು ಕಾಣುತ್ತಿದ್ದ. ೧೯೪೦ನೇ ಜೂನ್ ತಿಂಗಳಲ್ಲಿ ಜರ್ಮನಿ ಫ್ರಾನ್ಸನ್ನು ಶರಣುಗೊಳಿಸಿದಾಗ, ಯುದ್ಧದಲ್ಲಿನ್ನು ಜರ್ಮನಿಗೆ ಜಯ ಖಂಡಿತವೆಂದು ತಿಳಿದು ಮುಸಲನಿಯೂ ರಣರಂಗಕ್ಕಿಳಿದ. ಆದರೆ ಆತನ ಕನಸುಗಳೆಲ್ಲಾ ಕೇವಲ ಗಾಳಿಗೋಪುರಗಳಾದವು.

ಹೊಸ ಸರ್ವಾಧಿಕಾರಿ ಮಾರ್ಶಲ್ ಬಡೋಗ್ಲಿಯೊ ಸೇನಾನಾಯಕ. ೭೩ ವರ್ಷದ ಮುದುಕ. ಫೇಸಿಸ್ಟರು ಇಟಲಿಯ ಅಧಿಕಾರಕ್ಕೇರಿದ ನಂತರ ಅವರನ್ನು ವಿರೋಧಿಸುತ್ತಿದ್ದ. ಕಳೆದ ಮಹಾಯುದ್ಧದಲ್ಲಿ ಶೂರತ್ವದಿಂದ ಹೋರಾಡಿ ಇಟಲಿಗೆ ಜಯ ಗಳಿಸಿದಾತ. ಒಡೋಗ್ಲಿಯೊನ ಮೇಲೆ ಅರಸನಿಗೆ ಅಧಿಕ ವಿಶ್ವಾಸ. ಅಂತೆಯೇ ಆತನು ಪರಮ ಆಪ್ತರು. ಮುಸಲನಿ ರೋಮ್ ನಗರಕ್ಕೆ ದಂಡಯಾತ್ರೆ ಹೊರಟಾಗಲೂ ಬಡೋಗ್ಲಿಯೊ ಆತನಿಗೆ ನೆರವಾಗಿರಲಿಲ್ಲ. ಬಡೋಗ್ಲಿ ಕೆಲಸಮಯ ಬ್ರೆಜಿಲಿನ ರಾಯಭಾರಿಯಾಗಿದ್ದ; ಲೀಬಿಯದ ಗವರ್ನರನಾಗಿದ್ದ. ಅಬಿಸೀನಿಯ ಯುದ್ಧದ ಜಯಕ್ಕೆ ಬಡೋಗ್ಲಿಯೇ ಮುಖ್ಯ ಕಾರಣನು. ಅವರಿಂದಲೇ ಆತ ಅಬಿಸೀನಿಯದ ವೈಸರಾಯನಾಗಿ ನೇಮಿಸಲ್ಪಟ್ಟ. ಮುಂದೆ ಅದಕ್ಕೆ ರಾಜಿನಾಮೆಯಿತ್ತ. ರೋಂ ನಗರದ ಮಹಾನಾಗರಿಕನೆಂಬ ಗೌರವ ಆತನಿಗೆ ಕೊಡಲಾಗಿತ್ತು. ಬಡೋಗ್ಲಿಯೊ ೧೯೩೭ರಲ್ಲಿ ಜರ್ಮನ್ ಸಮರ ತಜ್ಞರೊಡನೆ ವಿಚಾರ ವಿನಿಮಯಮಾಡಲು ಹೋಗಿದ್ದ. ೧೯೩೯ರಲ್ಲಿ ಲಿಬಿಯದ ಸಂರಕ್ಷಣೆ ಭಾರ ವಹಿಸಿದ. ಪ್ರಾಯ ಬಹಳವಾಗಿ ನಿವೃತ್ತನಾಗಬೇಕಿದ್ದರೂ ಆತನಲ್ಲಿ ಕರ್ತೃತ್ವ ಶಕ್ತಿ ಬಹಳವಿದೆ. ಯುದ್ಧಾರಂಭದ ಬಳಿಕ ಸೇನಾಪತಿ ಪಟ್ಟವೂ ದೊರಕಿತು. ಗ್ರೀಸಿನ ಮೇಲೆ ಇಟಲಿ ಧಾಳಿಯಿಟ್ಟಾಗ ಬಡೋಗ್ಲಿ ತನ್ನ ಕೆಲಸಕ್ಕೆ ರಾಜಿನಾಮೆಯಿತ್ತ.

WANTED

FOR THE SRIMAD ANANTHESHWAR AGAMA PATHASHALA, MANJESHWAR.

1. A Sahitya Shiromani on a pay of Rs. 20 per month, to be also the Warden of the Ashram with free quarters and boarding.

2. An Entrance Certificate holder able to teach Karmanga at Rs. 15 per month and free boarding and lodging.

Apply with testimonials to the Manager, Srimad Anantheshwar Temple Manjeshwar by 15-8-43.

Note —10 free scholarships are available to non resident students of Manjeshwar who wish to join these classes. They are also required to put in their applications within that time.

24-7-43 (Sd) B. N. Baliga
Manager.



ನೋಟೀಸು

The Canara Banking Corporation Ltd.,

Office: COONDAPUR

ದಿ ಕೆನರಾ ಬೇಂಕಿಂಗ್ ಕೋರ್ಪೊರೇಶನ್ ಲಿಮಿಟೆಡ್, ಕುಂದಾಪುರ

ಈ ಮೂಲಕ ತಿಳಿಯಪಡಿಸುವದೇನೆಂದರೆ ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಲ್ಲಿ ಚಿನ್ನಾಭರಣಗಳನ್ನು ಅಡವಿಟ್ಟು ಪಡಕೊಂಡ ಸಾಲಕ್ಕೆ ಈ ವರೆಗೂ ಎಷ್ಟು ದಫೆ ತಿಳಿಸಿದರೂ ಬಡ್ಡಿ ಹಣವನ್ನು ಪಾವತಿ ಮಾಡದೆ ಇರುವುದರಿಂದ ಸದ್ರಿ ಲೋನಿನಲ್ಲಿ ಅಡಗಿರುವ ಚಿನ್ನಾಭರಣಗಳನ್ನು ಇದೇ ಬರುವ ಆಗೋಸ್ತು ತಿಂಗಳ 14ನೇ ತಾರೀಕಿನ ಶನಿವಾರ ದಿವ್ಸ ಗಂಟೆ 1ಕ್ಕೆ ಸರಿಯಾಗಿ ಯಾ ಬೇಂಕಿಗೆ ಯುಕ್ತಕಂಡ ಇತರ ದಿನಗಳಲ್ಲಿ ಸದ್ರಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ಸಾಲ ನಂ	ಹೆಸರು ವ ವಿಳಾಸ	ಮೊಬಲಗು
134 / 22-5-1940	ಶಿದ್ದಾಪುರ ವೆಂಕಪ್ಪ ಭಂಡಾರಿ, ಮಹಾಲಿಂಗ ಶೆಟ್ರ ಅಳಿಯ. ಅಕ್ಕುಂಜೆ, ಪೋಸ್ಟು ಶಂಕರನಾರಾಯಣ	ರೂ. 20.
61 / 23-3-1942	ಶಿರೂರು ಮಹಾಲಿಂಗ ಶೆಟ್ಟಿ, ನಾಗಪ್ಪ ಶೆಟ್ರ ಅಳಿಯ, ರೈತ, ಪೋಸ್ಟು ಶಿರೂರು.	ರೂ. 175.

Office of the Corporation, Dated 25-7-1943 — H. Ganesha Rao, Agent

ಸಿನೆಮಾ ಸುದ್ದಿ

ಸಿನೆಮಾ ಉತ್ಪಾದಕರ ಮೇಲೂ ಬಲಾತ್ಕಾರ?

ಯುದ್ಧ ಚಿತ್ರಗಳನ್ನು ತೋರಿಸಿಯೇ ತೀರಬೇಕೆಂದು ಸಿನೆಮಾ ಪ್ರದರ್ಶಕರ ಮೇಲೆ ಬಲಾತ್ಕಾರವಾದಂತೆ, ಚಿತ್ರ ತಯಾರಿಸುವವರಿಗೆ ಕಚ್ಚಾ ಫಿಲ್ಮು ಸಿಗಬೇಕಾದರೆ ಯುದ್ಧ ಚಿತ್ರಗಳನ್ನೂ ತಯಾರಿಸಲೇಬೇಕೆಂದು ಉತ್ಪಾದಕರ ಮೇಲೆಯೂ ಬಲಾತ್ಕಾರ ಬಿದ್ದಿದೆ ಈ ಸಂಬಂಧ ಬೊಂಬಯಿಗೆ ಐ. ಸಿ. ಎಸ್ ಆಫೀಸರ್ ಶ್ರೀ ಪಿ. ಎನ್ ಥಾವರ್ ಬಂದಿದ್ದು ಸಿನೆಮಾ ನಿರ್ಮಾಪಕರನ್ನು ಕಂಡು ಮಾತನಾಡಿದರು. ಮೊದಲು ಈ ವಿಚಾರದಲ್ಲಿ ಎಲ್ಲರೂ ಕಹಿಮುಖಮಾಡಿದರೂ ಸಂಭಾಷಣೆಯ ಕೊನೆಗೆ ಪ್ರತಿಯೊಬ್ಬರೂ ಉಮೇದ್ವಾರಿಗಳಾಗಿ ಮುಂದೆ ಬಂದದ್ದು ಆಶ್ಚರ್ಯ ಏಕೆಂದರೆ ಯಾರು ಯುದ್ಧ ಚಿತ್ರಗಳನ್ನು ತಯಾರಿಸುವುದಿಲ್ಲವೋ ಅವರಿಗೆ ಕಚ್ಚಾ ಫಿಲ್ಮುಗಳನ್ನು ಕೊಡಲಾಗುವುದಿಲ್ಲವೆಂದೂ, ಯಾರು ಮೊದಲಾಗಿ ತಯಾರಿಸುತ್ತಾರೋ ಅವರಿಗೆ ಮೊದಲು ಒದಗಿಸಬಹುದೆಂದೂ ಐ. ಸಿ. ಎಸ್ ಆಫೀಸರರು ನಯವಿನಯದಿಂದ ಹೇಳಿಬಿಟ್ಟಿದ್ದರು! ಅಂತೂ ಕೊನೆಗೆ ೨೫ ಸಂಪೂರ್ಣ ಯುದ್ಧದ ಚಿತ್ರಗಳನ್ನೂ ೫೦ ಸಣ್ಣ ಚಿತ್ರಗಳನ್ನು ಹೀಗೆ ೭೫ ಯುದ್ಧ ಪ್ರಚಾರ ಚಿತ್ರಗಳನ್ನು ತಯಾರಿಸಲು ಒಪ್ಪಿಕೊಂಡಿದ್ದಾರೆ ಹಿಂದಿಯಲ್ಲಲ್ಲದೆ ತಮಿಳು, ಬಂಗಾಳಿ, ತೆಲುಗುಗಳಲ್ಲಿಯೂ ದೀರ್ಘ ಚಿತ್ರಗಳು ತಯಾರಾಗಲಿವೆ! ಆದರೆ ಇದರ ಒಂದು ಚಮತ್ಕಾರವೆಂದರೆ ಸ್ಟುಡಿಯೋ ಉಳ್ಳ ನಿರ್ಮಾಪಕರಿಗೆ ಮಾತ್ರ ಈ ಯುದ್ಧ ಚಿತ್ರಗಳನ್ನು ತಯಾರಿಸಲು ಹಂಚಿಕೊಟ್ಟಿದ್ದನ್ನು ನೋಡಿದರೆ ಸ್ಟುಡಿಯೋ ಇಲ್ಲದ ಸುಮಾರು ೭೫ರಷ್ಟರ ಎಂದರೆ ಅಧಿಕ ಸಂಖ್ಯೆಯ ಸಿನೆಮಾ ನಿರ್ಮಾತೃಗಳಿಗೆ ಮುಂದೆ ಕಚ್ಚಾ ಫಿಲ್ಮು ದೊರಕುವುದು ಸಂಭವವೇ ಎಂಬುದು ದೊಡ್ಡ ಪ್ರಶ್ನಾರ್ಥಕ ಚಿಹ್ನೆಯಾಗಿದೆ!

ಪತ್ನಿಯೂ ನಟಿಯೂ ಒಬ್ಬಳೇ ಆಗಲಾರಳು!

ಸಿನೆಮಾ ಸುಂದರಿಯರ ಬೆನ್ನು ಹಿಡಿಯುವವರಿಗೆ ಇಲ್ಲೊಂದು ಪಾಠ ಇದೆ. ಜಹೂರ್ ರಾಜಾ "ಸಿಕಂದರ್" 'ಪಿರ್ ಮಿಲೇಂಗೇ' ಖ್ಯಾತಿಯ ಮೀನಾಳನ್ನು ಮದುವೆಯಾದ. ಒಳ್ಳೆಯ ಸರಸ ದಾಂಪತ್ಯವೆಂದು ಎಲ್ಲರೂ ಕೊಂಡಾಡಿದರು! ನವ ದಂಪತಿಗಳಾದರೂ ಹಾಗೆಂದೇ ಭಾವಿಸಿರಬೇಕು ಆದರೆ ಇತ್ತೀಚೆಗೆ ಅವರು ವಿವಾಹವಿಚ್ಛೇದ ಮಾಡಿಕೊಂಡಿದ್ದಾರೆ, ವಿವಾಹಿತ ಜೀವನದ ಎರಡು ವರ್ಷಗಳ ಸುಖಾನುಭವದ ನಂತರ! ಈ ವಿವಾಹವಿಚ್ಛೇದದ ಕಾರಣ ವಿವರಿಸುತ್ತಾ ಜಹೂರ್ ರಾಜಾ ಹೀಗನ್ನುತ್ತಾನೆ "ಓರ್ವ ಸ್ತ್ರೀಯು ಒಮ್ಮೆಗೇ ಪತ್ನಿಯಾಗಿ ಗೃಹರಂಗವನ್ನೂ, ನಟಿಯಾಗಿ ಸಿನೆಮಾ ರಂಗವನ್ನೂ ಅಲಂಕರಿಸಲಾರಳು ಇದು ಮೀನಾಳೊಡನೆ ಎರಡು ವರ್ಷ ವಿವಾಹಿತ ಜೀವನ ನಡೆಸಿದ ನನ್ನ ಅನುಭವ. ಒಂದೋ ಆಕೆ ಗೃಹಿಣಿಯಾಗಿ ಗೃಹಿಣೀ ಕರ್ತವ್ಯ ಮಾತ್ರ ಮಾಡಬೇಕು, ಇಲ್ಲವಾದರೆ ನಟಿಯಾಗಿ ಸಿನೆಮಾ ತಾರೆ ಮಾತ್ರ ಆಗಬೇಕು ಒಮ್ಮೆಗೇ ಎರಡೂ ಆಗುವುದಿಲ್ಲ. ಸಿನೆಮಾ ತಾರೆ ಮಾಡಲಾಗದ ಕರ್ತವ್ಯ ಮಾಡುವ ಗೃಹಿಣಿಯೊಬ್ಬಳು ಪತ್ನಿಯಾಗಿರಬೇಕೆಂದು ನಾನು ಬಯಸಿದೆ. ಅದಾಗದೆ ಇರುವುದರಿಂದ ನಾವು ವಿವಾಹವಿಚ್ಛೇದ ಮಾಡಿಕೊಂಡೆವು' ಕಿಶೋರಶಾಹು ಸ್ನೇಹಪ್ರಭಾರ ಅನುಭವವೂ ಇದೇ ಇರಬಹುದೆ? ಸಿನೆಮಾ ತಾರೆಗಳ ಬೆನ್ನು ಹಿಡಿಯುವರು ಈ ಯುವಕರ ಅನುಭವದಿಂದ ಪಾಠ ಕಲಿಯಬಹುದು!

ವಿಶೇಷ ಸುದ್ದಿಗಳು

'ಮುಮ್ತಾಜ್ ಶಾಂತಿ' ಎಂಬ ಹೆಸರಲ್ಲಿ ಹಿಂದೂ ಮುಸ್ಲಿಂ ಸಂಗಮವಿದೆ ಆಕೆ ಮುಸ್ಲಿಮಳೋ ಹಿಂದುವೋ ಎಂದು ಯಾರಿಗಾದರೂ ಸಂಶಯಬರಬಹುದು ಆದರೆ ಅವಳ ನಿಜವಾದ ಹೆಸರು ಮುಮ್ತಾಜ್ ಎಂದು ಯಾವ ಜಾತಿಯವಳೆಂದು ಇದರಿಂದ ಅರ್ಥಮಾಡಿಕೊಳ್ಳಿ, ಶಾಂತಿ ಎಂಬ ಉಪ ನಾಮಧೇಯ ಅವಳಿಗೆ ಆಕೆಯ ಆರಾಧಕರು ಕೊಟ್ಟದ್ದು, ಬಹುಶಃ ಆಕೆಯನ್ನು ನೋಡಿದರೆ, ಅವಳ ನಟನೆ, ಸಂಗೀತ ಹಾವಭಾವಗಳಲ್ಲಿ ಅವರಿಗೆ ನಿಜವಾಗಿ ಶಾಂತಿ ದೊರೆತಿರಬೇಕು!

ನಿರ್ದೇಶಕ ಬರುವಾರ ಪೂರ್ಣ ಹೆಸರು ಪ್ರಮಥೇಶಚಂದ್ರ ಬರುವ ಎಂದು ಬಂಗಾಳದ ಗೌರೀಪುರ ಎಂಬ ದೊಡ್ಡ ಜಮೀನ್ದಾರಿಯ ರಾಜಕುಮಾರ ಅವರು. ಅವರಲ್ಲಿರುವ ರಾಜ ರಕ್ತಕ್ಕಿಂತಲೂ ಅವರ ಐಶ್ವರ್ಯ ಹಿರಿದು. ಶಾಂತಿನಿಕೇತನದಲ್ಲಿ ಗುರುದೇವ ರವೀಂದ್ರರಲ್ಲಿ ಕಲಾಭ್ಯಾಸ ಮಾಡಿದ ಆದರ್ಶವಾದಿ. ಜಮುನಾಳೊಡನೆ ಯೂರೋಪ್ ಖಂಡಗಳಲ್ಲಿ ಸಂಚಾರ ಮಾಡಿ ಬಂದಿದ್ದಾರೆ! ಕಲೆಗಾಗಿ, ಕಲಾಸೇವೆಗಾಗಿ ಜೀವವನ್ನರ್ಪಿಸಿದ ರಾಜಕುಮಾರ ಅವರು!

ನೀನಾಳಿಗೆ ಮದುವೆ ಆಗಿದೆ, ಮೊಶಿನ್ ಅಬ್ದುಲ್ಲಾರು ಆಕೆಯ ಕೈ ಹಿಡಿದ ಭಾಗ್ಯವಂತ ಈತ ರೇಣುಕಾ ದೇವಿಯ ಸೋದರ ರೇಣುಕಾ ದೇವಿ ಹಾಗಾದರೆ ಹಿಂದೂ ಸ್ತ್ರೀಯಲ್ಲ!

'ಅಖ್ತಾರಿ ಬಾಯಿ ಫೈಜಾಬಾದಿ ಈಕೆ ಔಧದ ಪ್ರಸಿದ್ಧ ಗಾಯಕಿ ಸಿರಿವಂತೆಳು ವ್ಯವಹಾರದಲ್ಲಿ ಮೋಸ ಮಾಡಿದಳೆಂದು, ರೂ 300 ಜುಲ್ಮಾನೆ ಅಥವಾ 9 ತಿಂಗಳ ಕಠಿಣ ಸಜೆಗೆ ಗುರಿಯಾಗಿದ್ದಾಳೆ! ಕಲಾವಂತರೂ ಧನ ಲಾಲ್ಸಗಳಾಗುತ್ತಾರೆಯೆ?

THE CANARA BANKING CORPORATION Ltd

(Incorporated in Brit sh India with limited l ability)

STATEMENT OF AFFAIRS AS ON 31ST DECEMBER 1942

Capital & Liabilities	Rs	As	Ps	Property & Assets	Rs	As	Ps
Paid up Capital	6 36 890	0	0	Office premises furniture etc	91 659	0	0
Reserve & other funds	3 71 882	13	11	Advances	31 28 612	4	9
Deposits	41 83 873	4	1	Investment on Govt Securities etc at cost	15 34 536	14	3
Due to Bankers	6 08 545	12	1	Sundries	74 183	5	7
Bills per contra	3 59 357	12	1	Bills for Collection	3 59 357	12	1
Sundries including branch adjustments & undisbursed profits	2 83 736	5	9	Cash on Hand & with bankers	12 05 397	14	8
Profit for the year 1942	49 461	3	5				
Total Rs	63 93 747	3	4	Total Rs	63 93 747	3	4

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಗೆಯೇ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವವಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದುದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

NOTICE

The 15th and 16th August 1943, have been fixed as the days for recruiting at Mangalore youths to the Army for India's defence during the ensuing Recruiting Week commencing from 15th August 1943 It is the duty of all public spirited gentlemen to do their utmost to make the Recruitment week the success that it deserves to be All gentlemen of influence are earnestly requested to appeal to the patriotism of the youths to join the army in large numbers An earnest appeal is also made to the youths of Mangalore to show that this district is not behind any other in contributing its best to the defence of this country at this most opportune time

H. Hoosein Puttur Sahib

Dated 28-7 43 — Chairman, Municipal Council Mangalore

NOTICE

The Bombay Life Assurance Company, Limited

Notice having been given of the Loss of Policy No 49572 on the Life of Rev Fr Lawrence Stanislaus D'Souza a duplicate policy will be issued unless objection is lodged with us within one month from this date.

Bombay, 27-7-1944 — Jyotendra L. Mehta, *Managing Director.*

The Bank of [illegible] Limited, [illegible].

Estd. 1931

HEAD OFFICE [illegible]lore. *BRANCHES* Moodabidri & Padubidri.

[illegible]

ISSUES DRAFTS ON ALL IMPORTANT TOWNS IN THE DISTRICT and also on BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.

at very favourable rates

All kinds of inland banking business undertaken

ಹುಳುಕಡ್ಡಿ ಮದ್ದು



ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ, ಉಷ್ಣತ್ರಾವ, ತಲೆ ಹುಣ್ಣು, ವ್ರಣ ಮೊದಲಾದ ಎಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ನೀವೀವರೆಗೆ ವಿಮೆಯನ್ನು ಇಳಿಸದಿದ್ದರೆ, ಯಾ ಸಾಕಷ್ಟು ವಿಮೆಯನ್ನು ಮಾಡಿಲ್ಲವಾದರೆ

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡಿನಲ್ಲಿ

ಈಗಲೇ ವಿಮೆ ಇಳಿಸಿರಿ.

ಏಕೆಂದರೆ.

1. ಜೀವವಿಮೆಯು ಒಬ್ಬನ ವೃದ್ಧಾಪ್ಯದ ಮತ್ತು ಸಮೀಪದ ಹಾಗೂ ಪ್ರೀತಿಯ ಸಂಬಂಧಿಕರ ಜೀವನವನ್ನು ಸುರಕ್ಷಿತಗೊಳಿಸುತ್ತದೆ.
2. ನೀವಿಂದು ವಿಮೆಯನ್ನಿಳಿಸಬಲ್ಲಿರಾದರೆ ನಾಳೆ ಹಾಗೆ ಮಾಡಲು ಶಕ್ತರಾಗದೆ ಹೋಗಬಹುದು.
3. ಆರೋಗ್ಯವು ಅನಿಶ್ಚಿತವೆಂದಾದರೆ ಮೃತ್ಯುವು ಯಾರನ್ನೂ ಬಿಡುವಂತಿಲ್ಲ.
4. ಮೃತ್ಯು ಮತ್ತು ಮುಪ್ಪು ಎಂಬುದು ಅಮೂಲ್ಯವಾದೊಂದು ನಿಶ್ಚಿತ.
5. ಜೀವವಿಮೆಯು ಮರಣದ ಕ್ರೂರತೆಯನ್ನು ಹೋಗಲಾಡಿಸುವುದೊಂದೇ ಅಲ್ಲ; ಅದರ ಸಂಕಷ್ಟವನ್ನೂ ದೂರೀಕರಿಸುತ್ತದೆ.

ಆದುದರಿಂದ ಇಂದೇ ಜೀವವಿಮೆ ಮಾಡುವುದು ಲಾಭಕರವಾಗಿದೆ.

ವಿಶೇಷ ಮಾಹಿತಿಗೆ ದಯಮಾಡಿ ಬರೆಯಿರಿ:

ಕೊಟ್ಟಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

— : ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ : —

ಮಂಗಳೂರು ಕಲ್ಲಿಕೋಟೆ ಸೇಲಂ ತಿರುವಾಂಕೂರು ಬೆಂಗಳೂರು ನಗರ ಮತ್ತು ಬೊಂಬಾಯಿ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವ ವಿಧದ ದೋಷಗಳನ್ನು ಗುಣಪಡಿಸುವ ದಿವ್ಯ ಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ್ ವ ಏಜೆಂಟರು:—

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಪೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೋ:—1. ಮಾರಾಠ ಗಲ್ಲಿ ಹುಬ್ಬಳ್ಳಿ.
2. 36 ಫ್ರಾಕೊರ್ಸ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.

ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಕು 6—8—1943 [ಸಂಚಿಕೆ 32]

ವೈಸರಾಯರ ಭಾಷಣ ನಿರಾಶೆಯನ್ನು ಹುಟ್ಟಿಸಿದೆ!

ವೈಸರಾಯರ ಸಪ್ಪೆ ಭಾಷಣ!
ಭಾರತೀಯರಲ್ಲಿ ಐಕ್ಯವಿಲ್ಲವಂತೆ!

ಹೊಸದಿಲ್ಲಿಯಲ್ಲಿ ಸೇರಿದ ಕೇಂದ್ರ ಎಸೆಂಬ್ಲಿ ಅಧಿವೇಶನದಲ್ಲಿ ವೈಸರಾಯರು ಸಂಪ್ರದಾಯದಂತೆ ಈ ಸಲವೂ ಭಾಷಣವಿತ್ತರು. ಅದರಲ್ಲಿ, ವಿಶೇಷವೇನೂ ಇರಲಿಲ್ಲ. ಭಾರತದ ಭವಿಷ್ಯದ್ವಿಚಾರ ಯಾವುದೇ ಸೂಚನೆಯಿಲ್ಲ; ಭಾರತೀಯರಲ್ಲಿ ಐಕ್ಯವಿಲ್ಲವೆಂಬ ಹಳೇ ಹಾಡೇ ಹಾಡಿದರು. ಯುದ್ಧಾನಂತರದ ಪುನರ್ಘಟನೆಯನ್ನು ಭಾರತೀಯರೇ ರಚಿಸಬೇಕೆಂದರು. ಬ್ರಿಟಿಷ್ ಸರಕಾರವು ಸೂಚಿಸಿದ ಸೂಚನೆಯು ಭಾರತೀಯರಿಗೆ ಸರಿತೋರದಿದ್ದರೆ ಅವರು ಬೇರೆ ಯೋಗ್ಯವಾದ ಸೂಚನೆ ಸೂಚಿಸಬಹುದೆಂದರು.

ವೈಸರಾಯರು ಪ್ರಾರಂಭದಲ್ಲಿ ತಮ್ಮ ಏಳು ವರ್ಷಗಳ ಆಡಳಿತಾವಧಿಯಲ್ಲುಂಟಾದ ರಾಜಕೀಯ ಸಮಸ್ಯೆಯನ್ನು ಚರ್ಚಿಸಿದರು. ಪ್ರಾಂತಿಕ ಆಡಳಿತ ಯಶಸ್ವಿ ಮಾಡುವುದು ಹಾಗೂ ಸಂಯುಕ್ತ ರಾಜ್ಯಘಟನೆ ಜಾರಿಗೆ ತರುವುದವೆರಡು ತನ್ನ ಮಹತ್ವದ ಉದ್ದೇಶಗಳಾಗಿದ್ದುವೆಂದರು. ಪ್ರಾಂತಿಕ ಆಡಳಿತ ಯಶಸ್ವಿಯಾಗಿದೆಯೆಂದೂ ಹೇಳಿದರು. ಸಂಯುಕ್ತ ರಾಜ್ಯಘಟನೆ ಜಾರಿಗೆ ಬರದಿರಲು ಭಾರತದ ಬೇರೆ ಬೇರೆ ಪಕ್ಷ ಪಂಗಡಗಳ ಕಿರುಕುಳವೇ ಕಾರಣವೆಂದರು. ಆದರೂ ಹೆಚ್ಚಿನ ಅಧಿಕಾರಗಳೀಗ ಭಾರತೀಯರಿಗೆ ಕೊಡಲ್ಪಟ್ಟಿದೆಯೆಂದೂ, ಕಾರ್ಯಕಾರೀ ಮಂಡಳ ವಿಸ್ತರಿಸಿ ಭಾರತೀಯರಿಗೆ ಹೆಚ್ಚಿನ ಪ್ರಾತಿನಿಧ್ಯ ಕೊಟ್ಟಿದೆಯೆಂದೂ, ಮಾತ್ರವಲ್ಲದೆ, ಬ್ರಿಟಿಷ್ ಸರಕಾರ ಅಧಿಕಾರ ಬಿಟ್ಟುಕೊಡಲು ತಯಾರಿದ್ದುದರಿಂದಲೇ ಭಾರತೀಯರಲ್ಲಿ ಅಧಿಕಾರಕ್ಕಾಗಿ ಆಂತರಿಕ ಕಲಹವುಂಟಾಗಿ ಅನೈಕ್ಯವಿರುವುದರಿಂದ ಅವರು ಒಂದಾಗಬೇಕೆಂದೂ, ಯುದ್ಧಾನಂತರವಾದರೂ ಭಾರತವು ಸ್ವತಂತ್ರವಾಗಬೇಕಾದರೆ ಭಾರತೀಯರೇ ಅದಕ್ಕೆ ಬೇಕಾದ ಸೂಚನೆ ತರಬೇಕೆಂದೂ ತಿಳಿಸಿದರು. ಆ ಮೇಲೆ ಹೊಸ ವೈಸರಾಯರಾಗಿ ಬರುವ ವೇವಲರ ಗುಣಕಥನ ಮಾಡಿದರು.

ವೈಸರಾಯರ ಭಾಷಣವು ನಿರಾಶಾಜನಕವಾಗಿದೆಯೆಂದು ದೇಶದ ಮುಖಂಡರು ಹಾಗೂ ಪತ್ರಿಕೆಗಳು ಈಗಾಗಲೇ ಅಭಿಪ್ರಾಯ ವ್ಯಕ್ತಮಾಡಿವೆ.

‘ಗಾಂಧಿಜಿ ಭೇಟಿಗೆ ಖಂಡಿತ ಒಪ್ಪಿಗೆಯಿಲ್ಲ’
ಬೋಸರ ಕುರಿತು ಕೆಲವು ವಿವರ ಸುದ್ದಿಗಳು

ಚಳವಳಗಾರರ ಮೇಲೆ ವಿಮಾನಗಳಿಂದ ಗುಂಡಿನ ಸುರಿಮಳೆ!

ಕಳೆದ ಅಗಸ್ಟ್ ಗಲಭೆಯಲ್ಲಿ ಚಳವಳಗಾರರ ಮೇಲೆ ವಿಮಾನಗಳಲ್ಲಿ ಬಂದು ಗುಂಡಿನ ಸುರಿಮಳೆ ಸುರಿಸಿದೆಯೆಂದು ಯುದ್ಧ ಸೆಕ್ರೆಟರಿ ತ್ರಿವೇದಿಯವರು, ನಿಯೋಗಿಗಳ ಪ್ರಶ್ನೆಗೆ ಉತ್ತರ ಕೊಡುತ್ತಾ ಒಪ್ಪಿಕೊಂಡರು! ಅವೆಲ್ಲಾ ಅಧಿಕಾರಿಗಳ ಒಪ್ಪಿಗೆಯಿಂದಲೇ ಮಾಡಲ್ಪಟ್ಟವೆಂದೂ ಅವರು ನುಡಿದರು.

ಗಾಂಧಿಜಿ ಭೇಟಿಗೆ ಖಂಡಿತ ಒಪ್ಪಿಗೆ ಕೊಡುವುದಿಲ್ಲ!
ಅಮೆರಿ ಉದ್ಗಾರ!

ಗಾಂಧಿ ವೈಸರಾಯ್ ಪತ್ರವ್ಯವಹಾರದ ವಿಚಾರ ಕಾಮನ್ಸ್ ಸಭೆಯಲ್ಲಿ ವಾದ ನಡೆಯಿತು. ಗಾಂಧಿಜಿ ಇತ್ತೀಚೆಗೆ ಪತ್ರ ಬರೆದು, ಭೇಟಿಗಾಗಿ ಅಥವಾ ಕಾಂಗ್ರೆಸು ಮುಖಂಡರನ್ನು ಕಾಣುವುದಕ್ಕಾಗಿ ಒಪ್ಪಿಗೆ ಕೇಳಿರುವರೇ ಎಂದು ಕೇಳಲು ಅಮೆರಿಯವರು ಇಲ್ಲವೆಂದರು. ಭಾರತ ಮಂತ್ರಿಯಾಗಲೀ ವೈಸರಾಯರಾಗಲಿ ಗಾಂಧಿ ಅಥವಾ ಬೇರೆ ಯಾವುದೇ ಕಾಂಗ್ರೆಸ್ ಮುಖಂಡರಿಗೆ ಪತ್ರ ಬರೆದಿರುವರೇ ಎಂದು ಕೇಳಿದ್ದಕ್ಕೂ ಇಲ್ಲವೆಂದರು. ‘ಆದರೆ ಗಾಂಧಿ ಮತ್ತು ಗೃಹಖಾತೆಯ ಅಧಿಕಾರಿಗಳೊಳಗೆ ಆಗಾಗ ಪತ್ರವ್ಯವಹಾರ ಆಗುತ್ತಿದೆ. ಆ ಪತ್ರದ ಸಂಖ್ಯೆ ಅಥವಾ ಅದರಲ್ಲಿನ ವಿಷಯಗಳನ್ನು ತಿಳಿಸಲು ಸಾಧ್ಯವಿಲ್ಲ’ ಎಂದೂ ಅಮೆರಿಯೆಂದರು. ‘ಗಾಂಧಿಯವರನ್ನು ಬಂಧಿಸಿದ ಪರಿಸ್ಥಿತಿಯನ್ನು ಪರ್ಯಾಲೋಚಿಸಿ ಅವರು ತಮ್ಮ ಅಭಿಪ್ರಾಯವನ್ನು ಜನರಿಗೆ ತಿಳಿಸಲು ಭಾರತದಲ್ಲಾಗಲಿ ಇಂಗ್ಲೆಂಡಿನಲ್ಲಾಗಲಿ ಖಂಡಿತ ಅವಕಾಶ ಕೊಡಬಾರದೆಂದು ಭಾರತ ಸರಕಾರ ನಿರ್ಧರಿಸಿದೆ’ ಎಂದು ಅಮೆರಿ ನುಡಿದರು.

ಶ್ರೀವಾಸ್ತವ ಸುಬ್ಬರಾಯನರು ವಿಚಾರವಿನಿಮಯದಲ್ಲಿ

ಮದ್ರಾಸ್ ಪ್ರಾಂತದ ಮಾಜಿ ಮಂತ್ರಿ ಡಾ। ಸುಬ್ಬರಾಯನ್ ಮತ್ತು ಸಂಯುಕ್ತ ಪ್ರಾಂತ ಮಾಜಿ ಪಾರ್ಲಿಮೆಂಟರಿ ಸೆಕ್ರೆಟರಿ ಶ್ರೀ ಗೋಪಿನಾಥ ಶ್ರೀವಾಸ್ತವ ಇವರಿಬ್ಬರು ಜತೆಯಲ್ಲಿ ಮುಂಬಯಿಗೆ ಹೋಗಿದ್ದು ಸದ್ಯದ ಪರಿಸ್ಥಿತಿಯಲ್ಲಿ ಕಾಂಗ್ರೆಸಿನವರು ಯಾವ ಕಾರ್ಯಕ್ರಮ ಕೈಕೊಳ್ಳಬೇಕೆಂದು ವಿಚಾರವಿನಿಮಯಕ್ಕೆ ತೊಡಗಿದ್ದಾರೆ. ಈ ವಿಚಾರ ಕಾಂಗ್ರೆಸ್ಸೇತರ ಮುಖಂಡರ ಸಲಹೆಯನ್ನೂ ಪಡೆಯುವರು.

ಟೋಕಿಯೋದಲ್ಲಿ ಸುಭಾಸಬೋಸರು!
— ಕೆಲವು ವಿವರದ ಸುದ್ದಿಗಳು

‘ಮದ್ರಾಸ್ ರಿವ್ಯೂ’ ಪತ್ರಿಕೆಯಲ್ಲಿ ಈ ಸಾರಾಂಶದ ಲೇಖನ ಒಂದು ಬಂದಿದೆ: ಸುಭಾಸಬೋಸರು, ಈಗ ಟೋಕಿಯೋದಲ್ಲಿರುವರು. ಇಲ್ಲಿಗೆ ಬಂದು ಇಂಗ್ಲಿಷ್, ಜರ್ಮನ್, ಹಿಂದಿ, ಬಂಗಾಳಿ ಭಾಷೆಗಳಲ್ಲಿ ಭಾಷಣ ಮಾಡಿದರು. ಈ ಭಾಷಣಗಳಲ್ಲಿ ಬೋಸರು ಜಪಾನರ ದಿಗ್ವಿಜಯವನ್ನು ಹೊಗಳುತ್ತಾರೆ. ‘ಭಾರತದ ಗಡಿನಾಡಿನಲ್ಲಿ ಜಪಾನ್ ಸೈನ್ಯ ನಿಂತಿದೆ. ಜಪಾನ್ ಸರಕಾರ ಭಾರತ ಸ್ವಾತಂತ್ರ್ಯಕ್ಕಾಗಿ ಸಹಾನುಭೂತಿ ತೋರಿಸಿದೆ’ ಎನ್ನುತ್ತಾ ಬೋಸರು ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ಖಂಡಿಸುತ್ತಾರೆ. ‘ಬ್ರಿಟಿಷ್ ಸಾಮ್ರಾಜ್ಯಶಾಹಿ ಕೊನೆಗೆ ನಿರ್ನಾಮವಾಗುವುದು. ಆದರೆ ಶರಣಾಗಲಾರರು. ಇತಿಹಾಸದಲ್ಲಿ ಸಾಮ್ರಾಜ್ಯಗಳ ಭವಿತವ್ಯ ಹೀಗೆಯೇ ಆಗಿದೆ’ ಎಂದು ಅವರು ನುಡಿದರು.

‘ಬೋಸರು ಬರ್ಲಿನಿನಲ್ಲಿದ್ದಾಗ, ಜರ್ಮನಿಯೇ ಭಾರತದ ಏಳಿಗೆ ಮಾಡುವುದೆಂದು ಹೇಳುತ್ತಿದ್ದರು. ಯುರೋಪಿನ ಮೇಲೆ ಮಿತ್ರರ ಆಕ್ರಮಣದ ವಿಚಾರವಾಗಿ ಬೋಸರು, ‘ಈ ಪ್ರಯತ್ನವು ಚಂದ್ರಲೋಕವನ್ನೇರುವ ಸಾಹಸದಂತೆ’ ಎಂದಿದ್ದಾರೆ. ಜಪಾನು ಮತ್ತು ಜರ್ಮನಿಗಳು ತಮ್ಮ ಸ್ವಾರ್ಥಸಾಧನೆಗೆ ಬೋಸರನ್ನು ಉಪಯೋಗಿಸುತ್ತವೆ. ಕ್ರಿಪ್ಸರು ಭಾರತಕ್ಕೆ ಬಂದಾಗ ಬೋಸರು ಭಾರತ ಬ್ರಿಟನುಗಳ ಒಪ್ಪಂದವನ್ನು ಸಹಿಸಿದಂತೆ ತೋರಲಿಲ್ಲ. ವಿಶಾಖಪಟ್ಟ, ಕೋಕನಾಡುಗಳಿಗೆ ಬಾಂಬು ಬಿದ್ದಾಗ, ಭಾರತವು ಜಪಾನಿಗೆ ಶರಣಾಗದಿದ್ದರೆ ಬಾಂಬಿನ ಪೆಟ್ಟು ಸಹಿಸಬೇಕಾಗುವುದೆಂದು ಜಪಾನು ಬೆದರಿಸಿತು. ಕ್ರಿಪ್ಸ್ ಸಂಧಾನ ವಿಫಲವಾದಾಗ ಅಕ್ಷರಾಷ್ಟ್ರಗಳಿಗೆ ಸಂತೋಷವಾಯಿತು. ಬೋಸರು ಸತ್ತಿರುವರೆಂಬ ಸುದ್ದಿಯನ್ನೂ ಅಕ್ಷರಾಷ್ಟ್ರಗಳು ಪ್ರಚಾರಪಡಿಸಿದ್ದವು. ಜರ್ಮನಿಯಲ್ಲಿದ್ದಾಗ ಬೋಸರಿಗೆ ಹಿಟ್ಲರ್ ಮುಸಲನಿಗಳು ಬಹುಸನ್ಮಾನ ವಸ್ತ್ರ ಕೊಟ್ಟಿದ್ದರಂತೆ’.

ದಕ್ಷಿಣ ಆಫ್ರಿಕದ ವಿರುದ್ಧ ಪ್ರತೀಕಾರ

ಕೈಕೊಳ್ಳಬೇಕೆಂದ ಠರಾವು ಕೇಂದ್ರ ಎಸೆಂಬ್ಲಿಯಲ್ಲಿ ಸ್ವೀಕೃತವಾಯಿತು. ಯುರೋಪಿಯನ್ ಪಂಗಡದವರು ದುಡುಕಿನ ಕಾರ್ಯಕ್ರಮ ಮಾಡಬಾರದೆಂದರು. ಹಿಂದೆ ದಕ್ಷಿಣ ಆಫ್ರಿಕದಲ್ಲಿ ಭಾರತದ ಏಜೆಂಟರಾದ ರೇಜಾ ಅಲಿಯವರೂ ದ. ಆಫ್ರಿಕ ಸರಕಾರದ ವರ್ಣದ್ವೇಷವನ್ನು ಖಂಡಿಸಿದ ಠರಾವಿಗೆ ಬೆಂಬಲವಿತ್ತರು. ಭಾರತದಿಂದ ಆಫ್ರಿಕಕ್ಕೆ ಹೋಗುವ, ಆಹಾರ ಸಾಮಗ್ರಿ, ಗೋಣಿಚೀಲ ಮೊದಲಾದವುಗಳನ್ನು ತಡೆಯಬೇಕು, ಭಾರತದಲ್ಲಿ ಬಂದು ನೆಲಸಿದ ದ. ಆಫ್ರಿಕನರ ಮೇಲೂ ನಿರ್ಬಂಧ ಹಾಕಬೇಕು ಮೊದಲಾಗಿ ಅಭಿಪ್ರಾಯವಿತ್ತರು. ಸರಕಾರವು ದ. ಆಫ್ರಿಕದ ಭಾರತೀಯರ ಸಹಾಯವಿಲ್ಲದೆ ಕರ್ತವ್ಯ ಚ್ಯುತಿ ಮಾಡಿದೆಯೆಂದು ಶ್ರೀ. ಬೆನರ್ಜಿಯವರು ಹೇಳಿದರು. ಮೇಲೆ ಎಂ. ಎಸ್. ಜೋಶಿ ಮೊದಲಾದವರು ಮಾತನಾಡಿ ಬೆಂಬಲವಿತ್ತರು. ಲೀಗೂ ಬೆಂಬಲಕೊಟ್ಟಿತು. ವೈಸರಾಯ್ ಕಾರ್ಯಕಾರಿ ಮಂಡಳದ ಸದಸ್ಯ ಡಾ. ಖಾರೆಯವರೂ ದ. ಆಫ್ರಿಕ ಸರಕಾರದ ನೀತಿ ಖಂಡಿಸಿ ಭಾಷಣವಿತ್ತರು.

ರಾಜಕೀಯ ಕೈದಿಗಳನ್ನು

ಯೋಗ್ಯ ರೀತಿಯಿಂದ ನಡೆಸಬೇಕೆಂದೂ, ೪೬೩೨ ಮಂದಿ ಸ್ಥಾನಬದ್ಧರ ಬಿಡುಗಡೆಯಾಗಬೇಕೆಂದೂ ಕೇಂದ್ರ ಎಸೆಂಬ್ಲಿಯಲ್ಲಿ ಸದಸ್ಯರು ವಾದಿಸಿದರು. ಸಂರಕ್ಷಕ ಕಾಯಿದೆಯನ್ನು ಕಟುವಾಗಿ ಟೀಕಿಸಲಾಯಿತು.

ಕಾಪು ಶ್ರೀ ಹಳೆ ಮಾರಿಯಮ್ಮ ದೇವರ ಭಂಡಾರದ ಬಾಬ್ತು ತಾರೀಕು 31-7-42ರಿಂದ ತಾ. 29-7-43ರ ವರೆಗಿನ ಒಂದು ವರ್ಷದ ಜಮಾ ಖರ್ಚುಗಳ ವಿವರ.

ಜಮಾ ವಿವರಗಳು	ನಗದು ರೂ.	ಅ.	ಪೈ.	ಇಡೀ ಪವನು	ಅರ್ಧ ಪವನು	ಮಸ್ಕತಿ ಮು.	ಕ.	ಸೇ.	ಭತ್ತ ಮು.	ಕ.	ಸೇ.	ತೆಂಗಿನ ಕ್ಯಾ	ಶೀಯಾಳ
ಗುದಸ್ತಾ ಶಿಲ್ಕು	80	6	3			81		3½					
ಗದ್ದಿಗೆ ಪೂಜೆ ಕಾಣಿಕೆ	1531	1	3										
ಕುಂಕುಮಾರ್ಚನೆ ಕಾಣಿಕೆ	14												
ನವರಾತ್ರಿ ಬಾಬ್ತು ನಗ್ದಿ ವ ಅಕ್ಕಿ	12	4				1	1	3½					
ಮಾರಿಪೂಜೆ 3 ಹರಿಕೆಪೂಜೆ 5 ವ ಪ್ರತಿಷ್ಠೆ ಕಾಣಿಕೆ ಕೂಡ	839	12					1	4				35	
ಆಸ್ತಿ ಉತ್ಪತ್ತಿ ಹುಟ್ಟುವಳಿ ಹಿಂದಿನ ಬಿಲೆ ಕೂಡಾ	1803	15											
ಹರಿಕೆ ಬಂದ ಬಾಬ್ತು ಜಮಾ						80			19	1	2	358	466
ಗುದಸ್ತಾ ಶಿಲ್ಕು ಪವನು ಅರ್ಧ ಪವನು ವಿಕ್ರಿತ ಜಮಾ	504			2	2								
ಅಕ್ಕಿ ವ ಭತ್ತ ವಿಕ್ರಿತ ಜಮಾ	828	4	9										
ಕಾರ್ಪೊರೇಶನ್ ಬೇಂಕ ಡಿಪೋಜಿಟು ವ ಬಡ್ಡಿ ಜಮಾ	305	12	4										
ಮಾರಿಗುಡಿ ಜೀರ್ಣೋದ್ಧಾರ ಬಗ್ಗೆ ವ ವಿಕ್ರಿತ ವಗೈರೆ ಜಮಾ	435	6	5										
ವೆಂಕಟ್ರಮಣ ದೇವರ ಭಂಡಾರದಿಂದ	1450												
1592/37 ಈಡು ದಸ್ತಾವೇಜು ಅಸ್ಲು ಬಡ್ಡಿ	809	10				1	1	9¾					
ಜುಮ್ಲಾ ಜಮಾ	8614	8	5	2	2	164	1	6¾	19	1	2	393	466

ಖರ್ಚು ವಿವರಗಳು	ನಗದು ರೂ.	ಅ.	ಪೈ.	ಇಡೀ ಪವನು	ಅರ್ಧ ಪವನು	ಮಸ್ಕತಿ ಮು.	ಕ.	ಸೇ.	ಭತ್ತ ಮು.	ಕ.	ಸೇ.	ತೆಂಗಿನ ಕ್ಯಾ	ಶೀಯಾಳ
ಆಸ್ತಿಗಳ ತೀರ್ವೆಗೆ	200	12											
ಗದ್ದಿಗೆ ಪೂಜೆಗಳಿಗೆ	217	8	6										
ನವರಾತ್ರಿ ಬಾಬ್ತು	196	14	10									308	440
ಮಾರಿಪೂಜೆಗಳ ಬಾಬ್ತು	486	13	1			1	1	3½					26
ವ್ಯವಹರಣೆಗಳ ಖರ್ಚು	52	10	6			12	2	12				68	
ಆಸ್ತಿಗಳ ಕೃತದ ಖರ್ಚು	20	15	8										
ನೌಕರರ ತಲಬು	803	1	10			35		5¼					
ಯೆಂಡೋಮೆಂಟ ಬೋರ್ಡ್ ಕಮಿಟಿ ವ ಓಡಿಟರರ ಫೀಸು ಖರ್ಚು	188	12											
ಬರವಣಿಗೆ, ಪ್ರಯಾಣ, ಪಸೂರಿ ಕೂಡಾ	183	6	6										
ವೆಂಕಟ್ರಮಣ ದೇವರ ಭಂಡಾರಕ್ಕೆ	549												
ಮಾರಿಗುಡಿ ಜೀರ್ಣೋದ್ಧಾರ ಪ್ರತಿಷ್ಠೆ ವ ಸಮಾರಾಧನೆಗಳ ಕೂಡಾ ಖರ್ಚು	4321	8	5			20						22	
ಹುಚ್ಚಂಗಿ ಗುಡಿ ಖರ್ಚು	692	14											
ಕೊರಪರೇಶನ ಬೇಂಕ ಸೇವಿಂಗ್ಸ ಡಿಪೋಜಿಟು ಖರ್ಚು	700												
ವಿಕ್ರಿತ ಅಕ್ಕಿ ವ ಭತ್ತ ಖರ್ಚು						95			19	1	2		
ಅಖೈರು ಶಿಲ್ಕು		3	1	2	2								
ಜುಮ್ಲಾ ಖರ್ಚು	8614	8	5	2	2	164	1	6¾	19	1	2	393	466

ಹರಿಕೆಗೆ ಬಂದ ಬಾಬ್ತು ಮೂಗುತಿ 13, ಬೊಟ್ಟು 11, ದಾರೆಮಣಿ 3, ಕರಿಮಣಿ 1, ಒಂಟಿ ಕರಿಮಣಿ ತುಂಡು 2, ಕೊಳ್ಳಿ 1, ಕೆಂಪಿನ ಬೆಂಡೋಲೆ ಜೋಡು 1, ಚಿನ್ನದ ತಾಳಿ 1ರ ತೂಕ 1¼ ಮಿಶ್ರಿ 1, ಚಿನ್ನ ದೃಷ್ಟಿ 1ರ ತೂಕ 1, ಬೆಳ್ಳಿ ಪದಕಗಳು 6, ಸಣ್ಣಜೋಡುಗಳು ಕೂಡಾ ಬೆಳ್ಳಿ ತೊಲೆ 6 ಶಿಲ್ಕು.

ಕಾಪು ಶ್ರೀ ಹಳೆ ಮಾರಿಯಮ್ಮ ದೇವರ ಭಂಡಾರದ ಬಾಬ್ತು 1943-44ಕ್ಕೆ ಒಂದು ವರ್ಷದ ಅಂದಾಜು ಜಮಾ ಖರ್ಚಿನ ಬಜೆಟು ವಿವರ

1943-44ಕ್ಕೆ ಅಂದಾಜು ಜಮಾ	ಖಾತೆಯ ಹೆಸರು	1943-44ಕ್ಕೆ ಅಂದಾಜು ಖರ್ಚು
	ಆರಂಭದ ಶಿಲ್ಕು	
0-8-1	ನಗ್ದಿ	
	ಗೇಣಿ ಉತ್ಪತ್ತಿ	
600-0-0	ನಗದಿ, ಆರುನೂರು ಹಿಂದಿನ ಬಾಕಿ	
600-0-0	ಧವಸಧಾನ್ಯ ಹಿಂದಿನ ಬಾಕಿ ಕೂಡಾ	
1800-0-0	ಗದ್ದಿಗೆ ಪೂಜೆ, ಮಾರಿ ಪೂಜೆ ನವರಾತ್ರಿ ಕೂಡಾ	
	ನೌಕರರ ತಲಬು	521-1[illegible]
	ಅಕ್ಕಿ ಮುಡಿ 42ರ	300-[illegible]
	ಗದ್ದಿಗೆ ಪೂಜೆ, ಮಾರಿ ಪೂಜೆಗಳ ನವರಾತ್ರಿ ಕೂಡಾ ಖರ್ಚು	300-[illegible]
	ಆಸ್ತಿಗಳ ತೀರ್ವೆಗೆ	184-[illegible]
	ಬರವಣಿ, ಪ್ರಯಾಣ, ಹಸುರಿ ಕೂಡಾ	100-[illegible]
	ಯೆಂಡೋಮೆಂಟು ಬೋರ್ಡು	125-[illegible]
8000-3-1		[illegible]

K. Narasimha Shenoy,
Manager.

ಕಾಪು ಶ್ರೀ ವೆಂಕಟರಮಣ ದೇವರ ಭಂಡಾರದ ಬಾಬ್ತು ತಾರೀಕು 31-7-1942ರಿಂದ ತಾ. 29-7-1943ರ ವರೆಗಿನ ಒಂದು ವರ್ಷದ ಜಮಾ ಖರ್ಚುಗಳ ವಿವರ.

ಜಮಾ ವಿವರಗಳು	ನಗದು ರೂ.	ಅ.	ಪೈ.	ಬೆಳ್ತಿಗೆ ಮು.	ಕ.	ಸೇ.	ಮಸ್ಕತಿ ಮು.	ಕ.	ಸೇ.	ಭತ್ತ ಮು.	ಕ.	ಸೇ.	ತೆಂಗಿನ ಕ್ಯಾ
ಗುದಸ್ತಾ ಶಿಲ್ಕು	115				1	¾	16	1	3				2
ಉಡುಪಿ ಡಿ. ಮು. ಕೋರ್ಟು ನಂಬ್ರ 504/39 ಡಿಕ್ರಿ ಪೈಕಿ ಜಮಾ	1300												
ಆಸ್ತಿ ಹುಟ್ಟುವಳಿ ಜಮಾ	570	8	7	21	1	2½	34	1	3	24			365
ಅನಂತವ್ರತದ ಖರ್ಚಿಗೆ ಜಮಾ	50												
ಅಕ್ಕಿ ವ ಭತ್ತ ವಿಕ್ರಿತ ಜಮಾ	200	11	9										
ಮಾರಿಯಮ್ಮ ದೇವರ ಭಂಡಾರ ಜಮಾ	549												
ಶಾಶ್ವತ ಸಂತರ್ಪಣೆ ಬಗ್ಗೆ ತಪಶೀಲು	65												22
ಅಮೃತಪಡಿಗೆ ಬಂದ ಬಾಬ್ತು	36	8			2	7							
ಶ್ರೀ ಕಾಶೀಮಠದ ಕಾಣಿಕೆ ಜಮಾ	1	11											
ಶ್ರೀ ವೆಂಕಟರಮಣ ದೇವರ ಕಾಣಿಕೆ	4	5	3										
ಕ್ರಯದ ಕ್ಯಾ ವ ಅಕ್ಕಿ ಜಮಾ				22	2								343
	2892	7	7	45		10¼	50	2	6	24			732

ಖರ್ಚು ವಿವರಗಳು	ನಗದು ರೂ.	ಅ.	ಪೈ.	ಬೆಳ್ತಿಗೆ ಮು.	ಕ.	ಸೇ.	ಮಸ್ಕತಿ ಮು.	ಕ.	ಸೇ.	ಭತ್ತ ಮು.	ಕ.	ಸೇ.	ತೆಂಗಿನ ಕ್ಯಾ
ಆಸ್ತಿಗಳ ತೀರ್ವೆಗೆ	126	8											
ಯೆಂಡೋಮೆಂಟ ಚಾರ್ಜು ಮತ್ತು ಕಮಿಟಿ ಕೂಡಾ 2 ವರ್ಷದ ವಂತಿಗೆ	42	6											
ಅನಂತವ್ರತದ ಖರ್ಚು	51	4	6										
ಸಮಾರಾಧನೆ ಶಾಶ್ವತ್ ಸಂತರ್ಪಣೆ ಕೂಡಾ	227	4	11	1	2	4							
ಉತ್ಸವಗಳ ವ ವಸಂತಕ್ಕೆ ಕೂಡಾ	212	2	7										
ನಿತ್ಯ ವಿನಿಯೋಗಗಳ ಅಕ್ಕಿ ಕ್ಯಾ ಎಲೆಅಡ್ಕೆ ಬತ್ತಿ ತೆಂಗಿನೆಣ್ಣೆ ಕೂಡಾ	627	15	6										
ನೌಕರರ ತಲಬು	114												
ಬರವಣಿಗೆ ಚಿಲ್ರೆ ಹಸುರಿಗಳ	20	8	3										
ಮಾರಿಯಮ್ಮ ದೇವರ ಭಂಡಾರಕ್ಕೆ	1450							1	9¾				
ಗೇಣಿ ಅಕ್ಕಿ ಕ್ರಯದ ಅಕ್ಕಿ ವ ಕ್ಯಾ ವ ಅಮೃತಪಡಿಗೆ ಬಂದ ಅಕ್ಕಿ ಕೂಡಾ				43	1								728
ವಿಕ್ರಿತ ಅಕ್ಕಿ ವ ಭತ್ತ							16	1	3	24			
ಅಖೈರು ಶಿಲ್ಕು	20	5	10			6¼	32	2	7¼				4
	2892	7	7	45		10¼	50	2	6	24			732

ಕಾಪು ಶ್ರೀ ವೆಂಕಟ್ರಮಣ ದೇವರ ಭಂಡಾರದ ಬಾಬ್ತು 1943-44ಕ್ಕೆ ಒಂದು ವರ್ಷದ ಅಂದಾಜು ಜಮಾ ಖರ್ಚಿನ ಬಜೆಟು ವಿವರ

1943-44ಕ್ಕೆ ಅಂದಾಜು ಜಮಾ ರೂ. ಅ. ಪೈ.	ಖಾತೆಯ ಹೆಸರು	1943-44ಕ್ಕೆ ಅಂದಾಜು ಖರ್ಚು
	ಆರಂಭದ ಶಿಲ್ಕು	
20-5-10	ನಗದಿ	
320-0-0	ಹಾಲಿಯಿರುವ ಧವಸಧಾನ್ಯ	
149-2-6	ಗೇಣಿ ಉತ್ಪತ್ತಿ ನಗದಿ	
650-0-0	ಮತ್ತು ಧವಸಧಾನ್ಯ	
55-0-0	ಮಾಮೂಲು ಕಾಣಿಕೆ ಮತ್ತು ಹರಿಕೆಗಳು	
400-0-0	ಉಡುಪಿ ಡಿ. ಮು. ಕೋರ್ಟು ನಂಬ್ರ 504/39ನೇ ಡಿಕ್ರಿ ಅದಾಲತು ಬಾಕಿ ಬರ ರೂಪಾಯಿ	
6-0-0	ತಸ್ತಿಕು	
	ಸರ್ಕಾರಿ ತೀರ್ವೆಗೆ	184-2-0
	ನಿತ್ಯಗಟ್ಲೆ ವಿನಿಯೋಗಗಳು	700-0-0
	ವಿಶೇಷಗಟ್ಲೆ ಉತ್ಸವ ಸಮಾರಾಧನೆ ಕೂಡಾ	500-0-0
	ನೌಕರರ ತಲಬು	114-0-0
	ನಾದಿಲ್ ವಾರು ಚಿಲ್ರೆ ಖರ್ಚು	20-0-0
	ಕಟ್ಟಡ ವಾಹನ ದುರುಸ್ತಿ	40-0-0
	ವ್ಯವಹರಣೆ ಖರ್ಚು	20-0-0
	ಯೆಂಡೋಮೆಂಟು ಬೋರ್ಡು ಮತ್ತು ಕಮಿಟಿ ಆಫೀಸು	20-0-0
1600-8-4		1598-2-0

K. Narasimha Shenoy, Manager.

ಸಮರಭೂಮಿಯ ಸಂಚಾರ

ಸಿಸಿಲಿಯಲ್ಲಿ ಇನ್ನೂ ಹೋರಾಟ ನಡೆಯುತ್ತಲೇ ಇದೆ. ಕೆಟಾನಿಯಾ ಕಾಳಗವೂ ಮುಂದುವರಿಯುತ್ತಿದೆ. ಸಿಸಿಲಿಯ ದಕ್ಷಿಣದಲ್ಲಿ ಜರ್ಮನ್ ಸೇನೆ ಮಿತ್ರರನ್ನು ಪ್ರತಿಭಟಿಸುತ್ತಿದೆ. ಕೆನೆಡಿಯನ್ ಮತ್ತು ಬ್ರಿಟಿಷ್ ಸೈನ್ಯಗಳು ಪರಾಕ್ರಮದಿಂದ ಕಾದಾಡುತ್ತಿವೆ. 'ನಾಜಿ ದಾಸ್ಯ ಶೃಂಖಲೆಯನ್ನು ಕಡಿದು ಶರಣು ಬನ್ನಿರಿ' ಎಂದು ಮಿತ್ರರು ಇಟಲಿಯನರಿಗೆ ಎಚ್ಚರಿಕೆ ಕೊಡುತ್ತಿದ್ದಾರೆ. ಇಟಲಿಯಲ್ಲಿ ಬೇಕಾದಷ್ಟು ಜರ್ಮನ್ ಸೇನೆಯಿದೆ. ಸಾಲದ್ದಕ್ಕೆ ಮುಸಲನಿ ಪತನದ ಸುದ್ದಿ ಕೇಳಿದ ಕೂಡಲೇ ಹಿಟ್ಲರ್ ಬ್ರೆನ್ನರ್ ಕಣಿವೆಯನ್ನು ಬಲಗೊಳಿಸಿಕೊಂಡಿದ್ದಾನೆ. ಆ ಮೂಲಕ ಮಿತ್ರರು ಯುರೋಪಿಗೆ ಧಾಳಿಯಿಡದಂತೆ ಮಾಡಲು! ಸಿಸಿಲಿಯಲ್ಲಿ ಅಮೆರಿಕನ್ ಸೇನೆಯೂ ಹೋರಾಡುತ್ತಿದೆ. ಅಮೆರಿಕದಿಂದ ಸಿಸಿಲಿಗೆ ಸಾಧನ ಸಾಮಗ್ರಿ ಬರುತ್ತಿವೆ.

ಸಿಸಿಲಿಯಲ್ಲಿ ಶತ್ರುಗಳ ಸಂರಕ್ಷಕ ಗುಡ್ಡದ ಮೇಲೆ ಭೀಕರ ಸಂಗ್ರಾಮವಾಗುತ್ತಿದೆ. ವ್ಯೂಹದ ಮಧ್ಯಭಾಗದಲ್ಲಿ ಮಿತ್ರಸೈನ್ಯಗಳು ಮುಖ್ಯವಾಗಿ ಬ್ರಿಟಿಷ್ ಮತ್ತು ಕೆನೆಡಿಯನ್ ಸೈನ್ಯಗಳು ಮುನ್ನುಗ್ಗಿ ಶತ್ರುವಿನ ಕೆಟಾನಿಯ ವ್ಯೂಹವನ್ನು ಗಂಡಾಂತರದಲ್ಲಿ ನೂಕುವ ಸಾಹಸ ನಡೆದಿದೆ. ಗಾಲ ಭೂಟೋವನ್ನು ವಶ ಮಾಡಿಕೊಂಡ ಬಳಿಕ ಮಿತ್ರರು ಮುಂದೆ ಮೂರು ಮೈಲು ಮುನ್ನುಗ್ಗಿ, ಅಡ್ರೊಯಿನಾದ ಕಡೆಗೆ ಸಾಗಿದ್ದಾರೆ. ಬಲಭಾಗದಲ್ಲಿ ಬ್ರಿಟಿಷ್ ದಳ ಸಾಹಸ ನಡೆಸಿದೆ. ಈ ಸೇನೆ ಅಡ್ರೋಯಿನಾದಿಂದ ಆರು ಮೈಲು ದೂರದಲ್ಲಿದೆ. ಅಡ್ರೋಯಿನಾ ಮುಖ್ಯ ಆಯಕಟ್ಟಿನ ಸ್ಥಳ. ಇದು ಮಿತ್ರವಶವಾಯಿತೆಂದರೆ ಜರ್ಮನರ ಸಾಹಸ ಮುಂದೆ ನಿರರ್ಥಕವಾಗುವುದೆಂದು ಸಮರ ತಜ್ಞರು ಅಭಿಪ್ರಾಯ ಪಡುತ್ತಾರೆ. ಮರಳು ಭೂಮಿಯ ಯುದ್ಧಕ್ಕೂ ಗುಡ್ಡನಾಡಿನ ಯುದ್ಧಕ್ಕೂ ಬಹು ವ್ಯತ್ಯಾಸವಿದೆ. ಹೇಸರ ಗತ್ತೆಗಳ ಮೇಲೆ ಸಾಮಾನು ಹೇರಿಕೊಂಡು ಹೋಗಬೇಕು. ಅಂತೂ ಈ ಯುದ್ಧವು ಪ್ರಾಚೀನ ಕಾಲದ ಯುದ್ಧಗಳನ್ನು ನೆನಪಿಗೆ ಬರುತ್ತದೆ.

ಮೆಸ್ಸಿನಾ ಯುದ್ಧವೂ ಈಗ ಆರಂಭವಾಗಿದೆ. ಕೆಟನಿಯಾ ಯುದ್ಧವು ಸದ್ಯ ಹಿನ್ನೆಲೆಗೆ ಬಂದಿದೆ. ಮಿತ್ರ ವಶವಾದ ರೀಗಲಬುಟೋವು ಶತ್ರುಗಳ ಉತ್ತರ ವ್ಯೂಹದಲ್ಲಿ ಮುಖ್ಯ ಸ್ಥಳ. ಕೆಟೀನಾವಾ ಎಂಬ ಇನ್ನೊಂದು ಸಿಸಿಲಿಯನ್ ನಗರವೂ ಮಿತ್ರವಶವಾಗಿದೆ. ಈ ನಗರವು ಡಿಟಾನಿಯೊ ನದಿಯ ಉತ್ತರ ಭಾಗದಲ್ಲಿದೆ.

ಸಿಸಿಲಿಯ ಉತ್ತರ ಕರಾವಳಿಯಲ್ಲಿ ಓರ್ಲಾಂಡೋ ಭೂಶಿರದ ಪಶ್ಚಿಮಕ್ಕೆ ಅಮೆರಿಕನ್ ನೌಕಾಪಡೆಯ ಕ್ರೂಜರುಗಳೂ ಮತ್ತು ವಿನಾಶಿಕೆಗಳು ಕರಾವಳಿ ರಸ್ತೆ ಹಾಗೂ ಅಮೆರಿಕನ್ ಸಪ್ತಮ ದಳದ ಎಡಪಾರ್ಶ್ವದಲ್ಲಿರುವ ಶತ್ರು ಕೇಂದ್ರ ಮೇಲೆ ಗುಂಡು ಸುರಿಸುತ್ತಿವೆ.

ಒರೆಲ್ ರಣರಂಗದಲ್ಲಿ ರಶ್ಯನರು ಮುಂದೆ ನುಗ್ಗುತ್ತಿದ್ದಾರೆ. ಡೊನೆಟ್ಜ್ ಪ್ರದೇಶದಲ್ಲಿ ಜರ್ಮನರು ಕೈಕೊಂಡ ಧಾಳಿಯು ವ್ಯರ್ಥವಾಯಿತೆಂದು ಹೇಳಲಾಗುತ್ತದೆ. ಬಯಲಗರದ ರಣರಂಗದಲ್ಲಿ ಗಸ್ತಿ ಚಟುವಟಿಕೆಗಳು ನಡೆಯುತ್ತಿವೆ. ಲೆನಿನ್‌ಗ್ರಾಡ್ ಮಾರ್ಗಕ್ಷೇತ್ರದಲ್ಲಿ ಇತ್ತಂಡದವರೂ ಗುಂಡುಗಳನ್ನು ಹಾರಿಸುತ್ತಿದ್ದಾರೆ.

ಒರೆಲ್ ಕ್ಷೇತ್ರದಲ್ಲಿ ನಾಲ್ಕೈದು ಮೈಲು ಅಂತರ ರಶ್ಯನರು ಮುನ್ನುಗ್ಗಿ, ಜನವಸತಿಯುಳ್ಳ ನಲ್ವತ್ತು ಐವತ್ತು ಸ್ಥಳಗಳನ್ನು ಆಕ್ರಮಿಸಿದರು. ಇವುಗಳಲ್ಲಿ ಒರೆಲ್ ನಗರದ ಪೂರ್ವಕ್ಕಿರುವ ಡೊಮಿನಿನೋ ರೈಲ್ವೆ ನಿಲ್ದಾಣ ಒಂದಾಗಿದೆ. ಸಿಲಾಟೊವ್ಕ ಮತ್ತು ಸಿಚ್ ಇವು ಮುಖ್ಯ ನಗರಗಳು. ಡಾನ್ಸಬ್ ಹೋರಾಟದಲ್ಲಿ ಶತ್ರುವಿಗೆ ಅಪಾರ ನಷ್ಟ ಸಂಭವಿಸಿದ್ದರಿಂದ ಶತ್ರು ಪ್ರತಿಧಾಳಿ ನಿಂತಿದೆ. ಲೆನಿನ್‌ಗ್ರಾಡ್ ವಲಯದಲ್ಲಿ ಫಿರಂಗಿಗರ್ಜನೆ ಕಡಿಮೆಯಾಗಿದೆ.

ಯುರೋಪಿನಲ್ಲೇ ಅತ್ಯಂತ ದೊಡ್ಡ ಕೇಂದ್ರವಾದ ರುಮೇನಿಯದ 'ಪ್ಲೋಯೆಸ್ಟಿ'ಯ ಮೇಲೆ ಧಾಳಿಯಾಗಿದೆ. ಅಮೆರಿಕನ್ ವಿಮಾನಗಳು ಬಹಳ ಭರದಿಂದ ಹಾರಾಡಿ ಈ ಸಾಹಸ ಮಾಡಿದವು.

ಮುಸಲನಿ ಪತನವಾದ ಕೂಡಲೇ ಇಟಲಿ ತಮಗೆ ಶರಣು ಬಂದು ಬಿಡುತ್ತದೆಯೆಂಬ ಮಿತ್ರರ ಹಾರೈಕೆಯಿನ್ನೂ ಫಲಿಸಲಿಲ್ಲ. ಮುಸಲನಿ ರಾಜಿನಾಮೆಯಿಂದ ಇಟಲಿಯಲ್ಲಿ ಆಂತರಿಕ ಅಶಾಂತಿ ಹೆಚ್ಚುತ್ತಿರುವುದಾಗಿ ತಿಳಿದುಬಂದರೂ, ಇಟಲಿ ಇನ್ನೂ ಯುದ್ಧ ಸಾಗಿಸುತ್ತಲೇ ಇದೆ. ವೆಟಿಕಾನ್ ರಾಯಭಾರಿ ಪದವಿಗೆ ಮುಸಲನಿ ಅಳಿಯ ಕೌಂಟ್ ಸಿಯಾನೋ ರಾಜಿನಾಮೆಯಿತ್ತಿರುವನಾಗಿ ತಿಳಿಯುತ್ತದೆ. ಮುಸಲನಿ ವಿಷಯ ಇಟಲಿಯ ಪತ್ರಿಕೆ ಇನ್ನೊಂದು ಕತೆ ಹೊರಡಿಸಿದೆ. 'ನಿಜವಾಗಿ ಮುಸಲನಿ ರಾಜಿನಾಮೆ ಕೊಟ್ಟಿಲ್ಲ. ಆತ ರೈತರ ಒಂದು ಸಭೆಗೆ ಹೋಗಿದ್ದ. ಇಟಲಿ ಅರಸು ಆತನನ್ನು ಅಗತ್ಯ ಬರಬೇಕೆಂದು ಹೇಳಿ ಕಳುಹಿಸಿದ; ಬಂದ ಮುಸಲನಿಯನ್ನು ಅಲ್ಲಿಯೇ ಸೆರೆಹಿಡಿಯಲಾಯಿತು' ಎಂದು ಆ ಪತ್ರಿಕೆ ಹೇಳುತ್ತದೆ. ರಾಜಕೀಯವೆಂದರೆ ನಿಜವಾಗಿ ಚಾಣಕ್ಯ ನೀತಿಯೆ! ಏನಾಗಿದೆಯೋ ಯಾರಿಗೆ ಹೇಳಲಿಕ್ಕಾದೀತು? ಇತ್ತೀಚೆಗೆ ಮುಸಲನಿಯ ಹಿಂಬಾಲಕರನ್ನು, ಫೇಸಿಸ್ಟ್ ಮುಖಂಡರನೇಕರನ್ನು ಬಂಧಿಸಲಾಗುತ್ತಿದೆಯೆಂಬ ಸುದ್ದಿಯಿದೆ.

ಕಂಬನಿಸುರಿಸುವರಿಲ್ಲದೆ, ಕೀರ್ತಿಕೊಂಡಾಡುವರಿಲ್ಲದೆ, ಗೌರವಸಲ್ಲಿಸುವರಿಲ್ಲದೆ, ಇಟಲಿಯ ಸರ್ವಾಧಿಕಾರಿ ಮುಸಲನಿ, ಕಳೆದವಾರ ಜಗತ್ತಿನ ರಂಗಭೂಮಿಯಿಂದ ಹೊರಬಿದ್ದನು! ಅವನ ಪತನಕ್ಕಾಗಿ ವಿಶಾಲ ಭಾರತದಲ್ಲಿ ಒಂದೇ ಒಂದು ಕಂಬನಿಯನ್ನು ಸುರಿಸಿದ ಭಾರತೀಯನಾವನಾದರೂ ಇದ್ದಾನೆಯೆ?

ಅಕ್ಷರಾಷ್ಟ್ರಗಳ ಮೂವರು ಪಾಲುಗಾರರಲ್ಲಿ ಮುಸಲನಿ ಬಗ್ಗೆ ಭಾರತಕ್ಕೆ ಕಡಿಮೆ ಗೌರವವಿದೆ. ಹಿಟ್ಲರನ ದೀಗ ಸಗಾ... ವನ್ನು ನೋಡಿ 'ಅದ್ಭುತವೀರ'ನೆನ್ನುವ ಭಾರತೀಯರಿರಬಹುದು; ಯುರೋಪಿಗೆದುರು, ಏಶ್ಯಾ ನಿಲ್ಲಬೇಕಾದರೆ, ಜಪಾನಿನ ಬೆಂಬಲ ಬೇಕೆನ್ನುವ ಭಾರತೀಯರನ್ನು ನೋಡಬಹುದು. ಆದರೆ ಇಟಲಿಯ ಈ ಪತಿತ ಸರ್ವಾಧಿಕಾರಿಯ ವಿಷಯ ಎಳ್ಳಷ್ಟಾದರೂ ಗೌರವವುಳ್ಳವರು ನಮ್ಮಲ್ಲಿ ಯಾರೂ ಇಲ್ಲ.

ಇತರ ಸರ್ವಾಧಿಕಾರಿಗಳಂತೆ, ಮುಸಲನಿಯಾದರೂ ಭಾರತದ ಪ್ರೀತಿ ವಿಶ್ವಾಸಗಳಿಸಿಕೊಳ್ಳಲು ಬೇಕಾದ ಪ್ರಯತ್ನಗಳನ್ನೆಲ್ಲಾ ಮಾಡಿದ್ದ. ೧೯೩೧ರಲ್ಲಿ ಗಾಂಧಿಜಿ ದುಂಡುಮೇಜಿನ ಪರಿಷತ್ತಿನಿಂದ ಮರಳಿ ಬರುವಾಗ ರೋಮಿನಲ್ಲಿ ಎರಡು ದಿನ ಇಳಿದಿದ್ದರು. ಮುಸಲನಿ ಆ ಕೂಡಲೇ ಮಹಾತ್ಮರಿಗೆ ಒಂದು ಆಮಂತ್ರಣವಿತ್ತನು. ಆ ಭೇಟಿಯ ವಿಚಾರ ಯಾವುದೇ ಪತ್ರಿಕೆಗಳಲ್ಲೂ ಪ್ರಕಟವಾಗಿಲ್ಲ. ಆದರೆ ಮುಸಲನಿಯು ಭಾರತದ ರಾಜಕೀಯದಲ್ಲಿ ವಿಶೇಷ ಆಸಕ್ತಿ ತೋರಿಸಿದನೆಂದೂ, ಸ್ವತಃ ಕ್ರೂರ ಹಿಂಸಾಕಾರಿಯಾದರೂ ಮಹಾತ್ಮರ ಅಹಿಂಸಾ ಸಮರದಲ್ಲಿ ಅತ್ಯಂತ ಅಭಿಮಾನ ತೋರಿಸಿದನೆಂದೂ ಹೇಳಲಾಗುತ್ತದೆ. ಆದರೆ ದಯಾಮಯ ಗಾಂಧಿಜಿ—ಹಿಂಸಾತುರ ಮುಸಲನಿಯೊಡನೆ ಒಪ್ಪಂದಕ್ಕೆ ಬರುವುದು ಸಾಧ್ಯವೇ ಇಲ್ಲ!

ಮುಸಲನಿ ಬಳಿಕ, ಭಾರತದ ಕಲಾಸಂಸ್ಕೃತಿಯ 'ಕೊಳ್ಳೆ'ಗೆ ಗಮನವಾಡಿದ. ಪಂಡಿತ ಓಂಕಾರನಾಥ್ ಎಂಬ ಪ್ರಸಿದ್ಧ ಭಾರತೀಯ ಸಂಗೀತಗಾರರನ್ನು ಮುಸಲನಿ ಆಮಂತ್ರಿಸಿಕೊಂಡ. ಮುಸಲನಿ ಭಾರತೀಯ ಸಂಗೀತಕ್ಕೆ ಮರುಳುಗೊಂಡನೆಂದೂ ಪ್ರಸಿದ್ಧವಾಗಿತ್ತು. ಮುಂದೆ ಇಟಲಿಯ ವಿಶ್ವವಿದ್ಯಾಲಯಗಳಲ್ಲಿ ಹಾಗೂ ಕಲಾಕೇಂದ್ರಗಳಲ್ಲಿ ಕಲಿಯುವ ಭಾರತೀಯ ವಿದ್ಯಾರ್ಥಿಗಳಿಗೆ ಅಲ್ಲಿನ ಸರ್ಕಾರ ವಿದ್ಯಾರ್ಥಿವೇತನ ಕೊಡುವುದಾಗಿ ತಿಳಿದು ಬಂತು! ಆದರೆ, ಕೆಲ ಕಾಲದ ಬಳಿಕ ಆ ಯೋಜನೆ ಅಲ್ಲಿಗೇ ನಿಂತಿತು!

ಮುಂದೆ ಅಭಿಸಿನಿಯಾ ಸಂಗ್ರಾಮ ಸುರುವಾಯಿತು! ಈ ಸಂದರ್ಭದಲ್ಲಿಯೇ ಮುಸಲನಿ ಭಾರತದ ಸಹಾನುಭೂತಿ ಸರ್ವಸ್ವವನ್ನೂ ಕಳಕೊಂಡದ್ದು. ದುರ್ಬಲ ಅರಕ್ಷಿತರಾಷ್ಟ್ರವೊಂದನ್ನು ಫೇಸಿಸ್ಟ್ ಶಕ್ತಿ ನಿರ್ದಯಮರ್ದನ ಮಾಡುತ್ತಿರುವುದನ್ನು ಕಂಡು ಸ್ವಾತಂತ್ರ್ಯ ಪ್ರಿಯ ಭಾರತೀಯರು ರೊಚ್ಚಿಗೆದ್ದರು. ಪಾಶ್ಚಾತ್ಯ ಸಮ್ರಾಜ್ಯಶಾಹಿಯ ನಾಚಿಕೆಯಿಲ್ಲದ ಸುಲಿಗೆ ಕೆಲಸವಿದೆಂದು ಅವರು ಖಂಡಿಸಿದರು. ಅಬಿಸೀನಿಯದ ನಿರಸ್ತ್ರ ಜನರ ಮೇಲೆ, ಸ್ತ್ರೀಪುರುಷ ಬಾಲವೃದ್ಧರ ಮೇಲೆ ಬಾಂಬೆಸೆಯುವುದು ತನಗೆ ಅತ್ಯಂತ ಸಂತೋಷವನ್ನೀಯುತ್ತದೆಂದು ಮುಸಲನಿ ಪುತ್ರ ವಿಟ್ಟೋರಿಯೋ ಹೇಳಿದ ಮಾತುಗಳನ್ನು ಕೇಳಿ ಭಾರತದ ಜನಮನವು ... ನಿಸ್ಸಹಾಯ ಜನರ ವಧೆಯ ರ... ದಿಂದ ತೊಯ್ದ, ಸರ್ವಾಧಿಕಾರಿಗಳ ... ಕುಲುಕುವರೆ ಭಾರತೀಯರು ಹೇಸುತ್ತಾರೆಂಬ ವಿಷಯವನ್ನು ಮೊತ್ತಮೊದಲ ಮುಸಲನಿಗೆ ತಿಳಿಸಿದವರು ಪಂಡಿತ ಜವಾಹರಲಾಲನೆಹರು! ಪತ್ನಿಯ ನಿಧನದ ಬಳಿಕ ಯುರೋಪಿನಿಂದ ಮರಳುವಾಗ, ಮಧ್ಯಮಾರ್ಗದಲ್ಲಿ ನೆಹರು ಇಟಲಿಯಲ್ಲಿ ತಂಗಿದ್ದರು. ನೆಹರುತ್ತಂಗಿದ್ದ ಹೋಟೆಲಿಗೆ ಓರ್ವ ಮುಖ್ಯ ಫೇಸಿಸ್ಟ್ ಅಧಿಕಾರಿ ಬಂದು ಮುಸಲನಿಯಿಂದ ಅವರಿಗೆ ಆಮಂತ್ರಣವಿದೆಯೆಂದು ತಿಳಿಸಿ ಬರಹೇಳಿದ. ಮುಸಲನಿ, ನೆಹರು ಭೇಟಿಗಾಗಿ ಇನ್ನೊಂದು ಪ್ರಾಮುಖ್ಯ ಕಾರ್ಯವನ್ನು ಬದಿಗೊತ್ತಿ ಕಾದು ಕುಳಿತಿರುವುದಾಗಿಯೂ ತಿಳಿಸಿದ. ನಿಜವಾಗಿಯೂ ಇದು ಓರ್ವ ಯುರೋಪಿಯನನಿಗಾದರೂ ದೊಡ್ಡ ಗೌರವವೇ ಆಗಿತ್ತು! ಆದರೆ ಧೀರನೆಹರುವಿನ ಉತ್ತರ ಎದೆ ನಡುಗಿಸುವಂಥಾದ್ದು! ನೆಹರು ಮುಸಲನಿ ಆಮಂತ್ರಣವನ್ನು ತಿರಸ್ಕರಿಸಿದರು! ನಿಸ್ಸಹಾಯ ಅಬಿಸೀನಿಯದ ಮೇಲೆ ನಿರ್ದಯ ಬಾಂಬು ಸುರಿಸಿದವನನ್ನು ನೋಡಲು ನಾ ಬರಲಾರೆನೆಂದು ಹೇಳಿಕಳುಹಿಸಿದರು! ಎಂಥಾ ಧೈರ್ಯ! ಸರ್ವಾಧಿಕಾರಿಯ ರಾಜ್ಯದಲ್ಲಿಯೇ ಸರ್ವಾಧಿಕಾರಿಗೆ ತಿರಸ್ಕಾರ! ಮುಸಲನಿಗಾದರೂ ಎದೆ ನಡುಗಿರಬೇಕು!

ಇಲ್ಲಿ ತುಸು ವಿಚಾರಿಸಬೇಕು! ಇಂಥಾ ಫೇಸಿಸ್ಟ್ ಶತ್ರು, ಸರ್ವಾಧಿಕಾರೀವಿರೋಧಿ ಪಂಡಿತನೆಹರುಗಳು, ಇಂದಿನ ಫೇಸಿಸ್ಟ್ ವಿರೋಧಿ ಸಂಗ್ರಾಮವೆಂದು ಹೇಳಲ್ಪಡುವ ಯುದ್ಧದಲ್ಲಿ ಫೇಸಿಸ್ಟ್ ಪರರೆಂಬ ಆರೋಪಿತರಾಗಿ, ಬ್ರಿಟಿಷ್ ಪ್ರಭುತ್ವದವರಿಂದ ಸೆರೆಮನೆಗೆ ತಳ್ಳಲ್ಪಟ್ಟಿದ್ದಾರೆ! ಪ್ರಜಾಪ್ರಭುತ್ವ, ಸ್ವಾತಂತ್ರ್ಯಗಳಿಗಾಗಿ ಹೋರಾಡಲ್ಪಡುವುದೆಂದು ಹೇಳಲ್ಪಟ್ಟ ಯುದ್ಧಕಾಲದಲ್ಲಿ, ಪ್ರಜಾಪ್ರಭುತ್ವ, ಸ್ವಾತಂತ್ರ್ಯಗಳ ಮೂರ್ತಿಯೆನಿಸಿದ ಪಂಡಿತ ನೆಹರು ಸೆರೆಯಮನೆಯಲ್ಲಿ ಸೇರಿಸಲ್ಪಟ್ಟಿರುವರು! ಇದೆಂಥಾ ವಿಪರ್ಯಾಸ! ಇದೆಂಥ ಆಭಾಸ!

ಅಂತೂ ಮುಸಲನಿ ಪತನ ಹೊಂದಿದನು; ನಿಜವಾಗಿಯೂ ಜಗತ್ತಿನ ಮಹಾವ್ಯಕ್ತಿಯೊಬ್ಬನು ರಂಗಸ್ಥಳದಿಂದ ಹೊರಬಿದ್ದನು! ಇಪ್ಪತ್ತೊಂದು ವರ್ಷಗಳ ಸರ್ವಾಧಿಕಾರಿ ಕಿರೀಟ ಕಳಚಿ ಕುಳಿತನು! ಹಿಟ್ಲರನ ಬಲಗೈ ಬಂಟನು ಅಪ್ಪಳಿಸಿ ಹೋದನು! ಫೇಸಿಸ್ಟ್ ಜನ್ಮದಾತನ ಸೊಕ್ಕು ಮುರಿಯಿತು! ಇಂಥಾ ಸಂದರ್ಭದಲ್ಲಿ ಮುಸಲನಿಗಾಗಿ ಕಂಬನಿಗರೆದವರು, ಆತನ ಕೀರ್ತಿಕೊಂಡಾಡುವವರು, ಆತನನ್ನು ತುಸುವಾದರೂ ಗೌರವಿಸುವವರು, ಭಾರತದಲ್ಲಿ ಒಬ್ಬನೂ ಇಲ್ಲ! ಆತನ ಪತನಕ್ಕಾಗಿ ಮರುಗುವ ಜೀವ ಒಂದೂ ಇಲ್ಲ! ಏಕೆಂದರೆ ಭಾರತೀಯರೆಲ್ಲರೂ ಫೇಸಿಸ್ಟ್ ವಿರೋಧಿಗಳು! ಇದನ್ನು ಬ್ರಿಟಿಷ್ ಪ್ರಭುತ್ವದವರು ಈಗಲಾದರೂ ಗಮನಕ್ಕೆ ತಂದುಕೊಳ್ಳುವುದು ಒಳ್ಳೆಯದು.

ಸ್ವದೇಶಾಭಿಮಾನಿ

ತಾರೀಕು 6—8—1943

ವೈಸರಾಯರ ಭಾಷಣ

ಕೇಂದ್ರ ಎಸೆಂಬ್ಲಿಯಲ್ಲಿ ವೈಸರಾಯ್ ಲಾರ್ಡ್ ಲಿನ್‌ಲಿತ್‌ಗೋರವರು ಸಂಪ್ರದಾಯದಂತೆ ಭಾಷಣವಿತ್ತರು. ಸಂಪ್ರದಾಯದಂತೆ, ಭಾರತದ ಬಿಕ್ಕಟ್ಟಿನ ಕಾರಣವನ್ನು ದೇಶದ ಜನತೆಯ ಮೇಲೆಯೇ ಹೊರಿಸಿದರು! ಏಳು ವರ್ಷಗಳ ಅಧಿಕಾರ ನಡೆಸಿದ ಬಳಿಕ, ಅಂತರ್ರಾಷ್ಟ್ರೀಯ, ರಾಷ್ಟ್ರೀಯ ಪರಿಸ್ಥಿತಿಗಳೀಗ ಇಷ್ಟೊಂದು ಪರಿವರ್ತನ ಹೊಂದಿದ್ದರೂ, ವೈಸರಾಯರ ಭಾಷಣ ಕ್ರಮದಲ್ಲಿ ಹಾಗೂ ಅವರ ಅಭಿಪ್ರಾಯದಲ್ಲಿ ಏನೇನೂ ಸಂಪ್ರದಾಯ ಪರಿವರ್ತನೆಯಾಗದಿರುವುದನ್ನು ನೋಡಿ ಹಲವರು ನಿರಾಶರಾಗಿದ್ದಾರೆ. ಭಾರತದ ಭವಿಷ್ಯತ್ತಿನ ಕುರಿತು ಒಂದೂ ಆಶ್ವಾಸನಕರವಾದ ಮಾತಿಲ್ಲದೆ, ಎಲ್ಲವೂ ಭಾರತೀಯರಿಂದಲೇ ಆಗತಕ್ಕದ್ದಿದೆಯೆಂದೂ, ಭಾರತೀಯರು ಅನೈಕ್ಯರಾಗಿರುವುದರಿಂದ ಈ ಬಿಕ್ಕಟ್ಟು ಉಂಟಾಗಿದೆಯೆಂದೂ ಹಾಡಿದ್ದನ್ನೇ ಹಾಡಿರುವುದನ್ನು ಕೇಳಿ ಹಲವರಿಗೆ ಬೇಸರವೇ ಆಗಿದೆ.

ವೈಸರಾಯರು ತಮ್ಮ ಪ್ರಧಾನ ಕಾರ್ಯವಾಗಿ, ಕಾರ್ಯಕಾರೀ ಮಂಡಳದ ವಿಸ್ತರಣ ವಿಚಾರವನ್ನು ಎತ್ತಿ ಹೇಳಿದರು. ಕೇವಲ ನಾಲ್ವರು ಯೂರೋಪಿಯರನ್ನುಳಿದರೆ ಮಿಕ್ಕ ಹನ್ನೊಂದು ಮಂದಿಯೂ ಭಾರತೀಯರೆಂದು ಸಾರಿದರು. ಆದರೆ ವೈಸರಾಯ್ ಕಾರ್ಯಕಾರೀಮಂಡಳವು ಭಾರತೀಯ ಪ್ರತಿನಿಧಿಗಳಿಂದ ವಿಸ್ತರಿಸಲ್ಪಟ್ಟರೂ, ನಿಜವಾದ ಅಧಿಕಾರವಿಲ್ಲದಿರುವಾಗ ಈ ಸದಸ್ಯರು ಏನು ತಾನೇ ಮಾಡಬಲ್ಲರೆಂದು ರಾಜ್ಯಶಾಸ್ತ್ರನೆಯ ಪಂಡಿತರಾದವರು ಪ್ರಶ್ನಿಸುತ್ತಾರೆ.

ಪ್ರಾಂತಿಕ ಸ್ವಾಯತ್ತತೆಯ ಯಶಸ್ವಿತೆಯ ವಿಚಾರ ವೈಸರಾಯರು ಸಂತೋಷಪಟ್ಟಂತೆ ತೋರುತ್ತದೆ. ಬಹು ಸಂಖ್ಯಾಕ ಪಕ್ಷದ ಸದಸ್ಯರನ್ನು ಸೆರೆಮನೆಯಲ್ಲಿಟ್ಟು ಅಲ್ಪ ಸಂಖ್ಯಾಕ ಮಂತ್ರಿಮಂಡಳ ರಚಿಸಿದರೆ ಇದು ಪ್ರಾಂತಿಕ ಸ್ವಾಯತ್ತತೆಯ ಆಭಾಸವೆಂಬುದನ್ನು ಎಲ್ಲರೂ ಬಲ್ಲರು. ಸಪ್ರು ಮೊದಲಾದ ಪಕ್ಷರಹಿತ ಮುಖಂಡರೂ ಕೂಡಾ, ಕಾಂಗ್ರೆಸ್ ಮುಖಂಡರನ್ನು ಸೆರೆಮನೆಯಿಂದ ಬಿಟ್ಟು ಬಿಕ್ಕಟ್ಟು ಬಗೆಹರಿಸಿ ಎಂದು ಏಕಕಂಠದಿಂದ ಸಾರುತ್ತಿರುವಾಗ ಆ ಕುರಿತು ವೈಸರಾಯರು ಏನೊಂದೂ ಆಶ್ವಾಸನವೀಯದಿರುವುದು ನಿಜವಾಗಿಯೂ ನಿರಾಶಾಜನಕವಿದೆ.

ಮುಂದಿನ ವೈಸರಾಯ್ ವೇವಲರನ್ನು ಲಾರ್ಡ್ ಲಿನ್‌ಲಿತ್‌ಗೋ ಚೆನ್ನಾಗಿ ಕೊಂಡಾಡಿದರು. ಹಾಗೆ ಅವರು ಕೊಂಡಾಡುವುದು ಸಹಜವಾದದ್ದೇ. ಆದರೆ ವೇವಲರು ಭಾರತದ ಜನತೆಗೆ ಎಷ್ಟರ ಮಟ್ಟಿಗೆ ಬೇಕಾಗುವರೆಂಬುದನ್ನು ಅವರ ಮುಂದಿನ ಆಡಳಿತವನ್ನು ನೋಡಿಕೊಂಡು ಭಾರತದ ಜನತೆಯೇ ನಿಶ್ಚಯಿಸೀತು. ಇಂದಿಗೆ ವೇವಲರು ವೈಸರಾಯರಾಗುತ್ತಾರೆಂಬುದರಿಂದ ಹಿಂದಿನವರು ಹೋಗಿ ಇನ್ನೊಬ್ಬರು ಬರುತ್ತಾರೆಂದು ಮಾತ್ರ ಭಾರತೀಯರು ಅರ್ಥಮಾಡಿಕೊಳ್ಳಬಲ್ಲರಲ್ಲದೆ, ಎಷ್ಟು ಹೊಗಳಿದರೂ ಅವರ ಕುರಿತು ಹೆಚ್ಚಿನ ಆಶಾತುರರಾಗಿರುವುದು ಸಂಭವವಿಲ್ಲ.

ಒಟ್ಟಿನಿಂದ ವೈಸರಾಯರ ಈ ಸಲದ ಭಾಷಣವು ಅವರ ಅಧಿಕಾರದಂತೆ ತುಂಬಾ ನಿರಾಶಾಜನಕವಿತ್ತು; ಭಾರತದ ಭವಿಷ್ಯತ್ತಿನ ವಿಚಾರ ಏನೋ ಸೂಚನೆ ಇರಲಿಲ್ಲ; ಕಾಂಗ್ರೆಸ್ ಮುಖಂಡರ ಬಿಡುಗಡೆಯ ಆಶೆಯಾವುದೂ ತೋರಿಬರಲಿಲ್ಲ, ಮಂತ್ರಿಮಂಡಳ ವಿಸ್ತರಣಕ್ಕಿಂತ, ಹೆಚ್ಚಿನ ರಾಜಕೀಯ ಘಟನಾಸುಧಾರಣೆ ತೋರಲಿಲ್ಲ. ಇದರಿಂದಾಗಿ ಭಾರತೀಯರು ಅಷ್ಟೊಂದು ಸಮಾಧಾನಪಟ್ಟುಕೊಂಡಿಲ್ಲ!

ರಾಜಕೀಯ ಕೈದಿಗಳು

ರಾಜಕೀಯ ಕೈದಿಗಳ ವಿಚಾರದಲ್ಲಿ ಕೇಂದ್ರ ಎಸೆಂಬ್ಲಿಯಲ್ಲಿ ತುಂಬಾ ಮಾತುಕತೆಗಳಾದವು. ಸರಕಾರವು ನ್ಯಾಯವಾದ ರೀತಿಯಿಂದ ರಾಜಕೀಯ ಕೈದಿಗಳನ್ನು ನೋಡುವುದಿಲ್ಲವೆಂಬ ವಿಷಯವಾಗಿ ಸದಸ್ಯರು ಕಟುವಾಗಿ ಟೀಕಿಸಿದರು. ರಾಜಕೀಯ ಕೈದಿಗಳನ್ನು ಸರಕಾರವು ಯೋಗ್ಯ ರೀತಿಯಿಂದ ನೋಡಬೇಕೆಂದೂ, ಇಂದು ಅನುಸರಿಸುತ್ತಿರುವ ಧೋರಣವನ್ನು ಪುನರ್ವಿಮರ್ಶಿಸಬೇಕೆಂದೂ ತಂದ ನಿರ್ಣಯವೇನೋ ಬಿದ್ದು ಹೋಯಿತು, ಕೇಂದ್ರ ಎಸೆಂಬ್ಲಿಯಲ್ಲಿ ಹಾಜರಿರುವ ಜನತಾ ಪ್ರತಿನಿಧಿಗಳನ್ನು ಸಂಖ್ಯೆಯ ಕಡೆಗೆ ಗಮನ ಕೊಟ್ಟರೆ ಆ ನಿರ್ಣಯವು ಬಿದ್ದು ಹೋದದ್ದರಲ್ಲಿ ಏನೂ ಆಶ್ಚರ್ಯವಾಗಲಾರದು. ಆದರೆ ಯುರೋಪಿಯನ್ ಪಕ್ಷವೊಂದನ್ನುಳಿದು ಮಿಕ್ಕೆಲ್ಲಾ ಪಕ್ಷಗಳೂ ಆ ನಿರ್ಣಯವನ್ನೆತ್ತಿ ಮಾತನಾಡಿದ್ದು ಹಾಗೂ ಸರಕಾರದ ಧೋರಣವನ್ನು ಟೀಕಿಸಿದ್ದು ಇಲ್ಲಿ ಗಮನಾರ್ಹವಿದೆ.

"ಇಂದು ಸರಕಾರದ ಸೂತ್ರದಲ್ಲಿ ಕೆಲವು ಭಾರತೀಯ ಪ್ರತಿನಿಧಿಗಳಿದ್ದರೂ ಅದರ ಧೋರಣವು ಪರಕೀಯವೇ ಇದೆ. ಆದ್ದರಿಂದ ಈ ದೇಶದ ಜನರ ಅಭಿಪ್ರಾಯವನ್ನು ಈಗ ಸರಕಾರ ಅಲ್ಲಗಳೆವುದು ತಪ್ಪು. ಸ್ಥಾನಬದ್ಧರನ್ನು ಹಾಗೂ ರಾಜಕೀಯ ಕೈದಿಗಳನ್ನು ಯೋಗ್ಯ ರೀತಿಯಿಂದ ನಡೆಸಬೇಕು. ವಿಚಾರಣೆಗೆ ಗುರಿಪಡಿಸದೆ ಸೆರೆಮನೆಗೆ ಸೇರಿಸಿದವನು ಕಾನೂನಿನ ಹಾಗೂ ಪ್ರಾಮಾಣಿಕರ ದೃಷ್ಟಿಯಿಂದ ನಿರಪರಾಧಿಯೇ ಆಗಿರುವನು. ಶಾಂತಿರಕ್ಷಣೆಗಾಗಿ ಅಂಥವನನ್ನು ಸೆರೆಮನೆಯಲ್ಲಿಡಬೇಕಾಗಿದೆಯೆಂದು ಸರಕಾರ ಹೇಳಿದರೂ ಅವರನ್ನು ಯೋಗ್ಯರೀತಿಯಿಂದಲೇ ನೋಡಬೇಕು" ಇಂತೆಂದು ಮುಸ್ಲಿಂ ಲೀಗಿನ ಪ್ರತಿನಿಧಿ ನವಾಬ್ ಜಾದಾ ಲಿಯಾಖತ್ ಅಲ್ಲಿಖಾನರು ಹೇಳಿದರು. ಮೇಲಿನ ಮಾತುಗಳು ಕಾಂಗ್ರೆಸ್ ವಿರೋಧಿ ರಾಜಕೀಯ ಪಕ್ಷದ ಪ್ರತಿನಿಧಿಯ ಮಾತುಗಳು! ಸರಕಾರವು ರಾಜಕೀಯ ಕೈದಿಗಳನ್ನು ನಡೆಸುತ್ತಿರುವ ವಿಷಯ ಜನಮತ ಹೇಗಿದೆಯೆಂಬುದಕ್ಕೆ ಇದು ಉತ್ತಮ ನಿದರ್ಶನವಾಗುವುದು.

ಸ್ವದೇಶ ಸಮಾಚಾರ

ಆಣೆ ಗಾಂಧಿ ಭೇಟಿಯಿಲ್ಲ

ಸಿಲೋನಿಗೆ ಹೋಗುವ ಮೊದಲು ಆಣೆ ಗಾಂಧಿಜಿ ಭೇಟಿ ಮಾಡುವರೆಂದು ಪ್ರಕಟವಾದ ಸುದ್ದಿ ನಿರಾಧಾರವಾದುದೆಂದು ಆಣೆಯವರೀಗ ತಿಳಿಸುತ್ತಾರೆ.

ಚಳವಳದಲ್ಲಿ ಭೀಕರ ಆರೋಪಕ್ಕೆ ಗುರಿಯಾದವರ ರಕ್ಷಣೆ

೯೪೨ರ ಆಗಸ್ಟ್ ೯ರ ನಂತರದ ಚಳವಳದಲ್ಲಿ ಭೀಕರ ಆರೋಪಕ್ಕೆ ಗುರಿಯಾದವರ ಬಗ್ಗೆ ನ್ಯಾಯವನ್ನೊದಗಿಸುವ ಸಲುವಾಗಿ ಮುಂಬಯಿಯಲ್ಲಿ ಕೆಲವು ಅಧ್ಯ ಮಹನೀಯರ ಒಂದು ಸಮಿತಿ ರಚಿತವಾಗಿದೆ, ಶ್ರೀಗಳಾದ ನರಿಮನ್, ಬ್ರೆಲ್ವಿ ಸೆಟಲವಾಡ, ವಾಡಿಯಾ ಮೊದಲಾದವರಿದರಲ್ಲಿದ್ದಾರೆ.

ಗಾಂಧಿಜಿ ವಿಚಾರ ಕೌನ್ಸಿಲ್‌ನಲ್ಲಿ ಪ್ರಶ್ನೋತ್ತರ

ಗಾಂಧಿಜಿಯವರ ಮೇಲೆ ಹಾಕಿರುವ ನಿರ್ಬಂಧವಿರುವ ವರೆಗೆ ಅವರ ಪತ್ರವ್ಯವಹಾರ ಪ್ರಕಟಿಸಲಾಗುವುದಿಲ್ಲವೆಂದು ಗೃಹಖಾತೆಯ ಮಂತ್ರಿಗಳು ಶ್ರೀ. ಪಿ. ಎನ್. ಸಪ್ರುಗಳ ಪ್ರಶ್ನೆಗೆ ಉತ್ತರ ಕೊಡುತ್ತಾ ಹೇಳಿದರು. ಆಗಸ್ಟ್ ನಿರ್ಣಯವನ್ನು ಗಾಂಧಿಜಿ ಹಿಂತೆಗೆದಿರುವರೇ ಎಂದು ಕೇಳಿದ ಪ್ರಶ್ನೆಗೂ ಅದೇ ಉತ್ತರ ಬಂತು. ಗಾಂಧಿ ಮತ್ತು ವರ್ಕಿಂಗ್ ಕಮಿಟಿ ಸದಸ್ಯರನ್ನು ಬಿಡುಗಡೆ ಮಾಡುವ ವಿಚಾರ ಸರಕಾರದ ಶರತಗಳನ್ನು ತಿಳಿಸಿದೆ, ಅದಿನ್ನೂ ಪೂರ್ಣಗೊಳಿಸಲ್ಪಟ್ಟಿಲ್ಲವೆಂದೂ ಹೇಳಲಾಯಿತು.

'ಗಾಂಧಿಜಿಯೊಡನೆ ನಮಗೂ ಸೆರೆ'

ಗಾರ್ಡಿಯನ್ ಟೀಕೆ

ಗಾಂಧಿಜಿ ಪತ್ರದ ವಿಚಾರ ಅಮೆರಿಯಿತ್ತ ಹೇಳಿಕೆ ಕುರಿತು, 'ಮೆಂಚೆಸ್ಟರ್ ಗಾರ್ಡಿಯನ್' ಪತ್ರಿಕೆ ಟೀಕಿಸುತ್ತಾ, ಗಾಂಧಿಜಿಯನ್ನು ಸೆರೆಯಲ್ಲಿಟ್ಟು ಅವರ ಅಭಿಪ್ರಾಯ ಪ್ರಕಟಣೆಗೆ ನಿರ್ಬಂಧ ಹಾಕಿದುದಕೊಡನೆ, ಸದ್ಯ ಗಾಂಧಿಜಿ ಅಭಿಪ್ರಾಯವೇನೆಂದು ನಮಗೂ ತಿಳಿಸದೆ ನಮ್ಮನ್ನೂ ಅಮೆರಿ ಸೆರೆಮನೆಯಲ್ಲಿಟ್ಟಿದ್ದಾರೆಂದು ಬರೆಯುತ್ತದೆ. ಮುಂದಿನ ಭಾರತದ ಪರಿಸ್ಥಿತಿಗೆ ಪಾರ್ಲಿಮೆಂಟಿನ ಮೂಲಕ ನಾವು ಜವಾಬ್ದಾರರಿರುತ್ತಾ ನಮಗೆ ಯಾವ ಅಭಿಪ್ರಾಯವೂ ತಿಳಿಸದಿರುವುದು ತಪ್ಪೆಂದು ಆ ಪತ್ರಿಕೆ ಟೀಕಿಸುತ್ತದೆ.

ಸಾವರ್ಕಾರರ ರಾಜಿನಾಮೆ

ಹಿಂದು ಮಹಾ ಸಭಾಧ್ಯಕ್ಷ ಸಾವರ್ಕಾರರು ಅನಾರೋಗ್ಯದ ನಿಮಿತ್ತ ಅಧ್ಯಕ್ಷಸ್ಥಾನಕ್ಕೆ ರಾಜಿನಾಮೆಯಿತ್ತಿದ್ದಾರೆ. ಕಳೆದ ಆರು ವರ್ಷಗಳಿಂದಲೂ ಅವರೇ ಅದರ ಅಧ್ಯಕ್ಷರಾಗಿದ್ದರು. ರಾಜಿನಾಮೆಯಿತ್ತರೂ ತಾನೋರ್ವ ಯೋಧನಾಗಿಯೇ ಇರುವೆನೆಂದು ಅವರು ತನ್ನ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಗಾಂಧಿಜಿ ಪತ್ರ

ಕಾಮನ್ಸ್ ಸಭೆಯಲ್ಲಿ ಅಮೆರಿಯವರಿತ್ತ ಹೇಳಿಕೆಯಂತೆ ಗೃಹಖಾತೆಯ ಅಧಿಕಾರಿಗಳೊಡನೆ ಗಾಂಧಿಜಿ ಪತ್ರದ ವಿಚಾರ ಪ್ರಶ್ನಿಸುವ, ನೇಶನಲಿಸ್ಟ್ ಪಕ್ಷದ ಶ್ರೀ ರಾಮರತನ್ ಗುಪ್ತರ ಒಂದು ನೋಟೀಸು ಸ್ವೀಕರಿಸಲಾಗುವುದಿಲ್ಲವೆಂದು ಗೃಹಖಾತೆ ಅಧಿಕಾರಿಗಳು ತಿಳಿಸಿದರು. ಆದಕಾರಣ ಸಾಧಾರಣ ಸಭೆಯಲ್ಲಿ ಪ್ರಶ್ನೆ ಕೇಳುವುದಲ್ಲದೆ ತನಗೆ ಬೇರೆ ಉಪಾಯವಿಲ್ಲವೆಂದು ಶ್ರೀ. ಗುಪ್ತರು ಪತ್ರಿಕಾ ಪ್ರತಿನಿಧಿಗಳಿಗೆ ಹೇಳಿದರು. ಅಮೆರಿಯವರು ಕಾಮನ್ಸ್ ಸಭೆಯಲ್ಲಿ, ಗಾಂಧಿಜಿ ಗೃಹಖಾತೆಯ ಮಂತ್ರಿಗಳೊಡನೆ ಪತ್ರವ್ಯವಹಾರ ಮಾಡುತ್ತಿದ್ದಾರೆಂದು ತಿಳಿಸಿದ್ದರು

ಯು. ಕೆ. ಸಿ. ಸಿ.

ಎಂದರೆ ಭಾರತದಲ್ಲಿ ಬ್ರಿಟಿಷರು ಮಾಡುತ್ತಿರುವ ಒಂದು 'ವ್ಯಾಪಾರ' ಸಂಸ್ಥೆ. ಹಿಂದಿನ ಈಸ್ಟ್ ಇಂಡಿಯಾ ಕಂಪನಿ ಮಾದರಿಯದು. ಯುನೈಟೆಡ್ ಕಿಂಗ್‌ಡಮ್ ಕಮರ್ಶಿಯಲ್ ಕಾರ್ಪರೇಶನ್ ಎಂದು ಇದರ ಪೂರ್ಣ ಹೆಸರು. ಇದು ಬ್ರಿಟಿಷ್ ಸಾಮ್ರಾಜ್ಯದಲ್ಲಿ ಸರಕಾರದ ಪರವಾಗಿ ಕೆಲಸ ಮಾಡುತ್ತಿದೆ. ಇದರಿಂದ ಭಾರತದ ಉದ್ಯಮಕ್ಕೆ ಬಹಳ ಆಘಾತವಿದೆಯೆಂದು ದೂರಿರುವುದು. ಈ ಕುರಿತು ಕಾಮನ್ಸ್ ಸಭೆಯಲ್ಲಿಯೂ ಪ್ರಶ್ನೆ ಬಂದಿದೆ. ಅಮೆರಿಯವರು ಹಾಗೇನೂ ಇಲ್ಲವೆಂದು ಮರೆಮಾಚಿಕೊಂಡಿದ್ದಾರೆ.

ಕಾಮನ್ಸ್ ಸಭೆಯಲ್ಲಿ ಬಡಿದಾಟ

ಕಾಮನ್ಸ್ ಸಭೆಯ ಇಬ್ಬರು ಸದಸ್ಯರು, ಕೇಪ್ಟನ್ ಕನಿಂಗಾಮ್ ಮತ್ತು ಕಮಾಂಡರ್ ಲೋಕರ್ ಲೇಂಪ್‌ಸನ್ ಇವರು ಸಭಾರಂಗದಲ್ಲಿ ಬಡಿದಾಡಿಕೊಂಡರು. ಬ್ರಿಟಿಷರ ನಾಗರಿಕತೆ ಇಷ್ಟೆ!

ಆರೋಗ್ಯದ ಸೂರ್ಯಗಳು ಕೇವಲ ಅಜಮರ್ಲು ನಾಧಾರ



ದೇಹದೊಳಗಿನ ಸ್ವಚ್ಛತೆಯಷ್ಟೂ
ANDREWS
LIVER SALT
ಎಂಡ್ರೂಸರ ಲಿವರ್‌ಸೊಲ್ಟ್
ಆರೋಗ್ಯತನ್ನೂ ರ ಮಾಡುತ್ತದೆ

ಯುದ್ಧದ ದೆಸೆಯಿಂದಾಗಿ, ಎಂಡ್ರೂಸ್ ಲಿವರ್‌ಸಾಲ್ಟ್ ಈಗ ದೊರಕುವುದಿಲ್ಲವೆಂಬುದು ವಿಷಾದಕರವಿದೆ. ಆದರೆ ಅಂತರ್ರಾಷ್ಟ್ರೀಯ ಪರಿಸ್ಥಿತಿ ಸುಧಾರಿಸಿದ ಕೂಡಲೇ ಇದು ಖಂಡಿತ ದೊರಕುವುದು

ಜಿಲ್ಲಾ ಸಮಾಚಾರಗಳು

ಮಂಗಳೂರು

ಕಲೆಕ್ಟರರ ಆಫೀಸಿನಲ್ಲಿ 'ರೇಶನಿಂಗ್' ವಿಚಾರವಾಗಿ

ಒಂದು ಸಭೆಯು ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲೆಯ ಕೆಲವು ಮಾನ್ಯಗೃಹಸ್ಥರು ಆಮಂತ್ರಿತರಾಗಿದ್ದರು. ಜಿಲ್ಲೆಯಲ್ಲಿ 'ರೇಶನಿಂಗ್' ಪ್ರಾರಂಭಿಸುವ ವಿಚಾರವಾಗಿ ಕಲೆಕ್ಟರರು ಈ ಮಹನೀಯರ ಅಭಿಪ್ರಾಯ ಕೇಳಿದರು. ಕೆಲವು ಚರ್ಚೆಗಳ ಬಳಿಕ ರೇಶನಿಂಗ್ ಪ್ರಯೋಗಿಸಲು ಒಪ್ಪಿಗೆಯಿತ್ತರು. ಜಿಲ್ಲೆ ಹಾಗೂ ತಾಲೂಕು ಕೇಂದ್ರಗಳಲ್ಲಿ ರೇಶನಿಂಗ್ ಪ್ರಾರಂಭಿಸುವುದಾಗಿ ಒಂದು ನಿರ್ಣಯವಾಯಿತು.

ಒಂದು ಮನೆಯಲ್ಲಿ ಸರಾಸರಿ ತಲೆಯೊಂದರ ಮೂರು ರೂಪಾಯಿ ಮತ್ತು ಅದರ ಕಡಮೆ ಸಂಪಾದನೆಯಿದ್ದವರ ಸಂಖ್ಯೆ ತೆಗೆದು ಅವರಿಗೆ ಕಾರ್ಡುಗಳನ್ನು ಕೊಟ್ಟು, ಅಂಥವರಿಗೆ ಕಡಿಮೆ ದರದಲ್ಲಿ ಅಕ್ಕಿ ಒದಗಿಸುವುದು ಈಗಿನ ವ್ಯವಸ್ಥೆಯೆಂದು ತಿಳಿಯುತ್ತದೆ

ಅಕ್ಕಿ ಭತ್ತಗಳ ದಾಸ್ತಾನು ವಿಚಾರ

ಕಲೆಕ್ಟರರ ಪ್ರಕಟಣೆ

"ಜನತೆಯ ಜೀವನಕ್ಕೆ ಅತ್ಯಾವಶ್ಯಕವಾದ ಅಕ್ಕಿಯನ್ನು ಒದಗಿಸುವ ಬಗ್ಗೆ ದಕ್ಷಿಣ ಕನ್ನಡಾ ಜಿಲ್ಲೆಯಲ್ಲಿನ ಅಕ್ಕಿಯ 'ಮಿಲ್ಲು'ಗಳಲ್ಲಿ ಭತ್ತವನ್ನು ಉಪಯೋಗಿಸುವ ರೀತಿಯನ್ನು ವ್ಯವಸ್ಥೆಗೊಳಿಸುವುದು ಆಗತ್ಯವಿರುವುದರಿಂದ ದಕ್ಷಿಣ ಕನ್ನಡಾ ಜಿಲ್ಲಾ ಕಲೆಕ್ಟರ್, ಎಂ ಕರಮತುಲ್ಲ, ಐ ಸಿ ಎಸ್ ಆದ ನಾನು ಡಿಫೆನ್ಸ್ ಒಫ್ ಇಂಡಿಯಾ ರೂಲ್ಸುಗಳ ಪೈಕಿ 81 (2) (a) ನೇ ರೂಲಿನ ಪ್ರಕಾರ ಈ ಕೆಳಗಣ ಹುಕುಮನ್ನು ವಿಧಿಸಿರುತ್ತೇನೆ —1. ತಾರೀಕು 1-9 1943ರಲ್ಲು ವ ಆದರ ನಂತರ ಯಾವತ್ತೂ ಮಿಲ್ಲಿನ ಮಾಲಿಕನು ಮತ್ತು ವ್ಯಾಪಾರಿಯು ಡಬ್ಬಲ್ ಅಥವಾ ಪಾಲೀಶ್‌ಯಾನೆ ಒಪ್ಪದ ಅಕ್ಕಿಯನ್ನು ದಾಸ್ತಾನು ಮಾಡಕೂಡದು ಮತ್ತು ಮಾರಾಟ ಮಾಡಬಾರದು 2 ಅಂತಹ ಮಿಲ್ಲಿನ ಮಾಲಿಕನು ಅಥವಾ ವ್ಯಾಪಾರಿಯು ಸದರೀ ಅನುಜ್ಞೆಯನ್ನು ಉಲ್ಲಂಘಿಸಿದರೆ ಆತನ ಮೇಲೆ ಬೇರೆ ದಾವೆ ಮಾಡುವುದರ ವಿನಾ ಆತನ ಲೈಸನ್ಸು ರದ್ದು ಪಡಿಸಲಾದೀತು ಅಥವಾ ಅಮಾನತು ಪಡಿಸಲಾದೀತು 3. ಅಧಿಕಾರ ಹೊಂದಿದ ಯಾವತ್ತೂ ಉದ್ಯೋಗಸ್ಥನು ವ ಮಾರಾಟ ಮಾಡಿಡ ಅಥವಾ ದಾಸ್ತಾನು ವ ಮಾರಾಟ ಮಾಡುತ್ತಾರೆ ಎಂದು ತೋರುವ ವಠಾರವನ್ನು ಹೊಕ್ಕು ತನಿಕಿ ನಡಿಸಬಹುದು 4. ಈ ಹುಕುಂ ಇಡೀ ದಕ್ಷಿಣ ಕನ್ನಡಾ ಜಿಲ್ಲೆಗೆ ಅನ್ವಯವಾಗುತ್ತದೆ'

ಅಕ್ಕಿ ಕ್ರಯ

ಅಕ್ಕಿ ಕ್ರಯವು ಮುಡಿಗೆ ರೂ ೧೬ರಿಂದ ಕಳದ ವಾರ ೩ ರೂಪಾಯಿಯಂತೆ ಎಂದರೆ ಮುಡಿಗೆ ರೂ. ೧೩ರ ಮಟ್ಟಕ್ಕೆ ತಗ್ಗಿತ್ತು ಇನ್ನೂ ತಗ್ಗಬಹುದೆಂದೂ, ಒಡವರು ಒದುಕಬಹುದೆಂದೂ ಹಲವರು ಆಶೆಗೊಂಡಿದ್ದರು ಆದರೆ ಸದ್ಯ ಅಕ್ಕಿ ಕ್ರಯ ಮೆಲ್ಲಗೆ ಏರುತ್ತಿದೆ ದಿವಸ ದಿವಸಕ್ಕೆ ನಾಲ್ಕಾಣೆ ಎಂಟಾಣೆಗಳಂತೆ ಏರುವುದು ಕಾಣುತ್ತದೆ. ಹೀಗೆ ಏರಲಿಕ್ಕೆ ಬಿಟ್ಟರೆ ಇದರ ಮಿತಿ ಎಲ್ಲಿ ನಿಲ್ಲುವುದೆಂದು ಹೇಳಬರುವುದಿಲ್ಲ ಅಧಿಕಾರಿಗಳು ಈ ಕಡೆಗೆ ಅವಶ್ಯ ಗಮನ ಕೊಡಬೇಕು

ಶ್ರೀ ವರದರಾಯ ಪ್ರಭುಗಳ ಬಂಧನ

ಶ್ರೀ. ಮಹೇಲ್ ನಾಯ್ಕರಲ್ಲಿ ಗುಮಾಸ್ತರಾಗಿರುವ ಶ್ರೀ. ವರದರಾಯ ಪ್ರಭುಗಳನ್ನು ತಾ. 4ರಂದು ಪೋಲೀಸರು, ರಾಜಕೀಯ ಆರೋಪದ ಮೇಲೆ ಕೈದು ಮಾಡಿರುವರೆಂದು ತಿಳಿಯುತ್ತದೆ.

ಹತ್ತಿ ಬಟ್ಟೆ ಮತ್ತು ನೂಲುಗಳ ಕಂಟ್ರೋಲ್ ಆರ್ಡರು

ಕಲೆಕ್ಟರರ ಪ್ರಕಟಣೆ

"೧೯೪೩ರ ಹತ್ತಿ ಮತ್ತು ನೂಲು (ಕಂಟ್ರೋಲ್) ಆರ್ಡರಿನ ಸೆಕ್ಶನ್ ೧೬ (1)ರಂತೆ, ಪ್ರತಿಯೋರ್ವ ಉತ್ಪಾದಕನೂ ಮತ್ತು ವ್ಯಾಪಾರಗಾರನೂ ೧೯೪೩, ಜುಲ್ಯಾ ೩೧ರ ವರೆಗೆ ತನ್ನಲ್ಲಿರುವ ಬಟ್ಟೆ ಮತ್ತು ನೂಲುಗಳ ಸ್ಟಾಕಿನ ವಿವರವನ್ನು ೧೯೪೩ ಆಗಸ್ಟ್ ೧೫ರ ಒಳಗೆ ತಿಳಿಸಬೇಕು. ಕೆಲವು ಚಿಲ್ಲರೆ ಬಟ್ಟೆ ವ್ಯಾಪಾರಿಗಳು ಈ ಆರ್ಡರು ತಮಗೆ ಸಂಬಂಧಿಸಿದ್ದಲ್ಲವೆಂದೂ, ಈ ಆರ್ಡರಿನಲ್ಲಿ ಆಮದಾದ ಬಟ್ಟೆ ಮತ್ತು ನೂಲುಗಳು ಸೇರುವುದಿಲ್ಲವೆಂದೂ ತಪ್ಪು ತಿಳುವಳಿಕೆಯುಳ್ಳವರಾಗಿದ್ದಾರೆ. ಈ ಕಂಟ್ರೋಲ್ ಆರ್ಡರಿನ ಸೆಕ್ಶನ್ ೩ರ ಕ್ಲಾಸ್ 'ಬಿ'ಗೆ ಗಮನಕೊಡಬೇಕು ಅದರಂತೆ ವ್ಯಾಪಾರಿಯೆಂದರೆ ಬಟ್ಟೆ ಮತ್ತು ನೂಲುಗಳನ್ನು ಚಿಲ್ಲರೆ ಅಥವಾ ರಖಂ ವ್ಯಾಪಾರ ಮಾಡುವ ಯಾವನೇ ಆದರೂ ಅತನಿಗೆ ಅನ್ವಯಿಸುತ್ತದೆಂದು ತಿಳಿಯುವುದು ಸರಕಾರವು ಈ ಬಟ್ಟೆ ಕಂಟ್ರೋಲ್ ಆರ್ಡರಿನಲ್ಲಿ ಆಮದಾದ ಬಟ್ಟೆ ಮತ್ತು ನೂಲುಗಳೂ ಸೇರಿವೆಯೆಂದು ಸ್ಪಷ್ಟಮಾಡಿದೆ ಈ ಬಗ್ಗೆ ಫಾರ್ಮುಗಳು ಬೇಕಾದವರು ತಾಲೂಕು ತಹಶಿಲ್ದಾರರಿಗೆ ಬರಕೊಳ್ಳಬೇಕು ಹಂಚಲಿಕ್ಕೆಂದು ತಾಲೂಕು ತಹಶಿಲ್ದಾರರಲ್ಲಿ ಪ್ರಿಂಟು ಮಾಡಿದ ಫಾರ್ಮು ಕಳುಹಿಸಲಾಗಿದೆ ಎಂಬುದಾಗಿ ಕಲೆಕ್ಟರರು ಪ್ರಕಟಿಸಿದ್ದಾರೆ

ಮುನಿಸಿಪಾಲಿಟಿ

ಸಭೆಯೊಂದು ಕಳದ ಸೋಮವಾರ ಚೇರ್‌ಮೇನ್ ಪುತ್ತೂರು ಹುಸೇನ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿ, ಪ್ಯೂನ್‌ರೋಡಿನ ರಿಪೇರಿಗಾಗಿ ರೂ. 450 ಸೆಂಕ್ಶನ್ ಮಾಡಿತು 15-8 43 ರಿಂದ ರಿಕ್ರೂಟಿಂಗ್ ವಾರ ಆಚರಿಸಬೇಕೆಂದು ಕಲೆಕ್ಟರರಿಂದ ಬಂದ ಪತ್ರದ ವಿಷಯ ಚೇರ್‌ಮೇನ್‌ರು ಭಾಷಣವಿತ್ತು ಉತ್ಸಾಹ ಪ್ರದರ್ಶಿಸಿದರು

ಪ್ರಕಾಶ್ ಎಸೋಸಿಯೇಶನ್

ಇದರ ಕಾರ್ಯಕಾರಿ ಸಮಿತಿಯ ಸಭೆ ೨ರಂದು ಸಾಯಂಕಾಲ ೬ ಗಂಟೆಗೆ ಸಂಘದ ಉಪಾಧ್ಯಕ್ಷ ಶ್ರೀ ಏ ಕೆ ನಾರಾಯಣರವರ ಅಧ್ಯಕ್ಷತೆಯಲ್ಲಿ ಜರಗಿತು ಕಾರ್ಯಕಾರಿ ಸಮಿತಿಗೆ ಮೂವರು ಶಾಲಾ ಪ್ರತಿನಿಧಿಗಳನ್ನು ಆರಿಸಲಾಯಿತು ಸಂಘದ ಉದ್ಘಾಟನಾ ಭಾಷಣ ಜರಗಿಸುವುದೆಂಬ ನಿರ್ಣಯವು ಕೈಕೊಳ್ಳಲ್ಪಟ್ಟಿತು ಅಂದು ಪ್ರಕಾಶ ಹಸ್ತಲಿಖಿತ ಪತ್ರಿಕೆಯ ಚತುರ್ಥ ಸಂಪುಟದ ಪ್ರಥಮ ಸಂಚಿಕೆ ಹೊರಬೀಳುವುದು ಸಂಘವು ಊರ ಸಾರ್ವಜನಿಕರ ಹಿತದೃಷ್ಟ್ಯಾ ಯೋಗ್ಯವಾದ ರಚನಾತ್ಮಕ ಕಾರ್ಯಕ್ರಮವನ್ನು ಕೈಕೊಳ್ಳುವರೆ ನಿರ್ಣಯವಾಗಿದ್ದು ಸಂಸ್ಥೆಯ ಕಡೆಯಿಂದ ಒಂದು ಹಿಂದೀ ಕ್ಲಾಸನ್ನು ತೆರೆವ ಪುಸ್ತಕಗಳ ವಿಮರ್ಶೆಯನ್ನು ಚರ್ಚಿಸುವ ನಿರ್ಣಯಗಳೂ ಕೈಕೊಳ್ಳಲ್ಪಟ್ಟವೆ

ಉದ್ಘಾಟನೆ

ದಕ್ಷಿಣ ಕನ್ನಡ ಜಿಲ್ಲಾ ಬಿ. ಟಿ ಕೋರ್ಸಿನ ವಿದ್ಯಾರ್ಥಿ ಸಭೆಯ ಉದ್ಘಾಟನಾ ಸಮಾರಂಭವು ಶ್ರೀಯುತ ಎಮ್ ವಾಸುದೇವ ರಾಯರ ಅಧ್ಯಕ್ಷತೆಯಲ್ಲಿ ತಾ. ೧ರಂದು ಮಧ್ಯಾಹ್ನ ಜರಗಿತು ಶ್ರೀ ಜಿ ಕೆ ಗೋವಿಂದ ಭಟ್ಟ 'ಅಂತರ್ರಾಷ್ಟ್ರೀಯ ಸಂಬಂಧಗಳ ನೆಲೆಗಟ್ಟು" ಎಂಬುದರ ಕುರಿತು ಭಾಷಣವನ್ನಿತ್ತರು. ಕಾರ್ಯದರ್ಶಿ ಶ್ರೀ ಪಿ ಕೆ ಮಾಧವ ರಾಯರು ಧನ್ಯವಾದಗಳನ್ನರ್ಪಿಸಿದರು

ಸಿನೆ ಕ್ರಿಟಿಕ್ಸ್ ಎಸೋಸಿಯೇಶನ್

ಇದರ ಸಭೆ ತಾ ೧ರಲ್ಲು ಜರಗಿತು ಎಸೋಸಿಯೇಶನಿನ ಕಾರ್ಯಕಾರಿ ಸಮಿತಿ ಸದಸ್ಯರಲ್ಲಿ ಒಬ್ಬರಾದ ಶ್ರೀ ಪಿ ಎನ್ ರಾಯರು ಫೋಟೋಗ್ರಾಫಿಯಲ್ಲಿ ಹೆಚ್ಚಿನ ಶಿಕ್ಷಣ ಪಡೆಯುವ ಬಗ್ಗೆ ಮುಂಬಾಯಿಗೆ ಹೋಗಲಿರುವರಾದ ಕಾರಣ ಅವರನ್ನು ಬೀಳ್ಕೊಡುವ ಸಮಾರಂಭ ನಡೆಯಿತು. ಲಘು ಫಲಾಹಾರವಾದ ಬಳಿಕ ಕೆಲವು ವಿಷಯಗಳನ್ನು ಚರ್ಚಿಸಿತು.

ಮಂಗಳೂರು ಶೇಂದಿ ಅಂಗಡಿ ಹರಾಜು

ಮಂಗಳೂರು ತಾಲೂಕಿನ ಹಾಗೂ ಟೌನಿನ ಶೇಂದಿ ಅಂಗಡಿ ಹರಾಜು ಕಳದ ಸೋಮವಾರ ನಡೆಯಿತು. ತಾಲೂಕಿನ ಹಾಗೂ ಟೌನಿನ ಎಲ್ಲಾ ಶೇಂದಿ ಅಂಗಡಿಗಳೂ ಇದುವರೆಗೆ ಏರದಷ್ಟು ವಿಪರೀತ ಮೌಲ್ಯಕ್ಕೆ ಏಲಂ ಆಗಿವೆ

ಉದ್ಘಾಟನಾ ಭಾಷಣಗಳು

ಗವರ್ನ್‌ಮೆಂಟ್ ಸೆಕೆಂಡರಿ ಟ್ರೈನಿಂಗ್ ಶಾಲೆಯ ವಿದ್ಯಾರ್ಥಿ ಸಂಘದ ಉದ್ಘಾಟನಾ ಸಮಾರಂಭವನ್ನು ಶ್ರೀ ಎಂ ಎಸ್ ಮಾಧವರಾಯರು ನೆರವೇರಿಸಿದರು 'ನಾವು ಏನನ್ನು ಕಲಿಸೋಣ?' ಎಂಬುದರ ಕುರಿತು ಅವರು ಮಾತನಾಡಿದರು ಮಿ| ಮೊಂತೆರೋ ಅಧ್ಯಕ್ಷತೆ ವಹಿಸಿದ್ದರು

ಸೈಂಟ್ ಏಲಾಶಿಯಸ್ ಕಾಲೇಜಿನ್ ಯೂನಿಯನಿನ ಉದ್ಘಾಟನಾ ಭಾಷಣವನ್ನು ಶ್ರೀ ಎಂ ಎಸ್. ಮಾಧವರಾಯರು ಮಾಡಿದರು. ವಿದ್ಯಾರ್ಥಿಗಳ ಗುಣನಡತೆಯ ವಿಚಾರ ಹಿತೋಪದೇಶವಿತ್ತರು

ನೇಮಕ

ಕೆನರಾ ಬೇಂಕಿನ ಸೆಕ್ರೆಟರಿ ಶ್ರೀ ಎ ಮಾಧವಪೈಗಳು ಮುಂಬಯಿಯ ಡಿಸ್ಕೌಂಟ್ ಬೇಂಕಿನ ಮೆನೇಜರಾಗಿ ನೇಮಕ ಹೊಂದಿದ್ದಾರೆಂದು ತಿಳಿಯುತ್ತದೆ

ಉಪಾಧ್ಯಾಯರಿಗೆ ತುಟ್ಟಿ ಭತ್ಯೆ

ಬಿಸೆಂಟ್ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯ ಆಡಳಿತ ಮಂಡಳದವರು ತಮ್ಮ ಅಧ್ಯಾಪಕರಿಗೆ ಎರಡನೆಯ ಬಾರಿ ತುಟ್ಟಿ ಭತ್ತೆ ಹೆಚ್ಚಿಸಿರುವರೆಂದು ಕೇಳುತ್ತೇವೆ. ಇದು ಇತರರಿಗೂ ಆದರ್ಶಕರವಾಗಿದೆ

ಪುತ್ತೂರು ಅಕ್ಕಿ ವ್ಯವಸ್ಥೆ

ಬಡವರಿಗೆ ಕಡಿಮೆ ಕ್ರಯದಲ್ಲಿ ಸಹಕಾರೀ ಸಂಘಗಳ ಮುಖಾಂತರ ಅಕ್ಕಿ ಸಿಗುವಂತೆ ಶ್ರೀ ಮೊಳಹಳ್ಳಿ ಶಿವರಾಯರು ಒಂದು ಯೋಜನೆ ಮಾಡಿದ್ದು ಕೆಲಸ ನಡೆಯುತ್ತದಾಗಿ ತಿಳಿಯುತ್ತೇವೆ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಡೆ ಮೊದಲಾದ ಜಮೀನ್ದಾರರೂ ಈ ಯೋಜನೆಯಲ್ಲಿ ಸಹಕಾರ ಕೊಡುತ್ತಿರುವುದು ಸ್ತುತ್ಯ.

ಕೆನರಾ ಬೇಂಕ್ ಲಿಮಿಟೆಡ್

ಇವರು ಹೊಸದಾಗಿ ಹೊರಡಿಸಿದ ಓರ್ಡಿನರಿ ಶೇರುಗಳು ಜಯಪ್ರದವಾಗಿವೆಯೆಂದು ತಿಳಿಯುತ್ತದೆ. ಫೇಸ್ ವೇಲ್ಯು ರೂ. 50ರ 18 ಸಾವಿರ ಶೇರುಗಳು ಪ್ರತಿ ಶೇರಿಗೆ ರೂ 90ರ ಬೆಲೆಯಲ್ಲಿ ಹೊರಡಿಸಲಾಗಿದ್ದು ಸ್ವಲ್ಪ ಸಮಯದಲ್ಲೇ ಇವುಗಳೆಲ್ಲಾ ಮಾರಾಟವಾಗಿವೆಯೆಂದು ತಿಳಿದಿದೆ ಪ್ರತಿಯೊಂದು ಶೇರಿಗೆ ರೂ 40ರ ಪ್ರಿಮಿಯಮ್ ಬೇಂಕಿನ "ರಿಸರ್ವ್"ಗೆ ತೆಗೆದುಕೊಳ್ಳಲಾಗುವುದು. ಇದರ ಫಲವಾಗಿ ಬೇಂಕಿನ ರಿಸರ್ವ್ ರೂ 7·2 ಲಕ್ಷದಷ್ಟು ಹೆಚ್ಚುವುದು ಶೇರುಗಳು ಹೆಚ್ಚು ಕ್ರಯದಲ್ಲಿ ಹೊರಡಿಸಲ್ಪಟ್ಟರೂ ಇಷ್ಟು ಬೇಗನೇ ಮಾರಾಟವಾದದ್ದು ಪ್ರಶಂಸನೀಯ ಹಲವು ಮಂದಿ ಗಿರಾಕಿಗಳು ಮತ್ತು ಸ್ನೇಹಿತರು ಸಾಧ್ಯವಾದಷ್ಟು ಶೇರು ಪಡಿಯಲು ಆತುರರಿದ್ದರು ಪ್ರೊಸ್ಪೆಕ್ಟಸ್‌ನ ಶರತದಂತೆ ಈ ಶೇರುಗಳು ಕಂತು ಪ್ರಕಾರ ಕೊಡಲಾಗುವುದು ಇದು ಸಂಪೂರ್ಣವಾದರೆ ಕೆನರಾ ಬೇಂಕಿನ ಕೆಪಿಟಲ್ ಮತ್ತು ರಿಸರ್ವ್ಸ್ 40 ಲಕ್ಷಕ್ಕೆ ಏರುವುದು ಇದು ಬೇಂಕಿನ ಭದ್ರತೆಗೆ ನೆಲೆಯಾಗಿದೆ ಬೇಂಕು ಇಷ್ಟು ಒಲಹೊಂದಿದೆಯೆಂದು ಕೇಳಿ ಇದರ ಹಿತಚಿಂತಕರು, ಗಿರಾಕಿಗಳು ಗಳೆಯರೆಲ್ಲಾ ಸಂತೋಷಪಡಬೇಕಾಗಿದೆ ಕೆನರಾ ಬೇಂಕು ಜಿಲ್ಲೆಯ ಪ್ರಮುಖ ಬೇಂಕುಗಳಲ್ಲಿ ಒಂದಾಗಿದೆ ಕೆಲವು ವರ್ಷಗಳ ಹಿಂದೆ 8 ಲಕ್ಷವಿದ್ದ ಇದರ ಕೆಪಿಟಲ್ ಮತ್ತು ರಿಸರ್ವ್ಸ್ ಈಗ ಐದು ಪಾಲಷ್ಟು ಹೆಚ್ಚಿದ್ದು ತುಂಬಾ ಪ್ರಶಂಸನೀಯ

'ಪತ್ರಿಕೆಯು ಒಂದು ಪ್ರಧಾನಶಕ್ತಿ'

'ಪತ್ರಿಕೆಗಳು ಸಾರ್ವಜನಿಕ ಸ್ವಾತಂತ್ರ್ಯ ಕಾಪಾಡಬೇಕು'

ಜಿಲ್ಲಾ ಪತ್ರಿಕೋದ್ಯಮಿ ಸಂಘ ಒಂದು ಕೇಂದ್ರ ಕಾರ್ಯಕ್ಷೇತ್ರವಾಗಲಿ!

ಜಿಲ್ಲಾ ಪತ್ರಿಕೋದ್ಯೋಗಿ ಸಂಘದ ಹೊಸ ಆಫೀಸಿನ ಉದ್ಘಾಟನೆಯನ್ನು ತಾ ೧ರಂದು ಸಂಜೆ ಮಾಡುತ್ತಾ, ಶ್ರೀ ಎಂ ಎಸ್ ಮಾಧವ ರಾಯರು, ಪತ್ರಿಕೆಗಳೂ ಪತ್ರಿಕೋದ್ಯೋಗಿಗಳೂ ಸಾಧಿಸಬೇಕಾದ ಉದ್ದೇಶಗಳ ಕುರಿತು ಮಾತನಾಡಿದರು

"ಹಿಂದಿನಿಂದಲೂ ಪತ್ರಿಕೆಯು ಒಂದು ಪ್ರಧಾನ ಶಕ್ತಿ ಆದರೆ ಪತ್ರಿಕೆಯಲ್ಲಿ ಬರೆಯುವವರು ಬೆಳಕಿಗೆ ಬರುತ್ತಿರಲಿಲ್ಲ, ಈ ಸಂಪ್ರದಾಯವನ್ನು ಈ ಭಾರತದಲ್ಲಿ ಮುರಿದವರು ಡಾ| ಅನಿಬೆಸಂಟರು ಉ| ಭಾರತದಲ್ಲಿ ಘೋಷ್ ಸಹೋದರರು ಪತ್ರಿಕೋದ್ಯೋಗಿಗಳಲ್ಲೂ ವ್ಯಕ್ತಿತ್ವವಿದೆ ಎಂದು ತೋರಿಸಿಕೊಟ್ಟವರು ಬ ಬು ಸುರೇಂದ್ರನಾಥ ಬ್ಯಾನರ್ಜಿ ಅವರು ಡಾ| ಬೆಸೆಂಟ್, ಹಾರ್ನಿಮಾನ್—ಇವರು ಪತ್ರಿಕೆಗಳ ಹಕ್ಕುಗಳಿಗಾಗಿ ಹೋರಾಡಿದವರಲ್ಲಿ ಮೊದಲಿಗರು, ಇತ್ತೀಚೆಗೆ ಅಖಿಲ ಭಾರತ ಪತ್ರಿಕಾ ಸಂಪಾದಕರ ಪರಿಷತ್ತು ತುಂಬ ಪ್ರಯೋಜನಕಾರಿಯಾದ ಕೆಲಸಗಳನ್ನು ಮಾಡುತ್ತಿದೆ

'ಯುದ್ಧವಿದೆಯೆಂಬ ಕಾರಣದಿಂದ ಪತ್ರಿಕೆಗಳ ಸ್ವಾತಂತ್ರ್ಯಕ್ಕೆ ಧಕ್ಕೆ ತಗಲಬಾರದು ಯುದ್ಧದ ಈ ಸಮಯದಲ್ಲಿ ಭಾರತದ ಪತ್ರಿಕೆಗಳ ಸ್ವಾತಂತ್ರ್ಯಕ್ಕೂ ಧಕ್ಕೆ ಬಂದಿದೆ ಭಾರತದ ಪತ್ರಿಕೆಗಳವರೆಲ್ಲ ಒಂದಾಗಿ ಹೋರಾಡಬೇಕಾದ ಕಾಲವಿದು. ಈ ಐಕ್ಯತೆ ಯುದ್ಧಾನಂತರವೂ ಇರಬೇಕು

'ವ್ಯಕ್ತಿಗಳನ್ನು ಇಲ್ಲವೆ ಸರಕಾರವನ್ನು ಟೀಕಿಸುವುದು ಮಾತ್ರ ಪತ್ರಿಕೆಗಳ ಉದ್ದೇಶವಿರಬಾರದು. ಜನಸಾಮಾನ್ಯರ ವಿಚಾರ ಶಕ್ತಿಯನ್ನು ವಿಕಾಸಗೊಳಿಸುವ, ಯೋಚನಾ ಶಕ್ತಿಯನ್ನು ಹೆಚ್ಚಿಸುವ ಉನ್ನತ ಧ್ಯೇಯಗಳನ್ನು ಅವು ಇಟ್ಟುಕೊಂಡಿರಬೇಕು. ಜಿಲ್ಲೆಯ ನಮ್ಮ ಜನರಿಗೆ ಸಂಬಂಧಿಸಿದ ವಿಷಯಗಳಿಗೆ ಪತ್ರಿಕೆಗಳು ಹೆಚ್ಚು ಗಮನ ಕೊಡುವುದಿಲ್ಲ ಜಿಲ್ಲೆಯ ಇತರ ಪ್ರದೇಶಗಳಲ್ಲಿ ಬಾತ್ಮಿದಾರರನ್ನು ನೇಮಿಸುವ ಪದ್ಧತಿ ಇಲ್ಲ ಈ ಅವ್ಯವಸ್ಥೆ ಹೋಗಬೇಕು. ಪತ್ರಿಕೋದ್ಯೋಗಿ ಸಂಘದ ಈ ಆಫೀಸು ಜಿಲ್ಲೆಯ ಎಲ್ಲಾ ಪತ್ರಿಕೋದ್ಯೋಗಿಗಳ ಚಟುವಟಿಕೆಯ ಕೇಂದ್ರ ಕಾರ್ಯಕ್ಷೇತ್ರವಾಗಬೇಕು" ಎಂದು ಶ್ರೀ. ಮಾಧವರಾಯರು ಆಶಿಸಿದರು

ಆರಂಭದಲ್ಲಿ ಲಘು ಫಲಾಹಾರವಾದ ವೇಳೆ ಸಂಘದ ಅಧ್ಯಕ್ಷ ಶ್ರೀ ಹು ಭೀಮರಾಯರು ನೆರೆದಿದ್ದ ಪತ್ರಿಕೋದ್ಯೋಗಿಗಳನ್ನೂ ಸಮಾರಂಭದ ಅಧ್ಯಕ್ಷರಾದ ಶ್ರೀ ಎ. ಬಿ. ಶೆಟ್ಟಿಯವರನ್ನೂ ಉದ್ಘಾಟಕರನ್ನೂ ಸ್ವಾಗತಿಸಿದರು

ಶ್ರೀ ಎ ಬಿ ಶೆಟ್ಟರು ತಮ್ಮ ಭಾಷಣದಲ್ಲಿ ಇಂದು ಪತ್ರಿಕೆಗಳಿಗೂ ಪತ್ರಿಕೋದ್ಯೋಗಿಗಳಿಗೂ ಬಂದೊದಗಿರುವ ಸಂಕಷ್ಟಗಳನ್ನು ವಿವರಿಸಿದರು ಸಾರ್ವಜನಿಕ ಹಕ್ಕು ಸ್ವಾತಂತ್ರ್ಯಗಳನ್ನು ರಕ್ಷಿಸುವವರು ಪತ್ರಿಕೆಗಳವರು ಅದನ್ನು ಸದಾ ನಾವು ನೆನಪಿನಲ್ಲಿಡಬೇಕಾಗಿದೆ ನಮಗೆ ಸಂಬಂಧಿಸಿದ ವಿಷಯಗಳೂ ಹಲವಾರು ಇವೆ. ಅವುಗಳನ್ನು ಚರ್ಚಿಸಿ ಪರಿಹಾರೋಪಾಯಗಳನ್ನು ಕಂಡುಹಿಡಿಯಲು ಪತ್ರಿಕೋದ್ಯೋಗಿಗಳ ಸಂಘಟನೆ ಅವಶ್ಯ" ಎಂದು ಶ್ರೀ ಶೆಟ್ಟರು ಹೇಳಿ, ಅಖಿಲ ಕರ್ನಾಟಕ ಪತ್ರಿಕೋದ್ಯೋಗೀ ಪರಿಷತ್ತನ್ನು ಜರಗಿಸಲು ಸಂಘವು ಮಾಡಿರುವ ನಿರ್ಧಾರವು ಕೈಗೂಡಲೆಂದೂ ಸಂಘದ ವಾಚನಾಲಯ ಮತ್ತು ಪುಸ್ತಕಭಂಡಾರಗಳು ಪತ್ರಿಕೋದ್ಯೋಗಿಗಳ ಉಪಯೋಗಕ್ಕೆ ಬೀಳಲೆಂದೂ ಹಾರೈಸಿದರು.

ಸಂಘದ ಕಾರ್ಯದರ್ಶಿ ಶ್ರೀ ಕುಳುಕುಂದ ಶಿ. ರಾಯರು ಕೃತಜ್ಞತೆಗಳನ್ನರ್ಪಿಸಿದರು

ಪುಸ್ತಕಾವಲೋಕನ:

ಇಬ್ಬರು ಈಶ ಸೇವಕರು

[ಖಾನ್ ಸಹೋದರರ ಜೀವನ ಪರಿಚಯ]

'ಖುದಾಯೀ ಖಿದ್ಮತ್‌ಗಾರ್' ಎಂದರೆ ದೇವರ ದಾಸರು; ಈಶ ಸೇವಕರು. ಗಡಿನಾಡಿನ ಕ್ರೂರ ಹಿಂಸಾ ಪ್ರವೃತ್ತಿಯ ಪಠಾಣರನ್ನು ಅಹಿಂಸೆಯ ಧೀರಯೋಧರನ್ನಾಗಿ ಪಳಗಿಸಿದ, ಅವರ ಮುಖಂಡರಾಗಿರುವ ಖಾನ್ ಅಬ್ದುಲ್ ಗಫಾರ್ ಖಾನ್ ಮತ್ತು ಅವರ ಅಣ್ಣ ಡಾ। ಖಾನ್ ಸಾಹೇಬ್ ಇವರ ರಮ್ಯರೋಮಾಂಚಕ ಜೀವನವು ಭಾರತದ ಇತಿಹಾಸದಲ್ಲಿ ಹೊಸತೊಂದು ಅಧ್ಯಾಯವನ್ನು ತೆರೆದಿದೆ. ಮಹಾತ್ಮಾಜಿಯವರ ಪಟ್ಟಶಿಷ್ಯರಾಗಿದ್ದ ಮಹಾದೇವ ದೇಸಾಯಿಯವರು, ಖಾನ್ ಸೋದರರ ಕುರಿತು ಬರೆದ ಅಮೂಲ್ಯ ಆಂಗ್ಲ ಭಾಷಾ ಗ್ರಂಥದ ಭಾಷಾಂತರವೀ ಪುಸ್ತಕ. ಇದನ್ನು ಶ್ರೀ ಕೆ. ಬಿ. ಮಾನಪ್ಪ ಇವರು ಅನುವಾದಿಸಿದ್ದಾರೆ. ಮೂಲಗ್ರಂಥದಲ್ಲಿರುವ ಎಲ್ಲ ಪಡಿಯಚ್ಚುಗಳನ್ನು ಇದರಲ್ಲಿಯೂ ಉಪಯೋಗಿಸಿದ್ದಾರೆ. ಕ್ರೌನ್ ⅛ ಆಕಾರದ ೮೬ ಪುಟಗಳ ಈ ಪುಸ್ತಕದ ಬೆಲೆ ೧॥ ಆಣೆ. ಪುಸ್ತಕ ಸಿಗುವ ಸ್ಥಳ, ಗ್ರಾಮ ಸೇವಾನಿಲಯ, ಮೈಸೂರು.

ಈ ಗ್ರಂಥಕ್ಕೆ ಮಹಾತ್ಮಾಜಿಯವರೇ ಮುನ್ನುಡಿ ಬರೆದಿದ್ದಾರೆ; ಖಾನ್ ಸೋದರರು ಗಡಿನಾಡಿಗೆ ಕಾಲಿಡಬಾರದೆಂದು ಸರಕಾರ ವಿಧಿಸಿದ ಸಂದರ್ಭದಲ್ಲಿ ಅವರು ಗಾಂಧೀ ಆಶ್ರಮದಲ್ಲಿ ಕಳೆದ ದಿನಗಳ ಸವಿನೆನಪು ಮಾಡಿದ್ದಾರೆ. ಇಡೀ ಪುಸ್ತಕ ಓದಿದ ಮೇಲೆ, ಗಡಿನಾಡಿನ ಈ ಇಬ್ಬರು ಈಶಸೇವಕರು ಮಹಾತ್ಮಾ ಗಾಂಧಿಯವರಲ್ಲಿಟ್ಟ ಅಮೋಘ ಭಕ್ತಿಯನ್ನು ವಿಚಾರಿಸಿದರೂ, ಗಾಂಧೀಜಿಯೇ ಅವರ ಜೀವನಪರಿಚಯದ ಈ ಗ್ರಂಥಕ್ಕೆ ಮುನ್ನುಡಿ ಬರೆದದ್ದು ಸಮಂಜಸವೆಂದು ಮತ್ತಷ್ಟು ಖಚಿತವಾಗುತ್ತದೆ.

ಆಂಗ್ಲಭಾಷೆಯಲ್ಲಿಯೇ ಮಹಾದೇವ ದೇಸಾಯಿಯವರದು ಒಂದು ವಿಶಿಷ್ಟವಾದ ಶೈಲಿ; ಮೋಹಕವೆನಿಸಿದ್ದು; ಅವರ ಆ ಸರಳತೆ, ಆ ಸ್ಪಷ್ಟತೆ, ಹೃದಯಕ್ಕಂಟುವ ರೀತಿಯ ಕಥನ ಇವೆಲ್ಲವೂ ಸೇರಿಕೊಂಡಿರುವ ಈ ಮಹಾಪುರುಷರಿಬ್ಬರ ಜೀವನವು ದೇಸಾಯಿಯವರ ಪುಸ್ತಕವೋದಿದ ವಾಚಕರಿಗೆ ಆಪ್ಯಾಯನವೆನಿಸುತ್ತದೆ. ಶ್ರೀ. ಮಾನಪ್ಪನವರು ದೇಸಾಯಿಯವರ ಭಾಷಾಶೈಲಿಗೆ ಉಚಿತವೆನಿಸುವ ಸರಳತೆ, ಸ್ಪಷ್ಟತೆ ಹೃದಯಸ್ಪರ್ಶಕ ರೀತಿಯಲ್ಲಿ ಈ ಪುಸ್ತಕವನ್ನು ಅನುವಾದಿಸಿದ್ದಾರೆಂದು ಧಾರಾಳ ಹೇಳಬಹುದು. ಪುಸ್ತಕದ ಅಚ್ಚುಕಟ್ಟು ಮೋಹಕವಿದೆ. 'ಮುದ್ರಾರಾಕ್ಷಸ'ನ ತೊಂದರೆಗಳನ್ನು ತಪ್ಪಿಸಿಕೊಂಡಿದ್ದರೆ ಅದಕ್ಕೆ ಕೊರತೆಯಿರಲಿಲ್ಲ.

ಮೊದಲಿಗೆ ವೀರ ಪಠಾಣರ ಕುಲದ ಧೈರ್ಯ, ಶೌರ್ಯ, ಅಭಿಮಾನಗಳನ್ನು ತಿಳಿಸಿದ್ದಾರೆ. ಈ ಹಿನ್ನೆಲೆಯಿಂದ ಮುಂದೆ ನೋಡಿದ್ದರೆ ಈ ಇಬ್ಬರು ಈಶ ಸೇವಕರ ವ್ಯಕ್ತಿತ್ವ ಚೆನ್ನಾಗಿ ಹೊಳೆಯುವುದು.

ಹಿರಿಯ ಸೋದರ ಡಾ। ಖಾನ್ ಸಾಹೇಬರು ೧೮೮೩ರಲ್ಲಿ ಜನಿಸಿದರು. ಅವರ ತಮ್ಮ ಗಡಿನಾಡಿನ ಗಾಂಧಿಯೆನಿಸಿದ ಅಬ್ದುಲ್ ಗಫಾರ್ ಖಾನ್ ೧೮೯೦ರಲ್ಲಿ ಜನ್ಮವೆತ್ತಿದರು. ಅವರ ತಂದೆ ಬೆಹರಾಮ್ ಖಾನ್ ಒಂದು ತಾಲೂಕಿನ ಯಜಮಾನ; 'ಬಾದಶಾಹ' ಎಂಬ ಗೌರವ ಪಡೆದವರು. ತೊಂಭತ್ತು ವರ್ಷ ಮೀರಿ ಬದುಕಿದವರು. ಅವರ ಹಿರಿಯರು ಹಿಂದಿನ ಕ್ರಾಂತಿಕಾಲದಲ್ಲಿ ಬ್ರಿಟಿಷರ ಪಕ್ಷ ನಿಂತು ಹೋರಾಡಿದವರು. ಮಕ್ಕಳಿಬ್ಬರು ಸೆರೆಮನೆ ಸೇರಿದಾಗ, ಇಡೀ ಕುಟುಂಬ, ವೃದ್ಧ ಬೆಹರಾಮ್ ಖಾನರೂ ಸೆರೆಮನೆಯ ಸವಿ ಅನುಭವಿಸಿದ್ದರು. ಮಾತಾಪಿತೃಗಳ ಅಚಲ ಧಾರ್ಮಿಕಶ್ರದ್ಧೆ ಈ ಇಬ್ಬರು ಈಶ ಸೇವಕರಲ್ಲಿ ಚೆನ್ನಾಗಿ ಒಡಮೂಡಿ ಅವರ ಬಾಳನ್ನು ಬೆಳಗಿಸಿದೆ.

ಖಾನ್ ಸೋದರರಿಬ್ಬರೂ ಆಂಗ್ಲ ಶಿಕ್ಷಣ ಪಡೆದವರು. ಡಾ। ಖಾನ್ ಸಾಹೇಬರು ಲಂಡನಿಗೆ ಹೋಗಿ ಉಚ್ಚ ವೈದ್ಯಕೀಯ ವಿದ್ಯಾಭ್ಯಾಸ ಪಡೆದು ಸೈನ್ಯಕ್ಕೆ ಸೇರಿದರು. ಕಿರಿಯ ಖಾನರೂ ಇಂಗ್ಲೆಂಡಿಗೆ ತೆರಳುವವರಿದ್ದು, ಗೃಹ ವಿಚಾರದಿಂದಾಗಿ ಮನೆಯಲ್ಲೇ ಉಳಿದರು. ಇನ್ನು ಇವರ ಮಕ್ಕಳು ಎಲ್ಲರೂ ಯೂರೋಪಿನಲ್ಲಿ ಶಿಕ್ಷಣ ಹೊಂದಿದ್ದಾರೆ. ಹೆಣ್ಣುಮಕ್ಕಳನ್ನೂ ವಿಲಾಯಿತಿ ವಿದ್ಯಾಭ್ಯಾಸಕ್ಕೆ ಕಳುಹಿಸಿದ್ದಾರೆ. ಡಾ। ಖಾನ್ ಸಾಹೇಬರು ಆಂಗ್ಲೇಯಳನ್ನು ಮದುವೆಯಾಗಿದ್ದಾರೆ. ಆದರೂ ಈ ಈಶ ಸೇವಕರು ಭಾರತದಲ್ಲಿ ಬ್ರಿಟಿಷ್ ಆಡಳಿತದ ವಿರುದ್ಧ ಹೋರಾಡುವ ಪ್ರಮುಖ ಸೇನಾನಿಗಳಾಗಿದ್ದಾರೆ.

ಇಷ್ಟು ಪ್ರಭಾವಶಾಲಿ ಪುರುಷರನ್ನು ಒಂದು ಲಕ್ಷ ಜನಸಂದಣಿಯೆದುರು 'ರಾಲೆಟ್ ಕಾನೂನು' ವಿರುದ್ಧ ಭಾಷಣ ಕೊಡುತ್ತಿದ್ದಾಗ ಸೆರೆ ಹಿಡಿದದ್ದು, ಅವರ ಕೈಕಾಲುಗಳಿಗೆ ಸಂಕೋಲೆ ಬಿಗಿದದ್ದು, ಆ ಮೇಲೆ ವೃದ್ಧ ತಂದೆ ಸಹಿತ ಇಡೀ ಕುಟುಂಬವೇ ಸೆರೆಮನೆ ಸಂಕಷ್ಟ ಸಹಿಸಿದ್ದು ಮನೆಯ ವಿಚಾರಗಳನ್ನು ಹಲಕಾಲದಿಂದ ತಿಳಿಯಲಾರದೆ ರಣರಂಗದಿಂದ ಮರಳಿದ ಖಾನ್ ಸಾಹೇಬರು ತನ್ನ ದೇಶದ, ತನ್ನ ಕುಟುಂಬದ ಪರಿಸ್ಥಿತಿ ನೋಡಿ ಸರಕಾರೀ ನೌಕರಿಗೆ ರಾಜಿನಾಮೆಯಿತ್ತು ಸ್ವಾತಂತ್ರ್ಯ ಸಂಗ್ರಾಮದಲ್ಲಿ ದುಮುಕಿದ್ದು, ಖಾನ್ ಸಾಹೇಬರ ಹಿರಿಯ ಮಗ ವೀರ ಒಬೆದುಲ್ಲಾ ಖಾನ್ ಸೆರೆಮನೆಯಲ್ಲಿ ಸರಕಾರ ಕೊಟ್ಟ ಸಂಕಷ್ಟದೆದುರು ಪ್ರತಿಭಟಿಸಿ ಉಪವಾಸ ಗೈದದ್ದು, ಈಗಲಾದರೂ ಆ 'ಈಶ ಸೇವಕರು' ಈ ತರದ ಅಗ್ನಿ ಪರೀಕ್ಷೆಯಲ್ಲಿಯೇ ಪಾವನರಾಗುತ್ತಿರುವುದು ಈ ರಮಣೀಯ ಇತಿಹಾಸವು ನವಿರೇಳಿಸುವಂಥಾದ್ದಿದೆ.

ಪಠಾಣಕುಲ ಹಿಂದೆ ಎಷ್ಟು ಕ್ರೂರ ಹಿಂಸಾತುರವಿದ್ದಿತೋ ಇಂದು ಅಷ್ಟೇ ಧೀರ ಅಹಿಂಸಾವ್ರತಿ ಇದೆ. ಖಾನ್ ಸೋದರರು ಎಷ್ಟು ರಾಷ್ಟ್ರಪ್ರೇಮಿಗಳಿದ್ದಾರೋ ಅಷ್ಟು ಅಂತರರಾಷ್ಟ್ರೀಯ ಪ್ರೇಮಿಗಳಿದ್ದಾರೆ; ಎಷ್ಟು ಲೌಕಿಕರಾಗಿರುವರೋ, ಅಷ್ಟೇ ಧಾರ್ಮಿಕರಿರುವರು. ಎಲ್ಲದಕ್ಕಿಂತಲೂ ಇವರಲ್ಲಿ ಮಿಗಿಲಾಗಿ ತೋರುವುದೆಂದರೆ ಗಾಂಧೀಜಿಯ ಸಂಘದಲ್ಲಿ ಅವರಿಗಿರುವ ಭಕ್ತಿ. ಅದೇ ಅವರ ಜೀವನವನ್ನು ಬೆಳಗಿಸಿದೆ. ಅದೇ ಅವರನ್ನು ಅಮರವೀರರನ್ನಾಗಿ ಮಾಡಿದೆ. ಅದರಿಂದಲೇ ಅವರು ಸುಖದ ಸುಪ್ಪತ್ತಿಗೆಯನ್ನು ಬಿಟ್ಟು ಸೆರೆಮನೆಯ ಸಂಕಷ್ಟಗಳನ್ನು ಹಸನ್ಮುಖಿಗಳಾಗಿ ಸಹಿಸುತ್ತಾರೆ. ಇಂಥಾ ಮುಂದಾಳುತನದಿಂದ ಇಂಥಾ ಆದರ್ಶದಿಂದ ಪಠಾಣಕುಲ ಇಂದು ತಮ್ಮ ಜೀವಿತದಲ್ಲಿ ಹೊಸ ಬೆಳಕನ್ನು ಕಂಡಿದೆ. ಈ ಎಲ್ಲಾ ವಿವರಣೆಗಳನ್ನೊಳಗೊಂಡ ಈ 'ಇಬ್ಬರು ಈಶ ಸೇವಕರ' ಅಂತೆಯೇ ದೇಶಸೇವಕರ ಜೀವನ ಪರಿಚಯ ಗ್ರಂಥವಿದು ನಿಜವಾಗಿಯೂ ಆಪ್ಯಾಯನವಾಗಿದೆ. ಕನ್ನಡಿಗರಿಗೆ ಈ ಅಮೂಲ್ಯ ಗ್ರಂಥವನ್ನು ಭಾಷಾಂತರಿಸಿ ಕೊಟ್ಟ ಶ್ರೀ. ಮಾನಪ್ಪನವರು ಅಭಿವಂದನೆಗರ್ಹರು. ಕನ್ನಡದಲ್ಲಿರುವ ರಾಜಕೀಯ ಹಾಗೂ ರಾಷ್ಟ್ರೇತಿಹಾಸ ಗ್ರಂಥಗಳಲ್ಲಿ ಇದೊಂದು ಅತ್ಯುತ್ತಮ ಗ್ರಂಥವೆನಿಸುವುದು.

—ಕಯ್ಯಾರ.

ರಾಷ್ಟ್ರೀಯ ವಾರ ಪತ್ರಿಕೆ
ಸ್ವದೇಶಾಭಿಮಾನಿಗೆ
— ಇಂದೇ —
ಚಂದಾದಾರರಾಗಿರಿ.

Again

TEN LACS IN TEN MINUTES

Our share-lists opened on 5th August and soon closed by over-subscription. Ten lacs in Ten Minutes a second time; but this time it is perhaps not such a great achievement in view of the changed economic conditions. Yet considering that shares of the face value of Rs. 50 were issued at Rs. 90, that they were sold without any publicity and without the help of brokers and that they were only sold over the counter to shareholders and customers the Canara Bank is justifiably proud of this achievement. When these shares are fully paid up according to the terms of the Prospectus the Capital structure of the Canara Bank will be as follows:—

CAPITAL

Ordinary	Rs. 15,00,000.
5% Cum Pref.	Rs. 14,00,000.
Reserves	Rs. 11,70,000.
Total	Rs. 40,70,000.

We thank all our friends and patrons whose unstinted support and symyathy made this success possible and assure them that we shall try in all possible way to continue to deserve their goodwill.

CANARA BANK LIMITED.

ESTD. 1906

ಸಿನೆಮಾ ಸುದ್ದಿ

ಮದುವೆ ಮೇಲೆ ಎಲ್ಲಾ ಸುಖವೇನು?

ಈ ಪ್ರಶ್ನೆ ಹುಟ್ಟುತ್ತದೆ ನಮ್ಮ ಸಿನೆಮಾಗಳನ್ನು ನೋಡಿ! ನಮ್ಮ ಸಿನೆಮಗಳ ಕತೆ ಹೆಚ್ಚಾಗಿ ಪ್ರಣಯ ಕಥೆ. ತರುಣ ತರುಣಿಯರ ಹುಚ್ಚಾಟಗಳು. ವಿವಾಹವಾಗುವ ಮೊದಲು ಎಷ್ಟೋ ಅಡ್ಡಿ ಆತಂಕಗಳು. ಅವೆಲ್ಲವನ್ನು ತೀರಿಸಿ ಕೊನೆಗೆ ತರುಣನೂ ತರುಣಿಯೂ ಒಟ್ಟಾಗುತ್ತಾರೆ ಒಂದು ಚಲೋ ಹಾಡು ಹಾಡುತ್ತಾರೆ. ಆದಾದ ಮೇಲೆ ಪ್ರೇಕ್ಷಕರು ಮನೆಗೆ ಹೋಗಬಹುದು! ಏಕೆಂದರೆ ಹಾಗೆ ತರುಣ ತರುಣಿಯರು ಒಂದಾದ ಮೇಲಿನ ಕೆಲಸ ಪ್ರೇಕ್ಷಕರು ನೋಡತಕ್ಕದ್ದಲ್ಲ, ಅದು ಅವರ ಸ್ವಂತ ಕೆಲಸ, ಎಂದರೆ ಪ್ರೇಮದ ಫಲ; ಅವರ ಜೀವನ ಮುಂದೆ ಸುಖ ಸಾಗರವಾಯಿತು ಎಂಬ ಅಭಿಪ್ರಾಯ ಮಾಡಿಕೊಂಡು ಪ್ರೇಕ್ಷಕರು ಮನೆಗೆ ಹೋಗುತ್ತಾರೆ ಆದರೆ ನಿಜ ಜೀವನ ಹೀಗೇನು? ಮದುವೆಯಾದ ಮೇಲೆ ಎಲ್ಲಾ ಸುಖವೇನು? ಮದುವೆಯಾದ ಬಳಿಕವೂ, ಸಂಕಷ್ಟ, ಹೋರಾಟ, ಕಷ್ಟ, ನಿಷ್ಠುರ, ನಿರುದ್ಯೋಗ, ದಾರಿದ್ರ್ಯ ನಮ್ಮ ಜೀವನದಲ್ಲಿ ಬಹಳ ಪಾಲು ಇಲ್ಲವೇನು? ನಮ್ಮ ನಾಡಿನ ಜನತೆಯ ಕಡೆಗೆ ಒಮ್ಮೆ ಚನ್ನಾಗಿ ಕಣ್ತೆರೆದು ನೋಡಬೇಕು ನಮ್ಮ ಸಿನೆಮಾ ನಿರ್ಮಾತೃಗಳು. ಆಜೀವನ ಚಿತ್ರಿಸಬೇಕು! ಮದುವೆಯಾದ ಮೇಲೆಯೂ ಜೀವನದ ಹೋರಾಟವುಂಟು ಎಂಬಂಶವನ್ನು ಮರೆತುಬಿಟ್ಟರೆ ಸಿನೆಮಾದಲ್ಲಿ ನೈಜಜೀವನ ಎಲ್ಲಿ ಚಿತ್ರಿಸಿದ ಹಾಗಾಯಿತು?

ಅವರು ಹಾಡುವುದಿಲ್ಲ!

ಸಬಿತಾ ಮಾಧುರಿ ಹಾಡುವುದಿಲ್ಲ! ಕಂಠ ಮನೋಹರವಿಲ್ಲ! ಸಂಗೀತಜ್ಞಾನ ಅವರಿಗಿಲ್ಲ! ಆದರೆ ಸಿನೆಮಾದಲ್ಲಿ ಅವರು ಹಾಡುತ್ತಾರೆ! ಅಥವಾ ಅವರು ಹಾಡಿದಂತೆ ನಮಗೆ ಭ್ರಾಂತಿ ಹುಟ್ಟಿಸಲಾಗುತ್ತದೆ. ಹಿಂಗಡೆಯಲ್ಲಿ ಯಾವಾಕೆಯೋ ಮಧುರಕಂಠೆ ಹಾಡುತ್ತಿರುತ್ತಾಳೆ. ಅವರು ಅದಕ್ಕೆ ಸರಿಯಾಗಿ ಬಾಯಿ ಬಿಡುತ್ತಾರೆ, ಹಾಡನ್ನೂ ನಟಿಸುತ್ತಾರೆ ಹೀಗೆ ಹಿಂಗಡೆ ಹಾಡುವವರಲ್ಲಿ ರಾಜಕುಮಾರಿ ಮತ್ತು ಅಮೀರ್‌ಬಾಯಿ ಕರ್ನಾಟಕಿ ಮುಖ್ಯರು ಇವರದೇ ಕಂಠ ಹಲವರ ಬಾಯಲ್ಲಿ ಕೇಳಬಹುದು. ಮಾಧುರಿ ಹಾಡಿದರೂ, ಸಬಿತಾ ಹಾಡಿದರೂ ಸ್ವರ ಒಂದೇ ಕೆಲವು ಒಳ್ಳೆಯ ನಟಿಯರು ಉತ್ತಮ ಸಂಗೀತ ಕುಶಲನಿಯರಿರುವುದಿಲ್ಲವೇನೋ ನಿಜ. ಅವೆರಡೂ ಇದ್ದರೇನೋ ಚಲು ಅದಿಲ್ಲದಿದ್ದರೂ ಪರವಾ ಇಲ್ಲ, ಆದರೆ ಹಿಂಗಡೆ ಹಾಡುವಾಕೆ ಒಬ್ಬಳೇ ಆಗಿದ್ದರೆ ಪ್ರೇಕ್ಷಕರ ಕಿವಿಗಳಿಗೆ ಒಂದೇ ಯಾವಾಗಲೂ ಪ್ರತಿಯೋರ್ವ ಹಾಡು ಬಾರದ ನಟಿಯ ಬಾಯಿಂದಲೂ ಹೊರಡುವುದನ್ನು ಕೇಳಿ ಬೇಸರವಾಗದೇನು? ನಮ್ಮ ನಾಡಿನಲ್ಲಿ ಕೋಕಿಲ ಕಂಠೆಯರು ಕಡಿಮೆಯಿಲ್ಲ. ಯಾಕೆ ಹೊಸ ಸ್ವರ ಸೇರಿಸಬಾರದು? ಕೇಳುವವರಿಗಾದರೂ ಹೊಸ ಭ್ರಾಂತಿಗಳನ್ನು ಯಾಕೆ ಹುಟ್ಟಿಸಬಾರದು? ಮನರಂಜನೆಗಾಗಿ ಸಿನೆಮಾ ನಿರ್ಮಾಣ ಮಾಡುವವರು ಈ ಅಂಶವನ್ನು ಯಾಕೆ ಗಮನಿಸುವುದಿಲ್ಲ?

ಸ್ನೇಹಪ್ರಭಾ ಬಂಧನ!

ಶ್ರೀಮತಿ ಸ್ನೇಹ ಪ್ರಭಾಳನ್ನು ಅಹಮ್ಮದ್ ನಗರದಲ್ಲಿ, ಒಂದು ಸಂಗೀತಶಾಲಾ ಸಹಾಯಾರ್ಥ ಪ್ರದರ್ಶನವಿತ್ತು ಬರುವಾಗ, ಪೋಲೀಸರು ಬಂಧಿಸಿದರೆಂದು 'ವಿಶ್ವಮಿತ್ರ' ಪತ್ರಿಕೆ ತಿಳಿಸಿದೆ. ಬಹಿರಂಗವಾಗಿ ಚುಂಬಿಸಿದ ಅಪರಾಧಕ್ಕೆ ಈ ಶಿಕ್ಷೆಯೇನು? ಡಿಫೆನ್ಸ್ ಕಾನೂನಿನ ಕಾಲ ಇದು. ಅದರಲ್ಲಿ ಹೇಗಿದ್ದರೂ ಇರಬಹುದು!

ನಟಿ ನಟಿಯರಾಗುತ್ತೀರಾ?

ದೇವಕೀ ಘೋಸರು ನಿಮಗೆ ಸಂದರ್ಭ ಕಲ್ಪಿಸಿಕೊಡಬಹುದು. ತಮ್ಮ ಮುಂದಿನ ಚಿತ್ರ 'ಮೇಘದೂತ'ದಲ್ಲಿ ನಟಿಸಲು ಸೌಂದರ್ಯವುಳ್ಳ, ಸುಕೋಮಲ ಕಂಠವುಳ್ಳ ನಟಿನಟಿಯರು ಬೇಕಾಗಿದ್ದಾರೆಂದು ಅವರು ಪ್ರಕಟಿಸಿದ್ದಾರೆ.

ನಟಿಯ ಪ್ರೇತ?

ಸಿನೆಮಾ ತಾರೆ ಮತ್ತು ರೇಡಿಯೋ ಗಾಯಿಕಿ ಬಿಬ್ಬೂ ಮೃತಳಾದಳೆಂದು ಉತ್ತರ ಭಾರತದ ಒಂದು ಸಿನೆಮಾ ಪತ್ರಿಕೆ, 'ನಂಬಲರ್ಹವಾದ ಸುದ್ದಿ'ಯೊಂದನ್ನು ಪ್ರಕಟಿಸಿತ್ತು! ಆದರೆ ಮೊನ್ನೆ ಮೊನ್ನೆ ಪುಣದ 'ರೇಸ್' ಒಂದರಲ್ಲಿ ಆಕೆಯನ್ನು ಕಂಡ 'ಮಿರರ್' ಪತ್ರಿಕೆಯ ಬಾತ್ಮೀದಾರನು 'ಇದು ಆಕೆಯ ಪ್ರೇತವಿರಬಹುದೇ' ಎಂದು ಮೊದಲಿಗೆ ಸಂಶಯಗೊಂಡ. ಕೊನೆಗೆ ಆಕೆ ಮೃತಳಾದಳೆಂದು ಸುದ್ದಿ ಕೊಟ್ಟ ಪತ್ರಿಕಾ ಬಾತ್ಮೀದಾರನು ಪ್ರೇತವಾಗಿ ಆ ಸುದ್ದಿ ಬರೆದಿರಬಹುದೆಂದು ಆತನಿಗೆ ನಂಬಿಕೆಯಾಯಿತು! ಹೀಗೆ ಬದುಕಿರುವವರನ್ನು ಕೊಲ್ಲುವ ಬಾತ್ಮೀದಾರರಿಗೆ ಡಿಫೆನ್ಸ್ ಓವ್ ಇಂಡಿಯಾ ಕಾನೂನು ಲಗಾವಾಗುವುದಿಲ್ಲವೆ?

ಸೈಗಲ್ ಸನ್ಯಾಲರು

ಇಬ್ಬರೂ ಈಗ ನ್ಯೂಥಿಯೇಟರ್ಸ್‌ಗೆ ತಿರುಗಿ ಬಂದಿದ್ದಾರೆ ಬೊಂಬಯಿಯಲ್ಲಿ ಅಲೆದಾಡಿ ಅವರಿಗೆ ಸಾಕಾಗಿರಬೇಕು, ಬಂಗಾಳ ಮರೆಯಲಾಗದೆ ಬಂದಿದ್ದಾರೆ ಹೀಗೆ, ಸೈಗಲ್ ಬೊಂಬಯಿಯಲ್ಲಿ ಮಾಡಿಕೊಂಡ ಕರಾರಿನಂತೆ ಇನ್ನೊಂದು ಚಿತ್ರ ಮುಗಿಸಬೇಕಾಗಿದೆ ಆತನ ಕೊನೆಯ ಚಿತ್ರ ರಣಜಿತ್‌ನ 'ಹಾರ್ ಜೈ' ಎಂಬುದು.

ನೋಟಗಳು...

ಮುಸ್ಲಿಂ ಲೀಗಿನ ಸರ್ವಾಧಿಕಾರಿ, ಜಿನ್ನರಿಗೆ ಮುಸ್ಲಿಮನೇ ಒಬ್ಬನು ಚೂರಿ ಹಾಕಿದ!

ಯುರೋಪಿನ ಸರ್ವಾಧಿಕಾರಿಗಳು 'ಬೋಡಿ ಗಾರ್ಡು' ಇಟ್ಟುಕೊಳ್ಳುತ್ತಾರೆ. ಮುಸ್ಲಿಂ ಲೀಗಿನ ಸರ್ವಾಧಿಕಾರಿಗಳಾದರೂ ಇನ್ನು ಮುಂದೆ ಹಾಗೆ ಮಾಡುವುದು ಒಳ್ಳೆಯದಲ್ಲವೆ?

ಹಿಂದು ಮಹಾಸಭೆಯ ಸರ್ವಾಧಿಕಾರಿ ಪಟ್ಟಕ್ಕೆ ಸಾವರ್ಕಾರರು ರಾಜಿನಾಮೆ ಕೊಟ್ಟರು!

ಇಟಲಿಯ ಸರ್ವಾಧಿಕಾರ ಪಟ್ಟಕ್ಕೆ ಮುಸಲನಿಯೂ ರಾಜಿನಾಮೆ ಕೊಟ್ಟ!

ಅಸೌಖ್ಯದ ನಿಮಿತ್ತ ಅಧ್ಯಕ್ಷ ಪಟ್ಟಕ್ಕೆ ರಾಜಿನಾಮೆಯಿತ್ತುದಾಗಿ ಸಾವರ್ಕಾರ್ ಹೇಳುತ್ತಾರೆ.

ಜಿನ್ನರೂ ಈಗ ಗುಣಮುಖರಾಗುತ್ತಿದ್ದಾರೆ!

ಸರ್ವಾಧಿಕಾರೀ ಕಿರೀಟ ಕಳಚಿ ಬಿದ್ದ ಮೇಲೆ ಮುಸಲನಿಗಂತೂ ರೋಗ ಸಂಪೂರ್ಣ ಗುಣವಾಗಿರಲೇ ಬೇಕು.

ಜಿನ್ನಾ ಸಾವರ್ಕರರನ್ನು ಭೇಟಿಯಾಗಿ ಸಿಂಧದ ಮಂತ್ರಿ ಡಾ ಹೇಮನದಾಸರು ಲೀಗ್ ಮಹಾಸಭೆಗಳೊಳಗೆ ಒಪ್ಪಂದ ಮಾಡಲು ಯತ್ನಿಸುತ್ತಾರೆ!

ಜಿನ್ನಾ ಸಾವರ್ಕಾರರ ರೋಗ ಸಂಪೂರ್ಣ ಗುಣವಾದರೆ ಒಪ್ಪಂದ ಆದರೂ ಆಗಬಹುದು!

'ವಿದ್ಯಾರ್ಥಿ ಸಂಘದಿಂದ ಕಮ್ಯುನಿಸ್ಟರನ್ನು ಹೊರಹಾಕದಿದ್ದರೆ ಮೋಕ್ಷವಿಲ್ಲ' ಎಂದು ಅಖಿಲ ಕೇರಳ ವಿದ್ಯಾರ್ಥಿ ಪರಿಷತ್ತಿನ ಸ್ವಾಗತ ಸಮಿತಿ ಅಧ್ಯಕ್ಷ ಶ್ರೀ ಮೋಹನದಾಸರು ಹೇಳುತ್ತಾರೆ

'ರಾಯಿಸ್ಟರನ್ನು ವಿದ್ಯಾರ್ಥಿ ಸಂಘದಿಂದ ಹೊರಹಾಕದಿದ್ದರೆ ಮೋಕ್ಷವಿಲ್ಲ'ವೆಂದು ಮಂಗಳೂರಿನ ಕಮ್ಯುನಿಸ್ಟರೂ ಸಾಹಸಮಾಡುತ್ತಿದ್ದಾರಂತೆ!

ಕಮ್ಯುನಿಸ್ಟ ರಾಯಿಸ್ಟರಿಬ್ಬರನ್ನೂ ಹೊರಹಾಕದೆ ವಿದ್ಯಾರ್ಥಿ ಸಂಘದ ಏಳಿಗೆಯಾಗುವುದಿಲ್ಲವೆಂದು ವಿದ್ಯಾರ್ಥಿಗಳಿಗೆ ನಾವು ಸಾರುತ್ತೇವೆ.

ಉಗ್ಗಿಲು ಬಂಡಿಗಳ ಸಮಯ

ಎಪ್ರಿಲ್ ತಾ ೧೫ರಿಂದ ವ್ಯತ್ಯಸ್ತವಾದ ಪ್ರಕಾರ,

	ಹೊರಡುವುದು.	ಒದುವುದು.
ಮೈಲ್	೭-೪೦ ಪೂ	೬-೨೫ ಅಪ.
ಶಟ್‌ಲ್	೬-೩೦ ಅಪ.	೧೦-೫ ಪೂ.

THE CANARA BANKING CORPORATION Ltd

(Incorporated in British India with limited liability)

STATEMENT OF AFFAIRS AS ON 31ST DECEMBER 1942

Capital & Liabilities	Rs	As	Ps	Property & Assets	Rs	As	Ps
Paid up Capital	6,36 890	0	0	Office premises furniture etc	91,659	0	0
Reserve & other funds	3 71 882	13	11	Advances	31 28,612	4	9
Deposits	41,83,873	4	1	Investment on Govt Securities etc at cost	15 34 536	14	3
Due to Bankers	5 08 545	12	1	Sundries	74 183	5	7
Bills per contra	3,59,357	12	1	Bills for Collection	3 59 357	12	1
Sundries including branch adjustments & undisbursed profits	2,83 736	5	9	Cash on Hand & with bankers	12 05 397	14	8
Profit for the year 1942	49 461	3	5				
Total Rs	63,93 747	3	4	Total Rs	63,93,747	3	4

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಆಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದುದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು. ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

Regd. No. M 3406

The Bank of Mangalore Limited, Mangalore.

ESTD: 1931

HEAD OFFICE Mangalore. *BRANCHES* Moodabidri & Padubidri.

The Bank Undertakes to Collect Cheques, Demand and Documentary Bills at Most Competitive Rates

ISSUES DRAFTS ON ALL IMPORTANT TOWNS IN THE DISTRICT
and also on
BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.
at very favourable rates

All kinds of inland banking business undertaken

(Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕಾಲ್ನೋವು, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯ ಕೆಟ್ಟು ಬಾತುಕೊಳ್ಳುವುದು, ಚೇಳು ವಿಷ ಮುಂತಾ ಚೇಸ್ನ, ಪಕ್ಷವಾತ, ಮೊಡಮೆ ಮೊದಲಾದ ಎಲ್ಲಾ ರೋಗ ಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ನೀವೀವರೆಗೆ ವಿಮೆಯನ್ನು ಇಳಿಸದಿದ್ದರೆ, ಯಾ ಸಾಕಷ್ಟು ವಿಮೆಯನ್ನು ಮಾಡಿಲ್ಲವಾದರೆ

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡಿನಲ್ಲಿ

ಈಗಲೇ ವಿಮೆ ಇಳಿಸಿರಿ.

ಏಕೆಂದರೆ

1. ಜೀವವಿಮೆಯು ಒಬ್ಬನ ವೃದ್ಧಾಪ್ಯದ ಮತ್ತು ಸಮೀಪದ ಹಾಗೂ ಪ್ರೀತಿಯ ಸಂಬಂಧಿಕರ ಜೀವನವನ್ನು ಸುರಕ್ಷಿತಗೊಳಿಸುತ್ತ
2. ನೀವಿಂದು ವಿಮೆಯನ್ನಿಳಿಸಬಲ್ಲಿರಾದರೆ ನಾಳೆ ಹಾಗೆ ಮಾಡಲು ಶಕ್ತರಾಗದೆ ಹೋಗಬಹುದು.
3. ಆರೋಗ್ಯವು ಅನಿಶ್ಚಿತವೆಂದಾದರೆ ಮೃತ್ಯುವು ಯಾರನ್ನೂ ಬಿಡುವಂತಿಲ್ಲ.
4. ಮೃತ್ಯು ಮತ್ತು ಮುಪ್ಪು ಎಂಬುದು ಅಮೂಲ್ಯವಾದೊಂದು ನಿಶ್ಚಿತ.
5. ಜೀವವಿಮೆಯು ಮರಣದ ಕ್ರೂರತೆಯನ್ನು ಹೋಗಲಾಡಿಸುವುದೊಂದೇ ಅಲ್ಲ; ಅದರ ಸಂಕಷ್ಟವನ್ನೂ ದೂರೀಕರಿಸುತ್ತದೆ.

ಆದುದರಿಂದ ಇಂದೇ ಜೀವವಿಮೆ ಮಾಡುವುದು ಲಾಭಕರವಾಗಿದೆ.

ವಿಶೇಷ ಮಾಹಿತಿಗೆ ದಯಮಾಡಿ ಬರೆಯಿರಿ:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

—: ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ : —

ಮಂಗಳೂರು ಕಲ್ಲಿಕೋಟೆ ಸೇಲಂ ತಿರುವಾಂಕೂರು ಬೆಂಗಳೂರು ನಗರ ಮತ್ತು ಬೊಂಬಾಯಿ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವ ವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ್ ವ ಏಜೆಂಟರು:—
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘವೇಂದ್ರ ಸ್ಟೋ ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ| ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾ ಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೊ:—1. ಮರಾಠ ಗಲ್ಲಿ ಹುಬ್ಬಳ್ಳಿ.
2. 36. ಫ್ರಾಕ್ರೋಫ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.
ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, [illegible]

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಕು 13—8—1943 [ಸಂಚಿಕೆ 33]

ಬಿಕ್ಕಟ್ಟು ಬಿಡಿಸಲು ಬ್ರಿಟಿಷ್ ಪ್ರಮುಖರ ವಿನಂತಿ!

ಬ್ರಿಟಿಷ್ ಭಾರತದ ಬಾಂಧವ್ಯ ಉಳಿಸಲು ಹೊಸ ಪ್ರಯತ್ನ ಮಾಡಬೇಕು.

ಪ್ರಮುಖ ಬ್ರಿಟಿಷರ ವಿನಂತಿ

ಪ್ರೊ। ಲಾಸ್ಕಿ, ಲಾರ್ಡ್ ಸ್ಟೇಬೋಗ್ಲಿ, ಕ್ಲೆಮೆಂಟ್ ಡೇವಿಸ್ (ಪಾರ್ಲಿಮೆಂಟ್ ಸದಸ್ಯ) ವೆಸ್ಟ್‌ಮಿನ್‌ಸ್ಟರಿನ ಆರ್ಚ್ ಡೀನ್, ಸರ್ ರಿಚಾರ್ಡ್ ಗ್ರೆಗರಿ, ಸರ್ ಅರ್ನೆಸ್ಟ್ ಬೆನೆಟ್, (ಪಾ. ಸ.) ಪ್ರೊ। ನಾರ್ಮನ್ ಬೆಂಟ್‌ವಿಟ್, ಬ್ರಿಮಿಂಗಾಮ್ ಮತ್ತು ಬ್ರೇಡ್‌ಫೋರ್ಡ್‌ಗಳ ಬಿಶಪ್, ಮಿಸೆಸ್ ವೆರಾಬ್ರಿಟೇನ್, ಡಾಮೆ ಎಲಿಜಬೆತ್ ಪ್ರೊ। ಎಡ್ವರ್ಡ್ ಥಾಮ್‌ಸನ್ ಮೊದಲಾದ ನೂರಾರು ಸಂಸ್ಥೆಗಳ ಪ್ರತಿನಿಧಿಗಳು, ಮಹಿಳೆಯರೂ ಮಹನೀಯರೂ ಬ್ರಿಟನಿನ ಹಲವು ಪ್ರಮುಖರು ಸೇರಿ ಬ್ರಿಟಿಷ್ ಭಾರತ ಬಾಂಧವ್ಯ ಉಳಿಯುವಂತೆ ಮಾಡಲು, ಸರಕಾರವು ಹೊಸ ಪ್ರಯತ್ನ ಮಾಡಬೇಕೆಂದು ಒಂದು ವಿನಂತಿ ಹೊರಡಿಸಿದ್ದಾರೆ. ಈ ವಿನಂತಿಯು ಪ್ರತಿಯನ್ನು ಚರ್ಚಿಲ್, ಅಮೆರಿ, ವೈಸರಾಯ್, ಲಿನ್‌ಲಿತ್‌ಗೋ ಮತ್ತು ವೇವೆಲ್ ಇವರಿಗೆ ಕಳುಹಿಸಲಾಗಿದೆ.

ಆ ಹೇಳಿಕೆಯಲ್ಲಿ, ಭಾರತದ ಮುಂದಾಳುಗಳನ್ನು ಸೆರೆಮನೆಯಲ್ಲಿ ಹಾಕಿ ಒಂದು ವರ್ಷ ದಾಟಿತು, ಭಾರತದ ಸಾವಿರಾರು ಮುಂದಾಳುಗಳು ಸೆರೆಮನೆಯೊಳಗೆ ವಿಚಾರಣೆಯಿಲ್ಲದೆ ತಳ್ಳಲ್ಪಟ್ಟಿದ್ದಾರೆ, ರಾಜಕೀಯ ಬಿಕ್ಕಟ್ಟು ಬಗೆಹರಿಸದೆ ಹಾಗೆಯೇ ಉಳಿದಿದೆ, ಭಾರತ ಬ್ರಿಟನುಗಳಲ್ಲಿ ವೈಷಮ್ಯ ಬೆಳೆದು ಬಂದಿದೆ, ಈ ಅವಸ್ಥೆ ಮುಂದುವರಿದರೆ ಭಾರತ ಬ್ರಿಟನುಗಳ ಬಾಂಧವ್ಯ ಕಡಿದು ಹೋದೀತು, ಆದ್ದರಿಂದ ಇಂದು ಪರಿಸ್ಥಿತಿಯನ್ನು ಪುನರಾಲೋಚಿಸಲು ಸಂದರ್ಭ ಒದಗಿದೆಯೆಂದು ನಾವು ತಿಳಿಯುತ್ತೇವೆ, ಆದಕಾರಣ ಭಾರತದ ಬಿಕ್ಕಟ್ಟು ಬಗೆಹರಿಸಲು ಬ್ರಿಟನು ಹೊಸ ಪ್ರಯತ್ನ ಮಾಡಬೇಕು ಎಂದು ತಿಳಿಸಲಾಗಿದೆ. ಬ್ರಿಟಿಷ್ ಪ್ರಮುಖರು ಸರಿಯಾದ ಸಮಯದಲ್ಲಿ ಸರಕಾರಕ್ಕೆ ಈ ಉಪದೇಶವಿತ್ತಿದ್ದಾರೆ.

ವಿಲ್ಕಿ ಭಾರತಕ್ಕೆ ಬರಲಿಲ್ಲವೇಕೆ? ಎಂದು ಕೌನ್ಸಿಲ್ ಓಫ್ ಸ್ಟೇಟಿನಲ್ಲಿ ಪ್ರಶ್ನೆ ಬಂತು. ವಿಲ್ಕಿಯವರು ಭಾರತಕ್ಕೆ ಬರಲು ಆತುರರಿದ್ದರೂ ಹಿಂದುಸ್ಥಾನ ಸರಕಾರವು ಅವರನ್ನು ಬರಬಿಡಲೆಂದು ಹೇಳಲಾಗುವ ಸುದ್ದಿ ಸರಿಯಲ್ಲವೆಂದೂ, ಆದರೆ ಆಗ ಬರಲು ಸಮಯ ಸರಿಯಲ್ಲವೆಂದು ಮಾತ್ರ ಸರಕಾರ ತಿಳಿಸಿದೆಯೆಂದೂ ಹೇಳಲಾಯಿತು.

'ಮಹಾತ್ಮರನ್ನು ನೋಡಲು ಸಮ್ಮತಿ ಕೊಡುವುದಿಲ್ಲ.'

ಹೊರಗಿನ ಧುರೀಣರೇ ಬಿಕ್ಕಟ್ಟು ಬಿಡಿಸಬೇಕು!

ಕಾಮನ್ಸಿನಲ್ಲಿ ಅಮೆರಿ ಉದ್ಗಾರ

ಭಾರತ ಮಂತ್ರಿಯೆನಿಸಿದ ಅಮೆರಿ ತಾ. ೫ರಂದು ಕಾಮನ್ಸ್ ಸಭೆಯಲ್ಲಿ ಸೋರೆನ್‌ಸನರು ಕೇಳಿದ ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ, ರಾಜಕೀಯ ಕೈದಿಗಳು ಅನಿರ್ಬಂಧ ಮುಕ್ತ ಮಾಡಬೇಕೆಂದು ಬ್ರಿಟನಿನ ೨೫ ಮಂದಿ ಪಾದ್ರಿಗಳು ಮಾಡಿದ ಮನವಿಯನ್ನು ವಿಚಾರಿಸುವುದಾಗಿ ಹೇಳಿದರು. 'ಭಾರತದ ಮುಖಂಡರು ಮುಂಬಂದು ಭಾರತದ ಭಾವೀ ಘಟನೆ ರಚಿಸಬೇಕೆಂದು ವೈಸರಾಯರು ಹಿನ್ನೇ ಹೇಳಿದ್ದರಲ್ಲಿ ಪಾದ್ರಿಗಳಂತೆಯೇ ಬಿನ್ನವಿಸಿದ್ದಾರೆ. ರಾಜಕೀಯ ಕೈದಿಗಳನ್ನು ಬಿಡಬೇಕೆಂಬ ವಿನಂತಿ ವಿಚಾರ ಸಾನಿಷ್ಯೇ ತಿಳಿಸುತ್ತೇನೆ. ಗಾಂಧಿಜಿ ಮತ್ತು ಕಾಂಗ್ರೆಸ್ ಧುರೀಣರು, ತಾವು ಕೈಕೊಂಡ ಅಕ್ರಮ ಕಾರ್ಯಕಲಾಪಗಳನ್ನು ಬಿಡುವ ಮನೋವೃತ್ತಿ ತೋರಿಸದ್ದರಿಂದ ಅವರನ್ನು ಬಿಡುಗಡೆ ಮಾಡಿಲ್ಲ' ಎಂದೂ ಅಮೆರಿ ತಿಳಿಸಿದರು. 'ಗಾಂಧಿ ಮತ್ತು ಕಾಂಗ್ರೆಸ್ ಧುರೀಣರ ಭೇಟಿಗೆ ಆಸ್ಪದ ಕೊಡಬಾರದೆಂದು ಸರಕಾರದ ಧೋರಣೆಯಿದೆ. ಉಳಿದ ಧುರೀಣರು ಅನ್ಯೋನ್ಯ ವಿಚಾರವಿನಿಮಯ ಮಾಡಬಹುದು. ಅಕ್ರಮ ಕೂಟಗಳಲ್ಲಿ ಸೇರದ ಧುರೀಣರು ಒಟ್ಟು ಸೇರಬಹುದು. ಮಹಾತ್ಮರನ್ನು ಭೇಟಿಯಾಗಲು ರಾಜಗೋಪಾಲಾಚಾರ್ಯ ಮೊದಲಾದವರಿಗೆ ಆಸ್ಪದವಿತ್ತರೆ; ಅಕ್ರಮ ಹಾದಿ ಹಿಡಿದವರಿಗೆ ಪ್ರೋತ್ಸಾಹ ಕೊಟ್ಟಂತಾಗುವುದು' ಎಂದು ಅಮೆರಿ ವಿಶದಪಡಿಸಿದರು!

ಬಂಗಾಳದಲ್ಲಿ ಭೀಕರ ಬರಗಾಲ!

ಬಂಗಾಳದಲ್ಲಿ ಭೀಕರ ಬರಗಾಲವಿಂದು ತಲೆಯೆತ್ತಿದೆ. ಸಾವಿರಾರು ಮಂದಿ ಬಡವರು ಹಳ್ಳಿಹಳ್ಳಿಗಳಿಂದ ಕಲ್ಕತ್ತ ನಗರಕ್ಕೆ ಬಂದು ಮುತ್ತುತ್ತಿದ್ದಾರೆ. ಕಲ್ಕತ್ತದ ಬೀದಿಗಳಲ್ಲಿ ಪ್ರತಿದಿನವೆಂಬಂತೆ ೨೫ಕ್ಕೆ ಕಡಿಮೆಯಾಗದಷ್ಟು ಹೆಣಗಳನ್ನು ಸರಕಾರೇತರ ಸಂಸ್ಥೆಗಳು ತೆಗೆಯುತ್ತಿವೆ. ಇವೆಲ್ಲಾ ಉಪವಾಸದ ಮರಣಗಳು! ಇದರ ನಿವಾರಣೋಪಾಯ ಮಾಡಲು ಇದುವರೆಗೆ ಬಂಗಾಳ ಸರಕಾರ ಸಮರ್ಥವಾಗಿಲ್ಲ! ಸರ್ ನಾಜಿಮುದ್ದೀನ್ ಸರಕಾರವು ಆಡಳಿತ ವಹಿಸುವಾಗ, ಜನರಿಗೆ ಆಹಾರ ತೊಂದರೆಯಾಗದಂತೆ ಮಾಡುವ ಭರವಸೆ ಕೊಟ್ಟಿತ್ತು. ಆದರೆ ಅದು ಪೂರೈಸಲಿಲ್ಲ. ಹಕ್ ಮಂತ್ರಿಮಂಡಳವು ಪ್ರಾಂತದಲ್ಲಿ ಸಾಕಷ್ಟು ಆಹಾರವಿಲ್ಲವೆಂದು ಹಿಂದೆಯೇ ತಿಳಿಸಿದೆ. ಆದರೆ ಹೊಸ ಮಂತ್ರಿಮಂಡಳದ ಸಚಿವ ಸುಹ್ರವರ್ದಿಯವರು ಬಂಗಾಳಕ್ಕೆ ಬೇಕಾದಷ್ಟು ಆಹಾರವಿದೆಯೆಂದು ಭರವಸೆಯಿತ್ತಿದ್ದರು. ಆ ಭರವಸೆಯಿಂದಾಗ ಏನಾಯಿತೋ ಗೊತ್ತಾಗುವುದಿಲ್ಲ. ಕಳೆದ ಎರಡು ತಿಂಗಳಲ್ಲಿಯೂ ಈ ಮಂತ್ರಿಮಂಡಳಕ್ಕೆ ಏನು ಮಾಡಲೂ ಆಗಲಿಲ್ಲ. ಪರಿಸ್ಥಿತಿ ದಿನದಿಂದ ದಿನಕ್ಕೆ ಕೆಡುತ್ತಾ ಇದೆ.

ಈ ಭೀಕರ ಪರಿಸ್ಥಿತಿಯಲ್ಲಿ, ಬಂಗಾಳಕ್ಕೆ ಹೊರಪ್ರಾಂತ್ಯದಿಂದ ಆಕ್ಕಿ ತರಿಸಬೇಕೆಂದು ಬಂಗಾಳ ಅಸೆಂಬ್ಲಿಯಲ್ಲಿ ಡಾ। ಮುಖರ್ಜಿಯವರು ತಿಳಿಸಿದರು. ಆ ಸಂದರ್ಭದಲ್ಲಿ ಯೂರೋಪಿಯನ್ ಪಕ್ಷದಿಂದ 'ನೀವು ಟೋಜೋನಲ್ಲಿಗೆ ಯಾಕೆ ಹೋಗಬಾರದು? ಅವರು ನಿಮ್ಮ ರಕ್ಷಕರಲ್ಲವೇ' ಎಂದು ಉದ್ಗಾರ ಹೊರಟಿತು' ಎಂಥಾ ಅಸಭ್ಯ ಮಾತುಗಳನ್ನು ಯೂರೋಪಿಯನರು ಆಡುತ್ತಾರೆಂದು ಇದರಿಂದ ವ್ಯಕ್ತವಾಗುತ್ತದೆ. ಈ ಸಂದರ್ಭದಲ್ಲಿ ಡಾ। ಮುಖರ್ಜಿಯ ಕೊಟ್ಟ ಉತ್ತರ ಸ್ವಾರಸ್ಯವಿದೆ! "ನಮ್ಮ ರಕ್ಷಕರು ಯಾರೆಂಬುದನ್ನು ಭವಿಷ್ಯದ ಇತಿಹಾಸ ನಿರ್ಣಯಿಸಬೇಕಾಗಿದೆ. ಆದರೆ ಇಷ್ಟನ್ನು ನಾನು ಹೇಳುತ್ತೇನೆ. ೧೭೦ ವರ್ಷಗಳ ನಿಮ್ಮ ಆಡಳಿತದ ಬಳಿಕವೂ ನಾವು ಹೀಗೆ ಉಪವಾಸ ಬಿದ್ದು ನರಳುತ್ತಿರಬೇಕಾದರೆ ನೀವು ಖಂಡಿತವಾಗಿಯೂ ನಮ್ಮ ರಕ್ಷಕರಲ್ಲ" ಎಂಬ ಮುಖರ್ಜಿಯವರ ಮಾತು ಯೋಗ್ಯವಾಗಿದೆ. ಜ್ಯಾನ್ ಹರ್ಬರ್ಟರು ಆಳುವ ಪ್ರಾಂತ್ಯದಲ್ಲಿ ಹೀಗೆ ಜನರು ಸಂಕಷ್ಟ ಪಡುತ್ತಿದ್ದರೂ, ಅಲ್ಲಿನ ಸದಸ್ಯರು ಅದರ ನಿವಾರಣೆಗಾಗಿ ಹಾತೊರೆಯುತ್ತಿದ್ದರೂ, ಅಲ್ಲಿನ ಯೂರೋಪಿಯನ್ 'ಸದ್ಗೃಹಸ್ಥರು' ಬಂಗಾಳದವರನ್ನು ಟೋಜೋನಲ್ಲಿಗೆ ಹೋಗಹೇಳುವುದೂ ಆಶ್ಚರ್ಯವಿದೆ.

ಮೂವರು ಗಲ್ಲಿಗೇರಿಸಲ್ಪಟ್ಟರು!

ಶ್ರೀಗಳಾದ ಸೀತಾರಾಮ ಗೋಪಿ, ಮಹಾವೀರ ದುಸಾದ ಮತ್ತು ಮೋತಿಬಾರಿ ಈ ಮೂವರು ೧೯೪೨ರ ಎರಡನೇ ಆರ್ಡಿನೆನ್ಸಿನನ್ವಯ ಕಳೆದ ನವಂಬರ ೧೭ನೇ ತಾರೀಕಿಗೆ ಭಾಗಲಪುರ ಸ್ಪೆಶಲ್ ಜಡ್ಜರಿಂದ ಮರಣ ದಂಡನೆ ವಿಧಿಸಲ್ಪಟ್ಟರು. ಅವರಿಗೆ ಜೀವದಾನ ತಿರಸ್ಕರಿಸಿ ಫೆಬ್ರವರಿ ೨೪ಕ್ಕೆ ಗಲ್ಲಿಗೇರಿಸಲಾಯಿತು. ಈ ಆರ್ಡಿನೆನ್ಸು ನಿಯಮ ಬಾಹ್ಯವೆಂದು ಕಲ್ಕತ್ತಾ ಹೈಕೋರ್ಟು ತೀರ್ಮಾನ ಮಾಡಿದೆ; ಆದರೆ ಅವರನ್ನು ಆ ಮೊದಲೇ ಗಲ್ಲಿಗೇರಿಸಲಾಯಿತು, ಎಂದು ಕೌನ್ಸಿಲ್ ಓಫ್ ಸ್ಟೇಟಿನಲ್ಲಿ ರಾಜಾ ಯುವರಾಜ ದತ್ತಸಿಂಗರು ಕೇಳಿದ ಪ್ರಶ್ನೆಗೆ ಗೃಹ ಖಾತೆ ಕಾರ್ಯದರ್ಶಿ ಉತ್ತರವಿತ್ತರು.

'ಕೌನ್ಸಿಲು ಪ್ರಾತಿನಿಧಿಕವಲ್ಲ'

ತಂಪಿಯವರ ಭಾಷಣ

ತಿರುವಾಂಕೂರು ಕೌನ್ಸಿಲು ಪ್ರಾತಿನಿಧಿಕವಲ್ಲವೆಂದು ಶ್ರೀ ಬಾಲಕೃಷ್ಣ ತಂಪಿಯರು ಮಾಡಿದ ಭಾಷಣವನ್ನು ಹಾಗೂ ಅದರಲ್ಲಿ ಅವರು ಸಂಸ್ಥಾನದ ಮುಖ್ಯಾಧಿಕಾರಿಗಳನ್ನು ಟೀಕಿಸಿದ್ದನ್ನು ಅಧಿಕೃತ ದಾಖಲೆಯಿಂದ ತೆಗೆದುಹಾಕಲಾಯಿತು.

ಅಗಸ್ಟ ೨೩ಕ್ಕೆ ಗಾಂಧಿಜಿ ಬಿಡುಗಡೆ?

'ದೇವರ ದಯೆಯಿಂದ ಇದೇ ಅಗಸ್ಟ ೨೩ಕ್ಕೆ ಗಾಂಧಿಜಿಯವರ ಬಿಡುಗಡೆಯಾಗುವುದು' ಎಂದು 'ಡೈಲಿ ಗಜೆಟ್' ಪತ್ರಿಕೆಯಲ್ಲಿ, ಪಂಡಿತ ರಾಮದುಲಾರೆ ಶರ್ಮರು ಬರೆದಿರುತ್ತಾರೆ.

The Bank of Mangalore Limited, Mangalore.

ESTD: 1931

HEAD OFFICE — Mangalore. *BRANCHES* — Moodabidri & Padubidri.

The Bank Undertakes to Collect Cheques, Demand and Documentary Bills at Most Competitive Rates.

ISSUES DRAFTS ON ALL IMPORTANT TOWNS IN THE DISTRICT

and also on

BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.

at very favourable rates

All kinds of inland banking business undertaken

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯ, ಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾ ಬೇನೆ, ಪಕ್ಷವಾತ, ನೊಡಿಮು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃಂತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ನೀವೀವರೆಗೆ ವಿಮೆಯನ್ನು ಇಳಿಸದಿದ್ದರೆ, ಯಾ ಸಾಕಷ್ಟು ವಿಮೆಯನ್ನು ಮಾಡಿಲ್ಲವಾದರೆ

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡಿನಲ್ಲಿ

ಈಗಲೇ ವಿಮೆ ಇಳಿಸಿರಿ.

ಏಕೆಂದರೆ.

1. ಜೀವವಿಮೆಯು ಒಬ್ಬನ ವೃದ್ಧಾಪ್ಯದ ಮತ್ತು ಸಮೀಪದ ಹಾಗೂ ಪ್ರೀತಿಯ ಸಂಬಂಧಿಕರ ಜೀವನವನ್ನು ಸುರಕ್ಷಿತಗೊಳಿಸುತ್ತ
2. ನೀವಿಂದು ವಿಮೆಯನ್ನಿಳಿಸಬಲ್ಲಿರಾದರೆ ನಾಳೆ ಹಾಗೆ ಮಾಡಲು ಶಕ್ತರಾಗದೆ ಹೋಗಬಹುದು.
3. ಆರೋಗ್ಯವು ಅನಿಶ್ಚಿತವೆಂದಾದರೆ ಮೃತ್ಯುವು ಯಾರನ್ನೂ ಬಿಡುವಂತಿಲ್ಲ.
4. ಮೃತ್ಯು ಮತ್ತು ಮುಪ್ಪು ಎಂಬುದು ಅಮೂಲ್ಯವಾದೊಂದು ನಿಶ್ಚಿತ.
5. ಜೀವವಿಮೆಯು ಮರಣದ ಕ್ರೂರತೆಯನ್ನು ಹೋಗಲಾಡಿಸುವುದೊಂದೇ ಅಲ್ಲ; ಅದರ ಸಂಕಷ್ಟವನ್ನೂ ದೂರೀಕರಿಸುತ್ತದೆ.

ಆದುದರಿಂದ ಇಂದೇ ಜೀವವಿಮೆ ಮಾಡುವುದು ಲಾಭಕರವಾಗಿದೆ.

ವಿಶೇಷ ಮಾಹಿತಿಗೆ ದಯಮಾಡಿ ಬರೆಯಿರಿ:

ಕೊಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

—: ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ :—

ಮಂಗಳೂರು ಕಲ್ಲಿಕೋಟೆ ಸೇಲಂ ತಿರುವಾಂಕೂರು ಬೆಂಗಳೂರು ನಗರ ಮತ್ತು ಬೊಂಬಾಯಿ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವ ವಿಧದ ದೋಷಗಳನ್ನು ಗುಣಪಡಿಸುವ ದಿವ್ಯೌಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ್ ವ ಏಜೆಂಟರು:–

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘವೇಂದ್ರ ಪೈ, ರಥಬೀದಿ. (3) ದಿ ಕರ್ನಾಟಕ ಸ್ನಫ್ ವರ್ಕ್ಸ್, ರಥಬೀದಿ. (4) ಡಾ| ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೊ:–1. ಮರಾಠ ಗಲ್ಲಿ ಹುಬ್ಬಳ್ಳಿ.

2. 36 ಫ್ಯಾಕ್ಟ್ರೋಸ್ಟ್ರೋಡ್, ಟ್ರಿಪ್ಲಿಕೇನ್, ಮದರಾಸು.

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.

ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಕು 13—8—1943 [ಸಂಚಿಕೆ 33]

ಬಿಕ್ಕಟ್ಟು ಬಿಡಿಸಲು ಬ್ರಿಟಿಷ್ ಪ್ರಮುಖರ ವಿನಂತಿ!

ಬ್ರಿಟಿಷ್ ಭಾರತದ ಬಾಂಧವ್ಯ ಉಳಿಸಲು ಹೊಸ ಪ್ರಯತ್ನ ಮಾಡಬೇಕು.

ಪ್ರಮುಖ ಬ್ರಿಟಿಷರ ವಿನಂತಿ

ಪ್ರೊ। ಲಾಸ್ಕಿ, ಲಾರ್ಡ್ ಸ್ಟೇಬೋಲ್ಗಿ, ಕ್ಲೆಮೆಂಟ್ ಡೇವಿಸ್ (ಪಾರ್ಲಿಮೆಂಟ್ ಸದಸ್ಯ) ವೆಸ್ಟ್‌ಮಿನ್‌ಸ್ಟರಿನ ಆರ್ಚ್ ಡೀನ್, ಸರ್ ರಿಚಾರ್ಡ್ ಗ್ರೆಗರಿ, ಸರ್ ಅರ್ನೆಸ್ಟ್ ಬೆನೆಟ್, (ಪಾ. ಸ.) ಪ್ರೊ। ನಾರ್ಮನ್ ಬೆಂಟ್‌ವಿಚ್, ಬ್ರಿಮಿಂಗಾಮ್ ಮತ್ತು ಬ್ರೇಡ್‌ಫೋರ್ಡ್‌ಗಳ ಬಿಶಪ್, ಮಿಸೆಸ್ ವೆರಾಬ್ರಿಟೇನ್, ಡಾಮೆ ಎಲಿಜಬೆತ್ ಪ್ರೊ। ಎಡ್ವರ್ಡ್ ಥಾಮ್‌ಸನ್ ಮೊದಲಾದ ನೂರಾರು ಸಂಸ್ಥೆಗಳ ಪ್ರತಿನಿಧಿಗಳು, ಮಹಿಳೆಯರೂ ಮಹನೀಯರೂ ಬ್ರಿಟನಿನ ಹಲವು ಪ್ರಮುಖರು ಸೇರಿ ಬ್ರಿಟಿಷ್ ಭಾರತ ಬಾಂಧವ್ಯ ಉಳಿಯುವಂತೆ ಮಾಡಲು, ಸರಕಾರವು ಹೊಸ ಪ್ರಯತ್ನ ಮಾಡಬೇಕೆಂದು ಒಂದು ವಿನಂತಿ ಹೊರಡಿಸಿದ್ದಾರೆ. ಈ ವಿನಂತಿಯ ಪ್ರತಿಯನ್ನು ಚರ್ಚಿಲ್, ಅಮೆರಿ, ವೈಸರಾಯ್, ಲಿನ್‌ಲಿತ್‌ಗೋ ಮತ್ತು ವೇವೆಲ್ ಇವರಿಗೆ ಕಳುಹಿಸಲಾಗಿದೆ.

ಆ ಹೇಳಿಕೆಯಲ್ಲಿ, ಭಾರತದ ಮುಂದಾಳುಗಳನ್ನು ಸೆರೆಮನೆಯಲ್ಲಿ ಹಾಕಿ ಒಂದು ವರ್ಷ ದಾಟಿತು, ಭಾರತದ ಸಾವಿರಾರು ಮುಂದಾಳುಗಳು ಸೆರೆಮನೆಯೊಳಗೆ ವಿಚಾರಣೆಯಿಲ್ಲದೆ ತಳ್ಳಲ್ಪಟ್ಟಿದ್ದಾರೆ, ರಾಜಕೀಯ ಬಿಕ್ಕಟ್ಟು ಬಗೆಹರಿಸದೆ ಹಾಗೆಯೇ ಉಳಿದಿದೆ, ಭಾರತ ಬ್ರಿಟನುಗಳಲ್ಲಿ ವೈಷಮ್ಯ ಬೆಳೆದು ಬಂದಿದೆ, ಈ ಅವಸ್ಥೆ ಮುಂದುವರಿದರೆ ಭಾರತ ಬ್ರಿಟನುಗಳ ಬಾಂಧವ್ಯ ಕಡಿದು ಹೋದೀತು, ಆದ್ದರಿಂದ ಇಂದು ಪರಿಸ್ಥಿತಿಯನ್ನು ಪುನರಾಲೋಚಿಸಲು ಸಂದರ್ಭ ಒದಗಿದೆಯೆಂದು ನಾವು ತಿಳಿಯುತ್ತೇವೆ, ಇದಕಾರಣ ಭಾರತದ ಬಿಕ್ಕಟ್ಟು ಬಗೆಹರಿಸಲು ಬ್ರಿಟನು ಹೊಸ ಪ್ರಯತ್ನ ಮಾಡಬೇಕು ಎಂದು ತಿಳಿಸಲಾಗಿದೆ. ಬ್ರಿಟಿಷ್ ಪ್ರಮುಖರು ಸರಿಯಾದ ಸಮಯದಲ್ಲಿ ಸರಕಾರಕ್ಕೆ ಈ ಉಪದೇಶವಿತ್ತಿದ್ದಾರೆ.

ಫಿಲ್ಪಿ ಭಾರತಕ್ಕೆ ಬರಲಿಲ್ಲವೇಕೆ?

ಎಂದು ಕೌನ್ಸಿಲ್ ಆಫ್ ಸ್ಟೇಟಿನಲ್ಲಿ ಪ್ರಶ್ನೆ ಬಂತು. ಫಿಲ್ಪಿಯವರು ಭಾರತಕ್ಕೆ ಬರಲು ಆತುರರಿದ್ದರೂ ಹಿಂದುಸ್ತಾನ ಸರಕಾರವು ಅವರನ್ನು ಬರಬಿಡಲೆಂದು ಹೇಳಲಾಗುವ ಸುದ್ದಿ ಸರಿಯುಲ್ಲವೆಂದೂ, ಆದರೆ ಆಗ ಬರಲು ಸಮಯ ಸರಿಯುಲ್ಲವೆಂದು ಮಾತ್ರ ಸರಕಾರ ತಿಳಿಸಿದೆಯೆಂದೂ ಹೇಳಲಾಯಿತು.

'ಮಹಾತ್ಮರನ್ನು ನೋಡಲು ಸಮ್ಮತಿ ಕೊಡುವುದಿಲ್ಲ'

ಬಂಗಾಳದಲ್ಲಿ ಭೀಕರ ಬರಗಾಲ!

'ಮಹಾತ್ಮರನ್ನು ನೋಡಲು ಸಮ್ಮತಿ ಕೊಡುವುದಿಲ್ಲ.'

ಹೊರಗಿನ ಧುರೀಣರೇ ಬಿಕ್ಕಟ್ಟು ಬಿಡಿಸಬೇಕು!

ಕಾಮನ್ಸಿನಲ್ಲಿ ಅಮೆರಿ ಉದ್ಗಾರ

ಭಾರತ ಮಂತ್ರಿಯೆನಿಸಿದ ಅಮೆರಿ ತಾ. ೩೦ರಂದು ಕಾಮನ್ಸ್ ಸಭೆಯಲ್ಲಿ ಸೋರೆನ್‌ಸನರು ಕೇಳಿದ ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ, ರಾಜಕೀಯ ಕೈದಿಗಳು ಅಸಿರ್ಬಂಧ ಮುಕ್ತ ಮಾಡಬೇಕೆಂದು ಬ್ರಿಟನಿನ ೨೫ ಮಂದಿ ಪಾದ್ರಿಗಳು ಮಾಡಿದ ಮನವಿಯನ್ನು ವಿಚಾರಿಸುವುದಾಗಿ ಹೇಳಿದರು. 'ಭಾರತದ ಮುಖಂಡರು ಮುಂಬಂದು ಭಾರತದ ಭಾವೀ ಘಟನೆ ರಚಿಸಬೇಕೆಂದು ವೈಸರಾಯರು ಮೊನ್ನೆ ಹೇಳಿದ್ದರಲ್ಲಿ ಪಾದ್ರಿಗಳಂತೆಯೇ ಬಿನ್ನವಿಸಿದ್ದಾರೆ. ರಾಜಕೀಯ ಕೈದಿಗಳನ್ನು ಬಿಡಬೇಕೆಂಬ ವಿನಂತಿ ವಿಚಾರ ನಾನಿಷ್ಟೇ ತಿಳಿಸುತ್ತೇನೆ. ಗಾಂಧಿಜಿ ಮತ್ತು ಕಾಂಗ್ರೆಸ್ ಧುರೀಣರು, ತಾವು ಕೈಕೊಂಡ ಅಕ್ರಮ ಕಾರ್ಯಕಲಾಪಗಳನ್ನು ಬಿಡುವ ಮನೋವೃತ್ತಿ ತೋರಿಸದ್ದರಿಂದ ಅವರನ್ನು ಬಿಡುಗಡೆ ಮಾಡಿಲ್ಲ' ಎಂದೂ ಅಮೆರಿ ತಿಳಿಸಿದರು. 'ಗಾಂಧಿ ಮತ್ತು ಕಾಂಗ್ರೆಸ್ ಧುರೀಣರ ಭೇಟಿಗೆ ಆಸ್ಪದ ಕೊಡಬಾರದೆಂದು ಸರಕಾರದ ಧೋರಣವಿದೆ. ಉಳಿದ ಧುರೀಣರು ಅನ್ಯೋನ್ಯ ವಿಚಾರವಿನಿಮಯ ಮಾಡಬಹುದು. ಅಕ್ರಮ ಕೂಟಗಳಲ್ಲಿ ಸೇರದ ಧುರೀಣರು ಒಟ್ಟು ಸೇರಬಹುದು. ಮಹಾತ್ಮರನ್ನು ಭೇಟಿಯಾಗಲು ರಾಜಗೋಪಾಲಾಚಾರ್ಯ ಮೊದಲಾದವರಿಗೆ ಆಸ್ಪದವಿತ್ತರೆ, ಅಕ್ರಮ ಹಾದಿ ಹಿಡಿದವರಿಗೆ ಪ್ರೋತ್ಸಾಹ ಕೊಟ್ಟಂತಾಗುವುದು' ಎಂದು ಅಮೆರಿ ವಿಶದಪಡಿಸಿದರು!

ಬಂಗಾಳದಲ್ಲಿ ಭೀಕರ ಬರಗಾಲ!

ಬಂಗಾಳದಲ್ಲಿ ಭೀಕರ ಬರಗಾಲವಿಂದು ತಲೆಯೆತ್ತಿದೆ. ಸಾವಿರಾರು ಮಂದಿ ಬಡವರು ಹಳ್ಳಿಹಳ್ಳಿಗಳಿಂದ ಕಲ್ಕತ್ತ ನಗರಕ್ಕೆ ಬಂದು ಮುತ್ತುತ್ತಿದ್ದಾರೆ. ಕಲ್ಕತ್ತದ ಬೀದಿಗಳಲ್ಲಿ ಪ್ರತಿದಿನವೆಂಬಂತೆ ೫೫ಕ್ಕೆ ಕಡಿಮೆಯಾಗದಷ್ಟು ಹೆಣಗಳನ್ನು ಸರಕಾರೇತರ ಸಂಸ್ಥೆಗಳು ತೆಗೆಯುತ್ತಿವೆ. ಇವೆಲ್ಲಾ ಉಪವಾಸದ ಮರಣಗಳು! ಇದರ ನಿವಾರಣೋಪಾಯ ಮಾಡಲು ಇದುವರೆಗೆ ಬಂಗಾಳ ಸರಕಾರ ಸಮರ್ಥವಾಗಿಲ್ಲ: ಸರ್ ನಾಜಿಮುದ್ದೀನ್ ಸರಕಾರವು ಆಡಳಿತ ವಹಿಸುವಾಗ, ಜನರಿಗೆ ಆಹಾರ ತೊಂದರೆಯಾಗದಂತೆ ಮಾಡುವ ಭರವಸೆ ಕೊಟ್ಟಿತ್ತು. ಆದರೆ ಅದು ಪೂರೈಸಲಿಲ್ಲ. ಹಕ್ ಮಂತ್ರಿಮಂಡಳವು ಪ್ರಾಂತದಲ್ಲಿ ಸಾಕಷ್ಟು ಆಹಾರವಿಲ್ಲವೆಂದು ಹಿಂದೆಯೇ ತಿಳಿಸಿದೆ. ಆದರೆ ಹೊಸ ಮಂತ್ರಿಮಂಡಳದ ಸಚಿವ ಸುಹ್ರವರ್ದಿಯವರು ಬಂಗಾಳಕ್ಕೆ ಬೇಕಾದಷ್ಟು ಆಹಾರವಿದೆಯೆಂದು ಭರವಸೆಯಿತ್ತಿದ್ದರು. ಆ ಭರವಸೆಯೀಗ ಏನಾಯಿತೋ ಗೊತ್ತಾಗುವುದಿಲ್ಲ. ಕಳೆದ ಎರಡು ತಿಂಗಳಲ್ಲಿಯೂ ಈ ಮಂತ್ರಿಮಂಡಳಕ್ಕೆ ಏನು ಮಾಡಲೂ ಆಗಲಿಲ್ಲ. ಪರಿಸ್ಥಿತಿ ದಿನದಿಂದ ದಿನಕ್ಕೆ ಕೆಡುತ್ತಾ ಇದೆ.

ಈ ಭೀಕರ ಪರಿಸ್ಥಿತಿಯಲ್ಲಿ, ಬಂಗಾಳಕ್ಕೆ ಹೊರಪ್ರಾಂತ್ಯದಿಂದ ಅಕ್ಕಿ ತರಿಸಬೇಕೆಂದು ಬಂಗಾಳ ಅಸೆಂಬ್ಲಿಯಲ್ಲಿ ಡಾ। ಮುಖರ್ಜಿಯವರು ತಿಳಿಸಿದರು. ಆ ಸಂದರ್ಭದಲ್ಲಿ ಯೂರೋಪಿಯನ್ ಪಕ್ಷದಿಂದ 'ನೀವು ಟೋಜೋನಲ್ಲಿಗೆ ಯಾಕೆ ಹೋಗಬಾರದು? ಅವರು ನಿಮ್ಮ ರಕ್ಷಕರಲ್ಲವೇ' ಎಂದು ಉದ್ಗಾರ ಹೊರಟಿತು' ಎಂಥಾ ಅಸಭ್ಯ ಮಾತುಗಳನ್ನು ಯೂರೋಪಿಯನರು ಆಡುತ್ತಾರೆಂದು ಇದರಿಂದ ವ್ಯಕ್ತವಾಗುತ್ತದೆ. ಈ ಸಂದರ್ಭದಲ್ಲಿ ಡಾ। ಮುಖರ್ಜಿಯ ಕೊಟ್ಟ ಉತ್ತರ ಸ್ವಾರಸ್ಯವಿದೆ! "ನಮ್ಮ ರಕ್ಷಕರು ಯಾರೆಂಬುದನ್ನು ಭವಿಷ್ಯದ ಇತಿಹಾಸ ನಿರ್ಣಯಿಸಬೇಕಾಗಿದೆ. ಆದರೆ ಇಷ್ಟನ್ನು ನಾನು ಹೇಳುತ್ತೇನೆ. ೧೭೦ ವರ್ಷಗಳ ನಿಮ್ಮ ಆಡಳಿತದ ಬಳಿಕವೂ ನಾವು ಹೀಗೆ ಉಪವಾಸ ಬಿದ್ದು ನರಳುತ್ತಿರಬೇಕಾದರೆ ನೀವು ಖಂಡಿತವಾಗಿಯೂ ನಮ್ಮ ರಕ್ಷಕರಲ್ಲ" ಎಂಬ ಮುಖರ್ಜಿಯವರ ಮಾತ್ರ ಯೋಗ್ಯವಾಗಿದೆ. ಜಾನ್ ಹರ್ಬರ್ಟರು ಆಳುವ ಪ್ರಾಂತ್ಯದಲ್ಲಿ ಹೀಗೆ ಜನರು ಸಂಕಷ್ಟ ಪಡುತ್ತಿದ್ದರೂ, ಅಲ್ಲಿನ ಸದಸ್ಯರು ಅದರ ನಿವಾರಣೆಗಾಗಿ ಹಾತೊರೆಯುತ್ತಿದ್ದರೂ, ಅಲ್ಲಿನ ಯೂರೋಪಿಯನ್ 'ಸದ್ಗೃಹಸ್ತರು' ಬಂಗಾಳದವರನ್ನು ಟೋಜೋನಲ್ಲಿಗೆ ಹೋಗಹೇಳುವುದು ಆಶ್ಚರ್ಯವಿದೆ.

ಮೂವರು ಗಲ್ಲಿಗೇರಿಸಲ್ಪಟ್ಟರು!

ಶ್ರೀಗಳಾದ ಸೀತಾರಾಮ ಗೋಪಿ, ಮಹಾವೀರ ದುಸಾದ ಮತ್ತು ಮೋತಿ ಬಾರಿ ಈ ಮೂವರು ೧೯೪೨ರ ಎರಡನೇ ಆರ್ಡಿನೆನ್ಸಿನನ್ವಯ ಕಳೆದ ನವಂಬರ ೧೬ನೇ ತಾರೀಕಿಗೆ ಭಾಗಲಪುರ ಸ್ಪೆಶಲ್ ಜಜ್ಜರಿಂದ ಮರಣ ದಂಡನೆ ವಿಧಿಸಲ್ಪಟ್ಟರು. ಅವರಿಗೆ ಜೀವದಾನ ತಿರಸ್ಕರಿಸಿ ಫೆಬ್ರವರಿ ೨೪ಕ್ಕೆ ಗಲ್ಲಿಗೇರಿಸಲಾಯಿತು. ಈ ಆರ್ಡಿನೆನ್ಸ್ ನಿಯಮ ಬಾಹ್ಯವೆಂದು ಕಲ್ಕತ್ತಾ ಹೈಕೋರ್ಟು ತೀರ್ಮಾನ ಮಾಡಿದೆ; ಆದರೆ ಅವರನ್ನು ಆ ಮೊದಲೇ ಗಲ್ಲಿಗೇರಿಸಲಾಯಿತು, ಎಂದು ಕೌನ್ಸಿಲ್ ಆಫ್ ಸ್ಟೇಟಿನಲ್ಲಿ ರಾಜಾ ಯುವರಾಜ ದತ್ತಸಿಂಗರು ಕೇಳಿದ ಪ್ರಶ್ನೆಗೆ ಗೃಹ ಖಾತೆ ಕಾರ್ಯದರ್ಶಿ ಉತ್ತರವಿತ್ತರು.

'ಕೌನ್ಸಿಲು ಪ್ರಾತಿನಿಧಿಕವಲ್ಲ'

ತಂಪಿಯವರ ಭಾಷಣ

ತಿರುವಾಂಕೂರು ಕೌನ್ಸಿಲು ಪ್ರಾತಿನಿಧಿಕವಲ್ಲವೆಂದು ಶ್ರೀ ಬಾಲಕೃಷ್ಣ ತಂಪಿಯವರು ಮಾಡಿದ ಭಾಷಣವನ್ನು ಹಾಗೂ ಅದರಲ್ಲಿ ಅವರು ಸಂಸ್ಥಾನದ ಮುಖ್ಯಾಧಿಕಾರಿಗಳನ್ನು ಟೀಕಿಸಿದ್ದನ್ನು ಅಧಿಕೃತ ದಾಖಲೆಯಿಂದ ತೆಗೆದುಹಾಕಲಾಯಿತು.

ಆಗಸ್ಟ್ ೨೩ಕ್ಕೆ ಗಾಂಧಿಜಿ ಬಿಡುಗಡೆ?

'ದೇವರ ದಯೆಯಿಂದ ಇದೇ ಆಗಸ್ಟ್ ೨೩ಕ್ಕೆ ಗಾಂಧಿಜಿಯವರ ಬಿಡುಗಡೆಯಾಗುವುದು' ಎಂದು 'ಡೈಲಿ ಗಜೆಟ್' ಪತ್ರಿಕೆಯಲ್ಲಿ ಪಂಡಿತ ರಾಮದುಲಾರಿ ಶರ್ಮರು ಬರೆದಿರುತ್ತಾರೆ.

ಬೇನೆ ಬಡತನಗಳು

ರಾಷ್ಟ್ರದ ಅವನತಿಗೆ ಕಾರಣ!

ಅದರ ನಿವಾರಣೆಗೆ ಏನು ಉಪಾಯ?

—ಕಯ್ಯಾರ.

ಭಾರತದ ಜನತೆಯಲ್ಲಿ ಬಹುಮಂದಿ ಬಡ ರೈತರು ಮತ್ತು ಕೂಲಿ ಕೆಲಸಗಾರರು. ಹಳ್ಳಿಗಳಲ್ಲಾಗಲಿ, ಪಟ್ಟಣಗಳಲ್ಲಾಗಲಿ ಅವರು ನೆಲಸಿರುವ ಸ್ಥಳಗಳನ್ನು ಒಮ್ಮೆ ತೆರೆದ ಕಣ್ಣಿನಿಂದ ನೋಡಬೇಕು! ಅವುಗಳನ್ನು ಮನೆಗಳೆನ್ನುವುದಕ್ಕಿಂತಲೂ ಗುಡಿಸಲುಗಳೆನ್ನುವುದೇ ಒಪ್ಪುತ್ತದೆ. ತಗ್ಗು ತಗ್ಗು ಸ್ಥಳದಲ್ಲಿ, ಕಿರಿದು ಕಿರಿದಾದ ಸಣ್ಣ ಸಣ್ಣ ಗುಡಿಸಲುಗಳಲ್ಲಿ ಹಲವಾರು ಮಂದಿ ವಾಸ ಮಾಡಿಕೊಂಡಿರುತ್ತಾರೆ! ಗುಡಿಸಲ ಸುತ್ತ ಕೊಳೆ ನೀರು ನಿಂತಿರುತ್ತದೆ; ಸರಿಯಾದ ಗಾಳಿಯಿಲ್ಲ; ಬೇಕಾದಷ್ಟು ಬೆಳಕಿಲ್ಲ; ಶುದ್ಧವಾದ ನೀರಿಲ್ಲ.

ಇನ್ನು ಅಲ್ಲಿ ನೆಲಸಿರುವ ಜನರು, ಮಕ್ಕಳಿಂದ ಹಿಡಿದು ಮುದುಕರ ವರೆಗೂ ಒಂದೇ ತರ; ಎಲ್ಲಾ ಎಲುಬಿನ ಗೂಡುಗಳು! ಯಾರ ಮುಖದಲ್ಲಿಯೂ ರಕ್ತವಿಲ್ಲ; ತೇಜಸ್ಸಿಲ್ಲ; ಉಲ್ಲಾಸವಿಲ್ಲ! ದಿನಕ್ಕೆ ಒಮ್ಮೆಯಾದರೂ ಹೊಟ್ಟೆಯ ಹಸಿವು ಅಡಗುವಷ್ಟು ಆಹಾರವಿಲ್ಲ! ಅದಕ್ಕೆ ಸಂಪಾದನೆ ಬೇಕಷ್ಟೆ! ಮುಂಜಾನೆಯಿಂದ ಸಂಜೆವರೆಗೆ ದುಡಿದರೂ ಕೈಬಾಯಿಗೆ ಹೋಗುವಂತಿಲ್ಲ. ಇಂಥಾ ದಾರಿದ್ರ್ಯದಲ್ಲಿ, ಇಂಥಾ ಶೋಷಣೆಯಲ್ಲಿ ಜನ ಜೀವಿಸುವರು; ರೋಗಗಳಿಗೆ ತುತ್ತಾಗುವರು. ಅವರ ಆ ಬಡ ಗುಡಿಸಲುಗಳು ಅವರ ದುರ್ಬಲ ದೇಹಗಳು ರೋಗಗಳಿಗೆ ತವರು ಮನೆ. ಒಂದಲ್ಲ ಒಂದು ರೀತಿಯ ಬೇನೆಯಿಂದ ಅವರು ನಿತ್ಯವೂ ನರಳುತ್ತಿರುವರು.

ಬೇನೆಯಿಂದ ನರಳುತ್ತಿದ್ದರೂ ಸರಿಯಾದ ಔಷಧೋಪಚಾರವಿಲ್ಲ; ಬೇಕಾದ ವೈದ್ಯಕೀಯ ಸಹಾಯವಿಲ್ಲ. ದುಡ್ಡಿದ್ದವರಿಗೆ ಮಾತ್ರ ಮದ್ದು ನಮ್ಮಲ್ಲಿ! ಒಟ್ಟು ರಾಷ್ಟ್ರದಲ್ಲಿ ಹೆರಿಗೆಯ ಮತ್ತು ಶಿಶುಸಂಗೋಪನೆಯ ಕೇಂದ್ರಗಳಿರುವುದು ಕೇವಲ ೬೦೦. ಅವುಗಳೂ ಬಡ ರೈತರಿಗೆ ಹಾಗೂ ಕೂಲಿ ಕೆಲಸಗಾರರಿಗೆ ಉಪಯೋಗಕ್ಕೆ ಬರುವಂತೆ ಇಲ್ಲ. ಹೆಚ್ಚಾಗಿ ಅವುಗಳಿರುವುದು ಪಟ್ಟಣ ಕೇಂದ್ರಗಳಲ್ಲಿಯೇ. ಅಲ್ಲಿನ ವೈದ್ಯರಿಗಾದರೂ ಬಡವರ ಸುಖದುಃಖಗಳನ್ನು ವಿಚಾರಿಸುವ ಅಭ್ಯಾಸ ಕಡಿಮೆ. ನಮ್ಮ ರಾಷ್ಟ್ರದಲ್ಲಿ ಹುಟ್ಟಿದ ಶಿಶುಗಳ ಸರಾಸರಿ ಜೀವಮಾನ, ಆಂಗ್ಲ ದೇಶದಲ್ಲಿ ಜನಿಸಿದ ಶಿಶುಗಳ ಸರಾಸರಿ ಜೀವಮಾನಕ್ಕಿಂತ ಅರ್ಧಕ್ಕಿಂತಲೂ ಕಡಿಮೆ! ೧೮೮೧ರಿಂದ ೧೯೩೧ರ ವರೆಗಿನ ಅಂಕೆ ಸಂಖ್ಯೆಗಳನ್ನು ಗಮನಿಸಿದರೆ ಇದು ಇನ್ನೂ ಅವನತಿ ಸ್ಥಿತಿಗೆ ಇಳಿದದ್ದು ಕಂಡುಬರುತ್ತದೆ. ನಮ್ಮಲ್ಲಿ ಸಾವಿರಕ್ಕೆ ೨೪ ಜನ ಸರಾಸರಿ ಸಾಯುತ್ತಿದ್ದಾರೆ; ಇಂಗ್ಲೆಂಡಿನಲ್ಲಿ ಕೇವಲ ೧೨ ಮಂದಿ ಸಾಯುವರು! ಪ್ರಸವ ಮರಣವು ಹೋಲೆಂಡಿನಲ್ಲಿ ಸಾವಿರಕ್ಕೆ ೨.೪, ಅಮೇರಿಕದಲ್ಲಿ ೮-೫ ಆದರೆ ಭಾರತದಲ್ಲಿ ೨೪-೫ರಷ್ಟು! ಬೆಳಕು ಕಂಡ ಒಂದು ವರ್ಷದೊಳಗೇ ಸಾಯುವ ಶಿಶುಗಳ ಸಂಖ್ಯೆ ನಮ್ಮಲ್ಲಿ ಇಡೀ ಪ್ರಪಂಚಕ್ಕೇ ಮಿಗಿಲು!

ಕೊಲೆರಾ, ಇಂಫ್ಲುಯೆಂಜಾ, ಪ್ಲೇಗು, ಮಲೇರಿಯಾಗಳಿಂದ ನಮ್ಮಲ್ಲಿ ಬಹಳ ಜನ ಸಾಯುವರು. ಕಳೆದ ಮುಕ್ಕಾಲು ಶತಮಾನದಲ್ಲಿ ಮಲೇರಿಯದಿಂದ ೮೦ ಮಿಲಿಯ ಜನ ಸತ್ತರು; ಪ್ಲೇಗಿನಿಂದ ೧೨.೫ ಮಿಲಿಯ, ಇಂಫ್ಲುಯೆಂಜಾದಿಂದ ೧೪ ಮಿಲಿಯ, ಕೊಲೆರಾದಿಂದ ೧೦.೭ ಮಿಲಿಯ. ಹೀಗೆ ಮಂದಿ ಮಡಿದರು! ಸಾಲದ್ದಕ್ಕೆ ಈಗ ಶ್ವಾಸಕೋಶಗಳ ರೋಗದಿಂದ ಮರಣ ಹೊಂದುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಾ ಇದೆ.

ಇವುಗಳಲ್ಲಿ ಕೆಲವು ಪ್ರತಿಬಂಧಿಸಬಹುದಾದ ರೋಗಗಳು. ಸರಿಯಾದ ಆಹಾರ, ಯೋಗ್ಯವಾದ ವಸತಿ, ಬೇಕಾದ ಔಷಧೋಪಚಾರವಿದ್ದರೆ ಈ ಮರಣ ಸಂಖ್ಯೆಯನ್ನು ದಿನದಿಂದ ದಿನಕ್ಕೆ ಕಡಿಮೆ ಮಾಡಬಹುದು. ಈಗ ಏನಿಲ್ಲೆಂದರೂ ವರ್ಷ ಒಂದಕ್ಕೆ ಸರಾಸರಿ ಮೂರು ನಾಲ್ಕು ವಾರಗಳ ವರೆಗೆ ಪ್ರತಿಯೊಬ್ಬ ಕೆಲಸಗಾರನೂ ತನ್ನ ಅನಾರೋಗ್ಯದ ನಿಮಿತ್ತ ರಜೆ ತೆಗೆದುಕೊಳ್ಳಬೇಕಾಗುತ್ತದೆ. ರಜೆ ತೆಗೆದು ಕೊಳ್ಳುವುದೆಂದರೆ ಮೊದಲಿದ್ದ ಉಪವಾಸಕ್ಕೆ ಮತ್ತು ಸ್ವಲ್ಪ ಬೆಂಕಿ ಹಾಕಿದಂತೆ

ಇಷ್ಟಿದ್ದರೂ ಇದನ್ನು ಪ್ರತಿಬಂಧಿಸಲು ಏನು ಕಾರ್ಯ ಆಗಿದೆ? ಇಡೀ ರಾಷ್ಟ್ರಕ್ಕೆ ಕೇವಲ 600 ಹೆರಿಗೆಯ ಮತ್ತು ಶಿಶು ಸಂಗೋಪನೆಯ ಕೇಂದ್ರ ಇದ್ದರೆ ಸಾಕೆ? ಇಂಗ್ಲೆಂಡು ಮತ್ತು ವೇಲ್ಸ್‌ನಂಥಾ ಸಣ್ಣ ರಾಷ್ಟ್ರದಲ್ಲಿಯೂ 3,000 ಕೇಂದ್ರಗಳಿರುವಾಗ! ಬ್ರಿಟಿಷ ಭಾರತಲ್ಲಿ ಕೇವಲ 7,000 ಆಸ್ಪತ್ರೆಗಳಿವೆ; ಇವುಗಳಲ್ಲಿ ಒಟ್ಟು 70,000 ಬೆಡ್ಡುಗಳು! ಎಂದರೆ 163 ಚದುರ ಮೈಲಿಗೆ ಒಂದು ಆಸ್ಪತ್ರೆಯಿದ್ದ ಹಾಗಾಯಿತು. ಮಲೇರಿಯದಿಂದ ನಮ್ಮ ರಾಷ್ಟ್ರದ ಜನ ನಿರಂತರ ಸಾಯುತ್ತಿದ್ದರೂ, ನಮ್ಮ ಆಸ್ಪತ್ರೆಗಳಿಗೆ ಒದಗಿಸುವ ಕ್ವಿನಿನು ವರ್ಷ ವರ್ಷಕ್ಕೆ ಕಡಿಮೆಯಾಗುತ್ತಲೇ ಇದೆ.

ಇದಕ್ಕೆಲ್ಲಾ ಮೂಲಕಾರಣ, ಸಾಕಷ್ಟು ಆಹಾರ ಸಿಗದಿರುವುದು; ರೈತರಿಗೆ ಹಾಗೂ ಕೂಲಿಗಾರರಿಗೆ ಸಾಕಷ್ಟು ಉತ್ಪತ್ತಿ ಇಲ್ಲದಿರುವುದು; ಎಂದರೆ ಅವರ ಕೆಲಸಕ್ಕೆ ಸರಿಯಾದ ಪ್ರತಿಫಲ ಹಾಗೂ ಸಂಬಳ ದೊರೆಯದಿರುವುದೇ! ನಮ್ಮ ರಾಷ್ಟ್ರದ ಜನರ ಬಡಕಲು ಶರೀರ, ನಿಸ್ತೇಜ ಮುಖ ನಿರುತ್ಸಾಹಗಳಿಗೆ ಹಾಗೂ ನಿರಂತರ ನೆಲಸಿರುವ ಬೇನೆಗಳಿಗೆ ಅವರಿಗೆ ಬೇಕಾದ ಆಹಾರ ಸಿಗದಿರುವುದೊಂದೇ ಕಾರಣ! ಯೋಗ್ಯವಾದ ಆಹಾರ ದೊರೆತರೆ ಬೇನೆ ಬೀಳುವುದು ಖಂಡಿತ ಕಡಿಮೆಯಾಗುತ್ತದೆ.

ನಮ್ಮ ರಾಷ್ಟ್ರದಲ್ಲಿ ಸರಾಸರಿ ಪ್ರತಿಯೊಬ್ಬನಿಗೆ ದಿನಕ್ಕೆ ೭ ಔನ್ಸು ಹಾಲು ಸಿಗುತ್ತದೆ. ಯುರೋಪಿನಲ್ಲಿ ಈ ಪ್ರಮಾಣವು ೩೫ ಔನ್ಸಿನಷ್ಟು. ಸರಾಸರಿ ೭ ಔನ್ಸಾದರೂ ಬಡ ರೈತರಿಗೆ ಹಾಗೂ ಕೂಲಿ ಕೆಲಸಗಾರರಿಗೆ ಸಿಗುವುದಿಲ್ಲ. ಏಕೆಂದರೆ ಶ್ರೀಮಂತರು ಅವರ ತುತ್ತನ್ನು ಸೆಳೆಕೊಳ್ಳುತ್ತಾರೆ! ಮಕ್ಕಳು ಮತ್ತು ತಾಯಂದಿರು ಬೇಕಾದಷ್ಟು ಹಾಲು ಕುಡಿಯುವುದೆಂಬುದು ನಮ್ಮ ದೇಶದಲ್ಲಿ ಇಲ್ಲವೇ ಇಲ್ಲ. ಬೊಂಬಯಿಯ ಕೆಲಸಗಾರರು ಸರಾಸರಿ ದಿನ ಒಂದರ ॥ ಔನ್ಸಿನಷ್ಟು ಮಾತ್ರ ಹಾಲು ಸೇವಿಸುತ್ತಾರೆ! ಮದ್ರಾಸಿನಲ್ಲಾದರೂ ಶೇಕಡಾ ೯೫ರಷ್ಟು ಮಂದಿ ಹಾಲು ಕುಡಿಯುವುದೇ ಇಲ್ಲ. ಬಡ ಭಾರತೀಯರ ಆಹಾರದಲ್ಲಿ ಮುಖ್ಯ ಜೀವಸತ್ವಗಳಾದ 'ಪ್ರೊಟಿನು' ಮತ್ತು 'ವಿಟಮಿನು'ಗಳಿಗೆ ದೊಡ್ಡ ಸೊನ್ನೆ!

ಭಾರತದಲ್ಲಿ ಹೆಚ್ಚಿನ ಜನ ದಿನಕ್ಕೊಂದು ಊಟವೂ ಉಣ್ಣುವುದಿಲ್ಲವೆಂದು ಹಿಂದೆ ಹೇಳಿದೆವು. ಬೊಂಬಯಿ ಕೆಲಸಗಾರ ಸಂಘದವರು ಕಡಿಮೆ ಪ್ರಮಾಣದ ಆಹಾರವೆಂದು ನಿಶ್ಚಯಿಸಿದ ಮಿತಿಗಿಂತಲೂ ಶೇಕಡಾ ೬೦ರಷ್ಟು ಅವನತ ಸ್ಥಿತಿಯ ಆಹಾರ ನಮ್ಮ ದೇಶದ ಕೆಲಸಗಾರರಿಗೆ ದೊರಕುವುದು. ಉತ್ತರ ಭಾರತದ ಹಲವು ಭಾಗಗಳಲ್ಲಿ ಕೂಲಿಗಾರರು ಮಧ್ಯಾಹ್ನ ಹೊತ್ತಿಗೆ ಒಣ ಕಾಳುಗಳನ್ನು ತಿಂದು ತಣ್ಣೀರು ಕುಡಿದು ಹೊಟ್ಟೆ ತುಂಬಿಸುತ್ತಾರೆ. ತರಕಾರಿ, ಎಣ್ಣೆ, ಹಣ್ಣುಗಳಂತೂ ಅವರ ಆಹಾರದಲ್ಲಿ ಇರುವುದೇ ಇಲ್ಲ. ಅಕ್ಕಿ ಉಣ್ಣುವ ಮದ್ರಾಸ್ ಪ್ರಾಂತದಲ್ಲಾದರೂ ದಿನಕ್ಕೊಮ್ಮೆ ತಂಗಳನ್ನ ತಿಂದೇ ಹೊಟ್ಟೆ ಹೊರುವರು. ಅವರ ಪದಾರ್ಥವೆಂದರೆ ಒಂದಿಷ್ಟು ಉಪ್ಪು!

ಭಾರತದ ಕೂಲಿ ಕೆಲಸಗಾರರು ಹಾಗೂ ಬಡ ರೈತರು ಕೈದಿಗಳಿಗಿಂತಲೂ ನಿಕೃಷ್ಟ ಜೀವನ ಮಾಡುವರು. ಜೈಲುಗಳಲ್ಲಾದರೂ ಹೊತ್ತಿಗೆ ಆಹಾರ, ಏನಾದರೂ ಸ್ವಲ್ಪ ತರಕಾರಿ, ತುಸು ಪದಾರ್ಥ ಇದ್ದೇ ಇರುತ್ತದೆ. ಕೈದಿಗಳ ಆ ಆಹಾರವಾದರೂ ಎಷ್ಟು ಕಷ್ಟದ್ದೆಂದು ನಮಗೆ ಗೊತ್ತೆ ಇದೆ; ಅವರಿಗಿಂತಲೂ ಇವರ ಆಹಾರ ನಿಕೃಷ್ಟವೆಂದರೆ ಇನ್ನೇನು ಹೇಳಬೇಕು?

ನಮ್ಮ ರಾಷ್ಟ್ರದ, ನಮ್ಮ ಜನರ ಈ ಶಾರೀರಿಕ ದುರ್ದೆಸೆಗೆ ಅವರ ದಾರಿದ್ರ್ಯ ಪ್ರಥಮ ಕಾರಣವೇನೋ ನಿಜ; ದಾರಿದ್ರ್ಯ ಸ್ಥಿತಿಯಲ್ಲಾದರೂ ಅವರು ಉಣ್ಣುವ ಆಹಾರ ಕ್ರಮಬದ್ಧವಿಲ್ಲದಿದೆ. ದೇಹ ಬೆಳೆಯಲು ಇಂಥಿಂಥಾ ಸತ್ವಗಳು ಇಷ್ಟಿಷ್ಟು ಆಹಾರದಲ್ಲಿರಬೇಕೆಂದು ನಿಯಮವಿದೆ. ಅದು ಪ್ರಕೃತಿ ನಿಯಮವು. ತಿನ್ನುವ ಆಹಾರ ಕಡಿಮೆಯಾದರೂ ಅದನ್ನು ಒಂದು ಕ್ರಮದಲ್ಲಿ ತಿಂದರೆ, ದೇಹ ಬೆಳೆಯುವ ಬೇಕಾದ ಆಹಾರ ಸತ್ವಗಳನ್ನು ಸೇರಿಸಿಕೊಂಡು ಸೇವಿಸಿದರೆ ದೇಹ ದುರ್ಬಲವಾಗುವುದಿಲ್ಲ. ಪ್ರೊಟಿನು, ವಿಟಮಿನುಗಳಿರುವ ಪದಾರ್ಥಗಳನ್ನು ತುಸು ತಿಳುವಳಿಕೆಯಿಂದ ಬಡವರೂ ಆಹಾರದಲ್ಲಿ ಸೇರಿಸಿಕೊಳ್ಳಬಹುದು. ಆ ವಿಚಾರ ಅವರಿಗೆ ಜ್ಞಾನವಿಲ್ಲ; ಅವರಿಗೆ ಓದು ಬರೆಹವಿಲ್ಲ. ೧೫೦ ವರ್ಷಗಳ ಬ್ರಿಟಿಷರ ಆಡಳಿತದ ಮೇಲೂ ಭಾರತ ದೇಶದಲ್ಲಿ ಶೇಕಡಾ ೧೦ರಷ್ಟು ಮಂದಿಯೂ ಸಾಕ್ಷರರಾಗಿಲ್ಲ. ಸರಕಾರ ಬೇಕಾದ ಪ್ರಚಾರ ಮಾಡುತ್ತಿಲ್ಲ. ಇದರಿಂದ ತಂಗಳನ್ನ ತಿಂದೋ, ಒಣ ರೊಟ್ಟಿ ಕಡಿದೋ, ತಣ್ಣೀರು ಕುಡಿದೋ ಜನ ಜೀವಸತ್ವ ಕಳಕೊಳ್ಳುತ್ತಾರೆ. ಭಾರತ ಹೀಗೆ ದಿನ ದಿನಕ್ಕೆ ಅವನತಿಗಿಳಿಯುತ್ತಾ ಬಂದಿದೆ.

ಸದ್ಯದ ಪರಿಸ್ಥಿತಿ ಅದಕ್ಕಿಂತಲೂ ಭೀಕರ! ಯುದ್ಧದ ದೆಸೆಯಿಂದ ಎಷ್ಟೋ ಕಡೆಗಳಲ್ಲಿ ಆಹಾರವೇ ಇಲ್ಲ. ಆಹಾರ ಸಿಗಬೇಕಾದರೆ ಎಷ್ಟೋ ಪಾಲು ಕ್ರಯ ಕೊಡಬೇಕು. ಅನ್ನದ ಒಂದು ಅಗಳು ಈಗ ಪವನಾಗಿದೆ! ವ್ಯಾಪಾರಿಗಳು ಕಳಸಂತೆ ಮಾಡಿಯಾದರೂ ಬೊಕ್ಕಸ ತುಂಬಿಸುತ್ತಾರೆ. ಶ್ರೀಮಂತರಿಗೆ ಎಷ್ಟು ದುಡ್ಡು ಕೂಡಿ ಹಾಕಿದರೂ ತೃಪ್ತಿ ಇಲ್ಲ. ಜಮೀನ್ದಾರರು ಇನ್ನೂ ಸುಲಿಗೆಯಲ್ಲಿಯೇ ನಿರತರಾದಂತೆ ತೋರುತ್ತದೆ. ಸರಕಾರವಾದರೂ ಆಹಾರ ಸರಿಯಾಗಿ ಹಂಚಿಕೊಡಲು ಸಮರ್ಥವಾಗಿಲ್ಲ. ರಾಷ್ಟ್ರೀಯ ಸರಕಾರ ನಮ್ಮಲ್ಲಿಲ್ಲ. ರಾಷ್ಟ್ರದ ಮುಖಂಡರು ಸೆರೆಮನೆಯೊಳಗೆ! ಇಂಥಾ ಅವ್ಯವಸ್ಥೆಯಲ್ಲಿ ಬಡವರಿಗೆ ಅನ್ನ ಯಾರು ಕೊಡಬೇಕು? ಅವರ ಹಸಿವು ಯಾರು ಕೇಳಬೇಕು? ಹುಲ್ಲು ಸೊಪ್ಪುಗಳನ್ನು ತಿಂದೋ ಎಷ್ಟೋ ಕಡೆಗಳಲ್ಲಿ ಜೀವನ ಧಾರಣೆ ಮಾಡುತ್ತಿದ್ದಾರೆ! ಮನುಷ್ಯ ವನ್ಯ ಜಾತಿಗೆ ಸೇರಿದ್ದಾನೆ! ಆತನ ಹೊಟ್ಟೆ ಅವನನ್ನು ಹಾಗೆ ಮಾಡಿದೆ! ಇಂಥಾ ನಿಕೃಷ್ಟ ಜೀವನದಿಂದ ಕೊಲೆರಾ ಮೊದಲಾದ ಭೀಕರ ವ್ಯಾಧಿಗಳು ತುಂಬಿ ಜನರನ್ನು ನುಂಗುತ್ತಾ ಬರುತ್ತದೆ!

ಈ ದಾರಿದ್ರ್ಯ, ಈ ಉಪವಾಸ, ಈ ರೋಗಗಳನ್ನು ತಡೆಗಟ್ಟದಿದ್ದರೆ, ಭಾರತದ ೪೦೦ ಮಿಲಿಯ ಜನ ೪ ಮಿಲಿಯವಾಗಲು ಎಷ್ಟು ಸಮಯ ಬೇಕು? ಕೊಲೆರಾ ತಾಗಿದವರು ನೂರಕ್ಕೆ ೯೯ರಷ್ಟು ಸಾಯುತ್ತಾರೆ; ಕೊಲೆರಾದಂಥಾ ರೋಗ ತೆರೆಯಂತೆ, ಬೆಂಕಿಯಂತೆ ಹರಡುತ್ತದೆ! ಈ ಪರಿಸ್ಥಿತಿ ಬೇಗನೇ ಸುಧಾರಿಸಬೇಕು! ರಾಷ್ಟ್ರದ ರಾಜಕೀಯಕ್ಕಿಂತ ಹೊಟ್ಟೆಯ ರಾಜಕೀಯ ಈಗ ಮುಖ್ಯ ಪ್ರಶ್ನೆ! ಸರಕಾರ ದೇಶದ ಮುಖಂಡರನ್ನು ಬಿಡುಗಡೆಮಾಡಬೇಕು. ರಾಷ್ಟ್ರ ಮುಖಂಡರು, ವಿದೇಶೀಯರನ್ನೋಡಿಸುವ ಮೊದಲು ಸ್ವದೇಶೀಯರನ್ನು ಬದುಕಿಸಬೇಕು. ರಾಷ್ಟ್ರೀಯ ಸರಕಾರ ಆಗಬೇಕು—ಜನತೆಯ ಸೇವೆ ಮಾಡಬೇಕು—ಈ ಬೇನೆ ಬಡತನಗಳನ್ನು ಬೇಗನೇ ಕೊನೆಗಾಣಿಸಬೇಕು.

ಸಮರಭೂಮಿಯ ಸಂಚಾರ

ಸೋವಿಯೆಟ್ ಸೇನೆಗಳು ಖಾರ್ ಖಾವ್ ದಾಟಿ ಮುನ್ನುಗ್ಗಿ, ದಕ್ಷಿಣ ರಶ್ಯ ದಲ್ಲಿ ಪೊಟಾವಾ ಎಂಬ ಮಹತ್ವದ ರೈಲ್ವೆ ಜಂಕ್ಷನ್‌ನಿಂದ ತುಸು ದೂರದಲ್ಲಿ ರುವವು. ಪೊಟಾವಾ ಖಾರಖೊವ್ ರಸ್ತೆ ಇನ್ನು ಬಹಳ ಹತ್ತಿರವಿದೆ. ಇದನ್ನು ಹತ್ತಿಸಿದರೆ ಖಾರ್‌ಖಾವಿನಲ್ಲಿರುವ ಜ ರ್ಮನರಿಗೆ ಮೇಲಿನ ರಣರಂಗದಲ್ಲಿ ಅವ ರ ಸೈನ್ಯ ಸಂಬಂಧ ತಪ್ಪುತ್ತದೆ. ಇದಲ್ಲದೆ ಖಾರ್‌ಖಾವ್‌ನ ಪಶ್ಚಿಮ ಮತ್ತು ನೈಋ ತ್ಯ ದಿಕ್ಕನಲ್ಲಿ ಒಂದೊಂದು ಸೈನ್ಯ ಹೊರ ಟಿವೆ. ಉತ್ತರ ಈಶಾನ್ಯ ದಿಕ್ಕುಗಳಿಂದ ಲೂ ಬೇರೆ ಸೈನ್ಯಗಳು ನುಗ್ಗುತ್ತಿವೆ. ಬ್ರಿ ಯಾನ್‌ಸ್ಕ್ ಭಾಗದಲ್ಲಿಯೂ ರಶ್ಯನರು ಮುನ್ನುಗ್ಗಿರುವರು. ಓರೆಲಿನ ಪಶ್ಚಿಮಕ್ಕೆ ೨೦ ಮೈಲು ದೂರವಿರುವ ಶೊಖೊವ ರೈಲ್ವೆ ಸ್ಟೇಶನು ರಶ್ಯನ್ ಸೈನಿಕರ ವಶ ವಾಗಿದೆ. ಬಿಯ್ಲಗರೋಡದಿಂದಲೂ ಹೊರು ಸೈನ್ಯಗಳು ಹೊರಟಿರುವುದರಿಂದ ಶತ್ರು ಅಧೀನವಾದ ಯುಕ್ರೇನಿನಲ್ಲಿರುವ ರೈಲು ದಾರಿಗಳು ಮತ್ತು ರಸ್ತೆಗಳು ಗಂಡಾಂತರಕ್ಕೀಡಾಗಿವೆ.

ಅಸಂಖ್ಯಾತ ರಶ್ಯನ್ ಸೇನೆಗಳು ವ್ಯಾ ಜ್ವಮಾ-ಕರೋವಗಳ ನಡುವೆ ಹೊಸ ಧಾಳಿಯನ್ನು ಪ್ರಾರಂಭಿಸಿವೆ. ಖಾಖಾರ್ ವ್ ಹತ್ತಿರ ರಶ್ಯನರು ಅತಿ ವೇಗದಿಂದ ಮುನ್ನುಗ್ಗಿ ಅದನ್ನು ಸ್ವಾಧೀನಪಡಿಸಲು ಸಾಹಸ ಮಾಡುತ್ತಿರುವುದರಿಂದ ಜರ್ಮ ನರು ಬೇಗನೇ ಅದನ್ನು ಬಿಡಬೇಕಾಗಿ ಬಂ ದಿದೆ. ನೀಪರ್ ನದಿಯ ಪಶ್ಚಿಮಕ್ಕಿರುವ ಜರ್ಮನ್ ಸೇನೆಯನ್ನು ರಕ್ಷಿಸಿಕೊಳ್ಳಬೇ ಕಾದರೆ ಜರ್ಮನರು ಖಾರ್ಖಾವನ್ನು ಕಡೆತನಕ ಉಳಿಸಿಕೊಳ್ಳಲೇಬೇಕು. ಖಾ ರ್ಖಾವದಿಂದ ಹೊರಡುವ ಎಲ್ಲಾ ರೈಲು ದಾರಿಗಳನ್ನೂ ರಶ್ಯನರೀಗ ವಶಮಾಡಿ ಕೊಂಡಿದ್ದಾರೆ. ಹಾಗಾಗಿ ಈಗ ಜರ್ಮ ನರ ವಶವಿರುವುದು ಎರಡೇ ಮಾರ್ಗ; ಪೊಲ್ಟಾವ್‌ನಿಂದ ಕೀವ್ ಕಡೆಗೆ ಹೋಗು ವುದೊಂದು; ಝಪರೋಜಿಯಿಂದ ಕ್ರಿಮಿಯಕ್ಕೆ ಹೋಗುವುದಿನ್ನೊಂದು. ಹಿ ಟ್ಲರನ ಪ್ರಸಿದ್ಧ ಸೈನ್ಯವನ್ನು ಹಿಂಬಾಲಿಸಿ ಕೊಂಡು ಹೋಗುತ್ತಿರುವ ರಶ್ಯನ್ ವೀರ ರು ಖಾರ್ಖಾವಿಗೆ ಕೇವಲ ಹತ್ತು ಮೈಲು ಅಂತರದಲ್ಲಿರುವರೆಂದು ಹೇಳಲಾಗಿದೆ.

ಸಿಸಿಲಿ ಕಾಳಗವೀಗ ಮುಗಿಯುತ್ತಾ ಬಂದಿದೆ. ಕೆಟನಿಯಾ ಪತನವಾಯಿತು; ಮಿತ್ರರು ಮೆಸ್ಸಿನಾ ಸಮುದ್ರಧುನಿಯ ಸುತ್ತಲೂ ತಮ್ಮ ಬಲವಾದ ವಿಮಾನ ನಿ ರೋಧಕ ಫಿರಂಗಿಗಳನ್ನು ತಂದಿಟ್ಟಿದ್ದಾರೆ. ರೆಂಡಾಝೋ ಮೇಲೆ ಬ್ರಿಟಿಷರೂ ಅಮೆರಿಕನರೂ ನುಗ್ಗುತ್ತಿದ್ದಾರೆ. ಅಲ್ಲಿ ಪ್ರತಿಭಟನೆಯೂ ಬಲವಾಗಿದೆ. ರೆಂಡಾ ಝೋ ನಗರವು ಮಿತ್ರರ ವಶವಾಗಿ ಬಿಟ್ಟರೆ ಎಟ್ನಾದ ಪೂರ್ವ ಕರಾವಳಿಯಲ್ಲಿ ರುವ ಹಾಗೂ ಅಷ್ಟಮ ದಲದ ಬಲ ಪಾರ್ಶ್ವದ ಎದುರಿಗಿರುವ ಜರ್ಮನರು ಗಂಡಾಂತರದಲ್ಲಿ ಬಿದ್ದಂತೆಯೇ ಆಗು ವುದು. ಮಿತ್ರರು ರೆಂಡಾಝೋದಿಂದ ಹಾಗೆಯೇ ಮುನ್ನುಗ್ಗಿ ಪೂರ್ವ ಕರಾವಳಿ ಯನ್ನು ಮುಟ್ಟಿದರೆ ಜರ್ಮನರು ಬಲೆ ಯಲ್ಲಿ ಬೀಳುವರು. ಬ್ರಿಟಿಷರು ಸುರಂಗ ಭಿತ್ತಿ ಮತ್ತು ವಿನಾಶಿಕ ಚಟುವಟಿಕೆಗಳ ನ್ನು ಕೈಕೊಂಡಿದ್ದು ಜರ್ಮನರಿದನ್ನು ಪ್ರತಿ ಭಟಿಸುತ್ತಿರುವರು.

ಸಿಸಿಲಿಯಲ್ಲಿ ಮಿತ್ರರ ಮುನ್ನಡೆ ನಿಧಾನ ವಾದರೂ, ನಿರಾತಂಕವಾಗಿ ಸಾಗುತ್ತಿದೆ. ಜರ್ಮನರು ಇಲ್ಲಿ ಪ್ರಬಲ ಪ್ರತಿಭಟನೆ ಕೊಡುತ್ತಿದ್ದಾರೆ. ರಸ್ತೆಗಳನ್ನು ಮತ್ತು ಸೇತುವೆಗಳನ್ನು ನಾಶಗೊಳಿಸುತ್ತಿದ್ದಾರೆ: ಒಂದಾದರೂ ಸರಿಯಾದ ದಾರಿಯಿಲ್ಲದಿರು ವುದರಿಂದ ಮಿತ್ರರ ಮುನ್ನಡೆ ನಿಧಾನವಾ ಗಿದೆ. ಎಟ್ನಾ ವ್ಯೂಹದ ಮಧ್ಯಭಾಗದಲ್ಲಿ ಮುನ್ನುಗ್ಗಿದ್ದ ಬ್ರಿಟಿಷ್ ಎಂಟನೇ ದಲದ ಮುಂದಲಗಳು ಅಮೆರಿಕದ ಸಪ್ತಮ ಸೈನ್ಯದೊಂದಿಗೆ ಕೂಡಿಕೊಂಡಿರುವವು. ಇವೆರಡೂ ಕೂಡಿ ಈ ಭಾಗದ ಜರ್ಮ ನರ ಮೇಲೇರಿ ಹೋಗುತ್ತವೆ. ಈ ವ್ಯೂಹ ವನ್ನು ಬಲಪಡಿಸಲು ಜರ್ಮನರು ತುಂಬಾ ಪ್ರಯತ್ನಿಸುತ್ತಿದ್ದಾರೆ. ಪೂರ್ವ ಕರಾವಳಿಯಲ್ಲಿ ಬ್ರಿಟಿಷ್ ಹಡಗಗಳು ಎಂಟನೇ ಸೈನ್ಯಕ್ಕೆ ಸಹಾಯ ಮಾಡುತ್ತಾ ಮುಂದೆ ಸಾಗುತ್ತಿವೆ. ಬ್ರಿಟಿಷ್ ಹಡಗ ಗ್ರಳು ಅಸಿರಾಲೆಯ ಅಚಿಗಿಯಾರೆ ಮತ್ತು ರಿಪೊಸ್ಟೆಗಳಲ್ಲಿದ್ದ ವೈರಿ ಠಾಣ್ಯಗಳ ಮೇಲೆ ಗುಂಡಿನ ಮಳೆ ಕರೆದವು. ಅತ್ತ ಬ್ರಿಟಿಷ್ ಎಂಟನೇ ದಳವು ಎಟ್ನಾ ಪರ್ವತವನು ಸುತ್ತಗಟ್ಟಿರುವುದು. ರೆಂಡಾಝೋಕ್ಕೆ ಒಂಬತ್ತು ಮೈಲು ದೂರವಿರುವ ಬ್ರಾಂಡೆ ಯು ಮಿತ್ರರ ವಶವಾಗಿದೆ. ಅಂತೂ ರೆಂಡಾಝೋದ ಸಲುವಾಗಿ ಭೀಕರ ಕಾಳಗವಾಗಲಿದೆ. ಇದೇ ಸಿಸಿಲಿಯ ಕೊನೆಯ ಹೋರಾಟವಾಗಬಹುದು. ಬಾಂಟೆಯಿಂದ ಎಟ್ನಾ ರಸ್ತೆಯಲ್ಲಿ ಮುನ್ನು ಗ್ಗುತ್ತಿರುವ ಬ್ರಿಟಿಷ್ ಸೈನ್ಯ ಈ ಪಟ್ಟಣಕ್ಕೆ ಕೇವಲ ಐದು ಮೈಲು ದೂರದಲ್ಲಿದೆ. ಟ್ರೊಯಿನಾದಿಂದ ಹೊರಟ ಅಮೆರಿಕನ್ ಸೇನೆಯು ಸಿಸಾರೋವನ್ನು ದಾಟಿ ಹೋಗಿ ರವದು.

ಮುಸಲನಿ ರಾಜಿನಾಮೆಯಿತ್ತ ಕೂಡ ಲೇ ಫೇಸಿಸಂ ಮಾಯವಾಯಿತೆಂದೂ, ಇಟಲಿ ತಮಗೆ ಶರಣು ಬಂತೆಂದೂ ಮಿತ್ರ ರು ಆನಂದ ಕೋಲಾಹಲದಲ್ಲಿದ್ದರು. ಆದರೆ ಈಗ ಆ ಸಂತೋಷ ತಣ್ಣಗಾಗಿದೆ. ಮುಸಲನಿ ಪತನದಿಂದಾಗಿ ಇಟಲಿಯಲ್ಲಿ ಫೇಸಿಸಂ ಮಾಯವಾಗಿಲ್ಲವೆಂದು ವಿದಿತ ವಾಗಿದೆ. ಮುಸಲನಿಯನ್ನು ತೆಗೆದು ಹಾಕಿ ಬಡೋಗ್ಲಿಯೋವನ್ನು ಸರ್ವಾಧಿ ಕಾರಿ ಮಾಡಿದ್ದು ಚೆಂಬರ್ಲಿನರನ್ನು ತೆಗೆ ದು ಹಾಗಿ, ಚರ್ಚಿಲರನ್ನು ಮುಖ್ಯಮಂತ್ರಿ ಮಾಡಿದ ಹಾಗೆಯೇ. ಕನ್ಸರ್‌ವೆಟಿವ್ ಪಕ್ಷ ಬ್ರಿಟನಿನಲ್ಲಿ ಸೋತುಹೋಗಿಲ್ಲ. ಸಾಮ್ರಾಜ್ಯ ಶಾಹೀ ಧೋರಣೆ ಬ್ರಿಟನು ಬಿಟ್ಟಿಲ್ಲ. ಹಾಗೆಯೇ ಇಟಲಿಯಲ್ಲಿ ಒಬ್ಬ ಸರ್ವಾಧಿಕಾರಿಯ ಬದಲು ಈಗ ಇಮ್ಮ ಡಿ ಸರ್ವಾಧಿಕಾರಿ ಬಂದಿದ್ದಾನೆ; ಇಮ್ಮ ಡಿ ಫೇಸಿಸ್ಟ್ ಅಧಿಕಾರ ವಹಿಸಿದ್ದಾನೆ. ಯುದ್ಧವನ್ನು ಮುಂದುವರಿಸಲು ಇಟಲಿ ಯ ಸರಕಾರ ನಿರ್ಧರಿಸಿದೆ. ಆಂತರಿಕ ಆಡಳಿತದಲ್ಲಿ ಬದಲಾವಣೆಯಾದರೂ ಹೊರಗಿನ ನೀತಿ ಒಂದೇ ಇದೆ. ಇಟಲಿ ಇನ್ನೂ ಮಿತ್ರರಿಗೆ ಶತ್ರುವಾಗಿಯೇ ಇದೆ. ಇಟಲಿಯಲ್ಲಿ ಮೊದಲೇ ಬೇಕಾದಷ್ಟು ಜರ್ಮನ್ ಸೈನಿಕರಿದ್ದರು. ಮುಸಲನಿ ಪತನದ ಮೇಲಂತೂ ಹಿಟ್ಲರನು ಹೊಸ ದಲಗಳನ್ನು ಅಲ್ಲಿಗೆ ಕಳುಹಿಸಿದ್ದಾನೆ. ಸಿಸಿಲಿ ರಕ್ಷಣೆಗಾಗಿ, ಇಟಲಿ ರಕ್ಷಣೆ ಗಾಗಿ ಜರ್ಮನ್ ವೀರರು ಇಂದು ಹೋರಾಡುತ್ತಾರೆ. ಇಂದಿನ ಇಟಲಿಯ ಸರ್ವಾಧಿಕಾರಿ ಮಾರ್ಶಲ್ ಬಡೋಗ್ಲಿ ಯೋ ಇಪ್ಪತ್ತೊಂದು ವರ್ಷಗಳಿಂದಲೂ ಮುಸಲನಿಯ ಕೈಕೆಳಗೆ ನುರಿತವರು; ಇಂಥಾ ನುರಿತ್ನ ಫೇಸಿಸ್ಟರ ಆಡಳಿತದಲ್ಲಿ ಇಟಲಿಯು ಮಿತ್ರರೊಡನೆ ರಾಜಿಮಾಡಿ ಕೊಳ್ಳುವುದೆಂಬುದು ಕೇವಲ ಕನಸಿನ ಮಾತಾಗಿದೆ.

ಸೊಲೊಮನಿನಲ್ಲಿ ಮುಂಡಾ ದುರ್ಗ ವನ್ನಾಕ್ರಮಿಸಿದ ಬಳಿಕ ಅಮೆರಿಕನರು ಕೋಲಂ ಬಂಗಾರಾ ದ್ವೀಪದಲ್ಲಿರುವ ಎಲ್ಲಾ ಎಂಬ ಊರಿನ ಕಡೆಗೆ ಸಾಗಿರು ವರು. ಜಪಾನರ ವಶವಿರುವುದೊಂದೇ ದುರ್ಗ. ಈ ದುರ್ಗದ ಮೇಲೂ ಬಾಂ ಬು ಬಿದ್ದಿದೆ. ಬೈರೋಕಾ ಬಂದರವೂ ಧಾಳಿಗೆ ಗುರಿಯಾಗಿದೆ. ಅತ್ತ ಮುಂಡಾ ದಿಕದ ಬೈರೋಕದ ಕಡೆಗೆ ಹೊರಟ ಸೇ ನೆಗಳಿಗೆ ಮಳೆಯಿಂದ ತೊಂದರೆಯಾಗಿದೆ. ಪೇಸಿಫಿಕ್ಕಿನಲ್ಲಿ ಮುಂದೆ ಯಾವ ರೀತಿಯ ಧಾಳಿ ನಡೆಸಬಹುದೆಂಬ ವಿಚಾರವಾಗಿ ದಳಪತಿ ಮೆಕಾರ್ಥರರು ಅಡ್ಮಿರಲ್ ಹಾ ಲ್ಸೆ ಮೊದಲಾದವರೊಡನೆ ವಿಚಾರವಿನಿ ಮಯ ಮಾಡುತ್ತಿದ್ದಾರೆ. ಆ ಕಡೆ ನ್ಯೂ ಗಿನಿಯಲ್ಲಿಯೂ ಬಾಂಬರ ವಿಮಾನಗಳು ಸ್ಲಾಲೆಮುವಾದ ಮೇಲೆ ಬಾಂಬು ಹಾಕಿ ವೆ. ಜಪಾನರು ಇದನ್ನು ಪ್ರತಿಭಟಿಸಿರು ವರು. ನ್ಯೂಗಿನಿಯಲ್ಲಿ ಸೈನ್ಯ ಚಟುವಟಿ ಕೆ ವಿಶೇಷವಾಗಿಲ್ಲ. ಕೇವಲ ಗಸ್ತಿಗಳ ಚಟುವಟಿಕೆಯಿದೆ. ಕರಾವಳಿಯಲ್ಲಿದ್ದ ಹಲವು ಜಪಾನೀ ವಿಮಾನಗಳನ್ನು ನಾಶ ಮಾಡಿದ ಸುದ್ದಿಯಿದೆ. ಕೆಲವು ಮಿತ್ರ ವಿಮಾನಗಳು ಸಿಲಿಬಿಸದಲ್ಲಿರುವ ಅಂಬ್ರಾ ಯ್ನಾ ವಿಮಾನಗೃಹದ ಮೇಲೆ ಬಾಂಬು ಸುರಿಸಿದವು.

ಆರೋಗ್ಯದ ಸುಗ್ರಗಳು
ಕೇವಲ ಅಜಮರ್ರುವಾಧಾರ



ದೊರುದೊಳಗಿನ ಶುಚಿತ್ವವನ್ನೂ
ANDREWS
LIVER SALT
ಎಂಡ್ರೂವರ ಲಿವರ್‌ಸಾಲ್ಟ್
ಆರೋಗ್ಯವನ್ನೂ ರಕ್ಷಿಸುತ್ತದೆ.

ಯುದ್ಧದ ದೆಸೆಯಿಂದಾಗಿ, ಎಂಡ್ರೂಸ್ ಲಿವರ್‌ಸಾಲ್ಟ್ ಈಗ ದೊರಕುವುದಿಲ್ಲವೆಂಬುದು ವಿಷಾದಕರವಿದೆ. ಆದರೆ ಅಂತರ್ರಾಷ್ಟ್ರೀಯ ಪರಿ ಸ್ಥಿತಿ ಸುಧಾರಿತವಾದ ಕೂಡಲೇ ಇದು ಖಂಡಿತ ದೊರಕುವುದು.

THE CANARA BANKING CORPORATION Ltd

(Incorporated in British-India with limited liability).

STATEMENT OF AFFAIRS AS ON 31ST DECEMBER 1942.

Capital & Liabilities	Rs.	As.	Ps.	Property & Assets	Rs.	As.	Ps.
Paid up Capital	6,36,890	0	0	Office premises, furniture, etc.	91,659	0	0
Reserve & other funds	3,71,882	13	11	Advances	31,28,612	4	9
Deposits	41,83,873	4	1	Investment on Govt. Securities etc. at cost	15,34,536	14	3
Due to Bankers	5,08,545	12	1	Sundries	74,183	5	7
Bills per contra	3,59,357	12	1	Bills for Collection	3,59,357	12	1
Sundries including branch adjustments & undisbursed profits	2,83,736	5	9	Cash on Hand & with bankers	12,05,397	14	8
Profit for the year 1942	49,461	3	5				
Total Rs.	63,93,747	3	4	Total Rs.	63,93,747	3	4

ಬಾವುಗಳನ್ನು ಕೂಡಲೇ ಗುಣಪಡಿಸಿರಿ.

ನೋವನ್ನು ಉಂಟುಮಾಡುವ ವಿಷ ಕಾರೀ ಬಾವುಗಳು ಈ ರೀತಿ ಗುಣ ವಾಗುತ್ತವೆ. ಅದನ್ನು ಆಗಾಗ ನೀರಿನಿಂದ ಕುಟಿಕೂರಾ ಸೋಪು ಹಾಕಿ ತೊಳೆಯಿರಿ; ಅದರ ಮೇಲೆ ಕುಟಿಕೂ ರಾ ಮುಲಾಮು ಹಚ್ಚಿರಿ.

ಕುಟಿಕೂರಾ ಮುಲಾಮು
CUTICURA OINTMENT

ಸ್ವದೇಶಾಭಿಮಾನಿ

ತಾರೀಕು 30—8—1943

ಗಾಂಧಿಜಿ ಒಬ್ಬರೇ!

"ಜೀವನದ ಪ್ರತಿಯೊಂದು ಭಾಗದಲ್ಲಿಯೂ ಅಹಿಂಸೆಯನ್ನು ಉಪದೇಶಿಸುತ್ತಿರುವ, ಜೀವಮಾನವಿಡೀ ಶಾಂತಿಸಂದೇಶವನ್ನು ಸಾರುತ್ತಿರುವ, ಗಾಂಧಿಜಿ ಒಬ್ಬರೇ, ಯುದ್ಧಾನಂತರದ ಶಾಂತಿ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿಯಾಗಿರಲರ್ಹರು." ಹೀಗೆಂದು ಮಿರಾಜಿನ ವಿಲ್ಲಿಂಗ್ಡನ್ ಕಾಲೇಜಿನ ಇಪ್ಪತ್ತನಾಲ್ಕನೆಯ ವಾರ್ಷಿಕೋತ್ಸವದ ಸಂದರ್ಭದಲ್ಲಿ 'ಮುಂದಿನ ಜಗತ್ತು' ಎಂಬ ವಿಷಯ ಭಾಷಣ ಮಾಡುತ್ತಾ, ರೈ. ಆ. ವಿ. ಎಸ್. ಶ್ರೀನಿವಾಸ ಶಾಸ್ತ್ರಿಗಳು ಹೇಳಿದರು.

"ಯುದ್ಧಾನಂತರದ ಶಾಂತಿ ಸಮ್ಮೇಳನದಲ್ಲಿ ಭಾರತವು ಯೋಗ್ಯ ಹಾಗೂ ಗೌರವಯುತ ಸ್ಥಾನವನ್ನು ಪಡೆಯುವುದಾದರೆ ಅಲ್ಲಿ ಯಾರು ಭಾರತದ ಪ್ರತಿನಿಧಿಯಾಗಿರಬಲ್ಲರು?" ಹೀಗೆಂದು ಶಾಸ್ತ್ರಿಗಳು ಪ್ರಶ್ನಿಸುತ್ತಾ, 'ಆ ಸಂದರ್ಭದಲ್ಲಿ ಭಾರತದ ನಿಜವಾದ ಪ್ರತಿನಿಧಿಯನ್ನು ಕಳುಹಿಸಬೇಕು; ಯುದ್ಧವನ್ನು ಸಾಗಿಸಿದ ಜನರು, ಯುದ್ಧಕ್ಕೆ ಕಾರಣರು; ಆದ್ದರಿಂದ ಅವರು ಶಾಂತಿಯಾಗಬೇಕೆಂದು ಹೇಳಲು ಅರ್ಹತೆಯುಳ್ಳವರಲ್ಲ. ಆ ಸಂದರ್ಭದಲ್ಲಿ ಗಾಂಧಿಜಿಯ ಭಾವನೆಗಳನ್ನು, ಅವರ ತತ್ವಗಳನ್ನು, ಅವರ ಅಭಿಪ್ರಾಯಗಳನ್ನು ಜಗತ್ತು ಆಲಿಸಬೇಕು" ಎಂದು ಶ್ರೀ ಶಾಸ್ತ್ರಿಗಳು ಉತ್ತರವಿತ್ತರು.

ಗಾಂಧಿಜಿಯವರನ್ನು ಸರಕಾರವು ಬಿಡುಗಡೆ ಮಾಡದಿರುವ ವಿಷಯ ಶಾಸ್ತ್ರಿಗಳು ವಿಷಾದವ್ಯಕ್ತಮಾಡಿದರು. 'ವೈಸರಾಯರ ಮಂತ್ರಿಮಂಡಲ ಮಂಡಿತರಾಗಿ ಪ್ರಸಿದ್ಧರಾದ ಆ ಹದನಾಲ್ಕು ಸದಸ್ಯರು ಭಾರತದ ಪ್ರತಿನಿಧಿಗಳಾಗಲು ಅರ್ಹರಲ್ಲ. ಜಗತ್ತನ್ನು ಉಳಿಸಲು, ಯುದ್ಧವನ್ನು ಕೊನೆಗಾಣಿಸಲು, ಗಾಂಧಿಜಿಯ ಸನ್ನಿಧಿಯು ಅತ್ಯಾವಶ್ಯಕವಿದೆ. ಭಾರತದ ಅಂತಸ್ಸತ್ವವೇ ಸರ್ವರಿಗೂ ಶಾಂತಿ ಮತ್ತು ಸುಖವನ್ನು ಸಾರುತ್ತಿದೆ. ಅದ್ದರಿಂದ ಭಾರತ ಮಾತ್ರ ಶಾಂತಿಸಂದೇಶ ಸಾರಬಹುದು' ಎಂದೂ ಶ್ರೀನಿವಾಸ ಶಾಸ್ತ್ರಿಗಳು ಹೇಳಿದರು.

ಬಿಕ್ಕಟ್ಟಿಗೆ ಮೂಲಕಾರಣವಾದ ವರ್ಣಭೇದವು ನಾಶವಾಗಬೇಕೆಂದು ತಿಳಿಸುತ್ತಾ, ಶಾಸ್ತ್ರಿಗಳು, ಉದಾತ್ತವಾದ ಲೋಕಹಿತ ಧೈರ್ಯದಿಂದ ನಾವು ನಮ್ಮೊಳಗಿನ ಭೇದಗಳನ್ನು ಈಗಲೇ ಮೂಲೆಗಿಡಬೇಕೆಂದೂ, ಕಾಂಗ್ರೆಸ್ ಸರಕಾರಗಳು ಅಧಿಕಾರಕ್ಕೆ ಬರಬೇಕೆಂದೂ, ಆಗ, ಕಾಂಗ್ರೆಸ್ ಸರಕಾರದಲ್ಲಿ ನಮ್ಮ ನಿಜವಾದ ಪ್ರತಿನಿಧಿಯು—ಗಾಂಧಿಜಿಯು— ಶಾಂತಿ ಸಮ್ಮೇಳನದಲ್ಲಿ ಭಾರತವನ್ನು ಪ್ರತಿನಿಧೀಕರಿಸಬೇಕೆಂದೂ, ಗಾಂಧಿಜಿ ಮಾತ್ರ ಜಗತ್ತಿಗೆ ಶಾಂತಿಸಂದೇಶವನ್ನು ಸಾರಿ ತಿಳಿಸಬಲ್ಲರೆಂದೂ ಹೇಳಿದರು.

ನೋಟಗಳು . . . .

ಆಗಸ್ಟ್ ತಿಂಗಳ ಪ್ರಾರಂಭದಲ್ಲಿ ಪ್ರಳಯವಾಗುತ್ತದೆಂದು 'ಚೇತಾವನೀ'ಕಾರರು ಹೆದರಿಸಿದರು.

ಆಗಸ್ಟ್ ೯ರಂದು 'ವಿಧ್ವಂಸಕ ಕಾರ್ಯ ನಡೆಸುವ' 'ಪಂಚಮ ದಳ'ದವರ ಕಾರ್ಯಕ್ರಮ ಪ್ರೊಂದಿದೆಯೆಂದು ಮಂಗಳೂರಿನ ಕಮುನಿಸ್ಟರೂ ಬೆದರಿಸಿದರು.

ಬುದ್ಧಿಯಿದ್ದವರು ಯಾರೂ ಈ ಭವಿಷ್ಯಗಳಿಗೆ ಏನೂ ಬೆಲೆ ಕೊಡದಿದ್ದರೂ ಬುದ್ಧಿಯಿಲ್ಲದವರು ಕೆಲವರು ನಿಜವಾಗಿ ಅಂಜಿಕೊಂಡಿರಬೇಕು.

'ಚೇತಾವನೀ'ಕಾರರಂತೆ ಕಮುನಿಸ್ಟರ ಭವಿಷ್ಯವೂ ಈಗ ಸುಳ್ಳಾಗಿದೆ. ಪ್ರಳಯವೂ ಆಗಲಿಲ್ಲ, 'ವಿಧ್ವಂಸಕ ಕಾರ್ಯ'ವೂ ನಡೆಯಲಿಲ್ಲ.

ಅಂತೂ ಆಗಸ್ಟ್ ತಿಂಗಳು ಅನಿಷ್ಟದ ತಿಂಗಳೇನೋ ನಿಜ; ಏಕೆಂದರೆ ಎರಡು ಅನಿಷ್ಟ ಭವಿಷ್ಯಗಳನ್ನು ನಾವೀ ತಿಂಗಳಲ್ಲಿಯೇ ಕೇಳಿದೆವು.

ಭವಿಷ್ಯ ಹೇಳಿದವರು ಬೇಗನೇ ಪ್ರಸಿದ್ಧಿಗೆ ಬರುತ್ತಾರೆ. ಹಣವನ್ನೂ ಗಳಿಸುತ್ತಾರೆ. 'ಗಾಂಧಿ ಜ್ಯೋತಿಷ'ರೊಬ್ಬರು ಪ್ರಸಿದ್ಧರಾದದ್ದು ಮಾತ್ರವಲ್ಲ ಹಣವನ್ನೂ ಸಂಪಾದಿಸುತ್ತಾರೆ.

ಪ್ರಳಯದ ಭವಿಷ್ಯ ಹೇಳಿ 'ಚೇತಾವನೀ'ಕಾರರೂ ಪ್ರಸಿದ್ಧರಾದರು; ಆ ಪುಸ್ತಕ ಮಾರಾಟ ಮಾಡಿ ಬೇಕಾದಷ್ಟು ಹಣವನ್ನೂ ಗಳಿಸಿಕೊಂಡರು.

ಆಗಸ್ಟ್ ೯ರ ಭವಿಷ್ಯ ಹೇಳಿ ಮಂಗಳೂರಿನ ಕಮುನಿಸ್ಟರೂ ಪ್ರಸಿದ್ಧಿಗೆ ಬಂದರೇನೋ ನಿಜ; ಹಣವನ್ನೂ ಸಂಪಾದಿಸಿದರೆನ್ನುವುದು ತಪ್ಪಾದೀತು; ಏಕೆಂದರೆ ಅದು ಅವರ ತತ್ವಕ್ಕೆ ವಿರೋಧ.

'ಯೇನಕೇನ ಪ್ರಕಾರೇಣ ಪ್ರಸಿದ್ಧ ಪುರುಷೋಭವ' ಎಂದ ಹಿರಿಯರೊಬ್ಬರು ಆಶೀರ್ವದಿಸ್ಸಿದ್ದಾರೆ!

ಸ್ವದೇಶ ಸಮಾಚಾರ

ಕಾಂಗ್ರೆಸ್ ಮುಖಂಡರ ಬಂಧನ ದಿನ

ಪುಣೆಯಲ್ಲಿ ಕನ್ನಡಿಗರ ಮೆರವಣಿಗೆ

ಆಗಾಖಾನ ಅರಮನೆ ಹತ್ತಿರ ಬಂದೋಬಸ್ತು

ತಾ ೯ರಂದು ಗಾಂಧಿಜಿ ಮೊದಲಾದ ರಾಷ್ಟ್ರಮುಖಂಡರ ಬಂಧನವಾಗಿ ಒಂದು ವರ್ಷವಾಯಿತಷ್ಟೇ. ಆ ದಿನ ಮುಂಜಾನೆ ಪುಣೆಯ ಪರಶುರಾಮ ಭಾವು ಕಾಲೇಜಿನಿಂದ ಗುಜರಾಥಿ ಹುಡುಗಿಯರ ಪ್ರಭಾತಫೇರಿ ಹೊರಟಿತು. ಅವರು ಮುನ್ಸಿಪಾಲಿಟಿ ಹತ್ತಿರ ಬಂದಕೂಡಲೇ ಪೋಲೀಸರು ಅವರನ್ನು ತಡೆದು ಕೈದುಮಾಡಿದರು. ಊರಲ್ಲೆಲ್ಲಾ ಪೋಲೀಸು ಬಂದೋಬಸ್ತಿದ್ದು, ಗಾಂಧಿಜಿಯವರನ್ನಿರಿಸಿದ್ದ ಆಗಾಖಾನ್ ಅರಮನೆಯ ರಸ್ತೆಯಲ್ಲಿ ಲಾಠೀ ಪೋಲೀಸರು ಸಜ್ಜಾಗಿ ನಿಂತಿದ್ದರು. ತಾ ೮ರಿಂದ ೯ರ ವರೆಗೆ ೧೫೦ಕ್ಕಿಂತ ಮಿಕ್ಕಿದವರ ಬಂಧನವಾಗಿದೆ. ಭಾರತದ ಬೇರೆ ಬೇರೆ ಕಡೆಗಳಿಂದ ಬಂದ ಸ್ವಯಂಸೇವಕರು ಅವರಲ್ಲಿದ್ದಾರೆ ಅವರ ಪ್ರತಿಯೊಬ್ಬರ ಕಿಸೆಯಲ್ಲಿ ಗಾಂಧಿಜಿ ಫೋಟೋ ಇದ್ದು ಅದರಲ್ಲಿ ಆಗಸ್ಟ್ ೯ ಎಂದು ಬರೆಯಲಾಗಿತ್ತು.

ಈ ಗಾಂಧಿಯಾತ್ರೆಗೆ ಅಸ್ಸಾಮಿನಿಂದ ೧೭೭, ಬಂಗಾಳ ೧೨೫, ಸಂ. ಪ್ರಾಂತ ೧೨೫, ಬಿಹಾರ ೧೨೫, ಮದ್ರಾಸು ೧೭೫, ಮಹಾರಾಷ್ಟ್ರ ಕರ್ನಾಟಕ, ಮುಂಬಯಿ, ಗುಜರಾಥ್ ಕೂಡಿ ೧೫೦, ಮಧ್ಯಪ್ರಾಂತ ೩೭, ಕೇರಳ ೨೫, ಸಿಂಧ ೧೨, ಪಂಜಾಬ್ ೧೦ ಹೀಗೆ ಸ್ವಯಂಸೇವಕರು ಹೊರಟಿದ್ದು ಮಧ್ಯಮಾರ್ಗದಲ್ಲಿಯೇ ಬಂಧಿತರಾಗಿ ಪುನೆವರೆಗೆ ಮುಟ್ಟಲಾಗಲಿಲ್ಲವೆಂದು ತಿಳಿಯುತ್ತದೆ. ತಾ ೯ ಮಧ್ಯಾಹ್ನ ಪರಶುರಾಮ ಭಾವು ಕಾಲೇಜಿನಿಂದ ನಾಲ್ಕು ಮೆರವಣಿಗೆಗಳು ಹೊರಟವು. ಅವುಗಳಲ್ಲಿ ಕರ್ನಾಟಕದವರು ಮಾತ್ರ ಇದ್ದರು.

ಇದೇ ರೀತಿ ಡಿಲ್ಲಿಯಲ್ಲಿ, ಕಲ್ಕತ್ತದಲ್ಲಿ, ನಾಗಪುರ, ಕಾಶಿ, ಅಮೃತಸರ, ಮುಂಬಯಿ ಮೊದಲಾದ ಕಡೆಗಳಲ್ಲಿ ಬಂಧನ ಮೆರವಣಿಗೆ, ಹರತಾಳಗಳಾದ ಸುದ್ದಿ ಬರುತ್ತಿದೆ. ದೇಶ ಸರ್ವತ್ರ ರಾಷ್ಟ್ರಮುಖಂಡರ ಬಂಧನಕ್ಕಾಗಿ ಅತ್ಯಂತ ಕಳವಳವ್ಯಕ್ತವಾಗಿದೆ.

ಮುಂಬಯಿಯ ಜನನ ಮರಣ

ಮುಂಬಯಿ ಇಲಾಖೆಯ ೧೯೪೧ನೇ ಇಸವಿಯ ಜನನ ಮರಣ ವರದಿಯಲ್ಲಿ ಶ್ವಾಸಕೋಶ ಮತ್ತು ಕಾಲರಾ ಮರಣಗಳೇ ಹೆಚ್ಚಿಗೆಯಾಗಿವೆ. ಒಟ್ಟು ೭,೩೨,೧೧೨ ಜನನ, ೫,೦೧,೪೭೫ ಮರಣಗಳು ಆಗಿದ್ದವು. ಗರ್ಭಿಣಿಯರೇ ಹೆಚ್ಚಾಗಿ ಸಾಯುವುದು ವರದಿಯಲ್ಲಿದೆ.

ಮನೆ ಖಾಲಿಮಾಡಲು ಭಾರತೀಯರಿಗೆ ನೋಟೀಸು!

ದಕ್ಷಿಣಾಫ್ರಿಕದ ವರ್ಣದ್ವೇಷ ಕಾಯಿದೆಯಂತೆ, ಪ್ರೊಟೋರಿಯ ಬರ್ಗಿನ ನೂರಾರು ಭಾರತೀಯರಿಗೆ ಮನೆ ಖಾಲಿಮಾಡಲು ಅಲ್ಲಿನ ಸರಕಾರ ನೋಟೀಸು ಕೊಟ್ಟದ್ದು ಅವರೆಲ್ಲಾ ನಿರ್ಗತಿಕರಾಗಿರುವರು. ಈ ಆಜ್ಞೆ ಉಲ್ಲಂಘಿಸಿದವರಿಗೆ ೧೦ ಪವನ್ ದಂಡ ವಿಧಿಸಲಾಗುವುದು ಮಾತ್ರವಲ್ಲ ಆತನನ್ನು ಬಲಾತ್ಕಾರದಿಂದ ಹೊರನೂಕಲಾಗುವುದು. ನಲ್ವತ್ತು ವರ್ಷಗಳಿಂದ ಅಲ್ಲಿ ವಾಸಮಾಡುತ್ತಿದ್ದ ಹಿಂದೀಯರು ಈಗ ಒಮ್ಮೆಲೇ ಬಿಟ್ಟುಹೋಗಬೇಕೆಂದರೆ ಎಲ್ಲಿಗೆ? ರಸ್ತೆಯಲ್ಲಿ ಬಿದ್ದು ಸಾಯುವದೊಂದೇ ಅವರ ಗತಿಯಾಗಿದೆ!

ಒಂದು ವರ್ಷ ದಾಟಿತು!

೧೯೪೨ನೇ ಆಗಸ್ಟ್ ೯ನೇ ತಾರೀಕಿನಂದು, ಸರಕಾರದವರು ಮಹಾತ್ಮಾಜಿ ಮೊದಲಾದ ರಾಷ್ಟ್ರದ ಮುಂದಾಳುಗಳನ್ನು ಒಮ್ಮೆಲೇ ನಿರ್ಬಂಧಿಸಿದರು; ರಾಷ್ಟ್ರದ ಪ್ರಾಂತದ, ಜಿಲ್ಲೆ, ಹಳ್ಳಿಗಳ ಮುಖಂಡರೂ ಸಕಲರೂ ಬಂಧಿಸಲ್ಪಟ್ಟರು. ಇದರಿಂದ ಉಂಟಾದ ಗೊಂದಲ ಕಳೆದ ಒಂದು ವರ್ಷಗಳಲ್ಲಿ ಆದ ಅನಾಹುತಗಳಿಂದು ಅಖಿಲ ರಾಷ್ಟ್ರಕ್ಕೇ ಗೊತ್ತಿರುವಂಥಾದ್ದು. ಗಾಂಧಿಜಿ ಬಂಧ ವಿಮೋಚನೆಗಾಗಿ ಉಪವಾಸವನ್ನೂ ಮಾಡಿದರು!

ಮೊನ್ನೆ ಆಗಸ್ಟ್ ೯ನೇ ತಾರೀಕಿಗೆ ಮಹಾತ್ಮರೇ ಮೊದಲಾದವರ ಬಂಧನವಾಗಿ ವರ್ಷ ಒಂದು ದಾಟಿತು. ಇಷ್ಟಾದರೂ ಸರಕಾರ ಮುಖಂಡರನ್ನು ಬಿಡುಗಡೆ ಮಾಡಿಲ್ಲ. ಅವರು ಜಪಾನ್‌ಪರರೆಂದು ಹಾಕಿದ ಅರೋಪದ ವಿಚಾರಣೆ ಮಾಡಿರೆಂದರೂ ಮಾಡಲಿಲ್ಲ; ಗಾಂಧಿಜಿ ಮೊದಲಾದವರ ಭೇಟಿಗಾಗಿ ಆಸ್ಪದವನ್ನೂ ಕೊಡಲಿಲ್ಲ. ಹೀಗೆ ಒಂದು ವರ್ಷ ದಾಟಿತು! ಆದಾಗಿ ಕಳೆದ ೯ನೆಯ ತಾರೀಕಿಗೆ ಇಡೀ ರಾಷ್ಟ್ರವು, ರಾಷ್ಟ್ರ ಮುಖಂಡರ ಬಂಧನದ ನಿಷೇದಾರ್ಥ ಸಂತಾಪ ಸೂಚಿಸಿ ಅಲ್ಲಲ್ಲಿ ಹರತಾಳ ಮೊದಲಾದ ಕಾರ್ಯಕ್ರಮ ನಡೆಸಿದ ವಾರ್ತೆಗಳು ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಅಲ್ಲಲ್ಲಿ ಅನೇಕರ ಬಂಧನವಾಗಿದೆ. ಮುಂಬಯಿ ಮೊದಲಾದ ದೊಡ್ಡ ನಗರೆಗಳಲ್ಲಿ ತುಂಬಾ ಜನರು ಸೆರೆಮನೆಗೊಯ್ಯಲ್ಪಟ್ಟಿದ್ದಾರೆ. ಅಂತೂ ಅಖಿಲ ಭಾರತದಲ್ಲಿ ಗಾಂಧಿಜಿ ಮೊದಲಾದ ರಾಷ್ಟ್ರ ಮುಖಂಡರ ಬಂಧನದ ಬಗ್ಗೆ ಜನತೆಗೆ ಎಷ್ಟು ಕಳವಳವುಂಟು ಎಂಬ ವಿಷಯ ವ್ಯಕ್ತವಾಗಿದೆ. ಸರಕಾರವು ಎಷ್ಟು ಬಂದೋಬಸ್ತು ಮಾಡಿದರೂ, ರಾಷ್ಟ್ರ ಮುಖಂಡರ ಬಿಡುಗಡೆಯಾಗದೆ ಇಂದಿನ ಬಿಕ್ಕಟ್ಟು ಬಗೆಹರಿಯುವಂತೆ ಕಾಣುವುದಿಲ್ಲ.

ಕಾಂಗ್ರೆಸ್ ಮುಖಂಡರ ಬಂಧನಕ್ಕಾಗಿ

ಲಂಡನಿನಲ್ಲಿ ವಾರ್ಷಿಕ ದಿನಾಚರಣೆ

ಲಂಡನಿನ ಇಂಡಿಯಾ ಲೀಗಿನವರು ಕಾಂಗ್ರೆಸ್ ಮುಖಂಡರ ಬಂಧನದ ವಾರ್ಷಿಕ ದಿನಾಚರಣೆ ತಾ ೯ರಂದು ಮಾಡಿದರು. ಈ ಸಂದರ್ಭದಲ್ಲಿ ಸೋರೆನ್ಸನರು ಮಾತನಾಡುತ್ತಾ ಒಪ್ಪಂದದ ಸಲುವಾಗಿ ಪುನಃ ಮಾತು ಕತೆ ಪ್ರಾರಂಭಿಸುವಂತೆ ಮಾಡಲು ಪ್ರಯತ್ನಿಸಬೇಕೆಂದರು. ಆ ಮೇರಿ, ಲಿನ್‌ಲಿತ್‌ಗೋ ಧೋರಣ ನಿಷೇಧಿಸಲಾಯಿತು. ಇಂದಿನ ಪರಿಸ್ಥಿತಿಯನ್ನು ಮೇಲವರಿಗೆ ತಿಳಿಸಬೇಕೆಂದು ನಿರ್ಣಯವಾಯಿತು.

ವೃದ್ಧಿಯಿಂದ ಅಭಿವೃದ್ಧಿ.

ಗತ ೧೯೪೨ನೇ ವರ್ಷದಿಂದ ಚಾಲು ೧೯೪೩ನೇ ಪ್ರಾರಂಭದ ಮಾಸಗಳು ಬಹು ಅಪಾಯಗಳಿಂದಲೂ ಹಾಗೂ ಸುಯೋಗಗಳಿಂದಲೂ ತುಂಬಿ ತುಳುಕಿದ್ದವು. ಜಾಣತೆಯಿಂದ ವ್ಯವಸ್ಥೆ ಮಾಡಲ್ಪಟ್ಟ ಸಂಸ್ಥೆಗಳು ಈ ಅಪಾಯಗಳನು ತಳ್ಳಿ, ಸುಸಂದರ್ಭಗಳನ್ನು ಉಪಯೋಗಿಸಿ ತೀವ್ರನೆ ಮುಂದುವರಿದವು.

೧೯೪೦, ೪೧ರಲ್ಲಿ ಕೆನರಾ ಬೇಂಕು ೯೦ ಲಕ್ಷ ಠೇವಣಿಗಳ ಮತ್ತು ಒಂದು ಕೋಟಿ ಸಾಂಪತ್ತಿಕ ಸ್ಥಿತಿಯಲ್ಲಿದ್ದು ಅಂದು ಸಹ ಅದು ವಿಸ್ತೃತ ಸ್ಥಿತಿಯ ಸಂಸ್ಥೆಯಾಗಿತ್ತು. ಇಂದು ಠೇವಣಿಗಳು ಇಮ್ಮಡಿಯಾಗಿವೆ. ಸಾಂಪತ್ತಿಕ ಸ್ಥಿತಿಯು ಎರಡುವರೆ ಕೋಟಿಗೆ ಮಿಕ್ಕಿದೆ. ಹಾಗೂ ತೆತ್ತ ಮೂಲಧನವು ನಾಲ್ಮಡಿಯಾಗಿದೆ.

ಜಾಣತನದ ವ್ಯವಸ್ಥೆಯ ಏರ್ಪಾಟಿನಿಂದಲೂ, ಆತ್ಮ ವಿಶ್ವಾಸದಿಂದಲೂ, ದೃಢ ಬುದ್ಧಿಯಿಂದಲೂ, ಯೋಗ್ಯ ಸೇವೆಯನ್ನು ಸಲ್ಲಿಸಿದರಿಂದಲೂ, ಇಂದಿನ ಈ ಪ್ರಗತಿಗೆ ಕಾರಣಭೂತರಾದ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರರಾಗಿ ಇನ್ನು ಮುಂದಕ್ಕೂ ಮಹತ್ವದ ಸೇವೆಯನ್ನು ಒಪ್ಪಿಸಲು ಸಮರ್ಥರಾಗಲು ನಾವು ಹಾರೈಸುವೆವು.

Canara Bank Limited.

ಕೆನರಾ ಬೇಂಕ್ ಲಿಮಿಟೆಡ್.

ಸ್ಥಾಪನೆ 1906.

ಜಿಲ್ಲಾ ಸಮಾಚಾರಗಳು

ಮಂಗಳೂರು

ಶ್ರೀಗಳಾದ ಉಪಾಧ್ಯಾಯ ಮತ್ತು ಕ್ಯಾಲೂರ್ಕಾರರ ಬಂಧನ

ಬೆಂಗಳೂರಲ್ಲಿ, ಮಂಗಳೂರಿನ ಶ್ರೀ. ಎನ್. ಎಲ್. ಉಪಾಧ್ಯಾಯ ಮತ್ತು ಶ್ರೀ ವಿ. ಆರ್. ಕ್ಯಾಲೂರ್ ಕಾರರನ್ನು ತಾ. ೬ರಂದು ಡಿಫೆನ್ಸ್ ಕಾನೂನಿನನ್ವಯ ಬಂಧಿಸಿರುವರೆಂದು ಸುದ್ದಿ ಬಂದಿದೆ.

ಶ್ರೀ ಕೆ. ವೆಂಕಟರಾಯರ ಬಂಧನ

ಗಣಪತಿ ಹೈಸ್ಕೂಲಿನ V ಫಾರ್ಮಿನ ವಿದ್ಯಾರ್ಥಿ ಶ್ರೀ. ಕೆ. ವೆಂಕಟರಾಯನನ್ನು ತಾ. ೯ರಂದು ಡಿಫೆನ್ಸ್ ಕಾನೂನಿನನ್ವಯ ಬಂಧಿಸಿರುವರು.

ಮಂಗಳೂರಲ್ಲಿ ಹರತಾಳ

ಆಗಸ್ಟ್ ೯ ರಂದು ಮಂಗಳೂರಲ್ಲಿ ಹಲವು ವ್ಯಾಪಾರಿಗಳು ಹರತಾಳ ಆಚರಿಸಿದ್ದರು, ಜವಳಿ ಅಂಗಡಿಗಳು ಹೆಚ್ಚಾಗಿ ಮುಚ್ಚಲ್ಪಟ್ಟಿದ್ದವು. ಪೋಲೀಸು ವಾಹನದ ಸಂಚಾರ ಬಲವಾಗಿತ್ತು. ಆದರೆ ಎಲ್ಲವೂ ಶಾಂತರೀತಿಯಿಂದ ನಡೆಯಿತು.

ತಾ ೯ ರಂದು ಸ್ಥಳೀಯ ಶಾಲಾ ಕಾಲೇಜುಗಳಲ್ಲಿ ಕೆಲ ವಿದ್ಯಾರ್ಥಿಗಳು ತರಗತಿಗಳಿಗೆ ಹಾಜರಾಗಿರಲಿಲ್ಲ. ತಾ ೧೦ ರಂದೂ ಕೆಲವು ಶಾಲೆಗಳಲ್ಲಿ ವಿದ್ಯಾರ್ಥಿಗಳ ಹಾಜರಿ ಕಡಿಮೆಯಿತ್ತು. ವಿದ್ಯಾರ್ಥಿನಿಯರೂ ಇದರಲ್ಲಿ ಭಾಗವಹಿಸಿದ್ದರು.

ಶ್ರೀ. ವೆಂಕಟೇಶ ಪೈಗಳ ಬಂಧನ

ಮಂಗಳೂರು ರಥಬೀದಿಯ ನ್ಯೂಸ್ ಪೇಪರ್ ಏಜೆಂಟ್ ಶ್ರೀ. ಕೊಂಚಾಡಿ ನಾರಾಯಣ ಶೆಣೈಗಳನ್ನು ಡಿಟೆನ್ಶನ್ ಮಾಡಿದ ಬಳಿಕ, ಅವರ ಸ್ಥಾನದಲ್ಲಿ ಕೆಲಸ ಮಾಡುತ್ತಿದ್ದ ಶ್ರೀ. ವೆಂಕಟೇಶ ಪೈ ಎಂಬವರನ್ನು ತಾ. ೯ರಂದು ಬಂಧಿಸಲಾಗಿದೆ.

೨೨ ಜನರ ಬಂಧನ

ಕಳೆದ ತಾ. ೭ರಂದು ರಾತ್ರಿ ಸುಮಾರು ೨೨ ಜನರನ್ನು ಪೋಲೀಸರು ಬಂಧಿಸಿದರು. ಜುಗಾರಿ ನಿಮಿತ್ತ ಎಂದು ಕೇಳುತ್ತೇವೆ.

ಮಿತ್ರಮಂಡಳಿ
"ಸಾಹಿತ್ಯ ವಿಮರ್ಶಾ ಕೂಟ"

ಮಿತ್ರಮಂಡಳಿಯ ಆಶ್ರಯದಲ್ಲಿ ಥಿಯಾಸಾಫಿಕಲ್ ಲಾಜಿನಲ್ಲಿ ಇದೇ ಆಗಸ್ಟ್ ತಾ. ೧೫ನೇ ಶನಿವಾರದಿಂದ ಹಿಡಿದು ಪ್ರತಿ ಶನಿವಾರ ಸಂಜೆ ೭ ಗಂಟೆಗೆ ಸಾಹಿತ್ಯ ವಿಮರ್ಶಾ ಕೂಟಗಳು ಏರ್ಪಡುವುವು. ಮೊದಲ ಸಭೆಯ ಚರ್ಚೆ ವಿಷಯವು 'ಮರದೆದುರಲ್ಲಿ'. ಮಿತ್ರಮಂಡಳಿಯ ಸದಸ್ಯರೂ ಸಾಹಿತಿಗಳೂ ಈ ಕೂಟಗಳನ್ನು ಸೇರಬೇಕಾಗಿ ವಿನಂತಿ.

ಜನತಾ ರಂಗಭೂಮಿ

ಮಂಗಳೂರಲ್ಲಿ ಸ್ಥಾಪಿತವಾದ ಜನತಾ ರಂಗಭೂಮಿಯ ಪ್ರಾರಂಭ ಭಾಷಣವು ಶ್ರೀ. ಕೋಟ ಶಿವರಾಮ ಕಾರಂತರಿಂದ ತಾ. ೧೫ರಂದು ಸಂಜೆ ೫ ಗಂಟೆಗೆ ಕೆನರಾ ಹೈಸ್ಕೂಲಲ್ಲಿ ನೆರವೇರಿಸಲ್ಪಡುವುದು.

ಕಟ್ಟಿಗೆ ಕ್ರಯ ಕಂಟ್ರೋಲ್

ಇತ್ತೀಚೆಗೆ ಕಟ್ಟಿಗೆ ಕ್ರಯವೂ ವಿಪರೀತ ಏರಿದ್ದರಿಂದ, ನಗರದಲ್ಲಿ ಬಡವರಿಗೆ ಹಾಗೂ ಮಧ್ಯವರ್ಗದವರಿಗೆ ಅಕ್ಕಿಯಂತೆ, ಅಕ್ಕಿ ಬೇಯಿಸಲು ಕಟ್ಟಿಗೆಯೂ ಅವಶ್ಯವಿರುವುದರಿಂದ, ಬಹಳ ಸಂಕಷ್ಟವುಂಟಾಗಿದೆ. ಇದರ ಕ್ರಯವೂ ಕಂಟ್ರೋಲ್ ಆಗುವ ಆವಶ್ಯಕತೆಯಿದೆ ಸಂಬಂಧಪಟ್ಟ ಅಧಿಕಾರಿಗಳು ಈ ಕುರಿತು ಆಲೋಚಿಸುವರೆಂದು ಹಾರೈಸುತ್ತೇವೆ.

ವರ್ಗಾವರ್ಗಿ

ದ. ಕ. ಜಿಲ್ಲಾ ಲೇಬರ್ ಆಫೀಸರರಾದ ಶ್ರೀ ಎಸ್. ಯು. ಪರಶುರಾಮ ನಾಯ್ಕರು ಮದ್ರಾಸ್ ನಗರದ "ಫುಡ್ ಗ್ರೈನ್ ಆಫೀಸರ"ರಿಗೆ ಸಹಾಯಕರಾದ ಅಸಿ॥ ಸ್ಟೆಟಿಸ್ಟಿಕಲ್ ಆಫೀಸರರಾಗಿ ಮದ್ರಾಸಿಗೆ ವರ್ಗಾಯಿಸಲ್ಪಟ್ಟಿರುತ್ತಾರೆ.

ಕಾಸರಗೋಡು ತಾಲೂಕು ಹೆಡ್ ಅಕೌಂಟೆಂಟರಾದ ಶ್ರೀ. ಎಸ್. ದಾಸಪ್ಪಯ್ಯನವರು ಜಿಲ್ಲಾ ಲೇಬರ್ ಆಫೀಸರರಾಗಿ ನೇಮಿಸಲ್ಪಟ್ಟಿದ್ದಾರೆ.

ಶ್ರೀ. ವೆಂಕಪ್ಪನವರು ಪುತ್ತೂರಿನ ಅಸಿ॥ ತಹಶಿಲ್ದಾರರಾಗಿಯೂ, ಮಿ. ಎಫ್. ಎಂ. ಪಿಂಟೋ ಅವರು ಬಂಟ್ವಾಳ ಡೆ॥ ತಹಶಿಲ್ದಾರರಾಗಿಯೂ ವರ್ಗಾಯಿಸಲ್ಪಟ್ಟಿದ್ದಾರೆ.

ಬಂಟ್ವಾಳದ ಡೆ॥ ತಹಶಿಲ್ದಾರರಾಗಿದ್ದು ಕಾರ್ಕಳದ ಸ್ಪೆ॥ ಸಬ್ ಮ್ಯಾಜಿಸ್ಟ್ರೇಟರಾಗಿ ನೇಮಿಸಲ್ಪಟ್ಟ ಮಿ. ಶೇಕ್ ಹುಸೇನ್ ಸಾಹೇಬ್ ಬಹದೂರರು ರಜೆಗಾಗಿ ಅಪೇಕ್ಷಿಸಿರುವುದರಿಂದ ಹಜೂರ್ ಹೆಡ್‌ಕ್ಲಾರ್ಕ್ ಮಿ. ಎಲ್. ಫೆರ್ನಾಂಡೀಸ್ ಅವರು ಕಾರ್ಕಳದ ಸ್ಪೆ॥ ಸಬ್ ಮ್ಯಾಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿದ್ದಾರೆ.

ಗುತ್ತಿಗೆ ಹರಾಜು.

ಈ ಬಾರಿ ಮಂಗಳೂರು ನಗರದ ಗುತ್ತಿಗೆಗಳ ಹರಾಜು ಹೀಗಿದೆ:— ಹಂಪನಕಟ್ಟೆ ರೂಪಾಯಿ ೧೮೫೫ (ಹಿಂದಿನ ಸಲ ರೂ. ೧೫೦೫) ದೋಟಿಕೇರಿ ರೂ. ೧೧೧೦೦; (ಹಿಂದಿನ ಸಲ ರೂ. ೬೮೦) ಬೋಳೂರು ರೂ. ೬೨೦ (ಹಿಂದಿನ ಸಲ ರೂ. ೪೪೦) ಶೇಡಿಗುಡ್ಡೆ ರೂ. ೧೫೬೦; (ಹಿಂದಿನ ಸಲ ರೂ. ೫೦೫) ನಂದಿಗುಡ್ಡೆ ರೂ. ೧೨೦೦ (ಹಿಂದಿನ ಸಲ ರೂ. ೫೫೫) ಬೋಳಾರ ರೂ. ೧೧೧೦; (ಹಿಂದಿನ ಸಲ ರೂ. ೫೬೦) ಜೆಪ್ಪಿನಮೊಗರು ರೂ. ೧೧೧೦ (ಹಿಂದಿನ ಸಲ ರೂ. ೫೨೫) ಬಿಜೈ ರೂ. ೭೫೦; (ಹಿಂದಿನ ಸಲ ರೂ. ೪೧೦) ಕದ್ರಿ ರೂ. ೫೦೫ (ಹಿಂದಿನ ಸಲ ರೂ. ೩೨೦) ದೇರೇಬೈಲು ರೂ. ೬೦೫; (ಹಿಂದಿನ ಸಲ ರೂ. ೨೬೦)

ನೇಮಕ

ಡಾ। ಬಿ. ಸುಬ್ಬರಾಯ ಬಾಳಿಗರವರು ಪುನಃ ಮಂಗಳೂರು ಮುನಿಸಿಪಲ್ ಹೆಲ್ತ್ ಆಫೀಸರರಾಗಿ ನೇಮಕ ಪಟ್ಟಿರುತ್ತಾರೆ.

ಹಸಿವಿನಿಂದ ಸತ್ತಳು!

ಮಂಗಳೂರು ಬ್ರಾಹ್ಮಣ ಕೇರಿ ಹನುಮಂತ ದೇವಾಲಯದ ಬಳಿ ಓರ್ವ ಭಿಕ್ಷುಕಿ ಜಗಲಿ ಮೇಲೆ ಪ್ರಾಣಬಿಟ್ಟು ಮಲಗಿದ್ದ ಕರುಣಾಮಯ ದೃಶ್ಯ ಕಂಡುಬಂದಿದೆ! ಹೊಟ್ಟೆಗೆ ಆಹಾರವಿಲ್ಲದಿರುವುದೇ ಇದರ ಕಾರಣ. ಹೀಗೆ ಎಷ್ಟು ಮಂದಿ ಹಸಿವು ರಕ್ಕಸನ ತುತ್ತಿಗೆ ಬಲಿಯಾಗುತ್ತಾರೋ ತಿಳಿಯದು. ಅಕ್ಕಿಗೆ ಕ್ರಯ ಏರಿಸುವವರು ಈ ಚಿತ್ರವನ್ನೊಮ್ಮೆ ತಮ್ಮ ಕಣ್ಣ ಮುಂದೆ ತಂದುಕೊಳ್ಳಲಿ!

ಚಲಚ್ಚಿತ್ರ ವಿಮರ್ಶಕ ಸಂಘ

ಇದರ ವಾರದ ಸಭೆಯು ಕಳೆದ ಆದಿತ್ಯವಾರ ಶ್ರೀ. ಪಿ. ಕೆ. ನಾರಾಯಣರ ಅಧ್ಯಕ್ಷತೆಯಿಂದ ಜರಗಿ ನಗರದ ಚಿತ್ರಗಳ ವಿಮರ್ಶೆ ಮಾಡಲಾಯಿತು.

ಈ ಸಂಘದ ಆಶ್ರಯದಲ್ಲಿ ಗುರುವಾರ ಸಂಜೆ ಕಲಾವಿದ ಶ್ರೀ ರಂಗ ವಿಟ್ಠಲರು ಒಂದು ಭಾಷಣವಿತ್ತರು. ಇವರು ಕನ್ನಡಿಗರಿದ್ದು ಪೂನದಲ್ಲಿ ನೃತ್ಯಕಲಾ ಶಾಲೆ ತೆರೆದಿರುವರು. ಶ್ರೀ. ಕು. ಶಿವರಾಯರು ಅಧ್ಯಕ್ಷತೆ ವಹಿಸಿದ್ದರು. ಶ್ರೀ. ವೆಂಕಟೇಶ ಪ್ರಭುಗಳು ಅತಿಥಿಗಳ ಪರಿಚಯ ಮಾಡಿದರು.

ಉಡುಪಿ

ಪತ್ರಿಕೋದ್ಯೋಗಿಗಳ ಸಂಘ

ಉಡುಪಿ ಪತ್ರಿಕೋದ್ಯೋಗಿಗಳ ಸಭೆಯೊಂದು 'ನವಯುಗ' ಕಟ್ಟಡದ ಮಾಳಿಗೆಯಲ್ಲಿ ತಾ. ೮ರಂದು ಸಂಜೆ ಜರಗಿ ಉಡುಪಿಯ ಪತ್ರಿಕೋದ್ಯೋಗಿಗಳ ಸಂಘವು ಪುನರ್ಘಟಿಸಲ್ಪಟ್ಟಿತು. ಜಿಲ್ಲೆಯ ಬೇರೆ ಬೇರೆ ಪ್ರದೇಶಗಳ ಪತ್ರಿಕೋದ್ಯೋಗಿಗಳು ಸಂಘಟಿತರಾಗಿ, ಒಮ್ಮನಸಿನಿಂದ ಕೆಲಸಮಾಡುವುದರ ಕುರಿತು, ಮಂಗಳೂರಿನಿಂದ ಇಲ್ಲಿಗೆ ಬಂದಿದ್ದ ಜಿಲ್ಲಾ ಪತ್ರಿಕೋದ್ಯೋಗಿ ಸಂಘದ ಉಪಾಧ್ಯಕ್ಷರಾದ ಶ್ರೀ. ಕಯ್ಯಾರ ಕಿಂಞಣ್ಣ ರೈ ಅವರು ಮಾತನಾಡಿದರು. ಈ ವರ್ಷ ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಪರಿಷತ್ತನ್ನು ಮಂಗಳೂರಿಗೆ ಕರೆಯಬೇಕೆಂದು ಜಿಲ್ಲಾ ಸಂಘವು ಮಾಡಿರುವ ನಿರ್ಧಾರವನ್ನು ಶ್ರೀಯುತರು ವಿವರಿಸಿ, ಆ ಸಂದರ್ಭದಲ್ಲಿ ಜಿಲ್ಲೆಯ ಪತ್ರಿಕೋದ್ಯೋಗಿಗಳೆಲ್ಲ ನೀಡಬೇಕಾಗಬಹುದಾದ ಸಹಕಾರವನ್ನು ಸ್ಪಷ್ಟಪಡಿಸಿದರು. ಸಭಾಂತ್ಯದಲ್ಲಿ ಶ್ರೀ. ಯು. ಎಸ್. ಭಟ್ ಅವರು ಧನ್ಯವಾದಗಳನ್ನರ್ಪಿಸಿದರು.

ಅಖಿಲಕರ್ನಾಟಕ ಮಕ್ಕಳ ಸಮ್ಮೇಳನ

ಅಖಿಲ ಕರ್ನಾಟಕ ಮಕ್ಕಳ ಸಮ್ಮೇಳನವನ್ನು ಈ ವರ್ಷ ಉಡುಪಿಯಲ್ಲಿ ಜರಗಿಸುವರೆ, ಇಲ್ಲಿನ ಉತ್ಸಾಹೀ ಬಾಲ ಬಂಧುಗಳು ನಿಶ್ಚಯಿಸಿದ್ದಾರೆ. ಪರ್ಯಾಯ ಸಮಯದಲ್ಲಿ ಈ ಸಮ್ಮೇಳನ ಕೂಡಿಸುವುದಾಗಿ ಅವರ ಅಭಿಪ್ರಾಯವಾಗಿದೆ. ಕಿರಿಯರ ಈ ಉತ್ಸಾಹವು ಅಭಿನಂದನೀಯವಿದೆ. ಇವರೀ ತರದ ಸಾಂಸ್ಕೃತಿಕ ಚಟುವಟಿಕೆಗಳಿಗೆ ಜಿಲ್ಲೆಯ ಮಹಾಜನರು, ವಿಶೇಷತಃ ಉಡುಪಿಯ ಸಾರ್ವಜನಿಕರು, ಹಿರಿಯರು ಯೋಗ್ಯ ಪ್ರೋತ್ಸಾಹ ಕೊಡುವರೆಂದೂ ಉಡುಪಿಗೆ ಆಹ್ವಾನಿಸಲ್ಪಟ್ಟಿರುವ ಈ ಮಕ್ಕಳ ಕೂಟದ ಸಮ್ಮೇಳನವು ಅತ್ಯಂತ ಯಶಸ್ವಿಯಾಗುವಂತೆ ಸಹಕರಿಸುವರೆಂದೂ ಹಾರೈಸಲಾಗಿದೆ.

ಉಡುಪಿಯಲ್ಲಿ ಕಿರಿಯರಿಂದ ಕಲಾಸಾಹಿತ್ಯ ಸಾಂಸ್ಕೃತಿಕ ಚಟುವಟಿಕೆಗಳು ಚನ್ನಾಗಿ ನಡೆಯುತ್ತಿರುವುದು ಸಂತೋಷಕರ. ವಿದ್ಯಾಪ್ರಕಾಶ, ಕಲಾಮೃತ, ಅಮೃತವಾಣಿ, ಬಾಲವೀರ, ಕಿಶೋರವಾಣಿ, ಬಾಲ ಬಂಧು, ತಳಿರು, ವಿದ್ಯಾನಂದ, ಮೊದಲಾಗಿ ಕೈಬರಹ ಪತ್ರಿಕೆಗಳು ಇಲ್ಲಿವೆ. ಇವೆಲ್ಲಾ ಸಚಿತ್ರವಾಗಿ ಸುಂದರವೂ ಆಕರ್ಷವೂ ಇವೆ. ಆಗಾಗ ಸಭೆ ಕೂಟಗಳನ್ನು ಸೇರಿಸಿ ವಿವಿಧ ವಿಷಯಗಳನ್ನು ಚರ್ಚಿಸುತ್ತಾರೆ. ತಮ್ಮದೇ ಆದ ಒಂದು ವಾಚನಾಲಯವನ್ನು ನಡೆಸುತ್ತಿದ್ದಾರೆ. ಇಂಥಾ ಚಟುವಟಿಕೆಗಳಲ್ಲಿ ವಿಶೇಷತಃ ಕಿರಿಯರೇ ಹೆಚ್ಚಿನ ಆಸಕ್ತಿ ವಹಿಸುತ್ತಿದ್ದಾರೆ. ಈ ಎಲ್ಲಾ ಚಟುವಟಿಕೆಗಳಿಗೆ ಒಂದು ಸಂಘಟಿತ ಸ್ವರೂಪವನ್ನು ಕೊಡುವುದು ಹಾಗೂ ಕಿರಿಯರ ಚಟುವಟಿಕೆಗಳು ಯೋಗ್ಯ ಹಾದಿಯಲ್ಲಿ ಹರಿದು ಮುಂದೆ ಅವರಿಂದ ಕಲಾಸಾಹಿತ್ಯ ಸೇವೆ ಹಾಗೂ ಸಮಾಜ ಸೇವೆ ಸಲ್ಲುವಂತೆ ಮಾಡಿಸುವುದು ಹಿರಿಯರ ಕರ್ತವ್ಯವಿರುವುದು.

ಕಾರ್ಕಳ

ಕಡಿಮೆ ಕ್ರಯದಲ್ಲಿ ಅಕ್ಕಿ

ತಿಂಗಳಿಗೆ ೨೫ ರೂ. ಕಡಿಮೆಯಾಗದ ೫೦ರೂ.ಗೆ ಮೀರದ ವೇತನ ಪಡೆಯುವ ಸ್ಥಳೀಯ ಸರಕಾರೀ ನೌಕರರಿಗೆ ಹಾಗೂ ಉಪಾಧ್ಯಾಯರಿಗೆ ಕ್ರಮವಾಗಿ ರೂ. ೮-೧-೬ ಮತ್ತು ರೂ. ೧೦-೮-೦ ಕ್ರಯದಲ್ಲಿ ತಿಂಗಳಿಗೆ ಒಂದೊಂದು ಮುಡಿ ಅಕ್ಕಿಯನ್ನೂ, ಮೂರು ಬಾಟಲಿಗೆ ಮೀರದಷ್ಟು ಎಣ್ಣೆ ಮತ್ತು ೩॥ ರಾತಲಿಗೆ ಮೀರದಷ್ಟು ಸಕ್ಕರೆಯನ್ನು ಕಂಟ್ರೋಲ್ ದರದಲ್ಲಿಯೂ ಕೊಡುವ ವ್ಯವಸ್ಥೆ ಜುಲಾಯಿ ತಿಂಗಳಿಂದ ಪ್ರಾರಂಭವಾಗಿದೆ.

ಉಪ್ಪಿನಂಗಡಿ

ಆಹಾರ ಸಂಕಷ್ಟ ನಿವಾರಣೆ

ಯ ಬಗ್ಗೆ ಇಲ್ಲಿ ಒಂದು ಸಮಿತಿ ಏರ್ಪಟ್ಟಿದ್ದು ಕಡಿಮೆ ಕ್ರಯದಲ್ಲಿ ಬಡವರಿಗೆ ಅಕ್ಕಿ ದೊರೆಯುವ ಏರ್ಪಾಡನ್ನು ಮಾಡುತ್ತಿದೆ. ಭೂಮಾಲಿಕರೂ, ವ್ಯಾಪಾರಿಗಳೂ, ಅಧಿಕಾರಿಗಳೂ ಇಂಥಾ ಜನೋಪಯೋಗೀ ಕಾರ್ಯದಲ್ಲಿ ಸಹಕರಿಸಬೇಕಾಗಿದೆ.

ಪೆರಡಾಲ

ಇಲ್ಲಿನ ಡಾ. ಪಿ. ಸುಬ್ರಹ್ಮಣ್ಯ ಶಾಸ್ತ್ರಿಗಳ ತಂದೆ ಶ್ರೀ. ಗಣಪತಿ ಭಟ್ಟರು ಕಳೆದ ೮ನೇ ತಾರೀಕಿನ ದಿನ ಬುಧವಾರ ರಾತ್ರಿ ೧೦ ಗಂಟೆ ಸಮಯಕ್ಕೆ ತನ್ನ ೭೪ನೇ ವಯಸ್ಸಿನಲ್ಲಿ ಕೈಲಾಸವಾಸಿಗಳಾದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ ಮೃತರ ಆತ್ಮಕ್ಕೆ ಚಿರಶಾಂತಿಯಿರಲಿ!

ಮೈಸೂರು ಪತ್ರಿಕೋದ್ಯೋಗಿ ಸಮ್ಮೇಳನ

ಈ ಸಮ್ಮೇಳನವು ಸಪ್ಟಂಬರ ೧೮ ಮತ್ತು ೧೯ರಲ್ಲಿ ಬೆಂಗಳೂರಲ್ಲಿ ಜರಗಲಿರುವುದೆಂದು ಪ್ರಕಟವಾಗಿದೆ. ಸಮ್ಮೇಳನದ ಸ್ವಾಗತ ಸಮಿತಿಯ ರಚನೆಯಾಗಿದೆ.

ರಾಜಿನಾಮೆಯಿತ್ತ ಕಾಂಗ್ರೆಸ್ ಪಕ್ಷದವರು ಡಿ। ಬೋರ್ಡಿಗೆ ಪುನಃ ಪ್ರವೇಶಿಸಬೇಕೆ?

ಶ್ರೀ. ಬಾಳ್ಕಟ್ಟೆಬೀಡು ಕೃಷ್ಣಯ್ಯ ಹೆಗ್ಗಡೆಯವರು ವಿರೋಧಿಸುತ್ತಾರೆ.

ಕಳೆದ ವರ್ಷ ಗಾಂಧಿಜಿ ಮೊದಲಾದ ರಾಷ್ಟ್ರದ ಮುಂದಾಳುಗಳನ್ನು ಸರಕಾರವು ಸೆರೆಮನೆ ಸೇರಿಸಿದ ನಿಷೇಧಾರ್ಥವಾಗಿ, ಡಿ। ಕಾಂ। ಕಮಿಟಿಯ ಆಜ್ಞೆ ಮೇರೆಗೆ ದ. ಕ. ಜಿಲ್ಲಾ ಡಿ। ಬೋರ್ಡಿನ ಕಾಂಗ್ರೆಸ್ ಪಕ್ಷದ ಮೆಂಬರರು ಅನೇಕರು ರಾಜಿನಾಮೆಯಿತ್ತಿದ್ದಾರಷ್ಟೆ? ಆದರೆ ಈಗ, ಪುನಃ ರಾಜಿನಾಮೆಯಿತ್ತ ಸ್ಥಳಗಳಿಗೆ ಉಪ ಚುನಾವಣೆ ನಡೆಯಲಿಕ್ಕಿರುವುದರಿಂದ, ಅದಕ್ಕೆ ರಾಜಿನಾಮೆಯಿತ್ತ ಡಿ। ಬೋ।ನ ಕಾಂಗ್ರೆಸ್ ಪಕ್ಷದವರು ಉಮೇದ್ವಾರರಾಗಿ ನಿಲ್ಲಬೇಕೆಂಬ ವಿಚಾರವನ್ನು ಆಲೋಚಿಸಲು, ಹಾಗೆ ರಾಜಿನಾಮೆಯಿತ್ತ ಸದಸ್ಯರ ಸಭೆಯೊಂದು ಸೇರಲಿರುವುದಾಗಿ, ತನಗೆ ಆ ಸಭೆಗೆ ಹಾಜರಾಗಲು ಆಮಂತ್ರಣ ಬಂದಿತ್ತೆಂಬ ವಿಷಯ ಶ್ರೀ ಬಾಳ್ಕಟ್ಟೆಬೀಡು ಕೃಷ್ಣಯ್ಯ ಹೆಗ್ಗಡೆಯವರು ತಿಳಿಸುತ್ತಾ, ರಾಜಿನಾಮೆಕೊಟ್ಟ ಡಿ। ಬೋ। ನ ಕಾಂ। ಪಕ್ಷದವರು ಪುನಃ ಚುನಾವಣೆಗೆ ನಿಲ್ಲುವ ವಿಷಯವನ್ನು ತಾನು ನಿಷೇಧಿಸುವುದಾಗಿ ಆ ಸಭೆಗೆ ತಂತಿಬಿಟ್ಟಿರುವುದಾಗಿ ತಿಳಿಸುತ್ತಾ, ಪರಿಸ್ಥಿತಿ ಸುಧಾರಿಸದೆ ಕಾಂಗ್ರೆಸ್ ಪಕ್ಷದ ಮೆಂಬರರು ಡಿ। ಬೋರ್ಡು ಪ್ರವೇಶಿಸಕೂಡದೆಂಬ ವಿಚಾರವಾಗಿ ಸಭೆ ಕರೆದವರಿಗೆ ತಾನು ಬರೆದ ಪತ್ರವನ್ನು ನಮಗೆ ಕಳುಹಿಸಿದ್ದಾರೆ. ಅದರ ಅಭಿಪ್ರಾಯ ಹೀಗಿದೆ.

"ದ. ಕ. ಜಿಲ್ಲಾ ಬೋರ್ಡಿಗೆ ಕಾಂಗ್ರೆಸಿನವರು ಉಮೇದ್ವಾರರಾಗಿ ಪ್ರತಿಸ್ಪರ್ಧಿಸುವ ವಿಚಾರ ನಾನು ನಿಷೇಧಿಸುತ್ತೇನೆಂದು ನಿಮಗೆ ತಂತಿ ಬಿಟ್ಟಿದ್ದೇನೆ. ಮುಂಬರುವ ಚುನಾವಣೆಯಲ್ಲಿಯೂ ನಾನು ನನ್ನ ಪ್ರಬಲ ಪ್ರತಿಷೇಧವನ್ನು ಸಾರುತ್ತೇನೆ. ನಾವೆಲ್ಲರೂ ಡಿ। ಕಾಂ। ಕಮಿಟಿಯ ಆಜ್ಞೆ ಮೇರೆಗೆ ರಾಜಿನಾಮೆ ಕೊಟ್ಟಿರುವೆವು. ಇಂದಿನೀ ಸಂದರ್ಭದಲ್ಲಿ, ವಿಶೇಷವಾಗಿ ನಮ್ಮ ಮುಂದಾಳುಗಳೆಲ್ಲಾ ಸೆರೆಮನೆ ಸೇರಿರುವೀ ಕಾಲದಲ್ಲಿ, ಸರಕಾರವು ಅವರ ಬಿಡುಗಡೆ ಮಾಡುವ ವಿಚಾರ ನಿಷ್ಠುರವಾಗಿರುವೀ ಸಂದರ್ಭದಲ್ಲಿ ನಾವು ಚುನಾವಣೆಗಳಲ್ಲಿ ಪ್ರತಿಸ್ಪರ್ಧಿಸಿದರೆ ಅದು ನಮ್ಮ ಹಾಗೂ ಕಾಂಗ್ರೆಸಿನ ಕೀರ್ತಿಯ ಹೆಸರಿಗೆ ಕಳಂಕತರುವಂಥಾದ್ದು. ನಾವು ನಮ್ಮ ಚುನಾವಣೆಯನ್ನು ಕೇಂದ್ರ ಶಾಸನ ಸಭೆಯ ಚುನಾವಣೆಗಳಿಗೆ ಹೋಲಿಸ ಕೂಡದು, ಏಕೆಂದರೆ ಅಲ್ಲಿ ಅವರು ಮೇಲಿನ ಅಧಿಕಾರಿಗಳ ಸಮ್ಮತಿ ಪಡೆದು ಚುನಾವಣೆಗೆ ನಿಂತದ್ದು. ಆದ್ದರಿಂದ ನೀವು ಈ ವಿಷಯ ಪರ್ಯಾಲೋಚಿಸಿ, ಕಾಂಗ್ರೆಸ್‌ನ ಹೆಸರಲ್ಲಿ ಯಾರೂ ಚುನಾವಣೆಗೆ ನಿಲ್ಲದಂತೆ ಹಾಗೂ ಅದರಿಂದ ನಮಗೆಲ್ಲಾ ಪ್ರಿಯವಾದ ಕಾಂಗ್ರೆಸಿನ ಶುಭ್ರ ಕೀರ್ತಿಗೆ ಕಳಂಕವಾಗದಂತೆ ತಡೆಗಟ್ಟುವಿರೆಂದು ನಾನು ಆಶಿಸುತ್ತೇನೆ ಮತ್ತು ಪ್ರಾರ್ಥಿಸುತ್ತೇನೆ"

ಡಿಸ್ಟ್ರಿಕ್ಟ್ ಬೋರ್ಡಿನ ಉಪ ಚುನಾವಣೆ

ಕಾಂಗ್ರೆಸು ಪಕ್ಷದ, ಜಿಲ್ಲಾ ಬೋರ್ಡು ಮೆಂಬರರು ರಾಜಿನಾಮೆಯಿತ್ತ ಸ್ಥಾನಗಳಿಗೆ ಉಪ ಚುನಾವಣೆ ನಡೆಯಲಿದೆ. ಮಂಗಳೂರು ತಾಲೂಕಿನ ಸೀಟುಗಳಿಗೆ ನೋಮಿನೇಶನ್ ಹಾಕುವ ಕೊನೆಯ ದಿನ ತಾ ೧೪-೮-೪೩. ಕಾಸರಗೋಡು ತಾಲೂಕಿನ ಸೀಟುಗಳಿಗೆ ನೋಮಿನೇಶನ್ ಹಾಕುವ ಕೊನೆಯ ದಿನ ತಾ ೨೫-೮-೪೩ ಮತ್ತು ೨೬-೮-೪೩. ಬೇರೆ ತಾಲೂಕುಗಳ ವಿವರ ತಿಳಿದು ಬಂದಿಲ್ಲ. ಈ ಉಪ ಚುನಾವಣೆಯಾಗುವ ವಿವರ ಸಾಕಷ್ಟು ಪ್ರಚಾರವಾಗಿಲ್ಲವೆಂದು ಕೆಲವರ ದೂರು ಇದೆ.

ಮಂಜೇಶ್ವರ

ವ್ಯಾಪಾರಿಗಳಿಗೆ ಜುಲುಮಾನೆ

ಇಲ್ಲಿ ಪ್ರಸಿದ್ಧ ವ್ಯಾಪಾರಿಗಳಿಗೆ ಕೆಲವರಿಗೆ ಡಿ। ಕಲೆಕ್ಟರರು ಆಹಾರ ಧಾನ್ಯ ನಿಯಂತ್ರಣ ಆಜ್ಞೆಯ ಮೇರೆಗೆ ಜುಲುಮಾನೆ ವಿಧಿಸಿದ್ದಾರೆ.

'ಗಾಂಧಿಜಿ ಪತ್ರಗಳನ್ನು ಪ್ರಸಿದ್ಧಿಸಿರಿ'

೧೯೪೯ರ ತನಕ ಯುದ್ಧ?

೧೯೪೯ರ ವರೆಗೆ ಯುದ್ಧ?

ನಾಕ್ಸರ ಭವಿಷ್ಯ

ಅಮೆರಿಕ ಜಪಾನು ಸಮರ ೧೯೪೯ರ ವರೆಗೆ ನಡೆದೀತು ಎಂದು ಅಮೆರಿಕದ ನೌಕಾ ಖಾತೆಯ ಕಾರ್ಯದರ್ಶಿ ಕರ್ನಲ್ ನಾಕ್ಸರು ಪತ್ರಿಕೋದ್ಯಮಿಗಳೊಡನೆ ಹೇಳಿದರು. ಅಮೆರಿಕದ ನಿರ್ಮಾಣ ಯೋಜನೆಯನ್ನು ಈ ಗುಣಿತಕ್ಕನುಸರಿಸಿಯೇ ಮಾಡಿದೆಯಂತೆ.

'ಗಾಂಧಿಜಿ ಪತ್ರಗಳನ್ನು ಪ್ರಸಿದ್ಧಿಸಿರಿ'

ಸೊರೆನ್ಸನರ ಒತ್ತಾಯ

ಪಾರ್ಲಿಮೆಂಟಿನ ಕೂಲಿಗಾರ ಪಕ್ಷದ ಸದಸ್ಯ ಸೊರೆನ್ಸನರು ಮೆಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯಲ್ಲಿ ಬಂಧ್ಯ ಲೇಖನ ಬರೆದು, ಮಹಾತ್ಮ ಗಾಂಧಿಯವರು ಸರಕಾರಕ್ಕೆ ಬರೆದ ಪತ್ರಗಳನ್ನು ಪ್ರಸಿದ್ಧಿಸಿರಿ ಎಂದು ಒತ್ತಾಯಪಡಿಸಿದ್ದಾರೆ. ಭಾರತದ ಪರಿಸ್ಥಿತಿ ಹೀಗಿದ್ದರೂ, ಸ್ವಾತಂತ್ರ್ಯಕ್ಕಾಗಿ ಹೋರಡುತ್ತೇವೆಂದು ಹೇಳುವುದು ಆಶ್ಚರ್ಯ. ಸ್ವಾತಂತ್ರ್ಯ ಮತ್ತು ಮಾನವ ಜನಾಂಗದ ಕಡೆಗೆ ನೋಡಿ ಭಾರತದ ಬಿಕ್ಕಟ್ಟು ಬಗೆಹರಿಸಬೇಕು. ಕಾಂಗ್ರೆಸ್ ಮುಖಂಡರನ್ನು ಬಂಧನದಲ್ಲಿಟ್ಟು ಅವರಿಗೆ ತಮ್ಮ ನ್ಯಾಯ ಹೇಳಿಕೊಳ್ಳಲೂ ಆಸ್ಪದವೀಯದಿರುವುದು ವಿಚಿತ್ರವಾಗಿದೆ, ಎನ್ನುತ್ತಾ ಅವರು ಬಿಕ್ಕಟ್ಟು ಬಗೆಹರಿಸಲು (೧) ಮಹಾತ್ಮರ ಪತ್ರ ಪ್ರಸಿದ್ಧಿಸಬೇಕು, (೨) ಗಾಂಧಿಜಿ ಮತ್ತು ಬೇರೆ ಮುಖಂಡರಿಗೆ ಹೇಳಿಕೆ ಕೊಡಲು ಅನುಕೂಲ ಮಾಡಬೇಕು. (೩) ಕಾಂಗ್ರೆಸ್ ಮತ್ತು ಕಾಂಗ್ರೆಸ್ಸೇತರ ಮುಖಂಡರು ಭೇಟಿಯಾಗಲು ಅವಕಾಶ ಕೊಡಬೇಕು. (೪) ಛಡೀಶಿಕ್ಷೆಯನ್ನು ರದ್ದು ಮಾಡಬೇಕು ಎಂದು ಸೂಚಿಸಿದ್ದಾರೆ.

ತಳಪಡೆಯವರ ಬಿಡುಗಡೆ

ಬೊಂಬಾಯಿ ಸರಕಾರದ ನಿರ್ಣಯ

ಬೊಂಬಾಯಿ ಸರಕಾರವು ಶ್ರೀ ಕೇಶವ ತಳಪಡೆಯವರನ್ನು ಅನಿರ್ಬಂಧ ಬಿಡುಗಡೆಮಾಡಲು ಆಜ್ಞೆ ಹೊರಡಿಸಿದೆಯೆಂದು ತಿಳಿದು ಬಂದಿದೆ. ಶ್ರೀ ತಳಪಡೆಯರ ಖಟ್ಲೆ ಪ್ರಸಿದ್ಧವಾದುದು. ಫೆಡರಲ್ ಕೋರ್ಟು ಡಿ. ಕಾನೂನಿನ ೨೬ ನಿಯಮವನ್ನು ನ್ಯಾಯಬಾಹಿರವೆಂದು ಸಾರಿದ್ದು ಇವರ ಖಟ್ಲೆ ವಿಚಾರಣೆಯಲ್ಲಿ. ತಳಪಡೆಯವರು ಬೊಂಬಯಿ ಹೈಕೋರ್ಟಿನ ಅರ್ಜಿಬರೆಯುವವರು. ಇವರ ಖಟ್ಲೆಯ ಕುರಿತು ಫೆಡರಲ್ ಕೋರ್ಟು, ಬೊಂಬಯಿ ಹೈಕೋರ್ಟುಗಳಲ್ಲಿ ಆದ ನಿರ್ಣಯ, ಅದರಿಂದ ಅಖಿಲ ಭಾರತದಲ್ಲಿ ಉಂಟಾದ ಚಳವಳಿ ಇತಿಹಾಸ ಪ್ರಸಿದ್ಧವಾಗುವುದು.

ಆಹಾರ ಪರಿಸ್ಥಿತಿಯು ವಿಷಮವಾಗಲು ಸರಕಾರವೇ ಕಾರಣ

ಎಂಬುದಾಗಿ ಕೇಂದ್ರ ಶಾಸನ ಸಭೆಯಲ್ಲಿ ಸದಸ್ಯರನೇಕರು ಟೀಕಿಸಿದರು. ಯುದ್ಧ ಸುರುವಾದಂದಿನಿಂದ ಸರಕಾರವು ತಪ್ಪು ಹೆಜ್ಜೆಗಳನ್ನಿಡುತ್ತಾ ಬಂದದ್ದೇ ಈ ಪರಿಸ್ಥಿತಿಗೆ ಕಾರಣವೆಂದೂ, ಪ್ರಾಂತ್ಯಗಳಲ್ಲಿ ಜನರಿಗೆ ಎಷ್ಟು ಆಹಾರ ಬೇಕಾಗುವುದೆಂಬುದನ್ನು ಸರಕಾರ ಲೆಕ್ಕ ತಯಾರಿಸಿಲ್ಲವೆಂದೂ, ಸರಕಾರದ ಹಣಕಾಸಿನ ಧೋರಣವೂ ಈ ಅವ್ಯವಸ್ಥೆ ಕಾರಣವೆಂದೂ ಮೊದಲಾಗಿ ಟೀಕಿಸಲಾಯಿತು.

ರೈಲು ಬಂಡಿಗಳ ಸಮಯ

ಏಪ್ರಿಲ್ ತಾ. ೧೫ರಿಂದ ವ್ಯಕ್ತಸ್ಥವಾದ ಪ್ರಕಾರ.

	ಹೊರಡುವುದು.	ಬರುವುದು.
ಮೈಲ್	೬-೪೦ ಪೂ.	೭-೨೫ ಅಪ.
ಶಟ್‌ಲ್	೭-೩೦ ಅಪ.	೧೦-೫ ಪೂ.

ANDREWS
LIVER SALT
ಆಂಡ್ರೂಸ್ ಲಿವರ್‌ಸಾಲ್ಟ್
ಆರೋಗ್ಯಪಾನೀಯ — ವಿರೇಚಕ

ಯುದ್ಧದ ನಿಮಿತ್ತದಿಂದಾಗಿ ಎಂಡ್ರೂಸ್ ಲಿವರ್‌ಸಾಲ್ಟ್ ಈಗ ದೊರೆಯುವುದಿಲ್ಲವೆಂಬುದು ವಿಷಾದಕರವಿದೆ. ಆದರೆ ಅಂತರ್ರಾಷ್ಟ್ರೀಯ ಪರಿಸ್ಥಿತಿ ಸುಧಾರಿತವಾದ ಕೂಡಲೇ ಇದು ಖಂಡಿತ ದೊರಕುವುದು.

NOTICE

I, Kuppa Shetty, nephew of Gangayya Shetty residing in Mulladka Village, Mangalore Taluk, do hereby issue this Notice to whom so ever it may concern.

I learn that Raju Shetty, son of Chandu Shetty, has taken the thumb-impressions of his father to some blank papers, at a time when the said Chandu Shetty was in an unconscious state about ten days back, at the evil instigations of some of the enemies of our family with a view to make unlawful gain to himself. The said Chandu Shetty, my brother, who is ailing at present, and who is still in my care and our family roof, was never the manager of his family and it has been held so in K. R. 365/49, both in the Original and Appellette Court. The said Chandu Shetty has no need nor right to contract debts either on his behalf or on behalf of his Family. Under these circumstances, I issue this Notice to all those that may concern, that any documents created against him or our family shall be invalid and not binding on the family and every person who takes a transfer of any document, to which my said brother is a party, is hereby warned that he takes the same at his own risk.

Mulladka, } ಕುಪ್ಪ ಸೆಟ್ಟಿ.
31-7-43. }

ಅಲಂಕಾರದ ಮನುಷ್ಯರಿಗೆ ಸುಂದರ ವಾಚುಗಳು

ಸುಂದರ, ಅಲಂಕಾರ ವೇಷಭೂಷಣದವರಿಗೂ 'ಜೆಂಟೀಲ್' ವಾಚುಗಳು ಒಪ್ಪುತ್ತವೆ. ಇವುಗಳು ವೆಸ್ಟ್ ಎಂಡ್ ವಾಚ್ ಕಂಪೆನಿಯವರ ತಯಾರಿಕೆಗಳಾಗಿ ಎರಡು ವಿಧದಲ್ಲಿವೆ. "A" ಮಾದರಿಯದು ಎಡಗಡೆ ಚಿತ್ರದಲ್ಲಿಯೂ "B" ಮಾದರಿಯದು ಬಲಗಡೆ ಚಿತ್ರದಲ್ಲಿಯೂ ತೋರಿಸಿದೆ. 'ಜೆಂಟೀಲ್' ವಾಚುಗಳು ಸರಿಯಾದ ಸಮಯ ಕೊಡುವವು. ಪೂರ್ಣ ಜುವೆಲುಗಳುಳ್ಳದ್ದು. ಸುಂದರವಾದ ನಿಕ್ಕಲ್ ಕ್ರೋಮಿಯಂ ಪ್ಲೇಟಿನಿಂದ ಕೂಡಿದ ಸಪೂರ ಬದಿಯ ಕೇಸುಳ್ಳದ್ದು. ಹಣದ ವಿಚಾರಕ್ಕೆ ಇದನ್ನು ಹೋಲಿಸಲಿಕ್ಕೇ ಬಾರದು.



ವೆಸ್ಟ್
ಎಂಡ್
ವಾಚ್
ಕಂಪೆನಿ
ಬೊಂಬಾಯಿ—ಕಲ್ಕತ್ತ.

WEST END WATCH Co
BOMBAY CALCUTTA

ನೋಟೀಸು

ದ. ಕ. ಸಬೋರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ

R. E. P. 198/1942
in O. S. 71/1939

ಶಂಕರ ಕಡಂಬಳಿತ್ತಾಯ — ಅರ್ಜಿದಾರ.

ರಾಮಯ್ಯ ಬಲ್ಲಾಳ ಕೂಡಾ—

ರೆಸ್ಪೋಂಡೆಂಟರು

2. ಬಂಗಾರು ಬಲ್ಲಾಳರಿಗೆ 4. ಲಕ್ಷ್ಮಣ ಬಲ್ಲಾಳರಿಗೆ 6. ನಂದಪ್ಪ ಬಲ್ಲಾಳರಿಗೆ 7. ಬಂಗಾರು ಬಲ್ಲಾಳರಿಗೆ 8. ಕೃಷ್ಣ ಬಲ್ಲಾಳರಿಗೆ 10. ಸರಸ್ವತಿಯಮ್ಮ 15. ರಾಮಯ್ಯಗೆ 16. ಬಂಗಾರು ಬಲ್ಲಾಳರಿಗೆ 17. ವೆಂಕಮ್ಮಗೆ 18. ನಂದಪ್ಪ ಬಲ್ಲಾಳರಿಗೆ 21. ಬಂಗಾರು ಬಲ್ಲಾಳರಿಗೆ 22. ವಿಠು ಬಲ್ಲಾಳರಿಗೆ 23. ಸುಬ್ರಾಯ ಬಲ್ಲಾಳರಿಗೆ.

ಮೇಲಿನ ಅಮಲ್ಜಾರಿಯಲ್ಲಿ ಅರ್ಜಿದಾರನು ರೆಸ್ಪೋಂಡೆಂಟರ ಬಾಬ್ತು ಸ್ಥಿರಾಸ್ತಿಗಳ ಏಲಂನ ಬಗ್ಗೆ ಅಪೇಕ್ಷಿಸಿರುತ್ತಾನೆ. ಇಸ್ತಿಹಾರಿನ ಶರತ್ತುಗಳನ್ನು ನಿರ್ಣಯಿಸುವ ಬಗ್ಗೆ ತಾ. 41-8-43ಕ್ಕೆ ಇಟ್ಟಿದೆ. ಮೇಲಿನ ಅಮಲ್ಜಾರಿಯ ರೆಸ್ಪೋಂಡೆಂಟರಿಗೆಯೇನಾದರೂ ಆಕ್ಷೇಪವಿದ್ದರೆ ಮೇಲಿನ ತಾರೀಕಿನಲ್ಲಿ ಕೋರ್ಟು ಮುಂದೆ ತಿಳಿಸತಕ್ಕದ್ದು. ಸದ್ರಿ ಅಮಲ್ಜಾರಿಯಲ್ಲಿ ಏಲಂ ಸಮಯದಲ್ಲಿ ಏಲಂಗೆ ನಿಲ್ಲುವರೆ ಪರ್ಮಿಶನ್ ಕೊಡಬೇಕೆಂತ REA 141/43ನೇ ಅರ್ಜಿಯನ್ನು ಸಹಾ ದಾಖಲು ಮಾಡಿರುತ್ತಾನೆ ಮತ್ತು ಸದ್ರಿ ಅರ್ಜಿಯು 31-8-1943ಕ್ಕೆ ಇಟ್ಟಿದೆ ಎಂತ ಈ ಮೂಲಕ ಸದ್ರಿ ವ್ಯಾಜ್ಯದ ರೆಸ್ಪೋಂಡೆಂಟರಿಗೆ ತಿಳಿಸಲಾಗಿಯದೆ.

ಮಂಗಳೂರು } ಯಸ್. ವೆಂಕಟ್ರಾವ್
10-8-1943 } ಅರ್ಜಿದಾರನಕಡೆ ವಕೀಲ.

ಸಿನೆಮಾ ಸುದ್ದಿ

'ತಮಿಳು ಸಾವಿತ್ರಿ' 'ಕನ್ನಡ ಪ್ರಹ್ಲಾದ'ರು ಕಣ್ಮರೆಯಲಿ!

'ಭರತ್ ಭೇಟ್' ಆದರ್ಶ ಪೌರಾಣಿಕ ಚಿತ್ರ

ಪೌರಾಣಿಕ ಸಿನೆಮಾ ಬಂತೆಂದರೆ ನಾವು ಮುಖಸಪ್ಪೆ ಮಾಡುತ್ತೇವೆ! ತಮಿಳು, ತೆಲುಗು, ಕನ್ನಡ, ಮಲೆಯಾಳೀ ಪೌರಾಣಿಕ ಚಿತ್ರಗಳನ್ನಂತೂ ನೋಡುವುದು ಬಹಳ ಕಷ್ಟ! 'ತಮಿಳು ಸಾವಿತ್ರಿ'ಯನ್ನು ಸುಬ್ಬುಲಕ್ಷ್ಮಿಯ ಹಾಡಿಗಾಗಿ, 'ಕನ್ನಡ ಪ್ರಹ್ಲಾದ'ವನ್ನು ಕನ್ನಡ ಚಿತ್ರವೆಂಬ ಅಭಿಮಾನಕ್ಕಾಗಿ ಮಾತ್ರ ನೋಡುತ್ತೇವೆ! ದಕ್ಷಿಣ ಭಾರತದ ಸಿನೆಮಾ ನಿರ್ಮಾತೃಗಳ ಕೈಯಲ್ಲಿ ನಮ್ಮ ಪೌರಾಣಿಕ ವ್ಯಕ್ತಿಗಳ ಭಯಂಕರ ಕೊಲೆ ಆಗುತ್ತದೆ., ಇದರಿಂದ ಅವರು ಕಲೆಯ ಕೊಲೆಯನ್ನೇ ಮಾಡುತ್ತಾರೆ! ಇಂಥವರ ಕಣ್ತೆರೆಯಬೇಕು; ಒಮ್ಮೆ ಅವರು 'ಪ್ರಕಾಶ್' ಚಿತ್ರ 'ಭರತ್ ಬೇಟ್' ನೋಡಬೇಕು! ನಮ್ಮ ಪೌರಾಣಿಕ ಚಿತ್ರಗಳನ್ನು ಹೇಗೆ ತಯಾರಿಸುವುದು; ಭಾರತದ ಪುರಾತನ ಸಂಸ್ಕೃತಿಯನ್ನು ಹೇಗೆ ಬೆಳಗಿಸುವುದು, ಎಂಬುದನ್ನು ನಮ್ಮ ತಮಿಳು ಸಾವಿತ್ರಿ'ಗಳು 'ಕನ್ನಡ ಪ್ರಹ್ಲಾದ'ರೂ, 'ಭರತ್ ಬೇಟ್' ನೋಡಿ ಕಲಿತು ಕೊಳ್ಳಲಿ!

'ಭರತ್ ಭೇಟ್' ಬಾಲಾಜಿಯಲ್ಲಿ ಈ ವಾರ ಪ್ರದರ್ಶಿತವಾಯಿತು. ದುರ್ಗಾ ಖೋಟೆ ಕೈಕೇಯಿಯಾಗಿ, ಶಾಹು ಮೋಡಕ್ ಭರತನಾಗಿ, ಶೋಭನಾ ಸೀತೆಯಾಗಿ, ವಿಮಲಾ ಮಂಥರೆಯಾಗಿ ಅತ್ಯುತ್ತಮ ಅಭಿನಯ ತೋರಿಸಿದ್ದಾರೆ ವೇಷ ಅಲಂಕಾರ, ಅಭಿನಯ, ಹಿನ್ನೆಲೆಗಳೂ ಪೌರಾಣಿಕ ವ್ಯಕ್ತಿಗಳ ನೆನಪು ತರುತ್ತವೆ ಸಂಗೀತವೂ ಬೇಕಾದಷ್ಟೇ ಇದ್ದು ಮನೋಹರವಿದೆ 'ಭರತ್ ಭೇಟ್'ನ ಹಿಂದೀ ಪ್ರತಿ 'ಭರತ್ ಮಿಲಾಪ್' ಹಿಂದೆ ಮಂಗಳೂರಿಗೆ ಬಂದಿತ್ತು ಅದೂ ಸಿನೆಮಾಪ್ರಿಯರ ಮನಸ್ಸನ್ನು ಒಲಿಸಿತ್ತು ರಾಮಾಯಣವನ್ನು ಬರೆದ ವಾಲ್ಮೀಕಿಯೇ ಈ ಚಿತ್ರ ನೋಡಿದ್ದರೂ ನಿಜವಾಗಿ ಮೆಚ್ಚುತ್ತಿದ್ದ! ಪ್ರಕಾಶದವರು 'ರಾಮ ರಾಜ್ಯ'ವನ್ನು ತಯಾರಿಸಿದ್ದಾರೆ. 'ಭರತ್ ಭೇಟ್' ನೋಡಿದವರು 'ರಾಮ ರಾಜ್ಯ'ವನ್ನು ಖಂಡಿತ ನೋಡಲು ಮರೆಯಲಾರರು. ದಕ್ಷಿಣ ಭಾರತದ, ವಿಶೇಶವಾಗಿ ಕನ್ನಡದ ಸಿನೆಮಾ ನಿರ್ಮಾತೃಗಳು ಇನ್ನಾದರೂ ಕಣ್ತೆರೆಯಬೇಕು.

ಟಿಕೆಟ್ ದರ ಹೆಚ್ಚಿಸಬೇಕೆ?

'ಸಿನೆಮಾ ಟಿಕೆಟ್ ದರ ಹೆಚ್ಚಿಸಬೇಕು' ಎಂಬ ವಿಷಯ ಈಗ ವಾದ ವಿವಾದಗಳುಂಟಾಗಿವೆ, ಎಲ್ಲಾ ಸಾಧನ ಸಾಮಗ್ರಿಗಳ ದರ ಬಹಳ ಹೆಚ್ಚಿರಲು, ಸಿನೆಮಾ ಉತ್ಪಾದನಾ ವೆಚ್ಚವೂ ಅಧಿಕವಾಗಿರಲು, ಸಿನೆಮಾ ದರ ಹೆಚ್ಚಿಸಬೇಕೆಂದು 'ಫಿಲ್ಮಿಸ್ತಾನ್'ದ ಅಧಿಕಾರಿ ರಾಯ್ ಬಹದ್ದೂರ್ ಚುನಿಲಾಲರು ವಾದಿಸುತ್ತಾರೆ ~~ಶ್ರೀ ಚುನಿಲಾಲ ದೇಸಾಯಿ; ಇವರು ಇದನ್ನು~~ ವಿರೋಧಿಸುವವರು, ಇವರು ಪ್ರಸಿದ್ಧ ಡಿಸ್ಟ್ರಿಬ್ಯೂಟರ್, ಉತ್ಪಾದಕರೂ ಪ್ರದರ್ಶಕರೂ ಆಗಿದ್ದು ಇವರಿಗೆಲ್ಲಾ ವಿಚಾರ ಗೊತ್ತಿದೆ ಇಂದು ಸಿನೆಮಾ ಜನಪ್ರಿಯ ಮಾಡಲು ನಮಗೆ ದೊರೆತ ಸುವರ್ಣಸಂದಿ, ಜನ ಈಗ ಸಿನೆಮಾ ಹಿಂದಿಗಿಂತ ಅದಿಕ ನೋಡುತ್ತಾರೆ ಈಗ ದರ ಹೆಚ್ಚು ಮಾಡಿ ಜನಪ್ರಿಯತೆ ಕಳಕೊಳ್ಳಬಾರದೆನ್ನುತ್ತಾರೆ ಅವರು ಅಂತೂ ಈ ದರದಲ್ಲೂ ಉತ್ಪಾದಕರೂ, ಪ್ರದರ್ಶಕರು ಎಲ್ಲರೂ ಲಾಭ ಮಾಡುತ್ತಿರುವಾಗ, ಇದಕ್ಕಿಂತ ದರ ಹೆಚ್ಚು ಮಾಡಿ ಏಕೆ ಸುಮ್ಮಗೆ ಜನರ ಸಹಾನುಭೂತಿ ಕಡಿಮೆಮಾಡಿಕೊಳ್ಳಬೇಕು? ಆಹಾರದ ಬಳಿಕ ಸಿನೆಮಾ ಈಗ ಜನರಿಗೆ ಬೇಕಾಗಿದೆ ಆಹಾರದ ಕ್ರಯಕ್ಕೆ ಕಂಟ್ರೋಲ್ ಮಾಡಬೇಕೆಂಬ ಕೂಗು ಸಾಲದೆ? ಸಿನೆಮಾ ದರಕ್ಕೂ ಸರಕಾರ ಕಂಟ್ರೋಲ್ ಮಾಡುವ ಸಂದರ್ಭ ಮಾಡಿಕೊಳ್ಳುವುದಕ್ಕಿಂತ ಇಂದಿನ ಈ ಸ್ವಂತ ಕಂಟ್ರೋಲ್ ಒಳ್ಳೆಯದೆಂದು ನಮ್ಮ ಸೂಚನೆ.

ಲಾಭದಲ್ಲಿ ಮಾತ್ರ ಪಾಲಿಲ್ಲ?

ನಟರು, ಸಂಗೀತಗಾರರು, ಕವಿಗಳು ಕತೆಗಾರರು, ನಿರ್ದೇಶಕರು ಇವರಿಗೆಲ್ಲಾ ಸಿನೆಮಾದ ಲಾಭದಲ್ಲಿ ಪಾಲುಂಟೇನು? 'ಜವಾಬ್' 'ಕಿಸ್ಮೆತ್' 'ಬಂಧನ್' 'ಖಜಾಂಜಿ' 'ಜ್ಞಾನೇಶ್ವರ್' ಇಂಥಾ ಚಿತ್ರಗಳು ಎಷ್ಟು ಲೋಕಪ್ರಿಯವಾಗಿವೆ? ಈ ಚಿತ್ರಗಳಿಂದ ಸಿನೆಮಾ ನಿರ್ಮಾಪಕರ ಬೊಕ್ಕಸ ಎಷ್ಟು ತುಂಬಿದೆ? ಆದರೆ ಅಲ್ಲಿನ ಬಡ ನಟರ, ಸಂಗೀತಗಾರರ, ಕವಿಗಳ, ಕತೆಗಾರರ, ನಿರ್ದೇಶಕರ ಲಾಭವೇನು? ಅಲ್ಲಿ ಅಭಿನಯಿಸಲು, ಹಾಡಲು ಕತೆ ಬರೆದುಕೊಡಲು ನಿರ್ದೇಶಿಸಲು ಗೊತ್ತುಮಾಡಿದ ಸಂಬಳ ಮಾತ್ರವೆ? ಇದರಲ್ಲಿ ಏನು ನ್ಯಾಯವುಂಟು? ಲಾಭದಲ್ಲಿ ಪಾಲುಂಟೆಂದು ಇವರಿಗೆಲ್ಲಾ ಅನುಭವವಾದರೆ, ಇನ್ನೆಷ್ಟು ಉತ್ತಮ 'ಖಜಾಂಜಿ'ಗಳು, 'ಜ್ಞಾನೇಶ್ವರ'ಗಳು, 'ಬಂಧನ್' 'ಬಸಂತ್'ಗಳು, 'ಜವಾಬ್' 'ಕಿಸ್ಮೆತ್'ಗಳು ನಮ್ಮಲ್ಲಿ ಹುಟ್ಟಲಿಕ್ಕಿಲ್ಲ? ಈ ಅಂಶವನ್ನು ನಮ್ಮ ಸಿನೆಮಾ ನಿರ್ಮಾತೃಗಳು ಚನ್ನಾಗಿ ಯೋಚಿಸಬೇಕು 'ಗ್ರಾಮೊಫೋನ್' ದೋಸೆ ಹಾಡಿದ ಸಂಗೀತಗಾರರಿಗೆ ತಮ್ಮ 'ದೋಸೆ' ಮಾರಾಟವಾದಂತೆ ತಮ್ಮ ಹೊಟ್ಟೆ ಹಸಿವು ಅಡಗುತ್ತಾ ಹೋಗುವುದೆಂಬ ಭರವಸೆಯಿದ್ದರೆ ಇನ್ನೆಂತಹ ಕರ್ಣ ಮಧುರ ಗಾನ ಅವರ ಕಂಠದಿಂದ ಹೊರಡಲಿಕ್ಕಿಲ್ಲ? ಕವಿಗಳ ಲೇಖನಿಯಿಂದ ಎಂದಾ ಮನೋಹರ ಕವನ ಹೊರಡಲಿಕ್ಕಿಲ್ಲ? ನಟನಟಿಯರು ಎಂಥಾ ಅಭೂತಪೂರ್ವ ಅಭಿನಯ ತೋರಿಸಲಿಕ್ಕಿಲ್ಲ? ಇದನ್ನು ಅವಶ್ಯ ಆಲೋಚಿಸಬೇಕು!

ಆರು ಮಕ್ಕಳ ತಂದೆ ಶಾಂತಾರಾಂ

ಶಾಂತಾರಾಮರ 'ಶಕುಂತಲೆ' ಜಯಶ್ರೀ 'ಭರತ'ನನ್ನು ಪಡೆದಿದ್ದಾಳೆ ಇದರಿಂದ ಶಾಂತಾರಾಮರು ಆರು ಮಕ್ಕಳ ತಂದೆಯಾಗಿದ್ದಾರೀಗ

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದುದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು. ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE. | **The Joint Booking Office,** KODIALBAIL.

ಅಕ್ಕಿ ಭತ್ತ ಒಯ್ಯುವ ವಿಚಾರ
ಕಲೆಕ್ಟರರ ಪ್ರಕಟಣೆ

ಮದ್ರಾಸ್ ಸಂಸ್ಥಾನದಿಂದ ಬೇರೆ ಸಂಸ್ಥಾನಕ್ಕೆ ~~ವ ಪುದುಕೋಟ್ಟೆ ಸಂಡೂರು ಮತ್ತು ಬಂಗನ~~ ಪಲ್ಲೆ ವಿನಾ ಇತರ ದೇಶೀಯ ರಾಷ್ಟ್ರಗಳಿಗೆ ನ್ಯಾಯವಾಗಿ ಕೊಡಲ್ಪಟ್ಟ ಪರ್ಮಿಟು ಯಾನೆ ರಹದಾರಿಯ ಕರಾರು ಮತ್ತು ಶರ್ತ ಪ್ರಕಾರ ವಿನಾ ಭತ್ತ ಮತ್ತು ಅಕ್ಕಿ ಒಯ್ಯೋಣವನ್ನು ನಿರ್ಬಂಧಿಸಿರುವದರಿಂದ ಸದ್ರಿ ಜೀನಸನ್ನು ಕಳ್ಳಾಟಿಕೆಯಿಂದ ರಫ್ತು ಮಾಡುವುದನ್ನು ತಡೆ ಮಾಡುವುದು ಆಗತ್ಯವಾಗಿರುವುದರಿಂದ ಈ ಕೆಳಗೆ ನಮೂದಿಸಿರುವ ಮಾರ್ಗಗಳಲ್ಲಿ ಹೋಗುವ ಯಾವತ್ತು ವಾಹನಗಳನ್ನು ನಿಲ್ಲಿಸಿ ಪರಿಶೋಧಿಸುವದಕ್ಕೆ ಮತ್ತು ಅವುಗಳಲ್ಲಿ ಒಯ್ಯುವ ಭತ್ತ ಅಥವ ಅಕ್ಕಿಗೆ ನ್ಯಾಯವಾದ ಪರ್ಮಿಟು ಯಾನೆ ರಹದಾರಿ ಉಂಟೋ ಎಂದು ತನಿಕೆ ನಡೆಸಿ ಭತ್ತ ಮತ್ತು ಅಕ್ಕಿಯ ಚಲಾವಣೆಯನ್ನು ತಪಾಸಣೆ ಮಾಡುವರೆ ಕೂಡಾ ಸದರಿ ಗಡಿನಾಡು ಮಾರ್ಗಗಳು ಇರುವ ಚೆಕಬಂದಿಯ ಫಿರ್ಕಾ ರೆವೆನ್ಯು ಇನ್ಸ್‌ಪೆಕ್ಟರ ಮತ್ತು ಅವರ ಮೇಲಿನ ತರಗತಿಯ ರೆವೆನ್ಯು ಇಲಾಖೆಯ ಎಲ್ಲಾ ಆಫೀಸರರಿಗೂ ಅಸಿಸ್ಟಾಂಟ್ ಕಮರ್ಶಿಯಲ್ ಟೇಕ್ಸ್ ಆಫೀಸರ್ ಮತ್ತು ಅವರ ಮೇಲಿನ ತರಗತಿಯ ಕಮರ್ಶಿಯಲ್ ಟೇಕ್ಸ್ ಇಲಾಖೆಯ ಎಲ್ಲಾ ಆಫೀಸರರಿಗೂ, ಸಬ್ ಇನ್ಸ್‌ಪೆಕ್ಟರ್ ಮತ್ತು ಅವರ ಮೇಲಿನ ತರಗತಿಯ ಪೋಲೀಸು ಮತ್ತು ಎಕ್ಸೈಜು ಇಲಾಖೆಗಳ ಎಲ್ಲಾ ಆಫೀಸರರಿಗೂ ಮತ್ತು ಸಂಬಂಧಪಟ್ಟ ಗ್ರಾಮ ಉದ್ಯೋಗಸ್ಥರಿಗೂ ಕೂಡಾ ಡಿಫೆನ್ಸ್ ಆಫ್ ಇಂಡಿಯ ಆಕ್ಟು ಪ್ರಕಾರ ದಕ್ಷಿಣ ಕನ್ನಡ ಕಲೆಕ್ಟರ್ ಎಮ್ ಕರಮತುಲ್ಲಾ, ಐ ಸಿ ಎಸ್ ಅವರು ಅಧಿಕಾರ ಕೊಟ್ಟಿರುತ್ತಾರೆಂಗಿ ಪ್ರಕಟಿಸುತ್ತಾರೆ ತನಿಕೆ ನಡೆಸುವ ಸ್ಥಳಗಳು ಈ ಕೆಳಗಿನವುಗಳು

ಕುಂದಾಪುರ ತಾಲೂಕಿನ ಕಾವಳಿ ರಸ್ತೆ ನಂಬ್ರ 31 ಉತ್ತರ ಮಂಗಳೂರು ಶೀರೂರು ಶಿರಾಡಿಯಲ್ಲಿ ಶೀರೂರು, ಸದ್ರಿ ತಾಲೂಕಿನ ನಾಗೋಡಿ ಘಾಟ ರಸ್ತೆಯಲ್ಲಿ ಕೊಲ್ಲೂರು ನಾಗೋಡಿ, ಕೋಟೆ, ಶೀರೂರು ಸದ್ರಿ ತಾಲೂಕಿನ ನಾಗೋಡಿ ಬೆಕ್ಕುಳ್ಳಿ, ಶಾಖೆಗಳ ದಾರಿಯಲ್ಲಿ ಕೋಟೆ ಶೀರೂರು ಹೆಬ್ಬಿಗೆ ಸದ್ರಿ ತಾಲೂಕಿನ ಕಡ್ಲೂರು ಹೊಸಂಗಡಿ ರಸ್ತೆಯಲ್ಲಿ ಎಡಮೊಗ್ಗೆ ಹೊಸಂಗಡಿ ಕಾರ್ಕಳ ತಾಲೂಕಿನ ಕಾರ್ಕಳ ಆಗುಂಬೆ ರಸ್ತೆಯಲ್ಲಿ ನಡ್ಪಾಲ್ ಪುತ್ತೂರು ತಾಲೂಕಿನ ಮಾಣಿ ಪಂಜಿರ ಬಾವ್ ರಸ್ತೆಯಲ್ಲಿ ಶಿರಾಡಿ, ಸದ್ರಿ ತಾಲೂಕಿನ ಮಂಗಳೂರು ಚಾರ್ಮಾಡಿ ರಸ್ತೆಯಲ್ಲಿ ಚಾರ್ಮಾಡಿ, ಸದ್ರಿ ತಾಲೂಕಿನ ಒಪ್ಪೆ ಪಾಟ ರಸ್ತೆಯಲ್ಲಿ ಬಿಳಿನೆಲೆ ಸದ್ರಿ ತಾಲೂಕಿನ ಮಂಗಳೂರು ಮಡಿಕೇರಿ ರಸ್ತೆಯಲ್ಲಿ ಸಂಪಾಜೆ

ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು

ಶ್ರೀ ಬೆಳ್ಳಾವೆ ವೆಂಕಟನಾರಾಯಣಪ್ಪನವರ ಸ್ಮಾರಕ ಉಪನ್ಯಾಸ ನಿಧಿ

ನಾಡು ನುಡಿ ಜನತೆಗಾಗಿ ನಿರ್ವಂಚನೆಯಿಂದ ಅವಿಶ್ರಾಂತವಾಗಿ ದುಡಿದು ತಾ 2-8-48 ರಂದು ದಿವಂಗತರಾದ ಶ್ರೀ ಬೆಳ್ಳಾವೆ ವೆಂಕಟನಾರಾಯಣಪ್ಪನವರ ಸ್ಮಾರಕವಾಗಿ ವರ್ಷವರ್ಷವೂ ಕನ್ನಡದಲ್ಲಿ ಉಪನ್ಯಾಸಗಳನ್ನು ಏರ್ಪಡಿಸಲು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಒಂದು ನಿಧಿಯನ್ನು ಕೂಡಿಸಬೇಕೆಂದು ನಿಶ್ಚಯಿಸಿದ್ದಾರೆ. ಈ ನಿಧಿಗೆ ಬಡವರು ಭಾಗ್ಯವಂತರು ಎಲ್ಲರೂ ಸಹಾಯ ಮಾಡಿ ಹಿರಿಯರ ಹೆಸರಿಗೆ ತಕ್ಕ ಮೊತ್ತ ಒಂದು ಕೂಡುವಂತೆ ಸಹಕರಿಸಬೇಕಾಗಿ ವಿನ್ನಹ. ಈ ಸಂಕಲ್ಪ ಶೀಘ್ರದಲ್ಲಿಯೇ ಕಾರ್ಯಗೂಡವಾಗಬೇಕಾಗಿರುವುದರಿಂದ ಇನ್ನು ಹದಿನೈದು ದಿನಗಳ ಒಳಗಾಗಿ ಎಲ್ಲ ಹಣವನ್ನೂ ಕೂಡಿಸಬೇಕೆಂದು ನಿಶ್ಚಯಿಸಿದೆ. ಆದ್ದರಿಂದ ಹಣಕೊಡಬಯಸುವವರು ದಯವಿಟ್ಟು ಇದೇ ಆಗಸ್ಟ್ 31ನೆಯ ತಾರೀಕಿನೊಳಗೆ ತಮ್ಮ ಸಹಾಯವನ್ನು ಪರಿಷತ್ತಿನ ಕಾರ್ಯದರ್ಶಿಯವರ ಹೆಸರಿಗೆ ಕಳಿಸಿ ಕೊಡುವ ಉಪಕಾರ ಮಾಡಬೇಕಾಗಿ ಪ್ರಾರ್ಥನೆ.

Regd No M3406

The Bank of Mangalore Limited, Mangalore.

ESTD: 1931

HEAD OFFICE Mangalore

BRANCHES Moodabidri & Padubidri

The Bank Undertakes to Collect Cheques, Demand and Documentary Bills at Most Competitive Rates.

ISSUES DRAFTS ON ALL IMPORTANT TOWNS IN THE DISTRICT

and also on

BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.

at very favourable rates

All kinds of inland banking business undertaken

ಹುಳುಕಡ್ಡಿ ಮದ್ದು

ತುಷ್ಟ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿಕ್ಕ ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬಾಯಿ, ಮದರಾಸು, ಕಲ್ಕತ್ತ, ಮಂಗಳೂರಲ್ಲಿ ಶಾ. ಕಂಪೆನಿಯಲ್ಲಿ ದೊರೆಯುವುದು.

ಜೀವವಿಮೆ ಮಾಡುವ ಪ್ರಯೋಜನವು ಇಂದು ಹಿಂದಿಗಿಂತ ಅಧಿಕವಾಗಿದೆ.

ದಿ ಬಾಂಬೆ ಲೈಫ್ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಇದರಲ್ಲಿ ಒಂದು ಪಾಲಿಸಿ ಪಡೆದು

ಈಗಲೇ ನೀವು ನಿಮ್ಮನ್ನು ಮತ್ತು ನಿಮ್ಮನ್ನು ಹೊಂದಿಕೊಂಡಿರುವವರನ್ನು ರಕ್ಷಿಸಿಕೊಳ್ಳಿರಿ!

ಪ್ರತಿನಿಧಿಗಳಿಲ್ಲದ ಸ್ಥಳಗಳಲ್ಲಿ ಏಜಂಟರ ಬೇಕಾಗಿದ್ದಾರೆ.

ಇನ್ಶೂರ್ ಮಾಡಲು ಅಥವಾ ಮಾಹಿತಿ ತಿಳಕೊಳ್ಳಲು ದಯಮಾಡಿ ಬರೆಯಿರಿ!

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

—: ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ :—

ಬೆಂಗಳೂರು ಬೊಂಬಾಯಿ ಮದ್ರಾಸು ಕಲ್ಲಿಕೋಟೆ ಮಂಗಳೂರು ಮತ್ತು ತ್ರಿವೇಂದ್ರಂ

'Bhuvanendra Products Limited'

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವ ವಿಧದ ದೋಷಗಳನ್ನು ಗುಣಪಡಿಸುವ ದಿವ್ಯ ಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ್ ವ ಏಜೆಂಟರು:—

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಷೈ, ರಥಬೀದಿ. (3) ದಿ ಕರ್ನಾಟಕ ಸ್ನಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೊ:—1. ಮರಾಠ ಗಲ್ಲಿ, ಹುಬ್ಬಳ್ಳಿ.

2. 86 ಪ್ಯಾಕ್ರೋಫ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೊಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.

ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಕು 20—8—1943 [ಸಂಚಿಕೆ 34]

ಆಗಾಖಾನ ಬಂಗ್ಲೆಯಲ್ಲಿ ಮುಖಂಡರ ಭೇಟಿ?

ಸರ್ ರಾಧಾಕೃಷ್ಣನರು ಟೀಕಿಸುತ್ತಾರೆ.

ದಕ್ಷಿಣ ಆಫ್ರಿಕದ ಬಿಳಿಯರ ಮೇಲೆ ಪ್ರತೀಕಾರ

ವೈಸರಾಯರ ಕೊನೆಯ ಭಾಷಣವನ್ನು ವಿಮರ್ಶಿಸುತ್ತಾ ಸರ್. ಎಸ್. ರಾಧಾಕೃಷ್ಣನರು ಕಾಶಿಯಲ್ಲಿ ಪ್ರಕೃತ ರಾಜಕೀಯದ ಕುರಿತು ಹೀಗೆಂದು ಹೇಳಿದರು:

'ನನ್ನ ಮನಸ್ಸಿಗೆ ಇಂದು ಕಳೆದ ಆಗಸ್ಟ್ ೯ರ ನೆನಪಾಗುತ್ತದೆ. ಆ ದಿನ ಗಾಂಧಿಜಿ ಮತ್ತು ಇತರ ದೇಶಸೇವಕರು ಸೆರೆಮನೆ ಸೇರಿದರು. ಅಂದು ಉಂಟಾದ ರಾಜಕೀಯ ಬಿಕ್ಕಟ್ಟು ಇಂದೂ ಹಾಗೆಯೇ ಉಳಿದಿದೆ. ಆರ್ಡಿನೆನ್ಸು, ವಿಶೇಷಾಧಿಕಾರಗಳು ಇಂದು ರಾಷ್ಟ್ರವನ್ನಾಳುತ್ತಿವೆ. ಅವಿಶ್ವಾಸ, ನಿರಾಶೆಗಳ ಹಾಲಾಹಲವು ರಾಷ್ಟ್ರದ ಮಿಲಿಯಾಂತರ ಮಂದಿಯ ಹೃದಯವನ್ನಾವರಿಸಿವೆ. ಬ್ರಿಟನಿನ ಒಳ್ಳೆಯ ಹೆಸರುಳಿಯಲು, ರಾಷ್ಟ್ರದಲ್ಲಿ ಶಾಂತಿ ನೆಲಸಬೇಕು. ವೈಸರಾಯರ ಅಂತ್ಯ ಭಾಷಣವು 'ತಾವು ಸೋತೆವು, ತಮ್ಮ ರಾಜಕೀಯ ದೃಷ್ಟಿ ಕುರುಡು' ಎಂದು ಒಪ್ಪಿಕೊಂಡಿದೆ. ಬ್ರಿಟಿಷರು ಹಾಕಿದ ಶರತಗಳನ್ನು ರಾಷ್ಟ್ರಮುಖಂಡರು ಒಪ್ಪಿಲ್ಲ: ಅವರು ಬೇರೆ ಶರತ ಹಾಕದಂತೆ ಸೆರೆಮನೆ ಸೇರಿಸಲಾಗಿದೆ. ಕೇವಲವಾದ ವಿವಾದ, ಕಚ್ಚಾಟ ಮಾತ್ರವಲ್ಲದೆ ಪರಿಣಾಮ ಏನೂ ಇಲ್ಲ. ಇದರಿಂದ ಏನು ಪ್ರಯೋಜನ? ಬ್ರಿಟಿಷರು ತಾವು ಘನವಂತರೆಂಬ ಹೆಮ್ಮೆ ಬಿಟ್ಟು ಇಂದಿನೀ ಬಿಕ್ಕಟ್ಟು ಬಗೆಹರಿಸಲು ಮನಸ್ಸು ಮಾಡಿದರೇನೇ ಏನಾದರೂ ಫಲಿಸೀತು, ಎಲ್ಲರೂ ಈಗ ಏಕೀಕೃತ ಭಾರತವನ್ನು ಸ್ಥಾಪಿಸುವ ಸರ್ವ ಸಮ್ಮತ ಹಾದಿ ಹಿಡಿದು ತಮ್ಮ ಹೊಣೆಯನ್ನು ನಿರ್ವಹಿಸಬೇಕು.

"ಗಾಂಧಿಜಿ ಸತ್ಯ ಅಹಿಂಸಾ ಆರಾಧಕ; ಭಾರತದ ಸ್ವಾತಂತ್ರ್ಯ ಆರಾಧಕ. ವೈಸರಾಯರಿಗೆ ಬರೆದ ಪತ್ರದಲ್ಲಿಯೂ ತಾವು ಯಾವ ರೀತಿಯ ಹಿಂಸೆಗೂ ಮನ ಮಾಡಿಲ್ಲ, ಕೈ ನೀಡಿಲ್ಲವೆಂದು ಸಾರಿದ್ದಾರೆ. ನಡೆದಿರುವ ಹಿಂಸಾ ಕಾರ್ಯವು ಗಾಂಧಿ ಮಾತಿಗೆ ವಿಪರೀತಾರ್ಥ ಕಲ್ಪಿಸಿಕೊಂಡು ಆಗಿದೆ. ಗಾಂಧಿಜಿ ಅದಕ್ಕೂ ಬೇಕಾದ ವಿಚಾರಣೆ ನಡೆಸಲು ಒಪ್ಪುತ್ತಾರೆ. ಆತ್ಮವನ್ನು ಕಳಕೊಂಡು ಸ್ವಾತಂತ್ರ್ಯ ಗಳಿಸಬೇಕೆ? ಅಂತರರಾಷ್ಟ್ರೀಯ ಪರಿಸ್ಥಿತಿ ಇಂದು ಉತ್ತಮವಾಗುತ್ತಿದೆ. ಯುದ್ಧ ಮುಗಿಯುತ್ತಿದೆ. ಬ್ರಿಟಿಷರು ಗೆಲ್ಲುತ್ತಿದ್ದಾರೆ. ಈ ಸಂತೋಷ ಎಲ್ಲರಂತೆ ಭಾರತೀಯರಿಗೂ ಇದೆ. ಹೊಸ ದೃಷ್ಟಿಯಿಂದ ಸಂಧಾನ ನಡೆಸಲು ಇದು ಸಂದರ್ಭ. ಸ್ವಾತಂತ್ರ್ಯ ಸಮರಕ್ಕೆ ಸ್ವತಂತ್ರ ವಿಧಾನಗಳನ್ನೇ ಉಪಯೋಗಿಸಬೇಕು. ಇದರ ಪ್ರಥಮ ಹಜ್ಜೆ ಗಾಂಧಿಜಿ ಬಿಡುಗಡೆ. ಈ ಸುವರ್ಣ ಸಂಧಿ ಕಳಕೊಂಡರೆ ಶಾಶ್ವತ ಒಪ್ಪಂದ ಸ್ನೇಹ ಸಹಕಾರಗಳ ಆಶಾಕಿರಣ ಮುಂದೆ ಮೂಡಲಾರದು."

ದಕ್ಷಿಣ ಆಫ್ರಿಕದ ಬಿಳಿಯರ ಮೇಲೆ ಪ್ರತೀಕಾರ!

ಕೇಂದ್ರ ಶಾಸನ ಸಭಾ ನಿರ್ಣಯ

ದಕ್ಷಿಣ ಆಫ್ರಿಕದ ಭಾರತೀಯರ ಮೇಲೆ ವರ್ಣದ್ವೇಷದ ಶಾಸನ ಮಾಡಿದ, ಅಲ್ಲಿನ ಬಿಳಿಯರ ಕುರಿತು ಭಾರತೀಯರು ಪ್ರತೀಕಾರ ಕೈಕೊಳ್ಳುವ ಶಾಸನವು ಕೇಂದ್ರ ಶಾಸನ ಸಭೆಗಳಲ್ಲಿ ಮಂಜೂರಾಗಿದೆ. ದಕ್ಷಿಣ ಆಫ್ರಿಕದ ಬಿಳಿಯರ ಮೇಲೆ ಭಾರತೀಯರಿಗೆ ಪ್ರತೀಕಾರ ಕೈಕೊಳ್ಳದೆ ಬೇರೆ ದಾರಿಯೇನೂ ಇರಲಿಲ್ಲ. ವಿದೇಶಗಳಲ್ಲಿರುವ ಸೋದರ ಭಾರತೀಯರ ಹಕ್ಕು ಬಾಧ್ಯತೆ ಗೌರವಗಳನ್ನು ಕಾಪಾಡುವುದು ಭಾರತೀಯರ ಹಾಗೂ ಭಾರತ ಸರಕಾರದ ಕರ್ತವ್ಯವೇ ಇರುವುದು. ದಕ್ಷಿಣ ಆಫ್ರಿಕದ ಬಿಳಿಯರ ಮೇಲೆ ತಕ್ಕ ಪ್ರತೀಕಾರ ಕೈಕೊಳ್ಳಲು ಕೇಂದ್ರ ಸರಕಾರವು ಭಾರತ ಸರಕಾರಕ್ಕೆ ಅಧಿಕಾರ ಕೊಟ್ಟಿದೆ. ಬಹಳ ಕಾಲದಿಂದ ಪ್ರಜಾ ಪ್ರತಿನಿಧಿಗಳು ಮತ್ತು ಸರಕಾರವು ಒಮ್ಮತದಿಂದ ಮಾಡಿದ ನಿರ್ಣಯವೆಂದರೆ ಇದೊಂದೇ! ಹೀಗಿದ್ದರೂ ವೈಸರಾಯ್ ಲಿನ್‌ಲಿತ್‌ಗೋರವರು ಬಿಳಿಯರು ಭಾರತೀಯರಿಗೆ ಮಾಡಿದ ಈ ಅನ್ಯಾಯದ ವಿಷಯ ಒಂದೇ ಒಂದು ಮಾತು ಹೇಳದಿರುವುದು ವಿಷಾದವನ್ನು ಉಂಟುಮಾಡುತ್ತದೆ.

ದಕ್ಷಿಣ ಆಫ್ರಿಕದ ಜನರ ವರ್ಣದ್ವೇಷ ಹಿಂದಿನಿಂದಲೇ ಪ್ರಸಿದ್ಧ. ಗಾಂಧಿಜಿ ಈ ಅನ್ಯಾಯವನ್ನೆದುರಿಸಿ ತನ್ನ ಸತ್ಯಾಗ್ರಹ ಸಮರ ನೀತಿಯನ್ನು ಮೊದಲು ಜಗತ್ತಿನ ಮುಂದೆ ಪ್ರಯೋಗಿಸಿ ತೋರಿಸಿದ್ದು ಇಲ್ಲಿಯೇ; ಅದಕ್ಕಾಗಿಯೇ! ಹೀಗೆ ಹಿಂದೆ ಅಲ್ಲಿ ಹೋರಾಟವಾಗಿ ೧೯೨೭ರಲ್ಲಿ ಕೇಪ್‌ಟೌನ್ ಒಪ್ಪಂದವಾಗಿತ್ತು; ಆದರೆ ಪುನಃ ಆಫ್ರಿಕದ ಬಿಳಿಯರ ಸರಕಾರ ಅದನ್ನು ಮೂಲೆಗೊತ್ತಿ ಪುನಃ ಭಾರತೀಯ ವಿರುದ್ಧ ಶಾಸನ ಮಾಡಿತು. ಜಗತ್ತಿನ ಸ್ವಾತಂತ್ರ್ಯಕ್ಕಾಗಿ ಬಿಳಿ ಜನರೊಡಗೂಡಿ ಭಾರತೀಯರೂ ಹೋರಾಡುವೀ ಸಂದರ್ಭದಲ್ಲಿ ದಕ್ಷಿಣಾಫ್ರಿಕ ಸರಕಾರವು ಈ ವರ್ಣದ್ವೇಷದ ಶಾಸನ ಮಾಡಿರಲು, ಅದಕ್ಕೆ ಪ್ರತೀಕಾರ ಮಾಡದೆ ಅನ್ಯ ಉಪಾಯವೇನಿದೆ? ಈ ಪ್ರತೀಕಾರವೆಂದರೆ ಹೀಗೆ: ಬಟ್ಟೆ, ಸಣಬು, ಮತ್ತು ಆಹಾರ ಪದಾರ್ಥಗಳನ್ನು ಆಫ್ರಿಕಕ್ಕೆ ಭಾರತದಿಂದ ಹೋಗದಂತೆ ತಡೆವುದು; ಅಲ್ಲಿಂದ ಬರುವ ತೊಗಲು ಹದಮಾಡುವುದಕ್ಕೆ ಉಪಯುಕ್ತವಾದ ತೊಗಟೆ, ಮತ್ತು ಬಣ್ಣಗಳನ್ನು ತಡೆದು ಆರ್ಥಿಕ ದಿಗ್ಬಂಧನ ಮಾಡುವುದು; ಆಫ್ರಿಕದಲ್ಲಿರುವ ಭಾರತೀಯರ ಮೇಲೆ ಹಾಕಿದಂಥಾ ನಿರ್ಬಂಧವನ್ನು ಇಲ್ಲಿರುವ ಆಫ್ರಿಕನರ ಮೇಲೆ ಹಾಕುವುದು, ಭಾರತೀಯ ಹೈಕಮಿಶನರನ್ನು ಹಿಂದಕ್ಕೆ ಕರೆಸುವುದು ಮುಂತಾದುವು. ಈ ಪ್ರತೀಕಾರೋಪಾಯಗಳನ್ನು ಸರಕಾರವು ಕೂಡಲೇ ಕೈಕೊಳ್ಳಬೇಕು; ಭಾರತವನ್ನಾಳುವ ಬಿಳಿಯರು ಇದಕ್ಕೆ ಹಿಂದೆಗೆಯಬಹುದು; ಅದನ್ನೂ ಭಾರತೀಯರು ಎದುರಿಸಬೇಕು.

ವರ್ಕಿಂಗ್ ಕಮಿಟಿ ಮೆಂಬರರು ಗಾಂಧಿಜಿ ಭೇಟಿಯಾದರೆ?

'ನೇಶನಲ್ ರಿವ್ಯೂ' ಪತ್ರಿಕೆ ಸುದ್ದಿ.

ಬೊಂಬಾಯಿಯ ನೇಶನಲ್ ರಿವ್ಯೂ ಪತ್ರಿಕೆಯು ಕೆಳಗಿನ ಸುದ್ದಿಯೊಂದನ್ನು ಪ್ರಕಟಿಸಿದೆ. 'ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರು ಆಗಾಖಾನ ಬಂಗ್ಲೆಯಲ್ಲಿ ಗಾಂಧಿಜಿ ಭೇಟಿಯಾಗಿ ಮಾತುಕತೆ ನಡೆಸಿದರು. ದೇಶದಲ್ಲಿ ಭೀಕರ ಬರಗಾಲ ಹಬ್ಬಿ, ಹಸಿವು ತಾಂಡವವಾಡುತ್ತಿರುವಾಗ, ಇದನ್ನು ನಿವಾರಿಸಲು ಸರಕಾರ ಅಶಕ್ತವಾಗಿದ್ದು, ಹೀಗೆ ಕಾಂಗ್ರೆಸ್ ಮುಂದಾಳುಗಳ ಭೇಟಿಗೆ ಅವಕಾಶ ಕಲ್ಪಿಸಿ ಕೊಡಲಾಗಿದೆಯೆಂದು ತೋರುವುದು. ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೆಂಬರರು ಗಾಂಧಿಜಿಯ ಭೇಟಿಯಾದರೆ, 'ಭಾರತದಿಂದ ತೊಲಗಿರಿ' ಎಂಬ ಚಳವಳಿ ನಿಲ್ಲುವುದೆಂದೂ ಸರಕಾರ ಆಲೋಚಿಸಿ ಈ ಭೇಟಿಗೆ ಅನುಕೂಲ ಕಲ್ಪಿಸಿಕೊಟ್ಟಿರಬೇಕು.

"ನನ್ನ ಧೋರಣೆಯೇನೆಂದು ನಾನು ವೈಸರಾಯರಿಗೆ ಬರೆದ ಪತ್ರದಲ್ಲಿ ತಿಳಿಸಿರುವೆನು. ನಾನು ನನ್ನ ಧ್ಯೇಯದ ಹಾದಿಯಿಂದ ಹಿಂಜರಿಯಲಾರೆನು. ಇಂದಿನೀ ದುರ್ಘಟನೆ ಕಾಂಗ್ರೆಸ್ ಹೊಣೆಯಲ್ಲ, ಸರಕಾರವೇ ಹೊಣೆ. ಆದ್ದರಿಂದ ನಮ್ಮ ಹಾದಿಯಿಂದ ನಾವೇಕೆ ಹಿಂಜರಿಯಬೇಕು, ಅದು ನಮ್ಮ ಕೆಲಸವಲ್ಲ. ಸರಕಾರವು ತಾನು ಕೈಕೊಂಡ ಧೋರಣವನ್ನು ಹಿಂತೆಗೆಯಬೇಕು. – ಹೀಗೆಂದು ಗಾಂಧಿಜಿ ಈ ಭೇಟಿಯಲ್ಲಿ ಕಾಂಗ್ರೆಸ್ ಮುಖಂಡರೊಡನೆ ಹೇಳಿದರೆಂದು ತಿಳಿಯುತ್ತದೆ. ಆದರೆ ನೆಹರು ಆಜಾದರು ಹೀಗೆ ಹೇಳುವುದಿಲ್ಲವಂತೆ. ಅಂತೂ, ಸರಕಾರವು, ಗಾಂಧಿಜಿಯನ್ನು ತನ್ನ ಧೋರಣದ ಕುರಿತು ತೃಪ್ತಿಗೊಳಿಸಿದರೆ ಭಾರತದ ಬಿಕ್ಕಟ್ಟು ಬಗೆ ಹರಿಯುವ ಸಂಭವವಿದೆ. ಈ ಭೇಟಿ ನಡೆಯುವ ಮುನ್ನ ಬೊಂಬಾಯಿ ಗವರ್ನರರು ಹೊಸ ಡಿಲ್ಲಿಗೆ ತೆರಳಿದ್ದರು. ಅಂತೂ, ವೇವೆಲರು ಬಂದಾಗ ಈ ಭೇಟಿಯ ಫಲಿತಾಂಶವೇನೆಂದು ಸ್ಪಷ್ಟವಾಗಬಹುದು."

ಬಂಗಾಳದಲ್ಲಿ ಬರಗಾಲ

ಭೀಕರವಾಗಿದೆ. ಅಕ್ಕಿಯ ಅಭಾವದಿಂದ ಜನರು ಕಂಗಾಲಾಗಿದ್ದಾರೆ. ಸರಕಾರವು ಸಾಕಷ್ಟು ವ್ಯವಸ್ಥೆ ಮಾಡಿಲ್ಲವೆಂದು ದೂರಿದೆ. ಮುಸ್ಲಿಂ ಲೀಗು ಮಂತ್ರಿಮಂಡಳವೂ ನಿರುಪಾಯವಿದೆ.

ಮಿತ್ರಮಂಡಳಿಯ ಅಭ್ಯಾಸಗೋಷ್ಠಿ

'ಮರದೆದುರಲ್ಲಿ' ಪುಸ್ತಕದ ಕುರಿತು ವಿಚಾರ

ಮಂಗಳೂರು ತಾ. 14

ಮಿತ್ರಮಂಡಳಿಯ ಆಶ್ರಯದಲ್ಲಿ ಪ್ರತಿ ಶನಿವಾರ ಸಂಜೆ ಸಾಹಿತ್ಯ ಅಭ್ಯಾಸ ಗೋಷ್ಠಿಯ ಕಾರ್ಯಕ್ರಮವೇರ್ಪಡಿಸಿದಂತೆ ಅದರ ಪ್ರಾರಂಭದ ಅಭ್ಯಾಸಗೋಷ್ಠಿಯು ಈ ದಿನ ಥಿಯಾಸಫಿಕಲ್ ಲಾಜಿನಲ್ಲಿ ಮಂಡಳಿಯ ಅಧ್ಯಕ್ಷರಾದ ಶ್ರೀ. ಮುಳಿಯ ತಿಮ್ಮಪ್ಪಯ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಈ ದಿನ ಅಭ್ಯಾಸಕ್ಕೆತ್ತಿದ ವಿಷಯ 'ಮರದೆದುರಲ್ಲಿ' ಎಂಬ ಮಿತ್ರಮಂಡಳಿಯಿಂದ ಇತ್ತೀಚೆಗೆ ಪ್ರಕಟವಾದ ಕವನ ಪುಸ್ತಕ. ಈ ಕವನ ಪುಸ್ತಕದ ಕವಿ 'ವಾಮನ'ರು.

ಅಭ್ಯಾಸ ಗೋಷ್ಠಿಯನ್ನು ಶ್ರೀ. ಎಸ್. ಮುಕುಂದರಾಯರು ಪ್ರಾರಂಭಿಸಿ ಮಾತನಾಡಿದರು. ಅವರು ತಮ್ಮ ಪ್ರಾರಂಭದ ಮಾತಿನಲ್ಲಿ ಅಭ್ಯಾಸಗೋಷ್ಠಿಯ ಕಾರ್ಯಕಲಾಪಗಳು, ಅವರಲ್ಲಿ ಚರ್ಚಿಸುವ ವಿಧಾನ, ವಿಷಯ ಪ್ರತಿಪಾದನಾ ರೀತಿ ಇವುಗಳ ಕುರಿತು ವಿವರಿಸಿದರು. 'ಆಧುನಿಕ ಕನ್ನಡ ಸಾಹಿತ್ಯವು ಆಂಗ್ಲ ಸಂಸ್ಕೃತಿಯ ಪ್ರಭಾವದಿಂದ ಹೊಸ ಹಾದಿಯಲ್ಲಿ ಹರಿದಿದೆ. ಇಂದಿನ ಸಾಹಿತ್ಯ ಕ್ಷೇತ್ರವನ್ನು ಅರಿತುಕೊಳ್ಳಲು ಹೊಸ ದೃಷ್ಟಿ ಬೇಕು; ಅದಕ್ಕೆ ಹೊಸ ಒರೆಗಲ್ಲು ಅಗತ್ಯ; ಅದಕ್ಕಾಗಿ ಅಭ್ಯಾಸ ಗೋಷ್ಠಿಗಳ ಏರ್ಪಾಡಾಗಬೇಕಾಗಿದೆ, ಅದರಲ್ಲಿ ಜನರಿಗೆ ಸಾಹಿತ್ಯಾಭಿರುಚಿಯುಂಟಾಗುವಂತೆಯೂ ಕವಿ ಹೃದಯ ತಿಳಿವಂತೆಯೂ ಮಾಡಬೇಕೆಂದರು.

ಆ ಮೇಲೆ ಶ್ರೀ. ಕಯ್ಯಾರ ಕಿಂಞಣ್ಣ ರೈಗಳು 'ಮರದೆದುರಲ್ಲಿ' ಪುಸ್ತಕದ ಕುರಿತು ಅಭ್ಯಾಸವಿತ್ತರು. 'ಇದು ಪ್ರಕೃತಿ ಕವನ' ಪುಸ್ತಕವೆಂದು ತೋರಿದರೂ ಇದರಲ್ಲಿ ಭಾವಗೀತಗಳ ಮಿಶ್ರಣವಿದೆ. ಅದನ್ನು ಒಂದು ವೈಶಿಷ್ಟ್ಯವೆಂದೂ ಎನ್ನಬಹುದು; ಕೊರತೆಯಾಗಿಯೂ ಹೇಳಬಹುದು. ಮೊದಲಿನ ಕವಿತೆಯಲ್ಲಿಯೇ ಪ್ರಕೃತಿ ನಿರೀಕ್ಷಣಕ್ಕಿಂತ ಭಾವ ತತ್ವಗಳ ಪ್ರತಿಪಾದನೆ ಹೆಚ್ಚಾಗಿ ಅಂತರ್ಗತವಿದೆಯೆಂದು ಹೇಳುತ್ತಾ, ಕವಿತೆಗಳಲ್ಲಿ ಶೃಂಗಾರ, ವೀರ, ಕರುಣ ರಸಗಳು ಕಡಿಮೆಯಿದ್ದು, ಹೆಚ್ಚು ಶಾಂತರಸವೇ ತೋರುತ್ತದೆಂದೂ, ಹೇಳಿ, ಇಲ್ಲಿನ ಕೆಲವು ಕವಿತೆಗಳನ್ನು ಅವುಗಳ ಭಾವನೆ ಸ್ವಾರಸ್ಯಗಳನ್ನು ತಿಳಿಸಿ, 'ನಿವೇದನ' 'ಪುಳಿನದಲಿ' 'ಈ ದಾರಿ' ಈ ಕೆಲವು ಕವನಗಳು ಉತ್ತಮವಾಗಿವೆಯೆಂದು ವಿಮರ್ಶಿಸಿದರು.

ಅನಂತರ ಶ್ರೀ. ಬಿ. ಎಂ. ಇದಿನಬ್ಬನವರು ಈ ಕವನ ಸಂಗ್ರಹದಲ್ಲಿ ತಾನು ಮೆಚ್ಚಿದ 'ಕವಿತೆ' 'ಪನ್ನಾದಾಸಿ' ಕೆಲವು ಕವನಗಳ ವಿಷಯ ಹೇಳಿ, ಅವುಗಳನ್ನು ಚಂದವಾಗಿ ಓದಿ, ಹೆಚ್ಚಾಗಿ ಇಲ್ಲಿನ ಕವಿತೆಗಳು ಗೂಢವಾಗಿಯೂ ಕ್ಲಿಷ್ಟವಾಗಿಯೂ ಇವೆಯೆಂದು ವಿಮರ್ಶಿಸಿದರು.

ಆ ಮೇಲೆ ಶ್ರೀ. ಅಡಿಗ ಸೂರ್ಯನಾರಾಯಣರಾಯರು ಈ ಪುಸ್ತಕವನ್ನು ವಿಮರ್ಶಿಸುತ್ತಾ, 'ಮರದೆದುರಲ್ಲಿ' ಎಂಬ ಕವನದಲ್ಲಿ ಬಂದಿರುವ ಒಂದು ಸೊಗಸಾದ ಚಿತ್ರವನ್ನೆತ್ತಿ ಹೇಳಿ, ತಾನು ಮೆಚ್ಚಿರುವ 'ಕವಿತೆ' ಮೊದಲಾದ ಕೆಲವು ಕವಿತೆಗಳ ವಿಷಯ ಹೇಳುತ್ತಾ, ಇಲ್ಲಿನ ಕೆಲವು ಕವನಗಳನ್ನು ಪ್ರಕಟಿಸದಿದ್ದರೂ ಆಗುತ್ತಿತ್ತೆಂದರು.

ಶ್ರೀ. ಎಸ್. ಮುಕುಂದರಾಯರು ಆ ಮೇಲೆ ಪುನಃ ಮಾತನಾಡಿ ಪ್ರಕೃತಿ ಕವಿತೆಗಳಲ್ಲಿ ಒಂದು ಚಿತ್ರ ಓದುಗರ ಕಣ್ಣ ಮುಂದೆ ನಿಲ್ಲ ಬೇಡವೆ? ಮರವೆಂದರೆ ಯಾವ ಮರ, ಹೂವೆಂದರೆ ಯಾವ ಹೂವೆಂದು ಕವಿ ಹೇಳಬೇಡವೆ? ಅದಿಲ್ಲದಿದ್ದರೆ ಅದು ಪ್ರಕೃತಿ ಕವಿತೆಯಾಗುತ್ತದೆಯೋ ಎಂದು ಒಂದು ಪ್ರಶ್ನೆ ಹಾಕಿದರು. ಅಧ್ಯಕ್ಷರು ತಮ್ಮ ಮಾತಿನಲ್ಲಿ ಶ್ರೀ. ಮುಕುಂದರಾಯರ ಪ್ರಶ್ನೆಗೆ ಉತ್ತರವೀಯುತ್ತಾ, ಕವಿತೆಗಳಲ್ಲಿ ವಿಶೇಷ-ಸಾಮಾನ್ಯವೆಂಬ ಎರಡು ರೀತಿಯಲ್ಲಿ ಹೇಳುವ ಕ್ರಮವಿದೆಯೆಂದು ಹೇಳಿ ಬರೇ ಹೂವೆನ್ನುವುದೂ, ಹೆಸರಿಸಿ ಬಣ್ಣಿಸುವುದು ಎರಡೂ ಕಾವ್ಯರೀತಿಯೆಂದೂ ವಿವರಿಸಿ, ಕಾವ್ಯಗಳಲ್ಲಿ ಧ್ವನಿ ಕಾವ್ಯವೇ ಉತ್ತಮವೆಂದೂ ಕನ್ನಡ ಸಾಹಿತ್ಯದ ಇಂದಿನ ಬೆಳವಣಿಗೆಗೆ ಇಂಥಾ ಗೋಷ್ಠಿಗಳು ಅವಶ್ಯವೆಂದೂ, ಈ ಅಭ್ಯಾಸಗೋಷ್ಠಿ ಇಂದಿನಂತೆ ಯಶಸ್ವಿಯಾಗಲೆಂದು ಹಾರೈಸಿದರು.

ಕೊನೆಗೆ ಶ್ರೀ. ವಾಮನ ಭಟ್ಟರು ಕೃತಜ್ಞತೆ ತಿಳಿಸಿದರು. ಮುಂದಿನ ಶನಿವಾರದ ಅಭ್ಯಾಸಗೋಷ್ಠಿಯ ವಿಷಯ 'ಕನ್ನಡದ ಸಣ್ಣ ಕತೆಗಳು' ಎಂದು. ಅಭ್ಯಾಸ ಪ್ರಾರಂಭಿಸುವವರು ಶ್ರೀ. ಮುಳಿಯ ತಿಮ್ಮಪ್ಪಯ್ಯರು.

THE CANARA BANKING CORPORATION Ltd

(Incorporated in British India with limited liability).

Estd:] Head office: UDIPI [1906.

(Branches & Agencies in all principal cities of India)

Authorised capital	Rs. 25,00,000.-
Issued & Subscribed	Rs. 16,00,000.
Paid up Capital	Rs. 10,06,000.
Reserves	Rs. 3,85,000.

Advances are made against approved securities and bills purchased or collected at most favourable rates.
For further particulars please apply to the nearest Branch.

ವಿದ್ಯಾರ್ಥಿಗಳಲ್ಲಿ ಒಂದು ವಿನಂತಿ

ವಿದ್ಯಾರ್ಥಿ ಸಂಘವು ವಿದ್ಯಾರ್ಥಿಗಳದೇ ಆಗಿರಲಿ!

ರಾಜಕೀಯ ಪ್ರಚಾರಕರ ಸುಲಿಗೆ ನಡೆಯದಿರಲಿ!

ಮಂಗಳೂರು ವಿದ್ಯಾರ್ಥಿ ಸಂಘವು ಈಗ ಒಡೆದು ಇಬ್ಭಾಗವಾಗಿದೆ; ಮಂಗಳೂರು ವಿದ್ಯಾರ್ಥಿ ಸಂಘ ಎಂಬ ಹೆಸರಲ್ಲಿ ಎರಡು ಆಫೀಸುಗಳು ಇವೆ; ಎರಡು ಪಕ್ಷದವರು ಬೇರೆ ಬೇರೆ ಪುಸ್ತಕ ಮಾಡಿಕೊಂಡು ವಿದ್ಯಾರ್ಥಿ ಸಂಘಕ್ಕೆ ಬೇರೆ ಬೇರೆ ಸದಸ್ಯರನ್ನು ಸೇರಿಸುತ್ತಿದ್ದಾರೆ. ರಾಯಿಸ್ಟರೊಂದು ಕಡೆಯಲ್ಲಿ, ಕಮುನಿಸ್ಟರೊಂದು ಕಡೆಯಲ್ಲಿ ವಿದ್ಯಾರ್ಥಿಗಳನ್ನು ಎಡಬಲಗಳಿಂದ ಸುಲಿಯುತ್ತಿದ್ದಾರೆಂದು ತಿಳಿದುಬಂದಿದೆ. ವಿದ್ಯಾರ್ಥಿಗಳನ್ನು ಸಂಘಟಿತರಾಗಿ ಮಾಡುವ ಬದಲು ರಾಯಿಸ್ಟ್ ಕಮುನಿಸ್ಟರು ವಿದ್ಯಾರ್ಥಿ ಸಂಘವನ್ನು ತಮ್ಮ ರಾಜಕೀಯ ಪ್ರಚಾರ ಕ್ಷೇತ್ರವಾಗಿ ಮಾರ್ಪಡಿಸುವ ಹಠಸಾಧನೆಗೆ ಬಿದ್ದು, ಒಡಕು ಹೋರಾಟಗಳ ರಂಗಸ್ಥಳವಾಗಿ ಮಾಡಿದ್ದಾರೆ. ವಿದ್ಯಾರ್ಥಿಗಳ ಹಿತ ಸಾಧಿಸುವ ಬದಲು, ಇದರಿಂದ ವಿದ್ಯಾರ್ಥಿಗಳಿಗೆ ಅನ್ಯಾಯವಾಗಿದೆ. ಮಂಗಳೂರ ವಿದ್ಯಾರ್ಥಿಗಳು ಈಗಲಾದರೂ ಎಚ್ಚರಗೊಳ್ಳಬೇಕು; ತಮ್ಮ ಸಂಘದಿಂದ ರಾಯಿಸ್ಟರನ್ನೂ ಕಮುನಿಸ್ಟರನ್ನೂ ಅಂತೆಯೇ ಇತರ ಯಾವುದೇ ರಾಜಕೀಯ ಪಕ್ಷದವರನ್ನೂ ನಿರ್ದಯವಾಗಿ ಹೊರಹಾಕಬೇಕು; ವಿದ್ಯಾರ್ಥಿ ಸಂಘವು ಕೇವಲ ವಿದ್ಯಾರ್ಥಿಗಳದೇ ಆಗಿರಬೇಕು, ವಿದ್ಯಾರ್ಥಿಗಳ ಸಂಘವನ್ನು ರಾಜಕೀಯ ಪ್ರಚಾರಕರ ಕೈಗೆ ಬಿಟ್ಟುಬಿಡುವುದೆಂದರೆ, ವಿದ್ಯಾರ್ಥಿಗಳಲ್ಲಿ ನಿಜವಾದ ಮುಂದಾಳುತನವಿಲ್ಲವೆಂದು ಒಪ್ಪಿಕೊಂಡಹಾಗೆ!

ಮಂಗಳೂರ ವಿದ್ಯಾರ್ಥಿಗಳೆ! ೧೯೩೭, ೩೮, ೩೯ ಈ ಕಾಲದ ನಿಮ್ಮ ವಿದ್ಯಾರ್ಥಿ ಸಂಘದ ಚಟುವಟಿಕೆಗಳನ್ನೊಮ್ಮೆ ನೆನಪಿಗೆ ತಂದುಕೊಳ್ಳಿ! ವಿದ್ಯಾರ್ಥಿ ಸಂಘವು ಆಗ ಎಷ್ಟು ಜನಪ್ರಿಯವಾಗಿತ್ತು! ಅದೇಕಾಯಿತು ಎಂದು ತುಸು ವಿಚಾರಿಸಿಕೊಳ್ಳಿ! ವಿದ್ಯಾರ್ಥಿಗಳಲ್ಲಿ ಆಗಲೂ ಕೂಡಾ ವೈಯುಕ್ತಿಕವಾಗಿ ಬೇರೆ ಬೇರೆ ರಾಜಕೀಯ ತತ್ವದವರು ಇದ್ದರು; ಸೋಶಿಯಲಿಸ್ಟರಿದ್ದರು, ಗಾಂಧಿವಾದಿಗಳಿದ್ದರು, ಮುಸ್ಲಿಂ ಲೀಗಿನವರಿದ್ದರು; ಹಿಂದು ಮಹಾಸಭೆಯವರೂ ಇಲ್ಲದಿರಲಿಲ್ಲ. ಆದರೆ ವಿದ್ಯಾರ್ಥಿ ಸಂಘದ ಮೇಲೆ ಯಾರೂ ತಮ್ಮ ರಾಜಕೀಯ ತತ್ವವನ್ನು ಹೊರಿಸುತ್ತಿರಲಿಲ್ಲ. ಸಂಘದ ಚಟುವಟಿಕೆಗಳಲ್ಲಿ ಎಲ್ಲರೂ ಕೇವಲ ವಿದ್ಯಾರ್ಥಿಗಳು ಮಾತ್ರ ಆಗಿದ್ದರಲ್ಲದೆ ಬೇರೇನೂ ಆಗಿರಲಿಲ್ಲ; ರಾಜಕೀಯ ತತ್ವ ಪ್ರಚಾರಕ ತಳತಂತ್ರ ವಿದ್ಯಾರ್ಥಿಸಂಘದಲ್ಲಿ ನಡೆಯುತ್ತಿರಲಿಲ್ಲ. ಆದ್ದರಿಂದಲೇ ಅಂದು ಅಂಥಾ ಸಂಘಟನೆ ಸಾಧ್ಯವಾಯಿತು; ಅಷ್ಟು ಜನಪ್ರಿಯವಾಯಿತು; ಅಷ್ಟೊಂದು ರಚನಾತ್ಮಕ ಕಾರ್ಯಗಳೂ ವಿದ್ಯಾರ್ಥಿ ಸಂಘದಲ್ಲಿ ಅಂದು ನೆರವೇರಿತು.

ಇಂದಿಗಾದರೂ ಅದು ಸಾಧ್ಯವಿದೆ. ತಮ್ಮ ತಮ್ಮ ರಾಜಕೀಯ ತತ್ವಗಳನ್ನು ವಿದ್ಯಾರ್ಥಿ ಸಂಘದಲ್ಲಿ ಹೇರಿ ವಿದ್ಯಾರ್ಥಿ ಹಿತವನ್ನು ಸುಲಿದುಕೊಳ್ಳಲು ಬಯಸುವ ರಾಯಿಸ್ಟರನ್ನು ಹಾಗೂ ಕಮುನಿಸ್ಟರನ್ನು ಅಂತೆ ಇತರ ಯಾವುದೇ ರಾಜಕೀಯ ತಂತ್ರಸಾಧಕರನ್ನು ನಮ್ಮ ವಿದ್ಯಾರ್ಥಿ ಸಂಘದಿಂದ ಹೊರಹಾಕಿದರೆ ಅದು ಇಂದಿಗೂ ಸಾಧ್ಯವಿದೆ! ನಮ್ಮದು ಕೇವಲ ವಿದ್ಯಾರ್ಥಿ ಸಂಘ ಮಾತ್ರವಿರಬೇಕು; ವೈಯುಕ್ತಿಕವಾಗಿ ನಾವು ಯಾವುದೇ ರಾಜಕೀಯ ತತ್ವವರ್ತಿಗಳಾಗಿರಲಿ ವಿದ್ಯಾರ್ಥಿ ಸಂಘದಲ್ಲಿ ವಿದ್ಯಾರ್ಥಿ ಸಂಘದ ಹೆಸರಲ್ಲಿ ನಾವದನ್ನು ದುರುಪಯೋಗಿಸಿಕೊಳ್ಳಕೂಡದು. ಅದರಿಂದ ನಮ್ಮ ಹಿತವಾಗುವ ಬದಲು ಅಹಿತವಾಗುವುದು! ಸಂಘಟನೆಯ ಬದಲು ವಿಘಟನೆಯಾಗುವುದು. ಸಂದರ್ಭವನ್ನುಪಯೋಗಿಸಿಕೊಂಡು ತಮ್ಮ ತಂತ್ರ, ನೀತಿಯನ್ನು ನಡೆಸುವ ಅರಾಷ್ಟ್ರೀಯ ಶಕ್ತಿಗಳಿಗೆ, ಅಪ್ರಾಗತಿಕ ಶಕ್ತಿಗಳಿಗೆ ನಾವು ಎಂದೆಂದೂ ಎಡೆಗೊಡಬಾರದು. ವಿದ್ಯಾರ್ಥಿಗಳು ಈಗ ಒಕ್ಕೊರಲಿನಿಂದ ಒಂದಾಗಿ, ಕಮುನಿಸ್ಟರನ್ನು, ರಾಯಿಸ್ಟರನ್ನು ಅಂತೆಯೇ ಯಾವುದೇ ಇತರ ರಾಜಕೀಯ ತತ್ವ ಪ್ರಚಾರಕರನ್ನು ನಮ್ಮ ಸಂಘದಿಂದ ಹೊರಹೋಗುವಂತೆ ಹೇಳುವ ಕಾಲವಿಂದು ಬಂದಿದೆ. ಇಂದು ನಿರ್ದಾಕ್ಷಿಣ್ಯವಾಗಿ ಅವನ್ನು ಹೊರಹಾಕಬೇಕಾಗಿದೆ. ಏಕೆಂದರೆ ಅದರಿಂದಲೇ ವಿದ್ಯಾರ್ಥಿಗಳ ಏಳಿಗೆಯಾಗಲು ಸಾಧ್ಯವಿದೆ. ವಿದ್ಯಾರ್ಥಿ ಸಂಘವನ್ನು ರಾಜಕೀಯ ತತ್ವ ಪ್ರಚಾರಕರ ಕೈಗೆ ಬಿಟ್ಟುಬಿಡುವುದೆಂದರೆ ನಮ್ಮಲ್ಲಿ ನಿಜವಾದ ಮುಂದಾಳುತನವಿಲ್ಲವೆಂದು ಒಪ್ಪಿಕೊಂಡ ಹಾಗೆ; ನಮ್ಮಲ್ಲಿ ದೌರ್ಬಲ್ಯವುಂಟೆಂದು ಒಪ್ಪಿಕೊಂಡ ಹಾಗೆ! ಆ ಮೂಲಕ ವಿದ್ಯಾರ್ಥಿ ಸಂಘವನ್ನು ಮುರಿದು ಹಾಕಿದ ಹಾಗೆ! ಇದಕ್ಕೆ ವಿದ್ಯಾರ್ಥಿಗಳು ನಾವಿಂದು ಸಿದ್ಧರಿದ್ದೇವೆಯೆ? "ವಿದ್ಯಾರ್ಥಿ"

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. C. 182/43

ವಾದಿ ಶ್ರೀ ಹಿರಿಯಡ್ಕ ವೀರಭದ್ರ ದೇವರ ಭಂಡಾರದ ಕಡೆಯಿಂದ ಆಡಳ್ತೆ ಮೊಕ್ತೇಸರ ಮೂರಬೆಟ್ಟು ತಿಮ್ಮಪ್ಪ ಹೆಗ್ಡೆ ಪ್ರತಿವಾದಿರು. 1. ರಾಮದಾಸ್ ಶೇಟ್ ಪುರುಷೋತ್ತಮ ಮಾವಜಿ ಶೇಟರ ಮಗ, 2. ಜವೇರಿ ಬಾಯಿ ಸದ್ರಿ ಪುರುಷೋತ್ತಮ ಮಾವಜಿ ಶೇಟರ ವಿಧವೆ, ಮಂಗಳೂರು ಟೌನ್ ಬಲ್ಮಠ ಕ್ರಾಸ್ ರೋಡಿನಲ್ಲಿರುವವರು.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ವಾದಿ, ಶ್ರೀ ವೀರಭದ್ರ ದೇವರ ಭಂಡಾರಕ್ಕೆ ನಿಮ್ಮಿಂದ ಬರತಕ್ಕ ಕಳೆದ ಧಾತು ಸಂವತ್ಸರದ ಲಾಗ್ವಾತಿನ ಮೂಲಗೇಣಿ ಬಾಕಿ ಬಗ್ಗೆ ಮೇಲಿನ ದಾವೆಯನ್ನು ನಿಮ್ಮ ಮೇಲೆ ಮಾಡಿದ್ದಾಗಿರುತ್ತದೆ. ಅಧುದರಿಂದ ನೀವು ಸ್ವತಹವಾಗಲೀ ವ ವಕೀಲರ ಮುಖಾಂತ್ರವಾಗಲೀ ತಾ. 30-8-43ಕ್ಕೆ ಸದ್ರಿ ಕೋರ್ಟಿನ ಮುಂದೆ ಹಗಲು 11 ಗಂಟೆಗೆ ಹಾಜರಾಗಿ ಜ್ವಾಬು ಮಾಡಿಕೊಳ್ಳತಕ್ಕದ್ದು. ಇಲ್ಲದಿದ್ದರೆ ನಿಮ್ಮ ಗೈರ ಹಾಜರಿಯಲ್ಲಿ ನಂಬ್ರ ಫೈಸಲ್ ಮಾಡಲಾದೀತು.

ಕೋರ್ಟ ಹುಕುಂ ಪ್ರಕಾರ

Coondapoor 13-8-43 | Y. Tejappa Shetty. Advocate for Plff.

ಸಮರಭೂಮಿಯ ಸಂಚಾರ

ಸಿಸಿಲಿ ಧಾಳಿ ಮುಗ್ಗಿಯಿತು! ಜರ್ಮನರ ಸುರಕ್ಷಿತ ಹಾಗೂ ಬಲವತ್ತಾದ ಕೊನೆಯ ಕೇಂದ್ರವಾದ ಮೆಸ್ಸಿನಾ ಹಾಗೂ ಸಿಸಿಲೀ ದ್ವೀಪವೇ ಮಿತ್ರರ ವಶವಾಯಿತು.

ಮೂವತ್ತೆಂಟು ದಿನಗಳ ವರೆಗೆ ಸಿಸಿಲಿಯಲ್ಲಿ ಹೋರಾಡಿ ಜರ್ಮನರು ಅದನ್ನೀಗ ಖಾಲಿಮಾಡಿ ಹೋಗಿದ್ದಾರೆ. ಅಮೇರಿಕನ್ ಸೈನವು ಇಲ್ಲಿ ಬಹಳ ಸಾಹಸದ ಕದನ ಕೊಟ್ಟಿದೆ. ಜಲಯುದ್ಧ, ನೆಲಯುದ್ಧ, ವಿಮಾನಯುದ್ಧ ಈ ತ್ರಿರಂಗಗಳಲ್ಲಿಯೂ ಯುದ್ಧ ನಡೆದು ಕೊನೆಗೆ ಮಿತ್ರರಿಗೆ ಜಯುವೇ ದೊರಕಿತು. ಬ್ರಿಟಿಷರ ಅಷ್ಟಮ ದಳ ಹಾಗೂ ಅಮೇರಿಕನರ ಸಪ್ತಮ ದಳ ಇವೆರಡು ಸಾಹಸಮಯ ಹೋರಾಟ ಹೂಡಿ ಮೆಸ್ಸಿನಾವನ್ನು ನುಗ್ಗಿದವು. ಮೆಸ್ಸಿನಾ ನುಗ್ಗಿದ ಕೂಡಲೇ ಶತ್ರು ಪ್ರತಿಭಟನೆ ಕಡಿಮೆಯಾಗುತ್ತಾ ಬಂತು; ಸಿಸಿಲಿ ಮಿತ್ರರ ಕೈವಶವೂ ಆಯಿತು. ಆದರೆ ಇಟಲಿಯಲ್ಲಿ ಮಾತ್ರ ವಿಮಾನ ನಿರೋಧಕ ಫಿರಂಗಿಗಳ ಘನ ಗರ್ಜನೆ ಒಂದೇ ರೀತಿಯಲ್ಲಿ ಗುಡುಗುತ್ತಿರುವುದು ಕೇಳುತ್ತಿದೆ. ಸಿಸಿಲಿ ಕೈಬಿಟ್ಟ ಮೇಲೆ ಮಿತ್ರರು ಇಟಲಿಗೆ ಖಂಡಿತ ಇಳಿವರೆಂಬ ಬೆದರಿಕೆ ಇಟಲಿಯನರಿಗೆ ಬಲವಾಗಿ ಇರಲೇಬೇಕು.

ಕ್ವಿಬೆಕ್ ಪರಿಷತ್ತು

ಮಿತ್ರಪಕ್ಷದ ಇಬ್ಬರು ಮಹಾನಾಯಕರು, ರೂಸ್‌ವೆಲ್ಟ್, ಚರ್ಚಿಲರು ಇದೀಗ ಆರನೆಯ ಸಲ ಕ್ವಿಬೆಕ್‌ನಲ್ಲಿ ಸಂಧಿಸಿ ಮಾತುಕತೆ ನಡೆಸುತ್ತಾರೆ ಈ ಮಾತುಕತೆಗೆ ಬಹಳ ರಾಜಕೀಯ ಮಹತ್ವ ಕೊಡಲಾಗಿದೆ. ಮಿತ್ರರಿಗೆ ಈಗ ಎಲ್ಲೆಡೆಗಳಲ್ಲಿಯೂ ವಿಜಯವೇ ದೊರಕುತ್ತಾ ಇರುವುದರಿಂದ, ಈ ವಿಜಯವನ್ನು ಮುಂದುವರಿಸಿ ಶತ್ರುವನ್ನು ಬೇಗನೇ ಸಂಪೂರ್ಣ ನಿರ್ನಾಮ ಮಾಡುವ ತೀವ್ರ ಕಾರ್ಯಕ್ರಮ ಕೈಕೊಳ್ಳಲು ಮಿತ್ರ ನಾಯಕರು ಕ್ವಿಬೆಕಿನಲ್ಲಿ ಸಂಧಿಸಿದ್ದಾರೆಂದು ಹೇಳುವುದು ತಪ್ಪಾಗದು. ಈ ಪರಿಷತ್ತಿನಲ್ಲಿ ಭಾರತದ ವಿಚಾರವೂ ಬರಲಿದೆಯೆಂದೂ, ಬರ್ಮವನ್ನು ಪುನರಾಕ್ರಮಿಸಬೇಕಾದರೆ ಭಾರತದಲ್ಲಿ ಪ್ರಬಲ ಸೇನಾ ವ್ಯೂಹ ರಚಿಸಬೇಕಾಗಿರುವುದರಿಂದ ಅದಕ್ಕಾಗಿ ಭಾರತದ ಬಿಕ್ಕಟ್ಟು ಬಗೆಹರಿಸುವುದು ಅವಶ್ಯವಿರುವುದೆಂದೂ ಒಂದು ಗಾಳಿಯ ಸುದ್ದಿಯಿದೆ. ಆದರೆ ಈ ಸುದ್ದಿ ಎಷ್ಟರ ಮಟ್ಟಿಗೆ ಸತ್ಯವೋ ನಂಬಲಾಗುವುದಿಲ್ಲ. ಏಕೆಂದರೆ ಮಿತ್ರ ನಾಯಕರು ಭಾರತದ ವಿಚಾರ ಮಾತ್ರ ಮಾಡುವುದೂ ಹಾಗೂ ಅದಕ್ಕೆ ಅಷ್ಟು ಪ್ರಾಧಾನ್ಯತೆ ಕೊಡುವುದೂ ಇದುವರೆಗಿನ ಅವರ ಸ್ವಭಾವ ನೋಡಿದರೆ ಕೇವಲ ಅಸಂಭವವೆಂದು ತೋರುತ್ತದೆ.

ಆ ವಿಚಾರ ಹೇಗಿದ್ದರೂ ಯೂರೋಪಿನ ಯುದ್ಧ ಕಾರ್ಯಕ್ರಮ ಅಲ್ಲಿ ನಿರ್ಧಾರವಾಗಬಹುದೆನ್ನುವುದು ನಿಶ್ಚಯವೇ. ಇದುವರೆಗೆ ಅವರ ಮಾತುಕತೆಯ ವಿವರವೇನೂ ಹೊರಬಿದ್ದಿಲ್ಲವೇನೋ ನಿಜ. ಆದರೆ ಕೆಲವು ವದಂತಿಗಳು ಕೇಳುತ್ತವೆ. ಪಶ್ಚಿಮ ಯೂರೋಪಿನ ಯೋಜನೆಯನ್ನು ಕಾರ್ಯರೂಪಕ್ಕೆ ತರುವ ಮೊದಲು, ಈಗ ನಡೆದಿರುವಂತೆ ಜರ್ಮನಿಯ ಮೇಲೆ ಬಾಂಬು ಸುರಿಸುವುದು, ಇಟಲಿಯನ್ನು ಸೋಲಿಸುವುದು ಇವೆರಡು ಯೋಜನೆಗಳನ್ನು ಭರದಿಂದ ಮುಂದುವರಿಸಬೇಕೆಂದು ಬ್ರಿಟನ್ ಅಮೇರಿಕ ಕೆನಡಾಗಳ ಅಭಿಪ್ರಾಯವಿರುವುದಂತೆ. ಆದರೆ ಎಲ್ಲಾ ಯೋಜನೆಗಳನ್ನೂ ಈಗ ಭರದಿಂದ ಒಮ್ಮೆಲೇ ಸಾಗಿಸಲು ಅನುಕೂಲವಿದೆಯೆಂದೂ ತಿಳಿದುಬಂದಿದೆ. ಈ ಪರಿಷತ್ತಿನಲ್ಲಿ ರೂಸ್‌ವೆಲ್ಟ್ ಚರ್ಚಿಲರು ಮಾತ್ರವಲ್ಲ ಮಿತ್ರಪಕ್ಷದ ಅನೇಕ ಮಂದಿ ಮುಂದಾಳುಗಳು ಸಮರ ತಜ್ಞರೆಲ್ಲರೂ ಸೇರಿದ್ದಾರೆ. ಚರ್ಚಿಸಲ್ಪಟ್ಟ ವಿಷಯುಗಳೆಲ್ಲಾ ಅತ್ಯಂತ ಗುಪ್ತವಾಗಿದ್ದರೂ ಯೂರೋಪ್ ಧಾಳಿ ಪ್ರಾರಂಭಿಸಬೇಕೆಂದು ಸರ್ವರೂ ಒಪ್ಪಿರುವಂತೆ ತಿಳಿಯಲಾಗಿದೆ, ದ್ವಿತೀಯ ರಂಗದ ವಿಚಾರವಾಗಿಯೂ ದೀರ್ಘ ಚರ್ಚೆಯಾಗಿದೆಯೆಂದು ತಿಳಿದಿದೆ

ಮಿತ್ರ ಪಕ್ಷದ ನಾಯಕರೆಲ್ಲಾ ಒಟ್ಟು ಸೇರಿ ಯೂರೋಪಿನ ಸಮರ ನೀತಿಯನ್ನು ಚರ್ಚಿಸುತ್ತಿರುವಾಗ, ಸ್ಟಾಲಿನರೇಕೆ ಬರಲಿಲ್ಲವೆಂಬ ಪ್ರಶ್ನೆ ಎದ್ದು ನಿಲ್ಲುತ್ತದೆ. ಹಿಟ್ಲರನೊಡನೆ ಪ್ರಬಲ ಹೋರಾಟಕೊಡುವುದು ಇಂದು ಅವಶ್ಯವಾಗಿರುವಾಗ ಈ ಪರಿಷತ್ತಿಗೆ ಸ್ಟಾಲಿನರು ಬರದಿರುವುದು ಅತ್ಯಂತ ಮಹತ್ವದ ಸಂಗತಿಯೆಂದು ತಿಳಿಕೊಳ್ಳಲು ಎಡೆಯಿದೆ. ಮಿತ್ರಪಕ್ಷದೀ ನಾಯಕರಲ್ಲಿ ಸ್ಟಾಲಿನರಿಗೆ ಮಹತ್ವದ ಭಿನ್ನಾಭಿಪ್ರಾಯವಿದೆಯೆಂದೂ ಹೇಳಲಾಗುತ್ತದೆ. ಆದರೆ ಚರ್ಚಿಲ್ ರೂಸ್‌ವೆಲ್ಟರು ಮಾತುಕತೆ ನಡೆಸಿ, ಸ್ಟಾಲಿನರ ಅಪೇಕ್ಷೆಯಾದ ದ್ವಿತೀಯರಂಗ ತೆರೆದರೆ ಸಾಕಷ್ಟೆ? ಸ್ಟಾಲಿನರಿಗಾದರೂ ಅದೇ ಬೇಕಾಗಿದೆ. ಆದ್ದರಿಂದ ದ್ವಿತೀಯ-ರಂಗ ತೆರೆಯುವ ವಿಚಾರ ಚರ್ಚಿಲ್ ರೂಸ್‌ವೆಲ್ಟರೂ ಈ ಪರಿಷತ್ತಿನಲ್ಲಿ ಚರ್ಚಿಸುವುದಿದ್ದರೆ ಸ್ಟಾಲಿನರು ಇದಕ್ಕೆ ಬರಬೇಕಾದ ಅವಶ್ಯವೇನೂ ಇಲ್ಲ. ರಶ್ಯಾದಲ್ಲಿ ಜೀವನ ಮರಣದ ಸಂಗ್ರಾಮ ನಡೆಯುತ್ತಿರುವಾಗ ರಣರಂಗವನ್ನು ಬಿಟ್ಟು ಸ್ಟಾಲಿನರಿಗೆ ಬರುವುದೂ ಒಂದು ಪಕ್ಷ ಆಗದೆ ಇದ್ದರೂ ಇರಬಹುದು ಈ ಪರಿಷತ್ತಿನ ಮಾತುಕತೆಯ ವಿವರಗಳನ್ನು ಸ್ಟಾಲಿನರಿಗೆ ತಿಳಿಸುವ ಏರ್ಪಾಡು ಮಾಡಲಾಗಿದೆಯೆಂದು ಸುದ್ದಿ ಪ್ರಕಟವಾಗಿದೆ.

ರಶ್ಯ ರಣರಂಗದಲ್ಲಿ

ರಶ್ಯದ ಮಧ್ಯ ಮತ್ತು ದಕ್ಷಿಣ ರಣರಂಗಗಳಲ್ಲಿರುವ ನಾಝಿ ಸೈನ್ಯಗಳಿಗೆ ಕೇಂದ್ರದಂತಿರುವ ಬ್ರಿಯಾನಸ್ಕ್ ನಗರಕ್ಕಾಗಿ ಘೋರ ಹೋರಾಟ ನಡೆಯುತ್ತಿದೆ. ಕರಚೇವದ ಪತನಕ್ಕೆ ಕಾರಣವಾದ ಯುದ್ಧ ತಂತ್ರವನ್ನು ರಶ್ಯನರು ಇಲ್ಲಿಯೂ ಉಪಯೋಗಿಸುತ್ತಿರುವರು. ಖಾರ್ಖಾವ್ ಕಾಳಗವು ಕೊನೆಯನ್ನು ಮುಟ್ಟುತ್ತಿದೆ. ರಶ್ಯನ್ ಸೇನೆಗಳು ಉತ್ತರದಲ್ಲಿರುವ ಉಪನಗರವನ್ನು ಮುಟ್ಟಿದ್ದು ಮುಖ್ಯ ನಗರವು ಇಲ್ಲಿಂದ ಒಂದೇ ಮೈಲು ಅಂತರದಲ್ಲಿರುವುದು. ಉತ್ತರ ಡೊನೆಜವನ್ನ ದಾಟಿ ಚುಗುಯೇವ ನಗರವನ್ನು ವಶಪಡಿಸಿಕೊಂಡ ಬೇರೆ ರಶ್ಯನ್ ಸೇನೆಗಳು ಖಾರ್ಖಾವಿನಿಂದ ಕೇವಲ ನಾಲ್ಕು ಮೈಲು ಅಂತರದಲ್ಲಿವೆ. ಝುಜದ್ರಾ ಎಂಬ ನಗರವನ್ನು ರಶ್ಯನರು ವಶಪಡಿಸಿಕೊಂಡರು. ಝುಕೋವ ರೈಲ್ವೆ ಸ್ಟೇಶನನ್ನು ರಶ್ಯನ್ ಸೇನೆ ಮುತ್ತಿದೆ. ಮಧ್ಯ ಡಾನೆಜ್ ವ್ಯೂಹದಲ್ಲಿರುವ ವೈಜಾಮ ಪ್ರದೇಶದಲ್ಲಿ ರಶ್ಯನರು ಹೊಸ ಧಾಳಿಯನ್ನು ಆರಂಭಿಸಿದ್ದಾರೆಂದೂ, ಶತ್ರುವಿನ ಪ್ರಬಲ ಪ್ರತಿಭಟನೆಯನ್ನು ಎದುರಿಸಿ ರಶ್ಯನರ ತೀವ್ರ ಧಾಳಿಯು ವೈಜಾಮಿನ ದಕ್ಷಿಣ ಮತ್ತು ನೈಋತ್ಯದಲ್ಲಿ ನಡೆದು ಬೈಲಿಯ ನೈಋತ್ಯಕ್ಕೆ ಲಾಡೋಗ ಸರೋವರ ಪ್ರದೇಶದಲ್ಲಿ ಸಾಗಿದೆಯೆಂದೂ ತಿಳಿದಿದೆ. ರಶ್ಯನ್ ಮುಂದಲವು ಈಗಾಗಲೇ ಬ್ರಿಯಾನ್‌ಸ್ಕದ ೧೫ ಮೈಲು ದೂರದಲ್ಲಿದೆ. ಇಲ್ಲಿಯೇ ಜರ್ಮನರ ದಕ್ಷಿಣ ಮತ್ತು ಮಧ್ಯ ವ್ಯೂಹಗಳು ಕೂಡುವವು ರಶ್ಯನರ ದಕ್ಷಿಣ ಸೈನ್ಯವು ಬ್ರಿಯಾನ್‌ಸ್ಕ್ ಸ್ಮೊಲೆನ್‌ಸ್ಕದ ಮಧ್ಯದಲ್ಲಿ ರೋಸಲಾವ ಉಹೆದ್ದಾರಿ ಜಂಕ್ಷನ್ ಕಡೆಗೆ ರಸ್ತೆಯ ಇಕ್ಕಡೆಗಳಿಂದಲೂ ಧಾವಿಸುತ್ತಿದೆ ಈ ಸ್ಥಳಗಳಲ್ಲಿ ಜರ್ಮನರು ವಿಶೇಷ ಸಾಹಸದಿಂದ ಪ್ರತಿಭಟಿಸುತ್ತಿರುವರು ಖಾರಖಾವ್ ಯುದ್ಧದಲ್ಲಿ ಹಿಟ್ಲರನು ತನ್ನ ಉತ್ತಮ ಸೇನೆಯನ್ನು ಉಪಯೋಗಿಸುತ್ತಾನೆ.

ರೋಮ್ ಅರಕ್ಷಿತ ನಗರ

ಇಟೆಲಿಯನ್ ಸರಕಾರ ರೋಮ್ ನಗರವನ್ನು ಅರಕ್ಷಿತ ನಗರವೆಂದು ಸಾರಿದೆ ಅರಕ್ಷಿತ ನಗರವೆಂದು ಸಾರಿದ ಮೇಲೆ ಅಲ್ಲಿ ಸೈನಿಕರನ್ನಿಡಲಾಗುವುದಿಲ್ಲ ಸೈನಿಕರನ್ನಿಡುವುದಿಲ್ಲವೆಂಥಮೇಲೆ ಅಲ್ಲಿಗೆ ಬಾಂಬು ಹಾಕುವ ಅವಶ್ಯವೂ ಇಲ್ಲ. ಹಾಗಾಗಿ ನಗರವನ್ನು ಧ್ವಂಸ ಕಾರ್ಯದಿಂದ ಉಳಿಸಲು ಹೀಗೆ ಅರಕ್ಷಿತ ನಗರವಾಗಿ ಸಾರುವುದು ಕ್ರಮವಾಗಿದೆ. ರೋಮ್ ನಗರವು ಪ್ರಪಂಚದ ಧಾರ್ಮಿಕ ಕಾರ್ಯಗಳ ಮಹಾಕ್ಷೇತ್ರವಾಗಿರುವುದರಿಂದ ಅದನ್ನು ನಾಶವಾಗದಂತೆ ಕಾಪಾಡುವುದು ಅವಶ್ಯ. ಹೀಗೆ ಮಾಡಿದ ಕಾರಣ ಕೆಥೋಲಿಕ್ ಜಗತ್ತಿಗೆ ಅತ್ಯಾನಂದವಾಗಿರುವುದು. ಇಟಲಿಯ ಮೇಲೆ ಮಿತ್ರರು ಕೈಕೊಳ್ಳಬೇಕೆಂದಿದ್ದ ಆಕ್ರಮಣ ಧೋರಣೆಗೆ ಈ ಪ್ರಕಟಣೆಯು ಬಹಳ ಪ್ರತಿಬಂಧಕವಿದೆ. ಏಕೆಂದರೆ ಅರಕ್ಷಿತ ಪಟ್ಟಣವೆಂದು, ಈ ಮಹಾ ಧಾರ್ಮಿಕ ಕ್ಷೇತ್ರವನ್ನು ಸಾರಿರುವಾಗ ಅದರ ಮೇಲೆ ಮತ್ತು ಬಾಂಬು ಹಾಕುವುದು ಸರಿಯಾಗುವುದಿಲ್ಲ ಹಾಗಾಗಿ ಮಿತ್ರನಾಯಕರ ಕ್ವಿಬೆಕ್ ಪರಿಷತ್ತಿನಲ್ಲಿ ಈ ವಿಚಾರವಾಗಿಯೂ ಚರ್ಚೆಯಾಗಬಹುದು.

ನೋಟಗಳು......

ಭಾರತದ ಕೇಂದ್ರ ಶಾಸನ ಸಭೆಯು 'ಗುಪ್ತ ಅಧಿವೇಶನ' ಒಂದನ್ನು ಕರೆದು ಪ್ರಸಿದ್ಧಿಗೆ ಬಂತು!

ಹೊಸ ಯುದ್ಧವೇನಾದರೂ ನಮ್ಮ ಮೇಲೆ ಸಾರಲ್ಪಟ್ಟಿದ್ದಾಗಲಿ, ಜಪಾನರೆದುರು ಹೊಸದಾಳಿಯೇನಾದರೂ ಆಲೋಚಿಸುವುದಾಗಲಿ ಅಥವಾ ಹೊಸ ಒಪ್ಪಂದವೇನಾದರೂ ಮಾಡುವುದಾಗಲಿ ಕೇಂದ್ರ ಶಾಸನ ಸಭೆಯ ಈ ಗುಪ್ತ ಅಧಿವೇಶನಕ್ಕೆ ಕಾರಣವಾಗಿರಲಿಲ್ಲ.

ಏಕೆಂದರೆ ಇಂಥಾ ವಿಷಯಗಳಲ್ಲಿ ನಮ್ಮ ಕೇಂದ್ರ ಶಾಸನ ಸಭೆಗೆ ಆಲೋಚಿಸಲು ಅಧಿಕಾರವೇ ಇಲ್ಲ!

ಹೇಗಿದ್ದರೂ ನಮ್ಮ ಕೇಂದ್ರ ಶಾಸನ ಸಭೆಯು—ಇತ್ತೀಚೆಗೆ ಬಹುಕಾಲದಿಂದ ಇದರ ಹೆಸರನ್ನೇ ನಾವು ಕೇಳದಿದ್ದರೂ—ಒಂದು ಗುಪ್ತ ಅಧಿವೇಶನವನ್ನು ಕರೆದು ಪ್ರಸಿದ್ಧಿಗೆ ಬಂತು!

ಬ್ರಿಟಿಷ್ ಪಾರ್ಲಿಮೆಂಟ್ ಆಗಾಗ 'ಗುಪ್ತ ಅಧಿವೇಶನ' ಕರೆಯುವುದುಂಟು,

ಭಾರತೀಯರಾದರೂ ಪಾರ್ಲಿಮೆಂಟ್ ಪದ್ಧತಿ ಕಲಿಯಬೇಡವೆ?

ಕಲಾಪ್ರಪಂಚಕ್ಕೆ ಒಂದು ಮಹಾನಷ್ಟ

ಶ್ರೀ ಗುರುಶಂಕರನ್ ನಂಬೂದಿರಿಪಾದರ ನಿಧನ

ಉದಯಶಂಕರ ಕಲ್ಚರ್ ಸೆಂಟರಿನ ಕಥಕ್ಕಳಿಯ ಗುರುಗಳೂ, ಉದಯಶಂಕರ ಕಥಕ್ಕಳಿ ನೃತ್ಯ ಗುರುಗಳೂ ಆದ ಶ್ರೀ ಗುರುಶಂಕರನ್ ನಂಬೂದಿರಿಪಾದರು ಇದೇ ತಾ ೭-೮-೪೩ರಂದು ಆಲ್ಮೋರಾದಲ್ಲಿಯ ಕಲಾ ಶಾಲೆಯಲ್ಲಿ ಕಥಕ್ಕಳಿ ನೃತ್ಯ ಕೊಡುತ್ತಿದ್ದಂತೆ ಅಕಸ್ಮಾತ್ ಹೃದಯ ವಿಕಾರದಿಂದ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ ಕಥಕ್ಕಳಿಯಲ್ಲಿ ಇವರು ಅಪೂರ್ವ ನೃತ್ಯಗಾರರು ಕಲಾಪ್ರಪಂಚಕ್ಕೆ ಇವರ ನಿಧನದಿಂದ ತುಂಬಲಾರದ ನಷ್ಟವುಂಟಾಗಿದೆ

NOTICE BY SUBSTITUTED SERVICE

In the Court of the District Munsiff of Mangalore

S C No 69/1935.
S. E A No 18*/194*.

Bantwal Sri Tirumala Venkatramana Temple . *Petitioner*

Vs

Bhagirathi alias Mahalaxmiamma & others *Respondents.*

To

Respts.—4. B Achutha Prabhu son of B Ganapathi Prabhu, residing at Falnir, Mangalore Town. 6. B Narasimha Bhandary, son of B Krishna Bhandary, residing near Guthemasthan, Kodialbail, Mangalore Town

Whereas the petitioner (decree-holder) has made application to the said court for execution of decree in S C No. 69/1935, this is to give you notice that you are to appear before the said court at 10-30 a. m. on the 27th day of August 1943, to show cause why execution should not be granted.

Mangalore, 17-8-1943. } B. Vaikunta Baliga, Vakil for Petitioner.

ಸ್ವದೇಶಾಭಿಮಾನಿ

ತಾರೀಕು 20—8—1943

ರಾಜಾಜಿ ಬುದ್ಧಿವಾದ

ರಾಜಾಜಿ ಜಿನ್ನರಿಗೆ ಪುನಃ ಈಗ ಬುದ್ಧಿವಾದ ಹೇಳುತ್ತಾರೆ. ಜಿನ್ನರಿಗೆ ಬಹುಶಃ ರಾಜಾಜಿಯವರದು ಇದು 'ಸಾವಿರದೊಂದನೆಯ ಸಲದ ಬುದ್ಧಿವಾದವಿರಬೇಕು. ಎಷ್ಟು ಸಲ ಹೇಳಿದರೂ, ಯಾರು ಏನೆಂದರೂ, ಜಿನ್ನರು ಸರಿದಾರಿಗೆ ಬರುವುದು ಕಾಣುವುದೇ ಇಲ್ಲ. 'ಬೋರ್ಗಲ್ಲ ಮೇಲೆ ಮಳೆಗರೆದಂತೆ' ಇದುವರೆಗೆ ಎಲ್ಲರ ಬುದ್ಧಿವಾದವೂ ಆಗಿದೆ. ಹೀಗಿದ್ದರೂ ರಾಜಾಜಿ ಈಗೊಮ್ಮೆ ಜಿನ್ನರಿಗೆ ಬುದ್ಧಿವಾದ ಹೇಳುತ್ತಾರೆ ಜಿನ್ನರು ಗಾಂಧಿಯನ್ನು ಭೇಟಿಯಾಗಬೇಕೆಂದು ಸೂಚಿಸುತ್ತಾರೆ.

ಗಾಂಧಿಜಿ ಹಿಂದೆ ಜಿನ್ನರನ್ನು ಭೇಟಿಯಾಗಬೇಕೆಂದು ಬಯಸಿ, ಜಿನ್ನರಿಗೆ ಪತ್ರಬರೆದದ್ದು, ಆ ಪತ್ರವನ್ನು ಸರಕಾರ ತಡೆದದ್ದು ಮಾತ್ರವಲ್ಲ ಗಾಂಧೀ ಜಿನ್ನರ ಭೇಟಿ ಕಲ್ಪಿಸಿ ಕೊಡದಿರುವುದು, ಈ ಮೂಲಕ ಜಿನ್ನರು ಹೇಳಿದ 'ಯಾರುತಾನೇ ಈ ಭೂಮಿಯಲ್ಲಿ ಗಾಂಧಿಜಿ ನನಗೆ ಪತ್ರ ಬರೆದರೆ ಅದನ್ನು ತಡೆಯಬಲ್ಲರು?' ಎಂಬೀ ಮಾತಿನ ಒಣ ಹೆದರಿಕೆಯನ್ನು ಬಯಲಿಗೆಳೆದದ್ದು ಈಗಾಗಲೇ ಜಗಜ್ಜಾಹಿರವಾಗಿದೆ. ಈ ಸಂದರ್ಭದಲ್ಲಿ ಜಿನ್ನರು ಕೊಟ್ಟ ಹೇಳಿಕೆ, 'ಗಾಂಧಿಜಿ ಪಾಕಿಸ್ತಾನಕ್ಕೆ ಒಪ್ಪಿ ಪತ್ರಬರೆಯಲಿ, ಆದರೆ ಅದನ್ನು ಯಾರುತಡೆವರು'(ಗಾಂಧಿಜಿ ಬರೆದ ಪತ್ರವೇನೆಂದು ಜಿನ್ನರಿಗೂ ಗೊತ್ತಿಲ್ಲ) ಎಂದು ಪುನಃ ಉದ್ಧರಿಸಿದ ಮಾತುಗಳು ತನ್ನ ಮನ ನೋಯಿಸಿದೆಯೆಂದೂ ಇದರಿಂದಾಗಿ ಇಷ್ಟುಕಾಲ ತಾನು ಮೌನ ತಾಳಿದೆನೆಂದೂ ರಾಜಾಜಿ ತಿಳಿಸುತ್ತಾರೆ. ಜಿನ್ನರೀ ಒಣ ಮಾತುಗಳಿಂದ ರಾಜಾಜಿಯೆಂದೇನು, ವಿಚಾರವಂತರಾದವರೆಲ್ಲರೂ ಮನನೊಂದುಕೊಂಡಿದ್ದಾರೆ.

'ಗಾಂಧಿಜಿ ಜಿನ್ನರನ್ನು ಭೇಟಿಯಾಗಬೇಕೆಂದು ಬಯಸಿದ್ದನ್ನು ವೈಸರಾಯರು ತಿರಸ್ಕರಿಸಿದರು ಏಕೆಂದರೆ ವೈಸರಾಯರಿಗೆ ಅದೇ ಬೇಕಾಗಿತ್ತು. ಯಾರು ಹೇಳಬಲ್ಲರು, ಬಹುಶಃ ಜಿನ್ನರು ಮತ್ತು ಗಾಂಧಿಜಿ ಭೇಟಿಯಾಗಿದ್ದರೆ ಕಾಂಗ್ರೆಸ್ ಲೀಗ್ ಒಪ್ಪಂದ ಆದರೂ ಆಗಬಹುದಿತ್ತು' ಉಪವಾಸಕಾಲದಲ್ಲಿ ಗಾಂಧಿಜಿಯ ಭೇಟಿಯಾದ ನನಗೆ ಅವರ ಧೋರಣ ಬದಲಾಗಿದೆಯೆಂದು ಅಭಿಪ್ರಾಯವಾಗಿದೆ. ವೈಸರಾಯರಿಗೂ ಇದು ತಿಳಿದಿದೆ. ಅದಾಗಿಯೇ ಅವರು ಈ ಭೇಟಿಗೆ ಅನುಕೂಲಮಾಡಿಕೊಡಲಿಲ್ಲ. ಆದರೆ ಜಿನ್ನರು ಬ್ರಿಟಿಷ್ ಸರಕಾರದ ಕೈಗೊಂಬೆಯಾಗಿ ಕುಣಿದದ್ದು ನೋಡಿ ನನಗೆ ನಿಜವಾಗಿಯೂ ಮನನೊಂದಿದೆ ಏಕೆಂದರೆ ಅವರು ಗಾಂದಿಜಿ ಭೇಟಿಗೆ ಆಗಃಒತ್ತಾಯಮಾಡಿದ್ದರೆ ಭಾರತದ ಭವಿಷ್ಯವೇ ಬದಲಾಗಬಹುದಿತ್ತು' ಹೀಗೆಂದು ರಾಜಾಜಿ ಅಂದಿನ ಕಥೆಯನ್ನು ಸ್ಮರಿಸುತ್ತಾರೆ.

[illegible] ದರೂ ಇನ್ನು ಮುಂದಾದರೂ [illegible] ಮನಮಾಡಿದರೆ ಕೂಡಲೇ ಕಾಂಗ್ರೆಸ್ ಲೀಗ್ ಒಪ್ಪಂದವಾಗಿ ದೇಶದ [illegible] ಗಲಿದೆಯೆಂದು ರಾಜಾಜಿ ಭಾವಿಸುತ್ತಾರೆ. ಹಾಗಾಗಿ, ಜಿನ್ನರು ಈಗ ಗಾಂಧಿಜಿ ಭೇಟಿ ಬಯಸಿ ವೈಸರಾಯರಿಗೆ ಪತ್ರಬರೆಯಬೇಕೆಂದು ರಾಜಾಜಿ ಸೂಚಿಸುತ್ತಾರೆ. 'ಜಿನ್ನರೀ ವಿನಂತಿಯನ್ನು ವೈಸರಾಯರೇನೋ ತಿರಸ್ಕರಿಸಬಹುದು. ('ತಿರಸ್ಕರಿಸಲು ಶಕ್ತರಲ್ಲ' ಎಂದು ರಾಜಾಜಿ ಹೇಳುವುದಿಲ್ಲ) ಏಕೆಂದರೆ ಸರಕಾರ ಮಾಡುವ ತಪ್ಪಿಗೆ ಮಿತಿಯೇ ಇಲ್ಲ; ಆದರೆ ಜಿನ್ನರ ಈ ವಿನಂತಿಯನ್ನು ತಿರಸ್ಕರಿಸುವುದು ಬ್ರಿಟಿಷ್ ಸರಕಾರಕ್ಕೆ ತುಂಬಾ ಕಷ್ಟವಾದೀತು. ಜಿನ್ನರು ಯಾರೊಡನೆ ಒಪ್ಪಂದಕ್ಕೆ ಬರಬೇಕೆಂದು ನಿರ್ಣಯಿಸುವುದು ಬ್ರಿಟಿಷ್ ಸರಕಾರವಲ್ಲ, ಗಾಂಧಿಜಿ ಸೆರೆಮನೆಯಲ್ಲಿದ್ದಾರೆ, 'ಅವರನ್ನು ಭೇಟಿಯಾಗಲು ಹೊರಗಿನವರಿಗೆ ಸಮ್ಮತಿಕೊಡಲಾರೆವು,' ಎನ್ನುವುದು, ಜಿನ್ನರು ಗಾಂಧಿಜಿಯನ್ನು ಭೇಟಿಯಾಗಬೇಕೆಂದು ಬಯಸಿದ ವಿನಂತಿಗೆ ಸರಿಯಾದ ಉತ್ತರ ಆಗಲಾರದು. ಹೇಗಿದ್ದರೂ ಜಿನ್ನರು ಗಾಂಧಿಜಿಯನ್ನು ಭೇಟಿಯಾಗಬೇಕೆನ್ನುವ ವಿನಂತಿಯೊಂದನ್ನು ಈಗ ಮಾಡಬೇಕು' ಹೀಗೆಂದು ರಾಜಾಜಿ ಅಭಿಪ್ರಾಯ ಪಟ್ಟಿದ್ದಾರೆ.

ಈ ಸಂದರ್ಭದಲ್ಲಿ 'ರಾಜಾಜಿ ಬ್ರಿಟಿಷರಿಗೂ ಬುದ್ಧಿವಾದ ಹೇಳಿದ್ದಾರೆ. ರಾಷ್ಟ್ರೀಯ ಭಾರತವು ಅಕ್ಷ ಪಕ್ಷಪಾತಿಯೆಂಬ ಬ್ರಿಟಿಷರ ಅಭಿಪ್ರಾಯವನ್ನು ಕಿತ್ತೊಗೆಯಬೇಕು. ಬ್ರಿಟಿಷರು ತಮ್ಮ ಧೋರಣೆ ಬದಲಿಸಿ ಭಾರತ ಹಾಗೂ ಬರ್ಮಾ ಅಭಿಪ್ರಾಯಗಳಿಗೆ ಏಕರೂಪತೆಯಿತ್ತು ಒಂದುಗೂಡಿಸಿದರೆ ಸ್ವಲ್ಪ ಕಾಲದಲ್ಲಿಯೇ ಎಲ್ಲರಿಗೂ ತೃಪ್ತಿಕರವಾದ ರೀತಿಯಲ್ಲಿ ಪೂರ್ವದಿಕ್ಕಿನಲ್ಲಿ ವಿಜಯ ಪಡೆಯಬಹುದೆಂದು ಅವರು ತಿಳಿಸಿರುವರು. 'ವೈಸರಾಯರು ಹೊಸಬರು ಬರಲಿರುವುದರಿಂದ ಹೊಸ ಧೋರಣೆ ವಹಿಸಲು ಅವಕಾಶವಿದೆ. ಬಹುಕಾಲದ ತನಕ ರಾಷ್ಟ್ರ ಪ್ರೇಮಿಗಳಾಗಿದ್ದ ಜಿನ್ನರೂ ಗಾಂಧಿಜಿ ಭೇಟಿಯಾಗಿ ಭಾರತದ ರಾಜಕೀಯ ಬಿಕ್ಕಟ್ಟನ್ನು ಬಗೆಹರಿಸುವ ಉಪಾಯವನ್ನು ಯೋಚಿಸಲಿ' ಎಂದು ರಾಜಾಜಿ ಹಾರೈಸಿದ್ದಾರೆ. ರಾಜಾಜಿಯ ಹಾರೈಕೆ ಸಫಲವಾಗಲಿ ಎಂದು ನಾವೂ ಬಯಸುತ್ತೇವೆ.

ಮಂಗಳೂರಲ್ಲಿ ಕೊಲೆರಾ ಹಾವಳಿ!

26 ಜನರಲ್ಲಿ 14 ಮರಣಗಳು

ಮಂಗಳೂರಲ್ಲಿ ೨೬ ಜನರು ಕೊಲೆರಾ ಪೀಡಿತರಾಗಿ, ಅವರಲ್ಲಿ ೧೪ ಮಂದಿ ಮೃತಿಹೊಂದಿದರು. ಇದು ತಾ. ೧೯ರ ವರೆಗಿನ ಸುದ್ದಿ. ರೋಗವು ಬೊಕ್ಕಪಟ್ಣ, ಜೆಪ್ಪು ಕೊಡಿಯಾಲ ಬೈಲು, ಇಲೆಕ್ಟ್ರಿಕ್ ಪವರ್ ಹೌಸ್ ಈ ಭಾಗಗಳಲ್ಲಿ ಹರಡಿದೆ. ನಗರದಲ್ಲಿ ಈ ರೋಗ ನಿವಾರಕ 'ಇಂಜೆಕ್ಶನ್' ಕೊಡುತ್ತಿದ್ದಾರೆ.

ಸ್ವದೇಶ ಸಮಾಚಾರ

ಲಂಡನಿನಲ್ಲಿ ಅಗೆಸ್ಟ್ ೯

ಲಂಡನಿನಲ್ಲಿ ಅಗಸ್ಟ್ ೯ರ ದಿನಾಚರಣೆ ಮಾಡಿ ಹಲವು ಕಡೆಗಳಲ್ಲಿ ಸಭೆಗಳಾದವು. ಎಲ್ಲಾ ಸಭೆಗಳಲ್ಲಿಯೂ ವೈಸರಾಯರ ಏಕ ತಂತ್ರಾಧಿಕಾರದ ಆಡಳಿತವು ಖಂಡಿಸಲ್ಪಟ್ಟಿತು. ಭಾರತೀಯರಿಗೆ ಸ್ವಾತಂತ್ರ್ಯ ದೊರೆಕಬೇಕೆಂದು ಸಾರಲ್ಪಟ್ಟಿತು. ಡಾ। ಗಂಗೊಳ್ಳಿಯವರು ಮಾತನಾಡುತ್ತಾ 'ಭಾರತಕ್ಕೆ ಸ್ವಾತಂತ್ರ್ಯ ದೊರಕದ ವಿನಾ, ಪ್ರಜಾಪ್ರಭುತ್ವ ರಾಷ್ಟ್ರಗಳು ಜಗತ್ತಿನಲ್ಲಿ ಎಂದೂ ಶಾಂತಿ ಸ್ಥಾಪಿಸಲಾರವು' ಎಂದು ಸಾರಿದರು

ಅಮೆರಿಕದಲ್ಲಿ ಅಗೆಸ್ಟ್ ೯

ರಾಷ್ಟ್ರದ ಮುಂದಾಳುಗಳ ಬಂಧನದ ದಿನಾಚರಣೆ ಅಮೆರಿಕದಲ್ಲಿ ಇಂಡಿಯಾ ಲೀಗಿನ ಆಶ್ರಯದಲ್ಲಿ ಜರಗಿಸಲ್ಪಟ್ಟಿತು. ಶ್ರೀ. ಜೆ. ಜೆ. ಸಿಂಗರು ಆ ದಿನ ಮಾತನಾಡುತ್ತಾ, ಬ್ರಿಟಿಷ್ ಸರಕಾರವು ಭಾರತೀಯರೊಡನೆ ಪುನಃ ಒಪ್ಪಂದ ನಡೆಸಬೇಕೆಂದೂ, ರಾಷ್ಟ್ರೀಯ ಸರಕಾರವು ಭಾರತದಲ್ಲಿ ಸ್ಥಾಪಿತವಾಗಬೇಕೆಂದೂ, ಯುದ್ಧಾನಂತರ ಭಾರತೀಯರಿಗೆ ಸ್ವಾತಂತ್ರ್ಯ ಖಂಡಿತವಾಗಿ ಕೊಡಬೇಕೆಂದೂ ಹೇಳಿದರು. ನೆಹರುಗಳನ್ನು ಪ್ರಶಂಸಿಸುತ್ತಾ ಅಮೆರಿಕ ಕಾಂಗ್ರೆಸ್ ಸದಸ್ಯ ಕ್ಲೇರ್ ಭೂತರು, 'ನೆಹರುಗಳೊಡನೆ ಹೋಲಿಸಲು ನಮ್ಮ ಕೆಲ ಮುಂದಾಳುಗಳೂ ಯೋಗ್ಯರಲ್ಲ, ಅವರಿಗೆ ಪಶ್ಚಿಮದ ಪ್ರಜಾ ಪ್ರಭುತ್ವದಲ್ಲಿ ಬಹು ಆದರವಿದೆ'ಯೆಂದರು.

ಪುನಃ ಲುಯಿಫಿಶರರು

ಭಾರತದ ಸಮಸ್ಯಾ ಪರಿಹಾರಕ್ಕೆ ಕೆಲವು ಸಲಹೆಗಳನ್ನು ಕೊಡುತ್ತಾ, ಲುಯಿಫಿಶರರು ಹೀಗೆಂದು ಹೇಳುತ್ತಾರೆ 'ಅಸಹಕಾರ ಆಂದೋಲನ ನಿಲ್ಲಿಸುವ ಭರವಸೆಯಿತ್ತರೆ ಭಾರತದ ಮುಖಂಡರನ್ನು ಗಾಂಧಿಜಿ ಮತ್ತು ನೆಹರುಗಳನ್ನು ಬಿಡುಗಡೆಮಾಡಬೇಕು, ಬ್ರಿಟನು ಭಾರತದಲ್ಲಿ ರಾಷ್ಟ್ರೀಯ ಸರಕಾರ ಸ್ಥಾಪಿಸಬೇಕು ಆ ಸರಕಾರವು ಮಿತ್ರರೊಡನೆ ಸಹಕರಿಸುವುದು. ಜಪಾನ್ ಪತನವಾದ ಒಂದು ವರ್ಷದೊಳಗೆ ಮಿತ್ರಬಲವು ಭಾರತವನ್ನು ಬಿಡಬೇಕು. ಭಾರತಕ್ಕೆ ಪೂರ್ಣ ಸ್ವಾತಂತ್ರ್ಯ ದೊರೆಯಬೇಕು. ಇದು ನನ್ನ ಅಭಿಪ್ರಾಯ. ವೇವಲರು ಭಾರತಕ್ಕೆ ವೈಸರಾಯರಾಗಿ ಹೋಗವರಿದ್ದಾರೆ; ಆಗಲಾದರೂ ಭಾರತದ ಬಿಕ್ಕಟ್ಟು ಬಗೆಹರಿಯಲಿ. ಇಂದು ಭಾರತೀಯರು ಕೇಳುವುದು, ರಾಷ್ಟ್ರೀಯ ಸರಕಾರ ಸ್ಥಾಪಿಸಿರೆಂದು. ಅದಾದರೆ ಮಿತ್ರರೊಡನೆ ಅವರು ಸಹಕರಿಸಲು ಸಿದ್ಧರು. ನೆಹರು ಅಥವಾ ಯಾವುದೇ ಮುಖಂಡರಾಗಲಿ, ಯುದ್ಧಕಾಲದಲ್ಲಿ ಬ್ರಿಟಿಷರು ಭಾರತದಿಂದ ಹೊರಡಬೇಕೆಂದು ಅನ್ನುವುದಿಲ್ಲ. ಇಂದು ಬಿಳಿಯನು ಏಶ್ಯದಲ್ಲಿ, ಹಾಗೂ ಪೂರ್ವದಲ್ಲಿ ಅಲ್ಲಿನ ಜನರ ಮಿತ್ರನಾಗಿರಬಹುದು, ಆದರೆ ಒಡೆಯನಾಗಿರಲು ಅವರು ಒಪ್ಪಲಾರರು.'

ಕವಿ ಇಕ್ಬಲರಿಗಿದು ಅಪಮಾನ

ತುಮಕೂರು ಕಾಲೇಜಿನ ಮುಸ್ಲಿಂ ವಿದ್ಯಾರ್ಥಿಗಳು ಮಹಾ ಕವಿ ಇಕ್ಬಲರ 'ಹಿಂದುಸ್ಥಾನ್ ಹಮಾರಾ' ಗೀತವನ್ನು ವಿರೂಪಗೊಳಿಸಿ ಹಾಡಿದರು! ರಾಷ್ಟ್ರಾಭಿಮಾನದ ಉತ್ಸಾಹದಲ್ಲಿ 'ನಮ್ಮದು ನಮ್ಮದೀ ಹಿಂದುಸ್ಥಾನ್' ಎಂದು ಅನಂದದಿಂದ ಸ್ಫೂರ್ತಿ ಸಂದೇಶ ಸಾರಿದ ಆ ಮಹಾಕವಿಗೆ ಇದು ಅಪಮಾನ! ಅವರ ಆತ್ಮವು ಈ ವಿರೂಪತೆಯ ಸುದ್ದಿ ತಿಳಿದರೆ ಎಷ್ಟು ನೊಂದುಕೊಳ್ಳಲಾರದು? ಶಾಲಾ ಕಾಲೇಜುಗಳಲ್ಲಿ ಇತ್ತೀಚೆಗೆ ಹರಡುತ್ತಿರುವ ಈ ವಿಷಬೀಜವನ್ನು ಸರಕಾರ ಮತ್ತು ಸಾರ್ವಜನಿಕರು ಪರಿಹರಿಸಬೇಕು. ನಿಮ್ಮ ನಿಮ್ಮ ಹಾಡನ್ನು ನೀವು 'ಬೇರೆ ಬೇರೆ ಹಾಡಿ ಎಂದು ಹೇಳಿ ಯುವಕರಲ್ಲಿ ವಿಷಬೀಜ ಬೆಳೆಯ ಬಿಡುವುದಕ್ಕಿಂತ ಇಂಥಾ ಪ್ರಾರ್ಥನೆಯೇ ಇಲ್ಲದಂತೆ ಮಾಡಿದರೆ ತೊಂದರೆಯೇನು?

ಭಾರತ ವಿಚಾರ ಚರ್ಚಿಲ್ ರೂಸ್‌ವೆಲ್ಟರು

ಚರ್ಚಿಲ್ ರೂಸವೆಲ್ಟರ ಭೇಟಿಯಲ್ಲಿ, ಭಾರತದ ವಿಚಾರ ಬರಲಿದೆ ಯೆಂದೂ ಏಕೆಂದರೆ ಬರ್ಮಾ ಆಕ್ರಮಣ ವಿಚಾರದಲ್ಲಿ ಭಾರತೀಯ ಸೇನೆಗಳು ಮುಖ್ಯ ಭಾಗವಹಿಸಬೇಕಾಗಿದೆಯೆಂದೂ, ಇದಕ್ಕೆ ಭಾರತದ ಬಿಕ್ಕಟ್ಟು ಬಗೆಹರಿಸುವುದು ಅವಶ್ಯವಿರುವುದೆಂದೂ ನ್ಯೂಯಾರ್ಕಿನ ಸುದ್ದಿಯೊಂದು ಬಂದಿದೆ ಈ ಸುದ್ದಿಯನ್ನೆತ್ತಿ ರಾಜಾಜಿಯವರು ಒಂದು ಹೇಳಿಕೆಯಿತ್ತು, ಇದು ಶುಭವಾರ್ತೆಯೆನ್ನುತ್ತಾ ಭಾರತದಲ್ಲಿ ರಾಷ್ಟ್ರೀಯ ಸರಕಾರ ಸ್ಥಾಪಿತವಾದರೆ ಭಾರತದ ಬಿಕ್ಕಟ್ಟು ಬಿಡಿಸಲು ವಿಳಂಬವಿಲ್ಲವೆಂದು ತಿಳಿಸಿ ಮಿತ್ರ ಮುಖಂಡರು ಈ ಕುರಿತು ಆಸಕ್ತಿ ವಹಿಸಬೇಕೆಂದು ತಿಳಿಸಿದ್ದಾರೆ.

ಮಂಗಳೂರು ಎರಡು ವಿದ್ಯಾರ್ಥಿ ಸಂಘಗಳು

ಕಳೆದ ವರ್ಷ ವಿದ್ಯಾರ್ಥಿ ಸಂಘದಲ್ಲಿ ಒಡಕುಂಟಾದ ಮೇಲೆ ಎರಡು ವಿದ್ಯಾರ್ಥಿ ಸಂಘಗಳಾಗಿವೆ. ಶ್ರೀ ಬಿ ಎಲ್. ಎನ್. ರೈಗಳು ಅಧ್ಯಕ್ಷರಾಗಿ ಶ್ರೀ. ಸುಬ್ಬಯ ಶೆಟ್ಟಿರು ಕಾರ್ಯದರ್ಶಿಗಳಾಗಿ ಏರ್ಪಟ್ಟ ವಿದ್ಯಾರ್ಥಿ ಸಂಘದವರು ತಾ. 18ರಂದು ಸಭೆ ಸೇರಿ ಹೊಸ ವರ್ಷದ ಕಾರ್ಯಕಾರೀ ಸಮಿತಿ ಚುನಾಯಿಸಿದರು.

ಪ್ರೊ ವಿ ಜೆ ಜೋಸೆಫರು ಅಧ್ಯಕ್ಷರಾಗಿ ಶ್ರೀ ಪದ್ಮನಾಭನ್ ಕಾರ್ಯದರ್ಶಿಯಾಗಿರುವ ವಿದ್ಯಾರ್ಥಿ ಸಂಘದ ಕಾರ್ಯಕಾರೀ ಚುನಾವಣೆ ತಾ. 25ಕ್ಕೆ ನಡೆಯಲಿದೆಯೆಂದು ಪ್ರಕಟವಾಗಿದೆ

ಮೊದಲಿನ ವಿದ್ಯಾರ್ಥಿ ಸಂಘವು, ಒಡೆದು ಬೇರೆ ನಿಂತ ಕೆಲವರ ತಂತ್ರವೆಂದೂ ನಿಜವಾದ ವಿದ್ಯಾರ್ಥಿ ಸಂಘವದಲ್ಲವೆಂದೂ ಮೊದಲಾಗಿ ಎರಡನೆಯ ವಿದ್ಯಾರ್ಥಿ ಸಂಘದವರು ಒಂದು ಹೇಳಿಕೆಯಿತ್ತಿದ್ದಾರೆ. ಎರಡನೆಯ ವಿದ್ಯಾರ್ಥಿ ಸಂಘದವರು ಹೊರಡಿಸಿದ ಹೇಳಿಕೆಗೆ ತಾನು ಹೊಣೆಗಾರನಲ್ಲವೆಂದೂ ತಾನದರ ಅಧ್ಯಕ್ಷತೆಯನ್ನಂಗೀಕರಿಸಿಲ್ಲವೆಂದೂ ಪ್ರೊ। ಜೋಸೆಫರು ಒಂದು ಹೇಳಿಕೆಯಿತ್ತಿದ್ದಾರೆ.

ವಿದ್ಯಾರ್ಥಿ ಸಂಘದಲ್ಲಿ ಹೀಗೆ ಒಡಕು ಹುಟ್ಟಿರುವುದು ವಿಷಾದಕರ. ವಿದ್ಯಾರ್ಥಿಗಳ ಹಿತ ಬಯಸುವವರು . ಎರಡು ಪಕ್ಷದವರನ್ನು ಕರೆಸಿ ಸಮಾಧಾನಪಡಿಸಿ ಒಪ್ಪಂದ ಮಾಡಿ ಒಕ್ಕಟ್ಟಿಂ ಟುಮಾಡಲು ಯತ್ನಿಸುವುದು ಅವಶ್ಯವಿದೆ.

ಜಿಲ್ಲಾ ಸಮಾಚಾರಗಳು

ಮಂಗಳೂರು

ಮಂಗಳೂರು ನಗರದಲ್ಲಿ ಕಾಲರಾ

ನಗರ ಮುನ್ಸಿಪಲ್ ಸಭೆಯೊಂದು ತಾ. ೧೬ರ ಸಂಜೆ ಪುತ್ತೂರು ಹುಸೇನ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆಯ ಪ್ರಾರಂಭದಲ್ಲಿ ನಗರದ ಹಾಗಿನ ಹೆಲ್ತ್ ಆಫೀಸರರಾದ ಶ್ರೀ. ಬಿ. ಸುಬ್ರಾಯ ಬಾಳಿಗರು ಮಾತಾಡುತ್ತಾ ಮಂಗಳೂರಿನಲ್ಲಿ ಕೊಡಿಯಾಲಬೈಲು, ಬೋಳೂರು, ಬೊಕ್ಕಪಟ್ಣ ಮೊದಲಾದ ಕಡೆಗಳಲ್ಲಿ ಕಾಲರಾ ಚಿಹ್ನೆಗಳು ಕಂಡುಬಂದಿವೆ ಎಂದು ತಿಳಿಸಿದರು. ಜನರಿಗೆ ಬೇಗನೇ ಛಾಕು ಹಾಕಿಸಲಾಗುವುದೆಂದೂ ಕಾಲರಾ ಹಾವಳಿ ಹಬ್ಬದಂತೆ ತಮ್ಮ ಇಲಾಖೆಯವರು ಮಾಡುವ ಪ್ರಯತ್ನಗಳಿಗೆ ಕೌನ್ಸಿಲಿನ ಬೆಂಬಲ ದೊರೆಯಬೇಕೆಂದು ಶ್ರೀ. ಬಾಳಿಗರು ತಿಳಿಸಿದರು. ಸಭೆಯು ಅವರಿಗೆ ನೆರವಾಗುವುದೆಂದು ಭರವಸೆ ಕೊಟ್ಟಿತು. ಸೆಂಟ್ರಲ್ ಮೈದಾನಿನಲ್ಲಿ 'ಹಾಕಿ' ಆಡಲು ಅನುಕೂಲ ಸ್ಥಳ ಏರ್ಪಡಿಸುವಂತೆ ಕೌನ್ಸಿಲು ೭೦೦ ರೂಪಾಯಿ ಕೊಡಲು ನಿರ್ಧರಿಸಿತು. ಹಿಂದು ಸೇವಾ ಸಂಘದವರು ತಮಗೆ ಧನ ಸಹಾಯ ಮಾಡಬೇಕೆಂದು ವಿನಂತಿಸಿದ್ದನ್ನು ಕೌನ್ಸಿಲು ಸ್ವೀಕರಿಸಿ ಆ ವಿನಂತಿಯು ಬರುವ ವರ್ಷದ ಬಜೆಟ್ ಚರ್ಚೆಯಲ್ಲಿ ವಿಮರ್ಶಿಸಲ್ಪಡುವುದೆಂದು ಸಾರಿತು. ಇತರ ಕೆಲವು ವಿಷಯಗಳು ಚರ್ಚಿಸಲ್ಪಟ್ಟ ಮೇಲೆ ಸಭೆ ಮುಗಿಯಿತು.

ಶ್ರೀ ವೆಂಕಟರಾಯರಿಗೆ ರಿಮಾಂಡು

ಗಣಪತಿ ಹೈಸ್ಕೂಲಿನ ವಿದ್ಯಾರ್ಥಿ ಶ್ರೀ. ಕೆ. ವೆಂಕಟರಾವ್ ಇವರನ್ನು ತಾ. ೯ರಲ್ಲಿ ಇಂಡಿಯಾ ಡಿಫೆನ್ಸ್ ರೂಲ್ಸುಗಳ ಮೇರೆಗೆ, ಆಕ್ಷೇಪಕರವಾದ ಸಾಹಿತ್ಯಗಳು ದೊರಕಿತೆಂಬ ಕಾರಣದಿಂದ ಸ್ಥಳೀಯ ಡಿ। ಮತ್ತು ಸೆಶ್ಯನ್ ಕೋರ್ಟಿನೆದುರು ಪೋಲೀಸರು ಕೈದು ಮಾಡಿ ಸ್ಥಳೀಯ ಸ್ಟೇ॥ ಸಬ್ ಮ್ಯಾಜಿಸ್ಟ್ರೇಟರ ಮುಂದೆ ಹಾಜರುಪಡಿಸಲಾಗಿ, ಅವರಿಗೆ ತಾ. ೧೯ರ ವರೆಗೆ 'ರಿಮಾಂಡು' ಕೊಡಲಾಯಿತು.

ಅಕ್ಕಿ ದರ ನಿರ್ಣಯ

ಕೆನರಾ ಚೇಂಬರ್ ಒಫ್ ಕೊಮರ್ಸಿನ ಸಭೆಯೊಂದು ತಾ. ೧೨ರಂದು ಜರಗಿ, ಅಕ್ಕಿಯ ಧಾರಣೆಗಳನ್ನು ಈ ಕೆಳಗಿನಂತೆ ನಿರ್ಣಯಿಸಲಾಯಿತೆಂದು ತಿಳಿಯುತ್ತದೆ. (೧) ಮೊದಲನೆ ತರಗತಿಯ ಗುಡ್ಡು, ಸುಗ್ಗಿ ಮತ್ತು ರಾಶಿ ಅಕ್ಕಿ (ಮಣ್ಣೋಲ್ ಕಡೆಯ ಮತ್ತು ಇತರ) ಕೊಂಡುಕೊಳ್ಳುವ ಧಾರಣೆ ಮುಡಿಗೆ ರೂ. ೧೪-೦-೦; ಮಾರಾಟದ ದರ ರೂ. ೧೪-೪-೦.

(೨) ಎರಡನೆ ತರಗತಿಯ ಅಕ್ಕಿ: ಕೊಂಡುಕೊಳ್ಳುವ ದರ ರೂ. ೧೩-೧೨-೦; ಮಾರಾಟದ ದರ ರೂ. ೧೪-೦-೦.

(೩) ಮಿಲ್ ಅಕ್ಕಿ: ಡಬ್ಬಲ್ ಪೋಲಿಶ್ (ಎಲ್ಲ ತರಗತಿ) ಕೊಂಡುಕೊಳ್ಳುವ ದರ ರೂ. ೧೩-೮-೦ ಮಾರಾಟದ ದರ ರೂ. ೧೩-೧೨-೦.

(೪) ಎಲ್ಲ ತರಗತಿಯ ಸಿಂಗಲ್ ಪೋಲಿಶ್; ಕೊಂಡುಕೊಳ್ಳುವ ದರ ರೂ. ೧೨-೧೨-೦; ಮಾರಾಟದ ದರ ರೂ. ೧೩-೦-೦.

ಈ ಮೇಲಿನ ಧಾರಣೆಗಳು ಕ್ರಮೇಣ ಕಡಿಮೆಯಾಗಲೂ ಬಹುದು; ವಿನಾ ಇನ್ನು ಹೆಚ್ಚುವಂತಿಲ್ಲ ಎಂಬ ಅಭಿಪ್ರಾಯ ಪ್ರಕಟವಾಗಿದೆಯೆಂದೂ ಕೇಳುತ್ತೇವೆ.

ಉಪಾಧ್ಯಾಯರ ಸಭೆ

ಸ್ಥಳೀಯ ಗಣಪತಿ ಹೈಸ್ಕೂಲಿನಲ್ಲಿ ಜಿಲ್ಲೆಯ ಹಲವು ತಾಲೂಕು ಮತ್ತು ಜಿಲ್ಲಾ ಬೋರ್ಡ್ ಉಪಾಧ್ಯಾಯರ ಜತೆಗೂಡಿದ ಯೂನಿಯನುಗಳ ಆಶ್ರಯದಲ್ಲಿ, ಶ್ರೀ. ಎ. ಪಾಂಡುರಂಗ ರಾಯರ ಅಧ್ಯಕ್ಷತೆಯಲ್ಲಿ ಸಭೆ ಜರಗಿ, ಜಿಲ್ಲಾ ಬೋರ್ಡ್ ಎಲಿಮೆಂಟರಿ ಶಾಲೋಪಾಧ್ಯಾಯರ ಒಂದು ಜಿಲ್ಲಾ ಫೆಡರೇಶನನ್ನು ಸ್ಥಾಪಿಸಬೇಕೆಂದು ನಿರ್ಧಾರವಾಗಿ ಆ ಸಂಬಂಧವಾದ ವಿಧಿನಿಯಮಗಳನ್ನೂ ಅಂಗೀಕರಿಸಲಾಯಿತು. ಶ್ರೀ. ಬಿ. ಭೋಜರಾಯರು ಕನ್ವೀನರ್ ಆಗಿ ಉಳ್ಳ ಒಂದು ತಾತ್ಕಾಲಿಕ ಸಮಿತಿ ಏರ್ಪಟ್ಟಿತು. ಅಲ್ಲದೆ ವಿದ್ಯಾಂಗದ ಡೈರೆಕ್ಟರು ಈ ಫೆಡರೇಶನನ್ನು ಒಪ್ಪಿಕೊಳ್ಳುವಂತೆಯೂ ಅವರಲ್ಲಿ ಅರಿಕೆ ಮಾಡಿಕೊಳ್ಳುವ ನಿರ್ಣಯವಾಯಿತು.

ರಿಕ್ರೂಟಿಂಗ್ ಸಪ್ತಾಹ

ಇದರ ಸಾರ್ವಜನಿಕ ಸಭೆಗಳು ಕೆಲ ದಿನಗಳಿಂದ ನಗರದ ಕೆಲವು ಭಾಗಗಳಲ್ಲಿ ನಡೆಯುತ್ತಿವೆ.

ಆರಂಭ ಭಾಷಣ

ಸೈಂಟ್ ಆಲೋಶಿಯಸ್ ಕಾಲೇಜಿನ ಸಂಸ್ಕೃತ ಸಂಘದ ಆರಂಭ ಭಾಷಣವನ್ನು ಬ್ರಹ್ಮಶ್ರೀ ನಿಡ್ಲೋಡಿ ಅನಂತ ಉಪಾಧ್ಯಾಯರು ಕೊಟ್ಟರು. ಸಂಘದ ಅಧ್ಯಕ್ಷರಾದ ಶ್ರೀ. ಎಂ. ಮಂಜುನಾಥ ಭಟ್ಟರು ಅಂದಿನ ಸಭಾಧ್ಯಕ್ಷತೆ ವಹಿಸಿದ್ದರು.

ಜಿಲ್ಲಾ ಪೋಲೀಸ್ ಸುಪರಿಂಟೆಂಡೆಂಟರು

ಜಿಲ್ಲಾ ಪೋಲೀಸ್ ಸುಪರಿಂಟೆಂಡೆಂಟರಾದ ಮಿ। ಎಫ್. ಜಿ. ಬೆಡ್ವಿಕ್ ಅವರು ೭ ವಾರಗಳ ರಜೆಯ ಮೇಲೆ ತೆರಳುವುದರಿಂದ ಉತ್ತರ ಮಧುರೆಯ ಹಂಗಾಮಿ ಡಿ. ಎಸ್. ಪಿ. ಯವರಾದ ಮಿ। ಆರ್. ಎ. ಲಿ. ಟ್ರಿಸ್‌ಕೋಟ್ ಅವರು ನಮ್ಮ ಜಿಲ್ಲಾ ಪೋಲೀಸ್ ಸುಪರಿಂಟೆಂಡೆಂಟರಾಗಿ ನೇಮಿಸಲ್ಪಟ್ಟಿರುವರು.

ಬಿಡ್ ಆಟಗಾರರ ಮೇಲೆ ಟೌನ್ ಪೋಲೀಸರ ಧಾಳಿ

ಕಳೆದ ತಾ. ೭ನೇ ಶನಿವಾರ ರಾತ್ರಿ ಮಂಗಳೂರು ಪೋಲೀಸ್ ಸರ್ಕಲ್ ಇನಸ್ಪೆಕ್ಟರ್ ಶ್ರೀ ಕೆ ಸೇತುಮಾಧವನ್ ಮೆನೋನರು ಸಬ್ ಇನಸ್ಪೆಕ್ಟರ್ ಶ್ರೀ ಎಂ. ಎಸ್ ಭಂಡಾರಿಯವರೂ ಪೋಲೀಸ್ ಸಿಬಂದಿಯೊಂದಿಗೆ ಸ್ಥಳೀಯ ಹಂಪನ್‌ಕಟ್ಟೆಯಲ್ಲಿ ಕೆಲವರಿಂದ ನಡೆಸಲ್ಪಡುತ್ತಿರುವ ಬಿಡ್ ಆಟದ ಸ್ಥಳವಾದ ಒಂದು ಕಟ್ಟಡಕ್ಕೆ ಧಾಳಿಮಾಡಿ ೧೨ ಮಂದಿಯನ್ನು ಕೈದುಮಾಡಿ ನಗದಿ ರೂ. ೩೩೯-೪-೦ಗಳನ್ನೂ ಆಟದ ಸಾಮಗ್ರಿಗಳನ್ನೂ ವಶಪಡಿಸಿಕೊಂಡರು. ಅದೇ ರಾತ್ರಿ ಅದೇ ಹಂಪನ್‌ಕಟ್ಟೆಯಲ್ಲಿ ಬೇರೊಂದು ಕಡೆ ಕೆಲವರಿಂದ ನಡೆಸಲ್ಪಡುವ ನ್ಯೂಯಾರ್ಕ್ ಆರಳೆ ಅಂಕೆಗಳಾಟದ ಸ್ಥಳವಾದ ಇನ್ನೊಂದು ಕಟ್ಟಡಕ್ಕೆ ಪೋಲೀಸ್ ಇನಸ್ಪೆಕ್ಟರರಾದ ಶ್ರೀಗಳಿದ ರಾಮಯ್ಯ ರೈಗಳೂ ಮೆನೋನರೂ ಧಾಳಿ ಮಾಡಿ ೧೧ ಮಂದಿಯನ್ನು ಕೈದುಮಾಡಿ ನಗದಿ ರೂ. ೮೦ನ್ನೂ ೨೦೦ ರೂ. ಬಾಳುವ ಆಭರಣಗಳನ್ನೂ, ಆಟದ ಸಾಮಗ್ರಿಗಳನ್ನೂ ಸೆಳೆದುಕೊಂಡರು. ನಗರದ ಹಲವು ಕಡೆಗಳಲ್ಲಿ ಈ ಆಟ ನಡೆಯುವುದೆಂಬ ವಾರ್ತೆ ಇದೆ. ಈ ಆಟ ಇನ್ನೂ ಹಬ್ಬದಂತೆ ಪೋಲೀಸ್ ಅಧಿಕಾರಿಗಳು ಈ ಕಾರ್ಯಕ್ರಮ ಕೈಕೊಂಡಿರುವುದು ಸ್ತುತ್ಯವಾದುದು.

ಕೈದಾದವರ ವಿಚಾರಣೆ ಸ್ಥಳೀಯ ಸ್ಟೇಶನರಿ ಸಬ್ ಮ್ಯಾಜಿಸ್ಟ್ರೇಟರ ಮುಂದೆ ನಡೆಯುತ್ತಿದೆ.

ಜಿಲ್ಲಾ ಬೋರ್ಡು ಸಭೆ
ಆಡಳಿತ ವರದಿ ಸ್ವೀಕಾರ

ಜಿಲ್ಲಾ ಬೋರ್ಡ್ ಸಭೆಯು ಕಳೆದ ಶನಿವಾರ ಪ್ರೆಸಿಡೆಂಟರಾದ ಶ್ರೀ। ಅರೂರು ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರುಗಿತು. ಅದಕ್ಕೆ ಮೊದಲು ಜರುಗಿದ ವಿಶೇಷ ಸಭೆಯಲ್ಲಿ ಬೋರ್ಡಿನ ಸ್ಥಾಯಿ ಸಮಿತಿಗೆ ಹಿಂದಿದ್ದ ಮೆಂಬರ್ ಜನಾಬ್ ಕುಂಞ ಕಲಂದರ ಸಾಹೇಬರನ್ನೇ ತಿರುಗಿ ಚುನಾಯಿಸಲಾಯಿತು. ಬೋರ್ಡು ಗ್ರಾಮಾಂತರದ ತನ್ನ ವೈದ್ಯರುಗಳಿಗೆ ಕೊಡುವ ಸಹಾಯ ಧನದ ಮೊತ್ತವನ್ನು ಕತ್ತರಿಸುವ ಮತ್ತು ಇತರ ವಿಚಾರಗಳ ಅನ್ವೇಷಣಕ್ಕಾಗಿ ಒಂದು ಸಮಿತಿಯನ್ನು ರಚಿಸಿತು. ಡಾ. ಪಿ. ಜಿ. ಆಚಾರ್ ಮೊದಲಾದವರು ಅದರ ಮೊತ್ತವನ್ನು ಕತ್ತರಿಸಬಾರದೆಂಬುದಕ್ಕೆ ತಕ್ಕ ಕಾರಣಗಳನ್ನು ಕೊಟ್ಟು ವಿವರಿಸಿದರು: ಸರಕಾರದ ೧೦-೭-೪೩ನೇ ಆಜ್ಞೆಯ ಮೇರೆಗೆ ಜಿಲ್ಲಾ ಬೋರ್ಡಿನ ಉದ್ಯೋಗಿಗಳಿಗೆ ತುಟ್ಟಿ ಭತ್ತೆಯ ಏರಿಕೆಯ ದರದಂತೆ ಕೊಡಲು ಮಂಜೂರಾಯಿತು. ಅಧ್ಯಕ್ಷರು ಆ ಏರಿದ ಅಂಶವನ್ನು ಕೊಡಲು ಹಣವನ್ನೊದಗಿಸಲಾಗಿದೆ ಎಂದೂ ಅದವರೆಗೆ ಸಲ್ಲಿಸುವುದು ವಿಹಿತವೆಂದೂ ಸೂಚಿಸಿದ್ದರು. ಈ ಮೊತ್ತವೂ ಸೇರಿ ಬೋರ್ಡ್ ಉದ್ಯೋಗಿಗಳಿಗೆ ಇದುವರೆಗೆ ಸಂದ, ಇನ್ನು ವರ್ಷಾಂತದ ವರೆಗೂ ಸಲ್ಲಬೇಕಾಗಿರುವ ಒಟ್ಟು ಮೊತ್ತ ರೂ. ೪ ಸಾವಿರವೆಂದು ತಿಳಿದು ಬಂತು. ಮಂಗಳೂರಿನ ಸರಕಾರಿ ಟ್ರೇಡ್ಸ್ ಸ್ಕೂಲಿನ ವಿದ್ಯಾರ್ಥಿ ವೇತನ ಕೊಡಲು ೨೦೦ ರೂ. ದಕ್ಷಿಣ ಕನ್ನಡದ ಹಿಂದುಸ್ಥಾನ ಸ್ಕೌಟ್ ಎಸೋಶಿಯೇಶನಿಗೂ ೧೯೪೩-೪೪ನೇ ಇಸ್ವಿಗೆ ೧೦೦ ರೂಗಳ ಸಹಾಯ ದ್ರವ್ಯ ಮಂಜೂರಾಯಿತು. ಅಧ್ಯಕ್ಷರು ಜಿಲ್ಲಾ ಬೋರ್ಡಿನ ೧೯೪೨-೪೩ನೇ ಇಸ್ವಿಯ ಆಡಳಿತ ವರದಿಯ ಮುಖ್ಯಾಂಶಗಳನ್ನೋದಿ, ಬೋರ್ಡ್ ಪ್ರೆಸಿಡೆಂಟರಾಗಿದ್ದ ದಿವಂಗತ ಡಾ. ಕೆ. ವಿಠ್ಠಲ ಶೆಟ್ಟರ ಗುಣಕಥನ ಮಾಡಿದರು. ಡಾ. ಪಿ. ಜಿ. ಆಚಾರ್ಯರವರೂ ಹೊಸ ಹಳೆಯ ಪ್ರೆಸಿಡೆಂಟ್, ಬೋರ್ಡಿನ ಕಾರ್ಯದರ್ಶಿ ಹಾಗೂ ಆಫೀಸ್ ಸಿಬಂದಿಯ ಕಾರ್ಯದಕ್ಷತೆಯನ್ನು ಪ್ರಶಂಸಿದರು. ಶ್ರೀ। ನಾಗಪ್ಪಯ್ಯನವರೂ ಅವರನ್ನು ಸಮರ್ಥಿಸಿ ಮಾತಾಡಿದರು. ಆಡಳಿತ ವರದಿ ಮಂಜೂರಾಯಿತು.

ಜಿಲ್ಲಾ ಬೋರ್ಡ್ ವೈಸ್ ಪ್ರೆಸಿಡೆಂಟರು ತಮ್ಮ ಪ್ರವಾಸ ಕಾಲದಲ್ಲಿ ಜಿಲ್ಲಾ ಬೋರ್ಡಿನ ವಿಶ್ರಾಂತಿ ಗೃಹಗಳು ತಮಗೆ ಬಾಡಿಗೆ ಇಲ್ಲದೆ ದೊರೆಯುವ ರಿಯಾಯಿತಿಯಾಗಬೇಕೆಂದು ಅಪೇಕ್ಷಿಸಿ ಬರೆದುಕೊಂಡಿದ್ದ ಪತ್ರದ ಕುರಿತು ಬಹಳ ಚರ್ಚೆ ನಡೆದು, ಆ ರಿಯಾಯಿತಿ ಸಿಕ್ಕಿದರೆ ಎಲ್ಲ ಬೋರ್ಡ್ ಮೆಂಬರರಿಗೂ ಸಿಕ್ಕಬೇಕೆಂದೂ ಇಲ್ಲದಿದ್ದರೆ ಯಾರಿಗೂ ಬೇಡವೆಂದೂ ಹಲವು ಮೆಂಬರರು ವಾದಿಸಲು ಅದರ ಇತ್ಯರ್ಥ ಮುಂದಕ್ಕೆ ಬಿತ್ತು. ವೈಸ್ ಪ್ರೆಸಿಡೆಂಟರೂ ಸದಸ್ಯರಿಗೆ ಇಷ್ಟ ತೋರದ ಆ ರಿಯಾಯಿತಿಯ ಕುರಿತು ಒತ್ತಾಯಿಸಲಿಲ್ಲ. ಕಂಕನಾಡಿಯ ಡೆಮಿಯನ್ ಕುಷ್ಠರೋಗಿಗಳ ಮಂದಿರಕ್ಕೆ ಬೋರ್ಡ್ ೫೦ ರೂಪಾಯಿಗಳ ಸಹಾಯ ಧನ ಕೊಟ್ಟಿತು. ಜಿಲ್ಲಾ ಬೋರ್ಡ್ ಹಿಂದೆ ವಿದ್ಯಾಂಗದ ತೆರಿಗೆಯನ್ನು ರುಪಾಯಿಗೆ ೬॥ ಪೈಯಿಂದ ೧ ಆಣೆಗೆ ಏರಿಸಿ, ಹಾಗೆ ಹುಟ್ಟಿ ಬಂದ ಹಣದಿಂದ ಬೋರ್ಡ್ ಎಲಿಮೆಂಟರಿ ಶಾಲೋಪಾಧ್ಯಾಯರಿಗೆ ತಿಂಗಳಿಗೆ ಸರಾಸರಿ ೨ ರುಪಾಯಿಗಳ ತುಟ್ಟಿ ಭತ್ತೆ ಕೊಡಬೇಕೆಂದು ನಿರ್ಣಯಿಸಿತಷ್ಟೆ. ಆ ನಿರ್ಣಯವನ್ನು ಸರಕಾರವೂ ಒಪ್ಪಿಕೊಂಡಿದೆ. ಆದರೆ ಈ 'ಏರಿಕೆಯ ತೆರಿಗೆ ಯುದ್ಧಕಾಲದಲ್ಲಿ' ಎಂದು ಬೋರ್ಡ್ ನಿರ್ಣಯಿಸಿದುದನ್ನು ಮಾತ್ರ ಸರಕಾರ ಒಪ್ಪದೆ ಹೋಗಿದೆ. ಜಿಲ್ಲಾ ಬೋರ್ಡಿನ ಉದ್ಯೋಗಿಗಳಿಗೂ, ಅಕ್ಕಿ, ಕಂಟ್ರೋಲ್ ದರದಲ್ಲಿಯೇ ಒದಗಿಸುವಂತೆ ಜಿಲ್ಲಾ ಕಲೆಕ್ಟರರನ್ನು ವಿನಂತಿಸಿಕೊಳ್ಳಬೇಕಾಗಿ ಡಾ. ಪಿ. ಜಿ. ಆಚಾರ್ಯರು ತಂದ ಠರಾವು ಮಂಜೂರಾಯಿತು. ಬೋರ್ಡ್ ಪ್ರೆಸಿಡೆಂಟರ ಮತ್ತು ಬೋರ್ಡ್ ಇಂಜಿನಿಯರಿಂಗ್ ಆಫೀಸುಗಳ ಸಿಬ್ಬಂದಿಯವರು ತಮಗೀ ಕಷ್ಟಕಾಲದಲ್ಲಿ ಮೂರು ತಿಂಗಳ ಸಂಬಳವನ್ನು ಮುಂಗಡವಾಗಿ ಕೊಡಿಸಿ ಆ ಮೊತ್ತವನ್ನು ೧೨ ತಿಂಗಳ ಸಮಾನವಾದ ಕಂತುಗಳಲ್ಲಿ ಹಿಂದೆ ಪಡೆಯುವಂತೆ ಮಾಡಿಕೊಂಡ ಆ ಅರಿಕೆಯು ಮನ್ನಿಸಲ್ಪಟ್ಟಿತು. ಈ ಸಂಬಂಧ ಸರಕಾರದ ಅನುಮತಿಗಾಗಿ ಬರೆದುಕೊಳ್ಳಲಾಯಿತು.

ಜಿಲ್ಲಾ ಬೋರ್ಡಿನ ಉಪಚುನಾವಣೆ

ಜಿಲ್ಲಾ ಬೋರ್ಡಿನ ಹಿಂದಿನ ಹಲವು ಮೆಂಬರರು ರಾಜಿನಾಮೆ ಕೊಟ್ಟು, ಕೆಲವರು ಇತರ ಕಾರಣಗಳಿಂದಲೂ ಮೆಂಬರಿಕೆ ಕಳೆದುಕೊಂಡಿರುವುದರಿಂದ ಆ ೨೨ ಮಂದಿ ಸದಸ್ಯರ ಸ್ಥಾನಗಳಿಗೆ ಉಪ ಚುನಾವಣೆ ನಡೆಯಬೇಕಾಗಿದ್ದು ಮಂಗಳೂರು ಮತ್ತು ಕಾಸರಗೋಡು ತಾಲೂಕುಗಳ ಚುನಾವಣೆಯ ವಿಚಾರ ಪ್ರಕಟವಾಗಿದೆ.

ಮಂಗಳೂರು ತಾಲೂಕಿಗೆ ಚುನಾವಣೆಗಳಾಗಬೇಕಾದ ಸ್ಥಾನಗಳು ಐದು. ಬಜ್ಪೆ (ರಿಸರ್ವ್) ಇಂಡಿಯನ್ ಕ್ರಿಶ್ಚಿಯನ್ ಸೀಟ್ ೧; ಜನರಲ್ ಸೀಟ್ ೧; ಹಾಗೆರಡು. (ಹಿಂದಿದ್ದ ಮೆಂಬರರು ಮಿ। ಅಲ್ಬುಕರ್ಕ್ ಮತ್ತು ದಿವಂಗತ ಡಾ॥ ವಿಠ್ಠಲ ಸೆಟ್ಟಿ) ಪಾಣೆಮಂಗಳೂರು ಜನರಲ್ ಸೀಟ್ ೧. (ಹಿಂದಿದ್ದ ಮೆಂಬರ್ ಶ್ರೀ। ಎಸ್. ಎನ್. ಹೊಳ್ಳರು) ಬಂಟ್ವಾಳ ಜನರಲ್ ಸೀಟ್ ೧. (ಹಿಂದಿದ್ದ ಮೆಂಬರರು ಶ್ರೀ। ವೈಕುಂಠ ಬಾಳಿಗರು) ಮೂಲ್ಕಿ ಜನರಲ್ ಸೀಟ್ ೧. (ಹಿಂದಿದ್ದ ಮೆಂಬರರು ಶ್ರೀ। ರಾಮಕೃಷ್ಣ ಪೂಂಜರು.) ಉಮೇದುವಾರರು ನೋಮಿನೇಶನ್ ಪತ್ರಗಳನ್ನು ದಾಖಲ್ಮಾಡುವ ದಿನ ೧೩-೮-೧೯೪೩ ಮತ್ತು ೧೪-೮-೧೯೪೩; ಅವನ್ನು ಪರಿಶೋಧಿಸುವ ದಿನ ತಾ: ೧೬-೮-೧೯೪೩ ಚುನಾವಣೆ ೨೦-೯-೧೯೪೩. ಓಟುಗಳನ್ನು ಎಣಿಸುವ ದಿನ ೨೧-೯-೧೯೪೩. ಕಾಸರಗೋಡು ತಾಲೂಕಿಗೂ ಚುನಾವಣೆಗಳಾಗಬೇಕಾದ ಸ್ಥಾನಗಳು ಐದು. ಕುಂಬಳೆ ಜನರಲ್ ಸೀಟ್ ೧ (ಹಿಂದಿದ್ದ ಮೆಂಬರರು ಶ್ರೀ। ಬಿ. ಗುಡ್ಡಪ್ಪರೈ) ಹೊಸದುರ್ಗ (ರಿಸರ್ವ್ಡ್) ಶೆಡ್ಯೂಲ್ಡ್ ಕ್ಲಾಸ್ (ಹರಿಜನ) ಸೀಟ್ ೧; (ಹಿಂದಿದ್ದ ಮೆಂಬರ್ ಶ್ರೀ। ಕೆ. ಸುಂದರ;) ಮತ್ತು ಜನರಲ್ ಸೀಟ್ ೧; (ಹಿಂದಿದ್ದ ಮೆಂಬರರು ಶ್ರೀ। ಚಂದು ನಂಬಿಯಾರರು) ಹಾಗೆ ಎರಡು ಸೀಟು. ಮಂಜೇಶ್ವರ: ಜನರಲ್ ಸೀಟ್ ೧; (ಹಿಂದಿದ್ದ ಮೆಂಬರರು ಶ್ರೀ। ಅಮೃತ ಕೃಷ್ಣ ರಾವ್) ಕಾಸರಗೋಡು ಜನರಲ್ ಸೀಟ್ ೧; (ಹಿಂದಿದ್ದ ಮೆಂಬರರು ಜನಾಬ್ ಶಿರೂಲ್ ಸಾಹೇಬ್ ಬಹದ್ದೂರ್.)

— ಉಮೇದುವಾರರು ನಾಮಿನೇಶನ್ ಪತ್ರಗಳನ್ನು ದಾಖಲ್ಮಾಡಬೇಕಾದ ದಿನ ತಾ. ೨೫-೮-'೪೩ ಮತ್ತು ೨೬-೮-'೪೩; ಅವನ್ನು ಪರಿಶೋಧಿಸುವ ದಿನ ತಾ. ೨೭-೮-'೪೩ ಚುನಾವಣೆ ೨೭-೯-'೪೩; ಓಟುಗಳನ್ನು ಎಣಿಸುವ ದಿನ ೨೮-೯-'೪೩

ಜಿಲ್ಲಾ ಸೆಶ್ಯನ್ಸ್ ಕೋರ್ಟಿನಲ್ಲಿ

ಕಾರ್ಕಳ ತಾಲೂಕು ನಡ್ಪಾಲ್ ಗ್ರಾಮದಲ್ಲಿ ಕಾದ ಎಂಬಾತನು ಹಲವು ವರ್ಷಗಳಿಂದ ಸಿಂದಿ ಎಂಬವಳೊಡನೆ ವಾಸವಾಗಿದ್ದು ಕಳೆದ ಎಪ್ರಿಲ್ ತಾ. ೨೦ರಲ್ಲಿ ಅವರವರಲ್ಲಿ ಮನೆಯೊಳಗೆ ಜಗಳವಾದ ಬಳಿಕ ಕಾದನು ಸಿಂದಿಯನ್ನು ಕೊಲೆ ಮಾಡಿದನೆಂಬ ಆರೋಪವುಳ್ಳ ಮೊಕದ್ದಮೆ ನಮ್ಮ ಸೆ॥ ಜಡ್ಜರಾದ ಮಿ। ಕೋಮನ್ ಐ. ಸಿ. ಎಸ್. ಇವರ ಮುಂದೆ ತನಿಖಿಯಾಗಿ ಆರೋಪಿಗೆ ಕಳೆದ ತಾ. ೧೩ರಲ್ಲಿ ೩ ವರ್ಷಗಳ ಕಠಿನ ಸಜೆ ವಿಧಿಸಲಾಯಿತು.

ಬ್ರಹ್ಮಾವರದ ಬಳಿಯ ಒಡ್ಡರಸೆ ಗ್ರಾಮದಲ್ಲಿ ೭-೯-೧೯೪೨ರಲ್ಲಿ ರಾತ್ರಿ ಗೋವಿಂದ ಸೆಟ್ಟಿ, ಶಿವರಾಮ ಸೆಟ್ಟಿ, ಸಂಜೀವ ಸೆಟ್ಟಿ, ಶೀನಪ್ಪ ಸೆಟ್ಟಿ, ಲಕ್ಷ್ಮಣ ಸೆಟ್ಟಿ, ತೇಜಪ್ಪ ಸೆಟ್ಟಿ, ಮಹಾಬಲ ಸೆಟ್ಟಿ, ಕಾಳ ಮತ್ತು ಕೃಷ್ಣ ಎಂಬೀ ೯ ಮಂದಿ ದೊಂಬಿ ಮಾಡಿದರೆಂದೂ, ಇವರಲ್ಲಿ ಕೆಲವರು ಆಯುಧಗಳಿಂದ ಇತರರನ್ನು ಗಾಯಪಡಿಸಿದರೆಂದೂ ಉಪ್ಪಳಾಡಿ ಮಹಲಿನ ಸೆಟ್ಟಿ ಎಂಬಾತನನ್ನು ಖೂನಿ ಮಾಡಿದರೆಂದೂ ಮುಂತಾದ ಹಲವು ಆರೋಪಗಳುಳ್ಳ ಒಂದು ಮೊಕದ್ದಮೆ ನಮ್ಮ ಜಿಲ್ಲಾ ಜಡ್ಜರ ಮುಂದೆ ಬಂದು ತನಿಖೆಯಾಗಿ ಕಳೆದ ತಾ. ೧೦ರಲ್ಲಿ ಎಲ್ಲರೂ ಬಿಡುಗಡೆ ಹೊಂದಿದರು.

ವೇಣೂರು:— ಹೊಸಂಗಡಿಯ ಬಳಿ ಸುಮಾರು ೧೪ ವರ್ಷದ ಒಬ್ಬ ಹಿಂದೂ ಹುಡುಗನು ಅಲ್ಲಿನ ಒಬ್ಬ ಕ್ರೈಸ್ತ ಹುಡುಗನನ್ನು ಕತ್ತಿಯಿಂದ ಕಡಿದೂ ಅನಂತರ ಅವನ ತಂಗಿಯನ್ನು ಬಾವಿಗೆ ದೂಡಿಯೂ ಹೀಗೆ ಏಕಕಾಲದಲ್ಲಿ ಎರಡು ಕೊಲೆಗಳಿಗೆ ಕಾರಣನಾದನೆಂಬ ಆರೋಪವುಳ್ಳ ಒಂದು ಮೊಕದ್ದಮೆ ನಮ್ಮ ಸೆಶನ್ಸ್ ಜಡ್ಜರ ಮುಂದೆ ಈಗ ನಡೆಯುತ್ತಿದೆ. ಆರೋಪಿಯಂತೆ, ಮೃತರಾದ ಇಬ್ಬರು ಅಣ್ಣತಂಗಿಯರೂ ಇದರಲ್ಲಿ ಮೈನರರು.

ಶ್ರೀ ಶಿವರಾಮ ಕಾರಂತರ ಗ್ರಂಥಕ್ಕೆ ಬಹುಮಾನ

ಶ್ರೀ ಶಿವರಾಮ ಕಾರಂತರು ಬರೆದ 'ಮರಳಿ ಮಣ್ಣಿಗೆ' ಕಾದಂಬರಿಗೆ ಈ ಸಲದ ದೇವರಾಜ ಬಹದ್ದೂರ್ ಪಾರಿತೋಷಿಕ, ರೂ. ೧೦೦೦ ಬಹುಮಾನ ದೊರೆತಿದೆ.

'ಹಸಿದವರ ಮುಂದೆ ದೇವರೂ ನಿಲ್ಲಲಾರ!'

ನಿಂತರೆ ಅನ್ನರೂಪದಲ್ಲಿ ಮಾತ್ರ!

— ಸರ್ವರಿಗೂ ಸ್ವಯಂನಿರ್ಣಯ ಹಕ್ಕು —

ಹಸಿದವರ ಮುಂದೆ ದೇವರೂ ನಿಲ್ಲಲಾರ'

'ನಿಂತರೆ ಅನ್ನರೂಪದಲ್ಲಿ ಮಾತ್ರ'

ಗಾಂಧಿಜಿ ಕುರಿತು ಸರೋಜಿನಿ ದೇವಿ

ಶ್ರೀಮತಿ ಸರೋಜಿನಿ ದೇವಿಯರು ಭಾರತದ ಪ್ರಕೃತ ಪರಿಸ್ಥಿತಿಯ ಕುರಿತು ಹೀಗೊಂದು ಹೇಳಿಕೆಯಿತ್ತಿದ್ದಾರೆ:

"ಗಾಂಧಿಜಿ ಮತ್ತು ಕಾಂಗ್ರೆಸ್ ಮುಖಂಡರ ಬಂಧನವಾದ ಮೇಲೆ ದೇಶದಲ್ಲಿ ಸರಿಯಾದ ನಾಯಕತ್ವವಿಲ್ಲದಾಯಿತು. ಜನರ ಮನಸ್ಸು ತಲ್ಲಣಗೊಂಡಿತು. ಈ ಕುರಿತು ಯಾರಿಗಾದರೂ ಸಂಶಯವಿದ್ದರೆ ಅದನ್ನು ಪರಿಹರಿಸಲು ಸಿದ್ಧಳಿದ್ದೇನೆ. ಕಾಂಗ್ರೆಸಿನ ಹೆಸರಲ್ಲಿ ಘೋಷಣೆ ಹೊರಡಿಸಲು ಅಥವಾ ಹೊಸ ಕಾರ್ಯಕ್ರಮ ಸೂಚಿಸಲು ಅಖಿಲ ಭಾರತ ಕಾಂಗ್ರೆಸ್ ಸಮಿತಿ ಯಾರಿಗೂ ಅಧಿಕಾರ ಕೊಟ್ಟಿಲ್ಲ. ಸ್ವೀಕೃತವಾದ ಅಹಿಂಸಾ ತತ್ವಕ್ಕೆ ವಿರುದ್ಧವಾದ ಆಂದೋಲನ ನಡೆಸಲೂ ಯಾರಿಗೂ ಅಧಿಕಾರ ಕೊಟ್ಟಿಲ್ಲ. ಈ ಸಂದರ್ಭದಲ್ಲಿ ಕಾಂಗ್ರೆಸಿನ ನಿರ್ಣಯವನ್ನು ಬದಲಾಯಿಸಲು ಯಾವ ಕಾಂಗ್ರೆಸ್ ಸದಸ್ಯರಿಗೂ ಅಧಿಕಾರ ಇಲ್ಲ.

"ಈಗ ಮುಂದಾಳುಗಳಿಲ್ಲದಿದ್ದರೂ ಕಾಂಗ್ರೆಸು ಆರಂಭಿಸಿದ ದೇಶಸೇವಾ ಕಾರ್ಯವನ್ನು ನಾವೆಲ್ಲರೂ ಮುಂದರಿಸಬೇಕು. ಈಗ ಜನರು ಹೇಳಲಾರದ ದುಃಖದಲ್ಲಿ ಮುಳುಗಿದ್ದಾರೆ. ಕೋಟ್ಯಂತರ ಹಸಿದ ಹೊಟ್ಟೆಗಳು ಅನ್ನಕ್ಕಾಗಿ ಕೂಗುತ್ತವೆ. ಈ ಆರ್ತನಾದ ನಮ್ಮೆಲ್ಲಾರಿಗೂ ಕೇಳದಿರಲಾರದು. ಈ ಹತಭಾಗ್ಯ ಜನರ ಮನಸ್ಸಿಗೆ ತುಸು ಶಾಂತಿ ದೊರಕಿಸುವುದೇ ಸದ್ಯ ನಮ್ಮ ಪವಿತ್ರ ಧರ್ಮ. ಗಾಂಧಿಜಿ ೧೯೨೧ರಲ್ಲಿಯೇ ಈ ರೀತಿ ಹೇಳಿದ್ದರು. 'ಹಸಿದವರ ಮುಂದೆ ದೇವರು ಸಹ ನಿಲ್ಲಲಾರ; ನಿಂತರೆ ಅನ್ನದ ರೂಪದಲ್ಲಿ ಮಾತ್ರ"

ಸರ್ವರಿಗೂ ಸ್ವಯಂನಿರ್ಣಯ ಹಕ್ಕು

ಅಟ್ಲಾಂಟಿಕ್ ಘೋಷಣೆಯ ದ್ವಿತೀಯ ವಾರ್ಷಿಕೋತ್ಸವದ ನಿಮಿತ್ತ, ಅಧ್ಯಕ್ಷ ರೂಸ್‌ವೆಲ್ಟರು ಒಂದು ಹೇಳಿಕೆಯೀಯುತ್ತಾ, ಸರ್ವರಿಗೂ ಸ್ವಯಂನಿರ್ಣಯ ಹಕ್ಕಿದೆಯೆಂದು ಅಟ್ಲಾಂಟಿಕ ಘೋಷಣೆಯ ಸ್ಪಷ್ಟೀಕರಣ ಮಾಡಿದರು. 'ಹೊಸ ಜಗತ್ತಿನ ನಿರ್ಮಾಣದ ಸಲುವಾಗಿ ಅದರಲ್ಲಿನ ಎರಡು ವಿಷಯಗಳನ್ನು ನಾನು ಸ್ಪಷ್ಟೀಕರಿಸುತ್ತೇನೆ. ೧. ತಮಗಿಷ್ಟಬಂದ ಸರಕಾರವನ್ನು ಸ್ಥಾಪಿಸಲು ಆಯಾ ರಾಷ್ಟ್ರದ ಜನರಿಗಿರುವ ಹಕ್ಕನ್ನು ಒಪ್ಪಿಕೊಳ್ಳುವುದು. ೨. ಕೆಲಸಗಾರರ ಜೀವನ ಮಟ್ಟದ ಸುಧಾರಣೆ, ಸಾಮಾಜಿಕ ಭದ್ರತೆ ಹಾಗೂ ಆರ್ಥಿಕ ವಿಷಯದಲ್ಲಿ ಅನ್ಯೋನ್ಯ ಸಹಾಯ—ಅಟ್ಲಾಂಟಿಕ್ ಘೋಷಣೆಗೆ ಸಹಿ ಮಾಡಿದಾಗ, ಈ ಸ್ವಯಂನಿರ್ಣಯ ತತ್ವ ಅಸಾಧ್ಯವೆಂದು ಹಲವರು ಬಗೆದಿದ್ದರು. ಆದರೆ ಈಗ ಸ್ವಾತಂತ್ರ್ಯ ಸೈನಿಕರು ರಣರಂಗಗಳಲ್ಲಿ ಮುನ್ನುಗ್ಗಿ ಹೋಗುತ್ತಿದ್ದಂತೆ ಈ ಸ್ವಯಂನಿರ್ಣಯ ತತ್ವವು ಜೀವಕಳೆ ಹೊಂದಿದೆ.' ಎಂದು ರೂಸ್‌ವೆಲ್ಟರು ಹೇಳುತ್ತಾ ಪುನಃ ಈ ರೀತಿ ತಿಳಿಸಿದರು:

"೧೯೩೫ರಲ್ಲಿ ಇದೇ ದಿನ (ತಾ. ೧೪) ಅಮೆರಿಕದ ಸಾಮಾಜಿಕ ಭದ್ರತೆಯ ಶಾಸನವು ಜಾರಿಗೆ ಬಂತು. ಮನುಷ್ಯನ ಹಸಿವು ಮೊದಲಾದ ಆರ್ಥಿಕ ಕೊರತೆಯನ್ನು ಹೋಗಲಾಡಿಸುವ ಮಾನವೀ ಪ್ರಯತ್ನವು ಅಂದಿನಿಂದ ಆರಂಭವಾಯಿತು. ಆ ಯೋಜನೆಯಂತೆ ಸುಮಾರು ೬೦ ದಶಲಕ್ಷ ಕೂಲಿಗಾರರು ತಮ್ಮ ಮುದಿತನದ ಮತ್ತು ಕುಟುಂಬ ರಕ್ಷಣೆಗಳ ವ್ಯವಸ್ಥೆ ಮಾಡಿಕೊಳ್ಳುತ್ತಿದ್ದಾರೆ. ಇದರ ಲಾಭವನ್ನು ಈಗಾಗಲೇ ಅನೇಕರು ಹೊಂದಿರುವರು. ಆದರೆ ಈ ಯೋಜನೆಯನ್ನು ಒಕ್ಕಲಿಗರಿಗೂ ಹೊಲಗಳಲ್ಲಿ ದುಡಿಯುವ ಕೆಲಸಗಾರರಿಗೂ ಅನ್ವಯಿಸುವುದು ಅವಶ್ಯವಿದೆ; ಮತ್ತು ನ್ಯಾಯವಿದೆ. ಅನಾರೋಗ್ಯದಿಂದುಂಟಾಗುವ ಆರ್ಥಿಕ ಅಡಚಣೆಗಳನ್ನು ದೂರ ಮಾಡಲೂ ಯೋಜನೆ ಮಾಡಬೇಕಾಗಿತ್ತೆ. ಈ ಯುದ್ಧದಲ್ಲಿ ಬೇಗನೇ ಮಹತ್ವದ ಘಟನೆಗಳು ಸಂಭವಿಸಲಿರುವವು. ಜರ್ಮನಿ, ಜಪಾನು, ಇಟಲಿಗಳು ಮಾತ್ರ ನಮ್ಮ ವೈರಿಗಳಲ್ಲ. ನಿರಂಕುಶಾಧಿಕಾರ, ಅಸಹನೆ, ಅಸ್ಥಿರತೆ, ಅನ್ಯಾಯ ಮೊದಲಾದ ಸಂಸ್ಕೃತಿ ವಿರೋಧ ಶಕ್ತಿಗಳೂ ನಮ್ಮ ಶತ್ರುಗಳು."

ಪ್ರೆಸಿಡೆಂಟ್ ರೂಸ್‌ವೆಲ್ಟರ ಈ ಸ್ಪಷ್ಟೀಕರಣವು ಮಹತ್ವದ್ದಿದೆ. ಅಟಲಾಂಟಿಕ ಘೋಷಣೆಯನ್ನು ಚರ್ಚಿಲರೂ ರೂಸ್‌ವೆಲ್ಟರೂ ಕೂಡಿ ಮಾಡಿದರು. ಚರ್ಚಿಲರು ರೂಸ್‌ವೆಲ್ಟರ ಈ ಸ್ಪಷ್ಟೀಕರಣದಲ್ಲಿ ಒಪ್ಪುತ್ತಾರೆಯೋ ಎಂದು ತಿಳಕೊಳ್ಳುವುದು ಅವಶ್ಯವಿದೆ. ಹಿಂದೆ ಅಟ್ಲಾಂಟಿಕ ಘೋಷಣೆಯು ಭಾರತಕ್ಕೆ ಅನ್ವಯಿಸುತ್ತದೆಯೋ ಎಂದು ಕೇಳಿದಾಗ ಚರ್ಚಿಲರು 'ಇಲ್ಲ' ಎಂದಿದ್ದರೂ, ಆಗಲೂ ರೂಸ್‌ವೆಲ್ಟರೂ ಆ ಘೋಷಣೆ ಈ ಇಡೀ ಜಗತ್ತಿಗೇ ಅನ್ವಯಿಸುತ್ತದೆಂದಿದ್ದರು. ಮಿತ್ರ ಭೂಪತಿಗಳು ಈ ಸಲವೂ ಎರಡು ನಾಲಗೆಗಳಿಂದ ಮಾತನಾಡುತ್ತಾರೋ ನೋಡಬೇಕು!

ಎರ್ಮಾಳು

ಇಲ್ಲಿಯ ಬೋರ್ಡು ಹಾಯರ್ ಎಲಿಮೆಂಟರೀ ಶಾಲೆಯನ್ನು ಜಿಲ್ಲಾ ಬೋರ್ಡು ಪ್ರೆಸಿಡೆಂಟರಾದ ಶ್ರೀ. ಎ. ಲಕ್ಷ್ಮೀನಾರಾಯಣ ರಾಯರು ಸಂದರ್ಶಿಸಿ, ಈ ಶಾಲೆಯು ಅಭಿವೃದ್ಧಿಗೆ ಬಂದಿರುವುದಂತಲೂ ಇಲ್ಲಿಗೆ ಇನ್ನಿಬ್ಬರು ಹೆಚ್ಚಿಗೆ ಉಪಾಧ್ಯಾಯರು ಅಗತ್ಯವೆಂತಲೂ ಅಭಿಪ್ರಾಯ ಕೊಟ್ಟಿರುತ್ತಾರೆ.

ಸತ್ಕಾರ ಕೂಟ—ಮೂಲ್ಕಿ

ಜಿಲ್ಲಾ ಬೋರ್ಡಿನ ಪ್ರೆಸಿಡೆಂಟ್ ಮತ್ತು ವೈಸ್ ಪ್ರೆಸಿಡೆಂಟರುಗಳ ಸನ್ಮಾನಾರ್ಥವಾಗಿ ಮೂಲ್ಕಿ ಬೋರ್ಡ್ ಹಾಯ್ಸ್ಕೂಲಲ್ಲಿ ಒಂದು ಸತ್ಕಾರ ಸಮಾರಂಭವೇರ್ಪಟ್ಟಿತು.

ಜಿಲ್ಲಾ ಸಮಾಚಾರಗಳು

ಅಧಿಕಾರಿಗಳ ಸಮ್ಮತಿಯಿಲ್ಲ

ಜನತಾ ರಂಗಭೂಮಿ (ಪೀಪಲ್ಸ್ ಥಿಯೇಟರ್) ಇದರ ಆರಂಭ ಭಾಷಣವು ಕಳೆದ ಶನಿವಾರ ಶ್ರೀ ಶಿವರಾಮ ಕಾರಂತರಿಂದ ಜರಗಲಿರುವುದಿದ್ದು ಅಧಿಕಾರಿಗಳ ಸಮ್ಮತಿ ಸಿಗದ್ದರಿಂದ ಮುಂದೆ ಬಿತ್ತು!

ಭಾಷಣಗಳು

ಕಳೆದ ಆದಿತ್ಯವಾರ ಸಂಜೆ ಬೆಸೆಂಟ್ ಬಾಲಿಕಾ ಪಾಠಶಾಲೆಯಲ್ಲಿ ಶ್ರೀ ಸಂಜೀವರಾಯರು ಠಾಗೂರ್ ಮತ್ತು ಅರವಿಂದರ ಕುರಿತು ಭಾಷಣವಿತ್ತರು. ಈ ಇಬ್ಬರು ಮಹನೀಯರೊಡನೆ ತನಗಾದ ಪರಿಚಯಗಳನ್ನು ಅವರು ವಿವರಿಸುತ್ತಾ, ಆ ಉಭಯ ಮಹನೀಯರ ಉದಾತ್ತ ಜೀವನವನ್ನು ವರ್ಣಿಸಿದರು.

ಗೋಕರ್ಣನಾಥ ದೇವಾಲಯದಲ್ಲಿ ಶ್ರೀ ಟಿ. ಗೋಪಾಲಕೃಷ್ಣ ಭಟ್ಟರು ರಘುವಂಶದ ಹರಿಶ್ಚಂದ್ರ ಕಾವ್ಯದ ಕುರಿತು ಮಾತನಾಡಿದರು.

ವರ್ಗಾವರ್ಗಿ

ಕುಂದಾಪುರದ ತಹಶಿಲ್ದಾರರಾದ ಮಿ। ಜಿ. ಎಲ್. ಡಿ'ಸೋಜ ಬಿ. ಎ. ಅವರು ದ. ಕನ್ನಡದ "ಗ್ರೈನ್ ರಿಸೆಪ್ಷನ್ ಆಫೀಸರ್"ರಾಗಿ ನೇಮಿಸಲ್ಪಟ್ಟಿರುವುದರಿಂದ ಉಡುಪಿ ಸ್ಟೆ॥ ಸಬ್ ಮ್ಯಾಜಿಸ್ಟ್ರೇಟರಾದ ಶ್ರೀ। ಪಿ. ಎಸ್. ತಿಮ್ಮಪ್ಪ ಸೆಟ್ಟರು ಕುಂದಾಪುರ ತಹಶಿಲ್ದಾರರಾಗಿಯೂ, ಮಿ। ಎಲ್. ಫೆರ್ನಾಂಡೀಸರು ಉಡುಪಿಯ ಸ್ಟೆ॥ ಸಬ್ ಮ್ಯಾಜಿಸ್ಟ್ರೇಟರಾಗಿಯೂ ವರ್ಗಾಯಿಸಲ್ಪಟ್ಟಿದ್ದಾರೆ.

ಕಾಸರಗೋಡಿನ ಅಸಿ॥ ತಹಶಿಲ್ದಾರ್ ಶ್ರೀ। ಪಿ. ಡಿ. ವೆಲಿಯತ್ ಬಿ. ಎ. ಅವರು ಬಂಟ್ವಾಳದ ಡೆಪ್ಯುಟಿ ತಹಶಿಲ್ದಾರರಾಗಿ ನೇಮಿಸಲ್ಪಟ್ಟಿರುವುದರಿಂದ ಶ್ರೀ। ಆರ್. ಎಸ್. ಸುಬ್ರಹ್ಮಣ್ಯಂ ಅವರು ಕಾಸರಗೋಡು ಅಸಿ॥ ತಹಶಿಲ್ದಾರರಾಗಿ ವರ್ಗಾಯಿಸಲ್ಪಟ್ಟಿದ್ದಾರೆ.

ಮಿ। ಎಫ್. ಎಂ. ಪಿಂಟೋ ಅವರು ಮಂಗಳೂರಿನ 'ಟೆಕ್ಸ್‌ಟೈಲ್' (ಬಟ್ಟೆ) ಅಸಿಸ್ಟೆಂಟ್ ಆಫೀಸರರಾಗಿ ನೇಮಿಸಲ್ಪಟ್ಟಿದ್ದಾರೆ.

ಕಾಸರಗೋಡಿನ ಅಸಿ॥ ಕಮರ್ಶಿಯಲ್ ಟ್ಯಾಕ್ಸ್ ಆಫೀಸರ್ ಮಿ। ಬಿ. ಜೆ. ಪಿಂಟೋ ಅವರು ಕಾರ್ಕಳ ಸ್ಟೆ॥ ಸಬ್ ಮ್ಯಾಜಿಸ್ಟ್ರೇಟರಾಗಿ ನೇಮಿಸಲ್ಪಟ್ಟಿರುವುದರಿಂದ, ಜಿಲ್ಲಾ ಲೇಬರ್ ಆಫೀಸರ್ ಶ್ರೀ। ಎಸ್. ದಾಸಪ್ಪಯ್ಯನವರು ಕಾಸರಗೋಡಿನ ಅಸಿ॥ ಕಮರ್ಶಿಯಲ್ ಟ್ಯಾಕ್ಸ್ ಆಫೀಸರರಾಗಿಯೂ, ಶ್ರೀ। ಮನೋಹರಯವರು ಕಾರ್ಕಳದ ಅಸಿ॥ ಕಮರ್ಶಿಯಲ್ ಟ್ಯಾಕ್ಸ್ ಆಫೀಸರರಾಗಿಯೂ, ಕಾರ್ಕಳದ ಅ॥ ಕಮರ್ಶಿಯಲ್ ಟ್ಯಾಕ್ಸ್ ಆಫೀಸರ್‌ರಾದ ಶ್ರೀ। ಯು. ಬಿ. ಗೋಪಾಲಕೃಷ್ಣಯ್ಯ ಬಿ. ಎ. ಅವರು ಮಂಗಳೂರಿನ ಜಿಲ್ಲಾ ಕಮರ್ಶಿಯಲ್ ಟ್ಯಾಕ್ಸ್ ಆಫೀಸರರ ಪರ್ಸನಲ್ ಅಸಿಸ್ಟೆಂಟ್‌ರಾಗಿಯೂ ವರ್ಗಾಯಿಸಲ್ಪಟ್ಟಿರುತ್ತಾರೆ.

ಶ್ರೀ। ಬಿ. ನಾರಾಯಣ ರಾವ್ ಪುತ್ತೂರಿನ ಅಸಿ॥ ತಹಶಿಲ್ದಾರರಾಗಿಯೂ, ಶ್ರೀ। ಕೆ. ವೆಂಕಪ್ಪ ಅವರು ಪುತ್ತೂರು ಸ್ಟೆ॥ ಸಬ್ ಮ್ಯಾಜಿಸ್ಟ್ರೇಟರಾಗಿಯೂ ನೇಮಿಸಲ್ಪಟ್ಟಿದ್ದಾರೆ.

ಮಿ। ಪೋಟೆನ್‌ರವರು ನಮ್ಮ ಜಿಲ್ಲಾ ಲೇಬರ್ ಆಫೀಸರರಾಗಿ ನೇಮಕಹೊಂದಿದ್ದಾರೆ.

ಉಡುಪಿ

ದ. ಕ. ಜಿಲ್ಲಾ ಹಿಂದು ಮಹಾಸಭೆ

ಇದರ ಪಂಚಮ ವಾರ್ಷಿಕೋತ್ಸವವು ಕಳೆದ ಉಡುಪಿಯಲ್ಲಿ ಜರಗಿತು. ಶ್ರೀ ಬಿ. ವಾಮನಾಚಾರ್ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಪಂ. ಮಂಜುನಾಥ ಶೆಣೈಯವರಿಂದ ವೈದಿಕ ಪ್ರಾರ್ಥನೆಯಾದ ಮೇಲೆ ಕಾರ್ಯದರ್ಶಿ ಅಲೆವೂರು ಶೇಷಪ್ಪಯ್ಯನವರು ವರದಿ ವಾಚನಮಾಡಿದರು. ನೂತನ ವರ್ಷದ ಕಾರ್ಯಕಾರೀ ಮಂಡಳಿಗೆ ೧೫ ಮಂದಿಯನ್ನು ಆರಿಸಲಾಯಿತು. ಶ್ರೀ ಎಸ್. ನಾಗರಾಜಯ್ಯನವರು (ಅಧ್ಯಕ್ಷ) ಶ್ರೀ ಪಿ. ಎಂ. ಎಲ್. ಆಚಾರ್ ಮತ್ತು ಶ್ರೀ ಸುಬ್ಬಣ್ಣಯ್ಯ ಇವರು ಉಪಾಧ್ಯಕ್ಷರು, ಶ್ರೀ ಅಲೆವೂರು ಶೇಷಪ್ಪಯ್ಯ ಮತ್ತು ಶ್ರೀ ಕೇಶವರಾಮಚಂದ್ರ ಶೆಣೈ ಇವರು ಕಾರ್ಯದರ್ಶಿಗಳು. ಶ್ರೀ ಪರಶುರಾಮಚಾರ್ಯರು ಆಫೀಸು ಸೆಕ್ರಟರಿ.

ಕಾಸರಗೋಡಿನಲ್ಲಿ ಕೈದು

ನೀಲೇಶ್ವರದ ಶ್ರೀ. ಎಂ. ಕುಂಞಂಬು ನಾಯರ್, ಹೊಸದುರ್ಗದ ಶ್ರೀ ಕೇಶವನ್, ಕಾಸರಗೋಡಿನ ಶ್ರೀಯುತ ಅಚ್ಯುತನ್ ಮತ್ತು ಪಿ. ವಿ. ಕದಂಬಳಿತ್ತಾಯ ಇವರು ತಾ. ೬ನೇ ದಿನ ರಾತ್ರಿ ಬಂಧಿಸಲ್ಪಟ್ಟರು.

ಕಾಸರಗೋಡ್ ತಾಲೂಕಿನ ರೈಲು ನಿಲ್ದಾಣಗಳನ್ನೂ ಕೆಲವೆಡೆ ರೈಲು ಹಾದಿಗಳನ್ನೂ ರಿಜರ್ವ ಪೋಲೀಸರು ಪಹರೆ ಮಾಡುತ್ತಿರುವರು.

ಕಮ್ಯುನಿಸ್ಟ ಕಚೇರಿಯ ಜಪ್ತಿ

ಮುಳಿಯಾರು ಗ್ರಾಮದ ಕಮ್ಯುನಿಸ್ಟ್ ಆಫೀಸನ್ನು ಪೋಲೀಸರೂ ರಿಜರ್ವ ಪೋಲೀಸರ ಒಂದು ಪಡೆಯೂ ತಾ. ೫ರಂದು ಶೋಧಿಸಿ ಕೆಂಪು ಬಾವುಟವನ್ನೂ ಕೆಲವು ರಿಕಾರ್ಡು ಫೈಲುಗಳನ್ನೂ ವಶಮಾಡಿಕೊಂಡಿರುವರು.

ನೀಲೇಶ್ವರ

ತಾ. ೧೫ರಂದು ನೀಲೇಶ್ವರದ ರಾಜಾಸ್ ಹೈಸ್ಕೂಲ್ ಕನ್ನಡ ವಿದ್ಯಾರ್ಥಿ ಸಂಘದ ಉದ್ಘಾಟನಾ ಸಮಾರಂಭವು, ಶ್ರೀ ಮುಳಿಯ ತಿಮ್ಮಪ್ಪಯ್ಯರ ಅಧ್ಯಕ್ಷತೆಯಲ್ಲಿ ನೆರವೇರಿತು. 'ನಾಡು ಬಾರದ ಸಾಹಿತ್ಯವೆಂತಿರಬೇಕು?'—ಎಂಬ ಕುರಿತು ಅವರು ವಿವರಿಸಿ ಭಾಷಣವಿತ್ತರು. ಕೊನೆಗೆ ಕನ್ನಡ ಸಾಹಿತ್ಯದ ಹೊಸ—ಹಳೆಯ ಹಾದಿಗಳನ್ನು ಸಿಂಹಾವಲೋಕಿಸುತ್ತಾ, 'ನಾನು ಇತ್ತೀಚೆಯ ಹೊಸ ಸಾಹಿತಿಗಳನ್ನೂ ಅವರ ಬರಹದ ಕ್ರಮಗಳನ್ನೂ ಟೀಕಿಸಲು ಬಯಸುವುದಿಲ್ಲ. ಆ ಕಾಲವು ಇದಲ್ಲ—ಇನ್ನೂ ಬಂದಿಲ್ಲ, ಮುಂದೆ ಬರಲಿದೆ' ಎಂದರು. ಅಲ್ಲದೆ, ಮಲಯಾಳ—ಕನ್ನಡಗಳ ಗಡಿನಾಡಿನಂತಿರುವ ಇಲ್ಲಿ, ಇತ್ತಂಡದವರೂ ತಮ್ಮ ಭಾಷೆಗಳು ಮೇಲು ಕೀಳೆಂದು ಹೊಡೆದಾಡಿಕೊಳ್ಳಬಾರದೆಂದೂ, 'ಸಾಹಿತ್ಯ'ವೆಂಬುದು ಯಾವುದಾದರೂ ಒಂದೇ ಆಗಿದೆಯೆಂದೂ ಒಂದೊಂದು ಅದರದರ ಪಾಡಿಗೆ ಬೆಳೆಯುತ್ತಿರಬೇಕೆಂದೂ ಹೇಳಿದರು. ಕಾರ್ಯದರ್ಶಿ ಪಿ. ಎಸ್. ಭಟ್ಟರ ಧನ್ಯವಾದಾರ್ಪಣೆಯೊಂದಿಗೆ ಸಭೆ ಕೊನೆಗೊಂಡಿತು.



ಯುದ್ಧದ ದೆಸೆಯಿಂದಾಗಿ ಎಂಡ್ರೂಸ್ ಲಿವರ್‌ಸಾಲ್ಟ್ ಈಗ ದೊರೆಕುವುದಿಲ್ಲವೆಂಬುದು ವಿಷಾದಕರವಿದೆ. ಆದರೆ ಅಂತರ್ರಾಷ್ಟ್ರೀಯ ಪರಿಸ್ಥಿತಿ ಸುಧಾರಿತವಾದ ಕೂಡಲೇ ಇದು ಖಂಡಿತ ದೊರಕುವುದು.

ಸಿನೇಮಾ ಸುದ್ದಿ

ಭಾರತದ ಅತ್ಯುತ್ತಮ ೧೦ ಚಿತ್ರಗಳು

೧. ಅಪ್ನಾಫರ್, (ಸಿರ್ಕೊ) ೨. ಗಾರ್ ಮಿಲ್ (ಚಿತ್ರಬಾನಿ) ೩. ಬೊಂದಿ (ಚಿತ್ರರೂಪ) ೪. ಭರತ್ ಮಿಲಾಪ್ (ಪ್ರಕಾಶ್) ೫. ಸೌಗಂದ್ (ನ್ಯೂಥಿಯೇಟರ್ಸ್) ೬. ಡಾಕ್ಟರ್ (ನ್ಯೂಥಿಯೇಟರ್ಸ್) ೭. ಕುಂವಾರ್ ಬಾಪ್ (ಆಚಾರ್ಯ) ೮-ಬಸಂತ್ (ಬಾಂಬೆ ಟಾಕೀಸ್) ೯. ಶೇಷ್ ಉತ್ತರ್ (ಜವಾಬ್) (ಎಂ ಪಿ. ಪಿ) ೧೦. ಲಗನ್ (ನ್ಯೂಥಿಯೇಟರ್ಸ್).

ಉತ್ತಮ ನಟರು

೧. ಬಂಗಾಳಿ ಚಿತ್ರದಲ್ಲಿ ನಟ ಜಹಾರ್ ಗಂಗೂಲಿ 'ಬೋಂಡಿ' ಚಿತ್ರದಲ್ಲಿ ನಟಿ-ಕಾನನ್ ದೇವಿ, ಶೇಷ್ ಉತ್ತರ್ (ಜವಾಬ್) ಚಿತ್ರದಲ್ಲಿ.

೨. ಹಿಂದೀ ಚಿತ್ರದಲ್ಲಿ ನಟ- ಚಂದ್ರಮೋಹನ್ 'ಅಪ್ನಾಪರ್' ಚಿತ್ರದಲ್ಲಿ ನಟಿ—ದುರ್ಗಾಖೋಟೆ ಭರತ್ ಮಿಲಾಪ್

ಉತ್ತಮ ನಿರ್ದೇಶಕರು

೧. ಬಂಗಾಳಿ ಚಿತ್ರದಲ್ಲಿ ಶೈಲಜಾನಂದ ಮು-ಖರ್ಜಿ 'ಬೋಂಡಿ' ಚಿತ್ರ ನಿರ್ದೇಶಕರು.

೨ ಹಿಂದಿ ಚಿತ್ರದಲ್ಲಿ ದೇವಕಿಬೋಸ್ ಅಪ್ನಾಘರ್ ಚಿತ್ರ ನಿರ್ದೇಶಕರು.

೧೯೪೨ರ ಉತ್ತಮ ಚಿತ್ರಗಳು

೧ ಬಂಗಾಲಿ ಬೋಂಡಿ(ಚಿತ್ರರೂಪ)

೨. ಹಿಂದಿ ಅಪ್ನಾಘರ್ (ಸಿರ್ಕೊ)

ಇದು ಬಂಗಾಳಿ ಪತ್ರಿಕೋದ್ಯೋಗಿ ಸಂಘದ ತೀರ್ಮಾನ

ಪೈಜಾಮ್ ಹುಡುಗಿಯರು!

'ಖಜಾಂಚಿ' ಚಿತ್ರ ಬಂದ ಮೇಲೆ ಹುಡುಗಿಯರಿಗೆ ಆ ಮುಸ್ಲಿಂ ಪಂಜಾಬೀ ಡ್ರೆಸ್ ಹಾಕಲು ಇಷ್ಟ ಬಹಳವಾಗಿದೆ ಸಿನೆಮಾ ತಾರೆಗಳನ್ನು ಅನುಕರಿಸುವುದು ಎಂದು ನಮ್ಮ ಹುಡುಗಿಯರ ಭ್ರಾಂತೇ, ಸಿನೆಮಾ ನಿರ್ಮಾಪಕರೂ ಈ ಸೂತ್ರ ಕಂಡುಕೊಂಡರು ಇತ್ತೀಚೆಯ ಎಷ್ಟೋ ಚಿತ್ರಗಳಲ್ಲಿ 'ಪೈಜಾಮ್ ಹುಡುಗಿ'ಯರನ್ನೇ ಕಾಣಬಹುದು ಇದು ಎಲ್ಲಿವರೆಗೆ ಹೋಯಿತೆಂದರೆ ಮುದುಕಿ ದುರ್ಗಾಖೋಟಿಯೂ 'ತಸ್ವೀರ್' ಚಿತ್ರದಲ್ಲಿ ಈ 'ಪೈಜಾಮ್ ಹುಡುಗಿ'ಯಾಗಿ ಕಾಣಿದಳು! ಎಷ್ಟೋ ಮಂದಿ ಹುಡುಗಿಯರು 'ಪೈಜಾಮ್' ಹಾಕಿಯೇ ಈ ಚಿತ್ರ ನೋಡಲು ಹೋದರು! ದುರ್ಗಾಖೋಟೆಯ ಈ ವೇಷ ನೋಡಿ ಅವರಿಗೇ ಅಸಹ್ಯವೆನಿಸಿರಬೇಕು! ಕೆಲ ಸಿನೆಮಾ ನಿರ್ಮಾಪಕರೂ ಇದರಿಂದ ಬುದ್ಧಿ ಕಲಿತಿದ್ದಾರೀಗ ತಮ್ಮ ತಾರೆಗಳ ಕುರೂಪ ಕಾಲುಗಳಿಂದ ಅವರೀಗ ಪೈಜಾಮ್‌ಗಳನ್ನು ಕಳಚುವುದರಲ್ಲಿದ್ದಾರೆ! ದೊಡ್ಡ ದೊಡ್ಡ ನಗರಗಳಲ್ಲಿ ಪೈಜಾಮ್ ಹುಡುಗಿಯರನ್ನು ಬೀದಿಗಳಲ್ಲಿ, ಕ್ಲಬ್ಬುಗಳಲ್ಲಿ, ಶಾಲೆಗಳಲ್ಲಿ ಕಾಣಬಹುದು!

ನಿಮಗಿದು ಗೊತ್ತಿದೆಯೆ?

ಭಾರತೀಯ ಸಿನೆಮಾಗಳಲ್ಲಿ ಚುಂಬನ ಬೇಕೆಂದು ಸಾರಿದ ಸುಶೀಲಾ ರಾಣಿಯ ನಿಜವಾದ ಹೆಸರು ಸುಶೀಲಾ ತೊಂಬಟ್ ಎಂದು! ಈಕೆ ಮದ್ರಾಸು ಪ್ರಾಂತದವಳು. ಒಮ್ಮೆ ಓರ್ವ ಐ ಎಂ. ಎಸ್. ಆಫೀಸರನು ಸುಶೀಲಾ ತೊಂಬಟ್ ಮದ್ರಾಸಿನ ರೇಡಿಯೋದಿಂದ ಹಾಡುವುದನ್ನು ಬಹಳ ಕುತೂಹಲದಿಂದ ಕೇಳಿ, ಆಕೆ ತನ್ನ ಪ್ರಣಯಿನಿ ಎಂದು ನಿಟ್ಟುಸಿರೆಳೆದಿದ್ದ! ಆದರೆ ಆಕೆ ಈಗ ಬಾಬುರಾವ್ ಪರೇಲನ ಮರೆ ಹೊಕ್ಕಿರುವಳು!

೧೮೯೬ರ ಅಕ್ಟೋಬರ ೧೭ರಂದು ಅಮೆರಿಕದಲ್ಲಿ ಪ್ರಥಮ ಸಿನೆಮಾ ತಯಾರಿಸಲ್ಪಟ್ಟಿತು

ಪ್ರತಿಮಾದಾಸ ಗುಪ್ತಳ ಗಂಡ ಮಿ। ಹಕ್, ಸೈನ್ಯದಲ್ಲಿ ಓರ್ವ ಅಧಿಕಾರಿಯಾಗಿದ್ದಾನೆ. ಇತ್ತೀಚೆಗೆ ಬೊಂಬಯಿಗೆ ಬಂದೀತನು, ಅವಿವಾಹಿತ ಯುವಕರೊಡನೆ ಮಾತನಾಡುತ್ತಾ, 'ನಟಿಯನ್ನು ಮದುವೆಯಾಗಬೇಡಿ' ಎಂದು ಉಪದೇಶಿಸಿ ಹೋದ.

ಪ್ರತಿಮಾ ದೇವಿಯು ಸ್ಟಾಲಿನ್ ಭಕ್ತಳು ಜಾಕೋಬ್ ಸರ್ಕಲ್‌ನ ಆಕೆಯ ಮನೆಯಲ್ಲಿ ದೊಡ್ಡದೊಂದು ಸ್ಟಾಲಿನ್ ಫೋಟೋ ಇದೆ.

'ತಾನ್‌ಸೇನ್' ನಿರ್ಮಾಪಕ ಜಯಂತ ದೇಸಾಯಿ ಸುರತಿನ ಸಿನೆಮಾ ಒಂದರಲ್ಲಿ ಬುಕ್ಕಿಂಗ್ ಕ್ಲಾರ್ಕ್ ಆಗಿದ್ದ

ಸಿನೆಮಾ ಪ್ರವೃತ್ತಿಯಲ್ಲಿರುವ ಉಜ್ವಲ ಕಾಂಗ್ರೆಸ್ ಭಕ್ತರೆಂದರೆ ಸೇಠ್ ಸುಗುಣಚಂದ್ ಇವರು, ಭಾರತ್ ಪಿಕ್ಚರ್ಸ್‌ನ ಮೇನೇಜಿಂಗ್ ಡೈರೆಕ್ಟರ್ ಇವರು, ಸದ್ಯ ಡಿ। ಕಾನೂನಿನನ್ವಯ ಸೆರೆಮನೆಯಲ್ಲಿದ್ದಾರೆ ವನಮಾಳಲ ಗಂಡನೂ ಕಾಂಗ್ರೆಸ್ ಭಕ್ತ, ಸೆರೆಮನೆ ಸೇರಿದ್ದಾನೆ

'ಕಿಸ್ಮೆತ್'ನಲ್ಲಿ ಅಭಿನಯಿಸಿದ ಚಂದ್ರಪ್ರಭಾ ನಯಪಳ್ಳಿಯವರ ಸಾದಿನಿ.

ಕಿವಿ ನೋವಿನಿಂದಾಗಿ ೧೯೩೪ರ ಮೇಲೆ ನಿತಿನ್ ಬೋಸರು ಒಂದೇ ಒಂದು ಚಲಚ್ಚಿತ್ರವನ್ನೂ ಕಂಡಿಲ್ಲ.

ಅಶೋಕ ಕುಮಾರ್ ಹಿಂದೆ ಬೊಂಬಯಿ ಟಾಕೀಸ್ ಲೆಬರಿಟರಿಯಲ್ಲಿ ಅಸಿಸ್ಟಾಂಟ್. ತಿಂಗಳಿಗೆ ೭೫ ರೂಪಾಯಿ ಸಂಬಳ ಪಡೆಯುತ್ತಿದ್ದ ಆಗ ಆತನಲ್ಲಿ ಪ್ಲೆನಲಿನ ಒಂದೇ ಚಲ್ಲಣವಿತ್ತು ಬಗೆ ಬಗೆಯ ಡ್ರೆಸ್ಸು ಇರಲಿಲ್ಲ ಇಂದು ಅರ್ಧ ಲಕ್ಷ ರೂಪಾಯಿ ಧನಿಕ ವಿಲ್ಸ್ಮಾನದ ಡೈರೆಕ್ಟರ್. ತಿಂಗಳಿಗೆ ರೂ ೨೦೦೦ ದುಡಿಯುತ್ತಾನೆ, ಅಲಂಕಾರ ಪುರುಷನಾಗಿದ್ದಾನೆ.

ಅಮಿಯ ಚಕ್ರವರ್ತಿ ಬೊಂಬಯಿ ಟಾಕೀಸ್ ಉಪಹಾರಗೃಹ ವಿಭಾಗದಲ್ಲಿ ಗುಮಾಸ್ತನಾಗಿದ್ದ ಮುಂದೆ ಟೈಪಿಸ್ಟ್ ಆದ ಅನಂತರ ಕಥಾ ಲೇಖಕನಾದ. ಇಂದು 'ಬಸಂತ್' ದಿಗ್ದರ್ಶಿಸಿ ಖ್ಯಾತಿ ವಿಖ್ಯಾತಿ ಗಳಿಸಿದ್ದಾನೆ!

ಮಂಗಳೂರು

ಚಲಚ್ಚಿತ್ರ ವಿಮರ್ಶಕ ಸಂಘ

ಇಥರ ವಾರದ ಸಭೆಯು ಶ್ರೀ ರೊಡ್ರಿಗಸ್ ಇವರ ಅಧ್ಯಕ್ಷತೆಯಲ್ಲಿ ಸೇರಿ 'ಶಾರದಾ' ಚಿತ್ರವು ಒಳ್ಳೆಯದಿಲ್ಲವೆಂದೂ ಕರ್ತರದು ಹಿಂದೂ ಕತೆಗಳನ್ನು ದಿಗ್ದರ್ಶಿಸುವಾಗ ಎಚ್ಚರದಿಂದಿರಬೇಕೆಂದೂ ಭರತ್ ಭೇಟ್' ಉತ್ತಮ ಚಿತ್ರವೆಂದೂ ವಿಮರ್ಶಿಸಲಾಯಿತು ಶ್ರೀ ಕಯ್ಯಾರ ಕಿಞ್ಞಣ್ಣರೈಗಳು ವಾರ್ಷಿಕ ವರ್ಗಣಿಯನ್ನು ರೂ ಒಂದು ಮಾಡಬೇಕೆಂದು (ರೂ ಮೂರು ಎಂದು ಹಿಂದೆ ನಿರ್ಣಯಿಸಲಾಗಿತ್ತು) ತಂದ ನಿರ್ಣಯವೂ ಶ್ರೀ ಕೆ. ಕೆ. ಕುಂದ ಶಿವರಾಯರು ಆರು ತಿಂಗಳಿಗೊಮ್ಮೆ ಅಧಿಕಾರೀ ಮಂಡಲ ಬದಲಾಗಬೇಕೆಂದು ತಂದ ನಿರ್ಣಯವೂ ಮಂಜೂರಾದವು

ವೃದ್ಧಿಯಿಂದ ಅಭಿವೃದ್ಧಿ.

ಗತ ೧೯೪೨ನೇ ವರ್ಷದಿಂದ ಚಾಲು ೧೯೪೩ನೇ ಪ್ರಾರಂಭದ ಮಾಸಗಳು ಬಹು ಅಪಾಯಗಳಿಂದಲೂ ಹಾಗೂ ಸುಯೋಗಗಳಿಂದಲೂ ತುಂಬಿ ತುಳುಕಿದ್ದವು ಜಾಣತೆಯಿಂದ ವ್ಯವಸ್ಥೆ ಮಾಡಲ್ಪಟ್ಟ ಸಂಸ್ಥೆಗಳು ಈ ಅಪಾಯಗಳನು ತಳ್ಳಿ ಸುಸಂದರ್ಭಗಳನ್ನು ಉಪಯೋಗಿಸಿ ಶೀಘ್ರನೆ ಮುಂದುವರಿದವು

೧೯೪೦, ೪೧ರಲ್ಲಿ ಕೆನರಾ ಬೇಂಕು ೯೦ ಲಕ್ಷ ಠೇವಣೆಗಳ ಮತ್ತು ಒಂದು ಕೋಟಿ ಸಾಂಪತ್ತಿಕ ಸ್ಥಿತಿಯಲ್ಲಿದ್ದ ಅಂದು ಸಹ ಅದು ವಿಸ್ತ್ರತ ಸ್ಥಿತಿಯ ಸಂಸ್ಥೆಯಾಗಿತ್ತು ಇಂದು ಠೇವಣೆಗಳು ಇಮ್ಮಡಿಯಾಗಿವೆ ಸಾಂಪತ್ತಿಕ ಸ್ಥಿತಿಯು ಎರಡುವರೆ ಕೋಟಿಗೆ ಮಿಕ್ಕಿದೆ ಹಾಗೂ ತೆತ್ತ ಮೂಲಧನವು ನಾಲ್ಮಡಿಯಾಗಿದೆ

ಜಾಣತನದ ವ್ಯವಸ್ಥೆಯ ಏರ್ಪಾಟಿನಿಂದಲೂ, ಆತ್ಮವಿಶ್ವಾಸದಿಂದಲೂ, ದೃಢಬುದ್ಧಿಯಿಂದಲೂ, ಯೋಗ್ಯ ಸೇವೆಯನ್ನು ಸಲ್ಲಿಸಿದರಿಂದಲೂ, ಇಂದಿನ ಈ ಪ್ರಗತಿಗೆ ಕಾರಣಭೂತರಾದ ಸಾರ್ವಜನಿಕರ ಮೆಚ್ಚಿಗೆಗೆ ಪಾತ್ರರಾಗಿ ಇನ್ನು ಮುಂದಕ್ಕೂ ಮಹತ್ತರ ಸೇವೆಯನ್ನು ಒಪ್ಪಿಸಲು ಸಮರ್ಥರಾಗಲು ನಾವು ಹಾರೈಸುವೆವು

Canara Bank Limited.

ಕೆನರಾ ಬೇಂಕ್ ಲಿಮಿಟೆಡ್.

ಸ್ಥಾಪನೆ 1906

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದುದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

The Bank of Mangalore Limited, Mangalore.

ESTD. 1931

HEAD OFFICE Mangalore.

BRANCHES Moodabidri & Padubidri.

The Bank Undertakes to Collect Cheques, Demand and Documentary Bills at Most Competitive Rates.

ISSUES DRAFTS ON ALL IMPORTANT TOWNS IN THE DISTRICT

and also on

BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.

at very favourable rates

All kinds of inland banking business undertaken

(Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾ ಬೇನೆ, ಪಕ್ಷವಾತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಜೀವವಿಮೆ ಮಾಡುವ ಪ್ರಯೋಜನವು ಇಂದು ಹಿಂದಿಗಿಂತ ಅಧಿಕವಾಗಿದೆ.

ದಿ ಬಾಂಬೆ ಲೈಫ್ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಇದರಲ್ಲಿ ಒಂದು ಪಾಲಿಸಿ ಪಡೆದು

ಈಗಲೇ ನೀವು ನಿಮ್ಮನ್ನು ಮತ್ತು ನಿಮ್ಮನ್ನು ಹೊಂದಿಕೊಂಡಿರುವವರನ್ನು ರಕ್ಷಿಸಿಕೊಳ್ಳಿರಿ!

ಪ್ರತಿನಿಧಿಗಳಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಇನ್ಶೂರ್ ಮಾಡಲು ಅಥವಾ ಮಾಹಿತಿ ತಿಳಕೊಳ್ಳಲು ದಯಮಾಡಿ ಬರೆಯಿರಿ!

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

—: ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ : —

ಬೆಂಗಳೂರು ಬೊಂಬಾಯಿ ಮದ್ರಾಸು ಕಲ್ಲಿಕೋಟೆ ಮಂಗಳೂರು ಮತ್ತು ತ್ರಿವೇಂಡ್ರಂ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವ ವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು:—

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಷ್ಟೋ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೊ:—1. ಮರಾಠ ಗಲ್ಲಿ ಹುಬ್ಬಳ್ಳಿ.

2. 36 ಫ್ಯಾಕ್ಟರೀಸ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಶ್ರೀಕರ ಕಸ್ತೂರಿ ಮಾತ್ರೆ ಸಮಸ್ತ ಶೀತವಾತ ರೋಗಗಳಿಗೆ ಸಿದ್ಧೌಷಧ.

ಶ್ರೀಕರ ಬಾಲಸಂಜೀವಿನಿ ಮಕ್ಕಳ ಸುಖಭೇದಿಗೆ ಉತ್ತಮೌಷಧ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಕು 27—8—1943 [ಸಂಚಿಕೆ 35]

'ಉಪವಾಸದಿಂದ ಸಾಯುವವರ ಪ್ರಾಣವುಳಿಸಿರಿ!'

ಚರ್ಚಿಲ್ ರೂಸ್‌ವೆಲ್ಟರಿಗೆ ಕಲ್ಕತ್ತದ ತಂತ್ರಿ!

ಬರ್ಮ ದೇಶದ ಕೈಗೊಂಬೆ ಸರಕಾರ—

ಮಿತ್ರರ ವಿರುದ್ಧ ಯುದ್ಧ ಸಾರಿತು

ಮೊನ್ನೆ ಅಗಸ್ಟ ತಾ. ೧೯ಕ್ಕೆ ಬರ್ಮದೇಶಕ್ಕೆ ಜಪಾನವು ಸ್ವಾತಂತ್ರ್ಯ ಕೊಟ್ಟಂತೆ ಮಾಡಿ ಅದನ್ನು ತನ್ನ ಅನುಯಾಯಿ ಸ್ವತಂತ್ರ ರಾಷ್ಟ್ರಗಳ ಗುಂಪಿನಲ್ಲಿ ಸೇರಿಸಿತು. ಮಂಚೂರಿಯದಂತೆ ಬರ್ಮ ದೇಶವೂ ಜಪಾನಿನ ಕೈಗೊಂಬೆಯಾಯಿತು. ಬರ್ಮ ದೇಶದ ಈಗಿನ ಮುಖ್ಯ ಮಂತ್ರಿ ಬಾ ಮೋ—ಇವರು ಒಂದು ಪ್ರಿವಿ ಕೌನ್ಸಿಲನ್ನು ತಮ್ಮ ಬೆಂಬಲಿಗರ ಸಹಾಯದಿಂದ ರಚಿಸಿದ್ದು ಇತ್ತೀಚಿಗೆ ಸಿದ್ಧವಾದ ಹೊಸ ಎಸೆಂಬ್ಲಿಯಲ್ಲಿ ಬರ್ಮ ದೇಶವು ಮಿತ್ರರ ವಿರುದ್ಧ ಯುದ್ಧ ಹೂಡಿದೆಯೆಂದು ಸಾರಿದರು, ಎಂಬುದಾಗಿ ಬರ್ಮ ದೇಶ ಸರಕಾರದ ಓರ್ವ ಪ್ರಮುಖ ಅಧಿಕಾರಿಗಳು ತನಗೆ ಸಂದರ್ಶನ ಕಾಲದಲ್ಲಿ, ತಿಳಿಸಿದರೆಂದು 'ಬೊಂಬೇ ಟಾಯಿಮ್ಸ್' ಪತ್ರಿಕೆಯಲ್ಲಿಯ ವಿಶೇಷ ಸುದ್ದಿಗಾರನು ತಿಳಿಸುತ್ತಾನೆ.

ಬರ್ಮ ದೇಶಕ್ಕೆ ಸಂಪೂರ್ಣ ಸ್ವಾತಂತ್ರ್ಯ?

ಬರ್ಮ ದೇಶಕ್ಕೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟಿರುವುದಾಗಿ ಜಪಾನರು ಮಾಡಿದ ಘೋಷಣೆ ಮೋಸದಿಂದ ಕೂಡಿದ್ದೆಂದೂ, ಗುಲಾಮಗಿರಿಯಲ್ಲಿರುವ ಜನರ ಸ್ನೇಹಗಳಿಸುವದಕ್ಕಾಗಿ ಹೀಗೆ ಮಾಡಲಾಗುತ್ತಿದೆಯೆಂದೂ ಚೀನಿ ಸರಕಾರದ ಯುದ್ಧಖಾತೆಯ ಮಂತ್ರಿ ಹೇಳಿದನು. ಸ್ವಾತಂತ್ರ್ಯ ಸಿಕ್ಕಿದ ಕೂಡಲೇ ಬರ್ಮ ದೇಶವು ಮಿತ್ರರಾಷ್ಟ್ರಗಳ ವಿರುದ್ಧ ಯುದ್ಧ ಸಾರಿತಂತೆ! ಆ ದೇಶದ ಜನ ಧನಗಳನ್ನು ಉಪಯೋಗಿಸುವದಕ್ಕಾಗಿ ಹೀಗೆ ಮಾಡಲಾಗಿದೆಯೆಂದೂ ಆ ಮಂತ್ರಿಯ ಅಭಿಪ್ರಾಯ.

ವೈಸರಾಯ್ ದಂಪತಿಗಳು ಮೈಸೂರಲ್ಲಿ

ವೈಸರಾಯ ದಂಪತಿಗಳು ಕೌಂಟೆಸ್ ಹೋಪ್‌ಟವುನ್ ಹಾಗೂ ತಮ್ಮ ಪರಿವಾರ ಸಮೇತ ತಾ. ೨೦ರಂದು ವಿಮಾನದಲ್ಲಿ ಬೆಂಗಳೂರಿಗೆ ಬಂದು ಮೈಸೂರು ಸಂಚಾರ ಮಾಡುತ್ತಾರೆ. ಯುದ್ಧದಲ್ಲಿ ಮಹಾರಾಜರು ಹೇಗೆ ಪ್ರೋತ್ಸಾಹ ತೆಕ್ಕೊಂಡಿದ್ದಾರೆಂಬುದನ್ನು ಅವರ ಮುಂದೆ ಪ್ರದರ್ಶಿಸಲಾಯಿತು. ವೈಸರಾಯ್ ದಂಪತಿಗಳು ಮೈಸೂರಿನ ಬೇರೆ ಬೇರೆ ಸಂಸ್ಥೆಗಳನ್ನು ಸಂದರ್ಶಿಸಿದರು. ಮೈಸೂರು ಸರಕಾರದ ಕಡೆಯಿಂದ ವೈಸರಾಯ ದಂಪತಿಗಳಿಗೆ ಸನ್ಮಾನ ಸತ್ಕಾರಗಳು ನಡೆದವು.

ಬರ್ಮದೇಶಕ್ಕೆ ಸ್ವಾತಂತ್ರ್ಯ?

ಗಡಿನಾಡು ಎಸೆಂಬ್ಲಿಯ ತಮಾಷೆ!

ಪ್ರತಿಪಕ್ಷದವರು ಇಂದಿದ್ದರೂ ಕಾನೂನು ಪಾಸಾದವು!

ಗಡಿನಾಡಿನ ಎಸೆಂಬ್ಲಿಯಲ್ಲಿ ಅರ್ಧ ಗಂಟೆಯೊಳಗೆ ಆರು ಸರಕಾರಿ ಕಾನೂನುಗಳ ಮೂರು ವಾಚನಗಳೂ ಪಾಸಾದವು. ಎಸೆಂಬ್ಲಿ ಇತಿಹಾಸದಲ್ಲಿಯೇ ಎಂದೂ ಎಲ್ಲಿಯೂ ಆಗದ ದಾಖಲೆಯಿದು. ಪ್ರತಿ ಪಕ್ಷದ (ಕಾಂಗ್ರೆಸ್) ಸದಸ್ಯರಾರೂ ಹಾಜರಾಗಲಿಲ್ಲ. ಮಂತ್ರಿಗಳ ಸಂಬಳದ ಮಸೂದೆಯಲ್ಲಿ ಮುಖ್ಯ ಮಂತ್ರಿಗಳಿಗೆ ೧೬೫೦ ರೂ, ಉಳಿದವರಿಗೆ ೧೫೦೦ ರೂ, ಸ್ಪೀಕರರಿಗೆ ೧೨೫೦ ರೂ. ಸಂಬಳ! ಕಾಂಗ್ರೆಸ್ ಮಂತ್ರಿಗಳು ರೂ. ೫೦೦ ಪ್ರತ್ರ ಸ್ವೀಕರಿಸಿದ್ದರು! ಎಸೆಂಬ್ಲಿಯ ಕಾರ್ಯಕಲಾಪಗಳನ್ನು ಪ್ರಸಿದ್ಧ ಕಾಂಗ್ರೆಸ್ ಪ್ರಮುಖರಾದ ಸಯ್ಯದ್ ಕೇಯುಮ್ ಶಾಹವರು ಪ್ರೇಕ್ಷಕರ 'ಗೆಲರಿ'ಯಿಂದ ನೋಡುತ್ತಿದ್ದರು.

ಅನ್ನವಿಲ್ಲದ ಕಲ್ಕತ್ತ

ಕಲ್ಕತ್ತವಿಂದು ಆಹಾರವಿಲ್ಲದೆ ಬಳಲುತ್ತಿದೆ. ಬಂಗಾಳ ಪ್ರಾಂತವಿಡೀ ಬರಗಾಲ ಪೀಡಿತವಾಗಿದೆ. ಬಂಗಾಳದ ಹಳ್ಳಿಹಳ್ಳಿಗಳಿಂದ ಅನ್ನವಿಲ್ಲದೆ ಅಲೆದಾಡುವ ಜನರು ಕಲ್ಕತ್ತಕ್ಕೆ ಬಂದು ಸೇರುತ್ತಾರೆ. ಇದರಿಂದೀಗ ನಗರದ ಪರಿಸ್ಥಿತಿ ಹದಗೆಟ್ಟಿದೆ. ಸರಕಾರವು ಏನು ಮಾಡಬೇಕೆಂದು ತಿಳಿಯದೆ ಬಹಳ ಕಳವಳಕ್ಕೊಳಗಾಗಿದೆ. ರೋಗಪೀಡಿತರು, ಹೊಟ್ಟೆಗಿಲ್ಲದೆ ಅಲೆದಾಡುವವರು, ಭಿಕ್ಷುಕರು ಇವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು ನಗರವು ಆರೋಗ್ಯ ದೃಷ್ಟಿಯಿಂದ ಬಹಳ ಕೆಟ್ಟಿದೆ. ಸರಕಾರದವರು ಇದನ್ನು ನಿವಾರಿಸುವ ಯೋಜನೆಗಳನ್ನು ಅಭ್ಯಾಸಮಾಡುತ್ತಿದ್ದಾರೆ. ಭಿಕ್ಷುಕರನ್ನೆಲ್ಲಾ ಹಿಡಿದು ಒಂದು ಕಡೆಗೆ ಹಾಕಲಾಗುತ್ತದೆ. ಮಾರ್ಗಗಳಲ್ಲಿ ಬಿದ್ದಿರುವ ಹೆಣಗಳನ್ನು ಬೇಗಬೇಗನೇ ತೆಗೆಯಲಾಗುತ್ತದೆ. ಮರಣ ಸನ್ನಿಹಿತರಾಗಿ ಬೀದಿಗಳಲ್ಲಿ ಬಿದ್ದಿರುವವರನ್ನು ಆಸ್ಪತ್ರೆಗಳಿಗೆ ಸಾಗಿಸಲಾಗುತ್ತದೆ. ನಗರದ ಹಲವು ಭಾಗಗಳನ್ನು ಆಗಾಗ ಗುಡಿಸಿ ಸ್ವಚ್ಛಮಾಡಿಡಲಾಗುತ್ತದೆ. ಕಳೆದ ಒಂದು ವಾರದಲ್ಲಿ ಮರಣ ಸನ್ನಿಹಿತರಾಗಿ ಬಿದ್ದ ೫೦೦ ಜನರನ್ನು ಆಸ್ಪತ್ರೆಗಳಿಗೆ ಸಾಗಿಸಲಾಯಿತು. ಇವರಲ್ಲಿ ೧೦೦ ಜನರು ಸತ್ತೇ ಹೋದರು. ೬೦೦ಕ್ಕೆ ಮಿಕ್ಕಿದ ಜನರನ್ನು ಬಿಕ್ಷೆಬೇಡಬಾರದೆಂಬ ಕಾನೂನಿನಂತೆ ಒಂದು ವಾರದಲ್ಲಿ ಪೋಲೀಸರು ಸೆರೆಹಿಡಿದರು. ನಗರಕ್ಕೆ ಹೊರಗಿನಿಂದ ಹೆಚ್ಚು ಜನ ಬರದಂತೆ ನೋಡಿಕೊಳ್ಳಲಾಗುತ್ತದೆ. ನಗರದಲ್ಲಿ ಶುದ್ಧ ನೀರಿನ ಪೂರೈಕೆ ಯೋಜನ ಮಾಡಲಾಗುತ್ತದೆ. ಹೀಗೆ ಇಡೀ ಬಂಗಾಳವು ಅದರಲ್ಲೂ ಜನಸಬಿಡವಿದ್ದ ಕಲ್ಕತ್ತವು ಅನ್ನವಿಲ್ಲದೆ ನರಳುತ್ತಿದೆ!

> **ಉಪವಾಸದಿಂದ ಸಾಯುವ ಜನರ ಪ್ರಾಣವುಳಿಸಿರಿ!**
>
> ಚರ್ಚಿಲ್ ರೂಸ್‌ವೆಲ್ಟರಿಗೆ ಕಲ್ಕತ್ತ ಮೇಯರ್ ತಂತಿ
>
> ಕಲ್ಕತ್ತದಲ್ಲಿ ಆಹಾರವಿಲ್ಲದೆ ಉಪವಾಸ ಬಿದ್ದು ಸಾಯುವ ಜನರ ಸಂಖ್ಯೆ ದಿನದಿಂದ ದಿನಕ್ಕೆ ಮಿತಿಮೀರುತ್ತಿದೆ. ಕಲ್ಕತ್ತ ಮೇಯರ್ ಸಯ್ಯದ್ ಬದ್ರುದ್ದೋಜಾರು ಕ್ವಿಬೆಕಿನಲ್ಲಿರುವ ಚರ್ಚಿಲ್ ರೂಸ್‌ವೆಲ್ಟರಿಗೆ ಕೆಳಗಿನ ಒಂದು ತಂತಿಕಳುಹಿಸಿದ್ದಾರೆ: 'ಆಹಾರ ಅಭಾವದಿಂದ ಬಂಗಾಳ ಪ್ರಾಂತ ಹಾಗೂ ಕಲ್ಕತ್ತ ನಗರದಲ್ಲಿ ಸಂಕಷ್ಟ ಪರಿಸ್ಥಿತಿಯೊದಗಿದೆ. ಪ್ರಾಂತದ ಜನರಿಗೆ ಆಹಾರ ಸಿಗದೆ ಅನೇಕರು ಉಪವಾಸದಿಂದ ಸಾಯುತ್ತಿದ್ದಾರೆ. ದಯಮಾಡಿ ಅಮೆರಿಕಾ, ಆಸ್ಟ್ರೇಲಿಯಾ, ಹಾಗೂ ಜಗತ್ತಿನ ಬೇರೆ ದೇಶಗಳಿಂದ ಹಡಗಗಳಲ್ಲಿ ಆಹಾರ ಸಾಮಗ್ರಿ ಕಳುಹಿಸಿ ಈ ಸಾಯುವ ಜನರ ಪ್ರಾಣವುಳಿಸಿರಿ'.

ವಿದ್ಯಾರ್ಥಿಗಳನ್ನು ಧರ್ಮಾಂತರಗೊಳಿಸಕೂಡದು

ಬೊಂಬಯಿ ಸಿನೆಟ್ ನಿರ್ಣಯ.

ಒಂದು ಧರ್ಮದ ವಿದ್ಯಾರ್ಥಿಯನ್ನು ಇನ್ನೊಂದು ಧರ್ಮಕ್ಕೆ ಮತಾಂತರಿಸುವದು ಸರಿಯಲ್ಲವೆಂದು, ಬೊಂಬಯಿ ವಿಶ್ವವಿದ್ಯಾಲಯಕ್ಕೆ ಸೇರಿದ ಯಾವುದೇ ವಿದ್ಯಾಲಯದಲ್ಲಾಗಲಿ ಅಥವಾ ಅದಕ್ಕೆ ಹೊಂದಿಕೊಂಡಿರುವ ಯಾವುದೇ ವಿದ್ಯಾಲಯದಲ್ಲಾಗಲಿ ಇಂಥಾ ಧರ್ಮಾಂತರವನ್ನು ಈ ವಿಶ್ವವಿದ್ಯಾಲಯವು ಮಾಡಗೊಡಕೂಡದೆಂದೂ ಪ್ರೊ. ಕೆ. ಟಿ. ಶಾರವರು ತಂದ ನಿರ್ಣಯವು ಬೊಂಬಯಿ ಸಿನೆಟಿನಲ್ಲಿ ಮಂಜೂರಾಯಿತು.

"ನಿಮಗೆಷ್ಟು ಗೊತ್ತೊ ನಮಗೂ ಅಷ್ಟೇ ಗೊತ್ತಿರುವುದು"

ಗಾಂಧಿ ಭೇಟಿ ವಿಚಾರ

ಮಹಾತ್ಮಾ ಗಾಂಧಿಯವರು ಹಾಗೂ ವರ್ಕಿಂಗ್ ಕಮಿಟಿ ಸದಸ್ಯರು ಆಗಾಖಾನ್ ಅರಮನೆಯಲ್ಲಿ ಭೇಟಿಯಾಗಿ ರಾಜಕೀಯ ಪರಿಸ್ಥಿತಿ ವಿಚಾರಿಸಿ ಅಗಸ್ಟ ನಿರ್ಣಯ ಹಿಂತೆಗೆವ ವಿಚಾರ ಚರ್ಚೆ ಮಾಡಿದರೆಂದು—ಒಂದು ಸುದ್ದಿ ಪ್ರಕಟವಾಗಿದೆಯಷ್ಟೆ? ಈ ಸುದ್ದಿಯ ಸತ್ಯಾಂಶದ ಕುರಿತು ಸರ್ ರಾಮಸ್ವಾಮಿ ಮುದಲಿಯರರೊಡನೆ ಪತ್ರಿಕಾ ಪ್ರತಿನಿಧಿಗಳು ಪ್ರಶ್ನಿಸಿದಾಗ, 'ನಿಮಗೆಷ್ಟು ಗೊತ್ತೋ ನಮಗೂ ಅಷ್ಟೇ ಗೊತ್ತು' ಎಂದು ಅವರು ಉತ್ತರವಿತ್ತರು.

'ಪೀಪಲ್ಸ್‌ವಾರ್' ಪತ್ರಿಕೆ ಮೇಲೆ ನೋಟಿಸು

೧೫೦೦ ರೂ. ಜಾಮೀನು

ಬೊಂಬಯಿ ಸರಕಾರವು, ಭಾರತ ಮುದ್ರಣ ಶಾಸನದ ವಿಶೇಷ ಕಾಯಿದೆಯನ್ವಯ ಭಾರತದ ಕಮ್ಯುನಿಸ್ಟ ಪಕ್ಷದ ಪತ್ರಿಕೆ 'ಪೀಪಲ್ಸ್‌ವಾರ್' ಮತ್ತು ಅದು ಮುದ್ರಿತವಾಗುವ 'ನ್ಯೂ ಏಜ್' ಮುದ್ರಣಾಲಯದಿಂದ ಪ್ರತ್ಯೇಕ ಪ್ರತ್ಯೇಕ ರೂ. ೧೫೦೦ ಜಾಮೀನು ಕೇಳಿದ್ದಾರೆ. ಪತ್ರಿಕೆಯ ಪ್ರಕಾಶನ ಕಚೇರಿ ಜಪ್ತಿಮಾಡಿ ಕಯ್ಯೂರು ಹುತಾತ್ಮರ ಸಂಬಂಧದ ಮರಾಠೀ ಹಸ್ತಪತ್ರಿಕೆಯನ್ನು ಪೋಲೀಸರು ಜಪ್ತಿಮಾಡಿಕೊಂಡು ಹೋಗಿರುವರು.

ಗಾಂಧೀಜಿ

ಸಂತನೋ? ಸರ್ವಾಧಿಕಾರಿಯೋ?

ಒಂದು ಸಂಶಯ ನಿವಾರಣೆ!

'ಗಾಂಧೀಜಿ, ಸಂತನೋ ಸರ್ವಾಧಿಕಾರಿಯೋ? ಶುದ್ಧ ಹೃದಯದ ರಾಷ್ಟ್ರಪ್ರೇಮಿಯೋ ಪಕ್ಷಹಿಡಿದು ಹೋರಾಡುವ ರಾಜತಂತ್ರಜ್ಞನೋ?' ಈ ಪ್ರಶ್ನೆ ಹರ್ಬರ್ಟ್ ಎಲ್. ಮೇಥ್ಯೂ ಇವರು ಕೇಳುತ್ತಾರೆ! ಭಾರತದಲ್ಲಿ 'ನ್ಯೂಯಾರ್ಕ್ ಟೈಮ್ಸ್' ಪತ್ರಿಕಾ ಬಾತ್ಮಿದಾರರಾಗಿ ಇವರು ಕೆಲಕಾಲ ಕೆಲಸಮಾಡಿದ್ದರು. ಮೇಥ್ಯೂರವರು ಭಾರತದ ವಿಚಾರ, ಪೂರ್ವ ಭಾವೀ ದುರಭಿಪ್ರಾಯವಿದ್ದವರಾದರೂ, ಅಭ್ಯಾಸ ಮಾಡಿದವರು

ಹಾಗಾಗಿ ಅವರ ಮಾತಿನಲ್ಲಿ ಕೆಲವು ಸಂದೇಹವಿದೆ. ಅವರು ಇತ್ತೀಚೆಗೆ 'ನ್ಯೂಯಾರ್ಕ್ ಟೈಮ್ಸ್ ಮೆಗೆಜಿನ್' ನಲ್ಲಿ ಬರೆದ ಲೇಖನ ಒಂದು ಅವರ ಹೃದಯ ಸಂದೇಹವನ್ನು ಹೊರಗೆಡುವುತ್ತದೆ. ಅವರನ್ನುತ್ತಾರೆ, 'ಗಾಂಧಿಜಿಯ ಗುಟ್ಟೆಂದರೆ ರಾಜಕೀಯದಲ್ಲಿ ಧರ್ಮವನ್ನು ಒಂದು ಆಯುಧವನ್ನಾಗಿ ಉಪಯೋಗಿಸುವುದು. ಏಕೆಂದರೆ ಭಾರತದಲ್ಲಿ ಧರ್ಮವೆಂಬುದು ಬಹಳ ಶಕ್ತಿಯುತವಾದ ವಿಶ್ವಾಸವಾಗಿದೆ ಗಾಂಧಿಜಿಗಿರುವ ಜನತಾ ಬೆಂಬಲ ಅವರ ಕೇವಲ ರಾಜಕೀಯಭಿಪ್ರಾಯದಿಂದ ಮಾತ್ರ ಅಲ್ಲ. ಹಿಂದುಗಳು ಅವರನ್ನು ಪೂಜಿಸುವುದೇಕೆಂದರೆ, ಅವರು ಗಾಂಧಿಜಿಯನ್ನು ಮಹಾ ಸಂತರೆಂದು ನಂಬುತ್ತಾರೆ', ಆದರೆ ಅವರ ಈ ಮಾತು ಸಾವಿರ ಸುಳ್ಳೆಂಬುದನ್ನು ಮೇಥ್ಯೂರವರು ತಿಳಿದಿರಬೇಕು

ಗಾಂಧಿಜಿ ಧರ್ಮಾತ್ಮರೆಂಬುದು ನಿಜ. ಆದರೆ ಅವರಿಗಿಂತ ಧರ್ಮಾತ್ಮರು ಬೇರಿದ್ದರು, ಇದ್ದಾರೆ, ಪಂಡಿತ ಮಾಲವೀಯರು ಅರವಿಂದ ಘೋಷರು ಮಾತ್ರವಲ್ಲ ಇನ್ನೆಷ್ಟೋ ಶಂಕರಾಚಾರ್ಯರು, ಋಷಿಗಳು, ಸ್ವಾಮಿಗಳು ಹೀಗೆ ಸಾವಿರಾರು ಮಂದಿ ರಾಜಕೀಯದಲ್ಲಿಯೂ ಇದ್ದಾರೆ ಗಾಂಧಿಜಿಯನ್ನು ಅವರ ಸಾಲಿಗೆ ಹಿಡಿದರೆ ಧರ್ಮದ ವಿಚಾರ ಅವರ ಬೊಬ್ಬೆ ಹೆಚ್ಚಾದೀತು. ಮಹಾತ್ಮರು ಸ್ವತಃ ಬ್ರಾಹ್ಮಣರಲ್ಲ. ಭಾರತದಲ್ಲಿ ದೈವ ಭಕ್ತಿಯ ಸಂತರ ಸಂತಾನ ಸಾವಿರವಿದೆ ಆದರೆ ಇವರಲ್ಲಿ ರೀಗಿ ಒಬ್ಬ ಧರ್ಮ ಧುರೀಣರೂ ಗಾಂಧಿಜಿಯಷ್ಟು ಜನತಾ ಬೆಂಬಲ ಪಡೆದಿಲ್ಲ ಗಾಂಧಿಜಿಯ ಅರ್ಧ ಪ್ರಭಾವವೂ ಅವರಿಗಿಲ್ಲ ಇದು ಯಾಕೆಂದು ಮೇಥ್ಯೂ ಬಲ್ಲರೆ?

ಗಾಂಧಿಜಿ ಬಿಡಿ, ಆ ವಿಜ್ಞಾನ ದೃಷ್ಟಿಯ ತಾರಮಾರ್ಥಿಕ ವ್ಯವಹಾರದ, ಆಸ್ತಿಕ್ಯವಾದೂರನೆನಿಸಿದ ಪಂಡಿತ ಜವಾಹರಲಾಲ ನೆಹರು ಇದ್ದಾರಲ್ಲ, ಅವರು ಗಾಂಧಿಜಿ ನಂತರ ಇಡೀ ಭರತ ಖಂಡದಲ್ಲಿ ಪ್ರಸಿದ್ಧರಾಗಿರುವುದು ಏಕೆಂದು ಮೇಥ್ಯೂ ತಿಳಿದಿದ್ದಾರೆಯೆ? ವಿದೇಶೀ ಪತ್ರಿಕೋದ್ಯಮಿಗಳು ವರ್ಣಿಸುವಂತೆ ಭಾರತವು ಅಷ್ಟರ ಮಟ್ಟಿಗೆ ಧರ್ಮಾಂಧವಾಗಿದ್ದರೆ ಇಷ್ಟೆಲ್ಲಾ ಬೇರೆ ಬೇರೆ ಶಂಕರಾಚಾರ್ಯರು ಬಾಳಿ ಬದುಕಿರುವಾಗಲೇ ನೆಹರು ಈ ಪ್ರಸಿದ್ಧಿ ಶಿಖರಕ್ಕೇರಿದ್ದು ಹೇಗೆ? ಈ ಪ್ರಶ್ನೆ, ಸರಳ ಪ್ರಶ್ನೆ ಮೇಥ್ಯೂರವರ ಕಣ್ಣು ತೆರೆಯಿಸಬಹುದು!'

"ಹಿಂದುಗಳು ಗಾಂಧಿಜಿಯನ್ನು ಪೂಜಿಸುವುದೇಕೆಂದರೆ 'ಅವರು ಓರ್ವ ಸಂತರೆಂದು ಅವರ ಭಾವನೆ?' ಹೀಗೆ ಮೇಥ್ಯೂ ಹೇಳುತ್ತಾರೆ. ಅಬ್ದುಲ್ ಗಫರ್ ಖಾನ್ ಹಿಂದುವಲ್ಲ; ಆದರೂ ಭಾರತದಲ್ಲಿ ಇನ್ನಾರೂ ಅನುಸರಿಸದಷ್ಟು ವಿಶ್ವಾಸ ಭಕ್ತಿಗಳಿಂದ ಅವರು ಗಾಂಧಿಜಿಯನ್ನು ಅನುಸರಿಸುತ್ತಾರೆ. ಪಂಡಿತ ನೆಹರುವಿಗೆ ಸಂತ ಸನಾತನಿಗಳನ್ನು ಕಂಡರೆ ಆಗದು. ಅವರಾದರೂ ಗಾಂಧಿಜಿಯನ್ನು ಹಾಗೆ ಪೂಜಿಸುವುದು ಏಕೆ? ಭಾರತದಲ್ಲಿ ಮಿಲಿಯಾಂತರ ಮಂದಿ ಯುವಕರಿದ್ದಾರೆ, ಪ್ರಕಟವಾಗಿಯೂ ಅಪ್ರಕಟವಾಗಿಯೂ ಅವರೆಲ್ಲರೂ ನಾಸ್ತಿಕರು; ಏನಿಲ್ಲದಿದ್ದರೂ ಧರ್ಮಾಂಧರಲ್ಲದವರು. ಅವರಾದರೂ ಮಹಾತ್ಮರನ್ನು ಹಾಗೆ, ಪೂಜಿಸುವುದು ಏಕೆ? ಮೇಥ್ಯೂ ಹೇಳಿ ನೋಡುವ–ಏಕೆ? ಇದು ಏಕೆ?.

ಭಾರತದಲ್ಲಿ ಹೀಗೆ ಧರ್ಮಾಂಧರಿದ್ದಾರೆಂದು ಮೇಥ್ಯೂ ಹೇಳಿದ್ದರ ಗುಟ್ಟು ಇಲ್ಲಿದೆ. ವಿದೇಶೀ ಪತ್ರಿಕಾ ಬಾತ್ಮೀದಾರರು ಹೀಗೆಯೇ ಬರೆಯಬೇಕು, ಏಕೆಂದರೆ 'ಭಾರತೀಯರು ಧರ್ಮಾಂಧರು; ಧರ್ಮಕ್ಕಾಗಿ ಜಗಳಾಡುವವರು; ಹಿಂದುಗಳು ಮುಸ್ಲಿಮರು ಹೊಡೆದಾಡಿಕೊಳ್ಳುತ್ತಾರೆ ಅವರಲ್ಲಿ ರಾಜಿಯಿಲ್ಲ.' ಹೀಗೆಲ್ಲಾ ಹೇಳಿದರೆ ಮಾತ್ರ ಇಲ್ಲಿನ ರಾಷ್ಟ್ರೀಯ ಆಂದೋಲನಕ್ಕೆ ವಿದೇಶಗಳಲ್ಲಿ ಸಹಾನುಭೂತಿ ಕಡಿಮೆ ಆದೀತು, ಅದರ ಶಕ್ತಿ ಕುಗ್ಗೀತು, ಭಾರತೀಯರು ಪ್ರಜಾಪ್ರಭುತ್ವ ಹಾಗೂ ಸ್ವಯಂಭರಣಕ್ಕೆ ಅನರ್ಹರೆಂದು ಸಾಧಿಸಿದ ಹಾಗಾದೀತು ಮೇಥ್ಯೂ ನಿಜ ಹೇಳಿ, ಇದಲ್ಲವೇ ಇದರ ಗುಟ್ಟು?

ಕ್ವಿಬೆಕ್ ನಲ್ಲಿ ಕೂಡಿದ ಚರ್ಚಿಲ್ ರೂಸ್‌ವೆಲ್ಟರು ಮಹಾ ಮಹಾ ರಾಜತಂತ್ರ ವಿಚಾರ ಚರ್ಚಿಸಲು ಸಭೆ ಸೇರಿದರೂ, ಆಗಾಗ ಅವರವರ ಧಾರ್ಮಿಕ ವಿಧಿ ತೀರಿಸಲು ಸಭೆ ಮುಂದುವರಿಸುತ್ತಾರೆ ಆದರೆ ಯಾರೂ ಅವರನ್ನು ಧಾರ್ಮಿಕ ಧುರೀಣರೆನ್ನುವುದಿಲ್ಲ. ಇಂಗ್ಲೆಂಡಿನ ದೇವಾಲಯಗಳಾದರೂ, ಬ್ರಿಟಿಷ್ ರಾಜ್ಯಪದ್ಧತಿಯ ಒಂದಂಶ, ಆದರೆ ಯಾರೂ ಇಂಗ್ಲಿಷರನ್ನು ಧರ್ಮಾಂಧರೆನ್ನುವುದಿಲ್ಲ. ಅಮೆರಿಕನರಾದರೂ ಬರ್ಟ್ರೆಂಡ್ ರಸೆಲ್ ನಂಥಾ ಆಚಾರ್ಯರನ್ನು ತಮ್ಮ ಯುನಿವರ್ಸಿಟಿಗಳಲ್ಲಿ ಇಟ್ಟುಕೊಳ್ಳುವುದಿಲ್ಲ. ಆದರೆ ಯಾರೂ ಅಮೆರಿಕನರನ್ನು ಧರ್ಮಾಂಧರೆನ್ನುವುದಿಲ್ಲ. ಯೆಹೂದಿ, ಕೆಥೊಲಿಕ್, ನಾಸ್ತಿಕ ಇವರಾರೂ ಅಮೆರಿಕದ ಅಧ್ಯಕ್ಷರಾಗಕೂಡದು. ಆದರೂ ಅಮೆರಿಕರನ್ನು ಧರ್ಮಾಂಧರೆಂದು ಯಾರೂ ಕರೆದಿಲ್ಲ.

ಆದರೆ ಹಿಂದು ಅಲ್ಲದ ಅಜಾದರನ್ನು, ತಮ್ಮ ಅಧ್ಯಕ್ಷರಾಗಿ ಆರಿಸಿದ, ಧರ್ಮಾಂಧರಲ್ಲದ ನೆಹರುಗಳನ್ನು ಆರಾಧಿಸುವ ಭಾರತೀಯರೆಲ್ಲರೂ ಧರ್ಮಾಂಧರು ಎಂದು ಹೇಳಲು ಮತ್ತಾರೆ! ಇದರ ಗುಟ್ಟು ಏನೆಂದು ಪ್ರತ್ಯೇಕ ಯಾಕೆ ಹೇಳಬೇಕು! ಇದರಂತೆ ಮೇಥ್ಯೂರವರ ಇನ್ನೊಂದು ಆರೋಪವಿದೆ. ಗಾಂಧಿಜಿ ಸರ್ವಾಧಿಕಾರಿಯೆಂದು! ಮೆಥ್ಯೂ ಬರೆಯುತ್ತಾರೆ: "ಗಾಂಧಿಜಿ ಓರ್ವ ಸರ್ವಾಧಿಕಾರಿಯೆಂದು ತಿಳಕೊಳ್ಳಬೇಕಾದುದು ಅವಶ್ಯ. ದಯಾಭಾವದಿಂದ ಒಲಿಸಿಕೊಳ್ಳುವ ಶಕ್ತಿಯಿದೆ, ಆದರೆ ಯಾವಾಗಲೂ ಒಪ್ಪಿಸುವವರು, ಆದ್ದರಿಂದಲೇ ಅವರು ಸರ್ವಾಧಿಕಾರಿ. ಕಾಂಗ್ರೆಸ್ ಪಕ್ಷ ಮತ್ತು ಚಳವಳದಲ್ಲಿ ಗಾಂಧಿಜಿ ಸಂಪೂರ್ಣ ಸರ್ವಾಧಿಕಾರಿ; ಗಾಂಧಿಜಿ ಅನುಯಾಯಿಗಳು ಕಾಂಗ್ರೆಸನ್ನು ಒಂದು ರೀತಿಯಿಂದ ಒಂದು ಪಕ್ಷದ ಆಡಳಿತ ಮಾಡಿದ್ದಾರೆ, ಹೇಗೆಂದರೆ ನಾಜಿ ಮತ್ತು ಫೇಸಿಸ್ಟರಂತೆ! ಇಟಲಿಯವರಿಗೆ, ಮುಸಲನಿ ಪಕ್ಷ ಹೇಳುತ್ತಿದ್ದಂತೆ! 'ಮುಸಲನಿ ಮಾಡಿದ್ದು ಯಾವಾಗಲೂ ಸರಿ' ಎಂದು! ಕಾಂಗ್ರೆಸಿನವರು, ಗಾಂಧಿಜಿ ಮಾಡಿದ್ದು ಯಾವಾಗಲೂ ಸರಿಯೆಂದು ತಿಳಕೊಳ್ಳುತ್ತಾರೆ; ಇಲ್ಲವಾದರೆ ಅವರಿಗೆ ಹಾಗೆ ತಿಳಿಸಲಾಗುವುದು,'' ಈ ಮಾತಿನಲ್ಲಿಯೂ ಸತ್ಯಾಂಶವಿಲ್ಲವೆಂಬುದು ಸೂರ್ಯ ಪ್ರಕಾಶದಷ್ಟು ಸಮ ಗಾಂಧಿಜಿ ಕಾಂಗ್ರೆಸಿನ ಸರ್ವಾಧಿಕಾರಿ ಎಂಬುದು ಸುಳ್ಳು ಅನೇಕ ಸಲ ಇದು ಸುಳ್ಳಾಗಿದೆ ಮುಸಲನಿ, ಹಿಟ್ಲರನು ಎಂದಾದರೂ ಉಪವಾಸ ಮಾಡಿದ್ದುಂಟೆ? ಅವರು ಎಂದಾದರೂ ಪಕ್ಷದ ಸದಸ್ಯತ್ವಕ್ಕೆ ರಾಜಿನಾಮೆಯಿತ್ತುದ್ದುಂಟೆ?

"ಗಾಂಧಿಜಿ ತನ್ನ ಪಕ್ಷದಲ್ಲಿ ಸ್ವರಾಜ್ಯ ಪಕ್ಷ, ಕೌನ್ಸಿಲು ಪಕ್ಷ, ಬದಲಾವಣೆಯಿಲ್ಲದ ಪಕ್ಷ, ಕೌನ್ಸಿಲು ಪ್ರವೇಶಿಸಬೇಕೆನ್ನುವ ಪಕ್ಷ, ಸುಬಾಸರನ್ನು ಅಧ್ಯಕ್ಷತೆಗೆ ಆರಿಸಿದ ಪಕ್ಷ, ಸಂಪೂರ್ಣ ಅಹಿಂಸೆಯನ್ನು ಬಿಡಬೇಕೆನ್ನುವ ಪಕ್ಷ, ಇವುಗಳಿಗೆಲ್ಲಾ ಸಂದರ್ಭವಿತ್ತಂತೆ ಹಿಟ್ಲರ್ ಮುಸಲನಿ ಸಂದರ್ಭವಿತ್ತಿದ್ದಾರೆಯೇ? ಪೂನಾ ನಿರ್ಣಯಪ್ರಕಾರ ಸರ್ವಾಧಿಕಾರಿಗಳೆದುರು ಹೋರಾಡಲು ಕಾಂಗ್ರೆಸಿನವರು ಕತ್ತಿ ಕಟ್ಟಲೂ ಸಿದ್ಧರಾಗಿರಲಿಲ್ಲವೆ? ಸರ್ವಾಧಿಕಾರಿಯು ಯಾರಾದರೂ ತನ್ನ ಪಕ್ಷದರು ಹೀಗೆಲ್ಲಾ ಮಾಡಲು ಬಿಟ್ಟಾನೇ ಹೇಗೆ? 'ಕಾಂಗ್ರೆಸು, ನಾಜಿ ಅಥವಾ ಫೇಸಿಸ್ಟ್ ಪಕ್ಷದಂತೆ ನಿಯಮಬದ್ಧವಾಗಿದೆ' ಎಂಬ ಮೇಥ್ಯೂರವರ ಮಾತುಗಳಿಗೆ ನಾವು ಹೇಳುವುದೆಂದರೆ, ಕಾಂಗ್ರೆಸ್ ಅಧಿವೇಶನವನ್ನವರು ಒಮ್ಮೆ ತೆರೆದ ಕಣ್ಣುಗಳಿಂದ ನೋಡಬೇಕೆಂದು! ಅಂತೆಯೇ ಅವರು ನಾಜಿ ಪಕ್ಷದ ಅಧಿವೇಶನಕ್ಕೂ ಹೋಗಿ ನೋಡಬೇಕು. ಹಾಗಿದ್ದರೂ, ಯಾರ ಕಣ್ಣು ಕುರುಡೋ, ಯಾರ ಅಭಿಪ್ರಾಯ ಪೂರ್ವ ಭಾವೀ ದುರಭಿಪ್ರಾಯ ದೂಷಿತವೋ ಅಂಥವರು ಮಾತ್ರ ಈ ರೀತಿ ಹೇಳಬಲ್ಲರು; ಈ ರೀತಿ ಸುಳ್ಳು ಸಾಧಿಸಬಲ್ಲರು.

'ಗಾಂಧಿಜಿ ಪ್ರಭಾವ, ಧರ್ಮದಿಂದಾಗಲಿ, ಸರ್ವಾಧಿಕಾರದಿಂದಾಗಲಿ ಆಗಿಲ್ಲ'ವೆಂದರೆ ಇನ್ನೇತರಿಂದ ಎಂದು ಅವರು ಪ್ರಶ್ನಿಸಬಹುದು, ಇದಕ್ಕೆ ನಮ್ಮ ಉತ್ತರ ಇಲ್ಲಿದೆ. ಮೆಥ್ಯೂಗಿಂತಲೂ ಶ್ರೇಷ್ಠ ಅಮೆರಿಕನರಾದ ಪರ್ಲ್ ಬಕ್ ಹೀಗೆ ಬರೆಯುತ್ತಾರೆ.

'ವಿಶ್ವದ ಇತರ ಜನರಂತೆ, ಚೀನದ ಜನರೂ ಯಾರು ನಿಜವಾಗಿ ಮಹಾತ್ಮರೋ ಯಾರು ದೊಡ್ಡ ಕೆಲಸಮಾಡಿದ್ದಾರೋ ಅವರನ್ನು ಹಿಂಬಾಲಿಸುತ್ತಾರೆ. ಇದು ಪೂರ್ವ ಮತ್ತು ಪಶ್ಚಿಮಗಳ ಒಂದು ದೊಡ್ಡ ವ್ಯತ್ಯಾಸ, ಪಾಶ್ಚಾತ್ಯ ಲೋಕದಲ್ಲಿ ಒಬ್ಬನನ್ನೇ ಅನುಸರಿಸುವುದೆಂದರೆ, ಅದು ಅಪಾಯ, ಅಲ್ಲಿ ಅನೇಕ ಪಕ್ಷಪಂಗಡವಿದ್ದರೆ ಮಾತ್ರ ಒಳ್ಳೆಯದು, ಆದರೆ ವಿಶ್ವದ ಜನರು ಓರ್ವ ಒಳ್ಳೆಯವನನ್ನು ಹಿಂಬಾಲಿಸುವಾಗ ಅಪಾಯವಿಲ್ಲ, ಅದು ಒಳ್ಳೆದೆಂದು ತಿಳಿದು ಹಿಂಬಾಲಿಸುತ್ತಾರೆ. ವಿಶ್ವದಲ್ಲಿ ಮನ ಪೂರ್ವಕ ಹಿಂಬಾಲಿಸುವುದು, ಪಾಶ್ಚಿಮಾತ್ಯಲೋಕದಲ್ಲಿ ಒತ್ತಾಯ ಬಲತ್ಕಾರಗಳಿಂದ ಇದೇ ಭಾರತದಲ್ಲಿ ಗಾಂಧಿಜಿಗಿರುವ ಮಹತ್ವಕ್ಕೆ ಕಾರಣ ಪಾಶ್ಚಿಮಾತ್ಯರಿಗೆ ಈ ಪ್ರಭಾವ ದೊರಕಲಾರದು ಆದರೆ ವಿಶ್ವದ ಜನರೂ ಸರಿಯಾಗಿ ಬುದ್ಧಿವಂತರು. ಸರಕಾರವು ದೊಡ್ಡ ರಾಜಕೀಯ ಯಂತ್ರವಿರಬಹುದು, ಆದರೆ ಸರಕಾರವು ಸರಕಾರವನ್ನು ನಿರ್ಮಿಸಿದ ಜನರಿಗಿಂತ ಮಹತ್ವವಲ್ಲ ಆದರೆ ಒಳ್ಳೆಯವನೂ, ಬುದ್ಧಿವಂತನೂ ಆದ ನಿಜವಾದ ಜನತಾ ಮುಂದಾಳುವು ಯಾವಾಗಲೂ ದೊಡ್ಡವನೇ'

ಬ್ರಿಟಿಷ್ ಮಿತ್ರ ಗಾಂಧಿ!

"ನಾನು ಬ್ರಿಟಿಷರನ್ನು ಪ್ರೀತಿಸುತ್ತೇನೆ. ಅವರು ನನಗೆ ನನ್ನ ದೇಶ ಬಾಂಧವರಂತೆ ಪ್ರೀತಿಯವರು. ಹಿಂಸೆಯ ಪ್ರವಾಹ ಹರಿಯಿಸಿ ನನ್ನ ಮಾತೃಭೂಮಿಗೆ ಸ್ವಾತಂತ್ರ್ಯ ಪಡೆಯುವ ಬದಲು, ನಾನು, ನನ್ನ ಮಾತೃಭೂಮಿಯ ಸ್ವಾತಂತ್ರ್ಯಕ್ಕಾಗಿ, ಶತಮಾನಗಳ ವರೆಗಾದರೂ ಕಾಯಲು ಸಿದ್ಧನಿದ್ದೇನೆ."

— ಗಾಂಧಿಜಿ —

ಶ್ರೀಮತಿ ಕಮಲಾದೇವಿಯವರನ್ನು "ಪೆರೋಲಿನ" ಬಿಡುಗಡೆ

ವೆಲ್ಲೂರಿನಲ್ಲಿ ಡೆಟನ್ಯೂ ಆಗಿರುವ ಶ್ರೀಮತಿ ಕಮಲಾ ದೇವಿಯವರನ್ನು ವೈದ್ಯಕೀಯ ಕಾರಣಗಳಿಂದ, ಒಂದು ತಿಂಗಳ ಮಟ್ಟಿಗೆ ಕಾವಲಿನ ಮೇಲೆ, ವೆಲ್ಲೂರಿನ ಮಹಿಳೆಯರ (ಪ್ರಿಸಿಡೆನ್ಸಿ) ಜೈಲಿನಿಂದ ಬಿಡುಗಡೆ ಮಾಡಲಾಗಿದೆ. ಶ್ರೀಮತಿಯವರು ರಕ್ತದ ಒತ್ತಾಟದಿಂದ ಬಾಧೆಪಡುತ್ತಿರುವರಾಗಿ ವಾರ್ತೆ. ೭ ತಿಂಗಳ ಹಿಂದೆ ಇದ್ದುದಕ್ಕಿಂತ ಈಗವರ ದೇಹದ ತೂಕವು ಸುಮಾರು ೨೬ ಪೌಂಡುಗಳಷ್ಟು ಕಡಿಮೆಯಾಗಿದೆಯೆಂದು ತಿಳಿದಿದೆ. ಅವರೀಗಲೂ ಮೈಸೂರು ಸಂಸ್ಥಾನದೊಳಗೆ ಪ್ರವೇಶಿಸಕೂಡದೆಂಬ ನಿರ್ಬಂಧವಿದೆ.

ಸಮರಭೂಮಿಯ ಸಂಚಾರ

ಕಳೆದ ಮೂರು ತಿಂಗಳಲ್ಲಿ ಎರಡನೆಯ ಸಲ, ಎರಡು ವರ್ಷಗಳಲ್ಲಿ ಆರನೆಯ ಸಲ ಚರ್ಚಿಲ್ ರೂಸ್‌ವೆಲ್ಟರು ಕ್ವಿಬೆಕ್‌ನಲ್ಲೀಗ ಭೇಟಿಯಾದರು. ಈ ಭೇಟಿಯ ಕುರಿತು ರಾಜಕೀಯ ಬಾತ್ಮಿದಾರರು, ಊಹಾಗಾರರು ಹಲತರದ್ದ ಸುದ್ದಿ ಹೊರಡಿಸುತ್ತಿದ್ದಾರೆ. ಸದ್ಯ ಚರ್ಚಿಲ್ ರೂಸ್‌ವೆಲ್ಟರ ಸಂಯುಕ್ತ ಪ್ರಕಟಣೆಯೊಂದು ಹೊರಟಿದೆ, ಈ ಪರಿಷತ್ತಿನ ಕುರಿತು ಅದರಲ್ಲಿಯೂ ವಿಶೇಷ ಸಂಗತಿಗಳು ಹೊರಬಿದ್ದಿಲ್ಲವೆಂಬುದು ನಿರಾಶಾಜನಕವಿದೆ.

ಸಿಸಿಲಿ ಮತ್ತು ಇತರ ಕಡೆಗಳಲ್ಲಿ ಮಿತ್ರರಿಗೆ ದೊರೆತ ವಿಜಯವೇ ಇಂದಿನೀ ಭೇಟಿಗೆ ಕಾರಣವೆಂದು ಯಾರಾದರೂ ತಿಳಕೊಳ್ಳ ಬರುತ್ತದೆ. ಅದಾಗಿಯೇ ಮುಂದೆ ಯುದ್ಧವನ್ನು ಯಶಸ್ವಿಗೊಳಿಸುವ ಕುರಿತು, ಹಿಟ್ಲರನನ್ನು ವಿನಾಶಗೊಳಿಸುವ ಕುರಿತು, ಫೆಸಿಸಂಮರ್ದನದ ಸಲುವಾಗಿ ಈ ಮಹಾ ಪ್ರಭೃತಿಗಳಿಬ್ಬರು ಕ್ವಿಬೆಕಿನಲ್ಲ ಕೂಡಿ ಮಾತನಾಡಿದರೆನ್ನುವುದೂ ಸರಿಯಾಗುತ್ತದೆ.

ಕ್ವಿಬೆಕ್ ಪರಿಷತ್ತಿಗೆ ಸ್ಟಾಲಿನ್ ಬರದಿರುವ ವಿಚಾರ ಪತ್ರಿಕೆಗಳಲ್ಲಿ ಬಹಳ ತರ್ಕ ವಿತರ್ಕಗಳು ಬಂದವು ಸ್ಟಾಲಿನ್ ಈ ಮಿತ್ರ ಮುಖಂಡರಿಬ್ಬರ ಧೋರಣದಲ್ಲಿ ಅಸಮಾಧಾನಗೊಂಡಿರುವವನಾಗಿ, ದ್ವಿತೀಯರಂಗ ತೆರೆಯದಿರುವುದರಿಂದ ಅತೃಪ್ತನಾಗಿರುವನಾಗಿ ಹಾಗೂ ರಶ್ಯದಲ್ಲಿ ಶತ್ರುವನ್ನು ಮರ್ದಿಸುವ ಮಹಾ ಸಾಹಸಕ್ಕೆ, ಜೀವನ ಮರಣಗಳ ಹೋರಾಟಕ್ಕೆ ಇಳಿದಿರುವನಾಗಿ, ಸುಮ್ಮಸುಮ್ಮಗೆ ಈ ಮಾತುಕತೆ ಮಾಡಲು ಬರುವುದಿಲ್ಲವೆಂದು ಇತ್ಯಾದಿ ಹಲ ತೆರದ ಸುದ್ದಿ ಬಂತು, ಮಿತ್ರ ಮುಖಂಡರು ಈ ಮತಭೇದದ ವಿಷಯವನ್ನು ಅಲ್ಲಗಳೆದು, ಸ್ಟಾಲಿನ್‌ಗೆ ಆಮಂತ್ರಣ ಹೋಗಿದ್ದರೂ ಕಾರಣಾಂತರದಿಂದ ಬರಲಾಗಲಿಲ್ಲವೆಂದೂ ಆದರೆ ಇಲ್ಲಿಯ ವಿಚಾರ ವಿನಿಮಯ ಅವನಿಗೆ ಆಗಾಗ ತಿಳಿಸುವ ಏರ್ಪಾಡು ಮಾಡಲಾಗಿದೆಯೆಂದೂ ಹೇಳಿದ್ದಾರೆ.

ಹೇಗಿದ್ದರೂ ಕ್ವಿಬೆಕ್ ಪರಿಷತ್ತು ಒಂದು ಕುಟುಂಬದ ಕೂಟದಂತಿದೆ. ಆಂಗ್ಲ ಅಮೆರಿಕನರೊಳಗೆ ಯುದ್ಧ ಸುರುವಾದಂದಿನಿಂದ ಈ ತರದ 'ಕುಟುಂಬ ಕೂಟ' ಆಗಾಗ ಏರ್ಪಟ್ಟಿವೆ. ರೂಸ್‌ವೆಲ್ಟರೇ ಒಂದು ಪತ್ರಿಕಾ ಪ್ರತಿನಿಧಿಗಳ ಸಮ್ಮೇಳನದಲ್ಲಿ 'ಇದು ಬ್ರಿಟಿಷ್ ಅಮೆರಿಕನರ ಕೂಟ,' ಎಂದು ಹೇಳಿದರು! ನಿಜವಾಗಿ ಇದು ಆಂಗ್ಲ ಅಮೆರಿಕನರದೇ ಕೂಟವಾದರೆ, ಸ್ಟಾಲಿನರು ಬರಲಿಲ್ಲವೆಂಬ ಕುರಿತು ಇಷ್ಟೊಂದು ಗಡಿಬಿಡಿಯಾದರೂ ಯಾಕೆ? ಇದು ಇಂಥಾ ಮಾತುಕತೆಯಾಗಿದ್ದಾರೆ, ಆಮಂತ್ರಿಸಿದರೂ ಸ್ಟಾಲಿನ್ ಬರುವುದು ಸಂಭವವೇನು?

ಸತ್ಯ ಸಂಗತಿ ಹೀಗಾದರೆ, ಕ್ವಿಬೆಕ್ ಪರಿಷತ್ತು ಆಂಗ್ಲ ಅಮೆರಿಕನರ ಕೇವಲ ಒಂದು ಕುಟುಂಬ ಕೂಟವಾದರೆ, ಈ ಪರಿಷತ್ತಿನ ಪರಿಣಾಮದ ಕುರಿತು ನಾವೇನೂ ಆಶಾತುರರಾಗಿಲ್ಲ. ಹಿಟ್ಲರನನ್ನು ಸದೆಬಡಿಯುವುದರಲ್ಲಿ, ಫೇಸಿಸಂ ಮರ್ದನದಲ್ಲಿ ಬಹುಭಾಗದ ಕೀರ್ತಿ ರಶ್ಯಕ್ಕೆ! ಸ್ಟಾಲಿನನಿಗೆ! ಹೀಗಿರುವಾಗ ಸ್ಟಾಲಿನ್‌ನನ್ನು ಬಿಟ್ಟು ಕ್ವಿಬೆಕ್‌ನಲ್ಲಿ ಚರ್ಚಿಲ್ ರೂಸ್‌ವೆಲ್ಟರು ಮಾತ್ರ ಒಟ್ಟಾಗಿ ಆಲೋಚನೆ ಮಾಡುವುದು ಸಾಕಾದೀತೆ? ರಶ್ಯದಲ್ಲಿಯೇ ಈ ಪರಿಷತ್ತು ಯಾಕೆ ಕರೆಯಬಾರದಿತ್ತು? ಕ್ರೆಮ್ಲಿನ್‌ನಲ್ಲಿ ಏಕೆ ಸಭೆ ಕೂಡಬಾರದಿತ್ತು? ಇಂದಿನೀ ಪರಿಸ್ಥಿತಿಯಲ್ಲಿ ಚರ್ಚಿಲ್ ರೂಸ್‌ವೆಲ್ಟರಾದರೆ ಮನೆಬಿಟ್ಟು ಹೊರಟರೂ ಹೊರಡಬಹುದು ಅವರು ಆಗಾಗ ಹೊರಡುತ್ತಾರೆ, ಆದರೆ ಸ್ಟಾಲಿನ್ ಹಾಗೆ ಮಾಡುವಂತಿಲ್ಲ. ರಣಮಧ್ಯದಲ್ಲಿ ನಿಂತು ಪಿತೃಭೂಮಿಯನ್ನು ರಕ್ಷಿಸುವ ಜನನಾಯಕ ಆತ! ಆದ್ದರಿಂದ ನಿಜವಾಗಿಯೂ ರಶ್ಯವೇ ಹಿಟ್ಲರನ ವಿನಾಶದಲ್ಲಿ ಬಹುಭಾಗದ ಪರಿಶ್ರಮ ವಹಿಸುತ್ತಿರುವಾಗ, ಸ್ಟಾಲಿನನನ್ನು ಕೂಡಿಕೊಂಡೇ ವಿಚಾರ ವಿಮರ್ಶೆ ಮಾಡಬೇಕಾಗಿರುವಾಗ, ಕ್ರೆಮ್ಲಿನ್‌ನಲ್ಲಿ ಏಕೆ ಪರಿಷತ್ತು ಕರೆಯಬಾರದಿತ್ತು? ಚರ್ಚಿಲರನ್ನು ರೂಸ್‌ವೆಲ್ಟ್, ರೂಸ್‌ವೆಲ್ಟರನ್ನು ಚರ್ಚಿಲ್ ಬೇಕಾದಷ್ಟು ಸಲ ಕಂಡಿದ್ದಾರೆ, ಈ ಎರಡು ವರ್ಷದಲ್ಲಿಯೇ ಇದಾರನೆಯ ಸಲ ಕಾಣುತ್ತಾರೆ, ವರ್ಷದ ಹಿಂದೆ ಚರ್ಚಿಲರೇನೋ ಒಮ್ಮೆ ಸ್ಟಾಲಿನ್ರ ಭೇಟಿಯಾಗಿದ್ದಾರೆ, ಆದರೆ ರೂಸ್‌ವೆಲ್ಟರು ಸ್ಟಾಲಿನನನ್ನು ಇದುವರೆಗೆ ದೂರದಿಂದಾದರೂ ನೋಡಿದ್ದಾರೋ ಇಲ್ಲವೋ?

ಕ್ವಿಬೆಕ್ ಪರಿಷತ್ತಿಗೆ ಸ್ಟಾಲಿನ್ ಬರಲಿಲ್ಲ ಏಕೆ ಬರಲಿಲ್ಲವೆಂದು ನಮಗ ಗೊತ್ತಿಲ್ಲ ಆದರೆ ಬರಲಿಲ್ಲವೆಂದುದರಿಂದ ಪತ್ರಿಕೆಗಳಲ್ಲಿ ಆ ಕುರಿತು ತುಂಬಾ ಮಾತುಕತೆಯಾದರೂ ಆಯಿತು. ಆದರೆ ಮಿತ್ರರ ಸಂಕೋಲೆಯಲ್ಲಿ ಬಡಗೊಣಸಾದ ಚೀನದ ದಳಪತಿ ಚಿಯಾಂಗ್ ಕೈಶೇಕರ ಸುದ್ದಿ ಎತ್ತಿದವರಾರಿದ್ದಾರೆ? ಚಿಯಾಂಗರಿಗೆ ಆಮಂತ್ರಣ ಹೋಗಿತ್ತೋ ಇಲ್ಲವೋ ಯಾರು ಹೇಳಿದ್ದಾರೆ? ಚಿಯಾಂಗರು ಬರುವುದು ಅವಶ್ಯವಿತ್ತೋ ಇಲ್ಲವೋ ಯಾರು ತರ್ಕಿಸಿದ್ದಾರೆ? ರಶ್ಯ ಆ ಕಡೆ ಹಿಟ್ಲರನ ವಿನಾಶಕ್ಕೆ ಪ್ರಬಲ ಕಾರಣವಾದರೆ, ಈ ಕಡೆ ಏಶ್ಯದಲ್ಲಿ ಜಪಾನ್ ಮರ್ದನಕ್ಕೆ ಚೀನವೂ ಅಷ್ಟೇ ಕಾರಣವಲ್ಲೇನು? ರಶ್ಯ ಜರ್ಮನಿಯೆದುರು ಎದೆಗೊಟ್ಟು ನಿಂತಂತೆ ಚೀನ ಕಳೆದ ಆರು ವರ್ಷಗಳಿಂದಲೂ ಜಪಾನಿನೆದುರು ಎದೆಗೊಟ್ಟು ನಿಂತಲ್ಲೇನು? ಹೀಗಿರುವಾಗ, ಮಿತ್ರಮುಖಂಡರು ಕೂಡಿ ಯುದ್ಧ ವಿಚಾರ ವಿಮರ್ಶಿಸುವಾಗ ಚಿಯಾಂಗರನ್ನಾದರೂ ಆಮಂತ್ರಿಸುವುದು ಅವಶ್ಯವಿರಲಿಲ್ಲವೇ ಹೇಗೆ?

ಚರ್ಚಿಲ್ ರೂಸ್‌ವೆಲ್ಟ್ ಭೇಟಿ ಇದುವರೆಗೇನೋ ಯಶಸ್ವಿಯಾಗಿದೆ ಫಲಕಾರಿಯಾಗಿದೆ, ಆದರೆ ಈ ಸಲ ಕೆಲವು ಸಂಶಯ ಬೀಜಗಳು ಹುಟ್ಟಿವೆ. ಬೆಲ್ಜಿಯಂ ಗ್ರೀಸ್‌ನಂಥಾ ಸಣ್ಣ ರಾಷ್ಟ್ರಗಳೇನೋ ಪ್ರೇಕ್ಷಕರ ಸಾಲಿನಲ್ಲಿ ನಿಲ್ಲಬಹುದು, ಆದರೆ ಚೀನಾ ರಶ್ಯಗಳಲ್ಲ, ಚೀನ ರಶ್ಯಗಳನ್ನು ಬಿಟ್ಟು ಆಂಗ್ಲ ಅಮೆರಿಕದ 'ಕುಟುಂಬ ಕೂಟ'ವು ಯಾರಿಗೂ ಅರ್ಥವಾಗುವುದಿಲ್ಲ! ಏಕೆಂದರೆ ಯುದ್ಧ ಅಥವಾ ಶಾಂತಿ ಇವೆರಡು ಸಮಸ್ಯೆಗಳೂ ಕೇವಲ ಆಂಗ್ಲ ಅಮೆರಿಕನ 'ಕುಟುಂಬ ಕೂಟದಲ್ಲಿ' ಇತ್ಯರ್ಥಿಸುವಂಥಾದ್ದಲ್ಲ ಅಥವಾ ಹಾಗೆ ಇತ್ಯರ್ಥವಾದರೂ ಅದರಿಂದ ಪುರುಷಾರ್ಥವಿಲ್ಲ. ಚರ್ಚಿಲ್ ರೂಸ್‌ವೆಲ್ಟರು ಅಖಿಲ ಪ್ರಪಂಚದ ಪ್ರಜಾಪ್ರಭುತ್ವ ಸ್ವಾತಂತ್ರ್ಯಗಳ ಇಬ್ಬರು ಏಕೈಕ ಪ್ರತಿನಿಧಿಗಳಾಗಲಾರರು, ಏಕೆಂದರೆ ಪ್ರಜಾಪ್ರಭುತ್ವ ಸ್ವಾತಂತ್ರ್ಯಗಳು ಕೇವಲ ಆಂಗ್ಲ ಅಮೆರಿಕನರಿಗೆ ಮಾತ್ರ ಮಾರಿಹೋಗಿಲ್ಲ ಅಥವಾ ಚರ್ಚಿಲ್ ರೂಸ್‌ವೆಲ್ಟರು ಮಾತ್ರ ಪ್ರಜಾ ಪ್ರಭುತ್ವ ಸ್ವಾತಂತ್ರ್ಯಗಳ ಸ್ಥಾಪನೆಯ ಹೊಣೆ ಹೊತ್ತುಕೊಳ್ಳಬೇಕಾದ ಅವಶ್ಯವೂ ಇಲ್ಲ ಚೀನಾ, ರಶ್ಯಾ, ಆಂಗ್ಲ, ಅಮೆರಿಕ, ಈ ನಾಲ್ಕು ಮುಖ್ಯ ರಾಷ್ಟ್ರಗಳ ಪ್ರತಿನಿಧಿಗಳು ಒಮ್ಮೆಯಾದರೂ ಒಂದುಗೂಡಲಿಲ್ಲವೆಂಬುದು ಬಹಳ ವಿಚಿತ್ರವೆನಿಸುತ್ತದೆ ನಾಲ್ಕು ರಾಷ್ಟ್ರಗಳ ಪ್ರತಿನಿಧಿಗಳೇಕೆ, ಮೂರು ರಾಷ್ಟ್ರಗಳ ಪ್ರತಿನಿಧಿಗಳಾದರೂ ಒಟ್ಟಾಗಿದ್ದಾರೆಯೋ? ಯಾವಾಗಲೂ ಚರ್ಚಿಲ್ ರೂಸ್‌ವೆಲ್ಟ್ ಇವರಿಬ್ಬರೇ ಪರಿಷತ್ತು ಕರೆಯುವುದು, ಮಾತನಾಡುವುದು ಇದು ಏಕೆ? ಅಥವಾ ಹೇಗೆ ಇಬ್ಬರು ಮಾತ್ರ ನಾಲ್ವರ ಪರವಾಗಿ ಮಾತನಾಡಿದರೆ ಹೇಗೆ?

ಅಖಿಲ ಕರ್ನಾಟಕ ಪ್ರಗತಿಶೀಲ ಬರೆಹಗಾರರ ಕೂಟ

ಈ ಕೂಟದ ಕಾರ್ಯಕಾರಿ ಸಮಿತಿಯು ಮುಂಬಯಿಯಲ್ಲಿ ಸಭೆ ಸೇರಿ ತನ್ನ ಚಟುವಟಿಕೆಗಳನ್ನು ಪರಿಶೀಲಿಸಿತು. ಅ ಭಾ. ಪ್ರಗತಿಶೀಲ ಲೇಖಕರ ಕೂಟದ ಧ್ಯೇಯ ಉದ್ದೇಶಗಳ ಪರಾಮರ್ಶೆ ನಡೆದು, ಕನ್ನಡ ಬರೆಹಗಾರರ ಕಾರ್ಯಕ್ಷೇತ್ರವು ನಿರ್ಧರಿಸಲ್ಪಟ್ಟಿತು ಕನ್ನಡ ಕೂಟದ ಕಡೆಯಿಂದ ಏನಾದರೊಂದು ಪತ್ರಿಕೆಯನು ಹೊರಡಿಸಲು ಸಾಧ್ಯವಿದೆಯೋ ಏನೆಂಬುದನ್ನು ಕೂಡ ಸಮಿತಿಯು ಆಲೋಚಿಸಿತು ಕರ್ನಾಟಕದಲ್ಲಿ ಎಲ್ಲಾದರೂ ಒಂದೆಡೆ ಕೇಂದ್ರದಲ್ಲಿ ಕನ್ನಡ ಬರೆಹಗಾರರ ಸಮ್ಮೇಳನವನ್ನು ಕರೆಯುವುದರ ಸಾಧ್ಯತೆಯನ್ನು ಸಮಿತಿಯು ಪರ್ಯಾಲೋಚಿಸಿತು

ಅ. ಕ. ಪ್ರಗತಿಶೀಲ ಬರೆಹಗಾರರ ಕೂಟದ ಆಫೀಸಿಗೆ ಪತ್ರ ಬರೆಯಬಿಚ್ಛಿಸುವವರು—ಕಾರ್ಯದರ್ಶಿ, ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ, ಲಿಮಿಟೆಡ್ ಇದರ ಮುಖಕ, ದಾದರ್ ಮುಂಬಯಿ, ಇಲ್ಲಿಗೆ ಬರೆಯಬೇಕು



ಸ್ವದೇಶಾಭಿಮಾನಿ

ತಾರೀಕು 27—8—1943

ಕ್ವಿಬೆಕ್ ಪರಿಷತ್ತು

ಕ್ವಿಬೆಕ್ ಪರಿಷತ್ತು ಈಗ ಕೊನೆಗೊಂಡಿದೆ, ಆ ಪರಿಷತ್ತಿನಲ್ಲಿ ಏನೇನಾಯಿತು? ಏನೇನು ವಿಚಾರ ವಿಮರ್ಶೆಗಳು ನಡೆದವು; ಮಿತ್ರರ ಮುಂದಿನ ಕಾರ್ಯಕ್ರಮವೇನು? ಹಿಟ್ಲರನನ್ನು ಸೋಲಿಸಲು, ಫೇಸಿಸಮನ್ನು ಮರ್ದಿಸಲು ಯಾವ ಯಾವ ಕಾರ್ಯಗಳು ಕೈಕೊಳ್ಳಲ್ಪಡುವವು? ಇವು ಇಂದು ಎಲ್ಲರ ಪ್ರಶ್ನೆ. ಆದರೆ ಕ್ವಿಬೆಕ್ ಪರಿಷತ್ತಿನ ಫಲಿತಾಂಶದ ಕುರಿತು ಚರ್ಚಿಲ್ ರೂಸ್‌ವೆಲ್ಟರು ಹೊರಡಿಸಿದ ಒಂದು ಸಂಯುಕ್ತ ಪ್ರಕಟಣೆಯಲ್ಲಿ, ಜನರ ಆಕಾಂಕ್ಷೆಗೆ ತಣ್ಣೀರೆರಚಿದ್ದಾರೆ. ಮುಂದಿನ ಕಾರ್ಯದ ಕುರಿತು ಏನೂ ಹೇಳದೆ 'ಕ್ವಿಬೆಕ್ ನಿರ್ಣಯಗಳು ರಣಭೂಮಿಯಲ್ಲಿ ಹೊರ ಬೀಳುವವು' ಎಂದಿಷ್ಟೇ ಹೇಳಿದ್ದಾರೆ! ಹಾಗಾಗಿ ಇನ್ನು ರಣಭೂಮಿಯನ್ನು ನೋಡುವುದು ಮಾತ್ರ ಉಳಿದಿದೆ.

'ಕಳೆದ ಮೇ ತಿಂಗಳಲ್ಲಿ ಚರ್ಚಿಲ್ ರೂಸ್‌ವೆಲ್ಟರು ಕೂಡಿದ ಮೇಲಿನ ಜಗತ್ತಿನ ಸಂಗತಿಗಳೆಲ್ಲಾ ಪರಿಶೀಲಿಸಲಾಯಿತು; ಎರಡು ರಾಷ್ಟ್ರಗಳ ಸೈನ್ಯ ವಿಮಾನ ನೌಕಾ ಬಲಗಳು ಮುಂದುವರಿಯುವರೆ ಬೇಕಾದ ಹಂಚಿಕೆ ಕೈಕೊಳ್ಳಲಾಯಿತು. ಈ ಉಭಯ ಬಲಗಳು ಪ್ರಪಂಚದ ಅನೇಕ ರಣರಂಗಗಳಲ್ಲಿ ವೈರಿಯನ್ನೆದುರಿಸುವುದರಿಂದ ಯುದ್ಧ ಕ್ರಮದಲ್ಲಿ ಒಕ್ಕಟ್ಟು, ಸೌಹಾರ್ದತೆಗಳಿರಬೇಕಾಗಿರುವ ಕಾರಣ, ಅದನ್ನೂ ವಿಚಾರಿಸಲ್ಲಾಯಿತು. ಜಪಾನಿನ ವಿರುದ್ಧ ಯುದ್ಧ ಮತ್ತು ಚೀನಕ್ಕೆ ಮಾಡುವ ಸಹಾಯದ ಕುರಿತು ಹೆಚ್ಚು ಚರ್ಚೆ ನಡೆಯಿತು. ಯೂರೋಪ್ ಯುದ್ಧದ ಬಗ್ಗೆ ಸೈನ್ಯಾಧಿಕಾರಿಗಳು ಕೊಟ್ಟ ಸೂಚನೆಗಳಿಗೆ ಬೆಂಬಲವಿತ್ತಂತೆ, ಫೆಸಿಫಿಕ್ ಯುದ್ಧದ ಕುರಿತು ಕೊಟ್ಟ ಸೂಚನೆಗಳೂ ಒಪ್ಪಲಾಯಿತು. ಈ ಸೈನಿಕ ನಿರ್ಣಯಗಳ ಪರಿಣಾಮವಾಗಿ ಉಂಟಾದ ರಾಜಕೀಯ ಸಮಸ್ಯೆಗಳ ವಿಚಾರದಲ್ಲಿಯೂ ಒಮ್ಮತದ ನಿರ್ಣಯಗಳಾದವು' ಹೀಗೆಂದು ಕ್ವಿಬೆಕ್ ಪರಿಷತ್ತಿನ ನಿರ್ಣಯದ ಕುರಿತು ಚರ್ಚಿಲ್ ರೂಸ್‌ವೆಲ್ಟರು ಸೂತ್ರ ರೂಪದಲ್ಲಿ ಹೇಳಿಕೆಯಿತ್ತಿದ್ದಾರೆ.

ಈ ಯುದ್ಧವು ಎಂದು ಕೊನೆಗೊಳ್ಳುವುದೋ ಎಂದು ಜಗತ್ತಿನ ಜನತೆಯೆಲ್ಲಾ ನಿರೀಕ್ಷಿಸುತ್ತದೆ. ಹಾಗಾಗಿ ಕ್ವಿಬೆಕ್ ನಿರ್ಣಯದ ಕುರಿತು ಜನತೆಗೆ ಅಷ್ಟು ಆಗ್ರಹವಿತ್ತು. ಇತ್ತೀಚೆಗೆ ಮಿತ್ರ ರಾಷ್ಟ್ರಗಳು ಅಲ್ಲಲ್ಲಿ ವಿಜಯ ಸಂಪಾದಿಸುತ್ತವೆ. ಈ ವಿಜಯದ ಕಾಲದಲ್ಲಿ ಕ್ವಿಬೆಕ್ ಪರಿಷತ್ತು ಸೇರಿದ್ದರಿಂದ ಈ ಪರಿಷತ್ತಿನಲ್ಲಿ ಮುಂದೆ ಮಹಾವಿಜಯದ ಆಲೋಚನೆ ನಡೆದಿರಬಹುದೆಂದು ಎಲ್ಲರ ಹಾರೈಕೆಯಾಗಿತ್ತು. ಆದರೆ ಚರ್ಚಿಲ್ ರೂಸ್‌ವೆಲ್ಟರು ಯಾವುದನ್ನೂ ತಿಳಿಸದೆ ಎಲ್ಲವನ್ನೂ ಗುಟ್ಟಾಗಿಟ್ಟುಕೊಂಡಿದ್ದಾರೆ.

ಯುದ್ಧದ ಸುದ್ದಿ

ಮಿತ್ರರಿಗೆ ಇಂದು ಎಲ್ಲಾ ಕಡೆಗಳಲ್ಲಿಯೂ ವಿಜಯವೇ ದೊರಕುತ್ತಿದೆ. ರಶ್ಯದಲ್ಲಿ ಜರ್ಮನರಿಗೆ ಅಪಜಯಗಳೊದಗುತ್ತಿವೆ. ರಶ್ಯದ ರಣಭೂಮಿಯಲ್ಲಿ ಹಿಟ್ಲರನು ಮುಂದೊತ್ತಿದಷ್ಟು ರಭಸದಲ್ಲಿ ಅಲ್ಲವಾದರೂ ರಶ್ಯನ್ ವೀರರು ಸಾಹಸದಿಂದ ಹೋರಾಡಿ ಕೈಬಿಟ್ಟು ಹೋದ ನಗರಗಳನ್ನು ಪುನಃ ಸ್ವಾಧೀನ ಪಡಿಸುತ್ತಿದ್ದಾರೆ. ರಶ್ಯವು ಜರ್ಮನಿಯನ್ನು ಹದಗೊಳಿಸುವಷ್ಟು, ಅಮೆರಿಕವು ಜಪಾನನ್ನು ಸೋಲಿಸುತ್ತಿಲ್ಲ. ಶಾಂತಿಸಾಗರದ ಯುದ್ಧವು ಅಷ್ಟು ಸಮರ್ಪಕ ರೀತಿಯಿಂದ ನಡೆಯುವುದಿಲ್ಲ. ಆದರೆ ಕ್ವಿಬೆಕ್ ಪರಿಷತ್ತಿನಲ್ಲಿ ಜಪಾನಿನ ವಿರುದ್ಧ ಯುದ್ಧದ ವಿಚಾರ ಮಾತುಕತೆಗಳಾಗಿವೆಯೆಂಬ ವಿಷಯ ಪ್ರಾಮುಖ್ಯವಾಗಿದೆ.

ಸಿಸಿಲಿ ಯುದ್ಧ ಮುಗಿದ ಬಳಿಕ ಇಟಲಿಯ ಧಾಳಿಯೇ ಮಿತ್ರರ ಮುಂದಿನ ಹೆಜ್ಜೆಯೆಂದು ಹೇಳಲಾಗಿದೆ. ಅದಿನ್ನು ಪ್ರಾರಂಭವಾಗಿಲ್ಲ. ಇತ್ತೀಚೆಗೆ ಜರ್ಮನಿಯ ಮೇಲೆ ಮಿತ್ರ ವೈಮಾನಿಕರು ಬಾಂಬು ಸುರಿಸುತ್ತಿರುವುದು ಒಂದು ವಿಶೇಷ ಸುದ್ದಿ. ಮಿತ್ರ ವಿಮಾನಗಳು ಈಗೀಗ ಗ್ರೀಸ್ ಮತ್ತು ಗ್ರೀಕ್ ದ್ವೀಪಗಳ ಮೇಲೂ ಧಾಳಿಯಿಡುತ್ತಿವೆ. ಜರ್ಮನರು ಡೆನ್ಮಾರ್ಕಿನ ರಾಜಧಾನಿ ಕೋಪನ್‌ಹೇಗನನ್ನು ಸಂಪೂರ್ಣ ಆಕ್ರಮಿಸಿದರು.

THE CANARA BANKING CORPORATION Ltd

(Incorporated in British India with limited liability).

Estd:] Head office: UDIPI [1906.

(Branches & Agencies in all principal cities of India)

Authorised capital	Rs. 25,00,000.
Issued & Subscribed	Rs. 16,00,000.
Paid up Capital	Rs. 10,06,000.
Reserves	Rs. 3,85,000.

Advances are made against approved securities and bills purchased or collected at most favourable rates.

For further particulars please apply to the nearest Branch.

ಸ್ವದೇಶ ಸಮಾಚಾರ

ಆಂಧ್ರ ವಿದ್ಯಾರ್ಥಿ ಪರಿಷತ್ತು

ಗುಂಟೂರಿನಲ್ಲಿ ಜರಗಿತು. ರೈ ಕೀರ್ತನ್ ಅಧ್ಯಕ್ಷತೆ ವಹಿಸಿದ್ದರು. ಅಧ್ಯಕ್ಷರು ಮಹಾತ್ಮಾ ಗಾಂಧಿಯವರ ಸತ್ಯ ಅಹಿಂಸಾ ತತ್ವಗಳನ್ನು ಪ್ರಶಂಸಿಸುತ್ತಾ, 'ಆಗಾಖಾನ ಅರಮನೆಯಲ್ಲಿ ಅಡಗಿಸಿಟ್ಟ ಆ ಮಹಾ ಜ್ಯೋತಿ ಸತ್ಯ ಅಹಿಂಸೆಗಳ ಬೆಳಕನ್ನು ಜಗತ್ತಿಗೆ ಕೊಟ್ಟಿರುವರು' ಎಂದು ಹೇಳಿ ಗಾಂಧಿಜಿಯವರ ಸಂದೇಶ ಭಾರತಕ್ಕೆ ಮಾತ್ರವಲ್ಲ ಅಖಿಲ ಜಗತ್ತಿಗೇ ಅನ್ವಯಿಸುತ್ತದೆಂದೂ, ಅವರ ಹದಿಮೂರು ಸೂತ್ರಗಳನ್ನು ವಿದ್ಯಾರ್ಥಿಗಳು ಪ್ರಯೋಗದಲ್ಲಿ ತರಬೇಕೆಂದೂ ಹೇಳಿದರು. ಸಾವಿರಾರು ಮಂದಿ ವಿದ್ಯಾರ್ಥಿಗಳು ಹಾಜರಿದ್ದರು. ಮದ್ರಾಸು ವಿದ್ಯಾರ್ಥಿ ಸಂಘದ ಸಂಘಟಕ ಶ್ರೀ. ರಾಮಚಂದ್ರನರು ಮಾತನಾಡಿ, ಕಮುನಿಸ್ಟ್ ಪಕ್ಷವು ಈಗ ವಿದ್ಯಾರ್ಥಿಗಳ ಹಿತವನ್ನು ಹಾಳುಮಾಡುತ್ತಿರುವ ಹಾಗೂ ಅರಾಷ್ಟ್ರೀಯ ದಾರಿಯಲ್ಲಿ ಅವರನ್ನು ಕೊಂಡೊಯ್ಯುತ್ತಿರುವ ವಿಷಯ ಹೇಳಿ ವಿದ್ಯಾರ್ಥಿಗಳು ಯಾವಾಗಲೂ ರಾಷ್ಟ್ರೀಯ ಮನೋಭಾವದವರಿರುವರೆಂದು ವಿವರಿಸಿದರು. ಪರಿಷತ್ತಿಗೆ ಸರೋಜಿನಿ ದೇವಿ, ಕೊಂಡ ವೆಂಕಟಪ್ಪಯ್ಯ ಮೊದಲಾದವರು ಸಂದೇಶ ಕಳುಹಿಸಿದ್ದರು.

ಕ್ರಿಪ್ಸ್ ಪುನಃ ಬರಲಿ!

ರಾಜಗೋಪಾಲಾಚಾರಿಯವರು, ಲಂಡನಿನ 'ನ್ಯೂಸ್ ಕ್ರಾನಿಕಲ್' ಪತ್ರಿಕೆಯಲ್ಲಿ ಒಂದು ಲೇಖನ ಬರೆಯುತ್ತಾ, ಕ್ರಿಪ್ಸರು ಈಗ ಹೊಸ ಸಂಧಾನ ಯತ್ನಮಾಡಬೇಕೆಂದೂ, ವೇವಲರು ಬರುವ ಮೊದಲು ಈ ಪ್ರಯತ್ನ ಮಾಡತಕ್ಕದೆಂದೂ ತಿಳಿಸಿದ್ದಾರೆ. ಪಾರ್ಲಿಮೆಂಟು ಕೂಡಿದಾಗ ಚರ್ಚಿಲರಿಗೆ ಕ್ರಿಪ್ಸರನ್ನು ಪುನಃ ಭಾರತಕ್ಕೆ ಕಳುಹಿಸುವ ವಿಚಾರ ಸೂಚನೆ ಕೊಡಲಾಗುವುದೆಂದೂ ಸದ್ದಿ. ಕ್ವಿಬೆಕ್ ಪರಿಷತ್ತಿಗೆ ಚೀನದ ಪ್ರತಿನಿಧಿ ಡಾ। ಸೂಂಗರು ಬಂದದ್ದರಿಂದ ಬರ್ಮಾ ಯುದ್ಧದ ವಿಚಾರವೀಗ ಮುಂದೆ ಬಂದಿದೆ. ಆದ್ದರಿಂದ ಭಾರತದ ರಾಜಕೀಯ ಬಿಕ್ಕಟು ಬೇಗನೇ ಬಗೆಹರಿಸತಕ್ಕದ್ದೆಂದು ಹಲವರು ಭಾವಿಸುತ್ತಾರೆ.

'ಪ್ರೆಸ್ ಕಾನ್ಫರೆನ್ಸ್'ಗಳು!

ಡಿಲ್ಲಿಯಲ್ಲಿ ಆಗಾಗ ಜರಗುತ್ತಿರುವ ಕೆಲವು 'ಪ್ರೆಸ್ ಕಾನ್ಫರೆನ್ಸು'ಗಳಲ್ಲಿ ವೈಸರಾಯರ ಎಗ್ಸಿಕ್ಯುಟಿವ್ ಕೌನ್ಸಿಲಿನ ಸದಸ್ಯರುಗಳಂಥ ಮಹಾನುಭಾವರೇ ಭಾಷಣ ಮಾಡುವರೆಂದೂ, ಈಚೆಗೊಂದು ವರ್ಷದಿಂದ ನಡೆದ ಆಂಥ ದೊಡ್ಡ ಕಾನ್ಫರೆನ್ಸುಗಳಿಗೆ ಭಾರತೀಯರಾದ ಪತ್ರಿಕಾ ಪ್ರತಿನಿಧಿಗಳಿಗೆ ಪ್ರವೇಶವಿರಲಿಲ್ಲವೆಂದೂ ಹೇಳಲಾಗಿದೆ. ಕೆಲ ಕಾಲದ ಹಿಂದೆ ಸರ್ ಎ. ರಾಮಸ್ವಾಮಿ ಮೊದಲಿಯಾರರು ಬ್ರಿಟಿಷ್ ಮತ್ತು ಅಮೆರಿಕದ ಪತ್ರಿಕಾ ಪ್ರತಿನಿಧಿಗಳದೊಂದು ಡಿಲ್ಲಿಯ ಸಭೆಯಲ್ಲಿ ಭಾಷಣ ಮಾಡಿದರೆಂದೂ ಆಗ "ಮೆಂಚೆಸ್ಟರ್ ಗಾರ್ಡಿಯನ್" ಪತ್ರಿಕೆಯ ಬಾತ್ಮೀದಾರನು ಭಾರತೀಯನಾದುದರಿಂದ ಆತನು ಹೊರಗಿರಬೇಕಾಯಿತೆಂದೂ ಸುದ್ದಿ.

ನೋಟಗಳು........

ಬಂಗಾಳ ಸರಕಾರದ ಚೀಫ್ ಸೆಕ್ರೆಟರಿ ಜಿ. ಆರ್. ಬ್ಲೇರ್ ಐ. ಸಿ. ಎಸ್. ಇವರು ತಮ್ಮ ಉದ್ಯೋಗಕ್ಕೀಗ ರಾಜಿನಾಮೆಯಿತ್ತಿದ್ದಾರೆ.

ಭಾರತೀಯ ಐ. ಸಿ. ಎಸ್‌ಗಳು ತಮ್ಮ ಉದ್ಯೋಗಗಳಿಗೆ ರಾಜಿನಾಮೆ ಕೊಡುವುದೆಂದರೇ ಅದೊಂದು ವಿಚಿತ್ರ! ಅದರಲ್ಲೂ ಐರೋಪ್ಯರೊಬ್ಬರು ರಾಜಿಯಿತ್ತದ್ದು ಪ್ರಪಂಚದ ಇನ್ನೊಂದು 'ಮಹಾದ್ಭುತ!'

ಭಾರತೀಯ ಐ. ಸಿ. ಎಸ್‌ಗಳು ಒಂದು ವೇಳೆ ರಾಜಿನಾಮೆಯಿತ್ತರೂ ಒಂದು ಸಮಾಧಾನವುಂಟು; ಎಷ್ಟೆಂದರೂ ಅವರು ಭಾರತೀಯರು; ಕರಿಜನ'ಗೆ ಬಿಳಿ ಜನರಷ್ಟು ಬುದ್ಧಿಯಿಲ್ಲವೆಂದು ನಮ್ಮನ್ನಾಳುವ ಸರಕಾರವೇ ತಿಳಿದಿದೆ. ಆದರೆ ಬಿಳಿ ಜನರೂ ಹೀಗೆ ಬುದ್ಧಿ ಕೆಟ್ಟರೆ ಹೇಗೆ?

'ಸೆನ್ಸರ್' ಆಫೀಸರರ ಕತ್ತರಿ ಸಾಮಾನ್ಯ ಜನರ ಪತ್ರಗಳಿಗೆ ಮಾತ್ರವಲ್ಲ; ಇಂಗ್ಲೆಂಡಿನಲ್ಲಿರುವ ತಮ್ಮ ಬಂಧುವೊಬ್ಬರಿಗೆ ಬ್ಲೇರರು ಬರೆದ ಪತ್ರವೂ 'ಸೆನ್ಸರ್' ಬಾಯಿಗೆ ಬಿತ್ತು!

ಬ್ಲೇರರು ಆ ಪತ್ರದಲ್ಲಿ ಬಂಗಾಳ ಸರಕಾರದ ಆಡಳಿತವನ್ನು ದೂಷಿಸಿ ಬರೆದಿದ್ದರಂತೆ! ಮೇಲಧಿಕಾರಿಗಳು ಈ ಪತ್ರವನ್ನು ತಡೆಹಿಡಿದರು! ಇದನ್ನು ಆಕ್ಷೇಪಿಸಿ ಬ್ಲೇರರು ರಾಜಿನಾಮೆಯಿತ್ತರೆಂದು ಸುದ್ದಿ!

ಪಂಜಾಬ್ ಸರಕಾರದ ಮೂನ್ ಎಂಬ ಐ. ಸಿ. ಎಸ್. ಉದ್ಯೋಗಸ್ಥರೂ ಇದೇ ರೀತಿ ರಾಜಿನಾಮೆಯಿತ್ತಿದ್ದಾರೆ. ಸೆರೆಮನೆಯಲ್ಲಿರುವ ರಾಜಕುಮಾರಿ ಅಮೃತಕೌರರಿಗೆ ಹೆಚ್ಚಿನ ಸೌಕರ್ಯ ಕೊಡಬೇಕೆಂದು ಮೂನರು ವಾದಿಸಿದ್ದು ಅವರ ಅಪರಾಧ! ರಾಜಕುಮಾರಿ ಕೌರ್ ಗಾಂಧಿ ಶಿಷ್ಯೆ! ಗಾಂಧಿ ಶಿಷ್ಯರಿಗೆ ಸೌಕರ್ಯ ಮಾಡಿಕೊಡಲು ಐ. ಸಿ. ಎಸ್ ವಾದಿಸುವುದೆ?

ಅಂತೂ ಭಾರತೀಯ ಐ. ಸಿ. ಎಸ್‌ರು ರಾಜಿನಾಮೆ ಕೊಡುತ್ತಾರೇನೋ ಸರಿ! ಆಂಗ್ಲೇಯ ಐ. ಸಿ. ಎಸ್‌ರೂ ಹೀಗೆ ಮಾಡಿದರೆ ಹೇಗೆ? ಅಥವಾ ಇದು ಇಂದಿನ ಭಾರತದ ಹವಾಗುಣವೋ ಏನು?

134

ANDREWS
LIVER SALT
ಆಂಡ್ರೂಸ್ ಲಿವರ್‌ಸಾಲ್ಟ್
ಆರೋಗ್ಯಪಾನೀಯ — ವಿರೇಚಕ

ಯುದ್ಧದ ದೆಸೆಯಿಂದಾಗಿ ಎಂಡ್ರೂಸ್ ಲಿವರ್‌ಸಾಲ್ಟ್ ಈಗ ದೊರಕುವುದಿಲ್ಲವೆಂಬುದು ವಿಷಾದಕರವಿದೆ. ಆದರೆ ಅಂತರ್ರಾಷ್ಟ್ರೀಯ ಪರಿಸ್ಥಿತಿ ಸುಧಾರಿತವಾದ ಕೂಡಲೇ ಇದು ಖಂಡಿತ ದೊರಕುವುದು.

ಜಿಲ್ಲಾ ಸಮಾಚಾರಗಳು

ಮಂಗಳೂರು

ಜಿಲ್ಲಾ ಬೋರ್ಡು ಚುನಾವಣೆ

ಮಂಗಳೂರು ಫಿರ್ಕಾದ ಒಂದು ಜನರಲ್ ಸೀಟಿಗೆ ಶ್ರೀ ಎಸ್. ನರಸಪ್ಪಯ್ಯ, ವಕೀಲ್ ಅವರೂ ಶ್ರೀ ಕಾಂತಣ್ಣ ಯಾನೆ ಕೃಷ್ಣಸೆಟ್ಟಿ ಅವರೂ ಹೀಗೆ ಅವರಿಬ್ಬರು ಉಮೇದುವಾರರಾಗಿರುತ್ತಾರೆ. ರಿಸರ್ವ್ ಸೀಟಿಗೆ ಮಿ. ಕೈತಾನ್ ಲೋಬೋ ಅವರು ಪ್ರತಿಸ್ಪರ್ಧಿಗಳಿಲ್ಲದೆ ಚುನಾಯಿಸಲ್ಪಟ್ಟಿದ್ದಾರೆ. ಮೂಲ್ಕಿ ಫಿರ್ಕಾಕ್ಕೆ ಶ್ರೀ ಬೋಳ ವಾಸುದೇವರಾವ್ ಅವರು ಪ್ರತಿಸ್ಪರ್ಧಿಗಳಿಲ್ಲದೆ ಆರಿಸಲ್ಪಟ್ಟಿದ್ದಾರೆ. ಪಾಣೆಮಂಗಳೂರು ಫಿರ್ಕಾ ಜ॥ ಸೀಟ್ ೧ಕ್ಕೆ ಶ್ರೀ ಕಾಂತಣ್ಣ ಶೆಟ್ಟಿ ಕೆ. ಮತ್ತು ಕೃಷ್ಣ ಸ್ಟ ಕೆ. ಇವರಿಬ್ಬರು ಉಮೇದುವಾರರಾಗಿರುತ್ತಾರೆ.

ಮೂಡಬಿದ್ರೆ ಫಿರ್ಕಾಕ್ಕೆ ಇರುವ ಜನರಲ್ ಸೀಟ್ ೧ (ಹಿಂದಿದ್ದ ಮೆಂಬರರು ಶ್ರೀ ಧರ್ಮಸಾಮ್ರಾಜ್ಯ ಅವರು), ಉಡುಪಿ-ತಾಲೂಕಿನ ಹಿರಿಯಡ್ಕ ಫಿರ್ಕಕ್ಕೆ ಇರುವ ಜನರಲ್ ಸೀಟ್ ೧ (ಶ್ರೀ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಗಡೆಯವರು ಹಿಂದೆ ಇಲ್ಲಿನ ಮೆಂಬರರಾಗಿದ್ದರು), ಕಟ್ಪಾಡಿ ಫಿರ್ಕಕ್ಕೆ ಇರುವ ಜನರಲ್ ಸೀಟ್ ೧, (ಹಿಂದಿದ್ದ ಮೆಂಬರರು ಶ್ರೀ ಪಾಂಗಾಳ ಉಪೇಂದ್ರ ನಾಯ್ಕರು) ಮತ್ತು ರಿಸರ್ವ್ಡ್ ಸೀಟ್ ೧ (ಹಿಂದಿದ್ದ ಮೆಂಬರರು ಮಿ॥ ಫೆರ್ನಾಂಡೀಸರು) ಹೀಗೆ ೩ ಸೀಟುಗಳು

ಮೂಡಬಿದ್ರೆ—ಹಿರಿಯಡ್ಕ—ಕಟ್ಪಾಡಿ ಸ್ಥಾನಗಳಿಗೆ ನೋಮಿನೇಶನ್ ಪತ್ರಗಳನ್ನು ಒಪ್ಪಿಸಬೇಕಾದ ತಾರೀಖುಗಳು ೧೩ ಮತ್ತು ೧೪ನೇ ಸಪ್ಟಂಬರ. ಈ ಮೂರು ಕಡೆಗಳಲ್ಲಿಯೂ ಚುನಾವಣೆ ಬರುವ ತಾ ೧೮ನೇ ಆಕ್ಟೋಬರದಲ್ಲಿ ಜರುಗಿ ಮರುದಿನ ಓಟುಗಳನ್ನೆಣಿಸಲಾಗುವುದು

ಬಂಟ್ವಾಳದ ಒಂದು ಜನರಲ್ ಸೀಟಿಗೆ ಒಂದೇ ನಾಮಿನೇಶನ್ ಬಂದಿದ್ದು ಹೀಗೆ ಶ್ರೀ ಬಿ. ದಾಮೋದರ ಬಾಳಿಗರು ಚುನಾಯಿಸಲ್ಪಟ್ಟಿದ್ದಾರೆಂದು ಹೇಳಲಾಗಿದೆ

ಕಲೆಕ್ಟರರ ಪ್ರಕಟಣೆ
ಮೆಣಸನ್ನು ಜಿಲ್ಲೆಯ ಹೊರಗೆ ಕಳುಹಿಸಕೂಡದು

ಜನತೆಯ ಜೀವನಕ್ಕೆ ಅತ್ಯವಶ್ಯವಾದ ಸರಬರಾಯಿಗಳನ್ನು ಕಾಪಾಡುವ ಒಗ್ಗೆ ಈ ಕೆಳಗಿನ ಏರ್ಪಾಡನ್ನು ಕೈಕೊಳ್ಳಬೇಕಾದ ಅಗತ್ಯವಿರುವ ಕಾರಣ ಡಿಫೆನ್ಸ್ ಓಫ್ ಇಂಡಿಯಾ ರೂಲು ಮೇರೆಗೆ ದಕ್ಷಿಣ ಕನ್ನಡ ಜಿಲ್ಲಾ ಕಲೆಕ್ಟರರು ಈ ಹುಕುಮನ್ನು ಮಾಡಿರುತ್ತಾರೆ

೧೯೪೩ನೇ ಇಸ್ವಿ ಆಗೋಸ್ತು ೨೫ನೇ ತಾರೀಕಿಗೆ ಮತ್ತು ಆನಂತರ ಯಾವನೊಬ್ಬನೂ ಮೆಣಸನ್ನು ದಕ್ಷಿಣ ಕನ್ನಡಾ ಜಿಲ್ಲೆಯ ಸರಹದ್ದಿನೊಳಗಿನ ಯಾವ ಸ್ಥಳದಿಂದಲೂ ಜಿಲ್ಲೆಯ ಹೊರಗಿನ ಯಾವ ಕಡೆಗೂ ಒಯ್ಯಕೂಡದು. ಈ ಹುಕುಮನ್ನು ಉಲ್ಲಂಘಿಸಿದ ಯಾವನೊಬ್ಬನೂ ಮೂರು ವರ್ಷಗಳಿಗೆ ಮೀರದ ಸಜೆಯೂ ಜುಲುಮಾನೆಯೂ ಇವೆರಡೂ ವಿಧಿಸಿ ಶಿಕ್ಷಿಸಲ್ಪಡಲು ಗುರಿಯಾಗುತ್ತಾನೆ

ಈ ಹುಕುಮನ್ನು ಕಳ್ಳಾಟಿಕೆಯಿಂದ ತಪ್ಪಿಸಿಕೊಳ್ಳುವದು ಯಾ ಉಲ್ಲಂಘಿಸುವದನ್ನು ತಡೆಯುವರೆ ಗಡಿನಾಡಿನ ಮಾರ್ಗಗಳಲ್ಲಿ ಹೋಗುವ ಯಾವತ್ತು ವಾಹನಗಳನ್ನು ನಿಲ್ಲಿಸಿ ತನ್ನಿಕೆ ಮಾಡಲಿಕ್ಕೂ ಅವುಗಳಲ್ಲಿ ಮೆಣಸು ಒಯ್ಯುತ್ತದೋ ಎಂದು ಪರಿಶೋಧಿಸಲಿಕ್ಕೂ ಗಡಿನಾಡು ಮಾರ್ಗಗಳು ಇರುವ ಚಕಬಂದಿಯ ಫಿರ್ಕಾ ರೆವೆನ್ಯು ಇನ್ಸ್‌ಪೆಕ್ಟರ್ ಮತ್ತು ಅವರ ಮೇಲಿನ ತರಗತಿಯ ರೆವೆನ್ಯು ಇಲಾಖೆಯ ಎಲ್ಲಾ ಆಫೀಸರರಿಗೂ ಆಸಿಸ್ಟಾಂಟ್ ಕಮರ್ಶಿಯಲ್ ಟೇಕ್ಸ್ ಆಫೀಸರ್ ಮತ್ತು ಅವರ ಮೇಲಿನ ತರಗತಿಯ ಕಮರ್ಶಿಯಲ್ ಟೇಕ್ಸ್ ಇಲಾಖೆಯ ಎಲ್ಲಾ ಆಫೀಸರರಿಗೂ ಸಬ್ ಇನ್ಸ್‌ಪೆಕ್ಟರ್ ಮತ್ತು ಅವರ ಮೇಲಿನ ತರಗತಿಯ ಪೋಲೀಸ್ ಮತ್ತು ಅಬಕಾರಿ ಇಲಾಖೆಗಳ ಎಲ್ಲಾ ಆಫೀಸರರಿಗೂ ಮತ್ತು ಸಂಬಂಧಪಟ್ಟ ಗ್ರಾಮ ಉದ್ಯೋಗಸ್ಥರಿಗೂ ಅಧಿಕಾರ ಕೊಟ್ಟಿರುತ್ತಾರೆ.

ಆರೋಪಿ ಬಿಡುಗಡೆ

ಸೆಶನ್ಸ್ ಜಡ್ಜರಾದ ಶ್ರೀ ಕೋಮನ್, ಐ. ಸಿ. ಎಸ್., ಅವರು ಕಳೆದ ಬುಧವಾರ (ವೇಣೂರು) ಹೊಸಂಗಡಿಯ ಬೇಯ ಜೋಡು ಖೂನಿಯ ತೀರ್ಪು ಹೇಳಿದರು: ಹೊಸಂಗಡಿಗೆ ಸಮೀಪದಲ್ಲಿ ಪಿ ಪಿಂಟೋಬಾಯಿ ಎಂಬ ಕ್ರೈಸ್ತ ವಿಧವೆಯ ಮನೆಯಲ್ಲಿ ಶಿತಾರಿ ವೆಂಕಪ್ಪ ಯಾನೆ ಜಾರು ಪೂಜಾರಿ ಎಂಬ ಸುಮಾರು ೧೪—೧೫ ವರ್ಷ ಪ್ರಾಯದ ಹುಡುಗನೊಬ್ಬನು ಮನೆಗೆಲಸಕ್ಕೆ ಇರುತ್ತಿದ್ದು ಪಿಂಟೋಬಾಯಿ ಮನೆಯಲ್ಲಿಲ್ಲದ ವೇಳೆ ಆಕೆಯ ೯ ವರ್ಷದ ಮಗನನ್ನೂ, ೫ ವರ್ಷದ ಮಗಳನ್ನೂ ಆ ಕೆಲಸದ ಹುಡುಗನು, ಖೂನಿ ಮಾಡಿದನೆಂಬ ಆರೋಪವುಳ್ಳ ಈ ಮೊಕದ್ದಮೆಯನ್ನು ಸಮ್ಮಡಿ॥ ಷಿ ಜಡ್ಜರು ತನಿಖೆ ಮಾಡಿ ಆರೋಪಿಯನ್ನು ಬಿಡುಗಡೆ ಮಾಡಿದರು

ಪ್ರಕಾಶ ಎಸೋಸಿಯೇಶನ್

ಇದರ ಉದ್ಘಾಟನಾ ಸಮಾರಂಭವು ತಾ. ೨೨ ರಂದು ಜರಗಿತು ಸಂಘದ ಉದ್ಘಾಟನಾ ಸಮಾರಂಭವನ್ನು ನೆರವೇರಿಸುತ್ತಾ ಶ್ರೀ ಸೋಮಶೇಖರ ರಾಯರು ವಿದ್ಯಾರ್ಥಿಗಳ ಸಂಘವು ಬರೇ ಕಲೆಯ ಕಡೆಗೆ ಮಾತ್ರ ತನ್ನ ದೃಷ್ಟಿ ಹೊರಳಿಸದೆ ಸಮಾಜದ ಕಾರ್ಯಗಳ ಕಡೆಗೂ ತನ್ನ ದೃಷ್ಟಿ ಬೀರಬೇಕೆಂದು ಸಾರಿದರು. ಶ್ರೀ ಬಿ. ವಿ. ಬಾಳಿಗರ ಸಂಗೀತವಿತ್ತು ಅಧ್ಯಕ್ಷರ ಭಾಷಣದ ತರುವಾಯ ಶ್ರೀ ಬಿ ಎಂ ಇದಿನಬ್ಬ, ಶ್ರೀ ಎಂ. ವಿ ಪ್ರಭು, ಶ್ರೀ ಎ ಶಿವಶಂಕರ ಇವರು ಕೆಲವು ಕವಿತೆಗಳನ್ನು ಓದಿ ಹೇಳಿದರು ಶ್ರೀ ಕೆ. ಕೆ. ಸೆಟ್ಟರು ಕೃಷ್ಣನ ಜೀವನದ ವಸ್ತ್ರಾಪಹರಣ ಚಿತ್ರವನ್ನು ತಮ್ಮ ನೃತ್ಯ ಭಂಗಿಯಿಂದ ಮನೋಹರವಾಗಿ ಚಿತ್ರಿಸಿದರು ಅಧ್ಯಕ್ಷರಾದ ಡಾ॥ ಗಿರಧರರಾಯರು ಧನ್ಯವಾದ ಅರ್ಪಿಸಿದರು

ಭಾಷಣ

ದಿ ಕೆನರಾ ಸೀನೆ ಕ್ರಿಟಿಕ್ಸ್ ಎಸೋಸಿಯೇಶನ್ ಇದರ ಸಭೆಯೊಂದು ತಾ ೨೨ರಲ್ಲಿ ಶ್ರೀ ಕೆ ನಾರಾಯಣರ ಅಧ್ಯಕ್ಷತೆಯಲ್ಲಿ ಸೇರಿತು ಉದಯಶಂಕರರ ನೃತ್ಯ ಕೇಂದ್ರದಲ್ಲಿ ಶಿಕ್ಷಣ ಪಡೆದ ಶ್ರೀ ಕೆ ಕೆ ಸೆಟ್ಟರು ನಾಟ್ಯ ಕಲೆಯ, ಉದಯಶಂಕರರ ಕೇಂದ್ರದ ಮತ್ತು ಉದಯಶಂಕರರು ಪ್ರಭಾತ್ ಸ್ಟುಡಿಯೋದಲ್ಲಿ ತಯಾರಿಸಲಿರುವ ಚಿತ್ರದ ಕುರಿತು ಭಾಷಣವಿತ್ತರು

ಮಹಿಳೆಯ ಸಾಹಸ

ಕಳೆದ ಗುರುವಾರ ಕದ್ರಿಯ ಗುಡ್ಡೆಮನೆ ಎಂಬಲ್ಲಿ ೧। ವರ್ಷದ ಒಂದು ಮಗು ಆಕಸ್ಮಾತ್ ಒಂದು ಬಾವಿಗೆ ಬೀಳಲು ನಾಗಮ್ಮ ಎಂಬ ೨೫ ವರ್ಷದಾಕೆ ಓಡಿ ಬಂದು ಬಾವಿಗೆ ಹಾರಿ ಮಗುವನ್ನೆತ್ತಿ ಉದುಕಿಸಿದಳು

ಶ್ರೀ ಕೃಷ್ಣಜಯಂತಿ ಮಹೋತ್ಸವ

ಫೆಡರಲ್ ಹಿಂದೂ ಸ್ಕೂಲ್ಸ್ ಬೋರ್ಡ್ ಮತ್ತು ವಿವೇಕಾನಂದ ಸಭೆ ಇವರ ನೇತೃತ್ವದಲ್ಲಿ ಶ್ರೀ ಕೃಷ್ಣಜಯಂತಿಯು ಇದೇ ತಾ ೨೦ ಮತ್ತು ೨೨ನೇ ತಾರೀಕುಗಳಲ್ಲಿ ಆಚರಿಸಲ್ಪಟ್ಟಿತು ಪ್ರೊ। ಸಂಜೀವರಾವ್, ಮುಕುಂದರಾವ್ ಮೊದಲಾದವರ ಪ್ರವಚನಗಳು, ಶ್ರೀಮತಿ ಯಮುನಾಬಾಯಿಯರ ಕೀರ್ತನೆಗಳೂ ಇದ್ದವು.

ಮಂಗಳೂರಲ್ಲಿ ಸ್ಟೇಂಡಾರ್ಡ್ ಬಟ್ಟೆ

ಮಂಗಳೂರಿಗೆ ಅಗ್ಗದ ಬಟ್ಟೆಗಳು ಬಂದಿವೆ, ಹಂಪನಕಟ್ಟೆ, ಮಣ್ಣಗುಡ್ಡೆ, ಕದ್ರಿ ಮೊದಲಾದ ಕಡೆ ಇರುವ ಸಹಕಾರೀ ಸಂಘಗಳಿಗೂ, ಇನ್ನಿತರ ಕೆಲವು ಮುಂದಿಗೂ ಈ ಬಟ್ಟೆಗಳ ಮಾರಾಟಕ್ಕಾಗಿ "ಲೈಸೆನ್ಸ್" ಕೊಡಲಾಗಿದೆ. ಈ ತಿಂಗಳ ಅಂತ್ಯದೊಳಗೆ ಇಲ್ಲಿಗೆ ಸುಮಾರು ೬೩ ಮಿಲ್ಯ ಗಜಗಳಷ್ಟು ಈ ಜಾತಿಯ ಬಟ್ಟೆ ಬರಬಹುದೆಂದು ನಿರೀಕ್ಷಿಸಲಾಗಿದೆ. ಈ ಬಟ್ಟೆ ವ್ಯಾಪಾರವಿಲ್ಲಿ ಬೇಗನೇ ಆರಂಭವಾಗಲಿದೆ ಈ ಬಟ್ಟೆಗಳಲ್ಲಿ ಶರ್ಟಿಂಗ್, ಸೀರೆಗಳು, ಧೋತಿಗಳೆಂಬ ಮೂರು ವರ್ಗಗಳಿವೆ ಈ ಬಟ್ಟೆಗಳನ್ನು ಲೈಸೆನ್ಸ್ ಪಡೆದ ಯಾವಾತನೂ ಸರಕಾರ ನಿರ್ಧರಿಸಿದ ಬೆಲೆಗಿಂತ ಹೆಚ್ಚಿಗೆಯಾಗಿ ಮಾರಕೂಡದು ಶರ್ಟಿಂಗ್ ಬಟ್ಟೆಯಲ್ಲಿ ಆಗಲಕ್ಕೆ ತಕ್ಕಂತೆ ಗಜವೊಂದಕ್ಕೆ ೦—೧೦—೫ ಪೈಯಿಂದ ೦—೪—೧೧ ಪೈ ವರೆಗೆ ಸುಮಾರು ೧೦ ನಮೂನೆಗಳೂ, ಧೋತಿಗಳಲ್ಲಿ ೧೦/೨ ಗಜಗಳ ಅಳತೆಯ ರೂ. ೨—೧೩—೬, ರ. ೨—೯—೦ರ ಎರಡು ನಮೂನೆಗಳೂ, ೬ ಗಜಗಳ ಸೀರೆಗಳಲ್ಲಿ ರೂ ೩—೧೧—೦ ರೂ. ೩ ೧೨—೦ರ ಎರಡು ನಮೂನೆಗಳೂ ಸಾರ್ವಜನಿಕರ ಉಪಯೋಗಕ್ಕೆ ಚಿಲ್ಲರೆ ಮಾರಾಟಕ್ಕೆ ದೊರೆಯಲಿವೆ

ಉಡುಪಿ
ಅಖಿಲ ಕರ್ಣಾಟಕ ಕಿರಿಯರ ಸಮ್ಮೇಳನ

ತಾ ೨೧ರ ಸಂಜೆ ಸ್ಟುಡೆಂಟ್ಸ್' ಲೈಬ್ರೆರಿಯಲ್ಲಿ ಉಡುಪಿ ಕಿರಿಯರ ಸಭೆ ಸೇರಿತು ಶ್ರೀ ಕೆ ಶಂಕರನಾರಾಯಣ ಉಪಾಧ್ಯಾಯರು ಅಗ್ರಾಸನ ವಹಿಸಿದರು ಕಿರಿಯರ ಸಮ್ಮೇಳನ ಮಾಡುವುದರ ಅವಶ್ಯಕತೆಯ ಕುರಿತು ಶ್ರೀ ಯು. ವ್ಯಾಸರಾಯ, ಎಸ್ ಎಲ್ ನಾರಾಯಣ ಭಟ್, ಯು ಎಸ್ ಶ್ರೀನಿವಾಸ ಭಟ್ ಮೊದಲಾದವರು ಮಾತನಾಡಿದರು ಆನಂತರ ಸಮ್ಮೇಳನವು ಯಶಸ್ವಿಯಾಗಿ ಜರಗುವಂತೆ ಕಾರ್ಯಕಾರಿ ಮಂಡಳಿಯ ಆಯ್ಕೆ ನಡೆಯಿತು ಶ್ರೀ ಎಸ್. ಎಲ್ ನಾರಾಯಣ ಭಟ್ಟರು ಅಧ್ಯಕ್ಷರಾಗಿಯೂ ಶ್ರೀ ಯು ವ್ಯಾಸರಾಯರು ಕಾರ್ಯದರ್ಶಿಗಳಾಗಿಯೂ ಶ್ರೀ ಶಂಕರನಾರಾಯಣ ಉಪಾಧ್ಯಾಯರು ಕೋಶಾಧಿಕಾರಿಗಳಾಗಿಯೂ ನೇಮಕ ಹೊಂದಿದರು. ಆನಂತರ ಆಗಿ ಬಂದ ಶ್ರೀ ಪಾಂಡುರಂಗ ಪೈಗಳು ಈ ಉದ್ಯಮ ಯಶಸ್ವಿಯಾಗಿ ಜರಗಲೆಂದು ಹಾರೈಸಿದರು, ಅಧ್ಯಕ್ಷರು ತಮ್ಮ ಭಾಷಣದಲ್ಲಿ, ಅಖಿಲ ಕರ್ನಾಟಕದ ಕಿರಿಯರ ಸಮ್ಮೇಳನ ಮಾಡುವ ನಮ್ಮ ಈ ಗುಂಪು ಅರ್ಧದಲ್ಲೇ ಕೊನೆಗೊಳ್ಳಬಾರದೆಂದು ಛತ್ರಿ ಹೇಳಿದರು ಧನ್ಯವಾದಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು ಈ ಸಮ್ಮೇಳನದ ಕುರಿತು ಹೆಚ್ಚಿನ ವಿಚಾರ ಅಪೇಕ್ಷಿಸುವವರು ಯು ವ್ಯಾಸರಾವ್, ಸೋದೆಮಠ ರಸ್ತೆ, ಉಡುಪಿ ಇವರಿಗೆ ಬರೆಯುವುದು

ಮೃದುವಾದ ಚರ್ಮವನ್ನು ಬಹಳ ಜಾಗ್ರತೆಯಿಂದ ಕಾಪಾಡಬೇಕು

ಕುಟಿಕೂರಾ ಸಾಬೂನು ಮಗುವಿನ ಮೃದುಚರ್ಮವನ್ನು ರಕ್ಷಿಸಲಿ!



ಕುಟಿಕೂರಾ ಸೋಪು

CUTICURA SOAP.

ಮಂಗಳೂರಲ್ಲಿ ಕೋಲೆರಾ
50 ಜನರಲ್ಲಿ 19 ಮಂದಿ ಸತ್ತರು

ತಾ ೨೭ರ ವರೆಗಿನ ವರದಿಯಂತೆ ಮಂಗಳೂರಲ್ಲಿ ಒಟ್ಟು ೫೦ ಜನರಿಗೆ ಕೋಲೆರಾ ರೋಗ ತಾಗಿ, ಅವರಲ್ಲಿ ೧೯ ಜನರು ಸತ್ತರು. ರೋಗ ಪ್ರಾರಂಭವಾದಂದಿನಿಂದ ಇದುವರೆಗೆ ಒಂದೇ ತರದಲ್ಲಿದ್ದೆ ದಿನವೊಂದಾ ಒಂದೆರಡು ಮರಣಗಳು ಆಗುತ್ತಲೇ ಇದೆ ಕೋಲೆರಾ ಮಂಗಳೂರಿಗೆ ಹೇಗೆ ಬಂತೆಬುದನ್ನು ಹೇಳಲಾಗುವುದಿಲ್ಲ. ಏಕೆಂದರೆ ಮೊದಲು ಯಾರಿಗೆ ಕೋಲೆರಾ ತಾಗಿತು ಎಂದು ಇದುವರೆಗೆ ತಿಳಿದಿಲ್ಲ. ಆದರೂ ಇದು ಮಲಬಾರಿನಿಂದಲೇ ಬಂದಿರಬೇಕೆಂದು ಊಹಿಸಬಹುದು. ಮುನ್ಸಿಪಲ್ ಹೆಲ್ತ್ ಆಫೀಸರ್ ಡಾ। ಬಾಳಿಗರು ತನ್ನ ಸಿಬಂದಿ ಸಹಿತ ನಗರದಲ್ಲಿ ಒಂದೇ ಸಮನೆ ಕೋಲೆರಾ ಪ್ರತಿಬಂಧಕ ಕಾರ್ಯ ನಡೆಸುತ್ತಿದ್ದಾರೆ, ತಾ. ೨೭ರ ವರೆಗೆ ಸುಮಾರು ೨೪ ಸಾವಿರ ಮಂದಿಗೆ ಪ್ರತಿಬಂಧಕ ಇಂಜೆಕ್ಷನ್ ಚುಚ್ಚಲಾಗಿದೆ. ಖಾಸಗಿ ಡಾಕ್ಟರರೂ ಈ ಕಾರ್ಯದಲ್ಲಿ ಸಹಕರಿಸುತ್ತಾರೆ ಡಾ। ಗಳಾದ ಗಿರಿಧರರಾವ್, ಎಂ. ಟಿ. ಕಾಮತ್, ಪಿ ಟಿ ಕಾಮತ್, ಕೆ ಜಿ ಎಂ ಭಂಡಾರಿ, ಕೆ ಬಿ ಶೆಟ್ಟಿ, ಎಂ ಎಸ್ ಪ್ರಭು ಯು ಎಸ್ ನಾಯಕ್, ಉಪೇಂದ ಪೈ, ಬಿ ಎಂ ಬಾಳಿಗಾ ಮೊದಲಾದವರೂ ವಿಶೇಷ ಸಹಕರಿಸಿದ್ದಾರೆ. ಹೆಚ್ಚಾಗಿ ಮಂಗಳೂರಲ್ಲಿ ಕೋಲೆರಾ ಆದದ್ದೂ ಹಾಗೂ ಮರಣ ಹೊಂದಿದ್ದು, ಬೋಳೂರು ಬೊಕ್ಕಪಟ್ಣ, ಕುದ್ರೋಳಿ ಕಡೆಯಲ್ಲಿ, ಜಪ್ಪಿನಲ್ಲಿ, ಸೂಟರ್ ಪೇಟೆ ಈ ಕಡೆಗಳಲ್ಲಿ ರೋಗವು ಇಡೀ ನಗರದಲ್ಲಿ ಎಲ್ಲಾ ಕಡೆಗಳಲ್ಲಿ ಅಲ್ಲಲ್ಲಿ ಹರಡಿದೆ.

ಕೋಲೆರಾ ಹಾವಳಿಗೆ ನಿರ್ಬಂಧ ಉಪಾಯ

ನಾಗರಿಕರು ಅನ್ನ ಪಾನೀಯಗಳ ವಿಷಯದಲ್ಲಿ ಜಾಗ್ರತೆ ವಹಿಸುವುದೊಳಿತು ಪ್ರತಿಯೊಬ್ಬರೂ ಕೋಲೆರಾ ಪ್ರತಿಬಂಧಕ ಮೈಲಿ ಚುಚ್ಚಿಸಿಕೊಳ್ಳಬೇಕು ನಾಗರಿಕರಿಗೆ ಸಹಾಯವಾಗುವಂತೆ ಕೋಲೆರಾ ರೋಗದ ಚಿಹ್ನೆಗಳನ್ನೂ ಅದರ ನಿವಾರಣೋಪಾಯಗಳನ್ನೂ ಈ ಕೆಳಗೆ ಕೊಟ್ಟಿರುತ್ತೇವೆ ಪ್ರತಿಯೊಬ್ಬ ನಾಗರಿಕನು ಅದನ್ನು ಗಮನಿಸಬೇಕು

ರೋಗದ ಮೂರು ಮುಖ್ಯ ಲಕ್ಷಣಗಳು

೧ ವಾಂತಿ
೨ ಗಂಜಿನೀರಿನ ಬಣ್ಣದ ಸಡಿಲು ಭೇದಿ
೩ ಅಂಗಾಂಗಗಳಿಗೆ ಸಪ್ಪೂದ ಚೆವರು ಬಂದು ಇಡೀ ದೇಹವು ತಣ್ಣಗಾಗುವುದು.
ಕ್ಷಣದಿಂದ ಕ್ಷಣಕ್ಕೆ ಅಶಕ್ತಿ ಹೆಚ್ಚುವುದು

ಕೋಲೆರಾ ರೋಗ ತಗಲಿದರೆ

೧ ರೋಗ ತಗಲಿದಾಕ್ಷಣ ಸಮೀಪದ ವೈದ್ಯರಲ್ಲಿಗೆ ಹೋಗಿರಿ ವೈದ್ಯರ ಅಭಾವ ಕಂಡುಬಂದಲ್ಲಿ ತಕ್ಷಣ ಆಸ್ಪತ್ರೆಗೆ ಹೋಗಬೇಕು.

೨. ರೋಗ ತಗಲಿದವರು ಮೊಸರು ಹೊರತು ಇತರ ಯಾವ ಪದಾರ್ಥವನ್ನೂ ಸೇವಿಸಬಾರದು, ಮೊಸರು ಸಿಗದಿದ್ದ ಪಕ್ಷದಲ್ಲಿ ಆಮ್ಲ ಪದಾರ್ಥ (Acid Medium) ಶರಬತ್ತು, (ಹುಳಿ ಬೆರಸಿದ ನೀರು) ಗಳನ್ನು ಮಾತ್ರ ಸೇವಿಸಬೇಕು.

೩. ರೋಗ ತಗಲಿದಾಕ್ಷಣ ಚಿಕಿತ್ಸೆಗೆ ಯಾವ ರೀತಿಯಲ್ಲೂ ವಿಳಂಬವಾಗಬಾರದು, ಕಾರಣ ಈ ವ್ಯಾಧಿಯು ಕೇವಲ ೨೪ ತಾಸುಗಳೊಳಗೆ ಮರಣ ತರಬಲ್ಲದು.

ನಿವಾರಣೋಪಾಯಗಳು

೧. ತಣ್ಣಗೆ ಇರುವ ಯಾವ ಪದಾರ್ಥವನ್ನೂ ಸೇವಿಸಬೇಡಿ

೨ ಗಾಳಿಗೆ ಬಿಟ್ಟಿರುವ (exposed) ಎಲ್ಲಾ ಪೇಟೆಯ ಪದಾರ್ಥಗಳನ್ನು ವರ್ಜಿಸಿರಿ

೩ ಮನೆಯಲ್ಲಿ ಆದಷ್ಟು ಮಟ್ಟಿಗೆ ಬಿಸಿ ಪದಾರ್ಥಗಳನ್ನು ಸೇವಿಸತಕ್ಕದ್ದು

೪ ಎಲ್ಲಾ ಜಾತಿಯ ಮೀನು, ಮಾಂಸ ಇತ್ಯಾದಿ ಪದಾರ್ಥಗಳನ್ನು ರೋಗವು ಊರಿನಿಂದ ಸಂಪೂರ್ಣ ಮಾಯವಾಗುವ ತನಕ ವರ್ಜಿಸಬೇಕು.

೫ ರೋಗಾಣುಗಳನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಕೊಂಡೊಯ್ಯುವ ನೊಣಗಳ ಕುರಿತು ಜಾಗ್ರತೆಯಿರಲಿ.

೬. ಪ್ರತಿಯೊಬ್ಬರೂ ಕೋಲೆರಾ ಪ್ರತಿಬಂಧಕ ಮೈಲೀ ಚುಚ್ಚಿಸಿಕೊಳ್ಳಬೇಕು.

ಬ್ರಿಟಿಷರಿಗೆ ಮಾತ್ರವಲ್ಲ—ಪಾಶ್ಚಾತ್ಯರಿಗೇ—ಇದು ಕೇಡುಗಾಲ!

ಭಾರತದ ಗಾಯ ಗುಣಪಡದಿದ್ದರೆ—

ಸರ್ ಆರ್ಥರ್ ಮೂರರ ಎಚ್ಚರಿಕೆ!

ಸರ್ ಆರ್ಥರ್ ಮೂರ್ 'ಸ್ಟೇಟ್ಸ್‌ಮನ್' ಪತ್ರಿಕೆಯ ಹಿಂದಿನ ಸಂಪಾದಕರು. ಭಾರತದ ರಾಷ್ಟ್ರೀಯ ಭಾವನೆಯನ್ನು ಬಲ್ಲ ಪರೋಪಕಾರಿಗಳು. ಸರಕಾರವನ್ನು ನಿಷ್ಪಕ್ಷಪಾತವಾಗಿ ಟೀಕಿಸಬಲ್ಲವರಾಗಿದ್ದಾರೆ. ಇವರು ಇತ್ತೀಚೆಗೆ ಭಾರತದ ರಾಜಕೀಯ ವಿಚಾರ, ವೈಸರಾಯರ ಭಾಷಣ, ಮುಂದಿನ ವೈಸರಾಯರ ಕರ್ತವ್ಯ ವಿಚಾರ ಒಂದು ಲೇಖನ ಬರೆದಿದ್ದಾರೆ. ಅದು ಇಂತಿದೆ:

"ಕಳೆದ ಏಳುವರ್ಷಗಳಿಂದ ಲಿನ್‌ಲಿತ್‌ಗೋರವರು ಭಾರತದ ಭಾರವಾದ ಹೊರೆಯನ್ನು ಧೈರ್ಯದಿಂದಲೂ ತಾಳ್ಮೆಯಿಂದಲೂ ಹೊತ್ತು ನಿಂತಿದ್ದಾರೆ. ಭಾರತದ ಭವಿಷ್ಯದ ಕುರಿತು ಬ್ರಿಟಿಷ್ ಸರಕಾರದ ಸದುದ್ದೇಶದ ಬಗ್ಗೆ ಜನರಲ್ಲಿರುವ ಸಂದೇಹ ನಿವಾರಣೆ ಮಾಡಲು ಯುದ್ಧಾರಂಭದಿಂದ ಭಗೀರಥ ಪ್ರಯತ್ನ ನಡೆಸಿದ್ದೇನೆಂದು ಲಿನ್‌ಲಿತ್‌ಗೋ ಮೊನ್ನೆ ಭಾಷಣದಲ್ಲಿ ಹೇಳಿದ್ದಾರೆ. ಈ ಮಾತನ್ನೇನೋ ನಾವು ಒಪ್ಪಲೇ ಬೇಕು. ಆದರೆ ವಿಷಮ ಸಂದರ್ಭವೊಂದು ಒದಗಿದಾಗ ಭವಿಷ್ಯ ಕಾಲಕ್ಕಿಂತ ವರ್ತಮಾನಕಾಲಕ್ಕೆ ಮಹತ್ವ ಕೊಡಬೇಕಾಗಿದೆ. ಈಗ ಯೋಗ್ಯ ಕಾರ್ಯ ಕೈಕೊಂಡರೆ ಮುಂದೆಯೂ ಅದರಂತೆ ನಡೆಯುವರೇ ಇಲ್ಲವೇ ಎಂಬ ಸಂಶಯ ಹೋಗಲಾಡಿಸಬಹುದು. ಭವಿಷ್ಯ ಕಾಲದ ಯೋಜನೆ ತಯಾರಿಸುವಾಗ ವರ್ತಮಾನಕಾಲದ ವಿಚಾರ ಮರೆತೇ ಬಿಡುವುದು ಯೋಗ್ಯವಲ್ಲ. ಲಾರ್ಡ್ ಲಿನ್‌ಲಿತ್‌ಗೋರವರು ಆಗಾಗ ಭವಿಷ್ಯದ ಕುರಿತು ಮಾತನಾಡಿದ್ದಾರೆ. ಭಾರತೀಯರೇ ಅವರ ರಾಜ್ಯಘಟನೆಯನ್ನು ಮಾಡಿಕೊಳ್ಳಬೇಕು, ಈ ವಿಷಯ ವಿವಿಧ ಪಕ್ಷಗಳು ಒಂದಾಗಿ ಮುಂದೆ ಬರಬೇಕೆಂದು ಅವರು ಹೇಳಿದ್ದಾರೆ.

"ಭಾರತೀಯರು, ಅವರು ಕಾಂಗ್ರೆಸಿಗರಿರಲಿ, ಲೀಗಿನವರಿರಲಿ, ಪಕ್ಷಾತೀತರಿರಲಿ, ಪ್ರಕೃತದ ಪರಿಸ್ಥಿತಿ ಕಡೆಗೆ ಲಕ್ಷ್ಯ ಕೊಡುತ್ತಿದ್ದರು. ಆದರೆ ಪ್ರಕೃತ ಪರಿಸ್ಥಿತಿ ಕುರಿತು ಅವರಿಗೆ ಯಾವಾಗ ಆಶಾಭಂಗವಾಯಿತೋ ಆಗ, ಭವಿಷ್ಯದ ಗರ್ಭದಲ್ಲಿ ಅಡಗಿದ ಮಗುವು ಹೆಣ್ಣೋ, ಗಂಡೋ ಎಂದು ಈಗಲೇ ಯಾಕೆ ಚಿಂತಿಸಬೇಕು ಎಂದು ಅವರೆಲ್ಲರೂ ಸುಮ್ಮಗಾಗಿದ್ದಾರೆ. ಯುದ್ಧ ಪ್ರಯತ್ನ ಮತ್ತು ಅದರ ನಿರ್ವಹಣೆಯಲ್ಲಿ ಅವರ ಕೊಡಲು ಬೇಡಿದರು. ಯುದ್ಧಕಾಲದಲ್ಲಿ ವ್ಯಾವಹಾರಿಕವಾದ ಕೊನೆಗೊಂದರೆ ಲೀಗ್ ಕಾಂಗ್ರೆಸ್ ಪಕ್ಷ ಪ್ರತಿನಿಧಿಗಳನ್ನೊಳಗೊಂಡ ಒಂದು ರಾಷ್ಟ್ರೀಯ ಸರಕಾರ ಸ್ಥಾಪಿಸಿರಿ ಎಂದು ಅವರು ಸೂಚಿಸಿದರು. ಆದರೆ ಬ್ರಿಟಿಷ್ ಸರಕಾರವು ತನ್ನ ಹಳೇ ಸಂಪ್ರದಾಯಕ್ಕೇ ಅಂಟಿಕೊಂಡು ಇದನ್ನು ಕಿವಿಯಲ್ಲೇ ಹಾಕಿಕೊಳ್ಳಲಿಲ್ಲ.

ಯುದ್ಧ ಕಾಲದಲ್ಲಿ ಭಾರತ ಮಂತ್ರಿ ಮತ್ತು ಬ್ರಿಟಿಷ್ ಪಾರ್ಲಿಮೆಂಟಿನ ಕೈಯಲ್ಲೇ ಅಧಿಕಾರವಿರಬೇಕು; ರಾಷ್ಟ್ರೀಯ ಸರಕಾರದಲ್ಲಿ ಸೇರಲು ಭಾರತದ ಭಿನ್ನ ಪಕ್ಷಗಳು ಒಮ್ಮನಸ್ಸಿನಿಂದ ವರ್ತಿಸಿದರೂ ಸರಕಾರದ ಮೇಲಿನ ನಿರ್ಧಾರದ ಮೇಲೆ ಇದರ ಪರಿಣಾಮವು ಏನೂ ಆಗಲಿಕ್ಕಿಲ್ಲ ಹಾಗೂ ಅಧಿಕಾರ ಬಿಟ್ಟುಕೊಡುವುದು ಸಾಧ್ಯವಿಲ್ಲ ಎಂದು ಹೇಳಲಾಯಿತು. ಕ್ರಿಪ್ಸ್ ಸಂಧಾನ ವಿಫಲವಾದ ಮೇಲೆ ಸರ್ ಸುಲ್ತಾನ್ ಅಹಮ್ಮದರು ಕೇಂದ್ರ ಶಾಸನ ಸಭೆಯಲ್ಲಿ 'ಭಾರತದ ಪಕ್ಷಗಳು ಒಗ್ಗಟ್ಟಿನಲ್ಲಿದ್ದರೆ ಬ್ರಿಟಿಷ್ ಸರಕಾರವು ಅಧಿಕಾರ ಬಿಟ್ಟುಕೊಡಬಹುದು' ಎಂದರು. ಆದರೆ ಅಮೆರಿಯವರು ಬ್ರಿಟಿಷ್ ಪಾರ್ಲಿಮೆಂಟಿಗೆ ಹೊಣೆ ಇರತಕ್ಕದೆಂದು ಹೇಳಿ ಇವರ ಕಿವಿ ಹಿಂಡಿದರು.

"ಹಿಂದು–ಮುಸ್ಲಿಂ ವಿಷಮದ ವಿಚಾರ ನಾವು ಆಡುವ ಮಾತುಗಳು, ಕಪಟ, ಅಪ್ರಾಮಾಣಿಕ ಮತ್ತು ಮೊಸಳೆ ಕಣ್ಣೀರಿನ ತರದ್ದೆಂದು ಸಾಧಾರಣತಃ ಭಾರತೀಯರೆಲ್ಲರ ಅಭಿಪ್ರಾಯ. ಇದನ್ನು ನಾವು ಆಲೋಚಿಸಬೇಕು. ರಾಜಕೀಯವಾದ ಮಹಾ ರಾಜನಿಂದ ಶಾಲಾ ಬಾಲಕನವರೆಗೆ ಈ ಮಾತು ನಿಜವಾಗಿದೆ. ಈ ಪ್ರಶ್ನೆಯ ಕುರಿತು ಅವರಿಗೆ ಸಂಶಯವೇ ಇಲ್ಲ. ಹಿಂದು ಮುಸ್ಲಿಂ ಭೇದ ತಂತ್ರ ನೀತಿಯಿಂದ ಬ್ರಿಟಿಷ್ ಸರಕಾರವು ತನ್ನ ಬೇಳೆ ಬೇಯಿಸುತ್ತದೆಂದು ಅವರ ಅಭಿಪ್ರಾಯ. ಭಾರತೀಯರು ತಮಗೆ ಬೇಕಾಗಿದ್ದ ರಾಜ್ಯಘಟನೆಯನ್ನು ತಾವೇ ತಯಾರಿಸಿಕೊಳ್ಳಬೇಕೆಂದು ಬ್ರಿಟಿಷರು ಹೇಳುವುದು ಈ ಸಂಶಯವನ್ನು ದೃಢಪಡಿಸಿದೆ. ಏಕೆಂದರೆ ಇದುವರೆಗೆ ಸೈಮನ್ ಕಮಿಶನ್, ದುಂಡು ಮೇಜಿನ ಪರಿಷತ್ತು ಇವುಗಳ ಕಾಲದಲ್ಲಿ ಭಾರತದ ರಾಜ್ಯಘಟನೆಯನ್ನು ಸಿದ್ಧಗೊಳಿಸುವ ಹೊಣೆ ನಮ್ಮದೆಂದು ನಾವು ಹೇಳುತ್ತಿದ್ದೆವು.

'ಯುದ್ಧಕಾಲದ ಸ್ಥಿತಿಗತಿ ಆವಶ್ಯಕತೆಗಳನ್ನು ಭಾರತೀಯರು ಬಲ್ಲರು. ಯುದ್ಧಾಂತ್ಯದ ವರೆಗೆ ಸಹಿಸಲು ಅವರಿಗೆ ತಾಳ್ಮೆಯಿದೆ. ಪಕ್ಷ ಸಂಗಡಗಳ ಕಲಹವನ್ನೆಲ್ಲಾ ಬದಿಗೊತ್ತಿ ರಾಜ್ಯಘಟನೆಯ ಮಾತನ್ನೂ ಬಿಟ್ಟು, ರಾಷ್ಟ್ರೀಯ ಸಮ್ಮಿಶ್ರ ಸರಕಾರವನ್ನು ಅವರು ಬಯಸಿದಾಗ ಅದು ಕೂಡಾ ತಿರಸ್ಕರಿಸಲ್ಪಟ್ಟಿತು. ಇಂಥಾ ಪರಿಸ್ಥಿತಿಯಲ್ಲಿ ಅವರದು ಅವ್ಯವಹಾರಿಕ ಸೂಚನೆಯೆಂದು ಬ್ರಿಟಿಷ್ ಸರಕಾರ ದೂಷಿಸುತ್ತದೆ; ರಾಜ್ಯಘಟನೆಯ ಕುರಿತು ಮಾತನಾಡುತ್ತಿದೆ; ಸಹಾಯ ಕೊಡುವುದಾಗಿ ಹೇಳುತ್ತದೆ. ಆದರೆ ರಾಜಕೀಯ ಜಾಗೃತಿ ಹೊಂದಿದ ಯಾವ ಭಾರತೀಯನೂ ಇದಕ್ಕೆ ಮರುಳಾಗಲಾರನು; ಇದು ನಮ್ಮ ಗೌರವಕ್ಕೆ ಹೇಯದ್ದೂ ಅಲ್ಲ. ತನ್ನ ಕಾಲ ಕೆಳಗಿದಲ್ಲಿಟ್ಟುಕೊಂಡ ಜನರನ್ನು ಬ್ರಿಟಿಷರು ಈ ರೀತಿ ಕಾಣಲು ಅವರ ಗುಣ ನಡತೆಯೇ ಕಾರಣ. ಸ್ವರಾಜ್ಯದ ವಿಶ್ವಾಸ ತನಗಿರಲಿ, ಪರಕೀಯರಿಗಿರಲಿ ಇದು ಅವನ ರಕ್ತಗತವಾಗಿದೆ. ರಾಷ್ಟ್ರೀಯ ಸರಕಾರವನ್ನು ಅವನು ಬಹುಕಾಲ ಅನುಭವಿಸುವುದರಿಂದ ರಾಜಕೀಯನವ ಜಾಗೃತಿ ಹೊಂದಿದ ಒಂದು ದಾಸ್ಯ ಜನಾಂಗದ ದುಃಖವು ಅವನ ಅನುಭವಕ್ಕೆ ಬರುವುದಿಲ್ಲ.

'ಭಾರತದ ಬಿಕ್ಕಟ್ಟು ಬಿಡಿಸುವ ಕಾಲವಿಂದು ಸನ್ನಿಹಿತವಾಗಿದೆ. ಯುದ್ಧವು ಕೊನೆಯಂಚಿಕ್ಕೆ ಮುಟ್ಟಿದೆ. ಯುದ್ಧಾನಂತರದ ಕಾಲ ಸಮೀಪಿಸಿದೆ. ಹೀಗಿರುವಾಗ, ಅಧಿಕಾರ ಬಿಟ್ಟುಗೊಡುವ ಮೊದಲು, ಭಾರತೀಯರು ತಮ್ಮ ರಾಜ್ಯಘಟನೆ ತಾವೇ ತಯಾರಿಸಬೇಕೆಂಬ ಹಾಡಿನ ಪಲ್ಲವಿಯೊಂದನ್ನೇ ಹಾಡುವುದೆ? 'ಜನ್ನರಿಗೇ ಅಧಿಕಾರ ಕೊಡಿ' ಎಂದು ಗಾಂಧಿಜಿ ಹಾಗೂ ಕಾಂಗ್ರೆಸ್ ಅಧ್ಯಕ್ಷರು ಹೇಳಿದರಲ್ಲ? ಕಾಂಗ್ರೆಸಿನೊಡನೆ ಸಹಕರಿಸಲು ಆಕ್ಷೇಪವಿಲ್ಲವೆಂದು ಜಿನ್ನರೂ ಸಾರಿದ್ದಾರೆ. ಅವರೂ 'ಅಧಿಕಾರ ಬಿಟ್ಟುಕೊಡಿ' ಎಂದಿದ್ದಾರೆ. ಲಾರ್ಡ್ ವೇವಲರ ಕೆಲಸ ಕಠಿಣವಾದದು. ಆದರೆ ಅವರ ಮುಂದೆ ಸುವರ್ಣ ಸಂಧಿಯಿದೆ. ಈ ಗಾಯವನ್ನು ಗುಣಪಡಿಸಿ ಭಾರತ ಬ್ರಿಟನುಗಳೊಳಗೆ ಸ್ನೇಹ ಸಂಬಂಧ ಸ್ಥಾಪಿಸಲು ಅವರು ಬಯಸುತ್ತಿದ್ದಾರೆಂದು ನಾನು ಬಲ್ಲೆ. ಬ್ರಿಟಿಷ್ ವಿರೋಧಭಾವನೆ ದೇಶದಲ್ಲಿ ಇಷ್ಟು ವ್ಯಾಪಕವಾಗಿ ಎಂದೂ ಇರಲಿಲ್ಲ. ಯುದ್ಧಕಾಲದಲ್ಲಿ ರಾಷ್ಟ್ರೀಯ ಸರಕಾರಕ್ಕೆ ಅಧಿಕಾರ ಬಿಟ್ಟುಕೊಡಲು ನಿರಾಕರಿಸಿ, ರಾಜ್ಯ ಘಟನೆಯ ಮಾತನ್ನಾಡಿರುವುದರಿಂದ ಹಿಂದು ಮುಸ್ಲಿಂ ಭೇದ ಉಗ್ರವಾಗಿದೆ. ಬ್ರಿಟಿಷ್ ಸರಕಾರ ಇದನ್ನು ಬೇಕೆಂದೇ ಮಾಡಿದೆಯೆಂದು ಭಾರತೀಯರು ನಂಬಿದ್ದಾರೆ. ಈ ಗಾಯವನ್ನು ಗುಣಪಡಿಸಲು ಪ್ರಯತ್ನಿಸದಿದ್ದರೆ ಬ್ರಿಟನಿಗೆ ಮಾತ್ರವಲ್ಲ ಇಡೀ ಪಾಶ್ಚಾತ್ಯ ಜಗತ್ತಿಗೇ ವಿಶ್ವದಲ್ಲಿ ಕೇಡುಗಾಲ ಬರುವುದರಲ್ಲಿ ಸಂಶಯವಿಲ್ಲ."

ಸಣ್ಣ ಕತೆಗಳ ಕುರಿತು

ಮಿತ್ರಮಂಡಳಿಯ ಅಭ್ಯಾಸ ಗೋಷ್ಠಿ

ಆಗೋಸ್ತು ೨೧ನೇ ಶನಿವಾರ ಶ್ರೀ ಎಂ. ವಾಸುದೇವ ಪ್ರಭುಗಳ ಅಧ್ಯಕ್ಷತೆಯಲ್ಲಿ ಮಿತ್ರ ಮಂಡಳಿಯ ವಾರದ ಅಭ್ಯಾಸಗೋಷ್ಠಿ ಜರಗಿತು. ಶ್ರೀ ಮುಳಿಯ ತಿಮ್ಮಪ್ಪಯ್ಯನವರು ಕನ್ನಡದ ಸಣ್ಣ ಕತೆಗಳ ಕುರಿತು ಅಭ್ಯಾಸವನ್ನು ಮೊದಲು ಮಾಡಿದರು.

ಶ್ರೀ ಮುಳಿಯ ತಿಮ್ಮಪ್ಪಯ್ಯನವರು 'ನಾನು ಇಂದಿನ ಕತೆಗಳನ್ನು ಓದಿದವನು ಅಲ್ಲ. ಆದರೂ ಸಣ್ಣ ಕತೆಗಳ ಸ್ವರೂಪವೆಂತಿರಬೇಕು, ಎಂತಿದ್ದೀತೆಂದು ಊಹಿಸ ಬಲ್ಲೆನೆಂದು ಹೇಳುತ್ತಾ ಸಣ್ಣ ಕತೆಗಾರನು 'ತಿಂದರೊಳಿ ಬಿಂದುಮಥರ್ಗಮು ನಂಪಲ್' [illegible] ನೆರೆವಾತನಾಗಿರಬೇಕೆನ್ನುತ್ತಾ ಸಣ್ಣ ಕತೆಗಾರನು ರೇಖಾ ಚಿತ್ರಗಾರನಂತಿರಬೇಕು. ಶೃಂಗಾರಕ್ಕಿಂತ ಕರುಣಾರಸ ಹೆಚ್ಚಿರಬೇಕು, ಎಂದು ಹೇಳಿ ಭಾರತದ ಕತೆಯೊಂದನ್ನು ಉದಾಹರಿಸಿದರು.

ಶ್ರೀ ಜಿ. ವಾಮನ ಭಟ್ಟರು 'ಮೈಸೂರು ಕತೆಗಳ ಅಭ್ಯಾಸವೀಯುತ್ತಾ ಸಣ್ಣ ಕತೆಗಳ ಸುಗ್ಗಿ ಮೈಸೂರಿನಲ್ಲಿ ತುಂಬಾ. ಅದಕ್ಕೆ ಹಲವಾರು ಕಾರಣಗಳಿರಬಹುದು. ಕಾಲದಿಂದ ಕಾಲಕ್ಕೆ ಸಮಾಜವು ಮಾರ್ಪಡುವಂತೆ, ಮೈಸೂರಿನ ಕತೆಗಾರಿಕೆಯೂ ಆ ಸಮಾಜ ಚಿತ್ರಿಸುವ ಕಲೆಯಲ್ಲಿ ಬೆಳೆದು ಬಂದಿದೆ' ಎಂದು ಹೇಳಿ ರಂಗಪ್ಪನ ದೀಪಾವಳಿಯಿಂದ ಶಿಟ್ಟಣ್ಣನ ದೀಪಾವಳಿ ಹೇಗೆ ರೂಪಾಂತರವಾದ ಸಮಾಜದ ಚಿತ್ರವನ್ನು ಕೊಡುತ್ತದೆಂದು ತೋರಿಸಿದರು.

ಧಾರವಾಡದ ಕತೆಗಳ ಅಭ್ಯಾಸವನ್ನು ಗೋಷ್ಠಿಯು ಮುಂದಿಡುತ್ತಾ ಶ್ರೀ ಪಿ. ಕೆ. ನಾರಾಯಣನವರು 'ಆನಂದ ಕಂದರ ಕತೆಗಾರಿಕೆಯ ವೈಶಿಷ್ಟ್ಯವನ್ನು ವಿವರಿಸಿ ಅಲ್ಲಿನ ಇತ್ತೀಚೆಯ ಕೆಲ ಕತೆಗಾರರ ವಿಷಯವನ್ನು ತಿಳಿಸಿದರು.

ಮಂಗಳೂರು ಕತೆಗಾರರ ಕುರಿತು ಶ್ರೀ ಅಲಂಗಾರು ತಿರುಮಲೇಶ ಭಟ್ಟರು ಮಾತನಾಡಿ, ಪಂಜೆಯವರು ಮೊದಲ ಕತೆಗಾರರಾದರೂ ಅವರ ಹೆಚ್ಚಿನ ಕತೆಗಳನ್ನು ನಾನು ಓದಿಲ್ಲ. ಕಡೆಂಗೋಡ್ಲು ಶಂಕರ ಭಟ್ಟರು ಒಳ್ಳೆ ಕತೆಗಾರರು. ಆದರೆ ಅವರ ಕತೆಗಾರಿಕೆ ಮುಂದೆ ಹೋಗಿಲ್ಲ. ಯಂ ಯನ್. ಕಾಮತರು ನಮ್ಮ ಜಿಲ್ಲೆಯಲ್ಲಿ ಹೆಚ್ಚು ಕೃತಿ ಬರೆದವರು, ಎಂದು ಹೇಳಿ ಕೊರಡ್ಕಲ್ ಶ್ರೀನಿವಾಸರಾವ್ ಕಾರಂತರು ಪಡುಕೋಣೆಯವರು ಇವರೇ ಮೊದಲಾದವರ ಕತೆಗಳನ್ನು ಉದಾಹರಿಸಿದರು.

ಶ್ರೀ ಎಂ. ವಾಸುದೇವರಾಯರು ತಮ್ಮ ಭಾಷಣದ ಮೊದಲು ಗೋಷ್ಠಿಗೆ ಕೆಲವು ಸೂಚನೆಗಳನ್ನಿತ್ತರು. ಕೋದಂಡರಾಯರ, ಪ್ರಶಸ್ತಿ ಪ್ರಕಟನೆ, ಬಂಗಾರದ ಬಳೆಯ ... ಇವುಗಳು, ಸಣ್ಣ ಕತೆಗಳ ಬಹಳ ದೊಡ್ಡ ಸಾಹಿತ್ಯವೆ ಅದರ ಹುಟ್ಟು ಬೆಳವಣಿಗೆ, ವೈವಿಧ್ಯ ಇವುಗಳನ್ನು ಹೇಳಿ "ಕತೆಗಾರರು ರೇಖಾ ಚಿತ್ರಗಾರರಿಗಿಂತಲೂ ವರ್ಣಚಿತ್ರಗಾರರಾಗಿರುವುದು ಮೇಲು" ಎಂದರು.

ಶ್ರೀ ಕಯ್ಯಾರ ಕಿಞ್ಞಣ್ಣ ರೈಗಳು ಕನ್ನಡ ನಾಡಿನ ಕತೆಗಾರ್ತಿಯರ ಕುರಿತು ಮಾತನಾಡುತ್ತಾ "ಇತ್ತೀಚೆಗೆ ಕತೆಗಾರರಿಗಿಂತಲೂ ಕತೆಗಾರ್ತಿಯರೇ ಒಳ್ಳೇ ಕತೆಗಳನ್ನು ಬರೆಯುತ್ತಾರೆ, ಅವರು ಸಮಾಜವನ್ನು ನೋಡುವ ದೃಷ್ಟಿ ಹೊಸತಾಗಿದೆ ಮತ್ತು ಸುಂದರವಾಗಿದೆ" ಎಂದು ಹೇಳುತ್ತಾ, ಕಥಾ ಸ್ಪರ್ಧೆಗಳಲ್ಲಿ ಅವರಿಗೇ ಹೆಚ್ಚು ಬಹುಮಾನ ಸಿಗುವುದನ್ನೂ ವಿವರಿಸಿ ಕತೆಗಾರ್ತಿಯರಲ್ಲಿ ಗೌರಮ್ಮ, ಶ್ಯಾಮಲದೇವಿ, ವಾಸಂತಿದೇವಿ, ವಾಣಿ ಮೊದಲಾದವರು ಒಳ್ಳೇ ಬರೆಹಗಾರ್ತಿಯರೆಂದರು.

ಶ್ರೀ ಸೂರ್ಯನಾರಾಯಣ ಅಡಿಗರು ಮಾತನಾಡುತ್ತಾ ದಕ್ಷಿಣ ಕನ್ನಡದವರೇ ಹಾಸ್ಯರಸವನ್ನು ಕತೆಗಾರಿಕೆಯಲ್ಲಿ ತಂದರೆಂದೂ ಈ ವೈಶಿಷ್ಟ್ಯ ಮುದ್ದಣ್ಣನ ಕಾಲದಿಂದ ಬಂದಿದೆಯೆಂದೂ ಅಭಿಪ್ರಾಯ ಪಟ್ಟರು.

ಅಧ್ಯಕ್ಷರು ಸಭೆಯ ಕಾರ್ಯವನ್ನು ವಿಮರ್ಶಿಸಿ ಅಭ್ಯಾಸ ಗೋಷ್ಠಿಯನ್ನು ಮುಕ್ತಾಯಗೊಳಿಸಿದರು.

NOTICE

In the Court of the District Munsif of Mangalore.

S. C. No. 293/43.

C. Narayanachar.........*Plff.*

Vs

Sesu Mulya & other......*Defts.*

To

2nd Deft: Venkappa nephew of Boggu Mulya residing at Kadinakallu of Kulai village Mangalore Taluk.

Please take notice that the Plaintiff above named has instituted a suit against for recovery of arrears of chalgeni rent etc. and the same is posted to 4-9-43. If you fail to appear either in person or through a pleader on that date the same will be decided in your absence.

By order of the Court,

Mangalore, 17-8-1943. (Sd) P. Ramachandra Rao. Advocate for Plff.

ಸಿನೆಮಾ ಸುದ್ದಿ

ನಟನಟಿಯರು ಬೇಡುತ್ತಾರೆ!

ಬಿಜಾಪುರ ಬರಗಾಲ ಪೀಡಿತರಿಗಾಗಿ

—ಕಲಾಸೇವೆ—ಜನತಾಸೇವೆ—

ಬೊಂಬಾಯಿಯಲ್ಲಿ ತಾ. ೧೬ರಂದು, ಒಂದು ವಿಶೇಷ ದಿನ. ಅಂದು ಬೊಂಬಾಯಿ ಫಿಲ್ಮ್ ಉತ್ಪಾದಕರು, ಡಿಸ್ಟ್ರಿಬ್ಯುಟರರು, ಪ್ರದರ್ಶಕರು ಇವರೆಲ್ಲರೂ ಬಿಜಾಪುರ ಬರಗಾಲ ಪೀಡಿತರಿಗಾಗಿ ನಿಧಿಸಂಗ್ರಹ ಮಾಡಿದರು! ಕಲಾಸೇವೆ ಜನಸೇವೆಯೆಂಬುದು ಇಲ್ಲಿ ನಿಜವಾಗಿ ಪ್ರಯೋಗದಲ್ಲಿ ಬಂತು! ಒಂದೇ ಸಂಜೆಯ ಧನಸಂಗ್ರಹವು ೩೦,೦೦೦ ರೂಪಾಯಿಗೂ ಮಿಕ್ಕಿತೆಂದರೆ ಇದು ಗಣನೀಯವಾದುದು. ಬಿಜಾಪುರದ ಬಡವರ ಗುಡಿಸಲು ಒಲೆಗಳ ಬೆಂಕಿ ಇದರಿಂದ ಆರದಂತೆ ಇರಲು ಸಹಾಯವಾಯಿತು.

ಹೀಗೆ ಸಂಗ್ರಹ ಮಾಡುವುದರಲ್ಲಿ ಕೇವಲ ಹಣದ ವಿಚಾರವಿರುವುದು ಮಾತ್ರವಲ್ಲ; ಹಾಗೆ ಮಾಡಿದ ಮನಸ್ಸು ವಿಶೇಷ. ಆದರಿಂದಲೇ ನಾವದನ್ನು ಇಲ್ಲಿ ಸ್ಮರಿಸುವುದು. ಉತ್ಪಾದಕ ಮೆಹಬೂಬ್ ಮತ್ತು ಚಂದೂಲಾಲ ಶಹಾರವರು, ತಮ್ಮ 'ನಜ್ಮಾ' ಮತ್ತು 'ತಾನ್‌ಸೇನ್' ಚಿತ್ರಗಳ ಮೂರು ಪ್ರದರ್ಶನಗಳ ಉತ್ಪತ್ತಿಯನ್ನು-ಇವೆರಡೂ ಹೊಸದಾಗಿ ಪ್ರದರ್ಶಿತವಾಗಿದ್ದು ಜನಪ್ರಿಯವಿರುವ ಚಿತ್ರಗಳು-ಕೊಟ್ಟದ್ದು ವಿಶೇಷ ಸ್ಮರಣೀಯವಿದೆ. ಇದರಿಂದಲೇ ಕೇವಲ ಈ ಎರಡು ಚಿತ್ರಗಳಿಂದಲೇ ನಿಧಿ ರೂ. ೬೦೦೦! —

ಈ ಸಿನೆಮಾ ಪ್ರದರ್ಶನದ ನಿಧಿ ಸಂಗ್ರಹ ಮಾತ್ರವಲ್ಲ; ಸಿನೆಮಾ ನಟನಟಿಯರು ಸಿನೆಮಾ ಪತ್ರಿಕೋದ್ಯಮಿಗಳು, ಓರ್ವ ಸಿನೆಮಾ ಉತ್ಪಾದಕರೂ ಕೂಡಾ ನಗರದಲ್ಲಿ ಸುತ್ತಾಡಿ ಬಿಜಾಪುರ ಬರಗಾಲ ಪೀಡಿತರಿಗಾಗಿ ಬೇಡಿ ನಿಧಿಯೆತ್ತಿದರು! ಇವರಲ್ಲಿ ಪ್ರಥ್ವಿರಾಜ್ ಕಾಪೂರ್‌ರಷ್ಟು ಉತ್ಸಾಹದ 'ಭಿಕ್ಷುಕ' ಬೇರಿರಲಿಲ್ಲ. ತಾನು ಅಭಿನಯಿಸಿದ 'ಇಶಾರಾ' ಚಿತ್ರ ನಡೆಯುತ್ತಿರುವ 'ಸ್ವಸ್ತಿಕಾ' ಸಿನೆಮಾ ಭವನದಲ್ಲಿ ಅವರು ಬಂದು ಬೇಡಿದ್ದಲ್ಲದೆ, ಇತರ ಹಲವು ಕಡೆಗಳಲ್ಲಿಯೂ ನಿಧಿಯೆತ್ತಿದರು. ಅಂದು ಭಾಷಣವಿತ್ತರು, ರಾಷ್ಟ್ರಗೀತೆಗಳನ್ನು ಹಾಡಿದರು; ತನ್ನ ಕೈಬರಹದ ಭಾವಚಿತ್ರಗಳನ್ನು ತನ್ನ ಆರಾಧಕರಿಗಿತ್ತರು. ಮಾತ್ರವಲ್ಲ, ಬಿಜಾಪುರ ಬರಗಾಲ ಪೀಡಿತರಿಗೆ ಧನ ಸಂಗ್ರಹವಾಗುವುದಿದ್ದರೆ ಹಾಡಿ ಕುಣಿಯಲೂ ಕೂಡಾ ಸಿದ್ಧರಿದ್ದರು!

ಮೆಹಬೂಬರು, ಇವರು 'ನಜ್ಮಾ'ದ ನಿರ್ದೇಶಕರು ಮತ್ತು ತಯಾರಕರು, ಇವರಾದರೂ ಮಿನೆರ್ವಾ ಥಿಯೇಟರಿನಲ್ಲಿ ಸುತ್ತಾಡಿ ಬಿಜಾಪುರದ ಬಡವರಿಗಾಗಿ ಬೇಡುತ್ತಿದ್ದರು!

ಕುಮಾರ್, 'ನಜ್ಮಾ'ದ 'ನವಾಬ್ ಮುಕಾರಾಮ್' ಈ ಪ್ರಸಿದ್ಧ ನಟರಾದರೂ ಸುಮ್ಮಗಿರಲ್ಲ. ಸಭಿಕರಿಗೆ ಭಾಷಣವಿತ್ತರು, ತನ್ನ ಟೊಪ್ಪಿಯ ಭಿಕ್ಷಾಪಾತ್ರೆ ಹಿಡಿದು ಬಿಜಾಪುರದ ಭಾಂಧವರಿಗಾಗಿ ಬೇಡಿದರು!

'ನ್ಯೂ ವೆಸ್ಟ್ ಇಂಡೀಸ್' ಥಿಯೇಟರಿನಲ್ಲಿ 'ನಮಸ್ತೆ' ನಡೆಯುತಿತ್ತು; ಪ್ರತಿಮಾದಾಸ ಗುಪ್ತೆ ಅದರಲ್ಲಿ ನಾಯಕಿ; ಒಮ್ಮೆಲೇ ರಂಗಭೂಮಿಯ ಮೇಲೆ ಆಕೆ ಅವತಾರವೆತ್ತಿ ಪ್ರೇಕ್ಷಕರನ್ನು ಬೆರಗುಗೊಳಿಸಿಬಿಟ್ಟಳು! ತೆರೆಯಿಂದ ನೆಲಕ್ಕೆ ಇಳಿದು ಬಂದವಳೇ ಆ ದೇವತೆ ಬಿಜಾಪುರ ನಿಧಿ ಸಂಗ್ರಹ ಮಾಡಿದಳು!

'ಘರ್ ಸಂಸಾರ್' ನಟ, ಮಜಾರ್ ಖಾನ್, ತನ್ನ ಸಿನೆಮಾ ನಡೆಯುತ್ತಿರುವ 'ನೋವೆಲ್ಟಿ' ಥಿಯೇಟರಿನಲ್ಲಿ ಉದಿಸಿ ಬಂದವನೇ, ಬಿಜಾಪುರ ನಿಧಿ ಸಂಗ್ರಹ ಮಾಡಿದ; ಮಾತ್ರವಲ್ಲ ಇತರ ಕಡೆಗಳಲ್ಲಿಯೂ ಸಹ ಈ ಭಿಕ್ಷುಕ ವರ್ಗದೊಡನೆ ಸೇರಿ ಬೇಡಿದ.

ಆ ದಿನ ತಾರಾಲೋಕದಿಂದ ಭಿಕ್ಷುಕಲೋಕಕ್ಕೆ ಇಳಿದು ಬಂದ ಇತರ ತಾರಾಗಣಗಳೆಂದರೆ, ವತ್ಸಲಾ ಕುಮ್ಟೇಕರ್, ಡೇವಿಡ್, ಹರಿಶ್ಚಂದ್ರ, ಸತೀಶ್, ಉಮಾಕಾಂತ್, ಪಾಂಡೆ ಮತ್ತು ಬಲರಾಜ್ ಮೆಥಾ.

ಈ ಭಿಕ್ಷುಕ ಸಂಘದಲ್ಲಿ 'ಸೌಂಡ್'ನ ಜಾಬಕ್, ಮಾರ್ಗರೇಟ್ ಪೋಪ್, ಶ್ರೀಮತಿ ನಾಡಿಯಾ ಮೊದಲಾದವರೂ ಇದ್ದರು.

ವಾಲ್ಕೇಶ್ವರ ರೋಡಿನಲ್ಲಿರುವ ಸ್ಕೇಟಿಂಗ ರಿಂಕ್ ಪ್ಲೇಟಿನಲ್ಲಿ, ಇಲ್ಲಿ ಕೆಲವು ಮುಖ್ಯ ಫಿಲ್ಮ್ ಮಹನೀಯರು ವಾಸಿಸುವರು, ಇಲ್ಲಿಗೂ ಒಂದು ಈ ಭಿಕ್ಷಾ ಪಂಗಡವು 'ಧಾಳಿಯಿಟ್ಟಿತು!' ಅಲ್ಲಿನ 'ಭೂಪತಿ'ಗಳು ಭೋಜನಕೂಟದಲ್ಲಿದ್ದರು! 'ಧಾಳಿಗಾರರು' ಫ್ರೆಂಚ್ ಕ್ರಾಂತಿಗಾರರ ನೆನಪು ತರುತ್ತಿದ್ದರು! ಭಿಕ್ಷಾಪಾತ್ರಕ್ಕೆ ಹಣ ಹಾಕದೆ ಅವರು ಅಲ್ಲಿಂದ ಮರುಳುವಂತಿಲ್ಲ; ಮರುಳುವುದು ಮಾತ್ರವೇನು? ಅಷ್ಟು ಜನ ಬಾಂಧವರು ಬಿಜಾಪುರದಲ್ಲಿ ಹೊಟ್ಟೆಗಿಲ್ಲದೆ ಸಾಯುತ್ತಿರುವಾಗ, ಇವರನ್ನಿಲ್ಲಿ ಊಟ ಮಾಡಲು ಬಿಡುವುದಿಲ್ಲವೆಂಬಂತೆ ಕಂಡಿತು! ನೂರಾರು ರೂಪಾಯಿ ಸಂಗ್ರಹಿಸಿ ಆ 'ಭಿಕ್ಷುಕ'ರು ಅಲ್ಲಿಂದ ಮರಳಿದರು!

'ಸ್ವಸ್ತಿಕಾ ಟಾಕೀಸ್'ನಲ್ಲಿ ಪೃಥ್ವಿರಾಜರು ಬಿಜಾಪುರದ ಬರಗಾಲ ಪೀಡಿತರ ಸಂಕಷ್ಟವನ್ನು ವರ್ಣಿಸಿ ಆವೇಶದ ಭಾಷಣವೀಯುತ್ತಿದ್ದರು. ನಾಲ್ಕಾಣೆ ತರಗತಿಯ (ಕೆಳತರಗತಿ) ಓರ್ವ ಹರಕು ಬಟ್ಟೆಯ ಪ್ರೇಕ್ಷಕನು ತನ್ನ ಹರಕು ಅಂಗಿಯ ಕಿಸೆಯಿಂದ ಮಡಚಿದ ಹತ್ತು ರೂಪಾಯಿ ನೋಟು ಒಂದನ್ನು ಅವರ ಭಿಕ್ಷಾ ಪಾತ್ರೆಗೆ ಹಾಕಿಬಿಟ್ಟ! ಎಂಥಾ ಹೃದಯದ್ರಾವಕ ಸನ್ನಿವೇಶ ಇದು! ಬಡವರ ಕಷ್ಟ ಬಡವರು ಬಲ್ಲರು! ಬಹುಶಃ ಅವನ ಅರ್ಧ ತಿಂಗಳ ಉತ್ಪತ್ತಿ ಎಲ್ಲಾ ಹೋಯಿತು! ಆದರೂ ಆತ ಸಂಕಟವಿಲ್ಲದೆ ಕೊಟ್ಟು ಬಿಟ್ಟ! ತನ್ನ ಹೆಸರು 'ಪತ್ರಿಕೆಯಲ್ಲಿ ಬರುತ್ತದೆಂದು ನೆನಸಿ ಆತ ಕೊಟ್ಟಿರಲಾರ!

ಓರ್ವ ಮಹಿಳೆ ೧೦೧ ರೂಪಾಯಿ ಕೊಟ್ಟಳು! ಇನ್ನೋರ್ವ ಮಹಿಳೆ ತನ್ನ ಪಕೀಟನ್ನು ಪೂರ್ಣ ಖಾಲಿಮಾಡಿ ಸುರಿದಳು! ತನ್ನ ಕೈಯಲ್ಲಿ ಕಾಸಿಲ್ಲದೆ ಓರ್ವ ಮಿಲ್ ಕೆಲಸಗಾರ, ತನ್ನ ಗೆಳೆಯನಿಂದ ಒಂದು ರೂಪಾಯಿ ಸಾಲತೆಗೆದುಕೊಟ್ಟ! ಓರ್ವ ಪತ್ರಿಕೋದ್ಯಮಿ ಕಿಸೆಯಲ್ಲಿ ಕೇವಲ ಐದು ರೂಪಾಯಿ ಮಾತ್ರ ಇತ್ತು, ಆತ ಅದೆಲ್ಲವನ್ನೂ ಬಿಜಾಪುರ ನಿಧಿಗೆ ಅರ್ಪಿಸಿದ.

ಆದರೆ ಸಿನೆಮಾಕ್ಕಾಗಿ ರೂ. ೧, ೨, ೩ ಖರ್ಚುಮಾಡಿ ಕೂತವರು ಬಹಳ ಜಿಪುಣತನ ತೋರಿಸಿದರು; ಕೆಲ ಧನಿಕ ಧರ್ಮಾತ್ಮರನ್ನು ಬಿಟ್ಟರೆ ಬಡವರಿಗಾಗಿ ಮರುಗುವವರು, ಬರಗಾಲ ಪೀಡಿತರಿಗಾಗಿ ಸಹಾನುಭೂತಿಯುವರು ಕೇವಲ ಬಡವರೇ ಎಂಬುದು ತಿಳಿದು ಬಂತು!

ವೃದ್ಧಿಯಿಂದ ಅಭಿವೃದ್ಧಿ.

ಗತ ೧೯೩೯ನೇ ವರ್ಷದಿಂದ ಚಾಲು ೧೯೪೩ನೇ ಪ್ರಾರಂಭದ ಮಾಸಗಳು ಬಹು ಅಪಾಯಗಳಿಂದಲೂ ಹಾಗೂ ಸುಯೋಗಗಳಿಂದಲೂ ತುಂಬಿ ತುಳುಕಿದ್ದವು. ಜಾಣತೆಯಿಂದ ವ್ಯವಸ್ಥೆ ಮಾಡಲ್ಪಟ್ಟ ಸಂಸ್ಥೆಗಳು ಈ ಅಪಾಯಗಳನು ತಳ್ಳಿ ಸುಸಂದರ್ಭಗಳನ್ನು ಉಪಯೋಗಿಸಿ ತೀವ್ರನೆ ಮುಂದುವರಿದವು.

೧೯೪೦, ೪೧ರಲ್ಲಿ ಕೆನರಾ ಬೇಂಕು ೬೦ ಲಕ್ಷ ಠೇವಣೆಗಳ ಮತ್ತು ಒಂದು ಕೋಟಿ ಸಾಂಪತ್ತಿಕ ಸ್ಥಿತಿಯಲ್ಲಿದ್ದು ಅಂದು ಸಹ ಅದು ವಿಸ್ತೃತ ಸ್ಥಿತಿಯ ಸಂಸ್ಥೆಯಾಗಿತ್ತು. ಇಂದು ಠೇವಣೆಗಳು ಇಮ್ಮಡಿಯಾಗಿವೆ. ಸಾಂಪತ್ತಿಕ ಸ್ಥಿತಿಯು ಎರಡುವರೆ ಕೋಟಿಗೆ ಮಿಕ್ಕಿದೆ. ಹಾಗೂ ತೆತ್ತ ಮೂಲಧನವು ನಾಲ್ಮಡಿಯಾಗಿದೆ.

ಜಾಣತನದ ವ್ಯವಸ್ಥೆಯ ಏರ್ಪಾಟಿನಿಂದಲೂ, ಆತ್ಮ ವಿಶ್ವಾಸದಿಂದಲೂ, ದೃಢ ಬುದ್ಧಿಯಿಂದಲೂ, ಯೋಗ್ಯ ಸೇವೆಯನ್ನು ಸಲ್ಲಿಸಿದರಿಂದಲೂ, ಇಂದಿನ ಈ ಪ್ರಗತಿಗೆ ಕಾರಣಭೂತರಾದ ಸಾರ್ವಜನಿಕರ ಮೆಚ್ಚಿಗೆಗೆ ಪಾತ್ರರಾಗಿ ಇನ್ನು ಮುಂದಕ್ಕೂ ಮಹತ್ವದ ಸೇವೆಯನ್ನು ಒಪ್ಪಿಸಲು ಸಮರ್ಥರಾಗಲು ನಾವು ಹಾರೈಸುವೆವು.

Canara Bank Limited.

ಕೆನರಾ ಬೇಂಕ್ ಲಿಮಿಟೆಡ್.

ಸ್ಥಾಪನೆ 1906.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ.

ಆದುದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

The Bank of Mangalore Limited, Mangalore.

ESTD. 1931

HEAD OFFICE Mangalore. *BRANCHES* Moodabidri & Padubidri

The Bank Undertakes to Collect Cheques, Demand and Documentary Bills at Most Competitive Rates.

ISSUES DRAFTS ON ALL IMPORTANT TOWNS IN THE DISTRICT

and also on

BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.

at very favourable rates

All kinds of inland banking business undertaken

ಹುಳುಕಡ್ಡಿ ಮದ್ದು



ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಚಿತ್ತ ಉಪದ್ರವ, ಕೆರೆ ಹುಣ್ಣು, ವ್ರಣ ಮೊದಲಾದ ಎಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,
ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಜೀವವಿಮೆ ಮಾಡುವ ಪ್ರಯೋಜನವು ಇಂದು ಹಿಂದಿಗಿಂತ ಅಧಿಕವಾಗಿದೆ

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಇದರಲ್ಲಿ ಒಂದು ಪಾಲಿಸಿ ಪಡೆದು

ಈಗಲೇ ನೀವು ನಿಮ್ಮನ್ನು ಮತ್ತು ನಿಮ್ಮನ್ನು ಹೊಂದಿಕೊಂಡಿರುವವರನ್ನು ರಕ್ಷಿಸಿಕೊಳ್ಳಿರಿ!

ಪ್ರತಿನಿಧಿಗಳಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಇನ್ಶೂರ್ ಮಾಡಲು ಅಥವಾ ಮಾಹಿತಿ ತಿಳಕೊಳ್ಳಲು ದಯಮಾಡಿ ಬರೆಯಿರಿ!

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

—: ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ : —

ಬೆಂಗಳೂರು ಬೊಂಬಾಯಿ ಮದ್ರಾಸು ಕಲ್ಲಿಕೋಟೆ ಮಂಗಳೂರು ಮತ್ತು ತ್ರಿವೇಂಡ್ರಂ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವ ವಿಧದ ದೋಷಗಳನ್ನು ಗುಣಪಡಿಸುವ ದಿವ್ಯೌಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ್ ವ ಏಜೆಂಟರು:—
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಷೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಪಿ. ವಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೋ—1. ವೆಂಕ್ರಾರ ಗಲ್ಲಿ ಹುಬ್ಬಳ್ಳಿ.
2. 86 ಫ್ಯಾಕ್ರೋಫ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಮೃತ್ಯುಂಜಯ ರಸ, ಪಂಚವಟ ಮಾತ್ರೆ. ಕೊಲರಾ ರೋಗಕ್ಕೆ ಸಿದ್ಧೌಷಧ.

ಸೇವನಾ ಕ್ರಮಗಳು ಔಷಧಿಯೊಡನೆ ಇದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ
SWADESHABHIMANI
ESTD. 1906
[ಸಂಪುಟ 37] ತಾರೀಕು 3—9—1943 [ಸಂಚಿಕೆ 36]

'ಭಾರತದ ಯುದ್ಧ ಭಾರತೀಯರೇ ಗೆಲಬೇಕು'

'ಭಾರತದ ಯುದ್ಧವನ್ನು ಭಾರತೀಯರೇ ಗೆಲ್ಲಬೇಕು'

ಬರ್ನಾರ್ಡ್‌ಶಾರ ಹೇಳಿಕೆ

ಭಾರತ ಸ್ವಾತಂತ್ರ್ಯಕ್ಕೆ ಅಂತರ್‌ರಾಷ್ಟ್ರೀಯ ಮನ್ನಣೆ ಕೊಡಬೇಕೆಂಬ ಉದ್ದೇಶದಿಂದ ಸ್ಥಾಪಿತವಾದ ಸಂಘದ ಕಾರ್ಯದರ್ಶಿಗಳು ಜಾರ್ಜ್ ಬರ್ನಾಡ್‌ಶಾರಿಗೆ ಒಂದು ಪತ್ರ ಬರೆದು, ಆ ಸಂಘಕ್ಕೆ ಅವರು ಸೇರಬೇಕೆಂದು ಕೇಳಿಕೊಂಡದ್ದಕ್ಕೆ ಶಾರು ಈ ರೀತಿ ಉತ್ತರವಿತ್ತಿದ್ದಾರೆ: 'ನನಗೆ ತಿಳಿದ ಮಟ್ಟಿಗೆ ಭಾರತದ ಭವಿತವ್ಯವು ಅಮೆರಿಕದಂತೆ ಸಂಯುಕ್ತ ಕಾಮನ್‌ವೆಲ್ತ್ ಆಗಿರುವುದು. ಬ್ರಿಟಿಷ್ ಕಾಮನ್‌ವೆಲ್ತ್ ಮತ್ತು ಯು. ಎಸ್. ಎಸ್. ಆರ್. ಇವು ಉಳಿದ ಫೆಡರೇಶನುಗಳಾಗಿದ್ದು, ಅವು ಇನ್ನೂ ಘಟಿತವಾಗಿಲ್ಲ. ಆದರೆ ಅವುಗಳಲ್ಲಿ ಸಂಘಟನೆಯಾಗದಿದ್ದರೆ ಅವು ಉಪವಾಸ ಬೀಳಬೇಕು, ಇಲ್ಲವೆ ಭಿಕ್ಷೆ ಬೇಡಬೇಕು. ಅಥವಾ ಸಾಲಮಾಡಿ ಒಬ್ಬರದೊಬ್ಬರು ಅಪಹರಿಸಿ ಜೀವಿಸಬೇಕು. ಭಿಕ್ಷುಕರು ಮತ್ತು ಸಾಲಗಾರರು ಸ್ವತಂತ್ರರಲ್ಲ. ಹಾಗೂ ಅಪಹರಣವೆಂದರೆ ಯುದ್ಧ. ಭಾರತೀಯರ ವ್ಯವಹಾರವು ನನ್ನ ವೈಯುಕ್ತಿಕ ವ್ಯವಹಾರವಲ್ಲ. ಆದ್ದರಿಂದ ಈ ವಿಷಯ ನಾನು ಕೈಹಾಕುವುದು ಅಧಿಕ ಪ್ರಸಂಗ; ಭಾರತದ ಯುದ್ಧವನ್ನು ಭಾರತೀಯರೇ ಗೆಲ್ಲಬೇಕು.'

ಭಾರತ ಸರಕಾರದ ಸಂರಕ್ಷಣ ಖಾತೆವೆಚ್ಚ!

೧೪ ಕೋಟಿ ಮತ್ತೂ ಹೆಚ್ಚಿತು!

ಭಾರತ ಸರಕಾರದ ಈ ವರ್ಷದ ಮೂರು ತಿಂಗಳ ವೆಚ್ಚವೀಗ ಪ್ರಕಟವಾಗಿದ್ದು, ಈ ಮೂರು ತಿಂಗಳಲ್ಲಿಯೇ ಆದಾಯಕ್ಕಿಂತ ವೆಚ್ಚವು 33¼ ಕೋಟಿ ಹೆಚ್ಚಾಗಿರುವುದು. ಕಳೆದ ವರ್ಷ 29¾ ಕೋಟಿ ಹೆಚ್ಚಾಗಿತ್ತು. ಆದಾಯವು 0¾ ಕೋಟಿಯಷ್ಟು ಹೆಚ್ಚಾಗಿದ್ದರೂ, ವೆಚ್ಚವು 13¼ ಯಷ್ಟು ಹೆಚ್ಚಾಗಿ 48 ಕೋಟಿ ರೂಪಾಯಿ ಹೆಚ್ಚಾಗಿದೆ. ಮುಲ್ಕಿ ವೆಚ್ಚ ೧ ಕೋಟಿ ರೂಪಾಯಿ ಹೆಚ್ಚಾಗಿದೆ. ರೈಲ್ವೆ ಮತ್ತು ಪೋಸ್ಟಲ್ ತಂತಿ ಇಲಾಖೆಗಳಿಂದ ಅನುಕ್ರಮವಾಗಿ ೫॥ ಮತ್ತು ಕೋಟಿ ರುಪಾಯಿ ಹೆಚ್ಚು ಆದಾಯವಾಗಿದೆ, ಇದೇ ಅವಧಿಯಲ್ಲಿ ಕಾಯಂ ಸಾಲ 32¾ ಕೋಟಿ ರುಪಾಯಿಯಷ್ಟು ಬೆಳೆದಿದೆ.

'ಕಾಂಗ್ರೆಸಿನವರು ಜಪಾನ್ ಪರರಲ್ಲ'

ಅಮೆರಿಯವರ ಮೇಲೆ ಅತೃಪ್ತಿ

"ಕಾಂಗ್ರೆಸಿನವರು ಜಪಾನ್ ಪರರೆಂಬುದರಲ್ಲಿ ಅರ್ಥವಿಲ್ಲ"

ರಾಜಾ ಮಹೇಶ್ವರದಯಾಲರ ಟೀಕೆ

'ಭಾರತದ ಇಂದಿನ ಪರಿಸ್ಥಿತಿ ನಮಗೆ ಮಾತ್ರವಲ್ಲ. ಬ್ರಿಟಿಷರಿಗೂ ಹಾನಿಕರ. ಬ್ರಿಟಿಷರ ವಿರುದ್ಧ ಇಂದು ನಮ್ಮಲ್ಲಿ ದಿನೇ ದಿನೇ ದುರಭಿಪ್ರಾಯ ಹೆಚ್ಚುತ್ತಿದೆ. ಇಂದು ಸರಕಾರವು ಮುಖಂಡರನ್ನು ಬಿಡಬೇಕು. ಮುಖಂಡರ ಸೂಚನೆಯಂತೆ ಕೇಂದ್ರದಲ್ಲಿ ಪ್ರತಿನಿಧಿ ಸರಕಾರವನ್ನು ಸ್ಥಾಪಿಸಬೇಕು. ಕಾಂಗ್ರೆಸ್ ಮುಖಂಡರು ಜಪಾನ್ ಪರರೆಂದು ಸರಕಾರವು ಹೇಳುವುದರಲ್ಲಿ ಅರ್ಥವಿಲ್ಲ. ಆ ಮಾತನ್ನು ಯಾರೂ ನಂಬಲಾರರು' ಹೀಗೆಂದು ಅ. ಭಾ. ಹಿಂದು ಮಹಾ ಸಭೆಯ ಕಾರ್ಯಕಾರೀ ಮಂಡಳಿ ಸದಸ್ಯರಾದ ರಾಜ ಮಹೇಶ್ವರದಯಾಲರು ಹೇಳುತ್ತಾರೆ. ಕೊನೆಗೆ ಅವರು, 'ನಮ್ಮ ಸಮಸ್ಯೆಯನ್ನು ಬಗೆಹರಿಸಲು ನಾವು ವಿದೇಶೀಯರಿಗೆ ಮೊರೆಯಿಡಕೂಡದು. ಅಮೆರಿಕನರಿಗೆ ನಮ್ಮ ಮೇಲೆ ಸಹಾನುಭೂತಿಯಿರಬಹುದು, ಆದರೆ ಅವರು ಚರ್ಚಿಲರೊಡನೆ ಹೇಳಿ ನಮ್ಮ ಸಮಸ್ಯೆ ಬಿಡಿಸುವುದು ಅಸಂಭವ' ಎಂದರು.

ಅಮೆರಿಯನ್ನಾರಿಸಿದವರಿಗೇ ಅವರ ಮೇಲೆ ಇಂದು ಅತೃಪ್ತಿ!

ಸ್ಪಷ್ಟೀಕರಣ ಕೇಳುತ್ತಾರೆ.

ಅಮೆರಿ, ಬರ್ಮಿಂಗೆಮ್ ಜನರ ಪ್ರತಿನಿಧಿಯಾಗಿ ಪಾರ್ಲಿಮೆಂಟ್ ಸದಸ್ಯರಾಗಿರುವರು. ತಮ್ಮ ಈ ಪ್ರತಿನಿಧಿಯು ಭಾರತದ ವಿಷಯ ವಹಿಸಿದ ಧೋರಣದಿಂದ, ಅಲ್ಲಿನ ಜನರೀಗ ಅತೃಪ್ತರಾಗಿದ್ದಾರೆ. ಬರ್ಮಿಂಗೆಮಿಗೆ ಬಂದು ಅಮೆರಿ ಭಾರತದ ಕಡೆಗೆ ಬ್ರಿಟಿಷ್ ಸರಕಾರ ವಹಿಸಿದ ಧೋರಣದ ವಿಚಾರ ವಿವರಿಸಿ ತಮ್ಮನ್ನು ತೃಪ್ತಿಪಡಿಸದ ವಿನಾ ತಾವು ಸಮಾಧಾನ ಹೊಂದುವಂತಿಲ್ಲವೆಂದು ಬರ್ಮಿಂಗೆಮಿನ ಜನರು ಈಗ ಚಳವಳವೆಬ್ಬಿಸಿದ್ದಾರೆ. ಬ್ರಿಟನಿನ ಸರಬರಾಯಿ ಖಾತೆಯ ಕೆಲಸಗಾರರು ಮತ್ತು ಹೊಗೆಸೊಪ್ಪು ಕೈಗಾರಿಕೆಯ ಕೆಲಸಗಾರರು ಟ್ರೇಡ್ ಯೂನಿಯನ್ ಕಾಂಗ್ರೆಸಿನಲ್ಲಿ ಭಾರತದ ವಿಚಾರವಾಗಿ ನಿರ್ಣಯವನ್ನು ಮಂಡಿಸಲಿರುವರು. ಸರಕಾರವು ಕೂಡಲೇ ರಾಜಕೀಯ ಕೈದಿಗಳ ಬಿಡುಗಡೆ ಮಾಡಿ ಭಾರತೀಯರ ಸಹಕಾರ ಪಡೆದು, ಜನರ ಪ್ರತಿನಿಧಿ ಸರಕಾರವನ್ನು ರಚಿಸಬೇಕೆಂದೂ, ಭಾರತ ಸಮಸ್ಯೆ ಪರಿಹರಿಸಬೇಕೆಂದೂ ಕೆಲಸಗಾರರ ನಿರ್ಣಯವಿರುವುದು!

ಎಂಜಲೆಲೆಗಾಗಿ ನಾಯಿಯೊಡನೆ ಹುಡುಗರ ಹೋರಾಟ!

ಬಂಗಾಳದ ದೃಶ್ಯ!

ಯಾರೋ ಶ್ರೀಮಂತರು ಎಂಜಲೆಲೆಯನ್ನು ಹೊರಗೆ ಬಿಸಾಡಿದ್ದರು; ಅದರಲ್ಲಿ ಅನ್ನದ ಅವಶೇಷಗಳಿದ್ದವು. ಕೂಡಲೇ ಹಸಿವೆಯಿಂದ ನರಳುತ್ತಿದ್ದ ಹುಡುಗನೊಬ್ಬನು ಅಲ್ಲಿಗೆ ಹಾರಿಬಂದ, ಬಳಿಯಲ್ಲಿಯೇ ಹಸಿದ ಹುಲಿಯಂತಿದ್ದ ನಾಯಿಯೊಂದು ಕಾದಿತ್ತು! ಎಂಜಲೆಲೆಗಾಗಿ ನಾಯಿಗೂ ಹುಡುಗನಿಗೂ ಹೋರಾಟವಾಯಿತು! ಹೋರಾಡಿದ ಹುಡುಗನೀಗ ಆಸ್ಪತ್ರೆಯಲ್ಲಿದ್ದಾನೆ! ಅವನ ಪರಿಸ್ಥಿತಿ ವಿಷಮವಾಗಿದೆ. ಇದು ಬಂಗಾಳದ ವಿಷ್ಣುಪುರವೆಂಬಲ್ಲಿ ನಡೆದ ಸತ್ಯಕತೆ. ಬಂಗಾಳದಲ್ಲಿ ಇಂದಿದು ದಿನನಿತ್ಯದ ನೋಟ!

ಬಂಗಾಳದ ಪರಿಸ್ಥಿತಿ ಕಂಡು ಆಹಾರ ಮಂತ್ರಿಗಳ ಕಂಬನಿ!

ಸರಕಾರದ ತಪ್ಪು ಒಪ್ಪಿಗೆ!

ಭಾರತ ಸರಕಾರದ ಆಹಾರ ಮಂತ್ರಿ ಸರ್. ಜೆ. ಪಿ. ಶ್ರೀವತ್ಸವರು ಐದು ದಿನಗಳ ವರೆಗೆ ಬಂಗಾಳದ ಆಹಾರ ಸ್ಥಿತಿಯನ್ನು ಪರಿಶೀಲಿಸಿಕೊಂಡು ಡಿಲ್ಲಿಗೆ ಮರಳಿರುವರು. ಅಲ್ಲಿನ ಹೃದಯ ವಿದ್ರಾವಕ ಪರಿಸ್ಥಿತಿಯನ್ನು ನೋಡಿ ತನಗೆ ಅತ್ಯಂತ ವೇದನೆಯಾಗಿದೆಯೆಂದು ಅವರು ಹೇಳಿದರು "ಎಲ್ಲಾ ಕೆಲಸವನ್ನು ಬದಿಗಿರಿಸಿ ಆಹಾರ ಸಮಸ್ಯೆ ಪರಿಹರಿಸುವ ಕೆಲಸಮಾಡಬೇಕೆಂದು ಬಂಗಾಳ ಸರಕಾರಕ್ಕೆ ಹೇಳಿದ್ದೇನೆ. ಅವರ ವ್ಯವಸ್ಥೆ ಬೇಗನೇ ಆಗುವುದು. ನಾನೂ ಬೇರೆ ಕಡೆಯಿಂದ ಆಹಾರ ಒದಗಿಸುವ ಏರ್ಪಾಡು ಮಾಡುವೆನು. ಬಂಗಾಳದ ಎಲ್ಲಾ ಜನರೂ ರಾಜಕೀಯ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಹಸಿದವರಿಗೆ ನೆರವಾಗಲು ಮುಂದೆ ಬರಬೇಕು. ಹಿಂದಾದುದನ್ನು ದೂರಿ ಫಲವಿಲ್ಲ. ಕಳೆದ ನವಂಬರಿನಲ್ಲಿ ಇಲ್ಲಿಗೆ ಬಂದಾಗ ಆಹಾರ ಸಾಕಾದೀತೋ ಎಂದು ನಾನು ವಿಚಾರಿಸಿದ್ದೆ. ಆಗ ಯಾರೂ ಏನೂ ಹೇಳಲಿಲ್ಲ. ಆಹಾರದ ಅಭಾವವಾಗಲಾರದೆಂದು ಸಮಾಧಾನ ಹೊಂದಿ ಮರಳಿದೆನು. ನಾವೆಲ್ಲರೂ ತಪ್ಪು ಮಾಡಿದ್ದೇವೆ. ಈಗ ಎಲ್ಲರೂ ಸೇರಿ ಸಾಧ್ಯವಿರುವುದನ್ನೆಲ್ಲಾ ಮಾಡುವ" ಎಂದು ಅವರು ಹೇಳಿಕೆಯಿತ್ತಿರುವರು.

ಮದ್ರಾಸಿನಲ್ಲಿ ರೇಶನಿಂಗ್

ಸೆಪ್ಟಂಬರ ಐದರಿಂದ ಮೊದಲ್ಗೊಂಡು ಮದ್ರಾಸಿನಲ್ಲಿ ರೇಶನಿಂಗ್ ಜಾರಿಗೆ ಬರುವುದು. ರೇಶನಿಂಗ್‌ಗಾಗಿ ಅಧಿಕಾರಿ ಅಧಿಕಾರೇತರ ಸಲಹೆ ಸಮಿತಿಗಳೇರ್ಪಟ್ಟಿವೆ; ಒಂದು ನಿರೀಕ್ಷಕಮಂಡಳವಾಗಿದೆ. ಒಂದು ತಿಂಗಳ ಅಕ್ಕಿ ಯಾವಾಗಲೂ ನಗರದಲ್ಲಿರುವಂತೆ ನೋಡಲಾಗುವುದು. ವಾರದ ರೇಶನಿಂಗ್ ಮಾತ್ರ ಪ್ರಾರಂಭದಲ್ಲಿ ಕೊಡಲಾಗುವುದು. ಕೂಪನ್‌ಗಳನ್ನು ಹಂಚಲಾಗಿದೆ.

ಭಾರತದ ಬಿಕ್ಕಟ್ಟಿನ ಕುರಿತು ಬ್ರೆಂಡನ್ ಬ್ರಾಕೆನರ ಹೇಳಿಕೆ

ಬ್ರಿಟಿಷ್ ಸುದ್ದಿ ಖಾತೆಯ ಮಂತ್ರಿ ಬ್ರೆಂಡನ್ ಬ್ರಾಕೆನರು ಒಂದು ಹೇಳಿಕೆಯಲ್ಲಿ ಭಾರತದ ವಿಚಾರವಾಗಿ ಹೇಳುತ್ತಾ, 'ಭಾರತದ ರಾಜಕೀಯ ಪ್ರಶ್ನೆ ಹಿಂದೆ ಹಾಕಲಾಗಿದೆ. ಆದರೆ ಬ್ರಿಟನ್ನು ಭಾರತಕ್ಕೆ ಕೊಟ್ಟ ವಚನವನ್ನು ಪೂರ್ಣ ಪಾಲಿಸುವುದು. ಭಾರತವು ಮಹತ್ವದ ನೆಲೆಯಾಗಿರುವುದರಿಂದ ಯುದ್ಧಯತ್ನಕ್ಕೆ ತೊಂದರೆಯಾಗುವ ರಾಜಕೀಯ ವಿವಾದಕ್ಕೆ ಅಲ್ಲಿ ಆಸ್ಪದ ಕೊಡಲಾಗುವುದಿಲ್ಲ.'

ಸಂಧಾನ! ಸಂಧಾನ! ಸಂಧಾನ!

ಆಶಾವಾದಿ—ಸಂಧಾನದೂತ—ರಾಜಾಜಿ

ಸಂಧಾನ! ಸಂಧಾನ! ಸಂಧಾನ! ಭಾರತ-ಬ್ರಿಟನುಗಳೊಳಗೆ ಎಷ್ಟು ಸಲ ಸಂಧಾನ ಪ್ರಯತ್ನ ನಡೆಯಿತು! ಕಾಂಗ್ರೆಸ್ ಮುಖಂಡರು, ಲೀಗ್ ಮುಂದಾಳುಗಳು, ಹಿಂದು ಮಹಾಸಭೆಯವರು ಸಾಲದಕ್ಕೆ ಕಮ್ಯುನಿಸ್ಟರು, ಇನ್ನು ಪಕ್ಷವಿದ್ದವರೆಲ್ಲರೂ ಕೊನೆಗೆ ಪಕ್ಷರಹಿತರೂ ಕೂಡಾ ಸಂಧಾನ ಪ್ರಯತ್ನ ಮಾಡಿದ್ದಾರೆ! ಒಂದೆರಡು ಸಲ ಅಲ್ಲ; ಸಾವಿರಾರು ಸಲ. ಈ ಪ್ರಯತ್ನದಲ್ಲಿ ಸೋತುಹೋದರೂ ಕೆಲವರು ಇನ್ನೂ ಸಂಧಾನ ಪ್ರಯತ್ನದಲ್ಲಿಯೇ ಇದ್ದಾರೆ. 'ಹಠ ಹಿಡಿದು ಈ ಪ್ರಯತ್ನ ಮಾಡುತ್ತಾರೆ, ಹಾಗೆ ಪ್ರಯತ್ನ ಮಾಡುವುದೇನೋ ಒಳ್ಳೆಯದು, ಆಶಾವಾದಿಗಳಾಗಿರುವುದು ಬದುಕುವ ಹಾದಿ; ಸಂಧಾನ ಎಂದಾದರೊಂದು ದಿನ ಆದರೂ ಆಗಬಹುದು, 'ಸಾಧಿಸಿದರೆ ಸಬಳವನ್ನು ನುಂಗಬಹುದು!' ಕೊನೆಗೆಂದರೆ, ಪ್ರಯತ್ನ ಮಾಡದೆ ಇರುವುದಕ್ಕಿಂತ, ಪ್ರಯತ್ನ ಮಾಡಿ ಸೋತು ಹೋದರೂ ಹೆಚ್ಚಿನ ಬೇಸರವಿಲ್ಲ. ಪರಿಣಾಮ ಏನೂ ಆಗದಿದ್ದರೂ, ಪ್ರಯತ್ನವನ್ನು ನಾವು ಮಾಡಿದ್ದೇವೆಂದಿಷ್ಟು ಸಮಧಾನವಾದರೂ ಇದ್ದೇ ಇದೆ, ತಳಮಳಿಸುವ ಹೃದಯಕ್ಕೆ ಸಮಾಧಾನ ಮುಖ್ಯ, ಸಮಾಧಾನ ತೃಪ್ತಿ ಎಂಬುದು ಇದಾದರೂ ಇಲ್ಲದಿದ್ದರೆ, ಆಶಾವಾದಿಗಳೂ ಆಗಿರದಿದ್ದರೆ, ಆಹಾರವೂ ಇಲ್ಲದ ಈ ಕಾಲದಲ್ಲಿ ಶೇಕಡಾ ತೊಂಬತ್ತೊಂಬತ್ತರಷ್ಟು ಮಂದಿ ಭಾರತೀಯರು ಆತ್ಮಹತ್ಯೆಯನ್ನೇ ಮಾಡಿಕೊಳ್ಳಬೇಕಾಗಿತ್ತು! ಹಾಗಾಗಿಯೇ ಸಂಧಾನ! ಸಂದಾನ! ಸಂಧಾನ! ಇದೇ ನಮಗೆ ಹಿಂದೆಯೂ, ಇಂದಿಗೂ, ಮುಂದಿಗೂ ಒಂದು ಸಮಾಧಾನ!

ಇತ್ತೀಚೆಗೆ ಸಂಧಾನ ದೂತರಾಗಿ ಮುಂದೆ ಬಂದವರು ರಾಜಾಜಿ, ಗಾಂಧಿಜಿ ಇತಿಹಾಸ ಪ್ರಸಿದ್ಧ 'ಕ್ವಿಟ್ ಇಂಡಿಯಾ' ಸೂತ್ರವು ತಯಾರು ಮಾಡುವ ಮುನ್ನವೇ ರಾಜಾಜಿ ಸಂಧಾನ ಸಾಧನೆಗಾಗಿ ಭಾರತದ ಉದ್ದಗಲ ಓಡಾಡಿದರು. ಜಿನ್ನರನ್ನು ಕಂಡರು, ವೈಸರಾಯರನ್ನು ಕಾಣಲು ಪ್ರಯತ್ನಪಟ್ಟರು, ಜಿನ್ನರೂ ವೈಸರಾಯರೂ ರಾಜಾಜಿಗೆ ಏನೂ ಆಶೆ ಹುಟ್ಟಿಸಲಿಲ್ಲ. ಏನೂ ಆಗದಿದ್ದರೂ, ರಾಜಾಜಿ ಭಾರತದ ಉದ್ದಗಲ ಅಲೆದಾಡುವುದನ್ನೂ ಬಿಡಲಿಲ್ಲ; ಪತ್ರಿಕೆಗಳಲ್ಲಿ ಪುಟ ಪುಟಗಳಷ್ಟು ಪ್ರಕಟಣೆ ಕೊಟ್ಟರು. ಸತ್ಯವಾಗಿ ಆದದ್ದು, ಬ್ರಿಟನು ಅಧಿಕಾರ ಬಿಟ್ಟುಕೊಡದೇ ಉಳಿದದ್ದು, ಮತ್ತು, ಕಾಂಗ್ರೆಸಿನವರು ಸೆರೆಮನೆ ಸೇರಿರುವೀ ಸಂದರ್ಭವನ್ನು ನೋಡಿಕೊಂಡು ಜಿನ್ನರು ಪ್ರಾಂತ ಪ್ರಾಂತಗಳಲ್ಲಿ ಮಂತ್ರಿ ಮಂಡಳ ರಚಿಸಿದ್ದು! ಇಷ್ಟಾದರೂ ರಾಜಾಜಿಗೆ ಇನ್ನೂ ಬದ್ಧಿ ಬರಲಿಲ್ಲ; 'ಸಂಧಾನ! ಸಂಧಾನ' ಎಂದು ಇನ್ನೂ ಅವರು ಕೂಗುತ್ತಲೇ ಇದ್ದಾರೆ!

'ರಾಜಾಜಿಯವರ ಸಂಧಾನ ಪ್ರಯತ್ನದ ಮೊದಲನೆಯ ಹಜ್ಜೆಯಾಗಿ ಆದದ್ದೆಂದರೆ ಕಾಂಗ್ರೆಸಿನಲ್ಲಿ ಒಡಕು ಹುಟ್ಟಿದ್ದು; ಎಷ್ಟೋ ಮಂದಿ ರಾಜಾಜಿ ಅನುಯಾಯಿಗಳಾಗಿ ಬಿಟ್ಟರು! ಕಳೆದ ಆಗಸ್ಟ್ ತಿಂಗಳಿಮೇಲಂತೂ ಹಲವು ಮಂದಿ ನಮ್ಮ ಮುಖಂಡರು ರಾಜಾಜಿ ಅನುಯಾಯಿಗಳೆಂದು ಮನೆಯ ಮಾಡನ್ನೇರಿ ಕೂಗತೊಡಗಿದರು; ರಾಜಾಜಿ ಇದಕ್ಕಾಗಿ ಸಂತೋಷಪಟ್ಟಿರಲೇಬೇಕು! ಒಮ್ಮೆಲೇ ತನ್ನ ಅನುಯಾಯಿಗಳಸಂಖ್ಯೆ ಬೆಳೆದುದನ್ನು ಕಂಡು! ಆದರೆ ರಾಜಾಜಿ ಅನುಯಾಯಿಗಳು ಕೇವಲ ಬಾಯಿಯಲ್ಲಿ ಮಾತ್ರ ಹಾಗೆ ಹೇಳಿದರಲ್ಲದೆ ಸಂಧಾನಕ್ಕಾಗಿ ರಾಜಾಜಿಯಂತೆ ಓಡಾಡುವ ಕೆಲಸವನ್ನೂ ಯಾರೂ ಮಾಡಲಿಲ್ಲ. ಹಾಗೆ ಮಾಡಿಯೂ ಅವರಿಗೇನೂ ಪ್ರಯೋಜನವಿರಲಿಲ್ಲ. ಬಹುಶಃ ತತ್ಕಾಲಕ್ಕೆ ರಾಜಾಜಿ ಅನುಯಾಯಿಗಳೆಂದು ಹೇಳುವುದರಲ್ಲಿ ಅವರು ಸುಖಕಂಡಿರಬಹುದು, ಅಂತೂ ರಾಜಾಜಿಯವರ ಸಂಧಾನ ಪ್ರಯತ್ನದ ಮೊದಲನೆಯ ಹಜ್ಜೆಯಾಗಿ ಆದದ್ದೆಂದರೆ ಕಾಂಗ್ರೆಸಿನಲ್ಲಿ ಒಡಕು!

ಮುಂದೆ ಮುಂದಾಳುಗಳ ಪರಿಷತ್ತು ಸೇರಿತು, ಮುಂದಾಳುಗಳೆಂದರೆ ಪಕ್ಷವಿಲ್ಲದ ಮುಂದಾಳುಗಳು. 'ಪಕ್ಷ'ಗಳಿದ್ದ ಹಕ್ಕಿಗಳು ನಿಂತಲ್ಲಿ ನಿಲ್ಲುವುದಿಲ್ಲ. ಎಲ್ಲೆಲ್ಲಿಯೋ ಹಾರಿಹೋಗುತ್ತವೆ. ಯಾರ ಹಿಡಿತಕ್ಕೂ ಸಿಗುವ ಹಾಗಿಲ್ಲ. ಬಹುಶಃ ಪಕ್ಷವಿದ್ದ ಮುಂದಾಳುಗಳು ಹಾಗೆ ಯಾರ ಹಿಡಿತಕ್ಕೂ ಸಿಗುವುದಿಲ್ಲವೋ ಏನೊ? ಹಾಗಾಗಿ ಪಕ್ಷವಿಲ್ಲದವರನ್ನು ಒಟ್ಟು ಸೇರಿಸಿ ಪರಿಷತ್ತು ಜರಗಿತು ಕೆಲ ಜನರು ಶಿಖೆಯ ಮೇಲೆ ಆಶೆಕಟ್ಟಿಕೊಂಡರು. ಯಾವುದಕ್ಕೂ ಕೊನೆಯಿಲ್ಲದ ಆಶೆ. ಆದರೆ ವೈಸರಾಯರು ಮದ್ರಾಸಿನ ಮಾಜಿ ಮಂತ್ರಿಯೊಡನೆಯೂ ಮಾತನಾಡಲು ಸಿದ್ಧರಿರಲಿಲ್ಲ ಸರ್ ತೇಜಬಹದ್ದೂರ್ ಸಪ್ರುಗಳೂ ತನ್ನಿಂದ ಏನೇನೂ ಆಗುವುದಿಲ್ಲವೆಂದು ತಿಳಿದು ಕೊನೆಗೆ ನಿರಾಸೆಯ ನಿಟ್ಟುಸಿರೆಳೆದರು!

ಪಕ್ಷವಿಲ್ಲವರು ಹೀಗೆ ಬಾಲ ಮಡಚಿಕೊತರೂ, ಮದ್ರಾಸಿನ ಮಾಜಿ ಪ್ರಧಾನ ಮಂತ್ರಿಗಳು ಮತ್ತೂ ಸಂಪೂರ್ಣ ನಿರಾಶರಾಗಲಿಲ್ಲ. ನಿರಾಶರಾಗುವುದು ಮನುಷ್ಯನ ಧರ್ಮವಲ್ಲವೆಂದು ಅವರ ಖಂಡಿತ ನಿರ್ಧಾರವಿರಲೇ ಬೇಕು. 'ಶಾಂತಿ-ಶಾಂತಿ ಶಾಂತಿ' ಎಂದು ರಾಜಾಜಿ ಕೂಗಾಡಿದರು. ಶಾಂತಿಯ ಸಾರ್ವಭೌಮನೇ ಪೂನಾದ ಆಗಾಖಾನ ಅರಮನೆಯೊಳಗೆ ಸೇರಿಸಲ್ಪಟ್ಟಿರುವಾಗ, ರಾಜಾಜಿ, ಶಾಂತಿ: ಶಾಂತಿ:' ಎಂದರೆ ಜನರಿಗೆ ಏನೆಂದು 'ಅರ್ಥವಾಗಬೇಕು? ಹಾಗಾಗಿ ರಾಜಾಜಿಯ ಶಾಂತಿ ಪ್ರಯತ್ನ ಮುರಿದು ಹೋಯಿತು. ಆದರೆ ಇದರಿಂದಲೂ ಅವರು ಸುಮ್ಮಗಿರುವುದು ಸಾಧ್ಯವಿಲ್ಲ, ನಮ್ಮ ದೇಶದ ಜನರಿಗೆ ಏನೂ ಬುದ್ಧಿಯಿಲ್ಲ; ಅಥವಾ ನಮ್ಮ ದೇಶದಲ್ಲಿರುವ ಆಂಗ್ಲೇಯರಿಗೂ ಬೇಕಾದಷ್ಟು ಬುದ್ಧಿಯಿಲ್ಲವೆಂದು ರಾಜಾಜಿ ಭಾವಿಸಿಕೊಂಡರೋ ಏನೊ? ವಿಮಾನ ಕೊಟ್ಟರೆ ವಿಲಾಯತಿಗೆ ಹಾರುತ್ತೇನೆ ಎಂದು ಅವರು ಹಟಹಿಡಿದರು! ವಿಲಾಯತಿಗೆ ಹೋಗಿ, ಅಲ್ಲಿನ ಜನರಿಗೆ ರಾಮಾಯಣ ಭಾರತದ ಕಥೆಗಳನ್ನು ಹೇಳಿ ಮಂಕು ಮರುಳುಗೊಳಿಸಬಹುದೆಂದು ಭಾವನೆಯಿತ್ತೆಂದು ತೋರುತ್ತದೆ! ಏನೊ? ಹೇಗಿದ್ದರೂ, ರಾಜಾಜಿ ಈ ಮಹಾ ಯುದ್ಧದ ಕಾಲದಲ್ಲಿ ವಿಮಾನವೇರಿ, ವಿಲಾಯತಿ ಹೋಗುವಷ್ಟು ತಾಪತ್ರಯ, ಪ್ರಾಣಾಪಾಯಕರ ಸಾಹಸ ಕೈಕೊಳ್ಳಲು ಸಿದ್ಧರಿದ್ದರೂ ಸರಕಾರ ಅವರಿಗೆ ವಿಮಾನ ಒದಗಿಸಲಿಲ್ಲ! ಬರ್ಲಿನಿಗೆ ಬಾಂಬು ಹಾಕಲು, ಇನ್ನೂ ವಿಮಾನಗಳು ತುಂಬಾ ಬೇಕಾಗಿರುವಾಗ ರಾಜಾಜಿಯನ್ನು ವ್ಯರ್ಥವಾಗಿ ವಿಲಾಯತಿಗೆ ಹೊತ್ತುಕೊಂಡು ಹೋಗಲು ಇಂದಿನೀ ಯುದ್ಧಕಾಲದಲ್ಲಿ ವಿಮಾನವೊಂದನ್ನು ಕೊಡಲು ಸಾಧ್ಯವಾಗುವುದಾದರೂ ಹೇಗೆ?

ವಿಲಾಯತಿಗೆ ಹಾರುವುದೂ ನಿಂತಿತು! ಮುಂದೇನು ಮಾಡೋಣ ಸಂಧಾನಕ್ಕೆ! ನಾವೆಲ್ಲರೂ ಅಕ್ಷಪಕ್ಷಪಾತಿಗಳಲ್ಲವೆಂದೂ ಮಿತ್ರರ ಮಿತ್ರರೆಂದೂ ಏಕಕಂಠದಿಂದ ಹಾಡಬೇಕೆಂದು ಹೇಳಿದರು ರಾಜಾಜಿ! ಆಗಾಖಾನ ಅರಮನೆಯಿಂದ ಗಾಂಧಿಜಿ ವೈಸರಾಯರಿಗೆ ಬರೆದ ಪತ್ರದಲ್ಲಿ ಭಾರತೀಯರೆಲ್ಲರೂ ಅಕ್ಷಪಕ್ಷ ವಿರೋಧಿಗಳೆಂದೂ, ಮಿತ್ರರ ಮಿತ್ರರೆಂದೂ ಸಾರಿದ ಸಂದೇಶವನ್ನು ಜಗತ್ತು ಮರೆತುಬಿಡಬೇಕೆಂದು ರಾಜಾಜಿ ಭಾವಿಸುತ್ತಾರೊ ಹೇಗೆ? ಲಂಡನಿನ ಸಿರಿವಂತರು, ಜರ್ಮನಿಯ ಯುದ್ಧಯಂತ್ರಕ್ಕೆ ಬೆಂಬಲ ನಿಂತಿದ್ದಾಗ ಅಮೆರಿಕವು ಜಪಾನಿಗೆ ನೆರವಾಗಿದ್ದಾಗ ಭಾರತದ ವೀರರು ನಾಜಿ ಆಕ್ರಮಣವನ್ನು ಜಪಾನ್ ಧಾಳಿಯನ್ನು ಒಂದೇ ಸ್ವರದಿಂದ ಖಂಡಿಸಿದ್ದರು! ಇತರರು ತಮ್ಮ ಕೈಯನ್ನು ರಕ್ತದಲ್ಲಿ ಅದ್ದುತ್ತಿರುವಾಗ ಭಾರತೀಯರ ಹಸ್ತಗಳು ನಿರ್ಮಲವೇ ಇದ್ದವು! ಆದರೆ ಮುಂದೆ ಯುದ್ಧಸಾರಿದಾಗ, ಲೋಕ ಸ್ವಾತಂತ್ರ್ಯದ ಸ್ಪಷ್ಟೀಕರಣದಲ್ಲಿ ರಾಷ್ಟ್ರೀಯ ಭಾರತವನ್ನು ಹುರಿದುಂಬಿಸಲು ಬ್ರಿಟನು ಸೋತುಹೋಯಿತು. ಇಷ್ಟಿದ್ದರೂ ಈಗ ರಾಜಾಜಿ ಹೇಳುತ್ತಾರೆ, ನಾವೆಲ್ಲರೂ ಅಕ್ಷ ಪಕ್ಷ ವಿರೋಧಿಗಳೆಂದೂ ಮಿತ್ರರ ಮಿತ್ರರೆಂದೂ ಈಗ ಹೇಳಬೇಕೆಂದು! ಕನಸಿನಿಂದ ಎಚ್ಚತ್ತು ಹೇಳುವಂತೆ!

ಒಡೆಯರನ್ನು ಈ ರೀತಿ ಸಮಾಧಾನಪಡಿಸಿದರೆ ನಮ್ಮ ಮೇಲೆ ಅವರು ಕರುಣಾ ದೃಷ್ಟಿ ಬೀರಬಹುದೆಂದು ರಾಜಾಜಿ ಹೇಳಿದ್ದು ಮಾತ್ರವಲ್ಲದೆ ಅವರ ಕೂಗು ಇಲ್ಲಿಗೇ ನಿಲ್ಲಲಿಲ್ಲ. ಜಿನ್ನರೊಡನೆ ಅವರು ಒಂದು ವಿನಂತಿ ಮಾಡಿಕೊಂಡು, ಇದುವರೆಗೆ ಜಿನ್ನರು ಮಾಡಿದ ತಪ್ಪುಗಳನ್ನು ಮರೆತು, ಮಹಾತ್ಮರ ಸಂದರ್ಶನ ಮಾಡಬೇಕೆಂದೂ ಕೇಳಿಕೊಂಡರು. ವೈಸರಾಯರು ಮಹಾತ್ಮರ ಸಂದರ್ಶನ ಮಾಡಿಸಲು ಒಪ್ಪದಿದ್ದರೂ ಚಿಂತೆಯಿಲ್ಲ; ಜಿನ್ನರು ಈ ಪ್ರಯತ್ನ ಮಾಡಬೇಕಂತೆ! ಅಮೆರಿಕದ ಪ್ರಸಿಡೆಂಟ್ ರೂಸ್‌ವೆಲ್ಟರ ರಾಯಭಾರಿಗೇ ಯಾರ ಭೇಟಿಮಾಡಿಸಲು ಲಿನ್‌ಲಿತ್‌ಗೋ ತಿರಸ್ಕರಿಸಿದರೋ ಅವರ ಭೇಟಿಯನ್ನು ಜಿನ್ನರಿಗೆ ವೈಸರಾಯರು ಮಾಡಿಸಬೇಕೆಂದು ರಾಜಾಜಿ ಆಶೆ! ಆದರೆ ಜಿನ್ನರು ಬ್ರಿಟಿಷ್ ಅಧಿಕಾರದೆದುರು ನಿಜವಾಗಿಯೂ ಅಷ್ಟರ ಮಟ್ಟಿಗೆ ಎದುರಾಡಲು ಸಮರ್ಥರಿದ್ದಾರೆಯೆ? ನಿಜವಾಗಿಯೂ ಇಲ್ಲ! ಅವರಿಗೆ ಹಾಗೆ ಮಾಡಲು ಧೈರ್ಯವೂ ಇಲ್ಲ. ಹಿಂದುಗಳನ್ನು ವಿರೋಧಿಸುತ್ತೇನೆಂಬ ಮುಸುಕು ಹಾಕಿಕೊಂಡು, ಕಾಂಗ್ರೆಸಿಗೆ ಎದುರು ನಿಂತು ಮಾತ್ರ ಜಿನ್ನರು ಕೀರ್ತಿ ಕಟ್ಟಿಕೊಂಡವರು!

ಬ್ರಿಟಿಷ್ ಅಧಿಕಾರಿಗಳಾದರೂ ಮಾತಿನ ಮಲ್ಲರಿಗೆ ಏನೂ ಬೆಲೆ ಕೊಡುವುದಿಲ್ಲ ಅವರಿಗೆ ಆಡಿದಂತೆ ಮಾಡುವವರ ಅಂಜಿಕೆ ಬಹಳ. ಅದಾಗಿಯೇ ಕಾಂಗ್ರೆಸು ಆಂದೋಲನ ಆರಂಭಿಸುವ ಮಾತುಕತೆ ಮಾಡುತ್ತಿದ್ದಂತೆ, ಮುಂದಾಳುಗಳ ಮುಂಚಿತವಾಗಿ ಸೆರೆಮನೆ ಸೇರಿಸಲ್ಪಟ್ಟರು! ಹಾಗೆ, ಸರಕಾರ ಜಿನ್ನರಿಗೆ ಅಂಜುವುದಿಲ್ಲ ಹರಟೆ ಕೊಚ್ಚುವವರಿಗೆ ಏನು ಬೆಲೆ ಕೊಡಬೇಕೆಂದು ಬ್ರಿಟಿಷರಿಗೆ ಚೆನ್ನಾಗಿ ಗೊತ್ತು ಜಿನ್ನರಿಗೆ ಅವರ ದೇಶದಲ್ಲಿ ಎಷ್ಟರ ಮಟ್ಟಿಗೆ ಬೆಲೆಯಿದೆಯೆಂಬುದು ಬ್ರಿಟಿಷರಿಗೂ ಗೊತ್ತೇ. ಅವರಾ ಮನುಷ್ಯನು, ಡಿಲ್ಲಿಯ ಪ್ರಸಿದ್ಧ ಭಾಷಣದಲ್ಲಿ, 'ಗಾಂಧಿಜಿ ನನಗೆ ಪತ್ರ ಬರೆದರೆ ಅದನ್ನು ತಡೆಯುವರಾರಿದ್ದಾರೋ ನೋಡುತ್ತೇನೇ' ಎಂದು ಕೂಗಿದಾಗ, ಆ ಮಾತಿಗೆ ಸತ್ವವಿದೆಯೆಂಬುದು ಅವರಿಗೆ ಚೆನ್ನಾಗಿ ಗೊತ್ತಿತ್ತು. ಹಾಗಾಗಿಯೇ ಜಿನ್ನರ ಮಾತಿನಿಂದ ಅವರು ಬೆರಗುಗೊಳ್ಳಲಿಲ್ಲ, ಬೆದರಲೂ ಇಲ್ಲ. ಗಾಂಧಿಜಿ ಜಿನ್ನರಿಗೆ ಬರೆದ ಪತ್ರವನ್ನು ತಡೆದೇ ಬಿಟ್ಟರು ಜಿನ್ನರು ತನ್ನಿಂದೇನೂ ಆಗುವುದಿಲ್ಲವೆಂಬುದನ್ನು ಎರಡನೆ ನಾಲಿಗೆಯಲ್ಲಿ ಹೇಳಿ ಸುಮ್ಮಗೆಯೇ ಕುಳಿತುಬಿಟ್ಟರು!

ಇನ್ನೂ ರಾಜಾಜಿ ಸುಮ್ಮಗಿರುವುದಿಲ್ಲ ಆಶಾವಾದಿ ನಿರಾಶರಾಗಲು ಸಾಧ್ಯವಿಲ್ಲ. ಕ್ರಿಪ್ಸರು ಪುನಃ ಒಮ್ಮೆ ಸಂಧಾನಕ್ಕೆ ಬರಬೇಕಂತೆ! ನೆಹರು, ಅಜಾದ್, ಗಾಂಧಿಯವರನ್ನು ಕಾಣಬೇಕಂತೆ ಇದೆಲ್ಲಾ ಕನಸೇ ಹೇಗೆ? ಮಾತ್ರವಲ್ಲ ಜಿನ್ನರು ಗಾಂಧಿಜಿ ಭೇಟಿಗಾಗಿ ವೈಸರಾಯರನ್ನು ಕೇಳಬೇಕಂತೆ! ಜಿನ್ನರು ಕೇಳುವುದ ಸಂಭವವಿಲ್ಲ, ಕೇಳಿದರೂ ವೈಸರಾಯರು ಬಿಡುವಂತೆ ತೋರುವುದಿಲ್ಲ. ರಾಜಾಜಿ ಇನ್ನೂ ಸಂಧಾನದ ಆಶೆ ಬಿಟ್ಟಿಲ್ಲ ಸಂಧಾನ! ಸಂಧಾನ! ಸಂಧಾನ!

ರೈಲು ಬಂಡಿಗಳ ಸಮಯ

ಎಪ್ರಿಲ್ ತಾ. ೧೫ರಿಂದ ವ್ಯತ್ಯಸ್ಥ ಮಾದ ಪ್ರಕಾರ

	ಹೊರಡುವುದು	ಬರುವುದು
ಮೈಲ್	೭-೪೦ ಪೂ.	೬-೨೫ ಅಪ.
ಶಟ್ಲ್	೬-೩೦ ಅಪ.	೧೧-೩೫ ಪೂ.

ಸಮರಭೂಮಿಯ ಸಂಚಾರ

ರಶ್ಯನರು ಬ್ರಿಲ್, ಬಯಲ್‌ಗೋರೊಡ್ ಮತ್ತು ಖಾರ್ಕೋವ್‌ಗಳನ್ನು ಸ್ವಾಧೀನ ಮಾಡಿ ರಣಭೂಮಿಯಲ್ಲಿ ಮತ್ತೂ ಮುಂದೊತ್ತಿ ನಾಜೀ ಶಕ್ತಿಯನ್ನು ಮುರಿಯುತ್ತಿದ್ದಾರೆ. ಕಳೆದ ವಾರದ ಯುದ್ಧಾವಲೋಕನದಿಂದ ರಶ್ಯನ್ ರಣರಂಗದಲ್ಲಿ ನಾಜೀ ಪ್ರಾಬಲ್ಯ ಕಡಿಮೆಯಾದದ್ದು ಕಂಡುಬರುತ್ತದೆ. ಹಿಟ್ಲರನ ಬಲಕ್ಕೆ ರಶ್ಯನರು ಕೊಟ್ಟ ಹೊಡೆತ ಅಷ್ಟು ಬಲವಂತವಾಗಿದ್ದು, ಅಷ್ಟು ಪರಿಣಾಮಕಾರಿಯಾಗಿದೆ. ನಾಜೀಸೇನೆನೀಪರ್‌ನಿಂದ ಹಿಂದೋಡಿಸಲ್ಪಟ್ಟದ್ದಲ್ಲದೆ ಪೂರ್ವಯುಕರಿನಿನಿಂದ ಹೊರಹಾಕಲ್ಪಟ್ಟಿರುವುದು. ಇದೀಗ ಟಾಗನ್‌ರೋಗನು ರಶ್ಯನರು ಕೈವಶ ಪಡಿಸಿಕೊಂಡದ್ದು ರಶ್ಯದ ರಣನೀತಿಹಾಸದಲ್ಲಿ ಒಂದು ಚಿರ ಸ್ಮರಣೀಯ ಉಲ್ಲೇಖವಾಗುವುದು. ಕಳೆದ ಹೇಮಂತ ಧಾಳಿಯ ಕಾಲದಲ್ಲಿ ನಾಜಿಗಳು ರಶ್ಯನರನ್ನು ಡೊನೆಜ್ ನದಿಯಿಂದ ಹಿಂದಕಟ್ಟಿದ್ದಾರೆಂಬುದನ್ನು ನಾವಿಲ್ಲಿ ನೆನಪು ಮಾಡಿಕೊಳ್ಳಬೇಕು. ಹಾಗಾಗಿ ರಶ್ಯನರೀಗ ಟಾಗನ್‌ರೋಗನ್ನು ಹಿಡಿದು ಮಿಯುಸ್ ನದಿಯ ಉತ್ತರಕ್ಕೆ ದಾಳಿಯಿಟ್ಟಿರುವುದರಿಂದ, ಬೇಗನೇ ಡೋನ್‌ಬಾಸ್ ಪ್ರಾಂತವು ರಶ್ಯನರ ವಶ ಬರಬಹುದೆಂಬ ನಿರೀಕ್ಷೆಯುಂಟಾಗಿದೆ. ಇದೇ ರೀತಿಯಲ್ಲಿ, ಬ್ರಿಯಾನ್‌ಸ್ಕಿನ ನೈಋತ್ಯದಲ್ಲಿ, ಮುಂದೊತ್ತಿ ಸೆವ್‌ಸ್ಕ್‌ನ ಮುಖ್ಯಪಟ್ಟಣವನ್ನು ಹಿಡಿದದ್ದು ಪ್ರಶಂಸನೀಯ. ಇದರಿಂದ ಸ್ಮೊಲೆನ್‌ಸ್ಕ್ ಮತ್ತು ಕೀವ್ ಪ್ರಧಾನ ಪಟ್ಟಣ, ಖಾರ್ಕೋವಿನ ಪಶ್ಚಿಮ ಭಾಗಗಳ ಜರ್ಮನ್ ವ್ಯವಹಾರ ಸಂಬಂಧ ಮುರಿದಂತೆ ಆಗುತ್ತದೆ. ಇದೇ ರೀತಿ ಇತರ ರಣಕ್ಷೇತ್ರಗಳಲ್ಲಿಯೂ ರಶ್ಯನರು ಈಗ ಬಹಳ ಪ್ರಗತಿತೋರಿಸುತ್ತಿದ್ದಾರೆ. ಇದರಿಂದೆಲ್ಲಾ ಜರ್ಮನರ ವ್ಯವಹಾರ ಸಂಬಂಧ ಮಾತ್ರ ಮುರಿಯುವುದಲ್ಲ, ಜರ್ಮನರು ಒಟ್ಟಿನಿಂದ ಪಶ್ಚಿಮಕ್ಕೆ ಹಿಂಜಾರಬೇಕಾಗಿ ಬರುದಿದೆ. ರಶ್ಯನರು ಇಷ್ಟು ಬೇಗನೇ ಇಂಥಾ ಪ್ರಗತಿ ತೋರಿಸಿದ್ದು ಎಲ್ಲರಲ್ಲಿಯೂ ವಿಜಯದ ಆಶಾಕಿರಣವನ್ನು ಮೂಡಿಸುವಂತಿದೆ.

ಬರ್ಮಾ ಧಾಳಿಯುಂಟೆ?

ಕ್ವಿಬೆಕ್ ಪರಿಷತ್ತಿನ ವಿವರವನ್ನು ಮಿತ್ರ ಮುಖಂಡರಿಬ್ಬರೂ ಬಹಿರಂಗಪಡಿಸಲಿಲ್ಲ. ಏಕೆಂದರೆ 'ವಿವರವನ್ನು ತಿಳಿಸಿದರೆ, ಯುದ್ಧ ಮಾಡದೆ ಫೇಸಿಸ್ಟರು ಶರಣು ಬಂದು ಬಿಟ್ಟಾರೆ'ಂದು ರೂಸ್‌ವೆಲ್ಟರ ಅಂಜಿಕೆ! ಹೇಗಿದ್ದರೂ ಜಪಾನ್‌ನೊಡನೆ ಯುದ್ಧ, ಚೀನಕ್ಕೆ ಸಹಾಯ ಮಾಡುವ ವಿಚಾರಗಳಿವು ಈ ಪರಿಷತ್ತಿನಲ್ಲಿ ಪ್ರಮುಖವಾಗಿ ಚರ್ಚಿಸಲ್ಪಟ್ಟ ವಿಷಯವೆಂಬುದಿಷ್ಟು ಪ್ರಕಟವಾಗಿದೆ. ಚಿಯಾಂಗ್ ಕೈಶೇಕರನ್ನು ಕರೆಸಿಕೊಳ್ಳಲಾಗದಿದ್ದರೂ, ಅವರ ಪ್ರತಿನಿಧಿ ಡಾ। ಟಿ. ವಿ. ಸೂಂಗರು ಈ ಚರ್ಚೆಯಲ್ಲಿ ಪ್ರಮುಖ ಭಾಗವಹಿಸಿದ್ದರೆಂದು ಹೇಳಲಾಗಿದೆ. ಅತ್ತ ಅಮೆರಿಕ ಇತ್ತ ಬ್ರಿಟನು ಎರಡು ಕಡೆಗಳಿಂದಲೂ ಜಪಾನನ್ನು ಮುತ್ತಿದರೆ, ಜಪಾನು ಮುರಿಯಲೂಬಹುದು; ಚೀನ ಗೆದ್ದರೂ ಗೆಲಬಹುದು. ಹಿಟ್ಲರನು ಈಗಾಗಲೇ ಅರ್ಧಮರ್ಧ ಸೋತಿರುವನೆಂದೂ ಆದ್ದರಿಂದ ಇನ್ನುಮುಂದೆ ಜಪಾನ್ ಕಡೆಗೆ ಲಕ್ಷ್ಯ ಕೊಡಬೇಕೆಂದೂ ಮಿತ್ರರು ಬಗೆದಿದ್ದರೂ ಇರಬಹುದು.

ಕ್ವಿಬೆಕ್ ಪರಿಷತ್ತಿನ ನಂತರ, ಲಾರ್ಡ್ ಲುಯಿಮೌಂಟ್ ಬ್ಯಾಟನರು ಆಗ್ನೇಯ ಏಶ್ಯದ ಸೇನಾಪತಿಗಳಾಗಿ ನೇಮಕಹೊಂದಿದ್ದಾರೆ. ವೇವಲರನ್ನು, ಓರ್ವ ಸೈನ್ಯ ವಿಚಕ್ಷಣರನ್ನೇ ಭಾರತದ ವೈಸರಾಯರಾಗಿ ನೇಮಿಸಿದ್ದೂ ಭಾರತವು ಮುಂದೆ ಒಂದು ರಣಕ್ಷೇತ್ರವಾಗುವುದೆಂದು ತಿಳಿದೇ ಎಂಬುದಾಗಿ ಹೇಳಲಾಗಿದೆ. ಇದೇ ಸಮಯದಲ್ಲಿ ಏಶ್ಯಕ್ಕೆ ಓರ್ವ ಹೊಸ ಸೇನಾಪತಿಯ ನೇಮಕವೂ ಆಗಿದೆ. ಜಪಾನಿನ ಲಕ್ಷ್ಯವಾದರೂ ಈಗ ಚೀನ ಭಾರತ ಎರಡು ಕಡೆಗಳಿಗೇ ಹರಿದಿದೆ. ಜಪಾನಿನ್ ವಿರುದ್ಧ ಭಾರತ ಸಿಲೋನ್‌ಗಳಿಂದ ಚಟುವಟಿಕೆ ನಡೆಸುವುದು ಕ್ವಿಬೆಕ್ ಪರಿಷತ್ತಿನ ನಿರ್ಣಯವೆಂದೂ ಹೇಳಲಾಗುತ್ತದೆ. ಈ ಹೊಸ ಚಟುವಟಿಕೆಗಾಗಿ ಹೊಸ ಸೇನಾಪತಿ, ಸೇನಾಪತಿ ವೈಸರಾಯ್ ಇವರಿಬ್ಬರೂ ಒಂದಾಗಿದ್ದಾರೆ. ಬರ್ಮವನ್ನು ಗೆಲ್ಲದಿದ್ದರೆ ಮಿತ್ರರಿಗೆ ಸಾಧ್ಯವೇ ಇಲ್ಲ. ಬರ್ಮದಲ್ಲಿರುವ ಆಹಾರ ಮತ್ತು ಸಾಧನ ಸಾಮಗ್ರಿ ವಿಷಯ ಮಾತ್ರವಲ್ಲದೆ ಚೀನ ರಶ್ಯಗಳಿಗೆ ಸಹಾಯ ಕಳುಹಿಸಲು ಬರ್ಮಾ ಮಾರ್ಗ ತೆರೆಯುವುದು ಅತ್ಯವಶ್ಯವಿದೆ. ಹೀಗಾಗಿ ಮುಂದೆ ಬರ್ಮಾಧಾಳಿ ಬೇಗನೇ ಆಗಿ, ಭಾರತವು ಮಹಾ ಸಂಗ್ರಾಮರಂಗವಾಗುವುದೇ ಎಂದು ಹಲವರು ನಿರೀಕ್ಷಿಸುತ್ತಾರೆ.

ಹೆಸ್ಸ್ ಸಂಧಾನ

ನಾಜೀ ಮುಂದಾಳುಗಳಲ್ಲೊಬ್ಬನಾದ ಹೆಸ್ಸ್ ಒಮ್ಮಿಂದೊಮ್ಮೆ ಗಾಳಿಗರಲ್ಲಿ ಇಂಗ್ಲೆಂಡಿಗೆ ಬಂದದ್ದು, ಅಲ್ಲಿ ಕೈಸೆರೆ ಬಿದ್ದದ್ದು ಇವೆಲ್ಲಾ ಬಹಳ ಸೋಜಿಗದ ಸುದ್ದಿಗಳಾದವು. ಹೆಸ್ಸ್ ಇಂಗ್ಲೆಂಡಿಗೆ ಬಂದ ಕುರಿತು ಅನೇಕ ಕತೆಗಳು ಬಂದವು. ಇದರಲ್ಲಿ ಹೆಚ್ಚಿನದಂತ ಕತೆಯಿದ್ದರೂ ಇರಬಹುದು. ಹಿಟ್ಲರನೊಡನೆ ಮತಭೇದವಾಗಿ ಬಂದನೆಂದು ಕೆಲವರು ಹೇಳಿದರು; ತಲೆಕೆಟ್ಟು ಓಡಿಬಂದನೆಂದು ಬೇರೆ ಕೆಲವರೆಂದರು; ಸಂಧಾನಕ್ಕಾಗಿ ಬಂದನೆಂದರು ಕೆಲವರು; ಮಿತ್ರರಲ್ಲಿ ಒಡಕು ಹುಟ್ಟಿಸಲು ಬಂದನೆಂದು ಇನ್ನು ಕೆಲವರು ಹೇಳಿದರು. ಆದರೆ ಕೆಲದಿನಗಳ ವರೆಗೆ ಈ ದಂತಕತೆಗಳು ಹೊರಟು ಆ ಮೇಲೆ ಸುದ್ದಿ ತಣ್ಣಗಾಯಿತು. ಇತ್ತೀಚೆಗೆ 'ದಿ ಅಮೆರಿಕನ್ ಮರ್ಕ್ಯುರಿ' ಎಂಬ ಪತ್ರಿಕೆ ಹೆಸ್ಸ್ ಆಗಮನ ಕತೆಯನ್ನು ಸ್ವಲ್ಪ ವಿವರವಾಗಿ ಇನ್ನೊಂದು ರೀತಿಯಲ್ಲಿ ಕೊಟ್ಟಿದೆ. ಇದರಲ್ಲಿ ಎಷ್ಟರ ಮಟ್ಟಿಗೆ ಸತ್ಯಾಂಶವಿದೆಯೋ ಎಂಬೀ ವಿಷಯ ಬೇರೆ; ಆದರೆ ಕುತೂಹಲಕ್ಕಾಗಿ ಇದನ್ನು ತಿಳಕೊಳ್ಳುವದವಶ್ಯ. ಈ ಹೊಸ ಕತೆ ಹೀಗಿದೆ:

"ಹೆಸ್ಸ್ ಹಿಟ್ಲರನ ಆಜ್ಞೆಯಂತೆ ಬ್ರಿಟಿಷರೊಡನೆ ಸಂಧಾನ ಮಾಡಲು ಬಂದ; ಇದಕ್ಕಿಂತ ಮೊದಲು ಹಿಟ್ಲರ್ ಸರಕಾರಕ್ಕೂ, ಬ್ರಿಟನಿನಲ್ಲಿರುವ ಕೆಲವರಿಗೂ ಪತ್ರವ್ಯವಹಾರ ನಡೆಯುತ್ತಿತ್ತು. ಆದರೆ ಹಿಟ್ಲರನ ಪತ್ರವೆಲ್ಲಾ ಗುಪ್ತ ಪೋಲೀಸರ ಕೈಗೆ ಬರುತ್ತಿತ್ತೆಂಬುದು ಹಿಟ್ಲರನಿಗೆ ಗೊತ್ತಿಲ್ಲ! ಇದರ ಫಲವಾಗಿ ಸಂಧಾನಕ್ಕೆಂದು ಬಂದ ಹೆಸ್ಸ್ ಕೈದಿಯಾಗಬೇಕಾಯಿತು. ಹಿಟ್ಲರನಿಗೆ ಬ್ರಿಟಿಷರನ್ನು ಎಣಿಸಿದಷ್ಟು ಬೇಗ ಸೋಲಿಸಲಾಗದೆ, ರಶ್ಯದ ಯುದ್ಧವನ್ನು ಮುಂದುವರಿಸಲು ತಾಳ್ಮೆಯಿಲ್ಲದೆ ಬ್ರಿಟಿಷರೊಡನೆ ಸಂಧಾನಕ್ಕೆ ತೊಡಗಿದ್ದ. ಇಂಗ್ಲೆಂಡಿಗೆ ಬಂದಿಳಿದ ಹೆಸ್ಸನಿಗೆ ಮೊದಲು ತಾನು ಗುಪ್ತ ಪೋಲೀಸರ ಕೈವಶವಿರುವ ಸುದ್ದಿ ಗೊತ್ತಾಗದೆ ಸಂಧಾನದ ಶರತ್ತಗಳನ್ನು ವಿವರವಾಗಿ ಮಂಡಿಸಿದ. ಅವನ ಅಂತರಂಗವನ್ನೆಲ್ಲಾ ತಿಳಕೊಂಡ ಮೇಲೆ ಆತನನ್ನು ಕೈದಿಯಾಗಿಟ್ಟರು. ಕೊನೆಗೆ ಹೆಸ್ಸನಿಗೆ ತನ್ನ ಪರಿಸ್ಥಿತಿ ತಿಳಿಯಿತು. ಸಂಧಾನಕ್ಕಾಗಿ ಬಂದವನನ್ನು ಕೈದಿಯಾಗಿಡುವುದು ನ್ಯಾಯವಲ್ಲವೆಂದು ವಾದಿಸಿದ. ಆದರೆ ಬ್ರಿಟಿಷರು ಆತನನ್ನು ಬಿಡದೆ ಭದ್ರ ಕಾವಲಿನಲ್ಲಿಟ್ಟಿದ್ದಾರೆ. ಯುದ್ಧಾನಂತರ ಈ ವಿವರವು ಒಂದು ಮಹತ್ವದ ಸುದ್ದಿಯಾಗಿ ಪ್ರಕಟವಾಗುವುದು." ಇದು ಹೆಸ್ಸನ ಕುರಿತು ಪ್ರಕಟವಾದ ಇತ್ತೀಚೆಯ ಸುದ್ದಿ!

ಇಟಲಿಯ ಹಿಂದಿನ ಸರರಾಷ್ಟ್ರ ಮಂತ್ರಿಯೂ, ಮುಸಲಿನಿಯ ಅಳಿಯನೂ ಆದ ಕೌಂಟ್ ಸಿಯಾನೋ ರೋಮಿನಲ್ಲಿ ಕಠಿಣ ಕಾವಲಿನ ಬಂಧನದಲ್ಲಿಡಲ್ಪಟ್ಟವನು ತನ್ನ ಪತ್ನಿ ಮತ್ತು ಮೂರು ಮಕ್ಕಳು ಸಹಿತ ತಪ್ಪಿಸಿಕೊಂಡು ಹೋಗಿರುವನೆಂದು ಪ್ರಕಟವಾಗಿದೆ.

THE CANARA BANKING CORPORATION Ltd

(Incorporated in British India with limited liability).

Estd:] Head office: UDIPI [1906.

(Branches & Agencies in all principal cities of India)

Authorised capital	Rs. 25,00,000.
Issued & Subscribed	Rs. 16,00,000.
Paid up Capital	Rs. 10,06,000.
Reserves	Rs. 3,85,000.

Advances are made against approved securities and bills purchased or collected at most favourable rates.

For further particulars please apply to the nearest Branch.

'ಪ್ರಕಾಶ' ಕೂಟದಲ್ಲಿ 'ಮರಳಿ ಮಣ್ಣಿಗೆ' ಕುರಿತು ಅಭ್ಯಾಸಗೋಷ್ಠಿ

ಮಂಗಳೂರು 'ಪ್ರಕಾಶ ಕೂಟ'ದಲ್ಲಿ ಶ್ರೀ ಶಿವರಾಮ ಕಾರಂತರ 'ಮರಳಿ ಮಣ್ಣಿಗೆ' ಕಾದಂಬರಿ ಕುರಿತು ಅಭ್ಯಾಸಗೋಷ್ಠಿಯು ಶ್ರೀ. ಕೆ. ರಾಮಗೌಡರ ಅಧ್ಯಕ್ಷತೆಯಿಂದ ತಾ. ೨೯ರಂದು ಜರಗಿತು.

ಶ್ರೀ. ತಿರುಮಲೇಶ್ವರ ಅಲಂಗಾರರು 'ಮರಳಿಮಣ್ಣಿಗೆಯ ರಚನೆ ಮತ್ತು ಶೈಲಿ' ಕುರಿತು ಅಭ್ಯಾಸವೀಯುತ್ತಾ, ಪ್ರಾರಂಭದಲ್ಲಿ ಕತೆಯನ್ನು ವಿವರಿಸಿ, 'ದಕ್ಷಿಣದ ಕಡಲು ದಂಡೆಯ ಬಡತನದ ಜೀವನ ಇಲ್ಲಿ ಬುಗಿಲೆದ್ದಿದೆ. ಹಳ್ಳಿಗಳಲ್ಲಿ ಹೊಸ ತತ್ವ ಹರಡುವವರ ಕಷ್ಟ ಚಿತ್ರಿತವಾಗಿದೆ, ಕಾದಂಬರಿ ಪಾತ್ರ ಸನ್ನಿವೇಶಕ್ಕೆ ತಕ್ಕುದಾಗಿದೆ' ಎಂದರು.

ಶ್ರೀ ಪಿ. ಕೆ. ನಾರಾಯಣರು 'ಮರಳಿ ಮಣ್ಣಿಗೆ'ಯ ಪಾತ್ರಗಳ ಅಭ್ಯಾಸವಿತ್ತು, ಈ ಕಾದಂಬರಿಯಲ್ಲಿ ನಮ್ಮ ನಾಡಿನ ಒಂದೂವರೆ ಶತಮಾನದ ಜೀವನ ಸಂಸ್ಕೃತಿಗಳಿವೆಯೆಂದು ಹೇಳಿ, ಇಲ್ಲಿನ ಮುಖ್ಯ ಪಾತ್ರಗಳ ವೈಶಿಷ್ಟ್ಯ ವಿವರಿಸಿ, 'ಕಾರಂತರ ಪುರುಷ ಪಾತ್ರಗಳಿಗಿಂತ ಸ್ತ್ರೀ ಪಾತ್ರ ಉತ್ತಮವಾಗಿದೆ'ಯೆನ್ನುತ್ತಾ 'ಈ ಕಾದಂಬರಿ, ೧೯೪೦ರಲ್ಲಿ ಏಲ್ಲದೆ, ನಮ್ಮ ಜೀವನ ಮುಂದೇನು? ಎಂದು ಸೂಚಿಸಬೇಕಿತ್ತು' ಎಂದರು.

ಶ್ರೀ. ಬಿ. ಎಂ. ಇದಿನಬ್ಬರು 'ಮರಳಿ ಮಣ್ಣಿಗೆ'ಯ ಸ್ಥಾನ ಮತ್ತು ವೈಶಿಷ್ಟ್ಯಗಳನ್ನು ವಿವೇಚಿಸಿ, 'ಶ್ರೀ. ಪುಟ್ಟಪ್ಪನವರ 'ಕಾನೂರು ಸುಬ್ಬಮ್ಮ ಹೆಗ್ಗಡ್ತಿ'ಯ ಭಾಷೆ ಬಿಗಿಯಾಗಿದೆ; ಆ ಕಾದಂಬರಿಯಲ್ಲಿ ಚಟ ಕಡಿಮೆ, 'ಮರಳಿ ಮಣ್ಣಿಗೆ' 'ಕಾನೂರು ಸುಬ್ಬಮ್ಮ ಹೆಗ್ಗಡ್ತಿ'ಗಿಂತ ಉತ್ತಮ. ಶ್ರೀ. ಕಾರಂತರ ಕಾದಂಬರಿ ಮೊದಲ ಸ್ಥಾನ ಪಡೆದಿದೆ' ಎಂದರು.

ಶೀ ಕಯ್ಯಾರ ಕಿಞ್ಞಣ್ಣ ರೈಗಳು, ಆ ಬಳಿಕ ಮಾತನಾಡಿ, 'ಕಾನೂರು ಸುಬ್ಬಮ್ಮ ಹೆಗ್ಗಡ್ತಿ'ಗಿಂತ 'ಮರಳಿ ಮಣ್ಣಿಗೆ' ಉತ್ತಮವೆಂಬುದನ್ನು ನಾನು ಒಪ್ಪಲಾರೆ; ಎರಡೂ ಕನ್ನಡದ ಶ್ರೇಷ್ಠವರ್ಗದ ಕಾದಂಬರಿಗಳು. ಕಾನೂರು ಸುಬ್ಬಮ್ಮ ಹೆಗ್ಗಡ್ತಿಯನ್ನು ಮರಳಿ ಮಣ್ಣಿಗೆ ಸ್ಪರ್ಧಿಸಿದಂತೆ ತೋರುತ್ತದೆ, ಅಲ್ಲಿ ಅಬ್ರಾಹ್ಮಣ ಜೀವನ ಚಿತ್ರವಿದೆ; ಇಲ್ಲಿ ಬ್ರಾಹ್ಮಣ ಜೀವನ ಚಿತ್ರವಿದೆ; ಅದರ ಭಾಷೆ ನಿರರ್ಗಳ ಧಾರೆಯಾದರೆ, ಇದರದು ಹಸಿಹಸಿಯಂತಿದೆ, ಆದರೆ ಇಬ್ಬರೂ ಕಾದಂಬರಿಕಾರರೂ ತಮ್ಮ ಕಥಾನಾಯಕರನ್ನು ಆದರ್ಶವಾದಿಗಳಾಗಿ ಮಾಡ ಹೋಗಿ ಅಪಜಯಹೊಂದಿದ್ದಾರೆ' ಎಂದು ಹೇಳುತ್ತಾ 'ಮರಳಿ ಮಣ್ಣಿಗೆ'ಯಲ್ಲಿ ಒಂದು ರೀತಿಯ ಸೋಲಿನ ಮನೋಭಾವನೆ (defeatism) ತೋರುತ್ತದೆ, ಲಚ್ಚನಂಥಾ ಶತಪಾತ್ರ ನಮ್ಮ ಸಮಾಜದಲ್ಲಿರುವುದು ಸಾಧ್ಯವುಂಟೇ, ರಾಮನಂಥಾ ಸಂಗೀತ ಕೋವಿದನು ಉದ್ಯೋಗ ಸಿಗದೆ 'ಮರಳಿ ಮಣ್ಣಿಗೆ' ಬರುವುದು ಸಹಜವೇ? 'ಮರಳಿ ಮಣ್ಣಿಗೆ' ಎಂಬ ಇಂದಿನ ಕಾಲದ ಕರೆಯ ಹೆಸರು ಕೊಟ್ಟ ಕಾರಂತರು ಎಲ್ಲೆಲ್ಲಿಯೂ ಉದ್ಯೋಗ ಸಿಗದ, ನಿರಾಶಾವಾದಿಯನ್ನು 'ಮರಳಿ ಮಣ್ಣಿಗೆ' ಕರತಂದದ್ದು ಇದು ಕೇವಲ ವಿಡಂಬನೆಯಾಗಿದೆ ಎಂದು ಮೊದಲಾಗಿ ಹೇಳಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಕಾದಂಬರಿಯ ರಚನೆ, ಪಾತ್ರ, ಶೈಲಿಗಳ ಗಳ ಕುರಿತು ಅಭಿಪ್ರಾಯ ತಿಳಿಸಿದ ಮೇಲೆ ಶ್ರೀ. ಜಿ. ರಾಮಚಂದ್ರ ಭಟ್ಟರು ವಂದನಾರ್ಪಣೆ ಮಾಡಿದರು.

ಸ್ವದೇಶಾಭಿಮಾನಿ

ತಾರೀಕು 3—9—1943

ಬಂಗಾಳದ ಹೃದಯದ್ರಾವಕ ದೃಶ್ಯ!

ಬ್ರಿಟಿಷರ ಆಡಳಿತದ ಇತಿಹಾಸದಲ್ಲಿ, ಭಾರತೀಯರ ಜೀವನದ ಇತಿಹಾಸದಲ್ಲಿ ಬಂಗಾಳದ ಇಂದಿನ ಹೃದಯವಿದ್ರಾವಕ ದೃಶ್ಯವು ವಿಪರೀತವಾದದ್ದು; ವಿಷಮವಾದುದು. ಕಲ್ಕತ್ತದ ಬೀದಿ ಬೀದಿಗಳಲ್ಲಿ, ಬಂಗಾಳದ ಗ್ರಾಮಗ್ರಾಮಗಳಲ್ಲಿ ಜನರು ಅನ್ನವಿಲ್ಲದೆ ನರಳುತ್ತಿದ್ದಾರೆ; ಹಸುಮಕ್ಕಳು, ಹೆಂಗುಸರು, ಮುದುಕರು ಇವರ ಜತೆಗೆ ದೃಢಕಾಯದ ಜವ್ವನಿಗರು ಎಲ್ಲರೂ ದಿನ ದಿನ ಕೂಳಿಲ್ಲದೆ ಗೋಳಾಡಿ ಮಡಿಯುತ್ತಿದ್ದಾರೆ! ಹಸಿವಿನ ಬೆಂಕಿಗೆ ಇಡೀ ಬಂಗಾಳವೇ ಇಂದು ಬಲಿಯಾಗುತ್ತಿದೆ. ದಿನದಿನವೂ ಆಹಾರವಿಲ್ಲದೆ ಎಲ್ಲೆಡೆಗಳಲ್ಲಿಯೂ ನರಳಿ ಸಾಯುತ್ತಿರುವ ಜನರ ದೃಶ್ಯ ಕರುಳು ಕೊರೆಯುವಂಥಾದ್ದು! ಮೃತ್ಯುದೇವತೆ ಇಂದು ಬಂಗಾಳದಲ್ಲಿ ನುತ್ತ ನೃತ್ಯಕ್ಕೆ ತೊಡಗಿದ್ದಾಳೆ!

ನಮ್ಮ ರಾಷ್ಟ್ರದ ಜನರ ಜೀವನದ ಮೇಲೆ ಇಂಥಾ ವಿಷಮ ಪರಿಣಾಮವಾದದ್ದನ್ನು ನಾವು ಇತರ ಭಾಗದವರು ಸಹಿಸಿಕೊಂಡಿರುವುದು ಸಾಧ್ಯವಿಲ್ಲ. ಯಾವುದೇ ಪ್ರಾಂತದ, ಯಾವುದೇ ರಾಷ್ಟ್ರದ ಜನರಿರಲಿ ಮಾನವ ಜೀವನದ ಸುಖದುಃಖಗಳು ಎಲ್ಲರಿಗೂ ಒಂದೇ ತೆರ; ಬಂಗಾಳದ ಬಂಧುಗಳ ಸಂಕಷ್ಟ ಇಂದು ನಮ್ಮ ಪಾಲಿನ ಸಂಕಷ್ಟ. ಅವರ ಹಸಿದ ಹೊಟ್ಟೆಯ ಕೂಗು ನಮ್ಮ ಕರುಳಿನ ಕೂಗು; ಅವರ ಹಸಿಮೊಡಲಿಗೆ ಅನ್ನವೀಯುವ ಕಾರ್ಯ ಇಂದು ನಮ್ಮ ಕರ್ತವ್ಯ. ಬಂಗಾಳ ಬರಗಾಲ ಪೀಡಿತ ಬಂಧುಗಳಿಗೆ ಸಾವಿರ ಗಟ್ಟಲೆಯಿಂದ ಸಹಾಯ ಕಳುಹಿಸಿ ಅವರನ್ನು ನರಳಾಟದಿಂದ, ಮೃತ್ಯು ಮುಖದಿಂದ ತಪ್ಪಿಸುವುದು ಭಾರತದ ಇತರ ಪ್ರಾಂತಗಳವರಂತೆ ಕನ್ನಡ ನಾಡಿನ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ನಮ್ಮೆಲ್ಲರ ಇಂದಿನ ಆದ್ಯ ಕರ್ತವ್ಯವಿರುವುದು.

ಇಂಥಾ ಮಾನವೀಯ ಕಾರ್ಯದಲ್ಲಿ ಭಿನ್ನಭೇದವಿರಕೂಡದು; ಇರಲಾರದು. ಎಲ್ಲಾ ಜಾತಿ ಮತದವರೂ ಒಂದಾಗಿ ಈ ಸಂಕಷ್ಟನಿವಾರಣೆಗೆ ಮುಂದೆ ಬರಬೇಕು; ಎಲ್ಲಾ ರಾಜಕೀಯ ವಿವಾದಗಳನ್ನು ಬದಿಗೊತ್ತಿ, ಎಲ್ಲರೂ ಮಾನವ ದಯಾಭಾವದ ಒಂದೇ ರಾಜಕೀಯದಲ್ಲಿ ಮಗ್ನರಾಗಬೇಕು. ಇಂಥಾ ಪರಿಸ್ಥಿತಿಯೊದಗಿದಕ್ಕಾಗಿ ಈಗ ಯಾರನ್ನೂ ದೂರಿ ಪ್ರಯೋಜನವಿಲ್ಲ. ಸರಕಾರದ ಆಹಾರ ಮಂತ್ರಿ ಶ್ರೀ ಪತ್ನವರೇ ಬಂಗಾಳವನ್ನು ಸಂದರ್ಶಿಸಿ ಬಂದು 'ನಾವೆಲ್ಲರೂ ತಪ್ಪು ಮಾಡಿದ್ದೇವೆ' ಎಂಬುದನ್ನು ಮುಕ್ತಕಂಠ ಒಪ್ಪಿಕೊಂಡಿದ್ದಾರೆ. ಅಲ್ಲಿನ ಕರುಣಾಮಯ ದೃಶ್ಯವನ್ನು ನೋಡಿದರೆ ಯಾವ ಕಲ್ಲೆದೆಯವನಾದರೂ ಹಾಗೆ ಹೇಳಲೇಬೇಕು. ಬಂಗಾಳದ ಬಾಂಧವರನ್ನು ಹಸಿವಿನ ಬೆಂಕಿಯಿಂದ ಬದುಕಿಸುವ ಭಾರ ಇಂದು ನಮ್ಮೆಲ್ಲರದು. ಇದು ಜೀವನದಲ್ಲಿ ಅತ್ಯಂತ ಉದಾತ್ತವಾದ ಕಾರ್ಯ.

ಫೆಡರಲ್ ಕೋರ್ಟಿನ ಇನ್ನೊಂದು ತೀರ್ಮಾನ

"೨೬ನೆಯ ನಿರ್ಣಯದನ್ವಯ ಸ್ಥಾನಬದ್ಧಮಾಡಲು ಬಂಗಾಳ ಸರಕಾರದವರು ವಿಧಿಸಿದ ಕ್ರಮವನ್ನು ನಾವು ಬಲವಾಗಿ ನಿಷೇಧಿಸುತ್ತೇವೆ. ೨೬ನೇ ನಿಯಮದನ್ವಯ ಅವಶ್ಯವಿದ್ದ ವಿಧಿಗಳನ್ನೆಲ್ಲಾ ಪೂರೈಸದೆ ಆ ನಿಯಮಕ್ಕೆ ಭಂಗ ತಂದಿರುವರೆಂದು ತೋರಿಸಲು ಅನೇಕ ಆಧಾರಗಳಿವೆ, ಇವುಗಳಂತೆ ಬಂಗಾಳ ಸರಕಾರದ ಆಜ್ಞೆ ಅಕ್ರಮವಿದೆಯೆಂದು ನಿರ್ಣಯಿಸಲು ಯಾವ ಅಡ್ಡಿಯೂ ಇಲ್ಲ. ಪ್ರಜಾಸ್ವಾತಂತ್ರ್ಯ ಮತ್ತು ಕಾನೂನಿನ ನಿಯಮಗಳ ಕುರಿತು ಬಂಗಾಳ ಸರಕಾರವು ಬಹಳ ಅನಾದರ ತೋರಿಸಿರುವುದು. ಅವರ ಆಜ್ಞೆಯ ಪ್ರತಿಯೊಂದು ಶಬ್ದವೂ ನಿಯಮಬಾಹಿರವಿರುವುದು. ಆಜ್ಞೆ ಕೊಡುವಾಗ ವಿಚಾರಮಾಡಿ ನುಂಡಟ್ಟು ಮಾಡಿಕೊಳ್ಳುವುದಂತೂ ಬಹಳ ಕಡಿಮೆ' ಹೀಗೆಂದು ಬಂಗಾಳ ಸರಕಾರದ ಅಪೀಲಿನ ಕುರಿತು ಫೆಡರಲ್ ಕೋರ್ಟಿನ ನ್ಯಾಯಮೂರ್ತಿ ಸರ್ ಜಫರುಲ್ಲಾ ಖಾನ್ ಮತ್ತು ವರದಾಚಾರಿಯವರು ಎಂಟು ಖಟ್ಲೆಗಳ ಕುರಿತು ತೀರ್ಮಾನ ಕೊಟ್ಟಿರುವರು.

ಮೇಲಿನ ಅಪೀಲಿನ ಕುರಿತು ಮುಖ್ಯ ನ್ಯಾಯಮೂರ್ತಿಗಳ ತೀರ್ಮಾನವಿಂತಿರುವುದು: "ಪೋಲೀಸರು ಶಿಫಾರಸು ಮಾಡಿದಂತೆ ೧೯೪೨ ಅಕ್ಟೋಬರ ೧ಕ್ಕೆ ಬಂಗಾಳ ಸರಕಾರ ಆಜ್ಞೆ ಹೊರಡಿಸಿದೆ. ಈ ಕ್ರಮವು ಶುದ್ಧ ತಪ್ಪು. ಇಂಥಾ ಆಜ್ಞೆ ಹೊರಡಿಸುವಾಗ, ಬಂಧಿತರ ವಿಚಾರ ವೈಯುಕ್ತಿಕ ವಿಚಾರಿಸುವರೋ ಎಂದು ಮುಂತಾಗಿ ಗೊತ್ತಾಗುವಂತಿಲ್ಲ. ಆದ್ದರಿಂದ ೧೯೪೨ನೇ ಅಕ್ಟೋಬರ ೧ರ ನಂತರದ ಆಜ್ಞೆ ನ್ಯಾಯಬಾಹಿರವಾಗಿದೆ."

ಮಂಗಳೂರಲ್ಲಿ ಕೊಲೆರಾ

೬೯ ಜನರಲ್ಲಿ ೨೧ ಮರಣ

ಮಂಗಳೂರಲ್ಲಿ ಕೊಲೆರಾ ಹಾವಳಿಯಿಂದ ತಾ. ೨೮ ವರೆಗೆ ೬೩ ಜನರು ಬಾಧಿತರಾಗಿದ್ದು, ಇವರಲ್ಲಿ ೨೩ ಜನರು ಮರಣ ಹೊಂದಿರುವರು. ಕೊಲೆರಾ ಹಾವಳಿ ನಿವಾರಿಸುವ ಬಗ್ಗೆ ನಗರದ ಆರೋಗ್ಯ ಇಲಾಖೆಯವರು ವಿಶೇಷ ಜಾಗ್ರತೆ ತೆಕ್ಕೊಳ್ಳುತ್ತಾರೆ. ನಗರದ ಬೇರೆ ಬೇರೆ ಕಡೆಗಳಲ್ಲಿ ಖಾಸಗಿ ಡಾಕ್ಟರರೂ ಆರೋಗ್ಯ ಇಲಾಖೆಯ ಸಿಬಂಧಿಯವರೂ 'ಇಂಜೆಕ್ಶನ್', ಕೊಡುತ್ತಾರೆ. ಸ್ವಯಂಸೇವಕ ದಳವೊಂದು ಬೋಳೂರು ಕಡೆಗಳಲ್ಲಿ ನಗರ ಸ್ವಚ್ಛತಾ ಕಾರ್ಯ ಮೊದಲಾದವುಗಳನ್ನು ಮಾಡುತ್ತಿರುವುದು.

ಸ್ವದೇಶ ಸಮಾಚಾರ

ಗಡಿನಾಡಿನ ಗಾಂಧಿಯರ ಆರೋಗ್ಯ

ಜೈಲ್ ಮಂತ್ರಿ ವಿಚಾರಿಸುವರು

'ಗಡಿನಾಡಿನ ಗಾಂಧಿ' ಖಾನ್ ಅಬ್ದುಲ್ ಗಫರ್ ಖಾನರು, ಸೆರೆಮನೆಯಲ್ಲಿ ಬಹಳ ಅನಾರೋಗ್ಯದಿಂದಿರುವರೆಂಬ ವಾರ್ತೆ ಹಲವು ದಿನಗಳ ಹಿಂದೆಯೇ ಪ್ರಕಟವಾಗಿದೆ. ಇದರಿಂದ ಗಡಿನಾಡಿನಲ್ಲಿ ಮಾತ್ರವಲ್ಲ ಇಡೀ ಭಾರತದಲ್ಲಿ ವಿಶೇಷ ಉದ್ವೇಗ ವುಂಟಾಗಿರುವುದು. ಈ ಸಂಬಂಧ ಸರಕಾರಕ್ಕೆ ಜನರ ಒತ್ತಾಯವುಂಟಾಗಿದೆ. ಹಾಗಾಗಿ ಗಡಿನಾಡು ಪ್ರಾಂತದ ಜೈಲ್ ಮಂತ್ರಿ ಖಾನ್ ನಮಜೀಖಾನರು ಸ್ವತಃ ಜೈಲಿಗೆ ಹೋಗಿ ಅವರ ಆರೋಗ್ಯ ವಿಚಾರವನ್ನು ತಿಳಕೊಳ್ಳುವುದಾಗಿ ಈಗ ಭರವಸೆಯಿತ್ತಿದ್ದಾರೆ.

ರಾಜಾಜಿ ಲಂಡನಿಗೆ ಬರಲಿ!

ಕ್ರಿಪ್ಸರು ಪುನಃ ಭಾರತಕ್ಕೆ ಬರಬೇಕೆಂದು, ರಾಜಾಜಿ ಒಂದು ಹೇಳಿಕೆಯಿತ್ತರಷ್ಟೆ? ಆದರೆ ಕ್ರಿಪ್ಸರ ಆರೋಗ್ಯ ಚನ್ನಾಗಿಲ್ಲದ್ದರಿಂದ ಸಧ್ಯ ಅವರು ಭಾರತಕ್ಕೆ ಬರುವುದು ಸಾಧ್ಯವಿಲ್ಲದ ಕಾರಣ, ರಾಜಾಜಿ ಲಂಡನಿಗೆ ಬಂದು ಬ್ರಿಟಿಷರ ಮುಂದೆ ಭಾರತದ ಹೇಳಿಕೆಯನ್ನಿಡಬೇಕೆಂದು ಅಲ್ಲಿ ಕೆಲವರ ಅಭಿಪ್ರಾಯವಾಗಿದೆ. ಹೇಗೂ ಸದ್ಯ ಜಪಾನ್ ಮೇಲೆ ಆಕ್ರಮಣ ವಿಚಾರ, ಲಾರ್ಡ್ ಮೌಂಟಬೇಟನರನ್ನು ಏಶ್ಯದ ಸೇನಾಪತಿಯಾಗಿ ನೇಮಿಸಿದ್ದು, ಸೇನಾಪತಿ ವೈಸರಾಯರು ಬರುವುದು ಈ ಎಲ್ಲಾ ಲಕ್ಷಣಗಳನ್ನು ನೋಡಿದರೆ ಏನೋ ಬದಲಾವಣೆ ಆಗುತ್ತದೆಂದು ಹಾರೈಸಬಹುದು.

ಅಂಚೆಖಾತೆಯಲ್ಲಿ ೩.೪೧ ಕೋಟಿ ರೂಪಾಯಿ ಉಳಿತಾಯ

ಪಬ್ಲಿಕ್ ಎಕೌಂಟ್ ಕಮಿಟಿಯ ಸಭೆ ನ್ಯೂ ಡಿಲ್ಲಿಯಲ್ಲಿ ಸೇರಿ ಅಂಚೆ ಮತ್ತು ತಂತಿ ಖಾತೆಯ ೧೯೪೦–೪೧ನೇ ವರ್ಷದ ಲೆಕ್ಕ ಪರಿಶೀಲಿಸಿ, ಈ ವರ್ಷದಲ್ಲಿ ೩.೪೧ ಕೋಟಿ ರೂಪಾಯಿ ಉಳಿತಾಯವಾಗಿದೆಯೆಂದು ಪ್ರಕಟಿಸಿದ್ದಾರೆ. ಕಳೆದ ವರ್ಷ ೧.೨೩ ಕೋ. ರೂ. ಉಳಿತಾಯವಾಗಿತ್ತು. ಕಲ್ಕತ್ತಾ, ಮುಂಬಯಿ, ಮದ್ರಾಸು ತಂತಿ ಕಂಪನಿಗಳನ್ನು ಕೊಂಡಿದ್ದು, ಅವುಗಳ ಹಣವನ್ನು ಬಹುಶಃ ಕೊಟ್ಟಂತಾಗಿದೆ. ಮದ್ರಾಸ್ ಕಂಪನಿಯ ಕೆಲವು ಶೇರುಗಳನ್ನು ಮಾತ್ರ ಇನ್ನೂ ಕೊಳ್ಳುವುದಿದೆ. ಮುಂಬಯಿ ಕಂಪನಿಯವರು ಕರಾಚಿ ಅಹಮ್ಮದಾಬಾದ್ ಎಕ್ಸ್‌ಚೇಂಜ್ ಆಫೀಸುಗಳನ್ನು ತಾವೇ ನಡೆಸುತ್ತಿರುವರು. ಮುಂದಿನ ಸಪ್ಟಂಬರದಲ್ಲಿ ಅವು ಸರಕಾರದ ಆಡಳಿತಕ್ಕೊಳಪಡುವವು. ಪೋಸ್ಟ್ ಆಫೀಸುಗಳಲ್ಲಿ ಕಳವು ಮೋಸಗಳಾದ ಕೆಲವು ಸಂಗತಿಗಳು ತಿಳಿದುಬಂದಿವೆ. ವಿಮಾನ ಮೂಲಕ ಟಪ್ಪಾಲು ಕಳುಹಿಸುವ ವ್ಯವಸ್ಥೆ ಲೋಕಪ್ರಿಯವಾಗಿದೆ. ೧೦ ಲಕ್ಷಕ್ಕಿಂತ ಹೆಚ್ಚು ಪತ್ರ ವಿಮಾನ ಮೂಲಕ ಕಳುಹಿಸುತ್ತಿರುವರು.

'ಗಾಂಧಿಜಿ ಬಿಡುಗಡೆಗೆ ಲೀಗ್ ಪ್ರಯತ್ನಿಸುವುದಿಲ್ಲ!'

ಲೀಗ್ ಮುಖಂಡರ ಹೇಳಿಕೆ

ಕಾಕ್ಸಾರ ಮುಖಂಡರಾದ ಅಲ್ಲಮಮಶ್ರಿಕಿಯವರು ಇತ್ತೀಚೆಗೆ ಒಂದು ಹೇಳಿಕೆಯಿತ್ತು, ಮುಸ್ಲಿಮರಿಗೆ ಪಾಕಿಸ್ತಾನ ಬೇಕಾದರೆ ಗಾಂಧಿಜಿ ಬಿಡುಗಡೆಗೆ ಯತ್ನಿಸಬೇಕು; ಹಿಂದು ಮುಸ್ಲಿಂ ಒಪ್ಪಂದ ಮಾಡಿಕೊಳ್ಳಬೇಕು, ಜಿನ್ನಾ ಸಾಹೇಬರ ವಿರುದ್ಧಾಭಿಪ್ರಾಯವೀಗ ಹೆಚ್ಚಾಗಿದೆ, ಎಂದು ಎಚ್ಚರಿಸಿದ್ದಾರೆ, ಇದಕ್ಕೆ ಉತ್ತರವೀಯುತ್ತಾ ಬಂಗಾಳ ಶಾಸನಸಭಾ ಸದಸ್ಯರೂ, ಲೀಗ್ ವರ್ಕಿಂಗ್ ಕಮಿಟಿ ಮೆಂಬರರೂ ಆದ ಶ್ರೀ ಹಸನ್ ಇಸ್ಪಹಾನಿಯವರು ಹೀಗೆ ಹೇಳುತ್ತಾರೆ: "ಅಗಸ್ಟ್ ನಿರ್ಣಯ ಮಾಡಿದಂದಿನಿಂದ ಅದು ನಮ್ಮ ಹಿತಕ್ಕೆ ಬಾಧಕವೆಂದು ನಾವು ಹೇಳುತ್ತಾ ಬಂದಿದ್ದೇವೆ. ಆ ನಿರ್ಣಯವೇ ಗಾಂಧಿಜಿ ಬಂಧನಕ್ಕೆ ಕಾರಣ. ಅನಂತರದ ಪರಿಸ್ಥಿತಿಯಲ್ಲಿ ಏನೂ ಬದಲಾವಣೆ ಆಗಿಲ್ಲ. ಆದ್ದರಿಂದ ಗಾಂಧಿಜಿ ಧೋರಣ ಮತ್ತು ಹೃದಯದಲ್ಲಿ ಪರಿವರ್ತನೆಯಾಗುವ ವರೆಗೆ ಅವರ ಬಿಡುಗಡೆಯಾಗಬೇಕೆಂದು ಹೇಳುವುದರಲ್ಲಿ ಅರ್ಥವಿಲ್ಲ. ಮುಸ್ಲಿಂ ಭಾರತದ ಮೇಲೆ ಪಿಸ್ತೂಲ್ ಹಿಡಿದು ನಿಂತ ಜನರ ಬಿಡುಗಡೆಗೆ ಮುಸ್ಲಿಮರು ಯತ್ನಿಸಬೇಕೆ? ಹಿಂದು ಮುಸ್ಲಿಂ ಒಪ್ಪಂದ ಮಾಡಬೇಕೆಂದಾದರೆ ಅಲ್ಲಮರೇ ಯಾಕೆ ವೈಸರಾಯರನ್ನು ಕಂಡು ಗಾಂಧಿಜಿ ಭೇಟಿಯಾಗಿ ಪಾಕಿಸ್ಥಾನಕ್ಕೆ ಅವರ ಒಪ್ಪಿಗೆಯಿದೆಯೋ ಇಲ್ಲವೋ ಎಂದು ಕೇಳಿ ತಿಳಿಸಬಾರದು?" ಹೀಗೆಂದು ಇಸ್ಪಹಾನಿ ಹೇಳುತ್ತಾರೆ. ಮುಸ್ಲಿಂ ಲೀಗಿನ ಮನೋಧರ್ಮ, ಸಂಕುಚಿತ ರಾಷ್ಟ್ರೀಯ ಬುದ್ಧಿ ಈ ಮಾತುಗಳಲ್ಲಿ ಸ್ಪಷ್ಟಸ್ಪಷ್ಟವಾಗಿದೆ.

ಚರ್ಚಿಲ್ ಹಿಂದೆ ಹೇಳಿದ್ದರು! ಇಂದು ಮೌನವೇಕೆ?

"ದಕ್ಷಿಣಾಫ್ರಿಕದಲ್ಲಿ ಭಾರತೀಯರು ಬೆವರು ಸುರಿಸಿ ಬಳಿಯನು ಪ್ರವೇಶಿಸದ ಸ್ಥಳಗಳನ್ನು ನಂದನವನವಾಗಿ ಮಾರ್ಪಡಿಸಿದರು. ಆಫ್ರಿಕದ ಕಾಡನ್ನು ನಗುವ ನಾಡಾಗಿ ಮಾಡಿದರು. ಇಂತಹ ಸ್ಥಳದಿಂದ ಭಾರತೀಯರನ್ನು ಹೊರ ಅಟ್ಟುವುದು, ಅಲ್ಲಿಯ ಸರಕಾರದ ಅನ್ಯಾಯ. ದಕ್ಷಿಣಾಫ್ರಿಕದಲ್ಲಿ ಭಾರತೀಯರಿಗೆ ಇರಲು ವಸತಿಯಿಲ್ಲದಿದ್ದರೆ ಅದು ಮಹಾ ಅನ್ಯಾಯ" ಈ ಮಾತುಗಳನ್ನು ಹಿಂದೆ ಚರ್ಚಿಲ್ ಹೇಳಿದ್ದರು! ಆಗ ಅವರು ಬ್ರಿಟಿಷ್ ಪ್ರಧಾನ ಮಂತ್ರಿಯಾಗಿಲ್ಲ. ಇಂದು ಸುಮ್ಮಗಿರುವುದು ಬಹುಶಃ ಪ್ರಧಾನ ಮಂತ್ರಿಯಾದದ್ದರಿಂದ!

ಜಿಲ್ಲಾ ಸಮಾಚಾರಗಳು

ಮಂಗಳೂರು

ಶ್ರೀ ಎಂ. ಡಿ. ಅಧಿಕಾರಿಗಳ ಬಿಡುಗಡೆ

ದಕ್ಷಿಣಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾದ ಶ್ರೀ. ಎಂ. ಡಿ. ಅಧಿಕಾರಿಗಳು ತಮ್ಮ ಶಿಕ್ಷೆ ಅವಧಿ ಮುಗಿಸಿ ಬಿಡುಗಡೆಹೊಂದಿ ಬಂದಿರುವರು.

ಶ್ರೀ ಕೆ. ಕೃಷ್ಣ ಶೆಟ್ಟರಿಗೆ ೮ ತಿಂಗಳ ಶಿಕ್ಷೆ

ಧಾರವಾಡ ಕರ್ನಾಟಕ ಹೈಸ್ಕೂಲಲ್ಲಿ ಶಿಕ್ಷಕರಾಗಿದ್ದ ಮಂಗಳೂರಿನ ಶ್ರೀ. ಕೆ. ಕೃಷ್ಣಶೆಟ್ಟಿ ಬಿ. ಎ. ಇವರನ್ನು ಮಂಗಳೂರಲ್ಲಿ ಪೋಲೀಸರು ದಸ್ತಗಿರಿ ಮಾಡಿದ್ದು, ಇವರ ವಿಚಾರಣೆ ಧಾರವಾಡದಲ್ಲಿ ನಡೆದು ೮ ತಿಂಗಳ ಶಿಕ್ಷೆ ವಿಧಿಸಿ, 'ಬಿ' ಕ್ಲಾಸು ಕೊಟ್ಟು, ಹಿಂಡಲಗಿ ಜೈಲಿನಲ್ಲಿಟ್ಟಿರುವರೆಂದು ತಿಳಿದಿದೆ.

ಶ್ರೀ. ವೆಂಕಟರಾಯರ ಬಿಡುಗಡೆ

ಆಗಸ್ಟ್ ೧೫ಕ್ಕೆ ಬಂಧಿಸಲ್ಪಟ್ಟ ಗಣಪತಿ ಹೈಸ್ಕೂಲಿನ ವಿದ್ಯಾರ್ಥಿ ಶ್ರೀ. ವೆಂಕಟರಾಯರು ವಿಚಾರಣೆಯಿಲ್ಲದೆ ಬಿಡಲ್ಪಟ್ಟಿರುವರು.

ವಿದ್ಯಾರ್ಥಿ ಸಂಘ

ಮಂಗಳೂರಿನ ಇನ್ನೊಂದು ವಿದ್ಯಾರ್ಥಿ ಸಂಘದ ಸಭೆ ತಾ. ೨೫ರಂದು ಶ್ರೀ. ಯೋಗೀಶ್ವರ ಹೊಳ್ಳರ ಅಧ್ಯಕ್ಷತೆಯಲ್ಲಿ ಸೇರಿ ಹೊಸ ವರ್ಷದ ಕಾರ್ಯಕಾರೀ ಮಂಡಳಿಗೆ ೧೯ ಮಂದಿಯನ್ನು ಚುನಾಯಿಸಲಾಗಿದೆ.

ಜಿಲ್ಲೆಯಲ್ಲಿ ಕೊಲೆರಾ ಚಿಹ್ನೆಗಳು

ಪುತ್ತೂರು ಸಮೀಪ ಬಪ್ಪ ಮಹಮ್ಮದೀಯರ ಮನೆಯಲ್ಲಿ ಒಬ್ಬರು ವಾಂತಿಭೇದಿಯಾಗಿ ಮೃತಪಟ್ಟರೆಂದು ತಿಳಿದಿದೆ.

ಕಾಸರಗೋಡು ತಾಲೂಕಿನಲ್ಲಿಯೂ ಅಲ್ಲಲ್ಲಿ ಕೆಲವು ಕಡೆಗಳಲ್ಲಿ ವಾಂತಿಭೇದಿಯ ಚಿಹ್ನೆಗಳು ತೋರಿಬಂದಿವೆ.

ಮಂಗಳೂರು ತಾಲೂಕಿನ ಹರೇಕಳ ಗ್ರಾಮದ ಕೆಲವು ಕಡೆ ಉಳ್ಳಾಲದ, ಪೆರುಮನ್ನೂರು ಗ್ರಾಮದಲ್ಲಿಯೂ ಕೊಲೆರಾ ರೋಗದ ಚಿಹ್ನೆಗಳು ಕಂಡುಬಂದಿವೆ.

ಕಾರ್ಕಳದಲ್ಲಿಯೂ ಕೊಲೆರಾ ಚಿಹ್ನೆ ತಲೆದೋರಿದೆ. ಮುನ್ಸಿಫ್ ಕೋರ್ಟಿನ ಹಿಂಭಾಗದಲ್ಲಿ ಓರ್ವ ಹೆಂಗುಸು ವಾಂತಿಭೇದಿಯಾಗಿರುವುದು.

ವಿದ್ಯಾರ್ಥಿ ವಿಹಾರ ಮಂಡಳ

ವೊಂದು ದ. ಕ. ಟೀಚರ್ಸ್ ಗಿಲ್ಡಿನ ಆಶ್ರಯದಲ್ಲಿ ಹಿಂದಿನವಾರ ಕೊಂಚಾಡಿಗೆ ಪಯಣ ಬೆಳಸಿತು. ಸ್ಥಳೀಯ ಹೈಸ್ಕೂಲುಗಳ ವಿದ್ಯಾರ್ಥಿಗಳು ವಿದ್ಯಾರ್ಥಿನಿಯರು ಬಂದಿದ್ದರು. ಡಾ। ಕೇಶವ ಪೈ. ಪ್ರೊ। ಸಂಜೀವರಾವ್, ಶ್ರೀ ಎಂ. ಎಸ್. ಮಾಧವರಾವ್ ಶ್ರೀ ಎಸ್. ಮುಕುಂದರಾವ್ ಮೊದಲಾದವರಿದ್ದರು. ಬರುವ ನವಂಬರಿನಲ್ಲಿ ಇನ್ನೊಂದು ವಿಹಾರವೇರ್ಪಡಿಸುವ ನಿರ್ಧಾರವಾಗಿದೆ.

ಫಾಶೀ ಶಿಕ್ಷೆ

ಕುಂದಾಪುರ ತಾಲೂಕು ಉಪ್ಪುಂದದಲ್ಲಿ ಸುಬ್ಬು, ಚಿಕ್ಕ ಎಂಬವರು ಕಳೆದ ೩೦-೪-೪೩ರಲ್ಲಿ ಮುದೂರ ಎಂಬಾತನನ್ನು ಕೊಲೆಮಾಡಿದರೆಂಬ ಆರೋಪದ ಮೊಕದ್ದಮೆ ಮಂಗಳೂರು ಸೆಶನ್ಸ್ ಜಡ್ಜರಲ್ಲಿ ತನಿಖೆಯಾಗಿ ತಾ ೨೬ರಲ್ಲಿ ತೀರ್ಪಾಯಿತು. ಸುಬ್ಬನಿಗೆ ೫ ವರ್ಷಗಳ ಶಿಕ್ಷೆ, ಚಿಕ್ಕನಿಗೆ ಫಾಶೀ ವಿಧಿಸಲ್ಪಟ್ಟಿತು.

ದಂಡನೆ

ಸ್ಥಳೀಯ ಸಬ್ ಡಿವಿಜನಲ್ ಮೆಜಿಸ್ಟ್ರೇಟ್ ಶ್ರೀ ಮಾಧವರಾಯರು, ಗೋಳಿಕಟ್ಟೆ ಚರಿಯಬ್ಬ ಬ್ಯಾರಿಯೆಂಬಾತನು ಬಂದು ಬೆಂಕಿಪೆಟ್ಟಿಗೆಯನ್ನು ಒಂದುವರೆ ಆಣೆಗೆ ಮಾರಿದನೆಂಬ ಅಪಾದನೆ ತನಿಖೆ ನಡೆಸಿ ಆರೋಪಿಗೆ ೭ ದಿನ ಸಜೆ ೫೦ ರೂ. ಜುಲ್ಮಾನೆ ತಪ್ಪಿದರೆ ೧ ತಿಂಗಳ ಕಠಿಣ ಸಜೆ ವಿಧಿಸಿದರು.

ಸತ್ಕಾರ

ಸ್ಥಳೀಯ ವಕೀಲ ಸಂಘದವರು, ಲಾಹೋರ್ ಹೈಕೋರ್ಟಿನ ಜಸ್ಟಿಸ್ ಛೀಫ್, ಲೆ। ಕ। ವಿ. ಆರ್. ಮಿರಾಜ್‌ಕಾರ್ ಇವರಿಗೆ ಒಂದು ಸತ್ಕಾರ ಕೂಟವನ್ನೇರ್ಪಡಿಸಿದರು. ಜಿಲ್ಲಾ ಜಡ್ಜರು, ಸಬ್ ಜಡ್ಜರು, ಮುನ್ಸಿಫರೂ ಆಮಂತ್ರಿತರಾಗಿದ್ದರು.

ಮುಸ್ಲಿಂ ಮಹಿಳೆಯರಿಗೆ ವಿದ್ಯಾಭ್ಯಾಸ

ಕೊಡಲು ನಿರಾಕರಿಸುವುದು ಇಸ್ಲಾಮಿಗೆ ವಿಹಿತವಲ್ಲವೆಂಬ ವಿಷಯ ಚರ್ಚೆಯು ಸ್ಥಳೀಯ ಇಸ್ಲಾಮಿಯ ಕ್ಲಬ್ಬಿನಲ್ಲಿ ಜನಾಬ್ ಅಬ್ದುಲ್ ರಹೀಂ ಅಹಮ್ಮದರ ಅಧ್ಯಕ್ಷತೆಯಲ್ಲಿ ನಡೆಯಿತು ವಿದ್ಯಾಭ್ಯಾಸ ಕೊಡಬೇಕೆಂದು ಬಹು ಮತದಿಂದ ಮಂಜೂರಾಯಿತು.

ನಿಧನ

ಕೆಲಕಾಲದಿಂದ ಅಸ್ವಸ್ಥದಲ್ಲಿದ್ದ ವಕೀಲ ಶ್ರೀ ಬಿ. ವ್ಯಾಸರಾಯ ಆಚಾರ್ ಇವರು ತಾ ೩೧ರಂದು ಬೆಳಗ್ಗೆ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರ ನಿಧನ ಸಂತಾಪ ಸೂಚನೆಯಾಗಿ ಸ್ಥಳೀಯ ಎಡಿಶನಲ್ ಜಡ್ಜ್ ಕೋರ್ಟಿನಲ್ಲಿ ಎಲ್ಲರೂ ಎದ್ದು ನಿಂತು ಎರಡು ನಿಮಿಷ ಮೌನವ್ರತ ಆಚರಿಸಿದರು. ಮೃತರ ಆತ್ಮಕ್ಕೆ ಶಾಂತಿಯಿರಲಿ!

ಕಾರ್ಕಳ

ಬಂಗಾಳ ನಿಧಿ

ಸ್ಥಳೀಯ ವಕೀಲ ಸಂಘದವರು, ರೂ ೩೫ ವಂತಿಗೆ ಮಾಡಿ ಬಂಗಾಳ ಕ್ಷಾಮಪೀಡಿತರಿಗಾಗಿ ಡಾ। ಶ್ಯಾಮಪ್ರಸಾದ ಮುಖರ್ಜಿಯವರು ಏರ್ಪಡಿಸಿದ ನಿಧಿಗೆ ಸಹಾಯ ಕಳುಹಿಸಿದರು.

ಅನಾಥಾಶ್ರಮ

ಕರಪಾಡಿ ಅನಾಥಾಶ್ರಮ ಕಮಿಟಿ ಸಭೆ ಸೇರಿ ಆಶ್ರಮಕ್ಕೆ ಹಣ ವಂತಿಗೆ ಮಾಡುವ, ಆಶ್ರಮದ ಬಗ್ಗೆ ದರಖಾಸ್ತು ಪಡೆಯುವ ನಿರ್ಣಯಗಳಾದವು.

ಇಲ್ಲಿನ ಕಾರ್ಕಳ ಕ್ರಿಕೆಟ್ ಕ್ಲಬ್ ಎಂಬ ಹೆಸರಿನ ಆಟಗಾರರ ಕೂಟ ಸ್ಥಾಪನೆಯಾಗಿದೆ.

ಪುತ್ತೂರು

ಅಪಘಾತಗಳು

ಪುತ್ತೂರು ಸಮೀಪ ಬಲ್ನಾಡು ಎಂಬಲ್ಲಿ ಒಂದು ಗುಡ್ಡವನ್ನು ಕಡಿದು ತೋಡು ಬಿಡಿಸುವಾಗ ಗುಡ್ಡದ ಒಂದು ಭಾಗ ಜರಿದು ೮ ಜನರಿಗೆ ಜಖಂ ಆಗಿ ಇಬ್ಬರು ಮಣ್ಣಿನಡಿಯಲ್ಲಿ ಹೂತು ಮರಣಹೊಂದಿರುವರಾಗಿ ತಿಳಿದುಬರುತ್ತದೆ.

ತಾ. ೨೯ರಂದು ಸಂಜೆ ಪುತ್ತೂರಿನ ಸಮೀಪ ಬೊಳ್ವಾರಿನಲ್ಲಿ ಶಂಕರ್‌ವಿಟ್ಠಲ್ ಬಸ್ಸ್ ಅಪಘಾತಕ್ಕೆ ತುತ್ತಾಗಿ ಮೋಟರಿನಲ್ಲಿದ್ದ ೧೨ ಮಂದಿಗೆ ಜಖಂ ಆಗಿದೆ. ಅವರಲ್ಲಿ ನಾಲ್ವರಿಗೆ ಪೆಟ್ಟು ಜೋರಾಗಿದ್ದು ಕೂಡಲೆ ಆಸ್ಪತ್ರೆಗೆ ಸಾಗಿಸಲಾಗಿದೆ. ಬಸ್ಸ್ ಕಂಡೆಕ್ಟರನ ಕಾಲಿನ ಕೀಲು ಮುರಿದಿದೆಯೆಂದೂ ತಿಳಿಯುತ್ತದೆ.

ಕುಂಬಳೆ

ಜಿಲ್ಲಾ ಬೋರ್ಡಿನ ಕಾಂಗ್ರೆಸ್ ಸದಸ್ಯರು ರಾಜಿನಾಮೆಕೊಟ್ಟ ಸ್ಥಳಕ್ಕೆ ಕಾಸರಗೋಡು ಸರ್ಕಲ್‌ನಿಂದ ಡಾ। ಕೆ. ಪಿ. ರಾಘವೇಂದ್ರರಾಯರೂ, ಕುಂಬಳೆ ಸರ್ಕಲ್‌ನಿಂದ ಶ್ರೀ. ಬಂಬ್ರಾಣ ಕರಿಯಪ್ಪ ಭಂಡಾರಿಗಳೂ, ಹೊಸದುರ್ಗ ಸರ್ಕಲಿನ ಹರಿಜನಸ್ಥಾನಕ್ಕೆ ಶ್ರೀ. ಶಂಕರನವರೂ ಸ್ಪರ್ಧೆಯಿಲ್ಲದೆ ಚುನಾಯಿತರಾಗಿರುವರು. ಮಂಜೇಶ್ವರ ಹೊಸದುರ್ಗ ಸರ್ಕಲ್ ಜನರಲ್ ಸೀಟಿಗೆ ಸ್ಪರ್ಧೆಗಳಿವೆ.

"ಕವಿ ಕಡೆಂಗೋಡ್ಲು ಇನ್ನೂ ಬರೆಯಬೇಕು!"

ಮಿತ್ರಮಂಡಳಿಯ ಅಭ್ಯಾಸಗೋಷ್ಠಿ

ಮಿತ್ರಮಂಡಳಿಯ ಸಾಪ್ತಾಹಿಕ ಅಭ್ಯಾಸ ಗೋಷ್ಠಿಯು ತಾ. ೨೮ರಂದು ಸಂಜೆ ಶ್ರೀ। ಮುಕುಂದ ಪ್ಯಾಯರ ಅಧ್ಯಕ್ಷತೆಯಲ್ಲಿ ಜರಗಿತು. ಆ ದಿನ "ಕವಿ ಕಡೆಂಗೋಡ್ಲು" ಎಂಬ ವಿಷಯದ ಕುರಿತಾಗಿದ್ದ ಭಾಷಣಗಳ ಮೊದಲು ಶ್ರೀ ಎ. ತಂಭಟ್ಟರು ಶ್ರೀ। ಕಡೆಂಗೋಡ್ಲು ಅವರ 'ಹಳೆಯ ನೆನಪು' ಕವಿತೆಯನ್ನು ಹಾಡಿದರು.

ಶ್ರೀ। ಸೇಡಿಯಾಪು ಕೃಷ್ಣ ಭಟ್ಟರು ಮಾತನಾಡುತ್ತಾ, ಬಾಲ್ಯದಲ್ಲಿ ತಾವೂ ಕಡೆಂಗೋಡ್ಲು ಶಂಕರ ಭಟ್ಟರೂ ಒಡನಾಡಿಗಳಾಗಿದ್ದುದನ್ನು ಸ್ಮರಿಸಿ, ಆರಂಭದಲ್ಲಿ ಪ್ರಶಾಂತ ಸರೋವರದಂತಿದ್ದ ಶಂಕರ ಭಟ್ಟರ ಕವಿತೆಗಳು ಕಾಲಕಳೆದಂತೆ ಘರ್ಷಣೆಯ, ಹೋಯ್ದಾಟದ ಅಶಾಂತ ಕಡಲಾಯಿತು, ಎಂದರು. 'ಶ್ರೀ। ಶಂಕರ ಭಟ್ಟರ ಪ್ರತಿಯೊಂದು ಕೃತಿಯಲ್ಲೂ ಅವರದೇ ಆದ ಒಂದು ವೇದಾಂತವಿದೆ. ಅವರು ಶೋಕ ರಸ ಪ್ರಿಯರು, ಹಳೆಗನ್ನಡದ ಅಭ್ಯಾಸ ಸಂಸ್ಕಾರ, ಆಂಗ್ಲ ಭಾಷೆಯ ಪ್ರಭಾವ ಮತ್ತು ಸ್ವಂತದ ಶಕ್ತಿ —ಇವು ಮೂರು ಈ ಕವಿಯಲ್ಲಿವೆ' ಎಂದು ಶ್ರೀಯುತರು ಅಭಿಪ್ರಾಯ ಪಟ್ಟರು.

ಶ್ರೀ. ಎಂ. ವಾಸುದೇವರಾಯರು 'ನಲ್ಮೆ'ಯ ಕುರಿತು ಸವಿಸ್ತಾರ ಅಭ್ಯಾಸವನ್ನಿತ್ತರು. 'ಸುಸ್ಪಷ್ಟ ಛಾಪೆ ಬೇಕಿದ್ದರೆ ಶಂಕರ ಭಟ್ಟರ ಲೇಖನಗಳನ್ನೋದಬೇಕು' ಎಂದರು. 'ಕೆಲವೊಂದೆಡೆ ಪ್ರೇಮ ಮತ್ತು ಜೀವನ ತೊಳ್ಳುಬಳಕೆಯಾಗಿ ಈ ಕೃತಿಗಳಲ್ಲಿ ಕಾಣುವುದಿಲ್ಲ. ಪ್ರತಿಯೊಂದರಲ್ಲೂ ದುರಂತದ ಛಾಯೆ ಇದೆ. 'ರಾಷ್ಟ್ರಬಂಧು'ವಿನ ಕಾತರ್ ವಾಚಸ್ಪತಿಯ ಕೆಲವು ನಗೆಯ ಕಿಡಿಗಳಾದರೂ ಅಲ್ಲಲ್ಲಿ ಬರಬಾರದಿತ್ತೆ. ಅನಿಸುತ್ತದೆ. ಯಾವ ವಿಷಯವನ್ನು ಸರಸವಾಗಿ ಕೊಡದೆ, ಅಂದವಾಗಿ ನೆಯ್ದ ಬಿಗಿಟುಗಳ ರೂಪದಲ್ಲಿ ಇವರು ಮುಂದಿಡುವರು' ಎಂದು ಶ್ರೀ. ವಾಸುದೇವರಾಯರು ಹೇಳಿ, ಶಂಕರಭಟ್ಟರು ಇನ್ನೂ ಬರೆಯಲಿ ಎಂದರು.'

'ಹಳೆಯಸಂಘವನ್ನು ಮುರಿದು ಹೊಸ ಹಾದಿಯನ್ನು ಅಂದು ಮೆಟ್ಟಿದ ಪ್ರಗತಿಶೀಲ ಪ್ರತಿಭಾನ್ವಿತ ಕವಿ ಇವರು' ಎಂದು 'ಹಣ್ಣುಕಾಯಿ' ಕವಿತಾ ಸಂಗ್ರಹದ ಅಭ್ಯಾಸವನ್ನೊಪ್ಪಿಸುತ್ತಾ ಶ್ರೀ ಕುಳುಕುಂದ ಶಿವರಾಯರು ಹೇಳಿದರು. 'ಸಂಧಿ ಸಮಾಸದ ಮೂಟೆಯನ್ನು ಹೊರುವ' ಪಂಡಿತರನ್ನು ಛೇಡಿಸಿದ 'ಪಂಡಿತರ ಪಯಣ' ಎಂಬ ಕವಿತೆಯು ಅತ್ಯುತ್ತಮ ವಕ್ರ ಗೀತವೆಂದೂ ಹೇಳಿ, ಕಡೆಂಗೋಡ್ಲು ಅವರೆ ಈಗ ಹೆಮ್ಮಕ್ಕಳ ಕಾಲೇಜಿಗೆ ಸಂಧಿ ಸಮಾಸಗಳನ್ನು ಒಯ್ಯುತ್ತಿದ್ದಾರೆ. ಅವರೀಗ ಏಕೆ ಕವಿತೆ ಬರೆಯುತ್ತಿಲ್ಲ ಎಂಬುದು ದೊಡ್ಡ ಸಮಸ್ಯೆ. ಜನರಿಗಾಗಿ ಬರೆದು, ಅವರಿಗಾಗಿ ಇನ್ನೂ ಶಂಕರಭಟ್ಟರು ಹಾಡಲಿಕ್ಕಿಲ್ಲವೆ? ರಾಷ್ಟ್ರೀಯ ಜೀವನದ ಹೋಯ್ದಾಟವೂ ಜಗತ್ತಿನ ಆಂದೋಲನಗಳೂ ಈ ಕವಿ ಹೃದಯವನ್ನು ಕೆದಕದೆ ಇರುವುವೆ? ಎಂದು ಕುಳುಕುಂದರು ಹೇಳಿದರು.

ಶ್ರೀ। ಬಿ. ಯಂ. ಇದಿನಬ್ಬ ಅವರು 'ಹೊನ್ನಿ ಮದುವೆ'ಯನ್ನು ಹಾಡಿದ ಬಳಿಕ, ಅಭ್ಯಾಸಗೋಷ್ಠಿಯನ್ನು ಅಧ್ಯಕ್ಷರು ಮುಂದಿನ ತಾ. ೪ನೇ ಶನಿವಾರಕ್ಕೆ ಮುಂದುವರಿಸಿದರು.

ತೈಕ್ಕಟ್ಟೆ

ಅಪಘಾತ

ಇಲ್ಲಿ ಸಮೀಪದ ಕುಂಭಾಶಿಯಲ್ಲಿ ಗುಡ್ಡವೊಂದು ಕುಸಿದು ಬಿದ್ದು, ಇದುವರೆಗೆ ೭ ದೇಹಗಳು ಮಣ್ಣಿನಡಿಯಲ್ಲಿ ಸಿಕ್ಕಿವೆ. ಇವರಲ್ಲಿ ೪ ಸ್ತ್ರೀಯರು, ೩ ಮಕ್ಕಳು. ಓರ್ವ ಸ್ತ್ರೀ ಕೂಡಲೇ ಮೃತಳಾಗಿರುವಳು. ಮಕ್ಕಳಿಗೆ ಸಾಧಾರಣ ಪೆಟ್ಟಾಗಿದೆ. ಇನ್ನೆಷ್ಟು ಶರೀರಗಳು ಮಣ್ಣಿನಡಿಯಲ್ಲಿವೆಯೋ ತಿಳಿದಿಲ್ಲ.

ಕೊಲೆರಾ ನಿರ್ಬಂಧಕ್ಕಾಗಿ

ನಗರ ನೈರ್ಮಲ್ಯ ಕಾರ್ಯಕ್ರಮ

ಸಾರ್ವಜನಿಕ ಸೇವಾಕಾಂಕ್ಷಿಗಳಲ್ಲಿ ವಿನಂತಿ.

ಮಂಗಳೂರು ನಗರದಲ್ಲಿ ಇತ್ತೀಚೆಗೆ ಕೊಲೆರಾ ಹಾವಳಿಯುಂಟಾಗಿದ್ದು, ಈಗಾಗಲೇ ಹಲವು ಮಂದಿ ನಗರದ ಬೇರೆ ಬೇರೆ ಭಾಗಗಳಲ್ಲಿ ಈ ರೋಗಕ್ಕೆ ಬಲಿ ಬಿದ್ದ ವಿಚಾರ ಸಾರ್ವಜನಿಕರಿಗೆ ಇಷ್ಟರಲ್ಲೇ ತಿಳಿದಿರಬಹುದು. ನಗರ ಆರೋಗ್ಯ ಇಲಾಖೆಯವರು ಡಾ। ಬಾಳಿಗರು ಮತ್ತು ಅವರ ಸಿಬಂಧಿ ಈ ಕಾರ್ಯದಲ್ಲಿ ವಿಶೇಷ ಶ್ರದ್ಧೆ ವಹಿಸಿ ಕೆಲಸ ಮಾಡುತ್ತಿರುವುದರಿಂದ, ಹಾಗೂ ಅಲ್ಲಲ್ಲಿ ಹಲವು ಸಾರ್ವಜನಿಕ ಸೇವಾತತ್ಪರರಾದ ಡಾಕ್ಟರರೂ ಜನರಿಗೆ ರೋಗ ನಿವಾರಕ ಇಂಜೆಕ್ಷನ್ ಕೊಡುತ್ತಿರುವುದರಿಂದ ಕೊಲೆರಾ ದಿನದಿಂದ ದಿನಕ್ಕೆ ಹೆಚ್ಚುತ್ತಿಲ್ಲವೆಂಬುದು ಸಂತೋಷದ ವಿಷಯ. ಆದರೆ ಇದುವರೆಗಿನ ಈ ರೋಗದ ಹಾವಳಿಯ ವರದಿಯನ್ನು ನೋಡಿದರೆ ಬೋಳೂರು ಬೊಕ್ಕಪಟ್ಣ ಈ ಕಡೆಗಳಲ್ಲಿಯೇ ಹೆಚ್ಚಾಗಿ ಇದು ಹಬ್ಬಿರುವಂತೆ ಕಂಡುಬರುತ್ತದೆ. ಇದಕ್ಕೆ ಈ ಭಾಗವು ಇಡೀ ನಗರದಲ್ಲಿ ಬಹಳ ಅಶುದ್ಧವಾಗಿರುವುದೂ, ಇಲ್ಲಿನ ಜನರು ಇಂಜೆಕ್ಷನ್ ತೆಕೊಳ್ಳಲು ಮುಂದೆ ಬರದಿರದೂ, ಇಲ್ಲಿನ ನಿವಾಸಿಗಳು ಹೆಚ್ಚಾಗಿ ಮಾಂಸಹಾರಿಗಳೇ ಆಗಿರುವುದು ಮೊದಲಾದುವು ಕಾರಣಗಳೆಂದು ತಿಳಿದು ಬಂದಿದೆ. ಆದರಿಂದ, ಬೋಳೂರು ಬೊಕ್ಕಪಟ್ಣ ಈ ಕಡೆಗಳಲ್ಲಿ ರೋಗ ಪ್ರತಿಬಂದಿಸುವ ಕಾರ್ಯಕ್ರಮವನ್ನು ಕೈಕೊಂಡರೆ, ನಗರವನ್ನು ಕೊಲೆರಾ ಹಾವಳಿಯಿಂದ ತಪ್ಪಿಸಬಹುದೆಂದು ತಿಳಿದು, ಬೋಳೂರು ಧರ್ಮಾರ್ಥ ರಾತ್ರಿ ಶಾಲೆಯ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳು, ಮುಂದೆ ಬಂದು ಮನೆ ಮನೆಗಳಿಗೆ ಹೋಗಿ, ಸ್ವತಃ ವಠಾರ ಶುಚಿಮಾಡುವುದು, ಅವರಿಗೆ ನೈರ್ಮಲ್ಯ ವಿಚಾರ ಬೋಧಿಸುವುದು, ಇಂಜೆಕ್ಷನ್ ಹಾಕಿಸಿ ಕೊಳ್ಳದವರಿಗೆ ಇಂಜೆಕ್ಷನ್ ಮಾಡಿಸುವುದು, ರೋಗ ತಗಲಿದವರನ್ನು ಆಸ್ಪತ್ರೆಗೆ ಸಾಗಿಸುವುದು, ಅವರ ಶುಶ್ರೂಷೆ ಕೈಕೊಳ್ಳುವುದೇ ಮೊದಲಾದ ಕಾರ್ಯಕ್ರಮವನ್ನು ಕೈಕೊಂಡಿದ್ದಾರೆ. ಕಳೆದ ಆದಿತ್ಯವಾರದಿಂದ ಈ ಕಾರ್ಯಕ್ರಮ ಭರದಿಂದ ಸಾಗುತ್ತಿದೆ. ಈ ಕೆಲಸದಲ್ಲಿ ಆರೋಗ್ಯ ಇಲಾಖೆಯವರು ಸಂಪೂರ್ಣ ಸಹಕಾರ ಕೊಡುತ್ತಿದ್ದಾರೆ. ಮಂಗಳೂರು ವಿದ್ಯಾರ್ಥಿ ಸಂಘ, ಕಮ್ಯುನಿಸ್ಟ್ ಪಕ್ಷ, ಪ್ರಕಾಶ ಎಸೋಸಿಯೇಶನ್ ಮೊದಲಾದ ಸಂಸ್ಥೆಯವರು ಮತ್ತು ಕಾಂಗ್ರೆಸಿನವರೂ ಸ್ವಯಂಸೇವಕರಾಗಿ ಸೇರಿ ಈ ಕಾರ್ಯದಲ್ಲಿ ನೆರವಾಗುತ್ತಾರೆ. ಈ ಕೆಲಸವನ್ನು ಎಡೆಬಿಡದೆ ಸಾಗಿಸಬೇಕಾಗಿದೆ. ಇದಕ್ಕೆ ತುಂಬಾ ಸ್ವಯಂಸೇವಕರು ಅವಶ್ಯ. ಪ್ರತಿ ದಿನ ಸಂಜೆ ೭ ಗಂಟೆಯಿಂದ ಒಂದು ಗಂಟೆ ಈ ಕೆಲಸ ಮಾಡುವದೆ ನಿಶ್ಚಯವಾಗಿದೆ. ಮಾತ್ರವಲ್ಲದೆ ಬರುವ ಚೌತಿ ಮತ್ತು ಆದಿತ್ಯವಾರಗಳ ರಜೆ ದಿನಗಳಲ್ಲಿ ನೂರಾರು ಮಂದಿ ಸ್ವಯಸೇವಕರನ್ನು ಸೇರಿಸಿ ಇಡೀ ದಿನ ಈ ಕೆಲಸವೇ ಮಾಡುವುದಾಗಿಯೂ ನಿಶ್ಚಯವಾಗಿದೆ. ಇಂಥಾ ಮಾನವೀಯ ಕರ್ತವ್ಯದಲ್ಲಿ, ಜನತಾ ಸೇವೆಯಲ್ಲಿ ಸಾರ್ವಜನಿಕ ಸೇವಾಕಾಂಕ್ಷಿಗಳೆಲ್ಲರೂ, ಬಹುಸಂಖ್ಯೆಯಿಂದ ಸ್ವಯಂಸೇವಕರಾಗಿ ಮುಂದೆ ಬರುವುದು ಮಾತ್ರವಲ್ಲ, ಪ್ರತಿಯೊಂದು ಸಂಘ ಸಂಸ್ಥೆಯವರೂ ತಮ್ಮ ಸ್ವಯಂ ಸೇವಕರನ್ನು ಕಳುಹಿಸಿ ನಗರದಲ್ಲಿ ಕೊಲೆರಾ ಹಾವಳಿ ಯಿಲ್ಲದಂತೆ ಮಾಡಲು ನೆರವಾಗಬೇಕಾಗಿ ಸವಿನಯ ವಿನಂತಿಯಿದೆ. ಈ ಕಾರ್ಯದಲ್ಲಿ ನೆರವಾಗಲು ಬಯಸುವ ಸ್ವಯಂ ಸೇವಕರು ಶ್ರೀ. ಕಯ್ಯಾರ ಕಿಞ್ಞಣ್ಣ ರೈ, ಸ್ವದೇಶಾಭಿಮಾನಿ ಆಫೀಸು, ಮಂಗಳೂರು, ಇವರೊಡನೆ ಬಂದು ಮಾತನಾಡಬಹುದು.

ಸಿನೆಮಾ ಸುದ್ದಿ

ಠಾಗೋರರ ಕಾದಂಬರಿ ಚಿತ್ರ

ಲಂಡನ್ ಸಂಸ್ಥೆ ಪ್ರಯತ್ನ

ಲಂಡನಿನಲ್ಲಿರುವ ಠಾಗೋರರ ಸಂಸ್ಥೆಯ ಕಾರ್ಯಕಾರೀ ಮಂಡಳಿಯವರು ಅಮೆರಿಕನ್ ಶಾಖೆಯೊಂದನ್ನು ತೆರೆಯುವ ನಿಶ್ಚಯ ಮಾಡಿದ್ದಾರೆ. ಈ ಶಾಖೆಗೆ ಮಿಸೆಸ್ ಪರ್ಲ್ ಬಕ್, ಲುಯಿ ಬ್ರೂಮ್ ಫೀಲ್ಡ್, ರಿಚಾರ್ಡ್ ವ್ಯಾನ್ಸ್ ಮತ್ತು ಮಿಸೆಸ್ ಎಡ್ವರ್ಡ್ ವೆಸ್ಟನ್ ಮೊದಲಾದವರ ಸಹಕಾರವಿದೆ. ಇವರು ಠಾಗೋರರ ಪ್ರಸಿದ್ಧ ಕಾದಂಬರಿ 'ಗೋರಾ'ವನ್ನು ಚಿತ್ರಪಟಕೆಗೆಯಲು ಆಂಗ್ಲೋ ಅಮೆರಿಕನ್ ಚಿತ್ರಪಟ ಕಂಪೆನಿ ಮೊದಲಾದವರೊಡನೆ ಪತ್ರ ವ್ಯವಹಾರ ನಡೆಸುತ್ತಿದ್ದಾರೆ.

೧೧ ಸಾವಿರ ಅಡಿಗಳು ಸಾಕು!

ನಾಗಯ್ಯ ಹೇಳುತ್ತಾರೆ.

ದಕ್ಷಿಣ ಭಾರತದ ಪ್ರಸಿದ್ಧ ನಟ ಶ್ರೀ ವಿ. ನಾಗಯ್ಯರು ಬೆಂಗಳೂರಲ್ಲಿ ಪತ್ರಿಕಾ ಪ್ರತಿನಿಧಿಗಳೊಡನೆ, ಚಿತ್ರಗಳು ೧೧ ಸಾವಿರ ಅಡಿಯಿರಬೇಕೆಂಬ ನಿರ್ಣಯವನ್ನು ತಾನು ಸ್ವಾಗತಿಸುವುದಾಗಿ ಹೇಳಿದರು. ದಕ್ಷಿಣ ಭಾರತದ ಚಿತ್ರಗಳಲ್ಲಿ ಹೊಸ ತಾರೆಗಳನ್ನು ಕಾಣಬೇಕೆಂದೂ ಅವರು ಹೇಳಿದರು. ನಾಗಯ್ಯರು ಒಬ್ಬರೇ ದಕ್ಷಿಣ ಭಾರತದ ನಟರಲ್ಲಿ ಉತ್ತರ ಭಾರತದ ಪ್ರಥಮ ಶ್ರೇಣಿಯ ನಟವರ್ಗದ ಸರಿಸಮಾನರು.

'ರಾಮರಾಜ್ಯ' ಹೆಸರು— ಮುಸ್ಲಿಂ ವಿರೋಧವೆ?

'ಭರತ್ ಮಿಲಾಪ್'ನಂಥಾ ಉತ್ತಮ ಪೌರಾಣಿಕ ಚಿತ್ರವನ್ನಿತ್ತ ಪ್ರಕಾಶ್ ಪಿಕ್ಚರ್ಸಿನವರು 'ರಾಮರಾಜ್ಯ'ವನ್ನು ತಯಾರಿಸಿದ್ದಾರೆ. ಸಿನೆಮಾ ಪ್ರಿಯರು ಅದನ್ನು ಎದುರು ನೋಡುತ್ತಿದ್ದಾರೆ; ಲಕ್ಷಾಂತರ ರೂಪಾಯಿ ವೆಚ್ಚಮಾಡಿ ಈ ಚಿತ್ರ ತಯಾರಿಸಲಾಗಿದೆ. ಆದರೀಗ ಈ ಚಿತ್ರದ ಕುರಿತು ಒಂದು ಅಪಸ್ವರ ಹೊರಟಿದೆ. 'ರಾಮರಾಜ್ಯ'ವೆಂಬ ಹೆಸರು ಮುಸ್ಲಿಂ ಜಾತಿಗೆ ವಿರೋಧವೆಂದು! 'ಐಕ್ಯದ' ಹೆಸರಲ್ಲಿ ಇಂಥಾ ದುರುದ್ದೇಶಿಗಳ ಮಾತಿಗೆ ಬೆಲೆ ಕೊಡಬಾರದು. ಇಷ್ಟೊಂದೂ ಸಹನೆಯಿಲ್ಲದ ಜಾತಿಯ ಜನಗಳು ಲೋಕದಲ್ಲಿ ಬದುಕಿರಲೂ ಯೋಗ್ಯರಲ್ಲ.

ಇವಿನ್ನೆರಡು!

ಸಿನೆಮಾ ಲೋಕದ ಅಂಧಗಾಯಕ ಕೆ. ಸಿ. ಡೆ. ಸ್ಥಾಪಿತ ಅರೋರಾ ಪ್ರೊಡಕ್ಷನ್ಸ್ ಒಂದು, ಎ. ಎಂ. ಪ್ರೊಡಕ್ಷನ್ ಇನ್ನೊಂದು ಈ ಎರಡು ಹೊಸ ಸಿನೆಮಾ ನಿರ್ಮಾಣ ಸಂಸ್ಥೆಗಳೀಗ ತಲೆಯೆತ್ತಿವೆ. ಇವೆರಡು ಕೂಡಿ ಒಟ್ಟು ಸ್ವಂತ ಸ್ಟುಡಿಯೋ ಇಲ್ಲದ ನಿರ್ಮಾಪಕರ ಸಂಖ್ಯೆ ೩೯ ಆಯಿತು. ಕೆ. ಸಿ. ಡೇ. ಸಂಸ್ಥೆಯ ಪ್ರಥಮ ಚಿತ್ರ 'ಸುನೋಸುನಾತಾ ಹೂನ್'. 'ಸುಭೂತ್' ಎಂಬುದು ಎರಡನೆಯ ಸಂಸ್ಥೆಯ ಚಿತ್ರ.

ಪುತ್ರ ಸಂತಾನದೊಡನೆ ಪದವಿ!

ಜಯಶ್ರೀಯಲ್ಲಿ ಶಾಂತಾರಾಮರಿಗೆ ಪುತ್ರಸಂತಾನವಾದ ಸಂತೋಷದೊಡನೆ ಭಾರತ ಚಲಚ್ಚಿತ್ರ ನಿರ್ಮಾಪಕ ಸಂಘದ ಅಧ್ಯಕ್ಷ ಸ್ಥಾನವೂ ದೊರೆತಿದೆ! ಕೊಡುವಾಗ ದೇವರು ಒಮ್ಮೆಗೆ ಎರಡೂ ಕೈಗಳಿಂದಲೂ ಕೊಡುತ್ತಾನೆ!

'ಹಮಾರೀ ಬಾತ್'

ಬೊಂಬೇ ಟಾಕೀಸ್ ಚಿತ್ರ!

ಬೊಂಬೇ ಟಾಕೀಸಿನ ಮುಂದಿನ ಚಿತ್ರ 'ಹಮಾರೀ ಬಾತ್' ಇದರ ನಿರ್ಮಾಣ ಕಾರ್ಯ ಭರದಿಂದ ಸಾಗುತ್ತಿದೆ. ದೇವಿಕಾರಾಣಿ ಜಯರಾಜರು ಮುಖ್ಯ ಪಾತ್ರವರ್ಗ. ಶಾನವಾಜ್, ಮುಮ್ತಾಜ್ ಅಲಿ, ಪ್ರಭಾ, ಡೇವಿಡ್, ಸೂರಯ್ಯ ಮೊದಲಾದ ಪ್ರಸಿದ್ಧ ತಾರಾಗಣವಿದರಲ್ಲಿ ವಿರಾಜಿಸುವುದು. ಕವಿ ನರೇಂದ್ರರು ಇದರಲ್ಲಿ ಹಾಡುತ್ತಾರೆ.

'ಹಿಟ್ಲರ್ ಗೆಂಗ್'

ಎಂಬುದು ಪರಮೌಂಟನವರ ಮುಂದಿನ ಕೃತಿ. ಯುದ್ಧ ಪ್ರಚಾರ ಸಂಘದವರು ಈ ಚಿತ್ರ ತಯಾರಿಕೆಯಲ್ಲಿ ಸಹಜವಾಗಿ ನೆರವಾಗುತ್ತಾರೆ. ಹಿಟ್ಲರ್, ಗೋರಿಂಗ್, ಹೆಸ್, ಗೊಬೆಲ್ಸ್ ಮೊದಲಾದ ನಾಜೀ ನಾಯಕರು ಅಧಿಕಾರಕ್ಕೇರಿದ ಚರಿತ್ರೆಯನ್ನಿದರಲ್ಲಿ ಚಿತ್ರಿಸುವ ಸಾಹಸ ಮಾಡುತ್ತಾರೆ. 'ಹಿಟ್ಲರ್ಸ್ ಚಿಲ್ಡ್ರನ್' ಎಂಬ ಚಿತ್ರವೊಂದು ಈಗಾಗಲೇ ತಯಾರಾಗಿರುವುದು. ಹಿಟ್ಲರನ ರಾಜ್ಯದಲ್ಲಿ ಮಕ್ಕಳ ಕರುಣಕತೆ ವಿವರಿಸಿ! ಚೇಪ್ಲಿನನ 'ದಿ ಗ್ರೇಟ್ ಡಿಕ್ಟೇಟರ್' ಇಷ್ಟರಲ್ಲೇ ವಿಖ್ಯಾತವಾಗಿದೆ. ಅಂತೂ ವೈರಿ ಹಿಟ್ಲರನಿಗೆ ಯುದ್ಧಕ್ಷೇತ್ರದಲ್ಲಿ ಮಾತ್ರವಲ್ಲ ಕಲಾಕ್ಷೇತ್ರದಲ್ಲಿಯೂ ತುಂಬಾ ಪ್ರಚಾರ ಸಿಕ್ಕಿದೆ!

'ದಿಕ್ಷಿ'ಯಲ್ಲಿ ದೊರೊತಿ

ದೊರೊತಿಲೇಮರಳ ಮುಂದಿನ ಚಿತ್ರ 'ದಿಕ್ಷಿ'; ಇದು ಪರಮೌಂಟ್ ಕೃತಿ. ಬಿಂಗ್ ಕ್ರೋಸ್ಬಿ ಮತ್ತು ಡಿವೂಲ್ಫ್ ಇವರು ಇದರಲ್ಲಿ ನಟಿಸುವರು.

ಸ್ಥಳೀಯ ಚಿತ್ರಗಳು

ಸೆಂಟ್ರಲ್ ಟೋಕೀಸಿನಲ್ಲಿ, ತ್ಯಾಗರಾಜ್ ಪಿಲ್ಮ್ಸ್ ಚಿತ್ರ 'ತಿರುನೀಲಕಂಠಾರ್' ಪ್ರದರ್ಶಿತವಾಗುತ್ತಿದೆ. 'ತಿರುನೀಲಕಂಠಾರ್' ದಕ್ಷಿಣ ಭಾರತದ ಪ್ರಸಿದ್ಧ ಭಕ್ತಾಗ್ರಣಿಯ ಜೀವನ ಕಥೆ. ೨೫ ಕರ್ಣಮನೋಹರ ಹಾಡುಗಳಿವೆ. ತ್ಯಾಗರಾಜ ಭಾಗವತರ್, ಎನ್. ಎಸ್. ಕೃಷ್ಣನ್, ಟಿ. ಎ. ಮಧುರಂ ಮೊದಲಾದ ನಟವರ್ಗ.

'ಬಾಲಾಜಿ ಟಾಕೀಸಿನಲ್ಲಿ ಶಾಲಿಮಾರ್ ಪಿಕ್ಚರ್ಸ್ ಕೃತಿ 'ಪ್ರೇಮ ಸಂಗೀತ' ಎಂಬ ಸಾಮಾಜಿಕ ಚಿತ್ರ ಪ್ರದರ್ಶಿತವಾಗುವುದು. ನೀನಾ, ಜೈರಾಜ್ ಮೊದಲಾದ ಪ್ರಸಿದ್ಧ ನಟವರ್ಗದ ಅಭಿನಯ. ಇದು ಸಂಗೀತ, ವಿನೋದ, ಶೃಂಗಾರಮಯವಾಗಿದೆ.

'ಒಳ್ಳೆಯ ಚಿತ್ರಗಳನ್ನು ತರಿಸಿರಿ'

-ಚಲಚ್ಚಿತ್ರ ವಿಮರ್ಶಕ ಕೂಟದ ಸಾಪ್ತಾಹಿಕ ಸಭೆಯು ತಾ. ೯ರಲ್ಲು ಶ್ರೀ ಮುರಲೀಧರರ ಅಧ್ಯಕ್ಷತೆಯಲ್ಲಿ ಜರಗಿ, ನಗರದಲ್ಲಿ ಪ್ರದರ್ಶಿತವಾಗುತ್ತಿರುವ 'ಸುಭದ್ರಾ' ಚಿತ್ರದ ವಿಮರ್ಶೆಯ ಬಳಿಕ, 'ಇಂಥ ಚಿತ್ರವನ್ನು ಯಾವ ಥಿಯೇಟರಿನವರೂ ಎರಡನೆಯ ಬಾರಿ ತರಿಸಬಾರದು, ಯಾವಾಗಲೂ ಒಳ್ಳೆಯ ಚಿತ್ರಗಳನ್ನೇ ಪ್ರದರ್ಶಿಸಬೇಕು— ಈ ವಿಷಯವನ್ನು 'ಸುಭದ್ರಾ'ದ ಪ್ರದರ್ಶಕರಿಗೂ, ಹಂಚಿಕೆಗಾರರಿಗೂ, ನಿರ್ಮಾಪಕರಿಗೂ ತಿಳಿಸಬೇಕು.' ಎಂಬ ನಿರ್ಣಯವು ಸರ್ವಾನುಮತದಿಂದ ಸ್ವೀಕರಿಸಲ್ಪಟ್ಟಿತು. 'ಶಮನ್ನಾ' ಚಿತ್ರವು ಸಂದೇಶಾತ್ಮಕ ಮತ್ತು ಹೊಸರೀತಿಯದಿದೆ. ಎಂದು ಒಬ್ಬ ಸದಸ್ಯರು ಅಭಿಪ್ರಾಯಪಟ್ಟರು.

ನೋಟಗಳು

ಕ್ರಿಪ್ಸರು ಮರಳಿ ಭಾರತಕ್ಕೆ ಬರಲಿ ಎಂದು ರಾಜಾಜಿ ಆಹ್ವಾನಿಸುತ್ತಾರೆ.

ಆದರೆ ಕ್ರಿಪ್ಸರ ಆರೋಗ್ಯ ಚೆನ್ನಾಗಿಲ್ಲವಂತೆ. ಹಾಗಾಗಿ 'ರಾಜಾಜಿಯೇ ಬಂದು ಬಿಡಲಿ' ಎಂದು ಲಂಡನಿನವರು ಕೆಲವರು ಆಹ್ವಾನಿಸುತ್ತಾರೆ.

'ಭಾರತಕ್ಕೆ ಹೋಗಿ ಬಿಕ್ಕಟ್ಟು ಬಗೆಹರಿಸಿಬಿಡುತ್ತೇನೆ' ಎಂದು ಹಿಂದೊಮ್ಮೆ ಕ್ರಿಪ್ಸರು ಹುರಿಗೊಂಡರು! ಯುದ್ಧಕಾಲವಾದರೂ, ಬ್ರಿಟಿಷ್ ಸರಕಾರ ಅವರಿಗೊಂದು ವಿಮಾನ ಒದಗಿಸಿಕೊಟ್ಟಿತು! ಆರುಸಾವಿರ ಮೈಲು ಹಾರಿಬಂದರು ಕ್ರಿಪ್ಸರು.

'ಬಂದ ದಾರಿಗೆ ಸುಂಕವಿಲ್ಲ'ದೆ ಕ್ರಿಪ್ಸರು ಮರಳಬೇಕಾಯಿತು. ಸರಕಾರ ವಿಮಾನ ಒದಗಿಸಿದ್ದು ವ್ಯರ್ಥ; ಕ್ರಿಪ್ಸರಿಗೆ ಎರಡು ಸಲ ಆರುಸಾವಿರ ಮೈಲು ಹಾರಾಡಿದ ಆಯಾಸ ಬೇರೆ.

ಬಹುಶಃ ಆ ಮೇಲೆಯೇ ಕ್ರಿಪ್ಸರು ಆರೋಗ್ಯ ಕೆಟ್ಟಿರಬೇಕು.

ಹೇಗೂ ಅದರಿಂದ ಒಂದು ಪ್ರಯೋಜನವಾಯಿತು. ಗಗನ ಸಂಚಾರದಲ್ಲಿ ಕ್ರಿಪ್ಸರಿಗಿರುವ ನೈಪುಣ್ಯವನ್ನು ನೋಡಿಯೇ ಇರಬೇಕು, ಬ್ರಿಟಿಷ್ ಸರಕಾರ ಅವರನ್ನು ವಿಮಾನ ಖಾತೆಯ ಮಂತ್ರಿಯಾಗಿ ನೇಮಿಸಿತು.

ಪ್ರಧಾನ ಮಂತ್ರಿಯಾಗುವ ಯೋಗ ವಿಮಾನ ಮಂತ್ರಿತ್ವದಲ್ಲಿ ಸಮಾಪ್ತಿಯಾಯಿತು!

ಹೇಗೂ ಕ್ರಿಪ್ಸರಿಗೆ ಇಂದು ಆರೋಗ್ಯ ಚೆನ್ನಾಗಿಲ್ಲ; ಅವರು ಮರಳಿ ಭಾರತಕ್ಕೆ ಬರುವ ಸಂಭವವೂ ತೋರುವುದಿಲ್ಲ.

ಆದರೆ ರಾಜಾಜಿ ಒಮ್ಮೆ ಯಾಕೆ ವಿಲಾಯತಿಗೆ ಹೋಗಬಾರದು?

'ವಿಮಾನವೊದಗಿಸಿಕೊಟ್ಟರೆ ವಿಲಾಯತಿಗೆ ಹಾರುತ್ತೇನೆ.' ಎಂದು ಹಿಂದೊಮ್ಮೆ ಅವರೇ ತಿಳಿಸಿದ್ದರು!

ಚಿಕ್ಕಮಕ್ಕಳಿಂದ ಮುಪ್ಪಿನ ಮುದುಕರ ವರೆಗೆ ನಮ್ಮಲ್ಲಿ ಎಲ್ಲರೂ ರಾಮಾಯಣ ಭಾರತಗಳ ಕಥೆಗಳನ್ನು ಬಲ್ಲರು. ಹಾಗಾಗಿ ಇನ್ನೂ ಇನ್ನೂ ರಾಜಾಜಿ ಇಲ್ಲಿಯೇ ತಮ್ಮ ಪುರಾಣ ಬಿಚ್ಚಿದರೆ ಯಾರಿಗೂ ಅದು ರುಚಿಸಲಿಕ್ಕಿಲ್ಲ.

ಆದರೆ ವಿಲಾಯತಿಯ ಜನರು ವಿನೋದಕ್ಕಾಗಿಯಾದರೂ ರಾಜಾಜಿ ಪುರಾಣವನ್ನು ಕೇಳಿದರೂ ಕೇಳಬಹುದು. ರಾಜಾಜಿ ತಮ್ಮ ಕತೆಗಳನ್ನೆಲ್ಲ ಅಲ್ಲಿಯೇ ಹೇಳಿ ಮುಗಿಸಿ ಆ ಮೇಲೆ ಇಲ್ಲಿಗೆ ಬರಬಹುದು!

ಈ ಸಂದರ್ಭದಲ್ಲಿ ದೊರೆತ ಗಗನ ಸಂಚಾರದ ಅನುಭವದ ಫಲವಾಗಿ ಮುಂದೆ ಯಾವಾಗಲಾದರೂ ಆಗಬಹುದಾದ ರಾಷ್ಟ್ರೀಯ ಸರಕಾರದಲ್ಲಿ ರಾಜಾಜಿಗೆ ವಿಮಾನ ಮಂತ್ರಿತ್ವ ದೊರೆತರೂ ದೊರೆಯಬಹುದು!

ವಿಮಾನ ಮಂತ್ರಿತ್ವವನ್ನಾದರೂ ರಾಜಾಜಿಗೆ ಕೊಟ್ಟದ್ದರೆ ಪ್ರಧಾನ ಮಂತ್ರಿಯಾಗಿ ದೊರೆತ ಅನುಭವ ಸಂಪೂರ್ಣ ಮರೆತುಹೋಗದಂತೆ ಆಗುತಿತ್ತು.

ಅಂತೂ ಕ್ರಿಪ್ಸರಿಗೆ ಈ ಕಡೆ ಬರಲಿಕ್ಕಾಗದಿದ್ದರೆ ರಾಜಾಜಿ ಆ ಕಡೆ ಒಮ್ಮೆ ಹೋಗುವುದಾದರೂ ಎಷ್ಟೋ ಪಾಲಿಗೆ ಒಳ್ಳೆಯದು!

ಶ್ರೀ ವಿ. ಎಸ್. ಕುಡ್ವರ ಗ್ರಂಥಕ್ಕೆ ಮದ್ರಾಸು ಯುನಿವರ್ಸಿಟಿ ಪಾರಿತೋಷಿಕ

ಸಿ. ಪಿ. ಸಿ. ಕಂಪನಿಯ ಮೆನೇಜಿಂಗ್ ಡೈರೆಕ್ಟರರಾದ ಶ್ರೀ. ವಿ. ಎಸ್. ಕುಡ್ವರು ಬರೆದ 'ಮೊಟರು ಯಂತ್ರ ವಿಜ್ಞಾನ' ಎಂಬ ಗ್ರಂಥಕ್ಕೆ ದ್ರಾವಿಡ ಭಾಷೆಗಳಲ್ಲಿ ಆಧುನಿಕ ವೈಜ್ಞಾನಿಕ ವಿಷಯಗಳಲ್ಲಿ ಪುಸ್ತಕ ಪ್ರಕಟಿಸುವ ಬಗ್ಗೆ ಪ್ರೊ. ತ್ಯಾ. ಹಿ. ವಾ. ಗಿ. ಮದ್ರಾಸು ಯುನಿವರ್ಸಿಟಿಯವರು ಕೊಡುವ ಪಾರಿತೋಷಿಕ ರೂ. 750ನ್ನು ಕೊಟ್ಟಿರುತ್ತಾರೆ. ಶ್ರೀ ಕುಡ್ವರಿಗೆ ನಮ್ಮ ಅಭಿನಂದನೆಗಳು.

ವಿಜಾಪುರದಲ್ಲಿ ಅವರ್ಣನೀಯ ಕ್ಷಾಮ

ಸಹಾಯನಿಧಿಗಳನ್ನೇರ್ಪಡಿಸಲು ವಿನಂತಿ

ಆಹಾರದ ಅಭಾವವು ದೇಶದ ಎಲ್ಲೆಡೆಯಲ್ಲಿಯೂ ಬಹಳವಾಗಿದ್ದು ಅನೇಕ ಪ್ರಾಂತ್ಯಗಳಲ್ಲಿ ಭೀಕರ ಕ್ಷಾಮವೂ ರೋಗರುಜೆಗಳೂ ತಲೆಯೆತ್ತಿ ಸಾವಿರಾರು ಜನರು ಬಲಿಯಾಗುತ್ತಿರುವರು. ಕ್ಷಾಮ ಪೀಡಿತ ಪ್ರದೇಶಗಳಲ್ಲಿ ಕರ್ನಾಟಕದ ಒಂದು ಜಿಲ್ಲೆಯಾದ ವಿಜಾಪುರವೂ ಒಂದು. ಇಲ್ಲಿಯ ಜನರ ಪಾಡು ಕರುಣಾಜನಕವಾದುದು. ನಿತ್ಯವೂ ಹಸಿದವರ ಗೋಳು, ಹೊಟ್ಟೆಗಿಲ್ಲದೆ ರೋಗರುಜೆಗಳಿಂದ ನರಳುವವರ ಬಾಳು ಇದನ್ನು ಶಮನಿಸುವ ಕಾರ್ಯಭಾರವು ಸರಕಾರದು ಎಷ್ಟೋ, ಅಷ್ಟೇ ಉದಾರ ಜನತೆಯದೂ ಆಗಿದೆ.

ವಿಜಾಪುರದಲ್ಲಿ ಕ್ಷಾಮ ನಿವಾರಣಾರ್ಥ ಅನೇಕ ತಾತ್ಕಾಲಿಕ ಅನ್ನ ಛತ್ರಗಳು ತೆರೆಯಲ್ಪಟ್ಟಿವೆ, ಅನೇಕ ಸಂಘ ಸಂಸ್ಥೆಗಳು ಈ ವಿಭಾಗದಲ್ಲಿ ಮುಂದುವರಿದು ಸಾಧ್ಯವಿದ್ದಷ್ಟು ಮಟ್ಟಿಗೆ ಜನರಿಗೆ ಪರಿಹಾರ ಕೊಡುತ್ತಿವೆಯಾದರೂ ಅನ್ನದಾನವು ಮುಂದುವರಿಯುವಂತೆ ಅನ್ನ ಛತ್ರಗಳು ತಡೆ ಇಲ್ಲದೆ ನಡೆಯುವಂತೆ ಸಹಾಯ ಧನ ಕೊಡುವುದು ಉದಾರಿ ಜನಗಳ ಕರ್ತವ್ಯವಾಗಿದೆ. ಕರ್ನಾಟಕದ ಈ ಕಡೆ ಇರುವ ನಾವು ವಿಜಾಪುರ ಕ್ಷಾಮ ನಿವಾರಣೆಗೆ ನಮ್ಮ ಕರ್ತವ್ಯವನ್ನು ಮಾಡಿ ಪೂರೈಸಿಲ್ಲ.

ಆ ಬಗ್ಗೆ ನಿಧಿಯನ್ನು ಸಂಗ್ರಹಿಸಲು ಉದಾರಿ ಮಹನೀಯರೇ ಮುಂದೆ ಬಂದು ಸಮಿತಿಯನ್ನು ಸ್ಥಾಪಿಸಿ ತಮ್ಮ ಯಥಾನು ಶಕ್ತಿ ಸಹಾಯ ಧನ ಕೊಟ್ಟು ನಮ್ಮ ನಾಡಿನ ಒಂದು ಜಿಲ್ಲೆಯ ಲಕ್ಷೋಪಲಕ್ಷ ಜನರನ್ನು ಮೃತ್ಯುವಿನಿಂದ ರಕ್ಷಿಸಿದ ಪುಣ್ಯಕ್ಕೆ ಭಾಗಿಗಳಾಗುವರೆಂದು ನಮ್ಮ ಭರವಸೆ, ಎಂದು ಶ್ರೀ ಆರ್. ಎ. ಬಿಜೂರ್ ಮೊದಲಾದವರು ಒಂದು ವಿನಂತಿ ಹೊರಡಿಸಿದ್ದಾರೆ.



ಪುಸ್ತಕಾವಲೋಕನ

ನಾರೀಹೃದಯ

ಇದು ತೊದಲ್ನುಡಿ ಗ್ರಂಥಮಾಲೆಯ ೧೭ನೆಯ ನುಡಿ–ಲೇಖಿಕೆ ಶ್ರೀಮತಿ ಶಿವರಾಣಿ ದೇವಿ, ಅನುವಾದಕರು ಶ್ರೀ ಎಸ್. ಎಲ್. ಸುಬ್ರಹ್ಮಣ್ಯಂ, ಕೊಡಗನೂರು, ಮೈಸೂರು ಸಂಸ್ಥಾನ. ಪ್ರಕಾಶಕರು, ಕಿರಿಯರ ಪ್ರಪಂಚ, ಉಡುಪಿ, ಪುಟ ಸಂಖ್ಯೆ ೧೨೬+೮ ಬೆಲೆ ಮೊದಲ ಪುಟದಲ್ಲಿ ನಮೂದಾಗಿರುವಂತೆ ೧೪ ಆಣೆ, ರಕ್ಷಾ ಪತ್ರದ ಕೊನೆಯ ಪುಟದಲ್ಲಿ ಅಚ್ಚಾಗಿರುವಂತೆ ೧೨ ಆಣೆ.

ಹಿಂದಿಯಲ್ಲಿ ಪ್ರಸಿದ್ಧ ಕಥೆಗಾರರೆಂದು ಹೆಸರು ಪಡೆದ ಸ್ವರ್ಗೀಯ ಪ್ರೇಮಚಂದ್ರರ ಧರ್ಮ ಪತ್ನಿ ಶ್ರೀಮತಿ ಶಿವರಾಣಿ ದೇವಿಯವರ ಹದಿನಾಲ್ಕು ಕಥೆಗಳ ಕನ್ನಡ ಅನುವಾದವಾದ "ನಾರೀಹೃದಯ"ವನ್ನು ಪ್ರಕಟಿಸಿ "ಕಿರಿಯರ ಪ್ರಪಂಚ"ವು ನಾರೀ ಪ್ರಪಂಚಕ್ಕೆ ಗೌರವ ಮತ್ತು 'ಶಿವಲ್ರಿ' ತೋರಿರುವುದು ಸಮಂಜಸವಾಗಿದೆ. ಅನುವಾದ ತೃಪ್ತಿಕರವಾಗಿದೆ. ಪುಸ್ತಕದ ಅಚ್ಚು ಮತ್ತು ಕಟ್ಟು ಚೆಲುವಾಗಿವೆ.

ಮೊದಲ ಕಥೆ 'ನಾರೀಹೃದಯ' ವಾಚ್ದರಿಂದ ಅಥವಾ ಅದೇ ಇದ್ದುದರಲ್ಲೆಲ್ಲ ಉತ್ತಮ ಕಥೆ ಎಂಬ ಭಾವನೆಯಿಂದಲೋ ಏನೋ ಪುಸ್ತಕಕ್ಕೆ ಅದೇ ಹೆಸರು ಕೊಟ್ಟಿದೆ. ಪ್ರತಿಯೊಂದು ಕಥೆಯಲ್ಲಿ ಸ್ತ್ರೀ ಹೃದಯದ ಒಂದೊಂದು ಛಾಯೆ, ಒಂದೊಂದು ಬಣ್ಣ ಕಾಣಬರುವುದರಿಂದ ಈ ಹೆಸರು ಯುಕ್ತವಾಗಿದೆಯೆನ್ನಬಹುದು. ಈ ಕಥೆಯ ಸಾರಾಂಶವಿದು: ಬಿ. ಎ. ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾದೊಡನೆ ವಿಜಯನಿಗೆ ಗೋರಕ್ ಪುರದ ತಹಸಿಲ್‌ದಾರಿ ದೊರೆಯುತ್ತದೆ. ಅಲ್ಲಿಗೆ ಹೋದ ಮೇಲೆ ಅವನು ತನ್ನನ್ನೊಲಿದ ಪ್ರಭೆಯನ್ನು ಮರೆಯುತ್ತ ಬಂದು ಅವಳ ನಂಬಿಕೆಗೆ ದ್ರೋಹವೆಸಗಿದರೂ ಅವಳುಮಾತ್ರ ಅವನನ್ನೇ ಅನನ್ಯವಾಗಿ ಚಿಂತಿಸುತ್ತ ಕೊನೆಗೆ ಹೇಗಾದರೂ ಅವನನ್ನು ಪುನಃ ಒಲಿಸಿಕೊಳ್ಳುತ್ತಾಳೆ. ಇದು ನಾರೀಹೃದಯ ಸ್ವಭಾವವೆಂದು ತೋರಿಸಲು ಲೇಖಿಕೆಯವರ ಯತ್ನವೆಂದು ಕಾಣುತ್ತದೆ.

ಎರಡನೆಯ ಕಥೆ 'ಮಾಡಿದ್ದುಣ್ಣೋ ಮಹಾರಾಯ' ಸತ್ವ ಶಾಲಿನಿಯಾದ ಬಾಲವಿಧವೆ ಕಾಂತಿಯು ತನ್ನ ಗೆಳತಿ ಸುಭದ್ರೆಯ ನೆರವು ಪಡೆದು ದುರಾಚಾರಿ ಮೋಹನ ಸಿಂಹನಿಗೆ ಬುದ್ಧಿ ಕಲಿಸಿರುವುದು ಇಲ್ಲಿ ಚಿತ್ರಿತವಾಗಿದೆ. 'ಸಾಹಸ' ಎಂಬ ಮೂರನೆಯ ಕಥೆಯಲ್ಲಿ, ವಿವಾಹ ವಯಸ್ಕಳೂ ವಿದ್ಯಾವತಿಯೂ ಆದ ರಮೆ ಇಷ್ಟರಲ್ಲೇ ತನ್ನನ್ನು ಮದುವೆಯಾಗುವುದರಲ್ಲಿದ್ದ ಪಂಡಿತ ಅಮರನಾಥನೆಂಬ ವೃದ್ಧನಿಗೆ 'ಜೋಡು ಮರ್ಯಾದೆ' ಮಾಡಿದ 'ಸಾಹಸ'ವನ್ನು ವರ್ಣಿಸಿದೆ. ಕಥಾ ನಿರೂಪಣೆ ಸ್ವಲ್ಪ ಅಭಾಸಕರವಾಗಿ ತೋರಿದರೂ ಮುದುಕರ ಮದುವೆ ಹುಚ್ಚು ಬಿಡಬೇಕಾದರೆ ಇಂತಹದೇ ಉತ್ತಮ ಔಷಧವೆಂದು ತೋರುತ್ತದೆ. ಮುಂದಿನದು 'ಕಾಕಜ್ಜ' ಎಂಬ ಕಥೆ. ಮನೆಯ ದಾಸಿಯಾದ ಮುದುಕಿ ಕಾಕಜ್ಜಿಯಲ್ಲಿ ಎಷ್ಟರ ಮಟ್ಟಿನ ಪ್ರೇಮ ಔದಾರ್ಯಗಳಿದ್ದುವು, ಅದರಿಂದಾಗಿ ಹೇಗೆ ಮನೆಯ ಯಜಮಾನ ಗಂಗಾ ಪ್ರಸಾದನ ಬಾಳು ನಾಯಬಾಳಾಗುವುದು ತಪ್ಪಿತು ಎನ್ನುವುದೇ ಇಲ್ಲಿ ಕಥಾವಸ್ತು.

ಪುಸ್ತಕದ 'ಪರಿಚಯದ'ಲ್ಲಿ ಶ್ರೀ ಶಿವಪೂಜನ ಸಹಾಯ ಇವರು ಹೇಳುವಂತೆ 'ಸವತಿ, ತಾಯಿ, ಬಂಧನ, ಬಲಿದಾನ ಎಂಬ ಕಥೆಗಳು ಅತ್ಯಂತ ಪ್ರಭಾವಶಾಲಿಯಾಗಿವೆ.' ಕಿರಿಯ ಸವತಿ ಬಹಳ ಚಾತುರ್ಯದಿಂದ ಹಿರಿಯ ಸವತಿಯ ಮೇಲಿನ ದ್ವೇಷವನ್ನು ವಿಚಿತ್ರವಾಗಿ ಸಾಧಿಸಿದ ಬಗೆಯನ್ನು 'ಸವತಿ'ಯಲ್ಲಿ ಸುಂದರವಾಗಿ ಚಿತ್ರಿಸಿದೆ. 'ತಾಯಿ' (ಮಾತೆ) ಎಂಬ ಕಥೆಯ ವಿವರವಿದು: ವಸಂತನು ರಾಷ್ಟ್ರೀಯ ಭಾವನೆಯುಳ್ಳ ಯುವಕ. ಅವನ ತಾಯಿಯೂ ಅದೇ ಮನೋಭಾವವನ್ನುಳ್ಳ ಸಾಧ್ವಿ. ತಂದೆ ಸರಕಾರಿ ನೌಕರನಾಗಿದ್ದು ಅಧಿಕಾರಿಗಳಲ್ಲಿ 'ದಾಸಾನುದಾಸ' ಮತ್ತು ಪ್ರಜಾವರ್ಗದಲ್ಲಿ ದರ್ಪ ತೋರುವವನು. ವೈಸ್‌ರಾಯ್ ತಮ್ಮ ಊರಿಗೆ ಬರುವ ಸಿದ್ಧತೆ ನಡೆಯುತ್ತಿದ್ದಾಗ ಮಗ ರಾಷ್ಟ್ರೀಯ ಸ್ವಯಂಸೇವಕ ದಳಕ್ಕೆ ಸೇರುವುದು, ತಂದೆ ದಬ್ಬಾಳಿಕೆಯಿಂದ ರಾಷ್ಟ್ರೀಯ ಭಾವನೆಯವರನ್ನು ದಂಡಿಸಲು ಏರ್ಪಡಿಸುವುದು, ವೈಸ್‌ರಾಯಿಗೆ ಸತ್ಕಾರ ನಡೆಯುತ್ತಿರಲು ಪೋಲೀಸರ ಕುದುರೆಗಳ ತುಳಿತಕ್ಕೆ ಸಿಕ್ಕಿ ಇತರ ಅನೇಕರೊಂದಿಗೆ ವಸಂತನ ಸಾವು, ಪೋಲೀಸ್ ಅಧಿಕಾರಿಗಳು ವಸಂತನ ತಂದೆಗೆ ಸಮಾಧಾನದ ಮಾತು ಹೇಳಲು ಬರುವುದು. ತನ್ನ 'ಪತಿದೇವ'ನ ವರ್ತನೆಯಿಂದ ರೋಸಿದ ರಾಧೆ, ಮಗನ ಅಗಲಿಕೆಯನ್ನು ಸಹಿಸಲಾರದೆ ಅಡಿಗೆ ಮನೆಗೆ ಹೋಗಿ ಬಾಗಿಲು ಮುಚ್ಚಿಕೊಂಡು ಮೈಮೇಲೆ ಸೀಮೆಎಣ್ಣೆ ಹೊಯಿದು ಬೆಂಕಿ ಹಚ್ಚಿಕೊಳ್ಳುವುದು–ಇವು ಬಹಳ ಸಹಜವಾಗಿ ಹೃದಯದ್ರಾವಕವಾಗಿ ವರ್ಣಿತವಾಗಿವೆ.

'ಬಂಧನ'ದಲ್ಲಿ ದೇಶ ಪ್ರೇಮಿಗಳಾದ ಗಂಡ ಹೆಂಡಿರು ಕಾಯಿಲೆಯಿಂದ ನರಳುತ್ತಿರುವ ಮಗನ ಆರೈಕೆಗೂ ಅವಕಾಶವಿಲ್ಲದೆ ಬಂಧನಕ್ಕೊಳಗಾದ ಸನ್ನಿವೇಶವನ್ನು ಎದೆಮುಟ್ಟುವಂತೆ ಹೇಳಿದೆ. ಹಿಂದೂ ಮುಸಲ್ಮಾನರೊಳಗೆ ಸೌಹಾರ್ದ ಬೆಳೆಯುವಂತೆ ಮಾಡಲು ಅಪಾರ ಸ್ವಾರ್ಥತ್ಯಾಗ ಮಾಡಿ ನೆರೆಯ ಮುಸಲ್ಮಾನ ಬಂಧುವಿಗೆ ಆಸರೆಯಿತ್ತ ಶಾಂತಿದೇವಿ ಬಕ್ರೀದ್ ಹಬ್ಬದ ದಿನ ವಿಚಾರಶೂನ್ಯರಾದ ಕೆಲ ಹಿಂದೂ ನೋದರರಿಂದ ಬಲಿಯಾಗುವ ಕಥೆಯೇ 'ಬಲಿದಾನ'. ಮುಸಲ್ಮಾನರು ಅಂದು ಹಸುವನ್ನು ಖುರ್ಬಾನಿ ಮಾಡಿದ್ದರೆ ಊರಲ್ಲೆಲ್ಲ ಹಿಂದೂ ಮುಸಲ್ಮಾನರ ಜಗಳಕ್ಕೆ ಕಾರಣವಾಗುತ್ತಿತ್ತು. ಅದಕ್ಕೆ ಬದಲು ಶಾಂತಿದೇವಿ ತನ್ನ ಪ್ರಾಣವನ್ನೇ ಆಹುತಿ ಕೊಟ್ಟು ಊರ ಹಿಂದೂ ಮುಸಲ್ಮಾನರೊಳಗೆ ಮಧುರ ಬಾಂಧವ್ಯ ಬೆಳೆಯಲು ಕಾರಣಳಾದಳು.

ಉಳಿದ ಕಥೆಗಳು ಈ ಮಟ್ಟಕ್ಕೇರಲಾರವು. ಆದರೂ ಒಟ್ಟಿನಲ್ಲಿ ಈ ಕಥಾ ಸಂಗ್ರಹ ಕನ್ನಡಿಗರ ಆದರಕ್ಕೆ ಪಾತ್ರವಾಗಲು ಅರ್ಹವಾಗಿದೆ.

—ವಾಸುದೇವ.

ಕರ್ನಾಟಕ ಶ್ರೀ ಮುನವಳ್ಳಿಯವರ ಬಿಡುಗಡೆ

ರಾಷ್ಟ್ರದ್ರೋಹ ದುರಂತದಲ್ಲಿ ೩॥ ವರ್ಷ ಶಿಕ್ಷೆ ಅನುಭವಿಸಿ, ಬಿಡುಗಡೆಯಾದ ಕೂಡಲೇ ಸ್ಥಾನಬದ್ಧರಾಗಿರಿಸಲ್ಪಟ್ಟ ಹುಬ್ಬಳ್ಳಿಯ ಶ್ರೀ ಬಸಪ್ಪಾ ನಾಗಪ್ಪಾ ಮುನವಳ್ಳಿ ಬಿ. ಎ. ಎಲ್. ಎಲ್. ಬಿಯವರು ತಾ. ೨೭ರಂದು ಬಿಡುಗಡೆಯಾಗಿರುವರು, ಬ್ರಿಟಿಷ ಗಡಿಗೆ ಹೋಗಬಾರದೆಂದು ಇವರ ಮೇಲೆ ನಿರ್ಬಂಧವಿದೆ.

ವೃದ್ಧಿಯಿಂದ ಅಭಿವೃದ್ಧಿ.

ಗತ ೧೯೩೯ನೇ ವರ್ಷದಿಂದ ಚಾಲು ೧೯೪೩ನೇ ಪ್ರಾರಂಭದ ಮಾಸಗಳು ಬಹು ಅಪಾಯಗಳಿಂದಲೂ ಹಾಗೂ ಸುಯೋಗಗಳಿಂದಲೂ ತುಂಬಿ ತುಳುಕಿದ್ದವು. ಜಾಣತೆಯಿಂದ ವ್ಯವಸ್ಥೆ ಮಾಡಲ್ಪಟ್ಟ ಸಂಸ್ಥೆಗಳು ಈ ಅಪಾಯಗಳನು ತಳ್ಳಿ ಸುಸಂದರ್ಭಗಳನ್ನು ಉಪಯೋಗಿಸಿ ತೀವ್ರನೆ ಮುಂದುವರಿದವು.

೧೯೪೦, ೪೧ರಲ್ಲಿ ಕೆನರಾ ಬೇಂಕು ೬೦ ಲಕ್ಷ ಠೇವಣಿಗಳ ಮತ್ತು ಒಂದು ಕೋಟಿ ಸಾಂಪತ್ತಿಕ ಸ್ಥಿತಿಯುಳ್ಳದ್ದು ಅಂದು ಸಹ ಅದು ವಿಸ್ತೃತ ಸ್ಥಿತಿಯ ಸಂಸ್ಥೆಯಾಗಿತ್ತು. ಇಂದು ಠೇವಣಿಗಳು ಇಮ್ಮಡಿಯಾಗಿವೆ. ಸಾಂಪತ್ತಿಕ ಸ್ಥಿತಿಯು ಎರಡುವರೆ ಕೋಟಿಗೆ ಮಿಕ್ಕಿದೆ. ಹಾಗೂ ತೆತ್ತ ಮೂಲಧನವು ನಾಲ್ಮಡಿಯಾಗಿದೆ.

ಜಾಣತನದ ವ್ಯವಸ್ಥೆಯ ಏರ್ಪಾಟಿನಿಂದಲೂ, ಆತ್ಮ ವಿಶ್ವಾಸದಿಂದಲೂ, ದೃಢ ಬುದ್ಧಿಯಿಂದಲೂ, ಯೋಗ್ಯ ಸೇವೆಯನ್ನು ಸಲ್ಲಿಸಿದರಿಂದಲೂ, ಇಂದಿನ ಈ ಪ್ರಗತಿಗೆ ಕಾರಣಭೂತರಾದ, ಸಾರ್ವಜನಿಕರ ಮೆಚ್ಚುಗೆಗೆ ಪಾತ್ರರಾಗಿ ಇನ್ನು ಮುಂದಕೂ ಮಹತ್ವದ ಸೇವೆಯನ್ನು ಒಪ್ಪಿಸಲು ಸಮರ್ಥರಾಗಲು ನಾವು ಹಾರೈಸುವೆವು.

Canara Bank Limited.

ಕೆನರಾ ಬೇಂಕ್ ಲಿಮಿಟೆಡ್.

ಸ್ಥಾಪನೆ 1906.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದುದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ, ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

The Bank of Mangalore Limited, Mangalore.
ESTD 1931

HEAD OFFICE Mangalore. *BRANCHES* Moodabidri & Padubidri.

The Bank Undertakes to Collect Cheques, Demand and Documentary Bills at Most Competitive Rates.

ISSUES DRAFTS ON ALL IMPORTANT TOWNS IN THE DISTRICT
and also on
BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.
at very favourable rates
All kinds of inland banking business undertaken

(Regd)

ಅಮೃತಾಂಜನ

ತಲೆವೇದನೆ, ಶರೀರವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾ ಬೇನೆ, ಪಕ್ಷವಾತ, ನೆಗಡಿಮೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. — ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಜೀವವಿಮೆ ಮಾಡುವ ಪ್ರಯೋಜನವು ಇಂದು ಹಿಂದಿಗಿಂತ ಅಧಿಕವಾಗಿದೆ.

ದಿ ಬಾಂಬೆ ಲೈಫ್ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಇದರಲ್ಲಿ ಒಂದು ಪಾಲಿಸಿ ಪಡೆದು

ಈಗಲೇ ನೀವು ನಿಮ್ಮನ್ನು ಮತ್ತು ನಿಮ್ಮನ್ನು ಹೊಂದಿಕೊಂಡಿರುವವರನ್ನು ರಕ್ಷಿಸಿಕೊಳ್ಳಿರಿ!

ಪ್ರತಿನಿಧಿಗಳಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಇನ್ಶೂರ್ ಮಾಡಲು ಅಥವಾ ಮಾಹಿತಿ ತಿಳಕೊಳ್ಳಲು ದಯಮಾಡಿ ಬರೆಯಿರಿ!

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

— : ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ : —

ಬೆಂಗಳೂರು ಬೊಂಬಾಯಿ ಮದ್ರಾಸು ಕಲ್ಲಿಕೋಟೆ ಮಂಗಳೂರು ಮತ್ತು ತ್ರಿವೇಂಡ್ರಂ

'Bhuvanendra Products Limited
Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವ ವಿಧದ ದೋಷಗಳನ್ನು ಗುಣಪಡಿಸುವ ದಿವ್ಯೌಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ್ ವ ಏಜೆಂಟರು:—
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘವೇಂದ್ರ ಷೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ| ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

ಡಿಪೋ:—1. ಮರಾಠ ಗಲ್ಲಿ ಹುಬ್ಬಳ್ಳಿ.
2. 86 ಪ್ಯಾಕ್ರೋಫ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೊಂಗರೆ
ಬಾಲಾಮೃತವು
ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ಮೃತ್ಯುಂಜಯ ರಸ. ಪಂಚವಟಿ ಮಾತ್ರೆ. ಕೊಲೆರಾ ರೋಗಕ್ಕೆ ಸಿದ್ಧೌಷಧ.
ಸೇವನಾ ಕ್ರಮಗಳು ಔಷಧಿಯೊಡನೆ ಇದೆ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಕು 10—9—1943 [ಸಂಚಿಕೆ 37]

ವಿಲ್ಕಿ ಭಾರತಕ್ಕೆ ಬರದಂತೆ ರೂಸ್‌ವೆಲ್ಟ್ ತಡೆದರು!

ವಿಲ್ಕಿ ಭಾರತಕ್ಕೆ ಬರದಂತೆ ರೂಸ್‌ವೆಲ್ಟರು ತಡೆದರು!

ಇದನ್ನು ಕೇಳಿ ಯಾರಾದರೂ ಆಶ್ಚರ್ಯ ಪಡಬಹುದು. ಚತುಃಸ್ವಾತಂತ್ರ್ಯಗಳ ಘೋಷಣೆ ಮಾಡಿದ ರೂಸ್‌ವೆಲ್ಟರು ಹೀಗೆ ಮಾಡಿಯಾರೆ? ಸಂಶಯವೇಕೆ? ವಿಲ್ಕಿಯೊಡನೆ ಕೇಳಿ, ಅವರು ಇತ್ತೀಚೆಗೆ ಬರೆದ 'ಏಕಜಗತ್ತು' ಪುಸ್ತಕದಲ್ಲಿ ಹೀಗಿದೆ 'ದೂರ ಪೂರ್ವದ ಕುರಿತು ತಿಳಿವ ಕುತೂಹಲ ನನಗೆ ತುಂಬಾ ಇತ್ತು. ನಾನು ಕಾರ್ಯಕ್ರಮ ನಿಶ್ಚಯಿಸುವಾಗಲೇ ನನ್ನ ಪ್ರಯಾಣದ ಕುರಿತು ವಾಶಿಂಗ್‌ಟನಿನಲ್ಲಿ ಸಂಶಯ ಹೆಚ್ಚಾಯಿತು ನಾನು ಭಾರತಕ್ಕೆ ಹೋಗಕೂಡದೆಂದು ರೂಸ್‌ವೆಲ್ಟರು ತಿಳಿಸಿದರು. ಚೀನಕ್ಕೂ ಹೋಗಲು ಸೌಕರ್ಯ ಒದಗುತ್ತದೋ ಇಲ್ಲವೋ ಅಂಜಿಕೊಂಡಿದ್ದೆ".

ಭಾರತದ ಬಿಕ್ಕಟ್ಟು ಬ್ರಿಟಿಷರು ಬಿಡಿಸುವುದಿಲ್ಲ!

ಡಿಲ್ಲಿಯ ಊಹಾಪೋಹೆ

ಬ್ರಿಟಿಷ್ ಸುದ್ದಿ ಖಾತೆಯ ಮಂತ್ರಿ ಬ್ರೆಂಡನ್ ಬ್ರೇಕರು ಮತ್ತು ಇತ್ತೀಚೆಗೆ ಲಂಡನಿನಿಂದ ಮರಳಿದ ರಾಮಸ್ವಾಮಿ ಮುದಲಿಯಾರರೂ, ಅಮೆರಿ ಚರ್ಚಿಲ್‌ಗಳ ಪಾಠವನ್ನೇ ಹೇಳಿರುವುದರಿಂದ, ಭಾರತದ ಸ್ವಾತಂತ್ರ್ಯ ಪ್ರಶ್ನೆಯನ್ನು ಯುದ್ಧಾನಂತರದ ವರೆಗಿಡುವ ಅಭಿಪ್ರಾಯ ತಿಳಿಸಿದ್ದರಿಂದ, ಬ್ರಿಟಿಷರು ಭಾರತದ ಬಿಕ್ಕಟ್ಟು ಬಗೆಹರಿಸುವುದಿಲ್ಲವೆಂದು ನ್ಯೂ ಡಿಲ್ಲಿಯ ರಾಜಕೀಯ ಕೂಟದಲ್ಲಿ ಅಭಿಪ್ರಾಯವಿದೆ ಆದರೆ ವೇವಲರು ತನ್ನ ವೈಸರಾಯ್ ನೇಮಕವಾದ ಕೂಡಲೇ, ಭಾರತದ ಬಿಕ್ಕಟ್ಟನ್ನು ಯುದ್ಧಾನಂತರದ ವರೆಗಿಡದೆ ಬೇಗನೇ ಏಕೆ ತೀರಿಸಬಾರದು ಎಂದು ಒಮ್ಮೆ ಹೇಳಿದ್ದರು. ಆದರೆ ಚರ್ಚಿಲರಾದಿ ಪ್ರಭೃತಿಗಳ ಅಭಿಪ್ರಾಯಕ್ಕೂ ವೇವಲರ ಈ ಅಭಿಪ್ರಾಯಕ್ಕೂ ತುಂಬಾ ವಿರುದ್ಧವಿರುವುದರಿಂದ, ರಾಜಕೀಯ ಪ್ರವೀಣರು ಊಹಿಸುವುದೇನೆಂದರೆ ಬ್ರಿಟನಿನಲ್ಲಿ ಉಚ್ಚಾಧಿಕಾರದಲ್ಲಿರುವವರು ಸಧ್ಯವೇ ಭಾರತದ ಬಿಕ್ಕಟ್ಟು ಬಗೆಹರಿಸುವರೆ ಮುಂದೆ ಬರಲು ತಯಾರಿಲ್ಲವಾದ ಕಾರಣ, ವೇವಲರು ಭಾರತಕ್ಕೆ ಬಂದ ಕೂಡಲೇ ಬಿಕ್ಕಟ್ಟು ಬಗೆಹರಿಯುವುದೆಂದು ಕೆಲವರಿಗಿರುವ ಆಶೆ ಕೇವಲ ನಿರಾಶೆಯಾಗಿದೆ. ಹಾಗೆಯೇ ವೇವಲರು ಬಂದ ಕೂಡಲೇ ಜಪಾನ್ ಮೇಲೆ ಆಕ್ರಮಣವಾಗುವುದೆಂಬ ಆಶೆಯೂ ದೂರವುಳಿದಿದೆ ಅದೇ ರೀತಿ ವೈಸರಾಯ್ ಮಂತ್ರಿಮಂಡಳ ಮಂಡಿತರೂ, ರಾಜಕೀಯ ಬಿಕ್ಕಟ್ಟಿನ ವಿಚಾರ ತಲೆ ಹಾಕುವುದೇನೂ ತೋರುವುದಿಲ್ಲ ರಾಜಾಜಿ, ಮುನ್ಶಿ, ಶ್ರೀ ವಾಸ್ತವ ಇವರ ಚಟುವಟಿಕೆಯ ಕಡೆಗೆ ಹಲವರ ನಿರೀಕ್ಷೆಯೊಗ ಹರಿದಿದೆ.

ಭಾರತದ ಬಿಕ್ಕಟ್ಟು ಬ್ರಿಟಿಷರು ಬಿಡಿಸುವುದಿಲ್ಲ

ಬ್ರಿಟಿಷರಿಗೆ ಭಾರತದ ಕುರಿತು ಜ್ಞಾನವಿಲ್ಲ

"ಬ್ರಿಟಿಷರಿಗೆ ಭಾರತದ ಕುರಿತು ಜ್ಞಾನವಿಲ್ಲ"

– ಇದು ಅಕ್ಷಮ್ಯ ಅಪರಾಧ –

'ಭಾರತೀಯನ ದೃಷ್ಟಿಯಲ್ಲಿ ಬ್ರಿಟನು' ಎಂಬ ಕುರಿತು ಬಿ ಬಿ ಸಿಯಲ್ಲಿ ಶ್ರೀ ಚಿನ್ನದೊರಾಯಿಯವರು ಮಾತನಾಡುತ್ತಾ ಕಳೆದ ಎರಡು ಶತಮಾನಗಳ ಆಡಳಿತದ ಮೇಲೂ ಬ್ರಿಟಿಷರಿಗೆ ಭಾರತದ ವಿಷಯ ಇಂದೂ ಅಜ್ಞಾನವಿರುವುದು ಅಕ್ಷಮ್ಯ ಅಪರಾಧವೆಂದರು 'ಬ್ರಿಟಿಷ್ ನಾಗರಿಕರಿಗೂ, ಸೈನಿಕರಿಗೂ ಭಾರತದ ಕುರಿತು ತಿಳಿವ ಕುತೂಹಲವಿದೆ ಆದರೆ ಅವರು ನನ್ನೊಡನೆ ಕೇಳುವ ಪ್ರಶ್ನೆಯಿಂದ ಅವರಿಗೆ ಭಾರತದ ವಿಷಯ ಏನೂ ಗೊತ್ತಿಲ್ಲವೆಂದು ಸ್ಪಷ್ಟವಾಗುತ್ತದೆ. ಇದು ಶೋಚನೀಯ. ಇಂಥಾ ಅಜ್ಞಾನದಿಂದ ಶತ್ರು ಪ್ರಚಾರಕ್ಕೆ ಒಳ್ಳೆಯ ಸಹಾಯವಾಗುವುದು. ಯುದ್ಧಾನಂತರ ನಿರ್ಮಿಸಲ್ಪಡುವ ಜಗತ್ತಿನಲ್ಲಿ ಪರಸ್ಪರ ವಿಶ್ವಾಸ ಸೌಹಾರ್ದಗಳಿಂದ ಶಾಂತಿ ನೆಲೆಗೊಳ್ಳಬೇಕು. ಆದ್ದರಿಂದ ಭಾರತದ ಬಗ್ಗೆ ಪ್ರತಿಯೊಬ್ಬನೂ ತಿಳಕೊಳ್ಳಬೇಕು" ಎಂದು ಅವರು ಭಾಷಣದಲ್ಲಿ ಹೇಳಿದರು. ಬ್ರಿಟಿಷ್ ಜನತೆಯನ್ನು ಭಾರತದ ಕುರಿತು ಹೀಗೆ ಬೇಕು ಬೇಕೆಂದೇ ಅಜ್ಞಾನದಲ್ಲಿಡಲಾಗಿದೆಯೆ?

'ಕಯ್ಯೂರ ಹುತಾತ್ಮರು' ಪುಸ್ತಕದ ಜಪ್ತಿ

ಪುಣೆಯಲ್ಲಿರುವ ಕಮ್ಯುನಿಸ್ಟ್ ಪಕ್ಷದ ಮಹಾರಾಷ್ಟ್ರ ಕಚೇರಿಯನ್ನು ಜಪ್ತಿಮಾಡಿ 'ಕಯ್ಯೂರ ಹುತಾತ್ಮರು' ಎಂಬ ಪುಸ್ತಕದ ಪ್ರತಿಯನ್ನು ಪೋಲೀಸರು ತೆಗೆದುಕೊಂಡು ಹೋದರು

ಇದನ್ನು ಸ್ವಾತಂತ್ರ್ಯ ಪ್ರಜಾಪ್ರಭುತ್ವಗಳ ಯುದ್ಧವೆಂದು ಏಕೆ ಹೇಳುತ್ತೀರಿ?

ಬ್ರೆಂಡನ್ ಬ್ರೇಕನರು ಭಾರತದ ವಿಚಾರ ಸ್ಪಷ್ಟಪಡಿಸಿದ ಅಭಿಪ್ರಾಯವನ್ನು ಲಂಡನಿನಲ್ಲಿರುವ ಎಲ್ಲಾ ಭಾರತೀಯ ಸಂಘಗಳೂ, ಭಾರತ ಚಿಂತಕರೂ ಕೆಲವು ಪತ್ರಿಕೆಗಳೂ ಟೀಕಿಸುತ್ತವೆ ಭಾರತದ ಸ್ವಾತಂತ್ರ್ಯವನ್ನು ನೀವು ಹಿಂದೂಡುವಿರಾದರೆ, ಈ ಯುದ್ಧವನ್ನು ಸ್ವಾತಂತ್ರ್ಯ ಪ್ರಜಾಪ್ರಭುತ್ವಗಳ ಯುದ್ಧವೆಂದು ಏಕೆ ಕರೆಯುತ್ತೀರಿ? ಎಂದು ಭಾರತದ ಮಿತ್ರರಾದ ಬ್ರಿಟಿಷರೇ ಬ್ರಿಟಿಷ್ ಸರಕಾರದೊಡನೆ ಪ್ರಶ್ನಿಸುತ್ತಾರೆ. ಎಡ್ಗರ್‌ಸ್ನೋ ಭಾರತದಿಂದ ಮರಳಿದವರು ಸ್ವರಾಜ್ಯ ಭವನದಲ್ಲಿ ಮಾತನಾಡುತ್ತಾ, ಗಾಂಧಿಜಿಗಿಂತ ನೆಹರುವಿಗೆ ಹೆಚ್ಚಿನ ಅಂತರ್ರಾಷ್ಟ್ರೀಯ ವಿಶಾಲ ದೃಷ್ಟಿಯಿದೆಯೆಂದು ಹೇಳಿದರು

ಖಾದಿ ಸಪ್ತಾಹ

ನವಂಬರ ತಾ. ೫ರಿಂದ ೧೨ರ ವರೆಗೆ ವಿಜಾಪುರ ಜಿಲ್ಲೆಯ ಬರಗಾಲ ಪೀಡಿತ ನೂಲುವವರಿಗೆ ಹಾಗೂ ನೇಕಾರರಿಗೆ ಸಹಾಯವಾಗುವಂತೆ, ಕರ್ನಾಟಕ ಅ. ಭಾ. ಚರಕಾ ಸಂಘದವರು ಖಾದೀ ಸಪ್ತಾಹ ಆಚರಿಸುತ್ತಾರೆ. ಒಂದು ರೂಪಾಯಿ ಬೆಲೆಯ ಮೇಲೆ ೨ ಆಣೆ ಕಮಿಶನ್ ಕೊಡಲಾಗುವುದು. ಆದ್ದರಿಂದ ಮಹಾಜನರು ಖಾದಿ ಸಪ್ತಾಹದಲ್ಲಿ ಅಧಿಕ ಖಾದಿ ಕೊಂಡುಕೊಂಡು ಈ ಮೂಲಕ ಬರಗಾಲ ಪೀಡಿತರಿಗೆ ನೆರವಾಗಬೇಕೆಂದು ವಿನಂತಿಯಿದೆ.

ಭಾರತದ ದಾಸ್ಯಕ್ಕೆ ಭಾರತೀಯರೇ ಕಾರಣರಂತೆ!

ಅಟ್ಲೀಯವರ ಆರೋಪ

ಬ್ರಿಟಿಷ್ ಸಾಮ್ರಾಜ್ಯ ಮಂತ್ರಿ ಸಿ. ಆರ್ ಅಟ್ಲೀಯವರು ಒಂದು ಭಾಷಣ ಕೊಡುತ್ತಾ, ಭಾರತದ ದಾಸ್ಯಕ್ಕೆ ಭಾರತೀಯರೇ ಕಾರಣರೆಂದು, ಹಾಡಿದ ಹಾಡನ್ನೇ ಪುನಃ ಹಾಡಿದರು 'ಪೂರ್ಣ ಸ್ವಾತಂತ್ರ್ಯ ಪಡೆಯಲು ಜಾತಿ ಜಾತಿಗಳೊಳಗಿರುವ ವೈಷಮ್ಯವೇ ಮುಖ್ಯ ಆತಂಕ. ಇದೇ ಸಮಸ್ಯೆ ಬಾರದಂತ ಸಾಮ್ರಾಜ್ಯದ ಬೇರೆ ಭಾಗಗಳಲ್ಲಿ ಮುಖ್ಯವಾಗಿ ಸಿಲೋನ್ ಪೇಲಿಸ್ತೀನ್‌ಗಳಲ್ಲಿಯೂ ಇದೆ. ಈ ಆತಂಕಗಳನ್ನು ಪರಿಹರಿಸಲು ನಾವು ಸಾಧ್ಯವಿದ್ದಷ್ಟು ಪ್ರಯತ್ನಿಸಿದ್ದೇವೆ ಇದನ್ನು ಯಾವ ಶಾಸನೆಯ ಮೂಲಕವೂ ಇಲ್ಲದೆ ಮಾಡಲು ಸಾಧ್ಯವಿಲ್ಲವಾದ್ದರಿಂದ ಇದರ ನಿವಾರಣೋಪಾಯವನ್ನು ಭಾರತೀಯ ದೇಶೀಯರೇ ಮಾಡಬೇಕು' ಎಂದರು ಎಷ್ಟೆಂದರೂ ಗಂಟೆಗೊಂದೇ ಸ್ವರ!

ವಿಧವಾ ಸಹಾಯಕ ಸಭಾ, ಲಾಹೋರ್

ಈ ಹೆಸರಿನಿಂದ ಒಂದು ಸಂಸ್ಥೆ ಸ್ಥಾಪಿತವಾಗಿದೆ. ಅಖಿಲ ಭಾರತದಲ್ಲಿ ವಿಧವಾ ಸಹಾಯ ಮಾಡುವ ಉದ್ದೇಶದಿಂದ ಇದು ಸ್ಥಾಪಿತವಾಗಿರುವುದು. ಸರ್ ಗಂಗಾರಾಮ್‌ಜಿ ಈ ಆಂದೋಲನದ ಆರಂಭ ಕರ್ತರು ವಿಧವೆಗಳಿಗೆ ಸಹಾಯ ಮಾಡುವುದು, ಅವರ ಮಕ್ಕಳ ರಕ್ಷಣೆ, ಸಮಾಜದಿಂದ ಅವರಿಗೆ ಆಗುವ ಅನ್ಯಾಯವನ್ನು ತಡೆಗಟ್ಟುವುದು ಮೊದಲಾಗಿ ಇದರ ಕೆಲಸಗಳು. ರೂ. ೨೫ರಿಂದ ರೂ. ೧೦೦೦ದ ವರೆಗೆ ಧನ ಸಹಾಯವೀಯುವವರು ಇದರ ಸದಸ್ಯ ಸಹಾಯಕರಾಗುವರು ಸರ್ ಗೋಕುಲ್ ಚಂದ್, ಜೈನರಂಗ್ ಎಂ. ಎ. ಪಿ. ಎಚ್. ಡಿ. ಎಂ. ಎಲ್. ಎ. ಪಂಜಾಬಿನ ಮಾಜಿ ಮಂತ್ರಿ ಇವರು ಇದರ ಜನರಲ್ ಪ್ರೆಸಿಡೆಂಟರು. ಶ್ರೀ. ಆರ್. ಒ ಕೆಪ್ಪನ್ ಆರ್. ಆರ್. ಎಂ. ಭಂಡಾರಿ, ಕೆ. ಬಿ. ಎಚ್. ಇವರು ಕಾರ್ಯದರ್ಶಿಗಳು. ೩೦, ಪಿರೋಜ್‌ಪುರ್ ರೋಡ್ ಲಾಹೋರ್ ಇದು ವಿಳಾಸ.

The Bank of Mangalore Limited, Mangalore.

ESTD. 1931

HEAD OFFICE Mangalore. *BRANCHES* Moodabidri & Padubidri.

The Bank Undertakes to Collect Cheques, Demand and Documentary Bills at Most Competitive Rates.

ISSUES DRAFTS ON ALL IMPORTANT TOWNS IN THE DISTRICT
and also on
BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.
at very favourable rates

All kinds of inland banking business undertaken

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾ ಬೇನೆ, ಸಕ್ತವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. — ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಜೀವವಿಮೆ ಮಾಡುವ ಪ್ರಯೋಜನವು ಇಂದು ಹಿಂದಿಗಿಂತ ಅಧಿಕವಾಗಿದೆ.

ದಿ ಬಾಂಬೆ ಲೈಫ್ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಇದರಲ್ಲಿ ಒಂದು ಪಾಲಿಸಿ ಪಡೆದು

ಈಗಲೇ ನೀವು ನಿಮ್ಮನ್ನು ಮತ್ತು ನಿಮ್ಮನ್ನು ಹೊಂದಿಕೊಂಡಿರುವವರನ್ನು ರಕ್ಷಿಸಿಕೊಳ್ಳಿರಿ!

ಪ್ರತಿನಿಧಿಗಳಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಇನ್ಶೂರ್ ಮಾಡಲು ಅಥವಾ ಮಾಹಿತಿ ತಿಳಕೊಳ್ಳಲು ದಯಮಾಡಿ ಬರೆಯಿರಿ!

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

—: ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ :—

ಬೆಂಗಳೂರು ಬೊಂಬಾಯಿ ಮದ್ರಾಸು ಕಲ್ಲಿಕೋಟೆ ಮಂಗಳೂರು ಮತ್ತು ತ್ರಿವೇಂದ್ರಂ

'Bhuvanendra Products Limited
Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವ ವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ ನ ಏಜಂಟರು:-
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಷೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

ಡಿಪೋ:—1. ಮರಾಠ ಗಲ್ಲಿ ಹುಬ್ಬಳ್ಳಿ.
2. 86 ಫ್ಲಾಕ್ರೋಫ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ಮೃತ್ಯುಂಜಯ ರಸ.
ಪಂಚವಟಿ ಮಾತ್ರೆ. ಕೊಲೆರಾ ರೋಗಕ್ಕೆ ಸಿದ್ಧೌಷಧ.
ಸೇವನಾ ಕ್ರಮಗಳು ಔಷಧಿಯೊಡನೆ ಇದೆ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಕು 10—9—1943 [ಸಂಚಿಕೆ 37]

ವಿಲ್ಕಿ ಭಾರತಕ್ಕೆ ಬರದಂತೆ ರೂಸ್‌ವೆಲ್ಟ್ ತಡೆದರು!

ವಿಲ್ಕಿ ಭಾರತಕ್ಕೆ ಬರದಂತೆ ರೂಸ್‌ವೆಲ್ಟರು ತಡೆದರು!

ಇದನ್ನು ಕೇಳಿ ಯಾರಾದರೂ ಆಶ್ಚರ್ಯ ಪಡಬಹುದು. ಚತುಃಸ್ವಾತಂತ್ರ್ಯಗಳ ಘೋಷಣೆ ಮಾಡಿದ ರೂಸ್‌ವೆಲ್ಟರು ಹೀಗೆ ಮಾಡಿವರೆ? ಸಂಶಯವೇಕೆ? ವಿಲ್ಕಿಯೊಡನೆ ಕೇಳಿ; ಅವರು ಇತ್ತೀಚೆಗೆ ಬರೆದ 'ಏಕಜಗತ್ತು' ಪುಸ್ತಕದಲ್ಲಿ ಹೀಗಿದೆ, "ದೂರ ಪೂರ್ವದ ಕುರಿತು ತಿಳಿವ ಕುತೂಹಲ ನನಗೆ ತುಂಬಾ ಇತ್ತು. ನಾನು ಕಾರ್ಯಕ್ರಮ ನಿಶ್ಚಯಿಸುವಾಗಲೇ ನನ್ನ ಪ್ರಯಾಣದ ಕುರಿತು ವಾಶಿಂಗ್‌ಟನಿನಲ್ಲಿ ಸಂಶಯ ಹೆಚ್ಚಾಯಿತು ನಾನು ಭಾರತಕ್ಕೆ ಹೋಗಕೂಡದೆಂದು ರೂಸ್‌ವೆಲ್ಟರು ತಿಳಿಸಿದರು. ಚೀನಕ್ಕೆ ಹೋಗಲು ಸಾಕರ್ಯ ಒದಗುತ್ತದೋ ಇಲ್ಲವೋ ಅಂಜಿಕೊಂಡಿದ್ದೆ".

ಭಾರತದ ಬಿಕ್ಕಟ್ಟು ಬ್ರಿಟಿಷರು ಬಿಡಿಸುವುದಿಲ್ಲ!

ಡಿಲ್ಲಿಯ ಊಹಾಪೋಹ

ಬ್ರಿಟಿಷ್ ಸುದ್ದಿ ಖಾತೆಯ ಮಂತ್ರಿ ಬ್ರೆಂಡನ್ ಬ್ರೇಕರು ಮತ್ತು ಇತ್ತೀಚೆಗೆ ಲಂಡನಿನಿಂದ ಮರಳಿದ ರಾಮಸ್ವಾಮಿ ಮುದಲಿಯಾರರೂ, ಅಮೆರಿ ಚರ್ಚಿಲ್‌ಗಳಿಪಾರವನ್ನೇ ಹೇಳಿರುವುದರಿಂದ, ಭಾರತದ ಸ್ವಾತಂತ್ರ್ಯ ಪ್ರಶ್ನೆಯನ್ನು ಯುದ್ಧಾನಂತರದ ವರೆಗಿಡುವ ಅಭಿಪ್ರಾಯ ತಿಳಿಸಿದ್ದರಿಂದ, ಬ್ರಿಟಿಷರು ಭಾರತದ ಬಿಕ್ಕಟ್ಟು ಬಗೆಹರಿಸುವುದಿಲ್ಲವೆಂದು ನ್ಯೂ ಡಿಲ್ಲಿಯ ರಾಜಕೀಯ ಕೂಟದಲ್ಲಿ ಅಭಿಪ್ರಾಯವಿದೆ. ಆದರೆ ವೇವಲರು ತನ್ನ ವೈಸರಾಯ್ ನೇಮಕವಾದ ಕೂಡಲೇ, ಭಾರತದ ಬಿಕ್ಕಟ್ಟನ್ನು ಯುದ್ಧಾನಂತರದ ವರೆಗಿಡದೆ ಬೇಗನೇ ಏಕೆ ತೀರಿಸಬಾರದು ಎಂದು ಒಮ್ಮೆ ಹೇಳಿದ್ದರು. ಆದರೆ ಚರ್ಚಿಲ ಮೊದಲಾದ ಪ್ರಭೃತಿಗಳ ಅಭಿಪ್ರಾಯಕ್ಕೂ ವೇವಲರ ಈ ಅಭಿಪ್ರಾಯಕ್ಕೂ ತುಂಬಾ ವಿರುದ್ಧವಿರುವುದರಿಂದ, ರಾಜಕೀಯ ಪ್ರವೀಣರು ಊಹಿಸುವುದೇನೆಂದರೆ ಬ್ರಿಟನಲ್ಲಿ ಉಚ್ಚಾಧಿಕಾರದಲ್ಲಿರುವವರು ಸ್ವಲ್ಪವೇ ಭಾರತದ ಬಿಕ್ಕಟ್ಟು ಬಗೆಹರಿಸುವರೆ ಮುಂದೆ ಬರಲು ತಯಾರಿಲ್ಲವಾದ ಕಾರಣ, ವೇವಲರು ಭಾರತಕ್ಕೆ ಬಂದ ಕೂಡಲೇ ಬಿಕ್ಕಟ್ಟು ಬಗೆಹರಿಯುವುದೆಂದು ಕೆಲವರಿಗಿರುವ ಆಶೆ ಕೇವಲ ನಿರಾಶೆಯಾಗಿದೆ. ಹಾಗೆಯೇ ವೇವಲರು ಬಂದ ಕೂಡಲೇ ಜಪಾನ್ ಮೇಲೆ ಆಕ್ರಮಣವಾಗುವುದೆಂಬ ಆಶೆಯೂ ದೂರವುಳಿದಿದೆ. ಅದೇ ರೀತಿ ವೈಸರಾಯ್ ಮಂತ್ರಿಮಂಡಳ ಮಂಡಿತರೂ, ರಾಜಕೀಯ ಬಿಕ್ಕಟ್ಟಿನ ವಿಚಾರ ಕೆಲೆ ಹಾಕುವುದೇನೂ ತೋರುವುದಿಲ್ಲ. ರಾಜಾಜಿ, ಮುನ್ಶಿ, ಶ್ರೀ ವಾಸ್ತವ ಇವರ ಚಟುವಟಿಕೆಯ ಕಡೆಗೆ ಹಲವರ ನಿರೀಕ್ಷೆಯೂಗ ಹರಿದಿದೆ.

ಭಾರತದ ಬಿಕ್ಕಟ್ಟು ಬ್ರಿಟಿಷರು ಬಿಡಿಸುವುದಿಲ್ಲ

ಬ್ರಿಟಿಷರಿಗೆ ಭಾರತದ ಕುರಿತು ಜ್ಞಾನವಿಲ್ಲ

"ಬ್ರಿಟಿಷರಿಗೆ ಭಾರತದ ಕುರಿತು ಜ್ಞಾನವಿಲ್ಲ"

– ಇದು ಅಕ್ಷಮ್ಯ ಅಪರಾಧ –

'ಭಾರತೀಯನ ದೃಷ್ಟಿಯಲ್ಲಿ ಬ್ರಿಟನು' ಎಂಬ ಕುರಿತು ಬಿ. ಬಿ. ಸಿಯಲ್ಲಿ ಶ್ರೀ ಚಿನ್ನದೊರಾಯಿಯವರು ಮಾತನಾಡುತ್ತಾ ಕಳೆದ ಎರಡು ಶತಮಾನಗಳ ಆಡಳಿತದ ಮೇಲೂ ಬ್ರಿಟಿಷರಿಗೆ ಭಾರತದ ವಿಷಯ ಇಂದೂ ಅಜ್ಞಾನವಿರುವುದು ಅಕ್ಷಮ್ಯ ಅಪರಾಧವೆಂದರು. 'ಬ್ರಿಟಿಷ್ ನಾಗರಿಕರಿಗೂ, ಸೈನಿಕರಿಗೂ ಭಾರತದ ಕುರಿತು ತಿಳಿವ ಕುತೂಹಲವಿದೆ. ಆದರೆ ಅವರು ನನ್ನೊಡನೆ ಕೇಳುವ ಪ್ರಶ್ನೆಯಿಂದ ಅವರಿಗೆ ಭಾರತದ ವಿಷಯ ಏನೂ ಗೊತ್ತಿಲ್ಲವೆಂದು ಸ್ಪಷ್ಟವಾಗುತ್ತದೆ. ಇದು ಶೋಚನೀಯ. ಇಂಥಾ ಅಜ್ಞಾನದಿಂದ ಶತ್ರು ಪ್ರಚಾರಕ್ಕೆ ಬಳ್ಳಿಯ ಸಹಾಯವಾಗುವುದು ಯುದ್ಧಾನಂತರ ನಿರ್ಮಿಸಲ್ಪಡುವ ಜಗತ್ತಿನಲ್ಲಿ ಪರಸ್ಪರ ವಿಶ್ವಾಸ ಸೌಹಾರ್ದಗಳಿಂದ ಶಾಂತಿ ನೆಲೆಗೊಳ್ಳಬೇಕು. ಆದ್ದರಿಂದ ಭಾರತದ ಬಗ್ಗೆ ಪ್ರತಿಯೊಬ್ಬನೂ ತಿಳಕೊಳ್ಳಬೇಕು" ಎಂದು ಅವರು ಭಾಷಣದಲ್ಲಿ ಹೇಳಿದರು. ಬ್ರಿಟಿಷ್ ಜನತೆಯನ್ನು ಭಾರತದ ಕುರಿತು ಹೀಗೆ ಬೇಕು ಬೇಕೆಂದೇ ಅಜ್ಞಾನದಲ್ಲಿಡಲಾಗಿದೆಯೆ?

'ಕಯ್ಯೂರ ಹುತಾತ್ಮರು'

ಪುಸ್ತಕದ ಜಪ್ತಿ

ಪುಣೆಯಲ್ಲಿರುವ ಕಮುನಿಸ್ಟ ಪಕ್ಷದ ಮಹಾರಾಷ್ಟ್ರ ಕಚೇರಿಯನ್ನು ಜಪ್ತಿಮಾಡಿ 'ಕಯ್ಯೂರ ಹುತಾತ್ಮರು' ಎಂಬ ಪುಸ್ತಕದ ಪ್ರತಿಯನ್ನು ಪೋಲೀಸರು ತೆಗೆದುಕೊಂಡು ಹೋದರು

ಇದನ್ನು ಸ್ವಾತಂತ್ರ್ಯ ಪ್ರಜಾಪ್ರಭುತ್ವಗಳ ಯುದ್ಧವೆಂದು ಏಕೆ ಹೇಳುತ್ತೀರಿ?

ಬ್ರೆಂಡನ್ ಬ್ರೇಕನರು ಭಾರತದ ವಿಚಾರ ಸ್ಪಷ್ಟಪಡಿಸಿದ ಅಭಿಪ್ರಾಯವನ್ನು ಲಂಡನಿನಲ್ಲಿರುವ ಎಲ್ಲಾ ಭಾರತೀಯ ಸಂಘಗಳೂ, ಭಾರತ ಚಿಂತಕರೂ ಕೆಲವು ಪತ್ರಿಕೆಗಳೂ ಟೀಕಿಸುತ್ತವೆ. ಭಾರತದ ಸ್ವಾತಂತ್ರ್ಯವನ್ನು ನೀವು ಹಿಂದೂಡುವಿರಾದರೆ, ಈ ಯುದ್ಧವನ್ನು ಸ್ವಾತಂತ್ರ್ಯ ಪ್ರಜಾಪ್ರಭುತ್ವಗಳ ಯುದ್ಧವೆಂದು ಏಕೆ ಕರೆಯುತ್ತೀರಿ? ಎಂದು ಭಾರತದ ಮಿತ್ರರಾದ ಬ್ರಿಟಿಷರೇ ಬ್ರಿಟಿಷ್ ಸರಕಾರದೊಡನೆ ಪ್ರಶ್ನಿಸುತ್ತಾರೆ. ಎಡ್ಗರ್‌ಸ್ನೋ ಭಾರತದಿಂದ ಮರಳಿದವರು ಸ್ವರಾಜ್ಯ ಭವನದಲ್ಲಿ ಮಾತನಾಡುತ್ತಾ, ಗಾಂಧೀಜಿಗಿಂತ ನೆಹರುವಿಗೆ ಹೆಚ್ಚಿನ ಅಂತರ್‍ರಾಷ್ಟ್ರೀಯ ವಿಶಾಲ ದೃಷ್ಟಿಯಿದೆಯೆಂದು ಹೇಳಿದರು.

ಖಾದಿ ಸಪ್ತಾಹ

ನವಂಬರ ತಾ. ೫ರಿಂದ ೧೨ರ ವರೆಗೆ ವಿಜಾಪುರ ಜಿಲ್ಲೆಯ ಬರಗಾಲ ಪೀಡಿತ ನೂಲುವವರಿಗೆ ಹಾಗೂ ನೇಕಾರರಿಗೆ ಸಹಾಯವಾಗುವಂತೆ, ಕರ್ನಾಟಕ ಅ. ಭಾ. ಚರಕಾ ಸಂಘದವರು ಖಾದೀ ಸಪ್ತಾಹ ಆಚರಿಸುತ್ತಾರೆ. ಒಂದು ರೂಪಾಯಿ ಬೆಲೆಯ ಮೇಲೆ ೨ ಆಣೆ ಕಮಿಶನ್ ಕೊಡಲಾಗುವುದು. ಆದ್ದರಿಂದ ಮಹಾಜನರು ಖಾದಿ ಸಪ್ತಾಹದಲ್ಲಿ ಅಧಿಕ ಖಾದಿ ಕೊಂಡುಕೊಂಡು ಈ ಮೂಲಕ ಬರಗಾಲ ಪೀಡಿತರಿಗೆ ನೆರವಾಗಬೇಕೆಂದು ವಿನಂತಿಯಿದೆ.

ಭಾರತದ ದಾಸ್ಯಕ್ಕೆ ಭಾರತೀಯರೇ ಕಾರಣರಂತೆ!

ಅಟ್ಲೆಯವರ ಆರೋಪ

ಬ್ರಿಟಿಷ್ ಸಾಮ್ರಾಜ್ಯ ಮಂತ್ರಿ ಸಿ ಆರ್ ಅಟ್ಲೆಯವರು ಒಂದು ಭಾಷಣ ಕೊಡುತ್ತಾ, ಭಾರತದ ದಾಸ್ಯಕ್ಕೆ ಭಾರತೀಯರೇ ಕಾರಣರೆಂದು, ಹಾಡಿದ ಹಾಡನ್ನೇ ಪುನಃ ಹಾಡಿದರು. 'ಪೂರ್ಣ ಸ್ವಾತಂತ್ರ್ಯ ಪಡೆಯಲು ಜಾತಿ ಜಾತಿಗಳೊಳಗಿರುವ ವೈಷಮ್ಯವೇ ಮುಖ್ಯ ಆತಂಕ ಇದೇ ಸಮಸ್ಯೆ ಭಾರತದಂತೆ ಸಾಮ್ರಾಜ್ಯದ ಬೇರೆ ಭಾಗಗಳಲ್ಲಿ ಮುಖ್ಯವಾಗಿ ಸಿಲೋನ್ ಪೇಲಿಸ್ತೀನ್‌ಗಳಲ್ಲಿಯೂ ಇದೆ. ಈ ಆತಂಕಗಳನ್ನು ಪರಿಹರಿಸಲು ನಾವು ಸಾಧ್ಯವಿದ್ದಷ್ಟು ಪ್ರಯತ್ನಿಸಿದ್ದೇವೆ. ಇದನ್ನು ಯಾವ ಘಟನೆಯ ಮೂಲಕವೂ ಇಲ್ಲದೆ ಮಾಡಲು ಸಾಧ್ಯವಿಲ್ಲವಾದ್ದರಿಂದ ಇದರ ನಿವಾರಣೋಪಾಯವನ್ನು ಆಯಾಯ ದೇಶೀಯರೇ ಮಾಡಬೇಕು' ಎಂದರು ಎಷ್ಟೆಂದರೂ ಗಂಟಗೊಂದೇ ಸ್ವರ!

ವಿಧವಾ ಸಹಾಯಕ ಸಭಾ, ಲಾಹೋರ್

ಈ ಹೆಸರಿನಿಂದ–ಒಂದು ಸಂಸ್ಥೆ ಸ್ಥಾಪಿತವಾಗಿದೆ. ಅಖಿಲ ಭಾರತದಲ್ಲಿ ವಿಧವಾ ಸಹಾಯ ಮಾಡುವ ಉದ್ದೇಶದಿಂದ ಇದು ಸ್ಥಾಪಿತವಾಗಿರುವುದು. ಸರ್ ಗಂಗಾರಾಮ್‌ಜಿ ಈ ಆಂದೋಲನದ ಆರಂಭ ಕರ್ತರು. ವಿಧವೆಗಳಿಗೆ ಸಹಾಯ ಮಾಡುವುದು, ಅವರ ಮಕ್ಕಳ ರಕ್ಷಣೆ, ಸಮಾಜದಿಂದ ಅವರಿಗೆ ಆಗುವ ಅನ್ಯಾಯವನ್ನು ತಡೆಗಟ್ಟುವುದು ಮೊದಲಾಗಿ ಇದರ ಕೆಲಸಗಳು. ರೂ. ೫ರಿಂದ ರೂ. ೧೦೦ರ ವರೆಗೆ ಧನ ಸಹಾಯವೀಯುವವರು ಇದರ ಸದಸ್ಯ ಸಹಾಯಕರಾಗುವರು. ಸರ್! ಗೋಕುಲ ಚಂದ್, ಜೈನರಂಗ್ ಎಂ. ಎ. ಪಿ. ಎಚ್ ಡಿ, ಎಂ. ಎಲ್. ಎ. ಪಂಜಾಬಿನ-ಮಾಜಿ ಮಂತ್ರಿ ಇವರು ಇದರ ಜನರಲ್ ಪ್ರೆಸಿಡೆಂಟರು. ಶ್ರೀ. ಆರ್. ಒ. ಕೆಪ್ಪನ ಆರ್. ಕ್ಯರ್. ಎಂ. ಭಂಡಾರಿ, ಕೆ. ಐ ಎಚ್. ಇವರು ಕಾರ್ಯದರ್ಶಿಗಳು ೩೦, ಫಿರೋಜ್‌ಪುರ್ ರೋಡ ಲಾಹೋರ್ ಇದು ವಿಳಾಸ.

ಹೃದಯದ್ರಾವಕ ಕತೆಗಳು!

ಕರುಳಿನ ಕೂಗು! ಕರುಣೆಯ ಕೂಗು!

ದುರ್ದೈವೀ ಬಂಗಾಳದ ದೃಶ್ಯ!

ಬಂಗಾಳದ ಇಂದಿನ ಕೂಗು—ಕರುಳಿನ ಕೂಗು! ಕರುಣೆಯ ಕೂಗು! ಇಡಿಯ ಬಂಗಾಳವೇ ಇಂದು ಹೃದಯ ವಿದ್ರಾವಕ ಆರ್ತನಾದ ಮಾಡುತ್ತಿದೆ! ಮೃತ್ಯುವಿಗೆ ಮಾರಿಬಲಿ ಆಗುತ್ತಿದೆ ಅಲ್ಲಿ! ಬಂಗಾಳದ ನಗರ ಗ್ರಾಮಗಳಲ್ಲಿ ದಿನದಿನವು ಸಾವಿರಾರು ಮಂದಿ, ಹಸುಗೂಸುಗಳು, ಮುಪ್ಪಿನ ಮುದುಕರು, ಹೆಂಗುಸರು, ಗಂಡುಸರು ಎಲ್ಲರೂ ಹಸಿವಿನ ಬೆಂಕಿ ತಾಳಲಾರದೆ ಪ್ರಾಣಬಿಡುತ್ತಿದ್ದಾರೆ. ಬ್ರಿಟಿಷ್ ಭಾರತದ ಪ್ರಧಾನ ನಗರದಲ್ಲಿ, ಕಲ್ಕತ್ತದಲ್ಲಿಂದು ಈ ದೃಶ್ಯ; ಮಾನವ ಕೋಟಿ ಅಪಮಾನ ಪಡಬೇಕಾದ ದೃಶ್ಯ! ಯೂರೋಪಿನಲ್ಲಿ ಮಿತ್ರರು ವಿಜಯಿಗಳಾಗುತ್ತಿದ್ದಾರೆ! ನಾಜಿಗಳು, ಫೇಸಿಸ್ಟರು ಸೋಲುತ್ತಿದ್ದಾರೆ; ನಿಜವಾಗಿ ಇದು ಅವರಿಗೆ ಆನಂದದ ಕಾಲ! ಆದರೆ ಬಡ ಭಾರತಕ್ಕೆ, ದುರ್ದೈವೀ ಬಂಗಾಳಕ್ಕೆ ಇಂಥಾ ಸಂಕಷ್ಟ ಕಾಲ ಬೇರೊಂದಿಲ್ಲ! ಅಯ್ಯೊ! ಇದೆಂಥಾ ವಿಪರೀತ!

ಫರಿದ್‌ಪುರ ಬಂಗಾಳದ ಒಂದು ಊರು. ಇಲ್ಲಿನ ಗೋಸಾಯರಾತ್ ಎಂಬಲ್ಲಿ ಆದ ಕರುಣಾಜನಕ ಸತ್ಯಕಥೆಯೊಂದು ಹೀಗಿದೆ: ಒಬ್ಬ ಎಳೆ ಪ್ರಾಯದ ಹುಡುಗ ಹಸಿವು ತಾಳಲಾರದೆ, ನಡೆಯಲು ತ್ರಾಣವಿಲ್ಲದೆ ಬೀದಿಯಲ್ಲಿ ಬಿದ್ದುಕೊಂಡಿದ್ದ: ಬೀದಿಯಲ್ಲಿ ಮೂರ್ಛೆಗೊಂಡು ಬಿದ್ದವನನ್ನು ಎತ್ತಿ ಉಣಿಸುವವರಿಲ್ಲ. ಇತರರಿಗೆ ಆಹಾರವಿದ್ದರೆ ತಾನೆ? ಎಲ್ಲರೂ ಒಂದೇ!' ರಾತ್ರಿಯಲ್ಲಿ ತೋಳವೊಂದು ಬಂದಿತು. ಅದಕ್ಕೂ ಬಹಳ ಹಸಿದಿರಬೇಕು! ಮನುಷ್ಯರೇ ಹಾಗೆ ಹಸಿದು ಕಂಗಾಲಾಗಿರುವಾಗ ತೋಳ ಮತ್ತೆ ಯಾವ ಸ್ಥಿತಿಯಲ್ಲಿರಬೇಡ? ಹಸಿದು ಬಂದಿದ್ದ ತೋಳನು. ಆ ಬಾಲಕನ ಬಲಗಾಲನ್ನು ಕಡಿದು ತಿಂದುಬಿಟ್ಟಿತು! ಹುಡುಗ ಬಹಳ ಚೀರಿಕೊಂಡಿರಬೇಕೆಂದು ಬೇರೆ ಹೇಳಬೇಕೆ? ನಡೆದು ಓಡಿಹೋಗಲು ತ್ರಾಣವೆಲ್ಲಿದೆ? ಅರ್ಧ ಸತ್ತ ಆ ಹುಡುಗನ ಶರೀರ ಮತ್ತೂ ಕೆಲದಿನ ಆ ಬೀದಿಯಲ್ಲಿ ನರಳುತಿತ್ತು. ಯಾವನೂ ಅದನ್ನು ತೆಗಿಯಲು ಯತ್ನಿಸಲಿಲ್ಲ. ಅಂಥಾದ್ದು ಅವರಿಗೆ ದಿನದಿನದ ದೃಶ್ಯವಾಗಿದೆ! ಇನ್ನೊಂದು ದಿನ ರಾತ್ರಿ ತೋಳ ಬಂದು ಅವನ ಕೈಯನ್ನು ಕಾಲುಗಳನ್ನು, ದೇಹವೆಲ್ಲವನ್ನೂ ಕಚ್ಚಿ ತಿಂದು ಬಿಟ್ಟಿತು! ಕೊನೆಯ ಗಳಿಗೆಯಲ್ಲಿ ಆತ ಮಾಡಿದ ಕಿರುದನಿ—ದೇವರೆಂಬವನಿದ್ದರೆ—ಆತನಿಗೆ ಮಾತ್ರ ಕೇಳಿಸಿತಬಹುದು! ಮರುದಿನ ಬೆಳಗ್ಗೆ ಬೀದಿಗೆ ಬಂದವರು ಬಾಲಕನ ರುಂಡ ಮುಂಡಗಳ ಅವಶೇಷಗಳನ್ನು ಕಂಡು ಕಂಬನಿ ಸುರಿಸಿದರು! ಪಾಪ! ಅವರು ಮತ್ತೇನು ಮಾಡಬಲ್ಲರು?

ಕಲ್ಕತ್ತ ನಗರದಲ್ಲಿಯೇ ಇನ್ನೊಂದು ಘಟನೆ ನಡೆಯಿತು. 'ಒಂದು ದಿನ ಓರ್ವ ಗೌಳಿಗಿತಿ ಹಾಲಿನ ಕೊಡವನ್ನು ಹೊತ್ತುಕೊಂಡು ಹೋಗುತ್ತಿದ್ದಳು. ಏನೋ ಆಕಸ್ಮಾತ್ ಹಾಲಿನ ಕೊಡ ಅವಳ ತಲೆಯಿಂದ ಜಾರಿ ದೊಪ್ಪನೆ ನೆಲಕ್ಕೆ ಬಿದ್ದುಬಿಟ್ಟಿತು! ಜೇನಿಗೆ ಮುತ್ತುವ ನೊಣಗಳಂತೆ ಅಲ್ಲಿ ಅಕ್ಕಪಕ್ಕಗಳಲ್ಲಿದ್ದ ನಿರ್ಗತಿಕರು ಅಲ್ಲಿಗೆ ಓಡಿಬಂದರು. ಕೆಲವರು ಚೆಲ್ಲಿದ್ದ ಹಾಲಿಗೆ ನಾಲಿಗೆ ನೀಡಿ ನಕ್ಕಿದರು. ಕೆಲವರು ತಮ್ಮ ಚಿಂದಿಗಳನ್ನದ್ದಿ ಬಾಯಿಗೆ ಹಿಂಡಿಕೊಂಡರು. ಕೆಲವರು ಅರಿವೆಗಳನ್ನು ಅದರಲ್ಲಿ ಒದ್ದೆಮಾಡಿ ತಮ್ಮಲ್ಲಿದ್ದ ಪಾತ್ರೆಗಳಲ್ಲಿ ಹಿಂಡಿಕೊಂಡರು. ಹಸುಗೂಸುಗಳು ಬೀದಿ ನಾಯಿಗಳೊಡನೆ ಜಗಳಾಡಿಕೊಂಡು ನೆಲದ ಕೆಸರು ಸಹಿತ ಬಿಡದೆ ಹಾಲು ಚೆಲ್ಲಿದ ಸ್ಥಳವನ್ನು ಕೊನೆವರೆಗೂ ನೆಕ್ಕುತ್ತಾ ಇದ್ದವು!

ಇಂತಹುದೇ ಇನ್ನೊಂದು ದೃಶ್ಯ! ಯಾರೋ ಶ್ರೀಮಂತರು, ಉಂಡು ಎಂಜಲೆಲೆಯನ್ನು ಹೊರಗೆ ಬೀದಿಗೆ ಬಿಸಾಡಿದ್ದರು. ಅದರಲ್ಲಿ ಕೆಲವು ಅನ್ನದ ಅವಶೇಷಗಳಿದ್ದವು. ಬೀದಿಗೆ ಎಲೆ ಬೀಳುವುದೇ ತಡ, ಅಲ್ಲಿ ಹಸಿವೆಯಿಂದ ನರಳುತ್ತಿದ್ದ ಹುಡುಗನೊಬ್ಬ ಓಡಿಬಂದು ಎಂಜಲೆಲೆಯನ್ನು ನೆಕ್ಕತೊಡಗಿದ! ಅಲ್ಲಿ ಬಳಿಯಲ್ಲಿಯೇ ಹಲವು ದಿನಗಳಿಂದ ಏನೂ ತಿನಸಿಗದೆ ಹಸಿದ ಹುಲಿಯಂತಾಗಿದ್ದ ನಾಯಿಯೊಂದಿತ್ತು; ಅದೂ ಅಲ್ಲಿಗೆ ಧಾವಿಸಿ ಬಂತು! ನಾಯಿಗೂ ಹುಡುಗನಿಗೂ ಎಂಜಲೆಲೆಗಾಗಿ ಹೋರಾಟ! ಹಸಿದ ನಾಯಿಯೊಡನೆ ಹೋರಾಡಿದ ಹುಡುಗನ ಅವಸ್ಥೆ ಬೇರೆ ಹೇಳಬೇಕೆ? ಹುಡುಗನು ಈಗ ಆಸ್ಪತ್ರೆಗೆ ಸಾಗಿಸಲ್ಪಟ್ಟಿದ್ದಾನೆ! ಆವನ ಪರಿಸ್ಥಿತಿ ವಿಷಮವಾಗಿದೆ! ಹಸಿವೆಯ ನೋವಿಗೆ, ಮೈಯ ಗಾಯದ ನೋವೂ ಸೇರಿದೆ! ಅಯ್ಯೊ! ಇದು ಎಂಥಾ ಜೀವನ!

ಓರ್ವ ಯುವಕನ ಮೃತಶರೀರವು ಕಲ್ಕತ್ತದ ರಸ್ತೆ ಬದಿಯ ಮರದಡಿಯಲ್ಲಿ ಬಿದ್ದಿತ್ತು; ನೊಣಗಳು ಆ ಶರೀರದ ಮುಖದ ಸುತ್ತೂ ಹಾರಾಡುತ್ತಿದ್ದವು. ಯಾರು ಆ ಹೆಣವನ್ನು ಅಲ್ಲಿಂದ ತೆಗೆವರಿಲ್ಲ, ಅಥವಾ ಯಾರು ತೆಗೆಯಬೇಕು ಇಂದಿಲ್ಲ ನಾಳೆ ಇತರರೂ ಅದೇ ಸ್ಥಿತಿಗೆ ಬರುವವರು ತಾನೆ? ಬಿಸಿಲು, ಗಾಳಿ, ಮಳೆಗೆ ಆ ಹೆಣ ಬಿದ್ದುಕೊಂಡಿದೆ. ಈ ಹೆಣವು ಬರ್ದ್ವಾನ್ ನೆರೆಯಿಂದ ಕೊಚ್ಚಿ ಬಂದಿರಬೇಕೆಂದು ಗ್ರಹಿಸಬೇಡಿ; ಆಹಾರವಿಲ್ಲದೆ ಕಲ್ಕತ್ತದ ಬೀದಿಯಲ್ಲಿ ಬಿದ್ದು ಹೊರಳಾಡಿ ಸತ್ತ ಸಾವಿರಾರು ಮಂದಿ ಯುವಕರಲ್ಲಿ ಒಬ್ಬ ಈತ! ಮೃತ್ಯುವಿನ ದವಡೆಗೆ ಬಂಗಾಳದ ಯುವಕರು ಹೇಗೆ ಸಾಲುಗಟ್ಟಿ ನುಗ್ಗುತ್ತಿದ್ದಾರೆ!

ಕಲ್ಕತ್ತದ ಬೀದಿಯಲ್ಲಿನ ಒಂದು ಕುಟುಂಬ; ಮಧ್ಯಪ್ರಾಯದ ಗಂಡುಸು, ಆತನ ಹೆಂಡತಿ, ಮಕ್ಕಳು ಮತ್ತು ಕುಟುಂಬದ ಇತರ ಜನರು. ಸುರಿಮಳೆಗೆ, ಸುಡುವ ಬಿಸಿಲಿಗೆ, ರಾತ್ರಿ ಛಳಿಗೆ ಒಂದು ಹರಕು ಕೊಡೆಮಾತ್ರ ಅವರ ಆವರಣವಾಗಿದೆ! ಆ ಜನರು ಹಳ್ಳಿಯ ಜನರು; ಕೃಷಿಕರು. ದಷ್ಟ ಪುಷ್ಟ ಶರೀರ ಅವರದು. ಕೃಷಿಕರಿಗೆ ಹೆಚ್ಚಾಗಿ ಈ ಸಮಯದಲ್ಲಿ ಕೆಲಸವಿರುವುದಿಲ್ಲ; ಸಾಲದ್ದಕ್ಕೆ ಈ ವರ್ಷ ಆಹಾರವೂ ಇಲ್ಲ. ಏನಾದರೂ ಕೆಲಸ ಸಿಗುತ್ತದೋ, ಆಹಾರ ಸಿಗಬಹುದೋ ಎಂದು ಅವರು ಕಲ್ಕತ್ತೆಗೆ ಬಂದಿದ್ದರು. ಕೈಯಲ್ಲಿದ್ದ ಪುಡಿಕಾಸು, ಕೆಲದಿನಗಳ ಬಾಡಿಗೆ ಊಟಗಳಿಗೆ ಖರ್ಚಾಯಿತು. ಕಡೆಗೊಂದು ದಿನ ಉಳಕೊಂಡಿದ್ದ ಮನೆಯ ಒಡೆಯ ಇವರನ್ನು ಹೊರಹಾಕಿದ! ಹಾಗಾಗಿ ಮಾರ್ಗದ ಬದಿಗೆ ಬಂದು ಇವರು ಈಗ ಬೇಡಿದ ಅಕ್ಕಿಯನ್ನಿಷ್ಟು ಬೇಯಿಸಿ ತಿನ್ನುತ್ತಿದ್ದಾರೆ! ಕಲ್ಕತ್ತದಲ್ಲಿ (ಧರ್ಮಾರ್ಥ ಆಹಾರದ ಅಡಿಗೆಸಾಲೆ ಇದೆ. ಇವರು ಅಲ್ಲಿಗೆ ಹೋಗಲಿಲ್ಲ. ಕಾಸು ಬೇಡಬಹುದು; ಅನ್ನವನ್ನೂ ಬೇಡುವುದು ಅವರಿಂದ ಆಗದ ಕೆಲಸ. ಏನಾದರೂ ಕೆಲಸಕೊಡಿ ದುಡಿದು ತಿನ್ನುತ್ತೇವೆ, ಎನ್ನುತ್ತಾರೆ. ಹಳ್ಳಿಯಿಂದ ಬಂದ ಜನ ಇವರು; ಅದಾಗಿ ಇಷ್ಟು ಅಭಿಮಾನ! ಆದರೆ ಈ ಅಭಿಮಾನ ಎಷ್ಟುದಿನ ಉಳಿದೀತು? ನಾಳೆ ಅನ್ನವನ್ನೂ ಬೇಡಿಯೇ ಬೇಡುತ್ತಾರೆ. ಬೇಡಿದರೂ ಹೊಟ್ಟೆ ಹೊರಲಾಗುವುದಿಲ್ಲ. ನಾಳದು ಬೀದಿಯಲ್ಲಿ ಬಿದ್ದು ತೋಳನ ಬಾಯಿಗೋ, ಮೃತ್ಯುವಿನ ಬಾಯಿಗೋ ಇವರೂ ಆಹುತಿಯೇ!

ಒಂದು ಬಡ ಬಡಕಲು ಹೆಂಗುಸು ಅಳುತ್ತ ಚೀರಿಡುತ್ತಿದ್ದ ಮಗುವಿಗೆ ಮೊಲೆಯೂಡುತ್ತಿದ್ದಾಳೆ. ಆಕೆ ಉಂಡಿದ್ದರಲ್ಲವೇ ಅವಳ ಮೊಲೆಯಲ್ಲಿ ಹಾಲು ಇರುವುದು. ಅವಳ ದೇಹದ ಹಾಲೇನು ರಕ್ತವೂ ಆರಿಯೇ ಹೋಗಿತ್ತು! ಮಗು ಮತ್ತೂ ಮತ್ತೂ ಚೀರಿಡುತ್ತಿದೆ. ತಾಯಿ ಎದೆಗಪ್ಪಿ ಅಳುತ್ತಿದ್ದಳು: ಎದೆಗಪ್ಪಿಕೊಳ್ಳದೆ ಇನ್ನೇನು ಮಾಡುವಳು? ಹಸುಗೂಸನ್ನು ಹೆತ್ತ ಕರುಳು ಬಿಸಾಡಬಹುದೆ?—ತಾಯಿ ಮಗುವನ್ನು ಬೀಸಾಡಿದ್ದೂ ಚಿತ್ರವುಂಟು. ಎಳೆಂಟು ವರ್ಷದ ಮಗುವೊಂದನ್ನು ಹಿಡಿದು ಒಬ್ಬಾಕೆ ಹಸಿದು ಹೆಣವಾಗಿದ್ದ ಹೆಂಗುಸು ಬೀದಿಬದಿಯಲ್ಲಿ ಕುಳಿತಿದ್ದಳು. ಒಬ್ಬರು ಮಹಾನುಭಾವರು ಆ ಹಾದಿ ಹಾದುಹೋದರು. 'ಒಂದು ಕಾಸು ದಮ್ಮಯ್ಯ' ಎಂದು ಬೇಡಿದಳು. ದಯಾಳು ಮಹಾಶಯರು ಒಂದಾಣೆ ಕೊಟ್ಟರು! ಆಕೆ ಅವರ ಕಾಲುಹಿಡಿದು ಕೇಳಿದಳು, 'ದಯಾಳು ಎರಡು ರುಪಾಯಿ ಕೊಡುತ್ತೀರಾ? ಈ ಮಗುವನ್ನು ನಿಮಗೆ ಕೊಡುತ್ತೇನೆ ನಿಮ್ಮ ಚಾಕರಿ ಮಾಡಬಹುದು' ತಾಯಿ ತನ್ನ ಮಗುವನ್ನು ಮಾರುತ್ತಾಳೆ! ಹೊಟ್ಟೆಯ ಹಸಿವು ತಾಳಲಾರದು! ತನ್ನ ಕಣ್ಣೆದುರಲ್ಲೇ ತನ್ನ ಮಗು, ತನ್ನ ಕರುಳಿನ ಕುಡಿ ಸಾಯುವುದನ್ನು ನೋಡಬೇಕು! ಅದಕ್ಕಾಗಿಯೂ ಆಕೆ ಮಗುವನ್ನು ಮಾರುತ್ತಾಳೆ!

ಹೀಗಿದೆ ಇಂದು ಬಂಗಾಳದ ಅವಸ್ಥೆ! ಬಿಜಾಪುರ, ಕೇರಳ, ಒರಿಸ್ಸಾ ಇವುಗಳ ಪಾಡೂ ಇದೇ ರೀತಿ. ಸೂಕ್ಷ್ಮ ರೂಪದಿಂದ ನೋಡಿದರೆ ಇಡೀ ಭಾರತದ ಅವಸ್ಥೆಯೇ ಹೀಗಿದೆಯೆನ್ನಬಹುದು. ಭಾರತವನ್ನು ಯಾರು ಆಳಬಲ್ಲರೋ, ಯಾರು ಭಾರತದ ನಿಜವಾದ ಪ್ರತಿನಿಧಿಗಳೋ ಯಾರಲ್ಲಿ ಭಾರತದ ಜನತೆಗೆ ಪೂರ್ಣ ವಿಶ್ವಾಸವಿದೆಯೋ ಅವರಿಂದು ಸೆರೆಮನೆಗಳಲ್ಲಿದ್ದಾರೆ! ಅವರ ಏಕಮಾತ್ರ ಮುಖಂಡ, ಆಹಾರ ವಿಷಯದಲ್ಲಿ ಅಧಿಕಾರವಾಣಿಯಿಂದ ಹೇಳಬಲ್ಲ ಮುಂದಾಳು, ಜನತೆ ಈ ಘೋರ ಸಂಕಷ್ಟದಿಂದ ನರಳುತ್ತಿರುವಾಗಲೂ [illegible] ಅಲ್ಲಾಡಿಸಲಾರ[illegible] ಬಾಯಿಯಿಂದ 'ಅಧಿಕ ಆಹಾರ ಬೆಳೆಸಿರಿ' ಎಂಬ ಸಂದೇಶ ಹೊರಟಿದ್ದರೆ ಇಂದು ಭಾರತದಲ್ಲಿ ಟನ್‌ಗಟ್ಟಲೆ ಆಹಾರ ಹೆಚ್ಚುತಿತ್ತೋ! ಅವರು ಮೂಕರಾಗಿ ಮಾಡಲ್ಪಟ್ಟಿದ್ದಾರೆ. ಇಂಥಾ ಸ್ಥಿತಿಯಲ್ಲಿ ಬಂಗಾಳದ ಜನ, ಭಾರತದ ಜನ ಇಂದು ನರಳುತ್ತಿದೆ; ನರಳಿ ಸಾಯುತ್ತಿದೆ.

ಕಲ್ಕತ್ತಾ ನಗರವೊಂದರಲ್ಲಿಯೇ ೮೦ ಸಾವಿರ ಜನರು ನಿರ್ಗತಿಕರಾಗಿದ್ದಾರೆ! ಈ ೮೦ ಸಾವಿರ ನಿರ್ಗತಿಕರಿಗೆ ಗತಿಮಾಡಲಾರದ ಅಲ್ಲಿನ ಲೀಗ್ ಮಂತ್ರಿಮಂಡಳವೇ ಈ ಸಂಖ್ಯೆ ಕೊಟ್ಟಿದೆ! ಸರಕಾರದ ವರದಿ ಇಷ್ಟು! ನಿಜವಾದ ಸಂಖ್ಯೆ ಇನ್ನೆಷ್ಟೊ? ಆಗಸ್ಟ್ ೨೧ಕ್ಕೆ ಕೊನೆಯಾಗುವ ಒಂದು ವಾರದಲ್ಲಿ ಕಲ್ಕತ್ತದ ಬೀದಿಗಳಿಂದ ೫೦೦ ಮಂದಿ ಸಾಯುವ ಜನರನ್ನು ಹೆಕ್ಕಲಾಯಿತೆಂದೂ, ಅವರನ್ನು ಆಸ್ಪತ್ರೆಗೆ ಸಾಗಿಸಿದಲ್ಲಿ ನಲ್ವತ್ತು ಮಂದಿ ಆಸ್ಪತ್ರೆಯಲ್ಲಿ ಪ್ರಾಣಬಿಟ್ಟರೆಂದೂ ಎಸೋಸಿಯೇಟೆಡ್ ಸುದ್ದಿ ಸಾರುತ್ತದೆ: ಆದರೆ ಬೀದಿಗಳಲ್ಲಿ ಬಿದ್ದು ಪ್ರಾಣಬಿಟ್ಟವರ, ಮನೆ ಗುಡಿಸಲುಗಳಲ್ಲಿ ನರಳಿ ನರಳಿ ಸತ್ತವರ ಸಂಖ್ಯೆ ಈ ವರದಿಯಲ್ಲಿಲ್ಲ. ಇದನ್ನೆಲ್ಲಾ ಲೆಕ್ಕ ಹಾಕಿದರೆ ಒಂದು ವಾರದಲ್ಲಿ, ದಿನವೊಂದರಲ್ಲಿ ಕಲ್ಕತ್ತ ಒಂದು ನಗರದಲ್ಲಿಯೆ ಎಷ್ಟು ಜನ ಸಾಯುತ್ತಿದ್ದಾರೊ? ಕಲ್ಕತ್ತಾ ನಗರ ಒಂದರಲ್ಲಿಯೇ ಇಷ್ಟು ಮಂದಿ ನಿರ್ಗತಿಕರಾದರೆ, ಬಂಗಾಳ ಇಡೀ ಪ್ರಾಂತದಲ್ಲಿ ಇನ್ನೆಷ್ಟೊ? ಲಕ್ಷಾಂತರ ಸಾಕೆ? ಮಿಲಿಯಾಂತರ ಮಂದಿ ಇರಲೇಬೇಕು? ಇವರಿಗೆ ಗತಿ ಯಾರು? ಪಾಪ! ಮೃದು ಮಾನವ ಹೃದಯಗಳು, ಮಿಲಿಯಾಂತರ ಮಂದಿ ಮಾನವರು ಸುಡುವ ಹಸವಿನ ಬೆಂಕಿಯಿಂದ ಬಳಲುವುದನ್ನು, ಒಮ್ಮೆ ನೆನೆದರೆಯೇ ಮೈ ನಡುನಡುಗುವುದು! ಈ ಗೋಳಾಟ, ಈ ನರಳಾಟ; ಈ ಮಾರಿಬಲಿಗೆ ಯಾರು ಹೊಣೆ?

ಬರಗಾಲ ಬಂದಾಗ, ಊರಲ್ಲಿ ಏನಿಲ್ಲದಾಗ ಜನ ನರಳಿ ಸಾಯುವುದುಂಟು; ಆದರೆ ತಮ್ಮ ಮುಂದೆ ಆಹಾರವಿದ್ದು ತಾವು ತಿನಲಾರದೆ ಸಾಯುವ ಸ್ಥಿತಿ ಬರಬಾರದು! ಯುನೈಟೆಡ್ ಕಿಂಗ್‌ಡಂ ಕೋರ್ಪರೇಶನ್ನಿನವರು ನಮ್ಮ ಆಹಾರವನ್ನು, ನಾವು ವಿರೋಧಿಸಿದರೂ ಒಯ್ಯಬಲ್ಲರು! ಮುಸ್ಲಿಂ ಲೀಗಿನವರು, ಅಲ್ಪ ಸಂಖ್ಯಾಕರು, ನಾವು ಪ್ರತಿನಿಧಿಗಳಲ್ಲವೆಂದರೂ, ನಮ್ಮ ಪ್ರತಿನಿಧಿಗಳನ್ನು ಸೆರೆಮನೆಯಲ್ಲಿರಿಸಿ ನಮ್ಮನ್ನು ಆಳಬಲ್ಲರು! ನಿಜವಾಗಿ ಇಂದಿನ ಆಹಾರ ಪರಿಸ್ಥಿತಿ ದಾರುಣವಾದದ್ದು. ಬಂಗಾಳದ್ದು ಭೀಷಣ ಭೀಕರವಾದದ್ದು! ಇದಕ್ಕೆ ನಾವಿಂದು ಯಾರ ಮೇಲೂ ದೂರು ಹೇರಿ ಪ್ರಯೋಜನವಿಲ್ಲ. ನಮ್ಮಿಂದ ಆಗುವ ಸಹಾಯ ಮಾಡಬೇಕು; ನಮ್ಮ ತುತ್ತಿನಲ್ಲಿ ಅರ್ಧ ತುತ್ತು ಉಪವಾಸದಿಂದ ನರಳುವವರಿಗೆ ಕೊಡಬೇಕು. ನಮ್ಮೊಡನೆ ನಮ್ಮ ದೇಶಬಾಂಧವರು ಬದುಕಬೇಕು. ನಾವೆಲ್ಲರೂ ಬದುಕಿ ನಮ್ಮ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಹೋರಾಡಬೇಕು! —[illegible]

ಸಮರಭೂಮಿಯ ಸಂಚಾರ

★ ೧೯೩೯ ಸೆಪ್ಟಂಬರದಿಂದ ೧೯೪೩ ಸೆಪ್ಟಂಬರ ವರೆಗೆ ★

೪ ವರ್ಷಗಳ ಮಹಾಯುದ್ಧದ ಸಿಂಹಾವಲೋಕನ

೧೯೩೯ ಸಪ್ಟಂಬರ ೩ನೆಯ ತಾರೀಕಿಂದು ಜರ್ಮನಿ ಪೋಲೆಂಡಿನಿಂದ ಹಿಂದೆಗೆಯಬೇಕೆಂದು ಹೇಳಿದಕ್ಕೆ ಒಪ್ಪದಿದ್ದಲು, ಬ್ರಿಟನ್-ಫ್ರಾನ್ಸ್‌ಗಳು ಜರ್ಮನಿಯ ಮೇಲೆ ಯುದ್ಧ ಸಾರಿದವು. ಅದೇ ತಾ. ೧೭ರಂದು ರಶ್ಯನ್ ಸೇನೆ ಪೂರ್ವ ಪೋಲೆಂಡನ್ನು ಪ್ರವೇಶಿಸಿತು. ತಾ. ೨೭ರಂದು ವಾರ್ಸೋ ಶರಣಾಯಿತು. ಆ ವರ್ಷ ನವಂಬರ ೩೦ರಂದು ರಶ್ಯ ಫಿನ್‌ಲೆಂಡನ್ನು ಆಕ್ರಮಿಸಿತು; ಹೆಲ್‌ಸಿಂಕಿಗೆ ಬಾಂಬು ಬಿತ್ತು. ಅದೇ ದಶಂಬರ ೧೩ರಂದು ಪ್ಲೇಟ್ ನದೀ ಕಾಳಗ; ಜರ್ಮನ್ ಪೊಕೆಟ್ ಬೇಟಲ್ ಶಿಫ್ ಗ್ರೇಫ್‌ಸ್ಪೀ ಮೊಂಟೆವಿಡಿಯೋಗೆ ಓಡಿದರಾಗಿ ಅದೇ ತಾ. ೧೭ರಂದು ಮುಳುಗಿತು. ತಾ. ೨೭ರಂದು ಭಾರತೀಯ ಸೇನೆ ಫ್ರಾನ್ಸನ್ನು ತಲಪಿತು.

೧೯೪೦ ಮಾರ್ಚಿ ೧೨ರಂದು ರಶ್ಯ ಫಿನ್ನರ ಶಾಂತಿ ಕರಾರು. ಜರ್ಮನರು ಡೆನ್ಮಾರ್ಕ್ ಮತ್ತು ನೋರ್ವೆ ಆಕ್ರಮಿಸಿದ್ದು ಅದೇ ಎಪ್ರಿಲ್ ೯ರಂದು; ತಾ. ೫ರಂದು ಬ್ರಿಟಿಷರು ನಾರ್ವಿಕಿನ ಬಳಿ ನೋರ್ವೆಯಲ್ಲಿಳಿದರು. ಅದೇ ಮೇ ೧೦ರಲ್ಲಿ ಜರ್ಮನರು ಹಾಲೆಂಡ್, ಬೆಲ್ಜಿಯಂ ಮತ್ತು ಲಕ್ಸೆಂಬರ್ಗ್‌ಗಳನ್ನು ಆಕ್ರಮಿಸಿದರು. ಬ್ರಿಟಿಷ್ ಮತ್ತು ಫ್ರೆಂಚರು ಬೆಲ್ಜಿಯಂ ಪ್ರವೇಶಿಸಿದರು. ಬ್ರಿಟಿಷ್ ಸೇನೆ ಹೊಲೆಂಡಿನಲ್ಲಿಳಿಯಿತು. ಚೆಂಬರ್ಲೆನ್ ರಾಜೀನಾಮೆಯಿತ್ತು ಚರ್ಚಿಲ್ ಪ್ರಧಾನಿಯಾದದ್ದು. ತಾ. ೧೫ರಂದು ಹೊಲೆಂಡ್ ಶರಣಾಗಿ, ೨೮ರಂದು ಕಾಲಿಯೊಪೋಲ್ಡ್ ದೊರೆಯ ಆಜ್ಞೆಯಂತೆ ಶರಣುಬಂದಿತು. ಅದೇ ವರ್ಷ ಜೂನ್ ೩, ೪ ಡಂಕರ್ಕಿನಿಂದ ರಾತ್ರಿವೇಳೆ ಬ್ರಿಟಿಷ್ ದಳ ಹಿಂದೋಡಿತು. ತಾ. ೧೦ರಲ್ಲಿ ನಾರ್ವೆ ಖಾಲಿಯಾದದ್ದು ಮತ್ತು ಇಟಲಿಯು ಬ್ರಿಟನ್ ಫ್ರಾನ್ಸ್‌ಗಳ ವಿರುದ್ಧ ಯುದ್ಧ ಸಾರಿತು. ತಾ. ೧೪ರಲ್ಲಿ ಜರ್ಮನರು ಪೇರಿಸನ್ನು ಪ್ರವೇಶಿಸಿದರು. ತಾ. ೧೭ ಪಿಟೆನ್ ಮಂತ್ರಿಮಂಡಳ ರಚನೆ, ಫ್ರಾನ್ಸ್ ಶರತಗಳನ್ನು ಕೇಳಿತೆಂದು ಪಿಟೆನ್ ಸಾರಿದ್ದು. ೨೧ರಲ್ಲಿ ಮಾರ್ಶಲ್ ಫೋಚನ ದಳ ಜರ್ಮನರ ಶಾಂತಿ ಶರತವನ್ನು ಪಡೆದದ್ದು. ತಾ. ೨೩ರಲ್ಲಿ ಬ್ರಿಟನು ಹೋರಾಟ ಸಾಗಿಸುವುದೆಂದು ಚರ್ಚಿಲ್ ಸಾರಿದ್ದು. ಜುಲ್ಯಾ ...ರಲ್ಲಿ ಫ್ರೆಂಚ್ ಸರಕಾರ ವಿಚಿಗೆ ಹೋಗಲು ನಿಶ್ಚಯಿಸಿದ್ದು. ಇದೇ ಅಗಸ್ಟ ೨೫ರಲ್ಲಿ ಬ್ರಿಟಿಷರು ಬರ್ಲಿನಿಗೆ ಮೊದಲನೆ ಬಾಂಬು ಹಾಕಿದ್ದು. ಇದೇ ೨೬, ೨೭ರಲ್ಲಿ ಜರ್ಮನರು ಇಡೀ ರಾತ್ರಿ ಲಂಡನಿನ ಮೇಲೆ ಬಾಂಬಿನ ಮಳೆ ಸುರಿಸಿದ್ದು. ಸಪ್ಟಂಬರ ೭ಕ್ಕೆ ಥೇಮ್ಸ್ ಭಾಗದಲ್ಲಿ ಜರ್ಮನರ ಭೀಕರ ಧಾಳಿ; ...೦೬ ಜನರು ಸತ್ತು, ೧,೩೩೭ ಜನ ಗಾಯಗೊಂಡದ್ದು. ತಾ. ೧೫ಕ್ಕೆ ೧೮೫ ಜರ್ಮನ್ ವಿಮಾನಗಳನ್ನುರುಳಿಸಿದ್ದು. ತಾ. ೨೭ರಂದು ಬರ್ಲಿನಿನಲ್ಲಿ ಜರ್ಮನ್ ಇಟಲಿ ಜಪಾನುಗಳೊಳಗೆ ೧೦ ವರ್ಷಗಳ ಒಪ್ಪಂದದ ಸಹಿಯಾದದ್ದು. ಇದೇ ಒಕ್ಟೋಬರ ೨೮ ಇಟಲಿಯು ಗ್ರೀಸಿಗೆ ಧಾಳಿಯಿಟ್ಟದ್ದು. ನವಂಬರ ೧೧, ೧೨ ಟಾರೊಂಟೋ ಮೇಲೆ ಮುತ್ತಿಗೆ. ದಶಂಬರ ೯ರಂದು ಪಶ್ಚಿಮ ಮರುಭೂಮಿ ಆಕ್ರಮಣ. ತಾ. ೨೯ 'ನಾವು ಪ್ರಜಾಪ್ರಭುತ್ವಗಳ ಶಸ್ತ್ರಾಗಾರ'ರೆಂದು ರೂಸ್‌ವೆಲ್ಟ್ ಸಾರಿದ್ದು. ತಾ. ೨೯, ೩೦ ಲಂಡನ್ನಿಗೆ ಬೆಂಕಿಯಿಡಲು ಜರ್ಮನರು ಪ್ರಯತ್ನಿಸಿದ್ದು.

೧೯೪೧ ಮಾರ್ಚಿ ೯ ಇಟಲಿಯನರ ಅಲ್ಬೇನಿಯ ಆಕ್ರಮಣ. ತಾ. ೧೧ ರೂಸ್‌ವೆಲ್ಟರಿಂದ ಕಡ ಒತ್ತಿ ಕಾನೂನಿಗೆ ಸಹಿ. ತಾ. ೨೭ ಕೆರೆನ್ ಹಿಡಿದದ್ದು. ಭಾರತ ಚತುರ್ಥ ಪಂಚಮ ದಳಗಳ ಸಾಹಸ. ಎಪ್ರಿಲ್ ೧ ಕೇಪ್ ಮಟಪನ್ ಕಾಳಗ. ತಾ. ೩ ಇರಾಖಿನಲ್ಲಿ ರಶೀದ್ ಆಲಿ ಅಕ್ಷಪಕ್ಷ ಸೇರಿದ್ದು. ತಾ. ೬ ಜರ್ಮನರು ಗ್ರೀಸ್ ಮತ್ತು ಯುಗಸ್ಲಾವಿಯ ಆಕ್ರಮಿಸಿದ್ದು. ತಾ. ೧೩ ರಶ್ಯ ಜಪಾನ್‌ಗಳೊಳಗೆ ತಾಟಸ್ಥ್ಯ ಒಪ್ಪಂದ. ಮೇ ೫ಕ್ಕೆ ಹೈಲಸೆಲಾಸಿ ಅಡಿಸ್ ಅಬಾಬಾ ಪ್ರವೇಶಿಸಿದ್ದು. ತಾ. ೧೦ ರುಡೋಲ್ಫ್ ಹೆಸ್ ಪೆರಶೂಟಿನಲ್ಲಿ ಸ್ಕೋಟ್‌ಲೇಂಡಿನಲ್ಲಿಳಿದು ರಾಜಕೀಯ ಬಂಧಿಯಾದದ್ದು. ತಾ. ೧೯ ಅವೋಸ್ತಾದ ಡ್ಯೂಕ್ ಶರಣಾದುದು. ಇಟಲಿಯನ್ ಪೂರ್ವ ಆಫ್ರಿಕದ ಸಮಾಪ್ತಿ. ತಾ. ೨೦ ಜರ್ಮನರು ಕ್ರೀಟನ್ನು ಆಕ್ರಮಿಸಿದ್ದು. ತಾ. ೨೪ ಬ್ರಿಟಿಷ್ ಕಾಳಗ ನೌಕೆ ಹುಡ್ಡನ್ನು ಜರ್ಮನರು ಧ್ವಂಸಗೊಳಿಸಿದ್ದು. ತಾ. ೨೭ ಬ್ರಿಟಿಷರು ಜರ್ಮನ್ ಬಿಸ್ಮಾರ್ಕ್ ಹಡಗವನ್ನು ಮುಳುಗಿಸಿ ಪ್ರತೀಕಾರ ಕೈಕೊಂಡದ್ದು. ತಾ. ೩೦ ಇರಾಖಿನ ದಂಗೆ ಮುಕ್ತಾಯ. ರಶೀದ್ ಆಲಿಯ ಪರ್ಶಿಯ ಪಲಾಯನ, ಶಾಂತಿ ಒಪ್ಪಂದ. ಜೂನ್ ೮ ಇಂಪೀರಿಯಲ್ ಮತ್ತು ಸ್ವತಂತ್ರ ಫ್ರೆಂಚ್ ದಳಗಳು ಸಿರಿಯ ಪ್ರವೇಶಿಸಿದ್ದು. ತಾ. ೧೬, ೧೭ ರೂರ್ ಮತ್ತು ರೈನ್‌ಲೆಂಡ್ ಮೇಲೆ ಭೀಕರ ಧಾಳಿ. ತಾ. ೧೮ ಜರ್ಮನಿ ಮತ್ತು ಟರ್ಕಿಗಳು ಅನಾಕ್ರಮಣ ಮತ್ತು ಸ್ನೇಹ ಒಪ್ಪಂದಕ್ಕೆ ಸಹಿ ಹಾಕಿದ್ದು. ತಾ. ೨೨ ಜರ್ಮನಿ ರಶ್ಯದ ಮೇಲೆ ಆಕ್ರಮಿಸಿದ್ದು; ಚರ್ಚಿಲರು ರಶ್ಯಕ್ಕೆ ಸಹಾಯ ಭರವಸೆ ಹೇಳಿದ್ದು. ಜುಲ್ಯಾ ೧೨ ಹಿಟ್ಲರನ ಜರ್ಮನಿಯೊಡನೆ ಪ್ರತ್ಯೇಕ ಒಪ್ಪಂದವಿಲ್ಲವೆಂಬ ಪರಸ್ಪರ ಸಹಾಯಕ ಒಪ್ಪಂದವು ಬ್ರಿಟನು ರಶ್ಯಗಳೊಳಗೆ ಮೋಸ್ಕೋದಲ್ಲಿ ಸಹಿಯಾದದ್ದು. ಅಗಸ್ಟ ೧೪ ಉತ್ತರ ಅಟ್ಲಾಂಟಿಕಿನಲ್ಲಿ ಚರ್ಚಿಲ್ ರೂಸ್‌ವೆಲ್ಟ್ ಭೇಟಿಯಾದ ಸುದ್ದಿಯನ್ನು ಅಟ್ಲೆ ತಿಳಿಸಿದ್ದು. ಅಟ್ಲಾಂಟಿಕ್ ಘೋಷಣೆಯೆಂಬ ಅಷ್ಟಾಂಶ ಘೋಷಣೆ ಪ್ರಕಟವಾದದ್ದು. ತಾ. ೨೫ ಪರ್ಶಿಯದ ಒಪ್ಪಿಗೆಯಿಲ್ಲದಿದ್ದರೂ ಜರ್ಮನ್ ದಳ ಪರ್ಶಿಯಕ್ಕೆ ನುಗ್ಗಿತೆಂದು ಬ್ರಿಟಿಷ್ ರಶ್ಯನ್ ದಳಗಳು ಪರ್ಶಿಯ ಹೊಕ್ಕದ್ದು. ಅಕ್ಟೋಬರ್ ೨೦ ಕ್ಯುಬಿಶೆವ್‌ನಲ್ಲಿರುವುದಾಗಿ ಸೋವಿಯೆಟ್ ಸರಕಾರದಿಂದ ಸುದ್ದಿ. ನವಂಬರ್ ೧೪ ಟಾರ್ಪೆಡೊನಿಂದ ಆರ್ಕ್ ರೋಯಲ್ ಜಿಬ್ರಾಲ್ಟರ್ ಬಳಿ ಭೇದಿಸಲ್ಪಟ್ಟದ್ದು. ತಾ ೧೮ ಲಿಬಿಯದಲ್ಲಿ ಇಂಪೀರಿಯಲ್ ದಳ ಆಕ್ರಮಣ ಕೈಕೊಂಡದ್ದು. ಅಷ್ಟಮ ದಳ ಸಿರೆನಾಯಿಕದಲ್ಲಿ ಮುಂದೊತ್ತಿದ್ದು. ದಸಂಬರ ೭ ಜಪಾನ್ ವಿಮಾನ ದಳ ಅಮೆರಿಕ ದಳವನ್ನು ಪರ್ಲ್‌ಹಾರ್ಬರ್ ಮತ್ತು ಹವಾಯಿಯಲ್ಲಿ ಇತರ ಭಾಗಗಳಲ್ಲಿ ಆಕ್ರಮಿಸಿದ್ದು. ತಾ. ೭, ೮ರಲ್ಲಿ ಜಪಾನರು ಸಯಾಮ್ ಮತ್ತು ಮಲಯಾಗಳಲ್ಲಿ ಇಳಿದದ್ದು. ತಾ. ೯ ಚೀನವು, ಜರ್ಮನ್ ಇಟಲಿಗಳೆದುರು ಯುದ್ಧ ಸಾರಿದ್ದು. ಮಲಯ ತೀರದಲ್ಲಿ ಪ್ರಿನ್ಸ್ ಓಫ್ ವೇಲ್ಸ್ ಮತ್ತು ರಿಪಲ್ಸ್ ಜಪಾನರಿಂದ ಮುಳುಗಿಸಲ್ಪಟ್ಟದ್ದು. ತಾ. ೧೧ ಅಮೆರಿಕದೊಡನೆ ಇಟಲಿ ಮತ್ತು ಜರ್ಮನಿ ಯುದ್ಧ ಸಾರಿದ್ದು. ತಾ. ೨೩ ಚರ್ಚಿಲ್ ವಾಶಿಂಗ್‌ಟನಿನಲ್ಲಿ. ತಾ. ೨೫ ಹೊಂಗ್‌ಕೋಂಗ್ ಶರಣುಹೋದದ್ದು.

೧೯೪೨ ಜನವರಿ ೧ರಲ್ಲಿ, ಅಕ್ಷರಾಷ್ಟ್ರ ವಿರೋಧ ಯುದ್ಧಮಾಡಲು ಹಾಗೂ ಪ್ರತ್ಯೇಕ ಒಪ್ಪಂದ ಮಾಡದಿರಲು ವಾಶಿಂಗ್‌ಟನಿನಲ್ಲಿ ೨೬ ರಾಷ್ಟ್ರಗಳು ಒಂದು ಒಪ್ಪಂದ ಸಹಿ ಹಾಕಿದವು. ತಾ. ೧೦, ೧೧ರಲ್ಲಿ ಈಸ್ಟ್ ಇಂಡೀಸ್ಸಿನ ನೆದರ್ಲೆಂಡಿಗೆ ಜಪಾನರ ಆಕ್ರಮಣ. ತಾ. ೨೩ ಮೆಕಾಸರ್ ಜಲಸಂಧಿಯಲ್ಲಿ ಜಪಾನೀ ಹಡಗಗಳನ್ನು ಅಮೆರಿಕ ಮತ್ತು ಡಚ್ ವಿಮಾನ ನೌಕಾ ಬಲಗಳೆದಿರಿಸಿದವು. ಫೆಬ್ರವರಿ ೯ಕ್ಕೆ ಚಿಯಾಂಗ್ ದಂಪತಿಗಳು ಡಿಲ್ಲಿ ಸಂದರ್ಶಿಸಿದರು. ಜೂನ್ ೧೫ರಂದು ಸಿಂಗಾಪೂರ ಶರಣುಬಂತು. ಹೊಸ ಇರಾಕ್ ಪರ್ಶಿಯಾ ದಲವಾದ ದಶಮ ಸೇನೆಯ ರಚನೆಯ ಪ್ರಕಟಣೆ. ಮಾರ್ಚ್ ೩ ಸುಬಿಕ್ ಅಖಾತದಲ್ಲಿ ಮೇಕಾರ್ಥರ ವಿಮಾನ ದಳವು ಜಪಾನರ ನೌಕಾ ದಳವನ್ನು ಮುಳುಗಿಸಿದ್ದು. ಮಾರ್ಚ್ ೭ಕ್ಕೆ ರಂಗೂನ್ ಖಾಲಿಯಾದುದು. ಬ್ರಿಟಿಷ್ ದಳಗಳು ಹಿಂದೆಗೆದದ್ದು. ಎಪ್ರಿಲ್ ೫ಕ್ಕೆ ಕೊಲೊಂಬೋ ಧಾಳಿ ನಡೆಸಿ ಜಪಾನರು ೨೭ ವಿಮಾನ ಕಳಕೊಂಡರು. ಎಪ್ರಿಲ್ ೬ಕ್ಕೆ ಭಾರತಕ್ಕೆ ಪ್ರಥಮ ವಿಮಾನಧಾಳಿ; ಕೋಕನಾಡ ವಿಶಾಖ ಪಟ್ಟಣಗಳಿಗೆ ಜಪಾನರು ಬಾಂಬು ಹಾಕಿದ್ದು. ಎಪ್ರಿಲ್ ೯ರಂದು ಬಟಾನ್ ಪೆನಿನ್ಸುಲಾ ಪಿಲಿಪೈನ್‌ಗಳಲ್ಲಿರುವ ಅಮೆರಿಕ ಮತ್ತು ಪಿಲಿಪೈನ್ ದಳಗಳು ಶರಣುಬಂದದ್ದು; ಹಿಂದೂ ಸಾಗರದಲ್ಲಿ ಜಪಾನರು ಡೊರೆಶೈರ್, ಕಾರ್ನ್‌ವಾಲ್ ಮತ್ತು ಹರ್ಮೀಸ್ ಹಡಗಗಳನ್ನು ಮುಳುಗಿಸಿದ್ದು. ಎಪ್ರಿಲ್ ೧೮ಕ್ಕೆ ಅಮೆರಿಕ ವಿಮಾನಗಳು ಟೋಕಿಯೋಗೆ ಬಾಂಬು ಹಾಕಿದ್ದು. ಎಪ್ರಿಲ್ ೨೨ಕ್ಕೆ ಭಾರತದಲ್ಲಿ ಅಮೆರಿಕದ ದಳಗಳು ಇರುವುದಾಗಿ ಕರ್ನಲ್ ಜಾನ್ಸನ್ ತಿಳಿಸಿದ್ದು. ಅದೇ ಮೇ ೮ರಂದು ಸೊಲೊಮನ್ಸ್ ಮತ್ತು ಕೋರಲ್ ಸಮುದ್ರದಲ್ಲಿ ಅಮೆರಿಕ ಸೈನ್ಯ ಜಪಾನರಿಗೆ ಸೋಲುಂಟುಮಾಡಿದ್ದು. ಮೇ ೫ಕ್ಕೆ ಮಡಗಾಸ್ಕರಿನಲ್ಲಿ ಬ್ರಿಟಿಷರಿಳಿದದ್ದು. ಮೇ ೨೬ರಂದು ಯುದ್ಧಕಾಲದಲ್ಲಿ ಮತ್ತೆ ಯುದ್ಧಾನಂತರದಲ್ಲಿಯೂ ಸಂಪೂರ್ಣ ಸಹಕರಿಸಿ ನಡೆವ ಆಂಗ್ಲ ರಶ್ಯ ಒಪ್ಪಂದವು ಲಂಡನಿನಲ್ಲಿ ಸಹಿಯಾದದ್ದು. ಮೇ ೩೦, ೩೧ಕ್ಕೆ ಆರ್. ಎ. ಎಫ್. ವಿಮಾನಗಳು ಕೊಲೊನ್ ಧಾಳಿಯಿಟ್ಟದ್ದು. ಜೂನ್ ೧, ೨ಕ್ಕೆ ಆರ್. ಎ. ಎಫ್. ಬ್ರೆಮೆನ್ ಧಾಳಿ. ಜೂನ್ ೫ರಂದು ಬ್ರಿಟನಿನಿಂದ ದೊಡ್ಡ ಹಡಗವೊಂದು ಭಾರತಕ್ಕೆ ಸುಖ ತಲಪಿದ ಸುದ್ದಿ ಬಂದದ್ದು. ಜೂನ್ ೧೮ರಂದು ಚರ್ಚಿಲರು ಅಮೆರಿಕದಲ್ಲಿ., ಜೂನ್ ೨೫, ೨೬ರಂದು ಆರ್. ಎ. ಎಫ್. ಬ್ರೆಮೆನ್ ಧಾಳಿಯಿಟ್ಟದ್ದು. ಜುಲ್ಯಾ ೧ಕ್ಕೆ ಜರ್ಮನರು ಎಲ್ ಎಲೆಮಿನ್ ಮುಟ್ಟಿದ್ದು. ಅಗಸ್ಟ ೧೨ ಸ್ಟಾಲಿನರೊಡನೆ ಮಾತನಾಡಲು ಚರ್ಚಿಲ್ ಮೋಸ್ಕೋಗೆ ಬಂದದ್ದು. ಅಗಸ್ಟ ೧೯ರಂದು ಡಿಪ್ಪೆ ಮೇಲೆ ಕಾಸುಗಳ ಧಾಳಿ. ಅಗಸ್ಟ ೩೧ರಂದು ಜರ್ಮನರು ಸ್ಟಾಲಿನ್‌ಗ್ರಾಡಿನ ೧೫ ಮೈಲುಗಳ ಅಂತರದಲ್ಲಿ. ಸಪ್ಟಂಬರ ೨ ಡುಸೆಲ್‌ಡೋರ್ಫಿಗೆ ಧಾಳಿ. ಅಕ್ಟೋಬರ ೧೧ ಗುಡಲಂಕಾರ್, ಸೊಲೊಮನ್ಸ್‌ದಳಿಗೆ ಬರುವ ಜಪಾನರ ಸೈನ್ಯವಾಹಕ ಹಡಗ ಹಿಂದಿರುಗಬೇಕಾಯಿತು. ಅಕ್ಟೋಬರ ೨೩ಕ್ಕೆ ಈಜಿಪ್ತಿನಲ್ಲಿ ಅಷ್ಟಮ ದಳ ಆಕ್ರಮಣ ಕೈಕೊಂಡದ್ದು. ನವಂಬರ ೩ರಂದು ಈಜಿಪ್ತಿನಲ್ಲಿ ಅಕ್ಷಬಲ ಹಿಂದೆಗೆಯ ತೊಡಗಿತು. ನವಂಬರ ೫ಕ್ಕೆ ಮಡಗಾಸ್ಕರಿನಲ್ಲಿ ಶಾಂತಿ ಸಹಿಯಾಯಿತು. ತಾ. ೮ ದಳಪತಿ ಐಸಿನ್ ಹೋವರ ಕೈಕೆಳಗೆ ಮಿತ್ರದಳ ಉತ್ತರ ಆಫ್ರಿಕಕ್ಕೆ ಬಂತು. ನವಂಬರ ೧೩ಕ್ಕೆ ಜಪಾನ್ ದಳವು ಅಮೆರಿಕ ದಳದಿಂದ ಗುಡಲಕನಲ್‌ದಿಂದ ಹಿಂದಕ್ಕಟ್ಟಲ್ಪಟ್ಟಿತು. ಸಂಪ್ಟಂಬರ ೨೮ರಿಂದ ನ್ಯೂಗಿನಿಯ ಪಾಪುವಾದ ಬೂನಾವನ್ನು ಆಸ್ಟ್ರೇಲಿಯನ್ ಸೇನೆ ತಲಪಿತು. ಇದೇ ೨೭ಕ್ಕೆ ಜರ್ಮನರು ಟೌಲೋನ್ ಪ್ರವೇಶಿಸಿದ್ದು. ಫ್ರೆಂಚ್ ನೌಕಾ ಹಡಗ ಮುಳುಗಿದ್ದು. ಅದೇ ೨೮ಕ್ಕೆ ಆರ್. ಎ. ಎಫ್ ಟ್ಯೂರಿನ್ ಧಾಳಿ. ಅದೇ ೩೦ಕ್ಕೆ ಗುಡಲಂಕನಾಲಿಗೆ ಸೇನೆ ಕಳುಹಿಸುವ ಜಪಾನ್ ಹಡಗದೊಡನೆ ಅಮೆರಿಕ ದಳದ ಕಾದಾಟ. ದಶಂಬರ ೩ಕ್ಕೆ ಸಾಮಾಜಿಕ ಭದ್ರತೆಯ ಕುರಿತು ಬ್ರೆವರಿಜರ ವರದಿ. ಅದೇ ೨೧ಕ್ಕೆ ಬ್ರಿಟಿಷ್ ಮತ್ತು ಭಾರತ ದಳಗಳು ಬರ್ಮಾಗಡಿ ದಾಟಿದವು.

೧೯೪೩ ಜನವರಿ ೧೭ ಅಕ್ಷರಾಷ್ಟ್ರಗಳ ವಿರುದ್ಧ ಇರಾಖ್ ಯುದ್ಧ ಸಾರಿತು. ಅದೇ ೨೩ಕ್ಕೆ ಅಷ್ಟಮದಳ ತ್ರಿಪೋಲಿ ಹಿಡಿಯಿತು. ಅದೇ ೨೬ಕ್ಕೆ ಚರ್ಚಿಲ್ ರೂಸ್‌ವೆಲ್ಟರು ಕಸಬ್ಲಾಂಕದ ತಮ್ಮ ೧೦ ದಿನಗಳ ಪರಿಷತ್ತನ್ನು ಕೊನೆಗೊಳಿಸಿದರು. ಫೆಬ್ರವರಿ ೨ ಚರ್ಚಿಲ್ ಟರ್ಕಿಯಲ್ಲಿ;

6ನೇ ಪುಟಕ್ಕೆ ಮುಂದುವರಿದಿದೆ

ಸ್ವದೇಶಾಭಿಮಾನಿ

ತಾರೀಕು 10—9—1943

ಇಟಲಿ ಶರಣು ಬಂತು!

ಇಟಲಿಯು ಯುದ್ಧವನ್ನು ನಿಲ್ಲಿಸಿ ಮಿತ್ರ ರಾಷ್ಟ್ರಗಳೊಡನೆ ಒಪ್ಪಂದ ಮಾಡಿಕೊಂಡಿತೆಂದು ಅಧಿಕೃತ ಸಾರಲಾಗಿದೆ. ಇಟಲಿಯು ಯಾವ ಶರತವೂ ಇಲ್ಲದೆ ಶರಣುಬಂತೆಂದು ಸೇನಾಪತಿ ಐಸೆನ್ ಹಾವರು ಮಿತ್ರ ಕಚೇರಿಯಿಂದ ಪ್ರಕಟಣೆ ಹೊರಡಿಸಿದ್ದಾರೆ. ಐಸೆನ್ ಹಾವರು ತಮ್ಮ ಪ್ರಕಟಣೆಯಲ್ಲಿ ಮತ್ತೆ ಹೀಗೆಂದಿರುವರು. 'ಇಟಲಿಯು ತಾತ್ಕಾಲಿಕ ಒಪ್ಪಂದ ಮಾಡಿಕೊಳ್ಳಲು ನಾನು ಒಪ್ಪಿಗೆಯಿತ್ತಿದ್ದೇನೆ. ನಾನು ಸೂಚಿಸಿದ ಎಲ್ಲಾ ಶರತಗಳಿಗೂ ಇಂಗ್ಲೆಂಡ್, ಅಮೆರಿಕ, ರಶ್ಯಗಳು ಸಮ್ಮತಿಸಿರುವವು. ಆದ್ದರಿಂದ ಮಿತ್ರ ರಾಷ್ಟ್ರಗಳ ಹಿತದೃಷ್ಟಿಯಿಂದಲೇ ನಾನೀ ಒಪ್ಪಂದಕ್ಕೆ ಒಪ್ಪಿದ್ದೇನೆ. ಈ ಒಪ್ಪಂದ ಪತ್ರಕ್ಕೆ ನನ್ನ ಪ್ರತಿನಿಧಿ ಮತ್ತು ಮಾರ್ಶಲ್ ಬಡೋಗ್ಲಿಯರ ಪ್ರತಿನಿಧಿಗಳು ಸಹಿ ಹಾಕಿರುವರು. ಇಟಲಿ ಮತ್ತು ಮಿತ್ರ ರಾಷ್ಟ್ರಗಳೊಳಗಿನ ಯುದ್ಧ ನಿಲ್ಲುವುದು. ಇಟಲಿಯಿಂದ ಜರ್ಮನರನ್ನು ಹೊರಗಟ್ಟುವ ಎಲ್ಲಾ ಇಟಾಲಿಯನರಿಗೂ ಸಹಾಯ ಕೊಡಲಾಗುವುದು.'

ಬ್ರಿಟಿಷ್ ಮುಖ್ಯಮಂತ್ರಿಗಳ ಕಚೇರಿಯಿಂದ ಹೊರಟ ಇನ್ನೊಂದು ಪ್ರಕಟಣೆಯೂ ಈ ವಿವರವನ್ನು ಸಮರ್ಥಿಸುತ್ತದೆ ಮಾತ್ರವಲ್ಲದೆ ಇಟಲಿ ಶರಣಾದ್ದರಿಂದ ಅಕ್ಷ ರಾಷ್ಟ್ರಗಳ ಬಲವು ಸಂಪೂರ್ಣ ಮುರಿದಂತಾಯಿತೆಂದು ತಿಳಿಸಿದೆ. ನಿಜವಾಗಿಯೂ ಇಟಲಿಯ ಪತನದೀ ಸುದ್ದಿ ಇಂದಿನೀ ಮಹಾ ಯುದ್ಧದಲ್ಲಿ ಒಂದು ಚರಿತ್ರಾರ್ಹ ಸುದ್ದಿ. ಮಿತ್ರ ರಾಷ್ಟ್ರಗಳಿಗೆ ಇದೊಂದು ಅದ್ಭುತ ವಿಜಯವೆನಬೇಕು. ನಲ್ವತ್ತೈದು ದಿನಗಳ ಹಿಂದೆ, ಇಟಲಿಯ ಇಪ್ಪತ್ತು ವರ್ಷಗಳ ಸರ್ವಾಧಿಕಾರಿ ಹಾಗೂ ಒಂದು ರೀತಿಯಿಂದ ಇಂದಿನೀ ಮಹಾಯುದ್ಧದ ಜನ್ಮದಾತನೂ, ಹಿಟ್ಲರುವೂ ಆದ ಮುಸಲನಿ ರಾಜಿನಾಮೆ ಕೊಟ್ಟಂದೇ ಇಟಲಿಯ ಪತನವಿನ್ನು ನಿಶ್ಚಯವೆಂದು ಹಲವರು ತಿಳಿದಿದ್ದರು.

ಇಟಲಿಯ ಪತನದಿಂದ ಅಕ್ಷಪಕ್ಷದ ಶಕ್ತಿ ಖಂಡಿತವಾಗಿಯೂ ಕುಗ್ಗಿತು. ಹಿಂದೆ ಫ್ರಾನ್ಸು ಪತನ ಹೊಂದಿದಾಗ ಬ್ರಿಟನಿಗೆ ಬಂದೊದಗಿದಂತಹ ವಿಪತ್ತು ಇಂದು ಜರ್ಮನಿಗೂ ಒದಗಿದೆ. ಅತ್ತ ರಶ್ಯದಲ್ಲಿಯೂ ಜರ್ಮನರು ಸೋಲುತ್ತಿದ್ದಾರೆ. ಇದೆಲ್ಲವನ್ನು ನೋಡಿದರೆ ಮಿತ್ರರ ವಿಜಯದ ಆಶಾಂಕುರವು ದಿನದಿನಕ್ಕೆ ಚಿಗುರೊಡೆದು ಬಲಿಯುತ್ತಾ ಬರುವುದು ಕಾಣುತ್ತದೆ. ಆದರೆ ಯೂರೋಪಿನ ಆಕ್ರಮಣ, ಆಕ್ರಮಿತ ರಾಷ್ಟ್ರಗಳ ಸ್ವಾಧೀನತೆ ರಶ್ಯದಿಂದ ಶತ್ರು ಪಲಾಯನ ಇವಿಷ್ಟು ಆಗದೆ ಇಷ್ಟರಲ್ಲೇ ಹಿಟ್ಲರನು ಸೋತು ಹೋದನೆಂದು ಹಿಗ್ಗುವುದು, ಹಿಗ್ಗಿ ಮೈಮರೆತು ಬಿಡುವುದು ಯೋಗ್ಯವಲ್ಲ.

ನೋಟಗಳು

ಚರ್ಚಿಲರಿನ್ನೂ ಅಮೇರಿಕದಲ್ಲಿಯೇ ಇದ್ದಾರೆ.

ಸ್ಟಾಲಿನರು ರಣರಂಗದಲ್ಲಿದ್ದಾರೆ.

ಮುಸಲನಿ ಸೆರೆಮನೆ ಸೇರಿದ್ದಾನೆ.

ಬಡೋಗ್ಲಿಯೊ ಶರಣು ಬಂದಿದ್ದಾನೆ.

ಹಿಟ್ಲರನೀಗ ಎಲ್ಲಿದ್ದಾನೆಂದು ಗೊತ್ತಿಲ್ಲ.

ಟೋಜೋ ಜಪಾನಿನಲ್ಲೇ ಇರಬೇಕು.

ಸುಭಾಸ ಬೋಸ್ ಸಿಂಗಾಪುರಕ್ಕೆ ಬಂದ ನಂತರದ ಸುದ್ದಿಯನ್ನು ಯಾರೂ ತಿಳಿಸಿಲ್ಲ.

ಜಯ ಪ್ರಕಾಶರು ಇನ್ನೂ ಸಿಗಲಿಲ್ಲ.

ಜಿನ್ನರು ಮುಸಲ್ಮಾನನೋರ್ವನೇ ತನ್ನ ಮೇಲೆ ಆಕ್ರಮಣಮಾಡಿದ ವ್ಯಾಜ್ಯದ ವಿಷಯ ಕೋರ್ಟಿಗೆ ಹೋಗಿದ್ದಾರೆ.

ಗಾಂಧೀಜಿಯು ಬಿಡುಗಡೆಯಾಗಲಿಲ್ಲ.

ನೆಹರು ಆಜಾದ್ ಮೊದಲಾದ ಕಾಂಗ್ರೆಸ್ ಮುಖಂಡರ ಸುದ್ದಿ ತಿಳಿದಿಲ್ಲ.

'ಗಡಿನಾಡಿನ ಗಾಂಧಿ'ಯವರ ಆರೋಗ್ಯ ಚೆನ್ನಾಗಿಲ್ಲ.

ಕಾಮ್ರೇಡ್ ಪಿ. ಸಿ. ಜೋಶಿಯವರು ಮದುವೆಯಾಗಿದ್ದಾರೆ.

ಕಮ್ಯುನಿಸ್ಟರೂ ಮದುವೆಯಾಗುತ್ತಾರೆ!

ಎಂ. ಎನ್. ರಾಯ್ ಎಲ್ಲಿದ್ದಾರೆಂಬ ಪತ್ತೆಯೇ ಇಲ್ಲ!

ಆಣೆ ಸಿಲೋನಿಗೆ ಹಾರಿದ್ದಾರೆ.

ವಿಲಾಯಿತಿಗೆ ಹಾರಲು ರಾಜಾಜಿಗೆ ಇದುವರೆಗೆ ಯಾರೂ ವಿಮಾನ ಒದಗಿಸಿ ಕೊಡಲಿಲ್ಲ.

ಬಂಗಾಳ ಬಿಜಾಪುರ ಒರಿಸಾ ಕೇರಳಗಳಲ್ಲಿ ಬರಗಾಲದಿಂದ ಜನರು ಸಾಯುತಿದ್ದಾರೆ.

ಅಖಿಲ ಭಾರತವೇ ಇದರಿಂದ ಕಳವಳಗೊಂಡಿದೆ.

ಇಟಲಿ ಶರಣಾಗಿದೆ; ರಶ್ಯದಲ್ಲೂ ವಿಜಯವು ದೊರಕುತ್ತಿದೆ.

ಮಿತ್ರ ರಾಷ್ಟ್ರಗಳಲ್ಲಿ ಆನಂದೋತ್ಸವವಾಗುತ್ತಿದೆ.

ಎಲ್ಲಾ ಸುದ್ದಿಗಳನ್ನು ತಿಳಿಸಲು ಪತ್ರಿಕೆಗಳಿಗೆ ಸ್ವಾತಂತ್ರ್ಯವಿಲ್ಲ; ಸ್ವಾತಂತ್ರ್ಯವಿಷ್ಟಷ್ಟನ್ನೂ ತಿಳಿಸಲು ಕಾಗದವಿಲ್ಲ!



ಸ್ವದೇಶ ಸಮಾಚಾರ

"ಮಹಾತ್ಮರ ವಿಷಯ ತಪ್ಪು ತಿಳಕೊಳ್ಳಬೇಡಿ"

ಬ್ರೆಂಡನ್ ಬ್ರೇಕನರಿಗೆ ಉತ್ತರ.

ಬ್ರಿಟಿಷ್ ಸರಕಾರದ ಸುದ್ದಿ ಖಾತೆ ಮಂತ್ರಿ ಬ್ರೆಂಡನ್ ಬ್ರೇಕನರು, ಮಹಾತ್ಮಾ ಗಾಂಧಿಯವರ ಮೇಲೆ ಅವರು ಅಕ್ಷ ರಾಷ್ಟ್ರ ಪಕ್ಷಪಾತಿ ಎಂದು ಮಾಡಿದ ಆರೋಪವನ್ನು ವಿರೋಧಿಸಿ, ಗಾಂಧಿಜಿಗಿರುವ ಶಾಂತಿ ಪ್ರಿಯತೆ ಅಹಿಂಸಾ ಧ್ಯೇಯಗಳನ್ನು, ಅವರಿಗೆ ಅಕ್ಷ ರಾಷ್ಟ್ರ ಸಹಾನುಭೂತಿಯಿದೆಯೆಂದು ತಪ್ಪು ತಿಳಕೊಳ್ಳಬಾರದೆಂದು, ಮಧ್ಯಪ್ರಾಂತದ ಪ್ರಾಗತಿಕರು ಒಂದು ಠರಾವು ಮಾಡಿ ಉತ್ತರವಿತ್ತಿರುವರು. ಮಧ್ಯ ಪ್ರಾಂತವು ಸ್ವಲ್ಪ ತ್ಯಾಗ ಮಾಡಿಯಾದರೂ ಬಂಗಾಳಕ್ಕೆ ಆಹಾರ ಕಳುಹಿಸಬೇಕೆಂದು ಇನ್ನೊಂದು ಠರಾವಾಯಿತು. ಇನ್ನೊಂದು ನಿರ್ಣಯದಲ್ಲಿ ಗಾಂಧಿಜಿ ಮೊದಲಾದ ರಾಷ್ಟ್ರಧುರೀಣರ ಬಿಡುಗಡೆಗಾಗಿ ಕೇಳಲಾಯಿತು. ದಕ್ಷಿಣ ಆಫ್ರಿಕದ ವರ್ಣದ್ವೇಷದ ಕಾನೂನನ್ನು ವಿರೋಧಿಸಿ ಇನ್ನೊಂದು ನಿರ್ಣಯವಾಯಿತು. ಭಾರತದ ಆಹಾರ ಪರಿಸ್ಥಿತಿಗೆ ವಿಷಾದ ವ್ಯಕ್ತಮಾಡಿ, ಈ ಸಮಸ್ಯಾ ಪರಿಹಾರಕ್ಕೆ ಸಮಗ್ರ ಭಾರತದಲ್ಲಿ ಏಕದೃಷ್ಟಿಯ ಆರ್ಥಿಕ ಆಡಳಿತಗಳಾಗದಂತೆ ನೋಡಬೇಕೆಂದೂ, ಭಾರತದ ಉತ್ಪತ್ತಿ ಬೆಳೆಸಿ ಸಂಗ್ರಹಮಾಡಿಕೊಳ್ಳುವ ವ್ಯವಸ್ಥೆಯಿಡಬೇಕೆಂದೂ ನಿರ್ಣಯವಾಯಿತು,

ಶಾಶ್ವತ ಶಾಂತಿ ಸ್ಥಾಪನೆಗೆ

ಹೂವರರ ಸಲಹೆ

ಅಮೆರಿಕದ ಹಿಂದಿನ ಅಧ್ಯಕ್ಷ ಹರ್ಬರ್ಟ್ ಹೂವರರು, ಸಂಯುಕ್ತ ರಾಷ್ಟ್ರಗಳು ಯುದ್ಧಾನಂತರದ ಶಾಂತಿಸ್ಥಾಪನೆಯ ಯೋಜನೆ ಮಾಡಲು ಅವಸರ ಮಾಡಬಾರದೆಂದೂ, ಮೆದುಳಿನ ಕಾವು ಇಳಿದು ಸಮತೋಲ ಬುದ್ಧಿ ಬಂದ ಮೇಲೆ ಇದನ್ನು ಕೈಕೊಳ್ಳಬೇಕೆಂದೂ ತಿಳಿಸಿ ಈ ಸೂಚನೆಗಳನ್ನಿತ್ತಿದ್ದಾರೆ. (೧) ಶಾಂತಿ ಸ್ಥಾಪನೆಗಾಗಿ ಕೆಲವು ಮುಖ್ಯ ರಾಷ್ಟ್ರಗಳು ಯುದ್ಧ ಕೊನೆಗೊಳ್ಳುವ ಮೊದಲೇ ಒಂದು ಮಂಡಳವನ್ನೇರ್ಪಡಿಸಬೇಕು. (೨) ತಾತ್ಕಾಲಿಕ ಒಪ್ಪಂದ ಕರಾರುಗಳನ್ನು ಇವರೇ ತಯಾರಿಸಬೇಕು: (೩) ಯುದ್ಧದ ಬಿಸಿ ಇಳಿವ ವರೆಗೆ ಏನನ್ನೂ ಮಾಡಕೂಡದು. (೪) ನಿಜವಾದ ಶಾಂತಿ ಸ್ಥಾಪನೆಯ ತಳಹದಿ ಹಾಕಿದ ಮೇಲೆ ಅದರ ಮುಂದಿನ ಕಾರ್ಯಕ್ರಮ ನಿರ್ವಹಿಸುವರೆ ಈ ವ್ಯವಸ್ಥಾಪಕರ ಮಂಡಳದ ಬದಲು ಒಂದು ಜಾಗತಿಕ ಸಂಸ್ಥೆಯನ್ನು ಸ್ಥಾಪಿಸಬೇಕು.

ವೇವಲರು ತಯಾರಾಗುತ್ತಾರೆ!

ಭಾರತದ ಭಾವೀ ವೈಸರಾಯ್ ಫೀಲ್ಡ್ ಮಾರ್ಶಲ್ ಲಾರ್ಡ್ ವೇವಲರು ಮತ್ತು ಅವರ ಖಾಸಗಿ ಕಾರ್ಯದರ್ಶಿ ಇವಾನ್ ಜೆಂಕಿನ್ಸ್ ಇವರು ಮುಂದಿನ ತಿಂಗಳು ಭಾರತಕ್ಕೆ ಹೊರಡುವವರಿರುವುದರಿಂದ, ಈಗ ಲಂಡನಿನ 'ಇಂಡಿಯಾ ಆಫೀಸ'ನಲ್ಲಿಯೇ ಬಹುಕಾಲ ಕಳೆಯುತ್ತಿರುವರು; ಭಾರತವನ್ನಾಳುವ ರಾಜನೀತಿಯಲ್ಲಿ ತರಬೇತಿ ಹೊಂದುತ್ತಿರುವರು. ವೇವಲರು ಅಮೆರಿಯವರ ಕೈಕೆಳಗೆ ಪಡೆದ ಅನುಭವವನ್ನು ಭಾರತದಲ್ಲಿ ಬಂದು ಪ್ರದರ್ಶಿಸಿದರೆ ಜನರು ಸಮಾಧಾನಗೊಂಡಾರೆಂದು ಇಲ್ಲಿ ಯಾರೂ ನಂಬುವುದಿಲ್ಲ. ಏಕೆಂದರೆ ಅಮೆರಿಯವರು ಎಂಥಾ ಶಿಕ್ಷಣ ಕೊಟ್ಟಾರೆಂದು ಈಗಾಗಲೇ ಎಲ್ಲರಿಗೂ ತಿಳಿದಿದೆ.

'ದೇಶಸೇವೆ ಮಾಡಲು ಅಧಿಕಾರ ಸ್ವೀಕರಿಸಿದೆ'

ಡಾ। ಖರೆ ಹೇಳುತ್ತಾರೆ!

ಮುಂಬಯಿಯಲ್ಲಿ ಹಿಂದು ಸನಾತನಿಗಳು ಕೊಟ್ಟ ಒಂದು ಸತ್ಕಾರ ಕೂಟದಲ್ಲಿ ಮಾತನಾಡುತ್ತಾ ಇತ್ತೀಚೆಗೆ ವೈಸರಾಯ್ ಕಾರ್ಯಕಾರೀ ಮಂಡಳಕ್ಕೆ ಪ್ರವೇಶಿಸಿದ ಡಾ। ಖಾರೆಯವರು, ದೇಶಸೇವೆ ಮಾಡಲು ಅಧಿಕಾರ ಸ್ವೀಕರಿಸಿದೆಯೆಂದು ಹೇಳಿದರು. 'ಕಾಂಗ್ರೆಸಿನಿಂದ ಹೊರಬಿದ್ದ ಮೇಲೆ ಯಾವುದೇ ಸ್ಥಾನ ಮಾನದಿಂದಲಾದರೂ ದೇಶಸೇವೆ ಮಾಡಲು ಅಡ್ಡಿಯಿಲ್ಲವೆಂದು ನಿರ್ಧರಿಸಿದೆ. ದೇಶದ ಸ್ವಾತಂತ್ರ್ಯಕ್ಕಾಗಿ ತ್ಯಾಗ ಮಾಡಿದವರು ಪ್ರಶಂಸಾರ್ಹರು. ಆದರೆ ಸುಖಭೋಗಗಳಿಗಾಗಿ ದೇಶದಲ್ಲಿ ಹುಟ್ಟಿದ್ದೇವೆಂಬವರು ದೇಶಸೇವೆ ಮಾಡಿದೆವೆನ್ನುವುದರಲ್ಲಿ ಹುರುಳಿಲ್ಲ' ಎಂದು ಅವರೇ ಹೇಳಿದರು! ವೀರ ಸಾವರ್ಕರರು ಡಾ। ಖಾರೆಯವರು ಮಂತ್ರಿಮಂಡಳದಲ್ಲಿ ಸೇರಿದ್ದಕ್ಕೆ ಅಭಿನಂದಿಸಿದರು. ಇದು ಹಿಂದು ಮಹಾಸಭೆಯ ತತ್ವಕ್ಕೆ ಸರಿಯಾಗಿದೆಯೆಂದರು. ಎಷ್ಟೇ ಕಡಿಮೆ ಅಧಿಕಾರವಿದ್ದರೂ ಅದನ್ನು ಸ್ವೀಕರಿಸಿ ಹೆಚ್ಚು ಹೆಚ್ಚಿನ ಅಧಿಕಾರಕ್ಕಾಗಿ ಹೋರಾಡಿದರೆ ಮಾತ್ರ ಸ್ವಾತಂತ್ರ್ಯ ಗಳಿಸಬಹುದೆಂದು ಅವರು ಹೇಳಿದರು!

ಭಾರತೀಯರು ಈಗ ಸ್ವಾತಂತ್ರ್ಯ ಕೇಳುವುದು ಅಪರಾಧ?

ಎಂಬುದಾಗಿ ಅಮೆರಿಕದ ಪ್ರಸಿದ್ಧ ಲೇಖಕ ಅಪ್ಟನ್ ಸಿಂಕ್ಲೇರರು ಮುಂಬಯಿ ಪ್ರಾಗತಿಕ ಲೇಖಕರಿಗೆ ಬರೆದ ಪತ್ರದಲ್ಲಿ ತಿಳಿಸುತ್ತಾರೆ! ಅಕ್ಷರಾಷ್ಟ್ರಗಳನ್ನು ನಾಶಮಾಡುವುದೊಂದೇ ಸದ್ಯದ ಗುರಿಯಂತೆ! ಬ್ರಿಟಿಷರಿಂದ ನಮಗೆ ತೊಂದರೆಯಾಗಿರಬಹುದಾದರೂ, ಜಪಾನರನ್ನು ಹಾರೈಸಬೇಡವೆಂದಿದ್ದಾರೆ. ಬ್ರಿಟಿಷ್ ಮತ್ತು ಅಮೆರಿಕನ್ ಸೈನ್ಯಗಳಿಗೆ ಸಾಮಗ್ರಿ ಕಳುಹಿಸಲು ಭಾರತವೊಂದೇ ಮಾರ್ಗವಾದದ್ದರಿಂದ ಭಾರತದ ಮೇಲೆ ಮಿತ್ರರು ಅಧಿಕಾರಮಾಡಲೇ ಬೇಕಾಗುವುದೆಂದೂ, ಭಾರತದಂಥಾ ಬಹುಭಾಷೆಗಳುಳ್ಳ ಪ್ರದೇಶದಲ್ಲಿ ಸ್ವರಾಜ್ಯ ಸ್ಥಾಪಿಸುವುದು ಕಷ್ಟವೆಂದೂ ಅವರ ವಿಚಿತ್ರವಾದ! ಸಿಂಕ್ಲೇರ್ ಎಷ್ಟೆಂದರೂ ಬಿಳಿಯರು; ಸಾಮ್ರಾಜ್ಯಶಾಹೀ ರಾಷ್ಟ್ರದವರು! ನೀರಿಗಿಂತ ರಕ್ತ ದಪ್ಪ ತಾನೆ?

ಜಿಲ್ಲಾ ಸಮಾಚಾರಗಳು

ಮಂಗಳೂರು

ನಗರ ಸಭೆ

ಮಂಗಳೂರು ನಗರ ಸಭೆ ತಾ. ೬ರಂದು ಚೇರ್‌ಮೇನ್ ಖತ್ತೂರ್ ಹುಸೆನ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರಂಭದಲ್ಲಿ ಹೆಲ್ತ್ ಆಫೀಸರ್ ಡಾ. ಬಾಳಿಗರು ಕೊಲೆರಾ ವರದಿಯೊಪ್ಪಿಸಿದರು. ಕೊಲೆರವು ನಗರದ ಪ್ರತಿಯೊಂದು ಭಾಗದಲ್ಲಿ ದೆಯೆಂದರು. ಬಡ ಜನರಿಗೆ ಕಡಿಮೆಕ್ರಯದಲ್ಲಿ ಅಕ್ಕಿ ದೊರಕುವಂತೆ ಕೌನ್ಸಿಲು ಪ್ರಯತ್ನಿಸಬೇಕೆಂದು ಶ್ರೀ ಲೋಬೋರವರು ಹೇಳಲು ಕಾರ್ಯಕ್ರಮಪಟ್ಟಿಯಲ್ಲಿ ಅದಿಲ್ಲದ ಕಾರಣ ಈ ಸಭೆಯಲ್ಲಿ ತರಕೂಡದೆಂದು ಚೇರ್‌ಮೇನರು ಹೇಳಿದರು. ಶ್ರೀ ಶ್ರೀಷ್ಕರು ಬಡ ಜನರಿಗೆ ನಿಯಂತ್ರಣ ದರದಲ್ಲಿ ಅಕ್ಕಿಯನ್ನು ಕಲೆಕ್ಟರರು ದೊರಕಿಸಿ ಕೊಡಬೇಕೆಂದು ಕೌನ್ಸಿಲು ವಿನಂತಿಸುತ್ತದೆಯೆಂದು ತಂದ ಠರಾವು ಪಾಸಾಯಿತು. ಅನಂತರ ಸರಕಾರದ ಆಜ್ಞೆಗಳನು ಸ್ವೀಕರಿಸುವ ಕಾರ್ಯಕ್ರಮ ಬಂದಾಗ್ಯ ಶ್ರೀ ಸುವರ್ಣರು ಸರಕಾರದ ಆಜ್ಞೆಯೇನೆಂದು ವಿವರಿಸದೆ ಅದನ್ನು ಕಣ್ಣುಮುಚ್ಚಿ ಕೈಕೊಳ್ಳಲಾರೆವೆಂದು ಹೇಳಿದ್ದನ್ನು ಶ್ರೀ ಲೋಬೋ ಸಮರ್ಥಿಸಲು ಆ ಕಾರ್ಯಕ್ರಮ ಮುಂದೆ ಬಿತ್ತು. ಈ ಸಮಯದಲ್ಲಿ ಕೌನ್ಸಿಲರು ಒಂದೇ ಸಲ ಮಾತನಾಡಿ ಗಲಭೆಯಾಗಲು ಅಧ್ಯಕ್ಷರು ಗಲಭೆಮಾಡಬಾರದೆಂದರು. ಇನ್ನು ಕೆಲವು ವಿಷಯ ಬರುವ ಸಭೆಗೆ ಚರ್ಚೆಗೆ ಮುಂದುವರಿಸಲಾಯಿತು.

ಸೇರಿಗೆ ೩ ಆಣೆಯಂತೆ ಅಕ್ಕಿ

ಮಾರಾಟವನ್ನು ಶ್ರೀ ಕಟ್ಟೆಮಾರ್ ರಘುಚಂದ್ರ ಬಳ್ಳಾಲರು ಹಂಪನಕಟ್ಟೆಯ ತಮ್ಮ ಬಳ್ಳಾಲ ಮಹಾಲಿನಲ್ಲಿ ಕೊಡಲು ಕಳೆದ ಆದಿತ್ಯವಾರದಿಂದ ಪ್ರಾರಂಭಿಸಿರುವರು.

ಅವಗಡ

ಕಳೆದ ಚೌತಿದಿನ ರಾತ್ರಿ ಉರ್ವದ ಮಾರ್ಕೆಟಿನ ಬಳಿ ಓರ್ವ ಗೌಡಸಾರಸ್ವತ ಯುವಕನು ಗಣಪತಿ ವಿಗ್ರಹವನ್ನು ಬಾವಿಗೆ ಹಾಕುವಾಗ ಬಾವಿಗೆ ಬಿದ್ದು ಮೃತನಾದನು.

ಪ್ರೆಸ್ ಮಜೂರರ ಸಂಘ

ಇದರ ಹೊಸ ಕಾರ್ಯಕಾರಿ ಸಮಿತಿಯ ಸಭೆಯು ತಾ. ೫ರಂದು ಸೇರಿ ಸಂಘಟನೆಯನ್ನು ಅಭಿವೃದ್ಧಿ ಪಡಿಸುವ ನಿರ್ಧಾರವನ್ನು ಮಾಡಿತು. ತಾ. ೧೦ರ ಮೊದಲ್ಗೊಂಡು ವಾರಕ್ಕೆರಡು ಹಿಂದೀ ಕ್ಲಾಸುಗಳೂ ಎರಡು ಇಂಗ್ಲಿಷ್ ಕ್ಲಾಸುಗಳೂ ತೆರೆಯಲ್ಪಡುವುವು. ಪ್ರಕಾಶ ಕೂಟದವರು ಈ ತರಗತಿಗಳನ್ನು ನಡೆಸುವರು. ಪ್ರೆಸ್ ಮಜೂರರೆಲ್ಲರ ಸೌಕರ್ಯಕ್ಕಾಗಿ ಈ ಕ್ಲಾಸುಗಳು ಸಂಜೆ ೭॥ಯ ಅನಂತರ ನಡೆಸಲ್ಪಡುವುವು.

ಸಮ್ಮತಿ ಇಲ್ಲ!

ಬರಗಾಲ ಪೀಡಿತ ಜನರ ಸಹಾಯಾರ್ಥ ನಿಧಿ ಸಂಗ್ರಹಿಸುವುದಕ್ಕಾಗಿ ಸದ್ಯದಲ್ಲೇ, ಆಹಾರ ಪ್ರಶ್ನೆಗೆ ಸಂಬಂಧಿಸಿದ 'ಪ್ರತಿಜ್ಞೆ'ಯೆಂಬ ನಾಟಕವನ್ನಾಡಬೇಕೆಂದು ಭಾರತೀಯ ಜನತಾ ರಂಗಭೂಮಿಯ [ಪೀಪ್‌ಲ್ಸ್ ಥಿಯೇಟರ್] ಮಂಗಳೂರು ಸಮಿತಿಯವರು ನಿರ್ಧರಿಸಿದ್ದರು. ಆದರೆ ಆ ನಾಟಕವನ್ನು ಆಡಕೂಡದೆಂದು ಜಿಲ್ಲಾಧಿಕಾರಿಗಳು ತಿಳಿಸಿರುವರು.

ಮಂಜೇಶ್ವರ

ಇಲ್ಲಿಯ ಜಿಲ್ಲಾ ಬೋರ್ಡು ಸದಸ್ಯರಾದ ಅಮೃತ ಕೃಷ್ಣರಾಯರು ಜಿಲ್ಲಾ ಬೋರ್ಡಿನ ತಮ್ಮ ಸದಸ್ಯತನಕ್ಕೆ ರಾಷ್ಟ್ರಧುರೀಣರ ಬಂಧನದ ನಿಷೇಧ ಸಂಬಂಧ ರಾಜಿನಾಮೆ ಕೊಟ್ಟಿರುವುದರಿಂದ, ಅವರ ಸ್ಥಾನಕ್ಕೆ ಇಲ್ಲಿಯ ಕೋಪರೆಟಿವ್ ಟೌನ್ ಬೇಂಕ್ ಲಿಮಿಟೆಡಿನ ಕಾರ್ಯದರ್ಶಿ ಶ್ರೀ ಮಂಜೇಶ್ವರ ಮುಕುಂದ ನಾಯಕರು ಹುಮ್ಮೇದ್ವಾರರಾಗಿದ್ದಾರೆ.

ಅಗ್ಗದರದ ವಸ್ತ್ರ ಮಾರಾಟ

ಇಲ್ಲಿಯ ಮಂಜೇಶ್ವರ ಕೋ-ಒಪರೇಟಿವ್ ಟೌನ್ ಬ್ಯಾಂಕಿನವರು ಸಾರ್ವಜನಿಕರಿಗೆ ಅಗ್ಗದರದ ಸ್ಟೇಂಡರ್ಡ್ ಬಟ್ಟೆಗಳನ್ನು ಪೂರೈಸುವ ಶಾಪೊಂದನ್ನು ತೆರೆದಿರುವರು.

ಮಂಗಳೂರು ವಿದ್ಯಾರ್ಥಿಗಳಿಗೆ ಒಂದು ಮಾದರಿ!

ಬೊಂಬಾಯಿ ಐಕ್ಯ ಸಮ್ಮೇಳನ

'ಆಗಸ್ಟ್ ವಿದ್ಯಾರ್ಥಿ ಹುತಾತ್ಮರ' ಸಲುವಾಗಿ ಎರಡು ನಿಮಿಷಗಳ ಮೌನವ್ರತದೊಡನೆ, ಕಳೆದ ಆಗಸ್ಟ್ ೨೧ರಂದು ಬೊಂಬಾಯಿಯಲ್ಲಿ ನಾಲ್ಕು ವರೆ ಗಂಟೆ ಕಾಲ 'ವಿದ್ಯಾರ್ಥಿ ಐಕ್ಯ ಸಮ್ಮೇಳನ'ವೊಂದು ಜರಗಿತು. ಬೇರೆ ಬೇರೆ ವಿದ್ಯಾರ್ಥಿ ಸಂಘಗಳನ್ನು ಒಟ್ಟುಗೂಡಿಸಿ, ವಿದ್ಯಾರ್ಥಿಗಳಲ್ಲಿ ಐಕ್ಯವಾಗಬೇಕೆಂದು ಈ ಸಮ್ಮೇಳನ ಕರೆಯಲಾಗಿತ್ತು; ೩೦೦೦ಕ್ಕೆ ಮಿಕ್ಕಿ ಪ್ರತಿನಿಧಿಗಳು ಬಂದಿದ್ದರು. ೧೯೪೦ರ ನಾಗಪುರ ವಿಘಟನೆಯ ನಂತರ ವಿದ್ಯಾರ್ಥಿಗಳು ಹೀಗೆ ಐಕ್ಯರಾದದ್ದು ಇದೇ ಮೊದಲನೆಯ ಸಲ.

'ಮಂಗಳೂರು ವಿದ್ಯಾರ್ಥಿ ಸಂಘ' ಎಂಬ ಹೆಸರಲ್ಲಿಯೇ ಈಗ ಎರಡು ವಿದ್ಯಾರ್ಥಿ ಸಂಘ ಇರುವ ಹಾಗೆ, 'ಬೊಂಬಾಯಿ ವಿದ್ಯಾರ್ಥಿ ಸಂಘ'ವೆಂಬ ಹೆಸರಲ್ಲಿರುವ ಅಲ್ಲಿನ ಅನೇಕ ವಿದ್ಯಾರ್ಥಿ ಸಂಘಗಳು ತಮ್ಮ ಬೇರೆ ಬೇರೆ 'ಚೆಕ್ಕಿನ ಬಿಡಾರ'ಗಳನ್ನು ಕರಗಿಸಿ ಒಂದೇ ಸಂಘ ಮಾಡಲು ಅದಕ್ಕೆ ಬೇಕಾದ ಘಟನಾವಳಿ ರಚಿಸಲು ಅಲ್ಲಿ ಸಭೆ ಕೂಡಿದ್ದರು.

'ಆಗಸ್ಟ್ ವಿದ್ಯಾರ್ಥಿ ಹುತಾತ್ಮರ' ಸಲುವಾಗಿ ಎರಡು ನಿಮಿಷ ಮೌನವ್ರತ ಮುಗಿದ ಮೇಲೆ ಸ್ವಾಗತ ಸಮಿತಿ ಅಧ್ಯಕ್ಷ ಶ್ರೀ. ಪ್ರಭಾಕರ ಕುಂಟೆ ಇವರು, ವಿದ್ಯಾರ್ಥಿಗಳಿಗೆ ಬಂದೊದಗಿದ ಮೂರು ವಿಧದ ಗಂಡಾಂತರವನ್ನು (ಸರಕಾರದಿಂದ, ವಿದ್ಯಾ ಇಲಾಖೆ ಅಧಿಕಾರಿಗಳಿಂದ ಮತ್ತು ಕಮ್ಯುನಿಸ್ಟರಿಂದ) ವಿವರಿಸಿ ಹೇಳಿದರು. ವಿದ್ಯಾರ್ಥಿ ಸಂಘವು ಪ್ರಜಾಪ್ರಭುತ್ವ ತತ್ವದ ಸಂಸ್ಥೆಯಾದರೂ ಅದನ್ನು ಆಕ್ರಮಣ ಮಾಡಲು, ಆಕ್ರಮಿಸಿ ತಮ್ಮ ತಂತ್ರ ನೀತಿಯನ್ನು ಸಾಧಿಸಲು ಕಮ್ಯುನಿಸ್ಟರು ಮಾಡಿದ ಒಳಸಂಚು, ಅನ್ಯಾಯಗಳನ್ನು ಅವರು ಸ್ಪಷ್ಟವಾಗಿ ತಿಳಿಸಿದರು.

ಆ ಮೇಲೆ ಸಮ್ಮೇಳನಾಧ್ಯಕ್ಷ ಡಾ। ಮನೋಹರ್ ಇವರು, ಜನತಾ ಸೇವೆ ಮಾಡಲು ಕೂಲಿಗಾರರ ಹಾಗೂ ಕಿಸಾನರ ಬೆಂಬಲ ನಿಲ್ಲಲು ವಿದ್ಯಾರ್ಥಿಗಳಿಗಿರುವ ಆತುರ ಹಾಗೂ ಆಹಾರ ಸಂಕಷ್ಟ ನಿವಾರಣೆಗೆ ಮಾಡಬೇಕಾದ ಪ್ರಯತ್ನ ಇವುಗಳನ್ನು ತಿಳಿಸಿ, ಸರಕಾರದ ಅಭಿಪ್ರಾಯದಂತೆ ವಿದ್ಯಾರ್ಥಿಗಳ ಬುದ್ಧಿ ಎ. ಆರ್. ಪಿ ಮತ್ತು ನೇಶನಲ್ ವಾರ್ ಫ್ರಂಟಿಗಿಂತ ದೂರ ಹೋಗಬಾರದೆಂದು ಕಾಣುತ್ತದೆಯೆಂದರು. ಅನಂತರ ಮಾಮಾ ವಾರೇಕರ್, ಡಾ। ಚಿಟ್ನಿಸ್, ಕೆ. ಎಂ. ದೇಸಾಯಿ ಮತ್ತು ರೋಹಿತ್ ದಾವೆ ಇವರು ಮೇಲಿನ ಅಭಿಪ್ರಾಯವನ್ನು ಸಮರ್ಥಿಸಿ ಮಾತನಾಡಿದರು.

ಬಳಿಕ ಐಕ್ಯ ಪ್ರಕಟಣೆ ವಿಚಾರ ಚರ್ಚಿಸಲಾಯಿತು. ಆ ಪ್ರಕಟಣೆಯಲ್ಲಿ 'ವಿದ್ಯಾರ್ಥಿ ಚಳವಳದ ಅಂತರ್ರಾಷ್ಟ್ರೀಯತೆಯನ್ನು ಒಪ್ಪಿ, ಭಾರತದ ವಿದ್ಯಾರ್ಥಿ ಚಳವಳವು ಹಿಂದಿನಂತೆ ಮುಂದೆಯೂ ಲೋಕದ ಸಂಕಟಗ್ರಸ್ತ ಜನರ ನೆರವಾಗುವುದೆಂದು ತಿಳಿಸಿ 'ನಮ್ಮ ದಾಸ್ಯ ಭೂಮಿಯಲ್ಲಿ ವಿದ್ಯಾರ್ಥಿ ಚಳವಳವು ಯಾವಾಗಲೂ ರಾಷ್ಟ್ರೀಯ ಚಳವಳಕ್ಕೆ ಬೆಂಬಲ ಕೊಡುವುದೆಂದು ಒಪ್ಪಿ, ವಿದ್ಯಾರ್ಥಿ ಸಂಘವನ್ನು ಕಮ್ಯುನಿಸ್ಟರು ಮೊದಲಾದ ರಾಜಕೀಯ ಪಕ್ಷದವರು ತಮ್ಮ ಹಿತಸಾಧನೆಗಾಗಿ ಉಪಯೋಗಿಸುವುದನ್ನು ಖಂಡಿಸಿ, ವಿದ್ಯಾರ್ಥಿ ಸಂಘದಲ್ಲಿ ಪಕ್ಷಭೇದ, ಜಾತಿಭೇದಗಳಿರಬಾರದೆಂದು ಸಾರಿ, ವಿದ್ಯಾರ್ಥಿ ಸಂಘದ ಮೂಲಕ ವಿದ್ಯಾರ್ಥಿಗಳ ಸಂಕಷ್ಟ ನಿವಾರಣೆಗೆ ಹಿಂದಗಿಂತಲೂ ಅಧಿಕ ಪ್ರಯತ್ನ ಮಾಡಬೇಕೆಂದು ತಿಳಿಸಲಾಯಿತು.

ಆ ಮೇಲೆ 'ಆರ್ಥಿಕ ವಿಷಮತೆ'ಯ ನಿರ್ಣಯ ಬಂತು. ದೇಶದಲ್ಲಿರುವ ದಾರಿದ್ರ್ಯ ಉಪವಾಸಗಳ ವಿಚಾರಮಾಡಿ, ಜನತೆಗೆ ವಿಶ್ವಾಸವುಳ್ಳ ಸಾಮ್ರಾಜ್ಯಶಾಹೀ ಬಂಧನವಿಲ್ಲದ ಸರಕಾರ ಸ್ಥಾಪಿಸಬೇಕೆಂದೂ ಅಧಿಕ ಆಹಾರ ಬೆಳೆಸುವ, ಬೇರೆ ಕಡೆಗಳಿಂದ ಕಡಿಮೆಯಿದ್ದಲ್ಲಿಗೆ ಆಹಾರ ತರಿಸುವ, ಪರದೇಶಗಳಿಂದ ತರಿಸಿಕೊಳ್ಳುವ ವಿಚಾರ ಅದರಲ್ಲಿ ವಿಚಾರಿಸಲಾಯಿತು.

'ಜಾತೀಯ ಐಕ್ಯ'ದ ನಿರ್ಣಯವು, ಸರಕಾರವು ಜಾತೀಯ ಅನೈಕ್ಯವನ್ನೆತ್ತಿ ಭೇದವನ್ನುಂಟುಮಾಡಿದೆಯೆಂದು ತಿಳಿಸಿ ಪ್ರತಿಯೊಂದು ಸಂಸ್ಕೃತಿಯ ಬೆಳವಣಿಗೆಗೂ ಪೂರ್ಣ ಆಸ್ಪದವಿರಬೇಕೆಂದು ತಿಳಿಸಿತು. ಬೊಂಬಾಯಿಯ ಈ ಐಕ್ಯ ಸಮ್ಮೇಳನವು ಮಂಗಳೂರು ವಿದ್ಯಾರ್ಥಿಗಳ ಕಣ್ತೆರೆಯಿಸದೆ?

—ವಿದ್ಯಾರ್ಥಿ.

ಅಭ್ಯಾಸಗೋಷ್ಠಿ

'ಕಡೆಂಗೋಡ್ಲು ಕವಿಯ ಹೃದಯವನ್ನು ರಾಷ್ಟ್ರೀಯ ಜೀವನ ಕೆರಳಿಸಿದೆ'

ಮಿತ್ರಮಂಡಳಿಯು ಆರಂಭಿಸಿದ 'ಕಡಂಗೋಡ್ಲು ಕವಿಗಳು' ಎಂಬ ವಿಷಯದ ಅಭ್ಯಾಸವು ತಾ. ೪ರಂದು ಕೊನೆಗಂಡಿತು.

ಶ್ರೀ। ಕಡೆಂಗೋಡ್ಲು ಶಂಕರ ಭಟ್ಟರ ಆರಂಭದ ಕವಿತಾಸಂಗ್ರಹ 'ವಾಗ್ದೇವಿಕಾಣಿಕೆ'ಯ ಕುರಿತು ಶ್ರೀ। ಟಿ. ಗೋಪಾಲಕೃಷ್ಣ ಭಟ್ಟರು ಮಾತನಾಡುತ್ತಾ, ತಮ್ಮ ಉತ್ತಮ ಕವಿತೆಗಳನ್ನು ರಚಿಸುವ ಮೊದಲು ಕಡೆಂಗೋಡ್ಲು ಕವಿಗಳು ಬರೆದ ಆರಂಭದ ಅಭ್ಯಾಸ ಕವಿತೆಗಳೇ ಇದ್ದರಲ್ಲಿ ಹೆಚ್ಚಿನವು' ಎಂದು ಹೇಳಿದರು.

ಶ್ರೀ। ನಾರಾಯಣ ಮೂರ್ತಿಯವರು ಹಣ್ಣುಕಾಯಿಯಲ್ಲಿನ ತಮ್ಮ ಮೆಚ್ಚುಗೆಯ ಕವಿತೆಗಳ ಕುರಿತು ಮಾತನಾಡಿ, ಕೆಲವೆಡೆ ಅರ್ಥಲಾಲಿತ್ಯದ ಅಭಾವವಿದೆಯೆಂದರು.

'ಹೊನ್ನಿಯ ಮದುವೆ'ಯಲ್ಲಿ ಬಲು ಅಂದವಾದ ಅಲಂಕಾರಗಳಿವೆ. ರಚನೆಯು ಆಂಗ್ಲ ಅನುಕರಣೆಯೆಂದು ಖಂಡಿತವಾಗಿ ಹೇಳಬಹುದಾದರೂ ತುಂಬ ಪರಿಣಾಮಕಾರಿಯಾಗಿದೆ, ಎಂದು ಶ್ರೀ। ನರಸಿಂಹ ಭಟ್ಟರು ಹೇಳಿದರು.

ಶ್ರೀ। ಕಯ್ಯಾರರು ಕಡೆಂಗೋಡ್ಲು ಅವರ 'ಕಹಳೆ' ಕವಿತೆಯನ್ನೆತ್ತಿ ಮಾತನಾಡಿ, 'ಕಡೆಂಗೋಡ್ಲು ಕವಿಯ ಹೃದಯವನ್ನು, ರಾಷ್ಟ್ರೀಯ ಜೀವನದ ಹೊಯ್ದಾಟ-ಜಗತ್ತಿನ ಆಂದೋಲನಗಳು ಕೆರಳಿಸಿದೆ'ಯೆಂದು ವಿವರಿಸಿದರು.

ಕವಿಯ ಕೆಲವು ಶಬ್ದ-ಪ್ರಯೋಗಗಳ ಕುರಿತು ತಮಗಾದ ಶಂಕೆಯನ್ನು ಶ್ರೀ। ಕೆ. ರಾಮಕೃಷ್ಣ ಭಟ್ಟರು ವ್ಯಕ್ತಪಡಿಸಿದಾಗ ಅಂತಹ ಶಂಕೆಗಳು ಅನವಶ್ಯಕವೆಂದು ಶ್ರೀ ಕೆ ಎಸ್. ಅಡಿಗರು ಉತ್ತರವಿತ್ತರು.

೧೯೩೧ರಲ್ಲಿ ಮಿತ್ರಮಂಡಳಿಯ ಒಂದು ಸಭೆ ಜರಗಿದಾಗ ಮದ್ರಾಸಿನಲ್ಲಿದ್ದ ಮಂಡಳಿಯ ಓರ್ವ ಸ್ಥಾಪಕ ಶ್ರೀ ರಾಘವಾಚಾರಿ [ದಿವಂಗತರು] ಅವರು ಕಳುಹಿದ್ದ ಸಂದೇಶದಿಂದ ಶ್ರೀ. ಶಂಕರ ಭಟ್ಟರ ಕುರಿತಾದ್ದ ಕೆಲ ವಾಕ್ಯಗಳನ್ನು ಶ್ರೀ ಜಿ. ವಾಮನ ಭಟ್ಟರು ಓದಿ ಹೇಳಿ, 'ಮಂಗಳೂರಿನ ಹೊಸ ಕವಿಗಳೆಲ್ಲ ಕಡೆಂಗೋಡ್ಲು ಕವಿಗಳ ಅನುಯಾಯಿಗಳೇ' ಎಂದರು.

ಅಧ್ಯಕ್ಷರಾಗಿದ್ದ ಶ್ರೀ ಎಸ್. ಮುಕುಂದರಾಯರು ತಮ್ಮ ಭಾಷಣದಲ್ಲಿ ಕಡೆಂಗೋಡ್ಲು ಅವರು ಉತ್ತಮ ಶ್ರೇಣಿಗೆ ಸೇರಿದ ಕವಿಯೆಂದರು. 'ಕೆಲ ಪ್ರಯೋಗಗಳು ಸವೆದು ಹೋದ ನಾಣ್ಯಗಳಾಗಿವೆ; ಜನರು ಆಡುವ ರೀತಿಯಲ್ಲೆ ಬರೆಯಬೇಕಾಗಿತ್ತು; ಮುಂದಿನ ಕವಿಗಳು ಆ ರೀತಿ ಮಾಡಬಹುದು ಎಂದು ಅವರು ಸೂಚನೆಯಿತ್ತು, 'ಹೊನ್ನಿಯ ಮದುವೆ' ಕಥೆಯ ಸ್ಥಳ ಮತ್ತು ಪಾತ್ರಗಳ ಕುರಿತು ವಿಮರ್ಶಿಸುತ್ತಾ, 'ಗುಡಿಯ ಗುರಿಕಾರ'ನಿಗೂ 'ನಡುಮನೆ ಗೌಡ'ನಿಗೂ ಸಂಬಂಧ ಹೇಗೆ, ಮತ್ತು ಪಡುಗಡಲ ತೀರದಲ್ಲಿ ಗೌಡ ಜಾತಿಯವರು ಇದ್ದಾರೆಯೇ, ಗೌಡ ಶಬ್ದವು ಜಾತಿ ವಾಚಕವೋ ಗುಣ ವಾಚಕವೋ' ಎಂಬ ವಿಚಾರ ಸಂಶಯವೆತ್ತಿದರು. ಕಾರ್ಯದರ್ಶಿ ಡಾ. ಎಸ್. ಪಿ. ಭಟ್ಟರು ಧನ್ಯವಾದಗಳನ್ನರ್ಪಿಸಿದ್ದರು.

ಚೆನ್ನಾಗಿ ಅಭ್ಯಾಸ ಮಾಡಿಯೇ ಬಂದು ಪ್ರಸ್ತಾವನೆಗಳಿಲ್ಲದೆ, ಮಾತನಾಡುವವರು ನೇರವಾಗಿ ವಿಷಯವನ್ನೆತ್ತಿದರೆ ಸಮಯವೂ ಉಳಿಯುವುದು; ಗೋಷ್ಠಿಯೂ ಯಶಸ್ವಿಯಾಗುವುದು, ಎಂದು ಕೆಲ ಭಾಷಣಕರ್ತರು ಹಿತಸೂಚನೆಗಳನ್ನಿತ್ತರು.

ತಾ. ೧೫ನೆಯ ಶನಿವಾರದ ವಿಷಯ: ಸ್ವತಂತ್ರ ಕಥೆ, ಕವಿತೆ ಅನುಬಂಧಗಳನ್ನು ಓದೋಣ...

ಉಡುಪಿಯಲ್ಲಿ ಕೊಲೆರಾ

ಚಿಕ್ಕ ತಲೆದೋರಿದೆ ಇಲ್ಲಿಯೂ ಇನಾಕುಲೇಶನ್ ಆರಂಭವಾಗಿರುವುದು.

ದಕ್ಷಿಣ ಕನ್ನಡ ಜಿಲ್ಲಾ ಏಡೆಡ್ ಎಲಿಮೆಂಟರಿ ಶಾಲಾ ಫೆಡರೇಶನ್

ಈ ಫೆಡರೇಶನಿನ ಉಡುಪಿ ತಾಲೂಕಿನ ಶಾಖೆಯನ್ನು ಇದೇ ಸಪ್ಟಂಬರ ೧೯ನೇ ತಾರೀಕು ಆದಿತ್ಯವಾರ ಬೆಳಗ್ಗೆ ಗಂಟೆ ೧೦-೩೦ಕ್ಕೆ ಉಡುಪಿ ಮೊಡರ್ನ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ತೆರೆಯುವುದಾಗಿ ನಿರ್ಣಯಿಸಿಯದೆ. ಉಡುಪಿ ತಾಲೂಕು ಏಡೆಡ್ ಶಾಲಾ ಮೆನೇಜರುಗಳೂ ವಿದ್ಯಾಪ್ರಸಾರದಲ್ಲಿ ಆಸಕ್ತಿಯಿರುವ ಉಪಾಧ್ಯಾಯರುಗಳೂ ವ ಇತರ ಮಹನೀಯರುಗಳೂ ಆ ಸಭೆಗೆ ದಯಮಾಡಿ ಹಾಜರಿದ್ದು ಫೆಡರೇಶನಿನ ಉದ್ದೇಶವು ಸಫಲವಾಗುವಂತೆ ಸಹಕರಿಸಬೇಕಾಗಿ ವಿನಂತಿಯದೆ.

ಮಂಗಳೂರಲ್ಲಿ ಕೊಲೆರಾ

೯೯ ರಲ್ಲಿ ೩೮ ಮಂದಿ ಮರಣ

ಮಂಗಳೂರಲ್ಲಿ ಕೊಲೆರಾ ವಿಶೇಷವಾಗಿ ಹಬ್ಬದಿದ್ದರೂ ನಗರದ ಎಲ್ಲಾ ಭಾಗಗಳಲ್ಲಿ ಹಾಊ ದಿನದಿನವೂ ಕೊಲೆರಾ ರೋಗ ತಗಲಿದವರ, ಮೃತಹೊಂದಿದವರ ಸುದ್ದಿ ಬರುತ್ತಾ ಇದೆ. ತಾ. ೧೦ ಪೂರ್ವಾಹ್ನದ ವರೆಗೆ ೯೯ ಮಂದಿ ಕೊಲೆರಾ ತಗಲಿ ೩೮ ಮಂದಿ ಮರಣಹೊಂದಿರುವರು. ನಗರ ಆರೋಗ್ಯ ಇಲಾಖೆಯವರು ಕೊಲೆರಾ ರೋಗ ಪ್ರಸಾರವಾಗದಂತೆ ವಿಶೇಷ ಜಾಗರೂಕತೆವಹಿಸುತ್ತಿದ್ದಾರೆ. ಇದುವರೆಗೆ ೫೦,೩೭೩ ಮಂದಿಗೆ 'ಇನಾಕುಲೇಶನ್' ಆಗಿದೆ. ಕೊಲೆರಾ ರೋಗ ತಗಲಿದವರನ್ನು ಕೂಡಲೇ ಆಸ್ಪತ್ರೆಗೆ ಸಾಗಿಸಿ ಶುಶ್ರೂಷೆ ನಡೆಯುತ್ತಿದೆ. ಹೀಗೆ ಶುಶ್ರೂಷೆ ಹೊಂದಿದವರಲ್ಲಿ ಮೃತಹೊಂದಿದವರ ಸಂಖ್ಯೆ ಬಹಳ ಕಡಿಮೆ. ಕೊಲೆರಾ ರೋಗ ಉಡುಪಿ, ಕಾರ್ಕಳ, ಪಾಣೆಮಂಗಳೂರು, ಉಳ್ಳಾಲ ಮೊದಲಾದ ಕಡೆಗಳಲ್ಲೂ, ಜಿಲ್ಲೆಯ ಬೇರೆಬೇರೆ ಭಾಗಗಳಲ್ಲಿಯೂ ಇರುವುದು. ಜಿಲ್ಲೆಯ ಮಹಾಜನರು ಈ ಸಂಬಂಧ ವಿಶೇಷ ಎಚ್ಚರ ತೆಗೆದುಕೊಳ್ಳಬೇಕು.

ಯುದ್ಧದ ದೆಸೆಯಿಂದಾಗಿ, ಆಂಡ್ರೂಸ್ ಲಿವರ್‌ಸಾಲ್ಟ್ ಈಗ ದೊರಕುವುದಿಲ್ಲವೆಂಬುದು ವಿಷಾದಕರವಿದೆ. ಆದರೆ ಅಂತರ್ರಾಷ್ಟ್ರೀಯ ಪರಿಸ್ಥಿತಿ ಸುಧಾರಿತನಾದ ಕೂಡಲೇ ಇದು ಪುನಃ

ಸಿನೆಮಾ ಸುದ್ದಿ

ಸಿನೆಮಾ ನಿರ್ಮಾಣ ರಹಸ್ಯ

ಶ್ರೀ ಶಾಂತೇಶ ಪಾಟೀಲರ ಭಾಷಣ

ಚಲಚ್ಚಿತ್ರ ನಿರ್ಮಾಣ ಒಂದು ಕಲೆ. ಆದರೆ ಕವಿಯ ಸೃಷ್ಟಿ ಚಿತ್ರಕಾರನ ಸೃಷ್ಟಿ ಇವುಗಳಂತೆ ಇದು ವೈಯುಕ್ತಿಕವಾಗಿರದೆ ಸಾಂಘಿಕವಿದೆ. ಹಲವು ಕಲಾವಿದರ ಕೌಶಲ್ಯದ ಜೋಡಣೆಯಿಂದ ಚಲಚ್ಚಿತ್ರಗಳು ರಚಿತವಾಗುತ್ತವೆ. ಆದ್ದರಿಂದಲೇ ಇವು ಶಿಕ್ಷಣ ಸಾಧನವಾಗಿವೆ. ಕಥಾ ನಿಯೋಜನೆ ಮೊದಲ್ಗೊಂಡು ಚಿತ್ರ ನಿರ್ಮಾಣದ ಬೇರೆ ಬೇರೆ ಭಾಗಗಳನ್ನು ಮುಖ್ಯವಾಗಿ ಪೂರ್ವರಂಗ ಚಿತ್ರ ನಿರ್ಮಾಣ ಮತ್ತು ಸಂಕಲನ ಎಂದು ಮೂರು ವಿಭಾಗವಾಗಿ ವಿಂಗಡಿಸಬಹುದು.'' ಹೀಗೆಂದು ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ಮುಂಬಯಿ 'ಶ್ರೀ ಸೌಂಡ್ ಸ್ಟುಡಿಯೋ'ದ ಧ್ವನಿಲೇಖಕರಾಗಿರುವ ಕನ್ನಡಿಗ ಶ್ರೀ ಶಾಂತೇಶ ಪಾಟೀಲ ಎಂ. ಎಸ್. ಸಿ. ಇವರು ಸಿನೆಮಾ ನಿರ್ಮಾಣದ ರಹಸ್ಯದ ಕುರಿತು ವಿವರಿಸಿದರು. ಅವರು ಮತ್ತೆ ಹೀಗೆಂದು ಮುಂದುವರಿಸಿದರು.

"ನಿರ್ಮಾತೃ/ನಿರ್ದೇಶಕ ಭಂಡವಳಗಾರ ಇವರು ಚಲಚ್ಚಿತ್ರದ ಸೂತ್ರಧಾರರು. ಇವರು ಕಲಾವಂತರಿದ್ದರೆ ಉತ್ತಮ ಕಲಾಕೃತಿ ಹೊರಡುವುದು. ಕಥೆ ಹಾಗೂ ನಟನಟಿಯರ ಆಯ್ಕೆ ಇವರಿಂದ ನಡೆಯುವುದು. ಸಿನೆಮಾ ನಿರ್ಮಾಣದಲ್ಲಿ ನಿರ್ದೇಶಕನ ಹೊಣೆ ಹೆಚ್ಚಿನದು. ಅವನು ಆರೋಗ್ಯವಂತ ಮಾತ್ರವಲ್ಲದೆ ಉತ್ತಮ ಸಾಹಿತಿ ನಾಟ್ಯನಿಪುಣ, ವಿಶೇಷವಾಗಿ ವಿಜ್ಞಾನ ಪರಿಚಯ ಹಾಗೂ ಸಂಗೀತಗಾರನೂ ಇರಬೇಕು ದೂರ್ದೃಷ್ಟಿಯವನೂ ಕರ್ತವ್ಯ ದಕ್ಷನೂ ಮಾತ್ರವಲ್ಲದೆ ಅತ್ಯಂತ ಸಾಹಸ ಶೀಲನೂ ಆಗಿರಬೇಕು.

ಸಿನೆಮಾ ನಿರ್ಮಾಣದಲ್ಲಿ ಚಿತ್ರಗ್ರಾಹಕನ ಸ್ಥಾನವೂ ಹಿರಿದು. ಅವನು ಪ್ರಕಾಶನ ಶಾಸ್ತ್ರವನ್ನು ಚನ್ನಾಗಿ ಅರಿತಿರಬೇಕು ಕಥೆಗೆ ಕಳೆತರುವುದು, ಕಥೆಯ ರಸವನ್ನು ತೋರಿಸುವುದು, ಕಥೆಯ ಓಟವನ್ನು ಸಾಗಿಸುವುದು ಚಿತ್ರಗ್ರಹಣದ ಕುಶಲತೆಗಳಾಗಿವೆ.

"ಸಿನೆಮಾದಲ್ಲಿ ಧ್ವನಿಲೇಖನ (Recording)ವು ಮಹತ್ವದ್ದು. ಲೇಖನ ಮಾಡ್ಡಿದ್ದು ತಿಳಿಯದೆ ಧ್ವನಿಲೇಖನ ಮಾಡುವುದು ಯಶಸ್ವಿಯಾದ ಧ್ವನಿಲೇಖನ. ಎಷ್ಟೋ ಬಾರಿ ಒಂದಕ್ಕಿಂತ ಹೆಚ್ಚು ಧ್ವನಿಲೇಖನ ಒಮ್ಮೆಲೇ ಮಾಡಬೇಕಾಗುತ್ತದೆ ಆಗ ಎರಡು ಮೂರು ಧ್ವನಿವಾಹಕ ಯಂತ್ರಗಳನ್ನು ಧ್ವನಿಲೇಖಕನು ಉಪಯೋಗಿಸುವನು. ಸಂಗೀತ ಪಾರ್ಶ್ವ ಸಂಗೀತಗಳನ್ನು ಸರಿಯಾಗಿ ಬಳಸಿಕೊಳ್ಳುವುದು ಜಾಣ್ಮೆ.

ಮುಖ ಸೌಂದರ್ಯ, ಶರೀರ, ಒಪ್ಪುವ ಅಭಿನಯ ಕೌಶಲ್ಯ ಇವು ನಟನಟಿಯರ ಸಲ್ಲಕ್ಷಣ. ಸಿನೆಮಾ ನಟರಾಗಲು ಹಿಂದೀ ಭಾಷಾ ಪರಿಚಯಬೇಕು. ಉತ್ತರ ಪ್ರಾಂತದವರೇ ಹೆಚ್ಚಿಗೆ ನಟರಾಗಿರುವುದು ಈ ಕಾರಣದಿಂದ.

"ಸಂಗೀತವು ಚಿತ್ರದಲ್ಲಿ ಪೋಷಕನಾಗಿ ಬರುವುದು. ಪಾರ್ಶ್ವ ಸಂಗೀತವೂ ಹಾಗೆಯೆ. ಪಾಳ್ಕೆಯವರಿಂದ ಮಹಾರಾಷ್ಟ್ರೀಯ ಸಂಗೀತ ಮೊದಮೊದಲು ಸಿನೆಮಾಗಳಲ್ಲಿ ಅಗ್ರಸ್ಥಾನ ಪಡೆಯಿತು. ಮುಂದೆ ದೇವಕೀ ಬೋಸರಿಂದ ಬಂಗಾಲೀ ಸಂಗೀತ ಸಿನೆಮಾದಲ್ಲಿ ಮೇಲ್ಮೆ ಹೊಂದಿತು. ಇತ್ತಿತ್ತ ಪಂಜಾಬೀ ಸಂಗೀತ ಜನಪ್ರಿಯವಾಗುತ್ತಿದೆ. ಕರ್ನಾಟಕ ಸಂಗೀತವೂ ಒಂದಿಲ್ಲೊಮ್ಮೆ ಜನಪ್ರಿಯತೆ ಪಡೆಯುವುದು.

'ಸಂಕಲನ' ಛಾಯಾಗ್ರಹಣ ಯಂತ್ರ ತೆಗೆದ ಚಿತ್ರಗಳ ಜೋಡಣೆ. ಸಿನೆಮಾ ನಿರ್ಮಾಣದಲ್ಲಿ ಕೊನೆಮೆಟ್ಟಿಲು ಈ ಸಂಪಾದನ ಹೊಣೆ ಎಲ್ಲದಕ್ಕಿಂತಲೂ ಹೆಚ್ಚಿನದು. ಚಿತ್ರದ ಯಶಾಪಯಶ ಹೆಚ್ಚಾಗಿ ಸಂಪಾದಕನನ್ನೇ ಹೊಂದಿದೆ. ಕೊನೆಗೆ ಚಿತ್ರಪ್ರದರ್ಶನಾಲಯ ಹಾಗೂ ಸಲಕರಣೆಗಳೂ ಚೆನ್ನಾಗಿದ್ದರೆ ಮಾತ್ರ ಸಿನೆಮಾ ಒಳ್ಳೆಯದಾಗುತ್ತದೆ.

ವೃದ್ಧಿಯಿಂದ ಅಭಿವೃದ್ಧಿ.

ಗತ ೧೯೪೨ನೇ ವರ್ಷದಿಂದ ಚಾಲು ೧೯೪೩ನೇ ಪ್ರಾರಂಭದ ಮಾಸಗಳು ಬಹು ಅಪಾಯುಗಳಿಂದಲೂ ಹಾಗೂ ಸುಯೋಗಗಳಿಂದಲೂ ತುಂಬಿ ತುಳುಕಿದ್ದವು. ಜಾಣತೆಯಿಂದ ವ್ಯವಸ್ಥೆ ಮಾಡಲ್ಪಟ್ಟ ಸಂಸ್ಥೆಗಳು ಈ ಅಪಾಯುಗಳನು ತಳ್ಳಿ ಸುಸಂದರ್ಭಗಳನ್ನು ಉಪಯೋಗಿಸಿ ತೀವ್ರನೆ ಮುಂದುವರಿದವು.

೧೯೪೦,೪೧ರಲ್ಲಿ ಕೆನರಾ ಬೇಂಕು ೯೦ ಲಕ್ಷ ಠೇವಣೆಗಳ ಮತ್ತು ಒಂದು ಕೋಟಿ ಸಾಂಪತ್ತಿಕ ಸ್ಥಿತಿಯಲ್ಲಿದ್ದು ಅಂದು ಸಹ ಅದು ವಿಸ್ತೃತ ಸ್ಥಿತಿಯ ಸಂಸ್ಥೆಯಾಗಿತ್ತು. ಇಂದು ಠೇವಣೆಗಳು ಇಮ್ಮಡಿಯಾಗಿವೆ. ಸಾಂಪತ್ತಿಕ ಸ್ಥಿತಿಯು ಎರಡುವರೆ ಕೋಟಿಗೆ ಮಿಕ್ಕಿದೆ. ಹಾಗೂ ತೆತ್ತ ಮೂಲಧನವು ನಾಲ್ಮಡಿಯಾಗಿದೆ.

ಜಾಣತನದ ವ್ಯವಸ್ಥೆಯ ಏರ್ಪಾಟಿನಿಂದಲೂ, ಆತ್ಮ ವಿಶ್ವಾಸದಿಂದಲೂ, ದೃಢ ಬುದ್ಧಿಯಿಂದಲೂ, ಯೋಗ್ಯಸೇವೆಯನ್ನು ಸಲ್ಲಿಸಿದರಿಂದಲೂ, ಇಂದಿನ ಈ ಪ್ರಗತಿಗೆ ಕಾರಣಭೂತರಾದ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರರಾಗಿ ಇನ್ನು ಮುಂದಕ್ಕೂ ಮಹತ್ವದ ಸೇವೆಯನ್ನು ಒಪ್ಪಿಸಲು ಸಮರ್ಥರಾಗಿಲು ನಾವು ಹಾರೈಸುವೆವು.

Canara Bank Limited.

ಕೆನರಾ ಬೇಂಕ್ ಲಿಮಿಟೆಡ್.

ಸ್ಥಾಪನೆ 1906.

ಸಮರಭೂಮಿಯ ಸಂಚಾರ [೫ನೇ ಪುಟದಿಂದ ಮುಂದುವರಿದುದು.]

೧೯೩೯ ಸೆಪ್ಟಂಬರದಿಂದ ೧೯೪೩ ಸೆಪ್ಟಂಬರ ವರೆಗೆ

ನಾಲ್ಕು ವರ್ಷಗಳ ಮಹಾ ಯುದ್ಧದ ಸಿಂಹಾವಲೋಕನ

ಅಡಾನಾ ಒಪ್ಪಂದ. ಅದೇ ೩ರಂದು ಸ್ಟಾಲಿನ್ ಗ್ರಾಡ್ ಕಾಳಗದ ಕೊನೆ; ರಶ್ಯನ್ ವಿಜಯ. ಅದೇ 9 ಜಪಾನರು ಗುಡಲ್‌ಕನಾಲ್ ಬಿಟ್ಟರು. ಅದೇ ೨೮ರಂದು ಅಸ್ವಮುದಳ ಮೇರೆಥ್ ವ್ಯೂಹ ಭೇದಿಸಿತು. ನಾರ್ಚ ೪ ಬಿಸ್ಮಾರ್ಕ್ ಸಾಗರ ಯುದ್ಧ. ಮೇ ೭ ಟುನಿಸ್ ಬಿಜರ್ಟಗಳನ್ನು ಮಿತ್ರರು ಹಿಡಿದರು. ಅದೇ ೯ಕ್ಕೆ ಅರಕಾನ ದಾಳಿ ಮುಗಿದದ್ದು! ಅದೇ ೧೧ ಅಟ್ಟುವಿನಲ್ಲಿ ಅಮೆರಿಕ ದಳ ಇಳಿದುದು. ಅದೇ ೧೨ ಟುನಿಸ್ ಕಾಳಗದ ಕೊನೆ; ವಾನ್ ಆರ್ನಿಮ್‌ನನ್ನು ಚತುರ್ಥ ದಳ ಸೆರೆ ಹಿಡಿದದ್ದು, ವಾಶಿಂಗ್‌ಟನಿನಲ್ಲಿ ಚರ್ಚಿಲ್ ತಲಪಿದ ಸುದ್ದಿ. ಅದೇ ೧೬ಕ್ಕೆ ಆರ್. ಎ. ಎಫ್‌ಗಳಿಂದ ಮೋನೇ ಮತ್ತು ಎಡೆರ್ ಆಣೆಕಟ್ಟುಗಳು ಭೇದಿಸಲ್ಪಟ್ಟದು. ಅದೇ ೨೨ಕ್ಕೆ ಬರ್ಮ ೧,೦೦೦ ಮೈಲು ಮುಂದುವರಿದ ವಿಂಗೇಟ್ ಪಾರ್ಟಿಯ ಹಿಂತಿರುಗುವಿಕೆ ಸುದ್ದಿ; ರಶ್ಯವು ಮೂರನೆ ಅಂತರ್‍ರಾಷ್ಟ್ರೀಯವನ್ನು ಕರಗಿಸಿದ್ದು. ಅದೇ ೨೭ ಯಾಂಗ್‌ಸ್ಟೀ ನದೀ ಉತ್ತರ ತೀರದಲ್ಲಿ ಚೀನಾ ದಳಗಳು ಆಕ್ರಮಣ ಆರಂಭಿಸಿದ್ದು. ಜೂನ್ ೧೦ ಪೆಂಟೆಲೇರಿಯವನ್ನು ಮಿತ್ರರು ವಶಪಡಿಸಿದ್ದು. ಅದೇ ತಾ. ೧೨ ಚೀನರು ಕಿನ್ನಾವನ್ನು ಕೈವಶಮಾಡಿದ್ದು. ಲಂಡನಿನ ಅರಸರು ದಕ್ಷಿಣ ಆಫ್ರಿಕೆ ದಳಕ್ಕೆ ಸಂದರ್ಶನವಿತ್ತದ್ದು. ಜುಲೈ ೧ರಂದು ಆಗ್ನೇಯ ಶಾಂತ ಸಾಗರದಲ್ಲಿ ಮಿತ್ರರ ಆಕ್ರಮಣ. ಅದೇ ೪ ನ್ಯೂಗಿನಿಯಲ್ಲಿ ಮೇಕಾರ್ಥರ್ ಯುದ್ಧಾರಂಭ. ಅದೇ ೧೦ ಸಿಸಿಲಿಯಲ್ಲಿ ಮಿತ್ರರಿಳಿದದ್ದು. ಅದೇ ೧೮ ರೋಮ್‌ಗೆ ಬಾಂಬು. ಅದೇ ೧೯ ಹಿಟ್ಲರ್ ಮುಸಲನಿ ಭೇಟಿ. ಅದೇ ೨೫ ಮುಸಲನಿ ರಾಜಿನಾಮೆ. ಬುಡೋಗ್ಲಿಯೋ ಹೊಸ ಪ್ರಧಾನ ಮಂತ್ರಿಯಾದದ್ದು. ಅದೇ ೩೦ ಜನರಲ್ ಇಶನ್‌ಹೋವರ್ ಇಟಲಿಗೆ ಶಾಂತಿ ಕರಾರು ಕಳುಹಿಸಿದ್ದು. ಆಗಸ್ಟ್ ೫ ಮಿತ್ರರು ಕಟೇನಿಯ ಮತ್ತು ಪೆಟೆರ್ನೊ ಹಿಡಿದದ್ದು. ಅದೇ ೧೩ ಮಿತ್ರರು ರಾಂಡಾಜೋ ಹಿಡಿದದ್ದು. ತಾ. ೧೭ಕ್ಕೆ ಅಮೆರಿಕನ್ ದಳ ಮೆಸ್ಸಿನಾ ನುಗ್ಗಿದ್ದು. ತಾ. ೧೮ ಸಿಸಿಲಿಯಲ್ಲಿ ಅಕ್ಷಸೈನ್ಯದ ಪ್ರತಿಭಟನೆ. ತಾ. ೨೩ ರಶ್ಯನರು ಖಾರ್ಕೋವ್ ಹಿಡಿದದ್ದು. ತಾ. ೨೪ ಬರ್ಲಿನಿಗೆ ೭೦೦ ಬಾಂಬರ್ ಧಾಳಿ. ಕ್ವಿಬೆಕ್ ಪರಿಷತ್ತು ಮುತ್ತಾಯ; ನಾಲ್ಕು ಸೂತ್ರಗಳ ಪ್ರಕಟಣೆ ಹೊರಟದ್ದು. ತಾ. ೨೯ ಜರ್ಮನರು ಡೆನ್ಮಾರ್ಕಿನಲ್ಲಿ ಮಿಲಿಟರಿ ಆಡಳಿತ ಸಾರಿದ್ದು; ದೊರೆ ಕ್ರಿಶ್ಚಿಯನರ ಬಂಧನ.

ಇಂತಿದು ನಾಲ್ಕು ವರ್ಷಗಳ ಸಮರ ಭೂಮಿಯ ಸಿಂಹಾವಲೋಕನ.

NOTICE

In the Court of the Principal Subordinate Judge of South Kanara.

R. E. P. No. 39 of 1943.

O. S. No. 75/1935.

Between:-

Srimad Ananteshwar Temple, Manjeshwar—*Petitioner.*

and

Nagaraja and others—*Respondents.*

To

The Respondents: 1. Nagaraja, son of Padmavathi. 2. Laxmimathi. 3. Sridevi alias Rukmini. 4. Ratnavathi. 5. Dharmaraj. 6. Jagathpal. 7. Nemiraj. 8. Ganapalva. 9. Sunanda.—Respondents 2 to 9 are the minor children of Padmavathi, and are minors by next—friend 1st Respondent. All are residing at Gunderi House, Gunderi village, Karkal Taluk.

Please take notice that the above execution petition filed by the petitioner against the decree in O. S. No. 75 of 1935 for the recovery of Rs 623-13-4 and costs of the petition and praying that in default of payment the moveables belonging to you in your house in Gunderi may be attached and sold, will come on for hearing on 30-9-43 at 11 A. M. in the above Court. You may either appear in person or by a pleader failing which the same will be decided in your absence.

Mangalore 31-8-1943. **M. A. Kamath,** Vakil for Petitioner.

THE CANARA BANKING CORPORATION Ltd

(Incorporated in British India with limited liability).

Estd:] **Head office: UDIPI** [1906.

(Branches & Agencies in all principal cities of India)

Authorised capital	Rs. 25,00,000
Issued & Subscribed	Rs. 16,00,000
Paid up Capital	Rs. 10,06,000
Reserves	Rs. 3,85,000

Advances are made against approved securities and bills purchased or collected at most favourable rates.

For further particulars please apply to the nearest Branch.

ಪುಸ್ತಕಾವಲೋಕನ

ಪ್ರೇಮಪ್ರವಾಹ:—ಅಂತರಂಗ ಪತ್ರಿಕೆಯಿಂದ ಆಯ್ದ ಐದು ಕಥೆಗಳು. ಪ್ರಕಾಶಕರು–ಅಂತರಂಗ ಕಾರ್ಯಾಲಯ ಉಡುಪಿ. ಕ್ರಾ೧/೮ ಪುಟ 72, ಬೆಲೆ ಆರಾಣೆ.

ಈ ಪುಸ್ತಕಕ್ಕೆ ಶ್ರೀ ಕೊರಡ್ಕಲ್ ಶ್ರೀನಿವಾಸ ರಾಯರು ಚಿಕ್ಕ ಮುನ್ನುಡಿ ಬರೆದು ಎರಡೇ ಮಾತುಗಳಿಂದ ಸಣ್ಣ ಕಥೆಗಳೆಂತಿರಬೇಕೆಂದು ತಿಳಿಸಿದ್ದಾರೆ. ಪುಸ್ತಕದ ಮೊದಲ ಕಥೆ ಪ್ರಣಯ–ಪ್ರಲಯ, ಎರಡನೆಯದು ಛಾಯಾ ಸಾಕ್ಷಿ, ನಾಲ್ಕನೆಯದು 'ಎಂತಹ ಕೊಲೆ' ಇವು ಅಂತರಂಗ ಸಂಪಾದಕ ಶ್ರೀ. ಎಂ. ವಿ. ಹೆಗ್ಡೆಯವರದು. ಮೂರನೇ ಕಥೆ 'ಗೌರಿ' ಶ್ರೀ. ಎಸ್. ಎಲ್. ಸುಬ್ರಮಣ್ಯಂ ಅವರದು.—ಐದನೇ ಕಥೆಯಾದ ಮತ್ತು ಪುಸ್ತಕ ಹೆಸರಾದ 'ಪ್ರೇಮ ಪ್ರವಾಹ ಶ್ರೀಮತಿ ಸರಸ್ವತಿಬಾಯಿ ರಾಜವಾಡೆಯವರದು.

'ಪ್ರಣಯ–ಪ್ರಲಯ' ಇಂಗ್ಲೀಷು ಕಥೆಯೊಂದರ ಅನುವಾದ, ಯೋಧನೊಬ್ಬನು ವೈರಿಯಾಕ್ರಮಿತ ದೇಶವನ್ನು ಗೆದ್ದು ಅಲ್ಲಿ–ಇರೋನಳೆಂದೊಬ್ಬಳನ್ನು ತನ್ನಾಶೆಯ ತುತ್ತಾಗಿ ತೆಗೆದುಕೊಳ್ಳಲು, ಆತನ ಕೈಕೆಳಗಿನ ಯೋಧನೊಬ್ಬನು ಅದಕಡ್ಡಿ ಬಂದು–ಮುಂದೆ ಆಕೆಯನ್ನು ಕೊಂದು ತಾನೂ ಅವಳ ಹಾದಿ ಹಿಡಿಯುವುದು.

'ಛಾಯಾ ಸಾಕ್ಷಿ' ಕೈಹಿಡಿದ ಹೆಂಡತಿಯ ಮೇಲೆ ಅನುಮಾನ ಬಂದು ಪತ್ತೆ ಹಚ್ಚಿದ ರೀತಿ; ಪತ್ತೆಹಚ್ಚಿ ವಿವಾಹ ವಿಚ್ಛೇದ ಮಾಡಿಕೊಳ್ಳುವುದು.

ರಂಗನ ಧನಿಗೆ ಆತನ ಪತ್ನಿ 'ಗೌರಿ' ಮೇಲೆ ಆಶೆ ಉಂಟಾಗಲು ಅವನು ಸಹಿಸದೆ ಧನಿಗೆದುಹಾಡಿ ಹೊಡೆತ ತಿಂದು ಆಸ್ಪತ್ರೆ ಸೇರುವುದು. ಮುಂದೆ ಆ ಧನಿಗೆ ಗೌರಿ ಬುದ್ಧಿವಾದ ಹೇಳಿ ಧನಿ ಉತ್ತಮದಾರಿಗೆ ಬರುವುದು. ರಂಗನಿಗೆ ಮತ್ತು ಸಂಶಯ. ಇದನ್ನು ಸಹಿಸದೆ ಗೌರಿ ನೀರಿಗೆ ಹಾರಿ ಪ್ರಾಣಕಳೆಕೊಳ್ಳುವುದು, ಅವಳ ಜೀವರಕ್ಷಿಸ ಹೊರಟ ರಂಗ ಅವನೂ ಅಲ್ಲೇ ಅಂತ್ಯಕಾಣುವುದು.

ಎಂತಹ ಕೊಲೆ–ನಾಗರಿಕ ಪತಿಪತ್ನಿಯರು ಸಿನೆಮ ನೋಡಿ ಬಂದು ಅದರ ನಾಯಕ ನಾಯಕಿಯರಂತೆ ನಟನೆ ಮಾಡುತ್ತಿರುವುದನ್ನು ಕಂಡ ಹೆಂಡತಿಯ ತಮ್ಮ–ಭಾವ ಮಾರನೇ ದಿನ ಭಾವನನ್ನು ಕೊಂದು ಜೇಲು ಸೇರುವುದು.

ಪ್ರೇಮಪ್ರವಾಹ–ಎರಡು ಹೆಣ್ಣುಮಕ್ಕಳಿಗೆ–ಓರ್ವನಲ್ಲಿ ಪ್ರೀತಿ, ಕೊನೆಗೆ ಆತನ ಜೀವವುಳಿಸುವದಕ್ಕಾಗಿ ಮತ್ತು ಅಕ್ಕನಿಗಾಗಿ ತಂಗಿ ತನ್ನ ಜೀವ ಬಲಿಕೊಡುತ್ತಿರುವುದು.

ಮೊದಲ ನಾಲ್ಕು ಕಥೆಗಳು ಆಧಾರ ಮತ್ತು ಭಾಷಾಂತರವೆಂಬುದನ್ನು ಲೇಖಕರೇ ಒಪ್ಪಿರುತ್ತಾರೆ. ಐದನೆಯದು ಸ್ವತಂತ್ರವಾಗಿರಬೇಕು, ಮೊದಲ ನಾಲ್ಕು ಕಥೆಗಳು ನಮ್ಮಲ್ಲಿಂದ ಕಾಣಸಿಗದ ಚಿತ್ರಗಳು. ಇಂಥಾ ಕಥೆಗಳನ್ನು ಬೇರೆ ಬಾಷೆಯಿಂದ ಕನ್ನಡಕ್ಕಿಳಿಸಿ ಕೊಟ್ಟದ್ದರಿಂದ ಹೆಚ್ಚಿನದೇನೂ ಲಾಭವಾಗದು.

ಕೊನೆಯ ಕಥೆಯಾದ ಪ್ರೇಮ ಪ್ರವಾಹದಲ್ಲಿ ಲೇಖಕಿಯವರು ಪಾತ್ರಗಳಲ್ಲಿ ನೈಜ ಜೀವನ ಚಿತ್ರಿಸಲು ಹೊರಟು ಯಶಸ್ವಿಯಾಗದೆ ಕೇವಲ ಒಂದು ತತ್ವನಿದರ್ಶನಕ್ಕೆ ಹೊರಟ ಕಥೆಯಂತಾಗಿದೆ. ಈ ಸಂಗ್ರಹದ ಕಥೆಗಳಲ್ಲಿ ಇದೊಂದು ಉತ್ತಮವಾದುದು. ಕಾರಣ ಈ ಸಂಗ್ರಹಕ್ಕೆ ಈ ಹೆಸರು ಕೊಟ್ಟರೇನೋ?

— ಆಲಂಗಾರು

ಬಂಗಾಳದ ಗವರ್ನರರು ಕಂಗಾಲಾಗಿರುವರು

ಎಂದು ಸುದ್ದಿಯಿದೆ. ಜಾನ್ ಹರ್ಬರ್ಟರ ಅನಾರೋಗ್ಯ ನಿಮಿತ್ತ ತಾತ್ಕಾಲಿಕ ಗವರ್ನರರಾಗಿ ಸರ್ ಥಾಮಸ್ ರುಥರ್ ಫೊರ್ಡರು ನೇಮಕ ಹೊಂದಿದ್ದಾರೆ! ಪ್ರಜೆಗಳಿಂದ ಗವರ್ನರರ ವರೆಗೂ ಯಾರಿಗೂ ಬಂಗಾಳದಲ್ಲಿಂದು ಸುಖವಿಲ್ಲ! ಬಂಗಾಳದ ಗವರ್ನರರಿಗೆ ರಕ್ತ ಸೋರುವ ರೋಗ ಹಿಡಿದಿದ್ದು ಪರಿಸ್ಥಿತಿ ಚಿಂತಾಜನಕವಿದೆಯೆಂದು ಪ್ರಸಿದ್ಧವಾಗಿದೆ!



ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಆಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದುದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂಧರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು. ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ
O. S. 992/1927.
R. E. P. 301/1943.

ತಿಮ್ಮಕ್ಕಮ್ಮ . . . . . *Petitioner.*

1. ಮಣ್ಣಾನರ್ಕ ಶಂಭು ಸುಬ್ರಾಯ ಭಟ್ರ ಮಗ–ಗಾರ್ಡಿಯಾನ ಗಣಪತಿ ಭಟ್ಟ ಕಿನಿಲ ಈಶ್ವರ ಭಟ್ರ ಮಗ–ಪೆರುವಜೆ ಗ್ರಾಮ.
2. ಸರಸ್ವತಿ ಅಮ್ಮ ಸುಬ್ರಾಯ ಭಟ್ರ ವಿಧವೆ–ಸದ್ರಿ ಪೆರುವಜೆ ಗ್ರಾಮ.

Respondents.

ಎದ್ರಿರಿಂದ ಅರ್ಜಿದಾರಳಿಗೆ ಬರ ಜೀವನಾಂಶದ ಐವಜಿಗೆ ಅಮಲ್ಜಾರಿ ಮಾಡಿ ಯೇಲಂ ಇಸ್ತಿಹಾರು ವಗೈರೆ ಹಾಜ್ರು ಮಾಡಿ ಅದರ ಯೇಲಂ ಇಸ್ತಿಹಾರಿನ ಶರತ್ತುಗಳನ್ನು ನಿರ್ಣಯಿಸಲಿಕ್ಕಂತ (Notice of sale) ತಾರೀಕು 13–9–1943ಕ್ಕೆ ನೋಟೀಸಿನ ವ್ಯಾದೆ ಇಟ್ಟಿರುವದ್ರಿಂದ ಆ ವ್ಯಾದೆ ದಿನ ಎದ್ರಿರು ತಮ್ಮ ಆಕ್ಷೇಪಗಳೇನಾದರೂ ಹೇಳುವದಿದ್ದರೆ 11 ಘಂಟೆಗೆ ತಪ್ಪದೆ ಕೋರ್ಟಿನ ಮುಂದೆ ಹಾಜ್ರಾಗಿ ಬರಹಮೂಲಕ ಹೇಳಿಕೊಳ್ಳತಕ್ಕದ್ದು. ಇದಕ್ಕೆ ತಪ್ಪಿದ್ರೆ ಅವರನ್ನು ಶಿವಾಯಿ ಎಂತ ಮಾಡಿ ಮುಂದಿನ ತನ್ನಿಯಿಂದ ಈ ವೆವಹರಣೆಯನ್ನು ಮುಂದರಿಸಲಾಗುವದು ಎಂತ ಈ ಕೋರ್ಟು ಹುಕುಂ ಪ್ರಕಾರ ಈ ನೋಟೀಸು ಮಾಡಿಸಿಯದೆ.

Puttur S. K. } **B. Ramachandra Rao.**
30-8-1943 } Pleader for petr.

The Bank of Mangalore Limited, Mangalore.

ESTD. 1931

HEAD OFFICE Mangalore. *BRANCHES* Moodabidri & Padubidri

The Bank Undertakes to Collect Cheques, Demand and Documentary Bills at Most Competitive Rates.

ISSUES DRAFTS ON ALL IMPORTANT TOWNS IN THE DISTRICT

and also on

BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.

at very favourable rates

All kinds of inland banking business undertaken

ಹುಳಿಕಡ್ಡಿ ಮದ್ದು



ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಜ್ಜಿ, ಪಿತ್ಥ ಉಪದ್ರವ, ಕಲೆ, ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬಾಯಿ, ಮದರಾಸು, ಕಲ್ಕತ್ತ, ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಜೀವವಿಮೆ ಮಾಡುವ ಪ್ರಯೋಜನವು ಇಂದು ಹಿಂದಿಗಿಂತ ಅಧಿಕವಾಗಿದೆ.

ದಿ ಬಾಂಬೆ ಲೈಫ್ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಇದರಲ್ಲಿ ಒಂದು ಪಾಲಿಸಿ ಪಡೆದು

ಈಗಲೇ ನೀವು ನಿಮ್ಮನ್ನು ಮತ್ತು ನಿಮ್ಮನ್ನು ಹೊಂದಿಕೊಂಡಿರುವವರನ್ನು ರಕ್ಷಿಸಿಕೊಳ್ಳಿರಿ!

ಪ್ರತಿನಿಧಿಗಳಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಇನ್ಶೂರ್ ಮಾಡಲು ಅಥವಾ ಮಾಹಿತಿ ತಿಳುಕೊಳ್ಳಲು ದಯಮಾಡಿ ಬರೆಯಿರಿ!

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

— : ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ : —

ಬೆಂಗಳೂರು ಬೊಂಬಾಯಿ ಮದ್ರಾಸು ಕಲ್ಲಿಕೋಟೆ ಮಂಗಳೂರು ಮತ್ತು ತ್ರಿವೇಂದ್ರಂ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವ ವಿಧದ ದೋಷಗಳನ್ನು ಗುಣಪಡಿಸುವ ದಿವ್ಯ ಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ್ ವ ಏಜೆಂಟರು:—

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಷೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಶಾಖೆ:—1. ಮರಾಠ ಗಲ್ಲಿ ಹುಬ್ಬಳ್ಳಿ,

2. 36 ಪ್ಯಾಕ್ರೋಫ್ಟ್ಸ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಕೀರ್ತಿಪ್ರಾಪ್ತ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಮೃತ್ಯುಂಜಯ ರಸ. ಕೊಲರಾ ರೋಗಕ್ಕೆ ಸಿದ್ಧೌಷಧ.

ಪಂಚವಟಿ ಮಾತ್ರೆ.

ಸೇವನಾ ಕ್ರಮಗಳು ಔಷಧಿಯೊಡನೆ

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ... ಬೀದಿ ಮಂಗಳೂರು.

ಸ್ವದೇಶಾಭಿಮಾನಿ

SWADESHABHIMANI

STD. 1906

[ಸಂಪುಟ 37] ತಾರೀಕು 17—9—1943 [ಸಂಚಿಕೆ 38]

'ಸ್ವತಂತ್ರವಾದ ಭಾರತದಿಂದ ನಮಗೆ ಬಲವಿತ್ತು'

ಸ್ವತಂತ್ರ ಭಾರತದಿಂದ ನಮಗೆ ಬಲಬರುತ್ತಿತ್ತು

ಪ್ರೊ॥ ಲಾಸ್ಕಿ ಹೇಳುತ್ತಾರೆ.

'ಸ್ವತಂತ್ರವಾದ ಭಾರತವು ತನ್ನ ಮನವೊಪ್ಪಿ ಮಿತ್ರರಾಷ್ಟ್ರಗಳೊಡನೆ ತನ್ನ ಯೋಗ್ಯಸ್ಥಾನವನ್ನು ಸ್ವೀಕರಿಸಿದಾಗ ನಮಗೆ ಎಂಥಾ ಬಲ ಬರುತ್ತಿತ್ತೋ ಅದಿಂದು ಗಾಂಧಿ-ನೆಹರುಗಳನ್ನು ಬಂಧನದಲ್ಲಿಟ್ಟು ಪ್ರಜಾಪ್ರಭುತ್ವಕ್ಕಾಗಿ ಕಾದುವೆನೆಂದು ಹೇಳುವ ಬ್ರಿಟನಿಗೆ ಸಿಗುವುದು ಸಾಧ್ಯವೇ ಇಲ್ಲ.' ಎಂದು ಇಂಗ್ಲಡಿನ ಪ್ರಸಿದ್ಧ ಲೇಖಕ ಪ್ರೊ॥ ಲಾಸ್ಕಿಯವರು ತಮ್ಮ ಹೊಸ ಪುಸ್ತಕ 'ನಮ್ಮ ಕಾಲದ ಕ್ರಾಂತಿಯ ಕುರಿತು ವಿಚಾರಗಳು' ಎಂಬ ಪುಸ್ತಕದಲ್ಲಿ ಬರೆಯುತ್ತಾರೆ. ಅವರು ಮುಂದುವರಿಸಿ ಅದರಲ್ಲಿ ಹೀಗೆಂದಿರುವರು.

'ಭಾರತವು ನಮ್ಮ ಮುಂದಿರಿಸಿದ ಬೇಡಿಕೆ ಅಸಾಧ್ಯವಾಗಲಿ, ಅಕಾಲಿಕವಾಗಲಿ ಇರಲಿಲ್ಲ ಯುದ್ಧ ಪೂರ್ವದಲ್ಲಿಯೇ ಭಾರತ ಸಮಸ್ಯೆ ಬಿಡಿಸುವ ಅವಕಾಶ ಸಿಕ್ಕಿದಾಗ ಅದನ್ನು ತಿರಸ್ಕರಿಸಲಾಯಿತು ಕ್ರಿಪ್ಸ್ ಸಂಧಾನವೂ, ಪ್ರತಿಗಾಮಿಗಳ ವಿರೋಧ ಸರಕಾರದ ಸಂಕುಚಿತ ಧೋರಣೆಗಳಿಂದಾಗಿ ವಿಫಲವಾಯಿತು ಸೋವಿಯೆಟ್ ಅಧಿಕಾರದಲ್ಲಿ ೨೫ ವರ್ಷಗಳಲ್ಲಿ ರಶ್ಯದಲ್ಲಾದ ಅಭಿವೃದ್ಧಿ ನಮ್ಮ ೧೫೦ ವರ್ಷಗಳ ಭಾರತದ ಆಡಳಿತದಲ್ಲಿಯೂ ಆಗಲಿಲ್ಲ. ಏಶ್ಯದ ಜನರನ್ನು ಬ್ರಿಟನು ಅಮೇರಿಕಗಳ ಜನರಂತೆ ಭಾವಿಸದಿದ್ದುದೇ ಕ್ರಿಪ್ಸ್ ಸಂಧಾನ ವಿಫಲವಾಗಲು ಕಾರಣ. ಭಾರತದಲ್ಲಿ ಜಾತೀಯ ಮತ ಭೇದಗಳುಂಟೆಂದು ಒಪ್ಪಿಕೊಂಡರೂ, ನಾವು ಯಾವ ಪೌರುಷ ತೋರಿಸಿ ಯುದ್ಧವನ್ನೆದುರಿಸುತ್ತೇವೋ ಅಂಥಾ ಪೌರುಷ ತೋರಿದರೆ ಅಲ್ಲಿನ ಮತ ಭೇದವನ್ನು ಅಡಗಿಸಲು ಸಾಧ್ಯವುಂಟು'

ಬಂಗಾಳದ ಗವರ್ನರರಿಗೆ ಶ್ಯಾಮಪ್ರಸಾದ ಮುಖರ್ಜಿಯವರ ಬಹಿರಂಗ ಪತ್ರ

ಡಾ॥ ಶ್ಯಾಮ ಪ್ರಸಾದ ಮುಖರ್ಜಿಯವರು ಬಂಗಾಳದ ಈಗಿನ ಗವರ್ನರ್ ಸರ್ ಥಾಮಸ್ ರುಧರ್‌ಫೋರ್ಡರಿಗೆ ಒಂದು ಬಹಿರಂಗ ಪತ್ರ ಬರೆದಿದ್ದಾರೆ

ಬಂಗಾಳದ ಗವರ್ನರರಿಗೆ ಮುಖರ್ಜಿಯವರ ಪತ್ರ

ಬಂಗಾಳದ ಸಾವಿನ ಸುದ್ದಿ!

ಬಂಗಾಳದ ಇಂದಿನ ಕಂಗಾಲು ಪರಿಸ್ಥಿತಿಯ ನಿವಾರಣೋಪಾಯದ ಕುರಿತು ನಿರ್ದಾಕ್ಷಿಣ್ಯವಾಗಿ ತಿಳಿಸಿದ್ದಾರೆ ಕೂಡಲೇ ನಿವಾರಣೋಪಾಯ ಕೈಕೊಳ್ಳದಿದ್ದರೆ ಗವರ್ನರರೇ ಜನತೆಯನ್ನು ಇದಿರಿಸಬೇಕಾಗುವುದೆಂದು ಎಚ್ಚರಿಸಿದ್ದಾರೆ ಅವರ ಸುದೀರ್ಘ ಪತ್ರದ ಸಾರಂಶ ವಿಂತಿದೆ. — — —

'ಯುದ್ಧ ನಿರ್ವಹಣ ದೃಷ್ಟಿಯಿಂದ ಸರಕಾರವು ಜನರನ್ನು ಸಾಯದಂತೆ ಮೊದಲೇ ಮುಂಜಾಗ್ರತೆ ವಹಿಸಬೇಕಾಗಿತ್ತು. ಸರಕಾರದ ಈ ತಪ್ಪು ಇನ್ನು ಮುಂದುವರಿಯಬಾರದು. ಆಸ್ಟ್ರೇಲಿಯಾ ಮೊದಲಾದ ಬೇರೆ ದೇಶಗಳಿಂದ ಬಂಗಾಳಕ್ಕೆ ಆಹಾರ ತರಿಸಬೇಕೆಂದು ಕಳೆದ ತಿಂಗಳಿಂದ ಕೇಳಿಕೊಳ್ಳುತ್ತಿದ್ದರೂ ಇಷ್ಟು ವರೆಗೆ ಆ ಕಾರ್ಯಕ್ರಮ ಆಗಿಲ್ಲ ಅನಿರ್ಬಂಧ ವ್ಯಾಪಾರವಿದ್ದ ಕಾಲದಲ್ಲಿ, ಯಾವುದೇ ಮುಂಜಾಗ್ರತೆ ವಹಿಸದೆ ಮುಸ್ಲಿಂ ಲೀಗಿನ ಕೃಪಾಶ್ರಯದ ಒಂದು ಸಂಸ್ಥೆಗೆ ೮॥ ಕೋಟಿ ರೂಪಾಯಿಗಳನ್ನು ಮುಂಗಡ ಕೊಟ್ಟ ಸರಕಾರ ಪ್ರಜೆಗಳ ಹಿತ ಹಾಳುಮಾಡಿದೆ. ಇದರ ವಿಚಾರಣೆಗೆ ನಿಷ್ಪಕ್ಷಪಾತೀ ಮಂಡಳಿಯೊಂದೇರ್ಪಡಬೇಕು, ಅದರ ಮುಂದೆ ಮಂತ್ರಿ ಮಂಡಳದ ಸ್ವಾರ್ಥದೃಷ್ಟಿಯ ವ್ಯವಹಾರವನ್ನು ಬಯಲಿಗೆಳೆಯಲು ಆಸ್ಪದ ಕೊಡಬೇಕು ನಿಯಂತ್ರಣದ ಮೊದಲು ಸಾಹುಕಾರರಿಗೆ ಮನಬಂದಂತೆ ಆಹಾರ ಕೊಂಡುಕೊಳ್ಳುವ ಅವಕಾಶ ಕೊಡಲಾಗಿದೆ ಇದರಿಂದ ಕಳ್ಳ ಪೇಟೆಗೆ ದಾರಿಯಾಯಿತು ಆಹಾರವನ್ನು ಹಂಚುವ ಕೆಲಸದಲ್ಲಿಯೂ ಜಾತೀಯತೆಯ ತಳಹದಿಯನ್ನು ಸರಕಾರ ವಹಿಸಿದೆ. ಇಲ್ಲಿ ಲಂಚಖೋರತನವಾದದ್ದು ಜಾಹಿರವಾಗಿದೆ. ಮಿಲಿಟರಿಯವರ ಹತ್ತಿರ ಎಷ್ಟು ಸಂಗ್ರಹವುಂಟೆಂದು ತಿಳಿಸಬೇಕು. ಪ್ರಾಂತದಲ್ಲಿ ಆಹಾರ ಕೊರತೆಯಿದ್ದರೂ ಅದಿಲ್ಲವೆಂದು ಸರಕಾರ ತಪ್ಪು ತಿಳಿಸಿದೆ '

ಆ ಮೇಲೆ ಮುಖರ್ಜಿಯವರು ಮಧ್ಯಮ ವರ್ಗ ಹಾಗೂ ಕೂಲಿಗಾರರ ಗೋಳನ್ನು ವಿವರಿಸಿ ಸಾರ್ವಜನಿಕ ಜೀವನದ ಬೆನ್ನೆಲುಬಿನಂತಿದ್ದ ಅವರಿಗೆ ಸಹಾಯ ಕೊಡುವುದು ಅವಶ್ಯವೆಂದಿದ್ದಾರೆ ಬಂಗಾಳದ ಇಂದಿನ ಮಂತ್ರಿಮಂಡಳ ಪಕ್ಷಾಂಧವಿದೆಯೆಂದೂ ಅದರಲ್ಲಿ ಜನತೆಗೆ ವಿಶ್ವಾಸವಿಲ್ಲವೆಂದೂ, ಆದ್ದರಿಂದ ಪ್ರಜೆಗಳ ಸಂಕಷ್ಟ ನಿವಾರಣೆಗೆ ಅದು ಅಸಮರ್ಥವಿರುವುದೆಂದೂ ತಿಳಿಸಿ, ಸಾರ್ವಜನಿಕ ಬೆಂಬಲವುಳ್ಳ ಸರಕಾರವೊಂದೇ ಈ ಸಂಕಷ್ಟ ನೀಗಿಸಬಹುದೆಂದು ಎಚ್ಚರಿಸಿ, ಒಂದು ವೇಳೆ ಪ್ರಾತಿನಿಧಿಕ ಸರಕಾರ ಮಾಡುವುದು ಅಸಾಧ್ಯವಾದರೆ ಗವರ್ನರರೇ ತಮ್ಮ ಕಾರುಭಾರು ಮಾಡಬೇಕೆಂದೂ ಆಗ್ಯ ಜನತೆಯನ್ನು ಗವರ್ನರರು ಎದುರಿಸಬೇಕಾಗುವುದೆಂದೂ ಹೇಳಿದ್ದಾರೆ 'ಆಹಾರ ಹೆಚ್ಚು ಬೆಳೆಸಿರಿ' ಎಂದು ಟೊಳ್ಳು ಪ್ರಚಾರ ಪ್ರಯೋಜನವಿಲ್ಲವೆಂದೂ ಅದಕ್ಕೆ ಬೇಕಾದ ಸಹಾಯವನ್ನು ಸರಕಾರ ರೈತರಿಗೆ ಒದಗಿಸಲಿಲ್ಲವೆಂದೂ, ಇಂದು ರಾಜಕೀಯ ಕೈದಿಗಳನ್ನು ಬಿಡುಗಡೆಮಾಡಿದರೆ ಪರಿಸ್ಥಿತಿ ಸುಧಾರಿಸುವುದೆಂದೂ ಸ್ವಾತಂತ್ರ್ಯವೊಂದೇ ಇದೆಲ್ಲವರ ಪರಿಹಾರವೆಂದೂ ಕೊನೆಗೆ ನಿರ್ಧರಿಸಿದ್ದಾರೆ

ಮುಖರ್ಜಿಯವರು ಬಂಗಾಳದ ಹಿಂದಿನ ಮಂತ್ರಿ ಬಂಗಾಳ ನಿರಾಶ್ರಿತರಿಗಾಗಿ ಇಂದು ಲಕ್ಷಾಂತರ ನಿಧಿಸಂಗ್ರಹಿಸಿ ನೆರವಾಗುತ್ತಾರೆ ಬಂಗಾಳದ ಸಂಕಷ್ಟ ಅವರಿಗೆ ಚೆನ್ನಾಗಿ ಗೊತ್ತು, ಅವರ ಅನುಭವ ಪರಿಪಕ್ವವಾದುದು ಹೊಸ ಗವರ್ನರಿಗೆ ಈ ಮಾತು ರುಚಿಸಲಿಕ್ಕಿಲ್ಲವೆ?

ಬಂಗಾಳದ ಸಾವಿನ ಸುದ್ದಿ! ೧೭೭೦ರ ಪುನರಾವೃತ್ತಿ!

೧೭೭೦ರಲ್ಲಿ, ಲಾರ್ಡ್ ಕ್ಲೈವನ ಕಾಲದಲ್ಲಿ ಬಂಗಾಳಕ್ಕೆ ಉಂಟಾದ ಬರಗಾಲವು ಅತ್ಯಂತ ಭೀಕರವಾಗಿತ್ತು. ರಸ್ತೆಗಳಲ್ಲಿ ಬಿದ್ದ ಹೆಣಗಳನ್ನು ಎತ್ತಿ ಹಾಕಲು ಬದುಕಿದ್ದವರಲ್ಲಿ ಶಕ್ತಿಯಿದ್ದಿಲ್ಲ, ಆದ್ದರಿಂದ ನರಿ ಹದ್ದುಗಳೇ ಊರಿಗೆ ನುಗ್ಗಿ ಪ್ರೇತ ನಾಟ್ಯ ನಡೆಸುತ್ತಿದ್ದವೆಂದು ಹೇಳಲಾಗಿದೆ. ಆದರೆ ಬಂಗಾಳದ ಇಂದಿನ ಪರಿಸ್ಥಿತಿಯು ಅಷ್ಟೇ ಭೀಕರವಾಗಿದೆ, ಇಂದೂ ನರಿ ಹದ್ದುಗಳು ಮನುಷ್ಯರನ್ನು ಭಕ್ಷಿಸುತ್ತಿರುವ ಸುದ್ದಿ ಬಂದಿದೆ ಮೊಗ್ರಾ ಬಜಾರದಲ್ಲಿ ಹಸಿವೆಯಿಂದ ಕಂಗಾಲಾದ ಓರ್ವ ಮನುಷ್ಯನು ರಸ್ತೆಯ ಬದಿಯಲ್ಲಿ ಮಲಗಿದ್ದನು. ಮಧ್ಯರಾತ್ರಿಯ ಹೊತ್ತಿಗೆ ತೋಳವೊಂದು ಬಂದು ಅವನ ಕಾಲನ್ನು ಕಚ್ಚಿ ತಿನ್ನ ತೊಡಗಿತು ಈ ದುರ್ಭಾಗ್ಯನ ನರಳುವಿಕೆಯನ್ನು ಕೇಳಿ ಹಾದಿಕಾರನೊಬ್ಬನು ತೋಳವನ್ನೋಡಿಸಿದನು

ಮಧ್ಯಮ ವರ್ಗದವರ ಪಾಡನ್ನಂತೂ ಹೇಳುವುದೇ ಬೇಡ. ಅವರು ಬಾಗಿಲು ಮುಚ್ಚಿ ಒಳಗೆ ಕುಳಿತು ಕಣ್ಣೀರು ಸುರಿಸುತ್ತಿರುವರು ಸುಖಮರಣವನ್ನಾದರೂ ಕೊಡು ಎಂದು ಭಗವಂತನಲ್ಲಿ ಮೊರೆಯಿಡುತ್ತಾರೆ' ಎಂದು ಜಿಲ್ಲಾ ಪರಿಹಾರ ಸಮಿತಿಯವರ ಪ್ರಕಟಣೆಯೊಂದು ತಿಳಿಸುತ್ತದೆ 'ಈ ಬರಗಾಲಕ್ಕೆ ಅನೇಕರು ಬಲಿಯಾದರು, ಮೊದಮೊದಲು ಅವರು ಭಿಕ್ಷೆ ಬೇಡಿದರು ಅದು ಸಿಗದಾಗಲು ಅನ್ನದ ಛತ್ರಗಳಿಗೆ ಮುತ್ತಿಗೆ ಹಾಕಿದರು. ಅಲ್ಲಿಂದಲೂ ಹೊರಹಾಕಲ್ಪಟ್ಟ ನಂತರ ಗೆಡ್ಡೆ ಗೆಣಸು ಹುಲ್ಲುಗಳನ್ನು ತಿನ್ನತೊಡಗಿದರು, ಇದರಿಂದ ವಾಂತಿಬೇದಿ ಅತಿಸಾರ, ವಿಷಮ ಜ್ವರಗಳು ತಗಲಿದವು. ಸರಿಯಾಗಿ ವೈದ್ಯ ಸಹಾಯವೂ ಇಲ್ಲ. ಹೆಂಗಸರು ಮತ್ತು ಮಕ್ಕಳೂ ರಸ್ತೆ ಬದಿಗಳಲ್ಲಿ ಬಿದ್ದು ಸಾಯುತ್ತಾರೆ, ಇವರನ್ನು ಹೊತ್ತು ಹಾಕುವುದೇ ಸಮಸ್ಯೆಯಾಗಿದೆ' ಎಂದೂ ಆ ಪ್ರಕಟಣೆಯಲ್ಲಿದೆ.

ಸಿಂಧದಲ್ಲಿ ಹಿಂದುಗಳು ಸಂಕಷ್ಟಕ್ಕೊಳಗಾಗಿದ್ದಾರೆ

ಸಿಂಧಿನಲ್ಲಿ ಇಂದು ಮುಸ್ಲಿಂ ಲೀಗ್ ಪ್ರಭಾವದ ಮಂತ್ರಿ ಮಂಡಳವಿದೆ ಅಲ್ಲಿನ ಲೀಗಿನವರು ಹಿಂದುಗಳ ಅಂಗಡಿಗಳನ್ನು ಬಹಿಷ್ಕರಿಸಿ ಮೊದಲಾಗಿ ಪ್ರಚಾರ ಮಾಡುತ್ತಾರೆ. ಶಿಕಾರಪುರ ಪ್ರಾಂತ್ಯದಲ್ಲಿ ಹಿಂದುಗಳ ಮೇಲೆ ಅತ್ಯಾಚಾರ ನಡೆಯುವ ಸುದ್ದಿ ಬರುತ್ತದೆ. ಸಿಂಧದ ರಾಷ್ಟ್ರೀಯ ಮನೋಭಾವದ ಹಿಂದಿನ ಮುಖ್ಯ ಮಂತ್ರಿ ಅಲ್ಲಾ ಭಕ್ಷರನ್ನು ಅಧಿಕಾರದಿಂದ ಕೆಳತಳ್ಳಿ, ಗುಂಡಿಟ್ಟು ಕೊಲ್ಲಲಾಗಿದೆ. ಅಲ್ಲೀಗ ಮುಸ್ಲಿಂ ರಾಜ್ಯಭಾರವಾಗಿ, ಹಿಂದುಗಳು ಸಂಕಷ್ಟಕ್ಕೊಳಗಾಗಿದ್ದಾರೆಂಬುದು ಧೃಡಿದೆ, ಈ ವಿಷ ಬೀಜವನ್ನು ಬೆಳೆಸುವುದು ಅಪಾಯಕರ!

ಇಡೀ ಬಂಗಾಳವಿಂದು 'ಕತ್ತಲು ಕೋಣೆ'

ಯಾವ ನವಾಬನೂ ಇದಕ್ಕೆ ಕಾರಣನಲ್ಲ.

ಸರಕಾರಕ್ಕೆ ಮುನ್ಶಿಯವರ ಹಿತವಾದ

"ಭಾರತವಿಂದು ಅಸಹಾಯವಾಗಿದೆ. ಅದರ ಮೃತ್ಯುಗಳು ಸಂಕೋಲೆಯಿಂದ ಬಿಗಿದಿವೆ. ಬ್ರಿಟಿಷರು ಲೋಕಾಧಿಪತ್ಯಕ್ಕೆ ಹೋರಾಡುತ್ತಾರೆ. ಆದರೆ ತುಲಸೀದಾಸರ ವಚನಾಮೃತವನ್ನು ನೆನಪುಮಾಡಿಕೊಳ್ಳಲಿ. 'ದರಿದ್ರರ ಅನಾಥರ ಶಾಪ ಎಂದಿಗೂ ವ್ಯರ್ಥವಾಗದು.' ಬ್ರಿಟನು ಈ ಪಂಕ್ತಿಯನ್ನು ವಿಚಾರಿಸಿ ಕೂಡಲೇ ಜಾಗೃತಿಗೊಂಡು ಕಾರ್ಯ ಕೈಕೊಳ್ಳಬೇಕು. ಬ್ರಿಟಿಷರು ಭಾರತದ ರಾಜಕೀಯವನ್ನು 'ಹಿಮಸಮಾಧಿ' (Cold storage)ಯಲ್ಲಿಡುವ ಪ್ರಯತ್ನ ಮಾಡಬಹುದು. ಆದರೆ ಭಾರತೀಯರ ಜೀವವನ್ನು ಪ್ರಯೋಜನವಿಲ್ಲವೆಂದು ತಿಳಿಯುವುದು ತಪ್ಪು. ಬಂಗಾಳದ ಇಂದಿನ ಈ ಹಾಹಾಕಾರವು ಭಾರತದ ಹಾಹಾಕಾರದ ಮುನ್ನುಡಿಯಾಗಿದೆ. ಇಂದಿನೀ ಹೆಣಗಳಿಗೆ ನಾಳೆ ಅಗಣಿತ ಬೆಲೆ ತೆರಬೇಕಾದೀತು" ಹೀಗೆಂದು ಮುಂಬಯಿಯ ಮಾಜಿ ಮಂತ್ರಿಗಳೂ, ಭಾರತದ ಓರ್ವ ಮುಂದಾಳುಗಳೂ ಆದ ಶ್ರೀ ಕನ್ಹಯ್ಯಲಾಲ ಮುನ್ಶಿಯವರು ಬಂಗಾಳದ ಇಂದಿನ ಉಪವಾಸ ಪರಿಸ್ಥಿತಿಯ ವಿಚಾರ ಬರೆಯುತ್ತಾ ಸರಕಾರಕ್ಕೆ ತೀವ್ರ ಎಚ್ಚರಿಕೆಯಿತ್ತಿದ್ದಾರೆ. ಅವರ ಲೇಖನದ ಇತರ ಅಂಶಗಳು ಇಂತಿವೆ.

'ಗಂಡುಸರು ಹಸಿದು ಕಂಗಾಲಾಗಿ ಒಂದು ತುತ್ತು ಅನ್ನಬೇಡಲು ಮನೆಬಿಟ್ಟು ಹೋಗುವುದು, ಹೆಂಗುಸರು ಕೊನೆಯ ಗಳಿಗೆವರೆಗೂ ಸಿಗಲೊಲ್ಲದ ಅನ್ನಕ್ಕಾಗಿ ವಾರವಾರ ಚಿಂತಿಸಿ, ಕೊನೆಗೆ ಒಂದು ತುತ್ತನ್ನ ಕೊಡಬಲ್ಲವರಿಗೆ ತಮ್ಮ ಮಕ್ಕಳನ್ನು ಮಾರುತ್ತಿರುವುದು, ಶಿಶುಗಳು ಅನ್ನದ ವ್ಯರ್ಥ ನಿರೀಕ್ಷೆಯಿಂದ ಬೆಂಡಾಗಿ ಕಸದ ಡಬ್ಬಿಗಳಲ್ಲಿ ಬಿದ್ದಿರುವ ಎಂಜಲೆಲೆಗಾಗಿ ಬೀದಿ ನಾಯಿಗಳೊಡನೆ ಜಗಳಾಡುತ್ತಿರುವುದು, ಇದು ಇಂದು ಬ್ರಿಟಿಷರಾಳುತ್ತಿರುವ ಭಾರತದ ಒಂದು ದೃಶ್ಯ! ಅಮೆರಿಯರ ಅಭಿಪ್ರಾಯದಂತೆ, ದೇವಲೋಕಕ್ಕೆ ಸಮದಟ್ಟುವ ಬ್ರಿಟಿಷ್ ಸಾಮ್ರಾಜ್ಯದ ದ್ವಿತೀಯ ಮಹಾ ನಗರವಾದ ಕಲ್ಕತ್ತೆಯ ಹೃದಯ ದ್ರಾವಕ ದೃಶ್ಯ! ವ್ಯಾಪಾರಕ್ಕೆಂದು ಬಂದು, ಅಧಿಕಾರಕ್ಕೆಂದು ನೆಲಸಿದ ಬಿಳಿಯರು, ಈ ದೇಶದಲ್ಲಿ ಕಾಲಿಟ್ಟು ಎರಡು ಶತಮಾನಗಳಾದ ಮೇಲೆ, ಇಂದು ಜಗತ್ತಿನ ಸ್ವಾತಂತ್ರ್ಯವನ್ನು ಸಂಪಾದಿಸಲು ಹೋರಾಡುವ ಮಹಾ ಯುದ್ಧದ ನಾಲ್ಕನೆಯ ವರ್ಷದಲ್ಲಿ, ಭಾರತದ ಜನಕೋಟಿಯು ಎದುರಿಸಬೇಕಾದ ಉಪವಾಸ, ರೋಗ, ಹಾಹಾಕ್ರಂದನಗಳು ಇಷ್ಟು ಭಯಂಕರ ರೀತಿಯಲ್ಲಿ, ಈ ದೇಶದಲ್ಲಿ ಹಿಂದೆಂದೂ ಉಂಟಾಗಿಲ್ಲ.

'ಬ್ರಿಟಿಷ್ ಇತಿಹಾಸಕಾರರಿಗೆ ಕಲ್ಕತ್ತೆಯ ಕತ್ತಲುಕೋಣೆ ಬಹಳ ಮೆಚ್ಚಿಗೆಯಾದ ಕತೆ. ಈ ಕಟ್ಟು ಕತೆಯನ್ನು ಸತ್ಯವೆಂದೇ ಅವರು ಭಾರತದ ಶಾಲೆಗಳಲ್ಲಿ ಎಳೆಹುಡುಗರಿಗೆ ಕಲಿಸುತ್ತಾರೆ. ಆದರೆ ಇಂದು ಆಹಾರವಿಲ್ಲದೆ ಇಡಿಯ ಬಂಗಾಳವೇ ದೊಡ್ಡ ಕತ್ತಲು ಕೋಣೆಯಾಗಿದೆ. ಈ ಸಲ ಇಂಥಾ ಕತ್ತಲುಕೋಣೆ ಮಾಡಲು ಯಾವನೊಬ್ಬನ ನವಾಬನ 'ಕಟ್ಟುನೀತಿ'ಯೂ ಕಾರಣವಲ್ಲ. ಇದು ಸರ್ ಜಾನ್ ಹರ್ಬರ್ಟರ ಹಾಗೂ ಅವರ ಹೊಸ ಗೆಳೆಯರ ಕೃಪಾಶ್ರಯದಲ್ಲಿ ಮತ್ತು ಲಾರ್ಡ್ ಲಿನ್‌ಲಿತ್‌ಗೋರವರ ಉದಾರ ಆಡಳಿತದ ನೆರಳಲ್ಲಿ ನಡೆದದ್ದು; ಅವರ ನಿಷ್ಪ್ರಯೋಜಕ ರಾಜ್ಯಭಾರಕ್ಕೆ ತಕ್ಕ ಪ್ರತಿಫಲವಾಗಿ. ಮಾರ್ಗಗಳ ಬದಿಯಲ್ಲಿ ಹೆಂಗುಸರು ಬೋಧತಪ್ಪಿ ಬೀಳುತ್ತಿರುವಾಗ, ಅವರ ಒಣಗಿದ ಗಂಟಲುಗಳಿಗೆ ಒಂದು ಹನಿ ನೀರು ಎರೆಯುವವರಿಲ್ಲದೆ ಶಿಶುಗಳು ತಾಯಂದಿರ ಬಗಲಲ್ಲಿ ಕಣ್ಮುಚ್ಚುವ, ಮನುಷ್ಯರು ಮನುಷ್ಯರಾಗಿರದೆ ಕೇವಲ ಚರ್ಮದ ಚೀಲಗಳಲ್ಲಿ ತುಂಬಿಸಿದ ಎಲುಬಿನ ಹೊರೆಯಾಗಿರುವ ದೃಶ್ಯ, ಇಂದು ಬಂಗಾಳ ಪ್ರಾಂತ್ಯ ಒಂದರಲ್ಲಿ ಅಲ್ಲದೆ, ಈ ವಿಶಾಲ ವಿಶ್ವದಲ್ಲಿ ಬೇರೊಂದು ಕಡೆ ಎಲ್ಲಾದರೂ ಉಂಟೆ?

'ಹಿಟ್ಲರ್ ವಿರೋಧ ಹೋರಾಡುವೀ ಯುದ್ಧದ ನಾಲ್ಕುವರ್ಷಗಳಲ್ಲಿ ನಾಜಿಗಳ ದಬ್ಬಾಳಿಕೆಗೆ ಬಲಿಯಾದ ಜನರ ಸಂಕಷ್ಟ ಸಾವಿರಗಳನ್ನು ಕಣ್ಣಮುಂದೆ ಕಟ್ಟುವ ಕತೆಗಳ, ಚಿತ್ರಗಳ ಸುರಿಮಳೆ ಸುಂಟರಗಾಳಿಗಳು ನಮ್ಮ ಮುಂದೆ ಕೋಲಾಹಲ ಮಾಡಿವೆ. ಸ್ವಾಲದ್ದಕ್ಕೆ ಮಿತ್ರರು ಅಮೆರಿಕದ ಧುರೀಣತೆಯಲ್ಲಿ ಒಮ್ಮೆ ನಾಜಿಗಳನ್ನು ನಿರ್ಮೂಲಮಾಡಿದ ಮೇಲೆ ಜಗತ್ತಿಗೆ ಕೊಡುವ ಸುಖಸೌಭಾಗ್ಯಗಳ ಗುಣಗಾನ ಬೇಕಾದಷ್ಟು ಕೇಳಿದ್ದೇವೆ. ಅದರ ಅನಂತ ಪ್ರಕೃತಿ ಸುಖದ ತವರೂರಾದ ಈ ದೇಶದಲ್ಲಿ ಸಾವಿರಾರು ಜನ ಹಸಿವು, ರೋಗಗಳಿಗೆ ಬಲಿಯಾಗುತ್ತಿದ್ದರೂ ಅದರ ಸುದ್ದಿ ಬಾಹ್ಯ ಜಗತ್ತಿಗೆ ತಿಳಿಯಂದಿತರಬೇಕಾಗಿದೆ! ಹೀಗೆಂದು ಆಹಾರದ ಅಭಾವದ ವಿಷಯ ಕಂಬನಿ ಸುರಿಸುವುದು ಕಡಿಮೆಯಾಗಿಲ್ಲ: ಬಂಗಾಳ ಸರಕಾರ 'ಕೂಡಿಸಿಡುವವರ ಮೇಲೆ ಕಾಳಗ ಮಾಡುವೆವು; ಬೆಲೆಗಳನ್ನು ನಿಯಂತ್ರಿಸುವೆವು, ಕಳ್ಳ ಪೇಟೆಯನ್ನು ನಿರ್ನಾಮ ಮಾಡುವೆವು ಮತ್ತು ಸಾಧ್ಯವಿದ್ದದನ್ನೆಲ್ಲಾ ಮಾಡಿಯೇ ಬಿಡುವೆವು' ಎಂದು ತನ್ನ ನಿರ್ಧಾರ ತಿಳಿಸಿದೆ. ಆದರೆ ಇಂಥಾ ಒಂದು ಪತ್ರಿಕಾ ಪ್ರಕಟಣೆಗಳ [illegible] ಹಿಂದಿದ್ದು, ನೂರಾರು ಶವಗಳನ್ನು ಮಾರ್ಗಗಳಿಂದ ಎತ್ತಿಕೊಂಡು ಹೋಗುವ, ವಿಷಮ ಜ್ವರ ವಾಂತಿ ಭೇದಿಗಳು ಹಬ್ಬುತ್ತಿರುವ, ದಿಕ್ಕಿಲ್ಲದೆ ಹೆಣಗಳು ಕೊಳೆಯುತ್ತಿರುವ ಸುದ್ದಿಗಳೂ ಬರುತ್ತವೆ!

'ಬಂಗಾಳದ ಆಹಾರ ಅಭಾವವನ್ನು ಬಹಿರಂಗವಾಗಿ ಹೇಳಿ ತಿಳಿಸುವ ಎದೆಗಾರಿಕೆಯುಳ್ಳ ಮಂತ್ರಿಮಂಡಳ ವೊಂದಿತ್ತು. ಅದು ಬಂಗಾಳದ ಗವರ್ನರರಿಗೂ ಅಲ್ಲಿನ ಬಿಳಿಯರಿಗೂ ಅಸಹನೀಯವಾಯಿತು. ಕ್ಲೈವ ಬೀದಿಯ (ಯುರೋಪಿಯನ್ ವಸತಿ) ಅಧಿಪತಿಗಳ ಬೆಂಬಲದಿಂದ ಹೊಸ ತಂಗಡವೊಂದನ್ನು ಉಪ್ಪರಿಗೆಗೇರಿಸಲಾಯಿತು. ಬಹು ಮಂದಿ 'ಸ್ವಾಮಿ'ಗಳ ಮನ ಮೆಚ್ಚಿಸಲು ಹೊರಟ ಮಂತ್ರಿಮಂಡಳಗಳು ಮಾತಿನಲ್ಲಿ ಪುಲ್ಲತನ ತೋರಿಸಿದರೂ ಕೃತಿಯಲ್ಲಿ ನಿಷ್ಪ್ರಯೋಜಕವಾಗುವವು; ಕೇವಲ ವಿಡಂಬನಾತ್ಮಕ ವೀರಾವೇಶ ತೋರಿಸಿ ತಮ್ಮನ್ನು ಹೇಗಾದರೂ ಉಳಿಸಿಕೊಂಡು ಲಕ್ಷಾಂತರ ಮಂದಿಯನ್ನು ನರಳಿಸುವವು. ಸರ್ ಜಾನ್ ಹರ್ಬರ್ಟರು ಎಲ್ಲಾ ತಪ್ಪನ್ನೂ ಕೇಂದ್ರ ಸರಕಾರದ ತಲೆಗೆ ಹೊರಿಸಬಹುದು. ಕೇಂದ್ರದಲ್ಲಂತೂ 'ಊರು ಉರಿಯುತ್ತಿರುವಾಗ ವಾದ್ಯ ಊದುವುದು' ನಡೆದಿದೆ. ವಿಹಾರಕೂಟ, ಬೀಳ್ಕೊಡುವ ಸಮಾರಂಭ, ನರ್ತನಗಳಲ್ಲಿ ಲಾರ್ಡ್ ಲಿನ್‌ಲಿತ್‌ಗೋ? ಮತ್ತು ಅವರ ಮಂತ್ರಿಮಂಡಳ ಹಾಗೂ ವಿದೇಶದಿಂದ ಆಮದಾದ 'ವಿಶೇಷಜ್ಞ'ರು, ಶಾಶ್ವತ ಕಾರ್ಯದರ್ಶಿಗಳು ತಲ್ಲೀನರಾಗಿದ್ದಾರೆ. ಅನ್ನವಿಲ್ಲದೆ ನರಳುವ ಬಂಗಾಳ ಅವರಿಗಿರುವ ಸಾವಿರಾರು ಕೆಲಸಗಳಲ್ಲಿ ಒಂದು. 'ಅನ್ನಭಾವವೆಂಬುದು ಯುದ್ಧಕ್ಕೆ ಸಂಬಂಧಿಸಿದ್ದಲ್ಲ ಅಥವಾ ರಾಜಕೀಯ ಭಾರತದ ಮರ್ದನಕ್ಕೆ ಸಂಬಂಧಿಸಿದ್ದೂ ಅಲ್ಲ.' ಹಾಗಿರುವಾಗ ಕೇಂದ್ರ ಸರಕಾರವು ತನ್ನ ಉನ್ನತ ದೃಷ್ಟಿಯನ್ನು 'ಯುದ್ಧಯತ್ನ'ದಿಂದ ಹೊರಳಿಸಿ, ಪ್ರಾಂತಿಕ ಸ್ವಾಯತ್ತತೆಯ ಅಧಿಕಾರಕ್ಕೆ ಆತಂಕ ತರುವುದು. ಅದಕ್ಕೆ ಸರ್ವಥಾ ಸಾಧ್ಯವಾಗುವುದಿಲ್ಲ.

'ಕ್ಲೈವ್ ರಸ್ತೆಯ ವ್ಯಾಪಾರೀ ಮಹನೀಯರು ತಮ್ಮ ಸೇವಕರಿಗಾಗಿ ಆಹಾರ ಸಂಗ್ರಹಿಸಿಟ್ಟುದನ್ನು ಬಹಿರಂಗ ಒಪ್ಪುತ್ತಾರೆ. ಸೈನ್ಯ ಶಾಖೆಯವರೂ ತಮಗೆ ಬೇಕಾದಷ್ಟು ಸಂಗ್ರಹವಿಟ್ಟುಕೊಳ್ಳದೆ ಸಾಧ್ಯವಿಲ್ಲ. ಆದರೆ ಬಂಗಾಳದ ಆಹಾರ ಮಂತ್ರಿಗಳಿಗೆ ತಮ್ಮ ಆಶ್ರಯದಾತರ ಮನನೋಯಿಸುವ ಪೌರುಷ ಬರಬೇಕೆಂದರೆ ಎಲ್ಲಿಂದ ಬರಬೇಕು? ಆ ಆಶ್ರಯದಾತರಾದರೂ, 'ಭಾರತೀಯರು ಅನ್ನದ ಗಂಜಿ ಕುಡಿದು, ಬಿಳಿಯರಿಗೆ ಅನ್ನವನ್ನು ಕೊಡುತ್ತಿದ್ದ' ಹಿಂದಿನ ಸುಖದಿನಗಳನ್ನು ನೆನೆಯುತ್ತಾ ಕುಳಿತಿರಲೂ ಬಹುದು! ಆದರೆ ಯುರೋಪಿಯನ್ ಸ್ವಾಮಿಗಳ ಕೈಗೊಂಬೆಯಾದ ಕಲ್ಕತ್ತದ 'ಸ್ಟೇಟ್ಸ್‌ಮನ್' ಪತ್ರಿಕೆಯೇ ಏನು ಬರೆಯುತ್ತದೆ ನೋಡಿ: 'ಸಂಗ್ರಾಮ ರಂಗದ ಸಮೀಪದಲ್ಲಿರುವ ಬಂಗಾಳದಂತಹ ಮಹತ್ವದ ಪ್ರಾಂತವನ್ನು ಈ ರೀತಿಯ ಆರ್ಥಿಕ ಗೊಂದಲಕ್ಕೆ ಹಾಕಿದ್ದು ಭಾರತದ ಸಾರ್ವಜನಿಕ ಜೀವನಕ್ಕೆ ಮಾತ್ರವಲ್ಲ, ಬ್ರಿಟಿಷ್ ಆಡಳಿತದ ಕೀರ್ತಿಗೂ ಕಳಂಕ ತರುವುದಾಗಿದೆ!'

'ಇದಕ್ಕೆ' ಯಾರು ಹೊಣೆ? ಇದರ ನಿವಾರಣೋಪಾಯ ಯಾವುದು? ಸರ್ ಜಾನ್ ಹರ್ಬರ್ಟರು ಫಜುಲ್ಲುಲ್ ಹಕ್ಕರಿಗೆ ರಾಜಿನಾಮೆ ಸಹಿಹಾಕಲು ಕೊಟ್ಟಂಥಾ ಟೈಪುಮಾಡಿದ ಕಾಗದವನ್ನು ತಮಗೂ ಯಾರಾದರೂ ಕೊಡಬಹುದೆಂಬ ಭಯ ಅವರಿಗಿಲ್ಲ. ಈ ವಿಷಯ ಏನಾದರೂ ಮುಂದೆ ವಿಚಾರಣೆಯಾಗಬಹುದು, ಎಂದು ಅಂಜುವ ಅವಶ್ಯಕತೆಯೂ ಇಲ್ಲ; ಏಕೆಂದರೆ ಅವರು ಇಂದು ಪೋಲೀಸ್ ಆಡಳಿತದ ಅಧಿಕಾರಿಯಾಗಿದ್ದಾರೆ! ಅವರಾಗಲಿ, ಲಾರ್ಡ ಲಿನ್‌ಲಿತ್‌ಗೋ ಆಗಲಿ, ಅಮೆರಿಯಾಗಲಿ, ಮುಂದೆ ಎಂದಾದರೊಮ್ಮೆ ಕ್ಲೈವ್ ಹೇಸ್ಟಿಂಗರಂತೆ ತಾವೂ ಪಾರ್ಲಿಮೆಂಟಿನ ಮುಂದೆ ಆರೋಪಿಗಳಾಗಿ ನಿಲ್ಲುವ ಪ್ರಸಂಗ ಬಂದೀತೆಂದು ಹೆದರಬೇಕಾಗಿಯೂ ಇಲ್ಲ. ಏಕೆಂದರೆ ಬರ್ಕ್ ಮತ್ತು ಶರಿಡನರ ಕಾಲದ ಬ್ರಿಟಿಷರ ನ್ಯಾಯಪ್ರಿಯತೆ ಇಂದು ನಿರ್ವೀರ್ಯವಾಗಿದೆ.

'ಕಳೆದ ಎರಡು ವರ್ಷಗಳಿಂದಲೂ ಭಾರತದ ಅಂತರಿಕ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಬೇಕೆಂಬ ವಿಚಾರ, ಭಾರತ ಸರಕಾರದ ಬ್ರಿಟಿಷ್ ಸರಕಾರಗಳ ಗಮನಕ್ಕೆ ತರಲಾಗಿದೆ. ಜನತಾ ಸಹಕಾರವನ್ನು ಅಲಕ್ಷಿಸುವುದರಿಂದುಂಟಾಗುವ ಅನರ್ಥವನ್ನು ತಿಳಿಸಿ ಹೇಳಲಾಗಿದೆ. ಪ್ರಜೆಗಳ ಆಹಾರವೇ ಆಡಳಿತದ ಪ್ರಥಮ ಹೊಣೆ; ಸರಕಾರದ ಪ್ರಥಮ ಕರ್ತವ್ಯ. ಈ ಕರ್ತವ್ಯ, ಈ ಹೊಣೆಯನ್ನು ಸರಿಯಾಗಿ ಪಾಲಿಸದಿದ್ದರೆ, ಚಕ್ರವರ್ತಿಗಳ ಚತುರಂಗ ಬಲಸೇರಿದರೂ ಪ್ರಜೆಗಳ ಕಲುಷಿತ ಹೃದಯವನ್ನು ಒಂದುಗೂಡಿಸುವುದು ಸಾಧ್ಯವಾಗಲಾರದು.'

THE CANARA BANKING CORPORATION Ltd
(Incorporated in British India with limited liability)
Estd:] Head office: UDIPI [1906.
(Branches & Agencies in all principal cities of India)

Authorised capital	Rs. 25,00,000.
Issued & Subscribed	Rs. 16,00,000.
Paid up Capital	Rs. 10,06,000.
Reserves	Rs. 3,85,000.

Advances are made against approved securities and bills purchased or collected at most favourable rates.
For further particulars please apply to the nearest Branch.

ಸಮರ ಭೂಮಿಯ ಸಂಚಾರ

ಇಟಲಿ ಶರಣು ಬಂದರೂ ಸಂಗ್ರಾಮ ಮುಗಿದಿಲ್ಲ

ಮುಸಲನಿ ಜರ್ಮನಿಯಲ್ಲಿದ್ದಾನೆ?

ಇಟಲಿ ಶರಣು ಬಂತೆಂಬುದು ಸಂತೋಷದ ಸುದ್ದಿ. ಆದರೆ ಇಟಲಿ ಕಾಳಗ ಇನ್ನೂ ಮುಗಿದಿಲ್ಲವೆಂದು ಕೇಳಿ ವಿಷಾದವಾಗುತ್ತದೆ. ಸೇನಾಪತಿ ಮೊಂಟಗ್‌ಮೋರಿಯವರೇ ಇಟಲಿಯಲ್ಲಿರುವ ಜರ್ಮನರ ಶಕ್ತಿಯನ್ನು ತೀರಾ ಅಲ್ಲಗಳೆಯುವುದು ಸಾಧ್ಯವಿಲ್ಲವೆಂದು ಒಪ್ಪಿಕೊಂಡಿದ್ದಾರೆ. ನಾಜಿಗಳಿನ್ನೂ ಇಟಲಿಯಲ್ಲಿ ಹೋರಾಟ ಸಾಗಿಸುತ್ತಿದ್ದಾರೆ. ಇಟಲಿ ಪತನದ ಸುದ್ದಿ ಪ್ರಕಟವಾದ ಒಂಭತ್ತು ಗಂಟೆಯೊಳಗೇ ಮಿತ್ರರು ನೇಪಲ್ಸ್‌ನಲ್ಲಿಳಿದರೆಂದು ಹೇಳಲಾಗಿದೆ. ಆದರೆ ಇಷ್ಟರಲ್ಲೇ ಜರ್ಮನರು ರೋಮ್ ನಗರವನ್ನು—ಇಟಲಿಯ ಹೃದಯದಂತಿರುವ—ಸ್ವಾಧೀನ ಮಾಡಿಕೊಂಡರೆಂಬುದು ದಿಗಿಲುಗೊಳಿಸುವ ವಾರ್ತೆ! ನೇಪಲ್ಸ್ ನಗರವು ಸದ್ಯ ಜರ್ಮನರ ವಶವಿರುವುದರಿಂದ ಅಲ್ಲಿ ಬ್ರಿಟಿಷ್ ಅಷ್ಟಮ ದಳದವರು ಅಮೆರಿಕದ ಬಲಸಹಿತ ಕಾಳಗ ಕೊಡುತ್ತಿರುವರು. ಜಿನೊವಾ ನಗರವನ್ನು ಜರ್ಮನರು ಆಕ್ರಮಿಸುತ್ತಿದ್ದಾರೆ.

ಇಟಲಿ ಪತನವಾಯಿತೆಂಬ ಸುದ್ದಿ ಕೇಳಿದ ಕೂಡಲೇ ಹಿಟ್ಲರನು ತನ್ನ ಯುದ್ಧ ಮಂಡಳದ ಸಭೆಯೊಂದನ್ನು ಕರೆದನು; ಹಿಮ್ಲರ್, ಗೋರಿಂಗ್, ಗೊಬೆಲ್ಸ್ ಪ್ರಭೃತಿಗಳೊಡನೆ ವಿಚಾರ ವಿನಿಮಯ ಮಾಡಿದನು. ಮಿತ್ರ ಮುಸಲನಿಯನ್ನು ವಂಚಿಸಿದ ಬಡೋಗ್ಲಿಯನನ್ನು ಮುರಿದಿಕ್ಕುವ ಶಪಥ ಹಾಕಿದ್ದಾನೆ. ಹಿಟ್ಲರನೀ ಸಂದರ್ಭದಲ್ಲಿ ಕೊಟ್ಟ ಭಾಷಣವು ಒಳ್ಳೆ ವೀರಾವೇಶದಿಂದ ಕೂಡಿದೆ. ಮುಸಲನಿಯ ಕೈಬಿಡಲಾರೆನೆಂದು ತಿಳಿಸಿದ್ದಾನೆ. ಜರ್ಮನರು ಇಟಲಿಯಲ್ಲಿ ಕಡೆತನಕ ಹೋರಾಡುವರೆಂದು ಹೇಳಿದ್ದಾನೆ. ಹಿಟ್ಲರನ ರಾಜ್ಯದಲ್ಲಿ ಮುಸಲನಿ ಸರಕಾರ ಸ್ಥಾಪಿತವಾಗಿದೆ. ಬಡೋಗ್ಲಿಯೋ ದ್ರೋಹ ಮಾಡಿದನೆಂದು ಜರ್ಮನಿ ಮಾತ್ರ ಹೇಳಿದ್ದಲ್ಲ, ಜಪಾನೂ ಕೆರಳಿದೆ; ಬಡೋಗ್ಲಿಯೋ ಮಿತ್ರರೊಡನೆ ಒಪ್ಪಂದ ಮಾಡಿದ್ದು ತ್ರಿರಾಷ್ಟ್ರ ಒಪ್ಪಂದಕ್ಕೆ (ಜರ್ಮನ್, ಇಟಲಿ, ಜಪಾನು) ವಿರೋಧವಾಗಿದೆಯೆಂದು ತಿಳಿಸಿದೆ. ಜರ್ಮನಿಯಲ್ಲಿ ಸ್ಥಾಪಿತವಾದ ಮುಸಲನಿಯ ಫೇಸಿಸ್ಟ್ ಸರಕಾರವು ಇಟಲಿಯನ್ ಸೈನಿಕರು ಮತ್ತು ಜರ್ಮನರು ಬಡೋಗ್ಲಿಯೋನ ಒಪ್ಪಂದವನ್ನು ನಿರಾಕರಿಸಬೇಕೆಂದು ವಿನಂತಿ ಮಾಡಿದೆ. ಯೂರೋಪು ರಕ್ಷಣೆಗೆ ಅವಶ್ಯವಿರುವ ಇಟಲಿಯ ಭಾಗಗಳಿಗಾಗಿ ಜರ್ಮನಿ ಹೋರಾಡಿಯೇ ತೀರುವುದೆಂದು ಜರ್ಮನ್ ವಿದೇಶಾಂಗ ಕಚೇರಿಯ ಮುಖ್ಯಾಧಿಕಾರಿ ತಿಳಿಸಿದ್ದಾನೆ.

ಅಂತೂ ಇಟಲಿಯ ಪ್ರಕರಣವಿಂದು ಮುಕ್ತಾಯವಾಗಿಲ್ಲ. ಬದಲು ಇಟಲಿಯಿಂದು ರಣರಂಗವಾಗಿದೆಯೆಂದು ಮಾತ್ರ ಹೇಳಬಹುದು. ಬಡೋಗ್ಲಿಯೋ ಸರಕಾರದ ಸಹಾಯದಿಂದ ಮಿತ್ರರು, ಜರ್ಮನ್ ಬಲದ ಸಹಾಯದಿಂದ ಮುಸಲನಿ ಕಡೆಯವರು ಅಲ್ಲಿ ಕಾಳಗ ಕೊಡುತ್ತಾರೆ; ಹೀಗೆ ಅಲ್ಲಿ ಮಲ್ಲಯುದ್ಧ ನಡೆಯುತ್ತಿದೆ. ಜರ್ಮನರು ರೋಮ್ ನಗರಕ್ಕೆ ಮುತ್ತಿಗೆ ಹಾಕಿದ್ದು ಒಂದು ವಿಶೇಷದ ಸುದ್ದಿಯೇ ಸರಿ. ಇಷ್ಟರಲ್ಲಿ ಬಡೋಗ್ಲಿಯೋನ ವಿಷಯ ಕೆಲವು ಸುದ್ದಿಗಳು ಹರಡಿವೆ. ಆತನು ಎಲ್ಲಿಗೋ ಪಲಾಯನ ಮಾಡಿದ್ದಾನೆಂದು ಹೇಳಲಾಗಿದೆ. ಬಡೋಗ್ಲಿಯನನ್ನು ಕೊಲೆ ಮಾಡಿ ಬಿಟ್ಟರೆಂದು ಇನ್ನೊಂದು ಸುದ್ದಿ. ಇಟಲಿಯ ಚಕ್ರವರ್ತಿ ವಿಕ್ಟರ್ ಎಮಾನುವೇಲರು ಪದತ್ಯಾಗಮಾಡಿ ಪಲಾಯನ ಮಾಡಿದ್ದಾರೆಂದು ಮತ್ತೊಂದು ವಾರ್ತೆ. ಇದರಿಂದೆಲ್ಲಾ ಇಂದು ಇಟಲಿಯಲ್ಲಿ ಒಟ್ಟು ಕೋಲಾಹಲವೇ ಆಗಿರುವುದು. ಮುಸಲನಿ ಮಾತ್ರ ಹಿಟ್ಲರನ ರಾಜ್ಯದಲ್ಲಿದ್ದಾನೆಂದು ಈಗ ಖಂಡಿತ ಸುದ್ದಿ ಬಂದಿದೆ. ಮುಸ್ಸೋಲಿನಿ ಹಿಟ್ಲರರ ಭೇಟಿಯಾಗಿ ವಿಚಾರ ವಿನಿಮಯವಾಯಿತು. ಬಡೋಗ್ಲಿಯೋ ಸರಕಾರ, ಜರ್ಮನರ ಮೇಲೆ ಯುದ್ಧ ಸಾರಿದ ನಂತರ ಚರ್ಚಿಲ್ ರೂಸ್‌ವೆಲ್ಟರು ಇಟಲಿಯನರಿಗೆ ಒಂದು ಸಂದೇಶವಿತ್ತು ಜರ್ಮನರನ್ನು ಅವರು ಎದುರಿಸಬೇಕೆಂದು ತಿಳಿಸಿದ್ದಾರೆ.

ಕಳೆದ ವಾರದಲ್ಲಿ ಜಗತ್ತಿನ ಇಬ್ಬರು ಮಹಾನಾಯಕರು, ಚರ್ಚಿಲ್, ಹಿಟ್ಲರನು ಎರಡು ಉದ್ದಾಮ ಭಾಷಣಗಳನ್ನು ಮಾಡಿದರು; ಭಾಷಣ ಮಾಡುವುದರಲ್ಲಿ ಅವರು ಒಬ್ಬರನ್ನೊಬ್ಬರು ಮೀರಿಸಿದ್ದಾರೆ. ಒಂದು ರೀತಿಯಿಂದ ಅವರಿಬ್ಬರ ಭಾಷಣಗಳಿಲ್ಲವಾದರೆ ಬ್ರಿಟನು ಜರ್ಮನಿಗಳು ಇನ್ನೂ ಹುರುಪುಗೊಂಡು ಹೋರಾಡುತ್ತಿದ್ದವೋ ಎಂದು ಸಂಶಯ ಬರುತ್ತದೆ. ಅದಕ್ಕೇ ಇರಬೇಕು ಅವರು ಆಗಾಗ ಭಾಷಣಮಾಡುತ್ತಾರೆ.' ಅದೂ ಜತೆಯಲ್ಲಿಯೇ ಭಾಷಣ ಮಾಡುತ್ತಾರೆ. ಯಾರಾದರೂ ಒಬ್ಬನು ಮಾತನಾಡಿ ನಿಂತರೆ ಸಾಕು, ಇನ್ನೊಬ್ಬನು ಭಾಷಣಕ್ಕೇಳುತ್ತಾನೆಂದು ಅರ್ಥಮಾಡಿಕೊಳ್ಳಲೇ ಬೇಕು. ಹಿಟ್ಲರನನ್ನು ಚರ್ಚಿಲ್, ಚರ್ಚಿಲರನ್ನು ಹಿಟ್ಲರ್ ಸಿಗಬಹುದಾಗ ಎಲ್ಲಾ ಶಬ್ದಗಳಿಂದಲೂ ದೂಷಿಸುತ್ತಾರೆ. ಅನ್ಯೋನ್ಯ ಕಾದಾಡಿಕೊಳ್ಳುವವರಲ್ಲಿ ಇದು ಸಹಜವಷ್ಟೆ? ಅದೂ ಲೋಕ ಯುದ್ಧವನ್ನೇ ಸಾಗಿಸುತ್ತಿರುವ ಈ 'ವಿಭೂತಿಗಳು' ಎಷ್ಟು ಅಟ್ಟಹಾಸದಿಂದ ಬೊಬ್ಬಿಟ್ಟರೂ ಸಾಲದು!

"ಆಕ್ರಮಣಗಾರ ನಮ್ಮ ಶತ್ರು; ಆಕ್ರಮಣಗಾರ ನಮ್ಮ ಶತ್ರು; ಅವನು ಎಂಥಾ ವೇಷದಿಂದಲೇ ಬರಲಿ; ಎಂಥಾ ಸವಿನುಡಿಯನ್ನೇ ಹೇಳಲಿ, ಆದ್ದರಿಂದ ಒಳಗೆ ಮತ್ತು ಹೊರಗೆ ನಾವು ಯಾವಾಗಲೂ ಆಕ್ರಮಣಗಾರರನ್ನೆದುರಿಸಲು ಎಚ್ಚರದಿಂದಲೇ ಇರಬೇಕು." ಹೀಗೆಂದು ಇನ್ನೂ ಅಮೆರಿಕದಲ್ಲಿಯೇ ಇರುವ ಚರ್ಚಿಲರು ಅಲ್ಲಿನ ಹಾರ್ವರ್ಡ ವಿಶ್ವವಿದ್ಯಾನಿಲಯದಲ್ಲಿ ಯುವಕರ ಮುಂದೆ ನಿಂತು ಸಾರಿದರು. ಇಂಥಾ ಮಾತುಗಳಿಂದಲೇ ಅವರಿಂದು ಜಗತ್ಪ್ರಸಿದ್ಧರು. ಬ್ರಿಟನನ್ನು ಕಾಳಗಕ್ಕೆ ಹುರಿದುಂಬಿಸುತ್ತಾರೆ. ಇವರ ಈ ಗುಣಕ್ಕೆ, ಈ ಹೋರಾಟದ ಪಂಥಕ್ಕೆ ಯಾರಾದರೂ ತಲೆದೂಗಬೇಕು. ಆದರೆ ಬ್ರಿಟನಿನ ಸಂರಕ್ಷಕನು ಭಾರತದ ಹಿತಕಾರಿಯಾಗಿಲ್ಲ: ಏಕೆಂದರೆ ಆಕ್ರಮಣಗಾರರನ್ನೆದುರಿಸುವ, ಪ್ರಜಾಪ್ರಭುತ್ವ ಸ್ವಾತಂತ್ರ್ಯಗಳಿಗಾಗಿ ಹೋರಾಡಲು ಹುರಿದುಂಬಿಸುವ ಚರ್ಚಿಲರೇ, ಭಾರತದ ಸ್ವಾತಂತ್ರ್ಯ ವೀರರನ್ನು ಸೆರೆಮನೆಯಲ್ಲಿ ತಳ್ಳಿಬಿಟ್ಟಿದ್ದಾರೆ.

ಹಿಟ್ಲರ್ ಆರ್ಭಟೆಯೇ ಬೇರೆ. ೧೯೪೩ರಲ್ಲಿಯೇ ಜರ್ಮನಿಗೆ ಜಯತಂದು ಯುದ್ಧವನ್ನು ನಿಲ್ಲಿಸಿಬಿಡುತ್ತೇನೆಂದು ಅವನು ಹೇಳಿದ. ಹತ್ತೇ ವಾರದಲ್ಲಿ ರಶ್ಯವನ್ನು ನುಂಗಿ ನೀರ್ಕುಡಿಯುತ್ತೇನೆಂದೂ ಆತ ಹಿಂದೆ ಹೆಮ್ಮೆಕೊಚ್ಚಿದ್ದ. ಹಿಟ್ಲರ್ ಹೇಳಿದಂತೆ ಪ್ರತಿಯೊಂದೂ ನಡೆದಿದ್ದರೆ, ಆತನನ್ನು ರಾಕ್ಷಸನೆನ್ನುವ ಬದಲು ದೇವತೆಯೆಂದು ಜನಕೊಂಡಾಡುತ್ತಿದ್ದರು. ಆದರೆ ಬಹುಶಃ ಹೀಗೆಲ್ಲಾ ಭರವಸೆ ಕೊಡುವುದು ಜರ್ಮನರು, ಏನಾದರೂ ಸ್ವಲ್ಪ ಸಮಾಧಾನ ತಾಳಿ ಮತ್ತೂ ಹೋರಾಡಲಿ ಎಂದಿರಬೇಕು. ಯಾರಿಗಾದರೂ ಸರಿಯೇ, ಬಿಡದೆ ವರ್ಷ ವರ್ಷಗಟ್ಟಲೆ ಕಾಳಗ ಕೊಡುತ್ತಾ ಇದ್ದರೆ ಬೇಸರ ಬಂದೇ ಬರಬೇಕು. ಅದರಲ್ಲೂ ಈ ಮಹಾ ಯುದ್ಧದಿಂದಾಗಿ ಈಗ ನಾವು ಯುದ್ಧರಂಗದಿಂದ ದೂರವಿರುವ ಭಾರತೀಯರೂ ಈ ಪರಿ ಅನ್ನವಿಲ್ಲದೆ ಬಟ್ಟೆಯಿಲ್ಲದೆ ಕಂಗಾಲಾಗಿರುವಾಗ, ಯುದ್ಧರಂಗವಾದ ಜರ್ಮನಿಯ ಅವಸ್ಥೆ ಹೇಗಿರಬೇಡ? ಹೀಗಾಗಿ ಹಿಟ್ಲರನು ಆಗಾಗ ಜರ್ಮನರಿಗೆ ಬೇಗನೇ ಯುದ್ಧವನ್ನು ಕೊನೆಗಾಣಿಸುತ್ತೇನೆಂದು ಭರವಸೆ ಕೊಡುತ್ತಾನೆ. ಈ ಭಾಷಣದಲ್ಲಿ ಆತನು ಮುಖ್ಯವಾಗಿ ಮಿತ್ರ ಮುಸಲನಿಯನ್ನು ಪ್ರಶಂಸಿಸಿ, ಬಡೋಗ್ಲಿಯೋನ ವಂಚನೆಗೆ ಸೇಡು ತೀರಿಸುವುದಾಗಿ ಹೇಳಿ, ಕೊನೆಗೆ ಹೇಡಿಯಾಗಿ ಬಾಳುವುದಕ್ಕಿಂತ ಹೋರಾಡಿ ವೀರ ಸ್ವರ್ಗ ಪಡೆಯುವ ಎಂದು ಘೋಷಿಸಿದ್ದಾನೆ.

ನೋಟಗಳು.......

ಇತ್ತೀಚೆಗೆ ವಿಶೇಷ ಸುದ್ದಿಗಳೇ ಬರುತ್ತವೆ.

ಈ ಸುದ್ದಿಗಳಲ್ಲಿ ವಿಶೇಷವೆಂದರೆ ಸುದ್ದಿಗಳ ಮೇಲೆ ಸುದ್ದಿಗಳು!

ಇಟಲಿ ಶರಣು ಬಂದದ್ದು ಒಂದು ವಿಶೇಷ ಸುದ್ದಿ.

ರೋಮನ್ನು ಜರ್ಮನರು ಆಕ್ರಮಿಸಿದರು ಎಂದು ಆ ಮೇಲೆ ಬಂದ ಸುದ್ದಿಯೂ ವಿಶೇಷವೇ!

ಮಿತ್ರರು ಇಟಲಿಯನ್ನು ಗೆದ್ದರೆಂಬುದೂ ಒಂದು ವಿಶೇಷ ಸುದ್ದಿ.

ಜರ್ಮನರು ಇಟಲಿಯಲ್ಲಿ ಪ್ರಬಲರಾಗಿದ್ದಾರೆಂಬುದು ಅದಕ್ಕಿಂತ ವಿಶೇಷ.

ಮುಸಲನಿಯನ್ನು ಬಂಧನದಲ್ಲಿಟ್ಟಿದ್ದಾರೆಂದು ತಿಳಿದು ಬಂತು.

ಮುಸಲನಿ ಜರ್ಮನಿಯಲ್ಲಿದ್ದಾನೆಂದು ಈಗ ಗೊತ್ತಾಗಿದೆ.

ಮುಸಲನಿಯನ್ನು ಸೋಲಿಸಿ ಬಡೋಗ್ಲಿಯೋ ಸರ್ವಾಧಿಕಾರಿಯಾದನೆಂದು ಸಾರಲಾಯಿತು.

ಬಡೋಗ್ಲಿಯೋ ಪಲಾಯನಮಾಡಿದ್ದಾನೆಂದೂ, ಕೊಲೆಮಾಡಲ್ಪಟ್ಟಿದ್ದಾನೆಂದೂ ಮತ್ತೆ ಸುದ್ದಿ ಹರಡಿತು.

ಆಕಾಶವಾಣಿಯಲ್ಲಿ ಮಾತನಾಡಿದನೆಂಬುದು ಆ ಮೇಲಿನ ಸುದ್ದಿ!

ಈ ಯುದ್ಧವು ಕೆಲವು ವರ್ಷಗಳವರೆಗೆ ನಿಲ್ಲುವುದಿಲ್ಲವೆಂದು ಹಲವರು ಹೇಳಿದರು.

ಈ ವರ್ಷವೇ ಯುದ್ಧ ಮುಗಿಸಿ ಬಿಡುತ್ತೇನೆಂದು ಹಿಟ್ಲರ್ ಭರವಸೆ ಕೊಡುತ್ತಾನೆ.

ಹೋಗುವ ವೈಸರಾಯರಿಗೆ ಸತ್ಕಾರಕೂಟ ಭೋಜನ ಸಮಾರಂಭಗಳು ನಡೆಯುತ್ತಿವೆ.

ಈಗಿನ ಬಂಗಾಳ ಪ್ರಾಂತದಲ್ಲಿ ಜನರು ಉಪವಾಸದಿಂದ ಸರಳಿ ಸಾಯುತ್ತಾರೆ.



ANDREWS
LIVER SALT
ಆಂಡ್ರೂಸ್ ಲಿವರ್‌ಸಾಲ್ಟ್
ಆರೋಗ್ಯಪಾನೀಯ — ವಿರೇಚಕ

ಯುದ್ಧದ ದೆಸೆಯಿಂದಾಗಿ ಎಂಡ್ರೂಸ್ ಲಿವರ್‌ಸಾಲ್ಟ್ ಈಗ ದೊರಕುವುದಿಲ್ಲವೆಂಬುದು ವಿಷಾದಕರವಿದೆ. ಆದರೆ ಅಂತರ್‌ರಾಷ್ಟ್ರೀಯ ಪರಿಸ್ಥಿತಿ ಸುಧಾರಿಕವಾದ ಕೂಡಲೇ ಇದು ಖಂಡಿತ ದೊರಕುವುದು.

ಸ್ವದೇಶಾಭಿಮಾನಿ

ತಾರೀಕು 17—9—1943

ಇಟಲಿಯ ಒಪ್ಪಂದ

ಇಟಲಿಯ ಬಡೋಗ್ಲಿಯೋ ಸರಕಾರವು ಮಿತ್ರರೊಡನೆ ಮಾಡಿಕೊಂಡ ಒಪ್ಪಂದದ ಶರತಗಳು ಪ್ರಸಿದ್ಧವಾಗಿವೆ. ಮುಸಲಿನಿಯನ್ನು ಅಧಿಕಾರದಿಂದ ಕೆಳತಳ್ಳಿ ಮಾರ್ಶಲ್ ಬಡೋಗ್ಲಿಯೋ ಮಿತ್ರರೊಡನೆ ಒಪ್ಪಂದಮಾಡಿಕೊಳ್ಳಲು ಮುಂದಾದನು. ಹೆಚ್ಚಿನ ಗಂಡಾಂತರಗಳಿಂದ ತನ್ನ ರಾಷ್ಟ್ರವನ್ನು ರಕ್ಷಿಸುವ ಸಲುವಾಗಿ ಒಪ್ಪಂದ ಮಾಡಿಕೊಂಡೆನೆಂದು ಬಡೋಗ್ಲಿಯೋ ತಿಳಿಸಿದ್ದಾನೆ.

ಈ ಸುದ್ದಿಯನ್ನು ಕೊನೆಗಳಿಗೆವರೆಗೂ ಜರ್ಮನರಿಗೆ ತಿಳಿಸಿಲ್ಲ. ಹಾಗೆ ತಿಳಿಸದೆ ಇರುವುದರಲ್ಲಿ ಉದ್ದೇಶವಿಲ್ಲದೆಯೂ ಇಲ್ಲ. ಹೀಗೆ ಜರ್ಮನರಿಗೆ ಗೊತ್ತುಗುರಿಯಿಲ್ಲದೆ ಬಡೋಗ್ಲಿಯೋ ಮಿತ್ರರೊಡನೆ ಒಪ್ಪಂದ ಮಾಡಿಕೊಂಡನೇನೋ ನಿಜ; ಬಹುಶಃ ಮಿತ್ರರ ಬಲದಿಂದ ಇಟಲಿಯನ್ನುಳಿಸುವೆನೆಂದೂ ಖಚಿತ ಮಾಡಿದ ಬಡೋಗ್ಲಿಯೋಗೆ ಶತ್ರುವಿನ ಧಾಳಿಯಾಗುವುದೆಂಬ ಹೆದರಿಕೆಯೇನೂ ಇರಲಿಲ್ಲವೋ ಏನೊ? ಹೇಗೂ ಬಡೋಗ್ಲಿಯೋ ಮಿತ್ರರೊಡನೆ ಒಪ್ಪಂದ ಮಾಡಿಕೊಂಡಂತೆ, ಜರ್ಮನರು ಕೆರಳಿ ಇಟಲಿಯಲ್ಲಿ ಕಾಳಗ ಕೊಡುತ್ತಾರೆ. ಹಿಟ್ಲರನು ಮುಸಲನಿಯನ್ನು ಹಿಡಿದೆತ್ತಿ, ಬಡೋಗ್ಲಿಯೋನನ್ನು ವಂಚಕನೆಂದು ಸಾರಿ, ಇಟಲಿಯ ರಕ್ಷಣೆಗಾಗಿ ಜರ್ಮನಿ ಹೋರಾಡುವುದೆಂದು ತಿಳಿಸಿದ್ದಾನೆ.

ಈಗ ಪ್ರಸಿದ್ಧವಾದ ಶರತಗಳನ್ನು ನೋಡಿದರೆ ಇಟಲಿಗೆ ಯಾವುದೇ ರೀತಿಯಿಂದಲೂ ಅಲುಗಾಡಲು ಸಾಧ್ಯವಿಲ್ಲವೆಂಬಂತೆ ತೋರುವುದು. ಇಟಲಿಯನ್ನು ಸಂಪೂರ್ಣವಾಗಿ, ಜರ್ಮನಿಯೆದುರು ಹೋರಾಡಲು ಉಪಯೋಗಿಸಿಕೊಳ್ಳಬೇಕು, ಇಟಲಿಯಲ್ಲಿರುವ ಎಲ್ಲಾ ವಿಮಾನ ಗೃಹ ಬಂದರುಗಳನ್ನು ಮಿತ್ರರ ಉಪಯೋಗಕ್ಕೆ ಕೊಡಬೇಕು, ಇಟಲಿಯ ಸಾರಿಗೆ ನೌಕಾಪಡೆ ಮಿತ್ರರ ಕೈವಶ ಬರಬಹುದು. ಹಾಗೂ ನೌಕಾ ವಿಮಾನ ಪಡೆಗಳು ಮಿತ್ರರು ನಿಶ್ಚಯಿಸುವ ಸ್ಥಳಗಳಿಗೆ ಹೋಗಬೇಕು. ಜರ್ಮನರಿಗೆ ಇಟಲಿಯಲ್ಲಿ ಯಾವುದೇ ಬಗೆಯ ಸೌಕರ್ಯವನ್ನೂ ಕೊಡತಕ್ಕದ್ದಲ್ಲ. ಇವೇ ಮುಂತಾದುವು ಒಪ್ಪಂದದ ಶರತಗಳು. ಒಪ್ಪಂದದ ಶರತಗಳಲ್ಲಿ ಇಟಲಿಯನ್ನು ಮಿತ್ರರು ಹೀಗೆ ಬಿಗಿದಿದ್ದಾರೆ.

ಈ ಶರತಗಳು ಕೂಡಲೇ ಜಾರಿಯಲ್ಲಿ ಬರಬೇಕಾಗಿವೆಯೆಂದೂ ತಿಳಿಸಲಾಗಿದೆ. ಇದನ್ನು ಬಡೋಗ್ಲಿಯೋ ಮತ್ತು ಅರಸರು ಪ್ರಜೆಗಳಿಗೆ ತಿಳಿಸಿದ್ದಾರೆ. ಈಗಾಗಲೇ ಈ ಶರತಗಳಿಂದ ಇಟಲಿಯಲ್ಲಿ ಮಿತ್ರರು ಕಾರ್ಯಾಚರಣೆ ಕೈಕೊಂಡಿದ್ದಾರೆ. ಬಹಳ ಗುಪ್ತವಾಗಿ, ಬಹಳ ಮುಂಜಾಗ್ರತೆಯಿಂದ ಇಟಲಿಯಲ್ಲಿ ಈ ಕೆಲಸ ನಡೆದಿದೆ. ಶತ್ರುಗಳಿಗೆ ಇದನ್ನು ತಿಳಿಸದಿದ್ದರೂ ಇದರ ಪ್ರತಿಕ್ರಿಯೆಯಿಂದು ಬಲವಾಗಿದೆ. ಬಡೋಗ್ಲಿಯೋ ಮತ್ತು ಮಿತ್ರರು ಒಪ್ಪಂದದ ವಿಷಯ ಮುಂಚಿತವಾಗಿ ಪ್ರಕಟಿಸಿದ್ದರೆ ಯಾವ ಅನರ್ಥ ಬರಬಹುದೆಂದು ತಿಳಿದಿದ್ದರೋ ಅದಿಂದು ಬೃಹದ್ರೂಪವಲ್ಲದಿದ್ದರೂ ಸೂಕ್ಷ್ಮ ರೂಪದಲ್ಲಿ ಬಂದೇ ಇದೆ. ಜರ್ಮನರು ಇಟಲಿಯಲ್ಲಿ ಮಿತ್ರರೆದುರು ಬಲವಂತರಾಗಿ ಹೋರಾಟ ಕೊಡುತ್ತಿದ್ದಾರೆ.

ಜರ್ಮನರು ಇಟಲಿಯಲ್ಲಿ ಇಂದು ಕೊಡುತ್ತಿರುವ ಕಾದಾಟ ಬಹಳ ಉಗ್ರವಾಗಿದೆ. ಇಟಲಿ ಹೋದರೆ ಯೂರೋಪಿನ ಆಕ್ರಮಣ ಖಂಡಿತವೆಂದು ಜರ್ಮನಿಗೆ ಹೆದರಿಕೆ ಇದ್ದೇ ಇದೆ. ಹಾಗಾಗಿ ಜೀವದ ಹಂಗು ತೊರೆದು ಜರ್ಮನರು ಕಾದಾಡುತ್ತಿದ್ದಾರೆ. ರೋಮ್ ನಗರವನ್ನು ಮುತ್ತಿರುವರೆಂದೂ ಸುದ್ದಿಯಿದೆ. ಬಡೋಗ್ಲಿಯೋನ ಕೊಲೆಯಾಯಿತೆಂದು ಒಂದು ಸುದ್ದಿ ಬಂದರೂ, ಆ ಕೂಡಲೇ ಆಕಾಶವಾಣಿಯಲ್ಲಿ ಆತನು ಮಾತನಾಡಿದನೆಂದು ತಿಳಿದುಬಂದದ್ದರಿಂದ ಮೃತನಾಗಿಲ್ಲವೆಂದು ಹೇಳಬಹುದು. ಆದರೆ ಆತನ ಗೊತ್ತುಗುರಿ ತಿಳಿದಿಲ್ಲ. ಇಟಲಿಯ ಅರಸರೂ ಪಲಾಯನ ಮಾಡಿದ ವಾರ್ತೆಯಿದೆ. ಅಂತೂ ಇಟಲಿಯು ಮಿತ್ರರಿಗೆ ಶರಣು ಬಂದು ಒಪ್ಪಂದ ಮಾಡಿಕೊಂಡರೂ, ಇಟಲಿಯ ಕಾಳಗ ಮುಗಿದಿಲ್ಲ. ಇಟಲಿಯನರಿಗೆ ಶಾಂತಿಯುಲ್ಲ. ಬಡೋಗ್ಲಿಯಗೂ ಸಾಕಷ್ಟು ಸುಖವಿಲ್ಲ.

ಚರ್ಮವ್ಯಾಧಿಗಳು ಮ್ಯಾಜಿಕಿನಂತೆ ಮಾಯವಾಗುವುವು!

ಕುಟಿಕೂರಾ ಮುಲಾಮು (Cuticura Ointment) ಚರ್ಮವ್ಯಾಧಿಗಳನ್ನು, ಊರ್ಜಿತಗೊಳಿಸುವ ಕ್ರಿಮಿಗಳನ್ನು ನಾಶಗೊಳಿಸುವುದು.



ಕುಟಿಕೂರಾ ಮುಲಾಮು

CUTICURA OINTMENT

ಸ್ವದೇಶ ಸಮಾಚಾರ

ಕೆಂಪಂಗಿಗಳ ಬಿಡುಗಡೆ

ಗಡಿನಾಡಿನ ಮಂತ್ರಿಮಂಡಳವು ಈಗ ಕೆಂಪಂಗಿಗಳನ್ನು ಸೆರೆಮನೆಯಿಂದ ಬಿಡುಗಡೆ ಮಾಡುತ್ತಿದೆ. ಇಷ್ಟರ ವರೆಗೆ ಎಂ. ಎಲ್. ಏಗಳಲ್ಲಿ ಯಾರನ್ನೂ ಬಿಟ್ಟಿಲ್ಲ. ಗಡಿನಾಡಿನ ಗಾಂಧಿ ಗಫರ್ ಖಾನರು ಆರೋಗ್ಯದಿಂದಿರುವರಾಗಿ ಸರಕಾರೀ ಪ್ರಕಟಣೆಯೊಂದು ತಿಳಿಸುತ್ತದೆ.

ಭಾರತ ಸಮಸ್ಯೆ ಬಿಡಿಸಿದರೆ—
ಶೀಘ್ರ ಜಯಲಾಭ

'ಭಾರತದ ಸಮಸ್ಯೆಯನ್ನು ಬಿಡಿಸಬಹುದು' ಎಂದು ನ್ಯೂಯಾರ್ಕ್ ಹೆರಾಲ್ಡ್ ಪತ್ರಿಕೆಯ ಡೆವಿಡ್ ಮೆಕೆಂಜಿಯವರು ಬರೆದ ಪುಸ್ತಕವನ್ನು ವಿಮರ್ಶಿಸುತ್ತಾ, ಬರೆಯುತ್ತಾ, ಭಾರತದ ಸಮಸ್ಯೆ ಬಿಡಿಸಿದರೆ ಮಿತ್ರರಿಗೆ ಶೀಘ್ರದಲ್ಲಿ ಜಯಲಾಭವಿದೆಯೆಂದು ಉಲ್ಲೇಖಿಸಿದೆ.

ಬಂಗಾಳದ ಆಯವ್ಯಯ
೭ ಕೋಟಿ ರೂ. ಕೊರತೆ

ಬಂಗಾಳ ಅಸೆಂಬ್ಲಿ ಅಧಿವೇಶನದಲ್ಲಿ ಅರ್ಥಸಚಿವ ಶ್ರೀ ತುಳಸೀಚರಣ ಗೋಸಾವಿಯವರು ಸಂಪೂರ್ಣ ಹೊಸ ಅಂದಾಜು ಪತ್ರಿಕೆಯನ್ನು ಮಂಡಿಸಿದರು. ಅಂದಾಜ್ ಪತ್ರಿಕೆಯ ಆಶ್ಚರ್ಯಕರ ವಿಷಯವೆಂದರೆ ೭ ಕೋಟಿ ಮತ್ತು ೩೬ ಲಕ್ಷ ರೂಪಾಯಿ ಕೊರತೆ ತೋರಿಸಿರುವುದು. ಉತ್ಪನ್ನವು ೧ ಕೋಟಿ ೯೮ ಲಕ್ಷ ರೂಪಾಯಿ ಬೆಳೆದದ್ದರೂ ಆಹಾರ ಬಿಕ್ಕಟ್ಟಿನ ಪರಿಶ್ರಮವಾಗಿ ಈ ಕೊರತೆ ಉಂಟಾಗಿರುವದಂತೆ. ಈ ವರ್ಷ ಪ್ರಾಂತದ ಒಟ್ಟು ಉತ್ಪನ್ನವು ೧೮ ಕೋಟಿ ೪೪ ಲಕ್ಷ ರೂಪಾಯಿ ಆಗಬಹುದೆಂದು ಅಂದಾಜು ಮಾಡಲಾಗಿದೆ, ಈ ಕೊರತೆಯ ಕೆಲವಂಶವನ್ನಾದರೂ ತುಂಬಿಕೊಳ್ಳಲು ಒಕ್ಕಲುತನದ ಮೇಲೆ ತೆರಿಗೆ ಹಾಕಬೇಕೆಂದೂ, ಮಾರಾಟ ತೆರಿಗೆಯನ್ನು ಹೆಚ್ಚಿಸಬೇಕೆಂದೂ ಸೂಚಿಸಲಾಗಿದೆ.

ಅಧಿವೇಶನ ಪ್ರಾರಂಭದಲ್ಲಿ ಕಾಂಗ್ರೆಸ್ ಪಕ್ಷದ ಮುಖಂಡರು ಒಂದು ಸೂಚನೆ ಮಂಡಿಸಿ, ಫೆಡರಲ್ ಕೋರ್ಟಿನ ತೀರ್ಮಾನದಂತೆ ಮುಖಂಡರ ಬಂಧನ ನ್ಯಾಯಬಾಹಿರವಿರುತ್ತಾ ಇನ್ನೂ ಅವರ ಬಿಡುಗಡೆಯೇಕೆ ಆಗಲಿಲ್ಲವೆಂದು ಕೇಳಿದಕ್ಕೆ, ಈ ವಿಷಯ ಪ್ರಿವಿ ಕೌನ್ಸಿಲಿಗೆ ಅಪೀಲು ಮಾಡಲು ಅಪ್ಪಣೆಕೊಟ್ಟಿರುವುದರಿಂದ ಆ ವಿಷಯವಿನ್ನೂ ನ್ಯಾಯಸ್ಥಾನದಲ್ಲಿರುವುದಾಗಿ ಅದರ ಕುರಿತು ಚರ್ಚಿಸಲಾಗುವುದಿಲ್ಲವೆಂದು ಉತ್ತರ ಬಂತು. ಹಾಗಾಗಿ ಈ ಸೂಚನೆಗೆ ಅಪ್ಪಣೆ ಸಿಗಲಿಲ್ಲ.

ಜಿನ್ನರ ಕೊಲೆಗೆ ಪ್ರಯತ್ನವೇಕೆ?
ಕೋರ್ಟು ವಿಚಾರಣೆ ವರದಿ

ಜಿನ್ನರನ್ನು ಮುಸ್ಲಿಮನೊಬ್ಬನು ಕೊಲೆಮಾಡಲು ಪ್ರಯತ್ನಿಸಿದ ಸುದ್ದಿ ಹಿಂದೆ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಆ ವಿಚಾರಣೆ ಬೊಂಬಾಯಿಯ ಕೋರ್ಟಿನಲ್ಲಿ ನಡೆಯಿತು. 'ಗಾಂಧಿಯವರ ಭೇಟಿಮಾಡಿ, ಅವರೊಡನೆ ಒಪ್ಪಂದಮಾಡಿಕೊಳ್ಳಿರಿ ರಾಜಕೀಯ ಬಿಕ್ಕಟ್ಟು ಬಗೆಹರಿಸಿ [illegible] ಬೇಡಿ' ಹೀಗೆಂದು ಖಾಖ್ಸಾರರನೇಕರು [illegible]ನ್ನು ಬೆದರಿಸಿ ಬರೆದ ಪತ್ರಗಳು ಕೋರ್ಟ್ ಮುಂದೆ ಹಾಜರು ಮಾಡಲ್ಪಟ್ಟವು. ಆರೋ[illegible] ಲಾಹೋರಿನವ ಖಾಖ್ಸಾರ್. ಸಂಸ್ಥೆಯ ಸದ[illegible] ಖಾಖ್ಸಾರ್ ಧ್ಯೇಯ ಸಾಧನೆಗೆ ಜೀವವನ್ನು [illegible]ಸಲು ಈತ ಪಣತೊಟ್ಟವನಿದ್ದ. ಖಾಖ್ಸಾರ್ [illegible] ಮುಖಂಡ ಅಲ್ಲಮ್ ಮಶ್ರಿಖಿಯವರು ಖಾಖ್ಸಾ[illegible] ಒಂದು ವಿನಂತಿ ಹೊರಡಿಸಿ ಜಿನ್ನರು ಗಾಂ[illegible]ನ್ನು ಕಂಡು ರಾಜಕೀಯ ಬಿಕ್ಕಟ್ಟು ಬಗೆಹ[illegible]ವಂತೆ ಒತ್ತಾಯ ಮಾಡುವ ಹೇಳಿಕೆ ಕೊ[illegible]ದ್ದರು. ಈ ಸಂಬಂಧವೇ ಖಾಖ್ಸಾರರು ಜಿನ್ನರ[illegible] ಪತ್ರ ಕಳುಹಿಸಿದ್ದರು. ಜಿನ್ನರು ಜೂಲೈ [illegible]ರೊಳಗೆ ಈ ಕಾರ್ಯಕ್ಕೆ ಕೈಕೊಳ್ಳಬೇಕೆಂ[illegible] ಖಾಖ್ಸಾರರು ಅವಧಿಯಿಟ್ಟಿದ್ದರು. ಆ ನಂ[illegible] ಅವಧಿ ೧೦ ದಿನ ಮುಂದುವರಿಸಿದರು. ಜೂಲೈ ೧೫ನೇ ತಾರೀಕಿಗೆ ಆರೋಪಿಗೆ ಜಿನ್ನರಲ್ಲಿಗೆ [illegible]ದು ಚೂರಿಹಾಕಿದನು' ಇತ್ಯಾದಿ ಪ್ರೊಸಿಕ್ಯೂಟ[illegible] ವಾದಿಸಿದರು. ಆ ವೇಳೆ ಜಿನ್ನರು ಹೇಳಿ[illegible]ಯಿತ್ತು ತನಗೆ ಅಂಥಾ ಬೆದರಿಕೆ ಪತ್ರ ಬಂ[illegible] ವಿಷಯ ತಿಳಿಸಿದರು. 'ನನ್ನ ಕೆಲಸ ಮಾಡ[illegible] ಆಗದಿದ್ದುದು ನನ್ನ ದುರ್ದೈವ. ಅಲ್ಲಮ ಮ[illegible]ಖಿಯವರ ಹೇಳಿಕೆಯನ್ನು ಮೀರಿದ್ದರಿಂದ ನಿ[illegible]ನ್ನು ಕೊಲ್ಲಲು ನಾನು ಯತ್ನಿಸಿದೆ. ನೀ[illegible] ಬ್ರಿಟಿಷರ ಕೈಗೊಂಬೆ' ಎಂದು ಆತನು ಒದರಿ[illegible]ನೆಂದರು. ಜಿನ್ನರ ಕಾರ್ಯದರ್ಶಿಯೂ ಇ[illegible] ರೀತಿ ಹೇಳಿಕೆಯಿತ್ತರು. ಆರೋಪಿತನ[illegible] ತಾನೇ ರಕ್ಷಿಸಿಕೊಳ್ಳುವನೆಂದುದರಿಂದ ವಕೀ[illegible]ರಿಗೆ ಕೊಡುವ ಸೌಕರ್ಯವನ್ನು ತನಗೂ ಕೊ[illegible]ಬೇಕೆಂದನು. ಮೆಜಿಸ್ಟ್ರೇಟರು ಇದಕ್ಕೊಪ್ಪ[illegible] ಕೃಟಿಗಿದಿರುವ ಸೌಕರ್ಯವಷ್ಟನ್ನೇ ಕೊಡು[illegible]ದಾಗಿ ಹೇಳಿದರು. ವಿಚಾರಣೆ ಮುಂದುವರಿಸ[illegible]

ಮಂಗಳೂರು
ಜಿಲ್ಲಾ ಪತ್ರಿಕೋದ್ಯೋಗಿ ಸಂಘ

[illegible]ದ ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಳನ ತಾತ್ಕಾಲಿಕ ಸ್ವಾಗತ ಸಮಿತಿ ಸಭೆಯ[illegible] ತಾ. ೧೬ರಂದು ಜಿಲ್ಲಾ ಪತ್ರಿಕೋದ್ಯೋ[illegible] ಸಂಘದ ಆಫೀಸಿನಲ್ಲಿ ಸಂಜೆ ೬ ಗಂಟೆಗೆ ಶ್ರೀ[illegible] ಮಂಗಳೂರು ಜಾರಪ್ಪನವರ ಅಧ್ಯಕ್ಷತೆಯಿಂ[illegible] ಸೇರಿ, ಸ್ವಾಗತ ಸಮಿತಿ ಸದಸ್ಯರನ್ನು ಮಾಡಲ[illegible] ಐದು ಜನರಿಂದ ಕೂಡಿದ ಒಂದು ಸಮಿತಿ[illegible] ಮೈಸೂರು ದ್ವಿತೀಯ ಪತ್ರಿಕೋದ್ಯೋಗಿ ಸಮ್ಮೇಳನಕ್ಕೆ ಪ್ರತಿನಿಧಿಯಾಗಿ ಶ್ರೀ ಕಯ್ಯಾ[illegible] ಕಿಞ್ಞಣ್ಣ ರೈಗಳನ್ನು ಕಳುಹಿಸುವುದಾಗಿ ನಿರ್ಣ[illegible]ಯವಾಯಿತು.

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R. I. P. No. 680/1943.

ಕ್ರ. ನಂ. 205/1942

ಅರ್ಜಿದಾರ—ಉಳ್ಳಾಲ ಗುಲಾಂಬ್ಯಾರಿ—ವಾದಿ

ಎದ್ರಿ ಅರ್ಜಿದಾರರು—ಶೀತು ಹೆಂಗ್ಸು ಕೂಡಾ—

ಪ್ರತಿವಾದಿರು

3ನೇ ಪ್ರತಿವಾದಿ ವ ಸದ್ರಿ ಅರ್ಜಿದಾರನಾ[illegible] ಪುತ್ತೂರು ತಾಲೂಕು ಪುದುವೆಟ್ಟು ನೆಲ್ಯಾರ[illegible] ಗ್ರಾಮದಲ್ಲಿರುವ ರಾಮಣ್ಣ ಸೆಟ್ಟಿ ಮೊಮ್ಮ[illegible] ಕೊರಗ ಸೆಟ್ಟಿ (ಯಾನೆ ಬಂಟ)ರಿಗೆ ತಿಳಿಸುವದೇ[illegible]ನಂದರೆ:—

ವಾದಿ ಗುಲಾಂ ಬ್ಯಾರಿಯು ನಿಮ್ಮ ಮೇಲೆ[illegible] ಕೂಡಾ ಮೇಲಿನ ಅರ್ಜಿ ವ್ಯವಹರಣೆಯಲ್ಲಿ[illegible] ಫ್ಯಾನಲ್ ಡಿಕ್ರಿ ಅಪೇಕ್ಷಿಸಿ ಮಾಡಿದ ಅರ್ಜಿಯು[illegible] ಸದ್ರಿ ಕೋರ್ಟಿನಲ್ಲಿ ತಾ. 12-10-1943ನೇ[illegible] ಪೂರ್ವಾಹ್ನ 11 ಘಂಟೆಗೆ ತನ್ಕಿಗೆ ಇಟ್ಟಿದೆ. ನಿಮಗೇನಾದರೂ ಉದಹರಿಸುವದಿದ್ದರೆ ಆ ಸ[illegible]ಮಯಕ್ಕೆ ಕೋರ್ಟು ಮುಂದೆ ಹಾಜರಾಗಿ ಉದಹರಿಸತಕ್ಕದ್ದು. ಇದಕ್ಕೆ ತಪ್ಪಿದರೆ ನಿಮ್ಮ[illegible] ಶಿವಾ ಅರ್ಜಿ ವ್ಯವಹರಣೆ ಮುಂದರಿಸಲಾದೀತು.

ಪುತ್ತೂರು, } T. Ganapathy Rao.

ಜಿಲ್ಲಾ ಸಮಾಚಾರಗಳು

ಮಂಗಳೂರು

ಮಂಗಳೂರಲ್ಲಿ ಕೊಲೆರಾ 113ರಲ್ಲಿ 48 ಮರಣ.

ತಾ. 16ರ ಮಧ್ಯಾಹ್ನ ವರೆಗೆ ಮಂಗಳೂರು ನಗರದಲ್ಲಿ 113 ಮಂದಿಗೆ ಕೊಲೆರಾ ರೋಗ ತಗಲಿ 48 ಮಂದಿ ಮೃತರಾಗಿದ್ದಾರೆ. ಇದು ವರೆಗೆ 50 ಸಾವಿರಕ್ಕೆ ಮಿಕ್ಕಿ ಇನಾಕ್ಯುಲೇಶನ್ ಆಗಿದೆ.

ಶ್ರೀ ಕಲ್ಲೆ ನಾರಾಯಣರಾಯರ ಬಂಧನ !

ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಪತ್ರಿಕೆಯ ಸಂಪಾದಕ ಮಂಡಳಿಯ ಸದಸ್ಯರೊಲ್ಲೊಬ್ಬರಾದ, ಶ್ರೀ ನಾರಾಯಣ ಕಲ್ಲೆಯವರನ್ನು (ದಕ್ಷಿಣ ಕನ್ನಡದವರು) ಹುಬ್ಬಳ್ಳಿಯ ಕ್ರಿಶ್ಚಿಯನ್ ಕೊಲೊನಿಯಲ್ಲಿರುವ ತಮ್ಮ ಮನೆಯಲ್ಲಿ ತಾ ೯ರಂದು ಮಧ್ಯಾಹ್ನ ಪೋಲೀಸರು ಬಂಧಿಸಿದರು. ಮನೆ ಜಡ್ತಿ ಕಾಲಕ್ಕೆ ಅಗತ್ಯಾನೇ ಶಿರ್ಶಿಯಿಂದ ಬಂದ ಒಂದು ಕಾಗದ ಸಿಕ್ಕಿತಂತೆ. ಇವರನ್ನು ಬಂಧಿಸಿ ಧಾರವಾಡಕ್ಕೊಯ್ದಿರುವರು. ಡಿ. ಇ. ಕಾನೂನಿನ ೨೯ನೇ ಕಲಮಿನನ್ವಯ ಅವರನ್ನೀಗ ಬಂಧನದಲ್ಲಿಟ್ಟಿರುವರು.

ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಪರಿಷತ್ತು

ಜಿಲ್ಲಾ ಪತ್ರಿಕೋದ್ಯೋಗಿ ಸಂಘದ ಮಹಾಸಭೆ ತಾ. ೧೧ರಂದು ಸಂಘದ ಕಚೇರಿಯಲ್ಲಿ ಶ್ರೀ ಹುರುಳಿ ಭೀಮರಾಯರ ಅಧ್ಯಕ್ಷತೆಯಿಂದ ಸೇರಿ, ಈ ವರ್ಷಾಂತ್ಯದೊಳಗೆ ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಪರಿಷತ್ತನ್ನು ಮಂಗಳೂರಲ್ಲಿ ಕರೆವ ವಿಚಾರವಾಗಿ ಒಂದು ತಾತ್ಕಾಲಿಕ ಸ್ವಾಗತ ಸಮಿತಿ ರಚಿಸಲಾಯಿತು. ಸ್ವಾಗತ ಸಮಿತಿಯ ನಿಯಮಾವಳಿ ರಚಿಸಲಾಯಿತು. ಸ್ವಾಗತ ಸಮಿತಿಗೆ ಚಂದಾ ತೆರುವ ಪತ್ರಿಕೋದ್ಯೋಗಿಗಳನ್ನು ಮತ್ತು ಇತರರನ್ನೂ ಸದಸ್ಯರಾಗಿ ಸೇರಿಸುವುದೆಂದಾಯಿತು. ಜಿಲ್ಲೆಯ ಬೇರೆಬೇರೆ ಕಡೆಗಳಲ್ಲಿರುವ ಪತ್ರಿಕೋದ್ಯೋಗಿ ಸಂಘಗಳು ವಾರ್ಷಿಕ ವರ್ಗಣಿ ರೂ. ೩ನ್ನು ತೆತ್ತು ಜಿಲ್ಲಾ ಸಂಘದ ನಿಬಂಧನೆಗನುಸಾರವಾಗಿ ಈ ಕೇಂದ್ರ ಸಂಘಕ್ಕೆ ಸೇರಬಹುದೆಂದಾಯಿತು.

ತೋಟಗಾರಿಕೆಗಳ ಸ್ಪರ್ಧೆ

ಇದೇ ಕಳೆದ ತಾ. ೬ರಲ್ಲಿ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜಿಲ್ಲಾ ಎಡ್ವಾನ್ಸ್‌ಮೆಂಟ್ ಸಂಘದ ಒಂದು ಸಭೆ ಜರುಗಿ ಆರನೆಯ ಮಂಗಳೂರು ಫಲಪುಷ್ಪ ಪ್ರದರ್ಶನದ ಬದಲಿಗೆ ಈ ವರ್ಷ ಒಂದು ತೋಟಗಾರಿಕೆಗಳ ಸ್ಪರ್ಧೆ ನಡೆಯಬೇಕೆಂದೂ ಇದಕ್ಕಾಗಿ ಸ್ಪರ್ಧಿಸುವವರು ಯಾವ ಫೀಸೂ ತೆರಬೇಕಾಗಿಲ್ಲವೆಂದೂ, ಸ್ಪರ್ಧಿಸುವವರ ಅರ್ಜಿಗಳು ಇದೇ ತಾ. ೩೦ರೊಳಗೆ ಸೆಕ್ರೆಟರಿಗಳಿಗೆ ತಲಪಬೇಕೆಂದೂ ಸ್ಪರ್ಧೆಯ ವಿಮರ್ಶಾಕಾರ್ಯವು ಬರುವ ಅಕ್ಟೋಬರ ತಾ. ೧ರಿಂದ ೫ರ ವರೆಗೆ ಯೋಗ್ಯ ಜಡ್ಜಿಗಳಿಂದ ನಡೆಯುವುದೆಂದೂ ಸಂಬಂಧಪಟ್ಟವರು ತಿಳಿಸಿರುತ್ತಾರೆ.

ನೇಮಕಗಳು

ಡಾ। ಎಂ. ಉಮೇಶ ರಾವ್ ಎಲ್. ಎಂ. ಎಂಡ್ ಎಸ್. ಟಿ. ಡಿ. ಡಿ. (ವೇಲ್ಸ್) ಇವರು ಹೆಡ್‌ಕ್ವಾರ್ಟರ್ಸ್ ಆಸ್ಪತ್ರೆಯ ಗೌರವಾರ್ಥ ಅಸಿ॥ ಮೆಡಿಕಲ್ ಆಫೀಸರರಾಗಿ ೫ ವರ್ಷಗಳ ವರೆಗೆ ನೇಮಿಸಲ್ಪಟ್ಟಿದ್ದಾರೆ.

ಮಂಗಳೂರು ಫಿಶರೀಸ್ ಇಲಾಖೆಯ ಇನಸ್ಪೆಕ್ಟರ್ ಶ್ರೀ ಇ. ಕೆ. ಮಾಧವನ್ ಅವರು ಫಿಶರೀಸಿನ ಅಸಿ॥ ಡೈರೆಕ್ಟರರಾಗಿ ನೇಮಿಸಲ್ಪಟ್ಟಿದ್ದಾರೆ.

ನಿವೃತ್ತ ಡೆಪ್ಯುಟಿ ಕಲೆಕ್ಟರರಾದ ಶ್ರೀ ಜಿ. ದತ್ತಾತ್ರೆಯರಾವ್ ಅವರು ತಿರುಗಿ ಡೆಪ್ಯುಟಿ ಕಲೆಕ್ಟರರಾಗಿ ನೇಮಕ ಹೊಂದಿ ದಕ್ಷಿಣ ಕನ್ನಡದ ಜಿಲ್ಲಾ ಕಲೆಕ್ಟರರಿಗೆ ಪರ್ಸನಲ್ ಅಸಿಸ್ಟೆಂಟರಾಗಿ ನೇಮಿಸಲ್ಪಟ್ಟಿದ್ದಾರೆ.

ತಹಶಿಲ್ದಾರರಿಗೆ "ರಿಕ್ವಿಜಿಶನ್" ಅಧಿಕಾರ

ಇದುವರೆಗೆ ಅಕ್ಕಿಬತ್ತಗಳ ಕುರಿತಾಗಿ ಎಗ್ಜಿಕ್ಯುಟಿವ್ ಅಧಿಕಾರಿಗಳಿಗೆ ಮಾತ್ರವೇ ಇದ್ದ "ರಿಕ್ವಿಜಿಶನ್" ಅಧಿಕಾರವೀಗ ಈ ಜಿಲ್ಲೆಯ ಯಾವತ್ತು ತಹಶಿಲ್ದಾರರಿಗೂ ಕೊಡಲಾಗಿದೆ ಎಂದು ತಿಳಿದು ಬರುತ್ತಿದೆ.

ಸಾರಾಯಿ ಭಟ್ಟಿ ಕಾರ್ಖಾನೆ

ದ. ಕ. ಜಿಲ್ಲೆಗಾಗಿ ಮಂಗಳೂರಲ್ಲಿ ಒಂದು ಸಾರಾಯಿ ಭಟ್ಟಿ ಇಳಿಸುವ ಕಾರ್ಖಾನೆಯನ್ನು ಸ್ಥಾಪಿಸುವ ಸಲುವಾಗಿ, ಶ್ರೀ ಎಫ್. ಪಿ. ಎಸ್. ಅಲ್ಬುಕರ್ಕರಿಗೆ ಲೈಸನ್ಸ್ ಕೊಡಿಸಬೇಕೆಂದು ಇಲ್ಲಿನ ಸಮಾಜಗಳ ಸುಮಾರು ೩೫ ಮಂದಿ ಮುಂದಾಳುಗಳು ಪ್ರಾರ್ಥಿಸಿಕೊಂಡು ಮದ್ರಾಸಿನ ಎಕ್ಸೈಜ್ ಶಾಖೆಯ ಕಮಿಶನರ್ ಶ್ರೀ ಎಫ್. ಬಿ. ಬ್ರೌನ್ ಇವರಲ್ಲಿ ಒಂದು ವಿನಂತಿ ಪತ್ರವನ್ನು ಕಳುಹಿಸಿದ್ದಾರೆ.

ಸರಾಯಿ ಮಾಡಲು ಅಗತ್ಯವಿರುವ ಗೇರು ಹಣ್ಣು ಮೊದಲಾದುವು ಈ ಜಿಲ್ಲೆಯಲ್ಲಿ ಧಾರಾಳವಾಗಿ ದೊರಕುತ್ತದೆಂದೂ ಸರಾಯಿ ಮಾಡುವುದೇ ಮುಖ್ಯೋದ್ದೇಶವಾದ್ದರೂ, "ಪವರ್ ಆಲ್ಕಹೋಲ್"ನ್ನು ಮಾಡುವುದೂ ಇನ್ನೊಂದು ಉದ್ದೇಶವೆಂದೂ ಪವರ್ ಆಲ್ಕಹೋಲ್ ಯಾವ್ಯಾವುದಕ್ಕೆ ಉಪಯೋಗಿಸಲು ಬರುತ್ತಿದೆ, ಪೆಟ್ರೋಲಿನೊಡನೆ ಅದನ್ನು ಹೇಗೆ ಬೆರಕೆ ಮಾಡಲಾಗುತ್ತಿದೆ, ವಿದೇಶಗಳಲ್ಲಿ, ಆಸ್ಟ್ರೇಲಿಯಾ ಮೊದಲಾದ ಕಡೆ, ಅದರ ಪ್ರಯೋಗವು ಹೇಗೆ ಆಗುತ್ತಿದೆ, ಕೈಗಾರಿಕೆ ಕಾರ್ಖಾನೆಗಳಲ್ಲಿ ಇದರ ಅವಶ್ಯಕತೆ ಎಷ್ಟು ಹುಟ್ಟಿಗಿದೆ ಎಂಬುದನ್ನು ಸ್ಪಷ್ಟಪಡಿಸುವುದರೊಡನೆ, ದಕ್ಷಿಣ ಕನ್ನಡದಲ್ಲಿ, ಮಲಬಾರಿನ ಹೋಲಿಕೆಯೊಡನೆ, ಈ ಕಾರ್ಖಾನೆಗೆ ಬೇಕಾದ ಸೌಕರ್ಯಗಳು ಧಾರಾಳವಾಗಿದೆ ಎಂಬುದನ್ನೂ ಈಗ ಈ ಯುದ್ಧದ ಸಮಯದಲ್ಲಿ ಮಂಗಳೂರಲ್ಲಿ ಈ ಕಾರ್ಖಾನೆ ಸ್ಥಾಪಿಸಲು ಎಂಥ ಸುಸಂದರ್ಭವೊದಗಿದೆ ಎಂಬುದನ್ನು ಈ ವಿನಂತಿ ಪತ್ರದಲ್ಲಿ ಮನಗಾಣಿಸಲಾಗಿದೆ. ಸಾರಾಯಿ ಇಳಿಸುವ ಈ ಕಾರ್ಖಾನೆಗೆ ಸರಕಾರದ ಅಪ್ಪಣೆ ದೊರಕಿದರೆ, ಅದರೊಡನೆ ಸಕ್ಕರೆ, ಪವರ್ ಹಾಗೂ ಕೈಗಾರಿಕೆಗಳ ಆಲ್ಕಹೋಲ್ ಮೊದಲಾದುವನ್ನೂ ತಯಾರಿಸಬಹುದೆಂದೂ ಸೂಚಿಸಲಾಗಿದೆ.

ಭತ್ತದ ರೂಪದಲ್ಲೇ ಕಿಸ್ತಿನ ತೆರಿಗೆ

ಈಗಿನ ಫಸಲನ್ನು ಕೊಯ್ದ ಬಳಿಕ ತೀರ್ವೆಯನ್ನು ಭತ್ತದ ರೂಪದಲ್ಲಿ ವಸೂಲುಮಾಡುವ ಆಲೋಚನೆ ಮದ್ರಾಸ್ ಸರಕಾರಕ್ಕೆ ಇದೆ, ಎಂದು ಮದ್ರಾಸ್ ಗವರ್ನರರ ಎಡ್ವೈಜರರಾದ ಶ್ರೀ ಎಸ್. ವಿ. ರಾಮಮೂರ್ತಿಯವರು ಮದ್ರಾಸಿನಲ್ಲಿ ಪತ್ರಿಕೋದ್ಯಮಿಗಳ ಭೇಟಿಯ ಕಾಲದಲ್ಲಿ ತಿಳಿಸಿರುವರು,

ಕೊಲೆರಾ ಸಂಬಂಧ ಹೆಚ್ಚಿನ ಸಿಬಂದಿ

ಮಂಗಳೂರಿನ ಕೊಲೆರಾ ಸಂಬಂಧ ತಿಂಗಳಿಗೆ ೫೫ ರೂಪಾಯಿಗಳ ಒಬ್ಬ ಸೆನಿಟರಿ ಇನಸ್ಪೆಕ್ಟರ್, ೧೨ ರೂಪಾಯಿಗಳ ಒಬ್ಬ ಸೈಕಲ್ ಆರ್ಡರ್ಲಿ ಮತ್ತು ರೂ. ೨೪ ರೂಪಾಯಿಗಳ ಇಬ್ಬರು ತೋಟಿಗಳು (ಎಲೋವೆನ್ಸ್ ಸಹಿತ) ಹೆಚ್ಚಿನ ಸಿಬಂದಿಯಾಗಿ ನೇಮಿಸಲ್ಪಡುವಂತೆ ಕಳೆದ ಮು॥ ಕೌ॥ ಮಿಟಿಂಗಿನಲ್ಲಿ ಮಂಜೂರಾಗಿದೆ. ಈ ಹೆಚ್ಚಿನ ಸಿಬಂದಿಗೆ ತಿಂಗಳಿಗೆ ಎಲೊವೆನ್ಸ್ ಮತ್ತು ಸಂಬಳಕ್ಕಾಗಿ ಬೇಕಾಗುವ ಮೊತ್ತ ರೂಪಾಯಿ ೧೨೭-೮-೦

ದಂಡನೆ

ವೆಬ್‌ಸ್ಟರ್ ಮಾರ್ಕೆಟಿನ ವ್ಯಾಪಾರಿ ಶ್ರೀ ಎನ್. ಮಾಧವ ನ್ಯಾಕ್ ಅವರು ಲೈಸನ್ಸ್ ಇಲ್ಲದೆ ಸುಮಾರು ೭೦ ಮುಡಿ ಉದ್ದು ದಾಸ್ತಾನು ಇಟ್ಟಿದ್ದರೆಂಬ ಆರೋಪದ ಒಂದು ಮೊಕದ್ದಮೆ ಸಬ್॥ ಡಿ॥ ಆಫೀಸರರಾದ ಶ್ರೀ ಪಿ. ವಿ. ಮಾಧವರಾಯ ಮುಂದೆ ವಿಚಾರವಾಗಿ ಆರೋಪಿಗೆ ೧೫ ದಿವಸಗಳ ಕಠಿಣ ಸಜೆಯೂ ೩೦೦ ರೂಪಾಯಿಗಳ ಜುಲ್ಮಾನೆಯೂ ಆಯಿತು.

ಅಭ್ಯಾಸಗೋಷ್ಠಿ ಸ್ವಂತಕೃತಿಗಳ ವಾಚನ

ಕಳೆದ ಶನಿವಾರ 'ಮಿತ್ರಮಂಡಳಿ'ಯ ವಾರದ 'ಅಭ್ಯಾಸಗೋಷ್ಠಿ'ಯಲ್ಲಿ 'ಸ್ವಂತ ಕೃತಿಗಳ ವಾಚನ' ಕಾರ್ಯಕ್ರಮವು ಶ್ರೀ ಸೇಡಿಯಾಪು ಕೃಷ್ಣಭಟ್ಟರ ಅಧ್ಯಕ್ಷತೆಯಿಂದ ಜರಗಿತು.

ಶ್ರೀ ಪಿ. ಯಲ್. ರಾಯರು ತಮ್ಮ 'ಹಕ್ಕಿ' ಯೆಂಬ ಭಾವನಾತ್ಮಕ ಕವಿತೆಯನ್ನೋದಿದರು. ಶ್ರೀ ಪತ್ತುಮುಡಿ ರಾಮಕೃಷ್ಣರಾಯರು 'ಭಾರತೀಯನ ಹಂಬಲು' ಎಂಬ ದೇಶಪ್ರೇಮಪೂರಿತ ಕವನವನ್ನು ವಾಚನಮಾಡಿದರು. ಶ್ರೀ ವಿ. ಶಂಭಟ್ಟರು 'ವಿಮಾನ'ವೆಂಬ ಹೊಸ ಕವನವನ್ನೂ 'ನಾಯಿಮರಿ' ಎಂಬ ಶಿಶುಗೀತವನ್ನೂ ಹಾಡಿದರು. ಶ್ರೀ ರಂ. ರಾ. ತಲ್ಲೇರಿಕರರು 'ಗೋವಿಂದ ಶೆಟ್ಟರ ಸಾಕ್ಷಿ' ಎಂಬ ವಕೀಲ ಜೀವನದ ವಿನೋದಮಯ ಕತೆಯನ್ನು ಓದಿದರು. ಶ್ರೀ ಎಂ. ವಾಸುದೇವಪ್ರಭುಗಳು 'ವ್ಯಾಕರಣ ಪಾಠ' ಸಂಶೋಧನೆ ಮೊದಲಾದ ತಮ್ಮ ವಿನೋದ ವಿಡಂಬನಾತ್ಮಕ ಪ್ರಬಂಧಗಳನ್ನು ರಸವತ್ತಾಗಿ ಓದುತ್ತಾ ಸಭಿಕರನ್ನು ನಗೆಯಲ್ಲಿ ತೇಲಿಸಿದರು.

ಅನಂತರ ಶ್ರೀ ಕಯ್ಯಾರ ಕಿಞ್ಞಣ್ಣ ರೈಗಳು 'ಸ್ವಗತ' ಎಂಬ ತನ್ನ ಜೀವನ ಸ್ಮರಣೆಗಳನ್ನೀಯುವ ಕವನವನ್ನು ಹಾಡಿದರು. ಶ್ರೀ ಟಿ. ಗೋಪಾಲಕೃಷ್ಣಭಟ್ಟರು 'ಜಾಮದಹನ' 'ಆರ್ತನಾದ' ಕವಿತೆಗಳ ವಾಚನಮಾಡಿದರು. ಶ್ರೀ ನರಸಿಂಹ ಭಟ್ಟರು ತಮ್ಮ ಹೊಸಕವಿತೆ ಓದಿದ ಬಳಿಕ ಶ್ರೀ ಪಿ. ಕೆ. ನಾರಾಯಣಪೈ 'ಬೀದಿಯಲಿ ಬಿದ್ದಿರುವ ತೆಂಗುಲಾಟಿಯ ಕಂಡು' ಎಂಬ ಭಾವನಾತ್ಮಕ ಕವನವನ್ನು ವಾಚನಮಾಡಿದರು.

ಅನಂತರ ಅಧ್ಯಕ್ಷರು ಮಾತನಾಡುತ್ತಾ 'ಮಿತ್ರಮಂಡಳಿ'ಯ ಆಶ್ರಯದಲ್ಲಿ ಆಗಾಗ ಈ ರೀತಿ ಲೇಖಕರು ತಮ್ಮ ತಮ್ಮ ಕೃತಿಗಳನ್ನು ಓದುವ ಏರ್ಪಾಡು ಮಾಡಿದ್ದು ಪ್ರಶಂಸನೀಯವೆಂದೂ, ಲೇಖಕರು ಇಂಥಾ ಸಂದರ್ಭದಲ್ಲಿ ತಾವು ಹೊಸದಾಗಿ ಬರೆದು ತಂದು ಓದುವುದು ಎಂಬ ನಿಯಮವನ್ನನುಸರಿಸಿದರೆ ಬಹಳ ಉತ್ತಮವಾಗುವುದೆಂದೂ ತಿಳಿಸಿ, ಸ್ವಂತಕೃತಿಗಳನ್ನು ಓದುವವರಿಗೆ ಕೆಲವು ಸೂಚನೆಗಳನ್ನಿತ್ತರು.

ಕೊನೆಗೆ ಡಾ। ಎಸ್. ಪಿ. ಭಟ್ಟರು, ಕೃತಜ್ಞತೆಯನ್ನು ತಿಳಿಸಿ 'ಮಿತ್ರಮಂಡಳಿ'ಯ ಆಶ್ರಯದಲ್ಲಿ 'ಒಂದು ಸಾಹಿತ್ಯ ಸಂಪಾದಕ ಮಂಡಳಿ'ಯನ್ನು ಏರ್ಪಡಿಸಿದ್ದು, ಹೊಸದಾಗಿ ಲೇಖನ ಬರೆಯುವವರು, ಹೆಚ್ಚಾಗಿ ವಿದ್ಯಾರ್ಥಿ ಸದಸ್ಯರು ತಮ್ಮ ಕವಿತೆ, ಕತೆ, ಪ್ರಬಂಧ ಮೊದಲಾದುವುಗಳನ್ನು ಈ ಮಂಡಳಿಯವರ ವಶವಿತ್ತರೆ, ಅವರು ಅದನ್ನು ಓದಿ, ಯೋಗ್ಯ ಸಲಹೆ ಸೂಚನೆಗಳನ್ನೀಯುವುದಲ್ಲದೆ, ಪ್ರಕಟಣಾರ್ಹವೆನಿಸಿ ತೋರಿದ್ದನ್ನು ಮಿತ್ರಮಂಡಳಿಯ ಮೂಲಕ ಪತ್ರಿಕೆಗಳಿಗೆ ಪ್ರಕಟಿಸಲು ಕಳುಹಿಸುವರೆಂದೂ ತಿಳಿಸಿದರು.

ಬರುವ ಶನಿವಾರದ ಅಭ್ಯಾಸ ವಿಷಯ 'ಏಕಾಂಕ ನಾಟಕಗಳು'

ಬಂಗಾಳದ ನಿರಾಶ್ರಿತರಿಗೆ

ನಿಧಿಕೂಡಿಸುವ ಬಗ್ಗೆ ಕೆನರಾ ಹೈಸ್ಕೂಲ್ ಭುವನೇಂದ್ರ ಸಭಾಸದನದಲ್ಲಿ ಶ್ರೀ ಕೆ. ಅಕ್ಷ್ಯ ಆಚಾರ್ ಇವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಸೇರಿತ್ತು. ಶ್ರೀಗಳಾದ ಆರ್. ಎ. ಬಿಜೂರು, ಬಿ. ಎ. ಕಕ್ಕಿಲ್ಲಾಯ, ಪಿ. ದಾಮೋದರ ಕಿಣಿ ಡಾ। ಕೆ. ಗಿರಿಧರರಾವ್ ಇವರು ಭಾಷಣ ಮಾಡಿದ ಮೇಲೆ ಈ ಬಂಗಾಳದ ನಿಧಿಗೆ ಹಣ ಕೂಡಿಸಲು ಒಂದು ಸಮಿತಿಯ ರಚನೆಯಾಯಿತು.

ಉಡುಪಿ

ಪತ್ರಿಕೋದ್ಯೋಗಿ ಸಂಘ

ಉಡುಪಿಯ ಪತ್ರಿಕೋದ್ಯೋಗಿಗಳ ಸಭೆ ತಾ. ೧೨ರಂದು ಶ್ರೀ ಕೆ. ಪಟ್ಟಿಲ ಶೆಣೈಯವರ ಅಧ್ಯಕ್ಷತೆಯಲ್ಲಿ ನವಯುಗ ಪ್ರೆಸ್ಸಿನಲ್ಲಿ ಸೇರಿ ಉಡುಪಿ ಪತ್ರಿಕೋದ್ಯೋಗಿ ಸಂಘವೊಂದು ರಚಿಸಲ್ಪಟ್ಟಿತು. ಸಭೆ ಆರಿಸಿದ ಹೊಸ ಕಾರ್ಯಕಾರಿ ಮಂಡಳಿಯಲ್ಲಿ ಶ್ರೀ ಕೆ. ಹೊನ್ನಯ ಶೆಟ್ಟಿ ಅಧ್ಯಕ್ಷರು, ಶ್ರೀ ಬಿ. ರಾಮಕೃಷ್ಣಚಾರ್ ಉಪಾಧ್ಯಕ್ಷರು, ಶ್ರೀ ಎಸ್. ಎಸ್. ಪರ್ಕಳ ಕಾರ್ಯದರ್ಶಿ, ಶ್ರೀ ಕೆ. ಆರ್. ಶೆಟ್ಟಿ ಕೋಶಾಧಿಕಾರಿಗಳಾಗಿರುವರು. ಶ್ರೀಗಳಾದ ಕೊರಡ್ಕಲ್ ಶ್ರೀನಿವಾಸರಾವ್, ಯು. ಎಸ್. ಭಟ್, ಕೆ. ವಿ. ಬಾಯಿ ಇವರು ಸಮಿತಿಯ ಇತರ ಸದಸ್ಯರು. ಆ ದಿನ ಸಭೆಗೆ ಬಂದಿದ್ದ ಜಿಲ್ಲಾ ಪತ್ರಿಕೋದ್ಯೋಗಿ ಸಂಘದ ಕಾರ್ಯದರ್ಶಿ ಶ್ರೀ ಕುಳುಕುಂದ ಶಿವರಾಯರು, ಈ ವರ್ಷಾಂತ್ಯದೊಳಗೆ ಮಂಗಳೂರಲ್ಲಿ ಜರಗಿಸುವ ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಳನದ ಕುರಿತು ಹಾಗೂ ಆಗುತ್ತಿರುವ ಸನ್ನಾಹವನ್ನು ವಿವರಿಸಿದರು. ಉಡುಪಿ ಪತ್ರಿಕೋದ್ಯೋಗಿ ಸಂಘವು ಕೇಂದ್ರ ಸಂಘದ ಈ ನಿರ್ಣಯವನ್ನು ಸ್ವಾಗತಿಸುತ್ತದೆ ಯೆಂಬ ನಿರ್ಣಯವೂ, ಶ್ರೀಯುತರು ಶಿವರಾಮ ಕಾರಂತ ಮತ್ತು ವಿ. ಎಸ್. ಕುಡ್ವರ ಗ್ರಂಥಗಳಿಗೆ ಪಾರಿತೋಷಿಕ ದೊರೆತ ಬಗ್ಗೆ ಅವರನ್ನು ಅಭಿನಂದಿಸುವ ನಿರ್ಣಯವೂ ಸ್ವೀಕರಿಸಲಾಯಿತು.

ಪುತ್ತೂರು

ನಿಧನ

ಸ್ಥಾನಬದ್ಧರಾಗಿ ವೆಲ್ಲೂರು ಸೆರೆಮನೆಯಲ್ಲಿರುವ ಶ್ರೀ ಬಿ. ದಾಮೋದರ ಬಾಳಿಗರ ತೀರ್ಥರೂಪರಾದ ಶ್ರೀ ಬಂಟ್ವಾಳ ಅಣ್ಣಪ್ಪ ಬಾಳಿಗರು ತಾ. ೧೦ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಇಲ್ಲಿ ಮೊದಲಿನಿಂದಲೇ ವ್ಯಾಪಾರಿಗಳಾಗಿದ್ದು ಜನಪ್ರಿಯರಾಗಿದ್ದರು. ಇವರ ಮಕ್ಕಳ ಮತ್ತು ಕುಟುಂಬದವರ ದುಃಖದಲ್ಲಿ ನಾವು ಸಹಭಾಗಿಗಳಾಗಿರುವೆವು. ಮೃತರ ಆತ್ಮಕ್ಕೆ ಚಿರಶಾಂತಿಯಿರಲಿ!

ಕಾರ್ಕಳ

ಪ್ರಮಾಣ ಪತ್ರ ವಿತರಣೋತ್ಸವ

ಕಾರ್ಕಳ ತಾಲೂಕು ರಾಷ್ಟ್ರಭಾಷಾ ಪ್ರಚಾರ ಸಂಘದ ದ್ವಿತೀಯ ಪ್ರಮಾಣ ಪತ್ರ ವಿತರಣೋತ್ಸವವು ತಾ. ೨-೧೦-೪೩ರ ಸಾಯಂಕಾಲ ೫-೩೦ಕ್ಕೆ ಶ್ರೀ. ವೆಂಕಟ್ರಮಣ ಹಾಯರ ಎಲಿಮೆಂಟರಿ ಶಾಲೆಯಲ್ಲಿ ಶ್ರೀ. ಕೆ. ಪಿ. ಶೇಷಗಿರಿ ಪ್ರಭುಗಳ ಅಧ್ಯಕ್ಷತೆಯಲ್ಲಿ ಜರಗುವದು. ಶ್ರೀ. ಬಿ. ರಾಮಕೃಷ್ಣಾಚಾರ್ ಇವರು ಭಾಷಣವನ್ನು ಕೊಡುವರು. ಈ ಸಂದರ್ಭದಲ್ಲಿ ಆಕರ್ಷಕ ಮತ್ತು ಮನೋರಂಜಕ ಇತರ ಕಾರ್ಯಕ್ರಮಗಳೂ ಇರುವವು. ಹಿಂದೀ ಪ್ರೇಮಿಗಳೆಲ್ಲರು ಬಂದು ಪ್ರೋತ್ಸಾಹಿಸಬೇಕಾಗಿಯೂ ಸಂಘಕ್ಕೆ ಉದಾರ ಸಹಾಯವನ್ನು ಕೊಟ್ಟು ರಾಷ್ಟ್ರಕಾರ್ಯದಲ್ಲಿ ನೆರವಾಗಬೇಕೆಂದೂ ಸಂಘದ ಪರವಾಗಿ ಕಾರ್ಯದರ್ಶಿ ಶ್ರೀ. ಕಟಪಾಡಿ ಶ್ರೀನಿವಾಸ ಶೆಣೈಯವರು ಕೋರುತ್ತಾರೆ.

ನೋಟೀಸು

ಮಂಗ್ಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S. C. No. 377/43.

ಎ. ನೊರಂಞ .... ವಾದಿ.

ಎದ್ರಿ

ಎಯ್ಯಾಡಿ ತುಕ್ರ ಮ್ಯೊಲಿ ... ಪ್ರತಿವಾದಿ.

ಸದ್ರಿ ಪ್ರತಿವಾದಿ ಎಯ್ಯಾಡಿ ತುಕ್ರ ಮ್ಯೊಲಿಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ, ಪ್ರತಿವಾದಿಯು ವಾದಿಯ ಕೂಡೆ ನಡ್ಸಿದ ಲೇವಾದೇವಿ ಬಾಬ್ತು ಬಾಕಿಮಾಡಿಕೊಂಡ ಬಹಾ ಅಸ್ಲು ಬಡ್ಡಿ ರುಪ್ಯಾ 178-7-8ನ್ನು ಬರಮಾಡಿಕೊಳ್ಳುವರೆ ವಾದಿಯು ದಾವಾ ದಾಖ್ಲ ಮಾಡಿ ಅದು ತನ್ನಿಬಗ್ಗೆ ತಾ. 27-9-1943ರಲ್ಲಿ ಮೇಲ್ಕಂಡ ಕೋರ್ಟಿನಲ್ಲಿ ಇಟ್ಟಿರುತ್ತದೆ.

ಸದ್ರಿ ದಿವ್ಸ ನೀವು ಖುದ್ದಾಗಲೀ ವ, ವಕೀಲರ ಮುಖಾಂತ್ರ ಹಾಜ್ರಾಗಿ ನಿಮ್ಮ ಉದಾಹರಣೆಯನ್ನು ದಾಖ್ಲು ಮಾಡದಿದ್ದರೆ ಸದ್ರಿ ವ್ಯಾಜ್ಯವು ನಿಮ್ಮ ಗೈರ್ಹಾಜರಿಯಿಂದ ತೀರ್ಮಾನವಾದೀತು. ತಿಳಿದಿರಲಿ.

By order

Mangalore } John Gonsalves.
14-9-1943 } Vakil for plff.

ನಿಮಾ ಸುದ್ದಿ

ಕನ್ನಡದ ಕೀರ್ತಿಗೆ ಕಳಂಕ ತಂದಿದೆ!

'ಕೃಷ್ಣ ಸುಧಾಮ' ಅತಿ ಹೀನ ಚಿತ್ರ—

ಸುಬ್ರಹ್ಮಣ್ಯರಿಗೆ ಚಲಚ್ಚಿತ್ರ ವಿಮರ್ಶಕರ ಎಚ್ಚರಿಕೆ!

ಕನರಾ ಚಲಚ್ಚಿತ್ರ ಸಂಘದ ವಾರದ ಠಿ ಕಳೆದ ಆದಿತ್ಯವಾರ ಶ್ರೀ ಜಿ. ಎನ್. ಡ್ಯಯವರ ಅಧ್ಯಕ್ಷತೆಯಲ್ಲಿ ಸೇರಿ ಕಲ್ಯೆ ಾಣಿಯವರ 'ಕೃಷ್ಣಸುಧಾಮ' ಚಿತ್ರವು ೂಲಂಕಷ ವಿಮರ್ಶಿಸಲ್ಪಟ್ಟಿತು. ಆ ಚಿತ್ರವನ್ನು ವಿಮರ್ಶಿಸಿದವರೆಲ್ಲರೂ ಅದು ತಿ ಹೀನಚಿತ್ರವೆಂದೂ, ಕನ್ನಡದ ಕೀ ರ್ತಿಗೆ ಕಳಂಕ ತರುವಂಥಾದ್ದೆಂದೂ, ತ ಮಿಳಿನ ಸುಬ್ರಹ್ಮಣ್ಯಂ ಇನ್ನು ಮುಂದೆ ನ್ನಡ ಚಿತ್ರಗಳನ್ನು ತಯಾರಿಸಿಕೂಡ ದೆಂದೂ, ಅಥವಾ ಇನ್ನು ಮುಂದೆ ಇಂ ಥಾ ಕನ್ನಡ ಚಿತ್ರಗಳನ್ನು ತಯಾರಿಸುವ ಸಾಹಸಮಾಡಿದರೆ, ಅದು ಕನ್ನಡನಾಡಿನ ಯಾವುದೇ ಥಿಯೇಟರಿನಲ್ಲಿಯೂ ಪ್ರದ ರ್ಶಿತವಾಗದಂತೆ ಆಂದೋಲನ ಮಾಡ ಬೇಕೆಂದೂ ಮೊದಲಾಗಿ ಹೇಳಿದರು.

ಬೇರೆ ಬೇರೆ ವಿಮರ್ಶಕರು ಹೇಳಿದ ಅಭಿಪ್ರಾಯಗಳು ಹೀಗಿವೆ:

'ಸಂಸಾರ ನೌಕ'ದಿಂದ ತೊಡಗಿ, ದಿನ ದಿನಕ್ಕೆ ಕನ್ನಡ ಚಿತ್ರಗಳು ಕೆಳ ತರಗತಿಗೆ ಬರುವುದನ್ನು ನೋಡಿದರೆ ವಿಷಾದವಾಗು ತ್ತದೆ. ಅದರಲ್ಲೂ ಕಲ್ಯಾಣಿಯವರು 'ಕನ್ನಡ ಪ್ರಹ್ಲಾದವನ್ನು' ನಿರ್ಮಿಸಿ ಕನ್ನಡಿ ಗರ ಮನಸ್ಸಿಗೆ ಮಾಡಿದ ಗಾಯದ ಮೇ ಲೆ, 'ಕೃಷ್ಣಸುದಾಮ' ಚಿತ್ರದಿಂದ ಸುಣ್ಣ ಎರೆದಂತೆ ಮಾಡಿದ್ದಾರೆ. ಹಿಂದೂ ಧ ರ್ಮಕ್ಕೆ ಅಪಮಾನ ಮಾಡಿದ್ದಾರೆ. ಏಸು ಕ್ರಿಸ್ತ ಪೈಗಂಬರರ ಪಾತ್ರಗಳನ್ನು ಸ್ತ್ರೀಯ ರು ನಟಿಸಿದ್ದರೆ, ನಟಿಸಿ ಈ ರೀತಿ ಅಪ ಮಾನ ಮಾಡಿದ್ದರೆ, ಕ್ರಿಶ್ಚಿಯನರಾಗಲಿ ಮುಸ್ಲಿಮರಾಗಲಿ ಸಹಿಸುತ್ತಿದ್ದರೆ? ಏನೇ ನೋ ಆಗಿಬಿಡುತಿತ್ತು. ಸುಬ್ರಹ್ಮಣ್ಯರು ಸ್ತ್ರೀಯರಿಗೆ ಗಂಡುವೇಷ ಹಾಕಿಸಿ ಅದ ರಿಂದ ಕೆಳತರಗತಿಯ ಜನರ ಮನ ಸೆಳೆ ದು ದುಡ್ಡು ಮಾಡುವ ಈ ಹವ್ಯಾಸಕ್ಕೆ ಹೊರಟು, ನಮ್ಮ ಧಾರ್ಮಿಕ ಪುರುಷನಿಗೆ, ಶ್ರೀ ಕೃಷ್ಣನಿಗೆ ಅಪಮಾನ ಮಾಡಿದ್ದಾರೆ. ಇದು ಹಿಂದುಗಳ ತಾಳ್ಮೆಯನ್ನೂ ಪರೀಕ್ಷಿ ಸುವಂಥಾದ್ದು. ಇದನ್ನು ನಿಷೇಧಿಸಲೇ ಬೇಕು. 'ಕೃಷ್ಣ ಸುಧಾಮ' ಚಿತ್ರದಲ್ಲಿ ಒಂದು ಕಡೆ 'ಜರ್ಮನ್ ಕೆಲೆಂಡರ್' ಇದೆ. ಇದು ಎಂಥಾ ದಿಗ್ದರ್ಶನ! ಸಹಪಾಠಿಗ ಳಾದ ಕೃಷ್ಣ ಸುಧಾಮರು ಸಮ ವಯ ಸ್ಕರಾಗಬೇಕಿತ್ತು. ನರಹರಿ ಶಾಸ್ತ್ರಿಗಳ ಮುಪ್ಪಿಗೂ ಸುಬ್ಬುಲಕ್ಷ್ಮಿಯ ತಾರುಣ್ಯ ಕ್ಕೂ ಜತೆಯೆ? ಸುಧಾಮನು ಬಡತನ ದಿಂದ ಕೃಶನಾಗಬೇಕಿತ್ತು; ಬೊಜ್ಜು ಬೆಳೆ ಯಬಾರದು. ಕೃಷ್ಣನು ಸರಿಯಾಗಿ ನಿಂ ತಾಗ ಎದೆಯಲ್ಲಿ ಬೆಟ್ಟಗಳೇಳುತ್ತವೆ; ಬ ಗ್ಗಿದಾಗ ಭುಜಗಳ ಕೆಳಗೆ ಇನ್ನೆರಡು ಭುಜಗಳು ಹುಟ್ಟಿ ಚತುರ್ಭುಜವಾಗು ತ್ತದೆ. ಸುಧಾಮನ ಹೆಂಡತಿ ಇಪ್ಪತ್ತೇಳು ಮಕ್ಕಳ ತಾಯಿಯಾದರೂ ಹದಿನಾರು ವ ರ್ಷದ ಹುಡುಗಿಯಾಗಿದ್ದಾಳೆ. ಮಕ್ಕಳು ಒಂದೇ ತಾಯಿ ತಂದೆಗೆ ಹುಟ್ಟಿದ ಹಾಗೆ, ಯಾವುದಾದರೂ ಪ್ರಾಯ ಭೇದ ತೋರು ವ ಹಾಗೆ ಮಾಡಲು ಪ್ರಯತ್ನವೇ ಮಾ ಡಲಿಲ್ಲ. 'ಪತಿನಿ' ಮೊದಲಾಗಿ ಕನ್ನಡ ಭಾಷೆ ಕೆಡಿಸಿ ಉಚ್ಚರಿಸುತ್ತಾರೆ. ಕನ್ನಡಿ ಗರ ಸಾಹಸವೆಂದೂ ಈ ಚಿತ್ರಕ್ಕೆ ಪ್ರೋ ತ್ಸಾಹ ಕೊಡುವುದು ಸಾಧ್ಯವಿಲ್ಲ. ಏಕೆಂ ದರೆ ಇದು ಕನ್ನಡಿಗರನ್ನು ವಂಚಿಸಿ, ಹಣ ಸುಳಿಯಲು ಮಾಡಿದ ತಮಿಳರ ಮಾಯೆ! ನರಹರಿ ಶಾಸ್ತ್ರಿ ಮುತ್ತಿನ್ನೊಬ್ಬರನ್ನು ಬಿಟ್ಟ ರೆ ಹೆಚ್ಚಾಗಿ ಎಲ್ಲಾ ತಮಿಳರೇ! ಕವಿ ಕೇ ಸರಿ ನರಹರಿ ಶಾಸ್ತ್ರಿಗಳು, ತಮಿಳರ ಮಾ ಯೆಗೆ ಬಲಿಯಾಗಿ ಕುಣಿಯಲು ಹೊರಟು ಗೌರವ ಕಳಕೊಂಡಿದ್ದಾರೆ. ಅವರು ಆಡು ವ ಭಾಷೆಯೂ ತಮಿಳು ಕನ್ನಡ. ಇಂಥಾ ಮೋಸಕ್ಕೆ ಕನ್ನಡಿಗರು ಬಲಿಬೀಳಬಾರ ದು. ಕೃಷ್ಣಸುಧಾಮವನ್ನು ನೋಡಬಾರ ದು. ನೋಡಿ ಮನ ನೊಂದುಕೊಳ್ಳುವು ದಕ್ಕಿಂತ ನೋಡದೇ ಇರುವುದು ವಾಸಿ."

ಹೀಗೆ ಒಂದಲ್ಲ ಎರಡಲ್ಲ ಸಾವಿರಾರು ತಪ್ಪುಗಳನ್ನು ಚಲಚ್ಚಿತ್ರ ವಿಮರ್ಶಕರು ತಿಳಿಸಿದರು. ಮುಂದೆ ತಮಿಳು ಸುಬ್ರಹ್ಮ ಣ್ಯಂ ಇಂಥಾ ಸಾಹಸವನ್ನು, ಕನ್ನಡದ ಕೀರ್ತಿಗೆ ಕಳಂಕ ತರುವಂಥಾ ಕೆಲಸವ ನ್ನು ಮಾಡಿದರೆ, ಅವರ ಚಿತ್ರ ಕನ್ನಡನಾ ಡಿನ ಯಾವುದೇ ಥಿಯೇಟರಿನಲ್ಲು ಪ್ರದ ರ್ಶಿತವಾಗದಂತೆ ಆಂದೋಲನ ಮಾಡು ವ ಎಚ್ಚರಿಕೆ ಅವರಿಗೆ ಕೊಡಬೇಕೆಂದೂ ನಿರ್ಣಯವಾಯಿತು.

ಸೆಂಟ್ರಲಿನಲ್ಲಿ 'ರೋಟಿ'

ನೇಶನಲ್ ಸ್ಟುಡಿಯೋದವರ ದೇಶ ವಿಖ್ಯಾತ ಚಿತ್ರ 'ರೋಟಿ' ಸೆಂಟ್ರಲಿನಲ್ಲಿ ಪ್ರದರ್ಶಿತವಾಗುತ್ತಿದೆ. 'ರೋಟಿ' ನ್ನಂ ದರೆ ಅನ್ನ; ಅನ್ನದ ಸಮಸ್ಯೆ ಇಂದಿನ ಭಾ ರತದ ಸಮಸ್ಯೆ ಭಾರತದ ಭೀಷಣ ಚಿತ್ರ ವನ್ನು ಈ ರಮ್ಯರೋಮಾಂಚಕ ಕಥೆಯು ನಮ್ಮ ಕಣ್ಣಮುಂದೆ ಕಟ್ಟುತ್ತದೆ. ಕೀರ್ತಿ ಶಾಲೀ ನಟಿ ಚಂದ್ರಮೋಹನ್, ಶೇಖ್ ಮುಖ್ತಾರ್, ಸಿತಾರಾ, ಅಖ್ತಾರಿ ಫೈಜಾ ಬಾದಿ, ಅಶ್ರಾಫ್ ಖಾನ್ ಇವರೊಡನೆ ಈ ಸಿನೆಮದಲ್ಲಿ ಅದ್ಭುತ ಅಭಿನಯ ತೋ ರಿಸಿರುವನು. 'ರೋಟಿ' ಅವಶ್ಯ ನೋಡ ಬೇಕಾದ ಚಿತ್ರ.

'ಭಕ್ತ ಪೋತನಾ' ಬಾಲಾಜಿಯಲ್ಲಿ

ವಾಹಿನಿಯವರ ಸುಪ್ರಸಿದ್ಧ ಚಿತ್ರ ಭಕ್ತ ಪೋತನಾ ಬಾಲಾಜಿಯಲ್ಲಿ ಪ್ರದ ರ್ಶಿತವಾಗುತ್ತಿದ್ದು, ಸಿನೆಮಾ ಪ್ರಿಯರ ಮನ ಸೆಳೆದಿದೆ. ದಕ್ಷಿಣಭಾರತದ ಪ್ರಸಿ ದ್ಧ ನಟ ನಾಗಯ್ಯನು ಇದರಲ್ಲಿ ಕೀರ್ತಿ ಶಿಖರಕ್ಕೇರಿದ್ದಾನೆ. 'ಭಕ್ತಪೋತನಾ' ದಕ್ಷಿಣಭಾರತದ 'ಜ್ಞಾನೇಶ್ವರ' ವಾಗಿದೆ ಯೆಂದು ಹಲವರ ಅಭಿಪ್ರಾಯ.

ಯುದ್ಧಾನಂತರ ಎಲ್ಲರಿಗೂ ಸ್ವಾತಂತ್ರ್ಯವಂತೆ!

ಕಾರ್ಡೆಲ್ ಹಲ್ ಹೇಳುತ್ತಾರೆ

ಅಮೆರಿಕದ ವಿದೇಶಾಂಗ ಸಚಿವ ಕಾ ರ್ಡೆಲ್ ಹಲ್ಲರು ಯುದ್ಧಾನಂತರದ ಪುನ ರ್ರಚನೆಯ ಕುರಿತು ಮಾತನಾಡಿ ಆದರಲ್ಲಿ ಅಮೆರಿಕದ ಪ್ರಜೆಗಳು ಯಾವ ಪಾತ್ರವ ಹಿಸಬೇಕೆಂಬುದನ್ನು ಹೇಳುತ್ತಾ, ಅಂತ ರಾಷ್ಟ್ರೀಯ ಸಂಬಂಧವುಳ್ಳ ಒಂದು ಹೊ ಸ ಸಂಸ್ಥೆಯ ನಿರ್ಮಾಣವು ಅಂತರಾಷ್ಟ್ರೀ ಯ ಸರಕಾರದ ಮೂಲ ತತ್ವ. ಹೊಸ ಸಂಸ್ಥೆಗೆ ನೀತಿ ನ್ಯಾಯ ಶಾಸನಗಳು ತ ಳಹದಿಯಾಗಿರಬೇಕು, ಉಗ್ರರಾಷ್ಟ್ರೀಯ ತ್ವಕ್ಕೆ ಆರ್ಥಿಕ ಮತ್ತು ರಾಜಕೀಯ ಕ್ಷೇತ್ರ ದಲ್ಲಿ ಸ್ಥಾನವಿಲ್ಲ, ಎಲ್ಲ ಜನಾಂಗಗಳಿ ಗೂ ಸ್ವಾತಂತ್ರ್ಯ ಮತ್ತೆ ರಾಜಕೀಯ ಸ್ವಾತಂತ್ರ್ಯ ಇವು ಆ ಹೊಸ ಪದ್ಧತಿಯ ನೀತಿಗಳಾಗಿರಬೇಕು ಎಂದರು.

ಇಕ್ಬಾಲರು ಸಪ್ರು ಮನೆತನದವರು

ಮಹಾಕವಿ ಸರ್ ಮಹಮ್ಮದ್ ಇಕ್ಬಾ ಲರು ಸರ್ ತೇಜ್ ಬಹದ್ದೂರ್ ಸಪ್ರು ಗಳ ವಂಶದವರೆಂದು ಡಾ। ಮುಂಜೆಯ ವರು ಶೋಧಿಸಿ ತಿಳಿಸಿದ್ದಾರೆ. ಜಿನ್ನರ ತಂದೆಯ ತಂದೆ ಹಿಂದೂ ಆಗಿದ್ದರು!





ಪತ್ರಿಕಾವಲೋಕನ
ಕೈಬರಹದ ಪತ್ರಿಕೆಗಳು

ವಿದ್ಯಾಪ್ರಕಾಶ (ಸಾಹಿತ್ಯಾಂಕ) ಉಡುಪಿಯ ವಿದ್ಯಾರ್ಥಿಗಳ ಕೈಬರಹದ ಮಾಸಪತ್ರಿಕೆ ಸಂಪಾದಕರು: ವ್ಯಾಸ ರಾವ್. ಉ. ಸಹಸಂಪಾದಕರು: ಬಾಲ ಕೃಷ್ಣ ಹೆಗ್ಡೆ ಬಿ. ಬರೆದವರು: ಯು. ಜಯರಾಮ—ಉಡುಪ, ಚಿತ್ರಗಾರರು ಪಿ. ಶೀನ ಶೆಟ್ಟಿ ಸಲಹೆಗಾರರು, ಉಡುಪಿಯ ವಿವಿಧ ಬರೆಹಗಾರರು.

ಉಡುಪಿಯ ವಿದ್ಯಾರ್ಥಿಗಳು ತಮ್ಮ 'ವಿದ್ಯಾ ಪ್ರಕಾಶ' ಕೈಬರಹದ ಮಾಸಪತ್ರಿಕೆಯ ಸಾಹಿತ್ಯಾಂಕವಿದರಲ್ಲಿ ಕೆಲವು ಹಿರಿಯ ಬರೆಹಗಾರರ ಲೇಖನಗಳನ್ನು ಒಟ್ಟು ಮಾಡುವ ಸಾಹಸ ಮಾಡಿ ಸಂಪಾದಿಸಿದ್ದಾರೆ. ಶ್ರೀಗಳಾದ ಶಿವರಾಮ ಕಾರಂತ, ಕಲ್ಯಾಣಮ್ಮ, ಅ. ನ. ಕೃಷ್ಣರಾವ್, ಬೆಟಗೇರಿ ಕೃಷ್ಣಶರ್ಮ ಇವರು ಸಂದೇಶವಿತ್ತು ಹರಸಿದ್ದಾರೆ. ಶ್ರೀಗಳಾದ ಕೊರಡ್ಕಲ್ಲರು ವಿಠ್ಠಲ ಶೆಣೈ, ವೆಂಕಟರಾಜರು, ಕುಳುಕುಂದರು, ಕಯ್ಯಾರರು, ರಾಮಾಚಾರ್ಯರು, ಆರ್. ಆರ್. ಕುಂಜೂರ್, ರಾಮಕೃಷ್ಣ ಆಚಾರ್, ಶ್ರೀಮತಿ ಲೀಲಾಬಾಯಿ ಕಾಮತ್ ಮೊದಲಾದವರ ಲೇಖನಗಳು ಇದರಲ್ಲಿ ಸಂಗ್ರಹಿಸಲ್ಪಟ್ಟಿವೆ ಶ್ರೀಗಳಾದ ಬೇಂದ್ರೆ, ಪುಟ್ಟಪ್ಪ, ಎಂ. ಆರ್. ಶ್ರೀನಿವಾಸ ಮೂರ್ತಿ ಇವರ ಲೇಖನಗಳನ್ನು ಉದ್ಧರಿಸಿ ಕೊಟ್ಟಿದ್ದಾರೆ ಶ್ರೀ. ಎಂ. ವಿ. ಎಚ್ ಈ ಕಾರ್ಯದಲ್ಲಿ ನೆರವಾದಂತೆ ತೋರುತ್ತದೆ. ಕೆಲವು ವಿದ್ಯಾರ್ಥಿಗಳ ಲೇಖನವೂ ಇದೆ. ಕೊನೆಗೆ 'ಅಮೃತವಾಣಿ' 'ಕಲಾಮೃತ' 'ಬಾಲವೀರ' ಬಾಲಬಂಧು' ಈ ಉಡುಪಿಯ ವಿದ್ಯಾರ್ಥಿಗಳ ಹಸ್ತಾಕ್ಷರ ಪತ್ರಿಕೆಗಳ ವಿಮರ್ಶೆಯೂ ಇದೆ. ಉಡುಪಿಯ ವಿದ್ಯಾರ್ಥಿಗಳ ಈ ಉತ್ಸಾಹ ಪ್ರಶಂಸನೀಯವಿದೆ.

ಪತ್ರಿಕೆಯ ಹೊರ ಆವರಣವೇ ಮನ ಸೆಳೆಯುತ್ತದೆ ಒಳಗಿನ ಚಿತ್ರಗಳು ಚಿತ್ತಾಕರ್ಷಕವಿವೆ ಶ್ರೀ. ಶೀನ ಶೆಟ್ಟರು ಪ್ರತಿಭಾಶಾಲಿ ಕಲಾವಂತರು ಕಾಗದವೂ ಚೆನ್ನಾಗಿರುವುದು. ಬರೆಹ ಅಷ್ಟೊಂದು ಅಂದವಾಗಿಲ್ಲವಾದರೂ ತಪ್ಪಿಲ್ಲದೆ ಓರಣವಾಗಿದೆ. ಕನ್ನಡ ನಾಡಿನ ಕಿರಿಯರು ವಿದ್ಯಾರ್ಥಿಗಳು ಈ ಮಾದರಿಯಲ್ಲಿ ತಮ್ಮ ಸಾಹಿತ್ಯ ಕಲಾ ಸಂಸ್ಕೃತಿ ಸೇವೆ ಮುಂದುವರಿಸಿದರೆ ಕನ್ನಡ ನಾಡಿಗೆ ಖಂಡಿತವಾಗಿಯೂ ಉನ್ನತ ಭವಿಷ್ಯವಿದೆ.

ಕಲಾಮೃತ (ಚಲಚ್ಚಿತ್ರಾಂಕ) ಸಂಪುಟ ೧ ಸಂಚಿಕೆ ೬—ಕ್ರೈಸ್ತ ಮಾಧ್ಯಮಿಕ ಶಾಲಾ, ಉಡುಪಿ ಸಂಪಾದಕರು ಶ್ರೀ. ಯು. ಎನ್. ಶ್ರೀನಿವಾಸ ಭಟ್ಟ. ಉಪ ಸಂಪಾದಕರು ಶ್ರೀ. ಬಿ. ವಾದಿರಾಜ ಶೆಟ್ಟಿ, ಚಿತ್ರಗಾರರು. ಶ್ರೀಗಳಾದ ಆರ್. ಕೆ. ದೇವಡ್ಗಾರ್, ಬಿ. ಜಿ. ಮುಹಮ್ಮದ್ ಮತ್ತು ಯು. ಎಲ್. ಬಿ. ಆಚಾರ್,

ಉಡುಪಿಯ ಕ್ರೈಸ್ತ ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಗಳು ತಮ್ಮ ಕಲಾಮೃತದ 'ಚಲಚ್ಚಿತ್ರ' ವಿಶೇಷಾಂಕ ಹೊರಡಿಸಿದ್ದಾರೆ. 'ಚಿತ್ರ ಸಮಾಚಾರ'ದ ಶ್ರೀ. ಕೃಷ್ಣಮೂರ್ತಿಯವರು ಇದಕ್ಕೆ ಸಂದೇಶವಿತ್ತಿರುವರು. ಶ್ರೀಗಳಾದ ಹೊನ್ನಯ್ಯ ಶೆಟ್ಟಿ, ಉ. ಮೊ. ಪುತ್ರಾಯ, ಆರ್. ಕೆ. ಆರ್. 'ಮೂ' ಸದಾಶಿವ ಶೆಟ್ಟಿ, ಬನ್ನಂಜೆ ರಾಮಾಚಾರ್, ಎಸ್. ಬಿ. ಯು, ಯು. ವ್ಯಾಸರಾವ್ ಕಯ್ಯಾರ ಕಿಞ್ಞಣ್ಣ ರೈ, ಸುಬ್ರಾಯ ಆಚಾರ್, ಪಾಂಡುರಂಗ ಪೈ, ಪಲಿಮಾರು ಜಯರಾಮ, ಎಸ್. ಎಲ್. ನಾರಾಯಣ ಭಟ್ಟ, ಪಿ. ವಾಸುದೇವರಾವ್, ಉ. ರಾಮಚಂದ್ರ ರಾವ್ ಇವರೇ ಮೊದಲಾದವರ ವಿದ್ಯಾರ್ಥಿಗಳ ಮತ್ತು ಹಿರಿಯರ ವಿಚಾರ ಪೂರ್ಣ ಲೇಖನಗಳಿವೆ. ಸಂಚಿಕೆ ತುಂಬಾ ಚಿತ್ರಗಳಿದ್ದು ಮನೋರಂಜಕವಿದೆ. ಉಡುಪಿಯ ಕಿರಿಯರಲ್ಲಿ ಇಷ್ಟೊಂದು ಉತ್ಸಾಹ, ಕಲಾಪ್ರೇಮ, ಸಾಹಿತ್ಯ ಪ್ರೀತಿಗಳಿರುವುದು ನೋಡಿ ಯಾರಾದರೂ ಹಿಗ್ಗಲೇಬೇಕು. ಚಿತ್ರಗಾರರು ಕೆಲವು ಆಕರ್ಷಕ ವರ್ಣ ಚಿತ್ರಗಳನ್ನು ಬರೆದು ಸಂಚಿಕೆ ಚಂದ ಹೆಚ್ಚಿಸಿದ್ದಾರೆ. ಹೊರಗಿನಿಂದ ನೋಡಿದರೇ ಎತ್ತಿ ಓದೋಣ ಎಂಬ ಬಾಹ್ಯಾಂಗ, ಒಳಗಿನ ಚಿತ್ರ ಲೇಖನಗಳ ಓರಣ ಇವೆಲ್ಲಾ ಪ್ರಶಂಸನೀಯವಿರುವುದು. ಇವರ 'ದಸರಾ ಸಂಚಿಕೆ' ಇದಕ್ಕಿಂತಲೂ ಮನೋಹರವಾಗಲಿ ಎಂದು ನಾವು ಆಶಿಸುತ್ತೇವೆ

ಶ್ರೀ..

ಬಳ್ಳಾರಿಯಲ್ಲಿ ಆಂಧ್ರ ಪರಿಷತ್ತು.
ಕನ್ನಡನಾಡಿನ ಗಡಿಯಲ್ಲಿ

ಇದೇ ಅಕ್ಟೋಬರ ತಿಂಗಳಲ್ಲಿ ಬಳ್ಳಾರಿಯಲ್ಲಿ ಆಂಧ್ರ ಮಹಾಸಭೆಯ ಪರಿಷತ್ತು ಕೂಡುವ ಸುದ್ದಿಯಿದೆ. ಸರ್ ವಿಜಯರು ಈ ಸಾಹಸ ಮಾಡುತ್ತಿದ್ದಾರೆ. ಕನ್ನಡದ ಗಡಿನಾಡಿನಲ್ಲಿ ಆಂಧ್ರರು ಈ ಪ್ರಯತ್ನ ಮಾಡುತ್ತಾರೆ. ಬಳ್ಳಾರಿ ಜಿಲ್ಲೆ ಆಂಧ್ರ ಜಿಲ್ಲೆಯಲ್ಲ, ಕರ್ನಾಟಕ ಜಿಲ್ಲೆ. ಕನ್ನಡದ ಈ ಜಿಲ್ಲೆಯನ್ನು ಆಂಧ್ರಕ್ಕೆ ಸೇರಿಸಿಕೊಳ್ಳುವ ಈ ಪ್ರಯತ್ನವನ್ನು ಕನ್ನಡಿಗರು ತಡೆಗಟ್ಟಬೇಕು. ಆಂದೋಲನ ಮಾಡಬೇಕು. ಬಳ್ಳಾರಿ ಜಿಲ್ಲೆಯಲ್ಲಿ ಕ್ಷಾಮ ಬಂದಿದೆ. ಆಂಧ್ರರು ಇದಕ್ಕೆ ಸಹಾಯ ಮಾಡಿದ್ದಾರೆ. ಆದರೆ ಈ ಸಹಾಯ ಮಾನವ ವರ್ಗಕ್ಕೆ ಮಾಡಿದ ಸಹಾಯ. ಆಂಧ್ರರು ಈ ಸಹಾಯದ ದುರ್ಲಾಭ ಮಾಡಿಕೊಳ್ಳಬಾರದು.

ಮದ್ರಾಸು ಪ್ರಾಂತದಲ್ಲಿ ಪ್ಲೇಗು

ಹಬ್ಬತೊಡಗಿರುವುದರಿಂದ, ಮದ್ರಾಸ್ ನಗರಕ್ಕೆ ಅದರ ತೊಂದರೆ ತಟ್ಟದಂತೆ ನಗರವನ್ನು ಒಂದು ವರ್ಷದ ವರೆಗೆ ಯಾವುದೇ ಸಮಯದಲ್ಲಾದರೂ ಪ್ಲೇಗ್ ಬಾಧಿತ ಪ್ರದೇಶವೆಂದು ಸಾರಲು ಸರಕಾರ ಅಧಿಕಾರ ತೆಗೆದುಕೊಂಡಿದೆ.

ಚಂದ್ರಲೇಖಾ ಪತ್ರಿಕೋದ್ಯೋಗ ಕಲಿಯುತ್ತಿದ್ದಾಳೆ

ಅಮೆರಿಕಕ್ಕೆ ಹೋಗಿರುವ ನೆಹರು ಸೊಸೆಯಂದಿರಲ್ಲಿ ಕುಮಾರಿ ಚಂದ್ರಲೇಖಾ ಪತ್ರಿಕೋದ್ಯೋಗವನ್ನು ಆರಿಸಿಕೊಂಡು ರಾಜಕೀಯ ಶಾಸ್ತ್ರಾಧ್ಯಯನ ಮಾಡುತ್ತಿದ್ದಾರೆ, ಕುಮಾರಿ ನಯನತಾರಾ ಸಮಾಜ ಸೇವಾ ಶಾಸ್ತ್ರ ಕಲಿಯುತ್ತಾರೆ ಇಬ್ಬರೂ ಈಗ ವಿದ್ಯಾಭ್ಯಾಸ ಸುರುಮಾಡಿದ್ದಾರೆ.

NOTICE

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R. E P 95/1942

R E A 1?40/1943

R E A No 1033/194?

C H. ಕುಂಞಿ ಕಲಂದರ್—ಅರ್ಜಿದಾರ

ಮತ್ತು

ಖದೀಜಬಿ ಸಹಾ . ರೆಸ್ಪಾಂಡೆಂಟರು.

6th Respondent Abdulla Razzak grandson of Abdulla Saiba and son of 3rd Respondent Sheik Fareed Saiba Now in active Military Service No 113924 at Jubbalpore and that at present he is in 2rq as Electrician No 113024. H Q 211 Indian I O. D

ಮೃತಪಟ್ಟ 1ನೇ ರೆಸ್ಪಾಂಡೆಂಟಳು ಕೊಟ್ಟ ಆತಂಕ ನಿವೃತ್ತಿ ಪಡಿಸುವರೆ ಅರ್ಜಿದಾರನು ದಾಖಲ್ಲು ಮಾಡಿದ ಸದ್ರಿ ಅರ್ಜಿಯಲ್ಲಿ ನಿಮ್ಮನ್ನು 1ನೇ ರೆಸ್ಪಾಂಡೆಂಟಳ ವಾರ್ಸಿದಾರನಿಗೆ ಕೂಡ್ಸಿ ಕಕ್ಷಿ ಸೇರಿಸಬೇಕಾಗಿ ಕೊಟ್ಟ R. E A. 1033/1943ನೇ ಅರ್ಜಿಯು ತಾರೀಕು 25-9-1943ಕ್ಕೆ ತನ್ಖಿಗೆ ಇಟ್ಟಿರುವದರಿಂದ ಆಕ್ಷೇಪವಿದ್ರೆ ಆ ದಿವ್ಸ ಜ್ಯಾಹೀರು ಮಾಡಬೇಕಾಗಿಯೂ ತಪ್ಪಿದರೆ ನಿಮ್ಮ ಗೈರಹಾಜರಿಯಲ್ಲಿ ತೀರ್ಮಾನವಾದೀತೆಂಬ ಸಂಗ್ತಿ ಕೂಡಾ ಈ ಮೂಲಕ ತಿಳಿಸೋಣಾಗಿಯದೆ.

ಕಾಸರಗೋಡು 14-9-'43 (sd) P Ahamad Advocate for Petr

FIRST AND FOREMOST

FIRST AND FOREMOST among the ideals of the CANARA BANK is the ideal of Service to its Customers

ESTD. 1906.

CANARA BANK LTD.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಗೆಯೇ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ, ಆದುದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು. ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE

The Joint Booking Office, KODIALBAIL.

The Bank of Mangalore Limited, Mangalore.

ESTD: 1931

HEAD OFFICE Mangalore — *BRANCHES* Moodabidri & Padubidri

The Bank Undertakes to Collect Cheques, Demand and Documentary Bills at Most Competitive Rates.

ISSUES DRAFTS ON ALL IMPORTANT TOWNS IN THE DISTRICT and also on BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.

at very favourable rates

All kinds of inland banking business undertaken

(Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾ ಬೇನೆ, ಪಕ್ಷವಾತ, ನೋಡಿಮ ನೋದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಜೀವವಿಮೆ ಮಾಡುವ ಪ್ರಯೋಜನವು ಇಂದು ಹಿಂದಿಗಿಂತ ಅಧಿಕವಾಗಿದೆ.

ದಿ ಬಾಂಬೆ ಲೈಫ್ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಇದರಲ್ಲಿ ಒಂದು ಪಾಲಿಸಿ ಪಡೆದು

ಈಗಲೇ ನೀವು ನಿಮ್ಮನ್ನು ಮತ್ತು ನಿಮ್ಮನ್ನು ಹೊಂದಿಕೊಂಡಿರುವವರನ್ನು ರಕ್ಷಿಸಿಕೊಳ್ಳಿರಿ!

ಪ್ರತಿನಿಧಿಗಳಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಇನ್ಶೂರ್ ಮಾಡಲು ಅಥವಾ ಮಾಹಿತಿ ತಿಳಕೊಳ್ಳಲು ದಯಮಾಡಿ ಬರೆಯಿರಿ!

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

—: ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ : —

ಬೆಂಗಳೂರು ಬೊಂಬಾಯಿ ಮದ್ರಾಸು ಕಲ್ಲಿಕೋಟೆ ಮಂಗಳೂರು ಮತ್ತು ತ್ರಿವೇಂಡ್ರಂ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವ ವಿಧದ ದೋಷಗಳನ್ನು ಗುಣಪಡಿಸುವ ದಿವ್ಯ ಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ್ ವ ಏಜೆಂಟರು:–

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಪೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.

ಕಟಪಾಡಿ, ದ. ಕನ್ನಡ.

ಡಿಪೋ:–1. ಮರಾಠ ಗಲ್ಲಿ ಹುಬ್ಬಳ್ಳಿ.

2. 86 ಫ್ಯಾಕ್ರೋಫ್ಟ್ಸ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಮೃತ್ಯುಂಜಯ ರಸ. ಪಂಚವಟ ಮಾತ್ರೆ. **ಕೊಲೆರಾ ರೋಗಕ್ಕೆ ಸಿದ್ಧೌಷಧ.**

ಸೇವನಾ ಕ್ರಮಗಳು ಔಷಧಿಯೊಡನೆ ಇದೆ.

ಸದ್ವೈದ್ಯಶಾಲಾ ನಂಜನಗೂಡು; ಬ್ರಾಂಚ್ ರಥಬೀದಿ, ಮಂಗಳೂರು.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಕು 24—9—1943 [ಸಂಚಿಕೆ 39]

ಬರುವ ವೈಸರಾಯರು ಹೀಗೆಂದು ಹೇಳುತ್ತಾರೆ!

ಹೋಗುವ ವೈಸರಾಯರ ಕೆಲ ಸ್ಮರಣೆಗಳು.

ತಾವು ಭಾರತಕ್ಕೆ ಹೋದ ಮೇಲೆ ಪರಿಹರಿಸಬೇಕಾದ ಸಮಸ್ಯೆಗಳ ಕುರಿತು ಭಾರತದ ಮುಂದಿನ ವೈಸರಾಯರಾದ ಲಾರ್ಡ್ ವೇವಲ್‌ರವರು ಲಂಡನಿನಲ್ಲಿ ಮಾತನಾಡುತ್ತಾ ಹೀಗೆ ತಿಳಿಸಿದರು.

ಆ ಸಮಸ್ಯೆಗಳು ಮೂರು ಎಂಬುದಾಗಿ ಅವರು ಹೇಳಿ, ಜಪಾನಿನ ಮೇಲಿನ ಯುದ್ಧವನ್ನು ತ್ವರಿತಗೊಳಿಸುವುದು ಭಾರತ ಸರಕಾರದ ದಿನದಿನದ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳನ್ನು ನಿವಾರಿಸುವುದು ಮತ್ತು ಭಾರತದ ರಾಜಕೀಯ ಬೆಳವಣಿಗೆಯನ್ನು ಸರಿಗೊಳಿಸುವುದು ಎಂದರು.

"ಭಾರತದ ಮೇಲೆ ನನಗೆ ನಿಜವಾದ ಪ್ರೇಮವಿದೆ. ಸಿಪಾಯಿಯಾದ ನಾನು ನನ್ನ ಜಯಕ್ಕೆಲ್ಲಾ ಭಾರತೀಯ ಸೈನ್ಯವೇ ಕಾರಣವೆಂದು ತಿಳಿಯುತ್ತೇನೆ. ಮಿತ್ರ ರಾಷ್ಟ್ರಗಳಿಗೆ ಭಾರತದ ಸಹಾಯ ಅಪಾರವಾಗಿ ಆಗಿದೆ. ಮಧ್ಯ ಪ್ರಾಚ್ಯದ ರಕ್ಷಣೆಯಲ್ಲಿ ಭಾರತೀಯ ಸೈನಿಕರು ಬಹಳ ಸಹಾಯ ಮಾಡಿದ್ದಾರೆ. ಭಾರತೀಯ ಸಾಮಗ್ರಿಗಳೂ ಅಧಿಕವಾಗಿ ಬಂದಿವೆ. ಭಾರತವು ಪೂರ್ಣ ಸ್ವಾತಂತ್ರ್ಯ ಹೊಂದುವಂತೆ ಮಾಡಲು ಭಾರತಕ್ಕೆ ಸಾಧ್ಯವಾದೆಲ್ಲ ಸಹಾಯವನ್ನೂ ಮಾಡಲು ಬ್ರಿಟನಿನ ಪ್ರಜೆಗಳು ಬಹಳ ಆಸಕ್ತಿ ಹೊಂದಿದ್ದಾರೆ. ಜಪಾನಿನ ಮೇಲೆ ನನಗೆ ಕಡುತರವಾದ ದ್ವೇಷವಿದೆ. ಜಪಾನರನ್ನು ಜರ್ಮನರಷ್ಟೇ ಪೂರ್ಣವಾಗಿ ಸೋಲಿಸುವ ವರೆಗೂ ನಮಗಾಗಲೀ, ಪೂರ್ವರಾಷ್ಟ್ರಗಳಿಗಾಗಲಿ ಅಥವಾ ಪ್ರಪಂಚಕ್ಕಾಗಲೀ ಆರ್ಥಿಕ ಅಥವಾ ರಾಜಕೀಯ ಸುರಕ್ಷತೆಯು ಇರುವ ಹಾಗಿಲ್ಲ."

ಈಜಿಪ್ಟನ್ನು ರಕ್ಷಿಸುವುದರಲ್ಲಿ ಭಾರತೀಯ ಸೈನಿಕರು ಬಹಳ ಸಹಾಯ ಮಾಡಿದ್ದರೆಂದೂ, ಭಾರತೀಯ ಸೈನಿಕರ ಸಹಾಯವಿಲ್ಲದಿದ್ದಲ್ಲಿ ಈಜಿಪ್ಟನ್ನು ಮಿತ್ರ ಸೈನ್ಯಗಳು ರಕ್ಷಿಸಲು ಸಾಧ್ಯವಾಗುತ್ತಿರಲಿಲ್ಲವೆಂದೂ, ಈ ರೀತಿ ಭಾರತೀಯರು ಸಹಾಯ ಮಾಡಿದುದರಿಂದ ಈಜಿಪ್ಟೇ ಅಲ್ಲದೆ ಪ್ಯಾಲಸ್ಟೈನ್, ಸಿರಿಯಾ, ಇರಾಕ್ ಮತ್ತು ಪರ್ಷಿಯಾಗಳನ್ನೂ ರಕ್ಷಿಸಿದಂತಾಗಿದೆಯೆಂದೂ ಲಾರ್ಡ್ ವೇವಲ್‌ರು ನುಡಿದರು.

ಬಂಗಾಳದ ಕ್ಷಾಮಪೀಡಿತರು

'ಯುದ್ಧದ ಆರಂಭ ಭಾಗದಲ್ಲಿ ಭಾರತೀಯ ಸೈನ್ಯಗಳು ಈ ರೀತಿ ಈಜಿಪ್ಟ್ ಪ್ರದೇಶದಲ್ಲಿ ಕಾರ್ಯಾಚರಣೆಯಲ್ಲಿ ತೊಡಗಿದ್ದಾಗಲೇ ಅತ್ತ ಕಡೆ ಜಪಾನು ಯುದ್ಧಕ್ಕೆ ಇಳಿದುದರಿಂದ ಭಾರತೀಯ ಸೈನ್ಯವನ್ನು ಅತ್ತ ಕಡೆಗೂ ಕಳುಹಿಸಬೇಕಾಯಿತು. ಈ ಎಲ್ಲ ಕಾರಣಗಳಿಂದ ಭಾರತದಲ್ಲಿ ಹೆಚ್ಚಿನ ತೊಂದರೆಗಳೂ, ರೈಲ್ವೆ ಓಡಾಟಕ್ಕೆ ಅಡಚಣೆಯೂ ಆರ್ಥಿಕ ಪರಿಸ್ಥಿತಿ ಮೇಲೆ ಹೆಚ್ಚಿನ ಪರಿಣಾಮವೂ ಉಂಟಾಯಿತು. ಈಗಲೂ ಭಾರತವು ಆ ಪೆಟ್ಟಿನಿಂದ ಪಾರಾಗಿಲ್ಲ. ಭಾರತಕ್ಕೆ ಹೆಚ್ಚಿನ ಹೊರೆಯನ್ನು ನಾವು ಹೊರಿಸಹೋಗುವುದಾದರೆ ಆ ಬಗ್ಗೆ ನಾವು ಬಹಳ ಎಚ್ಚರಿಕೆಯಿಂದಿರಬೇಕು. ಇಲ್ಲದಿದ್ದರೆ ನಮ್ಮ ಆ ಸಿಲ್ಪಾಣವು ತತ್ತರಗೊಂಡು ಕುಸಿದ್ದು ಬೀಳುವುದು' ಎಂದು ಲಾರ್ಡ್ ವೇವೆಲ್‌ರವರು ಎಚ್ಚರಿಕೆಯಿತ್ತರು.

ಲಿನ್‌ಲಿತ್‌ಗೊ ಹೋಗುವಾಗ- ಕೆಲ ಚರಿತ್ರಾರ್ಹ ಸ್ಮರಣಿಕೆಗಳು-

ಬೊಂಬಾಯಿಯ 'ಫೋರಂ' ಪತ್ರಿಕೆಯಲ್ಲಿ ಶ್ರೀ ಜೆ. ಎನ್. ಸಹಾನಿಯವರು ಹೀಗೆ ಬರೆಯುತ್ತಾರೆ. 'ಏಳುವರೆ ವರ್ಷಗಳ ತಡೆಯಿಲ್ಲದೆ ಅಧಿಕಾರಮಾಡಿದ ಬಳಿಕ ಲಿನ್‌ಲಿತ್‌ಗೋ ಭಾರತದ ವೈಸರಾಯ ಪದವಿಯಿಂದೀಗ ನಿವೃತ್ತರಾಗುತ್ತಾರೆ. ವೈಸರಾಯರನ್ನು ಬೀಳ್ಕೊಡುವ ಕೂಟಗಳು ಜರಗುತ್ತಿವೆ. ಭಾಷಣಗಳಾಗುತ್ತಿವೆ. ಬಂದವರಿಗೆಲ್ಲಾ ಹೊಟ್ಟೆ ತುಂಬಾ ಬಡಿಸುತ್ತಾರೆ. ಎಲ್ಲರೂ ಬೇಕಾದಷ್ಟು ತಿಂದು ಬೇಕಾದಷ್ಟು ಮಾತನಾಡುತ್ತಾರೆ. ಆದರೆ ಅತ್ತ ಭಾರತದ ಒಂದು ಪ್ರಾಂತವಾದ ಬಂಗಾಳದಲ್ಲಿ ಜನರು ಊಟಕ್ಕಿಲ್ಲದೆ ಉಪವಾಸ ಬಿದ್ದು ಸಾಯುತ್ತಾರೆ. ಈ ಜನರ ಪಾಡು ಹೇಗಿದೆಯೆಂದು ಯಾರೂ ಒಂದು ಭಾಷಣದಲ್ಲಿಯೂ ಹೇಳಲಿಲ್ಲ. ಈ ವಿಷಯದಲ್ಲಿ ವೈಸರಾಯರಾದರೂ ಒಂದೇ ಒಂದು ಮಾತು ಹೇಳಲಿಲ್ಲ. ಬಂಗಾಳದ ದಾರುಣ ವೈಸರಾಯರ ಗಮನಕ್ಕೆ ಬಂದಿದ್ದರೆ ಅವರು ಅದನ್ನು ಮರೆತುಬಿಡುವುದು, ತಮ್ಮ ಭಾಷಣದಲ್ಲಿ ಒಮ್ಮೆಯೂ ವಿವರಿಸದಿರುವುದು ಸಾಧ್ಯವಿಲ್ಲ.

'ವೈಸರಾಯ ಲಿನ್‌ಲಿತ್‌ಗೋ ಭಾರತವನ್ನು ಬಿಟ್ಟುಹೋಗುವೀ ಸಂದರ್ಭದಲ್ಲಿ ಇನ್ನೊಂದು ಚರಿತ್ರಾರ್ಹ ಘಟನೆ ನೆನಪಿಗೆ ಬರುತ್ತದೆ. ವೈಸರಾಯರು 'ಹೋರಿ'ಗಳ ಬೆನ್ನು ತಟ್ಟಿದ್ದಾರೆ. ಯುರೋಪಿಯನರ ಗೆಳೆತನಮಾಡಿದ್ದಾರೆ. ರಾಜ ಭಕ್ತರನ್ನು ಕರೆದಿದ್ದಾರೆ. ಗಾಂಧಿ, ಜಿನ್ನಾ, ನೆಹರು, ಮತ್ತು ಕೆಲವು ಪ್ರಸಿದ್ಧ ರಾಷ್ಟ್ರೀಯ ಮುಖಂಡರನ್ನು ಬಿಟ್ಟರೆ ಅವರು ಇತರ ಭಾರತೀಯರನ್ನು ಬಹು ದೂರವಿರಿಸಿದ್ದಾರೆ. ಅವರ ಕೈ ಕುಲುಕ ಹೋಗಲಿಲ್ಲ, ಹಾಗಾಗಿ ಯಾರು ವೈಸರಾಯರು ಬರಲಿ, ಅವರ ಕೈ ಕುಲುಕಹೋಗುವ ಕೆಲವು ಮಂದಿ ಈ ವಿಷಯ ಆಗಾಗ ಆಕ್ಷೇಪ ಹೇಳಿದ್ದುಂಟು. ಕಾಂಗ್ರೆಸಿನವರೋ ವೈಸರಾಯರ ಕೂಟಕ್ಕೆ ಬರುವುದಿಲ್ಲ-ಆದರೆ ನಾವು ಯಾವಾಗಲೂ ಬರಲು ತಯಾರಿದ್ದೇವಲ್ಲಾ? ನಮ್ಮ ಕೈ ಕುಲುಕುವುದಿಲ್ಲವೇಕೆ?' ಎಂದು ಅವರ ದೂರು. ಒಮ್ಮೆ ಈ ವಿಷಯವನ್ನು ಕೌನ್ಸಿಲ್ ಆಫ್ ಸ್ಟೇಟಿನ ಮಾನ್ಯ ಮೆಂಬರರೊಬ್ಬರು ಅಧಿವೇಶನದ ಮುಂದೆಯೇ ಮಂಡಿಸಿದ್ದುಂಟು. ಹೇಗೂ, ಕೊನೆವರೆಗೆ ವೈಸರಾಯರು ಭಾರತೀಯರ ಕೈ ಕುಲುಕ ಹೋಗುವ ತಾಪತ್ರಯಕ್ಕೆ ಬಹಳವಾಗಿ ಹೋಗಲಿಲ್ಲ.

'ಒಮ್ಮೆ ವೈಸರಾಯರಲ್ಲಿಗೆ ಗಾಂಧೀಜಿ, ಜಿನ್ನಾ, ರಾಜೇಂದ್ರರು ಹೋಗಿದ್ದರು, ಜಿನ್ನರ ಕಾರಿನಲ್ಲಿ. ಎಲ್ಲಾ ಮಾತನಾಡಿದ ಮೇಲೆ ಗಾಂಧೀಜಿ ವೈಸರಾಯರೊಡನೆ ಅವರ ಪಿಲಿಸ್‌ನ ಆರೋಗ್ಯ ವಿಚಾರ ಕೇಳಿದರು. 'ಪಿಲಿಸ್' ಆರೋಗ್ಯವಾಗಿರುವ ವಿಷಯ ವೈಸರಾಯ್ ತಿಳಿಸಿದರು. 'ನಿಮಗೆ ಪಿಲಿಸ್ ನೋಡಬೇಕೇ?' ಎಂದು ವೈಸರಾಯರು ಗಾಂಧೀಜಿಯವರನ್ನೇ ಕೇಳಿದರು. 'ನೋಡೋಣ' ಎಂದರು ಗಾಂಧೀಜಿ. 'ಜಿನ್ನಾ ಬರುತ್ತೀರಾ?' ಎಂದು ಕೇಳಿದರು ಗಾಂಧೀಜಿ. ಜಿನ್ನರಿಗೆ ಪಿಲಿಸ್ ಬೇಕಾಗಿರಲಿಲ್ಲ; ಬೇಕಾದದ್ದು ಪಾಕಿಸ್ತಾನ. ಆದರೂ ಅವರೂ ಹಿಂಬಾಲಿಸಿದರು. ವೈಸರಾಯ್ ಅವರಿಗೆ ಪಿಲಿಸನ್ನು ತೋರಿಸಿದರು. ಪಿಲಿಸ್ ಎಂದರೆ ಅವರ ಪ್ರೀತಿಯ ಆವೆ.

ಬಂಗಾಳದಲ್ಲಿ ಕ್ಷಾಮ

ನವಖಾಲಿಯಲ್ಲಿ ಕಷ್ಟ ಪರಿಸ್ಥಿತಿ

ಹೆಣಗಳನ್ನು ನದಿಗೆ ಹಾಕುತ್ತಿದ್ದಾರೆ

ನವಖಾಲಿ ಸುತ್ತು ಮುತ್ತಲೂ ಮತ್ತು ನವಖಾಲಿ ಪಟ್ಟಣದಲ್ಲಿಯೂ ಜನರು ಹೊಟ್ಟೆಗಿಲ್ಲದೆ ಬಹಳ ಕಷ್ಟಪಡುತ್ತಿದ್ದಾರೆ. ಹೊಟ್ಟೆಗಿಲ್ಲದೆ ಹಲವು ಮಂದಿ ಸತ್ತರು. ಸಹಾಯ ನಿಧಿ ಸಂಗ್ರಹಿಸಲಾಗುತ್ತದೆ. ಮನೆಯೊಂದರಲ್ಲಿ ಮಧ್ಯಮ ವರ್ಗದ ಮನುಷ್ಯನೊಬ್ಬನು ಅನ್ನವಿಲ್ಲದೆ ಅಳುತ್ತಿದ್ದನು. ಮತ್ತು ಸಾವಿಗಾಗಿ ದೇವರನ್ನು ಪ್ರಾರ್ಥಿಸುತ್ತಿದ್ದನು. ನವಖಾಲಿ ಜಿಲ್ಲೆಯಲ್ಲಿ ಕ್ಷಾಮಬಾಧೆಯು ತೀವ್ರವಾಗಿದೆ. ವೈದ್ಯ ಸಹಾಯವೇನೂ ಇಲ್ಲ. ಕೆಲವು ತಿಂಗಳಿಂದೀಚೆಗೆ ಬಹುಮಂದಿ ಸತ್ತಿರುವರು. ಬೀದಿಗಳಲ್ಲಿ ಮತ್ತು ರಸ್ತೆ ಬದಿಗಳಲ್ಲಿ ಹೆಂಗಸರು ಗಂಡಸರು ಮತ್ತು ಮಕ್ಕಳು ಸಾಯುತ್ತಿದ್ದಾರೆ. ಶವ ಸಾಗಿಸಲು ಸರಿಯಾದ ಏರ್ಪಾಡಿಲ್ಲ. ನದಿಗೆ ಹೆಣಗಳನ್ನು ಹಾಕುತ್ತಿದ್ದಾರೆ.

ಡಾಕ್ಕಾದಲ್ಲಿ ಸಹಾ ಹೊಟ್ಟೆಗಿಲ್ಲದವರ ಮರಣಗಳು ನಡೆಯುತ್ತಿವೆ. ಮಿಡ್‌ಫರ್ಡ್ ಆಸ್ಪತ್ರೆಗೆ ಸೆಪ್ಟಂಬರ್ ೪ ರಿಂದ ೧೧ರ ವರೆಗೆ ೭೮ ಮಂದಿ ಹೊಟ್ಟೆಗಿಲ್ಲದೆ ಸಂಕಟಪಡುವವರನ್ನು ಚಿಕಿತ್ಸೆಗಾಗಿ ಸೇರಿಸಲಾಯಿತು. ಇವರಲ್ಲಿ ಆರು ಮಂದಿ ಸತ್ತರು. ಡಾಕ್ಕಾ ನಗರದ ಬೀದಿಗಳಲ್ಲಿ ಹೊಟ್ಟೆಗಿಲ್ಲದೆ ಜನರು ನಿತ್ಯವೂ ಸಾಯುತ್ತಲಿದ್ದಾರೆ: ಶವಗಳನ್ನು ಎತ್ತಿ ಹಾಕಲು ಪೌರಸಭೆಯವರು ಸಿಬಂದಿ ನೇಮಿಸಿದ್ದಾರೆ.

ಕಲ್ಕತ್ತಾ ಪೋಲೀಸ್ ಕಮಿಷನರು ಹೊರಡಿಸಿದ ಪ್ರಕಟಣೆಯೊಂದು ತಿಳಿಸುವ ಮೇರೆಗೆ ಆಗಸ್ಟಿನಲ್ಲಿ ಕಲ್ಕತ್ತಾದಲ್ಲಿ ೨೧೧ ಮಂದಿ ಮಕ್ಕಳ ಪತ್ತೆಯಿಲ್ಲ. ೨೫ ಮಂದಿ ಮಕ್ಕಳು ಸಿಕ್ಕಿರುತ್ತಾರೆ. ಕಲ್ಕತ್ತಾದ ಬೀದಿಗಳಲ್ಲಿ ಮಲಗಿದ ೯೧ ಮಂದಿ ಅನಾಥ ಮಕ್ಕಳನ್ನು ಪೋಲೀಸ್ ಠಾಣೆಗಳಿಗೆ ತೆಗೆದುಕೊಂಡು ಹೋಗಲಾಯಿತು. ೧೪ ಮಂದಿಯನ್ನು ಪೋಷಕರಿಗೆ ಒಪ್ಪಿಸಲಾಯಿತು. ಉಳಿದವರನ್ನು ಧರ್ಮ ಸಂಸ್ಥೆಗಳಿಗೆ ಪೋಷಣೆಗೆ ಒಪ್ಪಿಸಲಾಯಿತು.

ಇವರು ಫೇಸಿಸ್ಟ್ ವಿರೋಧಿಗಳು

ಕಾಂಗ್ರೆಸ್, ಲೀಗ್ ಮಹಾಸಭೆಯವರು—

ಕಮ್ಯೂನಿಸ್ಟರೂ ಫೇಸಿಸ್ಟ್ ವಿರೋಧಿಗಳೇ!

ಭಾರತದ ಪತ್ರಿಕೋದ್ಯೋಗಿಗಳಲ್ಲಿ ಖ್ವಾಜಾ ಅಹಮ್ಮದ್ ಅಬ್ಬಾಸ್ ಒಬ್ಬ ಪ್ರಖ್ಯಾತ ಲೇಖಕರು. ವಿಶ್ವ ಸಂಚಾರ ಮಾಡಿದವರು. ರಾಷ್ಟ್ರೀಯ ಮನೋಭಾವದ ಮುಸ್ಲಿಮರು. ಅಂತರಾಷ್ಟ್ರೀಯ ವಿಚಾರ ಅರಿತವರು. ಅಮೆರಿಕದ ಬಗ್ಗೆ, ಅಲ್ಲಿನ ಪ್ರಜಾಪ್ರಭುತ್ವದ ಬಗ್ಗೆ ಅಭಿಮಾನವಿದ್ದವರು. ಪ್ರಗತಿಪರ ಲೇಖಕರು. ಅವರು ಇತ್ತೀಚೆಗೆ ಕೆಲವು ಲೇಖನಮಾಲೆ ಬರೆದಿದ್ದಾರೆ; ಕಾಂಗ್ರೆಸ್ ಮುಖಂಡರನ್ನು ಸೆರೆ ಹಿಡಿದ ಮೇಲೆ, ಕಾಂಗ್ರೆಸಿನವರು ಫೇಸಿಸ್ಟ್ ಸಹಾಯಕರೆಂದು ಹೇಳುವ ಅಪಪ್ರಚಾರ ತಡೆಯಲು; ಗಾಂಧಿಜಿ ಮೊದಲಾದವರು ಜಪಾನ್ ವಿರೋಧಿಗಳೆಂದು ಸ್ಪಷ್ಟ ಪಡಿಸಲು; ಕಾಂಗ್ರೆಸು ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಹೋರಾಡುವುದರೊಡನೆ ಅಂತರಾಷ್ಟ್ರೀಯ ಸ್ವಾತಂತ್ರ್ಯದ ವಿಷಯವೂ ಹೆಚ್ಚಿನ ಆತುರವುಳ್ಳದ್ದಾಗಿದೆಯೆಂಬುದನ್ನು ಸಮರ್ಥಿಸಲು. ಅವರು ಒಂದು ಲೇಖನದಲ್ಲಿ ಭಾರತದ ಸಕಲ ಪಕ್ಷ ಪಂಗಡಗಳೂ ಫೇಸಿಸ್ಟ್ ವಿರೋಧಿಯೆಂದು ಸಮರ್ಥಿಸಿದ್ದಾರೆ. ಭಾರತದ ಕಮ್ಯೂನಿಸ್ಟರ ವಿಷಯ ತಿಳಿಸಿದ್ದಾರೆ. ಅದರ ಸಾರಾಂಶ ಕೆಳಗೆ ಕೊಡಲಾಗಿದೆ.

"ಕೆಲವು ಬ್ರಿಟಿಷ್ ರಾಜನೀತಿಜ್ಞರು ಮತ್ತು ಇತರ ಪಕ್ಷ ಪಂಗಡಗಳವರು 'ಕಾಂಗ್ರೆಸ್ಸೆಂದರೆ 'ಭಾರತ'ವಲ್ಲವೆಂದು ಇತ್ತೀಚೆಗೆ ಹೇಳುತ್ತಾರೆ. ನಿಜವಾಗಿ ಅಲ್ಲ. ಬೋಲ್ಶೆವಿಕ್ ಪಕ್ಷವೆಂದರೆ ರಶ್ಯವೂ ಅಲ್ಲ. ಸಿನ್ ಫೀನ್ ಎಂದರೆ ಐರ್ಲೆಂಡೂ ಅಲ್ಲ ರೂಸ್‌ವೆಲ್ಟರ ಡೆಮೊಕ್ರೆಟಿಕ್ ಪಕ್ಷವೆಂದರೆ ಅಮೆರಿಕವೂ ಅಲ್ಲ. ಆದರೆ ಭಾರತದಲ್ಲಿ ಕಾಂಗ್ರೆಸು ಪ್ರಭಾವ ಶಾಲಿಯಾದ ಅತ್ಯಂತ ದೊಡ್ಡ ರಾಜಕೀಯ ಪಕ್ಷವೆಂಬುದನ್ನು ಯಾರು ಅಲ್ಲಗಳೆಯರರು. ರಾಜಕೀಯ ಅಧಿಕಾರವನ್ನು ಹೇಗೆ ಹಂಚಿಕೊಳ್ಳಬೇಕೆಂಬಲ್ಲಿ ಮಾತ್ರ ಭಿನ್ನಾಭಿಪ್ರಾಯವಲ್ಲದೆ ಕಾಂಗ್ರೆಸು ವಾದಿಸುವ ಸ್ವಾತಂತ್ರ್ಯ ಬೇಡಿಕೆಯಲ್ಲಿ ಯಾರದೂ ಭಿನ್ನಾಭಿಪ್ರಾಯವಿಲ್ಲ.

ಕಾಂಗ್ರೆಸನ್ನು ಬಿಟ್ಟರೆ ಉಳಿದೆರಡು ಮಹತ್ವದ ಪಕ್ಷಗಳು ಹಿಂದು ಮಹಾಸಭೆ ಮತ್ತು ಮುಸ್ಲಿಂಲೀಗ್ ಗಳೆಂಬ ಜಾತಿಯ ಸಂಸ್ಥೆಗಳು. ಹಲಕಾಲದ ವರೆಗೆ ಇದರಲ್ಲಿ ಮಂದ ಪಕ್ಷಿಯರೇ ಇದ್ದರು—ಈಗಲೂ ಇದ್ದಾರೆ. ಇವುಗಳಾದರೂ ರಾಷ್ಟ್ರದ ಸ್ವಾತಂತ್ರ್ಯ ಬೇಡಿಕೆಯ ವಿಷಯ ಕಾಂಗ್ರೆಸ್ ಬೇಡಿಕೆಯನ್ನೇ ಅಂಗೀಕರಿಸಿವೆ. ಏಕೆಂದರೆ ಆ ಎರಡು ಸಂಸ್ಥೆಗಳಿಗೂ ಗೊತ್ತು ಆ ವಿಷಯದಲ್ಲಿ ಕಾಂಗ್ರೆಸಿನೊಡನೆ ಅಭಿಪ್ರಾಯ ಭೇದವಿಲ್ಲವೆಂದು. ಆದರೆ ಲೀಗ್, ಮಹಾಸಭೆ ಇವೆರಡು ಸಂಸ್ಥೆಗಳು ಅವುಗಳ ಮುಖಂಡರಾಗಲಿ ಅಂತರಾಷ್ಟ್ರೀಯ ವಿಚಾರದಲ್ಲಿ ಹೆಚ್ಚು ಗಮನಕೊಡಲಿಲ್ಲ. ತಮ್ಮ ತಮ್ಮ ಜಾತೀಯತೆಯ ಜಗಳಾಟದಲ್ಲಿಯೇ ಅವರ ಕಾಲಕಳೆದಿರುವಾಗ, ಫೇಸಿಸ್ಟ್ ಪಶುಶಕ್ತಿಯ ವಿಚಾರ ಗಮನ ಕೊಡಲು ಅವುಗಳಿಗವಕಾಶವೂ ಇಲ್ಲ. ಆದರೆ ಕಾಂಗ್ರೆಸು ಪ್ರಾರಂಭದಿಂದಲೇ ಫೇಸಿಸ್ಟರನ್ನು, ನಾಜಿಗಳನ್ನು, ಜಪಾನಿಯರನ್ನು ಅವರ ಅಕೃತ್ಯಗಳಿಗಾಗಿ ಖಂಡಿಸುತ್ತಾ ಇತ್ತು. ಇದರ ಬದಲು ಮಹಾ ಸಭೆಯವರು ಹಿಟ್ಲರನು ಹೇಳುವ 'ಆರ್ಯ' ಶಬ್ದದಿಂದ ವಂಚಿತರಾಗಿ, ಹಿಟ್ಲರನನ್ನು 'ಆರ್ಯೋ'ದ್ಧಾರಕನಾಗಿ ಭಾವಿಸಿದ ಕಾಲವೊಂದಿತ್ತು. ಹತ್ತು ವರ್ಷಗಳ ಹಿಂದಿನ ಒಂದು ಮಹಾ ಸಭಾಧಿವೇಶನದಲ್ಲಿ ನಾಜಿಗಳ ಗುಣಗಾನವೂ ಒಮ್ಮೆ ಆಗಿತ್ತು! ಮಾತ್ರವಲ್ಲ ಜಪಾನೀಯರನ್ನು ಬೌದ್ಧರನ್ನಾಗಿ ತಿಳಕೊಂಡು ಆತ್ಮೀಯರಾಗಿ ಮಹಾಸಭೆ ತಿಳಿದ ಕಾಲವು ಇತ್ತು; ಮುಸ್ಲಿಂ ಲೀಗಿನವರು ಟರ್ಕಿ ಮೊದಲಾದ ಮುಸ್ಲಿಂ ರಾಜ್ಯಗಳ ಕಡೆಗೆ ಆಶಾತುರರಾಗಿದ್ದಂತೆ. ಹಾಗಾಗಿ ಕಾಂಗ್ರೆಸು ಮಾತ್ರ ಮೊದಲಿಂದಲೇ ಫೇಸಿಸ್ಟ್ ವಿರೋಧಿಯಾಗಿ ನಿಂತಿತ್ತು. ಆದರೆ ಇಂದು ಮಹಾಸಭೆಯವರು ಮುಸ್ಲಿಂ ಲೀಗಿನವರೂ ಫೇಸಿಸ್ಟ್ ವಿರೋಧಿಗಳಾಗಿದ್ದಾರೆ. ಕಾಂಗ್ರೆಸ್ ಮುಖಂಡರಷ್ಟು ಅಂತರಾಷ್ಟ್ರೀಯ ವಿಚಾರಗಾಢ ಅಭ್ಯಾಸವಿಲ್ಲದಿದ್ದರೂ ಅವರು ಫೇಸಿಸ್ಟ್ ವಿರೋಧಿಗಳೆಂಬುದು ಖಂಡಿತ.

"ಕಾಂಗ್ರೆಸ್ಸನ್ನು ಬಿಟ್ಟರೆ ಭಾರತದಲ್ಲಿ ಕಡು ಫೇಸಿಸ್ಟ ವಿರೋಧಿಗಳು ಕಮ್ಯುನಿಸ್ಟರು. ಕಾಂಗ್ರೆಸು ಮುಖಂಡರು ಸೆರೆಮನೆಯೊಳಗೆ ಸೇರಿಸಲ್ಪಟ್ಟ ಸಂದರ್ಭದಲ್ಲಿ ರಾಷ್ಟ್ರವನ್ನು ಫೇಸಿಸ್ಟ್ ವಿರೋಧಿಯಾಗಿ ಮಾಡುವ ಕಾರ್ಯಭಾರ ಅವರು ವಹಿಸಿಕೊಂಡಿದ್ದಾರೆ. ಕಮ್ಯುನಿಸ್ಟ್ ಪಕ್ಷದ ಇತರ ಚಟುವಟಿಕೆಗಳ ಕುರಿತು ಎಷ್ಟೇ ವಿವಾದವಿದ್ದರೂ, ಅವರ ಫೇಸಿಸ್ಟ್ ವಿರೋಧ ಪ್ರಚಾರದ ವಿಷಯ ಏನೂ ಭಿನ್ನಾಭಿಪ್ರಾಯವಿಲ್ಲ. 'ಪಿತೃಭೂಮಿ' ರಶ್ಯದ ಅಂಥಾ ಆರಾಧನೆಮಾಡಿ—ಏಕೆಂದರೆ ರಶ್ಯವೊಂದೇ ಜಗದುದ್ಧಾರ ಮಾಡಬಲ್ಲದೆಂದು ಅವರ ಭಾವನೆ—ಅವರಿಂದು ಉಗ್ರ ಫೇಸಿಸ್ಟ್ ವಿರೋಧಿಗಳಾಗಿರುವರು. ಹಿಂದೆ ಕಮ್ಯುನಿಸ್ಟರು ಸಾಮ್ರಾಜ್ಯಶಾಹಿಯನ್ನು, ಭಂಡ ವಾಳಶಾಹಿಯನ್ನು ಎಂಥಾ ಉಚ್ಚಕಂಠದಿಂದ ಖಂಡಿಸುತ್ತಿದ್ದರೂ ಈಗ ಹಾಗೆ ಮಾಡುವುದಿಲ್ಲ. ಏಕೆಂದರೆ ಅವುಗಳಿಗಿಂತ ಫೇಸಿಸಂ ಒಂದೇ ಈಗ ಜಗತ್ತಿನ ಪ್ರಬಲ ಶತ್ರುವೆಂದು ಅವರ ಭಾವನೆಯಿದೆ. ಅವರು ಸಾಮ್ರಾಜ್ಯಶಾಹಿಯ ಗುಲಾಮರಾಗಿ ಕೆಲಸ ಮಾಡುತ್ತಾರೆಂದು ಹೇಳುವುದಲ್ಲ; 'ಜನತೆಯಯುದ್ಧ' ಮಾತ್ರ ರಾಷ್ಟ್ರವನ್ನು ರಕ್ಷಿಸುವುದೆಂದು ಅವರು ಬಲ್ಲರು;

"ಕಾಗ್ರೆಸು ಫೆಸಿಸ್ಟ್ ವಿರೋಧಿ; ಕಮುನಿಸ್ಟ್ ಪಕ್ಷ ಫೆಸಿಸ್ಟ್ ವಿರೋಧಿ. ಹಾಗಾದರೆ ಇವುಗಳೊಳಗೆ ವ್ಯತ್ಯಾಸವೇನು? ಏಕೆ ಒಂದು ಪಕ್ಷ ಸೆರೆಮನೆಯಲ್ಲಿದೆ. ಇನ್ನೊಂದು ಪಕ್ಷ ಪ್ರಚಾರ ಮಾಡುತ್ತಿದೆ? ಇದಕ್ಕೆ ಕಾರಣವೇನೋ ಬಹಳ ಇದೆ. ಕಾಂಗ್ರೆಸು ಹೇಳುತ್ತದೆ:— "ಭಾರತವು ಸ್ವತಂತ್ರವಾಗಲಿ; ಭಾರತವು ಫೇಸಿಸಮ್ ವಿರೋಧ ಹೋರಾಡುವುದು. ಕಮುನಿಸ್ಟ ಪಕ್ಷ ಹೇಳುತ್ತದೆ, 'ಭಾರತವು ಫೇಸಿಸಂ ವಿರೋಧ ಹೋರಾಡಲಿ; ಆದರೆ ಮಾತ್ರ ಭಾರತ ಸ್ವತಂತ್ರವಾದೀತು" ಎಂದು. ಕಮುನಿಸ್ಟ್ ಪಕ್ಷವು ರಶ್ಯ ಯುದ್ಧಕ್ಕೆ ಸೇರಿದೊಡನೆ ನ್ಯಾಯ ಸಮ್ಮತ ಸಂಸ್ಥೆಯಾಯಿತು; ಅಲ್ಲಿವರೆಗೆ ಗುಪ್ತಗಾಮಿನಿಯಾಗಿತ್ತು. ಕೂಡಲೇ ಕಮುನಿಸ್ಟರು 'ಇದು ಜನತಾಯುದ್ಧವೆಂದು' ಹೇಳತೊಡಗಿದರು. ಸರಕಾರ ಹೆಚ್ಚಿನ ಮಂದಿ ಅವರ ಮುಖಂಡರನ್ನು ಬಿಡುಗಡೆ ಮಾಡಿತು. ಏಕೆಂದರೆ ಇದುವರೆಗೆ ಇಂಥಾ ಕ್ರಾಂತಿಕಾರರಾಗಿದ್ದವರು ಒಮ್ಮೆಲೇ ತಮಗೆ ಬೇಕಾದ ಹಾಗೆ ಮಾತನಾಡಿಸ್ವರಿಂದ ಕಮುನಿಸ್ಟರು, 'ಇಂದು ನಾವು ಬೆಳೆಯುವ ಶಕ್ತಿಯಾಗುತ್ತಿದ್ದೇವೆಂದೇನೋ ಕನಸುಕಟ್ಟುತ್ತಿರಬಹುದು, ಆದರೆ ಕೆಲವರು ಹೇಳುವಂತೆ, ಕೇವಲ 'ನ್ಯೂಸೆನ್ಸ್' ಆಗುತ್ತಿದ್ದರೂ ಸರಕಾರದ ಯುದ್ಧಯತ್ನಕ್ಕೆ ಅವರಿಂದ ತುಂಬಾ ಸಹಾಯವಾಗುತ್ತದೆಂಬುದು ಸತ್ಯ. ಮುಷ್ಕರವಾಗದಂತೆ, ಹರತಾಳವಾಗದಂತೆ, ಕೇವಲ ಘಟನಾತ್ಮಕ ಚಳವಳಿ ಮಾಡುವಂತೆ ಅವರು ಮಾಡುತ್ತಾರೆ. ಇದು ಈ ಯುದ್ಧದ ಒಂದು ಅದ್ಭುತವೆನ್ನಬೇಕು—ಯಾವುದೆಂದರೆ ಹಿಂದಿನ ಕ್ರಾಂತಿಕಾರರಾದ ಕಮುನಿಸ್ಟರು, ಇಂದು ಕೇವಲ ವಿನಂತಿಕಾರರು ಮತ್ತು ಸಹಿಗಳನ್ನು ಸಂಗ್ರಹಿಸುವವರು ಆದದ್ದು! ಹೀಗಾದರೂ ಸರಕಾರವನ್ನು ಟೀಕಿಸುವುದನ್ನು ಕಮುನಿಸ್ಟರು ಬಿಡಲಿಲ್ಲ; ಕಮ್ಯುನಿಸ್ಟರನ್ನು ಬಂಧಿಸುವುದನ್ನು ಸರಕಾರವೂ ಬಿಟ್ಟಿಲ್ಲ!

"ಕಮ್ಯುನಿಸ್ಟ್ ಪಕ್ಷದ ವಿಷಯ ಜನತೆಗಿರುವ ಅಭಿಪ್ರಾಯವನ್ನಿಲ್ಲಿ ತುಸು ಚರ್ಚಿಸುವುದವಶ್ಯ. ಕಮ್ಯುನಿಸ್ಟ್ ಪಕ್ಷದ ಸದಸ್ಯತ್ವ ಇಂದು ಹೆಚ್ಚಾಗಿದೆ. ಇದಕ್ಕೆ ಕಾರಣ, ಜನತೆಯಲ್ಲಿ ಕಮ್ಯುನಿಸ್ಟ ಪಕ್ಷ ಜನಪ್ರಿಯವಿದೆಯೆಂದಲ್ಲ; ಇದೇ ಮೊದಲನೆಯ ಸಲ ಅವರು ಹೊರಬಂದು ಕೆಲಸ ಮಾಡಲು ಆಸ್ಪದ ದೊರೆತದ್ದರಿಂದ ಹಾಗೂ, ಹಿಂದೆ ಕಮುನಿಸ್ಟ್ ಎಂದರೆ ಸೆರೆಮನೆ ಸೇರುವ ಆಮಂತ್ರಣವಾಗಿದ್ದರೆ, ಇಂದು ಕಮುನಿಸ್ಟನೆಂದರೆ ಬಿಡುಗಡೆಗೊಂದು ಸನ್ಮತಿಪತ್ರ ದೊರೆತಂತೆ ಆದ್ದರಿಂದ ಮತ್ತು ಇದರ ಕೆಲವು ಮುಂದಾಳುಗಳು ಹಿಂದೆ ಬಹಳ ಬಲಿದಾನ, ಶ್ರಮ ಜೀವನ, ಸಂಘಟನ ಮಾಡಿದವರಾಗಿರುವುದರಿಂದ. ಹಾಗಲ್ಲದೆ ಭಾರತದ ಜನತೆ ಕಮುನಿಸ್ಟರ ರಾಷ್ಟ್ರೀಯ ಧೋರಣೆಯನ್ನು ಸಮ್ಮತಿಸಿದ್ದರಿಂದ ಎಂದು ಅವರು ತಿಳಕೊಂಡಿದ್ದರೆ ಅದು ಕೇವಲ ಭ್ರಮೆ. ಇಂದು ಭಾರತದಲ್ಲಿ ಮುಷ್ಕರವಿಲ್ಲವೇಕೆಂದರೆ, ಭಾರತದ ಇತಿಹಾಸದಲ್ಲಿಯೇ ಇದು ಮೊದಲನೆಯ ಸಲ ಕೂಲಿಗಾರರು ಹೆಚ್ಚಿನ ಸಂಬಳ ಪಡೆಯುತ್ತಿರುವುದು. [illegible] ಯುದ್ಧಯತ್ನದಲ್ಲಿ ನಿರತವಾಗಿ ಹೆಚ್ಚಿನ ಲಾಭ ಪಡೆದ ಪ್ರತಿಫಲವಿದು. ಇಂಥ ಸಂದರ್ಭದಲ್ಲಿ ಕಮುನಿಸ್ಟರಿಗೂ ಅವರ ಮನಸ್ಸಿದ್ದರೂ ಮುಷ್ಕರ ಮಾಡಿಸುವುದು ಸಾಧ್ಯವೆಂದು ನಾನು ಭಾವಿಸುವುದಿಲ್ಲ.

"ಹಿಂದೊಮ್ಮೆ ಒಂದು ಕಾಲವಿತ್ತು ಬಹಳ ಉಗ್ರಗಾಮಿ ಯುವಕರು ತಮ್ಮನ್ನು ಕಮುನಿಸ್ಟರೆಂದು ಹೇಳಿಕೊಳ್ಳುತ್ತಿದ್ದರು. ಅದರಿಂದ ಜನರು ಆತನನ್ನು ಸಾಮ್ರಾಜ್ಯಶಾಹಿಯ ಕಡು ವಿರೋಧಿಯೆಂದು ಅರ್ಥಮಾಡಿಕೊಳ್ಳುತ್ತಿದ್ದರು. ಆ[illegible] ವಿದ್ಯಾರ್ಥಿ ಸಂಘಗಳಲ್ಲಿ ಕಮುನಿಸ್ಟರಿ[illegible] ಒಳ್ಳೆಯ ಪ್ರಭಾವವೂ ಇತ್ತು. ಆದ[illegible] ಇತ್ತೀಚೆಗೆ ಕಮುನಿಸ್ಟರ ಮೇಲೆ ಎಲ್ಲ[illegible]ಗೂ ಸಂದೇಹ ಹುಟ್ಟಿದೆ. ಅವರು ಹಿಂ[illegible]ನಷ್ಟು ಸಾಮ್ರಾಜ್ಯಶಾಹೀ ವಿರೋಧಿಗ[illegible]ಲ್ಲವೆಂದು ತಿಳಿದಿದೆ. ವಿದ್ಯಾರ್ಥಿಗಳ[illegible] ಕಮುನಿಸ್ಟರನ್ನು ಹಿಂಬಾಲಿಸುವುದು ಕ[illegible]ಮೆಯಾಗಿದೆ. ಕಾಂಗ್ರೆಸಿನಿಂದ ಹೊ[illegible] ನಿಂತವರು, ಸೆರೆಮನೆ ಹೋಗಲು ಹೆ[illegible]ರುವವರು, ಸರಕಾರದ ವಿಧೇಯ 'ಸೇ[illegible]ಕ'ರು, ಹೇಡಿಗಳು ಕಮುನಿಸ್ಟರಾಗಿ ಸೇ[illegible]ರಿದ್ದಾರೆ. ಕಮುನಿಸ್ಟರು, ಸರಕಾರದಿಂ[illegible] ಹಣ ಪಡೆಯುತ್ತಿದ್ದಾರೆಂದೂ ಕೆಲವರ[illegible] ಸಂಶಯಪಡುತ್ತಾರೆ. ಆದರೆ ಕಮು[illegible]ಸ್ಟರ ಮೇಲೆ ಇಂಥಾ ಆರೋಪವನ್ನು ಮಾಡುವುದು ತಪ್ಪು. ಆರೋಪ ಮಾ[illegible]ಡುವುದು ತಪ್ಪಾದರೂ, ಅವರ ಮೇ[illegible] ಜನತೆಯ ಸಂಶಯ ಮಾತ್ರ ದಿನದಿಂ[illegible] ದಿನಕ್ಕೆ ಹೆಚ್ಚುತ್ತಲೇ ಇದೆ; ಕೊನೆಗೆಂದ[illegible] ಸಾಮ್ರಾಜ್ಯಶಾಹಿಯೊಡನೆ ಜತೆಗೂಡಿ [illegible]ಲಸಮಾಡುವ ಅವರು ನಿಜವಾದ ಕಮು[illegible]ನಿಸ್ಟರೇ ಎಂದೂ ಕೆಲವರಿಗೆ ಸಂದೇಹ[illegible]ದೆ! ಹೇಗಿದ್ದರೂ ಕಮುನಿಸ್ಟರು ತಾ[illegible] ಈ ಸಂದರ್ಭದಲ್ಲಿ ಕಾಂಗ್ರೆಸ್ ರೀತಿಯ[illegible] ಫೇಸಿಸ್ಟ್ ವಿರೋಧ ಭಾವನೆ ಬೆಳೆಸಿದ್ದ[illegible] ನಿಜವಾಗಿ ಹೆಚ್ಚಿನ ಜನಪ್ರಿಯತೆ ಹೊಂ[illegible] ಬಹುದಿತ್ತು.

"ಇನ್ನು ಭಾರತದ ರಾಷ್ಟ್ರೀಯ ಪತ್ರಿ[illegible]ಗಳು ಶೇಕಡಾ ನೂರರಂತೆ ಫೇಸಿಸ್ಟ್ ವಿರೋಧಿಗಳು. ಅಖಿಲಭಾರತ ಮ[illegible]ಳಾ ಪರಿಷತ್ತು ಫೇಸಿಸ್ಟ್ ವಿರೋಧಿ; [illegible] ಗತಿಶೀಲ ಬರೆಹಗಾರರು ಫೇಸಿಸ್ಟ್ ವಿರೋಧಿಗಳು. ಜನತಾ ರಂಗಭೂಮಿಯ[illegible]ವರು ಫೇಸಿಸ್ಟ್ ವಿರೋಧಿಗಳು. ಜನತಾ ರಂಗಭೂಮಿಯವರು ಫೇಸಿಸ್ಟ್ ವಿರೋಧ ಚಳವಳವನ್ನೇ ಮಾಡುತ್ತಾರೆ. ಹೀ[illegible]ದ್ದರೂ, ಸರಕಾರವು ಈ ಕೆಲವು ಪ್ರಾಮುಖ್ಯ ಫೆಸಿಸ್ಟ್ ವಿರೋಧಿ ಸಂಸ್ಥೆಗಳ ಮೇ[illegible] ಇನ್ನೂ ಮರ್ದನಮಾಡುತ್ತಿರುವುದು ಆ[illegible]ಶ್ಚರ್ಯಕರವಿದೆ."

ಇಟಲಿಯ ಭವಿಷ್ಯ ಗೊತ್ತಿತ್ತು

ಮುಸೋಲಿನಿಯನ್ನೂ ಫ್ಯಾಸಿಸ್ಟ್ [illegible]ಳಿತವನ್ನೂ ಉರುಳಿಸಿದಂತಹ ಜನರ[illegible] ಹಿಟ್ಲರನು ತನ್ನ ಭಾಷಣದಲ್ಲಿ ದೂಷಿ[illegible] ಬಹಳ ಹಿಂದೆಯೇ ಇಟಲಿಯು ಕುಸಿ[illegible] ಬೀಳುವುದಾಗಿ ನಿರೀಕ್ಷಿಸಲಾಗಿತ್ತು [illegible]ದು ಹೇಳಿದನು.

ಸಮರಭೂಮಿಯ ಸಂಚಾರ

ಬೇಸಿಗೆ ರಜೆಯ ನಂತರ ಕಾಮನ್ಸ್ ಸಭಾಧಿವೇಶನವು ತಾ. ೨೧ರಂದು ಪುನಃ ಕೂಡಿತು. ಮುಖ್ಯ ಪ್ರಧಾನರಾದ ಚರ್ಚಿಲರು ದೀರ್ಘ ಭಾಷಣ ಮಾಡಿ ಯುದ್ಧ ವಿಚಾರ ಹೇಳಿದರು. ಮಿತ್ರರಿಗೆ ಜರ್ಮನರಿಗಿಂತ ಹೆಚ್ಚು ವಿಮಾನವಿದೆ ಯೆಂದರು. ನೌಕಾ ವ್ಯವಹಾರಕ್ಕೆ ಶತ್ರುಗಳಿಂದ ತೊಂದರೆಯೊದಗಿದ್ದರೂ, ಕಳೆದ ನಾಲ್ಕು ತಿಂಗಳಲ್ಲಿ ಉತ್ತರ ಅಟ್ಲಾಂಟಿಕಿನಲ್ಲಿ ವೈರಿಗಳಿಂದ ಒಂದು ವ್ಯಾಪಾರೀ ಹಡಗವೂ ಮುಳುಗಿಸಲ್ಪಟ್ಟಿಲ್ಲವೆಂದರು. ಜಪಾನರ ವಿಮಾನ ಹಾಗೂ ಹಡಗುಗಳು ಬಹಳ ನಷ್ಟವಾಗಿವೆಯೆಂದರು. ಅನಂತರ ಅವರು, ಎಡ್ಮಿರಲ್ ಲುಯಿ ಮೌಂಟ್ ಬೇಟನರು ಜನರಲ್ ಐಸೆನ್ ಹಾವರಂತೆ ಹೊಸ ಡಿಲ್ಲಿಯಲ್ಲಿ, ಅದೇ ಮಾದರಿಯ ಮಿತ್ರರ ಸನ್ನಿಧಿ ಕೇಂದ್ರ ಸ್ಥಾಪಿಸುವರೆಂದೂ, ಭೂಮಧ್ಯ ಸಮುದ್ರದಲ್ಲಿ ಚಟುವಟಿಕೆಗಳು ಯಾವಾಗಲೂ ಸಂಭವವಿದೆಯೆಂದು ಗಣಿಸಲ್ಪಟ್ಟದ್ದು ಫ್ರಾನ್ಸ್ ಹಾಗೂ ಕೆಳಗಿನ ಪ್ರದೇಶಗಳ ಜರ್ಮನರ ಮೇಲೆ ಧಾಳಿಯಾಗಿಲ್ಲವೆಂದೂ, ಜರ್ಮನರು ವಿಮಾನ ಠಾಣ್ಯ ಹಿಡಿದುಕೊಂಡಿರದಿದ್ದರೆ ಮಿತ್ರರ ಧಾಳಿ ಸಮಯದಲ್ಲಿ ಅಮೆರಿಕನ್ ಸೈನಿಕರು ರೋಮಿನಲ್ಲಿ ಇಳಿಯಬಹುದಾಗಿತ್ತೆಂದೂ ಹೇಳಿದರು.

ಆ ಮೇಲೆ ಅವರು, ಮುಸಲನಿ ವಿಚಾರ ಮಾತನಾಡಿ ಬಡೋಗ್ಲಿಯೋ ಸರಕಾರವು ಮುಸಲನಿಯನ್ನು ಬಂಧನದಲ್ಲಿಡಲು ಯೋಗ್ಯ ದಕ್ಷತೆ ವಹಿಸಿದ್ದರೆಂದೂ, ಆದರೆ ಕೊಡೆ ವೈಮಾನಿಕರು ಬಂದು ಅವರನ್ನು ಬಿಡಿಸಿಕೊಂಡು ಹೋಗುವ ಶಕ್ಯತೆ ಅವರಿಗೆ ತೋರಿದ್ದರಿಂದ, ಅವರು ಆ ಬಗ್ಗೆ ವ್ಯವಸ್ಥೆ ಮಾಡಿರಲಿಲ್ಲವೆಂದೂ ಮುಸಲನಿ ತಪ್ಪಿಸಿಹೋದಲ್ಲಿ, ಗುಂಡಿಕ್ಕಲು ಕಾವಲುಗಾರರಿಗೆ ಅಪ್ಪಣೆ ಕೊಡಲಾಗಿದ್ದರೂ ಕಾವಲುಗಾರರು ಅದರಂತೆ ನಡೆಯಲಿಲ್ಲವೆಂದೂ ತಿಳಿಸಿದರು. ಅನಂತರ ಚರ್ಚಿಲರು ನಮ್ಮ ಸೈನಿಕರು ಉತ್ತರಕ್ಕೆ ರಭಸದಿಂದ ಮುನ್ನುಗ್ಗುತ್ತಿರುವುದಾಗಿ ಹೇಳಿ, ಸಾರ್ಡಿನಿಯಾ ಮತ್ತು ಕೊರ್ಸಿಕಾಗಳ ಮೇಲೆ ಧಾಳಿಯಿಡಲು ತಾವು ಮಹತ್ವದ ಯೋಜನೆ ಮಾಡಿದ್ದಾಗಿ ತಿಳಿಸಿದರು. ಕೊನೆಗೆ ಅವರು ಬ್ರಿಟನ್, ಅಮೆರಿಕ, ರಶ್ಯಗಳ ತ್ರಿರಾಷ್ಟ್ರ ಪರಿಷತ್ತು ಬೇಗನೇ ಸೇರಲಿರುವುದೆಂದೂ ಹೇಳಿದರು. ಚರ್ಚಿಲರು ತಮ್ಮ ಭಾಷಣದಲ್ಲಿ ಜಪಾನಿನ ವಿಚಾರವಾಗಿ ಮಾತನಾಡುತ್ತಾ, ಲಾರ್ಡ್ ಲುಯಿ ಮೌಂಟನರು ಬೇಗನೇ ಭಾರತಕ್ಕೆ ಹೋಗುವುದಾಗಿ ತಿಳಿಸಿ, ಜನರಲ್ ಐಸೆನ್ ಹಾವರು ಉತ್ತರ ಆಫ್ರಿಕದಲ್ಲಿ ಸ್ಥಾಪಿಸಿದ ಸನ್ನಿಧಿ ಕೇಂದ್ರದಂತೆ, ಲುಯಿ ಮೌಂಟನರೂ ಅಲ್ಲಿ ಒಂದು ಕೇಂದ್ರ ನೆಲೆಗೊಳಿಸುವರೆಂದರು. ಅವರ ಪ್ರಥಮ ಕೇಂದ್ರವು ಡಿಲ್ಲಿಯಲ್ಲಿ ಆಗುವುದಾಗಿ ಹೇಳಿದರು. ಈ ಹೊಸ ಯೋಜನೆ ಮತ್ತು ಲುಯಿ ಮೌಂಟನರ ನೇಮಕವನ್ನು ಚಿಯಾಂಗ್ ಕೈಶೇಕರು ಸ್ವಾಗತಿಸಿರುವುದಾಗಿ ತಿಳಿಸಿದರು.

ಅನಂತರ ಪೇಸಿಫಿಕ್ ವಿಚಾರವಾಗಿ ಭಾಷಣದಲ್ಲಿ, ಈಗಾಗಲೇ ಪೇಸಿಫಿಕ್ ಸಮುದ್ರದ ಅನೇಕ ಭಾಗಗಳಲ್ಲಿ ದೊಡ್ಡ ಪ್ರಮಾಣದ ಧಾಳಿಗಳು ಪ್ರಾರಂಭವಾಗಿವೆಯೆಂದು ತಿಳಿಸಿ, ಲೇ ಮತ್ತು ಸಾಲೆಮುವಾ ಇವು ಪುನಃ ವಶಪಡಿಸಿಕೊಳ್ಳಲ್ಪಟ್ಟಿವೆಯೆಂದು ಹೇಳಿ, ಒಂಭತ್ತನೇ ಆಸ್ಟ್ರೇಲಿಯಾ ದಳದವರು ಜಪಾನರಿಗೆ ಅಲ್ಲಿ ತೋರಿಸಿದ ಎದುರಾಟವನ್ನು ವಿವರಿಸಿ, ಅಲುನಿಯಸಿನಿಂದ ಜಪಾನರನ್ನು ಹೊರದೂಡಿದ ವಿಚಾರ ಹೇಳಿದರು. ಅನಂತರ ಭೂಮಧ್ಯ ಸಮುದ್ರ ಹಾಗೂ ಇಟಲಿ ಕಡೆಗೆ ಹೊರಳಿ, ಉತ್ತರ ಆಫ್ರಿಕವನ್ನು ವಶಪಡಿಸಿಕೊಂಡದ್ದು ಹಾಗೂ ಇಟಲಿಯಲ್ಲಿ ಇಳಿದದ್ದು, ಫ್ರಾನ್ಸ್ ಹಾಗೂ ಕೆಳಗಿನ ದೇಶಗಳ ಮೇಲಿನ ನೇರವಾದ ಧಾಳಿಯಲ್ಲವೆಂದು ಹೇಳಿ, ಭೂಮಧ್ಯ ಸಮುದ್ರದಲ್ಲಿ ಹೊಸ ರಂಗ ತೆರೆಯುವುದು ಜರ್ಮನಿ ಹಾಗೂ ಅಧೀನ ರಾಷ್ಟ್ರಗಳ ಮೇಲಿನ ಮುಖ್ಯ ಧಾಳಿಗೆ ಪ್ರಾಸ್ತಾವಿಕವೆಂದೂ ತಿಳಿಸಿದರು.

ಮತ್ತೆ ಇಟಲಿಯ ಸದ್ಯದ ಪರಿಸ್ಥಿತಿ ವಿಷಯ ಹೀಗೆಂದರು:—ಜುಲೈ ೨೫ರಂದು ಫೇಸಿಸಂ ಪತನವಾದ ಮೇಲೆ ಇಟಲಿಯು ಅನಿರ್ಬಂಧ ಶರಣು ಬರುವಂತೆ ನೋಡಿಕೊಳ್ಳಲು ಅಲ್ಲಿನ ಅಧಿಕಾರಿಗಳೊಡನೆ ಸಂಬಂಧವಿಟ್ಟುಕೊಳ್ಳಲು ತಾವು ಆತುರರಾದೆವು. ಅದರಂತೆ ಬಡೋಗ್ಲಿಯೋ ಸರಕಾರಕ್ಕೆ ನಾವು ನಮ್ಮ ಕರಾರು ತಿಳಿಸಿ ಒಪ್ಪಂದ ಸಮಯದಲ್ಲಿ ಒಂದು ಅಮೆರಿಕನ್ ದಳವನ್ನು ರೋಮಿನಲ್ಲಿಳಿಸುವ ಸಿದ್ಧತೆ ಮಾಡಿದೆವು. ಆದರೆ ಅಲ್ಲಿನ ವಿಮಾನ ಕೇಂದ್ರಗಳು ಜರ್ಮನ್ ಸ್ವಾಧೀನವಿರುವವೆಂದು ನಮಗೆ ತಿಳಿಯಿತು. ಒಪ್ಪಂದ ಕರಾರಿನಲ್ಲಿ ಮುಸಲಿನಿಯನ್ನು ನಮಗೆ ಒಪ್ಪಿಸಬೇಕೆಂದಿತ್ತು. ಆದರೆ ನಾವಲ್ಲಿ ಇಳಿಯುವ ಅದು ಸಾಧ್ಯವಿರಲಿಲ್ಲ. ವೈರಿಗಳು ಅಲ್ಲಿ ವಿಶೇಷ ಅಧಿಕಾರದಲ್ಲಿರುವುದರಿಂದ, ಇಟಲಿಯನ್ ಸರಕಾರದ ಉದ್ದೇಶ ಅವರಿಗೆ ತಿಳಿಯುವುದು ಸಾಧ್ಯವಿತ್ತು. ನಾವು ಇಟಲಿಯ ಮೇಲಿನ ಈ ಮುಖ್ಯ ಧಾಳಿಯ ವಿಷಯವನ್ನು ನಾವು ಇಟಲಿಯನ್ ಸರಕಾರದ ಧೋರಣಕ್ಕೆ ವ್ಯತಿರಿಕ್ತವಾಗಿಯೇ ಮಾಡಿದೆವು. ಮುಸಲಿನಿಯ ಪತನಕ್ಕಿಂದ ಮೊದಲೇ ನಾವಲ್ಲಿ ಇಳಿವ ಸಾಹಸ ಮಾಡಿದ್ದೆವು. ನೇಪಲ್ಸ್‌ನಲ್ಲಿ ನಮ್ಮ ಸೇನೆ ಇಳಿದದ್ದು ದೊಡ್ಡ ಸಾಹಸವಾಗಿದೆ. ಇದಲ್ಲದೆ ಅಮೆರಿಕನರು ಸಾರ್ಡಿನಿಯಾ ದ್ವೀಪದಲ್ಲಿ ಇಳಿದು ಅಲ್ಲಿಂದ ಜರ್ಮನರನ್ನು ಹೊರಗಟ್ಟಲು ಸಹಾಯ ಮಾಡುತ್ತಿರುವರು. ಕೊರ್ಸಿಕಾದಲ್ಲಿ ಫ್ರೆಂಚರು ಇಟಲಿಯನರು ಹಾಗೂ ಕೊರ್ಸಿಕನರು ಜರ್ಮನರ ಮೇಲೆ ಪ್ರತ್ಯಕ್ಷ ಧಾಳಿ ನಡೆಸಿರುವರು" ಚರ್ಚಿಲರು ವೈರಿಗಳ ಸೇಡು ತೀರಿಸಿಕೊಳ್ಳುವ ಕೊನೆಯ ಪ್ರಯತ್ನ ಮಾಡುವುದಾಗಿ ಹೇಳಿ ಭಾಷಣ ಮುಕ್ತಾಯಗೊಳಿಸಿದರು.

ಭೂಮಧ್ಯ ಸಮುದ್ರದಲ್ಲಿರುವ ಕೊರ್ಸಿಕಾ ನಡು ಗುಡ್ಡೆಯಲ್ಲಿ ಫ್ರೆಂಚ್ ಸೈನಿಕರು ಕೆಲವು ದಿನಗಳ ಹಿಂದೆ ಇಳಿದಿರುವರು. ಇಳಿದು ಅಲ್ಲಿಯ ಕೂಟ ಯೋಧರನ್ನು ಕೂಡಿಕೊಂಡು ಜರ್ಮನರೆದುರು ಹೋರಾಡುತ್ತಿದ್ದಾರೆ ಎಂದು ಜನರಲ್ ಜಿರಾಡರು ಪ್ರಕಟಿಸಿದ್ದಾರೆ. ಇಲ್ಲಿನ ಘಟನೆಗಳು ತಮಗೆ ಅನುಕೂಲವಾಗಿರುವುದೆಂದೂ ಕೊರ್ಸಿಕಾದ ರಾಜಧಾನಿ ಅಜ್ಯಾಸಿಯೋವನ್ನು ಫ್ರೆಂಚರು ವಶಪಡಿಸಿಕೊಂಡಿರುವರೆಂದು ಸುದ್ದಿ ಬಂದಿದೆಯೆಂದೂ, ಜರ್ಮನರ ಸೈನಿಕರು ಇಟಲಿಗೆ ಓಡಿಹೋಗುವುದಕ್ಕಾಗಿ ಪೂರ್ವ ಕರಾವಳಿ ತೀರ ಬಾಸ್ತಿಯಾ ಬಂದರದ ಕಡೆಗೆ ಹಿಂದೆ ಸರಿಯುತ್ತಿರುವರಾಗಿಯೂ ಆ ಪ್ರಕಟಣೆಯಲ್ಲಿ ಹೇಳಲಾಗಿದೆ.

ಜರ್ಮನರ ಭದ್ರಕೋಟೆಯೆನಿಸಿದ ಸ್ಮೊಲೆನ್‌ಸ್ಕ್ ನಗರಕ್ಕೆ ಈಶಾನ್ಯ ಮತ್ತು ಆಗ್ನೇಯದಿಂದ ಈಗಾಗಲೇ ಗಂಡಾಂತರ ಪ್ರಾಪ್ತವಾದದ್ದಲ್ಲದೆ ಕೆಂಪು ಸೈನಿಕರು ಇಂದು ವಾಯುವ್ಯದಿಂದಲೂ ನುಗ್ಗಿ ಒಳಗೆ ಬರುತ್ತಿದ್ದಾರೆ. ರಶ್ಯನ್ ಸೈನಿಕರು ಸ್ಮೊಲೆನ್‌ಸ್ಕ್ ನಗರದಿಂದ ೭೦ ಮೈಲು ದೂರವಿರುವ ಹಾಗೂ ವಿಲಿಕಿಲೂಕಿಯಿಂದ ೫೫ ಮೈಲು ದೂರವಿರುವ ವೆಲಿಜ್ ಎಂಬ ನಗರವನ್ನು ವಶಪಡಿಸಿಕೊಂಡರು. ಈ ನಗರ ಆಕ್ರಮಣದಿಂದ ಸ್ಮೊಲೆನ್‌ಸ್ಕ್ ನಗರವನ್ನು ಸಮೀಪಿಸಿದಂತಾಯಿತಲ್ಲದೆ ಶತ್ರು ಕೋಟೆಯ ಹಿಂಬಾಗವನ್ನು ಭೇದಿಸಿದಂತಾಯಿತು. ಸ್ಮೊಲೆನ್‌ಸ್ಕ್ ನಗರದ ಬಾಹ್ಯ ರಕ್ಷಣಾರೇಖೆಯ ಒಳಗಡೆಸಹ ಕೆಂಪು ಸೈನಿಕರು ಪ್ರವೇಶಿಸಿರುವರು. ಈ ಭಾಗದಲ್ಲಿ ಸುಮಾರು ೨೫ ಲಕ್ಷ ಸೈನಿಕರು ಹೋರಾಡುತ್ತಿರುವರು. ಇತ್ತ ಸ್ಮೊಲೆನ್‌ಸ್ಕ್ ದಕ್ಷಿಣಕ್ಕಿರುವ ಯುಕ್ರೇನಿನ ರಾಜಧಾನಿಯಾದ ಕೀವ್ ನಗರಕ್ಕೂ ವಿಪತ್ತು ಬಂದಿರುವುದು ಇಲ್ಲಿರುವ ಈಶಾನ್ಯಕ್ಕೆ ೫೦ ಮೈಲು ದೂರವಿರುವ ಕ್ರೊಯಿಂಟಿಟಿಸ್ಕವು ಈಗಾಗಲೇ ರಶ್ಯನರ ಸ್ವಾಧೀನವಾಗಿದೆ. ಇದಕ್ಕಿಂತ ಕೆಳಗೆ ರಶ್ಯನರು ನೀಪರ್ ನದಿಯ ವಕ್ರಾಕಾರದ ಕಡೆಗೆ ಭರದಿಂದ ಮುಂದೊತ್ತುತ್ತಿದ್ದಾರೆ. ಇಲ್ಲಿಂದ ಪಾಲಟಾ ಪೋಲ ನಗರಕ್ಕೆ ಕೇವಲ ೮ ಮೈಲು ಮಾತ್ರ ಉಳಿದಿದೆ. ಪೊಲ್ಟಾವಿನ ಪತನವು ಸನ್ನಿಹಿತವಾಗಿದೆ. ೩೦೦೦ ಹಳ್ಳಿಗಳನ್ನು ರಶ್ಯನರು ಜರ್ಮನರ ದಾಸ್ಯದಿಂದ ಕಳೆದ ಒಂದು ವಾರದಲ್ಲಿ ಬಿಡುಗಡೆಮಾಡಿದರು.

ಜಪಾನರು ಚೀನೀಯರೊಡನೆ ಒಪ್ಪಂದ ಮಾಡಿಕೊಳ್ಳುವರೆಂಬ ಸುದ್ದಿಯೊಂದು ಹಿಂದಿನ ಮಂಗಳವಾರ ಅಮೆರಿಕದಿಂದ ಬಂದಿದೆ. ಅಮೆರಿಕದಲ್ಲಿ ರಾಷ್ಟ್ರೀಯ ಚೀನೀ ಸರಕಾರದ ರಾಯಭಾರಿ ಡಾ| ಸೂಂಗರೇ ಈ ವಿಷಯವನ್ನು ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ಹೇಳಿದರು. 'ಏಶ್ಯಾ ಏಶ್ಯದವರಿಗೆ. ಪಾಶ್ಚಾತ್ಯರು ಏಶ್ಯದಲ್ಲಿ ಕಾಲಿಡುವುದು ನ್ಯಾಯವಲ್ಲ' ಎಂಬ ಧ್ಯೇಯಕ್ಕೆ ಕೈಶೇಕರು ಒಪ್ಪುವುದಾದರೆ ತಾವು ಚೀನದಿಂದ ಕಾಲ್ತೆಗೆಯುವುದಾಗಿ ಜಪಾನರು ಹೇಳುತ್ತಾರಂತೆ. ಆದರೆ ಈ ಅಭಿಪ್ರಾಯವು ಚೀನದ ರಾಜಕಾರಣಿಗಳಿಗೂ ಮಾನ್ಯವಾಗಿಲ್ಲವೆಂದು ಡಾ| ಸೂಂಗರೇ ಹೇಳಿದ್ದಾರೆ.

ಸ್ವದೇಶ ಸಮಾಚಾರ

ಶ್ರೀ ಶರಚ್ಚಂದ್ರರ ಬಿಡುಗಡೆ ಮಾಡಲು ಅಸಮರ್ಥರಿರುವೆವು

ಬಂಗಾಳ ಅಸೆಂಬ್ಲಿಯಲ್ಲಿ ಬಡ್ಜೆಟಿನ ಬಗ್ಗೆ ನಡೆದ ಚರ್ಚೆಗೆ ಉತ್ತರ ಕೊಟ್ಟಾಗ ಆರ್ಥಿಕ ಮಂತ್ರಿಗಳಾದ ಶ್ರೀ ಟಿ. ಸಿ. ಗೋಸ್ವಾಮಿಯವರು ಶರತಚಂದ್ರ ಬೋಸರ ಬಿಡುಗಡೆಯ ಬಗ್ಗೆ ಏನೂ ಮಾಡಲು ಅಸಮರ್ಥರಾಗಿರುವೆವೆಂದು ವಿಷಾದ ವ್ಯಕ್ತಪಡಿಸಿದರು.

ಕಲ್ಕತ್ತಕ್ಕೆ ಆಹಾರ ದವಸಗಳ ರವಾನೆ

ಹತ್ತು ದಿನಗಳಲ್ಲಿ ೨೪೦೦೦ ಟನ್‌ಗಳು ಸಾಗಿವೆ

ಕಲ್ಕತ್ತಕ್ಕೆ ಆಹಾರ ದವಸಗಳ ರವಾನೆಯು ಹೆಚ್ಚಾಗುತ್ತಿದೆ. ಸಪ್ಟಂಬರ್ ತಿಂಗಳಿನ ಮೊದಲನೆ ೧೦ ದಿನಗಳಲ್ಲಿ ೨೪೦೦೦ ಟನ್‌ಗಳಷ್ಟು ದವಸ ಕಲ್ಕತ್ತಾಕ್ಕೆ ಹೋಗಿದೆ. ಇದರಲ್ಲಿ ಮುಖ್ಯವಾಗಿ ಗೋಧಿ, ಅಕ್ಕಿ ಇವೆ. ಎರಡು ಹಡಗುಗಳಲ್ಲಿ ಬಂದ ದವಸಗಳೂ ಇದರಲ್ಲಿ ಸೇರಿದೆ. ಇವನ್ನೆಲ್ಲಾ ಕಲ್ಕತ್ತಾ ಮತ್ತು ಇತರ ಜಿಲ್ಲೆಗಳಲ್ಲಿ ಹಂಚಲು ಬಂಗಾಳ ಸರಕಾರದ ವಶಕ್ಕೆ ಕೊಡಲಾಗಿದೆ. ರೈಲುಗಳಲ್ಲಿ ದಿನಕ್ಕೆ ೧೭೦೦ ಟನ್‌ಗಳಷ್ಟು ದವಸಗಳು ಬರುತ್ತಿವೆ.

ಬಂಗಾಳಕ್ಕೆ ಆಹಾರ ಧಾನ್ಯ ಪೂರೈಕೆ

ಕೇಂದ್ರ ಸರಕಾರದ ವ್ಯವಸ್ಥೆ

ಬಂಗಾಳಕ್ಕೆ ಕೇಂದ್ರ ಸರಕಾರವು ಸಾಧ್ಯವಿದ್ದ ಮಟ್ಟಿಗೂ ಆಹಾರಧಾನ್ಯಗಳ ಪೂರೈಕೆ ಮಾಡುವ ಭರವಸೆಯಿತ್ತಿರುವುದಾಗಿ ಡಿಲ್ಲಿಗೆ ಹೋಗಿ ಬಂದ ಬಂಗಾಳದ ಮಂತ್ರಿ ಶ್ರೀ ಸುಹ್ರವರ್ದಿಯವರು ಹೇಳಿದರು.

ಯುದ್ಧಯತ್ನಕ್ಕೆ ೫೦ ಲಕ್ಷ ಪವನು!

ನಿಜಾಮರ ಸಹಾಯ

ಲಂಡನಿನಲ್ಲಿರುವ ಇಂಡಿಯನ ಜಮಖಾನಾ ಕ್ಲಬ್ಬಿಗೆ ಪ್ರತಿವರ್ಷ ೧೫೦ ಪೌಂಡುಗಳಂತೆ ಯುದ್ಧ ಮುಗಿದ ನಂತರವೂ ಒಂದು ವರ್ಷಕ್ಕೆ ಕೊಡುವುದಾಗಿ ನಿಜಾಮರು ಜಾಹೀರು ಮಾಡಿದ್ದಾರೆ. ಒಟ್ಟು ಇವರ ಇದುವರೆಗಿನ ಸಹಾಯ ೫೦ ಲಕ್ಷ ಪೌಂಡು.

ಮಂಗಳೂರು

ಕಲೆಕ್ಟರರ ಪ್ರಕಟಣೆ

ಮಂಗಳೂರು ಮತ್ತು ಕಾಸರಗೋಡು ತಾಲೂಕುಗಳು ಕೋಲೆರಾ ರೋಗದಿಂದ ವ್ಯಾಪಿಸಲ್ಪಟ್ಟವುಗಳಾಗಿವೆ ಎಂಬವಾಗಿ ದಕ್ಷಿಣಕನ್ನಡ ಜಿಲ್ಲಾ ಕಲೆಕ್ಟರವರು ಪ್ರಸಿದ್ಧಿ ಮಾಡಿದ್ದಾರೆ.

ಈ ಮೂಲಕ ದಕ್ಷಿಣ ಕನ್ನಡ ಜಿಲ್ಲಾ ಹೆಲ್ತ್ ಆಫೀಸರರಿಗೆ ಮತ್ತು ಮೇಲಿನ ಎರಡು ತಾಲೂಕುಗಳಲ್ಲಿ (ಮಂಗಳೂರು ಮುನಿಸಿಪಾಲಿಟಿಯ ಸರಹದ್ದಿನ ಒಳಗಣ ಪ್ರದೇಶ ವಿನಾ) ಕೆಲಸ ಮಾಡುವ ಹೆಲ್ತ್ ಯಾ ಕೋಲೆರಾ ಇನ್ಸ್‌ಪೆಕ್ಟರರಿಗೆ ಮತ್ತು ಮಂಗಳೂರು ಮುನಿಸಿಪಾಲಿಟಿಯೊಳಗೆ ಮಂಗಳೂರು ಮುನಿಸಿಪಲ್ ಹೆಲ್ತ್ ಆಫೀಸರರಿಗೂ ಅವರ ಕೈಕೆಳಗೆ ಕೆಲಸಮಾಡುವ ಸೆನಿಟರಿ ಯಾ ಕೋಲೆರಾ ಇನ್ಸ್‌ಪೆಕ್ಟರರಿಗೂ ಕಲೆಕ್ಟರರು ಆಕ್ಟ್ ಪ್ರಕಾರದ ಅಧಿಕಾರಗಳನ್ನು ಕೊಟ್ಟಿರುತ್ತಾರೆ.

ಸ್ವದೇಶಾಭಿಮಾನಿ

ತಾರೀಕು 24—9—1943

ಪತ್ರಿಕೋದ್ಯೋಗಿ ಸಮ್ಮೇಳನ

ಇತ್ತೀಚೆಗೆ ಒಂದೆರಡು ವರ್ಷಗಳಿಂದ ರಾಷ್ಟ್ರದ ಪತ್ರಿಕೋದ್ಯೋಗಿಗಳು ಸಂಘಟಿತರಾಗಿ ಬಲಯುತರೆನಿಸಲು ಪ್ರಯತ್ನ ಮಾಡುತ್ತಿರುವುದು ಪ್ರಶಂಸನೀಯವಿದೆ. ಇದಕ್ಕೆ ಜಾಗ್ರತ ಜಗತ್ತಿನ ಇಂದಿನ ಹಲವು ಸನ್ನಿವೇಶಗಳು ಕಾರಣವಿವೆ. ಯುದ್ಧಾರಂಭವಾದ ಮೊದಲ್ಗೊಂಡು ಭಾರತದ ಪತ್ರಿಕೋದ್ಯಮಕ್ಕೆ ಉಂಟಾದ ಆತಂಕ, ಪತ್ರಿಕಾ ಸ್ವಾತಂತ್ರ್ಯಕ್ಕೆ ಸಂಭವಿಸಿದ ಎಡರು ತೊಡರುಗಳು ಮುಖ್ಯವಾದ ಕಾರಣಗಳೆನ್ನಬಹುದು. ಅಖಿಲಭಾರತ ಪತ್ರಿಕೋದ್ಯೋಗೀ ಸಂಘ, ಅಖಿಲಭಾರತ ಸಂಪಾದಕ ಸಂಘಗಳು ತಲೆಯೆತ್ತಿ ಇಷ್ಟರಲ್ಲೇ ಮಾಡಿದ ಕಾರ್ಯಕಲಾಪಗಳು, ಆತಂಕಗಳನ್ನು ಎದುರೊಡ್ಡಿ ಪಡೆದ ವಿಜಯಗಳು, ಪತ್ರಿಕೋದ್ಯೋಗಿಗಳ ಜೀವನದಲ್ಲಿ ಉಂಟುಮಾಡಿದ ನೂತನ ಕ್ರಾಂತಿಗಳು ಗಮನಾರ್ಹವಿರುವವು ಇಂಥಾ ಸಂದರ್ಭದಲ್ಲಿ ಮೈಸೂರು ಸಂಸ್ಥಾನದ ಪತ್ರಿಕೋದ್ಯಮಿಗಳು ಬೆಂಗಳೂರಲ್ಲಿ ಸಮ್ಮೇಳನ ಸೇರಿ ಕೈಕೊಂಡ ಚಟುವಟಿಕೆ, ಮಂಜೂರುಮಾಡಿದ ನಿರ್ಣಯಗಳು, ಅಧ್ಯಕ್ಷಪೀಠದಿಂದ ಶ್ರೀ ಟಿ. ಟಿ ಶರ್ಮರು ಮಾಡಿದ ಭಾಷಣ ಇವು ನಮ್ಮ ನಾಡಿನ ಪತ್ರಿಕೋದ್ಯಮಿ ಜೀವನದಲ್ಲಿ ಚಿರಸ್ಮರಣೀಯವಾಗಿ ಉಳಿಯುವವು

ಮೈಸೂರು ಪತ್ರಿಕೋದ್ಯಮಿ ಪರಿಷತ್ತಿನ ಆರಂಭ ಭಾಷಣಮಾಡುತ್ತಾ ಮೈಸೂರು ದಿವಾನರಾದ ಶ್ರೀ. ಎನ್. ಮಾಧವರಾಯರು ಹೇಳಿದ ನಾಲ್ಕೇ ನಾಲ್ಕು ಮಾತುಗಳಾದರೂ ವಿಚಾರಾರ್ಹವಿವೆ. 'ನಾನು ಪತ್ರಿಕೋದ್ಯಮಿಯಾಗಿದ್ದರೆ' ಎಂದು ಅವರು ಪ್ರಾರಂಭಿಸಿ, ಪತ್ರಿಕೋದ್ಯಮಿಯು ಹೇಗಿರಬೇಕೆಂದು ಯೋಗ್ಯ ಉಪದೇಶವಿತ್ತರು. 'ಆದರೆ ಇಂದು ಪತ್ರಿಕಾ ಕರ್ತರಿಗೆ ಆಡಳಿತದವರಿಂದ ಆಗಾಗ ಒದಗುತ್ತಿರುವ ಅನೇಕ ತೊಂದರೆಗಳಿಗೆ ಏನು ನಿವಾರಣೋಪಾಯವೆಂಬುದನ್ನು 'ತಾವು ದಿವಾನರಾಗಿರುವುದರಿಂದ' ಏನಾದರೂ ಸೂಚಿಸಬಹುದೆಂದು ನಾವು ಹಾರೈಸಿದ್ದು ಕೇವಲ ನಿರಾಶೆಯಲ್ಲಿಯೇ ಕೊನೆಗೊಂಡಿತು.

'ಪತ್ರಿಕಾ ವೃತ್ತಿಯು ಅಸಾಮಾನ್ಯವಾದುದು. ಈ ವೃತ್ತಿಯನ್ನು ಅನುಸರಿಸಿದ ಪತ್ರಿಕಾ ಕರ್ತರಾದರೋ ಅಸಾಧಾರಣ ಶಕ್ತಿ ಸಂಪನ್ನರು. ನೀತಿಯುತವಾದ ಪತ್ರಿಕೆ, ಆದರ್ಶದಿಂದ ಕೂಡಿದ ಪತ್ರಿಕಾ ಕರ್ತ ಇವೆರಡೂ ಒಂದು ಜನಪದಕ್ಕೆ ಲಭ್ಯವಾಯಿತೆಂದರೆ ಅದರ ಭಾಗ್ಯವೆನ್ನೆಷ್ಟೆಂಥು ಹೇಳೋಣ! ಭರತಖಂಡದ ರಾಜಕೀಯ ಪರಿಸ್ಥಿತಿಯಿಂದ ಪತ್ರಿಕೆಗಳ ಜೀವನವು ಕುಂಠಿತವಾಗಿದೆ. ಭರತಖಂಡದ ಕಾನೂನು ಕಡತಗಳನ್ನು ನೋಡಿದರೆ ಪತ್ರಿಕೆಗಳ ಸಹಜ ವಿಕಾಸಕ್ಕೆ ಅವು ಎಷ್ಟು ಪ್ರತಿಬಂಧಕವಾಗಿವೆ ಯೆಂಬುದು ಸ್ಪಷ್ಟವಾಗುತ್ತದೆ!' ಈ ಸರಣಿಯಲ್ಲಿ ಸಮ್ಮೇಳನಾಧ್ಯಕ್ಷ ಪೀಠದಿಂದ ಶ್ರೀ ತಾತಾಚಾರ್ಯ ಶರ್ಮರು ಉದ್ಘೋಷಿಸಿದರು. ಪತ್ರಿಕಾ ಸ್ವಾತಂತ್ರ್ಯಕ್ಕೆ ಉಂಟಾದ ಪ್ರತಿಬಂಧಕಗಳಿಗಾಗಿ ರೋಷ ವಿಷಾದ ವ್ಯಕ್ತಪಡಿಸಿದರು. ತರುಣ ಪತ್ರಿಕಾಕರ್ತರ ದೇಶಭಕ್ತಿಯನ್ನು ಕೊಂಡಾಡಿದರು. ರಾಷ್ಟ್ರದ ಸ್ವಾತಂತ್ರ್ಯ ಸಂಗ್ರಾಮದ ರೋಮಾಂಚಕ ಇತಿಹಾಸವನ್ನು ಜನತೆಯ ಮುಂದಿಡಲು ಗುಲಾಮರಾದ ನಮಗೆ ಭಾಗ್ಯವಿಲ್ಲವೆಂದು ನಿಟ್ಟುಸಿರೆಳೆದರು ಪತ್ರಿಕೋದ್ಯಮಿ ಆದರ್ಶಯುತನಾಗಿರಬೇಕೆಂದೂ, ನೀತಿ ನಿರ್ಮಲನಿರಬೇಕೆಂದೂ ಒತ್ತಿಹೇಳಿದರು ಶ್ರೀ. ಶರ್ಮರ ಅಧ್ಯಕ್ಷ ಭಾಷಣವು ಒಂದು ಶಾಶ್ವತ ಸಾಹಿತ್ಯವಾಗಿ ಉಳಿಯುವುದು.

ಸಮ್ಮೇಳನದ ನಿರ್ಣಯಗಳು ಗಮನಾರ್ಹವಿರುವವು. ಪತ್ರಿಕಾ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಸಂಕಷ್ಟಕ್ಕೆ ಗುರಿಯಾದ ಪತ್ರಿಕಾ ಕರ್ತರನ್ನು ಅಭಿನಂದಿಸಿದ್ದು, ರಾಜಕೀಯ ಕೈದಿಗಳಿಗೆ ಪತ್ರಿಕೆಗಳನ್ನು ತರಿಸಲು ಸ್ವಾತಂತ್ರ್ಯವಿರಬೇಕೆಂದು, ಪತ್ರಿಕೋದ್ಯಮಕ್ಕೆ ಸಂಬಂಧಿಸಿ ಪುಸ್ತಕ ಪ್ರಕಟಿಸಬೇಕೆಂದು, ವಿದ್ಯಾರ್ಥಿವೇತನವನ್ನು ಏರ್ಪಡಿಸಬೇಕೆಂದು ಮಂಗಳೂರಲ್ಲಿ ಜರಗುವ ಅಖಿಲ ಕರ್ನಾಟಕ ಪತ್ರಿಕೋದ್ಯೋಗೀ ಪರಿಷತ್ತಿನಲ್ಲಿ ಸಹಕರಿಸಬೇಕೆಂದು ಮೊದಲಾಗಿ ನಿರ್ಣಯಿಸಿದ್ದು ಪ್ರಶಂಸನೀಯವಾಗಿದೆ. ನಮ್ಮ ದೇಶದಲ್ಲಿ ಇಂದು ಆಹಾರ ಸಮಸ್ಯೆ ವಿಷಮ ಪರಿಸ್ಥಿತಿಗೇರಿರುವೀ ಕಾಲದಲ್ಲಿ ಸಂಸ್ಥಾನದ ಪತ್ರಿಕೋದ್ಯೋಗಿಗಳು ಆ ಕುರಿತು ತಮ್ಮ ಪ್ರಚಾರ ಧೋರಣೆ ನಿರ್ಣಯಗಳನ್ನು ಮಾಡದಿರುವುದು ಒಂದು ಗಮನಾರ್ಹವಾದ ಲೋಪವೆನಬೇಕು. ಒಟ್ಟಿನಿಂದ ಶ್ರೀ ತಿ ತಾತಾಚಾರ್ಯ ಶರ್ಮರ ಯೋಗ್ಯ ಧುರೀಣತ್ವದಲ್ಲಿ ಮೈಸೂರು ಸಂಸ್ಥಾನದ ದ್ವಿತೀಯ ಪತ್ರಿಕೋದ್ಯೋಗೀ ಸಮ್ಮೇಳನವು ಅತ್ಯಂತ ಯಶಸ್ವಿಯಾಗಿಯೇ ಜರಗಿತು

ನೋಟಗಳು . . . . .

ಶ್ರೀ ಜಯಪ್ರಕಾಶ ನಾರಾಯಣರು ಕಲ್ಕತ್ತೆಗೆ ಬಂದಿದ್ದರೆಂದು ಬಂಗಾಳ ಅಸೆಂಬ್ಲಿಯಲ್ಲಿ ಹೇಳಲಾಯಿತು.

ಜಯಪ್ರಕಾಶರು ಇನ್ನೂ ಹಿಂದೂದೇಶದಲ್ಲಿಯೇ ಇದ್ದಾರೆಂದು ಇದರಿಂದ ರುಜುವಾಯಿತು.

ಬಂಗಾಳಕ್ಕೆ ಜಯಪ್ರಕಾಶರು ಬಂದಿದ್ದರೆಂದು ಸರಕಾರಕ್ಕೆ ತಿಳಿದರೂ, ಅವರನ್ನು ಏಕೆ ಸೆರೆ ಹಿಡಿಯಲಿಲ್ಲವೆಂದು ಸಭಾಸ್ಯರು ಪ್ರಶ್ನೆ ಕೇಳಿದರು.

ಸಹಜವಾಗಿ ಇದು ಕೇಳುವಂಥಾ ಪ್ರಶ್ನೆ!

'ಅವರು ಕಲ್ಕತ್ತಕ್ಕೆ ಬಂದು ಹೋದ ಮೇಲೆ ಆ ವಿಷಯ ಪೋಲೀಸರಿಗೆ ತಿಳಿಯಿತು' ಎಂದು ಸರಕಾರದ ಉತ್ತರ ಬಂತು!

ಜಯಪ್ರಕಾಶರನ್ನು ಹಿಡಿದುಕೊಟ್ಟವರಿಗೆ ೧೦ ಸಾವಿರ ರೂಪಾಯಿ ಬಹುಮಾನ ಸಾರಲಾಗಿದೆ.

ಪಾಪ! ತಡವಾಗಿ ತಿಳಿದದ್ದು ಸಿ. ಐ. ಡಿ ಗಳ ದುರ್ಭಾಗ್ಯ!

ಕೆಲ ಸಮಯದ ಹಿಂದೆಯೂ ಒಮ್ಮೆ ಜಯಪ್ರಕಾಶರು ಪೋಲೀಸರ ಮುತ್ತಿಗೆಯಿಂದ ಅಕಸ್ಮಾತ್ ತಪ್ಪಿಸಿಕೊಂಡರೆಂದ ಸುದ್ದಿ ಬಂದಿತ್ತು.

ಸೆರೆಮನೆಯಿಂದಲೇ ತಪ್ಪಿಸಿಕೊಂಡವರು ಸೆರೆಮನೆಯ ಹೊರಗಿರುವಾಗ ತಪ್ಪಿಸಿಕೊಳ್ಳುವುದರಲ್ಲಿ ಆಶ್ಚರ್ಯವೇನು?

ಎಷ್ಟೆಂದರೂ, ಗಾಂಧಿಜಿ ಹೇಳಿದಂತೆ, 'ಜಯಪ್ರಕಾಶರು ಪಾಶ್ಚಾತ್ಯ ರಾಜಕೀಯವನ್ನು ಅಭ್ಯಾಸ ಮಾಡಿದವರು.'

ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಪರಿಷತ್ತಿಗೆ

ಮೈಸೂರು ಪತ್ರಿಕೋದ್ಯಮಿಗಳ ಬೆಂಬಲ

ಬೆಂಗಳೂರಲ್ಲಿ ದ್ವಿತೀಯ ಮೈಸೂರು ಪತ್ರಿಕೋದ್ಯೋಗೀ ಸಮ್ಮೇಳನ

(ನಮ್ಮ ಪ್ರತಿನಿಧಿಗಳಿಂದ)

ಬೆಂಗಳೂರು ತಾ. ೨೧

ಮೈಸೂರು ಸಂಸ್ಥಾನದ ಪತ್ರಿಕೋದ್ಯೋಗಿಗಳ ದ್ವಿತೀಯ ಸಮ್ಮೇಳನವು ತಾ. ೧೯ರಂದು ಶ್ರೀ ತಿರುಮಲೆ ತಾತಾಚಾರ್ಯ ಶರ್ಮರ ಅಧ್ಯಕ್ಷತೆಯಲ್ಲಿ ಕನ್ನಡ ಸಾಹಿತ್ಯ ಪರಿಷನ್ಮಂದಿರದಲ್ಲಿ ಪ್ರಾರಂಭವಾಗಿ ತಾ. ೨೦ರಂದು ಸಂಜೆ ಮುಕ್ತಾಯವಾಯಿತು. ಸಂಸ್ಥಾನದ ಪತ್ರಿಕೋದ್ಯೋಗಿಗಳಲ್ಲದೆ, ದಕ್ಷಿಣ ಕನ್ನಡದಿಂದಲೂ, ಬೇರೆ ಕಡೆಗಳಿಂದಲೂ ಒಟ್ಟು ೧೩೫ ಮಂದಿ ಪತ್ರಿಕೋದ್ಯಮಿಗಳು ಬಂದಿದ್ದರು. ದಿವಾನರಾದ ಶ್ರೀ ಎನ್. ಮಾಧವರಾಯರು ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸಿದರು.

"ನಾನು ಪತ್ರಿಕೋದ್ಯಮಿಯಾಗಿದ್ದರೆ, ಮೊದಲು ನಾನು ಸಾಮಾನ್ಯ ಸುದ್ದಿಗಾರನಾಗಿ ನನ್ನ ಜೀವನ ಆರಂಭಿಸುತ್ತಿದ್ದೆ. ಸುದ್ದಿಗಾರನ ಹೊಣೆಗಾರಿಕೆ ಹೆಚ್ಚಿನದು. ಸುದ್ದಿಗಾರನು ನ್ಯಾಯಾನ್ಯಾಯ ವಿಮರ್ಶೆ ಮಾಡಬೇಕು. ಉಪಸಂಪಾದಕನು ಮನಸೆಳೆವ ರೀತಿಯಲ್ಲಿ ಸುದ್ದಿಗಳನ್ನು ಜೋಡಿಸಬೇಕು. ಪತ್ರಿಕೆಗಳಲ್ಲಿ ನಾನಾ ವಿಷಯವಿರಬೇಕು. ಇಂದಿನ ಅಧ್ಯಕ್ಷರಾದ ಶ್ರೀ ಶರ್ಮರು ವಿಶೇಷ ಅನುಭವಶಾಲಿಗಳು. ಅವರ ಮುಂದಾಳುತನದಲ್ಲಿ ಸಮ್ಮೇಳನ ಯಶಸ್ವಿಯಾಗಲಿ" ಎಂದು ಮೊದಲಾಗಿ ದಿವಾನರು ತಮ್ಮ ಭಾಷಣದಲ್ಲಿ ಹೇಳಿದರು

ಸಭಾ ಪ್ರಾರಂಭದಲ್ಲಿ ಸ್ವಾಗತ ಸಮಿತಿ ಅಧ್ಯಕ್ಷ ಶ್ರೀ. ಪಿ ಬಿ ಶ್ರೀನಿವಾಸನರು, ಸ್ವಾಗತ ಮಾಡುತ್ತಾ, 'ನಮ್ಮ ಪತ್ರಿಕೆಗಳು ಚಿಕ್ಕವಾಗಿದ್ದರೂ, ಸಂಪಾದಕರು ಬಡವರಾಗಿದ್ದರೂ ಬಾತ್ಮಿದಾರರು ಅದಕ್ಕಿಂತಲೂ ಬಡವರಾಗಿದ್ದರೂ ನಾವಿಂದು ಕೆಚ್ಚೆದೆಯಿಂದ ಮುಂದುವರಿಯುತ್ತೇವೆ. ನಾವು ಧೈರ್ಯಗುಂದಿಲ್ಲ ನಾವು ಐಶ್ವರ್ಯ ಗಳಿಸಿಲ್ಲವಾದರೂ ಸೇವೆ ಸಲ್ಲಿಸಿದ್ದೇವೆ ಕನ್ನಡ ಪತ್ರಿಕೆಗಳಿಗೆ ತ್ಯಾಗವೇ ಆಸ್ತಿಭಾರ. ಅಧ್ಯಕ್ಷರಾದ ಶ್ರೀ. ಶರ್ಮರು ತ್ಯಾಗದ ಮೂರ್ತಿ. ಕನ್ನಡದಲ್ಲಿ 'ಲಂಡನ್ ಟೈಮ್ಸ್'ನಂಥಾ ಪತ್ರಿಕೆ, ಕಸ್ತೂರಿ ಬಿಲ್ಡಿಂಗ್ಸ್‌ನಂಥಾ ಭವನ ನಿರ್ಮಾಣವಾಗುವ ದಿನ ದೂರವಿರಲಾರದು' ಎಂದು ಹೇಳಿದರು.

ಸಮ್ಮೇಳನವು ಯಶಸ್ವಿಯಾಗಲೆಂದು ಹಾರೈಸಿ ಬಂದಿದ್ದ ಸಂದೇಶಗಳನ್ನು ಶ್ರೀ. ಬಿ. ಎನ್. ಗುಪ್ತರು ಓದಿದರು ಸರ್ ಸುಲ್ತಾನ್ ಅಹಮ್ಮದ್, ರೈ ಆ ಶ್ರೀನಿವಾಸ ಶಾಸ್ತ್ರಿ, ಎಂ ಆರ್. ಜಯಕರ್, ಸಾವರ್ಕರ್, ವಿಜಯರಾಘವಾಚಾರ್ಯ, ವಿಶ್ವೇಶ್ವರಯ್ಯ, ಕೆ ಎಂ ಮುನ್ಷಿ, ಫ್ರಾನಿಸ್‌ಲೋ, ಶ್ಯಾಮ ಪ್ರಸಾದ ಮುಖರ್ಜಿ, ಬ್ರೆಲ್ವಿ, ಪೋಹರೆ, ಸರ್ ಸಿ ಪಿ ಶ್ರೀನಿವಾಸನ್, ಗೋಯಂಕಾ, ನಟೇಶನ್, ಮೈಸೂರಿನ ಮಂತ್ರಿಗಳು ಹಾಗೂ ರೆಸಿಡೆಂಟ್, ಬಿ. ಎಂ ಶ್ರೀಕಂಠಯ್ಯ, ದಕ್ಷಿಣ ಕನ್ನಡ ಪತ್ರಿಕೋದ್ಯೋಗಿ ಸಂಘ ಮೊದಲಾದವರಿಂದ ಬಂದ ಹಲವು ಸಂದೇಶಗಳು ಓದಲ್ಪಟ್ಟವು.

ಅನಂತರ ಅಧ್ಯಕ್ಷರಾದ ಶ್ರೀ ಶರ್ಮರು ತಮ್ಮ ಭಾಷಣ ಮಾಡಿದರು. ಪತ್ರಿಕಾ ಜೀವನದ ನಾನಾ ಹೋರಾಟಗಳನ್ನು ವಿವರಿಸಿದರು. ಪತ್ರಿಕಾ ಸ್ವಾತಂತ್ರ್ಯಕ್ಕಾಗಿ ವಾದಿಸಿದರು. ಪತ್ರಿಕಾ ಶಾಸನವನ್ನು ಖಂಡಿಸಿದರು ಮೈಸೂರು ಸರಕಾರದ ಉಗ್ರ ಶಾಸನವನ್ನು ವಿರೋಧಿಸಿದರು. ಭಾರತ ಸಂರಕ್ಷಣಾ ಕಾನೂನು ಅನ್ಯಾಯವಾಗಿದೆಯೆಂದರು. ತರುಣ ಪತ್ರಿಕಾ ಕರ್ತರ ದೇಶಭಕ್ತಿಯನ್ನು ಪ್ರಶಂಸಿಸಿದರು. ಆದರ್ಶ ಪತ್ರಿಕೆಯಂತಿರಬೇಕೆಂದು ತಿಳಿಸಿದರು. ಕನ್ನಡ ಪತ್ರಿಕೋದ್ಯಮಿಗಳು ಕನ್ನಡವನ್ನು ಚೆನ್ನಾಗಿ ಅಭ್ಯಾಸ ಮಾಡಬೇಕೆಂದರು, ಮೈಸೂರು ಸಂಸ್ಥಾನ ಪತ್ರಿಕೋದ್ಯೋಗಿಗಳು ಆರಂಭಿಸಿದ ಸಹಾಯ ನಿಧಿಗೆ ಈ ವರ್ಷದೊಳಗಾಗಿ ಒಂದು ಲಕ್ಷ ರೂಪಾಯಿ ನಿಧಿ ಸೇರಿಸಬೇಕೆಂದು ಸೂಚಿಸಿದರು. ಪಾಶ್ಚಾತ್ಯ ಪತ್ರಿಕೆಗಳೊಡನೆ ನಮ್ಮ ನಾಡಿನ ಪತ್ರಿಕೆಗಳು ಸರಿಗಟ್ಟಬೇಕೆಂದರು. ಕೊನೆಗೆ ಉಪನಿಷದ್ವಾಕ್ಯದೊಡನೆ ಪ್ರಚಂಡ ಕರತಾಡನದ ಮಧ್ಯೆ ಭಾಷಣವನ್ನು ಮುಕ್ತಾಯಗೊಳಿಸಿದರು. ಶ್ರೀ. ಶರ್ಮರ ಅಧ್ಯಕ್ಷ ಭಾಷಣವು ಆದಿಯಿಂದ ಕೊನೆವರೆಗೆ ತುಂಬಾ ವೀರವಾಕ್ಯಗಳಿಂದ ಕೂಡಿದ್ದು ಸ್ಫೂರ್ತಿಯುತವಾಗಿತ್ತು.

ಅನಂತರ ಶ್ರೀ ಎಚ್. ಶ್ರೀಕಂಠಯ್ಯನವರು ಆಭಾರ ಮನ್ನಿಸಿ ಭಾಷಣವಿತ್ತ ಮೇಲೆ, ಸಮ್ಮೇಳನದ ಪ್ರತಿನಿಧಿ ವಸತಿಯಾದ ಸಜ್ಜನರಾಯ ಕಲ್ಯಾಣ ಮಂದಿರದಲ್ಲಿ ಮುಂದಿನ ಕಾರ್ಯಕಲಾಪಗಳು ಜರಗಿದವು ವಿಷಯ ನಿಯಾಮಕ ಸಮಿತಿ ಸಭೆ ಮಧ್ಯಾಹ್ನ ಮತ್ತು ರಾತ್ರಿ ಸೇರಿ ನಿರ್ಣಯಗಳನ್ನು ಚರ್ಚಿಸಿತು.

ಮಂಗಳೂರಿಂದ ಬಂದಿದ್ದ ದಕ್ಷಿಣ ಕನ್ನಡ ಪತ್ರಿಕೋದ್ಯೋಗಿ ಸಂಘದ ಉಪಾಧ್ಯಕ್ಷರಾದ ಶ್ರೀ ಕಯ್ಯಾರ ಕಿಞ್ಞಣ್ಣರೈಗಳು ಅಧ್ಯಕ್ಷರ ವಿನಂತಿ ಮೇರೆಗೆ ಭಾಷಣಮಾಡುತ್ತಾ, ಮಂಗಳೂರಲ್ಲಿ ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಳನವನ್ನು ಒದಗುವ ದಶಂಬರ ಅಂತ್ಯದೊಳಗೆ ಜರಗಿಸುವ ವಿಚಾರ ವಿವರಿಸಿ, ಈ ಪರಿಷತ್ತಿನಲ್ಲಿ ಸಂಸ್ಥಾನದ ಪತ್ರಿಕೋದ್ಯೋಗಿಗಳೂ ಸಹಕರಿಸಬೇಕೆಂದು ವಿನಂತಿಸಿದರು ಅಖಿಲ ಕರ್ನಾಟಕದ ಪತ್ರಿಕೋದ್ಯೋಗಿಗಳು, ಇಂದಿನ ಜಾಗ್ರತ ಜಗತ್ತಿನಲ್ಲಿ, ತಮ್ಮ ಸಂಘಟಿತ ಶಕ್ತಿಯನ್ನು ಸಾಧಿಸಿ ಬಲಯುತರಾಗಬೇಕೆಂದೂ ತಿಳಿಸಿದರು.

ಶ್ರೀಗಳಾದ ಮಹದೇವ ದೇಸಾಯಿ ಪಂಡಿತ ತಾರಾನಾಥರ ನಿಧನದ ಬಗ್ಗೆ ಸಂತಾಪ ಸೂಚಿಸುವ, ಆಗಸ್ಟ್ ಗಲಭೆಯಲ್ಲಿ ತಮ್ಮ ಯಿನಾಡು, ವಿಶ್ವಕರ್ನಾಟಕ, ಡೈಲಿ ನ್ಯೂಸ್, ಜನವಾಣಿ ಪತ್ರಿಕೆಗಳು ತಾವಾಗಿಯೇ ಪ್ರಕಟಣೆ ನಿಲ್ಲಿಸಿ ಪತ್ರಿಕಾ ಸ್ವಾತಂತ್ರ್ಯ ಕಾಪಾಡಿದ್ದಕ್ಕೆ ಅಭಿನಂದನೆ ಮಾಡುವ, 'ವಿಶ್ವ ಕರ್ನಾಟಕ' 'ಮೈಸೂರು ಪತ್ರಿಕೆ'ಗಳಿಂದ ಸರಕಾರ ತೆಗೆದುಕೊಂಡ ಠೇವಣಾತಿಯನ್ನು ತಿರುಗಿ ಕೊಡಬೇಕೆನ್ನುವ, ಯುದ್ಧರಂಗದ ನಾನಾ ಕ್ಷೇತ್ರಗಳಿಗೆ ಸರಕಾರವು ಮೈಸೂರು ಪತ್ರಿಕೋದ್ಯಮಿಗಳನ್ನು ಕಂಡುಕೊಂಡು ಅನುಭವ ಕೊಡಬೇಕೆನ್ನುವ, ರಾಜಕೀಯ ಕೈದಿಗಳಿಗೆ ಪತ್ರಿಕೆಗಳನ್ನು ತರಿಸುವುದರಲ್ಲಿ ಸ್ವಾತಂತ್ರ್ಯವಿರಬೇಕೆನ್ನುವ, ಪತ್ರಿಕೋದ್ಯಮಕ್ಕೆ ಸಂಬಂಧಿಸಿದ ಪುಸ್ತಕ ಪ್ರಕಟಿಸಬೇಕೆನ್ನುವ, ಪತ್ರಿಕೋದ್ಯೋಗದಲ್ಲಿ ಶಿಕ್ಷಣವೀಯಲು ವಿದ್ಯಾರ್ಥಿವೇತನ ನಿಧಿ ಏರ್ಪಡಿಸಬೇಕೆನ್ನುವ, ಪತ್ರಿಕಾ ಮಾಲಿಕರು ತಮ್ಮ ನೌಕರರಿಗೆ ಯೋಗ್ಯ ಸಂಬಳ, ರಜೆ, ತುಟ್ಟಿ ಭತ್ತೆ, ಪ್ರೊವಿಡೆಂಟ್ ಫಂಡ್ ಮೊದಲಾದ ಸೌಕರ್ಯವೇರ್ಪಡಿಸಬೇಕೆನ್ನುವ, ಮಂಗಳೂರಲ್ಲಿ ಜರಗುವ ಅಖಿಲ ಕರ್ನಾಟಕ ಪತ್ರಿಕೋದ್ಯೋಗೀ ಸಮ್ಮೇಳನದಲ್ಲಿ ಸಹಕರಿಸಬೇಕೆನ್ನುವ, ಸರಕಾರದ ಶಾಸನವನ್ನು ಖಂಡಿಸುವ, ಅಶ್ಲೀಲ ವಿಷಯಕ ಜಾಹೀರಾತು ಪ್ರಕಟಿಸಬಾರದೆನ್ನುವ ಇವೇ ಮೊದಲಾದ ೩೭ ನಿರ್ಣಯಗಳು ಮಂಜೂರಾದವು

ಅಧ್ಯಕ್ಷರು ತಮ್ಮ ಮುಕ್ತಾಯ ಭಾಷಣದಲ್ಲಿ ಮಂಜೂರಾದ ನಿರ್ಣಯಗಳನ್ನು ವಿಮರ್ಶಿಸಿ ಪತ್ರಿಕೋದ್ಯೋಗವು ಇನ್ನೂ ಬೆಳೆಯಲೆಂದು ಆಶಿಸಿದರು, ಅನಂತರ ಸಮ್ಮೇಳನಕ್ಕೆ ನೆರವಾದ ಸಮಸ್ತರಿಗೂ ಶ್ರೀ ಎಸ್ ಜಿ ಮೊಹಿಯುದ್ದೀನರು ಕೃತಜ್ಞತೆ ಹೇಳಿದರು ಆಗಂತುಕ ಮತ್ತು ಪ್ರತಿನಿಧಿಗಳ ಪರವಾಗಿ ಶ್ರೀಗಳಾದ ಡಿ. ವಿ. ಗುಂಡಪ್ಪ, ವೀರ ಕೇಸರಿ ಸೀತಾರಾಮ ಶಾಸ್ತ್ರಿ, ಎಸ್. ನಂಜುಂಡಯ್ಯ ಇವರು ಭಾಷಣವಿತ್ತು ಸಮ್ಮೇಳನವನ್ನು ಪ್ರಶಂಸಿ ಕೃತಜ್ಞತೆ ಸೂಚಿಸಿದರು

ರಾತ್ರಿ ಶ್ರೀಮತಿ ರಾಜಮ್ಮನವರು ತಮ್ಮ ಅಮೋಘವಾದ ವೀಣಾವಾದನದಿಂದ ಪ್ರತಿನಿಧಿಗಳನ್ನು ಆನಂದಗೊಳಿಸಿದರು. ಸಮ್ಮೇಳನದ ತಾ ೨೦ರಂದು ಸಂಜೆ ಶ್ರೀ ಬಿ. ಎನ್. ಗುಪ್ತರು ತಮ್ಮ ಪತ್ರಿಕೆಯ ಬಾತ್ಮಿದಾರರನ್ನೂ, ಇತರ ಮಹನೀಯರನ್ನೂ ಆಮಂತ್ರಿಸಿ 'ಪ್ರಜಾಮತ' ಆಫೀಸಿನಲ್ಲಿ ಒಂದು ಸತ್ಕಾರ ಕೂಟವನ್ನೇರ್ಪಡಿಸಿದರು. ಶ್ರೀಗಳಾದ ವೀರಕೇಸರಿ ಸೀತಾರಾಮ ಶಾಸ್ತ್ರಿ, ಕಯ್ಯಾರ ಕಿಞ್ಞಣ್ಣ ರೈ ಮೊದಲಾದವರ ಭಾಷಣಗಳಿದ್ದುವು.

ಜಿಲ್ಲಾ ಸಮಾಚಾರಗಳು

ಮಂಗಳೂರು

ಮತ್ತೂ ನಿರ್ಬಂಧ

ಸಂಪೂರ್ಣವಾಗಿಯೂ ಧಾರ್ಮಿಕ ಮತ್ತು ಸಾಮಾಜಿಕ ಕೂಟಗಳಲ್ಲದೆ ಇತರ ಬಗೆಯ ಸಾರ್ವಜನಿಕ ಸಭೆ ಮೆರವಣಿಗೆ ಇತ್ಯಾದಿಗಳನ್ನು ಈ ಜಿಲ್ಲೆಯಲ್ಲಿ ನಡೆಸಕೂಡದು, ಛಂಗಿಗಳಾಗ ಕೂಡದೆಂದೂ ಈ ಬಹಿಷ್ಕಾರದ ಅವಧಿಯನ್ನು ಇದೇ ಸೆಪ್ಟಂಬರ್ ೧೮ರಿಂದ ೩ ತಿಂಗಳ ವರೆಗೆ ಹೆಚ್ಚಿಸಲಾಗಿದೆ ಎಂದೂ ಜಿಲ್ಲಾ ಕಲೆಕ್ಟರರ ಅಪ್ಪಣೆ.

ಮುನಿಸಿಪಲ್ ಕೌನ್ಸಿಲ್

ಸಭೆ ತಾ ೨೦ರಂದು ಸಂಜೆ ಅದರ ಕಾರ್ಯಾಲಯದಲ್ಲಿ ಚೇಯರ್ ಮ್ಯಾನರ ಅಧ್ಯಕ್ಷತೆಯಲ್ಲಿ ಜರಗಿತು. ಮುನಿಸಿಪಾಲಿಟಿಯಲ್ಲಿ ಸಂಚಾರ ಪುಸ್ತಕ ಭಂಡಾರಗಳಿಗೆ ಅವಕಾಶಮಾಡಿಕೊಟ್ಟು ಜನತೆಗೆ ಉಪಕಾರ ಮಾಡಬೇಕೆಂದು ಶ್ರೀ ರಂಗನಾಥ ಪೂಂಜರೂ ಇತರರೂ ಚರ್ಚಿಸಿದ ಮೇಲೆ ಅದರ ಕುರಿತು ಹೆಚ್ಚಿನ ಮಾಹಿತಿಗಾಗಿ ಪತ್ರವ್ಯವಹಾರ ನಡೆಸಬೇಕೆಂದಾಯಿತು. ೧೯೪೪-೪೫ನೇ ಇಸ್ವಿ ಬಜೆಟ್ ತಯಾರಿಗಾಗಿ ಒಂದು ಸಮಿತಿಯ ರಚನೆಯಾಗಿ ಎಲ್ಲ ಕೌನ್ಸಿಲರರೂ ಯುಕ್ತ ಕಂಡ ಸೂಚನೆಗಳನ್ನು ಕೊಡಬೇಕೆಂದಾಯಿತು. ಅಕ್ಕಿಯನ್ನು ಮಿತವಾದ ದರದಲ್ಲಿ ಒದಗಿಸುವಂತೆ ಅಧಿಕಾರಿಗಳನ್ನು ಪ್ರಾರ್ಥಿಸಬೇಕೆಂಬ ಶ್ರೀ ಸಿ. ಎಲ್. ಲೋಬೋ ಅವರ ಠರಾವು, ಏಕಕಂಠದಿಂದ ಮಂಜೂರಾಗುವುದರೊಡನೆ ಅದನ್ನೇ ಪುಷ್ಟೀಕರಿಸುವ ಶ್ರೀ ಎಂ. ಎಸ್. ಶ್ರೇಷ್ಠರ ಮತ್ತೊಂದು ಠರಾವೂ ಮಾನ್ಯವಾಯಿತು. ಬೇಡುವವರಿಗಾಗಿ ಒಂದು ಮಂದಿರ ರಚನೆಗೆ ಸ್ಥಳ ಕೊಡಿಸಬೇಕೆಂದು ಪ್ರಾರ್ಥಿಸಿದ ಶ್ರೀ. ಎಂ. ಎನ್. ಬಡಿವಾಳರ ಅರಿಕೆಯ ಪೂರೈಕೆಯನ್ನು ಒಂದು ಸಮಿತಿಯ ತೀರ್ಮಾನಕ್ಕೊಪ್ಪಿಸಲಾಯಿತು.

ಹೊಸ ಗಡಿಗಳ ಮೌಲ್ಯ ನಿರ್ಣಯ

ವಿಸ್ತರಿಸಿದ ಹೊಸ ಮುನಿಸಿಪಲ್ ಪ್ರದೇಶದಲ್ಲಿ ತೆರಿಗೆ ಹೊರಿಸುವ ಸಂಬಂಧವಾದ ಮೌಲ್ಯ ನಿರ್ಣಯದ ಕಾರ್ಯವು ಈ ತಿಂಗಳೊಳಗೆ ಮುಗಿಯುವುದೆಂದು ತಿಳಿಯಲಾಗಿದೆ. ವೆಲ್ಯುಯೇಶನ್ ಆಫೀಸರಾಗಿ ನೇಮಿಸಲ್ಪಟ್ಟ ಶ್ರೀ. ವಿಹೆಚ್. ಎನ್. ಸಿಂಹ ಇವರು ನಾಲ್ಕು ತಿಂಗಳೊಳಗೆ ಮುತುವರ್ಜಿಯಿಂದ ಕಾರ್ಯ ನಡೆಸಿರುವರು.

ಕಡ್ಡಾಯ ಇನಾಕ್ಯುಲೇಶನ್

ಮಂಗಳೂರು ನಗರದಲ್ಲಿ ಜನರಿಗೆ ಕಡ್ಡಾಯವಾಗಿ ಕಾಲರಾ ಇನಾಕ್ಯುಲೇಶನ್ ಹಾಕಲಿಕ್ಕೂ ಕೊಲೆರಾ ರೋಗಿಗಳನ್ನು ಅವರಿರುವ ಮನೆಗಳಿಂದ ಆಸ್ಪತ್ರೆಗೆ ಕಡ್ಡಾಯವಾಗಿ ಸಾಗಿಸಲಿಕ್ಕೂ ಇಲ್ಲಿಯ ಮು॥ ಹೆಲ್ತ್ ಶಾಖೆಯವರಿಗೆ ಸದ್ಯವೇ ಜಿಲ್ಲಾ ಕಲೆಕ್ಟರರಿಂದ ಅಧಿಕಾರ ದೊರೆಯುವುದೆಂದು ತಿಳಿದುಬಂದಿದೆ.

ಚುನಾವಣೆ ನಡೆಯಲಿಲ್ಲ

ಜಿಲ್ಲಾ ಬೋರ್ಡಿನ ಮಂಗಳೂರು ಸರ್ಕಲಿನ ಸ್ಥಾನಕ್ಕಾಗಿ ನಡೆಯಬೇಕಾಗಿದ್ದ ಚುನಾವಣೆ ನಡೆಯಲಿಲ್ಲ. ಬ್ಯಾಲಟ್ ಪೇಪರುಗಳು ಬಂದಿಲ್ಲವೆಂದು ಹೇಳಲಾಗಿದೆ.

ಜಿಲ್ಲಾ ಬೋರ್ಡಿಗೆ ಹೊಸ ಉಪಚುನಾವಣೆ

ಈ ಜಿಲ್ಲೆಯ ಕೊಕ್ಕಡ, ಉಪ್ಪಿನಂಗಡಿ, ಪುತ್ತೂರು, ಸುಳ್ಯ ಎಂಬೀ ೪ ಸರ್ಕಲುಗಳಿಗೆ ಬೇಗನೇ ಚುನಾವಣೆ ನಡೆಯುವುದು. ಅವುಗಳ ಸಂಬಂಧ ಉಮೇದುವಾರರು ಒಪ್ಪಿಸಬೇಕಾದ ಅರ್ಜಿ, ಆ ಅರ್ಜಿಗಳ ತನಿಖೆ, ಚುನಾವಣೆ ಮತ್ತು ಮತಗಳ ಎಣಿಕೆ ನಡೆಯುವುದೆಲ್ಲ ಈ ಕೆಳಗಿನ ತಾರೀಕುಗಳಲ್ಲಿ—ಅರ್ಜಿ ಸ್ವೀಕಾರ ೮-೧೦-೪೩ ಮತ್ತು ೯-೧೦-೪೩ರಲ್ಲಿ; ಅವುಗಳ ತನಿಖೆ ತಾ. ೧೧-೧೦-೪೩ರಲ್ಲಿ; ಚುನಾವಣೆ ತಾ. ೮-೧೧-೪೩ರಲ್ಲಿ; ಮತದ ಎಣಿಕೆ ೯-೧೧-೪೩ರಲ್ಲಿ. ಇವುಗಳಲ್ಲಿ ಕೊಕ್ಕಡ ಸರ್ಕಲಿನಲ್ಲಿ ಒಂದು ಸೀಟೂ, ಉಪ್ಪಿನಂಗಡಿ ಸರ್ಕಲಿನಲ್ಲಿ ೧ ಸೀಟೂ ಪುತ್ತೂರು ಸರ್ಕಲಿನಲ್ಲಿ ರಿಜರ್ವ್ ಸೀಟ್ ಕೂಡ ೨ ಸೀಟೂ ಸುಳ್ಯ ಸರ್ಕಲಿನಲ್ಲಿ ೧ ಸೀಟೂ ಇದೆ.

ರಾತ್ರಿ ಶವ ಸುಡುವರೆ ಅಡ್ಡಿ

ಸಮುದ್ರ ತೀರದಿಂದ ೬ ಮೈಲುಗಳೊಳಗೆ ರಾತ್ರಿ ಕಾಲದಲ್ಲಿ ಶವಸುಡಬಾರದೆಂದು ಭಾರತ ಸಂರಕ್ಷಣೆ ಕಾನೂನಿನ ಪ್ರಕಾರ ದ. ಕ. ಜಿಲ್ಲಾ ಕಲೆಕ್ಟರರು ಆಜ್ಞೆ ಕೊಡಿಸಿದ್ದಾರೆ.

ಜಿಲ್ಲಾ ಸೆಶ್ಯನ್ಸ್ ಕೋರ್ಟಿನಲ್ಲಿ

ಕಡಬದ ಬಳಿಯ ಇಜ್ಜಂಪಾಡಿಯ ಪದ್ಮರಾಜ ಹೆಗ್ಗಡೆ ಮತ್ತು ಇತರ ೧೭ ಮಂದಿಯ ಮೇಲೆ, ನೇಮಿರಾಜ ಚೌಟ ಎಂಬಾತನ ಕೊಲೆ ಮಾಡಿದರೆಂಬ ಆರೋಪದ ಮೊಕದ್ದಮೆಯೊಂದು ನಮ್ಮ ಸೆಶ್ಯನ್ಸ್ ಜಡ್ಜರಾದ ಶ್ರೀ ಥೋಮಸ್ ಐ. ಸಿ. ಯಸ್‌ರ ಮುಂದೆ ನಡೆದು ೧-೩ ಆರೋಪಿಗಳಿಗೆ ತಲಾ ೧ ವರ್ಷದ ಕಠಿಣ ಸಜೆಯೂ, ೪, ೮, ೭, ೧೭ನೇ ಆರೋಪಿಗಳಿಗೆ ತಲಾ ೧ ವರ್ಷದ ಕಠಿಣ ಸಜೆಯೂ, ಮಿಕ್ಕವರಿಗೆ ಬಿಡುಗಡೆಯೂ ಆಯಿತು.

ಕಾಸರಗೋಡು ಪ್ರಾಂತದ ನೆಟ್ಟಣಿಗೆ ಗ್ರಾಮದ ಸುಬ್ಬ ಎಂಬಾತನು ಮಮ್ಮುಞಿ ಎಂಬವನನ್ನು ಕೊಲೆ ಮಾಡಿದನೆಂಬ ಆರೋಪದ ಮೊಕದ್ದಮೆಯೊಂದು ಅದೇ ಜಿಲ್ಲಾ ಸೆಶನ್ಸ್ ಕೋರ್ಟಿನಲ್ಲಿ ನಡೆದು ಆರೋಪಿಗೆ ಟಾಪು ಸಜೆ ವಿಧಿಸಲಾಯಿತು.

ವರ್ಗ

ಕಲ್ಲಿಕೋಟೆಯ ಸಹಕಾರ ಸಂಘಗಳ ಪ್ರೊಬೆಶನರಿ ರಿಜಿಸ್ಟ್ರಾರ್ ಶ್ರೀ ಎನ್. ರಮಾನಾಥ ರಾವ್ ಅವರು ಸಹಕಾರಿ ಸಂಘಗಳ ಡೆಪ್ಯುಟಿ ರಿಜಿಸ್ಟ್ರಾರರಾಗಿ ಮಂಗಳೂರಿಗೂ ಶ್ರೀ ಸಿ. ಕಣನ್ ನಾಯರ್ ಅವರು ಲ್ಯಾಂಡ್ ಮಾರ್ಗೇಜ್ ಬೇಂಕಿನ ಡೆಪ್ಯುಟಿ ರಿಜಿಸ್ಟ್ರಾರರಾಗಿ ಕೊಯಮುತ್ತೂರಿಗೆ ವರ್ಗಾಯಿಸಲ್ಪಟ್ಟಿದ್ದಾರೆ.

ಡಾ। ಎನ್. ಎನ್. ಸುಜೀರ್ ಅವರು ಮಲಬಾರಿಗೂ ಡಾ. ಬಿ. ಶಂಕರರಾವ್ ಅವರು ಮಸ್ಲಿಪಟ್ಟಮಿಗೂ ಡಾ। ವಿ. ಜೆ. ಪಿರೇರಾ ಅವರು ಅನಂತಪುರಕ್ಕೂ ಜಿಲ್ಲಾ ಮೆಡಿಕಲ್ ಆಫೀಸರುಗಳಾಗಿ ವರ್ಗಾಯಿಸಲ್ಪಟ್ಟಿದ್ದಾರೆ.

ಹೊಟ್ಟೆಗಿಲ್ಲದ ಹೆಂಗುಸರು!!

ಪೆಲಿಕ್ಸ್ ಪೈ ಬಜಾರಿನ ಕೋಪರೇಟಿವ್ ಸ್ಟೋರ್ಸ್ ಮೂಲಕ ಅಕ್ಕಿ ಮಾರಾಟ ಮಾಡುವಲ್ಲಿ ಆರೇಳು ಮಂದಿ ಹೆಂಗುಸರು ಹೊಟ್ಟೆಗಿಲ್ಲದೆ ಮೂರ್ಛೆಗೊಂಡಿದ್ದರು. ಓರ್ವ ಹೆಂಗುಸಿನ ಸ್ಥಿತಿ ಚಿಂತಾಜನಕವಿತ್ತು. ಸ್ವಯಂಸೇವಕರು ಅವಳನ್ನು ಸಮೀಪದ ವೈದ್ಯರಲ್ಲಿ ಕರಕೊಂಡು ಹೋಗಿ ಉಪಚರಿಸಿ ಚೇತನ ಹೊಂದುವಂತೆ ಮಾಡಿದರು.

ನಿರ್ದೋಷಿಗಳಾದರು!

ಮಂಗಳೂರು ಕಮ್ಯುನಿಸ್ಟ್ ಪಾರ್ಟಿಯ ಶ್ರೀ. ಬಿ. ವಿ. ಕಕ್ಕಿಲ್ಲಾಯರ ಮೇಲೆ ಹಾಕಿದ್ದ ಖಟ್ಲೆ ಪುತ್ತೂರು ಸಬ್ ಡಿವಿಜನಲ್ ಆಫೀಸರ ಮುಂದೆ ನಡೆದು ಅವರನ್ನು ತಾ. ೨೦ರಂದು ಅವರನ್ನು ನಿರ್ದೋಷಿ ಮಾಡಿ ಖಟ್ಲೆ ಖುಲಾಸೆ ಮಾಡಿದರು.

ಕೆನರಾ ಚಲಚ್ಚಿತ್ರ ವಿಮರ್ಶಕ

ಕೂಟದ ಸಭೆಯು ತಾ. ೧೯ರಂದು ಶ್ರೀ. ತಿರುಮಲೇಶ ಅಲಂಗಾರು ಅವರ ಅಧ್ಯಕ್ಷತೆಯಲ್ಲಿ ಜರಗಿ 'ಭಕ್ತ ಪೋತನ ಒಳ್ಳೆಯ ಚಿತ್ರ, 'ರೋಟಿ' ನೋಡಬೇಕಾದ ಚಿತ್ರವೆಂದೂ ಹಲವರು ಅಭಿಪ್ರಾಯ ಪಟ್ಟರು.

ಬೆಂಕಿ ಅನಾಹುತ

ಗಣಪತಿ ಹೈಸ್ಕೂಲ್ ರಸ್ತೆ ಶ್ರೀವಿಲಾಸದ ಬಳಿಯಿರುವ ಶ್ರೀ. ಎ. ದಿ. ಸ್ಟಿಲ್ವರ ನೂಲಿನ ಅಂಗಡಿಯಲ್ಲಿ ತಾ. ೨೦ರಂದು ರಾತ್ರೆ ಬೆಂಕಿ ತಗಲಿ, ಕೂಡಲೇ ನಂದಿಸುವ ಪ್ರಯತ್ನ ಗೈದು ಹೆಚ್ಚಿನ ಅನಾಹುತವಾಗಲಿಲ್ಲ.

ಮಿತ್ರಮಂಡಳಿ ಅಭ್ಯಾಸಗೋಷ್ಠಿ

ಕನ್ನಡ ಏಕಾಂಕ ನಾಟಕಗಳ ಅಭ್ಯಾಸಗೋಷ್ಠಿಯು ಮಿತ್ರಮಂಡಳಿಯಲ್ಲಿ ತಾ ೧೮ರಂದು ಶ್ರೀ ಎಂ. ವಾಸುದೇವರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಅಂದಿನ ಅಭ್ಯಾಸಿಗಳಾದ ಶ್ರೀ ಕೆ. ಎಸ್. ಅಡಿಗರು ತಮ್ಮ ಸುದೀರ್ಘವಾದ ಭಾಷಣದಲ್ಲಿ ಏಕಾಂಕ ನಾಟಕಗಳ ಗಾತ್ರ, ಪ್ರಾಚೀನತೆ, ಭಾಷೆ, ಸಂಗೀತ ಬೇಕೋ ಬೇಡವೋ, ನಾಟಕಗಳ ವಸ್ತು, ಪಾತ್ರಗಳ ವಿಚಾರ, ಅಂಕಗಳು ಎಂತಿರಬೇಕು ಮೊದಲಾಗಿ ವಿದ್ವತ್ಪೂರ್ಣವಾದ ಭಾಷಣ ಮಾಡಿದರು. ಅವರು ತಮ್ಮ ಮಾತಿನಲ್ಲಿ 'ಗೋವಿಂದ ಪೈಯವರ ಆರು ಪುಟದ ನಾಟಕವೂ ಬೇಂದ್ರೆಯವರ ೮೦ ಪುಟದ ನಾಟಕವೂ ಏಕಾಂಕವಾಗಿದೆ. ಇದರಿಂದ ಗಾತ್ರ ತಿಳಿಯುವುದು ಕಷ್ಟವೆನ್ನುತ್ತಾ ಏಕಾಂಕ ನಾಟಕಗಳೆಲ್ಲ ಅದಷ್ಟು ಚಿಕ್ಕವಿರಬೇಕೆಂದೂ ಏಕಾಂಕ ನಾಟಕಗಳ ಪ್ರಾಚೀನತೆಯನ್ನು ವಿವರಿಸುತ್ತಾ, ಭಾಸನ ನಾಟಕಗಳನ್ನು ಸಭೆಯವರಿಗೆ ತಿಳಿಸಿ ಪೌರ್ವಾತ್ಯರು ಈ ವಿಚಾರದಲ್ಲಿ ಹೆಮ್ಮೆ ಪಡಬೇಕೆಂದರು. ಏಕಾಂಕ ನಾಟಕಗಳಲ್ಲಿ ಅತಿಯಾಗಿ ಇಂಗ್ಲಿಷ್ ಭಾಷೆಯುಪಯೋಗಿಸಬಾರದೆಂದು ಈ ದೃಷ್ಟಿಯಲ್ಲಿ ಕೈಲಾಸಂರ ಪ್ರಯೋಗಗಳು ಅನುಕರಣೀಯವಲ್ಲವೆಂದರು.

ಕವಿತೆಯನ್ನು ಯಾವ ದೃಷ್ಟಿಯಿಂದ ಓದಬೇಕೆಂಬುದನ್ನು ನಮ್ಮಲ್ಲಿನ ಕವಿಗಳು ನಮಗೆ ಸಲಹೆಗಳನ್ನೀಯುವಂತೆ ಅವರನ್ನು ಆಮಂತ್ರಿಸಿ ಅವರಿಂದ ವಾಚನಗಳನ್ನು ಮಾಡಿಸಬೇಕೆಂದು ಶ್ರೀ ತಿರುಮಲೇಶ ಅಲಂಗಾರರು ಒಂದು ಸೂಚನೆಯನ್ನು ಸಭೆಯ ಮುಂದಿಟ್ಟರು.

ಅಧ್ಯಕ್ಷರು ಸಭೆಯನ್ನು ಮುಂದಿನ ವಾರಕ್ಕೆ ಮುಂದುವರಿಸಿದರು.

ಹರಿಜನ ವಾರ

ಹಿಂದಿನಂತೆ ಈ ವರ್ಷವೂ ಅಖಿಲ ಹಿಂದೂಸ್ಥಾನದಲ್ಲಿ ನಡೆಯುವಂತೆ ನಮ್ಮ ಜಿಲ್ಲೆಯಲ್ಲಿಯೂ ತಾ. ೨೪-೯-೪೩ರಿಂದ ತಾ ೨-೧೦-೪೩ರ ವರೆಗೆ 'ಹರಿಜನ ವಾರ'ವನ್ನು ಜರಗಿಸುವುದಾಗಿ ಜಿಲ್ಲಾ ಸಂಘವು ನಿರ್ಣೈಸಿರುತ್ತದೆ. ಆದಿನಗಳಲ್ಲಿ ಹರಿಜನ ವಸತಿಗಳಿಗೆ ಸಂದರ್ಶನ ಮತ್ತು ಹರಿಜನ ಸೇವೆಗಾಗಿ ಧನ ಸಂಗ್ರಹ ಮೊದಲಾದ ಕೆಲಸಗಳನ್ನು ನಡೆಸಲಿದ್ದೇವೆ. ಅಲ್ಲದೆ ತಾ. ೨೫-೯-೪೩ನೇ ಶನಿವಾರ ಸಾಯಂಕಾಲ ೪ ಗಂಟೆಗೆ ಮಂಗ್ಳೂರು ಬಿಸೆಂಟ್ ಬಾಲಿಕಾ ಪಾಠಶಾಲೆಯ ಎದುರು ಕೆನರಾ ಹೈಸ್ಕೂಲಿನ ಆಟದ ಬಯಲಿನಲ್ಲಿ ಶಾಲಾ ಮಕ್ಕಳ ಪಂದ್ಯಾಟಗಳಿವೆ. ಡಾ। ಯಂ. ಕೇಶವ ಪೈಗಳು ಅಧ್ಯಕ್ಷರಾಗಿ ಬಹುಮಾನಗಳನ್ನು ಕೊಡಲಿರುವರು. ಅದೇ ದಿನ ಸಾಯಂಕಾಲ ಹರಿಜನ ಮಕ್ಕಳಿಗೆ ಡಿ. ಸಿ. ಯಂ. ಶಾಲೆಯಲ್ಲಿ ಕಬ್ಬು ಮತ್ತು ಮಿಠಾಯಿ ಹಂಚಲಿದೆ. ಮಹಿಳೆಯರೂ ಮಹನೀಯರೂ ಉದಾರ ಸಹಾಯಗಳನ್ನಿತ್ತು ನಮ್ಮೊಡನೆ ಸಹಕರಿಸಬೇಕಾಗಿ ವಿನಂತಿ ಎಂದು ಶ್ರೀ ನಾರಾಯಣ ಕಿಲ್ಲೆ, ಜಿಲ್ಲಾ ಹರಿಜನ ಸೇವಕ ಇವರು ತಿಳಿಸುತ್ತಾರೆ.

ಪೀಪಲ್ಸ್ ಥಿಯೇಟರ್ಸ್

ಮಂಗಳೂರು ಜನತಾ ರಂಗಭೂಮಿ ಸಮಿತಿಯ ಉದ್ಘಾಟನೆಯನ್ನು ಶ್ರೀ ಶಿವರಾಮ ಕಾರಂತರು ತಾ. ೨೬ನೇ ರವಿವಾರ ಸಂಜೆ ಆರು ಗಂಟೆಗೆ ಥಿಯಸಾಫಿಕಲ್ ಲಾಜಿನಲ್ಲಿ ನೆರವೇರಿಸುವರು. ಎಲ್ಲರಿಗೂ ಸ್ವಾಗತವಿದೆ.

ಉಡುಪಿ

ಅಖಿಲ ಕರ್ನಾಟಕ ಕಿರಿಯರ ಸಮ್ಮೇಳನ

ಉಡುಪಿಯ 'ಕಿರಿಯರ ಸಾಹಿತ್ಯ ಸಂಘ'ವು, ನಾಡಿನ ಕಿರಿಯರ ಸಮ್ಮೇಳನವನ್ನು ಉಡುಪಿಯಲ್ಲಿ ಬರುವ ಜನವರಿಯಲ್ಲಿ, ಪರ್ಯಾಯ ಮಹೋತ್ಸವಕ್ಕೆ ಮೊದಲು ಜರಗಿಸಬೇಕೆಂದು ನಿಶ್ಚಯಿಸಿದೆ. ನಾಡಿನ ಕೆಲವೆಡೆಗಳಲ್ಲಿ ಮಕ್ಕಳ ಕೂಟಗಳಿವೆ. ಆದರೆ ಕಿರಿಯರ ಈ ಚಳವಳಿಗೆ ಇನ್ನೂ ಒಂದು ನಿರ್ದಿಷ್ಟ ರೂಪ ಕೊಡಲ್ಪಟ್ಟಿಲ್ಲ. ಕಿರಿಯರ ಸಂಘಟನೆ ಯಾವ ರೀತಿಯಲ್ಲಿ ಇರಬೇಕು? ಅವರು ಎಂತಹ ಚಟುವಟಿಕೆಗಳನ್ನು ಹೇಗೆ ಕೈಕೊಳ್ಳಬೇಕು? ಈ ಕುರಿತಾದ ನಿರ್ಣಯಗಳನ್ನು ಸಮ್ಮೇಳನದಲ್ಲಿ ಮಾಡುವುದು ಅಗತ್ಯ. ಸಮ್ಮೇಲನವನ್ನು ಮೂರು ದಿವಸಗಳ ತನಕ ಜರಗಿಸಬೇಕೆಂಬುದು ಉದ್ದೇಶವಿದೆ. ಆಗ ಹಿರಿಯರ ಭಾಷಣಗಳೂ ಕಿರಿಯರ ನಾಟಕ ಸಂಗೀತ ನೃತ್ಯಗಳೂ ಇರುವುವು. ಕಿರಿಯರಿಗಾಗಿಯೇ ಕಥಾಸ್ಪರ್ಧೆ, ಚಿತ್ರ-ಸಂಗೀತ-ಭಾಷಣ ಸ್ಪರ್ಧೆಗಳು, ಕಸೂತಿ ಸ್ಪರ್ಧೆ, ವೇಷ ಪಲ್ಲಟ ಮತ್ತಿತರ ಮೇಲಾಟಗಳಿರುವುವು.

ಇಪ್ಪತ್ತು ವರ್ಷಕ್ಕಿಂತ ಕೆಳಗಿನ ಪ್ರಾಯದವರಿಗೆ ಈ ಸಮ್ಮೇಳನದಲ್ಲಿ ಸಹಭಾಗಿಗಳಾಗಲು ಆಸ್ಪದವಿದೆ. ನಾಡಿನ ಪ್ರತಿಯೊಂದು ಭಾಗದಿಂದ ಲಕ್ಷ ಕಿರಿಯರು ಬಂದು, ಸಮ್ಮೇಲನದಲ್ಲಿ ಭಾಗವಹಿಸಿ, ಈ ಉದ್ಯಮ ಯಶಸ್ವಿಯಾಗುವರೆಕ್ಕೆ ಹಿರಿಯರು ಸಹಾಯನೀಡಬೇಕು. ಸ್ವಾಗತ ಸಮಿತಿಯಲ್ಲಿ ಕಿರಿಯರೂ ಹಿರಿಯರೂ ಇರಬೇಕೆಂದು ನಾವು ನಿರ್ಧರಿಸಿದ್ದೇವೆ. ೮ ಅಣೆ, ೧ ರೂ. ೫ ರೂ. ಮತ್ತು ಅದಕ್ಕಿಂತ ಹೆಚ್ಚು ಕೊಟ್ಟು, ನೀವೆಲ್ಲರೂ ಸ್ವಾಗತಸಮಿತಿಯ ಸದಸ್ಯರಾಗಬೇಕು. ಧನ ಸಹಾಯವಿತ್ತು, ಸಹಾಯಕರಾಗಿಯೂ ಪೋಷಕರಾಗಿಯೂ ಇರಬಹುದು. ನಾವು ಮುಂದಡಿಯಿಡುವಂತೆ ಮಾಡುವುದು ಕಿರಿಯರಾದ ನಮ್ಮನ್ನೂ ಹಿರಿಯರಾದ ನಿಮ್ಮನ್ನೂ ಸೇರಿದೆ' ಎಂದು ಉಡುಪಿ ಕಿ. ಸಾ. ಸಂಘದ ಕಾರ್ಯಕಾರೀ ಸಮಿತಿಯವರು ಒಂದು ವಿನಂತಿ ಕೊಟ್ಟಿರುವರು.

ಮಂಗಳೂರಲ್ಲಿ ಕೊಲೆರಾ

ತಾ. ೨೪ರ ವರೆಗೆ ಮಂಗಳೂರಲ್ಲಿ ೧೨೫ ಮಂದಿಗೆ ಕೊಲೆರಾ ತಾಗಿ, ೫೦ ಮಂದಿ ಮೃತಪಟ್ಟಿರುವರು. ತಾ. ೨೨ರಂದು ೫ ಮಂದಿಗೆ ಕೊಲೆರಾ ರೋಗ ತಗಲಿದೆ. ಈಗ ಪುನಃ ಮಳೆ ಬೀಳುವುದರಿಂದ ಕೊಲೆರಾ ಹೆಚ್ಚಾಗುತ್ತಿದೆಯೆಂದು ತಿಳಿಯುತ್ತದೆ.



ಯುದ್ಧದ ದೆಸೆಯಿಂದಾಗಿ ಎಂಡ್ರೂಸ್ ಲಿವರ್ ಸಾಲ್ಟ್ ಈಗ ದೊರಕುವುದಿಲ್ಲವೆಂಬುದು ವಿಷಾದಕರವಿದೆ. ಆದರೆ ಅಂತರ್‌ರಾಷ್ಟ್ರೀಯ ಪರಿಸ್ಥಿತಿ ಸುಧಾರಿತವಾದ ಕೂಡಲೇ ಇದು ಖಂಡಿತ ದೊರಕುವುದು.

ಆಫ್ರಿಕಾ ಜಯ ಭಾರತದ ಸಹಾಯದಿಂದ

ನೆಹರ‍್ರು ಸೊಸೆಯ‍್ರರು ಅಮೆರಿಕದಲ್ಲಿ

ಜಯಪ್ರಕಾಶರು ಕಲ್ಕತ್ತದಲ್ಲಿದ್ದರು.

ಆಫ್ರಿಕಾ ದಂಡಯಾತ್ರೆಯಲ್ಲಿ ಭಾರತದ ಸಹಾಯ

'ಗ್ರೇಟ್ ಬ್ರಿಟನ್ ಎಂಡ್ ಈಸ್ಟ್' ಪತ್ರಿಕೆಯಲ್ಲಿ ಆಫ್ರಿಕಾ ಜಯವು ಭಾರತದ ಸಹಾಯದಿಂದ ಆಯಿತು ಎಂಬ ಬಗ್ಗೆ ಈ ರೀತಿ ವಿವರ ಬಂದಿವೆ:

ಟ್ಯುನಿಸಿಯಾ ಕದನದ ವಿಜಯದಲ್ಲಿ ಕೊನೆಗಂಡ ಆಫ್ರಿಕಾ ದಂಡಯಾತ್ರೆಗೆ ಭಾರತ ಮಾಡಿದ ಸಹಾಯ ತೀರಾ ಹೆಚ್ಚಿನದು. ಬ್ಯಾಟರಿಗಳಿಂದ ಪಯಜಾಮ್ ಗುಂಡಿಗಳ ವರೆಗೆ ರೈಲ್ವೆ ಗಾಡಿಗಳಿಂದ ಹಿಡಿದು ಲ್ಯಾಂಡಿಗ್ ಕ್ರಾಫ್ಟ್‌ನ ವರೆಗೆ ೧೫ ಲಕ್ಷ ಟನ್‌ಗೂ ಹೆಚ್ಚಾಗಿ ಸಾಮಾನು ಸಂತತ ಧಾರೆಯಾಗಿ ಮಧ್ಯ ಪ್ರಾಚ್ಯಕ್ಕೆ ಭಾರತದಿಂದ ಹರಿದಿದೆ. ಇದರಿಂದ ಎಲ್ಲಕ್ಕೂ ಹೆಚ್ಚಾಗಿ ಆದ ಉಪಕಾರ ಹಡಗಿನ ಸ್ಥಳದಲ್ಲಿ ಆದ ಮಿಗತಾಯ.

ಉತ್ತರ ಆಫ್ರಿಕದಿಂದ ಅಕ್ಷ ದಳಗಳನ್ನು ತೊಲಗಿಸುವುದರಲ್ಲಿ ಭಾರತ ಮಾಡಿದ ಅಗಾಧ ಸಹಾಯದ ಕಥೆ ಇದೀಗ ಮೊದಲು ಬಾರಿಗೆ ಬಯಲಿಗೆ ಬಂದಿದೆ. ಅಮೇರಿಕಾ ಸಹಾಯ ಮಾಡಲು ಒಪ್ಪುವ ಮುನ್ನ, ಸಾಮಾನು ಸರಂಜಾಮು ಸರಬರಾಯಿ ಮಾಡುವ ಭಾರ ಪೂರಾ ಭಾರತದ ಹೆಗಲ ಮೇಲೇ ಇತ್ತು. ಇದಕ್ಕಾಗಿ ಕಣ್ಣು ಮುಚ್ಚಿ ತೆಗೆಯುವುದರೊಳಗಾಗಿ ಹೊಸ ಹೊಸ ಕೈಗಾರಿಕೆಗಳು ಭಾರತದಲ್ಲಿ ಹುಟ್ಟಿದವು.

ನೂರಾರು ಸೈನ್ಯದ ಗಾಡಿಖಾನೆಗಳು, ಆಸ್ಪತ್ರೆಗಳು, ಭಾರತದ ಉಕ್ಕಿನಿಂದ ತಯಾರಾದ ವಿಮಾನದ ಹ್ಯಾಂಗರುಗಳನ್ನು ರಣರಂಗಕ್ಕೆ ಭಾರತ ನೀಡಿತು. ಮರಳುಗಾಡಿನಲ್ಲಿ ಉಕ್ಕಿನ ಹೊಳೆ ಹರಿಯಿಸಿತು. ಮಧ್ಯಪ್ರಾಚ್ಯದಲ್ಲಿನ ರೈಲುಗಳು, ಅದರ ಎಲ್ಲಾ ಸಾಧನ ಸಾಮಗ್ರಿಗಳೂ ಎಲ್ಲಾ ಭಾರತದಿಂದ ಬಂದವೇ.

ಸಾಮಾನು ತುಂಬುವ ಪೆಟ್ಟಿಗೆ, ಮದ್ದಿನ ಪೆಟ್ಟಿಗೆ, ಟೆಲಿಗ್ರಾಫ್ ಕಂಬಗಳು, ಹಡಗಿನಿಂದ ಇಳಿದು ಹತ್ತುವ ಏಣಿಗೆ ಮರಮುಟ್ಟು ಎಲ್ಲವನ್ನೂ ಭಾರತವೇ ಸರಬರಾಯಿ ಮಾಡಿತು. ವಿದ್ಯುಚ್ಛಕ್ತಿ ತಂತಿಗಳು, ಬೀಸಣಿಗೆಗಳು, ನೀರಿನ ಪಾಲ್ವುಗಳು, ಪಂಪುಗಳು, ಪಿಂಗಾಣಿ ಇನ್‌ಸುಲೇಟರುಗಳು, ಬೇಕಲೈಟ್ ಸಾಮಾನು ಏನು ಬೇಕೆಂದರೆ ಅದನ್ನು ಭಾರತ ಕೊಟ್ಟಿತು. ಎಷ್ಟೋ ಸಾಮಾನು ಮೊದಲ ಬಾರಿಗೇ ಭಾರತದಲ್ಲಿ ತಯಾರಾಗಲಾರಂಭಿಸಿದವು.

ಎಲ್ಲಕ್ಕಿಂತ ಮಿಗಿಲಾದ ಸಹಾಯವೆಂದರೆ ಡ್ರೈಬ್ಯಾಟರಿಗಳದು. ಮಿತ್ರ ದೇಶದ ಹಡಗುಗಳು ಆಫ್ರಿಕಾದ ಭೂಶಿರವನ್ನು ಸುತ್ತಿ ಬರುವುದರಲ್ಲಿ ಅವು ಹಾಳಾಗುತ್ತಿದ್ದುದರಿಂದ ಅವನ್ನು ಭಾರತದಲ್ಲೇ ತಯಾರಿಸಲಾರಂಭಿಸಿದರು. ಈ ತಯಾರಿ ೧೯೪೧ರಲ್ಲಿ ಆರಂಭವಾಯಿತು. ಅಂದಿನಿಂದ ವಿಮಾನ ಪಡೆಯೊಂದಕ್ಕೇ ಭಾರತ ೫೦೦,೦೦೦ ಬ್ಯಾಟರಿಗಳನ್ನು ತಯಾರಿಸಿ ಕೊಟ್ಟಿದೆ.

ಅಲಾಮಿನ್ ಕದನ ಗೆಲ್ಲಲು ಕಾರಣವಾದದ್ದು ಜ॥ ಅಲೆಕ್ಸಾಂಡರರ 'ಮಸುಕು' ಕ್ಯಾಮಾಫ್ಲಾಜ್–ಚಾತುರ್ಯದಿಂದ. ಇದಕ್ಕೆ ಬೇಕಾದ ಎಲ್ಲ ಬಲೆಗಳನ್ನು ಒದಗಿಸಿದ್ದು ಭಾರತವೇ. ಈ ಬಲೆಗಳನ್ನು ಸಾಲಾಗಿ ಜೋಡಿಸಿದರೆ ಜಗತ್ತನ್ನು ಎಂಟು ಬಾರಿ ಸುತ್ತಬಹುದು; ಅಷ್ಟು ಉದ್ದ! ಭಾರಿ ಕಾರ್ಖಾನೆಗಳಲ್ಲೇ ಅಲ್ಲ. ಭಾರತದ ಹಳ್ಳಿ-ಮನೆ ಮನೆಯಲ್ಲೂ ಇವು ತಯಾರಾದವು.

ಮಧ್ಯ ಪ್ರಾಚ್ಯರಂಗದಲ್ಲಿ ಸೈನಿಕರು ಇರಲು ಡೇರೆಗಳು, ಅವರುಡುವ ಬಟ್ಟೆ, ಹಾಕಿಕೊಳ್ಳುತ್ತಿದ್ದ ಬೂಟ್ಸ್ ಎಲ್ಲಾ ಭಾರತದಲ್ಲಿ ತಯಾರಾದವು. ಅವರ ಆಹಾರ ಕೂಡಾ ಭಾರತದಿಂದ ಬಂದದ್ದೆ.

ಭಾರತ ಕೊಟ್ಟದ್ದು ಇಷ್ಟೇ ಅಲ್ಲ; ೫೦೦೦೦ ಡೇರೆಗಳು, ೧೦೦೦೦೦೦ ಕಂಬಳಿಗಳು ೨೫೦೦,೦೦ ಸೊಳ್ಳೆ ಪರದೆಗಳು, ೧೬೦ ಟನ್ ಸೊಳ್ಳೆ ಮುಲಾಮು, ೧೫೦೦೦೦೦ ನೀರು ಶೋಧಿಸುವ ಮಾತ್ರೆಗಳು, ೩೩೬೦೦೦ ಟಿನ್ನಿನಷ್ಟು ಹಣ್ಣಳೆಣ್ಣೆ; ಇದೆಲ್ಲಾ ಭಾರತದ ದಾನ.

ಈ ಸಾಮಾನುಗಳನ್ನು ಸುರಕ್ಷಿತವಾಗಿ ಹೊತ್ತು ಸಾಗಿಸಿದ ಕೀರ್ತಿ ಭಾರತದ ಕಡಲು ಪಡೆಯದು. ಆಫ್ರಿಕಾ ಯುದ್ಧ ನಡೆಯುತ್ತಿದ್ದಾಗ, ಅಮೇರಿಕಾ ಬ್ರಿಟನ್‌ನಿಂದ ಸಾಮಾನು ತಂದ ಹಡಗುಗಳು ಮುಳುಗಿದಾಗ ಭಾರತ ಆ ಸಾಮಾನುಗಳನ್ನೂ ಕಳಿಸಿತು. ಒಂದು ಸಲ ೭೦೦೦ ಟನ್‌ನಷ್ಟು ಉಕ್ಕಿನ ತಗಡುಗಳನ್ನೂ ಕಳಿಸಿತು. ಭಾರತದ ಈ ಉಕ್ಕಿನ ತಗಡುಗಳೇ 'ಮೈನು'ಗಳಾಗಿ ಜರ್ಮನರ ಮೃತ್ಯುವಾದದ್ದು.

ಅಂತೂ ಆಫ್ರಿಕಾ ಗೆಲುವಿನ ಕೀರ್ತಿಯ ಹಿರಿಸಾಲು ಭಾರತಕ್ಕೆ ಸಲ್ಲಬೇಕಾದ್ದು.

ಜಯಪ್ರಕಾಶ ನಾರಾಯಣ್ ಕಲ್ಕತ್ತಕ್ಕೆ ಅವರ ಭೇಟಿ

ಜೈಲಿನಿಂದ ತಪ್ಪಿಸಿಕೊಂಡಿರುವ ಜಯಪ್ರಕಾಶ ನಾರಾಯಣರವರು ಈಚೆಗೆ ಕಲ್ಕತ್ತಕ್ಕೆ ಬಂದಿದ್ದರೆಂಬುದಾಗಿ ಸರ್ ಕೆ. ನಾಜಿಮುದ್ದೀನ್‌ರವರು ಬಂಗಾಳಾ ಅಸೆಂಬ್ಲಿಯಲ್ಲಿ ತಿಳಿಸಿದರು.

ಅವರನ್ನೇಕೆ ದಸ್ತಗಿರಿ ಮಾಡಲಿಲ್ಲವೆಂದು ಕೇಳಲಾಗಿ ಅವರು ಕಲ್ಕತ್ತಾವನ್ನು ಬಿಟ್ಟ ಮೇಲೆ ಆ ಬಗ್ಗೆ ಪೋಲೀಸರಿಗೆ ಸಮಾಚಾರ ಬಂದಿತೆಂದು ತಿಳಿಸಿದರು.

ನೆಹರೂ ಸೋದರ ಸೊಸೆಯರು ಚೀನೀ ಮಹಿಳೆಯ ಅಭಿಪ್ರಾಯ 'ನನಗೆ ಸೀರೆ ಉಡುವುದನ್ನು ಕಲಿಸಿದರು'

ಸಂಯುಕ್ತ ಸಂಸ್ಥಾನದಲ್ಲಿರುವ ಮಾಜಿ ಚೀನೀ ರಾಯಭಾರಿಯ ಮಗಳಾದ ಕುಮಾರಿ ಮಮತ [illegible] ಅಮೇರಿಕಾದಲ್ಲಿರುವ ಪಂಡಿತ ಜವಹರ್‌ಲಾಲರ ಸೋದರ ಸೊಸೆಯರಾದ ಕುಮಾರಿ ಚಂದ್ರಲೇಖಾ ಮತ್ತು ನಯನ ತಾರಾ ಇವರ ಬಗ್ಗೆ 'ನ್ಯೂಯಾರ್ಕ್ ಪೋಸ್ಟ್' ಎಂಬ ಪತ್ರಿಕೆಯಲ್ಲಿ ಈ ರೀತಿ ಬರೆದಿದ್ದಾರೆ:

'ಪಂಡಿತರ ಸೋದರ ಸೊಸೆಯರನ್ನು ಕಂಡ ದಿನ ನಿಜವಾಗಿಯೂ ನನ್ನ ಪಾಲಿಗೆ ಹಬ್ಬ. ಎಂಥ ಗೆಳೆವಕ್ಕಿಗಳು ಅವರಿಬ್ಬರು! ಒಬ್ಬರಿಗಿಂತ ಒಬ್ಬರು ಹೆಚ್ಚು ಮಧುರ. ನಾವು ನಮ್ಮ ನಮ್ಮ ದೇಶಗಳ ಬಗ್ಗೆ, ಅಮೇರಿಕಾದ ಬಗ್ಗೆ, ಅಲ್ಲಿಯ ಸಿನೆಮಾ, ಸಂಗೀತ, ಹಾಸ್ಯ ಎಲ್ಲದರ ಬಗ್ಗೆಯೂ ಮಾತಾಡಿದೆವು. ನಯನ ತಾರಾ ನನಗೆ ಅವರಂತೆ ಸೀರೆ ಉಟ್ಟುಕೊಳ್ಳುವುದನ್ನು ಕಲಿಸಿದಳು. ನಾನು ಅವರಿಬ್ಬರಿಗೆ ಚೀನೀ ರೀತಿ ಉಡುಪು ಧರಿಸುವುದನ್ನು ತೋರಿಸಿಕೊಟ್ಟೆ. ಎಷ್ಟು ಉತ್ಸಾಹ ಅವರಿಗೆ ಅದನ್ನು ಕಲಿತುಕೊಳ್ಳಲು. ಇಷ್ಟರಲ್ಲೇ ಅವರಿಬ್ಬರೂ ವೆಲ್ಲೆಸ್ಲಿ ಕಾಲೇಜಿಗೆ ಹೋಗುತ್ತಾರೆ. ಎಲ್ಲಿ ಹೋದರೂ ಎಲ್ಲರಿಗೂ ಮೆಚ್ಚಾಗುವ ಅಕ್ಕತಂಗಿಯರಿವರು!

THE CANARA BANKING CORPORATION Ltd

(Incorporated in British India with limited liability).

Estd:] Head office: UDIPI [1906.

(Branches & Agencies in all principal cities of India)

Authorised capital	Rs.	25,00,000
Issued & Subscribed	Rs.	16,00,000
Paid up Capital	Rs.	10,06,000
Reserves	Rs.	3,85,000

Advances are made against approved securities and bills purchased or collected at most favourable rates. For further particulars please apply to the nearest Branch.

ಸಿನೆಮಾ ಸುದ್ದಿ

ಹಾಲಿವುಡ್ ತಾರೆ—ಡೇ

ಗಾಂಧಿಜಿ ಭೇಟಿ ಬಯಸುತ್ತಾಳೆ!

ಹಾಲಿವುಡ್ ತಾರೆ ಮಿಸ್ ಲೀರಿನೆ ಡೇ ಸಂಚಾಕೆ ಒಂದು ಲೇಖನ ಬರೆದು, ನನಗೆ ಗಾಂಧಿಜಿಯನ್ನು ನೋಡಬೇಕಾಗಿದೆಯೆಂದು ಆತುರ ತೋರಿಸಿದ್ದಾಳೆ. ಇಡೀ ಜಗತ್ತಿನಲ್ಲಿ ಇತರ ಯಾವನೆ ಮನುಷ್ಯನಿಗಿರದಷ್ಟು ಶಕ್ತಿ—ಜನತೆಯ ಬುದ್ಧಿಯನ್ನು ತನ್ನೆಡೆಗೆ ಸೆಳೆವ ಶಕ್ತಿ—ಗಾಂಧಿಜಿಗಿದೆ. ಅಂಥ ಮಹಾತ್ಮರನ್ನು ಕಾಣಬೇಕು! ನಾಲ್ಕು ನೂರು ಮಿಲಿಯ ಜನರನ್ನು ಸಾವಿರಾರು ಮಂದಿ ಯಾಕೆ ಆಳುತ್ತಾರೆಂದು ನನಗೆ ತಿಳಿಯಬೇಕು. ಗಾಂಧಿಜಿ ಉಪವಾಸ ಮಾಡುವ ರಹಸ್ಯ ಅರಿಯಬೇಕು!" ಎಂದೆಲ್ಲಾ ಆಕೆಯ ಆತುರ! ಅದರೆ ಪ್ರೆಸಿಡೆಂಟರ ರಾಯಭಾರಿ ಫಿಲಿಪ್ಸರಿಗೆ ಸಿಗದ ದರ್ಶನ ಸಿನೆಮಾ ತಾರೆಗೆ ದೊರಕೀತೆ?

'ಷೇಶನ್'ನಲ್ಲಿ ಮುಗಿಯಿತೆ?

ಸರ್ದಾರ್ ಅಖ್ತಾರ್ ಅಭಿನಯ 'ಷೇಶನ್'ನಲ್ಲಿ ಮುಗಿಯಿತೆ? ನಿರ್ದೇಶಕ ಮೆಹಬೂಬರನ್ನು ಮದುವೆಯಾಗಿ ಆಕೆ ಇನ್ನು ಮುಂದೆ ಚಲಚ್ಚಿತ್ರ ರಂಗಕ್ಕೆ ಕಾಲಿಡುವುದಿಲ್ಲವೆಂದು ದಟ್ಟ ಸುದ್ದಿಯಿದೆ!

'ರಾಮರಾಜ್ಯ'ದಲ್ಲೇನಿದೆ?

'ಭರತ್ ಮಿಲಾಪ್' ನೋಡಿ ನಾವು ಮೆಚ್ಚಿದ್ದೇವೆ; ಇಂಥಾ ಪೌರಾಣಿಕ ಬೇಕೆಂದಿದ್ದೇವೆ. ಅದಕ್ಕಾಗಿಯೇ ವಿಜಯ ಭಟ್ಟರು 'ರಾಮರಾಜ್ಯ'ವನ್ನೀಗ ಕೊಟ್ಟಿದ್ದಾರೆ. ಇದರಲ್ಲಿ ಸೀತಾ ವನವಾಸ, ಕುಶಲವರ ಜನನ ಮತ್ತೆ ಸೀತಾ ರಾಮರ ಸಂಯೋಗ ಇವು ಕಥಾ ವಿಷಯ. ಪ್ರೇಮ್ ಅದಿಬ್ ಮತ್ತು ಶೋಭನಾ ರಾಮಸೀತೆಯರು. ಉಮಾಕಾಂತ್ ಭರತ, ಯಶವಂತ್ ಮಧುಸೂದನರು ಲವಕುಶರು.

'ಭಕ್ತ ರಾಯಿದಾಸ್'

ಭಕ್ತ ಜೀವನದ ಕಥೆಯು ಇನ್ನೊಂದು ಚಿತ್ರ. ಭಾರತೀಯರಿಗೆ ಇಂಥಾ ಚಿತ್ರಗಳಲ್ಲಿ ಆದರ ಬಹಳ. ಅದನ್ನು ತಿಳಿದೇ ನಿರ್ಮಾಪಕರು ಭಾರತದ ಭಕ್ತಾಗ್ರಣಿಗಳ ಜೀವನವನ್ನು ಇತ್ತೀಚೆಗೆ ಬಹಳವಾಗಿ ಚಿತ್ರಿಸುತ್ತಿದ್ದಾರೆ. ಕಾಶಿಯ ಹಾದಿಗ ಭಕ್ತನ ಕಥೆಯಿದು. ಸನಾತನಿಗಳಿತ್ತ ಸಂಕಷ್ಟವನ್ನೆದುರಿಸಿ, ಮಾನವ ಜನಾಂಗದ ಸಮತಾ ಬುದ್ಧಿಯನ್ನು ಬೋಧಿಸಿ ಸಂತನಾದವನೀತ. ಮಿನೆರ್ವಾ ಮೂವಿಟೋನಿನವರು ಇದನ್ನು ತಯಾರಿಸಿದ್ದಾರೆ. ಪರೇಶ್ ಬೆನರ್ಜಿ, ಲಲಿತಾ ಪವಾರ್, ಶೀಲಾ, ಕೆ. ಎನ್. ಸಿಂಗ್, ಅನಂತ ಮರಾಠೆ ಮೊದಲಾದವರು ನಟವರ್ಗ. ಭೊಂಬಯಿ ಕೃಷ್ಣ ಥಿಯೇಟರಿನಲ್ಲಿದು ಈಗ ಪ್ರದರ್ಶಿತವಾಗುತ್ತಿರುವುದು.

'ಬಸಂತ್' ೭೦ ವಾರ ದಾಟಿದೆ

ಬೊಂಬಯಿ ಟಾಕೀಸಿನ ಭಾಗ್ಯ ಚಿತ್ರ ಬಸಂತ್ ಬೊಂಬಯಿ ಮೆಜೆಸ್ಟಿಕ್ ಥಿಯೇಟರಿನಲ್ಲಿ ೭೦ ವಾರ ದಾಟಿ ಪ್ರದರ್ಶಿತವಾಗುತ್ತಿರುವುದು. ಹಿಂದುಸ್ತಾನೀ ಚಿತ್ರಗಳಲ್ಲಿ ವಜ್ರೋತ್ಸವ ಆಚರಿಸಿದ ಪ್ರಥಮ ಚಿತ್ರವಿದು. ಈಗ ಈ ಚಿತ್ರದ ವರ್ಣರಂಜಿತ ಚಿತ್ರ ತಯಾರಾಗಿದ್ದು, ಅದರ ಪ್ರಥಮ ಪ್ರದರ್ಶನ ಶ್ರೀ. ಕೆ. ಎಂ. ಮುನ್ಶಿಯವರ ಅಧ್ಯಕ್ಷತೆಯಲ್ಲಿ ಪ್ರದರ್ಶಿತವಾಗುವುದು.

'ತಾನ್‌ಸೇನ್'

ರಣಜಿತ್‌ನವರ ಪ್ರಸಿದ್ಧ ಚಿತ್ರ 'ತಾನ್‌ಸೇನ್' ಬಹಳ ಕೀರ್ತಿ ಪಡೆದಿದೆ. ಸೈಗಲ್ ಖುರ್ಶಿದ್ ಇದರಲ್ಲಿ ನಟಿಸಿ ಹಾಡಿ ಜನತೆಯನ್ನು ಮರುಳುಗೊಳಿಸಿದ್ದಾರೆ. ಮೊಗಲ್ ಚಕ್ರವರ್ತಿಯ ಆಸ್ಥಾನದಲ್ಲಿದ್ದ ನವರತ್ನಗಳಲ್ಲಿ ಓರ್ವನಾದ ಪ್ರಸಿದ್ಧ ಸಂಗೀತಗಾರನು ತಾನಸೇನನು—ಈತನ ಭವ್ಯ ಜೀವನ ಇಲ್ಲಿ ಭವ್ಯವಾಗಿ ಕೊಡಲಾಗಿರುವುದು.

'ಸ್ನೇಹ ಪ್ರಭಾ'ಳ ದಸ್ತಗಿರಿ ರಹಸ್ಯ

ಈಗ ಹೊರಬಿದ್ದಿದೆ. ಅಹಮ್ಮದ್ ನಗರದಲ್ಲಿ ಒಂದು ಸಹಾಯಾರ್ಥ ಪ್ರದರ್ಶನದಲ್ಲಿ ಆಕೆ ನರ್ತನ ಮಾಡಿದಳು. ನೃತ್ಯ ಪ್ರದರ್ಶನದ ಮಧ್ಯದಲ್ಲಿ, ಡ್ರೆಸ್ ಬದಲಾಯಿಸುವಲ್ಲಿ ಪೋಲೀಸರು ಬಂದು ತುಂಬಿಕೊಂಡಿರುವುದರಿಂದ, ತಾನಿನ್ನು ಮುಂದಿನ ಕಾರ್ಯಕ್ರಮ ತೋರಿಸಲು ಸಾಧ್ಯವಿಲ್ಲವೆಂದು ಹೇಳಿದಳು. ಆಕೆ ಹೇಳಿದ ಮಾತು 'ರಾಜದ್ರೋಹ'ವಾಯಿತೆಂದು ಅವಳನ್ನು ಪೋಲೀಸರು ಬಂಧಿಸಿಕೊಂಡೊಯ್ದರು. ಲೋಕಪ್ಪಿನಲ್ಲಿ ಕೆಲ ತಾಸು ಇಟ್ಟರು; ಆ ಮೇಲೆ ಮೇಲಿನ ಅಧಿಕಾರಿಗಳು ಬಂದು ಅವಳ ಬಿಡುಗಡೆ ಮಾಡಿಸಿದರು.

'ಸರೋಜ ಶಿಲೋತ್ರಿ'

ಇದು ಶೋಭನಾಳ ಹೆಸರು

ಶೋಭನಾ ಸಮರ್ಥಳ ಮೊದಲಿನ ಹೆಸರು ಸರೋಜ ಶಿಲೋತ್ರಿ. ಡಾ। ಎ. ಎಚ್. ಶಿಲೋತ್ರಿ ಎಂ. ಎ. ಪಿ. ಎಚ್. ಡಿ ಇವರು ಆಕೆಯ ತಂದೆ. ತಂದೆ ಬೇಂಕರ್ ಆಗಿದ್ದರು. 1916ನೇ ಇಸವಿ, ನವಂಬರ ೭ರಲ್ಲಿ ಆಕೆ ಜನಿಸಿದಳು. ಸಿರಿವಂತ ತಂದೆ ತಾಯಿಗಳ ಒಬ್ಬಳೇ ಮಗಳಾಗಿ ಸರೋಜ ಸಂತೋಷದಲ್ಲಿ ಬೆಳೆದಳು. ೧೯೨೭ರಲ್ಲಿ ಆಕೆ ತಂದೆ ತಾಯಿಗಳೊಡನೆ ವಿಶ್ವ ಸಂಚಾರ ಮಾಡಿದಳು. ಹಿಂದಿ, ಮರಾಠಿ, ಇಂಗ್ಲಿಷ್ ಭಾಷೆಗಳನ್ನು ಬಲ್ಲಳು. ತಂದೆಯ ಬೇಂಕ್ ದಿವಾಳಿ ಆಯಿತು. ಮುಂದೆ ತಂದೆ ತೀರಿಹೋದರು. ಸರೋಜ ಸಿನೆಮಾ ತಾರೆಯಾದಳು. ಬರ್ಲಿನ್‌ನಿಂದ ಮರಳಿ ಬಂದ ಯುವಕ ಕಲಾವಿದ ಕುಮಾರಸೇನ್ ಸಮರ್ಥರಲ್ಲಿ ಅನುರಾಗವುಂಟಾಯಿತು. ಇವರ ಮದುವೆಯಾಗಿ ಶೋಭನಳಿಗೆ ಈಗ 10 ವರ್ಷದ ಮಗಳೊಬ್ಬಳಿದ್ದಾಳೆ. ಗಂಡ ಸಿನೆಮಾ ನಟನೆಗೆ ಅನುಮತಿಯಿತ್ತ. ಸ್ವತಃ ಆತ ಕಲಾವಿದ; ಸಿನೆಮಾ ನಿರ್ದೇಶಕ. ಆಕೆಯ ತಾಯಿಯೂ ಒಂದು ಸಿನೆಮಾದಲ್ಲಿ ನಟಿಸಿದ್ದಾಳೆ. ಮಗಳೂ ಮುಂದೆ ಸಿನೆಮಾ ತಾರೆಯಾಗಬಹುದು. ಶೋಭನಾ ಈಗ ತಿಂಗಳಿಗೆ ರೂ. 10 ಸಾವಿರ ಗಳಿಸುತ್ತಾಳೆ. 'ಭರತ್ ಮಿಲಾಪ್'ನಲ್ಲಿ ಆಕೆಯ ಹೆಚ್ಚಿದ ಕೀರ್ತಿ, 'ರಾಮರಾಜ್ಯ'ದಲ್ಲಿ ಮುಗಿಲು ಮುಟ್ಟುವುದೆಂದು ಎಲ್ಲರೂ ನಿರೀಕ್ಷಿಸುತ್ತಾರೆ. ಕಾಗದ ಬರೆಯುತ್ತೀರಾ? ಇದು ವಿಳಾಸ:- 'ಶಾಭಾಗ್', ಪೆಡ್ಡಾರ್ ರೋಡ್, ಬೊಂಬಾಯಿ.

ಬಂಗಾಳಕ್ಕೆ ಸಹಾಯ

ದೇಶದ ಮೂಲೆಮೂಲೆಗಳಿಂದ

ಬಂಗಾಳದಲ್ಲಿ ಉಪವಾಸ ಬಿದ್ದು ನರಳುವವರಿಗೆ ದೇಶದ ಮೂಲೆ ಮೂಲೆಗಳಿಂದ ಸಹಾಯ ಹೋಗುತ್ತಿದೆ. ಬಂಗಾಳ ನಿರಾಶ್ರಿತರಿಗೆ ಸಹಾಯಮಾಡಲು ನಿಧಿಗಾಗಿ ಡಾ। ಶ್ಯಾಮ ಪ್ರಸಾದ ಮುಖರ್ಜಿಯವರು ವಿನಂತಿಸಿದಂತೆ ಭಾರತ ಎಲ್ಲಾ ಭಾಗದವರೂ ಅವರ ನಿಧಿಗೆ ಸಹಾಯ ಕಳುಹಿಸುತ್ತಾರೆ. ಇಂಡಿಯನ್ ಎಕ್ಸ್‌ಪ್ರೆಸ್ ೧ ಲಕ್ಷ ರೂಪಾಯಿ ಮಿಕ್ಕಿ ಕಳುಹಿಸಿದೆ. ಹಾಗೆ ಹಿಂದುಸ್ತಾನ್ ಟೈಮ್ಸ್ ಹಲವು ಸಾವಿರ, ಜನ್ಮಭೂಮಿ, ೫೦ ಸಾವಿರ ರೂ ಮತ್ತು ೨೦೦೦ ಟನ್ ಸಜ್ಜಿಗೆ ಹೀಗೆ ಇತರ ಅನೇಕ ಪತ್ರಿಕೆಗಳು ವ್ಯಕ್ತಿ ಸಂಸ್ಥೆಗಳು ನೆರವಾಗಿವೆ. ಸಿಂಧ್ ಹಡಗ ಕಂಪನಿಯವರು ಬಂಗಾಳಕ್ಕೆ ಆಹಾರ ಸಾಗಿಸಲು ಒಂದು ಹಡಗ ಧರ್ಮಾರ್ಥ ಕೊಡಲೊಪ್ಪಿದ್ದಾರೆ.

೧೯೪೦ರಲ್ಲಿ ಇಟಲಿಯ ಸ್ಥಿತಿ

ಇಟಲಿಗೆ ಜರ್ಮನಿಯು ಸಹಾಯ ಮಾಡದಿದ್ದಲ್ಲಿ ೧೯೪೦ನೇ ಇಸವಿಯ ಚಳಿಗಾಲದಲ್ಲಿಯೇ ಇಟಲಿಯು ಉತ್ತರ ಆಫ್ರಿಕಾದ ತನ್ನ ಸಾಮ್ರಾಜ್ಯವನ್ನೆಲ್ಲ ಕಳೆದುಕೊಂಡು ಬಿಡುತ್ತಿದ್ದಿತು ಎಂದು ಹಿಟ್ಲರ್ ಹೇಳಿದರು.

FIRST AND FOREMOST

FIRST AND FOREMOST among the ideals of the CANARA BANK is the ideal of Service to its Customers.

ESTD. 1906.

CANARA BANK LTD.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಆಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಗೆಯೇ ಆಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು. ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE

The Joint Booking Office, KODIALBAIL.

The Bank of Mangalore Limited, Mangalore.

ESTD: 1931

HEAD OFFICE Mangalore. *BRANCHES* Moodabidri & Padubidri.

The Bank Undertakes to Collect Cheques, Demand and Documentary Bills at Most Competitive Rates.

ISSUES DRAFTS ON ALL IMPORTANT TOWNS IN THE DISTRICT

and also on

BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.

at very favourable rates

All kinds of inland banking business undertaken

ಹುಳುಕಡ್ಡಿ ಮದ್ದು



ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪ್ಪೋ,
ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಜೀವವಿಮೆ ಮಾಡುವ ಪ್ರಯೋಜನವು ಇಂದು ಹಿಂದಿಗಿಂತ ಅಧಿಕವಾಗಿದೆ.

ದಿ ಬಾಂಬೆ ಲೈಫ್ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಇದರಲ್ಲಿ ಒಂದು ಪಾಲಿಸಿ ಪಡೆದು

ಈಗಲೇ ನೀವು ನಿಮ್ಮನ್ನು ಮತ್ತು ನಿಮ್ಮನ್ನು ಹೊಂದಿಕೊಂಡಿರುವವರನ್ನು ರಕ್ಷಿಸಿಕೊಳ್ಳಿರಿ!

ಪ್ರತಿನಿಧಿಗಳಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಇನ್ಶೂರ್ ಮಾಡಲು ಅಥವಾ ಮಾಹಿತಿ ತಿಳಕೊಳ್ಳಲು ದಯಮಾಡಿ ಬರೆಯಿರಿ!

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

—: ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ: —

ಬೆಂಗಳೂರು ಬೊಂಬಾಯಿ ಮದ್ರಾಸು ಕಲ್ಲಿಕೋಟೆ ಮಂಗಳೂರು ಮತ್ತು ತ್ರಿವೇಂದ್ರಂ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ್ ವ ಏಜೆಂಟರು:—

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಷೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. R. S. ಸಿ. ಪಿ. ಸಿ. ಬಿಲ್ಡಿಂಗ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೊ:—1. ಮರಾಠ ಗಲ್ಲಿ ಹುಬ್ಬಳ್ಳಿ.
2. 36 ಫ್ಯಾಕ್ಟ್ರೋಪ್ಸ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಮೃತ್ಯುಂಜಯ ರಸ. ಪಂಚವಟ ಮಾತ್ರೆ. ಕೊಲೆರಾ ರೋಗಕ್ಕೆ ಸಿದ್ಧೌಷಧ.

ಸೇವನಾ ಕ್ರಮಗಳು ಔಷಧಿಯೊಡನೆ ಇದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಖು 1—10—1943 [ಸಂಚಿಕೆ 40]

ಗಾಂಧಿ-ಮೇಕ್ಸ್‌ವೆಲರ ಪತ್ರ ವ್ಯವಹಾರ

ಪ್ರಕಟಿಸಲು ಅಮೆರಿ ನಕಾರ.

ಆಹಾರದ ಕೊರತೆಗೆ ಸರಕಾರ ಕಾರಣ

ಚಳವಳದಲ್ಲಿ ೨॥ ಸಾವಿರ ಜನರಿಗೆ ಛಡಿಏಟು! ೭೩ ಜನರಿಗೆ ಫಾಶಿಶಿಕ್ಷೆ!

ಭಾರತ ಮಂತ್ರಿ ಅಮೆರಿಯವರು ಈ ಚೆಗೆ ಭಾರತದ ಕುರಿತು ಪಾರ್ಲಿಮೆಂಟಿನ ಪ್ರಶ್ನೋತ್ತರ ಕಾಲದಲ್ಲಿ ಕೆಲವು ವಿಷಯ ಹೇಳಿದರು. 'ಗಾಂಧಿಜಿ ಮತ್ತು ಅವರ ಮಿತ್ರರ ಬಿಡುಗಡೆಯ ವಿಚಾರವಿದೆಯೇ' ಎಂಬ ಪ್ರಶ್ನೆಗೆ ಅಮೆರಿ ಉತ್ತರಕೊಡಲಿಲ್ಲ. ಭಾರತ ಪರಿಸ್ಥಿತಿ ಬಗ್ಗೆ ಹಿಂದೆ ಹೇಳಿದ್ದಕ್ಕಿಂತ ಹೆಚ್ಚು ಹೇಳುವುದಿಲ್ಲವೆಂದರು. 'ಸದ್ಯದ ಪರಿಸ್ಥಿತಿ ಕುರಿತು ಗಾಂಧಿಜಿ ತನ್ನ ಅಭಿಪ್ರಾಯ ವ್ಯಕ್ತ ಮಾಡಿ ಮೇಕ್ಸ್‌ವೆಲ್ಲರಿಗೆ ಬರೆದ ಪತ್ರ ಪ್ರಕಟಿಸುವಿರಾ?' ಎಂದು ಕೇಳಿದ್ದಕ್ಕೆ, ಹಾಗೆ ಮಾಡಲು ಭಾರತ ಪರಿಸ್ಥಿತಿ ಇನ್ನೂ ಅನುಕೂಲವಾಗಿಲ್ಲವೆಂದರು

ಅಮೆರಿಯವರು ಇನ್ನೊಂದು ಪ್ರಶ್ನೆಗೆ ಉತ್ತರ ಕೊಡುತ್ತಾ, ೧೯೪೨ನೇ ಅಗಸ್ಟ್‌ನಿಂದ ಈ ಜೂನ್ ಅಂತ್ಯದ ವರೆಗೆ ೨೪೮೧ ಜನರಿಗೆ ಛಡೀ ಏಟಿನ ಶಿಕ್ಷೆ ವಿಧಿಸಲ್ಪಟ್ಟಿತೆಂದೂ, ಚಳವಳ ನಿಮಿತ್ತ ೭೩ ಜನರಿಗೆ ಗಲ್ಲಿನ ಶಿಕ್ಷೆ ವಿಧಿಸಲಾಯಿತೆಂದೂ ತಿಳಿಸಿದರು. ಸೊರೆನ್ಸನ್ ಮೊದಲಾದ ಸದಸ್ಯರು ಬಂಗಾಳದ ಆಹಾರ ಪರಿಸ್ಥಿತಿಯು ವಿಷಮವಾಗಲು ಸರಕಾರವೇ ಹೊಣೆಯೆಂದು ವಾದಿಸಿದ್ದನ್ನು ಅಮೆರಿ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡಿದರು

ಭಾರತದ ಪರಿಸ್ಥಿತಿಗಾಗಿ ನಾಚಿಕೆ ಪಡಬೇಕಾಗಿಲ್ಲವಂತೆ! ವೇವಲರ ವಿಚಿತ್ರ ಊಹೆ!

'ಭಾರತದ ವಿಷಯ ಬ್ರಿಟನು ವಹಿಸಿದ ರೀತಿ ನೀತಿಯ ಕುರಿತು ನಾವು ನಾಚಿಕೆ ಪಡಬೇಕಾದ್ದಿಲ್ಲ. ಬದಲು ನಾವು ಹೆಮ್ಮೆಪಡಬಹುದು,—ಭಾರತದಲ್ಲಿ ನಾವು ಅನೇಕ ತಪ್ಪುಗಳನ್ನು ಮಾಡಿರಬಹುದು. ಆದರೆ ಅತ್ಯಾಶೆಯಿಂದಾಗಲಿ ಬೆದರಿಕೆಯಿಂದಾಗಲಿ ಮಾಡಿದ್ದಲ್ಲ, ದೇಶದ ಹಿತದೃಷ್ಟಿಯಿಂದ. ಭಾರತವು ಎಂದೂ ಅನುಭವಿಸದ ಶಾಂತಿಯನ್ನು ನಾವು ಸ್ಥಾಪಿಸಿರುವೆವು. ಜಗತ್ತಿನ ಈ ವಿಷಮ ವಾತಾವರಣದಲ್ಲಿ ನಾವು ಅಲ್ಲಿ ಭದ್ರವಾದ ಸರಕಾರ ಸ್ಥಾಪಿಸಿರುವೆವು.' ಎಂದು ಮೊದಲಾಗಿ ಮುಂದಿನ ವೈಸರಾಯರಾದ ಲಾರ್ಡ್ ವೇವಲರು ಲಂಡನಿನಲ್ಲಿ ಒಂದು ಭಾಷಣಮಾಡುತ್ತಾ ಹೇಳಿದರು.

ಭಾರತದಲ್ಲಿ ಇಂದು ಗಂಡಾಂತರ ಕಾಲ ಬಂದಿದೆಯೆಂದೂ, ಮುಂದಿನದು ಇನ್ನೂ ಗಂಡಾಂತರವಾಗಿದೆಯೆಂದೂ, ಈ ಸಂಕಟದಿಂದ ನಾವು ರಾಷ್ಟ್ರವನ್ನು ದಾಟಿಸಬೇಕಾಗಿದೆಯೆಂದೂ, ಹಾಗಾದರೆ ಭಾರತವು ತನ್ನ ಕಾರ್ಯಭಾರವನ್ನು ತಾನೇ ನಿರ್ವಹಿಸಿಕೊಳ್ಳುವದೆಂದೂ, ಭಾರತವು ಬ್ರಿಟಿಷ್ ಕಾಮನ್ ವೆಲ್ತ್ ಮತ್ತು ಇತರ ಜನಾಂಗಗಳೊಡನೆ ಸ್ನೇಹ ಸಂಬಂಧದಿಂದ ಪ್ರಗತಿಯನ್ನು ಹೊಂದುವುದೆಂದೂ ಇದನ್ನು ಸಾಧಿಸಲು ತನ್ನಿಂದ ಸಾಧ್ಯವಾದದ್ದನ್ನೆಲ್ಲಾ ಮಾಡುವೆನಾಗಿಯೂ ಅವರು ಹೇಳಿದರು.

ಭಾರತದ ಆಹಾರ ವಿಚಾರದಲ್ಲಿ ಗ್ರೇಗರಿ ಸಮಿತಿ ವರದಿ

ಭಾರತದ ಆಹಾರ ವಿಚಾರವಾಗಿ ಸರಕಾರವು ನೇಮಿಸಿದ ಗ್ರೇಗರಿ ಸಮಿತಿಯು ಈಗ ತನ್ನ ವರದಿಯನ್ನೊಪ್ಪಿಸಿದೆ. ಆ ವರದಿಯ ಅಂಶಗಳಿಂತಿವೆ.

(೧) ಯುದ್ಧ ನಡೆವ ವರೆಗೆ ಭಾರತದ ಹೊರಗಿಂದ ತರಿಸುವ ಆಹಾರ ಸಾಮಗ್ರಿಗಿಂತ ಹೆಚ್ಚು ಭಾರತದಿಂದ ಹೊರಗೆ ಆಹಾರ ವಸ್ತು ಹೋಗಬಾರದು (೨) ದೇಶದಲ್ಲಿ ಎಲ್ಲಿಯಾದರೂ ಆಹಾರ ಯಾವಾಗಲಾದರೂ ಅವಶ್ಯ ಬಿದ್ದರೆ ಕೇಂದ್ರ ಸರಕಾರದ ವಶ ಸಾಕಷ್ಟು ಧಾನ್ಯ ಸಂಗ್ರಹವಿರಬೇಕು. (೩) ಕೃಷಿಕರು ತಮ್ಮ ಧಾನ್ಯಗಳನ್ನು ಮಾರಲು ಒಪ್ಪುವಂತೆ ಅವರಿಗೆ ಅವಶ್ಯಕವಾದ ಪದಾರ್ಥಗಳನ್ನು ಧಾನ್ಯದ ಬದಲು ಅವರಿಗೆ ಒದಗಿಸಬೇಕು ಮತ್ತು ಅಂಥ ಸಾಮಗ್ರಿಗಳ ಉತ್ಪಾದನವನ್ನು ಯುದ್ಧ ಸಾಮಗ್ರಿಯಷ್ಟೇ ಮಹತ್ವ ಕೊಟ್ಟು ಉತ್ಪಾದಿಸಬೇಕು. (೪) ಪಟ್ಟಣದ ಪ್ರತಿಯೊಬ್ಬನಿಗೆ ಒಂದು ಪೌಂಡಿನಷ್ಟು ಪ್ರಮಾಣದಲ್ಲಿ 'ರೇಶನಿಂಗ್' ಕೊಡಬೇಕು. (೫) ಮುಖ್ಯ ಆಹಾರ ಧಾನ್ಯಗಳ ಬೆಲೆ ನಿಯಂತ್ರಣವಿರಬೇಕು. (೬) ಅದಕ್ಕಾಗಿ ಒಂದು ಸಮಿತಿ ಏರ್ಪಡಿಸಬೇಕು. (೭) ಕೇಂದ್ರ ಸರಕಾರ ಅವಶ್ಯವಿದ್ದರೆ ಈ ವಿಚಾರದಲ್ಲಿ ಪ್ರಾಂತಗಳ ಮೇಲೆ ಅಧಿಕಾರ ನಡೆಸಬೇಕು

ಸದ್ಯಕ್ಕೆ (೧) ಹೆಚ್ಚು ಧಾನ್ಯ ಬೆಳೆಸಬೇಕು. (೨) ಸರಿಯಾಗಿ ಆಹಾರ ಎಲ್ಲಾ ಕಡೆಗೂ ಎಲ್ಲರಿಗೂ ಹಂಚುವಂತೆ ಏರ್ಪಡಿಸಬೇಕು. ಅದಕ್ಕಾಗಿ ರೇಶನಿಂಗ್ ಪದ್ಧತಿ ತರಬೇಕು (೩) ಬೆಲೆ ನಿಯಂತ್ರಣ ಮಾಡಬೇಕು (೪) ಪ್ರಾಂತಿಕ ಕೇಂದ್ರ ಅಧಿಕಾರಿಗಳ ಬಗ್ಗೆ ನ್ಯಾಯವಾದ ಸುಧಾರಣೆ ಮಾಡಬೇಕು ಕೆಲವು ಸೂಚನೆಗಳು (೧) ಈ ವರ್ಷ ೧೫ ಲಕ್ಷ ಟನ್ ಧಾನ್ಯ ಪರದೇಶದಿಂದ ತರಿಸಬೇಕು ಮುಂದಾದರೂ ೧೦ ಲಕ್ಷ ಟನ್ ತರಿಸಬೇಕು. (೨) ಸೈನಿಕರ ಸಲುವಾಗಿ ಆಹಾರ ಸಂಗ್ರಹ ಮಾಡುವಾಗ ಸಾರ್ವಜನಿಕರ ಜೀವನದ ಕಡೆಗೆ ಮನ ಕೊಡಬೇಕು.

'ಭಾರತದ ಆಹಾರ ಕೊರತೆಗೆ ಸರಕಾರವೇ ಹೊಣೆಯಾಗಿದೆ'

'ನ್ಯೂ ಸ್ಟೇಟ್ಸ್‌ಮೇನ್' ಟೀಕೆ.

ಲಂಡನಿನ 'ನ್ಯೂ ಸ್ಟೇಟ್ಸ್‌ಮೇನ್' ಪತ್ರಿಕೆಯು ತನ್ನ ಅಗ್ರಲೇಖನದಲ್ಲಿ ಭಾರತದ ಆಹಾರ ಕೊರತೆ ವಿಚಾರ ವಿಮರ್ಶಿಸಿ, ಇದಕ್ಕೆ ಸರಕಾರವೇ ಹೊಣೆಯೆಂದು ತಿಳಿಸಿದೆ. ಭಾರತಕ್ಕೆ ಹೋದ ಮೇಲೆ ವೈಸರಾಯ್ ವೇವಲರ ಪ್ರಥಮ ಕರ್ತವ್ಯ ಇದನ್ನು ನಿವಾರಿಸುವುದೆಂದು ಸೂಚಿಸಿದೆ. ಕಲ್ಕತ್ತದ ಜನರ ಜೀವನ ಸಂಕಷ್ಟವನ್ನು ಓದಿದರೆ ಮಧ್ಯ ಕಾಲೀನ ಯುಗದ ಭೀಕರ ಮರಣ ವೃತ್ತಾಂತವು ನೆನಪಿಗೆ ಬರುತ್ತದೆಂದು ಉಲ್ಲೇಖಿಸಿದೆ. ಸರಕಾರವು ಇಂದಿನ ಅನಾಹುತ ನಿವಾರಿಸಲು ಏನು ಉಪಾಯ ಕೈಕೊಂಡಿರುವುದೆಂದು ಕೇಳಿದೆ. ಭಾರತದ ಸೈನ್ಯವು ತನ್ನ ಸಂಗ್ರಹಕ್ಕೆ ಬೇಕಾಗಿ ಹೇರಳ ಧಾನ್ಯ ಪಡಕೊಂಡು ಕ್ರಯ ಹೆಚ್ಚಿಸಿದೆಯೆಂದೂ, ತಿಳಿಸಿ, ಭಾರತದಲ್ಲಿ ಇಂದು ನಿಜವಾದ ಅಧಿಕಾರದಲ್ಲಿರುವವರು ಯಾರೆಂದು ಪ್ರಶ್ನೆ ಹಾಕಿ, ಕೇಂದ್ರದಲ್ಲಿ ಹಿಂದಿನಂತೆಯೇ ಸ್ವಚ್ಛಂದ ಆಡಳಿತ ನಡೆಯುತ್ತಿದೆಯೆಂದೂ—ವೈಸರಾಯ ಕಾರ್ಯಕಾರಿ ಮಂಡಳದವರು ವೈಸರಾಯರ ನೇಮಕದವರಲ್ಲದೆ ಜನತೆಯ ಪ್ರತಿನಿಧಿಗಳಲ್ಲವೆಂದೂ, ಎಲ್ಲಾ ಪ್ರಾಂತಗಳಲ್ಲಿಯೂ ಸ್ವತಂತ್ರ ಆಡಳಿತವಿಲ್ಲವೆಂದೂ, ಅಲ್ಲಿನ ಮುಖ್ಯ ಪಕ್ಷದ ಮುಖಂಡರೆಲ್ಲಾ ಜೈಲಿಗೆ ಹಾಕಲ್ಪಟ್ಟಿರುವರೆಂದೂ ತಿಳಿಸಿದೆ. 'ಡೈಲಿ ಹೆರಾಲ್ಡ್' ಪತ್ರಿಕೆಯೂ ಸರಕಾರದ ನೀತಿಯನ್ನು ಕಡುತರವಾಗಿ ಟೀಕಿಸಿದೆ.

ಭಾರತಕ್ಕೆ ಆಹಾರ ಕಳುಹಿಸಲು ಲಂಡನಿನಲ್ಲಿ ಚಳವಳ

ಭಾರತದ ಆಹಾರ ಪರಿಸ್ಥಿತಿ ವಿಷಮವಾಗಿರುವುದರಿಂದ ಅದರ ಪರಿಹಾರ ವ್ಯವಸ್ಥೆ ಮಾಡಲು ಕ್ಲೆಮೆಂಟ ಡೇವಿಸ್ ಎಂಬ ಪಾರ್ಲಿಮೆಂಟ್ ಸದಸ್ಯರ ಅಧ್ಯಕ್ಷತೆಯಲ್ಲಿ ಲಂಡನಿನಲ್ಲಿ ಒಂದು ಸಮಿತಿ ಸ್ಥಾಪಿತವಾಗಿದೆ. ಶ್ರೀ ವಿ. ಕೆ. ಕೃಷ್ಣ ಮೇನನರು ಇದರ ಕಾರ್ಯಾಧ್ಯಕ್ಷರು. ಭಾರತದಲ್ಲಿ ಆಹಾರ ಪರಿಸ್ಥಿತಿ ಎಷ್ಟು ಕೆಟ್ಟಿದೆಯೆಂಬುದನ್ನು ಈ ಸಮಿತಿಯು ಬ್ರಿಟಿಷ್ ಜನತೆಗೆ ತಿಳಿಸಿ ಕೂಡಲೇ ಭಾರತಕ್ಕೆ ಆಹಾರ ಸಾಮಗ್ರಿ ಕಳುಹಿಸುವಂತೆ ಸರಕಾರಕ್ಕೆ ಒತ್ತಾಯ ಮಾಡುವಂತೆ ಈ ಸಮಿತಿಯ ಕಾರ್ಯಕಾರೀ ಮಂಡಳಿಯ ಅವಸರದ ಸಭೆಯೊಂದು ಕೂಡಿತು. ಪರಿಸ್ಥಿತಿಯನ್ನೆಲ್ಲಾ ಸಾಕ್ಷ್ಯಂತವಾಗಿ ಪರಿಶೀಲಿಸಿದ ಮೇಲೆ ಬ್ರಿಟಿಷ್ ಸರಕಾರವು ಸಾಮ್ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಸಂಗ್ರಹಿಸಿದ ಆಹಾರ ಸಾಮಗ್ರಿಯನ್ನು ಕೂಡಲೇ ಭಾರತಕ್ಕೆ ಕಳುಹಿಸಬೇಕೆಂದು ಅದಕ್ಕಾಗಿ ಹಡಗ ವ್ಯವಸ್ಥೆ ಮಾಡಬೇಕೆಂದೂ ನಿರ್ಣಯ ಮಾಡಲಾಯಿತು. ಈ ಬಗೆ ವಾಣಿಜ್ಯ ಮಂಡಳದ ಅಧ್ಯಕ್ಷರನ್ನು ಹಾಗೂ ಬೇರೆ ಬೇರೆ ಮಂತ್ರಿಗಳನ್ನು ಕಾಣಲು ಉಪಸಮಿತಿ ನೇಮಕವಾಯಿತು.

ಬಳ್ಳಾರಿಯಲ್ಲಿ ಆಂಧ್ರ ಪರಿಷತ್ತು

ಜರಗಿಸುವ ವಿಚಾರ ಕನ್ನಡ ನಾಡಿನ ಬೇರೆ ಬೇರೆ ಭಾಗಗಳಿಂದ ಕನ್ನಡಿಗರು, ಕನ್ನಡ ಸಂಸ್ಥೆಗಳು ತಮ್ಮ ವಿರೋಧ ಪ್ರದರ್ಶನ ಮಾಡಿ ಮದ್ರಾಸ್ ಗವರ್ನರರಿಗೆ ತಂತಿ ಕಳುಹಿಸಿವೆ.

ಭಾರತೀಯರು

ಈತನನ್ನು ಮರೆಯಲುಂಟೆ?

ಕರ್ನಲ್ ಫ್ರೇಂಕ್ ಜಾನ್ಸನ್

ಲಾಹೋರ್ ಸಂಗ್ರಾಮವನ್ನು ಗೆದ್ದ 'ವೀರ'!

ಲೇಖಕರು:— ಜಿ. ಎನ್. ಸಪ್ಳೆ,
ಕಾರ್ಯದರ್ಶಿ, ಅ. ಭಾ. ಸಂಪಾದಕ ಪರಿಷತ್ತು.

ಬ್ರಿಟನಿನ ಓರ್ವ ಸಿಪಾಯಿ, ನಾಯಕ, ಯೋಧ, ಜಯಪ್ರದಾತ ಮಡಿದ! ಆದರೆ ಹಾಡುವವರಿಲ್ಲದೆ, ಕೊಂಡಾಡುವವರಿಲ್ಲದೆ, ಕಂಬನಿ ಸುರಿಸುವವರಿಲ್ಲದೆ ಸತ್ತ! 'ಸ್ಟೇಟ್ಸ್‌ಮನ್' ಪತ್ರಿಕೆ ಕೂಡಾ, ಒಂದು ಮೂಲೆಯಲ್ಲಿ ನಾಲ್ಕೇ ಪಂಕ್ತಿ ಬರೆದು ಆತನ ಮರಣ ವಾರ್ತೆಯನ್ನು ಮುಗಿಸಿಬಿಟ್ಟಿತು. ಆದರೆ ಕರ್ನಲ್ ಸರ್ ಫ್ರೇಂಕ್ ಜಾನ್ಸನನ ನಿಧನಕ್ಕಾಗಿ ನಾನು ನನ್ನ ಕಂಬನಿ ಮಿಡಿಯದೆ ಇರಲಾರೆ. ಬ್ರಿಟನು ಆತನನ್ನು ಮರೆಯಬಹುದು. ಆದರೆ ಭಾರತ ಮರೆಯಲುಂಟೆ? ಆತನ ಹೆಸರು ಭಾರತದ ಚರಿತ್ರೆಯಲ್ಲಿ ರೋಬರ್ಟ್ ಕ್ಲೈವ್, ವಾರನ್ ಹೆಸ್ಟಿಂಗ್ಸ್, ಜನರಲ್ ನಿಕೋಲ್‌ಸನ್ ಹಾಗೂ ಜನರಲ್ ಒಡ್ವಾಯರರ ಸಾಲಿಗೆ ಸೇರಿದ್ದು. ೧೯೧೯ ಮೇ ತಿಂಗಳಲ್ಲಾದ 'ಲಾಹೋರಿನ ಕಾಳಗ'ವನ್ನು ಇದೇ ಕರ್ನಲ್ ಜಾನ್ಸನನು ಏಕಾಕಿಯಾಗಿ ಗೆದ್ದು ಜನತನ್ನು ನೆಲಕ್ಕಪ್ಪಳಿಸಿ ಬ್ರಿಟನಿಗೆ ಜಯವೊದಗಿಸಿದ 'ವೀರ'!

ಪಂಜಾಬಿನ ಲೆಪ್ಟಿನೆಂಟ್ ಗವರ್ನರ್ ಸರ್ ಮೈಕೆಲ್ ಒಡ್ವಾಯರ ಚಕ್ರವ್ಯೂಹದ ಮಹಾರಥನಾಗಿ ಕರ್ನಲ್ ಜಾನ್ಸನ್ ಪ್ರಸಿದ್ಧಿಗೇರಿದ. ಆ ಚಕ್ರವ್ಯೂಹದ ಇತರ ಮಹಾರಥರೆಂದರೆ ಜಲಿಯಾನವಾಲ್ ಕಾರಣ ಪುರುಷ ಜನರಲ್ ಡಯರ್; ನಾಗರಿಕರನ್ನು ಬಾಂಬು ಹಾಕಿ ಮರ್ದಿಸುವ ವಿದ್ಯೆಯನ್ನು ಮೊಟ್ಟಮೊದಲು ಬ್ರಿಟನಿಗೆ ಕಲಿಸಿದ 'ಮೇಧಾವಿ' ಕರ್ನಲ್ ಓಬ್ರಿನ್, ಮಿ। ಬಿಸೋನ್, ಕರ್ನಲ್ ನೋರ್ತ್ ಮತ್ತು ಕೆಪ್ಟನ್ ಹೆಮಿಲ್ಟನ್ ಇವರು.

೧೯೧೯ರಲ್ಲಿ ಲಾಹೋರಿನ ಪ್ರಜೆಗಳನ್ನು ಮರ್ದಿಸಿ, ಭಾರತದ ಇತಿಹಾಸದಲ್ಲಿ ಗಣನೀಯ ಸ್ಮರಣೆಯನ್ನುಳಿಸದಿದ್ದರೆ, ಹಾಗೆ ಮಾಡಿ ಬ್ರಿಟನಿಗೆ ಮಹಾ ವಿಜಯವನ್ನು ಸಾಧಿಸಿ ಕೊಡದಿದ್ದರೆ, ಪ್ರಥಮ ಮಹಾ ಯುದ್ಧದಲ್ಲಿ ಏನೂ ಸಾಹಸಗೈದಿರದ ಈ ಕರ್ನಲ್ ಜಾನ್ಸನ್ 'ಸರ್' ಪದವಿ ಪಡೆಯದೇ ವಿರಾಮ ಹೊಂದಬೇಕಾಗಿ ಬರುತಿತ್ತು. ಪಂಜಾಬು, ಈ ಯುದ್ಧದಲ್ಲಿ ಹೇಗೋ ಹಾಗೆಯೇ ಕಳೆದ ಯುದ್ಧದಲ್ಲಿಯೂ ತನುಮನಧನಗಳಿಂದ ಜರ್ಮನರನ್ನು ಸೋಲಿಸಲು ಅಪಾರ ತ್ಯಾಗವಮಾಡಿತ್ತು. ಹೀಗೆ ಮಾಡಿದ ಉಪಕಾರಕ್ಕೆ ಪಂಜಾಬಿಗೆ 'ಪ್ರತ್ಯುಪಕಾರ'ವು ಬ್ರಿಟನಿಂದ ಸಹಜವಾಗಿ ದೊರಕಲೇ ಬೇಕಾಗಿತ್ತು. ಸರ್ ಮೈಕೆಲ್ ಒಡ್ವಾಯರ್, ಆಗಿನ ಪಂಜಾಬಿನ ಗವರ್ನರನು, ಪ್ರಥಮ ಮಹಾ ಯುದ್ಧದಲ್ಲಿ ಪಂಜಾಬಿನ ಜನರನ್ನು, ಸಂಪತ್ತನ್ನು ಬೇಕಾದಷ್ಟು ಶೇಖರಿಸಿದವನಿರಲು, ತಾನು ಅಲ್ಲಿನ ಅಧಿಕಾರವನ್ನು ಬಿಟ್ಟು ಹೋಗುವ ಮೊದಲು, ಪಂಜಾಬಿಗೆ 'ರಕ್ತ ಮತ್ತು ಸಂಪತ್ತು'ಗಳ ಪ್ರತ್ಯುಪಕಾರ ಮಾಡಿಯೇ ಹೋಗಬೇಕಾಗಿತ್ತು.

ರೌಲೆಟ್ ಏಕ್ಟ ಚಳವಳ ಪ್ರಾರಂಭವಾಯಿತು. ಮಹಾತ್ಮಾ ಗಾಂಧಿಯವರ ಬಂಧನವಾದ ಕೂಡಲೇ ಸರ್ ಮೈಕಲ್ ಒಡ್ವಾಯರ್ ಪಂಜಾಬಿನಲ್ಲಿ ಮಾರ್ಶಲ್ ಲಾ ಸಾರಿದ. ಬ್ರಿಟಿಷರು ಯಾವ ಮಾರ್ಶಲ್ ಲಾ ವಿರೋಧ ಹೋರಾಡಿದರೋ ಅದನ್ನೇ ಭಾರತದಲ್ಲಿ ಪ್ರಯೋಗಿಸಿದರು. ಕರ್ನಲ್ ಫ್ರೇಂಕ್ ಜಾನ್ಸನನು ಲಾಹೋರಿನ ಮಿಲಿಟರಿ ಕಮಾಂಡರಾಗಿ ನೇಮಕ ಹೊಂದಿದ ಈ ವೀರ ಸ್ಥಾನದಿಂದಲೇ ಕರ್ನಲ್ ಜಾನ್ಸನ್ ತನ್ನ 'ಅಮರ ಪದವಿ' ಗಳಿಸಿಕೊಂಡ. ಭಾರತದ ಇತಿಹಾಸದಲ್ಲಿ ಇಂಥಾ ಕೆಲವು ಘಟನೆಗಳು ನಡೆದದ್ದುಂಟು. 'ನೀರು ಹೊರುವವ'ನೊಬ್ಬನು ಮುಗಲ ಸಾಮ್ರಾಜ್ಯವನ್ನು ಒಂದು ದಿನ ಆಳಿದ್ದುಂಟು. ಹುಮಾಯೂನ್ ಹೆಮುಬಕಲ್ ಎಂಬ ಉಪ್ಪು ಮಾರಾಟಗಾರನು ಉತ್ತರ ಭಾರತವನ್ನು ಆಳಿದ್ದುಂಟು. ಅಫ್ಘಾನಿಸ್ಥಾನದಲ್ಲಿ ಅಮಾನುಲ್ಲಾ ಖಾನನನ್ನು ಕೆಳತಳ್ಳಿ ಬಾಚಾನಾಕೋ ಆಳಿದ್ದುಂಟು. ಆದರೆ ಮೇಲಿನವರು ಯಾರೊಬ್ಬರೂ, ಕರ್ನಲ್ ಜಾನ್ಸನ್ ಲಾಹೋರಿನ ಮಿಲಿಟರಿ ಕಮಾಂಡರಾಗಿ ಮಾಡಿದಂಥಾ ಕೆಲ ತಿಂಗಳು ಮಾಡಿದ ದುರಾಡಳಿತವನ್ನು ಮಾಡಿಲ್ಲ.

ಲಾಹೋರಿನ ಮಿಲಿಟರಿ ಕಮಾಂಡರಾಗಿ ಕರ್ನಲ್ ಜಾನ್ಸನ್ ಹೊರಡಿಸಿದ ಹಲವು ಆಜ್ಞೆಗಳಲ್ಲಿ ಕೆಲವನ್ನು ಮಾತ್ರ ಕೊಟ್ಟರೆ ಸಾಕು. 'ಸಿವಿಲ್ ಎಂಡ್ ಮಿಲಿಟರಿ ಗಜೇಟ್' ಎಂಬ ಒಂದು ಪತ್ರಿಕೆ ಹೊರತು, ಲಾಹೋರಿನ ಇತರ ಎಲ್ಲಾ ಪತ್ರಿಕೆಗಳೂ ನಿಲ್ಲಿಸಲ್ಪಟ್ಟವು. ಪ್ರತಿಯೊಬ್ಬ ನಾಗರಿಕನು, ತನ್ನ ಸ್ವಾಧೀನವಿರುವ ಗಾಡಿ, ಸೈಕಲು, ಕಾರು ಪ್ರತಿಯೊಂದನ್ನೂ ಸರಕಾರಕ್ಕೆ ಒಪ್ಪಿಸಬೇಕಾಯಿತು. ಪ್ರತಿಯೊಬ್ಬ ನಾಗರಿಕನೂ ರಾತ್ರಿ ಎಂಟು ಗಂಟೆಯಿಂದ ಮುಂಜಾನೆ ಎಂಟು ಗಂಟೆ ವರೆಗೆ ಮನೆಯೊಳಗೇ ಇರಬೇಕಾಯಿತು. ಯಾರು ಈ 'ಕೆರ್ಫ್ಯೂ' ಆಜ್ಞೆಗೆ ಮೀರಿದರೋ ಅವರೆಲ್ಲರೂ ಬಂಧಿಸಲ್ಪಟ್ಟರು; ಛಡಿ ಏಟುಗಳಿಗೀಡಾದರು; ಕರ್ನಲ್ ಜಾನ್ಸನ್ ವಿದ್ಯಾರ್ಥಿಗಳ ವಿಷಯ ಪ್ರತ್ಯೇಕ ಎಚ್ಚರ ವಹಿಸಿದ. ಪ್ರಥಮ ಜಾಗತಿಕ ಯುದ್ಧವನ್ನು ಸ್ವಾತಂತ್ರ್ಯ ಧ್ಯೇಯದಿಂದ ಗೆದ್ದ ಹುಮ್ಮಸಿನಲ್ಲಿ ಈ ತರುಣ ಜನಾಂಗವು ಹೊಡೆತ, ಛಡಿ, ಸೆರೆಮನೆ ಸಂಕಷ್ಟಗಳನ್ನು ಅನುಭವಿಸಬೇಕಾಯಿತು. ದಿನವೊಂದಕ್ಕೆ ನಾಲ್ಕು ಸಲ, ಕರೆ ಕೇಳಿದೊಡನೆ ಎಲ್ಲಾ ವಿದ್ಯಾರ್ಥಿಗಳೂ ಬ್ರಡ್ಲಾಫ್ ಹಾಲಿನಲ್ಲಿ ಸೇರಬೇಕು. ಇದಕ್ಕೆ ಹಾಜರಾಗದವನಿಗೆ ಭಯಂಕರ ಶಿಕ್ಷೆಯಿತ್ತು. ವಿದ್ಯಾರ್ಥಿಗಳಿಗೆ ವಿಧೇಯತೆ ಕಲಿಸುವ ಸಲುವಾಗಿ, ಉರಿ ಬಿಸಿಲಲ್ಲಿ ಮೂರು ಮೈಲುಗಳ ತನಕ ಕಾಲು ತಲೆ ಬೋಳಾಗಿ 'ಯೂನಿಯನ್ ಜೇಕ್'ಗೆ ಸಲಾಂ ಹೊಡೆಯುತ್ತಾ ನಡೆಯಬೇಕು. ಬ್ರಿಟಿಷ್ ಜನಾಂಗದ 'ಗೌರವ' ಪ್ರದರ್ಶಕವಾದ 'ಯೂನಿಯನ್ ಜೇಕ್'ಗೆ ಸಲಾಂ ಹೊಡೆಯುವರೆ ದಿನಕ್ಕೊಂದು ಬಾರಿ ವಿದ್ಯಾರ್ಥಿಗಳೆಲ್ಲಾ ಒಟ್ಟು ಸೇರಿ ಆ ಕೆಲಸ ಮಾಡಲೇ ಬೇಕಾಗಿತ್ತು. ವಾಹನಗಳನ್ನು ಸರಕಾರಕ್ಕೊಪ್ಪಿಸುವ ಶಾಸನ ಎಷ್ಟು ಉಗ್ರವಾಗಿತ್ತೆಂದರೆ, ಸರಕಾರದ ಉಚ್ಚ ಅಧಿಕಾರಿಗಳೂ ಅದಕ್ಕೆ ಮೀರಿ ನಡೆಯಕೂಡದು. ಲಾಹೋರಿನ ಆಗಿನ ಹೈಕೋರ್ಟು ಜಡ್ಜರಾದ ಸರ್ ಶಾದಿಲಾಲರು ಈ ಆಜ್ಞೆಯನ್ನು ಮೊದಲು ಮನ್ನಿಸದಿದ್ದರೂ ಕೊನೆಗೆ ತಲೆ ತಗ್ಗಿಸಲೇ ಬೇಕಾಗಿಬಂತು. ಭಾರತದ ನ್ಯಾಯಾಧೀಶರೊಬ್ಬರೂ ಬ್ರಿಟನಿನ 'ಜೇಕ್ ಬೂಟ್'ಗೆ ಶರಣು ಬಂದರು.

ತನ್ನ 'ಆಜ್ಞೆ'ಗಳನ್ನು ಹಚ್ಚಲು ಸಾವಿರಕ್ಕೂ ಮೀರಿದ ಮನೆಗಳನ್ನು ಸರ್ ಜಾನ್ಸನ್ ಆರಿಸಿದ. ಇವೆಲ್ಲಾ ಹೆಚ್ಚಾಗಿ 'ಸರಕಾರಕ್ಕೆ ವಿಧೇಯರಲ್ಲದವರ' ಮನೆಗಳು. ಆ ಆಜ್ಞೆಗಳನ್ನು ಅವರ ಮನೆಗಳ ಗೋಡೆಗಳಿಗೆ ಅಂಟಿಸಿದ್ದು, ಯಾರಿಂದಲೂ ಯಾವ ವಿಧದಿಂದಲೂ ಹಾಳಾಗದಂತೆ ಆ ಮನೆಯವರೇ ಜವಾಬ್ದಾರರು. ಹಾಳಾದರೆ ಶಿಕ್ಷೆ ತಪ್ಪಿದ್ದಲ್ಲ. ಪಂಜಾಬಿನ ಶಿಪಾಯಿಗಳಿಂದ, ಪಂಜಾಬಿನ ಹಣದಿಂದ, ಹೋರಾಡಿದ ಪ್ರಥಮ ಮಹಾಯುದ್ಧದ ತತ್ವ ಪ್ರದರ್ಶನವು ಪಂಜಾಬಿನಲ್ಲಿ ಹೀಗೆ ಜಾನ್ಸನನಿಂದ ನಡೆಯಿತು. ಎಲ್ಲಾ ವಿದ್ಯುದ್ದೀಪ, ವಿದ್ಯುತ್ ಬೀಸಣಿಗೆಗಳೂ ಮಿಲಿಟರಿ ಅಧಿಕಾರಿಗಳ ವಶ ಒಪ್ಪಿಸಲಾದುವು. ಮಿಲಿಟರಿ ಅಧಿಕಾರಿಗಳ ಆಜ್ಞೆ ವಿನಾ ಯಾವನೇ ಅಂಗಡಿಗಾರನಾಗಲಿ, ಬಾಗಿಲು ತೆರೆಯಲೂ ಕೂಡದು, ಮುಚ್ಚಲೂ ಕೂಡದು! ಅಮೃತಸರದಂತೆ, ಸಿಪಾಯಿಗಳನ್ನು ಕಂಡಕೂಡಲೇ ನೆಲದಲ್ಲಿ ಹರಿದು ಹೋಗಬೇಕಾಗಿ ಬರದಿದ್ದರೂ, ಪ್ರತಿಯೊಬ್ಬ ನಾಗರಿಕನೂ 'ಖಾಕೀ' ವೇಷಧಾರಿಗೆ ಗೌರವ ತೋರಿಸಲೇ ಬೇಕು. ಪ್ರತಿದಿನ ಬೆಳಗ್ಗೆ, ಲಾಹೋರಿನ ಈ 'ಮಹಾ ಆಡಳಿತಗಾರ'ರಿಗೆ ಯಾರು ಯಾರು ಅವಿಧೇಯತೆ ತೋರಿಸಿದ್ದಾರೋ ಅವರಿಗೆ ಶಿಕ್ಷೆ ಸಾರಲ್ಪಡುತಿತ್ತು. ಶಿಕ್ಷೆಯೆಂದರೆ ಬಂಧನ, ಸ್ಥಾನಬದ್ಧತೆ, ಛಡೀ ಏಟುಗಳು ಇತ್ಯಾದಿ ಇತ್ಯಾದಿ.

ಆದರೆ ಜಾನ್ಸನ್ ಮಾಡಿದ ಒಂದು 'ಉಪಕಾರ'ವೆಂದರೆ, ಈ ತರದ ಶಿಕ್ಷೆ ವಿಧಿಸುವಲ್ಲಿ ಯಾವುದೇ ಜಾತಿಮತ ಭೇದ ತೋರಿಸದಿರುವುದು! ಹಿಂದುಗಳಗಳನ್ನು, ಮುಸ್ಲಿಮರೆಲ್ಲರನ್ನೂ ಇದರಲ್ಲಿ ಸಮಾನವಾಗಿ ನೋಡಿದ್ದು! ಯಾವುದೇ ಅಪರಾಧಕ್ಕೆ ಹಿಂದುವಿಗೆ ಎಷ್ಟು ಛಡಿಗಳೋ ಮುಸ್ಲಿಮನಿಗೂ ಅಷ್ಟೇ. ಒಬ್ಬ ರಾಜಭಕ್ತ, ಒಬ್ಬ ಕಾಂಗ್ರೆಸಿನವ, ಒಬ್ಬ ಹಿಂದು, ಒಬ್ಬ ಮುಸ್ಲಿಮ್ ಯಾರಾದರೂ ಅವರಿಗೆ ಒಂದೇ ತರ ಶಿಕ್ಷೆ. ಇಸ್ಲಾಮಿಯಾ ಕಾಲೇಜಿನ ಹುಡುಗರಂತೆ ಸನಾತನಧರ್ಮ ಕಾಲೇಜಿನ ಹುಡುಗರೂ ಕರೆಬಂದಾಗ ಒಟ್ಟು ಸೇರಿ 'ಯೂನಿಯನ್ ಜೇಕಿ'ಗೆ ಸಲಾಂ ಹೊಡೆಯಲೇ ಬೇಕು. ಹೀಗಾಗಿ ಜಿನ್ನರು ಮೂವತ್ತು ದಿವಸಗಳಿಂದಲೂ ಸಾಧಿಸಲಾರದ ಜಾತೀಯ ಐಕ್ಯವನ್ನು ಕರ್ನಲ್ ಜಾನ್ಸನ್ ಕೆಲವೇ ತಿಂಗಳಲ್ಲಿ ಸಾಧಿಸಿಬಿಟ್ಟ!

ಕರ್ನಲ್ ಜಾನ್ಸನ್ ಕರ್ನಲ್ ಆಗಿ ನಿವೃತ್ತನಾದ. 'ಲಾಹೋರಿನ ಸಂಗ್ರಾಮ'ವನ್ನು ಗೆದ್ದ ಆತನ ಪೌರುಷಕ್ಕೆ ಫೀಲ್ಡ್ ಮಾರ್ಶಲ್ ಪದವಿ ಆತನಿಗೆ ಸಲಬೇಕಾಗಿತ್ತು. ಆದರೆ ಬ್ರಿಟಿಷ್ ಸರಕಾ ಬರೇ 'ಸರ್' ಪದವಿ ಮಾತ್ರ ಕೊಟ್ಟು ಮುಗಿಸಿಬಿಟ್ಟಿತು. ಮಿಲಿಟರಿ ಅಧಿಕಾರದಿಂದ ಆತ ಅಕಾಲದಲ್ಲಿ ನಿವೃತ್ತನಾದರೂ ಮುಂದೆ ಬರ್ಮಾದ ಪೆಟ್ರೋಲಿಯಂ ಕಂಪನಿಯಲ್ಲಿ 'ಒಳ್ಳೆಯ' ಉದ್ಯೋಗ ದೊರಕದಿರಲಿಲ್ಲ. ಬಹುಶಃ ದ್ವಿತೀಯ ಮಹಾಯುದ್ಧದಲ್ಲಿ ಬರ್ಮಾಕ್ಕುಂಟಾದ ಗಂಡಾಂತರ ಕಾಲದಲ್ಲಿ, ಬ್ರಿಟನಿಗೆ ಹಾರಿಹೋಗಲು ಪಾಸುಪೋರ್ಟು ದೊರಕಿದ್ದೂ ಆತನ ಹಿಂದಿನ ಶೂರತನದ ಸ್ಮಾರಕವಿರಬೇಕು.

ಇದಾಗಿ, ಕರ್ನಲ್ ಜಾನ್ಸನ್ ಭಾರತೀಯರು ಮರೆಯಲಾರದ ಐತಿಹಾಸಿಕ ಪುರುಷ. 'ಲಾಹೋರ್ ಸಂಗ್ರಾಮ'ದ ಮಹಾ 'ವೀರ'. ಪಂಜಾಬಿನ 'ಮಾರ್ಶಲ್ ಲಾ'ದ ಕಪ್ಪು ದಿನಗಳ ನೆನಪುಳಿವವರೆಗೆ, ಪಂಜಾಬಿನ ಜನರ ಬತ್ತಲೆ ಬೆನ್ನುಗಳು ನಿರ್ದಯ ಛಡೀ ಏಟಿನ ಗುರುತನ್ನು ತೋರಿಸುವವರೆಗೆ ಕರ್ನಲ್ ಜಾನ್ಸನನ ಹೆಸರು ಭಾರತದ ಇತಿಹಾಸದಲ್ಲಿ ಮರೆಯಲಾರದು. ತನ್ನ 'ಸಾಮ್ರಾಜ್ಯ ರಕ್ಷಕ'ರಲ್ಲಿ ಓರ್ವ ಆಧಾರ ಸ್ತಂಭನಾದ ಕರ್ನಲ್ ಜಾನ್ಸನನ್ನು ಬ್ರಿಟನು ಮರೆತರೂ ಭಾರತ ಮರೆಯಲಿಕ್ಕಿಲ್ಲ. ಏಕೆಂದರೆ ನಿಜವಾಗಿ ಕರ್ನಲ್ ಜಾನ್ಸನನು ಭಾರತೀಯರಿಗೆ, ಹಿಂದುಗಳಿರಲಿ ಮುಸ್ಲಿಮರಿರಲಿ ಯಾರೇ ಆಗಲಿ, ತಮ್ಮ ದಾಸ್ಯ ಜೀವನದ ಕಹಿ ಅನುಭವವನ್ನು ತಿಳಿಸಿ, ಅವರಲ್ಲಿ ಸ್ವಾತಂತ್ರ್ಯ ಪ್ರೀತಿ ಹುಟ್ಟಿಸುವ ಮಹೋಪಕಾರ ಮಾಡಿದ್ದಾನೆ.! ಈ ದ್ವಿತೀಯ ಮಹಾಯುದ್ಧದ ವಿಜಯದ ನಂತರ ಮುಂದೆ ಇಂಥಾ ಕರ್ನಲ್ ಜಾನ್ಸರ ಅಗತ್ಯ ನಮಗೆ ಬರದಿರಲೆಂದು ಬ್ರಿಟನು ಭಾರತಗಳೆರಡೂ ಕೂಡಿ ಪ್ರಾರ್ಥಿಸಿಕೊಳ್ಳುವ.

ಸ್ಥಿರ ಆಸ್ತಿ ಯೇಲಂ

ದ. ಕ. ಸಬ್‌ಕೋರ್ಟು

ಕ್ರಮ ನಂಬ್ರ 21/1940ನೇ ವ್ಯಾಜ್ಯದಲ್ಲಿ ಕೋರ್ಟಿನವರು ಆಜ್ಞಾಪಿಸಿದ ಮೇರೆಗೆ ಮಂಗಳೂರು ತಾಲೂಕು ಮಣಿನಾಲ್ಕೂರು ಗ್ರಾಮದ ನೇತ್ರಾವತಿ ಹೊಳೆ ಬಳಿ ಮುಂಡೇಲು ಎಂಬ ವರ್ಷ 1ರ ಅಕ್ಕಿ ಮುಡಿ 63 ತೆಂಗಿನಕಾಯಿ 300 ಗೇಣಿ ಬರುವ ರೂಪಾಯಿ 51-8-0 ಜಮೀನ್ ತೀರ್ವೆಯ ಆಸ್ತಿ ಒಂದು, ವರ್ಷ ಒಂದರ ಅಕ್ಕಿ ಮುಡಿ ಹತ್ತು ಗೇಣಿ ಸಿಕ್ಕುವ ನಡುಮೊಗರು ಎಂಬ ಆಸ್ತಿ ಒಂದು ಈ ಎರಡು ಆಸ್ತಿಗಳು ಪುತ್ತೂರು ನನ್ನ ಆಫೀಸಿನಲ್ಲಿ ತಾ. 14-10-'43ಕ್ಕೆ ಬೆಳಗ್ಗೆ ಘಂಟೆ 10ಕ್ಕೆ ಯೇಲಂ ಮಾಡಲ್ಪಡುವವು. ಹೆಚ್ಚಿನ ವಿವರಗಳಿಗೆ ಏಲಂ ಇಸ್ತಿಹಾರು ಪ್ರತಿಯನ್ನು ನನ್ನಿಂದ ಪಡೆದು ತಿಳಿಯಬಹುದು.

ತಾರೀಕು 20-9-'43 } ಮೊಳಹಳ್ಳಿ ಶಿವರಾವ್, ಕೋರ್ಟು ರಿಸೀವರ್.

ಯುದ್ಧ ಎಂದರೆ ಒಂದು ಜೂಜು ಎನ್ನುವುದುಂಟು. ನಿಜವಾಗಿಯೂ ಇದೊಂದು ಜೂಜೇ. ಜೂಜಿನಲ್ಲಿ ಯಾರು ಸೋಲುತ್ತಾರೋ ಯಾರು ಗೆಲ್ಲುತ್ತಾರೋ ಯಾರಿಗೆ ಗೊತ್ತು. ಅಥವಾ ಒಮ್ಮೆ ಒಬ್ಬನಿಗೆ ಸೋಲು ಬಂದರೂ ಮರುಕ್ಷಣದಲ್ಲಿ ಆತನಿಗೆ ಮೇಲ್‌ಗೈ ಆದರೂ ಆಯಿತು. ಮೊನ್ನೆ ಮುಸಲಿನಿ ಪತನವಾಯಿತು, ಇಟಲಿ ಶರಣಾಯಿತು ಎಂದು ನಾವು ಓದಿದೆವು, ಮಿತ್ರರು ಇಟಲಿಯನ್ನು ಹೊಕ್ಕ ಸುದ್ದಿಯನ್ನೂ ಕೇಳಿದೆವು; ಬಡೋಗ್ಲಿಯೋ ಸರಕಾರದೊಡನೆ ಮಾಡಿದ ಸಂಧಾನ ಶರತಗಳನ್ನೂ ತಿಳಿದೆವು. ಆದರೆ ಒಮ್ಮೆಲೇ ಅಡಿಮೇಲಾಗಬೇಕೆ? ಇಟಲಿಯಲ್ಲಿ ಜರ್ಮನರು ಪ್ರಬಲ ಪ್ರತಿಭಟನೆ ಕೊಡಬೇಕೆ? ಸೆರೆಯಲ್ಲಿ ಸಿಲುಕಿದ್ದ, ಮಿತ್ರರು ತಮ್ಮ ವಶಕೊಡಬೇಕೆಂದು ಕರಾರು ಹಾಕಿದ್ದ ಮುಸಲನಿಯೇ ತಲೆ ತಪ್ಪಿಸಿ ಜರ್ಮನಿಗೆ ಓಡಿಹೋಗಬೇಕೆ? ಜರ್ಮನಿಯಲ್ಲಿ ಹಿಟ್ಲರನು ಆತನನ್ನು ಆದರದಿಂದ ಸ್ವಾಗತಿಸಿ 'ಸ್ವತಂತ್ರ ಇಟಲಿ ಸರಕಾರ'ವನ್ನು ಸ್ಥಾಪಿಸಬೇಕೆ? ಜರ್ಮನ ದಳ ಇಟಲಿಯಲ್ಲಿ ಸರ್ವತ್ರವೂ ಹಬ್ಬಿದ್ದು ಮಿತ್ರರನ್ನಿಂತು ಪ್ರತಿಭಟಿಸಬೇಕೆ? ಇಷ್ಟೆಲ್ಲಾ ಆದರೂ, ಮಿತ್ರರೊಡನೆ ಸಂಧಾನಮಾಡಿಕೊಂಡರೂ ಬಡೋಗ್ಲಿಯೋ ಸುದ್ದಿ ಕೇಳದಿರಬೇಕೆ? ಇಟಲಿ ಅರಸರು ಈಗ ಎಲ್ಲಿದ್ದಾರೆಂಬ ಪತ್ತೆಸಹ ತಿಳಿಯಬಾರದೆ? ಇದನ್ನೆಲ್ಲಾ ನೋಡಿದರೆ ಯುದ್ಧವು ನಿಜವಾಗಿಯೂ ದೊಡ್ಡದೊಂದು ಜೂಜು ಎಂದೇ ಅನಿಸುತ್ತದೆ.

ಬರ್ಮಾ ಧಾಳಿ ವಿಷಯ ಇತ್ತೀಚೆಗೆ ಮಿತ್ರ ವ್ಯೂಹದಲ್ಲಿ ಭಾರೀ ಮಾತುಕತೆಗಳಾಗುತ್ತವೆ. ಬ್ರಿಟಿಷ್ ಅವೆರಿಕನ್ ಸೈನಿಕರು ಬರ್ಮದ ಮೇಲೆ ಈಗಾಗಲೇ ಕಿರುಕುಳ ಹುಟ್ಟಿಸುತ್ತಿರುವರು. ಇದರಿಂದ ಜಪಾನರಾದರೂ ಸಿಟ್ಟಿಗೆದ್ದು ಪ್ರತೀಕಾರ ಕೈಕೊಳ್ಳಬಹುದು ಆದ್ದರಿಂದ ಭಾರತವಾದರೂ ಬೇಗನೇ ಭಾಂಬಿನ ಧಾಳಿಗೆ ಗುರಿಯಾಗಬಹುದಾದ ಕಾರಣ ಇದಕ್ಕೆ ಭಾರತೀಯರು ಸಿದ್ಧರಾಗಿರಬೇಕೆಂದು ಭಾರತದ ಸಂರಕ್ಷಣೆ ಖಾತೆಯ ಅಧಿಕಾರಿಗಳೇ ಹೇಳಿದ್ದಾರೆ, ಬರ್ಮವನ್ನು ಹಿಂದೆ ತೆಗೆದುಕೊಳ್ಳದಿದ್ದರೆ ಭಾರತದ ಆಹಾರ ಸಂಕಷ್ಟ ನಿವಾರಿಸಲು ಬೇರೆ ಉಪಾಯವಿಲ್ಲದಿರುವುದರಿಂದ, ಹಾಗೂ ಚೀನಕ್ಕೆ ಸಹಾಯ ನೀಡಲು ಸಾಧ್ಯವಿಲ್ಲದಿರುವುದರಿಂದ, ಬರ್ಮ ಧಾಳಿಯನ್ನು ಬೇಗನೇ ಪ್ರಾರಂಭಿಸಬೇಕೆಂದು ಹಲವು ಕಡೆಗಳಿಂದ ಒತ್ತಾಯಗಳೂ ಆಗುತ್ತಿವೆ. ಹೊಸ ಸೇನಾಪತಿ ಮೌಂಟ್‌ಬೇಟನರ ನೇಮಕವೂ, ಭಾರತಕ್ಕೆ ಸೇನಾಪತಿ ವೈಸರಾಯ್ ವೇವಲರ ನೇಮಕವೂ ಈ ಕಡೆಯಲ್ಲಿ ಮಿಲಿಟರಿ ಚಟುವಟಿಕೆ ಪ್ರಾರಂಭಿಸುವ ಸೂಚನೆಯೆಂದೇ ಹೇಳಲಾಗಿದೆ. ಅಂತೂ ಬರ್ಮಾ ಧಾಳಿ ವಿಚಾರವಿಂದು ಮಿತ್ರ ವ್ಯೂಹದಲ್ಲಿ ಪ್ರಾಮುಖ್ಯವಾದ ಚರ್ಚೆಯೆನ್ನಬಹುದು. ಇಷ್ಟರಲ್ಲಿ ಅತ್ತ ಕಡೆ ಫ್ರಾನ್ಸಿನ ಮೇಲೆ ಧಾಳಿಯಿಡುವ ಸುದ್ದಿಯೂ ಕೇಳಿಬರುತ್ತದೆ.

ಸಮರಭೂಮಿಯ ಸಂಚಾರ

ಸಾರ್ಡಿನಿಯಾ ಕೊರ್ಸಿಕಾಗಳ ಆಕ್ರಮಣದಿಂದ ಈ ಸುದ್ದಿಗೆ ಬಲಬಂದಿದೆ. ಸಿಸಿಲಿಯಿಂದ ಇಟಲಿಗೆ ಹಾರಿದಂತೆ ಕೊರ್ಸಿಕಾದಿಂದ ಫ್ರಾನ್ಸಿಗೆ ಇಳಿಯಬಹುದು, ಮಿತ್ರ ಸೈನ್ಯವು ಫ್ರಾನ್ಸಿಗಿಳಿದುಬಿಟ್ಟರೆ, ಬಾಗಿಲಿನಿಂದ ಶತ್ರುವನ್ನು ಓಡಿಸಿಬಿಟ್ಟರೆ ಅದೊಂದು ಮಹತ್ವದ ವಿಜಯವೆನ್ನಲು ಏನೂ ಅಡ್ಡಿಯಿಲ್ಲ.

ಯೂರೋಪಿನಲ್ಲಿ ಎಲ್ಲಿಯಾದರೂ ಧಾಳಿಯಾದರೆ, ಜರ್ಮನಿ, ಸಿಸಿಲಿಯಲ್ಲಿದ್ದುದಕ್ಕಿಂತ ಹತ್ತು ಪಾಲು ಹೆಚ್ಚು ಸೈನ್ಯ ಬಲದಿಂದ ಪ್ರತಿಭಟಿಸಲು ಸಿದ್ಧವಿರುವುದರಿಂದ ದ್ವಿತೀಯ ರಂಗವನ್ನು ತೆರೆವುದು ಕಠಿಣವಿದೆಯೆಂದು ಅಮೆರಿಕ ಉಪ ಸೈನ್ಯಾಧಿಕಾರಿ ಅಭಿಪ್ರಾಯ ಪಡುತ್ತಾನೆ. ಜರ್ಮನಿ ಮತ್ತು ಜಪಾನುಗಳು ಬೇಗನೇ ಸೋಲುವುದು ಸಾಧ್ಯವಿಲ್ಲವೆಂದು ಮಿಲಿಟರಿ ಗುಪ್ತ ಖಾತೆಯ ಮೇಜರ್ ಸ್ಟ್ರಾಂಗ್‌ನ ಅಭಿಪ್ರಾಯವಿದೆ. ಜರ್ಮನಿಯ ಯುದ್ಧ ಬಲದಲ್ಲಿ ಇಂದು ೩॥ ಕೋಟಿ ಕೆಲಸಗಾರರು ಎಂದರೆ ಯುದ್ಧ ಪೂರ್ವ ಕಾಲಕ್ಕಿಂತ ೧ ಕೋಟಿ ೨೦ ಲಕ್ಷ ಹೆಚ್ಚು ಸೈನಿಕರು ದುಡಿಯುತ್ತಿರುವರೆಂದೂ, ಜಪಾನಿಗಳಂತೂ ಇನ್ನೂ ಹುರುಪಿನಲ್ಲಿದ್ದಾರೆಂದೂ, ಜಪಾನಿನಲ್ಲಿ ಇನ್ನೂ ಸೈನ್ಯದಲ್ಲಿ ಸೇರಿಸಿ ಕೊಳ್ಳಲ್ಪಡದ ೨೦ ಲಕ್ಷ ವಯಸ್ಕರಿರುವರೆಂದೂ ಅಂತೆಯೇ ಜಪಾನಿಗೂ ಇನ್ನೂ ಜನರ ಕೊರತೆಯಾಗಿಲ್ಲವೆಂದೂ ಆತನ ಅಭಿಪ್ರಾಯವಿರುವುದು.

ಕೊರ್ಸಿಕದಿಂದ ಸೇನೆ ಸಲಕರಣೆಗಳನ್ನು ಜರ್ಮನರು ಖಾಲಿಮಾಡುತ್ತಿದ್ದಾರೆ, ನಾಲ್ಕು ಜರ್ಮನ್ ಹಡಗಗಳನ್ನು ಬ್ರಿಟಿಷ್ ಸಬ್‌ಮೆರಿನುಗಳು ಮುಳುಗಿಸಿದವೆಂದೂ ಸುದ್ದಿಯಿದೆ ಈಶಾನ್ಯ ಇಟಲಿಯಲ್ಲಿ ಜರ್ಮನರ ಮಹತ್ವದ ವಿಮಾನ ನೆಲೆಯಾಗಿದ್ದ ಫೋಗಿಯಾ ನಗರವು ಬ್ರಿಟಿಷ್ ಅಷ್ಟಮದಳದ ವಶವಾಯಿತೆಂದೂ ಸಾಲೆರ್ನೋ ರಂಗದಲ್ಲಿಯೂ ಜರ್ಮನರು ಬಹಳ ದಣಿದಿರುವರೆಂದೂ ಹೇಗಲಾಗಿದೆ. ಮುಸಲಿನಿಯ ಹೊಸ ಸರಕಾರದ ಮಂತ್ರಿಯಾದ ಮಾರ್ಶಲ್ ರುಡೋಲೆ ಗಜಾನಿಯನ್ನು ಕೊಲೆ ಮಾಡುವ ಪ್ರಯತ್ನ ನಡೆಯಿತೆಂದೂ ಆದರೆ ಅದು ಅಯಶಸ್ವಿಯಾಯಿತೆಂದೂ ರಾಯ್‌ಟರ್ ಸುದ್ದಿ. ಇತ್ತೀಚೆಗೆ ಜರ್ಮನರಿಂದ ಕೊಲೆ ಮಾಡಲ್ಪಟ್ಟ ಸಿನಾರ್ ಬ್ರೂನೋ ಬೂಜಿ ಇವನ ಕಮುನಿಸ್ಟ ಮಿತ್ರರು ಈ ಪ್ರಯತ್ನ ಮಾಡಿದರೆಂದೂ ಸಿನಾರ್ ಬುನೋ ಬಡೋಗ್ಲಿಯ ಮಿತ್ರನಾಗಿದ್ದಾನೆಂದೂ ತಿಳಿದು ಬರುವುದು

'ರಶ್ಯವು ಸೋಲುವವರೆಗೆ ಜರ್ಮನರು ಶಸ್ತ್ರವನ್ನು ಕೆಳಗಿಡುವಹಾಗಿಲ್ಲ' ಎಂದು ಜರ್ಮನಿಯ ಪರರಾಷ್ಟ್ರ ಮಂತ್ರಿ ಹೆರ್ ವಾನ್ ರಿಬೆನ್ ಟ್ರಾಪ್ ತ್ರಿರಾಷ್ಟ್ರ ಒಪ್ಪಂದದ ಕುರಿತು ಜರ್ಮನ್ ಆಕಾಶವಾಣಿಯಲ್ಲಿ ಭಾಷಣ ಮಾಡುತ್ತಾ ಹೇಳಿದನು. ಬ್ರಿಟನು ಅಮೆರಿಕಗಳ ಸ್ನೇಹದಿಂದ ಎಂತಹ ಪ್ರತಿಫಲ ಸಿಗುವುದೆಂಬುದಕ್ಕೆ ಇಟಲಿಯಿಂದು ಉದಾಹರಣೆಯಾಗಿದೆ. ಇಟಲಿಯ ರಾಜ ಮತ್ತು ರಾಜಕುಮಾರರಿಬ್ಬರೂ ಶರಣು ಬಂದು, ಮುಸಲಿನಿಯನ್ನು ನಾಶಮಾಡಲು ಸಹ ಒಪ್ಪಿದರೂ ಅವರಿಗೆ ದೊರೆತ ಬಹುಮಾನವೇನು? ಶರತ್ತವಿನಾ ಶರಣಾಗತಿಯಲ್ಲವೆ? ತ್ರಿರಾಷ್ಟ್ರ ಒಪ್ಪಂದದ ಬೆಂಬಲಕ್ಕಿರುವ ೭೫ ಕೋಟಿ ಜನರು ಕೂಡಾ ಕೊನೆಯ ವರೆಗೆ ಹೋರಾಡುವರು. ಎಂಥಾ ಗಂಡಾಂತರವೇ ಬಂದರೂ ಯೂರೋಪಿನ ಕೋಟೆ ರಕ್ಷಿಸಲು ನಮ್ಮ ಸೈನಿಕರು ಕೊನೆಯ ವರೆಗೂ ಹೋರಾಡುವರು' ಎಂದು ರಿಬನ್‌ಟ್ರಾಪ್ ತಿಳಿಸಿದನು. ಇದೇ ಸಂದರ್ಭದಲ್ಲಿ ಮುಸಲಿನಿ ಕೂಡಾ ಮಾತನಾಡುತ್ತಾ, ಇಟಲಿಯ ಅರಸು ನಮ್ಮ ದೇಶದ ಮೇಲೆ ತಂದ ಅಪಮಾನವನ್ನು ರಿಪಬ್ಲಿಕನ್ ಫೇಸಿಸ್ಟ ಪಕ್ಷವು ಅಳಿಸುವುದು ನಮ್ಮ ರಾಷ್ಟ್ರವು ತ್ರಿರಾಷ್ಟ್ರ ಒಪ್ಪಂದವನ್ನು ಅಕ್ಷರಶಃ ಪಾಲಿಸುವುದು' ಎಂದನು.

ದಕ್ಷಿಣ ಇಟಲಿಯಲ್ಲಿ ಮಿತ್ರರ ಸೈನ್ಯ ಮುಂದೊತ್ತಿ ಜರ್ಮನರು ಹೋರಾಡಿ ಹಿಂಗಾಲಾಗಿರುವರಂತೆ. ಎಂಟನೇ ಸೈನ್ಯವು ಒಪ್ಪಾಂಟೋ ನದಿಯ ಮಾರ್ಗವಾಗಿ ಮುನ್ನುಗ್ಗುತ್ತಿದೆ. ಐದನೇ ಸೈನ್ಯದ ಮುನ್ನಡೆಯೂ ಯಶಸ್ವಿಯಾಗಿದೆಯೆಂದು ಹೇಳಲಾಗಿದೆ ಸಾಲೆರ್ನೋದಲ್ಲಿ ಮುನ್ನುಗ್ಗಿದ್ದಲ್ಲದೆ, ಫೋಗ್ಗಿಯವನ್ನು ಆಕ್ರಮಣ ಮಾಡಿರುವುದಾಗಿ ಹೇಳಲಾಗಿದೆ. ರಶ್ಯದ ರಣರಂಗದಲ್ಲಿ ನೀಪರ ಕಾಳಗವಿಂದು ಜೋರಾಗಿದೆ. ನೀಪರ ನದೀ ದಂಡೆಯ ಮೇಲೆ ರಕ್ತದ ಕಾಲುವೆ ಹರಿಯುತ್ತಿವೆ. ಹೆಣಗಳು ರಾಶಿ ರಾಶಿಯಾಗಿ ಬೀಳುತ್ತಿವೆ ಕೀವ್ ಮತ್ತು ಜಾಪೆರಾಜಗಳ ನಡುವೆ ಹೆಚ್ಚುತ್ತಿರುವ ರಶ್ಯನರ ಒತ್ತಾಟವನ್ನು ತಡೆಗಟ್ಟಲು ಜರ್ಮನರು ಸಾಹಸಪಡುತ್ತಿರುವರುವದಾಗಿ ಹೇಳಲಾಗಿದೆ ಅತ್ತ ನಿಪ್ರೊಪೆಟ್ರೊವಸ್ಕಿನ ಸಲುವಾಗಿಯೂ ಭಾರೀ ಕಾಳಗ ನಡೆಯುತ್ತಿರುವುದು. ಅಂತೂ ರಶ್ಯನರು ಇಲ್ಲಿ ಇದು ವರೆಗೆ ೯೦೦ ಮಿಕ್ಕಿ ಹಳ್ಳಿ ಪಟ್ಟಣಗಳನ್ನು ಸ್ವಾಧೀನ ಪಡಿಸಿಕೊಂಡರು.

ಇಟಲಿಯ ಅರಸು ವಿಕ್ಟರ್ ಇಮಾನ್ಯುವೇಲ್, ರಾಜಕುಮಾರ ಉಮರಟೋ ಮತ್ತು ಮಾರ್ಶಲ್ ಬಡೋಗ್ಲಿಯೋ ಇವರು ದಕ್ಷಿಣ ಇಟಲಿಯಲ್ಲಿ ಇತ್ತೀಚೆಗೆ ಮಿತ್ರರು ಆಕ್ರಮಿಸಿದ ಒಂದು ನಗರದಲ್ಲಿ ಹೊಸ ರಾಜಧಾನಿಯನ್ನು ಸ್ಥಾಪಿಸಿರುವರೆಂದು ಬ್ರಿಂಡಸಿಯಲ್ಲಿರುವ ಓರ್ವ ಸುದ್ದಿಗಾರನು ತಿಳಿಸುತ್ತಾನೆ. ಅರಸರು ಒಂದು ತಿಂಗಳ ಹಿಂದೆಯೇ ಇಲ್ಲಿಗೆ ಬಂದಿದ್ದರಂತೆ. ಸಾಧ್ಯವಾದ ಕೂಡಲೇ ರೋಮ ನಗರಕ್ಕೆ ಹೋಗುವ ಆಲೋಚನೆಯೂ ಅವರಿಗಿದೆಯಂತೆ. ಈ ಮಧ್ಯೆ ಇಟಲಿಯ ರಾಜಕೀಯ ಪರಿಸ್ಥಿತಿಯನ್ನು ಶಾಂತಮಾಡುವ ಆಲೋಚನೆಯಿದೆ.

ಅಮೆರಿಕ ಯುದ್ಧ ಖಾತೆಯ ಅಧಿಕಾರಿಗಳೊಬ್ಬರು ಪತ್ರಿಕಾ ಪ್ರತಿನಿಧಿಗಳ ಸಭೆಯೊಂದರಲ್ಲಿ ಭಾಷಣ ಮಾಡುತ್ತಾ, ಯೂರೋಪಿನಲ್ಲಿ ಇನ್ನು ಕೆಲವೇ ತಿಂಗಳಲ್ಲಿ ಭೂಮಿ ಹಾಗೂ ವಿಮಾನ ಯುದ್ಧಗಳು ತೀರ ಉಗ್ರವಾಗಲಿವೆಯೆಂದು ತಿಳಿಸಿದರು. ವಿವರಗಳನ್ನು ಕೇಳಲು, ಅದನ್ನೀಗ ಬಹಿರಂಗಪಡಿಸುವ ಆಲೋಚನೆಯಿಲ್ಲವೆಂದರು ಆದರೆ ಈ ವರ್ಷದೊಳಗಾಗಿ ೩೭ ಲಕ್ಷ ಜನರನ್ನು ಒತ್ತಾಯದಿಂದ ಸೈನ್ಯಕ್ಕೆ ಸೇರಿಸಿಕೊಳ್ಳಲು ಅಡ್ಡಿ ಮಾಡಬಾರದೆಂದು ಅಮೆರಿಕದ ಸೈನ್ಯ ಮಂಡಳದ ಮುಖ್ಯಾಧಿಕಾರಿ ಜನರಲ್ ಮಾರ್ಶಲರು ಆಗ್ರಹ ಹಿಡಿದದ್ದಕ್ಕೆ ಇದೇ ಕಾರಣವೆಂದು ಮಿಲಿಟರಿ ತಜ್ಞರ ಅಭಿಪ್ರಾಯವಿದೆ. ಇಷ್ಟು ಸೈನ್ಯ ಸಂಗ್ರಹವಾಯಿತೆಂದರೆ ಮಹತ್ವದ ಯೋಜನೆ ಮಾಡಲು ಅನುಕೂಲವಾಗುವುದೆಂಬುದು ಖಂಡಿತ

NOTICE

In the Court of the District Judge of South Kanara.

O S No. 4/1943

Between

1 Venkatesh Shanbhogue, 2 Anandaraya Kamath 3. Keshava Shanbhogue—*Plaintiffs*

and

1. Shridhar Shanbhogue, 2. Moodlagiri Shanbhogue, 3 Shrinivasa Shanbhogue, 4 Anandaraya Nayak 5 Manjunatha Nayak, 6 Manjunatha Shanbhogue, 7. Venkatesh Bhat 8 Appanna Bhat, 9. Rama Kamath, 10 Vasudeva Shanbhogue, 11 Narashimha Pai, 12. H R. E. Board—*Defendants*

Notice is hereby given to all the concerned in the above matter that the above suit has been filed praying that the scheme decreed in O.S. 47/1921 and R. E. P. 142/1922 on the file of the Subordinate Judge of South Kanara, may be modified providing suitable provisions in the scheme regarding the powers and functions of the trustees, General Votaries, Manager or Executive Officer, maintaining of accounts and audit of the same, mode of election of trustees etc. The said suit now stands posted to 26-10-1943 All who may wish to oppose the suit or to suggest any further provisions to be added or modified, may, appear before the above mentioned Court on or before the said date at 11 A.M. either in person or by Vakil and state what they have to say.

Mangalore 1-10-1943 **K. S. Hegde** Advocate for Plaintiffs

ಭಾರತೀಯರು

ಈತನನ್ನು ಮರೆಯಲುಂಟೆ?

ಕರ್ನಲ್ ಫ್ರೇಂಕ್ ಜಾನ್ಸನ್

ಲಾಹೋರ್ ಸಂಗ್ರಾಮವನ್ನು ಗೆದ್ದ 'ವೀರ'!

ಲೇಖಕರು:— ಜಿ. ಎನ್. ಸಸ್ತ್ರಿ,
ಕಾರ್ಯದರ್ಶಿ, ಅ. ಭಾ. ಸಂಪಾದಕ ಪರಿಷತ್ತು.

ಬ್ರಿಟನಿನ ಓರ್ವ ಸಿಪಾಯಿ, ನಾಯಕ, ಯೋಧ, ಜಯಪ್ರದಾತ ಮಡಿದ! ಆದರೆ 'ಹಾಡುವವರಿಲ್ಲದೆ, ಕೊಂಡಾಡುವವರಿಲ್ಲದೆ, ಕಂಬನಿ ಸುರಿಸುವವರಿಲ್ಲದೆ' ಸತ್ತ! 'ಸ್ಟೇಟ್ಸ್‌ಮನ್' ಪತ್ರಿಕೆ ಕೂಡಾ, ಒಂದು ಮೂಲೆಯಲ್ಲಿ ನಾಲ್ಕೇ ಪಂಕ್ತಿ ಬರೆದು ಆತನ ಮರಣ ವಾರ್ತೆಯನ್ನು ಮುಗಿಸಿಬಿಟ್ಟಿತು. ಆದರೆ ಕರ್ನಲ್ ಸರ್ ಫ್ರೇಂಕ್ ಜಾನ್ಸನನ ನಿಧನಕ್ಕಾಗಿ ನಾನು ನನ್ನ ಕಂಬನಿ ಮಿಡಿಯದೆ ಇರಲಾರೆ. ಬ್ರಿಟನು ಆತನನ್ನು ಮರೆಯಬಹುದು. ಆದರೆ ಭಾರತ ಮರೆಯಲುಂಟೆ? ಆತನ ಹೆಸರು, ಭಾರತದ ಚರಿತ್ರೆಯಲ್ಲಿ ರೋಬರ್ಟ್ ಕ್ಲೈವ್, ವಾರನ್ ಹೇಸ್ಟಿಂಗ್ಸ್, ಜನರಲ್ ನಿಕೋಲ್‌ಸನ್ ಹಾಗೂ ಜನರಲ್ ಓಡ್ವಾಯರರ ಸಾಲಿಗೆ ಸೇರಿದ್ದು. ೧೯೧೯ ಮೇ ತಿಂಗಳಲ್ಲಾದ 'ಲಾಹೋರಿನ ಕಾಳಗ'ವನ್ನು ಇದೇ ಕರ್ನಲ್ ಜಾನ್ಸನನು ಏಕಾಕಿಯಾಗಿ ಗೆದ್ದು ಜನರನ್ನು ನೆಲಕ್ಕಪ್ಪಳಿಸಿ ಬ್ರಿಟನಿಗೆ ಜಯವೊದಗಿಸಿದ 'ವೀರ'!

ಪಂಜಾಬಿನ ಲೆಫ್ಟಿನೆಂಟ್ ಗವರ್ನರ್ ಸರ್ ಮೈಕಲ್ ಒಡ್ವಾಯರರ ಚಕ್ರವ್ಯೂಹದ ಮಹಾರಥನಾಗಿ ಕರ್ನಲ್ ಜಾನ್ಸನ್ ಪ್ರಸಿದ್ಧಿಗೇರಿದ. ಆ ಚಕ್ರವ್ಯೂಹದ ಇತರ ಮಹಾರಥರೆಂದರೆ ಜಲಿಯಾನವಾಲಾ ಕಾರಣ ಪುರುಷ ಜನರಲ್ ಡಯರ್; ನಾಗರಿಕರನ್ನು ಬಾಂಬು ಹಾಕಿ ಮರ್ದಿಸುವ ವಿದ್ಯೆಯನ್ನು ಮೊಟ್ಟಮೊದಲು ಬ್ರಿಟನಿಗೆ ಕಲಿಸಿದ 'ಮೇಧಾವಿ' ಕರ್ನಲ್ ಓಬ್ರಿನ್, ಮಿ|| ಪಿಸೋನ್, ಕರ್ನಲ್ ನೋರ್ತ್ ಮತ್ತು ಕೆಪ್ಟನ್ ಹೆಮಿಲ್ಟನ್ ಇವರು.

೧೯೧೯ರಲ್ಲಿ ಲಾಹೋರಿನ ಪ್ರಜೆಗಳನ್ನು ಮರ್ದಿಸಿ, ಭಾರತದ ಇತಿಹಾಸದಲ್ಲಿ ಗಣನೀಯ ಸ್ಮರಣೆಯನ್ನುಳಿಸದಿದ್ದರೆ, ಹಾಗೆ ಮಾಡಿ ಬ್ರಿಟನಿಗೆ ಮಹಾ ವಿಜಯವನ್ನು ಸಾಧಿಸಿ ಕೊಡದಿದ್ದರೆ, ಪ್ರಥಮ ಮಹಾ ಯುದ್ಧದಲ್ಲಿ ಏನೂ ಸಾಹಸಗೈದಿರದ ಈ ಕರ್ನಲ್ ಜಾನ್ಸನ್ 'ಸರ್' ಪದವಿ ಪಡೆಯದೇ ವಿರಾಮ ಹೊಂದಬೇಕಾಗಿ ಬರುತಿತ್ತು. ಪಂಜಾಬು, ಈ ಯುದ್ಧದಲ್ಲಿ ಹೇಗೋ ಹಾಗೆಯೇ ಕಳೆದ ಯುದ್ಧದಲ್ಲಿಯೂ ತನುಮನ ಧನಗಳಿಂದ ಜರ್ಮನರನ್ನು ಸೋಲಿಸಲು ಅಪಾರ ತ್ಯಾಗಮಾಡಿತ್ತು. ಹೀಗೆ ಮಾಡಿದ ಉಪಕಾರಕ್ಕೆ ಪಂಜಾಬಿಗೆ 'ಪ್ರತ್ಯುಪಕಾರ'ವು ಬ್ರಿಟನಿಂದ ಸಹಜವಾಗಿ ದೊರಕಲೇ ಬೇಕಾಗಿತ್ತು. ಸರ್ ಮೈಕೆಲ್ ಒಡ್ವಾಯರ್, ಆಗಿನ ಪಂಜಾಬಿನ ಗವರ್ನರನು, ಪ್ರಥಮ ಮಹಾ ಯುದ್ಧದಲ್ಲಿ ಪಂಜಾಬಿನ ಜನರನ್ನು, ಸಂಪತ್ತನ್ನು ಬೇಕಾದಷ್ಟು ಶೇಖರಿಸಿದವನಿರಲು, ತಾನು ಅಲ್ಲಿನ ಅಧಿಕಾರವನ್ನು ಬಿಟ್ಟು ಹೋಗುವ ಮೊದಲು, ಪಂಜಾಬಿಗೆ 'ರಕ್ತ ಮತ್ತು ಸಂಪತ್ತು'ಗಳ ಪ್ರತ್ಯುಪಕಾರ ಮಾಡಿಯೇ ಹೋಗಬೇಕಾಗಿತ್ತು.

ರೌಲೆಟ್ ಏಕ್ಟ್ ಚಳವಳಿ ಪ್ರಾರಂಭವಾಯಿತು. ಮಹಾತ್ಮಾ ಗಾಂಧಿಯವರ ಬಂಧನವಾದ ಕೂಡಲೇ ಸರ್ ಮೈಕಲ್ ಒಡ್ವಾಯರ್ ಪಂಜಾಬಿನಲ್ಲಿ ಮಾರ್ಶಲ್ ಲಾ ಸಾರಿದ. ಬ್ರಿಟಿಷರು ಯಾವ ಮಾರ್ಶಲ್ ಲಾ ವಿರೋಧ ಹೋರಾಡಿದರೋ ಅದನ್ನೇ ಭಾರತದಲ್ಲಿ ಪ್ರಯೋಗಿಸಿದರು.

ಕರ್ನಲ್ ಫ್ರೇಂಕ್ ಜಾನ್ಸನನು ಲಾಹೋರಿನ ಮಿಲಿಟರಿ ಕಮಾಂಡರಾಗಿ ನೇಮಕ ಹೊಂದಿದ ಈ ವೀರ ಸ್ಥಾನದಿಂದಲೇ ಕರ್ನಲ್ ಜಾನ್ಸನ್ ತನ್ನ 'ಅಮರ ಪದವಿ' ಗಳಿಸಿಕೊಂಡ. ಭಾರತದ ಇತಿಹಾಸದಲ್ಲಿ ಇಂಥಾ ಕೆಲವು ಘಟನೆಗಳು ನಡೆದದ್ದುಂಟು. 'ನೀರು ಹೊರುವವನೊಬ್ಬನು ಮುಗಲ ಸಾಮ್ರಾಜ್ಯವನ್ನು ಒಂದು ದಿನ ಆಳಿದ್ದುಂಟು. ಹುಮಾಯೂನ್ ಹೆಮುಬಕಲ್ ಎಂಬ ಉಪ್ಪು ಮಾರಾಟಗಾರನು ಉತ್ತರ ಭಾರತವನ್ನು ಆಳಿದ್ದುಂಟು. ಅಫ್ಘಾನಿಸ್ಥಾನದಲ್ಲಿ ಅಮಾನುಲ್ಲಾ ಖಾನನನ್ನು ಕೆಳತಳ್ಳಿ ಬಾಚಾಸಾಕೋ ಆಳಿದ್ದುಂಟು. ಆದರೆ ಮೇಲಿನವರು ಯಾರೊಬ್ಬರೂ, ಕರ್ನಲ್ ಜಾನ್ಸನ್ ಲಾಹೋರಿನ ಮಿಲಿಟರಿ ಕಮಾಂಡರಾಗಿ ಮಾಡಿದಂಥಾ ಕೆಲ ತಿಂಗಳು ಮಾಡಿದ ದುರಾಡಳಿತವನ್ನು ಮಾಡಿಲ್ಲ.

ಲಾಹೋರಿನ ಮಿಲಿಟರಿ ಕಮಾಂಡರಾಗಿ ಕರ್ನಲ್ ಜಾನ್ಸನ್ ಹೊರಡಿಸಿದ ಹಲವು ಆಜ್ಞೆಗಳಲ್ಲಿ ಕೆಲವನ್ನು ಮಾತ್ರ ಕೊಟ್ಟರೆ ಸಾಕು. 'ಸಿವಿಲ್ ಎಂಡ್ ಮಿಲಿಟರಿ ಗಜೇಟ್' ಎಂಬ ಒಂದು ಪತ್ರಿಕೆ ಹೊರತು, ಲಾಹೋರಿನ ಇತರ ಎಲ್ಲಾ ಪತ್ರಿಕೆಗಳೂ ನಿಲ್ಲಿಸಲ್ಪಟ್ಟವು. ಪ್ರತಿಯೊಬ್ಬ ನಾಗರಿಕನು, ತನ್ನ ಸ್ವಾಧೀನವಿರುವ, ಗಾಡಿ, ಸೈಕಲು, ಕಾರು ಪ್ರತಿಯೊಂದನ್ನೂ ಸರಕಾರಕ್ಕೆ ಒಪ್ಪಿಸಬೇಕಾಯಿತು. ಪ್ರತಿಯೊಬ್ಬ ನಾಗರಿಕನೂ ರಾತ್ರಿ ಎಂಟು ಗಂಟೆಯಿಂದ ಮುಂಜಾನೆ ಎಂಟು ಗಂಟೆ ವರೆಗೆ ಮನೆಯೊಳಗೇ ಇರಬೇಕಾಯಿತು. ಯಾರು ಈ 'ಕರ್ಫ್ಯೂ' ಆಜ್ಞೆಗೆ ವಿರೋಧರೋ ಅವರೆಲ್ಲರೂ ಬಂಧಿಸಲ್ಪಟ್ಟರು; ಛಡಿ ಏಟುಗಳಿಗಳೊಗಾದರು; ಕರ್ನಲ್ ಜಾನ್ಸನ್ ವಿದ್ಯಾರ್ಥಿಗಳ ವಿಷಯ ಪ್ರತ್ಯೇಕ ಎಚ್ಚರ ವಹಿಸಿದ. ಪ್ರಥಮ ಜಾಗತಿಕ ಯುದ್ಧವನ್ನು ಸ್ವಾತಂತ್ರ್ಯ ಧ್ಯೇಯದಿಂದ ಗೆದ್ದ ಹುಮ್ಮಸಿನಲ್ಲಿ ಈ ತರುಣ ಜನಾಂಗವು ಹೊಡೆತ, ಛಡಿ, ಸೆರೆಮನೆ ಸಂಕಷ್ಟಗಳನ್ನು ಅನುಭವಿಸಬೇಕಾಯಿತು. ದಿನವೊಂದಕ್ಕೆ ನಾಲ್ಕು ಸಲ, ಕರೆ ಕೇಳಿದೊಡನೆ ಎಲ್ಲಾ ವಿದ್ಯಾರ್ಥಿಗಳೂ ಬ್ರಡ್ಲಾಫ್ ಹಾಲಿನಲ್ಲಿ ಸೇರಬೇಕು. ಇದಕ್ಕೆ ಹಾಜರಾಗದವನಿಗೆ ಭಯಂಕರ ಶಿಕ್ಷೆಯಿತ್ತು. ವಿದ್ಯಾರ್ಥಿಗಳಿಗೆ ವಿಧೇಯತೆ ಕಲಿಸುವ ಸಲುವಾಗಿ, ಉರಿ ಬಿಸಿಲಲ್ಲಿ ಮೂರು ಮೈಲುಗಳ ತನಕ ಕಾಲು ತಲೆ ಬೋಳಾಗಿ 'ಯೂನಿಯನ್ ಜೇಕ್'ಗೆ ಸಲಾಂ ಹೊಡೆಯುತ್ತಾ ನಡೆಯಬೇಕು. ಬ್ರಿಟಿಷ್ ಜನಾಂಗದ 'ಗೌರವ' ಪ್ರದರ್ಶಕವಾದ 'ಯೂನಿಯನ್ ಜೇಕ್'ಗೆ ಸಲಾಂ ಹೊಡೆಯುವರೆ ದಿನಕ್ಕೊಂದು ಬಾರಿ ವಿದ್ಯಾರ್ಥಿಗಳೆಲ್ಲಾ ಒಟ್ಟು ಸೇರಿ ಆ ಕೆಲಸ ಮಾಡಲೇ ಬೇಕಾಗಿತ್ತು. ವಾಹನಗಳನ್ನು ಸರಕಾರಕ್ಕೊಪ್ಪಿಸುವ ಶಾಸನ ಎಷ್ಟು ಉಗ್ರವಾಗಿತ್ತೆಂದರೆ, ಸರಕಾರದ ಉಚ್ಚ ಅಧಿಕಾರಿಗಳೂ ಅದಕ್ಕೆ ಮೀರಿ ನಡೆಯಕೂಡದು. ಲಾಹೋರಿನ ಆಗಿನ ಹೈಕೋರ್ಟು ಜಡ್ಜರಾದ ಸರ್ ಶಾದಿಲಾಲರು ಈ ಆಜ್ಞೆಯನ್ನು ಮೊದಲು ಮನ್ನಿಸದಿದ್ದರೂ ಕೊನೆಗೆ ತಲೆ ತಗ್ಗಿಸಲೇ ಬೇಕಾಗಿ ಬಂತು. ಭಾರತದ ನ್ಯಾಯಾಧೀಶರೊಬ್ಬರೂ ಬ್ರಿಟನಿನ 'ಜೇಕ್ ಬೂಟ್'ಗೆ ಶರಣು ಬಂದರು.

ತನ್ನ 'ಆಜ್ಞೆ'ಗಳನ್ನು ಹಚ್ಚಲು ಸಾವಿರಕ್ಕೂ ಮೀರಿದ ಮನೆಗಳನ್ನು ಸರ್ ಜಾನ್ಸನ್ ಆರಿಸಿದ. ಇವೆಲ್ಲಾ ಹೆಚ್ಚಾಗಿ 'ಸರಕಾರಕ್ಕೆ ವಿಧೇಯರಲ್ಲದವರ' ಮನೆಗಳು. ಆ ಆಜ್ಞೆಗಳನ್ನು ಅವರ ಮನೆಗಳ ಗೋಡೆಗಳಿಗೆ ಅಂಟಿಸಿದ್ದು, ಯಾರಿಂದಲೂ ಯಾವ ವಿಧದಿಂದಲೂ ಹಾಳಾಗದಂತೆ ಆ ಮನೆಯವರೇ ಜವಾಬ್ದಾರರು. ಹಾಳಾದರೆ ಶಿಕ್ಷೆ ತಪ್ಪಿದ್ದಲ್ಲ. ಪಂಜಾಬಿನ ಶಿಪಾಯಿಗಳಿಂದ, ಪಂಜಾಬಿನ ಹಣದಿಂದ ಹೋರಾಡಿದ ಪ್ರಥಮ ಮಹಾಯುದ್ಧದ ತತ್ವ ಪ್ರದರ್ಶನವು ಪಂಜಾಬಿನಲ್ಲಿ ಹೀಗೆ ಜಾನ್ಸನನಿಂದ ನಡೆಯಿತು. ಎಲ್ಲಾ ವಿದ್ಯುದ್ದೀಪ, ವಿದ್ಯುತ್ ಬೀಸಣಿಗೆಗಳೂ ಮಿಲಿಟರಿ ಅಧಿಕಾರಿಗಳ ವಶ ಒಪ್ಪಿಸಲಾದುವು. ಮಿಲಿಟರಿ ಅಧಿಕಾರಿಗಳ ಆಜ್ಞೆ ವಿನಾ ಯಾವನೇ ಅಂಗಡಿಗಾರನಾಗಲಿ, ಬಾಗಿಲು ತೆರೆಯಲೂ ಕೂಡದ್ದು, ಮುಚ್ಚಲೂ ಕೂಡದು! ಅಮೃತಸರದಂತೆ, ಸಿಪಾಯಿಗಳನ್ನು ಕಂಡಕೂಡಲೇ ನೆಲದಲ್ಲಿ ಹರಿದು ಹೋಗಬೇಕಾಗಿ ಬರದಿದ್ದರೂ, ಪ್ರತಿಯೊಬ್ಬ ನಾಗರಿಕನೂ 'ಖಾಕೀ' ವೇಷಧಾರಿಗೆ ಗೌರವ ತೋರಿಸಲೇ ಬೇಕು. ಪ್ರತಿದಿನ ಬೆಳಗ್ಗೆ, ಲಾಹೋರಿನ ಈ 'ಮಹಾ ಆಡಳಿತಗಾರ'ರಿಗೆ ಯಾರು ಯಾರು ಅವಿಧೇಯತೆ ತೋರಿಸಿದ್ದಾರೋ ಅವರಿಗೆ ಶಿಕ್ಷೆ ಸಾರಲ್ಪಡುತಿತ್ತು. ಶಿಕ್ಷೆಯೆಂದರೆ ಬಂಧನ, ಸ್ಥಾನಬದ್ಧತೆ, ಛಡೀ ಏಟುಗಳು ಇತ್ಯಾದಿ ಇತ್ಯಾದಿ.

ಆದರೆ ಜಾನ್ಸನ್ ಮಾಡಿದ ಒಂದು 'ಉಪಕಾರ'ವೆಂದರೆ, ಈ ತರದ ಶಿಕ್ಷೆ ವಿಧಿಸುವಲ್ಲಿ ಯಾವುದೇ ಜಾತಿಮತ ಭೇದ ತೋರಿಸದಿರುವುದು! ಹಿಂದುಗಳಗಳನ್ನು, ಮುಸ್ಲಿಮರೆಲ್ಲರನ್ನೂ ಇದರಲ್ಲಿ ಸಮಾನವಾಗಿ ನೋಡಿದ್ದು! ಯಾವುದೇ ಅಪರಾಧಕ್ಕೆ ಹಿಂದುವಿಗೆ ಎಷ್ಟು ಛಡಿಗಳೋ ಮುಸ್ಲಿಮನಿಗೂ ಅಷ್ಟೇ. ಒಬ್ಬ ರಾಜಭಕ್ತ, ಒಬ್ಬ ಕಾಂಗ್ರೆಸಿನವ, ಒಬ್ಬ ಹಿಂದು, ಒಬ್ಬ ಮುಸ್ಲಿಮ್ ಯಾರಾದರೂ ಅವರಿಗೆ ಒಂದೇ ತರ ಶಿಕ್ಷೆ. ಇಸ್ಲಾಮಿಯಾ ಕಾಲೇಜಿನ ಹುಡುಗರಂತೆ ಸನಾತನ ಧರ್ಮ ಕಾಲೇಜಿನ ಹುಡುಗರೂ ಕರೆ ಬಂದಾಗ ಒಟ್ಟು ಸೇರಿ 'ಯೂನಿಯನ್ ಜೇಕ್'ಗೆ ಸಲಾಂ ಹೊಡೆಯಲೇ ಬೇಕು. ಹೀಗಾಗಿ ಜಿನ್ನರು ಮೂಹತ್ತು ದಿವಸಗಳಿಂದಲೂ ಸಾಧಿಸಲಾರದ ಜಾತೀಯ ಐಕ್ಯವನ್ನು ಕರ್ನಲ್ ಜಾನ್ಸನ್ ಕೆಲವೇ ತಿಂಗಳಲ್ಲಿ ಸಾಧಿಸಿಬಿಟ್ಟ!

ಕರ್ನಲ್ ಜಾನ್ಸನ್ ಕರ್ನಲ್ ಆಗಿ ನಿವೃತ್ತನಾದ. 'ಲಾಹೋರಿನ ಸಂಗ್ರಾಮ'ವನ್ನು ಗೆದ್ದ ಆತನ ಪೌರುಷಕ್ಕೆ ಫೀಲ್ಡ್ ಮಾರ್ಶಲ್ ಪದವಿ ಆತನಿಗೆ ಸಲಬೇಕಾಗಿತ್ತು. ಆದರೆ ಬ್ರಿಟಿಷ್ ಸರಕಾರ ಬರೀ 'ಸರ್' ಪದವಿ ಮಾತ್ರ ಕೊಟ್ಟು ಮುಗಿಸಿಬಿಟ್ಟಿತು. ಮಿಲಿಟರಿ ಅಧಿಕಾರದಿಂದ ಆತ ಅಕಾಲದಲ್ಲಿ ನಿವೃತ್ತನಾದರೂ ಮುಂದೆ ಬರ್ಮಾದ ಪೆಟ್ರೋಲಿಯಂ ಕಂಪನಿಯಲ್ಲಿ 'ಒಳ್ಳೆಯ' ಉದ್ಯೋಗ ದೊರಕದಿರಲಿಲ್ಲ. ಬಹುಶಃ ದ್ವಿತೀಯ ಮಹಾಯುದ್ಧದಲ್ಲಿ ಬರ್ಮಕ್ಕುಂಟಾದ ಗಂಡಾಂತರ ಕಾಲದಲ್ಲಿ, ಬ್ರಿಟನಿಗೆ ಹಾರಿಹೋಗಲು ಪಾಸುಪೋರ್ಟು ದೊರಕಿದ್ದೂ ಆತನ ಹಿಂದಿನ ಶೂರತನದ ಸ್ಮಾರಕವಿರಬೇಕು.

ಇದಾಗಿ, ಕರ್ನಲ್ ಜಾನ್ಸನ್, ಭಾರತೀಯರು ಮರೆಯಲಾರದ ಐತಿಹಾಸಿಕ ಪುರುಷ. 'ಲಾಹೋರ್ ಸಂಗ್ರಾಮ'ದ ಮಹಾ 'ವೀರ'. ಪಂಜಾಬಿನ 'ಮಾರ್ಶಲ್ ಲಾ'ದ ಕಪ್ಪು ದಿನಗಳ ನೆನಪುಳಿವವರೆಗೆ, ಪಂಜಾಬಿನ ಜನರ ಬತ್ತಲೆ ಬೆನ್ನುಗಳು ನಿರ್ದಯ ಛಡೀ ಏಟಿನ ಗುರುತನ್ನು ತೋರಿಸುವವರೆಗೆ ಕರ್ನಲ್ ಜಾನ್ಸನನ ಹೆಸರು ಭಾರತದ ಇತಿಹಾಸದಲ್ಲಿ ಮರೆಯಲಾರದು. ತನ್ನ 'ಸಾಮ್ರಾಜ್ಯ ರಕ್ಷಕ'ರಲ್ಲಿ ಓರ್ವ ಆಧಾರ ಸ್ತಂಭನಾದ ಕರ್ನಲ್ ಜಾನ್ಸನನ್ನು ಬ್ರಿಟನು ಮರೆತರೂ ಭಾರತ ಮರೆಯಲಿಕ್ಕಿಲ್ಲ. ಏಕೆಂದರೆ ನಿಜವಾಗಿ ಕರ್ನಲ್ ಜಾನ್ಸನನು ಭಾರತೀಯರಿಗೆ, ಹಿಂದುಗಳಿರಲಿ ಮುಸ್ಲಿಮರಿರಲಿ ಯಾರೇ ಆಗಲಿ, ತನ್ನ ದಾಸ್ಯ ಜೀವನದ ಕಹಿ ಅನುಭವವನ್ನು ತಿಳಿಸಿ; ಅವರಲ್ಲಿ ಸ್ವಾತಂತ್ರ್ಯ ಪ್ರೀತಿ ಹುಟ್ಟಿಸುವ ಮಹೋಪಕಾರ ಮಾಡಿದ್ದಾನೆ.! ಈ ದ್ವಿತೀಯ ಮಹಾಯುದ್ಧದ ವಿಜಯದ ನಂತರ ಮುಂದೆ ಇಂಥಾ ಕರ್ನಲ್ ಜಾನ್ಸರ ಅಗತ್ಯ ನಮಗೆ ಬರದಿರಲೆಂದು ಬ್ರಿಟನು ಭಾರತಗಳೆರಡೂ ಕೂಡಿ ಪ್ರಾರ್ಥಿಸಿಕೊಳ್ಳುವ.

ಸ್ಥಿರ ಆಸ್ತಿ ಯೇಲಂ

ದ. ಕ. ಸಬ್ ಕೋರ್ಟು

ಕ್ರಮ ನಂಬ್ರ 21/1940ನೇ ವ್ಯಾಜ್ಯದಲ್ಲಿ ಕೋರ್ಟಿನವರು ಆಜ್ಞಾಪಿಸಿದ ಮೇರೆಗೆ ಮಂಗಳೂರು ತಾಲೂಕ ಮಣಿನಾಲ್ಕೂರು ಗ್ರಾಮದ ನೇತ್ರಾವತಿ ಹೊಳೆ ಬಳಿ ಮುಂಡೇಲು ಎಂಬ ವರ್ಷ 1ರ ಅಕ್ಕಿ ಮುಡಿ 63 ತೆಂಗಿನಕ್ಕಾ 300 ಗೇಣಿ ಬರುವ ರೂಪಾಯಿ 51-8-0 ಜಮೀನು ತೀರ್ವೆಯ ಆಸ್ತಿ ಒಂದು. ವರ್ಷ ಒಂದರ ಅಕ್ಕಿ ಮುಡಿ ಹತ್ತು ಗೇಣಿ ಸಿಕ್ಕುವ ನಡುಮೊಗ್ರು ಎಂಬ ಆಸ್ತಿ ಒಂದು ಈ ಎರಡು ಆಸ್ತಿಗಳು ಪುತ್ತೂರು ನನ್ನ ಆಫೀಸಿನಲ್ಲಿ ತಾ. 14-10-'43ಕ್ಕೆ ಬೆಳಿಗ್ಗೆ ಘಂಟೆ 10ಕ್ಕೆ ಯೇಲಂ ಮಾಡಲ್ಪಡುವವು. ಹೆಚ್ಚಿನ ವಿವರಗಳಿಗೆ ಏಲಂ ಇಸ್ತಿಹಾರಿನ ಪ್ರತಿಯನ್ನು ನನ್ನಿಂದ ಪಡೆದು ತಿಳಿಯಬಹುದು.

ತಾರೀಕು 20-9-'43 } ಮೊಳಹಳ್ಳಿ ಶಿವರಾವ್, ಕೋರ್ಟು ಅಮೀನ್.

ಸಮರ ಭೂಮಿಯ ಸಂಚಾರ

ಯುದ್ಧ ಎಂದರೆ ಒಂದು ಜೂಜು ಎನ್ನುವುದುಂಟು. ನಿಜವಾಗಿಯೂ ಇದೊಂದು ಜೂಜೇ. ಜೂಜಿನಲ್ಲಿ ಯಾರು ಸೋಲುತ್ತಾರೋ ಯಾರು ಗೆಲ್ಲುತ್ತಾರೋ ಯಾರಿಗೆ ಗೊತ್ತು. ಅಥವಾ ಒಮ್ಮೆ ಒಬ್ಬನಿಗೆ ಸೋಲು ಬಂದರೂ ಮರುಕ್ಷಣದಲ್ಲಿ ಆತನಿಗೆ ಮೇಲ್ಗೈ ಆದರೂ ಆಯಿತು. ಮೊನ್ನೆ ಮುಸಲಿನಿ ಪತನನಾಯಿತು, ಇಟಲಿ ಶರಣಾಯಿತು ಎಂದು ನಾವು ಓದಿದೆವು; ಮಿತ್ರರು ಇಟಲಿಯನ್ನು ಹೊಕ್ಕ ಸುದ್ದಿಯನ್ನೂ ಕೇಳಿದೆವು. ಬಡೋಗ್ಲಿಯೋ ಸರಕಾರದೊಡನೆ ಮಾಡಿದ ಸಂಧಾನ ಶರತಗಳನ್ನೂ ತಿಳಿದೆವು. ಆದರೆ ಒಮ್ಮೆಲೇ ಅಡಿಮೇಲಾಗಬೇಕೆ? ಇಟಲಿಯಲ್ಲಿ ಜರ್ಮನರು ಪ್ರಬಲ ಪ್ರತಿಭಟನೆ ಕೊಡಬೇಕೆ? ಸೆರೆಯಲ್ಲಿ ಸಿಲುಕಿದ್ದ, ಮಿತ್ರರು ತಮ್ಮ ವಶಕೊಡಬೇಕೆಂದು ಕರಾರು ಹಾಕಿದ್ದ ಮುಸಲನಿಯೇ ತಲೆ ತಪ್ಪಿಸಿ ಜರ್ಮನಿಗೆ ಓಡಿಹೋಗಬೇಕೆ? ಜರ್ಮನಿಯಲ್ಲಿ ಹಿಟ್ಲರನು ಆತನನ್ನು ಆದರದಿಂದ ಸ್ವಾಗತಿಸಿ 'ಸ್ವತಂತ್ರ ಇಟಲಿ ಸರಕಾರ'ವನ್ನು ಸ್ಥಾಪಿಸಬೇಕೆ? ಜರ್ಮನ ದಳ ಇಟಲಿಯಲ್ಲಿ ಸರ್ವತ್ರವೂ ಹಬ್ಬಿದ್ದು ಮಿತ್ರರನ್ನಿಂತು ಪ್ರತಿಭಟಿಸಬೇಕೆ? ಇಷ್ಟೆಲ್ಲಾ ಆದರೂ, ಮಿತ್ರರೊಡನೆ ಸಂಧಾನಮಾಡಿಕೊಂಡರೂ ಬಡೋಗ್ಲಿಯೋ ಸುದ್ದಿ ಕೇಳದಿರಬೇಕೆ? ಇಟಲಿ ಅರಸರು ಈಗ ಎಲ್ಲಿದ್ದಾರೆಂಬ ಪತ್ತೆ ಸಹ ತಿಳಿಯಬಾರದೆ? ಇದನ್ನೆಲ್ಲಾ ನೋಡಿದರೆ ಯುದ್ಧವು ನಿಜವಾಗಿಯೂ ದೊಡ್ಡದೊಂದು ಜೂಜು ಎಂದೇ ಅನಿಸುತ್ತದೆ.

ಬರ್ಮಾ ಧಾಳಿ ವಿಷಯ ಇತ್ತೀಚೆಗೆ ಮಿತ್ರ ವ್ಯೂಹದಲ್ಲಿ ಭಾರೀ ಮಾತುಕತೆಗಳಾಗುತ್ತವೆ. ಬ್ರಿಟಿಷ್ ಅಮೇರಿಕನ್ ಸೈನಿಕರು ಬರ್ಮದ ಮೇಲೆ ಈಗಾಗಲೇ ಕಿರುಕುಳ ಹುಟ್ಟಿಸುತ್ತಿರುವರು. ಇದರಿಂದ ಜಪಾನರಾದರೂ ಸಿಟ್ಟಿಗೆದ್ದು, ಪ್ರತೀಕಾರ ಕೈಕೊಳ್ಳಬಹುದು. ಆದ್ದರಿಂದ ಭಾರತವಾದರೂ ಬೇಗನೇ ಬಾಂಬಿನ ಧಾಳಿಗೆ ಗುರಿಯಾಗಬಹುದಾದ ಕಾರಣ ಇದಕ್ಕೆ ಭಾರತೀಯರು ಸಿದ್ಧರಾಗಿರಬೇಕೆಂದು ಭಾರತದ ಸಂರಕ್ಷಣೆ ಖಾತೆಯ ಅಧಿಕಾರಿಗಳೇ ಹೇಳಿದ್ದಾರೆ. ಬರ್ಮವನ್ನು ಹಿಂದೆ ತೆಗೆದುಕೊಳ್ಳದಿದ್ದರೆ ಭಾರತದ ಆಹಾರ ಸಂಕಷ್ಟ ನಿವಾರಿಸಲು ಬೇರೆ ಉಪಾಯವಿಲ್ಲದಿರುವುದರಿಂದ, ಹಾಗೂ ಚೀನಕ್ಕೆ ಸಹಾಯ ನೀಡಲು ಸಾಧ್ಯವಿಲ್ಲದಿರುವುದರಿಂದ, ಬರ್ಮ ಧಾಳಿಯನ್ನು ಬೇಗನೇ ಪ್ರಾರಂಭಿಸಬೇಕೆಂದು ಹಲವು ಕಡೆಗಳಿಂದ ಒತ್ತಾಯಗಳೂ ಆಗುತ್ತಿವೆ. ಹೊಸ ಸೇನಾಪತಿ ಮೌಂಟ್‌ಬೇಟನರ ನೇಮಕವೂ, ಭಾರತಕ್ಕೆ ಸೇನಾಪತಿ ವೈಸರಾಯ್ ವೇವಲರ ನೇಮಕವೂ ಈ ಕಡೆಯಲ್ಲಿ ಮಿಲಿಟರಿ ಚಟುವಟಿಕೆ ಪ್ರಾರಂಭಿಸುವ ಸೂಚನೆಯೆಂದೇ ಹೇಳಲಾಗಿದೆ. ಅಂತೂ ಬರ್ಮಾ ಧಾಳಿ ವಿಚಾರವಿಂದು ಮಿತ್ರ ವ್ಯೂಹದಲ್ಲಿ ಪ್ರಾಮುಖ್ಯವಾದ ಚರ್ಚೆಯೆನ್ನಬಹುದು. ಇಷ್ಟರಲ್ಲಿ ಅತ್ತ ಕಡೆ ಫ್ರಾನ್ಸಿನ ಮೇಲೆ ಧಾಳಿಯಿಡುವ ಸುದ್ದಿಯೂ ಕೇಳಿಬರುತ್ತದೆ.

ಸಾರ್ಡಿನಿಯಾ ಕೋರ್ಸಿಕಾಗಳ ಆಕ್ರಮಣದಿಂದ ಈ ಸುದ್ದಿಗೆ ಬಲಬಂದಿದೆ. ಸಿಸಿಲಿಯಿಂದ ಇಟಲಿಗೆ ಹಾರಿದಂತೆ ಕೋರ್ಸಿಕಾದಿಂದ ಫ್ರಾನ್ಸಿಗೆ ಇಳಿಯಬಹುದು. ಮಿತ್ರ ಸೈನ್ಯವು ಫ್ರಾನ್ಸಿಗಿಳಿದುಬಿಟ್ಟರೆ, ಬಾಗಿಲಿನಿಂದ ಶತ್ರುವನ್ನು ಓಡಿಸಿಬಿಟ್ಟರೆ ಅದೊಂದು ಮಹತ್ವದ ವಿಜಯವೆನ್ನಲು ಏನೂ ಅಡ್ಡಿಯಿಲ್ಲ.

ಯೂರೋಪಿನಲ್ಲಿ ಎಲ್ಲಿಯಾದರೂ ಧಾಳಿಯಾದರೆ, ಜರ್ಮನಿ, ಸಿಸಿಲಿಯಲ್ಲಿದ್ದುದಕ್ಕಿಂತ ಹತ್ತು ಪಾಲು ಹೆಚ್ಚು ಸೈನ್ಯ ಬಲದಿಂದ ಪ್ರತಿಭಟಿಸಲು ಸಿದ್ಧವಿರುವುದರಿಂದ ದ್ವಿತೀಯ ರಂಗವನ್ನು ತೆರೆವುದು ಕಠಿಣವಿದೆಯೆಂದು ಅಮೆರಿಕ ಉಪ ಸೈನ್ಯಾಧಿಕಾರಿ ಅಭಿಪ್ರಾಯ ಪಡುತ್ತಾನೆ. ಜರ್ಮನಿ ಮತ್ತು ಜಪಾನುಗಳು ಬೇಗನೇ ಸೋಲುವುದು ಸಾಧ್ಯವಿಲ್ಲವೆಂದು ಮಿಲಿಟರಿ ಗುಪ್ತ ಖಾತೆಯ ಮೇಜರ್ ಸ್ಟ್ರಾಂಗ್‌ನ ಅಭಿಪ್ರಾಯವಿದೆ. ಜರ್ಮನಿಯ ಯುದ್ಧ ಬಲದಲ್ಲಿ ಇಂದು ೩॥ ಕೋಟಿ ಕೆಲಸಗಾರರು ಎಂದರೆ ಯುದ್ಧ ಪೂರ್ವ ಕಾಲಕ್ಕಿಂತ ೧ ಕೋಟಿ ೨೦ ಲಕ್ಷ ಹೆಚ್ಚು ಸೈನಿಕರು ದುಡಿಯುತ್ತಿರುವರೆಂದೂ; ಜಪಾನಿಗಳಂತೂ ಇನ್ನೂ ಹುರುಪಿನಲ್ಲಿದ್ದಾರೆಂದೂ, ಜಪಾನಿನಲ್ಲಿ ಇನ್ನೂ ಸೈನ್ಯದಲ್ಲಿ ಸೇರಿಸಿ ಕೊಳ್ಳಲ್ಪಡದ ೨೦ ಲಕ್ಷ ವಯಸ್ಕರಿರುವರೆಂದೂ ಅಂತೆಯೇ ಜಪಾನಿಗೂ ಇನ್ನೂ ಜನರ ಕೊರತೆಯಾಗಿಲ್ಲವೆಂದೂ ಆತನ ಅಭಿಪ್ರಾಯವಿರುವುದು.

ಕೋರ್ಸಿಕದಿಂದ ಸೇನಿ ಸಲಕರಣೆಗಳನ್ನು ಜರ್ಮನರು ಖಾಲಿಮಾಡುತ್ತಿದ್ದಾರೆ, ನಾಲ್ಕು ಜರ್ಮನ್ ಹಡಗುಗಳನ್ನು ಬ್ರಿಟಿಷ್ ಸಬ್‌ಮೆರಿನುಗಳು ಮುಳುಗಿಸಿದವೆಂದೂ ಸುದ್ದಿಯಿದೆ. 'ಈಶಾನ್ಯ ಇಟಲಿಯಲ್ಲಿ ಜರ್ಮನರ ಮಹತ್ವದ ವಿಮಾನ ನೆಲೆಯಾಗಿದ್ದ ಫೋಗಿಯಾ ನಗರವು ಬ್ರಿಟಿಷ್ ಅಷ್ಟಮದಳದ ವಶವಾಯಿತೆಂದೂ ಸಾಲೆರ್ನೋ ರಂಗದಲ್ಲಿಯೂ ಜರ್ಮನರು ಬಹಳ ದಣಿದಿರುವರೆಂದೂ ಹೇಗಲಾಗಿದೆ. ಮುಸಲನಿಯ ಹೊಸ ಸರಕಾರದ ಮಂತ್ರಿಯಾದ ಮಾರ್ಶಲ್ ರುಡೋಲೆ ಗಜಾನಿಯನ್ನು ಕೊಲೆ ಮಾಡುವ ಪ್ರಯತ್ನ ನಡೆಯಿತೆಂದೂ ಆದರೆ ಅದು ಅಯಶಸ್ವಿಯಾಯಿತೆಂದೂ ರಾಯ್‌ಟರ್ ಸುದ್ದಿ. ಇತ್ತೀಚೆಗೆ ಜರ್ಮನರಿಂದ ಕೊಲೆ ಮಾಡಲ್ಪಟ್ಟ ಸಿನಾರ್ ಬ್ರುನೋ ಬೂಜಿ ಶವನ ಕಮುನಿಸ್ಟ ಮಿತ್ರರು ಈ ಪ್ರಯತ್ನ ಮಾಡಿದರೆಂದೂ ಸಿನಾರ್ ಬುನೋ ಬಡೋಗ್ಲಿಯ ಮಿತ್ರನಾಗಿದ್ದಾನೆಂದೂ ತಿಳಿದು ಬರುವುದು!

'ರಶ್ಯವು ಸೋಲುವವರೆಗೆ ಜರ್ಮನರು ಶಸ್ತ್ರವನ್ನು ಕೆಳಗಿಡುವಹಾಗಿಲ್ಲ' ಎಂದು ಜರ್ಮನಿಯ ಪರರಾಷ್ಟ್ರ ಮಂತ್ರಿ ಹೆರ್ ವಾನ್ ರಿಬನ್‌ಟ್ರಾಪ್ ತ್ರಿರಾಷ್ಟ್ರ ಒಪ್ಪಂದದ ಕುರಿತು ಜರ್ಮನ್ ಆಕಾಶವಾಣಿಯಲ್ಲಿ ಭಾಷಣ ಮಾಡುತ್ತಾ ಹೇಳಿದನು. ಬ್ರಿಟನು ಅಮೆರಿಕಗಳ ಸ್ನೇಹದಿಂದ ಎಂತಹ ಪ್ರತಿಫಲ ಸಿಗುವುದೆಂಬುದಕ್ಕೆ ಇಟಲಿಯಿಂದು ಉದಾಹರಣೆಯಾಗಿದೆ. ಇಟಲಿಯ ರಾಜ ಮತ್ತು ರಾಜಕುಮಾರರಿಬ್ಬರೂ ಶರಣು ಬಂದು, ಮುಸಲಿನಿಯನ್ನು ನಾಶಮಾಡಲು ಸಹ ಒಪ್ಪಿದರೂ ಅವರಿಗೆ ದೊರೆತ ಬಹುಮಾನವೇನು? ಶರತವಿನಾ ಶರಣಾಗತಿಯಲ್ಲವೆ? ತ್ರಿರಾಷ್ಟ್ರ ಒಪ್ಪಂದದ ಬೆಂಬಲಕ್ಕಿರುವ ೬೫ ಕೋಟಿ ಜನರು ಕೂಡಾ ಕೊನೆಯ ವರೆಗೆ ಹೋರಾಡುವರು. ಎಂಥಾ ಗಂಡಾಂತರವೇ ಬಂದರೂ ಯೂರೋಪಿನ ಕೋಟೆ ರಕ್ಷಿಸಲು ನಮ್ಮ ಸೈನಿಕರು ಕೊನೆಯ ವರೆಗೂ ಹೋರಾಡುವರು' ಎಂದು ರಿಬನ್‌ಟ್ರಾಪ್ ತ ಆರ್ಭಟಿಸಿದನು. ಇದೇ ಸಂದರ್ಭದಲ್ಲಿ ಮುಸಲಿನಿ ಕೂಡಾ ಮಾತನಾಡುತ್ತಾ, 'ಇಟಲಿಯ ಅರಸು ನಮ್ಮ ದೇಶದ ಮೇಲೆ ತಂದ ಅಪಮಾನವನ್ನು ರಿಪಬ್ಲಿಕನ್ ಫೇಸಿಸ್ಟ ಪಕ್ಷವು ಅಳಿಸುವುದು ನಮ್ಮ ರಾಷ್ಟ್ರವು ತ್ರಿರಾಷ್ಟ್ರ ಒಪ್ಪಂದವನ್ನು ಅಕ್ಷರಶಃ ಮನ್ನಿಸುವುದು' ಎಂದನು.

ದಕ್ಷಿಣ ಇಟಲಿಯಲ್ಲಿ ಮಿತ್ರರ ಸೈನ್ಯ ಮುಂದೊತ್ತಿ ಜರ್ಮನರು ಹೋರಾಡಿ ಕಂಗಾಲಾಗಿರುವರಂತೆ. ಎಂಟನೇ ಸೈನ್ಯವು ಒಫಾಂಟೋ ನದಿಯ ಮಾರ್ಗವಾಗಿ ಮುನ್ನುಗ್ಗುತ್ತಿದೆ. ಐದನೇ ಸೈನ್ಯದ ಮುನ್ನಡೆಯೂ ಯಶಸ್ವಿಯಾಗಿದೆಯೆಂದು ಹೇಳಲಾಗಿದೆ. ಸಾಲೆರ್ನೋದಲ್ಲಿ ಮುನ್ನುಗ್ಗಿದ್ದಲ್ಲದೆ, ಪೊಗ್ಗಿಯವನ್ನು ಆಕ್ರಮಣ ಮಾಡಿರುವುದಾಗಿ ಹೇಳಲಾಗಿದೆ. ರಶ್ಯದ ರಣರಂಗದಲ್ಲಿ ನೀಪರ ಕಾಳಗವಿಂದು ಜೋರಾಗಿದೆ. ನೀಪರ ನದೀದಂಡೆಯ ಮೇಲೆ ರಕ್ತದ ಕಾಲುವೆ ಹರಿಯುತ್ತಿದೆ. ಹೆಣಗಳು ರಾಶಿ ರಾಶಿಯಾಗಿ ಬೀಳುತ್ತಿವೆ. ಕೀವ್ ಮತ್ತು ಜಾಪಿ ರಾಜಗಳ ನಡುವೆ ಹೆಚ್ಚುತ್ತಿರುವ ರಶ್ಯನರ ಒತ್ತಾಟವನ್ನು ತಡೆಗಟ್ಟಲು ಜರ್ಮನರು ಸಾಹಸಪಡುತ್ತಿರುವರುವರಾಗಿ ಹೇಳಲಾಗಿದೆ. ಅತ್ತ ನಿಫೊಪೆಟ್ರೊವನ್ನಿನ ಸಲುವಾಗಿಯೂ ಭಾರೀ ಕಾಳಗ ನಡೆಯುತ್ತಿರುವುದು. ಅಂತೂ ರಶ್ಯನರು ಇಲ್ಲಿ ಇದು ವರೆಗೆ ೯೦೦ ಮಿಕ್ಕಿ ಹಳ್ಳಿ ಪಟ್ಟಣಗಳನ್ನು ಸ್ವಾಧೀನ ಪಡಿಸಿಕೊಂಡರು.

ಇಟಲಿಯ ಅರಸು ವಿಕ್ಟರ್ ಇಮಾನ್ಯುವೇಲ್, ರಾಜಕುಮಾರ ಉಮರಟೋ ಮತ್ತು ಮಾರ್ಶಲ್ ಬಡೋಗ್ಲಿಯೋ ಇವರು ದಕ್ಷಿಣ ಇಟಲಿಯಲ್ಲಿ ಇತ್ತೀಚೆಗೆ ಮಿತ್ರರು ಆಕ್ರಮಿಸಿದ ಒಂದು ನಗರದಲ್ಲಿ ಹೊಸ ರಾಜಧಾನಿಯನ್ನು ಸ್ಥಾಪಿಸಿರುವರೆಂದು ಬ್ರಿಂಡಿಸಿಯಲ್ಲಿರುವ ಓರ್ವ ಸುದ್ದಿಗಾರನು ತಿಳಿಸುತ್ತಾನೆ. ಅರಸರು ಒಂದು ತಿಂಗಳ ಹಿಂದೆಯೇ ಇಲ್ಲಿಗೆ ಬಂದಿದ್ದರಂತೆ. ಸಾಧ್ಯವಾದ ಕೂಡಲೇ ರೋಮ ನಗರಕ್ಕೆ ಹೋಗುವ ಆಲೋಚನೆಯೂ ಅವರಿಗಿದೆಯಂತೆ. ಈ ಮಧ್ಯೆ ಇಟಲಿಯ ರಾಜಕೀಯ ಪರಿಸ್ಥಿತಿಯನ್ನು ಶಾಂತಮಾಡುವ ಆಲೋಚನೆಯಿದೆ.

ಅಮೆರಿಕ ಯುದ್ಧ ಖಾತೆಯ ಅಧಿಕಾರಿಗಳೊಬ್ಬರು ಪತ್ರಿಕಾ ಪ್ರತಿನಿಧಿಗಳ ಸಭೆಯೊಂದರಲ್ಲಿ ಭಾಷಣ ಮಾಡುತ್ತಾ, ಯೂರೋಪಿನಲ್ಲಿ ಇನ್ನು ಕೆಲವೇ ತಿಂಗಳಲ್ಲಿ ಭೂಮಿ ಹಾಗೂ ವಿಮಾನ ಯುದ್ಧಗಳು ತೀರ ಉಗ್ರವಾಗಲಿವೆಯೆಂದು ತಿಳಿಸಿದರು. ವಿವರಗಳನ್ನು ಕೇಳಲು, ಅದನ್ನೀಗ ಬಹಿರಂಗಪಡಿಸುವ ಆಲೋಚನೆಯಿಲ್ಲವೆಂದರು. ಆದರೆ ಈ ವರ್ಷದೊಳಗಾಗಿ ೩೭ ಲಕ್ಷ ಜನರನ್ನು ಒತ್ತಾಯದಿಂದ ಸೈನ್ಯಕ್ಕೆ ಸೇರಿಸಿಕೊಳ್ಳಲು ಅಡ್ಡಿ ಮಾಡಬಾರದೆಂದು ಅಮೆರಿಕದ ಸೈನ್ಯ ಮಂಡಳದ ಮುಖ್ಯಾಧಿಕಾರಿ ಜನರಲ್ ಮಾರ್ಶಲರು ಆಗ್ರಹ ಹಿಡಿದದ್ದಕ್ಕೆ ಇದೇ ಕಾರಣವೆಂದು ಮಿಲಿಟರಿ ತಜ್ಞರ ಅಭಿಪ್ರಾಯವಿದೆ. ಇಷ್ಟು ಸೈನ್ಯ ಸಂಗ್ರಹವಾಯಿತೆಂದರೆ ಮಹತ್ವದ ಯೋಜನೆ ಮಾಡಲು ಅನುಕೂಲವಾಗುವುದೆಂಬುದು ಖಂಡಿತ.

NOTICE

In the Court of the District Judge of South Kanara.

O. S. No. 4/1943

Between:

1. Venkatesh Shanbhogue, 2. AnandarayaKamath 3. Keshava Shanbhogue—*Plaintiffs*

and

1. Shridhar Shanbhogue, 2. Moodlagiri Shanbhogue, 3. Shrinivasa Shanbhogue, 4. Anandaraya Nayak 5. Manjunatha Nayak, 6. Manjunatha Shanbhogue, 7. Venkatesh Bhat 8. Appanna Bhat, 9. Rama Kamath, 10. Vasudeva Shanbhogue, 11. Narashimha Pai, 12. H. R. E. Board—

Defendants

Notice is hereby given to all the concerned in the above matter that the above suit has been filed praying that the scheme decreed in O.S. 47/1921 and R. E. P. 142/1922 on the file of the Subordinate Judge of South Kanara, may be modified providing suitable provisions in the scheme regarding the powers and functions of the trustees, General Votaries, Manager or Executive Officer, maintaining of accounts and audit of the same, mode of election of trustees etc. The said suit now stands posted to 26-10-1943. All who may wish to oppose the suit or to suggest any further provisions to be added or modified, may appear before the above mentioned Court on or before the said date at 11 A.M. either in person or by Vakil and state what they have to say.

Mangalore
1-10-1943

K. S. Hegde
Advocate for Plaintiffs

ಸ್ವದೇಶಾಭಿಮಾನಿ

ತಾರೀಖು 1—10—1943

ಹಾರ್ನಿಮೆನರ ಜಯ

ಕೋರ್ಟು ಅಪಮಾನಮಾಡಿದರೆಂದು ಅಲ್ಲಾಬಾದ್ ಹೈಕೋರ್ಟಿನವರು ಹೊರಡಿಸಿದ ವಾರಂಟಿನ ವಿರುದ್ಧ ಮುಂಬಯಿ ಹೈ ಕೋರ್ಟಿನಲ್ಲಿ ಮಾಡಿದ ಅಪೀಲಿನಲ್ಲಿ ಸೆಂಟಿನಲ್ ಪತ್ರಿಕೆಯ ಸಂಪಾದಕರಾದ ಶ್ರೀ ಬಿ. ಜಿ. ಹಾರ್ನಿಮೆನರಿಗೆ ವಿಜಯ ಲಭಿಸಿತು. ಈ ಸಂದರ್ಭದಲ್ಲಿ ಅಖಿಲ ಭಾರತ ಪತ್ರಿಕೋದ್ಯೋಗಿ ಸಂಘ ಮತ್ತು ಅಖಿಲ ಭಾರತ ಸಂಪಾದಕ ಪರಿಷತ್ತಿನ ಮುಂಬಯಿ ಸಮಿತಿಯವರು ಹಾರ್ನಿಮೆನರನ್ನು ಅಭಿನಂದಿಸಿದ್ದು, ಹಾರ್ನಿಮೆನರಿಗೆ ದೊರಕಿದೀ ವಿಜಯವು ಭಾರತದ ಪತ್ರಿಕೋದ್ಯಮಕ್ಕೆ ದೊರಕಿದ ವಿಜಯವೆಂಬುದರ ಸೂಚಕವಾಗಿದೆ.

ಶ್ರೀ. ಹಾರ್ನಿಮೆನರು ಆಂಗ್ಲೇಯರು. ಭಾರತಕ್ಕೆ ಬಂದಂದಿನಿಂದ ಭಾರತೀಯರ ಸ್ವಾತಂತ್ರ್ಯಕ್ಕಾಗಿ ಅವರು ಹೋರಾಡಿದವರು; ಸ್ಥೈರ್ಯದಿಂದ ಈ ಹೋರಾಟ ಹೂಡಿದ್ದಾರೆ. 'ಹಿಂದುಸ್ತಾನ್ ಟೈಮ್ಸ್' ಕೋರ್ಟು ಅಪಮಾನ ಖಟ್ಲೆಯಲ್ಲಿ ಶ್ರೀ. ದೇವದಾಸ ಗಾಂಧಿಗಳು ಪ್ರಿವಿಕೌನ್ಸಿಲಿನಲ್ಲಿ ವಿಜಯ ಸಂಪಾದಿಸಿದರು. ಇದೀಗ ಅಂಥಾ ಎರಡನೆಯ ವಿಜಯವಾಗಿದೆ. 'ಹಾರ್ನಿಮೆನರ ವಿಜಯವು ಪತ್ರಿಕೆಗಳ ಸ್ವಾತಂತ್ರ್ಯವನ್ನಲ್ಲದೆ ಪ್ರಜಾಸ್ವಾತಂತ್ರ್ಯವನ್ನೂ ಎತ್ತಿ ಹಿಡಿದಿದೆ. ಏಕೆಂದರೆ ಪತ್ರಿಕೆಗಳು ಪ್ರಜಾಪ್ರತಿನಿಧಿಗಳು. ಎಷ್ಟುದೊಡ್ಡ ಕೋರ್ಟಾದರೂ ನ್ಯಾಯಸಮ್ಮತವಾದ ಟೀಕೆಯಿಂದ ಹೊರಗುಳಿಯಲಾರದು' ಎಂದು ಹಾರ್ನಿಮೆನರನ್ನು ಅಭಿನಂದಿಸಿ ಶ್ರೀ. ಜೋಕಿಂ ಆಳ್ವರು ಹೇಳಿದ ಮಾತುಗಳು ಅಕ್ಷರಶಃ ಸತ್ಯವಿವೆ. ಇನ್ನು ಮುಂದಾದರೂ ನ್ಯಾಯಾಧಿಕಾರಿಗಳು ಪತ್ರಿಕೆಗಳ ಮೇಲೆ ಹಾಗೂ ಪತ್ರಿಕಾ ಸಂಪಾದಕರ ಮೇಲೆ ಖಟ್ಲೆ ಮಾಡುವ ಮೊದಲು ಚನ್ನಾಗಿ ವಿಚಾರಮಾಡಿಕೊಳ್ಳುವುದು ಒಳ್ಳೆಯದು.

ಸದುಪದೇಶ

ಅಮೇರಿಕದ ಭಾರತೀಯರ ಸಂಘದ ಅಧ್ಯಕ್ಷ ಶ್ರೀ. ಗಾಯ್ ಎಮೆರಿ ಶಿಪ್ಲರರು 'ನ್ಯೂಯಾರ್ಕ್ ಟೈಮ್ಸ್' ಪತ್ರಿಕೆಯಲ್ಲಿ ಒಂದು ಲೇಖನ ಬರೆಯುತ್ತಾ, ಭಾರತದ ಸಮಸ್ಯಾ ಪರಿಹಾರದ ವಿಷಯ ಬ್ರಿಟಿಷ್ ಸರಕಾರಕ್ಕೆ ಕೆಲವು ಸದುಪದೇಶಗಳನ್ನಿತ್ತಿದ್ದಾರೆ. ಅದರ ಸಾರಾಂಶವಿಂತಿದೆ:

'ಬ್ರಿಟಿಷ್ ಸರಕಾರ ಮತ್ತು ಭಾರತೀಯರೊಳಗಿನ ವೈಷಮ್ಯ ನಿವಾರಣೆಗೆ ಎರಡು ಮಾರ್ಗಗಳಿವೆ. (೧) ಬ್ರಿಟಿಷ್ ಕಾಮನ್‌ವೆಲ್ತಿನಲ್ಲಿ ಸದಸ್ಯರಂತೆ ಯುದ್ಧಾನಂತರ ಭಾರತಕ್ಕೆ ಸ್ವಾತಂತ್ರ್ಯನೀಯುವ ಭರವಸೆ ಕೊಡುವುದು ಹಾಗೂ ಭಾರತೀಯರಿಗೆ ಸಭೆ ಮೆರವಣಿಗೆಗಳನ್ನು ನೆರವೇರಿಸಲು ಬ್ರಿಟಿಷ್ ಸರಕಾರವೂ ಬ್ರಿಟಿಷ್ ಚಕ್ರವರ್ತಿಗಳೂ ಸ್ವಾತಂತ್ರ್ಯ ಕೊಡುವುದು. (೨) ಭಾರತದಲ್ಲಿ ತಾತ್ಕಾಲಿಕ ಪ್ರಾತಿನಿಧಿಕ ಸರಕಾರವನ್ನು ಸ್ಥಾಪಿಸುವರೆ, ಹೊಸ ವೈಸರಾಯರಿಗೆ ಬ್ರಿಟಿಷ್ ಸರಕಾರವು ತಿಳಿಸುವುದು.'

ಶಿಪ್ಲರರ ಈ ಸೂಚನೆಯು ಸರಿಯಾದುದಿದೆ. ಭಾರತದ ಬಿಕ್ಕಟ್ಟನ್ನು ಹೀಗೆಯೇ ಬೆಳೆಯಬಿಡುವುದು ಬ್ರಿಟಿಷ್ ಸರಕಾರಕ್ಕೂ ಭೂಷಣವಲ್ಲ; ಮಿತ್ರರಿಗೂ ಹಿತವಲ್ಲ; ಜಗತ್ತಿಗೂ ಸುಖವಲ್ಲ. ಆದ್ದರಿಂದ ಬ್ರಿಟಿಷರು ಅಮೇರಿಕದಿಂದ ಬಂದ ಈ ಸದುಪದೇಶದ ಕುರಿತು ಪರ್ಯಾಲೋಚಿಸುವುದು ವಿಹಿತವಿದೆ.

ಆಹಾರ ಸಮ್ಮೇಳನ

ಮೈಸೂರು ಸಂಸ್ಥಾನದಲ್ಲಿ ಕಾಂಗ್ರೆಸು ಮುಖಂಡರು ಆಹಾರ ಸಮ್ಮೇಳನ ಮಾಡಿ ಇಂದಿನ ವಿಷಮ ಪರಿಸ್ಥಿತಿಯಲ್ಲಿ ಜನತೆಯ ಸೇವೆ ಮಾಡಲು ಮುಂದೆ ಬಂದದ್ದು ಪ್ರಶಂಸನೀಯವಿದೆ. ಬೆಂಗಳೂರಲ್ಲಿ ಜರಗಿದ ಆಹಾರ ಸಮ್ಮೇಳನವು ಕಾಂಗ್ರೆಸಿನವರು ಇಂಥಾ ಪರಿಸ್ಥಿತಿಯಲ್ಲಿ ಸೆರೆಮನೆಯಿಂದ ಹೊರಗಿದ್ದರೆ ಹೇಗೆ ದರಿದ್ರ ನಾರಾಯಣನ ಸೇವೆ ಮಾಡಲು ಮುಂದೆ ಬರಬಹುದು ಎಂಬ ವಿಷಯ ಸರಕಾರದ ಕಣ್ತೆರೆಯಿಸುವಂತಿದೆ.

ಇಂದು ಭಾರತದ ಪ್ರಾಮುಖ್ಯ ಪ್ರಶ್ನೆ, ಆಹಾರ ಪ್ರಶ್ನೆ; ಜನರಿಗೆ ಆಹಾರ ಹಂಚಿ ಸಿಗುವಂತೆ ಆಗಬೇಕು. ಯಾವುದೇ ಪ್ರಾಂತದ ಜನರೂ ಉಪವಾಸ ಬಿದ್ದು, ಇಂದು ಬಂಗಾಳ ಮತ್ತು ಇತರ ಕೆಲವು ಪ್ರಾಂತಗಳಲ್ಲಿ ಆಗುವಂತೆ — ನರಳಿ ಸಾಯಬಾರದು. ಕಳ್ಳ ವ್ಯಾಪಾರ ನಡೆಯಬಾರದು. ಇದಕ್ಕೆ ಸಾರ್ವಜನಿಕ ಬೆಂಬಲ ಬೇಕು. ಸಾರ್ವಜನಿಕ ಬೆಂಬಲ ಪಡೆಯಲು ರಾಷ್ಟ್ರೀಯ ಮುಖಂಡರ ಬಿಡುಗಡೆಯಾಗಬೇಕು. ಸರಕಾರವು ಈ ಪರಿಸ್ಥಿತಿಯನ್ನಾದರೂ ಮನತಂದು ಮಹಾತ್ಮರೇ ಮೊದಲಾದ ರಾಷ್ಟ್ರದ ಮುಖಂಡರನ್ನು ಬಿಡುಗಡೆಮಾಡುವುದು ಒಳ್ಳಿತು. ರಾಷ್ಟ್ರದ ಮುಖಂಡರು ಖಂಡಿತವಾಗಿಯೂ ಆಹಾರ ಸಮಸ್ಯೆ ಪರಿಹರಿಸಬಲ್ಲರು.

ನೋಟಗಳು . . .

ಸರ್ ನಾರ್ಮನ್ ಎಂಜಲರು 'ಮಹಾಭ್ರಮೆ' ಎಂಬ ಪುಸ್ತಕ ಬರೆದ ಪ್ರಸಿದ್ಧ ಗ್ರಂಥಕರ್ತರು.

'ಮಹಾಭ್ರಮೆ'ಯನ್ನು ಬರೆದು ಅವರು ಜಗತ್ತಿನ ವಿಚಾರವಂತರ ಹಲವು ಭ್ರಮೆಗಳನ್ನು ಪರಿಹರಿಸಿದ್ದಾರೆ.

'ಆಂಗ್ಲೋ ಅಮೇರಿಕನ್ ಪ್ರಭುತ್ವದಿಂದ ಜಗತ್ತಿಗೆ ಶಾಂತಿ ಸಿಗುವುದೆಂದು ನನಗನಿಸುವುದಿಲ್ಲ' ಎಂದು ಸರ್ ಎಂಜೆಲರು ಈಗ ಹೇಳುತ್ತಾರೆ.

ಎಂಜೆಲರ ಈ ಸ್ಪಷ್ಟೋಕ್ತಿಯೂ, ಹಲವರ ಭ್ರಮೆ ಪರಿಹರಿಸಬಲ್ಲುದು.

'ಜಗತ್ತು ಜರ್ಮನಿಯಷ್ಟೆ ಆಂಗ್ಲೋ ಅಮೇರಿಕನ್ ಪ್ರಭುತ್ವವನ್ನೂ ವಿರೋಧಿಸುತ್ತದೆ' ಎಂದು ಅವರು ಖಂಡತುಂಡ ಹೇಳುತ್ತಾರೆ.

ಆದರೆ ಜಾಗತಿಕ ಶಾಂತಿ ಸಂಘಟನೆ, ಆಂಗ್ಲೋ ಅಮೇರಿಕನ್ ಸೌಹಾರ್ದ ಸಹಕಾರಗಳು ಅವಶ್ಯವಿವೆಯೆಂಬುದನ್ನು ಅವರು ಒಪ್ಪಿಕೊಳ್ಳುತ್ತಾರೆ.

ಹೀಗೆ ಹೇಳುವುದರ ಜತೆಯಲ್ಲಿಯೇ, ರಶ್ಯ, ಚೀನ ಹಾಗೂ ಉಳಿದ ಸಂಯುಕ್ತ ರಾಷ್ಟ್ರಗಳನ್ನು ಮತ್ತು ಉಳಿದ ಜಾಗತಿಕ ರಾಷ್ಟ್ರಗಳನ್ನೂ ಸೇರಿಸಿಕೊಳ್ಳಬೇಕೆಂದು ಅವರು ವಾದಿಸುತ್ತಿದ್ದಾರೆ.

ನಿಜವಾಗಿಯೂ ಸರ್ ಎಂಜೆಲರು ಹಲವರ 'ಮಹಾಭ್ರಮೆ'ಯೊಂದನ್ನು ಪರಿಹರಿಸಿದ್ದಾರೆ.

ಸ್ವದೇಶ ಸಮಾಚಾರ

ಬಂಗಾಳಕ್ಕೆ ಆಹಾರ ಕಳುಹಿಸಲು ಅಮೇರಿಕದ ನಕಾರ

ಕಲ್ಕತ್ತದ ಮೇಯರರಿಂದ ಬಂಗಾಳಕ್ಕೆ ಆಹಾರ ಸಾಮಗ್ರಿ ಕಳುಹಿಸುವಂತೆ, ತಮಗೆ ಬಂದ ವಿನಂತಿ ವಿಷಯ ಅಮೇರಿಕದ ಅಧಿಕಾರಿಗಳೊಬ್ಬರು ಮಾತನಾಡುತ್ತಾ, ಈ ವಿನಂತಿಯನ್ನು ನೇರವಾಗಿ ವಿಚಾರಿಸಲು ಆಗುವುದಿಲ್ಲವೆಂದೂ, ಯೋಗ್ಯ ಅಧಿಕಾರಿಗಳ ಮುಖಾಂತರ ಇದು ಬರಬೇಕೆಂದೂ ಅವರು ಹೇಳಿದರು. ಬ್ರಿಟಿಷ್ ಸರಕಾರದ ಮುಖಾಂತರ ವಿನಂತಿ ಬರಬಹುದೇ ಎಂದು ಕೇಳಿದ್ದಕ್ಕೆ, ಬ್ರಿಟಿಷರೇ ತಮಗಿಂತ ಮುಂಚಿತ ದಕ್ಷಿಣ ಆಫ್ರಿಕದಿಂದ ಆಹಾರ ಸಾಮಗ್ರಿ ಕಳುಹಿಸಬಹುದಲ್ಲಾ ಎಂದು ಸೂಚಿಸಿದರು.

ಅಮೇರಿಕದ ಪತ್ರಿಕೆಗಳಲ್ಲಿ ಬಂಗಾಳದ ಸಂಕಷ್ಟದ ಉಲ್ಲೇಖ ಬಂದಿದೆ: 'ಭಾರತದಲ್ಲಿಂದು ಸಾವಿರಾರು ಜನರು ಅನ್ನವಿಲ್ಲದೆ ಸಾಯುತ್ತಿದ್ದಾರೆ; ಬರ್ಮವನ್ನು ತಿರುಗಿ ವಶಮಾಡಿಕೊಳ್ಳುವುದು ಅವಶ್ಯವಿದೆ, ಮೊದಲಾಗಿ ಬರೆಯಲಾಗಿದೆ. ಕಲ್ಕತ್ತಾ ಮೇಯರರ 'ವಿನಂತಿಗೆ ಅಮೇರಿಕದವರು ಆಹಾರ ಕಳುಹಿಸುವ ವಿಚಾರಕ್ಕಾಗಿ ಹಾರಿಕೆ ಉತ್ತರವಿತ್ತದಕ್ಕೆ ಟೀಕಿಸಲಾಗಿದೆ.

'ಕಾಂಗ್ರೆಸ್ ಕೈದಿಗಳಿಗೆ ಕ್ಷಮೆ ಕೇಳಲು ಒತ್ತಾಯಮಾಡಿಲ್ಲ'

ಸಿಂಧ ಮಂತ್ರಿ ಹೇಳುತ್ತಾರೆ

ಸಿಂಧದ ಕಾನೂನು ಮಂತ್ರಿ ಶ್ರೀ ಎಂ. ಎಚ್. ಗಜದಾರರು ಪತ್ರಿಕಾ ಪ್ರತಿನಿಧಿಗಳಿಗೆ ಕೊಟ್ಟ ಸಂದರ್ಶನದಲ್ಲಿ, ಸಿಂಧ ಸರಕಾರವು ಕಾಂಗ್ರೆಸ್ ಕೈದಿಗಳೊಡನೆ, ಕ್ಷಮೆ ಬೇಡಿದರೆ ಹಾಗೂ ಕಾಂಗ್ರೆಸಿಗೆ ರಾಜಿಯಿತ್ತರೆ ಅವರನ್ನು ಬಿಡುಗಡೆಮಾಡುವುದಾಗಿ ಎಂದೂ ಹೇಳಲಿಲ್ಲವೆಂದು ಹೇಳಿದರು. ಯುದ್ಧ ಯತ್ನಕ್ಕೆ ತೊಂದರೆ ಮಾಡುವುದಿಲ್ಲವೆಂಬ ಭರವಸೆಯಿತ್ತರೆ ಬಿಡುಗಡೆ ಮಾಡಲು ಸರಕಾರ ಹೇಳಿರುವುದಾಗಿಯೂ ತಿಳಿಸಿದರು.

'ಬಂಗಾಳದ ಪರಿಸ್ಥಿತಿಗೆ ಸರಕಾರವೇ ಕಾರಣ'

ಶ್ರೀ ಜೆ. ಕೆ. ಮಿತರರ ಅಭಿಪ್ರಾಯ

ಬಂಗಾಳದ ನೇಶನಲ್ ಕಾಮರ್ಸ್ ಚೇಂಬರಿನ ದ್ವಿತೀಯ ತ್ರೈಮಾಸಿಕ ಸಭೆಯ ಅಧ್ಯಕ್ಷ ಸ್ಥಾನದಿಂದ ಶ್ರೀ ಜೆ. ಕೆ. ಮಿತರರು ಒಂದು ಹೇಳಿಕೆಯಿತ್ತು, ದಾರಣೆ ನಿಯಂತ್ರಣವನ್ನು ಅವಿಚಾರತ್ವದಿಂದ ಜಾರಿಗೆ ತಂದುದರಿಂದ ಜನ ಸಾಮಾನ್ಯರಿಗೆ ಇಂದು ಪೇಟೆಯಲ್ಲಿ ಆಹಾರ ಸಾಮಗ್ರಿ ಸಿಗದಂತಾಗಿದೆಯೆಂದೂ, ಇದಕ್ಕೆ ಸರಕಾರವೇ ಸಂಪೂರ್ಣ ಹೊಣೆಗಾರವಾಗಿದೆಯೆಂದೂ ಹೇಳಿದರು. ಬಂಗಾಳದ ಇಂದಿನ ಸಂಕಷ್ಟ ನಿವಾರಣೆಯು ಹೆಚ್ಚು ಆಹಾರ ಸಾಮಗ್ರಿ ಹೊರಗಿನಿಂದ ತರಿಸಿ ಅದನ್ನು ಸರಿಯಾಗಿ ಹಂಚುವುದರಲ್ಲಿದೆಯೆಂದರು.

ಅಮೇರಿಯವರಿಗೆ ಸರ್ ಗುಲಾಮ್ ಹುಸೇನರ ಉತ್ತರ

'ಆಹಾರ ವಿಚಾರದಲ್ಲಿ ಕೇಂದ್ರ ಸರಕಾರವೂ ಗೊಂದಲಮಾಡಿದೆ. ಇದನ್ನು ಅದೇ ಒಪ್ಪಿಕೊಂಡಿದೆ. ಹೀಗಿರುತ್ತಾ ಅಮೇರಿಯವರು ಪ್ರಾಂತಿಕ ಸ್ವಾಯತ್ತ[ತೆ]ಯ ಮೇಲೆ ಟೀಕೆಮಾಡಿದ್ದು ಸರಿಯಲ್ಲ' ಎಂದು ಸಿಂಧ ಮಂತ್ರಿ ಸರ್ ಗುಲಾಮ್ ಹುಸೇನರು ಹೇಳಿದರು.

'ಜೈಲಿನಿಂದ ಹೊರಗಿದ್ದವರು ತಮ್ಮ ಹೇಳಿಕೆ ಮುಂದಿಡಬೇಕು'

ರಾಜಾಜಿ ವಾದಿಸುತ್ತಾರೆ

'ಬ್ರಿಟಿಷರು ತಾವಾಗಿಯೇ ಮುಂ[ದೆ] ಬರಲಿ ಎಂದು ಕಾಯುವುದು ತಪ್ಪು. ಜೈಲಿನಿಂದ ಹೊರಗಿರುವವರು ತಮ್ಮ ಹೇಳಿಕೆ ಸರಕಾರದ ಮುಂದಿಡಬೇಕು. ಮತ್ತೆ ಆ ಹೇಳಿಕೆ ಸರಕಾರದ ಘೋಷಣೆ ಆಶ್ವಾಸನಗಳಿಗೆ ವಿರೋಧವಿರಬಾರದು. ರಾಷ್ಟ್ರ ಮುಖಂಡರನ್ನು ಬಿಡುಗಡೆಮಾ[ಡ]ಬೇಕೆಂದು ಹೇಳುತ್ತಾ ಕುಳಿತರೆ ಅವ[ರ] ಬಿಡುಗಡೆಯಾಗದು; ಅಂಥಾ ಪರಿಸ್ಥಿ[ತಿ]ಯನ್ನು ನಾವು ಕಲ್ಪಿಸಬೇಕು. ತಾತ್ಕಾಲಿಕ ಸರಕಾರ ಸ್ಥಾಪಿಸದೆ ನಾವು ಸುಮ್ಮ[ನಿ]ದ್ದರೆ ಯುದ್ಧಾನಂತರದ ಪರಿಸ್ಥಿತಿ ೧೯೪೨ ...ಕ್ಕಿಂತ ಶೋಚನೀಯವಾಗುವುದು ಎಂದ[ು] ರಾಜಾಜಿ ಈಗ ವಾದಿಸುತ್ತಾರೆ.

'ಬಂಗಾಳದಲ್ಲಿ ಅಕ್ಕಿಯೇ ಇಲ್ಲ'

ಹಕ್ಕರ ಹೇಳಿಕೆ

'ಇಂದು ಬಂಗಾಳದಲ್ಲಿ ಭಯಂಕ[ರ] ಕ್ಷಾಮವುಂಟಾಗಿದೆ. ಕೇವಲ ಅಕ್ಕಿ ಕೊ[ರ]ತೆ ಮಾತ್ರವಲ್ಲ ಇಡೀ ಬಂಗಾಳದಲ್ಲಿ ಅಕ್ಕಿಯೇ ಇಲ್ಲ. ಈ ದುರ್ದಶೆಗೆ ... ನ ಮಂತ್ರಿಮಂಡಳವೇ ಹೊಣೆ' ಎಂದ[ು] ಬಂಗಾಳ ಅಸೆಂಬ್ಲಿಯಲ್ಲಿ ಫಜಲುಲ ಹಕ್ಕರು ಹೇಳಿದರು. ಬೇರೆ ಕೆಲವರ[ು] ಮಿಡ್ನಾಪುರ ಮೊದಲಾದ ಕಡೆಗಳ ಸ್ಥಿ[ತಿ] ವರ್ಣಿಸಿ ಅಲ್ಲಿ ಆಹಾರದ ಕೊರತೆ ಕೇ[ಳು]ತ್ತಕ್ಕಿಂತ ಹತ್ತುಪಾಲು ಹೆಚ್ಚಿದೆಯೆಂದರು.

ವಾಡಿಕೆಯಂತೆ ದಸರಾ ಹಬ್ಬದ ನಿಮಿತ್ತ, ರಜೆಯಿರುವುದರಿಂದ ಬರುವ ವಾರದ 'ಸ್ವದೇಶಾಭಿಮಾನಿ' ಪತ್ರಿಕೆ ಹೊರಡುವುದಿಲ್ಲ.

— ಮೆನೇಜರ್.

ಕನ್ನಡ ಪತ್ರಿಕೆಗಳಿಗೆ ಬಹಿಷ್ಕಾರವೆ

ವೆಲ್ಲೂರು ಸೆಂಟ್ರಲ್ ಜೈಲಿನಲ್ಲಿರುವ ಸ್ಥಾ[ನ]ಬದ್ಧರಿಗೆ ಇತರ ಭಾಷೆಯ ಎಲ್ಲಾ ಪತ್ರಿಕೆಗ[ಳು] ದೊರೆವ ಸೌಕರ್ಯವಿದ್ದರೂ ಕನ್ನಡ ದೇಶ[ದ] ಸ್ಥಾನ ಬದ್ಧರಿಗೆ ಮಾತ್ರ ಕನ್ನಡ ಭಾಷೆಯ ಯಾ[ವು]ದೇ ಪತ್ರಿಕೆಯನ್ನೂ ಓದಲು ಕೊಡುವುದಿಲ್ಲವೆಂ[ದು] ಕೇಳುತ್ತೇವೆ. ಸರಕಾರವು ಹಾಗೂ ಸಂಬಂ[ಧ]ಪಟ್ಟ ಅಧಿಕಾರಿಗಳು ಇಂಥಾ ಪಕ್ಷಪಾತವ[ನ್ನು] ಯಾಕೆ ಮಾಡುತ್ತಾರೋ ತಿಳಿಯದು.

ದಕ್ಷಿಣ ಕನ್ನಡ ಜಿಲ್ಲಾ ನೆರೆಹಾವ[ಳಿ] ನಿವಾರಣೆ ಸಮಿತಿ, ಉಡುಪಿ

ಇದರ ಮಹಾಸಭೆಯು ಶ್ರೀ ವೆಲ್ಲಿ ಕಲ್ಯಾಣ ಶೆಟ್ಟಿ ಇವರ ಅಧ್ಯಕ್ಷತೆಯಲ್ಲಿ ಕಳೆದ ಆದಿವಾರ ಜರಗಿ, ರೂ ೧೦೦೦ ಬಂಗಾಳ ಸಹಾ[ಯ] ನಿಧಿಗೂ, ರೂ ೮೦೦ ಬಿಜಾಪುರ ಮತ್ತು ಬಳ್ಳಾರಿ ನಿಧಿಗಳಿಗೂ, ರೂ ೪೦೦ ಅಜಮೀರ್ ಮರ್ವಾ[ಡ] ರಾ ನಿಧಿಗೂ ಕಳುಹಿಸುವುದಾಗಿ ನಿಶ್ಚಯಿಸ[ಲಾ]ಯಿತು.

ಸೈಂಟ್ ಎಲೋಶಿಯಸ್ ಕಾಲೇಜ್

ರೆಕ್ಟರ್ ದಿನಾಚರಣೆಯು ಶ್ರೀ ಎಂ. ಸಿ. ... ಕೋಮಸ್ ಐ. ಸಿ. ಎಸ್. (ಜಿಲ್ಲಾ ಜಡ್ಜರು) ...ರ ಅಧ್ಯಕ್ಷತೆಯಲ್ಲಿ ನೆರವೇರಿತು.

ಜಿಲ್ಲಾ ಸಮಾಚಾರಗಳು

ಮಂಗಳೂರು

ಮಂಗಳೂರು

ಅಕ್ಕಿ ಸರಬರಾಯಿಗಾಗಿ ಸಭೆ

ಕಳೆದ ಆದಿತ್ಯವಾರ ಜಿಲ್ಲಾ ಕಲೆಕ್ಟರರ ಬಂಗಲೆಯಲ್ಲಿ ಈ ಜಿಲ್ಲೆಯ ಪ್ರಮುಖ ಜಮೀನುದಾರರ ಸಭೆಯೊಂದು ಕಲೆಕ್ಟರರ ಕೋರಿಕೆಯಂತೆ ಸೇರಿತ್ತು. ಈ ಜಿಲ್ಲೆಯ ತಾಲೂಕು ಪಟ್ಟಣಗಳು ಮತ್ತು ಇತರ ಚಿಕ್ಕ ಪುಟ್ಟ ಊರುಗಳಲ್ಲಿಯೂ 'ರೇಶನಿಂಗ್' ಪದ್ಧತಿಯನ್ನು ಸದ್ಯವೇ ಜಾರಿಗೆ ತರುವುದೆಂದು ಮಾತುಕತೆಗಳಾಯಿತು. ಈ ರೇಶನಿಂಗಿಗಾಗಿ ಈ ಜಿಲ್ಲೆಗೆ ಸುಮಾರು ೧೫ ಲಕ್ಷ ಮುಡಿ ಅಕ್ಕಿ ಬೇಕೆಂದು ಅಂದಾಜಾಗಿರುವ ಮೇರೆಗೆ ಜಮೀನ್ದಾರರು ತಮ್ಮ ಗೇಣಿ ಅಕ್ಕಿ ಮುಡಿಗಳ ಸಂಖ್ಯೆಯಲ್ಲಿ ಸೇಕಡಾ ೫೦ ರಷ್ಟನ್ನು ಅಧಿಕಾರಿಗಳ ವಶ ಮಾಡಬೇಕೆಂಬ ಸೂಚನೆ ಬರಲು, ಜಮೀನ್ದಾರರ ಪರವಾಗಿ, ಅವರು ಸೇಕಡಾ ೨೫ ಮುಡಿಗಳನ್ನು ಸದ್ಯ ಒಪ್ಪಿಸುವರೆಂದೂ, ಮತ್ತೆ ಸಾಲದಿದ್ದರೆ ಹೆಚ್ಚಿಗೆಯಾಗಿ ೫೦ ರಷ್ಟನ್ನೂ ಭರ್ತಿಮಾಡುವರೆಂದೂ ಅರಿಕೆ ಮಾಡಲಾಯಿತು. ಅನಂತರ ಅಕ್ಕಿ ಮುಡಿಯ ಬೆಲೆ ರೂ. ೧೧ರಷ್ಟು ಇರಬೇಕೆಂಬ ಜಮೀನ್ದಾರರ ಪರವಾಗಿ ಮಾಡಲಾದ ಅರಿಕೆ ಇನ್ನೂ ನಿರ್ಧಾರಕ್ಕೆ ಬಂದ ಹಾಗಿಲ್ಲ. ಜಮೀನ್ದಾರರೇ ಆ ಅಕ್ಕಿ ಮುಡಿಗಳನ್ನು ನಗರ ಕ್ವಾರ್ಟರುಗಳಿಗೆ ಸಾಗಿಸುವ ಕುರಿತು ಮಾತುಕತೆಗಳಾಗಿವೆ ಎಂದು ತಿಳಿದುಬಂದಿದೆ.

ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಳನದ ಸ್ವಾಗತ ಸಮಿತಿ ಚುನಾವಣೆ

ದಕ್ಷಿಣ ಕನ್ನಡ ಪತ್ರಿಕೋದ್ಯೋಗಿ ಸಂಘದ ಕಚೇರಿಯಲ್ಲಿ ಕಳೆದ ತಾ ೩೦ರಂದು ಸಂಘದ ಅಧ್ಯಕ್ಷ ಶ್ರೀ ಹುರುಳಿ ಭೀಮರಾಯರ ಅಧ್ಯಕ್ಷತೆಯಿಂದ ಸೇರಿದ ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಳನದ ತಾತ್ಕಾಲಿಕ ಸ್ವಾಗತ ಸಮಿತಿಯ ಸಭೆಯಲ್ಲಿ ಕೆಳಗಿನ ಮಹನೀಯರು ಅ. ಕ. ಪ. ಸಮ್ಮೇಳನದ ಸ್ವಾಗತ ಸಮಿತಿಯ ಕಾರ್ಯಕಾರೀ ಮಂಡಳಿ ಸದಸ್ಯರಾಗಿ ಚುನಾಯಿಸಲ್ಪಟ್ಟರು. ಶ್ರೀ ಡಿ. ಪುಟ್ಟುಸ್ವಾಮಿ (ಅಧ್ಯಕ್ಷರು) ಶ್ರೀಗಳಾದ ಪಿ. ಎಸ್. ಕುಡ್ವ, ಕೆ. ಆರ್. ಅಬ್ಬಾರ್, ರಾವ್ ಸಾಹೆಬ್ ಎ. ಎಲ್. ಪಿಂಟೊ, ಕೆ. ಹೊನ್ನಯ್ಯ ಶೆಟ್ಟಿ, ಹುರುಳಿ ಭೀಮರಾವ್ (ಉಪಾಧ್ಯಕ್ಷರು) ಶ್ರೀ ಉಡುಪಿ ಗೋವಿಂದರಾವ್ (ಕೋಶಾಧ್ಯಕ್ಷರು) ಶ್ರೀಗಳಾದ ಕಯ್ಯಾರ ಕಿಞ್ಞಣ್ಣ ರೈ, ಎಸ್. ಆರ್. ಕುಳುಕುಂದ, ತಿರುಮಲೇಶ್ವರ ಭಟ್ಟ (ಕಾರ್ಯದರ್ಶಿಗಳು.) ಶ್ರೀಗಳಾದ ಎ. ಬಿ. ಶೆಟ್ಟಿ, ಎಚ್. ರಾಮರಾಯ ಮಲ್ಯ, ಡಾ। ಎಸ್. ಪಿ. ಭಟ್, ಎ. ಎಸ್. ಕಾಮತ್, ಕಡೆಂಗೋಡ್ಲು ಶಂಕರಭಟ್ಟ, ಕುಡ್ವ ವಾಸುದೇವ ಶೆಣೈ, ಎಂ. ಎಸ್. ಮಾಧವರಾವ್, ಜಿ. ವಾಮನ ಭಟ್ಟ, ಕಾವು ವಾಮನ ಶೆಣೈ ಟಿ. ಆರ್. ಎ. ಪೈ, ಬಿ. ವಿ. ಬಾಳಿಗ, ಮಂಗಳೂರು ಜಾರಪ್ಪ, ಬಂಟ್ವಾಳ ನಾರಾಯಣ ನಾಯಕ್, ಬೋಳಾರ ವಿಠಲರಾವ್ ವಿ. ಕೇಶವ ಕಾಮತ್—(ಸಮಿತಿ ಸದಸ್ಯರು) ಇನ್ನು ಹೆಚ್ಚಿನ ಸದಸ್ಯರನ್ನು ಸೇರಿಸಿಕೊಳ್ಳುವರೆ ಈ ಕಾರ್ಯಕಾರೀ ಸಮಿತಿಗೆ ಅಧಿಕಾರ ಕೊಡಲಾಗಿದೆ. ಬರುವ ಬುಧವಾರ ತಾ ೬ರಂದು ಸಂಜೆ ೭ ಗಂಟೆಗೆ ಈ ಕಾರ್ಯಕಾರೀ ಮಂಡಳಿಯ ಸಭೆ ಜಿಲ್ಲಾ ಪತ್ರಿಕೋದ್ಯೋಗಿ ಸಂಘದ ಆಫೀಸಿನಲ್ಲಿ ಮುಂದಿನ ಕಾರ್ಯಕ್ರಮಗಳ ಕುರಿತು ನಿರ್ಧರಿಸುವರೆ ಸೇರಲಿದೆ.

ನಿರ್ಬಂಧ ತೆಗೆಯಬೇಕು

ಜಿಲ್ಲಾ ಕಲೆಕ್ಟರರು ಸಾರ್ವಜನಿಕ ಸಭೆ ಮೆರವಣಿಗೆ ಮಾಡದಂತೆ ನಿರ್ಬಂಧ ಹಾಕಿದ್ದನ್ನು ಮತ್ತೂ ಎರಡು ತಿಂಗಳು ಮುಂದುವರಿಸಿದ ಬಗ್ಗೆ ಆ ನಿರ್ಬಂಧ ತೆಗೆದು ಹಾಕಬೇಕೆಂದು ಕಮ್ಯೂನಿಸ್ಟ್ ಪಕ್ಷ ಮಂಗಳೂರ ಶಾಖೆಯವರು ಇತರ ಪಕ್ಷಗಳ ಬೆಂಬಲ ಪಡೆದು ಮನವಿ ಮಾಡುವ ನಿರ್ಣಯ ಮಾಡಿದ್ದಾರೆ. ಹೀಗೆ ನಿರ್ಬಂಧ ಮಾಡಿದರೆ ಜನರನ್ನು ಫೇಸಿಸ್ಟ್ ವಿರೋಧ ತಯಾರಿಸಲು ತೊಂದರೆಯಾಗುತ್ತದೆಯೆಂದು ಅವರ ಆಕ್ಷೇಪವಾಗಿದೆ.

ಅಂಗಡಿ ಕೆಲಸಗಾರರು

ತಮಗೆ ವಾರಕ್ಕೊಂದು ರಜಾದಿನ ಕೊಡಬೇಕಾಗಿ ಚೇಂಬರ್ ಓಫ್ ಕೊಮರ್ಸಿಗೆ ವಿನಂತಿ ಮಾಡಲು ಸಹಿಗಳನ್ನು ಸಂಗ್ರಹಿಸುತ್ತಿದ್ದಾರೆ. ದಿನ ಬೆಳಗ್ಗೆ ೮ ಗಂಟೆಯಿಂದ ರಾತ್ರಿ ೧೦ ಗಂಟೆ ಮಿಕ್ಕಿಯೂ ಒಂದು ದಿನವೂ ರಜೆಯಿಲ್ಲದೆ ದುಡಿವ ತಮಗೆ ವಾರಕ್ಕೊಮ್ಮೆ ರಜೆ ಸಿಗಬೇಕೆಂದು ಕೇಳುವ ಅವರ ವಿನಂತಿ ನ್ಯಾಯದ್ದಾಗಿದೆ.

ಜಿಲ್ಲಾ ಬೋರ್ಡಿಗೆ ಚುನಾವಣೆ

ಬೈಂದೂರು ಸರ್ಕಲಿನ ಒಂದು ಸ್ಥಾನ; ಬಸ್ರೂರ್ ಸರ್ಕಲಿನ ಒಂದು ಸ್ಥಾನ; ಕುಂದಾಪುರ ಸರ್ಕಲಿನ ಒಂದು ಸ್ಥಾನ; ಅಲ್ಲದೆ ಹೆಂಗಸರ ಬಗೆಗಾಗಿ ಕಾದಿಟ್ಟ ಇನ್ನೊಂದು ಸ್ಥಾನ; ವಂಡ್ಸೆ ಸರ್ಕಲಿನ ಬಗೆಗೆ ಒಂದು ಸ್ಥಾನ, ಹೀಗೆ ೫ ಡಿಸ್ಟ್ರಿಕ್ಟ್ ಬೋರ್ಡ್ ಸ್ಥಾನಗಳಿಗಾಗಿ ಚುನಾವಣೆ ನಡೆಯುವುದು. ಇವೆಲ್ಲ ಸ್ಥಾನಗಳಿಗಾಗಿಯೂ ಉಮೇದುವಾರರು ಇದೇ ಅಕ್ಟೋಬರ ತಾರೀಕು ೨೧–೨೨ರಲ್ಲಿ ಅರ್ಜಿಗಳನ್ನು ಸಲ್ಲಿಸಬೇಕು; ಅವುಗಳ ತನಿಖೆ ಅದೇ ತಾ. ೨೬ರಲ್ಲಿ ಚುನಾವಣೆ ಬರುವ ನವೆಂಬರ್ ತಾ. ೨೪ರಲ್ಲಿ; ಮತದ ಎಣಿಕೆ ತಾ. ೩೦ರಲ್ಲಿ.

ನೇಮಕ

ಮಂಗಳೂರಲ್ಲಿ ಸಬ್ ಡಿವಿಜನಲ್ ಆಫೀಸರರಾಗಿದ್ದು ರಜೆಯ ಮೇಲೆ ತೆರಳಿದ, ಶ್ರೀ ಬಿ. ಜೋಗಪ್ಪ ಅವರು ದತ್ತ ಮಂಡಲದ ಇಕೊನಮಿಕ್ ಡೆವಲಪ್ ಮೆಂಟ್ ಬೋರ್ಡ್, ಮದ್ರಾಸ್ ಇದರ ಕಾರ್ಯದರ್ಶಿಯಾಗಿರುವಂತೆ ನೇಮಕ ಹೊಂದಿದ್ದಾರೆ.

ಜಿಲ್ಲಾ ಕ್ಷೌರಿಕ ಮಹಾಜನರ ಪ್ರಥಮ ಪರಿಷತ್ತು

ತಾ. ೨೯ನೇ ಬುಧವಾರ ರಘುನಾಥಯ್ಯನವರ ಸ್ಮಾರಕ ಭವನದಲ್ಲಿ ಜರುಗಿತು. ಸಭಾಧ್ಯಕ್ಷರು ಮುನಿಸಿಪಲ್ ಚೆಯರ್ಮೇನರು.

ಮಂಗಳೂರು ಬ್ರಹ್ಮ ಸಮಾಜ

ಇದರ ೭೩ನೇ ವಾರ್ಷಿಕೋತ್ಸವವು ಇದೇ ಅಕ್ಟೋಬರ ತಾ. ೩ರಿಂದ ೧೦ರ ವರೆಗೆ ಭಾಷಣಾದಿ ವಿವಿಧ ಕಾರ್ಯಕ್ರಮಗಳೊಡನೆ ಜರುಗಲಿದೆ. ಪ್ರಾರ್ಥನೆ, ಹರಿಕಥೆ, ವಾಚನ ಇತ್ಯಾದಿಗಳೂ ಆ ಕಾರ್ಯಕ್ರಮದಲ್ಲಿ ಸೇರಿವೆ.

ಕೆಲಸವಿಲ್ಲ

ಮಂಗಳೂರು, ಸ್ವಸ್ತಿಕ ಬೀಡಿ ಫೇಕ್ಟರಿಯನ್ನು ಒಮ್ಮೆಲೇ ಮುಚ್ಚಿದ್ದರಿಂದ, ಅಲ್ಲಿನ ಕೆಲಸಗಾರರಿಗೆ ಕೆಲಸವಿಲ್ಲದೆ ತೊಂದರೆಗೊಳಗಾಗಿರಲು, ಬೀಡಿಲೇಬರ್ ಯೂನಿಯನಿನವರು ಈ ಕುರಿತು ಜಿಲ್ಲಾ ಕಲೆಕ್ಟರರಿಗೆ ಮನವಿ ಮಾಡಿದ್ದಾರೆ. ತಮ್ಮಲ್ಲಿ ಬೀಡಿ ಸಂಗ್ರಹ ಹೆಚ್ಚಿರುವುದರಿಂದ ಫೇಕ್ಟರಿ ಮುಚ್ಚಲಾಯಿತೆಂದು ಫೇಕ್ಟರಿ ಮಾಲಕರು ಹೇಳಿಕೆಯೆಂದೂ, ಕೆಲವು ಕೆಲಸಗಾರರನ್ನು ಮಾತ್ರ ಕೆಲಸಕ್ಕೆ ಸೇರಿಸಿ ಅವರಿಗೂ ಕಡಿಮೆ ಸಂಬಳ ಕೊಡುವ ಮಾತು 'ಹೇಳಿದರೆಂದೂ' ಇದರಿಂದ ವಿವಾದ ಉಂಟಾಗಿದೆಯೆಂದೂ ಹೇಳಿಕೆಯಿದೆ. ಅಂತೂ ಈಗ ೩೭ ಮಂದಿ ಬಡ ಮಜೂರರು ಕೆಲಸವಿಲ್ಲದೆ ಕಷ್ಟ ಪಡುತ್ತಿರುವರು.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಮಂಗಳೂರು

ಇದರ ೧–೪–೧೯೩೪ರಿಂದ ೩೧–೩–೧೯೪೩ರ ವರೆಗಿನ ಒಂಬತ್ತು ವರ್ಷಗಳ ವರದಿಯು ನಮ್ಮ ಹಸ್ತಗತವಾಗಿದೆ. ದಕ್ಷ ಮಹನೀಯರ ಆಡಳಿತದಲ್ಲಿ ಈ ಸಂಸ್ಥೆಯು ದಿನವೊಂದರ ಸರಾಸರಿ ೧೭೦ ಮಂದಿಗೆ ಆಯುರ್ವೇದ ಧರ್ಮ ಔಷದೋಪಚಾರ ಮಾಡುತ್ತಿದ್ದು, ಮಂಗಳೂರಲ್ಲಿ ಜನಪ್ರಿಯವಾದ ಒಂದು ಸಂಸ್ಥೆಯಾಗಿದೆ. ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರು ಹಾಗೂ ಕೀ. ಶೆ. ಎನ್. ಅಚ್ಯುತ ನಾಯಕರು ಈ ಸಂಸ್ಥೆಯ ಅಭಿವೃದ್ಧಿಗೆ ಬಹಳ ದುಡಿದಿದ್ದು ಅವರ ನಿಧನದಿಂದ ಸಂಸ್ಥೆ ಇಬ್ಬರು ಸಹಾಯಕರನ್ನು ಕಳಕೊಂಡಂತಾಗಿದೆ. ಈ ನಷ್ಟವನ್ನು ಮಂಗಳೂರಿನ ಸಾರ್ವಜನಿಕ ಸೇವಾ ಕಾಂಕ್ಷಿಗಳಾದ ಉದಾರೀ ಶ್ರೀಮಂತರು ಮುಂದೆ ಬಂದು ತುಂಬಿಸಿ, ಸಂಸ್ಥೆಯು ಏಳಿಗೆ ಸಾಧಿಸುವ ಮೂಲಕ ಬಡರೋಗಿಗಳ ಸಂಕಷ್ಟ ಪರಿಹಾರ ಮಾಡಬೇಕು. ಶ್ರೀ ಕೊಂಚಾಡಿ ಕೇಶವ ಶೆಣೈಗಳೇ ಮೊದಲಾದವರು ಈಗ ಪರಿಶ್ರಮ ವಹಿಸಿ ದುಡಿಯುತ್ತಾರೆ. ಈ ಸಂಸ್ಥೆಯವರು ಶಾಸ್ತ್ರೋಕ್ತ ರೀತಿಯಲ್ಲಿ ಆಯುರ್ವೇದ ಔಷಧಗಳನ್ನು ತಯಾರಿಸುತ್ತಾರೆ. ಇದನ್ನು ಇನ್ನಷ್ಟು ಬೆಳೆಸಬೇಕು. ನಮ್ಮ ನಾಡಿನ ಜನರಿಗೆ ಇನ್ನೂ ಆಯುರ್ವೇದ ಔಷಧದಲ್ಲಿ ಆದರವಿದೆ. ಅದು ಕಡಿಮೆ ಖರ್ಚಿನಿಂದಲೂ ಆಗುತ್ತದೆ. ಹೀಗಿರುವಾಗ ಔಷಧ ತಯಾರಿಸುವ ಅಂಗ ಸಂಸ್ಥೆಯು ಬೆಳೆದು ಆ ಮೂಲಕ ಆಯುರ್ವೇದ ಇದರ ಪ್ರಚಾರ ಮತ್ತೆ ಬಡಜನರ ರೋಗ ಪರಿಹಾರಗಳು ಸಾಧಿಸಬೇಕಾದದ್ದು ಆವಶ್ಯ. ಈ ಒಂಬತ್ತು ವರ್ಷಗಳಲ್ಲಿ ಈ ಸಂಸ್ಥೆಯು ರೂ ೧೩,೬೪೯ ರೂಪಾಯಿಗಳ ಮದ್ದು ಧರ್ಮಾರ್ಥ ಕೊಟ್ಟಿರುವುದು. ಒಟ್ಟು ಖರ್ಚು ರೂ ೧೯ ಸಾವಿರಕ್ಕೆ ಮಿಾರಿದೆ. ಮೂಲ್ಕಿಯಲ್ಲಿ ಒಂದು ಧರ್ಮಾರ್ಥ ಔಷಧ ಶಾಲೆ ತೆರೆಯಲಾಗಿತ್ತು. ಈ ಸಂಸ್ಥೆಯನ್ನು ಬಲಪಡಿಸಿ ಸಾರ್ವಜನಿಕ ಸೇವೆ ಹಾಗೂ ಆಯುರ್ವೇದದ ಪ್ರಚಾರ ಸಾಧಿಸುವುದು ಅವಶ್ಯ. ಈ ಭಾರ ನಮ್ಮ ಜಿಲ್ಲೆಯ ಮಹನೀಯರನ್ನು ಸೇರಿದೆ. ಅವರು ಮುಂದೆ ಬಂದು ಸಂಸ್ಥೆಯ ಏಳಿಗೆಗಾಗಿ ದುಡಿದು ಪುಣ್ಯಭಾಗಿಗಳಾಗಬೇಕೆಂದು ನಮ್ಮ ಹಾರೈಕೆ.

ಜನತಾ ರಂಗಭೂಮಿ

ಮಂಗಳೂರು ಶಾಖೆಯ ಜನತಾ ರಂಗಭೂಮಿಯ ಉದ್ಘಾಟನಾ ಸಮಾರಂಭವವು ಕಳೆದ ಆದಿತ್ಯವಾರ ಸಂಜೆ ಥಿಯಸಾಫಿಕಲ್ ಮಂದಿರದಲ್ಲಿ ಶಾಖೆಯ ಅಧ್ಯಕ್ಷ ಶ್ರೀ. ರಂಗರಾವ್ ತಲ್ಚೇರಿಕರರ ಅಧ್ಯಕ್ಷತೆಯಲ್ಲಿ ಜರುಗಿತು. ಶಾಖಾ ಕಾರ್ಯದರ್ಶಿ ಶ್ರೀ. ಕುಳುಕುಂದ ಶಿವರಾಯರು 'ಜನತಾ ರಂಗಭೂಮಿ'ಯ ಉದ್ದೇಶ, ಸ್ವರೂಪಗಳನ್ನು ವಿವರಿಸಿದ ಮೇಲೆ ಶ್ರೀ. ಕೆ. ಶಿವರಾಮ ಕಾರಂತರು ಆರಂಭೋತ್ಸವದ ಭಾಷಣ ಮಾಡುತ್ತ ನಮ್ಮ ದೇಶದ ಬಯಲಾಟ, ನಾಟಕ, ಸಿನೆಮಾಗಳ ಸ್ವರೂಪವನ್ನೂ ರಷ್ಯದ ಜನತಾ ರಂಗಭೂಮಿಯ ರೂಪರೇಷೆ, ವ್ಯವಸ್ಥೆಗಳನ್ನೂ ವಿಶದೀಕರಿಸಿ, ಜನತಾ ರಂಗಭೂಮಿಯು ಯಾವ ರೀತಿಯ ಸಿದ್ಧಾಂತಕ್ಕೂ ಹೋಗದೆ ಕೇವಲ ಸಮಸ್ಯೆಗಳನ್ನು ಮಾತ್ರ ಜನತೆಯ ಮುಂದಿರಿಸಬೇಕೆಂದರು. ಅಧ್ಯಕ್ಷರು ಸಮಯೋಚಿತವಾದ ಮಾತುಗಳಾಡಿದ ಬಳಿಕ ಕಾರ್ಯದರ್ಶಿಗಳು ಕೃತಜ್ಞತೆ ಹೇಳಿದರು.

ಕಾಸರಗೋಡು

ನೀಲೇಶ್ವರ

ರಾಜಾಸ್ ಹೈಸ್ಕೂಲಿನ ರಜತೋತ್ಸವವನ್ನು ಈ ವರ್ಷ ನವಂಬರದಲ್ಲಿ ಜರಗಿಸುವ ನಿರ್ಧಾರವಾಗಿದ್ದು, ಆ ಸಂದರ್ಭದಲ್ಲಿ ಶಾಲಾ ಮ್ಯೂಸಿಯಂ ಮತ್ತು ಲೈಬ್ರರಿಗಾಗಿ ಪ್ರತ್ಯೇಕ ಸ್ಮಾರಕ ಮಂದಿರವೊಂದನ್ನು ಕಟ್ಟಿಸಲು ಆರಂಭಿಸಬೇಕೆಂದು ರಜತೋತ್ಸವ ಸಮಿತಿಯವರು ನಿರ್ಧರಿಸಿದ್ದಾರೆ. ಇದಕ್ಕಾಗಿ ರೂ. ೫೦೦೦ ನಿಧಿಯಾದರೂ ಬೇಕಾಗುವುದು. ಪುತ್ತೂರು ಮತ್ತು ಕಾಸರಗೋಡು ತಾಲೂಕುಗಳ ಹಲವಾರು ಪ್ರದೇಶಗಳಲ್ಲಿರುವ ಈ ಶಾಲೆಯ ಹಳೆಯ ವಿದ್ಯಾರ್ಥಿಗಳೂ ಇತರ ವಿದ್ಯಾಭಿಮಾನಿಗಳೂ ನಿಧಿ ಸಂಗ್ರಹದಲ್ಲಿ ನೆರವಾಗಬೇಕೆಂದು ರಜತೋತ್ಸವ ಸಮಿತಿಯವರು ವಿನಂತಿ ಮಾಡಿದ್ದಾರೆ. ನಿಧಿಗಾಗಿ ವಂತಿಗೆಯನ್ನು ಶ್ರೀ ರಾಮಕೃಷ್ಣರಾವ್, ಕೋಶಾಧಿಕಾರಿ, ರಜತೋತ್ಸವ ಸಮಿತಿ, ನೀಲೇಶ್ವರ ಇವರಿಗೆ ಕಳುಹಬಹುದು.

ಉಡುಪಿ

ಭಾವಚಿತ್ರ ಅನಾವರಣ

ಮಣಿಪಾಲದಲ್ಲಿ ತಾ. ೫ರಂದು ಮಣಿಪಾಲ ಟೆಕ್ಸ್ ಟೈಲ್ ಮಗ್ಗದ ಕಾರ್ಖಾನೆಯಲ್ಲಿ ಅದರ ಸ್ಥಾಪಕರೂ ಪಾಲಕರೂ ಆಗಿದ್ದ ಶ್ರೀ. ಪಿ. ಎ. ಪೈಗಳ ಭಾವಚಿತ್ರ ಅನಾವರಣೋತ್ಸವವು ಶ್ರೀ. ಕೊಟ್ಟಿಕಾರ್ ಪದ್ಮನಾಭ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಮಣಿಪಾಲ ಶಾಲೆಯ ಮಕ್ಕಳ ಪ್ರಾರ್ಥನಾ ಗೀತಾದಿಗಳಾದ ಮೇಲೆ ಶ್ರೀಗಳಾದ ಶ್ರೀನಿವಾಸ ಪೈ, ಪ್ರಸಾದ ಜಪ್ತನ್ನ, ನಾರಾಯಣ ಪ್ರಭು ಮೊದಲಾದವರ ಭಾಷಣ ಗುಣ ಕಥನಗಳ ನಂತರ ಭಾವಚಿತ್ರ ಅನಾವರಣೋತ್ಸವ ನಡೆಯಿತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ದಿವಂಗತರ ಗುಣಕಥನ ಮಾಡಿದರು.

'ಪ್ರಕಾಶ ಕೂಟ'ದಲ್ಲಿ ಗೀತಾಸಂಚಯದ ಅಭ್ಯಾಸ

ತಾ. ೨೭ರಂದು ಪ್ರಕಾಶಕೂಟದ ಸಾಹಿತ್ಯಗೋಷ್ಠಿ ಶ್ರೀ ತಿರುಮಲೇಶ ಅಲಂಗಾರರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಬಿ. ವಿ. ಬಾಳಿಗರು ತಾವು ಬರೆದ 'ಗೀತಾ ಸಂಚಯ'ದ ಕೆಲವು ಕವಿತೆಗಳನ್ನು ಹಾಡಿ ಸಭಿಕರನ್ನು ಆನಂದಗೊಳಿಸಿದರು.

ಶ್ರೀ. ಕಯ್ಯಾರ ಕಿಞ್ಞಣ್ಣ ರೈಗಳು "ಮರಳಿ ಮಣ್ಣಿಗೆ" ಕಾದಂಬರಿಗೆ ಮೈಸೂರಿನ ದೇವರಾಜ ಬಹದೂರ ಪಾರಿತೋಷಕವನ್ನು ಪಡೆದಿರುವ ಶ್ರೀ. ಶಿವರಾಮ ಕಾರಂತರನ್ನೂ, 'ಮೋಟಾರು ಯಂತ್ರ ವಿಜ್ಞಾನ' ಗ್ರಂಥಕ್ಕೆ ಮದ್ರಾಸು ವಿಶ್ವವಿದ್ಯಾಲಯದಿಂದ ಬಹುಮಾನ ಪಡೆದಿರುವ ಶ್ರೀ. ಪಿ. ಎಸ್. ಕುಡ್ವರನ್ನೂ ಪ್ರಕಾಶ ಕೂಟದ ಪರವಾಗಿ ಅಭಿನಂದಿಸುವ ಠರಾವನ್ನು ಮುಂದಿಡಲು ಅದು ಸರ್ವಾನುಮತದಿಂದ ಸ್ವೀಕರಿಸಲ್ಪಟ್ಟಿತು.

ಶ್ರೀ. ಶಾಂತಾರಾಮ ಪೈಯವರು 'ಗೀತಾಸಂಚಯ'ದ ಅಭ್ಯಾಸವನ್ನು ಸಭಿಕರ ಮುಂದಿಟ್ಟು, ಗೀತಾಸಂಚಯದ ಗೀತಗಳು ಮನೋಹರವಾಗಿವೆ. ಬಾಳಿಗರು ಧಾರ್ಮಿಕ ಅಭಂಗಗಳ ಬದಲು ಜನರ ಜೀವನವನ್ನೂ, ಅವರ ಸುಖದುಃಖವನ್ನೂ ನೈಜತೆಯಿಂದ ಚಿತ್ರಿಸುವ ಗೀತಗಳಿಗೆ ಪ್ರಾಧಾನ್ಯತೆ ಕೊಡಬೇಕು; ಎಂದು ಹೇಳಿದರು.

ಶ್ರೀ. ಎಂ. ದೇವದಾಸ ಕಾಮತರು 'ಗೀತಗಳಲ್ಲಿ ಭಾವನಾಝರಿಯು ಹರಿಯುತ್ತಿರುವುದು; ಬಾಳಿಗರು ರಾಷ್ಟ್ರೀಯ ಗೀತಗಳನ್ನು ಬರೆಯಲಿ' ಎಂದರು.

ಶ್ರೀ. ಕೆ. ಸದಾಶಿವರು ರಾಷ್ಟ್ರೀಯ ಗೀತಗಳೂ ಬಡವರ ಬಾಳ್ವೆಯ ಕರುಣಾಮಯ ಚಿತ್ರಗಳೂ ಇದರಲ್ಲಿವೆ; ಕವಿಯ ಕೋಮಲ ಹೃದಯವನ್ನು ಚಿತ್ರಿಸುವ ಹೃದಯಸ್ಪರ್ಶಿ ಗೀತಗಳೂ ಇಲ್ಲಿವೆ' ಎಂದರು.

'ಈ ಪುಸ್ತಕದ ಗೀತಗಳು ಮೋಹಕವಾಗಿದೆ. ರಸಿಕರು, ಸಂತರು, ಮಹಿಳೆಯರು, ದೇಶ ಪ್ರೇಮಿಗಳು ಎಲ್ಲರ ಮನವನ್ನು ಸೆಳೆಯುವ, ಗೀತಗಳು ಇಲ್ಲಿವೆ' ಎಂದು ಶ್ರೀ. ಸೋಮಶಯ್ಯ ಭಟ್ಟರು ಹೇಳಿದರು.

ಶ್ರೀ. ಕಯ್ಯಾರರು 'ಪ್ರತೀ ಒಂದು ಭಾಷಾಕ್ಷೇತ್ರವು ವಿಸ್ತೃತವಾಗಬೇಕು. ಭಾಷಾ ಸೇವೆಯಿಂದ ದೇಶಸೇವೆ ಆಗುವಂತೆಯೂ ನೋಡಬೇಕು; ಬಾಳಿಗರು ಕನ್ನಡದಲ್ಲೂ, ಕೊಂಕಣಿಯಲ್ಲೂ ಹೆಚ್ಚೆಚ್ಚು ಬರೆಯಲಿ. ತುಳು ನೊತ್ತಿದ್ದವರಾದ ನಾವು ತುಳುವಿನಲ್ಲೂ ಬರೆಯುತ್ತೇವೆ' ಎಂದು ತಿಳಿಸಿದರು.

ಶ್ರೀ. ಪಿ. ಕೆ. ನಾರಾಯಣರು 'ಬಾಳಿಗರು ಪ್ರತಿಭಾ ಸಂಪನ್ನರಾದ ಕವಿಗಳು. ಆದರೆ ಅವರು ಧಾಟಿಗೆ ಭಾವಕ್ಕಿಂತ ಹೆಚ್ಚು ಲಕ್ಷ್ಯ ಕೊಟ್ಟಂತೆ ತೋರುವುದು. ಬಾಳಿಗರು ಸ್ವತಂತ್ರವಾದ ಧಾಟಿಯಲ್ಲಿ ಸ್ವತಂತ್ರವಾದ ಭಾವವನ್ನು ಪ್ರಕಟಿಸಲಿ' ಎಂದು ತಮ್ಮ ಅಭ್ಯಾಸವನ್ನು ಮುಂದಿಟ್ಟರು.

ಕಡೆಗೆ ಅಧ್ಯಕ್ಷರು 'ಬಾಳಿಗರು ಕನ್ನಡದಲ್ಲಿ ಜನಜೀವನ ಚಿತ್ರಿಸುವ, ರಾಷ್ಟ್ರ ಗೀತಗಳನ್ನು ರಚಿಸಿದ್ದಲ್ಲಿ ಇನ್ನೂ ಒಳ್ಳೇದಿತ್ತು' ಎಂದೆ ಮುಂತಾಗಿ ಸೂಚನೆ ಸಲಹೆಗಳನ್ನು ಕೊಟ್ಟರು. ಕಾರ್ಯದರ್ಶಿ ಶ್ರೀ. ಎಸ್. ಜಿ. ನಾಯ್ಕರು ಶ್ರೀ. ಬಿ. ವಿ. ಬಾಳಿಗರು 'ಗೀತಾಸಂಚಯ'ವನ್ನು ಬರೆದದ್ದಕ್ಕಾಗಿ ಅಭಿನಂದಿಸಿ ಮುಂದೆ ರಾಷ್ಟ್ರೀಯ ಕವನಗಳನ್ನು ಅವರು ಬರೆಯಲಿ ಎಂದು ಹಾರೈಸಿ ತಂದ ಠರಾವು ಸರ್ವಾನುಮತದಿಂದ ಸ್ವೀಕರಿಸಲ್ಪಟ್ಟಿತು. ಕಾರ್ಯದರ್ಶಿಗಳು ಧನ್ಯವಾದ ಅರ್ಪಿಸಿದರು.

ಕೆನರಾ ಚಲಚ್ಚಿತ್ರ ವಿಮರ್ಶಕೆ

ಕೂಟದ ಸಭೆ ತಾ. ೨೫ರಂದು ಶ್ರೀ. ತಿರುಮಲೇಶ್ವರ ಅಲಂಗಾರರ ಅಧ್ಯಕ್ಷತೆಯಲ್ಲಿ ಸೇರಿತು. 'ರೋಟಿಯ' ವಿಮರ್ಶೆಯು ಮುಂದುವರಿದು, 'ಅದು ಒಳ್ಳೆಯ ಸಮಸ್ಯಾತ್ಮಕ ಚಿತ್ರ' ಎಂದು ಬಹುಮತದ ನಿರ್ಧಾರವಾಯಿತು. "ಜಮೀನ್ದಾರ್ ತೀರ ಸಾಮಾನ್ಯ ಚಿತ್ರ"ವೆಂದು ಕೂಟವು ಅಭಿಪ್ರಾಯಪಟ್ಟಿತು. ಆ ಚಿತ್ರದಲ್ಲಿ ಬೇಬಿ ಅಖ್ತಾರಿಯ ಅಭಿನಯವೇ ಉತ್ಕೃಷ್ಟವಾದುದೆಂದು ಎಲ್ಲರೂ ಅಭಿಪ್ರಾಯಪಟ್ಟರು.

ಕನ್ನಡ ಗ್ರಂಥಕರ್ತರು ಗೌರವಿಸಲ್ಪಟ್ಟರು
ಶ್ರೀಗಳಾದ ಕುಡ್ವರು ಮತ್ತು ಕಾರಂತರಿಗೆ 'ಮಿತ್ರ ಮಂಡಳಿ'ಯಲ್ಲಿ ಸತ್ಕಾರ ಕೂಟ

ಶ್ರೀ ಶಿವರಾಮ ಕಾರಂತರ 'ಮರಳಿ ಮಣ್ಣಿಗೆ' ಕಾದಂಬರಿಗೆ ಮೈಸೂರಿನ ದೇವರಾಜ ಬಹದ್ದೂರ್ ಪಾರಿತೋಷಕವೂ, ಶ್ರೀ ವಿ. ಎಸ್. ಕುಡ್ವರ 'ಮೋಟರ್ ಯಂತ್ರ ವಿಜ್ಞಾನ' ಗ್ರಂಥಕ್ಕೆ ಮದ್ರಾಸು ವಿಶ್ವವಿದ್ಯಾಲಯದ ಪಾರಿತೋಷಕವೂ ದೊರೆತ ಬಗ್ಗೆ ಅವರನ್ನು ಅಭಿನಂದಿಸುವ ಸತ್ಕಾರ ಕೂಟವನ್ನು ಕಳೆದ ಶನಿವಾರ ಮಿತ್ರ ಮಂಡಳಿಯವರು ಶ್ರೀ ಮುಳಿಯ ತಿಮ್ಮಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದರು. ಪ್ರಾರಂಭದಲ್ಲಿ ಪಾನ ಫಲಾಹಾರಗಳಾಗಿ, ಅತಿಥಿಗಳಿಬ್ಬರಿಗೂ ಹೂಮಾಲೆ ಹಾಕಿ ಗೌರವಿಸಿದ ಬಳಿಕ ಅಧ್ಯಕ್ಷರು ಶ್ರೀಗಳಾದ ಕುಡ್ವರು ಮತ್ತು ಕಾರಂತರಿಬ್ಬರನ್ನು ಅಭಿನಂದಿಸಿ ಭಾಷಣ ಮಾಡುತ್ತಾ, ಈ ಇಬ್ಬರು ನಮ್ಮ ಬಂಧುಗಳು ಇಡೀ ಕನ್ನಡ ಸಮಾಜಕ್ಕೆ ಆನಂದದಾಯಕ ಕಾರ್ಯ ಮಾಡಿದವರೆಂದು ತಿಳಿಸಿ ಒಬ್ಬರು ವಿಜ್ಞಾನದಲ್ಲಿ ಇನ್ನೊಬ್ಬರು ಸಾಹಿತ್ಯದಲ್ಲಿ ಈರ್ವರೂ ಅಸಾಮಾನ್ಯ ಬಹುಮಾನ ಪಡೆದಿರುವರೆಂದು ಹೇಳಿದರು.

ಕಾರ್ಯದರ್ಶಿ ಡಾ। ಎಸ್. ಪಿ. ಭಟ್ಟರು ಶ್ರೀಗಳಾದ ಗೋವಿಂದ ಪೈ ಮತ್ತು ಎ. ಬಿ. ಶೆಟ್ಟರಿಂದ ಬಂದ ಸಂದೇಶಗಳನ್ನೋದಿದರು.

ಪ್ರೊ। ರಾಮಚಂದ್ರಯ್ಯರು ಮಾತನಾಡಿ, ವಿಶ್ವವಿದ್ಯಾನಿಲಯದವರು ಆಧುನಿಕ ಗ್ರಂಥಗಳಿಗೆ ಬಹುಮಾನವೀಯುವ ವಿಷಯ ಪ್ರಸ್ತಾಪಿಸಿ, [illegible]೪೩ರ ವರೆಗೆ ಕನ್ನಡ ವಿದ್ವಾಂಸರು ಸ್ಪರ್ಧಿಸದಿದ್ದರೂ ಆ ಮೇಲೆ ತುಂಬಾ ಬಹುಮಾನವನ್ನು ಪಡೆದರೆಂದು ಪ್ರಶಂಸಿಸಿದರು.

ಶ್ರೀ ಕೆ. ಗೋಪಾಲ ರಾಯರು ಮಾತನಾಡುತ್ತಾ, ಶ್ರೀ ಕಾರಂತರ ವಿಶ್ವತೋಮುಖವಾದ ಚಟುವಟಿಕೆಗಳನ್ನು ಅಭಿನಂದಿಸಿ, ಶ್ರೀ ಕುಡ್ವರು [illegible]ಸಿಗಳು ಸಾಮರ್ಥ್ಯವಂತರು ಎಂದು ಹೇಳಿದರು.

ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಮಾತನಾಡಿ, ಶ್ರೀ ಕುಡ್ವರೊಡನೆ ಮದ್ರಾಸು ವಿಶ್ವವಿದ್ಯಾನಿಲಯದ ಪಾರಿತೋಷಕಕ್ಕೆ ಸ್ಪರ್ಧಿಸಿ ಸೋತವನ ನೆಲೆಯಲ್ಲಿ ತಾನವರನ್ನು ಅಭಿನಂದಿಸುತ್ತೇನೆಂದೂ, ಶ್ರೀ ಕಾರಂತರು ತಮ್ಮಲ್ಲಿ ಸಾಹಿತ್ಯಾಭಿರುಚಿ ಹುಟ್ಟಿಸಿದರೆಂದೂ ತಿಳಿಸಿದರು.

ಶ್ರೀ ಹುರುಳಿ ಭೀಮರಾಯರು, ಶ್ರೀಗಳಾದ ಕುಡ್ವರು ಮತ್ತು ಕಾರಂತರಿಬ್ಬರೂ ಪತ್ರಿಕೋದ್ಯಮಿಗಳೆಂದೂ, ಅವರಿಗಿಂದು ದೊರಕಿದ ಬಹುಮಾನಕ್ಕಾಗಿ ತಾನು ಪತ್ರಿಕೋದ್ಯೋಗಿ ಸಂಘದ ಪರವಾಗಿ ಅಭಿನಂದಿಸುತ್ತೇನೆಂದೂ ಹೇಳಿದರು.

ಕೊನೆಗೆ ಶ್ರೀ ಎಸ್. ಮುಕುಂದರಾಯರು ಮಾತನಾಡಿ, ಶ್ರೀ ಕುಡ್ವರನ್ನು 'ಸತ್ಯಾಗ್ರಹಿ'ಯು [illegible]ಬಾಲಕನಾಗಿ ಕಂಡ ಮೊದಲ್ಗೊಂಡು ಮುಂದೆ ಅವರ ವಿವಿಧ ಚಟುವಟಿಕೆಗಳನ್ನು ತಿಳಿಸಿ; ಕಾರಂತರ ಕುರಿತು ಹೇಳುತ್ತಾ, ಅವರು ಕನ್ನಡಕ್ಕೆ ಭೂಷಣಪ್ರಾಯರೆಂದೂ, ನಮ್ಮ ನಾಡಿನ ಜೀವನವನ್ನು ಕಾರಂತರಂತೆ ಚಿತ್ರಿಸುವವರು ಬೇರಿಲ್ಲವೆಂದೂ ಹೇಳಿದರು.

ಆ ಮೇಲೆ ಅತಿಥಿಗಳು ಉತ್ತರವಿತ್ತರು. ಶ್ರೀ ವಿ. ಎಸ್. ಕುಡ್ವರು ತಮ್ಮ ಭಾಷಣದಲ್ಲಿ, ಬಾಲ್ಯದಿಂದಲೇ ತಾನು ವಾಙ್ಮಯಾಭಿರುಚಿಯುಳ್ಳವನೆಂದು ಹೇಳಿ, ಶ್ರೀ ಕಾರಂತರಿಗೂ ತನಗೂ ಒಂದೇ ದಿನ ಸತ್ಕಾರವೇರ್ಪಡಿಸಿದ್ದುದರಲ್ಲಿ ಒಂದು ವೈಶಿಷ್ಟ್ಯವಿದೆ ಎನ್ನುತ್ತಾ, 'ನನ್ನ ಕೆಲಸವನ್ನು ಅವರು ಮಾಡಹೋಗಿದ್ದಾರೆ, ಅವರ ಕೆಲಸವನ್ನು ನಾನು ಮಾಡಹೋಗಿದ್ದೇನೆ; ಹಾಗೆ ಮಾಡದೆ ನನ್ನ ಕೆಲಸ ನಾನು ಮಾಡಬೇಕು, ಅವರ ಕೆಲಸ ಅವರು ಮಾಡಬೇಕು' ಎಂಬ ಒಂದು ಸೂಚನೆ ಇದರಲ್ಲಿದೆಯೆಂದು ಹೇಳಿ ತಮಗೆ ಸತ್ಕಾರ ಮಾಡಿದ್ದಕ್ಕಾಗಿ ಮಿತ್ರಮಂಡಳಿಯನ್ನು ಅಭಿನಂದಿಸಿದರು.

ಅನಂತರ ಶ್ರೀ ಶಿವರಾಮ ಕಾರಂತರು ತಮ್ಮ ಭಾಷಣದಲ್ಲಿ, 'ಮರಳಿ ಮಣ್ಣಿಗೆ'ಯಲ್ಲಿ ನಮ್ಮ ನಾಡಿನ ಬದುಕನ್ನೇ ತಾನು ಲೇಖನಿಯಲ್ಲಿ ಚೆಲ್ಲಿದ್ದೇನೆಂದೂ, ತನ್ನ ಅಜ್ಜಿಯ ಬಾಳಿನಿಂದ ಹಿಡಿದು ಕತೆ ತೊಡಗಿ ಅವರ ಬಾಯಿಯಿಂದ ಕೇಳಿದ ಮಾತುಗಳೇ ತನಗೆ ಈ ಕಾದಂಬರಿ ಬರೆಯಲು ಸಹಾಯವಾದುವೆಂದೂ ತಿಳಿಸಿ, 'ಮನುಷ್ಯನು ಬರೆವುದು ಸೇವೆಗಲ್ಲ; ಅದು ಆತನ ಮನಸ್ಸಮಾಧಾನಕ್ಕೆ; ನನ್ನ ಬದುಕಿಗೆ, ನನ್ನ ದುಷ್ಟತೆಗೆ, ನನ್ನ ಒರಟುತನಕ್ಕೆ, ನನ್ನ ಕೋಮಲತೆಗೆ ಯಾರು ಕಾರಣರೋ ಅವರ ಪ್ರೇರಣೆಯಿಂದ 'ಮರಳಿ ಮಣ್ಣಿಗೆ' ಉಂಟಾಗಿದೆ' ಎಂದು ಹೇಳಿ ತಮ್ಮನ್ನು ಸತ್ಕಾರ ಮಾಡಿದ್ದಕ್ಕಾಗಿ ಮಿತ್ರಮಂಡಳಿಯವರನ್ನು ಅಭಿವಂದಿಸಿದರು. ಕಾರ್ಯದರ್ಶಿಗಳು ಕೃತಜ್ಞತೆ ಹೇಳಿದರು.

ಚರಖಾ ಜಯಂತಿ
೨೫–೯–೪೩ ರಿಂದ ೧೦–೧೦–೪೩ ರ ವರೆಗೆ

ಅಖಿಲ ಭಾರತ ಚರಖಾ ಸಂಘದ ಕರ್ನಾಟಕ ಶಾಖೆಯ ಕಾರ್ಯದರ್ಶಿಗಳು ಈ ಪ್ರಕಟನೆ ಕೊಟ್ಟಿದ್ದಾರೆ.

ಈ ವರ್ಷ ಚರಖಾ ಜಯಂತಿಯನ್ನು ತಾ. ೨೫-೯-೪೩ರಿಂದ ೧೦-೧೦-೪೩ರ ವರೆಗೆ ಆಚರಿಸಲ್ಪಡತಕ್ಕದ್ದಿದೆ. ಮಹಾತ್ಮ ಗಾಂಧಿಜಿಯವರು ಜನ್ಮವೆತ್ತಿ ೭೫ ವರ್ಷಗಳಾದುವು. ಇದು ಅವರ ೭೫ನೇ ಜಯಂತ್ಯುತ್ಸವವು. ಈ ಜಯಂತ್ಯುತ್ಸವವನ್ನೇ ನಾವು ಇತ್ತೀಚೆಗೆ ಅವರ ಆದೇಶದ ಮೇರೆಗೆ 'ಚರಖಾ' ಜಯಂತಿಯೆಂದು ಆಚರಿಸುತ್ತಿರುವೆವು; ಈ ದಿನಗಳಲ್ಲಿ ಮಹಾತ್ಮರ ಮಹಾಮಂತ್ರದಂತಿರುವ ಖಾದಿ ಪ್ರಚಾರ, ಹರಿಜನಸೇವೆ, ಜಾತಿ ಜಾತಿಗಳಲ್ಲಿ ಐಕ್ಯಮತ ಮುಂತಾದ ರಚನಾತ್ಮಕ ಕಾರ್ಯದಲ್ಲಿ ನಾವೆಲ್ಲರು ತೊಡಗಬೇಕು. ಸದ್ಯಕ್ಕೆ ಅವರು ಕಾರಾಗೃಹದಲ್ಲಿರುವವರಿಂದಲೂ, ಪರಿಸ್ಥಿತಿಯು ತೀರ ಪ್ರತಿಕೂಲವಾಗಿರುವದರಿಂದಲೂ ಖಾದಿ ಪ್ರಸಾರವನ್ನುಳಿದು ಮಿಕ್ಕ ಕಾರ್ಯಗಳ ಸಂಘಟನೆಯು ವ್ಯವಹಾರ್ಯವಾಗದು. ಕಾರಣ ಎಲ್ಲರೂ ಖಾದಿಯನ್ನು ಕೊಂಡು ಮಹಾತ್ಮರ ಮೇಲಿರುವ ನಮ್ಮ ಪ್ರೇಮಾದರಗಳನ್ನು ವ್ಯಕ್ತಗೊಳಿಸುವ.

ಮೊನ್ನೆ ಮೊನ್ನೆ ನಾವು ಏರ್ಪಡಿಸಿದ್ದ 'ವಿಜಾಪೂರ ಬರಗಾಲ ಪರಿಹಾರ ಖಾದೀ ಸಪ್ತಾಹ'ದಲ್ಲಿ ಕರ್ನಾಟಕಸ್ಥರು ಖಾದಿಯಲ್ಲಿರುವ ತಮ್ಮ ನಿಷ್ಠೆಯನ್ನು ವ್ಯಕ್ತಗೊಳಿಸಿರುವರು. ಆದರೂ ಅನೇಕರು ಹಿಂದುಳಿದಿರಬಹುದು. ಅವರು ಈ ಮಂಗಲ ದಿನಗಳಲ್ಲಿ ಮುಂದೆ ಬಂದು ಖಾದೀ ಕೊಂಡು ಕೃತಾರ್ಥರಾಗಬೇಕೆಂದು ಬಿನ್ನಪ. ಈ ದಿನಗಳಲ್ಲಿ ಚಿಲ್ಲರೆ ಖಾದೀ ಕೊಂಡವರಿಗೆ ೧ ರೂಪಾಯಿಗೆ ೦-೧-೦ (ಒಂದಾಣೆ) ಕಮಿಶನ್ ದೊರೆಯುವದು.

ಬಂಗಾಳಕ್ಕೆ ಕಳುಹಿಸಿದ ಆಹಾರ ಹಂಚಿರುವರೊ? ಬಚ್ಚಿಟ್ಟಿರುವರೊ?

ಬಂಗಾಲಕ್ಕೆ ದಿನಾಲೂ ೨ ಸಾವಿರ ಟನ್ ಆಹಾರ ಹೋಗುತ್ತಿದ್ದರೂ ಅದನ್ನು ಸರಕಾರದವರು ಹಂಚಿರುವರೋ, ಅಲ್ಲ ಏಜಂಟರು ಬಚ್ಚಿಟ್ಟಿರುವರೋ ಎಂಬ ಬಗ್ಗೆ ಸಂಶಯವುಂಟಾಗಿದೆಯೆಂದು ಬಂಗಾಲ ರಾಷ್ಟ್ರೀಯ ವಣಿಕ್ ಸಂಘದ ಅಧ್ಯಕ್ಷ ಶ್ರೀ ಜೆ. ಕೆ. ಮಿತ್ರರು ಹೊರಡಿಸಿದ ಪ್ರಕಟಣೆಯಲ್ಲಿದೆ. ಬಂಗಾಲಕ್ಕೆ ಕಳುಹಿಸಿದ ಆಹಾರದ ಕುರಿತು ಸರಕಾರ ಏನು ಮಾಡಿದ್ದರೂ, ಪೇಟೆಯಲ್ಲಿ ಸಾಮಾನ್ಯ ಜನರಿಗೆ ಆಹಾರ ಸಿಗುವುದಿಲ್ಲವೆಂಬ ದೂರಿದೆ. ಬಂಗಾಲ ಸರಕಾರದ ಮೇಲೆ ಹೊರಿಸಲಾದ ಲಾಭ ಬಡಕತನದ ಆರೋಪವನ್ನು ವಿಚಾರಿಸಲು ಒಂದು ವಿಚಾರಣಾ ಮಂಡಳವೇರ್ಪಡಿಸುವರೆಂದು ತಿಳಿಯುತ್ತದೆ.

NOTICE

In the Court of the District Munsif of Mangalore.

R. E. P. No. 268/1943
O. S. No. 245/1942

Between:
Rev. Fr. Antony D. Souza ... *Petitioner*
and
Lawrence Benjamin D'Souza & 3 others. —*Respondents*

To
Respondents 1, 2 and 4.
1. Lawrence Benjamin D'Souza, 2. Pedru Souza, 4. Raymond Souza, sons of Jacob Souza, residing in Amunje Village, Mangalore Taluk.

Please take notice that the abovenamed Petitioner (decree holder) has applied for sale of the immoveable properties fully described in the sale papers and charged under the decree and that the 5th day of October 1943 has been fixed for settling the terms of sale proclamation.

(By order of court)

Mangalore 26–9–1943
(sd) P. D. Souza B.A., B.L.
(sd) L. C. Pais B.A., B.L.
Vakils for Petitioner.



THE CANARA BANKING CORPORATION Ltd
(Incorporated in British India with limited liability).

Estd:] Head office: UDIPI [1906.

(Branches & Agencies in all principal cities of India)

Authorised capital	Rs. 25,00,000.
Issued & Subscribed	Rs. 16,00,000.
Paid up Capital	Rs. 10,06,000.
Reserves	Rs. 3,85,000.

Advances are made against approved securities and bills purchased or collected at most favourable rates. For further particulars please apply to the nearest Branch.

ಸಿನೆಮಾ ಸುದ್ದಿ

ಸೆಂಟ್ರಲಿನಲ್ಲಿ 'ಬ್ಲಡ್ ಏಂಡ್ ಸೇಂಡ್'

ಎಂಬೀ ಟ್ವೆಂಟಿಯತ್ ಸೆಂಚುರಿ ಫೋಕ್ಸನವರ ನೈಸರ್ಗಿಕ ವರ್ಣರಂಜಿತ ಚಿತ್ರ ಪ್ರದರ್ಶಿತವಾಗುತ್ತಿದೆ ಟ್ಯಾರನ್ ಪವರ್ ಮೊದಲಾದ ವಿಶ್ವವಿಖ್ಯಾತ ನಟನಟೀವರ್ಗದ ಅಭಿನಯದಿಂದ ಕೂಡಿದ್ದು ಈ ಚಿತ್ರವೂ ಪ್ರಖ್ಯಾತ ಚಿತ್ರಗಳಲ್ಲಿ ಒಂದಾಗಿದ್ದು ಸಿನೆಮಾಪ್ರಿಯರು ಬಹುಕಾಲದಿಂದ ಇದನ್ನು ನಿರೀಕ್ಷಿಸುತ್ತಿದ್ದರು. ಅವರ ನಿರೀಕ್ಷೆ ಇಂದು ಸಫಲವಾಗಿದೆ.

ಬಾಲಾಜಿಗೆ 'ಕಿಸ್ಮತ್' ಬಂದಿದೆ

ಬೊಂಬೇ ಟಾಕೀಸಿನವರ 'ಕಿಸ್ಮೆತ್' ಚಿತ್ರವೆಂದರೆ ಎಲ್ಲರಿಗೂ ಗೊತ್ತು ಎಲ್ಲಾ ಕಡೆಗಳಲ್ಲಿಯೂ ಇದು ಜನಪ್ರಿಯವಾಗಿದೆ. ಮಂಗಳೂರು ನಾಗರಿಕರು ಇದನ್ನು ಬಹುಕಾಲದಿಂದ ಹಾರೈಸುತ್ತಿದ್ದರು. ಅದೀಗ ಬಂದಿದೆ. ಅಶೋಕ ಕುಮಾರ್, ಶಾನವಾಜ್, ಮುಮ್ತಾಜ್ ಶಾಂತಿ, ಮುಮ್ತಾಜ್ ಆಲಿ ಇವರೇ ಮೊದಲಾದ ಸುಪ್ರಸಿದ್ಧ ನಟನಟೀ ವರ್ಗವಿಲ್ಲಿದೆ

'ಹಮಾರೀ ಬಾತ್'ನ ವಿವರ

ಬೊಂಬೇ ಟಾಕಿಸಿನ ಮುಂದಿನ ಚಿತ್ರ 'ಹಮಾರೀಬಾತ್' ಎಂಬುದಾಗಿ ಪ್ರಸಿದ್ಧವಾಗಿದೆ ಸಂಭಾಷಣೆಯ ಚಿತ್ರೀಕರಣ ಆಗಿ ಸಂಗೀತ ಮತ್ತು ನರ್ತನ ಬಾಕಿಯುಳಿದಿದೆ. ಅನಿಲ ವಿಶ್ವಾಸ ಮತ್ತು ಮುಮ್ತಾಜ್ ಆಲಿ ಇವರು ಸಂಗೀತ ಮತ್ತು ನರ್ತನ ನಿರ್ದೇಶಕರು ಕವಿ ನರೇಂದ್ರ ಶರ್ಮರು ಹಾಡು ಕಟ್ಟಿದವರು. ದೇವಿಕಾ ರಾಣಿ ಎರಡು ವರ್ಷಗಳ ನಂತರ ಈ ಚಿತ್ರದಲ್ಲೀಗ ಜಯರಾಜನೊಡನೆ ಅಭಿನಯಿಸುತ್ತಾರೆ ಸೂರಯ್ಯಾ ಮತ್ತು ಪ್ರಭಾ ಹೊಸ ತಾರೆಗಳು ಚಕ್ರವರ್ತಿ ಇದರ ನಿರ್ಮಾಪಕರು ಶಾಸವಾಜ್ ಮತ್ತು ಡೇವಿಡ್ ಕೂಡಾ ಇದರಲ್ಲಿರುವರು.

ಶಾಂತಾರಾಮರ 'ಶಕುಂತಲಾ'

ಇಂದು ಸಿನೆಮಾಲೋಕದ ಬಹುಮಂದಿಯ ನಿರೀಕ್ಷೆ ಶಾಂತಾರಾಮರ ಶಕುಂತಲಾ ಆಗಿದೆ. ಕಾಳಿದಾಸನ ಅಮರ ನಾಟಕದ ಆಧಾರದಿಂದ ಈ ಚಿತ್ರ ನಿರ್ಮಾಣವಾಗುವುದು. ಜಯಶ್ರೀ ಚಂದ್ರಮೋಹನರು ಶಕುಂತಲಾ ದುಷ್ಯಂತರಾಗಿರುವರು ಪ್ರಭಾತವನ್ನು ಬಿಟ್ಟ ಮೇಲೆ ಶಾಂತಾರಾಮರ ಮೊದಲಿನ ಚಿತ್ರವಿದು—ಯುದ್ಧ ಚಿತ್ರಗಳನ್ನು ಬಿಟ್ಟರೆ ಬೊಂಬಯಿಯ ಸ್ವಸ್ತಿಕಾ ಥಿಯೇಟರಿನಲ್ಲೀಗ ಇದು ಪ್ರದರ್ಶಿತವಾಗುತ್ತಿರುವುದು

ಖಜಾಂಜಿ-ಕಾ-ಭೇಟಾ

'ಖಜಾಂಜಿ' ಪ್ರಖ್ಯಾತ ಚಿತ್ರ ಅದರಿಂದಲೇ ಇರಬೇಕು, 'ಖಜಾಂಜಿಕಾ ಬೇಟಾ' ಎಂಬ ಇನ್ನೊಂದು ಚಿತ್ರವೀಗ ತಯಾರಾಗಿದೆ ನೇಶನಲ್ ಥಿಯೇಟರಿನವರಿಂದ ಶಾಲೆದಾ, ಯುಸಫ್ ಎಪೆಂಡಿ, ಮಜಿದ್, ಬೀಬಿ, ಆಲಿ, ನಾಜಿರಾ, ವಿಮಲಾದೇವಿ, ಮೊದಲಾದವರು ಇದರಲ್ಲಿ ನಟಿಸುತ್ತಾರೆ 'ಖಜಾಂಜಿ' ನೋಡಿದವರು 'ಖಜಾಂಜಿಕಾ ಭೇಟಾ' ನೋಡಲು ಮರೆಯಬೇಡಿ

ಪ್ರಭಾತದವರ ಸುದ್ದಿ

ಪ್ರಭಾತ ಕಂಪನಿಯವರು ಕೆಲವು ಹೊಸ ಚಿತ್ರಗಳನ್ನು ತಯಾರಿಸುವುದರಲ್ಲಿದ್ದಾರೆ. 'ಉಮರ್ ಖಯ್ಯಂ' 'ಕರ್ಮ' 'ಲಕಾರಾಮ್' ಇವೇ ಮೊದಲಾದ ಹೆಸರುಗಳು ಕೇಳಿಬರುತ್ತವೆ. ಉದಯಶಂಕರರ ಚಿತ್ರವೂ ಪ್ರಭಾತದವರ ಸಂಗಡ ತಯಾರಾಗುವ ಸುದ್ದಿಯಿದೆ.

'ನವಯುಗ'ದವರ

'ಲಡಾಯಿಕೇ ಬಾದ್' ತಯಾರಾಗಿ ಪ್ರದರ್ಶಿತವಾಗುತ್ತಿದ್ದು, 'ನಯಾ ತಾರಣ್' ಪೂರ್ಣವಾಗಲಿದೆ. 'ಚೋಟೇಸಿ ದುನಿಯಾ' ಮತ್ತು 'ಭಕ್ತ ಪುಂಡಲೀಕ' ಇವೆರಡು ಅವರ ಮುಂದಿನ ಚಿತ್ರಗಳು.

ಈ ಆದರ್ಶ ಅನುಸರಿಸುವರೆ?

ಬೊಂಯಿಯಲ್ಲಿ ಪ್ರದರ್ಶಿತವಾಗುವ ಸರ್ವಸಾಧಾರಣ ಎಲ್ಲಾ ಥಿಯೇಟರುಗಳೂ ಅಗಸ್ ೧೯ ರಂದು ತಮ್ಮ ಹಣ ಸಂಗ್ರಹವನ್ನು ಬಿಜಾಪುರ ನಿಧಿಗಾಗಿ ಕೊಟ್ಟರೆಂಬುದು ಪ್ರಶಂಸನೀಯ ವಾರ್ತೆ ಅದಿನ ನಟನಟಿಯರೂ ಬಿಜಾಪುರ ನಿಧಿಗಾಗಿ ಧನಸಂಗ್ರಹ ಮಾಡಿದರು ಇದರ ವರದಿಯನ್ನು ಹಿಂದಿನ ಒಂದು ಸಂಚಿಕೆಯಲ್ಲಿ ನಾವು ಕೊಟ್ಟಿರುವೆವು ಬಂಗಾಳದಲ್ಲಿ ಭೀಕರ ಕ್ಷಾಮ ಬಂದಿದೆ ಬಿಜಾಪುರದ ಬರಗಾಲ ಹಾಗೆಯೇ ಇದೆ. ಇಂಥಾ ಸಂದರ್ಭದಲ್ಲಿ ಮಂಗಳೂರಿನ ಥೀಯೇಟರಿನವರು ಬೊಂಬಯಿ ಪ್ರದರ್ಶಕರ ಆದರ್ಶವನ್ನು ಏಕೆ ಅನುಸರಿಸಬಾರದು? ಥಿಯೇಟರು ಮಾಲಕರು ಹಾಗೂ ಸಿನೆಮಾ ವ್ಯಾಪಾರಿಕೆಯವರು ಇಂಥಾ ಮಾನವೀಯ ಕಾರ್ಯಗಳಿಗೆ ವೈಯುಕ್ತಿಕವಾಗಿ ಸಹಾಯ ಮಾಡುತ್ತಾರೆ. ಆದರೆ ಈ ತರದ ಸಹಾಯಪ್ರದರ್ಶನದಿಂದ ಸಾರ್ವಜನಿಕರ ಹೃದಯವನ್ನು ಆ ಕಡೆ ಸೆಳೆದಂತೆಯೂ ಆಗುವುದು. ಮಂಗಳೂರು ಥಿಯೇಟರ್ ಮಾಲಕರು ಈ ಕಡೆ ಗಮನ ಕೊಡುವರೆ?

ಭಾರತದ ಮೇಲೆ ಧಾಳಿಯಾಗಬಹುದು

'ಅಧಿಕಾರಿಗಳ ಎಚ್ಚರಿಕೆ

'ಭಾರತದ ಮೇಲೆ ಬಾಂಬು ಬೀಳದೆ ನಾಲ್ಕು ತಿಂಗಳಾದವು ಆದರೆ ಕೊನೆವರೆಗೆ ಈ ಪರಿಸ್ಥಿತಿ ಉಳಿಯಲಿಕ್ಕಿಲ್ಲ. ಬರ್ಮದ ಮೇಲೆ ಅಮೇರಿಕನರು ಮತ್ತೆ ಬ್ರಿಟಿಷರು ಬಾಂಬಿಕ್ಕುತ್ತಾರೆ. ಜವಾನರು ಬೇಗನೇ ಪ್ರತೀಕಾರ ಮಾಡಬಹುದು ಇಂಥಾ ಪರಿಸ್ಥಿತಿಯನ್ನೆದುರಿಸಲು ಸಿದ್ಧವಾಗಬೇಕು' ಎಂದು ಸಂರಕ್ಷಣ ಖಾತೆಯ ಪ್ರಕಟಣೆ

ಎನ್ ಕೆ ಉಪಾಧ್ಯಾಯರಿಗೆ ಧಾರವಾಡ ಬಿಡಲು ಆಜ್ಞೆ

ಕಳೆದ ಆರು ತಿಂಗಳಿಂದ ಹುಬ್ಬಳ್ಳಿ ರೈಲ್ವೆ ಯೂನಿಯನಿನಲ್ಲಿ ಕೆಲಸ ಮಾಡುತ್ತಿದ್ದ ಮಂಗಳೂರಿನ ಕಮ್ಯುನಿಸ್ಟರಾದ ಶ್ರೀ ಎನ್ ಕೆ. ಉಪಾಧ್ಯಾಯರ ಮೇಲೆ ದಾರವಾಡದ ಜಿಲ್ಲಾ ಮೆಜಿಸ್ಟ್ರೇಟರು ಒಂದು ಆಜ್ಞೆ ಹೊರಡಿಸಿ ೧೦ ದಿವಸದೊಳಗೆ ಧಾರವಾಡ ಜಿಲ್ಲೆಯನ್ನು ಬಿಟ್ಟು ಹೋಗಬೇಕಾಗಿ ಮತ್ತೆ ೬ ತಿಂಗಳು ಆ ಜಿಲ್ಲೆಗ ಕಾಲಿಡವಾರದಾಗಿ ವಿಧಿಸಿದ್ದಾರೆಂದು ತಿಳಿಯುತ್ತದೆ

FIRST AND FOREMOST

FIRST AND FOREMOST among the ideals of the CANARA BANK is the ideal of Service to its Customers

ESTD. 1906.

CANARA BANK LTD.

ನೋಟೀಸು

ಮದ್ರಾಸು ಜುಡಿಕೇಚರ್ ಹೈಕೋರ್ಟಿನಲ್ಲಿ

ಓರ್ಡಿನರಿ ಒರಿಜಿನಲ್ ಸಿವಿಲ್ ಜುರಿಸ್ಡಿಕ್ಶನ್

ಅರ್ಜಿ ನಂ 1892/1943

ಒ ಪಿ ನಂ 158/1938

1913ನೇ ಇಸವಿ ಇಂಡಿಯನ್ ಕಂಪೆನೀಸ್ ಏಕ್ಟ್ VIIರ ವಿಚಾರ

ಮತ್ತು

ಟ್ರಾವನ್ಕೂರ್ ನೆಶನಲ್ ಮತ್ತು ಕ್ವಿಲೋನ್ ಬೇಂಕ್ ಲಿಮಿಟೆಡ್ (ಲಿಕ್ವಿಡೇಶನಿನಲ್ಲಿ)

ಎಸ್ ಬರ್ಕತ್ ಆಲಿ ಎಂಡ್ ಬ್ರದರ್ಸ್—

ಪಿಟಿಶನರ್ಸ್.

ಸಿರಿಲ್ ಗಿಲ್ ಮತ್ತು 2 ಮಂದಿ ಇತರರು—ಜೋಯಿಂಟ್ ಒಫಿಸಿಯಲ್ ಲಿಕ್ವಿಡೇಟರರು

ಅರ್ಜಿದಾರರು.

ಮಾನ್ಯ ಮಿ। ಜಸ್ಟಿಸ್ ಬೆಲಂ ಅಪ್ಪಣೆಯಂತೆ ಈ ನೋಟೀಸು ಕೊಡಲಾಗಿದೆ ಮೇಲೆ ಹೇಳಿದ ಕಂಪೆನಿಯ ಎಲ್ಲಾ ಪಾಲುದಾರರು ಪ್ರತಿ ಪಾಲೊಂದರ ರೂಪಾಯಿ ಇಪ್ಪತ್ತೈದರಂತೆ ತೆರುವಂತೆ ಮಾಡಿದ ಅರ್ಜಿಯು ಮೇಲೆ ಹೇಳಿದ ಜಡ್ಜರು ತನ್ನ ಚೇಂಬರಿನಲ್ಲಿ 1943ನೆ ಇಸವಿ ನವಂಬರ ತಾರೀಕು 4ರಂದು ಪೂರ್ವಾಹ್ನ 11 ಗಂಟೆಗೆ ವಿಚಾರಣೆಗಾಗಿ ಇಟ್ಟಿರುತ್ತಾರೆ. ಈ ವಿಷಯದಲ್ಲಿ ಸಂಭಂದಪಟ್ಟವರು ಆ ದಿನ ಬಂದು ಆ ವಿಷಯದಲ್ಲಿ ತಮ್ಮದೇನಾದರೂ ಆಕ್ಷೇಪವಿದ್ದರೆ ತಿಳಿಸಬೇಕು.

25 9 '43 — ಜಿ ಗಿಲ್. ಕೋ ಒಫಿಸಿಯಲ್ ಲಿಕ್ವಿಡೇಟರ್ಸರ ಪರವಾಗಿ.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಆಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದಧರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ

JOINT MANAGERS,

The Combined Booking Agency, MANGALORE — The Joint Booking Office, KODIALBAIL.

The Bank of Mangalore Limited, Mangalore.

ESTD. 1931

HEAD OFFICE Mangalore.

BRANCHES Moodabidri & Padubidri.

The Bank Undertakes to Collect Cheques, Demand and Documentary Bills at Most Competitive Rates.

ISSUES DRAFTS ON ALL IMPORTANT TOWNS IN THE DISTRICT

and also on

BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.

at very favourable rates

All kinds of inland banking business undertaken

(Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ವಾತ, ನೋವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು

ಜೀವವಿಮೆ ಮಾಡುವ ಪ್ರಯೋಜನವು ಇಂದು ಹಿಂದಿಗಿಂತ ಅಧಿಕವಾಗಿದೆ.

ದಿ ಬಾಂಬೆ ಲೈಫ್ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಇದರಲ್ಲಿ ಒಂದು ಪಾಲಿಸಿ ಪಡೆದು

ಈಗಲೇ ನೀವು ನಿಮ್ಮನ್ನು ಮತ್ತು ನಿಮ್ಮನ್ನು ಹೊಂದಿಕೊಂಡಿರುವವರನ್ನು ರಕ್ಷಿಸಿಕೊಳ್ಳಿರಿ!

ಪ್ರತಿನಿಧಿಗಳಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಇನ್ಶೂರ್ ಮಾಡಲು ಅಥವಾ ಮಾಹಿತಿ ತಿಳಕೊಳ್ಳಲು ದಯಮಾಡಿ ಬರೆಯಿರಿ:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

—: ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ: —

ಬೆಂಗಳೂರು ಬೊಂಬಾಯಿ ಮದ್ರಾಸು ಕಲ್ಲಿಕೋಟೆ ಮಂಗಳೂರು ಮತ್ತು ತ್ರಿವೇಂಡ್ರಂ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors Proved to be the best remedy where even allopathic medicines failed A specific for threatened or habitualabortion andother uterine troubles Must be commense soon after conception andcontinued up to the time of delivery

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವ ವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು –

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಪೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ (4) ಡಾ। ಯಂ ಎಸ್ ಪ್ರಭು, M. B B S ಸಿ. ಪಿ ಸಿ ಬಿಲ್ಡಿಂಗ್ಸ್ (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೊ:—1. ಮರಾರ ಗಲ್ಲಿ ಹುಬ್ಬಳ್ಳಿ,
2. 86 ಫ್ಯಾಕ್ಟ್ರೀಸ್ಟ್ರೋಡ್, ಟ್ರಿಪ್ಲಿಕೇನ್, ಮದರಾಸು.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ ವಿ. ಪಂಡಿತರ

ಮೃತ್ಯುಂಜಯ ರಸ. ಪಂಚವಟಿ ಮಾತ್ರೆ. ಕೊಲೆರಾ ರೋಗಕ್ಕೆ ಸಿದ್ಧೌಷಧ.

ಸೇವನಾ ಕ್ರಮಗಳು ಔಷಧಿಯೊಡನೆ ಇದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited. Printed & Published by A. S. Kamath at the Sharada Press, Car Street Mangalore

MISSING
8-OCTOBER

MISSING
8-OCTOBER

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಕು 15—10—1943 [ಸಂಚಿಕೆ 41]

ಜಿಲ್ಲೆಯ ಆಹಾರ ಪರಿಸ್ಥಿತಿ ಕೆಟ್ಟು ಹೋಗಬಾರದು

ಮುನ್ಸಿಪಾಲಿಟಿ ಜಿಲ್ಲಾ ಬೋರ್ಡು ಸದಸ್ಯರ ಆಗ್ರಹ.

'ಬಂಗಾಳದ-ಪುನರಾವೃತ್ತಿಯಾಗಕೂಡದು'

"ಬಂಗಾಳದ ದುರವಸ್ಥೆ ನಮಗೆ ಬರಬಾರದು; ಮತ್ತೆ ನಾವು ಅದೃಷ್ಟದಿಂದ ಹೀಗಾಯಿತೆಂದು ಹೇಳುವುದು ಬೇಡ; ಮನುಷ್ಯ ಮಾಡುವ ತಪ್ಪನ್ನು ಅದೃಷ್ಟದ ಮೇಲೆ ಹೊರಿಸಬಾರದು ಇಂದಿನ ಜಿಲ್ಲೆಯ ಆಹಾರ ವ್ಯವಸ್ಥೆಯ ಅವ್ಯವಸ್ಥೆಯನ್ನು ನೋಡಿ ನಾವು ಕಣ್ಮುಚ್ಚಿರಬಾರದು. ಇಂದಿನ ಅವ್ಯವಸ್ಥೆಗಳೆಲ್ಲಾ ಮನುಷ್ಯ ಮಾಡಿದ್ದು, ಮನುಷ್ಯರೇ ಯುದ್ಧವನ್ನೂ ಹೂಡಿದ್ದಾರೆ ನಾವಿಂದು ಅನ್ನವಿಲ್ಲದೆ, ಎಣ್ಣೆಯಿಲ್ಲದೆ ಕಳವಳಗೊಂಡಿದ್ದೇವೆ. ಜನರು ಹಸಿವಿನಿಂದ ಕತ್ತಲೆಯಿಂದ ಕಂಗಾಲಾಗಿದ್ದಾರೆ ನಮ್ಮ ಜನರು ಸಾಯುತ್ತಾರೆ; ಕತ್ತಲೆಯಲ್ಲಿ ಸಾಯುತ್ತಾರೆ. ಜಿಲ್ಲಾಧಿಕಾರಿಗಳು ಕೂಡಲೇ ಸುವ್ಯವಸ್ಥೆ ತರಬೇಕು, ರೇಶನಿಂಗ್ ಸರಿಯಾಗಿ ಆಗುವಂತೆ ಕೂಡಲೇ ಕಾರ್ಯಕ್ರಮ ಕೈಕೊಳ್ಳಬೇಕು' ಹೀಗೆಂದು ತಾ. 4ರಂದು ಸೇರಿದ ಮಂಗಳೂರು ಮುನಿಸಿಪಾಲಿಟಿ ಸಭೆಯಲ್ಲಿ ಉಪಾಧ್ಯಕ್ಷ ಶ್ರೀ ಸಿ. ಎಲ್. ಲೋಬೋರವರು ಜಿಲ್ಲೆಯ ಆಹಾರ ಪರಿಸ್ಥಿತಿ ಸುಧಾರಣೆಯ ಕುರಿತು ತಂದ ತನ್ನ ನಿರ್ಣಯವನ್ನು ಮಂಡಿಸುತ್ತಾ ಮಾತನಾಡಿದರು. ಶ್ರೀ ಲೋಬೋರ ನಿರ್ಣಯದಲ್ಲಿ ಜಿಲ್ಲೆಯ ಆಹಾರ ಪರಿಸ್ಥಿತಿ ಹೇಗೆ ಕೆಡುತ್ತಾ ಬಂತು, ನಗರ ಸಭಾ ಸದಸ್ಯರ ಹಾಗೂ ಸಾರ್ವಜನಿಕರ ಸಹಾಯವನ್ನು ಅಧಿಕಾರಿಗಳು ಹೇಗೆ ಪಡೆಯದೆ ಕಾರ್ಯಮಾಡಿದರು, ಆಹಾರ ಅಭಾವದಿಂದ ನಗರದಲ್ಲಿ ಹೇಗೆ ಕಾಲರಾ ಮೊದಲಾದ ರೋಗಗಳು ತಲೆಯೆತ್ತಿದವು, ಮೊದಲಾದ ವಿಚಾರಗಳಿದ್ದುವು ಮಾತ್ರವಲ್ಲದೆ, ಕೂಡಲೇ 'ರೇಶನಿಂಗ್ ಪದ್ಧತಿ ಜಾರಿಗೆ ಬಂದು, ಜನರಿಗೆ ಅಕ್ಕಿ ಮತ್ತು ಚಿಮ್ಣಿ ಎಣ್ಣೆ ಸರಿಯಾಗಿ ದೊರಕುವಂತಾಗಬೇಕೆಂದೂ ವಿನಂತಿ ಮಾಡಲಾಗಿತ್ತು.

ಶ್ರೀ ಲೋಬೋರವರು, ಇಂದು ನಗರದಲ್ಲಿ ಜಾರಿಗೆ ಬಂದಿರುವ 'ಗುರುತು ಚೀಟಿ' ಪದ್ಧತಿಯ ಕುರಿತು ಮಾತನಾಡುತ್ತಾ, ಈ ಗುರುತು ಚೀಟಿಗಳು ಯಾರಿಗೆ (ಬಡವರಿಗೆ) ಸಿಗಬೇಕಾಗಿತ್ತೋ ಅವರಿಗೆ [illegible], ತಲಾ ಒಂದರ ಮೂರು ರೂ [illegible] ಹೆಚ್ಚು ಸಂಪಾದನೆಯುಳ್ಳ ಶ್ರೀಮಂತರಿಗೂ ಈ ಚೀಟಿಗಳು ದೊರಕಿರುತ್ತವೆ' ಎಂದು ಮೊದಲಾಗಿ ಟೀಕಿಸಿದರು. ಶ್ರೀ ಲೋಬೋರವರು ತಂದ ನಿರ್ಣಯವನ್ನು ಶ್ರೀ ಪ್ಯಾಸರು ಅನುಮೋದಿಸಿದರು.

ಶ್ರೀ ಎಂ ಎಸ್ ಶ್ರೀಷ್ಠರು ಶ್ರೀ ಲೋಬೋರವರು ತಂದ ನಿರ್ಣಯದ ತತ್ವವನ್ನು ಒಪ್ಪಿಕೊಂಡು, ಅದರಲ್ಲಿ ಜಿಲ್ಲಾ ಅಧಿಕಾರಿಗಳ ಮೇಲೆ ಮಾಡಿರುವ ದೂರಿನಂಶವನ್ನು ತಿದ್ದುಪಡಿ ಮಾಡುವ ಉಪಸೂಚನೆ ತಂದರು. ಅವರು ಮಾತನಾಡುತ್ತಾ, 'ಪರಿಷತ್ತು, ಪಂಚಾತಿಕೆ, ಒಪ್ಪಂದಗಳ ಕಾಲ ಕಳೆದುಹೋಯಿತು, ಅಧಿಕಾರಿಗಳು ಧೈರ್ಯದಿಂದ ಕೆಲಸಗಳನ್ನು ಕೈಕೊಳ್ಳಬೇಕು' ಎಂದು ಹೇಳಿದರು. ಶ್ರೀ ಶ್ರೀಷ್ಠರ ಮಾತನ್ನು ಶ್ರೀ ಶಂಕರಾಳ್ವರೂ, ರಾ ಸಾ ರಂಗನಾಥ ಪೂಂಜರೂ ಅನುಮೋದಿಸಿದರು

ಈ ವಾಗ್ವಾದಕ್ಕೆ ಉತ್ತರವಾಗಿ, ಮುನ್ಸಿಪಲ್ ಕಮಿಶನರು ಮಾತನಾಡುತ್ತಾ, ತಲಾ ರೂಪಾಯಿ ಮೂರಕ್ಕಿಂತ ಕಡಿಮೆಯಿರುವವರಿಗೆ ಮಾತ್ರ ಗುರುತು ಚೀಟಿಗಳನ್ನು ಹಂಚಬೇಕಾಗಿದ್ದರೂ, ಈ ಹಂಚುವಿಕೆಯಲ್ಲಿ ತಪ್ಪುಗಳಾಗಿವೆಯೇನೋ ನಿಜ, ಆಫೀಸು ಗುಮಾಸ್ತರು ಅವಸರವಸರವಾಗಿ ಪಟ್ಟಿ ತಯಾರಿಸಬೇಕಾಗಿ ಬಂದದ್ದರಿಂದ, ಸಂಪಾದನೆ ಎಷ್ಟೆಂದು ಹೇಳದವರನ್ನೆಲ್ಲಾ ಬಡವರ ಸಾಲಿಗೆ ಸೇರಿಸಿ ಅವರಿಗೆ ಚೀಟಿ ಕೊಡಲಾಗಿದೆಯೆಂದೂ, ಹೀಗೆ ತಪ್ಪಾಗಿ ೩೦೦ ಚೀಟುಗಳು ಕೊಡಲಾಗಿದ್ದು ಈಗ ಅವುಗಳನ್ನು ಹಿಂತೆಗೆದುಕೊಳ್ಳುವ ಕೆಲಸ ನಡೆಯುತ್ತಿದೆಯೆಂದೂ ತಿಳಿಸಿದರು. ಜಿಲ್ಲೆಗೆ ಯಾವಾಗಲೂ ಬೇಕಾಗುವ ಚಿಮ್ಣಿ ಎಣ್ಣೆಯ ೧/೫ರಲ್ಲಿ ಒಂದು ಪಾಲು ಈಗ ಜಿಲ್ಲೆಗೆ ಬರುತ್ತಿದೆಯೆಂದೂ ಅವರು ಸೂಚಿಸಿದರು.

ಆಗ ಶ್ರೀ ಶ್ರೀಷ್ಠರು, ಶ್ರೀ ಲೋಬೋರ ನಿರ್ಣಯಕ್ಕೆ ಉಪಸೂಚನೆಯಾಗಿ ಮಂಡಿಸಲಿರುವ ತನ್ನ ನಿರ್ಣಯವನ್ನು ತಯಾರಿಸಿ ತಾನದನ್ನು ಸಭೆಯ ಮುಂದೆ ಮಂಡಿಸಲಿರುವೆನಾಗಿ ತಿಸಿಳಿದರು. ಸಮಯ ೮॥ ಗಂಟೆ ಆದದ್ದರಿಂದ ವಿಳಂಬವಾಯಿತೆಂದೂ ಸಭೆಯನ್ನು ಮುಂದುವರಿಸಬಹುದೆಂದೂ ಕೆಲವರು ಸೂಚಿಸಿದರು ಇನ್ನು ಕೆಲವರು ಆ ಸೂಚನೆಯನ್ನು ವಿರೋಧಿಸಿದರು ಶ್ರೀ ಶ್ರೀಷ್ಠರು ತಮ್ಮ ನಿರ್ಣಯವನ್ನು ಓದತೊಡಗಿದರು ಈ ಉಪ ನಿರ್ಣಯವನ್ನು ಶ್ರೀ ರಾಮಪ್ಪನವರು ಅನುಮೋದಿಸಿದರು ಶ್ರೀ. ಶ್ರೀಷ್ಠರ ಉಪ ನಿರ್ಣಯದ ಸಾರಾಂಶ ಇಂತಿದೆ "ಅಕ್ಕಿ ಭತ್ತಗಳನ್ನು ವಶಮಾಡಿಕೊಳ್ಳುವ ಕಾರ್ಯ ಭರದಿಂದ ನಡೆಯಬೇಕು. ಸಕ್ಕರೆ ಚಿಮ್ಣಿ ಎಣ್ಣೆಯ ವಿಷಯದಲ್ಲಿಯೂ ರೇಶನಿಂಗ್ ಆಗಬೇಕು ತಾವು ಏನೆಲ್ಲಾ ಮಾಡಿದ್ದೇವೆಯೆಂಬುದನ್ನು ಜಿಲ್ಲಾಧಿಕಾರಿಗಳು ವಾರಕ್ಕೆರಡು ಬಾರಿ ತಿಳಿಸಬೇಕು."

ಶ್ರೀ ಸಿ ಎಲ್ ಲೋಬೋರವರು ಈ ಉಪ ನಿರ್ಣಯಕ್ಕೆ ಉತ್ತರವೀಯುತ್ತಾ 'ನಾನು ನನ್ನ ನಿರ್ಣಯದಲ್ಲಿ ಯಾರ ಮೇಲೂ ಆರೋಪ ಹೊರಿಸಿಲ್ಲ ಜಿಲ್ಲಾಧಿಕಾರಿಗಳು ಪರಿಸ್ಥಿತಿ ಸುಧಾರಿಸಿಲ್ಲವಾದರೆ, ಪ್ರಾಂತಿಕ ಇಲ್ಲವೇ ಕೇಂದ್ರ ಸರಕಾರ ಅದ್ದಿ ಮಾಡಿರಬೇಕಲ್ಲವೆ? ಆದ್ದರಿಂದ ಇದ್ದುದನ್ನು ಇದ್ದಂತೆ ಹೇಳಬೇಕಾಯಿತು ಬೇಕಾದರೆ, ನನ್ನ ನಿರ್ಣಯವನ್ನು ಮತಗಣನೆಗೆ ಹಾಕಬಹುದು" ಎಂದರು. "ನನ್ನದು ಉಪನಿರ್ಣಯ ಹೌದೋ ಅಲ್ಲವೋ ಎಂದು ತಿಳಿಸಿರಿ" ಎಂದು ಶ್ರೀ. ಶ್ರೀಷ್ಠರು ಅಧ್ಯಕ್ಷರೊಡನೆ ಕೇಳಿದರು. 'ಈಗ ನಾನೇನನ್ನೂ ಹೇಳಲೂ ಶಕ್ತನಾಗಿಲ್ಲ" ಎಂದು ಅಧ್ಯಕ್ಷರು ತೀರ್ಮಾನವಿತ್ತರು. ಹಾಗಾಗಿ ಈ ನಿರ್ಣಯವನ್ನು ವಿಚಾರಿಸುವ ಸಲುವಾಗಿಯೇ ತಾ. ೧೧ರಂದು ಒಂದು ವಿಶೇಷ ಸಭೆ ಕರೆಯುವುದಾಗಿ ನಿರ್ಣಯವಾಯಿತು.

ತಾ. 11ರ ಸಭೆಯಲ್ಲಿ ಶ್ರೀ ಎಂ. ಎಸ್. ಶ್ರೀಷ್ಠರು ತನ್ನದು ಉಪ ಸೂಚನೆಯೆಂದು ಆಧಾರ ಸಹಿತ ವಾದಿಸಿ ಅದನ್ನು ವಿವರಿಸಿದರು. ಶ್ರೀ ಲೋಬೋರವರ ನಿರ್ಣಯದ ತತ್ವಕ್ಕೆ ತನ್ನ ಒಪ್ಪಿಗೆಯಿದೆ'ಯೆಂದೂ, ಆದರೆ ಅದರ ವಿಶದೀಕರಣ ಮಾತ್ರ ತಾನಿಲ್ಲಿ ಮಾಡಿರುವುದಾಗಿಯೂ ಅವರು ಹೇಳಿದರು ಕಲೆಕ್ಟರರ ಆಫೀಸಿನಲ್ಲಿ ಜರಗಿದ್ದ ಆಹಾರ ಸಮ್ಮೇಳನವಲ್ಲವೆಂದೂ, ಅದು ಕೇವಲ ಒಂದು ಅಂತರಂಗ ಸಭೆಯೆಂದೂ ಹೇಳಿದರು ಶ್ರೀ ಲೋಬರು ಉತ್ತರವೀಯುತ್ತಾ, ಶ್ರೀ ಶ್ರೀಷ್ಠರು ಹೇಳಿದ ಶಬ್ದಗಳ ತಿದ್ದುಪಡಿಗೆ ತಾನು ಸಿದ್ಧನೆಂದೂ ತನಗೆ ಅಧಿಕಾರಿಗಳನ್ನು ಟೀಕೆಮಾಡುವ ಉದ್ದೇಶವಿಲ್ಲವೆಂದೂ ತಿಳಿಸಿ, ನಮ್ಮ ಜಿಲ್ಲೆಯಲ್ಲಿ ಬಂಗಾಳದ ಪುನರಾವೃತ್ತಿಯಾಗದಂತೆ ನಾವೀಗಲೇ ಎಚ್ಚರ ತೆಗೆದುಕೊಳ್ಳಬೇಕೆಂಬುದು ತನ್ನ ನಿರ್ಣಯದ ಆಶಯವೆಂದೂ, ತಾಯಿ ಹಾಲಿಗಾಗಿ ಮಗು ಕೂಗುವಂತೆ ನಾನು ಸರಕಾರದೊಡನೆ ನನ್ನೀ ಕೂಗು ಮುಂದಿಡುತ್ತೇನೆಂದೂ ಹೇಳಿದರು ಆನಂತರ ರಾ ಸಾ ರಂಗನಾದ ಪೂಂಜರು ಮಾತನಾಡಿ, ಶ್ರೀ ಲೋಬೋರವರ ನಿರ್ಣಯದಲ್ಲಿ ಅಧಿಕಾರಿಗಳ ಮೇಲೆ ಕೆಲವು ಆರೋಪಗಳಿವೆ, ಆದರೆ ನಾವಿಲ್ಲಿ ಚರ್ಚಿಸುವಂತೆ, ಜಿಲ್ಲಾ ಬೋರ್ಡು ಮಾಲಿಕರ ಸಂಘಗಳೇ ಮೊದಲಾದ ಇತರ ಸಂಸ್ಥೆಗಳೂ ಈ ಕುರಿತು ಸರಕಾರದೊಡನೆ ವಿನಂತಿಮಾಡಿಕೊಂಡಿವೆ. ಗವರ್ನರರ ಎಡ್ವೈಸರ್ ಶ್ರೀ ರಾಮಮೂರ್ತಿಯವರು ಬೇಗನೇ ಈ ಜಿಲ್ಲೆಗೆ ಬರಲಿರುವರು ನಾವೀಗ ಈ ನಿರ್ಣಯವನ್ನು ಪಾಸುಮಾಡಿಬಿಟ್ಟರೆ ಮತ್ತೆ ಅವರನ್ನು ಕರೆದು ಆಲೋಚಿಸುವ ಅಂಶ ಉಳಿವುದಿಲ್ಲ. ಹಾಗಾಗಿ ನಾವೀಗ ನಿರ್ಣಯವನ್ನು ಮುಂದುವರಿಸಿ, ಜಿಲ್ಲಾಧಿಕಾರಿಗಳ ಯೋಜನೆಯೇನೆಂಬ ಕುರಿತು ಅವರ ಅಭಿಪ್ರಾಯ ಕೇಳಿ, ಮತ್ತೆ ಎಡ್ವೈಸರರ ಅಭಿಪ್ರಾಯವೂ ತಿಳಿದು ಅವುಗಳೆಲ್ಲಾ ನಮಗೆ ಸರಿತೋರದಲ್ಲಿ ಈ ನಿರ್ಣಯವೋ ಉಪನಿರ್ಣಯವೋ ಮಂಜೂರು ಮಾಡಬಹುದೆಂದರು. ಶ್ರೀ ಹಮ್ಮಬ್ಬರು ಶ್ರೀ ಪೂಂಜರ ಮತವನ್ನು ಅನುಮೋದಿಸಿದರು.

ಆ ಮೇಲೆ ಶ್ರೀ ಲೋಬರು ಮಾತನಾಡಿದರು. 'ಶೇಕಡಾ ೫೦ಕ್ಕಿಂತ ಹೆಚ್ಚಿನಂಶ ರಿಕ್ವಿಸಿಶನ್ ಮಾಡಬೇಕು. ಮುಡಿ!

(7ನೇ ಪುಟಕ್ಕೆ ಮುಂದುವರಿದಿದೆ)

ಜಿಲ್ಲೆಯ ಮುಖಂಡರು

ಆಹಾರ ಸಮ್ಮೇಳನ ಕರೆಯಬೇಕು

—ಕಯ್ಯಾರ ಕಿಞ್ಞಣ್ಣ ರೈ.

‘ನಮ್ಮ ಜಿಲ್ಲೆ ಬಂಗಾಳವಾಗಬಾರದು’ ಇದು ಇಂದು ಎಲ್ಲೆಲ್ಲಿಯೂ ಕೇಳಿ ಬರುವ ಕೂಗು. ‘ಸರಕಾರದವರು ಅಕ್ಕಿ ಭತ್ತಗಳನ್ನು ಸ್ವಾಧೀನ ಮಾಡುತ್ತಾರೆ, ಶೇಕಡಾ ೫೦ರಷ್ಟು ವಶಪಡಿಸಿಕೊಳ್ಳುತ್ತಾರೆ. ರೂ. ೨೦ಕ್ಕಿಂತ ಹೆಚ್ಚಿನ ತೀರ್ವೆಯವರಿಂದೆಲ್ಲಾ ಸೆಳೆಕೊಳ್ಳುತ್ತಾರೆ.’ ಹೀಗೆ ನಾನಾ ರೀತಿಯಿಂದ ಜನರು ಮಾತನಾಡುತ್ತಿದ್ದಾರೆ. ಸರಕಾರದವರು ಜಿಲ್ಲಾಧಿಕಾರಿಗಳು ಆಹಾರದ ಸಮಸ್ಯೆಯು ಯಾವ ಯೋಜನೆ ಕೈಕೊಂಡಿದ್ದಾರೆಂದು ನಿಶ್ಚಿತವಾಗಿ ಯಾರಿಗೂ ಗೊತ್ತಿಲ್ಲ. ಆದರೆ ಪೇಟೆ ಪಟ್ಟಣಗಳಲ್ಲಿ, ಗ್ರಾಮಗ್ರಾಮಗಳಲ್ಲಿ ಏನೋ ಒಂದು ರೀತಿಯ ಕಳವಳ ಹುಟ್ಟಿದೆ. ನಮ್ಮ ಜಿಲ್ಲೆ, ಕಳೆದ ವರ್ಷ ಗಂಡಾಂತರವನ್ನು ದಾಟಿ ನಿಂತ ಜಿಲ್ಲೆ, ಬರುವ ವರ್ಷ ಬಂಗಾಳ ಆಗಬಹುದೇ—, ಜನರು ಉಪವಾಸ ಬೀಳಬೇಕಾದೀತೇ ಎಂಬುದು ಈ ಕಳವಳದ ಮೂಲ. ನಿಜವಾಗಿ ಜನರು ಇಂದು ಎಚ್ಚತ್ತಿರುವುದು ಯೋಗ್ಯ ಚಿಹ್ನೆ. ತಡವಾಗಿ ಎಚ್ಚತ್ತರೆ ಏನೂ ಪ್ರಯೋಜನವಿಲ್ಲ. ನಮ್ಮ ಜಿಲ್ಲಾ ಬೋರ್ಡಿನಲ್ಲಿ ನಮ್ಮ ಮುನ್ಸಿಪಾಲಿಟಿಗಳಲ್ಲಿ ಜನರ ಆಹಾರ ಸಂಕಷ್ಟದ ಬಗ್ಗೆ ತೀವ್ರ ಚರ್ಚೆಯಾದದ್ದೂ ಶುಭ ಸೂಚನೆಯೇ.

ಇಷ್ಟರಿಂದಲೇ ಕೆಲಸ ನೆರವೇರಲಿಲ್ಲ. ಇಂದು ಉಂಟಾದ ಈ ಪ್ರಶ್ನೆಗೆ ಸರಿಯಾದ ಉತ್ತರ ಸಿಗಬೇಕು. ‘ನಮ್ಮ ಜಿಲ್ಲೆ ಬಂಗಾಳವಾಗಲಿಕ್ಕಿಲ್ಲ’ವೆಂಬ ಭರವಸೆಯನ್ನು ಜನರಿಗೆ ಕೊಡಬೇಕು. ಈ ಜಿಲ್ಲೆಯಲ್ಲಿ ಸಾಕಷ್ಟು ಆಹಾರವಿರುವಾಗ, ನಮ್ಮ ಬಟ್ಟಲಲ್ಲಿ ಅನ್ನವಿರುವಾಗ ನಾವದನ್ನು ತಿನದಂತೆ ಮಾಡುವ ಕೆಲಸವನ್ನು ಯಾರೂ ಮಾಡಲಾರರು ಎಂಬ ಭರವಸೆ ಉಂಟುಮಾಡಬೇಕು. ಈ ಕೆಲಸವನ್ನು ಅಧಿಕಾರಿಗಳು ಮೊದಲು ಮಾಡಬೇಕಾಗಿದೆ. ಜಿಲ್ಲೆಯ ಆಹಾರವ್ಯವಸ್ಥೆಯ ವಿಚಾರ ತಮ್ಮ ಧೋರಣೆಯೇನೆಂಬುದನ್ನು ಅವರು ಸ್ಪಷ್ಟವಾಗಿ ತಿಳಿಸಬೇಕು. ಹಾಗೆ ತಿಳಿಸಿ ಜನತೆಯ ಜನತಾ ಮುಖಂಡರ ಸಹಕಾರ ಪಡೆದುಕೊಂಡು ಕೆಲಸ ಮಾಡಬೇಕು.

ಜಿಲ್ಲೆಯ ಅಧಿಕಾರಿಗಳು ಈ ಕೆಲಸವನ್ನು ಬೇಗನೇ ಮಾಡಿಯಾರೆಂದು ನಾವು ಹಾರೈಸುತ್ತೇವೆ. ಆದರೆ ನಮ್ಮ ಮುಖಂಡರೂ ಕೈಕಟ್ಟಿ ಕುಳಿತಿರಬಾರದು. ಜಿಲ್ಲಾಧಿಕಾರಿಗಳು ಮಾಡಲು ಮರೆತರೆ, ಅಥವಾ ಅವರು ಮಾಡುವ ಕೆಲಸದಲ್ಲಿ ಲೋಪ ದೋಷಗಳಿದ್ದರೆ, ಅಥವಾ ಅವರು ಮಾಡುವ ವ್ಯವಸ್ಥೆಗೆ ನಮ್ಮ ಸಹಕಾರಬೇಕಾಗಿದ್ದರೆ ಅದನ್ನು ಕೊಡಲು ಸಿದ್ಧರಾಗಬೇಕು. ಸರಕಾರದವರು ಹಾಗೂ ಅಧಿಕಾರಿಗಳು ತಮ್ಮ ಆಳುವ ಧೋರಣೆಗೆ ಸರಿಯಾಗಿ ನಡೆದಾರು. ಇಂದಿನೀ ಯುದ್ಧ ಕಾಲದಲ್ಲಿ ಅದಕ್ಕಿಂತ ಹೆಚ್ಚಿನ ಕೆಲಸ ಅವರಿಂದ ಆದೀತೆಂದು ಹಾರೈಸುವುದೂ ತಪ್ಪು. ಆದರೆ ಆಳಿಸಿಕೊಳ್ಳುವವರ ದೂರೇನೆಂದು ಅವರಿಗೆ ತಿಳಿಸಬೇಕು. ಆಳಿಸಿಕೊಳ್ಳುವವರ ಹಿತವೇನೆಂದು ಸಾರಬೇಕು. ಇದಕ್ಕಾಗಿ ಜಿಲ್ಲೆಯ ಮುಖಂಡರು ಎಲ್ಲಾ ಪಕ್ಷದವರೂ, ಒಟ್ಟು ಕೂಡಿ ‘ಆಹಾರ ಸಮ್ಮೇಳನ’ವೊಂದನ್ನು ಬೇಗನೇ ಕರೆಯುವುದು ಅವಶ್ಯ.

ರಾಷ್ಟ್ರದ ಮುಖಂಡರು, ಕಾಂಗ್ರೆಸ್ ಮುಖಂಡರು, ಈಗ ಹೊರಗಿದ್ದರೆ ಈ ಕೆಲಸ ಖಂಡಿತವಾಗಿ ಕೈಕೊಳ್ಳುತ್ತಿದ್ದರು. ಅವರು ಹೊರಗಿಲ್ಲದಿದ್ದರೂ, ಇತರ ಪಕ್ಷದ ಮುಖಂಡರು ಇದ್ದಾರೆ. ಪಕ್ಷವಿಲ್ಲದ ಪಕ್ಷಗಳ ಮುಖಂಡರು ಕೆಲವರಿದ್ದಾರೆ. ಕಮ್ಯುನಿಸ್ಟರೂ ಇದ್ದಾರೆ. ಕಾಂಗ್ರೆಸ್ ಮುಂದಾಳುಗಳೂ ಕೆಲವರೀಗ ಬಿಡುಗಡೆ ಹೊಂದಿದ್ದಾರೆ. ಇವರೆಲ್ಲಾ ಒಟ್ಟಾಗಿ ಕೂಡಲೇ ನಮ್ಮ ಜಿಲ್ಲೆಯ ಆಹಾರ ಪರಿಸ್ಥಿತಿಯನ್ನು ವಿಮರ್ಶಿಸಲು ‘ಆಹಾರ ಸಮ್ಮೇಳನ’ವನ್ನು ಕರೆಯುವುದು ಅವಶ್ಯವಾಗಿದೆ. ಈಗಲೇ ಆಹಾರದ ವಿಚಾರ ಆಲೋಚಿಸತಕ್ಕದ್ದಿದೆ. ತಡಮಾಡಿ ಆಲೋಚಿಸಿಯೂ ಪ್ರಯೋಜನವಿಲ್ಲ. ಪರಿಸ್ಥಿತಿ ಹದಗೆಟ್ಟ ಮೇಲೆ ಯಾವ ಯಾವ ಆಲೋಚನೆ ಮಾಡಿದರೂ, ಮಾಡದಿದ್ದರೂ ಒಂದೇ. ಊರಲ್ಲಿ ಅನ್ನವಿಲ್ಲದಿದ್ದರೆ, ಜನರು ಉಪವಾಸಬಿದ್ದು ನರಳುತ್ತಿದ್ದರೆ, ಪ್ರಾಂತಪ್ರಾಂತಗಳಲ್ಲೆಲ್ಲಾ ಈ ಪರಿಸ್ಥಿತಿ ಬಂದುಬಿಟ್ಟರೆ, ಮತ್ತೆ ಪರಿಸ್ಥಿತಿಯನ್ನು ಹದಕ್ಕೆ ತರುವುದು ಯಾರಿಂದಲೂ ಆಗದ ಕೆಲಸ. ಅದಕ್ಕಾಗಿ ನಮ್ಮ ಮುಖಂಡರು, ‘ಜಿಲ್ಲೆಯ ಮುಖಂಡರು, ಕೂಡಲೇ ‘ಆಹಾರ ಸಮ್ಮೇಳನ’ವೊಂದನ್ನು ಕರೆಯಬೇಕು.

ಆಹಾರವಸ್ತುವನ್ನು ಶರೀರಪೋಷಣೆಗೆ ಅವಶ್ಯವಿದ್ದಷ್ಟೆ ತಿಂದರೆ, ಮುಂಜಾಗ್ರತೆಯಿಂದ ದುರ್ವ್ಯಯವಾಗುವುದನ್ನು ತಡೆದರೆ ಕೊನೆಗೆ ಉಪವಾಸ ಬೀಳದಂತೆ ಮಾಡಬಹುದು. ಉಪವಾಸದಿಂದ ನರಳುವ ಇತರರಿಗೂ ನಮ್ಮ ಆಹಾರದಿಂದ ಒಂದು ಪಾಲು ಕೊಟ್ಟು ನಾವು ಬದುಕುವುದರೊಡನೆ ಅವರನ್ನೂ ಬದುಕಿಸುಬಹುದು. ಇದು ಎಲ್ಲರೂ ಒಪ್ಪುವ ಮಾತು. ಆದಾಗಿಯೇ ‘ರೇಶನಿಂಗ್’ ಪದ್ಧತಿಗೆ ಎಲ್ಲರೂ ಒಪ್ಪುತ್ತಾರೆ. “ತಾಲೂಕಿನ ಕೇಂದ್ರ ಪಟ್ಟಣಗಳಲ್ಲಿ ಮತ್ತು ಇತರ ಕೇಂದ್ರ ಸ್ಥಳಗಳಲ್ಲಿ ಅಕ್ಕಿಯ ಪೂರ್ಣ ರೇಶನಿಂಗ್ ಜಾರಿಗೆ ತರಬೇಕು’ ಎಂಬ ಸೂಚನೆಯನ್ನು ಜಿಲ್ಲಾ ವರ್ಗದಾರ ಸಂಘದವರೂ ಮಂಗಳೂರು ವರ್ತಕ ಸಂಘದವರು ಸರಕಾರಕ್ಕೆ ತಿಳಿಸಿದ್ದಾರೆ. ಅಧಿಕಾರಿಗಳೂ ಇದನ್ನು ಸಮರ್ಥಿಸಿ, ಪ್ರಾಂತಿಕ ಸರಕಾರಕ್ಕೆ ಬರೆದಿರುವುದಾಗಿ ತಿಳಿದಿದೆ. ರೇಶನಿಂಗ್ ಜಾರಿಗೆ ಬಂದ ಮೇಲೆ ಬೇರೆ ಅಕ್ಕಿ ವ್ಯಾಪಾರವೆಂದಿಲ್ಲ; ಇರಬಾರದು. ಅಧಿಕಾರಿಗಳು ಏರ್ಪಡಿಸುವ ಡಿಪೋಗಳಲ್ಲಿ ಮಾತ್ರ ಅಕ್ಕಿ ದೊರಕುವುದಲ್ಲದೆ ಬೇರೆ ವ್ಯಾಪಾರ ಮಾಡಕೂಡದು. ಹಾಗೆ ಮಾಡಿದರೆ ಅಂಥವರಿಗೆ ಕಠಿಣ ಶಿಕ್ಷೆ ವಿಧಿಸಬೇಕು. ‘ಕಳ್ಳ ವ್ಯಾಪಾರ’—ಅದೂ ಅನ್ನದ ವಿಷಯದಲ್ಲೂ ನಡೆದರೆ ಅದನ್ನು ಅಧಿಕಾರಿಗಳು ತಡೆಯಲೇಬೇಕು. ಅಧಿಕಾರಿಗಳು ತಡೆಯಲು ಅಸಮರ್ಥರಾದರೆ ಸಾರ್ವಜನಿಕರೇ ಮುಂದೆ ಬಂದು ಆರೋಪಿಗಳನ್ನು ಬಯಲಿಗೆಳೆಯಬೇಕು. ಇದಕ್ಕೆ ಸಾರ್ವಜನಿಕರ ಬೆಂಬಲ ಅವಶ್ಯ. ಎಲ್ಲಾ ಕೆಲಸ ಅಧಿಕಾರಿಗಳಿಂದ ಆಗುವಂತಿಲ್ಲ. ಸಾರ್ವಜನಿಕ ಮುಖಂಡರು ನಮ್ಮ ಜಿಲ್ಲೆಯ ಮುಂದಾಳುಗಳು, ಅಕ್ಕಿ ರೇಶನಿಂಗ್ ಆಗುವ ಕಾಲದಲ್ಲಿ ನಿರ್ವಹಿಸಬೇಕಾದ ಕರ್ತವ್ಯ ಬಹಳವಿದೆ. ಆ ಕುರಿತು ಅವರು ಈಗಾಗಲೇ ಒಟ್ಟುಗೂಡಿ ವಿಚಾರವಿನಿಮಯ ಮಾಡಬೇಕು. ತಾವು ಮಾಡಬೇಕಾದ ಕರ್ತವ್ಯವೇನೆಂಬುದನ್ನು ಪರ್ಯಾಲೋಚಿಸಬೇಕು. ಕಾಂಗ್ರೆಸಿನಂಥಾ ಸಂಸ್ಥೆ ಇಂದು ನ್ಯಾಯಬಾಹಿರವಾಗಿ, ಇಂಥಾ ಕೆಲಸ ಮಾಡಲು ಅಸಾಧ್ಯವಿರುವಾಗ, ಇತರ ಸಂಸ್ಥೆಗಳಾದರೂ ನ್ಯಾಯವಾಗುವಂತೆ ಮಾಡಲು ನಮ್ಮ ತಮ್ಮ ಮೇಲೆ ಬಿದ್ದಿರುವ ಭಾರವನ್ನು ಜವಾಬ್ದಾರಿಯರಿತು ಹೊರಬೇಕು. ಬಡ ಜನರ ಸಂಕಷ್ಟವನ್ನು ಆಹಾರ ಸಂಕಷ್ಟವನ್ನು ಪರಿಹರಿಸಲು,’ ಸರ್ವರಿಗೂ ಜಿಲ್ಲೆಯ ಮುಂದಾಳುಗಳು ಈಗಾಗಲೇ ಒಂದುಗೂಡಿ ‘ಆಹಾರ ಸಮ್ಮೇಳನ’ ಕರೆದು ಪರಿಸ್ಥಿತಿ ಪರ್ಯಾಲೋಚಿಸಬೇಕು.

ಜಿಲ್ಲೆಯ ಆಹಾರ ಪರಿಸ್ಥಿತಿ ಕುರಿತು ವಿಚಾರಿಸುವರೆ ಜಿಲ್ಲಾ ಕಲೆಕ್ಟರರು ಇತ್ತೀಚೆಗೆ ತಮ್ಮ ಕಛೇರಿಯಲ್ಲಿ ಜಿಲ್ಲೆಯ ಕೆಲವು ಮುಖ್ಯ ಜಮೀನ್ದಾರರನ್ನು ಕರೆಸಿ ವಿಚಾರ ವಿನಿಮಯ ಮಾಡಿದರು. ಅದರಲ್ಲಿ ಅವರು ಮುಖ್ಯವಾಗಿ ಹೇಳಿದ ವಿಚಾರವೆಂದರೆ ವರ್ಗದಾರರು ಅಕ್ಕಿ ಭತ್ತಗಳನ್ನು ಸರಕಾರದ ವಶ ಕೊಡಬೇಕೆಂದು. ಅಕ್ಕಿ ಭತ್ತಗಳನ್ನು ಸರಕಾರದ ವಶಕೊಟ್ಟರೆ ಆ ಮೇಲೆ ಯಾವ ಯಾವ ವ್ಯವಸ್ಥೆಗಳನ್ನು ಮಾಡಲಾಗುವುದೆಂಬ ವಿಚಾರ ಕಲೆಕ್ಟರರು ವರ್ಗದಾರರಿಗೆ ವಿವರ ಹೇಳಿರುವುದಿಲ್ಲ. ಆದರೂ ವರ್ಗದಾರರು ಅಕ್ಕಿ ಮುಡಿ ಒಂದರೆ ರೂ. ೧೦ರ ಕ್ರಯಕ್ಕೆ ಕೊಡಬಹುದೆಂದು ಒಪ್ಪಿದ್ದಾರೆ. ಈಗಿನ ಬೆಳೆಯಲ್ಲಿಯೇ ಶೇಕಡಾ ೨೫ರಷ್ಟು ಕೊಡಬಹುದೆಂದೂ, ಮುಂದೆ ಅದನ್ನು ಶೇಕಡಾ ೫೦ಕ್ಕೇರಿಸಬಹುದೆಂದೂ ಅವರು ಸಮ್ಮತಿಸಿರುವರು. ವರ್ಗದಾರರು ಬಡಜನರಿಗೆ ಸಹಾಯವಾಗುವದಾದರೆ ಕಡಿಮೆ ಬೆಲೆಗೆ ಕೊಡಲು ತಯಾರಿದ್ದಾರೆ. ಆದರೆ ನಮ್ಮ ಅಕ್ಕಿ ಭತ್ತ ವ್ಯಾಪಾರಿಗಳ ಕೈಗೆ ಬಂದು, ಮುಂದೆ ವ್ಯಾಪಾರಿಗಳು ತಮಗಿಚ್ಛೆ ಬಂದ ಕ್ರಯದಲ್ಲಿ ಮಾರಾಟವಾಗದಂತೆ, ಕಳೆದ ವರ್ಷದ ಪ್ರಮಾದವು ಈ ವರ್ಷ ಪುನರಾವೃತ್ತವಾಗದಂತೆ ಸರಕಾರ ನೋಡಬೇಕೆಂದು ಅವರ ವಿನಂತಿ. ಈ ವಿನಂತಿ ನ್ಯಾಯವಾದದ್ದಿದೆ. ಬಡಜನರಿಗೆ ಪ್ರಯೋಜನ ಆಗದೆ ವ್ಯಾಪಾರಿಗಳಿಗೆ ಮಾತ್ರ ಲಾಭ ಮಾಡಿಕೊಡುವುದು ಆದರೆ ಇದನ್ನು ತಡೆಯಬೇಕು. ಇದಕ್ಕಾಗಿಯೂ ಜಿಲ್ಲೆಯ ಮುಖಂಡರು ‘ಆಹಾರ ಸಮ್ಮೇಳನ’ವೊಂದನ್ನು ಬೇಗನೇ ಕರೆಯಬೇಕು.

ಅಕ್ಕಿಯನ್ನು ಸರಕಾರ ಸ್ವಾಧೀನಮಾಡಿ
ಕೊಳ್ಳುವುದರಲ್ಲಿ ವರ್ಗದಾರರ ಆಕ್ಷೇಪ
ವಿಲ್ಲ. ಭತ್ತವನ್ನು ಕೊಡಬೇಕೆಂದರೆ ಅ
ವರು ಆಕ್ಷೇಪಿಸುತ್ತಾರೆ. ಭತ್ತವನ್ನು
ಸ್ವಾಧೀನಪಡಿಸಿ ಹಳ್ಳಿಯಿಂದ ತಂದುಬಿ
ಟ್ಟರೆ, ಭತ್ತವನ್ನು ಅಕ್ಕಿ ಮಾಡುವ ಕೆಲಸ
ಮಾಡಿ ಜೀವನ ಸಾಗಿಸುವ ಹಲವು ಕು
ಟುಂಬಗಳ ಉದ್ಯೋಗವೇ ಹೋದಂತಾ
ಯಿತು. ಭತ್ತವನ್ನು ಅಕ್ಕಿ ಮಾಡುವಾ
ಗ, ಹಳ್ಳಿಯವರಿಗೆ ಸಿಗುವ ತೌಡು, ಬೇ
ಸಾಯಕ್ಕೆ ಅವಶ್ಯವಿರುವ ಜಾನುವಾರ
ಳ ಸಂರಕ್ಷಣೆಗೆ ಅವಶ್ಯವಾಗಿದೆ. ಅಕ್ಕಿ
ಯ ಹೊಟ್ಟು ಬೆಂಕಿ ಉರಿಸಲು ಬೂ
ಮಾಡಲು ಬೇಕಾಗುತ್ತದೆ. ಬದಲು ಭ
ತ್ತಗಳನ್ನೆಲ್ಲಾ ಹಸಿಹಸಿಯಾಗಿ ಪೇಟೆ
ತಂದು, ಅಲ್ಲಿನ ಮಿಲ್ಲಿಗೆ ಕೊಟ್ಟರೆ ಅದ
ರಿಂದ ಆಗುವ ಅಕ್ಕಿ ನಿಸ್ಸತ್ವವೂ, ಹಾಳೂ
ಆಗಿದ್ದು ಜನರ ಆರೋಗ್ಯ ಬಹಳ ಕೆಟ್ಟು
ಹೋಗುವುದಲ್ಲದೆ, ಸಾಂಕ್ರಾಮಿಕ ರೋ
ಗಗಳು ತೀವ್ರವಾಗಿ ಹಬ್ಬಲು ಆಸ್ಪದವೂ
ಆಗುತ್ತದೆ. ಹಾಗಾಗಿ ವರ್ಗದಾರರ ಈ
ತರ್ಕವೂ ನ್ಯಾಯವಾದುದಿದೆ. ಇದಕ್ಕಾ
ಗಿಯೂ ಜಿಲ್ಲೆಯ ಮುಖಂಡರು ಸಂಘಟಿ
ತರಾಗಿ ‘ಆಹಾರ ಸಮ್ಮೇಳನ’ವೊಂದನ್ನು
ಕರೆಯುವುದು ಅವಶ್ಯವಿದೆ.

ಶೇಕಡಾ ೬೦ರಷ್ಟು ನಮ್ಮ ಜಿಲ್ಲೆಯ
ಆಹಾರ ಉತ್ಪತ್ತಿ ನಮ್ಮ ಜಿಲ್ಲೆಯ ಜನ
ರಿಗೆ ಸಾಕಾಗಿದೆ. ನಮ್ಮ ಜಿಲ್ಲೆಯ ಜನ
ಸಂಖ್ಯೆ ಸು. ೧೪ ಲಕ್ಷ. ನಮ್ಮ ಜಿಲ್ಲೆಯಲ್ಲಿ
ಬೆಳೆದ ಅಕ್ಕಿ ಸು. ೫೦ ಲಕ್ಷ. ಆದರೆ ಇಂದು
ಜನರ ಮನಸ್ಸಿನಲ್ಲಿ ಹುಟ್ಟಿದ ಕಳವಳಕ್ಕೆ
ಕಾರಣ ಅಧಿಕಾರಿಗಳ ಯೋಜನೆಯೇನೆಂ
ಬುದರ ಸ್ಪಷ್ಟೀಕರಣವಿಲ್ಲದೆ ಮತ್ತು ಮು
ಖಂಡರು ಈ ಕುರಿತು ಸರಿದಾರಿ ತೋರಿ
ಸದೆ ಇದ್ದುದರಿಂದ. ಆ ಎರಡು ಕೆಲಸ
ಗಳನ್ನು ಆ ಉಭಯತರೂ ಕೂ
ಡಲೇ ಮಾಡಬೇಕು. ಹಾಗೆ ಮಾಡಿ
ನಮ್ಮ ಜಿಲ್ಲೆ ಬಂಗಾಳವಾಗದಂತೆ ನೋ
ಡಬೇಕು. ಈಗಾಗಲೇ ಆಹಾರವಿ
ಲ್ಲದೆ ಕೋಲೆರಾ ರೋಗಕ್ಕೆ ತುತ್ತಾದ ಕೇ
ವು ವರದಿ ಬಂದಿದೆ. ಆಹಾರ ಕಳ್ಳ ಸಾ
ತೆಗೆ ಹೋಗಬಾರದು. ಅಕ್ಕಿ ವ್ಯಾಪಾರ
ಯುದ್ಧ ಮುಗಿವ ತನಕ ವ್ಯಾಪಾರಿಗಳ
ಕೈಗೆ ಹೋಗಲೇ ಕೂಡದು. ಇಂಥಾ
ವಿಷಯದಲ್ಲಿ ಮುಂದಗತಿ ಪ್ರಯೋಜನ
ವಿಲ್ಲ. ಹಳ್ಳಿಗಳಲ್ಲಿ ವ್ಯಾಪಾರಿಗಳ ದಲ್ಲಾ
ಳಿಗಳು ಈಗಾಗಲೇ ಕೆಲಸಮಾಡುತ್ತಿ
ದ್ದಾರೆ. ಭತ್ತವನ್ನೆಲ್ಲಾ ವರ್ಗದಾರರಿಂ
ದ ತರಿಸಿ ಅಕ್ಕಿಯನ್ನು ನಾವು ಮಿಲ್ಲಿನಲ್ಲಿ
ಮರ್ದಿಸಿ ಕೊಡುತ್ತೇವೆ ಎಂದು ಕೇ
ವ್ಯಾಪಾರಿಗಳು ಹಂಚಿಕೆ ಹಾಕಿದ್ದಾರೆ
ದೂ ತಿಳಿದಿದೆ. ಇದನ್ನೆಲ್ಲಾ ಕೂಲಂಕ
ಷ ವಿಚಾರಿಸಬೇಕು. ಇದಕ್ಕಾಗಿ, ಇಂ
ಥಾ ಇನ್ನು ಹಲವಾರು ಅತ್ಯಗತ್ಯದ ವಿ
ಚಾರಗಳನ್ನೆಲ್ಲಾ ಆಲೋಚಿಸುವುದಕ್ಕಾಗಿ
ಜಿಲ್ಲೆಯ ಮುಖಂಡರು, ಸಕಲ ಜಾತಿವ
ತ ಸಂಘದವರೂ ಬೇಗನೇ ಒಂದು ಆಹಾ
ರ ಸಮ್ಮೇಳನವನ್ನು ಕರೆಯ ಬೇಕಾ
ಗಿದೆ.

ಸಮರಭೂಮಿಯ ಸಂಚಾರ

ಮದ್ರಾಸಿನ ಮೇಲೆ ಬಾಂಬು!

ರಶ್ಯ ಇಟಲಿಗಳಲ್ಲಿ ಕಾಳಗ

ತ್ರಿರಾಷ್ಟ್ರ ಪರಿಷತ್ತು ಮೋಸ್ಕೋದಲ್ಲಿ.

ತಾ ೧೧ರ ರಾತ್ರಿ ಶತ್ರು ವಿಮಾನವು ಮದ್ರಾಸಿನ ವರೆಗೆ ಹಾರಿಬಂದು ನಗರದ ಮೇಲೆ ಕೆಲವು ಬಾಂಬುಗಳ ನ್ನೊಗೆದವು ಮಿಲಿಟರಿ ಹಾನಿಬಗ್ಗೆ ವರದಿ ಕೊಟ್ಟಿಲ್ಲ. ನಾಗರಿಕರು ಸಾವು ನೋವುಗಳಿಗೆ ತುತ್ತಾಗಿರುವರೆಂದು ಹೇಳಲಾಗಿದೆ. ಸಿಲೋನಿನ ಕಡೆಯಿಂದ ತಾ ೧೧ರಂದು ಒಂದು ಶತ್ರು ವಿಮಾನವು ಕಾಣಿಸಿಕೊಂಡಿತೆಂದೂ ಅದನ್ನು ಬಾಂಬಿಕ್ಕುವ ಮೊದಲೇ ಕೆಳಗುರುಳಿಸಲಾಯಿತೆಂದೂ ತಿಳಿಯುತ್ತದೆ. ಮದ್ರಾಸಿನ ಮೇಲೆ ವಿಮಾನದಾಳಿ ಮಾಡಿದ್ದು ಜಪಾನಿನ ಒಂದು ನಿರೀಕ್ಷಕ ವಿಮಾನವೆಂದೂ, ಬಾಂಬಿನಿಂದ ನಾಗರಿಕರಿಗೆ ಸ್ವಲ್ಪ ಹಾನಿಯಾಗಿದ್ದರೂ, ಜನರಾರೂ ಧೈರ್ಯಗೆಟ್ಟಿಲ್ಲವೆಂದೂ, ಈ ಸಲ ಊರುಬಿಟ್ಟೋಡುವ ಗಡಿಬಿಡಿ ಸ್ವಲ್ಪ ಮಾತ್ರವೂ ಇಲ್ಲವೆಂದೂ, ವ್ಯಾಪಾರ ವಹಿವಾಟುಗಳು ಎಂದಿನಂತೆ ಸಾಗುತ್ತಿವೆಯೆಂದೂ ತಿಳಿಸಲಾಗಿದೆ. ಇತ್ತೀಚೆಗೆ ಮದ್ರಾಸು ಮತ್ತೆ ಅದರ ಸುತ್ತಲಿನ ಪ್ರದೇಶದಲ್ಲಿ ಭಾರೀ ಮಳೆಯಿಂದಾಗಿ ಅನೇಕ ಮನೆಗಳುರುಳಿವೆಯೆಂದೂ ಸರಕಾರದ ಪ್ರಕಟಣೆಯಿರುವುದು

ರಶ್ಯದಲ್ಲಿ ಜರ್ಮನರು ಕಟ್ಟಿದ ದೊಡ್ಡ ಗೊಮೆಲ ದುರ್ಗಕ್ಕೆ ಗಂಡಾಂತರ ಸನ್ನಿಹಿತವಾಗಿದೆ ರಶ್ಯನ್ ಸೇನೆಗಳು ಜರ್ಮನ್ ವ್ಯೂಹವನ್ನು ಭೇದಿಸಿ ಗೊಮೆಲ್ ಪಟ್ಟಣದ ಉಪನಗರವನ್ನು ಆಕ್ರಮಿಸಿವೆ. ಯುಕ್ರೇನಿನ ರಾಜಧಾನಿಯಾದ ಕೀವ್ ನಗರಕ್ಕೆ ರಶ್ಯನ್ ಸೇನೆಗಳು ಎರಡು ಕಡೆಗಳಿಂದಲೂ ಮುತ್ತಿಗೆ ಹಾಕಿರುವವು. ಕೀವ್ ಪಟ್ಟಣವು ವಶವಾಗುವುದರಲ್ಲಿ ಏನೂ ಸಂಶಯವಿಲ್ಲವೆಂದು 'ಪ್ರವಾಡಾ' ಪತ್ರಿಕೆ ಸಾರುತ್ತದೆ ಈ ಭಾಗದಲ್ಲಿರುವ ನೀಪರ್ ದಂಡೆಯ ಮೇಲಿರುವ ಶತ್ರುಗಳ ಇಡೀ ವ್ಯೂಹವೇ ಕುಸಿದು ಬೀಳುವ ಸಂಭವವಿದೆಯೆಂದು ಹೇಳಲಾಗಿದೆ. ಗೊಮೆಲ್ ಪ್ರದೇಶದಲ್ಲಿ ನಡೆಯುತ್ತಿರುವ ಯುದ್ಧವು ಘೋರವಾಗಿದೆ ಇದು ದೊಡ್ಡ ಆಯಕಟ್ಟಿನ ಸ್ಥಳ 'ಜರ್ಮನರ ಛಳಿಗಾಲದ ಭದ್ರವಾದ ವ್ಯೂಹ ಇದು ರಶ್ಯನ್ ವೀರರು ಈ ದುರ್ಗವನ್ನು ಮುತ್ತಿ ಇದರ ಹೊರ ಆವರಣವನ್ನು ವಶಪಡಿಸಿ ಉಪನಗರಕ್ಕೆ ಕಾಲಿಟ್ಟಿದ್ದಾರೆ. ಗೊಮೆಲ್ ದುರ್ಗ ಮತ್ತು ರಶ್ಯನ್ ಸೇನೆಗಳ ನಡುವೆ ಸ್ಲೋಝು ನದಿ ಹರಿಯುತ್ತಿದೆ. ಅದನ್ನು ದಾಟುವುದು ಬಾಕಿಯಿದೆ. ಗೋಮೆಲಿನ ಉತ್ತರಕ್ಕಿರುವ ವಿಟೆಬಸ್ಕ್ ನಗರಕ್ಕಾಗಿಯೂ ಭೀಕರ ಕಾಳಗವಾಗುತ್ತಿರುವುದು,

ಇಟಲಿಯಲ್ಲಿ 'ವಲ್ಟರ್ನೋ' ನದೀ ಹತ್ತಿರ ಬೀಡು ಬಿಟ್ಟಿರುವ ಬ್ರಿಟಿಷ್ ಮತ್ತು ಅಮೆರಿಕನ್ ಸೈನ್ಯಗಳು ಒಂದು ಉಗ್ರ ಕಾಳಗ ಪ್ರಾರಂಭಿಸ್ತಿರುವವು ಜರ್ಮನರ ಪ್ರತಿಭಟನೆಯೂ ಜೋರಾಗಿದೆ ಇಲ್ಲಿ ಮಳೆಯೂ ಹೆಚ್ಚಾಗಿದೆ ಆದರೂ ಐದು ಮತ್ತು ಎಂಟನೆ ಸೈನ್ಯಗಳು ಮುಂದೊತ್ತುತ್ತಿವೆ ವೆಲ್ಟರ್ನೋ ನದಿ ದಾಟಲು ಮಿತ್ರ ಸೈನ್ಯಗಳು ಸಾಹಸಮಾಡುತ್ತಿರುವವು. ಮಿತ್ರರು ಈ ಸಾಹಸದಲ್ಲಿ ಯಶಸ್ವಿಗಳಾದರೆ ಜರ್ಮನರು ಪ್ರತಿದಾಳಿ ಮಾಡುವ ಸಂಭವವಿದೆಯೆಂದು ರಾಯಿಟರ್ ಸುದ್ದಿಗಾರನ ಹೇಳಿಕೆಯಾಗಿದೆ ಈ ಪ್ರದೇಶದಲ್ಲಿ ಜರ್ಮನರೂ ತಮ್ಮ ಬಲ ಸಂಗ್ರಹಿಸುತ್ತಿದ್ದಾರೆ ಇಲ್ಲಿ ಅವರು ಫಿರಂಗಿಗಳನ್ನು ತುಂಬಾ ಇಟ್ಟಿರುವರು ಮಿತ್ರರ ಚಲನವಲನಗಳನ್ನು ಅವರಿಗೆ ಎತ್ತರದಿಂದ ನೋಡಲು ಅನುಕೂಲವಿದೆ ನೆರೆಬಂದು ವೆಲ್ಟರ್ನೋ ನದಿ ದಾಟಿಬಿಡಲು ಈಗ ಪ್ರಕೃತಿ ಪ್ರತಿಕೂಲವಾಗಿದೆ ಭಾರತೀಯ ಸೈನ್ಯಗಳು ಇಟಲಿ ಯುದ್ಧದಲ್ಲಿ ಧೀರ ಭಾಗವಹಿಸುತ್ತಿವೆ ನೇಪಲ್ಸ್ ರೋಮ್‌ಗಳ ಮಧ್ಯೆ ಘೋರ ಹೋರಾಟ ನಡಯಲಿದೆಯೆಂದು ನಿರೀಕ್ಷೆಯಿದೆ

ತ್ರಿರಾಷ್ಟ್ರ ಪರಿಷತ್ತಿಗೆ ಅವಶ್ಯವಿರುವ ಎಲ್ಲಾ ಸಿದ್ಧತೆಗಳೂ ನಡೆಯುತ್ತಿವೆ ಈಡನ್, ಕಾರ್ಡೆಲ್ ಹಲ್ಲರು ಮೋಸ್ಕೋ ಪಟ್ಟಣಕ್ಕೆ ತೆರಳುವುದು ಮಾತ್ರ ಬಾಕಿಯುಳಿದಿದೆ. ಈ ಪರಿಷತ್ತು ಎಂಟು ಹತ್ತು ದಿನಗಳ ತನಕ ನಡೆಯಬಹುದೆಂದು ತಿಳಿಯುತ್ತದೆ ಸಭೆಯಲ್ಲಿ ಚರ್ಚಿಸಲಿರುವ ವಿಷಯಗಳ ಕುರಿತು ತ್ರಿರಾಷ್ಟ್ರಗಳ ಮುಖಂಡರು ಈಗಾಗಲೇ ವಿಚಾರ ವಿನಿಮಯ ಮಾಡಿಕೊಂಡಿರುವರು ತ್ರಿರಾಷ್ಟ್ರಗಳ ಮೇಲೆ ಸಂಯುಕ್ತ ಹೊಣೆಗಾರಿಕೆಯಿರುವ ಮತ್ತು ಅವು ಅನ್ಯೋನ್ಯ ಸಹಕಾರದಿಂದ ಒಂದೇ ಧೋರಣವನ್ನು ಪಾಲಿಸಬೇಕಾದ ಸಮಸ್ಯೆಗಳು ಚರ್ಚೆಗೆ ಬರುವವು ಚರ್ಚೆಗೆ ಬರುವ ಯುದ್ಧ ಸಮಸ್ಯೆಗಳಲ್ಲಿ (೧) ಶತ್ರು ರಾಷ್ಟ್ರಗಳು ಶರಣು ಎನ್ನುವ ಮೊದಲು, ಶರಣಾದ ಕಾಲಕ್ಕೆ ಮತ್ತು ಆ ಮೇಲೆ ಅನುಸರಿಸಬೇಕಾದ ನೀತಿ (೨) ಶತ್ರು ಆಕ್ರಮಿತ ಪ್ರದೇಶಗಳ ವಿಮೋಚನೆ ಮಾಡುವ ಮೊದಲು ಮತ್ತೆ ಆ ಮೇಲೆ ಪಾಲಿಸಬೇಕಾದ ನೀತಿ ಇವು ಅತಿ ಗಹನವಾದವುಗಳು ಆ ಮೇಲೆ ಶಾಂತಿ ಸ್ಥಾಪನೆಯ ವಿಚಾರವೂ ಆಲೋಚಿಸಲಾಗುವುದೆಂದು ಹೇಳಲಾಗಿದೆ. ಈ ಸಲದ ಪರಿಷತ್ತಿಗೆ ಮೋಸ್ಕೋವನ್ನು ಆರಿಸಿಕೊಂಡದ್ದರಲ್ಲಿ ಅತ್ಯಂತ ಮಹತ್ವವಿದೆ.

ಮಿತ್ರಮಂಡಳಿಯ

ಎರಡು ಅಭ್ಯಾಸಗೋಷ್ಠಿಗಳು

ಏಕಾಂಕ ನಾಟಕ—ಕೃತಿವಾಚನ

'ನಾಟಕಗಳಲ್ಲಿ ಮನರಂಜನೆ ಇರಬೇಕು. ನಾಟಕ ಬರೆದವನಿಗೆ ಆತ್ಮ ಸಂತೋಷ ಮಾತ್ರವಲ್ಲ, ಜನತಾ ಸಂತೋಷವೂ ಮುಖ್ಯವಾದುದು, ಆ ಮೇಲೆ ಪ್ರಚಾರ ಏಕಾಂಕ ನಾಟಕಗಳಲ್ಲಿ ಅನಿರೀಕ್ಷಿತ ಘಟನೆಗಳಿರಬೇಕು ಬರೇ ಸಮಾಜದ ಚಿತ್ರವಾರೆ ರಂಗಭೂಮಿಯಲ್ಲಿ ಯಶಸ್ವಿಯಾದಿತೊ? ಎಂಬ ಸಂದೇಹವಿದೆ ನನಗೆ' ಎಂದು ಶ್ರೀ ಸೇಡ್ಯಾಪು ಕೃಷ್ಣ ಭಟ್ಟರು ತಾ ೨೮ ಸಂಜೆ ೬ ಗಂಟೆಗೆ ಶ್ರೀ ವಾಸುದೇವರಾಯರ ಅಧ್ಯಕ್ಷತೆಯಲ್ಲಿ ಸ್ಥಳೀಯ ಥಿಯಸೋಫಿಕಲ್ ಲೋಜಿನಲ್ಲಿ ಜರಗಿದ ಮಿತ್ರಮಂಡಳಿಯ ಅಭ್ಯಾಸ ಗೋಷ್ಠಿ ಸಭೆಯಲ್ಲಿ ಹೇಳಿದರು, 'ಹಿಂದಿನವರು ಕಟ್ಟುನಿಟ್ಟುಗಳಿಗೆ ಸಿಕ್ಕಿಬೀಳಲಿಲ್ಲ ಒಂದು ಅಂಕದಲ್ಲಿ ಒಂದೇ ದೃಶ್ಯ ಹಿಂದಿನ ಕಾಲದಲ್ಲಿ ಪರದೆ ಇಳಸುವ ಪದ್ಧತಿ ಇಲ್ಲವಾಗಿ ತೋರುತ್ತದೆ ಈಗ ಒಂದಂಕದಲ್ಲಿ ಹಲವು ದೃಶ್ಯಾವಳಿಗಳಿರುತ್ತವೆ ಇಂಗ್ಲೀಷಿನ ಅನುಕರಣೆ ಇರಬಹುದೇನೋ? ಪಂಚ ಸಂಧಿಗಳು, ಏಕಾಂಕ ನಾಟಕಗಳಲ್ಲಿಯೂ ಈ ಸಂಧಿಗಳು ಸೂಕ್ಷ್ಮವಾಗಿಯಾದರೂ ಇರಬೇಕು ಇದಕ್ಕೆ ಹೆಚ್ಚಿನ ಚಾತುರ್ಯ ಬೇಕು ಆದುದರಿಂದ ಏಕಾಂಕ ನಾಟಕ ರಚನೆ ಕಷ್ಟ ಏಕಾಂಕ ನಾಟಕದಲ್ಲಿ ಒಂದೇ ದೃಶ್ಯವಿರುವುದು ಚೆನ್ನಾಗಿರುತ್ತದೆಂದು ನನಗೆ ತೋರುತ್ತದೆ ಶ್ರೀ ಕೈಲಾಸಂರವರ ನಾಟಕಗಳು ನಿಯಮ ಬದ್ಧವಿದೆಯೋ? ಭಾಷೆ ಚೆನ್ನಾಗಿದೆಯೋ? ಅದೆಲ್ಲಾ ಬಿಟ್ಟರೂ ಬರೇ ನಾಟಕ ದೃಷ್ಟಿಯಿಂದ ಚೆನ್ನಾಗಿದೆ ಅನ್ನಬಹುದು'' ಎಂದು ತಮ್ಮ ಅಭ್ಯಾಸವನ್ನು ೧ ತಾಸಿನ ಭಾಷಣದಿಂದ ಸಭಿಕರ ಮುಂದಿಟ್ಟರು

ಶ್ರೀ ಎಸ್ ಮುಕುಂದ ರಾಯರು 'ನಾಟಕಗಳಲ್ಲಿ ಘರ್ಷಣೆ ಇರಬೇಕು ಅನೇಕಾಂಕ ನಾಟಕಗಳಿಂದಲೂ ಯಾವುದೇ ಒಂದು ದೃಶ್ಯವನ್ನು ತೆಗೆದುಕೊಂಡರೂ ಅದು ಏಕಾಂಕ ಆಗಬಹುದು ಏಕಾಂಕ ನಾಟಕ ಬರೆಯುವುದು ನಾಟಕ ಬರೆಯಲು ಬರಿಯುವ ಕಲೆ ಅದರಲ್ಲಿ ಒಂದು ಸಮಸ್ಯೆ 'ಇರಬೇಕಾದ್ದರಿಂದ ಅದನ್ನು ಬಿಡಿಸಲು ಎಷ್ಟು ದೃಶ್ಯ ಬೇಕೊ ಅಷ್ಟು ದೃಶ್ಯ ಬೇಕು ದೃಶ್ಯ ವ್ಯಕ್ತಿಗಳಿಗೆ ಗಡಿಯಿಲ್ಲ ಸಮಯಕ್ಕೆ ಮಿತಿಯಿಲ್ಲ ಸಿಕ್ಕುಮುವಿಷ್ಟೇ. ಒಂದು ಪ್ರಶ್ನೆ, ಅದನ್ನು ಬಿಡಿಸಬೇಕು! ಅದುದರಿಂದ ಏಕಾಂಕ ನಾಟಕ ಬರೆಯುವುದು ಸುಲಭ'. ಇತ್ಯಾದಿಯಾಗಿ ತಮ್ಮ ಅಭಿಪ್ರಾಯವನ್ನು ಸಭಿಕರ ಮುಂದಿಟ್ಟರು.

ಶ್ರೀ ಕಯ್ಯಾರ ಕಿಂಞ್ಞಣ್ಣ ರೈಗಳು ತಮ್ಮ ಅಭ್ಯಾಸವನ್ನು ಸಭಿಕರ ಮುಂದಿಟ್ಟು, ನಾಟಕಕಾರನು ಸ್ವತಂತ್ರತೆಯನ್ನು ವಹಿಸಬೇಕು, ಭಾಷೆಯಲ್ಲಿಯೂ ಬೇಕಾದನ್ನು ಸ್ವತಂತ್ರತೆ ವಹಿಸಬೇಕು, ಆ ಮಟ್ಟಿಗೆ ಇಂದು ಶ್ರೀ ಕೈಲಾಸಂ ಮುಂದರಿದಷ್ಟು ಬೇರಾರೂ ನನ್ನ ತಿಳುವಳಿಕೆಗೆ ಬಂದಿಲ್ಲ ಎಂದು ಹೇಳಿದರು.

ಆ ಮೇಲೆ ಅಧ್ಯಕ್ಷರು ಈಗಿನ ನಾಟಕಗಳು, ಒಂದು ರೀತಿಯಿಂದ ಪಾಶ್ಚಾತ್ಯ ರೀತಿಯ ಛಾಯೆ ನಾಟಕಕಾರರಿಗೆ ನಿಯಮ ಬದ್ಧತೆ ಇಲ್ಲವಾದರೂ ಸ್ವಚ್ಛಂದತೆಯಿಲ್ಲ ನಾಟಕದ ಸಮಸ್ಯೆಯ ಐಕ್ಯೆಯಲ್ಲಿ ಸನ್ನಿವೇಶಗಳು ಮುಖ್ಯ" ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿ ಏಕಾಂಕ ನಾಟಕಗಳು ಎಷ್ಟು ಹೆಚ್ಚಾಯಿತೊ ಅಷ್ಟು ನಮ್ಮಲ್ಲಿ ಭಾಷೆ ಬೆಳವಣಿಗೆಗೆ ಸಹಾಯವಾಗುವುದು ಎಂಬ ಸೂಚನೆಯೊಡನೆ ತಮ್ಮ ಅಧ್ಯಕ್ಷ ಭಾಷಣವನ್ನು ಕೊನೆಗೊಳಿಸಿದರು.

ಮಿತ್ರಮಂಡಳಿಯ ವಾರದ ಅಭ್ಯಾಸ ಗೋಷ್ಠಿ ಕಳದ ತಾ ೯ರಂದು ಶ್ರೀ ರಂಗರಾ ತಲ್ಚೇರಿಕರರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಸೇಡ್ಯಾಪು ಕೃಷ್ಣ ಭಟ್ಟರು ತಮ್ಮ ಕೃತಿಗಳ ವಾಚನ ಮಾಡಿದರು. ತನ್ನ ಕವಿತೆಗಳ ಕುರಿತು ಹೇಳುತ್ತಾ ನಾನು ಆದಷ್ಟು ಮಟ್ಟಿಗ ಸ್ವತಂತ್ರ ಹಾದಿ ತುಳಿಯುತ್ತೇನೆ, ಇಂಗ್ಲಿಷಿನ ಅನುಕರಣವೆಂದರೆ ನನಗೆ ಹೆಚ್ಚಿನ ಇಂಗ್ಲಿಷ್ ಬರದು. ಆದರೆ ನಾನು ತುಳಿದ ದಾರಿ ಹಿಂದಿನವರು ನಡೆದದ್ದಾಗಿದ್ದರೆ ದೋಷವಿಲ್ಲ ನಾನು ಮೆಟ್ಟಿದ ಹೆಜ್ಜೆಯಲ್ಲಿ ಹಿಂದಿನವರೂ ಹೋಗಿರಬಹುದು' ಎನ್ನುತ್ತಾ ತನ್ನ ಅಪ್ರಕಟಿತ ಕವನ 'ಶಬರಿ'ಯನ್ನು ಓದಿದರು ಶಬರಿಯ ಹಿಂದಿನ ಜೀವನ, ರಾಮ ದರ್ಶನಗಳು ಇದರಲ್ಲಿ ಸ್ವಾರಸ್ಯವಾಗಿ ಚಿತ್ರಿತವಾಗಿವೆ ಕವಿಗಳು ಆ ಮೇಲೆ ತನ್ನ 'ವಿಜಯ, ನಗರ ಧ್ವಂಸ' ಏಕಾಂತ' 'ಕೃಷ್ಣ ಕುಮಾರಿ' ಕವಿಗಳನ್ನು ಓದಿದರು

ಶ್ರೀ ಕೆ ಎಸ್ ಅಡಿಗರು ಮಾತನಾಡಿ ಶ್ರೀ ಸೇಡ್ಯಾಪು ಕೃಷ್ಣ ಭಟ್ಟರು 'ಶಬರಿ' ಕವನವನ್ನು ಪ್ರಕಟಿಸಿ, ಅಖಿಲ ಕರ್ನಾಟಕದ ರಸಿಕರಿಗೆ ಸಾಹಿತ್ಯದ ರಸದೂಟ ಮೀಯಬೇಕೆಂದು ವಿನಂತಿಸುತ್ತಾ, ಅವರು ಒಪ್ಪುವುದಾದರೆ 'ಮಿತ್ರಮಂಡಳಿ'ಯು ಅದನ್ನು ಪ್ರಕಟಿಸುವುದಾಗಿ ಹೇಳಿದರು. ಶ್ರೀ ಜೆ ವಾಮನ ಭಟ್ಟರು ಶ್ರೀ ಅಡಿಗರ ಮಾತನ್ನು ಸಮರ್ಥಿಸಿದರು.

ಅಧ್ಯಕ್ಷರು ಮಾತನಾಡಿ ಶ್ರೀ ಕೃಷ್ಣ ಭಟ್ಟರ ಕವಿತೆಗಳ ಸ್ವಾರಸ್ಯ ತಿಳಿಸಿ ತನಗೆ ಕವಿಹೃದಯವಿಲ್ಲದಿದ್ದರೂ ಇಂಥಾ ಕವಿತೆಗಳು ಹೃದಯಂಗಮವಾಗುವವೆಂದೂ, ಕನ್ನಡದ ಕವಿಗಳು ಜನಸಾಮಾನ್ಯರಿಗೆ ತಿಳಿವ ರೀತಿಯಲ್ಲಿ ಭೂರಿ ಕವಿತೆಗಳನ್ನು ರಚಿಸಬೇಕೆಂದೂ ಸೂಚನೆಯಿತ್ತರು ಮುಂದಿನ ವಾರದ ಅಭ್ಯಾಸ 'ಅಂದಿನ ಆವೂರು ಗ್ರಂಥದ ಕುರಿತು.

ಕುಂಬಳೆ

ಗಾಂಧಿ ಜಯಂತಿ

ನಿಮಿತ್ತ ಕುಂಬಳೆ ಪೇಟೆಯಲ್ಲಿ ಹತ್ತು ಸಮಸ್ತರು ಬಡಬಗ್ಗರಿಗೆ ತಾ ೨ರಂದು ಅಕ್ಕಿ ಹಂಚಿದರು

ಬಂಗಾಳ ನಿಧಿಗೆ ಕುಂಬಳೆ ಮತ್ತು ಆಸುಪಾಸಿನ ಗ್ರಾಮಗಳಿಂದ ಸುಮಾರು ರೂ, ೧೫೦ ಕಳುಹಿಸಲಾಗಿದೆ.

ಸ್ವದೇಶಾಭಿಮಾನಿ

ತಾರೀಕು 15—10—1943

ದಿಲ್ಲಿಯಲ್ಲಿ ಆಹಾರ ಸಮ್ಮೇಳನ

ದೇಶದ ಆಹಾರ ಪರಿಸ್ಥಿತಿಯನ್ನು ಸಮಾಲೋಚಿಸುವರೆ ದಿಲ್ಲಿಯಲ್ಲಿ ಈ ವಾರ ಕರೆದ ಆಹಾರ ಸಮ್ಮೇಳನದಲ್ಲಿ, ಭಾರತ ಸರಕಾರದ ಆಹಾರಮಂತ್ರಿ ಶ್ರೀ. ಜೆ. ಪಿ. ಶ್ರೀವಾಸ್ತವರು ಮಾಡಿದ ಪ್ರಾರಂಭಭಾಷಣದಲ್ಲಿ ಹಲವು ಮಹತ್ವದ ವಿಷಯಗಳು ಹೊರಬಿದ್ದವೆ. ಅದರಲ್ಲಿ ಪ್ರಾಮುಖ್ಯವಾದುದೊಂದು, ಇನ್ನು ಮುಂದೆ ನಮ್ಮ ದೇಶದಿಂದ ಹೊರ ದೇಶಗಳಿಗೆ ಆಹಾರ ಸಾಮಗ್ರಿ ಕಳುಹಿಸಲಾಗುವುದಿಲ್ಲವೆಂಬುದು. ಎರಡನೆಯ ವಿಶೇಷ ಸಂಗತಿಯೆಂದರೆ, ಸರಕಾರವು ಹಡಗಗಳ ವ್ಯವಸ್ಥೆ ಮಾಡುವುದೆಂಬುದು. ಈಗಾಗಲೇ ಹೊರ ದೇಶದಿಂದ ಆಹಾರ ಸಾಮಗ್ರಿ ತರಿಸುವ ವ್ಯವಸ್ಥೆ ಮಾಡಲಾಗಿದೆಯೆಂದೂ ಶ್ರೀವಾಸ್ತವರು ಹೇಳಿದರು.

ಹಿಂದೆ ಈ ವಿಷಯದಲ್ಲಿ ವರದಿಯೊಂದನ್ನು ಪ್ರಕಟಿಸಿದ ಗ್ರೆಗರಿ ಸಮಿತಿಯವರು ಇಲ್ಲಿಗೆ ಕಡಿಮೆ ಪಕ್ಷ ಒಂದುವರೆ ಮಿಲಿಯ ಆಹಾರ ಸಾಮಗ್ರಿ ಕೂಡಲೇ ಬರಬೇಕೆಂದೂ, ಮತ್ತು ಯುದ್ಧ ಮುಗಿವ ತನಕ ಪ್ರತಿ ವರ್ಷ ಒಂದು ಮಿಲಿಯ ಟನ್ ಗೋಧಿ ಬರಬೇಕೆಂದೂ ಹೇಳಿದ್ದಾರೆ ಆದರೆ ಈ ಅಂಕೆಸಂಖ್ಯೆ ಯಾವ ಆಧಾರದ ಮೇಲೆ ಹೇಳಲಾಗಿದೆಯೆಂದು ತಿಳಿದು ಬರುವುದಿಲ್ಲ. ದೇಶದ ಇಂದಿನ ಪರಿಸ್ಥಿತಿ ನೋಡಿದರೆ ಈ ಅಂದಾಜು ಏನೇನೂ ಸಾಕಾಗುವಂತೆ ತೋರುವುದಿಲ್ಲ ಶ್ರೀವಾಸ್ತವರ ಭಾಷಣದಲ್ಲಿ ಗ್ರೆಗರಿ ಸಮಿತಿಯವರ ಹೇಳಿಕೆಗಿಂತ ಹೆಚ್ಚಿಗೆ ಆಹಾರ ಸಾಮಗ್ರಿ ನಮಗೆ ಒದಗೀತೆಂಬ ಯಾವ ಸೂಚನೆಯೂ ಇರುವುದಿಲ್ಲ.

ಶ್ರೀವಾಸ್ತವರ ಭಾಷಣದ ಇನ್ನೊಂದು ಪ್ರಾಮುಖ್ಯಾಂಶವೆಂದರೆ, ದೇಶದ ಜನತೆಗೆ ಆಹಾರ ಒದಗಿಸುವಲ್ಲಿ ಕೇಂದ್ರ ಸರಕಾರಕ್ಕೆ ಹೆಚ್ಚಿನ ಜವಾಬ್ದಾರಿಯಿದೆಯೆಂದು ಹೇಳಿದ್ದು. ಈ ವಿಷಯ ಕೇಂದ್ರ ಸರಕಾರಕ್ಕೆ ಈಗಾದರೂ ತಿಳಿದು ಬಂದದ್ದು ಒಳ್ಳೇಯದೇ ಆಯಿತು. ಆಹಾರ ಮಂತ್ರಿಗಳ ಈ ಭಾಷಣದಲ್ಲಿ ಆಹಾರದ ಕ್ರಯ ನಿಯಂತ್ರಣ, ಹಂಚುವಿಕೆ ಮೊದಲಾದ ಕೆಲಸಗಳನ್ನು ಮಾತ್ರ ಕೇಂದ್ರ ಸರಕಾರ ಮಾಡುವುದಲ್ಲದೆ ಒಂದು ಕೇಂದ್ರ ಸಮಿತಿಯನ್ನು ಸ್ಥಾಪಿಸುವುದಾಗಿ ತಿಳಿದುಬರುತ್ತದೆ. ಇದರ ವಿವರವಿನ್ನೂ ತಿಳಿದಿಲ್ಲ. ನಿಜವಾಗಿಯೂ ಅಂಥಾ ಒಂದು ಕೇಂದ್ರ ಸಮಿತಿ ಸರಿಯಾಗಿ ಕೆಲಸಮಾಡಿದರೆ ದೇಶದ ಆಹಾರ ಸಮಸ್ಯೆ ಪರಿಹಾರವಾಗಬಹುದೆಂಬುದರಲ್ಲಿ ಸಂಶಯವಿಲ್ಲ. ಆದರೆ ಸರಕಾರದವರು ಈ ಕೆಲಸಗಳನ್ನೆಲ್ಲಾ ಕೈಕೊಳ್ಳುವ ಮೊದಲು ಸರಿಯಾದ ಅಂಕೆಸಂಖ್ಯೆಗಳನ್ನು ಸಂಗ್ರಹಿಸಿ ಕೆಲಸಕ್ಕೆ ಕೈಹಚ್ಚುವುದು ಒಳ್ಳೇಯದು.

ನೋಟಗಳು

ಗಡಗಳ ಎಲೆ ತಿಂದು ಬಂಗಾಳದಲ್ಲಿ ಜನರು ಜೀವನ ಮಾಡುತ್ತಿದ್ದಾರೆ.

ಕಳೆದೊಂದು ವಾರದಲ್ಲಿ ಕಲ್ಕತ್ತದಲ್ಲಿ ೧೯೬೭ ಜನರು ಹಸಿವಿನ ಬೇಗೆಯಿಂದ ಸುಟ್ಟು ಹೋದರು!

ಪಾರ್ಲಿಮೆಂಟಿನಲ್ಲಿ, ಭಾರತ ಮಂತ್ರಿ ಅಮೆರಿಯವರು ಬಂಗಾಳದ ಆಹಾರಸಂಕಷ್ಟ ನಿವಾರಿಸಲು ಹಡಗ ವ್ಯವಸ್ಥೆ ಮಾಡಿದ್ದೇವೆಂದರು.

ಬಂಗಾಳ ಮಂತ್ರಿಮಂಡಳದ ಜಗಳದಿಂದ ಬಂಗಾಳಕ್ಕೆ ಇಂಥಾ ದುಸ್ಥಿತಿ ಬಂದಿದೆಯೆಂದರು.

ಹಾಡಿದ್ದೇ ಹಾಡುತ್ತಾನಂತೆ ಕಿಸುಬಾಯಿದಾಸಯ್ಯ!

ಆಹಾರದ ಪರಿಸ್ಥಿತಿ ದಿನದಿಂದ ದಿನಕ್ಕೆ ಕೆಡುತ್ತಿರುವುದರಿಂದ, ಅದನ್ನು ಪರಿಹರಿಸಲು ಪ್ರಾಂತಿಕ ಸರಕಾರಗಳು ಅಸಮರ್ಥವಾಗಿರುವುದರಿಂದ ಇನ್ನು ಮೇಲೆ ಆ ಕೆಲಸವನ್ನು ಕೇಂದ್ರ ಸರಕಾರವೇ ವಹಿಸಿಕೊಳ್ಳುವುದೆಂದು ದಿಲ್ಲಿಯಲ್ಲಿ ಕೂಡಿದ ಆಹಾರ ಸಮ್ಮೇಳನದಲ್ಲಿ ಶ್ರೀ. ವಾಸ್ತವರು ಹೇಳಿದರು

ಪರದೇಶಗಳಿಗೆ ಇಲ್ಲಿಂದ ಕಳುಹಿಸುತ್ತಿದ್ದ ಆಹಾರ ಸಾಮಗ್ರಿಗಳನ್ನು ನಿಲ್ಲಿಸಲಾಗಿದೆಯೆಂದೂ ಅವರು ನುಡಿದರು.

ಬಿಜಾಪುರದ ಬರಗಾಲ ಪರಿಸ್ಥಿತಿ ಸುಧಾರಿಸಿದೆಯೆಂದು ಮುಂಬಯಿ ಗವರ್ನರರು ಹೇಳುತ್ತಾರೆ.

ಕಲ್ಕತ್ತದಲ್ಲಿ ಜನರು ಸಾಯುತ್ತಿದ್ದರೂ ಅಲ್ಲಿ ಇನ್ನೂ ಒಂದು ತಿಂಗಳ ಆಹಾರ ಸಂಗ್ರಹವಿದೆಯೆಂದು ಅಮೆರಿ ಹೇಳುತ್ತಾರೆ

ಆಹಾರ ಸಮಸ್ಯೆ ಬಗೆಹರಿಸಲು ಪಂಜಾಬೇ ಹೆಚ್ಚಿನ ಸಹಾಯ ಮಾಡಿರುವುದೆಂದೂ ಕೇಂದ್ರ ಸರಕಾರವು ರೇಶನಿಂಗ್ ಮತ್ತು ಕಂಟ್ರೋಲ್ ಯೋಜನೆಗಳನ್ನು ಒತ್ತಾಯದಿಂದ ಹೇರಿದರೆ ಪಂಜಾಬಿನಲ್ಲಿ ಅನರ್ಥವಾದೀತೆಂದೂ ದಿಲ್ಲಿ ಆಹಾರ ಪರಿಷತ್ತಿನಲ್ಲಿ ಸರ್ ಛೋಟು ರಾಮರು ಹೇಳಿದರು.

ದಕ್ಷಿಣದ ಆಹಾರ ಪರಿಸ್ಥಿತಿ ವಿಚಾರ ಮುನ್ಸಿಪಾಲಿಟಿ ಡಿಸ್ಟ್ರಿಕ್ಟ್ ಬೋರ್ಡುಗಳ ಸದಸ್ಯರು ಚರ್ಚೆಮಾಡುತ್ತಾರೆ.

ಮೂಡಬಿದ್ರೆ

ಜೀವದಯಾಷ್ಟಮಿ

ಇಲ್ಲಿ ಜೀವದಯಾಷ್ಟಮಿ ಉತ್ಸವದ ಸಂಬಂಧ ತಾ ೬ರಲ್ಲಿ ಪಣಪಿಲು ಅರಮನೆ ಶ್ರೀ ಶ್ರೀವರ್ಮ ಶೆಟ್ರ ಮೂಲಕ ಮೂಡಬಿದ್ರೆಯಲ್ಲಿ ಬಡವರಿಗೆ ಅಕ್ಕಿ ಹಂಚೋಣವಾಯಿತು. ತಾ. ೭ರಲ್ಲಿ ಜೀವದಯಾಷ್ಟಮಿ ದಿನವಾದ್ದರಿಂದ ಸುತ್ತುಮುತ್ತಲಿನ ಸುಮಾರು ಮೂರು ಸಾವಿರ ಜೈನಬಂಧುಗಳು ಇಲ್ಲಿಯ ಬಸದಿಗಳ ದರ್ಶನಾರ್ಥವಾಗಿ ಬಂದಿದ್ದರು. ಹೊಸ ಬಸದಿ ಮತ್ತು ಗುರುಬಸದಿಯಲ್ಲಿ ಪೂಜೆ ನಡೆಯಿತು. ಶ್ರೀ ಶ್ರೀವರ್ಮ ಶೆಟ್ರು ಸೌ। ದೇಜಮ್ಮನವರೂ ಆಗಂತುಕರಿಗೆ ಸಮಾರಾಧನೆ ನಡೆಯಿಸಿದರು. ಶ್ರೀ ಶಾಂತಿರಾಜ ಶಾಸ್ತ್ರಿಗಳು ಬರೆದ 'ಸ್ತ್ರೀಕರದರ್ಪಣ' ಪುಸ್ತಕವನ್ನು ಶಾಸ್ತ್ರದಾನವಾಗಿ ಹಂಚಲಾಯಿತು. ಹೊಸ ಬಸದಿಯಲ್ಲಿ ಇಲ್ಲಿಯ ಚಾರುಕೀರ್ತಿ ಕನ್ಯಾ ಪಾಠಶಾಲೆಯ ವಿದ್ಯಾರ್ಥಿನಿಯರು ಶ್ರೀಮತಿ ಪಣಪಿಲು ಕಮಲಾವತಿ ಅಮ್ಮನವರ ಅಧ್ಯಕ್ಷತೆಯಲ್ಲಿ ಸಭೆ ಜರಗಿಸಿ ಧಾರ್ಮಿಕ ಸಂಭಾಷಣೆ_ಉಪದೇಶ ಆಯಿತು. ಶ್ರೀ ವರ್ಧಮಾನ ಹೆಗ್ಗಡೆಯವರು ಈ ದಿನದ ಮಹತ್ವ ದೇವ ಭಕ್ತಿಯ ಮಹಿಮೆ ಮತ್ತು 'ಸ್ತ್ರೀಕರದರ್ಪಣ' ಪುಸ್ತಕದ ಮುಖ್ಯ ಮಾತು ಇವನ್ನು ತುಳು ಭಾಷೆಯಲ್ಲಿ ವಿವರಿಸಿ ಹೇಳಿದರು.

ಸ್ವದೇಶ ಸಮಾಚಾರ

ನಾಲ್ವರು ಭಾರತೀಯರಿಗೆ ಫಾಶಿ!

ಮಲಯದ ನಿವಾಸಿಗಳಾಗಿದ್ದ ನಾಲ್ವರು ಭಾರತೀಯರನ್ನು ಹಿಡಿದು ಅವರು ಜಪಾನಿನ ಗುಪ್ತಚಾರರಾಗಿ ಕೆಲಸಮಾಡುತ್ತಾರೆಂದು ಅವರನ್ನು ಗಲ್ಲಿಗೇರಿಸಲಾಯಿತೆಂದು ಹೊಸ ದಿಲ್ಲಿಯಿಂದ ಸುದ್ದಿ ಬಂದಿದೆ.

ಮಹಾತ್ಮರ ಬಿಡುಗಡೆ?

ಗುಜರಾಥಿನ ರಾಜಕೀಯ ಕೈದಿಗಳಲ್ಲಿ ಅನೇಕರ ಬಿಡುಗಡೆ ಈಗಾಗಲೇ ಆಗಿದೆ. ಉಳಿದವರನ್ನು ಇದೇ ಅಕ್ಟೋಬರ ಮಧ್ಯದಲ್ಲಿ ಬಿಡುಗಡೆ ಮಾಡಲಾಗುವುದೆಂದು ತಿಳಿದು ಬರುತ್ತದೆ. ಮುಂದಿನ ವೈಸರಾಯ್ ವೇವೆಲರು ಬಂದನಂತರ ಮಹಾತ್ಮಾ ಗಾಂಧಿ ಮತ್ತು ವರ್ಕಿಂಗ್ ಕಮಿಟಿ ಸದಸ್ಯರನ್ನು ಬಿಡುವ ಬಗ್ಗೆ ವಿಚಾರ ಮಾಡಲಾಗುವುದೆಂದು ಸುದ್ದಿಯಿದೆ

ಶ್ರೀ. ಜೆ. ಸಿ. ಕುಮಾರಪ್ಪ

ನವರು ತಮ್ಮ ಮೇಲಿನ ಕ್ರಿಮಿನಲ್ ವ್ಯವಹರಣೆಯ ಸಂಬಂಧ ವಾರ್ಧಾದ ಮ್ಯಾಜಿಸ್ಟ್ರೇಟರಾದ ಶ್ರೀ ಬಿ. ವಿ ಪಟವರ್ಧನರ ಕೋರ್ಟಿನ ಮುಂದೆ ಕೊಟ್ಟ ಹೇಳಿಕೆಯಲ್ಲಿ ಆಕ್ಷೇಪಕರವಾದ ವಿಷಯಗಳು ಇವೆ ಎಂದೂ ಅದನ್ನು ಅದರ ಸಾರಾಂಶ, ಭಾಷಾಂತರಗಳನ್ನೂ ಪ್ರಕಟಿಸಬಾರದೆಂದೂ ಮಧ್ಯಪ್ರಾಂತದ ಸರಕಾರ ಬಹಿಷ್ಕರಿಸಿದೆ.

NOTICE

In the Court of the District Munsif of Mangalore.

O. S. 349/1943.

Between -

Kalwai, Laxminarayana Bhatta—*Plff,*

and

Thappa Shetty & others-*Defts*

To all the Defendants.

(1) Thappa Shetty (2) Ittamma Hengsu (3) Sesu Hengsu (4) Monappa Shetty (5) Muthu Hengsu Defendants are the children of late Maire Hengsu, land holders. The 2nd and 3rd reside in Bajpe village, The 1st Deft. in Perlamane Kannure village, 4th Deft. in Poddodi Guthu, Kenjar village, the 5th Deft. in Agarimane of Surthkal village; all of Mangalore Taluk.

Sirs,

Please take notice that the above named Plaintiff has filed the above suit against the above Defendants. The said suit stands posted to 25-10-43 for your appearance. Therefore you should appear in person or by a vakil before the said Court on the said date at 11 A. M and file your written statement; failing which the suit will be decided in your absence.

(By order of the Court)

Mangalore } B. S. Achar,
7-10-1943 } Vakil for plaintiff

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಲೂಯಿಸ್ ಮೆಂಡ್ರೀಸ್ ... ... ವಾದಿ,

ಮತ್ತು

ಜೋನ್ ಸಿಕೇರ ... ... ಪ್ರತಿವಾದಿ.

ಮಂಗಳೂರು ತಾಲ್ಲೂಕು ಕದ್ರಿ ಗ್ರಾಮದ ಬೋಳೂರು ಬೈಲಲ್ಲಿಯಿರುವ ದುಜಾರಿ ಸಿಕೇರರ ಮಗ್ಗ ಮೇಲೆ ಹೆಸರು ಕಾಣ್ಸಿದ ಪ್ರತಿವಾದಿ ಜೋನ್ ಸಿಕೇರರು ವಾದಿಗೆ 26-2-1942ರಲ್ಲಿ ರೂ. 200/-ಕ್ಕೆ ಬರಕೊಟ್ಟ ಅಡವಿನ ಹಣಗಳಾಗಿ ವಾದಿಯು ಮಾಡಿದ ಮೇಲಿನ ದಾವೆಯು ತಾ. 21-10-43ಕ್ಕೆ ಇಟ್ಟಿದೆ. ಸದ್ರಿ ಪ್ರತಿವಾದಿಗೆ ನಾದರೂ ಆಕ್ಷೇಪಿಸುವದಿದ್ದರೆ ಸದ್ರಿ ತಾರೀಕಿನ ಪೂರ್ವಾಹ್ನ 10½ ಘಂಟೆಗೆ ಕೋರ್ಟಿನ ಮುಂದೆ ಹಾಜರಾಗಿ ಹೇಳಿಕೊಳ್ಳದಿದ್ದಲ್ಲಿ ಸದ್ರಿ ದಾವೆಯು ಆತನ ಗೈರು ಹಾಜ್ರಿಯಲ್ಲಿ ತೀರ್ಮಾನಿಸಲ್ಪಡುವದೆಂದು ಈ ಮೂಲಕ ತಿಳಿಸಲಾಗಿದೆ.

ಮಂಗಳೂರು } K. R. Achar
9-10-43 } ವಾದಿಯ ವಕೀಲ್.

NOTICE

In the Court of the Dt. Munsif of Mangalore, S. K.

O. S. 382/1943.

S S Puranik— *Plaintiff.*

and

S. Paramasivan— *Defendant.*

To the defendant S. Paramasivan, Auditor, Shanthi Bhavan, Chalapuram, Calicut.

Take notice that the above named plaintiff has filed the above suit for the reliefs mentioned in the plaint therein and that the said suit is posted for trial to 30-10-1943. If you do not appear on the said date the same will be decided in your absence.

B. O.

Mangalore, } **S. Venkat Rao,**
14-10-1943 } Vakil for plaintiff.

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ

S. C. 159/43.

E J. Pharias— ವಾದಿ

ಎದ್ರಿ

ಸೋಫಿಯಾ ಮತ್ಯಾಸ್ ಬ್ಯಾ ಕೂಡಾ—

ಪ್ರತಿವಾದಿರು

L. Rs of D 2:—Defts. 3, 4, 5

3 Mary Tauro Bai alias Pinto widow of Anthony Pinto 4. Leorress Pinto, 5. Alpi Pinto, son of Anthony Pinto, residing in Attavar Mangalore, Mangalore Taluk.

ರಿಗೆ

ಮೋಟಿಗೇಜ ವ್ಯವಹಾರದ ತೀರ್ಪ ಕೂಡಾ ರೂ. 35-10-1ಕ್ಕೆ ವ ಕೋರ್ಟಿನ ಖರ್ಚಿನ ಒಟ್ಟಿಗೆ ಕೂಡಾ ವಾದಿಯು ಮಾಡಿದ ಮೇಲಿನ ದಾವೆಯು ತಾ. 4-11-43ಕ್ಕೆ ಇಟ್ಟಿರುವುದರಿಂದ ಆ ಕುರಿತು ನಿಮಗೇನಾದರೂ ಆಕ್ಷೇಪಣೆಗಳಿದ್ದರೆ ನೀವು ಆ ದಿನ ಬೆಳಿಗ್ಗೆ ಗಂಟೆ 10ಕ್ಕೆ ಈ ಕೋರ್ಟಿನ ಮುಂದೆ ಹಾಜರಾಗಿ ಹೇಳದಿದ್ದರೆ ನಿಮ್ಮನ್ನು ಏಕಪಕ್ಷ ಮಾಡಿ ತೀರ್ಮಾನಿಸಲಾದೀತೆಂತ ಈ ಮೂಲಕ ತಿಳಿಸಲಾಗುತ್ತದೆ.

ಪುತ್ತೂರು } (Sd) H Pundarik Bhat,
4-10-43. } Pleader for plff.

ಜಿಲ್ಲಾ ಸಮಾಚಾರಗಳು

ಮಂಗಳೂರು

ಮುನ್ಸಿಪಾಲಿಟಿ

ತಾ. ೪ರಂದು ಸೇರಿದ ಮುನ್ಸಿಪಾಲಿಟಿ ಸಭೆಯಲ್ಲಿ, ಆನೆಕಾಲು ರೋಗವನ್ನು ನಿವಾರಿಸುವುದು ಹೇಗೆಂಬುದರ ಕುರಿತು ಹೆಲ್ತ್ ಆಫೀಸರರಿಗೆ ಸಲಹೆ ಕೊಡುವುದಕ್ಕಾಗಿ ನೇಮಕವಾಗಿದ್ದ ಸಮಿತಿಯು ಕೊಟ್ಟ ಸೂಚನೆಯನ್ನು ಸಭೆ ಅಂಗೀಕರಿಸಿತು. ಉರ್ವದ ಮಿಚ್ಚಾರ್ಕಾರರ ಛೇಜದ ಕಾರ್ಖಾನೆಯ ಕೆಲವು ದೋಷಗಳ ಫಲವಾಗಿ ಆಸುಪಾಸಿನ ಜನರೆಲ್ಲ ಕೆಟ್ಟ ಗಾಳಿಯನ್ನು ಸೇವಿಸಬೇಕಾಗುತ್ತದೆಂದು ದೂರು ಸಭೆಯ ಮುಂದಿಡಲ್ಪಟ್ಟು ಆ ಕುರಿತು ಪ್ರಾಂತಿಕ ಆರೋಗ್ಯಾಧಿಕಾರಿಗಳಿಂದ ಸೂಚನೆ ಬರುವ ತನಕ ಕಾಯುವುದೆಂದಾಯಿತು. 'ಕಾರ್ಖಾನೆ ನಿಯಮ ಮೀರಿದ್ದರೂ ನಾವು ದುಡುಕಬಾರದು, ಹಿಂದೆಯೂ ಅದೇ ರೀತಿ ಕಾರ್ಖಾನೆ ನಡೆಯುತ್ತಿತ್ತು, ಈಗ ಮಾತ್ರ ಗೊಂದಲವೇಕೆ?' ಎಂದು ಶ್ರೀಗಳಾದ ಮಣೇಲ್ ಮುಕುಂದ ನಾಯಕ್ ಮತ್ತು ರಾಮಚಂದ್ರ ಪೈಗಳು ವಾದಿಸಿದರು. 'ಹಾಗಾದರೆ ದುಡ್ಡಿದ್ದವರೆಲ್ಲ ನಿಯಮ ಮೀರ ಬಹುದೆ?' ಎಂದು ಶ್ರೀ. ಗಂಗಾಧರ ದಾಸರು ಟೀಕಿಸಿದರು. ಈ ವಿಷಯವನ್ನು ಮುಂದುವರಿಸಬೇಕೆಂದೂ, ಇದಕ್ಕೆ ಒಂದು ಸಮಿತಿ ನೇಮಿಸಬೇಕೆಂದೂ ಶ್ರೀ. ಸಿ. ಎಲ್. ಲೋಬೋ ಸೂಚಿಸಿದರು. ಸಮಿತಿಯ ಆವಶ್ಯಕತೆಯಿಲ್ಲವೆಂದು ಶ್ರೀ. ಸುವರ್ಣರ ಅಭಿಪ್ರಾಯವನ್ನೇ ಸಭೆ ಸ್ವೀಕರಿಸಿತು. ಕಲೆಕ್ಟರರ ಖಾಸಗಿ ಸಹಾಯಕ ಅಧಿಕಾರಿಗಳಾಗಿ ನೇಮಿಸಲ್ಪಟ್ಟ ಸಭಾ ಸದಸ್ಯರಾದ ಶ್ರೀ. ಜಿ. ದತ್ತಾತ್ರೇಯ ರಾಯರ ಸ್ಥಾನಕ್ಕೆ ಹೊಸಬರೊಬ್ಬರ ನೇಮಕವಾಗುವ ಸಂಭವವಿರುವುದರಿಂದ, ಖಾಲಿ ಬಿದ್ದಿರುವ ಟೌನ್ ಪ್ಲೇನಿಂಗ್ ಸಮಿತಿಯ ಸ್ಥಾನಕ್ಕೆ ಸದ್ಯ ಇನ್ನೊಂದು ನೇಮಕ ಬೇಡವೆಂದಾಯಿತು. 'ಕಳೆದ ರಾಜಕೀಯ ಗೊಂದಲದಲ್ಲಿ ಏನಾದರೂ ನಷ್ಟವಾಗಿದ್ದರೆ ಪರಿಹಾರ ದ್ರವ್ಯವನ್ನು ಕೊಡುವುದಾಗಿ ಪ್ರಾಂತಿಕ ಸರಕಾರದಿಂದ ಬಂದ ಆಜ್ಞೆ ಓದಲ್ಪಟ್ಟು, ಇತ್ತೀಚೆಗೆ ನಗರದಲ್ಲಿ ಕಳವಾದ ಲಾಟೀನು ಕಂಬಗಳ ಹಾಗೂ ದೀಪಗಳ ನಷ್ಟವನ್ನು ಕೊಡುವಂತೆ ಸರಕಾರವನ್ನು ಕೇಳಿಕೊಳ್ಳಲಾಯಿತು.

ಶ್ರೀಮಂತ ಸಾಹುಕಾರರಿಗೆ ರೇಶನಿಂಗ್ ಕಾರ್ಡುಗಳು?

ಈಗ ಕೆಲದಿನಗಳಿಂದ ಮಂಗಳೂರು ನಗರದಲ್ಲಿ ರೇಶನಿಂಗ್ ಕಾರ್ಡುಗಳನ್ನು ಹಂಚುವ ಕೆಲಸ ನಡೆಯುತ್ತಿದೆ. ಇದೇನೆಂದು ವಿಚಾರಿಸಿದಾಗ ಕೆಲವು ವಿವರಗಳು ತಿಳಿದುಬಂದಿವೆ. ಕಳೆದ ಆಗಸ್ಟ್ ತಿಂಗಳಲ್ಲಿ ಕಲೆಕ್ಟರರು ಒಂದು ಸಭೆ ಕರೆಸಿ ನಗರದಲ್ಲಿ ರೇಶನಿಂಗ್ ಜಾರಿಗೆ ತರುವ ವಿಚಾರ ಮಾತನಾಡಿದರೆಂದೂ ಅದರಲ್ಲಿ ಮೊದಲನೆಯಾಗಿ ತಿಂಗಳಿಗೆ ಸರಾಸರಿ ತಲೆಯೊಂದರ ರೂ. ೪ರ ಸಂಪಾದನೆಯುಳ್ಳವರಿಗೆ ಮೊದಲು ರೇಶನಿಂಗ್ ಕಾರ್ಡು ಕೊಟ್ಟು, ಆ ಮೇಲೆ ಕ್ರಮಪ್ರಕಾರ ರೇಶನಿಂಗ್ ಸರ್ವತ್ರ ಜಾರಿಗೆ ತರುವಂತೆ ಮಾಡಲಾಗುವುದೆಂದೂ, ಈ ಕಾರ್ಡು ಕೊಟ್ಟವರಿಗೆ ನಿಯಂತ್ರಿತ ದರದಲ್ಲಿ ಅಕ್ಕಿ ಒದಗಿಸಲಾಗುವುದೆಂದೂ ತಿಳಿದುಬಂದಿದೆ. ಆದರೆ ಈಗ ಈ ಕಾರ್ಡುಗಳು ಬಡವರಿಗೆ ಸಿಗುವುದರ ಬದಲು ಶ್ರೀಮಂತರಿಗೆ, ಸಾಹುಕಾರರಿಗೆ, ವಕೀಲರಿಗೆ ದೊರಕಿದೆ. ಎಷ್ಟೋ ಮಂದಿ, ಸಾವಿರಾರು ಮಂದಿ ಬಡವರಿಗೆ ಇದರ ಪ್ರಯೋಜನವೇ ದೊರಕಲಿಲ್ಲ. ಹೀಗಾದರೆ ಇದರಿಂದ ಸರಕಾರವು ಏನು ಪ್ರಯೋಜನ ಮಾಡಿದ ಹಾಗಾಯಿತು? ಈ ಕಾರ್ಡು ಹಂಚುವ ಕ್ರಮ ಸರಿಯಾಗಿ ನಡೆದಿಲ್ಲವೆಂದು ದೂರು ಬಂದಿದೆ. ಇದನ್ನು ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಗಮನಕ್ಕೆ ತಂದುಕೊಂಡು ಪ್ರಮಾದದಿಂದ ಹಂಚಲಾದ ಕಾರ್ಡುಗಳನ್ನು ಹಿಂತೆಗೆದುಕೊಳ್ಳಬೇಕು. ನ್ಯಾಯವಾಗಿ ಕೊಡಬೇಕಾದವರಿಗೆ ಕಾರ್ಡುಗಳು ಸಿಗುವಂತೆ ಮಾಡಬೇಕು. ಇದಕ್ಕೆ ಸರಿಯಾಗಿ ಜನಗಣತಿ, ಉತ್ಪತ್ತಿ ಲೆಕ್ಕಾಚಾರಗಳೆಲ್ಲ ನಡೆಯಬೇಕು. ಇದರಿಂದ ಬಡವರಿಗೇ ಮೊದಲು ಪ್ರಯೋಜನ ದೊರೆಯುವಂತೆ ಆಗಲಿ ಎಂದು ಹಾರೈಕೆ. (ಬಾತ್ಮಿ.)

ಜಿಲ್ಲಾ ಬೋರ್ಡು ಸಭೆ

ತಾ. ೧೩ರಂದು ಶ್ರೀ. ಕಯ್ಯಾರು ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಸೇರಿ, ಹೊಸ ಸದಸ್ಯರು ಶ್ರೀಗಳಾದ ಶ್ರೀ. ಸಿ. ಎಲ್. ಲೋಬೋ, ಬಂಟ್ವಾಳ ಕರಿಯಪ್ಪ ಭಂಡಾರಿ, ಎ. ಸಿ. ಚಾತುಕುಟ್ಟಿ ನಾಯರ್, ಕೆ. ಶಂಕರ, ರಾಮಯ ನಾಯಕ್, ಬೋಳ ವಾಸುದೇವ ರಾವ್, ಬಿ. ಸಿ. ರೇಗೋ, ಕೃಷ್ಣಶೆಟ್ಟಿ ಇವರು ರಾಜಭಕ್ತಿ ಪ್ರದರ್ಶನ ಮಾಡಿದರು. ಶ್ರೀಮತಿ ಸುಶೀಲಾ ಟ್ಯಾಪ್ಪೆಯವರ ಅಕಾಲ ನಿಧನಕ್ಕೆ ಸಂತಾಪ ಸೂಚಿಸಿ ಠರಾವು ಅಧ್ಯಕ್ಷರಿಂದ ಹೇಳಲ್ಪಟ್ಟ ಮೇಲೆ ಎಲ್ಲರೂ ಎದ್ದು ನಿಂತು ಶಾಂತಿಪ್ರಾರ್ಥನೆ ಮಾಡಿ ಐದು ನಿಮಿಷ ಸಭಾ ಕಾರ್ಯ ಮುಂದುವರಿಸಲ್ಪಟ್ಟಿತು. ಉಪಾಧ್ಯಕ್ಷ ಶ್ರೀ. ಮಹಾಲಿಂಗ ಶೆಟ್ಟರು ತನಗೆ ಬಂಗ್ಲೆ ಧರ್ಮಾರ್ಥ ಉಳಕೊಳ್ಳಲು ಕೊಡಬೇಕೆಂದು ಬರೆದ ಪತ್ರವು ಚರ್ಚಿಸಿ ತಿರಸ್ಕೃತವಾಯಿತು. ವಾರ್ ಫ್ರಂಟಿನ ಉಪನ್ಯಾಸಕಿಯರಿಬ್ಬರು (ಶ್ರೀಮತಿ ಪಾರ್ವತಿ ಮತ್ತು ಶ್ರೀಮತಿ ರಾಧಾ) ತಮಗೆ ಒಂದು ವಾರದ ವರೆಗೆ ಉಳಕೊಳ್ಳಲು ಬಂಗ್ಲೆ ಕೊಡಬೇಕೆಂದು ಮಾಡಿಕೊಂಡ ವಿನಂತಿಯ ವಿಚಾರ ಅಧ್ಯಕ್ಷರು ವಿವರಿಸಿ ಚರ್ಚೆಯಾಗಿ ಮತತೆಗೆದು ತಿರಸ್ಕೃತವಾಯಿತು. ಕೊಟ್ಟರೆ ಸಾರ್ವಜನಿಕ ಕೆಲಸಮಾಡುವ ಎಲ್ಲಾ ಮಹಿಳೆಯರಿಗೂ ಕೊಡಬೇಕಾಗುತ್ತದೆಂದು ಡಾ। ಪಿ. ಜಿ. ಆಚಾರ್ಯರು ವಾದಿಸಿದರು. ಉಪಾಧ್ಯಾಯರ ನೇಮಕ ವಿಷಯ ಜಾಹೀರಾತು ಮಾಡಬೇಕಾಗಿರುವುದರಿಂದ, ಆ ಖರ್ಚು ಕೊಡಿಸುವರೆ ಅರ್ಜಿಮಾಡುವವರು ಅರ್ಜಿಯೊಡನೆ ಫೀಸು ಕಟ್ಟಬೇಕೆಂದು ಸರಕಾರದಿಂದ ಬಂದ ಸೂಚನೆಯನ್ನು ಬೋರ್ಡು ಒಪ್ಪಿತು. ಮದ್ರಾಸು ವಿಜಿಲೆನ್ಸ್ ಕಮಿಟಿಯವರು ಸಹಾಯ ದ್ರವ್ಯ ಕೇಳಿದ್ದಕ್ಕೆ ತಿರಸ್ಕಾರ ಸೂಚಿಸಿ, ಕಾಸರಗೋಡು 'ಅಕ್ಕಿ ಫಂಡಿನ'ವರಿಗೆ ಸಹಾಯ ದ್ರವ್ಯ ಕೊಡಲಾಯಿತು. ಜಿಲ್ಲೆಯಲ್ಲಿ ಕೊಲೆರಾ ಇನ್ನೂ ಇದೆಯೆಂದೂ, ಆಹಾರಾಭಾವದಿಂದ ಕೊಲೆರಾ ಉಂಟಾದ ಕೇಸುಗಳೂ ಗಮನಕ್ಕೆ ಬಂದಿದೆಯೆಂದೂ ಹೇಳಲಾಯಿತು. ಬಜೆಟ್ ಕಮಿಟಿಗೆ ಶ್ರೀಗಳಾದ ಜತ್ತಪ್ಪ ರೈ, ನಾಗಪ್ಪಯ್ಯ, ಖಾನ್ ಬಹದ್ದೂರ್ ಚಪ್ಪಾಡ್ ಸಾಹೇಬ್, ಚಾತುಕುಟ್ಟಿ ನಾಯರ್, ಸಿ. ಎಲ್. ಲೋಬೋ, ರಘುಚಂದ್ರ ಬಲ್ಲಾಳ, ಮೀರ್ ಹೈದರ್ ಸಾಹೇಬ್, ಡಾ। ಅಡ್ಯಂತಾಯ, ಬಿ. ಕೃಷ್ಣಯ್ಯ ಹೆಗ್ಡೆ, ಜಿ. ಸಿ. ರೇಗೋ, ಸರ್ವೋತ್ತಮ ಪೈ ಮತ್ತು ಕೃಷ್ಣರಾಯ ಕೊಡ್ಗಿಯವರನ್ನು ಸದಸ್ಯರಾಗಿ ಆರಿಸಲಾಯಿತು.

ಬಿಡುಗಡೆ

ಮಂಗಳೂರಿನ ರಾಜಕೀಯ ಕೈದಿಗಳಾದ ಶ್ರೀಗಳಾದ ಉಪೇಂದ್ರ ನಾಯಕ್, ನಾರಾಯಣ ಶೆಟ್ಟಿ, ಮಹಾಬಲೇಶ್ವರ ಭಟ್ಟ, ಮಹಾಬಲ ಹೆಗ್ಡೆ, ಆನಂದ ರೈ, ಲೋಹಿದಾಸ, ಸಂಕಪ್ಪ ಶೆಟ್ಟಿ, ಗಂಗಯ್ಯ, ಐತಪ್ಪ ಶೆಟ್ಟಿ, ಹರಿಹರ ನಾಯಕ್, ಮಾಧವ ನಾಯಕ್, ತಿಮ್ಮಪ್ಪ ಮಲ್ಲಿ, ವಿಟ್ಠಲ ಶೆಣೈ, ಅನಂತ ಭಟ್ಟ ಮತ್ತು ನಾರಾಯಣ ಶೆಟ್ಟಿ ಇವರು ಆಲಿಪುರಂ ಕೇಂಪ್ ಜೈಲಿನಿಂದ ತಾ. ೨೭ರಂದು ಬಿಡುಗಡೆಯಾಗಿ ಊರಿಗೆ ಬಂದಿರುವರು.

೩ ವರ್ಷ ಶಿಕ್ಷೆ

ಆಗಸ್ಟ್ ತಿಂಗಳಲ್ಲಿ ಸೆರೆಹಿಡಿದ ಶ್ರೀ. ವರದರಾಯ ಪ್ರಭುಗಳಿಗೆ ೩ ವರ್ಷಗಳ ಕಠಿಣ ಶಿಕ್ಷೆ ವಿಧಿಸಿರುವರೆಂದು ಕೇಳುತ್ತೇವೆ.

ಎಡ್ವೈಜರರಿಗೆ ತಂತಿ

ಈ ಜಿಲ್ಲೆಯ ಭೂಮಾಲಕ ಸಂಘದವರೂ ಬಂಟರ ಯಾನೆ ನಾಡವ ಸಂಘದವರೂ ಬತ್ತದ ಹೊಸ ಬೆಳೆಯನ್ನು 'ರಿಕ್ವಿಸಿಶನ್' ಮಾಡುವ ಕುರಿತು ಆಕ್ಷೇಪಿಸಿಯೂ, ಆ ಸೂಚನೆಯನ್ನು ಜಾರಿಗೆ ತರಬಾರದೆಂದು ಪ್ರಾರ್ಥಿಸಿಯೂ, ಈ ಕ್ಷೇತ್ರವನ್ನು ಸಂದರ್ಶಿಸಬೇಕೆಂದು ಅಪೇಕ್ಷಿಸಿಯೂ ಮದ್ರಾಸ್ ಗವರ್ನರರ ಎಡ್ವೈಜರರಿಗೆ ತಂತಿ ಕೊಟ್ಟಿರುವರು.

ದಸರಾ

ಉತ್ಸವವು ಫೆಡರಲ್ ಹಿಂದೂ ಸ್ಕೂಲ್ ಬೋರ್ಡು ಮತ್ತು ವಿವೇಕಾನಂದ ಸಭೆಗಳ ಆಶ್ರಯದಲ್ಲಿ ವಿವಿಧ ಕಾರ್ಯಕ್ರಮಗಳಿಂದ ಕೆನರಾ ಹೈಸ್ಕೂಲಿನಲ್ಲಿ ನೆರವೇರಿತು. ಪ್ರತಿದಿನ ಭಾಷಣ, ಕೀರ್ತನೆ, ಸಂಗೀತಗಳಿದ್ದವು. ಶ್ರೀಗಳಾದ ಪ್ರಹ್ಲಾದ ಹೆಗ್ಡೆ, ಎಸ್. ಮುಕುಂದ ರಾವ್, ಎನ್. ಎ. ಉಪಾಧ್ಯಾಯ, ಎಸ್. ಕೃಷ್ಣ ಭಟ್ಟ, ಕೆ. ಬಾಲಕೃಷ್ಣರಾವ್ ಮತ್ತು ಶ್ರೀಮತಿ ಆನಂದಿಬಾಯಿ ಇವರು ಭಾಷಣಗಳನ್ನಿತ್ತರು. ಶ್ರೀ. ವೆಂಕಟ್ರಾಯರ ಹರಿಕಥೆ, ಶ್ರೀ. ಬಾಳಿಗರ ಸಂಗೀತಗಳಿದ್ದವು. ನಾಟಕಾಭಿನಯವು ನಡೆಯಿತು.

ಕದ್ರಿಯ 'ಬಾಲ ನಾಟಕ ಸಭೆ'ಯವರೂ ದಸರಾ ದಿನವನ್ನು ಶ್ರೀ. ಕೆ. ಎಸ್. ಅಡಿಗರ ಅಧ್ಯಕ್ಷತೆಯಲ್ಲಿ ಜರಗಿಸಿದರು. ಶ್ರೀಗಳಾದ ಪಿ. ರಾಮರಾವ್, ಎನ್. ರಾಘವೇಂದ್ರರಾವ್, ಮೊದಲಾದವರ ಭಾಷಣಗಳಿದ್ದುವು. ನಾಟಕಾಭಿನಯವೂ ಇತ್ತು.

ಬ್ರಹ್ಮ ಸಮಾಜ

ದ ವಾರ್ಷಿಕೋತ್ಸವವು ತಾ. ೩ರಿಂದ ಆರಂಭವಾಗಿ ಪ್ರತಿದಿನ ಭಾಷಣಗಳಿದ್ದುವು. ರಾ। ಇ. ಸುಬ್ಬು ಕೃಷ್ಣಯ್ಯರು ಪ್ರಧಾನ ಭಾಷಣಕರ್ತರಾಗಿದ್ದರು.

ವಿದ್ಯಾರ್ಥಿ ಸಂಘ

ಮಂಗಳೂರಿನ ಕಾರ್ನಾಡ್ ಸದಾಶಿವರಾವ್ ರೋಡಿನಲ್ಲಿರುವ ಒಂದು ವಿದ್ಯಾರ್ಥಿ ಸಂಘದ ಸಭೆ ಸೇರಿ ಇದರ ಜನರಲ್ ಸೆಕ್ರೆಟರಿ ಶ್ರೀ. ಎಸ್. ಜಿ. ನಾಯ್ಕರ ರಾಜಿನಾಮೆ ಸ್ವೀಕರಿಸಿ, ಆ ಸ್ಥಾನದಲ್ಲಿ ಶ್ರೀ. ಮಾಧವನ್ ನಾಯರರನ್ನು ಆರಿಸಿತು. ಶ್ರೀ. ಸಿ. ಆರ್. ದಾಸ್ ಇವರು ಕಲ್ಚರಲ್ ಸೆಕ್ರೆಟರಿಗಳಾದರು.

ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಳನ ಮಂಗಳೂರು

ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಪರಿಷತ್ತೊಂದನ್ನು, ಬರುವ ದಶಂಬರದ ಕೊನೆಯ ವಾರದೊಳಗೆ ಅಥವಾ ೧೯೪೫ ಜನವರಿಯ ಪ್ರಥಮದ ವಾರದಲ್ಲಿ ಮಂಗಳೂರಲ್ಲಿ ಜರಗಿಸಲು ದ. ಕ. ಜಿಲ್ಲಾ ಪತ್ರಿಕೋದ್ಯೋಗಿ ಸಂಘವು ನಿರ್ಧರಿಸಿದೆ.

ಅಖಿಲ ಕರ್ನಾಟಕದ ಪತ್ರಿಕೋದ್ಯೋಗಿಗಳೊಳಗೆ ಪರಸ್ಪರ ಸಂಪರ್ಕವಿರುವಂತೆ ಮಾಡುವುದು; ಅವರೊಳಗೆ ಐಕ್ಯ, ಅನ್ಯೋನ್ಯ ಸಹಕಾರ, ಸೌಹಾರ್ದಗಳನ್ನು ಹುಟ್ಟಿಸಿ, ಪತ್ರಿಕೋದ್ಯಮದ ಅನುದಿನದ ಪ್ರಶ್ನೆಗಳನ್ನು ಅವರು ಸಾಮೂಹಿಕವಾಗಿ ಇದಿರಿಸಿ, ಕನ್ನಡ ಪತ್ರಿಕೋದ್ಯಮದ ಶೀಘ್ರ ಮತ್ತು ಪೂರ್ಣ ಅಭಿವೃದ್ಧಿಗೆ ಪ್ರಯತ್ನಿಸುವಂತೆ ಮಾಡುವುದು; ಅದಕ್ಕಾಗಿ ಸಾಧ್ಯವಿದ್ದರೆ, ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಸಂಘವನ್ನು ರಚಿಸುವುದು;—ಇವು ಸಮ್ಮೇಳನದ ಉದ್ದೇಶಗಳು.

ಕರ್ನಾಟಕದಲ್ಲಿರುವ ಎಲ್ಲಾ ಪತ್ರಿಕೋದ್ಯೋಗಿ ಸಂಘಗಳೂ (ಮೈಸೂರು ಸಂಸ್ಥಾನವೂ ಸೇರಿ) ದೈನಿಕ, ಸಾಪ್ತಾಹಿಕ, ಮಾಸಿಕ ಮತ್ತಿತರ ಕನ್ನಡ ಪತ್ರಿಕೆಗಳೂ ತಮ್ಮ ಪ್ರತಿನಿಧಿಗಳನ್ನು ಸಮ್ಮೇಳನಕ್ಕೆ ಕಳುಹಿಸಬೇಕು. ಪ್ರಾತಿನಿಧ್ಯದ ಹಣವಾಗಿ ಒಂದು ರೂಪಾಯಿಯನ್ನು ಪ್ರತಿನಿಧಿಗಳು ತರಬೇಕು; ಅವರ ವಸತಿ ಮತ್ತು ಊಟದ ಏರ್ಪಾಡನ್ನು ಉಚಿತವಾಗಿ ಮಾಡಲಾಗುವುದು.

ಸಮ್ಮೇಳನವನ್ನು ಜರಗಿಸುವ ಮತ್ತು ಪ್ರತಿನಿಧಿಗಳನ್ನು ಸ್ವಾಗತಿಸುವ ವ್ಯವಸ್ಥೆಯನ್ನು ಮಾಡುವುದಕ್ಕಾಗಿ ಒಂದು ಸ್ವಾಗತ ಸಮಿತಿಯನ್ನು ಜಿಲ್ಲಾ ಪತ್ರಿಕೋದ್ಯೋಗಿ ಸಂಘವು ರಚಿಸಿದೆ. ಕೆಳಗೆ ಕಾಣಿಸಿದ ಮಾನನೀಯರ ಹೆಸರುಗಳನ್ನೊಳಗೊಂಡ ಕಾರ್ಯನಿರ್ವಾಹಕ ಸಮಿತಿಯನ್ನು ಅಕ್ಟೋಬರ ತಾ ೬ರಂದು ಸ್ವಾಗತ ಸಮಿತಿಯು ಆರಿಸಿರುವುದು. ಶ್ರೀ ವಿ. ಎಸ್. ಕುಡ್ವ (ಸ್ವಾಗತಾಧ್ಯಕ್ಷರು;) ಶ್ರೀಯುತರು ಕೆ. ಆರ್. ಆಚಾರ್, ರಾವ್ ಸಾಹೇಬ್ ಎ. ಎಲ್. ಪಿಂಟೋ, ಕೆ. ಹೊನ್ನಯ್ಯ ಶೆಟ್ಟಿ ಮತ್ತು ಎಚ್. ಭೀಮರಾವ್ (ಉಪಾಧ್ಯಕ್ಷರು;) ಶ್ರೀ. ಉಡುಪಿ ಗೋವಿಂದ ರಾವ್ (ಕೋಶಾಧಿಕಾರಿ;) ಶ್ರೀಯುತರು ಕಯ್ಯಾರ ಕಿಂಞಣ್ಣ ರೈ, ಶಿ. ರಾ. ಕುಳುಕುಂದ ಮತ್ತು ತಿರುಮಲೇಶ್ವರ ಭಟ್ (ಕಾರ್ಯದರ್ಶಿಯರು) ಶ್ರೀಯುತರು ಎ. ಬಿ. ಶೆಟ್ಟಿ, ಪಿ. ರಾ. ಮಲ್ಯ, (ಡಾ) ಎಸ್. ಪಿ. ಭಟ್, ಎ. ಎಸ್. ಕಾಮತ್, ಕಡೆಂಗೋಡ್ಲು ಶಂಕರ ಭಟ್, ಕುಡ್ಪಿ ವಾಸುದೇವ ಶೆಣೈ, ಮಂಗಳೂರು ಜಾರಪ್ಪ, ಎಂ. ಎಸ್. ಮಾಧವ ರಾವ್, ಜೆ. ವಾಮನ ಭಟ್, ಕಾಪು ವಾಮನ ಶೆಣೈ, ಟಿ. ಆರ್. ಎ. ಪೈ, ಬಂಟ್ವಾಳ ನಾರಾಯಣ ನಾಯಕ್, ಬೋಳಾರ ವಿಠ್ಠಲ ರಾವ್, ಕೆ. ಕೃಷ್ಣರಾವ್, ಪಿ. ಕೇಶವ ಕಾಮತ್, ಬಿ. ವಿ. ಬಾಳಿಗ, ಮತ್ತು ಎಸ್. ಮುಕುಂದ ರಾವ್ (ಕಾರ್ಯನಿರ್ವಾಹಕ ಸಮಿತಿಯ ಸದಸ್ಯರು) ಜಿಲ್ಲೆಯಲ್ಲಿರುವ ಎಲ್ಲಾ ಪತ್ರಿಕೋದ್ಯೋಗಿಗಳೂ ಪತ್ರಿಕೋದ್ಯಮದಲ್ಲಿ ಆಸಕ್ತಿ ಸಹಾನುಭೂತಿಗಳಿರುವ ಇತರ ಎಲ್ಲಾ ಮಹನೀಯರೂ ರೂ ೧೦ ಇಲ್ಲವೆ ಅದಕ್ಕಿಂತ ಹೆಚ್ಚು, ರೂ ೫ ಅಥವಾ ರೂ ೩ ಹೀಗೆ ಫೀ ತೆತ್ತು ಸ್ವಾಗತ ಸಮಿತಿಯ ಸದಸ್ಯರಾಗಬಹುದು. ದಕ್ಷಿಣ ಕನ್ನಡದ ಎಲ್ಲಾ ಪತ್ರಿಕೋದ್ಯೋಗಿಗಳೂ ಪತ್ರಿಕೋದ್ಯೋಗದ ಪ್ರಾಧಾನ್ಯವನ್ನು ಮನಗಾಣುವ ಇತರ ಎಲ್ಲಾ ಮಾನನೀಯರೂ ಸ್ವಾಗತ ಸಮಿತಿಯ ಸದಸ್ಯರಾಗಬೇಕೆಂದು ವಿನಂತಿ.

ಅಖಿಲ ಕರ್ನಾಟಕ ಪತ್ರಿಕೋದ್ಯೋಗಿಗಳ ಸಂಘವು ಇಲ್ಲದ ಕಾರಣ, ಸಮ್ಮೇಳನದ ಅಧ್ಯಕ್ಷರನ್ನು ಆರಿಸುವ ಭಾರವು, ಜಿಲ್ಲಾ ಪತ್ರಿಕೋದ್ಯೋಗಿ ಸಂಘದ ಮೇಲೆಯೇ ಬಿದ್ದಿದೆ. ಸ್ವಾಗತ ಸಮಿತಿಯ ಕಾರ್ಯನಿರ್ವಾಹಕ ಮಂಡಲದವರೂ ಜಿಲ್ಲಾ ಪತ್ರಿಕೋದ್ಯೋಗಿ ಸಂಘದವರೂ ಜತೆಯಾಗಿಯೇ ಅಧ್ಯಕ್ಷರನ್ನು ಗೊತ್ತುಪಡಿಸುವರು. ಅಧ್ಯಕ್ಷರು ಒಬ್ಬ ಪ್ರಖ್ಯಾತ ಪತ್ರಿಕೋದ್ಯೋಗಿಯಾಗಿದ್ದು, ಕನ್ನಡ ನಾಡಿನ ಎಲ್ಲಾ ಪತ್ರಿಕೋದ್ಯೋಗಿಗಳಿಗೂ ಮೆಚ್ಚುಗೆಯಾಗುವಂತೆ, ಅವಶ್ಯವಿರುವ ಎಚ್ಚರಿಕೆಯನ್ನು ಆಯ್ಕೆಯ ಸಮಯದಲ್ಲಿ ತೆಗೆದುಕೊಳ್ಳಲಾಗುವುದು.

ಸಮ್ಮೇಳನವು ಜರಗುವ ನಿಶ್ಚಿತ ದಿನ ಮತ್ತು ಅಧ್ಯಕ್ಷರ ಆಯ್ಕೆ—ಈ ಕುರಿತಾದ ಪ್ರಕಟನಾ ಪತ್ರಗಳು ಕ್ರಮಶಃ ಹೊರಬೀಳುವುವು. ತಮ್ಮ ಸಹಕಾರವನ್ನಿತ್ತು, ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಪರಿಷತ್ತನ್ನು ಯಶಸ್ವಿಗೊಳಿಸಬೇಕೆಂದು ಕನ್ನಡ ನಾಡಿನ ಎಲ್ಲಾ ಪತ್ರಿಕೋದ್ಯೋಗಿಗಳಿಗೆ ವಿನಂತಿ ಮಾಡುತ್ತೇವೆ ಎಂದು ಸ್ವಾಗತ ಸಮಿತಿ ಅಧ್ಯಕ್ಷ, ಶ್ರೀ ವಿ. ಎಸ್. ಕುಡ್ವ, ಇವರು ಪ್ರಕಟಿಸುತ್ತಾರೆ.

ಅ. ಕ. ಪತ್ರಿಕೋದ್ಯೋಗಿ ಸಮ್ಮೇಳನ

ಈ ವರ್ಷಾಂತ್ಯದೊಳಗೆ ಇಲ್ಲವೆ ೧೯೪೫ ಜನವರಿಯ ಆರಂಭದಲ್ಲಿ ಮಂಗಳೂರಲ್ಲಿ ಜರಗಲಿರುವ ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಳನದ ಸ್ವಾಗತ ಸಮಿತಿಯ ಆಯ್ಕೆಯು ಪೂರ್ಣವಾಗಿರುವುದು. ಅನಾರೋಗ್ಯದ ನಿಮಿತ್ತ ಅನನುಕೂಲತೆಯನ್ನು ಸೂಚಿಸಿದ ಶ್ರೀ ಡಿ. ಪುಟ್ಟಸ್ವಾಮಿ ಅವರ ಸ್ಥಾನದಲ್ಲಿ 'ನವಭಾರತ' ಪತ್ರಿಕೆಯ ಸಂಪಾದಕರಾದ ಶ್ರೀ ವಿ. ಎಸ್. ಕುಡ್ವರು ಸ್ವಾಗತಾಧ್ಯಕ್ಷರಾಗಿ ಆರಿಸಲ್ಪಟ್ಟಿರುವರು.

ರಾಜಕೀಯ ಕೈದಿಗಳಿಗೆ ಕನ್ನಡ ಪತ್ರಿಕೆಗಳನ್ನು ಕೊಡಬೇಕು

ಜಿಲ್ಲಾ ಪತ್ರಿಕೋದ್ಯೋಗಿಗಳ ಸಂಘದ ಕಾರ್ಯಕಾರಿ ಸಮಿತಿಯ ಸಭೆಯು ಈ ದಿನ ಸಂಜೆ ಉಪಾಧ್ಯಕ್ಷರಾದ ಶ್ರೀ ಕಯ್ಯಾರ ಕಿಂಞಣ್ಣ ರೈ ಅವರ ಅಧ್ಯಕ್ಷತೆಯಲ್ಲಿ ಜರಗಿ, ಶ್ರೀ ರಮಾನಂದ ಛಟರ್ಜಿ ಅವರ ನಿಧನದಲ್ಲಿ ಸಂತಾಪವನ್ನು ವ್ಯಕ್ತಪಡಿಸಿತು. ಅಲಹಾಬಾದ್ ನ್ಯಾಯಸ್ಥಾನದವರು ಹೊರಿಸಿದ ಆಕ್ಷೇಪದ ವಿಷಯದಲ್ಲಿ ಜಯಶೀಲರಾದುದಕ್ಕಾಗಿ ಭಾರತದ ಹಿರಿಯ ಪತ್ರಿಕೋದ್ಯೋಗಿ ಶ್ರೀ ಬಿ. ಜೆ. ಹಾರ್ನಿಮನರನ್ನು ಅಭಿನಂದಿಸುವ, ಒಬ್ಬ ಐ. ಸಿ. ಎಸ್. ಅಧಿಕಾರಿಯ ರಾಜಿನಾಮೆಯ ಕುರಿತು ವಾರ್ತೆ ಕಳುಹಿದವನ ಹೆಸರು ವಿಳಾಸ ತಿಳಿಸಬೇಕೆಂದು 'ಹಿತವಾದ' ಪತ್ರಿಕೆಯ ಮೇಲೆ ಆಜ್ಞೆ ಹೊರಿಸಿದ ಮಧ್ಯಪ್ರಾಂತ ಸರಕಾರದ ವರ್ತನೆಯನ್ನು ಖಂಡಿಸುವ ಮತ್ತು ಆ ಆಜ್ಞೆಯನ್ನು ಒಡನೆಯೇ ಹಿಂತೆಗೆದುಕೊಳ್ಳಬೇಕೆಂದು ಸೂಚಿಸುವ ನಿರ್ಣಯಗಳಾದುವು. ಈ ಪ್ರಾಂತದಲ್ಲಿ ರಾಜಕೀಯ ಕೈದಿಗಳಿಗೆ ಕೊಡುವ ಪತ್ರಿಕೆಗಳಲ್ಲಿ ಕನ್ನಡ ಪತ್ರಿಕೆಗಳನ್ನೂ ಸೇರಿಸಬೇಕೆಂದು ಸಮಿತಿಯು ಮದ್ರಾಸು ಸರಕಾರವನ್ನು ಕೇಳಿಕೊಂಡಿತು.

ಮಂಗಳೂರು

ಬಿಸೆಂಟ್ ದಿನಾಚರಣೆ

ರಾಷ್ಟ್ರೀಯ ಬಾಲಿಕಾ ಪಾಠಶಾಲೆಯಲ್ಲಿ ತಾ. ೧೪ರಂದು ಬಿಸೆಂಟ್ ದಿನಾಚರಣೆಯೂ ಅದರ ವರ್ಧಂತಿಯೂ ಜಿಲ್ಲಾ ಜಡ್ಜ್ ಶ್ರೀ. ಕೋವನ್ನರ ಅಧ್ಯಕ್ಷತೆಯಿಂದ ನೆರವೇರಿತು. ಡಾ। ಎಂ. ಕೇಶವ ಪೈಗಳು ಬಿಸೆಂಟ್ ಸ್ಮಾರಕ ಭಾಷಣವಿತ್ತರು. ಶ್ರೀ. ಎಂ. ಎಸ್. ಮಾಧವರಾಯರೂ ಮಾತನಾಡಿದರು. ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸುಶೀಲಾ ಚೌಟರು ಶಾಲಾ ವರದಿಯೋದಿದರು. ಶ್ರೀ. ಎಂ. ಎಸ್. ಏಕಾಂಬರರಾಯರು ವಂದನಾರ್ಪಣೆ ಮಾಡಿದರು. ನೃತ್ಯ ಸಂಗೀತ ಮೊದಲಾದ ವಿನೋದಾವಳಿಗಳಿದ್ದುವು.

ಹಿಂದುಸ್ತಾನ್ ಸ್ಕೌಟ್ ದಿನಾಚರಣೆ

ಯು ರಾಷ್ಟ್ರೀಯ ಬಾಲಿಕಾ ಪಾಠಶಾಲೆಯಲ್ಲಿ ಆಚರಿಸಲ್ಪಟ್ಟಿತು. ನಗರದ ಇತರ ಸ್ಕೌಟುಗಳೂ ಇದರಲ್ಲಿ ಭಾಗವಹಿಸಿದ್ದರು. ಎರಡನೆ ದಿನ ಇದರ ಆಶ್ರಯದಲ್ಲಿ ಗಾಂಧಿ ಜಯಂತಿ ಆಚರಿಸಲ್ಪಟ್ಟಿತು. ಶ್ರೀಮತಿ ಸುಶೀಲಾ ಚೌಟ್ ಡಾ। ಕೇಶವ ಪೈ, ಶ್ರೀ. ಎಂ. ವೆಂಕಟೇಶ ಪೈ, ಡಾ। ಸಿ. ಆರ್. ಕಾಮತ್ ಶ್ರೀ ಪಿ. ಕೆ. ನಾರಾಯಣ ಮೊದಲಾದವರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು.

ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮದ ವಾರ್ಷಿಕೋತ್ಸವ

ಅದರ ಕಾರ್ಯಾಲಯದಲ್ಲಿ ಕಳೆದ ತಾ. ೩ರಲ್ಲಿ ಡಾ ಎಂ. ಕೇಶವ ಪೈಗಳ ಅಧ್ಯಕ್ಷತೆಯಲ್ಲಿ ಜರುಗಿತು. ಈ ಆಶ್ರಮದ ಆಡಳಿತೆ ಸಮಿತಿಯ ಕಾರ್ಯದರ್ಶಿ ಶ್ರೀ ಕೆ. ಕೇಶವ ಶೆಣೈ ಅವರು ಈ ಸಂಸ್ಥೆಯ ಗತ ವರ್ಷದ ವರದಿಯನ್ನೋದಿದರು. ಶ್ರೀ ಎಂ. ವಿ. ಶಾಸ್ತ್ರಿಗಳು ಆಯುರ್ವೇದ ಚಿಕಿತ್ಸಾ ಪದ್ಧತಿಯ ಮಹತ್ವದ ಕುರಿತಾಗಿ ಭಾಷಣ ಮಾಡಿದರು. ಅಧ್ಯಕ್ಷರ ಮುಕ್ತಾಯ ಭಾಷಣದೊಂದಿಗೆ ಆಡಳಿತದ ಸಮಿತಿಯ ಸದಸ್ಯರಲ್ಲಿ ಒಬ್ಬರಾದ ಶ್ರೀ ಬಿ ವೈಕುಂಠ ಬಾಳಿಗರು ವಂದನೆಗಳನ್ನು ಸಮರ್ಪಿಸಿದರು

ಇಸ್ಲಾಮಿಯಾ ಕಲ್ಚರ್ ಲೈಬ್ರೆರಿ

ಈ ಪುಸ್ತಕಾಲಯದ ಸಹಾಯಾರ್ಥವಾಗಿ ಮುಸ್ಲಿಂ ತರುಣರು ಈಚೆಗೆ ಗಣಪತಿ ಹೈಸ್ಕೂಲಿನಲ್ಲಿ ವಿವಿಧ ವಿನೋದಾವಳಿಗಳ ಪ್ರಯೋಗವೊಂದನ್ನು ಬೇಗಂ ಕರಮತುಲ್ಲಾ ಅವರ ಅಧ್ಯಕ್ಷತೆಯಲ್ಲಿ ಜರುಗಿಸಿದರು.

ಪೋಸ್ಟ್‌ಮೇನನಿಗೆ ದಂಡನೆ

ಮಂಗಳೂರಿನ ಪೋಸ್ಟ್‌ಮೇನರಲ್ಲಿ ಒಬ್ಬನಾದ ಶಿವಣ್ಣ ಎಂಬಾತನು ತನ್ನ ಕರ್ತವ್ಯಪಾಲನೆಯಲ್ಲಿ ನಂಬಿಕೆ ದ್ರೋಹ ಮತ್ತು ಫೋರ್ಜರಿಗಳನ್ನು ನಡೆಸಿದನೆಂಬ ಆರೋಪದ ಮೊಕದ್ದಮೆ ಇಲ್ಲಿನ ಅಸಿ॥ ಜಡ್ಜರ ಮುಂದೆ ನಡೆದು ಆರೋಪಗಳೆರಡರಲ್ಲಿ ಪ್ರತಿಯೊಂದಕ್ಕೂ ತಲಾ ೧-೧ ವರ್ಷ ಕಠಿನ ಸಜೆ ಏಕಕಾಲದಲ್ಲಿ ಅನುಭವಿಸುವಂತೆ ವಿಧಿಸಲಾಗಿದೆ ಹಾಗೆ ಸಜೆ ಒಟ್ಟು ೧ ವರ್ಷ.

ಗಣಪತಿ ಹೈಸ್ಕೂಲ್ ದಿನಾಚರಣೆ

ಸ್ಥಳೀಯ ಗಣಪತಿ ಹೈಸ್ಕೂಲ್ ದಿನಾಚರಣೆಯೂ ವಿಜಯ ದಶಮಿ ಉತ್ಸವವೂ ಕಳೆದ ಶುಕ್ರವಾರ ಸಂಜೆ ಆ ಶಾಲೆಯಲ್ಲಿ ಜಿಲ್ಲಾ ಜಡ್ಜರಾದ ಶ್ರೀ ಕೋಮಸ್ ಐ. ಸಿ. ಎಸ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಹೆಡ್ಮಾಸ್ಟರ್ ಶ್ರೀ ಎಂ. ಎಸ್. ಏಕಾಂಬರ ರಾವ್ ಅವರು ವರದಿಯೋದಿದರು. ಅಧ್ಯಕ್ಷರ ಭಾಷಣಾನಂತರ ಶ್ರೀ ಎನ್ ರಾಮರಾಯರು ಧನ್ಯವಾದಗಳನ್ನು ಅರ್ಪಿಸಿದರು. ವಿವಿಧ ವಿನೋದಾವಳಿಗಳೂ ಇದ್ದುವು. ಕಳೆದ ಮಂಗಳವಾರ ಈ ಶಾಲೆಯ ಹೆತ್ತವರ ದಿನಾಚರಣೆ ಶ್ರೀ ಯು. ರಾಮರಾಯರ ಅಧ್ಯಕ್ಷತೆಯಲ್ಲಿ, ಬುಧವಾರ ಮಹಿಳೆಯರ ದಿನಾಚರಣೆ ಶ್ರೀಮತಿ ಎಚ್. ಮನೋರಮಾ ಬಾಯಿಯವರ ಅಧ್ಯಕ್ಷತೆಯಲ್ಲಿಯೂ, ಜರುಗಿದುವು. ಕಳೆದ ಗುರುವಾರ ಬೆಳಗ್ಗೆ ಆಟಪಾಟಗಳು ನಡೆದು ಜಿಲ್ಲಾ ಜಡ್ಜರು ಗೆದ್ದವರಿಗೆ ಬಹುಮಾನ ಹಂಚಿದರು. ಅಂದು ಸಂಜೆ ಶಾಲೆಯ ಹಳೇ ವಿದ್ಯಾರ್ಥಿಗಳ ಸಭೆ ಶ್ರೀ ಎಂ. ವೆಂಕಟೇಶ ಪೈಯವರ ಅಧ್ಯಕ್ಷತೆಯಲ್ಲಿ ಜರುಗಿ, ಕಾರ್ಯದರ್ಶಿ ಶ್ರೀ ಎ. ವೆಂಕಪ್ಪಯ್ಯ ಅವರು ಆ ಸಂಘದ ವರದಿಯೊಪ್ಪಿಸಿದರು. ಹೊಸ ಕಾರ್ಯಕಾರಿ ಸಮಿತಿಯ ಚುನಾವಣೆ ನಡೆಯಿತು.

ಎ. ಆರ್. ಪಿ. ಸ್ಪೋರ್ಟ್ಸ್

ತಾ ೧೪ನೇ ಸಂಜೆ ೪ ಗಂಟೆ ಹೊತ್ತಿಗೆ ಸ್ಥಳೀಯ ಪೋಲೀಸ್ ಹಾಕಿ ಗ್ರೌಂಡಿನಲ್ಲಿ ಇಲ್ಲಿಯ ಎ. ಆರ್. ಪಿಯವರ ಆಟಪಾಟಗಳು ಜರಗಿದವು. ಸಿವಿಲ್ ಡಿಫೆನ್ಸ್ ಶಾಖೆಯ ಡೆಪ್ಯುಟಿ ಡೈರೆಕ್ಟರರಾದ ಎಚ್. ಸಿ ಮೆಳ್ ಲಾಫಿನ್ ಎಸ್ಕ್ವಯರ್ ಅವರು ಈ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿದರು. ಬೇಗಂ ಕರಮತುಲ್ಲಾ ಅವರು ಬಹುಮಾನಗಳನ್ನು ಹಂಚಿದರು.

ಶವ ತೇಲುತ್ತಿತ್ತು

ತಾ ೧೯ರ ಮಧ್ಯಾಹ್ನ ಸ್ಥಳೀಯ ಮಹಾಮಾಯಿ ದೇವಸ್ಥಾನದ ಕೆರೆಯಲ್ಲಿ ಸುಮಾರು ೩೦ ವರ್ಷ ಪ್ರಾಯದ ಒಬ್ಬ ಯುವಕನ ಹೆಣ ತೇಲುತ್ತಿದ್ದುದು ಕಂಡು ಬಂದಿದೆ. ಇವನು ಇಲ್ಲಿಯ ತನಿಯ ಎಂಬ ಕೆಲಸದ ಮಾರಾಟಗಾರನ ಮಗನೆಂದೂ ತಿಳಿದು ಬಂದಿದೆ.

ಪಂದ್ಯಾಟ

ಮಂಗಳೂರು ಶ್ರೀ. ರಾಮಕೃಷ್ಣ ವಿದ್ಯಾರ್ಥಿ ಭವನದ ಕ್ರಿಕೆಟ್ ಕ್ಲಬ್‌ನವರಿಗೂ ಇಲ್ಲಿನವರಿಗೂ ಪಂದ್ಯಾಟವಾಗಿ ಕಾರ್ಕಳದವರು ವಿಜಯಿಗಳಾದರು. ಮಂಗಳೂರು ದಳವನ್ನು ಸನ್ಮಾನಿಸಿ ಉಪಹಾರಕೊಟ್ಟಿತು.

ಉಡುಪಿ

ಶ್ರೀ ಸೋದೆ ಮಠಾಧೀಶರು ವೃಂದಾವನಸ್ಥರಾದರು

ಶ್ರೀ ಮದುಡುಪಿಯ ಶ್ರೀ ಸೋದೆ ಮಠಾಧೀಶರಾದ ಶ್ರೀ ವಿಶ್ವೇಂದ್ರತೀರ್ಥ ಶ್ರೀ ಪಾದಂಗಳವರು ಕಳೆದ ತಾ ೮ರಲ್ಲಿ ತಮ್ಮ ೬೩ನೆಯ ವಯಸ್ಸಿನಲ್ಲಿ ಉದಿಯಾವರದ ತಮ್ಮ ಮಠದಲ್ಲಿ ವೃಂದಾವನಸ್ಥರಾದರೆಂದು ತಿಳುಹಲು ತುಂಬ ವಿಷಾದವೆನ್ನಿಸುತ್ತಿದೆ ಶ್ರೀಗಳವರು ಕೆಲ ಕಾಲದಿಂದ ವಾತ ಬಾಧೆಗೆ ತುತ್ತಾಗಿದ್ದರು ಆದರೂ ದೇವಾರಾಧನೆ, ಬ್ರಾಹ್ಮಣ ಸಂತರ್ಪಣೆ, ನಿತ್ಯನೈಮಿತ್ತಿಕಗಳನ್ನು ಕೊನೆ ತನಕವೂ ನಡೆಸುತ್ತ ಬಂದರು ಶ್ರೀಗಳವರು ಅಷ್ಟಮಠದ ಹಿರಿಯ ಶ್ರೀಗಳಲ್ಲಿ ಎರಡನೆಯವರಾಗಿದ್ದು, ಸಂಸ್ಕೃತ ಶಾಸ್ತ್ರ ಪಾಂಡಿತ್ಯದಲ್ಲಿ ಅಗ್ರಗಣ್ಯರಾಗಿದ್ದರು. ಇವರಿಗೆ ಲಲಿತ ಕಲೆಗಳ ಮೇಲಿನ ಅಭಿಮಾನವು ಅಪಾರವಾಗಿತ್ತು.

ಇತ್ತೀಚೆಗೆ ಇನ್ನಂಜೆಯ ಶಾಲೆಯನ್ನು ಹೈಸ್ಕೂಲನ್ನಾಗಿ ಮಾರ್ಪಡಿಸುವಲ್ಲಿ ಅಧಿಕ ವೆಚ್ಚವನ್ನೂ ಅಧಿಕ ಶ್ರಮವನ್ನೂ ನಿರ್ವಹಿಸಿದ ಇದೇ ಶ್ರೀಗಳವರ ವಿದ್ಯಾಭಿಮಾನವು ಈ ಜಿಲ್ಲೆಯಲ್ಲಿ ಈ ಶ್ರೀಗಳವರ ಹೆಸರನ್ನು ಅಜರಾಮರವಾಗಿ ಇರಿಸ ತಕ್ಕದಾಗಿದೆ. ಅಷ್ಟಮಠದ ಶ್ರೀಪಾದಂಗಳವರಲ್ಲಿ ಹೈಸ್ಕೂಲನ್ನು ಸ್ಥಾಪಿಸಿದವರಲ್ಲಿ ಶ್ರೀ ಸೋದೆಯವರೇ ಪ್ರಥಮದವರು, ಅವರು ಈ ವಿಚಾರದಲ್ಲಿ ಇತರ ಮಠಗಳವರಿಗೂ ಆದರ್ಶಪ್ರಾಯರಾಗಿದ್ದಾರೆ, ಕಳೆದ ವಿನಾಯಕ ಚೌತಿಯ ಸಮಯದಲ್ಲಿ ಶ್ರೀಗಳವರು ಶಿಷ್ಯ ಸ್ವೀಕಾರ ಮಾಡಿದ್ದರು. ಇವರು ವೃಂದಾವನಸ್ಥರಾದುದು ಧಾರ್ಮಿಕ ಮಂಡಲಕ್ಕೆ, ವೈಷ್ಣವ ಪ್ರಪಂಚಕ್ಕೆ ತುಂಬಲಾಗದ ದೊಡ್ಡ ನಷ್ಟವಾಗಿದೆ

ದಸರಾ

ಕಾರ್ಯಕ್ರಮವು ಇಲ್ಲಿ ಪರ್ಯಾಯ ಪೀಠಸ್ಥ ಶ್ರೀಮತ್ ವಿದ್ಯಾರತ್ನ ತೀರ್ಥ ಶ್ರೀಪಾದಂಗಳವರ ನೇತೃತ್ವದಲ್ಲಿ ಜರಗಿತು. ಶ್ರೀಹರಿ ಸರ್ವೋತ್ತಮ ದಾಸರ ಕೀರ್ತನೆಗಳಿದ್ದುವು. ನಾಟಕಾಭಿನಯಗಳಿದ್ದವು.

ಫಳ್ನೀರು

ತಾ ೫ರಂದು ಸಂಜೆ ಜಿಲ್ಲಾ ವಿಹಾರ ವಿನೋದದ ಮೂರನೆಯ ಕೇಂದ್ರವು ಡಿಸ್ಟ್ರಿಕ್ಟ್ ಡೆಪ್ಯುಟಿ ಇನಸ್ಪೆಕ್ಟರರಾದ ಶ್ರೀ ಕೆ. ಸಂಜೀವ ಭಟ್ಟರ ಅಧ್ಯಕ್ಷತೆಯಲ್ಲಿ ಜಿಲ್ಲಾ ರೂರಲ್ ರಿಕ್ರಿಯೇಷನ್ ಆಫೀಸರರಾದ ಶ್ರೀ ಕೆ. ಯಂ. ಬಾಳಿಗರವರಿಂದ ಇಲ್ಲಿ ತೆರೆಯಲ್ಪಟ್ಟಿತು. ಶಾಲಾ ಬಾಲಕ ಬಾಲಿಕೆಯರ ಹಾಗೂ ಇತರ ಯುವಕರ ವಿವಿಧ ವಿನೋದಾವಳಿ ಮತ್ತು ಚಟುವಟಿಕೆಗಳು ನೆರವೇರಿದ ಮೇಲೆ ಹದಿನೈದು ಮಂದಿ ಸದಸ್ಯರುಳ್ಳ ಒಂದು ಸಮಿತಿಯು ಸ್ಥಾಪಿಸಲ್ಪಟ್ಟು ಸ್ಥಳೀಕ ಡಾಕ್ಟರ್ ಕುಮಾರನ್ ನಂಬಿಯಾರರು ಅಧ್ಯಕ್ಷರಾಗಿಯೂ ಶ್ರೀಗಳಾದ ದೊಡ್ಡಣ್ಣ ಸೆಟ್ಟಿ ಮತ್ತು ವಿ. ರಾಮದಾಸ ಪ್ರಭುಗಳು ಉಪಾಧ್ಯಕ್ಷರುಗಳಾಗಿಯೂ ಶ್ರೀ ವೈ. ಕಾಳು ಸೆಟ್ಟಿ ಜನರಲ್ ಸೆಕ್ರಿಟರಿಗಳಾಗಿಯೂ ಸರ್ವಾನುಮತದಿಂದ ಚುನಾಯಿಸಲ್ಪಟ್ಟರು.

ಕಾರ್ಕಳ

ದಸರಾ

ಕಾರ್ಯಕ್ರಮವು ಇಲ್ಲಿ ಕರ್ನಾಟಕ ಸಂಘದ ಆಶ್ರಯದಲ್ಲಿ ಆಚರಿಸಲ್ಪಟ್ಟಿತು. ಶ್ರೀಗಳಾದ ಎಂ. ಎಸ್. ಅಧಿಕಾರಿ, ಕಟಪಾಡಿ ಶ್ರೀನಿವಾಸ ಶೆಣೈ, ಬಿ. ಬಾಲಕೃಷ್ಣ ಶೆಟ್ಟಿ, ಯಂ. ರಾಮಚಂದ್ರ ಭಟ್ಟ, ಯು. ಕೃಷ್ಣರಾವ್, ಕೆ. ಎಲ್. ಎನ್. ಉಪಾಧ್ಯಾಯ, ಬಿ. ಸದಾಶಿವರಾವ್, ಪಿ. ವಿ. ಉಪಾಧ್ಯಾಯ, ಕೆ. ಎಲ್. ಕುಡ್ವ, ಮೊದಲಾದವರು ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು

ಪ್ರಮಾಣ ಪತ್ರ ವಿತರಣ

ಕಾರ್ಕಳ ತಾಲೂಕು ರಾಷ್ಟ್ರಭಾಷಾ ಪ್ರಚಾರ ಸಂಘದ ದ್ವಿತೀಯ ಪ್ರಮಾಣ ಪತ್ರ ವಿತರಣೋತ್ಸವವು ತಾ. ೩ರಂದು ಶ್ರೀ ಪಿ ಶೇಷಗಿರಿ ಪ್ರಭುಗಳ ಅಧ್ಯಕ್ಷತೆಯಿಂದ ಜರಗಿತು ಹಲವರು ಸಂದೇಶಗಳನ್ನು ಕಳುಹಿಸಿದ್ದರು. ಹೊರ ಊರಿನಿಂದಲೂ ಅನೇಕ ಮಹನೀಯರು ಬಂದಿದ್ದರು. ಸಂಘದ ಕಾರ್ಯದರ್ಶಿ ಶ್ರೀ. ಕಟಪಾಡಿ ಶ್ರೀನಿವಾಸ ಶೆಣೈಯವರು ವರದಿ ವಾಚನ ಮಾಡಿದರು. ಶ್ರೀ ಬಿ. ರಾಮಕೃಷ್ಣಾಚಾರರು ಭಾಷಣವನ್ನಿತ್ತರು ಶ್ರೀಗಳಾದ ಪಂ। ಮಂಜುನಾಥ, ಕೇಶವ ರಾಮಚಂದ್ರ ಶೆಣೈ, ಇ ಧರ್ಮಪಾಲ, ಕುಮಾರಿ ಗಿರಿಜಾ, ಕೆ. ವೆಂಕಟೇಶ ಪ್ರಭು ಮತ್ತು ಕೃಷ್ಣಾನಂತ ಪೈಗಳು ಭಾಷಣಗಳನ್ನಿತ್ತರು

ಶಂಕುಸ್ಥಾಪನೆ

ಶ್ರೀ ವೆಂಕಟ್ರಮಣ ಹಾಯರ್ ಎಲಿಮೆಂಟರಿ ಶಾಲೆಯ ಮೂರನೇ ಕಟ್ಟಡ ದಿವಂಗತ ಶ್ರೀ. ಕೆ. ಬಿ. ದಾಸಪ್ಪ ಶೆಣೈ ಸ್ಮಾರಕ ಸಭಾ ಭವನದ ಶಂಕುಸ್ಥಾಪನೆ ತಾ ೧ರಂದು ಬೆಳಗ್ಗೆ ಶ್ರೀ ಬಳ್ಕುಂಜೆ ಸುಬ್ಬರಾಯರಿಂದ ವಿಧ್ಯುಕ್ತ ನೆರವೇರಿಸಲ್ಪಟ್ಟಿತು. ಸಂದರ್ಭೋಚಿತ ಭಾಷಣಗಳೂ ಇದ್ದುವು

ತಾ. ೨ರಂದು ಇಲ್ಲಿ ಹಿಂದುಸ್ಥಾನ್ ಸ್ಕೌಟ್ ದಿನಾಚರಣೆಯು ಇತ್ತು. ಧ್ವಜಾರೋಹಣ ಧ್ವಜವಂದನಾದಿಗಳು ನಡೆದವು

ಗಾಂಧಿ ಜಯಂತಿ

ನಿಮಿತ್ತ ಇಲ್ಲಿ ತಾ. ೨ರಂದು ಬಡವರಿಗೆ ಅನ್ನದಾನವಿತ್ತು. ಇದೇ ದಿನ ರಾಷ್ಟ್ರೀಯ ಚರಕಾ ಸಂಘದ ಆಶ್ರಯದಲ್ಲಿ ನೂಲುವ ಸ್ಪರ್ಧೆಯೂ ಶಬರಿ ಆಶ್ರಮದಲ್ಲಿ ಹರಿಜನ ಸಪ್ತಾಹ ಕಾರ್ಯಕ್ರಮಗಳೂ ಇದ್ದುವು.

ಪಂಜ

ಅಕಾಲ ಮರಣ

ಇಲ್ಲಿನ ಜಮೀನ್ದಾರರೂ ಜೋಯಿಸರೂ ಆದ ಶ್ರೀ ಮುಕ್ಕಾಡ ಪರಮೇಶ್ವರ ಜೋಯಿಸರು ವ್ಯವಹಾರದಲ್ಲಿ ನುರಿತವರಿದ್ದು ಲೋಕಹಿತಕ್ಕಾಗಿ ಗ್ರಾಮ ಸಹಕಾರಿ ಸಂಘದಲ್ಲಿ ಸೇವೆ ಮಾಡಿ ಪಂಜಾ ಕೋ ಒಪರೇಟಿವ್ ಸ್ಟೋರ್ಸಿನ ಸ್ಥಾಪನೆಗಾಗಿ ಬಹಳ ಶ್ರಮ ತೆಗೆದುಕೊಂಡು ಡೈರೆಕ್ಟರರಾಗಿಯೂ ಇದ್ದು ತನುಮನ ಧನಗಳಿಂದ ಜನ ಹಿತಕ್ಕಾಗಿ ಪ್ರಯತ್ನಪಡುತ್ತಿದ್ದು ೪ ದಿನಗಳಿಂದ ಶೀತಜ್ವರ ಪೀಡಿತರಾಗಿ ತನ್ನ ಬರೇ ೩೨ನೇ ವರ್ಷ ಪ್ರಾಯದಲ್ಲಿ ಜೀವದಿಂದಿರುವ ತನ್ನ ಹೆತ್ತ ತಾಯಿಗೆ ಮತ್ತು ಪಂಜ ಸೀಮೆ ಜನತೆಗೆ ೧೯-೯-೪೩ನೇ ದಿನ ಬೆಳಿಗೆ ೧೧ ಗಂಟೆಗೆ ದಿವಂಗತರಾಗಿ ಸಂತಾಪವನ್ನುಂಟು ಮಾಡಿದರು. ದಿವಂಗತರ ಆತ್ಮ ಶಾಂತಿ ಸಾಮ್ರಾಜ್ಯದಲ್ಲಿ ಬೆಳಗಲಿ.

ಬದಿಯಡ್ಕ

ಹೈಸ್ಕೂಲ್ ಸ್ಥಾಪನೆಗೆ ಊರವರ ಪ್ರಯತ್ನ

ಇಲ್ಲಿರುವ ಪೆರ್ಡಾಲ ಬೋರ್ಡ್ ಹಯ್ಯರ್ ಎಲಿಮೆಂಟರಿ ಶಾಲೆಯು ದಿನೇ ದಿನೇ ಅಭಿವೃದ್ಧಿ ಹೊಂದುತ್ತಿರುವುದರಿಂದ ಈ ಕೇಂದ್ರ ಸ್ಥಳವು ಹೈಸ್ಕೂಲ್ ಸ್ಥಾಪನೆಗೆ ಯೋಗ್ಯ ಸ್ಥಳವೆಂದು ತಿಳಿದು ಈ ಊರವರು, ಇಲ್ಲಿ ಹೈಸ್ಕೂಲ ಸ್ಥಾಪಿಸುವ ವಿಷಯ ಪ್ರಯತ್ನ ಮಾಡುತ್ತಿದ್ದಾರೆ ಈ ಕುರಿತು ಇದು ಮೊದಲೇ ಜಿಲ್ಲಾ ಬೋರ್ಡಿಗೆ ಊರವರ ವಿನಂತಿ ಶಿಷ್ಟ ಮಂಡಳಗಳು ಹೋಗಿವೆ. ಕಳೆದ ತಿಂಗಳು ತಾ. ೨೪ರಂದು ಇಲ್ಲಿಗೆ ಶಾಲಾ ಸಂದರ್ಶನಕ್ಕೆ ಬಂದಿದ್ದ ಡಿ. ಬಿ. ಇ ಓರಾದ ಶ್ರೀ ಹೊಸಬೆಟ್ಟು ರಾಮರಾಯರೊಡನೆಯೂ ಊರವರು ಈ ವಿನಂತಿ ಮಾಡಿಕೊಂಡಿದ್ದಾರೆ. ಆದಕ್ಕೆ ಅವರು ಬೇಕಾದ ಯೋಗ್ಯ ಸಲಹೆಗಳನ್ನು ಕೊಟ್ಟಿರುವರು.

ತಾ ೪-೧೦-೪೩ರಂದು ಊರ ಪ್ರಮುಖರ ಸಭೆಯೊಂದು ಶ್ರೀ ಕಯ್ಯಾರ ಕಿಞ್ಞಣ್ಣ ರೈಗಳ ಅಧ್ಯಕ್ಷತೆಯಲ್ಲಿ ಸೇರಿ, ಇಲ್ಲಿ ಹೈಸ್ಕೂಲ್ ಸ್ಥಾಪಿಸುವ ಪ್ರಯತ್ನ ಮಾಡುವ ಬಗ್ಗೆ ಒಂದು ತಾತ್ಕಾಲಿಕ ಸಮಿತಿ ರಚಿಸಲ್ಪಟ್ಟಿತು. ಈ ಸಮಿತಿಗೆ ಶ್ರೀ ಕುಳಮರ್ವ? ಕೃಷ್ಣಭಟ್ಟರು (ಅಧ್ಯಕ್ಷರು) ಶ್ರೀಗಳಾದ ಡಾ॥ ಪಿ ಎಸ್. ಶಾಸ್ತ್ರಿ ಮತ್ತು ಎಂ. ರಾಮಕೃಷ್ಣ ರಾಯರು (ಕಾರ್ಯದರ್ಶಿಗಳು) ಆ ದಿನದ ಸಭೆಯಲ್ಲಿ ಶ್ರೀಗಳಾದ ಈ. ಕೃಷ್ಣಭಟ್ಟ, ಡಾ। ಶಾಸ್ತ್ರಿ ಎಂ. ರಾಮಕೃಷ್ಣರಾವ್, ಪಿ. ಅನಂತ ಭಟ್ಟ, ಮಿಂಚಿನಡ್ಕ ಮಹಾಬಲ ಭಟ್ಟ, ಪಿ. ಸುಬ್ರಾಯ ಭಟ್ಟ ಮೊದಲಾದವರು ಭಾಷಣವಿತ್ತರು ಇಲ್ಲಿ ಹೈಸ್ಕೂಲ್ ಆಗಬೇಕೆಂಬ ವಿಚಾರ ಊರವರೆಲ್ಲರೂ ಏಕಾಭಿಪ್ರಾಯವುಳ್ಳವರಾಗಿದ್ದಾರೆ.

ಕೋಟೇಶ್ವರ

ನಾಡಹಬ್ಬ

ಇಲ್ಲಿನ 'ಮಿತ್ರಮಂಡಲಿ'ಯವರು ಕಳೆದ ತಾ ೩ರಂದು 'ನಾಡ ಹಬ್ಬ'ವನ್ನು ಶ್ರೀ ಕೆ. ವಿ. ಪುರಾಣಿಕರ, ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿಸಿದರು ಶ್ರೀ ಜಿ. ಆರ್. ಎಮ್ಮೆಕರು ಶ್ರೀ ಬಿ. ಎಸ್. ಹತ್ವಾರರು ಶ್ರೀ ಎಮ್ ಜಿ. ಭಟ್ಟರು ಮೊದಲಾದವರು ಭಾಗವಹಿಸಿದ್ದರು. ಆ ಮೇಲೆ ಶ್ರೀ ಕೆ. ವಿ ಪುರಾಣಿಕರು 'ನಲ್ಮೆ' ಕಾವ್ಯವನ್ನು ಕುರಿತು ಮಾತನಾಡಿ ಕನ್ನಡದ ಆಧುನಿಕ ಕಾವ್ಯಗಳೊಳಗೆಲ್ಲಾ ಇದೇ ಉತ್ತಮವಾದುದು ಎಂದರು

ಅನಂತರ ಸ್ವಂತ ಕೃತಿ ವಾಚನಗಳಾದುವು. ಶ್ರೀ ಬಿ. ಎಸ್. ಹತ್ವಾರರು ತಮ್ಮ 'ಮಲ್ಲಿಗೆ' ಎಂಬ ಕವಿತೆಯನ್ನು, ಶ್ರೀ ಕೆ ವಿ. ಪುರಾಣಿಕರು ತಮ್ಮ 'ಅಸಮಾನ ತಾಯಿ' ಎಂಬ ಕಥನ ಕವಿತೆಯನ್ನೂ ಶ್ರೀ ಎಸ್. ಆರ್. ಎಮ್ಮೆಕರು ತಮ್ಮ 'ಭಾರತಾಂಬೆ' ಎಂಬ ಗೀತೆಯನ್ನೂ ಹಾಡಿದ ಬಳಿಕ ರಾಷ್ಟ್ರ ಗೀತೆಯೊಂದಿಗೆ ಉತ್ಸವವು ಕೊನೆಗೊಂಡಿತು.

ಬಾರಕೂರು

ಬಂಗಾಳ ಬರಗಾಲ ಪರಿಹಾರನಿಧಿ

ಬಾರಕೂರು ಶ್ರೀ ನವಭಾರತ ವ್ಯಾಯಾಮ ಸಂಘದವರು ಬಾರಕೂರು ಸಾರ್ವಜನಿಕರಿಂದ ಚಂದಾ ಎತ್ತಿ 'ಸಂಯುಕ್ತ ಕರ್ನಾಟಕ' ಪತ್ರಿಕೆ ಹುಬ್ಬಳ್ಳಿಗೆ ಬಂಗಾಳ ನಿಧಿಗಾಗಿ ರೂ ೧೧೬-೧೪-೬ ನ್ನು ಕಳುಹಿಸಿರುತ್ತಾರಾಗಿ ತಿಳಿದುಬರುತ್ತದೆ.

ಬಾರಕೂರಿಗೊಂದು ಹೈಸ್ಕೂಲು

ಊರ ಪ್ರಮುಖರ ಸಭೆಯೊಂದು ಬಾರಕೂರು ಬೋ. ಹಾ. ಎ. ಶಾಲೆಯಲ್ಲಿ ಶ್ರೀ ರೆ. ಫಾ. ಕಸ್ತಲಿನೋರವರ ಅಧ್ಯಕ್ಷತೆಯಲ್ಲಿ ಸೇರಿತು. ಜಿಲ್ಲಾ ಬೋರ್ಡು ಅಪ್ಪಣೆಯಿತ್ತರೆ, ಉತ್ತಮ ಕಟ್ಟಡವೊಂದು, ಮತ್ತು ಫರ್ನಿಚರುಗಳನ್ನು ಊರಿನವರು ಒದಗಿಸಿ ಬೋರ್ಡಿಗೆ ಬಿಟ್ಟುಕೊಡಲು ಸಿದ್ಧವಿರುವರೆಂದೂ, ಅಂದರೆ ಮುಂದೆ ಹೈಸ್ಕೂಲನ್ನು ನಡೆಸಿಕೊಂಡು ಹೋಗಲು ಬೋರ್ಡು ದಯವಿಟ್ಟು ಒಪ್ಪಿದರೆ ಹಾಗೆ ಬೋರ್ಡಿನಿಂದ ಅಪ್ಪಣೆ ಪಡೆಯಲು ಶ್ರೀ ರೆ. ಫಾ. ಕಸ್ತಲಿನೋರವರನ್ನೊಳಗೊಂಡ ೬ ಜನ ಸದಸ್ಯರುಗಳ ಕಮಿಟಿಯೊಂದು ರಚಿತವಾಯಿತೆಂದೂ ತಿಳಿದುಬರು

(1ನೇ ಪುಟದಿಂದ ಮುಂದುವರಿದುದು)

ಜಿಲ್ಲೆಯ ಆಹಾರ ಪರಿಸ್ಥಿತಿ ಕೆಟ್ಟು ಹೋಗಬಾರದು'

...ಲ ಬೆಲೆ ನಿರ್ಣಯಿಸಬೇಕೆಂದು ನನ್ನ ...ನಂತಿ. ಜಿಲ್ಲಾ ಭೂಮಾಲಿಕರೂ ಸಾ...ರಣ ಈ ವಿಚಾರಕ್ಕೆ ಒಪ್ಪಿದ್ದಾರೆ. ಆ...ರೆ ಇತ್ತೀಚೆಗೆ ನೂರು ಮುಡಿಗಿಂತ ಹೆ...ಚ್ಚಿನ ಗೇಣಿಯುವರಿಂದ ಮಾತ್ರ ಅಕ್ಕಿ ರಿ...ಕ್ವಿಸಿಶನ್ ಮಾಡಬೇಕೆಂದು ಜಿಲ್ಲಾ ಅಧಿ...ಕಾರಿಗಳು ಆಜ್ಞೆ ಹೊರಡಿಸಿದ್ದಾಗ ನಾನು ...ಕೇಳುತ್ತೇನೆ. ಹೀಗಾದರೆ ಇದು ಅಪಾ...ಯ. ನಮ್ಮ ಜಿಲ್ಲೆಯಲ್ಲಿ ನೂರು ಮುಡಿ...ಗಿಂತ ಕಡಮೆಯವರೇ ಬಹಳ. ಅವರ ...ಅಕ್ಕಿ ಕಳ್ಳ ಸಂತೆಯಲ್ಲಿ ಎಷ್ಟು ಕ್ರಯಕ್ಕೂ ಮಾರಾಟವಾಗಬಹುದೆಂದಾಯಿತು. ಇ...ದಾಗಕೂಡದು. ವ್ಯಾಪಾರಿಗಳ ಕೈಗೆ ಅಕ್ಕಿ ಭತ್ತ ಹೋಗಕೂಡದು. ಕಳೆದ ವರ್ಷದ ತಪ್ಪು ಪುನರಾವೃತ್ತಿಯಾಗಕೂಡದು' ಎಂದರು. ಶ್ರೀ. ಎ. ಶಂಕರಾಳ್ವ...ರು ಮಾತನಾಡುತ್ತಾ, ಕೂಡಲೇ ಕಲೆಕ್ಟರ...ರಲ್ಲಿಗೆ ಹೋಗಿ ಅವರ ಅಭಿಪ್ರಾಯ ತಿಳ...ಕೊಳ್ಳಬೇಕೆಂದೂ, ಅಕ್ಕಿ ಭತ್ತ ದಳಾಳಿ...ಗಳ ಕೈಗೆ ಹೋಗದಂತೆ ಮಾಡಬೇಕೆಂ...ದೂ, ಅಧಿಕಾರಿಗಳು ನಮ್ಮ ಯಾವುದೇ ಸಲಹೆಗಳನ್ನೂ ಕೇಳದಿದ್ದರೆ, ನೇಮಿತ ಸದಸ್ಯರಾದರೂ, ನಮ್ಮ ಗೌರವ ಕಾಪಾಡಲು ನಾವು ರಾಜಿ ಕೊಡಲೂ ಸಿದ್ಧರಿರುವೆವೆಂದೂ ಹೇಳಿದರು. 'ಅಕ್ಕಿ ಭತ್ತ ವ್ಯಾಪಾರಿಗಳ ಕೈಗೆ ಕೊಡಕೂಡದೆಂಬುದಕ್ಕೆ ನನ್ನ ಒಪ್ಪಿಗೆಯಿದೆ'ಯೆಂದು ಶ್ರೀ. ರಾಮಪ್ಪನವರು ನುಡಿದರು. ಶ್ರೀ. ಶ್ರೀಸ್ಥರೂ ಈ ಸೂಚನೆಗೊಪ್ಪಿ ತನ್ಮಧ್ಯೇ ರಿಕ್ವಿಸಿಶನ್ ಅಕ್ಕಿ ಭತ್ತ ವ್ಯಾಪಾರಿಗಳ ಕೈಗೆ ಹೋಗದಂತೆ ತಡೆವ ಕೆಲಸ ಮಾಡಬೇಕೆಂದರು. ಜಮೀನ್ದಾರರಲ್ಲಿಯೇ ಅಕ್ಕಿ ಇರಬೇಕು' ಎಂದು ಶ್ರೀ. ಜುನೇಲ್ ಮುಕುಂದ ನಾಯ್ಕರೂ ಹೇಳಿದರು. ಶ್ರೀಮತಿ ಅನ್ನಿ ವರಾಂಜಾರೂ ಇದಕ್ಕೊಪ್ಪಿಗೆಯಿತ್ತರು. ...ಮೇಲೆ ಶ್ರೀಗಳಾದ ರಂಗನಾಥ ಪೂಂಜ, ಶಂಕರಾಳ್ವ, ಶ್ರೀಸ್ಥ, ರಾಮಪ್ಪ, ಲೋಬೋ, ಜೇರ್‌ಮೇನ್, ಹಮ್ಮಬ್ಬ, ಶ್ರೀಮತಿ ಅರಾಂಜಾ ಮತ್ತು ಸುವರ್ಣರಿಂದ ಕೂಡಿದ ಒಂದು ಕಮಿಟಿಯಾಗಿ ಅವರು ಕಲೆಕ್ಟರರಲ್ಲಿ ಹೋಗಿ ಅವರ ಯೋಜನೆಯ ವಿವರಣೆ ಬೇಗನೇ ತಿಳಿದು ವರದಿ ಕೊಡುವಂತೆ ನಿರ್ಣಯವಾಯಿತು.

ತಾ. ೧೩ರಂದು ಜಿಲ್ಲಾ ಬೋರ್ಡು ಆಫೀಸಿನಲ್ಲಿ ಅದರ ಸದಸ್ಯರ ಸಭೆಯೊಂದು ಸೇರಿ, ಜಿಲ್ಲೆಯ ಆಹಾರ ಸಮಸ್ಯೆ ವಿಚಾರ ಚರ್ಚಿಸಿ, ಜಿಲ್ಲಾ ಭೂಮಾಲಿಕ ಸಂಘದವರು ಸರಕಾರಕ್ಕೆ ಮಾಡಿಕೊಂಡ ವಿನಂತಿಯನ್ನು ಅನುಮೋದಿಸುವ ಹಾಗೂ ಗವರ್ನರರ ಅಡ್ವೈಸರ್ ಶ್ರೀ ರಾಮಮೂರ್ತಿಯವರನ್ನು ಬೇಗನೇ ಈ ಜಿಲ್ಲೆ ಸಂದರ್ಶಿಸುವಂತೆ ಕೇಳಿಕೊಳ್ಳುವ ಒಂದು ನಿರ್ಣಯ ಮಾಡಿತು. ಆ ದಿನದ ಸಭೆಯಲ್ಲಿ ಶ್ರೀಗಳಾದ ಸಿ. ಎಲ್. ಲೋಬೋ ಇವರು ತಾನು ಸರಕಾರಕ್ಕೆ ಮಾಡಿಕೊಂಡ ವಿನಂತಿ, ಜಿಲ್ಲಾ ಭೂಮಾಲಿಕರ ಸಂಘ ಮಾಡಿದ ವಿನಂತಿ, ಆ ಮೇಲೆ ಕಳುಹಿಸಲಾದ ತಂತಿಗಳ ವಿಷಯ ವಿವರಿಸಿ ಹೇಳಿದರು.

ಪುತ್ತೂರು ದಸರಾ

ಕಾರ್ಯಕ್ರಮವು ಇಲ್ಲಿನ ಹಿಂದೀ ಸಂಸ್ಕೃತ ಪಾಠಶಾಲೆಯ 'ಸರಸ್ವತಿ ಸಮಾಜ'ದವರಿಂದ ಆಚರಿಸಲ್ಪಟ್ಟಿತು. ಶ್ರೀಗಳಾದ ಕೆ. ಕೃಷ್ಣರಾವ್, ಬಿ. ರಾಮಚಂದ್ರ ರಾವ್, ಟಿ. ನಾಗೇಶರಾವ್, ಸಿ. ಎಸ್. ಶಾಸ್ತ್ರಿ, ಕೆ. ರಾ. ಕುಳುಕುಂದ, ಬಿ. ಎನ್. ಜೋಳ್ಳೆ ಮೊದಲಾದವರು ಈ ಕಾರ್ಯಕ್ರಮದ ಭಾಷಣಾದಿಗಳಲ್ಲಿ ಭಾಗವಹಿಸಿದ್ದರು. ಶ್ರೀ. ಕೃಷ್ಣಮಾಚಾರ್ ಕೃತಜ್ಞತೆ ಹೇಳಿದರು. ವಿವಿಧ ವಿನೋದಾವಳಿಗಳೂ ಇದ್ದವು.

THE CANARA BANKING CORPORATION Ltd

(Incorporated in British India with limited liability).

Estd:] Head office: UDIPI [1906.

(Branches & Agencies in all principal cities of India)

Authorised capital	Rs. 25,00,000.
Issued & Subscribed	Rs. 16,00,000.
Paid up Capital	Rs. 10,06,000.
Reserves	Rs. 3,85,000.

Advances are made against approved securities and bills purchased or collected at most favourable rates. For further particulars please apply tothe nearest Branch.

FIRST AND FOREMOST

FIRST AND FOREMOST among the ideals of the CANARA BANK is the ideal of Service to its Customers.

ESTD. 1906.

CANARA BANK LTD.

NOTICE

In the Court of the District Munsif of Karkala (South Kanara.)

O. P. No. 92/1943.

1. Sarvothama Mallia son of Panduranga Mallia, 2. Khejji alias Sridevi wife of the 1st petitioner. Both residing in Marpadi village, Karkal Taluk

Petitioners.

versus

1. Panduranga Mallia son of Sarvothama Mallia C/O P. K. Bhandarkar Kalavar Mansion, Babulnath, Bombay.
2. Upendra Mallia son of Sarvothama Mallia, Marpadi village, Karkal Taluk.
3. Vamana Mallia son of Sarvothama Mallia 29/3 Hazra Road. R. B. Avenue P. O. Calcutta., *Counter Petitioners.*

Whereas the abovenamed petitioners have made application to this Court for issue of a Succession certificate in favour of the 1st petitioner for the amounts due to their son the deceased Vasudeva Mallia and that the said application will be coming on for hearing on the 27th day of October 1943 at 10 A. M. You may appear in this Court either in person or by Pleader duly instructed on the said date and oppose the application failing wherein the said application will be heard and determined in your absence.

(By order of the Court)

Karkala } K. L. Kudva,
4-10-'43 } Pleader for petitioners.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಗೆಯೇ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE **The Joint Booking Office,** KODIALBAIL.

NOTICE

THE BOMBAY LIFE ASSURANCE COMPANY, LTD.

Notice having been given of the loss of Policy No: 4776 & 5375 on the life of late Mr. Manel Ramachandra Nayak duplicate policies will be issued and the claim will be paid unless objection is lodged with us within one month from this date.

Bombay } **Jyotendra L. Mehta,**
1-10-'43 } *Managing Director.*

The Bank of Mangalore Limited, Mangalore.

ESTD: 1931

HEAD OFFICE Mangalore. ***BRANCHES*** Moodabidri & Padubidri.

The Bank Undertakes to Collect Cheques, Demand and Documentary Bills at Most Competitive Rates.

ISSUES DRAFTS ON ALL IMPORTANT TOWNS IN THE DISTRICT

and also on

BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.

at very favourable rates

All kinds of inland banking business undertaken

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ಥ, ಉಷ್ಣದ್ರವ್ಯ, ಕಜ್ಜಿ ಹುಣ್ಣು, ವ್ರಣ ಮೊದಲಾದ ಎಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,

ಬೊಂಬ್ಬಾ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಜೀವವಿಮೆ ಮಾಡುವ ಪ್ರಯೋಜನವು ಇಂದು ಹಿಂದಿಗಿಂತ ಅಧಿಕವಾಗಿದೆ.

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಇದರಲ್ಲಿ ಒಂದು ಪಾಲಿಸಿ ಪಡೆದು

ಈಗಲೇ ನೀವು ನಿಮ್ಮನ್ನು ಮತ್ತು ನಿಮ್ಮನ್ನು ಹೊಂದಿಕೊಂಡಿರುವವರನ್ನು ರಕ್ಷಿಸಿಕೊಳ್ಳಿರಿ!

ಪ್ರತಿನಿಧಿಗಳಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಇನ್ಶೂರ್ ಮಾಡಲು ಅಥವಾ ಮಾಹಿತಿ ತಿಳಕೊಳ್ಳಲು ದಯಮಾಡಿ ಬರೆಯಿರಿ!

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

—: ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ: —

ಬೆಂಗಳೂರು ಬೊಂಬಾಯಿ ಮದ್ರಾಸು ಕಲ್ಲಿಕೋಟೆ ಮಂಗಳೂರು ಮತ್ತು ತ್ರಿವೇಂಡ್ರಂ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವ ವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು:—

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಪೈ, ರಥಬೀದಿ: (3) ದಿ ಕರ್ನಾಟಕ ಸ್ಟಫ್ ವರ್ಕ್ಸ, ರಥಬೀದಿ. (4) ಡಾ| ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೊ:—1. ಮರಾಠ ಗಲ್ಲಿ ಹುಬ್ಬಳ್ಳಿ.
2. 86 ಫ್ಯಾಕ್ಟ್ರೋಪ್ಸ್‌ರೋಡ್, ಟ್ರಿಪ್ಲಿಕೇನ್, ಮದರಾಸು.

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಮೃತ್ಯುಂಜಯ ರಸ.
ಪಂಚವಟ ಮಾತ್ರೆ. ಕೊಲೆರಾ ರೋಗಕ್ಕೆ ಸಿದ್ಧೌಷಧ.

ಸೇವನಾ ಕ್ರಮಗಳು ಔಷಧಿಯೊಡನೆ ಇದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಕು 22—10—1943 [ಸಂಚಿಕೆ 42]

ಲಿನ್‌ಲಿತ್‌ಗೋ ಹೋದರು; ವೇವಲ್ ಬಂದರು

ಆಹಾರ ವ್ಯವಸ್ಥೆ ಬಗ್ಗೆ ಸರಕಾರದ ಸ್ಪಷ್ಟ ಧೋರಣೆ

ಕ್ರಯನಿಯಂತ್ರಣ ಮತ್ತು ರೇಶನಿಂಗ್

ಡಿಲ್ಲಿಯಲ್ಲಿ ಸೇರಿದ ಆಹಾರ ಪರಿಷತ್ತಿನಲ್ಲಿ ಹಿಂದುಸ್ಥಾನ ಸರಕಾರದ ಆಹಾರ ಖಾತೆಯ ಕಾರ್ಯದರ್ಶಿಗಳಾದ ಹಚಿಂಗ್ಸರು ಎಲ್ಲ ಪ್ರಾಂತಗಳಲ್ಲಿ ಮುಖ್ಯ ಆಹಾರ ಪದಾರ್ಥಗಳ ಧಾರಣೆಯನ್ನು ನಿಯಂತ್ರಿಸುವುದು, ನಗರಗಳಲ್ಲಿ ರೇಶನಿಂಗ್ ಸುರುಮಾಡುವುದು ಮತ್ತು ಪ್ರಾಂತಗಳು ಆಹಾರ ಪದಾರ್ಥಗಳನ್ನು ಸಂಪಾದಿಸುವುದು ಈ ಮೂರು ನಿರ್ಣಯಗಳನ್ನು ಸರಕಾರದವರು ಮಾಡಿರುವುದಾಗಿ ಹೇಳಿದರು. ಆಹಾರ ಸಚಿವ ಶ್ರೀ ವಾಸ್ತವರು ಆಹಾರ ಪದಾರ್ಥಗಳನ್ನು ತುಂಬಿದ ಮೊದಲನೆಯ ಹಡಗ ಹೊರಗಿನಿಂದ ಬಂದು ಇದೀಗ ಭಾರತದಲ್ಲಿಳಿದಿರುವುದೆಂದೂ, ಎರಡನೆಯ ಹಡಗವು ಇಷ್ಟರಲ್ಲೇ ಬರುವುದೆಂದೂ ತಿಳಿಸಿರುವರು. ಆಯಾ ಪ್ರಾಂತಗಳಲ್ಲಿ ಮತ್ತು ಸಂಸ್ಥಾನಗಳಲ್ಲಿ ಈಗ ಗೊತ್ತಿರುವಂತೆ ಹೆಚ್ಚಿನ ಆಹಾರ ಪದಾರ್ಥಗಳಿರುವುದನ್ನು ಕೊರತೆ ಬಿದ್ದಿರುವ ಪ್ರಾಂತಗಳಿಗೆ ಸಾಗಿಸುವುದು ಮೊದಲನೆಯ ಯೋಜನೆಯಾಗಿದೆ. ಎರಡನೆಯದು ಆಯಾ ಪ್ರಾಂತಗಳಲ್ಲಿ ಮತ್ತು ಸಂಸ್ಥಾನಗಳಲ್ಲಿ ಹೆಚ್ಚಳವಿದೆಯೋ ಕೊರತೆಯಿದೆಯೋ ಎಂಬುದನ್ನು ನಿರ್ಧರಿಸುವುದಕ್ಕಾಗಿ ಸಮ್ಮತವಾದೊಂದು ಯೋಜನೆ ಅಳವಡಿಸಿ ಅದನ್ನು ಜಾರಿಗೆ ತರುವುದು. ಜನವರಿಯಿಂದ ಈ ಬಗ್ಗೆ ವಿವರಗಳು ಗೊತ್ತಾಗುವವು.

ಕೇಂದ್ರ ಸರಕಾರವು ಆಹಾರ ಪದಾರ್ಥಗಳನ್ನೆಲ್ಲಾ ವಶಪಡಿಸಿಕೊಳ್ಳುವುದು ತತ್ವದ ದೃಷ್ಟಿಯಿಂದ ಸರಿಯಾದರೂ ವ್ಯವಹಾರ ದೃಷ್ಟಿಯಿಂದ ಅದು ಸದ್ಯಕ್ಕೆ ಸರಿಯಾಗದಿರುವುದರಿಂದ ಪ್ರಾಂತಗಳೇ ಆಹಾರ ಪದಾರ್ಥಗಳನ್ನು ಸಂಪಾದಿಸುವವೆಂದೂ ಆದರೆ ಕೇಂದ್ರ ಸರಕಾರವು ಕೆಲ ಬಗೆಯ ನಿಯಂತ್ರಣ ಹಾಕುವರೆಂದೂ, ಕೇಂದ್ರ ಸರಕಾರವು ಎಲ್ಲವನ್ನೂ ತಿಳಕೊಂಡಿರುವುದೆಂದೂ ಪ್ರಾಂತಗಳ ಮುಖ್ಯ ಮುಖ್ಯ ಆಹಾರ ಧಾರಣೆ ನಿಯಂತ್ರಿತವಾಗುವುದೆಂದೂ, ಹಾಗೆಯೇ ರೈತನಿಗೆ ಬೇಕಾದ ಎಲ್ಲಾ ಪದಾರ್ಥಗಳ ಬೆಲೆ ನಿಯಂತ್ರಣವಾಗುವುದೆಂದೂ, ನಗರಗಳಲ್ಲಿ ರೇಶನಿಂಗ್ ಜಾರಿಗೆ ತರುವುದು, ೭೫ ಸಾವಿರ ಮತ್ತು ಅದಕ್ಕಿಂತ ಹೆಚ್ಚು ಜನಸಂಖ್ಯೆ ಇದ್ದ ಸ್ಥಳಗಳಲ್ಲಿ ಕಾರ್ಡು ಪದ್ಧತಿಯ ರೇಶನಿಂಗ್ ಜಾರಿಗೆ ತರಲಾಗುವುದೆಂದೂ ಅವಶ್ಯವಿದ್ದಲ್ಲೆಲ್ಲಾ ಸರಕಾರವೇ ಅಂಗಡಿ ತೆರೆವುದೆಂದೂ ಹೇಳಲಾಗಿದೆ.

'ಕ್ರಿಪ್ಸ್ ಯೋಜನೆಯಂತೆ ನಡೆಯಲು ಬ್ರಿಟನು ಸಿದ್ಧವಿದೆ'

ಆದರೆ ಕಾಂಗ್ರೆಸು ಧೋರಣೆ ಬದಲಾಯಿಸಬೇಕು

ಅಮೆರಿ ಹೇಳಿಕೆ

'ಕ್ರಿಪ್ಸ್ ಯೋಜನೆಯಂತೆ ನಡೆಯಲು ನಾವು ಸದಾ ಸಿದ್ಧರು. ಭಾರತದಲ್ಲಿ ಮಾತ್ರ ಇನ್ನೂ ಒಪ್ಪಂದವಾಗಿಲ್ಲ. ಒಮ್ಮತವಿಲ್ಲ' ಎಂಬುದಾಗಿ ಅಮೆರಿಯವರು ಲಂಡನ್ 'ಸಂಡೇ ಟೈಮ್ಸ್' ಪತ್ರಿಕೆಯ ಸುದ್ದಿಗಾರನೊಡನೆ ಮಾತನಾಡುತ್ತಾ ಹೇಳಿದರು. 'ಭಾರತೀಯರು ೧೯೩೫ನೇ ರಾಜ್ಯಘಟನೆಯನ್ನು ಸ್ವೀಕರಿಸಿ ಕಡೆತನಕ ಕೆಲಸ ಮಾಡಿದ್ದರೆ ಈಗಾಗಲೇ ಭಾರತವು ಬ್ರಿಟಿಷ್ ಸಾಮ್ರಾಜ್ಯದ ಪ್ರಮುಖ ಭಾಗವಾಗುತ್ತಿತ್ತು. ಇನ್ನು ಮುಂದೆ ರಾಜ್ಯಘಟನೆಯಲ್ಲಿ ಭಾಗವಹಿಸಲು ಸಿದ್ಧರಾಗಿದ್ದರೆ ಅವರ ಧೋರಣೆ ಮತ್ತು ಕೃತಿಯನ್ನು ಅವರು ಅಲ್ಲಗಳೆಯಬೇಕು' ಎಂದೂ ಅಮೆರಿಯೆಂದರು. 'ಯುದ್ಧಕಾಲದಲ್ಲಿ ಬಹಿರಂಗ ಬಂಡಾಯವೆಬ್ಬಿಸಲು ಪ್ರಯತ್ನ ಮಾಡುವ ಜನರಿಗೆ ಸೆರೆಮನೆಯೇ ಯೋಗ್ಯ ಸ್ಥಳವೆಂದು ಲಿನ್‌ಲಿತ್‌ಗೋ ನಿಶ್ಚಯಿಸಿದ್ದು ಉಚಿತವಿದೆ. ಶಾಸನಭಂಗ ಮಾಡಿ ಸರಕಾರವನ್ನುರುಳಿಸಲು ಯತ್ನಿಸುವವರಿಗೆ, ಅನ್ಯೋನ್ಯ ಒಪ್ಪಂದ ಮಾಡಿಕೊಳ್ಳಲೂ ಸರಕಾರ ಆಸ್ಪದ ಕೊಡುವುದು ಸಾಧ್ಯವೇ? ಇನ್ನು ಮುಂದೆ ಅವರನ್ನು ಬಿಡಬೇಕಾದರೆ ಅವರು ತಮ್ಮ ಹಿಂದಿನ ಕೆಲಸಗಳಿಗೆ ಕ್ಷಮೆಬೇಡಬೇಕು' ಎಂದು ಅಮೆರಿ ರಾಗವೆಳೆದರು.

ಭಾರತದಲ್ಲಿ ಜಪಾನರ ಪಂಚಮದಳ ಚಟುವಟಿಕೆ

ಎರಡು ಹೊಸ ಆರ್ಡಿನೆನ್ಸ್

ಸಂರಕ್ಷಣ ಸೈನ್ಯದಲ್ಲಿರುವ ಜಪಾನರ ರಾಜನಿಷ್ಠೆಗೆ ವ್ಯತ್ಯಯ ತರಲು ಹಾಗೂ ವೈರಿಗಳಿಗೆ ಸಹಾಯ ಮಾಡಲು ಪ್ರಯತ್ನಿಸುವವರನ್ನು ದಂಡಿಸಲು ಭಾರತ ಸರಕಾರ ಎರಡು ಹೊಸ ಆರ್ಡಿನೆನ್ಸು ಹೊರಡಿಸಿದೆ. ಇವು ವಿಶೇಷತಃ ವೈರಿ ಹಸ್ತಗತ ಬರ್ಮಾ ದೇಶದ ಸುತ್ತುಮುತ್ತಲಿನ ಜನರನ್ನುದ್ದೇಶಿಸಿವೆ. ಪಂಚಮದಳದ ಚಟುವಟಿಕೆ ಮಾಡುವವರಿಗೆ ಫಾಶಿ ಶಿಕ್ಷೆ ಅಥವಾ ಆಮರಣ ಕಾರಾಗೃಹವಾಸ ವಿಧಿಸುವ ಅಧಿಕಾರ ಕೊಡಲ್ಪಡುವುದಲ್ಲದೆ, ಸೈನಿಕರನ್ನು ಅವರ ಕರ್ತವ್ಯ ಪರಾಙ್ಮುಖರಾಗಿ ಮಾಡುವಂಥಾ ಲೇಖನ ಪ್ರಕಟಿಸುವವರಿಗೆ ಆಮರಣ ಬಂಧನ ಇಲ್ಲವೇ ೧೦ ವರ್ಷ ಶಿಕ್ಷೆ ಹಾಗೂ ದಂಡ ವಿಧಿಸಲಾಗುವುದು.

ಇನ್ನೊಂದು ಹೊಸ ಆರ್ಡಿನೆನ್ಸು

'ಯಾವನೊಬ್ಬನು ಯಾವುದೇ ವಿಧ್ವಂಸಕ ಚಟುವಟಿಕೆ ಕೈಕೊಂಡರೆ, ಇಲ್ಲವೆ ಏನೂ ಕಾರಣವಿಲ್ಲದೆ ಶಾಸನ ವಿರುದ್ಧವಾಗಿ ಯಾವುದೇ ರೀತಿಯಿಂದ ವಿಧ್ವಂಸಕ ವಿಷಯುಗಳ ಬಗ್ಗೆ ಮಾತನಾಡಿದರೆ ಅಥವಾ ಅದನ್ನು ಮುದ್ರಿಸಿದರೆ, ಪ್ರಸಿದ್ಧಿಸಿದರೆ, ಹಂಚಿದರೆ ಅದವಾ ಪ್ರಚಾರ ಮಾಡಿದರೆ ಅವನಿಗೆ ಆಮರಣ ಶಿಕ್ಷೆ ವಿಧಿಸಬಹುದು ಅಥವಾ ೧೦ ವರ್ಷ ಶಿಕ್ಷೆ ವಿಧಿಸಬಹುದು ಮತ್ತು ದಂಡಕ್ಕೂ ಅವನು ಪಾತ್ರನಾಗುವನು. ಯಾವನೊಬ್ಬನ ಹತ್ತಿರ ಇಂಥಾ ವಿಧ್ವಂಸಕ ಚಟುವಟಿಕೆಗಳ ಯಾವುದೊಂದು ಪ್ರಕಟಣೆ ಮುಂತಾದ್ದು ಸಿಕ್ಕಿದರೂ ಅವನಿಗೆ ೧೦ ವರ್ಷ ಶಿಕ್ಷೆ ಮತ್ತು ದಂಡ ವಿಧಿಸಲಾಗುವುದು' ಎಂದು ಕೇಂದ್ರ ಸರಕಾರದ ಪ್ರಕಟಣೆ ಸಾರುತ್ತದೆ.

ಲಿನ್‌ಲಿತ್‌ಗೋ ಪ್ರಯಾಣ

ಹಿಂದಿನ ವೈಸರಾಯ್ ಲಿನ್‌ಲಿತ್‌ಗೋರವರ ಸಪರಿವಾರ ಡಿಲ್ಲಿಯಿಂದ ಹೊರಟು ಸ್ವದೇಶಕ್ಕೆ ಮರಳಿದರು. ಹೊರಟುಹೋಗುವ ಸಮಯ ಲೇಡಿ ಲಿನ್‌ಲಿತ್‌ಗೋರವರು ಒಂದು ಲಕ್ಷ ರೂಪಾಯಿ ನಿಧಿಯೊಂದನ್ನು ಸೈನ್ಯದಲ್ಲಿ ಹೋರಾಡಿ ಮಡಿದ ಸೈನಿಕರ ಹೆಣ್ಮಕ್ಕಳ ವಿದ್ಯಾರ್ಥಿ ವೇತನ ನಿಧಿಗಾಗಿ ಕೊಟ್ಟು ಹೋಗಿದ್ದಾರೆ.

ವೇವಲರು ಬಂದಿಳಿದರು.

ಭಾರತದ ಮುಂದಿನ ವೈಸರಾಯ್ ವೇವಲರು ಭಾರತಕ್ಕೆ ಬಂದಿಳಿದರು. ಅವರ ಆಗಮನವು ಸಾರ್ವಜನಿಕವಿರಲಿಲ್ಲ. ತೋಪುಗಳ ಗರ್ಜನೆ ಮಾತ್ರ ನಡೆಯಿತಲ್ಲದೆ ಯಾವ ಸಮಾರಂಭವೂ ನಡೆದಿಲ್ಲ. ವೇವಲರೊಡನೆ ಅವರ ಪತ್ನಿ, ಮಗಳು ಮತ್ತು ಖಾಸಗಿ ಕಾರ್ಯದರ್ಶಿ ಇಷ್ಟು ಮಂದಿ ಇಳಿದರು. ಹಿಂದೆ ಇಲ್ಲಿದ್ದಾಗ ಖಾಕಿ ಮಿಲಿಟರಿ ವೇಷದಲ್ಲಿದ್ದ ವೈಸರಾಯರು ಇದೇ ಮೊದಲನೆಯ ಸಲ ಸೂಟು ಹ್ಯಾಟುಗಳಲ್ಲಿ ಬಂದಿಳಿದರು.

ಬ್ರಿಟನಿನ ನೀತಿಯಿಂದಲೇ ಭಾರತದ ದುಸ್ಥಿತಿ

ಬ್ರಿಟನ್ ಟ್ರೇಡ್ ಯೂನಿಯನ್ ಮುಖಂಡರ ಹೇಳಿಕೆ

'ಭಾರತದಲ್ಲಿಂದು ಉಂಟಾದ ಬರಗಾಲ ಮಾನವ ನಿರ್ಮಿತವಾದದ್ದು. ಇದಕ್ಕೆಲ್ಲಾ ಮುಖ್ಯವಾಗಿ ಸರಕಾರವು ಜನತೆಯ ಸಹಕಾರ ಪಡೆಯದಿರುವುದೇ ಕಾರಣ. ಭಾರತದ ಗಡಿಯಲ್ಲಿ ಶಕ್ತಿಯುತನಾದ ಶತ್ರುವು ಕಾದು ನಿಂತಿರುವನು. ಫೇಸಿಸಮ್ಮನ್ನೆದುರಿಸಲು ಜನರಿಗೆ ಆಸ್ಪದವಿಲ್ಲವಾಗಿದೆ. ಬ್ರಿಟನಿನ, ರಶ್ಯದ, ಚೀನದ ಪ್ರಜೆಗಳು ಭಾರತದ ಕುರಿತು ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ಭಾರತದಲ್ಲಿ ನಾವು ಅನುಸರಿಸುತ್ತಿರುವ ನೀತಿಯು ಅನ್ಯಾಯವಾದುದು. ಇದರಿಂದಲೇ ಬ್ರಿಟನಿಗೂ ಭಾರತಕ್ಕೂ ಅಪಾಯವನ್ನುಂಟುಮಾಡುವ ರಾಜಕೀಯ ಬಿಕ್ಕಟ್ಟು ಭಾರತದಲ್ಲುಂಟಾದದ್ದು. ಬ್ರಿಟಿಷ್ ಸರಕಾರವು ಅಮೆರಿ ನೀತಿಯನ್ನು ಕೂಡಲೇ ಬದಲಾಯಿಸಿ, ಭಾರತದ ಮುಖಂಡರನ್ನೆಲ್ಲಾ ಬಿಡುಗಡೆ ಮಾಡಬೇಕು. ಭಾರತಕ್ಕೆ ಆಹಾರ ಮತ್ತು ವೈದ್ಯ ಸಹಾಯಗಳನ್ನು ಬ್ರಿಟನು ಕಳುಹಿಸಬೇಕು. ಭಾರತದಲ್ಲಿ ದೊಡ್ಡ ಬದಲಾವಣೆಯಾಗುವ ಕಾರ್ಯಕ್ರಮ ಕೈಕೊಳ್ಳಬೇಕೆಂದು ಬ್ರಿಟನಿನ ಜನತೆ ಹಾರೈಸುತ್ತದೆ' ಎಂದು ಬ್ರಿಟನಿನ ಟ್ರೇಡ್ ಯೂನಿಯನ್ ಮುಖಂಡರಾದ ವಿಲಿಯಂ ಡೊಬ್ಬಿಯವರು ಲಂಡನಿನ ಸಭೆಯೊಂದರಲ್ಲಿ ಹೇಳಿದರು.

ಸರಕಾರಕ್ಕೆ

ಜಿಲ್ಲಾ ಭೂಮಾಲಿಕರ ವಿನಂತಿ.

'ಪೂರ್ಣ ರೇಶನಿಂಗ್ ಮಾಡಿರಿ'

'ವ್ಯಾಪಾರಿಗಳ ಕೈಗೆ ಕೊಡಬೇಡಿ'

'ಜಿಲ್ಲಾಧಿಕಾರಿಗಳು ನಮ್ಮ ಸೂಚನೆ ಕೇಳುತ್ತ ವಕ್ತದಲ್ಲಿ ಈ ಜಿಲ್ಲೆಯ ಭೂಮಾಲಿಕರು ನಮ್ಮ ಬೆಂಬಲ ಕೊಡುತ್ತೇವೆ. ಅವಲ್ಲದಿದ್ದರೆ ಗೊಂದಲ ಮಾತ್ರ ಉಂಟಾದೀತು. ಈಗ ಜಿಲ್ಲಾ ಅಧಿಕಾರಿಗಳು ಇತ್ತ ಆಜ್ಞೆ, ರೆವೆನ್ಯೂ ಇಲಾಖೆಯವರಿಗೆ ಅಪರಿಮಿತ ಅಧಿಕಾರ ಕೊಡುತ್ತದೆ. ಇದರಿಂದ ಲಂಚ ಖೋರತನ ಸುರುವಾಗಿ, ರೆವೆನ್ಯೂ ಅಧಿಕಾರಿಗಳು ಲಂಚಕ್ಕೆ ಕೈಹಾಕಿ ಹಣಗಳಿಸುತ್ತಿದ್ದಾರೆಂದ್ದು ತಿಳಿದು ಬಂದಿದೆ. ಜನರು ಇದನ್ನು ಹೇಳಲು ಅಂಜುತ್ತಾರೆ; ಡಿಫೆನ್ಸ್ ಕಾನೂನು ಇರುವುದರಿಂದ. ಆದರೆ ಸರಕಾರವು ಅಧಿಕಾರಿಗಳ ಲಂಚ ಖೋರತನದ ವಿರುದ್ಧ ಚಳವಳವನ್ನು ಪ್ರಾರಂಭ ಮಾಡಬೇಕು. ಇದು ಸರಕಾರದ ಒಳ್ಳೆಯ ಹೆಸರು ಉಳಿಸಲೂ ಅವಶ್ಯ. ಇಲ್ಲದಿದ್ದರೆ, ಸರಕಾರೀ ನೌಕರರು ಮಾಡುವ ಪ್ರತಿಯೊಂದು ಅನ್ಯಾಯವನ್ನೂ ಸರಕಾರವೇ ಮಾಡುತ್ತದೆಯೆಂದು ಜನರು ತಿಳಕೊಂಡಾರು' ಹೀಗೆಂದು ಮದ್ರಾಸ್ ಸರ್ಕಾರದ ಮಾಜಿ ಪಾರ್ಲಿಮೆಂಟರಿ ಸೆಕ್ರೆಟರಿಗಳಾದ ಶ್ರೀ. ಎ ಬಿ. ಶೆಟ್ಟರು ತಾ ೧೮ರಂದು ಸಂಜೆ ಕಲೆಕ್ಟರರ ಆಫೀಸಿನ, ಬೆಂಚ್ ಕೋರ್ಟ್ ಹಾಲಿನಲ್ಲಿ, ಮದ್ರಾಸ್ ಸರಕಾರದ ಎಡಿಶನಲ್ ಡಿಪ್ಯುಟಿ ಕಮಿಶನರ್ ಓಫ್ ಸಿವಿಲ್ ಸಪ್ಲೈಸ್ ರಾವ್ ರಾವ್ ಸಾಹೇಬ್ ಆರ್. ಸಿ. ರಾಥೋಡ ಮುಂದೆ, ಜಿಲ್ಲಾ ಭೂಮಾಲಿಕರ ಸಂಘದ ಪರವಾಗಿ, ಮನವಿ ಮುಂದಿಸಿ ಭಾಷಣ ಮಾಡುತ್ತಾ ಹೇಳಿದರು. ರಾ. ಸಾ. ರಾಥೋಡರವರು, ಮದ್ರಾಸ್ ಸರಕಾರದಿಂದ ಇಲ್ಲಿನ ಆಹಾರ ಪರಿಸ್ಥಿತಿ ಕುರಿತು ಅಭ್ಯಾಸ ಮಾಡುವರೆ ಕಳುಹಿಸಲ್ಪಟ್ಟವರಿದ್ದು, ಅವರು ಇಲ್ಲಿನ ವಿಚಾರಗಳನ್ನೆಲ್ಲಾ ತಿಳಕೊಂಡು ಪ್ರಾಂತಿಕ ಸರಕಾರಕ್ಕೆ ವರದಿ ಮಾಡುವರು

ಶ್ರೀ ಎ. ಬಿ ಶೆಟ್ಟರು, ಭಾಷಣ ಮಾಡುತ್ತಾ, ಕಳೆದ ತಿಂಗಳು ಜಿಲ್ಲಾ ಕಲೆಕ್ಟರರು ಭೂಮಾಲಿಕರನ್ನು ಕರೆದು ಮಾತನಾಡಿದ ವಿಷಯ ಪ್ರಸ್ತಾಪಿಸಿ, ಜಿಲ್ಲೆಯಲ್ಲಿ ಆಹಾರ ಸಂಕಷ್ಟವುಂಟಾಗದಂತೆ ನಾವು ಬೇಕುಬೇಕಾದ ಸಹಕಾರ ಕೊಡುವುದಾಗಿ ಹೇಳಿದ್ದರೂ, ಒಮ್ಮೆಲೇ ಭತ್ತವನ್ನು ಸ್ವಾಧೀನ ಮಾಡುವ ಹುಕುಂ ಹೊರಡಿದರೆಂದೂ, ಇದರಿಂದ ಜಿಲ್ಲೆಯ ಜನತೆಯ ಮನಸ್ಸಿನಲ್ಲಿ ಕಳವಳ ಹುಟ್ಟಿದೆಯೆಂದೂ, ಆಹಾರ ತಜ್ಞರು ಮಿಲ್ ಅಕ್ಕಿಗಿಂತ, ಕೈಯಲ್ಲಿ ಕುಟ್ಟಿ ಮಾಡಿದ ಅಕ್ಕಿ ಜೀವನ ಧಾರಣೆಗೆ ಅತ್ಯುತ್ಕೃಷ್ಟವೆಂದು ಹೇಳುತ್ತಿರುವ ಇಂದಿನ ಕಾಲದಲ್ಲಿ, ಹಳ್ಳಿ ಜನರ ವರ್ಷವೊಂದರ ಆರು ತಿಂಗಳ ಉದ್ಯೋಗದ ವಿಷಯವನ್ನೂ ವಿಚಾರಿಸದೆ, ನಮ್ಮ ಜಿಲ್ಲಾ ಅಧಿಕಾರಿಗಳು, ಮಂಗಳೂರಲ್ಲಿ ಅಕ್ಕಿ ಮಿಲ್ಲು ಸ್ಥಾಪಿಸಿ ಲಾಭ ಪಡೆಯಲು ಪ್ರಯತ್ನಿಸುವವರನ್ನು ಪ್ರೋತ್ಸಾಹಿಸುವುದು ಬಹಳ ವಿಚಿತ್ರ ವಿಷಯವೆಂದೂ, ಆದ್ದರಿಂದ ಭತ್ತವನ್ನು ಸರಕಾರವು ರಿಕ್ವಿಶನ್ ಮಾಡ ಕೂಡದೆಂಬುದು ನಮ್ಮ ಮುಖ್ಯ ವಿನಂತಿಯೆಂದೂ ಹೇಳಿದರು. ನಾವು ನಮ್ಮ ಗೇಣಿಯಲ್ಲಿ ಶೇಕಡಾ ೨೫ರಷ್ಟು ಅಕ್ಕಿ ಕೊಡುವುದಾಗಿ ಹೇಳಿದ್ದಕ್ಕೆ ಕಲೆಕ್ಟರರು ಅದು ಸಾಲದೆಂದರು; ಆ ಮೇಲೆ ಶೇಕಡಾ ೫೦ರಷ್ಟು ಕೊಡಲು ಸಿದ್ಧರಿರುವದಾಗಿ ತಿಳಿಸಿದೆವು; ಕಲೆಕ್ಟರರು ೧೫ ಲಕ್ಷ ಮುಡಿ ಅಕ್ಕಿ ಬೇಕೆಂದು ಹೇಳುತ್ತಾರೆ. ಇದು ಯಾವ ಲೆಕ್ಕದ ಆಧಾರದಿಂದ ಎಂದು ಗೊತ್ತಾಗುವುದಿಲ್ಲ ನಗರ ಪೇಟೆಯವರ ಆಹಾರ ವ್ಯವಸ್ಥೆಮಾಡಿ ಹಳ್ಳಿಯವರನ್ನು ಉಪವಾಸ ಬೀಳಿಸುವುದೊ?' ಎಂದೂ ಶ್ರೀ ಶೆಟ್ಟರು ಕೇಳಿದರು.

'ಬೇಸ್ಸಾಯಗಾರರು ತಮ್ಮಲ್ಲಿರುವ ಅಕ್ಕಿಯನ್ನು ಕಡಿಮೆ ಕ್ರಯದಲ್ಲಿ ಕೊಡಬೇಕೆಂದು ಸರಕಾರ ಒತ್ತಾಯ ಪಡಿಸುತ್ತದೆ. ಅವರಾದರೂ ಅಕ್ಕಿ ಮುಡಿ ಒಂದರ ರೂ ೧೦ಕ್ಕೆ ಕೊಡಲು ಒಪ್ಪಿದ್ದಾರೆ. ಜನರ ಹಿತಕ್ಕಾಗಿ ಲಾಭಮಾಡುವುದನ್ನ ವರು ಬಿಟ್ಟುಬಿಡುತ್ತಾರೆ. ಆದರೆ ಸರಕಾರ ಒಂದು ವೃತ್ತಿಯ ಜನರನ್ನು ಮಾತ್ರ ಸ್ವಾರ್ಥ ತ್ಯಾಗ ಮಾಡಲು ಕೇಳಬಾರದು. ವ್ಯಾಪಾರಿಗಳೂ ಸ್ವಾರ್ಥ ತ್ಯಾಗ ಮಾಡಬೇಕು. ನಮ್ಮ ಕಾರ್ಖಾನೆಯ ಮಾಲಿಕರು ತುಂಬಾ ಲಾಭ ಮಾಡುತ್ತಾರೆ. ಅವರೂ ತಮ್ಮ ಕೆಲಸಗಾರರಿಗೆ ಸಂಬಳ ಹೆಚ್ಚು ಕೊಡಬೇಕು. ಎಲಿಮೆಂಟ್ರಿ ಶಾಲಾ ಉಪಾಧ್ಯಾಯರಿಗೆ ಸಂಬಳ ಹೆಚ್ಚು ಮಾಡಬೇಕು.' ಹೀಗೆಂದೂ ಶ್ರೀ ಎ. ಬಿ. ಶೆಟ್ಟರು ತಮ್ಮ ಭಾಷಣದಲ್ಲಿ ತಿಳಿಸಿದರು ಇಂದು ನಗರದಲ್ಲಿ ನಡೆಯುತ್ತಿರುವ ಆಹಾರ ಹಂಚುವ ವ್ಯವಸ್ಥೆ ಸರಿಯಾಗಿ ನಡೆವುದಿಲ್ಲ, 'ಗುರುತು ಚೀಟಿ' ಬೇಕಾದವರಿಗೆ ಸಿಗುವುದಿಲ್ಲ, ಅಕ್ಕಿ ಸರಿಯಾಗಿ ಕೊಡುವ ವ್ಯವಸ್ಥೆ ಮಾಡಿಲ್ಲವೆಂದೂ ಅವರು ಹೇಳುತ್ತಾ, ಇದೆಲ್ಲದರ ಪರಿಹಾರರವಾಗಿ ಪೂರ್ಣ ರೇಶನಿಂಗ್ ಜಾರಿಗೆ ತರಬೇಕೆಂದೂ, ಸರಕಾರವು ಸ್ವಾಧೀನ ಮಾಡಿದ ಅಕ್ಕಿಯನ್ನು, ವ್ಯಾಪಾರಿಗಳ ಕೈಗೆ ಕೊಡದೆ ಕೋಪರೇಟಿವ್ ಸ್ಟೋರುಗಳ ಮುಖಾಂತರ ಹಂಚುವ ಏರ್ಪಾಡಾಗಬೇಕೆಂದೂ ಹೇಳಿ, ವ್ಯಾಪಾರಿಗಳ ಕೈಗೆ ಅಕ್ಕಿ ಹೋದರೆ ಕಳ್ಳ ವ್ಯಾಪಾರವು ಖಂಡಿತವಾಗಿಯೂ ಉಂಟಾಗುತ್ತದೆಂದೂ, ವ್ಯಾಪಾರಿಯೆಂಬವನನ್ನು ಯುದ್ಧ ಮುಗಿವ ತನಕ ಆಹಾರ ಹಂಚುವ ಕಾರ್ಯದಿಂದ ಹೊರ ಹಾರಬೇಕೆಂದೂ ನಮ್ಮಲ್ಲಿ ಕೆಲವರ ಅಭಿಪ್ರಾಯ ಇರುವುದಾಗಿಯೂ ತಿಳಿಸಿದರು.

ಶ್ರೀ. ಕೆ. ಬಿ. ಜಿನರಾಜ ಹೆಗ್ಡೆ, ಎಂ. ಎಲ್ ಎ. (ಕೇಂದ್ರ) ಇವರು ಮಾತನಾಡಿ ಹೀಗೆ ಹೇಳಿದರು. 'ಕಳೆದ ವರ್ಷದ ಅನುಭವವನ್ನು ನೋಡಿದರೆ, ನಮ್ಮ ಜಿಲ್ಲೆಯಲ್ಲಿ ಹುಟ್ಟಿದ ಆಹಾರ ನಮಗೆ ಸಾಕೆಂದು ತೋರುತ್ತದೆ. ಹಾಗಿದ್ದರೂ ಇಲ್ಲಿ ಸರಿಯಾಗಿ ಎಲ್ಲರಿಗೂ ಆಹಾರ ವ್ಯವಸ್ಥೆ ಆಗಬೇಕಾದರೆ, ನಾವೀಗಲೇ ನಮ್ಮ ಅವಶ್ಯಕತೆಗಳನ್ನು ಕಡಿಮೆಮಾಡಿಕೊಳ್ಳಬೇಕು. ನಮ್ಮ ಜಿಲ್ಲೆಯಲ್ಲಿ ಆಹಾರ ಮುಗಿದು ಹೋದರೆ ಹೊರಗಿಂದ ತರುವುದು ಅಸಾಧ್ಯ. ಕಳೆದ ವರ್ಷ ನಮ್ಮ ಅಕ್ಕಿಯನ್ನು ಸರಕಾರ ಸ್ವಾಧೀನ ಮಾಡಿತು. ಆದರಿಂದ ಗಿರಾಕಿಗಳಿಗೆ ಪ್ರಯೋಜನವಾಗಲಿಲ್ಲ. ವ್ಯಾಪಾರಿಗಳಿಗೆ ಲಾಭ ಮಾಡಿಕೊಟ್ಟಂತೆ ಮಾತ್ರ ಆಯಿತು. ಈ ವರ್ಷವೂ ಪುನಃ ಕಳೆದ ವರ್ಷದ ಅನುಭವದ ಪುನರಾವೃತ್ತಿಯಾಗಬಾರದು. ಹಾಗಾಗದಂತೆ ಮಾಡಬೇಕಾದರೆ ರೇಶನಿಂಗ್ ಜಾರಿಗೆ ತರುವುದೊಂದೇ ಉಪಾಯ. ಮದ್ರಾಸು ಬೊಂಬಾಯಿಗಳಲ್ಲಿ ರೇಶನಿಂಗ್ ಜಾರಿಗೆ ಬಂದಿದೆ, ಅಲ್ಲಿ ಜನರ ದೂರುಗಳಿಲ್ಲ. ಕಲ್ಕತ್ತದಲ್ಲಿ ರೇಶನಿಂಗ್ ಜಾರಿಗೆ ತರದೆ ಈ ಗೊಂದಲವುಂಟಾಯಿತು. ರೇಶನಿಂಗ್ ದೊಡ್ಡ ಕೆಲಸವೇನೋ ಸರಿ. ಇದಕ್ಕೆ ಸರಕಾರ ಮುಂದೆ ಬರಲೇಬೇಕು. ಇಂದು ಸಕ್ಕರೆ ಚಿಮ್ನಿ ಎಣ್ಣೆಗಳ ಸ್ಥಿತಿ ನಾಳೆ ಅಕ್ಕಿಗೂ ಆದರೆ ಗಂಡಾಂತರವಾದೀತು. ಭತ್ತವನ್ನು ತಂದು ಮಿಲ್ಲುಗಳಲ್ಲಿ ಮರ್ದಿಸುವ ಯೋಚನೆಗೆ ಅಧಿಕಾರಿಗಳು ಪ್ರೋತ್ಸಾಹವೀಯುತ್ತಾರೆಂಬುದು ವಿಷಾದಕರ ಭತ್ತವನ್ನು ಮಿಲ್ಲಿಗೆ ಕೊಟ್ಟು ಮರ್ದಿಸುವುದೆಂದರೆ, ನಮ್ಮ ಹಳ್ಳಿಯ ಸಾವಿರಾರು ಕುಟುಂಬಗಳನ್ನೆಲ್ಲಾ ಮಿಲ್ಲಿಗೆ ಕೊಟ್ಟು ಮರ್ದಿಸಿದಂತೆ!'

ಶ್ರೀ ಹೆಗ್ಡೆಯವರು ಮುಂದುವರಿಸುತ್ತಾ ಹೀಗೆಂದರು. "ಜಿಲ್ಲೆಯಲ್ಲಿ ಈಗಾಗಲೇ ಜನರು ಹೇಳುತ್ತಿದ್ದಾರೆ, 'ನೀವು ಏನು ಬೇಕಾದರೂ ಬೆಳೆಸಿ, ಸರಕಾರ ಅದನ್ನೆಲ್ಲಾ ಸೆಳೆಕೊಳ್ಳುವುದು' ಎಂದು. ಶೇಕಡಾ 9ರಷ್ಟು ಮಂದಿ ಮಾತ್ರ ಪಟ್ಟಣದಲ್ಲಿರುವವರು ಅಷ್ಟರ ಸುಖದ ವ್ಯವಸ್ಥೆಗಾಗಿ ಸೇಕಡಾ 93ರಷ್ಟು ಹಳ್ಳಿಯಲ್ಲಿರುವವರನ್ನು ಉಪವಾಸ ಬೀಳಿಸುವುದೆ? ಕಲೆಕ್ಟರರು ೧೫ ಲಕ್ಷ ಮುಡಿ ಅಕ್ಕಿ ಬೇಕೆಂದು ಯಾವ ಆಧಾರದಿಂದ ಹೇಳಿದರೋ ನಮಗೆ ತಿಳಿಯಲಾರದು. ಕೇವಲ ಒಂದೆರಡು ಲಕ್ಷ ಜನರು ಪಟ್ಟಣದಲ್ಲಿರುವವರು. ಇವರಿಗೆ ಆರು ಲಕ್ಷ ಮುಡಿ ಅಕ್ಕಿ ಬೇಕು. ಬೇಕಾದರೆ ಇನ್ನೆರಡು ಲಕ್ಷ ಮುಡಿ. ೧೫ ಲಕ್ಷ ಮುಡಿ ಅಕ್ಕಿ ಬೇಕೆಂದರೂ ಸಂಗ್ರಹ ಮಾಡುವುದು ಕಷ್ಟ. ಹೀಗೆ ಮಾಡದರೆ ಹಳ್ಳಿಗಳು ಉಪವಾಸ ಬೀಳಲೇಬೇಕು. ಇದು ಅನರ್ಥವನ್ನುಂಟುಮಾಡೀತು. ಬೇಕಾದರೆ ಎಂಟು ಲಕ್ಷ ಮುಡಿ ಅಕ್ಕಿ ರಿಕ್ವಿಸಿಶನ್ ಮಾಡಿ. ಕಾಸರಗೋಡು ತಾಲೂಕಿಗೆ ಅಲ್ಲಿನ ಅಕ್ಕಿ ಉತ್ಪತ್ತಿ ಸಾಲದು. ಅಲ್ಲಿನ ಹಳ್ಳಿ ಕೇಂದ್ರಗಳಲ್ಲೂ ರೇಶನಿಂಗ್ ಜಾರಿಗೆ ಬರಲಿ. ನಮಗೆ ಭೂಮಾಲಿಕರಿಗೆ ಈಗ ಲಾಭದಾಶೆಯಿಲ್ಲ, ಆದರೆ ನಮ್ಮ ಸ್ವಾರ್ಥ ತ್ಯಾಗದ ಫಲ ಬಡ ಜನರಿಗೆ ಆಗಲೇಬೇಕು. ವ್ಯಾಪಾರಿಗಳು ಇದರಿಂದ ಲಾಭ ಮಾಡಬಾರದು. ನಾವೀಗ ಅಕ್ಕಿ ಮುಡಿ ಒಂದರ ರೂ.೧೫೦ ಕೇಳಿದ್ದೇವೆ. ಇಂದಿನ ಕ್ರಯ ನಿರ್ಣಯವನ್ನು ಯಾವ ಅರ್ಥಶಾಸ್ತ್ರಜ್ಞನೂ ಮಾಡಲಾರನು. ಆದರೆ ನಮ್ಮ ಈ ಕ್ರಯ ನಿರ್ಣಯದ ಆಧಾರವೆಂದರೆ ಯುದ್ಧ ಪೂರ್ವದ ಬೆಲೆಯ ಇಮ್ಮಡಿ. ಇತರ ಎಲ್ಲಾ ವಸ್ತುಗಳಿಗೆ ಕ್ರಯ ನಾಲ್ಕೈದು ಪಾಲು ಏರಿರಲು ನಮ್ಮ ಉತ್ಪತ್ತಿಗೆ ಇಮ್ಮಡಿ ಕ್ರಯ ಹೆಚ್ಚೆ? ನೋಟಿನ ಅತಿ ಪ್ರಸರಣ ನಿಂತರೆ ನಾವು ಇನ್ನೂ ಕ್ರಯ ಇಳಿಸಲು ಸಿದ್ಧರು. ಸ್ವಾಧೀನ ಮಾಡಿದ ಅಕ್ಕಿಯನ್ನು ಖರೀದಿ ಮಾಡಿ, ಸರಿಯಾಗಿ ಹಂಚುವ ಜವಾಬ್ದಾರಿಯನ್ನು ಜಿಲ್ಲಾ ಸಹಕಾರೀ ಸಂಘದವರು ಮಾಡಲು ಸಿದ್ಧರಿದ್ದಾರಾಗಿ ಅದರ ಅಧ್ಯಕ್ಷ ಶ್ರೀ ಮೊಳಹಳ್ಳಿ ಶಿವರಾಯರು ತಿಳಿಸಿದ್ದಾರೆ. ಹೇಗೂ ಅಕ್ಕಿ ವ್ಯಾಪಾರಿಗಳ ಕೈಗೆ ಹೋಗಕೊಡದು. ಕಳೆದ ವರ್ಷ ೧೫ ಲಕ್ಷ ಅಕ್ಕಿ ಮುಡಿ ರಿಕ್ವಿಸಿಶನ್ ಮಾಡಲಾಯಿತು. ಹನ್ನೆರಡೇ ದಿನಗಳಲ್ಲಿ ಅದು ಮಾಯವಾಗಿ, ಮುಂದೆ 'ವರ್ಗದಾರರ ಅಕ್ಕಿ'ಯೆಂದು ಹೆಚ್ಚು ಕ್ರಯಕ್ಕೆ ವ್ಯಾಪಾರಿಗಳು ಮಾರಾಟ ಮಾಡಿ ಲಾಭ ಪಡೆದರು. ಖಂಡಿತವಾಗಿಯೂ ಈ ವರ್ಷ ಇದರ ಪುನರಾವೃತ್ತಿಯಾಗಬಾರದು."

ಶ್ರೀ ಸಿ. ಎಲ್, ಲೋಬೋರವರು ಮಾತನಾಡಿ, ಕಳೆದ ವರ್ಷ ವ್ಯಾಪಾರಿಗಳ ಕೈಗೆ ಅಕ್ಕಿ ಕೊಟ್ಟು ಗಿರಾಕಿಗಳಿಗೆ ಉಂಟಾದ ಸಂಕಷ್ಟಗಳನ್ನು ತಿಳಿಸಿದರು ಅಧಿಕಾರಿಗಳು ಇತ್ತೀಚೆಗೆ ರೆವೆನ್ಯೂ ಅಧಿಕಾರಿಗಳಿಗಿತ್ತ ಸೂಚನೆ ವಿಷಯ ಪ್ರಸ್ತಾಪಿಸಿ ನೂರು ಮುಡಿ ಅಕ್ಕಿಗಿಂತ ಕೆಳಗಿನವರಿಗೆ ರಿಕ್ವಿಸಿಶನ್ ಇಲ್ಲವಾದರೆ ಇದರಿಂದ ಕಳ್ಳ ವ್ಯಾಪಾರ ಹೆಚ್ಚಾಗುವುದೆಂದು ಹೇಳಿದರು. ನಮ್ಮ ಜಿಲ್ಲೆ ಬಂಗಾಳವಾಗಬಾರದೆಂದೂ, ಈಗಾಗಲೇ ನಮ್ಮ ಜಿಲ್ಲೆಯಲ್ಲಿ ಆಹಾರಾಭಾವದಿಂದ ಕೋಲೆರಾ ರೋಗವಾಗಿ ಸತ್ತ ವರದಿ ಬಂದಿದೆಯೆಂದೂ, ಇಲ್ಲಿಂದ ಹೊರಗೆ ಅಕ್ಕಿ ಹೋಗದಂತೆ ನಿರ್ಬಂಧ ಹಾಕಬೇಕೆಂದೂ ಹೇಳಿದರು.

ಡಾ| ಪಿ. ಎಸ್. ಭಟ್ಟರು ಕಾಸರಗೋಡು ತಾಲೂಕಿನ ಪರವಾಗಿ ವಿನಂತಿ ಮಂಡಿಸುತ್ತಾ ಹೀಗಂದರು, "ನಮ್ಮ ತಾಲೂಕು ಈ ಜಿಲ್ಲೆಯಲ್ಲಿ ಕಡಮೆ ಆಹಾರ ಉತ್ಪತ್ತಿ ತಾಲೂಕು. ನಮ್ಮಲ್ಲಿಯೂ ರಿಕ್ವಿಸಿಶನ್ ಮಾಡುವ ಆಜ್ಞೆ ಆಗಿದೆ. ರಿಕ್ವಿಸಿಶನ್ ಮಾಡುವಾಗ, ನಮ್ಮ ಭೂಮಾಲಿಕರಿಗೆ ಎಷ್ಟು ಅಗತ್ಯವಿದೆಯೆಂಬ ವಿಚಾರವನ್ನೂ ಸರಕಾರ ಗಮನಿಸಬೇಕು. ನಮ್ಮಲ್ಲಿ ಕೂಲಿ ಕೊಡುವುದೂ ಅಕ್ಕಿ ಭತ್ತಗಳ ರೂಪದಲ್ಲಿ. ನಮ್ಮಲ್ಲಿಂದ ಅಕ್ಕಿ ಭತ್ತ ತೆಗೆದುಕೊಂಡು ಹೋಗಬಾರದು ಮಾತ್ರವಲ್ಲ, ನಮ್ಮಲ್ಲಿಗೆ ಸಾಕಾಗದ್ದನ್ನು ಇತರ ತಾಲೂಕುಗಳಿಂದ ಒದಗಿಸಿಕೊಡುವ ಭದ್ರತೆಯನ್ನೂ ಸರಕಾರ ಕೊಡಬೇಕು."

(7ನೇ ಪುಟಕ್ಕೆ ಮುಂದುವರಿದಿದೆ)

ಸಮರಭೂಮಿಯ ಸಂಚಾರ

ಬ್ರಿಟಿಷ್ ವಿದೇಶ ಮಂತ್ರಿ ಅಂತೋನಿ ಈಡನರು ಅಮೆರಿಕದ ವಿದೇಶ ಮಂತ್ರಿ ಕಾರ್ಡೆಲ್ ಹಲ್ಲರೊಡನೆ ತಾ. ೧೯ರಂದು ಮೋಸ್ಕೋಗೆ ಬಂದಿಳಿದರು. ಅವರ ಜೊತೆಯಲ್ಲಿ ಅಮೆರಿಕದ ರಾಯಭಾರಿ ಅಡ್ಮಿರಲ್ ಹೆರಿಮೆನ್, ಸರ್ ಹೇಸ್ಟಿಂಗ್ಸ್ ಮತ್ತು ಬ್ರಿಟಿಷ್ ಕಚೇರಿಯ ವಿಲಿಯಂ ಸ್ಟ್ರ್ಯಾಂಗ್ ಮೊದಲಾದವರಿದ್ದರು. ರಶ್ಯದ ವಿದೇಶ ಮಂತ್ರಿ ಮೊಲಟೋವರು ವಿಮಾನ ಗೃಹದಲ್ಲಿ ಹಾಜರಿದ್ದು ಅವರನ್ನು ಸ್ವಾಗತಿಸಿದರು. ಮೋಸ್ಕೋದಲ್ಲಿ ಇಷ್ಟರಲ್ಲೇ ಕೂಡಲಿರುವ ತ್ರಿರಾಷ್ಟ್ರ ಪರಿಷತ್ತಿನಿಂದ ಬ್ರಿಟನ್ ಅಮೆರಿಕ ರಶ್ಯಗಳ ಸ್ನೇಹ ಸಂಬಂಧವು ಇನ್ನೂ ಹೆಚ್ಚುವುದೆಂದು ಹೇಳಲಾಗಿದೆ. ಈ ಪರಿಷತ್ತಿನ ಫಲಿತಾಂಶವಾಗಿ ಅಕ್ಷ ರಾಷ್ಟ್ರಗಳನ್ನು ಸೋಲಿಸುವ ಸಂಯುಕ್ತ ಯೋಜನೆ ನಿರ್ಧಾರವಾಗುವುದೆಂದು ನಂಬಬಹುದು.

ದಕ್ಷಿಣ ರಶ್ಯದಲ್ಲಿ ಜರ್ಮನ್ ಸೈನ್ಯಗಳಿಗೆ ದೊಡ್ಡ ಗಂಡಾಂತರವೊದಗಿದೆಯೆಂದು ತಿಳಿದುಬರುತ್ತದೆ. ಗೋಮಲ್‌ನಿಂದ ಮೆಲಿಟೊ ಪೋಲೀನವರೆಗಿರುವ ಪ್ರದೇಶದಲ್ಲಿ ನಾಲ್ಕು ಸಲ ಯುದ್ಧ ಘಟಿದಿದ್ದು ಜರ್ಮನರ ಸ್ಥಿತಿಯಿಂದು ಶೋಚನೀಯವಾಗಿರುವುದಂತೆ. ದಕ್ಷಿಣ ರಶ್ಯದಲ್ಲಿರುವ ತಮ್ಮ ಸೈನ್ಯಗಳಿಗೆ ದೊಡ್ಡ ಗಂಡಾಂತರವೊದಗಿದೆಯೆಂದು ಜರ್ಮನರೇ ಒಪ್ಪಿಕೊಂಡಿದ್ದಾರಾಗಿ ಸಾರಲಾಗಿದೆ. ಮೆಲಿಟೋಪೋಲ್ ರಸ್ತೆಯಲ್ಲಿ ಇನ್ನೂ ಯುದ್ಧ ನಡೆಯುತ್ತಿದೆ. ಇದಕ್ಕೆ ಉತ್ತರದಲ್ಲಿ ಇನ್ನೊಂದು ಸೈನ್ಯ ಝಪರಾಜ್ಯದ ಕಡೆಗೆ ಹೊರಟಿದೆ. ಕ್ರೆಮನಜಗದ ಆಗ್ನೇಯದಲ್ಲಿ ಜರ್ಮನ ವ್ಯೂಹವು ಭೇದಿಸಲ್ಪಟ್ಟಿರುವುದು. ಕೀವ್‌ನ ಉತ್ತರಕ್ಕೆ ನಡೆಯುತ್ತಿರುವ ಕಾಳಗವೂ ಭೀಕರವಾಗಿದೆ. ರಶ್ಯನ್ ಸೈನ್ಯಗಳು ಮೂರು ಕಡೆಗಳಿಂದ ಡ್ನೀಪರ್ ನದಿ ದಾಟಿ ಯುಕ್ರೇನಿನಲ್ಲಿ ಯಶಸ್ವಿಯಾಗಿ ಮುನ್ನುಗ್ಗುತ್ತಿರುವವು. ರಶ್ಯನ್ ಸೈನಿಕರು ಬಹಳ ಸಾಹಸಮಯ ಹೋರಾಟ ಹೂಡಿ ನೀಪರ್ ನದಿಯನ್ನು ದಾಟಿ ಬಂದಿದ್ದಾರೆ. ಇದು ಒಂದು ಮಹತ್ವದ ವಿಜಯವಾಗಿದೆ.

ಜನರಲ್ ಸ್ಮಟ್ಸರು ಲಂಡನಿನ ಗಿಲ್ಡ್ ಹಾಲಿನಲ್ಲಿ ಒಂದು ಭಾಷಣ ಮಾಡುತ್ತಾ ಮಿತ್ರರು ಮುಂದಿನ ವರ್ಷ ಯೂರೋಪಿನಲ್ಲಿ, ಹಿಟ್ಲರನ ಮಧ್ಯ ಕೋಟೆಯ ಮೇಲೆ ಪ್ರಚಂಡ ಧಾಳಿಯಿಡುವುದಾಗಿ ಹೇಳಿದರು. ಅವರು ತಮ್ಮ ಭಾಷಣದಲ್ಲಿ, ಮಿತ್ರರಿಗೆ ಕಳೆದ ಅಕ್ಟೋಬರ್ ವರೆಗೆ ಹೆಚ್ಚು ಗಂಡಾಂತರ ಉಂಟಾಯಿತೆಂದೂ, ಆದರೆ ಆ ಮೇಲೆ ರಶ್ಯನ್ ಹಾಗೂ ಬ್ರಿಟಿಷ್ ಸೈನಿಕರು ಎರಡು ಕಡೆಗಳಲ್ಲಿ ಮಹತ್ವದ ವಿಜಯ ಪಡೆದದ್ದರಿಂದ ಯುದ್ಧದ ಗತಿಯೇ ಬದಲಾಯಿತೆಂದೂ, ಈಗ ವೈರಿಯೂ ಹಿಂಜರಿಯುತ್ತಿರುವನಾಗಿಯೂ ಹೇಳಿ, ರಶ್ಯನರ ಸಾಹಸವನ್ನು ಕೊಂಡಾಡಿದರು. ೧೯೪೪ರಲ್ಲಿ ದ್ವಿತೀಯ ರಂಗ ತೆರೆಯಲು ಮಿತ್ರರು ಯೋಜನೆ ಮಾಡಿರುವರೆಂದೂ ತಿಳಿಸಿದ್ದರು. ಮೋಸ್ಕೋದಲ್ಲಿ ತ್ರಿರಾಷ್ಟ್ರ ಪರಿಷತ್ತು ಜರಗುತ್ತಿರುವಾಗ, ಸ್ಮಟ್ಸರು ಹೇಳಿದ ಈ ಹೇಳಿಕೆಯಿಂದ ಒಳ್ಳೆ ಪರಿಣಾಮವಾಗಬಹುದೆಂದು ಊಹಿಸಲಾಗಿದೆ.

'ಯೂರೋಪಿನಲ್ಲಿ ಜರ್ಮನರಿಗಾಗುತ್ತಿರುವ ಅಪಜಯವನ್ನು ನೋಡಿ ಜಪಾನರು ಸ್ವಲ್ಪವೂ ಗಾಬರಿಯಾಗಿಲ್ಲ. ಜರ್ಮನಿಗೆ ಏನೇ ಆಗಲಿ, ಯೂರೋಪಿನ ಪರಿಸ್ಥಿತಿ ಎಷ್ಟೇ ವ್ಯತ್ಯಾಸವಾಗಲಿ, ಪೂರ್ವ ಏಶ್ಯದಲ್ಲಿ ಯುದ್ಧವನ್ನು ತಾವು ಯಶಸ್ವಿಯಾಗಿ ಮುಂದುವರಿಸುವೆವೆಂಬ ವಿಶ್ವಾಸ ಜಪಾನರಿಗಿದೆ. ಪೂರ್ವ ಏಶ್ಯದಲ್ಲಿ ಯುದ್ಧವಿನ್ನೂ ಐದು ವರ್ಷ ನಡೆಯುವುದು; ಜಪಾನರು ಅದಕ್ಕೆ ಸಿದ್ಧರಾಗಿದ್ದಾರೆ' ಹೀಗೆಂದು ಚಿಲಿ ದೇಶದ ಪತ್ರಿಕೋದ್ಯೋಗಿಯೋರ್ವನು ಮುಂಬಯಿಯಲ್ಲಿ ಜಪಾನಿಂದ ಬಂದ 'ಟಿಯೋಮಾರ' ಹಡಗದಲ್ಲಿ ಬಂದಿಳಿದವನು ಹೇಳಿದನು.

ಅಮೆರಿಕದಿಂದ ಸುದ್ದಿ

ಅಮೆರಿಕದಲ್ಲಿ, ಪೌರ್ವಾತ್ಯ ಸಂಸ್ಕೃತಿಯ ಅಭ್ಯಾಸಕ್ಕಾಗಿ ಮಿಚಿಗನ್ ಸ್ಟೇಟ್ ಕೋಲೇಜಿನಲ್ಲಿ ಅಭ್ಯಾಸ ಕೊಡಲಾಗುತ್ತದೆ. ಮಿಲಿಯಾಂತರ ಅಮೆರಿಕದ ಸಿಪಾಯಿಗಳು ಹಿಂದುಸ್ತಾನೀ ಕಲಿಯುತ್ತಿದ್ದಾರೆ. ಭಾಷಾ ಉಚ್ಚಾರಣೆ ಗ್ರಾಮಫೋನ್ ರಿಕಾರ್ಡು ಇಡುತ್ತಾರೆ.

ಪಾಮೆದತ್ತರ 'ಪ್ರೋಬ್ಲೆಮ್ ಓಫ್ ಇಂಡಿಯಾ' ಮತ್ತು ಮೆಕೆನ್ಸಿಯವರ 'ಇಂಡಿಯಾ ಸ ಪ್ರೊಬ್ಲೆಮ್ ಕೇನ್ ಬಿ ಸೊಲ್ವ್ಡ್' ಎಂಬ ಎರಡು ಪುಸ್ತಕಗಳನ್ನು ನ್ಯೂಯಾರ್ಕ್ ಟೈಮ್ಸ್ ಪತ್ರಿಕೆ ವಿಮರ್ಶಿಸಿ ಇವೆರಡು ಪುಸ್ತಕಗಳು ಭಾರತದ ಕುರಿತು ಉತ್ತಮ ಅಭ್ಯಾಸ ಪುಸ್ತಕಗಳೆಂದು ಪ್ರಶಂಸಿಸಿದೆ.

ಭಾರತೀಯ ನೃತ್ಯಕಾರ್ತಿಯಾದ ಅಮೆರಿಕದ ಲಾಮೆರಿ ತನ್ನ ನೃತ್ಯಕೇಂದ್ರದಲ್ಲಿ ಆಗಾಗ ನೃತ್ಯಭ್ಯಾಸ ಕೊಡುತ್ತಾಳೆ. ಪ್ರಸಿದ್ಧ ಭಾರತ ಸಂಗೀತಗಾರ ವಸಂತ ನಾನಾ ಸಿಂಗರು ಅಲ್ಲಿ ತನ್ನ ಪ್ರದರ್ಶನವಿತ್ತರು.

ಅಮೆರಿಕದಲ್ಲಿ ಹಿಂದೆ ಚೀನದ ರಾಯಭಾರಿಯ ಮಗಳು ಮೈಮಿಸ್ವೆಟೊಂಬವಳು ಅಮೆರಿಕದಲ್ಲಿರುವ ನೆಹರು ಸೊಸೆಯರನ್ನು ಭೇಟಿಯಾಗಿ ಅವರ ಕುರಿತು ತುಂಬಾ ಪ್ರಶಂಸಿಸಿ ಬರೆದಿರುವಳು. ಚಂದ್ರಲೇಖಾ ಮತ್ತು ನಯತಾರಾ ತನಗೆ ಸೀರೆ ಉಡಲು ಕಲಿಸಿದರು; ಚೊಕ್ಕ ಹುಡುಗಿಯವರು ಇವರು ಎಂದು ಆಕೆ ಹೊಗಳುತ್ತಾಳೆ. (USOWI)

ಮೌಂಟ್ ಬೇಟನರ ಆಗಮನ

ಪೂರ್ವ ಏಶ್ಯಾದಲ್ಲಿ ಮಿತ್ರರ ಮುಖ್ಯ ಸೇನಾಪತಿಗಳಾಗಿ ನೇಮಕ ಹೊಂದಿದ ಎಡ್ಮಿರಲ್ ಮೌಂಟ್ ಬೇಟನ್ನರು ಪರಿವಾರ ಸಮೇತ ಬಂದಿರುವರು.

ನೋಟಗಳು. . . .

ಇಟಲಿಯಲ್ಲಿ ಮಿತ್ರರ ಐದನೇ ಸೇನಾದಳವು ಹಿಟ್ಲರನನ್ನು ಬಂಧಿಸಿದೆ!

ಇದು ನಿಜವಾಗಿಯೂ ಬಹಳ ಸಂತೋಷದ ಸುದ್ದಿ.

ಆದರೆ ಸೆರೆಹಿಡಿದ ಮೇಲೆ ಆತ ನಿಜವಾದ ಹಿಟ್ಲರ್ ಅಲ್ಲವೆಂದು ತಿಳಿದುಬಂತು!

ವಲ್ಟರ್ನೋ ನದಿಯಲ್ಲಿ ಈಸಿ ಬಂದ ಜರ್ಮನ್ ಸೈನಿಕನೊಬ್ಬನು ದಡಕ್ಕೆ ಬಂದ ಕೂಡಲೇ 'ತಾನು ಹಿಟ್ಲರ್' ಎಂದು ಹೇಳಿದ!

ಹಿಟ್ಲರ್ ಸಿಕ್ಕಿದನೆಂದು ಆತನನ್ನು ಮಿತ್ರ ಸೈನಿಕರು ಬಂಧಿಸಿಯೂ ಬಿಟ್ಟರು.

ನಿಜವಾದ ಹಿಟ್ಲರ್ ಈತನಲ್ಲದಿದ್ದರೂ ಹಿಟ್ಲರ್ ಪಕ್ಷದವನಾದ್ದರಿಂದ ಈಗ ಆತ ಯುದ್ಧ ಕೈದಿಯಾಗಿದ್ದಾನೆ.

ಮುಸಲಿನಿಯೂ ಒಮ್ಮೆ ಮಿತ್ರರ ಕೈದಿಯಾಗಿ ಪರಾರಿಯಾಗಿದ್ದಾನೆ!

ಕೈಗೆ ಬಂದ ತುತ್ತು ಬಾಯಿಗೆ ಬರುವುದಿಲ್ಲವೆಂಬುದು ಇದು ನಿಜವಾಗಿಯೂ ದುರ್ಭಾಗ್ಯ!

ವೇವಲರು ಅಧಿಕಾರ ಸ್ವೀಕರಿಸಿದರು

ಹೊಸ ವೈಸರಾಯರಾದ ಫೀಲ್ಡ್ ಮಾರ್ಶಲ್ ವೈಕೌಂಟ್ ವೇವಲರು ತಾ. ೨೦ರಂದು ಅಧಿಕಾರ ಸ್ವೀಕರಿಸಿದರು.

ಚಿತಗಾಂಗ್ ಧಾಳಿ

ಚಿತಗಾಂಗ್ ಮೇಲೆ ಜಪಾನ್ ಧಾಳಿ ಪ್ರಯತ್ನ ತಾ. ೨೦ರಂದು ನಡೆಯಿತು. ಮಿತ್ರ ವೈಮಾನಿಕರು ಅವುಗಳನ್ನೆದುರಿಸಿದರು.

ರೋಮನ್ ರೊಲೆಂಡರ ನಿಧನ

ರೊಮನ್ ರೊಲೆಂಡರು ನಾಜಿಗಳ ಸೆರೆಮನೆಯಲ್ಲಿ ನಿಧನ ಹೊಂದಿದರು. ವಿಶ್ವವಿಖ್ಯಾತ ಲೇಖಕರು. ಇವರೂ ಗಾಂಧಿಜಿಯ ಪರಮಮಿತ್ರರು, ಫೇಸಿಸಂ ವಿರೋಧಿ ಅವರು.

ನೆಪ್ಟ್ಯೂನ್ ವಿಮಾ ಕಂಪೆನಿಯ ಶಾಖೆ

ಬೊಂಬಯಿಯ 'ನೆಪ್ಟ್ಯೂನ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್' ಎಂಬ ಪ್ರಸಿದ್ಧ ವಿಮಾ ಕಂಪೆನಿಯ ಒಂದು ಹೊಸ ಶಾಖೆ ಇಲ್ಲಿಯ ಜೇಡಿಗುಡ್ಡೆಯ ಮಹಾತ್ಮ ಗಾಂಧಿ ರಸ್ತೆಯಲ್ಲಿನ ಶ್ರೀ ವುತ್ತು ಸೇಟರ ಕಟ್ಟಡದಲ್ಲಿ ಕಳೆದ ಆದಿತ್ಯವಾರ ಸಂಜೆ ತೆರೆಯಲ್ಪಟ್ಟಿತು. ನಿವೃತ್ತ ಜಿಲ್ಲಾ ರಜಿಸ್ಟ್ರಾರ್ ಶ್ರೀ ರಾಮಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಮಲಬಾರ್, ದಕ್ಷಿಣ ಕನ್ನಡ ಮತ್ತು ಮೈಸೂರು ಸಂಸ್ಥಾನಗಳ ಶಾಖಾ ಮ್ಯಾನೇಜರಾಗಿ ಶ್ರೀ ಎಂ. ಈಶ್ವರ ಶೆಟ್ಟಿ ಇವರು ನಿಯೋಜಿಸಲ್ಪಟ್ಟಿರುವರು

FIRST AND FOREMOST

FIRST AND FOREMOST among the ideals of the CANARA BANK is the ideal of Service to its Customers.

ESTD. 1906.

CANARA BANK LTD.

'ಎದೆನೋವನ್ನು ನಿವಾರಿಸಿರಿ.

ನಿಮಗೆ ಬೇಗನೇ ಶೀತವಾಗುವುದೆ? ನೀವು ಆಗಾಗ ಕೆಮ್ಮು, ಶ್ವಾಸಕೋಶದ ದೌರ್ಬಲ್ಯಗೊಳಿಸುವ ಶೀತಬಾಧೆಯಿಂದ ನರಳುತ್ತೀರಾ? ಹಾಗಿದ್ದರೆ, ವಿಷಹಾರಿ, ಶ್ವಾಸಯೋಗ್ಯ ಮಾತ್ರೆಗಳಾದ ಪೆಪ್ಸುಗಳನ್ನು ಸೇವಿಸಿ ಗುಣಹೊಂದಿರಿ.

ಪೆಪ್ಸ ಬಾಯಲ್ಲಿ ಹಾಕಿದ ಕೂಡಲೇ ಉತ್ತಮ ಸುಗಂಧ ಔಷಧಿ ರಸ ಹೊರಡಿಸುತ್ತದೆ. ಅದು ಶ್ವಾಸದೊಡನೆ ಶ್ವಾಸಕೋಶವನ್ನು ಸೇರುವುದು. ಹಾಗೆ ಸೇರಿ, ಎದೆನೋವು, ಕಫ, ಗಂಟಲು ನೋವು, ಶೀತಬಾಧೆ, ಕೆಮ್ಮು, ಮೊದಲಾದವುಗಳನ್ನು ಗುಣಪಡಿಸುವುದು. ನೇವಸ ಮತ್ತು ಶೀತಜ್ವರಗಳಿಗೂ ಪರಮೌಷಧ. ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಪೆಪ್ಸು ದೊರಕುತ್ತದೆ.



ಪೆಪ್ಸನ್ನು ಕೊಂಡುಕೊಳ್ಳಿರಿ.

PEPS

ವಿಷಹಾರಿ ಶ್ವಾಸಯೋಗ್ಯ ಮಾತ್ರೆಗಳು.

ಸ್ವದೇಶಾಭಿಮಾನಿ

ತಾರೀಕು 22—10—1943

ಅಮೆರಿ ರಾಗ

ಹೋಗುವ ವೈಸರಾಯರಾದ ಲಾರ್ಡ್ ಲಿನ್‌ಲಿತ್‌ಗೋರವರ ಆಡಳಿತವನ್ನು ಹೊಗಳುತ್ತಾ ಭಾರತ ಮಂತ್ರಿ ಅಮೆರಿಯವರು ಭಾರತೀಯರಿಗೆ ಕೆಲವು ಕಹಿ ನೆನಹುಗಳನ್ನುಂಟುಮಾಡಿದ್ದಾರೆ; ಭಾರತೀಯರಿಗೆ ಮಾತ್ರ ಕಹಿಯಲ್ಲ, ಲಿನ್‌ಲಿತ್‌ಗೋರವರಿಗಾದರೂ ಈ ನೆನಪು ಅಷ್ಟೊಂದು ಹಿತಕರವೆನಿಸಲಿಕ್ಕಿಲ್ಲ. ರಾಷ್ಟ್ರದ ಮುಂದಾಳುಗಳನ್ನು ಸೆರೆಮನೆ ಸೇರಿಸಿದ ವಿಷಯದಲ್ಲಿ ಲಿನ್‌ಲಿತ್‌ಗೋರವರಿಗೆ ಅಮೆರಿಯವರು ಶಿಫಾರಸು ಕೊಡುತ್ತಾ, ಲಂಡನ್‌ನ 'ಸಂಡೇಟೈಮ್ಸ್' ಪತ್ರಿಕಾ ಬಾತ್ಮಿದಾರನೊಡನೆ ಹೇಳಿದ ಕೆಲವು ಮಾತುಗಳು ವಿಮರ್ಶಾಯೋಗ್ಯವಾಗಿವೆ.

ಭಾರತದ ಬಿಕ್ಕಟ್ಟು ಬಗೆಹರಿಸಲು ಭಾರತೀಯರು ಅನ್ಯೋನ್ಯ ಒಪ್ಪಂದವಮಾಡಿಕೊಳ್ಳಬೇಕೆಂದು ಅಮೆರಿ ಹೇಳಿದರು. ಹಾಗೆ ಅವರು ಒಪ್ಪಂದ ಮಾಡಿಕೊಳ್ಳುವರೆ, ಅವರನ್ನು ಸೆರೆಮನೆ ಸೇರಿಸಿದ್ದರಿಂದ ಆತಂಕವಾಗಿದೆಯೆಂಬುದನ್ನೂ ಅವರು ಒಪ್ಪಿಕೊಂಡರು; ಆದರೆ ಮರುಕ್ಷಣದಲ್ಲಿಯೇ ಲಿನ್‌ಲಿತ್‌ಗೋರವರು 'ಬಂಡಾಯಗಾರ'ರನ್ನು ಸೆರೆಮನೆಯಲ್ಲಿಟ್ಟದ್ದು ಬಹಳ ನ್ಯಾಯವಾಯಿತೆಂದು ಸಮರ್ಥಿಸಿದರು. ಹೀಗೆ ಅಮೆರಿಯವರು, ಹೋಗುವ ವೈಸರಾಯರ ಕುರಿತು ಭಾರತೀಯರಿಗೆ ಕೆಲವು ಕಹಿ ನೆನಪುಗಳನ್ನು ಹುಟ್ಟಿಸಿದುದರೊಡನೆ, ಬರುವ ವೈಸರಾಯರಾದರೂ ಹಿಂದಿನವರ ಧೋರಣೆಯನ್ನೇ ಅನುಸರಿಸುವರೆಂಬ ಒಂದು ರೀತಿಯ ಭರವಸೆಯನ್ನೂ ಈ ಮೂಲಕ ತಿಳಿಸಿ, ಒಟ್ಟು ಭಾರತೀಯರು ಮುಖಸಪ್ಪಗೆ ಮಾಡಿಕೊಳ್ಳುವಂತೆ ಮಾಡಿದ್ದಾರೆ.

ಅಮೆರಿಯವರು ಚರ್ಚಿಲರ 'ಆತ್ಮಸಾಕ್ಷಿ'ಯಂತಿದ್ದಾರೆ. ಭಾರತದ ವಿಚಾರ ಈ ಮಾತು ನಿಜವಾಗಿಯೂ ಸತ್ಯವೆನಬೇಕು. ಹಿಂದಿನ ವೈಸರಾಯರ ಧೋರಣೆಯಿಂದ, ಎಂದರೆ ರಾಷ್ಟ್ರದ ಮುಖಂಡರ ಬಂಧನದಿಂದ, ರಾಷ್ಟ್ರೀಯ ಐಕ್ಯಕ್ಕೆ ಆತಂಕವೆಂದು ಅಮೆರಿ ಒಪ್ಪಿಕೊಂಡರೂ ಅವರನ್ನು ಸೆರೆಮನೆಯಿಂದ ಬಿಡಲಾಗುವುದಿಲ್ಲವೆಂದು ಶಿಫಾರಸು ಮಾಡಿದ್ದನ್ನು ನೋಡಿದರೆ ಬರುವ ವೈಸರಾಯರಲ್ಲಿ ನಾವು ಹೆಚ್ಚಿನ ಆಶಾತುರರಾಗಬೇಕಾಗಿಲ್ಲವೆಂದು ಅಮೆರಿ ಸೂಚಿಸಿದಂತಾಗುವುದಿಲ್ಲವೆ? 'ಕ್ರಿಪ್ಸ್ ಸಂಧಾನಕ್ಕೆ ನಾವಿನ್ನೂ ಸಿದ್ಧರಿದ್ದೇವೆ' ಎಂದು ಅಮೆರಿಯವರೇನೋ ಆಗಾಗ ಹೇಳುತ್ತಾರೆ ನಿಜ. ಆದರೆ ರಾಷ್ಟ್ರದ ಮುಖಂಡರನ್ನು ಬಿಡುಗಡೆ ಮಾಡುವ ಮನಸ್ಸಿಲ್ಲವೆಂದ ಮೇಲೆ ಕ್ರಿಪ್ಸ್ ಸಂಧಾನವಾದರೂ ಯಾರೊಡನೆ?

ಹೋಗುತ್ತಾರೆ; ಬರುತ್ತಾರೆ.

ಹಿಂದಿನ ವೈಸರಾಯರಾದ ಲಾರ್ಡ್ ಲಿನ್‌ಲಿತ್‌ಗೋರವರು ಏಳು ವರ್ಷಗಳ ದೀರ್ಘ ಅವಧಿಯ ಆಡಳಿತ ಮುಗಿಸಿ ಸಪತ್ನೀ ಸಪರಿವಾರ ಭಾರತದಿಂದ ಹೊರಟು ಹೋಗುತ್ತಾರೆ. ಕ್ರಮ ಪ್ರಕಾರ, ಮುಂದಿನ ವೈಸರಾಯರಾದ ಲಾರ್ಡ್ ವೇವಲರು ಸಪತ್ನೀ ಸಪರಿವಾರರಾಗಿ ಲಂಡನಿನಿಂದ ಬರುತ್ತಾರೆ. ಲಿನ್‌ಲಿತ್‌ಗೋ ಹೋದರು; ವೇವಲ್ ಬಂದರು. ಭಾರತದ ಜನಮುಖದಲ್ಲಿ ಹೋಗುವವರ ಕುರಿತು ವಿಷಾದವೂ ಇಲ್ಲ, ಬರುವವರ ಕುರಿತು ಸಂಭ್ರಮವೂ ಇಲ್ಲ. ಹಿಂದೆ ಎಷ್ಟೋ ಸಲ, ಕಳೆದ ಇನ್ನೂರು ವರ್ಷ ಸುದೀರ್ಘ ಬ್ರಿಟಿಷ್ ಆಡಳಿತ ಕಾಲದಲ್ಲಿ ಬಹಳ ಮಂದಿ ವೈಸರಾಯರು ಬಂದಿದ್ದರು ಬಹಳ ಮಂದಿ ಹೊರಟು ಹೋಗಿದ್ದರು.

ಹೋಗುವ ವೈಸರಾಯರದೊಂದು ವೈಶಿಷ್ಟ್ಯವೆಂದರೆ, ಅವರು ಭಾರತದ ಮುಂದಾಳುಗಳನ್ನು ಬಿಡುಗಡೆ ಮಾಡಿರಿ; ಇದರಿಂದ ಪೇಸಿಸಮ್ಮೆನೆದುರು 'ಭಾರತದ ಜನತೆಯನ್ನು ಹುರಿದುಂಬಿಸಿ ಹೋರಾಡುವಂತೆಮಾಡಿರಿ' ಎಂದು ದೇಶದ ಮೂಲೆಮೂಲೆಗಳಿಂದ, ದೂರ ವಿದೇಶಗಳಿಂದಲೂ ವಿನಂತಿಯ ಮೇಲೆ ವಿನಂತಿಗಳು ಬಂದಿದ್ದರೂ, ಅವುಗಳನ್ನು ಕೇಳಿಯೂ ಕೇಳದಂತೆ ಮಾಡಿ ಲಾರ್ಡ್ ಲಿನ್‌ಲಿತ್‌ಗೋ ಭಾರತವನ್ನು ಬಿಟ್ಟು ಹೊರಟು ಹೋಗುತ್ತಾರೆ. ಕೆಲವರು ಆಶಾವಾದಿಗಳು ಭಾವಿಸಿದ್ದರು, ಲಾರ್ಡ್ ಅರ್ವಿನರಂತೆ, ರಾಷ್ಟ್ರದ ಮುಖಂಡರೊಡನೆ ಎಷ್ಟೇ ತಿಕ್ಕಾಟವುಂಟಾದರೂ, ಕೊನೆಗೆ ಹೊರಟು ಹೋಗುವಾಗ,ಲಾದರೂ ಅವರನ್ನು ಸೆರೆಮನೆಯಿಂದ ಬಿಡಿಸಿ, ಆದರಪೂರ್ವಕ ಬರಮಾಡಿಕೊಂಡು ಸ್ನೇಹದಿಂದ ಕೈಕುಲುಕಿಸಿ ಹೋದಾರು ಲಿನ್‌ಲಿತ್‌ಗೋ ಎಂದು. ಆದರೆ ಲಿನ್‌ಲಿತ್‌ಗೋರವರು ಆ 'ವೃಥೋಪಚಾರ' ಮಾಡಲಿಲ್ಲ; ತನ್ನ 'ಧೋರಣೆ'ಗೆ, ತನ್ನ 'ಗೌರವ'ಕ್ಕೆ ಆ ಮೂಲಕ 'ಬ್ರಿಟಿಷ್ ಧೋರಣೆ ಗೌರವ'ಗಳಿಗೂ ಕುಂದು ತರಲಿಲ್ಲ. ಆಶಾವಾದಿಗಳು ನಿರಾಶರಾದರೂ ಬ್ರಿಟಿಷ್ ಮಾಂಡಳಿಕರು ಅಮೆರಿ ಚರ್ಚಿಲರು ಖಂಡಿತವಾಗಿ 'ಭಲೇ ಭೇಷ್' ಎಂದು ಲಿನ್‌ಲಿತ್‌ಗ್ಲೋರವರ ಬೆನ್ನು ತಟ್ಟಿಯೇ ತಟ್ಟುತ್ತಾರೆ. ಭಾರತದ ಮುಂದಾಳುಗಳ ಗಾಂಧಿಜಿ, ಅಜಾದ್, ನೆಹರೂಗಳ ಕೈಕುಲುಕಿಸಿ ಹೋಗುವುದರಿಂದ' ಲಿನ್‌ಲಿತ್‌ಗೋರವರಿಗೆ ಆಗಬೇಕಾದುದಾದರೂ ಏನು?

ಬಂದ ವೈಸರಾಯರ ಕುರಿತು ಈಗ ಏನು ಹೇಳುವುದೂ ಅಸಮಂಜಸವಾದೀತು. ಆದರೆ ಇಷ್ಟೊಂದು ಮಾತ್ರ ಸ್ಪಷ್ಟ. ವೇವಲರ ವಿಷಯದಲ್ಲಿ ಯಾರೂ ವಿಶೇಷ ಆಶಾತುರರಾಗಿಲ್ಲ. ಏಕೆಂದರೆ ಸೇನಾಪತಿಯಾಗಿ ಅವರ ಕುರಿತು ಭಾರತೀಯರು ಚೆನ್ನಾಗಿ ಬಲ್ಲರು; ಅವರು ಸೇನಾಪತಿ ವೈಸರಾಯರೆಂದೂ ಬಲ್ಲರು. ವೈಸರಾಯ್ ಉದ್ಯೋಗ ವಹಿಸುವ ಮೊದಲು ಲಂಡನಿನ ಇಂಡಿಯಾ ಆಫೀಸಿನಲ್ಲಿ ಅಮೆರಿ ಕಂಪನಿಯಕ್ಕೆ ಕೆಳಗೆ 'ಯೋಗ್ಯ' ಶಿಕ್ಷಣ ಪಡೆದು ಬಂದವರೆಂದೂ ಬಲ್ಲರು. ಭಾರತೀಯರು ಇಷ್ಟು ಮಾತ್ರ ಬಲ್ಲವರಲ್ಲದೆ ಇನ್ನು ಇದಕ್ಕಿಂತ ಹೆಚ್ಚು, ಈಗಾಗಲೆ ಹೇಗೆ ಹೇಳುವುದು?

ಸ್ವದೇಶ ಸಮಾಚಾರ

ಶ್ರೀ. ದೇಶಪಾಂಡೆಯವರ ಬಿಡುಗಡೆ

ಶ್ರೀ. ಗಂಗಾಧರರಾವ್ ದೇಶಪಾಂಡೆಯವರನ್ನು ನಾಸಿಕ ಜೈಲಿನಿಂದ ಅನಾರೋಗ್ಯದ ನಿಮಿತ್ತ ಬಿಡುಗಡೆ ಮಾಡಿದ್ದು ಅವರು ಬೊಂಬಾಯಿಯಲ್ಲಿ ಡಾ। ದೇಶಮುಖರ ಶುಶ್ರೂಷೆಯಲ್ಲಿದ್ದಾರೆ.

ಶ್ರೀ. ಹುಕ್ಕೇರಿಕರ್ ಮತ್ತು ಕರಮಕರರ ಬಿಡುಗಡೆ

ಡಿಫೆನ್ಸ್ ಕಾನೂನಿನಂತೆ ಬಂದಿಸಲ್ಪಟ್ಟ ಶ್ರೀ. ಆರ್. ಎಸ್. ಹುಕ್ಕೇರಿಕರರ ಖಟ್ಲೆಯ ತೀರ್ಪಿತ್ತು ಧಾರವಾಡದ ಜಿಲ್ಲಾ ಜಡ್ಜರು ಅವರನ್ನು ಬಿಡುಗಡೆ ಮಾಡಿರುವರು. ಶ್ರೀ. ಹುಕ್ಕೇರಿಕರರು ತಮ್ಮ ಮುಂದೆ ಹಾಜರಾಗಬೇಕೆಂದು ೧೯೪೨ ಸಪ್ಟಂಬರದಲ್ಲಿ ಜಿಲ್ಲಾ ಮೆಜಿಸ್ಟ್ರೇಟರು ಆಜ್ಞೆ ಹೊರಡಿಸಿದ್ದು, ಅವರು ಹಾಜರಾಗದಿಲ್ಲವಾಗಿ ಅವರನ್ನು ಹುಡುಕಿ ಕೊಟ್ಟರೆ ಬಹುಮಾನ ಕೊಡುವುದಾಗಿ ಪೋಲೀಸರು ಜಾಹಿರುಮಾಡಿದ್ದರು. ಜಿಲ್ಲಾ ಮೆಜಿಸ್ಟ್ರೇಟರು ಈ ಹುಕುಮು ಹೊರಡಿಸಿದ ಕಾಲದಲ್ಲಿ ಫೆಡರಲ್ ಕೋರ್ಟಿನವರು ಡಿ. ಕಾನೂನಿನ ೨೬ನೆ ಕಲಮು ನಿಯಮ ಬಾಹಿರವೆಂದು ಸಾರಿದ್ದರಿಂದ ಆ ಅಕ್ರಮ ನಿಯಮದ ಮೇಲೆ ಹೊರಡಿಸಿದ ಆಜ್ಞೆ ಉಲ್ಲಂಘನೆ ಅಪರಾಧವಾಗುವುದಿಲ್ಲವೆಂದು ಜಡ್ಜರು ತೀರ್ಮಾನವಿತ್ತಿರುವರು. ಶ್ರೀ. ಡಿ. ಪಿ ಕರಮಕರರನ್ನೂ ಹೀಗೆ ಬಿಡುಗಡೆ ಮಾಡಲಾಗಿದೆ.

ಕಾಂಗ್ರೆಸು ಶಾಸನಭಂಗ ಹಿಂತೆಗೆದುಕೊಂಡಿಲ್ಲ

ಅಮೆರಿ ಹೇಳಿಕೆ

ಭಾರತದ ಆಹಾರ ಬಿಕ್ಕಟ್ಟಿನ ಬಗ್ಗೆ ಪಾರ್ಲಿಮೆಂಟಿನಲ್ಲಿ ಕಳೆದ ವಾರ ತೀವ್ರ ಚರ್ಚೆ ನಡೆಯಿತು. ಬಂಗಾಳದಲ್ಲಿ ವಾರಂಪ್ರತಿ ಒಂದು ಸಾವಿರ ಜನ ಉಪವಾಸದಿಂದ ಸಾಯುತ್ತಿದ್ದಾರೆಂಬ ಕೇಳಿದಕ್ಕೆ ಅದರ ನಿವಾರಣೆಗೆ ಸಮರ್ಥ ಆಡಳಿತಗಾರರನ್ನು ನೇಮಿಸಲಾಗಿದೆಯೆಂದು ಅಮೆರಿ ಹೇಳಿದರು. ಭಾರತಕ್ಕೆ ಆಹಾರವನ್ನು ಕಳುಹಿಸಲು ಸಿದ್ಧರಿರುವೆವೆಂದು ಜಪಾನೀಯರು ಆಕಾಶವಾಣಿಯಲ್ಲಿ ನುಡಿಯುತ್ತಿರುವುದು ನಿಜವೇ ಎಂದುದಕ್ಕೆ ಅದು ಅವರ ಕೇವಲ ಪ್ರಚಾರವೆಂದರು. 'ಭಾರತದ ಭಿನ್ನ ಭಿನ್ನ ಜಾತಿಗಳ ಸೌಹಾರ್ದವನ್ನುಂಟುಮಾಡಲು ಪ್ರಯತ್ನವನ್ನು ಹೊಸ ವೈಸರಾಯರು ಮಾಡುವರು. ಅಲ್ಲಿನ ರಾಜಕೀಯ ಬಿಕ್ಕಟ್ಟಿನ ಪರಿಹಾರದ ಭಾರವು ಅಲ್ಲಿನ ಮುಖಂಡರನ್ನು ಹೊಂದಿದೆ. ಗಾಂಧಿಜಿ, ವೈಸರಾಯ್ ಮೇಕ್ಸ್‌ವೆಲ್ಲರಿಗೆ ಬರೆದ ಪತ್ರದ ವಿಷಯ ಜುಲೈ ೧೯ನೇ ತಾರೀಕಿನ ಹೇಳಿಕೆಗಿಂತ ಹೆಚ್ಚೇನು ಹೇಳಲಿಕ್ಕಿಲ್ಲ' ಎಂದು ಅಮೆರಿ ಹಾಡಿದರು.

ಹಗಲಲ್ಲಿ ನಕ್ಷತ್ರ ಕಂಡಿತು!

ನಾಗಪುರದಲ್ಲಿ ತಾ. ೧೪ರಂದು ೨-೩೦ ಗಂಟೆಗೆ ಸುಮಾರು ಪಶ್ಚಿಮ ದಿಕ್ಕಿನಲ್ಲಿ ರೂಪಾಯಿಯಷ್ಟಗಲದ ತೇಜಪುಂಜ ನಕ್ಷತ್ರವೊಂದು ಕಾಣಬಂತು. ಜನರು ತಮ್ಮ ಕೆಲಸಗಳನ್ನೆಲ್ಲ ಬಿಟ್ಟು ಅದನ್ನು ನೋಡುತ್ತಾ ನಿಂತಿದ್ದರು.

ಸತ್ತ ಮಗು ೧೦ ವರ್ಷದ ನಂತರ ಬದುಕಿತು

ಬಂಗಾಳದಲ್ಲಿ ೧೧ ವರ್ಷಗಳ ಹಿಂದೆ ಹಾವಿನಿಂದ ಕಡಿಯಲ್ಪಟ್ಟು ಸತ್ತ ಒಂದು ಮಗು, ಮನೋಶಾ ಎಂಬ ನಾಗದೇವಿ ಬದುಕಿಸುವಳೆಂಬ ನಂಬಿಗೆಯಿಂದ ಮಗುವನ್ನು ನದಿಯಲ್ಲಿ ಬಿಡಲ್ಪಟ್ಟಿದ್ದು, ಮೊನ್ನೆ ವಿಜಯದಶಮಿ ದಿವಸ ಬದುಕಿ ಸಿಕ್ಕಿದೆ. ಹೆಚ್ಚಿನ ವಿಚಾರಣೆಗೆ ಪೋಲೀಸರ ವಶ ಒಪ್ಪಿಸಲಾಗಿದೆ.

ಫೆಡರಲ್ ಯೋಜನೆಯಲ್ಲಿ ವೈಸರಾಯರ ವಿಶ್ವಾಸ

ನರೇಂದ್ರ ಮಂಡಳದ ೧೯ನೇ ಅಧಿವೇಶನದ ಆರಂಭ ಭಾಷಣ ಮಾಡುತ್ತಾ ಹೋಗುವ ವೈಸರಾಯ್ ಲಿನ್‌ಲಿತ್‌ಗೋರವರು ಫೆಡರಲ್ ವ್ಯವಸ್ಥೆಯೇ ಯುಕ್ತವೆಂದೂ ಅದರಿಂದ ಭಾರತದ ಐಕ್ಯಮತ್ಯ ಮತ್ತು ರಾಜ್ಯಾಂಗ ಭವಿಷ್ಯವ ಸಾಧಿಸುವುದೆಂದೂ ಭರವಸೆಯಿಂದ ನುಡಿದರು. ಸಣ್ಣ ಸಣ್ಣ ಸಂಸ್ಥಾನಗಳೂ ವಿವಿಧ ಗುಂಪುಗಳಾಗಿ ಸೇರಿ ಆಡಳಿತ ವ್ಯವಸ್ಥೆ ಮಾಡಿಕೊಳ್ಳಬೇಕೆಂಬ ತಮ್ಮ ಹಿಂದಿನ ಸೂಚನೆಯನ್ನು ವೈಸರಾಯರು ಪುನಃ ಒತ್ತಾಯ ಪಡಿಸಿದರು.

ಕೊಚ್ಚಿ ಮಹಾರಾಜರ ನಿಧನ

ಕೊಚ್ಚಿ ಸಂಸ್ಥಾನದ ಮಹಾರಾಜರಾದ ಶ್ರೀ. ಕೇರಳ ವರ್ಮರು ತಾ. [illegible]ರಂದು ತಮ್ಮ ೭೯ನೇ ವಯಸ್ಸಿನಲ್ಲಿ ನಿಧನ ಹೊಂದಿದರು. ಇವರು ಸಂಸ್ಕೃತದಲ್ಲಿ ಮಹಾಪಂಡಿತರಾಗಿದ್ದರು. ಆಯುರ್ವೇದದಲ್ಲಿ ತುಂಬಾ ಪ್ರವೀಣರು. ಆಯುರ್ವೇದಾಭಿವೃದ್ಧಿಗೆ ತುಂಬಾ ಸಹಾಯಕರಾಗಿದ್ದರು. ಸಂಗೀತ ಕಲೆಗೂ ತುಂಬಾ ಪ್ರೋತ್ಸಾಹ ಕೊಡುತ್ತಿದ್ದರು. ಇವರ ಕಾಲದಲ್ಲಿ ಸಂಸ್ಥಾನದಲ್ಲಿ ತುಂಬಾ ಅಭಿವೃದ್ಧಿ ಕೆಲಸಗಳಾಗಿವೆ. ಸರ್ ಷಣ್ಮುಖಂ ಚೆಟ್ಟಿಯಾರರು ದಿವಾನಗಿರಿಯಿಂದ ನಿವೃತ್ತರಾದ ಕೂಡಲೇ ಇವರು ಕೊಚ್ಚಿ ಮಹನೀಯರೊಬ್ಬರನ್ನೇ ದಿವಾನರಾಗಿ ಮಾಡಬೇಕೆಂದು ಪ್ರಯತ್ನ ಪಟ್ಟರೂ, ಬ್ರಿಟಿಷ್ ಅಧಿಕಾರಿಯೊಬ್ಬರನ್ನು ಒತ್ತಾಯದಿಂದ ಕೊಚ್ಚಿ ದಿವಾನರಾಗಿ ನೇಮಿಸಲಾಯಿತು.

ನ್ಯೂಯಾರ್ಕಿನಲ್ಲಿ ಗಾಂಧಿ ಜಯಂತಿ

ಆಚರಿಸಲ್ಪಟ್ಟಿತು. ಇಲ್ಲಿನ ಇಂಡಿಯಾ ಲೀಗಿನವರು ಈ ಉತ್ಸವ ಆಚರಿಸಿದರು. ಬಂಗಾಳದ ಕ್ಷಾಮ ನಿವಾರಣೆಗೆ ರೂಸ್‌ವೆಲ್ಟರು ಏನಾದರೂ ಉಪಾಯ ಕೈಕೊಳ್ಳಬೇಕೆಂದು ಈ ಸಭೆಯಲ್ಲಿ ವಿನಂತಿಸಲಾಯಿತು. ಈ ಸಭೆಗೆ ಸಕಲ ಜಾತಿ ಮತ ಪಂಥದವರೂ, ಅಮೆರಿಕನರೂ ತುಂಬಾ ಮಂದಿ ಬಂದಿದ್ದರು. ಸರ್ದಾರ್ ಜೆ. ಜೆ. ಸಿಂಗ್ ಮೊದಲಾದವರ ಭಾಷಣಗಳಿದ್ದುವು.

ಜಯಪ್ರಕಾಶರ ಬಂಧನ!

ಕಾಂಗ್ರೆಸ್ ಸೋಶಿಯಲಿಸ್ಟ್ ಮುಖಂಡರಾದ ಶ್ರೀ. ಜಯಪ್ರಕಾಶ ನಾರಾಯಣರನ್ನು ಪಂಜಾಬಿನಲ್ಲಿ ಬಂಧಿಸಿದರೆಂದು ಸುದ್ದಿಯಿದೆ. ಇವರನ್ನು ಹುಡುಕಿ ಕೊಟ್ಟವರಿಗೆ ಸರಕಾರವು ರೂ. ೧೦ ಸಾವಿರ ಇನಾಮು ಸಾರಿತ್ತು.

ಜಿಲ್ಲಾ ಸಮಾಚಾರಗಳು

ಮಂಗಳೂರು

ಜಿಲ್ಲಾ ಕಲೆಕ್ಟರರಲ್ಲಿ ಮುನಿಸಿಪಲ್ ಕೌನ್ಸಿಲ್ ಸಮಿತಿ

ಮಂಗಳೂರು ಮುನಿಸಿಪಲ್ ಕೌನ್ಸಿಲಿನಿಂದ ಯೋಜಿಸಲ್ಪಟ್ಟ ೬ ಮಂದಿ ಸದಸ್ಯರ ಸಮಿತಿ ಯವರು ನಮ್ಮ ಜಿಲ್ಲಾ ಕಲೆಕ್ಟರರನ್ನು ಕಳೆದ ಶನಿವಾರ ಹಜೂರ್ ಕಚೇರಿಯಲ್ಲಿ ಭೇಟಿಯಾಗಿ, ಸೀಮೆ ಎಣ್ಣೆ, ಹೊಸ ಬತ್ತ, ಅಕ್ಕಿಗಳ ವಿಚಾರ ದಲ್ಲಿ ಮಾತುಕತೆ ನಡೆಸಿದರು. ಚಿಲ್ಲರೆ ವ್ಯಾಪಾರಿಗಳು ತಮಗೆ ಕೊಡಲಾದ ಎಣ್ಣೆಯಲ್ಲಿ ಗ್ಯಾಲನೊಂದಕ್ಕೆ ಇಂತಿಷ್ಟೇ ಎಣ್ಣೆಯನ್ನು ಮಾರ ಬೇಕೆಂದೂ ಅಪರಿಮಿತಿಯನ್ನು ನಿರ್ಧರಿಸಬೇಕೆಂದೂ ಬಂದ ಸೂಚನೆಯನ್ನು ಸ್ವೀಕರಿಸಲಾಯಿತೆಂದು ಗೊತ್ತಾಗಿದೆ.

ಮಿಲ್ಲುಗಳಿಗೆ ಬತ್ತವನ್ನು ಒದಗಿಸುತ್ತಿರುವ ೨ ಕ್ಷೇತ್ರಗಳಿಂದಲೂ, ಬತ್ತವನ್ನೇ ಗೇಣಿರೂಪದಲ್ಲಿ ತೆರುವ ಆ ಕ್ಷೇತ್ರಗಳಿಂದಲೂ ಬತ್ತವನ್ನು ರಿಕ್ವಿಜಿಶನ್ ಮಾಡುವಂತೆಯೂ, ಅವಲಕ್ಕಿಗಾಗಿ ಬತ್ತ ಮಾರಾಟವಾಗುತ್ತಿರುವಲ್ಲಿ ಆ ಮಾರಾಟವನ್ನು ನಿಲ್ಲಿಸಲಾಗುವುದಿಲ್ಲವೆಂತಲೂ ಅಭಿಪ್ರಾಯವು ಪ್ರಕಟವಾಯಿತಲ್ಲದೆ, ರಿಕ್ವಿಜಿಶನ್ ಕಾರ್ಯದಿಂದ ತಪ್ಪುವ ಹಾಗೆ ಹಸಿ ಬತ್ತವನ್ನೇ ಮಾರಾಟ ಮಾಡುವುದಾದರೆ ಅದನ್ನು ರಿಕ್ವಿಜಿಶನ್ ಮಾಡಲಾಗುವುದೆಂದೂ ಈ ಸಂಬಂಧ ವರ್ಗದಾರರ ಸಹಕಾರವನ್ನು ಪಡೆಯಲು ಡೆಪ್ಯುಟಿ ಕಲೆಕ್ಟರರು ಅಲ್ಲಲ್ಲಿ ಸಂಚರಿಸುವರೆಂದೂ, ಅಂಥ ಸಹಕಾರ ದೊರಕದ ಕಡೆಗಳಲ್ಲಿ ಬತ್ತವನ್ನು ರಿಕ್ವಿಜಿಶನ್ ಮಾಡಲಾಗುವುದೆಂದೂ, ಅಕ್ಕಿ ತಯಾರಿಗಾಗಿ ಎರಡು ಹೊಸ ಮಿಲ್ಲುಗಳು ಸ್ಥಾಪನೆಯಾಗಲಿದ್ದು ಅಲ್ಲಿ ಅಕ್ಕಿ ಬತ್ತಗಳ ಸರಿಯಾದ ಲೆಕ್ಕಾಚಾರಕ್ಕೆ ಸೌಲಭ್ಯ ದೊರೆಯುವುದೆಂದೂ, ಬರುವ ಫೆಬ್ರುವರಿ ವರೆಗೆ ಈ ಏರ್ಪಾಡು ಜಾರಿಯಲ್ಲಿರಬಹುದೆಂದೂ ರೂ. ೧೦೦ ಕ್ಕೆ ಅಥವಾ ಮೇಲ್ಪಟ್ಟ ತೀರ್ವೆ ತೆರುವವರ ಮಟ್ಟಿಗೆ ಈಗ ರಿಕ್ವಿಜಿಶನಿನ ಏರ್ಪಾಡು ಅನ್ವಯಿಸುತ್ತಿದ್ದರೂ ೫೦ ರೂ. ಅಥವಾ ಮೇಲ್ಪಟ್ಟು ತೀರ್ವೆ ತೆರುವವರ ವಿಚಾರವನ್ನೂ ಅಗತ್ಯವಿದ್ದಂತೆ ಪರ್ಯಾಲೋಚಿಸಲಾಗುವುದೆಂದೂ ಭತ್ತದ ಕ್ರಯವನ್ನು ನಿರ್ಧರಿಸಬೇಕಾದುದು ಕೇಂದ್ರ ಸರಕಾರದ ಅಧಿಕಾರಕ್ಕೆ ಒಳಪಟ್ಟಿದ್ದೆಂದೂ, ರೇಶನಿಂಗ್ ಬಂದ ನಂತರ ಮಾತ್ರ ಆ ಕಾರ್ಯದಲ್ಲಿ ಜಿಲ್ಲಾ ಕಲೆಕ್ಟರರು ಪ್ರವೇಶಿಸಬಹುದೆಂದೂ, ಜಿಲ್ಲೆಯ ಹೆಡ್ ಕ್ವಾರ್ಟರ್ಸ್‌ಗಳಲ್ಲಿಯೂ ಸಣ್ಣ ಊರುಗಳಲ್ಲಿಯೂ ರೇಶನಿಂಗ್ ಪದ್ಧತಿ ಜಾರಿಗೆ ಬರುವಂತೆ ಜಿಲ್ಲಾ ಕಲೆಕ್ಟರರು ಶಿಫಾರಸು ಮಾಡಿರುವರೆಂದೂ, ಮಂಗಳೂರಲ್ಲಿಯೂ ಕಾಸರಗೋಡು ಪ್ರಾಂತದಲ್ಲಿನ ಪ್ರಾಮುಖ್ಯ ಡಿಫಿಸಿಟ್ ಕ್ಷೇತ್ರಗಳಲ್ಲಿಯೂ ಮೊದಲು ರೇಶನಿಂಗ್ ಜ್ಯಾರಿಗೆ ಬರಬಹುದೆಂದೂ, ಭತ್ತ ಅಕ್ಕಿ ಹೊರಗೆ ಹೋಗದಂತೆ ಆ ಸಬಂಧವು ಇನ್ನೂ ಇರುವುದೆಂದು ಮೈಸೂರಲ್ಲಿ ಅಕ್ಕಿಯ ಬೆಲೆ ಇಲ್ಲಿಗಿಂತ ಕಡಿಮೆ ಇರುವುದರಿಂದ ಅತ್ತ ಕಡೆಗೆ ಇಲ್ಲಿನ ಭತ್ತ ಅಕ್ಕಿ ಸಾಗುವ ಸಂಭವವೇ ಇಲ್ಲವೆಂದೂ, ದೋಣಿಗಳಲ್ಲಿ ಸಾಗುವ ಅಕ್ಕಿ ಭತ್ತಗಳನ್ನು ಅಲ್ಲಲ್ಲಿ ಪರಿಶೋಧಿಸುವ ಈ ವ್ಯವಸ್ಥೆಯನ್ನು ಬಹಳ ಪರಿಣಾಮಕಾರಿಯಾದ ರೀತಿಯಲ್ಲಿ ನಡೆಸುತ್ತಿದ್ದು, ಕಳ್ಳತನದಿಂದ ಅಕ್ಕಿ ಭತ್ತ ಸಾಗದಂತೆ ಮಲಬಾರಿನ ಅತ್ತ ಕಡೆಗೆ ಜಾಗರೂಕತೆ ವಹಿಸಲಾಗಿದೆ ಎಂದೂ ಈ ಮಾತುಕತೆಯಲ್ಲಿ ತಿಳಿದುಬಂದಿದೆ.

ಮಿತ್ರಮಂಡಳಿ

ಇದರ ಕಾರ್ಯಕಾರೀ ಸಮಿತಿ ಸಭೆಯು ಕಳೆದ ಬುಧವಾರ ಸಂಜೆ ಶ್ರೀ. ಎಂ. ವಿ. ಪ್ರಭುಗಳ ಅಧ್ಯಕ್ಷತೆಯಲ್ಲಿ ಸೇರಿ ಈ ವರ್ಷ 'ವಿನೋದ ಚಿತ್ರಗಳು' ಮಾದರಿಯ ಚುಟುಕು ಪ್ರಬಂಧಗಳ ಒಂದು ಪುಸ್ತಕ ಸಂಗ್ರಹವನ್ನು ಮಿತ್ರಮಂಡಳಿಯಿಂದ ಪ್ರಕಟಿಸುವುದೆಂದೂ, 'ಅಂದಿನ ಅಪೂರು' ಪುಸ್ತಕದ ಕುರಿತು ಕಾಲೇಜು ವಿದ್ಯಾರ್ಥಿಗಳಿಗೆ ವಾರ್ ಸ್ಪರ್ಧೆಯನ್ನೇರ್ಪಡಿಸಿ ಬಹುಮಾನ ಕೊಡುವುದೆಂದೂ ನಿರ್ಣಯಗಳಾದುವು.

ಪ್ರಕಾಶ ಕೂಟ

ದ ಕಾರ್ಯಕಾರೀ ಸಮಿತಿ ಸಭೆಯು ಶ್ರೀ. ಕೆ. ಜಿ. ರಾಯರ ಅಧ್ಯಕ್ಷತೆಯಲ್ಲಿ ಜರಗಿ, ಸರಿಕ್ಕೆ ಒಂದು ಆಫೀಸು ತೆರೆವ ನಿರ್ಧಾರವಾಯಿತು. ಎ. ಆರ್. ಪಿ. ಶಿಕ್ಷಣ ಪಡೆಯಲು ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಿ ಏರ್ಪಾಡು ಮಾಡಬೇಕೆಂದೂ, ಸಾಂಸ್ಕೃತಿಕ ಚಟುವಟಿಕೆಗಳನ್ನು ಪ್ರತಿ ಆದಿತ್ಯವಾರ ಕೂಟದ ಕಚೇರಿಯಲ್ಲಿ ಜರಗಿಸಬೇಕೆಂದೂ ಸಂಘದ ವಾರ್ಷಿಕೋತ್ಸವವನ್ನು ಡಿಸೆಂಬರ ಕೊನೆ ವಾರ ಇಲ್ಲವೇ ಜನವರಿ ಪ್ರಥಮ ವಾರ ಜರಗಿಸಬೇಕೆಂದೂ, ಸಭಾಸ್ಯರನ್ನು ಸೇರಿಸುವ ಅವಧಿ ಮುಂದುವರಿಸಬೇಕೆಂದೂ ನಿರ್ಣಯಗಳಾದುವು.

ಲಂಚ ತೆಗೆದುಕೊಂಡದ್ದಕ್ಕೆ ಸರಕಾರೀ ನೌಕರರು ಸಸ್ಪೆಂಡ್ ಮಾಡಲ್ಪಟ್ಟರು

ಕೊಯಂಬುತ್ತೂರಿನಲ್ಲಿ, ಆಹಾರ ಧಾನ್ಯಗಳ ಕುರಿತು ಲಂಚ ತೆಗೆದುಕೊಂಡ ಬಗ್ಗೆ ಒಬ್ಬ ಕಮರ್ಶಿಯಲ್ ಟೇಕ್ಸ್ ಆಫೀಸರ್, ಅವರ ಕ್ಲಾರ್ಕ್, ಒಬ್ಬ ಡೆಪ್ಯುಟಿ ಕಮರ್ಶಿಯಲ್ ಟೇಕ್ಸ್ ಆಫೀಸರ್, ಮೂವರು ತಹಶಿಲ್ದಾರರು, ಒಬ್ಬರು ರೆವಿನ್ಯೂ ಇನ್ಸ್‌ಪೆಕ್ಟರರು, ಇಬ್ಬರು ತಾಲೂಕು ಆಫೀಸು ಕ್ಲಾರ್ಕರು ಇಷ್ಟು ಮಂದಿ ಸಸ್ಪೆಂಡ್ ಮಾಡಲ್ಪಟ್ಟಿರುವರು.

ಸಮ್ಮತಿಯಿಲ್ಲ

ರಶ್ಯದಲ್ಲಾದ ನವಂಬರ್ ಕ್ರಾಂತಿಯ ೩೧ನೇ ವರ್ಧಂತಿಯನ್ನು ತಾ. ೧೧ರಿಂದ ೭೮ ತನಕ ಆಚರಿಸಲು ಮಂಗಳೂರು ಕಮ್ಯುನಿಸ್ಟ್ ಪಕ್ಷದವರಿಗೆ ಅಧಿಕಾರಿಗಳ ಅನುಮತಿ ಸಿಗಲಿಲ್ಲವೆಂದು ತಿಳಿದುಬಂದದೆ.

ಅ.ಕ. ಪತ್ರಿಕೋದ್ಯೋಗಿ ಸಮ್ಮೇಳನ

ಇದರ ಸ್ವಾಗತ ಸಮಿತಿಯ ಕಾರ್ಯನಿರ್ವಾಹಕ ಮಂಡಳಿಯ ಸದಸ್ಯರಾಗಿರಲು 'ವಿವೇಕಾಭ್ಯುದಯ'ದ ಸಂಪಾದಕರಾದ ಎಡ್ವೋಕೇಟ್ ಶ್ರೀ. ಧರ್ಮಸ್ಥಳ ಪುಟ್ಟುಸ್ವಾಮಿಯವರು ತನ್ನ ಒಪ್ಪಿಗೆಯಿತ್ತಿದ್ದಾರೆ.

ಬಿಡುಗಡೆ

ಕಲ್ಲಮುಂಡ್ಕೂರಿನಲ್ಲಿ ಸಾಪ್ರಿ ಪಿಂಟೋ ಎಂಬಾತನು ಸೀನ ನರಸಣ್ಣ ಎಂಬಾತನನ್ನು ಕೊಲೆ ಮಾಡಿದನೆಂಬ ಆರೋಪದ ಮೊಕದ್ದಮೆ ನಮ್ಮ ಜಿಲ್ಲಾ ಜಡ್ಜರಲ್ಲಿ ನಡೆದು ಆರೋಪಿಯು ಬಿಡುಗಡೆಯಾಯಿತು.

ಆಂಧ್ರ ಆಕ್ರಮಣ ನಿಷೇಧ

'ಮಿತ್ರಮಂಡಳಿ'ಯ ಸಭೆಯು ತಾ. ೧೭ರಂದು ಶ್ರೀ ಕೆ. ಎಸ್. ಅಡಿಗರ ಅಧ್ಯಕ್ಷತೆಯಲ್ಲಿ ಸೇರಿ ಈ ಕೆಳಗಿನ ನಿರ್ಣಯವನ್ನು ಮಾಡಿತು. 'ಬಳ್ಳಾರಿಯ ಹಾಗೂ ಸುತ್ತಲಿನ ಕೆಲ ಆಂಧ್ರರು, ಬಳ್ಳಾರಿಯಲ್ಲಿ ಆಂಧ್ರ ಮಹಾ ಸಭೆಯ ೨೪ನೆಯ ಅಧಿವೇಶನವನ್ನು ಕರೆದು ಆ ಮೂಲಕ ಬಳ್ಳಾರಿ, ಅನಂತಪುರ, ಕರ್ನೂಲ ಜಿಲ್ಲೆಗಳ ಕನ್ನಡ ಭಾಗಗಳನ್ನು ಆಂಧ್ರ ಪ್ರಾಂತ್ಯಕ್ಕೆ ಸೇರಿಸುವ ಒಪ್ಪಿಗೆ ಪಡೆಯಲು ಪ್ರಯತ್ನ ಮಾಡುತ್ತಿರುವರೆಂಬುದನ್ನು ಕೇಳಿ ಅಖಿಲ ಕರ್ನಾಟಕದ ಕನ್ನಡಿಗರು ಬಹಳ ಸಂತಾಪ ಪಟ್ಟಿದ್ದಾರೆ. ಆದ್ದರಿಂದ ಈ ಕುರಿತು ದಕ್ಷಿಣ ಕನ್ನಡದ ಕನ್ನಡಿಗರ ನಿಷೇಧ ಪ್ರದರ್ಶನವಾಗಿ ಮಂಗಳೂರಿನ ಮಿತ್ರಮಂಡಳಿಯ ಈ ಸಭೆಯು, ಆಂಧ್ರರ ಈ ಆಕ್ರಮಣ ಧೋರಣೆಯನ್ನು ನಿಷೇಧಿಸುತ್ತದಲ್ಲದೆ, ಆಂಧ್ರರ ಆಕ್ರಮಣ ಧೋರಣೆಯು ಕನ್ನಡಿಗರ ಹಾಗೂ ಆಂಧ್ರರ ಅನ್ಯೋನ್ಯ ಮೈತ್ರಿ ಹಾಗೂ ಹಿತ ಸಂಬಂಧಗಳಿಗೆ ಘಾತುಕವಾದುದೆಂದು ಅಭಿಪ್ರಾಯ ಪಡುತ್ತದೆ'.

ಈ ನಿರ್ಣಯವನ್ನು ಬಳ್ಳಾರಿಯ ಆಂಧ್ರ ಮಹಾ ಸಭಾ ಸ್ವಾಗತ ಸಮಿತಿಗೂ ಪ್ರಾಂತದ ಪತ್ರಿಕೆಗಳಿಗೂ ಕಳುಹಿಸಿಕೊಡಲಾಗಿದೆ.

ಪ್ರಕಾಶ ಎಸೋಸಿಯೇಶನ್‌ನವರೂ ಈ ದಿನ ಶ್ರೀ ಪಿ. ಎನ್. ಶೆಣೈಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ಮೇಲಿನ ನಿರ್ಣಯವನ್ನು ಮಂಜೂರು ಮಾಡಿ, ಬಳ್ಳಾರಿ ಆಂಧ್ರ ಮಹಾ ಸಭಾ ಸ್ವಾಗತ ಸಮಿತಿಗೂ ಪ್ರಾಂತಿಕ ಪತ್ರಿಕೆಗಳಿಗೂ ಕಳುಹಿಸಿಕೊಟ್ಟಿರುವರು.

ಎಕ್ಕಾರಿನಲ್ಲಿ ನೆರೆಹಾವಳಿ

ತಾ. ೧೯ರಂದು ಮಧ್ಯರಾತ್ರಿಯ ಸಮಯ ಪ್ರಾರಂಭವಾದ ಮಳೆ ಎಡೆಬಿಡದೆ ಬಂದು, ಮೂಡು ಪೆರಾರು, ಪಡು ಪೆರಾರು, ತೆಂಕ ಎಕ್ಕಾರು, ಬಡಗ ಎಕ್ಕಾರು ಈ ಗ್ರಾಮಗಳ ನಡುವೆ ಹರಿದು ಹೋಗುವ ತೋಡು ಉಕ್ಕಿ ಬಂದು ಭತ್ತ ಬೈ ಹುಲ್ಲು, ಮನೆಮಾರು, ಮರ ಮೋಪು ಧನಧಾನ್ಯ, ಫಲಸ್ಯದು, ಪಶುಪಕ್ಷಿ, ಮುಂತಾದನ್ನು ನೀರಿನ ಪ್ರವಾಹದಿಂದ ಕೊಚ್ಚಿಕೊಂಡು ಹೋಗಿ ಬಜಪೆ ಕಿನ್ನಿಗೋಳಿ ರಸ್ತೆಯಲ್ಲಿ ಸುಮಾರು ೧೪ ಮೈಲು ೬ ಫರ್ಲಾಂಗಿನ ಹತ್ತಿರ ತೆಂಕ ಎಕ್ಕಾರು ಬಡಗ ಎಕ್ಕಾರನ್ನು ಜೋಡಿಸುವ ಸಂಕದ ಸಮೀಪ ಜನೆಯಾಗಿ, ಸಂಕದ ಕಂಡಿಗಳು ಸಪೂರವಾಗಿಯೋ ಯಾ, ಹೊಡೆದುಕೊಂಡು ಬಂದ ಯಾವತ್ತೂ ಕಸರು ಕೊಳೆಯಿಂದ ನೀರ ಬಾರಿ ಬಂದು ಆಗಿದ್ದೋ, ಹೇಗೂ ತೋಡಿನ ಇತ್ತಂಡದಲ್ಲಿಯೂ ವಿಸ್ತಾರವಾಗಿ ನೀರು ಉಕ್ಕಿ, ಇದರಿಂದ ಉಂಟಾದ ಜಖಂ ನಷ್ಟ, ಕಷ್ಟ ಅಷ್ಟಿಷ್ಟೆಂದು ಬಣ್ಣಿಸಲು ಅಸಾಧ್ಯ. ಒಂದೆರಡು ತಾಸಿನಲ್ಲಿ ಒಂದೇ ಸವನೆ ಸಂಕದ ದಕ್ಷಿಣ ಪಾರ್ಶ್ವದ ಕುಂದವೂ ಸಂಕದ ಅರ್ಧಾಂಶ ಭಾಗವೂ ಭಾಗವಾಗಿ ಒಡೆದು ಸಂಕದ ದಕ್ಷಿಣದಲ್ಲಿ ಡಿಸ್ಟ್ರಿಕ್ಟ್ ಬೋರ್ಡು ರಸ್ತೆಯೂ ೧೦-೧೨ ಕೋಲು ಉದ್ದಕ್ಕೂ ಇಡೀ ಕೊಚ್ಚಿಕೊಂಡು ಹೋಗಿ ಯಾವತ್ತೂ ಮೇಲೆ ಜಮಾ ಆದ ನೀರು ಕೆಳಗೆ ಪ್ರವಹಿಸಿ ಬಹಳ ದೂರದ ಹಳ್ಳಿಗಳ ವರೆಗೆ ತೋಡಿನ ಇತ್ತಂಡದಲ್ಲಿರುವ ವಿಸ್ತಾರವಾಗಿರುವ ಬೈಲಿಗೆ ಹರಿದು ಭತ್ತ ಬೈ ಹುಲ್ಲು ಸಿಕ್ಕದ ರೀತಿಯಲ್ಲಿ ಜಖಂ ಆಗಿ ಸುಗ್ಗಿಗೆ ಹಾಕಿದ ನೇಜಿ ನುಚ್ಚಾಗಿ, ಸಂಕದ ಮೇಲೆ ಕೆಳಗೆ ಹಲವು ಕಟ್ಟಿ ಹುಣಿಗಳು ಕುಸಿದು ಹೋಗಿಯೂ ರಾಶಿರಾಶಿಯಾಗಿ ಹರಿದು ಗದ್ದೆಗಳಲ್ಲಿ ತುಂಬಿರುತ್ತದೆ. ಈಗಿನ ಕಷ್ಟಕಾಲದಲ್ಲಿ ಕಷ್ಟಪಟ್ಟು ದುಡಿದು ಕೈಗೆ ಬಂದ ತುತ್ತು ಬಾಯಿಗೆ ಮುಟ್ಟದ ಹಾಗೆ ಈ ನೆರೆಯ ಹಾವಳಿಯಿಂದ ಮನೆಮಾರು, ಅನ್ನ ನೀರು, ಎತ್ತು ಸೊತ್ತು ಇಲ್ಲದೆ ಹಲವರು ಬೆಂಡಾಗಿದ್ದಾರೆ.

ಗುರುಪುರ, ಬಜಪೆ, ಕಟೀಲು, ಕಿನ್ನಿಗೋಳಿ, ಮುಲ್ಕಿ ಸಂಕಲಕರಿಯ ಈ ಮೋಟಾರು ಲೈನಿನಲ್ಲಿ ಪಬ್ಲಿಕ್ ಕನ್ವೇಯನ್ಸಿನವರು ಎಲ್ಲರೂ ಸಹಕರಿಸಿ ಪ್ರಯಾಣಿಕರಿಗೆ ತೊಂದರೆಯಾಗದಂತೆ ಹಿಂದಿನಂತೆ ಇನ್ನು ಮುಂದೆಯೂ ಬಸ್ಸುಗಳ ಸೌಕರ್ಯ ಮಾಡಿದರೆ ಜನರಿಗೆ ತುಂಬಾ ಅನುಕೂಲವಾಗುತ್ತಿತ್ತು. ಅಲ್ಲದೆ ಈ ಮುಖ್ಯ ಮಾರ್ಗವನ್ನು ಹಾಗೂ ಸಂಕವನ್ನು ಕೂಡಾ ಬೇಗನೆ ಸರಿಪಡಿಸಿದ್ದಲ್ಲಿ ಶಾಲಾ ಮಕ್ಕಳಿಗೂ ವ್ಯಾಪಾರದ ಆಮದು ರಫ್ತಿಗೂ ತುಂಬಾ ಅನುಕೂಲವಾಗುತ್ತಿತ್ತು' ಎಂದು ಬಜಪೆಯ ಡಾ। ಎಂ. ರಂಗಪ್ಪ ಕಾಮತರು ಬರೆಯುತ್ತಾರೆ.

ಪುತ್ತೂರು

ಭೂಮಾಲಿಕರ ಸಭೆ

ಯೊಂದು ತಾ. ೨೪ರಂದು ಮಧ್ಯಾಹ್ನ ೨ ಗಂಟೆಗೆ ಸಹಕಾರೀ ಸಂಘದ ಕಟ್ಟಡದಲ್ಲಿ ಜರಗುವುದು. ೧) ಅಕ್ಕಿ ಯಾ ಭತ್ತವನ್ನು ಬಲಾತ್ಕಾರದಿಂದ ಸರಕಾರದವರು ಭೂಮಾಲಿಕರಿಂದಾಗಲಿ ಅವರ ಒಕ್ಕಲುಗಳಿಂದಾಗಲಿ ಕೊಂಡು ಹೋಗಬಾರದು. ೨) ಪ್ರತಿಯೊಂದು ತಾಲೂಕಿನ ವ ಸಬ್ ತಾಲೂಕಿನ ಕೇಂದ್ರಗಳಲ್ಲಿ ಅಕ್ಕಿಯನ್ನು ಹಂಚುವ ಏರ್ಪಾಡು ಮಾಡಬೇಕು. ೩) ರೇಶನಿಂಗ್ ಮಾಡುವ ಬಗ್ಗೆ ಅಕ್ಕಿ ಸಂಗ್ರಹಿಸುವರೆಂದೂ ೫೦ಕ್ಕಿಂತ ಹೆಚ್ಚು ತೀರ್ವೆ ಕೊಡುವ ವರ್ಗದಾರರು ಖರ್ಚಿನ ಮಟ್ಟಿಗೆ ಇಟ್ಟುಕೊಂಡು ಮಿಕ್ಕ ತಮ್ಮ ಅಕ್ಕಿ ಭತ್ತಗಳಲ್ಲಿ ½ ಅಂಶಕ್ಕೆ ಕಡಿಮೆಯಾಗದಷ್ಟು ಅಗತ್ಯವಿದ್ದಲ್ಲಿ ½ ವರೆಗೂ ಮುಡಿ ಒಂದರ ರೂ. ೧೦ರ ಕ್ರಯಕ್ಕೆ ಸರಕಾರಕ್ಕೆ ಆಯಾಯ ತಾಲೂಕು ಕೇಂದ್ರಗಳಿಗೆ ತಮ್ಮ ಖರ್ಚಿನಿಂದ ಸಾಗಿಸಿ ಕೊಡಬೇಕು. ೪) ಹೀಗೆ ಸಾಗಿಸಿದ ಕೂಡಲೇ ವರ್ಗದಾರರಿಗೆ ಕೊಡುವ ಏರ್ಪಾಡನ್ನು ಸರಕಾರ ಮಾಡಬೇಕು. ೫) ಮೇಲೆ ಕಾಣಿಸಿದಂತೆ ಅಕ್ಕಿಯನ್ನು ೧೯೪೯ ಫೆಬ್ರುವರಿ ಒಳಗೆ ವರ್ಗದಾರರು ಕೊಡಬೇಕು—ಇತ್ಯಾದಿ ವಿಚಾರಗಳಿದರಲ್ಲಿ ಚರ್ಚಿಸಲ್ಪಡುವುವು.

ಅಭ್ಯಾಸಗೋಷ್ಠಿ 'ಮಿತ್ರಮಂಡಳಿ'ಯಲ್ಲಿ ಕಾಮತರ ನೆನಪು

ತಾ. ೧೬ರ ಸಂಜೆ ಥಿಯೊಸಾಫಿಕಲ್ ಲಾಜಿನಲ್ಲಿ ಶ್ರೀ ಪಿ. ಕೆ. ನಾರಾಯಣರವರ ಅಧ್ಯಕ್ಷತೆಯಲ್ಲಿ ಸೇರಿದ ಮಿತ್ರಮಂಡಳಿಯ ವಾರದ ಅಭ್ಯಾಸಗೋಷ್ಠಿಯಲ್ಲಿ ಮಿತ್ರಮಂಡಳಿಯ ಪ್ರಕಟಣೆಯಾದ ದಿವಂಗತ ಎಂ. ಎನ್. ಕಾಮತರ ಜೀವನ ಸ್ಮರಣೆಗಳುಳ್ಳ ಹಾಗೂ ಅವರ ಕೆಲವು ಕಥಾ ಸಂಗ್ರಹವಾದ 'ಅಂದಿನ ಅಪೂರು' ಪುಸ್ತಕದ ಕುರಿತು ಪ್ರಸ್ತಾವಿಕ ಅಭ್ಯಾಸಗಳಾದುವು.

ಶ್ರೀ ಜೆ. ವಾಮನ ಭಟ್ಟರು, ಎಂ. ಎನ್ ಕಾಮತರ ನೆನಪುಮಾಡಿ ಕೊಡುತ್ತಾ, ಕನ್ನಡ ಸಾಹಿತ್ಯ ವೃದ್ಧಿಯಾಗಬೇಕೆಂಬ ಬಗ್ಗೆ ಕಾಮತರು ಹೇಗೆ ಚಡಪಡಿಸುತ್ತಿದ್ದರು, ಯಾವ ಯಾವ ಸೂಚನೆಗಳನ್ನೀಯುತ್ತಿದ್ದರು, ಎಂಬುದನ್ನು ತಿಳಿಸಿ ಮೈಸೂರು ವಿಶ್ವವಿದ್ಯಾನಿಲಯದವರು 'ಪ್ರಚಾರ ಪುಸ್ತಕ ಮಾಲೆ' ಪ್ರಾರಂಭ ಮಾಡುವ ಹತ್ತಾರು ವರ್ಷಗಳ ಹಿಂದೆಯೇ ಕಾಮತರು ಅಂಥ ಪುಸ್ತಕಗಳನ್ನು ಬರೆದು ಪ್ರಕಟಿಸಬೇಕೆಂದು ಹೇಳುತ್ತಿದ್ದರೆಂದು ಮೊದಲಾಗಿ ಹೇಳಿ, ಅಂದಿನ ಅಪೂರು ಪುಸ್ತಕವನ್ನು ಸಂಪಾದಿಸುವರೆ ಕಾರಣ ಯಾವುದೆಂಬುದನ್ನು ವಿವರಿಸುತ್ತಾ, ಕಾಮತರು ತನ್ನೀ ಕತೆಗಳಲ್ಲಿ ನಮ್ಮ ನಾಡಿನ ಜೀವನದ ಚಿತ್ರ ತೋರಿಸಿದ್ದಾರೆಂದು ಹೇಳಿ, ಹೆಚ್ಚಿನ ಅಭ್ಯಾಸಗಳನ್ನು ಬರುವ ವಾರ ಸಭೆಯು ಮುಂದಿಸುವುದಾಗಿ ತಿಳಿಸಿದರು.

ಶ್ರೀ ಎಂ. ವಿ. ಪ್ರಭುಗಳು ಮಾತನಾಡಿ 'ಅಂದಿನ ಅಪೂರು' ಪುಸ್ತಕದ ಮುನ್ನುಡಿ ದೊಡ್ಡದಾಯಿತೆಂದೂ ಅದನ್ನು ಸ್ವಲ್ಪ ಕಡಮೆ ಮಾಡಿದ್ದರೆ ಚೆನ್ನಾಗಿತ್ತೆಂದೂ ಹೇಳಿ ಕಾಮತರ ಕೆಲವು ಕತೆಗಳ ಸ್ವಾರಸ್ಯವನ್ನು ವಿವರಿಸಿದರು.

ಶ್ರೀ ಟಿ. ಶಂಕರ ಭಟ್ಟರು ಮಾತನಾಡಿ ಕಾಮತರ ಜೀವನ ಸ್ಮರಣೆಗಳನ್ನೀಯುತ್ತಾ, ಅವರ ಲೇಖನಗಳು ಪ್ರೇರಣೆಯಿಂದುಂಟಾದವುಗಳೆಂದೂ ತಿಳಿಸಿ, ಅವರ ಕತೆಗಳಲ್ಲಿರುವ ಹಾಸ್ಯ ವಿಡಂಬನೆ ಸಹಜ ಚಿತ್ರಗಳ ವಿಷಯ ತಿಳಿಸಿದರು.

ಕೆ. ಎಸ್. ಅಡಿಗರು ಮಾತನಾಡುತ್ತಾ, ದಿವಂಗತ ಕಾಮತರ 'ಕೃತಿಯ' ಕುರಿತು ಹೇಳುವಾಗ ಹೆಚ್ಚಿನ ವಿಚಾರ ಮಾಡಬೇಕಾಗುತ್ತದೆಂದೂ ಅಂಥಾ ಉದಾತ್ತ ಸಾಹಿತಿಗೆ ಸಾಕಷ್ಟು ಗೌರವ ವಿತ್ತು ಮಾತನಾಡಬೇಕಾಗುವುದೆಂದೂ ಹೇಳಿ, 'ಅಂದಿನ ಅಪೂರಿ'ನಲ್ಲಿರುವ ಬೇರೆ ಬೇರೆ ಕತೆಗಳ ಸ್ವಾರಸ್ಯಗಳನ್ನು ವಿವರಿಸಿ ಹೇಳಿದರು.

ಶ್ರೀ ಶ್ರೀ. ರಾ. ಕುಳುಕುಂದರು ಮಾತನಾಡುತ್ತಾ ಕಾಮತರ ಕುರಿತು ಕಿರಿಯರು ಯಾವ ಅಭಿಪ್ರಾಯವಿಟ್ಟಿದ್ದಾರೆ, ಅವರ 'ಕತೆಗಳು', ಸಾಹಿತ್ಯ ಕೃತಿಗಳು ಹೇಗೆ ಆನಂದದಾಯಕವಾಗಿದೆಯೆಂದು ತಿಳಿಸಿದರು.

ಶ್ರೀ ರಾಮಕೃಷ್ಣ ಭಟ್ಟರು ಮಾತನಾಡಿ, 'ಅಂದಿನ ಅಪೂರು' ಎಂಬ ಕಥಾ ಸಂಗ್ರಹದಲ್ಲಿ ಕಾಮತರು ಚಿತ್ರಿಸಿರುವ ಜನ ಜೀವನವೇರೀತಿಯದು. 'ಬೊಗ್ಗು ಮಹಾಶಯ' ಕತೆಯ ಸ್ವಾರಸ್ಯ ಯಾವ ರೀತಿಯದೆಂದು ವಿವರಿಸಿದರು.

ಶ್ರೀ ಕಯ್ಯಾರ ಕಿಞ್ಞಣ್ಣ ರೈಗಳು ಮಾತನಾಡುತ್ತಾ, ಕಾಮತರ ಬಗ್ಗೆ ಮಿತ್ರಮಂಡಳಿಯವರಿಗೆ ಹಾಗೂ ನಮ್ಮ ನಾಡಿನ ಸಾಹಿತ್ಯ ಸೇವಕರಿಗೆ ಅಪಾರ ಅಭಿಮಾನವಿದೆಯೆಂದೂ, ಅವರ ಕೃತಿಗಳ ಕುರಿತು ಅವರ ಜೀವನ ಸ್ಮರಣೆಗಳ ಕುರಿತು, ಇನ್ನು ಕೆಲವು ವಾರಗಳ ವರೆಗೆ ವಿದ್ವಾಂಸರಿಂದ ಅಭ್ಯಾಸವೇರ್ಪಡಿಸಿ ಆ ಮೇಲೆ ವಿದ್ಯಾರ್ಥಿಗಳಿಗೆ ಸ್ಪರ್ಧೆ ಏರ್ಪಾಡಾಗಲಿದೆಯೆಂದೂ ಹೇಳಿ, ಆ ಉದಾತ್ತ ವ್ಯಕ್ತಿಗೆ ಸಲಬೇಕಾದ ಗೌರವ ಸಲ್ಲಿಸುವರೆ ಮಿತ್ರಮಂಡಳಿಯವರು ಆತುರಪಡುತ್ತಿರುವರೆಂದೂ, ಈ ಕಾರ್ಯಕ್ರಮದಲ್ಲಿ ಬಹುಮಂದಿ ಭಾಗವಹಿಸಿ ಕಾರ್ಯವನ್ನು ಯಶಸ್ವಿಗೊಳಿಸಬೇಕೆಂದೂ ಕೇಳಿಕೊಂಡರು.

ಶ್ರೀ ಸೇಡಿಯಾಪು ಕೃಷ್ಣ ಭಟ್ಟರು ಕಾಮತರ 'ದಿವ್ಯಪಥ' ಎಂಬ ಕವನವನ್ನು ಓದಿದರು.

ಅಧ್ಯಕ್ಷರು ಕಾಮತರ ಕುರಿತು ಕೆಲವು ಸ್ಮರಣೆಗಳನ್ನೀಯುತ್ತಾ ಅಭ್ಯಾಸವನ್ನು ಬರುವ ವಾರಕ್ಕೆ ಮುಂದರಿಸಿದರು.

ಸಿನೆಮಾ ಸುದ್ದಿ

ಚಲಚ್ಚಿತ್ರ ವಿಮರ್ಶಕ ಕೂಟ

ಕೆನರಾ ಚಲಚ್ಚಿತ್ರ ವಿಮರ್ಶಕ ಕೂಟದ ಸಭೆಯು ಸೋಮವಾರಂದು ಶ್ರೀ ಬಿ. ಎಂ. ಇದಿನಬ್ಬ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಗತಿಸಿದ ಸುಪ್ರಸಿದ್ಧ ಸಂತ ನಟ ವಿಷ್ಣು ಪಂತ ಪಾಗ್ನೀಸ್, ಚಲಚ್ಚಿತ್ರೋದ್ಯಮಿ ನಾಗನಾಥರಾವ್ ಮತ್ತು ಹಿರಿಯ ಪತ್ರಿಕೋದ್ಯೋಗಿ ರಮಾನಂದ ಛಟರ್ಜಿ ಇವರ ನಿಧನದಲ್ಲಿ ಸಂತಾಪವನ್ನು ಸೂಚಿಸಿತು. ಮುಂಬಯಿಗೆ ತೆರಳಿದ ಕೂಟದ ಕಾರ್ಯದರ್ಶಿ ಶ್ರೀ ಕೆ. ವಿ. ಭಟ್ಟರು ಕೂಟಕ್ಕೆ ಸಲ್ಲಿಸಿದ ಸೇವೆಗಾಗಿ ಅವರನ್ನು ಪ್ರಶಂಸಿಸುವ ಮತ್ತು ಈಗ ಅಸೌಖ್ಯದಲ್ಲಿರುವ ಜತೆ ಕಾರ್ಯದರ್ಶಿ ಶ್ರೀ ವೆಂಕಟೇಶ ಪ್ರಭು ಅವರು ಬೇಗನೆ ಗುಣಮುಖರಾಗಲೆಂದು ಆಶಿಸುವ ನಿರ್ಣಯಗಳಾದುವು. ಶ್ರೀ ಪಿ. ಎಚ್. ರಾಯರನ್ನು ಸಭೆಯು ತಾತ್ಕಾಲಿಕ ಕಾರ್ಯದರ್ಶಿಯಾಗಿ ಆರಿಸಿತು.

ಬಳಿಕ ಚಿತ್ರಗಳ ವಿಮರ್ಶೆ ನಡೆಯಿತು 'ಕಿಸ್ಮತ್ ಒಳ್ಳೆಯ ಮನರಂಜನೆ ಮಾಡುತ್ತದೆ. ಕತೆಯಲ್ಲಿ ಮಾತ್ರ ತಿರುಳಿಲ್ಲ' 'ಬ್ಲಡ್ ಎಂಡ್ ಸೇಂಡ್ ಉತ್ತಮ ಚಿತ್ರ' 'ಶಾಕುಂತಲಾದಲ್ಲಿರುವುದು ಹಾಡುಗಳು ಮಾತ್ರ. ಈ ಕತೆಯನ್ನು ಕಾಳಿದಾಸ ಮಹಾಕವಿ ನೋಡಿದರೆ ಆತ್ಮಹತ್ಯ ಮಾಡಿಕೊಳ್ಳುತ್ತಿದ್ದ' ಎಂಬ ಅಭಿಪ್ರಾಯಗಳನ್ನು ಕೂಟದ ಸದಸ್ಯರು ಕೊಟ್ಟರು.

ಭಾರತೀಯ ಚಲಚ್ಚಿತ್ರರಂಗದಲ್ಲಿ 'ಸ್ಟಂಟ್' ಚಿತ್ರಗಳ ಸ್ಥಾನ

ಕೆನರಾ ಚಲಚಿತ್ರ ವಿಮರ್ಶಕ ಕೂಟದ ಸಭೆಯು ಕಳೆದ ಆದಿತ್ಯವಾರ ಶ್ರೀ ಆನಂದಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. 'ಭಾರತೀಯ ಚಲಚ್ಚಿತ್ರ ರಂಗದಲ್ಲಿ 'ಸ್ಟಂಟ್' ಚಿತ್ರಗಳ ಸ್ಥಾನ ಎಂಬ ವಿಷಯದ ಕುರಿತು ಶ್ರೀಯುತರು ಶಿ. ರಾ. ಕುಳುಕುಂದ, ಜೆ. ಎನ್. ಶೆಟ್ಟಿ ರಘು, ಪಿ. ಕೆ. ನಾರಾಯಣ, ಮುರಲೀಧರ, ಕೆ. ಬಿ. ಅಯ್ಯಪ್ಪ, ಕೃಷ್ಣ ಗೋಪಾಲ ಮತ್ತು ಕೆ. ಕೆ. ರೈ ಇವರು ಮಾತನಾಡಿದರು.

'ಭಾರತೀಯ ಚಲಚ್ಚಿತ್ರೋದ್ಯಮದ ಪ್ರಗತಿಗೆ 'ಸ್ಟಂಟ್' ಚಿತ್ರಗಳು ಆರಂಭದಲ್ಲಿ ತುಂಬ ನೆರವಾಗಿವೆ. ಆದರೆ ಅಂತಹ ಕೀಳ್ಮಟ್ಟದ ಚಿತ್ರಗಳಿಂದ ಇಲ್ಲಿಯ ಸಾಮಾಜಿಕ ಇಲ್ಲವೆ ಆರ್ಥಿಕ ಪ್ರಶ್ನೆಗಳನ್ನು ಬಗೆಹರಿಸುವುದರಲ್ಲಿ ಪ್ರಯೋಜನವಾದುದಿಲ್ಲ. ಈಗ ಭಾರತೀಯ ಚಲಚ್ಚಿತ್ರ ರಂಗದಲ್ಲಿ ಸ್ಟಂಟ್ ಚಿತ್ರಗಳಿಗೆ ಪ್ರಾಧಾನ್ಯವಿಲ್ಲ. ನೈಜ, ಅನೈಸರ್ಗಿಕ ಮತ್ತು ಕೀಳು ತರಗತಿಯ ಚಿತ್ರಗಳು ಭಾರತೀಯ ಚಲಚ್ಚಿತ್ರರಂಗಕ್ಕೆ ಕಳಂಕ. ಆದರೆ ಮಕ್ಕಳು ಇನ್ನೂ ಸ್ಟಂಟ್ ಚಿತ್ರಗಳನ್ನು ಪ್ರೀತಿಸುತ್ತಾರೆ. ಆದುದರಿಂದ ಹಿರಿಯರಿಗಾಗಿಯೂ, ಕಿರಿಯರಿಗಾಗಿಯೂ ಶೈಕ್ಷಣಿಕ ಮೌಲ್ಯವಿರುವ, ಮನರಂಜನೆ ಮಾಡುವ ಪ್ರಗತಿಶೀಲ ಸ್ಟಂಟ್ ಚಿತ್ರಗಳ ನಿರ್ಮಾಣವು ಅಗತ್ಯ' ಎಂಬ ನಿರ್ಣಯವನ್ನು ಕೂಟವು ಸ್ವೀಕರಿಸಿತು.

ಕಿಶೋರಸಾಹು ಪುನರ್ವಿವಾಹ

ಸ್ನೇಹ ಪ್ರಥಾ ಪ್ರಧಾನೇಂದ ವಿವಾಹ ವಿಚ್ಛೇದನವಾಗಿ ಬೇರೆಯಾದ ಕಿಶೋರ ಸಾಹು ಈಗ ಪುನರ್ವಿವಾಹ ಮಾಡಿಕೊಂಡಿದ್ದಾನೆ. ಶ್ರೀಮತಿ ಪ್ರೀತಿ ಪಾಂಡ್ಯೆ ಎಂಬುದು ನೂತನ ವಧುವಿನ ಹೆಸರು.

ಒಮ್ಮೆ ಸಾಹು ಶಾಂತಿನಿಕೇತನಕ್ಕೆ ಭಾಷಣ ಕೊಡಲು ಹೋಗಿದ್ದ. ಅಲ್ಲಿ ಪ್ರೀತಿ ಪಾಂಡ್ಯಳು ವಿದ್ಯಾರ್ಥಿನಿಯಾಗಿದ್ದಳು. ಅಲ್ಲಿನ ಪ್ರಥಮ ಪರಿಚಯವೇ ಪ್ರಣಯವಾಯಿತು. ಮುಂದೆ ಆಗಾಗ ಕಿಶೋರ್ ಭಾಷಣ ಕೊಡುವ ನೆವದಿಂದ ಶಾಂತಿನಿಕೇತನಕ್ಕೆ ಹೋಗುತ್ತಿದ್ದ. ಈ ವಿಚಾರ ಶಾಂತಿನಿಕೇತನದ ಅಧಿಕಾರಿಗಳಿಗೆ ತಿಳಿಯದಿರಲಿಲ್ಲ. ಅವರು ಯೋಗ್ಯ ಎಚ್ಚರಿಕೆಯಿತ್ತರು.

ಮುಂದೆ ಮುಂಬಯಿಯಲ್ಲಿ ಕಿಶೋರ್ ಪ್ರೀತಪಾಂಡ್ಯಳನ್ನು ಭೇಟಿಯಾದ. ಅಲ್ಲಿಯೇ ಆರ್ಯ ಸಮಾಜದಲ್ಲಿ ಅವರ ವಿವಾಹವೂ ನಡೆಯಿತು. ಸಿನೆಮಾ ನಟನ ವಿವಾಹವೂ ಒಂದು ಸಿನೆಮಾ ಕತೆಯಾಗಿದೆ.

ಸಾದರ-ಸ್ವೀಕಾರ

1. Jinna Saheb Please
2. Unity- ಇವೆರಡೂ ಇದರ ಪ್ರಕಟಣೆಗಳು.

Hamara Hindusthan Publicatian, Bombay.

3. ಅಕ್ಕತಂಗಿ—ಪ್ರಕಾಶಕರು—ಸಾಹಿತ್ಯ ಭಂಡಾರ ಹುಬ್ಬಳ್ಳಿ.
4. ಸರ್ವೋದಯ—ಮಹಾತ್ಮ ಗಾಂಧಿ—ಪ್ರಕಾಶಕರು—ಗ್ರಾಮಸೇವಾ ನಿಲಯ ಮೈಸೂರು.
5. ಎರಡು ಪುಟ್ಟ ನಾಟಕಗಳು—
6. ಪಂಚಕಜ್ಜಾಯ—

ಇವೆರಡು ಬೆಂಗಳೂರು ಮಕ್ಕಳ ಕೂಟದ ಪ್ರಕಟಣೆಗಳು.

7. ತಮಾಷ್—ಅಂಗ್ಲ ಕನ್ನಡ ವಾರಪತ್ರಿಕೆ—ರಾಮಾನುಜ ರೋಡ', ಮೈಸೂರು

—ವಿಮರ್ಶೆ ಯಥಾವಕಾಶ

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. 125/1943
R. E. P. 406/43.

ವಾದಿಳು— ಮುತ್ತಕ್ಕ ಸೆಟ್ತಿ
ಪ್ರತಿವಾದಿರು— ಅಣ್ಣಪ್ಪ ಸೆಟ್ಟಿ ಕೂಡಾ

ಕುಂದಾಪುರ ತಾಲೂಕು ಕಾಳಾವರ ಗ್ರಾಮದಲ್ಲಿ ನಾಗಯ್ಯ ಸೆಟ್ರು ಅಳಿಯ 3ನೇ ಪ್ರತಿವಾದಿ ರಾಮಣ್ಣ ಸೆಟ್ರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ—ಕಾಳಾವರ ಕತ್ರಿಕಟ್ಟೆ ಕೆಳಮನೆ ಸೂರಮ್ಮ ಸೆಟ್ತಿ ಮಗಳು ಮುತ್ತಕ್ಕ ಸೆಟ್ತಿ ಕೂಡಾ 5 ಜನರು ತಾ. 15-4-28ರಲ್ಲು ನೀವು ಕೂಡಾ 2 ಜನರಿಗೆ ಬರಕೊಟ್ಟ ರೂ. 1700ರ ಈಬಿನ ಅಸಲು ಬಡ್ಡಿ ಹಣವನ್ನು ವಾದಿಳು ಮೇಲ್ನಾಣಿಸಿದ ತನ್ನ ಡಿಕ್ರಿಯ ಹಣದ ಬಗ್ಗೆ ಜಪ್ತು ಮಾಡ್ಸಬೇಕೆಂತ ಅರ್ಜಿ ಕೊಟ್ಟಿರುವುದರಿಂದ ನಿಮ್ಮದೇನಾದ್ರು ಆಕ್ಷೇಪಣೆಯಿದ್ದರೆ ತಾ. 25-10-43ನೇ ದಿವಸ ಮೇಲಿನ ಕೋರ್ಟಿನ ಮುಂದೆ ಬೆಳಿಗ್ಗೆ 10 ಗಂಟೆಗೆ ಹಾಜರಾಗಿ ಜ್ಯಾಹಿರ್ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವುದು ಎಂತ ಈ ಮೂಲಕ ತಿಳಿಯೋಣಾಗಿದೆ.

ಕೋರ್ಟು ಹುಕುಂ ಪ್ರಕಾರ.

ಕುಂದಾಪುರ
ತಾ. 11-10-43.
Sd) V. K. Shetty,
Advocate for Pltf.

ಪುಸ್ತಕಾವಲೋಕನ

ಗೀತಾ-ಸಂಚಯ

ರಚಿಸಿದವರು:—ಶ್ರೀ ಜಿ. ಪಿ. ರಾಜರತ್ನಂ [illegible]

ಬೆಲೆ 0—8—0

ಇದು ಕೊಂಕಣಿ ಭಾಷೆಯ ಕೆಲ ಕವಿತೆಗಳ ಒಂದು ಸಂಗ್ರಹ. ಸಂತರ ಆತ್ಮವನ್ನು ಒಲಿಸುವ, ರಸಿಕರ ಮನಸ್ಸನ್ನು ಸಲಿಸುವ, ರಾಷ್ಟ್ರಪ್ರೇಮಿಗಳನ್ನು ಹುರಿದುಂಬಿಸುವ ಗೀತಗಳು ಇದರಲ್ಲಿವೆ, ಜನ-ಜೀವನವನ್ನು ಚಿತ್ರಿಸಿದ, ಗೀತಗಳೂ ಇಲ್ಲಿವೆ.

ಈ ಕುಸುಮದ ಎಸಳುಗಳೆಲ್ಲವೂ ಒಂದೇ ತರದ ಸೌರಭವನ್ನು ಬೀರುವುದಿಲ್ಲ; ಎಲ್ಲಾ ಗೀತಗಳಲ್ಲಿ ಕವಿತಾ ಪ್ರವಾಹವು ಒಂದೇ ಸಮನಾಗಿ ಹರಿಯುವುದಿಲ್ಲ; ಕೆಲವೆಡೆ ಕವಿತಾ ಪ್ರವಾಹವು ಏನೊಂದು ತೊಡಕಿಲ್ಲದೆ ಹರಿಯುವುದು, ಕೆಲವೆಡೆ ಮಂದಗತಿಯಿಂದ, ಕೆಲವೆಡೆ ತೀವ್ರಗತಿಯಿಂದ,—ಭಾವನಾ ಝುರಿಯೂ ಹಾಗೆಯೇ.

ಗೀತಗಳು ಸರಳವಿವೆ, ಸುಬೋಧವಿವೆ; ಭಾಷಾ ಗಲಿಬಿಲಿ, ಶಬ್ದಗಳ ಆಡಂಬರ ಈ ಗೀತಗಳಲ್ಲಿಲ್ಲ. ಶಬ್ದಗಳ ಆರಿಸುವಿಕೆಯಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆ.

ಶ್ರಾವಣ ಮಾಸದ ಹೂಗಳ ಚೆಲುವೂ ಪಕ್ಷಿಗಳ ನಲಿವು 'ಶ್ರಾವಣು ಆಯ್ಲೊಗೆ' ಓದುವಾಗ ನಮ್ಮ ಕಣ್ಮುಂದೆ ಹಾದು ಹೋಗುವುದು 'ಆಯುಕಾ ಸುಸ್ವಾಗತಹೆ' ಗೀತದಲ್ಲಿ ಕವಿಯ ಆಶೆ-ಅಪೇಕ್ಷೆಯು ಎಲ್ಲಾ ದೇಶಗಳ ಶಾಂತಿ ಸ್ವಾತಂತ್ರ್ಯ. 'ಭಾರತ ಮಾತೆಲಿ ಪ್ರಾರ್ಥನಾ'—ಸರ್ವ ದೇಶ ಬಾಂಧವರಲ್ಲಿ ಸಹೋದರ ಭಾವ, ಸಮಾನತೆಯು ಉದ್ಭವಿಸಲಿ ಎಂಬುದು ಈ ಕವಿತೆಯಲ್ಲಿ ಕವಿಯ ಆ[illegible]ರ—ಆದರೆ, ಈ ಕವಿತೆಯಲ್ಲಿ ಹಿಂದೂಗಳಲ್ಲದ ರಾಷ್ಟ್ರವೀರರನ್ನು ಸೂಚಿಸಿದ [illegible] ನ್ಯಾಯ. ಪಸನು ಸರ —ಇದು ಪಕ್ಷಪಾತ ಯೆತುಮಿನ್ ಗೀತ-ಮನೋಹರವಾಗಿದೆ. ಲೇಖಕರು ಹಿಂದೂ ಮುಸ್ಲಿಮ್ ಐಕ್ಯದ ಉಪಾಸಕರು ಎಂದೂ ಕೆಲವು ಗೀತಗಳಿಂದ ತಿಳಿದು ಬರುವುದು. 'ಧನ್ಯತೆ ರಾಷ್ಟ್ರವೀರ'—ಈ ಗೀತದಲ್ಲಿ ಕವಿಯು ಹಿಂದಣ ಮತ್ತು ಈಗಿನ ರಾಷ್ಟ್ರವೀರರನ್ನು ತೆಕೆಯ (ಮತ್ತು ಸೆರೆಯ) ಮರೆಯಿಂದ ಕರೆದಿರುವನು. ರಾಷ್ಟ್ರವೀರರೆಲ್ಲ ಸಿಕಂದರನಿಗೆ ಏಕೆ ಸ್ಥಾನ ಕೊಟ್ಟದ್ದೊ (ಅದೂ ಜವಾಹರರೊಂದಿಗೆ) ತಿಳಿಯುವುದಿಲ್ಲ. ರಾಷ್ಟ್ರದ ವೀರಾಂಗನೆಯರನ್ನೂ ಸ್ಮರಿಸಿದ್ದರೆ ಚೆನ್ನಾಗಿತ್ತೇನೋ. 'ರಾಮಚಂದ್ರಾಲೆಹಟ' 'ರಾಷ್ಟ್ರವೀರಾಂ ರಾಕ' 'ಆಸ್ಕೆ ಭಾಗ್ಯರೇಲ ದೇವ' ಇವು ಉತ್ತಮ ಕವಿತೆಗಳು.

ಕೆಲ ಎಸಳುಗಳಿಂದ ಕೂಡಿದ ಈ ಸಂಚಯವು—ಕುಸುಮವು—ತನ್ನ ಸುಗಂಧದಿಂದ ಮನಸ್ಸಿಗೆ ನವೀನ ಉತ್ಸಾಹವನ್ನು ಕೊಡುವುದು. ತರುಣರಾದ ಬಾಳಿಗರ ಮುಂದಿನ ಕೃತಿಗಳನ್ನು ನಿರೀಕ್ಷಿಸುವೆವು.

'ಕುಮಾರ'

ಕನ್ನಡ ಟೈಪ್‌ರೈಟರ್

ಮೈಸೂರು ಬ್ರೋಡ್‌ಕಾಸ್ಟ್ ಇನ್ಸ್‌ಟಿಟ್ಯೂಟಿನ ಶ್ರೀ. ಸುಬ್ಬರಾಘವರು ಪೌರಸಭೆಯಿಂದ ದ್ರವ್ಯ ಸಹಾಯ ಪಡೆದು ಕನ್ನಡ ಟೈಪ್‌ರೈಟರನ್ನು ಸುಧಾರಿಸಿ ಪೌರಸಭೆಯವರ ಮುಂದೆ ಪ್ರದರ್ಶಿಸಿದರು. ಯಂತ್ರವು ಇಂಗ್ಲಿಷ್ ರೆಮಿಂಗ್ಟನ್ ಮಾದರಿಯಿದೆ. ಸ್ವರ ಮತ್ತು ಒತ್ತಕ್ಷರಗಳ ಜೋಡಣೆಗಳಿಗೆ ತಕ್ಕಂತೆ ಯಂತ್ರದ ನ[illegible]ಗೆ ವ್ಯತ್ಯಾಸವಿದೆ.

THE CANARA BANKING CORPORATION Ltd

(Incorporated in British India with limited liability).

Estd:] Head office: UDIPI [1906.

(Branches & Agencies in all principal cities of India)

Authorised capital	Rs. 25,00,000.
Issued & Subscribed	Rs. 16,00,000.
Paid up Capital	Rs. 10,06,000.
Reserves	Rs. 3,85,000.

Advances are made against approved securities and bills purchased or collected at most favourable rates.

For further particulars please apply tothe nearest Branch.



(2ನೇ ಪುಟದಿಂದ ಮುಂದುವರಿದುದು)

ಜಿಲ್ಲಾ ಭೂಮಾಲಿಕರ ವಿನಂತಿ.

ಶ್ರೀ. ಎಸ್. ನಾಗರಾಜಯ್ಯನವರು ಮಾತನಾಡುತ್ತಾ, ಲೋರಿಯವರು ಮೈಲೊಂದರ ಮೂರು ರುಪಾಯಿ ಚಾರ್ಜು ಹೇಳುತ್ತಾರೆಂದೂ, ಅವರಿಗೆ ಕಂಟ್ರೋಲ್ ದರದಲ್ಲಿ ಪೆಟ್ರೋಲ್ ಸಿಗುವಾಗ, ಅವರೂ ಲಾಭ ಮಾಡದೆ, ಅಕ್ಕಿ ಭತ್ತ ಸಾಗಿಸುವಲ್ಲಿ ಸಹಕರಿಸುವಂತೆ ಸರಕಾರ ಲೋರಿ ಚಾರ್ಜು ನಿರ್ಬಂಧಿಸಬೇಕೆಂದೂ ಹೇಳಿ, ರೆವಿನ್ಯೂ ಅಧಿಕಾರಿಗಳು ಈಗಾಗಲೇ ಒಕ್ಕಲುಗಳಿಗೆ, ಸರಕಾರಕ್ಕೆ ತಿಳಿಸದೆ ಅಕ್ಕಿ ಭತ್ತಗಳನ್ನು ಯಾರಿಗೂ ಕೊಡಕೂಡದೆಂದು ಕೊಟ್ಟಿರುವ ಹುಕುಮನ್ನಿತ್ತಿ ಟೀಕಿಸಿ, ಹೀಗೆ ಮಾಡುವುದರಿಂದ ಭೂಮಾಲಿಕನನ್ನು ಮತ್ತಷ್ಟು ಕಷ್ಟಕ್ಕೆ ಗುರಿಮಾಡಿದಂತಾಯಿತೆಂದೂ, ಮೊದಲೇ ನಮ್ಮ ಜಿಲ್ಲೆಯಲ್ಲಿ ವ್ಯಾಜ್ಯ ಮಾಡದೆ ಗೇಣಿ ವಸೂಲಾಗದಿರುವಾಗ, ಈ ಆಜ್ಞೆಯೂ ಆದರೆ, ಮುಂದೆ ಖಂಡಿತನಾಗಿ ಧನಿಗೆ ಒಕ್ಕಲು ಗೇಣಿ ಕೊಡಲಾರರೆಂದೂ ಹೇಳಿದರು.

ಶ್ರೀ. ಎಂ. ಎಸ್. ಶ್ರೇಷ್ಠರು ಮಾತನಾಡಿ ಸರಕಾರವು ಒಕ್ಕಲುಗಳಿಂದ ಹಾಗೂ ಭತ್ತವನ್ನು ವಸೂಲು ಮಾಡಬಾರದೆಂದರು.

ಶ್ರೀ. ಎನ್. ರಾಮರಾಯರು ಮಾತನಾಡಿ, ನಮ್ಮ ಅಕ್ಕಿ ಭತ್ತಗಳ ರಿಕ್ವಿಸಿಶನ್ ಮಾಡುವಾಗ ಅದು ಎಲ್ಲಿಗೆ ಹೋಗುತ್ತದೆಂದು ನಮಗೆ ತಿಳಿಯಬೇಕೆಂದೂ, ಒಕ್ಕಲುಗಳಿಂದ ಭತ್ತ ವಸೂಲು ಮಾಡಿ, ಅದನ್ನು ಮಿಲ್ಲಿಗೆ ಕೊಟ್ಟು ಕೆಟ್ಟ ಅಕ್ಕಿ ಒದಗಿಸಬೇಡಿರೆಂದೂ, ಹೇಳಿದರು.

ರಾವ್ ಸಾಹೇಬ್ ರಂಗನಾಥ ಪೂಂಜರು ಮಾತನಾಡಿ, ನಗರ ಮತ್ತು ಕಾಸರಗೋಡು ತಾಲೂಕಿನ ಕೇಂದ್ರ ಸ್ಥಳಗಳಲ್ಲಿ ಮಾತ್ರ ರಿಕ್ವಿಸಿಶನ್ ಮಾಡುವಾಗ, ಅಲ್ಲಿಗೆ ತಲಾ ಒಂದರೆ ನಾಲ್ಕು ಮುಡಿಯಂತೆ ಲೆಕ್ಕ ಹಾಕಿ ಅಕ್ಕಿ ರಿಕ್ವಿಸಿಶನ್ ಮಾಡಬಹುದೆಂದೂ ಭೂಮಾಲಿಕರು ಸರಕಾರಕ್ಕೆ ಸಹಾಯ ಮಾಡಲು ಸಿದ್ಧರಿದ್ದರೂ, ಸರಕಾರದ ಶರತ ತಿಳಿಯಬೇಕಾಗಿದೆಯೆಂದೂ, ಒಕ್ಕಲುಗಳಿಂದ ವಸೂಲು ಮಾಡುವದರಿಂದ ಅನರ್ಥವುಂಟೆಂದೂ, ಭೂಮಾಲಿಕರಿಂದಲೇ ವಸೂಲು ಮಾಡಬಹುದೆಂದೂ ತಿಳಿಸಿದರು.

ದ. ಕ. ಭೂಮಾಲಿಕ ಸಂಘದ ಅಧ್ಯಕ್ಷರಾದ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಡೆಯವರು ತಮ್ಮ ಸೂಚನೆಗಳಿಗೆ ಸರಕಾರವು ಗಮನವಿತ್ತಲ್ಲಿ ಜಿಲ್ಲಾ ಭೂಮಾಲಿಕರು ತಮ್ಮ ಸಹಕಾರವನ್ನು ಕೊಡುವುದಾಗಿ ಹೇಳಿದರು.

ನಿವೃತ್ತ ಡಿಪ್ಯುಟಿ ಡೈರೆಕ್ಟರ್ ಓಫ್ ಅಗ್ರಿಕಲ್ಚರರಾದ ಶ್ರೀ. ಕೆ. ಟಿ. ಆಳ್ವರು ಮಾತನಾಡಿ, ನಮ್ಮ ಜಿಲ್ಲೆಯು ಸಾಮಾನ್ಯ ಪರಿಸ್ಥಿತಿಯಲ್ಲಿ ಮಾತ್ರ ಸಾಕಷ್ಟು ಆಹಾರ ಉತ್ಪತ್ತಿ ಮಾಡುವ ಜಿಲ್ಲೆಯೆಂದೂ, ಆದರೆ ಈ ವರ್ಷದ ಪ್ರಥಮ ಬೆಳೆ ಹಾಳಾಗಿದೆಯೆಂದೂ ಹೇಳಿ, ಪ್ರಥಮ ಬೆಳೆಯಲ್ಲಿಯೇ ೩ ಅಂಶ ಆಹಾರ ಸುಟ್ಟುವುದಾಗಿರಲು, ಇದರಿಂದ ಬಹಳ ನಷ್ಟವುಂಟಾಗಿದೆಯೆಂದೂ, ಸರಕಾರವು ಅಧಿಕಾಹಾರ ಬೆಳೆಸಿರೆಂದೇನೋ ಜನರಿಗೆ ಹೇಳುತ್ತದೆ. ಆದರೆ, ಹಾಗೆ ಮಾಡಲು ಬೇಕಾದ ಸಹಾಯ ಮಾಡಬೇಡವೇ ಎಂದು ಪ್ರಶ್ನಿಸಿ, ಹಿಂದೆ ತಾನು ಆಫೀಸರನಾಗಿರುವಾಗಲೂ ಜನರಿಗೆ ಅಧಿಕಾಹಾರ ಬೆಳೆಸಲು ಹೇಳಿದ್ದೇನೆಂದೂ ಆದರೆ ಇದಕ್ಕೆ ಸರಕಾರ ಸಾಕಷ್ಟು ಸಹಾಯ ಮಾಡುವುದಿಲ್ಲವೆಂದೂ ಹೇಳಿದರು.

ಶ್ರೀ ಕೆ ವಿ. ಶೇಷಗಿರಿ ಪ್ರಭುಗಳು ಮಾತನಾಡಿ, ಅಲ್ಲಲ್ಲಿ ಆಹಾರ ಸಮಿತಿ ಮಾಡಬೇಕೆಂದೂ, ಮುಡಿಯೊಂದರ ರೂ ೧೦ ಕ್ರಯ ವಿಧಿಸಬೇಕೆಂದೂ ತಿಳಿಸಿದರು

ಕೊನೆಗೆ ರಾ. ಸಾ. ರಾಥೋರವರು ಉತ್ತರವೀಯುತ್ತಾ, ತಾನು ಇಲ್ಲಿಗೆ ಬಂದದ್ದು ಇಲ್ಲಿನ ಪರಿಸ್ಥಿತಿ ಅಭ್ಯಾಸ ಮಾಡಲಾದ್ದರಿಂದ, ತಾನೀಗ ಏನೂ ಹುಕುಂ ಕೊಡಲಾರೆನೆಂದು ಹೇಳಿ, ರೆವಿನ್ಯೂ ಅಧಿಕಾರಿಗಳು ಲಂಚ ತೆಗೆದುಕೊಳ್ಳುತ್ತಾರೆಂದು ಮಾಡಿದ ದೂರಿನ ಕುರಿತು, ಆ ವಿಷಯ ಸರಕಾರದ ಗಮನಕ್ಕೆ ಬಂದರೆ, ಅಂಥಾ ಅಧಿಕಾರಿಗಳಿಗೆ ಕಠಿಣ ಶಿಕ್ಷೆ ಕೊಡಲಾಗುವುದೆಂದು ಎಚ್ಚರವಿತ್ತರು. ಸಂಘದ ಕಾರ್ಯದರ್ಶಿ ಶ್ರೀ. ಸದಾನಂದ ಹೆಗ್ಡೆಯವರು ಧನ್ಯವಾದವನ್ನರ್ಪಿಸಿದರು.

ಸಂಗ್ರಹ-ಲಾಭ ಬಡಕತನ ಪ್ರತಿಬಂಧಕ ಆರ್ಡಿನೆನ್ಸು

ಉತ್ಪಾದಕರೂ ವ್ಯಾಪಾರಿಗಳೂ ಪದಾರ್ಥಗಳನ್ನು ನಿರ್ದಿಷ್ಟ ಪಡಿಸಿದ್ದಕ್ಕಿಂತ ಹೆಚ್ಚಿಗೆ ತಮ್ಮಲ್ಲಿ ಇಟ್ಟುಕೊಳ್ಳಬಾರದೆಂದೂ ಯಾವ ಪದಾರ್ಥವನ್ನು ಉತ್ಪಾದನ ಬೆಲೆಗಿಂತ ಶೇಕಡಾ ೨೦ಕ್ಕಿಂತ ಹೆಚ್ಚಿನ ಲಾಭವಿಟ್ಟು ಮಾರಕೂಡದೆಂದೂ ಇಂಡಿಯಾ ಸರಕಾರ ಹೊಸ ಆರ್ಡಿನೆನ್ಸು ಹೊರಡಿಸಿದೆ. ಈ ನಿಯಮ ಉಲ್ಲಂಘಿಸಿದವರಿಗೆ ೫ ವರ್ಷ ವರೆಗೆ ಶಿಕ್ಷೆ ಅಥವಾ ದಂಡ ವಿಧಿಸಲಾಗುವುದು.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಗೆಯೇ ಆಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು. ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE — **The Joint Booking Office,** KODIALBAIL.

The Bank of Mangalore Limited, Mangalore.
ESTD: 1931

HEAD OFFICE	***BRANCHES***
Mangalore.	Moodabidri & Padubidri.

The Bank Undertakes to Collect Cheques, Demand and Documentary Bills at Most Competitive Rates.

ISSUES DRAFTS ON ALL IMPORTANT TOWNS
IN THE DISTRICT
and also on
BOMBAY, MADRAS, CALICUT, BANGALORE,
MYSORE, TIRUPPUR, COIMBATORE, ERODE,
KUMBAKONUM, BELGAUM, DHARWAR
HONAVAR etc.
at very favourable rates
All kinds of inland banking business undertaken

(Regd)

ಅಮೃತಾಂಜನ

ತಲೆವೇದನೆ,ಶಿರೋವೇದನೆ, ಉಳುಕು, ಕುತ್ತಿಗೆ,ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾ ಬೇನೆ, ಪಕ್ಷವಾತ, ನೋವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಈ ಕಂಪೆನಿಯಲ್ಲಿ ದೊರೆಯುವುದು.

ಜೀವವಿಮೆ ಮಾಡುವ ಪ್ರಯೋಜನವು ಇಂದು ಹಿಂದಿಗಿಂತ ಅಧಿಕವಾಗಿದೆ.

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಇದರಲ್ಲಿ ಒಂದು ಪಾಲಿಸಿ ಪಡೆದು

ಈಗಲೇ ನೀವು ನಿಮ್ಮನ್ನು ಮತ್ತು ನಿಮ್ಮನ್ನು ಹೊಂದಿಕೊಂಡಿರುವವರನ್ನು ರಕ್ಷಿಸಿಕೊಳ್ಳಿರಿ!

ಪ್ರತಿನಿಧಿಗಳಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಇನ್ಶೂರ್ ಮಾಡಲು ಅಥವಾ ಮಾಹಿತಿ ತಿಳಕೊಳ್ಳಲು ದಯಮಾಡಿ ಬರೆಯಿರಿ!

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

— : ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ: —

ಬೆಂಗಳೂರು   ಬೊಂಬಾಯಿ   ಮದ್ರಾಸು   ಕಲ್ಲಿಕೋಟೆ   ಮಂಗಳೂರು   ಮತ್ತು   ತ್ರಿವೇಂಡ್ರಂ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commeuse soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯೌಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು:-
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘವೇಂದ್ರ ಷ್ಟೋ, ರಥಬೀದಿ. (3) ದಿ ಕರ್ನಾಟಕ ಸ್ಟೋರ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್.. (5). ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೋ:—1. ಮರಾಠಗಲ್ಲಿ ಹುಬ್ಬಳ್ಳಿ.
2. 86 ಫಾಕ್ರೋಫ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ಮೃತ್ಯುಂಜಯ ರಸ.
ಪಂಚವಟಿ ಮಾತ್ರೆ. **ಕೊಲೆರಾ ರೋಗಕ್ಕೆ ಸಿದ್ಧೌಷಧ.**
ಸೇವನಾ ಕ್ರಮಗಳು ಔಷಧಿಯೊಡನೆ ಇದೆ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಕು 29—10—1943 [ಸಂಚಿಕೆ 43]

ವೇವೆಲರು ಮಹಾತ್ಮರ ಭೇಟಿ ಮಾಡುವರು?

ವೇವಲರು ಗಾಂಧಿ ಮತ್ತು ಕಾಂಗ್ರೆಸ್ ಮುಖಂಡರ ಭೇಟಿ ಮಾಡುವರು?

ವೇವಲರು ವೈಸರಾಯ್ ಪದವಿಯನ್ನು ಸ್ವೀಕರಿಸಿದ್ದು ಅವರು ಬೇಗನೇ ಭಾರತದ ರಾಜಕೀಯ ಬಿಕ್ಕಟ್ಟು ಬಗೆಹರಿಸುವ ಒಂದು ಪ್ರಯತ್ನ ಮಾಡಬಹುದೆಂದೂ, ಅವರು ಲಂಡನಿನಿಂದ ಸಿದ್ಧಪಡಿಸಿದ ಯೋಜನೆಯನ್ನು ಗಾಂಧಿಜಿ ಹಾಗೂ ಕಾಂಗ್ರೆಸ್ ಮುಂಖಂಡರ ಭೇಟಿಯಾಗಿ ಅವರ ಮುಂದಿಡುವರೆಂದೂ ಡಿಲ್ಲಿಯಲ್ಲಿ ಸುದ್ದಿಯಿದೆ. ಡಿಲ್ಲಿಯ ವಾತಾವರಣವಿಂದು ವೈಸರಾಯರ ಮುಂದಿನ ಯೋಜನೆಗಳ ಕುರಿತು ತುಂಬಿರುವುದು.

ಅಮೆರಿಯನ್ನು ಮನೆಗೆ ಕಳಿಸಿ' ಪಾರ್ಲಿಮೆಂಟಿನಲ್ಲಿ ವಾದ

ಲೀಬ್ರಿಜ್ ಕಾರ್ಖಾನೆ ಸಮಿತಿಯವರು ಬ್ರಿಟಿಷ್ ಮುಖ್ಯ ಮಂತ್ರಿ ಚರ್ಚಿಲರಿಗೆ ಒಂದು ಮನವಿ ಮಾಡುತ್ತಾ, ಭಾರತ ಮಂತ್ರಿ ಅಮೆರಿಯವರನ್ನು ಕೂಡಲೇ ಮನೆಗೆ ಕಳುಹಿಸಬೇಕೆಂದೂ, ಭಾರತದ ಮುಖಂಡರ ಬಿಡುಗಡೆ ಮಾಡಿ ಬಿಕ್ಕಟ್ಟು ಬಗೆಹರಿಸಬೇಕೆಂದೂ ಕೇಳಿಕೊಂಡಿದ್ದರು. ‘ಈ ವಿಷಯದ ಕುರಿತು ಚರ್ಚಿಲರು ಏನು ವಿಚಾರ ಮಾಡಿದಿರಿ' ಎಂದು ಪಾರ್ಲಿಮೆಂಟಿನಲ್ಲಿ ಗಲಚಾರರು ಪ್ರಶ್ನಿಸಿದರು. ‘ಈ ಕಾರ್ಖಾನೆಯವರಿಗೆ ಅಂಥಾ ವಿಚಾರ ಬೇಕಾಗಿಲ್ಲ'ವೆಂದು ಚರ್ಚಿಲ್ ಹೇಳಿದರು. ‘ಈ ಕಾರ್ಖಾನೆಯವರು ಅಭಿಪ್ರಾಯವನ್ನು ಚರ್ಚಿಲರು ಕಡೆಗಣಿಸುವುದು ಅದು ನನಗೆ ವಿಷಾದವಾಗುತ್ತದೆ. ಬ್ರಿಟನಿನ ಇನ್ನೂ ಅನೇಕ ಪ್ರಜೆಗಳು ಹೀಗೆಯೇ ತಿಳಿದಿದ್ದಾರೆ. ಹಾಗಾಗೆ ಅಮೆರಿಯನ್ನು ಮನೆಗೆ ಕಳುಹಿಸಿ ಕೊಟ್ಟರೆ ಎಲ್ಲರಿಗೂ ಸಮಾಧಾನವಾಗುವುದಿಲ್ಲವೇ ಎಂದು ಗಲಚಾರೆರು ಕೇಳಿದರು. ‘ಓರ್ವ ಮಂತ್ರಿಯನ್ನು, ಅವನ ಆಡಳಿತ ಪ್ರಯೋಜನವಿಲ್ಲದಿದ್ದರೆ, ಅವನನ್ನು ದೂರ ಮಾಡೆಂದು ಹೇಳುವುದು ಪ್ರಜಾ ಪ್ರಭುತ್ವದ ಅಧಿಕಾರ' ಎಂದು ಶಿನ್ ವೆಲ್ಲರು ವಾದಿಸಿದರು. ‘ಜನರು ಏನು ಬೇಕಾದರೂ ಕೇಳಬಹುದು. ಆದರೆ ಮೊದಲು ಪಾರ್ಲಿಮೆಂಟ್ ಸದಸ್ಯರು ಕೇಳಿದ ಪ್ರಶ್ನೆಗೆ ಮಾತ್ರ ಉತ್ತರ ಕೊಡಲಾಗುವುದು' ಎಂದರು ಚರ್ಚಿಲರು. ‘ಈ ಕಾರ್ಖಾನೆ ನನ್ನ ಮತದಾರ ಸಂಘದಲ್ಲಿದೆ. ನಾನು ಮುಖ್ಯ ಮಂತ್ರಿಯವರಿಗೆ ಗೌರವ ತೋರಿಸುವಂತೆ, ಅವರು ನಮಗೆ ಗೌರವದ ಉತ್ತರ ಕೊಡಬೇಕು' ಎಂದು ಸೋರೆನ್ಸನರು ಹೇಳಿದರು. ‘ಜನರು ತಮಗೆ ಸಂಬಂಧಿಸಿದ ಪ್ರಶ್ನೆ ಕೇಳಿದರೆ ಉತ್ತರ ಕೊಡಬಲ್ಲೆ' ಎಂದು ಚರ್ಚಿಲ್ ನುಡಿದರು.

‘ಅಮೆರಿಯನ್ನು ಮನೆಗೆ ಕಳುಹಿಸಿ’

ಎ. ಐ. ಸಿ. ಸಿ. ಸಭೆ ಸೇರಿಸುವ ಪ್ರಯತ್ನ

ಎ. ಐ. ಸಿ. ಸಿ. ಸಭೆ ಕೂಡಿಸುವ ಪ್ರಯತ್ನ

ಶ್ರೀ ಮುನ್ಷಿಯವರು ಡಿಲ್ಲಿಗೆ ಬಂದಿರುವರು. ಶ್ರೀ. ವಾಸ್ತವರೂ ಆಗಮಿಸಿದ್ದಾರೆ ಸೆರೆಮನೆಯಿಂದ ಹೊರಗಿರುವ ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಸದಸ್ಯರ ಸಮ್ಮೇಲನ ಜರಗಿಸುವ ಮಾತುಕತೆಗಳಾಗುತ್ತಿವೆ. ನವಂಬರ ಆದಿಯಲ್ಲಿ ಸೇರಲಿರುವ ಕೇಂದ್ರ ಎಸೆಂಬ್ಲಿ ಅಧಿವೇಶನಕ್ಕೆ ಮೊದಲು ಈ ಸಮ್ಮೇಳನ ಕೂಡಿಸುವ ಅಂದಾಜು ಇದೆ. ನವಂಬರ ೮ಕ್ಕೆ ಕೇಂದ್ರ ಎಸೆಂಬ್ಲಿ ಕಾಂಗ್ರೆಸ್ ಸದಸ್ಯರ ಸಭೆ ಕೂಡುವುದು ಕಾಂಗ್ರೆಸ್ ಸದಸ್ಯರು ಎಸೆಂಬ್ಲಿ ಅಧಿವೇಶನಕ್ಕೆ ಹಾಜರಾಗಬೇಕೇ ಎಂಬ ವಿಚಾರ ವಿಮರ್ಶಿಸಲಾಗುವುದು.

ಕಲ್ಕತ್ತೆಯಲ್ಲಿ ವೈಸರಾಯರು

ವೈಸರಾಯ್ ವೇವೆಲರು ಪತ್ನಿಸಮೇತ ಹಾಗೂ ಖಾಸಗಿ ಕಾರ್ಯದರ್ಶಿ ಜೆಂಕಿನ್ಸರೊಡನೆ ಕಲ್ಕತ್ತೆಗೆ ಬಂದು ಅಲ್ಲಿನ ಹೃದಯದ್ರಾವಕ ಪರಿಸ್ಥಿತಿಗಳನ್ನು ಕಣ್ಣಾರೆ ಕಂಡಿದ್ದಾರೆ. ಬಂಗಾಲದ ಕುರಿತು ವೇವಲರ ಕರ್ತವ್ಯವೆಂಬ ಕುರಿತು ಯಾರ್ಕ್‌ಶಾರ್ ಪತ್ರಿಕೆ ಒಂದು ಅಗ್ರಲೇಖ ಬರೆದು, ಸರಕಾರವು ತನ್ನ ಕರ್ತವ್ಯವನ್ನು ಸರಿಯಾಗಿ ನೆರವೇರಿಸದ ಕಾರಣ ಈ ಬವಣೆಯುಂಟಾಯಿತೆಂದೂ, ವೇವಲರಾದರೂ ಜನರ ಸಹಕಾರ ಪಡೆದು ಬಂಗಾಳದ ಪರಿಸ್ಥಿತಿ ಸುಧಾರಿಸಲು ಪ್ರಯತ್ನಿಸಬೇಕೆಂದೂ ತಿಳಿಸಿದೆ.

ತ್ರಾವಣಕೋರ್ ಕೊಚ್ಚಿನ್ ಪರಿಸ್ಥಿತಿ ಬಂಗಾಳದಷ್ಟೇ ಭೀಕರ

ಇದೆಯೆಂದು ಸರ್. ಸಿ ಪಿಯವರು ಒಂದು ಹೇಳಿಕೆಯಿತ್ತು ತಿಳಿಸಿದರು. ಅದರಲ್ಲಿ ಕೊಚ್ಚಿನ್ ಪರಿಸ್ಥಿತಿ ತ್ರಾವಣಕೋರಕ್ಕಿಂತಲೂ ಭೀಕರವಾಗಿದೆಯೆಂದು ಅವರ ಹೇಳಿಕೆ ಬಂಗಾಳದಲ್ಲಿ ೧೦೦ಕ್ಕೆ ೮೩ರಷ್ಟು ಆಹಾರ ಹುಟ್ಟುವುದಾದರೂ ಅಲ್ಲಿ ಹೀಗೆ ಬರಗಾಲವುಂಟಾಗಲು ಕಾರಣವೇನೆಂಬ ಬಗ್ಗೆ ಅವರು ವಿಷಾದ ಸೂಚಿಸಿದರು.

ಒರಿಸಾ ಇನ್ನೊಂದು ಬಂಗಾಳ ಸರಕಾರದ ಮೇಲೆ ಆರೋಪ.

ಒರಿಸಾದ ಇಂದಿನ ದುಸ್ಥಿತಿಯನ್ನು ವಿವರಿಸಿ, ಸಹಾಯ ಕೋರುತ್ತಾ ಅಲ್ಲಿನ ಕಾಂಗ್ರೆಸ್ ಮುಂದಾಳುಗಳಾದ ಸ್ವಾಮಿ ವಿಚಿತ್ರಾನಂದದಾಸ ಮತ್ತು ಶ್ರೀ ಬಿ. ದಾಸ ಎಂ. ಎಲ್ ಎ, (ಕೇಂದ್ರ) ಇವರು ಒಂದು ಹೇಳಿಕೆ ಹೊರಡಿಸಿ, ಬಂಗಾಳದ ಭೀಕರ ಪರಿಸ್ಥಿತಿ ಜಗತ್ತಿಗೆ ತಿಳಿದು, ಎಲ್ಲರ ಸಹಾಯ ದೊರಕಿತ್ತು. ಆದರೆ ಒರಿಸಾದ ಸಂಕಷ್ಟದ ಬಗ್ಗೆ ಹೊರಗಿನವರಿಗೇನೂ ಗೊತ್ತಿಲ್ಲ, ಕಳೆದ ಮೇ ತಿಂಗಳಲ್ಲಿ ಸ್ವತಂತ್ರ ವ್ಯಾಪಾರ ಮಾಡುವಂತೆ ಸರಕಾರ ಆಜ್ಞೆಯಿತ್ತು ಒರಿಸಾದ ಸದ್ಯದ ದುಸ್ಥಿತಿಗೆ ಕಾರಣವಾಯಿತು, ಒರಿಸಾವು ಉಳಿತಾಯದ ಪ್ರಾಂತವೆಂದು ಸಾರಿ ಸರಕಾರ ಅಪರಾಧ ಮಾಡಿತು, ತಪ್ಪು ದಾರಿ ಹಿಡಿದು ಸರಕಾರವು ಆಹಾರ ಸಾಮಗ್ರಿಯನ್ನು ಹೊರಗೆ ಕಳುಹಿಸಿತು, ಹೀಗೆ ಒರಿಸಾವನ್ನಿಂದು ಸರಕಾರ ಉಪವಾಸದಲ್ಲಿ ಅದ್ದಿದೆಯೆಂದು ಅವರು ವಿಶದಪಡಿಸಿದ್ದಾರೆ.

ಮಲಬಾರಿನ ಅನಾಥರನ್ನು ಕಾಪಾಡಿರಿ

ಥಕ್ಕರ ಬಾಪರ ವಿನಂತಿ.

ಶ್ರೀ. ಥಕ್ಕರ್ ಬಾಪರು ಮಲಬಾರಿನಲ್ಲಿ ಸಂಚರಿಸುತ್ತಿದ್ದು, ಕಳೆದ ಜೂನ್, ಜುಲಾಯಿ, ಅಗಸ್ಟ್ ತಿಂಗಳಲ್ಲಿ ಮಲಬಾರಿನಲ್ಲಿ ಉಂಟಾದ ಕೊಲೆರಾ ಬೇನೆಯಿಂದ ಸತ್ತವರ ಸಂಖ್ಯೆ 30 ಸಾವಿರಕ್ಕೆ ಮಿಕ್ಕಿದೆಯೆಂದೂ, ಇದರಿಂದ ಅನೇಕ ಮಂದಿ ಮಕ್ಕಳು ನಿರ್ಗತಿಕರಾಗಿರುವರೆಂದೂ, ಹರಿಜನ ವರ್ಗಕ್ಕೆ ಸೇರಿದವರು ಹಲವರಿರುವರೆಂದೂ, ಅವರೆಲ್ಲ ಉಪವಾಸ ಬಿದ್ದು ಸಾಯುವ ಪರಿಸ್ಥಿತಿಯಲ್ಲಿರುವರಾದ್ದರಿಂದ, ಈ ಬಗ್ಗೆ ಮಹಾಜನರು ಸಹಾಯ ಮಾಡಿ ಇವರನ್ನು ಕಾಪಾಡಬೇಕೆಂದೂ ವಿನಂತಿ ಹೊರಡಿಸಿದ್ದಾರೆ.

‘ಬಂಗಾಳದ ಪರಿಸ್ಥಿತಿಗೆ ಸರಕಾರ ಕಾರಣ’

ಪಂಡಿತ ಕುಂಜ್ರು ಹೇಳಿಕೆ.

ಸರ್ವೆಂಟ್ಸ್ ಓವ್ ಇಂಡಿಯಾ ಸೊಸೈಟಿ ಅಧ್ಯಕ್ಷರಾದ ಪಂಡಿತ ಕುಂಜ್ರುರವರು ಬಂಗಾಳವನ್ನು ಸಂಚರಿಸಿ ಬಂದು, ಅಲ್ಲಿನ ಇಂದಿನ ಪರಿಸ್ಥಿತಿಗೆ ಪ್ರಾಂತಿಕ ಸರಕಾರ, ಕೇಂದ್ರ ಸರಕಾರ ಹಾಗೂ ಲಿನ್‌ಲಿಥ್‌ಗೋ ಅಮೆರಿಯವರೇ ಕಾರಣರೆಂದು ವಿಶದಪಡಿಸಿದ್ದಾರೆ. ಜನರು ಉಪವಾಸದಿಂದ ಸಾಯುತ್ತಿದ್ದರೂ ಲಿನ್‌ಲಿಥ್‌ಗೋ ಮತ್ತು ಅಮೆರಿಯವರು ತಮ್ಮ ಕೆಲಸದಲ್ಲಿಯೇ ಮಗ್ನರಾಗಿದ್ದರೆಂದೂ ಮುಂದಿನ ಹೊಣೆಯೆಲ್ಲ ವೇವಲರನ್ನೇ ಅವಲಂಬಿಸಿರುವುದಾಗಿಯೂ ಅವರು ತಿಳಿಸಿದ್ದಾರೆ. ಬಂಗಾಳದ ಪಟ್ಟಣಗಳಿಗಿಂತ ಹಳ್ಳಿಗಳ ಪರಿಸ್ಥಿತಿ ಮತ್ತಷ್ಟು ಭೀಕರವಾಗಿದೆಯೆಂದೂ ಅವರು ಪ್ರಕಟಿಸಿದ್ದಾರೆ.

ಹೊಸ ವೈಸರಾಯರು

ಪತ್ರಿಕೋದ್ಯಮಿಗಳ ಭೇಟಿ

ಹೊಸ ವೈಸರಾಯ್ ಲಾರ್ಡ ವೇವಲರು ಪತ್ನಿ ಸಮೇತ, ವೈಸರಾಯ್ ಭವನದಲ್ಲಿ ಪತ್ರಿಕೋದ್ಯಮಿಗಳ ಕೂಟ ಕರೆದರು. ಸುಮಾರು ೪೦ ಮಂದಿ ಪ್ರಮುಖ ಪತ್ರಿಕೋದ್ಯಮಿಗಳಿದ್ದರು. ಬ್ರಿಟಿಷ್, ಅಮೆರಿಕನ್, ಆಸ್ಟ್ರೇಲಿಯನ್, ಚೈನೀಸ್, ರಶ್ಯನ್ ಮತ್ತೆ ಫ್ರೀ ಫ್ರೆಂಚ್ ಪತ್ರಿಕೋದ್ಯಮಿಗಳೂ ಇದ್ದರು.

ರಾಜಾಜಿ ಡಿಲ್ಲಿಗೆ

ನವಂಬರ ಮೊದಲನೆಯ ವಾರದಲ್ಲಿ ಬರುವರೆಂದು ತಿಳಿದುಬರುತ್ತದೆ.

The Bank of Mangalore Limited, Mangalore.

ESTD. 1931

HEAD OFFICE Mangalore — *BRANCHES* Moodabidri & Padubidri.

The Bank Undertakes to Collect Cheques, Demand and Documentary Bills at Most Competitive Rates.

ISSUES DRAFTS ON ALL IMPORTANT TOWNS IN THE DISTRICT

and also on

BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.

at very favourable rates

All kinds of inland banking business undertaken

(Regd)

ಅಮೃತಾಂಜನ

ತಲೆನೋವು, ಶಿರೋವೇದನ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ, ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ಮೊಡವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಜೀವವಿಮೆ ಮಾಡುವ ಪ್ರಯೋಜನವು ಇಂದು ಹಿಂದಿಗಿಂತ ಅಧಿಕವಾಗಿದೆ.

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಇದರಲ್ಲಿ ಒಂದು ಪಾಲಿಸಿ ಪಡೆದು

ಈಗಲೇ ನೀವು ನಿಮ್ಮನ್ನು ಮತ್ತು ನಿಮ್ಮನ್ನು ಹೊಂದಿಕೊಂಡಿರುವವರನ್ನು ರಕ್ಷಿಸಿಕೊಳ್ಳಿರಿ!

ಪ್ರತಿನಿಧಿಗಳಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಇನ್ಶೂರ್ ಮಾಡಲು ಅಥವಾ ಮಾಹಿತಿ ತಿಳಕೊಳ್ಳಲು ದಯಮಾಡಿ ಬರೆಯಿರಿ!

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

—: ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ: —

ಬೆಂಗಳೂರು ಬೊಂಬಾಯಿ ಮದ್ರಾಸು ಕಲ್ಲಿಕೋಟೆ ಮಂಗಳೂರು ಮತ್ತು ತ್ರಿವೇಂಡ್ರಂ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವ ವಿಧದ ದೋಷಗಳನ್ನು ಗುಣಪಡಿಸುವ ದಿವ್ಯೌಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು—

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘವೇಂದ್ರ ಪೈ, ರಥಬೀದಿ. (3) ದಿ ಕರ್ನಾಟಿಕ ಸ್ಟೈಫ್ ವರ್ಕ್ಸ್, ರಥಬೀದಿ. (4) ಡಾ| ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೋ:—1. ದುರ್ಗಾದ ಗಲ್ಲಿ ಹುಬ್ಬಳ್ಳಿ.

2. 86 ಪ್ಯಾಕ್ರಾಫ್ಟ್ಸ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಮೃತ್ಯುಂಜಯ ರಸ. ಪಂಚವಟ ಮಾತ್ರೆ. **ಕೊಲೆರಾ ರೋಗಕ್ಕೆ ಸಿದ್ಧೌಷಧ.**

ಸೇವನಾ ಕ್ರಮಗಳು ಔಷಧಿಯೊಡನೆ ಇದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರ್ಯಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಕು 29—10—1943 [ಸಂಚಿಕೆ 43]

ವೇವೆಲರು ಮಹಾತ್ಮರ ಭೇಟಿ ಮಾಡುವರು?

ವೇವೆಲರು ಗಾಂಧಿ ಮತ್ತು ಕಾಂಗ್ರೆಸ್ ಮುಖಂಡರ ಭೇಟಿ ಮಾಡುವರು?

ವೇವೆಲರು ವೈಸರಾಯ್ ಪದವಿಯನ್ನು ಸ್ವೀಕರಿಸಿದ್ದು ಅವರು ಬೇಗನೇ ಭಾರತದ ರಾಜಕೀಯ ಬಿಕ್ಕಟ್ಟು ಬಗೆಹರಿಸುವ ಒಂದು ಪ್ರಯತ್ನ ಮಾಡಬಹುದೆಂದೂ, ಅವರು ಲಂಡನಿನಿಂದ ಸಿದ್ಧಪಡಿಸಿದ ಯೋಜನೆಯನ್ನು ಗಾಂಧಿಜಿ ಹಾಗೂ ಕಾಂಗ್ರೆಸ್ ಮುಂಖಂಡರ ಭೇಟಿಯಾಗಿ ಅವರ ಮುಂದಿಡುವರೆಂದೂ ದಿಲ್ಲಿಯಲ್ಲಿ ಸುದ್ದಿಯಿದೆ. ದಿಲ್ಲಿಯ ವಾತಾವರಣವಿಂದು ವೈಸರಾಯರ ಮುಂದಿನ ಯೋಜನೆಗಳ ಕುರಿತು ತುಂಬಿರುವುದು.

'ಅಮೆರಿಯನ್ನು ಮನೆಗೆ ಕಳಿಸಿ' ಪಾರ್ಲಿಮೆಂಟಿನಲ್ಲಿ ವಾದ

ಲೀಬ್ರಿಜ್ ಕಾರ್ಖಾನೆ ಸಮಿತಿಯವರು ಬ್ರಿಟಿಷ್ ಮುಖ್ಯ ಮಂತ್ರಿ ಚರ್ಚಿಲರಿಗೆ ಒಂದು ಮನವಿ ಮಾಡುತ್ತಾ ಭಾರತ ಮಂತ್ರಿ ಅಮೆರಿಯವರನ್ನು ಕೂಡಲೇ ಮನೆಗೆ ಕಳುಹಿಸಬೇಕೆಂದೂ, ಭಾರತದ ಮುಖಂಡರ ಬಿಡುಗಡೆ ಮಾಡಿ ಬಿಕ್ಕಟ್ಟು ಬಗೆಹರಿಸಬೇಕೆಂದೂ ಕೇಳಿಕೊಂಡಿದ್ದರು. 'ಈ ವಿಷಯದ ಕುರಿತು ಚರ್ಚಿಲರು ಏನು ವಿಚಾರ ಮಾಡಿದರಿ' ಎಂದು ಪಾರ್ಲಿಮೆಂಟಿನಲ್ಲಿ ಗಲಚಾರರು ಪ್ರಶ್ನಿಸಿದರು. 'ಈ ಕಾರ್ಖಾನೆಯವರಿಗೆ ಅಂಥಾ ವಿಚಾರ ಬೇಕಾಗಿಲ್ಲ'ವೆಂದು ಚರ್ಚಿಲ್ ಹೇಳಿದರು. 'ಈ ಕಾರ್ಖಾನೆಯವರು ಅಭಿಪ್ರಾಯವನ್ನು ಚರ್ಚಿಲರು ಕಡೆಗಣಿಸುವುದು ಅದು ನನಗೆ ವಿಷಾದವಾಗುತ್ತದೆ. ಬ್ರಿಟನಿನ ಇನ್ನೂ ಅನೇಕ ಪ್ರಜೆಗಳು ಹೀಗೆಯೇ ತಿಳಿದಿದ್ದಾರೆ. ಹಾಗಾಗಿ ಅಮೆರಿಯನ್ನು ಮನೆಗೆ ಕಳುಹಿಸಿ ಕೊಟ್ಟರೆ ಎಲ್ಲರಿಗೂ ಸಮಾಧಾನವಾಗುವುದಿಲ್ಲವೇ' ಎಂದು ಗಲಚಾರರು ಕೇಳಿದರು. 'ಓರ್ವ ಮಂತ್ರಿಯನ್ನು, ಅವನ ಆಡಳಿತ ಪ್ರಯೋಜನವಿಲ್ಲದಿದ್ದರೆ, ಅವನನ್ನು ದೂರ ಮಾಡೆಂದು ಹೇಳುವುದು ಪ್ರಜಾ ಪ್ರಭುತ್ವದ ಅಧಿಕಾರ' ಎಂದು ಶಿನ್‌ವೆಲ್ಲರು ವಾದಿಸಿದರು. 'ಜನರು ಏನು ಬೇಕಾದರೂ ಕೇಳಬಹುದು. ಆದರೆ ಮೊದಲು ಪಾರ್ಲಿಮೆಂಟ್ ಸದಸ್ಯರು ಕೇಳಿದ ಪ್ರಶ್ನೆಗೆ ಮಾತ್ರ ಉತ್ತರ ಕೊಡಲಾಗುವುದು' ಎಂದರು ಚರ್ಚಿಲರು. 'ಈ ಕಾರ್ಖಾನೆ ನನ್ನ ಮತದಾರ ಸಂಘದಲ್ಲಿದೆ. ನಾನು ಮುಖ್ಯ ಮಂತ್ರಿಯವರಿಗೆ ಗೌರವ ತೋರಿಸುವಂತೆ, ಅವರು ನಮಗೆ ಗೌರವದ ಉತ್ತರ ಕೊಡಬೇಕು' ಎಂದು ಸೋರೆನ್ಸನರು ಹೇಳಿದರು. 'ಜನರು ತಮಗೆ ಸಂಬಂಧಿಸಿದ ಪ್ರಶ್ನೆ ಕೇಳಿದರೆ ಉತ್ತರ ಕೊಡಬಲ್ಲೆ' ಎಂದು ಚರ್ಚಿಲ್ ನುಡಿದರು.

'ಅಮೆರಿಯನ್ನು ಮನೆಗೆ ಕಳುಹಿಸಿ'

ಎ. ಐ. ಸಿ. ಸಿ. ಸಭೆ ಸೇರಿಸುವ ಪ್ರಯತ್ನ

ಎ. ಐ. ಸಿ. ಸಿ. ಸಭೆ ಕೂಡಿಸುವ ಪ್ರಯತ್ನ

ಶ್ರೀ. ಮುನ್ಶಿಯವರು ದಿಲ್ಲಿಗೆ ಬಂದಿರುವರು. ಶ್ರೀ. ಶಾಸ್ತ್ರಿಯವರೂ ಆಗಮಿಸಿದ್ದಾರೆ. ಸೆರೆಮನೆಯಿಂದ ಹೊರಗಿರುವ ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಸದಸ್ಯರ ಸಮ್ಮೇಲನ ಜರಗಿಸುವ ಮಾತುಕತೆಗಳಾಗುತ್ತಿವೆ. ನವಂಬರ ಆದಿಯಲ್ಲಿ ಸೇರಲಿರುವ ಕೇಂದ್ರ ಎಸೆಂಬ್ಲಿ ಅಧಿವೇಶನಕ್ಕೆ ಮೊದಲು ಈ ಸಮ್ಮೇಳನ ಕೂಡಿಸುವ ಅಂದಾಜು ಇದೆ. ನವಂಬರ ೮ಕ್ಕೆ ಕೇಂದ್ರ ಎಸೆಂಬ್ಲಿ ಕಾಂಗ್ರೆಸ್ ಸದಸ್ಯರ ಸಭೆ ಕೂಡುವುದು. ಕಾಂಗ್ರೆಸ್ ಸದಸ್ಯರು ಎಸೆಂಬ್ಲಿ ಅಧಿವೇಶನಕ್ಕೆ ಹಾಜರಾಗಬೇಕೇ ಎಂಬ ವಿಚಾರ ವಿಮರ್ಶಿಸಲಾಗುವುದು.

ಕಲ್ಕತ್ತೆಯಲ್ಲಿ ವೈಸರಾಯರು

ವೈಸರಾಯ್ ವೇವಲರು ಪತ್ನಿಸಮೇತ ಹಾಗೂ ಖಾಸಗಿ ಕಾರ್ಯದರ್ಶಿ ಜೆಂಕಿನ್ಸರೊಡನೆ ಕಲ್ಕತ್ತೆಗೆ ಬಂದು ಅಲ್ಲಿನ ಹೃದಯದ್ರಾವಕ ಪರಿಸ್ಥಿತಿಗಳನ್ನು ಕಣ್ಣಾರೆ ಕಂಡಿದ್ದಾರೆ. ಬಂಗಾಲದ ಕುರಿತು ವೇವಲರ ಕರ್ತವ್ಯವೆಂಬ ಕುರಿತು ಯಾರ್ಕ್‌ಶಾರ್ ಪತ್ರಿಕೆ ಒಂದು ಅಗ್ರಲೇಖ ಬರೆದು, ಸರಕಾರವು ತನ್ನ ಕರ್ತವ್ಯವನ್ನು ಸರಿಯಾಗಿ ನೆರವೇರಿಸದ ಕಾರಣ ಈ ಬವಣೆಯುಂಟಾಯಿತೆಂದೂ, ವೇವಲರಾದರೂ ಜನರ ಸಹಕಾರ ಪಡೆದು ಬಂಗಾಳದ ಪರಿಸ್ಥಿತಿ ಸುಧಾರಿಸಲು ಪ್ರಯತ್ನಿಸಬೇಕೆಂದೂ ತಿಳಿಸಿದೆ.

ತ್ರಾವಣಕೋರ್ ಕೊಚ್ಚಿನ್ ಪರಿಸ್ಥಿತಿ ಬಂಗಾಳದಷ್ಟೇ ಭೀಕರ

ಇದೆಯೆಂದು ಸರ್. ಸಿ. ಪಿಯವರು ಒಂದು ಹೇಳಿಕೆಯಿತ್ತು ತಿಳಿಸಿದರು. ಅದರಲ್ಲೂ ಕೊಚ್ಚಿನ್ ಪರಿಸ್ಥಿತಿ ತ್ರಾವಣಕೋರಕ್ಕಿಂತಲೂ ಭೀಕರವಾಗಿದೆಯೆಂದು ಅವರ ಹೇಳಿಕೆ. ಬಂಗಾಳದಲ್ಲಿ ೧೦೦ಕ್ಕೆ ಲಕ್ಷರಷ್ಟು ಆಹಾರ ಹುಟ್ಟುವುದಾದರೂ ಅಲ್ಲಿ ಹೀಗೆ ಬರಗಾಲವುಂಟಾಗಲು ಕಾರಣವೇನೆಂಬ ಬಗ್ಗೆ ಅವರು ವಿಷಾದ ಸೂಚಿಸಿದರು.

ಒರಿಸಾ ಇನ್ನೊಂದು ಬಂಗಾಳ ಸರಕಾರದ ಮೇಲೆ ಆರೋಪ.

ಒರಿಸಾದ ಇಂದಿನ ದುಸ್ಥಿತಿಯನ್ನು ವಿವರಿಸಿ, ಸಹಾಯ ಕೋರುತ್ತಾ ಅಲ್ಲಿನ ಕಾಂಗ್ರೆಸ್ ಮುಂದಾಳುಗಳಾದ ಸ್ವಾಮಿ ವಿಚಿತ್ರಾನಂದದಾಸ ಮತ್ತು ಶ್ರೀ ಬಿ. ದಾಸ ಎಂ. ಎಲ್. ಎ. (ಕೇಂದ್ರ) ಇವರು ಒಂದು ಹೇಳಿಕೆ ಹೊರಡಿಸಿ, ಬಂಗಾಳದ ಭೀಕರ ಪರಿಸ್ಥಿತಿ ಜಗತ್ತಿಗೆ ತಿಳಿದು, ಎಲ್ಲರ ಸಹಾಯ ದೊರಕಿತ್ತು, ಆದರೆ ಒರಿಸಾದ ಸಂಕಷ್ಟದ ಬಗ್ಗೆ ಹೊರಗಿನವರಿಗೇನೂ ಗೊತ್ತಿಲ್ಲ; ಕಳೆದ ಮೇ ತಿಂಗಳಲ್ಲಿ ಸ್ವತಂತ್ರ ವ್ಯಾಪಾರ ಮಾಡುವಂತೆ ಸರಕಾರ ಆಜ್ಞೆಯಿತ್ತು ಒರಿಸಾದ ಸದ್ಯದ ದುಸ್ಥಿತಿಗೆ ಕಾರಣವಾಯಿತು, ಒರಿಸಾವು ಉಳಿತಾಯದ ಪ್ರಾಂತವೆಂದು ಸಾರಿ ಸರಕಾರ ಅಪರಾಧ ಮಾಡಿತು, ತಪ್ಪು ದಾರಿ ಹಿಡಿದು ಸರಕಾರವು ಆಹಾರ ಸಾಮಗ್ರಿಯನ್ನು ಹೊರಗೆ ಕಳುಹಿಸಿತು, ಹೀಗೆ ಒರಿಸಾವನ್ನಿಂದು ಸರಕಾರ ಉಪವಾಸದಲ್ಲಿ ಅದ್ದಿದೆಯೆಂದು ಅವರು ವಿಶದಪಡಿಸಿದ್ದಾರೆ.

ಮಲಬಾರಿನ ಅನಾಥರನ್ನು ಕಾಪಾಡಿರಿ

ಠಕ್ಕರ ಬಾಪರ ವಿನಂತಿ.

ಶ್ರೀ. ಠಕ್ಕರ್ ಬಾಪರು ಮಲಬಾರಿನಲ್ಲಿ ಸಂಚರಿಸುತ್ತಿದ್ದು, ಕಳೆದ ಜೂನ್, [illegible] ಬಾರಿನಲ್ಲಿ ಉಂಟಾದ ಕೋಲೆರಾ ಬೇನೆಯಿಂದ ಸತ್ತವರ ಸಂಖ್ಯೆ 30 ಸಾವಿರಕ್ಕೆ ಮಿಕ್ಕಿದೆಯೆಂದೂ, ಇದರಿಂದ ಅನೇಕ ಮಂದಿ ಮಕ್ಕಳು ನಿರ್ಗತಿಕರಾಗಿರುವರೆಂದೂ, ಹರಿಜನ ವರ್ಗಕ್ಕೆ ಸೇರಿದವರು ಹಲವರಿರುವರೆಂದೂ, ಅವರೆಲ್ಲ ಉಪವಾಸ ಬಿದ್ದು ಸಾಯುವ ಪರಿಸ್ಥಿತಿಯಲ್ಲಿರುವರಾದ್ದರಿಂದ, ಈ ಬಗ್ಗೆ ಮಹಾಜನರು ಸಹಾಯ ಮಾಡಿ ಇವರನ್ನು ಕಾಪಾಡಬೇಕೆಂದೂ ವಿನಂತಿ ಹೊರಡಿಸಿದ್ದಾರೆ.

'ಬಂಗಾಳದ ಪರಿಸ್ಥಿತಿಗೆ ಸರಕಾರ ಕಾರಣ'

ಪಂಡಿತ ಕುಂಜ್ರು ಹೇಳಿಕೆ.

ಸರ್ವೆಂಟ್ಸ್ ಓಫ್ ಇಂಡಿಯಾ ಸೊಸೈಟಿ ಅಧ್ಯಕ್ಷರಾದ ಪಂಡಿತ ಕುಂಜ್ರುರವರು ಬಂಗಾಳವನ್ನು ಸಂಚರಿಸಿ ಬಂದು, ಅಲ್ಲಿನ ಇಂದಿನ ಪರಿಸ್ಥಿತಿಗೆ ಪ್ರಾಂತಿಕ ಸರಕಾರ, ಕೇಂದ್ರ ಸರಕಾರ ಹಾಗೂ ಲಿನ್‌ಲಿತ್‌ಗೋ ಅಮೆರಿಯವರೇ ಕಾರಣರೆಂದು ವಿಶದಪಡಿಸಿದ್ದಾರೆ. ಜನರು ಉಪವಾಸದಿಂದ ಸಾಯುತ್ತಿದ್ದರೂ ಲಿನ್‌ಲಿತ್‌ಗೋ ಮತ್ತು ಅಮೆರಿಯವರು ತಮ್ಮ ಕೆಲಸದಲ್ಲಿಯೇ ಮಗ್ನರಾಗಿದ್ದರೆಂದೂ ಮುಂದಿನ ಹೊಣೆಯೆಲ್ಲ ವೇವಲರನ್ನೇ ಅವಲಂಬಿಸಿರುವುದಾಗಿಯೂ ಅವರು ತಿಳಿಸಿದ್ದಾರೆ. ಬಂಗಾಳದ ಪಟ್ಟಣಗಳಿಗಿಂತ ಹಳ್ಳಿಗಳ ಪರಿಸ್ಥಿತಿ ಮತ್ತಷ್ಟು ಭೀಕರವಾಗಿದೆಯೆಂದೂ ಅವರು ಪ್ರಕಟಿಸಿದ್ದಾರೆ.

ಹೊಸ ವೈಸರಾಯರು ಪತ್ರಿಕೋದ್ಯಮಿಗಳ ಭೇಟಿ

ಹೊಸ ವೈಸರಾಯ್ ಲಾರ್ಡ ವೇವಲರು ಪತ್ನಿ ಸಮೇತ, ವೈಸರಾಯ್ ಭವನದಲ್ಲಿ ಪತ್ರಿಕೋದ್ಯಮಿಗಳ ಕೂಟ ಕರೆದರು. ಸುಮಾರು ೪೦ ಮಂದಿ ಪ್ರಮುಖ ಪತ್ರಿಕೋದ್ಯಮಿಗಳಿದ್ದರು. ಬ್ರಿಟಿಷ್, ಅಮೆರಿಕನ್, ಆಸ್ಟ್ರೇಲಿಯನ್, ಚೈನೀಸ್, ರಶ್ಯನ್ ಮತ್ತೆ ಫ್ರೀ ಫ್ರೆಂಚ್ ಪತ್ರಿಕೋದ್ಯಮಿಗಳೂ ಇದ್ದರು.

ರಾಜಾಜಿ ದಿಲ್ಲಿಗೆ

ನವಂಬರ ಮೊದಲನೆಯ ವಾರದಲ್ಲಿ ಬರುವರೆಂದು ತಿಳಿದುಬರುತ್ತದೆ.

The Bank of Mangalore Limited, Mangalore.
ESTD: 1931

HEAD OFFICE	*BRANCHES*
Mangalore.	Moodabidri & Padubidri.

The Bank Undertakes to Collect Cheques, Demand and Documentary Bills at Most Competitive Rates.
ISSUES DRAFTS ON ALL IMPORTANT TOWNS IN THE DISTRICT
and also on
BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.
at very favourable rates
All kinds of inland banking business undertaken

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲುವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾ ಬೇನೆ, ಪಕ್ಷವಾತ, ನೋಡಿಮ ನೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ

ಅಮೃತಾಂಜನ ಡಿಪೋ. — ಬೊಂಬಾಯಿ ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಜೀವವಿಮೆ ಮಾಡುವ ಪ್ರಯೋಜನವು ಇಂದು ಹಿಂದಿಗಿಂತ ಅಧಿಕವಾಗಿದೆ.

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಇದರಲ್ಲಿ ಒಂದು ಪಾಲಿಸಿ ಪಡೆದು

ಈಗಲೇ ನೀವು ನಿಮ್ಮನ್ನು ಮತ್ತು ನಿಮ್ಮನ್ನು ಹೊಂದಿಕೊಂಡಿರುವವರನ್ನು ರಕ್ಷಿಸಿಕೊಳ್ಳಿರಿ!

ಪ್ರತಿನಿಧಿಗಳಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಇನ್ಶೂರ್ ಮಾಡಲು ಅಥವಾ ಮಾಹಿತಿ ತಿಳಕೊಳ್ಳಲು ದಯಮಾಡಿ ಬರೆಯಿರಿ

ಕೊಟ್ಟಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

—: ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ: —

ಬೆಂಗಳೂರು ಬೊಂಬಾಯಿ ಮದ್ರಾಸು ಕಲ್ಲಿಕೋಟೆ ಮಂಗಳೂರು ಮತ್ತು ತ್ರಿವೇಂಡ್ರಂ

‘Bhuvanendra Products Limited

Katapadi, S. Kanara.

“BHUVANENDRA” Garbhapal

Tried and appreciated by eminent Doctors Proved to be the best remedy where even allopathic medicines failed A specific for threatened or habitualabortion andother uterine troubles Must be commense soon after conception andcontinued up to the time of delivery

‘ಭುವನೇಂದ್ರ ಗರ್ಭಪಾಲ’

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವ ವಿಧದ ದೋಷಗಳನ್ನು ಗುಣಪಡಿಸುವ ದಿವ್ಯ ಔಷಧಿ ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು –
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ (2) ರಾಘುವೇಂದ್ರ ಪೈ, ರಥಬೀದಿ (3) ದಿ ಕರ್ನಾಟಿಕ ಸ್ಟಫ್ ವರ್ಕ್ಸ್, ರಥಬೀದಿ (4) ಡಾ| ಯಂ ಎಸ್ ಪ್ರಭು, M. B B S. ಸಿ. ಪಿ ಸಿ ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

ಡಿಪೋ:—1. ಮಂತ್ರಾರ ಗಲ್ಲಿ, ಹುಬ್ಬಳ್ಳಿ.
2. 86. ಫ್ಲ್ಯಾಕ್ರಾಫ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೋಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ ವಿ. ಪಂಡಿತರ
ಮೃತ್ಯುಂಜಯ ರಸ. ಪಂಚವಟಿ ಮಾತ್ರೆ. **ಕೊಲೆರಾ ರೋಗಕ್ಕೆ ಸಿದ್ಧೌಷಧ.**
ಸೇವನಾ ಕ್ರಮಗಳು ಔಷಧಿಯೊಡನೆ ಇದೆ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಕು 29—10—1943 [ಸಂಚಿಕೆ 43]

ವೇವೆಲರು ಮಹಾತ್ಮರ ಭೇಟಿ ಮಾಡುವರು?

'ವೇವೆಲರು ಗಾಂಧಿ ಮತ್ತು ಕಾಂಗ್ರೆಸ್ ಮುಖಂಡರ ಭೇಟಿ ಮಾಡುವರು?

ವೇವಲರು ವೈಸರಾಯ್ ಪದವಿಯನ್ನು ಸ್ವೀಕರಿಸಿದ್ದು ಅವರು ಬೇಗನೇ ಭಾರತದ ರಾಜಕೀಯ ಬಿಕ್ಕಟ್ಟು ಬಗೆಹರಿಸುವ ಒಂದು ಪ್ರಯತ್ನ ಮಾಡಬಹುದೆಂದೂ, ಅವರು ಲಂಡನಿನಿಂದ ಸಿದ್ಧಪಡಿಸಿದ ಯೋಜನೆಯನ್ನು ಗಾಂಧಿಜಿ ಹಾಗೂ ಕಾಂಗ್ರೆಸ್ ಮುಂಖಂಡರ ಭೇಟಿಯಾಗಿ ಅವರ ಮುಂದಿಡುವರೆಂದೂ ಡಿಲ್ಲಿಯಲ್ಲಿ ಸುದ್ದಿಯಿದೆ. ಡಿಲ್ಲಿಯ ವಾತಾವರಣವಿಂದು ವೈಸರಾಯರ ಮುಂದಿನ ಯೋಜನೆಗಳ ಕುರಿತು ತುಂಬಿರುವುದು.

'ಅಮೆರಿಯನ್ನು ಮನೆಗೆ ಕಳಿಸಿ' ಪಾರ್ಲಿಮೆಂಟಿನಲ್ಲಿ ವಾದ

ಲೀಬ್ರಿಜ್ ಕಾರ್ಖಾನೆ ಸಮಿತಿಯವರು ಬ್ರಿಟಿಷ್ ಮುಖ್ಯ ಮಂತ್ರಿ ಚರ್ಚಿಲರಿಗೆ ಒಂದು ಮನವಿ ಮಾಡುತ್ತಾ ಭಾರತ ಮಂತ್ರಿ ಅಮೆರಿಯವರನ್ನು ಕೂಡಲೇ ಮನೆಗೆ ಕಳುಹಿಸಬೇಕೆಂದೂ, ಭಾರತದ ಮುಖಂಡರ ಬಿಡುಗಡೆ ಮಾಡಿ ಬಿಕ್ಕಟ್ಟು ಬಗೆಹರಿಸಬೇಕೆಂದೂ ಕೇಳಿಕೊಂಡಿದ್ದರು. 'ಈ ವಿಷಯದ ಕುರಿತು ಚರ್ಚಿಲರು ಏನು ವಿಚಾರ ಮಾಡಿದರಿ' ಎಂದು ಪಾರ್ಲಿಮೆಂಟಿನಲ್ಲಿ ಗಲಚಾರರು ಪ್ರಶ್ನಿಸಿದರು. 'ಈ ಕಾರ್ಖಾನೆಯವರಿಗೆ ಇಂಥಾ ವಿಚಾರ ಬೇಕಾಗಿಲ್ಲ'ವೆಂದು ಚರ್ಚಿಲ್ ಹೇಳಿದರು. 'ಈ ಕಾರ್ಖಾನೆಯವರು ಅಭಿಪ್ರಾಯವನ್ನು ಚರ್ಚಿಲರು ಕಡೆಗಣಿಸುವುದು ಅದು ನನಗೆ ವಿಷಾದವಾಗುತ್ತದೆ. ಬ್ರಿಟನಿನ ಇನ್ನೂ ಅನೇಕ ಪ್ರಜೆಗಳು ಹೀಗೆಯೇ ತಿಳಿದಿದ್ದಾರೆ. ಹಾಗಾಗಿ ಅಮೆರಿಯನ್ನು ಮನೆಗೆ ಕಳುಹಿಸಿಕೊಟ್ಟರೆ ಎಲ್ಲರಿಗೂ ಸಮಾಧಾನವಾಗುವುದಿಲ್ಲವೇ' ಎಂದು ಗಲಚಾರರು ಕೇಳಿದರು. 'ಓರ್ವ ಮಂತ್ರಿಯನ್ನು, ಅವನ ಆಡಳಿತ ಪ್ರಯೋಜನವಿಲ್ಲದಿದ್ದರೆ, ಅವನನ್ನು ದೂರ ಮಾಡೆಂದು ಹೇಳುವುದು ಪ್ರಜಾ ಪ್ರಭುತ್ವದ ಅಧಿಕಾರ' ಎಂದು ಶಿನ್ ವೆಲ್ಲರು ವಾದಿಸಿದರು. 'ಜನರು ಏನು ಬೇಕಾದರೂ ಕೇಳಬಹುದು. ಆದರೆ ಮೊದಲು ಪಾರ್ಲಿಮೆಂಟ್ ಸದಸ್ಯರು ಕೇಳಿದ ಪ್ರಶ್ನೆಗೆ ಮಾತ್ರ ಉತ್ತರ ಕೊಡಲಾಗುವುದು' ಎಂದರು ಚರ್ಚಿಲರು. 'ಈ ಕಾರ್ಖಾನೆ ನನ್ನ ಮತದಾರ ಸಂಘದಲ್ಲಿದೆ. ನಾನು ಮುಖ್ಯ ಮಂತ್ರಿಯವರಿಗೆ ಗೌರವ ತೋರಿಸುವಂತೆ, ಅವರು ನಮಗೆ ಗೌರವದ ಉತ್ತರ ಕೊಡಬೇಕು' ಎಂದು ಸೋರೆನ್ಸನರು ಹೇಳಿದರು. 'ಜನರು ತಮಗೆ ಸಂಬಂಧಿಸಿದ ಪ್ರಶ್ನೆ ಕೇಳಿದರೆ ಉತ್ತರ ಕೊಡಬಲ್ಲೆ' ಎಂದು ಚರ್ಚಿಲ್ ನುಡಿದರು.

'ಅಮೆರಿಯನ್ನು ಮನೆಗೆ ಕಳುಹಿಸಿ'

ಎ. ಐ. ಸಿ. ಸಿ. ಸಭೆ ಸೇರಿಸುವ ಪ್ರಯತ್ನ

ಎ. ಐ. ಸಿ. ಸಿ. ಸಭೆ ಕೂಡಿಸುವ ಪ್ರಯತ್ನ

ಶ್ರೀ. ಮುನ್ಷಿಯವರು ಡಿಲ್ಲಿಗೆ ಬಂದಿರುವರು. ಶ್ರೀ. ವಾಸ್ತವರೂ ಆಗಮಿಸಿದ್ದಾರೆ. ಸೆರೆಮನೆಯಿಂದ ಹೊರಗಿರುವ ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಸದಸ್ಯರ ಸಮ್ಮೇಲನ ಜರಗಿಸುವ ಮಾತುಕತೆಗಳಾಗುತ್ತಿವೆ. ನವಂಬರ ಆದಿಯಲ್ಲಿ ಸೇರಲಿರುವ ಕೇಂದ್ರ ಎಸೆಂಬ್ಲಿ ಅಧಿವೇಶನಕ್ಕೆ ಮೊದಲು ಈ ಸಮ್ಮೇಳನ ಕೂಡಿಸುವ ಅಂದಾಜು ಇದೆ. ನವಂಬರ ೮ಕ್ಕೆ ಕೇಂದ್ರ ಎಸೆಂಬ್ಲಿ ಕಾಂಗ್ರೆಸ್ ಸದಸ್ಯರ ಸಭೆ ಕೂಡುವುದು. ಕಾಂಗ್ರೆಸ್ ಸದಸ್ಯರು ಎಸೆಂಬ್ಲಿ ಅಧಿವೇಶನಕ್ಕೆ ಹಾಜರಾಗಬೇಕೇ. ಎಂಬ ವಿಚಾರ ವಿಮರ್ಶಿಸಲಾಗುವುದು.

ಕಲ್ಕತ್ತೆಯಲ್ಲಿ ವೈಸರಾಯರು

ವೈಸರಾಯ್ ವೇವಲರು ಪತ್ನಿಸಮೇತ ಹಾಗೂ ಖಾಸಗಿ ಕಾರ್ಯದರ್ಶಿ ಜೆಂಕಿನ್ಸರೊಡನೆ ಕಲ್ಕತ್ತೆಗೆ ಬಂದು ಅಲ್ಲಿನ ಹೃದಯದ್ರಾವಕ ಪರಿಸ್ಥಿತಿಗಳನ್ನು ಕಣ್ಣಾರೆ ಕಂಡಿದ್ದಾರೆ. ಬಂಗಾಲದ ಕುರಿತು ವೇವಲರ ಕರ್ತವ್ಯವೆಂಬ ಕುರಿತು ಯಾರ್ಕ್‌ಶಾರ್ ಪತ್ರಿಕೆ ಒಂದು ಅಗ್ರಲೇಖ ಬರೆದು, 'ಸರಕಾರವು ತನ್ನ ಕರ್ತವ್ಯವನ್ನು ಸರಿಯಾಗಿ ನೆರವೇರಿಸದ್ದ ಕಾರಣ ಈ ಬವಣೆಯುಂಟಾಯಿತೆಂದೂ, ವೇವಲರಾದರೂ ಜನರ ಸಹಕಾರ ಪಡೆದು ಬಂಗಾಳದ ಪರಿಸ್ಥಿತಿ ಸುಧಾರಿಸಲು ಪ್ರಯತ್ನಿಸಬೇಕೆಂದೂ ತಿಳಿಸಿದೆ.

ತ್ರಾವಣಕೋರ್ ಕೊಚ್ಚಿನ್ ಪರಿಸ್ಥಿತಿ ಬಂಗಾಳದಷ್ಟೇ ಭೀಕರ

ಇದೆಯೆಂದು ಸರ್. ಸಿ. ಪಿಯವರು ಒಂದು ಹೇಳಿಕೆಯಿತ್ತು ತಿಳಿಸಿದರು. ಅದರಲ್ಲಿ ಕೊಚ್ಚಿನ್ ಪರಿಸ್ಥಿತಿ ತ್ರಾವಣಕೋರಕ್ಕಿಂತಲೂ ಭೀಕರವಾಗಿದೆಯೆಂದು ಅವರ ಹೇಳಿಕೆ. ಬಂಗಾಳದಲ್ಲಿ ೧೦೦ಕ್ಕೆ ೮೩ರಷ್ಟು ಆಹಾರ ಹುಟ್ಟುವುದಾದರೂ ಅಲ್ಲಿ ಹೀಗೆ ಬರಗಾಲವುಂಟಾಗಲು ಕಾರಣವೇನೆಂಬ ಬಗ್ಗೆ ಅವರು ವಿಷಾದ ಸೂಚಿಸಿದರು.

ಒರಿಸಾ ಇನ್ನೊಂದು ಬಂಗಾಳ ಸರಕಾರದ ಮೇಲೆ ಆರೋಪ.

ಒರಿಸಾದ ಇಂದಿನ ದುಸ್ಥಿತಿಯನ್ನು ವಿವರಿಸಿ, ಸಹಾಯ ಕೋರುತ್ತಾ ಅಲ್ಲಿನ ಕಾಂಗ್ರೆಸ್ ಮುಂದಾಳುಗಳಾದ ಸ್ವಾಮಿ ವಿಚಿತ್ರಾನಂದದಾಸ ಮತ್ತು ಶ್ರೀ. ಬಿ. ದಾಸ ಎಂ. ಎಲ್. ಎ, (ಕೇಂದ್ರ) ಇವರು ಒಂದು ಹೇಳಿಕೆ ಹೊರಡಿಸಿ, ಬಂಗಾಳದ ಭೀಕರ ಪರಿಸ್ಥಿತಿ ಜಗತ್ತಿಗೆ ತಿಳಿದು, ಎಲ್ಲರ ಸಹಾಯ ದೊರಕಿತು, ಆದರೆ ಒರಿಸಾದ ಸಂಕಷ್ಟದ ಬಗ್ಗೆ ಹೊರಗಿನವರಿಗೇನೂ ಗೊತ್ತಿಲ್ಲ; ಕಳೆದ ಮೇ ತಿಂಗಳಲ್ಲಿ ಸ್ವತಂತ್ರ ವ್ಯಾಪಾರ ಮಾಡುವಂತೆ ಸರಕಾರ ಆಜ್ಞೆಯಿತ್ತು ಒರಿಸಾದ ಸದ್ಯದ ದುಸ್ಥಿತಿಗೆ ಕಾರಣವಾಯಿತು, ಒರಿಸಾವು ಉಳಿತಾಯದ ಪ್ರಾಂತವೆಂದು ಸಾರಿ ಸರಕಾರ ಅಪರಾಧ ಮಾಡಿತು, ತಪ್ಪು ದಾರಿ ಹಿಡಿದು ಸರಕಾರವು ಆಹಾರ ಸಾಮಗ್ರಿಯನ್ನು ಹೊರಗೆ ಕಳುಹಿಸಿತು, ಹೀಗೆ ಒರಿಸಾವನ್ನಿಂದು ಸರಕಾರ ಉಪವಾಸದಲ್ಲಿ ಅದ್ದಿದೆಯೆಂದು ಅವರು ವಿಶದಪಡಿಸಿದ್ದಾರೆ.

ಮಲಬಾರಿನ ಅನಾಥರನ್ನು ಕಾಪಾಡಿರಿ

ಠಕ್ಕರ ಬಾಪರ ವಿನಂತಿ.

ಶ್ರೀ. ಠಕ್ಕರ್ ಬಾಪರು ಮಲಬಾರಿನಲ್ಲಿ ಸಂಚರಿಸುತ್ತಿದ್ದು, ಕಳೆದ ಜೂನ್, ಜುಲಾಯಿ, ಅಗಸ್ಟ್ ತಿಂಗಳಲ್ಲಿ ಮಲಬಾರಿನಲ್ಲಿ ಉಂಟಾದ ಕೋಲೆರಾ ಬೇನೆಯಿಂದ ಸತ್ತವರ ಸಂಖ್ಯೆ 30 ಸಾವಿರಕ್ಕೆ ಮಿಕ್ಕಿದೆಯೆಂದೂ, ಇದರಿಂದ ಅನೇಕ ಮಂದಿ ಮಕ್ಕಳು ನಿರ್ಗತಿಕರಾಗಿರುವರೆಂದೂ, ಹರಿಜನ ವರ್ಗಕ್ಕೆ ಸೇರಿದವರು ಹಲವರಿರುವರೆಂದೂ, ಅವರೆಲ್ಲ ಉಪವಾಸ ಬಿದ್ದು ಸಾಯುವ ಪರಿಸ್ಥಿತಿಯಲ್ಲಿರುವವರಾದ್ದರಿಂದ, ಈ ಬಗ್ಗೆ ಮಹಾಜನರು ಸಹಾಯ ಮಾಡಿ ಇವರನ್ನು ಕಾಪಾಡಬೇಕೆಂದೂ ವಿನಂತಿ ಹೊರಡಿಸಿದ್ದಾರೆ.

'ಬಂಗಾಳದ ಪರಿಸ್ಥಿತಿಗೆ ಸರಕಾರ ಕಾರಣ'

ಪಂಡಿತ ಕುಂಜ್ರು ಹೇಳಿಕೆ.

ಸರ್ವೆಂಟ್ಸ್ ಓಪ್ ಇಂಡಿಯಾ ಸೊಸೈಟಿ ಅಧ್ಯಕ್ಷರಾದ ಪಂಡಿತ ಕುಂಜ್ರುರವರು ಬಂಗಾಳವನ್ನು ಸಂಚರಿಸಿ ಬಂದು, ಅಲ್ಲಿನ ಇಂದಿನ ಪರಿಸ್ಥಿತಿಗೆ ಪ್ರಾಂತಿಕ ಸರಕಾರ, ಕೇಂದ್ರ ಸರಕಾರ ಹಾಗೂ ಲಿನ್‌ಲಿತ್‌ಗೋ ಅಮೆರಿಯವರೇ ಕಾರಣರೆಂದು ವಿಶದಪಡಿಸಿದ್ದಾರೆ. ಜನರು ಉಪವಾಸದಿಂದ ಸಾಯುತ್ತಿದ್ದರೂ ಲಿನ್‌ಲಿತ್‌ಗೋ ಮತ್ತು ಅಮೆರಿಯವರು ತಮ್ಮ ಕೆಲಸದಲ್ಲಿಯೇ ಮಗ್ನರಾಗಿದ್ದರೆಂದೂ ಮುಂದಿನ ಹೊಣೆಯೆಲ್ಲ ವೇವಲರನ್ನೇ ಅವಲಂಬಿಸಿರುವುದಾಗಿಯೂ ಅವರು ತಿಳಿಸಿದ್ದಾರೆ. ಬಂಗಾಳದ ಪಟ್ಟಣಗಳಿಗಿಂತ ಹಳ್ಳಿಗಳ ಪರಿಸ್ಥಿತಿ ಮತ್ತಷ್ಟು ಭೀಕರವಾಗಿದೆಯೆಂದೂ ಅವರು ಪ್ರಕಟಿಸಿದ್ದಾರೆ.

ಹೊಸ ವೈಸರಾಯರು

ಪತ್ರಿಕೋದ್ಯಮಿಗಳ ಭೇಟಿ

ಹೊಸ ವೈಸರಾಯ್ ಲಾರ್ಡ ವೇವಲರು ಪತ್ನಿ ಸಮೇತ, ವೈಸರಾಯ್ ಭವನದಲ್ಲಿ ಪತ್ರಿಕೋದ್ಯಮಿಗಳ ಕೂಟ ಕರೆದರು. ಸುಮಾರು ೪೦ ಮಂದಿ ಪ್ರಮುಖ ಪತ್ರಿಕೋದ್ಯಮಿಗಳಿದ್ದರು. ಬ್ರಿಟಿಷ್, ಅಮೆರಿಕನ್, ಆಸ್ಟ್ರೇಲಿಯನ್, ಚೈನೀಸ್, ರಶ್ಯನ್ ಮತ್ತೆ ಫ್ರೀ ಫ್ರೆಂಚ್ ಪತ್ರಿಕೋದ್ಯಮಿಗಳೂ ಇದ್ದರು.

ರಾಜಾಜಿ ಡಿಲ್ಲಿಗೆ

ನವಂಬರ ಮೊದಲನೆಯ ವಾರದಲ್ಲಿ ಬರುವರೆಂದು ತಿಳಿದುಬರುತ್ತದೆ.

ಆಹಾರ ಪರಿಸ್ಥಿತಿ

ಕಡಿಮೆ ಉತ್ಪತ್ತಿಯ ಕಾಸರಗೋಡು

ಹಳ್ಳಿಗರ ಅಗತ್ಯ ನೋಡಬೇಕು

ಕಡಿಮೆಯಿದ್ದಲ್ಲಿಂದಲೂ ಕೊಂಡುಹೋಗುವುದೆ?

—ಕಯ್ಯಾರ ಕಿಞ್ಞಣ್ಣ ರೈ

ದಕ್ಷಿಣ ಕನ್ನಡ ಜಿಲ್ಲೆ ಕಳೆದ ವರ್ಷದ ಆಹಾರ ಸಂಕಷ್ಟವನ್ನು ದಾಟಿ ಮೇಲೆ ಬಿದ್ದಿದೆ. ಮೇಲೆ ಬಿದ್ದದ್ದು ಬಹಳ ಪ್ರಯಾಸದಿಂದ ಎಂಬುದನ್ನು ಒಪ್ಪಿಕೊಳ್ಳಲೇಬೇಕು. ಬಡ ಕೂಲಿಗಾರರು ವಿಪರೀತ ಸಂಕಷ್ಟಕ್ಕೊಳಗಾಗಿದ್ದಾರೆ. ಮಧ್ಯಮ ವರ್ಗದವರು, ನಿಶ್ಚಿತ ಸಂಬಳದ ರೂ. ೫೦ಕ್ಕಿಂತ ಕಡಿಮೆ ಸಂಬಳದವರು ತುಂಬಾ ಬವಣೆಗೊಂಡಿದ್ದಾರೆ; ಸಾಲ ಶೂಲಗಳಿಗೊಳಗಾಗಿದ್ದಾರೆ. ಸಾಧಾರಣ ಸ್ಥಿತಿಯಲ್ಲಿಯಾದರೂ ನಮ್ಮ ಊರಿನ ರೈತರು ಬಡ ಕೂಲಿಗಾರರು ಸಾಕಷ್ಟು ಹೊಟ್ಟೆಗೆ ತಿನ್ನುವುದಿಲ್ಲ. ಒಪ್ಪೊತ್ತು ಊಟ, ಗಂಜಿ ನೀರು ಕುಡಿದು ಹೊಟ್ಟೆ ಹಸಿವಡಗಿಸುತ್ತಾರೆ; ಇದು ನಮ್ಮ ಜಿಲ್ಲೆಯಲ್ಲಿ ಮಾತ್ರವಲ್ಲ, ಅಖಿಲ ಭಾರತದಲ್ಲಿಯೇ ಹೀಗೆ. ಇದಕ್ಕೆ ಕಾರಣ ಬೇರೆ ಬೇರೆ ಇದೆ. ರಾಜಕೀಯ ಕಾರಣ ಮುಖ್ಯವಾದದ್ದು. ಅದರಿಂದಲೇ ಆರ್ಥಿಕ ಅವನತಿ ಇಷ್ಟು ಅಧಃಪತನ ಹೊಂದಿದೆಯೆಂದು ಇತ್ತೀಚೆಗೆ ಅರ್ಧ ಶತಮಾನದಿಂದ ನಮ್ಮ ಮುಂದಾಳುಗಳು ಹೇಳುತ್ತಾ ಬಂದಿದ್ದಾರೆ. ಅಂತೂ ದಕ್ಷಿಣ ಕನ್ನಡ ಒಟ್ಟು ಬರಗಾಲ ಪೀಡಿತವಾಗದೆ, ಬಂಗಾಳವಾಗದೆ ಕಳೆದ ವರ್ಷ ಅತಿ ಪ್ರಯಾಸದಿಂದ ಮೇಲೆ ಬಿದ್ದಿದೆ. ಇಷ್ಟರಲ್ಲೇ ಅನ್ನವಿಲ್ಲದೆ ಉಪವಾಸ ಬಿದ್ದ ಕೆಲ ಸಂಭವಗಳನ್ನು ನೋಡಿದ್ದೇವೆ. ಆಹಾರವಿಲ್ಲದೆ ನಮ್ಮ ಜಿಲ್ಲೆಯಲ್ಲಿ ಕೊಲೆರಾ ಉಂಟಾದ ವರದಿ ಬಂದಿದೆ!

*   *   *   *

ಕಳೆದ ವರ್ಷ ಹೇಗೂ ದಾಟಿತು. ಮುಂದಿರುವ ವರ್ಷ ಅದಕ್ಕಿಂತಲೂ ಗಂಡಾಂತರದ್ದೆಂದು ಎಲ್ಲರೂ ಬಲ್ಲರು. ಜನರು ಬಹಳ ಗಾಬರಿಗೊಂಡಿದ್ದಾರೆ. ಜಿಲ್ಲೆಯಲ್ಲಿ ರೇಶನಿಂಗ್ ಆಗಬೇಕೆಂದು ಸೂಚನೆ ಬಂದಿದೆ. ಸರಕಾರ ಅಕ್ಕಿ ಭತ್ತವನ್ನು ಸ್ವಾಧೀನ ಮಾಡುವ ಆಜ್ಞೆ ಹೊರಡಿಸಿದೆ. ಈ ಆಜ್ಞೆಯ ಕುರಿತು ಹಿಂದಿನ ಕೆಲ ವಾರಗಳಿಂದ ಬಹಳ ವಿವಾದಗಳಾಗಿವೆ. ಜಿಲ್ಲಾ ಭೂಮಾಲಿಕರ ದೂರು ಸರಕಾರಕ್ಕೆ ಹೋಗಿದೆ. ಗಿರಾಕಿಗಳ ಕಡೆಯಿಂದಲೂ ಮನವಿ ಸಾಗಿದೆ. ಸ್ಥಳೀಕ ಸಂಸ್ಥೆಗಳಲ್ಲಿ ಜಿಲ್ಲಾ ಬೋರ್ಡು ಮುನ್ಸಿಪಾಲಿಟಿಗಳಲ್ಲಿಯೂ ಚರ್ಚೆಗಳಾಗಿವೆ. ಒಟ್ಟಿನಿಂದ ಇಂದು ನಮ್ಮ ಜಿಲ್ಲೆ ದೊಡ್ಡ ಆಹಾರದ ಸಂಕಷ್ಟವನ್ನಿದಿರಿಸಬೇಕಾಗಿ ಬಂದಿದೆ ಯೆಂಬುದು ನಿರ್ವಿವಾದ.

ಕಳೆದವಾರ, ಜಿಲ್ಲಾ ಕಲೆಕ್ಟರರ ಕಚೇರಿಯಲ್ಲಿ, ಸರಕಾರದ ಮುಂದೆ ತಮ್ಮ ದೂರು ಹೇಳಿ ಕೊಳ್ಳಲು ಸೇರಿದ ಸಭೆಯಲ್ಲಿ ನಿವೃತ್ತ ಕೃಷಿ ಇಲಾಖಾಧಿಕಾರಿಗಳಾದ ಶ್ರೀ ಕೆ. ಟಿ. ಆಳ್ವರು ಹೇಳಿದ ಮಾತುಗಳು ತುಂಬಾ ಗಮನಾರ್ಹವಿರುವವು. ನಮ್ಮ ಜಿಲ್ಲೆ ಸಾಧಾರಣ ಪರಿಸ್ಥಿತಿಯಲ್ಲಿ ಎಂದರೆ ಇಲ್ಲ. ಚೆನ್ನಾಗಿ ಬೆಳೆ ಬೆಳೆದಲ್ಲಿ ಮಾತ್ರ ನಮಗೆ ಸಾಕಷ್ಟು ಆಹಾರ ಉತ್ಪತ್ತಿ ಮಾಡುವ ಜಿಲ್ಲೆ. (ಸಾಧಾರಣ ಪರಿಸ್ಥಿತಿಯಲ್ಲೂ ನಮ್ಮ ಜಿಲ್ಲೆಗೆ ಹೊರಗಿನಿಂದ ಅಕ್ಕಿ ಬರುತ್ತಿತ್ತು' ಎಂಬುದನ್ನೂ ಮರೆಯಬಾರದು.) ಆದರೆ ಈ ವರ್ಷದ ಮೊದಲ ಬೆಳೆ ಚೆನ್ನಾಗಿಲ್ಲ. ಮೊದಲ ಬೆಳೆಯಲ್ಲಿಯೇ ವರ್ಷದ ಉತ್ಪತ್ತಿ ಯಾ? ಅಂಕೆ ಹುಟ್ಟುವುದು; ಅದು ಚೆನ್ನಾಗಿಲ್ಲವೆಂದರೆ ಮುಂದಿನ ಬೆಳೆ ಎಷ್ಟು ಚೆನ್ನಾದರೂ (ಆಗುವ ಸಂಭವವಿಲ್ಲವೆಂದು ಇಂದಿನ ಹವಾಮಾನದಿಂದ ಖಚಿತವಾಗುತ್ತದೆ) ಈಗ ಉಂಟಾದ ನಷ್ಟದ ಭರ್ತಿ ಆಗಲಾರದು. ಹೀಗಿರುತ್ತಾ ನಮ್ಮ ಜಿಲ್ಲೆ ಈ ವರ್ಷ ಬಹಳ ಆಹಾರ ಸಂಕಷ್ಟವನ್ನೆದುರು ನೋಡಬೇಕಾಗಿದೆ. ಇಂಥಾ ಸಂದರ್ಭದಲ್ಲಿ ಸರಕಾರ ಜನತೆಯ ವಿಶ್ವಾಸ ಗಳಿಸಿಕೊಂಡು ಕೆಲಸ ಮಾಡಿದರೆ ಮಾತ್ರ ಸಂಪೂರ್ಣ ಉಪವಾಸ ಬೀಳದೆ ಜೀವಧಾರಣೆ ಮಾಡಬಹುದು. ಇದ್ದಷ್ಟು ಆಹಾರವನ್ನು ಎಲ್ಲರೂ ಹಂಚಿ ತಿನ್ನಬಹುದು.

*   *   *   *

ಇದು ಇಡೀ ಜಿಲ್ಲೆಯ ಆಹಾರ ಪರಿಸ್ಥಿತಿಯ ಕುರಿತಾಗಿರುವ ವಿಚಾರ. ಇಡೀ ಜಿಲ್ಲೆಯಲ್ಲಿ ಕಾಸರಗೋಡು ತಾಲೂಕಿನ ಪರಿಸ್ಥಿತಿ ವಿಪರೀತವಾದದ್ದು. ಅಲ್ಲಿ ಆಹಾರ ಉತ್ಪತ್ತಿ ಕಡಮೆ. ಭತ್ತದ ಕೃಷಿಗಿಂತ ಅಡಿಕೆ ಕೃಷಿ ಹೆಚ್ಚು. ಆಹಾರಕ್ಕಾಗಿ ಭತ್ತ ಬೆಳೆಸಲಿ ಎಂದರೆ ಒಮ್ಮೆಲೇ ಅಡಿಕೆ ಸಸಿಗಳನ್ನು ಕಡಿದು ಹಾಕಿ ಭತ್ತ ಬೆಳೆಸುವುದೂ ಸಾಧ್ಯವಿಲ್ಲದ ಸಂಗತಿ. ಈ ತಾಲೂಕಿನಲ್ಲಿ ಬೆಳೆದ ಅಕ್ಕಿ ಭತ್ತ, ಈ ತಾಲೂಕಿಗೆ ಮೂರು ತಿಂಗಳಿಗೂ ಸಾಲದು. ಈ ಕಾಸರಗೋಡಿಗೆ ಪುತ್ತೂರಿನಿಂದ ಹಾಗೂ ಕುಂದಾಪುರದಿಂದ ಹೆಚ್ಚಾಗಿ ಅಕ್ಕಿ ಭತ್ತ ಬರಬೇಕಾಗಿದೆ. ಅಧಿಕಾರಿಗಳು ಇಲ್ಲಿಯೂ ರಿಕ್ವಿಸಿಶನ್ ಆಜ್ಞೆ ಮಾಡಿದ್ದಾರೆ. ಶೇಕಡಾ ೫೦ ರಂತೆ ಇಲ್ಲಿಂದಲೂ ಒಯ್ಯುತ್ತಾರೆ. ಮೊದಲೇ ಕಡಿಮೆ ಆಹಾರ ಉತ್ಪತ್ತಿಯ ತಾಲೂಕು; ಅದರಲ್ಲೂ ಅರ್ಧಾಂಶವನ್ನು ಸಾಗಿಸಿ ಬಿಟ್ಟರೆ ಮತ್ತೆ ಏನು ಉಳಿಯಿತು?-ಒಂದು, ಒಂದೂವರೆ ತಿಂಗಳ ಖರ್ಚಿಗೂ ಬಂದೀತೆ? ಪುತ್ತೂರು ಹಾಗೂ ಇತರ ತಾಲೂಕುಗಳಲ್ಲಿ ಇದೇ ರೀತಿ ಶೇಕಡಾ ೫೦ರಂತೆ ರಿಕ್ವಿಸಿಶನ್ ಆಜ್ಞೆ ಆಗಿರುವಾಗ, ಮುಂದಕ್ಕೆ ಬೇರೆ ತಾಲೂಕುಗಳಿಂದ ಈ ತಾಲೂಕಿಗೆ ಬರುವುದಂತೂ ಅಸಂಭವ. ಹೀಗಿರುವಾಗ ಮೊದಲೇ ಕಡಿಮೆಯಿದ್ದಲ್ಲಿಂದ, ಅದರಲ್ಲೂ ಅರ್ಧಾಂಶವನ್ನು ಸರಕಾರ ಒಯ್ದುಬಿಟ್ಟರೆ ಜನರ ಅವಸ್ಥೆಯೇನು? ಮೊದಲನೇ ಪ್ರಶ್ನೆ; ಕಾಸರಗೋಡು ತಾಲೂಕಿನವರು ಬದುಕುವುದು ಹೇಗೆ? ಎರಡನೇ ಪ್ರಶ್ನೆ ಅವರು ಕೃಷಿ ಸಾಗಿಸುವುದು ಹೇಗೆ?

ಕೃಷಿಗೆ ತುಂಬಾ ಅಕ್ಕಿ ಭತ್ತ ಬೇಕು. ಕಾಸರಗೋಡು ತಾಲೂಕಿನಲ್ಲಿ, ಹಳ್ಳಿಗಳಲ್ಲಿ ಕೂಲಿ ಕೊಡುವುದು ಅಕ್ಕಿ ಭತ್ತಗಳ ರೂಪದಲ್ಲಿ. ಅಡಿಕೆ ಕೃಷಿಯಂತೂ ವರ್ಷದ ಹನ್ನೆರಡು ತಿಂಗಳೂ ನಡೆಯಬೇಕು. ಈಗಿನ ಕೆಲವು ವರ್ಷದಿಂದ ಮಹಾ ರೋಗ ಬಂದು ಇನ್ನಷ್ಟು ಕೃಷಿಕರು ಕೊಳೆಯ ವಿಷಯ ಜಾಗ್ರತೆ ವಹಿಸಬೇಕಾಗಿದೆ. ಹಳ್ಳಿಯ ಕೃಷಿಕರಿಗೆ ಮನೆಯ ಖರ್ಚಿಗಿಂತ ಹೆಚ್ಚು ಕೂಲಿಗೆ ಅಕ್ಕಿ ಭತ್ತ ಬೇಕಾಗುತ್ತದೆ. ಕೂಲಿಗೆ ಅಕ್ಕಿ ಭತ್ತ ಕೊಡುವುದೆಂದರೆ ವರ್ಷವಿಡೀ ಬಡ ಕೆಲಸಗಾರರನ್ನು ಸಾಕಿದಂತೆ. ಇಂಥಾ ಕಷ್ಟಕಾಲದಲ್ಲಿ ಅಕ್ಕಿಗೆ ದಿನದಿಂದ ದಿನಕ್ಕೆ ಕ್ರಯ ಏರುತ್ತಾ ಹೋಗುವಲ್ಲಿ ಬಡವರ ಕೂಲಿಯನ್ನು ಹಣದ ರೂಪದಲ್ಲಿ ಮಾಡಿದರೆ ಅದಕ್ಕಿಂತ ದೊಡ್ಡ ಅನ್ಯಾಯ ಬೇರಿಲ್ಲ. ಆದರೆ ಕಾಸರಗೋಡು ತಾಲೂಕಿನ ಕೃಷಿಕರಿಗೆ ಈಗಿನ ಪರಿಸ್ಥಿತಿಯಲ್ಲಿ ಮುಂದೇನು ಮಾಡುವುದೆಂಬುದು ಯಾವುದೂ ತಿಳಿಯುತ್ತಿಲ್ಲದು.

*   *   *   *

ಕಾಸರಗೋಡು ತಾಲೂಕಿನಲ್ಲಿ ಮುಖ್ಯ ಬೆಳೆ ಅಡಿಕೆ, ತೆಂಗು ಮತ್ತು ಒಳ್ಳೆ ಮೆಣಸು. ಆದ್ದರಿಂದ ಕೃಷಿಕರಿಗೆ ಎಷ್ಟು ಅಕ್ಕಿ ಭತ್ತ ಬೇಕಾಗಿದೆಯೆಂಬುದನ್ನು ಸರಕಾರ ಲೆಕ್ಕತೆಗೆಯದೆ ಒಂದೇ ತರದಲ್ಲಿ ರಿಕ್ವಿಸಿಶನ್ ಮಾಡಕೂಡದು. ರಿಕ್ವಿಸಿಶನ್ ಮಾಡಿದ ಅಕ್ಕಿ ಭತ್ತಗಳನ್ನು ಸಾಗಿಸುವರೆ ಬೇಕಾದಷ್ಟು ಮಾರ್ಗ ಸೌಕರ್ಯಗಳು ಈ ತಾಲೂಕಿನಲ್ಲಿಲ್ಲ. ಹೊರೆಯಾಗಿ ಹೊತ್ತುಕೊಂಡು ಹೋಗಬೇಕು. ಹೀಗೆ ತಾಲೂಕು ಕೇಂದ್ರಕ್ಕೆ, ಅಥವಾ ಡಿಪೋಗಳಿಗೆ ಸಾಗಿಸುವುದು ಬಹಳ ತ್ರಾಸದ ಕೆಲಸ. ಆ ಮೇಲೆ ಅಲ್ಲಿಂದ ತರುವುದು ಅದಕ್ಕಿಂತ ತ್ರಾಸ. ಅಥವಾ ಹೀಗೆ ಇಮ್ಮಡಿ ಕೆಲಸಮಾಡಿಕೊಳ್ಳುವುದೂ, ಕಡಿಮೆ ಉತ್ಪತ್ತಿಯ ಪ್ರದೇಶದಿಂದ ತೀರಾ ಅನವಶ್ಯಕ. ಎಲ್ಲಾ ತರದ ಅಕ್ಕಿಭತ್ತಗಳನ್ನು ಒಂದುಕಡೆ ಸೇರಿಸಿ ವಿಶ್ರಮಾಡುವುದರಿಂದ ಆಹಾರ ಕೆಡಲೂ ಕಾರಣವುಂಟು. ಹಾಗಾಗಿ ಕಾಸರಗೋಡು ತಾಲೂಕಿನ ಹಳ್ಳಿ ಹಳ್ಳಿಗಳಲ್ಲಿ, ಆಯಾಯ ಗ್ರಾಮಸ್ಥರಿಗೆ ಬೇಕಾದ ಅವಶ್ಯಕತೆಗಳನ್ನು ಮೊದಲು ಆಲೋಚಿಸಿ, ಅಲ್ಲಿಂದ ಅಕ್ಕಿತೆಗೆದುಕೊಂಡು ಹೋಗಬೇಕು ಮಾತ್ರವಲ್ಲ ಸಾಕಾಗದಲ್ಲಿಗೆ ಕೊಡುವ ಭರವಸೆ ಏರ್ಪಾಡುಗಳೂ ಆಗಬೇಕಾಗಿದೆ.

ಹೀಗೆ ಕಾಸರಗೋಡು ತಾಲೂಕಿನ ಕುರಿತು, ಜಿಲ್ಲಾ ಆಹಾರ ಪರಿಸ್ಥಿತಿ ವಿಮರ್ಶಿಸುವಾಗ, ಅಧಿಕಾರಿಗಳು ಸಾರ್ವಜನಿಕರು ವಿಶೇಷ ಗಮನ ಕೊಡಬೇಕಾಗಿದೆ. ಕಾಸರಗೋಡು ಮಲಬಾರಿಗೆ ತಾಗಿರುವ ತಾಲೂಕು. ಮಲಬಾರು ಅನ್ನಾಭಾವದಿಂದ, ರೋಗರುಜೆಗಳಿಂದ ಕಳೆದ ವರ್ಷವೇ ನರಳಿದೆ. ಈ ವರ್ಷ ಅದರ ಸೋಂಕು ಸಮೀಪದ ಕಾಸರಗೋಡಿಗೆ ತಗಲುವುದು ಸಂಭವವಿದೆ. ಯಾವುದೇ ಮುಂದಿನ ಆಲೋಚನೆಯಿಲ್ಲದೆ ಕಾರ್ಯಕೈಕೊಂಡರೆ ಹಾಗಾಗುವುದಂತೂ ಖಂಡಿತ. ಅದಕ್ಕಾಗಿ ಈಗಲೇ ಚೆನ್ನಾಗಿ ಆಲೋಚಿಸಬೇಕು. ಕಡಿಮೆ ಆಹಾರ ಉತ್ಪತ್ತಿಯಿರುವ ಕಾಸರಗೋಡು ತಾಲೂಕಿನ ವಿಷಯ ಪ್ರತ್ಯೇಕ ಗಮನವಿರಲಿ. ಅನರ್ಥ ಒದಗಿದ ಮೇಲೆ ಅದನ್ನು ಪರಿಹರಿಸಲು ಪ್ರಯತ್ನಿಸುವುದಕ್ಕಿಂತ ಅನರ್ಥವುಂಟಾದಂತೆ ಜಾಗ್ರತೆ ವಹಿಸುವುದೇ ಬುದ್ಧಿವಂತಿಕೆಯಾಗಿದೆ.

ಪುತ್ತೂರು ತಾಲೂಕು ಭೂಮಾಲಕರ ಸಭೆ

ತಾ. ೨೪ರಂದು ಶ್ರೀ. ಎಂ. ಶಿವರಾಯರ ಅಧ್ಯಕ್ಷತೆಯಲ್ಲಿ ಸೇರಿದ ಪುತ್ತೂರು ತಾಲೂಕು ಭೂಮಾಲಕರ ಸಭೆಯಲ್ಲಿ ಕೆಳಗಿನ ನಿರ್ಣಯಗಳಾಗಿವೆ. (೧) ನಿಶ್ಚಿತ ಬೆಲೆಯಲ್ಲಿ ಅಕ್ಕಿ ಒದಗಿಸುವರೆ ಹಾಗೂ ಕೃಷಿಕರಲ್ಲದ ಪೇಟೆಯ ಜನರಿಗೆ ಆಹಾರ ಒದಗಿಸುವರೆ ರಿಕ್ವಿಸಿಶನ್ ಮಾಡಬೇಕಾದದ್ದು ಅವಶ್ಯವಾದರೂ, ಅಗತ್ಯವಿರುವುದಕ್ಕಿಂತ ಹೆಚ್ಚು ರಿಕ್ವಿಸಿಶನ್ ಮಾಡಕೂಡದು. (೨) ಬೆಳೆ ವಲ್ಲಿಂದಲೇ ಭತ್ತವನ್ನು ರಿಕ್ವಿಸಿಶನ್ ಮಾಡುವುದು ತಪ್ಪು; ಗೇಣಿಯನ್ನು ಭತ್ತ ರೂಪದಲ್ಲಿ ಕೊಡುವಲ್ಲಿ ಮಾತ್ರ ಹಾಗೆ ಮಾಡಬಹುದು. ಇತರ ಕಡೆಗಳಲ್ಲಿ ಅಕ್ಕಿಯನ್ನು ಮಾತ್ರ ರಿಕ್ವಿಸಿಶನ್ ಮಾಡಬೇಕು. (೩) ಭತ್ತವನ್ನು ರಿಕ್ವಿಸಿಶನ್ ಮಾಡಿ ಮಿಲ್ಲಿಗೆ ಕೊಟ್ಟು ಅಕ್ಕಿ ಮಾಡುವುದು, ಹೊಸ ಮಿಲ್ಲುಗಳನ್ನು ಸ್ಥಾಪಿಸಲು ಆಸ್ಪದ ಕೊಡುವುದು, ಹಳ್ಳಿಯ ಉದ್ಯೋಗಿಕ ಅವನತಿಯನ್ನುಂಟುಮಾಡಿ ಜನರನ್ನು ಸಂಕಷ್ಟಕ್ಕೆ ಗುರಿಮಾಡುವುದರಿಂದ ಹಾಗೆ ಮಾಡಕೂಡದು. (೪) ತಾಲೂಕು ಕೇಂದ್ರಗಳಿಗೆ ಭೂಮಾಲಕರೇ ಅಕ್ಕಿ ಅಥವಾ ಭತ್ತವನ್ನು ಸಾಗಿಸಲು ಒಪ್ಪುತ್ತಾರೆ. ಹಾಗೆ ಒಪ್ಪದಲ್ಲಿ ಮಾತ್ರ ಇತರರ ಮೂಲಕ ಸಾಗಿಸಬಹುದು. (೫) ಭೂಮಾಲಿಕರ ಗೇಣಿಯ ½ ಅಂಶವನ್ನು ಮಾತ್ರ ರಿಕ್ವಿಸಿಶನ್ ಮಾಡಿ, ಮುಂದೆ ಅಗತ್ಯವಿದ್ದರೆ ½ ಅಂಶವನ್ನೂ ಮಾಡಬಹುದು. (೬) ಅಕ್ಕಿಗೆ ಮುಡಿಯೊಂದರ ರೂ. ೧೦, ಅದೇ ಕ್ರಯದಲ್ಲಿ ಭತ್ತಕ್ಕೂ ಕ್ರಯ ಸಿಗಬೇಕು. ಕ್ರಯವನ್ನು ಕೂಡಲೇ ನಿರ್ಧರಿಸಬೇಕಲ್ಲದೆ ಸ್ಥಳೀಯ ಅಧಿಕಾರಿಗಳ ಖುಷಿಬಂದಂತೆ ಮಾಡಬಿಡಬಾರದು. ೭) ರಿಕ್ವಿಸಿಶನ್ ಮಾಡುವಾಗ ಅಡಿಕೆ ಮೊದಲಾದ ಕೃಷಿಗಳಿಗೆ ಅಗತ್ಯವಿರುವ ಅಕ್ಕಿ ಭತ್ತವನ್ನು ಕೊಡುವ ಏರ್ಪಾಡಿರಬೇಕು. ೮) ೧೦೦ ಮುಡಿ ಅಕ್ಕಿ ಅಥವಾ ರೂ. ೧೦೦ ತೀರ್ವೆ ಇರುವವರಿಗಿಂತ ಕಡಿಮೆಯುಳ್ಳವರಿಂದ ರಿಕ್ವಿಸಿಶನ್ ಮಾಡಕೂಡದು. ೯) ಹೆಚ್ಚು ಮಂದಿ ಇರುವ, ಅಳಿಯ ಸಂತಾನ ಕುಟುಂಬದಂಥಾ ಕುಟುಂಬದಲ್ಲಿ ಯಜಮಾನನ ಹೆಸರಲ್ಲಿ ಪಟ್ಟೆಯಿದ್ದರೂ ಕುಟುಂಬದ ಮೆಂಬರರ ಜೀವನಾಂಶವಾಗಬೇಕಾಗಿರುವುದರಿಂದ ಅಂಥಾ ಪಟ್ಟೆದಾರನಿಂದ ರಿಕ್ವಿಸಿಶನ್ ಮಾಡುವಾಗ ಆ ಕುಟುಂಬದ ಅವಶ್ಯಕತೆಯನ್ನು ವಿಚಾರಿಸಿಕೊಳ್ಳಬೇಕು. ೧೦) ರಿಕ್ವಿಸಿಶನ್‌ಗೈದ ಅಕ್ಕಿ ಭತ್ತಗಳ ಕ್ರಯ ಕೂಡಲೇ ಕೊಡಬೇಕು. ೧೧) ರಿಕ್ವಿಸಿಶನ್ ಮಾಡಿದ ಅಕ್ಕಿ ಭತ್ತಗಳನ್ನು ಈಗಿನಂತೆ ವ್ಯಾಪಾರಿಗಳ ವಶ ಕೊಡದೆ, ಸರಕಾರೀ ಏಜೆನ್ಸಿ ಅಥವಾ ಸಹಕಾರೀ ಸಂಘಗಳ ಮೂಲಕ ಹಂಚುವ ಏರ್ಪಾಡು ಮಾಡಿಸಬೇಕು. (೧೨) ಎಲ್ಲಾ ತಾಲೂಕು ಕೇಂದ್ರ, ಅರ್ಧಪಟ್ಟಣಗಳಲ್ಲಿಯೂ ರೇಶನಿಂಗ್ ಜಾರಿಮಾಡಬೇಕು. (೧೩) ದಕ್ಷಿಣ ಕನ್ನಡ ಭೂಮಾಲಿಕ ಸಂಘದ ವಿನಂತಿಗೆ ಬೆಂಬಲವಿದೆ ಮಾತ್ರವಲ್ಲದೆ ಈ ತಾಲೂಕಿನ ಕುರಿತು ಗವರ್ನರರ ಎಡ್ವೈಸರರಲ್ಲಿ ವಿನಂತಿ ಮಾಡಲು ಶ್ರೀಗಳಾದ ಎಂ. ಶಿವರಾವ್ ಮತ್ತು ಬಿ. ಪ್ರಭಾಕರರಾಯರನ್ನು ನೇಮಿಸಲಾಗಿದೆ. (೧೪) ಈ ಇಬ್ಬರು ಮಹನೀಯರು ಇತರ ಮೂರು ಮಂದಿಯನ್ನು ಸೇರಿಸಿಕೊಂಡು ರಿಕ್ವಿಸಿಶನ್ ಅಧಿಕಾರಿಗಳ ಮತ್ತು ಭೂಮಾಲಿಕರಲ್ಲಿ ಸಹಕಾರವುಂಟಾಗುವಂತೆ ಕೆಲಸಮಾಡುವರೆ ಕೈಕೊಂಡಿದ್ದಾರೆ.

ಸಮರಭೂಮಿಯ ಸಂಚಾರ

ಮೋಸ್ಕೋ ಪರಿಷತ್ತಿನ ಕಡೆಗೆ ಇಂದು ಜಗದ ಜನತೆಯ ದೃಷ್ಟಿ ಹರಿದಿದೆ. ಬ್ರಿಟನ್ನು, ಅಮೆರಿಕ, ರಶ್ಯ ಈ ತ್ರಿರಾಷ್ಟ್ರಗಳ ಮುಖಂಡರು ಮೋಸ್ಕೋದಲ್ಲಿ ಸೇರಿ ಯಾವ ತೀರ್ಮಾನ ಮಾಡುತ್ತಾರೆಂಬ ಬಗ್ಗೆ ಜನರಿಗೆಲ್ಲಾ ಕುತೂಹಲ! ಮಿತ್ರ ಮುಖಂಡರು ಹಿಂದೆಯೂ ಕೆಲವೊಮ್ಮೆ ಕೂಡಿ ಮಾತಾಡಿದ್ದರು. ಅಟ್ಲಾಂಟಿಕ್ ಶಾಸನದಂಥಾ 'ಜಲಲಿಪಿ'ಯನ್ನು ಬರೆದು ಹೋಗಿದ್ದರು. ಆದರೆ ಹಿಂದೆಂದೂ ಸ್ಟಾಲಿನ್ ಈ ಮಾತುಕತೆಯಲ್ಲಿ ಮುಂದಾಳಾದುದಿಲ್ಲ. ಕೈಕೇಕರ ಕೈಯೂ ಏನೂ ಇರಲಿಲ್ಲ ಕೇವಲ ಬ್ರಿಟನು ಅಮೆರಿಕದ ಮುಂದಾಳುಗಳು ಮಾತ್ರ. ಸ್ಟಾಲಿನ್ ಚಿಯಾಂಗರೊಡನೆ ಸಂಪರ್ಕವಿಟ್ಟುಕೊಂಡಿರುವರೆಂದೇನೋ ಅಂದೂ ಆ ಪ್ರಭೃತಿಗಳು ಹೇಳಿಕೊಳ್ಳುತ್ತಿದ್ದರು. ಆದರೆ ಅದು ಅಷ್ಟೇನೂ ಕಾರ್ಯರೂಪದಲ್ಲಿ ಬಂದಿರಲಿಲ್ಲ. ಏಕೆಂದರೆ ಹಿಂದಿ ಆ ಭೇಟಿಗಳ ಫಲಿತಾಂಶವಾಗಿ ಹೊರಟ ಹೇಳಿಕೆಗಳು, ಮಾಡಿದ ಶಾಸನಗಳು, ಸಾರಿದ ತತ್ವಗಳು ಎಲ್ಲವೂ ಸಾಮ್ರಾಜ್ಯಶಾಹೀ ಧೋರಣದಿಂದ ಅಲಿಪ್ತವಾಗಿರಲಿಲ್ಲ. ಸ್ಟಾಲಿನ್ ಕೈಕೇಕರ ಕೈಯಿದ್ದರೆ ಇಂಥಾದ್ದೇನೂ ಆಗುತ್ತಿರಲಿಲ್ಲವೆಂದು ಜನತೆಗೆ ತುಸು ವಿಶ್ವಾಸವಿದೆ. ಆದರೆ ಆ ವಿಶ್ವಾಸದ ಪರೀಕ್ಷೆ ಈ ಸಲ ಆಗಿಬಿಡುತ್ತದೆ.

ಸ್ಟಾಲಿನರ ವಿಷಯವೇನೋ ಜನರಿಗೆ ತುಂಬಾ ಕುತೂಹಲವುಂಟು. ಏಕೆಂದರೆ ಇದು ವರೆಗೆ ರಶ್ಯದ ವಿಷಯ ಬಿಟ್ಟರೆ, ರಶ್ಯ ಸಂಗ್ರಾಮ ಬಿಟ್ಟರೆ, ಅಂತರ್ರಾಷ್ಟ್ರೀಯ ಸಮಸ್ಯೆ ಕುರಿತು ಅವರು ಹೇಳಿಕೆ ಹೊರಡಿಸಿದ್ದು ಕಡಿಮೆ. ಇದುವರೆಗೆ ಕೇವಲ ಒಂದು ಸಮುಸ್ಯಾತ್ಮಕ ವ್ಯಕ್ತಿ ಸ್ಟಾಲಿನ್ ಹಿಟ್ಲರನ ಫೇಸಿಸಂ ರಕ್ಕಸನೊಡನೆ ಏಕಾಂಗಿಯಾಗಿ ಎದೆಗೊಟ್ಟು ಎದುರಾಡಿದ ಜಗದೇಕ ನಾಯಕ ಸ್ಟಾಲಿನ್. ಹೀಗೆ ಹೋರಾಡುವ ಮಹಾವೀರನಲ್ಲಿ ಪನತತ್ವವಿರಬೇಡವೆ? 'ಸರ್ವರಿಗೂ ಸಮಪಾಲು' ಸಿಗಬೇಡವೇ ಮುಂದಿನ ನವಜಗದ ನಿರ್ಮಾಣದಲ್ಲಿ? ಮೋಸ್ಕೋ ಪರಿಷತ್ತಿನಲ್ಲಿ ಈ ಕುರಿತು ಸ್ಪಷ್ಟ ಹೇಳಿಕೆ ಹೊರಡಬಹುದೇ ಎಂಬ ಕುರಿತು ಜಗದ ಜನರೆಲ್ಲಾ ಕುತೂಹಲಗೊಂಡಿದ್ದಾರೆ.

ರಶ್ಯದ ಸರಕಾರೀ ಪತ್ರಿಕೆ 'ಯುದ್ಧ ಮತ್ತು ಕೂಲಿಗಾರ ವರ್ಗ'ವು ತನ್ನ ಅಗ್ರಲೇಖವೊಂದರಲ್ಲಿ ಮೋಸ್ಕೋ ಪರಿಷತ್ತಿನ ಕುರಿತು ಕೆಲವು ಮಹತ್ವದ ವಿಚಾರಗಳನ್ನು ತಿಳಿಸಿದೆ. ಯುದ್ಧವನ್ನು ದೀರ್ಘವೆಳೆಯುವ ಜರ್ಮನಿಯ ತಳತಂತ್ರವನ್ನು ಮುರಿವುದು, ಪೋಲೆಂಡ್ ಸಮಸ್ಯೆ, ಟರ್ಕಿಯ ತಾಟಸ್ಥ ಇವು ಅದರಲ್ಲಿ ಚರ್ಚಿಸಲಾದ ವಿಷಯಗಳು. ಯುದ್ಧಾನಂತರದ ಲೋಕವ್ಯವಸ್ಥೆಯ ಕುರಿತೂ ಅಲ್ಲಿ ಕೆಲವು ಗಮನಾರ್ಹ ಉಲ್ಲೇಖಗಳಿವೆ. 'ಮಿತ್ರರು ಯುದ್ಧ ನಿರ್ವಹಿಸುವಲ್ಲಿ ಸಾಕಷ್ಟು ಸಾಮರ್ಥ್ಯ ತೋರಿಸದಿರುವುದೇ ಜರ್ಮನರು ಯುದ್ಧವನ್ನು ಇಷ್ಟು ದೀರ್ಘ ಎಳೆಯಲು ಕಾರಣ' ಎಂದು ಅದರಲ್ಲಿ ಎತ್ತಿ ಹೇಳಲಾಗಿದೆ. ಆಂಗ್ಲ ಸೋವಿಯೆಟ್ ಒಪ್ಪಂದದ ವಿಷಯ ಬರೆಯುತ್ತಾ, ಮುಂದಿನ ಈ ರಾಷ್ಟ್ರಗಳ ಶಾಶ್ವತ ಸಹಕಾರಕ್ಕೆ ಇಲ್ಲಿ ಬೇಕಾದ ತಳಹದಿ ನಿರ್ಮಾಣವಾಗುವುದೆಂದೂ, ಸೋವಿಯೆಟ್ ಯೂನಿಯನ್ ಮತ್ತು ಅಮೆರಿಕಗಳೊಳಗೆ ಇದುವರೆಗೆ ಅಂಥಾ ಒಂದು ಒಪ್ಪಂದವಿಲ್ಲದಿದ್ದರೂ ಮಿತ್ರರ ಇಂದಿನ ಸಹಕಾರದಿಂದ ಈ ವಿಷಯವಾಗಿಯೂ ಸಾಕಷ್ಟು ಸೌಹಾರ್ದ ಹುಟ್ಟಿ ಬಂದಿದೆಯೆಂದೂ ಅದರಲ್ಲಿ ತಿಳಿಸಿದೆ. ಈ ಮಾತುಕತೆಯ ವಿಷಯ ಗುಪ್ತವಾಗಿಡಲಾಗಿದ್ದರೂ, ಅದರಿಂದ ಏನಾದರೂ ತಳತಂತ್ರ ನಡೆಯುವುದೆಂದು ಊಹಿಸಬೇಕಾಗಿಲ್ಲವೆಂದೂ, ಈ ಪರಿಷತ್ತಿನ ಮುಖ್ಯವಾದೊಂದು ವಿಚಾರವೆಂದರೆ ಬ್ರಿಟನು, ರಶ್ಯ ಅಮೆರಿಕಗಳ ವಿದೇಶ ನೀತಿಯ ಸ್ಪಷ್ಟೀಕರಣವೆಂದೂ, ಇದೇ ಆಕ್ರಮಣಗಾರರೆದುರು ಹೋರಾಡುವರಿಗೆ ಸಾಕಷ್ಟು ಬಲಕೊಡುವುದೆಂದೂ ಏಕೆಂದರೆ ಹಿಟ್ಲರನ ಆಕ್ರಮಣದಿಂದ ಕಂಗಾಲಾದ ರಾಷ್ಟ್ರಗಳಿಗೆ ಮಿತ್ರರು ಯೋಗ್ಯ ಭರವಸೆಯೀಯುವುದು ಸಮರ್ಪಕವಿದೆಯೆಂದೂ ಅದರಲ್ಲಿ ಸಾರಲಾಗಿದೆ. ಬ್ರಿಟನು, ಅಮೆರಿಕ, ರಶ್ಯಗಳೊಳಗೆ ಸಹಕಾರವಿದ್ದು ವಿದೇಶನೀತಿಯ ಸ್ಪಷ್ಟೀಕರಣವಾದರೆ ಅದರಿಂದಲೇ ಮುಂದೆ ಜಗತ್ತಿನಲ್ಲಿ ಈ ತರದ ಅನರ್ಥದ ಪುನರಾವೃತ್ತಿಯಾಗದಂತೆ ನೋಡಬಹುದೆಂದು ಆ ಪತ್ರಿಕೆ ಅಭಿಪ್ರಾಯಪಡುತ್ತದೆ.

ಆ ಮೇಲೆ, ರಶ್ಯವನ್ನು ಬಿಟ್ಟು ಕೇವಲ ಬ್ರಿಟನು ಅಮೆರಿಕಗಳು ಮಾತ್ರ ಯಾವುದೇ ಒಂದು ನಿರ್ಧಾರಕ್ಕೆ ಬಂದರೂ ಅದರಿಂದ ಜಗತ್ತಿನ ಸಮಸ್ಯೆ ಪರಿಹಾರವಾಗಲಿಕ್ಕಿಲ್ಲೆಂದೂ, ಆದ್ದರಿಂದ ಮಿತ್ರರು ಕಳೆದ ಮಹಾಯುದ್ಧದ ಪಾಠವನ್ನು ಓದಿಯಾದರೂ, ಮುಂದೆ ಅಂಥಾ ಅನರ್ಥವನ್ನು ತಪ್ಪಿಸಲಿಕ್ಕಾಗಿ, 'ಜನಾಂಗ ಸಂಘ' ಮುಂದೆ ಮುರಿಯದಂತೆ ಮಾಡುವುದಕ್ಕಾಗಿ ಈ ತ್ರಿರಾಷ್ಟ್ರಗಳ ಸಹಕಾರ ಧೋರಣವಿರಬೇಕೆಂದು ಬರೆದು, ವರ್ಸೇಲ್ಸ ಒಪ್ಪಂದವು ಮುರಿದು ಹೋಗಲು ಅಮೆರಿಕವು ಬೇರೆ ನಿಂತದ್ದೂ, ರಶ್ಯವು ಅಂತರ್ರಾಷ್ಟ್ರೀಯ ಸಭೆಯಿಂದ ಪ್ರತ್ಯೇಕವಿದ್ದದ್ದು, ವಿಜಯೀ ರಾಷ್ಟ್ರಗಳಾದ ಬ್ರಿಟನು ಫ್ರಾನ್ಸುಗಳೊಳಗೆ ಭಿನ್ನಾಭಿಪ್ರಾಯವಿದ್ದದ್ದು ಕಾರಣವೆಂದು ತಿಳಿಸುತ್ತಾ, ಮುಂದೆ ಈ ತರದ ಎಲ್ಲಾ ಪ್ರಮಾದಗಳನ್ನು ತಪ್ಪಿಸಬೇಕೆಂದು ಸೂಚನೆಯಿತ್ತಿದೆ. ಬ್ರಿಟನು ಅಮೆರಿಕಗಳು ಯುದ್ಧವನ್ನು ಬೇಗನೇ ಮುಗಿಸುವ ನಿರ್ಧಾರ ಮಾಡಿಲ್ಲವೆಂದೂ, ಇದುವರೆಗೆ ಈ ಎರಡು ರಾಷ್ಟ್ರಗಳ ಮುಖ್ಯ ದಳಗಳು ಹಿಟ್ಲರನೆದುರು ನಿಂತು ಹೋರಾಡಿಲ್ಲವೆಂದೂ ಆ ಲೇಖನದಲ್ಲಿ ಅಪವಾದ ಹೊರಿಸಲಾಗಿದೆ. ಮೇಲಿನ ಈ ಲೇಖನವು ರಶ್ಯದ ಅಧಿಕಾರೀ ಪತ್ರಿಕೆಯದಾಗಿದ್ದು, ಹೆಚ್ಚು ಸ್ಪಷ್ಟೋಕ್ತಿಯುಳ್ಳದ್ದಾಗಿರುವುದರಿಂದ, ಈ ಸಲದ ಪರಿಷತ್ತಿನಲ್ಲಿ, ಸಹಜವಾಗಿ ರಶ್ಯವು ಬ್ರಿಟನು ಅಮೆರಿಕಗಳಿಗೆ ಪಾಠ ಕಲಿಸುವುದೇ ಎಂದು ಊಹಿಸಲು ಆಸ್ಪದವಿದೆ

ಒಟ್ಟಿನಿಂದ ನೋಡಿದರೆ ಇಂದು ರಶ್ಯವು ಬ್ರಿಟನು ಅಮೆರಿಕಗಳ ಯುದ್ಧ ಧೋರಣೆಯಲ್ಲಿ ತೃಪ್ತಿಪಟ್ಟಿಲ್ಲವೆಂಬುದು ಸ್ಪಷ್ಟ ಆದಕಾರಣವೇ, ಈ ಪರಿಷತ್ತಿನಲ್ಲಿ ಆ ಕುರಿತು ಅವುಗಳ ಮೇಲೆ ಒತ್ತಾಯ ಬೀಳದಿರದು. ಜರ್ಮನಿಯನ್ನು ಸೋಲಿಸಲು ಬಹುಪಾಲು ಸಾಹಸ ಮಾಡಿದ ರಶ್ಯದ ಮಾತಿಗೆ ಬೆಲೆ ಬರಲೇಬೇಕು. ದ್ವಿತೀಯ ರಂಗವನ್ನು ತೆರೆಯದಿದ್ದರೆ, ಮನಸ್ಸು ಇಟ್ಟು ಹಿಟ್ಲರನೆದುರು ಹೋರಾಡದಿದ್ದರೆ ಯುದ್ಧವು ಕೊನೆಗಾಣುವುದಂತೂ ಸಂಭವವಿಲ್ಲ. ೧೯೪೪ರ ವರೆಗೆ ಮಿತ್ರರು ದ್ವಿತೀಯ ರಂಗ ತೆರೆಯಲು ಸಿದ್ಧರಿಲ್ಲವೆಂದು ಹಿಂದೆ ಸಾರಿದ್ದಾರೆ. ಇದನ್ನು ರಶ್ಯ ಸಹಿಸಲಾರದು. ಏಕೆಂದರೆ ೧೯೪೪ರ ವರೆಗೂ ರಶ್ಯ ಈ ಅಗ್ನಿ ಪರೀಕ್ಷೆಯಲ್ಲಿಯೇ ಮುಂದುವರಿಯಲಾರದು. ಬ್ರಿಟನು ಅಮೆರಿಕಗಳು ರಣರಂಗಕ್ಕಿಳಿ ಸಂಪೂರ್ಣ ಇಳಿಯದೆ ರಶ್ಯವೊಂದನ್ನೇ ಭೀಕರ ಶತ್ರುವಿನೆದುರು ಹೋರಾಡಬಿಟ್ಟು ಚಂದ ನೋಡುವುದನ್ನು ರಶ್ಯವು ಸಹಿಸಲಿಕ್ಕೆ ಸಾಧ್ಯವೇ ಇಲ್ಲ! ಇದುವರೆಗೆ ಕ್ವಿಬೆಕ್‌ನಲ್ಲಿಯೋ, ಅಟ್ಲಾಂಟಿಕ್ ಸಾಗರದಲ್ಲಿಯೋ ಸಭೆ ಸೇರಿದಾಗ ಅಲ್ಲಿಗೆ ಹೋಗದೆ, ಹೋಗಲು ಸಮಯವೂ ಇಲ್ಲದೆ ತನ್ನ ಕಾರ್ಯದಲ್ಲಿಯೇ ಎಂದರೆ ಹಿಟ್ಲರ್ ವಿನಾಶದಲ್ಲಿಯೇ ನಿರತನಾಗಿದ್ದ ಸ್ಟಾಲಿನ್ ಈ ಸಲ ತನ್ನಲ್ಲಿಗೆ ಇತರ ಮಿತ್ರ ಮುಖಂಡರನ್ನು ಬರಮಾಡಿಕೊಂಡವನು ಅವರನ್ನು ದ್ವಿತೀಯ ರಂಗ ತೆರೆಯಲು ಒತ್ತಾಯಮಾಡಿಯೇ ಮಾಡುತ್ತಾನೆ, ಅವರನ್ನು ಸಾಮ್ರಾಜ್ಯಶಾಹೀ ಧೋರಣೆಯಿಂದ ಬದಲಾಯಿಸಲು ಆಗ್ರಹಮಾಡಿಯೇ ಮಾಡುತ್ತಾನೆ. ಈ ಕಾರ್ಯದಲ್ಲಿ ಈ ಒತ್ತಾಯದಲ್ಲಿ ಸ್ಟಾಲಿನ್ ಈ ಸಲ ವಿಫಲನಾದರೆ, ಅದರಿಂದಲೂ ಯುದ್ಧಗತಿಯಲ್ಲಿ ಮಹತ್ವದ ಬದಲಾವಣೆ ಆಗಿಯೇ ಆಗುವುದು ಹಾಗಾಗಿ ಮೋಸ್ಕೋ ಪರಿಷತ್ತು ಬಹಳ ಮಹತ್ವದ್ದು ಎನಬೇಕಾಗಿದೆ.

ಶಿವಮೊಗ್ಗ

ಕನ್ನಡ ಸಾಹಿತ್ಯ ಸಮ್ಮೇಳನ

ಶಿವಮೊಗ್ಗದಲ್ಲಿ ೨೭ನೆಯ ಕನ್ನಡ ಸಾಹಿತ್ಯ ಸಮ್ಮೇಳನವು ದಸಂಬರ ತಿಂಗಳು ೨೬, ೨೭, ೨೮ನೆಯ ದಿನಗಳಲ್ಲಿ ನಡೆಯಲಿರುವುದು. ಶ್ರೀಗಳಾದ ತಿರುಮಲೆ ತಾತಾಚಾರ್ಯ ಶರ್ಮ, ದತ್ತಾತ್ರೇಯ ಬೇಂದ್ರೆ, ಶಿ ಶಿ ಬಸವನಾಳ, ಮತ್ತು ಕಿ ಕೆ ವೆಂಕಟರಾಮಯ್ಯ ಈ ನಾಲ್ವರ ಹೆಸರುಗಳನ್ನು ಅಧ್ಯಕ್ಷ ಪದವಿಗೆ ಸೂಚಿಸಲಾಗಿದೆಯೆಂದು ತಿಳಿದುಬರುತ್ತದೆ

ಲಾರ್ಡ್ಸ್ ಸಭೆಯಲ್ಲಿ ಭಾರತದ ಆಹಾರ ವಿಚಾರ

ಚರ್ಚಿಸಲ್ಪಟ್ಟಿತು ಡೆಕ್ಕನ್ ಕೊಚ್ಚಿನ್ ತ್ರಾವಣಕೋರ್ ಮತ್ತು ಬಂಗಾಳದ ಹೃದಯದ್ರಾವಕ ಬರಗಾಲ ಪರಿಸ್ಥಿತಿ ಬಗ್ಗೆ ಸರಕಾರದ ದೋರಣವೇ ಕಾರಣವೆಂದು ಟೀಕಿಸಲಾಯಿತು ಭಾರತದ ಮುಖಂಡರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದಿರುವುದೇ ಕಾರಣವೆಂದು ಹೇಳಲಾಯಿತು.

ಆಹಾರ ಸಿಗದಿರಲು ಆತ್ಮಹತ್ಯೆ

ಬಂಗಾಲದ ಬಾರಿಸಾಲದಲ್ಲಿ ಚಂದ್ರಹಾರವೆಂಬ ಹಳ್ಳಿಯ ಅಗಸನೋರ್ವನು ತನ್ನ ಹೆಂಡತಿ ಮಕ್ಕಳಿಗೆ ಅನ್ನ ಕೊಡಲಾರದೆ, ಆ ಸಂಕಷ್ಟವನ್ನು ನೋಡಿ ಸಹಿಸಿರಲೂ ಆಗದೆ ನೇಣು ಹಾಕಿಕೊಂಡು ಆತ್ಮಹತ್ಯ ಮಾಡಿಕೊಂಡಿರುವನಾಗಿ ತಿಳಿದು ಬಂದಿದೆ.

ಕಾಮಶಾಸ್ತ್ರದ ಗ್ರಂಥಗಳು

ಅನಂಗರಂಗ ೧—೮—೦
ಸ್ತ್ರೀಪುರುಷರ ಲಕ್ಷಣ, ಸಂಭೋಗ ಕಾಲ ನಿರ್ಣಯ, ರತಿಸಮಯದ ಹಾವಭಾವಗಳು, ದ್ರವಣಾದಿ ಔಷಧಗಳು ಇವೇ ಮೊದಲಾದ ರತಿಶಾಸ್ತ್ರದ ರಹಸ್ಯಮಯ ವಿಷಯಗಳು.

ವಿಕೃತ ಕಾಮ ೧—೮—೦
ಬಾಲ್ಯದ ಕಾಮವಿಕಾರಗಳು, ಸ್ವಾನುರತಿ, ಹಿಂಸಾರತಿ, ಪ್ರದರ್ಶನರತಿ, ಸಲಿಂಗರತಿ ಇತ್ಯಾದಿ.

ಪೌರುಷ ೧—೮—೦
ನಪುಂಸಕರೆಂದು ಮರುಗಬೇಡಿ ಪುನಃ ಪೌರುಷ ಪ್ರಾಪ್ತಮಾಡಿಕೊಳ್ಳಲು ನೂರಾರು ಉಪಾಯಗಳಿವೆ

ಗರ್ಭನಿರೋಧ (ಅಚ್ಚಿನಲ್ಲಿದೆ) ೧—೮—೦
ಸಂತತಿ ನಿಯಮನಕ್ಕೆ ಸರಿಯಾದ ದಾರಿಬೇಕೆ? ಡಾ! ಗೋಪಾಲಕೃಷ್ಣರಾಯರು ಬರೆದ ಈ ಹೊಸ ಪುಸ್ತಕ ಓದಿರಿ.

ದಾಂಪತ್ಯ ದರ್ಶನ ೧—೮—೦
ಸಂಭೋಗ ಸುಖ, ಗಂಡಹೆಂಡಿರಲ್ಲಾಗುವ ಆತ್ಮೈಕ್ಯ, ಅತಿ ಲಂಪಟತನದ ದುಷ್ಪರಿಣಾಮ, ರತಿ ಸೌಖ್ಯಕ್ಕೂ ಸಂತಾನ ಸುದೃಢತೆಗಳಿಗೂ ಇರುವ ಸಂಬಂಧಗಳ ಬಗ್ಗೆ ದಿ| ಪಂಡಿತ ತಾರಾನಾಥರಾಯರ ಕಾಮ ಮನೋವೈಜ್ಞಾನಿಕ ಗ್ರಂಥ.

ರತಿರಹಸ್ಯ ೧—೮—೦
ತಾರುಣ್ಯದ ಮದ, ಸ್ತನಗಳ ಸೌಂದರ್ಯ, ಸಮಾಗಮ ಶಯನ ಇತ್ಯಾದಿ

ಪ್ರೇಮಕಲಾ ೧—೮—೦
ಅಶ್ಲೀಲವಲ್ಲ! ಶಾಸ್ತ್ರೀಯ ಗ್ರಂಥವೆಂದು ಕೋರ್ಟಿನ ನಿರ್ಣಯವೇ ಆಗಿದೆ.

ಭ್ರಾಂತಿ ಮತ್ತು ಲೈಂಗಿಕ ಶಿಕ್ಷಣ ೧—೮—೦
ಪ್ರಸಿದ್ಧ ಡಾಕ್ಟರುಗಳ ಮೂರು ಶಾಸ್ತ್ರೀಯ ಪುಸ್ತಕಗಳು. ಉನ್ಮಾದ, ವೇಶ್ಯಾವೃತ್ತಿಯ ಹಾವಳಿ ಲೈಂಗಿಕ ಹಾಗೂ ಗುಪ್ತ ರೋಗಗಳ ಚಿಕಿತ್ಸೆ........

ವಿ. ಪಿ. ವೆಚ್ಚ ಬೇರೆ. ನಮ್ಮ ಕ್ಯಾಟಲಾಗಿಗೆ ಒಂದಾಣೆ ಅಂಚೆಚೀಟು ಕಳಿಸಿರಿ.

ಸಮಾಜ ಪುಸ್ತಕಾಲಯ ಧಾರವಾಡ.

ಸ್ವದೇಶಾಭಿಮಾನಿ

ತಾರೀಕು 29—10—1943

ಯಾವುದು ಮುಖ್ಯ?

ಭಾರತದ ಜನತೆ ಆಹಾರವಿಲ್ಲದೆ ಉಪವಾಸ ಬಿದ್ದು ಸಾಯುತ್ತಿದೆ. ಕಲ್ಕತ್ತದ ಬೀದಿಗಳಲ್ಲಿ ಜನರು ನೊಣಗಳಂತೆ ಪ್ರತಿದಿನ ಮರಣ ಹೊಂದುತ್ತಿರುವರು. ಇಂಥಾ ಸಂದರ್ಭದಲ್ಲಿ ಸರಕಾರವು ಹೊರಗಿನಿಂದ ಆಹಾರ ತರಿಸಬೇಕಾಗಿದೆ. ಆಹಾರ ತರಿಸಲು ಹಡಗದ ವ್ಯವಸ್ಥೆಯಾಗಬೇಕು. ಹಡಗದ ವ್ಯವಸ್ಥೆಗೆ ಬ್ರಿಟಿಷ್ ಸರಕಾರ ಒಪ್ಪಬೇಕು.

ಇಂಡಿಯಾ ಆಫೀಸಿನ ಶಾಶ್ವತ ಅಂಡರ್ ಸೆಕ್ರೆಟರಿಗಳಾದ ಮಿ: ಬಕ್ಸ್ಟರರು ಈ ವಿಷಯವಾಗಿ ಇತ್ತೀಚೆಗೆ ಹೇಳಿದ ಮಾತು ಗಮನೀಯವೂ ವಿಷಾದಕರವೂ ಇದೆ. "ಸರಕಾರದ ಧೋರಣದಲ್ಲಿ ಸೈನಿಕ ಸರಬರಾಯಿಗೆ ಹಡಗದ ವ್ಯವಸ್ಥೆ ಮಾಡುವುದೇ ಪ್ರಥಮ ಕರ್ತವ್ಯವಾಗಿದೆ" ಎಂದು ಅವರು ಉದ್ಗರಿಸಿದರು. ಆಹಾರವಿಲ್ಲದೆ ಜನರು ನರಳಿ ಸಾಯುತ್ತಿದ್ದರೂ, ಅವರಿಗೆ ಆಹಾರವೊದಗಿಸಲು ಹಡಗ ವ್ಯವಸ್ಥೆ ಮಾಡುವುದು ಬ್ರಿಟಿಷ್ ಸರಕಾರದ ಅಮುಖ್ಯ ಕರ್ತವ್ಯವೆಂದು ಇದರಿಂದ ಅರ್ಥವಾಗುವುದೆ? ಹಾಗಾದರೆ ನಿಜವಾಗಿಯೂ ಇದು ಅತ್ಯಂತ ವಿಷಾದಕರವಿದೆ.

ಇಂಥಾ ಸಂದರ್ಭದಲ್ಲಿ ಇಂಡಿಯಾ ಸರಕಾರ ಏನುಮಾಡುವುದೋ ನೋಡಬೇಕು. ಭಾರತದಲ್ಲಿ ಇದೇ ರೀತಿ ಉಪವಾಸ ಮರಣಗಳನ್ನು ಮುಂದುವರಿಸಬಿಡುವುದೆ? ಅಥವಾ ಕೂಡಲೇ ಅವರನ್ನು ಬದುಕಿಸುವ ದಾರಿ ಮಾಡುವುದೆ? ಅವರು ಬದುಕಬೇಕಾದರೆ ಆಹಾರ ತರಿಸಲು ಹಡಗ ವ್ಯವಸ್ಥೆ ಕೂಡಲೇ ಈಗ ಬೇಕು. ಸೈನಿಕ ಸರಬರಾಜಿಗಿಂತ ಜನತೆಯ ಜೀವರಕ್ಷಣೆ ಕಡಿಮೆ ಮಹತ್ವದ್ದಲ್ಲವೆಂದು ಬ್ರಿಟಿಷ್ ಪ್ರಭುತ್ವದ ಗಮನಕ್ಕೆ ಬರಬೇಕು. ಅಥವಾ ಸೈನಿಕ ಸರಬರಾಜಿಗೆ ತೊಂದರೆಯಾಗದೆ ಜನತೆಗೆ ಆಹಾರವೊದಗಿಸುವರೆ ಹಡಗ ವ್ಯವಸ್ಥೆ ಮಾಡುವುದು ಸಾಧ್ಯವಿದೆಯೆಂದು ಖಚಿತಗೊಳಿಸಬೇಕು. ವೈಸರಾಯ್ ವೇವಲರು ಕಲ್ಕತ್ತವನ್ನಿಂದು ಸಂದರ್ಶಿಸಿದ್ದಾರೆ. ಅಲ್ಲಿನ ಹೃದಯದ್ರಾವಕಸ್ಥಿತಿಯನ್ನೂ ಕಣ್ಣಾರೆ ಕಂಡಿದ್ದಾರೆ. ಈಗಲಾದರೂ ಜನರ ಜೀವ ಉಳಿಸುವುದು ಸೈನಿಕರ ಕರ್ತವ್ಯಕ್ಕಿಂತ ಕಡಿಮೆ ಮಹತ್ವದ್ದಲ್ಲವೆಂದು ಅವರು ತಿಳಿಯಲಾರರೆ?

ಮದ್ಯಪಾನಕ್ಕೆ ಪ್ರತಿಬಂಧವಿಲ್ಲ?

ಪ್ರಜಾಪ್ರತಿನಿಧಿಗಳು ಮಂಜೂರು ಮಾಡಿದ ಶಾಸನಗಳು ಒಂದೊಂದಾಗಿ ಗವರ್ನರರ ಏಕತಂತ್ರಾಧಿಕಾರದ ಕಾಲದಲ್ಲಿ ರದ್ದಾಗುತ್ತಾ ಬರುವುದು ಅತ್ಯಂತ ಶೋಚನೀಯ ವಿಷಯವಾಗಿದೆ. ಅದರಲ್ಲೂ ಜನರ ಆರ್ಥಿಕ ಹಾಗೂ ನೈತಿಕ ಉನ್ನತಿಗೆ ಕಾರಣವಾದ ಮದ್ಯಪಾನ ಪ್ರತಿಬಂಧಕ ಕಾನೂನು ಕಾಂಗ್ರೆಸ್ ಸರಕಾರಗಳ ಆಡಳಿತದಲ್ಲಿ ಬೇರೆ ಬೇರೆ ಪ್ರಾಂತಗಳಲ್ಲಿ ಜಾರಿಗೆ ಬಂದಿದ್ದು, ಇತ್ತೀಚೆಗೆ ಗವರ್ನರರ ಆಡಳಿತಗಳಲ್ಲಿ ಬೀಹಾರ, ಮುಂಬೈ ಪ್ರಾಂತಗಳಲ್ಲಿ ರದ್ದಾಗಿರುವುದಲ್ಲದೆ, ಮದ್ರಾಸು ಪ್ರಾಂತಗಳಲ್ಲಿಯೂ ರದ್ದಾಗಲಿರುವ ಸುದ್ದಿ ಬಂದಿದೆಯೆಂದು ತಿಳಿಸಲು ವಿಷಾದವೆನಿಸುತ್ತದೆ.

ಮದ್ರಾಸ್ ಸರಕಾರದ ಅಬಕಾರೀ ಶಾಖೆಯ ೧೯೪೨—೪೩ನೆಯ ವರದಿಯೀಗ ಹೊರಬಿದ್ದಿರುವುದು. ಅದರಲ್ಲಿ, ಕಳ್ಳತನದ ಕುಡುಕತನ ಹೆಚ್ಚಾಗಿದೆಯೆಂದೂ, ಜನತೆ ಮೊದಲಿನಷ್ಟು ಉತ್ಸಾಹದಿಂದ ಮದ್ಯ ಪ್ರತಿಬಂಧಕ ಕಾರ್ಯದಲ್ಲಿ ಸಹಕರಿಸುತ್ತಿಲ್ಲವೆಂದೂ, ಈ ಪರಿಸ್ಥಿತಿಯಲ್ಲಿ ಮದ್ಯ ಪ್ರತಿಬಂಧಕ ಕಾಯಿದೆಯನ್ನು ಯಶಸ್ವಿಯಾಗಿ ಜಾರಿಗೆ ತರುವುದು ಸಾಧ್ಯವಾಗದ್ದರಿಂದ ಸರಕಾರವು ಅದನ್ನು ರದ್ದುಗೊಳಿಸುವ ವಿಚಾರ ಮಾಡಿದೆಯೆಂದೂ ಹೇಳಲಾಗಿದೆ.

ಇದೊಂದು ವಿಚಿತ್ರವಾದ ವಾದಸರಣಿ. ಕಳ್ಳತನವನ್ನು ನಿಲ್ಲಿಸಲು ಸಾಧ್ಯವಾಗುವುದಿಲ್ಲವೆಂದು ಕಳ್ಳತನ ಮಾಡಲು ಒಪ್ಪಿಗೆ ಕೊಡಬಹುದೆ? ಕಳ್ಳತನ ನಿಲ್ಲಿಸುವುದು ಸರಕಾರದ ಕರ್ತವ್ಯ. ಅದನ್ನು ನಿಲ್ಲಿಸಲಾಗುವುದಿಲ್ಲವೆಂದರೆ ಆಡಳಿತದವರು ತಮ್ಮ ದೌರ್ಬಲ್ಯ ಒಪ್ಪಿಕೊಂಡಂತೆ. ಆಡಳಿತದವರು ಈ ತರದ ಮನೋಭಾವನೆ ತಳೆದರೆ ಯಾವ ಶಾಸನಗಳೂ ಉಳಿಯಲಾರವು. ಅದರಲ್ಲೂ ಜನರ ಆರ್ಥಿಕ ಮತ್ತು ನೈತಿಕ ಉನ್ನತಿಯಾಗುವ ಈ ಮದ್ಯಪಾನ ಪ್ರತಿಬಂಧಕ ಶಾಸನದ ವಿಷಯ ಈತರದ ಆಲೋಚನೆ ಮಾಡಿ ಅದನ್ನು ರದ್ದುಗೊಳಿಸುವುದು ಆಶ್ಚರ್ಯಕರ. ಪ್ರಜಾ ಪ್ರತಿನಿಧಿಗಳು ಮಾಡಿದ ಶಾಸನಗಳಿಗೆ ಗವರ್ನರರ ಅಧಿಕಾರದಲ್ಲಿ ಈ ವರದ ಲೋಪಗಳಾಗುತ್ತಿರುವುದು ನಿಜವಾಗಿಯೂ ನ್ಯಾಯವೆನಿಸಲಾರದು.

ನೋಟಿಗಳು....,

ಭಾರತದ ಬಿಕ್ಕಟ್ಟು ಬಿಡಿಸಿರೆಂದು ಮಾನ್ಯ ಶ್ರೀನಿವಾಸ ಶಾಸ್ತ್ರಿಗಳು ಅಮೆರಿ, ವೇವಲ್ ಮತ್ತು ಮಹಾತ್ಮರಿಗೆ ಒಂದು 'ಬಹಿರಂಗ ಪತ್ರ' ಬರೆದಿದ್ದಾರೆ.

ಪತ್ರಿಕೆಗಳಲ್ಲಿ ಆ ಪತ್ರವು ನಿಜವಾಗಿಯೂ 'ಬಹಿರಂಗ'ವಾಗಿ ಬರಿದಿದೆ.

'ಸೆನ್ಸರ್' ಖಾತೆಯವರು ತುಂಬಾ ಜಾಗೃತರಾಗಿ ಕೆಲಸ ಮಾಡುತ್ತಿರುವಾಗ 'ಅಂತರಂಗ ಪತ್ರ' ಬರೆದರೂ ಪ್ರಯೋಜನವಿಲ್ಲವೆಂದು ಮಾನ್ಯ ಶಾಸ್ತ್ರಿಗಳಿಗೂ ಇಂದು ಖಚಿತವಾಗಿರುವಂತೆ ಕಾಣುತ್ತದೆ.

ಈ ಮುದಿಪ್ರಾಯದಲ್ಲಿ, ಇನ್ನಾದರೂ ಅಂತರಂಗವನ್ನೆಲ್ಲಾ ಬಿಟ್ಟು ಬಹಿರಂಗ ವ್ಯವಹಾರಮಾಡಿದರೆ ಸೀದಾ ಮುಕ್ತಿಗೆ ಮುಟ್ಟಬಹುದೆಂದು ಶಾಸ್ತ್ರಿಗಳ ವಿಶ್ವಾಸವಿದ್ದರೂ ಇರಬಹುದು!

ಮುಪ್ಪು ಮೀರಿದೀ ಕಾಲದಲ್ಲಿ ಮಾನ್ಯ ಶಾಸ್ತ್ರಿಗಳಿಗೆ ಈ ಬುದ್ಧಿ ತೋರಿದ್ದನ್ನು ಕೆಲವರು ಏನಾದರೂ ಹೇಳಿಕೊಂಡರೂ ಭಾರತ ಬಿಕ್ಕಟ್ಟು ಬಿಡಿಸಬೇಕೆನ್ನುವ ಅವರ ಆಗ್ರಹದ ಕುರಿತು ಯಾರೂ ಅಪನಂಬಿಕೆ ಪಡಲಾರರು.

ಅಮೆರಿ ಯಾವುದನ್ನೂ ಕೇಳುವುದಿಲ್ಲವೆಂದು ಗೊತ್ತಿದ್ದರೂ ಶಾಸ್ತ್ರಿಗಳು ತನ್ನ ಸಾಹಸ ಬಿಟ್ಟಿಲ್ಲ.

ವೇವಲರ ಮರ್ಜಿ ಗೊತ್ತಿಲ್ಲದಿದ್ದರೂ ಶಾಸ್ತ್ರಿಗಳು ಅರ್ಜಿಮಾಡದಿರಲಿಲ್ಲ.

ಗಾಂಧಿಜಿಯೊಡನೆ ಯಾವುದೇ ಪತ್ರವ್ಯವಹಾರ ಮಾಡಕೂಡದೆಂದು ಸರಕಾರ ವಿಧಿಸಿದ್ದರೂ ಶಾಸ್ತ್ರಿಗಳು ಬಹಿರಂಗ ಪತ್ರ ಬರೆದೇ ಬಿಟ್ಟರು.

ಮಂಗಳೂರು

ಜಿಲ್ಲಾಧಿಕಾರಿಗಳಲ್ಲಿ ಶ್ರೀ. ಎ. ಬಿ. ಶೆಟ್ಟರ ಪ್ರಶ್ನೆಗಳು

ಶ್ರೀ. ಎ. ಬಿ. ಶೆಟ್ಟರು ಜಿಲ್ಲಾಧಿಕಾರಿಗಳ ಗಮನದ ಬಗ್ಗೆ ಈ ಕೆಳಗಿನ ಪ್ರಶ್ನೆಗಳುಳ್ಳ ಒಂದು ಪತ್ರ ಬರೆದಿರುವರು.

೧) "ರಿಕ್ವಿಸಿಶನ್ ಮಾಡಿದ ಭತ್ತವನ್ನು ಡಲಿವರಿಮಾಡುವ ಮೊದಲು ಅಕ್ಕಿಯಾಗಿ ಮಾಡಬಹುದೆ? ೨) ಯಾರಿಗೆ, ಯಾವಾಗ, ಎಲ್ಲಿ ಇದನ್ನು ಡೆಲಿವರಿ ಮಾಡಬೇಕು? ೩) ಬೇರೆ ಬೇರೆ ತರದ ಅಕ್ಕಿಗಳಿಗೆ ಯಾವ ಕ್ರಯ ಕೊಡಲಾಗುವುದು? ೪) ಒಕ್ಕಲು ಕೊಡುವ ಗೇಣಿಯಲ್ಲಿ ಶೇಕಡಾ ಎಷ್ಟು ಈಗ ರಿಕ್ವಿಸಿಶನ್ ಮಾಡಲಾಗುವುದು? ಈ ದಾಮಾಶಾಯಿ ಉತ್ಪತ್ತಿಯ ಪರಿಸ್ಥಿತಿಯನ್ನು ಹೊಂದಿ ಬದಲಾಗುವುದೆ? ಆಗುವುದಾದರೆ ಹೇಗೆ? ೫) ಎರಡನೆಯ ಬೆಳೆಯ ನಂತರ ಪುನಃ ರಿಕ್ವಿಸಿಶನ್ ಮಾಡಲಾಗುವುದೆ? ೬) ಆತಂಕದ ಬಗ್ಗೆ ಕೂಡುವ ಅರ್ಜಿಗಳು ಸ್ಟ್ಯಾಂಪ್ ಪೇಪರ್‌ನಲ್ಲಿ ಬರೆಯಲ್ಪಡಬೇಕೆ?

ಈ ಸುದ್ದಿಗಳ ಕುರಿತು ಸರಿಯಾದ ವಿವರ ಕೊಡದಿರುವುದರಿಂದ ರೈತರು ಸರಕಾರದ ಉದ್ದೇಶವೇನು, ಸರಕಾರಕ್ಕೆ ಎಷ್ಟು ಅಕ್ಕಿ ಭತ್ತ ಬೇಕು ಎಂದು ಮೊದಲಾಗಿ ತಿಳಿಯದೆ ಗಾಬರಿಗೊಂಡಿರುವರು. ಆದ್ದರಿಂದ ಮೇಲಿನ ವಿಷಯದಲ್ಲಿ ವಿವರವನ್ನು ಸ್ಥಳೀಯ ಕನ್ನಡ ಪತ್ರಿಕೆಗಳಲ್ಲಿ ಪ್ರಕಟಣೆ ಮಾಡಿದರೆ, ಅಗತ್ಯವಿರುವವರಿಗೆ ಬಹಳ ಉಪಕಾರವಾಗುತಿತ್ತು."

ಕೆನರಾ ಚೇಂಬರ್ ಓಫ್ ಕಾಮರ್ಸ್

ಇದರ ಕಚೇರಿಯಲ್ಲಿ ಶ್ರೀ ಮರೋಳಿ ದೇವರಾಯ ಕಾಮತರ ಅಧ್ಯಕ್ಷತೆಯಿಂದ ಸೇರಿದ ಹೊಗೆಸೊಪ್ಪಿನ ವ್ಯಾಪಾರಿಗಳ ಹಾಗೂ ತಯಾರಿಕಾರರ ಸಭೆಯಲ್ಲಿ ಈ ಕೆಳಗಿನ ನಿರ್ಣಯಗಳಾದುವು. (೧) ಡ್ಯೂಟಿಪೈಡ್ ಹೊಗೆಸೊಪ್ಪಿಗೆ, ವಿಶೇಷವಾಗಿ ಆಫೀಸರರಿಲ್ಲದ ಹಳ್ಳಿ ಸ್ಥಳಗಳಲ್ಲಿ ಟಿ. ಪಿ. ಪರ್ಮಿಟುಗಳು ಸಿಗುವುದು ಕಷ್ಟವಾದ್ದರಿಂದ, ಹಾಗೂ ಇಂದಿನ ರೀತಿಯ ಆ ವ್ಯಾಪಾರಕ್ಕೆ ಬಾಧಕವಿರುವುದರಿಂದ, ವ್ಯಾಪಾರಿಗಳೇ, ಡ್ಯೂಟಿಪೈಡ್ ಹೊಗೆಸೊಪ್ಪಿಗೆ ಹಾಗೂ ಅದರಿಂದ ತಯಾರಿಸಿದ ಸಾಮಾನುಗಳಿಗೆ, ಪರ್ಮಿಟು ಕೊಡುವರೆ ಅಧಿಕಾರ ಹೊಂದುವಂತೆ ಮಾಡಬೇಕೆಂದೂ, (೨) ಇಂದಿನ ಅಳತೆ ಕ್ರಮದಲ್ಲಿ ಸರಿಯಾದ ಒಂದು ನಿಶ್ಚಿತ ಕ್ರಮವಿಲ್ಲದಿರುವುದರಿಂದ ಸರಕಾರವು ಸ್ಟೇಂಡಾರ್ಡ್ ಅಳತೆಯನ್ನು ಹೊಗೆಸೊಪ್ಪಿನ ಕುರಿತು ನಿಶ್ಚಯಿಸಬೇಕೆಂದೂ (೩) ಸ್ಟೇಟಿನಲ್ಲಿ ಬೆಳೆಸಿದ ಹೊಗೆಸೊಪ್ಪನ್ನು ಬರುವಂತೆ ಮಾಡುವ ಸೌಕರ್ಯ ಒದಗಿಸಬೇಕೆಂದೂ, (೪) ಹೊಗೆಸೊಪ್ಪಿಗೆ ಜೊಯಿಗೆ ಸೇರಿಸುವ ಪದ್ಧತಿಯನ್ನು ತಡೆಗಟ್ಟಬೇಕೆಂದೂ, (೫) ಈ ವಿಷಯದ ಎಲ್ಲಾ ಆರ್ಡರು, ರೂಲ್ಸು, ವಿವರಗಳ ಪ್ರತಿಗಳನ್ನು ಕೆನರಾ ಚೇಂಬರ್ ಓಫ್ ಕಾಮರ್ಸಿಗೆ ಕಳುಹಿಸಬೇಕೆಂದೂ, ಸರಕಾರವನ್ನು ಕೇಳಿಕೊಳ್ಳಲಾಗಿದೆ.

ಮಿತ್ರಮಂಡಳಿ

ಮಂಗಳೂರು 'ಮಿತ್ರಮಂಡಳಿ'ಯವರು ಈ ವರ್ಷದ ಅಂತ್ಯದೊಳಗೆ ವಿನೋದಾತ್ಮಕ ಪ್ರಬಂಧ ಹಾಗೂ ಕತೆಗಳನ್ನೊಳಗೊಂಡ ಒಂದು ಪುಸ್ತಕವನ್ನು ಪ್ರಕಟಿಸಲು ನಿಶ್ಚಯಿಸಿದ್ದಾರೆ. 'ಮಿತ್ರಮಂಡಳಿ' ಸದಸ್ಯರು ನವಂಬರ ೧೫ರ ಒಳಗೆ ತಮ್ಮ ಲೇಖನಗಳನ್ನು ಕಾರ್ಯದರ್ಶಿಗಳಿಗೆ ಕಳುಹಿಸಿಕೊಡಬೇಕಾಗಿ ವಿನಂತಿ.

ಲಾಯಿಡ್ ಜಾರ್ಜರ ದ್ವಿತೀಯ ವಿವಾಹ!

೮೦ ವರ್ಷ ಪ್ರಾಯದ ಲಾಯಿಡ್ ಜಾರ್ಜರಿಗೆ, (ಬ್ರಿಟನಿನ ಮಾಜಿ ಪ್ರಧಾನ ಮಂತ್ರಿ) ೫೫ ವರ್ಷ ಪ್ರಾಯದ ಮಿಸ್ ಸ್ಟಿವೆನ್‌ಸನರೊಡನೆ ದ್ವಿತೀಯ ವಿವಾಹವಾಯಿತು. ಲಾಯಿಡ್ ಜಾರ್ಜರಿಗೆ ೨೫ನೇ ವರ್ಷ ಪ್ರಾಯದಲ್ಲಿ ಮೊದಲನೆ ಲಗ್ನವಾಗಿದ್ದು ಆಕೆ ೧೯೪೧ನೇ ಜನವರಿಯಲ್ಲಿ ಮರಣ ಹೊಂದಿದ್ದಳು.

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. No. 104/194

1. ದೇವರಾಯ ಶ್ಯಾನುಭಾಗ, 2. ರಮಾನಾಥ ಶೆಣೈ, 3. ಸದಾಶಿವ ಶೆಣೈ, 4. ವಿಟ್ಠಲ ಶೆಣೈ, 5. ಶ್ರೀಮತಿ ಬಾಯಿ } ಮೈನರರು. ಉಪೇಂದ್ರ ಶ್ಯಾನುಭಾಗರ ಮಕ್ಕಳು. ಮೈನರ 4,5ನೇಯವರಕ್ಕೆ ಮಟಿಂಕ 1ನೇ ಅರ್ಜಿದಾರ. ಉಡ್ಪಿ ತಾಲೂಕು ನಡ್ಸಾಲು ಗ್ರಾಮದ ಪಡುಬಿದ್ರೆಯಲ್ಲಿರುವವರು.— } ಅರ್ಜಿದಾರರು

ಮತ್ತು

1. ರೋಹಿಣಿಬಾಯಿ, ಉಪೇಂದ್ರ ಕಮ್ತಿರ ವಿಧವೆ, 2. ವೇದಾವತಿಬಾಯಿ, ವಿಟ್ಠಪ್ಪ ಶ್ಯಾನುಭಾಗರ ವಿಧವೆ. 3. ಪದ್ಮಾವತಿಬಾಯಿ, ನಾರಾಯಣ ಶ್ಯಾನುಭಾಗರ ವಿಧವೆ. 1ನೇ ಎದ್ರಿಳು ಉಡ್ಪಿ ತಾಲೂಕು ಏಣಿಗುಡ್ಡೆ ಗ್ರಾಮದ ಕಟ್ಪಾಡಿಯಲ್ಲಿ ಕಲ್ಲಸಂಕ ಪೊಸಾರ ರಾಘವೇಂದ್ರ ಕಮ್ತಿರ ಮನೆಯಲ್ಲಿಯೂ 2 3ನೇ ಎದ್ರಿರು ಉಡ್ಪಿ ತಾಲೂಕು ನಡ್ಸಾಲು ಗ್ರಾಮದ ಪಡುಬಿದ್ರೆಯಲ್ಲಿಯೂ ಇರುತ್ತಾರೆ.— } ಎದ್ರಿ

ಸದರೀ ಎದ್ರಿರಿಗೆ ವ ಇತರ ಸಮಸ್ತ ಜನರೀಗೆ ಈ ಮೂಲಕ ತಿಳಿಯಪಡಿಸುವದೇನಂದ್ರೆ—

ಅರ್ಜಿದಾರರ ತಂದೆ ಇತ್ತಲಾಗೆ ಮೃತಪಟ್ಟ ನಡ್ಸಾಲು ಗ್ರಾಮದಲ್ಲಿದ್ದ ಉಪೇಂದ್ರ ಶ್ಯಾನುಭಾಗಯೆಂಬವರು ಕೆಳಗೆ ತಪ್ಸೀಲು ಕಾಣಿಸಿದಂತೆ ಬೇಂಕ್ ವಗೈರೆಯಲ್ಲಿ ಪಡಕೊಂಡ ಶೇರುಗಳ ಬಾಬ್ತು ಸದ್ಯಿಯವರಿಗೆ ಬರತಕ್ಕ ಐವೇಜನ್ನು ಪಡಿಯುವರೆ ತಮಗೆ ಸಕ್ಸೇಶನ್ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರರು ದಾಖ್ಲುಮಾಡಿದ ಮೇಲ್ಕಂಡ O. P. No. 104/1943ನೇ ಅರ್ಜಿಯ ತನ್ಕಿ ಬಗ್ಗೆ ತಾರೀಕು 13-11-1943ಕ್ಕೆ ಇಟ್ಟಿರುತ್ತದೆ. ಆದ್ರಿಂದ ಸದ್ರಿ ಸಕ್ಸೇಶನ್ ಸರ್ಟಿಫಿಕೇಟು ಕೊಡುವರೆ ಯಾರಿಗಾದರೂ ಆಕ್ಷೇಪಯಿದ್ದರೆ ಸದ್ರಿ ತಾ. 13-11-1943ನೇ ತಾರೀಕಿನ ಹಗಲು ಘಂಟೆ 10ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಹಾಜರು ಆಗಿ ಜಾಹೀರು ಮಾಡತಕ್ಕದ್ದು. ಇದಕ್ಕೆ ತಪ್ಪಿದ್ದಲ್ಲಿ ಅರ್ಜಿದಾರರಿಗೆ ಸಕ್ಸೇಶನ್ ಸರ್ಟಿಫಿಕೇಟು ಕೊಡಲಾದೀತು ಎಂತ ಈ ಮೂಲಕ ತಿಳಿಯಪಡಿಸಲ್ಪಟ್ಟಿದ್ದಾಗಿರುತ್ತದೆ.

ಸಕ್ಸೇಶನ್ ಸರ್ಟಿಫಿಕೇಟು ಅಪೇಕ್ಷಿಸಿದ ಕಣದ ವಿವರ.

	Rs. As. Ps.
1. Scindia Steam Navigation Company Ltd. Bombay for 38 Shares—	617-8-0
2. The wadia Woolen Mills Ltd. Bombay for 12 Shares—	480-0-0
3. The Central Bank of India Ltd. Bombay for 12 Shares—	318-0-0
4. The Union Bank of India Ltd. Bombay for 20 Shares—	155-0-0
5. The Gaekwar oil and Chemical Company Ltd. Baroda for 5 Shares—	250-0-0
6. Bank of Mangalore Ltd. Mangalore for 6 Shares—	90-0-0
Total	1910-8-0

Karkala, 23-10-1943. } H. V. Kamath, Advocate for Pttrs.

ಜಿಲ್ಲಾ ಸಮಾಚಾರಗಳು

ಮಂಗಳೂರು

ಉಪಾಧ್ಯಾಯರ ಕೌನ್ಸಿಲ್

ಸಭೆ ಕಳೆದ ಶನಿವಾರ ಸಂಜೆ ಕೆನರಾ ಹೈಸ್ಕೂಲಿನ ಉಪಾಧ್ಯಕ್ಷ ಶ್ರೀ. ಎಂ. ಎಸ್. ಏಕಾಂಬರ ರಾಯರ ಅಧ್ಯಕ್ಷತೆಯಲ್ಲಿ ನೆರೆದು 'ವಿದ್ಯಾವಾರಾಚರಣೆಯ' ಕಾರ್ಯಕ್ರಮಗಳನ್ನು ನಿರ್ಧರಿಸಿತು. ಪೊಂಗಲ್ ರಜಾ ದಿನಗಳಲ್ಲಿ ಬರುವ ಜನವರಿ ತಾ. ೧೪, ೧೫, ೧೬ರಲ್ಲಿ ಈ ವಾರದಾಚರಣೆಯನ್ನು ಉಡುಪಿಯಲ್ಲಿ ಮಾಡಬೇಕೆಂದೂ ತಾ. ೧೪ರಂದು ಸಂಜೆ ೪ರಿಂದ ೬ರ ವರೆಗೆ 'ಯುದ್ಧಾನಂತರದ ಶಿಕ್ಷಣ'ವೆಂಬ ಭಾಷಣವೂ ೬ರಿಂದ ೭ರ ವರೆಗೆ ಸ್ಕೌಟ್ ಚಟುವಟಿಕೆಗಳೂ ತಾ. ೧೫ರಲ್ಲಿ ಸಂಜೆ 'ವಿದ್ಯಾವಿಷಯಗಳ ಅಭಿವೃದ್ಧಿಯ ಸಾಧ್ಯತೆ' ಎಂಬ ಭಾಷಣವೂ ಅಂಗಸಾಧನೆಗಳೂ ತಾ. ೧೬ರಲ್ಲಿ 'ಶಿಕ್ಷಣ ವಿಧಾನ ಮತ್ತು ಶಾಲಾ ತರಗತಿಗಳ ಕಲಾವಿಶೇಷತೆ'ಯ ಭಾಷಣವು ಶಾಲಾ ಮಕ್ಕಳ ವಿನೋದಾವಳಿಗಳೂ ನಡೆಯಬೇಕೆಂದೂ ಗೊತ್ತಾಯಿತು. ಈ ಸಂಬಂಧ ಒಂದು ಕಮಿಟಿಯು ರಚನೆ ಆಗಿದೆ.

ಕೇಂದ್ರ ಉಪಾಧ್ಯಾಯರ ಸಂಘ

ದ ಸಭೆ ಕಳೆದ ಶನಿವಾರ ಸಂಜೆ ಸೆಂಟ್ರಲ್ ವಾರ್ಡ್ ಮುನಿಸಿಪಲ್ ಹಾ. ಎ. ಶಾಲೆಯಲ್ಲಿ ಶ್ರೀ. ಕೆ. ಮಂಜಪ್ಪ ಭಂಡಾರಿ ಅವರ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀಮತಿ ಚೆಲ್ಲ, ಶ್ರೀ. ಬಾರ್ನಬಸ್, ಶ್ರೀ. ಸದಾನಂದ ಸೋನ್ಸ್ ಅವರು ಮಾತಾಡಿದರು, ಶ್ರೀ. ಬಿ. ವೆಂಕಟೇಶ ನಾಯಕರು ವಂದಿಸಿದರು.

ದಂಡನೆ

ಇಲ್ಲಿಯ ಪ್ರಿನ್ಸಿಪಾಲ್ ಸಬ್ ಜಡ್ಜರ ಕೋರ್ಟಿನಲ್ಲಿ ಶ್ರೀ. ಎಂ ಆರ್ ಕೃಷ್ಣ ಆರ್ ನ್ಯಾಕ್ ಎಂಡ್ ಸನ್ಸ್‌ರಲ್ಲಿಂದ ಕಳವಾದ ೩೨ ಪೆಟ್ರೊಮೇಕ್ಸ್ ದೀಪ ಮೊದಲಾದ ಹಲವು ಪದಾರ್ಥಗಳ ಮೊಕದ್ದಮೆಯ ವಿಚಾರಣೆ ಕಳೆದ ಸುಮಾರು ೧೫ ದಿನಗಳಿಂದ ನಡೆದಿದ್ದು (ಜ್ಯೂರಿಯವರೆಲ್ಲರ ಏಕ ಅಭಿಪ್ರಾಯದಂತೆ) ೫ ಮಂದಿ ಆರೋಪಿಗಳಲ್ಲಿ ೧ನೇ ಆರೋಪಿ ಇದಿನಬ್ಬ (ಕಳುವಿನ ಚಾರ್ಜು)ನಿಗೆ ೩ ವರ್ಷ ಕಠಿನ ಸಜೆ, ೨ನೇ ಆರೋಪಿ ಸಾಬನ್ ಹಸ್ನಗೆ (ಕಳುವಿನ ಚಾರ್ಜು ಸೆಕ್ಷನ್ ೩೮೦) ೬ ವರ್ಷ ಕಠಿನ ಸಜೆ (ಇವರಿಬ್ಬರೂ ಹಳೆ ಅಪರಾಧಿಗಳು) ೫ನೇ ಆರೋಪಿ ಜಿ. ಹನುಮಂತ ಪೈಗೆ (ಕಳುವಿನ ಮಾಲು ಪಡೆದವರು ಸೆಕ್ಷನ್ ೪೧೧) ೩ ವರ್ಷಗಳ ಕಠಿನ ಸಜೆ, ರೂ ೨೦೦ ಜುಲ್ಮಾನೆ ತಪ್ಪಿದರೆ ಮತ್ತೆ ೬ ತಿಂಗಳ ಕಠಿನ ಸಜೆ ಎಂದು ವಿಧಿಸಲಾಗಿದೆ. ೩ನೇ ಮತ್ತು ೪ನೇ ಆರೋಪಿಗಳು (ಕಾಲ ಬಾವ ಯಾನೆ ಹಮ್ಮದೆ ಮತ್ತು ಸೇಕೆ ಬ್ಯಾರಿ) ಸೆಕ್ಷನ್ ೩೮೦, ೪೧೧ರಂತೆ ನಿರ್ದೋಷಿಗಳೆಂದು ಬಿಡುಗಡೆಯಾದರೂ ೪೫೭ನೇ ಸೆಕ್ಷನಿನಂತೆ (ಬೀಗ ಮುರಿದದ್ದು) ಅವರನ್ನು ತಿರುಗಿ ವಿಚಾರಣೆಗೆ ಗುರಿಪಡಿಸಲಾಗದೇ ಎಂಬ ಕುರಿತು ಇದೇ ನವಂಬರ ತಾ [illegible] ಎಡಿಷನಲ್ ಪಬ್ಲಿಕ್ ಪ್ರಾಸಿಕ್ಯೂಟರರಿಂದ ಅಭಿಪ್ರಾಯ ಪಡೆದು ಮುಂದುವರಿಸಲಾಗುತ್ತಿದೆ.

ಹವಾಮಾನ

ಮಳೆಯು ಇನ್ನೂ ನಿಂತಿಲ್ಲ. ಸಂಜೆ ಹೊತ್ತಿಗೆ ಪ್ರತಿ ದಿನವೆಂಬಂತೆ ಗುಡುಗು ಮಳೆ ಸುರಿಯುತ್ತಿದೆ.

ಅಂತರ ಕಾಲೇಜು ಚರ್ಚಾ ಭಾಷಣ

ಕಳೆದ ತಾ. ೨೨ರಲ್ಲಿ ಗವರ್ನಮೆಂಟ್ ಕಾಲೇಜ್ ಮತ್ತು ಸೈಂಟ್ ಎಲಾಶಿಯಸ್ ಕಾಲೇಜುಗಳ ವಿದ್ಯಾರ್ಥಿಗಳೊಳಗೆ ಒಂದು ಚರ್ಚಾ ಭಾಷಣ ಸಭೆ ಸೈ. ಎ. ಕಾಲೇಜಿನಲ್ಲಿ ಏರ್ಪಾಡಾಗಿತ್ತು. ಶ್ರೀ. ಬಿ. ಸೋಮಶೇಖರ ರಾಯರು ಅಂದಿನ ಸಭಾಧ್ಯಕ್ಷರಾಗಿದ್ದರು. ಸೈ. ಎ. ಕಾಲೇಜ್ ಯೂನಿಯನಿನ ಅಧ್ಯಕ್ಷ ಶ್ರೀ. ಲಾರೆನ್ಸ್ ...ಂಗೇರರು ಸ್ವಾಗತ ಭಾಷಣ ಮಾಡಿದ ಮೇಲೆ, ಗವರ್ನ್‌ಮೆಂಟ್ ಕಾಲೇಜ್ ಯೂನಿಯನಿನ ಅಧ್ಯಕ್ಷ ಶ್ರೀ. ಶ್ರೀಧರ ಶೆಣೈಯವರು ಅದಕ್ಕೆ ಉತ್ತರ ಹೇಳಿದರು. ಆ ಮೇಲೆ 'ವಿಜ್ಞಾನದ ಸಮಾ...ಶವು ಮನುಷ್ಯವರ್ಗಕ್ಕೆ ಹಿತಕ್ಕಿಂತ ಅಹಿತವನ್ನೇ ಹೆಚ್ಚಿಗೆಯಾಗಿ ಮಾಡಿದೆ' ಎಂಬ ಠರಾವು ಮಂಡಿಸಲ್ಪಡಲು ಅದರ ಪರವಾಗಿ ಗವರ್ನಮೆಂಟ್ ಕಾಲೇಜಿನ ಶ್ರೀಗಳಾದ ಮೋಹನ್‌ದಾಸ್ ಕಾಮತ್, ಬಾಲಕೃಷ್ಣ ಶೆಟ್ಟಿ, ತುಕಾರಾಂ ನ್ಯಾಕ್ ಶಾಂತಾ ಎಸ್, ತಿಲಕ್ ಹೆಗ್ಡೆ, ಶಿವರಾಂ ಶೆಟ್ಟಿ ಇವರೂ, ಠರಾವಿನ ವಿರೋಧವಾಗಿ ಸೈ. ಎ. ಕಾಲೇಜಿನ ಶ್ರೀ ಥಾಮಸ್ ಕಳಂಜಾ ಶ್ರೀ ಸ್ಯಾಮುವೇಲ್ ಕೆ. ಸಿ. ಶ್ರೀಗಳಾದ ಜಯರಾಂ ಶೆಟ್ಟಿ, ಉಮೇಶರಾವ್, ಲೋಕನಾಥ, ಶ್ರೀ ಐ. ಸಿಡ್ನಿ ಪಿಂಟೋ ಅವರೂ ಮಾತನಾಡಿದ ಮೇಲೆ ಶ್ರೀ ಅಣ್ಣಪ್ಪ ಮತ್ತು ಶ್ರೀ. ಶಿವಶಂಕರ ರಾವ್ ಅವರೂ ಮಾತಾಡಿದರು. ಮತ ತೆಗೆಯಲಾಗಿ ಠರಾವು ಸೋತುಹೋಯಿತು. ಅಧ್ಯಕ್ಷರ ಭಾಷಣಾನಂತರ ಸೈ. ಎ. ಕಾಲೇಜಿನ ಶ್ರೀ. ಸಿ. ಎಸ್. ಗಣಪತಿ ಅವರು ವಂದಿಸಿದರು.

ಗುರುತು ಚೀಟಿ —

ನಗರದಲ್ಲಿ ಬಡವರಿಗೆ ಕಡಿಮೆ ಕ್ರಯದಲ್ಲಿ ಅಕ್ಕಿ ಒದಗಿಸುವ ಬಗ್ಗೆ ಗುರುತು ಚೀಟಿ ಕೊಡುವ ವ್ಯವಸ್ಥೆಯಲ್ಲಿ ಹಿಂದೆ ಸ್ವಲ್ಪ ಅವ್ಯವಸ್ಥೆ ನಡೆದರೂ, ಈಗ ಅದರ ತಿದ್ದುಪಡಿ ಆಗುತ್ತಮ್ಮ, ಹೊಸ ಅರ್ಜಿಗಳ ತನಿಖೆ ನಡೆಯುತ್ತದೆಂದು ತಿಳಿದು ಬರುತ್ತದೆ.

ಉಡುಪಿ

ಜಿಲ್ಲಾ ಬೋರ್ಡು: —

ಚುನಾವಣೆಯಲ್ಲಿ ಹಿರಿಯಡ್ಕ ಸರ್ಕಲಿನಿಂದ ಶ್ರೀ ಎಂ ನಾಗಣ್ಣ ಹೆಗ್ಡೆಯವರೂ, ಕಟ್ಪಾಡಿ ಸರ್ಕಲಿನಿಂದ ಶ್ರೀ ಶ್ರೀನಿವಾಸ ಮಿತ್ತಂತಾಯರೂ ಆರಿಸಿ ಬಂದಿರುವರು.

ಕಾಸರಗೋಡು

ನೀಲೇಶ್ವರ —

ಕಾಸರಗೋಡು ತಾಲೂಕು ಕೆಲಸಗಾರರ ಸಭೆಯು ನೀಲೇಶ್ವರದಲ್ಲಿ ತಾರೀಕು ೨೫-೯-೪೩ರಲ್ಲು ಕಣ್ಣನ್ನೂರಿನ ಶ್ರೀ ಪಿ. ಮಾಧವನ್ ಎಂಬವರ ಅಧ್ಯಕ್ಷತೆಯಲ್ಲಿ ಜರಗಿತು. ಕಾಸರಗೋಡು ತಾಲೂಕು ಗ್ರಾಮ ಸೇವ ಸಂಘದ ಪುನರ್ಘಟನೆಯನ್ನು ಮಾಡಲಾಯಿತು. ಸಂಘದ ಕಾರ್ಯ ನಿರ್ವಹಿಸಲು ೯ ಜನರಿಂದ ಕೂಡಿದ ಆಡಳಿತೆ ಕಮಿಟಿಯನ್ನು ರಚಿಸಿ, ಶ್ರೀ ಮೇಲೋತ್ತು ನಾರಾಯಣ ನಂಬಿಯಾರರನು ಅಧ್ಯಕ್ಷರನ್ನಾಗಿಯೂ, ಶ್ರೀ ಎಸ್. ಕೆ ಬಾಲಕೃಷ್ಣರನ್ನು ಜನರಲ್ ಸೆಕ್ರೆಟೆರಿಯನ್ನಾಗಿಯೂ, ಶ್ರೀ ಪಿ ಪಿ. ಕಡಂಬಳಿತ್ತಾಯರನ್ನು ಜೊಯಿಂಟ್ ಸೆಕ್ರಟರಿಯನ್ನಾಗಿಯೂ ಚುನಾಯಿಸಲಾಯಿತು.

ಕಾಸರಗೋಡು ತಾಲೂಕು ಗ್ರಾಮಸೇವಾ ಸಂಘದ ವರ್ಕಿಂಗ್ ಕಮಿಟಿಯ ಸಭೆ ಶ್ರೀ ಎಂ ನಾರಾಯಣ ನಂಬಿಯಾರರ ಅಧ್ಯಕ್ಷತೆಯಲ್ಲಿ ಕಳೆದ ತಾ ೨೫ರಂದು ಜರಗಿತು.

ಕಾಸರಗೋಡು ತಾಲೂಕು ಗ್ರಾಮಸೇವಾ ಸಂಘದ ಆಫೀಸನ್ನು ತಾರೀಕು ೧-೧೦-೪೩ರಿಂದ ನೀಲೇಶ್ವರದಲ್ಲಿ ತೆರೆಯುವದೆಂತಲೂ, ಶ್ರೀ ಎಂ ಕುಂಞಂಬು ನಾಯರನ್ನು ತಾ ೧-೧೦-೪೩ರಿಂದ ತಾಲೂಕು ಆರ್ಗನೈಸರನ್ನಾಗಿಯೂ ಆಫೀಸಿಗೆ ಬೇಕಾದ ಸಾಧನ ಸಾಮಗ್ರಿಗಳನ್ನು ಒದಗಿಸಲು ಸೆಕ್ರೆಟರಿಗೆ ಅಧಿಕಾರ ಕೊಡುವುದಾಗಿಯೂ, ಕೊಲೆರಾ ಹಾವಳಿ ನಿವಾರಣಾ ಕಮಿಟಿಯು ಈ ವರೇಗೆ ಕೆಲಸ ನಡಿಸಿದಂತೆಯೂ ಮುಂದೆಯೂ ನಡೆಸುವುದೆಂತಲೂ ತೀರ್ಮಾನಿಸಲಾಯಿತು.

ಕಾಸರಗೋಡು ತಾಲೂಕು ನೇಶನಲ್ ಸ್ಟೂಡೆಂಟ್ಸ್ ಆರ್ಗನೈಸೇಶನ್ ಆಫೀಸು ತಾ ೧-೧೦-೪೩ರಲ್ಲು ಕಾಸರಗೋಡಲ್ಲಿಯೂ ಕಾಸರಗೋಡು ತಾಲೂಕು ಗ್ರಾಮಸೇವಾ ಸಂಘದ ಆಫೀಸು ಅದೇ ದಿನ ನೀಲೇಶ್ವರದಲ್ಲಿಯೂ ಸಮ್ಮಂದ ಪಟ್ಟ ಕೆಲಸಗಾರರಿಂದ ತೆರೆಯಲ್ಪಟ್ಟಿತು.

ಕಾಸರಗೋಡು ತಾಲೂಕು ಗ್ರಾಮಸೇವಾ ಸಂಘದ ಆಡಳಿತೆ ಕಮಿಟಿಯ ಸಭೆಯು ಶ್ರೀ ಎಂ. ನಾರಾಯಣ ನಂಬಿಯಾರರ ಅಧ್ಯಕ್ಷತೆಯಲ್ಲಿ ತಾ ೪ರಂದು ಸಂಘದ ಆಫೀಸಿನಲ್ಲಿ ಜರಗಿತು. ಕೊಲೆರಾ ಹಾವಳಿಯ ನಿವಾರಣೆಯ ಬಗ್ಗೆ ತೆರೆಯಲ್ಪಟ್ಟ ಪಿಲಿಕೋಡು ಕೇಂದ್ರದಲ್ಲಿ ಶ್ರೀ ಪಿ. ಟಿ. ಕುಂಞಂಬು ಎಂಬವರು ತಾಲೂಕು ಕಮಿಟಿಯವರು ತಿಳಿಸುವ ತನಕ ಕೆಲಸ ನಡಿಸುತ್ತಿರಬೇಕಾಗಿಯೂ, ಸದರಿ ಕೇಂದ್ರವನ್ನು ಸಂದರ್ಶಿಸಿ ರೋಗ ಸ್ಥಿತಿ ಹಾಗೂ ಕೇಂದ್ರದ ಕುರಿತು ೧ ವಾರದೊಳಗೆ ರಿಪೋರ್ಟು ರವಾನಿಸುವರೆ ಜೊಯಿಂಟ್ ಸೆಕ್ರೆಟರಿ ಪಿ. ಪಿ. ಕಡಂಬಳಿತ್ತಾಯರನ್ನೂ ಈಗ ಜಾರಿಯಲ್ಲಿರುವ ಎಲ್ಲ ಕಮಿಟಿಗಳು ಈವರೆಗೆ ನಡಿಸಿದ ಕೆಲಸಗಳ ವರದಿಯನ್ನು ತಾ ೧೫-೧೦-೪೩ರ ಒಳಗೆ ಸಂಘದ ಆಫೀಸಿಗೆ ರವಾನಿಸಿ ಕೊಡುವಂತೆಯೂ, ಸಂಘದ ಆಶ್ರಯದಲ್ಲಿ ವಾಚನಾಲಯವನ್ನು ತೆರೆಯುವದೆಂತಲೂ ಅದಕ್ಕೆ ಸಂಬಂಧಿಸಿದ ನಿಯಮಗಳನ್ನು ಜನರಲ್ ಸೆಕ್ರೆಟರಿಯವರು ತಯಾರಿಸಿ ಸಭೆಯ ಮುಂದಿರಿಸಬೇಕಾಗಿಯೂ ನಿಶ್ಚಯಿಸಲಾಯಿತು.

ಕಾಸರಗೋಡು ತಾಲೂರು ನೇಶನಲ್ ಸ್ಟೂಡೆಂಟ್ ಆರ್ಗನೈಸೇಶನ್ ಯೂನಿಯನಿನ ಆಡಳಿತ ಕಮಿಟಿಯ ಸಭೆಯು ಕಮಿಟಿಯ ಅಧ್ಯಕ್ಷರಿಂದ ತಾರೀಕು ೨೭-೧೦-೪೩ರಲ್ಲು ಆಫೀಸಿನಲ್ಲಿ ಜರಗಿಸಲ್ಪಟ್ಟಿತು. ತಾ ೧-೧೧-೪೩ರಿಂದ ಪ್ರಕೃತ ಆಫೀಸಿನಲ್ಲಿ ವಾಚನಾಲಯವೊಂದನ್ನು ತೆರೆಯುವದೆಂತಲೂ ಇಂಗ್ಲಿಷು, ಹಿಂದು, ಮಲೆಯಾಳ, ಮಾತೃಭೂಮಿ, ಕನ್ನಡ, ಸಂಯುಕ್ತ ಕರ್ನಾಟಕ ಇವನ್ನು ಸದ್ಯ ತರಿಸುವದೆಂತಲೂ ತೀರ್ಮಾನಿಸಲಾಯಿತು.

ಅಜಾನೂರು —

ಕಾಸರಗೋಡು ತಾಲೂಕು ಗ್ರಾಮಸೇವಾ ಸಂಘದ ಆಡಳಿತೆ ಕಮಿಟಿ ಸಭೆಯು ಶ್ರೀ ಎಂ ನಾರಾಯಣ ನಂಬಿಯಾರರ ಅಧ್ಯಕ್ಷತೆಯಲ್ಲಿ ತಾರೀಕು ೨೪-೧೦-೪೩ರಲ್ಲು ವಿ ಎ. ಕೃಷ್ಣನ್ನಾಯರ ಮನೆಯಲ್ಲಿ ಜರಗಿತು.

ತಾಲೂಕು ಆರ್ಗನೈಸರರು ಕೆಲಸ ನಡಿಸಿದ ಬಗ್ಗೆ ತಯಾರಿಸಿದ ಡೈರಿಯನ್ನು ಓದಲಾಯಿತು. ಕಾಸರಗೋಡು ತಾಲೂಕಿನ ಚರ್ವತ್ತೂರು ಫಿರ್ಕಾದಲ್ಲಿ ಕೆಲಸ ನಿರ್ವಹಿಸಲು ಶ್ರೀ ಕುಮಾರ ನಂಬಿಯಾರರನ್ನೂ, ಕಾಂಞಂಗಾಡು ಫಿರ್ಕಾದಲ್ಲಿ ಕೆ. ಶಂಕರನ್ ಎಂಬವರನ್ನೂ, ಕಾಸರಗೋಡು ಫಿರ್ಕಾದಲ್ಲಿ ಸಂಘದ ಜೊಯಿಂಟ್ ಸೆಕ್ರೆಟರಿ ಶ್ರೀ ಪಿ. ಪಿ ಕಡಂಬಳಿತ್ತಾಯರನ್ನೂ ಚುನಾಯಿಸಿದ್ದಲ್ಲದೆ ಆಡಳಿತ ಕಮಿಟಿಯ ಒಗ್ಗೆ ಶ್ರೀ ವಿ. ಪಿ. ಕೆ ನಾಯನಾರ್ ಮತ್ತು ಪಿ ಪಿ. ಕೃಷ್ಣನ್ನಾಯರ್ ಇವರನ್ನು ನಿರ್ಣಯಿಸಲಾಯಿತು.

ಭೂಮಾಲಿಕರ ಸಭೆ

ಭೂಮಾಲಿಕರು ಬೆಳೆಸುವ ಅಕ್ಕಿ ಭತ್ತಗಳ ಪೈಕಿ ಅರ್ಧಾಂಶವನ್ನು ಸರಕಾರದವರು ಕಂಟ್ರೋಲು ಬೆಲೆಗೆ ಪಡೆಯುವ ಯೋಜನೆಯಿಂದ ಕಾಸರಗೋಡು ತಾಲೂಕಿಗೆ ಒದಗಬಹುದಾದ ಪರಿಣಾಮಗಳನ್ನು ಚರ್ಚಿಸಿ, ಈ ಯೋಜನೆಯಲ್ಲಿ ಈ ತಾಲೂಕಿನ ಮಟ್ಟಿಗೆ ಆಗತ್ಯವುಳ್ಳ ತಿದ್ದುಪಡಿಗಳನ್ನು ಸರಕಾರಕ್ಕೆ ಸೂಚಿಸುವ ಬಗ್ಗೆ ಇದೇ ತಾ 31ನೇ ಆದಿತ್ಯವಾರ ದಿನ ಸಾಯಂಕಾಲ ಗಂಟೆ 5-30ಕ್ಕೆ ಕಾಸರಗೋಡು ಕೋ-ಒಪರೇಟಿವ್ ಟೌನ್ ಬೇಂಕಿನ ಕಟ್ಟಡದಲ್ಲಿ ಭೂಮಾಲಿಕರ ಒಂದು ಸಭೆಯು ಸೇರಲಿರುವುದು.

ಕುಂದಾಪುರ

ಕಳೆದ ವರ್ಷದ ರಿಕ್ವಿಸಿಶನ್

ಮಂಗಳೂರಲ್ಲಿ ಕಳೆದವಾರ ಸರಕಾರಕ್ಕೆ ಮನವಿ ಮಾಡಲು ದಕ್ಷಿಣ ಕನ್ನಡ ಭೂಮಾಲಿಕರ ಸಂಘದ ಸಭೆಯಲ್ಲಿ, ಕುಂದಾಪುರದ ಶ್ರೀ ಎಸ್. ಪರಮೇಶ್ವರಯ್ಯನವರು ಮಾತನಾಡುತ್ತಾ, ಕುಂದಾಪುರದಲ್ಲಿ ಮುಡಿಯೊಂದಕ್ಕೆ ರೂ ೮ರಂತೆ ಕಳೆದ ವರ್ಷ ರಿಕ್ವಿಸಿಶನ್ ಮಾಡಿ, ಅದನ್ನು ವ್ಯಾಪಾರಿಗಳ ಕೈಗೆ ಕೊಟ್ಟ ಮೇಲೆ ಅವರು ಮುಡಿಯೊಂದರ ರೂ ೧೨ರಂತೆ ಮಾರಿದರೆಂದೂ ರಿಕ್ವಿಸಿಶನ್ ಮಾಡಿದ ಮೂರೇ ತಿಂಗಳಲ್ಲಿ ಸರಕಾರದವರೇ ವ್ಯಾಪಾರಿಗಳಿಂದ ಅದೇ ಅಕ್ಕಿಯನ್ನು ಮುಡಿಯೊಂದರ ೧೭ರಂತೆ ಕೊಂಡುಕೊಂಡರೆಂದೂ ತಿಳಿಸಿದರು.

ಪ್ರಕಾಶ ಕೂಟದಲ್ಲಿ 'ಕಾನೂರು ಸುಬ್ಬಮ್ಮ ಹೆಗ್ಗಡಿತಿ'ಯ ಅಭ್ಯಾಸಗೋಷ್ಠಿ

ಈ ಅಭ್ಯಾಸ ಕೂಟವು ಜಿ. ಎಸ್. ಶೆಣೈಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಪಿ. ಕೆ. ನಾರಾಯಣರವರು ಕಾದಂಬರಿಯ ಕಥಾವಸ್ತು; ಅದರ ವ್ಯಕ್ತಿಗಳು, ಪಾತ್ರ ಪೋಷಣೆ ಮೊದಲಾಗಿ ತಮ್ಮ ಅಭ್ಯಾಸವನ್ನು ಸಭೆಯ ಮುಂದಿಟ್ಟರು. ಈ ಕಾದಂಬರಿಯು ಕಥಾವಸ್ತುವು ವಿಶಾಲ ವೈಭವಗಳಲ್ಲಿ ಮಹಾ ಕಾದಂಬರಿಯ ಎಲ್ಲ ವಿಶಿಷ್ಟತೆಯನ್ನು ಪಡೆದಿದೆ. ಮಲೆನಾಡಿನ ಒಕ್ಕಲು ಮಕ್ಕಳ ಜೀವನವು ನೈಜವಾಗಿ, ಕಲಾಪೂರ್ಣವಾಗಿ ಪ್ರೌಢವಾಗಿ ಚಿತ್ರಿಸಲ್ಪಟ್ಟಿದೆ. ಕಾದಂಬರಿಯ ಜೀವಾಳದಂತಿರುವ ಹೂವಯ್ಯ ರಾಮಯ್ಯ ಸೀತೆ ಪಾತ್ರಗಳಲ್ಲಿ ಹೂವಯ್ಯನು ಅಧಿಕ ಧ್ಯೇಯವಾದಿಯಾಗಿ ಕಾಣುತ್ತಾನೆ. ಹಲವಾರು ಸುಂದರ ಚಿತ್ರವನ್ನೊಳಗೊಂಡ ಈ ಕಾದಂಬರಿಯು ಸಮಗ್ರ ಕಾದಂಬರಿಯ ದೃಷ್ಟಿಯಿಂದ ಅಷ್ಟೊಂದು ಸಮರ್ಪಕವಾಗಿಲ್ಲ. ಇದರ ಭಾಷೆಯು ಮಲೆನಾಡಿನ ಸುಂದರವಾದ ಮನ ಸೆಳೆಯುವ ದೇಸಿಯಿಂದಲೂ ಪ್ರೌಢವಾದ ಕಾವ್ಯಮಯವಾದ ವರ್ಣಗಳಿಂದಲೂ ಕೂಡಿದ್ದರೂ ಹಲವೆಡೆಯಲ್ಲಿ ವಿಶೇಷ ಕಷ್ಟಕರವಾದ ಸಂಸ್ಕೃತವು ಬಂದು ಸುಲಲಿತವಾಗಿ ನಿಸರ್ಗವಾಗಿ ಹರಿವ ಕಾದಂಬರಿಗೆ ತಡೆಹಾಕಿದ ಹಾಗಿದೆ'ಯೆಂದರು.

ಶ್ರೀ ಲೋಕನಾಥರು ಈ ಕಾದಂಬರಿಯು ಎಲ್ಲಾ ರೀತಿಯಲ್ಲಿ ಉತ್ತಮವಾಗಿದೆ. ಹಿಂದಿನ ಋಷಿವರ್ಯರಂತೆ ಪುಟ್ಟಪ್ಪನವರು ಈ ಕಥೆಯಲ್ಲಿ ಧರ್ಮವನ್ನು ಸರಿಯಾಗಿ ಹೇಳಿದ್ದಾರೆ. ಕಾದಂಬರಿಯಲ್ಲಿ ಉತ್ತಮವಾದ ಹಲವಾರು ವರ್ಣನೆಗಳಿವೆ, ಎಂದರು.

ಶ್ರೀ ಕಯ್ಯಾರ ಕಿಞ್ಞಣ್ಣ ರೈಗಳು ಮಾತನಾಡುತ್ತಾ, ಈ ಕಾದಂಬರಿಯ ಭಾಷೆಯು ಕಾದಂಬರಿಗೆ ಒಪ್ಪವಂತಿದೆಯೆಂದೂ, ಯಾವುದೇ ಸಾಹಿತ್ಯದಲ್ಲಾದರೂ ಕಾದಂಬರಿಗಳ ಭಾಷೆಗೊಂದು ಮಟ್ಟವಿದೆಯೆಂದೂ, ಆ ಮಟ್ಟಕ್ಕೇರದಿದ್ದರೆ ಕಾದಂಬರಿಯ ರಸಾಸ್ವಾದ ಮಾಡುವುದು ಕಷ್ಟವೆಂದೂ ಹೂವಯ್ಯನು ಭಾವನಾಸಮಾಧಿಯಲ್ಲಿರುವವನಾದರೂ ಅಂತಹ ವ್ಯಕ್ತಿಗಳು ಕಾದಂಬರಿಯಲ್ಲಿ ಬರುವುದರಲ್ಲಿ ದೋಷವಿಲ್ಲವೆಂದೂ ಕನ್ನಡದ ಮೂರು ಮಹಾ ಕಾದಂಬರಿಗಳಲ್ಲೊಂದಾದ ಗಳಗನಾಥರ ಮಾಧವ ಕರುಣಾವಿಲಾಸವನ್ನು ಮುಂದಿನ ಸಲ ಅಭ್ಯಾಸಮಾಡಬೇಕೆಂದೂ ಸೂಚನೆಯಿತ್ತರು.

ಶ್ರೀ ಶಿ. ರಾ. ಕುಳುಕುಂದರು ತಮ್ಮ ಅಭ್ಯಾಸದಲ್ಲಿ ಪುಟ್ಟಪ್ಪನವರೂ, ಕಾರಂತರೂ, ಭಾವುಕರಾಗಿ ನಮಗೆರಡು ಮಹಾ ಕಾದಂಬರಿಗಳನ್ನಿತ್ತಿದ್ದಾರೆ. ಕಾದಂಬರಿಗಳಲ್ಲಿ ಭಾವನಾ ಪರರಾದ ಧ್ಯೇಯವಾದಿಗಳಿಗೆ ಸ್ಥಳವಿರಬಹುದು ಆದರೆ ಪ್ರಾಯೋಗಿಕ ಜೀವನದಲ್ಲಿ ಅವರಿಗೆ ಸ್ಥಾನವಿಲ್ಲ. 'ಕಾನೂರು ಸುಬ್ಬಮ್ಮ ಹೆಗ್ಗಡಿತಿಯು' 'ದುರಂತ'ವಾಗಿಯೇ ಉಳಿದಿದ್ದರೆ ಕಾದಂಬರಿಯು ಈ ಪುಟ್ಟಪ್ಪನವರ ಅಮರ ಕೃತಿಯಾಗುತಿತ್ತು. ಕಾದಂಬರಿಯ ಭಾಷೆಗೊಂದು ಮಟ್ಟ ಅಗತ್ಯವಿಲ್ಲ, ಎಲ್ಲರಿಗೂ ಅರ್ಥವಾಗಲಿ ಎಂದರು.

ಶ್ರೀ ಎಂ. ಎಸ್. ಭಟ್ಟರು ತಮ್ಮ ಪುಟ್ಟಪ್ಪನವರ ಒಳ್ಳೇ ವರ್ಣನೆಗಳಿಂದಲೂ, ಒಳ್ಳೇ ವಿಚಾರಗಳಿಂದಲೂ ಕೂಡಿರುವ ಈ ಉತ್ತಮ ಕಾದಂಬರಿಯ ಸರ್ವಾಂಗ ಸುಂದರವೆಂದರು.

ಅಧ್ಯಕ್ಷರು ಇದೊಂದು ಉತ್ತಮ ಕಾದಂಬರಿಯೆಂದು ಹೇಳಿದರು.

ಶ್ರೀ ಜಿ. ರಾಮಚಂದ್ರ ಭಟ್ಟರು ಧನ್ಯವಾದ ಅರ್ಪಿಸಿದರು.

ಬಂಗಾಳಕ್ಕೆ ಸಹಾಯ

ಕಾರ್ಸಾಟ್ ಸದಾಶಿವ ರೋಡಿನಲ್ಲಿರುವ ವಿದ್ಯಾರ್ಥಿ ಸಂಘದವರು ಒಂದು ಪ್ರಕಟನೆ ಹೊರಡಿಸಿ ಬಂಗಾಳ ನಿರಾಶ್ರಿತರಿಗೆ ಸಹಾಯ ಮಾಡಲು ವಿನಂತಿಸಿಕೊಂಡಿದ್ದಾರೆ.

ಸಿನೆಮಾ ಸುದ್ದಿ

ನಮ್ಮ ತಾರಾಗಣಗಳು

ಛಾಲಕ ನಟನಟಿಯರಲ್ಲಿ ಯಾರು ಯಾರು ಈಗ ಕೀರ್ತಿಗೆ ಏರುತ್ತಾ ಇದ್ದಾರೆ, ಯಾರು ಯಾರು ಕೀರ್ತಿ ಶಿಖರದಿಂದ ಪತನವಾಗುತ್ತಿದ್ದಾರೆ, ಯಾರು ಒಂದೇ ತರದಲ್ಲಿದ್ದಾರೆ, ಎಂಬೀ ವಿವರದ ಪಟ್ಟಿಯೊಂದನ್ನು ಕೆಳಗೆ ಕೊಡಲಾಗಿದೆ.

ಇಂದು ಕೀರ್ತಿ ಶಿಖರಕ್ಕೇರುವವರಲ್ಲಿ ಮುಮ್ತಾಜ್ ಶಾಂತಿ ಮೊದಲಿನಾಕೆ. ಆವಳ ಸಾಲಿಗೆ ರತ್ನಮಾಲಾ, ಭಾರತೀ ದೇವಿ, ಜಯಶ್ರೀ, ನಿರ್ಮಲಾ, ನಲಿನಿ ಜಯವಂತ್ ವೀಣಾ, ಸ್ವರ್ಣಲತಾ, ಬೇಬಿ ಅಖ್ತಾರ್, ಚಂದ್ರಪ್ರಭಾ, ಅಂಜಲಿ, ಸುರಯ್ಯಾ, ಕುಸುಮ ದೇಶಪಾಂಡೆ ಮತ್ತು ಐದು ಮಂದಿ ಗಂಡು ತಾರಾಗಣ—ವಾಸ್ತಿ; ಉಲ್ಲಾಸ್, ಡೇವಿಡ್, ಸತೀಶ್ ಹಾಗೂ ಅಶಿತ ಭರಣ್.

ಪತನ ಹೊಂದುವ ತಾರೆಗಳ ವಿಷಯ. ಇದು ಬಹಳ ನಿಷ್ಠುರ ಕಾರ್ಯವೇನೋ ಖರಿ. ಆದರೆ ಇದ್ದದ್ದನ್ನು ಹೇಳಿದರೆ ತಪ್ಪೇನಿದೆ? ಇವರಲ್ಲಿ ಸಬಿತಾ ಮೊದಲಿನಾಕೆ, ಅವಳ ಸಾಲಿಗೆ, ರೋಸ್, ಮಾಧುರಿ, ಶಾಂತಾ ಆಪ್ಟೆ, ಸಾಧನಾಬೋಸ್, ರತನ್ ಬಾಯಿ, ಲೀಲಾ ದೇಸಾಯಿ, ಲೀಲಾ ಚಿಟ್ನಿಸ್, ಮೋತಿಲಾಲ, ಶಾಹು ಮೋಡಕ್, ಕಿಶೋರ ಶಾಹು, ಪಹರಿ ಸನ್ಯಾಲ್, ಪ್ರೇಮ ಅದಿಬ್ ಮತ್ತು ಮಜಾರ್ ಖಾನ್. ಇವರಿಂದು ಪತನ ಹೊಂದುತ್ತಿದ್ದರೂ ಹಿಂದೊಂದು ಕಾಲದಲ್ಲಿ ಕೀರ್ತಿ ಶಿಖರಕ್ಕೇರಿದವರೆಂಬುದನ್ನು ಯಾರೂ ಅಲ್ಲಗಳೆಯಲಾರರು.

ಈಗ ಒಂದೇ ತರದಲ್ಲಿ ನಿಂತವರು ಇವರು ಸೈಗಲ್, ದುರ್ಗಾ ಖೋಟೆ, ನವಾಬ್, ಚಂದ್ರ ಮೋಹನ್, ಪ್ರಥ್ವಿರಾಜ್, ಜೈರಾಜ್, ಕಾನನ್, ಜಮುನಾ, ಮಹತಾಬ್, ಯಾಕೊಬ್, ಅಶೋಕಕುಮಾರ್, ಕುರ್ಶಿದ್, ಸ್ನೇಹಪ್ರಭಾ, ಮೋಲಾ, ಶೋಭನಾ ಸಮರ್ಥ ಮತ್ತು ತಾರಾ

ಇನ್ನು ಕೊನೆಯ ಒಂದು ತರಗತಿ ಹೆಂದರೆ ಒಮ್ಮೆ ಸಿನೆಮಾ ರಂಗದಿಂದ ದೂರ ಹೋಗಿ ಪುನಃ ಅದಕ್ಕೆ ಬಂದು ಸೇರಿದವರು. ಇವರು ರೇಣುಕಾ ದೇವಿ, ದೇವಿಕಾರಾಣಿ, ನಾಸೀಮ್, ಸುರೇಂದ್ರ ಮತ್ತು ಚಾರ್ಲಿ

ಚಲಚ್ಚಿತ್ರ ವಿಮರ್ಶಕ ಕೂಟದ ಸಭೆ

ಕೆನರಾ ಚಲಚ್ಚಿತ್ರ ವಿಮರ್ಶಕ ಕೂಟದ ಸಾಪ್ತಾಹಿಕ ಸಭೆಯು ತಾ ೨೪ರಂದು ಶ್ರೀ ರಂಗ ತಲ್ಲೇರಿಕರರ ಅಧ್ಯಕ್ಷತೆಯಲ್ಲಿ ಜರಗಿ ಚಿತ್ರಗಳ ವಿಮರ್ಶೆ ನಡೆಯಿತು. "ಕುರ್ಬಾನಿ (ತ್ಯಾಗ) ಚಿತ್ರದಲ್ಲಿ ಉತ್ತಮ ನಟ_ನಟಿಯರಿದ್ದರೂ ನಿಷ್ಪ್ರಯೋಜಕ ಕಥೆಯ ಈ ಚಿತ್ರ ಮೂರನೇ ತರಗತಿಯದ್ದಾಗಿದೆ" ಎಂಬ ಅಭಿಪ್ರಾಯವನ್ನು ಕೊಟ್ಟಿತು. ಅಧ್ಯಕ್ಷರು ಮಾತನಾಡುತ್ತಾ ಹಿಂದೀ ಚಿತ್ರಗಳಲ್ಲಿ ಈಗ ಕಂಡು ಬರುತ್ತಿರುವ ಅಸಂಬದ್ಧಗಳನ್ನು ವಿವರಿಸಿದರು. "Little Nelly Kelly"ಯು ಒಳ್ಳೆಯ ಚಿತ್ರ ಎಂಬ ಅಭಿಪ್ರಾಯವಾಯಿತು ತಮಿಳು ಚಿತ್ರಗಳ ಕುರಿತು ಮಾತನಾಡುತ್ತಾ ಅಧ್ಯಕ್ಷರು "ಶಕುಂತಲಾವನ್ನು ನೋಡಿದ ಮೊದಲನೆಯ ತಮಿಳು ಚಿತ್ರವೇ ಕೊನೆಯದಾಗುವುದು. ಇನ್ನು ತಮಿಳು ಚಿತ್ರಗಳನ್ನು ನಾನು ನೋಡಲಾರೆ" ಎಂದರು.

ಮಂಗಳೂರು

ಮುನ್ಸಿಪಾಲಿಟಿ

ಮಂಗಳೂರು ಮುನ್ಸಿಪಲ್ ಕೌನ್ಸಿಲಿನ ಸಭೆಯೊಂದು ತಾ. ೨೫ರಂದು ಚೇರ್‌ಮೇನ್ ಜನಾಬ್ ಖುತ್ತಾರ್ ಹುಸೇನ್ ಸಾಹೇಬರ ಅಧ್ಯಕ್ಷತೆಯಲ್ಲಿ ಸೇರಿ, ಅಕ್ಕಿಯ ಕುರಿತು ಕಲೆಕ್ಟರರೊಡನೆ ಮಾತುಕತೆ ನಡೆಸಿ ಬಂದ ಶಿಷ್ಟಮಂಡಳದ ವರದಿ ಒಪ್ಪಿಸಲಾಯಿತು. ಶಿಷ್ಟಮಂಡಳದವರ ಕೇಳಿಕೆಗಳಿಗೆಲ್ಲಾ ಸಮರ್ಪಕ ಉತ್ತರ ದೊರೆತಿರುವುದೆಂದು ಅಧ್ಯಕ್ಷರು ಹೇಳಿದರು. ಆನಂತರ ಶ್ರೀಗಳಾದ ಲೋಬೋ ಮತ್ತು ಶ್ರೀಷರು ತಾವು ಸಭೆಯ ಮುಂದೆ ಮಂಡಿಸಿದ್ದ ನಿರ್ಣಯಗಳನ್ನು ಹಿಂತೆಗೆದರು.

ಶ್ರೀ ಲೋಬೋರವರು 'ಆ ಮೇಲೆ ಹೊಸ ನಿರ್ಣಯವೊಂದನ್ನು ಸಭೆಯ ಮುಂದಿಡುತ್ತಾ 'ಬೆಲೆ ನಿಯಂತ್ರಣವಿಲ್ಲದೆ ಅಕ್ಕಿಯ ಪರಿಸ್ಥಿತಿ ವಿಷಮವಾಗಿದೆ. ಬೆಲೆ ನಿಯಂತ್ರಿಸಲು ಪ್ರಾಂತಿಕ ಸರಕಾರವು ಕಲೆಕ್ಟರರಿಗೆ ಅಧಿಕಾರ ಒಪ್ಪಿಸಬೇಕು. ರೇಶನಿಂಗ್ ಪದ್ಧತಿ ನಗರದಲ್ಲಿ ಜಾರಿಗೆ ಬರಬೇಕು ಎಂದು ಸೂಚಿಸಿದರು. ಶ್ರೀ ಶ್ರೀಷರು ಈ ನಿರ್ಣಯವನ್ನು ಸಮರ್ಥಿಸಿದರು. ಶ್ರೀ ಹಮ್ಮಬ್ಬರು ಈ ಸೂಚನೆಯನ್ನು ಸ್ವಲ್ಪ ಸಣ್ಣದು ಮಾಡಬೇಕೆಂದು ಸೂಚಿಸಲು ಹಾಗೆ ಮಾಡಲಾಯಿತು ಶ್ರೀ ರಾಮಪ್ಪನವರು ತಮ್ಮದೇ ಒಂದು ಹೊಸ ನಿರ್ಣಯವನ್ನು ಸಭೆಯ ಮುಂದಿರಿಸಿದರು ಕೆಲ ಸಮಯ ತಡೆಯಿಲ್ಲದೆ ಚರ್ಚೆ ನಡೆದು ಕೆಲ ಸದಸ್ಯರು ಸಭೆಯಿಂದ ಎದ್ದು ಹೋದರು ಕೊನೆಗೆ ಶ್ರೀ ರಾಮಪ್ಪನವರು ತಮ್ಮ ನಿರ್ಣಯವನ್ನು ಹಿಂತೆಗೆದುಕೊಳ್ಳಲು ಶ್ರೀ ಲೋಬೋರವರ ನಿರ್ಣಯವು ಕೆಲವು ಶಬ್ದಗಳ ಬದಲಾವಣೆಯಾಗಿ ಸರ್ವಾನುಮತಿಯಿಂದ ಮಂಜೂರಾಯಿತು.

ಗೌಡ ಸಾರಸ್ವತ ಬ್ರಾಹ್ಮಣ ಸಂಘದವರು ಕೇಳಿದ ರೂ ೩೦೦ ಕೊಡಲು ಸಭೆ ನಿರಾಕರಿಸಿತು. ಅದನ್ನು ಮುಂದಿನ ವರ್ಷ ಆಲೋಚಿಸುವುದೆಂದಾಯಿತು ಟೌನ್ ಪ್ಲೇನಿಂಗ್ ಕಮಿಟಿ ವಶದಲ್ಲಿರುವ ರೂ ೪೦,೦೦೦ವನ್ನು ಶೇಕಡ ೩ರ ಡಿಫೆನ್ಸ್ ಬಾಂಡುಗಳಲ್ಲಿಡಲು ಒಪ್ಪಿಗೆಯಾಯಿತು ಪಟ್ಲೆಂಡ್‌ಪೇಟೆ ಶಾಲೆಯಲ್ಲಿ ಕಳವಾದ ಕಳಿವಾವಿನ ಸಸಿ ಪತ್ತೆ ಹಚ್ಚಲಿಕ್ಕಾಗಲಿಲ್ಲವೆಂಬ ಪೋಲೀಸ್ ಇನ್‌ಸ್ಪೆಕ್ಟರ ಪತ್ರವೋದಲಾಯಿತು.

ರಾವ್ ಸಾಹೇಬ್ ರಂಗನಾಥ ಪೂಂಜರು ಒಂದು ನಿರ್ಣಯ ತಂದರು 'ನವಂಬರ ತಾ ೧ರಿಂದ ನಗರದ ಕೆಲವು ಸ್ಥಳಗಳಲ್ಲಿ ಅನಾಥರಿಗಾಗಿ ಕೆಲವು ವಸತಿಗಳನ್ನು ಕಟ್ಟಿಸಿ, ನಗರ ಸಭೆಯು ಪ್ರತಿ ತಿಂಗಳು ಕೊಡುವ ರೂ. ೫೦೦ಕ್ಕೆ ಸಾರ್ವಜನಿಕ ಸಹಾಯವನ್ನು ಹಾಗೂ ಅಕ್ಕಿ ಕಟ್ಟಿಗೆ ರೂಪದಲ್ಲಿ ಪಡೆದು, ಅನಾಥ ಸಂರಕ್ಷಣೆ ಮಾಡಬೇಕು' ಎಂದು ಅವರ ಸೂಚನೆಯಾಗಿದೆ. ಈ ನಿರ್ಣಯದ ವಿಷಯ ಕೆಲ ಹೊತ್ತು ಚರ್ಚೆ ನಡೆದು ಕೊನೆಗೆ ಅದನ್ನು ಸ್ವೀಕರಿಸಲಾಯಿತು. ಈ ನಿರ್ಣಯವನ್ನು ಕಾರ್ಯರೂಪಕ್ಕೆ ತರುವರೆ ಶ್ರೀಗಳಾದ ಪೂಂಜ, ಮುಕುಂದ ನಾಯಕ್, ಲೋಬೋ, ಶ್ರೀಷ, ಫರ್ಟಾಡೋ, ಹಮ್ಮಬ್ಬ, ರಾಮಪ್ಪ ಮತ್ತು ಶಾಂತಾಬಾಯಿಯವರನ್ನೊಳಗೊಂಡ ಒಂದು ಸಮಿತಿ ರಚಿಸಲ್ಪಟ್ಟಿತು. ಹೊರಗಿನ ಮಹನೀಯರನ್ನೂ ಈ ಸಮಿತಿಗೆ ಸೇರಿಸಿಕೊಳ್ಳಲು ಅಧಿಕಾರ ಕೊಡಲಾಯಿತು.

ಕೊಲೆರಾ

ಮಂಗಳೂರು ನಗರದಲ್ಲಿ ಪುನಃ ಈಗ ಕೊಲೆರಾ ತಲೆಯೆತ್ತಿದೆ. ತಾ. ೨೬ರಂದು ೪ ಮಂದಿ ಕೊಲೆರಾ ತಗಲಿ ೩ ಮಂದಿಗೆ ಅವರಲ್ಲಿ ಮರಣ ಹೊಂದಿದರು. ಈ ವರೆಗೆ ಒಟ್ಟು ೬೪,೪೦೭ ಮಂದಿಗೆ ಕೊಲೆರಾ ಇನಾಕುಲೇಶನ್ ಆಗಿದೆ. ಇದುವರೆಗೆ ಒಟ್ಟು ೧೫೩ ಮಂದಿಗೆ ಕೊಲೆರಾ ರೋಗ, ತಗಲಿ ಅವರಲ್ಲಿ ೭೭ ಮಂದಿ ಮೃತಪಟ್ಟಿರುವರು.

ದೀಪಾವಳಿಯ ವಂದನೆಗಳು— ಮತ್ತು ಪ್ರಾಮುಖ್ಯ ಶ್ರೇಷ್ಠತೆಯ ಹಾಗೂ ಆಯ್ಕೆಯ ಕಾಣಿಕೆಗಳು

ಮಿನಿಯೇಚರ್ "ಟಿ"
(ಫ್ಯಾನ್ಸಿ ಆಕಾರದ್ದು, ಉರುಟು ಕನ್ನಡಿಯದು)
18 ಕ್ಯಾರಟ್ ಗಟ್ಟಿ ಚಿನ್ನದ್ದು—ರೂ. 141.



ಹೊಸ ಮಹತ್ವದ ದರ್ಜೆಯ "ಇ"
(ಫ್ಯಾನ್ಸಿ ಆಕಾರದ್ದು, ಫ್ಯಾನ್ಸಿ ಕನ್ನಡಿಯದು)
ನಿಕ್ಕೆಲ್ ಬೆಳ್ಳಿಯದು .. ರೂ 62
ಸದಾ ಶುಭ್ರ ಉಕ್ಕಿನದು .. ರೂ 71...
18 ಕ್ಯಾರಟ್ ಗಟ್ಟಿ ಚಿನ್ನದ್ದು.. ರೂ 197..

ಮಿನಿಯೇಚರ್ "ಕ್ಯೂ-2"
(ಫ್ಯಾನ್ಸಿ ಆಕಾರದ್ದು, ಫ್ಯಾನ್ಸಿ ಕನ್ನಡಿಯದು)
18 ಕ್ಯಾರಟ್ ಗಟ್ಟಿ ಚಿನ್ನದ್ದು ರೂ. 264

ಆಕ್ರಮದ ತಲ್ಪೋಣದಿಂದ ಈ ಎಲ್ಲ ನಮೂನೆಯನ್ನು ಒದಗಿಸಲಾಗದಿದ್ದರೂ, ಕೇಳಿಕೆಗಳನ್ನು ಶಕ್ಯವಿರುವಷ್ಟು ಪೂರೈಸುವ ಪ್ರಯತ್ನವಿದೆ.
ವೆಸ್ಟ್ ಎಂಡ್ ವಾಚ್ ಕೊ., ಬೊಂಬಾಯಿ ಮತ್ತು ಕಲ್ಕತ್ತ.

WEST END WATCH Co
BOMBAY — CALCUTTA.



ಸಂಕಷ್ಟಕಾರಕ ಮೂಲವ್ಯಾಧಿಯನ್ನು ನೀವು ನಿವಾರಿಸಲಾರಿರಾ?
ಜಾಂಬಕ್ ಇದಕ್ಕೆ ದಿವ್ಯೌಷಧ.

ಆ ಅತ್ಯಂತ ನೋವನ್ನುಂಟುಮಾಡುವ ಮೂಲವ್ಯಾದಿ ರೋಗವನ್ನು ನೀವು ಗುಣಪಡಿಸಬಹುದು, ಸುಡುವ ನೋವಿನಿಂದ, ನಿರಂತರ ಬಾಧೆಯಿಂದ ನೀವು ನಿಶ್ಶಕ್ತರಾಗನರಳಬೇಡಿ ಜಾಂಬಕ್ ಲೇಪವನ್ನು ಸದಾ ತಾಗಿಸಿರಿ.

ಈ ಅದ್ಭುತಗುಣಕಾರೀ ವನಸ್ಪತಿ ಔಷಧದಲ್ಲಿ ಮೂಲವ್ಯಾಧಿ ನಿವಾರಿಸುವ ದಿವ್ಯ ಸತ್ವವಿದೆ. ಹಾಗಾಗಿ ಇನ್ನು ಹೆಚ್ಚು ವಿಳಂಬಮಾಡಬೇಡಿ. ಪ್ರತಿದಿನ ಜಾಂಬಕ್ ಲೇಪ ತಾಗಿಸಿರಿ.

ಯಾವಾಗಲೂ ಜಾಂಬಕನ್ನೇ ಉಪಯೋಗಿಸಿರಿ.

ZAM-BUK

ಪ್ರಾಣಿ ಕೊಬ್ಬು ವಿರಹಿತವಾದುದು.

ಅ| ಕ| ಕಿರಿಯರ ಸಮ್ಮೇಲನ

ಇದನ್ನು ಉಡುಪಿಯಲ್ಲಿ ಜರಗಿಸುವುದಕ್ಕಾಗಿ ಸ್ವಾಗತ ಸಮಿತಿಯ ರಚನೆಯಾಗಿದೆ. ಶ್ರೀ. ಎ. ರಮೇಶರಾವ್ (ಸ್ವಾಗತಾಧ್ಯಕ್ಷ) ಶ್ರೀಯುತರು ಸುಂದರ ರಾಮ ಕಾಮತ್, ಎಸ್. ಎಲ್. ನಾರಾಯಣ ಭಟ್, ಬಿ. ಬಾಲಕೃಷ್ಣ ಹೆಗ್ಡೆ ಮತ್ತು ಕುಮಾರಿ ಮೀರಾಬಾಯಿ ಕಾಮತ್ (ಉಪಾಧ್ಯಕ್ಷರು) ಶ್ರೀ ಉ. ವ್ಯಾಸರಾಯ (ಕಾರ್ಯದರ್ಶಿ) ಶ್ರೀಯುತರು ಮೋಹನ ಚಂದ್ರ ಶೆಣೈ, ಕೆ. ಪಿ. ಸೇತುರಾಮಾಚಾರ್ಯ, ಯು. ರಾಮಚಂದ್ರ ರಾವ್, ಕುಮಾರಿ ಎ. ಶಾರದಾಬಾಯಿ, ವೆಂಕಟ್ರಮಣ ಭಟ್ ಕೆ, ಎಮ್ ಸಂಜೀವ ಕಾಮತ್, ಎನ್. ಹರಿದಾಸ ಒಲ್ಲಾಳ, ಯು. ಎನ್ ಶ್ರೀನಿವಾಸ ಭಟ್, ಪಿ. ಜಯರಾಮ ಉಡುಪ (ಕಾರ್ಯಕಾರಿ ಸಮಿತಿಯ ಇತರ ಸದಸ್ಯರು) ಮತ್ತು ಶ್ರೀ ಬಿ ರಾಮಕೃಷ್ಣಾಚಾರ್ (ಕೋಶಾಧಿಕಾರಿ.)

'ಸಮ್ಮೇಲನ ೧೯೪೪ ಜನವರಿ ತಾ. ೧೫, ೧೬, ೧೭ರಂದು ಜರಗುವುದು ಆ ಮೂರು ದಿನಗಳಲ್ಲಿ ಮೂವರು ಹಿರಿಯರಿಂದ ಭಾಷಣಗಳನ್ನು ಏರ್ಪಡಿಸಲಾಗುವುದು ಆ ಸಂದರ್ಭದಲ್ಲಿ, ಸಾಂಸ್ಕೃತಿಕ ಚಟುವಟಿಕೆಯ ಇನ್ನೊಂದು ಅಂಗವಾಗಿ, ಕಿರಿಯರ ನಾಟಕ, ಸಂಗೀತ, ನೃತ್ಯಗಳಿರುವವು ಕಿರಿಯರಿಗಾಗಿಯೇ ಕಥಾಸ್ಪರ್ಧೆ ಚಿತ್ರ-ಸಂಗೀತ ಭಾಷಣ ಸ್ಪರ್ಧೆಗಳು, ಕಸೂತಿ ಸ್ಪರ್ಧೆ, ಕೈಗಾರಿಕೆ ಸ್ಪರ್ಧೆ, ವೇಷ ಪಲ್ಲಟ ಮತ್ತಿತರ ಮೇಲಾಟಗಳಿರುವವು.

'ಸಮ್ಮೇಲನದ ಅಧ್ಯಕ್ಷ ಸ್ಥಾನವನ್ನು ಒಬ್ಬ ಕಿರಿಯರೇ ವಹಿಸುವರು

'ಸ್ವಾಗತಸಮಿತಿಯಲ್ಲಿ ಜಿಲ್ಲೆಯ ಕಿರಿಯರೂ ಹಿರಿಯರೂ ೮ ಆಣೆ, ೧ ರೂಪಾಯಿ ೫ ರೂಪಾಯಿ ಮತ್ತು ಅದಕ್ಕಿಂತ ಹೆಚ್ಚು ತೆತ್ತು, ಸದಸ್ಯರಾಗಬಹುದು ರೂ. ೧೫ ತೆತ್ತವರನ್ನು ಪೋಷಕರಾಗಿ ಸಮಿತಿಯು ಪರಿಗಣಿಸುವುದು ಕರ್ಣಾಟಕದಲ್ಲಿರುವ ಮಕ್ಕಳ ಇಲ್ಲವೆ ಕಿರಿಯರ ಕೂಟಗಳವರು ತಮ್ಮ ಪ್ರತಿನಿಧಿಗಳನ್ನು ಕಳುಹಿಸಿಕೊಡಬೇಕು ಜಿಲ್ಲೆಯ ಮತ್ತು ಬೇರೆ ಕಡೆಗಳಿಂದ ೨೦ ಕಿರಿಯರಲ್ಲಿ ಒಬ್ಬರಂತೆ ಪ್ರತಿನಿಧಿಗಳು ಆರಿಸಲ್ಪಡಬೇಕು ಪ್ರತಿನಿಧಿಗಳು ೪ ಆಣೆಯ ಪ್ರಾತಿನಿಧಿಕ ಫೀ ತೆರಬೇಕಾಗುವುದು ಹೊರಗಿನಿಂದ ಬಂದವರಿಗೆ ಸಮ್ಮೇಲನದ ಸಮಯದಲ್ಲಿ ಊಟ ಹಾಕುವ ಮತ್ತು ಉಳಕೊಳ್ಳುವ ಏರ್ಪಾಡನ್ನು ಸಮ್ಮೇಲನದವರು ಮಾಡುವರು

'ಸಮ್ಮೇಲನಕ್ಕೆಂದು ಉಡುಪಿಗೆ ಬಂದವರನ್ನು ಸ್ವಾಗತಿಸುವುದಕ್ಕಾಗಿ ಊರಿನ ಹಿರಿಯರನ್ನೊಳಗೊಂಡ 'ನಗರ ಸ್ವಾಗತ ಸಮಿತಿ'ಯೊಂದು ಸ್ಥಾಪಿಸಲ್ಪಟ್ಟಿದೆ

'ಸಮ್ಮೇಲನವು ಜರಗುವ ಸ್ಥಳ, ನಿಶ್ಚಿತ ಸಮಯ ಮತ್ತಿತರ ಕಾರ್ಯಕ್ರಮಗಳು ಕ್ರಮಶಃ ಹೊರಬೀಳುವುವು.

ಮಗುವನ್ನು ನಾಯಿ ತಿಂದಿತು!

ಕಲ್ಕತ್ತೆಯ ಕಾರ್ನವಾಲೀಸ್ ಬೀದಿಯಲ್ಲಿ ನಾಯಿ ಅರ್ಧ ತಿಂದುಬಿಟ್ಟ ಮಗುವಿನ ದೇಹವೊಂದು ಕಾಣಸಿಕ್ಕಿದೆ.

'ಕಾಂಗ್ರೆಸಿನೊಡನೆ ಸಂಧಾನ ಮಾಡಿ'

ಆಂಧ್ರ ಮಹಾಸಭೆಯ ವಿನಂತಿ.

ಬಳ್ಳಾರಿಯಲ್ಲಿ ಸೇರಿದ ಆಂಧ್ರ ಮಹಾಸಭೆಯಲ್ಲಿ, ಸರಕಾರವು ಬೇಗನೇ ಕಾಂಗ್ರೆಸ್ ಮುಖಂಡರೊಡನೆ ಸಂಧಾನಮಾಡಿಕೊಳ್ಳಬೇಕೆಂಬ ವಿನಂತಿ ಮಂಜೂರಾಗಿದೆ. ರಾಜಕೀಯ ಕೈದಿಗಳ ಬಿಡುಗಡೆ, ಕಾಂಗ್ರೆಸ್ ಮುಖಂಡರೊಡನೆ ಸಂಧಾನ, ಕ್ರಿಪ್ಸ್ ಸೂಚನೆಯ ಪುನರಾಲೋಚನೆ, ಜಾತೀಯತೆ ವಿರೋಧ ಬ್ರಿಟಿಷ್ ಪ್ರಭುತ್ವ ಪ್ರಕಟಣೆ ಕೊಡುವುದು, ಅಟ್ಲಾಂಟಿಕ್ ಘೋಷಣೆ ಸ್ಪಷ್ಟೀಕರಣ, ರಾಷ್ಟ್ರೀಯ ಸರಕಾರ ರಚನೆ, ಬರ್ಮಾ ಸ್ವಾತಂತ್ರ್ಯ ಘೋಷ ಇವುಗಳು ಆ ಠರಾವಿನಂಶಗಳು.

ಸರ್ ಹರ್ಬರ್ಟ್ ರಾಜಿನಾಮೆ

ಬಂಗಾಳದ ಗವರ್ನರ್ ಸರ್ ಜಾನ್ ಹರ್ಬರ್ಟರು ಆರೋಗ್ಯ ಸರಿಯಿಲ್ಲವೆಂದು ತಮ್ಮ ಕೆಲಸಕ್ಕೆ ರಾಜಿನಾಮೆ ಕೊಟ್ಟಿದ್ದಾರೆ. ಸರ್ ಹರ್ಬರ್ಟರು ಬಂಗಾಳದಲ್ಲಿ ಬಹಳ ಕಾರುಭಾರು ಮಾಡಿದರು; ಹಕ್ಕರನ್ನು ರಾಜಿನಾಮೆ ಕೊಡಿಸಿದರು. ಮುಸ್ಲಿಂ ಲೀಗ್ ಮಂತ್ರಿಮಂಡಳವನ್ನು ತಂದರು ಬಂಗಾಳದಲ್ಲಿ ಬರಗಾಲವೂ ಅವರ ಆಡಳಿತದಲ್ಲಿ ಉಂಟಾಯಿತು.

ಪುಸ್ತಕಾವಲೋಕನ

'ಎರಡು ಪುಟ್ಟ ನಾಟಕಗಳು'

ಶ್ರೀಮತಿ ಆರ್ ಕಲ್ಯಾಣಮ್ಮ, ಹಾಗೂ ಶ್ರೀ ಬಿ ರಂಗನಾದರು ಈ ನಾಟಕಗಳ ಲೇಖಕರು ಮಕ್ಕಳ ಕುರಿತು ಬರೆದಿರುವ ಈ ನಾಟಕದಲ್ಲಿ 'ಪ್ರೌಢ' ಶೈಲಿಯ ಗಲಭೆಯಿಲ್ಲ ಎಳೆಯರು ಓದಿ ಆನಂದಿಸಿದ ಮೇಲೆ ನಲಿಯುವುದಕ್ಕೆ ಮರೆಯಲಾರರು ಆ ತರದ ನವೀನತೆಯಿದೆ ಶ್ರೀ ಬಿ ರಂಗನಾಥರಾಯರ 'ಗಣೇಶ' ಇನ್ನೂ ಇರುತ್ತಿದ್ದರೆ ಓದಬಹುದಾಗಿತ್ತು, ಅನ್ನಿಸುತ್ತದೆ. ಇನ್ನೂ ಒಂದೆರಡು ಅಂಕವನ್ನು ಸೇರಿಸಿದ್ದರೆ ಮತ್ತಷ್ಟು ಸೊಗಸನ್ನು ಕಾಣಬಹುದಾಗಿತ್ತು

ಶ್ರೀಮತಿ ಆರ್. ಕಲ್ಯಾಣಮ್ಮನವರ 'ದರಿದ್ರ ನಾರಾಯಣ' ಉತ್ತಮ ಮಾದರಿಯದು ನಾಟಕದಲ್ಲಿಯ ಭಾವನೆ ಮಕ್ಕಳ ಸ್ಥಿತಿಗೆ ತಕ್ಕುದಾಗಿದೆ ಅದನ್ನೇ ದೊಡ್ಡ ಮನಸ್ಸಿನಲ್ಲಿ ಕಲ್ಯಾಣಮ್ಮನವರು ಕಾಣುತ್ತಿದ್ದರೆ ಹಿರಿಯರಿಗೂ ಉತ್ತಮ ಬರಹವಾಗಿ ಕಾಣಲು ನಿರ್ದಿಷ್ಟವಾದ ಗುರಿಯಿದೆ ಆ ಗುರಿಯನ್ನು ಎಳೆಮನಸ್ಸಿಗೆ ಒಲಿಸುವ ಕಲ್ಯಾಣಮ್ಮನವರ ಸಾಹಸ ಹಿರಿದು ಮಕ್ಕಳ ಕುರಿತು ಬಹುವಾಗಿ ಶ್ರಮವಹಿಸಿದ ಮಹಿಳೆಯರಲ್ಲಿ ಹೆಚ್ಚಿನ ಗೌರವ ಶ್ರೀಮತಿಯವರಿಗೆ ಸಲ್ಲಬೇಕಾಗಿದೆ.

—ಎಸ್ ಎಲ್. ನಾ ಭಟ್ಟ

THE CANARA BANKING CORPORATION Ltd

(Incorporated in British India with limited liability)

Estd:] Head office· UDIPI [1906.

(Branches & Agencies in all principal cities of India)

Authorised capital	Rs	25,00,000
~~Issued & Subscribed~~	~~Rs.~~	~~16,00,000~~
Paid up Capital	Rs	10,06,000
Reserves	Rs	3,85 000

Advances are made against approved securities and bills purchased or collected at most favourable rates For further particulars please apply tothe nearest Branch

FIRST AND FOREMOST

FIRST AND FOREMOST among the ideals of the CANARA BANK is the ideal of Service to its Customers

ESTD· 1906.

CANARA BANK LTD.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಗೆಯೇ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. **ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.**

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ,

JOINT MANAGERS,

The Combined Booking Agency, MANGALORE

The Joint Booking Office, KODIALBAIL.

The Bank of Mangalore Limited, Mangalore.

ESTD: 1931

HEAD OFFICE Mangalore. *BRANCHES* Moodabidri & Padubidri.

The Bank Undertakes to Collect Cheques, Demand and Documentary Bills at Most Competitive Rates.

ISSUES DRAFTS ON ALL IMPORTANT TOWNS IN THE DISTRICT
and also on
BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.
at very favourable rates

All kinds of inland banking business undertaken

ಹುಳುಕಡ್ಡಿ ಮದ್ದು



ಕಜ್ಜಿ, ತುರಿಕೆ; ತುರಿಕಜ್ಜಿ, ಹುಳುಕಡ್ಡಿ, ಸಿಕ್ಕ ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,
ಬೊಂಬ್ಬಾ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಜೀವವಿಮೆ ಮಾಡುವ ಪ್ರಯೋಜನವು ಇಂದು ಹಿಂದಿಗಿಂತ ಅಧಿಕವಾಗಿದೆ.

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಇದರಲ್ಲಿ ಒಂದು ಪಾಲಿಸಿ ಪಡೆದು

ಈಗಲೇ ನೀವು ನಿಮ್ಮನ್ನು ಮತ್ತು ನಿಮ್ಮನ್ನು ಹೊಂದಿಕೊಂಡಿರುವವರನ್ನು ರಕ್ಷಿಸಿಕೊಳ್ಳಿರಿ!

ಪ್ರತಿನಿಧಿಗಳಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಇನ್ಶೂರ್ ಮಾಡಲು ಅಥವಾ ಮಾಹಿತಿ ತಿಳಕೊಳ್ಳಲು ದಯಮಾಡಿ ಬರೆಯಿರಿ

ಕೊಟ್ಟಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

—: ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ: —

ಬೆಂಗಳೂರು ಬೊಂಬಾಯಿ ಮದ್ರಾಸು ಕಲ್ಲಿಕೋಟೆ ಮಂಗಳೂರು ಮತ್ತು ತ್ರಿವೇಂಡ್ರಂ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors Proved to be the best remedy where even allopathic medicines failed A specific for threatened or habitualabortion andother uterine troubles Must be commense soon after conception andcontinued up to the time of delivery

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವ ವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು—
(1) ಡಾಕ್ಟರ್ ವಿ. ಓ. ಕಾಮತ್, ರಥಬೀದಿ. (2) ರಾಘುವೇಂದ್ರ ಷೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B B. S. ಸಿ. ಪಿ ಸಿ ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

ಡಿಪೋ:—1. ಮಾರಾರ ಗಲ್ಲಿ ಹುಬ್ಬಳ್ಳಿ.
2. 86 ಫ್ರಾಕ್ರೋಫ್ಟ್ಸರೋಡ್, ಟ್ರಿಪ್ಲಿಕೇನ್, ಮದರಾಸು.

ಡೊಂಗರೆ ಬಾಲಾಮೃತವು

ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ಮೃತ್ಯುಂಜಯ ರಸ. ಪಂಚವಟಿ ಮಾತ್ರೆ. ಕೊಲೆರಾ ರೋಗಕ್ಕೆ ಸಿದ್ಧೌಷಧ.
ಸೇವನಾ ಕ್ರಮಗಳು ಔಷಧಿಯೊಡನೆ ಇದೆ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಕು 5—11—1943 [ಸಂಚಿಕೆ 43]

ರ್ಡ್ ವೇವಲರು

ಕೂಲಿಗಾರರ, ಕೃಷಿಕರ ಉದ್ಧಾರ ಮಾಡುವರು?

ಕೂಲಿಗಾರರನ್ನೂ ಕೃಷಿಕರನ್ನೂ ವೇವಲರು ಉದ್ಧಾರ ಮಾಡುವರು?

ವೈಸರಾಯ್ ವೇವಲರು ಬಂದವರೇ ಕಲ್ಕತ್ತವನ್ನು ಸಂದರ್ಶಿಸಿದರು. ಸಾಮ್ರಾಜ್ಯದ ಮಹಾನಗರದಲ್ಲಿ ಅನ್ನವಿಲ್ಲದೆ ಜನ ನರಳಿ ಸಾಯುತ್ತಿರುವುದನ್ನು ಅವರು ಕಣ್ಣಾರೆ ಕಂಡಿರಬೇಕು. ಆದರೆ ಬಂದ ಮೇಲೆ ಇದ್ದುವರೆಗೂ ಯಾವುದೇ ಪ್ರಕಟಣೆ ಹೊರಡಿಸಿಲ್ಲ. ಮುಂದಿನ ವೈಸರಾಯರು ಏನು ಮಾಡುವರು ಎಂಬ ಕುರಿತು, ಅವರ ಬಾಯಿಯಿಂದ ಏನೂ ಹೊರಡಲಿಲ್ಲ.

ಆದರೂ ಸುದ್ದಿಗಳೊಂದೊಂದೇ ಹೊರ ಬೀಳುತ್ತಿವೆ. ವೇವಲರು ಕೂಲಿಗಾರರನ್ನೂ ಕೃಷಿಕರನ್ನೂ 'ಉದ್ಧಾರ' ಮಾಡುವ ಯೋಚನೆಯಲ್ಲಿದ್ದಾರಂತೆ! ರಾಜನಿಷ್ಠರನ್ನೆಲ್ಲಾ ಒಂದೆಡೆ ಸೇರಿಸಿ ಅವರ ಬೆಂಬಲ ಪಡೆದು ಆಡಳಿತ ನಡೆಸುವರೆಂದೂ; ಕಾಂಗ್ರೆಸ್ ಲೀಗ್‌ಗಳ ಗೋಜಿಗೆ ಹೋಗದೆ, ರಾಜನಿಷ್ಠರ ಬೆಂಬಲದಿಂದ ಆಡಳಿತ ನಡೆಸುತ್ತಿರುವಾಗ ಬಡವರ 'ಉದ್ಧಾರ' ಮಾತ್ರ ಮಾಡುವರೆಂದೂ, ಕೂಲಿಗಾರರಿಗೆ ಹೆಚ್ಚು ಹೆಚ್ಚು ಸಂಬಳ ಸಿಗುವಂತೆ, ಸಂಬಳದ ರಜೆಕೊಟ್ಟು ಸೌಕರ್ಯ ವೊದಗುವರೆಂತೆ, ಕೃಷಿಕರ ಸಾಮಾನುಗಳಿಗೆ ಹೆಚ್ಚು ಬೆಳೆ ಬರುವಂತೆ ಆಲೋಚನೆಯಲ್ಲಿರುವರೆಂದೂ ಹೇಳಲಾಗಿದೆ. 'ವಿಭಜಿಸಿ ಆಳುವ ನೀತಿ'ಯ ಹೊಸತೊಂದು ಸ್ವರೂಪವನ್ನು ಇಲ್ಲಿ ಕಾಣಬರುವುದಿಲ್ಲವೆ?

ಪ್ರಣಯ ಭಗ್ನೆ ಬೆಸೆಂಟಮ್ಮ ಥಿಯೋಸಫಿಸ್ಟ್ ಆದದ್ದೇಕೆ?

ಭಾರತದ ಸ್ವಾತಂತ್ರ್ಯಕ್ಕಾಗಿ ದುಡಿದ ಡಾ|| ಅನಿಬೆಸೆಂಟರ ಹಿಂದಿನ ಜೀವನದ ಕುರಿತು ಒಂದು ಸುದ್ದಿಯಿದೆ. ಪ್ರಣಯ ಭಗ್ನೆಯಾಗಿ ಆಕೆ 'ಥಿಯಾಸಫಿಸ್ಟ್' ಆಗಿ ವೇದಾಂತ ಹಿಡಿದರಂತೆ. ಜೀವನ ವೈರಾಗ್ಯ ತಾನೇ ವೇದಾಂತದ ಮೂಲ? ಇದರ ವಿವರ ಹೀಗಿದೆ: ಮೊದಲನೆಯ ಸಲ ಪ್ರಸಿದ್ಧ ನಾಟಕಕಾರ ಬರ್ನಾರ್ಡ್ ಶಾರನ್ನು ಕಂಡು ಆಕೆ ಜುಗುಪ್ಸೆಗೊಂಡಿದ್ದರು; ಆದರೆ ಮುಂದೆ ಪ್ರೇಮ ಬೆಳೆಯಿತು ಶಾ ಬೆಸೆಂಟರಲ್ಲಿ ಸಲಿಗೆ ಹುಟ್ಟಿತು. ಶಾರವರು ಒಂದು ದಿನ ಮದುವೆಯ ಪ್ರಸ್ತಾಪ ಮಾಡಿದರು. ಆದರೆ ಆಗಲೇ ಬೆಸೆಂಟಮ್ಮ ವಿವಾಹವಾಗಿದ್ದರು. ಗಂಡನೂ ಬದುಕಿದ್ದ. ಸಂಕಟ ಗ್ರಸ್ತರಾದ ಬೆಸೆಂಟ್ ಮುಂದೆ ಜೀವನ ನಿರಾಶರಾಗಿ ಥಿಯಾಸಫಿಸ್ಟ್ ಆದರು. ಮುಂದೆಯೂ, ಅವರಿವರಿಗೆ ಸ್ನೇಹ ತುಂಬಾ ಇತ್ತು. 'ನಾನೇಕೆ ಥಿಯಾಸಫಿಸ್ಟ್ ಆದೆ' ಎಂಬೊಂದು ಲೇಖನದಲ್ಲಿ ಬೆಸೆಂಟಮ್ಮನೇ ತನ್ನೀ ಹೃದ್ಗತವನ್ನು ಹೇಳಿಕೊಂಡಿದ್ದಾರೆ.

ರೂಸ್‌ವೆಲ್ಟ್ ಸ್ಟಾಲಿನ್ ಭೇಟಿ?

ಆಸ್ಟ್ರೇಲಿಯದಲ್ಲಿ 'ಇಂಡಿಯಾ ಲೀಗ್'

ಬಂಗಾಳದಲ್ಲಿ ವಾರ ಒಂದಕ್ಕೆ ೫೦ ಸಾವಿರ ಜನರ ಮರಣ!

ಬಂಗಾಳವನ್ನು ಸುತ್ತಿ ಬಂದ ಪಂಡಿತ ಕುಂಜ್ರಗಳು ತಮ್ಮೊಂದು ಹೇಳಿಕೆಯಲ್ಲಿ ಬಂಗಾಳದಲ್ಲಿ ಪ್ರತಿ ವಾರಕ್ಕೆ ೫೦ ಸಾವಿರ ಜನರು ಅನ್ನವಿಲ್ಲದೆ ಸಾಯುತ್ತಿರುವರೆಂದೂ, ಅಲ್ಲಿ ರೈತರು ಧಾನ್ಯ-ಸಂಗ್ರಹ ಮಾಡಿಲ್ಲವೆಂದೂ, ಹಾಗೆ ಮಾಡಿರುವರೆಂಬುದಾಗಿ ಅಲ್ಲಿನ ಭಾರತೀಯ ಅಧಿಕಾರಿಗಳಾಗಲಿ ಯೂರೋಪಿಯನ್ ಅಧಿಕಾರಿಗಳಾಗಲಿ ತಮ್ಮೊಡನೆ ಹೇಳಲಿಲ್ಲವೆಂದೂ ಲಿನ್‌ಲಿತ್ ಗೋರವರು ಹೊರಟುಹೋಗುವ ಮುನ್ನ ಕಲ್ಕತ್ತವನ್ನೊಮ್ಮೆ ಸಂದರ್ಶಿಸಿ ಹೋಗಬೇಕಾಗಿತ್ತೆಂದೂ ಹೇಳಿದರು.

ಬ್ರಿಟಿಷ್ ಪ್ರಭುತ್ವಕ್ಕೆ ಇದು ಕಳಂಕ ಜಿನ್ನರೂ ಹೇಳುತ್ತಾರೆ

'ಬಂಗಾಳದ ಉಪವಾಸ ಮರಣಗಳ ವಿಷಯ ನೋಡಿದರೆ ಇದು ಬ್ರಿಟಿಷ್ ಪ್ರಭುತ್ವಕ್ಕೆ ಒಂದು ಕಳಂಕವಾಗಿದೆ. ಇದರ ಹೊಣೆಯನ್ನು ಬ್ರಿಟಿಷರು ಪ್ರಾಂತಿಕ ಸರಕಾರದ ಮೇಲೆ ಹೊರಿಸುವುದು ಅನ್ಯಾಯ. ವೈಸರಾಯ್ ವೇವಲರು ಸಾಧ್ಯವಾದೆಲ್ಲಾ ಕೆಲಸ ಮಾಡಿ ಈ ಪರಿಸ್ಥಿತಿ ಸುಧಾರಿಸಬೇಕು. ಚರ್ಚಿಲರೂ ಬಂಗಾಳದ ಹಾಗೂ ಭಾರತದಲ್ಲೆಲ್ಲಿಯೂ ಮುಂದೆ ಇಂತಹ ಪರಿಸ್ಥಿತಿಯುಂಟಾಗಲಾರದೆಂಬ ಭರವಸೆ ಕೊಡಬೇಕು.' ಎಂದು ಜಿನ್ನರು ಒಂದು ಹೇಳಿಕೆ ಹೊರಡಿಸಿದ್ದಾರೆ.

ವೇವಲ್ ಬಂದ ವಿಮಾನ ಅರಮನೆಯೇ ಆಗಿತ್ತು!

ವೈಸರಾಗಿ ಬಂದ ವೇವಲರ ವಿಮಾನ ಪ್ರತ್ಯೇಕವಾಗಿ ತಯಾರಾಗಿದ್ದು ಅರಮನೆಯಂತೆಯೇ ಇತ್ತು. ಇದರೊಳಗೆ ಮಂಚ, ನುಸಿ ಪರದೆ, ವಿದ್ಯುತ್ ಬೀಸಣಿಗೆ, ಸಂದರ್ಶಕರನ್ನು ನೋಡುವ ಒಂದು 'ಆಸ್ಥಾನ ಕೋಣೆ' ಎಲ್ಲಾ ಇತ್ತು. ಭಾರತಕ್ಕೆ ಇದುವರೆಗೆ ಎಲ್ಲಾ ವೈಸರಾಯರೂ ಹಡಗದಲ್ಲಿ ಬಂದಿಳಿಯುತ್ತಿದ್ದರು; ಬೊಂಬಾಯಿಯಲ್ಲಿ. ವೇವಲರು ಭಾರತಕ್ಕೆ ವಿಮಾನವೇರಿ ಬಂದ ಮೊದಲನೆಯ ವೈಸರಾಯ್. ಇವರಿಳಿದುದು ಕರಾಚಿಯಲ್ಲಿ. ಭಾರತವು ಸ್ವತಂತ್ರವಾದರೆ ವಿಮಾನವೇರಿ ಬಂದ ವೈಸರಾಯರಲ್ಲಿ ಇವರೇ ಕೊನೆಯವರೂ ಆದರೂ ಆಗಬಹುದು.

ಗಂಡಂದಿರ ವಿರುದ್ಧ ಹೆಂಡಂದಿರ ಉಪವಾಸ

ಕೇಂದ್ರ ಶಾಸನ ಸಭೆಯಲ್ಲಿ ಬರಲಿರುವ ಸ್ತ್ರೀಯರ ಹಕ್ಕು ಬಾಧ್ಯತೆಗಳ ಕುರಿತಾದ ಶಾಸನದ ವಿರುದ್ಧ ಪೈಜಾಬಾದಿನ ಸನಾತನಿಗಳು ಕೆಲವರು ಕೇಂದ್ರ ಶಾಸನ ಸಭೆಯ ಮುಂದೆ ಉಪವಾಸ ಮುಷ್ಕರ ಮಾಡಲು ನಿಶ್ಚಯಿಸಿದ್ದಾರೆ. ತಮ್ಮ ಗಂಡಂದಿರ ಈ ಮೂರ್ಖತನದ ವಿರುದ್ಧ ಅವರಲ್ಲಿ ಮೂವರು ಹೆಂಡಂದಿರು ಈ ನಿರ್ಣಯ ಬದಲಿಸುವ ವರೆಗೂ ಉಪವಾಸ ಮಾಡುವುದಾಗಿ ಈಗಲೇ ಉಪವಾಸ ತೊಡಗಿಬಿಟ್ಟಿದ್ದಾರೆ.

ಬಂಗಾಳಕ್ಕೆ ಸಹಾಯಮಾಡಲು ಖಾಕ್ಸಾರರಿಗೆ ತಡೆ

ಬಂಗಾಳದ ಖಾಕ್ಸಾರ ಮುಖಂಡ ಶ್ರೀ ಅಬ್ದುಲ್ ರಶೀದ್ ಖುರೇಶಿ ಸಾಲಾರ್ ಇ ಆಲಾ ಇವರು ಬಂಗಾಳದ ೫ ಲಕ್ಷ ನಿರಾಶ್ರಿತರಿಗೆ ಸಹಾಯಮಾಡಲು ಸ್ವಯಂಸೇವಕರನ್ನು ಕಳುಹಿಸಿದಾಗ ನಾಜಿಮುದ್ದೀನ್ ಮಂತ್ರಿಮಂಡಳವು ತಡೆ ಮಾಡಿತೆಂದು ತಮ್ಮ ಮುಂದಾಳು ಅಲ್ಲಾಮಾ ಮಷ್ರಿಕಿಯವರಿಗೆ ತಿಳಿಸಿದ್ದಾರೆ.

ಆಸ್ಟ್ರೇಲಿಯದಲ್ಲಿ 'ಇಂಡಿಯಾ ಲೀಗ್'

ಆಸ್ಟ್ರೇಲಿಯದಲ್ಲಿ ಒಂದು ಇಂಡಿಯಾ ಲೀಗ್ ಸ್ಥಾಪಿಸಲಾಗಿದೆ. ಉಭಯ ರಾಷ್ಟ್ರಗಳೊಳಗೆ ಸೌಹಾರ್ದವುಂಟುಮಾಡುವುದು, ಸಂಸ್ಕೃತಿ ಹಾಗೂ ವ್ಯಾಪಾರೀ ಹಿತಸಂಬಂಧ ಬೆಳೆಸುವುದು ಇವೇ ಉದ್ದೇಶಗಳು. ಈ ಕುರಿತು ಸರ್ ಸ್ಟಿವನ್ಸ್, ಡಾಕ್ಟರ್ ಸಕ್ಸೇನಾ ಮೊದಲಾದವರು ಮಾತನಾಡಿದರು. ಪ್ರೊಫೆಸರ್ ಅಷ್ಟಾಲ್ಕಿನ್ ಇದರ ಅಧ್ಯಕ್ಷರು. ಲಂಡನ್ ಅಮೆರಿಕಗಳಲ್ಲಿರುವ ಇಂಡಿಯಾ ಲೀಗು ಇತ್ತೀಚೆಗೆ ಭಾರತದ ಸ್ವಾತಂತ್ರ್ಯ ಸಂಗ್ರಾಮದ ವಿಷಯ ಬಹಳ ಕೆಲಸಮಾಡುತ್ತಿದೆ.

ರೂಸ್‌ವೆಲ್ಟ್ ಸ್ಟಾಲಿನ್ ಭೇಟಿ?

ಈ ವರ್ಷದ ಅಂತ್ಯದೊಳಗೆ ಬಹುಶಃ ಅಮೆರಿಕದ ಅಧ್ಯಕ್ಷ ರೂಸ್‌ವೆಲ್ಟರೂ ರಶ್ಯದ ಅಧಿಕಾರಿ ಸ್ಟಾಲಿನರೂ ಭೇಟಿಯಾಗುವುದು ಸಂಭವವಿದೆಯೆಂದು ವಾಶಿಂಗ್‌ಟನ್ ವಾರ್ತೆ.

ತಲಪಡೆ ಖಟ್ಲೆ ಅಪೀಲು ಸರಕಾರಕ್ಕೆ ಅಪ್ಪಣೆ ಸಿಗಲಿಲ್ಲ.

ತಳಪಡೆ ಖಟ್ಲೆಯಲ್ಲಿ ಫೆಡರಲ್ ಕೋರ್ಟಿನ ತೀರ್ಮಾನದ ವಿರುದ್ಧ ಪ್ರಿವಿ ಕೌನ್ಸಿಲಿನಲ್ಲಿ ಅಪೀಲು ಮಾಡಲು ಅನುಮತಿ ಸಿಗಬೇಕೆಂದು ಮುಂಬೈ ಸರಕಾರದವರು ಬೇಡಿಕೊಂಡದ್ದಕ್ಕೆ ಫೆಡರಲ್ ಕೋರ್ಟಿನಲ್ಲಿ ಅಪ್ಪಣೆ ಸಿಗಲಿಲ್ಲ.

ಜಿಲ್ಲೆಯ ಆಹಾರ ಉತ್ಪತ್ತಿ

ಜಿಲ್ಲೆಯ ಜನರಿಗೆ ಸಾಕೆ?

ಲೆಕ್ಕಾಚಾರವನ್ನೊಮ್ಮೆ ಗಮನಿಸುವುದು

— ಕಯ್ಯಾರ ಕಿಞ್ಞಣ್ಣ ರೈ.

ನಮ್ಮ ಜಿಲ್ಲೆಯ ಪ್ರಥಮ ಬೆಳೆ, ಏಣೆಲು ಬೆಳೆಯಲ್ಲಿ ಹೆಚ್ಚಿನ ಭತ್ತ ಬೆಳೆವುದು; ೩ ಅಂಶ ಹುಟ್ಟುತ್ತದೆ. ಆ ಬೆಳೆ ಈ ವರ್ಷ ಹಾಳಾಗಿದೆ. ಸಾಮಾನ್ಯ ಪರಿಸ್ಥಿತಿಯಲ್ಲಿ ಮಾತ್ರ ನಮ್ಮ ಜಿಲ್ಲೆಗೆ ಸಾಕಷ್ಟು ಆಹಾರ ಬೆಳೆಯುವುದು. ಆದರೆ ಈ ವರ್ಷ ಮಾತ್ರ ಸಾಲದು' ಹೀಗೆ ಅಭಿಪ್ರಾಯಗಳು ಬಂದಿವೆ. ಆದರೆ ಸಾಮಾನ್ಯ ಪರಿಸ್ಥಿತಿಯಲ್ಲಿಯೂ ನಮ್ಮ ಜಿಲ್ಲೆ ನಮಗೆ ಸಾಕಷ್ಟು ಆಹಾರ ಉತ್ಪತ್ತಿ ಮಾಡುತ್ತದೆಯೇ ಹೇಗೆ? ನಮ್ಮ ಜಿಲ್ಲೆಯಿಂದ ಹೊರಗೆ ಹೋಗುವುದನ್ನು ಮಾತ್ರ ನಿಲ್ಲಿಸಿದರೆ ನಾವು ಬದುಕಬಹುದೇನು? ಹೊರಗಿನಿಂದ ಅಕ್ಕಿ ಬಾರದಿದ್ದರೂ ನಾವು ಸಂಕಷ್ಟಕ್ಕೆ ಗುರಿಯಾಗಲಿಕ್ಕಿಲ್ಲವೆಂಬ ಭರವಸೆಯುಂಟೇ ನಮಗೆ?

ಬೇಸಾಯಕ್ಕೆ ದಕ್ಷಿಣ ಕನ್ನಡ ಜಿಲ್ಲೆಯ ಹವೆ ಬಹಳ ಅನುಕೂಲವಾಗಿದೆ. ಸರಾಸರಿ ೧೨೦ರಿಂದ ೧೪೦ ಇಂಚು ಮಳೆ ಇಲ್ಲಿ ಬೀಳುವುದು. ಇಲ್ಲಿ ಒಟ್ಟು ೫,೮೫,೪೬೫ ಎಕ್ರೆ ಜಾಗೆಯಲ್ಲಿ ಕೃಷಿ ಆಗುವುದು. ಅದರಲ್ಲಿ ೧,೯೯,೦೮೫ ಎಕ್ರೆಗಳಲ್ಲಿ ಒಂದು ಬೆಳೆಗಿಂತ ಹೆಚ್ಚು ಬೆಳೆಯುವುದು ಹಾಗೂ ಒಟ್ಟಾರೆಯಿಂದ ಕೃಷಿಯು ೭,೮೪,೫೫೦ ಎಕ್ರೆ ಸ್ಥಳದಲ್ಲಿ ಆಗುತ್ತದೆ.

ಜಿಲ್ಲೆಯ ಮುಖ್ಯ ಉತ್ಪತ್ತಿ ಭತ್ತ. ಅದು ೪,೯೨,೪೩೨ ಎಕ್ರೆಗಳಲ್ಲಿ ಬೆಳೆಯುತ್ತದೆ. ಎಂದರೆ ಶೇಕಡಾ ೭೮% ಕೃಷಿಯ ಸ್ಥಳದಲ್ಲಿ ಭತ್ತವಾಗುವುದೆಂದಾಯಿತು. ೧೯೩೨–೩೩ರಲ್ಲಿ ೩,೮೭,೦೦೦ ಟನ್ ಭತ್ತ ಬೆಳೆಯಿತು. ಅದರಲ್ಲಿ ೨೨,೦೦೦ ಟನ್ ಬೀಜಕ್ಕಾಗಿ ಬೇರೆ ಇರಿಸಲಾಗಿದೆ. ಉಳಿದ ೩,೬೫,೦೦೦ ಟನ್ ಭತ್ತದಿಂದ ೨,೪೩,೦೦೦ ಟನ್ ಅಕ್ಕಿ ಆಗಿದೆ.

ದಕ್ಷಿಣ ಕನ್ನಡದ ಜನಸಂಖ್ಯೆ ೧೯೩೧ರ ಖಾನೆಶುಮಾರಿಯಂತೆ ೧೩,೭೨,೨೪೧. ಇವರಲ್ಲಿ ೧೦,೨೯,೦೦೦ ಮಂದಿ ಪ್ರಾಯಸ್ಥರು. ಇವರಲ್ಲಿ ೧೧,೦೦೦ರಷ್ಟು ಮಂದಿಯನ್ನು ಭತ್ತವಲ್ಲದೆ ಇತರ ಧಾನ್ಯ ಹಾಗೂ ಆಹಾರ ವಸ್ತುಗಳಿಂದ ಸಾಕಬಹುದು. ಪ್ರತಿಯೊಬ್ಬನಿಗೆ ವರ್ಷ ಒಂದರ ೫ ಹಂಡ್ರೆಡ್ ವೇಟ್ ನಂತೆ ೧೦,೧೮,೦೦೦ ಪ್ರಾಯಸ್ಥರನ್ನು ಸಾಕಲು ೨,೫೫,೦೦ ಟನ್ ಅಕ್ಕಿ ಬೇಕು. ಹೀಗೆಂದರೆ ಜಿಲ್ಲೆಯು ಪ್ರತಿ ವರ್ಷ ೧೨,೦೦೦ ಟನ್ ಅಕ್ಕಿಯನ್ನು ಹೊರಗಿನಿಂದ ತರಿಸಬೇಕಾಗಿತ್ತು. ಇದು ೧೯೩೨–೩೩ರ ಜನ ಸಂಖ್ಯೆಯಂತೆ. ಆದರೆ ಈಗ ಜನ ಸಂಖ್ಯೆ ಇನ್ನೂ ಹೆಚ್ಚಿದೆ ಕಡಿಮೆಯೆಂದರೆ ಎರಡು ಲಕ್ಷ ಮೀರಲೇಬೇಕು. ಹೇಗಿದ್ದರೂ ಮೇಲಿನ ಅಂಕೆ ಸಂಖ್ಯೆಗಳಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಜಿಲ್ಲೆಯ ಜನರಿಗೆ ಬೇಕಾದಷ್ಟು ಆಹಾರ ಬೆಳೆಯುವುದಿಲ್ಲವೆಂಬುದು ಖಂಡಿತ;

ದಕ್ಷಿಣ ಕನ್ನಡದ ಜನ ಬದುಕಬೇಕಾದರೆ ಹೊರಗಿನಿಂದ ಅಕ್ಕಿ ಬಂದೇ ತೀರಬೇಕು. ಜಪಾನರು ಮಲಯಾ ಬರ್ಮಗಳನ್ನು ಸ್ವಾಧೀನಪಡಿಸಿಕೊಂಡ ಬಳಿಕ ಬರ್ಮದಿಂದ ಇಲ್ಲಿಗೆ ನಮ್ಮ ಜಿಲ್ಲೆಗೆ, ಮಾತ್ರವೆಂದೇನು ಇಡೀ ದೇಶಕ್ಕೆ ಅಕ್ಕಿ ಬರುವುದು ನಿಂತು ಹೋಗಿದೆ. ಅಕ್ಕಿಗೆ ಕ್ರಯ ಬಹಳ ಏರಿದ್ದೇ ಇದರ ದೃಷ್ಟಾಂತವು. ಹಾಗಾಗಿ ದಕ್ಷಿಣ ಕನ್ನಡವು ತನ್ನಲ್ಲಿ ಉತ್ಪತ್ತಿ ಮಾಡಿದ ಆಹಾರ ವಸ್ತುವಿನಿಂದಲೇ ಬದುಕಿರಬೇಕಾದರೆ, ಮಾಡಬೇಕಾದ ಪ್ರಾಮುಖ್ಯವಾದ ಒಂದು ಕಾರ್ಯ ಆಧುನಿಕ ವೈಜ್ಞಾನಿಕ ರೀತಿಯಲ್ಲಿ ಒಳ್ಳೆಯ ಗೊಬ್ಬರ ಮತ್ತು ಬೀಜಗಳನ್ನು ಉಪಯೋಗಿಸಿ ಬೇಸಾಯವನ್ನು ಅಭಿವೃದ್ಧಿಗೊಳಿಸುವುದು. ಇನ್ನೊಂದು ಕೆಲಸ, ಹೆಚ್ಚು ಭೂಮಿಯಲ್ಲಿ ಹಿಂದಿಗಿಂತ 'ಅಧಿಕ ಆಹಾರ ಬೆಳೆಸುವುದು', ಖಾಲಿ ಬಿದ್ದ ಸ್ಥಳಗಳಲ್ಲಿ ಹೆಚ್ಚು ಆಹಾರ ಬೆಳೆಸುವುದನ್ನು ಇಂದು ಸರಕಾರವೇ ಬೋಧಿಸುತ್ತದೆ. ಇದು ಸಾಧ್ಯವುಂಟಾದರೂ ಬಹಳ ವೆಚ್ಚ ಮಾಡಬೇಕಾಗಿದೆ. ಕೃಷಿಕರಿಗೆ ಸರಕಾರವು ಬೇಕುಬೇಕಾದ ಸಹಾಯ ಮಾಡದಿದ್ದರೆ, ಅಧಿಕಾಹಾರ ಬೆಳೆಸಿರಿ ಎಂಬುದು ಕೇವಲ ಕಂಠ ಶೋಷಣೆ ಮಾತ್ರ ಆಗುವುದು. ದಕ್ಷಿಣ ಕನ್ನಡದ ನೆಲವು ಇನ್ನಷ್ಟು ಅಧಿಕ ಆಹಾರ ಬೆಳೆಸುವಷ್ಟು ಫಲದಾಯಕವಾಗಿದೆಯೆಂಬುದರಲ್ಲಿ ಸಂಶಯವಿಲ್ಲ. ಹಾಗಾಗಿ ಈ ಕಡೆಗೆ ಕೃಷಿಕರೂ, ಸರಕಾರವೂ ಕೂಡಿ ಗಮನ ಕೊಟ್ಟರೆ ನಮ್ಮ ಜಿಲ್ಲೆಗೆ ಬೇಕಾದ ಆಹಾರವನ್ನು ನಮ್ಮಲ್ಲಿಯೇ ಬೆಳೆಸಿ ನಾವು ಬದುಕ ಬಹುದು.

ಭತ್ತವಲ್ಲದೆ ನಮ್ಮ ಜಿಲ್ಲೆಯಲ್ಲಿ ಇತರ ಹಲವು ಆಹಾರ ಸಾಮಗ್ರಿಗಳು ಬೆಳೆಯುತ್ತವೆ. ರಾಗಿ ೬,೨೩೬ ಎಕ್ರೆಗಳಲ್ಲಿ, ಎಣ್ಣೆ ಬೀಜಗಳು ೫೧,೬೮೮ ಎಕ್ರೆಗಳಲ್ಲಿ, ತೆಂಗಿನ ಕಾಯಿ ಸರಾಸರಿ ೪೯,೩೬೬ ಎಕ್ರೆಗಳಲ್ಲಿ, ಮೆಣಸು, ಶುಂಠಿ ಮೊದಲಾದವು ೧೯,೧೭೦ ಎಕ್ರೆಗಳಲ್ಲಿ, ಕಬ್ಬು ೪,೫೧೪ ಎಕ್ರೆಗಳಲ್ಲಿ, ಹತ್ತಿ ೭೪೭ ಎಕ್ರೆಗಳಲ್ಲಿ, ಹೊಗೆಸೊಪ್ಪು, ವೀಳ್ಯದೆಲೆ ಮೊದಲಾದವು ೨೧,೫೮೪ ಎಕ್ರೆಗಳಲ್ಲಿ, ಹಣ್ಣು ಮತ್ತು ತರಕಾರಿ ೨೮,೯೭೫ ಎಕ್ರೆಗಳಲ್ಲಿ, ಮತ್ತೆ ಆಹಾರೇತರ ವಸ್ತುಗಳು ೧೮,೦೦೮ ಎಕ್ರೆಗಳಲ್ಲಿ ಧಾನ್ಯಗಳು ೪೫೬,೭೨೮ ಎಕ್ರೆಗಳಲ್ಲಿಯೂ ಬೆಳೆಯುತ್ತದೆ. ಹೀಗೆ ಒಟ್ಟಿನಿಂದ ಇವು ೧೯೩೨-೩೩ರ ವರದಿಯಂತೆ ೩,೦೮೬ ಟನ್ನಷ್ಟು ಬೆಳೆಯುತ್ತಿದ್ದು ೧೧,೦೦೦ ಮಂದಿ ಪ್ರಾಯಸ್ಥರನ್ನು ಸಾಕಲು ಸಾಕಾಗಬಹುದಷ್ಟಿರುವುದು.

ಮೇಲಿನ ಲೆಕ್ಕಾಚಾರದಿಂದ ದಕ್ಷಿಣ ಕನ್ನಡ ಜಿಲ್ಲೆ ಸಾಮಾನ್ಯ ಸ್ಥಿತಿಯಲ್ಲಿಯೂ, ಸಾಕಷ್ಟು ಆಹಾರ ಉತ್ಪತ್ತಿ ಮಾಡುವ ಜಿಲ್ಲೆಯಲ್ಲವೆಂದು ಖಚಿತವಾಗುತ್ತದೆ. ನಮ್ಮ ಜಿಲ್ಲೆಯಲ್ಲಿ ಜನಸಂಖ್ಯೆ ೧೯೩೨–೩೩ರಿಂದ ಬಹಳ ಏರಿರಲೇಬೇಕು. ಮಂಗಳೂರು ನಗರ ಒಂದರಲ್ಲೇ ಏರಿದ ಜನ ಸಂಖ್ಯೆಯ ದಾಮಶಾಯಿಯನ್ನು ನೋಡಿದರೆ ಒಟ್ಟು ಜಿಲ್ಲೆಯಲ್ಲಿ ಎರಡು ಲಕ್ಷಕ್ಕಿಂತ ಕಡಿಮೆಯಿರಲಿಕ್ಕಿಲ್ಲವೆಂಬುದು ಖಂಡಿತ. ಆದರೆ ಅದೇ ರೀತಿ ಆಹಾರ ಉತ್ಪತ್ತಿ ಹೆಚ್ಚಿದೆಯೆಂದು ಹೇಳಬರುವುದಿಲ್ಲ. ಕಾರಣ ಪುತ್ತೂರು ಕಾಸರಗೋಡು ತಾಲೂಕುಗಳ ಗದ್ದೆಗಳಲ್ಲಿ, ವರ್ಷವೊಂದರ ಎರಡು ಮೂರು ಬೆಳೆ ಬರುವ ಗದ್ದೆಗಳಲ್ಲೇ ಹೆಚ್ಚಾಗಿ ಅಡಿಕೆ ಸಸಿ ನಟ್ಟಿದ್ದಾರೆ. ಇತ್ತೀಚೆಗಂತೂ ಅಡಿಕೆಗೆ ವಿಪರೀತ ಕ್ರಯ ಏರುವಾಗ, ಸಹಜವಾಗಿ ಕೃಷಿಕರು ಈ ಕೃಷಿಗೆ ಕೈ ಹಾಕಿದ್ದರಲ್ಲಿ ತಪ್ಪೇನಿಲ್ಲ. ಪುತ್ತೂರು ತಾಲೂಕಿನಲ್ಲಾದರೂ ಇನ್ನೂ ತುಂಬಾ ಭತ್ತ ಬೆಳೆಯುತ್ತದೆ. ಆದರೆ ಕಾಸರಗೋಡು ತಾಲೂಕು ತೋಟಗಳಿಂದಲೇ ತುಂಬಿ ಹೋಗಿರುವುದು. ಕೆಲ ಭೂಮಾಲಕರು ಸಂಪೂರ್ಣ ತೋಟವೇ ಇರುವವರೂ ಇದ್ದಾರೆ. ಹೀಗಿರುವಾಗ ಆಹಾರ ಉತ್ಪತ್ತಿಯಾಗುವ ಸ್ಥಳವು ದಿನದಿಂದ ದಿನಕ್ಕೆ ಕಡಿಮೆಯಾಗಿ ಬರುತ್ತಿದೆಯೆಂದೇ ಸ್ಪಷ್ಟವಾಗುತ್ತದೆ.

ಕಳೆದ ಒಂದೆರಡು ವರ್ಷಗಳಿಂದ ಅಧಿಕಾಹಾರ ಬೆಳೆಸಿರಿ ಎಂದು ಸರಕಾರ ಹೇಳುತ್ತಾ ಬರುತ್ತಿದೆ. ಈ ಮಾತು ಬಹಳ ಚಲೋದಾದದ್ದು; ಬಹಳ ಇಂಪಾದದ್ದು. ನಿಜವಾಗಿ ಜನರಿಗೆ ಹೇಳಬೇಕಾದದ್ದು. ಅವರು ಮಾಡಲೂಬೇಕಾದದ್ದು. ಕಳೆದ ಎರಡು ವರ್ಷಗಳಿಂದ ಎಷ್ಟರ ಮಟ್ಟಿಗೆ ನಮ್ಮ ಜಿಲ್ಲೆಯಲ್ಲಿ ಅಧಿಕಾಹಾರ ಬೆಳೆಸಲಾಗಿದೆಯೆಂದು ವಿಚಾರಿಸಿದರೆ ಈ ಘೋಷಣೆ ಹೇಳುವುದರಿಂದ ಮಾತ್ರ ಏನು ಪ್ರಯೋಜನವೆಂದು ಪ್ರಶ್ನಿಸಬೇಕಾಗಿದೆ; ಸರಕಾರ ದರಖಾಸ್ತು ಜಾಗವನ್ನೇನೋ ಕೊಡುತ್ತದೆ. ಕೊಡುತ್ತದೆಯೆಂದರೆ ಕೃಷಿ ಮಾಡಲು ಮಾತ್ರ. ಕೃಷಿ ಮಾಡುವರೆ ದರಖಾಸ್ತಿಗೆ ಆವರಣ ಹಾಕಿಸಬೇಕು; ನೆಲ ಫಲವತ್ತಾಗಲು ಅದನ್ನು ಉತ್ತು ಗೊಬ್ಬರ ತುಂಬಿಸಬೇಕು. ಹೀಗೆ ಮಾಡಲು ಕೃಷಿಕನಿಗೆ ಸಹಾಯ ಮಾಡಬೇಕು: ಈ ಸಹಾಯವನ್ನು ಸರಕಾರವೇ ಮಾಡಬೇಕು. ಇದು ಒದಗದಿದ್ದರೆ ಅಧಿಕಾಹಾರ ಬೆಳೆಸುವುದು ಹೇಗೆ? ಇಥವಾ ಒಬ್ಬ ಅನುಕೂಲವುಳ್ಳ ಕೃಷಿಕನಾದರೂ ಈ ಕೆಲಸವನ್ನು ಸದ್ಬುದ್ಧಿಯಿಂದ ತೊಡಗಲಿ ಎಂದರೆ, ಅವನು ಆವರಣ ಹಾಕಿ, ಫಲವತ್ತಾಗಿ ಮಾಡಿದ ದರಖಾಸ್ತು ಜಾಗ ಮುಂದೆ ಅವನಿಗೇ ಸಿಗುವವುದೆಂಬ ಭರವಸೆಯಾದರೂ ಬೇಕು. ಸರಕಾರ ಆ ಭರವಸೆಯನ್ನೂ ಪೂರ್ಣ ಕೊಡುವುದಿಲ್ಲ. ಹೀಗಿರುವಾಗ ಕೇವಲ ಅಧಿಕಾಹಾರ ಬೆಳೆಸಿರಿ ಎಂದು ಮಾತ್ರ ಹೇಳುತ್ತಾ ಹೋಗುವುದಕ್ಕಿಂತ, ಕಾರ್ಯತಃ ಕೃಷಿಕರು ಹಾಗೆ ಮಾಡಲು ಏನೆಲ್ಲಾ ಅವರಿಗೆ ಸೌಕರ್ಯ ಬೇಕಾಗಿದೆಯೆಂಬುದನ್ನು ವಿಚಾರಿಸಿ ಸರಕಾರವೂ ಕೃಷಿ ಇಲಾಖೆಯವರೂ ಕೆಲಸಮಾಡಬೇಕು. ಹಾಗೆ ಮಾಡಿದರೆ ನಮ್ಮ ಜಿಲ್ಲೆ ಫಲವತ್ತಾದ ಮಣ್ಣಿನಿಂದ ಕೂಡಿರುವುದರಿಂದ ನಮ್ಮಲ್ಲಿ ಬೆಳೆದ ಆಹಾರದಿಂದ ನಮ್ಮ ಜನರನ್ನು ಸಾಕಬಹುದು.

ಕಾಮಶಾಸ್ತ್ರದ ಗ್ರಂಥಗಳು

ಅನಂಗರಂಗ ೧—೮—೦
ಸ್ತ್ರೀಪುರುಷರ ಲಕ್ಷಣ, ಸಂಭೋಗ ಕಾಲ ನಿರ್ಣಯ, ರತಿಸಮಯದ ಹಾವಭಾವಗಳು, ದ್ರವಣಾದಿ ಔಷಧಗಳು ಇವೇ ಮೊದಲಾದ ರತಿಶಾಸ್ತ್ರದ ರಹಸ್ಯಮಯ ವಿಷಯಗಳು.

ವಿಕೃತ ಕಾಮ ೧—೮—೦
ಬಾಲ್ಯದ ಕಾಮವಿಕಾರಗಳು, ಸ್ವಾನುರತಿ, ಹಿಂಸಾರತಿ, ಪ್ರದರ್ಶನರತಿ, ಸಲಿಂಗರತಿ ಇತ್ಯಾದಿ.

ಪೌರುಷ ೧—೮—೦
ನಪುಂಸಕರೆಂದು ಮರುಗಬೇಡಿ. ಪುನಃ ಪೌರುಷ ಪ್ರಾಪ್ತಮಾಡಿಕೊಳ್ಳಲು ನೂರಾರು ಉಪಾಯಗಳಿವೆ.

ಗರ್ಭನಿರೋಧ (ಅಚ್ಚಿನಲ್ಲಿದೆ) ೧—೮—೦
ಸಂತತಿ ನಿಯಮನಕ್ಕೆ ಸರಿಯಾದ ದಾರಿಬೇಕೆ? ಡಾ। ಗೋಪಾಲ ಕೃಷ್ಣರಾಯರು ಬರೆದ ಈ ಹೊಸ ಪುಸ್ತಕ ಓದಿರಿ.

ದಾಂಪತ್ಯ ದರ್ಶನ ೧—೮—೦
ಸಂಭೋಗ ಸುಖ, ಗಂಡಹೆಂಡಿರಲ್ಲಾಗುವ ಆತ್ಮೈಕ್ಯ, ಅತಿ ಲಂಪಟತನದ ದುಷ್ಪರಿಣಾಮ, ರತಿ ಸೌಖ್ಯಕ್ಕೂ ಸಂತಾನ ಸುದೃಢತೆಗೆಗೂ ಇರುವ ಸಂಬಂಧಗಳ ಬಗ್ಗೆ ದಿ। ಪಂಡಿತ ತಾರಾನಾಥರಾಯರ ಕಾಮ ಮನೋವೈಜ್ಞಾನಿಕ ಗ್ರಂಥ.

ರತಿರಹಸ್ಯ ೧—೮—೦
ತಾರುಣ್ಯದ ಮದ, ಸ್ತನಗಳ ಸೌಂದರ್ಯ, ಸಮಾಗಮ ಶಯನ ಇತ್ಯಾದಿ

ಪ್ರೇಮಕಲಾ ೧—೮—೦
ಅಶ್ಲೀಲವಲ್ಲ! ಶಾಸ್ತ್ರೀಯ ಗ್ರಂಥವೆಂದು ಕೋರ್ಟಿನ ನಿರ್ಣಯವೇ ಆಗಿದೆ.

ಭ್ರಾಂತಿ ಮತ್ತು ಲೈಂಗಿಕ ಶಿಕ್ಷಣ ೧—೮—೦
ಪ್ರಸಿದ್ಧ ಡಾಕ್ಟರುಗಳ ಮೂರು ಶಾಸ್ತ್ರೀಯ ಪುಸ್ತಕಗಳು. ಉನ್ಮಾದ, ವೇಶ್ಯಾವೃತ್ತಿಯ ಹಾವಳಿ ಲೈಂಗಿಕ ಹಾಗೂ ಗುಪ್ತ ರೋಗಗಳ ಚಿಕಿತ್ಸೆ . . . .

ವಿ. ಪಿ. ವೆಚ್ಚ ಬೇರೆ. ನಮ್ಮ ಕ್ಯಾಟಲಾಗಿಗೆ ಒಂದಾಣೆ ಅಂಚೇಚೀಟು ಕಳಿಸಿರಿ.

ಸಮಾಜ ಪುಸ್ತಕಾಲಯ ಧಾರವಾಡ.

ಸಮರಭೂಮಿಯ ಸಂಚಾರ

ಮೋಸ್ಕೋ ಮಾತುಕತೆಯ ಮಹತ್ವದ ಸುದ್ದಿಗಳು

ಯುದ್ಧವನ್ನು ಬೇಗನೇ ಕೊನೆಗಾಣಿಸಬೇಕು.

ಯುದ್ಧಾನಂತರ ಶಾಂತಿ ವ್ಯವಸ್ಥೆಯಾಗಬೇಕು.

ಅಕ್ಟೋಬರ್ ೩೦ನೇ ಶನಿವಾರ ಮೋಸ್ಕೋ ಮಾತುಕತೆ ಮುಗಿಯಿತು. ರಷ್ಯ ಬ್ರಿಟನು ಹಾಗೂ ಅಮೆರಿಕಗಳ ಪರದೇಶ ಸಚಿವರು ಒಂದು ಒಮ್ಮತದ ತೀರ್ಮಾನಕ್ಕೆ ಬಂದಿದ್ದು, ಇನ್ನು ಮುಂದೆ ಯುದ್ಧವು ದೀರ್ಘ ಕಾಲ ಮುಂದುವರಿಯದಂತೆ ಮಾಡಬೇಕಾಗಿರುವ ಯುರೋಪಿಯನ ಸಮಸ್ಯೆಗಳನ್ನು ಅನ್ಯೋನ್ಯ ಸಹಕಾರದಿಂದ ವಿಚಾರಮಾಡಿ ತಕ್ಕ ಕಾರ್ಯಕ್ರಮ ಕೈಕೊಳ್ಳುವರೆ ವ್ಯವಸ್ಥೆಗೈಯಬೇಕೆಂದು ನಿರ್ಧಾರ ಮಾಡಿರುವರೆಂಬದಾಗಿ ಒಂದು ಪ್ರಕಟಣೆ ತಿಳಿಸಿದೆ. ಒಮ್ಮತದಿಂದ ಯೋಗ್ಯ ಸಲಹೆ ಕೊಡುವಂತೆ ಒಂದು ಯುರೋಪಿಯನ್ ಸಲಹೆ ಮಂಡಳವನ್ನೇರ್ಪಡಿಸಬೇಕೆಂದೂ ನಿರ್ಧರಿಸಿರುವರೆಂದೂ ಅದರಲ್ಲಿ ಹೇಳಲಾಗಿದೆ.

“ಯುದ್ಧಾನಂತರವೂ ಬ್ರಿಟನ್ ಅಮೆರಿಕ ರಷ್ಯಗಳೊಳಗೆ ಪರಸ್ಪರ ಸಹಕಾರದಿಂದ ನಡೆದು ಕೊಳ್ಳುವುದು ಅವಶ್ಯವೆಂದು ಮೂರು ರಾಷ್ಟ್ರಗಳೂ ಒಪ್ಪಿಕೊಂಡಿವೆ. ಮೊದಲು ಜರ್ಮನಿವಿರುದ್ಧ ಮಾಡುವ ಯುದ್ಧದವಿಚಾರ, ಇದನ್ನು ಆದಷ್ಟು ಬೇಗ ಕೊನೆಗೊಳಿಸುವ ದೀರ್ಘವಾದ ಚರ್ಚೆ ನಡೆಯಿತು. ಈ ಸಭೆಗೆ ಸೈನ್ಯವಿಚಕ್ಷಣರನ್ನೂ ಆಮಂತ್ರಿಸಲಾಗಿತ್ತು. ಶರತವಿಲ್ಲದೆ ಶರಣುಬರುವವರೆಗೆ ಜರ್ಮನಿಯ ವಿರುದ್ಧ ಯುದ್ಧ ಮಾಡಲಾಗುವುದು; ಯಾವುದೇ ಜರ್ಮನ್ ಸರಕಾರದೊಡನೆ ಒಪ್ಪಂದವನ್ನು ಮಾಡಿಕೊಳ್ಳುವ ಕಾಲದಲ್ಲಿ ಆಕ್ರಮಿತ ರಾಷ್ಟ್ರಗಳಲ್ಲಿ ಬಗೆ ಬಗೆಯ ಅನ್ಯಾಯಕ್ಕೂ ಕಷ್ಟಕ್ಕೆ ಗುರಿಯಾದ ಜನರನ್ನು ಆಯಾಯ ದೇಶಗಳಿಗೊಯ್ದು ಅಲ್ಲಿ ವಿಚಾರಣೆ ಹಾಗೂ ಶಿಕ್ಷೆಗಳ ಬಗ್ಗೆ ವ್ಯವಸ್ಥೆ ಮಾಡಲಾಗುವುದೆಂದು ಈ ಪರಿಷತ್ತಿನಲ್ಲಿ ಚರ್ಚಿಲ್ ರೂಸ್‌ವೆಲ್ಟ್ ಸ್ಟಾಲಿನರ್ ಪ್ರಕಟಪಡಿಸಿದ್ದರು. ಆಸ್ಟ್ರಿಯಾ ಕಳೆದುಕೊಂಡ ಸ್ವಾತಂತ್ರ್ಯವನ್ನು ಪುನಃ ದೊರಕಿಸಲಾಗುವುದು. ಇಟಲಿಯಲ್ಲಿ ಉದ್ಭೃತವಾಗುವ ಸಮಸ್ಯೆಗಳನ್ನು ವಿಚಾರಿಸಲು ಈ ತ್ರಿರಾಷ್ಟ್ರ ಮತ್ತು ಸ್ವತಂತ್ರ ಫ್ರೆಂಚ್ ಪ್ರತಿನಿಧಿಗಳ ಒಂದು ಸಮಿತಿ ಏರ್ಪಡಿಸಲಾಗುವುದು ಮಾತ್ರವಲ್ಲದೆ ಇಟಲಿಯಲ್ಲಿ ಫೇಸಿಸಮ್ಮಿನ ಹುಟ್ಟಡಗಿಸಲಾಗುವುದು. ಅಂತರಾಷ್ಟ್ರೀಯ ಶಾಂತಿ ಮತ್ತು ವ್ಯವಸ್ಥೆಯ ಬಗ್ಗೆ ಒಂದು ಸಾಮಾನ್ಯ ಅಂತರಾಷ್ಟ್ರೀಯ ಸಂಸ್ಥೆಯನ್ನು ನಿರ್ಮಿಸುವುದು.” ಈ ವಿಚಾರಗಳೆಲ್ಲಾ ಆ ಪ್ರಕಟಣೆಯಲ್ಲಿ ಅಡಗಿದೆ.

ಮೋಸ್ಕೋದಲ್ಲಿ ರಷ್ಯ ಬ್ರಿಟನ್ ಅಮೆರಿಕಗಳ ವಿದೇಶ ಮಂತ್ರಿಗಳಾದ ಮೊಲೊಟೊವ್, ಈಡನ್, ಕಾರ್ಡೆಲ್ ಹಲ್ಲರು ಅಕ್ಟೋಬರ್ ತಾ. ೧೯ರಿಂದ ೩೦ರ ವರೆಗೆ ಈ ಮಾತುಕತೆ ನಡೆಸಿದರು. ಈ ಮಾತುಕತೆಯಲ್ಲಿ ಹನ್ನೆರಡು ಸಭೆಗಳಾಗಿವೆಯೆಂದು ತಿಳಿದಿದೆ. ಈ ಸಭೆಗೆ ಈ ಮೂವರು ವಿದೇಶ ಮಂತ್ರಿಗಳಲ್ಲದೆ ಆಯಾಯ ದೇಶಗಳ ರಾಯಭಾರಿಗಳು ಸಮರತಜ್ಞರು ರಾಜನೀತಿ ಚತುರರೂ ಆಮಂತ್ರಿತರಾಗಿದ್ದರು. ಬ್ರಿಟನು, ಅಮೆರಿಕ, ರಷ್ಯಗಳ ವಿದೇಶ ಮಂತ್ರಿಗಳು ಒಟ್ಟು ಕೂಡಿದ್ದು ಇತಿಹಾಸದಲ್ಲಿಯೇ ಇದು ಮೊದಲನೆಯ ಸಲವೆನಬಹುದು.

ಒಟ್ಟು ಈ ಸಮ್ಮೇಳನದ ಚರ್ಚಿಸಲಾದ ಮುಖ್ಯ ಪ್ರಶ್ನೆಗಳೆರಡು (೧) ಜರ್ಮನಿಯ ವಿರುದ್ಧ ಹೋರಾಡುವೀ ಯುದ್ಧವನ್ನು ಆದಷ್ಟು ಬೇಗ ಕೊನೆಗೊಳಿಸುವುದು. (೨) ಯುದ್ಧಾನಂತರವೂ ಜಗತ್ತಿನ ಶಾಂತಿ ವ್ಯವಸ್ಥೆಯ ಬಗ್ಗೆ ಈ ಮೂರು ದೇಶಗಳೂ ಒಂದರೊಡನೊಂದು ಪರಸ್ಪರ ಸೌಹಾರ್ದದಿಂದಿರುವುದು; ಹಾಗೆ ಮಾಡಿದರೆ ಮಾತ್ರ ಶಾಶ್ವತ ಶಾಂತಿಯನ್ನು ಪಾಲಿಸಲ್ಕಾಗುವುದಲ್ಲದೆ, ತಮ್ಮ ತಮ್ಮ ದೇಶಗಳ ರಾಜಕೀಯ, ಆರ್ಥಿಕ, ಸಾಮಾಜಿಕ ಹಿತಗಳನ್ನು ಅಭಿವೃದ್ಧಿಗೊಳಿಸಲು ಅನುಕೂಲವಾಗುವುದು ಎಂದು ಪ್ರತಿನಿಧಿಗಳೆಲ್ಲ ಒಪ್ಪಿಕೊಂಡಿರುವರೆಂದು ಹೇಳಲಾಗಿದೆ.

ಮೋಸ್ಕೋ ಸಮ್ಮೇಳನದ ಫಲಿತಾಂಶವನ್ನು ನೋಡಿದರೆ ಮಿತ್ರವರ್ಗದವರು ಹೇಗೆ ಸೈನಿಕ ಜಯಕ್ಕಾಗಿ ಇತರ ಭಿನ್ನಭೇದಗಳಿದ್ದರೂ ಅವರು ಇಂದು ಒಟ್ಟಾಗಿರುವರೆಂಬುದು ವಿದಿತವಾಗುತ್ತದೆ. ಸಾಮ್ರಾಜ್ಯಶಾಹೀ ಬ್ರಿಟನು ಅಮೆರಿಕಗಳಿಗೂ ಸಮತಾವಾದೀ ರಶ್ಯಕ್ಕೂ ಒಮ್ಮತ ಬರುವುದು ಸಾಧ್ಯವಿಲ್ಲೆಂದು ಜರ್ಮನರು ಖಂಡಿತ ಮಾಡಿದ್ದರೆ ಅವರಿಂದು ನಿರಾಶರಾಗುವಂತಾಗಿದೆ. ಇಂದು ಪ್ರಕಟವಾಗಿರುವೀ ವರದಿಯನ್ನೋದಿದರೆ ಹೇಗೆ ತ್ರಿರಾಷ್ಟ್ರಗಳು ಹಿಟ್ಲರನನ್ನೆದುರಿಸುವುದರಲ್ಲಿ ಯುದ್ಧವನ್ನು ಆದಷ್ಟು ಬೇಗನೇ ಕೊನೆಗಾಣಿಸುವುದರಲ್ಲಿ ಆಸಕ್ತವಾಗಿದ್ದೆಯೆಂಬುದು ಸ್ಪಷ್ಟವಾಗುತ್ತದೆ. ಇನ್ನೂ ಕೆಲವು ಭಿನ್ನಾಭಿಪ್ರಾಯಗಳಿದ್ದರೂ ಇರಬಹುದು; ಇರಲೇಬೇಕು. ಆದರೆ ಅಂಥಾ ಭಿನ್ನ ಮತಗಳ ಇತ್ಯರ್ಥದ ಸಲುವಾಗಿ ಪ್ರತ್ಯೇಕ ಸಮಿತಿ ಏರ್ಪಟ್ಟಿರುವುದರಿಂದ ಅದರ ಪರಿಹಾರೋಪಾಯವೂ ಕಂಡ್ರು ಹುಡುಕಿದಂತಾಗಿದೆ. ಒಂದೇ ಪರಿಷತ್ತಿನಲ್ಲಿ ಈ ತ್ರಿರಾಷ್ಟ್ರಗಳೊಳಗೂ ಒಂದೇ ಕೊನೆಯ ನಿರ್ಣಯವಾಗುವುದು ಸಾಧ್ಯವಿಲ್ಲ; ಏಕೆಂದರೆ ಕಾಲು ಶತಮಾನಗಳಿಂದ ರಶ್ಯದ ವಿಷಯ ಈ ಉಭಯ ರಾಷ್ಟ್ರಗಳೂ ಸಂಶಯ ಗ್ರಸ್ತವಾಗಿ ನಡೆದುಕೊಂಡಿರುವುದರಿಂದ ಆ ಸಂಶಯದ ವಾತಾವರಣವು ಶುಭ್ರವಾಗಲು ನಿಜವಾಗಿಯೂ ಕೆಲ ದಿನಗಳು ಬೇಕೇಬೇಕಾಗುವವು.

ಮೊಸ್ಕೋ ಮಾತುಕತೆಯ ಒಪ್ಪಂದವು ತುಂಬಾ ವ್ಯಾವಹಾರಿಕವಿದೆ. ಈ ಪರಿಷತ್ತಿನಲ್ಲಿಯೂ ದ್ವಿತೀಯ ರಂಗದ ಸುದ್ದಿಯೇ ಇಲ್ಲವೆಂಬುದು ಒಂದು ಗಮನೀಯವಾದ ವಿಚಾರವೇನೋ ಸರಿ. ಆದರೆ ದ್ವಿತೀಯ ರಂಗದ ಕುರಿತು ರಶ್ಯನರು ಇಷ್ಟು ಸಮಯಗಳಿಂದಲೂ ಬೊಬ್ಬಿಡುತ್ತಿರುವಾಗ, ಈ ಪರಿಷತ್ತಿನಲ್ಲಿ ಅದರ ಕುರಿತು ಹೆಚ್ಚಿನ ಒತ್ತಾಯ ಮಾಡದಿರಲಾರರೆಂಬುದೂ ನಿಶ್ಚಯ; ಒತ್ತಾಯ ಮಾಡಿ ಒಂದು ನಿರ್ಧಾರಕ್ಕೆ ತ್ರಿರಾಷ್ಟ್ರಗಳು ಬಂದಿದ್ದರೂ ಇದು ಸೈನಿಕ ಚಲನವಲನಗಳ ರಹಸ್ಯವನ್ನೊಳಗೊಂಡ ಸಂಗತಿಯಾಗಿರುವುದರಿಂದ ಅದನ್ನು ಬಹಿರಂಗಪಡಿಸಲೂ ಉಪಾಯವಿಲ್ಲ. ರಶ್ಯವು ಈ ಒಪ್ಪಂದಕ್ಕೆ ಸಹಿ ಹಾಕಿದೆಯೆಂಬುದರಿಂದಲೇ, ಬ್ರಿಟನು ಅಮೆರಿಕಗಳ ಯುದ್ಧ ಪ್ರಯತ್ನದಲ್ಲಿ, ಮುಂದಿನ ಭರವಸೆಗಳಲ್ಲಿ ರಶ್ಯವು ತೃಪ್ತಿಗೊಂಡಿದೆಯೆಂಬುದೂ ವಿದಿತವಾಗುವುದು. ಯುದ್ಧವನ್ನೂ ಬೇಗನೇ ಕೊನೆಗಾಣಿಸುವ, ತ್ರಿರಾಷ್ಟ್ರಗಳ ಸಂಯುಕ್ತ ಯುದ್ಧ ಚಟುವಟಿಕೆಯ ಕುರಿತು ಲಂಡನಿನಿಂದಲೂ ಈಗ ಸುದ್ದಿ ಬರುತ್ತಿದೆ. ರಶ್ಯನರು ಜಪಾನಿನೆದುರು ಹೋರಾಡಲು ಅವರ ಸೈಬೇರಿಯ ಕೇಂದ್ರವನ್ನು ಬಿಟ್ಟುಕೊಟ್ಟರೆ ಮಾತ್ರ ದ್ವಿತೀಯರಂಗ ತೆರೆಯಲಾಗುವುದೆಂದು ಅಮೆರಿಕದ ಕೆಲ ಮುತ್ಸದಿಗಳು ಹೇಳುತ್ತಾ ಬಂದರೂ, ರಶ್ಯವು ಜಪಾನಿನೊಡನೆ ಸದ್ಯಕ್ಕೆ ಕಲಹವನ್ನು ಕಟ್ಟಿಕೊಳ್ಳುವುದಿಲ್ಲವೆಂದೂ ಸ್ಪಷ್ಟವಾಗಿದೆ. ರೂಸ್‌ವೆಲ್ಟರೇ ಕೆಲ ಸಮಯಗಳ ಹಿಂದೆ ಹೇಳಿದಂತೆ, ರಶ್ಯನರು ಈಗ ಎದುರಿಸುತ್ತಿರುವ ಶತ್ರುವೇ ಭಯಂಕರನಾಗಿರುವಾಗ, ಅವರು ಇದೇ ಸಮಯದಲ್ಲಿ ಇನ್ನೊಬ್ಬ ಶತ್ರುವನ್ನೂ ಆಹ್ವಾನಿಸಿಕೊಳ್ಳುವುದು ಸಮಂಜಸವಲ್ಲ. ಹೇಗಿದ್ದರೂ ದ್ವಿತೀಯ ರಂಗದ ವಿಷಯ ಈ ಒಪ್ಪಂದದ ಕರಾರುಗಳಲ್ಲಿ ಯಾವ ಸೂಚನೆಯೂ ಕಂಡುಬರದಿರುವುದು ಸ್ವಲ್ಪ ನಿರಾಶಾಜನಕವಾಗಿ ಕಂಡರೂ ರಶ್ಯವು ತೃಪ್ತಿಪಟ್ಟಿರುವುದೆಂಬುದರಿಂದ ದ್ವಿತೀಯ ರಂಗದ ವಿಷಯ ನಿಶ್ಚಯ ಆಲೋಚನೆ ಆಗಿರಬೇಕೆಂದೇ ಊಹಿಸಿಕೊಳ್ಳಲು ಬರುತ್ತದೆ.

ಇಟಲಿಯ ಕುರಿತು ಈ ಸಮ್ಮೇಳನದಲ್ಲಿ ಮಾಡಿರುವ ಆಲೋಚನೆಗಳೂ ಮಹತ್ವದ್ದಿವೆ. ಒಂದು ರೀತಿಯಿಂದ ಈ ವಿಷಯದಲ್ಲಿ ರಶ್ಯ ಮತ್ತು ಆಂಗ್ಲ ಅಮೆರಿಕಗಳೊಳಕೆ ತತ್ವತಃ ಒಪ್ಪಂದವೇ ಆಗಿದೆಯೆನಬೇಕು. ಇಟಲಿಯಲ್ಲಿ ಯಾವುದೇ ತರದ ಫೇಸಿಸಂ ಇರಬಾರದೆಂದು ಸಾಧಿಸುವುದೇ ಮಿತ್ರರ ಮುಖ್ಯೋದ್ದೇಶವೆಂದು ಸಾರಲಾಗಿದೆ. ಇಂದಿನ ಬಡೋಗ್ಲಿಯೋ ಮತ್ತು ಅರಸು ಇಮಾನ್ವೇಲರಂಥಾ ಮುಂದಾಳುಗಳ ಆರೆಹೃದಯದ ಪ್ರಯತ್ನದಿಂದ ಇಟಲಿಯ ಜನರನ್ನು ಫೇಸಿಸ್ಟ್ ವಿರೋಧ ಹೋರಾಡುವಂತೆ ಹುರಿದುಂಬಿಸುವುದು ಅಸಾಧ್ಯವಾಗಿದೆ. ಆಸ್ಟ್ರಿಯದ ಜನರ ಬಂಧ ವಿಮೋಚನೆಯ ಶರತವೂ ಬಹಳ ಸ್ವಾರಸ್ಯದ್ದಿದೆ. ಒಂದು ರೀತಿಯಿಂದ ಇದು ಮಿತ್ರರ ಮುಂದಿನ ಯುದ್ಧ ಗತಿಯನ್ನು ಸೂಚಿಸುತ್ತದೆಯೆಂದು ಭಾವಿಸಬಹುದು ಮಾತ್ರವಲ್ಲದೆ ಇದು ಜರ್ಮನಿಯ ಪದಹತಿಯಿಂದ ದಳಿತವಾದ ರಾಷ್ಟ್ರಗಳಿಗೆ ಸ್ಫೂರ್ತಿಯನ್ನುಂಟುಮಾಡುವುದೂ ಆಗಿದೆ. ಇದರಿಂದೆಲ್ಲಾ ಏನು ವ್ಯಕ್ತವಾಗುತ್ತದೆಂದರೆ ಆಸ್ಟ್ರಿಯವುಮುಂದೆ ಪ್ರಜಾಪ್ರಭುತ್ವ ಸ್ವಾತಂತ್ರ್ಯಗಳನ್ನು ಅನುಭವಿಸಬೇಕೆಂಬುದತಲ್ಲಿ ಆಂಗ್ಲ ಅಮೆರಿಕನರಿಗೆ ನಿಜವಾದ ವಿಶ್ವಾಸವುಂಟೆಂದು. ಈ ವಿಶ್ವಾಸವು ಆಸ್ಟ್ರಿಯಾದ ಮಟ್ಟಿಗೆ ಇರದೆ ಶತ್ರುಪದದಳಿತ ರಾಷ್ಟ್ರಗಳಿಗೆ ಮಾತ್ರ ಅಸ್ತಯಿಸದೆ ಇನ್ನಷ್ಟು ವಿಶಾಲತೆಯಲ್ಲಿ ಹರಡಿ ತಮ್ಮವಸಾಹತುಗಳಾದ ಭಾರತದಂಥಾ ರಾಷ್ಟ್ರಗಳ ಕಡೆಗೂ ಹಬ್ಬುವುದು ಸಮಂಜಸವಿದೆ.

ಕೊನೆಯದಾಗಿ ಈ ಸಮ್ಮೇಳನದ ಚರ್ಚಿಸಲಾದ ವಿಷಯ ಯುದ್ಧಾನಂತರದ ಜಗತ್ತಿನ ಶಾಂತಿ ವ್ಯವಸ್ಥೆಯ ವಿಚಾರ. ಈ ತ್ರಿರಾಷ್ಟ್ರಗಳು—ಚೈನವೂ ಕೂಡಾ, ಏಕೆಂದರೆ ಅದು ಸಮ್ಮೇಳನದಲ್ಲಿ ಸೇರಿರದಿದ್ದರೂ ಈ ಪ್ರಕಟಣೆಗೆ ಸಹಿಹಾಕಿದೆ—ಜಗತ್ತಿನ ಮುಂದಿನ ಶಾಂತಿ ವ್ಯವಸ್ಥೆಯನ್ನು ಒಪ್ಪಿಕೊಂಡು, ಅದನ್ನು ಸಾಧಿಸುವ ಸಲುವಾಗಿ ಒಂದು ಅಂತರ್ರಾಷ್ಟ್ರೀಯ ಸಂಸ್ಥೆ ಸ್ಥಾಪಿಸಬೇಕೆಂಬ ನಿರ್ಧಾರಕ್ಕೆ ಬಂದಿವೆ. ಈ ಅಂತರ್ರಾಷ್ಟ್ರೀಯ ಸಂಸ್ಥೆಗೆ ‘ಸಣ್ಣ ದೊಡ್ಡ ಎಲ್ಲಾ ರಾಷ್ಟ್ರಗಳೂ ಸದಸ್ಯವಾಗಬಹುದು.’ ಹೇಗಿದ್ದರೂ ಪರತಂತ್ರ ರಾಷ್ಟ್ರಗಳಿಗೆ ಈ ಅಂತರಾಷ್ಟ್ರೀಯ ಸಂಸ್ಥೆಯಲ್ಲಿ ಸ್ಥಾನವಿಲ್ಲವೆಂಬುದು ಖಂಡಿತ. ಆದರೆ ಹಿಂದಿನ ವ್ಯವಸ್ಥೆಯೇ ಮುಂದೆಯೂ ಉಳಿದರೆ ಕೆಲವು ಆಳುವ ರಾಷ್ಟ್ರಗಳೂ, ಕೆಲವು ಆಳಿಸಿಕೊಳ್ಳುವ ರಾಷ್ಟ್ರಗಳೂ ಆಗಿ ಉಳಿವುದಾದರೆ, ‘ಯುದ್ಧಾನಂತರದ ಜಗತ್ತಿನಲ್ಲಾದರೂ ಯಾವುದೇ ಅಂತರಾಷ್ಟ್ರೀಯ ಸಂಸ್ಥೆ ಸ್ಥಾಪಿಸಿದರೂ ಶಾಂತಿ ವ್ಯವಸ್ಥೆ ಸಾಧ್ಯವುಂಟೇ ಎಂಬುದರ ಬಗ್ಗೆ ಮಿತ್ರ ರಾಷ್ಟ್ರಗಳು ಸ್ಪಷ್ಟೀಕರಣ ಕೊಡಬೇಕಾಗಿದೆ. ಅಟ್ಲಾಂಟಿಕ್ ‘ಜಲಪಿಲಿ’ಯು ಇಂಥಾ ಸ್ಪಷ್ಟೀಕರಣವೆನ್ನುವುದಾದರೆ ಅದರಲ್ಲಿ ಸಾರಿದ ತತ್ವಗಳ ವಿಷಯ ಇನ್ನೂ ಸಾಮ್ರಾಜ್ಯ ಶಾಹೀ ರಾಷ್ಟ್ರಗಳು ಒಮ್ಮತಗೊಂಡಂತೆ ಕಂಡುಬರುವುದಿಲ್ಲ. ಹಾಗಾಗಿ ಮಿತ್ರ ರಾಷ್ಟ್ರಗಳ, ದೊಡ್ಡ ದೊಡ್ಡ ಭೂಪತಿಗಳು ಮಹಾಮಹಾ ನಿರ್ಧಾರ ಮಾಡಿದೆವೆಂದು ಹೆಮ್ಮೆ ಕೊಚ್ಚಿಕೊಳ್ಳುತ್ತಿರುವಾಗಲೂ ಪರತಂತ್ರ ರಾಷ್ಟ್ರಗಳ ಮಿಲಿಯಾಂತರ ಜನರು, ತಮ್ಮ ಅದೃಷ್ಟವು ಇನ್ನೂ ಅಂಧಕಾರಮಯವಾಗಿದೆಯೆಂದೇ ಚಿಂತಿಸುತ್ತಿದ್ದಾರೆ.

ಸ್ವದೇಶಾಭಿಮಾನಿ

ತಾರೀಕು 5—11—1943

ಯುದ್ಧದ ಸುದ್ದಿ

ಮೋಸ್ಕೋ ಮಾತು ಕತೆ ಮುಗಿಯಿತು. ಬಹಿರಂಗವಾದ ಪ್ರಕಟಣೆಯಿಂದ, ಮಿತ್ರ ಮುಖಂಡರು, ಹಿಟ್ಲರ ಸನ್ನು ಸೋಲಿಸುವರೆ ಆ ಮೂಲಕ ಯುದ್ಧವನ್ನು ಬೇಗನೇ ಕೊನೆಗಾಣಿಸುವರೆ ಮಹತ್ವದ ಒಮ್ಮತದ ನಿರ್ಧಾರ ಮಾಡಿರುವರೆಂದು ತಿಳಿಯುತ್ತದೆ. ಯುದ್ಧಾನಂತರದ ಶಾಂತಿ ವ್ಯವಸ್ಥೆಗಳ ಆಲೋಚನೆಯೂ ಈ ಸಂದರ್ಭದಲ್ಲಿ ಆದದ್ದು ಶ್ರೇಯಸ್ಕರವಿದೆ ದ್ವಿತೀಯ ರಂಗದ ಸುದ್ದಿಯಲ್ಲದಿದ್ದರೂ ರಶ್ಯಕ್ಕೆ ತೃಪ್ತಿಕರವಾದ್ದ ನಿರ್ಧಾರವಾಗಿದೆಯೆಂದು ಪ್ರಕಟವಾಗಿರುವುದರಿಂದ ಆ ಕುರಿತು ಹೆಚ್ಚು ಕಳವಳಗೊಳ್ಳಬೇಕಾಗಿಲ್ಲ.

ರಣರಂಗದಲ್ಲಿಯೂ ರಶ್ಯನರು ಪ್ರಗತಿ ಹೊಂದುತ್ತಿರುವರು. ನೀಪರ್ ಮತ್ತು ಅಝೋಪಗಳ ನಡುವೆ ಹೋರಾಡಿ ರಶ್ಯನ್ ಸೇನೆ ಮುನ್ನುಗ್ಗುತ್ತಿದೆ. ನೀಪರ್ ವಕ್ರದಲ್ಲಿ ನಿಪ್ರೊಪೆಟ್ರೋವಸ್ಕದ ಕಡೆಗೂ ರಶ್ಯನರು ಮುನ್ನಡೆದಿದ್ದಾರೆ. ಕ್ರಿಮಿಯದ ಹೆಬ್ಬಾಗಿಲಿನಂತಿರುವ ಪೆರಿಕೋಪ ನಗರವನ್ನು ರಶ್ಯನರು ವಶಪಡಿಸಿಕೊಂಡಿರುವರು ಕ್ರಿಮಿಯದಲ್ಲಿ ತುಂಬಾ ಜರ್ಮನ್ ಸೈನಿಕರಿದ್ದು ಅವರ ಮೇಲೆ ರಶ್ಯನರ ಧಾಳಿ ನಡೆಯುತ್ತಿದೆ

ಇಟಲಿಯನರ ಒಂದು ಪ್ರಾತಿನಿಧಿಕ ಸರಕಾರ ಸ್ಥಾಪಿಸುವರೆ ಬಡೋಗ್ಲಿಯೋ ಕೈಕೊಂಡ ಪ್ರಯತ್ನದಲ್ಲಿ ಬಿಕ್ಕಟ್ಟುಂಟಾಗಿದೆ ಕೌಂಟ್ ಸ್ಪೋರ್ಸಾ ಮತ್ತು ಕ್ರಾಂಟ್ ಕ್ರೋಚ್ ಇವರು ತಮ್ಮ ರಾಜಕೀಯ ಉದ್ದೇಶಗಳನ್ನು ಸಾಧಿಸಿಕೊಳ್ಳಲು ಪ್ರಯತ್ನಿಸುವವರಾದ್ದರಿಂದ ಅವರೊಡನೆ ಸೇರಿರುವ ಇಟಲಿಯ ಅರಸು ಇಮಾನ್ಯುವೇಲರ ಅಧೀನದಲ್ಲಿ ಕೆಲಸ ಮಾಡಲು ತಾನು ಸಿದ್ಧನಿಲ್ಲವೆಂದು ಬಡೋಗ್ಲಿಯೋ ಹೇಳುತ್ತಾನೆ ಹೀಗಾಗಿ ಅರಸರ ಸಿಂಹಾಸನ ತ್ಯಾಗದ ಸುದ್ದಿ ಹಬ್ಬಿದೆ ರಾಜ ಕುಮಾರ ಉಂಬರ್ಟೋ ರವರಿಗೂ ಇದೇ ರೀತಿ ವಿರೋಧವಿರುವುದರಿಂದ, ಅರಸರ ಏಳನೆಯ ವರ್ಷದ ಮೊಮ್ಮಗ ಪ್ರಿನ್ಸ್ ಇಮಾನ್ಯುವೇಲ್‌ಗೆ ಪಟ್ಟ ದೊರೆವ ಸಂಭವವಿದೆಯೆಂದು ಹೇಳಲಾಗುತ್ತದೆ. ಇಟಲಿಯಲ್ಲಿ ಮಿತ್ರ ಸೈನ್ಯವು ನೇಪಲ್ಸ್‌ನಿಂದ ಮುಂದುವರಿಯುತ್ತಿದೆ.

ಇದು ಹಾಸ್ಯಾಸ್ಪದ

'ಈಗ ಮದ್ಯಪಾನ ನಿಷೇಧ ಶಾಸನವನ್ನು ತೆಗೆದುಹಾಕಿ, ನಾನು ಅದಕ್ಕಾಗಿ ಹಾಕಿದ್ದ ಇನ್ನಿತರ ಸುಂಕವನ್ನು ಹಣ ದೊರೆಯುತ್ತದೆಂಬ ದೃಷ್ಟಿಯಿಂದ ವಸೂಲು ಮಾಡುವುದು ಇದು ಕೇವಲ ಹಾಸ್ಯಾಸ್ಪದವಾಗಿದೆ' ಎಂದು ಶ್ರೀ. ರಾಜಗೋಪಾಲಾಚಾರ್ಯರು ಮದ್ರಾಸ್ ಸರಕಾರವು ಕಾಂಗ್ರೆಸ್ ಮಂತ್ರಿಮಂಡಳದ ಕಾಲದಲ್ಲಿ ಮದ್ರಾಸ್ ಪ್ರಾಂತದ ಕೆಲವು ಜಿಲ್ಲೆಗಳಲ್ಲಿ ಜಾರಿ ಮಾಡಿದ್ದ ಮದ್ಯಪಾನ ನಿಷೇಧ ಕಾನೂನನ್ನು ಕಿತ್ತುಹಾಕುವ ಯೋಚನೆಯಲ್ಲಿದೆಯೆಂಬ ಸುದ್ದಿಯ ಕುರಿತು ತಮ್ಮ ಅಭಿಪ್ರಾಯವನ್ನು ಸ್ಪಷ್ಟ ಪ್ರಕಟಪಡಿಸಿದ್ದಾರೆ.

ಅವರು ತಮ್ಮ ಪ್ರಕಟಣೆಯಲ್ಲಿ ಮತ್ತೆ ಹೀಗೆಂದಿರುವರು. 'ಸರಕಾರದ ಈ ಧೋರಣದ ಕುರಿತು ನನ್ನ ಅಭಿಪ್ರಾಯವೇನೆಂದು ಹೇಳುವ ಅವಶ್ಯವಿಲ್ಲ. ಅದು ಲೋಕಕ್ಕೇ ಗೊತ್ತಿರುವ ವಿಷಯವಾಗಿದೆ. ಈಗಿನ ಸರಕಾರಕ್ಕೆ ಕಾನೂನಿಗೆ ಬರುವ ಅಡ್ಡಿಗಳನ್ನು ತಡೆಗಟ್ಟಲು ಶಕ್ಯವಿಲ್ಲವಾಗಿದೆ. ಜನರು ಗುಟ್ಟಿನಲ್ಲಿ ಕುಡಿಯುತ್ತಾರೆಂದು ಸರಕಾರವು ಈ ಪ್ರಯತ್ನವನ್ನು ಕಿತ್ತೊಗೆಯುವ ಸಾಹಸಕ್ಕೆ ಕೈಹಾಕಿದೆ ಮುಖಂಡರು ಸದ್ಯ ಈ ವಿಷಯದಲ್ಲಿ ಕೆಲಸ ಮಾಡದ ಪರಿಸ್ಥಿತಿ ಬಂದಿದೆ. ಏನು ಮಾಡಿದರೂ 'ಕಾಂಗ್ರೆಸಿನವರ ತೊಂದರೆ' ಯೆಂಬ ಅಪವಾದ ಬಂದು, ಸರಕಾರದೊಡನೆ ತಿಕ್ಕಾಟವುಂಟಾಗುವ ಪ್ರಸಂಗವೊದಗುವುದು'.

ನೋಟಗಳು....,

ರಾಜ ಪ್ರತಿನಿಧಿ ವೇವಲರು ಅರಮನೆಯಂಥಾ ವಿಮಾನದಲ್ಲಿ ಬಂದಿಳಿದರು.

ಅದೇ 'ಅರಮನೆ ವಿಮಾನ'ವನ್ನೇರಿ ಮಾಜಿ ರಾಜ ಪ್ರತಿನಿಧಿ ಲಿನ್‌ಲಿತ್ ಗೋ ಹೊರಟು ಹೋದರು

ರಾಜ ಪ್ರತಿನಿಧಿಯಾಗಿ ಏಳು ವರ್ಷದ ಅಖಂಡ ಅಧಿಕಾರ ಮಾಡಿ ಲಿನ್‌ಲಿತ್ ಗೋರವರು ಹೋಗುವಾಗ ಇಡೀ ಬಂಗಾಳವೇ ಭಯಂಕರವಾಗಿ ಕೂಗುತ್ತಿದ್ದರೂ ಭಾರತವನ್ನು ಬಿಟ್ಟು ಅವರು ಹೊರಟುಹೋದರು!

ಲಿನ್‌ಲಿತ್ ಗೋ ಹೋಗುವಾಗ ಇಡೀ ಭಾರತದಲ್ಲಿ ಯಾರೂ ಕಂಬನಿ ಸುರಿಸಿದವರೇ ಇಲ್ಲವೆಂದರೆ ಅದು ನಿಜವಾಗಿಯೂ ಅನ್ಯಾಯವಾದೀತು

ಕರಿಡನಿನಲ್ಲಿ ವಿಮಾನದಿಂದಿಳಿದ ಲಿನ್‌ಲಿತ್ ಗೋ ಸ್ಟೇಶನಿನಿಂದ ಮೋಟರು ಹತ್ತಿ ಹೋಗುವಾಗ ಕೆಲವು ಭಾರತೀಯ ತರುಣರು ಏನೋ ಘೋಷಣೆ ಮಾಡಿ ಕಣ್ಮರೆಯಾದರೆಂದು ರಾಯ್‌ಟರ್ ಸುದ್ದಿ

ಅವರು ಏನು ಘೋಷಣೆ ಮಾಡಿದರೆಂಬುದು ರಾಯ್‌ಟರ್ ಸುದ್ದಿಗಾರನಿಗೆ ಅರ್ಥವಾಗಲಿಲ್ಲವೆಂದು ತೋರುತ್ತದೆ

ಭಾರತೀಯರ ಭಾಷೆ ಬ್ರಿಟನಿನಲ್ಲಿರುವ ರಾಯ್‌ಟರ್ ಸುದ್ದಿಗಾರನಿಗೆ ತಿಳಿಯಬೇಕೆಂದೇನೂ ಇಲ್ಲ

ಭಾರತೀಯರ ಹೃದಯವೂ ಬ್ರಿಟಿಷರಿಗೆ ಅರ್ಥವಾಗುವುದೇ ಇಲ್ಲ.

ಹಾಗಾದರೂ ಲಿನ್‌ಲಿತ್ ಗೋ ಹೋಗುವಾಗ ಅಖಿಲ ಬಂಗಾಳವೇ ಕೂಗುತಿತ್ತು.

ಲಿನ್‌ಲಿತ್ ಗೋ ಹೋಗುವ ಮುನ್ನ ಬಂಗಾಳವನ್ನೊಮ್ಮೆ ಸಂದರ್ಶಿಸಿ ಹೋಗಬೇಕಿತ್ತೆಂದು ಪಂಡಿತ ಕುಂಜ್ರುಗಳ ಹೇಳಿಕೆ

ಬಂಗಾಳದವರು ಯಾಕೆ ಕೂಗುತ್ತಾರೆಂದು ಅಗಲಾದರೂ ಅವರಿಗೆ ಅರ್ಥವಾಗುತ್ತಿತ್ತೇನೋ!

ಹೋಗುವ ವೈಸರಾಯರಿಗೆ ಅದು ಅರ್ಥವಾಗಿಯಾದರೂ ಏನು ಪ್ರಯೋಜನ?

ಬಂದ ವೈಸರಾಯರು ಕಲ್ಕತ್ತವನ್ನು ಸಂದರ್ಶಿಸಿಯೇ ಬಿಟ್ಟರು!

ಲಿನ್‌ಲಿತ್ ಗೋ ಹೋಗುವಾಗ ಬಂಗಾಳ ವಿಡೀ ಕೂಗುತ್ತಿದ್ದುದರ ಅರ್ಥ ವೇವಲರಿಗಾದರೂ ಈಗ ಆಗಿರಬಹುದು.

ಸ್ವದೇಶ ಸಮಾಚಾರ

ಪೂರ್ವ ಬಂಗಾಲದಲ್ಲಿ ಐತಿಹಾಸಿಕ ಮಹತ್ವದ ಶೋಧ

ಪೂರ್ವ ಬಂಗಾಳದಲ್ಲಿ ಮಿಲಿಟರಿಯವರು ಕೆಲವು ಸ್ಥಳಗಳನ್ನು ಅಗೆಯುತ್ತಿದ್ದಾಗ ಕೆಲವು ಐತಿಹಾಸಿಕ ಮಹತ್ವದ ನಾಣ್ಯಗಳು, ಶಿಲ್ಪಗಳು, ಚಿತ್ರ ಗೊಂಬೆಗಳು ದೊರೆತಿವೆ. ಬೌದ್ಧಕಾಲದ ಅವಶೇಷಗಳೆ ಹೆಚ್ಚಾಗಿ ಕಂಡು ಬಂದಿವೆ. ಯಾವುದೋ ಒಂದು ಬೆಳ್ಳಿಸತುವಿನ ಸುರುಳಿಯನ್ನು ಚಂದ್ರವಂಶದ ಅರಾಖಾನದ ಓರ್ವ ರಾಜನು ಕೊಟ್ಟಿದ್ದಾನೆಂದು ದೊರೆತ ಸುರುಳಿಯ ಮೇಲಿಂದ ಊಹಿಸಲಾಗಿದೆ. ಇತಿಹಾಸ ಸಂಶೋಧಕರಿಗೆ ಇಲ್ಲೊಂದು ಭಂಡಾರ ದೊರೆತಂತಾಗಿದೆ.

ಪುಸ್ತಕ ಜಪ್ತಿ

ಮುಂಬಯಿಯ ಪತ್ರಿಕೋದ್ಯಮಿ ಶ್ರೀ ಡಿ ಎಫ್. ಕಾರಂಕರು ಬರೆದ I go west ಮತ್ತು Karaka Hits Propaganda ಎಂಬ ಪುಸ್ತಕಗಳ ಪ್ರತಿಗಳನ್ನು ವಿಕ್ಟೋರಿಯಾ ಟರ್ಮಿನಸ್ ಸ್ಟೇಶನಿನಿಂದ ಪೋಲೀಸರು ಜಪ್ತಿಮಾಡಿ ಕೊಂಡೊಯ್ದಿರುವರು.

ಬಂಗಾಲದ ಬರಗಾಲಕ್ಕೆ ಅಮೆರಿಯೇ ಹೊಣೆ

ಬಂಗಾಳದ ಈ ಅನಾಹುತಕ್ಕೆ ಪ್ರಾಂತಿಕ ಸರಕಾರವಾಗಲಿ, ಕೇಂದ್ರ ಸರಕಾರವಾಗಲಿ ಹೊಣೆಯಾಗಿರದೆ, ನಿಜವಾದ ಇದರ ಜವಾಬ್ದಾರಿ ಭಾರತ ಸರಕಾರ ಮತ್ತು ಬ್ರಿಟಿಷ್ ಸರಕಾರಗಳ ಮೇಲಿದೆ. ಔದಾಸೀನ್ಯದಿಂದಲೂ, ಅಲಕ್ಷ್ಯದಿಂದ ಸಕಾಲದಲ್ಲಿ ಯೋಗ್ಯ ಕಾರ್ಯ ಕ್ರಮ ಕೈಕೊಳ್ಳದಿರುವುದರಿಂದಲೂ ಈ ವಿಪತ್ತು ಪ್ರಾಪ್ತವಾಗಿದೆ ಎಂದು ಬಂಗಾಳ ಪ್ರಾಂತವನ್ನೆಲ್ಲ ಸಂಚರಿಸಿ ಬಂದ ಲೀಗ್ ಮುಖಂಡ ಲಿಯಾಖತ್ ಆಲಿಖಾನ್ ಮತ್ತು ಇಸ್ಮಾಯಿಲ್ ಖಾನ್ ಇವರು ಹೇಳಿಕೆಯಿತ್ತಿರುವರು.

ಬೊಂಬಯಿಯಲ್ಲಿ ಸ್ತ್ರೀ ಜ್ಯೂರರು

ಭಾರತದಲ್ಲಿ ಇದೇ ಮೊದಲನೆಯ ಸಲವಾಗಿ ಬರುವ ಈಸ್ಟರಿನಿಂದ ಸ್ತ್ರೀ ಜ್ಯೂರರು ಕ್ರಿಮಿನಲ್ ಸೆಶನ್ಸ್‌ನಲ್ಲಿ ಕೆಲಸಮಾಡುವಂತೆ ಬೊಂಬಯಿ ಹೈಕೋರ್ಟಿನವರು ಆಜ್ಞೆ ಹೊರಡಿಸಿದ್ದಾರೆ

'ಭಾರತದ ಕುರಿತು ಬಿಳಿ ಕಾಗದ

'೧೯೪೩ರಲ್ಲಿ ಭಾರತದ ಆಹಾರ ಪರಿಸ್ಥಿತಿ' ಎಂಬ ವಿಚಾರದಲ್ಲಿ ಕಾಮನ್ಸ್ ಸಭೆಯಲ್ಲಿ 'ಬಿಳಿ ಕಾಗದ' ಮಂಡಿಸಲಾಗಿದೆ. ಭಾರತದ ಅನ್ನ ಸಮಸ್ಯೆ ಪರಿಹರಿಸುವ ಕುರಿತು ಕಾಂಗ್ರೆಸ್ ಮುಂದಾಳುಗಳೊಡನೆ ಆಲೋಚಿಸಬಾರದೇ ಎಂದು ಕೇಳಿದ್ದಕ್ಕೆ ಅವರ ಧೋರಣೆ ಬದಲಾಗದೆ ಹಾಗೆ ಮಾಡಲಾಗುವುದಿಲ್ಲವೆಂದರು ಅಮೆರಿ.

ಕಿಶೋರಲಾಲರ ಬಿಡುಗಡೆಗೆ ಪ್ರಿವಿ ಕೌನ್ಸಿಲ್ ಅಪೀಲು

ಭಗತ್ ಸಿಂಗರ ಖಟ್ಲೆಯ ಆರೋಪಿಗಳಲೊಬ್ಬರಾದ ಶ್ರೀ ಕಿಶೋರಲಾಲರು ೧೪ ವರ್ಷ ಅವಧಿ ಜೈಲುವಾಸ ಮಾಡಿದ್ದರಿಂದ ಅವರ ಬಿಡುಗಡೆ ಮಾಡಬೇಕೆಂದೂ, ಇನ್ನೂ ಜೈಲಲ್ಲಿಡುವುದು ಅನ್ಯಾಯವೆಂದೂ ಅರ್ಜಿಮಾಡಿದ್ದಲ್ಲಿ ಲಾಹೋರ್ ಹೈ ಕೋರ್ಟು ಇದನ್ನು ನಿರಾಕರಿಸಿದ್ದರಲ್ಲು ಈಗ ಪ್ರಿವಿ ಕೌನ್ಸಿಲು ಅರ್ಜಿ ಮಾಡಲು ಅಪ್ಪಣೆ ಕೊಟ್ಟಿದೆ.

ವೈಸರಾಯರು ಗವರ್ನರರನ್ನು ಕಾಣುವರು

ಕಲ್ಕತ್ತೆಯಿಂದ ಮರಳಿ ಬಂದ ಮೇಲೆ ವೈಸರಾಯ್ ವೇವಲರು ಪ್ರಾಂತಿಕ ಗವರ್ನರರುಗಳ ಭೇಟಿಯಾಗಿ, ದೇಶದ ಆಹಾರ ಪರಿಸ್ಥಿತಿ, ರಾಜಕೀಯ ಬಿಕ್ಕಟ್ಟು, ಯುದ್ಧ ವಿಚಾರಗಳನ್ನೆಲ್ಲಾ ಚರ್ಚಿಸುವರೆಂದು ತಿಳಿದು ಬರುತ್ತದೆ.

ಕಾರ್ನಾಡ್ ಸದಾಶಿವರಾವ್ ಸ್ಮಾರಕ ಧರ್ಮಾಸ್ಪತ್ರೆ

ಬೊಂಬಯಿಯಲ್ಲಿ ದೇ. ಭ. ಕಾರ್ನಾಡ್ ಸದಾಶಿವ ರಾವ್ ಹೊಮೊಯೊಪೆತಿಕ್ ಧರ್ಮಾಸ್ಪತ್ರೆಯೊಂದು ತೆರೆಯಲ್ಪಟ್ಟಿದೆ. ಮದ್ರಾಸ್ ಪ್ರಾಂತದಲ್ಲಿ, ದಕ್ಷಿಣ ಕನ್ನಡದಲ್ಲಿ ಹುಟ್ಟಿದ ಇವರ ಸ್ಮಾರಕವನ್ನು ಮುಂಬಯಿ ಪ್ರಾಂತದವರಾದರೂ ಮಾಡಿದ್ದು ಅಭಿನಂದನೀಯವಿದೆ. ಪಂಜಾಬಿನ ದೇಶ ಭಕ್ತ ಡಾಕ್ಟರರೊಬ್ಬರು ಇದರ ಮೇಲ್ವಿಚಾರಕರಾಗಿರುವರು. ಕಾರ್ನಾಡ್ ಸದಾಶಿವರಾಯರು ಅಖಿಲ ಭಾರತ ವ್ಯಕ್ತಿಯಾಗಿದ್ದರೆಂಬುದಕ್ಕೆ ಇದೊಂದು ಸಾಕ್ಷಿಯಾಗಿದೆ.

ರಿವೆ ಕೀತನರ ಮೇಲೆ ನಿರ್ಬಂಧ

ಮದ್ರಾಸಿನ ಚೆಂಗಲ್ಪಟ್ ಶಿಬಿರದಲ್ಲಿನ ವಿದ್ಯಾರ್ಥಿಗಳ ಸಭೆಗೆ ಬರಲಿರುವ ರಿವೆ. ಆರ್ ಆರ್ ಕೀತನರ ಮೇಲೆ ಮದ್ರಾಸ್ ಸರಕಾರವು ಮದ್ರಾಸ್ ಪ್ರಾಂತಕ್ಕೆ ಕಾಲಿಡಬಾರದೆಂದು ನಿರ್ಬಂಧ ಹಾಕಿದೆ. ರಿವೆ ಕೀತನರು ಅಮೆರಿಕನರು. ಮಿಶನರಿಯಾಗಿ ಬಂದವರು, ಆ ಕೆಲಸಕ್ಕೆ ೧೯೩೦ರಲ್ಲಿ ರಾಜಿಕೊಟ್ಟು ಭಾರತದ ಗ್ರಾಮಸೇವೆಗಾಗಿ ದುಡಿಯುತ್ತಾರೆ. ಕೆಂಗೇರಿ ಗುರುಕುಲ ಆಶ್ರಮದಲ್ಲಿ ಕೆಲ ವರ್ಷ ಇದ್ದರು. ಈಗ ಬೆಂಗಳೂರಿನ ಬಳಿ ಆನಂದ ಆಶ್ರಮದಲ್ಲಿದ್ದು ಗ್ರಾಮಸೇವೆ ಮಾಡುತ್ತಾರೆ ಇತ್ತೀಚೆಗೆ ಅವರು ರಾಷ್ಟ್ರೀಯ ವಿದ್ಯಾರ್ಥಿ ಸಂಘದವರಿಗೆ ರಚನಾತ್ಮಕ ಕಾರ್ಯಗಳ ಕುರಿತು ಹಿತ ಸೂಚನೆ ಕೊಡುತ್ತಾ ಅವರ ಸಂಘಟನೆಗೆ ಸಹಾಯಮಾಡುತ್ತಿರುವರು. ಅವರ ಪತ್ನಿ ಚಿಕಾಗೋ ವಿಶ್ವವಿದ್ಯಾಲಯದ ಎಂ ಡಿ ಪದವೀಧರರಾದ ಡಾಕ್ಟರ್ ಅವರೂ ಗ್ರಾಮಸೇವೆ ಮಾಡುತ್ತಿರುವರು

ಸ್ಥಿರಆಸ್ತಿ ಏಲಂ

ದ ಕ ಸಬ್ ಕೋರ್ಟಿನ ಕ್ರಮ ನಂಬ್ರ 21/1940ನೇ ವ್ಯಾಜ್ಯದಲ್ಲಿ ಕೋರ್ಟಿನವರು ಆಜ್ಞಾಪಿಸಿದ ಮೇರೆಗೆ ಮಂಗಳೂರು ತಾಲೂಕು ಮಣಿ ನಾಲ್ಕೂರು ಗ್ರಾಮದ ನೇತ್ರಾವತಿ ಹೊಳೆ ಬಳಿ ಮುಂಡೇಲು ಎಂಬ ವರ್ಷ 1ರ ಅಕ್ಕಿ ಮುಡಿ 63 (ಅರುವತ್ತಮೂರು) ತೆಂಗಿನ ಕ್ವಾ 300 (ಮುನ್ನೂರು) ಗೇಣಿಯ ರೂ 51-8-0 ತೀರ್ವೆಯ ಆಸ್ತಿ 1 ಮತ್ತು ವರ್ಷ 1ರ 26 ಮುಡಿ ಅಕ್ಕಿ ಗೇಣಿಯ ನಡುಮೊಗ್ರು ಎಂಬ ಆಸ್ತಿ 1 ಸಹ ಎರಡು ಆಸ್ತಿಗಳು ಪುತ್ತೂರು ನನ್ನ ಆಫೀಸಿನಲ್ಲಿ ತಾ 1-611-1943ಕ್ಕೆ ಘಂಟೆ (ಹಗಲು) 10ಕ್ಕೆ ಏಲಂ ಮಾಡಲ್ಪಡುವದು. ಹೆಚ್ಚಿನ ವಿವರ ಭಾಷಾ ಏಲಂ ಇಸ್ತಿಹಾರಿನ ಪ್ರತಿಯನ್ನು ನನ್ನಿಂದ ಪಡೆದು ತಿಳಿಯಬಹುದು.

ಪುತ್ತೂರು } ಮೊಳಹಳ್ಳಿ ಶಿವರಾವ್
21-10-43 } ಕೋರ್ಟು ರಿಸೀವರ್

ಜಿಲ್ಲಾ ಸಮಾಚಾರಗಳು

ಮಂಗಳೂರು

ವಿದ್ಯಾರ್ಥಿ ಸಂಘ
ಐಕ್ಯ ಪ್ರಯತ್ನ ಯಾರಿಂದೆ ಮುರಿಯಿತು?

ಮಂಗಳೂರು ವಿದ್ಯಾರ್ಥಿ ಸಂಘದಲ್ಲಿ ಕಳೆದ ವರ್ಷದಿಂದ ಒಡಕು ಹುಟ್ಟಿ ಈಗ ಎರಡು ಯೂನಿಯನ್‌ಗಳು 'ಮಂಗಳೂರು ವಿದ್ಯಾರ್ಥಿ ಸಂಘ'ವೆಂಬ ಹೆಸರಿನಿಂದ ಸ್ಥಾಪಿತವಾಗಿ (ಕಾರ್ನಾಡ್ ಸದಾಶಿವ ರಾವ್ ರಸ್ತೆಯಲ್ಲಿ ಒಂದು, ಮತ್ತೊಂದು ಕೆನರಾ ಹ್ಯಾಸ್ಕೂಲ್ ರಸ್ತೆಯಲ್ಲಿ) ನಿಯಷ್ಟೆ? ಇವುಗಳೊಳಗೆ ಐಕ್ಯ ಪ್ರಯತ್ನ ನಡೆಯುತ್ತಿದ್ದು ತಾ. ... ರಂದು ಎರಡು ... ಈ ಎರಡು ಯೂನಿಯನುಗಳ ಪ್ರತಿನಿಧಿಗಳ ಸಭೆಯು ದಕ್ಷಿಣ ಕನ್ನಡ ಪತ್ರಿಕೋದ್ಯೋಗಿ ಸಂಘದ ಆಫೀಸಿನಲ್ಲಿ ಜರಗಿತು. ಶ್ರೀಗಳಾದ ಕೆ. ಕೆ. ರೈ ಮತ್ತು ಬಿ. ಎಸ್. ಭಾಸ್ಕರ ರೈ ಇವರು ಮಧ್ಯಸ್ಥರಾಗಿದ್ದರು. ಕಾರ್ನಾಡ್ ಸದಾಶಿವ ರಾವ್ ರಸ್ತೆಯ ಹಳೆ ವಿದ್ಯಾರ್ಥಿ ಸಂಘದವರು ಯಾವುದೇ ಶರತ ಹಾಕದೆ ಮಧ್ಯಸ್ಥರ ತೀರ್ಮಾನದಂತೆ ರಾಜಿಗೆ ಬರಲು ಒಪ್ಪಿ ನಿರ್ಣಯ ಮಾಡಿದ್ದರು. ಕೆನರಾ ಹೈಸ್ಕೂಲ್ ರಸ್ತೆಯ ಹೊಸ ಯೂನಿಯನಿನವರು, ತಮ್ಮನೇ ಅಧ್ಯಕ್ಷರನ್ನು ಮುಂದಿನ ಸಂಘಟಿತ ಯೂನಿಯನಿಗೆ ಅಧ್ಯಕ್ಷರಾಗಿ ಮಾಡಬೇಕು, ಎರಡು ವರ್ಷಗಳ ಲೆಕ್ಕಪತ್ರವನ್ನು ಹಳೇ ಯೂನಿಯನಿನವರು ಒಪ್ಪಿಸಬೇಕು, ಹಿಂದೆ ಹಳೆ ಯೂನಿಯನಿನ ಹೆಸರಲ್ಲಿ ಆಫೀಸ್ ಸೆಕ್ರೆಟರಿ ಶ್ರೀ ಶಿವಶಂಕರ ರಾಯರು ಹೊರಡಿಸಿದ ಪ್ರಕಟಣೆಯಲ್ಲಿರುವ ಆರೋಪವನ್ನು ಅಲ್ಲಗಳೆದು ಪ್ರಕಟಣೆ ಕೊಡಬೇಕು, ಮತ್ತೀ ಸಂಘಟಿತ ಯೂನಿಯನು ಎರಡು ಯೂನಿಯನುಗಳ 'ಜನರಲ್ ಬೋಡಿ' ಯಿಂದ ಚುನಾಯಿತವಾಗದೆ ಕೇವಲ 'ಎಕ್ಸಿಕುಟಿವ್'ನಿಂದ ಆರಿಸಲ್ಪಡಬೇಕು ಎಂದು ಶರತಗಳನ್ನು ಹಾಕಿ ನಿರ್ಣಯ ಮಾಡಿ ಬಂದಿದ್ದರು.

ಹಳೆಯ ಯೂನಿಯನಿಗೆ ಶ್ರೀ ರಂಗರಾವ್ ತಲ್ಲೇರಿಕರರು ಅಧ್ಯಕ್ಷರಾಗಿರುವುದರಿಂದ ಹೊಸ ಯೂನಿಯನಿನವರು ತಮ್ಮದೇ ಅಧ್ಯಕ್ಷರಾಗಬೇಕೆಂಬುದು ನ್ಯಾಯವಲ್ಲವೆಂದು ಮಧ್ಯಸ್ಥರು ಹೇಳಲು ಕೊನೆಗೆ ಮೂರನೆಯವರನ್ನು ಅಧ್ಯಕ್ಷರಾಗಿ ಮಾಡುವ ಸೂಚನೆಗೆ ಉಭಯತರೂ ಒಪ್ಪಿದರು. ಒಂದು ವರ್ಷದ ಲೆಕ್ಕಪತ್ರವನ್ನು ಒಪ್ಪಿಸಲು ಮಾತ್ರ ತಾವು ಜವಾಬ್ದಾರರೆಂದು ಹಳೆ ಯೂನಿಯನಿನವರು ವಾದಿಸಿದರೂ, ಮಧ್ಯಸ್ಥರು ಹೇಳಿದಂತೆ ಆಫೀಸಿನಲ್ಲಿ ಹಿಂದಿನ ಲೆಕ್ಕಪತ್ರಗಳೆಲ್ಲ ಇರುವುದರಿಂದ ಅದನ್ನು ನೋಡಲು ಆಕ್ಷೇಪವಿಲ್ಲವೆಂದೂ ಅದನ್ನು ಪರಿಶೀಲಿಸಲು, ಮಧ್ಯಸ್ಥರಿಬ್ಬರು ಹಾಗೂ ಎರಡು ಯೂನಿಯನ್‌ಗಳ ಪ್ರತಿನಿಧಿಗಳ ಸಮಿತಿ ಏರ್ಪಡಾಯಿತು. ಶ್ರೀ ಶಿವಶಂಕರ ರಾಯರು ಹೊರಡಿಸಿದ ಪ್ರಕಟಣೆಯ ಕುರಿತು ತಾವು ಮೊದಲೇ ಅದನ್ನು ಅಲ್ಲಗಳೆದಿರುವ ಠರಾವು ಮಾಡಿರುವೆವೆಂದು ಹೇಳಿದರೂ, ಅದು ಸಾಲದೆಂದೂ, ಅದನ್ನು ಸಂಪೂರ್ಣ ತಾವು ಮನ್ನಿಸುವುದಿಲ್ಲವೆಂಬರ್ಥದ ಶಬ್ದ ಹಾಕಿಯೇ ಪ್ರಕಟಿಸಬೇಕೆಂದು ಹೊಸ ಯೂನಿಯನಿನವರು ವಾದಿಸಲು ಇದರ ಕುರಿತು ದೀರ್ಘ ಚರ್ಚೆಯಾಗಿ, ಶಬ್ದದ ಕುರಿತು ಚರ್ಚಿಸಿ ಐಕ್ಯವಾಗುವುದನ್ನು ಮುಂದುವರಿಸುವುದು ಬೇಡವೆಂಬ ಮಧ್ಯಸ್ಥರ ಮಾತಿಗೆ ಮನ್ನಣೆ ಕೊಟ್ಟು ಹಳೆ ಯೂನಿಯನಿನವರು ಅದಕ್ಕೂ ಒಪ್ಪಿಗೆಯಿತ್ತರು.

ಕೊನೆಯದಾಗಿ ಮುಂದೆ ಐಕ್ಯವಾಗುವ ಹೊಸ ಕಾರ್ಯಕಾರೀ ಮಂಡಳದ ವಿಚಾರ ಚರ್ಚೆ ಬಂತು. ಹೊಸ 'ಎಕ್ಸಿಕುಟಿವ'ನ್ನು ಒಂದಾದ 'ಜನರಲ್ ಬೋಡಿ' ಆರಿಸುವುದು ನ್ಯಾಯವೂ ಪ್ರಜಾಪ್ರಭುತ್ವ ರೀತಿಯದಾಗುತ್ತದೆಂದೂ ಮಧ್ಯಸ್ಥರು ಹೇಳಿದರು. ಹಳೆ ಯೂನಿಯನ್‌ನಿನವರದಕ್ಕೆ ಒಪ್ಪಿದರು. ಆದರೆ ಹೊಸ ಯೂನಿಯನಿನವರು ಬಲವಾಗಿ ಚರ್ಚಿಸಿ ಹಾಗಾಗಕೂಡದೆಂದರು. ಆ ಮೇಲೆ ಎರಡು ಪಕ್ಷಗಳಿಗೂ ಸಮಾಧಾನವಾಗಿ, ಐಕ್ಯವಾದ ಯೂನಿಯನಿನ ಎಕ್ಸಿಕುಟಿವನ್ನು ಈ ಎರಡು ಯೂನಿಯನ್ ಪ್ರತಿನಿಧಿಗಳಿಂದ ಈಗ ಆರಿಸಿ, ಆ 'ಎಕ್ಸಿಕುಟಿವ್'ಗೆ 'ಜನರಲ್ ಬೋಡಿ'ಯ ಒಪ್ಪಿಗೆ ಪಡೆಯಬೇಕೆಂದು ಮಧ್ಯಸ್ಥರು ತೀರ್ಮಾನಿಸಿದರು. ಈ ತೀರ್ಮಾನಕ್ಕೆ ಮೊದಲನೆ ದಿನ ಉಭಯತರೂ ಒಪ್ಪಿದ್ದರು. ಆದರೆ ಮರುದಿನದ ಸಭೆಯಲ್ಲಿ ಹೊಸ ಯೂನಿಯನಿನವರು ಜನರಲ್ ಬೋಡಿ ಒಪ್ಪಿಗೆ ಪಡೆಯುವ ಶರ್ತಕ್ಕೆ ಒಪ್ಪಲಿಲ್ಲ. 'ಜನರಲ್ ಬೋಡಿ' ಒಪ್ಪಿಗೆ ಪಡೆಯದೆ, ಹಾಗು ಅವರಿಗೆ ಐಕ್ಯವಾದ ವಿಷಯವೇನನ್ನೂ ತಿಳಿಸದೆ ರಾಜಿಮಾಡುವುದು ಪ್ರಜಾಪ್ರಭುತ್ವ ತತ್ವಕ್ಕೆ ವಿರೋಧವಾಗುತ್ತದೆಂದು ಐಕ್ಯ ಪ್ರಯತ್ನವು ಮುರಿಯಿತು.

ದ. ಕ. ಜಿಲ್ಲಾ ಮಹಿಳಾ ಪರಿಷತ್ತು

ಇದೇ ಬರುವ ನವಂಬರ್ ತಾ. ೧೪ರಲ್ಲು ದ. ಕ. ಜಿಲ್ಲಾ ಮಹಿಳಾ ಪರಿಷತ್ತು ... ಬೆಸೆಂಟ್ ರಾಷ್ಟ್ರೀಯ ಪಾಠಶಾಲೆಯಲ್ಲಿ ಜರಗುವುದು. ಶ್ರೀಮತಿ ಬಿ. ಪದ್ಮಾಬಾಯಿ, ಎಸ್ ರಾವ್, ಬಿ. ಎ. (ಬನಾರಸ್ಸಿನ ಥಿಯೊಸೊಫಿಕಲ್ ಮಹಿಳಾ ವಿಶ್ವವಿದ್ಯಾಲಯದ ನಿವೃತ್ತ ಪ್ರಿನ್ಸಿಪಾಲರು) ಇವರು ಅಧ್ಯಕ್ಷತೆವಹಿಸುವರು. ಪರಿಷತ್ತಿನ ಉದ್ಘಾಟಕರು ಶ್ರೀಮತಿ ರಮಾಬಾಯಿ, ವಿ ಪೈ. ಕಾರ್ಯಕ್ರಮ - ಬೆಳಗ್ಗೆ ೧೦ ಗಂಟೆಗೆ - ಪ್ರತಿನಿಧಿಗಳನ್ನು ಸ್ವಾಗತಿಸುವುದು, - ಕಾರ್ಯಕಾರಿ ಸಮಿತಿ ಸಭೆ, ಸಾಯಂಕಾಲ ೫ ಘಂಟೆಗೆ ಪರಿಷತ್ತಿನ ಬಹಿರಂಗ ಅಧಿವೇಶನ.

ಎಡ್ವೈಜರರ ಆಗಮನ

ಜಿಲ್ಲಾ ಭೂಮಾಲಕ ಸಂಘದವರ ವಿನಂತಿಯನ್ನು ಮನ್ನಿಸಿ ಮದ್ರಾಸು ಗವರ್ನರರ ಎಡ್ವೈಜರರಾದ ಶ್ರೀ ರಾಮ ಮೂರ್ತಿಯವರು ನವೆಂಬರ್ ಮೊದಲನೇ ಇಲ್ಲವೆ ಎರಡನೆ ವಾರದಲ್ಲಿ ಮಂಗಳೂರಿಗೆ ಬರಲಿರುವರೆಂದು ಕೇಳಿಬರುತ್ತಿದೆ.

ವಾಚನಗೋಷ್ಠಿ

ಪ್ರಕಾಶ ಕೂಟದ ಆಶ್ರಯದಲ್ಲಿ ವಾಚನ ಗೋಷ್ಠಿಯೊಂದು ತಾ. ೩೦ರಂದು ಸಂಜೆ ಜರಗಿತು. ಶ್ರೀ ಕೆ ಸದಾಶಿವ ಅವರು ಅಧ್ಯಕ್ಷತೆ ವಹಿಸಿದ್ದರು. ದಿವಂಗತ ಟಿ. ಎಸ್. ವೆಂಕಣ್ಣಯ್ಯನವರ ಕುರಿತು 'ಹೊಯಿಸಳ'ರು ಬರೆದಿದ್ದ ಕವಿತೆಯನ್ನು ದಿವಂಗತ ಪೇಜಾವರ ಸದಾಶಿವ ರಾಯರ ಎರಡು ಕವಿತೆಗಳನ್ನು ಶ್ರೀ ಬಿ. ಎಂ ಇದಿನಬ್ಬ ಅವರು ಹಾಡಿದರು. ಶ್ರೀ ಶಿ. ರಾ ಕುಳುಕುಂದರು, ಬ್ರಿಟಿಷ್ ತರುಣ ಕಮ್ಯೂನಿಸ್ಟ್ ಲೀಗಿನ ಕಾರ್ಯದರ್ಶಿ, ಬೆಡ್ ವಿಲಿಸರ When ಎಂಬ ಲೇಖನವನ್ನೂ ತಮ್ಮ 'ಪೂರ್ಣ ಚಿತ್ರ' ಕತೆಯನ್ನೂ ಓದಿದರು. 'ನಮ್ಮ ಕವಿತೆಗಳು' ಪುಸ್ತಕದಲ್ಲಿ ಪ್ರಕಟವಾದ 'ಹೊಸ ಹಾಡು' ಮತ್ತು 'ಊರ್ಮಿಳಾ' ಎಂಬ ತಮ್ಮ ಕವಿತೆಗಳನ್ನು ಶ್ರೀ ಕೆ ಕೆ. ರೈ ಅವರು ಓದಿ ಹೇಳಿದರು. ಸಭಾಂತ್ಯದಲ್ಲಿ ಶ್ರೀ ಜೆ. ರಾಮಚಂದ್ರ ಭಟ್ಟರು ಧನ್ಯವಾದಗಳನ್ನರ್ಪಿಸಿದರು.

ಮುಂದಿನ ಸಭೆಯು ತಾ. ೧೪ನೇ ರವಿವಾರ ಸಂಜೆ ೬ ಘಂಟೆಗೆ ಪತ್ರಿಕೋದ್ಯೋಗಿ ಸಂಘದ ಕಟ್ಟಡದಲ್ಲಿ ಜರುಗುವುದು. ಆ ದಿನ ಗಳಗನಾಥರ 'ಮಾಧವ ಕರುಣಾವಿಲಾಸ' ಕಾದಂಬರಿಯ ಕುರಿತು ಅಭ್ಯಾಸ ಗೋಷ್ಠಿ ನಡೆಯುವುದು

ಬಿಡುಗಡೆ

ಕಾಸರಗೋಡಿನ ಅನಂತ ಮಲ್ಯ ಎಂಬವರನ್ನು ಕೊರಗ ಎಂಬ ಅವರ ಒಕ್ಕಲು ಖೂನಿ ಮಾಡಿದನೆಂಬ ಆರೋಪದ ಮೊಕದ್ದಮೆ ನಮ್ಮ ಜಿಲ್ಲಾ ಸೆಶ್ಶನ್ಸ್ ಜಡ್ಜರಲ್ಲಿ ವಿಚಾರಣೆಗೆ ಬಂದಿತು. ಪ್ರಾಸಿಕ್ಯೂಶನಿನ ಸಾರಾಂಶವಿಷ್ಟು - ಅನಂತ ಮಲ್ಯರು ಇದೇ ಇಸ್ವಿ ಎಪ್ರಿಲ್ ವಿಷುವಿನಂದು ಮನೆ ಬಿಟ್ಟು ಹೊರಡುವಂತೆ ಆರೋಪಿಯನ್ನು ಕೇಳಿದ್ದರು. ಅವನು ಮನೆ ಬಿಟ್ಟಿರಲಿಲ್ಲ. ಕಳೆದ ಅಗೋಸ್ತು ತಾ. ೧೮ರಲ್ಲಿ ಮಲ್ಯರು ಆರೋಪಿಯ ಮನೆಗೆ ಹೋಗಿ ಅವನು ಮನೆಬಿಟ್ಟು ಹೊರಡಬೇಕೆಂದರು. ಆರೋಪಿ ಹೆಂಡತಿಯೊಡನೆ ಮನೆಯ ಸಾಮಾನುಗಳನ್ನು ಹೊರಗಿಡುವಾಗ ಅವನ ಕೈಯಲ್ಲಿ ಕತ್ತಿಯೂ ಇತ್ತು. ಮಲ್ಯರು ಸಾವಣನಿನ ಒಂದು ಬುಟ್ಟಿಯಲ್ಲಿ ಏನಿದೆ ಎಂದು ಇಣಿಕಿ ನೋಡುತ್ತಿರುವಾಗ ಆರೋಪಿ ಹಿಂದಿನಿಂದ ಬಂದು ಅವರ ತಲೆ ಕತ್ತರಿಸಿದ್ದು ಓಡಿದ್ದ, ಕತ್ತಿ ಚುಚ್ಚಿದ್ದ ತಲೆಯ ಸಹಿತ ಮಲ್ಯರನ್ನು ಡಾ। ರಾಘವೇಂದ್ರರಾಯರ ನರ್ಸಿಂಗ್ ಹೋಮ್‌ಗೆ ತಂದು ಚಿಕಿತ್ಸೆ ಮಾಡಲಾಯಿತು. ೫ ದಿನಗಳ ಮೇಲೆ ಅವರು ಮೃತರಾದರು. ಡಿಫೆನ್ಸ್‌ನ ಸಾರಾಂಶವಿಷ್ಟು - ಕೊರಗ ಮನೆಯಿಂದ ಹೊರಗಿದ್ದಾಗ ಮಲ್ಯರು ಅವನ ಮನೆಗೆ ಹೋಗಿ, ಅವನ ಹೆಂಡತಿಯನ್ನೆಳೆದು, ಮನೆ ಬಿಡಬೇಕೆಂದು ಗದರಿಸ್ಸ, ಆವಳಿಗೆ ಮುಷ್ಟಿಯಿಂದ ಗುದ್ದಲಾಗಿ ಅವಳು ಬೊಬ್ಬೆ ಹಾಕಿದಳು. ಕೊರಗ ಮನೆಗೆ ಓಡಿ ಬಂದ ಕೂಡಲೇ ಮಲ್ಯರು ಅವನನ್ನು ಹಿಡಿದು ಕೊರಗನ ಕೈಯಲ್ಲಿದ್ದ ಕತ್ತಿಯನ್ನು ಸೆಳೆದುಕೊಳ್ಳಲು ಮಾಡಿದ ಆ ಕಾದಾಟದ ಕಾಲದಲ್ಲಿ ಕತ್ತಿ ಅವರ ತಲೆ ಕತ್ತರಿಸಿ ಗಾಯಪಡಿಸಿತು.

ಎಸೆಸರು ಆರೋಪಿ ನಿರ್ದೋಷಿ ಎಂದು ಒಮ್ಮತದಿಂದ ತೀರ್ಮಾನಿಸಿದುದನ್ನು ಜಡ್ಜರೂ ಒಪ್ಪಿ ಆರೋಪಿಯನ್ನು ಬಿಡುಗಡೆ ಮಾಡಿದರು.

ದಂಡನೆ

ಮಾರ್ನಮಿಕಟ್ಟೆ ಸಿಕೇರಾ ರಂಗಿನ ಕಾರ್ಖಾನೆಯ ಕೆಲಸಗಾರರು ಕೂಟ್ಟ ಬತ್ತೆ ಮೊದಲಾದುವನ್ನು ಹೆಚ್ಚಿಸಬೇಕೆಂಬ ಕೇಳಿಕೆ ಮುಂದಿಸಿ ಕಳೆದ ಮೇ ತಾ ೧೭ರಂದು ಮುಷ್ಕರ ಹೂಡಿದ್ದರು. ಆ ಸಂದರ್ಭದಲ್ಲಿ ಒಬ್ಬ ನೇಕಾರ ಮುಷ್ಕರ ಹೂಡಲಿಲ್ಲವೆಂಬ ಕಾರಣದಿಂದ ಅವನಿಗೆ ಹೊಡೆದರೆಂದು ಆರೋಪಿಸಿ ೮ ಮಂದಿಯನ್ನು ಪೋಲೀಸರು ಕೈದು ಮಾಡಿದ್ದರು. ಆ ಮೊಕದ್ದಮೆ ಈಗ ಇಲ್ಲಿಯ ಸ್ಟೇ। ಸಬ್ ಮ್ಯಾಜಿಸ್ಟ್ರೇಟರಾದ ಶ್ರೀ ಸದಾನಂದ ಶ್ಯಾನುಭೋಗರಿಂದ ತೀರ್ಮಾನವಾಯಿತು. ಮ್ಯಾಜಿಸ್ಟ್ರೇಟರು ಪೋಲೀಸರ ಹೇಳಿಕೆಯನ್ನು ನಂಬುತ್ತ ಆರೋಪಿಗಳು ನ್ಯಾಯ ತಪ್ಪಿ ವರ್ತಿಸಿದರೆಂದು ಆರೋಪಿಗಳಲ್ಲಿ ೭ ಮಂದಿಗೆ ೬-೬ ತಿಂಗಳ ಕಠಿನ ಸಜೆ ವಿಧಿಸಿದರು. ಆನೇ ಆರೋಪಿಯ ವಿಚಾರಣೆ ಪೂರ್ಣವಾಗಿಲ್ಲ

ತಿದ್ದುಪಡಿ

೩೧-೧೦-೪೮ನೇ ಸಂಚಿಕೆಯ ಎರಡನೆಯ ಪುಟ ನಾಲ್ಕನೆಯ ಕಾಲಮಿನಲ್ಲಿ 'ಕಳೆದ ವರ್ಷ ೧೩ ಲಕ್ಷ ಅಕ್ಕಿ ಮುಡಿ ರಿಕ್ವಿಸಿಶನ್ ಮಾಡಲಾಯಿತು' ಎಂದಿರುವುದನ್ನು 'ಕಳೆದ ವರ್ಷ ಮಂಗಳೂರು ಒಂದರಲ್ಲಿ ೩೦ ಸಾವಿರ ಮುಡಿ ಅಕ್ಕಿ ವ್ಯಾಪಾರಸ್ಥರಿಂದ ರಿಕ್ವಿಸಿಶನ್ ಮಾಡಲಾಯಿತು' ಎಂದು ತಿದ್ದಿ ಓದಬೇಕಾಗಿ ವಿನಂತಿ.

ನಗರಸಭೆ

ಮಂಗಳೂರು ನಗರಸಭೆ ಕಳೆದ ಸೋಮವಾರ ಕೂಡುವುದಿದ್ದು 'ಕೋರಂ' ಇಲ್ಲದೆ ಮುಂದುವರಿಯಿತು. ಕೆಲವುಂದಿ ಬಂದಿದ್ದ ಸಹಸ್ಯರು ಬಹಳ ಹೊತ್ತು ಕಾದು ಮತ್ತೆ ತೆರಳಿದರು.

ಉಡುಪಿ

ಸತ್ಕಾರಕೂಟ

'ಎಕೆಡೆಮಿ ಆಫ್ ಜನರಲ್ ಎಜ್ಯುಕೇಶನ್' ಎಂಬ ಶಿಕ್ಷಣ ಸಂಸ್ಥೆಯ ಶಿಕ್ಷಣ ನಿಲಯವು ನಡೆಯಿಸುತ್ತಿರುವ ವಿಮಾ ಶಿಕ್ಷಣ ತರಗತಿಯ ವಿದ್ಯಾರ್ಥಿಗಳಿಗೆ ವಿಮಾತತ್ವದ ಕುರಿತಾಗಿ ಉಪನ್ಯಾಸ ಮಾಲೆಯನ್ನೀಯಲು ಪ್ರೊಫೆಸರ್ ಕೆ. ಟಿ ಮಾಧವ ಪಿಕ್ಕೇರಿ, ಮೈಸೂರು, ಇವರು ಇತ್ತ ದಯೆ ಮಾಡಿಸಿದ್ದು ಉಪನ್ಯಾಸಾವಳಿಯನ್ನು ಪೂರೈಸಿ ತೆರಳುವ ಮುನ್ನ ಇವರಿಗೆ ಕೃತಜ್ಞತಾಪೂರ್ವಕವಾದ ವಿದಾಯವನ್ನೀಯುವ ಆ ಸಮಾರಂಭವನ್ನು ಆ ವಿದ್ಯಾರ್ಥಿಗಳು ಕಳೆದ ತಾ ೨೯ರಂದು ಕೆನರಾ ಮ್ಯೂಚುವಲ್ ಭವನದಲ್ಲಿ ಎಕೆಡೆಮಿಯ ರಿಜಿಸ್ಟ್ರಾರರಾದ ಡಾ। ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರುಗಿಸಿದರು.

ಪುತ್ತೂರು

ಸುಬ್ರಹ್ಮಣ್ಯ ಷಷ್ಠಿ

ದಕ್ಷಿಣ ಕನ್ನಡ ಜಿಲ್ಲಾ ಪುತ್ತೂರು ತಾಲೂಕು ಮದಕೋಭಾರ ಕುಕ್ಕೆ ಶ್ರೀ. ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಇದೇ ಒರುವ ಸ್ವಭಾನು ಸಂವತ್ಸರದ ಕಾರ್ತಿಕ ಬ। ೧೩ಯು ಬುಧವಾರ ೨೪-೧೧-೪೮ರಲ್ಲು ಉತ್ಸವ ಪ್ರಾರಂಭವಾಗಿ ಕಾರ್ತಿಕ ಬ। ೩೦ ಯು ೨೭-೧೧-೪೮ ಶನಿವಾರ ಲಕ್ಷದೀಪೋತ್ಸವ, ಮಾರ್ಗಶಿರ ಶು। ೪ಯು ಬುಧವಾರ ಹೂವಿನ ತೇರು, ಶು। ೫ಯು ಗುರುವಾರ (೨-೧೨-೪೮) ಪಂಚಮಿ ರಥೋತ್ಸವ ಶು। ೬ಯು ಶುಕ್ರವಾರ ೩-೧೨-೪೮ರಲ್ಲು ಚಂಪ ಷಷ್ಠಿ ಮಹೋತ್ಸವ, ಶು। ೭ಯು ಶನಿವಾರ ತಾ. ೪-೧೨-೪೮ರಲು ಅವಭೃತೋತ್ಸವ ಮೊದಲಾದ ಉತ್ಸವಗಳು ಶ್ರೀ ದೇವರ ಸನ್ನಿಧಿಯಲ್ಲಿ ಜರಗುವುವು.

ಪುತ್ತೂರಲ್ಲಿ ರಿಕ್ರೂಟಿಂಗ್ ಆಫೀಸು

ಕಳೆದ ತಾ ೨೭ರಲ್ಲಿ ಪುತ್ತೂರಲ್ಲಿ ಕಣ್ಣಾನೂರಿನ ಅಸಿ। ರಿಕ್ರೂಟಿಂಗ್ ಆಫೀಸರರಾದ ಕ್ಯಾಪ್ಟನ್ ಕಾಡ್ರೆ ಅವರು ಒಂದು ರಿಕ್ರೂಟಿಂಗ್ ಆಫೀಸನ್ನು ತೆರೆದರು. ಕೇಪ್ಟನರನ್ನು ಸ್ವಾಗತಿಸಿ ಹೂ ಮಾಲೆ ಹಾಕಿದ ಬಳಿಕ ಅವರು ಒಂದು ಸಭೆಯಲ್ಲಿ ರಿಕ್ರೂಟ್‌ಮೆಂಟಿನ ಕುರಿತಾಗಿ ಭಾಷಣ ಮಾಡಿದರು. ತಹಶಿಲ್ದಾರ್ ಶ್ರೀ ಬಿ ಗಣೇಶ ಅವರು 'ಡಿಫೆನ್ಸ್ ಸರ್ವಿಸು'ಗಳಿಗೆ ಸೇರುವುದರಿಂದ ಉಂಟಾಗುವ ನಾನಾ ಪ್ರಯೋಜನಗಳನ್ನು ವಿವರಿಸಿದರು

ಅಭ್ಯಾಸಗೋಷ್ಠಿ

ಹಿಂದಿನ ಬಾರಿ ಮುಂದುವರಿದ, 'ಅಂದಿನ ಅಪೂರು' ಪುಸ್ತಕದ ಮತ್ತು ದಿವಂಗತ ಎಮ್. ಎನ್ ಕಾಮತರ ಜೀವನದ ಕುರಿತಾದ ಅಭ್ಯಾಸ ಗೋಷ್ಠಿಯು ತಾ ೨೮ರಂದು ಸಂಜೆ ಮುಕ್ತಾಯವಾಯಿತು. ಶ್ರೀ ಪಿ ಕೆ ನಾರಾಯಣ ಅವರು ಅಧ್ಯಕ್ಷತೆ ವಹಿಸಿದ್ದರು

ಶ್ರೀ ಜಿ ಆರ್ ಶೆಣೈ ಅವರು ಮಾತನಾಡುತ್ತಾ, ಕಾಮತರು ಪತ್ರಿಕೋದ್ಯೋಗಿಯಾಗಿಯೂ ಜನಸೇವೆ - ಸಾಹಿತ್ಯ ಸೇವೆ - ಮಾಡಿದ್ದಾರೆ. ಕಾಮತರ ಬಾಲ್ಯದಲ್ಲಿ ಜಿಲ್ಲೆಯ ಜೀವನ ಹೇಗಿತ್ತು? ಎಂಬುದು 'ಅಂದಿನ ಅಪೂರಿನ ಕಥೆ'ಯಿಂದ ವ್ಯಕ್ತವಾಗುತ್ತದೆ. ಕತೆಗಳು ವಾಸ್ತವಿಕ, ವಿಡಂಬನಾತ್ಮಕ ಮತ್ತು ಸ್ವಾರಸ್ಯಪೂರ್ಣವಿವೆ. ಜಿಲ್ಲೆಯ ವಾತಾವರಣದಿಂದ ನಿಜರೂಪವು ಅವುಗಳಲ್ಲಿ ಕಂಡುಬರುತ್ತದೆ' ಎಂದರು

'ಹಿಂದಿನ ಹಳ್ಳಿಯ ವೈಶಿಷ್ಟ್ಯ ಇಂದು ಹಾಳಾಗಿದೆ. ಆ ಹಳೆಯದನ್ನು 'ಅಂದಿನ ಅಪೂರಿ'ನ ಕತೆಗಳು ಸ್ಮರಣೆಗೆ ತರುತ್ತವೆ' ಎಂದು ಶ್ರೀ ಜೆ ವಾಮನ ಭಟ್ಟರು ತಮ್ಮ ಭಾಷಣದಲ್ಲಿ ಹೇಳಿದರು

ಶ್ರೀ ಎಂ ವಿ ಪ್ರಭುಗಳು ಮಾತನಾಡುತ್ತಾ ''ಹೆಂಗುಸರ ಜೀವನವು ಹೆಚ್ಚಾಗಿ ಕತೆಗಳಲ್ಲಿ ಚಿತ್ರಿಸಲ್ಪಟ್ಟಿಲ್ಲ' ಎಂದರು. ಜಾನ್ಸನ್ನನಿಗೆ ಒಬ್ಬನು ಬೊಸ್ವೆಲ್. ಆದರೆ ಕಾಮತರಿಗೆ ಇಪ್ಪತ್ತು ಬೊಸ್ವೆಲರಿದ್ದಾರೆ. ಅವರು ಒಬ್ಬ ರಸಿಕ ಜೀವಿ. ಕಾಮತರು ಷೇಕ್ಸ್‌ಪಿಯರನಷ್ಟೇ ನಾಟಕಗಳನ್ನೂ ಬರೆದರು' ಎಂದು ಕಾಮತರ ಜೀವನದ ಕುರಿತು ಮಾತನಾಡುತ್ತ ಶ್ರೀ ಪ್ರಭುಗಳು ಹೇಳಿದರು.

ಅಧ್ಯಕ್ಷರು ತಮ್ಮ ಮುಕ್ತಾಯ ಭಾಷಣದಲ್ಲಿ ಹೀಗೆಂದರು: ''ಗ್ರಂಥದ ಮುನ್ನುಡಿಗಳಲ್ಲಿ ಕಾಮತರನ್ನು ಅನಂತರ ಅವರ ಕೃತಿಗಳನ್ನು ಕಾಣುತ್ತೇವೆ. ಕಾಮತರನ್ನು ಕಳೆದುಕೊಂಡ ಮೇಲೆ ನಾವೀಗ ಮರುಗುತ್ತಿದ್ದೇವೆ. ಕಾಮತರ ಕವಿತೆಗಳು, ಇತರ ಲೇಖನಗಳು, ಕಿರಿಯರಿಗಾಗಿ ಅವರು ಬರೆದ ಸಾಹಿತ್ಯ, ಅವರ ನಾಟಕಗಳು - ಇವುಗಳನ್ನೆಲ್ಲ ಸಂಗ್ರಹಿಸಿ ಸಂಪಾದಿಸಿ, ಅಚ್ಚು ಹಾಕಿಸಲು ಮಂಗಳೂರಲ್ಲಿ ಒಂದು ಸಮಿತಿಯು ಏರ್ಪಡುವುದು ಅವಶ್ಯವಿದೆ ಎಂದು ನನ್ನ ಸೂಚನೆ. ಮಿತ್ರಮಂಡಳಿಯು ಈ ಕುರಿತು ಮುನ್ನಡೆ ಇಡುವುದು ಆಗತ್ಯ''

ಮುಂದಿನ ಸಭೆಯು ನವಂಬರ ತಾ. ... ರಂದು ೩ ಘಂಟೆಗೆ ಥಿಯಸಾಫಿಕಲ್ ಲಾಜಿನಲ್ಲಿ ಜರಗುವುದು. ಆಗ ಕಾಲೇಜು ವಿದ್ಯಾರ್ಥಿಗಳಿಗಾಗಿ 'ಅಂದಿನ ಅಪೂರು' ಗ್ರಂಥದ ಕುರಿತು ಉಪನ್ಯಾಸ ಸ್ಪರ್ಧೆ ಜರಗುವುದು.

ಸರ್ವಪಕ್ಷಗಳ ಆಹಾರ ಸಮ್ಮೇಳನ

ಜಾಟ್ನಾದಲ್ಲಿ ನವಂಬರ್ ಒಂದರಲ್ಲಿ ಸರ್ವಪಕ್ಷ ಸಮ್ಮೇಳನವನ್ನು ನೇರಿಸಬೇಕು, ಸಭೆಗೆ ಕಾಂಗ್ರೆಸು, ಮುಸ್ಲಿಂ ಲೀಗು, ಹಿಂದೂ ಮಹಾಸಭೆ ಕಮ್ಯೂನಿಸ್ಟರು ಎಲ್ಲರೂ ಪ್ರತಿನಿಧಿಗಳನ್ನು ಕಳುಹಿಸಬೇಕು ಎಂಬ ಏರ್ಪಾಟು ನಡೆಯುತ್ತಿದೆ.

ಸಿನೆಮಾ ಸುದ್ದಿ

ಮರಾಠೀ ಚಿತ್ರಗಳು

ಕಳೆದವಾರ ಕೆನರಾ-ಚಲಚ್ಚಿತ್ರ ವಿಮರ್ಶಕ ಸಂಘದವರು, 'ಬಾಯಿಲ್ ವೇಡಾ' ಚಿತ್ರ ಪ್ರದರ್ಶಿತವಾಗುತ್ತಿರುವುದರಿಂದ ಒಂದೇ ಚಿತ್ರವನ್ನೆತ್ತಿ ಮಾತನಾಡುವುದಕ್ಕಿಂತ ಒಟ್ಟು ಮರಾಠೀ ಚಿತ್ರಗಳ ಕುರಿತು ಚರ್ಚಿಸುವುದು ಸಮಂಜಸವೆಂದು ಎಲ್ಲರೂ ಅಭಿಪ್ರಾಯಪಟ್ಟರು.

ಪ್ರಾರಂಭದಲ್ಲಿ ಶ್ರೀ ಬಿ. ಎಂ. ಇದಿನಬ್ಬನವರು ಮಾತನಾಡಿ ಮರಾಠಿ ಚಿತ್ರಗಳು ಯಾವಾಗಲೂ ಸ್ವಾರಸ್ಯಕರವಾಗಿರುವವೆಂದು ಅಭಿಪ್ರಾಯಪಟ್ಟು, ಬಾಯಿಲ್ ವೇಡಾ' ಚಿತ್ರದ ಸೂಕ್ಷ್ಮ ವಿಮರ್ಶೆ ಮಾಡಿದರು.

ಶ್ರೀ ಕಯ್ಯಾರ ಕಿಞ್ಞಣ್ಣ ರೈಗಳು ಮಾತನಾಡುತ್ತಾ, ಮರಾಠಿ ಚಿತ್ರಗಳಲ್ಲಿ ಒಂದು ವೈಶಿಷ್ಟ್ಯವೆಂದರೆ ಹಾಸ್ಯರಸ; ಮರಾಟಿಯಲ್ಲಿ ಪ್ರಹಸನ ತುಂಬಾ ಬೆಳೆದಿದೆ. ವಿನೋದಕ್ಕಾಗಿ ಚಿತ್ರಗಳನ್ನು ನೋಡುವುದೇ ಮುಖ್ಯ ಉದ್ದೇಶವಿರುವಾಗ ಹಾಸ್ಯರಸದ ಚಿತ್ರಗಳು ಅವಶ್ಯ ಬೇಕು ಇತರ ಭಾಷೆಯ ಸಿನೆಮಾ ನಿರ್ಮಾಪಕರು ಮರಾಠೀ ನಿರ್ಮಾಪಕರಿಂದ ಈ ವಿಷಯವನ್ನು ಕಲಿತುಕೊಳ್ಳಬೇಕಾಗಿದೆ ಎಂದರು.

ಶ್ರೀ| ಸದಾಶಿವರು ಮಾತನಾಡಿ ಮರಾಠೀ ಚಿತ್ರಗಳ ಸಂಭಾಷಣೆ ಅರ್ಥವಾದರೆ ಬಹಳ ಸ್ವಾರಸ್ಯವಾಗಿರುತ್ತದೆಂದು ಹೇಳಿ 'ಬಾಯಿಲ್ ವೇಡಾ' ಚಿತ್ರವನ್ನು ವಿಮರ್ಶಿಸಿದರು.

ಶ್ರೀ| ಜೆ. ಎನ್. ಶೆಣೈಯವರು, ಮರಾಠದಲ್ಲಿಯೇ ಪ್ರಥಮವಾಗಿ ಭಾರತದಲ್ಲಿ ಚಲಚ್ಚಿತ್ರ ನಿರ್ಮಾಣವಾಯಿತೆಂದೂ, ಅವರು ಚಿತ್ರ ನಿರ್ಮಾಣದಲ್ಲಿ ಬಹಳ ಅಭಿವೃದ್ಧಿ ಹೊಂದಿರುವರೆಂದು ಹೇಳುತ್ತಾ, ಮರಾಠ ದೇಶದವರು ಹಿಂದಿಯಲ್ಲಿ ಮತ್ತು ಮರಾಠಿಯಲ್ಲಿ ಹೀಗೆ ಎರಡೆರಡು ಪ್ರತಿಗಳನ್ನು ತೆಗೆಯುವ ವಿಷಯ ಟೀಕಿಸಿ, ಒಂದೋ ಅವರು ಮರಾಠಿಯಲ್ಲಿಯೇ ತೆಗೆಯಬೇಕು, ಇಲ್ಲವಾದರೆ ರಾಷ್ಟ್ರ ಭಾಷೆಯಲ್ಲಿಯೇ ನಿರ್ಮಿಸಬೇಕೆಂದು ಸೂಚಿಸಿ, ಎರಡು ಭಾಷೆಗಳಲ್ಲಿಯೂ ಚಿತ್ರವನ್ನು ಸ್ವಲ್ಪ ಮಾತ್ರ ವ್ಯತ್ಯಾಸಮಾಡಿ ತೆಗೆಯುವುದರಿಂದ ವ್ಯರ್ಥವಾಗಿ ಎರಡು ಸಲ ನೋಡಬೇಕಾಗುತ್ತದೆಯೆಂದರು

ಶ್ರೀ ಕುಳುಕುಂದರು ಮಾತನಾಡುತ್ತಾ ಮರಾಠಿ ಚಿತ್ರಗಳು ಯಾವಾಗಲೂ ಪ್ರೇಕ್ಷಣೀಯವಿರುತ್ತವೆಂದೂ, ಹಿಂದೀ ಚಿತ್ರಗಳಿಗಿಂತ ಕಡಿಮೆ ತರಗತಿಯಿರುವುದಿಲ್ಲವೆಂದೂ ಹೇಳಿದರು.

ಶ್ರೀ. ರಘು ಇವರು 'ಮರಾಠೀ ಚಿತ್ರಗಳಲ್ಲಿ ರಂಗಭೂಮಿಯ ಛಾಯೆ ಬಹಳವಾಗಿ ಕಾಣುತ್ತದೆಂದರು.

ಶ್ರೀ. ರೊಡ್ರಿಗ್ಸ್‌ರೂ ಮರಾಠಿ ಚಿತ್ರಗಳ ವಿಷಯ ಪ್ರಶಂಸಿಸಿಯೇ ಮಾತನಾಡಿದರು

ಶ್ರೀ. ಚಿತ್ತರಂಜನ ದಾಸ್ರರು ಅಧ್ಯಕ್ಷತೆ ವಹಿಸಿದ್ದರು.

'ಪ್ರವೇಶ ದರ ಏರಿಸಕೂಡದು'

'ಚಿಲ್ಲರೆಯ ಅಭಾವ ಮತ್ತು ಇತರ ಕಾರಣಗಳನ್ನು ಹೇಳಿ ಸ್ಥಳೀಯ ಚಿತ್ರ ಪ್ರದರ್ಶನ ಮಂದಿರದವರು ಪ್ರವೇಶ ದರವನ್ನು ಏರಿಸಲಿರುವರೆಂದು ಈಗಾಗಲೇ ಹೊರಡಿಸಿರುವ ಜಾಹೀರಾತುಗಳಿಂದ ತಿಳಿದುಬಂದಿದೆ. ಇದರಿಂದ ಮೊದಲೇ ಯುದ್ಧದ ದುಃಸ್ಥಿತಿಯಿಂದ ವ್ಯಥಿತರಾಗಿರುವ ಮಧ್ಯಮ ತರಗತಿಯವರಿಗೆ ಹಾಗೂ ಬಡಜನರಿಗೆ ಬಹಳ ತೊಂದರೆಯಾಗುತ್ತದೆ. ಪ್ರದರ್ಶಕರ ಈ ಪ್ರಯತ್ನವನ್ನು ಕೆನರಾ ಚಲಚ್ಚಿತ್ರ ವಿಮರ್ಶಕ ಸಂಘವು ವಿರೋಧಿಸುತ್ತದೆ' ಎಂದು ಮಂಡಿಸಿದ ನಿರ್ಣಯವು ಬಹುಮತದಿಂದ ಮಂಜೂರಾಯಿತು.

ಮಂಗಳೂರು

ಅಖಿಲ ಕರ್ಣಾಟಕ

ಪತ್ರಿಕೋದ್ಯೋಗೀ ಸಮ್ಮೇಳನ

ಮಂಗಳೂರಲ್ಲಿ ದಶಂಬರ ಅಂತ್ಯ ಅಥವಾ ಜನವರಿ ಆದಿಯಲ್ಲಿ ಜರಗಲಿರುವ ಅಖಿಲ ಕರ್ಣಾಟಕ ಪತ್ರಿಕೋದ್ಯೋಗೀ ಸಮ್ಮೇಳನದ ಸ್ವಾಗತ ಸಮಿತಿಯ ಕಾರ್ಯದರ್ಶಿಗಳಲ್ಲೊಬ್ಬರಾದ ಶ್ರೀ. ತಿರುಮಲೇಶ್ವರ ಭಟ್ಟರು, ಮೈಸೂರು ಬೆಂಗಳೂರು, ಶಿವಮೊಗ್ಗಾ, ಮೊದಲಾದ ಕಡೆಗಳಲ್ಲಿ ಪ್ರವಾಸಮಾಡಿ ಮೈಸೂರು ಸಂಸ್ಥಾನದ ಹಲವು ಮಂದಿ ಹಿರಿಯ ಮತ್ತು ಕಿರಿಯ ಪತ್ರಿಕೋದ್ಯಮಿಗಳನ್ನು ಕಂಡು ಮಾತನಾಡಿರುವರು. ಸಮ್ಮೇಳನಕ್ಕೆ ಪ್ರತಿನಿಧಿಗಳಾಗಿ ಬರುವುದಾಗಿ ಹಲವು ಮಂದಿ ಭರವಸೆಯಿತ್ತಿದ್ದಾರೆ

ನೀಲೇಶ್ವರ

ಕೈಯ್ಯೂರು ಕೈದಿಗಳ ಬಿಡುಗಡೆ

ಕೈಯ್ಯೂರ ಮೊಕದ್ದಮೆಯಲ್ಲಿ ಎರಡು ವರ್ಷಗಳ ಸಜೆಗೆ ಗುರಿಯಾದ ಹದಿಮೂರು ಜನರನ್ನು ತಾ ೩೦-೧೦-೪೩ರಂದು ಕಣ್ಣಾನೂರ ಸೆಂಟ್ರಲ್ ಜೈಲಿನಿಂದ ಬಿಡುಗಡೆ ಮಾಡಿರುವರು. ಕಣ್ಣಾನೂರಿನಲ್ಲಿ ಮಜೂರರು ಅವರನ್ನು ಸ್ವಾಗತಿಸಲು ಏರ್ಪಾಡುಗಳನ್ನು ಮಾಡಿದ್ದರಾದರೂ, ಜೈಲಿನಿಂದ ಒಂದು ಗಂಟೆಗೆ ಇವರನ್ನು ಬಿಟ್ಟೊಡನೆ ಪೋಲೀಸರು ಇವರನ್ನು ತಮ್ಮ ವೇನಿನಲ್ಲಿ ಹತ್ತಿಸಿ ತಳಿಪ್ಪರಂಬ ಸ್ಟೇಷನಿನಲ್ಲಿ ಕೊಂಡೊಯ್ದು ಬಿಟ್ಟುದರಿಂದ ಸ್ವಾಗತವನ್ನು ಕೊಡಲಾಗಲಿಲ್ಲವೆಂದು ತಿಳಿದುಬರುತ್ತದೆ. ಇಲ್ಲಿ, ಚರ್ವತ್ತೂರಿನಲ್ಲೂ ರೈಲ್ವೆ ಸ್ಟೇಷನುಗಳಲ್ಲಿ, ಯಾವ ಸತ್ಕಾರಗಳನ್ನೂ ಏರ್ಪಡಿಸದಿರಲಿಕ್ಕಾಗಿ ಪೋಲೀಸರು ಮುಂದಾಗಿಯೇ ಬಂದೋಬಸ್ತನ್ನು ಏರ್ಪಡಿಸಿದ್ದರು.

ಬಿಡುಗಡೆಮಾಡಲ್ಪಟ್ಟ ಇವರನ್ನು ಸತ್ಕರಿಸಿ ಗೌರವಿಸಲು, ಕರಿವೆಳ್ಳೂರಿನಲ್ಲಿ ೩೧-೧೦-೪೩ಕ್ಕೆ ಕಾಸರಗೋಡು ತಾಲೂಕು ಕಿಸಾನ್ ಸಂಘ ಮತ್ತು ಕಮ್ಯೂನಿಸ್ಟ್ ಪಾರ್ಟಿಯ ಪರವಾಗಿ ಸಭೆ ಸೇರಿತು. ಕಾಂ| ಕೆ. ಕೃಷ್ಣನ್‌ನವರು ಅಧ್ಯಕ್ಷತೆಯನ್ನು ವಹಿಸಿದರು. ಅಥಿತಿಗಳ ಪರಿಚಯವನ್ನು ಸಭಿಕರಿಗೆ ಮಾಡಿಕೊಟ್ಟು ಅವರು ತಮ್ಮ ಉದ್ದದ ಭಾಷಣವನ್ನು ಕೊನೆಗೊಳಿಸಿದ ಮೇಲೆ, ಬಿಡುಗಡೆಮಾಡಲ್ಪಟ್ಟವರ ಪರವಾಗಿ, ಕಾಂ| ಕೆ. ಕೇಳುನಾಯರ್‌ರವರು ಮಾತನಾಡಿದರು. ಉಪಹಾರವಾದ ಮೇಲೆ ಸಭೆಯು ಮುಕ್ತಾಯವಾಯಿತು. (ಈ ಜಿಲ್ಲೆಯಲ್ಲಿ ಸಭೆ ಮೆರವಣಿಗೆಗಳಿಗೆ ನಿರೋಧವಿದ್ದುದರಿಂದ ಸಭೆಯು ಮಲಬಾರಿನ ಕರಿವೆಳ್ಳೂರಿನಲ್ಲಿ ಜರಗಿಸಬೇಕಾಗಿ ಬಂತೆಂದು ತಿಳಿದುಬರುತ್ತದೆ.)

ಕಾಸರಗೋಡು ತಾಲೂಕು ರೈತರ ಮಹಾಸಭೆ

ಇದೇ ಕಳೆದ ತಾ, ೩೧-೧೦-೧೯೪೩ನೆಯ ದಿನ ಕಾಸರಗೋಡು ಮಿಶನ್ ಹೈಸ್ಕೂಲಿನ ಕಟ್ಟಡದಲ್ಲಿ ಖಾನ್ ಬಹದೂರ್ ಮಹಮ್ಮದ್ ಶಮ್ನಾಡ್ ಎಂ. ಎಲ್. ಎ ಇವರ ಅಧ್ಯಕ್ಷತೆಯಲ್ಲಿ ಕಾಸರಗೋಡು ತಾಲೂಕು ರೈತರ ಮಹಾಸಭೆಯು ಸೇರಿತು. ಕಾಸರಗೋಡು ತಾಲೂಕಿನ ತಹಸೀಲ್ದಾರರಾದ ಜನಾಬ್ ಯು. ಪಳ್ಳಿಬ್ಯಾರಿ ಸಾಹೇಬರವರು ಸಭೆಯಲ್ಲಿ ಭಾಗವಹಿಸಿದರು ರೈತರು ಬೆಳೆಸುವ ಅಕ್ಕಿ ಭತ್ತಗಳಲ್ಲಿ ಅರ್ಧಾಂಶವನ್ನು ಸ್ವಾಧೀನ ಪಡಿಸುವ ಸರಕಾರದ ಯೋಜನೆಯಲ್ಲಿ ಈ ತಾಲೂಕಿನ ಮಟ್ಟಿಗೆ ಅಗತ್ಯ ಆಗಬೇಕಾದ ತಿದ್ದುಪಡಿಗಳ ಕುರಿತು ಚರ್ಚೆಯು ನಡೆಯಿತು. ಸರಕಾರದ ಕಡೆಯಿಂದ ತಹಸೀಲ್ದಾರರವರು ಈ ಕೆಳಗಿನಂತೆ ಸಭಿಕರಿಗೆ ಭರವಸೆಯನ್ನು ಕೊಟ್ಟಿರುವರು —

೧ ಸರಕಾರದವರು ಮಾಡಿದ ಯೋಜನೆಯ ವಿಷಯದಲ್ಲಿ ಯಾರೊಬ್ಬರೂ ಭಯಪಡಬೇಕಾಗಿಲ್ಲ ಯಾವ ರೈತರು ತಮ್ಮ ಕುಟುಂಬಗಳ ಮತ್ತು ವ್ಯವಸಾಯದ ಖರ್ಚುಗಳು ಕಳೆದು ಎಷ್ಟು ಅಕ್ಕಿ ಭತ್ತಗಳನ್ನು ಗತವರ್ಷಗಳಲ್ಲಿ ಮಾರಾಟ ಮಾಡಿರುವರೋ, ಅವರಿಂದ ಅಷ್ಟು ಅಕ್ಕಿ ಭತ್ತಗಳನ್ನು ಮಾತ್ರ ಸರಕಾರದವರು ಸ್ವಾಧೀನ ಪಡಿಸುವರು. ಇತರರಿಂದ ಎಷ್ಟನ್ನಾದರೂ ಸ್ವಾಧೀನ ಪಡಿಸಲಾಗಲಿಕ್ಕಿಲ್ಲ.

೨. ಸರಕಾರದವರು ಸ್ವಾಧೀನಪಡಿಸಿದ ಭತ್ತ ಅಥವಾ ಅಕ್ಕಿಯನ್ನು ಸಹಕಾರ ಸಂಘಗಳ ಮುಖಾಂತರವೇ ಮಾರಾಟ ಮಾಡಲಾಗುವುದು, ವ್ಯಾಪಾರಿಗಳ ವಶಕ್ಕೆ ಕೊಡುವುದಿಲ್ಲ.

೩. ಆಯಾ ಗ್ರಾಮಗಳ ಜನರ ಉಪಯೋಗಕ್ಕೆ ಅಗತ್ಯವಿರುವಷ್ಟು ಭತ್ತ ಅಥವಾ ಅಕ್ಕಿಯನ್ನು ಆಯಾ ಗ್ರಾಮಗಳಲ್ಲಿ ಇರಗೊಡಿಸದ ವಿನಹಾ, ಗ್ರಾಮಗಳಲ್ಲಿರುವ ಅಕ್ಕಿ ಭತ್ತಗಳನ್ನು ಬೇರೆ ಸ್ಥಳಕ್ಕೆ ಒಯ್ಯುವುದಿಲ್ಲ.

೪. ತಾಲೂಕಿನ ಅಕ್ಕಿ ಭತ್ತಗಳ ಬೆಳೆಯು ಇಲ್ಲಿಯ ಜನರ ಉಪಯೋಗಕ್ಕೆ ಸಾಕಷ್ಟು ಇಲ್ಲದಿರುವುದರಿಂದ ಇತರ ತಾಲೂಕುಗಳಿಂದ ಅಕ್ಕಿ ಭತ್ತಗಳನ್ನು ಈ ತಾಲೂಕಿಗೆ ಸಕಾಲದಲ್ಲಿ ತರಿಸಿ ಜನರ ಸಂಕಟವನ್ನು ನೀಗಿಸುವುದಕ್ಕೆ ಸರಕಾರವು ಯತ್ನಿಸುವುದು.

ತಾಲೂಕಿನ ಜನರ ದುರವಸ್ಥೆಯನ್ನು ನೀಗಿಸುವುದರಲ್ಲಿ ತಹಸೀಲ್ದಾರರವರು, ತೋರ್ಪಡಿಸಿದ ಉತ್ಸಾಹ ಸಹಾನುಭೂತಿಗಳಿಗಾಗಿಯೂ ಅವರು ಸಭೆಯವರಿಗಿತ್ತ ಆಶ್ವಾಸನೆಗಾಗಿಯೂ ಸಭೆಯವರು ತಮ್ಮ ಹೃತ್ಪೂರ್ವ ಕೃತಜ್ಞತೆಯನ್ನು ಅವರಿಗೆ ಸಮರ್ಪಿಸಿದ ನಂತರ ಸಭೆಯು ಮುಕ್ತಾಯವಾಯಿತು

In the Court of the Dt. Munsif of Mangalore

S. C. No 428/43

Jathamma—*Pltf*

Vs

Choma—*Deft*

To Deft Choma nephew of Boggu, residing near Bhandaramane of Athavar, Mangalore town.

Please take notice that the abovenamed Plaintiff has instituted a suit against you for the recovery of arrears of rent etc and the same is posted to 10-11-1943 If you failed to appear either in person or by a duly authorised Pleader the above suit will be decided in your absence.

Mangalore } (*Sd*) P. Ramachandra Rao
1-11-1943 } Advocate for Plaintiff

ಸಾಂಕ್ರಾಮಿಕ ಕಫರೋಗ ಬೇಗನೇ ಗುಣವಾಗುವುದು

ಕೊಂಡರೆ, ಕೊಡುವ ಕಫಬಾಧೆಯು ನಿಮ್ಮ ಗಂಟಲಿಗೆ ತೊಂದರೆಯನ್ನುಂಟುಮಾಡಿ ನೋವುಗೊಳಿಸುವುದು. ಕಫವು ಮೃದುವಾದ ಶ್ವಾಸನಾಳಕ್ಕೆ ಅಪಾಯವನ್ನುಂಟುಮಾಡಿ ಮುಂದೆ ಅದರಿಂದ ಕೆಟ್ಟ ಪರಿಣಾಮವುಂಟಾಗಲೂಬಹುದು. ಆದ್ದರಿಂದ ವಿಷಹಾರೀ ಶ್ವಾಸಯೋಗ್ಯ ಪೆಪ್ಸ್ ಮಾತ್ರೆಗಳನ್ನು ಸೇವಿಸಿರಿ

ಪೆಪ್ಸ್ ಬಾಯಲ್ಲಿ ಹಾಕಿದಕೂಡಲೇ ಕರಗಿ ಅತ್ಯುತ್ತಮ ಔಷಧಕಾರೀ ರಸವನ್ನು ಹೊರಡಿಸುತ್ತದೆ. ಅದು ನಿಮ್ಮ ಶ್ವಾಸದೊಡನೆ ಸೇರಿಕೊಂಡ ಶ್ವಾಸಕೋಶವನ್ನು ಬಲಪಡಿಸುವುದು. ಪೆಪ್ಸ್ ಹಾಗೆ ಸಾಂಕ್ರಾಮಿಕ ಕ್ರಿಮಿಗಳನ್ನು ಕೊಲ್ಲುವುದು ಗಂಟಲುನೋವನ್ನು ಎದೆನೋವನ್ನು ಮತ್ತು ಯಾವುದೇ ತರದ ಕಫಶೀತಗಳನ್ನೂ ಅದು ಗುಣ ಪಡಿಸುವುದು. ಎಲ್ಲಾ ಔಧಿ ವ್ಯಾಪಾರಿಗಳಲ್ಲಿಯೂ ಪೆಪ್ಸ್ ಒಂದು ರೂಪಾಯಿ ಬೆಲೆಗೆ ಸಿಗುತ್ತದೆ

ಪೆಪ್ಸನ್ನು ಕೊಂಡುಕೊಳ್ಳಿರಿ.

PEPS

ವಿಷಹಾರಿ ಶ್ವಾಸಯೋಗ್ಯ ಮಾತ್ರೆಗಳು.

ಇದು ಮಗುವಿನ ಚರ್ಮವನ್ನು ತಂಪಾಗಿಯೂ, ಮೃದುವಾಗಿಯೂ, ಇಡುವುದು.

ಮಕ್ಕಳಿಗೆ ಕುಟಿಕೂರ ಟಾಲ್ಕಮ್ ಪೌಡರನ್ನೇ ಉಪಯೋಗಿಸಿರಿ ಅಷ್ಟು ಸುಖಕರ- ಅಷ್ಟು ಚರ್ಮ ಮೃದುಕರ-

ಕುಟಿಕೂರ ಟಾಲ್ಕಮ್ ಪೌಡರ್.

CUTICURA TALCUM POWDER

ಪುಸ್ತಕಾವಲೋಕನ

ಅಕ್ಕ—ತಂಗಿ

ಹುಬ್ಬಳ್ಳಿ ಸಾಹಿತ್ಯ ಭಂಡಾರದ ಶ್ರೀ ಮಂಗಳೂರು ಗೋವಿಂದರಾಯರು ಶ್ರೀ ನಾರಾಯಣ ಸಂಗಮರು ಬರೆದ 'ಅಕ್ಕ ತಂಗಿ'—ಎಂಬ ೩ ರೂಪಾಯಿ ಬೆಲೆಯ ಕ್ರಾನ್ ೧/೮ ಆಕಾರ ೧೭೭ ಪುಟಗಳುಳ್ಳ ಈ ಕಥಾ ಪುಸ್ತಕವನ್ನು ಪ್ರಕಟಿಸಿದ್ದಾರೆ. 'ಅಕ್ಕ ತಂಗಿ' ಬಂಗಾಳಿಯಲ್ಲಿ ಶ್ರೀಮತಿ ನಿರುಪಮಾ ದೇವಿಯವರು ಬರೆದ 'ದಿದಿ' ಕಾದಂಬರಿಯ ಸಂಗ್ರಹೀತ ಅನುವಾದ ಕಥಾಪುಸ್ತಕವಿದು. ಶ್ರೀ 'ಅಂಬಿಕಾತನಯದತ್ತ'ರಿಗೆ ಶ್ರೀ ನಾರಾಯಣ ಸಂಗಮರು ಪುಸ್ತಕವನ್ನರ್ಪಿಸಿದ್ದಾರೆ. ಶ್ರೀ ಗೋಕಾಕರು ಒಂದು ಚಲೋ ಮುನ್ನುಡಿ ಬರೆದಿರುವರು.

'ಅಕ್ಕತಂಗಿ' ಬಹಳ ವಿಸ್ತಾರವಾದ ಕಥೆ. ಸುರೇಶನು ದೊಡ್ಡ ಜಮೀನ್ದಾರನ ಮಗ. ಸ್ನೇಹಳನ್ನು ಮೆಚ್ಚಿ ಮದುವೆಯಾದ, ತಂದೆಯ ಸಮ್ಮತಿಯಿಲ್ಲದೆ. ಸ್ನೇಹಳು ಬಡವರ ಹುಡುಗಿ. ಸುಧೆ ಶ್ರೀಮಂತರ ಕನ್ಯೆ, ತಂದೆ ತನ್ನ ಕೊರಳಿಗೆ ಕಟ್ಟಿದ ಹೆಣ್ಣು; ಆದ್ದರಿಂದಲೇ ಅವಳನ್ನು ಮೊದಲಬಾರಿಗೇ ತಿರಸ್ಕರಿಸುತ್ತಾನೆ. ಸುರೇಶ ಸ್ನೇಹರ ಪ್ರೇಮ–ತಂದೆ ಮಕ್ಕಳ ಸಂಬಂಧ, ಕೊನೆಗೆ ಸಾಯುವ ಕಾಲಕ್ಕೆ ಸುರೇಶನು ಸ್ನೇಹಳೊಂದಿಗೆ ತಂದೆಯಲ್ಲಿಗೆ ಬಂದದ್ದು, ತಂದೆ ಉದಾರ ಹೃದಯದಿಂದ ಮಗನನ್ನು ಕ್ಷಮಿಸಿದ್ದು, ಸುಧೆ ಮನೆಯ ಆಡಳಿತವನ್ನು ಸೊಗಸಾಗಿ ಸಾಗಿಸಿದ್ದು, ಸ್ನೇಹಳು ಸುಧೆಯ ಹೃದಯವನ್ನು ಸೂರೆಗೊಂಡು ಅವರು ನಿಜವಾದ 'ಅಕ್ಕತಂಗಿ'ಯರಾದುದು, ದಿನದಿನಕ್ಕೆ ಸುಧೆಯ ಸ್ವಭಾವ ಪರಿಚಯವಾಗಿ ಸುರೇಶನ ಮನವು ಸುಧೆಯ ಕಡೆಗೂ ಒಲಿದದ್ದು ಆದರೆ ಆಕೆ ಸ್ನೇಹಳ ಸುಖದ ಸಲುವಾಗಿ ಆತನಿಂದ ದೂರ ದೂರ ಸರಿದದ್ದು ಇವೆಲ್ಲಾ ಬಹಳ ಹೃದಯಂಗಮವಾಗಿ ವರ್ಣಿತವಾಗಿವೆ. ಓದಲು ಹಿಡಿದರೆ ಕೆಳಗಿಡಲು ಮನಸ್ಸಾಗದಷ್ಟು ಹೃದಯಂಗಮವಿದೆ.

ಇದೀ ಕಥೆಯಲ್ಲಿ ಮುಖ್ಯ ಮೂರು ಪಾತ್ರಗಳು; ಸುರೇಶ ಸುಧೆ, ಸ್ನೇಹ. ಸುರೇಶನು ಸುಧಾರಣಾವಾದಿ, ಆದರ್ಶವಾದಿ. ಆದರೂ ಅತನಲ್ಲಿ ದೌರ್ಬಲ್ಯವಿಲ್ಲದಿಲ್ಲ. ಸ್ನೇಹ ನಿಜವಾಗಿ ಸ್ನೇಹಮಯಿಯಾದ ಪತ್ನಿ, ಸ್ನೇಹಮಯಿಯಾದ ತಂಗಿ, ತುಂಬ ಸರಳ ಸ್ವಾಭಾವದ ನಿರಪರಾಧಿನಿ ಕನ್ಯೆ; ಯಾರಾದರೂ 'ಅಯ್ಯೋ ಪಾಪ' ಎನ್ನುವಂತಾಗಬೇಕು. ಅದೇ ಆಕೆ ತನ್ನ ಸವತಿಯ, ಸುಧೆಯ ಹೃದಯವನ್ನೂ ಒಲಿಸಿಕೊಂಡಳು. ಮೂರನೆಯ ಪಾತ್ರ ಸುಧೆ; ಈಕೆ ಗಂಭೀರೆ, ಶ್ರೀಮಂತರ ಕನ್ಯೆಯಾಗಿದ್ದು ಅವಳಲ್ಲಿ ತುಂಬ ದರ್ಪ ಅಭಿಮಾನ ತುಂಬಿದೆ. ಅಂತೆಯೇ ಆಕೆಯ ಧೈರ್ಯವೂ ಅಸದೃಶವಾದುದು. ಸ್ವತಃ ಸುರೇಶನೇ ಆಕೆಗಾಗಿ ಭೀತನಾಗಿ ಗೌರವ ತೋರಿಸುವಂತಿತ್ತು; ಈ ಮೂರು ಮುಖ್ಯ ಪಾತ್ರಗಳ ಸುತ್ತು ಕಥೆಯು ಹೆಣೆಯಲ್ಪಟ್ಟು ವಾಚನ ಮನೋಹರವಿದೆ.

ಶ್ರೀ ನಾರಾಯಣ ಸಂಗಮರು ಚಿತ್ರಗಾರರಾಗಿ ಹೆಸರು ಪಡೆದವರು; ಒಳ್ಳೆಯ ಕತೆಗಾರರೂ ಆಗಿದ್ದಾರೆ. ಶಾಂತಿನಿಕೇತನದಲ್ಲಿದ್ದು ಕಲಾ ಸಾಹಿತ್ಯಗಳನ್ನು ಆಳವಾಗಿ ಅಭ್ಯಾಸಿಸಿದ್ದಾರೆ. ಬಂಗಾಳ ಸಾಹಿತ್ಯದಲ್ಲಿಯೂ ಒಳ್ಳೆಯ ವಿದ್ವಾಂಸರಾಗಿದ್ದಾರೆ. ಇದುವರೆಗೂ ಹೆಚ್ಚಾಗಿ ಲೇಖನಿಗಿಂತ ಕುಂಚವನ್ನೇ ಹಿಡಿದು ಕೆಲಸ ಮಾಡಿದಂತೆ ತೋರುತ್ತದೆ. ಆದರೆ ಇವರ ಲೇಖನಿ ಕುಂಚಕ್ಕಿಂತ ಕಡಿಮೆ ಕಲಾಮಯವಾಗಿಲ್ಲವೆಂದು ನಾವು ಧೈರ್ಯವಾಗಿ ಹೇಳಬಲ್ಲೆವು. ಶ್ರೀ ನಾರಾಯಣ ಸಂಗಮರ ಕಲಾಪೂರ್ಣ ಸಾಹಿತ್ಯ ಕೃತಿಗಳನ್ನು ಕನ್ನಡಿಗರು ಹಾರೈಸುತ್ತಾರೆ. ಪುಸ್ತಕ ಪ್ರಕಟಣೆ ಕಷ್ಟಕರವಾದೀ ಕಾಲದಲ್ಲಿಯೂ ಇಂಥಾ ಉತ್ತಮ ಸಾಹಿತ್ಯ ಕೃತಿಯೊಂದನ್ನು ಕನ್ನಡಿಗರಿಗಿತ್ತ ಹುಬ್ಬಳ್ಳಿ ಸಾಹಿತ್ಯ ಭಂಡಾರದ ಶ್ರೀ ಮಂಗಳೂರು ಗೋವಿಂದರಾಯರಿಗೆ ನಮ್ಮ ವಿಶೇಷ ಅಭಿವಂದನೆಗಳು.

— ಕಯ್ಯಾರ

ಸಾದರ-ಸ್ವೀಕಾರ

ಕಲಾವಿದನ ತ್ಯಾಗ ಮತ್ತು ಇತರ ಕಥೆಗಳು

ಅನುವಾದಿಕೆ ಶ್ರೀಮತಿ ಜಯಲಕ್ಷ್ಮಿ ಆರ್ ಶ್ರೀನಿವಾಸನ್. ಪ್ರಕಾಶಕರು ಸತ್ಯಶೋಧನ ಪ್ರಕಾಶ ಮಂದಿರ, ಬೆಂಗಳೂರು. ಬೆಲೆ ರೂ. ೧-೦-೦

ಶ್ರೀ ಸ್ವಾಮಿ ರಾಮತೀರ್ಥ

ಲೇಖಕರು ಬಿ. ಸದಾಶಿವಯ್ಯ. ಪ್ರಕಾಶಕರು ಶರತ ಏಜನ್ಸಿ, ಬೆಂಗಳೂರು. ಬೆಲೆ ರೂ. ೧-೪-೦

ಭಾರತೀಯ ಕತೆಗಳು

ಮೂಲ ಲೇಖಕರು: ಶ್ರೀ ಎ. ಎಸ್. ಪಂಚಾಪಕೇಶ ಅಯ್ಯರ್. ಅನುವಾದಕರು ಶ್ರೀ ಕೊಡೆಕ್ಕಲ್ ಶ್ರೀನಿವಾಸ ರಾಯರು. ಪ್ರಕಾಶಕರು, ಕಿರಿಯರ ಪ್ರಪಂಚ ಉಡುಪಿ.

ಪ್ರಕಾಶ

(ನಾಟಕ) ಮೂಲ ಲೇಖಕರು: ಶ್ರೀ ಶೇಠ ಗೋವಿಂದ ದಾಸ್ ಎಂ. ಎಲ್. ಎ. (ಕೇಂದ್ರ) ಅನುವಾದಿಕೆ: ಶ್ರೀಮತಿ ಸರಸ್ವತಿ ಬಾಯಿ ರಾಜವಾಡೆ. ಪ್ರಕಾಶಕರು, ಕಿರಿಯರ ಪ್ರಪಂಚ ಉಡುಪಿ.

ವಿಮರ್ಶೆ ಯಥಾವಕಾಶ

ಒರಿಸಾದ ಪರಿಸ್ಥಿತಿ ಬಂಗಾಳದಂತೆ

ಪಂಡಿತ ಹೃದಯನಾಥ ಕುಂಜ್ರುರವರು ಒರಿಸಾವನ್ನು ಸಂದರ್ಶಿಸಿ ಬಂದವರು, ಅಲ್ಲಿನ ಪರಿಸ್ಥಿತಿಯೂ ಬಂಗಾಳದಂತೆಯೇ ಆಗಿದೆಯೆಂದು ಹೇಳಿದರು.

ಚೀನದೊಡನೆ ಜಪಾನ್ ಒಪ್ಪಂದ

ಚೀನದ ಜಪಾನರ ಕೈಗೊಂಬೆ ಸರಕಾರವಾದ ನಾಂಕಿಂಗ್ ಸರಕಾರದೊಡನೆ ಜಪಾನು ಒಪ್ಪಂದ ಮಾಡಿಕೊಂಡಿರುವ ಸುದ್ದಿಯಿದೆ. ಈ ಒಪ್ಪಂದದ ಶರತುಗಳಂತೆ ನೂತನ ಚೀನದ ನಿರ್ಮಾಣದಲ್ಲಿ ಜಪಾನು ಸಹಕರಿಸುವುದು ಮಾತ್ರವಲ್ಲದೆ ಪೂರ್ವ ಏಶಿಯದ ಪುನರ್ರಚನೆಗೆ ಪ್ರಯತ್ನಿಸುವುದು. ಈ ಒಪ್ಪಂದವು ಈಚೆಗೆ 'ಸ್ವತಂತ್ರ ಬರ್ಮಾ ರಾಷ್ಟ್ರ'ದೊಡನೆ ಜಪಾನು ಮಾಡಿಕೊಂಡ ಒಪ್ಪಂದದಂತೆ ಎಂದು ಲಂಡನಿನಲ್ಲಿ ಅಭಿಪ್ರಾಯಪಡಲಾಗಿದೆ.

FIRST AND FOREMOST

FIRST AND FOREMOST among the ideals of the CANARA BANK is the ideal of Service to its Customers.

ESTD. 1906.

CANARA BANK LTD.

THE CANARA BANKING CORPORATION Ltd

(Incorporated in British India with limited liability)

Estd:] Head office: UDIPI [1906.

(Branches & Agencies in all principal cities of India)

Authorised capital	Rs. 25,00,000.
Issued & Subscribed	Rs. 16,00,000.
Paid up Capital	Rs. 10,06,000.
Reserves	Rs. 3,85,000.

Advances are made against approved securities and bills purchased or collected at most favourable rates. For further particulars please apply tothe nearest Branch.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ, ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

The Bank of Mangalore Limited, Mangalore.
ESTD. 1931

HEAD OFFICE Mangalore
BRANCHES Moodabidri & Padubidri.

The Bank Undertakes to Collect Cheques, Demand and Documentary Bills at Most Competitive Rates.
ISSUES DRAFTS ON ALL IMPORTANT TOWNS IN THE DISTRICT
and also on
BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.
at very favourable rates
All kinds of inland banking business undertaken

(Regd)

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾ ಬೇನೆ, ನರವಾತ, ನೊಡಿತು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ, ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಜೀವವಿಮೆ ಮಾಡುವ ಪ್ರಯೋಜನವು ಇಂದು ಹಿಂದಿಗಿಂತ ಅಧಿಕವಾಗಿದೆ.

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಇದರಲ್ಲಿ ಒಂದು ಪಾಲಿಸಿ ಪಡೆದು
ಈಗಲೇ ನೀವು ನಿಮ್ಮನ್ನು ಮತ್ತು ನಿಮ್ಮನ್ನು ಹೊಂದಿಕೊಂಡಿರುವವರನ್ನು ರಕ್ಷಿಸಿಕೊಳ್ಳಿರಿ!
ಪ್ರತಿನಿಧಿಗಳಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.
ಇನ್ಶೂರ್ ಮಾಡಲು ಅಥವಾ ಮಾಹಿತಿ ತಿಳಕೊಳ್ಳಲು ದಯಮಾಡಿ ಬರೆಯಿರಿ!

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

—: ಅಥವಾ ಅವರ ಈ ಕೆಳಗಿನ ಯಾವುದಾದರೊ ಶಾಖೆಯಲ್ಲಿ ವಿಚಾರಿಸಿರಿ: —
ಬೆಂಗಳೂರು ಬೊಂಬಾಯಿ ಮದ್ರಾಸು ಕಲ್ಲಿಕೋಟೆ ಮಂಗಳೂರು ಮತ್ತು ತ್ರಿವೇಂಡ್ರಂ

'Bhuvanendra Products Limited
Katapadi, S. Kanara.
"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ್‌ವ ಏಜೆಂಟರು:—
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಪೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.
ಡಿಪೋ:—1. ಮರಾಠ ಗಲ್ಲಿ ಹುಬ್ಬಳ್ಳಿ.
2. 86 ಫ್ಯಾಕ್ಟ್ರೀವ್ಯೂರೋಡ್, ಟ್ರಿಪ್ಲಿಕೇನ್, ಮದರಾಸು.

ಡೊಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ,
ಮೃತ್ಯುಂಜಯ ರಸ. ಪಂಚವಟ ಮಾತ್ರೆ. ಕೋಲೆರಾ ರೋಗಕ್ಕೆ ಸಿದ್ಧೌಷಧ.
ಸೇವನಾ ಕ್ರಮಗಳು ಔಷಧಿಯೊಡನೆ ಇದೆ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಕು 12—11—1943 [ಸಂಚಿಕೆ 44]

ಜಿಲ್ಲೆಯ ಆಹಾರ ಪರಿಸ್ಥಿತಿ

ಸಹಕಾರಿ ಸಂಘಗಳ ಮೂಲಕ ಹಂಚುವುದು.

ಮಂಗಳೂರು ಕಾಸರಗೋಡುಗಳಲ್ಲಿ ರೇಶನಿಂಗ್

ರೆವಿನ್ಯೂ ಬೋರ್ಡಿನವರ ಅಪ್ಪಣೆ.

ಜಿಲ್ಲಾ ಕಲೆಕ್ಟರರೊಡನೆ ಪ್ರಶ್ನೋತ್ತರಗಳು.

ಮದ್ರಾಸು ರೆವಿನ್ಯೂ ಬೋರ್ಡಿನವರು, ದಕ್ಷಿಣ ಕನ್ನಡದಲ್ಲಿ ಅಕ್ಕಿ ಭತ್ತಗಳ ರಿಕ್ವಿಸಿಶನ್, ಅವುಗಳ ಹಂಚುವಿಕೆ ಯೋಜನೆಗಳ ಕುರಿತು ಕೆಳಗಿನ ಆಜ್ಞೆ ಹೊರಡಿಸಿದ್ದಾರೆ:

೧. ಹೆಚ್ಚಿಗಿರುವ ಅಕ್ಕಿ ಬತ್ತಗಳನ್ನು ಸ್ವಾಧೀನ ಮಾಡಿಕೊಳ್ಳುವಂತೆ ಏರ್ಪಡಿಸಿ ಅದನ್ನು ನ್ಯಾಯವಾದ ಬೆಲೆಯಲ್ಲಿ ವ್ಯಾಪಾರಕ್ಕೆ ತರುವರೆ ಅಗತ್ಯವಿರುವ ಜರೂರು ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂದು ಬೋರ್ಡು ಅಭಿಪ್ರಾಯಪಡುತ್ತದೆ. ದಕ್ಷಿಣ ಕನ್ನಡದಲ್ಲಿ ಬೆಲೆ ಹದಮೀರಿ ಏರಲು ಸಾಹುಕಾರರು ಹಾಗೂ ವರ್ಗದಾರರಲ್ಲಿ ಕೆಲವರು ಕೂಡಿಕೊಂಡು ಕೆಲಸಮಾಡಿದ್ದು ಕಾರಣವೆಂದು ತಿಳಿದು ಬಂದಿರುವುದರಿಂದ, ಈಗ ಕೋಓಪರೇಟಿವ್ ಸ್ಟೋರುಗಳಿಗೆ ಈ ಅಕ್ಕಿ ಬತ್ತದ ವ್ಯಾಪಾರಗಳನ್ನು ಹೊರಹಾಕಲು ಸಮಯವೊದಗಿದೆಯೆಂದು ಬೋರ್ಡು ಅಭಿಪ್ರಾಯಪಡುತ್ತದೆ. ಈ ವಿಷಯದಲ್ಲಿ ಮದ್ರಾಸ್ ಸಹಕಾರೀ ಸಂಘಗಳ ರಿಜಿಸ್ಟ್ರಾರರೊಡನೆ ಆಲೋಚಿಸಿದಲ್ಲಿ, ಮಂಗಳೂರಿನ ಸಹಕಾರೀ ರಖಂ ವ್ಯಾಪಾರದ ಸ್ಟೋರ್ಸಿನವರು ಅಕ್ಕಿ ಬತ್ತಗಳನ್ನು ಕೊಳ್ಳಲು ಒಪ್ಪಿರುವರು. ಕಲೆಕ್ಟರರ ಸೂಚನೆಯಂತೆ ಅವುಗಳನ್ನು ಹಂಚಲು ಏರ್ಪಾಡು ಮಾಡುವರು, ಈ ಯೋಜನೆಗೆ ಒಳಪಟ್ಟ ರಖಂ ವ್ಯಾಪಾರದ ಸ್ಟೋರ್ಸುಗಳಿಗೆ ದ. ಕ. ಜಿಲ್ಲಾ ಸಹಕಾರೀ ಸೆಂಟ್ರಲ್ ಬೇಂಕಿನವರು ಹಣದ ಸಹಾಯ ಮಾಡುವರು ಎಂದು ಅವರು ತಿಳಿಸಿದರು. ದ. ಕ. ಜಿಲ್ಲಾ ಕಲೆಕ್ಟರರು ಮಂಗಳೂರಿನ ಸಹಕಾರೀ ಸಂಘಗಳ ಡೆಪ್ಯುಟಿ ರಿಜಿಸ್ಟ್ರಾರರೊಡನೆ ಆಲೋಚನೆ ಮಾಡಿ ಕೂಡಲೇ ತಕ್ಕ ಕ್ರಮಗಳನ್ನು ಒದಗಿಸುವವರೆಗೂ ಅತ್ಯಂತ ಸಂತೋಷದಿಂದ ಅಥವಾ ರಿಕ್ವಿಸಿಶನ್ ಮೂಲಕ ಸಿಕ್ಕಿದ ಅಕ್ಕಿ ಭತ್ತಗಳನ್ನು ಕೊಳ್ಳುವಂತೆ ಸಹಕಾರೀ ರಖಂ ಸ್ಟೋರ್ಸುಗಳೊಡನೆ ಏರ್ಪಡಿಸುವಂತೆಯೂ ಕಲೆಕ್ಟರರೊಡನೆ ಕೇಳಿಕೊಳ್ಳಲಾಗಿದೆ. ಭತ್ತವನ್ನು ಪಡಕೊಂಡಲ್ಲಿ ಸ್ಟೋರುಗಳು ಅದನ್ನು ಕೈಯಿಂದ ಕುಟ್ಟಿ ಅಕ್ಕಿ ಮಾಡಿಸುವ ಏರ್ಪಾಡು ಮಾಡಬೇಕು ಅಲ್ಲದೆ ಹಂಚುವ ಕಡೆಗಳಿಗೆ ಅಥವಾ ಸ್ಟೋರುಗಳ ಕೇಂದ್ರಗಳಿಗೆ ತೆಗೆದುಕೊಂಡೂ ಹೋಗಬೇಕು.

೨. ಬೆಲೆಯ ಮಟ್ಟಿಗೆ, ತಾಲೂಕು ಕೇಂದ್ರಗಳಿಗೆ ಮುದಿಯೊಂದಕ್ಕೆ ರೂ. ೧೦ರ ಬೆಲೆಗೆ ತಂದು ಕೊಡಲು ವರ್ಗದಾರರು ಒಪ್ಪಿರುವರೆಂದು ಬೋರ್ಡಿನ ತಿಳುವಳಿಕೆ ಬಂದಿದ್ದು, ಈ ಬೆಲೆ ನ್ಯಾಯವಾದುದೆಂದು ಬೋರ್ಡು ಕೂಡಾ ಆಲೋಚಿಸಿದೆ. ಅದನ್ನು ಸಾಗಿಸಲಿಕ್ಕೆ ಮತ್ತು ದಾಸ್ತಾನು ಇಡಲಿಕ್ಕೆ ಆಗುವ ಖರ್ಚು ಮತ್ತು ರಖಂ ವ್ಯಾಪಾರಿಗಳಿಗೆ ಕಲೆಕ್ಟರರು ಸಾಮಾನ್ಯ ತೆಗೆದುಕೊಳ್ಳಲು ಬಿಡುವ ಮುದಿಯೊಂದರ ನಾಲ್ಕಾಣೆಗೆ ಮೀರದ ಲಾಭದಷ್ಟೇ, ಈ ಸಹಕಾರೀ ಸಂಘಗಳಿಗೂ ಲಾಭವಾಗಿದ್ದು, ಈ ಕ್ರಮದಿಂದ ಕಲೆಕ್ಟರರು ಅದರ ಬೆಲೆಯನ್ನು ನಿರ್ಣಯಿಸಬೇಕು.

೩. ಮಂಗಳೂರು ಮತ್ತು ಕಾಸರಗೋಡು ಪೇಟೆಗಳಲ್ಲಿ ರೇಶನಿಂಗ್ ಜಾರಿಗೆ ತರುವರೆ ಪ್ರತ್ಯೇಕ ಆಜ್ಞೆಗಳನ್ನು ಹೊರಡಿಸಲಾಗುತ್ತದೆ.

೪. ಭತ್ತಗಳನ್ನು ಮುಖ್ಯವಾದ ಕೇಂದ್ರಗಳಲ್ಲಿ ಕೈಯಿಂದ ಕುಟ್ಟಲು ಸಾಧ್ಯವಿದ್ದರೆ, ಹಾಗೆ ಮಾಡಿದಲ್ಲಿ ರಿಕ್ವಿಸಿಶನ್ ಮಾಡಿದ ಭತ್ತ ಸಾಗಿಸುವ ಕಷ್ಟವನ್ನು ಹೋಗಲಾಡಿಸಿದಂತಾಗುತ್ತದೆ. ಇಂಥ ಸಂಸ್ಥೆಗಳು ಈಗಾಗಲೇ ಇರಬೇಕೆಂದು ಬೋರ್ಡಿನ ಅಭಿಪ್ರಾಯ. ಹಾಗಿದ್ದರೆ ಈ ಯೋಜನೆಯನ್ನು ಜಾರಿಗೆ ತರಲು ಕಲೆಕ್ಟರರು ಅಂಥವರೊಡನೆ ಸಂಪರ್ಕ ಮಾತ್ರ ಇರಿಸಿಕೊಳ್ಳಬೇಕಾಗಿದೆ.”

ಅಕ್ಕಿ ಭತ್ತಗಳ ವಿಚಾರದಲ್ಲಿ ಭೂಮಾಲಿಕರ ಪ್ರಕಟಣೆ

ತಾ. 7-11-43ರಂದು ಸೆಂಟ್ರಲ್ ಕೋಓಪರೇಟಿವ್ ಬೇಂಕ್ ಕಟ್ಟಡದಲ್ಲಿ ಪತ್ರಿಕಾ ಪ್ರತಿನಿಧಿಗಳನ್ನು ಕರೆದು ಅವರಿಗೆ ಇಲ್ಲಿವರೆಗಿನ ಜಿಲ್ಲಾ ಆಹಾರ ಪರಿಸ್ಥಿತಿ ಚಳವಳದ ವಿಷಯದಲ್ಲಿ ಭೂಮಾಲಿಕರು ಈ ರೀತಿಯಾಗಿ ವಿವರಣೆಯಿತ್ತರು:

ಕಳೆದ ವರ್ಷ ಆಹಾರಸಾಮಗ್ರಿಗಳನ್ನು ಹತೋಟಿಗೆ ತರಲು ಅಧಿಕಾರಿಗಳು 'ರಿಕ್ವಿಸಿಶನ್' ಕಾರ್ಯಕ್ರಮ ಜಾರಿಗೆ ತಂದಿದ್ದರೂ ಹಲವು ಕಾರಣಗಳಿಂದ ಅದು ಅಷ್ಟೊಂದು ಯಶಸ್ವಿಯಾಗಲಿಲ್ಲ.

ಈ ವರ್ಷ ಅಧಿಕಾರಿಗಳು, ನೇರವಾಗಿ ಒಕ್ಕಲುಗಳಿಂದಲೇ ವಿಸ್ತಾರ ಪ್ರಮಾಣದಲ್ಲಿ ಭತ್ತವನ್ನು ರಿಕ್ವಿಸಿಶನ್ ಮಾಡಬೇಕಾಗಿ ಬಂತು. ಇದರಿಂದ ಹಳ್ಳಿಗಳ ಆರ್ಥಿಕ ಸ್ಥಿತಿಯೇ ಕೆಟ್ಟು ಹೋದೀತೆಂಬ ಭೀತಿಗೊಳಗಾದ ವರ್ಗದಾರರೂ ಒಕ್ಕಲುಗಳೂ ಸರಕಾರಕ್ಕೂ ಕಲೆಕ್ಟರರಿಗೂ ಈ ವಿಷಯದಲ್ಲಿ ತಮ್ಮ ಕಷ್ಟಗಳನ್ನು ಅರಿಕೆ ಮಾಡಿಕೊಂಡು, ಸರಕಾರದ ಮುಂದೆ ಒಂದು ಯೋಜನೆಯಿಟ್ಟರು. ಅದರಲ್ಲಿನ ಸೂಚನೆಗಳಿವು:

(೧) ಮಂಗಳೂರಲ್ಲಿಯೂ ಇತರ ಮುಖ್ಯ ನಗರಗಳಲ್ಲಿಯೂ ಸಂಪೂರ್ಣ 'ರೇಶನಿಂಗ್' ಜಾರಿಗೆ ತರಬೇಕು. (೨) ಅಕ್ಕಿ ವ್ಯಾಪಾರವನ್ನು ಮುಖ್ಯವಾಗಿ ರಿಕ್ವಿಸಿಶನ್ ಮಾಡಿದ ಅಕ್ಕಿಯನ್ನು ಸಂಪೂರ್ಣವಾಗಿ ದ. ಕ. ಜಿಲ್ಲಾ ಸೆಂಟ್ರಲ್ ಸಹಕಾರೀ ಸ್ಟೋರಿಗೆ ಒಪ್ಪಿಸಬೇಕು. (೩) ತಾಲೂಕು ಕೇಂದ್ರಗಳಿಗೆ ವರ್ಗದಾರರ ಖರ್ಚಿನಿಂದ ತಂದೊಪ್ಪಿಸುವ ಅಕ್ಕಿಯ ಮುದಿಯೊಂದಕ್ಕೆ ರೂ. ೧೦ರ ಬೆಲೆ ಕೊಡಬೇಕು.

ಸಿವಿಲ್ ಸಪ್ಲೈಸ್‌ನ ಎಡಿಶನಲ್ ಡೆಪ್ಯುಟಿ ಕಮಿಶನರ್ ರಾ। ಸಾ। ರಾಘೋರವರು ಈ ಸಂಗತಿಗಳನ್ನು ವಿಚಾರಿಸಿ ವರದಿಮಾಡುವಂತೆ ನೇಮಿಸಲ್ಪಟ್ಟ ಮೇರೆಗೆ ಅವರು ಕಳೆದ ತಿಂಗಳಲ್ಲಿ ಇಲ್ಲಿಗೆ ಬಂದು ತಾ. ೧೮-೧೦-೪೩ರಲ್ಲಿ ನೆರೆದ ವರ್ಗದಾರರ ಸಭೆಯಲ್ಲಿ ವರ್ಗದಾರರು ತಮ್ಮ ಅಭಿಪ್ರಾಯ ತಿಳಿಸಿದ್ದರು.

ರೆವಿನ್ಯೂ ಬೋರ್ಡಿನವರು ತಮ್ಮ ೩-೧೧-೪೩ರ ಆಜ್ಞೆಯಲ್ಲಿ ಹೆಚ್ಚು ಕಡಿಮೆ ವರ್ಗದಾರರ ಸೂಚನೆಗಳನ್ನು ಒಪ್ಪಿ ಅಂತೆ ಆಜ್ಞೆ ಮಾಡಿದ್ದಾರೆ. ಅದರಲ್ಲಿ ಅವರು ಮಂಗಳೂರು ಕಾಸರಗೋಡು ನಗರಗಳಲ್ಲಿ ರೇಶನಿಂಗ್ ಜಾರಿಗೆ ತರುವಂತೆಯೂ, ಸರಕಾರದ ವಶ ಬರುವ ಎಲ್ಲಾ ರಿಕ್ವಿಸಿಶನ್ ಮಾಡಿದ ಮತ್ತು ಇತರ ಸಂಗ್ರಹಗಳನ್ನು ಪೂರಾ ಮಂಗಳೂರು ರಖಂ ಸಹಕಾರೀ ಸ್ಟೋರ್ಸಿಗೆ ಕೊಡುವಂತೆಯೂ ಹೆಡ್ ಕ್ವಾರ್ಟರ್ಸುಗಳಿಗೆ ತಂದೊಪ್ಪಿಸುವ ಅಕ್ಕಿ ಮುದಿ ೧ಕ್ಕೆ ರೂ. ೧೦ ದೊರಕುವಂತೆಯೂ ನಿಷ್ಕರ್ಷೆ ಮಾಡಿದ್ದಾರೆ.

ಈ ಅಪ್ಪಣೆಯ ಪರಿಶೀಲನೆಗಾಗಿ ತಾ. ೭ರಲ್ಲಿ ಸೆಂಟ್ರಲ್ ಸಹಕಾರೀ ಬೇಂಕಿನ ಹಜಾರದಲ್ಲಿ ವರ್ಗದಾರರು ಸಭೆಸೇರಿದರು. ಅವರು ಬೋರ್ಡಿನ ಅಪ್ಪಣೆಯನ್ನು ಮನಃಪೂರ್ವಕವಾಗಿ ಅನುಮೋದಿಸಿ ಅದಕ್ಕೆ ತಮ್ಮ ಹೃತ್ಪೂರ್ವಕ ಬೆಂಬಲ ಕೊಡಲು ನಿರ್ಣಯಿಸಿದ್ದಾರೆ.

ಮಂಗಳೂರು ನಗರದ ಆಹಾರ ಪರಿಸ್ಥಿತಿಯನ್ನು ಕೂಡಲೇ ಸುಧಾರಿಸಲು, ವರ್ಗದಾರರ ಸಂಘವು ಸೆಂಟ್ರಲ್ ಸ್ಟೋರ್ಸಿಗೂ ಅದರ ಶಾಖೆಗಳಿಗೂ ಅಗತ್ಯವಿರುವ ಅಕ್ಕಿಯನ್ನು ಒದಗಿಸುವ ಹೊಣೆಯನ್ನು ವಹಿಸಿಕೊಂಡಿದ್ದು, ಈ ವಿಷಯದಲ್ಲಿ ಪ್ರಚಾರ ಕಾರ್ಯ ನಡೆಸಲಿಕ್ಕೂ, ಅಗತ್ಯವಿರುವ ಅಕ್ಕಿ ಒದಗಿಸಲಿಕ್ಕೂ ಆಯಾ ತಾಲೂಕುಗಳಲ್ಲಿ ಬೇರೆ ಬೇರೆ ಸಬ್ ಕಮಿಟಿಗಳನ್ನು ನೇಮಿಸಿತು.

ಬೋರ್ಡಿನ ಅಪ್ಪಣೆಯ ಕೆಲವು ಸಂದಿಗ್ಧ ವಿಷಯಗಳ ತೀರ್ಮಾನದಲ್ಲಿ ವರ್ಗದಾರರ ಸಂಘದಿಂದ ಪ್ರಾರ್ಥಿಸಲ್ಪಟ್ಟ ಸೆಂಟ್ರಲ್ ಸ್ಟೋರ್ಸಿನ ಅಧ್ಯಕ್ಷ ಶ್ರೀ। ಮೊಳಹಳ್ಳಿ ಶಿವರಾಯರು ಕಲೆಕ್ಟರರನ್ನು ಕಂಡು ಮಾತನಾಡಿ ಈ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆದಿರುವರು:

(೧) ಇನ್ನು ಮುಂದೆ ರಿಕ್ವಿಸಿಶನ್ ಮಾಡುವ ಅಕ್ಕಿಯ ಬೆಲೆಯೇನು?

ಉ: ಹಳೇ ರಿಕ್ವಿಸಿಶನ್ ಮಾಡಿದ ಅಕ್ಕಿಗೆ ಹಿಂದೆ ನಿರ್ಧರಿಸಿದ್ದೇ.

(೨) ರಿಕ್ವಿಸಿಶನ್ ಮಾಡಿದ ಹೊಸ ಅಕ್ಕಿಯನ್ನು ಸಹಕಾರೀ ರಖಂ ವ್ಯಾಪಾರದ ಸ್ಟೋರ್ಸಿಗೆ ವರ್ಗದಾರರಾಗಲಿ ರೈತರಾಗಲಿ ಒಪ್ಪಿಸುವಂತೆ ಕಲೆಕ್ಟರರು ಒಂದು ಸಾಮಾನ್ಯ ಅಪ್ಪಣೆ ಕೊಡುವರೆ?

ಉ: ವರ್ಗದಾರರೂ ರೈತರೂ ಭತ್ತವನ್ನು ಅಕ್ಕಿಮಾಡಿ ರಖಂ ವ್ಯಾಪಾರದ ಸ್ಟೋರ್ಸು ಅಥವಾ ಅದರ ಶಾಖೆಗೆ ತಲಪಿಸಿ ಹಣ ಪಡೆಯುವಂತೆ ಅಪ್ಪಣೆ ಮಾಡಲಾಗುವುದು. ಆ ಅಕ್ಕಿಯನ್ನು ಒಕ್ಕಲು ನೇರವಾಗಿ ಅಥವಾ ವರ್ಗದಾರರ ಮೂಲಕವಾಗಲಿ ತಲ್ಪಿಸಬಹುದು.

(೩) ಗುಡ್ಡು ಮುಸ್ಕತ್ತಿಗಳ ಬೆಲೆಯೆಷ್ಟು?

ಉ: ಸಾಮಾನ್ಯವಾಗಿ ಸುಗ್ಗಿ ರಾಶಿ ಮತ್ತು ಏಣೆಲ್ ರಾಶಿ ಮುದಿ ರೂ. ೧೦; ಗುಡ್ಡಿಗೆ ರೂ. ೧೨-೮-೦, ಮುಸ್ಕತಿಗೆ ರೂ. ೧೧, ಬೆಳ್ತಿಗೆಗೆ ರೂ. ೧೩, ಕಜೆ ರಾಶಿಗೆ ರೂ. ೯-೮-೦ ಬೆಲೆ ನಿರ್ಣಯವಿರುವುದು.

(೪) ಒಂದು ಮುದಿಗೆ ಆರುವರೆ ಕಳಸಿಗೆಯಾಗುವ ಭತ್ತದ ವಿನಿಮಯದ ಬೆಲೆ ಹೇಗೆ?

ಉ: ೬॥ ಕಳಸಿಗೆ ಭತ್ತ ಅಕ್ಕಿಯಾಗಿ ಮಾರ್ಪಡಿಸುವ ವಿನಿಮಯದ ಒಂದು ಮುದಿ ಅಕ್ಕಿಯಷ್ಟೆ.

(೫) ರೆವಿನ್ಯೂ ಬೋರ್ಡು ಅಪ್ಪಣೆಯ ಪ್ರಥಮ ವಾಕ್ಯದಲ್ಲಿ ತೋರುವ 'ಹೆಚ್ಚಿನ' ಎಂಬುದರ ಅರ್ಥವೇನು? ಹೆಚ್ಚಿನಂಶದ ಶೇಕಡಾ ಎಷ್ಟು ರಿಕ್ವಿಸಿಶನ್ ಮಾಡುತ್ತೀರಿ?

ಉ: ಹೆಚ್ಚಿನ ಎಂದರೆ ವರ್ಗದಾರರ ವಶ ಬರುವುದರಲ್ಲಿ ಅವರ ಸ್ವಕೃತ್ಯಕ್ಕೂ ಬೀಜಾಯಕ್ಕೂ ಅಗತ್ಯವಿರುವುದನ್ನು ಕಳೆದು ಉಳಿದ ಅಕ್ಕಿ. ಈ ಸಂಪೂರ್ಣ ಅಕ್ಕಿಯನ್ನು ರಿಕ್ವಿಸಿಶನಿಗೆ ಒಳಪಡಿಸಲಾಗುವುದು.

(೬) ಅಕ್ಕಿಯನ್ನು ಒಕ್ಕಲು ತಲಪಿಸುವಲ್ಲಿ ಅದರ ಬೆಲೆ ಸಾಮಾನ್ಯ ವರ್ಗದಾರನಿಗೆ ಹೋಗಬೇಡವೆ?

ಉ: ಸಹಕಾರೀ ಸ್ಟೋರ್ಸುಗಳಿಗೆ ಅಕ್ಕಿ ತಲಪಿಸುವಲ್ಲಿ ಒಕ್ಕಲು ಒಪ್ಪಿದರೆ ಹಣ ವರ್ಗದಾರನಿಗೆ ಕೊಡಲಾದೀತು.

(೭) ಮಾರ್ಕೆಟ್ಟಿಗೆ ಇನ್ನೂ ದಾಸ್ತಾನು ಇರಿಸಿರುವ ವ್ಯಾಪಾರಿಗಳ ಮೇಲೆ ನಿರ್ಬಂಧ ಹಾಕದ ವಿನಾ ಈಗ ಅಕ್ಕಿಗಿರುವ ವಿಪರೀತ ಬೆಲೆ ತಗ್ಗದ ಕಾರಣ, ನವಂಬರ ಅಂತ್ಯದೊಳಗೆ ಆ ಸ್ಟಾಕನ್ನು ಮಾರದಿದ್ದರೆ ಮಂಗಳೂರಿನ ರೇಶನಿಂಗ್‌ಗಾಗಿ ಅದನ್ನು ರಿಕ್ವಿಸಿಶನ್ ಮಾಡಲಾದೀತೆಂದು ಅಪ್ಪಣೆ ಕೊಡಬಹುದೆ?

ಉ: ವರ್ಗದಾರರ ಈ ಸೂಚನೆಯಂತೆ ಅಪ್ಪಣೆ ಕೊಡುವುದರಿಂದ ಹಿತವಾಗದಾದರೂ ಸಂದರ್ಭಬಿದ್ದಂತೆ ಕಾರ್ಯಕ್ರಮ ಕೈಕೊಳ್ಳಲಾಗುವುದು.

(7ನೇ ಪುಟಕ್ಕೆ ಮುಂದುವರಿದಿದೆ)

ಬ್ರಿಟನಿನ ಜನ ಉಪವಾಸ ಬಿದ್ದರೆ ಬ್ರಿಟಿಷರು ಸಹಿಸುತ್ತಿದ್ದರೆ?

ಬಂಗಾಳದ ಕುರಿತು ಪಾರ್ಲಿಮೆಂಟ್ ಸದಸ್ಯರ ಪ್ರಶ್ನೆ?

ನೋಟುಗಳ ಅತಿ ಪ್ರಸರಣ ತಡೆಯಬೇಕು.

'ಜನಸಂಖ್ಯೆ ಹೆಚ್ಚಿದೆ; ಪಕ್ಷಗಳಲ್ಲಿ ಐಕ್ಯವಿಲ್ಲ'

ಅಮೆರಿಯವರ ರಾಗ.

ಭಾರತದ ಆಹಾರದ ಪರಿಸ್ಥಿತಿಯ ಕುರಿತು ಬ್ರಿಟಿಷ್ ಪಾರ್ಲಿಮೆಂಟಿನ ಕಾಮನ್ಸ್ ಸಭೆಯಲ್ಲಿ ಪ್ರಬಲ ಚರ್ಚೆ ನಡೆಯಿತು. ಬಂಗಾಳದ ಹೃದಯ ದ್ರಾವಕ ವಾರ್ತೆಗಳನ್ನು ಕೇಳಿ ಕಳವಳಗೊಂಡ ಕಾಮನ್ಸ್ ಸಭಾಸದಸ್ಯರು ಕೆಲವರು, ಬ್ರಿಟಿಷ್ ಸರಕಾರ ಭಾರತದ ಕಡೆಗೆ ಕೊಡುವ ಅಲಕ್ಷ್ಯದ ವಿಷಯ ಉಗ್ರವಾಗಿ ಮಾತಾಡಿದರು. ಭಾರತದ ಆಹಾರ ಪರಿಸ್ಥಿತಿಯ ಕುರಿತು ಪಾರ್ಲಿಮೆಂಟಿನಿಂದ ಹೊರಬಿದ್ದ 'ಶ್ವೇತಪತ್ರ'ದ ವಿಷಯದಲ್ಲಿ ಅವರು ತುಂಬಾ ನಿರಾಶರಾಗಿದ್ದರು.

ಈ ಚರ್ಚೆಯನ್ನು ಸಮತಾವಾದೀ ಮುಖಂಡರಾದ ಪೆಥಿಕ್ ಲಾರೆನ್ಸ್‌ರು ಪ್ರಾರಂಭಮಾಡಿದರು.' ಅವರು ಹಿಂದೆ ಬ್ರಿಟಿಷ್ ಮಂತ್ರಿಮಂಡಳದಲ್ಲಿಯೂ ಇದ್ದರು. ಭಾರತದಲ್ಲಿ ಸಂಚರಿಸಿದ ಅವರು ಇಲ್ಲಿನ ಸಮಸ್ಯೆಗಳನ್ನು ಚೆನ್ನಾಗಿ ಅಭ್ಯಾಸಿಸಿರುವರು. ಇವರ ಜೊತೆಗೆ ಅರ್ಲ್ ವಿಂಟರ್‌ಟನ್, ಡೇವಿಡ್ ಲಾಯಿಡ್ ಜಾರ್ಜ್, ಚಾರ್ಲ್ಸ್ ಐಮನ್ ಮೊದಲಾದವರು ಕುಳಿತಿದ್ದರು. ಸಭಾಭವನವು ಜನರಿಂದ ಕಿಕ್ಕಿರಿದಿತ್ತು. ಅಮೆರಿ ಸಾಹೇಬರ ಪತ್ನಿಯವರೂ ಈ ಚರ್ಚೆ ಕೇಳಲು ಬಂದಿದ್ದರು. ಪೆಥಿಕ್ ಲೊರೆನ್ಸರು ಒಳ್ಳೆಯ ಅರ್ಥಶಾಸ್ತ್ರ ವಿಶಾರದರಾದ್ದರಿಂದ, ಭಾರತದ ಆರ್ಥಿಕ ಪ್ರಶ್ನೆಯ ಕಡೆಗೇ ಹೆಚ್ಚಿನ ಗಮನವಿತ್ತರು.

ಕೂಲಿಗಾರ ಪಕ್ಷದ ಮುಖ್ಯ ವಕ್ತಾರರಾದ ಫ್ರೆಡರಿಕ್ ಲಾರೆನ್ಸರು ಚರ್ಚೆ ಪ್ರಾರಂಭಿಸಿ ಹೀಗೆಂದು ಹೇಳಿದರು.

ಬ್ರಿಟನಲ್ಲಿ ಆಗಿದ್ದರೆ?

"ನನ್ನ ರಾಜಕೀಯ ಜೀವನವೆಲ್ಲ ಭಾರತದ ಪರಿಸ್ಥಿತಿಯನ್ನು ಅಭ್ಯಾಸಮಾಡುವುದರಲ್ಲಿಯೇ ಕಳೆದಿದೆ. ಆದರೂ ನನ್ನ ಜ್ಞಾನ ದೊಡ್ಡದೆಂದು ನಾನು ಹೇಳುವುದಿಲ್ಲ. ನನ್ನೀ ಮಾತುಗಳು ಭಾರತದ ಜನರಿಗೆ ಮಾತ್ರವಲ್ಲ, ಜಗತ್ತಿನ ಜನರಿಗೇ ಸಂಬಂಧಿಸಿದ್ದು. ಒಳ್ಳೆಯ ಕಾರ್ಯಪಟು ವೇವಲರು ಭಾರತದ ವೈಸರಾಯರಾಗಿ ದೊರೆತದ್ದು ಚೆನ್ನಾಗಿದೆ. ಈಗಾಗಲೇ ಅವರು ಬಂಗಾಳವನ್ನು ಸಂದರ್ಶಿಸಿ ತನ್ನ ಹೊಣೆಯನ್ನು ಹೊತ್ತಿದ್ದಾರೆ. ಭಾರತದ ಬರಗಾಲದ ಹೊಣೆಯನ್ನು ಕೊನೆಗೆ ಈ ಸಭೆಯೇ ಹೊರಬೇಕಾಗಿರುವುದು. ಬ್ರಿಟನಿನಲ್ಲಿ ಇಷ್ಟು ಮರಣಗಳು ಸಂಭವಿಸಿದ್ದರೆ ಅದರ ನಿವಾರಣೆಗೆ ಏನಾದರೂ ಮಾಡಬೇಕೆಂದು ಇಲ್ಲಿ ಸದಸ್ಯರೆಲ್ಲಾ ಬೊಬ್ಬಿಡುತ್ತಿದ್ದರು. ಪ್ರತಿದಿನ ಅದೇ ಚಿಂತೆ ಮಾಡುತ್ತಿದ್ದರು. ಆದರೆ ದೌರ್ಭಾಗ್ಯದಿಂದ ಈ ಸಭೆಯಲ್ಲಿ ಭಾರತದ ಒಬ್ಬನೇ ಒಬ್ಬ ಪ್ರತಿನಿಧಿಯಿಲ್ಲ. ಆದರೂ ಈ ಸಭೆ ತನ್ನ ಮೇಲೆ ಬಿದ್ದಿರುವ ಹೊಣೆಯನ್ನು ಸ್ವಲ್ಪವಾದರೂ ತಪ್ಪಿಸಬಾರದು. ಒಂದು ದೃಷ್ಟಿಯಿಂದ ನಾವೇ ಭಾರತದ ಪ್ರತಿನಿಧಿಗಳೆಂದರೂ ಎನಬಹುದು. ಏಕೆಂದರೆ ಅಲ್ಲಿ ಆಗುತ್ತಿರುವುದಕ್ಕೆಲ್ಲಾ ನಾವು ಹೊಣೆಗಾರರಾಗಿರುವೆವು. ನಮ್ಮ ಅದೂರ ದೃಷ್ಟಿ, ಸೋಮಾರಿತನ ಮತ್ತು ಕರ್ತವ್ಯ ಪರಾಙ್ಮುಖತೆಯ ಮೂಲಕ ಈ ದುರದೃಷ್ಟವು ಒದಗಿದ್ದು ಅದರ ಜವಾಬ್ದಾರಿಯನ್ನು ನಾವು ತಪ್ಪಿಸಿಕೊಳ್ಳಲಾರೆವು.

ಇದ್ದಂತೆ ಹೇಳಬೇಕು

'ಭಾರತದ ಕೆಲ ಕಡೆಗಳಲ್ಲಿ ಬೆಳೆ ಬರದಿರುವುದು ದೇವರ ಸಿಟ್ಟೆಂದು ಕೆಲವರು ಹೇಳುತ್ತಾರೆ. ಬರ್ಮಾ ಅಕ್ಕಿ ತಡೆದು ಜಪಾನಿಗಳು ಅನ್ಯಾಯಗೈದರೆಂದೂ ಕೆಲವರು ಹೇಳುವರು. ಕೇಂದ್ರ ಮತ್ತು ಪ್ರಾಂತ ಹೀಗೆ ಎರಡು ಸರಕಾರಗಳ ಮೇಲೆ ಹೊಣೆ ಇರುವುದರಿಂದ ಹೀಗಾಯಿತೆಂದೂ ಹೇಳಲಾಗುತ್ತದೆ. ಅಧಿಕ ಸಂಗ್ರಹ, ವಹಿವಾಟು ತೊಂದರೆ, ನೋಟಿನ ಅತಿಪ್ರಸರಣ ಇವುಗಳಿಂದ ಹೀಗಾಯಿತೆಂದು ಹೇಳಲಾಗುತ್ತದೆ. ಅಮೆರಿ ಈ ಪರಿಸ್ಥಿತಿಯನ್ನು ಆತ್ಮ ಸಂತೋಷದಿಂದಲೇ ಎದುರಿಸುತ್ತಿರುವರೆನಲಾರೆ. ಭಾರತ ಸರಕಾರ ಸಾಧ್ಯವಿದ್ದಷ್ಟು ಪ್ರಯತ್ನಿಸಿದರೂ ಪೂರೈಸಲಿಲ್ಲ. ಅಷ್ಟರಿಂದ ಈಸ ಬಲ್ಲವನು ಅಳತೆ ಮೀರಿ ಮುಳುಗಿದರೆ ತಪ್ಪು ಹೊರಿಸಬಾರದೆಂಬಂತೆ ಭಾರತ ಸರಕಾರವನ್ನು ದೂರಬಾರದೆಂದೂ ಹೇಳಲಾಗುತ್ತದೆ.

'ಇದ್ದುದಂತೆ ಇದ್ದಂತೆ ಹೇಳಬೇಕು. ನಾವು ಹಾಗೆಮಾಡುವುದಿಲ್ಲವೆಂದು ಭಾರತೀಯರ ಅಭಿಪ್ರಾಯವಿರುವುದು. ಅಮೆರಿಕನರೂ ಹಾಗೆ ಭಾವಿಸುತ್ತಾರೆ. ನನ್ನ ಅಭಿಪ್ರಾಯವೂ ಹಾಗೆಯೇ ಇರುವುದು ನಮ್ಮ ಭಾರತ ಸರಕಾರವೂ, ಇಲ್ಲಿ ಮತ್ತು ಭಾರತದಲ್ಲಿರುವ ಎಲ್ಲಾ ಅಧಿಕಾರಿಗಳೂ ಇದರಲ್ಲಿ ಪಾಲುಗಾರರು. ಭಾರತದ ಬರಗಾಲದ ಹೊಣೆಯಲ್ಲಿ ನಮ್ಮದು ಸಿಂಹದ ಪಾಲೆಂಬುದನ್ನು ಒಪ್ಪಿಕೊಳ್ಳಲೇಬೇಕು. ನಾವು ೪೦-೫೦ ವರ್ಷಗಳ ಹಿಂದೆ ಭಾರತಕ್ಕೆ ಹೋದಾಗಲೂ ಇದೇ ಪರಿಸ್ಥಿತಿಯಿತ್ತು. ಆದರೆ ಅದು ಚಿಕ್ಕ ರೂಪದಲ್ಲಿತ್ತು. ಅಲ್ಲಿ ಆಹಾರವಿತ್ತು; ಅದನ್ನು ಕೊಳ್ಳುವ ಶಕ್ತಿ ಜನರಿಗಿದ್ದಿಲ್ಲ. ಇಂದೂ ಆಹಾರ ಪದಾರ್ಥ ಕೊಂಡುಕೊಳ್ಳುವ ಶಕ್ತಿ ಜನರಲ್ಲಿಲ್ಲ. ಕ್ರಯ ಮಿತಿಮೀರಿ ಏರಿದ್ದರಿಂದ ಹೀಗಾಗಿದೆ. ನೋಟುಗಳ ಅತಿ ಪ್ರಸರಣವೇ ಕ್ರಯ ಏರುವುದಕ್ಕೆ ಒಂದು ಕಾರಣ. ನೋಟುಗಳ ಅತಿ ಪ್ರಸರಣಕ್ಕೆ ಭಾರತ ಸರಕಾರವೇ ಕಾರಣವಲ್ಲದೆ ಮತ್ತಾರೂ ಅಲ್ಲ. ಅಮೆರಿಯವರೂ ಈ ಮಾತನ್ನು ಅಲ್ಲಗಳೆವುದಿಲ್ಲ. ನೋಟುಗಳು ಅತಿಯಾಗಿವೆಯೆಂಬುದಕ್ಕೆ ಏನಾದರೂ ಸಾಕ್ಷಿ ಬೇಕಾದರೆ, ಆಹಾರದ ಕ್ರಯ ಏರಿದ್ದೇ ಸಾಕು. ನೋಟುಗಳ ಅತಿ ಪ್ರಸರಣ ಹೇಗಾಯಿತೆಂಬುದನ್ನು ಹೇಳಬೇಕಾದ ಅವಶ್ಯವಿಲ್ಲ.

ನಿವಾರಣೋಪಾಯ

ಈ ದೇಶದಲ್ಲಿ ಅತಿ ಪ್ರಸರಣವನ್ನು ತಡೆವ ಅನೇಕ ಪ್ರಯತ್ನ ಮಾಡಲಾಗಿದೆ. ಆದರೆ ಭಾರತದಲ್ಲಿ ಅದನ್ನೇನನ್ನೂ ಮಾಡಿಲ್ಲ. ಪರದೇಶಗಳಿಂದ ಆಹಾರ ತರಿಸುವ ಹೊಣೆ ಪ್ರಾಂತಿಕ - ಸರಕಾರಕ್ಕಿಲ್ಲದಿರುವುದರಿಂದ ಅದನ್ನು ಕೇಂದ್ರ ಸರಕಾರವೇ ಮಾಡಬೇಕು. ನೋಟುಗಳ ಅತಿ ಪ್ರಸರಣ ಕೂಡಲೇ ನಿಲ್ಲಿಸಬೇಕು, ದೇಶದಲ್ಲಿದ್ದ ಅಧಿಕ ಕೊಳ್ಳುವ ಶಕ್ತಿಯನ್ನು ಕರ ಇಲ್ಲವೇ ಸಾಲದ ಮೂಲಕ ಕಡಿಮೆ ಮಾಡಬೇಕು. ದ್ರವ್ಯ ಸಹಾಯಮಾಡಿ ಆಹಾರ ಪದಾರ್ಥಗಳ ಬೆಲೆ ಇಳಿಸಬೇಕು, ಬೊಂಬಾಯಿಯಂತೆ ಇಡೀ ದೇಶದಲ್ಲಿ ರೇಶನಿಂಗ್ ಪ್ರಾರಂಭಿಸಬೇಕು. ಆಹಾರ ಹೋಗುವುದನ್ನು ನಿಲ್ಲಿಸಬೇಕು, ಆಮದು ಆಗಬೇಕು. ಭಾರತದ ಬರಗಾಲವು ನಮಗೆ ಯುದ್ಧ ಭೂಮಿಯಲ್ಲಿ ಒದಗಿದ ಅಪಜಯವೆಂದೇ ಭಾವಿಸಬೇಕು. ಜಿನ್ನಾರವರು ಅಕ್ಟೋಬರ ೩ರಂದು ಕೊಟ್ಟ ಹೇಳಿಕೆಯಲ್ಲಿ ಸಹಕಾರದ ಸೂಚನೆಯಿದೆ. ಆದ್ದರಿಂದ ಎಲ್ಲಾ ಪಕ್ಷಗಳ ಸಹಕಾರ ಪಡೆಯಬೇಕು."

ಅಮೆರಿ ಉತ್ತರ

ಅನಂತರ ಭಾರತ ಮಂತ್ರಿ ಅಮೆರಿಯವರು ಮಾತನಾಡಿದರು. ಜನಸಂಖ್ಯೆ ಭಾರತದಲ್ಲಿ ಹೆಚ್ಚು ಬೆಳೆದಿದೆ, ಅದರಂತೆ ಆಹಾರ ಸಾಮಗ್ರಿ ಬೆಳೆಯುತ್ತಿಲ್ಲವೆಂದರು. ಸರಕಾರದ ಕಾರ್ಯಕಲಾಪಗಳನ್ನು ಪ್ರಶಂಸಿಸಿದರು. ಬ್ರಿಟಿಷ್ ಆಳ್ವಿಕೆಯು ಭಾರತಕ್ಕೆ 'ಸುವರ್ಣಯುಗ'ವನ್ನು ತಂದಿತೆಂದೂ ಹೇಳಿಬಿಟ್ಟರು. ಅವರ ಉತ್ತರದ ಸಾರಾಂಶವಿಂತಿದೆ.

"ಭಾರತದ ವಿಷಯ ನಮಗೆ ಘಟನಾತ್ಮಕ ಹೊಣೆಯಿದೆ. ಅಲ್ಲಲ್ಲಿನ ಅಧಿಕಾರಗಳನ್ನು ಹೆಚ್ಚಿನ ಪಾಲು ಅಲ್ಲಿನವರಿಗೇ ಒಪ್ಪಿಸಿಕೊಟ್ಟಿರುವೆವು. ಆದರೂ ಸಾಮ್ರಾಜ್ಯಾಂತರ್ಗತ ಮಾನವರ ಸುಖದುಃಖಗಳ ವಿಷಯ ನಾವು ಸಹಾನುಭೂತಿಯಲ್ಲಿದ್ದೇವೆ. ಬಂಗಾಳದ ಬರಗಾಲವು ಒಂದು ಪ್ರತ್ಯೇಕ ವಿಷಯ. ಅದು ಒಂದು ಅಪಾಯ ಸೂಚನೆ ಮಾತ್ರ. ಮುಂದೆ ನಾವು ಮಾಡುವ ಕರ್ತವ್ಯವನ್ನು ಎಚ್ಚರಿಸುತ್ತಿದೆ. ಭಾರತದ ಕೃಷಿಕರು ಅಲ್ಪಜೀವಿಗಳು. ಅದೂ ಕೂಡಾ ಅಲ್ಲಿ ಇಲ್ಲವಾದದ್ದರಿಂದೀಗ ಈ ಪರಿಸ್ಥಿತಿಯೊದಗಿದೆ.

ಜನಸಂಖ್ಯೆ ಹೆಚ್ಚಿದೆ

ಹಿಂದೆ ಚೀನದಂತೆ ಭಾರತದಲ್ಲಿಯೂ ಆಗಾಗ ಕ್ಷಾಮ ಬರುತಿತ್ತು. ಆದರೆ ಬ್ರಿಟಿಷರ ಆಳುವಿಕೆಯಿಂದಾಗ ಬಹ[illegible]
ಸುಧಾರಣೆ ಹೊಂದಿದೆ. ರೈಲ್ವೆ ಮಾರ್ಗ[illegible]
ಆಗಿದೆ. ಕಾಲುವೆ ವ್ಯವಸ್ಥೆ ನಡೆದಿದೆ
ಕೃಷಿಕರಿಗೆಲ್ಲಾ ಅನುಕೂಲತೆ ಮಾಡಿದೆ
ಬರಗಾಲದ ಸಮಸ್ಯೆ ಅಲ್ಲಿ ಯಾವಾ[illegible]
ಲೂ ಇದ್ದುದರಿಂದ ಅದನ್ನು ತಡೆಯು[illegible]
ವ್ಯವಸ್ಥೆ ಯಾವಾಗಲೇ ಮಾಡಿದೆ. ಅಂ[illegible]
ವ್ಯವಸ್ಥೆ ಮತ್ತು ಆರೋಗ್ಯಾಭಿವೃದ್ಧಿಯಿ[illegible]
ದ ಭಾರತದ ಆಹಾರ ಉತ್ಪತ್ತಿ ಬಹ[illegible]
ಹೆಚ್ಚಿದೆ. ಕಳೆದ ೧೨ ವರ್ಷಗಳಲ್ಲಿ ಭಾ
ರತದ ಜನಸಂಖ್ಯೆ 6 ಕೋಟಿ ಹೆಚ್ಚಿದೆ
ಈ 6 ಕೋಟಿಯಲ್ಲದೆ ಬೇರೆ 22 ಕೋ
ಟಿ ಜನರ ಆಹಾರ ವ್ಯವಸ್ಥೆ ಆಗಬೇಕು
ಬಂಗಾಳದ ಉತ್ಪತ್ತಿಯೂ ಜನಸಂಖ್ಯೆ
ಗಣನೆಯಿಂದ ಕಡಿಮೆಯಾಗಿದೆ. ಒಂದೆ
ಬಂಗಾಳದಲ್ಲಿಯೇ ೧೦ ವರ್ಷಗಳಲ್ಲಿ
೧೦ ಲಕ್ಷ ಜನಸಂಖ್ಯೆ ಹೆಚ್ಚಿರುವುದು
ಹೀಗೆ ಜನಸಂಖ್ಯೆ ಬೆಳೆಯಲು ಬಂಗಾ
ಳದ ಹಳ್ಳಿಗಳ ಬೆಳವಣಿಗೆ ಮತ್ತು ಕೈಗಾ
ರಿಕಗಳು ಕಾರಣ. ಮುಂದೆ ಭಾರತ
ದಲ್ಲಿ ಅಲ್ಲಿನ ಜನಸಂಖ್ಯೆಗೆ ಸರಿಯಾಗಿ
ಆಹಾರ ಉತ್ಪತ್ತಿ ಮಾಡಬೇಕಾದರೆ ಕೃಷಿ
ಯನ್ನು ಬೇರೆ ಉಪಾಯಗಳಿಂದ ಅಭಿ
ವೃದ್ಧಿ ಮಾಡಬೇಕು. ಇಷ್ಟು ಇರು
ವಾಗ ಯುದ್ಧ ಪರಿಸ್ಥಿತಿಯಲ್ಲಿ ಅಲ್ಲಿನ
ಪರಿಸ್ಥಿತಿ ಹೇಗಾಗಬಹುದೆಂದು ವಿಚಾರಿ
ಸಿರಿ. ಮಧ್ಯ ಪೂರ್ವದ ಯುದ್ಧದಲ್ಲಿ
ಭಾರತ ಬಹಳ ಸ್ವಾರ್ಥತ್ಯಾಗ ಮಾಡಿದೆ.
(ಹರ್ಷೋದ್ಗಾರ) ಇಷ್ಟಲ್ಲದೆ ಆ ದೇಶವು
ದೊಡ್ಡ ಪ್ರಮಾಣದಲ್ಲಿ ಮಿಲಿಟರಿಯವ
ರಿಗೆ ಸಹಾಯಮಾಡಿದೆ. ಅಲ್ಲೀಗ ಬೆಲೆ
ಏರಿದೆ.

"ಭಾರತ ಸರಕಾರದವರು ಅವನ್ನು ಸಾಧ್ಯವಿದ್ದೆಲ್ಲಾ ಪ್ರಯತ್ನಗಳಿಂದ ತಡೆಯುವರು. ಹಣ ಸಹಾಯವಿದ್ದರೆ ಬರಗಾಲವನ್ನು ಕಡಿಮೆ ಮಾಡಬಹುದು. ಹಳ್ಳಿಗಿಂತ ಪೇಟೆಯ ಸಾಹುಕಾರರು ತಮಗೆ ಅನುಕೂಲ ಮಾರ್ಗ ಅನುಸರಿಸಿದರು. ಇದರ ಪರಿಣಾಮ ಭೀಕರವಾಯಿತು. ಆ ದೇಶದಿಂದ ಸ್ವಲ್ಪಮಟ್ಟಿಗೆ ಪರದೇಶಕ್ಕೆ ಆಹಾರ ಸಾಮಗ್ರಿ ಹೋಗಿದೆಯೇನೋ ನಿಜ. ಬರ್ಮಾ ಮತ್ತು ಪರ್ಶಿಯಾ ಕರಾವಳಿ ಕೈತಪ್ಪಿದ್ದರಿಂದ ಅಲ್ಲಿ ಆಹಾರಾಭಾವವುಂಟಾಯಿತು."

ಬಳಿಕ ಪ್ರಾಂತಿಕ ಸರಕಾರದ ಆಡಳಿತವಿರುವುದರಿಂದ ರಾಜ್ಯಘಟನೆಯಂತೆ ಕೇಂದ್ರ ಸರಕಾರವು ಅದನ್ನು ನಿರ್ಬಂಧಿಸಬರುವುದಿಲ್ಲವೆಂದು ಮೊದಲಾಗಿ ಹೇಳಿ, ತಮ್ಮ ಹೊಣೆಯನ್ನು ತಪ್ಪಿಸಿಕೊಳ್ಳಲು ಯತ್ನಿಸಿದರು. ಬೆಲೆ ನಿಯಂತ್ರಣವನ್ನು ಯಶಸ್ವಿಯಾಗಿ ಮಾಡುವ ಪ್ರಯತ್ನ ನಡೆದಿದೆಯೆಂದರು. ಕೊನೆಗೆ ಭಾರತದ ಸಮಸ್ಯೆ ಯುದ್ಧವಿರಲಿ ಶಾಂತಿಯಿರಲಿ ಇರತಕ್ಕವೇ ಎಂದೂ, ಎಲ್ಲಾ ಪಕ್ಷಪಂಗಡಗಳಲ್ಲಿ ಒಡಂಬಡಿಕೆಯಾಗದೆ ಅಲ್ಲಿನ ಪರಿಸ್ಥಿತಿ ಸುಧಾರಿಸಬರುವುದಿಲ್ಲವೆಂದೂ ನುಡಿದರು.

ರಷ್ಯನ್ ನಾಯಕ ಸ್ಟಾಲಿನರು ರಷ್ಯನ್
ಕ್ರಾಂತಿಯ ವಾರ್ಷಿಕೋತ್ಸವದಂದು
ಒಂದು ಭಾಷಣವಿತ್ತರು; ಯೂರೋಪಿ
ನಲ್ಲಿ ದ್ವಿತೀಯ ರಂಗ ಬೇಗನೇ ಆಗ
ಬಹುದೆಂದು ಅವರು ಅಭಿಪ್ರಾಯ ವ್ಯಕ್ತ
ಪಡಿಸಿದರು. ರಷ್ಯಕ್ಕೆ ವಿಜಯವು ಸಮೀ
ಪವಾಗುತ್ತಿದೆಯೆಂದು ಅವರ ಅಚಲ
ವಿಶ್ವಾಸವಿದೆ. "ಯುದ್ಧದ ಆರಂಭ
ಕಾಲಕ್ಕಿಂತಲೂ ಯುದ್ಧಾಂತ ಕಾಲದಲ್ಲಿ
ನಷ್ಟವು ಹೆಚ್ಚಾಗಿ ಬೆಳಗುವುದು. ನಾವು
ಮಹಾ ಮಹಾ ವಿಜಯಗಳಿಸಿರಲು,
ಶತ್ರುಗಳು ಒಂದು ಕಡೆಯಲ್ಲಿಯೂ ಜಯ
ಗಳಿಸಿಲ್ಲ. ಕಳೆದ ವರ್ಷ ನಾವು ಗಂ
ಡಾಂತರವನ್ನಿದುರಿಸಿದೆವು. ವಸಂತ
ಕಾಲ ಪ್ರಾರಂಭವಾಗುತ್ತಲೇ ವೈರಿಗಳ
ಆಕ್ರಮಣವನ್ನು ತಪ್ಪಿಸಲು ನಾವು
ಮಾಡಿದ ಸಾಹಸದಿಂದ ಜರ್ಮನರು ಹಿಂ
ಜೋಡಿದರು. ನಮ್ಮ ಆಕ್ರಮಣ ಅಪ್ರ
ತಿಹತವಾಗಿ ಮುಂದುವರಿಯಿತು. ಬೇಗ
ನೇ ಶತ್ರುಗಳನ್ನು ಸಂಪೂರ್ಣ ಮುರಿಯ
ಬಹುದೆಂದು ನಮ್ಮ ವಿಜಯಗಳು ಸ್ಥಿರ
ಗೊಳಿಸಿರುವವು. ಯುದ್ಧಾರಂಭದಲ್ಲಿ
ಜರ್ಮನರೊಡನೆ ಸಾಕಷ್ಟು ಆಹಾರ
ಸಾಮಗ್ರಿಗಳಿದ್ದರೂ ಈಗ ಅವೆಲ್ಲಾ
ನಿರ್ನಾಮವಾಗಿವೆ." ಎಂದು ಅವರು
ತಿಳಿಸಿದರು.

ರಶ್ಯದ ಶಕ್ತಿ ಹೆಚ್ಚಿದೆ.

ಸ್ಟಾಲಿನರು ರಶ್ಯದ ಯುದ್ಧ ವಿಮರ್ಶೆ
ಯನ್ನು ಮಾಡುತ್ತಾ ಹೀಗೆ ಮುಂದುವರಿ
ಸಿದರು. "ವೈರಿಯು ಎಷ್ಟೊಂದು ಸಾಹ
ಸ ಮಾಡಿದರೂ ಆತನಿಂದ ಮುಂದೊತ್ತು
ವುದಾಗಲಿಲ್ಲ. ಈ ಮಹಾ ಯುದ್ಧದಲ್ಲಿ,
ಜರ್ಮನರ ಫೇಸಿಸ್ಟ್ ದಳವು ಒಮ್ಮೆ ಸ್ವಾ
ಧೀನ ಮಾಡಿದ ಸ್ಥಳವನ್ನು ಬಿಟ್ಟು ಹಿಂ
ಜೋಡಿದ್ದು ಇದೇ ಮೊದಲನೆಯ ಬಾರಿ
ಯೆನಬಹುದು. ಜರ್ಮನ್ ಸೈನಿಕರು
ಓಡಿ ಬದುಕುವ ಆಲೋಚನೆಯಲ್ಲಿದ್ದಾರೆ
ರಶ್ಯದ ೭೫೦ ಮೈಲುಗಳ ವಿಸ್ತಾರವಾದ
ರಣ ಕ್ಷೇತ್ರದಲ್ಲಿ ನಮ್ಮ ರಕ್ತದಳವು ಹರ
ಡಿದೆ. ವೈರಿಗಳು ಸಾವಿರಾರು ಚದುರ
ಮೈಲುಗಳ ವಿಸ್ತಾರ ರಣಭೂಮಿಯಿಂದ
ಕಾಲ್ತೆಗೆದಿರುವರು. ಇದು ಜರ್ಮನರ
ಸೋಲಿನ ಸೂಚನೆಯಾಗಿದೆ ಸ್ಟಾಲಿನ್
ಗ್ರಾಡ್ ಅಪಜಯದಿಂದ ವೈರಿಗಳು ಎಂ
ದೆಂದೂ ತಲೆಯೆತ್ತುವಂತಿಲ್ಲ. ಕಳೆದ
ವರ್ಷ ವೈರಿಗಳು ನಾಲ್ಕು ಮಿಲಿಯ ಸೈನಿ
ಕರನ್ನು ಕಳೆದುಕೊಂಡಿರುವರು. ಇದರೊ
ಡನೆ ಬೇಕಾದಷ್ಟು ಸೈನ್ಯ ಸಾಮಗ್ರಿ ಕಳೆ
ಕೊಂಡಿದ್ದಾರೆ. ಜರ್ಮನ್ ಫೇಸಿಸ್ಟರು
ಆರಂಭದ ಸಾಹಸವನ್ನು ಮತ್ತೆ ತೋರಿಸ
ಲಿಲ್ಲ. ಯುದ್ಧ ಸಮಯದಲ್ಲಿಯೂ
ನಾವು ನಮ್ಮ ಕೈಗಾರಿಕೆ ಉತ್ಪತ್ತಿಗಳನ್ನು
ಇಮ್ಮಡಿಗೊಳಿಸಿದ್ದೇವೆ. ನಮ್ಮ ಹಳ್ಳಿ ಜ
ನರೂ ಯುದ್ಧ ಸಿದ್ಧತೆ ಮಾಡಿದ್ದಾರೆ.
ನಾವು ಸೈನಿಕರಿಗೂ ಪ್ರಜೆಗಳಿಗೂ ಸಾಕ
ಷ್ಟು ಆಹಾರ ಒದಗಿಸಿಕೊಟ್ಟಿದ್ದೇವೆ. ವೈರಿ
ಗಳು ಪಲಾಯನ ಮಾಡುವಾಗ ನಮ್ಮ
ದೇಶವನ್ನು ಹಾಳು ಮಾಡುತ್ತಿದ್ದಾರೆ. ಈ
ಅನ್ಯಾಯದ ಪ್ರತೀಕಾರ ಮಾಡದಿರಲಾರೆ
ವು. ಮೋಸ್ಕೋ ಪರಿಷತ್ತು ಮಿತ್ರ ಪಕ್ಷ
ದ ಸೌಹಾರ್ದವನ್ನು ಬಲಗೊಳಿಸಿತು.'

ಹಿಟ್ಲರನ ಹುರುಪು.

ಮ್ಯೂನಿಕ್ ನಗರದಲ್ಲಿ ನಾಜಿ ಮುಖಂಡ
ರನ್ನುದ್ದೇಶಿಸಿ ಹಿಟ್ಲರನು ಒಂದು ಭಾಷಣ
ಮಾಡಿದನು. ಸಭಾ ಭವನವು ಸೈನಿಕ
ರಣಗೀತಗಳಿಂದ ಉತ್ಸಾಹ ಪೂರಿತವಾ
ಗಿತ್ತು. ಅಲ್ಲಲ್ಲಿ ಕಾವಲು ಸೈನಿಕರು ನಿಂ
ತಿದ್ದರು. ನಾಜೀ ದಳಪತಿಗಳು, ಮಂ
ತ್ರಿಗಳು ಕೂಡಿದ್ದರು. ಹಿಟ್ಲರನು ತನ್ನ
ಭಾಷಣವನ್ನು ಬಹಳ ಉತ್ಸಾಹ ಪೂರ್ಣ
ನಾಗಿಯೇ ಮಾಡಿದನು.

ಸಮರಭೂಮಿಯ ಸಂಚಾರ

'ತ್ರಿಮೂರ್ತಿ'ಗಳು ಮಾತನಾಡಿದರು!

ಸ್ಟಾಲಿನ್, ಹಿಟ್ಲರ್, ಮತ್ತು ಚರ್ಚಿಲ್ ಮೂವರೂ ತಾವೇ ಗೆಲುವೆವೆಂದರು!

"ನಾವು ಈಗ ಎಲ್ಲಾ ಆತಂಕ ಅಡಚಣೆ
ಗಳು ದಾಟಿ ಬರಲು ಶಕ್ತರಾಗಿರುವೆವು.
ಅಂತ್ಯದಲ್ಲಿ ನಮಗೆ ಜಯ ದೊರಗುವುದು.
ನಾವು ಪ್ರತೀಕಾರ ಕೈಕೊಳ್ಳದಿರಲ್ಲಾರೆವು.
ನಾವು ಅಮೆರಿಕಕ್ಕೆ ಮುಟ್ಟಲು ಶಕ್ತರಾಗ
ದಿದ್ದರೆ ನಮ್ಮ ಸಮೀಪವಿರುವ ಸಿಸಿಲಿ
ದ್ವೀಪದಲ್ಲೆ ಇಳಿಯುವುದು ಸುಲಭವಿರು
ವುದು— ಆದರೆ ಚೆನಲ್ ದಾಟುವುದು;
ಅಥವಾ ನಾರ್ವೆ ಮೇಲೆ ದಾಳಿಯಿಡು
ವುದು ಕಠಿಣವಿರುತ್ತದೆ. ಜರ್ಮನಿಯು
ಎಂದಿಗೂ ದುರ್ಬಲವಾಗದು ಮಿತ್ರರು
ದ್ವಿತೀಯರಂಗ ತೆರೆದರೆ ಅದನ್ನು ಎದುರಿ
ಸಲು ಎಲ್ಲಾ ಕಡೆಗಳಲ್ಲಿಯೂ ನಾವು
ಸಿದ್ಧರಿರುವೆವು. ಯುದ್ಧವು ಎಷ್ಟೇ ವರ್ಷ
ಗಳ ವರೆಗೆ ನಡೆದರೂ ಜರ್ಮನಿಯು
ಎಂದೂ ಶರಣು ಬರಲಿಕ್ಕಿಲ್ಲ. ಈ ಜಗ
ತ್ತಿನಲ್ಲಿ ಮತ್ತೆ ಯಾವುದೂ ಸಾಧ್ಯವಿರಬ
ಹುದು ಆದರೆ ಜರ್ಮನಿ ಬಲಗುಂದು
ವುದು ಮಾತ್ರ ಅಸಾಧ್ಯ' ಇವು ಹಿಟ್ಲರನ
ಘೋಷಗಳು ~~ಸಹಜವಾಗಿ~~ ಇದರಲ್ಲಿ
ತನ್ನ ಸೈನಿಕರನ್ನು ಹುರಿದುಂಬಿಸುವ
ಬುದ್ಧಿವಂತಿಕೆಯೇ ಇದೆಯೆಂದು ಯಾರಾ
ದರೂ ತಿಳಕೊಳ್ಳಲಾಗುತ್ತದೆ. ಆದರೆ
ಮುಂಬರುವ ಗಂಡಾಂತರವನ್ನು, ದ್ವಿತೀ
ಯರಂಗದ ವಿಚಾರವನ್ನೆಲ್ಲಾ ಜರ್ಮನಿ
ತಿಳಕೊಂಡು ಅದಕ್ಕೆ ಸಾಧ್ಯವಾದ ಎಲ್ಲಾ
ಸಿದ್ಧತೆಗಳನ್ನೂ ಮಾಡುತ್ತಿದೆಯೆಂದೂ
ಇದರಿಂದ ಅರ್ಥವಾಗುವುದಿಲ್ಲವೆ?

ಹಿಟ್ಲರ್ ಮಾತನಾಡುವುದು, ಚರ್ಚಿ
ಲ್ ಮಾತನಾಡುವುದೂ ಸಾಮಾನ್ಯ
ಒಂದೇ ಸಮಯದಲ್ಲಿ ಸಂಭವಿಸುತ್ತದೆ.
ಯಾವುದೋ ಒಂದು ಗುಂಡಿಯನ್ನೊತ್ತಿ
ದರೆ ಎರಡು ಬಾಯಿಗಳೂ ಬಿಡುವಂತೆ
ತೋರುತ್ತದೆ. ಪ್ರತಿ ಸಲವೂ ಯುದ್ಧ
ಪ್ರಾರಂಭವಾದಂದಿನಿಂದ ಇದೇ ಕ್ರಮ
ನಡೆದು ಬಂದಿದೆ. ಹಿಟ್ಲರ್ ಚರ್ಚಿಲರು
ಉತ್ತರಗಳಾಗಿ ಭಾಷಣ ಮಾಡುತ್ತಾರೆ.
ಜರ್ಮನರನ್ನು ಹಿಟ್ಲರ್ ಹುರಿದುಂಬಿಸು
ವಾಗ, ಬ್ರಿಟಿಷರನ್ನು ಚರ್ಚಿಲರು ಕೆರಳಿ
ಸುತ್ತಾರೆ. ಉಭಯ ಪಕ್ಷದ ಮಹಾನಾ
ಯಕರು, ಯುದ್ಧದ ಕಾರಣ ಕರ್ತೃಗಳು
ಇವರಾಗಿದ್ದು ಹೀಗೆ ಜತೆ ಜತೆಯಲ್ಲಿ

ಸ್ಪರ್ಧೆ ಸ್ಪರ್ಧೆಗಳಿಂದ ಭಾಷಣ ಮಾಡು
ವುದೂ ಹೋರಾಡುವುದೂ ನಡೆದೇ
ಇದೆ.

ಚರ್ಚಿಲರ ಸ್ವತ್ಪೋಕ್ತಿ.

"೧೯೪೦ರ ನವಂಬರದಲ್ಲಿ ಜರ್ಮನರ
ಮುಂಚಿನ ದಾಳಿಗೆ ನಾವೇ ಬಲಿಯಾಗಿ
ದ್ದೆವು. ಆಗ ಜರ್ಮನರಿಂದ ಸ್ವಾಧೀನ
ಗೊಳಿಸಲ್ಪಟ್ಟ ರಾಷ್ಟ್ರಗಳನ್ನು ದಾಸ್ಯದಿಂದ
ವಿಮೋಚನೆ ಮಾಡದ ವಿನಾ ನಾವು
ಹೋರಾಟ ನಿಲ್ಲಿಸಲಾರೆವೆಂದು ಶಪಥ
ಹಾಕಿದ್ದೆವು. ಆ ಶಪಥಕ್ಕೆ ನಾವಿಂದೂ
ಬದ್ಧರಿರುವೆವು. ೧೯೪೧ರಂದು ನಾವು
ಜಪಾನೀ ಸರಕಾರಕ್ಕೆ ನೀವು ಅಮೆರಿಕದ
ವಿರುದ್ಧ ಯುದ್ಧ ಮಾಡಿದರೆ ನಾವು ನಿಮ್ಮ
ವಿರೋಧ ಯುದ್ಧಮಾಡಬೇಕಾಗುವು
ದೆಂದು ಎಚ್ಚರಿಕೆ ಕೊಟ್ಟಿದ್ದೆವು. ಅದ
ರಂತೆ ಈಗ ಮಾಡಬೇಕಾಯಿತು ಕಳೆದ
ವರ್ಷ, ನಾನು ಬ್ರಿಟಿಷ್ ಸಾಮ್ರಾಜ್ಯ
ವನ್ನು ದಿವಾಳಿ ಮಾಡಲಾರೆನೆಂದು
ಹೇಳಿದ್ದೆ. ಇಂದಾದರೂ ನನ್ನ ಅಭಿಪ್ರಾಯ
ಅದೇ ಇದೆ. ಕಳೆದ ವರ್ಷದ ಬಳಿಕ
ನಮಗೆ ಪ್ರತಿಯೊಂದು ರಣರಂಗಗಳ
ಲ್ಲಿಯೂ ವಿಜಯವೇ ದೊರೆತಿದೆ. ರಶ್ಯ
ನರು ಜರ್ಮನರಿಗೆ ಬಲವಾದ ಹೊಡೆತ
ಕೊಟ್ಟು, ಅವರ ಶಕ್ತಿಯನ್ನು ಕುಂದಿಸಿ
ದ್ದಾರೆ. ಮೋಸ್ಕೋ ಪರಿಷತ್ತಿನ ಫಲಿ
ತಾಂಶವಾಗಿ ಬ್ರಿಟಿಷ್ ಹಾಗೂ ಅಮೆರಿಕ
ಗಳು ರಶ್ಯದೊಂದಿಗೆ ಸಹಕರಿಸಿ ಕೊನೆವ
ರೆಗೆ ಹೋರಾಡಲು ನಿರ್ಧರಿಸಿರುವವು
ಮತ್ತು ಪರಸ್ಪರ ಸ್ನೇಹ ಹಾಗೂ ಅದರ
ತಳಹದಿ ಮೇಲೆ ಹೊಸ ಜಗತ್ತು ನಿರ್ಮಿ
ಸಲು ನಿಶ್ಚಯಿಸಿರುವವು. ಜರ್ಮನಿಯು
ಒಮ್ಮೆಯೇ ಕಳಚಿಬೀಳುವುದೆಂದು ತಿಳಿ
ಯುವಷ್ಟು ಮೂರ್ಖರು ನಾವಲ್ಲ.
ಯೂರೋಪಿನಲ್ಲಿ ೧೯೪೪ರ ವರೆಗೆ ಭೀ
ಕರ ಹೋರಾಟವಾಗುವುದೆಂದೂ ಅದ
ರಲ್ಲಿ ಮಿತ್ರರು ಬಹಳ ಹಾನಿಗೆ ಗುರಿಯಾ
ಗಬೇಕಾಗುವುದೆಂದೂ ನಾನು ಬಲ್ಲೆ.
ಈಗ ದೊರೆತ ಜಯದಿಂದ ಮೈಮರೆತು
ಕುಳಿತುಕೊಳ್ಳುವ ಸಮಯವಿದಲ್ಲ.
ಇನ್ನೂ ಭಯಂಕರ ಯುದ್ಧಗಳು ಮುಂದೆ
ನಡೆಯಲಿವೆ. ಬ್ರಿಟನಿನ ಮೇಲೆ ಹೊಸ
ತರದ ಧಾಳಿಗಳು ಸಂಭವಿಸ ಬಹುದು.
ಕಳೆದ ಕೆಲ ತಿಂಗಳಿಂದ ಈ ಬಗ್ಗೆ ಸಿದ್ಧತೆ
ನಡೆದಿರುವಂತೆ ಕಂಡು ಬರುತ್ತದೆ. ಧಾಳಿ
ಯಾದರೆ ಬ್ರಿಟಿಷರು ಅಚಳ ಧೈರ್ಯ
ತೋರಿಸುವರೆಂದು ನನಗೆ ನಂಬಿಗೆಯಿದೆ.
ಯುದ್ಧದಲ್ಲಿ ನಾವು ಅಂಥಾ ತಪ್ಪು ಮಾಡ
ದಿದ್ದರೆ ೧೯೪೪ರಲ್ಲಿ ಯುದ್ಧವು ಶಿಖರಕ್ಕೇ
ರುವುದು. ನಮಗೆ ಗಂಡಾಂತರವಾಗಿದ್ದ
ಯುನಾವೆ ಉಪಟಳವನ್ನು ನಾವು ನಿಲ್ಲಿಸಿ
ದ್ದೇವೆ. ಮುಂದಿನ ಭೀಕರ ಹೋರಾಟ
ದಲ್ಲಿ ಬ್ರಿಟಿಷರು ರಕ್ತವನ್ನು ಸುರಿಸಬೇ
ಕಾಗಬೇಕಾಗುವುದು." ಹೀಗೆಂದು ಚ
ರ್ಚಿಲ್ ಹೇಳಿದರು.

ಚರ್ಚಿಲರ ಮಾತಿನಲ್ಲಿ ಎಂದಿನಂತೆ
ಕೆಲವು ಸತ್ಯಾಂಶಗಳೂ ಹೊಳೆಯುತ್ತವೆ.
ಹಿಟ್ಲರನಂತೆ ಚರ್ಚಿಲ್ ಬರೀ ಬೂಟಾ
ಟಿಕೆ ಮಾತ್ರ ಹೇಳಿಕೊಳ್ಳುವುದಿಲ್ಲ; ಗಂ
ಡಾಂತರವುಂಟೆಂದು ಅವರು ಒಪ್ಪಿಕೊಳ್ಳು
ತ್ತಾರೆ. ಬ್ರಿಟನಿನ ಮೇಲೆ ಧಾಳಿಯಾಗ
ಬಹುದೆಂದೂ ತಿಳಿದಿದ್ದಾರೆ. ಜರ್ಮನಿ
ಬೇಗನೇ ಕುಸಿದು ಬೀಳಲಾರದೆಂದೂ
ಅವರ ಅಂಬೋಣವಿದೆ, ೧೯೪೪ರ ವರೆಗೆ
ಭೀಕರ ಹೋರಾಟವಾಗಬಹುದೆಂದೂ
ಅವರು ತಿಳಿದಿರುವರು. ಇದರೊಡನೆ,
ಬ್ರಿಟಿಷ್ ಸಾಮ್ರಾಜ್ಯದ ದಿವಾಳಿ ಮಾಡ
ಲಾರೆನೆಂಬ ತನ್ನ ಹೃತ್ಪೂರ್ವಕವಾದ
ನುಡಿಯನ್ನೂ ಹೇಳಿದ್ದಾರೆ. ಕಟು ನಿಷ್ಠುರ
ಸಾಮ್ರಾಜ್ಯಶಾಹೀ ಬುದ್ಧಿಯನ್ನು ತೋ
ರಿಸಿ, ತನ್ನ ಬೆಂಬಲಿಗರನ್ನು ಮೆಚ್ಚಿಸಿದ್ದಾರೆ
ಸತ್ಯವನ್ನು ಹೇಳಿದಕ್ಕಾಗಿ ಅವರನ್ನು ಅಭಿ
ನಂದಿಸಬೇಕಾದರೂ, ಸಾಮ್ರಾಜ್ಯಶಾಹೀ
ಬುದ್ಧಿಗಾಗಿ ಖಂಡಿಸದಿರಲಾಗುವುದಿಲ್ಲ.
ಏಕೆಂದರೆ, ಮೋಸ್ಕೋ ಪರಿಷತ್ತು, ರಶ್ಯ
ದೊಡನೆ ಬ್ರಿಟನು ಅಮೆರಿಕಗಳ ಸಹ
ಕಾರ, ಮುಂದಿನ ನವ ಜಗತ್ತಿನ ನಿರ್ಮಾ
ಣ, ನಾಜೀ ದಲಿತ ರಾಷ್ಟ್ರಗಳ ದಾಸ್ಯವಿ
ಮೋಚನೆ ಇಂಥಾ ದೊಡ್ಡದೊಡ್ಡ ಮಾತು
ಗಳನ್ನಾಡಿ ಜನರನ್ನು ಮರುಳುಗೊಳಿ
ಸುವ ಚರ್ಚಿಲರು ಇನ್ನೂ ಈ ಯುದ್ಧಾ
ನಂತರವೂ ಬ್ರಿಟಿಷ್ ಸಾಮ್ರಾಜ್ಯ ರಕ್ಷಕ
ರಾಗಿ ಭಾರತದಂಥಾ ವಸಾಹತ್ತುಗಳ
ಮೇಲೆ ಕುದುರೆ ಸವಾರಿ ಮಾಡುವ
ಬುದ್ಧಿಯನ್ನೇ ಇಟ್ಟುಕೊಂಡಿದ್ದಾರೆಂದು
ತಿಳಿಸುವುದು ಏನೆಂದರೂ ಸಮಂಜಸವಾ
ಗಿಲ್ಲ ಅದು ನ್ಯಾಯವೂ ಅಲ್ಲ.

ಹೀಗೆ ಸ್ಟಾಲಿನ್, ಹಿಟ್ಲರ್, ಚರ್ಚಿ
ಲರು ಮೂವರು ಸಮರನಾಯಕರೂ ಈ
ವಾರ ಮಾತನಾಡಿದರು. ಅವರ ಭಾಷ
ಣಗಳ ಸಾರಾಂಶವನ್ನು ಓದಿದರೆ ನಮಗೆ
ಯುದ್ಧ ಪರಿಸ್ಥಿತಿ ಹೇಗಿದೆಯೆಂದು ಅರ್ಥ
ಮಾಡಿಕೊಳ್ಳಲು ಬರುತ್ತದೆ. ಮೋಸ್ಕೋ
ಪರಿಷತ್ತಿನ ಬಗ್ಗೆ ಮಿತ್ರರಿಗೆ ತೃಪ್ತಿಯಿದೆ.
ದ್ವಿತೀಯ ರಂಗ ತೆರೆಯುವ ಆಸೆ ಸ್ಟಾಲಿ
ನರಿಗಿದೆ. ಅಂತೆಯೇ ದ್ವಿತೀಯ ರಂಗದ
ಹೆದರಿಕೆ ಹಿಟ್ಲರನಿಗಿದೆ, ಬ್ರಿಟನಿಗೆ
ಪ್ರಚಂಡ ಧಾಳಿಯೊದಗಬಹುದೆಂದು
ಚರ್ಚಿಲರು ಭಾವಿಸುತ್ತಾರೆ. ೧೯೪೪ರ
ವರೆಗೆ ಕದನ ಮುಂದುವರಿಯುವುದೆಂದೂ
ಬೇಗನೇ ಜರ್ಮನಿ ಕುಸಿದು ಬೀಳಲಾರ
ದೆಂದೂ ಅವರ ನಂಬಿಕೆ. ಏನು ಮಾಡಿ
ದರೂ ಶರಣಾಗಲಾರೆನೆಂದು ಹಿಟ್ಲರ್
ಹಟತೊಟ್ಟಿದ್ದಾನೆ. ರಷ್ಯದ ರಣರಂಗದಲ್ಲಿ
ರಷ್ಯನರಿಗೆ ವಿಜಯವೇ ದೊರಕುತ್ತಿದೆ.
ಸೋಲು ಗೆಲವುಗಳ ಯಾವುದೇ ಇತ್ಯರ್ಥ
ವಿಂದು ಆಗದಿದ್ದರೂ ಮಿತ್ರರು ಮೇಲ್ಮೈ
ಯಾಗಿರುವರೆಂದೂ ಶತ್ರುವು ಸಂಕಟ
ಕ್ಕೊಳಗಾಗಿರುವನೆಂದೂ ಇದರಿಂದ ತಿಳ
ಕೊಳ್ಳಬಹುದು.

ತಾರೀಕು 12—11—1948

ಜಿಲ್ಲೆಯ ಆಹಾರ ವ್ಯವಸ್ಥೆ

ದಕ್ಷಿಣ ಕನ್ನಡದಲ್ಲಿ ಅಕ್ಕಿ ಛತ್ರಗಳ ಹಂಚುವಿಕೆಯ ಕುರಿತು, ಬಹುಕಾಲದಿಂದ ನಿರೀಕ್ಷಿಸುತ್ತಿದ್ದ ಸರಕಾರೀ ಪ್ರಕಟಣೆಯು, ಪ್ರಾಂತಿಕ ರೆವೆನ್ಯೂ ಇಲಾಖೆಯವರ ಆಜ್ಞೆಯು ಈಗ ಪ್ರಕಟವಾಗಿದೆ. ಆಹಾರದ ಸಮಸ್ಯೆಯುಂಟಾಗಿರುವೀ ಕಾಲದಲ್ಲಿ ಅಕ್ಕಿಯನ್ನು 'ರಿಕ್ವಿಸಿಶನು' ಮಾಡಬೇಕೆಂದೂ, ಅದನ್ನು ಸರಿಯಾಗಿ ಹಂಚಿಕೊಡಬೇಕೆಂದೂ ಸಾಮಾನ್ಯವಾಗಿರುವ ಜನತಾಭಿಪ್ರಾಯಕ್ಕೆ ಹೊಂದಿಕೊಂಡಿರುವ ಧೋರಣೆಯಿಟ್ಟುಕೊಂಡೇ ಅಧಿಕಾರಿಗಳು ಆಜ್ಞೆ ಹೊರಡಿಸಿದರ ಬಗ್ಗೆ ನಮ್ಮ ಅಭಿನಂದನೆಗಳು. ಮಂಗಳೂರು ಕಾಸರಗೋಡು ಈ ಎರಡು ನಗರಗಳಲ್ಲಿ ಬೇಗನೇ 'ರೇಶನಿಂಗ್' ಜಾರಿಗೆ ತರಲಾಗುವುದೆಂದೂ, ಈ ಪ್ರಕಟಣೆಯಿಂದ ತಿಳಿದು ಬರುತ್ತದೆ. 'ಜಿಲ್ಲೆಯ ಪೇಟೆ ಪಟ್ಟಣಗಳಲ್ಲಿ ರೇಶನಿಂಗ್ ಜಾರಿಗೆ ಬರಲಿ' ಎಂದು ಸಾರ್ವಜನಿಕರು ಈ ಮೊದಲೇ ವಿನಂತಿ ಮಾಡಿದ್ದರು. ಅಧಿಕಾರಿಗಳು ಇಂದು ಅದಕ್ಕೂ ಕಿವಿಗೊಟ್ಟಿರುವರೆಂಬುದು ಪ್ರಶಂಸನೀಯ. ಮಂಗಳೂರು ಕಾಸರಗೋಡುಗಳಲ್ಲಿ ರೇಶನಿಂಗ್ ಜಾರಿಗೆ ಬಂದು ಅದು ಕ್ರಮಶಃ ನಮ್ಮ ಜಿಲ್ಲೆಯ ಇತರ ನಗರಗಳಲ್ಲಿಯೂ ಪ್ರಯೋಗಿಸಲ್ಪಟ್ಟರೆ ಆಹಾರವು ಸರಿಯಾಗಿ ಹಂಚಿ ಸಿಗಬಹುದು ಮಾತ್ರವಲ್ಲದೆ, ಅಕ್ಕಿ ಕ್ರಯವೂ ಒಂದು ಸ್ಥಿಮಿತದಲ್ಲಿ ನಿಲ್ಲಲು ಅನುಕೂಲವಾಗುತ್ತದೆ.'

ರೆವೆನ್ಯೂ ಬೋರ್ಡಿನವರು, ರಿಕ್ವಿಸಿಶನ್ ಮಾಡಿದ ಹಾಗೂ ಇತರ ಅಕ್ಕಿ ಛತ್ರಗಳನ್ನು ಜಿಲ್ಲಾ ರಖಂ ಸಹಕಾರೀ ಸಂಘಕ್ಕೆ ಸರಕಾರವು ನಿಶ್ಚಯಿಸಿದ ಬೆಲೆಗೆ ಒಪ್ಪಿಸಿ, ಸೆಂಟ್ರಲ್ ಸ್ಟೋರ್ಸಿನವರು ಅಕ್ಕಿ ಛತ್ರಗಳನ್ನು ಅಕ್ಕಿ ಮುಡಿಯೊಂದರ ನಾಲ್ಕಾಣೆ ಲಾಭವಿಟ್ಟು ಹಂಚುವ ಏರ್ಪಾಡು ಮಾಡಬೇಕೆಂದೂ ವಿಧಿಸಿರುವರು. ವರ್ಗದಾರರು ತಮ್ಮ ಉತ್ಪತ್ತಿಗೆ ಬೆಲೆ ನಿಯಂತ್ರಣವಾಗುವಾಗ, ಗಿರಾಕಿಗಳಿಗೆ ಅದರ ಪ್ರಯೋಜನವಾಗಬೇಕೆಂದೂ, ನಿಯಂತ್ರಿತ ಬೆಲೆಯ ಅಕ್ಕಿಯನ್ನು ವ್ಯಾಪಾರಿಗಳ ಕೈಗೆ ಕೊಟ್ಟು ಮಿತಿಮೀರಿ ಕ್ರಯ ಏರಿಸುವ ಪ್ರಮಾದನ್ನು ಈ ವರ್ಷವೂ ಮಾಡಬಾರದೆಂದೂ, ಹಾಗಾಗಿ ಒಂದು ನಿಯಮಿತ ಬೆಲೆಯಲ್ಲಿ ಅಕ್ಕಿಯನ್ನು ಪಡಕೊಳ್ಳುವ ಒಂದು ಕೇಂದ್ರ ಸಂಸ್ಥೆ ಇರಬೇಕೆಂದೂ, ಸಹಕಾರೀ ಸಂಘಗಳ ಮೂಲಕ ಆ ಕೆಲಸ ಮಾಡಬಹುದೆಂದೂ ಕೆಲವು ಕಾಲದಿಂದ ಚಳವಳಿ ಹೂಡುತ್ತಿದ್ದಾರೆ. ಗಿರಾಕಿಗಳೂ [illegible] ಚಳವಳಿಯಲ್ಲಿ ತಮ್ಮ ದನಿಗೂಡಿಸುವರು. ಸರಕಾರವು ಸಾರ್ವಜನಿಕರ ಈ ಅಭಿಪ್ರಾ[illegible] ಯುತ್ತದ್ದು ಅಭಿನಂದನೀಯವಿದೆ. ಇದರಿಂದ ಕೆಲವು ವರ್ಗದಾರರಿಗೆ ಹೆಚ್ಚು ಕ್ರಯ ಏರಲಿ ಎಂಬ ದುರಾಶೆಯಿಂದ ಸಂಗ್ರಹಿಸಿಡುವ ದುರ್ಬುದ್ಧಿ ಹೋಗುವುದಲ್ಲದೆ, ವ್ಯಾಪಾರಿಗಳಿಗೆ ಸ್ವತಂತ್ರ ವ್ಯಾಪಾರಕ್ಕೆ ಅವಕಾಶಕೊಡದ ಕಾರಣ ಕ್ರಯ ನಿಯಂತ್ರಣವು ಯಶಸ್ವಿಯಾಗಲೂ ಸಹಾಯವಾಗುವುದು.

ಅಕ್ಕಿ ಛತ್ರಗಳ ಕುರಿತು ಹೀಗೆ ರೆವೆನ್ಯೂ ಬೋರ್ಡಿನ ಆಜ್ಞೆ ಪಡೆವುದರಿಂದ ಮಾತ್ರ ಕೆಲಸ ಆಯಿತೆಂದು ತಿಳಕೊಳ್ಳುವುದು ತಪ್ಪು. ಸರಿಯಾಗಿ ಅಕ್ಕಿ ಹಂಚುವ ಕೆಲಸದಲ್ಲಿ ಸಹಕಾರೀ ಸಂಘಗಳ ಮೇಲೆ ಹೆಚ್ಚಿನ ಜವಾಬ್ದಾರಿಯಿದೆ. ಅಂತೆಯೇ ವರ್ಗದಾರರ ಸಹಕಾರವೂ ಪ್ರಾಮುಖ್ಯವಾಗಿದೆ. ಇದರಲ್ಲಿ ಮಾತ್ರ ಮುಂದಿನ ಕಾರ್ಯಕ್ರಮಗಳ ಯಶಸ್ಸು ಅವಲಂಬಿಸಿದೆ. ನಮ್ಮ ಜಿಲ್ಲೆಯಲ್ಲಿ ಹೆಚ್ಚಿನ ಆಹಾರ ಉತ್ಪತ್ತಿ ಆಗದಿರುವುದರಿಂದ, ಅಕ್ಕಿ ಛತ್ರಗಳು ಹೊರಗೆ ಹೋಗದಂತೆ ತಡೆಯುವುದೂ ಅತ್ಯಂತ ಅವಶ್ಯ ಕಾರ್ಯ. ಅಕ್ಕಿ ಸಾಕಾಗದಿದ್ದಲ್ಲಿ ಹೊರಗಿನಿಂದ ಈ ಜಿಲ್ಲೆಗೆ ತರಿಸುವುದೂ ಅಷ್ಟೇ ಮುಖ್ಯವಿದೆ. ಕಡಿಮೆ ಬಿದ್ದ ತಾಲೂಕಿಗೆ ಹೆಚ್ಚಿಗಿರುವ ತಾಲೂಕುಗಳಿಂದ ಸಾಗಿಸಲೂ ಬೇಕಾಗಿದೆ. ಹೀಗೆ ಆಹಾರ ಒದಗಿಸಿ ಹಂಚಿಕೊಡುವ ವ್ಯವಸ್ಥೆ ಚೆನ್ನಾಗಿ ನಡೆಯಬೇಕಾದರೆ ಅದಕ್ಕೆ ಸಾಕಷ್ಟು ವಾಹನ ಸೌಕರ್ಯಗಳು ದೊರಕುವುದೂ ಅವಶ್ಯವಿದೆ. ಸರಕಾರವು ಈ ಸೌಕರ್ಯಗಳನ್ನು ಕೊಡುವರೆ ತನ್ನ ಸಂಪೂರ್ಣ ಸಹಕಾರವೀಯಬೇಕು.

ಅಕ್ಕಿ ತಯಾರಿಸುವ ವಿಷಯವೂ ಆರ್ಥಿಕ ಮತ್ತು ಆರೋಗ್ಯ ಎರಡು ದೃಷ್ಟಿಗಳಿಂದಲೂ ಬಹಳ ಮುಖ್ಯವಿದೆ. ರೆವೆನ್ಯೂ ಬೋರ್ಡಿನ ಆಜ್ಞೆಯಲ್ಲಿ ಅಕ್ಕಿಯನ್ನು ಕೈಯಲ್ಲಿ ಕುಟ್ಟಿ ಮಾಡುವರೆ ಪ್ರೋತ್ಸಾಹವಿತ್ತದ್ದು ನಿಜವಾಗಿಯೂ ಪ್ರಶಂಸನೀಯವಿರುವುದು. ಮಿಲ್ಲುಗಳಿಗೆ ಕೊಟ್ಟು ಅಕ್ಕಿ ಮಾಡುವುದರಿಂದ, ಜಿಲ್ಲೆಯ ಬಡಜನರ ಐದಾರು ತಿಂಗಳ ಉದ್ಯೋಗವೇ ಹೋಗಿ ಅವರ ಹೊಟ್ಟೆಗೆ ಹೊಡೆದಂತಾಗುವುದು ಮಾತ್ರವಲ್ಲದೆ, ಮಿಲ್ಲಿನ ಅಕ್ಕಿಯಲ್ಲಿ ಆಹಾರ ಸತ್ವವು ಕಡಿಮೆಯಿರುವುದರಿಂದ ಸಾಂಕ್ರಾಮಿಕ ರೋಗಗಳು ಒಮ್ಮೆಲೇ ಹೆಚ್ಚಬಹುದು. ಯುದ್ಧದ ಕಾಲದಲ್ಲಿ ಸೈನಿಕರಂತೆ ನಾಗರಿಕರೂ ಸತ್ವಶಾಲಿಗಳಾಗಿರಬೇಕಾದುದು ಅವಶ್ಯ. ಹಾಗಾಗಿ ಕೈಯಲ್ಲಿ ಛತ್ರ ಕುಟ್ಟಿ ಅಕ್ಕಿ ಮಾಡುವರೆ ಸರಕಾರವಿತ್ತ ಈ ಪ್ರೋತ್ಸಾಹವು ಸಂಸಂಪೂರ್ಣ ಯಶಸ್ವಿಯಾಗಲಿ ಎಂದು ನಮ್ಮ ಹಾರೈಕೆಯಾಗಿದೆ. ರೇಶನಿಂಗ್ ಜಾರಿಗೆತರುವ ವಿಷಯದಲ್ಲಿ ಅದರ ವಿವರಗಳನ್ನೂ, ಜಾರಿಗೆತರುವ ಸಮಯವನ್ನೂ ಸರಕಾರವು ಅದನ್ನು ಬೇಗನೇ ಸಾರ್ವಜನಿಕರಿಗೆ ತಿಳಿಸುವುದು ಒಳ್ಳೆಯದೆಂದು ನಾವು ಸೂಚಿಸಲು ಮರೆಯಲಾರೆವು. ರೇಶನಿಂಗ್ ಬೇಗನೇ ಜಾರಿಗೆ ಬಂದು, ಅದು ಯಶಸ್ವಿಯಾಗಿ ನಡೆಯಲೆಂದೂ, ಜನರು ಆಹಾರ ಸಂಕಷ್ಟದಿಂದ ನರಳದೆ ಎಲ್ಲರಿಗೂ ಸಮವಾಗಿ ಹಂಚಿ ಸಿಗುವಂತೆ ಆಗಲೆಂದೂ ನಾವು ಆಶಿಸುತ್ತೇವೆ.

...ಯುವರು ಮುಂದಿನ ಲಾರ್ಡ್...
...ಒಂದು ಮಸೂದೆ ಮಂಡಿಸಲಿ

...ಕ್ಕಟ್ಟು ಪರಿಹಾರಕ್ಕೆ ...ಮಂಡರನ್ನು ಬಿಡುಗಡೆ ಮಾಡಿ

...ಡಿ ಸರ್ವಾರರ ಸೂಚನೆ
...ದ ಬಿಕ್ಕಟ್ಟನ್ನು ಆದಷ್ಟು ಬೇಗ
...ದು ಭಾರತದ ಹಾಗೂ
...ರ್ವಜನಿಕರು ಅಭಿಪ್ರಾಯ
...ದು ನೇವಲರೇ ಮೊನ್ನೆ
...ಇದ್ದಿ ಆತಂಕಗಳಿದ್ದರೂ
...ಡಿಸಬಹುದೆಂದೂ ಅವರು
...ನೇವಲರು ಈಗ ಆ ಕೆಲಸ
... ಹೇಗೆ? ಭಾರತ ಬಿಕ್ಕಟ್ಟು
... ಅವಶ್ಯವಿರುವ ಒಂದು
...ಕ್ಕೆ ಮಾತುಕತೆಗೆ ಆಸ್ಪದ
... ಹೇಗೆ? ಆದ್ದರಿಂದ ಬಿಕ್ಕಟ್ಟು
...ಪರೆ ಮೊದಲು ಮು
...ನತೆಯಾಗಬೇಕು, ಮುಂ
...ಜನೆಯಂತೆ ರಾಷ್ಟ್ರೀಯ
...ನೆಯ ಯೋಜನೆ ಮುಂದಿ
...ಮ್ಮ ಸುಮ್ಮಗೆ ಭಾರತದ
...ತಮ್ಮ ಕರ್ತವ್ಯಲೋಪಕ್ಕೆ
...ಆಗಾಗ ಬ್ರಿಟಿಷರು ಹೇಳು
...ರ್ಥವಿಲ್ಲ' ಎಂದು ಸರ್
...ಶ್ರೀ ಎನ್. ಆರ್. ಸರ್ಕಾ
...ಯುಕ್ತ ಹೇಳಿಕೆ ಹೊರ

ಅಧಿವೇಶನದಲ್ಲಿ ...ಯ್ ಭಾಷಣವಿಲ್ಲ

...ಲ ವಾಚನಮಾತ್ರ
...ಲ್ಲಿ ಹೊಸ ಅಧಿವೇಶನ
...ಪದ್ಧತಿಯಂತೆ ವೈಸರಾಯರು
...ಭಾಷಣ ಮಾಡಬೇಕಾಗಿ
...ನೇವಲರು ಹಾಜರಿರದೆ
... ವಾಚನ ಅಧ್ಯಕ್ಷರಿಂದ
...ನಾನು ಎಪ್ರಿಲ್ ತಿಂಗಳಲ್ಲಿ
... ನಾನು ಇನ್ನೂ
...ಕ್ಕೆ ಚೆನ್ನಾಗಿ ಅಭ್ಯಾಸ
... ಆದ್ದರಿಂದ ಯಾವುದೇ
... ಕೊಡುವುದು ಸಾಧ್ಯ
...ಅವರ ಭಾಷಣದಲ್ಲಿತ್ತು.
...ದ ಅಧಿವೇಶನ ಕಾಲ
...ಭಾಷಣ ಮಾಡುವುದಾ
...ಲ್ಲಿ ಹೇಳಲಾಗಿತ್ತು.
... ಆಫ್ರಿಕಗಳಲ್ಲಿಯೂ
...ಧಿ ಕೂಡಿಸಲಾಗುತ್ತದೆ.
...ತದಿಂದಲೂ ಸಹಾಯ
... ಆದರೂ ಬಂಗಾಳದಲ್ಲಿ
...ಕ್ಕೆ ೫೦ ಸಾವಿರ ಜನರು
...ವರೆ?

...ಆರ್ಡಿನೆನ್ಸು ಆಕ್ರಮ

...ಫೆಡರಲ್ ಕೋರ್ಟಿನಲ್ಲಿ
...ಮತ್ತು ಎ. ಸಿ. ಸಿಂಹರ
... ಇದರಿಂದ ನ್ಯಾಯವಾದ
...ಗದೆ ನಾಗರಿಕನನ್ನು ಅವ
... ನಿರ್ಣಯಿಸುವುದು ತಪ್ಪೆಂ
...ನಾಗರಿಕ ಹಕ್ಕಿಗೆ, ಗವರ್ನರ
...ಎದುರು ಬರಬಾರದೆಂದೂ
...ದಿರುವುದು.

ಜಿಲ್ಲಾ ಸಮಾಚಾರಗಳು

ಮಂಗಳೂರು

ಆಗಮನ

ಮದ್ರಾಸು ಪ್ರಾಂತಿಕ ಸಿವಿಲ್ ಸಪ್ಲೈಸ್ ...ಕ್ತನರಾದ ಮಿ। ಗ್ರುಬ್ ಇವರು ತಾ. ೧೬ ...ಡು ಮಂಗಳೂರಿಗೆ ಬರುವರು, ಮಂಗ...ರಿನ ಆಹಾರ ಪರಿಸ್ಥಿತಿಯನ್ನು ಪರಿಶೀಲಿಸು...ವ, ಮಂಗಳೂರು ಕಾಸರಗೋಡುಗಳಲ್ಲಿ ...ರ್ಣ ರೇಶನಿಂಗ್ ಜಾರಿಗೆ ತರುವ ವಿಷಯ ...ರ್ಚೆ ಮಾಡುವುದು ಅವರ ಕಾರ್ಯ...ದಲ್ಲಿ ಒಂದಾಗಿದೆಯೆಂದು ತಿಳಿದು ಬರು...ದೆ.

ಸಂದರ್ಶನ

ಮದ್ರಾಸ್ ಪ್ರಾಂತಿಕ ಹಿಂದೂಸ್ಥಾನ ಸ್ಕೌಟ್ ...ಸೋಸಿಯೇಶನ್ ಆರ್ಗನೈಜರ್ ಶ್ರೀ। ರಾಜ...ಗೋಪಾಲನ್ ಮಂಗಳೂರಿಗೆ ಬಂದಿದ್ದು, ಜಿಲ್ಲಾ ...ವಾಸ ಆರಂಭಿಸಿದ್ದಾರೆ.

ವರ್ಗ

ಇಲ್ಲಿಯ ತಹಶೀಲ್ದಾರರಾದ ಶ್ರೀ. ಯು. ...ರ್ದನ ಇವರು ಕಾರ್ಕಳದ ತಹಶೀಲ್ದಾರ...ಗಿಯೂ ಕಾರ್ಕಳದ ತಹಶೀಲ್ದಾರರಾದ ಶ್ರೀ. ...ನ್. ಸುಂದರರಾವರು ಮಂಗಳೂರು ತಹಶೀ...ಲ್ದಾರರಾಗಿಯೂ ವರ್ಗಾಯಿಸಲ್ಪಟ್ಟಿರುತ್ತಾರೆ.

ಮಿತ್ರಮಂಡಳಿ

ನವೆಂಬರ್ ೧೩ನೇ ತಾರೀಕು ಶನಿವಾರ ...ಯಂ. ಗಂಟೆ ೬-೩೦ಕ್ಕೆ ಥಿಯೋಸೊಫಿಕಲ್ ...ಹೋಜಿನಲ್ಲಿ 'ಅಂದಿನ ಅಪೂರ್ವ'ನ ಮೇಲೆ ...ರ್ಚಾಸ್ಪರ್ಧೆಯಿದೆ. ಕೊಲೆಜು ವಿದ್ಯಾರ್ಥಿ...ಗೆ ಮಾತ್ರ ಪ್ರವೇಶ. ಉಮೇದುವಾರರು ...ನೇ ತಾರೀಕಿನೊಳಗೆ ತಮ್ಮ ಹೆಸರನ್ನು ತಮ್ಮ ...ಷ್ಟದ ಉಪಾಧ್ಯಾಯರ ಮೂಲಕವಾಗಿ ಆಗಲಿ ...ಯೋಸೊಫಿಕಲ್ ಲೋಜಿನಲ್ಲಾಗಲಿ ಸೂಚಿಸ...ಬೇಕಿದ್ದು.

'ಅಂದಿನ ಅಪೂರ್ವ'ನ ಚರ್ಚಾವಿಷಯಗಳು; ...ನನಗೆ ಮೆಚ್ಚುಗೆಯಾದ ಕತೆ, ೨. ಚಿತ್ರಿತ...ದ ಅತಿಸ್ಪಷ್ಟ ವ್ಯಕ್ತಿ, ೩. ಜನರ ಮೂಢ...ವ್ಯಸನಗಳು, ೪. ಬದಲಾವಣೆ ಕಾಲದ ಸ್ಥಿತಿ...ಗತಿಗಳು.

...ಅಂತರಾಷ್ಟ್ರೀಯ ಸಹಕಾರೀ ದಿನ

ಜಿಲ್ಲಾ ಕೇಂದ್ರ ಕೋಪರೇಟಿವ್ ಬ್ಯಾಂಕ್ ...ವಾರದಲ್ಲಿ ಡಿಪ್ಯುಟಿ ರಿಜಿಸ್ಟ್ರಾರರಾದ ಶ್ರೀ। ...ರ್ಕೋತ್ತಮಾಚಾರ್ಯರ ಅಧ್ಯಕ್ಷತೆಯಲ್ಲಿ ಅಂತ...ರಾಷ್ಟ್ರೀಯ ಸಹಕಾರಿಗಳ ದಿನವು ಆಚರಿಸಲ್ಪ...ಟ್ಟಿತು. ಅಂತಾರಾಷ್ಟ್ರೀಯ ಸಹಕಾರಿ ಸಾಂಕೇತಿಕ ...ಮನಬಿಲ್ಲಿನ ಧ್ವಜವು ಹಾರಿಸಲ್ಪಟ್ಟಿತ್ತು. ...ಸಹಕಾರ ಪದ್ಧತಿಯಲ್ಲಿ ತನಗಿರುವ ಅಚಲಶ್ರದ್ಧೆ...ಯನ್ನು ಈ ಸಭೆಯು ವ್ಯಕ್ತಪಡಿಸುತ್ತದೆ. ...ಅಟ್ಲಾಂಟಿಕ್ ಘೋಷಣೆಯಲ್ಲಿ ಅಡಕವಾಗಿರುವ ...ಉದ್ದೇಶಗಳನ್ನು ಸಾಧಿಸುವುದು ಸಹಕಾರೀ ...ಸಂಘಗಳ ಮೂಲಕವೇ ಸಾಧ್ಯವಿದೆಯೆಂದು ...ಅಭಿಪ್ರಾಯ ಪಡುತ್ತದೆ, ಅಕ್ಷ ಶಕ್ತಿಯಿಂದ ...ಆಕ್ರಮಿಸಲ್ಪಟ್ಟ ದೇಶಗಳಲ್ಲಿ ನಶಿಸಿ ಹೋಗಿರುವ ...ಸಹಕಾರೀ ಚಳವಳಿವು ಆ ದೇಶಗಳು ಸ್ವತಂತ್ರ...ವಾದೊಡನೆ ಪುನಃ ಬೆಳೆಯಲೆಂದು ಹಾರೈಸಿ, ...ದುರ್ದೈನಕ್ಕೊಳಗಾಗಿರುವ ಜನರೊಡನೆ ತನ್ನ ...ಸಂತಾಪವನ್ನು ಸಭೆಯು ವ್ಯಕ್ತಪಡಿಸು...ತ್ತದೆ, ಎಂಬೀ ಠರಾವು ಸರ್ವಾನುಮತದಿಂದ ...ಅಂಗೀಕಾರವಾಯಿತು." ಆ ಸಂದರ್ಭದಲ್ಲಿ ಠರಾವು ...ಮಂಡಿಸಿದ ಶ್ರೀ। ನರ್ಸಪ್ಪಯ್ಯನವರು ಮಾತನಾಡಿ, ...ರಷ್ಯ-ಚೀನಗಳಲ್ಲಿ ಸಹಕಾರೀ ಚಟುವಟಿಕೆ...ಗಳು ಮುಂದುವರಿದಿದೆಯೆಂದು ತಿಳಿಸಿ, ಈಗ ...ಜಿಲ್ಲೆಯ ಅಕ್ಕಿ ಸರಬರಾಯಿ ವ್ಯವಸ್ಥೆಯನ್ನು ...ನಡೆಸಲು ಜಿಲ್ಲಾ ಸಹಕಾರೀ ಸಂಘವನ್ನು ಕೇಳಿ...ಕೊಂಡಿರುವುದೇ ಅದರ ಶಕ್ತಿಯನ್ನು ತೋರಿಸು...ವುದೆಂದೆಂದರು.

ಅನಂತರ ಶ್ರೀ. ಎಸ್. ಪುಟ್ಟುಸುಂದರರಾಯರು ...ಮಾತನಾಡಿ ಅಧ್ಯಕ್ಷರು ಭಾಷಣವಾದ ಮೇಲೆ ...ಶ್ರೀ। ಉಡುಪ ಗೋವಿಂದರಾಯರು ಧನ್ಯವಾದ ...ಸಮರ್ಪಿಸಿದರು. ಅದೇ ಸಂದರ್ಭದಲ್ಲಿ ಜಿಲ್ಲಾ ಕೈಮಗ್ಗ ನೇಕಾರ ಸಹಕಾರೀ ಸಂಘದವರ ಬಟ್ಟೆ ಸೀರೆ ಪ್ರದರ್ಶನವಿತ್ತು.

ವಾಣಿಜ್ಯ ಸಂಘ

ಇದರ ಕಾರ್ಯದರ್ಶಿಗಳು ಒಂದು ಪ್ರಕಟಣೆಯಿತ್ತು, ಅಂಗಡಿ ಮತ್ತು ಧಂಡಸಾಲೆಗಳಲ್ಲಿ ಕೆಲಸ ಮಾಡುತ್ತಿರುವ ಮಜೂರರಿಗೆ ಪ್ರತಿ ತಿಂಗಳ ಎರಡನೆಯ ಮತ್ತು ಕೊನೆಯ ಆದಿತ್ಯವಾರಗಳನ್ನು ರಜಾ ದಿನಗಳಾಗಿ ಕೊಡುವರೆ ಹಲವು ವ್ಯಾಪಾರಸ್ಥರು ಒಪ್ಪಿರುವರೆಂದು ತಿಳಿಸುತ್ತಾರೆ. ಮುಂದೆ ಹಾಗೆ ರಜೆ ಕೊಡಬೇಕಾಗಿಯೂ ಅವರ ವಿನಂತಿಯಿದೆ

ರಶ್ಯನ್ ಕ್ರಾಂತಿದಿನ

ವಿಷ್ಣು ಮಂಗಳೂರು ಕಮ್ಯೂನಿಸ್ಟ್ ಪಕ್ಷದವರು ತಾ. ೭ರಂದು ಆಚರಿಸಿ ನಗರದ ಹಲವು ಕಡೆ ಮನೆ ಮನೆಗಳಿಗೆ ಹೋಗಿ ಈ ದಿನದ ಪ್ರಾಧಾನ್ಯತೆ ವಿವರಿಸುವುದರೊಡನೆ ಕಮ್ಯುನಿಸ್ಟ್ ತತ್ವ ಧ್ಯೇಯಗಳ ಪ್ರಚಾರ ಮಾಡಿದರು. ಅಗ ಕಮ್ಯುನಿಸ್ಟ್ ಸಂಕೇತಧ್ವಜವೂ ಮಾರಾಟ ಮಾಡಲ್ಪಟ್ಟಿತು.

ರೈಲ್ವೆ ಮಜೂರರ ಸಂಘ

ಇದರ ಸಭೆಯೊಂದು ಶ್ರೀ। ಎ. ಗೋವಿಂದನ್ ಇವರ ಅಧ್ಯಕ್ಷತೆಯಲ್ಲಿ ಸೇರಿ ಸಂಘದ ಸದಸ್ಯರಿಗೆ ಚಿಮ್ನಿ ಎಣ್ಣೆ ಸಕ್ಕರೆ ಸಿಗಲು ಚೀಟು ಗಳನ್ನು ಕೊಡಬೇಕೆಂದು ಕಲೆಕ್ಟರರಲ್ಲಿ ವಿನಂತಿ ಮಾಡುವ ಗೊತ್ತುವಳಿಯಾಯಿತು. ಅಧಿಕಾರಾಹಾರ ಬೆಳೆಸುವುದರ ಕುರಿತು ಶ್ರೀ। ಎನ್. ಎಸ್. ನಂಬೂದಿರಿಯವರು ಮಾತನಾಡಿದರು. ಬಂಗಾಳಕ್ಕೆ ಸಹಾಯ ಕಳಿಸುವುದಕ್ಕಾಗಿ ಈ ಸಂಘದವರು ತಮ್ಮ ಸದಸ್ಯರಿಂದ ಹಣ ಸಂಗ್ರಹಿಸುತ್ತಿರುವರು. ದ. ಭಾರತ ರೈಲ್ವೆ ಮಜೂರರ ಕಾರ್ಯದರ್ಶಿ ಶ್ರೀ। ಕೆ. ಅನಂತನ್ ನಂಬಿಯಾರರು ಮಂಗಳೂರಿಗೆ ಬಂದಿದ್ದು ಸಂಘದ ಸದಸ್ಯರನ್ನು ಕಂಡು ಮಾತನಾಡಿದರು.

ಚಿಮ್ನಿ ಎಣ್ಣೆ

ಸಿಗುವುದು ಇತ್ತೀಚೆಗೆ ಬಹಳ ಕಷ್ಟವಾಗುತ್ತಿದೆ. 'ನಮ್ಮಲ್ಲಿ ಎಣ್ಣೆ ಇಲ್ಲ-ಕಲೆಕ್ಟರರನ್ನು ಕೇಳಿ' ಎಂದು ವ್ಯಾಪಾರಿಗಳು ಹೇಳುತ್ತಾರೆ. ಹೀಗಾದರೆ ಜನರೇನು ಮಾಡಬೇಕೆಂದು ತಿಳಿಯುವುದಿಲ್ಲ. ಚಿಮ್ನಿ ಎಣ್ಣೆ ಎಲ್ಲರಿಗೂ ಸರಿಯಾಗಿ ಸಿಗುವಂತೆ ಯೋಗ್ಯವಾದ ವ್ಯವಸ್ಥೆಯನ್ನು ಬೇಗನೇ ಮಾಡಬಾರದೆ?

ರಾಜಿನಾಮೆ

ಕೆನರಾ ಹೈಸ್ಕೂಲ್ ರಸ್ತೆಯ ಹೊಸ ವಿದ್ಯಾರ್ಥಿ ಸಂಘದ ಜನರಲ್ ಸೆಕ್ರೆಟರಿ ಶ್ರೀ ಪ್ರಭಾಕರ ರೈಯವರು ರಾಜಿನಾಮೆಯಿತ್ತು ಅವರ ಸ್ಥಾನಕ್ಕೆ ಶ್ರೀ ಜೆ. ವಸ್ ಬಜ್ಪೆಯವರನ್ನು ಆರಿಸಲಾಯಿತೆಂದು ಕೇಳುತ್ತೇವೆ.

ರೇಶನಿಂಗ್ ಬರುವ ಮುಂಚೆ ಅಕ್ಕಿ ಕ್ರಯ ಏಕೆ ಏರಬೇಕು?

ಮಂಗಳೂರು ನಗರದಲ್ಲಿ ರೇಶನಿಂಗ್ ಬೇಗನೇ ಜಾರಿಗೆ ಒರಲಿದೆಯೆಂದು ಮದರಾಸು ಪ್ರಾಂತಿಕ ರೆವೆನ್ಯೂ ಬೋರ್ಡಿನವರ ಅಪ್ಪಣೆಯಿಂದ ತಿಳಿದು ಬರುತ್ತದೆ. ಆದರೆ ಈಗ ಕೆಲ ದಿನಗಳಿಂದ ಅಕ್ಕಿ ಕ್ರಯ ಏರುತ್ತಾ ಇದೆ ಅಕ್ಕಿ ಮುಡಿ ಒಂದರ ರೂ ೧೮ಕ್ಕೆ ಮಿಕ್ಕಿ ಮಾರಾಟವಾಗುತ್ತದೆ. ಹೀಗಾದರೆ ಸಧ್ಯ ಜನರು ಇಲ್ಲಿ ಉಪವಾಸ ಬೀಳಲೇ ಬೇಕು. ಅಧಿಕಾರಿಗಳು ಇದರಕಡೆಗೆ ಕಣ್ಣು ತೆರೆದು ನೋಡಲಾರರೆ?

ಕುಷ್ಠರೋಗಿಗಳಿಗೆ ಧರ್ಮಭೋಜನ

ಮಂಗಳೂರು ಮುನ್ಸಿಪಾಲಿಟಿ ಆಶ್ರಯದಲ್ಲಿ ಕಂಕನಾಡಿ ವೆಲೆಂಶಿಯಾ ಚರ್ಚಿನ ಬಳಿ 'ಡೆಮಲಿನ್ ಹೋಮಿ'ನಲ್ಲಿ ಕುಷ್ಠ ರೋಗಿಗಳಿಗೆ ಧರ್ಮಾರ್ಥ ಭೋಜನದ ಏರ್ಪಾಡು ಮಾಡುವ ಪ್ರಾರಂಭೋತ್ಸವವು ತಾ. ೧೧ರಂದು ಬೇಗಂ ಕರಮತುಲ್ಲರಿಂದ ನೆರವೇರಿಸಲ್ಪಟ್ಟಿತು. ಜಿಲ್ಲಾ ಜಡ್ಜರಾದ ಶ್ರೀ ಕೋಮನ್ ಅಧ್ಯಕ್ಷರಾಗಿದ್ದರು.

ಸೆಂಟ್ರಲ್ ಕ್ಲಬ್

ಇದರ ಪ್ರಾರಂಭೋತ್ಸವವು ಡಾ। ಪ್ರಭಾಕರ ರಾಯರಿಂದ ಹಂಪನಕಟ್ಟೆಯ ರುಡ್ರಿಗಸ್ ಕಟ್ಟೋಣದಲ್ಲಿ ಜರಗಿತು.

ಅಂತರಕಲಾಶಾಲಾ ಭಾಷಣ ಸ್ಪರ್ಧೆಯಲ್ಲಿ ಗೊಂದಲ

ಕಳೆದ ಶುಕ್ರವಾರ ಸಂಜೆ ಸೈಂಟ್-ಎಲೋಶಿಯಸ್ ಕಾಲೇಜ್ ಮತ್ತು ಗವರ್ನಮೆಂಟ್ ಕಾಲೇಜುಗಳ ವಿದ್ಯಾರ್ಥಿಗಳಲ್ಲಿ ಅಂತರಕಲಾಶಾಲಾ ಕನ್ನಡ ಭಾಷಣ ಸ್ಪರ್ಧೆಯು ನಿರ್ಸಟ್ಟಿತು. 'ಪ್ರಾಚೀನ ವಿದ್ಯೆ ಅರ್ವಾಚೀನ ವಿದ್ಯೆಗಿಂತ ಮೇಲು' ಎಂಬ ಕುರಿತು ಗ. ಕಾಲೇಜಿನ ಶ್ರೀ. ತಿಲಕ ಹೆಗ್ಡೆಯವರು ಚರ್ಚೆ ಪ್ರಾರಂಭಿಸಿದರು. ಶ್ರೀ ಆನಂದ ತಿಂಗಳಾಯರು ಅನುಮೋದಿಸಿದರು. ಅವರನ್ನು ಸಮರ್ಥಿಸಿ ಶ್ರೀಗಳಾದ ಭುಜಂಗ ಹೆಗ್ಡೆ, ಸುಬ್ರಾಯ ಭಟ್, ತುಕಾರಾಮ ನಾಯಕ್, ರಮಾನಂದರಾವ್ ಮತ್ತು ಶ್ರೀಮತಿ ಕಮಲಾದೇವಿ ಇವರು ಮಾತನಾಡಿದರು. ರಿವಾದದ ವಿರೋಧ ಸೈ. ಎ. ಕಾಲೇಜಿನ ಶ್ರೀಗಳಾದ ಬಿ. ಎನ್. ಮೂರ್ತಿ, ಜೆ. ಎಸ್. ಬಜ್ಪೆ, ಲೋಕನಾಥ, ನಾರಾಯಣ ರೈ, ಲಾರೆನ್ಸ್ ಡಿಸೋಜಾ, ಅಣ್ಣಪ್ಪ, ಯೋಗೀಶ್ವರ ಜೋಳ್ಳ ಇವರು ಮಾತನಾಡಿದರು. ವಿದ್ಯಾರ್ಥಿಗಳು ವಿಕಾರ ಶಬ್ದಗಳನ್ನು ಮಾಡುತ್ತಾ ಕೂಗುತ್ತಾ ಬೊಬ್ಬಿಡುತ್ತಿದ್ದದಲ್ಲದೆ ಅಸಭ್ಯವಾಗಿಯೂ ವರ್ತಿಸಿದ್ದರಿಂದ ಮಧ್ಯದಲ್ಲಿ ಗ. ಕಾ ಕನ್ನಡ ಪಂಡಿತರು ಒಂದು ಮಾತನಾಡಲು ಆದರಿಂದಲೂ ಗೊಂದಲ ಹೆಚ್ಚಾಗಿ ಕೊನೆಯ ಭಾಷಣಕಾರರು ಮಾತನಾಡಲು ಗೊಂದಲ ವಿಷಮತೆಗೇರಿ ಸಭೆಯು ಗೊಂದಲದಲ್ಲಿಯೇ ಮುಕ್ತಾಯವಾಯಿತು. ಶ್ರೀ. ಕೆ ಅರ್. ಆಚಾರರು ಸಭೆಯ ಅಧ್ಯಕ್ಷತೆ ವಹಿಸಿದ್ದರು

ಉಡುಪಿ

ಸೇಲ್ಸ್ ಟೇಕ್ಸ್ ರಿಯಾಯಿತಿಯು ಸಹಕಾರಿ ಸ್ಟೋರ್ಸುಗಳಿಗೆ ದೊರೆಯಬೇಕೆಂದು ಉಡುಪಿ ಸಹಕಾರ ಸಂಘದ ಮಹಾಸಭೆಯವರು ನಿರ್ಣಯಮಾಡಿದ್ದಾರೆ.

ಕೊಲೆರಾ ನಿವಾರಣೆ

ಪರ್ಯಾಯ ಜಾತ್ರೆ ಬರುವ ಜನವರಿ ಪ್ರಥಮ ವಾರದಲ್ಲಿ ಆರಂಭವಾಗಲಿದ್ದು ಅನೇಕ ಯಾತ್ರಿಕರು ಇಲ್ಲಿಗೆ ಒರುವವರಿರುವುದರಿಂದ ಇಲ್ಲಿ ಆಸುಪಾಸಿನ ಹಳ್ಳಿಗಳಲ್ಲಿ ಕೊಲೆರಾಪ್ಪೇ ಹರಡಿ ಅದು ಇನ್ನೂ ಪ್ರಬಲವಾಗದಂತೆ ತಡೆಯುವಂತೆ ತಕ್ಕ ಯೋಜನೆ ಕೈಕೊಳ್ಳಬೇಕಾಗಿಯೂ ಆಲೋಚಿಸಲು ಉಡುಪಿ ಮುನ್ಸಿಪಲ್ ಕಮಿಶನರರೊಂದು ಸಭೆ ಕರೆದು ಶ್ರೀ। ಕೆ. ಕೇಶವ ಕುಡ್ವರು ಅಧ್ಯಕ್ಷರಾಗಿ ಕೆಲವು ನಿರ್ಣಯಗಳಾದವು.

ಕಾರ್ಕಳ

ಅಕ್ಕಿ ರಿಕ್ವಿಸಿಶನ್

ಈ ಸಂಬಂಧ ತಾ. ೪ರಂದು ಕುಂದಾಪುರ ಡಿ। ಕಲೆಕ್ಟರರಿಂದ ಒಂದು ಸಭೆ ಕರೆಯಲ್ಪಟ್ಟು ಸಭೆಯಲ್ಲಿ, ಅಧಿಕಾರಿಗಳಿಗೆ ರಿಕ್ವಿಸಿಶನ್ ಆಕ್ಷೇಪಣೆ ಮತ್ತು ಅಕ್ಕಿ ಸರಬಾಯಿ ವಿಷಯ ಸೂಚನೆ ತಿಳಿಸುವರೆ ಒಂದು ಸಲಹೆಗಾರ ಮಂಡಳವನ್ನು ಸ್ಥಾಪಿಸುವುದರೊಂದಿಗೆ ಜಿಲ್ಲೆಯ ಜನಜೀವನವು ಕಷ್ಟದಾಯಕವಾಗದಂತೆ ಅಕ್ಕಿ ಕ್ರಯವನ್ನು ಒಂದು ನಿಶ್ಚಯಕ್ಕೆ ತರುವರೆ ಅಕ್ಕಿ ಧಾರಣೆ ಒಂದು ಮಿತಿಯಲ್ಲಿ ಡಲಿಕ್ಕಾಗಿಯೇ ರಿಕ್ವಿಸಿಶನ್ ಕಾರ್ಯ ನಡೆಯುವುದಾಗಿಯೂ, ರಿಕ್ವಿಸಿಶನ್ ಆದ ಭತ್ತ ಮತ್ತು ಅದರ ಬದಲಿಗೆ ೭॥ ಕಳಸಿಗೆ ಭತ್ತಕ್ಕೆ ಒಂದು ಮುಡಿಯಂತೆ ಅಕ್ಕಿ ಕೊಡಲೊಪ್ಪುವರಿಂದ ಅಕ್ಕಿ ಮಾರದ ಕಂತುಗಳಲ್ಲಿ ಅಕ್ಕಿಯನ್ನು ಅಧಿಕೃತ ಸಹಕಾರೀ ಸ್ಟೋರು ಹಾಗೂ ವ್ಯಾಪಾರಿಗಳು ನಿಶ್ಚಿತ ದರದಲ್ಲಿ ನಗದು ಹಣ ಕೊಟ್ಟು ಖರೀದಿ ಮಾಡುವವರಾಗಿಯೂ, ಹೀಗೆ ಮಾರಾಟಕ್ಕೆ ಸಿದ್ಧವಾದ ಅಕ್ಕಿಯನ್ನು ಅವರು ನಿಯಂತ್ರಿತ ದರದ್ದೇ ಕಾರ್ಡು ಇರುವವರಿಗೆ ಮಾರುವರೆಂದೂ, ಅದಕ್ಕೆ ವ್ಯತಿರಿಕ್ತ ನಡೆದವರು ದಂಡನೆಗೆ ಗುರಿಯಾಗುವರೆಂದೂ ಈಗ ಸಧ್ಯಕ್ಕೆ ಒಟ್ಟು ಉತ್ಪತ್ತಿಯ ಕಾಲಂಶ ಎಂದರೆ ಒಕ್ಕಲುಗಳಿಂದ ವರ್ಗದಾರರಿಗೆ ಬರುವ ಅಕ್ಕಿಯ ಅರ್ಧಾಂಶದಷ್ಟರ ಮೇಲೆ ನಿಯಂತ್ರಣವನ್ನಿಟ್ಟದ್ದರಿಂದ, ಅಕ್ಕಿ ಧಾರಣೆ ಸ್ತಿಮಿತದಲ್ಲಿ ಉಳಿವುದಿಲ್ಲವಾದರೆ ಮಿಕ್ಕದಕ್ಕೂ ನಿಯಂತ್ರಣ ಮಾಡಲಾಗುವುದೆಂದು ತಿಳಿದು ಬರುತ್ತದೆ

ಸತ್ಕಾರ ಕೂಟ, ಮದ್ರಾಸು

ದಕ್ಷಿಣ ಕನ್ನಡಾ ಜಿಲ್ಲಾ ಬೋರ್ಡು ಪ್ರೆಸಿಡೆಂಟರೂ ಉಡುಪಿ ಮುನಿಸಿಪಾಲಿಟಿಯ ಅಧ್ಯಕ್ಷರೂ ಆದ ಶ್ರೀ। ಅರೂರು ಲಕ್ಷ್ಮೀನಾರಾಯಣ ರಾಯರಿಗೆ ಮೈಸೂರು ಕೆಫೆ ಮಾಲಿಕರಾದ ಶ್ರೀ. ಗೋಪಾಲಾಚಾರ್ಯರು ಇನ್ನಿತರ ಕನ್ನಡ ಪ್ರಮುಖರ ಸಹಾಯದಿಂದ ತಾರೀಕು ೪ರಂದು ತಮ್ಮ ಕೆಫೆಯಲ್ಲಿ ಒಂದು ಸತ್ಕಾರ ಕೂಟವನ್ನೇರ್ಪಡಿಸಿ ಮನ್ನಿಸಿದರು. ದಕ್ಷಿಣ ಕನ್ನಡಾ ಜಿಲ್ಲೆಯ ಮದ್ರಾಸಿನಲ್ಲಿರುವ ಪ್ರಮುಖರಾದ ಆನರೇಬಲ್ ಜಸ್ಟಿಸ್ ಕೆ. ಪಿ ಲಕ್ಷ್ಮಣರಾವ್, ಹ್ಯಾ ಕೋರ್ಟು ಜಡ್ಜ್ ಶ್ರೀ। ವಿ. ಎನ್. ಕುಡ್ವ, ಐ. ಸಿ. ಎಸ್. ಪಿ ಎಸ್. ಹೆಜ್ಮಾಡಿ, ಐ. ಸಿ ಎಸ್. ಡಾ। ಕೆ ಎಮ್. ರೈ, ಎಫ್. ಆರ್. ಸಿ ಎಸ್. ಶ್ರೀ। ಕುಮಾರಯ್ಯನವರು, ಡಾ। ಯು. ಕೃಷ್ಣರಾವ್, ಶ್ರೀ। ಬಿ. ಸೀತಾರಾಮರಾವ್, ಶ್ರೀ। ಕೆ ವೈ ಅಡಿಗ, ಡಾ। ಕೆ. ಯು. ಜಿ. ರಾವ್, ಶ್ರೀ। ವಾಚಪ್ಪ ಗೌಡರ್, ಸೇಲಂ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರೇ ಮೊದಲಾದ ಅನೇಕ ಮಹನೀಯರು ದಯಮಾಡಿ ಕಾರ್ಯವನ್ನು ಯಶಸ್ವಿಯಾಗಿ ನೆರವೇರಿಸಿದರು

ಕರ್ನಾಟಕ

ಸೌ ಶಾಮಲಾಬಾಯಿ ಬೆಳಗಾವಕರರ ನಿಧನ

ಜಯಕರ್ನಾಟಕ ಮಾಸಪತ್ರಿಕೆಯ ಹಿಂದಿನ ಸಹಸಂಪಾದಿಕೆಯರಾಗಿದ್ದ ಸೌ. ಶಾಮಲಾಬಾಯಿ ರಾಮಚಂದ್ರರಾವ ಬೆಳಗಾವಕರ ಇವರು ತಾ. ೧೧ರಂದು ಸಾಯಂಕಾಲ ನಿಧನ ಹೊಂದಿದರೆಂದು ತಿಳಿಸಲು ಅತ್ಯಂತ ವಿಷಾದವಾಗುತ್ತದೆ. ಇವರು ಲೇಖಿಕೆಯರೂ ಆಗಿದ್ದರು. ಅವರು ಬರೆದ "ಹೂಬಿಸಿಲು" ಎಂಬ ಚಿಕ್ಕ ಕತೆಗಳ ಸಂಗ್ರಹವೊಂದು ಪ್ರಸಿದ್ಧವಾಗಿ ಜನರ ಮೆಚ್ಚುಗೆಗೆ ಪಾತ್ರವಾಗಿರುವುದಲ್ಲದೆ ಅವರ ಮತ್ತೊಂದು "ಹೊಂಬಿಸಿಲು" ಎಂಬ ಕಥಾ ಸಂಗ್ರಹವೂ ಬೇಗನೆ ಪ್ರಸಿದ್ಧವಾಗಲಿದೆ. ಸಾಹಿತ್ಯದಲ್ಲಿ ಕೆಲಸ ಮಾಡಿದಂತೆಯೆ ಅವರ ಕರ್ನಾಟಕದ ಸಾಮಾಜಿಕ ಸಾಂಸ್ಕೃತಿಕ ಕಾರ್ಯದಲ್ಲಿ ಒಹಳ ಕೆಲಸ ಮಾಡಿರುವರು. ಕರ್ನಾಟಕ ಮಹಿಲಾ ಸಮಾಜದ ಕಾರ್ಯದರ್ಶಿನಿಯಾಗಿ ಅದರ ಪ್ರತಿನಿಧಿಗಳಾಗಿ ಅವರು ಬೆಂಗಳೂರು, ನಾಗಪುರ, ಕಲಕತ್ತಾ, ದಿಲ್ಲಿ ಮೊದಲಾದ ದೂರದ ಪಟ್ಟಣಗಳಲ್ಲಿ ಸಂಚರಿಸಿ ಬಂದಿದ್ದರು. ಇವರು ಧಾರವಾಡ ನಗರಸಭೆಯ ಹಾಗು ಸ್ಕೂಲಬೋರ್ಡಿನ ಸದಸ್ಯರಾಗಿಯೂ ಕೆಲಸ ಮಾಡಿರುವರು.

ನೋಟೀಸು

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

R E P. 362/43.

ವೆಂಕಟ್ರಮಣ ಆಚಾರ್ಯ— ಅರ್ಜಿದಾರರು
ರಾಮಣ್ಣ ಸಂಪಿಗೆತ್ತಾಯ ಕೂಡಾ— ಎದ್ರಿರು

ಸದ್ರಿ ಅಪ್ಲಿಕ್ಯಾರಿಯ 3ನೇ ಎದ್ರಿ ಮ್ಯಾನರ ಗೌರಿ ಹೆಂಗ್ಸಿಗೆ ವ ಇವಳ ಗಾರ್ಡಿಯನ್ ತಂದೆ ವಾಸ್ತೇವ ಹೆಬ್ಬಾರರಿಗೆ ಕೂಡಾ ಈ ಮೂಲಕ ತಿಳಿಸುವುದೇನೆಂದ್ರೆ—

ಸದ್ರಿ ಅರ್ಜಿದಾರನು ದಾಖ್ಲು ಮಾಡಿದ ಮೇಲಿನ ಅಪ್ಲಿಕ್ಯಾರಿಯಲ್ಲಿ ಏಲಂ ಇಸ್ತಿಹಾರಿನ ಶರತಗಳನ್ನು ನಿಶ್ಚಯಿಸುವರೆ ತಾ 23 11-43 ಕ್ಕೆ ಇಟ್ಟಿದೆ. ಆದ್ರಿಂದ ಅದ್ರಲ್ಲಿ ವ್ಯವಹರಿಸುವುದಿದ್ರೆ ಆ ದಿವಸ 10 ಗಂಟೆಗೆ ಸರಿಯಾಗಿ ಸ್ವತಹ ಆಗ್ಲೀ ವಕೀಲರ ಮುಖಾಂತ್ರ ಆಗ್ಲಿ ಹಾಜ್ರು ಆಗಿ ಉದಹರಿಸತಕ್ಕದ್ದು. ತಪ್ಪಿದ್ರೆ ಏಕ್ ಪಾರ್ಟಿ ವಿಚಾರಣೆಯಿಂದ ತೀರ್ಮಾನ ಮಾಡಲಾಗುವುದು ತಿಳಿದಿರಲಿ.

ಪುತ್ತೂರು, 3-11-43. } C. S. Shastry, Vakil for Petitioner.

ಸಿನೆಮಾ ಸುದ್ದಿ

ಅನ್ನವಿಲ್ಲದೆ ಸತ್ತಳು ಸಿನೆಮಾ ನಟಿ!

ಬೊಂಬಾಯಿಯ 'ಮಾತುಂಗಾ'ದಲ್ಲಿ ಓರ್ವ ಸಿನೆಮಾ ನಟಿಯು ಅನ್ನವಿಲ್ಲದೆ ಸತ್ತಳೆಂದು 'ರೂಪವಾಣಿ' ಬರೆದಿದೆ. ಆಕೆ ಮುಖ್ಯಪಾತ್ರ ವಹಿಸುತ್ತಿದ್ದಳೆಂದೂ, ಇತ್ತೀಚೆಗೆ ಕೆಲಕಾಲದಿಂದ ಉದ್ಯೋಗವಿಲ್ಲದೆ ಈ ಅವಸ್ಥೆಗೆ ಬರಬೇಕಾಯಿತೆಂದೂ ಅದರಲ್ಲಿ ಉಲ್ಲೇಖಿತವಾಗಿದೆ. ಸಿನೆಮಾ ನಟಿಯರು ದೇವಾಂಗನೆಯರಲ್ಲ; ಅಮೃತಪಾನ ಮಾಡಿದವರಲ್ಲ. ಅವರಿಗೂ ಉಪವಾಸ ಸಾವುಗಳಿವೆ!

ಕನ್ನಡ 'ಹರಿಶ್ಚಂದ್ರ' ತಮಿಳಿನಲ್ಲಿ

ಪ್ರಗತಿ ಪಿಕ್ಚರ್ಸಿನವರ ಕನ್ನಡ ಚಿತ್ರ 'ಹರಿಶ್ಚಂದ್ರ'ವು ತಮಿಳಿನಲ್ಲೀಗ ರಚಿತವಾಗಿದೆ. ಸುಬ್ಬಯ್ಯ ನಾಯ್ಡು ಲಕ್ಷ್ಮೀಬಾಯಿ ಇವರೇ ನಾಯಕ, ನಾಯಕಿಯವರು. ಈ ತಮಿಳು ಚಿತ್ರವು ಸೆನ್ಸಾರಿನವರಿಂದ ಮಂಜೂರಾಗಿ ಬೇಗನೇ ಪ್ರದರ್ಶನಕ್ಕೆ ಬರಲಿದೆ.

೧೧ ಸಾವಿರ ಅಡಿಯ ತೆಲುಗು ಚಿತ್ರ

ದಕ್ಷಿಣ ಭಾರತದ ಚಿತ್ರಗಳಿಗೆ ಹೆಚ್ಚು ದೀರ್ಘ ಬೇಕಾದ್ದರಿಂದ ೧೧ ಸಾವಿರ ಅಡಿಯ ಕಡಿಮೆ ಮಿತಿಯನ್ನು ಸರಕಾರ ನಮಗೆ ಹಾಕಬಾರದು ಎಂದು ಶ್ರೀವಾಸನ್ ಚಳವಳ ಹೂಡಿದರಷ್ಟೆ? ಆದರೆ ತೆಲುಗು ಭಾಷೆಯಲ್ಲಿ ಶ್ರೀ. ಜಿ. ರಾಮಬ್ರಹ್ಮರು ದಿಗ್ದರ್ಶಿಸಿದ 'ಪಂತುಲಮ್ಮ' ಚಿತ್ರವೀಗ ೧೧ ಸಾವಿರ ಅಡಿಯಲ್ಲಿ ರಚಿತವಾಗಿ ಪ್ರದರ್ಶನಕ್ಕೆ ಸಿದ್ಧವಾಗಿದೆ. ದಕ್ಷಿಣ ಭಾರತದ ಚಲಚ್ಚಿತ್ರ ಕಲೆಯಲ್ಲಿ ಆಂಧ್ರರು ಮುಂಧಡಿಯಿಟ್ಟವರು. ಅವರು ಇದರಲ್ಲೂ ಒಂದಡಿ ಮುಂದೆ ಇಟ್ಟಿದ್ದಾರೆ:

ಕೆನರಾ ಚಲಚ್ಚಿತ್ರ ವಿಮರ್ಶಕರ ಸಂಘ

ಇದರ ವಾರದ ಸಭೆ ಶ್ರೀ ರಘು ಇವರ ಅಧ್ಯಕ್ಷತೆಯಲ್ಲಿ ಸೇರಿ 'ಬೇಡ್ ಪೇನ್ ಓಫ್ ವ್ಹೈಮಿಂಗ್' ಒಳ್ಳೆಯ ಚಿತ್ರವೆಂದು ವಿಮರ್ಶಿಸಲಾಯಿತು. ಬೆಂಗಳೂರು ಮೈಸೂರು ಕಡೆ ಪ್ರವಾಸ ಮಾಡಿ ಬಂದ ಶ್ರೀ ತಿರುಮಲೇಶ್ವರ ಭಟ್ಟರು ಅಲ್ಲಿನ ಸಿನೆಮಾ ವಿಮರ್ಶಕರ ಕುರಿತು ಮಾತನಾಡಿ, ನಮ್ಮ ಸಂಘದ ಕುರಿತು ಅಲ್ಲಿ ಒಳ್ಳೆಯ ಅಭಿಪ್ರಾಯವಿದೆಯೆಂದರು.

ಬೋಸರ ಸೈನ್ಯ

ಕೇಂದ್ರ ಎಸೆಂಬ್ಲಿಯಲ್ಲಿ ಕೇಳಿದ ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಸರ್ ರೆಜಿನಾಲ್ಡ್ ಮ್ಯಾಕ್ಸ್‌ವೆಲ್ಲರು, ಸುಭಾಸ ಚಂದ್ರ ಬೋಸರು ಭಾರತದ ಮೇಲೆ ಧಾಳಿಯಿಡಲು ಜಪಾನರಿಗೆ ಸಹಾಯ ಮಾಡುವುದಕ್ಕೆ ಒಂದು ಸೈನ್ಯ ಸಂಗ್ರಹ ಮಾಡುತ್ತಾರೆಂದು ಶತ್ರು ಪ್ರಚಾರ ಮಾಡುತ್ತಿರುವುದು ನಿಜವೆಂದೂ, ಈಗ ಜಪಾನರ ಕೈಯಲ್ಲಿ ಸೆರೆ ಸಿಕ್ಕಿರುವ ಹಿಂದೀಯರನ್ನು ಆ ಸೈನ್ಯದಲ್ಲಿ ಸೇರಲು ಒತ್ತಾಯ ಮಾಡಲಾಗುತ್ತಿದೆಯೆಂದೂ ಹೇಳಿದರು.

ಚರ್ಚಿಲರಿಗೆ ಭಾರತೀಯರು ಸತ್ತರೇನು?

'ಕಾಮನ್ಸ್' ಸಭೆಯಲ್ಲಿ ಭಾರತದ ಆಹಾರ ಪರಿಸ್ಥಿತಿ ಚರ್ಚಿಸಲ್ಪಟ್ಟಾಗ ಒಟ್ಟು ೬೦೦ ಮಂದಿ ಸದಸ್ಯರಲ್ಲಿ ಕೇವಲ ೩೦ ಅಥವಾ ೪೦ ಮಂದಿ ಮಾತ್ರ ಹಾಜರಿದ್ದರು. ಇದನ್ನು ನಾವು ಗಮನಿಸಬೇಕು. ಯೂರೋಪಿನ ಚಿಕ್ಕದೊಂದು ರಾಷ್ಟ್ರದ ಸಣ್ಣ ವಿಷಯ ಚರ್ಚಿಸಲ್ಪಡುವಾಗಲಾದರೂ, ಚರ್ಚಿಲರು ಎಲ್ಲಾ ಕೆಲಸಗಳನ್ನು ಬದಿಗಟ್ಟಿ ಬರುತ್ತಾರೆ. ೪೦ ಕೋಟಿ ಜನರ ಭವಿಷ್ಯ ನಿರ್ಣಯವಾಗುವಾಗ ಅವರಿಗೆ ಬರಲಾಗುವುದಿಲ್ಲವೋ? ೬೦೦ ಮಂದಿ ಸದಸ್ಯರು ೬೦೦೦ ಮೈಲು ದೂರದಿಂದ ನಮ್ಮನ್ನಾಳುವರೆಂಬುದು ತಿರುಳಿಲ್ಲದ ತತ್ವವೆಂದು ಇದರಿಂದ ಖಚಿತವಾಗುವುದು. ಹಿಂದೀಯರು ಸತ್ತರೇನು, ಬದುಕಿದ್ದರೇನು ಚರ್ಚಿಲರಿಗೆ?" ಹೀಗೆಂದು ಶ್ರೀ. ಜಯಕರರು ಒಂದು ಹೇಳಿಕೆಯಿತ್ತಿದ್ದಾರೆ.

ಉಡುಪಿ

ಅ. ಕ. ಕಿರಿಯರ ಸಮ್ಮೇಳನ

ಬರುವ ಜನವರಿ ತಿಂಗಳಲ್ಲಿ ಪರ್ಯಾಯ ಮಹೋತ್ಸವದ ಸಂದರ್ಭ ಜರಗಲಿರುವ ಈ ಸಮ್ಮೇಳನದ ಕಾರ್ಯದರ್ಶಿ ಶ್ರೀ. ಯು ವ್ಯಾಸರಾಯರೂ, ಉಪಾಧ್ಯಕ್ಷರಲ್ಲೊಬ್ಬರಾದ ಶ್ರೀ. ಎಸ್. ಎಲ್. ನಾರಾಯಣ ಭಟ್ಟರೂ ಕಾಸರಗೋಡು, ಚೆರ್ಕಳ, ಕುಂಬಳೆ, ಮಂಗಲಪಾಡಿ ಮೊದಲಾದ ಕಡೆಗಳಲ್ಲಿ ಸಂಚರಿಸಿ ಅನೇಕ ಮಂದಿ ಕಿರಿಯರನ್ನು ಕಂಡು ಮಾತನಾಡಿ ಸಮ್ಮೇಳನಕ್ಕೆ ಬರುವ ಭರವಸೆ ಪಡೆದಿರುವರು. ಶ್ರೀ. ಶಿವರಾಮ ಕಾರಂತರು ಈ ಸಮ್ಮೇಳನ ಉದ್ಘಾಟನೆ ಮಾಡಲು ಒಪ್ಪಿರುವರಾಗಿ ತಿಳಿಯುತ್ತದೆ.

ಸಾದರ ಸ್ವೀಕಾರ

೧. ವೀರ ಶೈವ ಸಮಾಜದ ದುಸ್ಥಿತಿ ಮತ್ತು ಅದರ ನಿವಾರಣೆ. ಲೇಖಕರು ಮತ್ತು ಪ್ರಕಾಶಕರು: ಎಂ. ಎಲ್. ನಾಗಣ್ಣ ಇವರು. ಆತ್ಮವಿಚಾರ ಮಂದಿರ. ೬೭೫ ವಾಣಿವಿಲಾಸ ರೋಡ್, ಮೈಸೂರು. ಬೆಲೆ ೦-೮-೦.

೨. ರಾಗ ವಿಲಸ-(ಕವನ ಸಂಗ್ರಹ). ಕವಿಗಳು 'ಧನ್ವಂತ' ಪ್ರಕಾಶಕರು: ಎಚ್. ಎನ್. ರಾವ್ ಬ್ರದರ್ಸ್, ಬೆಂಗಳೂರು ನಗರ. ಬೆಲೆ ಹನ್ನೆರಡಾಣೆ.

ವಿಮರ್ಶೆಯು ಅನಂತರ.

ಇದು ಮುಂದೆ ಅಪಾಯಕಾರೀ ತುರಿಕಜ್ಜಿಯಾದೀತೆ?

ಜಾಂಬಕ್ ನಿಮ್ಮ ಚರ್ಮದೋಷಗಳನ್ನು ಗುಣ ಮಾಡುವುದು

ಚರ್ಮದ ಮೇಲಿನ ಆ ಸಣ್ಣ ಕಜ್ಜಿಯ ಹಾಗೂ ದೊರಕಿರುವ ಭಾಗಗಳೇ ಮುಂದೆ ತುರಿಕಜ್ಜಿಗಳಾಗುತ್ತವೆ. ಆದ್ದರಿಂದ ಅಂಥಾದನ್ನು ತಿರಸ್ಕರಿಸದೆ, ಜಾಂಬಕನ್ನು ಪ್ರತಿರಾತ್ರೆ ತಪ್ಪದೆ ಹಚ್ಚಿರಿ. ಅದು ನೋವನ್ನು, ಕಜ್ಜಿಯನ್ನು, ಬಾವನ್ನು, ಕೂಡಾ ಗುಣಪಡಿಸುವುದಲ್ಲದೆ, ವಿಷಕಾರೀ ಕ್ರಿಮಿಗಳನ್ನು ಜಾಂಬಕ್ ಗುಣಪಡಿಸುತ್ತದೆ. ಕಲೆಯಿಲ್ಲದೆ ಗಾಯ ಮಾಯವಾಗುತ್ತದೆ. ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ಮಾರಾಟವಾಗುವುದು.

ಯಾವಾಗಲೂ ಜಾಂಬಕನ್ನೇ ಸೇವಿಸಿರಿ

ZAM-BUK

ಪ್ರಾಣಿ ಕೊಬ್ಬು ವಿರಹಿತವಾದುದು.

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 697/1942.

Between-

ಕುಂಞಾಲಿಬ್ಯಾರಿ, ನಂಬರ ಕುಂಞಾಮದೆ ಬ್ಯಾರಿಗಳ ಮಗ ವ್ಯಾಪಾರ ಕಸಬು, ಕಾಸರಗೋಡು ತಾಲೂಕು ಅಡ್ಕತ್ತಬೈಲು ಗ್ರಾಮದ ನೆಲ್ಲಿಕುಂಜೆಯಲ್ಲಿರುವವರು— ... ವಾದಿ

ಮತ್ತು

1. ಅಬ್ದುಲ್ ಖಾದ್ರಿ ಹಾಜಿ. ಕಡವತ್ತ ಅಂದು ಹಾಜಿ ಯಾನೆ ಅಬ್ದುಲ್ಲ ಹಾಜಿಯವರ ಮಗ, ವ್ಯಾಪಾರ ಕಸಬು ಕಾಸರಗೋಡು ತಾಲೂಕು ಕಾಸರಗೋಡು ಕಸಬಾ ಗ್ರಾಮದಲ್ಲಿರುವವರು.
2. ಅಂಬಾಚುಯಾನೆ ಅಬ್ಬಾಸಬ್ಯಾರಿ ಪಟ್ರಿಲ್ ಬೀರಾ ಮ್ಯೊದಿನ್ ಬ್ಯಾರಿಗಳ ಮಗ, ಕಾಸರಗೋಡು ತಾಲೂಕು ಅಡ್ಕತ್ತಬೈಲು ಗ್ರಾಮದ ನೆಲ್ಲಿಕುಂಜೆ ಎಂಬಲ್ಲಿರುವವರು. ... ಪ್ರತಿವಾದಿ

ಇವರೊಳಗೆ

ತಾ. 9-11-1942

ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವುದೇನೆಂದ್ರೆ:-

ವಾದಿಯು ಪ್ರತಿವಾದಿರ ಮೇಲೆ ಮೇಲ್ಕಂಡ ಕೋರ್ಟಿನಲ್ಲಿ 2ನೇ ಪ್ರತಿವಾದಿಯು ತನ್ನ ಆಸ್ತಿಯನ್ನು 1ನೇ ಪ್ರತಿವಾದಿಗೆ ಪರಾಧೀನ ಮಾಡಿದ್ದು ನ್ಯಾಯವಾದ್ದಲ್ಲವ ಪ್ರತಿಫಲವುಳ್ಳದ್ದಲ್ಲವೆಂತಲೂ, ತನ್ನ ಸಾಲಗಾರರಿಗೆ ಮೋಸಮಾಡುವ ಇರಾಧೆದ್ದು ಎಂತ ವಗೈರೆ ಸಂಗತಿ ಕಾಣಿಸಿ, ಸದ್ರಿ ಪರಾಧೀನವನ್ನು ರದ್ದು ಮಾಡುವರೆ ಈ ವ್ಯಾಜ್ಯ ದಾಖ್ಲು ಮಾಡಿರುತ್ತಾನೆ. ಸದ್ರಿ ವ್ಯಾಜ್ಯವು ತಾ. 22-11-1943ರಲ್ಲು ಮೇಲ್ಕಂಡ ಕೋರ್ಟಿನಲ್ಲಿ ತನ್ನಿ ಬಗ್ಗೆ ಇಟ್ಟಿರುತ್ತದೆ. ಆದುದರಿಂದ 2ನೇ ಪ್ರತಿವಾದಿಯು ಇತರ ಸಾಲಗಾರರಿಗೆ ಈ ಮೂಲಕ ತಿಳಿಯಪಡಿಸುವುದೇನಂದರೆ ಈ ವಿಷಯದಲ್ಲಿ ಏನಾದ್ರೂ ಆಕ್ಷೇಪ ಉಳ್ಳವರು ತಾ. 22-11-1943ರಲ್ಲು ಹಗಲು ಗಂಟೆ 11ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರಾಗಿ 1ನೇ ಪ್ರತಿವಾದಿಗೆ ಮಾಡಿದ ಪರಾಧೀನದ ವಿಷಯದಲ್ಲಿ ಆಕ್ಷೇಪವನ್ನು ಹೇಳಿಕೊಳ್ಳತಕ್ಕದ್ದು ಎಂಬ ಸಂಗ್ತಿಯನ್ನು ಈ ಮೂಲಕ ತಿಳಿಸಲಾಗುತ್ತದೆ.

Kasaragod, 9-11-1943. Sd/ Kumble Ganesh Rao B. A. L. L. B. Vakil for Plaintiff.

ಕಾಮಶಾಸ್ತ್ರದ ಗ್ರಂಥಗಳು

ಅನಂಗರಂಗ ೧—೮—೦
ಸ್ತ್ರೀಪುರುಷರ ಲಕ್ಷಣ, ಸಂಭೋಗ ಕಾಲ ನಿರ್ಣಯ, ರತಿಸಮಯದ ಹಾವಭಾವಗಳು, ದ್ರವಣಾದಿ ಔಷಧಗಳು ಇವೇ ಮೊದಲಾದ ರತಿಶಾಸ್ತ್ರದ ರಹಸ್ಯಮಯ ವಿಷಯಗಳು.

ವಿಕೃತ ಕಾಮ ೧—೮—೦
ಬಾಲ್ಯದ ಕಾಮವಿಕಾರಗಳು, ಸ್ವಾನುರತಿ, ಹಿಂಸಾರತಿ, ಪ್ರದರ್ಶನರತಿ, ಸಲಿಂಗರತಿ ಇತ್ಯಾದಿ.

ಪೌರುಷ ೧—೮—೦
ನಪುಂಸಕರೆಂದು ಮರುಗಬೇಡಿ. ಪುನಃ ಪೌರುಷ ಪ್ರಾಪ್ತಮಾಡಿಕೊಳ್ಳಲು ನೂರಾರು ಉಪಾಯಗಳಿವೆ.

ಗರ್ಭನಿರೋಧ (ಅಚ್ಚಿನಲ್ಲಿದೆ) ೧—೮—೦
ಸಂತತಿ ನಿಯಮನಕ್ಕೆ ಸರಿಯಾದ ದಾರಿಯೇಳ? ಡಾ। ಗೋಪಾಲಕೃಷ್ಣರಾಯರು ಬರೆದ ಈ ಹೊಸ ಪುಸ್ತಕ ಓದಿರಿ.

ದಾಂಪತ್ಯ ದರ್ಶನ ೧—೮—೦
ಸಂಭೋಗ ಸುಖ, ಗಂಡಹೆಂಡಿರಲ್ಲಾಗುವ ಆತ್ಮೈಕ್ಯ, ಅತಿ ಲಂಪಟತನದ ದುಷ್ಪರಿಣಾಮ, ರತಿ ಸೌಖ್ಯಕ್ಕೂ ಸಂತಾನ ಸುದೃಢತೆಗಳಿಗೂ ಇರುವ ಸಂಬಂಧಗಳ ಬಗ್ಗೆ ದಿ। ಪಂಡಿತ ತಾರಾನಾಥರಾಯರ ಕಾಮ ಮನೋವೈಜ್ಞಾನಿಕ ಗ್ರಂಥ.

ರತಿರಹಸ್ಯ ೧—೮—೦.
ತಾರುಣ್ಯದ ಮದ, ಸ್ತನಗಳ ಸೌಂದರ್ಯ, ಸಮಾಗಮ ಶಯನ ಇತ್ಯಾದಿ

ಪ್ರೇಮಕಲಾ ೧—೮—೦
ಅಶ್ಲೀಲವಲ್ಲ! ಶಾಸ್ತ್ರೀಯ ಗ್ರಂಥವೆಂದು ಕೋರ್ಟಿನ ನಿರ್ಣಯವೇ ಆಗಿದೆ.

ಭ್ರಾಂತಿ ಮತ್ತು ಲೈಂಗಿಕ ಶಿಕ್ಷಣ ೧—೮—೦
ಪ್ರಸಿದ್ಧ ಡಾಕ್ಟರುಗಳ ಮೂರು ಶಾಸ್ತ್ರೀಯ ಪುಸ್ತಕಗಳು. ಉನ್ಮಾದ, ವೇಶ್ಯಾವೃತ್ತಿಯ ಹಾವಳಿ ಲೈಂಗಿಕ ಹಾಗೂ ಗುಪ್ತ ರೋಗಗಳ ಚಿಕಿತ್ಸೆ . . . .

ವಿ. ಪಿ. ವೆಚ್ಚ ಬೇರೆ. ನಮ್ಮ ಕ್ಯಾಟಲಾಗಿಗೆ ಒಂದಾಣೆ ಅಂಚೇಚೀಟು ಕಳಿಸಿರಿ.

ಸಮಾಜ ಪುಸ್ತಕಾಲಯ ಧಾರವಾಡ.

(1ನೇ ಪುಟದಿಂದ)

ಸಹಕಾರಿ ಸಂಘಗಳ ಮೂಲಕ ಅಕ್ಕಿ ಹಂಚುವುದು.

(೮) ಭತ್ತವನ್ನು ಇದ್ದಲ್ಲಿಂದ ಕದಲಿಸಬಾರದೆಂದು ಅಪ್ಪಣೆಯನ್ನು ವರ್ಗದಾರರಿಗೆ ಕೊಡುವಾಗ ಕೆಲ ತಹಶಿಲ್ದಾರರು ಆ ಅವಧಿ ೧೯೪೪ನೇ ಡಿಸೆಂಬರವೆಂದಿದ್ದಾರೆ. ಇದಕ್ಕೆ ಅರ್ಥವಿಲ್ಲ. ಇದು ಅನಾವಶ್ಯಕ. ಆ ಅವಧಿ ೧೯೪೪ ಮೇ ಯೆಂದಾದರೆ ಸಾಕು, ಅಷ್ಟರಲ್ಲಿ ವರ್ಷದ ಪೈರೆಲ್ಲ ಒಳಗೆ ಬರುತ್ತದೆ.

ಉ: ಹೊಸ ಯೋಜನೆಗೆ ಅದರಿಂದ ಬಾಧಕವಿಲ್ಲ.

(೯) ಇದ್ದಲ್ಲಿಂದ ಕದಲಿಸಬಾರದೆಂಬೀ ಅಪ್ಪಣೆಯನ್ನು ಸೂರಾಟವಾಗದಂತೆ ಮಾತ್ರ ಅನ್ವಯಿಸಿದರೆ ಸಾಕು, ಅಷ್ಟಾದರೂ ಗೃಹಕೃತ್ಯಕ್ಕೂ ಬೇಸಾಯಕ್ಕೂ ಉಪಯೋಗವಾಗದಂತೆ ಮಾಡಬಾರದು.

ಉ: ಅಕ್ಕಿಯನ್ನು ಕದಲಿಸದ ಅಪ್ಪಣೆ ಸೂರಾಟದ ತುಟ್ಟಿಗೆ ಮಾತ್ರ, ಗೃಹಕೃತ್ಯದ ಬೇಸಾಯದ ಉಪಯೋಗಕ್ಕೆ ಅಪ್ಪಣೆಯಿಂದ ತಡೆಯಿಲ್ಲ.

ರೇಶನಿಂಗ್ ಬರುವ ವರೆಗೆ ಮಂಗಳೂರಲ್ಲಿ ಹಂಚಲು ಬೇಕಾದ ಅಕ್ಕಿಯನ್ನು ಕೂಡಲೇ ವರ್ಗದಾರರು ಕೊಡುವಂತೆ ಕಲೆಕ್ಟರರೊಡನೆ ಒಪ್ಪಿಕೊಂಡಿರುವರು

ಪುಸ್ತಕಾವಲೋಕನ

ಕಲಾವಿದನ ತ್ಯಾಗ ಮತ್ತು ಇತರ ಕತೆಗಳು: ಮೂಲ ಲೇಖಕರು: ಶ್ರೀ ಕೆ. ವಿ. ಜಗನ್ನಾಥನ್, ಅನುವಾದಕರು ಶ್ರೀಮತಿ ಆರ್. ಜಯಲಕ್ಷ್ಮಿ ಶ್ರೀನಿವಾಸನ್. ಪ್ರಕಾಶಕರು: ಸತ್ಯಶೋಧನ ಪ್ರಕಟನ ಮಂದಿರ, ಬೆಂಗಳೂರು. ಕ್ರೌನ್ ೧/೮ ಆಕಾರದ ೧೦೨ ಪುಟಗಳು. ಬೆಲೆ ಒಂದು ರೂಪಾಯಿ.

ತಮಿಳಿನಲ್ಲಿ ಹೆಸರಾಂತ ಕಥಾ ಲೇಖಕರಾದ ಶ್ರೀ ಕೆ. ವಿ. ಜಗನ್ನಾಥನ್ ಇವರ ಕತೆಗಳನ್ನು ಹಲವು ಅನುವಾದಗಳನ್ನು ಬರೆದು ಪ್ರಸಿದ್ಧರಾದ ಶ್ರೀಮತಿ ಜಯಲಕ್ಷ್ಮಿ ಆರ್ ಶ್ರೀನಿವಾಸನರಿಲ್ಲಿ ಕನ್ನಡಿಸಿ ಕೊಟ್ಟಿದ್ದಾರೆ. ಶ್ರೀ ಸಿ ಕೆ. ವೆಂಕಟರಾಮಯ್ಯನವರು ಇದಕ್ಕೆ ಒಂದು ಮುನ್ನುಡಿಯನ್ನು ಬರೆದು ಉಪಕಾರ ಮಾಡಿದ್ದಾರೆ.

ಇದರಲ್ಲಿ ಒಟ್ಟು ೧೦ ಕತೆಗಳಿವೆ ಹೆಚ್ಚಿನ ಕತೆಗಳೆಲ್ಲವೂ ಹೃದಯ ಸ್ಪರ್ಶಿಯಾಗಿರುವವು ಕಲಾವಿದನ ತ್ಯಾಗ, ಯಾವಾಗ ಬರುವನು, ತೋಟದವನು, ಮುದುಕಿಯ ನೆರಳು ಇವು ಅತ್ಯುತ್ತಮ ಕತೆಗಳೆನ್ನಬಹುದು. ಕಲಾವಿದನು ತನ್ನ ಕಲೆಯನ್ನು ಕೊನೆಗೊಮ್ಮೆ ಎಂಥಾ ಸಂಕಟದಿಂದ ತ್ಯಾಗವಮಾಡುತ್ತಾನೆ, ವಿಧಾಥಿಯುವನು ತನ್ನ ಮಗುವಿಗೆ ಔಷಧಿಯಕೊಡದೆ ಹೇಗೆ ತಳಮಳಗೊಳುತ್ತಾನೆ, ಒಂದು ಶಿಶು ಬೇರೊಂದು ಶಿಶುವಿನ ಮೇಲೆ ಎಂಥಾ ಆಕ್ಕರೆಯನ್ನಿಡುತ್ತದೆ, ಯುವಕ ಯುವತಿಯರು ಎಂಥಾ ಪ್ರೇಮಪಾಶದಲ್ಲಿ ಬಂಧಿತರಾಗಿರುತ್ತಾರೆ, ಶಿಶು ಹೃದಯವು ಎಷ್ಟು ಅಕೃತ್ರಿಮವಾದುದು, ಸ್ತ್ರೀ ಹೇಗೆ ತನ್ನ ಮಾನವನ್ನು ಕಾಪಾಡಿಕೊಂಡಿರುವಳು, ತೋಟದವನಿಗೆ ತಾನು ಬೆಳಸಿದ ಗಿಡಗಳಲ್ಲಿ ಎಂಥಾ ಮಮತೆಯಿರುತ್ತದೆ, ವಿದೇಶಕ್ಕೆ ಹೋದ ಗಂಡನು ಕ್ಷಯರೋಗಿಯಾಗಿ ಬಂದಾಗ ಪತ್ನಿ ಮಕ್ಕಳ ಪರಿಸ್ಥಿತಿ, ದೇವರು ರಾಜನ ಆಡಂಬರಕ್ಕಿಂತಲೂ ಮುದುಕಿಯ ಸೇವೆಯನ್ನು ಹೇಗೆ ಮೆಚ್ಚುತ್ತಾನೆ ಇವು ಈ ಹತ್ತು ಕತೆಗಳಲ್ಲಿ ಅಷ್ಟು ಹೃದಯಂಗಮವಾಗಿ ಹೇಳಲಾಗಿದೆ

ಇಲ್ಲಿನ ಹೆಚ್ಚಿನ ಕತೆಗಳು ಭಾವನಾ ಪ್ರಧಾನವಾದರೂ ನೈಜವನ್ನು ಬಿಟ್ಟಿಲ್ಲ ಕನ್ನಡ ಕಥಾ ಪ್ರೇಮಿಗಳು ತಮಿಳು ಕತೆಗಾರರ ಈ ಅನುವಾದವನ್ನು ಓದಿ ಸವಿಸವಿಯಬೇಕು

—ಕಯ್ಯಾರ

ನೋಟೀಸು

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S. C. 143/1942.
R. E P. No. 415/1943.

ಕುಂಞಣ್ಣ ಬಂಟ—(ವಾದಿ) ಅರ್ಜಿದಾರ

ಮತ್ತು

1. ಸಾವಿತ್ರಿ, ಮ್ಯಾನರ, ಮೃತಪಟ್ಟ ಪದ್ಮನಾಭ ಅಡಿಗರ ಮಗಳು ಗಾರ್ಡಿಯನ್ ತಾಯಿ 2ನೇ ರೆಸ್ಪಾಂಡೆಂಟಳು ಕಾವೇರಿ ಅಮ್ಮ 2 ಕಾವೇರಿ ಅಮ್ಮ ಸದ್ರಿ ಮೃತಪಟ್ಟ ಪದ್ಮನಾಭ ಅಡಿಗರ ವಿಧವೆ ಮಂಗಳೂರು ತಾಲೂಕು ಬಾಳ್ತಿಲ ಗ್ರಾಮದ ಸುದೆಕ್ಕಾರು ಬಟ್ರಕೋಡಿ ಎಂಬಲ್ಲಿರುವವರು } ರೆಸ್ಪಾಂಡೆಂಟ್ ಪ್ರತಿವಾದಿ

ಇವರೊಳಗೆ

ಸದ್ರಿ ಅರ್ಜಿದಾರನ ಕಡೆ ನೋಟೀಸ್.

ಮೇಲ್ಕಂಡ ವ್ಯಾಜ್ಯದಲ್ಲಾದ ಡಿಕ್ರಿ ಮೇರೆಗೆ ನಡ್ಸಿದ ಅಮಲ್‌ಜಾರಿ ವ್ಯವಹರಣೆಯಲ್ಲಿ, ಅರ್ಜಿದಾರನು ಹಾಜರುಪಡ್ಸಿದ ಸ್ಥಿರಸೊತ್ತಿನ ವಿಕ್ರಯದ ಇಸ್ತಿಹಾರಿನ ಷರತುಗಳನ್ನು ನಿರ್ಣಯಿಸಲಿಕ್ಕೆ ಇದೇ 1943ನೇ ಇಸವಿ ನವಂಬ್ರ ತಿಂಗಳ 27 ನೇ ತಾರೀಕಿಗೆ ಮೇಲ್ಕಂಡ ಅರ್ಜಿಯು ಮೇಲ್ಕಂಡ ಕೋರ್ಟಿನಲ್ಲಿ ತನ್ಖಿಗೆ ಇಡಲ್ಪಟ್ಟಿರುವ ಸಂಗ್ತಿ ಈ ಮೂಲಕ ತಿಳಿಸೋಣಾಗಿಯದೆ

Kasaragod, 12 11-1943. } **G. M. Kamath,** Vakil for Petnr (Plff)

FIRST AND FOREMOST

FIRST AND FOREMOST among the ideals of the CANARA BANK is the ideal of Service to its Customers

ESTD· 1906.

CANARA BANK LTD.

THE CANARA BANKING CORPORATION Ltd

(Incorporated in British India with limited liability)

Estd:] Head office· UDIPI [1906.

(Branches & Agencies in all principal cities of India)

Authorised capital	Rs. 25,00,000
Issued & Subscribed	Rs. 16,00,000
Paid up Capital	Rs 10,06,000
Reserves	Rs 3,85,000

Advances are made against approved securities and bills purchased or collected at most favourable rates For further particulars please apply tothe nearest Branch

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಆಗತ್ಯವುಂಟಾಗಿದ್ದು, ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ.

ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE·

The Joint Booking Office, KODIALBAIL·

ನೋಟೀಸು

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S 338/43

ಶ್ರೀ ಬಳೇಮಂಜ ಪಾರ್ಶ್ವನಾಥ ಬಸ್ತಿ ದೇವರು— } ವಾದಿ

ಕೇಶವ ಜೋಗಿತ್ತಾಯ ಕೂಡಾ ಪ್ರತಿವಾದಿರು 2ನೇ ಪ್ರತಿವಾದಿ—ಗಂಗಾಧರ ಜೋಗಿತ್ತಾಯ ಕೇಶವ ಜೋಗಿತ್ತಾಯರ ಮಗ, ಪುತ್ತೂರು ತಾಲೂಕು ಮುಚ್ಚಿನ ಗ್ರಾಮಸ್ಥ—ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ—

ಪ್ರತಿವಾದಿರ ಕುಟುಂಬದ ಮುಚ್ಚಿನ ಗ್ರಾಮದ ಪಟ್ಟಿ ನಂಬ್ರ 62ನೇ ಪಟ್ಟಿ ಆಸ್ತಿಯಿಂದ ವಾದಿ ಭಂಡಾರಕ್ಕೆ ತಸದೀಕು ರೂಪವಾಗಿ ಬರತಕ್ಕ ಹಣ ವಗೈರೆಗೆ (ರೂ. 4-3 11ಕ್ಕೆ) ನಿಮ್ಮ ಮೇಲೆ ಕೂಡ ವಾದಿ ಮಾಡಿದ ಮೇಲಿನ ವ್ಯಾಜ್ಯವು ತಾ 15—11—43ಕ್ಕೆ ತನ್ಖಿಗೆ ಇಟ್ಟಿರುತ್ತದೆ. ಆ ಕುರಿತು ನಿಮಗೇನಾದ್ರು ಆಕ್ಷೇಪ ಇದ್ರೆ ಸದ್ರಿ ವ್ಯಾದೆ ದಿನ ಪೂರ್ವಾಹ್ನ ಗಂಟೆ 10ಕ್ಕೆ ಮೇಲ್ಕಂಡ ಕೋರ್ಟು ಮುಂದೆ ನೀವು ಸ್ವತಃ ಯಾ ವಕೀಲ ದ್ವಾರಾ ಹಾಜ್ರಾಗಿ ಉದಹರಿಸತಕ್ಕದ್ದು ತಪ್ಪಿದ್ರೆ ನಿಮ್ಮನ್ನು ಶಿವ್ಯಾಮಾಡಿ ವ್ಯಾಜ್ಯ ತೀರ್ಮಾನಿಸಲಾದೀತು ಎಂತ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸಿಯದೆ.

Puttur 4. 11-43. } **M. Sadashiva Rao,** Pleader for Plff

The Bank of Mangalore Limited, Mangalore.
ESTD. 1931

HEAD OFFICE Mangalore. *BRANCHES* Moodabidri & Padubidri.

The Bank Undertakes to Collect Cheques, Demand and Documentary Bills at Most Competitive Rates.

ISSUES DRAFTS ON ALL IMPORTANT TOWNS IN THE DISTRICT
and also on
BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.
at very favourable rates
All kinds of inland banking business undertaken

ಹುಳುಕಡ್ಡಿ ಮದ್ದು



ಕಜ್ಜಿ, ತುರಿಕೆ, ತುರಿಕಜ್ಜಿ, ಹುಳುಕಡ್ಡಿ, ಪಿತ್ತ ಉಪದ್ರವ, ತಲೆ ಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ ಡಿಪೋ,
ಬೊಂಬಾಯಿ, ಮದರಾಸು, ಕಲ್ಕತ್ತ, ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ ದೊರೆಯುವುದು.

ಜೀವವಿಮೆ ಮಾಡುವ ಪ್ರಯೋಜನವು ಇಂದು ಹಿಂದಿಗಿಂತ ಅಧಿಕವಾಗಿದೆ.

ದಿ ಬಾಂಬೆ ಲೈಫ್ ಅಶ್ಶೂರೆನ್ಸ್ ಕಂಪೆನಿ ಲಿಮಿಟೆಡ್

ಇದರಲ್ಲಿ ಒಂದು ಪಾಲಿಸಿ ಪಡೆದು

ಈಗಲೇ ನೀವು ನಿಮ್ಮನ್ನು ಮತ್ತು ನಿಮ್ಮನ್ನು ಹೊಂದಿಕೊಂಡಿರುವವರನ್ನು ರಕ್ಷಿಸಿಕೊಳ್ಳಿರಿ!

ಪ್ರತಿನಿಧಿಗಳಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಇನ್ಶೂರ್ ಮಾಡಲು ಅಥವಾ ಮಾಹಿತಿ ತಿಳಕೊಳ್ಳಲು ದಯಮಾಡಿ ಬರೆಯಿರಿ!

ಕೊಚ್ಚಿಕ್ಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

— : ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ: —

ಬೆಂಗಳೂರು ಬೊಂಬಾಯಿ ಮದ್ರಾಸು ಕಲ್ಲಿಕೋಟೆ ಮಂಗಳೂರು ಮತ್ತು ತ್ರಿವೇಂಡ್ರಂ

'Bhuvanendra Products Limited
Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವ ವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು:–
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಫೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.
ಡಿಪೋ:—1. ಮರಾಠ ಗಲ್ಲಿ ಹುಬ್ಬಳ್ಳಿ.
2. 86 ಫ್ಲಾಕ್ರಾಪ್ಟ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ಮೃತ್ಯುಂಜಯ ರಸ. ಪಂಚವಟಿ ಮಾತ್ರೆ. ಕೊಲೆರಾ ರೋಗಕ್ಕೆ ಸಿದ್ಧೌಷಧ.
ಸೇವನಾ ಕ್ರಮಗಳು ಔಷಧಿಯೊಡನೆ ಇದೆ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಕು 19—11—1943 [ಸಂಚಿಕೆ 45]

ಂಗಳೂರು ಕಾಸರಗೋಡುಗಳಲ್ಲಿ

ರೇಶನಿಂಗ್ ಜಾರಿಯಾಗುವುದು-ಆದರೆ ಯಾವಾಗ?

ರೇಶನಿಂಗ್ ಆಫೀಸರರೊಡನೆ ಪ್ರಶ್ನೋತ್ತರಗಳು.

ತಾ. ೧೪ರಂದು ಕೆನರಾ ಚೇಂಬರ್ ಓಫ್ ಕೊಮರ್ಸಿನಲ್ಲಿ ವ್ಯಾಪಾರಿಗಳು ಪ್ರಾಂತಿಕ ರೇಶನಿಂಗ್ ಆಫೀಸರ್ ಶ್ರೀ. ಗ್ರಬ್ಬರಲ್ಲಿ ತಮ್ಮ ವಿನಂತಿ ಮಾಡಿಕೊಂಡರು. (ಅದರ ವಿಸ್ತಾರ ವರದಿಯನ್ನು ಎರಡನೆಯ ಪುಟದಲ್ಲಿ ಕೊಡಲಾಗಿದೆ) ಶ್ರೀ। ಗ್ರಬ್ಬರು ಅದಕ್ಕೆ ಸಮಾಧಾನಕರ ಉತ್ತರವೀಯುತ್ತಾ ಹೀಗೆಂದು ಹೇಳಿದರು:

'ಒಬ್ಬರನ್ನೊಬ್ಬರು ದೂರಿಕೊಳ್ಳುವುದಿಲ್ಲಿ ನಡೆದು ಬಿಟ್ಟಿದೆ, ನಿಜವಾಗಿ ಇದು ವಿಷಾದಕರ. ಪರಿಸ್ಥಿತಿ ಕೆಟ್ಟು ಹೋಗಿದೆ. ಇದಕ್ಕೆ ಯಾರು ಕಾರಣರೆಂದು ಆರೋಪ ಹೊರಿಸಿ ಕಲಹಮಾಡಿಕೊಳ್ಳಬೇಡಿ. ತಪ್ಪು ಎಲ್ಲರದೂ ಇದೆ. ವ್ಯಾಪಾರಿಗಳು, ವರ್ತಕರು, ಅಧಿಕಾರಿಗಳು ಗಿರಾಕಿಗಳು ಎಲ್ಲರೂ ತಪ್ಪು ಮಾಡುತ್ತಾರೆ. ನಾವೀಗ ನಮ್ಮ ನಮ್ಮೊಳಗಿನ ಭಿನ್ನಾಭಿಪ್ರಾಯಗಳನ್ನು ಮರೆತು ಬಿಡಬೇಕು. ನಮ್ಮ ಜನರು ಸಾಯುತ್ತಿದ್ದಾರೆ. ಎಲ್ಲರೂ ಸಹಕರಿಸಿ ಅವರನ್ನು ಬದುಕಿಸುವ ಪ್ರಯತ್ನ ಮಾಡಬೇಕು. ನಾನು ಇಲ್ಲಿಗೆ ನಿಮ್ಮೆಲ್ಲರ ಸಹಕಾರ ಪಡೆಯಲು ಬಂದಿದ್ದೇನೆ. ಆಹಾರದ ವಿಷಮ ಪರಿಸ್ಥಿತಿಯನ್ನು ಪರಿಹರಿಸುವ ಪ್ರಯತ್ನ ಮಾಡಲು ನಾನು ಬಂದಿದ್ದೇನೆ, ಡಾಕ್ಟರನ ಹಾಗೆ. ರೋಗಿಯನ್ನು ಸೌಖ್ಯ ಮಾಡುವುದು ನನ್ನ ಕರ್ತವ್ಯ. ರೋಗವನ್ನು ಯಾರು ತಂದರು ಎಂದು ನೋಡುವುದು ಬೇಡ. ಎಲ್ಲರೂ ತಂದಿರಬಹುದು. ಆದರೆ ರೋಗಿಯು ಗುಣಮುಖನಾಗುವಂತೆ ಡಾಕ್ಟರರೊಡನೆ ಮನೆಯವರೆಲ್ಲರೂ ಸಹಕರಿಸಬೇಕು. ಬಂಗಾಳದ ಅವಸ್ಥೆ ವಿಚಾರಿಸಿರಿ. ಅದಕ್ಕೆ ಯಾರನ್ನು ದೂರಿ ಏನು ಪ್ರಯೋಜನ? ಇಲ್ಲಿನ ಅವಸ್ಥೆಯೂ ಹಾಗೆ ಆಗಬೇಕೆ? ನಮ್ಮ ನಮ್ಮೊಳಗೆ ಪರಸ್ಪರ ಅವಿಶ್ವಾಸಬೇಡ. ಅನ್ಯೋನ್ಯ ವಿಶ್ವಾಸವಿಟ್ಟು ಸಹಕರಿಸಿ ಕೆಲಸಮಾಡುವ.

('ಸಹಕಾರವೆಂದರೆ ನಮ್ಮನ್ನು ಹೊರ ಹಾಕಿಯೆ?' ಒಬ್ಬರು ಪ್ರಶ್ನಿಸಿದರು.)

'ಯಾರೂ ಯಾರನ್ನೂ ಹೊರ ಹಾಕುವ ವಿಚಾರವಿಲ್ಲ. ಪರಿಸ್ಥಿತಿಯನ್ನು ಗಂಭೀರವಾಗಿ ಆಲೋಚನೆ ಮಾಡಿ. ನೀವು ವ್ಯಾಪಾರಿಗಳು, ಸಾರ್ವಜನಿಕರ ಹಿತಕ್ಕಾಗಿ ಅಕ್ಕಿ ವ್ಯಾಪಾರವನ್ನು ಈಗ ಬಿಡಬೇಕೆಂದು ಹೇಳಿದರೆ ನೀವು ಹೊರ ಹೋಗಲೇ ಬೇಕು. ವ್ಯಾಪಾರ ಬಿಟ್ಟು ಸಹಕರಿಸಬೇಕು. ನೀವು ಹಾಗೆ ಮಾಡುವಿರೆಂದೂ ನನಗೆ ಭರವಸೆಯಿದೆ. ಸಹಕಾರಿ ಸಂಘಗಳಿಗೆ ಅಕ್ಕಿ ವಿತರಣೆ ಕಾರ್ಯಭಾರ ಕೊಟ್ಟರೂ ರಖಂ ವ್ಯಾಪಾರಿಗಳಿಗೆ ಅಲ್ಲಿ ಬೇಕಾದಷ್ಟು ಕೆಲಸವಿದೆಯೆಂದು ನಿಮ್ಮ ಕಲೆಕ್ಟರರು ಹೇಳುತ್ತಾರೆ. ಸಹಕಾರೀ ಸಂಘವು ಹೊಸ ಸಂಸ್ಥೆ. ಅವರಿಗೆ ಸಾಕಷ್ಟು ಅನುಭವವಿಲ್ಲ. ನೀವು ಒಳ್ಳೆಯ

'ಶ್ರೀಮಂತರು ತಿಂದು ಬಡವರು ಸಾಯಬಾರದು.'

'ರೇಶನಿಂಗ್‌ಗೆ ಸರ್ವರ ಸಹಕಾರಬೇಕು.'

ಅನುಭವಶಾಲಿಗಳು. ನೀವು ಅಕ್ಕಿ ವ್ಯಾಪಾರವನ್ನು ಸ್ವತಂತ್ರಮಾಡಿದರೆ ಆಹಾರವನ್ನು ಕಳ್ಳ ಸಂತೆಗೆ ಒಯ್ಯುವಿರೋ ಎಂಬ ಭೀತಿ ಇದೆ. ನೀವು ಹಾಗೆ ಮಾಡದಿದ್ದರೆ ನಿಮಗೂ ಬೇಕಾದಷ್ಟು ಕೆಲಸವಿದೆ. ಒಂದು ವೇಳೆ ಸಹಕಾರೀ ಸಂಘಗಳು ಈ ಕಾರ್ಯದಲ್ಲಿ ಅನುಭವವಿಲ್ಲದೆ ಅಪಜಯ ಹೊಂದಿದರೆ ಆಗ ನೀವು ಮುಂದೆ ಬರಬೇಕು. ಆಗ ಹೇಳಬೇಡಿ 'ನಾವು ಮೊದಲೇ ಹೇಳಲಿಲ್ಲವೆ? ಸಹಕಾರೀ ಸಂಘಗಳಿಗೆ ಆಗಲಾರದು ಎಂದು, ಈಗ ಹಾಗೆ ಆಗಬೇಕು' ಎಂಬ ಧೋರಣೆ ವಹಿಸಕೂಡದು. ನಿಮ್ಮ ಜನರು ಸಾಯುವಾಗ ನೀವದನ್ನು ನೋಡಿ ಸುಮ್ಮಗಿರಲು ಸಾಧ್ಯವಿಲ್ಲ. ನಿಮ್ಮಲ್ಲಿಯೂ ಒಂದು ಐದಾರು ಜನ ರಖಂ ವ್ಯಾಪಾರಿಗಳು ಸರಕಾರಕ್ಕೆ ಈ ವಿಷಯ ಸಹಕಾರ ಕೊಡುವ ಭರವಸೆ ಕೊಟ್ಟು ಮುಂದೆ ಬರಬಹುದು. ಅವರಿಗೆ ವ್ಯಾಪಾರ ಮಾಡಲು ಸರಕಾರ ಅಸ್ಪದ ಮಾಡಬಹುದು. ರೇಶನಿಂಗ್ ಬಂದಾಗಲಾದರೂ ಅದನ್ನು ಸರಿಯಾಗಿ ಹಂಚುವ ಕೆಲಸವೆಲ್ಲಾ ಸಹಕಾರೀ ಸಂಘಗಳಿಂದಲೇ ಪೂರೈಸಲಾರದು. ಆದಕ್ಕೆ ನಿಮ್ಮ ಸಹಕಾರ ತುಂಬಾ ಬೇಕು. ಮದ್ರಾಸಿನ ಅನುಭವವೆಂದರೆ ಚಿಲ್ಲರೆ ವ್ಯಾಪಾರವಾದರೂ ಏನೂ ಲಾಭದಾಯಕ ವ್ಯಾಪಾರವಲ್ಲವೆಂದು ವ್ಯಾಪಾರಿಗಳ ಮತವಿಲ್ಲ. ಈ ಹಂಚುವ ಕೆಲಸ ನಿಮ್ಮಿಂದ ಆಗಬೇಕಾಗಿದೆ. ಜನರು ನಿಮ್ಮವರು. ನಾನು ಬರಬಹುದು, ಸೂಚನೆ ಮಾಡಬಹುದು, ಹೋಗಬಹುದು. 'ಆದರೆ ನೀವು ಜನರ ಮೇಲೆ ಪ್ರೀತಿಯಿಟ್ಟು ಸಹಕರಿಸಿ ಅವರನ್ನು ಬದುಕಿಸಬೇಕು.

'ನಾನಿಲ್ಲಿಗೆ ಬಂದಾಗ ರೇಶನಿಂಗ್ ಜಾರಿಮಾಡುವ ಅಭಿಪ್ರಾಯಕ್ಕೆ ನಿಮ್ಮೆಲ್ಲರದು ಒಪ್ಪಿಗೆಯುಂಟೋ ಇಲ್ಲವೋ ಎಂಬ ಸಂದೇಹಗೊಂಡು ಬಂದಿದ್ದೆ. ಆದರೆ ರೇಶನಿಂಗ್ ಜಾರಿಮಾಡುವ ವಿಷಯ ಎಲ್ಲರದೂ ಏಕಾಭಿಪ್ರಾಯವಿರುವುದರಿಂದ ನನ್ನ ಕರ್ತವ್ಯ ಆಗಿದೆ. ಇದು ಶುಭ ಸೂಚನೆ. ಮಂಗಳೂರು ನಗರ ಮತ್ತು ಕಾಸರಗೋಡು ನಗರ ಹಾಗೂ ಅವರ ಕೆಲವು ಹಳ್ಳಿ ಪಟ್ಟಣಗಳಲ್ಲಿಯೂ ರೇಶನಿಂಗ್ ಜಾರಿಗೆ ತರಬೇಕು. ಈ ವಿಷಯ ನೀವು ನಮ್ಮ ಸಲಹೆ ಸೂಚನೆಗಳನ್ನು ಕೊಡಬೇಕು. ಎಲ್ಲರಿಗೂ ರೇಶನಿಂಗ್ ಕಾಲದಲ್ಲಿ ಒಂದೇ ರೀತಿಯ ಅಕ್ಕಿ ಸಿಗುವುದೆಂಬುದಕ್ಕೆ ಯಾರೂ ಆಕ್ಷೇಪ ಮಾಡಬಾರದು. ಒಬ್ಬ ಗಾಡಿ ಹೊಡೆವವನು ಉಣ್ಣುವ ಅಕ್ಕಿಯನ್ನೇ ನಾನೂ ಉಣ್ಣುತ್ತೇನೆ. ಒಳ್ಳೆ ಅಕ್ಕಿ ಸಿಕ್ಕಿದಾಗ ಎಲ್ಲರೂ ಅದನ್ನು ಹಂಚಿ ತಿನ್ನೋಣ. ದಿನದಿಂದ ದಿನಕ್ಕೆ ನಾನೊಬ್ಬ ಸೋಶಿಯಲಿಸ್ಟ್—ಏಕೆ, ಕಮ್ಯುನಿಸ್ಟನೇ ಆಗುತ್ತಿದ್ದೇನೆ'

ಆ ಮೇಲೆ ಶ್ರೀ. ಗ್ರಬ್ಬರೊಡನೆ ಕೆಲವು ಪ್ರಶ್ನೋತ್ತರಗಳಾದುವು. ಯಾವಾಗ ರೇಶನಿಂಗ್ ಬರುತ್ತದೆಂದು ಕೇಳಿದಕ್ಕೆ ಆದಷ್ಟು ಬೇಗನೆ, ಬಹುಶಃ ಇನ್ನೊಂದು ತಿಂಗಳಲ್ಲಿಯೇ ಎಂದರು. ಆ ಮೇಲೆ ಮಂಗಳೂರು ನಗರವಲ್ಲದೆ ಉಳ್ಳಾಲ ಪದವು ಮೊದಲಾದ ಕಡೆಗಳಲ್ಲಿಯೂ ರೇಶನಿಂಗ್ ಜಾರಿಗೆ ತರಬಹುದೆಂಬ ಕುರಿತು ಚೇಂಬರ್ ಸದಸ್ಯರು ಸೂಚನೆಯಿತ್ತರು. ಸಂಜೆಯ ಸಭೆಯಲ್ಲಿ ರೇಶನಿಂಗ್ ವಿಚಾರ ವಿವರಿಸುವುದಾಗಿ ಹೇಳಿ ಅಲ್ಲಿಗೆ ವ್ಯಾಪಾರಿಗಳನ್ನೂ ಆಮಂತ್ರಿಸಿದರು.

ಇದೇ ದಿನ ಸಂಜೆ ೫ ಗಂಟೆಗೆ ಕಲೆಕ್ಟರರ ಆಫೀಸಿನ ಬೆಂಚ್ ಕೋರ್ಟು ಹಾಲಿನಲ್ಲಿ ನಗರದ ಕೆಲವು ಅನಧಿಕಾರೀ ಮುಖಂಡರನ್ನು ಕರೆದು ಅಲ್ಲಿ ಶ್ರೀ. ಗಬ್ಬರು ಬೇಗನೇ ಜಾರಿಗೆ ಬರಲಿರುವ ರೇಶನಿಂಗ್ ವಿಚಾರ ಹೀಗೆಂದು ವಿವರಿಸಿದರು.

'ನಾನಿಲ್ಲಿಗೆ ಬಂದುದ್ದು ಇಲ್ಲಿ ರೇಶನಿಂಗ್ ಜಾರಿಮಾಡುವ ಕುರಿತು ಅಭಿಪ್ರಾಯ ತಿಳಿಕೊಳ್ಳಲು. ನೀವೆಲ್ಲರೂ ಅದಕ್ಕೆ ಒಪ್ಪುತ್ತೀರೆಂದು ತಿಳಿದು ನನ್ನ ಕೆಲಸ ಪೂರೈಸಿದ ಹಾಗಿದೆ. ಅದದೂ ಬಂದವನು ರೇಶನಿಂಗ್ ಎಂದರೆ ಏನು, ಆದರಲ್ಲಿ ನಿಮ್ಮೆಲ್ಲರ ಸಹಕಾರ ಹೇಗೆ ಸಿಗಬೇಕಾಗಿದೆಯೆಂಬ ವಿಷಯ ವಿವರಿಸುತ್ತೇನೆ. ಯಾವುದಾದರೂ ಒಂದು ಸ್ಥಳದಲ್ಲಿ ರೇಶನಿಂಗ್ ಜಾರಿ ತರಬೇಕಾದರೆ ಪ್ರಾರಂಭದ ಕೆಲಸ ಜನ ಗಣನೆ ತೆಗೆಯುವುದು. ಇದು ಅತ್ಯಂತ ಪ್ರಾಮುಖ್ಯವಾದ ಕೆಲಸ. ಇದಕ್ಕೆ ಪ್ರತ್ಯೇಕ ಕೆಲಸಗಾರರು ಬೇಕಾಗಲಿಕ್ಕಿಲ್ಲ. ಎ. ಆರ್. ಪಿ. ಮತ್ತು ಮುನ್ಸಿಪಲ್ ನೌಕರರು ಈ ಕಾರ್ಯವನ್ನು ಮಾಡಬಹುದು. ಒಂದು ಮನೆಯಲ್ಲಿ ಎಷ್ಟು ಜನರಿದ್ದಾರೆ ಅವರಿಗೆ ಯಾವ ತರದ ಅಕ್ಕಿಬೇಕು, (ಬೆಳ್ತಿಗೆಯೋ ಕುಚ್ಚಿಗೆಯೋ?) ವಾರಕ್ಕೊಮ್ಮೆಯೋ, ದಿನಕ್ಕೊಮ್ಮೆಯೋ? ಅನುಕೂಲ ಇದ್ದವರಿಗೆ ವಾರಕ್ಕೊಮ್ಮೆಯಾದರೂ ಚಿಂತೆಯಿಲ್ಲ. ಒಮ್ಮೆಗೆ ಅಷ್ಟನ್ನು ಕೊಂಡುಕೊಳ್ಳುವ ಶಕ್ತಿ ಇರುತ್ತದೆ. ಆದರೆ ಬಡ ಕೂಲಿಗಾರರಿಗೆ ದಿನನಿತ್ಯ ಕೊಡುವ ಏರ್ಪಾಡು ಮಾಡಬೇಕಾಗುತ್ತದೆ. ಹೀಗೆ ಮನೆ ಮನೆ ಲೆಕ್ಕ ತೆಗೆಯಬೇಕು; ಹೋಟೇಲುಗಳ ಲೆಕ್ಕ ತೆಗೆಯಬೇಕು. ಸಂಸ್ಥೆಗಳ ಲೆಕ್ಕ ತೆಗಿಯಬೇಕು. ಹೀಗೆ ಲೆಕ್ಕ ಕೊಡುವಾಗ ಸರಿಯಾದ ಲೆಕ್ಕವನ್ನೇ ಜನರು ಕೊಡಬೇಕು. ಹಾಗೆ ಮಾಡಿದರೆ ಮಾತ್ರ ರೇಶನಿಂಗ್ ಜಯಪ್ರದವಾಗುವುದು. ಯಾರು ಸರಿಯಾದ ಲೆಕ್ಕ ಕೊಡುವುದಿಲ್ಲವೋ ಅವರು ಅನ್ಯಾಯಗಾರರಾಗುತ್ತಾರೆ. ಅವರ ಮೇಲೆ ಡಿಫೆನ್ಸ್ ರೂಲು ಜಾರಿಮಾಡಲಾಗುತ್ತದೆ ಹೀಗೆ ಲೆಕ್ಕ ಸಿಕ್ಕಿದ ಮೇಲೆ ಅವರಿಗೆ ಚೀಟಿ ಕೊಡಲಾಗುವುದು.

'ಚೀಟಿ ಕೊಡುವ ಸಮಯದಲ್ಲಿ ಮನೆಯಲ್ಲಿ ಸಂಗ್ರಹವಿರುವ ಅಕ್ಕಿಯ ಲೆಕ್ಕವನ್ನೂ ಕೊಡಬೇಕು. ಯಾರೂ ಮನೆಯಲ್ಲಿ ಸಂಗ್ರಹ ಇಟ್ಟುಕೊಂಡು ಚೀಟಿ ಉಪಯೋಗಿಸ ಬಾರದು. ಮನೆಗೆ ನೆಂಟರಿಷ್ಟರು ಬಂದರೆ ಅವರಿಗೂ ಚೀಟಿ ಕೊಡಲಾಗುತ್ತದೆ. ಪ್ರಾಯಸ್ಥರಿಗೆ ದಿನಕ್ಕೆ ಅರ್ಧ ಸೇರು ಅಕ್ಕಿ, ಮೂರು ವರ್ಷಕ್ಕಿಂತ ಮೇಲೆ ಮತ್ತು ೧೨ ವರ್ಷಕ್ಕಿಂತ ಕೆಳಗಿನ ಮಕ್ಕಳಿಗೆ ೧ ಪಾವು ಅಕ್ಕಿ ಕೊಡುತ್ತದೆ.

ಶ್ರೀ. ಯು. ಕಣ್ಣಪ್ಪ: 'ದಿನಕ್ಕೆ ಅರ್ಧಸೇರು ಅಕ್ಕಿ ಕಡಿಮೆ ಆಯಿತು.'

ಶ್ರೀ. ಗ್ರಬ್ಸ್: 'ನೀವು ದಿನಕ್ಕೆ ಅರ್ಧಸೇರು ಅಕ್ಕಿ ಕಡಿಮೆ ಆಯಿತು ಎನ್ನುತ್ತೀರೋ? ನೀವು ಹೆಚ್ಚು ತಿಂದು ಬಡವರನ್ನು ಸಾಯ ಬಿಡುತ್ತೀರೊ? ಎಲ್ಲರೂ ಹಂಚಿ ತಿನ್ನಬೇಕು. ಈಗ ಅಂಥಾ ಕಾಲ ಬಂದಿದೆ. ಶ್ರೀಮಂತರು ಸ್ವಲ್ಪ ಸ್ವಾರ್ಥ ತ್ಯಾಗ ಮಾಡಿ ಬಡವರನ್ನು ಬದುಕಿಸಬೇಕು. ಉಪವಾಸದಿಂದ ಸಾಯುವುದೇನೆಂದು ನಿಮಗಿನ್ನೂ ತಿಳಿದಂತೆ ತೋರುವುದಿಲ್ಲ. ಬಂಗಾಳದ ಹೃದಯ ದ್ರಾವಕ ಚಿತ್ರಗಳನ್ನು ಒಮ್ಮೆ ನಿಮ್ಮ ಕಣ್ಣಮುಂದೆ ತನ್ನಿರಿ. ಬಲಯುತ ಸುಂದರ ಶರೀರಗಳು, ಯಾರು ಮಾಡಿದ ಅಪರಾಧಕ್ಕೋ ಹೊಟ್ಟೆಯ ಹಸಿವನ್ನು ತಣಿಸಲಾರದೆ, ದಿನದಿನವೂ ಬಳಲಿ ಬೆಂಡಾಗಿ ಕ್ಷೀಣಿಸಿಕ್ಷೀಣಿಸಿ ಸಾಯುವುದು, ಅದರಂಥಾ ಸಂಕಷ್ಟ ಇನ್ನೇನಿದೆ? ಬಂಗಾಳದಲ್ಲಿಯೂ ಶ್ರೀಮಂತರು ಬದುಕಿದ್ದಾರೆ. ಬಂಗಾಳ, ಸರಕಾರದ ಲೆಕ್ಕದಲ್ಲಿಯೇ ಅಧಿಕ ಆಹಾರ ಉತ್ಪತ್ತಿ ಮಾಡುವ ಪ್ರಾಂತ್ಯ, ಅಲ್ಲಿನ ಖರ್ಚು ಕಳೆದು ಉಳಿತಾಯವುಂಟು ಅಲ್ಲಿ. ನಿಮ್ಮ ಜಿಲ್ಲೆ ಬೇಕಾದಷ್ಟು ಆಹಾರ ಮಾತ್ರ ಬೆಳೆಸುವುದೆಂದು ಸರಕಾರದ ಲೆಕ್ಕ. ಅಲ್ಲಿನ ಅವಸ್ಥೆ ಹಾಗಾದಾಗ ನಿಮ್ಮಲ್ಲಿನ ಅವಸ್ಥೆಯು ಹೇಗಾದೀತೆಂದು ಒಮ್ಮೆ ಊಹಿಸಿಕೊಳ್ಳಿ. ನಾವು ಬದುಕುವುದರೊಡನೆ ಎಲ್ಲರೂ ಬದುಕಬೇಕೆಂದು ವಿಚಾರಿಸಿ. ದಿನಕ್ಕೆ ½ ಸೇರು ಸಾಕಾಗುವುದಿಲ್ಲವೆ? ನನ್ನ ಮದ್ರಾಸಿನ ಅನುಭವವೆಂದರೆ ಧಾರಾಳ ಆಗುತ್ತದೆ. ನನಗೆ ಎಷ್ಟು ದೊರಕುವುದೋ ಅದನ್ನು

(೭ನೇ ಪುಟಕ್ಕೆ ಮುಂದುವರಿದಿದೆ)

"ರೇಶನಿಂಗ್ ಜಾರಿಗೆ ಬಂದರೆ ವ್ಯಾಪಾರಿಗಳಿಗೆ ಅಕ್ಕಿಯ ಸ್ವತಂತ್ರ ವ್ಯಾಪಾರ ಇಲ್ಲದಿದ್ದರೂ ಬಯಿದು ವಿಷಾದದ್ದು, ಚೇಂಬರಿನ ಮೆಂಬರರು ಹಲವಾರು ಸಲ ಸರಕಾರದೊಡನೆ ಮಂಗಳೂರು ಮಾತ್ರವಲ್ಲ ಕಾಸರಗೋಡು ತಾಲೂಕಿನಲ್ಲಿಯೂ ಕೂಡಾ ರೇಶನಿಂಗ್ ಜಾರಿಗೆ ತರಬೇಕೆಂದು ವಿನಂತಿಸಿಕೊಂಡಿದ್ದಾರೆ. ಹೀಗೆ ನಿರ್ಣಯಿಸುವಾಗ ನಾವು ತುಂಬಾ ಆಲೋಚನೆ ಮಾಡಿದ್ದೇವೆ. ವರ್ಗದಾರರು ಗಿರಾಕಿಗಳು, ಡಿ. ಬೋ. ಮೆಂಬರರು, ಮಂಗಳೂರು ಮುನ್ಸಿಪಲ್ ಕೌನ್ಸಿಲರು ಹೀಗೆ ಎಲ್ಲಾ ಸಾರ್ವಜನಿಕರ ಅಭಿಪ್ರಾಯಗಳನ್ನೂ ನಾವು ವಿಚಾರವಿಟ್ಟು ಗಮನಿಸಿದ್ದೇವೆ" ಹೀಗೆಂದು ತಾ. ೧೪ರಂದು ಪ್ರಾಂತಿಕ ರೇಶನಿಂಗ್ ಆಫೀಸರರಾದ ಶ್ರೀ. ಗ್ರಬ್ಸ್‌ರವರಿಗೆ ಕೆನರಾ ಚೇಂಬರ್ ಓಫ್ ಕಾಮರ್ಸಿನ ಪರವಾಗಿ ವಿನಂತಿ ಮಾಡುತ್ತಾ ಅದರ ಕಾರ್ಯದರ್ಶಿ ಶ್ರೀ. ಎಂ. ರಾಘವೇಂದ್ರ ಪೈಗಳು ಹೇಳಿದರು. ಶ್ರೀ. ಪೈಗಳು ತಮ್ಮ ಭಾಷಣದಲ್ಲಿ ಜಿಲ್ಲೆಯ ಆಹಾರ ವ್ಯವಸ್ಥೆಯ ವಿಚಾರ ಮತ್ತೂ ಹೀಗೆಂದು ಹೇಳಿದರು.

ನಾವು ಕೇಳಿದವರು

ಕಳೆದ ವರ್ಷ ಜಿಲ್ಲೆಯಿಂದ ಅಕ್ಕಿ ಹೊರ ಹೋಗದಂತೆ ಕಲೆಕ್ಟರರನ್ನು ಮೊದಲನೆಯದಾಗಿ ವಿನಂತಿಸಿಕೊಂಡವರು ಚೇಂಬರಿನವರು. ಮಲಬಾರಿನ ವ್ಯಾಪಾರದ ಬಗ್ಗೆ ಅಕ್ಕಿ ಪಡಕೊಂಡ ಕೆಲವು ವ್ಯಾಪಾರಿಗಳಿಗೆ ಇದು ತೊಂದರೆಯಾಗಿ ಅವರು ದೂರಿಟ್ಟರೂ ಕಡೆಗೆ ಜಿಲ್ಲೆಯ ಜನತೆಯ ಹಿತದೃಷ್ಟಿಯಿಂದ ಅವರೂ ಸಮಾಧಾನ ಮಾಡಿಕೊಂಡರು. ಆ ಅಕ್ಕಿ ಪ್ರತಿಯೊಂದು ಮುಡಿಯೂ ದಕ್ಷಿಣ ಕನ್ನಡದಲ್ಲಿ ನಷ್ಟದಿಂದಲೇ ಮಾರಲ್ಪಟ್ಟಿತು. ಮುಂದಿನ ಫೆಬ್ರವರಿಯಲ್ಲಿ ಹೊರ ಜಿಲ್ಲೆಗೆ ಹೋಗಬಾರದೆಂಬ ಆಜ್ಞೆ ಮುಂದುವರಿಸಬೇಕೆಂದು ವರ್ಗದಾರರು, ನಾವು, ಪ್ರಮುಖ ಕೆಲ ನಾಗರಿಕರು ಸಭೆ ಸೇರಿ ಆಲೋಚನೆ ಮಾಡಿದಾಗ ವರ್ಗದಾರರು ಅದಕ್ಕೆ ಆಕ್ಷೇಪಿಸಿದರೂ, ಚೇಂಬರ್ ಸದಸ್ಯರ ಹಿತಸೂಚನೆಯಂತೆ ಕಲೆಕ್ಟರರು ನಿರ್ಬಂಧವನ್ನು ಮುಂದುವರಿಸಿದರು.

'ಚೇಂಬರಿನವರು ಪುನಃ ೧–೯–೪೩ರಲ್ಲಿ ಕಮಿಶನರ್ ಓಫ್ ಸಿವಿಲ್ ಸಪ್ಲೈಸರಲ್ಲಿ ವಿನಂತಿಸಿಕೊಂಡು ಮುಂದಿನ ಬೆಳೆಯಲ್ಲಿನ ಅಧಿಕ ಅಕ್ಕಿಯನ್ನು ಒಬ್ಬ ಗ್ರೈನ್ ಪರ್ಚೇಸಿಂಗ್ ಆಫೀಸರರನ್ನು ನೇಮಿಸಿ ಸಂಗ್ರಹಿಸುವಂತೆಯೂ ಹಾಗೆ ಪಡೆದ ಅಕ್ಕಿಯನ್ನು ಮಂಗಳೂರು ಮತ್ತು ಕಾಸರಗೋಡುಗಳಲ್ಲಿ ರೇಶನಿಂಗ್ ಜಾರಿಗೆ ತಂದು ಸಹಕಾರಿ ಸಂಘ ಹಾಗೂ ಲೈಸನ್ಸ್ ಪಡೆದ ವ್ಯಾಪಾರಿಗಳ ಮುಖಾಂತರ ಹಂಚುವ ಏರ್ಪಾಡು ಮಾಡಬೇಕೆಂದೂ ಕೇಳಿಕೊಂಡಿದ್ದೆವು. ಇದೇ ಸಮಯದಲ್ಲಿ ಕಲೆಕ್ಟರರೂ ಕೂಡಾ ವರ್ಗದಾರರಿಂದ ಅಕ್ಕಿ ಭತ್ತ ಪಡಕೊಳ್ಳುವರೆ ಆಜ್ಞೆ ಹೊರಡಿಸಿದರು.

ವರ್ಗದಾರರ ಬೊಬ್ಬೆ

'ವರ್ಗದಾರರು ಈಗ ಚಳವಳವೆಬ್ಬಿಸಿದ್ದರು. ಅಕ್ಕಿ ಭತ್ತಗಳ ಕಳ್ಳ ವ್ಯಾಪಾರ ಮಾಡುತ್ತಾರೆಂದು ವ್ಯಾಪಾರಿಗಳ ಮೇಲೆ ಇಲ್ಲ ಸಲ್ಲದ ದೂರು ಹೊರಿಸಿದರು. ವರ್ಗದಾರರು ಸ್ವಾರ್ಥ ತ್ಯಾಗಮಾಡಿ ಅಕ್ಕಿ ಭತ್ತಗಳನ್ನು ಕಡಿಮೆ ಕ್ರಯದಲ್ಲಿ ಕೊಟ್ಟರುತ್ತಾ, ಅದನ್ನು ವ್ಯಾಪಾರಿಗಳ ಕೈಗೆ ಕೊಟ್ಟು ಅವರು ಕಳ್ಳ ಸಂತೆಮಾಡಿ ದುಡ್ಡು ಮಾಡುವ ಒಂದೇ ಇರಾದೆಯಲ್ಲಿರುವರೆಂಬೀ ರೀತಿಯಲ್ಲಿ ಹೊಣೆಗಾರ ಜನರೇ ಹೇಳತೊಡಗಿದರು. ಕಳೆದ ವರ್ಷ ಸಿಗದಿದ್ದರೂ ಸುಮಾರು ಅಧಿಕಾರಿಗಳು ಕೇಳಬೇಕಾದರೆ ಸಂಗ್ರಹಿಸುವವನೂ, ಲಂಚಕೊಡುವವನೂ ಇದಕ್ಕೆ ಹೊಣೆಗಾರನಾಗುವುದಿಲ್ಲವೆ? ಇಂಥಾ ಲಂಚಕೋರತನಕ್ಕೆ, ಹಾಗೆ ಆಗಿದ್ದರೆ—ವ್ಯಾಪಾರಿಗಳಾಗಲಿ, ಗಿರಾಕಿಗಳಾಗಲಿ ಕಾರಣರೊ?

'ಈಗ ವರ್ಗದಾರರು ಸರಕಾರಕ್ಕೆ ಕಾನೂನಾಗಿಯೇ ಅಕ್ಕಿ ಕೊಡುತ್ತೇವೆನ್ನುತ್ತಾರೆ; ಏಕೆಂದರೆ ಕಲೆಕ್ಟರರು ಭತ್ತವನ್ನು ಸ್ವಾಧೀನ ಪಡಿಸುವ ಆಜ್ಞೆ ಹೊರಡಿ

ಅಕ್ಕಿ ಬತ್ತದ ವಿಚಾರ

ಜಿಲ್ಲಾ ವ್ಯಾಪಾರಿಗಳ ವಿನಂತಿ

'ತಪ್ಪು ನಮ್ಮದಲ್ಲ — ವರ್ಗದಾರರದು'

'ರೇಶನಿಂಗ್ ಬರಲಿ—ಸಹಕರಿಸುವೆವು'

ರು.೩೦,೦೦೦ ಅಕ್ಕಿಮುಡಿ ಮಂಗಳೂರು ವ್ಯಾಪಾರಿಗಳಿಂದಲೂ, ಅಷ್ಟೇ ಅಕ್ಕಿ ಬಂಟ್ವಾಳ ವ್ಯಾಪಾರಿಗಳಿಂದಲೂ, ರಿಕ್ವಿಸಿಶನ್ ಮಾಡಲಾಗಿದೆಯೆಂದು ತಿಳಿದು ಬಂದಿದೆ. ಇಷ್ಟನ್ನು ವ್ಯಾಪಾರಿಗಳು ಕಂಟ್ರೋಲ್ ಕ್ರಯದಲ್ಲಿಯೇ ಮಾರಾಟ ಮಾಡಿದ್ದಾರೆ. ಆದರೆ ಈ ೬೦ ಸಾವಿರ ಮುಡಿ ಅಕ್ಕಿಯನ್ನೂ ವರ್ಗದಾರರು ಸ್ವಾರ್ಥ ತ್ಯಾಗಮಾಡಿ ಕಡಿಮೆ ಕ್ರಯಕ್ಕೆ ಕೊಟ್ಟಿರುವುದಿಲ್ಲ.

'ಕಳೆದ ಎಪ್ರಿಲ್‌ನಲ್ಲಿ ವರ್ಗದಾರರಿಂದ ಅಧಿಕಾರಿಗಳು ರಿಕ್ವಿಸಿಶನ್ ಮಾಡಿದರು. ವರ್ಗದಾರರಲ್ಲಿ ಕಡಿಮೆಯೆಂದರೆ ೨೫ ಲಕ್ಷ ಮುಡಿ ಅಕ್ಕಿ ಇರುವೀ ಕಾಲದಲ್ಲಿ ಅಧಿಕಾರಿಗಳು ಬಹುಪ್ರಯತ್ನ ಮಾಡಿದರೂ ವರ್ಗದಾರರಿಂದ ೪೦,೦೦೦ ಮುಡಿ ಅಕ್ಕಿಗಿಂತ ಹೆಚ್ಚು ರಿಕ್ವಿಸಿಶನ್ ಮಾಡಲಾಗಲಿಲ್ಲ. ವ್ಯಾಪಾರಿಗಳ ವಶವಿರುವ ಪ್ರತಿಯೊಂದು ಮುಡಿಯನ್ನೂ ಸರಕಾರ ರಿಕ್ವಿಸಿಶನ್ ಮಾಡಿರುವಾಗ, ವರ್ಗದಾರರಲ್ಲಿ ಅಷ್ಟು ಅಕ್ಕಿ ಇದ್ದರೂ ಅದನ್ನು ಸರಕಾರ ರಿಕ್ವಿಸಿಶನ್ ಮಾಡಲಿಲ್ಲವೇಕೆ? ತಮ್ಮ ಹೊಣೆಯನ್ನು ತಪ್ಪಿಸಿಕೊಳ್ಳುವ ಸಲುವಾಗಿ ವರ್ಗದಾರರು ಈಗ ಹೇಳುತ್ತಾರೆ, 'ಅಧಿಕಾರಿಗಳು ಲಂಚ ತೆಗೆದುಕೊಳ್ಳುತ್ತಾರೆ' ಎಂದು. ಲಂಚವನ್ನು ಸಿ ಅದರ ಹಣ ಒಕ್ಕಲಿನವನಿಗೆ ಹೋಗುತ್ತದೆಯೆಂದು ಹೆದರಿಕೆಯಿಂದ. ಕೃಷಿ ಕೆಲಸಕ್ಕೆ ಅಗತ್ಯವಿರುವ ಅಕ್ಕಿಭತ್ತವೆಂದು ವರ್ಗದಾರರು ತಮ್ಮಲ್ಲಿ ಕೆಲವಂಶ ಇಟ್ಟುಕೊಳ್ಳಲು ಬಯಸುತ್ತಾರೆ. ಆದರೆ ಕೃಷಿ ಮಾಡುವ ಅಕ್ಕಿ ಭತ್ತ ಒಕ್ಕಲುಗಳಲ್ಲಿರಬೇಕಲ್ಲದೆ ವರ್ಗದಾರರಲ್ಲಿರಕೂಡದು. ಕಲೆಕ್ಟರರೀಗ ರೂ. ೯–೮–೦ ಮತ್ತು ೧೦ಕ್ಕೆ ಮಾರಾಟ ಮಾಡಬೇಕೆಂದು ಹೇಳಿದ ಒಂದು ನಿರ್ಬಂಧ ಮಾಡಿದ್ದಾರೆ. ಇಲ್ಲದೆ ಕೊನೆಗೆ ಅಕ್ಕಿ ಭತ್ತವನ್ನು ಹೆಚ್ಚಿನ ಕ್ರಯಕ್ಕೆ ವ್ಯಾಪಾರಿಗೆ ಕೊಟ್ಟು, ಆತನನ್ನು ಮತ್ತೆ ಕಳ್ಳ ವ್ಯಾಪಾರ ಮಾಡುತ್ತಾನೆ, ಲಾಭ ತಿನ್ನುತ್ತಾನೆ ಎಂದು ದೂರುವ ಹಂಚಿಕೆ ಮಾಡಬಾರದು.

ನಮ್ಮನ್ನು ಹೊರಹಾಕುವುದೆ?

'ವ್ಯಾಪಾರಿಗಳನ್ನು ಹೊರಹಾಕಿ' ಎಂದು ಕಮಿಶನರೇ ತನ್ನಾಜ್ಞೆಯಲ್ಲಿ ಬರೆದು ಅದರಿಂದ ತುಂಬಾ ಪ್ರಚಾರ ಆಗಿದೆ. ಸಿವಿಲ್ ಸಪ್ಲೈಸ್ ಕಮಿಶನರೇ ಇಂಥಾ ಶಬ್ದವನ್ನುಪಯೋಗಿಸಿದ್ದನ್ನು ನೋಡಿ ನಮಗೆ ಬೇಸರವಾಗಿದೆ. ಆದರೂ ನಾವು ರಖಂ ವ್ಯಾಪಾರಿಗಳು ಯುದ್ಧದ ತನಕ ಸ್ವಲ್ಪ ಶಾಂತಿ ಪಡಕೊಳ್ಳಬಹುದೆನ್ನುವ. ನಾವೇ ೧–೯–೪೩ರಲ್ಲಿ ಮಾಡಿದ ವಿನಂತಿಯಲ್ಲಿ ಸರಕಾರ ಒಂದು ಪರ್ಚೇಸಿಂಗ್ ಆಫೀಸರರನ್ನು ನೇಮಿಸಿ ಅದಕ್ಕೆ ಸಹಕಾರೀ ಸಂಘ ಮತ್ತು ವ್ಯಾಪಾರಿಗಳ ಸಹಾಯ ಮಾಡುವಂತೆ ಹೇಳಿದ್ದೆವು. ಕಮಿಶನರು ಹಾಗೆ ಮಾಡುವ ಬದಲು ಸಹಕಾರೀ ಸಂಘಕ್ಕೆ ಅಕ್ಕಿ ಭತ್ತಗಳನ್ನು ಸಂಪೂರ್ಣ ಪಡಕೊಳ್ಳುವ ಅಧಿಕಾರ ಕೊಟ್ಟಿದ್ದಾರೆ. ಗಿರಾಕಿಗಳ ಹಿತವನ್ನು ಬಯಸಿ, ಇಂಥಾ ತೊಂದರೆಯ ಕೆಲಸದಲ್ಲಾದರೂ ಸಹಕಾರೀ ಸಂಘಗಳು ಯಶಸ್ವಿಯಾಗಲಿ ಎಂದು ನಾವು ಆಶಿಸುತ್ತೇವೆ. ಅದೇ ವಿನಂತಿಯಲ್ಲಿ ನಾವು ರೇಶನಿಂಗ ಜಾರಿಗೆ ತರುವಂತೆಯೂ ಕೇಳಿಕೊಂಡಿದ್ದೆವು. ಅದು ಬೇಗನೇ ಬರುತ್ತದೆಂದು ಕೇಳಿ ನಾವು ಸಂತೋಷಗೊಂಡಿರುವೆವು.

'ರೇಶನಿಂಗ್‌ನ ಮುಖ್ಯ ತತ್ವವೆಂದರೆ ಇದ್ದ ಆಹಾರವನ್ನು, ಸಾಮಾನ್ಯರಿಗೆ ಸಾಧ್ಯವಾಗುವ ಕ್ರಯದಲ್ಲಿ ಸರಿಯಾಗಿ ಹಂಚಿಕೊಡುವುದಾಗಿದೆ. ನಮ್ಮಲ್ಲಿ ಬೇಕಾದಷ್ಟು ಅಕ್ಕಿಯಿದ್ದು ಅದನ್ನು ಹಂಚುವ ವ್ಯವಸ್ಥೆಗಳು ಸರಿಯಾಗಿದ್ದರೂ ನಮ್ಮ ಒಂದು ಕಳವಳವೆಂದರೆ ಬೆಲೆಯದ್ದು. ಕ್ರಯ ನಿಯಂತ್ರಿಸಲು ಕಳೆದ ಮೂರು ವರ್ಷಗಳಿಂದ ನಾವು ಹಲವು ಪ್ರಯತ್ನ ಮಾಡಿದೆವು. ಕಳೆದ ವರ್ಷದಲ್ಲಿಯೇ ನಾವು ಹೊರ ಜಿಲ್ಲೆಗಾಗಿ ಪಡಕೊಂಡ ಅಕ್ಕಿಯನ್ನು ನಷ್ಟಹಾಕಿ ಇದೇ ಜಿಲ್ಲೆಯಲ್ಲಿ ಮಾರಾಟ ಮಾಡಿದ್ದೇವೆ.

ಕ್ರಯ ಏರಲು ಕಾರಣ

'ಕ್ರಯವನ್ನು ಸ್ಥಿಮಿತಕ್ಕೆ ತರುವ ಇನ್ನೊಂದು ಪ್ರಯತ್ನವನ್ನು ನಾವು ಕಳೆದ ಮೇಯಲ್ಲಿ ಮಾಡಿದೆವು. ನಾವು ನಮ್ಮಲ್ಲಿದ್ದ ಅಕ್ಕಿಯನ್ನು ರಿಕ್ವಿಸಿಶನ್ ಕ್ರಯದಲ್ಲಿ ಮಾರಿದೆವು. ಅಕ್ಕಿ ಹಳ್ಳಿಗಳಲ್ಲಿಯೇ ಇತ್ತು. ಪೇಟೆಯಲ್ಲಿ ಕಳವಳ ಉಂಟಾಗಿತ್ತು. ಆ ಸಮಯದಲ್ಲಿ ಒಬ್ಬ ದೊಡ್ಡ ವರ್ಗದಾರರು ತಮ್ಮಲ್ಲಿದ್ದ ಅಕ್ಕಿಯನ್ನು ಒಂದು ಯೂರೋಪಿಯನ್ ಫರ್ಮಿಗೆ ಅವರ ಎಸ್ಟೇಟ್ ಉಪಯೋಗಕ್ಕಾಗಿ ಮಾರಾಟಮಾಡಿದರು. ಗೊಂದಲ ಹೆಚ್ಚಾಯಿತು; ಕಾಸರಗೋಡಿನಿಂದ ಕೇಳಿಕೆಗಳು ಬಂದವು. ಕ್ರಯವು ಅಕ್ಕಿಮುಡಿಯೊಂದರ ರೂ. ೧೫ಕ್ಕೆ ಮೀರಿತು. ಕಲೆಕ್ಟರರ ಹೇಳಿಕೆಯಂತೆ ನಾವು ಚೇಂಬರಿನ ಪರವಾಗಿ ಮುಡಿಯೊಂದರ ರೂ. ೧೪ರ ಕ್ರಯಕ್ಕೆ ಒಪ್ಪಿದೆವು. ಕ್ರಯ ಆಗೊಮ್ಮೆ ಕಡಿಮೆಯಾಯಿತು. ಆದರೆ ಒಂದೇ ತಿಂಗಳ ಸ್ಟಾಕು ಇದ್ದದ್ದರಿಂದ ಪುನಃ ನಾವು ಕ್ರಯ ಸ್ವಲ್ಪ ಏರಿಸಬೇಕಾಯಿತು. ಅದರಿಂದಾದರೂ ವರ್ಗದಾರರು ಅಕ್ಕಿ ಕೊಟ್ಟಾರೆಂದು. ಇದಕ್ಕಾಗಿ ನಮ್ಮ ಮೇಲೆ 'ವ್ಯಾಪಾರಿಗಳ ಮತ್ತು ವರ್ಗದಾರರ ಸಂಯುಕ್ತ ಹಿತಾಕಾಂಕ್ಷೆ'ಯ ಆರೋಪ ಹೊರಿಸಲಾಗಿದೆ. ಇದು ಯಾವುದೇ ಒಂದು ಸಂಗಡದ ಹಿತಾಕಾಂಕ್ಷೆಯಲ್ಲ. ಇದು ಜೀವನಕ್ಕಾಗಿ ಹೋರಾಟ. ವ್ಯಾಪಾರಿ ಸತ್ತರೂ ಜನರು ಬದುಕಲೇಬೇಕು. ನಾವು ಈ ಯೋಚನೆಯಿಂದ ಈಗ ಮಾತ್ರವಲ್ಲ ಹತ್ತು ವಾರಕ್ಕಿಂತ ಹಿಂದೆಯೇ ಹೊರ ನಿಂತಿದ್ದೇವೆ.

೭ನೇ ಪುಟಕ್ಕೆ ಮುಂದುವರಿದಿದೆ.

THE CANARA BANKING CORPORATION Ltd

(Incorporated in British India with limited liability).

Estd:] Head office: UDIPI [1906.

(Branches & Agencies in all principal cities of India)

Authorised capital	Rs. 25,00,000.
Issued & Subscribed	Rs. 16,00,000.
Paid up Capital	Rs. 10,06,000.
Reserves	Rs. 3,85,000.

Advances are made against approved securities and bills purchased or collected at most favourable rates.

For further particulars please apply to the nearest Branch.

ಸಾಮ್ರಾಜ್ಯವಾದಿಗಳು ಸ್ವಾತಂತ್ರ್ಯ ದೇವಿಗೆ ಎಂಥಾ ಅಪಮಾನ ಮಾಡುತ್ತಿದ್ದಾರೆ! ಭಾರತೀಯರಿಗಂತೂ ಈ ವಿಷಯವು ಹಲವುಕಾಲದಿಂದ ಖಚಿತವಾಗಿದೆ. ಸದ್ಯ ಲೆಬನಾನ್ ಘಟನೆಯಿಂದ ಪಾಶ್ಚಾತ್ಯ ಜನತೆಗೂ ಈ ಮಾತಿನ ಸತ್ಯ ತಿಳಿದು ಬಂದಿರುವುದು 'ನಾವು ಸ್ವಾತಂತ್ರ್ಯಕ್ಕಾಗಿ ಹೋರಾಡುವೆವು, ನಮ್ಮೊಡನೆ ಸೇರಿ ಯುದ್ಧಮಾಡಿ, ನಾವು ಸ್ವಾತಂತ್ರ್ಯ ಪ್ರಜಾಪ್ರಭುತ್ವ ರಕ್ಷಕರು! ಎಂದು ಕಂಠ ಒಡೆಯುವಂತೆ ಕೂಗುವ ಈ ಸಾಮ್ರಾಜ್ಯಶಾಹೀ ರಾಷ್ಟ್ರಗಳಿಗೆ ಒಂದಿಷ್ಟು ನಾಚಿಕೆ ಇಲ್ಲವಲ್ಲಾ! ಸಾಮ್ರಾಜ್ಯ ವಿಸರ್ಜನೆಗೆ ನಾನು ಮುಖ್ಯ ಮಂತ್ರಿಯಾಗಿಲ್ಲ' ಎಂದು ಪದೇ ಪದೇ ಹೇಳುವ ಈ ಸಾಮ್ರಾಜ್ಯವಾದಿಗಳು ಜಗತ್ತಿನ ಸ್ವಾತಂತ್ರ್ಯ ಪ್ರಜಾಪ್ರಭುತ್ವದ ಮಾತನ್ನು ಯಾಕೆ ಎತ್ತಬೇಕು? ಅಥವಾ ಹಾಗೆಂದು ಕೂಗುತ್ತಿರುವ ಮಾತ್ರದಿಂದ ಅವರ ಮಾತಿನಲ್ಲಿ ತಿರುಳುಂಟೆಂದು, ಅವರ ಕಾರ್ಯವಂತೂ, ವಿಪರೀತವಾಗಿದ್ದರೆ—ಯಾರು ನಂಬಬೇಕು? ಬ್ರಿಟಿಷರ ಸ್ವಾತಂತ್ರ್ಯ ಪ್ರೇಮ ಭಾರತದ ವಿಷಯದಲ್ಲಿ ಪರೀಕ್ಷೆಯಾದಂತೆ, ಲೆಬನಾನ್ ಘಟನೆಯಿಂದ ಫ್ರೆಂಚರ ಠೊಳ್ಳಿನ ಮುಸುಕು ಈಗ ಬಯಲಾಗಿದೆ

ಲೆಬನಾನ್ ಅರಬರಾಷ್ಟ್ರ ೧೯೨೦ರಲ್ಲಿ ಲಾರೆನ್ಸರಿಂದ ಇದು ಸ್ವಾತಂತ್ರ್ಯದ ಭರವಸೆ ಪಡೆಯಿತು ಭರವಸೆಯೇನೋ ಪಡೆಯಿತು, ಆದರೆ ಇದುವರೆಗೆ ಸ್ವಾತಂತ್ರ್ಯ ಸಿಗಲಿಲ್ಲ ಪೂರ್ಣ ಸ್ವಾತಂತ್ರ್ಯಗೊಡುವೆವೆಂದು ಪುನಃ ೧೯೩೬ರಲ್ಲಿ ಅವರಿಗೆ ಭರವಸೆ ಸಿಕ್ಕಿತು, ಅದನ್ನು ಕೇಳಿ ಲೆಬನಾನರು ಮತ್ತು ಕೆಲ ಕಾಲ ಸುಮ್ಮಗಿದ್ದರು ಇದೀಗ ೧೯೪೧ ಸಮೀಪಿಸಿದೆ ಇನ್ನೂ ಅವರಿಗೆ ಸ್ವಾತಂತ್ರ್ಯ ಸಿಗುವ ಹಾಗೆ ತೋರುವುದಿಲ್ಲ ಫ್ರೆಂಚ ಸಾಮ್ರಾಜ್ಯಶಾಹಿಗಳು ಅವರನ್ನು ಸ್ವತಂತ್ರರಾಗಲು ಬಿಡುವುದಿಲ್ಲ ತನ್ಮಧ್ಯೆ ೧೯೪೧ರಲ್ಲಿ ನಮ್ಮ ಜರ್ಮನರು ಗ್ರೀಸನ್ನು ಆಕ್ರಮಿಸಿದಾಗ, ಸುತ್ತುಮುತ್ತಲಿನ ದೇಶಗಳಲ್ಲಿ ಗೊಂದಲವೆದ್ದಾಗ ಜನರನ್ನು ಸಮಾಧಾನಗೊಳಿಸಲು ಫ್ರೆಂಚರು ಸಿರಿಯಾ ಮತ್ತು

ಸಮರ ಭೂಮಿಯ ಸಂಚಾರ—

ಸ್ವಾತಂತ್ರ್ಯ ಪ್ರೇಮಿಗಳ ಮರ್ದನ!

— ಲೆಬನಾನ್‌ನ ದುರಂತ ಚಿತ್ರ —

ಲೆಬನಾನ್‌ಗಳ ಸ್ವಾತಂತ್ರ್ಯ ಸಾರಿದರು. ಬ್ರಿಟಿಷರೂ ಇದಕ್ಕೆ ಒಪ್ಪಿಗೆಯಿತ್ತಿದ್ದರು. ಇಷ್ಟಾದರೂ ಇನ್ನೂ ಆ ಜನರಿಗೆ ಬಂಧನ ತಪ್ಪಲಿಲ್ಲ ಲೆಬನಾನ್ ಜನರು ಕಾದು ಕಾದು ನಂಬಿ ನಂಬಿ ನಿರಾಶರಾಗಿ ಕೊನೆಗೆ ತಮ್ಮ ಸ್ವಾತಂತ್ರ್ಯವನ್ನು ತಾವೇ ಗಳಿಸಿಕೊಳ್ಳಬೇಕೆಂದು ಈಗ ನಿರ್ಧರಿಸಿರುವರು ಹಾಗೆಂದೇ ಮೊನ್ನೆ ಏಳನೇ ತಾರೀಕಿಗೆ ಪೂರ್ಣ ಸ್ವಾತಂತ್ರ್ಯ ಶಾಸನವನ್ನು ಅವರು ತಮ್ಮ ಪಾರ್ಲಿಮೆಂಟಿನಲ್ಲಿ ಮಂಜೂರು ಮಾಡಿದರು

ಇದನ್ನು ನೋಡಿ ಫ್ರೆಂಚ್ ಸಾಮ್ರಾಜ್ಯಶಾಹಿ ಕೆರಳಿತು ಲೆಬನಾನಿನ ಬೇರೂಟ ಮೊದಲಾದ ನಗರದ ರಸ್ತೆರಸ್ತೆಗಳಲ್ಲಿ ನಿರಪರಾಧಿಗಳಾದ ಜನರನ್ನು ಗುಂಡಿಟ್ಟು ಕೊಂದು ನೆತ್ತರ ಹೊಳೆಹರಿಸಿದರು. ಒಂದು ಜನಾಂಗವನ್ನು ತಮ್ಮ ಅಂಕೆಯಲ್ಲಿಟ್ಟುಕೊಳ್ಳಬೇಕೆಂದು ಬಯಸುವವರ ಕೃತಿ ಎಲ್ಲಾ ಕಡೆಗಳಲ್ಲಿಯೂ ಇದೇ! ಭಾರತೀಯರಾದರೂ ಇಂಥಾ ಘಟನೆಗಳನ್ನು ಅಮೃತಸರ, ಜಲಿಯಾನವಾಲ ಬಾಗ್‌ಗಳನ್ನು ಕಂಡಿದ್ದಾರೆ ಪ್ರಪಂಚದ ಇತಿಹಾಸದಲ್ಲಿ ಸ್ವಾತಂತ್ರ್ಯ ಪ್ರೇಮಿ ಜನರ ಮೇಲೆ ಈ ತರದ ಮರ್ದನಗಳು, ಭೀಕರ ಮರಣಗಳು ಸಾಮ್ರಾಜ್ಯ ತೃಷ್ಣರಾದ ಜನರಿಂದ ನಡೆದದ್ದು ನಾವು ಕೇಳಿದ್ದೇವೆ ಅಂತೆಯೇ ಲೆಬನಾನಿನಲ್ಲಿ ಫ್ರೆಂಚರಿಂದಲೂ ಆಯಿತು ಇಲ್ಲಿನ ಅಧ್ಯಕ್ಷ, ಮಂತ್ರಿ ಹಾಗೂ ಶಾಸನ ಸಭಾ ಸದಸ್ಯರನ್ನು ಮತ್ತು ಇತರ ಮುಖಂಡರೂ ಬಂಧನಕ್ಕೊಳಗಾದರು. ಇದರಿಂದಾಗಿ ಜನರ ಅಶಾಂತಿ ಮತ್ತೂ ಹೆಚ್ಚಾಗಿದೆ ಭಾರತದಲ್ಲಿಯೂ ಇದೇ ತರದ ಘಟನೆ ನಡೆದುದನ್ನು ನಾವು ಭಾರತೀಯರು ಎಂದೂ ಮರೆಯಲಾರೆವು

ಲೆಬನಾನ್ ಘಟನೆಯಿಂದ ಜಗತ್ತಿನ ಸ್ವಾತಂತ್ರ್ಯ ಪ್ರೇಮಿ ಜನತೆಯ ಅಂತಃಕರಣವನ್ನು ಕಲಕಿದಂತಾಗಿದೆ. ನಾಹಾಸ ಪಾಶಾರು ಈಗಾಗಲೇ ತಮ್ಮ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಸ್ವಾತಂತ್ರ್ಯ ಪ್ರಿಯ ಜನಾಂಗವೆಲ್ಲಾ ಕೆರಳಿದೆ ಬ್ರಿಟನಿನ ಜನತೆಯೂ ತನ್ನ ಅತೃಪ್ತಿ ತಿಳಿಸಿದೆ ವಿಚಿ ಸರಕಾರದ ದಾಸ್ಯ ಬುದ್ಧಿಯನ್ನು ವಿರೋಧಿಸುವ, ಸ್ವಾತಂತ್ರ್ಯ ಪ್ರೇಮಿ ಜನತೆಯ ಪಕ್ಷವೆನಿಸಿದ ಫ್ರೆಂಚ್ ರಾಷ್ಟ್ರೀಯ ಸಮಿತಿಯು ಈಗ ಒಂದು ಸಣ್ಣ ಸ್ವಾತಂತ್ರ್ಯ ಪ್ರಿಯ ರಾಷ್ಟ್ರವನ್ನು ತನ್ನ ಪದಹತಿಯಲ್ಲಿ ಮರ್ದಿಸುತ್ತಿರುವುದು ನಿಜವಾಗಿಯೂ ಸಂಕಟಕರವಾದ ಸುದ್ದಿಯಾಗಿದೆ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತೇವೆನ್ನುವ ಮಿತ್ರಪಕ್ಷದ ಮುಖಂಡರು ನಾಚಿಕೆಯಿಂದ ತಲೆತಗ್ಗಿಸಬೇಕಾದ ಸಂಗತಿ ಇದಾಗಿದೆ

ಲೆಬನಾನ್ ಮಾಡಿದ ತಪ್ಪೇನು? ಸ್ವಾತಂತ್ರ್ಯ ಕೇಳಿದ್ದೊ? ಹಾಗಾದರೆ ವಿಚಿ ಸರಕಾರವನ್ನು ಖಂಡಿಸಿ ಫ್ರಾನ್ಸಿಗೆ ಸ್ವಾತಂತ್ರ್ಯ ಬೇಕೆಂದು ಹೇಳುವ ಫ್ರೆಂಚ್ ರಾಷ್ಟ್ರೀಯ ಸಮಿತಿಯಾದರೂ ಅದೇ ಅಪರಾಧವನ್ನು ಮಾಡಿಲ್ಲವೆ? ಅಥವಾ ೧೯೨೦ರಲ್ಲಿ ಲೆಬನಾನರಿಗೆ ಸ್ವಾತಂತ್ರ್ಯದ ಭರವಸೆಯಿತ್ತು ಇದುವರೆಗೂ ಅವರನ್ನು ದಾಸ್ಯಪಂಕದಲ್ಲಿಯೇ ಇಟ್ಟಿರುವುದು ಯಾವ ನ್ಯಾಯ? ಸ್ವಾತಂತ್ರ್ಯ ಕೊಡುತ್ತೇವೆ, ಕೊಡುತ್ತೇವೆ ಎಂದು ಹೇಳುತ್ತಾ ಇದ್ದು, ಕೊನೆವರೆಗೂ ಸ್ವಾತಂತ್ರ್ಯ ಕೊಡುವ ಕಾರ್ಯ ಮಾಡದಿರುವ ಈ ಹಂಚಿಕೆ ಯಾಕೆ? ಸ್ವಾತಂತ್ರ್ಯ ಬೇಕೆಂದರೆ ಮುಖಂಡರನ್ನು ಸೆರೆಮನೆಗಳಿಗೆ ತಳ್ಳಿದರೆ, ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಜನರನ್ನು ಅದರೊಡನೆ ಹಲವು ನಿರಪರಾಧಿಗಳನ್ನು ಗುಂಡಿಟ್ಟು ಕೊಲ್ಲುವುದಾದರೆ, ಮತ್ತೆ ಬಾಯಿಯಿಂದ ಆಗಾಗ 'ಸ್ವಾತಂತ್ರ್ಯ ಕೊಡುತ್ತೇವೆ' ಎಂದು ಹೇಳುವುದಾದರೂ ಏಕೆ? ಲೆಬನಾನರು ಇಂದು ಭಾರತೀಯರಂತೆ ಸ್ವಾತಂತ್ರ್ಯವನ್ನು ಬಯಸುತ್ತಾರೆ, ಅದರಿಂದಾಗಿ ಸಾಮ್ರಾಜ್ಯಶಾಹಿಗಳ ನಿರ್ದಯ ಮರ್ದನಕ್ಕೊಳಗಾಗಿದ್ದಾರೆ

WANTED

Applications are invited from young men with good educational qualifications for the posts of Inspectors, Agents, Clerks etc Applicants may be called for an interview by the Selection Committee in which case they will be required to proceed to this place at their own cost Selected Candidates will be required to undergo a training course in Banking and allied subjects for one year prescribed by the Academy of General Education, Manipal in collaboration with the Syndicate Minimum qualification S S L. C Standard Age limit 25 Preference will be given to candidates having relations in Commerce Application should reach the undersigned by 25-12-1943.

For full particulars apply to

Udipi (S. India)
15th Nov. 1943

The Office Superintendent,
Canara Industrial & Banking Syndicate Limited, UDIPI

ಹಿಂದೂ ದೇಶಕ್ಕಾಗಿ ಪ್ರತ್ಯೇಕ ತಯಾರಿಸಿದ್ದು.

ವೆಸ್ಟ್ ಎಂಡ್ ವಾಚುಗಳು ಸಮಯವನ್ನು ಸರಿಯಾಗಿ ತೋರಿಸುವವು—ಇಂಬುದು ಹೆಮ್ಮೆ ಪಡತಕ್ಕ ವಿಷಯ ಇದಕ್ಕೆ ಕಾರಣವೆಂದರೆ, ಇದರ ಕೆಲಸ ಮತ್ತು ಇದಕ್ಕೆ ಉಪಯೋಗಿಸುವ ಅತ್ಯುತ್ತಮ ಹೆಚ್ಚು ಕ್ರಯದ ಸಾಮಾನುಗಳು ಹಿಂದೂ ದೇಶಕ್ಕಾಗಿ ಪ್ರತ್ಯೇಕ ತಯಾರಿಸಿದ್ದರಿಂದ ಇವು ಯಾವುದೇ ಹವೆಯಲ್ಲಿಯೂ ಸರಿಯಾದ ಸಮಯವನ್ನೇ ಕೊಡುತ್ತದೆ

ಸರಿಯಾಗಿ ಪೋಲು ಬಾರದಿರುವುದರಿಂದ ನಾವು ಜಾಹೀರು ಮಾಡಿದ ಎಲ್ಲಾ ನಮೂನೆಗಳ ವಾಚುಗಳನ್ನು ಒದಗಿಸಿಕೊಡಲು ತೊಂದರೆಯಾಗಿದ್ದರೂ, ನೀವು ಕೊಟ್ಟ ಆರ್ಡರಿಗೆ ಸರಿಯಾಗಿ ಅತ್ಯುತ್ತಮ ಸಾಮಾನುಗಳನ್ನು ನಿಮಗೆ ಕಳಿಸಲು ನಾವು ಪ್ರಯತ್ನಿಸುವೆವು

ನ್ಯೂ ಕೆಲಬ್ರಿ 'ಇ'
ಎಕ್ಸ್ಟ್ರಾ ಫೈನ್ ವಾಚ್—15 ಜ್ಯುವೆಲ್ಸ್
ನಿಕೆಲ್ ರೂ 62 ಪೆಟ್ರಿ ಸ್ಟೀಲ್ ರೂ 71
18 ಕ್ಯಾರೆಟ್ ಗಟ್ಟಿ ಬಂಗಾರ ರೂ 197,
ರೇಡಿಯಮ್ ಅಂಕೆಗಳು ಮತ್ತು ಹ್ಯಾಂಡ್‌ಗಳು ಯಾವುದೇ ತರದ ಪ್ರತಿಯೊಂದಕ್ಕೂ ರೂ 3 ಪ್ರತ್ಯೇಕ.



ಗೇಟ್ ಲೂಪ್ ರೆಕ್ಟೇಂಗುಲರ್
ಡಿಲಕ್ಸ್ ಕ್ವಾಲಿಟಿ ವಾಚು—16 ಜ್ಯುವೆಲ್ಸ್
18 ಕ್ಯಾ ಗಟ್ಟಿ ಬ ರೂ 304

ವೆಸ್ಟ್ ಎಂಡ್ ವಾಚ್ ಕಂಪೆನಿ, ಬೊಂಬಯಿ ಮತ್ತು ಕಲ್ಕತ್ತ.

WEST END WATCH Co
BOMBAY CALCUTTA

ಸ್ವದೇಶಾಭಿಮಾನಿ

ತಾರೀಕು 19—11—1943

ರೇಶನಿಂಗ್ ಬರುತ್ತದೆ

ಮಂಗಳೂರು ಕಾಸರಗೋಡು ಪೇಟೆಗಳಲ್ಲಿ ಮತ್ತು ಕಾಸರಗೋಡು ತಾಲೂಕಿನ ಮಲಬಾರ್ ಗಡಿಯ ಕೆಲವು ಊರುಗಳಲ್ಲಿ ಹಾಗೂ ಮಂಗಳೂರಿನ ಸುತ್ತಲಿರುವ ಉಳ್ಳಾಲ ಪಡವು ಮೊದಲಾದ ಕಡೆಗಳಲ್ಲಿ ರೇಶನಿಂಗ್ ಬೇಗನೇ ಜಾರಿಗೆ ಬರುತ್ತದೆಯೆಂಬುದು ಪ್ರಾಂತಿಕ ರೆವೆನ್ಯೂ ಬೋರ್ಡಿನ ಆಜ್ಞೆಯಿಂದಲೂ, ರೇಶನಿಂಗ್ ಕಂಟ್ರೋಲರ್ ಶ್ರೀ ಗ್ರಬ್ಬರ ಮಾತುಕತೆಗಳಿಂದಲೂ ತಿಳಿದುಬಂದಿದೆ. ರೇಶನಿಂಗ್ ಯಾವಾಗ ಬರುತ್ತದೆ ಎಂಬ ಕುರಿತು ನಿಶ್ಚಿತ ದಿನ ತಿಳಿಯದಿದ್ದರೂ ಖಂಡಿತವಾಗಿ ಬೇಗನೇ ಬರಲಿದೆಯೆಂದಿಷ್ಟು ನಾವು ಅರ್ಥ ಮಾಡಿಕೊಳ್ಳಬಹುದು.

'ರೇಶನಿಂಗ್ ಜಾರಿಗೆ ಬರಲಿ' ಎಂಬುದು ದಕ್ಷಿಣ ಕನ್ನಡದಲ್ಲಿ ಪ್ರತಿಯೊಂದು ವಿಭಾಗದವರ ಹೇಳಿಕೆಯಿರುವುದು. ಸರಕಾರವೂ ಅದೇ ಅಭಿಪ್ರಾಯ ಮಾಡಿರುವುದು. ಅಂತೂ ಸರಕಾರ ಮತ್ತು ಜನತೆ ಐಕ್ಯಮತದಿಂದ ಈ ಒಂದು ಕಾರ್ಯ ಮಾಡುವಲ್ಲಿ ಅಭಿಪ್ರಾಯ ಸೂಚಿಸುವುದು ಬಹಳ ಸಂತೋಷದ ವಿಷಯ. ಹಾಗಾಗಿಯೇ ರೇಶನಿಂಗ್ ನಮ್ಮ ಜಿಲ್ಲೆಯಲ್ಲಿ ಯಶಸ್ವಿಯಾಗಬಹುದೆಂದು ನಾವು ಮುಂಚಿತವಾಗಿಯೇ ಊಹಿಸಬಹುದಾಗಿದೆ ಮಾತ್ರವಲ್ಲದೆ ಯಶಸ್ವಿಯಾಗುವಂತೆ ಪ್ರತಿಯೊಬ್ಬರೂ ಪ್ರಯತ್ನಿಸಬೇಕೆಂದೂ ನಾವಿಲ್ಲಿ ವಿನಂತಿಸಿಕೊಳ್ಳುತ್ತೇವೆ.

ಶ್ರೀ ಗ್ರಬ್ಬರು ರೇಶನಿಂಗ್ ಪ್ರಯೋಗದ ಕುರಿತು ಆಲೋಚಿಸಲು ಇಲ್ಲಿಗೆ ಬಂದವರು. ಅದನ್ನು ಆಲೋಚಿಸಿ ವಿವರಿಸಿ ಹೇಳಿ ಹೋದರು. ಸಂಪ್ರದಾಯದಂತೆ ಇಲ್ಲಿನವರು ಅವರೊಡನೆ ಬೇಕಾದಷ್ಟು ದೂರುಗಳನ್ನೂ ಹೇಳಿದರು. ವರ್ಗದಾರರ ದೂರು ಬಹಳ ಹಿಂದಿನಿಂದಲೇ ಸರಕಾರಕ್ಕೆ ಹೋಗಿದೆ. ವ್ಯಾಪಾರಿಗಳ ದೂರು ಈ ಸಲ ಕೇಳಿಬಂತು. ಅಧಿಕಾರಿಗಳ ದೂರನ್ನೂ ಅವರು ಕೇಳಿಯೇ ಇರಬೇಕು. ಎಲ್ಲವನ್ನೂ ಕೇಳಿದ ಅವರು 'ಒಬ್ಬರೊಬ್ಬರನ್ನು ದೂರಿ ಕೆಲಸ ಕೆಡಿಸಬೇಡಿ; ನಿಮ್ಮ ಜನರು ಉಪವಾಸದಿಂದ ಸಾಯದಂತೆ ಕೂಡಿ ಸಹಕರಿಸಿ ಕೆಲಸ ಮಾಡಿ, ದಕ್ಷಿಣ ಕನ್ನಡ ಬಂಗಾಳವಾಗದಂತೆ ಎಚ್ಚರ ತೆಗೆದುಕೊಳ್ಳಿ' ಎಂದು ಹೇಳಿ ಸಮಾಧಾನ ಪಡಿಸಿದರು. ಬಹಳ ಕುಶಲತೆಯಿಂದ, ಎಲ್ಲರನ್ನೂ ಒಪ್ಪಿಸುವ ಮಾದರಿಯಿಂದ ಅವರು ಮಾತನಾಡಿ ಜಾಣ್ಮೆ ತೋರಿಸಿದರು.

ವರ್ಗದಾರರು ವ್ಯಾಪಾರಿಗಳನ್ನೂ ವ್ಯಾಪಾರಿಗಳು ವರ್ಗದಾರರನ್ನೂ, ಗಿರಾಕಿಗಳು ಇವರಿಬ್ಬರನ್ನೂ ಈ ಮೂವರೂ ಕೂಡಿ ಅಧಿಕಾರಿಗಳನ್ನೂ ಅಧಿಕಾರಿಗಳು ಈ ಮೂವರನ್ನೂ ಅನ್ಯೋನ್ಯ ದೂರಿಕೊಳ್ಳುವುದರಿಂದ ಪ್ರಯೋಜನವಿಲ್ಲ. ಯಾರೂ ದೇವತಾ ಮನುಷ್ಯರಲ್ಲ. ತಪ್ಪು ಮಾಡುವವರು ಎಲ್ಲಾ ವರ್ಗದಲ್ಲಿಯೂ ಇರುತ್ತಾರೆ. ಆದ್ದರಿಂದ ಇಂಥಾ ಇಡೀ ವರ್ಗ ತಪ್ಪುಗಾರ ಎಂದು ಹೇಳುವುದು ಸರಿಯಲ್ಲ. ಯಾರು ತಪ್ಪು ಮಾಡಿದರೂ ಮರೆತುಬಿಡಬೇಕು. ಜನರಿಗೆ ಅನ್ನಕೊಡುವ ಸಲುವಾಗಿ ಮರೆತುಬಿಡಬೇಕು. ಎಲ್ಲರೂ ತಮ್ಮ ತಮ್ಮ ಸ್ವಾರ್ಥಗಳನ್ನೀಗ ಬದಿಗೊತ್ತಬೇಕು. ರೇಶನಿಂಗ್ ವ್ಯವಸ್ಥೆಯಲ್ಲಿ ಎಲ್ಲರೂ ಹಂಚಿ ತಿಂದುಂಡು ಬದುಕುವ ಮಾನವೀಯ ಕಾರ್ಯದಲ್ಲಿ ಸಹಕರಿಸಿ ನಮ್ಮ ಜಿಲ್ಲೆಯನ್ನು ಗಂಡಾಂತರದಿಂದ ಪಾರುಗೊಳಿಸಬೇಕು—ಇದೇ ನಮ್ಮ ಅರಿಕೆಯಾಗಿದೆ.

ಜಯಪ್ರಕಾಶರಿಗೆ ಚಿತ್ರಹಿಂಸೆ!

ಕೇಂದ್ರ ಎಸೆಂಬ್ಲಿಯಲ್ಲಿ ಶ್ರೀ ಗೋವಿಂದ ದೇಶಮುಖರು ಶ್ರೀ ಜಯಪ್ರಕಾಶ ನಾರಾಯಣರಿಗೆ ಕೊಡಲಾದ ಚಿತ್ರಹಿಂಸೆಯ ಕುರಿತು ಹಾಗೂ ಅವರ ವಕೀಲರಾದ ಶ್ರೀ ಪಾರ್ಡಿವಾಲರನ್ನು ಬಂಧಿಸಿದ ಕುರಿತು ಚರ್ಚಿಸುವ ಎರಡು ನಿಲುವಳಿ ಸೂಚನೆಗಳನ್ನು ತರಲು ಅಧ್ಯಕ್ಷರು ಅದು ನಿಯಮ-ಬಾಹಿರವೆಂದು ಹೇಳಿದರು. ಶ್ರೀ. ಜಯಪ್ರಕಾಶರನ್ನು ಬೆನ್ನಿಲ್ಲದ ಕುರ್ಚಿಯಲ್ಲಿ ಹಿಮವನ್ನಿಟ್ಟು ಅದರಲ್ಲಿ ಕುಳ್ಳಿರಿಸಲಾಗುತ್ತಿದೆಯೆಂದೂ, ಅವರಿಗೆ ತಕ್ಕ ಆಹಾರ ಕೊಡದೆ ಚಿತ್ರಹಿಂಸೆಗೆ ಗುರಿಪಡಿಸಲಾಗುತ್ತಿದೆಯೆಂದೂ, ನಿದ್ದೆ ಮಾಡ ಬಿಡುವುದಿಲ್ಲವೆಂದೂ ಹೇಳಲಾಗಿದೆ. ಗೃಹಮಂತ್ರಿಗಳು ಈ ವಿಷಯ ಪ್ರಾಂತಿಕ ಸರಕಾರಕ್ಕೆ ಸಂಬಂಧಿಸಿದ್ದೆಂದೂ ಹೇಳಿ, ಈ ಆರೋಪಗಳು ಸುಳ್ಳೆನ್ನದೆ, ಅದಕ್ಕೆ ಸಾಕಷ್ಟು ಸಾಕ್ಷಿಯಿಲ್ಲವೆಂದು ಮಾತ್ರ ಹೇಳಿದರು.

ಕಾಂಗ್ರೆಸ್-ಸರಕಾರಗಳಲ್ಲಿ ಸಂಧಾನ

ಮುನ್ಶಿ-ವೇವಲ್ ಭೇಟಿ

ಶ್ರೀ ಕೆ. ಎಂ. ಮುನ್ಶಿಯವರು ಕಾಗಿಂರಂದ ವೈಸರಾಯ್ ವೇವಲರನ್ನು ಕಂಡು ಗುಪ್ತ ಮಾತುಕತೆ ನಡೆಸಿದರೆಂದು ರಾಜಕೀಯ ವಿಷಯದಲ್ಲಿ ವೇವಲರ ಮನೋಭಿಪ್ರಾಯವೇನೆಂದು ತಿಳಿಯಲು ಮುನ್ಶಿಯವರು ಬಂದಿರಬೇಕೆಂದೂ ಸಾಧ್ಯವಾದರೆ ಕಾಂಗ್ರೆಸ್ ಸರಕಾರಗಳೊಳಗೆ ಮುನ್ಶಿಯವರು ಸಂಧಾನ ಯತ್ನ ಮಾಡುವರೆಂದೂ ಊಹಿಸಲಾಗಿದೆ.

ಮಂಗಳೂರು

ಪ್ರಕಾಶ ಸಂಘ

ದವರು ತಮ್ಮ ಸದಸ್ಯರ ಕಥಾಗುಚ್ಛವೊಂದನ್ನು ಪ್ರಕಟಿಸಲಿರುವರು. ಸದಸ್ಯರು ತಮ್ಮ ಲೇಖನಗಳನ್ನು ಸಂಪಾದಕ, 'ಪ್ರಕಾಶ' ನವಭಾರತ ಆಫೀಸು ಇಲ್ಲಿಗೆ ನವಂಬರ ೨೫ರೊಳಗೆ ಕಳುಹಿಸಬಹುದು.

ಪೊಳಲಿ

ಉದಾರ ದಾನ

ಪೊಳಲಿ ಶ್ರೀ ರಾಜರಾಜೇಶ್ವರಿ ಸನ್ನಿಧಿಯಲ್ಲಿ ಮೈಸೂರು ಶ್ರೀಮಾನ್ ಮಹರಾಜರು (ದೇವಿ ಮಾಹಾತ್ಮ್ಯ ಪಾರಾಯಣ ನಡಸಿ ನವಂಬರ ತಾ ೫ನೇ ಶುಕ್ರವಾರ ಚಂಡಿಕಾ ಹೋಮ ೬೦೦ ಜನ ಬ್ರಾಹ್ಮಣ ಸಂತರ್ಪಣೆಯನ್ನು ನಡಸಿರುವರು.

ಪುತ್ತೂರು

ಇಲ್ಲಿಂದ ಡಿ. ಬೋರ್ಡಿಗೆ ಶ್ರೀ ಕೆ. ವೆಂಕಟ್ರಮಣ ಗೌಡರು ಮೆಂಬರರಾಗಿ ಆರಿಸಿ ಬಂದಿರುವರೆಂದು ತಿಳಿದು ಬರುತ್ತದೆ.

ನೋಟೀಸು

ಉಡ್ಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. No. 78/1943.

1 ರಂಗು ಹೆಂಗ್ಸು 2. ಕುಶ್ಟು ಹೆಂಗ್ಸು 3. ಮುಕ್ತು ಹೆಂಗ್ಸು ಕುಂಗುಹೆಂಗ್ಸಿನ ಮಗಳಂದಿರು ಉಡ್ಪಿ ತಾಲೂಕು ಪೆರಣಂಕಿಲ ಗ್ರಾಮದಲ್ಲಿರುವವರು. } ಅರ್ಜಿದಾರರು

ಮತ್ತು

ತಮ್ಮಯ್ಯ ಸೇರಿಗಾರ-ಪಾಚುಹೆಂಗ್ಸಿನ ಮಗ ಸದ್ರಿ ಪೆರಣಂಕಿಲ ಗ್ರಾಮ— } ಎದ್ರಿ

ಇವರೊಳಗೆ

ಸದ್ರಿ ಎದ್ರಿ ಮತ್ತು ಇತರ ಸಮಸ್ತರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:

ಅರ್ಜಿದಾರರ ಮಾವ ವ ಎದ್ರಿಯ ಸಹೋದರ ಸದ್ರಿ ಪೆರಣಂಕಿಲ ಗ್ರಾಮದಲ್ಲಿ ತಾ. 22–8–41ರಲ್ಲಿ ಮೃತಪಟ್ಟ ಅಣ್ಣಪ್ಪ ಸೇರಿಗಾರರಿಗೆ ಬರತಕ್ಕ ಸದ್ರಿ ಅರ್ಜಿಯಲ್ಲಿ ಕಾಣಿಸಿದ ಸಾಲ ವಸೂಲಿ ಬಗ್ಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ದಾಖಲ್ಲು ಮಾಡಿದ ಸದ್ರಿ ಅರ್ಜಿಯು ತಾ. 4–12–43ಕ್ಕೆ ತನ್ನಿಗೆ ಇಟ್ಟಿರುವದ್ರಿಂದ ಆ ಕುರಿತು ಆಕ್ಷೇಪ ಹೇಳುವವರು ಸದ್ರಿ ತಾರೀಕಿನ ದಿವಸ ಸದ್ರಿ ಅರ್ಜಿ ತನ್ನಿ ಸಮಯ ಕೋರ್ಟು ಮುಂದೆ ಸ್ವತಹಾ ಅಥವಾ ವಕೀಲರ ಮುಖಾಂತ್ರ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜ್ಯಾಹೀರು ಮಾಡಿಕೊಳ್ಳಬೇಕಾಗಿ ಈ ಮೂಲಕ ಸದ್ರಿ ಎದ್ರಿ ಮತ್ತು ಇತರ ಸಮಸ್ತರಿಗೆ ತಿಳಿಯಪಡಿಸೋಣಾಗುತ್ತದೆ.

Udipi S. K. } K. Ramanath Pai,
12-11-1943. } Advocate for Petnr.

NOTICE

In the Court of the District Munsif of Mangalore

O. S. 443/1943.

Between

A. J. Lobo son of Kistu Lobo-Bezey— } Plff.

and

Alphonso Souza son of Rosario Souza Nod-Kadry Mangalore Town. } Defendant.

To

The Deft. abovenamed.

Please take notice that the Plff. abovenamed has filed the above suit for recovery of possession of the plaint property and other reliefs claimed in the suit and that the 26th day of Nov. 1943 has been appointed for the hearing of the above suit. You may appear either in person or by pleader and file your written statement if any, failing which the suit will be decreed exparte

(By order of the Court.)

Mangalore, } P. D'Souza B. A. B. L.
16–11–'43 } L. C. Pais B. A. B. L.
Vakils for Plff.

ಆಕಸ್ಮಿಕ ಶೀತವು ನಿಮ್ಮ ಶ್ವಾಸಕೋಶಕ್ಕೆ ಅಪಾಯ

ನೀವು ಆಕಸ್ಮಿಕ ಶೀತಬಾಧೆಗೊಳಗಾಗುತ್ತೀರಾ? ನೀವು ಗಂಟಲುಬೇನೆ ಕೆಟ್ಟ ಕಫ, ಶೀತಗಳಿಂದ ಸಂಕಟ ಪಡುತ್ತೀರಾ? ಹಾಗಿದ್ದರೆ ಖಂಡಿತವಾಗಿ ಪೆಪ್ಸು ಸೇವಿಸಿರಿ. ಈ ಪ್ರಸಿದ್ಧ ವಿಷಹಾರೀ ಶ್ವಾಸಯೋಗ್ಯ ಮಾತ್ರೆಗಳು ಎಂಥಾ ಕೆಟ್ಟ ಶೀತವನ್ನೂ, ಇಂಫ್ಲುಯೆಂಜಾ, ಎದೆನೋವು ನ್ಯುಮೋನಿಯಾಗಳನ್ನೂ ಗುಣಪಡಿಸುವುದು.

ಬಾಯಿಗೆ ಹಾಕಿದ ಕೂಡಲೇ ಕರಗಿ, ಪೆಪ್ಸು ಉತ್ತಮ ಔಷಧಿ ರಸವನ್ನು ಹೊರಗೆಡವಿ ಅದು ನಿಮ್ಮ ಶ್ವಾಸಕೋಶಕ್ಕೆ ಹೋಗುತ್ತದೆ. ಪೆಪ್ಸು ಹೀಗೆ ಸಾಂಕ್ರಾಮಿಕ ಕ್ರಿಮಿಗಳನ್ನು ಶ್ವಾಸನಾಳದ ಬಾಧೆಯನ್ನು ಗುಣಪಡಿಸಿ ಶೀತಕ್ಕೆ ದಿವ್ಯೌಷಧವಾಗಿದೆ. ಎಲ್ಲಾ ಔಷಧಿ ವ್ಯಾಪಾರಿಗಳಲ್ಲಿಯೂ ದೊರಕುವುದು.

ಪೆಪ್ಸನ್ನು ಕೊಂಡುಕೊಳ್ಳಿರಿ.

PEPS

ವಿಷಹಾರಿ ಶ್ವಾಸಯೋಗ್ಯ ಮಾತ್ರೆಗಳು.

ಬಾವುಗಳನ್ನು ಕೂಡಲೇ ಗುಣಪಡಿಸಿರಿ

ನೋವನ್ನು ಉಂಟುಮಾಡುವ ವಿಷಕಾರೀ ಬಾವುಗಳು ಈ ರೀತಿ ಗುಣವಾಗುತ್ತವೆ. ಅದನ್ನು ಆಗಾಗ ನೀರಿನಿಂದ ಕುಟಿಕೂರಾ ಸೋಪು ಹಾಕಿ ತೊಳೆಯಿರಿ; ಅದರ ಮೇಲೆ ಕುಟಿಕೂರಾ ಮುಲಾಮು ಹಚ್ಚಿರಿ.



ಕುಟಿಕೂರಾ ಮುಲಾಮು

CUTICURA OINTMENT

ಜಿಲ್ಲಾ ಸಮಾಚಾರಗಳು

ಮಂಗಳೂರು

ಅಕ್ಕಿ ಭತ್ತಗಳ ಕುರಿತು ಜಿಲ್ಲಾ ಕಲೆಕ್ಟರರ ಆಜ್ಞೆ

ಅಕ್ಕಿ ಭತ್ತಗಳನ್ನು ಈ ಜಿಲ್ಲೆಯಲ್ಲಿ ರೇಶನಿಂಗ್ ಮಾಡುವ ಕುರಿತು ಈ ಕೆಳಗಿನ ಸೂಚನೆಗಳನ್ನು ಕೊಡಲಾಗಿದೆ. (೧) ಭತ್ತವನ್ನು ರೇಶನಿಂಗ್ ಮಾಡಿದಲ್ಲಿ ಒಕ್ಕಲು ಅದನ್ನು ಅಕ್ಕಿ ಮಾಡಿ ಅದರಲ್ಲಿ ಅನೇ ಒಂದು ಭಾಗವನ್ನು ಜನವರಿ ೧೫ರೊಳಗೂ ಅದರಲ್ಲಿ ಒಂದು ಭಾಗವನ್ನು ಫೆಬ್ರವರಿ ೧೫ರೊಳಗೂ ಅದರಲ್ಲಿ ೩ ಭಾಗವನ್ನು ಮಾರ್ಚ್ ೧೫ರೊಳಗೂ ಮತ್ತೆ ೩ ಭಾಗಗಳನ್ನು ಎಪ್ರಿಲ್ ೧೫ರೊಳಗೂ ಹೀಗೆ ೪ ಕಂತುಗಳಲ್ಲಿ ಒಪ್ಪಿಸಿ ಕೊಡಬೇಕು (೨) ಯಾರ ಮೇಲೆ ರೇಶನಿಂಗ್ ಅಪ್ಪಣೆಯನ್ನು ಜಾರಿಮಾಡಲಾಗಿದೆಯೋ ಅವರು ದ. ಕ ಕೇಂದ್ರ ಸಹಕಾರೀ ಸ್ಟೋರ್ ಲಿಮಿಟೆಡ್ ಅಥವಾ ಅದರಿಂದ ಅಧಿಕೃತವಾದ ಏಜೆಂಟರುಗಳಿಗೆ ಹೊರತಾಗಿ ಬೇರೆ ಯಾರಿಗೂ ರೇಶನಿಂಗ್ ಅಕ್ಕಿಯನ್ನು ಮಾರಲೂ ಒಪ್ಪಿಸಲೂ ಕೂಡದು.' (೩) ಅತ್ಯ ಸಂತೋಷದಿಂದ ಅಕ್ಕಿ ಮಾರುವ ಬೆಲೆ ಹೀಗೆ ನಿರ್ಧರಿಸಿದೆ ಕಜೆ ಕುಚ್ಚಿಗೆ ಮುಡಿ ರೂ. ೯॥; ತೋಳ್ಪಲು ರಾಶಿ ಸುಗ್ಗಿ ಮುಡಿ ರೂ. ೧೧; ಗುಡ್ಡ ಮುಡಿ ರೂ. ೧೦॥; ಮಸ್ಕತಿ ಮುಡಿ ರೂ. ೧೧, ಬೆಳ್ತಿಗೆ ರೂ. ೧೨. (೪) ಭತ್ತವನ್ನು ಅಕ್ಕಿಯಾಗಿ ಮಾಡಲು ಹೆಚ್ಚಿನ ಅನುಕೂಲವಿರುವ ಮುಂದೆ ತಿಳಿಸಲಾಗುವ ಆ ಪ್ರತ್ಯೇಕ ಕ್ಷೇತ್ರಗಳ ಹೊರತು ಅಕ್ಕಿ ಒಂದು ಮುಡಿಗೆ ಭತ್ತ ೬। ಕಳಸಿಗೆ ಸಮಾನವೆಂದೇ ಎಣಿಸಲಾಗಿದೆ. ಗೃಹಕೃತ್ಯಕ್ಕೂ ಬೇಸಾಯಕ್ಕೂ ಅಗತ್ಯವಾದ ಅಕ್ಕಿಯನ್ನು ಇಟ್ಟುಕೊಂಡು ಹೆಚ್ಚಿಗೆಯಾದ ಇಡೀ ಸ್ಟಾಕನ್ನೂ ರೇಶನಿಂಗ್ ಮಾಡಲಾಗುವುದು. (೫) ಒಕ್ಕಲುಗಳಿಂದ ಅಕ್ಕಿ ರೇಶನಿಂಗ್ ಮಾಡಿರುವ ಕಡೆ ಒಕ್ಕಲು ಅಕ್ಕಿಯನ್ನು ಸ್ಟೋರ್ಸಿಗೆ ತಂದು ಮಾರಿ ಅದರ ಹಣ ಧನಿಗೆ ಸಲ್ಲಬೇಕೆಂದು ಒಪ್ಪಿ ಹಾಗೆ ಅದನ್ನು ಧನಿಗೆ ಕೊಡಲು ಅವನು ಅನುಮತಿ ಕೊಟ್ಟಲ್ಲಿ ಅದು ವರ್ಗದಾರನಿಗೆ ಸಲಬಹುದು

ಶ್ರೀ ರಾಮಮೂರ್ತಿಗಳ ಕಾರ್ಯಕ್ರಮ

ಮದ್ರಾಸು ಗವರ್ನರರ ಎಡ್ವೈಸರ್ ಶ್ರೀ ರಾಮಮೂರ್ತಿಯವರು ದಕ್ಷಿಣ ಕನ್ನಡದ ಆಹಾರ ಪರಿಸ್ಥಿತಿ ಕುರಿತು ವಿಚಾರಿಸುವರೆ ತಾ ೨೩ರಂದು ಸಂಜೆ ಮಂಗಳೂರಿಗೆ ಬರುವರು. ತಾ. ೨೪ರಂದು ಬೆಂಚ್ ಕೋರ್ಟು ಹಾಲಿನಲ್ಲಿ ಸಾರ್ವಜನಿಕ ಸಭೆ

ಆಗಮನ

ಡಿಫೆನ್ಸ್ ಸರ್ವಿಸಿನ ಡೆಪ್ಯುಟಿ ಡೈರೆಕ್ಟರರಾದ ಮಿ ಎಚ್ ಸಿ ಕಿ ಮೆಕ್ಲೆಫಿನ್ ಅವರು ಇನ್ಸ್‌ಪೆಕ್ಷನಿಗಾಗಿ ಕಳೆದ ಬುಧವಾರ ಮಂಗಳೂರಿಗೆ ಬಂದರು.

ಮಿತ್ರಮಂಡಳಿ

ಮಿತ್ರಮಂಡಳಿಯ ಸಭೆಯೊಂದು ತಾ ೧೩ರಂದು ಶ್ರೀ ಕೆ ಎಸ್ ಆಡಿಗರ ಅಧ್ಯಕ್ಷತೆಯಲ್ಲಿ ಸೇರಿ ಜಯ ಕರ್ನಾಟಕದ ಹಿಂದಿನ ಸಹಸಂಪಾದಿಕೆಯರಾದ ಶ್ರೀಮತಿ ಶ್ಯಾಮಲಾ ಬಾಯಿ ಬೆಳಗಾವಕಾರರ ನಿಧನದ ಬಗ್ಗೆ ಸಂತಾಪ ಸೂಚಿಸುವ ಠರಾವಾಯಿತು.

ಆ ದಿನ ಜರಗಿದ 'ಅಂದಿನ ಆಪೂರ' ಭಾಷಣ ಸ್ಪರ್ಧೆಯಲ್ಲಿ (ಕಾಲೇಜು ವಿದ್ಯಾರ್ಥಿಗಳಿಗೆ) ಶ್ರೀಗಳಾದ ತಿಲಕ ಹೆಗ್ಡೆ, ನಾರಾಯಣ ಮೂರ್ತಿ ಮತ್ತು ಲೋಕನಾಥ ಇವರಿಗೆ ಪ್ರಥಮ ಬಹುಮಾನಗಳೂ (ಸಮಾನ) ಶ್ರೀಗಳಾದ ರಾಮಕೃಷ್ಣ ಹಂಡೆ ಮತ್ತು ಶಿವಶಂಕರ್ ಇವರಿಗೆ ದ್ವಿತೀಯ ಬಹುಮಾನಗಳೂ (ಸಮಾನ) ದೊರೆತಿವೆ

ಜಿಲ್ಲೆಯ ಆಹಾರ ಪೂರೈಕೆ

'ನಮ್ಮ ಜಿಲ್ಲೆಯ ಆಹಾರ ಪೂರೈಕೆಯ ಬಗ್ಗೆ ಸರಕಾರದವರು ರೈತವರ್ಗದವರಿಂದ ಅಕ್ಕಿ, ಭತ್ತಗಳನ್ನು ಕೊಂಡುಕೊಳ್ಳಬೇಕೆಂದು ಈಗ ತಾನೇ ಕೈಕೊಂಡ ಕಾರ್ಯವನ್ನು ದ. ಕ. ಸೆಂಟ್ರಲ್ ಸ್ಟೋರಿಗೆ ವಹಿಸಿಕೊಟ್ಟ ಸಂಗತಿಯು ಸರ್ವರಿಗೂ ತಿಳಿದಿದೆಯಷ್ಟೆ. ಅಕ್ಕಿಯನ್ನು ಕೊಂಡುಕೊಳ್ಳುವ ಬಗ್ಗೆ ಕೆಳಗೆ ಕಾಣಿಸಿದಂತೆ ಡಿಪೋಗಳನ್ನು ಈಗಾಗಲೇ ತೆರೆಯಲಾಗಿದೆ. ಗಂಗೊಳ್ಳಿ ಬಂದರದಲ್ಲಿ, ಕುಂದಾಪುರ ವೆಂಕಟ್ರಮಣ ದೇವಸ್ಥಾನದ ಬಳಿ, ಕಾರ್ಕಳ ದೊಡ್ಡ ಬೀದಿಯಲ್ಲಿ, ಉಡುಪಿ ಬಡಗು ಪೇಟೆಯಲ್ಲಿ, ಮಂಗಳೂರು ಬಂದರದಲ್ಲಿ, ಹಂಗಾರಕಟ್ಟೆ ಬಂದರದಲ್ಲಿ ಮತ್ತು ಪುತ್ತೂರು ಪೇಟೆಯಲ್ಲಿ. ರೇಶನಿಂಗ್ ಮಾಡಲ್ಪಟ್ಟ ಭತ್ತ ಯಾ ಅದರಿಂದ ತಾನೇ ತಯಾರಿಸಿದ ಅಕ್ಕಿಯನ್ನು, ಈ ಡಿಪೋಗಳಿಗೆ ಕೊಟ್ಟಲ್ಲಿ ನಮ್ಮ ಏಜಂಟರು ಅದರ ನಿಶ್ಚಿತ ಕ್ರಯವನ್ನು ಕೂಡಲೇ ಕೊಡುವರು.

ಹೀಗೆ ಒದಗಿಸಲ್ಪಟ್ಟ ಅಕ್ಕಿಯ ಪೈಕಿ ಒಂದಂಶ (ಇದು ಅರೆವಾಸಿ ಎಂತ ಈಗ ಎಣಿಸಿಯದೆ) ಆಯಾ ತಾಲೂಕಿನ ಪೇಟೆಪಟ್ಟಣಗಳ ಕೃಷಿಕರಲ್ಲದವರ ಬಗ್ಗೆ ಅಲ್ಲಲ್ಲಿ ದಾಸ್ತಾನಿಟ್ಟು ಅದನ್ನು ಆಯಾ ಕೇಂದ್ರಗಳಲ್ಲಿನ ಮುಂದಾಳುಗಳ ಸಹಕಾರದಿಂದ ಗುರುತಿನ ಚೀಟುಗಳನ್ನು ಕೊಟ್ಟು ಮಾರಾಟದ ವ್ಯವಸ್ಥೆ ಮಾಡಲಾಗುವದು. ಉಳಿದ ಅಕ್ಕಿಯನ್ನು ಮಂಗಳೂರಿನಲ್ಲಿ ಸದ್ಯ ಜ್ಯಾರಿಯಲ್ಲಿ ಬರಲಿಕ್ಕಿರುವ ಹಸುಗೆಯ ಬಗ್ಗೆ ಒಯ್ದು ಕಾಸರಗೋಡು ತಾಲೂಕಿನ ತುಟ್ಟಿಯ ಊರುಗಳ ಆಹಾರದ ಬಗ್ಗೂ ಒಯ್ದು ವಿನಿಯೋಗಿಸಲ್ಪಡುವದು.

ಜಿಲ್ಲೆಯ ಮಹಾ ಜನರ ಆಹಾರ ಸಂಕಷ್ಟ ನಿವಾರಣೆಯ ಮಹತ್ಕಾರ್ಯದಲ್ಲಿ ಸರ್ವರೂ ನೆರವಾಗಬೇಕಾಗಿ ವಿನಂತಿ

ಈ ಯೋಜನೆಯ ಮುಖ್ಯ ಕಾರ್ಯಾಲಯವನ್ನು ಮಂಗಳೂರು ಕೊಡಿಯಾಲ ಬೈಲಿನಲ್ಲಿ ಸೆಂಟ್ರಲ್ ಬೇಂಕಿನ ಎದುರು ತಾ ೧೫ರಂದು ತೆರೆಯಲಾಗಿದೆ ಪತ್ರವ್ಯವಹಾರ ವ ಹೆಚ್ಚಿನ ಮಾಹಿತಿ ಆಫೀಸಿನ ಮುಖ್ಯ ಅಧಿಕಾರಿ ಎಕ್ಸಿಕ್ಯೂಟಿವ್ ಆಫೀಸರರ ಕೂಡೆ' ಎಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಸ್ಟೋರುಗಳ ಪರಿಷತ್ತು

ತಾ ೧೩ರಂದು ಸಂಜೆ ಮಂಗಳೂರು ಕೋಆಪರೇಟಿವ್ ಕಟ್ಟಡದಲ್ಲಿ ದ. ಕ. ಜಿಲ್ಲಾ ಪ್ರಾಥಮಿಕ ಸ್ಟೋರುಗಳ ಪ್ರಥಮ ಪರಿಷತ್ತೊಂದು ಜರಗಿತು ೨೮ ಸ್ಟೋರುಗಳ ಪ್ರತಿನಿಧಿಗಳು ಮಂಗಳೂರು ಕೋಆಪರೇಟಿವ್ ಸೊಸೈಟಿಯ ಡಿಪ್ಯುಟಿ ರಿಜಿಸ್ಟ್ರಾರರು ದ. ಕ ಸೆಂಟ್ರಲ್ ಕೋಆಪರೇಟಿವ್ ಹೋಲ್ ಸೇಲ್ ಸ್ಟೋರ್ಸಿನ ಅಧ್ಯಕ್ಷರೂ, ಸೆಂಟ್ರಲ್ ಬೇಂಕಿನ ಸೆಕ್ರೆಟರಿಗಳೂ, ಸುಪರ್‌ವೈಸರರೇ ಮೊದಲಾದವರು ಬಂದಿದ್ದರು. ಶ್ರೀ ಎಂ ಶಿವರಾಯರು ಅಧ್ಯಕ್ಷತೆ ವಹಿಸಿದ್ದರು.

ರೇಶನಿಂಗ್ ಆದ ಅಕ್ಕಿಯನ್ನು ಹಂಚುವ ಹೊಣೆಯನ್ನು ಸೆಂಟ್ರಲ್ ಕೋಆಪರೇಟಿವ್ ಹೋಲ್ ಸೇಲ್ ಸ್ಟೋರು ವಹಿಸಿಕೊಂಡಿರುವುದರಿಂದ, ಪ್ರತಿಯೊಂದು ಪ್ರೈಮರಿ ಸ್ಟೋರುಗಳು ಅವುಗಳ ಶೇಕಡಾ ಹಂರಷ್ಟು ಪೈಡ್ ಅಫ್ ಶೇರ್ ಕೆಪಿಟಲನ್ನು ಸೆಂಟ್ರಲ್ ಹೋಲ್ ಸೇಲ್ ಸ್ಟೋರಿನಲ್ಲಿಡುವಂತೆಯೂ, ಈಗಿನ ಎಲ್ಲಾ ಪ್ರೈಮರಿ ಸ್ಟೋರುಗಳು ೧೯೪೯ನೇ ಜನವರಿ ಒಳಗೆ ತಮ್ಮ ಶೇರ್ ಕೆಪಿಟಲನ್ನು ರೂ. ೩,೦೦೦ಕ್ಕೆ ಏರಿಸುವಂತೆಯೂ, ಎಲ್ಲಿ ಕೋಆಪರೇಟಿವ್ ಸ್ಟೋರುಗಳು ಮತ್ತು ಸೊಸೈಟಿಗಳಿವೆಯೋ ಅಲ್ಲೆಲ್ಲಾ ಕಂಟ್ರೋಲ್ ಮಾಡಿದ ಸಾಮಾನುಗಳನ್ನು ಬೇರೆ ವ್ಯಾಪಾರಿಗಳಿಗೆ ಮಾರಾಟಮಾಡಲು ಕೊಡದೆ ಸಹಕಾರೀ ಸಂಘಗಳಿಗೆ ಮಾತ್ರ ಕಲೆಕ್ಟರರು ಲೈಸನ್ಸು ಕೊಡಬೇಕೆಂದೂ, ಮತ್ತು ಇತರ ಹಲವು ವ್ಯಾವಹಾರಿಕ ವಿಷಯಗಳುಳ್ಳ ನಿರ್ಣಯಗಳೂ ಆದವು

ವರ್ಗ ರದ್ದಾಗಿದೆ

ಕಾರ್ಕಳಕ್ಕೆ ತಹಶೀಲ್ದಾರರಾಗಿ ವರ್ಗಾಯಿಸಲ್ಪಟ್ಟ ಶ್ರೀ. ಯು ಜನಾರ್ಧನರವರ ವರ್ಗವನ್ನು ರದ್ದು ಮಾಡಲಾಗಿದೆ.

ವರ್ಗ

ದಕ್ಷಿಣ ಕನ್ನಡದ ಎಡಿಶನಲ್ ಟ್ರೆಜರಿ ಡೆಪ್ಯುಟಿ ಕಲೆಕ್ಟರರಾದ ಶ್ರೀ. ಎ. ಸುಬ್ಬಯ್ಯ ಪಿಳ್ಳೆ ಬಿ. ಎ ಮಂಗಳೂರು, ಅವರು ಮಲಬಾರಿನ ಎಡಿಶನಲ್ ಟ್ರೆಜರಿ ಡೆಪ್ಯುಟಿ ಕಲೆಕ್ಟರ್, ಕಲ್ಲಿಕೋಟೆ ಇಲ್ಲಿಗೆ ವರ್ಗಾಯಿಸಲ್ಪಟ್ಟಿದ್ದಾರೆ.

ಮಿ. ಪಿ. ಎಂ. ಜಾನ್ ಅವರು ಮಂಗಳೂರು ಡಿವಿಜನಿನ ಪಿ. ಡಬ್ಳ್ಯು. ಡಿಯ ಅಸಿ॥ ಇಂಜಿನಿಯರರಾಗಿ ವರ್ಗಾಯಿಸಲ್ಪಟ್ಟಿದ್ದಾರೆ.

ನಗರಸಭೆ

ಇದರ ಸಭೆಯೊಂದು ತಾ ೧೫ರಂದು ಸಂಜೆ ಚೇರ್‌ಮೇನ್ ಜ॥ ಹುಸೇನ್ ಸಾಹೇಬರ ಅಧ್ಯಕ್ಷತೆಯಲ್ಲಿ ಸೇರಿತು. ಶ್ರೀ. ರಾಮಮೂರ್ತಿಗಳು ಮಂಗಳೂರಿಗೆ ಬಂದಾಗ ಅವರನ್ನು ಕಾಣಬೇಕೆಂದು ನಿರ್ಣಯವಾಯಿತು. ಬಿಜೈ, ಉರ್ವ, ಕದ್ರಿ, ನೋಡು, ಬಟ್ಟಗುಡ್ಡೆಗಳ ಗ್ರಾಮಸ್ಥರು ತಮಗೊಂದು ಧರ್ಮಾರ್ಥ ಆಸ್ಪತ್ರೆ ಮಾಡಬೇಕೆಂದು ಬರೆದದ್ದು ಯುಕ್ತವೆಂದು ಒಪ್ಪಿ ಆ ವಿಷಯ ಅಂದಾಜು ಪತ್ರ ತಯಾರಿಸುವ ಸಮಯ ಆಲೋಚಿಸಬೇಕೆಂದಾಯಿತು.

ಕಮಿಶನರು ಮದ್ರಾಸಿಗೆ ತೆರಳಿ ಅಲ್ಲಿ ಟೌನ್ ಪ್ಲೇನಿಂಗ್ ಡೈರೆಕ್ಟರರೊಡನೆ ಕೆಲವು ಪ್ರಧಾನ ವಿಷಯ ವಿಚಾರಿಸಿ ಬರಲೆಂದು ಟೌನ್ ಪ್ಲೇನಿಂಗ್ ಕಮಿಟಿ ತೀರ್ಮಾನಿಸಿದುದರ ಕುರಿತು, ಶ್ರೀ. ಸಿ. ಎಲ್ ಲೋಬೋರವರು ಆಕ್ಷೇಪಿಸಿ, ಇದಕ್ಕೆ ಸಂಬಂಧಿಸಿದ ಕಾಗದ ಪತ್ರಗಳನ್ನು ತಮಗೆ ಕಳುಹಿಸಿಕೊಡಲಿಲ್ಲವೆಂದೂ, ಆ ಕಾಗದ ಪತ್ರಗಳನ್ನು ನೋಡದೆ ತಾವಿದಕ್ಕೆ ಸಮ್ಮತಿಸಲಾಗುವುದಿಲ್ಲವೆಂದೂ ಹೇಳಿದರು. ಕಾಗದ ಪತ್ರಗಳನ್ನು ಕೌನ್ಸಿಲರಿಗೆ ಒಪ್ಪಿಸಲೇ ಬೇಕೆಂಬ ನಿಯಮವಿಲ್ಲ' ವೆಂದು ಕಮಿಶನರು ಹೇಳಿದರು. 'ಕಾಗದ ಪತ್ರಗಳನ್ನು ನೋಡಲಿಲ್ಲವೆಂಬುದರಿಂದ, ಕೌನ್ಸಿಲಿನ ತೀರ್ಮಾನಕ್ಕೆ ಅಡ್ಡಿಯಿಲ್ಲ'ವೆಂದು ಅಧ್ಯಕ್ಷರು ತೀರ್ಮಾನವಿತ್ತರು ಆ ಮೇಲೆ ಮತ ತೆಗೆಯಲಾಗಿ ಶ್ರೀ ಪಿ ಎಲ್. ಲೋಬೋ ಶ್ರೀ. ಎಲ್. ಪಿ. ಪ್ಯಾಸ್ ವರದು ವಿರೋಧದಿಂದ, ಕಮಿಶನರು ಮದ್ರಾಸಿಗೆ ತೆಂಳಬೇಕೆಂದು ರೆ॥ ಫಾದರ್ ಲೋಬೋರವರು ತಂದ ಠರಾವು ಮಂಜೂರಾಯಿತು

ಐದನೆಯ ಜಿಲ್ಲಾ ಮಹಿಳಾ ಪರಿಷತ್ತು

''ದೇಶದಲ್ಲಿ ಆಹಾರದ ಅಭಾವ ವಿಶೇಷವಾಗಿದೆ. ಇದು ಗಂಡಸಿನ ಅದೂರ ದೃಷ್ಟಿ ಔದಾಸೀನ್ಯ, ಸ್ವಾರ್ಥಗಳ ಫಲವಾಗಿರುವುದು ಇದು ಅನ್ಯಾಯವೆಂಬ ಭಾವನೆ ನಮ್ಮಲ್ಲಿ ಹಲವು ಮಂದಿ ಸ್ತ್ರೀಯರಲ್ಲಿರುವುದು ಈ ಪಾಪವು ಘೋರವಾದುದು ಎಂದು ತಾಯಿಯರಾಗಿ ಭಗಿನಿಯರಾಗಿ ಪತ್ನಿಯರಾಗಿ ನಾವು ಗಂಡುಸರಿಗೆ ತಿಳಿಸಿ ಅವರ ಮನೋ ವೃತ್ತಿ ಬದಲಿಸಲಾರೆವೆ?'' ಎಂದು ತಾ ೧೪ರಂದು ಭಗಿನಿ ಸಮಾಜದ ಆಶ್ರಯದಲ್ಲಿ ಸೇರಿದ ಐದನೆಯ ಜಿಲ್ಲಾ ಮಹಿಳಾ ಪರಿಷತ್ತಿನ ಅಧ್ಯಕ್ಷ ಸ್ಥಾನದಿಂದ ಶ್ರೀಮತಿ ಪದ್ಮಾಬಾಯಿ ಬಿ. ಎಸ್ ರಾವ್ ಇವರು ಹೇಳಿದರು ಬಂಗಾಳ ಮೊದಲಾದ ಹಲವರು ಬರಗಾಲಪೀಡಿತ ಪ್ರದೇಶಗಳಲ್ಲಿ ಮಹಿಳಾ ಪರಿಷತ್ತಿನವರು ಯಾವ ಕೆಲಸ ಮಾಡುತ್ತಿದ್ದಾರೆಂದೂ ಅವರು ವಿವರಿಸಿದರು.

'ಹಿಂದಿನ ಸ್ತ್ರೀಯರಿಗಿಂತ ನಾವಿಂದು ಕಾರ್ಯಪಟುಗಳಾಗಿರುವೆವು, ಆದರೆ ನಮ್ಮಲ್ಲಿ ಶಬ್ದೇಕಾದ ಮಾನವ ಹೃದಯ ಸಂಕುಚಿತವಿದೆ. ನಗರದಲ್ಲಿ ಸಂಕಷ್ಟ ಪಡುತ್ತಿರುವ ಕುಟುಂಬದ ಲೆಕ್ಕವನ್ನು ಭಗಿನಿ ಸಮಾಜದವರು ತೆಗೆಯಬೇಕು, ಪ್ರತಿಯೊಂದು ಮನೆಯವರು ತಮ್ಮ ಸಾಮರ್ಥ್ಯಕ್ಕನುಸರಿಸಿ ಅನಾಥರನ್ನು ಪೋಷಿಸಬೇಕು' ಎಂದು ಅವರು ತಿಳಿಸಿದರು

ಶ್ರೀಮತಿ ಲೀಲಾ ಬ್ಯಾ ಬಾಳಿಗರು ಪ್ರಾರಂಭದಲ್ಲಿ ಸ್ವಾಗತ ಗೀತಾ ಹಾಡಿದರು ಆ ಮೇಲೆ ಶ್ರೀಮತಿ ರಮಾ ಬ್ಯಾ ಎಂ ಪೈಯವರು ಪರಿಷದುದ್ಘಾಟನೆ ನೆರವೇರಿಸಿದರು ತಮ್ಮ ಭಾಷಣದಲ್ಲಿ ಅವರು ಜಿಲ್ಲೆಯಲ್ಲಿ ಮಹಿಳೆಯರು ಇದುವರೆಗೆ ಮಾಡಿದ ಕಾರ್ಯಕಲಾಪಗಳನ್ನು ವಿವರಿಸಿ ಮುಂದೆ ಮಾಡಬೇಕಾದ ಕರ್ತವ್ಯಗಳ ಸೂಚನೆಯಿತ್ತರು.

ಸ್ವಾಗತಾಧ್ಯಕ್ಷೆ ಶ್ರೀಮತಿ ಲೀಲಾಬಾಯಿ ಏಕಾಂಬರರಾಯರು ಪ್ರತಿನಿಧಿಗಳನ್ನು ಸ್ವಾಗತಿಸಿದರು 'ಇಂದಿನೀ ಕ್ರಾಂತಿಯ ಫಲವಾಗಿನವಯುಗದ ನಿರ್ಮಾಣವಾಗಲಿದೆ. ಆಗ ಪುರುಷನು ಸ್ತ್ರೀಯ ನೆರವಿಲ್ಲದೆ ಸಮಸ್ಯಾ ಪರಿಹಾರ ಮಾಡಲಾರನು' ಎಂದು ಮೊದಲಾಗಿ ಅವರು ಹೇಳಿದರು.

ಶ್ರೀ ಕೆ. ಬಿ. ಜಿನರಾಜ ಹೆಗ್ಡೆ ಎಂ. ಎಲ್. ಎ. (ಕೇಂದ್ರ) ಶ್ರೀಮತಿಯರಾದ ಉಮಾಬಾಯಿ ಕುಂದಾಪುರ, ಮನೋರಮಾ ಬಾಯಿ ಉಡುಪಿ ಇವರ ಸಂದೇಶಗಳನ್ನು ಕುಮಾರಿ ಲಲಿತಾ ರಾವ್ ಓದಿದರು

ಶ್ರೀಮತಿ ಕಲ್ಯಾಣಿ ಡಿ. ಶೆಟ್ಟಿಯವರು ಭಗಿನಿ ಸಮಾಜದ ಗತವರ್ಷದ ವರದಿ ವಾಚನ ಮಾಡಿದರು. ಅನಂತರ ನೂಲುವ ಸ್ಪರ್ಧೆಯಲ್ಲಿದ್ದವರಿಗೆ ಬಹುಮಾನ ಕೊಡಲಾಯಿತು. ಆ ಮೇಲೆ ಅಧ್ಯಕ್ಷೆಯರ ಭಾಷಣವಾಯಿತು

ತಾ ೧೪ರಂದು ಪರಿಷತ್ತಿಗೆ ಸಂಬಂಧಿಸಿ ವಿವಿಧ ವಿನೋದಾವಳಿಗಳಿದ್ದವು. ತಾ ೧೪ರಂದು ವಿಷಯ ನಿಯಾಮಕ ಸಭೆ ಜರಗಿ ನಿರ್ಣಯಗಳು ಸ್ವೀಕೃತವಾಯಿತು

ಪರಿಷತ್ತಿನಲ್ಲಿ ಒಟ್ಟು ಎಂಟು ಮುಖ್ಯ ನಿರ್ಣಯಗಳು ಮಂಜೂರಾದುವು 'ಹಿಂದೀ ಭಾಷೆ ರಾಷ್ಟ್ರ ಭಾಷೆಯಾಗಬೇಕು' ಎಂಬ ನಿರ್ಣಯವನ್ನು ಶ್ರೀಮತಿ ಪ್ರೇಮಬ್ಯಾ ಮಂಜೇಶ್ವರರು ಮಂಡಿಸಿ, ಕುಮಾರಿ ರಾಧಾಬ್ಯಾ ಶ್ರೀಮ. ಸೀತಾ ನಗರ್‌ಮಟ್ ಮತ್ತು ಕುಮಾರಿ ಸೀತಾದೇವಿಯರು ಸಮರ್ಥಿಸಿದರು ಸ್ತ್ರೀಯರಿಗೆ ಸಮ ಪಾಲುಕೊಡುವ ಶಾಸನವನ್ನು ಸಮರ್ಥಿಸುತ್ತದೆ ಎಂಬ ಠರಾವು ಶ್ರೀಮತಿ ಆನಂದ ಬಾಯಿಯವರಿಂದ ಮಂಡಿಸಲ್ಪಟ್ಟು ಶ್ರೀಮತಿ ಲೀಲಾಬಾಯಿ ಏಕಾಂಬರ ರಾಯರು ಸಮರ್ಥಿಸಿದರು ಏಕಪತ್ನಿತ್ವವನ್ನು ಪ್ರತಿಪಾದಿಸುವ ಠರಾವನ್ನು ಶ್ರೀಮತಿ ಎನ್ ಆರ್ ದೇವಿಯರು ಮಂಡಿಸಿ ಶ್ರೀ ಬಿ. ಚೆನ್ನಮ್ಮನವರು ಸಮರ್ಥಿಸಿದರು ಸಹಕಾರೀ ತಳಹದಿಯ ಮೇಲೆ ಸ್ವದೇಶೀ ವಸ್ತುಗಳನ್ನು ಅದರಲ್ಲೂ ಖಾದಿ ಮತ್ತು ಕೈಯಲ್ಲಿ ಕಾಗದ ತಯಾರಿಸುವುದನ್ನು ಪ್ರೋತ್ಸಾಹಿಸಬೇಕೆನ್ನುವ ಠರಾವನ್ನು ಕುಮಾರಿ ಪಾರ್ವತಿಯವರು ಮಂಡಿಸಿ ಕುಮಾರಿ ಲಲಿತಾರಾವ್ ಅನುಮೋದಿಸಿದರು 'ಆಹಾರ ಪದಾರ್ಥಗಳ ರೇಶನಿಂಗ್ ಆಗಬೇಕು ಸದ್ಯದಲ್ಲೆ ಮಂಗಳೂರಿಗೆ ಬರಲಿರುವ ಶ್ರೀ ರಾಮ ಮೂರ್ತಿಯನ್ನು ಮಹಿಳೆಯರ ಶಿಷ್ಟಮಂಡಳವು ಈ ಕುರಿತು ಬೇಟಿಮಾಡಬೇಕು ಎಂಬ ನಿರ್ಣಯವು ಶ್ರೀಮತಿ ಎಂ ಪಾರ್ವತಿಯವರಿಂದ ಸೂಚಿತವಾಗಿ ಕುಮಾರಿ ರಾಧಾ ಇವರಿಂದ ಸಮರ್ಥಿಸಲ್ಪಟ್ಟಿತು 'ಅಸ್ಪೃಶ್ಯತೆಯನ್ನು ಹೊಗಲಿಡಿಸಬೇಕು' ಎಂಬ ನಿರ್ಣಯವು ಶ್ರೀಮತಿ ರಮಾಬ್ಯಾಯವರಿಂದ ಮಂಡಿಸಲ್ಪಟ್ಟು ಕುಮಾರಿ ರಾಧಾ ಶೆಟ್ಟಿಯವರಿಂದ ಅನುಮೋದಿತವಾಯಿತು 'ಹಿಂದುಸ್ತಾನ್ ಸ್ಕೌಟ್ ಚಳವಳಿಕ್ಕೆ ಬೆಂಬಲ ಕೊಡಬೇಕೆನ್ನುವ ಠರಾವು ಶ್ರೀಮತಿ ಕಲ್ಯಾಣಿಡಿ ಶೆಟ್ಟಿಯವರಿಂದ ತರಲು ಶ್ರೀಮತಿ ಸುಲೋಚನಬ್ಯಾಯವರು ಅನುಮೋದಿತವಾಯಿತು ಎಲ್ಲಾ ನಿರ್ಣಯಗಳೂ ವಿರೋಧವೇ ಇಲ್ಲದೆ ಮಂಜೂರಾದುವು ಜಯಕರ್ನಾಟಕ ಪತ್ರಿಕೆಯ ಸಹಸಂಪಾದಿಕೆ ಶ್ರೀಮತಿ ಶ್ಯಾಮಲಾದೇವಿಯರ ನಿಧನದ ಬಗ್ಗೆ ಸಂತಾಪ ಸೂಚಕ ಠರಾವಾಯಿತು. ಕುಮಾರಿ ಲಲಿತಾರಾವ್ ವಂದನಾರ್ಪಣೆ ಮಾಡಿದ ಮೇಲೆ ಭಾರತ ಮಾತಾ ಜಯಘೋಷವಾಗಿ 'ವಂದೇ ಮಾತರಂ' ಹಾಡಿ ಸಮ್ಮೇಳನ ಕೊನೆಗೊಂಡಿತು.

ಧರ್ಮಸ್ಥಳ

ಶ್ರೀ ಧರ್ಮಸ್ಥಳ ಕಾರ್ತಿಕ ದೀಪೋತ್ಸವ ಜಾತ್ರೆಯು ಇದೇ ನವಂಬರ ತಾ ೨೩ರಿಂದ ೨೭ನೇ ತಾರೀಕಿನ ವರೆಗೆ ಜರಗುವುದು ಅಮವಾಸ್ಯೆ ದಿವಸ ಕಡೇ ದೀಪೋತ್ಸವವು ಆಗಲಿರುವುದು ಆಖೇರಿ ಎರಡು ದಿವಸಗಳಲ್ಲಿ ಎಂದಿನಂತೆ ಧರ್ಮಸಮ್ಮೇಳನವು ನಡೆಯಲಿಕ್ಕಿದ್ದು ವಿವಿಧ ಧರ್ಮೀಯ ಪಂಡಿತರುಗಳು ಭಾಗವಹಿಸಲಿಕ್ಕಿರುವರು. ಮೊದಲನೆಯ ದಿವಸದಲ್ಲಿ ಕನ್ನಡ ಸಾಹಿತ್ಯಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ವ್ಯಾಖ್ಯಾನವಾಡಲ್ಪಡುವುದು ಕಡೆಯ ದಿವಸದಲ್ಲಿ "ಗೃಹಸ್ಥ ಧರ್ಮ" ಎಂಬ ವಿಷಯದ ಕುರಿತು ಉಪನ್ಯಾಸಗಳು ಆಗಲಿರುವುದು.

ಮಂಗಳೂರು ಕಾಸರಗೋಡುಗಳಲ್ಲಿ

ರೇಶನಿಂಗ್ ಜಾರಿಯಾಗುವುದು—ಆದರೆ ಯಾವಾಗ?

(1ನೇ ಪುಟದಿಂದ ಮುಂದುವರಿದುದು)

ಸಂಪೂರ್ಣ ನಾನು ಪಡೆಕೊಳ್ಳುವುದಿಲ್ಲ. ಅಥವಾ ನನಗೆ ದೊರಕುವುದು ನನ್ನ ದುಂದು ವೆಚ್ಚಕ್ಕೆ ಸಾಕಾಗದಿದ್ದರೆ ಆದರಿಂದ ಇತರರಿಗಾದರೂ ಪ್ರಯೋಜನವುಂಟೆಂಬುದು ಸಮಾಧಾನವುಂಟು. ಕಠಿಣಶ್ರಮ ಮಾಡುವವರಿಗಾದರೂ ಸ್ವಲ್ಪ ಹೆಚ್ಚು ಕೊಡಬಹುದು. ಆದರೆ ಅವರಿಗೂ ದಿನಕ್ಕೆ ಅರ್ಧ ಸೇರು ಸಾಕೆಂದು ಆಹಾರತಜ್ಞರ ಅಭಿಪ್ರಾಯವಿದೆ.

ಮುಂದುವರಿಸುತ್ತಾ ಶ್ರೀ. ಗ್ರಬ್ಬರು ಹೀಗೆಂದರು

"ಸಹಕಾರೀ ಸಂಘಗಳ ಮೂಲಕ ಇಲ್ಲವೇ ವ್ಯಾಪಾರಿಗಳ ಮೂಲಕ ಅಕ್ಕಿ ಪೇಟೆಗೆ ತರಲಾಗುವುದು. ಅಲ್ಲಲ್ಲಿ ಒಂದೊಂದು ಅಂಗಡಿ ಇಡುವುದು. ನಮಗೆ ಇಂಥಾದ್ದೇ ಅಕ್ಕಿ ಬೇಕೆಂದು ವಾದಿಸಬಾರದು. ಅರ್ಧೂ ಹೊರಗಿನಿಂದ ತರಿಸುವವರಿಗೆ ಪ್ರತ್ಯೇಕ ಪರ್ಮಿಟು ಕೊಡಲಾಗುವುದು. ಇಂಥ ಕಷ್ಟಕಾಲದಲ್ಲಿ ಯಾರೂ ವಿಶೇಷ ಸಂಭ್ರಮ ಮಾಡಬಾರದು. ಮಧುವೆಗೆ ೭॥ ಸೇರು ಅಕ್ಕಿ, ಉಪನಯಕ್ಕೆ ೧॥ ಸೇರು, ಶ್ರಾದ್ಧಕ್ಕೆ ಮೂರು ಪಾವು ಹೀಗೆ ಹೆಚ್ಚು ಕೊಡಲಾಗುತ್ತದೆ

ಶ್ರೀ. ವೆಂಕಟೇಶ ಪೈ "ದೇವಸ್ಥಾನಗಳ ಉತ್ಸವಗಳಿಗೆ ಇಲ್ಲವೆ?"

ಶ್ರೀ ಗ್ರಬ್ಸ್ "ಸ್ವಲ್ಪ ಸ್ವಾರ್ಥತ್ಯಾಗ ಮಾಡಿರೆಂದು ದೇವರನ್ನೂ ನಾವು ಕೇಳಿಕೊಳ್ಳಬೇಕು. ಮನೆಯಲ್ಲೇ ಊಟ ಮಾಡಿ ಉತ್ಸವಕ್ಕೆ ಬರಬಹುದು. ಆದರೆ ಸಂಪ್ರದಾಯದ ನೈವೇದ್ಯದ ಅಕ್ಕಿ ಸಿಗುವುದು. ವರ್ಷಕ್ಕೆ ಇಂತಿಷ್ಟೇ ಅಕ್ಕಿ ವಿನಿಯೋಗ ಆಗಬೇಕೆಂದು ಕೋರ್ಟು ಡಿಕ್ರಿ ಆಗಿದ್ದರೂ ಡಿಫೆನ್ಸ್ ಕಾನೂನಿನಂತೆ ಹಾಗೆ ಮಾಡಬೇಕಾಗಿಲ್ಲ.

ಶ್ರೀ ಪೆರೋಲಿ (ಕೊಮನ್‌ವೆಲ್ತ್ ಹಂಚು ಕಾರ್ಖಾನೆ ಮಾಲಕರು)

"ನಾನು ನನ್ನ ಕೈಕೆಳಗೆ ಕೆಲಸಮಾಡುವ ೮೦೦೦ ಕೆಲಸಗಾರರ ಪ್ರತಿನಿಧಿಯಾಗಿ ಬಂದಿರುವೆನು. ಒಟ್ಟು ಹಂಚಿನ ಕಾರ್ಖಾನೆಗಳಿಂದಲೇ ಈ ನಗರದಲ್ಲಿ ೬೦,೦೦೦ ಜನ ಜೀವಿಸುತ್ತಾರೆ ಇವರಿಗೆಲ್ಲ ಕಡಿಮೆ ಕ್ರಯದಲ್ಲಿ ಅಕ್ಕಿ ದೊರಕುವುದು ಯಾವಾಗ? ನಿಮ್ಮ ರೇಶನಿಂಗ್ ಯಾವಾಗ ಬರುತ್ತದೆ ನಿಶ್ಚಿತ ದಿನ ತಿಳಿಸುತ್ತೀರಾ?'

ಶ್ರೀ. ಎ ಬಿ ಶೆಟ್ಟಿ "ಸ್ಥಳೀಯ ಅಧಿಕಾರಿಗಳು ಯಾವ ಕೆಲಸವನ್ನೂ ಗಮನವಿಟ್ಟು ಮಾಡುವುದಿಲ್ಲ, 'ರೇಶನಿಂಗ್ ಬರಲಿ' ಎಂದು ನಾವು ಹಿಂದಿನಿಂದಲೇ ಹೇಳುತ್ತೇವೆ ಅದಿನ್ನೂ ಬಂದಿಲ್ಲವೇಕೆ? ಬರುತ್ತದೆ ಎಂಬ ಭರವಸೆ ಮಾತ್ರ ಬೇಡ—ಯಾವಾಗ ಬರುತ್ತದೆ ಎಂದು ಖಂಡಿತ ತಿಳಿಸಿ."

ಶ್ರೀಗಳಾದ ಸಾಲ್ಡಾಂಘಾ ಮತ್ತು ಶ್ರೀಷ್ಠರೂ ಬೇಗನೇ ರೇಶನಿಂಗ್ ಬರಲಿ ಎಂದರು.

ಶ್ರೀ. ನಾಗರಾಜಯ್ಯ: ಹತ್ತು ರೂಪಾಯಿ ಬೆಲೆಗೆ ನಾವು ಅಕ್ಕಿ ಕೊಡುತ್ತೇವೆಂದ ಮೇಲೆ ಅದಕ್ಕೆ ನಾವು ಇನ್ನು ಆಗುವುದಿಲ್ಲ ಹೆನ್ನಲಾರೆವು. ಆದರೆ ರೇಶನಿಂಗ್ ಜಾರಿಮಾಡದಿದ್ದರೆ ನಮಗೆ ಅನ್ಯಾಯ ಮಾಡಿದಂತಾಗುತ್ತದೆ."

ಶ್ರೀ. ಕೈತಾನ್ ಲೋಬೊ "ಇನ್ನು ಒಂದು ವಾರದೊಳಗೆ ರೇಶನಿಂಗ್ ಬರಬೇಕು. ಅಷ್ಟರಲ್ಲಿಯೇ ಈಗ ರೂ ೧೮ಕ್ಕೆ ಏರಿರುವ ಬೆಲೆಯಿಳಿಸುವ ಕಾರ್ಯವನ್ನೂ ಕೈಕೊಳ್ಳಬೇಕು."

ಶ್ರೀ. ಗ್ರಬ್ಸ್ 'ಸ್ಥಳೀಯ ಅಧಿಕಾರಿಗಳ ಮೇಲಿನ ದೂರನ್ನು ಕೇಳಲು ನಾನು ಸಿದ್ಧನಿಲ್ಲ. ನಾನೊಬ್ಬ ಸಣ್ಣ ಅಧಿಕಾರಿ. ನೀವದನ್ನು ಶ್ರೀ. ರಾಮಮೂರ್ತಿಗಳು ಬಂದಾಗ ಹೇಳಿ. ರೇಶನಿಂಗ್ ನಗರದ ಸುತ್ತು ಮುತ್ತು ಇರುವಂತೆ ಮಾಡುತ್ತೇವೆ. ತಿಂಗಳಿಗೆ ೩೦ ಸಾವಿರ ಮುಡಿ ಅಕ್ಕಿ ಬೇಕಾಗುವುದು. ಕಲೆಕ್ಟರರು ಅದನ್ನು ಒದಗಿಸುವ ಭರವಸೆ ಕೊಟ್ಟಿರುವರು. ರೇಶನಿಂಗ್ ಏರ್ಪಾಡು ಬೇಗನೇ ಮಾಡುತ್ತೇವೆ, ಆದರೆ ನಿಶ್ಚಿತ ದಿನ ಹೇಳಲಾರೆ. ಹಾಗೆ ಹೇಳಿದರೆ ಅಷ್ಟರಲ್ಲಿ ಇದ್ದ ಸಂಗ್ರಹವನ್ನು ಹೆಚ್ಚಿನ ಬೆಲೆಗೆ ಮಾರಲು ನಿಮ್ಮಲ್ಲಿ ಕೆಲವರು ಪ್ರಯತ್ನಿಸಬಹುದು.

ಮೂರು ರೂಪಾಯಿ ಸಂಬಳದವರಿಗೆ ಕೊಡುವ ಅಕ್ಕಿ ಎಷ್ಟು ಹಾಳಾದುದೆಂದು ಶ್ರೀ. ಸಾಲ್ಡಾಂಘಾರು ಶ್ರೀ ಗ್ರಬ್ಬರಿಗೆ ತೋರಿಸಿದರು. ಶ್ರೀ. ಪೆರೋಲಿಯವರು ಧನ್ಯವಾದಗಳನ್ನರ್ಪಿಸಿದರು ಶ್ರೀ ಗ್ರಬ್ಬರು ರೇಶನಿಂಗ್ ಜಾರಿ ಮಾಡುವ ವಿಷಯ ನಗರವನ್ನು ಸುತ್ತುಮುತ್ತನ್ನು ಸಂದರ್ಶಿಸಿ, ಕಾಸರಗೋಡು ತಹಶಿಲ್ದಾರರೊಡನೆ ಮಾತುಕತೆ ನಡೆಸಿ ತಾರೀಕು ೧೪ರಂದು ಬೆಳಗ್ಗೆ ಮದ್ರಾಸಿಗೆ ತೆರಳಿದರು

ವರ್ಗದಾರರಲ್ಲಿ ಒಂದು ವಿನಂತಿ

ಶ್ರೀ ಧರ್ಮಸ್ಥಳ ಮಂಜಯ ಹೆಗ್ಡೆಯವರು ಜಿಲ್ಲೆಯ ಆಹಾರ ವಿತರಣೆಯ ವಿಷಯದಲ್ಲಿ ವರ್ಗದಾರರು ಸರಕಾರದೊಡನೆ ಸಹಕರಿಸಬೇಕು, ಎಂಬುದಾಗಿ ಒಂದು ಪ್ರಕಟಣೆಯಿತ್ತಿರುವರು. ಅದರ ಕೆಲವು ಮುಖ್ಯಾಂಶಗಳು ಕೆಳಗೆ ಕೊಡಲಾಗಿದೆ

"ಕೆಲ ತಿಂಗಳ ಹಿಂದೆ ಅಕ್ಕಿಯ ಬೆಲೆ ಏರುತ್ತಾ ಹೋದುದರಿಂದ, ಖಾಸಗಿ ಪ್ರಯತ್ನವು ಪ್ರಯೋಜನಕಾರಿಯಲ್ಲವೆಂದು ತಿಳಿದ ಕಲೆಕ್ಟರ್ ದೊರೆಗಳವರು ರೈತರ ಮತ್ತು ಸಾಹುಕಾರರ ಅಕ್ಕಿಯನ್ನು "ರಿಕ್ವಿಸಿಶನ್" ಮಾಡಿಕೊಂಡರು. ಅನೇಕರು ಸಹಕಾರ ಮಾಡದೆ ಅಕ್ಕಿಯನ್ನು ಅಡಗಿಸಿ ಇಟ್ಟು ಇನ್ನೂ ಇನ್ನೂ ಹೆಚ್ಚಾದ ಬೆಲೆ ಬರಲೆಂದು ಬಯಸಿದಂತೆ ವರ್ತಿಸಿದರು. ಅಕ್ಕಿಯ ಬೆಲೆ ಮುಡಿಗೆ ರೂ. ೧೬—೦—೦ರಿಂದ ರೂ. ೧೭—೦—೦ರ ವರೆಗೆ ಏರಿ ಹೋಗುವುದಾಯಿತು ಅನಂತರ ಈ ಪರ್ಷ ವರ್ಗದಾರರನ್ನು ಕೇಳದೇನೆ ವಕ್ಲುಗಳ ಭತ್ತವನ್ನು ಪ್ರಥಮದಲ್ಲಿಯೇ 'ರಿಕ್ವಿಸಿಶನ್' ಅಧಿಕಾರವತ್ತಾಗಿ ಕೇಳಿದ್ದರಿಂದ ಬಹಳ ಭಯವನ್ನುಂಟು ಮಾಡಿದೆ. ಇದಕ್ಕೋಸ್ಕರ ನಮ್ಮ ಭೂಮಾಲಿಕ ಸಂಘದವರು ಸೇರಿ ಈ ಕಾಲಕಲ್ಲಿ ಸರಕಾರದವರೊಡನೆ ಸಹಕರಿಸದಿದ್ದಲ್ಲಿ ಅನರ್ಥಗಳು ಹೆಚ್ಚಾಗಬಹುದೆಂದು ಯೋಚಿಸಿ "ವರ್ಗದಾರರ ಅಕ್ಕಿಯು ಮುಡಿಗೆ ರೂ ೧೧ರಂತೆ ಕ್ರಯಕ್ಕೆ ಸಿಕ್ಕುವಂಥಾದ್ದಾದರೆ ತಮ್ಮ ಉತ್ಪತ್ತಿಯ ಶೇಕಡಾ ೫೦ರಂತೆ ಕೊಡಲು ಸಿದ್ಧರಿದ್ದೇವೆ ಪರಂತು ವಕ್ಲುಗಳಿಂದ ಭತ್ತವನ್ನು ಕೊಂಡು ಹೋಗಿ ಮಿಲ್ಲುಗಳ ಮೂಲಕ ಅಕ್ಕಿಯನ್ನು ಎಷ್ಟು ಮಾತ್ರಕ್ಕೂ ಮಾಡಿಸಕೂಡದು" ಎಂದು ಹೇಳಿದರು.

"ಇವನ್ನೆಲ್ಲಾ ಮದ್ರಾಸು ಸರಕಾರದವರು ಮನ್ನಿಸಿ ರೈತರು ತಮ್ಮ ಅಕ್ಕಿಯನ್ನು ತಾಲೂಕಿನ ಮುಖ್ಯ ಪಟ್ಟಣಗಳಲ್ಲಿ ಕೋ ಅಪರೇಟಿವ್ ಸೊಸ್ಶಾಟಿಗಳ ಸ್ಟೋರಿಗೆ ಕೊಂಡು ಹೋಗಿ ಕೊಡುವುದಾದರೆ ಮತ್ತು ಸೊಸ್ಶಾಟಿಯವರು ಕೊಂಡುಕೊಳ್ಳಲು ಒಪ್ಪಿದ್ದರಿಂದಲೂ ಕೂಡಾ ಅಲ್ಲಿ ಮುಡಿಗೆ ರೂ ೧೧ರ ಪ್ರಕಾರ ಪಡೆಯಬಹುದೆಂಬ ಹುಕುಮನ್ನು ಕೊಟ್ಟಿದ್ದಾರೆ ಇದರಿಂದ ವಕ್ಲುಗಳು ಬತ್ತವನ್ನು ತಾವೇ ಅಕ್ಕಿ ಮಾಡಬಹುದಾಗಿದೆ ಮತ್ತು ನಮ್ಮ ಮಾರಾಟದ ಅಕ್ಕಿಯ ಹೆಚ್ಚಿನ ಅಂಶಕ್ಕೆ ಸಾಮಾನ್ಯವಾದ ರಾಶಿ ಅಕ್ಕಿ ಮುಡಿ ೧ರ ರೂ ೧೧ರಂತೆ ಕ್ರಯವೂ ಸಿಗಬಹುದು ಪ್ರಕೃತ ತಿಂಗಳಿಗೆ ೬—೭ ಸಾವಿರ ಮುಡಿ ಅಕ್ಕಿಯನ್ನು ಫೆಬ್ರವರಿ ತಿಂಗಳ ತನಕ ಮಂಗಳೂರು ಪಟ್ಟಣಕ್ಕೆ ಸಿಕ್ಕುವಂತೆ ನಾವು ವರ್ಗದಾರರು ಹೇಗಾದರೂ ಕೋ-ಅಪರೇಟಿವ್ ಸ್ಟೋರ್ಸ್‌ಗಳ ಮೂಲಕ ಒದಗಿಸಿಕೊಡಲೇಬೇಕಾಗುವುದು. ಹೀಗೆ ವರ್ಗದಾರರು ಮಾಡತಕ್ಕ ಜವಾಬ್ದಾರಿಯ ಕರ್ತವ್ಯಗಳನ್ನು ಮಾಡಿದ್ದಾದರೆ ಸರಕಾರದವರಿಂದ ಹೆಚ್ಚಿನ ತೊಂದರೆ ಬರಲು ಕಾರಣವಿಲ್ಲ

'ಆವಶ್ಯಕತೆಯುಳ್ಳ ರೈತರು ಸ್ವತಹ ಕಲೆಕ್ಟರರನ್ನಾಗಲಿ ಅಥವಾ ಡಿಪ್ಯುಟಿ ಕಲೆಕ್ಟರರನ್ನಾಗಲಿ ನೋಡಿ ತಾವು ಸೇಕಡಾ ಇಂತಿಷ್ಟೇ ಅಕ್ಕಿಯನ್ನು ಸೊಸ್ಶಾಟಿಗೆ ಒದಗಿಸಿಕೊಡುವುದಾಗಿ ಭರವಸೆ ಕೊಡುವಲ್ಲಿ ಅಂಥ ವರ್ಗದಾರರ ಬಗ್ಗೆ 'ರಿಕ್ವಿಸಿಶನ್' ಹುಕುಮನ್ನು ಸಡಿಲುಮಾಡಲೂ ಬಹುದು. ಆದರೆ ಖರ್ಚು ಕಳೆದು ಉಳಿಯುವ ಅಕ್ಕಿಯನ್ನೆಲ್ಲಾ ಸೊಸ್ಶಾಟಿಗೇನೆ ಕೊಡಬೇಕಾಗುವುದು ಇಲ್ಲವಾದರೆ 'ರಿಕ್ವಿಸಿಶನ್' ಮಾಡಿದರೆ ಧರ್ಮ ಸಂಸ್ಥೆಗಳ ಖರ್ಚಿಗೆ ಕೂಡಾ ಸಮಯಕ್ಕೆ ಅಕ್ಕಿ ಸಿಕ್ಕದಂತೆ ಆಗಬಹುದು ವರ್ಗದಾರರು ಕೂಡಾ ತಮ್ಮ ಅಕ್ಕಿಯನ್ನು ತಪ್ಪದೆ ಸೊಸ್ಶಾಟಿಗೇನೆ ಕೊಡಬೇಕು ವಕ್ಲುಗಳು ಕೂಡಾ ಅಕ್ಕಿಯನ್ನು ಸೊಸ್ಶಾಟಿಗೆ ಕೊಡಬೇಕು ಆ ಸೊಸ್ಶಾಟಿಯ ಮೂಲಕವೇ ವಕ್ಲುಗಳು ತಮ್ಮ ಗೇಣಿಯನು ಅವರ ಧನಿಯವರಿಗೆ ಸಂದಾಯಮಾಡಬೇಕಾಗುವುದು ಕೋ ಒಪರೇಟಿವ್ ಸೊಸ್ಶಾಟಿಗಳ ಮೂಲಕ ವಕ್ಲುಗಳು ಗೇಣಿಯನ್ನು ಸಲಾಯಿಸುವ ರೀತಿ ಹೇಗೆ? ಎಂಬುದು ಇನ್ನೂ ನಿಶ್ಚಿತವಾಗಲಿಲ್ಲ ಈ ವಿಚಾರದಲ್ಲಿ ವರ್ಗದಾರರು, ಇಲ್ಲಿಗೆ ಬರಲಿಕ್ಕಿರುವ ಸರಕಾರದ ಮಂತ್ರಿಗಳಾದ ಶ್ರೀ. ರಾಮ ಮೂರ್ತಿಯವರನ್ನೇ ಕೇಳಲಿಕ್ಕಿರುವರು. ಆದುದರಿಂದ ನಮ್ಮ ಭೂಮಾಲಿಕ ಸಂಘದ ಅಭಿಪ್ರಾಯವನ್ನು ಪೂರ್ಣ ವಕ್ಲುಗಳೂ ಧನಿಯವರೂ ಸರ್ವರೂ ಬೆಂಬಲ ಕೊಟ್ಟು ಸಾರ್ಥಕಮಾಡಬೇಕಾಗಿ ನನ್ನ ವಿನಂತಿ'

"ಆಮೆರಿ ಲಿನ್‌ಲಿತ್‌ಗೋ ಹರ್ಬರ್ಟರನ್ನು ವಿಚಾರಣೆಗೆ ಗುರಿಪಡಿಸಿ"

ಬಂಗಾಳದ ದುಸ್ಥಿತಿ ವಿಷಯದಲ್ಲಿ ಆಮೆರಿ ಲಿನ್‌ಲಿತ್‌ಗೋ, ಜಾನ್ ಹರ್ಬರ್ಟ ಇವರನ್ನು ಖಟ್ಲೆಗೆ ಗುರಿಪಡಿಸಬೇಕೆಂದು ಕೇಂದ್ರ ಎಸೆಂಬ್ಲಿಯ ಕಾಂಗ್ರೆಸ್ ಸದಸ್ಯರಾದ ಶ್ರೀ ಪಂಡಿತ ಶಂಭು ದಯಾಳ ಮಿಶ್ರರು ಒಂದು ಉಪಸೂಚನೆ ಕಳಿಸಿದ್ದಾರೆ

'ಕರ್ಣಾಟಕ ವೈಭವ' ಜಪ್ತಿ

'ಕರ್ಣಾಟಕ ವೈಭವ' ಕಚೇರಿಯನ್ನೂ ಅದರ ಸಂಪಾದಕ ಶ್ರೀ. ವಿ. ಬಿ. ನಾಯಕರ ಮತ್ತು ಬಿಂದಾಚಾರ್ಯ ಕಟ್ಟಿ ಇವರ ಮನೆಗಳನ್ನು ಜಪ್ತಿಮಾಡಿರುವರು. ಶ್ರೀ. ವಿ. ಬಿ. ನಾಯಕರ ಮೇಲೆ ಖಟ್ಲೆ ಹಾಕಲಾಗಿದೆ. ಇದರಂತೆ ಶ್ರೀ ಆದ್ಯ ಅನಂತಾಚಾರ್ಯರ ಮನೆಆಸ್ಪತ್ರೆಗಳನ್ನು ಜಪ್ತಿ ಮಾಡಲಾಗಿದೆ.

ಕಾಮಶಾಸ್ತ್ರದ ಗ್ರಂಥಗಳು

ಅನಂಗರಂಗ ೧—೮—೦
ಸ್ತ್ರೀಪುರುಷರ ಲಕ್ಷಣ, ಸಂಭೋಗ ಕಾಲ ನಿರ್ಣಯ, ರತಿಸಮಯದ ಹಾವಭಾವಗಳು, ದ್ರವಣಾದಿ ಔಷಧಗಳು ಇವೇ ಮೊದಲಾದ ರತಿಶಾಸ್ತ್ರದ ರಹಸ್ಯಮಯ ವಿಷಯಗಳು

ವಿಕೃತ ಕಾಮ ೧—೮—೦
ಬಾಲ್ಯದ ಕಾಮವಿಕಾರಗಳು, ಸ್ವಾನುರತಿ, ಹಿಂಸಾರತಿ, ಪ್ರದರ್ಶನರತಿ, ಸಲಿಂಗರತಿ ಇತ್ಯಾದಿ

ಪೌರುಷ ೧—೮—೦
ನಪುಂಸಕರೆಂದು ಮರುಗಬೇಡಿ, ಪುನಃ ಪೌರುಷ ಪ್ರಾಪ್ತಮಾಡಿಕೊಳ್ಳಲು ನೂರಾರು ಉಪಾಯಗಳಿವೆ

ಗರ್ಭನಿರೋಧ (ಅಚ್ಚಿನಲ್ಲಿದೆ) ೧—೮—೦
ಸಂತತಿ ನಿಯಮನಕ್ಕೆ ಸರಿಯಾದ ದಾರಿ ಬೇಕೆ? ಡಾ। ಗೋಪಾಲ ಕೃಷ್ಣರಾಯರು ಬರೆದ ಈ ಹೊಸ ಪುಸ್ತಕ ಓದಿರಿ

ದಾಂಪತ್ಯ ದರ್ಶನ ೧—೮—೦
ಸಂಭೋಗ ಸುಖ, ಗಂಡಹೆಂಡಿರಲ್ಲಾಗುವ ಐಕ್ಯೈಕ್ಯ, ಅತಿ ಲಂಪಟತನದ ದುಷ್ಪರಿಣಾಮ, ರತಿ ಸೌಖ್ಯಕ್ಕೂ ಸಂತಾನ ಸುದೃಢತೆಗಳಿಗೂ ಇರುವ ಸಂಬಂಧಗಳ ಬಗ್ಗೆ ದಿ। ಪಂಡಿತ ತಾರಾನಾಥರಾಯರ ಕಾಮ ಮನೋವೈಜ್ಞಾನಿಕ ಗ್ರಂಥ.

ರತಿರಹಸ್ಯ ೧—೮—೦
ತಾರುಣ್ಯದ ಮದ, ಸ್ತನಗಳ ಸೌಂದರ್ಯ, ಸಮಾಗಮ ಶಯನ ಇತ್ಯಾದಿ

ಪ್ರೇಮಕಲಾ ೧—೮—೦
ಅಶ್ಲೀಲವಲ್ಲ! ಶಾಸ್ತ್ರೀಯ ಗ್ರಂಥವೆಂದು ಕೋರ್ಟಿನ ನಿರ್ಣಯವೇ ಆಗಿದೆ

ಭ್ರಾಂತಿ ಮತ್ತು ಲೈಂಗಿಕ ಶಿಕ್ಷಣ ೧—೮—೦
ಪ್ರಸಿದ್ಧ ಡಾಕ್ಟರುಗಳ ಮೂರು ಶಾಸ್ತ್ರೀಯ ಪುಸ್ತಕಗಳು ಉನ್ಮಾದ, ವೇಶ್ಯಾವೃತ್ತಿಯ ಹಾವಳಿ ಲೈಂಗಿಕ ಹಾಗೂ ಗುಪ್ತ ರೋಗಗಳ ಚಿಕಿತ್ಸೆ

ವಿ.ಪಿ. ವೆಚ್ಚ ಬೇರೆ: ನಮ್ಮ ಕ್ಯಾಟಲಾಗಿಗೆ ಒಂದಾಣೆ ಅಂಚೆಚೀಟು ಕಳಿಸಿರಿ

ಸಮಾಜ ಪುಸ್ತಕಾಲಯ ಧಾರವಾಡ.

(೨ನೇ ಪುಟದಿಂದ)

ಅಕ್ಕಿ ಭತ್ತದ ವಿಚಾರ

ಜಿಲ್ಲಾ ವ್ಯಾಪಾರಿಗಳ ವಿನಂತಿ.

'ಕಾಸರಗೋಡಿನಿಂದ ಹೆಚ್ಚು ಕ್ರೇಳಿಕೆ ಬರುವುದೇ ಕ್ರಯ ಏರಲು ಒಂದು ಕಾರಣವಾಗಿದೆ. ಅವರು ಕೊಂಡುಕೊಳ್ಳುವ ಅಕ್ಕಿ ಅವರ ಉಪಯೋಗಕ್ಕಾಗಿಯೇ. ಆದರೂ ಹಾಗೆ ಕ್ರಮವಿಲ್ಲದೆ ಹೋಗುತ್ತಾ ಇರುವುದರಿಂದ ಮಂಗಳೂರು ಧಾರಣೆ ಅಧಿಕವಾಗುತ್ತದೆ. ಕ್ರಯ ಕಡಿಮೆನಿಂತ ಪ್ರತಿಯೊಂದು ಸಲವೂ ಅಲ್ಲಿಗೆ ಅಕ್ಕಿ ಇಲ್ಲಿಂದ ಹೋಗುತ್ತದೆ. ನಾವಾದರೋ, ಪರ್ಮಿಟು ಇಲ್ಲದೆ ರೈಲಿನಿಂದ ಕಳುಹಿಸಲಾಗುವುದಿಲ್ಲ. ಆದರೆ ಬಂಟ್ವಾಳ ಮಂಗಳೂರುಗಳಿಂದ ಲೋರಿಗಳಲ್ಲಿ ಒಂದೇ ಸವನೆ ಅಲ್ಲಿಗೆ ಅಕ್ಕಿ ಹೋಗುತ್ತಾ ಇದೆ. ಇದರಿಂದ ಕ್ರಯ ಹೆಚ್ಚಾಗುತ್ತಿದೆ. ಕಾಸರಗೋಡಿಗೆ ೪ ಲಕ್ಷ ಮುಡಿ ಅಕ್ಕಿ ಬೇಕು. ಇದನ್ನು ಒಂದು ಕ್ರಮದಿಂದ ಕಳುಹಿಸಿದರೆ ಈ ತೊಂದರೆ ಆಗಲಿಕ್ಕಿಲ್ಲ. ಹಾಗಾಗಿ ಕಾಸರಗೋಡು ತಾಲೂಕಿನ ಕೆಲ ಕಡೆಗಳಲ್ಲಿ ರೇಶನಿಂಗ್ ಜಾರಿಗೆ ತರಲೇಬೇಕು

ಇಂದಿನ ಪರಿಸ್ಥಿತಿ

"ಇಂದಿನ ಪರಿಸ್ಥಿತಿ ನಮಗೆ ತುಸು ಕಳವಳ ಹುಟ್ಟಿಸಿದೆ. ಸಾಧಾರಣ ಪರಿಸ್ಥಿತಿಯಲ್ಲಿ ಈ ಸಮಯ ನಾವು ಮಂಗಳೂರಲ್ಲಿಯೇ ೭೫,೦೦೦ ಮುಡಿ ಅಕ್ಕಿ ಇಡುತ್ತಿದ್ದೆವು. ಕೀಳ್ತರಗತಿಯ ಅಕ್ಕಿ ಈಗ ಉಂಟೇನೋ ನಿಜ. ಅದು ಕೂಡಾ ಹೆಚ್ಚಿಲ್ಲ. ಸ್ವತಂತ್ರ ವ್ಯಾಪಾರಿಯಲ್ಲಿ ೫೦೦೦ ಮುಡಿಗಿಂತ ಹೆಚ್ಚಿಲ್ಲ. ಒಳ್ಳೆಯ ತರಗತಿಯ ಅಕ್ಕಿ ಸಿಗುವಂತಿಲ್ಲ. ವರ್ಗದಾರರು ಜನವರಿ ಮೇಲೆ ತಮ್ಮ ಅಕ್ಕಿ ಕೊಡುವ ಭರವಸೆಯಿತ್ತಿದ್ದಾರೆ. ಕುಂದಾಪುರದಲ್ಲಿ ಸ್ವಲ್ಪ ಅಕ್ಕಿ ಸಂಗ್ರಹವುಂಟು, ಅದನ್ನು ಮಂಗಳೂರಿನ ಸಾರ್ವಜನಿಕರಿಗೆ ಚಿಲ್ಲರೆ ವ್ಯಾಪಾರರೂಪದಲ್ಲಾದರೂ ಸಿಗುವಂತೆ ಮಾಡಬೇಕು. ವರ್ಗದಾರರು ಸಹಕಾರೀ ಸಂಘಗಳಿಗಾದರೂ ಭರವಸೆಯಿತ್ತ ಕ್ರಯದಲ್ಲಿ ಕೊಡಲು ಮುಂದೆ ಬಂದಾರೆ? ಅವರು ಹಾಗೆ ಮಾಡುತ್ತಾರೋ ಇಲ್ಲವೋ ತಿಳಿಯದು. ಆದರೆ ವರ್ಗದಾರ ಪ್ರತಿನಿಧಿಗಳು ಕಲೆಕ್ಟರಲ್ಲಿ, ವ್ಯಾಪಾರಿಗಳು ನವೆಂಬರದಲ್ಲಿ ಪಡಕೊಂಡ ಅಕ್ಕಿ ಸಂಗ್ರಹದ ಕುರಿತು ಸೂಚನೆ ಕೊಡುತ್ತಾರೆ. ಸಾರ್ವಜನಿಕರಿಗೆ ಆಹಾರ ಒದಗಿಸುವ ಯಾವುದೇ ಏಜೆನ್ಸಿಯೂ ಇರದಿರುವಾಗ ವ್ಯಾಪಾರಿಗಳು ಆ ಕೆಲಸ ಮಾಡಬೇಕಾಗಿದೆಯೆಂಬುದನ್ನವರು ಮರೆತಂತೆ ತೋರುತ್ತದೆ. ರೇಶನಿಂಗ್ ಮಾಡದೆ ಉಪಾಯವಿಲ್ಲ. ಕಾಸರಗೋಡು ತಾಲೂಕು ಮತ್ತು ಮಂಗಳೂರಿಗೆ ಬೇಕಾದಷ್ಟು ಅಕ್ಕಿ ಅವರು ಒದಗಿಸಿಕೊಡಲಿ. ಉಡುಪಿ ವರ್ಗದಾರರ ಕಡೆಯ ಇನ್ನೊಂದು ವಿಚಿತ್ರ ದೂರೆಂದರೆ ವ್ಯಾಪಾರಿಗಳು ಕ್ರಯ ಹೆಚ್ಚಿಸುತ್ತಾರೆಂದು. ವರ್ಗದಾರರಿಗೆ ಹಸಿವೇನೆಂದು ತಿಳಿದಿಲ್ಲ. ವ್ಯಾಪಾರಿ ಹಸಿದವರಿಗೆ ಅಕ್ಕಿ ಒದಗಿಸಿ ಕೊಡುತ್ತಾನೆ. ಉಡುಪಿ ವರ್ಗದಾರರು ರೂ. ೧೦ರ ಕ್ರಯದಲ್ಲಿ ಸಹಕಾರೀ ಸಂಘಗಳಿಗೆ ಮಾರಾಟಮಾಡದೆ, ಜನರು ಹಸಿವಿನಿಂದ ನರಳುವವರೇಗೆ ನೋಡಿ ವ್ಯಾಪಾರಿ ಬಂದು ಕ್ರಯ ಹೆಚ್ಚಿಸಲು ಕಾಯುತ್ತಾನೆ. ಹೀಗೆ ಮಾಡುತ್ತಾ ವರ್ಗದಾರರು ಹೇಳುವುದು ವ್ಯಾಪಾರಿ ಕ್ರಯ ಹೆಚ್ಚಿಸುತ್ತಾನೆಂದೊ?

'ನಾವೀ ವಿನಂತಿ ಮಾಡುವಾಗ ಯಾರ ಮೇಲೂ ದೋಷ ಆರೋಪಿಸುವುದಿಲ್ಲ. ನಮಗಿದರಿಂದ ಪಾರ ದೊರಕಿತು. ಇದರಿಂದಾಗಿ ನಾವು ರೇಶನಿಂಗ್ ಕೂಡಲೇ ಜಾರಿಗೆ ಬರಬೇಕೆನ್ನುತ್ತೇವೆ. ಮಂಗಳೂರು ನಗರ ಮತ್ತು ಕಾಸರಗೋಡು ತಾಲೂಕಿನಲ್ಲಿ ರೇಶನಿಂಗ್ ಜಾರಿ ಮಾಡಿರೆಂದು ನಾವು ನಿಮ್ಮನ್ನು ಕೇಳಿಕೊಳ್ಳುವೆವು. ನಾವೀ ವಿಷಯ ನಮ್ಮ ಸಂಪೂರ್ಣ ಸಹಕಾರ ಕೊಡುವೆವು.'

ಮಹಾಸಭೆಯ ರಜತ ಮಹೋತ್ಸವ

ಅಮೃತಸರದಲ್ಲಿ ಜರಗಲಿರುವ ಅ. ಭಾ ಹಿಂ ಮಹಾಸಭೆಯ ರಜತೋತ್ಸವ ಸ್ವಾಗತ ಸಮಿತಿಯವರು ಸುಮಾರು ೮೦೦ ಮಂದಿ ಮುಖಂಡರಿಗೆ ಆಮಂತ್ರಣ ಕಳುಹಿಸಿರುವರು. ಇವರಲ್ಲಿ ಸಪ್ರು, ಜಯಕರ್, ಮಾಲವೀಯ, ಡಾ ರಾಧಾಕುಮುದ ಮುಖರ್ಜಿ ಮೊದಲಾದವರಿರುವರು.

FIRST AND FOREMOST

FIRST AND FOREMOST among the ideals of the CANARA BANK is the ideal of Service to its Customers

ESTD. 1906.

CANARA BANK LTD.

ಮದ್ರಾಸಿನ ಮೇಲೆ ಜಪಾನ್ ವಿಮಾನ

'ತಾ. ೧೨ರಂದು ಹಾರಿತು; ಧಾಳಿಯ ಎಚ್ಚರಿಕೆ ಕೊಡಲಾಗಿದ್ದು ಬಾಂಬು ಬೀಳಲಿಲ್ಲ—ಇದೇ ದಿನ ಸಿಲೋನಿನ ಮೇಲೂ ಶತ್ರು ವಿಮಾನ ಬಂದಿತ್ತು. ಒಂದು ವಿಮಾನವನ್ನು ಹೊಡೆದುರುಳಿಸಲಾಗಿದೆ'ಯೆಂದು ಸರಕಾರೀ ಪ್ರಕಟಣೆ ತಿಳಿಸುತ್ತದೆ.

ಪುಸ್ತಕಾವಲೋಕನ

ಸರ್ವೋದಯ—ಲೇಖಕರು ಮಹಾತ್ಮಾಗಾಂಧೀ, ಮೈಸೂರು ಗ್ರಾಮ ಸೇವಾನಿಲಯದವರು ಇದನ್ನು ಅನುವಾದಿಸಿ ತಮ್ಮ ಗ್ರಾಮ ಸೇವಾ ಸಾಹಿತ್ಯದ ೪ನೆಯ ಪುಸ್ತಕವಾಗಿ ಪ್ರಕಟಿಸಿದ್ದಾರೆ. ಆಕಾರದ ೫೭ ಪುಟಗಳು ಬೆಲೆ ನಾಲ್ಕಾಣೆ

ಗಾಂಧಿಜಿಯ ಜೀವನದಲ್ಲಿ ಪ್ರಭಾವ ಬೀರಿದ ಮೂವರಲ್ಲಿ ರಸ್ಕಿನ್ ಒಬ್ಬ, ಆತನ Unto this last ಕೃತಿ ಆ ಕೃತಿಯನ್ನು ಓದಿ ಅವರ ಪರಿವರ್ತನ ಮಾಡಿದರು ಗಾಂಧಿಜಿ ಅದೇ 'ಸರ್ವೋದಯ'ವಾಯಿತು

(೧) ಎಲ್ಲರ ಹಿತದಲ್ಲಿಯೇ ತನ್ನ ಹಿತವು ಅಡಗಿದೆ, (೨) ವಕೀಲನ ವೃತ್ತಿಯೂ ಕ್ಷೌರಿಕನ ಕಸಬೂ ಸಮಾನ ಗೌರವದ್ದು, (೩) ಶ್ರಮಜೀವಿಯ ಬಾಳೇ ಧನ್ಯವಾದುದು ಇವು ಮೂರು ತತ್ವಗಳನ್ನು ಗಾಂಧಿಜಿ Unto this last ಕೃತಿ ಓದಿ ತಿಳಕೊಂಡರು, ಅದು ಅವರ ಹೃದಯಕ್ಕೆ ಅಂಟಿಕೊಂಡವು. ಭಾರತದ ಜನತೆಗೆ ಪ್ರಪಂಚದ ಜನತೆಗೆ ಇದರ ಮರ್ಮ ತಿಳಿಯಲೆಂದು ಅವರು ಸರಳವಾಗಿ ಇದನ್ನು ಅನುವಾದಿಸಿದರು. ಕನ್ನಡ ಅನುವಾದದಲ್ಲಿಯೂ ಆ ಸರಳತೆ ಚೆನ್ನಾಗಿ ಒಂದಿದೆ

'ಸತ್ಯದ ಮೂಲ' ಎಂಬುದು ಮೊದಲನೆಯ ಅಧ್ಯಾಯ. ನ್ಯಾಯ ನಡತೆ ವ್ಯವಹಾರಗಳಲ್ಲಿ ಸತ್ಯ ಜೀವನ ಬೇಕೆಂದು ಇಲ್ಲಿ ಪ್ರತಿಪಾದಿತವಾಗಿದೆ. ಉಪದೇಶಕರ ವ್ಯಾಪಾರಿಗಳ ಸಿಪಾಯಿಗಳ, ಕೂಲಿಗಳ, ದನಿಗಳ, ಸ್ವಾರ್ಥತ್ಯಾಗ ಮನೆಯವರ ಜೀವನದ ಮೂಲ ಇದೇ ಆಗಿರಬೇಕೆಂದು ಇಲ್ಲಿ ತಿಳಿಸಲಾಗಿದೆ

ಎರಡನೆಯದು 'ಧನದ ದಮನಿ'ಗಳೆಂಬುದು. ನೀತಿ ನ್ಯಾಯವಿಲ್ಲದೆ ಹಣ ಗಳಿಸುವುದನ್ನು ಆರ್ಥಿಕ ದೃಷ್ಟಿಯಿಂದಲೇ ವಿವೇಚಿಸಿ ಅಲ್ಲಗಳೆಯಲಾಗಿದೆ. ನಿಜವಾದ ಐಶ್ವರ್ಯ ಒಳ್ಳೆಯ ಮನುಷ್ಯರೇ ಎಂದು ಸಿದ್ಧಾಂತಮಾಡಲಾಗಿದೆ

ಮೂರನೆಯ ಅಧ್ಯಾಯ 'ನ್ಯಾಯನಿಷ್ಠೆ' ಮನುಷ್ಯ, ರಾಷ್ಟ್ರ ಇವುಗಳ ಜೀವನದಲ್ಲಿ ಮುಖ್ಯವಾಗಿರಬೇಕಾದದ್ದು ನ್ಯಾಯನಿಷ್ಠೆಯೆಂಬುದು ಇಲ್ಲಿನ ವಿವೇಚನೆ

ಕೊನೆಗೆ 'ಸತ್ಯಯಾವುದು' ಎಂಬುದನ್ನು ವಿವೇಚಿಸಿ ಸತ್ಯಸಂಧನಾದ ಮನುಷ್ಯನೇ ನಿಜವಾದ ಸಂಪತ್ತು ಎಂದು ಸಿದ್ಧಾಂತ ಮಾಡಲಾಗಿದೆ. ಅಂತ್ಯದಲ್ಲಿ ಗಾಂಧಿಜಿ ತನ್ನ ಉಪಸಂಹಾರ ಬರೆದು ಸ್ವರಾಜ್ಯ, ಅದರ ಸಂಪಾದನೆ, ಸತ್ಯಾಗ್ರಹದ ಮಹಿಮೆಗಳನ್ನು ಸೂಕ್ಷ್ಮವಾಗಿ ತಿಳಿಸಿರುವರು.

ಯಾವುದೇ ವೃತ್ತಿಯ ಮನುಷ್ಯನಾದರೂ ಇದನ್ನು ಓದಿ ಪಠಿಸಿ ತನ್ನ ಬಾಳನ್ನು ತಿದ್ದಿಕೊಳ್ಳಬಹುದು. —ಕಯ್ಯಾರ.

ರೈಲುಬಂಡಿಗಳ ಸಮಯ

ಗಾಡಿಗಳು	ಮಂಗಳೂರಿಂದ ಹೊರಡುವ ಸಮಯ.	ಮಂಗಳೂರಿಗೆ ತಲಪುವ ಸಮಯ.
ಗುಡ್ಸ್ ಬಂಡಿ	ಬೆಳಗ್ಗೆ ೬-೨೫.	ರಾತ್ರಿ ೭-೩೧.
ಪಟೆಲ್ ಕಣ್ಣಾನ್ನೂರು ಪರಿಯಂತ ಮಾತ್ರ	ಸಾಯಂ. ೫-೫೫	ಬೆಳಗ್ಗೆ ೯-೨೫.
ಮಲಬಾರ್ ಎಕ್ಸ್‌ಪ್ರೆಸ್	ಬೆಳಗ್ಗೆ ೭-೫.	ಸಾಯಂ. ೭.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

The Bank of Mangalore Limited, Mangalore.
ESTD. 1931
HEAD OFFICE Mangalore. *BRANCHES* Moodabidri & Padubidri.
The Bank Undertakes to Collect Cheques, Demand and Documentary Bills at Most Competitive Rates.
ISSUES DRAFTS ON ALL IMPORTANT TOWNS IN THE DISTRICT
and also on
BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR, HONAVAR etc.
at very favourable rates
All kinds of inland banking business undertaken

(Regd)

ಅಮೃತಾಂಜನ

ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು, ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ, ಪಕ್ಷವಾತ, ನೋವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

ಅಮೃತಾಂಜನ ಡಿಪೋ. ಬೊಂಬಾಯಿ ಮದರಾಸು, ಕಲ್ಕತ್ತ.
ಮಂಗಳೂರಲ್ಲಿ ಶಾಖೆ ಕಂಪೆನಿಯಲ್ಲಿ ದೊರೆಯುವುದು.

ಜೀವವಿಮೆ ಮಾಡುವ ಪ್ರಯೋಜನವು ಇಂದು ಹಿಂದಿಗಿಂತ ಅಧಿಕವಾಗಿದೆ.

ದಿ ಬಾಂಬೆ ಲೈಫ್ ಅಷ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಇದರಲ್ಲಿ ಒಂದು ಪಾಲಿಸಿ ಪಡೆದು
ಈಗಲೇ ನೀವು ನಿಮ್ಮನ್ನು ಮತ್ತು ನಿಮ್ಮನ್ನು ಹೊಂದಿಕೊಂಡಿರುವವರನ್ನು ರಕ್ಷಿಸಿಕೊಳ್ಳಿರಿ!
ಪ್ರತಿನಿಧಿಗಳಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.
ಇನ್ಶೂರ್ ಮಾಡಲು ಅಥವಾ ಮಾಹಿತಿ ತಿಳಕೊಳ್ಳಲು ದಯಮಾಡಿ ಬರೆಯಿರಿ!

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:
ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

—: ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ: —

ಬೆಂಗಳೂರು ಬೊಂಬಾಯಿ ಮದ್ರಾಸು ಕಲ್ಲಿಕೋಟೆ ಮಂಗಳೂರು ಮತ್ತು ತ್ರಿವೇಂಡ್ರಂ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವ ವಿಧದ ದೋಷಗಳನ್ನು ಗುಣಪಡಿಸುವ ದಿವ್ಯೌಷಧ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು:—
(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಶೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ.

ಡಿಪೋ:—1. ಮರಾಠ ಗಲ್ಲಿ ಹುಬ್ಬಳ್ಳಿ.
2. 86 ಫ್ರಾಕ್ರೇಪ್ಸ್ ರೋಡ್, ಟ್ರಿಪ್ಲಿಕೇನ್, ಮದರಾಸು.

ದೊಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ಮೃತ್ಯುಂಜಯ ರಸ. ಕಾಲರಾ ರೋಗಕ್ಕೆ ಸಿದ್ಧೌಷಧ.
ಪಂಚವಟಿ ಮಾತ್ರೆ.
ಸೇವನಾ ಕ್ರಮಗಳು ಔಷಧಿಯೊಡನೆ ಇದೆ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಖು 26—11—1943 [ಸಂಚಿಕೆ 46]

ಕೇಂದ್ರ ಎಸೆಂಬ್ಲಿಯಲ್ಲಿ

ಆಹಾರ ವಿಚಾರ ಸರಕಾರದ ಮೇಲೆ ಟೀಕೆಗಳು!

ಜಿನ್ನರೂ ಕೆರಳಿದ್ದಾರೆ!

'ನೀವು ಅಪರಾಧಿಗಳೆಂದು ನೀವೇ ಬಲ್ಲಿರಿ'

ಕೇಂದ್ರ ಶಾಸನ ಸಭೆಯಲ್ಲಿ ಕಳೆದವಾರ ಭಾರತದ ಆಹಾರ ಪರಿಸ್ಥಿತಿ ಬಗ್ಗೆ ಚರ್ಚೆ ನಡೆಯಿತು. ಪ್ರಜಾಪ್ರತಿನಿಧಿ ಸದಸ್ಯರು ಭಾರತದ ಆಹಾರ ಸಮಸ್ಯೆಗೆ ಬಂಗಾಲದ ಬರಗಾಲಕ್ಕೆ ಸರಕಾರವೇ ಕಾರಣವೆಂದು ವಿಶದಪಡಿಸಿದರು. ಆಹಾರ ಮಂತ್ರಿ ಶ್ರೀ. ವಾತ್ಸನರು, ಸರಕಾರವು ಬೇಕಾದಷ್ಟು ಕೆಲಸಮಾಡಿದೆಯೆಂದೂ, ಇನ್ನೂ ಬೆಲೆ ನಿಯಂತ್ರಿಸುವ ಕಾರ್ಯಕ್ರಮ ಕೈಕೊಳ್ಳಲಾಗುವುದೆಂದೂ ತಿಳಿಸಿದರು. ಪ್ರಜಾ ಪ್ರತಿನಿಧಿ ಸದಸ್ಯರಲ್ಲಿ ಕಾಂಗ್ರೆಸ್ ಮುಸ್ಲಿಂ ಲೀಗ್ ಮೊದಲಾದ ಪಕ್ಷ ಸದಸ್ಯರ ಮಾತುಗಳನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.

ಜನಾಬ್ ಅಬ್ದುಲ್ ರಶೀದ್ ಚೌಧರಿ: "ಭಾರತದ ಆಹಾರ ಸಂಕಷ್ಟದ ಹೊಣೆಯೆಲ್ಲಾ ಸರಕಾರದ ಹೆಗಲ ಮೇಲಿದೆ. ಬಂಗಾಲ ಸರಕಾರಕ್ಕೆ ಕೇಳಿದ್ದಕ್ಕಿಂತ ಹೆಚ್ಚಿನ ಧಾನ್ಯ ಸಹಾಯ ಹೋಗಿದೆ. ಆದರೆ ಅದೆಲ್ಲಾ ಎಲ್ಲಿ ಹೋಯಿತು? ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಭಾರತದ ಆಹಾರ ಸಮಸ್ಯೆ ಚರ್ಚಿತವಾಗುವಾಗ ಕೇವಲ ೩೫ ಮಂದಿ ಸದಸ್ಯರಿದ್ದುದರಿಂದಲೇ ಬ್ರಿಟಿಷರಿಗೆ ಭಾರತದ ಸಂಕಷ್ಟದಲ್ಲಿರುವ ಸಹಾನುಭೂತಿ ಗೊತ್ತಾಗುತ್ತದೆ. ಕೇಂದ್ರ ಶಾಸನ ಸಭೆಯು ಆರಿಸಿದ ಪ್ರತಿನಿಧಿಗಳು ಬಹುಸಂಖ್ಯೆಯಾಗಿರುವ ಒಂದು ವಿಚಾರಣಾ ಸಮಿತಿಯನ್ನು ಆಹಾರ ಸಮಸ್ಯೆ ಪರಿಶೀಲಿಸಲು ಏರ್ಪಡಿಸಬೇಕು."

ಸರ್ ಯಾಮಿನ್ ಖಾನ್: "ಸರಕಾರದಿಂದ ನೇಮಿತವಾದ ವಿಚಾರಣಾ ಸಮಿತಿಯೇರ್ಪಡಿಸಬೇಕೆನ್ನುವ ಸರಕಾರದ ಧೋರಣವೇ ಇಂದಿನ ದುರಂತಕ್ಕೆ ಸರಕಾರ ಕಾರಣವೆಂದು ವ್ಯಕ್ತಮಾಡುತ್ತದೆ. ಮುಂದಿನ ಬೆಳೆಯು ಧಾನ್ಯಕ್ಕೆ ಈಗಲೇ ಕ್ರಯ ನಿಯಂತ್ರಿಸಿದರೆ ಹುದುಗಿಸಿಟ್ಟ ಧಾನ್ಯ ಹೊರಬರಬಹುದು."

ಕೆ. ಸಿ. ನಿಯೋಗಿ: "ನ್ಯಾಯಾಡಳಿತದಲ್ಲಿ ಪರಿಣತ ವಕೀಲರೊಬ್ಬರ ಅಧ್ಯಕ್ಷತೆಯಲ್ಲಿ ಪ್ರಮುಖ ಅರ್ಥ ಶಾಸ್ತ್ರಜ್ಞರಿಂದ ನ್ಯಾಯಾಧೀಶ ಆಡಳಿತಗಾರರಿಂದ ಕೂಡಿದ ಒಂದು ಸಮಿತಿ ನೇಮಿಸಿ ಬರಗಾಲ ಪರಿಸ್ಥಿತಿ ವಿಚಾರಣೆ ಮಾಡಬೇಕು."

ಖಾನ್ ಬಹದ್ದೂರ್ ಶಾಬಾನ್: "ಸ್ಥಾನಬದ್ಧರಾಗಿ ಬಂಧಿತರಾದವರನ್ನು ತಾತ್ಕಾಲಿಕವಾಗಿಯಾದರೂ ಬಿಡುಗಡೆಮಾಡಿ, ಅದರಿಂದ ಸಮಸ್ಯೆ ಬಗೆಹರಿಸಲು ಯತ್ನಿಸಬೇಕು. ಭವಿಷ್ಯದ ಕಲ್ಪನೆಯಷ್ಟು ಒಳ್ಳೆಯದಾಗಿ ತೋರದಿರುವುದರಿಂದ ಈಗಲೇ ಬೇಕಾದ ಯೋಜನೆ ಕೈಕೊಳ್ಳಬೇಕು."

ಎಲ್. ಕೆ. ಮೈತ್ರ: "ಆಹಾರ ಸಂಕಷ್ಟದ ಕುರಿತು ಸರಕಾರವು ನಿರ್ಲಕ್ಷಿಸಿ ಈ ಗಂಡಾಂತರ ಬಂದಿತು. ಸಂಕಟಗ್ರಸ್ತ ಪ್ರದೇಶದಲ್ಲಿ ಸರಕಾರೇತರ ಸಂಸ್ಥೆಗಳು ಸಾಕಷ್ಟು ಕೆಲಸ ಮಾಡುತ್ತಿವೆ."

ಜನಾಬ್ ಅಜರ್ ಆಲಿ: "ಕೃಷಿಕರು ಸಂಗ್ರಹಿಸಿಡುವರೆಂಬುದು ಸುಳ್ಳು. ಹಳ್ಳಿಗರಿಂದ ಯುದ್ಧ ನಿಧಿಗೆ ಹಣತೆಗೆದುಕೊಳ್ಳಲು ಬಲಾತ್ಕಾರ ಮಾಡಲಾಗುತ್ತದೆ. ಜನತೆಯೊಡನೆ ಸರಕಾರವು ಯಾವ ವಿಧದ ಸಹಕಾರವನ್ನೂ ಇಟ್ಟುಕೊಂಡಿಲ್ಲ."

ಶ್ರೀ. ಶ್ಯಾಮಲಾಲ್: "ಆಹಾರ ಸಂಕಷ್ಟ ಕೆಟ್ಟ ಆಡಳಿತದ ದುಷ್ಪರಿಣಾಮಗಳಲ್ಲಿ ಒಂದು. ಸರಕಾರದ ನೋಟಿನ ಅತಿ ಪ್ರಸರಣ, ಸೈನ್ಯ ಖಾತೆಗೆ ಅಧಿಕ ಸಂಗ್ರಹ ಇವೆರಡು ಈ ದುಸ್ಥಿತಿಗೆ ಮುಖ್ಯ ಕಾರಣ. ಯುದ್ಧದ ಹಿತದೃಷ್ಟಿಯಿಂದಾದರೂ ಈ ಪರಿಸ್ಥಿತಿ ಪರಿಹರಿಸಬೇಕು."

ಸಿಂಧ ಸರಕಾರವು ಕೃಷಿಕರಿಂದ ಕಡಿಮೆ ಕ್ರಯಕ್ಕೆ ಧಾನ್ಯ ಸಂಗ್ರಹಿಸಿ, ಪರಪ್ರಾಂತ್ಯಗಳಿಗೆ ಕಳುಹಿಸಿ ಎರಡುಕೋಟಿ ರೂಪಾಯಿ ಲಾಭ ಪಡೆದ ವಿಷಯ ಆಹಾರ ಮಂತ್ರಿಗಳ ಬಾಯಿಯಿಂದಲೇ ಹೊರಬಿತು.

ನಿಯೋಗಿ: 'ಬಂಗಾಳದ ಮರಣಗಳು ಉಪವಾಸದಿಂದಲ್ಲ. ಬ್ರಿಟಿಷರ ಆಳುವಿಕೆಯಿಂದ ಭಾರತೀಯರಿಗಾದ ಅಪಾರ ಕಲ್ಯಾಣವನ್ನು ನೆನೆಯುವಾಗ ಆದ ಆನಂದೋದ್ವೇಗದಿಂದ ಹೃದಯ ಕ್ರಿಯೆ ನಿಂತುಹೋಗಿ ಜನರು ಸತ್ತರು' (ನಗು).

ಶಂಭುದಯಾಳ್: 'ಲಿನ್‌ಲಿತ್‌ಗ್ಹೋ, ಅಮೆರಿ, ಹರ್ಬರ್ಟರನ್ನು ಬಂಗಾಲದ ಆಹಾರ ದುರಂತದ ಬಗ್ಗೆ ವಿಚಾರಣೆಗೆ ಗುರಿಪಡಿಸಬೇಕು. ಕೇಂದ್ರದಲ್ಲಿ ರಾಷ್ಟ್ರೀಯ ಸರಕಾರ ಸ್ಥಾಪಿಸಬೇಕೆಂದು ಭಾರತ ಬ್ರಿಟನುಗಳಲ್ಲಿ ತುಂಬಾ ಮಂದಿ ಕೇಳಿದರೂ ಸರಕಾರ ದುರ್ಲಕ್ಷಿಸಿರುವುದರಿಂದ ದೇಶದ ಮುಂದಾಳುಗಳೇ ಮುಂಬಂದು ಈ ಸಂಕಷ್ಟ ನಿವಾರಣೆಯ ಉಪಾಯ ಕೈಕೊಳ್ಳಬೇಕು'

ಜಮುನಾದಾಸ ಮೆಹತಾ: 'ಬಂಗಾಳದ ವಿಷಮ ಪರಿಸ್ಥಿತಿಯನ್ನು ವಿಚಾರಿಸಲು ಒಂದು ವಿಚಾರಣಾ ಮಂಡಳ ಏರ್ಪಡಾಗಬೇಕು'

ನಿಯೋಗಿ: 'ಇಂದಿನ ಬರಗಾಲ ಸರಕಾರ ನಿರ್ಮಿತ. ಇದು ಪಕ್ಕಾ ಬ್ರಿಟಿಷ್ ನಿರ್ಮಿತವೆಂದು ಹಲವು ಕಡೆಗಳ ಉದಾಹರಣೆಗಳಿಂದ ವಿದಿತವಾಗುತ್ತದೆ. ಈ ವಿಷಯ ಕೇಂದ್ರ ಸರಕಾರವನ್ನು ಒತ್ತಾಯಪಡಿಸಬೇಕೆಂದು ಹಿಂದೊಮ್ಮೆ ನಾವು ಕೆಲವರು ಪ್ರಯತ್ನಿಸಿದಾಗ ಸರಕಾರೀ ಸದಸ್ಯರು ಉದಾಸೀನತೆ ವಹಿಸಿದರು. ಪ್ರಾಂತ ಹಾಗೂ ಕೇಂದ್ರ ಸರಕಾರಗಳಲ್ಲಿ ಹೊಣೆ ಹಂಚಿ ಹೀಗೆ ತೊಂದರೆಯಾಯಿತೆಂಬುದು ಕುಂಟುನೆವ. ಸಾವಿರಾರು ಜನರ ಜೀವವುಳಿಸುವ ಸಂದರ್ಭದಲ್ಲಿ ಮಾತ್ರ ಈ ತೊಂದರೆ ಅಡ್ಡ ಬಂತೆ? ಜನರ ಮೇಲೆ ದಬ್ಬಾಳಿಕೆ ನಡೆಸಬೇಕಾದರೆ ಹೊಸ ಡಿಲ್ಲಿಯಲ್ಲಿ ಗುಂಡಿಯೊತ್ತಿದರೆ ಸಾಕು. ಸರಕಾರ ಯಂತ್ರ ಭಯಂಕರ ವೇಗದಿಂದ ಚಲಿಸಿ ಬೇಕಾದ ಕಾರ್ಯ ನಡೆಸಿ ಬರುತ್ತದೆ. ಆದರೆ ಪ್ರಜಾಹಿತ ಬಂದಾಗ ಅಜಲುಲ್ ಸಾಹೇಬರನ್ನು ಜಾಲುಲ್ ಸಾಹೇಬರ ವಿರುದ್ಧ, ವಾಸ್ತವರನ್ನು ಸುಹ್ರವರ್ದಿ ವಿರುದ್ಧ ನಿಲ್ಲಿಸಿ ವಿದೇಶೀ ಮಿತ್ರರಿಗೆ ಭಾರತೀಯರ 'ಅಸಾಮರ್ಥ್ಯ' ಎತ್ತಿ ತೋರಿಸುತ್ತದೆ.

'ಜನಸಂಖ್ಯೆ ಬೆಳೆದು ಉಪವಾಸ ಬೀಳಬೇಕಾಯಿತೆಂದು ಸರಕಾರ ಹೇಳುತ್ತದೆ, ಆದರೆ ಜನಸಂಖ್ಯೆ ಇಂಗ್ಲೆಂಡು ಅಮೆರಿಕ ಮೊದಲಾದೆಡೆ ಇದಕ್ಕಿಂತಲೂ ಅಧಿಕ ಹೆಚ್ಚಿದೆ. ಅಲ್ಲಿ ಉತ್ಪಾದನ ಶಕ್ತಿ ಹೆಚ್ಚಿದೆ. ಬಂಗಾಲದ ಉತ್ಪಾದನ ಶಕ್ತಿ ಇನ್ನೂ ಅಕಬರನ ಕಾಲದಂತಿದೆ. ಇದಕ್ಕೆ ಸರಕಾರವೇ ಕಾರಣ. ಬಂಗಾಲದ ಯುರೋಪಿಯನ್ ಕಾರ್ಖಾನೆಯವರು ಆಹಾರ ಧಾನ್ಯ ಸಂಗ್ರಹಿಸಿಟ್ಟಿದ್ದಾರೆ. ಯುದ್ಧದ ನೆವನದಿಂದ ಯುರೋಪಿಯನ್ ವ್ಯಾಪಾರಿಗಳಿಗೆ ಸೌಕರ್ಯ ಹೆಚ್ಚು ಕೊಡಲಾಗುತ್ತದೆ'

ಜಮುನಾದಾಸ ಮೆಹತಾ: 'ಆಹಾರದ ಕುರಿತು ಸರಕಾರ ದುರ್ಲಕ್ಷ್ಯ ಸೋಮಾರಿತನ ಮಾಡಿದೆ. ನಿಮ್ಮಿಂದಾಗದಿದ್ದರೆ ಭಾರತದ ಮಂತ್ರಿಗಳು ರಾಜೀಯಿತ್ತು ಹೊರನಡೆಯಿರಿ. ಸರಕಾರ ಬುದ್ಧಿಪೂರ್ವಕ ಜನರನ್ನು ಉಪವಾಸ ಹಾಕಿದೆ. ಅದಕ್ಕಿಂತ ಹೆಚ್ಚಿನ ತಪ್ಪೆಂದರೆ ಜಮೀನ್ದಾರರು ಬಂಡವಾಳಗಾರರು ಕೂಡಿಟ್ಟು ಜನರನ್ನು ಉಪವಾಸ ಹಾಕಿದ್ದು.

ಚೌಧರಿ ಇಸ್ಮಾಯಿಲ್ ಖಾನ್: 'ಬಂಗಾಲ ಬರಗಾಲದ ಹೊಣೆ ಬ್ರಿಟಿಷ್ ಸರಕಾರದ ಮೇಲಿದೆ. ಹಿಂದೀಯ ಮಂತ್ರಿಗಳು ತಪ್ಪುಮಾಡಿದಾಗ ಗವರ್ನರರು ಕೈಹಾಕಿ ಸರಿಮಾಡಬೇಕಿತ್ತು. ಸರಕಾರದ ಹಿಂದೀಯ ಸದಸ್ಯರೇ ಕರ್ತವ್ಯ ಮಾಡಿಲ್ಲ. ಜನರು ಸಾಯುತ್ತಿದ್ದರೂ ಅವರು ಪೌತಿಕಾಯಿಗಳಂತೆ ತಣ್ಣಗೆ ಕುಳಿತಿದ್ದಾರೆ.

ಸ್ವಾಮಿ ವೆಂಕಟಾಚಲಂ ಚೆಟ್ಟಿ: "ಸರಕಾರ ಮೊದಲಿಂದಲೇ ಗೊಂದಲ ಮಾಡಿದೆ. ನಿಮ್ಮಿಂದ ಆಗದಿದ್ದರೆ ಹಾಗೆ ಹೇಳಿ ದೇಶದ ಬೆಂಬಲ ಬೇಡಿ. ಆಗ ರೇಶನಿಂಗ್ ಪದ್ಧತಿ ಯಶಸ್ವಿಯಾಗುವುದು."

ಜಾಫರ್ ಅಲ್ಲಿ: "ಭಾರತದ ಇಂದಿನ ಕಷ್ಟಕ್ಕೆ ಬ್ರಿಟಿಷ್ ಸರಕಾರದ ದುರ್ಲಕ್ಷ್ಯವೇ ಕಾರಣ. ಧಾನ್ಯದ ಹಡಗಗಳು ಬೇಗನೇ ಬರಲಿ."

ಎನ್: ಶಿವರಾಜ್: "ಬ್ರಿಟಿಷ್ ಸರಕಾರದವರು ಬಲಾತ್ಕಾರದಿಂದ ಭಾರತದಮೇಲೆ ಯುದ್ಧ ಹೇರಿದರು. ಅವರೇ ಆಹಾರವನ್ನು ಒದಗಿಸುವ ಹೊಣೆ ಹೊರಬೇಕಾಗಿದೆ."

ಅಖಿಲಚಂದ್ರ ದತ್: "ಕಾಂಗ್ರೆಸ್ ಮುಖಂಡರನ್ನು ಬಿಡುಗಡೆ ಮಾಡಿದರೆ ಆಹಾರ ಸಂಕಷ್ಟ ಪರಿಹಾರವಾಗುತ್ತದೆ."

ಸರ್ ಜೆಮ್ಸ್ ಫೆಡ್ರಿಕ್: "ರೇಶನಿಂಗ್‌ನಲ್ಲಿ ಮಿಲಿಟರಿಯವರಿಗೆ ನಾಗರಿಕರಿಂದ ಹನ್ನೆರಡು ಪಾಲು ಹೆಚ್ಚು ಕೊಡಲಾಗುತ್ತದೆ. ಇದು ತಪ್ಪು. ಇಂದಿನ ಯುದ್ಧದ ಹೊಣೆಯಂತೆ ಆಹಾರವೂ ಸಂಯುಕ್ತ ಸರಕಾರದ ಹೊಣೆ."

ರೇಣುಕಾರೋಯ್: "ಪರಿಸ್ಥಿತಿ ಹದಗೆಡುವವರೆಗೆ ಸುಮ್ಮನಿದ್ದು ಈ ಅವಸ್ಥೆ ಸರಕಾರವೇ ಮಾಡಿತು. ಪರಿಹಾರ ಕಾರ್ಯ ಖಾಸಗಿ ಸಂಸ್ಥೆಗಳು ಮಾಡುತ್ತಿವೆ. ಬಡ ರೈತರು ಆಹಾರ ಕೂಡಿಟ್ಟಿದ್ದಾರೆಂದು ಆರೋಪವಿದೆ ಅದರ ಸತ್ಯಾಂಶ ವಿಚಾರಣೆ ನಡೆಯಲಿ."

ನವಾಬ್ ಜಾದಾಲಿಯಾಖತ್ ಅಲಿಖಾನ್: "ಲಿನ್‌ಲಿತ್ ಗೋರವರು ಕೃಷಿಕನಿಗೆ ಒಳ್ಳೆದು ಮಾಡುತ್ತೇನೆಂದು ಆಶೆ ತೋರಿಸಿ, ಭೀಕರ ಕ್ಷಾಮದ ಮಧ್ಯದಲ್ಲಿ ಬಿಟ್ಟು ಹೋದ್ದುದು ವಿಷಾದಕರ. ಪರಿಹಾರ ಕಾರ್ಯಕ್ಕೆ ಸೈನ್ಯ ಖಾತೆಯನ್ನುಪಯೋಗಿಸಿದಂತೆ ನಾಲ್ಕು ತಿಂಗಳ ಹಿಂದೆ ಮಾಡಿದ್ದರೆ ಹೀಗಾಗುತ್ತಿರಲಿಲ್ಲ. ಅಸ್ಸಾಮಿನಲ್ಲಿ ಪಾಳುಬಿದ್ದಿರುವ ೨೦ ಲಕ್ಷ ಎಕ್ರೆ ಭೂಮಿಯಷ್ಟು ಆಹಾರ ಬೆಳೆಸಲು ಉಪಯೋಗಿಸಿದರೆ ಲಕ್ಷಾಂತರ ಟನ್ ಅಕ್ಕಿ ಹುಟ್ಟುವುದು. ಸರಕಾರ ಸುಮ್ಮಗಿದೆ. ಆಹಾರ ಒದಗಿಸದ ಹೊಣೆ ಸರಕಾರದ್ದಾಗಿದೆ."

ಎನ್. ಎಂ. ಜೋಶಿ: "ಸರಕಾರ ತನ್ನ ಕರ್ತವ್ಯಚ್ಯುತಿಯನ್ನೊಪ್ಪಿ ಇನ್ನಾದರೂ ಪರಿಣಾಮಕಾರೀ ಪರಿಹಾರೋಪಾಯ ಕೈಕೊಳ್ಳಬೇಕು. ಶಾಸನಸಭೆಗೆ ಸರಕಾರವನ್ನು ರಾಜೆ ಕೊಡಿಸುವ ಅಧಿಕಾರವಿಲ್ಲದಿರುವುದರಿಂದ ನಿರುಪಾಯವಾಗಿದೆ. ಕ್ರಯ ನಿಯಂತ್ರಣದ ವಿಷಯ ಉಗ್ರೋಪಾಯ ಕೈಕೊಳ್ಳಬೇಕಾಗಿದೆ."

ಸರ್ ಝಿಯಾ ಉದ್ದೀನ್: "ಕೆಲವು ಕಡೆ ಆರು ಲಕ್ಷ ರೂಪಾಯಿ ಲಂಚವನ್ನು ಸಾವುಕಾರರು ಕೊಡಬೇಕಾಯಿತಂತೆ. ಇದನ್ನು ಕೇಳಿ ಸರಕಾರದವರು ತಲೆತಗ್ಗಿಸಬೇಕು. ಬರ್ಮ ಕೈಬಿಟ್ಟೊಡನೆ ಅಸಾಮಿನ ಬಂಜರು ಭೂಮಿಯನ್ನು ಕೃಷಿಮಾಡಬೇಕಿತ್ತು."

ಸರದಾರ ಸಂತಸಿಂಗ್: "ಪಂಜಾಬದಂತೆ ಕೇಂದ್ರ ಬಂಗಾಳ ಸರಕಾರಗಳೂ ತುಂಬಾ ಲಾಭಬಡಕತನ ಮಾಡಿವೆ."

ಎ. ಆರ್. ಸಿದ್ದಿಕಿ: "ಚಿತಗಾಂಗಿನಲ್ಲಿ ಶೇಕಡಾ ೫೦ರಷ್ಟರ ಸರಕುಗಳು ಮಿಲಿಟರಿಯವರ ಹೊಟ್ಟೆಯೊಳಗೆ ಸೇರುತ್ತವೆ."

'ಇಂಗ್ಲೆಂಡಿನಲ್ಲಿ ಸಾವಿರಾರು ಜನ ವಿರಲಿ, ನೂರೇ ಜನರು ಉಪವಾಸದಿಂದ ಸಾಯುತ್ತಿದ್ದರೆ ಚರ್ಚಿಲ್ ಸರಕಾರವು ಅಧಿಕಾರೀ ಪೀಠದಲ್ಲಿ ೨೪ ಗಂಟೆಗಳ ಕಾಲವೂ ಕುಳಿತುಕೊಳ್ಳುತ್ತಿರಲಿಲ್ಲವೆ? ಆದರೆ ಇಲ್ಲಿ ನಮಗಿರುವುದು ಬೇಜವಾಬ್ದಾರಿ, ಕ್ರಮರಹಿತ, ಬುಡದಿಂದ ತಲೆವರೆಗೆ ಅಸಮರ್ಥವಾದ, ಸ್ಟೇಟ್ ಸೆಕ್ರೆಟರಿ ಸೂತ್ರಕ್ಕೆ ಅಂಕಿತವಾದ ಸರಕಾರ! ಅದು ಯಾವ ಬಿಕ್ಕಟ್ಟನ್ನೂ ಯಶಸ್ವಿಯಾಗಿ ಪರಿಹರಿಸಿಲ್ಲ. ಇಂಥ ಕರ್ತವ್ಯಚ್ಯುತಿಯ ಅಪರಾಧವನ್ನು ನೀವು ತಪ್ಪಿಸಲಾರಿರಿ. ನೀವು ಅಪರಾಧಿಗಳೆಂದು ನೀವು ಬಲ್ಲಿರಿ; ಅದನ್ನು ತಿಳಿಯದಿದ್ದರೆ ದೇವರೇ ಕಾಪಾಡಲಿ' ಎಂದು ಜಿನ್ನರೂ ಉಗ್ರವಾಗಿ ಟೀಕಿಸಿದರು.

ಒಂದು ಸಣ್ಣ ಕಥೆ

'ಪಂಡಿತ' ಪುತ್ರ

(ಲೇಖಕ: ಸು[illegible] ಅಮ್ಮನ್ನ)

[illegible] ಸುಂದರ [illegible] ಎಂದು [illegible]

ನನಗೆ [illegible] ವರ್ಷ ದಾಟಿ ೧೬ ಹಿಡಿದಿತ್ತು. ಆವಾಗ ಆದನೇ ತರಗತಿಯಲ್ಲಿದ್ದೆನು. ಒಂದು ದಿನ ನಮ್ಮ ಉಪಾಧ್ಯಾಯರು ಕನ್ನಡ ಪಾಠ ಕಲಿಸುತ್ತಿದ್ದಾಗ 'ಸುಂದರ' ನೋಡಲಿಕ್ಕೆ ಚೆನ್ನಾಗಿರುವ ಹುಡುಗನೆಂದು ಹೇಳಿದರು. ಆಗ ಎಲ್ಲರೂ ನನ್ನನ್ನೇ ದಿಟ್ಟಿಸಿ ನೋಡತೊಡಗಿದರು. ಎಲ್ಲರ ಕಣ್ಣುಗಳೂ, 'ನೀನೆಂಥಾ ಸುಂದರನೋ? ಎಂದು ನನ್ನನ್ನು ಮೂದಲಿಸಿ ಕೇಳುವಂತೆ ನನಗೆ ಭಾಸವಾಯಿತು. ನನಗೆ ನಾಚಿಕೆಯಾಯಿತು. ಅವರ ದೃಷ್ಟಿಪಾತದಿಂದ ನನ್ನ ಮುಖವನ್ನು ಮರೆಸಿಕೊಳ್ಳಲು ಯತ್ನಿಸಿದೆನು.

ಪಾಠ ಮುಗಿಯಿತು. ಕೂಡಲೆ ಕೆಲವು ತುಂಟರು ನನ್ನನ್ನು ಮುತ್ತಿ, ನನ್ನನ್ನು ಮೂದಲಿಸ ತೊಡಗಿದರು. ನಾನು ಕಪ್ಪುಅಂತೆ. ಕಪ್ಪಾದರೇನು? ಕಪ್ಪು ಕಸ್ತೂರಿಯಲ್ಲವೇ? ನನ್ನ ಕಣ್ಣು ಕೋಸು ಅಂತೆ; ಕಣ್ಣು ಕೋಸಾದರೇನು? ನಾನಾರನ್ನಾದರೂ ನೋಡುತ್ತಿದ್ದರೆ, ನಾನು ಅಂಥವರನ್ನೆ ನೋಡುತ್ತಿರುವೆನೆಂದು ಯಾರಿಗೂ ತಿಳಿಯಲಾರದು. ನನ್ನ ಹಲ್ಲುಗಳೆರಡು ತುಟಿ ಮೀರಿ ಹೊರಕ್ಕೆ ಇಣುಕುತ್ತಿವೆಯಂತೆ. ಅದಕ್ಕೇನು ಮಾಡಲಿ? ನಮಗೆ ಬಾಹ್ಯಪ್ರಪಂಚದಲ್ಲಿರುವ ಸಜೀವ ನಿರ್ಜೀವ ವಸ್ತುಗಳನ್ನು ನೋಡಲಿಕ್ಕೆ ಇಚ್ಛೆ ಇರುವಂತೆ ಹಲ್ಲುಗಳಿಗೂ ಇಚ್ಛೆಯಿಲ್ಲವೇ? ನನ್ನದು ಡೊಳ್ಳು ಹೊಟ್ಟೆಯಂತೆ. ಅದು ಆ ಗರ್ಭ ಶ್ರೀಮಂತತೆ ಲಕ್ಷಣವೆಂದು ಅವರಿಗೇನು ಗೊತ್ತು? ನಮಗೆ ಮನೆಯಲ್ಲಿ 'ಹೊಟ್ಟೆಗಿದ್ದರೆ ಬಟ್ಟೆಗಿಲ್ಲ' ಎಂಬಂತಿದ್ದರೂ ಈ ಡೊಳ್ಳು ಹೊಟ್ಟೆಯ ಸಹಾಯದಿಂದ ಆ ಗರ್ಭ ಶ್ರೀಮಂತನಂತೆ ಮೆರೆಯಬಹುದಲ್ಲವೇ?

* * *

ಈ ದಿವಸ ನಮ್ಮ ಪರೀಕ್ಷೆಯ ಫಲಿತಾಂಶವು ತಿಳಿಯುವುದು. ಎಲ್ಲರೂ ಶಾಲೆಗೆ ಹೋದರು. ನಾನೂ ಹೋದೆನು. ನಾನು ಮತ್ತು ಚೋರ-ನಮ್ಮಿಬ್ಬರ ಹೊರತು ಎಲ್ಲರೂ ಪಾಸ್ ಎಂದು ತಿಳಿಯಿತು.—ಅಂದರೆ ನಾನು ಮತ್ತು ಚೋರ ಫೈಲ್ ಎಂದರ್ಥ. ಚೋರ ತುಂಬಾ ಅತ್ತನು. ನನಗೆ ಅಳು ಬರಲೇ ಇಲ್ಲ. ಏನು ಮಾಡಲಿ? ನನ್ನ ದುರದೃಷ್ಟ—ಹಾಗೆಲ್ಲಾ ಕಣ್ಣೀರು ಸುರಿಸುವವರವನ್ನು ದೇವರು ನನಗೆ ದಯಪಾಲಿಸಲಿಲ್ಲ. ಅಳುವಂತೆ ನಟಿಸುವುದೂ ನನ್ನಿಂದ ಅಸಾಧ್ಯವಾಯಿತು. ಅಳುವುದೇತಕ್ಕೆ? ಶಾಲೆ ಬಿಟ್ಟೊಡನೆ ನೆಟ್ಟಗೆ ಮನೆಗೆ ಹೋದೆನು. ನಾನು ಫೈಲಾದ ಸಂಗತಿಯನ್ನು ತಂದೆ ತಾಯಿಯವರಿಗೆ ತಿಳಿಸಿದೆ. ಇದಕ್ಕೆ ಪ್ರತಿಫಲವಾಗಿ ನನಗೆ ಅವರಿಂದ 'ಸಾಕೊ ಬೇಕೊ?' ಎನ್ನಿಸುವಷ್ಟು 'ಮಂಗಳಾರತಿ'ಯು ದೊರೆಯಿತು. ತಂದೆಯವರೆಂದರು, 'ಇನ್ನು ನಿನ್ನನ್ನು ಶಾಲೆಗೆ ಕಳುಹಿಸುವುದಿಲ್ಲ'ವೆಂದು. ಇದರಿಂದ ನನಗೆ ಪರಮ ಸುಖವೇ ಆಯಿತು. 'ಏನು ಸುಂದರ ನೀನು ಎಂಥ ಸುಂದರ.....'ಎಂದು ಮುಂತಾಗಿ ನನ್ನನ್ನು ಅಣಕಿಸುವ ತುಂಟರ ತಂಟೆಯೂ ತಪ್ಪಿತು; ಕಲಿಯುವ ಕಾಟವೂ ದೂರವಾಯಿತು.

* * *

ನಮ್ಮ ತಂದೆಯವರು ಪಂಡಿತರು. 'ಪಂಡಿತ'ರೆಂದರೆ ಕನ್ನಡ ಪಂಡಿತರಲ್ಲ; ಮದ್ದು ಕೊಡುವ ಪಂಡಿತರು. ಅವರು ನನಗೂ ತಮ್ಮ ಪಾಂಡಿತ್ಯವನ್ನು ಕಲಿಸತೊಡಗಿದರು. ಹೀಗೆ ಐದು ವರ್ಷಗಳ ತನಕ 'ಪಾಂಡಿತ್ಯ'ವನ್ನು ಕಲಿತು ತಂದೆಯಿಲ್ಲದಿದ್ದಾಗ ನಾನೇ ಮದ್ದು ಕೊಡುವುದಕ್ಕೆ ತೊಡಗಿದೆನು. ಆದರೆ, ನಾನು ಮದ್ದು ಕೊಡಲಿಕ್ಕೆ ಹೋದೆನೆಂದರೆ 'ದೊಡ್ಡ ಪಂಡಿತರಿಲ್ಲ?' ಎಂದು ಕೇಳತೊಡಗಿದರು.

* * *

ಇಷ್ಟರಲ್ಲಿ ನನ್ನ ತಂದೆಯವರು ತೀರಿಕೊಂಡರು. ಹೀಗಾಗಿ ನಾನೇ ಅವರ ವೃತ್ತಿಯನ್ನು ಕೈಕೊಂಡೆನು. ನಾನು ಮದ್ದು ಕೊಡಲಿಕ್ಕೆ ತೊಡಗಿದುದೇ ತಡ!—ಮದ್ದಿಗಾಗಿ ಬರುವವರ ಸಂಖ್ಯೆಯು ದಿನದಿಂದ ದಿನಕ್ಕೆ ಕ್ಷಯಿಸುತ್ತ ಬರತೊಡಗಿತು. ಹೀಗೆ ಈ ಊರಿನಲ್ಲಿ ಮದ್ದಿಗಾಗಿ ನನ್ನ ಬಳಿಗೆ ಬರುವವರೇ ಇಲ್ಲ; ಹಮ್ಮು ಬಂದವರು ಇನ್ನೊಮ್ಮೆ ಕಾಣಲಿಕ್ಕೇನೇ ಇಲ್ಲ; ಮದ್ದು ಕೊಂಡು ಹೋದವರು ಅದರ ಹಣ ಕೊಡುವುದೇ ಇಲ್ಲ. ತಂದೆಯಂತೂ ತೀರಿಹೋದರು. ಸಂಪಾದನೆಯೂ ಇಲ್ಲದಿದ್ದರೆ ಬದುಕುವುದು ಹೇಗೆ?

ಕಟ್ಟಕಡೆಗೆ, ನಾನು ತಾಯಿಯನ್ನು ಬಿಟ್ಟು, ಹೋಳಿಕಡನೂರಿಗೆ ಬಂದು, ಅಲ್ಲಿ ನನ್ನ ವೈದ್ಯ ವೃತ್ತಿಯನ್ನು ಕೈಕೊಂಡೆನು. ಎಲ್ಲರೂ ನನ್ನನ್ನು 'ಪಂಡಿತ'ನೆಂದು ಕರೆಯ ತೊಡಗಿದರು. ನನಗೇಕೋ ಈ ಬಿರುದು ಸರಿದೋರಲಿಲ್ಲ. ಎಲ್ಲರೂ ನನ್ನನ್ನು 'ಡಾಕ್ಟರ್' ಎಂದು ಸಂಬೋಧಿಸಬೇಕೆಂಬುದೇ ನನ್ನಿಚ್ಛೆ. 'ಪಂಡಿತರೇ' ಎಂದು ನನ್ನನ್ನು ಕರೆದವರಿಗೆ 'ನಾನು ಪಂಡಿತನಲ್ಲ; ಡಾಕ್ಟರ್' ಎಂದು ಹೇಳಕೊಡಲು ಪ್ರಾರಂಭಿಸಿದೆನು. ಕ್ರಮೇಣ ಎಲ್ಲರೂ ನನ್ನನ್ನು 'ಡಾಕ್ಟರ್' ಎನ್ನ ತೊಡಗಿದರು.

'ಡಾಕ್ಟರ್' ಎನ್ನಿಸಿಕೊಂಡರೆ ಸಾಕೆ? ಅದಕ್ಕೆ ತಕ್ಕುದಾದ ವೇಷ ಭೂಷಣಗಳೂ ಬೇಡವೆ? ಇರಲಿಕ್ಕೆ ಒಂದು ಬಂಗಲೆ ಬೇಡವೇ? ಈ ದೋತರ,—ಈ ಮುಂಡಾಸು, ಈ ಮೆಟ್ಟುಗಳು ಈ ಗುಡಿಸಲು—ಇವೆಲ್ಲಾ ಯಾರಿಗೆ?—ಯಾವುದಕ್ಕೂ ಬಾರದ ಗೊಡ್ಡು ಪಂಡಿತರಿಗೆ. ನಾನು ಎಷ್ಟೆಂದರೂ 'ಡಾಕ್ಟರ'ನಲ್ಲವೇ!

ಇದಕ್ಕಾಗಿ ೨೦ ರೂಪಾಯಿ ಬಾಡಿಗೆಯ ಒಂದು 'ಬಂಗಲೆ'ಯನ್ನು ಬಾಡಿಗೆಗೆ ಮಾಡಿಕೊಂಡುದಾಯಿತು. ಇದಕ್ಕಿಂತಲೂ ಮೇಲೆನಿಸಿದ ಬಂಗಲೆಗಳೇ ಈ ಹೋಳಿಕಡನೂರಿನಲ್ಲಿಲ್ಲ. ಬರೀ ಬಂಗಲೆಯಾದರೆ ತೀರಿತೇ? ಇನ್ನು ಅದರಲ್ಲಿ ಇಡಲಿಕ್ಕೆ ಸಾಮಾನುಗಳೆಲ್ಲ ಬೇಡವೆ? ಉರುಟು ಮೇಜು, ಕುರ್ಚಿ, ಮಂಚ, ಅದಕ್ಕೆ ಸೊಳ್ಳೆ ಪರದೆ, (net) ಇಜೀಚೆರ್, ಮೇಜಿಗೆ ಟುವಾಲು, ಕುರ್ಚಿಗಳಿಗೆ ದಿಂಬುಗಳು, ಕಿಟಿಕಿ ಬಾಗಿಲುಗಳಿಗೆ ತೂಗಹಾಕುವ ಬಟ್ಟೆ, ದೊಡ್ಡ ಕನ್ನಡಿ, ಗೋಡೆಯಲ್ಲಿ ತೂಗು ಹಾಕಲಿಕ್ಕೆ ಅಂದವಾದ ದೃಶ್ಯಗಳು ಮತ್ತು ಹುಡುಗಿಯರ ಚಿತ್ರಗಳು—ಎಲ್ಲವನ್ನೂ ಕೊಂಡುಕೊಂಡೆನು. (ಸಾಲವಾಗಿ)

ಇನ್ನು ನನ್ನ ವೇಷಭೂಷಣಗಳು. ಮೊದಲಾಗಿ ಕ್ಷೌರಿಕನ ಹತ್ತಿರ ಹೋಗಿ ನನ್ನ ಜುಟ್ಟನ್ನು ತೆಗೆಯಿಸಿ ಕ್ರಾಪ್ ಮಾಡಿಸಿದೆನು. ಬಳಿಕ ಸೂಟು, ಬೂಟು, ಮರಿಗೆ ಟೊಪ್ಪಿ (hat) ಕುತ್ತಿಗೆಗೆ ಕಟ್ಟುವ ಪಟ್ಟಿ (Tie) ಮುಖಕ್ಕೆ ಹಾಕುವ ಹುಡಿ, (Powder) ತಲೆಗೆ ಹಾಕಲಿಕ್ಕೆ ಗಮಗಮಿಸುವ ಎಣ್ಣೆ, ಕೈಗಡಿಯಾರ, ಕೊಡೆ, ಕರವಸ್ತ್ರ—ಇವನ್ನೂ ಕೊಂಡುಕೊಂಡೆನು. (ಸಾಲವಾಗಿ.)

ಇನ್ನು ಒಂದು ಉಳಿದಿದೆ–ಕನ್ನಡಕ. ಇದನ್ನು ಪಡೆಯ ಬೇಕಾದರೆ ಕನ್ನಡಕದ ವ್ಯಾಪಾರಿಯೊಡನೆ) ಬಹಳ ಜಗಳವಾಡಬೇಕಾಯಿತು. ನನಗೆ ಕನ್ನಡಕದ ಅವಶ್ಯಕತೆಯಿಲ್ಲವಂತೆ. ಆ ಕುಮಜನಿಗೇನು ಗೊತ್ತು?' 'ಡಾಕ್ಟರ್' ಎಂದ ಸಿದ ಮೇಲೆ ಕನ್ನಡಕವೂ ಬೇಕಲ್ಲವೇ? ಕಡೆಗೆ ಹೇಗೂ ನಾನೇ ಜಯಿಸಿದೆನು.

ಈ ಎಲ್ಲಾ ಸುಖ ಸೌಭಾಗ್ಯಗಳನ್ನು ನನ್ನೊಂದಿಗೆ ಅನುಭವಿಸಲು ಒಬ್ಬಳು ಸಹಭಾಗಿನಿ ಬೇಡವೇ? ಈ ಊರಿನಲ್ಲಿ ನನಗೆ ಹುಡುಗಿ ಸಿಕ್ಕದಿರಲು, ನನ್ನ ತಾಯಿಗೆ ಬರೆದೆನು. ಕೆಲವು ದಿನಗಳಲ್ಲಿಯೇ ಉತ್ತರವು ಬಂತು. "ಹುಡುಗಿಯನ್ನು ನೋಡಿ ಇಟ್ಟಿದ್ದೇನೆ. ಆದಷ್ಟು ಬೇಗನೇ ಬಾ" ಇಷ್ಟೇ ಅವಳ ಪತ್ರದಲ್ಲಿ. ನನಗೆ ಬೇಕಾಗಿದ್ದ ಮಾತುಗಳು. ತಾಯಿ ನನಗೆ ಹುಡುಗಿಯ ಹೆಸರು, ಬಣ್ಣ, ಗುಣ, ರೂಪ—ಇವನ್ನೆಲ್ಲ ಬರೆಯಲೇ ಇಲ್ಲ. ನಾನು ಸುಂದರನಲ್ಲವೇ? ಅವಳ ಹೆಸರು 'ಸುಂದರಿ'ಯೆಂದಿರಬಹುದು. ಆದರೆ, ಸುಂದರನಿಗೆ ಸುಂದರಿಯೇ ಸಿಕ್ಕಬೇಕೆಂದು ಎಲ್ಲಿ ಬರೆದಿದೆ? ಅವಳ ಹೆಸರು ಪದ್ಮಿನಿ, ಸುಹಾಸಿನಿ, ಕಮಲಿನಿ, ನಳಿನಿ ಮುಂತಾದ ಮುದ್ದು ಮುದ್ದಾದ ಹೆಸರುಗಳಲ್ಲಿ ಒಂದಾಗಿರಬಹುದು. ಅವಳ ರೂಪ—ಗೌರವ ವರ್ಣ, ಗುಂಗುರಾದ ಕೇಶಪಾಶಗಳು, ವಿಶಾಲವಾದ ಹಣೆ, ಹೊಳೆವ ಕಂಗಳ್, ಸಂಪಿಗೆಯಂತಿರ್ಪ ನಾಸಿಕ, ಚೆಂದುಟಿ ಮೌಕ್ತಿಕದಂತಿಹ ರದನ ಪಂಕ್ತಿ, ಕೋಗಿಲೆಯ ಧ್ವನಿಯಂತಿರ್ಪ ಸ್ವರ, ಲಲನೆಯಂತಿರ್ಪ ದೇಹ—ಇಂತಿರಬಹುದು. ಇಂಥಾ ಸುಂದರಿಯು ನನ್ನನ್ನು ವರಿಸಲೊಪ್ಪುವಳೇ? ಒಪ್ಪಿದರೆ ಸಾಕಿತ್ತು.

* * *

ಈ ದಿನ ನಾನು ಹುಡುಗಿ ನೋಡಲು ತಾಯಿಯೊಂದಿಗೆ ಬಂದಿದ್ದೇನೆ. ನೋಡುತ್ತಿದ್ದೇನೆ! ಹುಡುಗಿ [illegible] ಹೆಸರು 'ಪುಟ್ಟಮ್ಮ' ಅಂತೆ. [illegible] ಅವಳು ಕೋಳದಟ್ಟಕೆಂದ. [illegible] ಕೋಸು—ಅವಳ ಎಡಗಣ್ಣು ಕೋಸು. ಎಂಥಾ ಜೋಡಿಯಿದು! ಏನೇ ಆಗಲಿ, ಸುಂದರಿಯರೂ ನನ್ನನ್ನು ವರಿಸಲೊಪ್ಪರು. ಸಿಕ್ಕಿದುದೇ ಪುಣ್ಯ ಎಂದು ನಾನೂ ಸಮ್ಮತಿಯನ್ನಿತ್ತೆನು.

* * *

ಈ ದಿನ ನಮ್ಮ ಮದುವೆ. ಸ್ತ್ರೀಯರ ಪದಗಳವೇನು? ಮಕ್ಕಳ ಚೆಲ್ಲಾಟವೇನು? ಗದ್ದಲವೇ ಗದ್ದಲ. ಅಷ್ಟರಲ್ಲೊಂದು ಅಘಟಿತ ಘಟನೆಯು ನಡೆದೇ ಹೋಯಿತು. ಅವಳ ಬೆರಳಿಗೆ ಉಂಗುರಹಾಕುವಾಗ 'ಈ ಉಂಗುರಕ್ಕೆ ಮೂರು ವರ್ಷಗಳ ಗ್ಯಾರಂಟಿ ಇದೆ!' ಎಂಬೀ ಮಾತುಗಳು ನನ್ನಪ್ಪಣೆ ಪಡೆಯದೆಯೇ ನನ್ನ ಬಾಯಿಯಿಂದ ಹೊರಕ್ಕೆ ಉರುಳಿದವು. ಛೇ! ಎಂಥಾ ಪ್ರಮಾದವಾಯಿತು! ಮರುಕ್ಷಣದಲ್ಲಿಯೇ ಅವಳ ಕಣ್ಣುಗಳಿಂದ ಬಾಷ್ಪ ಬಿಂದುಗಳು ಉರುಳ ತೊಡಗಿದವು. ನನ್ನ ಮೂಗು ಮುರಿದಂತಾಯಿತು. ಅಷ್ಟರಲ್ಲಿ ಅವಳ ಕೈಹಿಡಿಯುವ ಪ್ರಸಂಗವು ಬಂತು. ನಾನು ಅವಳ ಕೈಹಿಡಿದಾಗ ಅಲ್ಲಿಯ ನಾಡಿಯ ಬಡಿತವು ನನಗೆ ಸ್ಪರ್ಶದ ಮೂಲಕ ತಿಳಿದು ಬಂದು. ಮೊದಲೇ ಮಂಕನಂತಾಗಿದ್ದ ನನಗೆ, ಈಗ ಪೂರ್ಣ ಬುದ್ಧಿ ಭ್ರಂಶವಾಯಿತು. ನಾನೆಲ್ಲಿದ್ದೇನೆಂದು ನನಗೆನೇ ಮರೆತುಹೋಯಿತು. ರೋಗಿಯ ನಾಡಿಯ ಬಡಿತವನ್ನು ಪರೀಕ್ಷಿಸುತ್ತಿರುವೆನೆಂದು ಭ್ರಮಿಸಿ 'ನಾಲಿಗೆ ಹೊರಗೆ ಚಾಚಮ್ಮ' ಎಂದು ಬಿಟ್ಟೆನು. ಅವಳು ಬೆಚ್ಚಿಬಿದ್ದಳು. ನಾನೂ ಬೆಚ್ಚಿಬಿದ್ದೆನು. ಮುಂದೆ ನನ್ನ ಗತಿ ಯೇನಾಗಿರಬಹುದೆಂದು ನೀವೇ ಊಹಿಸಿರಿ.

WANTED

Applications are invited from young men with good educational qualifications for the posts of Inspectors, Agents Clerks etc. Applicants may be called for an interview by the Selection Committee in which case they will be required to proceed to this place at their own cost. Selected Candidates will be required to undergo a training course in Banking and allied subjects for one year prescribed by the Academy of General Education, Manipal in collaboration with the Syndicate. Minimum qualification: S. S. L. C. Standard. Age limit 25. Preference will be given to candidates having relations in Commerce. Application should reach the undersigned by 25-12-1943.

For full particulars apply to:

Udipi (S. India) }
15th Nov. 1943 }

The Office Superintendent,
Canara Industrial & Banking Syndicate Limited, UDIPI.

ಕಾಮಶಾಸ್ತ್ರದ ಗ್ರಂಥಗಳು

ಅನಂಗರಂಗ ೧—೮—೦
ಸ್ತ್ರೀಪುರುಷರ ಲಕ್ಷಣ, ಸಂಭೋಗ ಕಾಲ ನಿರ್ಣಯ, ರತಿಸಮಯದ ಹಾವಭಾವಗಳು, ದ್ರವಣಾದಿ ಔಷಧಗಳು ಇವೇ ಮೊದಲಾದ ರತಿಶಾಸ್ತ್ರದ ರಹಸ್ಯಮಯ ವಿಷಯಗಳು.

ವಿಕೃತ ಕಾಮ ೧—೮—೦
ಬಾಲ್ಯದ ಕಾಮವಿಕಾರಗಳು, ಸ್ವಾನುರತಿ, ಹಿಂಸಾರತಿ, ಪ್ರದರ್ಶನರತಿ, ಸಲಿಂಗರತಿ ಇತ್ಯಾದಿ.

ಪೌರುಷ ೧—೮—೦
ನಪುಂಸಕರೆಂದು ಮರುಗಬೇಡಿ. ಪುನಃ ಪೌರುಷ ಪ್ರಾಪ್ತಮಾಡಿಕೊಳ್ಳಲು ನೂರಾರು ಉಪಾಯಗಳಿವೆ.

ಗರ್ಭನಿರೋಧ (ಅಚ್ಚಿನಲ್ಲಿದೆ) ೧—೮—೦
ಸಂತತಿ ನಿಯಮನಕ್ಕೆ ಸರಿಯಾದ ದಾರಿಬೇಕೆ? ಡಾ। ಗೋಪಾಲ ಕೃಷ್ಣರಾಯರು ಬರೆದ ಈ ಹೊಸ ಪುಸ್ತಕ ಓದಿರಿ.

ದಾಂಪತ್ಯ ದರ್ಶನ ೧—೮—೦
ಸಂಭೋಗ ಸುಖ, ಗಂಡಹೆಂಡಿರಲ್ಲಾಗುವ ಅತ್ಯೈಕ್ಯ, ಅತಿ ಲಂಪಟತನದ ದುಷ್ಪರಿಣಾಮ, ರತಿ ಸೌಖ್ಯಕ್ಕೂ ಸಂತಾನ ಸುದೃಢತೆಗಳಿಗೂ ಇರುವ ಸಂಬಂಧಗಳ ಬಗ್ಗೆ ದಿ। ಪಂಡಿತ ತಾರಾನಾಥರಾಯರ ಕಾಮ ಮನೋವೈಜ್ಞಾನಿಕ ಗ್ರಂಥ.

ರತಿರಹಸ್ಯ ೧—೮—೦
ತಾರುಣ್ಯದ ಮದ, ಸ್ತನಗಳ ಸೌಂದರ್ಯ, ಸಮಾಗಮ ಶಯನ ಇತ್ಯಾದಿ

ಪ್ರೇಮಕಲಾ ೧—೮—೦
ಅಶ್ಲೀಲವಲ್ಲ! ಶಾಸ್ತ್ರೀಯ ಗ್ರಂಥವೆಂದು ಕೋರ್ಟಿನ ನಿರ್ಣಯವೇ ಆಗಿದೆ.

ಭ್ರಾಂತಿ ಮತ್ತು ಲೈಂಗಿಕ ಶಿಕ್ಷಣ ೧—೮—೦
ಪ್ರಸಿದ್ಧ ಡಾಕ್ಟರುಗಳ ಮೂರು ಶಾಸ್ತ್ರೀಯ ಪುಸ್ತಕಗಳು. ಉನ್ಮಾದ, ವೇಶ್ಯಾವೃತ್ತಿಯ ಹಾವಳಿ ಲೈಂಗಿಕ ಹಾಗೂ ಗುಪ್ತ ರೋಗಗಳ ಚಿಕಿತ್ಸೆ.

ವಿ. ಪಿ. ವೆಚ್ಚ ಬೇರೆ. ನಮ್ಮ ಕ್ಯಾಟಲಾಗಿಗೆ ಒಂದಾಣೆ ಅಂಚೇಚೀಟು ಕಳಿಸಿರಿ.

ಸಮಾಜ ಪುಸ್ತಕಾಲಯ ಧಾರವಾಡ.

ಸಮರಭೂಮಿಯ ಸಂಚಾರ

ಲೆಬನಾನರಿಗೆ ಸ್ವಾತಂತ್ರ್ಯ ಸಿಗುವುದು?

ಫ್ರಾನ್ಸಿನಲ್ಲಿ ಗಡಿಬಿಡಿ ಹುಟ್ಟಿದೆ

ಮುಸಲನಿ ಆತ್ಮಹತ್ಯ ಮಾಡಿಕೊಂಡನೆ?

ಪರಕೀಯರ ಸರಹತಿಯನ್ನು ತಾಳಲಾರದೆ, ಕೊನೆಗೊಮ್ಮೆ ಲೆಬನಾನರು ತಮ್ಮ ಪಾರ್ಲಿಮೆಂಟಿನಲ್ಲಿ ತಮ್ಮ ರಾಷ್ಟ್ರದ ಸ್ವಾತಂತ್ರ್ಯ ಘೋಷಣೆ ಮಾಡಿದರು. ಫ್ರೆಂಚ ಸಾಮ್ರಾಜ್ಯಶಾಹಿ ಇದನ್ನು ನೋಡಿ ಕೆರಳಿಬಿಟ್ಟಿತು! ಲೆಬನಾನ್ ಅಧ್ಯಕ್ಷರ, ಮಂತ್ರಿಗಳ ಮುಖಂಡರ ಬಂಧನಗಳಾದುವು; ಜನರನ್ನು ನಾಯಿಗಳಂತೆ ಗುಂಡಿಟ್ಟು ಕೊಲ್ಲಲಾಯಿತು; ದೇಶಾಭಿಮಾನ ಪ್ರೇರಿತರಾದ ವಿದ್ಯಾರ್ಥಿಗಳನ್ನೂ ನಿರ್ದಯ ಗುಂಡಿನ ಮಳೆ ಸುರಿಸಿ ನಿಧನಗೊಳಿಸಲಾಯಿತು! ಭಾರತೀಯರು ಲೆಬನಾನರರೀ ಸ್ವಾತಂತ್ರ್ಯ ಪ್ರೇಮ, ಫ್ರೆಂಚರರೀ ಸಾಮ್ರಾಜ್ಯದಾಹಗಳನ್ನು ಚನ್ನಾಗಿ ಅರ್ಥ ಮಾಡಿಕೊಂಡರು.

ಲೆಬನಾನರಿಗೆ ಸ್ವಾತಂತ್ರ್ಯ

ಲೆಬನಾನರು ಸ್ವಾತಂತ್ರ್ಯಕ್ಕಾಗಿ ಅತುಲ ಬಲಿದಾನವಿತ್ತರು. ಸ್ವಾತಂತ್ರ್ಯಪ್ರಿಯ ಲೆಬನಾನರನ್ನು ಮರ್ದಿಸಿದ್ದು, ರಾಷ್ಟ್ರೀಯ ಫ್ರೆಂಚ್ ಸಮಿತಿ. ಜರ್ಮನರ ಆಕ್ರಮಣದಿಂದ ಫ್ರಾನ್ಸನ್ನು ತಪ್ಪಿಸಿ, ಫ್ರೆಂಚರ ಸ್ವಾತಂತ್ರ್ಯವನ್ನು ಸ್ಥಾಪಿಸುವ ಪಕ್ಷ. ಮಿತ್ರಪಕ್ಷದಲ್ಲಿ ಸೇರಿ ಜಗತ್ತಿನ ಸ್ವಾತಂತ್ರ್ಯ ಪ್ರಜಾಪ್ರಭುತ್ವಗಳಿಗಾಗಿ ಹೋರಾಡುವ ರಾಷ್ಟ್ರ. ಇದರಿಂದಾಗಿಯೂ, ಹಿಂದೆ ಲೆಬನಾನಿಗೆ ಸ್ವಾತಂತ್ರ್ಯ ಕೊಡುವುದಾಗಿ ಹೇಳಿದ್ದರಿಂದಲೂ; ಬ್ರಿಟಿಷರಿಗೂ ಈ ಪರಿಸ್ಥಿತಿಯನ್ನು ಸ್ತಿಮಿತಕ್ಕೆ ತರಬೇಕಾಯಿತು. ಬ್ರಿಟಿಷರೂ ಇದರಲ್ಲಿ ಕೈಹಾಕಬೇಕಾಯಿತು.

ಅಂತೂ ಈಗ ಸಮಾಧಾನಕರವಾದ ಸುದ್ದಿ ಬಂದಿದೆ. ಲೆಬನಾನಿನ ಸಂಪೂರ್ಣ ಸ್ವಾತಂತ್ರ್ಯ ಕೊಡುವ ಆಶ್ವಾಸನೆಯಿತ್ತು, ಬಂಧನದಲ್ಲಿಟ್ಟ ಅಲ್ಲಿನ ಅಧ್ಯಕ್ಷ ಬೆಚಾರಿ ಎಲ್ ಖೌರಿಯರನ್ನೂ ಅವರ ಮಂತ್ರಿಗಳನ್ನೂ ಬಿಡುಗಡೆ ಮಾಡಲಾಗಿದೆ. ಇದರಿಂದ ಇಕ್ಕಡೆಯವರೂ ಈಗ ಶಾಂತರಾಗಿದ್ದಾರೆಂದು ತಿಳಿದುಬರುತ್ತದೆ. ಬಿಡುಗಡೆ ಹೊಂದಿದ ಕೂಡಲೇ ಅಧ್ಯಕ್ಷರು ಮಂತ್ರಿಗಳೊಡನೆ ಬಿರೂಟ ನಗರಕ್ಕೆ ಬಂದು ಜನರಿಗೆ ಸಂದರ್ಶನವಿತ್ತು ಎಲ್ಲರೂ ಉದ್ರೇಕಗೊಳ್ಳದೆ ಶಾಂತರಾಗಿರುವಂತೆ ಹೇಳಿದರು. ಲೆಬನಾನ್ ಸ್ವಾತಂತ್ರ್ಯಕ್ಕೆ ಗಂಡಾಂತರವಿಲ್ಲವೆಂದು ತಿಳಿಸಿದರು. ಲೆಬನಾನ್ ಘಟನೆಯಲ್ಲಿ ಲೆಬನಾನರು ಜಯಶಾಲಿಗಳಾದಂತೆ ತೋರುತ್ತದೆ. ಸ್ವಾತಂತ್ರ್ಯಕ್ಕಾಗಿ ಲೆಬನಾನರು ತಮ್ಮೆದೆಯ ರಕ್ತವನ್ನು ನೀರಿನಂತೆ ಚೆಲ್ಲಿ ತಮಗೆ ಬೇಕಾದ್ದನ್ನು ಪಡೆವ ಧೈರ್ಯದಲ್ಲಿದ್ದಾರೆ. ಸ್ವಾತಂತ್ರ್ಯ ದೇವಿಗೆ ಸರ್ವತ್ರ ವಿಜಯವಾಗಲಿ!

ರಶ್ಯನ್ ಸಂಗ್ರಾಮ

"ನೀಪರ್ ಸಂಗ್ರಾಮಕ್ಕೆ ರಶ್ಯನರು ಪ್ರಚಂಡ ಸನ್ನಾಹ ಮಾಡುತ್ತಿದ್ದಾರೆ. ನೀಪರ್ ವ್ಯೂಹದ ಭಾರೀ ಹೋರಾಟವು ಜರ್ಮನರಿಗೆ ವಿಷಮವಾಗಿ ನಿಲ್ಲುವುದು; ಕೆಂಪು ಸೈನ್ಯವು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿ ಎಲ್ಲಾ ವಿಭಾಗಗಳಲ್ಲಿಯೂ ಯಶಸ್ವಿಯಾಗಿ ಹೋರಾಡುತ್ತದೆ." ಎಂದು 'ನ್ಯೂಯಾರ್ಕ್ ಟೈಮ್ಸ್' ಪತ್ರಿಕೆ ಉಲ್ಲೇಖಿಸಿದೆ. ನೀಪರ್ ದಂಡೆಯ ಸಂಗ್ರಾಮದಲ್ಲಿ ರಶ್ಯನರು ೫೦ ಡಿವಿಜನಿನ ಭಾರೀ ಸೈನ್ಯ ವ್ಯೂಹವನ್ನು ಕಳುಹಿಸಿರುವರೆಂದು ಹೇಳಲಾಗಿದೆ. ಕ್ರಿವೊಯ್ ರೋಗಿನ ಉತ್ತರಭಾಗದಲ್ಲಿ ಮತ್ತು ನಿಪೂ ಪೆಟ್ರೋವಸ್ಕದ ದಕ್ಷಿಣಭಾಗದಲ್ಲಿ ನಿಕೋಪೋಲ್ ನಗರದಲ್ಲಿ ಕೆಂಪು ಸೈನ್ಯವು ಧಾಳಿಯಿಟ್ಟಿರುವುದು. ನೀಪರ್ ವಕ್ರದಲ್ಲಿ ಕೆಂಪು ಸೈನಿಕರು ನಿಜಾಬುಡಿಲೋ ರೈಲ್ವೆ ಸ್ಟೇಶನ್ ಮತ್ತು ಮಾರಿವಿಕೋ ಪಟ್ಟಣಗಳನ್ನಾಕ್ರಮಿಸಿದರು.

ಗೋಮೆಲ್ ದುರ್ಗವನ್ನು ವಶಪಡಿಸಿಕೊಳ್ಳಲು ಜನರಲ್ ರೊಕೊಸಿಸ್ಕಿಯವರ ಸೇನಾವಳಿಗಳು ಈ ಭಾಗದಲ್ಲಿ ಅರ್ಧ ಚಂದ್ರಾಕೃತಿಯಲ್ಲಿ ಮುನ್ನುಗ್ಗುತ್ತಿವೆ. ರೆಚಿಟ್ಸ್ ಪಟ್ಟಣವನ್ನಾಕ್ರಮಿಸಿದ ಸೈನಿಕರು ಈಗ ಪಶ್ಚಿಮಾಭಿಮುಖವಾಗಿ ಸಾಗುತ್ತಿರುವರು. ಮೊಗಿಲೆವ್ ರೈಲ್ವೆ ಕೇಂದ್ರವನ್ನು ವಶಪಡಿಸಿಕೊಳ್ಳಲು ಅವರು ಬಯಸುತ್ತಿದ್ದಂತೆ ತೋರುತ್ತದೆ. ನೀಪರ್ ಬಂಡೆಯ ಪಶ್ಚಿಮದಲ್ಲಿರುವ ಠಾಣ್ಯಗಳನ್ನಾಕ್ರಮಿಸಲು ರಶ್ಯನರು ಮಹಾ ಸಾಹಸ ಮಾಡುತ್ತಿರುವರು.

ಕೀವ್ ನಗರದ ಪಶ್ಚಿಮಕ್ಕೆ ಜರ್ಮನರು ಕೈಕೊಂಡ ಪ್ರತಿಧಾಳಿಯ ರಭಸವಿನ್ನೂ ನಿಂತಿಲ್ಲ. ಕೊರೊಸ್ಟಿಚೆವ್‌ನಲ್ಲಿ ಆರಂಭಿಸಿದ ಧಾಳಿ ಫಲಕಾರಿಯಾಗಿದೆ. ಇದರಿಂದ ಉತ್ಸಾಹಗೊಂಡ ಜರ್ಮನರು ಜಿತೋಮಿರ ನಗರದ ಉತ್ತರದಲ್ಲಿ ಮತ್ತೊಂದು ಧಾಳಿ ಪ್ರಾರಂಭಿಸಿರುವರು. ಜಿತೋಮಿರದ ಪೂರ್ವದಲ್ಲಿ ಜರ್ಮನರು ಟೇಂಕ್ ಮತ್ತು ಸಶಸ್ತ್ರ ದಳಗಳಿಂದ ಅತ್ಯಂತ ಘೋರ ಧಾಳಿ ಮಾಡಿ ರಶ್ಯನರನ್ನು ಭೇದಿಸಲು ಸಾಹಸ ಮಾಡುತ್ತಿರುವರು. ಕ್ರೆಮೆನಚಡ ನೈಋತ್ಯಕ್ಕೂ ಯುದ್ಧ ನಡೆಯುತ್ತದೆ.

ಇಟಲಿ ರಣಕ್ಷೇತ್ರ

ಇಟಲಿಯ ರಣರಂಗದಲ್ಲಿ ಮಿತ್ರ ಪಕ್ಷದವರು ಆವೇಶಗೊಂಡು ಹೋರಾಡುತ್ತಾರೆ. ಅಷ್ಟಮದಳವು ಬಿರುಗಾಳಿ ಮಳೆಗಳ ಹೊಡೆತಕ್ಕೆ ಸಿಕ್ಕಿದರೂ ಅವರ ಚಟುವಟಿಕೆಗಳು ಯಶಸ್ವಿಯಾಗಿದೆ. ಸಾಂಗ್ರೋ ನದೀ ತೀರದ ಕೆಲವು ದಿನ್ನೆಗಳನ್ನು ಮಿತ್ರರು ವಶಪಡಿಸಿ ಕೊಂಡಿರುವರು. ಬ್ರಿಟಿಷ್ ದಳವು ರಕ್ಷಣಾ ವ್ಯವಸ್ಥೆಗೊಳಿಸಿದೆ. ಅಗ್ನೋನೆ ಪಟ್ಟಣವನ್ನು ಆಕ್ರಮಿಸಿಕೊಂಡು ಮಿತ್ರ ಸೈನ್ಯವು ಎಂಟು ಮೈಲುಗಳ ವರೆಗೆ ವಿಸ್ತರಿಸಿಕೊಂಡು ಪಾಸ್ಕೋದಿಂದ ಟಿಯುನಾರೇ ಸಾಗರಕ್ಕೆ ಹೋಗುವ ಹಾದಿಯಲ್ಲಿ ನಿಂತಿದೆ. ಕ್ಯಾಸ್ಟೆಲ್ ಸಿಸ್, ವಿನ್‌ಸಂಟೋ ಮತ್ತು ರೊಕ್ಕೆಟಾ ಪಟ್ಟಣಗಳನ್ನು ಆಕ್ರಮಿಸಿ ಮಿತ್ರರು ಕ್ಯಾಸಿನೋ ನಗರಕ್ಕೆ ಭೀತಿಯನ್ನುಂಟು ಮಾಡಿರುವರು.

ದಕ್ಷಿಣ ಇಟಲಿ ಕಾಳಗದಲ್ಲಿ ಸಾಂಗ್ರೋ ನದೀ ತೀರದಲ್ಲಿ ಜರ್ಮನ್ ಸೈನಿಕರು ಹಿಂದೋಡುತ್ತಿದ್ದಾರೆಂದು ಹೇಳಲಾಗಿದೆ. ಬ್ರಿಟಿಷ್ ಪಂಚಮ ದಳದವನ್ನು ಸೋಲಿಸಲು ಜರ್ಮನರು ಅಪಾರ ಸೈನ್ಯ ಸಂಗ್ರಹಿಸುತ್ತಿರುವರು, ಜರ್ಮನರು ಸುರಂಗ ಮತ್ತು ವಿದ್ಯುಚ್ಛಕ್ತಿ ಬೇಲಿಗಳನ್ನು ಹಾಕಿ ತಮ್ಮ ವ್ಯೂಹವನ್ನು ಭದ್ರಗೊಳಿಸುತ್ತಿದ್ದಾರೆ. ಉಭಯತರೂ ವೈರಿ ವ್ಯೂಹವನ್ನು ಭೇದಿಸುವುದರಲ್ಲಿದ್ದಾರೆ. ಇಟಲಿಯ ಅರಸರಾದ ವಿಕ್ಟರ್ ಇಮಾನ್ಯುವೇಲರು ಒಂದು ಸಂದೇಶದಲ್ಲಿ, ವೈರಿಗಳನ್ನು ಇಟಲಿಯಿಂದ ಹೊಡೆದೋಡಿಸುವ, ಎದೆಗುಂದದೆ ಇಟಲಿ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಹುರುಪಿನ ಮಾತುಗಳನ್ನು ಹೇಳಿದ್ದಾರೆ.

ಫೇಸಿಫಿಕಿನಲ್ಲಿ ನೌಕಯುದ್ಧ

ಮಧ್ಯ ಫೇಸಿಫಿಕ್ ಸಾಗರದಲ್ಲಿ ಅಮೇರಿಕನ್ ಮತ್ತು ಜಪಾನೀ ನೌಕಪಡೆಗಳೊಳಗೆ ಬೇಗನೇ ದೊಡ್ಡ ನೌಕಾ ಕಾಳಗವೊಂದು ಸಂಭವಿಸುವುದು... ಅನಿವಾರ್ಯವೆಂದು ಸುದ್ದಿಬಂದಿದೆ. ಅಮೆರಿಕನ್ ನೌಕಾ ಬಲವು ಇದಕ್ಕೆ ಸಿದ್ಧವಾಗಿರುವುದಂತೆ. ಏಕೆಂದರೆ ಗಿಲ್ಬರ್ಟ್ ದ್ವೀಪದ ಮೇಲೆ ದಂಡೆತ್ತಿ ಹೋದದ್ದು ಇದರ ಲಕ್ಷಣವೆಂದು ಹೇಳಲಾಗುತ್ತದೆ. ಅಮೆರಿಕನರನ್ನು ತಡೆಯಲು ಮಧ್ಯ ಫೇಸಿಫಿಕಿನಲ್ಲಿರುವ ತಮ್ಮ ನೌಕಾ ಬಲದಲ್ಲಿ ಅರ್ಧಾಂಶದಷ್ಟು ಹಡಗಗಳನ್ನು ಜಪಾನರು ಉಪಯೋಗಿಸ ಬಹುದೆಂದೂ ಹೇಳಲಾಗುತ್ತದೆ. ಜಪಾನು ಒಂದು ಪಕ್ಷ ಈಗ ನೌಕಾ ಯುದ್ಧಕ್ಕೆ ಬರದಿದ್ದರೆ, ಮುಂದೆ ಜಪಾನಿಗೆ ದೊಡ್ಡ ಗಂಡಾಂತರ ಬಂದಾಗ ಅದನ್ನು ನಿವಾರಿಸಲು ಜಪಾನು ಹಡಗು ಪಡೆಯನ್ನು ಕಾದಿರುತ್ತದೆಯೆಂದು ತಿಳಕೊಳ್ಳಬೇಕಾಗುತ್ತದೆ.

ಹೇಗಿದ್ದರೂ ಗಿಲ್ಬರ್ಟ್ ದ್ವೀಪದ ಆಕ್ರಮಣದಿಂದ ಪಿಲಿಪಯಿನ್ ದೇಶಕ್ಕೆ ಗಂಡಾಂತರವಿದೆ. ಪಿಲಿಪಯಿನ್ ಜಪಾನಿನ ಕೀಲಿ ಕೈಯೆಂದು ಗಣಿಸಲಾಗಿದೆ. ಗಿಲ್ಬರ್ಟ್ ದ್ವೀಪದಲ್ಲಿಳಿದ ಅಮೆರಿಕನರಿಗೆ ಈಗ ವಿಜಯ ದೊರಕುತ್ತಿದೆ. ತಾರವಾದ್ವೀಪದಿಂದ ೮೦ ಮೈಲು ದೂರಕ್ಕಿರುವ ಅಬೆಮೂಮಾ ಎಂಬ ಚಿಕ್ಕ ಕೋರಲ್ ದ್ವೀಪವೂ ಅವರ ಸ್ವಾಧೀನವಿರುವುದು. ಮಕಿಂಗ್ ಮತ್ತು ತಾರವಾದ್ವೀಪಗಳಲ್ಲಿ ಪ್ರಬಲ ಹೋರಾಟವು ನಡೆಯುತ್ತಿದೆ. ನ್ಯೂಗಿನಿ ದ್ವೀಪದಲ್ಲಿ ಆಸ್ಟ್ರೇಲಿಯನ್ ಸೈನಿಕರು ಘೋರಾರಣ್ಯಗಳ ನಡುವೆ ಹಾದು ಜಪಾನರ ಸಟ್ಟೆಲಬೂರ್ಗ ದುರ್ಗಕ್ಕೆ ಸಮೀಪಿಸಿರುವರು. ಗುಡ್ಡಗಾಡುಗಳಲ್ಲಿ ಜಪಾನರು ಪ್ರಬಲ ಪ್ರತಿಭಟನೆ ಕೊಡುತ್ತಿರುವರು, ಮಿತ್ರ ವಿಮಾನಗಳು ಜಪಾನೀ ಆಕ್ರಮಿತ ಹಳ್ಳಿಗಳಿಗೆ ಧಾಳಿಯಿಡುತ್ತಿವೆ. ಬಾಗೆನವೀಲೆ ದ್ವೀಪದಲ್ಲಿ ಅಮೆರಿಕನರು ತಮ್ಮ ಠಾಣ್ಯ ವಿಸ್ತರಿಸುತ್ತಿರುವರು.

ಫ್ರಾನ್ಸಿನಲ್ಲಿ ಗಡಿಬಿಡಿ

ಫ್ರಾನ್ಸಿನಲ್ಲಿ ಗಡಿಬಿಡಿಯುಂಟಾಗಿರುವುದು. ವಿಚಿ ಸರಕಾರದ ಮುಖ್ಯಾಧಿಪತಿ ಪಿಟೇನರು ರಾಜಿನಾಮೆಯಿತ್ತಿದ್ದಾರೆ; ರಾಜಿನಾಮೆಯಿತ್ತೊಡನೆ ಅವರನ್ನು ಬಂಧಿಸಲಾಗಿದೆ. ಲ್ಯಾವಲ್ಲರು ಮಂತ್ರಿಮಂಡಳದ ಸಭೆಯ ಅಧ್ಯಕ್ಷತೆ ವಹಿಸಿಕೊಂಡಿರುವರು. ಲ್ಯಾವಲ್ ಸರಕಾರದ ಮೂರು ಮುಖ್ಯಾಧಿಕಾರಿಗಳನ್ನು ಯಾರೋ ಗುಂಡಿಕ್ಕಿಕೊಂದ ಸುದ್ದಿಯೂ ಬಂದಿದೆ. ಇವರಲ್ಲಿ ಇಬ್ಬರು ಫ್ರಾನ್ಸಿನ ಸೈನ್ಯ ಮತ್ತು ಪ್ರಚಾರ ಖಾತೆಗಳ ಮುಖ್ಯಾಧಿಕಾರಿಗಳಾಗಿರುವರು. ಹೋಟೆಲಿನಲ್ಲಿ ಅವರು ಊಟಕ್ಕೆ ಕುಳಿತಿದ್ದಾಗ ಕೆಲವು ಸಶಸ್ತ್ರ ದೇಶಪ್ರೇಮಿಗಳು ಒಳನುಗ್ಗಿ ಗುಂಡೆಸೆದು ಓಡಿಹೋದರು. ಹೀಗೆ ಫ್ರಾನ್ಸಿನಲ್ಲಿ ಭಯೋತ್ಪಾದಕ ಆಂದೋಲನಗಳೀಗ ಪ್ರಾರಂಭವಾದಂತಿದೆ.

ವಿಚಿ ಮಂತ್ರಿಮಂಡಳದಲ್ಲಿ ಇಂದು ಬಿಕ್ಕಟ್ಟು ಉಂಟಾಗಿರುವುದೆಂದು ಹೇಳಲಾಗುತ್ತಿದೆ. ಮಾರ್ಶಲ್ ಪಿಟೇನರು ಅನಾರೋಗ್ಯದಿಂದಿರುವರೆಂದೂ ಲ್ಯಾವಲ್ — ಪಿಟೇನರಲ್ಲಿ ಮನಸ್ತಾಪ ಹುಟ್ಟಿದೆಯೆಂದೂ ಸುದ್ದಿ ಹಬ್ಬಿದೆ. ಇದಕ್ಕೆ ಬೇಕಾದಷ್ಟು ಆಧಾರಗಳೇನೂ ಇಲ್ಲ. 'ಪಿಟೇನರ ಆರೋಗ್ಯವೇನೋ ಚನ್ನಾಗಿದೆ, ಆದರೆ ಅವರ ಚಟುವಟಿಕೆಗಳು ರದ್ದುಗೊಳಿಸಲ್ಪಟ್ಟಿವೆ' ಎಂದು ಕೆಲವು ಕಡೆಗಳಿಂದ ವಾರ್ತೆ ಬರುತ್ತದೆ. ಅಂತೂ ಫ್ರಾನ್ಸು ಸ್ವಲ್ಪ ತಳಮಳಕ್ಕೊಳಗಾಗಿದೆಯೆಂದು ಈ ಸುದ್ದಿಯಿಂದ ತಿಳಿಯಬಹುದು. ಫ್ರೆಂಚರೇನೋ ಉಜ್ವಲ ದೇಶಪ್ರೇಮಿಗಳು; ಸ್ವಾತಂತ್ರ್ಯಕ್ಕಾಗಿ ರಕ್ತವನ್ನು ನೀರಂತೆ ಚೆಲ್ಲುವ ಕ್ರಾಂತಿಕಾರರು ಹಿಟ್ಲರನ ಅಂಕೆಯಲ್ಲಿದ್ದು ಬದುಕುವುದಕ್ಕಿಂತ ಸಾವೇ ಮೇಲೆಂದು ಈಗ ತಮ್ಮ ಸ್ವಾತಂತ್ರ್ಯ ಪಡೆಯಲು ಕೆರಳಿ ನಿಂತಿರಲೂ ಬಹುದು.

ಸಾಮೊಸದಿಂದ ಹಿಂದೋಟ?

ಡೊಡೆಕೆನೀಜ ನಡುಗುಡ್ಡೆಗಳಲ್ಲೊಂದಾದ ಸಾಮೊಸ ನಡುಗುಡ್ಡೆಯನ್ನು ಬ್ರಿಟಿಷ್ ಗ್ರೀಕ್ ಮತ್ತು ಕೆಲವು ಇಟಲಿಯನ್ ಸೈನಿಕರು ಖಾಲಿ ಮಾಡಿದರೆಂದು ಈಗ ಅಧಿಕೃತ ಪ್ರಕಟಿಸಲಾಗಿದೆ. ಈ ಕುರಿತು ಮಧ್ಯಪೂರ್ವದಿಂದಲೂ ಒಂದು ವಿಶೇಷ ಪ್ರಕಟಣೆ ಹೊರಡಿಸಲ್ಪಟ್ಟಿರುವುದು. ತಮ್ಮ ಕೆಲಸಗಳನ್ನೆಲ್ಲಾ (ಅವು ಯಾವುವೆಂದು ನಮಗೆ ತಿಳಿದಿಲ್ಲ) ಪೂರ್ತಿ ಮುಗಿಸಿ, ಗ್ರೀಕ್, ಬ್ರಿಟಿಷ್ ಮತ್ತು ಕೆಲ ಇಟಲಿಯನ್ ಸೈನಿಕರು ತಾವು ಯಾವುದೇ ರೀತಿಯ ಹಾನಿಯನ್ನೂ ಹೊಂದದೆ ಸುಖವಾಗಿ ಸಾಮೊಸ ನಡುಗುಡ್ಡೆಯನ್ನು ಖಾಲಿಮಾಡಿ ಹಿಂದಿರುಗಿದರು. ಹೀಗೆ ಹಿಂದಿರುಗುವ ಸಾಹಸಮಯ ಕಾರ್ಯವನ್ನು ಇವರು ಬಹು ಸಮಯದಿಂದಲೇ ಮಾಡುತ್ತಿದ್ದರೆಂದು ಹೇಳಲಾಗುತ್ತದೆ.

ಜರ್ಮನ್ ಸೈನಿಕರು ಸಾಮೊಸವನ್ನು ಆಕ್ರಮಿಸಿಕೊಂಡಿರುವರೆಂದು ಬರ್ಲಿನಿನಿಂದ ಪ್ರಕಟಣೆ ಹೊರಡಿಸಲಾಗಿದೆ. ಅಂತೂ ಒಟ್ಟಿನಿಂದ ನೋಡುವಾಗ ಜರ್ಮನರು ಇಲ್ಲಿ ಗೆದ್ದು ಮಿತ್ರಪಕ್ಷದವರು ಸೋತ ಹಾಗೆ ಕಾಣುತ್ತದೆ. ಹಾಗೆ ಸೋತು ಹಿಂದಿರುಗಿದರೂ ಏನೂ ಹಾನಿಗೊಳಗಾಗದೆ ತಮ್ಮ ಉದ್ದೇಶಗಳನ್ನೆಲ್ಲ ಸಾಧಿಸಿ ಹಂತಿಕೆಯಂತೆ ಹಿಂದಿರುಗಿದ್ದು ಬಹಳ ಸ್ವಾರಸ್ಯದ ಸಂಗತಿಯಾಗಿರುವುದು. ಪಲಾಯನ ಮಾಡುವವರೂ ತಾವೇ ಬುದ್ಧಿಶಾಲಿಗಳೆಂದು ತಿಳಿಕೊಳ್ಳುವುದರಲ್ಲಿ ವಿಶೇಷ ತಪ್ಪೇನೂ ಇಲ್ಲ.

ಮುಸಲನಿ ಆತ್ಮಹತ್ಯೆ?

ಇಟಲಿಯ ಮಾಜಿ ಸರ್ವಾಧಿಕಾರಿಯಾದ ಸಿನಾರ ಮುಸಲನಿಯು ತನ್ನ ಮನೆಯಾದ 'ಲೇಕ ಗಾರ್ಡಾವಿಲಾದ'ದಲ್ಲಿ ತಾ. ೨೨ರಂದು ಆತ್ಮಹತ್ಯೆಮಾಡಿಕೊಂಡನೆಂದು ಈಗ ಸುದ್ದಿ ಹಬ್ಬಿಸಿರುವರು. ಈ ಸುದ್ದಿಯನ್ನು ಸ್ವಿಜರ್ಲೆಂಡಿಗೆ ಬಂದ ಪ್ರವಾಸಿಕರು ಹೇಳಿದರೆಂದು ಡೆಜೇನನಿಹೀತರ ಪತ್ರಿಕೆಯ ಝೂರಿಚ್ ಸುದ್ದಿಗಾರನು ತಿಳಿಸಿರುವುದಾಗಿ ಹೇಳಲಾಗಿದೆ. ಅಂತೂ ದೊಡ್ಡ ದ್ರಾವಿಡ ಪ್ರಾಣಾಯಾಮವು ಮಾಡಿ ಈ ಸುದ್ದಿ ಸೃಷ್ಟಿಸಲಾಗಿದೆಯೆಂಬುದು ವ್ಯಕ್ತ. ಮುಸಲನಿಯು ಅತೀವ ನಿರಾಶನಾಗಿ ಕೆಲದಿನಗಳ ಹಿಂದೆ ಈ ಮನೆಗೆ ಬಂದನಾಗಿಯೂ, ಹಾಗೆ ನಿರಾಶೆ ಮಿತಿಮೀರಿ ಪ್ರಾಣಹತ್ಯ ಮಾಡಿಕೊಂಡನೆಂದೂ ಆ ಪ್ರವಾಸಿಕರು ಹೇಳಿದರೆಂದೂ ಕೇಳುತ್ತದೆ.

ಇಂಥಾ ಸುದ್ದಿಗಳನ್ನು, ಹಿಟ್ಲರ್ ಮುಸಲನಿಗಳ ಆತ್ಮ ಹತ್ಯೆಯ ಸುದ್ದಿಗಳನ್ನು ಕೊಡುವುದು ಕೆಲ ಕಾಲದಿಂದ ಒಂದು ಕುಚೋದ್ಯವಾಗುತ್ತಾ ಬಂದಿದೆ. ಬಹುಶಃ ವೈರಿಯನ್ನು ಯಾವ ರೀತಿಯಿಂದಲಾದರೂ ಕೊಲ್ಲಬೇಕೆಂದು ಹಠವಿದ್ದರೆ ಹೀಗೆ ಸುದ್ದಿ ಹರಡಿಸಿಯೂ ಕೊಲ್ಲುವ ಉಪಾಯ ಹೂಡುತ್ತಾರೋ ಏನೋ! ಹಿಂದೆ ಇಂಥಾ ಹಲವು ಸುದ್ದಿಗಳು ನಿರಾಧಾರವಾಗಿ ಜಗತ್ತಿನ ಜನರ ಅಪಹಾಸ್ಯಕ್ಕೆ ಈಡಾಗಿವೆ. ಈ ಸುದ್ದಿಯ ಸತ್ಯಸಂಗತಿ ತಿಳಿದಿಲ್ಲವಾದರೂ ರಾಯಿಟರ್ ಸುದ್ದಿಗಾರನು ಈ ಸುದ್ದಿ ನಿಜವೆಂದು ಬೇರೆ ಕಡೆಯಿಂದ ತಿಳಿದುಬಂದಿಲ್ಲವೆಂದೀಗ ತಿಳಿಸಿರುವನು.

WANTED IMMEDIATELY

A clerk well qualified in Accountancy, Typewriting and correspondence, with previous experience. Salary according to qualification. Apply in person with testimonials. Selected candidate will have to furnish a security of Rs. 500.

C. P. Kamath,
Managing Director
Canara Medical Supplies Ltd.

ಸ್ವದೇಶಾಭಿಮಾನಿ

ತಾರೀಕು 26—11—1948

ಅಕ್ಕಿಯ ಕ್ರಯ ತಗ್ಗಿಸಲೇಬೇಕು

ದಕ್ಷಿಣ ಕನ್ನಡದ ಅಕ್ಕಿಯ ಕ್ರಯ ವಿಂದು ದಿನದಿಂದ ದಿನಕ್ಕೆ ಏರುತ್ತಾ ಹೋಗುತ್ತದೆ. ಬೇಗನೇ ರೇಶನಿಂಗ್ ಬರಲಿದೆಯೆಂದು ಕೇಳಬರುವುದಾದರೂ, ರೇಶನಿಂಗ್ ಬರುವ ವರೆಗೆ ಹೀಗೆ ಕ್ರಯ ಏರುತ್ತಾ ಹೋಗುವುದರಲ್ಲಿ ತುಂಬಾ ಅನರ್ಥವಿದೆ. ಬಡಜನರು, ಮಧ್ಯಮ ವರ್ಗದ ಜನರು ರೇಶನಿಂಗ್ ಬರುವ ವರೆಗೆ ಊಟ ಮಾಡಲು ಸಾಧ್ಯವಿಲ್ಲ ಮಾತ್ರವಲ್ಲ, ಹೀಗೆ ಕ್ರಯ ಏರಿದರೆ ಸಹಜವಾಗಿ ಹಳ್ಳಿಯ ವರ್ಗದಾರರಲ್ಲಿದ್ದ ಅಕ್ಕಿ ವ್ಯಾಪಾರಿಗಳ ಕೈಗೆ ಸೇರಿ ಕಳ್ಳ ಸಂತೆ ನಡೆಯಲು ಆಸ್ಪದವಾಗುವುದು. ಆದ್ದರಿಂದ ಕೂಡಲೇ ಸರಕಾರದವರು, ಜಿಲ್ಲಾಧಿಕಾರಿಗಳು ಅಕ್ಕಿಯ ನಿಶ್ಚಿತ ಕ್ರಯವನ್ನು ನಿರ್ಧರಿಸುವುದು ಅತ್ಯವಶ್ಯವಿರುವುದು.

ಮದ್ರಾಸ್ ಗವರ್ನರರ ಎಡ್ವೈಸರರಾದ ಶ್ರೀ। ರಾಮಮೂರ್ತಿಯವರು ಮಂಗಳೂರಿಗೆ ಬಂದಸಂದರ್ಭದಲ್ಲಿ ಈ ವಿಚಾರ ಹೆಚ್ಚಿನ ಮಾತುಕತೆಗಳಾಗಿವೆ. ಲೇಶನಿಂಗ್ ಜಾರಿಯಾಗುವ ಮುನ್ನ ಮಂಗಳೂರ ಜನತೆ ಬದುಕಬೇಕಾದಷ್ಟು ಅಕ್ಕಿ ಸಂಗ್ರಹ ನಮ್ಮಲ್ಲಿಲ್ಲವೆಂದು ವ್ಯಾಪಾರಿಗಳು ಹೇಳಿದ್ದಾರೆ. ಆದ್ದರಿಂದ ಅಷ್ಟು ಅಕ್ಕಿಯನ್ನು ಬೇಗನೇ, ದಶಂಬರ ಮಧ್ಯದೊಳಗೆ ಒದಗಿಸಿಕೊಡಬೇಕೆಂದು ಅಧಿಕಾರಿಗಳು ವರ್ಗದಾರರಿಗೆ ತಿಳಿಸಿರುವರು. ವರ್ಗದಾರರೂ ಅದಕ್ಕೆ ಒಪ್ಪಿರುವರು. ಆದರೆ ಈಗ ಮಳೆ ಬಿಡದಿರುವುದರಿಂದ, ಅಕ್ಕಿ ತಯಾರಿಸಲು ಅನುಕೂಲವಿಲ್ಲವೆಂದೂ, ಕ್ರಯ ನಿಶ್ಚಯವಾಗಿರದ್ದರಿಂದ, ವ್ಯಾಪಾರಿಗಳು ಮನೆಬಾಗಿಲಿಗೆ ಬಂದು ಹೆಚ್ಚಿನ ಕ್ರಯ ಕೊಡುವರೆಂಬ ಕಾರಣದಿಂದಲೂ ಸಾಕಷ್ಟು ಅಕ್ಕಿ ಒದಗಿಸುವುದು ತಮಗೆ ಸಾಧ್ಯವಾಗುವುದಿಲ್ಲವೆಂದೂ ಆದ್ದರಿಂದ ಸರಕಾರವು ಕೂಡಲೇ ಕ್ರಯ ತಗ್ಗಿಸಬೇಕಾದರೆ ಅಕ್ಕಿಯ ನಿಶ್ಚಿತಕ್ರಯ ನಿರ್ಧರಿಸಬೇಕೆಂದೂ ವರ್ಗದಾರರು ಹೇಳುತ್ತಾರೆ.

ನಮ್ಮ ಜಿಲ್ಲೆಯು ನಮ್ಮ ಉಪಯೋಗಕ್ಕೆ ಸಾಕಾಗುವಷ್ಟು ಮಾತ್ರ ಅಕ್ಕಿ ಉತ್ಪತ್ತಿ ಮಾಡುತ್ತದೆಂದು ಸರಕಾರ ತಿಳಿಸುತ್ತದೆ. ವರ್ಗದಾರರು ಈ ಜಿಲ್ಲೆಗೆ ಸಾಕಾಗುವಷ್ಟು ಉತ್ಪತ್ತಿ ಮಾಡುವುದಿಲ್ಲವೆಂದು ರುಜುಪಡಿಸುತ್ತಾರೆ. ಹೇಗಿದ್ದರೂ ಈ ವರ್ಷದ ಬೆಳೆ ಹಾಳಾದ ಕಾರಣ ನಮಗೆ ಸಾಕಾಗುವಷ್ಟು ಅಕ್ಕಿ ನಮ್ಮ ಜಿಲ್ಲೆಯಲ್ಲಿ ಹುಟ್ಟೀತೆಂಬ ಭರವಸೆಯಿಲ್ಲ. ಆದ್ದರಿಂದ ಹೊರಗಿನಿಂದ ಇಲ್ಲಿಗೆ ಅಕ್ಕಿ ತರಿಸಬೇಕಾಗಿ ಬರಬಹುದು. ಅಧಿಕಾರಿಗಳೂ ಇಂಥಾ ಸಂದರ್ಭದಲ್ಲಿ ತರಿಸುವ ಭರವಸೆಯೀಯುತ್ತಾರೆ. ಹಾಗಾದರೆ, ಸದ್ಯ ಹನಿ ಚೆನ್ನಾಗಿರದೆ ಅಕ್ಕಿ ಮಾಡಲು ಸಂಭವವಾಗದಿರುವುದರಿಂದ ಹಾಗೂ ನಿಶ್ಚಿತ ಕ್ರಯ ನಿರ್ಧರಿಸದೆ ಬೆಲೆ ಏರಿರುವುದರಿಂದ ಅಕ್ಕಿ ಕಡಿಮೆ ಕ್ರಯಕ್ಕೆ ಸಿಗದಿರಲು, ಕಡಿಮೆ ಸಿಗುವಂತೆ ಮಾಡಬೇಕಾದರೆ ಈಗಲೇ ಹೊರಗಿನಿಂದ ನಮ್ಮ ಜಿಲ್ಲೆಗೆ ಅಕ್ಕಿ ತರಿಸಬೇಕೆಂದು ಕೆಲವರು ಸೂಚನೆಯಿತ್ತಿರುವರು.

ಯಾವದೇ ರೀತಿಯಿಂದಲೇ ಆಗಲಿ ಸರಕಾರದವರು ಅಕ್ಕಿಯ ಕ್ರಯವನ್ನು ತಗ್ಗಿಸುವ ಕಾರ್ಯಕ್ರಮವನ್ನು ಕೂಡಲೇ ಕೈಕೊಳ್ಳಬೇಕು.

ಪತ್ರಿಕಾ ನಿರ್ಬಂಧ

'ಯುದ್ಧ ವಾರ್ತೆಗಳನ್ನುಳಿದು ಉಳಿದವುಗಳೆಲ್ಲದರ, ವಿಶೇಷತಃ ಆಂತರಿಕ ರಾಜಕೀಯ ಹಾಗೂ ಆರ್ಥಿಕ ವಿಷಯಗಳ ಕುರಿತು ಬರೆವಲ್ಲಿ ಪತ್ರಿಕೆಗಳಿಗೆ ಹಾಕಿದ ನಿರ್ಬಂಧಗಳನ್ನು ಸಂಪೂರ್ಣ ತೆಗೆದು ಹಾಕಬೇಕು' ಎಂಬ ನಿರ್ಣಯವನ್ನು ಪಂಡಿತ ಕುಂಜ್ರುಗಳು ಕೌನ್ಸಿಲ್ ಓಫ್ ಸ್ಟೇಟಿನಲ್ಲಿ ತಂದರು. ಈ ನಿರ್ಣಯವು ಮತಗಣನೆಯಿಲ್ಲದೆ ನಿರಾಕರಿಸಲ್ಪಟ್ಟದ್ದು ಅತ್ಯಂತ ವಿಷಾದಕರವಿದೆ. ಆದರೂ ಪಂಡಿತ ಕುಂಜ್ರುಗಳು ಈ ಸಂದರ್ಭದಲ್ಲಿ ಹೇಳಿದ ಮಾತುಗಳು ವಿಚಾರಣೀಯವಿವೆ:

"ಸುದ್ದಿನಿರ್ಬಂಧದ ವಿಷಯದಲ್ಲಿ ಪ್ರಾಂತಪ್ರಾಂತಗಳಲ್ಲಿ ಒಂದೇ ತರದ ಧೋರಣೆಯಿಲ್ಲ; ಪ್ರಾಂತ ಮತ್ತು ಕೇಂದ್ರ ಸರಕಾರಗಳಲ್ಲಿ ಈ ಕುರಿತು ಏಕಾಭಿಪ್ರಾಯವಿಲ್ಲ. ಭಾರತದ ಆಕಾಶವಾಣಿಯಲ್ಲಿ ಹೇಳಿದ ಸುದ್ದಿಗಳನ್ನು ಪ್ರಕಟಿಸಲು ಪಂಜಾಬಿನಲ್ಲಿ ನಿರ್ಬಂಧವಿದೆ. ಬಂಗಾಳದಲ್ಲಿ ಬಂಗಾಳದ ಸುದ್ದಿಗಳನ್ನೇ ಪ್ರಕಟಿಸದಂತೆ ಬಂಗಾಳದ ಪತ್ರಿಕೆಗಳಿಗೆ ತಡೆ ಹಾಕಲಾಗಿದೆ. ವಿದೇಶಗಳಿಗೆ ಹೋಗುವ ಭಾರತದ ಬರಗಾಲದ ಸುದ್ದಿಗಳ ವಿಷಯವೂ ಕಠಿಣ ನಿರ್ಬಂಧವಿದೆ. ಪತ್ರಿಕೆಗಳಿಗೆ ಈ ವಿಷಯ ಸ್ವಾತಂತ್ರ್ಯ ಕೊಡುವುದು ಅತ್ಯಂತ ಅವಶ್ಯ" ಎಂದು ಪಂಡಿತ ಕುಂಜ್ರು ವಾದಿಸಿದರು.

"ಸುದ್ದಿಗಳ ಮೇಲೆ ಹಾಕಿದ ನಿರ್ಬಂಧವು ನಾಜಿ ಆಡಳಿತದ ರೀತಿಯದ್ದಾಗಿದೆ. ಇದನ್ನು ತೆಗೆದುಹಾಕಲೇಬೇಕು. ಭಾರತದ ಪತ್ರಿಕೆಗಳ ಮೇಲೆ ಹಾಕಿದ ನಿರ್ಬಂಧ ಬಹಳ ನಿಷ್ಠುರದ್ದಿದೆಯೆಂದು ಪಾರ್ಲಿಮೆಂಟ್ ಸದಸ್ಯ ಗ್ಯಾಂಟ್ ಫೆರಿಸರೇ ಅಭಿಪ್ರಾಯಪಡುತ್ತಾರೆ. ಸರಕಾರ ಪುನರಾಲೋಚಿಸಿ ಈಗಲಾದರೂ ಪತ್ರಿಕೆಗಳ ಮೇಲಿನ ಇಂಥಾ ಕಠೋರ ನಿರ್ಬಂಧ ತೆಗೆದುಹಾಕಬೇಕು" ಎಂದು ಪಂಡಿತ ಕುಂಜ್ರುಗಳ ನಿರ್ಣಯವನ್ನು ಸಮರ್ಥಿಸುತ್ತಾ ಶ್ರೀ. ವಿ. ಎ. ಕಾಲಿಲ್ಕರ್ ಹೇಳಿದರು.

'ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ಭಾರತ ಸರಕಾರಕ್ಕೂ ಬಹಳ ಆಸಕ್ತಿಯಿದೆ'ಯೆಂಬೀ ಅಸಮರ್ಪಕ ಉತ್ತರವನ್ನು ಗೃಹಖಾತೆಯ ಕಾರ್ಯದರ್ಶಿಗಳು ಕೊಟ್ಟರು.

ಮಂಗಳೂರಲ್ಲಿ ಶ್ರೀ। ರಾಮಮೂರ್ತಿಯವರು ಮುಂದಾಳುಗಳೊಡನೆ ವಿಚಾರವಿನಿಮಯ

ಮದ್ರಾಸ್ ಗವರ್ನರರ ಎಡ್ವೈಜರ್ ಶ್ರೀ ಎಸ್. ವಿ. ರಾಮಮೂರ್ತಿಯವರು ಕಳೆದ ಮಂಗಳವಾರ ಸಂಜೆ ಮಂಗಳೂರಿಗೆ ಬಂದಿದ್ದು ಬುಧವಾರ ಗಂಟೆ ೩ಕ್ಕೆ ಅವರ ಸಮ್ಮುಖದಲ್ಲಿ ಬೆಂಚ್ ಕೋರ್ಟ್ ಹಾಲ್‌ನಲ್ಲಿ ಮಂಗಳೂರಿನ ಪ್ರಮುಖ ಮುಂದಾಳುಗಳ ಒಂದು ಸಭೆ ಜರುಗಿತು.

ಸಭಾರಂಭದಲ್ಲಿ ಎಡ್ವೈಜರರು ಹೀಗೆ ಹೇಳಿದರು:—ಬೋರ್ಡ್ ಆಫ್ ರೆವಿನ್ಯೂಯವರ ಈಚೆಗಿನ ಆಜ್ಞೆಯನ್ನೂ ಜಿಲ್ಲಾ ಕಲೆಕ್ಟರರವರ ಆ ಸಂಬಂಧವಾದ ಪ್ರಕಟಣೆಯನ್ನೂ ಒಪ್ಪಲಾಗಿದೆ (ಕಜೆ ಅಕ್ಕಿ ಬೆಳೆಯ ಹೊರತಾಗಿ) ಮುಡಿಯೊಂದಕ್ಕೆ (ರಾಶಿ ಅಕ್ಕಿ ಇತ್ಯಾದಿಗೆ) ರೂ. ೧೦ರಿಂದ (ಬೆಳ್ತಿಗೆ) ಮುಡಿ ೧ಕ್ಕೆ ರೂ. ೧೨ರ ವರೆಗೆಂದು ೪—೫ ಜಾತಿಯ ಅಕ್ಕಿ ಮುಡಿಗಳಿಗೆ ಕಲೆಕ್ಟರರು ಅಭಿಪ್ರಾಯಪಟ್ಟಿರುವ ಬೆಲೆ ನ್ಯಾಯವಾದದ್ದೆಂದು ತೋರುತ್ತದೆ; ಆ ಬೆಲೆ ಒಂದು ವರ್ಷದ ವರೆಗೆ ಜಾರಿಯಲ್ಲಿರುತ್ತದೆ.

ಜಿಲ್ಲಾ ಕಲೆಕ್ಟರರು ನಿಶ್ಚಿತವಾದ ಅಕ್ಕಿ ಬೆಲೆಯ ದರವನ್ನು ನಿರ್ಣೈಸುವರು. ಕೋಓಪರೇಟಿವ್ ಸೊಸೈಟಿಗಳು ರಿಕ್ವಿಜಿಶನ್ ಅಕ್ಕಿಯನ್ನು ಯಾವ ದರದಲ್ಲಿ ಮಾರಲು ಶಕ್ತವಾಗುತ್ತವೆಯೋ ಸಾಮಾನ್ಯ ಆ ದರವೇ ಈ ಬೆಲೆಯನ್ನು ನಿರ್ಧರಿಸುವ ಒಂದು ಪ್ರಮಾಣವಾಗುವುದು.

೫ ಎಕ್ರೆ ಅಥವಾ ಅದಕ್ಕಿಂತ ಹೆಚ್ಚು ಗದ್ದೆಗಳಿರುವ ವರ್ಗದಾರನಿಂದ ಒಂದನೇ ಬೆಳೆಯಲ್ಲಿ ೨೫%ರಷ್ಟೂ ಎರಡನೇ ಬೆಳೆಯಲ್ಲಿ ೫೦ತ್ತರಷ್ಟೂ ರಿಕ್ವಿಜಿಶನ್ ಮಾಡಲಾಗುವುದು. ಅಗತ್ಯ ಬಿದ್ದರೆ ಕೆಲವೊಂದು ವಿಶೇಷ ಸಂದರ್ಭಗಳಲ್ಲಿ ಇದಕ್ಕಿಂತಲೂ ಹೆಚ್ಚು ಪ್ರಮಾಣವನ್ನೂ ರಿಕ್ವಿಜಿಶನ್ ಮಾಡಲಾದೀತು. ಈ ಕ್ರಮಗಳು ಒಂದು ವರ್ಷದ ವರೆಗೆ ಜಾರಿಯಲ್ಲಿರುವುವು.

ರಿಕ್ವಿಜಿಶನ್ ಅಕ್ಕಿ ಬತ್ತಗಳನ್ನು ಕೊಳ್ಳುವ ಮಾರುವ ಯಾವತ್ತು ಕಾರ್ಯವೂ ಸಹಕಾರೀ ಸೊಸೈಟಿಗಳಿಗೆ ಮಾತ್ರವೇ ಒಪ್ಪಿಸಲಾಗಿದೆ; ಆ ಸಂಸ್ಥೆಗಳು ಇಲ್ಲದ ಕಡೆ ಇಂಥಾ ಹೆಚ್ಚಿನ ಸಂಸ್ಥೆಗಳು ಏರ್ಪಡುವವು ಅಥವಾ ಈ ಹಂಚುವ ಕೆಲಸವನ್ನು ಚಿಲ್ಲರೆ ವ್ಯಾಪಾರಿಗಳಿಗೊಪ್ಪಿಸಲಾಗುವುದು.

ಈ ಜಿಲ್ಲೆಯ ಒಳ ಭಾಗಗಳಲ್ಲಿನ ಅಕ್ಕಿ ಬತ್ತಗಳ ಚಲಾವಣೆಯನ್ನು ಕಂಟ್ರೋಲ್ ಮಾಡಲಾಗುವುದು; ಅಕ್ಕಿ ಬತ್ತಗಳು ಜಿಲ್ಲೆಯ ಗಡಿ ದಾಟಿ ಅತ್ತ ಕಳ್ಳಾಟಿಕೆಯಿಂದ ಸಾಗದಂತೆ ಗ್ರಾಮ ಕಮಿಟಿಗಳು ನೋಡಿಕೊಳ್ಳುವವು. ಅಕ್ಕಿಯನ್ನು ಕುಟ್ಟಿ ತಯಾರಿಸುವುದೇ ಶ್ರೇಯಸ್ಕರ,

ವರ್ಗದಾರನು ತನ್ನ ಬಾಬತು 'ರಿಕ್ವಿಜಿಶನ್' ಆದ ಯಾವತ್ತು ಅಕ್ಕಿ ಬತ್ತಗಳ ಸ್ಟಾಕನ್ನೂ ತಾನೇ ಆತ್ಮಸಂತೋಷದಿಂದ ಒಪ್ಪಿಸಿದಲ್ಲಿ ಅತನಿಗೆ ನಿರ್ಣೈಸಿದ ಬೆಲೆಕೊಟ್ಟು 'ರಿಕ್ವಿಜಿಶನ್' ಕಾರ್ಯಕ್ರಮದಲ್ಲಿ ಆತನಿಗೆ ರಿಯಾಯಿತಿಯನ್ನು ತೋರಲಾಗುವುದು; ಹಾಗಲ್ಲದೆ ಸರಕಾರವು ತಾನೇ ಆ ಸ್ಟಾಕನ್ನು ವಶಮಾಡಿಕೊಳ್ಳುವ ಪ್ರಸಂಗ ಒದಗಿದಲ್ಲಿ ನಿಶ್ಚಿತವಾಗಿ ನಿರ್ಧರಿಸಿದ ಅಕ್ಕಿ ಬೆಲೆಗಿಂತ ಮುಡಿಯೊಂದಕ್ಕೆ ೮ ಆಣೆ ಕಡಿಮೆ ಬೆಲೆಯನ್ನು ಕೊಡಲಾಗುವುದು.

ಇದು ಇಲ್ಲಿನವರಿಗೆ ಬೇಕಾಗುವಷ್ಟು ಅಕ್ಕಿ ಬೆಳೆಯುವ ಜಿಲ್ಲೆ. ಅದು ಸಾಲದೆ ಬಂದಲ್ಲಿ ಹೊರಗಿನಿಂದ ಅಕ್ಕಿ ಸಾಗಿಸುವ ಪ್ರಯತ್ನ ಮಾಡಲಾಗುವುದು.

ವರ್ಗದಾರನಿಗೆ ಅವನ ಗೇಣಿ ದೊರೆಯುವ ಸೌಕರ್ಯಕ್ಕಾಗಿ ಒಕ್ಕಲು ಅಕ್ಕಿ ಬತ್ತಗಳನ್ನು ಒದಗಿಸಿ ಒಕ್ಕಲಿಗೆ ಕ್ರಯಕೊಡುವ ಸಂದರ್ಭಗಳಲ್ಲಿ, ಆ ಸಂಗತಿಯನ್ನು ವರ್ಗದಾರನಿಗೆ ತಿಳಿಸಲಾಗುವುದು.

ಗೊಬ್ಬರ ಕೃಷಿ ಉಪಕರಣಗಳನ್ನು ಮಿತವಾದ ಬೆಲೆಯಲ್ಲಿ ಒದಗಿಸುವ ಯತ್ನ ನಡೆಯುತ್ತಿದೆ.

ಇದು ನವೆಂಬರ ತಿಂಗಳು; ಈ ತಿಂಗಳು ಮತ್ತು ಡಿಸೆಂಬರ್ ತಿಂಗಳಿಗೂ ಮಂಗಳೂರಿಗೆ ಅಕ್ಕಿ ಬೇಕು. ತಿಂಗಳೊಂದಕ್ಕೆ ಮಂಗಳೂರಿಗೆ ಸಮಾರು ೩೦ ಸಾವಿರ ಅಕ್ಕಿ ಮುಡಿ ಬೇಕು, ಅಷ್ಟನ್ನು ಜಿಲ್ಲೆಯ ಮುಂದಾಳುಗಳು ಒದಗಿಸುವಲ್ಲಿ ಸಹಾಯ ಮಾಡುವರೇ ಎಂದು ಅವರು ತಿಳಿಸಲಿ' ಎಂದರು.

ಶ್ರೀ ಎ. ಜಿ. ಶೆಟ್ಟರು, ಎಡ್ವೈಜರರು ಈ ಸಹಾನುಭೂತಿಪೂರ್ವಕವಾದ ಉತ್ತರ ಮತ್ತು ನಡವಳಿಕೆಗಳಿಗಾಗಿ ಅವರನ್ನು ಜಿಲ್ಲಾ ವರ್ಗದಾರರ ಸಂಘದ ಪರವಾಗಿ ಅಭಿನಂದಿಸಿದರು. ಈ ಸಂಘದ ಅನೇಕ ಸೂಚನೆಗಳನ್ನು ಸ್ವೀಕರಿಸಿದುದಕ್ಕಾಗಿ ಉಪಕಾರ ಸ್ಮರಿಸಿದರು. ಈಗ ರಿಕ್ವಿಜಿಶನ್ ಆದ ಬತ್ತದ ಪ್ರಮಾಣವನ್ನು ಒಟ್ಟೊಟ್ಟು ತಹಶೀಲ್ದಾರರು ಒಂದೊಂದು ರೀತಿ ಮಾಡಿರುವರೆಂದು ತಿಳಿಸಿದರು.

'ವರ್ಗದಾರರ ಆಕ್ಷೇಪಣೆ ಅರ್ಜಿಗಳ ರಾಶಿ ಬಿದ್ದಿದೆ; ಇವುಗಳಲ್ಲಿ ನ್ಯಾಯ ದೊರೆಯಬೇಕು. ಅಕ್ಕಿ ಮುಡಿಗೆ ಅಂದಾಜು ಮಾಡಿರುವ ಬೆಲೆಯನ್ನು ವರ್ಗದಾರರು ಒಪ್ಪುತ್ತಾರೆ; ಈ ವರ್ಷ ಎರಡು ಬೆಳೆಗಳೂ ಮಳೆಯಿಂದ ನಷ್ಟವಾಗಿವೆ. ಈ ಜಿಲ್ಲೆ ಸಾಕಾಗುವಷ್ಟು ಅಕ್ಕಿ ಬೆಳೆಸದ ಜಿಲ್ಲೆ; ಈಗ ಅಕ್ಕಿಯ ಬೆಲೆ ವಿಪರೀತವಿದೆ. ಮಳೆ ಇದ್ದರೂ ದಶಂಬರದ ಅಕ್ಕಿ ಸರಬರಾಯಿಗಳಿಗಾಗಿ ವರ್ಗದಾರರು ಆದಷ್ಟು ಪ್ರಯತ್ನಿಸುವರು; ಸಹಕರಿಸುವರು' ಎಂದರು.

ಶ್ರೀ. ಸಿ. ಎಲ್. ಲೋಬೊರು 'ಹೊರಗಿನಿಂದ ಅಕ್ಕಿ ಇಲ್ಲಿಗೆ ಬರಬೇಕು; ಆಗ ಅಕ್ಕಿ ಬೆಲೆ ತಗ್ಗುವುದು; ಈಗ ರಿಕ್ವಿಜಿಶನ್ ಆದ ಬತ್ತವೆಷ್ಟೆಂದು ತಿಳಿದಿಲ್ಲ. ಚಿಕ್ಕ ವರ್ಗದಾರರಿಗೂ ರಿಕ್ವಿಜಿಶನ್ ನೋಟೀಸ್ ಹೋಗಿದೆ. ಈ ಅಕ್ಕಿ ಬತ್ತಗಳ ವ್ಯವಸ್ಥೆಗಾಗಿ ಈಗಿರುವ ರೆವಿನ್ಯೂ ಸಿಬಂಧಿ ಸಾಲದು; ಹೆಚ್ಚಿಗೆ ಸಿಬಂಧಿ ಅಗತ್ಯ' ಎಂದರು:

ದ. ಕ. ಜಿಲ್ಲಾ ವರ್ಗದಾರರ ಸಂಘದ ಕಾರ್ಯದರ್ಶಿ ಶ್ರೀ। ಸದಾನಂದಹೆಗ್ಗಡೆ ಅವರು ಎರಡು ಮಾರ್ಕೆಟುಗಳಿರುವ ವಿಷಯವನ್ನೂ ಅಕ್ಕಿಯ ಬೆಲೆಯನ್ನು ನಿಶ್ಚಿತವಾಗಿ ನಿರ್ಣಯಿಸಬೇಕಾದುದನ್ನೂ ಸೂಚಿಸಿ, ದಶಂಬರದಲ್ಲಿ ೧೦ ಸಾವಿರ ಮುಡಿಗಳಷ್ಟು ಹೊಸ ಅಕ್ಕಿಯನ್ನು ಇಲ್ಲಿಗೆ ಒದಗಿಸಬಹುದೆಂದರು; 'ಅಕ್ಕಿ ದಾಸ್ತಾನಿರಿಸಿರುವವರಿಂದ ಅದನ್ನು ಹೊರಪಡಿಸುವ ಯತ್ನಗಳಾಗಬೇಕು; ಅಕ್ಕಿಯನ್ನು ಪರಜಿಲ್ಲೆಗಳಿಂದ ಇಲ್ಲಿಗೆ ಸಾಗಿಸಬೇಕು; ಇದು ಈ ವರ್ಷ ಸಾಕಾಗುವಷ್ಟು ಅಕ್ಕಿ ಇಲ್ಲದ ಜಿಲ್ಲೆ' ಎಂದರು.

ಚೇಂಬರ್ ಆಫ್ ಕಾಮರ್ಸಿನ ಶ್ರೀ. ರಾಘವೇಂದ್ರ ಪೈಗಳವರು ಅಕ್ಕಿ ವ್ಯಾಪಾರಿಗಳ ಕಷ್ಟಗಳನ್ನು ಅರುಹಿ ಅಕ್ಕಿ ಬೆಲೆ ಈಗ ನಿರ್ಣಯಿಸಬೇಕಾಗಿಲ್ಲವೆಂದರು. ಶ್ರೀ. ಎಸ್. ನರಸಪ್ಪಯ್ಯನವರು ಈಗಲೇ ನಿಶ್ಚಿತವಾಗಿ ಅಕ್ಕಿ ಬೆಲೆಯನ್ನು ನಿರ್ಣೈಸುವ ಅವಶ್ಯಕತೆಯನ್ನು ತಿಳಿಸಿದರು. ಶ್ರೀಗಳಾದ ಜೆರೋಮ್ ಸಾಲ್ಡಾನಾ, ಪಿ. ಆರ್. ಆರ್. ಫೂಂಜ, ಬಿ. ಶ್ಯಾಮ ಶೆಟ್ಟಿ, ಜಿ. ನಾಗರಾಜಯ್ಯ ಮೊದಲಾದವರೂ ಮಾತಾಡಿದರು.

ಶ್ರೀ. ರಾಮಮೂರ್ತಿಯವರು ಈ ದಿನ ಬೆಳಗ್ಗೆ ಕೋಪರೇಟಿವ್ ಹೋಲ್‌ಸೇಲ್ ಸ್ಟೋರ್ಸ್ ಮತ್ತು ಕೋಪರೇಟಿವ್ ಹೇಂಡ್ ಲೂಮ್ ಎಂಪೋರಿಯಂಗಳನ್ನು ಸಂದರ್ಶಿಸಿ ಅನಂತರ ಶ್ರೀಗಳಾದ ಮೊಳಹಳ್ಳಿ ಶಿವರಾವ್, ಎ. ಬಿ. ಶೆಟ್ಟಿ, ಸಿ. ಎಲ್. ಲೋಬೊ, ಶವಾಡ್ ಸಾಹೆಬ್ ಇವರಿಗೆ ಭೇಟಿಯಿತ್ತರು.

ಸಂಜೆ ೫॥ ಗಂಟೆಗೆ ಕೆನರಾ ಚೆಂಬರ್ ಓಫ್ ಕಾಮರ್ಸಿನವರು ಶ್ರೀ. ರಾಮಮೂರ್ತಿಯವರಿಗೆ ಕೆನರಾ ಹೈಸ್ಕೂಲ್ ವಠಾರದಲ್ಲಿ ಭಾರೀ ಸತ್ಕಾರ ಕೂಟವೊಂದನ್ನು ಏರ್ಪಡಿಸಿದರು. ಸತ್ಕಾರಕೂಟದ ಕೊನೆಗೆ ಶ್ರೀ. ಬಿ. ವಿ. ಬಾಳಿಗರು 'ಝುಂಟಾಲೂಂಟಾ' ಹಾಡಿದರು.

ಮರುದಿನ ಇಲ್ಲಿಂದ ಶ್ರೀ. ರಾಮಮೂರ್ತಿಯವರು ಕಾರ್ಕಳ ಉಡುಪಿಗಳಿಗೆ ಪ್ರಯಾಣ ಮಾಡಿದರು.

ಜಿಲ್ಲಾ ಸಮಾಚಾರಗಳು

ಮಂಗಳೂರು

ಮೆರವಣಿಗೆ ನಿರ್ಬಂಧ

ದ. ಕ. ಜಿಲ್ಲೆಯ ಮಂಗಳೂರು ಉಡುಪಿ ಮುನಿಸಿಪಾಲಿಟಿಯೊಳಗೆ ಮತ್ತು ಇಡೀ ಕಾಸರಗೋಡು ತಾಲೂಕಿನಲ್ಲಿ ನವೆಂಬರ ೧೮ರಿಂದ ಸಾರ್ವಜನಿಕ ಸಭೆ ಮೆರವಣಿಗೆ, ಭಾಷಣಗಳು ಜರಗಕೂಡದೆಂದು ನಿರ್ಬಂಧಕಾಜ್ಞೆಯನ್ನು ಜಿಲ್ಲಾ ಕಲೆಕ್ಟರರು ಮತ್ತು ಎರಡು ತಿಂಗಳು ಮುಂದುವರಿಸಿರುವರು.

ಶ್ರೀ. ಜಿನರಾಜ ಹೆಗ್ಡೆಯವರು

ಕೇಂದ್ರ ಎಸೆಂಬ್ಲಿ ಅಧಿವೇಶನದಲ್ಲಿ ಮಾತನಾಡುತ್ತಾ, 'ಕಳೆದ ೧೮ ತಿಂಗಳಿಂದ ನನಗೆ ಅರ್ಧ ಮಣ ಗೋದಿ, ಎರಡು ಪೌಂಡು ಸಕ್ಕರೆ ಸಿಕ್ಕಿದೆ, ವಾಹನ ಸೌಕರ್ಯದ ಅನಾನುಕೂಲತೆಯಿಂದ ಆಹಾರ ಪೂರೈಸಲಿಕ್ಕಾಗಲಿಲ್ಲವೆಂದು ಸ್ಥಳೀಯ ಅಧಿಕಾರಿಗಳು ತಿಳಿಸುತ್ತಾರೆ. ರೈತರು ಆಹಾರ ಧಾನ್ಯಗಳನ್ನು ಕೂಡಿಡುವರೆಂಬ ಆಪಾದನೆ ನಿರಾಧಾರದ್ದು, ಯಾವ ಪ್ರಾಂತದಲ್ಲಿ ರೈತರು ಕೂಡಿ ಹಾಕಿರುವರೆಂಬುದನ್ನು ಸರಕಾರ ತಿಳಿಸುವುದೆ? ಗವರ್ನರರ ಯುದ್ಧ ನಿಧಿಗೆ ಸಹಾಯನಿತ್ತ ಸಾಹುಕಾರರನ್ನು ಅವರು ಹೇರಳ ಸಂಗ್ರಹಿಸಿಟ್ಟು ಕ್ರಿಮಿನಲ್ ಆರೋಪಕ್ಕೆ ಗುರಿಯಾದರೂ ನಿರ್ದೋಷಿಗಳೆಂದು ಬಿಡಲಾಗಿದೆ' ಎಂದು ದ. ಕ. ಜಿಲ್ಲೆಯ ಆಹಾರ ಪರಿಸ್ಥಿತಿ ಕುರಿತು ಹೇಳಿದರು.

ಪ್ರಯಾಣಿಕರ ಮರಣ

ತಾ. ೨೨ರಂದು ಕುಂದಾಪುರಕ್ಕೆ ಹೋಗಲೆಂದು ಕೊಡಿಯಾಲ ಬೈಲಿನ ಬಸ್ಸ್ ಆಫೀಸಿಗೆ ಬಂದ ಮೈಸೂರಿನ ಶ್ರೀ. ಟಿ. ಶಿವರಾಮ ಪಂಡಿತರೆಂಬವರು ಆಯಾಸದಿಂದ ಬೆಂಚಿನ ಮೇಲೆ ಒರಗಿ ವಾಂತಿಮಾಡಿ ಪ್ರಾಣಬಿಟ್ಟರು.

'ಸುಬ್ರಹ್ಮಣ್ಯ ಷಷ್ಠಿ'-ಗೆ ಹೋಗುವವರು ಕೊಲೆರಾ ಇನಾಕುಲೇಶನ್ ಮಾಡಿಸಿಕೊಳ್ಳಬೇಕೆಂದು ಜಿಲ್ಲಾ ಹೆಲ್ತಾಫೀಸರರು ಪ್ರಕಟಣೆಯಿತ್ತಿರುವರು.

ರಾಜಾಜಿ ಆಗಮನ

೧೬—೧—೪೪ಕ್ಕೆ ಜರಗಲಿರುವ ನಿಲೇಶ್ವರ ಹ್ಯಾಸ್ಕೂಲಿನ ರಜತೋತ್ಸವಕ್ಕೆ ಅಧ್ಯಕ್ಷತೆ ವಹಿಸಲು ರಾಜಾಜಿ ಒಪ್ಪಿರುವರೆಂದು ತಿಳಿಯುತ್ತದೆ. ರಾಜಾಜಿಯವರು ತಾ. ೧೩—೧—೪೪ಕ್ಕೆ ಸಂಜೆ ಮಂಗಳೂರಿಗೆ ಬಂದು ತಾ. ೧೬ರ ಮೈಲು ಗಾಡಿಗೆ ನಿಲೇಶ್ವರಕ್ಕೆ ಹೋಗುವರೆಂದು ತಿಳಿದು ಬರುತ್ತದೆ.

ಕೆನರಾ ಹ್ಯಾಸ್ಕೂಲ್

ಸ್ಥಾಪಕರ ದಿನಾಚರಣೆಯು ಇದರ ಹಳೆ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ತಾ. ೧೯ರಂದು ನೆರವೇರಿತು. ಡಾ| ಕೇಶವ ಪೈಗಳು ಶಾಲಾ ಧ್ವಜ ಹಾರಿಸಿದರು. ಸಂಜೆ ಹ. ವಿ. ಸಂಘದ ಅಧ್ಯಕ್ಷ ಶ್ರೀ. ಎ. ಬಿ. ಶೆಟ್ಟಿರೂ, ಶ್ರೀ. ಪೀತಾಂಬರರಾಯರೂ ಶ್ರೀ. ಅಮ್ಮೆಂಬಳ ಸುಬ್ರಾಯ ಪೈಗಳ ವಿಗ್ರಹಕ್ಕೆ ಹಾರಹಾಕಿದರು. ಸಂಗೀತ, ಪಂಥ್ಯಾಟ, ಇನಾಮು ಹಂಚೋಣಗಳಾದ ಬಳಿಕ ಖಾನ್ ಸಾಹೆಬ್ ಹಾಜಿ ಸಯ್ಯದ್ ಹುಸ್ಸೆನ್ ಸಾಹೆಬ್ ಎಂ. ಎಲ್. ಎ. ಇವರು ಸ್ಮಾರಕ ಭಾಷಣವಿತ್ತರು. ಶ್ರೀ. ಎ. ಬಿ. ಶೆಟ್ಟರು ಅಧ್ಯಕ್ಷತೆವಹಿಸಿದ್ದರು.

ಖಾದಿ ಉತ್ಪತ್ತಿ ಕೇಂದ್ರ

ದಕ್ಷಿಣ ಕನ್ನಡ ಗ್ರಾಮ ಕೈಗಾರಿಕೆ ಕೇಂದ್ರ, ಎಂಬ ಸಂಸ್ಥೆಗೆ ಇದೇ ನವಂಬರ ತಿಂಗಳಲ್ಲಿ ಧನ ಸಹಾಯ ಮಾಡಿದವರ ಹೆಸರುಗಳು.

ಶ್ರೀಗಳಾದ ಸೂಜೀರ್ ದಾಮೋದ್ದರ ನ್ಯಾಕ ರೂ. ೫೦೦, ಉಳ್ಳಾಲ ಪದ್ಮಾವತಿ ಬ್ಯಾ ಮಲ್ಯ ರೂ. ೨೫೦, ಉಳ್ಳಾಲ ಸುಬ್ರಾಯ ಮಲ್ಯ ರೂ. ೫೦೦, ಮಿಜಾರ್ ಕೃಷ್ಣ ಪೈ ರೂ. ೨೫೦೦, ಮಿಜಾರ್ ಗೋವಿಂದ ಪೈ ರೂ. ೫೦೦, ಎ. ದಾಮೋದರ ಪೈ ೨೫೦, ಮಹಾಜನರು ಇನ್ನೂ ಹೆಚ್ಚಿನ ಧನಸಹಾಯವನ್ನು ಕೊಟ್ಟು ಈ ಸಂಸ್ಥೆಯನ್ನು ಬಲಪಡಿಸುವದು ಪ್ರತಿಯೊಬ್ಬನ ಕರ್ತವ್ಯವೆಂದು ತಿಳಿಯಬೇಕಾಗಿ ಅದರ ಕಾರ್ಯದರ್ಶಿಗಳ ವಿನಂತಿ.

ಚಲಚ್ಚಿತ್ರ ವಿಮರ್ಶಕ ಸಭೆ

ಕೆನರಾ ಚಲಚ್ಚಿತ್ರ ವಿಮರ್ಶಕ ಕೂಟದ ಸಭೆಯು ತಾ. ೨೧ನೇ ರವಿವಾರ ಶ್ರೀ| ಎಲ್ಲೂರು ಉಮೇಶರಾಯರ ಅಧ್ಯಕ್ಷತೆಯಲ್ಲಿ ಜರಗಿ—ಆ ತನಕ ಪ್ರದರ್ಶಿತವಾದ ಮತ್ತು ಆಗ ಪ್ರದರ್ಶಿಸಲ್ಪಡುತ್ತಿದ್ದ ಚಿತ್ರಗಳ ವಿಮರ್ಶೆ ನಡೆಯಿತು. "ಉಲ್ಜನ್" ತೀರ ಸಾಮಾನ್ಯ ಚಿತ್ರ; "ಸ್ವಾಮಿನಾಥ್" ಕೀಳು ಚಿತ್ರ; "Billy the Kid" ಒಳ್ಳೆಯದಿದೆ; "ಅರ್ಮಾನ್" ಪ್ರೋತ್ಸಾಹಕ್ಕೆ ಯೋಗ್ಯವಲ್ಲ; "Good Earth" ಹಳೆಯ ಚೈನದ ಚಿತ್ರವನ್ನು ತೋರಿಸುವ ಉತ್ತಮ ಚಿತ್ರ, ಚಿತ್ರವನ್ನು ನೋಡಿ ಬಂಗಾಳದ ದುರಂತದ ಭೀಕರತೆಯನ್ನು ಊಹಿಸಬಹುದು; ಎಂಬ ಅಭಿಪ್ರಾಯಗಳು ವ್ಯಕ್ತಗೊಳಿಸಲ್ಪಟ್ಟವು.

ಎ. ಆರ್. ಪಿ. ಪ್ರಯೋಗ

ಅಪಾಯ ಕಾಲದಲ್ಲಿ ಆಶ್ರಯ ಪಡಕೊಳ್ಳುವಂತೆ, ಎ. ಆರ್. ಪಿ. ಸಂಘಗಳನ್ನು ಜನರು ತಿಳಕೊಳ್ಳುವಂತೆ ಮಾಡಲು ತಾ. ೨೭ನೇ ಸಂಜೆ ೪ ಗಂಟೆಯಿಂದ ೪|| ಗಂಟೆ ವರೆಗೆ ಎ. ಆರ್. ಪಿ. ನಾಗರಿಕ ಸಂರಕ್ಷಕ ದಳದವರ ಕವಾಯತು ನಡೆಯಲಿದೆ. ಆಗ ಅರ್ಧ ಗಂಟೆ ವಾಹನ ಸಂಚಾರ ನಿಲ್ಲಿಸಲಾಗುವುದು, ಜನರು ಆಶ್ರಯ ಸ್ಥಾನ ಹೊಂದಬೇಕು. ಇದು ವಿಮಾನ ಧಾಳಿ ಎಚ್ಚರಿಕೆಯಲ್ಲ.

ವಿವಾಹ

'ಸ್ವದೇಶಾಭಿಮಾನಿ'ಯ ಸಂಸ್ಥಾಪಕ ಸಂಪಾದಕರಾದ ದಿವಂಗತ ವಿ. ಎಸ್. ಕಾಮತರ ಪುತ್ರಿ ಶ್ರೀಮತಿ ರುಕ್ಮಾಬಾಯಿಯವರ ವಿವಾಹವು ಪಾಣೆಮಂಗಳೂರಿನ ಕೈ. ವಾ. ಪಿ. ಶ್ರೀನಿವಾಸ ರಾಮಚಂದ್ರ ಪೈಯವರ ಪುತ್ರ ಶ್ರೀಮಾನ್ ರಾಮಚಂದ್ರ ಪೈಯವರೊಡನೆ ಇದೇ ತಾ. 22ನೇ ಸೋಮವಾರ ಪೂ. ಗಂಟೆ 4-14ಕ್ಕೆ ಮಂಗಳೂರಲ್ಲಿ ಡಾ| ವಿ. ಪಿ. ಕಾಮತರ ಮನೆಯಲ್ಲಿ ಸಂಭ್ರಮದಿಂದ ನೆರವೇರಿತು.

ಕಾಸರಗೋಡು ತಾಲೂಕಿನಲ್ಲಿ ನೆರೆಹಾವಳಿ

ಕಾಸರಗೋಡು ತಾಲೂಕು ಗ್ರಾಮ ಸೇವಾ ಸಂಘದ ಜತೆಕಾರ್ಯದರ್ಶಿ ಶ್ರೀ. ಪಿ. ಪಿ. ಕಡಂಬಳಿತ್ತಾಯರು ಹೀಗೆ ಬರೆಯುತ್ತಾರೆ:

ಕಾಸರಗೋಡು ತಾಲೂಕಿನ ಕೆಲ ಭಾಗಗಳಲ್ಲಿ ಅತಿವರ್ಷದಿಂದುಂಟಾದ ಬೆಳೆ ನಷ್ಟ ಹೊಂದಿದ ಕೃಷಿಕರ ಅತೀ ದಾರುಣಮಯವಾದ ಸ್ಥಿತಿಯಲ್ಲಿ ಈ ಸಂಘಕ್ಕಿರುವ ಹೃದಯಪೂರ್ವಕವಾದ ಸಹಕಾರವನ್ನೂ, ಸಹಾನುಭೂತಿಯನ್ನೂ ಸೂಚಿಸುವುದಲ್ಲದೆ ತಾಲೂಕಿನಲ್ಲಿ ಕಷ್ಟಪಡುತ್ತಿರುವ ಕೃಷಿಕರ ಕಷ್ಟವನ್ನು ಪರಿಹರಿಸುವ ಬಗ್ಗೆ ನೆರವಾಗಲು ದಕ್ಷಿಣ ಕನ್ನಡ ಮಹಾಜನ ಫ್ಲಡ್ ರಿಲೀಫ್ ಕಮಿಟಿಯವರಲ್ಲಿಯೂ ಅಖಿಳ ಕೇರಳ ಗ್ರಾಮ ಸೇವಾ ಸಂಘದ ದುರಿತ ನಿವಾರಣಾ ಕಮಿಟಿಯವರಲ್ಲಿಯೂ ವಿನಂತಿ ಮಾಡುವುದರೊಂದಿಗೆ ಬೆಳೆ ನಷ್ಟ ಹೊಂದಿದ ಸ್ಥಳಗಳನ್ನು ಪರಿಶೋಧಿಸಿ ಅಗತ್ಯವಿರುವ ಕಾರ್ಯವನ್ನು ಕೈಕೊಳ್ಳುವ ಬಗ್ಗೆ ಅಧಿಕಾರಿಗಳನ್ನು ಈ ಮೂಲಕ ಅಪೇಕ್ಷಿಸೋಣಾಗುತ್ತದೆ.

ನಷ್ಟ ಹೊಂದಿದ ಸ್ಥಳಗಳನ್ನು ಪರಿಶೀಲಿಸುವ ಬಗ್ಗೆ ಕಾಸರಗೋಡು ತಾಲೂಕು ಗ್ರಾಮ ಸೇವಾಸಂಘದ ಆಶ್ರಯದಲ್ಲಿ ೫ ಜನರಿಂದ ಕೂಡಿದ ಒಂದು ಸಮಿತಿಯನ್ನು ರಚಿಸಲಾಗಿರುತ್ತದೆ.

ನಿಲೇಶ್ವರ

ತಾ. ೨೦—೧೧—೪೩ರ ಸಂಜೆ ಗಂಟೆ ೫—೩೦ಕ್ಕೆ ನಿಲೇಶ್ವರದಲ್ಲಿ ಮಿಂಚುತಾಗಿ ಓರ್ವ ಮುಸಲ್ಮಾನ ಬಂದುವು ದಾರಿಯಲ್ಲಿ ಮೃತಿ ಹೊಂದಿರುತ್ತಾನೆ. ಅಲ್ಲದೆ ೩ ಜಾನ್ವಾರುಗಳು ಕೂಡಾ ಮಡಿದಿರುತ್ತವೆ.

ಗ್ರಾಮಸೇವಾ ಸಂಘ

ತಾಲೂಕು ಗ್ರಾಮಸೇವಾ ಸಂಘದ ಪ್ರಯತ್ನದ ಫಲವಾಗಿ ಪಿಲಿಕೋಟು, ಹೊಸದುರ್ಗ, ಚವತ್ತೂರು ಗ್ರಾಮಗಳಲ್ಲಿ ಗ್ರಾಮಸೇವಾ ಸಂಘಗಳು ಸ್ಥಾಪಿಸಲ್ಪಟ್ಟಿದೆ.

'ನವಂಬರ ತಾ. ೧೭ರಂದು ಈ ಕಡೆ ಸುರಿದ ಭೀಕರ ಮಳೆಯ ಫಲವಾಗಿ, ಸುಗ್ಗಿ ಗದ್ದೆಗಳಲ್ಲಿ ಹಾಕಿದ ಬೀಜವೆಲ್ಲವೂ ಪೂರ್ಣವಾಗಿ ನಾಶವಾಗಿದೆ. ಚರ್ವತ್ತೂರು, ಕೊಡಕ್ಕಾಟು, ತಿಮಿರಿ, ಕಾಞ್ಞೋಟು, ಮಡಿಕೈ—ಎಂಬ ಗ್ರಾಮಗಳಲ್ಲಿ ಒಂದು ಗಿಡವಾದರೂ ಬೀಜ ಉಳಿದಿರುವುದಿಲ್ಲ.

'ಕ್ಕಾಯಿಕೋಟು ಗ್ರಾಮ ಒಂದರಲ್ಲೇ ಸುಮಾರು ೫೦೦ ಮುಡಿ ಬೀಜದ ನೆಲವು ಕೀರಿ ನಡಿಯಲ್ಲಾಗಿದೆ.

'ಎರಡನೆ ಸಲ ಬೀಜವನ್ನು ಹಾಕಲು ಬೀಜವಿಲ್ಲದೆ ರೈತರು ಶೋಚನೀಯ ಸ್ಥಿತಿಯಲ್ಲಿದ್ದಾರೆ.

'ಕೂಡಲೇ ನೆರವು ಕೊಟ್ಟು ಪರಿಸ್ಥಿತಿಯನ್ನು ಸುಧಾರಿಸುವ ಯತ್ನವಾಗದಿದ್ದರೆ, ಬಂಗಾಲದ ಭೀಕರ ಬರಗಾಲವು ಇಲ್ಲಿಯೂ ಬಾರದಿರಲಾರದು. ಮಾರಾಟ ಮಾಡಲು ಸುಗ್ಗಿಯ ಬೀಜವು ಕೈಯಲ್ಲಿರುವ ಜಮೀನುದಾರರು ಸಹಾಯವೀಯಬೇಕು.'

ಹೊಸದುರ್ಗ

ನಿರ್ದೋಷಿಗಳಾದರು

ಮಡಿಕೈ ಗ್ರಾಮದ ವರ್ಗದಾರರೊಬ್ಬರ ಗದ್ದೆಯಿಂದ ಬಲತ್ಕಾರವಾಗಿ ಬೆಳೆ ಕೊಯ್ದರೆಂಬ ಆರೋಪದಲ್ಲಿ ಕಳೆದ ಜನವರಿಯಲ್ಲಿ ಇಲ್ಲಿನ ಪೋಲೀಸ್ ಇನ್ಸ್‌ಪೆಕ್ಟರ್ ಇಲ್ಲಿನ ೨೧ ಕಮ್ಯುನಿಸ್ಟರನ್ನು ಸೇರಿಸಿಕೊಟ್ಟ ಖಟ್ಲೆಯ ತೀರ್ಪು ಆಗಿ ಆರೋಪಿಗಳು ನಿರಪರಾಧಿಗಳೆಂದು ಬಿಡಲ್ಪಟ್ಟರು. ಶ್ರೀ. ಸುವರ್ಣರು ಆರೋಪಿಗಳ ಪರವಾಗಿ ವಾದಿಸಿದರು.

ಉಡುಪಿ

ಕ್ಷಾಮಪೀಡಿತ

ರಾದ ಬಿಜಾಪುರ ನಿವಾಸಿಗಳು ಧರ್ಮ ಸಹಾಯವನ್ನು ಕೋರಿ ಇಲ್ಲಿಗೆ ಬಂದು ಉಳಕೊಂಡಿರುವರು.

ಉಜಿರೆ

ಜನ್ಮದಿನೋತ್ಸವ

ದವಂಬರ ೨೦ರಂದು ಶ್ರೀ ಸಿದ್ಧವನ ಗುರುಕುಲ ಸಂಸ್ಥಾಪಕರಾದ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಡೆಯವರ ಜನ್ಮದಿನೋತ್ಸವವು ನೆರವೇರಿತು. ಮಧ್ಯಾಹ್ನ ವೃಷ್ಟಾನ್ನ ಭೋಜನವೂ, ಸಾಯಂಕಾಲ ಶ್ರೀ. ಹೆಗ್ಡೆಯವರ ಪುರೋಭಿವೃದ್ಧಿಗಾಗಿ ಭಜನೆಯೂ ಸಂಜೆ ಶ್ರೀ ಕೃಷ್ಣ ಚೈತನ್ಯ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸಭೆಯೂ ನೆರವೇರಿತು.

ಕಾರ್ಕಳ

ಸೀತಾನದಿ

(ಕಾರ್ಕಳ ತಾಲೂಕು) ಇಲ್ಲಿ ವರ್ಷಂಪ್ರತಿ ಜರಗಲಿರುವ ಜಾನುವಾರು ಸಂತೆಯು ಇದೇ ಬರುವ ತಾ. ೭—೧೨—೪೩ರಿಂದ ಹತ್ತು ದಿವಸಗಳವರೇಗೆ ಎಂದಿನಂತೆ ನೆರವೇರಲಿರುವುದು. ಆದ್ದರಿಂದ ನಮ್ಮ ಜಿಲ್ಲೆಯ ಮತ್ತು ಮೈಸೂರು ಪ್ರಾಂತ್ಯದ ಎಲ್ಲಾ ಜಾನುವಾರು ವ್ಯಾಪಾರಿಗಳು ತಮ್ಮ ಉತ್ತಮತರದ ರಾಸುಗಳನ್ನು ಮಾರಾಟಕ್ಕೂ ಪ್ರದರ್ಶನಕ್ಕೂ ತಂದು ಪ್ರೋತ್ಸಾಹಿಸಬೇಕಾಗಿಯೂ ಅವರಿಗೆ ಸರ್ವಾನುಕೂಲತೆಗಳನ್ನು ಒದಗಿಸಲಾಗುವುದೆಂದೂ ಹೆಬ್ರಿ ಪ. ಬೋ. ಪ್ರೆಸಿಡೆಂಟರು ತಿಳಿಸುತ್ತಾರೆ.

ಅಭ್ಯಾಸ ಗೋಷ್ಠಿ

ಮಿತ್ರಮಂಡಳಿಯ ಸಾಪ್ತಾಹಿಕ ಅಭ್ಯಾಸ ಗೋಷ್ಠಿಯು ಸಂಜೆ ಶ್ರೀ| ಎ. ಶಂಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ| ಶಿವರಾಮ ಕಾರಂತರ "ಬೆಟ್ಟದ ಜೀವ" ಪುಸ್ತಕದ ಕುರಿತು ಹಲವರು ತಮ್ಮ ಅಭ್ಯಾಸಗಳನ್ನು ಮುಂದಿರಿಸಿದರು.

ಶ್ರೀ| ಜಿ. ಪಾವನ ಭಟ್ಟರು ಮಾತನಾಡುತ್ತಾ 'ಇದೊಂದು ಶ್ರೇಷ್ಠ ಕಾದಂಬರಿ. ಹವ್ಯಕ ಬ್ರಾಹ್ಮಣರನ್ನು ಸರಿಯಾಗಿ ಚಿತ್ರಿಸಿಲ್ಲ ಎಂಬ ಆರೋಪವು ಸರಿಯಲ್ಲ. ಯೌವನದಲ್ಲಿ ತಪ್ಪು ಹಾದಿ ಹಿಡಿಯುವುದರಲ್ಲಿದ್ದ ಶರ್ಮನು, ಪಶ್ಚಾತ್ತಾಪಪಟ್ಟೇ, ಪೂನೆಗೆ ಹೋಗಿ ಹೊಸ ಜೀವನವನ್ನು ಆರಂಭಿಸಿರಬಹುದು' ಎಂದರು.

'ಹಾಸ್ಯಗಾರ ಕಾರಂತರ ನಗೆ ಮಾತುಗಳು ಇದರಲ್ಲಿ ಬೇಕಷ್ಟಿವೆ. ಪುತ್ತೂರು ತಾಲೂಕಿನ ಹಳ್ಳಿಯ ಜನರ ಅತಿಥಿ ಪ್ರೇಮ ಮತ್ತಿತರ ಗುಣಗಳು ಬಲು ಚೆನ್ನಾಗಿ ಚಿತ್ರಿಸಲ್ಪಟ್ಟಿವೆ' ಎಂದು ಶ್ರೀ. ತಿರುಮಲೇಶ್ವರ ಭಟ್ ಅವರು ಹೇಳಿದರು.

"ಈ ರೀತಿಯ ವರ್ಣನೆ ಕನ್ನಡಕ್ಕೆ ಹೊಸತು.. ವಾಕ್ಯ—ಶೈಲಿಗಳು ಪ್ರತಿಯೊಬ್ಬರ ಕೈಗೂ ಎಟಕುವಂಥವು, ಇದು ಗ್ರಾಮಗಳ ಉದಾತ್ತ ಜೀವನದ ಯಶಸ್ವಿ ಚಿತ್ರ ಮಾತ್ರವಲ್ಲ; ಉತ್ತಮ ಗ್ರಾಮದ ಉದಾಹರಣೆಯನ್ನು ರೂಪಿಸುವ ಗ್ರಂಥವೂ ಆಗಿದೆ," ಎಂದು ಶ್ರೀ| ಕೆ. ಸೂರ್ಯನಾರಾಯಣ ಅಡಿಗರು ಹೇಳಿದರು.

ಶ್ರೀ| ಬಿ. ಎಂ. ಇದಿನಬ್ಬ ಅವರು 'ವಿಮರ್ಶಿಸಬೇಕು ನಿಜ. ಆದರೆ ಟೀಕಿಸುವ ಭಾಗ ಯಾವುದು ಎಂಬುದೇ ತಿಳಿಯುವುದಿಲ್ಲ. ನಾವೆಲ್ಲರೂ ಪ್ರಶಂಸೆ ಮಾಡುತ್ತಿರುವುದೊಂದೇ ಕಾರಂತರ ಲೇಖನಿಯ ಸಾಮರ್ಥ್ಯವನ್ನು ಸೂಚಿಸುತ್ತದೆ' ಎಂದರು.

ಗ್ರಂಥದ ಬಲು ಸ್ವಾರಸ್ಯವಾದ ಕೆಲವು ಅಂಶಗಳನ್ನೆತ್ತಿ ಓದಿದ ಮೇಲೆ ಶ್ರೀ. ಪಿ. ಕೆ. ನಾರಾಯಣ ಅವರು, 'ಶರ್ಮನ ಜೀವನವನ್ನು ನೋಡಿ ಹವ್ಯಕರು ಸಿಟ್ಟುಗೊಳ್ಳುವ ಪ್ರಶ್ನೆಯಿಲ್ಲ. 'ಮರಳಿ ಮಣ್ಣಿಗೆ'ಯ ಕೋಟದ ಲಚ್ಚ ಶರ್ಮನಿಗಿಂತ ನೂರುಪಾಲು ಕರಿದಾಗಿ ಚಿತ್ರಿಸಲ್ಪಟ್ಟಿದ್ದ' ಎಂದರು.

ಕೆಲದಿನಗಳ ವಸ್ತುವನ್ನೆತ್ತಿ ಕಾದಂಬರಿ ಬರೆಯುವುದು ಕನ್ನಡದಲ್ಲಿ ಹೊಸ ಪ್ರಯೋಗ ..... ಇಲ್ಲಿ ಯಥಾರ್ಥವಾದಿ ಚಿತ್ರಕಾರರಾದ ಕಾರಂತರಿದ್ದಾರೆ...ಕಾರಂತರು ಬ್ರಾಹ್ಮಣ ಜೀವನವನ್ನು ಚಿತ್ರಿಸುವವರು ಎನ್ನುವುದಕ್ಕಿಂತ ಜನಜೀವನವನ್ನೂ ಚಿತ್ರಿಸುವವರೆನ್ನುವುದು ಲೇಸು:—ಎಂದು ಶ್ರೀ. ಶಿ. ರಾ. ಕುಳುಕುಂದರು ಹೇಳಿದರು.

ಶ್ರೀ. ಶಂಭಟ್ಟರು ತಮ್ಮ ಅಧ್ಯಕ್ಷ ಭಾಷಣವೀಯುತ್ತಾ, 'ಮರಳಿ ಮಣ್ಣಿಗೆ'ಯಲ್ಲಿ ಕೋಟ ಬ್ರಾಹ್ಮಣರ ಜೀವನವಿದ್ದರೆ, ಇಲ್ಲಿ ತೋಟ ಬ್ರಾಹ್ಮಣರದಿದೆ. ಹಳ್ಳಿಯವರ ಕೃಷಿಪ್ರೇಮ, ಅತಿಥಿ ಸತ್ಕಾರ, ದಾಂಪತ್ಯ ಜೀವನ—ಇವು ಸುರಸವಾಗಿ, ಯಥಾವತ್ತಾಗಿ ಚಿತ್ರಿಸಲ್ಪಟ್ಟಿವೆ, ಇದರಲ್ಲಿ ಹವ್ಯಕ ಬ್ರಾಹ್ಮಣರ ವಿರುದ್ಧ ಪ್ರಚಾರವಿದೆಯೆಂದು ನನಗೆಲ್ಲಿಯೂ ತೋರಲಿಲ್ಲ, ಬದಲಿಗೆ ಕಾರಂತರು ಗೋಪಾಲಯ್ಯ ನಂತಹ ಆದರ್ಶ ಜೀವಿಯನ್ನೇ ಚಿತ್ರಿಸಿರುವುದು ನಾವು ನೆನಪಿನಲ್ಲಿಡಬೇಕಾದ ವಿಷಯ' ಎಂದರು.

ಮುಂದಿನ ಸಭೆಯು ತಾ ೪ನೇ ಶನಿವಾರ ಜರಗಿ 'ಪ್ರಗತಿಶೀಲ ಸಾಹಿತ್ಯ' ಎಂಬ ವಿಷಯದ ಕುರಿತು ಉಪನ್ಯಾಸ—ಚರ್ಚೆಗಳಾಗುವುವು.

ನೋಟೀಸು

ಉಡ್ಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. No. 78/1943.

1. ರಂಗು ಹೆಂಗ್ಸು 2. ಕುಪ್ಪು ಹೆಂಗ್ಸು 3. ಮುತ್ತು ಹೆಂಗ್ಸು ತುಂಗುಹೆಂಗ್ಸಿನ ಮಗಳಂದಿರು ಉಡ್ಪಿ ತಾಲೂಕು ಪೆರಣಂಕಿಲ ಗ್ರಾಮದಲ್ಲಿರುವವರು. } ಅರ್ಜಿದಾರರು.

ಮತ್ತು

ತಮ್ಮಯ್ಯ ಸೇರಿಗಾರ-ಪಾಚುಹೆಂಗ್ಸಿನ ಮಗ ಸದ್ರಿ ಪೆರಣಂಕಿಲ ಗ್ರಾಮ— } ಎದ್ರಿ.

ಇವರೊಳಗೆ

ಸದ್ರಿ ಎದ್ರಿ ಮತ್ತು ಇತರ ಸಮಸ್ತರೀಗೆ ಈ ಮೂಲಕ ತಿಳಿಯಪಡಿಸುವುದೇನಂದರೆ:—

ಅರ್ಜಿದಾರರ ಮಾವ ವ ಎದ್ರಿಯ ಸಹೋದರ ಸದ್ರಿ ಪೆರಣಂಕಿಲ ಗ್ರಾಮದಲ್ಲಿ ತಾ. 22—8—41ರಲ್ಲಿ ಮೃತಪಟ್ಟ ಅಣ್ಣಪ್ಪ ಸೇರಿಗಾರಗೆ ಬರತಕ್ಕ ಸದ್ರಿ ಅರ್ಜಿಯಲ್ಲಿ ಕಾಣಿಸಿದ ಸಾಲ ವಸೂಲಿ ಬಗ್ಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ದಾಕ್ಲು ಮಾಡಿದ ಸದ್ರಿ ಅರ್ಜಿಯು ತಾ. 4—12—48ಕ್ಕೆ ತನ್ಕಿಗೆ ಇಟ್ಟಿರುವದ್ರಿಂದ ಆ ಕುರಿತು ಆಕ್ಷೇಪ ಹೇಳುವವರು ಸದ್ರಿ ತಾರೀಕಿನ ದಿವಸ ಸದ್ರಿ ಅರ್ಜಿ ತನ್ಕಿ ಸಮಯ ಕೋರ್ಟಿನ ಮುಂದೆ ಸ್ವತಹಾ ಅಥವಾ ವಕೀಲರ ಮುಖಾಂತ್ರ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜ್ಯಾಹೀರು ಮಾಡಿಕೊಳ್ಳಬೇಕಾಗಿ ಈ ಮೂಲಕ ಸದ್ರಿ ಎದ್ರಿ ಮತ್ತು ಇತರ ಸಮಸ್ತರಿಗೆ ತಿಳಿಯಪಡಿಸೋಣಾಗುತ್ತದೆ.

Udipi S. K. }
12-11-1943 }

H. Ramanath Pai,
Advocate for Petnr.

ರೈಲುಬಂಡಿಗಳ ಸಮಯ

ಗಾಡಿಗಳು.	ಮಂಗಳೂರಿಂದ ಹೊರಡುವ ಸಮಯ.	ಮಂಗಳೂರಿಗೆ ತಲಪುವ ಸಮಯ.
ಗುಡ್ಸ್ ಬಂಡಿ ಪಟೇಲ್ ಕನ್ನಾನ್ನೂರು ವರೆಯುಂತ ಮಾತ್ರ	ಬೆಳಗ್ಗೆ [illegible]	ರಾತ್ರಿ [illegible]
	ಸಾಯಂ. [illegible]	ಬೆಳಗ್ಗೆ [illegible]
ಮಲಬಾರ್ ಎಕ್ಸ್‌ಪ್ರೆಸ್	ಬೆಳಗ್ಗೆ [illegible]	ಸಾಯಂ. [illegible]

— ಜಯಪ್ರಕಾಶರ ಕೆಲವು ನೆನಪುಗಳು —

ಗೋಡೆಗಳಿಗೂ ಕಿವಿಗಳುಂಟೆ?

ಗೋಡೆಗಳಿಗೂ ಕಿವಿಗಳುಂಟು; ಆದ್ದರಿಂದಲೇ ಸೆರೆಮನೆಯ ಸುದ್ದಿಯೂ ಹೊರಮನೆಗೆ ಬರುತ್ತದೆ. ಸೆರೆಮನೆಗಳ ಸುತ್ತಲೂ ಭದ್ರವಾದ ಕೋಟೆಯಿದೆ; ವಿದ್ಯುತ್ತಂತಿ ಸುತ್ತಿಕೊಂಡಿದೆ. ಯಾರೂ ಹೊರಗೆ ಬರಕೂಡದು; ಬಂದವರನ್ನು ಗಾರ್ಡರು ಗುಂಡಿಕ್ಕಿ ಕೊಂದುಬಿಟ್ಟಾರು!

ಆದರೆ ಸುದ್ದಿಗಳನ್ನು ಯಾರು ತಡೆಯಬೇಕು? ಗುಂಡಾಗಲಿ, ವಿದ್ಯುತ್ತಾಗಲಿ ಅದಕ್ಕೆ ತಡೆಯಿಲ್ಲ; ಹಾಗಾಗಿ ನಾಜಿ ನಿರ್ಬಂಧ ಶಿಬಿರದ ವಾರ್ತೆ ಹೊರ ಕೇಳುತ್ತಿದೆ; ಗೊಬೆಲ್ಸ್ ನಾಜಿ ಪ್ರಚಾರ ಮಾಡುತ್ತಾ ತಮ್ಮ ಆಡಳಿತೆ ಹೊಗಳುತ್ತಾ ಇರಬಹುದು: ಆದರೆ ನಾಜಿಗಳ ನಿರ್ದಯ ವರ್ತನೆ ಹೊರಗಿನ ಜಗತ್ತಿಗೆ ತಿಳಿದೇಬಿಡುತ್ತದೆ.

ಕೇಂದ್ರ ಎಸೆಂಬ್ಲಿಯಲ್ಲಿ ಕಳೆದ ವಾರ ಒಂದು ಪ್ರಶ್ನೆ ಹಾಕಲ್ಪಟ್ಟಿತು. ಆದರೆ ಅದಕ್ಕೆ ಏನೂ ವಿರೋಧ ಉತ್ತರ ಬರಲಿಲ್ಲ: ಪ್ರಶ್ನೆಯನ್ನು ಮೊದಲನೆಯ ಸಲ ಕೇಳಿದಾಗ, 'ಅಯ್ಯೋ ಈ ಸುದ್ದಿ ನಿಮಗೆ ಹೇಗೆ ತಿಳಿದುಬಿಟ್ಟಿತು' ಎಂದು ಸರಕಾರದ ಮಾನ್ಯ ಮಂತ್ರಿಗಳು ಉದ್ಗಾರವೆತ್ತಿದರು!

'ಬಾಬು ಜಯಪ್ರಕಾಶ ನಾರಾಯಣರನ್ನು ಹಿಮದ ಗಟ್ಟಿಯ ಮೇಲೆ ಕೂತುಕೊಳ್ಳಿಸಲಾಗಿದೆಯೆ? ನಿದ್ರಾ ರಹಿತ ರಾತ್ರಿಗಳನ್ನು ಅವರು ಕಳೆಯಬೇಕಾಗುತ್ತದೆಯೆ? ಅವರು ಕುಳಿತುಕೊಳ್ಳುವ ಕುರ್ಚಿಗೆ ಹಿಂಬದಿಯಿಲ್ಲವೆ?'—ಈ ಪ್ರಶ್ನೆಗಳು ಸರಕಾರದ ಗೃಹಮಂತ್ರಿಯೊಡನೆ ಕೇಳಲ್ಪಟ್ಟವು. ಸರಕಾರದ ಗೃಹಮಂತ್ರಿ ಈ ಆರೋಪಗಳನ್ನೀಗ ಅಲ್ಲಗಳೆದಿದ್ದಾರೆ. ಈ ಮೇಲಿನ ಪ್ರಶ್ನೆಗಳಲ್ಲಿರುವ ಸಂಕಷ್ಟ, ಕೈದಿಯ ಮೇಲೆ ಅಧಿಕಾರಿಗಳು ಹೊರಿಸುವಂಥಾದ್ದು; ಇನ್ನು ಕೈದಿ ಸ್ವತಃ ಹೊರಬೇಕಾದ ಸಂಕಷ್ಟಗಳು ಸೆರೆಮನೆಯಲ್ಲಿ ಎಷ್ಟೋ ಇವೆ.

ಸೆರೆಮನೆಯ ಒಂದು ಕಡೆಯಲ್ಲಿ ಏನಾಗುತ್ತಿದೆಯೆಂದು ಇನ್ನೊಂದು ಕಡೆಯ ಕೈದಿಗೆ ಹೇಗೆ ತಿಳಿಯಬೇಕು? ಸೆರೆಮನೆಯ ನೀತಿಯ ಕುರಿತು ಯಾವುದೇ ಟೀಕೆ ಬರಬಾರದೆಂಬ ವಿಷಯ ಸರಕಾರ ಎಚ್ಚರ ಬಹಳ ತೆಗೆದುಕೊಳ್ಳುತ್ತದೆ. ಏಕೆಂದರೆ ಪೋಲಿಸ್ ಮತ್ತು ಸೆರೆಮನೆ ಇವೆರಡು ಈ ಸರಕಾರದ ಎಡಬಲಗೈಗಳಂತೆ ಇವೆ. 'ಈ ಗಾಂಧಿ ತೊಂದರೆ ನಿಲ್ಲಿಸಿಬಿಡುತ್ತೇನೆ; ಆ ಜನರನ್ನೆಲ್ಲಾ ಒಮ್ಮೆ ನನ್ನ ಕೈಗೆ ಹಿಡಿದು ಕೊಡಿ' ಹೀಗೆಂದು ಜೈಲರರೊಬ್ಬರು ಹೇಳಿದ್ದುಂಟು!- ಸರಕಾರ ಎಷ್ಟು ಎಚ್ಚರದಿಂದಿದ್ದರೂ ಒಮ್ಮೊಮ್ಮೆ ಗೋಡೆಗಳಿಗೂ ಕಿವಿ ಕೇಳುವುದುಂಟು!

ಜಯ ಪ್ರಕಾಶ್ ಅಖಿಲಭಾರತ ಖ್ಯಾತಿಯ ವ್ಯಕ್ತಿ. ಅಮೆರಿಕಕ್ಕೆ ತೆರಳಿ ಅಲ್ಲಿ ಹತ್ತು ಹನ್ನೆರಡು ವರ್ಷಗಳ ವರೆಗೂ ಕೂಲಿ ಮಾಡಿ ದುಡಿವುದರೊಡನೆ ವಿದ್ಯಾಭ್ಯಾಸ ಪಡೆದು ಬಂದರು. ಸಮತಾವಾದದ ದೀವಟಿಗೆ ಎತ್ತಿಕೊಂಡೇ ಬಂದರು. ಬಂದವರೇ ಕಾಂಗ್ರೆಸನ್ನು ಸೇರಿ ಕೆಲಸ ಮಾಡಿದರು. ಜವಾಹರ್ ಅವರನ್ನು ಮೆಚ್ಚಿ ಅವರಿಗೆ ಕಾಂಗ್ರೆಸ್ ಕಾರ್ಯದರ್ಶಿತ್ವವಿತ್ತರು. ೧೯೩೦ರಲ್ಲಿ ಸತ್ಯಾಗ್ರಹದ ಆರಂಭವಾಗಿ ಸೆರೆಮನೆ ಸೇರಿದರು.

ಸೆರೆಮನೆಯಿಂದ ಹೊರ ಬಂದವರೇ ತಮ್ಮ ಕೆಲವು ಗೆಳೆಯರೊಂದಿಗೆ ಕಾಂಗ್ರೆಸ್ ಸೋಷಿಯಲಿಸ್ಟ್ ಪಕ್ಷ ಸ್ಥಾಪಿಸಿದರು. ಕಾಂಗ್ರೆಸ್ ವರ್ಕಿಂಗ್ ಕಮಿಟಿಗೂ ಅವರ ಪ್ರವೇಶವಾಯಿತು. ಆದರೆ ತತ್ವ ಭೇದದಿಂದ ಅದರಿಂದ ಹೊರಬಂದರು; ಮುಂದೆ 1940ರ ವೈಯುಕ್ತಿಕ ಸತ್ಯಾಗ್ರಹ ಆರಂಭವಾಗುವ ಮುನ್ನವೇ ಅವರಿಗೆ ಸೆರೆಮನೆ ವಾಸ ವಿಧಿಸಲಾಗಿತ್ತು. ವೈಯುಕ್ತಿಕ ಸತ್ಯಾಗ್ರಹ ಪ್ರಾರಂಭವಾಯಿತು. ಭಾರತ ವೀರರು ಸೆರೆಮನೆ ಸಾಗಿದರು!

ಹಾ! ಆಗೊಂದು ಸುದ್ದಿ ಬಂತು. ಜಯಪ್ರಕಾಶ ನಾರಾಯಣರು ದಿಯೋಲಿ ಸ್ಥಾನಬದ್ಧ ಶಿಬಿರದಲ್ಲಿ ಅನ್ನ ಸತ್ಯಾಗ್ರಹ ಪ್ರಾರಂಭಿಸಿದರೆಂದು. ಮಹಾತ್ಮರಿಗಿದು ತಾಳಲಾರದ ಸಂಕಟ ವಾರ್ತೆ. ಜಯಪ್ರಕಾಶರ ಧರ್ಮಪತ್ನಿ ಪ್ರಭಾವತಿ ದೇವಿ, ಮಹಾತ್ಮರ ಶಿಷ್ಯಳು. ದೇಶ ಹೀಗೆ ತಲ್ಲಣಗೊಂಡ ಸಂದರ್ಭದಲ್ಲಿಯೇ ಸರಕಾರ ಇನ್ನೊಂದು ಅಸ್ತ್ರ ತೆಗೆಯಿತು. ಭಾರತದ ರಾಜಕೀಯ ರಂಗದಲ್ಲಿ ಒಂದು ಕ್ರಾಂತಿಯನ್ನುಂಟುಮಾಡಲು ಜಯಪ್ರಕಾಶರು ಗುಪ್ತ ಆಂದೋಲನ ನಡೆಸುತ್ತಿದ್ದಾರೆಂದು ಮ್ಯಾಕ್ಸ್‌ವೆಲ್ ಒಂದು ಪ್ರಕಟಣೆ ಹೊರಡಿಸಿಯೇ ಬಿಟ್ಟರು; ಜಯಪ್ರಕಾಶರಿಗಿದರ ಸತ್ಯಾಸತ್ಯತೆಗಳನ್ನು ತಿಳಿಸಲು ಸಂದರ್ಭ ಕೊಡದೆಯೇ! ಮ್ಯಾಕ್ಸ್‌ವೆಲ್ಲರು ಎಂ. ಎನ್. ರಾಯ್‌ರನ್ನು ಪ್ರೀತಿಸಿದಷ್ಟೇ ಜಯಪ್ರಕಾಶರನ್ನು ದ್ವೇಷಿಸತೊಡಗಿದರು. ಒಬ್ಬರು ತೋಳ ಇಬ್ಬರು ಕುರಿಮರಿಯಾದರು.

ದಿನಗಳುರುಳಿದವು. ಜಯಪ್ರಕಾಶರು ಸೆರೆಮನೆಯಲ್ಲಿಯೇ ಉಳಿದರು. 1942ನೆಯ ವರ್ಷ ಬಂತು. ಘಟನೆಗಳ ಮೇಲೆ ಘಟನೆಗಳು ಸಂಭವಿಸಿದವು. ಒಂದು ದಿನ ಜಯಪ್ರಕಾಶರು ಹಜಾರಿಬಾಗ್ ಸೆರೆಮನೆಯಿಂದ ತಪ್ಪಿಸಿದರೆಂಬ ಸುದ್ದಿ ಸಾರಲ್ಪಟ್ಟಿತು. ಅವರನ್ನು ಹಿಡಿದುಕೊಟ್ಟವರಿಗೆ ೧೦ ಸಾವಿರ ರೂಪಾಯಿಗಳ ಇನಾಮು ಕೊಡುವ ಪ್ರಕಟಣೆಯೂ ಹೊರಡಿಸಲ್ಪಟ್ಟಿತು. ಒಬ್ಬರು ಅವರನ್ನು ನೇಪಾಳಿನಲ್ಲಿ ಕಂಡ ಸುದ್ದಿ ತಿಳಿಸಿದರು; ಇನ್ನೊಬ್ಬರು ಅವರನ್ನು ಬಂಗಾಳದಲ್ಲಿ ಬಂಧಿಸಿದ ವಾರ್ತೆ ಹೇಳಿದರು; ಅವರು ಬೊಂಬಾಯಿಗೆ ಬಂದರೆಂದೂ ಕೆಲವರು ಹೇಳಿದರು. ಹೇಗಿದ್ದರೂ, ಇನ್ನೊಂದು ದಿನ ಅವರನ್ನು ಪಂಜಾಬಿನಲ್ಲಿ ಬೊಂಬಾಯಿ ವಾರಂಟ್ ಮೂಲಕ ಸೆರೆಹಿಡಿಯಲಾಯಿತೆಂದು ಮೇಕ್ಸ್‌ವೆಲ್ ನಮಗೆ ತಿಳಿಸಿದರು. ಎಲ್ಲಾ ಪ್ರಾಂತಗಳಿಗೂ ಅವರ ಶರೀರ ಬೇಕಾಗಿತ್ತು; ಎಲ್ಲಾ ಪೋಲೀಸರಿಗೂ ಅವರ ಕೈಗೆ ಕೋಳ ಹಾಕಬೇಕಾಗಿತ್ತು.

ಜಯಪ್ರಕಾಶರ ಅತ್ಯಂತ ಆಪ್ತ ಮಿತ್ರರು ಇಬ್ಬರು ಇನ್ನೂ ತಮ್ಮ ತಲೆಗಳಿಗೆ ತುಂಬಾ ಬಹುಮಾನವನ್ನು ಹೊತ್ತುಕೊಂಡು ತಲೆ ತಪ್ಪಿಸಿದ್ದಾರೆ. ಒಬ್ಬರು ಅಚ್ಯುತ ಪಟವರ್ಧನರು, ಇನ್ನೊಬ್ಬರು ಡಾಕ್ಟರ್ ರಾಮಮೋಹನ ಲೋಹಿಯರು. ಬರೀ ಗಂಡುಸರು ಮಾತ್ರ ಇಂಥಾ ಸಾಹಸ ಮಾಡಲು ನಮ್ಮ ಭಾರತ ಮಹಿಳೆಯರಾದವರೂ ಬಿಟ್ಟುಬಿಟ್ಟಾರೇ? ತಮ್ಮ ಗಂಡಂದಿರು ಭಾರತದ ಯಾವುದೋ ಕಡೆಯಲ್ಲಿ ಸೆರೆಮನೆಯಲ್ಲಿಡಲ್ಪಟ್ಟಿರಲು, ಶ್ರೀಮತಿಯರಾದ ಅರುಣ ಅಸಫ್ ಅಲಿ ಮತ್ತು ಸುಚೇತಾ ಕೃಪಾಲಾನಿ ಇವರಿಬ್ಬರೂ ತಮ್ಮ ತಲೆಗೆ ಇನಾಮು ಹೊತ್ತು ತಿರುಗುತ್ತಾರೆ. ಹೋದ ವೈಸರಾಯ್ ಲಿನ್‌ಲಿತ್‌ಗೋರವರು ತಮ್ಮೊಂದು ಮಹತ್ತೋಭಾರ ಪ್ರಕಟಣೆಯಲ್ಲಿ ಅರುಣಾಳ ಹೆಸರನ್ನು ಉಚ್ಚರಿಸಿ ಪಾವನಗೊಳಿಸಿದ್ದಾರೆ.

ಶಾಸನ ದೃಷ್ಟಿಯಿಂದ ಅಪರಾಧಿಯೆಂದು ಜಯಪ್ರಕಾಶರನ್ನು ಸರಕಾರ ಬಂಧಿಸಿದೆ. ಆದೇ ಶಾಸನದಿಂದ ಅವರ ವಿಚಾರಣೆ ಮಾಡಿ, ಅವರ ತಪ್ಪು ಸ್ಥಾಪಿತವಾದರೆ ಅವರನ್ನು ಶಿಕ್ಷೆಗೆ ಗುರಿಮಾಡಬಹುದಲ್ಲಾ? ಈ ಕುರಿತು, ಅವರ ವಿಚಾರಣೆಯಾಗಬೇಕೆಂದು ಪ್ರಯತ್ನಿಸಿದ ಶ್ರೀ ಪಾರ್ದಿವಾಲರನ್ನೂ ಸರಕಾರ ಬಂಧಿಸಿ ಬಿಟ್ಟಿತು. ಬಂಧಿಸಿದ ಕುರಿತು ಗೊಂದಲ ಹುಟ್ಟಲು ಈಗ ಅವರ ಬಿಡುಗಡೆ ಮಾಡಿದ್ದಾರೆ. ಶ್ರೀಮತಿ ಪೂರ್ಣಿಮಾ ಬೆನರ್ಜಿಯವರೂ ಈ ಕುರಿತು ಒಂದು ಅರ್ಜಿ ಮಾಡಿದ್ದಾರೆ. ಪಾರ್ದಿವಾಲ ಮತ್ತು ಪೂರ್ಣಿಮಾ ಬೆನರ್ಜಿಯವರ ಪ್ರಯತ್ನದ ಗತಿಯೇನೆಂದು ತಿಳಿದಿಲ್ಲ. ಜಯಪ್ರಕಾಶರನ್ನು ವಿಚಾರಣೆಗೆ ಗುರಿಪಡಿಸುವಿರೇ ಎಂದು ಕೇಳಿದ್ದಕ್ಕೆ ಗೃಹಮಂತ್ರಿಗಳು ಆ ವಿಷಯ ಸಾನೀಗ ಏನನ್ನೂ ಹೇಳಲಾರೆನೆಂದರು. ಅಂತೂ ಜಯಪ್ರಕಾಶರನ್ನು ಕೋರ್ಟಿಗೆ ತರುವುದಿಲ್ಲ; ಅವರ ವಿಚಾರಣೆ ನಡೆಸುವುದಿಲ್ಲ. ಅವರು ಹೇಗಿದ್ದಾರೆಂದು ತಿಳಿಯಲು ಯಾರಿಗೂ ಅವರ ಸಂದರ್ಶನವನ್ನೂ ಮಾಡಿಸುವುದಿಲ್ಲ. ಈ ಪರಿಸ್ಥಿತಿಗಳು ಜನತೆಯ ಅತೃಪ್ತಿಯನ್ನು ಹೆಚ್ಚಿಸಲು ಅನುಕೂಲವಾಗುವವೆಂದು ಬೇರೆ ಹೇಳಬೇಕಾಗಿಲ್ಲ.

ನಮ್ಮ ಸುವರ್ಣೋತ್ಸವ ಸಂಚಿಕೆಗೆ

ದಯಮಾಡಿ ನಿಮ್ಮ
ಪ್ರೀತಿಯ ಸಂದೇಶವನ್ನು
ಕಳುಹಿಸಿರಿ
ಅಮೃತಾಂಜನ ಲಿಮಿಟೆಡ್,
ಮದ್ರಾಸ್, ಬೊಂಬಯಿ,
ಕಲ್ಕತ್ತ.

FIRST AND FOREMOST

FIRST AND FOREMOST among the ideals of the CANARA BANK is the ideal of Service to its Customers.

ESTD. 1906.
CANARA BANK LTD.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು. ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE
The Joint Booking Office, KODIALBAIL.

The Bank of Mangalore Limited, Mangalore.

ESTD: 1931

HEAD OFFICE Mangalore. *BRANCHES* Moodabidri & Padubidri.

The Bank Undertakes to Collect Cheques, Demand and Documentary Bills at Most Competitive Rates.

ISSUES DRAFTS ON ALL IMPORTANT TOWNS IN THE DISTRICT and also on BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.

at very favourable rates

All kinds of inland banking business undertaken

THE CANARA BANKING CORPORATION Ltd

(Incorporated in British India with limited liability).

Estd:] Head office: UDIPI [1906.

(Branches & Agencies in all principal cities of India)

Authorised capital	Rs. 25,00,000.
Issued & Subscribed	Rs. 16,00,000.
Paid up Capital	Rs. 10,06,000.
Reserves	Rs. 3,85,000.

Advances are made against approved securities and bills purchased or collected at most favourable rates. For further particulars please apply tothe nearest Branch.

ಜೀವವಿಮೆ ಮಾಡುವ ಪ್ರಯೋಜನವು ಇಂದು ಹಿಂದಿಗಿಂತ ಅಧಿಕವಾಗಿದೆ.

ದಿ ಬಾಂಬೆ ಲೈಫ್ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಇದರಲ್ಲಿ ಒಂದು ಪಾಲಿಸಿ ಪಡೆದು

ಈಗಲೇ ನೀವು ನಿಮ್ಮನ್ನು ಮತ್ತು ನಿಮ್ಮನ್ನು ಹೊಂದಿಕೊಂಡಿರುವವರನ್ನು ರಕ್ಷಿಸಿಕೊಳ್ಳಿರಿ!

ಪ್ರತಿನಿಧಿಗಳಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಇನ್ಶೂರ್ ಮಾಡಲು ಅಥವಾ ಮಾಹಿತಿ ತಿಳಕೊಳ್ಳಲು ದಯಮಾಡಿ ಬರೆಯಿರಿ!

ಕೊಟ್ಟಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

— ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ —

ಬೆಂಗಳೂರು ಬೊಂಬಾಯಿ ಮದ್ರಾಸು ಕಲ್ಲಿಕೋಟೆ ಮಂಗಳೂರು ಮತ್ತು ತ್ರಿವೇಂಡ್ರಂ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವ ವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ್ ವ ಏಜೆಂಟರು:—

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಶೈ, ರಥಬೀದಿ. (3) ದಿ ಕರ್ನಾಟಕ ಸ್ನಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೊ:—1. ಮಾರಾರ ಗಲ್ಲಿ ಹುಬ್ಬಳ್ಳಿ.
2. 86 ಫಾಕ್ಸ್ ಸ್ಟ್ರೀಟ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಮೃತ್ಯುಂಜಯ ರಸ. ಕೊಲೆರಾ ರೋಗಕ್ಕೆ ಸಿದ್ಧೌಷಧ.

ಪಂಚವಟಿ ಮಾತ್ರೆ.

ಸೇವನಾ ಕ್ರಮಗಳು ಔಷಧಿಯೊಡನೆ ಇದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು,

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಕು 3—12—1943 [ಸಂಚಿಕೆ 47]

ಫೆಸಿಸ್ಟರನ್ನು ಬಿಟ್ಟೂ ಗಾಂಧೀಜಿ ಬಂಧನವೆ?

ಜಪಾನರ ಕೈಗೊಂಬೆಯಾಗಿ ಬೋಸರು?

ಅಲ್ಲಾ ಭಕ್ಷರ ಕೊಲೆಯ ಒಳಸಂಚು!

'ಗಾಂಧೀಮಯಂ ಜಗತ್'

ಗಾಂಧೀ ಎಂಬುದು ಇಂದು ಎಂಥಾ ಒಂದು ಶಕ್ತಿಪೂರ್ಣವಾದ ಹೆಸರು. ಮಹಾತ್ಮಾ ಗಾಂಧೀ ಎಂದರೆ, ಯಾರಾದರೂ ಈ ಹೆಸರು ಅರಿಯದವರಿದ್ದಾರೆಯೆ? ಭಾರತದಲ್ಲಿ ಮಾತ್ರವಲ್ಲ ವಿದೇಶಗಳಲ್ಲಿಯೂ ಗಾಂಧೀ ಎಂದರೆ ಜನತೆಗೆ ಗೊತ್ತು! ಉಜ್ವಲ ದೇಶಾಭಿಮಾನಿ, ಅಹಿಂಸಾ ಕ್ರಾಂತಿ ಪುರುಷ, ದೇವಸಮಾನ ಜೀವಿ ಅವರು ಎಂಬುದು ಅಖಿಲ ಜಗತ್ತಿಗೇ ಅರಿತಿದೆ.

ನಮ್ಮ ದೇಶದಲ್ಲಿಯೇ ಒಂದೊಂದು ಪ್ರಾಂತಕ್ಕೆ ಒಂದೊಂದು ಜಿಲ್ಲೆಗೆ ಒಂದೊಂದು ಗ್ರಾಮಕ್ಕೂ ಒಬ್ಬೊಬ್ಬ 'ಗಾಂಧಿ' ಇದ್ದಾರೆ. ಇವರಲ್ಲಿ ಅಬ್ದುಲ್ ಗಫರ್‌ಖಾನ್, ಗಡಿನಾಡಿನ ಗಾಂಧಿ ಎಂದು ಜಗದ್ವಿಖ್ಯಾತರು. ಗಾಂಧಿ ವಿಶ್ವರೂಪಿಯೆನಿಸಿದ್ದಾರೆ.

ಬ್ರಿಟನ್ನಿನಲ್ಲಿ ಈಗ ಅಮೆರಿಕದ ರಾಯಭಾರಿಯಾಗಿರುವ ವಿನಂಟ್ 'ನ್ಯೂ ಹೆಂಪ್ ಶೈರ್ ಗಾಂಧೀ' ಎಂದು ಕರೆಯಲ್ಪಡುವರು; ಕ್ವಿಟ್ ಇಂಡಿಯಾ ಪರ ವಾದಿಸಿದ ಅಮೆರಿಕದ ಲೇಖಕ ಪತ್ರಿಕೋದ್ಯೋಗಿ ಲೂಯಿಫಿಶರ್ 'ಅಮೆರಿಕನ್ ಗಾಂಧಿ'ಯಾಗಿರುವರು.

ಫಿಲಿಪೈನ್ ಪ್ರೆಸಿಡೆಂಟ್ ಕ್ವಿಜನ್ ಕೂಡಾ ಗಾಂಧಿ ಎಂಬ ಅಡ್ಡ ಹೆಸರು ಪಡೆದಿರುವರು. ಜಪಾನಿನ ಕ್ರಿಶ್ಚಿಯನ್ ಮುಖಂಡರಾಳು ಕಾಗ್ವಾ 'ಜಪಾನೀ ಗಾಂಧಿ'ಯಾಗಿದ್ದಾರೆ. ಟಿಬೆಟ್‌ನಲ್ಲಿ 'ವಿಷ್ಣು'ವಿಗೆ ಮಹಾತ್ಮಾಗಾಂಧಿ ಪದ್ಮನಾಭ ಎಂಬ ಅಂಕಿತವಿದೆ.

ಹೀಗೆ ಉದಾಹರಣೆಗಳ ಮೇಲೆ ಉದಾಹರಣೆಗಳನ್ನೆಷ್ಟೋ ಹೇಳಬಹುದು. ಒಟ್ಟಿನಲ್ಲಿ ಗಾಂಧಿ ಇಂದು ಜಗದ್ವ್ಯಾಪೀ ವ್ಯಕ್ತಿ. ದೇಶವಿದೇಶಗಳಲ್ಲಿ ಹರಡಿದ ಕೀರ್ತಿ.

ಎಲ್ಲಿ ಪಾವಿತ್ರ್ಯವಿದೆಯೋ, ಎಲ್ಲಿ ನೈರ್ಮಲ್ಯವಿದೆಯೋ, ಎಲ್ಲಿ ದೀನಜನ ಸೇವಾ ಬುದ್ಧಿಯಿದೆಯೋ, ಎಲ್ಲಿ ಸರಳತೆಯಿದೆಯೋ, ಎಲ್ಲಿ ದೇಶಾಭಿಮಾನ ಮಾನವ ಪ್ರೀತಿಗಳಿವೆಯೋ, ಎಲ್ಲಿ ತಪಸ್ಸಿದೆಯೋ ಅಲ್ಲಿ ಗಾಂಧಿ ಇಂದು ವಿಶ್ವರೂಪಿಯಾಗಿ ಮೆರೆಯುತ್ತಾರೆ.

ಅಂಥಾ ಮಹಾತ್ಮರು ೭೫ ವರ್ಷ ಪ್ರಾಯದ ಜಗದ್ವಿಖ್ಯಾತರು ಇಂದು ಬ್ರಿಟಿಷರಾಳುವ ಭಾರತದಲ್ಲಿ ಕತ್ತಲೆ ಕೋಣೆಗೆ ಸೇರಿಸಲ್ಪಟ್ಟಿದ್ದಾರೆ.

ಫೇಸಿಸ್ಟರನ್ನು ಬಿಡುಗಡೆಮಾಡಿದರೂ ಗಾಂಧಿಜಿ ಸೆರೆಮನೆಯಲ್ಲಿ!

ಬ್ರಿಟಿಷ್ ಸರಕಾರ, ಬ್ರಿಟನಿನ ಫೇಸಿಸ್ಟ್ ಮುಖಂಡ ಒಸ್ವಾಲ್ಡ್ ಮೋಸ್ಲೇಯನ್ನು ಆತನ ಪತ್ನಿ ಸಮೇತ ಸೆರೆಮನೆಯಿಂದ ಬಟ್ಟಿರುವರು. ಕೂಲಿಗಾರ ಜನತೆ ಇದರ ಕುರಿತು ವಿರೋಧ ಮಾಡಿದೆ, ಆದರೆ ಬ್ರಿಟನನ್ನಾಳುವುದು ದುಡ್ಡಿದವರು. ಒಸ್ವಾಲ್ಡ್ ಮೋಸ್ಲೆ ಶ್ರೀಮಂತ, ಅದ್ದರಿಂದಲೇ ಬಿಡುಗಡೆ ಹೊಂದಿದ ಎಂದು ಟೀಕೆ ಬರುತ್ತದೆ.

ಹೇಗಿದ್ದರೂ ಫೇಸಿಸ್ಟ್‌ಪರನಾಗಿದ್ದವನನ್ನು, ಹಿಟ್ಲರ್ ಪ್ರಿಯನನ್ನು ಬ್ರಿಟಿಷ್ ಸರಕಾರವಿಂದು ಬಿಡುಗಡೆಮಾಡಿದೆಯೆಂಬುದಿಷ್ಟು ಸತ್ಯ. ಆದರೆ ಗಾಂಧೀಜಿ ಜರ್ಮನರನ್ನಾಗಲಿ, ಜಪಾನರನ್ನಾಗಲಿ ವಿರೋಧಿಸುವವರು; ಹಾಗಿದ್ದರೂ ಅವರನ್ನು ಇನ್ನೂ ಬಿಡುಗಡೆಮಾಡಲು ಅದೇ ಬ್ರಿಟಿಷ್ ಪ್ರಭುತ್ವಕ್ಕೆ ಮನಸ್ಸಾಗಲೊಲ್ಲದು. ಕಾಂಗ್ರೆಸಿನವರೇನೂ ಫೇಸಿಸ್ಟರಲ್ಲ. ಇದು ಜಗತ್ತಿಗೇ ಗೊತ್ತಿದೆ; ನೆಹರು, ಅಜಾದ್ ಮೊದಲಾದ ರಾಷ್ಟ್ರದ ಮುಂದಾಳುಗಳು ಕಡು ಫೇಸಿಸ್ಟ್ ವಿರೋಧಿಗಳು. ಆದರೂ ಇವರನ್ನು ಸರಕಾರ ಬಿಡಲೊಲ್ಲದು: ಅವರ ಅಪರಾಧವೆಂದರೆ ತಮ್ಮ ದೇಶ ಸ್ವತಂತ್ರವಾಗಿರಬೇಕೆಂದು ಹೇಳುವುದು. ಹೇಗಿದೆ ಬ್ರಿಟಿಷ್ ಸಾಮ್ರಾಜ್ಯವಾದ!

ಒಸ್ವಾಲ್ಡ್ ಮೋಸ್ಲೆಗೆ ಶರೀರ ಸೌಖ್ಯವಿಲ್ಲವಂತೆ; ಅದಕ್ಕಾಗಿ ಫೇಸಿಸ್ಟ್ ಪರನಾದರೂ ಆತನ ಬಿಡುಗಡೆ ಮಾಡಲಾಯಿತೆಂದು ಬ್ರಿಟಿಷ್ ಸರಕಾರ ಸಮರ್ಥಿಸುತ್ತದೆ. ಭಾರತದ ಮುಖಂಡರು ಫೇಸಿಸ್ಟ್ ವಿರೋಧಿ ಮುಖಂಡರು ಶ್ರೀ। ಮಹಾದೇವದೇಸಾಯಿಗಳೇ ಮೊದಲಾದವರು ಸೆರೆಮನೆಯಲ್ಲಿಯೇ ಸತ್ತು ಹೋದರು! ಅವರ ಬಿಡುಗಡೆ ಆಗಲಿಲ್ಲ. ಶ್ರೀ। ಸತ್ಯಮೂರ್ತಿಗಳು ಸಾವತನಕ ಸೆರೆಮನೆಯಲ್ಲಿದ್ದು, ಬಿಡುಗಡೆಯಾದ ಕೆಲ ದಿನ ಆಸ್ಪತ್ರೆಯಲ್ಲಿದ್ದೇ ಮರಣ ಹೊಂದಿದರು. ಒಸ್ವಾಲ್ಡ್ ಮೋಸ್ಲೆ ಫೇಸಿಸ್ಟ್ ಪರನಾದರೂ ಬ್ರಿಟಿಷ್ ಜನ. ಮಹಾದೇವದೇಸಾಯಿ ಸತ್ಯಮೂರ್ತಿಗಳು ಫೇಸಿಸ್ಟ್ ವಿರೋಧಿಗಳಾದರೂ ಭಾರತೀಯರು! ಬ್ರಿಟಿಷ್ ರಾಳುವ ಭಾರತೀಯರು!

'ಬೋಸ್ ಬರುತ್ತಿದ್ದಾರೆ' ಜಪಾನರ ಕೈಗೊಂಬೆಯಾಗಿ?

ಸುಭಾಸ ಬೋಸ್ ಎಂದರೆ ಹಿಂದೊಮ್ಮೆ ಒಂದು ಕಾಲವಿತ್ತು, ಅಖಿಲಭಾರತದ ತರುಣ ಜನಾಂಗವೇ ಅವರ ಕಂಠಕ್ಕೆ ದನಿಗೂಡಿಸುತಿತ್ತು ಆದರೆ ಬೋಸರು ಭಾರತ ಬಿಟ್ಟು ಪಲಾಯನ ಮಾಡಿದ ಮೇಲೆ, ಜಪಾನರ, ಜರ್ಮನರ ಕೈಗೊಂಬೆಯಾಗಿ ನಿಂತ ಮೇಲೆ ಭಾರತೀಯರಿಗೆ ಅವರ ಮೇಲೆ ಹೆಚ್ಚಿನ ವಿಶ್ವಾಸವಿಲ್ಲ. ಬೋಸ್ ಹೇಳುತ್ತಲೇ ಇದ್ದಾರೆ 'ನಾನುಬರುತ್ತೇನೆ, ಬರುತ್ತೇನೆ' ಎಂದು.

ಇಂದಿನ ಪರಿಸ್ಥಿತಿಗಳನ್ನು ನಾವು ತುಸು ವಿಚಾರಿಸಬೇಕಾಗಿದೆ. ನಮ್ಮ ರಾಷ್ಟ್ರದ ಮುಂದಾಳುಗಳನ್ನು ಸರಕಾರ ಸೆರೆಮನೆ ಸೇರಿಸಿದೆ. ಯಾವಾಗ ಬಿಡುಗಡೆ ಮಾಡುತ್ತಾರೆಂದು ಯಾರಿಗೂ ಗೊತ್ತಿಲ್ಲ. ಕೆಲವು ಮುಂದಾಳುಗಳಂತೂ ಎಲ್ಲಿದ್ದಾರೆಂದೂ ಗೊತ್ತಿಲ್ಲ. ರಾಷ್ಟ್ರೀಯ ಮನೋಭಾವದವರ ಮೇಲೆ ಸಾಕಷ್ಟು ಮರ್ದನವಾಗಿದೆ. ದೇಶದಲ್ಲಿ, 'ಅನ್ನವಿಲ್ಲ; ಬಟ್ಟೆಯಿಲ್ಲ.' ಬಂಗಾಳ ಬಿಜಾಪುರ, ಕೇರಳ ಹೀಗೆ ಭಾರತದ ಪ್ರಾಂತ ಪ್ರಾಂತ ಹಸಿವಿನ ಬೆಂಕಿಯಿಂದ ಸುಡುತ್ತಿದೆ. ಇದಕ್ಕೆ ಗತಿಗಾಣಿಸುವವರೂ ಇಲ್ಲ. ಈಗ ಬೋಸರು ಹೇಳುತ್ತಾರೆ 'ನಾನು ಬರುತ್ತೇನೆ' ಎಂದು.

ಈಸ್ವರ ಕರ್ಕಶ ಸ್ವರವಾದರೂ ನಿರಾಶಾವಾದಿಗಳಿಗೆ, ಹಸಿವಿನ, ಬೆಂಕಿಯಿಂದ ನರಳಿ ಸಾಯುವವರಿಗೆ ತುಸು ಆಶೆಯನ್ನುಂಟುಮಾಡಬಹುದು! 'ಬೋಸ್ ಬರಬಹುದು; ನಮ್ಮ ಗತಿ ಗಾಣಿಸಬಹುದೆ'ಂದು ಅಂಥಾ ಜನ ತಿಳಿದರೆ ಅವರ ತಪ್ಪಿಲ್ಲ. ಸಾವಿಗಿಂತ ಬೋಸ್ ಬಂದು ಬದುಕಿಸಿದರೆ ಆಗಬಹುದೆಂದು ಅಂಥಾ ಸಂಕಷ್ಟ ಕಾಲದಲ್ಲಿ ದುರ್ಬಲ ಮನುಷ್ಯ ವಿಚಾರಿಸುತ್ತಾನೆ. ಸರಕಾರ ಈ ಪರಿಸ್ಥಿತಿಯನ್ನು ಗಮನಿಸಬೇಕು. ಜಪಾನರ ಕೈಗೊಂಬೆಯಾಗಿ ಬೋಸ್ ಬಂದು ಭಾರತದಲ್ಲಿ ಗೊಂದಲ ಮಾಡಬಾರದು, ಭಾರತ ಸ್ವತಂತ್ರವಾಗಬೇಕು, ಭಾರತ ಆಕ್ರಮಣಕಾರೀ ಜಪಾನರನ್ನು ಎದುರಿಸಬೇಕು; ಮುಖಂಡರ ಬಿಡುಗಡೆಯಾಗಬೇಕು. ಜನತೆಯಲ್ಲಿ ಸರಕಾರ ನಂಬಿಗೆಯಿಡಬೇಕು.

ಮದ್ಯಪಾನಕ್ಕೆ ಮದ್ರಾಸ್ ಸರಕಾರದ ಪ್ರೋತ್ಸಾಹ!

ಕಾಂಗ್ರೆಸ್ ಮಂತ್ರಿಮಂಡಳದ ಕಾಲದಲ್ಲಿ ಸೇಲಂ ಮೊದಲಾದ ನಾಲ್ಕು ಜಿಲ್ಲೆಗಳಲ್ಲಿ ಮದ್ಯಪಾನ ನಿಷೇಧಾಜ್ಞೆ ಜಾರಿಗೆ ಬಂದಿದ್ದು ಮುಂದೆ ಇಡೀ ಪ್ರಾಂತದಲ್ಲೇ ಅದು ಪ್ರಯೋಗಕ್ಕೆ ಬರುವುದಿದ್ದು, ಅಷ್ಟರಲ್ಲಿ ಅಖಿಲಭಾರತ ರಾಜಕೀಯ ನಿಮಿತ್ತ, ಕಾಂಗ್ರೆಸ್ ಮಂತ್ರಿಮಂಡಳ ರಾಜಿನಾಮೆ ಕೊಡಬೇಕಾಗಿ ಬಂದಿತಷ್ಟೆ? ಆದರೆ ಸದ್ಯ ಮದ್ರಾಸ್ ಗವರ್ನರರ ಎಡ್ವೈಸರ್ ಸರಕಾರವು ಮದ್ಯಪಾನ ನಿಷೇಧವಿದ್ದ ಜಿಲ್ಲೆಗಳಲ್ಲಿ ಪುನಃ ಜನರಿಗೆ ಮದ್ಯಪಾನ ಮಾಡಲು ಅನುಕೂಲ ಮಾಡಿಕೊಡಲು ನಿರ್ಧರಿಸಿದೆ.

ಈ ಕುರಿತು ಮದ್ರಾಸಿನ ಮಾಜಿ ಪ್ರಧಾನ ಮಂತ್ರಿ ರಾಜಾಜಿ ಮೊದಲಾದ ಮುಖಂಡರ ಸರಕಾರದೀಘಾತುಕ ಧೋರಣೆಯನ್ನು ಉಗ್ರವಾಗಿ ಟೀಕಿಸಿದ್ದಾರೆ. ರಾಜಾಜಿ ತಮ್ಮೊಂದು ಭಾಷಣದಲ್ಲಿ ಸರಕಾರದೀ ನೀತಿಯನ್ನು ಉಗ್ರ ಟೀಕಿಸಿರುವರು. "ಇಂದಿನೀಬರಗಾಲದ ಬವಣೆಗೆ ತುತ್ತಾದ ಆ ನಾಲ್ಕು ಜಿಲ್ಲೆಯ ಜನರಿಗೆ ಈ ಕಾನೂನು ರದ್ದುಮಾಡಿ ಅವರ ಆರ್ಥಿಕ ದೈಹಿಕ ಹಾನಿ ಬಹಳ ಮಾಡಿದಂತಾಗುವುದು. ಸರಕಾರವು, ಆಹಾರ ಅಭಾವವಿರುವಾಗ ಮದ್ಯದಂಥಾ ಪೌಷ್ಟಿಕ ಆಹಾರವನ್ನು ಉಪಯೋಗಿಸಿದರೆ ಜನರಿಗೆ ಹಿತವಾಗುವುದೆಂದೂ, ಇದರಿಂದ ಹಣದ ವಿಪರೀತ ಚಲಾವಣೆ ತಡೆದಂತಾಗುವುದೆಂದು ಹೇಳಿದ್ದು ಕೇವಲ ತಪ್ಪು ಸೂಚನೆ. ಮದ್ಯಪಾನ ನಿಷೇಧ ಕಾನೂನಿಂದ ಹಣದ ಗಳಿಕೆ ಕಡಿಮೆಯಾಗುತ್ತದೆಂದೂ ಹೇಳಲಾಗದು, ಏಕೆಂದರೆ ನಾನು ಹೊಸದಾಗಿ ಹೇರಿದ ಕರದಿಂದ ವಿಶೇಷ ಲಾಭವೇ ಆಗಿದೆ. ಒಂದು ಪಕ್ಷ ಈ ಕಾನೂನು ರದ್ದುಮಾಡುವಾಗ ಅದಕ್ಕಾಗಿಯೇ ಮಾಡಿದ ಕರದ ಕಾನೂನನ್ನು ಇಟ್ಟುಕೊಳ್ಳುವುದು ಅನ್ಯಾಯ: ಪ್ರಜಾಪ್ರತಿನಿಧಿಗಳು ಮಾಡಿದ ಈ ಕಾನೂನನ್ನು ಜನರೊಡನೆ ಕೇಳದೆ ರದ್ದು ಮಾಡಲು ಸರಕಾರಕ್ಕೆ ಅಧಿಕಾರವೇ ಇಲ್ಲ." ಹೀಗೆಂದು ಮೊದಲಾಗಿ ರಾಜಾಜಿ ಹೇಳಿದ್ದಾರೆ. ಮುಸ್ಲಿಂ ಲೀಗಿನವರೂ ಸರಕಾರವನ್ನು ಈ ಕುರಿತು ಟೀಕಿಸಿರುವರು.

ಅಲ್ಲಾ ಭಕ್ಷರ ಕೊಲೆಯ ಒಳಸಂಚು ಹೊರಬಿತ್ತು?

ಸಿಂಧದ ಮಾಜಿ ಮುಖ್ಯ ಮಂತ್ರಿ ಅಲ್ಲಾ ಭಕ್ಷರನ್ನು ಕೊಲೆಮಾಡಿದ ವಿಷಯ ಕರಾಚಿ ಪೋಲೀಸ್ ಇಲಾಖೆಯ ಇನ್‌ಸ್ಪೆಕ್ಟರ್ ಜನರಲ್ ಲೀ ಇವರು ಕೆಲವು ಶೋಧಗಳನ್ನು ಮಾಡಿ ಕೆಲ ಜನರನ್ನು ಬಂಧಿಸಿರುವುದಾಗಿ ತಿಳಿದಿದೆ. ಕೊಲೆಯಸಂಬಂಧ ನಾಲ್ಕುಜನರನ್ನು ಇಷ್ಟರಲ್ಲೇ ಬಂಧಿಸಲಾಗಿದೆ. ಖೂನಿ ಮಾಡಿದವರಿಗೆ ಅಲ್ಲಾ ಭಕ್ಷರನ್ನು ತೋರಿಸಿದವರಲ್ಲಿ ತಾನೊಬ್ಬನೆಂದು ಇತ್ತೀಚೆಗೆ ಬಂಧಿತನಾದವನೊಬ್ಬನು ಹೇಳಿದ್ದಾನಂತೆ.

ಕೊಲೆಯ ಒಳಸಂಚಿನ ಕುರಿತು ಪೋಲೀಸರಿಂದ ಅಧಿಕೃತವಾಗಿ ಏನೂ ತಿಳಿದಿಲ್ಲವಾದರೂ ಈ ಕೊಲೆ ವಿಷಯ ಭಾರೀ ಒಳಸಂಚೊಂದು ನಡೆದಿದ್ದು, ಸಿಂಧದ ಕೆಲ ಮುಖ್ಯ ಜಮೀನ್ದಾರರೂ ಇದರಲ್ಲಿ ಸೇರಿದ್ದು ಹಲವು ಕಾಲಗಳಿಂದ ಕೆಲವು ಗೂಂಡರನ್ನು ಈ ಕೆಲಸಕ್ಕೆ ನಿಯೋಗಿಸಲಾಗಿತ್ತೆಂದೂ, ಅವರಿಗೆ ಅಲ್ಲಾ ಭಕ್ಷರ ಗುರುತು ತೋರಿಸಲು ಬೇರೆ ಜನರನ್ನು ನೇಮಿಸಲಾಗಿತ್ತೆಂದೂ ಮೊದಲಾಗಿ ತಿಳಿಯುತ್ತದೆ. ಅಲ್ಲಾ ಭಕ್ಷರನ್ನು ವಧಿಸಲು ಇದಕ್ಕಿಂತ ಮೊದಲೂ ಒಮ್ಮೆ ಪ್ರಯತ್ನ ಮಾಡಲಾಗಿತ್ತಂತೆ.

ಅಲ್ಲಾಭಕ್ಷರು ಉಜ್ವಲ ರಾಷ್ಟ್ರೀಯ ವಾದಿ. ಗವರ್ನರರು ಅವರನ್ನು ಮುಖ್ಯ ಮಂತ್ರಿತ್ವದಿಂದ ತಳ್ಳಿ ಹಾಕಿದರು. ಅದರಿಂದ ಅವರ ಕೀರ್ತಿ ಇನ್ನೂ ಹೆಚ್ಚಿತು. ಅವರಿಗೆ ಭವ್ಯ ಭವಿಷ್ಯವಿತ್ತು. ಒಂದು ದಿನ ಅಕಸ್ಮಾತ್ ಮಧ್ಯಾಹ್ನ ಪೋಲೀಸ್ ಸ್ಟೇಶನಿನೆದುರು ಅವರನ್ನು ಗುಂಡು ಹಾಕಿ ವಧಿಸಲಾಯಿತು. ಹೀಗಾದರೂ, ಈ ಹತ್ಯಾಕಾಂಡದ, ಸಿಂಧದ ಮಾಜಿ ಮುಖ್ಯ ಮಂತ್ರಿಯ ವಧೆಯ ಪತ್ತೆ ಹಚ್ಚಲು ಬಹಳ ಆತಂಕಗಳಿರುವಂತೆ ತೋರುತ್ತದೆ.

ಬಂಗಾಳದ ಬಗ್ಗೆ ಲಂಡನಿನಲ್ಲಿ ಪ್ರಾರ್ಥನೆ

ಬಂಗಾಳದ ಕ್ಷಾಮದ ಬಗ್ಗೆ, ಭಾರತದ ಬ್ರಿಟನುಗಳ ಸಹಕಾರದ ಬಗ್ಗೆ ಲಂಡನಿನ ಬಿಷಪರ ಮುಂದಾಳುತನದಲ್ಲಿ ಲಂಡನಿನ ಕೆಲವು ಇಗರ್ಜಿಗಳಲ್ಲಿ ಪ್ರಾರ್ಥನೆ ನಡೆಯುವುದೆಂದೂ ಇದರಲ್ಲಿ ಭಾರತದ ಹೈ ಕಮಿಶನರ್ ಶ್ರೀ. ಸ್ಯಾಮುವೆಲ್ ರಂಗನಾಥನರೂ ಸೇರುವರೆಂದೂ ಸುದ್ದಿಬಂದಿದೆ.

ಬಂಗಾಳದ ಜನರೂ ದೇವರಲ್ಲಿ ಮೊರೆಯಿಡುತ್ತಾರೆ. ಲಂಡನಿನ ಜನರೂ ಅವರಿಗಾಗಿ ದೇವರಲ್ಲಿ ಮೊರೆಯಿಡಲಿ. ನಿರಾಶವಾದಿಗಳೆಲ್ಲಾ ದೇವರಲ್ಲಿ ಮೊರೆಯಿಡುತ್ತಿದ್ದಂತೆ, ಆ ಕಡೆ ಸಾಮ್ರಾಜ್ಯಶಾಹಿಗಳು ಬಂಗಾಳವನ್ನು ಭಾರತವನ್ನು ಶೋಷಿಸುತ್ತಾ ಇರುವರು.

ಕೆಂಪಂಗಿಗಳು

ಗಡಿನಾಡಿನಲ್ಲಿ ಡಾ। ಖಾನ್ ಸಾಹೇಬರ ಮುಂದಾಳುತನದಲ್ಲಿ ಕೆಂಪಂಗಿಗಳ ಚಳವಳದ ಪುನರ್ಘಟನೆಯಾಗುತ್ತಿದೆ.

[illegible] ಒಂದು ಸಣ್ಣ ಕಥೆ

★ ಎಡ-ಬಲರ ಪ್ರಲಾಪ ★

([illegible])

[illegible] ಹೆಸರು ಎಡ; ಹಾಗಿಬ್ಬರು ಅವಳಿಜವಳಿ ಮಕ್ಕಳು. ಬಾಲ್ಯದಿಂದಲೂ ಅನ್ಯೋನ್ಯ ಸ್ನೇಹಭಾವದಿಂದಿದ್ದೆವು. [illegible] ಇದ್ದೆವು. ನಾವಿಬ್ಬರೂ ಸುಖ-ದುಃಖಗಳಲ್ಲಿ ಪರಸ್ಪರ ಸಹಭಾಗಿಗಳಾಗಿ ಇರುತ್ತಿದ್ದೆವು. ನಮ್ಮಿಬ್ಬರೊಳಗಿನ ಮೈತ್ರಿಯನ್ನು ಕಂಡು ಹಲವರು ಮತ್ಸರಗೊಳ್ಳುತ್ತಿದ್ದರು, ಇನ್ನು ಕೆಲವರು ನಮ್ಮ ಈ ನಡತೆಯನ್ನು ಅನುಕರಿಸಲು ಯತ್ನಿಸುತ್ತಿದ್ದರು. ಒಂದೇ ಮಾತಿನಲ್ಲಿ ಹೇಳುವುದಾದರೆ,—ನಮ್ಮಿಬ್ಬರ ದೇಹಗಳು ಬೇರೆ ಬೇರೆಯಾಗಿದ್ದರೂ, ಆತ್ಮಗಳು ಒಂದೇ ಆಗಿದ್ದವು.

ಬಾಲ್ಯದಲ್ಲಿ ನಾವು ಅನುಭವಿಸುತ್ತಿದ್ದ ಸುಖ ಸಂತೋಷವನ್ನು ಏನೆಂದು ಬಣ್ಣಿಸಲಿ? ಬಾಲ್ಯದಲ್ಲಿ ನಾವು ಒಬ್ಬ ಕೃಪಾಳುವಾದ ಯಜಮಾನನ ಅಧೀನದಲ್ಲಿದ್ದೆವು. ಅವನು ನಿಜವಾಗಿಯೂ ನಮ್ಮ ಯಜಮಾನನಾಗಿರಲಿಲ್ಲ. ಅವನನ್ನು ನಮ್ಮ ತಂದೆ,—ಅಲ್ಲ ನಮ್ಮ ಪಾಲಿನ ದೇವರು—ಎನ್ನಬೇಕು. ಅವನು ನಮ್ಮನ್ನು ಒಂದು ದಿನವಾದರೂ ದುಡಿಸಿದಿಲ್ಲ. ನಮ್ಮನ್ನು ಅವನು ಪೆಟ್ಟಿಗೆಯೊಳಗೆ ಬಹಳ ಜೋಪಾನವಾಗಿ ಇಟ್ಟಿದ್ದನು. ನಾವಿಬ್ಬರು ಯಾವಾಗಲೂ ಸರಸ ಸಲ್ಲಾಪ ಮಾಡುತ್ತಾ ಸುಖ ಸಂತೋಷದಿಂದ ಸಮಯವನ್ನು ಕಳೆಯುತಲಿದ್ದೆವು. ಈ ಪ್ರಪಂಚದಲ್ಲಿ ಪ್ರಭುವಿನಿಂದ ಭಿಕಾರಿನ ಪರ್ಯಂತರ ಪ್ರತಿಯೊಬ್ಬನಿಗೂ ಒಂದೊಂದು ತೆರನಾದ ವಿಪತ್ತು ಇದ್ದೇ ಇರುವುದು; ಎಲ್ಲಾ ರೀತಿಯಿಂದಲೂ ಸುಖಭೋಗಿಯಾಗಿರತಕ್ಕವರು ಅತಿ ವಿರಳ. ಆದರೆ ನಮ್ಮ ಸಂಗತಿಯು ಬೇರೆಯೇ ಆಗಿತ್ತು. ನಮಗೆ ಸದಾ ಸುಖ; ಸಂತೋಷ, ಸಮಾಧಾನ, ಸಂತೃಪ್ತಿ, ಸ್ವಾತಂತ್ರ್ಯ......ಅದನ್ನೆಲ್ಲಾ ಹೇಳಿ ತೀರದು.

ಹೀಗಿರುವಲ್ಲಿ ಒಂದು ದಿನ ಒಬ್ಬ ಹೊಸಬನು ನಮ್ಮ ಯಜಮಾನನಲ್ಲಿಗೆ ಬಂದನು. ಅವರಿಬ್ಬರೊಳಗೆ ಅದೇನೋ ಮಾತು ಕತೆಯು ನಡೆಯುತ್ತಲಿದ್ದಿತು. ಅವರು ನಮ್ಮನ್ನು ಕುರಿತು ಏನನ್ನೋ ಮಾತನಾಡುತ್ತಿರುವರೆಂದು ನಮಗೆ ಭಾಸವಾಯಿತು. ಕಟ್ಟನೆ ನಾವಿಬ್ಬರೂ ಮೌನವನ್ನು ತಾಳಿ ಅವರು ಏನನ್ನು ಪ್ರಾಸ್ತಾವನಾಡುತ್ತಿರುವರೆಂದು ಆತುರದಿಂದ ಆಲಿಸತೊಡಗಿದೆವು. ನಮ್ಮ ಯಜಮಾನನು—ಅಲ್ಲ, ನಮ್ಮ ತಂದೆ, ನಮ್ಮ ದೇವರು,—ನಮ್ಮನ್ನು ಆ ಹೊಸಬನಿಗೆ ಮಾರುತ್ತಾನೆ ಎಂದು ನಮಗೆ ಅವರ ಮಾತುಕತೆಯಿಂದ ತಿಳಿದು ಬಂತು. ಇದರಿಂದ ನಮಗೆ ಬಹಳ ವ್ಯಸನವಾಯಿತು. ಆದರೆ, ನಮ ಯಜಮಾನನೇ, ನಮ್ಮನ್ನು ಮಾರಬೇಡ' ಎನ್ನುವಷ್ಟು ಸಾಹಸವು ನಮಗಂದು ಇಲ್ಲವಾಯಿತು.

ನಮ್ಮ ಯಜಮಾನನು ನಮ್ಮನ್ನು ಆ ಹೊಸಬನಿಗೆ ಮಾರಿಯೇ ಬಿಟ್ಟನು. ಎಂದು ನಾವು ಆ ಹೊಸಬನ ಕೈವಶವಾದೆವೋ, ಅಂದೇ ನಮ್ಮ ಸ್ವಾತಂತ್ರ್ಯ ಸುಖ, ಸಂತೋಷ, ಸಮಾಧಾನ, ಸಂತೃಪ್ತಿ, ಸರಸ ಸಲ್ಲಾಪ......ಸಮಸ್ತವೂ ಸಂಪೂರ್ಣವಾಗಿ ನಾಶವಾದುವು. ನಮ್ಮ ಹಳೇ ಯಜಮಾನನು ನಮ್ಮನ್ನು ಮಕ್ಕಳಂತೆ ಸಾಕಿ ಸಲಹುತ್ತಿದ್ದನು. ಆದರೆ ನಮ್ಮ ಹೊಸ ಯಜಮಾನನು ನಮ್ಮನ್ನು ಗುಲಾಮರಂತೆ ಕಾಣುತ್ತಿದ್ದನು. ನಿರ್ವಾಹವಿಲ್ಲದೆ ನಾವು ನಮ್ಮ ಸುಖವನ್ನು ಮರೆತು, ಅವನಿಗಾಗಿ ಮೈಮುರಿದು ದುಡಿಯಬೇಕಾಗಿ ಬಂತು. ಇಷ್ಟಾದರೂ ಅವನಿಗೆ ನಮ್ಮ ಸುಖ ದುಃಖಗಳ ಗೋಚರವೇ ಇಲ್ಲ, ಬಿಸಿಲೆನ್ನದೆ, ಮಳೆಯೆನ್ನದೆ, ನಾವು ಅವನ ಇಡೀ ಶರೀರದ ಭಾರವನ್ನೆಲ್ಲಾ ಹೊತ್ತುಕೊಂಡು ಅವನಿಷ್ಟವಿದ್ದೆಡೆಗೆ ಇವನನ್ನು ಒಯ್ಯಲೇಕಾಯಿತು. ಅವನ ಮೈಯು ಎಷ್ಟು ಶುಚಿಯಾಗಿತ್ತೋ ನಮ್ಮ ಮೈಯು ಅಷ್ಟೇ ಮಲಿನವಾಗಿತ್ತು. ನಮ್ಮ ಮೈಗೆ ಹಾದಿ ಬೀದಿಯ ಧೂಳು, ಉಗುಳು, ಪ್ರಾಣಿಗಳ ವಿಸರ್ಜನೆ......ಇನ್ನೂ ಏನೆಲ್ಲಾ ಹಾಳು ಪದಾರ್ಥಗಳು ತಗಲುತ್ತಿದ್ದುವು. ಕಲ್ಲು, ಮುಳ್ಳು, ಕುಪ್ಪಿಚೂರು.....ಮುಂತಾದುವು ನಮ್ಮ ಮೈಯನ್ನು ಚುಚ್ಚಿ ಗಾಯಮಾಡಿದುದಕ್ಕಂತೂ ಲೆಕ್ಕವೇ ಇಲ್ಲ.

ಇವೆಲ್ಲಾ ಅನರ್ಥಗಳಿಗೆ ನಮ್ಮ ಹೊಸ ಯಜಮಾನನೇ ಕಾರಣನು. ಮೊತ್ತ ಮೊದಲು, ಅವನು ನಮಗೆ ತಂದೊಡ್ಡಿದ ಈ ದುರವಸ್ಥೆಯನ್ನು ನೆನೆದು, ಕ್ರೋಧದಿಂದ ನಾವು ಅವನ ಕಾಲನ್ನು ಕಚ್ಚತೊಡಗಿದೆವು, ಇದರಿಂದ ನಮಗೆ ಒಂದೆರಡು ದಿನಗಳ ವಿಶ್ರಾಂತಿಯು ದೊರಕುತ್ತಿದ್ದರೂ ಪುನಃ ಅದೇ ಗತಿಯು ಪ್ರಾಪ್ತವಾಗುತ್ತಿತ್ತು. ಆದರೆ ಕ್ರಮೇಣ ನಮ್ಮ ಈ ಆಟವು ಅವನ ಮುಂದೆ ಸಾಗದೆ ಹೋಯಿತು. ದಿನವೆಲ್ಲಾ ಮೂಗಿಗೆ ಕವಡೆ ಕಟ್ಟಿಕೊಂಡು ಗೇಯ ಬೇಕಾಯಿತು: ಅವನಿಗೆ ನಾವು ಇಷ್ಟು ಉಪಕಾರಿಗಳಾಗಿದ್ದರೂ ಅವನು ನಮ್ಮನ್ನು ತುಚ್ಛವೆಂದು ಭಾವಿಸುತಿದ್ದನು. ನಾವು ತುಚ್ಛವಾಗಲು ತಾನೇ ಮೂಲಕಾರಣನೆಂಬುದು ಅವನಿಗೆ ಗೊತ್ತೇ ಇಲ್ಲ. ಅವನನ್ನು ದಾರಿಯಲ್ಲೆಲ್ಲಾ ಹೊತ್ತುಕೊಂಡು ಹೋಗಲಿಕ್ಕೆ ನಾವು ಬೇಕು; ಆದರೆ ಅವನು ಮನೆಯೊಳಕ್ಕೆ ಹೋಗುವಾಗ ನಮ್ಮನ್ನು ಹೊರಗೆನೇ ಬಿಟ್ಟು, ತಾನೇ ಒಳಗೆ ಹೋಗುವನು; ಮನೆ ಮಂದಿಯೊಡನೆ ಸರಸವಾಡಿ ಸಂತೋಷಪಡುವುದಕ್ಕೂ, ಹೊಟ್ಟೆ ತುಂಬಿಸುವ ಕೆಲಸಕ್ಕೂ ಅವನಿಗೆ ನಾವು ಬೇಡ.

ಬೇಸಗೆಯ ದಿನಗಳಲ್ಲಿಯಂತೂ ನಮ್ಮ ಕಷ್ಟವನ್ನು ಹೇಳಿ ತೀರದು. ಹಾದಿ ಬೀದಿಯ ದೂಳೆಲ್ಲಾ ನಮ್ಮ ಮೈಮೇಲೆ. ಡಾಮರು ಹಾಕಿದ ರಸ್ತೆಗಳಲ್ಲಿ ಹೋಗುವಾಗ ಕಾದ ಕಬ್ಬಿಣದಿಂದ ಮೈಗೆ ಕಾಯಿಸಿ ಇಟ್ಟಂತೆ ಆಗುವುದು. ನೆಲವು ಅಷ್ಟು ಬಿಸಿಯೇರಿರುತ್ತದೆ. ಅದನ್ನ ಸೈರಿಸಿಕೊಂಡು ನಾವು ಅವನನ್ನು ಅವನಿಷ್ಟವಿದ್ದೆಡೆಗೆ ಕೊಂಡೊಯ್ಯಬೇಕು. ಮಳೆಕಾಲದಲ್ಲಿ ನಮ್ಮ ಮೈಯೆಲ್ಲಾ ಮಳೆನೀರಿನಿಂದ ತೊಯ್ದುಹೋಗುತಿತ್ತು. ನಮ್ಮ ಯಜಮಾನನು ಮಲಗಲಿಕ್ಕೆ ಹೋಗುವಾಗ ನಮ್ಮನ್ನು ಒಂದು ಮೂಲೆಗೆ ಬಿಸುಟು ಬಿಡುವನು. ಅವನು ಮರಳಿ ನಮ್ಮಲ್ಲಿಗೆ ಬರುವನಕ ನಾವು ಹಾಗೆಯೇ ಬಿದ್ದುಕೊಂಡಿರಬೇಕು. ಹೀಗೆ ನಮ್ಮ ಕಷ್ಟವನ್ನೆಲ್ಲಾ ಹೇಳತೀರದು.

ಹೀಗಿರಲೊಂದು ದಿನ ನಮ್ಮ ಯಜಮಾನನನ್ನು ಒಬ್ಬ ಶ್ರೀಮಂತನ ಮನೆಗೆ ಕೊಂಡೊಯ್ಯುವ ಪ್ರಸಂಗವು ಬಂತು. ನಾವು ಅವನನ್ನು ಹೊತ್ತುಕೊಂಡು ಆ ಮನೆಯನ್ನು ತಲಪಿದೊಡನೆ ಅವನು ನಮ್ಮನ್ನು ತನ್ನ ಕಾಲುಗಳಿಂದ ಕಳಚಿ ಮನೆಯ ಹೊರಗೆ ಬಿಟ್ಟು ಒಳಹೊಕ್ಕನು. ಅಲ್ಲಿನ ಜನರೊಡನೆ ಸರಸವಾಡುತ್ತಾ ಫಲಹಾರಕ್ಕೆ ತೊಡಗಿದನು. ಅಷ್ಟರಲ್ಲಿ ಒಂದು ಕಳ್ಳ ನಾಯಿಯು ನಮ್ಮ ಕಡೆಗೆ ಬಂತು ಅದರ ಆ ಭಯಂಕರವಾದ ಮುಖ, ಕ್ರೂರವಾದ ಕಣ್ಣುಗಳು, ಹರಿತವಾದ ಹಲ್ಲುಗಳು, ಹೊರಕ್ಕೆ ನೀಡಿದ ನಾಲಿಗೆ.....ಇದನ್ನೆಲ್ಲಾ ಕಂಡು ನಮಗೆ ಬಹಳ ಭಯವಾಯಿತು. ಭಯದಿಂದ ಕೂಗಲಿಕ್ಕೂ ಆಗಲಿಲ್ಲ; ಇದ್ದಲ್ಲಿಂದ ಕದಲಲಿಕ್ಕೂ ಆಗಲಿಲ್ಲ. ಕಣ್ಣು ಮುಚ್ಚಿ ತೆರೆಯುವುದರೊಳಗಾಗಿ ನನ್ನ ಪ್ರಿಯ ಎಡನು ನಾಯಿಯ ಪಾಲಾದನು. ನಾಯಿಯು ಅವನನ್ನ ಎತ್ತಿಕೊಂಡು ಒಂದೇ ಓಟದಿಂದ ಓಡುತ್ತಿರುವುದನ್ನು ಕಂಡೆನು. ನಾನು ಅದನ್ನು ನೋಡುತ್ತಾ ಮೌನವಾಗಿ ರೋದಿಸ ತೊಡಗಿದೆನು. ಅಷ್ಟರತನಕ ನನ್ನ ಸುಖ ದುಃಖಗಳಲ್ಲಿ ಸಹಭಾಗಿಯಾಗಿದ್ದ ಎಡನೂ ಅಂದಿಗೆ ಕಣ್ಮರೆಯಾದನು. ಮುಂದೆ ಅವನ ಗತಿಯೇನಾಯಿತೋ, ದಾನರಿಯೆ.

ನಮ್ಮ ಯಜಮಾನನು ಫಲಾಹಾರತೀರಿಸಿಕೊಂಡು ಹರ್ಷಚಿತ್ತನಾಗಿ ಹೊರಗೆ ಬರುವಾಗ ನೋಡುವುದೇನನ್ನು! ಎಡನು ಕಾಣೆಯಾಗಿದ್ದನು. ಅವನನ್ನು ನಮ್ಮ ಯಜಮಾನನು ಆ ಮನೆಯ ಜನರೊಡನೆ ಅಲ್ಲಿ ಇಲ್ಲಿ ಹುಡುಕಾಡಿ, ಬೇಸತ್ತು, ಕೊನೆಗೆ ನಿರಾಶನಾಗಿ ನನ್ನನ್ನು ಒಂದು ಕಾಗದದಲ್ಲಿ ಸುತ್ತಿ ಬುಸುಗುಟ್ಟುತ್ತಾ ಮನೆಗೆ ಹೊತ್ತುಕೊಂಡು ಬಂದನು. ಇಷ್ಟು ದಿನಗಳ ತನಕ ಅವನ ಸೇವೆ ಮಾಡಿದುದಕ್ಕೆ ಒಮ್ಮೆಯಾದರೂ ಅವನು ನನ್ನನ್ನು ಹೊತ್ತುಕೊಂಡು ಬರಬೇಕಾಯಿತಲ್ಲವೇ—ಎಂದು ನನಗೆ ಬಹಳ ಸಮಾಧಾನವಾಯಿತು. ವಿರಹ ಖೇದವನ್ನು ಈ ಸಮಾಧಾನವು ಮರೆಸಿ ಬಿಟ್ಟಿತು. ತನ್ನ ಕಷ್ಟಗಳಿಗೆಲ್ಲಾ ಸಹಭಾಗಿಯಾಗಿದ್ದ ಎಡನಿಗೆ ಈ ಸುಖವನ್ನು ನನ್ನೊಂದಿಗೆ ಅನುಭವಿಸುವ ಪುಣ್ಯವು ಇಲ್ಲವಾಯಿತು. ಅವನು ನನ್ನಿಂದ ಅಗಲಿದ ಬಳಿಕ ನನಗೆ ಹೇಳುವವರಾರೂ ಇಲ್ಲ; ಕೇಳುವವರೂ ಇಲ್ಲ ಎಂಬಂತಾಯಿತು.—ಅಂದರೆ, ನನಗೆ ಚಿರಕಾಲ ವಿಶ್ರಾಂತಿಯೊದಗಿತು. ಇಷ್ಟು ಕಾಲ ದುಡಿದು ಮೈಯೆಲ್ಲಾ ಸವೆದು ಹೋಗಿ ದುಡಿಯಲಿಕ್ಕೆ ಅಸಮರ್ಥನಾಗಿದ್ದುದರಿಂದ ನನ್ನ ಈ ಯಜಮಾನನು ನನ್ನನ್ನು ಇಲ್ಲಿ ಬಿಸುಟು ಹೋಗಿರುವನು. ಈಗ ನಾನು ಏಕಾಂತ ವಾಸದಿಂದ ಬೇಸರಗೊಂಡು, ಎಡನ ಪುನರಾಗಮನವನ್ನು ಆತುರದಿಂದ ನಿರೀಕ್ಷಿಸುತ್ತಾ ಇದ್ದೇನೆ. ಅವನೆಂದು ಬರುವನೋ ಆ ಪರಮಾತ್ಮನೊಬ್ಬನೇ ಬಲ್ಲ.

ಇಂತಿದು ಎಡಬಲರ ಯಾನೆ ಪಾದರಕ್ಷೆಯ ಪ್ರಲಾಪ.

WANTED

Applications are invited from young men with good educational qualifications for the posts of Inspectors, Agents Clerks etc. Applicants may be called for an interview by he Selection Committee in which case they will be required to proceed to this place at their own cost. Selected Candidates will be required to undergo a training course in Banking and allied subjects for one year prescribed by the Academy of General Education, Manipal in collaboration with the Syndicate. Minimum qualification: S. S. L. C. Standard. Age limit 25. Preference will be given to candidates having relations in Commerce. Application should reach the undersigned by 25-12-1943.

For full particulars apply to:

Udipi (S. India) } The Office Superintendent,
15th Nov. 1943 } Canara Industrial & Banking Syndicate Limited, UDIPI.

ಹಿಂದೂ ದೇಶಕ್ಕಾಗಿ ಪ್ರತ್ಯೇಕ ತಯಾರಿಸಿದ್ದು.

ವೆಸ್ಟ್ ಎಂಡ್ ವಾಚುಗಳು ಸಮಯವನ್ನು ಸರಿಯಾಗಿ ತೋರಿಸುವವುಗಳೆಂಬುದು ಹೆಮ್ಮೆಪಡತಕ್ಕ ವಿಷಯ. ಇದಕ್ಕೆ ಕಾರಣವೆಂದರೆ, ಇದರ ಕೆಲಸ ಮತ್ತು ಇದಕ್ಕೆ ಉಪಯೋಗಿಸುವ ಅತ್ಯುತ್ತಮ ಹೆಚ್ಚು ಕ್ರಯದ ಸಾಮಾನುಗಳು ಹಿಂದೂ ದೇಶಕ್ಕಾಗಿ ಪ್ರತ್ಯೇಕ ತಯಾರಿಸಿದ್ದರಿಂದ ಇವು ಯಾವುದೇ ಹವೆಯಲ್ಲಿಯೂ ಸರಿಯಾದ ಸಮಯವನ್ನೇ ಕೊಡುತ್ತವೆ.

ಸರಿಯಾಗಿ ಮಾಲು ಬಾರದಿರುವುದರಿಂದ ನಾವು ಜಾಹೀರು ಮಾಡಿದ ಎಲ್ಲಾ ನಮೂನೆಗಳ ವಾಚುಗಳನ್ನು ಒದಗಿಸಿಕೊಡಲು ತೊಂದರೆಯಾಗಿದ್ದರೂ, ನೀವು ಕೊಟ್ಟ ಆರ್ಡರಿಗೆ ಸರಿಯಾಗಿ ಅತ್ಯುತ್ತಮ ಸಾಮಾನುಗಳನ್ನು ನಿಮಗೆ ಕಳಿಸಲು ನಾವು ಪ್ರಯತ್ನಿಸುವೆವು.



ನ್ಯೂ ಕೆಲಬ್ರಿ 'ಇ'
ಎಕ್ಸ್ಟ್ರಾ ಫೈನ್ ವಾಚ್—15 ಜ್ಯುವೆಲ್ಸ್
ನಿ. ಸಿ. ಕೇ. ರೂ. 62. ಪೆ. ಎ. ಬ್ರ್ಯಾ. ಸ್ಟೀ. ರೂ. 71.
18 ಕ್ಯಾರೆಟ್ ಗಟ್ಟಿ ಬಂಗಾರ ರೂ. 197.
ರೇಡಿಯಂ ಅಂಕೆಗಳು ಮತ್ತು ಹೇಂಡ್‍ಗಳು ಯಾವುದೇ ತರದ ಪ್ರತಿಯೊಂದಕ್ಕೂ ರೂ. 3 ಪ್ರತ್ಯೇಕ.



ಗೇಟ್ಸ್ ಲೂಪ್ ರೆಕ್ಟೇಂಗುಲರ್
ಡಿಲಕ್ಸ್ ಕ್ವಾಲಿಟಿ ವಾಚು—16 ಜ್ಯುವೆಲ್ಸ್
18 ಕ್ಯಾ. ಗಟ್ಟಿ ಬ. ರೂ. 304

ವೆಸ್ಟ್ ಎಂಡ್ ವಾಚ್ ಕಂಪೆನಿ, ಬೊಂಬಯಿ ಮತ್ತು ಕಲ್ಕತ್ತ.

WEST END WATCH Co
BOMBAY CALCUTTA

ಅಮರ ಭೂಮಿಯ ಸಂಚಾರ

ಚರ್ಚಿಲ್-ರೂಸ್‌ವೆಲ್ಟ್-ಕೈಶೇಕರು ಭೇಟಿಯಾದರು!

ಸ್ಟಾಲಿನರೊಡನೆ ಮಾತುಕತೆಗೆ ಪ್ರಯಾಣ

ಬ್ರಿಟಿಷ್, ಅಮೆರಿಕ, ಚೀನಗಳ ಪ್ರತಿನಿಧಿಗಳಾಗಿ ಸ್ವತಃ ಚರ್ಚಿಲ್ ರೂಸ್‌ವೆಲ್ಟ್ ಚಿಯಾಂಗ್ ಕೈಶೇಕರೇ ಒಟ್ಟಾಗಿ ಕೈರೋದಲ್ಲಿ ಸೇರಿ ದೀರ್ಘ ಮಾತುಕತೆ ನಡೆಸಿ, ರಶ್ಯದಲ್ಲಿ ಸ್ಟಾಲಿನರನ್ನು ಕಾಣಲು ಪರ್ಶಿಯಾದ ಒಂದು ಸ್ಥಳಕ್ಕೆ ಹೊರಟಿರುವರೆಂದು ಸುದ್ದಿಯಿದೆ. ಚರ್ಚಿಲ್ ರೂಸ್‌ವೆಲ್ಟ್ ಕೈಶೇಕರು ಪಿರಮಿಡ್ಸ್ ಹತ್ತಿರ ಒಂದು ಡೇರೆಯಲ್ಲಿ ಮಾತುಕತೆಮಾಡಲು ಸೇರಿದ್ದರು; ಚಿಯಾಂಗ್ ಕೈಶೇಕರೊಂದಿಗೆ ಅವರ ಪತ್ನಿಯವರೂ ಇದ್ದರು; ರೂಸ್‌ವೆಲ್ಟರು ವಿಮಾನದಲ್ಲಿಯೂ ಚರ್ಚಿಲರು ಹಡಗದಲ್ಲಿಯೂ ಬಂದಿದ್ದರು ಎಂದು ಹೇಳಲಾಗಿದೆ.

ಜರ್ಮನ್ ಸುದ್ದಿ ಸಂಸ್ಥೆಯೂ ಇದೇ ಅಭಿಪ್ರಾಯದ ವಾರ್ತೆಯನ್ನು ಪ್ರಕಟಿಸಿದೆ. "ಸ್ಟಾಲಿನ್, ರೂಸ್‌ವೆಲ್ಟ್, ಚರ್ಚಿಲ್ ಈ ಮೂವರು ಬೇಗನೇ ಭೇಟಿಯಾಗಲಿರುವರೆಂದು ಕೇಳಿಬರುತ್ತಿದೆ. ಚರ್ಚಿಲರು ಚಕ್ರವರ್ತಿಗಳ ಭಾಷಣದ ಕಾಲದಲ್ಲಿ ಬ್ರಿಟನಿನಲ್ಲಿರಲಿಲ್ಲ. ರೂಸ್‌ವೆಲ್ಟರೂ ಕೆಲದಿನಗಳಿಂದ ರಾಜಧಾನಿಯಲ್ಲಿ ಕಾಣಿಸಲಿಲ್ಲ. ಇವರಿಬ್ಬರೂ ಈಗಾಗಲೇ ಹೊರಡಿರಬೇಕು ಇವರ ಭೇಟಿಗೆ ತೆಹರಾನ್ ಅಥವಾ ಮಧ್ಯಪೂರ್ವದ ಯಾವುದೋ ಒಂದು ಸ್ಥಳವು ಆರಿಸಲ್ಪಟ್ಟಿದೆ. ಕಳೆದ ಎರಡು ವರ್ಷಗಳಿಂದ ಈ ಸಭೆ ಸೇರಿಸಲು ಪ್ರಯತ್ನ ನಡೆಯುತ್ತಿದೆ' ಎಂದು ಜರ್ಮನ್ ಸುದ್ದಿಯೂ ಸಾರುತ್ತದೆ ಅತ್ಯಂತ ಆಶ್ಚರ್ಯಕರವಾದ ಸನ್ನಿವೇಶಗಳು ಬೇಗನೇ ಒದಗಲಿರುವವೆಂದು ಅಮೆರಿಕನ್ ರಾಷ್ಟ್ರವು ನಿರೀಕ್ಷಿಸುವುದಾಗಿ ಲಂಡನ್‌ನಿಂದ ವಾರ್ತೆಯೊಂದು ಬಂದಿರುವುದು ಅಂತೂ ಈ ಭೇಟಿಯ ವಿಷಯ, ಈ ಮಹಾ ಪ್ರಭೃತಿಗಳ ಮಾತುಕತೆಯ ವಿಚಾರಗಳೆಲ್ಲಾ ನಿಜವಾಗಿಯೂ ಅತ್ಯಂತ ಮಹತ್ವದ್ದಿರುತ್ತದೆ

"ನಾವು ಸ್ವತಂತ್ರರಿರುವೆವು"

"ನಾವು ಸ್ವತಂತ್ರರಿರುವೆವು" ಹೀಗೆಂದು ಲೆಬನಾನ್ ಅಧ್ಯಕ್ಷ ಖೌರಿಯವರು ಮೊನ್ನೆ ಅಲ್ಲಿ ಉಂಟಾದ ಆಂದೋಲನದ ನಂತರದ ಪ್ರಥಮ ಸಂದರ್ಶನದಲ್ಲಿ ಪತ್ರಿಕಾ ಪ್ರತಿನಿಧಿಯೊಡನೆ ಹೇಳಿದರು "ಇಲ್ಲಿ ಘಟನಾತ್ಮಕ ಸಮಸ್ಯೆಯೇ ಇಲ್ಲ ಇನ್ನು ಮುಂದೆಯೂ ಏನೂ ಆಗದಂತೆ ನಾವು ಮುಂದಡಿಯಿಡುತ್ತೇವೆ ನಮ್ಮ ಸರಕಾರ ಮತ್ತು ಪಾರ್ಲಿಮೆಂಟುಗಳು ನಿತ್ಯದಂತೆ ಕೆಲಸ ಮಾಡುತ್ತವೆ ಮಂತ್ರಿಮಂಡಳದಲ್ಲಿ ಪುನಃ ಬದಲಾವಣೆ ಮಾಡಬೇಕೆಂದು ಜನರಲ್ ಕಾಟ್ರೂರವರು ಬಯಸಿ, ಪಾರ್ಲಿಮೆಂಟ್ ಸಭೆಯನ್ನು ಮುಂದುವರಿಸಬೇಕೆಂದರು ನನ್ನನ್ನು ಪುನಃ ಅಧ್ಯಕ್ಷನಾಗಿ ಮಾಡುವ ಭರವಸೆಯನ್ನೂ ಕೊಟ್ಟಿದ್ದರು ಆದರೆ ಈಗ ನಮ್ಮ ಮೇಲೆ ಯಾರ ದಬ್ಬಾಳಿಕೆಯೂ ನಡೆವುದಿಲ್ಲ ನಾವು ಸ್ವತಂತ್ರರಿರುವೆವು ನಮ್ಮದಿದು ಸ್ವತಂತ್ರ ರಾಷ್ಟ್ರ' ನಾವು ಅದೇ ರೀತಿಯಲ್ಲಿ ವರ್ತಿಸುತ್ತೇವೆ ಅಟ್ಲಾಂಟಿಕ್ ಘೋಷಣೆ ನಮಗೂ ಅನ್ವಯಿಸುವಂತೆ ಮಾಡುವೆವು' ಹೀಗೆಂದು ಅಧ್ಯಕ್ಷ ಖೌರಿಯವರು ತಿಳಿಸಿದರು

ಲೆಬನಾನಿನ ಮುಖ್ಯ ಮಂತ್ರಿ ರೈದವ್ ಸೋಲಾರವರು ಇದೇ ಅಭಿಪ್ರಾಯದ ಒಂದು ಪ್ರಕಟಣೆಯಿತ್ತಿರುವರು ಪ್ರಜಾ ಪ್ರಭುತ್ವ ಸ್ವಾತಂತ್ರ್ಯಗಳ ಸಲುವಾಗಿ ನಾವೀ ಯುದ್ಧ ಪ್ರಯತ್ನಕ್ಕೆ ಸಹಾಯ್ಯ ಮಾಡುತ್ತೇವೆಂದಿದ್ದಾರೆ. ಲೆಬನಾನ್ ಘರ್ಷಣೆಯಿಂದ ಭಾರತದ ಆಡಳಿತಗಾರರು ಬುದ್ಧಿನೀತಿಯನ್ನು ಕಲೆಯಬಹುದು ಭಾರತ ಸ್ವಾತಂತ್ರವಾಗಬೇಕೆನ್ನುವುದು, ಭಾರತವನ್ನು ಭಾರತೀಯರೇ ಆಳಬೇಕೆನ್ನುವುದು, ಭಾರತವನ್ನು ಆಳುವ ಬ್ರಿಟಿಷರು ಇಲ್ಲಿಂದ ಹೊರಟುಹೋಗಬೇಕೆನ್ನುವುದು, ಹೀಗೆ ಆಂದೋಲನವನ್ನು ಕೂಡಾ ಮಾಡುವುದು ಅದು ಕೇವಲ ಪ್ರಜಾಪ್ರಭುತ್ವ ಸ್ವಾತಂತ್ರ್ಯ ಪ್ರೀತಿಯಿಂದಲ್ಲದೆ ಯುದ್ಧ ಪ್ರಯತ್ನಕ್ಕೆ ವಿರೋಧ ಮಾಡಿ ಶತ್ರುವಿಗೆ ನೆರವಾಗಲಿಕ್ಕಲ್ಲವೆಂಬುದನ್ನು ಭಾರತವನ್ನಾಳುವ ಬ್ರಿಟಿಷರು ಇದರಿಂದಾದರೂ ಅರ್ಥಮಾಡಿಕೊಳ್ಳಬೇಕು.

"ಜರ್ಮನಿಗೇ ವಿಜಯ"

ಹಿಟ್ಲರ್ ಮಾತನಾಡುವುದೆಂದರೆ ಯಾವಾಗಲು ಹಾಗೆಯೇ. "ಜರ್ಮನಿಗೇ ವಿಜಯ" ಎಂಬುದು ಆತನ ಹಾಡಿನ ಪಲ್ಲವಿ. ಚರ್ಚಿಲ್ ಮಾತನಾಡಲಿ, ಸ್ಟಾಲಿನ್ ಮಾತನಾಡಲಿ ಅಥವಾ ಇನ್ನಾವ ಯುದ್ಧವೀರನೇ ಮಾತನಾಡಲಿ 'ತಮಗೆ ವಿಜಯ ದೊರಕುವುದು' ಎಂದು ಎಲ್ಲರೂ ಹೇಳುವರು. ಆದ್ದರಿಂದ ಹಿಟ್ಲರ್ 'ಜರ್ಮನಿಗೇ ವಿಜಯ'ವೆಂದು ಮೊನ್ನೆ ಮೊನ್ನೆ ಮಾಡಿದ ಒಂದು ಭಾಷಣದಲ್ಲಿಯೂ ಹೇಳಿದ್ದರೂ ಅದರಲ್ಲಿ ಆಶ್ಚರ್ಯವೇನೂ ಇಲ್ಲ. ಹಿಟ್ಲರ್ ನವಂಬರ 20ರಂದು ಕೊಟ್ಟ ಒಂದು ಭಾಷಣದ ಸಾರಾಂಶವಿಂತಿದೆ.

'ರಶ್ಯದ ಸಹಾಯದಿಂದ ಈ ಯುದ್ಧವನ್ನು ಹೂಡಿ ನಮ್ಮನ್ನು ನಾಶಗೊಳಿಸಬೇಕೆಂದು ಬ್ರಿಟಿಷರ ಹಾಗೂ ಯಹೂದ್ಯರ ಆಶೆಯಿದೆ ಜರ್ಮನಿಯು ತನ್ನ ಹಾಗೂ ಯೂರೋಪಿನ ಸಲುವಾಗಿ ಈ ಯುದ್ಧದಲ್ಲಿ ಗೆಲದಿದ್ದರೆ ಮೊಂಗೋಲರ ಕ್ರೂರ ಆಡಳಿತವು ಜಗತ್ತನ್ನು ಆವರಿಸುವುದು ನಿಜವಾಗಿ ನೋಡಿದರೆ ಕಳೆದ ೧೫೦ ವರ್ಷಗಳಿಂದ ಯೂರೋಪಿನ ಮೇಲೆ ಪ್ರಭುತ್ವ ಸ್ಥಾಪಿಸಬೇಕೆಂದು ಹೋರಾಡಿದವರು ಬ್ರಿಟಿಷರು ಈ ಯುದ್ಧದಲ್ಲಿ ಸೋತ ರಾಷ್ಟ್ರದ ಅವಸ್ಥೆ ಮುಗಿಯಿತೆನಬಹುದು ವಿಜಯದ ವಿನಾ ಈ ಯುದ್ಧದಲ್ಲಿ ಮತ್ತೇನಾದರೂ ಬಯಸುವುದು ಮೂರ್ಖತನ ಜರ್ಮನಿಗೆ ವಿಜಯ ದೊರಕುವುದೆಂದು ಪ್ರತಿಯೊಬ್ಬ ಜರ್ಮನ್ ಸೈನಿಕನೂ ದೃಢ ನಂಬಬೇಕು ಜನ, ಧನ, ಸಾಮಗ್ರಿಗಳ ಕಡೆಗೆ ನೋಡಿದರೆ ಜರ್ಮನಿಯು ಶತ್ರುಗಳನ್ನೆ ಮೀರಿ ವಿಜಯಿಯಾಗಲೇಬೇಕು"

ಚಕ್ರವರ್ತಿ ಭಾಷಣ

ಬ್ರಿಟನಿನ ಅರಸರೂ, ಭಾರತದ ಚಕ್ರವರ್ತಿಗಳೂ ಆದ ಜಾರ್ಜ್ ಸಾರ್ವಭೌಮರು ಪತ್ನೀಸಮೇತರಾಗಿ ಪಾರ್ಲಿಮೆಂಟಿನ ಲಾರ್ಡ್ಸ್ ಸಭೆಗೆ ಬಂದು ಪ್ರಕೃತದ ಪರಿಸ್ಥಿತಿಯ ಕುರಿತು, ಭಾಷಣವಿತ್ತರು ಅದರಲ್ಲಿ ಅವರು ಯುದ್ಧದ ವಿಮರ್ಶೆಮಾಡಿ, ಪ್ರಪಂಚದ ಜನರಿಗೆ ಶಾಂತಿ ಸುವ್ಯವಸ್ಥೆಗಳ ಆಶ್ವಾಸನೆಯಿತ್ತು, ಮೋಸ್ಕೋ ಪರಿಷತ್ತಿನ ನಿರ್ಣಯದ ಕುರಿತು ವಿವೇಚಿಸಿ, ಅಮೆರಿಕ ರಶ್ಯ ರಾಷ್ಟ್ರಗಳೊಡನೆ ಮಾಡಿದ ಸ್ನೇಹ ಸಂಬಂಧವನ್ನು ಮೆಚ್ಚಿ ಕೆಲವು ಮಾತನಾಡಿದರು ಅದರಲ್ಲಿ ಅವರು ಭಾರತದ ವಿಚಾರವೂ ಕೆಲವು ಮಾತುಗಳನ್ನು ಹೇಳಿರುವರೆಂಬುದು ಗಮನೀಯ ವಿಚಾರ ಭಾರತದ ಆಹಾರ ಅಭಾವವನ್ನು ಸರಿಗೊಳಿಸುವ ಭರವಸೆ ಇತ್ತಿದ್ದಾರೆ ಕ್ಷಾಮ ಪೀಡಿತ ಜನರ ಸಂಕಷ್ಟದಲ್ಲಿ ಸಹಾನುಭೂತಿಯನ್ನು ತೋರ್ಪಡಿಸಿದ್ದಾರೆ!

"ಯುದ್ಧ ನಿಮಿತ್ತದಿಂದ ನಮ್ಮ ಭಾರತದ ಪ್ರಜೆಗಳಿಗುಂಟಾಗಿರುವ ಆಹಾರದ ಸಂಕಷ್ಟವನ್ನು ನಿವಾರಿಸಲು 'ನಮ್ಮ ಸರಕಾರವು ಯೋಗ್ಯ ಸಹಾಯಮಾಡುವುದೆಂದು ನಾವು ನಂಬುತ್ತೇವೆ ನಮ್ಮ ಭಾರತದ ಪ್ರಜೆಗಳು ಹಾಗೂ ಇತರ ಸಾಮ್ರಾಜ್ಯದ ಪ್ರಜೆಗಳೂ ಯುದ್ಧ ಕಾರ್ಯದಲ್ಲಿ ನಮಗಿತ್ತ ಬೆಂಬಲವು ಪ್ರಶಂಸಾರ್ಹವಿದೆ ದೂರ ಪೂರ್ವದಲ್ಲಿ ನಮ್ಮ ಸೈನಿಕರು ವೈರಿಗಳ ದಾಳಿಯನ್ನು ಪ್ರತಿಭಟಿಸಿ ಹೋರಾಡುತ್ತಿದ್ದಾರೆ ಇದರಿಂದ ಚೀನಕ್ಕೆ ತುಂಬಾ ನೆರವಾಗುವುದು. ಚೀನದ ಜನರ ಸಂಕಷ್ಟದಲ್ಲಿ ನಮಗೆ ತುಂಬಾ ಸಹಾನುಭೂತಿಯಿದೆ' ಎಂದು ಚಕ್ರವರ್ತಿಗಳು ಹೇಳಿದರು. ಮೋಸ್ಕೋ ಪರಿಷತ್ತಿನ ಕುರಿತು ಮಾತನಾಡುತ್ತಾ ಸ್ಥಿರಶಾಂತಿ ಸ್ಥಾಪಿಸಲು ಮತ್ತು ಯುದ್ಧದಲ್ಲಿ ತೀವ್ರ ಜಯಗಳಿಸಲು ಅದು ಸಹಾಯಕವಾಗುವುದೆಂದು ಹಾರೈಸಿದರು.

"ನಮ್ಮ ಯುದ್ಧವು ಅಮೆರಿಕಾ ರಶ್ಯಗಳ ಸಹಾಯದಿಂದ ಬಲಗೊಂಡಿದೆ ಬ್ರಿಟನು ಭಾರತ ಅಮೆರಿಕ ಮತ್ತು ಇತರ ಮಿತ್ರರಾಷ್ಟ್ರಗಳ ಸೈನಿಕರು ಐಕ್ಯತೆಯಿಂದ ಸಹಕರಿಸಿ ಎಲ್ಲಾ ರಣಕ್ಷೇತ್ರಗಳಲ್ಲಿಯೂ ಹೋರಾಡುತ್ತಿದ್ದಾರೆ ನಮ್ಮ ಹಡಗ ವಿಮಾನಗಳು ಶತ್ರುಗಳ ಯುಬೋಟು ಹಾವಳಿಯನ್ನಡಗಿಸಿರುವವು ಇಟಲಿಯ ಜನರು ಅವರ ಮುಖಂಡರನ್ನು ಹೊರತಳ್ಳಿದ್ದರಿಂದ ಅವರಿಂದು ವಿಶ್ವಾಸಾರ್ಹರಾಗಿರುವರು ಫ್ರಾನ್ಸನ್ನು ಸ್ವಾತಂತ್ರ್ಯಗೊಳಿಸಬೇಕೆಂದು ನಮ್ಮ ಆಶೆಯಿದೆ ಪ್ರಪಂಚದ ಎಲ್ಲಾ ಜನರಿಗೂ ಶಾಂತ ವ್ಯವಸ್ಥೆಯಾಗಬೇಕೆಂದು ನಮ್ಮ ಆಶೆಯಿರುವುದು" ಈ ಮೊದಲಾಗಿ ಅವರು ಹೇಳಿದರು ಚಕ್ರವರ್ತಿಗಳಾದವರು ಹೇಳಬೇಕಾದ ರೀತಿಯಲ್ಲಿ, ಪ್ರಜೆಗಳಿಗೆ ಹುರುಪು ಹುಟ್ಟಿಸಬೇಕಾದ ರೀತಿಯಲ್ಲಿ ಅವರು ಮಾತನಾಡಿದರು ಚರ್ಚಿಲ್ ಹಿಟ್ಲರ್ ಮಾತನಾಡುವಂಥಾ ಅಬ್ಬರದ ಕೂಗಿಲ್ಲದಿದ್ದರೂ ತುಂಬಾ ಧೈರ್ಯಕಾರಕವಾಗಿತ್ತು ಅವರ ಭಾಷಣ

ಯುದ್ಧವೆಂದಿಗೆ ಮುಗಿಯುವುದು?

'ಯುದ್ಧವೆಂದಿಗೆ ಮುಗಿಯುವುದು?' ಹೀಗೆಂದು ಪ್ರತಿಯೊಬ್ಬರೂ ಪ್ರಶ್ನಿಸುತ್ತಾರೆ ಯುದ್ಧ ಬೇಗನೇ ಮುಗಿಯಬೇಕೆಂದು ಎಲ್ಲರಿಗೂ ಆಗ್ರಹವಿದೆ ಉಣಲು ಅನ್ನವಿಲ್ಲ ಉಡಲು ಬಟ್ಟೆಯಿಲ್ಲ, ಇನ್ನಾವ ಸುಖ ಸಾಧನಗಳೂ ಒದಗುವಂತಿಲ್ಲ ಇದಕ್ಕೆಲ್ಲಾ ಕಾರಣ ಇಂದಿನೀ ಯುದ್ಧ, ಹಾಗಾಗಿ ಅದು ಎಂದು ಮುಗಿವುದೋ ಎಂಬ ಎಂಬ ನಿರೀಕ್ಷೆ ಹಲವರದು ಭಾರತೀಯರಂತೂ ಅದೇ ಅಹರ್ನಿಶಿ ಜಪಿಸುತ್ತಿದ್ದಾರೆನಬಹುದು ಸಾಕು ಸಾಕಾಗಿ ಹೋಗಿದೆ ನಮಗೀ ಯುದ್ಧ, ನಾವು ಯುದ್ಧದಲ್ಲಿ ಸೋತಿದ್ದೇವೆಂದರೂ, ಸೇರಲಿಲ್ಲವೆಂದರೂ, ಅದರಿಂದುಂಟಾಗುವ ತೊಂದರೆ ಯಾರಿಗೂ ತಪ್ಪಿದ್ದಲ್ಲ, ಅಷ್ಟು ವಿಶ್ವತೋಮುಖವಾಗಿ ಅಷ್ಟು ವಿಕರಾಳವಾಗಿ ಈ ಯುದ್ಧವು ಹಬ್ಬಿದೆ

ಜಗತ್ತಿನ ಜನರಿಗೆಲ್ಲಾ ಇದೇ ಭಾವನೆ ಬಲವಾದರೆ, ಸೈನಿಕರಿಗೂ ಈ ಯುದ್ಧವು ಸಾಕು ಸಾಕಾದರೆ ಒಮ್ಮೆಲೇ ಯುದ್ಧ ನಿಲಬಹುದು, ಸಾಮ್ರಾಜ್ಯಶಾಹಿಗಳು, ಪರರಾಷ್ಟ್ರಾಪಹಾರಿಗಳು ಯುದ್ಧ ಹೂಡಿರೆಂದು ಎಷ್ಟೊಂದು ಹುರಿದುಂಬಿಸಿದರೂ, ಹೋರಾಡುವ ಜನತೆ ಹಾಗೂ ಸೈನಿಕರು ತಟಸ್ಥರಾದರೆಂದರೆ ಯುದ್ಧದ ಗತಿ ತೀರಿತು ಅಂಥಾ ಅವಸ್ಥೆಗೆ ಇಂದು ಜಗದ ಜನತೆಯು ಮುಟ್ಟಿದೆಯೋ ಇಲ್ಲವೇ ಎಂಬುದು ಒಂದು ಪ್ರಶ್ನೆ ಅಂಥಾ ಅವಸ್ಥೆಗೆ ಮುಟ್ಟಿದ್ದರೆ ನಾಳೆಯೇ ಯುದ್ಧ ನಿಲಬಹುದು. ಅಂತೂ ಹೆಚ್ಚು ಕಾಲ ಹೋಗಲಾರದೆಂಬುದಿದು ಖಂಡಿತ, ಆದರೆ ಜಗದ ಜನತೆಯ ಮನೋಭಾವನೆ ಹೇಗಿದೆಯೆಂದು ಯಾರು ನಮಗೆ ಹೇಳಬಲ್ಲರು? ಯಾರು ಅಧಿಕಾರದಲ್ಲಿದ್ದಾರೋ ಯಾರೀಯುದ್ಧ ಹೂಡುತ್ತಾರೋ ಅವರು ತಮಗೆ ಅನುಕೂಲವಾಗಿ, ತಮ್ಮ ವಿರೋಧಿಗಳಿಗೆ ಪ್ರತಿಕೂಲವಾಗಿ ಸುದ್ದಿ ಹಬ್ಬಿಸುವುದರಲ್ಲಿಯೇ ತಲ್ಲೀನರಾಗಿರುವಾಗ ಜಗದ ಜನತೆಯ ಮನೋಭಾವನೆ ಈ ವಿಶ್ವದ ಒಂದು ಮೂಲೆಯಲ್ಲಿ ಒಂದು ಅಧಿಕಾರದ ಅಂಕೆಯಲ್ಲಿ ಅದ್ದಿರುವ ಜನರಿಗೆ ಹೇಗೆ ತಿಳಿಯಬೇಕು?

ಯುದ್ಧಾನಂತರದಲ್ಲಿ

ಯುದ್ಧ ಯಾವಾಗ ಮುಗಿಯುವುದೆಂದು ಯಾರಿಗೂ ಸರಿಯಾಗಿ ತಿಳಿಯದಿದ್ದರೂ, ಎಂದಾದರೊಂದು ದಿನ ಇದು ಕೊನೆಗಾಣಲೇಬೇಕೆಂಬುದು ನಿರ್ವಿವಾದ ಆದ್ದರಿಂದಲೇ ಯುದ್ಧಾನಂತರದ ವಿಚಾರವಾಗಿ ಮುಂದಾಳುಗಳು ಆಲೋಚನೆ ಮಾಡುತ್ತಿದ್ದಾರೆ ಯುದ್ಧಾನಂತರದ ಜಗತ್ತಿನ ಶಾಂತಿ ವ್ಯವಸ್ಥೆಗಳ ಕುರಿತು ಮಿತ್ರ ಪಕ್ಷದ ತ್ರಿಮೂರ್ತಿಗಳು, ಚರ್ಚಿಲ್, ಸ್ಟಾಲಿನ್, ರೂಸ್‌ವೆಲ್ಟರು ಆಲೋಚನೆ ಮಾಡುತ್ತಿದ್ದಾರೆಂದು ಆಗಾಗ ಸುದ್ದಿ ಬರುತ್ತದೆ ಬಹುಶಃ ಇದೇ ತರದಲ್ಲಿ ಅಕ್ಷಪಕ್ಷದ ತ್ರಿಮೂರ್ತಿಗಳಾದ ರೂ ಹಿಟ್ಲರ್, ಮುಸಲನಿ, ಟೋಜೋ ಇವರೂ ಆಲೋಚಿಸುತ್ತಿರಬಹುದು ಅಂತೂ ಒಂದು ದಿನ ಯುದ್ಧ ಕೊನೆಗಾಣುವುದು, ಅದು ತಮ್ಮ ಪಕ್ಷಕ್ಕೇ ಜಯಪ್ರದವಾಗುವುದು ಎಂದು ಎರಡು ಪಕ್ಷದವರೂ ಈಗಾಗಲೇ ಹಂಚಿಕೆ ಹೂಡುತ್ತಾರೆ ಇದಾದರೂ ಸರಿಯೆ ಏಕೆಂದರೆ ತಮಗೆ ಜಯ ಖಂಡಿತವೆಂಬ ವಿಶ್ವಾಸವಿಲ್ಲದಿದ್ದರೆ ಇಂದು ಇಷ್ಟು ನಷ್ಟ ಕಷ್ಟಗಳನ್ನು ಕೊಟ್ಟು ಯಾಕೆ ಯುದ್ಧ ಮುಂದುವರಿಸಬೇಕು? ಹೀಗೆ ಉಭಯ ಪಕ್ಷದವರೂ ತಾವೇ ಗೆಲ್ಲುವೆವೆಂಬ ದೃಢ ನಿರ್ಧಾರದಿಂದ ಮುಂದಿನ ಯುದ್ಧಾನಂತರದ ಜಗತ್ತಿನ ವ್ಯವಸ್ಥೆಯ ವಿಚಾರ ಆಲೋಚನೆ ಆಗಾಗ ಮಾಡುತ್ತಾರೆ

ಪ್ರಥಮ ಮಹಾ ಯುದ್ಧದ ನಂತರವೂ ಶಾಂತಿ ವ್ಯವಸ್ಥೆಯೊಂದನ್ನು ಮಾಡಿದ್ದರು ರಾಷ್ಟ್ರ ಸಂಘವೊಂದು ಸ್ಥಾಪಿತವಾಯಿತು ಆದರೆ ಅದೆಲ್ಲಾ ಹೇಗೆ ನಿಷ್ಫಲವಾದುವೆಂಬ ಸ್ಪಷ್ಟ ಉದಾಹರಣೆ ನಮ್ಮ ಮುಂದಿದೆ ಇದಕ್ಕೆ ಕಾರಣ, ಆ ಶಾಂತಿ ವ್ಯವಸ್ಥೆಯಲ್ಲಿಯೂ ಸಾಮ್ರಾಜ್ಯ ಶಾಹಿಗಳು ತಮ್ಮ ಸ್ವಾರ್ಥ ಸಾಧನೆ ಬಿಡದಿರುವುದು ಹಾಗೂ ಒಂದು ರಾಷ್ಟ್ರವು ಇನ್ನೊಂದು ರಾಷ್ಟ್ರವನ್ನು ಪಂಚಿಸುತ್ತಾ ಸುಲಿಯುತ್ತಾ ಹೋದದ್ದು ಆದ್ದರಿಂದಲೇ ಈ ಯುದ್ಧಾನಂತರ ಆಗುವ ಶಾಂತಿ ವ್ಯವಸ್ಥೆಯಲ್ಲಿಯೂ ಹಿಂದಿನದೇ ರೀತಿಯ ಪ್ರಮಾದಗಳಾದಂತೆ, ಎಲ್ಲಾ ರಾಷ್ಟ್ರಗಳಿಗೂ ನ್ಯಾಯ ದೊರೆಯುವಂತೆ, ಸಣ್ಣ ಸಣ್ಣ ರಾಷ್ಟ್ರಗಳಿಗಾದರೂ ಸ್ವಾತಂತ್ರ್ಯ ಸ್ವಾವಲಂಬನ ದೊರೆಯುವಂತೆ ಮಾಡಬೇಕಾದದ್ದು ಪ್ರಥಮ ಕರ್ತವ್ಯವಾಗಿದೆ ಪರ ರಾಷ್ಟ್ರಗಳಾದರೂ ಅವುಗಳನ್ನೂ ಸ್ನೇಹದಿಂದ ನೋಡಬೇಕಾಗಿದೆ ಈ ಯುದ್ಧ ನಿಂತರೆ ಇನ್ನೊಂದು ಯುದ್ಧವು ತಲೆಯೆತ್ತದಂತೆ ಆಗಬೇಕಾದರೆ ಹೀಗೆ ಮಾಡಲೇಬೇಕು, ಸ್ವಾರ್ಥಗಳನ್ನು ಸಂಪೂರ್ಣ ಬಿಡಲೇಬೇಕು

ಮೃದುವಾದ ಚರ್ಮವನ್ನು ಬಹಳ ಜಾಗ್ರತೆಯಿಂದ ಕಾಪಾಡಬೇಕು

ಕುಟಿಕೂರಾ ಸಾಬೂನು ಮಗುವಿನ ಮೃದುಚರ್ಮವನ್ನು ರಕ್ಷಿಸಲಿ!



ಕುಟಿಕೂರಾ ಸೋಪು

CUTICURA SOAP.

ರೈಲ್ವೆ ಸೌಕರ್ಯ

ಯುದ್ಧಾನಂತರ ಈಗಿನ ಮೂರನೆಯ ತರಗತಿಯ ಗಾಡಿಗಳು ಇಂಟರ್ ತರಗತಿ ಗಾಡಿಗಳಂತಿದ್ದು ವಿದ್ಯುಚ್ಛಕ್ತಿ ಬೀಸಣಿಗೆ ಮೊದಲಾದ ಸೌಕರ್ಯದಿಂದ ಕೂಡಿರುವವಾಗಿ ಹೇಳಲಾಗಿದೆ

೫ ಹಡಗ ಆಹಾರ

ಕಳೆದ ಮೂರು ವಾರಗಳಲ್ಲಿ ವಿದೇಶದಿಂದ ೫ ಹಡಗ ಗೋದಿ ಹಾಗೂ ತಜ್ಜನ್ಯ ಪದಾರ್ಥಗಳು ಬಂದು ಭಾರತದಲ್ಲಿಳಿದಿರುವುದಾಗಿ ಆಹಾರ ಖಾತೆಯವರ ಹೇಳಿಕೆಯಿದೆ.

ಸ್ವದೇಶಾಭಿಮಾನಿ

ತಾರೀಖು 8—12—1943

ಕುಂಜ್ರುಗಳ ಹಿತೋಕ್ತಿ

'ನಾವು ಬಹಳ ಕಠಿಣ ಕಾಲವನ್ನು ಎದುರಿಸಿದ್ದೇವೆ. ಎಷ್ಟೋ ಸಮಸ್ಯೆಗಳು ನಮ್ಮನ್ನು ಕಳವಳಗೊಳಿಸುತ್ತವೆ. ಮನುಷ್ಯ ಲೋಕದ ಸ್ವಾತಂತ್ರ್ಯಕ್ಕಾಗಿ ನಾವೀ ಯುದ್ಧದಲ್ಲಿ ಅಪಾರ ತ್ಯಾಗಮಾಡಿದ್ದರೂ ನಮಗೆ ಆ ಸ್ವಾತಂತ್ರ್ಯದ ಪಾಲು ಲಭಿಸಲಿಲ್ಲ. ನಮ್ಮ ವಿರೋದಿಗಳು ಸ್ವಾತಂತ್ರ್ಯ ಸಾಧನೆಯ ಹಾದಿಯಲ್ಲಿ ನಮಗೆ ಆತಂಕ ತರುತ್ತಿದ್ದಾರೆ. ಪ್ರಜಾಪ್ರಭುತ್ವ ಪದ್ಧತಿಯು ಭಾರತಕ್ಕೆ ಅಯೋಗ್ಯವೆಂದೂ, ಇಲ್ಲಿನ ಭಿನ್ನತೆಯಿಂದಾಗಿ ಅಸಾಧ್ಯವೆಂದೂ ವಾದಿಸತೊಡಗಿದ್ದಾರೆ. ಸರಕಾರವೊಂದನ್ನುಳಿದು ಉಳಿದೆಲ್ಲಾ ವಿಚಾರಗಳಲ್ಲಿಯೂ ಇಂಗ್ಲೆಂಡನ್ನು ಅನುಕರಿಸಿರಿ ಎಂದು ನಮಗೆ ಬೋಧಿಸಲಾಗುತ್ತಿದೆ.' ಹೀಗೆಂದು ಕಾಶಿ ವಿಶ್ವವಿಧ್ಯಾಲಯದ ೨೬ನೇ ವಾರ್ಷಿಕ ಪದವೀದಾನ ಸಮಾರಂಭ ಭಾಷಣಮಾಡುತ್ತಾ ಪಂಡಿತ ಕುಂಜ್ರುಗಳು ಹೇಳಿದರು. ಪ್ರಜಾಪ್ರಭುತ್ವವು ಭಾರತಕ್ಕೆ ಯೋಗ್ಯವಲ್ಲವೆಂದು ಯಾವಾಗ ಶೋಧನೆ ಮಾಡಲಾಯಿತೋ ತಿಳಿದಿಲ್ಲವೆಂದು ಪಂಡಿತ ಕುಂಜ್ರುಗಳು ಹೇಳಿ, ಯುವಕರು ಭಾರತದ ಐಕ್ಯಕ್ಕಾಗಿ ಪ್ರಯತ್ನಿಸಬೇಕೆಂದರು. ನಮ್ಮ ನಮ್ಮೊಳಗಿನ ಜಾತಿಮತ ಭೇದ ಭಿನ್ನತೆಗಳನ್ನು ಮರೆತು ವಿಧ್ಯಾರ್ಥಿಗಳು ಅನ್ಯೋನ್ಯ ಅಣ್ಣ ತಮ್ಮಂದಿರಂತೆ ಬದುಕಿ ಬಾಳಬೇಕೆಂದು ತಿಳಿಸಿ ಚೀನದ ಉದಾರಣೆಯನ್ನಿತ್ತರು.

ಭಾರತದಲ್ಲಿ ಇಂದು ವ್ಯಾಪಿಸಿರುವ ಬಡತನ, ಅಜ್ಞಾನ, ರೋಗ ಮೊದಲಾದವುಗಳನ್ನು ಕುರಿತು ಪಂಡಿತ ಕುಂಜ್ರುಗಳು ನಿವೇದಿಸಿ, ಲೋಕದ ಇನ್ನಾವ ರಾಷ್ಟ್ರದಲ್ಲೂ ಈ ರೀತಿಯ ದೀನ ಹೀನ ಕರುಣ ಜೀವನವನ್ನು ಮಾನವ ಸಮಾಜ ಅನುಭವಿಸುವುದಿಲ್ಲೆಂದರು. ನಮ್ಮ ದೇಶದ ಅಭಿವೃದ್ಧಿಗಾಗಿ ಒಂದು 'ಬಿವರಿಜ್' ಯೋಜನೆಯನ್ನು ತಯಾರಿಸುವುದು ಅವಶ್ಯವೆಂದು ಹೇಳಿ, ಯುದ್ಧಾಂತ್ಯದಲ್ಲಿ ಹೆಣ್ಣು ಗಂಡೆನ್ನದೆ ಪ್ರತಿಯೊಬ್ಬರಿಗೂ ಜೀವನಾವಶ್ಯಕವಾದ ಅನ್ನಬಟ್ಟೆ ಉದ್ಯೋಗ ವಸತಿಗಳಿರುವ ವ್ಯಾವಹಾರಿಕವಾದ ವಿಸ್ತಾರ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಯತ್ನಿಸುವುದು ರಾಷ್ಟ್ರೀಯ ಸರಕಾರದ ಪ್ರಥಮ ಕರ್ತವ್ಯವೆಂದು ತಿಳಿಸಿದರು. ನಮ್ಮ ದೇಶದ ಜನರು, ದೇಶಸೇವೆಗಾಗಿ ತಮ್ಮ ಜೀವನವನ್ನು ಧಾರೆಯೆರೆದು, ಜನರಿಗೆ ಅನ್ನ ಬಟ್ಟೆ ಉದ್ಯೋಗ ವಸತಿಗಳನ್ನು ಒದಗಿಸಲು ಹೋರಾಡದೆ ಉಪಾಯವಿಲ್ಲವೆಂದರು.

"ಇಂದಿನ ವಿಶ್ವವಿದ್ಯಾಲಯಗಳ ಶಿಕ್ಷಣವು ನಿಷ್ಪ್ರಯೋಜಕವಿದೆ. ತಮ್ಮ ಕಾಲ ಮೇಲೆ ನಿಲ್ಲಲು ಅವಶ್ಯವಾದ ವಿದ್ಯೆ ನಮಗೆ ಬೇಕು. ಇದನ್ನು ಚೆನ್ನಾಗಿ ಅರಿಯಬೇಕು. ಇಂದಿನ ಶಿಕ್ಷಣದ ಪಟ್ಟಿ ಮತ್ತು ಪದ್ಧತಿಗಳನ್ನು ಅವಶ್ಯವಾಗಿ ಪುನರಾಲೋಚಿಸಬೇಕು. ಬೇರೆ ದೇಶಗಳಲ್ಲಿರುವ ವಿಶ್ವವಿದ್ಯಾಲಯಗಳೊಡನೆ ನಮ್ಮ ವಿಶ್ವವಿದ್ಯಾಲಯಗಳನ್ನು ಹೋಲಿಸಿದರೆ, ಡಿಗ್ರಿ ತರಗತಿಗಳು ಮೂರು ವರ್ಷಗಳೊಳಗೆ ಮುಗಿಯುವಂತೆ ಸುಧಾರಣೆ ತರಬೇಕಾಗಿದೆಯೆಂದು ನಮಗೆ ತಿಳಿಯುವದು. ಹೈಸ್ಕೂಲ್ ಶಿಕ್ಷಣ ಅವಧಿಯನ್ನು ಒಂದು ವರ್ಷ ಬೆಳೆಸಿ, ಆ ಮೇಲೆ ವಿದ್ಯಾರ್ಥಿಗಳನ್ನು ವಿಶ್ವವಿದ್ಯಾಲಯಗಳಿಗೆ ಸೇರಿಸಿಕೊಂಡರೆ ಇಂಟರ್ ಮಿಡಿಯೆಟ್ ಶಿಕ್ಷಣದ ಅವಶ್ಯವಿಲ್ಲ ಮಾತ್ರವಲ್ಲ ವಿದ್ಯಾಭ್ಯಾಸವೂ ಉತ್ತಮವಾಗುವುದು." ಹೀಗೆಂದು ಪಂಡಿತ ಕುಂಜ್ರುಗಳು ವಿವರಿಸಿದರು.

ಪುನಃ ಮದ್ಯಬೇಡ

ಮದ್ರಾಸ್ ಸರಕಾರವು, ಕಾಂಗ್ರೆಸ್ ಮಂತ್ರಿಮಂಡಳದವರು ಪ್ರಯೋಗದಲ್ಲಿ ತಂದ ಮದ್ಯಪಾನ ನಿಷೇಧಾಜ್ಞೆಗಳನ್ನು ಬೇಗನೇ ರದ್ದು ಗೊಳಿಸುವ ನಿರ್ಧಾರ ಮಾಡಿರುವರೆಂಬುದು ಈಗ ವಿದಿತವಾಗಿದೆ. ಇದರ ಕುರಿತು ರಾಜಗೋಪಾಲಾಚಾರ್ಯರು ಹಾಗೂ ಇತರ ಮುಖಂಡರು ಈಗಾಗಲೇ ತಮ್ಮ ಅಭಿಪ್ರಾಯತ್ತಿರುವರು. ಸರಕಾರದವರು ತಮ್ಮ ನಿರ್ಧಾರವನ್ನು ಪುನರಾಲೋಚಿಸಿ ಮದ್ಯಪಾನವನ್ನು ಪುನಃ ಆ ಜಿಲ್ಲೆಗಳಲ್ಲಿ ಪ್ರಾರಂಭ ಮಾಡಲು ಪ್ರಯತ್ನಿಸುವ ಬಗ್ಗೆ ಮದ್ರಾಸಿನಲ್ಲಿ ಒಂದು ಸಮಿತಿಯೂ ರಚಿತವಾಗಿರುವುದಂತೆ.

ಮದ್ಯಪಾನದಿಂದ ಜನರ ದೈಹಿಕ ಆರ್ಥಿಕ ಹಾಗೂ ನೈತಿಕ ಹಾನಿಗಳಿವೆಯೆಂದು ಜಗದ್ವಿದಿತವಾದ ಸಂಗತಿ. ಹೀಗಿರುತ್ತಾ ಇಂದು ಜನತೆಯು ಸಂಕಷ್ಟಮಯವಾದ ಪರಿಸ್ಥಿತಿಯಲ್ಲಿರಲು, ಭಾರತದ ಪ್ರಾಂತ ಪ್ರಾಂತಗಳಲ್ಲಿ ಬರಗಾಲ ಬಂದು ಜನರು ಉಪವಾಸ ಬಿದ್ದು ಸಾಯುತ್ತಿರಲು, ಅವರಿಗೆ ಈ ಪರಿಸ್ಥಿತಿಯಲ್ಲಿ ಮದ್ಯವನ್ನು ಕುಡಿಯುವ ಸಂದರ್ಭ ವೊದಗಿಸಿ ಕೊಡುವುದು ವಿಷಾದಕರವಿದೆ. ಮನುಷ್ಯನು ಅನ್ನಾಭಾವದಿಂದ, ದಾರಿದ್ರ್ಯದಿಂದ ದುರ್ಬಲನಾಗುತ್ತಾನೆ. ದುರ್ಬಲನಾದವನು ಮದ್ಯವನ್ನೂ ಸೇವಿಸಿದರೆ ಮತ್ತೆ ಆತನ ಪರಿಸ್ಥಿತಿ ಹೇಳುವುದು ಬೇಡ. ಹಾಗಾಗಿ ಸರಕಾರದವರು ಇಂಥಾ ಪರಿಸ್ಥಿತಿಯಲ್ಲಿ ಈಗ ಸೇಲಂ ಮೊದಲಾದ ಜಿಲ್ಲೆಗಳಲ್ಲಿ ಪ್ರಚಾರದಲ್ಲಿರುವ ಮದ್ಯಪಾನ ನಿಷೇಧಾಜ್ಞೆಯನ್ನು ತೆಗೆದು ಹಾಕುವ ನಿರ್ಧಾರ ಮಾಡಿದ ಕುರಿತು ಪುನರಾಲೋಚಿಸುವುದು ಅವಶ್ಯವಾಗಿದೆ ಯೆಂದು ನಮ್ಮ ಸೂಚನೆಯೂ ಆಗಿದೆ.

ಉಡುಪಿ

ಡಿಫೆನ್ಸ್ ಲೋನ್

ಪಡಕೊಂಡು ಯುದ್ಧ ಕಾರ್ಯಕ್ಕೆ ನೆರವಾಗಬೇಕೆಂದು ಡಿಫೆನ್ಸ್ ಲೋನ್ ಕಮಿಶನರ್ ಶ್ರೀ ಆರ್. ಕೃಷ್ಣಮೂರ್ತಿಯವರು ತಾ ೨೭ರಂದು ಇಲ್ಲಿನ ಮಹನೀಯರೊಡನೆ ವಿನಂತಿಸಿಕೊಂಡರು.

ಸ್ವದೇಶ ಸಮಾಚಾರ

ಪೂರ್ವ ಬಂಗಾಳದ ಮೇಲೆ ಜಪಾನ್ ಧಾಳಿ

ತಾ ೨೬ರಂದು ಜಪಾನ್ ಬಾಂಬರುಗಳು ಫೈಟರ್‌ಗಳೊಂದಿಗೆ ಒಂದು ಪೂರ್ವ ಬಂಗಾಳದ ಒಂದು ವಿಮಾನ ಠಾಣ್ಯದ ಮೇಲೆ ಧಾಳಿಯಿಟ್ಟವು.

ಪೂರ್ವಭಾಗದ ಮೇಲೆ ಬಂದ ಜಪಾನ್ ವಿಮಾನಗಳೊಡನೆ ಆರ್. ಎ. ಎಫ್. ವಿಮಾನಗಳು ಕಾದಾಡಿದವು.

೧೩೨ ವರ್ಷ ಹೆಂಗಸಿಗೆ ಮಕ್ಕಾ ಯಾತ್ರೆ ಬಯಕೆ

ಭೋಪಾಳದಲ್ಲಿನ ಒಂದು ಸಣ್ಣ ಅಂಗಡಿಯಲ್ಲಿ ಚಾಂದ ಬೀಬಿ ಎಂಬ ೧೩೨ ವರ್ಷ ಪ್ರಾಯದ ಒಬ್ಬ ಸ್ತ್ರೀಯಿರುವಳು. ಅವಳಿಗೆ ಇನ್ನೂ ಕಣ್ಣು ಚೆನ್ನಾಗಿ ಕಾಣಿಸುವುದಲ್ಲದೆ, ಕಿವಿಯೂ ಕೇಳುತ್ತದೆ. ೧೨೦ನೇ ವಯಸ್ಸಿನಲ್ಲಿ ಆವಳು ತನ್ನ ೭೫ ವರ್ಷದ ಮಗನೊಂದಿಗೆ ಮಕ್ಕಾ ಯಾತ್ರೆಗೆ ಹೋಗಿದ್ದಳು. ಅವಳ ತಮ್ಮನೊಬ್ಬನಿಗೆ ೧೧೧ನೇ ವರ್ಷ ನಡೆಯುತ್ತದೆ. ಅವಳ ತಾಯಿ ೧೨೫ ವರ್ಷದಲ್ಲಿ ಸತ್ತಳು. ದೀರ್ಘಾಯುಷ್ಯದ ಗುಟ್ಟೇನೆಂದು ವಿಚಾರಿಸಲು, ತಾನೇನೂ ಆಧುನಿಕ ಆಹಾರ ನಿಯಮಗಳನ್ನು ಪಾಲಿಸುವುದಿಲ್ಲವೆಂದು ಆಕೆ ವ್ಯಂಗ್ಯವಾಗಿ ನುಡಿದಳು.

ಶ್ರೀ ಬ್ರೆಲ್ವಿ ಅಧ್ಯಕ್ಷರು

ಅಖಿಲ ಭಾರತ ಸಂಪಾದಕ ಪರಿಷತ್ತಿಗೆ ಬೊಂಬೇ ಕ್ರಾನಿಕಲ್ ಸಂಪಾದಕ ಶ್ರೀ ಎಸ್. ಎ. ಬ್ರೆಲ್ವಿಯವರು ಅವಿರೋಧವಾಗಿ ಅಧ್ಯಕ್ಷರಾಗಿದ್ದಾರೆ.

'ರಾಜಕೀಯ ಮಾತಾಡಬೇಡಿ'

ಬೊಂಬಯಿಯ ಮಾಜಿ ಮಂತ್ರಿ ಶ್ರೀ. ಕೆ. ಎಂ. ಮುನ್ಶಿಯವರು ಅಲ್ಲಿನ ಒಂದು ಸಾಹಿತ್ಯ ಕಲಾ ಮಂಡಳದ ಆಶ್ರಯದಲ್ಲಿ 'ಸಾಹಿತ್ಯ ಮತ್ತು ಜೀವನ'ದ ಕುರಿತು ಭಾಷಣ ಕೊಡುವುದಾಗಿ ಪ್ರಸಿದ್ಧಿಸಲ್ಪಟ್ಟಿದ್ದು, ಪೋಲೀಸರು, ಅವರಿಗೆ ಆ ಸಭೆಯಲ್ಲಿ ರಾಜಕೀಯ ಮಾತನಾಡಬಾರದೆಂಬ ನಿರ್ಬಂಧ ಹೇರಿದ್ದರ ನಿಷೇಧಾರ್ಥವಾಗಿ ಅವರು ಆ ದಿನ ಭಾಷಣ ರದ್ದು ಮಾಡಿದರು.

ಅಧಿಕಾರಿ ಲಂಚ ತಿಂದರು!

ನೆಪಾಲ್ ರಾಮ ದಿವಾನ್ ಎಸ್. ಟಿ. ಒ. ಎಂ. ಇ. ಘಸ್, ಯು. ಎಸ್. ಎ ಇವರು ಕಲ್ಕತ್ತದ ವರ್ಕ್ಸ್ ಡಿವಿಜನಿನ ಒಬ್ಬ ಅಧಿಕಾರಿ. ಇವರು ಕಂಟ್ರಾಕ್ಟರನಿಂದ ೧ ಸಾವಿರ ರೂಪಾಯಿ ಲಂಚ ತೆಗೆದುಕೊಂಡರೆಂಬ ಆರೋಪದ ಮೇಲೆ ಕಲ್ಕತ್ತ ಸ್ಪೆಶಲ್ ಟ್ರಿಬ್ಯೂನಲ್‌ನಿಂದ ತನಿಖೆಯಾಗಿ ಆರೋಪಿಗೆ ೨ ವರ್ಷ ಶಿಕ್ಷೆ ೨ ಸಾವಿರ ರೂಪಾಯಿ ಜುಲ್ಮಾನೆಯಾಗಿದೆ.

ಕಾಂಗ್ರೆಸ್ ನಿಧಿ

ಕಳೆದ ಜನವರಿಯಲ್ಲಿ ಕಾಂಗ್ರೆಸ್ ನಿಧಿಯಾಗಿ ೭೫,೮೦೦ ರೂಪಾಯಿಗಳನ್ನು ಸರಕಾರ ವಶಪಡಿಸಿಕೊಳ್ಳಲು ಹೊರಡಿಸಿದ ಆಜ್ಞೆ ಸಿಂಧುವೇ ಎಂಬ ಕುಂತು ಬೊಂಬಯಿ ಕೋರ್ಟಿನಲ್ಲಿ ವ್ಯಾಜ್ಯ ಮಾಡಲಾಗಿದೆ.

ಮುದ್ರೆಯಿಲ್ಲದ ಬಟ್ಟೆ

ದಶಂಬರ ೩ರಿಂದ ಮುದ್ರೆಯಿಲ್ಲದ ಬಟ್ಟೆಯನ್ನು ಸರಕಾರದವರು ವಶಪಡಿಸಿಕೊಳ್ಳುವುದಾಗಿ ಪ್ರಕಟಿಸಿದ್ದಾರೆ.

ಗವರ್ನರ್ ದೇಶಮುಖ್

ಭಾರತ ರಿಸರ್ವ್ ಬೇಂಕಿನ ಗವರ್ನರರಾಗಿ ಶ್ರೀ. ಸಿ. ಡಿ. ದೇಶಮುಖರು ನೇಮಕ ಹೊಂದಿದ್ದು ಆವರ ಹೆಸರಲ್ಲಿ ನೋಟುಗಳು ಚಲಾವಣೆಗೆ ಬರಲಿದೆ.

ಗಾಂಧಿ—ವೇವೆಲರು

ಇವರ ಭೇಟಿ ವಿಷಯ ವೇವಲರು ಆಲೋಚಿಸಿರುವರೆಂದೂ ಆ ಪ್ರಕಾರ ಪತ್ರವ್ಯವಹಾರವಾಗಿದೆಯೆಂದೂ ಬೊಂಬೇ ಸೆಂಟಿನಲ್ ಪತ್ರಿಕೆ ಉಲ್ಲೇಖಿಸಿದೆ.

ಬಿ. ಎನ್. ಆರ್. ರಾಷ್ಟ್ರೀಕರಣ

ರಾಷ್ಟ್ರೀಕರಣ ಸರ್. ಎ. ಮುದಲಿಯಾರ್ ಬಿ. ಎನ್. ಆರ್. ರೈಲ್ವೆಯನ್ನು ಕೊಡಲು ಅಪ್ಪಣೆ ದೊರಕಿದೆಯಂತೆ.

ಸರ್ ಜಾನರ ಪ್ರಕೃತಿ

ಬಂಗಾಳದ ಹಿಂದಿನ ಗವರ್ನರರಾದ ಸರ್ ಜಾನ್ ಹರ್ಬರ್ಟರ ಆರೋಗ್ಯ ಚಿಂತಾಜನಕವಾಗಿದೆಯೆಂದು ಸರಕಾರೀ ಭವನದ ಪ್ರಕಟಣೆ.

೧ ವಾರದಲ್ಲಿ ೪೦೨ ಮರಣ

೨೭ನೇ ತಾರೀಖಿನ ವಾರಾಂತ್ಯದಲ್ಲಿ ನಗರದ ಬೇರೆ ಬೇರೆ ಆಸ್ಪತ್ರೆಗಳಲ್ಲಿ ೪೦೨ ಜನರು ಮಡಿದರೆಂದು ಕಲ್ಕತ್ತದ ಸುದ್ದಿ.

ಕೇವಲ ಅನ್ನದಿಂದ ಭಾರತದ ಬಿಕ್ಕಟ್ಟು ಬಗೆಹರಿಯದು

ಪಾರ್ಲಿಮೆಂಟಿನ ಕೂಲಿಗಾರ ಸದಸ್ಯರೂ ಲಂಡನಿನ ಭಾರತದ ಬರಗಾಲ ಸಮಿತಿಯ ಅಧ್ಯಕ್ಷರೂ ಆದ ಡಬ್ಲ್ಯು. ಜಿ. ಕಾವ್ ಇವರು ಭಾರತ ಬರಗಾಲ ಕಮಿಟಿ ಸಭೆಯಲ್ಲಿ ಭಾಷಣ ಮಾಡುತ್ತಾ ಭಾರತದ ಬಿಕ್ಕಟ್ಟನ್ನು ಬಿಡಿಸಲು ಒಂದು ಮುಖ್ಯ ಉಪಾಯವಿದೆಯೆಂದೂ, ಭಾರತದಲ್ಲಿ ಸ್ವತಂತ್ರ ಆಡಳಿತ, ಸ್ವಯಂನಿರ್ಣಯ ಹಕ್ಕು ಹಾಗೂ ಸ್ವಾತಂತ್ರ್ಯವನ್ನು ಜಾರಿಯಲ್ಲಿ ತರುವುದೇ ಮುಖ್ಯವೆಂದೂ ಹೇಳಿ ಕೇವಲ ಅನ್ನ ಮಾತ್ರ ಕೊಟ್ಟರೆ ಸಾಲದೆಂದೂ ಅವರು ತಿಳಿಸಿದರು.

ಶ್ರೀ. ಎಂ. ಆರ್. ಭಟ್ಟರು

ಬಾಗಲಕೋಟೆಯಲ್ಲಿ ಜರಗಲಿರುವ ೧೩ನೇ ನಿಖಿಳ ಆಯುರ್ವೇದ ಸಮ್ಮೇಳನಕ್ಕೆ ಮಂಗಳೂರಿನ ಶ್ರೀ. ಎಂ. ಆರ್. ಭಟ್ಟರು ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ.

ಒಪ್ಪಂದದ ಸುದ್ದಿ ಸುಳ್ಳು

ಜಾರಿಜದ ರಾಯಿಟರ್ ಸುದ್ದಿಗಾರನು ಹೀಗೆಬರೆಯುತ್ತಾನೆ, 'ಮಿತ್ರರಿಗೂ ವೈರಿಗಳಿಗೂ ಒಪ್ಪಂದವಾಗುವ ಸುದ್ದಿಗೆ ಸಾಕಷ್ಟು ಆಧಾರಗಳಿಲ್ಲ. ಆದರೆ ಸ್ಪೈನ್ ಮತ್ತು ಆಸ್ಟ್ರೀಯಗಳಲ್ಲಿ ರಾಜರನ್ನು ಪುನಃ ಸಿಂಹಾಸನದಲ್ಲಿ ಸ್ಥಾಪಿಸಲು ಪ್ರಯತ್ನ ನಡೆಯುತ್ತಿದೆಯಂತೆ ಯುದ್ಧ ಮುಗಿವ ಮೊದಲು ರಾಜ್ಯ ಪರಿವರ್ತನೆಮಾಡಲು ಹವಣಿಸುತ್ತಿದ್ದ ರಾಜ ಪಕ್ಷದವರಿಗೆ ಕೆಥೋಲಿಕರ ಬೆಂಬಲವಿದೆಯಂತೆ. ಆಸ್ಟ್ರೀಯದ ರಾಜಕುಮಾರನು ಅಲ್ಲಿಯ ಸಿಂಹಾಸನದ ಬಗ್ಗೆ ಹಾತೊರೆಯುತ್ತಿದ್ದು ಮೋಸ್ಕೋ ಪರಿಷತ್ತಿನ ನಿರ್ಣಯದಿಂದ ಅದಕ್ಕನುಕೂಲವಾಗಿದೆ.

ಅಕ್ಷ ರಾಷ್ಟ್ರಗಳಿಂದ ಒಪ್ಪಂದದ ಸೂಚನೆ ಬಂದಿರುವವೊ ಎಂದು ಸುದ್ದಿಗಾರನು ಕೇಳಿದ್ದಕ್ಕೆ ಕಾರ್ಡಿನಲ್ ಹೆಲ್ಲರು ನಕಾರಾತ್ಮಕ ಉತ್ತರವಿತ್ತಿರುವರು.

ಕಲೆಕ್ಟರರ ಪ್ರಕಟಣೆ

ಜನತೆಯ ಜೀವನಕ್ಕೆ ಅತ್ಯವಶ್ಯವಾದ ಸರಬರಾಯಿಗಳನ್ನು ಕಾಪಾಡುವ ಬಗ್ಗೆ ಡಿಫೆನ್ಸ್ ಆಫ್ ಇಂಡಿಯಾ ರೂಲ್ ಮೇರೆಗೆ ದಕ್ಷಿಣ ಕನ್ನಡ ಜಿಲ್ಲಾ ಕಲೆಕ್ಟರರು ಈ ಕೆಳಗಿನ ಹುಕುಮನ್ನು ಈ ಮೂಲಕ ಮಾಡಿರುತ್ತಾರೆ.

"1943ನೇ ಇಸವಿ ನವೆಂಬರ್ 15ನೇ ತಾರೀಕು ಮತ್ತು ಅನಂತರ ಯಾವನೊಬ್ಬನೂ ಗೋದಿ ಯಾ ಗೋದಿ, ಹಿಟ್ಟು, ರುಲಾಂ, ವು ಸಜ್ಜಿಗೆ ಇತ್ಯಾದಿಗಳನ್ನು ದಕ್ಷಿಣಕನ್ನಡ ಜಿಲ್ಲೆಯ ಹೊರಗಿನ ಯಾವ ಕಡೆಗೂ ಒಯ್ಯಕೂಡದು.

ಈ ಹುಕುಂಮನ್ನು ಉಲ್ಲಂಘಿಸಿದ ಯಾವನೊಬ್ಬನೂ—ಮೂರು ವರ್ಷಗಳಿಗೆ ಮೀರದ ಸಜೆ ಯಾ ಜುರುಮಾನೆ, ಯಾ—ಇವೆರಡು ವಿಧಿಸಲ್ಪಡಲು ಗುರಿಯಾಗುತ್ತಾನೆ.

ಗೋಧಿಯ ಜೀನಸುಗಳನ್ನು ದಕ್ಷಿಣ ಕನ್ನಡ ಜಿಲ್ಲೆಯ ಯಾವ ಕಡೆಯಿಂದಲೂ ಜಿಲ್ಲೆಯ ಹೊಳಗೆ ಒಯ್ಯುವುದು ಅವಶ್ಯವೆಂತ ಕಾಣುವ ವಿಶೇಷ ಸಂದರ್ಭಗಳು ಒದಗಿದಲ್ಲಿ ಅಂತಹ ಒಯ್ಯೋಣಕ್ಕೆ ರಹದಾರಿ ಕೊಡುವ ಅಧಿಕಾರೆಯು ರಫ್ತು ಮಾಡುವ ಸ್ಥಳವು ಮದ್ರಾಸು ಆಧಿಪತ್ಯದೊಳಗಣ ಜಿಲ್ಲೆಯಾದರೆ ದಕ್ಷಿಣ ಕನ್ನಡ ಜಿಲ್ಲಾ ಕಲೆಕ್ಟರರೂ, ಮದ್ರಾಸು ಆಧಿಪತ್ಯದ ಹೊರಗಣ ಪ್ರದೇಶವಾದರೆ, ಸಿವಿಲ್ ಸಪ್ಲೈಸ್ ಕಮಿಶನರರೂ ಆಗಿರುತ್ತಾರೆ."

ಜಿಲ್ಲಾ ಸಮಾಚಾರಗಳು

ಮಂಗಳೂರು

ಜಿಲ್ಲೆಯ ಇತರ ಕಡೆಗಳಲ್ಲಿ ಶ್ರೀ. ರಾಮಮೂರ್ತಿಗಳು

ತಾ. ೨೫ರಂದು ಬೆಳಗ್ಗೆ ರಾಮಮೂರ್ತಿಯವರು ಉಡುಪಿಗೆ ಹೊರಟರು ಹಾದಿಯಲ್ಲಿ ಗುರುಪುರದಲ್ಲಿ ಜಮೀನ್ದಾರರಾದ ಶ್ರೀಯುತರು ಬಲ್ಲಾಳ ಮತ್ತು ಮಾರ್ಲ ಇವರು ಇವರನ್ನು ಸ್ವೀಕರಿಸಿ, ತಾವು ಅವರೊಡನೆ ಸಹಕರಿಸುವುದಾಗಿ ಆಶ್ವಾಸನೆ ಕೊಟ್ಟರು

ಮೂಡಬಿದ್ರೆಯಲ್ಲಿ ಶ್ರೀ. ಧರ್ಮಸಾಮ್ರಾಜ್ಯ ಅವರು ಸಂಧರ್ಶಕರನ್ನು ಸ್ವಾಗತಿಸಿದರು

ಕಾರ್ಕಳದಲ್ಲಿ ಸಾರ್ವಜನಿಕ ಸಭೆ ಸರಗಿತು ಜಮೀನ್ದಾರರ ಪರವಾಗಿ ಶ್ರೀಯುತರು ಕೆ. ಪಿ. ಶೇಷಗಿರಿ ಪ್ರಭು ಮತ್ತು ಬಿ ಜಿ ಕಾಮತರೂ ವಾಣಿಜ್ಯ ಸಂಘದ ಕಡೆಯಿಂದ ಶ್ರೀ. ಕೆ. ಜಿ ಶೆಣೈ ಅವರೂ ತಮ್ಮ ಹವಾಲಿಗಳನ್ನು ಹೇಳಿಕೊಂಡರು

ಉಡುಪಿ ತಾಲೂಕಿನ ಗಡಿಯಿಂದ ಉಡುಪಿಯ ತನಕವೂ ಸಾಲುದ್ದಕ್ಕೆ ತೋರಣಗಳಿದ್ದುವು ಪ್ರತಿಯೊಂದು ತೋರಣದಲ್ಲೂ 'ನಮ್ಮ ಅಕ್ಕಿಯನ್ನು ಸ್ವಾಧೀನ ಪಡಿಸಬೇಡಿ,' 'ಅಕ್ಕಿಯನ್ನು ಕೊಂಡು ಹೋಗಬೇಡಿ' ಇತ್ಯಾದಿ ಘೋಷಣೆಗಳು ಬರೆಯಲ್ಪಟ್ಟಿದ್ದುವು ಉಡುಪಿಯಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಶ್ರೀ ಪಾಂಡುರಂಗನಾಯಕರು ಮಾತನಾಡುತ್ತಾ, ಉಡುಪಿ 'ಕಡಿಮೆ ಪೂರೈಕೆ'ಯ ತಾಲೂಕು, ಇಲ್ಲಿಂದ ಅಕ್ಕಿಯನ್ನು ಸ್ವಾಧೀನ ಪಡಿಸಿಕೊಳ್ಳಬಾರದು, ಇಲ್ಲಿಗೇ ಹೊರಗಿನಿಂದ ಆಮದು ಮಾಡಬೇಕು' ಎಂದು ಮುಂತಾಗಿ ಹೇಳಿದರು ರಾಮಮೂರ್ತಿಯವರು ಅದು ಸಾಧ್ಯವಿಲ್ಲವೆಂದು ಅಸಹಾಯತೆಯನ್ನು ವ್ಯಕ್ತಪಡಿಸಿದರು ವ್ಯಾಪಾರಿಗಳ ಪರವಾಗಿ ಶ್ರೀ ಕಾರ್ನಾಡ್ ಕೃಷ್ಣರಾಯರು ಅಭಿಪ್ರಾಯಗಳನ್ನು ಹೇಳಿದರು ಕುಂದಾಪುರದಿಂದ ಅಲ್ಲಿಗೆ ಬಂದಿದ್ದ ಶ್ರೀ ಬಿ ಶಿವರಾಮ ಶೆಟ್ಟಿ ಅವರು ಮಾತನಾಡಿ 'ನಮ್ಮ ಊರಿನ ಕಜೆ ಅಕ್ಕಿಗೆ ಮುಡಿಗೆ ೯॥/ ರೂ ಇಟ್ಟುದು ಸಾಲದು, ಹೆಚ್ಚು ಬೇಕು ಎಂದರು

ಶ್ರೀ ರಾಮಮೂರ್ತಿಯವರು ಅಲ್ಲಿಂದ ಕುಂಜಿಬೆಟ್ಟಿಗೆ ಹೋಗಿ ಭತ್ತ ಕುಟ್ಟುವ ಕೆಲಸವನ್ನು ನೋಡಿದರು ಉಡುಪಿಯಲ್ಲಿ ಶ್ರೀ ಫಲಿಮಾರು ಸ್ವಾಮಿಯವರು ಅವರಿಗೆ ಔತಣ ಏರ್ಪಡಿಸಿದರು ಆ ರಾತ್ರೆಯೇ ಮಂಗಳೂರಿಗೆ ಮರಳಿದ ಶ್ರೀ ರಾಮಮೂರ್ತಿಯವರು ಜಿಲ್ಲಾ ಕಲೆಕ್ಟರರು ಏರ್ಪಡಿಸಿದ ಔತಣ ಕೂಟದಲ್ಲೂ ಭಾಗವಹಿಸಿದರು

ದ. ಕ ಜಿಲ್ಲಾ ವರ್ಗದಾರರು

ದ. ಕ ಶ್ರೀ ರಾಮಮೂರ್ತಿಗಳಲ್ಲಿ ಮಂಡಿಸಿದ ವಿನಂತಿಯ ಸಾರಾಂಶವಿಂತಿದೆ ಅಕ್ಕಿ ಮುಡಿ ಒಂದಕ್ಕೆ ರೂ ೧೨೮ ಕ್ರಯದಲ್ಲಿ ತಾಲೂಕು ಕೇಂದ್ರಗಳಿಗೆ ತಂದೊಪ್ಪಿಸುವ ವಿಷಯ ಸರಕಾರ ಒಪ್ಪಿದಕ್ಕೆ ಅಭಿನಂದನೆ, ಸಬ್ ತಾಲೂಕು ಪೇಟೆ ಕೇಂದ್ರಗಳಲ್ಲಿಯೂ ಡಿಪ್ರೋ ತೆರೆದು ಅಕ್ಕಿ ಸಾಗಿಸುವ ವಾಹನಗಳ ದರವನ್ನು ನಿರ್ಣಯಿಸಬೇಕು, ಅಲ್ಲಲ್ಲಿ ಹಂಚಲು ಎಷ್ಟು ಸ್ಟಾಕು ಬೇಕೆಂದು ಕೂಡಲೇ ನಿರ್ಧರಿಸಬೇಕು, ಈ ಜಿಲ್ಲೆ ಆಹಾರಸಾಮಗ್ರಿ ಉತ್ಪಾದನೆಯಲ್ಲಿ ಕಡಿಮೆ ಬೀಳುವ ಜಿಲ್ಲೆ, ಈ ವರ್ಷವಂತೂ ಬೆಳೆ ಬಹಳ ಕೆಟ್ಟಿರುವುದರಿಂದ, ಕಡಿಮೆ ಬಿದ್ದ ಅಂಶವನ್ನು ಕನಿಷ್ಟ ಪಕ್ಷ ೫೨ ಸಾವಿರ ಟನ್ ಅಕ್ಕಿಯನ್ನು ಸರಕಾರ ಬೇರೆ ಕಡೆಯಿಂದ ತರಿಸಬೇಕು, ಅಕ್ಕಿಯು ರಖಂ ವ್ಯಾಪಾರಿಗಳ ಚಳವಳಕ್ಕೆ ಸರಕಾರ ಒಲಿಯಬಾರದು, ರೆವೆನ್ಯೂ ಬೋರ್ಡಿನವರು ನೇಮಿಸಿದ ಸೆಂಟ್ರಲ್ ಕೋಪರೇಟಿವ್ ಹೋಲ್‌ಸೇಲ್ ಸ್ಟೋರ್ಸಿನವರೇ ಅಕ್ಕಿ ಹಂಚಬೇಕು, ಖಾಸಗಿ ಅಕ್ಕಿ ವ್ಯಾಪಾರಕ್ಕೆ ಅವಕಾಶ ಕೊಡಬಾರದು, ಅಕ್ಕಿ ಭತ್ತಗಳಿಗೆ ಈಗಲೇ ಖಂಡಿತ ಬೆಲೆ ನಿರ್ಧರಿಸಬೇಕು, ಜಿಲ್ಲೆಯಿಂದ ಅಕ್ಕಿ ಭತ್ತ ಹೊರ ಹೋಗಕೂಡದು, ಎತ್ತಿನ ಗಾಡಿಯ ಪೆಟ್ಟಿ ಹಾಗೂ ಕೃಷಿಯ ಕಬ್ಬಿಣ ಉಪಕರಣಗಳಿಗೆ ಕಂಟ್ರೋಲ್ ದರ ಮಾಡಬೇಕು, ಅಕ್ಕಿ-ಭತ್ತಗಳು ಆತ್ಮಸಂತೋಷದಿಂದಲೇ ಕೊಡುವುದಲ್ಲದೆ ಸರಕಾರ ವಶಪಡಿಸಿಕೊಳ್ಳುವ ಕ್ರಮ ತೆಗೆದುಕೊಳ್ಳಬಾರದು, ಹೆಚ್ಚಿಗಿರುವ ಅಕ್ಕಿ ಭತ್ತದ ವಿಷಯ ನಿರ್ಧರಿಸುವಲ್ಲಿ ಅನ್ಯಾಯವಾಗಬಾರದು, ಈ ಕುರಿತು ಬಂದ ಆಕ್ಷೇಪಣೆ ಅರ್ಜಿಗಳನ್ನು ವಿಚಾರಿಸಬೇಕು, ಒಕ್ಕಲು ಭತ್ತ ಒಪ್ಪಿಸುವಾಗ ಗೇಣಿಯ ಕುರಿತು ವರ್ಗದಾರನಿಗೆ ತೊಂದರೆಯಾಗದಂತೆ ನೋಡಬೇಕು

ಅಕ್ಕಿ ಬತ್ತಗಳ ಡಿಪ್ರೋ

ಅಕ್ಕಿ ಬತ್ತಗಳನ್ನು ಪಡೆದು ಹಂಚುವ ಕೆಲಸಕ್ಕಾಗಿ ಸಹಕಾರೀ ಸಂಘದವರು ಈ ಕೆಳಗೆ ತೋರುವ ಕಡೆಗಳಲ್ಲಿ ಡಿಪ್ರೋಗಳನ್ನು ತೆರೆದು ಏಜೆಂಟರನ್ನು ನೇಮಿಸಿರುವರು- (೧) ಕುಂದಾಪುರ-ಏಜೆಂಟ್-ಶ್ರೀ ಎನ್ ಕೆ ಭಂಡಾರ್ಕಾರ್, (೨) ಗಂಗೊಳ್ಳಿ-ಶ್ರೀ ಯು ಪಾಂಡುರಂಗ ನಾರಾಯಣ ಪೈ, (೩) ಹಂಗಾರಕಟ್ಟೆ-ಶ್ರೀ ಎ ಮಹಾಬಲೇಶ್ವರ ಹೆಬ್ಬಾರ (೪) ಉಡುಪಿ-ಶ್ರೀ ವೆಂಕಟೇಶ ಶೆಣೈ, (೫) ಕಾರ್ಕಳ-ಶ್ರೀ ಕೆ ಜಯರಾಮರಾವ್, (೬) ಪಡುಬಿದ್ರೆ-ಶ್ರೀ ಪಿ ಭೋಜರಾವ್, (೭) ಮೂಲ್ಕಿ-ಶ್ರೀ ಕೆ ಗಣೇಶ ಸುಂದರರಾವ್, (೯) ಮಂಗಳೂರು-ಶ್ರೀ ಎನ್ ಎಂ ಪಿ ಕಾಮತ್, (೧೦) ಬಂಟ್ವಾಳ-ಶ್ರೀ ಬಿ ರಾಮ ಪೈ, (೧೧) ಪುತ್ತೂರು-ಶ್ರೀ ನ ಟ್ರ್ಯೋಜಿ ಕೃಷ್ಣಯ್ಯ, (೧೨) ಉಪ್ಪಿನಂಗಡಿ-ಶ್ರೀ ಬಿ ಸುಬ್ರಾಯ ಶಂಭಣ್ಣಯ್ಯ, (೧೩) ಬೆಳ್ತಂಗಡಿ-ಜನಾಬ್ ಬಿ ಇಸ್ಮಾಯಿಲ್ ಸಾಹೇಬ್, (೧೪) ಸುಳ್ಯ-ಶ್ರೀ ಎಂ ಕೂಸಣ್ಣ ಗೌಡ (೧೫) ವಿಟ್ಲ-ಶ್ರೀ ಎ ರಸ್ಕಿಂಞ, (೧೬) ಕಾಸರಗೋಡು ಶ್ರೀ ಎ ಗೋಪಾಲ ನ್ಯಾಕ್

ಸಹಕಾರೀ ನೌಕರರ ಸಂಘ

ಇದರ ವಾರ್ಷಿಕ ಸಭೆಯು ಕಳೆದ ಆದಿತ್ಯವಾರ ಕೋಪರೇಟಿವ್ ಬೇಂಕಿನಲ್ಲಿ ಶ್ರೀ ಎಂ ಶಾಂತಾರಾಮರಾಯರ ಅಧ್ಯಕ್ಷತೆಯಲ್ಲಿ ನೆರವೇರಿ ವರ್ಷಾವಧಿ ಲೆಕ್ಕಪತ್ರ ಅಡಿಟ್ ವರದಿಗಳನ್ನು ಮಂಜೂರು ಮಾಡಿ, ಸಂಘದ ಉಪನಿಬಂಧನೆಗಳಲ್ಲಿ ಕೆಲವು ತಿದ್ದುಪಡಿ ಗೈದು, ಡೈರೆಕ್ಟರ್ ಮಂಡಳ ರಚನೆಯಾಯಿತು

ಸಭೆಗಳು

ತಾ ೨೯ರ ಸಂಜೆ ಜಡ್ಜ್ ಶ್ರೀ ಕೋಮನರ ಅಧ್ಯಕ್ಷತೆಯಲ್ಲಿ ಒಂದು ಸಭೆ ಜರಗಿ ಪ್ರಾಂತಿಕ ಡಿಫೆನ್ಸ್ ಲೋನ್ ಆಫೀಸರ್ ಶ್ರೀ ಕೃಷ್ಣಮೂರ್ತಿಯವರು, ಆ ಲೋನುಗಳ ಕುರಿತು ವಿವರಿಸಿ ಮಹಾಜನರೂ ಸಂಸ್ಥೆಗಳು ಈ ಲೋನಿನಲ್ಲಿ ಹಣವನ್ನು ಹಾಕಬೇಕೆಂದು ಕೇಳಿಕೊಂಡುದರೊಡನೆ ಜಿಲ್ಲಾ ಕಲೆಕ್ಟರರೂ ಅದನ್ನು ಸಮರ್ಥಿಸಿ ಭಾಷಣವಿತ್ತರು ಈ ಪ್ರಾಂತದಲ್ಲಿ ನಮ್ಮ ಜಿಲ್ಲೆ ಲೋನಿನಲ್ಲಿ ಬಹಳ ಕಡಿಮೆ ಹಣ ಹಾಕಿರುವುದರಿಂದ ಬರುವ ಮಾರ್ಚಿಯೊಳಗೆ ೨೭ ಲಕ್ಷ ರೂಪಾಯಿಗಳನ್ನು ಕೂಡಿಸಬೇಕೆಂದು ಅಂದಾಜು ಮಾಡಿದ್ದಾರೆಂದು ತಿಳಿಯುತ್ತದೆ

ಅದೇ ದಿನ ಅದೇ ಸ್ಥಳದಲ್ಲಿ ಅದೇ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಸೈಂಟ್ ಜಾನ್ಸ್ ಎಂಬುಲೆನ್ಸ್ ಮತ್ತು ಇಂಡಿಯನ್ ರೆಡ್ ಕ್ರಾಸ್ ಸೊಸೈಟಿಯ ಶ್ರೀಮತಿ ಕುರಿಯನ್ ಇವರು ಈ ಸಂಸ್ಥೆಗಳ ಕಾರ್ಯ ಕಲಾಪ, ದೀನ ಜನರಿಗ ಹೇಗೆ ಸೇವೆ ಮಾಡುತ್ತಾರೆ, ವಿದೇಶಗಳಲ್ಲಿ ಸೈನ್ಯದಲ್ಲಿ ಸೆರೆಮನೆಗಳಲ್ಲಿರುವವರಿಗೆ ಹೇಗೆ ಸಹಾಯವೊದಗಿಸುತ್ತಾರೆಯೆಂಬುದನ್ನು ವಿವರಿಗೆ ಮಹಾ ಜನರು ಈ ಸಂಸ್ಥೆಗೆ ನೆರವಾಗಬೇಕೆಂದು ಕೇಳಿಕೊಂಡರು ಶ್ರೀ ಎಂ ವೆಂಕಟೇಶ ಪೈಗಳು ಕೃತಜ್ಞತೆ ಹೇಳಿದರು

ನಗರ ಸಭೆ

ತಾ ೨೯ರಂದು ಸಂಜೆ ಮುನ್ಸಿಪಲ್ ಆಫೀಸಿನಲ್ಲಿ ಚೇರ್‌ಮೇನರ ಅಧ್ಯಕ್ಷತೆಯಲ್ಲ ಸೇರಿತು ಚೇರ್‌ಮೇನರು ಹೊತ್ತಿಗೆ ಸರಿಯಾಗಿ ಬರದಿರುವುದರಿಂದ ಉಪಾಧ್ಯಕ್ಷರೂ ಇರದದ್ದರಿಂದ ಶ್ರೀ ಆರ್ ಆರ್ ಪೂಂಜರು ಅಧ್ಯಕ್ಷತೆಗೆ ಸೂಚಿತರಾಗಲು ಅವರೊಪ್ಪದೆ ಸ್ವಲ್ಪ ಕಾಯಲು ಚೇರ್‌ಮೇನರು ಬಂದು ಸಭೆ ಜರಗಿತು ನಗರದಲ್ಲಿ ಅನಾಥರಿಗಾಗಿ ಸ್ಥಾಪಿಸಲಿರುವ ಐದು ಅನಾಥ ಮಂದಿರಗಳ ಕುರಿತು ಆಲೋಚನೆ ಮಾಡಲು ಏರ್ಪಟ್ಟ ಸಮಿತಿಗೆ ಅವರ ಕುರಿತು ಕೆಲಸ ಮಾಡುವರೆ ಸ್ವಾತಂತ್ರ್ಯ ಕೊಡಲಾಯಿತು ಮುನ್ಸಿಪಾಲಿಟಿ ಗೇಂಗ್ ಕೂಲಿಗಳಿಗೆ ಅಂತ್ಯವಾದ ಕೆಲಸವಿಲ್ಲದೆ ಇಡೀ ವಾರದ ಸಂಬಳ ಸಿಗಬೇಕೆಂದು ಶ್ರೀ ಸಿ ಎಲ್ ಲೋಬರು ತಂದ ನಿರ್ಣಯ ಮಂಜೂರಾಯಿತು ಹ್ಯೊಗೆ ಬಜಾರ್ ಮೀನು ಮಾರ್ಕೆಟಿನ ಉಪಯೋಗವಿಲ್ಲವೆಂಬ ಕಾರಣ, ಆ ಸ್ಥಳವನ್ನು ಅದರ ಹಿಂದಿನ ಮಾಲಿಕರಿಗೆ ಕ್ರಯಕ್ಕೆ ಕೊಡಬಹುದೆಂದೂ, ಅದೇ ಸ್ಥಳದ ಹತ್ತಿರ ಇನ್ನೊಂದು ಹೊಸ ಮಾರ್ಕೆಟಿಗೆ ತಕ್ಕ ಸ್ಥಳವನ್ನು ಒದಗಿಸಿಕೊಡಬೇಕೆಂದೂ, ಆ ಕೆಲಸವನ್ನು ನಿಬಂಧನೆಗಳಿಗೆ ಅನುಸಾರವಾಗಿ ನಡೆಸಬೇಕೆಂದೂ ನಿರ್ಣಯವಾಯಿತು. ಶ್ರೀಮತಿ ಶಾಂತಾಬಾಯಿಯವರು ಈ ನಿರ್ಣಯ ತಂದರು ಶ್ರೀ ಗೊನ್ಸಾಲ್ವಿಸರು ಅನುಮೋದಿಸಿದರು. ಈ ಸೂಚನೆಗೆ ವಿರೋಧ ಸೂಚಿಸಲು ಹಲವು ಮಂದಿ ಮೊಗವೀರ ಸ್ತ್ರೀಪುರುಷರು ಸಭಾಸ್ಥಾನಕ್ಕೆ ಬಂದಿದ್ದರು. ಶ್ರೀಮತಿ ಎಮಿ ಆರಾ ಇವರು ಈ ಠರಾವನ್ನು ವಿರೋಧಿಸಿದರು. ಅವರನ್ನು ಸಮರ್ಥಿಸಿ ಹಲವರು ಮಾತನಾಡಿದರು ಶ್ರೀ ಹಮ್ಮಬ್ಬರೂ ವಿರೋಧಕರನ್ನು ಸಮರ್ಥಿಸಿದರು ಹಲವರ ಸೂಚನೆ ಉಪಸೂಚನೆಗಳಾದವು ಕೊನೆಗೆ ಆ ಸ್ಥಳದ ಹತ್ತಿರವೇ ಬೇರೆ ಸ್ಥಳವನ್ನು ಕೊಡುವುದಾಗಿ ಅದರ ಮಾಲಕರು ಒಪ್ಪಿ ಬರಕೊಟ್ಟ ಪ್ರಕಾರ ಸಭೆಯು ಮೇಲಿನ ನಿರ್ಣಯ ಮಾಡಿತು

ಹ್ಯೊಗೆ ಮಾರ್ಕೆಟು ಹೋಗಬಾರದು

ತಾ ೨೮ರಂದು ಸಂಜೆ ಹ್ಯೊಗೆ ಬಜಾರಿನಲ್ಲಿ ಶ್ರೀ ಜೆರೋಮ್ ಸಾಲ್ಡಾಣರ ಅಧ್ಯಕ್ಷತೆಯಲ್ಲಿ ಮಹಾ ಜನರ ಸಭೆಯೊಂದು ಸೇರಿ, ಶ್ರೀ ಎಚ್ ಕೆ ದಿಂಗಳಾಯರು ಮತ್ತಿತರರು ಮಾತನಾಡಿ, ಇಲ್ಲಿನ ಮಾರ್ಕೆಟನ್ನು ತೆಗೆದುಹಾಕಬೇಕೆಂದು ನಗರ ಸಭೆಯವರು ತೀರ್ಮಾನಿಸಿದ ಕುರಿತು ತೀವ್ರ ನಿಷೇಧ ಸೂಚಿಸಲಾಯಿತು

ಜನತಾ ರಂಗಭೂಮಿ

ಅ ಭಾ ಜನತಾ ರಂಗಭೂಮಿಯ ಮಂಗಳೂರು ಸಮಿತಿ ಆಶ್ರಯದಲ್ಲಿ ತಾ ೨೭ರಂದು ಸಂಜೆ 'ಅಮರತ್ವಕ್ಕೆ ಆಹ್ವಾನ'ವೆಂಬ ನಾಟಕವು ಯಶಸ್ವಿಯಾಗಿ ಗಣಪತಿ ಹೈಸ್ಕೂಲು ಭವನದಲ್ಲಿ ಆಡಲ್ಪಟ್ಟಿತು ಆರಂಭದಲ್ಲಿ ಸಮಿತಿ ಅಧ್ಯಕ್ಷ ಶ್ರೀ ರಂ ರಾ ತಲ್ಚೇರಿಕರರು ಮಾತನಾಡಿ ಇಲ್ಲಿನ ಜರಂ ಭೂಮಿಯ ವಿಷಯ ವಿವರಿಸಿದರು ಅನಂತರದ ಶ್ರೀ ಶಿವಶಂಕರರಾಯರು 'ಆಜಾದಿಕೇ ಹಿರ್' ಮತ್ತು 'ಬಜ್‌ಚಲೋ' ಹಾಡು ಹಾಡಿದರು ಶ್ರೀ ತಿರುಮಲೇಶ್ವರ ಭಟ್ಟರು 'ವಂಗ ಮೇಘ'ವೆಂಬ ಗದ್ಯ ಗೀತವನ್ನು ವಾಚಿಸಿದರು ಅನಂತರ ಶ್ರೀ ರಾಮಚಂದ್ರ ಭಟ್ಟರ ಮುಂದಾಳುತನದಲ್ಲಿ 'ಹಿಟ್ಲರ್ ಕಾಳಗ'ವೆಂಬ ವಿಡಂಬನಾತ್ಮಕ ಯಕ್ಷಗಾನವು ಅಭಿನಯಿಸಲ್ಪಟ್ಟಿತು ಸಮಿತಿ ಕಾರ್ಯದರ್ಶಿ ಶ್ರೀ ಕುಳುಕುಂದರು ಜನತಾ ರಂಗ ಭೂಮಿಯ ಚಟುವಟಿಕೆಗಳನ್ನು ವಿವರಿಸಿದರು ಆ ಮೇಲೆ ಶ್ರೀ ಕಯ್ಯಾರ ಕಿಞ್ಞಣ್ಣ ರೈಗಳು 'ಹೊಸ ಹಾಡು' 'ವಿಶ್ವ ಗರ್ಭದ ಗೋಳು' ಮತ್ತು 'ಚಿನ್ನ ಕನಸು ಕಂಡೆನೊಂದು' ಎಂಬ ತಮ್ಮ ಮೂರು ಪ್ರಗತಿಶೀಲ ಕವನಗಳನ್ನೋದಿದರು ಶ್ರೀ ಬಿ ವಿ ಬಾಳಿಗರು ಸಿನೆಮಾ ಹಾಡಿನ ದಾಟಿಯಲ್ಲಿ ತಮ್ಮ ಸಂತ ಕೆಲಂಕಣಿ ಗೀತಗಳನ್ನು ಸುಶ್ರಾವ್ಯವಾಗಿ ಹಾಡಿದರು ಕೊನೆಗೆ ಶ್ರೀ ರಘು, ಸದಾಶಿವ ರಾಮದಾಸಾಚಾರ್, ಶಾಂತಾರಾಮ ಪೈ, ಶ್ರೀನಿವಾಸ ಮೊದಲಾದ ನಟರು ಯಶಸ್ವಿಯಾಗಿ ನಾಟಕವನ್ನು ಅಭಿನಯಿಸಿದರು.

ಕಳ್ಳ ತೂಕ

ವನ್ನು ಪ್ರಯೋಗಿಸಿ ಕಟ್ಟಿಗೆ ಮಾರುತ್ತಿದ್ದಾರೆಂಬ ಆರೋಪದ ಮೇಲೆ ಬಂದರದ ಕೆಲವು ಕಟ್ಟಿಗೆ ವ್ಯಾಪಾರಿಗಳ ಮೇಲೆ ಪೋಲೀಸರು ಖಟ್ಲೆ ಹೂಡಿದ್ದಾರೆ

ಹಿಂದೂ ರಿಲಿಜಿಯಸ್

ಎಂಡೋಮೆಂಟ್ ಬೋರ್ಡು ಮದ್ರಾಸು ಇದರ ಕಮಿಶನರಾದ ಶ್ರೀ. ಎ. ಎಸ್. ಎಂ. ನಾಯರರು ಮಂಗಳೂರಿಗೆ ಬಂದಿದ್ದು ಜಿಲ್ಲೆಯ ಕೆಲವು ಪ್ರಮುಖ ದೇವಾಲಯಗಳ ಅಧಿಕಾರಿಗಳನ್ನು ಕರೆದು ಸಭೆ ಜರಗಿಸಿ, ದೇವಸ್ಥಾನಗಳ ಆಸ್ತಿಗಳಲ್ಲಿ ಹೆಚ್ಚು ಆಹಾರ ಬೆಳೆಸುವಂತೆ, ಖರ್ಚು ಕಳೆದುಳಿದ ಹಣವನ್ನು ಡಿಫೆನ್ಸ್ ಬೇಂಕಿನಲ್ಲಿಡುವಂತೆ ಕೇಳಿಕೊಂಡಿದ್ದಾರೆ

ಸಂಗೀತ

ಶ್ರೀ ಮಹಾ ಗಣಪತಿ ದೇವಸ್ಥಾನದಲ್ಲಿ ಕಳೆದ ಆದಿತ್ಯವಾರ ಸಂಜೆ ಶ್ರೀಗಳಾದ ಗೋವಿಂದ ನಂಬಿಯಾರ್, ಪದ್ಮನಾಭ ಸರಳಾಯ, ನಾರಾಯಣ ಪಿಶಾರಡಿ ಮೊದಲಾದವರ ಸಂಗೀತ ಕಚೇರಿಯಿತ್ತು

ಮುಂದಾಳುಗಳನ್ನು ಬಿಡಿರಿ

ತಾ ೨೫ರಂದು ಸಾರ್ವಜನಿಕ ಸಭೆ ಮಂಗಳೂರು ಕಮ್ಯುನಿಸ್ಟ್ ಪಕ್ಷದ ಆಶ್ರಯದಲ್ಲಿ ಶ್ರೀ ಶಾಂತಾರಾಮ ಪೈಗಳ ಅಧ್ಯಕ್ಷತೆಯಲ್ಲಿ ಪದಿಲಿನಲ್ಲಿ ಸೇರಿ ರಾಷ್ಟ್ರದ ಮುಂದಾಳುಗಳನ್ನು, ನಮ್ಮ ಜಿಲ್ಲೆಯ ಶ್ರೀ ಘಾಟೆ ಶ್ರೀ ಹೊಳ್ಳರೇ ಮೊದಲಾದವರನ್ನು ಬಿಡುಗಡೆ ಮಾಡಬೇಕೆಂದು ವಿನಂತಿ ಮಾಡಿತು ಶ್ರೀ ಬಿ ವಿ ಕಕ್ಕಿಲ್ಲಾಯರು ಭಾಷಣವಿತ್ತರು ಸಭೆ ಮೆರವಣಿಗೆ ಮಾಡಲು ಕಲೆಕ್ಟರರು ಹಾಕಿರುವ ನಿರ್ಬಂಧಕಾಜ್ಞೆ ಹಿಂತೆಗೆಯಬೇಕೆಂದೂ ವಿನಂತಿಸಲಾಯಿತು

ನೇಮಕ

ನಮ್ಮ ಜಿಲ್ಲೆಯವರಾದ ಶ್ರೀ ಎಂ ಕೆ ಶ್ಯಾಮಭಟ್ಟ ಇವರು ಟಪಾಲು ಕಚೇರಿಗಳ ಸುಪರಿಂಟೆಂಡೆಂಟರಾಗಿ ನೇಮಕ ಹೊಂದಿರುವರು ಸದ್ಯ ಮದ್ರಾಸಿನಲ್ಲಿ ಕೆಲಸ ಮಾಡುವರು

ಚುನಾಯಿಸಲ್ಪಟ್ಟರು

ಶ್ರೀ ಎನ್ ಎ ಕೆ ಬೋಜ ಶೆಟ್ಟರು ಅಸಿಸ್ಟೆಂಟ್ ಕನಸರ್‌ವೇಟರ್ ಆಫ್ ಫಾರೆಸ್ಟ್ಸರಾಗಿ ರಿಕ್ರೂಟ್ ಮಾಡಲ್ಪಟ್ಟಿರುವರು

ವರ್ಗ

ಪುತ್ತೂರು ಸಿವಿಲ್ ಅಸಿ। ಸರ್ಜನ್ ಡಾ। ಮುಂಡ್ಕೂರ್ ಸಂಜೀವ ರಾವ್ ಅವರು ತಲ್ಚೇರಿಗೆ ಸಿವಿಲ್ ಸರ್ಜನರಾಗಿ ವರ್ಗಾಯಿಸಲ್ಪಟ್ಟಿರುವರು

ಕುಂದಾಪುರದ ಡಿ ಮುನ್ಸಿಫ್‌ರಾದ ಶ್ರೀ ಸಿ ಎಲ್ ಕಲಾಸೋ ಇವರು ರಜೆ ಪಡೆದಿರುವುದರಿಂದ ಅವರ ಸ್ಥಾನಕ್ಕೆ - ಂದಾಪುರಕ್ಕೆ ತಿನ್ನವೆಲ್ಲಿ ಎಡಿಶನಲ್ ಡಿ ಮುನ್ಸಿಫ್‌ರಾದ ಶ್ರೀ ಯು ನಾರಾಯಣ ರಾವ್ ಇವರು ವರ್ಗಾಯಿಸಲ್ಪಟ್ಟಿದ್ದಾರೆ

ಕಾರ್ಕಳದ ಕೃಷಿ ಶಾಖೆಯ ಡೆಮೋನ್‌ಸ್ಟ್ರೇಟರಾದ ಶ್ರೀ ಜಿ ಸಖಾರಾಂ ರಾವ್ ಅವರು ತ್ರಿಚಿಯ ಜಿಲ್ಲಾ ಕಷಿ ಶಾಖೆಯ ಆಫೀಸರರಾಗಿ ನೇಮಕ ಹೊಂದಿದ್ದಾರೆ

ನೀಲೇಶ್ವರ

ವಿನಂತಿ

ಮಾನ್ಸೂನಿನ ಅತಿವೃಷ್ಟಿಯಿಂದ ಬೆಳೆ ನಷ್ಟ ಹೊಂದಿದ ಕಾಸರಗೋಡು ತಾಲೂಕಿನ ರೈತರಿಗೆ ನೆರವನ್ನು ಕೊಡಬೇಕೆಂದು ಕಾ ತಾ ಕಿ ಸಂಘದ ಕಾರ್ಯದರ್ಶಿಯವರು ಎಡ್ವೊಕೇಟ್ ಶ್ರೀ ರಾಮ ಮೂರ್ತಿಯವರನ್ನು ನೀಲೇಶ್ವರ ರೈಲ್ವೆ ಸ್ಟೇಶನಿನಲ್ಲಿ ಸಂಧಿಸಿ ವಿನಂತಿ ಪತ್ರ ಅರ್ಪಿಸಿರುವರು

ನಮ್ಮ ಸುವರ್ಣೋತ್ಸವ ಸಂಚಿಕೆಗೆ



ದಯಮಾಡಿ ನಿಮ್ಮ
ಪ್ರೀತಿಯ ಸಂದೇಶವನ್ನು
ಕಳುಹಿಸಿರಿ
ಅಮೃತಾಂಜನ ಲಿಮಿಟೆಡ್.
ಮದ್ರಾಸ್, ಬೊಂಬಾಯಿ,
ಕಲ್ಕತ್ತ.

ಚತುರ್ಥ ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಳನ, ಮಂಗಳೂರು

ಇದರ ಸ್ವಾಗತ ಸಮಿತಿ ಅಧ್ಯಕ್ಷರು ಹೀಗೆ ತಿಳಿಸುತ್ತಾರೆ:

ದಕ್ಷಿಣ ಕನ್ನಡ ಜಿಲ್ಲಾ ಪತ್ರಿಕೋದ್ಯೋಗಿ ಸಂಘವು ಕರೆದಿರುವ ಚತುರ್ಥ ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಳನವು ೧೯೪೪ ಜನವರಿ ಕೊನೆಯ ವಾರದಲ್ಲಿ ಇಲ್ಲವೆ ಫೆಬ್ರವರಿ ಪ್ರಥಮ ವಾರದಲ್ಲಿ ಜರಗುವುದೆಂದು ಸದ್ಯ ಗೊತ್ತಾಗಿದೆ.

ಸಮ್ಮೇಳನವು ಮುಂದಿಟ್ಟುಕೊಂಡಿರುವ ಉದ್ದೇಶಗಳು ಈ ಕೆಳಗಿನಂತಿವೆ:

೧. ಕರ್ನಾಟಕದ ಎಲ್ಲಾ ಪತ್ರಿಕೋದ್ಯೋಗಿಗಳೊಳಗೆ ಸಮೀಪ ಬಾಂಧವ್ಯವನ್ನು ಏರ್ಪಡಿಸುವುದು.

೨. ಭದ್ರ ತಳಹದಿಯ ಮೇಲೆ ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಸಂಘವೊಂದನ್ನು ಸ್ಥಾಪಿಸುವುದು.

೩. ಪ್ರಾಂತದ ಪತ್ರಿಕೋದ್ಯೋಗಿಗಳವರುಂದಿನ ಚಟುವಟಿಕೆಗಳ ಕುರಿತು ಏಕರೀತಿಯ ಯೋಜನೆಯೊಂದನ್ನು ನಿರ್ಮಿಸುವುದು.

೪. ಪ್ರಾಂತ್ಯದ ಪತ್ರಿಕೋದ್ಯಮವನ್ನು ಹೆಚ್ಚು ವೈಜ್ಞಾನಿಕ ರೀತಿಯಲ್ಲಿ ಬೆಳೆಸುವುದಕ್ಕೆ ಹಾದಿ–ಉಪಾಯಗಳನ್ನು ಕಂಡು ಹುಡುಕುವುದು; ಮತ್ತು ಅದಕ್ಕಾಗಿ ಪತ್ರಿಕೋದ್ಯಮದಲ್ಲಿ ತರುಣರಿಗೆ ಶಿಕ್ಷಣ ಕೊಡಿಸಲು ಒಂದು ಯೋಜನೆಯನ್ನು ತಯಾರಿಸುವುದು.

ಸಮ್ಮೇಳನವು ಬಲು ಯಶಸ್ವಿಯಾಗುವಂತೆ ಮಾಡುವುದಕ್ಕಾಗಿ, ಸದ್ಯ ಪ್ರಾಂತದಲ್ಲಿರುವ ಎಲ್ಲಾ ಪತ್ರಿಕೋದ್ಯೋಗಿ ಸಂಘಗಳೂ, ಪತ್ರಿಕೋದ್ಯೋಗಿಗಳೂ, ವೃತ್ತಪತ್ರಿಕೆಗಳೂ ತಮ್ಮ ಸಲಹೆಗಳನ್ನು ಕೆಳಗಿನ ವಿಳಾಸಕ್ಕೆ ಕಳುಹಿಸಿಕೊಟ್ಟು ಸಮ್ಮೇಳನವನ್ನು ಪೂರ್ಣ ಯಶಸ್ವಿಗೊಳಿಸಬೇಕೆಂದು ವಿನಂತಿ.

ಸಮ್ಮೇಳನವನ್ನು ಜರಗಿಸುವುದಕ್ಕೆ ಅವಶ್ಯವಿರುವ ಸಿದ್ಧತೆಗಳು ಆಗುತ್ತಲಿವೆ. ಅಧ್ಯಕ್ಷರ ಆಯ್ಕೆ, ಸಮ್ಮೇಳನ ಜರಗುವ ನಿಶ್ಚಿತ ದಿನ್ನ ಮತ್ತಿತರ ಮಾಹಿತಿಗಳನ್ನು ಕ್ರಮಶಃ ಪ್ರಕಟಿಸುವೆವು.

ಅಕ್ಕಿ ಸಂಗ್ರಹ ಸಪ್ತಾಹ ತಾ ೭ರಿಂದ ೧೪ರ ತನಕ

ದ. ಕ. ಭೂಮ್ಯಾಲಿಕರು ಮಾಡಿದ ವಿನಂತಿಯಲ್ಲಿ ಸರ್ವ ಜನರ ಹಿತ ದೃಷ್ಟಿಯಿಂದ ಕೇಳಿದ ಎಲ್ಲ ಸಂಗತಿಗಳನ್ನು ಸರಕಾರದವರು ಒಪ್ಪಿದ್ದಾರೆ. ಹಾಗಾಗಿ ಈ ಯೋಜನೆಯನ್ನು ಯಶಸ್ವಿ ಮಾಡುವ ಜವಾಬ್ದಾರಿ ನಮ್ಮದು. ಮಂಗಳೂರು ಪೇಟೆಗೆ ಬೇಕಾದ ೩೦ ಸಾವಿರ ಮುಡಿ ಅಕ್ಕಿ ಕೂಡಲೇ ದಶಂಬರ ೧೫ರ ಒಳಗೆ ಕೊಡಬೇಕಾಗಿದೆ. ವಿಳಂಬ ಮಾಡಿದರೆ ತೊಂದರೆಯೇ ವಿನಾ ಲಾಭವಿಲ್ಲ. ಇಂಥಾ ಅಕ್ಕಿಗಳನ್ನು ಸ್ಟೋರುಗಳಿಗೆ ವಿನಾ ಮತ್ತಾರಿಗೂ ಕೊಡಬಾರದು. ದಶಂಬರ ತಾ ೭ರಿಂದ ೧೪ರ ತನಕ ಅಕ್ಕಿ ಸಂಗ್ರಹ ಸಪ್ತಾಹವನ್ನು ಜಿಲ್ಲೆಯಲ್ಲಿ ಎಲ್ಲಾ ಕಡೆಗಳಲ್ಲಿಯೂ ಆಚರಿಸಬೇಕು. ಈ ಸಪ್ತಾಹದ ದಿನಗಳಲ್ಲಿ ಪ್ರತಿ ಗ್ರಾಮದಲ್ಲಿ ಪ್ರತಿನಿತ್ಯ ಸಾಧ್ಯವಿದ್ದ ಅಂದರೆ ತಯಾರಾದ ಅಕ್ಕಿ ಸಂಗ್ರಹಿಸಿ ಕಳುಹಿಸಿ ಕೊಡಬೇಕು. ಗ್ರಾಮ ಮುಂದಾಳುಗಳು ಈ ಬಗ್ಗೆ ಪ್ರಯತ್ನಮಾಡಬೇಕು, ಹೀಗೆಂದು ದ. ಕ. ಜಿಲ್ಲಾ ಭೂಮ್ಯಾಲಿಕ ಸಂಘದವರು ವಿನಂತಿಸುತ್ತಾರೆ.

ಚಲಚಿತ್ರ ವಿಮರ್ಶಕ ಸಂಘ

ಇದರ ಅರ್ಧ ವಾರ್ಷಿಕೋತ್ಸವವನ್ನು ಅ. ಕ. ಪತ್ರಿಕೋದ್ಯೋಗೀ ಸಮ್ಮೇಳನದ ಸಮಯದಲ್ಲಿ ನೆರವೇರಿಸುವುದಾಗಿ ತಾ ೨೮ರಂದು ಸೇರಿದ ಇದರ ಕಾರ್ಯಕಾರೀ ಮಂಡಳಿಯ ಸಭೆಯಲ್ಲಿ ನಿರ್ಣಯಿಸಲಾಯಿತು. ಇದರ ಉಪಾಧ್ಯಕ್ಷರಾದ ಶ್ರೀ ಕುಳುಕುಂದರು ಅಧ್ಯಕ್ಷತೆ ವಹಿಸಿದ್ದರು. ಜನವರಿ ಒಂದರಿಂದ ಸದಸ್ಯರನ್ನು ಸೇರಿಸಿ ದ್ವಿತೀಯ ಅರ್ಧ ವರ್ಷದ ಹೊಸ ಕಾರ್ಯಕಾರೀ ಮಂಡಳದ ಚುನಾವಣೆಯಾಗುವುದು.

ಮಂಗಳೂರು

ಜಿಲ್ಲಾ ಬೋರ್ಡ್ ಸಭೆ:—ದ. ಕ. ಜಿಲ್ಲಾ ಬೋರ್ಡು ಸಭೆಯು ತಾ. ೩೦ನೇ ರವಿವಾರ ದಿ. ಬ. ಕೋ. ಅಧ್ಯಕ್ಷರಾದ ಶ್ರೀ. ಕುಡ್ವ ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಸಭಾ ಸಮಯವಾದ ೧೨ ಗಂಟೆ ಹೊಡೆವಾಗ ಅಧ್ಯಕ್ಷರು, ಆಫೀಸಿ ರೂಮಿನಿಂದ ಸಭಾ ರಂಗಕ್ಕೆ ಬರದಿರಲು, ಶ್ರೀ. ಕೃಷ್ಣ ಶೆಟ್ಟರು ಎದ್ದು ನಿಂತು ಅಧ್ಯಕ್ಷರು ಹಾಜರಾಗದಿರುವುದರಿಂದ ಒಬ್ಬರು ಉಪಾಧ್ಯಕ್ಷರನ್ನು ಬೇರೊಬ್ಬರು ಇನ್ನೊಬ್ಬರನ್ನು ಸೂಚಿಸಿದರು. ಅಷ್ಟರಲ್ಲಿ ಅಧ್ಯಕ್ಷರು ತಮ್ಮ ಆಫೀಸು ಕೋಣೆಯಿಂದ ಹೊರಬಂದು ಸಭಾ ಕಾರ್ಯ ತೊಡಗಿದರು. ಪ್ರಾರಂಭದಲ್ಲಿ ಹೊಸದಾಗಿ ಚುನಾಯಿತರಾದ ಶ್ರೀ: ಪುಟ್ಟುಸ್ವಾಮಿ, ಶಿವರಾಮ ಶೆಟ್ಟಿ, ವೆಂಕಪ್ಪ ಶೆಟ್ಟಿ, ಕೆ. ವಿ. ಗೌಡ, ಮಿತ್ತಂತಾಯ, ಪೈ, ಮಂಜಯ್ಯ ಶೆಟ್ಟಿ, ನಾಗಣ್ಣ ಹೆಗ್ಡೆ, ಕೆ. ಪಿ. ರಾಘವೇಂದ್ರ ರಾವ್, ಕೃಷ್ಣ ಶೆಟ್ಟಿ, ಬಿ: ದಾಮೋದರ ಬಾಳಿಗ, ಕಾಂತಣ್ಣ ಶೆಟ್ಟಿ, ಬಾಲಕೃಷ್ಣ ರೈ ಮತ್ತು, ಶ್ರೀಮತಿಯರಾದ ಅಕ್ಕಮ್ಮ ಮತ್ತು ಸುಶೀಲಾಬಾಯಿ ಉಡುಪ ಇವರು ಪ್ರತಿಜ್ಞೆ ತೆಗೆದುಕೊಂಡರು. ಅಧ್ಯಕ್ಷರು ಹೊಸ ಸದಸ್ಯರನ್ನು ಸ್ವಾಗತಿಸಿ ಸಹಕರಿಸಬೇಕಾಗಿ ಕೇಳಿಕೊಂಡರು. ಈ ಸಭೆಯ ಮುಂದಿದ್ದ ಪ್ರಾಮುಖ್ಯ ವಿಷಯವಾದ ಬಜೆಟ್ ಪಾಸಾಗಲಿಲ್ಲ. ಹೊಸತಾಗಿ ಹಲವು ಮಂದಿ ಸದಸ್ಯರು ಚುನಾಯಿತರಾಗಿದ್ದು, ಅವರೆಲ್ಲರ ಸೂಚನೆ ಅಂಗೀಕರಿಸಲು ಸ್ವಲ್ಪ ಅವಧಿಬೇಕೆಂದು ನಿರ್ಧರಿಸಿ ಅದನ್ನು ಮುಂದುವರಿಸಲಾಯಿತು. ಕಾಸರಗೋಡು ಪುತ್ತೂರು ಕುಂದಾಪುರ ಮಂಗಳೂರು ಉಡುಪಿ ತಾಲೂಕುಗಳ ಪ್ರೊಫೆಶನಲ್ ಟೇಕ್ಸ್ ಅಪೀಲು ಕಮಿಟಿಗಳಿಗೆ ಹೊಸ ಸದಸ್ಯರನ್ನು ಆರಿಸಲಾಯಿತು.

ಉಡುಪಿ ಪರ್ಯಾಯ

ಇದೇ ಬರುವ ಪುಷ್ಯ ಶು. ೧೪ಯ ರವಿವಾರ ತಾರೀಕು ೯—೧—೧೯೪೪ರ ಮೊದಲ್ಗೊಂಡು ಬ. ೫ಯ ಶನಿವಾರ ತಾ ೧೫—೧—೪೪ರ ವರೆಗೆ ಶ್ರೀ ಕೃಷ್ಣ ಸನ್ನಿಧಿಯಲ್ಲಿ ಮಕರ ಸಂಕ್ರಮಣ ಪ್ರಯುಕ್ತ ಸಪ್ತೋತ್ಸವವು ಅವಭೃಥ ಚೂರ್ಣೋತ್ಸವಾದಿ ಯುಕ್ತವಾಗಿ ವಿಶೇಷ ಸಮಾರಂಭದಿಂದ, ಜರಗಲಿರುವುದಲ್ಲದೆ; ನಮ್ಮ ಈ ಪರ್ಯಾಯ ಅವಧಿಯು ಪುಷ್ಯ ಬ. ೭ಯ ಸೋಮವಾರ ತಾ. ೩೭—೧—೧೯೪೪ಕ್ಕೆ ಪರಿಸಮಾಪ್ತಿಯಾಗುವುದು.

ಕ್ರಿಕೆಟ್

ಉಡುಪಿ ಟೀಮಿನವರಿಗೂ ಮಂಗಳೂರು ಎಂ. ಸಿ. ಸಿ. ಟೀಮಿನವರಿಗೂ ಕ್ರಿಕೆಟ್ ಪಂದ್ಯಾಟವಾಗಿ ಉಡುಪಿಯವರು ವಿಜಯಿಗಳಾದರು.

ಪುತ್ತೂರು ತಾಲೂಕು ವರ್ಗದಾರರ ಸಭೆ

ಇದೇ ತಾ, ೧೨ನೇ ಆದಿತ್ಯವಾರ ಹಗಲು ಗಂಟೆ ೨ಕ್ಕೆ ಪುತ್ತೂರು ತಾಲೂಕು ವರ್ಗದಾರರ ಸಭೆಯು ಪುತ್ತೂರು ಸಹಕಾರಿ ಕಟ್ಟಡದಲ್ಲಿ ಜರಗುವುದು. ಸರಕಾರದವರು ಅಕ್ಕಿ ಮತ್ತು ಬತ್ತ ರಿಕ್ವಿಜಿಷನ್ ಮಾಡಿದ ಕುರಿತು ರೆವಿನ್ಯೂ ಬೋರ್ಡಿನ ಹುಕುಂ ವಗೈರೆಗಳ ಕುರಿತ್ತು ವಿವರಿಸಲಾದೀತು. ಅಲ್ಲದೆ ಮುಂದಿನ ಕಾರ್ಯಕ್ರಮದ ಕುರಿತು ಅನುಭವ ಕೊಡಲಾಗುವುದು.

ಜರ್ಮನರಿಂದ ಸಂಧಾನ ಸೂಚನೆ? ಯೂರೋಪಿನ ಮೇಲೆ ದಂಡಯಾತ್ರೆ

ಜರ್ಮನರ ಸಂಧಾನ ಪ್ರಯತ್ನ

ಜರ್ಮನರು ಹಾಗೂ ಮಿತ್ರರು ಎಷ್ಟೇ ನಿರಾಕರಿಸಿದರೂ ಜರ್ಮನರು ಸಂಧಾನದ ಪ್ರಯತ್ನ ಮಾಡಿರುವುದು ನಿಜವಿರುವುದೆಂದು ಬರ್ನದ ರಾಜಕೀಯ ಜನರು ಹೇಳುತ್ತಿರುವರೆಂದು ಜಾರಿಬಿದ್ದ ರಾಯಟರ್ ಸುದ್ದಿಗಾರನ ಹೇಳಿಕೆ. ಮಿತ್ರರು ಜರ್ಮನರಿಗೆ ಶರತ್ತು ಹಾಕದೆ ಶರಣು ಬರಲು ಹೇಳಿದ್ದು, ಜರ್ಮನರು ಆ ತರದ ಸೋಲನ್ನೊಪ್ಪಿಕೊಳ್ಳಲು ಸಿದ್ಧರಾಗದಿರುವುದೇ ಜರ್ಮನರ ನಿರಾಕರಣೆಯ ಕಾರಣವಿದೆಯೆಂದೂ ಆತನ ಹೇಳಿಕೆಯಿರುವುದು. ಜರ್ಮನ್ ಸುದ್ದಿ ಖಾತೆಯು ಸಂಧಾನದೀ ಸುದ್ದಿಯನ್ನು ಸಂತಾಪ ಪೂರ್ವಕ ನಿರಾಕರಿಸಿದ್ದರೂ ಪ್ರಮಾಣಿಕರು ಸರಕಾರೀ ಕಾರ್ಯದ ಮೇಲೆ ಹೋಗಿದ್ದರೆ ಅವರು ಗಡಿದಾಟಿ ಹೋಗುವ ಶಕ್ಯತೆಯಿರುತ್ತಿರಲಿಲ್ಲವೆಂದು ಟ್ರಿಬ್ಯೂನ್ ದಿ ಜಿನೆವಾ ಪತ್ರಿಕೆ ಉಲ್ಲೇಖಿಸಿದೆ.

ಯೂರೋಪಿನ ಮೇಲೆ ದಂಡಯಾತ್ರೆ

ರೂಸ್‌ವೆಲ್ಟ್, ಸ್ಟಾಲಿನ್, ಚರ್ಚಿಲರು ಭೇಟಿಯಾದಾಗ ವಸಂತಮಾಸದ ಆರಂಭದಲ್ಲಿ ಪಶ್ಚಿಮ ಯೂರೋಪಿನ ಮೇಲೆ ದಂಡೆತ್ತಿ ಹೋಗುವ ಬಂದು ಯೋಜನೆಯನ್ನು ಆ ಸಭೆಯಲ್ಲಿ ಚರ್ಚಿಸುವರೆಂದು ತಿಳಿದುಬರುತ್ತದೆ. ಜರ್ಮನಿ ಒಂದು ಪಕ್ಷ ಶರಣು ಬಂದಾಗ ಯಾವ ಶರತ್ತುಗಳನ್ನು ಹಾಕಬೇಕೆಂದು ಆ ಪರಿಷತ್ತಿನಲ್ಲಿ ಆಲೋಚಿಸಲಾಗುವುದೆಂದೂ ಹೇಳಲಾಗಿದೆ.

ಅಷ್ಟಮದ ದಲದ ಪ್ರಗತಿ

ಅಷ್ಟಮ ದಳದವರು ತಮ್ಮ ಹೊಸ ಸಾಂಗ್ರೋ ಸೇತುವೆ ಠಾಣ್ಯವನ್ನು ೧೨ ಮೈಲಿನ ವಿಸ್ತೃತದ ರಣಭೂಮಿಯಲ್ಲಿ ೪ ಮೈಲು ಒಳಗೆ ವಿಸ್ತರಿಸಿರುವರೆಂಬ ಅಧಿಕೃತ ಸುದ್ದಿ. ಈಗ ಸಾಂಗ್ರೋದ ವಾಯುವ್ಯದಲ್ಲಿರುವ ಜರ್ಮನರ ಚಳಿಗಾಲದ ವ್ಯೂಹದ ಮುಖ್ಯ ಸಂರಕ್ಷಣೆಗಳಲ್ಲಿ ಹೊಕ್ಕು ಕರಾವಳಿ ಸೇತುವೆ ಹಾದಿ ಹಿಡಿದು ಸಾಂಗ್ರೋ ನದಿ ದಾಟುತ್ತಿರುವರು. ನದಿಯ ಉತ್ತರದಲ್ಲಿ ಮೂರು ಮೈಲಿನ ಮೇಲಿರುವ ಮಜ್ಞಾ ಗ್ರೋಗ್ನಾ ಈಗ ಅವರ ವಶವಾಗಿದೆ. ಐದನೇ ದಳದವರು ಉತ್ತರಕ್ಕೆ ಒಂದು ಮೈಲು ನುಗ್ಗಿ ಕ್ಯಾಸಲ್ ನೋವೋ ವಶಪಡಿಸಿಕೊಂಡಿರುವರು.

ಸ್ಮಟ್ಸರು ಇಂಗ್ಲೆಂಡಿನಲ್ಲೇಕೆ?

ತ್ರಿಮೂರ್ತಿಗಳ ಭೇಟಿಯ ಸಿದ್ಧತೆ ಆಗಿರುವಾಗ ದಕ್ಷಿಣ ಆಫ್ರಿಕದ ಪ್ರಧಾನ ಮಂತ್ರಿ ಜನರಲ್ ಸ್ಮಟ್ಸರು ದೀರ್ಘಕಾಲದವರೆಗೆ ಲಂಡನಿನಲ್ಲಿರುವರೇಕೆ? ಮುಂದಿನ ಘಟನೆಗಳಿಂದ ಅದು ತನ್ನಿಂದ ತಾನೇ ಸಿದ್ಧವಾಗುವುದು. ಆದರೆ ಲಂಡನಿನ ರಾಜಕೀಯ ವಾತಾವರಣದಲ್ಲಿ ಅದೇ ಮಾತುಕತೆ ನಡೆಯುತ್ತದೆ. ಸ್ಮಟ್ಸರು ಯುದ್ಧ ಶಾಂತಿಗಳ ವಿಚಾರ ವಿಶೇಷ ಅನುಭವವುಳ್ಳ ಧುರೀಣರು. ಎರಡು ತಿಂಗಳ ಹಿಂದೆ ಸ್ಮಟ್ಸರು ಲಂಡನಿಗೆ ಬಂದಿದ್ದರು.

ಬಡೋಗ್ಲಿಯೋ ಮಂತ್ರಿಮಂಡಳದಲ್ಲಿ ಬಿಕ್ಕಟ್ಟು

ಬಡೋಗ್ಲಿಯೋ ಮಂತ್ರಿಮಂಡಳದಲ್ಲಿ ಪುನಃ ಬಿಕ್ಕಟ್ಟು ಉಂಟಾಗುವ ಪರಿಸ್ಥಿತಿ ತಲೆದೋರಿದೆ.

ದ್ವಿತೀಯರಂಗ ತೆರೆಯಲು ರಷ್ಯದ ಒತ್ತಾಯ

ಬ್ರಿಟನ್ ಮತ್ತು ಅಮೇರಿಕಗಳಲ್ಲಿ ಬೇಕಾದಷ್ಟು ಬಲವಿದೆಯೆಂದೂ ಅದ್ದರಿಂದ ಬೇಗನೇ ದ್ವಿತೀಯ ರಂಗ ತೆರೆಯಬೇಕೆಂದೂ ರಷ್ಯ ಒತ್ತಾಯ ಮಾಡುತ್ತಿದೆಯಂತೆ.

ಜಿಬ್ರಾಲ್ಟರಿನಲ್ಲಿ

ಜಿಬ್ರಾಲ್ಟರಿನಲ್ಲಿ ಮಿತ್ರರ ಸಾರಿಗ ಹಡಗಗಳು ಬಂದು ಆಶ್ರಯಪಡೆದಿರುವುದಾಗಿ ಜರ್ಮನರ ಸಾಗರೋತ್ತರ ಸುದ್ದಿ ಸಂಸ್ಥೆ ಸಾರಿದೆ.

ಲೆಬನಾನ್ ಬಗ್ಗೆ ಆಂಗ್ಲ–ಫ್ರೆಂಚರಲ್ಲಿ

ಲೆಬನಾನ್ ಸಮಸ್ಯೆ ಬಗೆಹರಿಯಿತೆಂದು ಈಗ ಹೇಳಲಾಗಿದ್ದರೂ, ಅದರ ಕಾರಣವು ಮಾಯವಾಗಿಲ್ಲವೆಂದು ಲಂಡನಿನ ಟೈಮ್ಸ್ ಪತ್ರಿಕೆ ಬರೆಯುತ್ತದೆ. ಲೆಬನಾನ್‌ನಲ್ಲಿ ಉಂಟಾದ ಚಳವಳದ ಕುರಿತು ಫ್ರೆಂಚರಿಗೂ ಆಂಗ್ಲರಿಗೂ ತಿಕ್ಕಾಟವುಂಟಾಗಿದೆಯೆಂದು ತಿಳಿದುಬರುತ್ತದೆ.

ಚಾಂಗಶೇಯಿಯಲ್ಲಿ ಯುದ್ಧ

ಚೀನದಲ್ಲಿಯ ಚಾಂಗಶೇಯಿಯಲ್ಲಿ ಘನಘೋರ ಕಾದಾಟ ನಡೆದಿದೆ, ಜಪಾನರು ಕಳೆದ ವಾರಾಂತ್ಯದಲ್ಲಿ ಅದನ್ನು ಆಕ್ರಮಿಸಲು ಯತ್ನಿಸಿದರು.

ಟರ್ಕಿ ಭೂಕಂಪ

ಕಳೆದ ಶುಕ್ರವಾರ ಟರ್ಕಿಯಲ್ಲಿ ನಡೆದ ಭೂಕಂಪದಲ್ಲಿ ೨೭೧೯ ಜನರು ಮರಣಹೊಂದಿದರು. ೩೩೨೧ ಜನರಿಗೆ ಸಾಮಾನ್ಯ ಗಾಯಗಳಾಗಿವೆ. ೧೪೨೯ ಮನೆಗಳು ಸಂಪೂರ್ಣ ನಾಶವಾಗಿವೆ. ೧೫೭೩ ಮನೆಗಳು ಕುಸಿದು ಬಿದ್ದಿವೆ.

ಚೀನೀಯರಿಗೆ ಜಯ

ಮಧ್ಯ ಚೀನದಲ್ಲಿ ಚೀನೀ ಸೈನಿಕರಿಗೆ ಮಹತ್ವದ ವಿಜಯ ದೊರೆತಿರುವುದು. ಟಂಗ ಟಂಗ ಸರೋವರದ ಬಳಿ ಜಪಾನೀ ಸೈನಿಕರನ್ನು ಸುತ್ತುಗಟ್ಟಿ ಚೀನೀ ಸೈನಿಕರು ಧಾಳಿಯಿಟ್ಟರು.

ವೆಟಿಕನ್ ಧಾಳಿ

ವೆಟಿಕನ್ ನಗರದ ಮೇಲೆ ಧಾಳಿ ಮಾಡುವುದಿಲ್ಲವೆಂದು ಮಿತ್ರರು ಪೋಪರಿಗೆ ಭರವಸೆ ಕೊಟ್ಟಿರುವರೆಂದು ತಿಳಿದುಬರುತ್ತದೆ.

ಕ್ರಿಮಿಯ ಧಾಳಿ

ಕ್ರಿಮಿಯದ ಉತ್ತರ ಭಾಗದಲ್ಲಿರುವ ಪೆರಿಕೋ ಪ್ರದೇಶದಲ್ಲಿ ರಷ್ಯನರು ಜರ್ಮನರ ವಿರುದ್ಧ ಧಾಳಿಮಾಡಿರುವರು.

ಕಾಮಶಾಸ್ತ್ರದ ಗ್ರಂಥಗಳು

ಅನಂಗರಂಗ ೧—೮—೦
ಸ್ತ್ರೀಪುರುಷರ ಲಕ್ಷಣ, ಸಂಭೋಗ ಕಾಲ ನಿರ್ಣಯ, ರತಿಸಮಯದ ಹಾವಭಾವಗಳು, ದ್ರವಣಾದಿ ಔಷಧಗಳು ಇವೇ ಮೊದಲಾದ ರತಿಶಾಸ್ತ್ರದ ರಹಸ್ಯಮಯ ವಿಷಯಗಳು.

ವಿಕೃತ ಕಾಮ ೧—೮—೦
ಬಾಲ್ಯದ ಕಾಮವಿಕಾರಗಳು, ಸ್ವಸುರತಿ, ಹಿಂಸಾರತಿ, ಪ್ರದರ್ಶನರತಿ, ಸಲಿಂಗರತಿ ಇತ್ಯಾದಿ.

ಪೌರುಷ ೧—೮—೦
ನಪುಂಸಕರೆಂದು ಮರುಗಬೇಡಿ. ಪುನಃ ಪೌರುಷ ಪ್ರಾಪ್ತಮಾಡಿಕೊಳ್ಳಲು ನೂರಾರು ಉಪಾಯಗಳಿವೆ.

ಗರ್ಭನಿರೋಧ (ಅಚ್ಚಿನಲ್ಲಿದೆ) ೧—೮—೦
ಸಂತತಿ ನಿಯಮನಕ್ಕೆ ಸರಿಯಾದ ದಾರಿಬೇಕೆ? ಡಾ| ಗೋಪಾಲ ಕೃಷ್ಣರಾಯರು ಬರೆದ ಈ ಹೊಸ ಪುಸ್ತಕ ಓದಿರಿ.

ದಾಂಪತ್ಯ ದರ್ಶನ ೧—೮—೦
ಸಂಭೋಗ ಸುಖ, ಗಂಡಹೆಂಡಿರಲ್ಲಾಗುವ ಐಕ್ಯ, ಅತಿ ಲಂಪಟತನದ ದುಷ್ಪರಿಣಾಮ, ರತಿ ಸೌಖ್ಯಕ್ಕೂ ಸಂತಾನ ಸುದೃಢತೆಗಳಿಗೂ ಇರುವ ಸಂಬಂಧಗಳ ಬಗ್ಗೆ ದಿ| ಪಂಡಿತ ತಾರಾನಾಥರಾಯರ ಕಾಮ ಮನೋವೈಜ್ಞಾನಿಕ ಗ್ರಂಥ.

ರತಿರಹಸ್ಯ ೧—೮—೦
ತಾರುಣ್ಯದ ಮದ, ಸ್ತನಗಳ ಸೌಂದರ್ಯ, ಸಮಾಗಮ ಶಯನ ಇತ್ಯಾದಿ

ಪ್ರೇಮಕಲಾ ೧—೮—೦
ಅಶ್ಲೀಲವಲ್ಲ! ಶಾಸ್ತ್ರೀಯ ಗ್ರಂಥವೆಂದು ಕೋರ್ಟಿನ ನಿರ್ಣಯವೇ ಆಗಿದೆ.

ಭ್ರಾಂತಿ ಮತ್ತು ಲೈಂಗಿಕ ಶಿಕ್ಷಣ ೧—೮—೦
ಪ್ರಸಿದ್ಧ ಡಾಕ್ಟರುಗಳ ಮೂರು ಶಾಸ್ತ್ರೀಯ ಪುಸ್ತಕಗಳು: ಉನ್ಮಾದ, ವೇಶ್ಯಾವೃತ್ತಿಯ ಹಾವಳಿ ಲೈಂಗಿಕ ಹಾಗೂ ಗುಪ್ತ ರೋಗಗಳ ಚಿಕಿತ್ಸೆ ....

ವಿ. ಪಿ. ವೆಚ್ಚ ಬೇರೆ. ನಮ್ಮ ಕ್ಯಾಟಲಾಗಿಗೆ ಒಂದಾಣೆ ಅಂಚೇಚೀಟು ಕಳಿಸಿರಿ.

ಸಮಾಜ ಪುಸ್ತಕಾಲಯ ಧಾರವಾಡ.

ಅಖಿಲ ಕರ್ನಾಟಕ ಕಿರಿಯರ ಸಮ್ಮೇಲನ, ಉಡುಪಿ

(ಜನವರಿ ತಾ. 15, 16, 17)

ಈ ಸಮ್ಮೇಲನದ ಅಂಗವಾಗಿ ಏರ್ಪಾಡಾಗಿರುವ ಸ್ಪರ್ಧೆಗಳಲ್ಲಿ ಕಳುಹಿಕೊಡಬೇಕಾದ ಮತ್ತು ಪ್ರತ್ಯಕ್ಷ ಭಾಗವಹಿಸಬೇಕಾದ ಎರಡು ವರ್ಗಗಳಿವೆ. (೧) ಕಥೆ, ಕವಿತೆ, ಕಸೂತಿ, ಕೈಗಾರಿಕೆ, ಚಿತ್ರ, ಹಸ್ತಾಕ್ಷರ ಪತ್ರಿಕೆ (೨) ಭಾಷಣ, ಸಂಗೀತ, ವೇಷಪಲ್ಲಟ, ನೃತ್ಯ, ಓಟ, ಎತ್ತರನೆಗೆತ, ದೂರನೆಗೆತ.

(೧) ಕಥೆ ಸ್ವತಂತ್ರವಾಗಿದ್ದು ಮುದ್ರಿತ ಅಥವಾ ಹಸ್ತಾಕ್ಷರ ಪತ್ರಿಕೆಗಳಲ್ಲಿ ಅಪ್ರಕಟಿತವಿದ್ದು, ಸಾಮಾಜಿಕ ಅಥವಾ ನಿತ್ಯ ಜೀವನದ ಘಟನೆ ಕಥಾ ವಸ್ತುವಾಗಿರಬೇಕು. ಅರ್ಧ ಹಾವಿನ ೮ ಪುಟಗಳಿಗೆ ಮಿಕ್ಕಿರಬಾರದು

(೨) ಕವಿತೆ ಸ್ವತಂತ್ರ ಹಾಗೂ ಅಪ್ರಕಟಿತವಿರಬೇಕು. ಪ್ರಾಸಕ್ಕಿಂತ ಭಾವಕ್ಕೇನೇ ಹೆಚ್ಚಿನ ಪ್ರಾಧಾನ್ಯತೆ ಕೊಡಲಾಗುವುದು

(೩) ಕಸೂತಿ ತಮ್ಮ ಸ್ವಂತ ರಚನೆಯಾದದಾಯಿತು.

(೪) ಕೈಗಾರಿಕೆ-ಕಸೂತಿಯ ನಿಯಮವೇ ಇದಕ್ಕೂ ಅನ್ವಯಿಸುತ್ತದೆ

(೫) ಚಿತ್ರ ಈ ಕೆಳಗಿನವುಗಳಲ್ಲಿ ಯಾವುದಾದರೊಂದನ್ನು ಅಥವಾ ಒಂದಕ್ಕೂ ಹೆಚ್ಚಿಗೆ, ಸ್ವತಃ ಬರೆದು ಕಳುಹಿಸಬೇಕು —೧ ಹಳ್ಳಿಯ ಹೆಂಗಸು, ಮನೇ ಮುಂದೆ ಕಸ ಗುಡಿಸುತ್ತಿದ್ದಾಳೆ, ಅವಳ ಕೂಸು ಸೆರಗೆಳೆಯುತ್ತಿದೆ, ಅಲ್ಲಿಯ ವಾತಾವರಣ. ೨ ಗುಡಿಸಲು ಇದಿರ ಬಾವಿಯಲ್ಲಿ ನೀರೆಳೆಯುವ ಹೆಂಗಸು, ನೀರಿಗಾಗಿ ಬಂದು ಕಾಯುತ್ತಿರುವ ಬೇರಿಬ್ಬರು. ೩. ಕೊಟ್ಟಿಗೆಯಿಂದ ಹೊರಬರುತ್ತಿರುವ ದನದ ಹಿಂಡು, ಹಾದಿ ತಪ್ಪದಂತೆ ಕೋಲು ಹಿಡಿದು ಅಡ್ಡ ನಿಂತಿರುವ ಹುಡುಗ, ಹಿಂದೆ ಒಂದು ನಾಯಿ ೪ ಮೆಟ್ಟುಕತ್ತಿಯ ಮೇಲೆ ತರಕಾರಿ ಹಚ್ಚುತ್ತಿರುವಾಕೆ, ಆಕೆಗೆ ಕಂಟೆ ಕೊಡುತ್ತಿರುವ ಮಗು ೫ ಗುಡಿಸಲ ಮಾಡು, ಯುವಕನು ಮಾಡು ಬಿಗಿಯುತ್ತಿದ್ದಾನೆ, ಕೆಳಗೆ ನಿಂತ ಹೆಂಗಸು ನೆರವಾಗುತ್ತಿದ್ದಾಳೆ ೬ ತಮ್ಮ ಕೂಟಕ್ಕೆ ಮುದುಕ ಬಂದಾಗ ಮಕ್ಕಳ ಚೇಷ್ಟೆ, ಮುದುಕನೂ ಸರಸವಿನೋದಿ, ಅವನ ಪ್ರತಿಕ್ರಿಯೆ ೭ ದಾರಿ ಕಾಯುತ್ತ ನಿಂತಿದ್ದ ಮಗು ಅಪ್ಪನ ಕೈಯಿಂದ ಗೊಂಬೆ ಕಸಕೊಳ್ಳುತ್ತಿದೆ ೮ ಮಗುವಿಗೆ ಜಡೆಕಟ್ಟುತ್ತಿರುವ ತಾಯಿ

(೬) ಹಸ್ತಾಕ್ಷರ ಪತ್ರಿಕೆ, ಕರ್ನಾಟಕದಲ್ಲಿರುವ ಎಲ್ಲಾ ಕೈಬರಹ ಪತ್ರಿಕೆಗಳೂ ಈ ಸ್ಪರ್ಧೆಯಲ್ಲಿ ಭಾಗವಹಿಸಬಹುದು

೨ನೇ ವಿಭಾಗದ ಭಾಷಣದ ವಿಷಯವನ್ನೂ ಇತರ ಎಲ್ಲಾ ಸ್ಪರ್ಧೆಗಳ ಕಾಲ ನಿರ್ಬಂಧ, ರೀತಿ ಮೊದಲಾದುವುಗಳನ್ನೂ ಆಯಾ ಸ್ಪರ್ಧೆಗಳ ಸಮಯದಲ್ಲೇ ತಿಳಿಸಲಾಗುವುದು

ಮೇಲಿನ ಎಲ್ಲಾ ಸ್ಪರ್ಧೆಗಳಲ್ಲಿ ಭಾಗವಹಿಸುವವರೂ ೨೦ ವರ್ಷದೊಳಗಿನ ವಯಸ್ಸಿನವರಾಗಿರಬೇಕು

ಸ್ಪರ್ಧೆಗೆ ಕಳುಹತಕ್ಕ ಸಾಹಿತ್ಯಗಳೂ ಪ್ರತ್ಯಕ್ಷ ಸ್ಪರ್ಧೆಯಲ್ಲಿ ಭಾಗವಹಿಸುವವರ ಹೆಸರು ವಿಳಾಸಗಳೂ ೨೫–೧೨–'೪೮ರೊಳಗೆ ಸಮ್ಮೇಲನದ ಸ್ವಾಗತಸಮಿತಿಯ ಕಾರ್ಯದರ್ಶಿಯ ಕೈಸೇರಬೇಕು

೩೦ನೇ ಕನ್ನಡ ಸಾಹಿತ್ಯ ಸಮ್ಮೇಳನ

ಇದು ದಶಂಬರ ೨೬, ೨೭, ೨೮ನೇ ತಾರೀಕುಗಳಲ್ಲಿ ಶ್ರೀ। ದ ರಾ ಬೇಂದ್ರೆಯವರ ಅಧ್ಯಕ್ಷತೆಯಲ್ಲಿ ಶಿವಮೊಗ್ಗದಲ್ಲಿ ಜರಗುವುದು ಸಮ್ಮೇಳನದ ಅಂಗವಾಗಿ ಅಖಿಲ ಕರ್ನಾಟಕ ಸಂಘ ಸಮ್ಮೇಳನ, ರೈತರ ಕೂಟ, ಮಹಿಳಾ ಸಮ್ಮೇಳನ, ವಿವಿಧಮನರಂಜನೆಗಳು ಇರುವವು

ಡಿಸೆಂಬರ್ ೨೭ನೇ ತಾರೀಕು ಅಖಿಲ ಕರ್ನಾಟಕ ಸಂಘ ಸಮ್ಮೇಳನವು ನಡೆಯುವುದು. ನಾಡಿನ ಎಲ್ಲಾ ಸಂಘಗಳೂ ತಮ್ಮ ಪ್ರತಿನಿಧಿಗಳನ್ನು ಕಳುಹಿಸಿಕೊಡಬೇಕಾಗಿ ಪ್ರಾರ್ಥನೆ. ಈ ಸಮ್ಮೇಳನಕ್ಕೆ ನಿರ್ಣಯಗಳನ್ನೂ, ಪ್ರತಿನಿಧಿಗಳ ಹೆಸರುಗಳನ್ನೂ ಡಿಸೆಂಬರ್ ತಾ ೨೦ರ ಒಳಗೆ ತಿಳಿಸಬೇಕು

ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಸಾರ್ವಜನಿಕರಿಗಾಗಿ ಲಾವಣಿ, ಆಶು ನಾಟಕ, ಆಶು ಕವಿತಾ ಸ್ಪರ್ಧೆಗಳನ್ನು ನಡೆಯಿಸಬೇಕೆಂದು ನಿಶ್ಚಯಿಸಿದೆ. ಲಾವಣಿ ಸ್ಪರ್ಧೆಯು ಡಿಸೆಂಬರ್ ತಾ ೨೬ರಲ್ಲಿಯೂ, ಆಶುನಾಟಕ ಸ್ಪರ್ಧೆಯು ಡಿಸೆಂಬರ್ ೨೭ರಲ್ಲಿಯೂ, ಆಶು ಕವಿತಾ ಸ್ಪರ್ಧೆಯು ಡಿಸೆಂಬರ್ ೨೮ರಲ್ಲಿಯೂ ನಡೆಯುವುದು.

ಮಹಿಳೆಯರಿಗಾಗಿ ತಾ. ೨೫ರಂದ ರಂಗೋಲಿ ಸ್ಪರ್ಧೆಯೊಂದನ್ನು ಏರ್ಪಡಿಸಿದೆ. ಈ ಸ್ಪರ್ಧೆಗಳಲ್ಲಿ ಭಾಗವಹಿಸುವವರು ದಶಂಬರ ತಾ ೧೫ರೊಳಗೆ ತಿಳಿಸಬೇಕು

ರೈಲುಬಂಡಿಗಳ ಸಮಯ

ಗಾಡಿಗಳು.	ಮಂಗಳೂರಿಂದ ಹೊರಡುವ ಸಮಯ.	ಮಂಗಳೂರಿಗೆ ತಲಪುವ ಸಮಯ.
ಗುಡ್ಸ್ ಬಂಡಿ	ಬೆಳಗ್ಗೆ ೬-೨೫,	ರಾತ್ರಿ ೭-೩೦
ಪಟೆಲ್ ಕನ್ನಾನ್ನೂರು ಪರಿಯಂತ ಮಾತ್ರ	ಸಾಯಂ ೫-೫೫	ಬೆಳಗ್ಗೆ ೯-೨೫
ಮಲಬಾರ್ ಎಕ್ಸ್‌ಪ್ರೆಸ್	ಬೆಳಗೆ ೭-೫,	ಸಾಯಂ ೭

ಕೊಲೆರಾ

ಮಂಗಳೂರು ನಗರದ ಆಸುಪಾಸುಗಳಲ್ಲಿ ಉಳ್ಳಾಲ, ವೆರ್ಮನ್ನೂರುಗಳಲ್ಲಿ ಕೊಲೆರಾ ಹಾವಳಿ ವಿಶೇಷವಾಗಿದೆಯೆಂದು ತಿಳಿದು ಬರುತ್ತದೆ

ಕುಂದಾಪುರ ಚುನಾವಣೆ

ಇಲ್ಲಿಂದ ಡಿ ಬೋ.ಗೆ ಶ್ರೀಮತಿ ಸಾಕೀಲಾಬಾಯಿ ಉಡುಪರು ಪ್ರತಿನಿಧಿಗಳಾಗಿ ಚುನಾಯಿತರಾಗಿದ್ದಾರೆ.

FIRST AND FOREMOST

FIRST AND FOREMOST among the ideals of the CANARA BANK is the ideal of Service to its Customers

ESTD. 1906.

CANARA BANK LTD.

WANTED

WANTED a District Organiser for SOUTH KANARA and Special Agents on liberal Commission and/or allowance basis Suitable special encouragements will be given to deserving and experienced men who can furnish a reasonable guarantee. Selection will be made by personal interview.

Apply IMMEDIATELY TO

The General Manager,

The Mysore Insurance Company, Limited,

AND

The Mysore Provident Insurance Company, Limited,

BANGALORE CITY.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧ ಪರಿಣಾಮಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಗೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. **ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.**

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE

The Joint Booking Office, KODIALBAIL.

The Bank of Mangalore Limited, Mangalore.

ESTD. 1931

HEAD OFFICE Mangalore — *BRANCHES* Moodabidri & Padubidri.

The Bank Undertakes to Collect Cheques, Demand and Documentary Bills at Best Competitive Rates.

ISSUES DRAFTS ON ALL IMPORTANT TOWNS IN THE DISTRICT

and also on

BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.

at very favourable rates

All kinds of inland banking business undertaken

THE CANARA BANKING CORPORATION Ltd

(Incorporated in British India with limited liability)

Estd.] Head office: UDIPI [1906.

(Branches & Agencies in all principal cities of India)

Authorised capital	Rs. 25,00,000.
Issued & Subscribed	Rs. 16,00,000.
Paid up Capital	Rs. 10,06,000.
Reserves	Rs. 3,85,000.

Advances are made against approved securities and bills purchased or collected at most favourable rates. For further particulars please apply tothe nearest Branch.

ಜೀವವಿಮೆ ಮಾಡುವ ಪ್ರಯೋಜನವು ಇಂದು ಹಿಂದಿಗಿಂತ ಅಧಿಕವಾಗಿದೆ.

ದಿ ಬಾಂಬೆ ಲೈಫ್ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಇದರಲ್ಲಿ ಒಂದು ಪಾಲಿಸಿ ಪಡೆದು

ಈಗಲೇ ನೀವು ನಿಮ್ಮನ್ನು ಮತ್ತು ನಿಮ್ಮನ್ನು ಹೊಂದಿಕೊಂಡಿರುವವರನ್ನು ರಕ್ಷಿಸಿಕೊಳ್ಳಿರಿ!

ಪ್ರತಿನಿಧಿಗಳಿಲ್ಲದ ಸ್ಥಳಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಇನ್ಶೂರ್ ಮಾಡಲು ಅಥವಾ ಮಾಹಿತಿ ತಿಳಕೊಳ್ಳಲು ದಯಮಾಡಿ ಬರೆಯಿರಿ!

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಆಶ್ರಿತ ಸಂಸ್ಥಾನ ಸಹಿತವಾದ ದಕ್ಷಿಣ ಹಿಂದುಸ್ಥಾನದ ಪ್ರಾಮುಖ್ಯ ಏಜೆಂಟರು:

ದಿ ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ ದ. ಕನ್ನಡ

—: ಅಥವಾ ಅವರ ಈ ಕೆಳಗಿನ ಯಾವುದಾದರೂ ಶಾಖೆಯಲ್ಲಿ ವಿಚಾರಿಸಿರಿ —

ಬೆಂಗಳೂರು ಬೊಂಬಾಯಿ ಮದ್ರಾಸು ಕಲ್ಲಿಕೋಟೆ ಮಂಗಳೂರು ಮತ್ತು ತ್ರಿವೇಂದ್ರಂ

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವ ವಿಧದ ದೋಷಗಳನ್ನು ಗುಣಪಡಿಸುವ ದಿವ್ಯ ಔಷಧಿ. ಗರ್ಭವತಿಯಾಗಿದ್ದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು:—

(1) ಡಾಕ್ಟರ್ ವಿ. ಟಿ. ಕಾಮತ್, ರಥಬೀದಿ. (2) ರಾಘುವೇಂದ್ರ ಶೈ, ರಥಬೀದಿ. (3) ದಿ ಕರ್ನಾಟಕ ಸ್ಮಿಥ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಸಿ. ಪಿ. ಟಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಶಾಖೆ:—1. ಮರಾಠ ಗಲ್ಲಿ ಹುಬ್ಬಳ್ಳಿ.
2. 86 ಫ್ಯಾಕ್ಟರೀಸ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಮೃತ್ಯುಂಜಯ ರಸ. ಕೊಲೆರಾ ರೋಗಕ್ಕೆ ಸಿದ್ಧೌಷಧ. ಪಂಚವಟಿ ಮಾತ್ರೆ.

ಸೇವನಾ ಕ್ರಮಗಳು ಔಷಧಿಯೊಡನೆ ಇದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿ

SWADESHABHIMANI

ESTD. **1906**

[ಸಂಪುಟ 37] ತಾರೀಕು 10—12—1943 [ಸಂಚಿಕೆ 49]

ಒಂದೆಡೆ ಉಪವಾಸ! ಇನ್ನೊಂದೆಡೆ ಭೋಗವಿಲಾಸ!

ಕಲ್ಕತ್ತದ ದರಿದ್ರ ಶ್ರೀಮಂತರ ಚಿತ್ರಗಳು!

ಸರ್ ಜ್ವಾಲಾ ಪ್ರಸಾದರ ಲೀಲೆ!

'ಕರಿಯ, ಬತ್ತಿದ, ಅರ್ಧ ನಗ್ನ ಮೃತಶರೀರಗಳ ರಾಶಿ ಸಮಾಧಿಯನ್ನು ಕಾಯುತ್ತಿವೆ, ಹದಿನಾಲ್ಕು ವರ್ಷ ಪ್ರಾಯದ ಒಬ್ಬ ಬಾಲಕನ ಹತ್ತು ವರ್ಷ ಪ್ರಾಯದ ಓರ್ವ-ಬಾಲಿಕೆಯ ಮೃತ ಶರೀರ ವೆಲ್ಲೆಸ್ಲಿ ಬೀದಿಯ ಪಾರ್ಕಿನ ಬಳಿ ಬಿದ್ದಿತ್ತು, ಇತ್ತೀಚೆಗೆ ಕಲ್ಕತ್ತದಲ್ಲಿ ಹಿಂದಿನ ಘೋಷಣವಿಲ್ಲ ಪ್ರಕೃತಿಯೇ ಕಲ್ಕತ್ತದ ಬಂಗಾಳದ ಉಪವಾಸಕ್ಕೆ ನಿವೃತ್ತಿ ಮಾಡಿತು ಉಪವಾಸವು ಲಕ್ಷಾಂತರ ಮಂದಿಯನ್ನು ಸಾವಿನ ದವಡೆಗೆ ನೂಕಿ ಪರಿಹಾರ ಮಾಡಿತು, ಈಗ ಮುಂದಿನ ಬೆಳೆ ಆಗುವ ಕಾಲ ಬಂದಿದೆ ಬಂಗಾಳದಲ್ಲಿ ಈ ವರ್ಷದ ಈ ಬೆಳೆ ಬಹಳ ಚನ್ನಾಗಿದೆ. ಹೀಗೆ ಎರಡು ವಿಧಗಳಿಂದಲೂ ಪ್ರಕೃತಿಯೇ ಉಪವಾಸ ಮಗ್ನ ಬಂಗಾಳವನ್ನು ಸಂಕಷ್ಟದಿಂದ ಪಾರುಮಾಡಿತು

ಶ್ರೀಮಂತರ ಭೋಗವಿಲಾಸ

'ಆದರೂ ಈಗ ದಾರಿ ಬದಿಯಲ್ಲಿ ನಿಂತು ಬೇಡುವ ಜನರು ಅರ್ಧ ನಗ್ನ ಉಪವಾಸಿಗಳು ಬಹಳ ಇದ್ದಾರೆ ಹಿಂದಿನದಕ್ಕಿಂತ ಈಗ ಕಡಿಮೆಯೆಂದು ಮಾತ್ರ ಹೇಳಿದೆ ಈಗಲೂ ಬೇಕಾದಷ್ಟು ಮಂದಿ ಇರುವರು ಅವರು ಬೇಡುವ ಸ್ವರ ಬಹಳ ವಿಕಾರ ಕರ್ಕಶ ಕರುಣಾಮಯವಿರುತ್ತದೆ ಎಂಥಾ ಕಲ್ಲೆದೆಯಾದರೂ ಅವರ ದನಿ ಕೇಳಿ ಒಡೆದುಹೋಗಬೇಕು ಕಲ್ಕತ್ತದಲ್ಲಿ ಈಗಲೂ ಕಳ್ಳ ಸಂತೆ ನಡೆಯುತ್ತಲೇ ಇದೆ ಅಕ್ಕಿ ಸಿಗಬೇಕಾದರೆ ಕಳ್ಳ ಸಂತೆಯೇ ಗತಿ ಕಲ್ಕತ್ತಕ್ಕೆ ಬಂಗಾಳಕ್ಕೆ ಇಷ್ಟು ಅಕ್ಕಿ ಹೊರಗಿಂದ ಬಂತು, ಸ್ವತಃ ಬಂಗಾಳದಲ್ಲಿಯೇ ಇಷ್ಟೊಂದು ಬೆಳೆಯಿತು, ಇದೆಲ್ಲಾ ಏನಾಯಿತು ಎಂದು ಕೇಳಿದರೆ ಅಧಿಕಾರಿಗಳು ನಿರುತ್ತರರಾಗುತ್ತಾರೆ

'ಕಲ್ಕತ್ತದ ಸಾಮಾನ್ಯ ಜನರು ಹೀಗೆ ರಾಶಿ ರಾಶಿಯಾಗಿ ಉಪವಾಸದಿಂದ ಸತ್ತುಹೋದರೂ ಅಲ್ಲಿನ ಶ್ರೀಮಂತರು ಈ ವರ್ಷ ಹಿಂದೆಂದೂ ಕನವರಿಸಿರದಷ್ಟು ಐಶ್ವರ್ಯಗಳಿಸಿದ್ದಾರೆ ಅವರು ಬೇಕಾದಷ್ಟು ಸುಖಭೋಗಮಗ್ನರಾಗಿ ಮೆರೆಯುತ್ತಾರೆ ತಿನ್ನುವುದು ಕುಡಿಯುವುದು ಬೇಕಾದಷ್ಟು ಸುಖಭೋಗ ಮಗ್ನರಾಗಿ ಮೆರೆಯುತ್ತಾರೆ ಸುಗಂಧ ದ್ರವ್ಯದಂಗಡಿಗಳಲ್ಲಿ, ಸೀರೆ ಆಭರಣಗಳ ಅಂಗಡಿಗಳಲ್ಲಿ, ತಿಂದು ಕುಡಿದು ತೇಗುವ ಹೋಟೇಲುಗಳಲ್ಲಿ ಹೀಗೆ ಎಲ್ಲಾ ವಿಲಾಸ ಭವನಗಳಲ್ಲಿಯೂ ಸರಾಗವಾಗಿ ಮೊದಲಿಗಿಂತ ಹೆಚ್ಚಿಗೆ ವ್ಯಾಪಾರ ನಡೆಯುತ್ತಾ ಇದೆ. ಇತ್ತೀಚೆಗೆ ಚೀನೀಯರ ತಿಂದು ಕುಡಿದು ತೇಗುವ ರೆಸ್ಟೋರೆಂಟುಗಳು ಕೆಲವು ಕಲ್ಕತ್ತದಲ್ಲಿ ಹೆಚ್ಚಾಗಿ ಬಂದಿವೆ, ರಾಶಿ ರಾಶಿಯಲ್ಲಿ ಲಕ್ಷಾಂತರ ಜನ ಸಾಯುತ್ತಿದ್ದರೂ ವಿಲಾಸ ವಿಭ್ರಮಗಳಿಗೆ, ಶ್ರೀಮಂತರ ಸುಖ ಭೋಗಗಳಿಗೆ ಕಡಿಮೆಯಿಲ್ಲ.

ಬದುಕುವ ಹಕ್ಕು ಬೇಕು

'ತರುಣ ಜನಾಂಗ, ಬಂಗಾಳದ ಯುವಕ ಜನಾಂಗ ರಾಜಕೀಯವನ್ನು ಮರೆತಿದೆ. ಅವರಿಗೆ, 'ಬದುಕಬೇಕು' ಎಂಬ ಒಂದೇ ರಾಜಕೀಯ ತಲೆಗೆ ಹತ್ತಿದೆ. ಅದಕ್ಕಿಂತ ಭಿನ್ನವಾದ, ಅದಕ್ಕಿಂತ ಉತ್ತಮವಿರಲಿ, ಕೀಳಿರಲಿ ಯಾವುದೇ ರಾಜಕೀಯವೂ ಅವರಿಗೆ ಬೇಡ. ತಮ್ಮ ಜನರು ನಿರಪರಾಧೀ ಜನರು ನೊಣಗಳಂತೆ ಲಕ್ಷಾಂತರ ಮಂದಿ ದಿನ ದಿನ ಉಪವಾಸ ಬಿದ್ದು ನರಳಿನರಳಿ ಸತ್ತುದನ್ನು ನೋಡಿ ಅವರ ಹೃದಯವಿಂದು ಕಲ್ಲಾಗಿದೆ ಓರ್ವ ಬಂಗಾಳೀ ತರುಣಿ ಹೇಳಿದಳು 'ಬಂಗಾಳ ಪಟ್ಟ ಕಷ್ಟ, ಈಗಲೂ ಪಡುತ್ತಿರುವೀ ಸಂಕಷ್ಟ ರಾಜಕೀಯವನ್ನು ಮಾರಿಬಿಟ್ಟಿದೆ ಬಂಗಾಳಕೊಲ್ಲಿಯ ಅಗಾಧ ಜಲರಾಶಿಯ ಅಡಿಯಲ್ಲಿ ಅಟ್ಲಾಂಟಿಕ್ ಶಾಸನ ಹುಗಿಯಲ್ಪಟ್ಟಿದೆ ನಮ್ಮ ನಿರ್ಗತಿಕ ಜನರನ್ನು ಸಮಾಧಿಗೇರಿಸಿದಕ್ಕಿಂತ ಸಾವಿರ ಸಲ ಹೆಚ್ಚು ನಾವು ಪ್ರಜಾಪ್ರಭುತ್ವವನ್ನು ಹೂತಿಟ್ಟಿದ್ದೇವೆ ನಮ್ಮೊ ದುರಂತ ನೋಡಿ 'ರೂಸ್‌ವೆಲ್ಟರ ನಾಲ್ಕು ಸ್ವಾತಂತ್ರ್ಯಗಳು' ಎಂಥಾ ಅಬದ್ಧ ಮಾತುಗಳೆಂದು ನಮಗೆ ಹೊಳೆಯಿತು ಬದುಕುವುದಕ್ಕೆ ನಮಗೆ ಸ್ವಾತಂತ್ರ್ಯವಿಲ್ಲ! ಬಂಗಾಳದಲ್ಲಿ ಸಾವಿಂದು ನೋಡುವುದೇನನ್ನು, ರೂಸ್‌ವೆಲ್ಟರು 'ನಾಲ್ಕು ಸ್ವಾತಂತ್ರ್ಯಗಳ'ಲ್ಲಿ ಹೇಳಿದ್ದೇನನ್ನು? ಆಧುನಿಕ ರಾಷ್ಟ್ರದ ಪ್ರಾಥಮಿಕ ಹಕ್ಕು, ಬದುಕಲಿರುವ ಸ್ವಾತಂತ್ರ್ಯ, ಅದೇ ನಮಗಿಲ್ಲ, ಬಂಗಾಳದ ಜನರಿಗಿಲ್ಲ''

ಹೀಗೆಂದು ಶ್ರೀ ಜಿ ಎನ್ ಸಹ್ನಿ ಕಲ್ಕತ್ತವನ್ನು ಸಂದರ್ಶಿಸಿ ಬಂದವರು ಬರೆದಿದ್ದಾರೆ

ಜ್ವಾಲಾ ಪ್ರಸಾದರ ಲೀಲೆ

'ಸರಕಾರದ ಆಹಾರ ಮಂತ್ರಿಗಳು ಸರ್ ಜ್ವಾಲಾ ಪ್ರಸಾದರು, ಕೌನ್ಸಿಲ್ ಓಫ್ ಸ್ಟೇಟಿನಲ್ಲಿ ಬಹಳ ಚಂದವಾಗಿ ಮಾತನಾಡಿ ಬಂಗಾಳದ ಬರಗಾಲದ ಸಮಸ್ಯೆ ಪರಿಹಾರ ಮಾಡಿದ ಹಾಗೆಯೇ ಎಂದು ಹೇಳಿದರು, ಸರಕಾರೀ ಸದಸ್ಯರು 'ಹೌದು ಬಸವಣ್ಣ'ಗಳು ತಲೆ ಅಲ್ಲಾಡಿಸಿದರು ಇಷ್ಟು ಹೇಳಿದ್ದರಿಂದ ಕೌನ್ಸಿಲ್ ಓಫ್ ಸ್ಟೇಟಿನ ಸದಸ್ಯರು ಸಮಾಧಾನಪಟ್ಟುಕೊಂಡಿದ್ದರೆ ಬಹಳ ವಿಚಿತ್ರವೆನಬೇಕು ಭಾರತದ ಆಹಾರ ಸಮಸ್ಯೆ, ಬಂಗಾಳದ ಉಪವಾಸ ಸಮಸ್ಯೆ ಜ್ವಾಲಾ ಪ್ರಸಾದರ ಇಷ್ಟೊಂದು ಮಾತುಗಳಿಂದ ಪರಿಹಾರವಾಗುವುದಿದ್ದರೆ ಮತ್ತೇನುಳಿಯಿತು? 'ಹೌದು ಬಸವಣ್ಣ'ಗಳನ್ನು ಒಪ್ಪಿಸಲು ಇನ್ನೆಷ್ಟು ಮಾತು ಖರ್ಚುಮಾಡಬೇಕು? ಇನ್ನೆಷ್ಟು ಬುದ್ಧಿ ವ್ಯಯಮಾಡಬೇಕು?

ಆದ್ದೂ ಯುದ್ಧಾನಂತರವೊ?

'ಕೆಳಗಿನ ಮನೆಯಲ್ಲಿ, ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ ಆಹಾರ ಸಮಸ್ಯೆ ಕುರಿತು ಚರ್ಚೆ ತೀವ್ರವಾಗಿ, ಬಂಗಾಳದ ಇಂದಿನ ದುರವಸ್ಥೆ ಕಾರಣರಾರು ಎಂಬ ಬಗ್ಗೆ ವಿಚಾರಣೆಯಾಗಬೇಕೆಂದಾಗಿ, ಈ ಬಗ್ಗೆ ಒಂದು ವಿಚಾರಣಾ ಮಂಡಳವಾಗಬೇಕೆಂದು ಕೇಳಲ್ಪಟ್ಟು, ಸರಕಾರವು 'ರೋಯಲ್ ಕಮಿಶನ್' ಸ್ಥಾಪಿಸಬಹುದೆಂದು ಒಪ್ಪಿದ್ದೂ, ಸದಸ್ಯರೂ ರೋಯಲ್ ಕಮಿಶನ್ ಕೂಡದು, ಜನತೆಯ ಪ್ರತಿನಿಧಿಗಳಿಂದ ಕೂಡಿದ ಕಮಿಶನ್ ಆಗಬೇಕೆಂದು ಹಠ ಹಿಡಿದದ್ದೂ ಪತ್ರಿಕೆಗಳಲ್ಲಿ ತುಂಬಾ ಬಂದಿದೆ. ಆ ಮೇಲೆ ಮೇಲಿನ ಮನೆಯ 'ಕೌನ್ಸಿಲ್ ಓಫ್ ಸ್ಟೇಟಿ'ನ ರೋಯಲ್ ಕಮಿಶನಿಗೆ ಒಪ್ಪಿದ್ದಾರೆ! 'ಹೌದು ಬಸವಣ್ಣ'ಗಳು ಯಾವುದಕ್ಕೂ ಒಪ್ಪುತ್ತಾರೆ ಈ ಕಮಿಶನರಾದರೂ, 'ಒಂದು ಯೋಗ್ಯ ದಿನ ನೇಮಕವಾಗುವುದೆ'ಂದೂ 'ಭಾರತದ ರಾಜಕೀಯದಿಂದ ಸಂಪೂರ್ಣ ಹೊರತಾ'ಗಿರುವುದೆಂದೂ ತಿಳಿಸಲಾಗಿದೆ ಒಹಳ ಚಂದವಾದ ಶಬ್ದವಿದು ಈ ಕಮಿಟಿಯನ್ನು ಸ್ಥಾಪಿಸಲು 'ಯೋಗ್ಯವಾದ ದಿನ'ವಿನ್ನಾವುದೋ? ನಾಳೆಯೋ? ಬರುವ ವರ್ಷವೊ? ಅಥವಾ ಯುದ್ಧಾ ನಂತರವೊ? ಹಾಗೆ ಕಮಿಶನನ್ನು ನೇಮಕ ಮಾಡಿದಾಗ ಭಾರತವು ಇಡೀ ಜಗತ್ತೂ ಇಂದಿನೀ ದುರಂತವನ್ನು ಸಂಪೂರ್ಣ ಮರೆತುಬಿಟ್ಟೀತು ಕಮಿಟಿ ಮಾಡುವುದು ಅಪರಾಧಿಗಳಿಗೆ ಶಿಕ್ಷೆ ಕೊಡಲು, ಅಪರಾಧಿಗಳಿಗೂ ಆಗ ಸ್ವತಃ ಯಮ ಧರ್ಮರಾಯನೇ ಶಿಕ್ಷೆ ಕೊಡಬಹುದು ಆದ್ದರಿಂದಲೇ ಸಾರ್ವಜನಿಕರು ಹೇಳುವುದು, ಈಗಲೇ ಕಮಿಟಿ ಮಾಡಬೇಕೆಂದು "

'ಫೋರಂ ಪತ್ರಿಕೆ ಹೀಗೆಂದು ಉಲ್ಲೇಖಿಸುತ್ತದೆ

'ಗವರ್ನರರು ನನ್ನೆದೆಗೆ ವಿಷ ಪೂರ್ಣ ಬಾಣ ಹೂಡಿದ್ದಾರೆ'

'ಹೊಸ ವರ್ಷದ ದಿನ ನರಕದ ಬಾಗಿಲು ತೆರೆಯದಿರಲಿ'

ರಾಜಾಜಿ ಭಾಷಣ

'ಈ ಅಸಹ್ಯವಾದ ಶಾಸನ (ಮದ್ಯಪಾನ ನಿಷೇಧ, ಕಾನೂನು ರದ್ದುಗೊಳಿಸಿದ್ದು) ಮಂಜೂರು ಮಾಡಲು ಮದ್ರಾಸು ಗವರ್ನರರಿಗೆ ಯಾರು ಬೋಧನೆ ಕೊಟ್ಟರೋ ನನಗೆ ತಿಳಿಯದಾಗಿದೆ ಈ ಕಾಯಿದೆ ಮೂಲಕ ಜನವರಿ ೧ನೇ ದಿನ ಲಕ್ಷಗಟ್ಟಲೆ ಒಕ್ಕಲಿಗ ಸ್ತ್ರೀಯರು ಕಂಬನಿ ಸುರಿಸುವರು ಕೈ ಮಗ್ಗದ ಉದ್ಯೋಗದ ಹಾಗೂ ಅನೇಕ ತಾಯಂದಿರು, ಹೆಂಡಂದಿರು, ಸರಕಾರವನ್ನು ಶಪಿಸುತ್ತಾ ಇರುವರು' ಹೀಗೆಂದು ಶ್ರೀ ಸಿ ರಾಜಗೋಪಾಲಾಚಾರ್ಯರು ಮದ್ರಾಸ್ ಪ್ರಾಂತಿಕ ಟ್ರೇಡ್ ಯೂನಿಯನ್ ಕಾಂಗ್ರೆಸ್, ವಿದ್ಯಾರ್ಥಿ ಸಂಘ, ಮದ್ರಾಸ್ ಕಮುನಿಸ್ಟ್ ಪಕ್ಷ ಮತ್ತು ಪಟ್ಟಣದ ೨೩ ಕೂಲಿಗಾರ ಸಂಸ್ಥೆಗಳ ಪರವಾಗಿ ಸೇರಿದ ಸಾರ್ವಜನಿಕ ಸಭೆಯೊಂದರಲ್ಲಿ ಭಾಷಣ ಮಾಡುತ್ತಾ ಹೇಳಿದರು

'ಸ್ವಲ್ಪ ಹೆಚ್ಚು ಹಣ ಬರುತ್ತದೆಂದೂ, ಸಾಕಷ್ಟು ಕಾರಣಗಳಿಲ್ಲದೆ ಗವರ್ನರರು ತಮ್ಮ ಮೇಲೆ ಸುಮ್ಮ ಸುಮ್ಮನೆ ತಮ್ಮ ಮೇಲೆ ಈ ದುಷ್ಕೃತ್ಯವನ್ನು ಹೊರಿಸಿಕೊಂಡಿದ್ದಾರೆ. ಈ ಯೋಜನೆ ಬಿಟ್ಟು ಬಿಡಲು ನಾನವರೊಡನೆ ಬೇಡುತ್ತೇನೆ. ಅಪರಾಧಿಗಳನ್ನೂ, ಲಂಚ ತಿನ್ನುವ ಅಧಿಕಾರಿಗಳನ್ನೂ ಶಿಕ್ಷಿಸುವ ಬದಲು, ಗವರ್ನರರು ಅವರ ಆದುಷ್ಕೃತ್ಯಕ್ಕೆ ಮನ್ನಣೆಯಿತ್ತು ಶಾಸನ ರದ್ದು ಮಾಡಿ ಅತಿ ಹೀನ ಅಪರಾಧ ಮಾಡಿ, ಶಾಸನ ಭಂಗ ಮಾಡಿದವರಿಗೆ ಉತ್ತೇಜನವಿತ್ತಿದ್ದಾರೆ ಅವರು ಈಗ ರದ್ದು ಮಾಡಿರುವ ಈ ಶಾಸನವು ಎಲ್ಲಾ ವರ್ಗದ ಜನರ ಇಚ್ಛೆಯ ಮೇರೆಗೆ ಮಾಡಿದ್ದಾಗಿದ್ದು ಆ ಕಾನೂನನ್ನು ಇನ್ನೂ ಲಕ್ಷಾಂತರ ಮಂದಿ ಸ್ತ್ರೀಯರು ತಮ್ಮ ಮನೆ ದೇವತೆಯೆಂದು ಕೊಂಡಾಡುತ್ತಾರೆ

''ಉಳಿದ ಪ್ರಾಂತಗಳು ಯುದ್ಧದ ವೆಚ್ಚ, ನಾಗರಿಕ ಸಂರಕ್ಷಣ ವೆಚ್ಚದ ಸಂಕಷ್ಟದಲ್ಲಿರುವಾಗ, ಮದ್ರಾಸ್ ಸರಕಾರಕ್ಕೆ ನಾನು ಒಳ್ಳೆಯ ಉತ್ಪತ್ತಿಯ ಉಪಾಯ ಹುಡುಕಿ ಕೊಟ್ಟೆನು ಅದರ ಫಲವನ್ನು ಅದು ಈಗ ಅನುಭವಿಸುತ್ತಿದೆ ನಾನು ಅವರಿಗೆ ಕಾಮಧೇನುವನ್ನಿತ್ತೆನು ಆದರೆ ಅವರೀಗ ಅದನ್ನು ಆಶೆಯಿಂದ ಹಿಂಡುತ್ತಾರೆ. ಹೊಗೆಸೊಪ್ಪು, ಮೋಟರ್ ಸ್ಪಿರಿಟ್ ಹಾಗೂ ಮಾರಾಟದ ತೆರಿಗೆ ಇವುಗಳ ದುಷ್ಟತನವನ್ನೆಲ್ಲ ನಾನು ಶ್ರೇಷ್ಠ ಹಾಗೂ ಸದುದ್ದೇಶದ ಸಲುವಾಗಿ ನನ್ನ ಮೇಲೆ ಹೇರಿಕೊಂಡೆನು ಇವುಗಳಿಂದ ಈ ವರ್ಷ ಸರಕಾರಕ್ಕೆ ನಾಲ್ಕು ಕೋಟಿ ರೂಪಾಯಿ ಉತ್ಪತ್ತಿಯಾಗಲಿದೆ ಜನರನ್ನು ಮದ್ಯ ಹಾಗೂ ಗಾಂಜಾದಿಂದ ವಿಮೋಚನೆಗೊಳಿಸುವುದೇ ಇದರ ಉದ್ದೇಶವಿತ್ತು ಈ ಹೆಚ್ಚಿನ ಉತ್ಪನ್ನಕ್ಕಾಗಿ ನನಗೆ ಅವರು ಕೃತಜ್ಞರಾಗಿರುವ ಬದಲು ನನ್ನದೆಗೆ ವಿಷಪೂರಿತ ಬಾಣ ಎಸೆದಿದ್ದಾರೆ

''೧೯೪೩ರೊಳಗೆ ಇಡೀ ಮದ್ರಾಸ್ ಪ್ರಾಂತವನ್ನು ಕುಡುಕತನದಿಂದ ಮುಕ್ತಮಾಡಿ ಜಗತ್ತಿಗೆ ನಾನು ಕೊಡುತ್ತಿದೆ ಮದ್ಯ ನಿರ್ಮಾಣದಲ್ಲಿ ಹಾಳಾಗುತ್ತಿದ್ದ ಹಣ ಹಾಗೂ ಶ್ರಮ ಹೊಸ ಉದ್ಯೋಗಕ್ಕೆ ಹೋಗುತಿತ್ತು ಪ್ರತಿ ವರ್ಷ ೨೦ ಕೋಟಿ ರೂಪಾಯಿ ಬೇಂಕು ಸೇರಬಹುದಾಗಿತ್ತು ಆದರೆ ಇದನ್ನೆಲ್ಲಾ ಬಿಟ್ಟು ಸರಕಾರ ಕೇವಲ ೪ ಕೋಟಿ ರೂಪಾಯಿ ದೊರಕಿಸಿಕೊಳ್ಳುವುದಕ್ಕಾಗಿ ಜನರನ್ನೆಲ್ಲಾ ದುಃಖದಲ್ಲಿ ನೂಕಿದ್ದಾರೆ ಮಹಿಳೆಯರ ಕಣ್ಣೀರು ಹಾಗೂ ಪ್ರಾರ್ಥನೆ ವ್ಯರ್ಥವಾಗಲಾರದು, ಹೊಸ ವರ್ಷದ ಶುಭ ದಿನದಲ್ಲಿ ನರಕದ ದ್ವಾರವನ್ನು ಸರಕಾರವು ಆ ನಾಲ್ಕು ಜಿಲ್ಲೆಗಳಲ್ಲಿ ತೆರೆಯದಿರಲೆಂದು ನನ್ನ ಪ್ರಾರ್ಥನೆ' ಎಂದೂ ರಾಜಾಜಿ ಹೇಳಿದರು

ಕಲ್ಕತ್ತದ ಮೇಲೆ ಜಪಾನ್ ಧಾಳಿ

ಕೆಲವರಿಗೆ ಮರಣಾಂತಿಕ ಗಾಯ!

ಜಪಾನ್ ವಿಮಾನಗಳು ಕಲ್ಕತ್ತದ ಮೇಲೆ ತಾ ೫ರಂದು ಧಾಳಿಯಿಟ್ಟು, ಕೆಲವು ಬಾಂಬುಗಳನ್ನು ಹಾಕಿದ್ದರಿಂದ ಆಸ್ತಿಗೆ ಹಾನಿಯಾದದ್ದಲ್ಲದೆ ಹಲವರು ಸಾವು ನೋವುಗಳಿಗೀಡಾಗಿರುವರು. ಹಗಲಿನಲ್ಲೇ ಕಲ್ಕತ್ತದ ಮೇಲೆ ಧಾಳಿ ನಡೆದದ್ದು ಇದು ಮೊದಲನೆಯ ಸಲ ಕಳೆದ ದಶಂಬರ ಜನವರಿಗಳಲ್ಲಿ ಆದ ಧಾಳಿ ಭೀಕರವಿತ್ತಾದರೂ ಆದು ರಾತ್ರಿ ಕಾಲದಲ್ಲಿ ಆಗಿತ್ತು. ಈ ಸಲ ಜಪಾನೀ ಬಾಂಬುಗಳು ಯುದ್ಧ ವಿಮಾನಗಳ ಬೆಂಗಾವಲಿನಲ್ಲಿ ಎರಡು ತಂಡಗಳಾಗಿ ಬಂದಿದ್ದವು ನಮ್ಮ ವಿಮಾನಗಳು ಅವುಗಳನ್ನು ತಡೆದದ್ದು ಮಾತ್ರವಲ್ಲದೆ ಎರಡು ಶತ್ರು ವಿಮಾನಗಳನ್ನು ನಾಶಮಾಡಿಯೂ ಬಿಟ್ಟಿವೆ.

ವೇವಲರಿದನ್ನು ಸಾಧಿಸಲು ಧೈರ್ಯ ಮಾಡುವರೆ?

ಭಾರತ ಮುಖಂಡರನ್ನು ಬಿಡುಗಡೆ ಮಾಡಿ— ಭಾರತೀಯರಿಗೆ ಅಧಿಕಾರ ಬಿಟ್ಟುಕೊಟ್ಟು— ಭಾರತವನ್ನು ಯುದ್ಧ ಮಗ್ನ ಮಾಡುವರೆ?

ಲೇಖಕ:— ಕ್ವಾಜಾ ಅಹಮ್ಮದ್ ಅಬ್ಬಾಸ್

ವೈಸರಾಯರು ಅಲಕ್ಷಿತ ಕಾರ್ಯಗಳಂತ ವಿಧ ವಿಧದ ವರ್ಣನ ಪ್ರಚಾರಗಳಿಗೆ ಎಡೆಯಾಗುತ್ತಾರೆ. ಗೃಹಾಗಾರ್ಡ್ ‘ರಹಸ್ಯಮಯ', ಚಿಟ್ಟಿ ಹೌಸ್, ಚಂದವಾದ ವಸ್ತ್ರ ಉಡುವವರು ಹೀಗೆಲ್ಲಾ ವರ್ಣನೆಗಳ ಮೇಲೆ ವರ್ಣನೆಗಳನ್ನು ನಾವು ಓದಬಹುದು. ಹಾಗೆಯೇ ಹಿಂದೂದೇಶಕ್ಕೆ ಒಬ್ಬ ವೈಸರಾಯರು ಆದರೆಂದರೆ ಮರುದಿನ ಅವರ ಜೀವನ, ಅವರ ಸಾಹಸ, ಅವರ ರೀತಿಧರ್ಮ, ಅವರ ಹೆಂಡತಿ ಮಕ್ಕಳ ವಿಚಾರಗಳೆಲ್ಲಾ ಪತ್ರಿಕೆಗಳಲ್ಲಿ ಪುಟ ಪುಟ ಪ್ರಕಟವಾಗುತ್ತವೆ.

ಲಾರ್ಡ್ ಇರ್ವಿನ್ ಬಂದಾಗ

ಲಾರ್ಡ್ ಇರ್ವಿನರು ವೈಸರಾಯರಾಗಿ ಬಂದಾಗ, ಅವರು ಕೃಷಿಯಲ್ಲಿ ಬಹಳ ಉತ್ಸಾಹವುಳ್ಳವರು ಧರ್ಮ ಪರಾಯಣರೆಂದೂ ಪ್ರಚಾರಿಸಲ್ಪಟ್ಟಿತು. ಒಂದು ಪತ್ರಿಕೆ ಅವರ ಒಂದು ಕೈಯಲ್ಲಿ ನೇಗಿಲು ಇನ್ನೊಂದು ಕೈಯ್ಯಲ್ಲಿ ಬೈಬಲ್ ಹಿಡಿದ ಚಿತ್ರವನ್ನೂ ಪ್ರಕಟಪಡಿಸಿತ್ತು. ಭಾರತೀಯರಿಗೆ ಕೃಷಿ ಮತ್ತು ಧರ್ಮ ಮುಖ್ಯವಲ್ಲವೆ? ವಿಲ್ಲಿಂಗಡನ್ ಕಾಲದಲ್ಲಿಯೂ ಅದೇ ತರದ ಪ್ರಚಾರ ಸಾಗಿತ್ತು. ಲಾರ್ಡ್ ಲಿನ್‌ಲಿತ್‌ಗೋ ಬಂದಾಗ ಅವರಿಗೆ ಕೃಷಿಯಲ್ಲಿರುವ ಪ್ರೀತಿಯ ವಿಷಯ ಮಾಡಿದ ಪ್ರಚಾರ ಅಷ್ಟಿಷ್ಟಲ್ಲ. ಇತರ ಸಮಯಗಳಲ್ಲಿ ನಾಯಿಗಳಿಗೂ ಭಾರತೀಯರಿಗೂ ಪ್ರವೇಶವಿಲ್ಲದ ಯಾಚ್‌ತ್ ಕ್ಲಬ್‌ನ ಎದುರು ಕೆಲವು ಕೃಷಿಕರನ್ನು ತರದು ಸಾಲಾಗಿ ಅವರಿಗೆ ಸ್ವಾಗತವನ್ನು ಅಧಿಕಾರಿಗಳೇ ಏರ್ಪಡಿಸಿದ್ದರು. ಇದು ಜನತೆಯ ಸ್ವಾಗತವೆಂದು ವೈಸರಾಯ್ ತಿಳಕೊಂಡರೋ ಏನೋ? ಮುಂದೆ ಲಿನ್‌ಲಿತ್‌ಗೋರವರ ಬೀಜದ ಹೋರಿ ಬೆಳೆಸುವ ಕಾರ್ಯಕ್ರಮದ ಕುರಿತು ಆದ ಪ್ರಚಾರಕ್ಕೆ ತುದಿ ಮೊದಲೇ ಇಲ್ಲ. ಆದರೆ ಲಿನ್‌ಲಿತ್‌ಗೋರನ್ನು ಭಾರತೀಯರು ನೆನಪಿನಲ್ಲಿಡುವುದಿದ್ದರೆ, ಮಹಾತ್ಮಾಜೀ ಜೀವಸಂಕಟದಲ್ಲಿದ್ದರೂ ಸೆರೆಮನೆಯಿಂದ ಬಿಡುಗಡೆ ಮಾಡದ ಕೃತ್ಯಕ್ಕಾಗಿಯಲ್ಲದೆ ಅವರ ಬೀಜದ ಹೋರಿಗಳಿಗಾಗಿ ಅಲ್ಲ.

ವೇವಲರ ನೇಮಕದಲ್ಲಿಯೂ ಇದೇ ರೀತಿ ನಡೆದಿದೆ. ಅವರ ರೀತಿ ನೀತಿ, ಗುಣನಡತೆ, ಸೀದಾ ಹಾದಿ, ಹೊರಡುವ ಮುನ್ನ ಸ್ವಲ್ಪ ಮುಖ ಬಾಡಿದ್ದದ್ದು, ಅವರ ಮಗಳು, ‘ತಂದೆ, ಯಾಕಿಷ್ಟು ಮುಖ ಬಾಡಿಸಿದ್ದಿ, ಸಂತುಷ್ಟನಾಗಿರು' ಎಂದದ್ದು, ಅವರು ವಿಮಾನದಲ್ಲಿ ಬಂದ ಮೊದಲನೇ ವೈಸರಾಯರಾದುದು, ಶತ್ರುರಾಜ್ಯದಲ್ಲಿ ತೊಂದರೆಯಿಲ್ಲದೆ ಹಾರಾಡಿದ್ದು, ಪದವಿ ಸ್ವೀಕರಿಸಿದ ಕೂಡಲೇ ಪತ್ರಿಕಾ ಪ್ರತಿನಿಧಿಗಳನ್ನು ಭೇಟಿ ಮಾಡಿದ್ದು, ಕೈಕುಲುಕಿದ್ದು ಬಹಳ ಬಹಳ ಸಂಗತಿಗಳು ಬಂದಿವೆ. ಅವರು ರೇಡಿಯೋದಲ್ಲಿ ಮಾತನಾಡುವರೆಂದಿದ್ದದ್ದು ಮಾತ್ರ ಇದುವರೆಗೂ ಕೇಳಿಲ್ಲ. ಆದರೆ ಕೂಡಲೇ ಬಂಗಾಳಕ್ಕೆ ಹೋದದ್ದು, ರಾತ್ರಿ ಸಮಯದಲ್ಲಿ, ಅರೇಬಿಯನ್ ನೈಟ್ಸ್ ಹರೂನಲ್ ರಶೀದನಂತೆ ಉಪವಾಸ ಬಿದ್ದವರನ್ನು ನೋಡಿ ಬಂದದ್ದು ಇವೆಲ್ಲಾ ಬಂದಿವೆ. ವೇವಲರ ನಿಜ ಸಂಗತಿ ಇನ್ನು ತಿಳಿಯಬೇಕಷ್ಟೆ.

ಇಪ್ಪತ್ತೈದು ವರ್ಷಗಳ ಹಿಂದೆ

ಇಪ್ಪತ್ತೈದು ವರ್ಷಗಳ ಹಿಂದಕ್ಕೆ ನನ್ನ ಮನಸ್ಸು ಓಡುತ್ತದೆ. ಬಾಲಕನಾದ ನಾನು ಆಗ ಪಾನಿಪತಿನ ಬಳಿಯಿರುವ ರೈಲ್ವೆ ಸ್ಟೇಶನೊಂದರ ವಾಸ ಮಾಡುತಿದ್ದೆ. ಒಂದು ಹೇಮಂತ ಪ್ರಾತಃಕಾಲ ನಾನು ಸ್ಟೇಶನಿಗೆ ಹೋಗಕೂಡದೆಂದು ಪೋಲೀಸನೊಬ್ಬ ಹೆದರಿಸಿದ. ಬಾಲಕನಾದ ನನಗೆ ರೈಲು ಓಡಾಡುವುದನ್ನು ನೋಡುವುದೆಂದರೆ ಜೀವ. ‘ವೈಸರಾಯರ ಸ್ಪೆಶಲ್ ಟ್ರೈನ್ ಬರುತ್ತದೆ' ಎಂದು ಆತ ತಿಳಿಸಿದ. ಅಯ್ಯೊ! ವೈಸರಾಯರೆಂದರೆ ನಾವೆಲ್ಲಾ ಬಹಳ ದೊಡ್ಡ ಮನುಷ್ಯ, ದೇವರಿಗೆ ಸಮಾನ ಎಂದು ಭಾವಿಸಿದ್ದೆವು. ಅವರು ಬರುವುದಾದರೆ ನಾವೇಕೆ ನೋಡಬಾರದು? ವೈಸರಾಯರು ದಿಲ್ಲಿಯಿಂದ ಸಿಮ್ಲಾಕ್ಕೆ ಒಂದು ಪ್ರತ್ಯೇಕವಾದ ಗಾಡಿಯಲ್ಲಿ ಯಾಕೆ ಹೋಗಬೇಕು? ಪೋಲೀಸರ ಕಾವಲು ಯಾಕೆ ಅವರಿಗೆ? ಅವರ ಹತ್ತಿರ ಮಕ್ಕಳು ಮರಿಗಳೂ ಕೂಡಾ ಯಾಕೆ ಹೋಗಬಾರದು? ಅವರಿಗೆ ಹೆದರಿಕೆಯೆ? ವೈಸರಾಯರೆಂದರೆ ಇವರೆಂಥಾ ಮನುಷ್ಯರಪ್ಪಾ! ಈ ವಿಚಾರಗಳು ಬಾಲಕರಾದ ನಮ್ಮ ತಲೆ ತುಂಬಾ ಸುತ್ತುತಿದ್ದವು!

ಮುಂದೆ ನಾನು ಯುವಕನಾದಾಗ, ಅಲಿಗರ್ ವಿಶ್ವವಿದ್ಯಾಲಯವನ್ನು ವೈಸರಾಯ್ ಲಾರ್ಡ್ ಇರ್ವಿನ್ ಸಂದರ್ಶಿಸಿದರು. ಆ ಸಮಯದಲ್ಲಿ ಒಂದು ಕುಚೋದ್ಯ ನಡೆಯಿತು. ನಮ್ಮ ಹಾಸ್ಟೆಲ್ ಸುತ್ತು ತಿರುಗಾಡುತಿದ್ದ ಒಬ್ಬ ವ್ಯಕ್ತಿಯನ್ನು ವಿದ್ಯಾರ್ಥಿಗಳು ಹಿಡಿದುಬಿಟ್ಟರು; ಹಿಡಿದು ಕೋಣೆಯೊಳಹಾಕಿದರು. ಕೊನೆಗೆ ಆತನೇ ಹೇಳಿದ, ವೈಸರಾಯರು ಅಲ್ಲಿಗೆ ಬರುವಾಗ ಯಾರಾದರೂ ಅವರ ಮೇಲೆ ಬಾಂಬು ಹಾಕಿ ಬಿಡುವ ಆಲೋಚನೆಯಲ್ಲಿದ್ದಾರೋ ಎಂದು ಪತ್ತೆ ಹಚ್ಚಲು ನೇಮಿಸಿದ ಐವತ್ತು ಮಂದಿ ಸಿ. ಐ. ಡಿಗಳಲ್ಲಿ ಆತ ಒಬ್ಬನೆಂದು!

ಕಳೆದ ತಿಂಗಳೂ ಕೂಡಾ

ಕಳೆದ ತಿಂಗಳು ನಾನು ಡಿಲ್ಲಿಗೆ ಹೋದಾಗ ಹಳೆ ಡಿಲ್ಲಿ ಮತ್ತು ಹೊಸ ರಾಜಧಾನಿಯ ಮಾರ್ಗದಲ್ಲಿ ಪೋಲೀಸ್ ಪಹರೆಯಿದ್ದು ನನ್ನ ಟೊಂಗವನ್ನು ಆದಾರಿ ಹೋಗಬಿಡಲಿಲ್ಲ. ಇದು ಏಕೆಂದು ತಿಳಿಯದೆ ನನಗೆ ಗಾಬರಿಯಾಯಿತು. ಕೆಲ ಸಮಯದ ನಂತರ ಒಂದು ದೊಡ್ಡ ಹೊಳೆವ ಕಾರು ಆ ಮಾರ್ಗವಾಗಿ ಓಡಿತು. ಹೋಗುವ ವೈಸರಾಯರು ಡಿಲ್ಲಿ ಮುನ್ಸಿಪಾಲಿಟಿಯ ಸತ್ಕಾರ ಸ್ವೀಕರಿಸ ಹೋಗುವುದೆಂದು ಮತ್ತೆ ತಿಳಿಯಿತು. ಮರುದಿನವೂ ಆ ಮಾರ್ಗದಲ್ಲಿ ಅದೇ ರೀತಿ ಪೋಲೀಸ್ ಪಹರೆಯಿತ್ತು.

ಶತಮಾನಗಳ ಬ್ರಿಟಿಷರ ಆಳ್ವಿಕೆಯಿಂದಾಗಿ ನಾವು ಇಂಥಾ ಸಂಗತಿಗಳನ್ನು ಏನೂ ನಿಷೇಧಮಾಡದೆ ಸಹಿಸಲು ಅಭ್ಯಾಸಿಸಿದ್ದೇವೆ. ಇದು ಸರ್ವ ಸಾಮಾನ್ಯವಲ್ಲ, ವಿಶೇಷ ಕಾಲವೆನಬಹುದು; ವಿಶೇಷವೆಂದರೆ ಬ್ರಿಟಿಷರು ಭಾರತವನ್ನು ಇನ್ನೂ ಆಳುವುದು. ಬ್ರಿಟನಿನ ಅರಸು ಅಥವಾ ಪ್ರಧಾನ ಮಂತ್ರಿಯು ಹಿಂದೂ ದೇಶದ ವೈಸರಾಯ್‌ರು ಹಾಗೆ ಪ್ರತಿ ಹೆಜ್ಜೆಗೂ ಕಾವಲಿರಿಸಿ ಪ್ರಯಾಣ ಮಾಡುವುದಿಲ್ಲ. ಅಮೆರಿಕದ ಪ್ರೆಸಿಡೆಂಟನನ್ನೂ ನಾನು ನೋಡಿದ್ದೇನೆ. ಇತರ ನಾಗರಿಕನಂತೆ ಆತನೂ ಕಾರಿನಲ್ಲಿ ಹೋಗುತ್ತಾನೆ. ಸಶಸ್ತ್ರ ಸೈನ್ಯ ಟರ್ಕಿಯ ಪ್ರೆಸಿಡೆಂಟನನ್ನು ಕಾಯುವುದಿಲ್ಲ. ಆಕ್ರಮಿತ ಯೂರೋಪಿನಲ್ಲಿ ಹಿಟ್ಲರನ ಕೈಗೊಂಬೆಗಳ ಹೊರತು ಪ್ರಪಂಚದಲ್ಲಿ ಇನ್ನಾರೂ ಈ ರೀತಿ ತಮ್ಮ ಜೀವಕ್ಕೆ ಹೆದರಿಕೊಂಡಿರುವುದಿಲ್ಲ.

ವೈಸರಾಯ್ ಭವನ ನೋಡಿದ್ದಿರಾ?

ಇಂಗ್ಲೆಂಡಿನ ಪ್ರಧಾನಿ ವಾಸಿಸುವ ೧೦ ‘ಡಾನಿಂಗ್ ಸ್ಟ್ರೀಟ್' ಭವನದಂಥಾ ಮನೆಯಲ್ಲಿರಲು ನ್ಯೂಡಿಲ್ಲಿಯಲ್ಲಿ ಯಾವನೇ ಒಬ್ಬ ಅಂಡರ್ ಸೆಕ್ರೆಟರಿ ಕೂಡಾ ಇಂದು ಒಪ್ಪಲಿಕ್ಕಿಲ್ಲ, ಅಮೆರಿಕದ ಅಧ್ಯಕ್ಷನ ಮನೆ ನಮ್ಮ ಎಕ್ಸಿಕುಟಿವ್ ಕೌನ್ಸಿಲರ ಬಂಗ್ಲೆಗಳನ್ನು ಮೀರಿಲ್ಲ. ಆದರೆ ನೀವೆಂದಾದರೂ ವೈಸರಾಯ್ ಭವನ ನೋಡಿದ್ದಿರಾ? ನಾನು, ವೈಸರಾಯರೇ ಅದರಲ್ಲಿ ವಾಸಿಸುವ ಮುನ್ನ ನೋಡಿದ್ದೇನೆ. ಅದರ ಕಂಟ್ರಾಕ್ಟರರೊಬ್ಬರು ನನ್ನನ್ನು ಅದನ್ನು ಕಟ್ಟುತ್ತಿದ್ದಾಗ ತೋರಿಸಿದರು. ಅಲ್ಲಿನ ವೈಭವಗಳೇನು? ವೈಸರಾಯರ ಕೋಣೆ, ಮಲಗುವ ಮನೆ, ವೈಸರಾಯಿಣಿಯರ ಮನೆ, ಬೆಳಗಿನೂಟದ ಕೋಣೆ, ಮಧ್ಯಾಹ್ನದ ಊಟದ ಕೋಣೆ, ಆಸನ ಕೋಣೆ, ಮೈಲುಗಟ್ಟಲೆ ಉದ್ದ, ಎಂಥಾ ಜಗಲಿ, ನೆಲಕ್ಕೆ ಎಂಥಾ ಮೆತ್ತನ್ನ ಹಾಸಿಗೆಗಳು, ಸೇವಕರೆಷ್ಟು, ಎಂಥಾ ಖರ್ಚು, ಎಷ್ಟು ವೈಭವ? ಪ್ರಪಂಚದ ಎಲ್ಲಾ ಪ್ರದೇಶದಲ್ಲಿರುವ ಭೋಗ ಸಾಧನಗಳೆಲ್ಲಾ ಅಲ್ಲಿವೆ.

ನಮ್ಮ ದೇಶದಂಥಾ ದಾರಿದ್ರ್ಯ ದೇಶದಲ್ಲಿ ವೈಸರಾಯರು ಇರುವುದು ಹೀಗೆ! ಬೆವರ್ಲಿ ನಿಕೊಲಸ್ ಹೇಳುತ್ತಾರೆ, ಧನಪ್ರತಿಕೆಗೆ ಬೆಲೆಕೊಡುವ ಭಾರತದಲ್ಲಿ ಹೀಗೆಲ್ಲಾ ಬೇಕಾಗುತ್ತದೆಂದು. ಹಾಗಾದರೆ ಅಲಂಕಾರ ಭೂಷಿತರಾದ ವೈಸರಾಯರ ಬೋಡಿಗಾರ್ಡುಗಳು ಖಿಳ ಶರ್ಟಿನ ಸರಳ ಕಾಂಗ್ರೆಸ್ ಸ್ವಯಂಸೇವಕರಿಂದ ಪ್ರಸಿದ್ಧರಿರಬೇಕಿತ್ತು, ಅಲಂಕೃತ ನೇಶನಲ್ ವಾರ್ ಫ್ರಂಟಿನ ಸಭೆಗಳು ಕಾಂಗ್ರೆಸ್ ಅಧಿವೇಶನಗಳಿಗಿಂತ ಜನಪ್ರಿಯವಾಗಬೇಕಿತ್ತು; ವೇಷ ಭೂಷಿತರಾದ ರಾಜ ಮಹಾರಾಜರು ಪಂಡಿತ ಜವಾಹರಲಾಲ ನೆಹರುಗಳಿಗಿಂತ ಜನಪ್ರಿಯರೆನಿಸಬೇಕಿತ್ತು. ನಕೋಲಸರಿಗೇ ಗೊತ್ತಿದೆ, ಭಾರತದಲ್ಲಿ ಸಮಸ್ತರ ಮನ್ನಣೆ ಗೌರವಗಳಿಗೆ ಪಾತ್ರನಾಗಿರುವ ವ್ಯಕ್ತಿ ಆ ಅರ್ಧ ನಗ್ನ ಫಕೀರ ಎಂಬುದು! ಅವರು ವಾಸ ಮಾಡುವ ಆ ಸರಳ ಸೇವಾ ಗ್ರಾಮದ ಮಣ್ಣಿನ ಕುಟೀರವೆಂದರೆ ನ್ಯೂಡಿಲ್ಲಿಯ ಯಾವುದೇ ಅಲಂಕೃತ ಭವನಕ್ಕಿಂತಲೂ ಭಾರತೀಯರಿಗೆ ಆಕರ್ಷಕವಿದೆ. ಏಕೆಂದರೆ ವರ್ಧಾದ ಆ ಕುಟೀರ ಭಾರತದ ಹೃದಯವನ್ನು ತಿಳಿಸುತ್ತದೆ, ನ್ಯೂಡಿಲ್ಲಿಯ ಆ ವಿಲಾಸಗೃಹ ನಮಗೆ ಬೇಡದ ವಿದೇಶೀ ಪ್ರಭುತ್ವದ ಚಿಹ್ನೆಯಾಗಿದೆಯೆಂದು ಜನರು ಭಾವಿಸುತ್ತಾರೆ. ಇಂಥಾ ಪರಿಸ್ಥಿತಿಯಲ್ಲಿ ವಾಸ ಮಾಡುವ ವೇವಲರು ಭಾರತದ ನಿಜಸ್ಥಿತಿಯನ್ನು ಎಂದಾದರೂ ತಿಳಕೊಂಡಾರೆ?

ಬಂಗಾಳ ಸಂದರ್ಶಿಸಿದರೆ ಸಾಲದು

ವೇವಲರು ಬಂಗಾಳವನ್ನು ಸಂದರ್ಶಿಸಿ ಉಪವಾಸ ಬಿದ್ದವರನ್ನು ಕಣ್ಣಾರೆ ಕಂಡು ಬಂದು ಬಿಟ್ಟರೆ ಸಾಲದು; ಇದೊಂದು ಕೇವಲ ಮಾನವೀಯ ಕೃತ್ಯ ಅಥವಾ ಪ್ರಚಾರ ಘೋಷ ಯಾವುದಿದ್ದರೂ ಇರಬಹುದು. ಆದರೆ ಬಂಗಾಳದ ದುರಂತವನ್ನಿದು ಪರಿಹರಿಸಲಾರದು. ರೋಗದ ಲಕ್ಷಣವನ್ನು ರೋಗವೆಂದು ತಿಳಕೊಳ್ಳಕೂಡದು.

ಬ್ರಿಟಿಷರ ಆಳ್ವಿಕೆಯಲ್ಲಿ ಬಂಗಾಳ ಉಪವಾಸ ಬಿದ್ದುದು ಇದು ಮೊದಲನೆಯ ಸಲವಲ್ಲ. ೧೭೬೯ರಲ್ಲಿ ಮುರ್ಶಿದಾಬಾದಿನಲ್ಲಿ ಕಂಪನಿಯ ರೆಸಿಡೆಂಟರಾಗಿದ್ದವರು ಬರೆದಿದ್ದ ಪತ್ರವು, ಕಂಪನಿಯ ಆಳ್ವಿಕೆ ನಂತರ ಬಂಗಾಳ ಎಷ್ಟರಮಟ್ಟಿಗೆ ಅವನತಿಗೆ ಬಂತು, ಅದಕ್ಕಿಂತ ಮೊದಲು ಎಷ್ಟು ಅಭಿವೃದ್ಧಿಯಲ್ಲಿತ್ತೆಂಬುದಕ್ಕೆ ಒಂದು ಸಾಕ್ಷಿಯಾಗಿ ನಿಂತಿದೆ. ೧೭೭೦ರಲ್ಲಿ ೧೦ ಮಿಲಿಯ ಜನರು ಬಂಗಾಳದಲ್ಲಿ ಸತ್ತಿದ್ದರು. ಆದರೂ ಭೂತೆರಿಗೆ ಅಲ್ಲಿ ಮೊದಲಿಗಿಂತಲೂ ಅಧಿಕವಾಗಿಯೇ ವಸೂಲಾಯಿತು. ೧೭೭೨ರಲ್ಲಿ ಗವರ್ನರ್ ವಾರನ್ ಹೆಸ್ಟಿಂಗ್ಸ್ ಬರೆದ ಪತ್ರದಲ್ಲಿಯೇ ಇದು ತಿಳಿವುದು.

ವೇವಲರು ಬಂಗಾಳಕ್ಕೆ ಹೋದುದರ ಫಲವಾಗಿ ಲಾಭ ಬಡಕರನ್ನೂ, ಸಂಗ್ರಾಹಕರನ್ನೂ, ಅಪರಾಧಿಗಳನ್ನೂ, ಲಂಚ ಗುಳಿಗಳನ್ನು ಎಲ್ಲಾ ಶಿಕ್ಷಿಸಿದರೆ ಅದು ಒಳ್ಳೆಯದೆ. ಆದರೆ ಈ ಎಲ್ಲಾ ಅಪರಾಧಗಳಿಗಿಂತಲೂ ಆರ್ಥಿಕ ಸೂರೆ ದೊಡ್ಡ ಅಪರಾಧ. ಅಲ್ಲಿನ ಹಳ್ಳಿಯ ಕೈಗಾರಿಕೆಗಳ ಹಾನಿ, ಭಾರತೀಯ ಕೈಗಾರಿಕೆಗಳಿಗೆ ವಿದೇಶೀ ಕೈಗಾರಿಕೆಗಳಿಂದ ದೊರೆತ ನಷ್ಟ, ಇವೆಲ್ಲಾ ಹೋಗಬೇಕು. ಭಾರತಕ್ಕೆ ರಾಷ್ಟ್ರೀಯ ಸರಕಾರ ಸಿಗುವ ವರೆಗೆ ಇದಾಗಲಾರದು.

ಭಾರತಕ್ಕೆ ಬ್ರಿಟಿಷರ ಆಳ್ವಿಕೆ ಬಂದದ್ದು ನಮ್ಮನ್ನು ಉದ್ಧಾರ ಮಾಡಲಿಕ್ಕೆಂದು ಇಲ್ಲಿ ಯಾರೂ ನಂಬುವುದಿಲ್ಲವೆಂಬುದನ್ನು ವೇವಲರು ಮೊದಲಾಗಿ ತಿಳಕೊಳ್ಳಬೇಕು. ಬ್ರಿಟಿಷರಾದರೂ ಈ ವಿಷಯ ಭ್ರಾಂತಿಯಿಟ್ಟುಕೊಂಡಿಲ್ಲವೆಂಬುದು ನಮಗೆ ಆಶ್ಚರ್ಯವೆನಿಸೀತು. ಲಾರ್ಡ್ ಬೋತರ್‌ಮೋರರು ೧೯೩೧ರಲ್ಲಿ ಸಾಕ್ಷಿ ಪೆಟ್ಟಿಗೆಗೇರಿ ಹೇಳಿದ್ದರು, ‘ನಮ್ಮ ಬೇಂಕಿಂಗ್, ವ್ಯಾಪಾರ, ಹಡಗ, ಇವುಗಳ ದುಟ್ಟಿಗೆ ಬ್ರಿಟನು ಭಾರತಕ್ಕೆ ಋಣಿ, ಬ್ರಿಟಿಷ್ ಸಾಮ್ರಾಜ್ಯದಿಂದ ಭಾರತ ಹೋದರೆ ಸಾಮ್ರಾಜ್ಯ ಮುಳುಗೀತು' ಎಂದು. “ನಾವು ಭಾರತಕ್ಕೆ ಸ್ವರಾಜ್ಯ ಕೊಡಲು ಹಿಂಜರಿವ ಎರಡು ಮುಖ್ಯ ಕಾರಣಗಳವೆ[illegible] ಒಂದು, ಸೈನ್ಯವನ್ನು ಬೇಕಾದಾಗ ನಮಗೆ ಅಲ್ಲಿ[illegible] ತರಬಹುದು; ಇನ್ನೊಂದು ಭಾರತವು ನಮ[illegible] ಒಳ್ಳೆಯ ಸಂತೆಯಾಗಿದೆ” ಎಂದು ಮಂಚೆಸ್ಟರ್ ಗಾರ್ಡಿಯನ್ ಬರೆದಿದೆ.

ವೇವಲರು ಮರೆತಿರಲಾರರು

ಭಾರತ ರಾಜಕೀಯವಾಗಿ ವಿಭಿನ್ನವಾಗಿ[illegible]ಯೆಂದು ಹೇಳಲಾಗಿದೆ. ಸ್ವತಂತ್ರ ಭಾರತದ[illegible] ಪಾಕಿಸ್ತಾನವೋ, ಹಿಂದುಸ್ತಾನವೋ, ಹಿಂದಿ[illegible] ಚರಕಾ ಯುಗವೋ, ಯಂತ್ರ ಯುಗವೋ[illegible] ಇಂಥಾ ವಿವಾದವೇಳಬಹುದು. ಆದರೆ ಎಲ್ಲರೂ[illegible] ಭಾರತವು ಸ್ವತಂತ್ರವಾಗಬೇಕೆಂಬ ವಿಷಯ[illegible] ಕಾಭಿಪ್ರಾಯದವರಾಗಿದ್ದಾರೆ, ಕ್ರಿಪ್ಸ್ ಸಂಧಾನ[illegible] ಕಾಲದಲ್ಲಿ ವೇವಲರೂ ಇದ್ದರು, ಯಾವ ವಿ[illegible]ಯಕ್ಕಾಗಿ ಕ್ರಿಪ್ಸ್ ಸಂಧಾನ ವಿಫಲವಾಯಿತ[illegible] ಎಂಬುದನ್ನು ಅವರು ಮರೆಯಲಾರರು. ‘ಭಾ[illegible]ತಕ್ಕೆ ಕೂಡಲೆ ಅಧಿಕಾರ ಬಿಟ್ಟುಕೊಡಬೇಕು ಎಂಬುದು ಎಲ್ಲರ ಕೇಳಿಕೆ ಆಗಿತ್ತು. ಆ ಪ್ರಾಮು[illegible]ಖ್ಯ ವಿಷಯವನ್ನು ಮರೆತು ಅವರು ತನ್ನ ಅ[illegible]ಕಾರವನ್ನು ಯಶಸ್ವಿಗೊಳಿಸಲಾರರು.

ಕ್ರಿಪ್ಸ್ ಸಂಧಾನದಲ್ಲಿ ವೇವಲರ ಪಾತ್ರ[illegible] ಕುರಿತು ಹಲವು ವದಂತಿಗಳಿವೆ. ಕೆಲವರೆನ್ನು[illegible]ತ್ತಾರೆ, ಭಾರತೀಯರಿಗೆ ಅಧಿಕಾರವಿತ್ತರೆ ನಾನ[illegible] ರಾಜಿ ಕೊಟ್ಟೇನೆಂದು ಅವರು ಹೆದರಿಸಿದರೆಂದು[illegible] ಕೆಲವರನ್ನುತ್ತಾರೆ ಅವರನ್ನು ಲಿನ್‌ಲಿತ್‌ಗೊ[illegible] ನಾಮ್‌ಕೇ ವಾಸ್ತೇ ಕರೆದಿದ್ದರೆಂದು; ಕೆಲವರೆನ್ನು[illegible]ತ್ತಾರೆ ಕಾಂಗ್ರೆಸ್ ಕೇಳಿಕೆಗೆ ಅವರು ಒಪ್ಪಿ ಆ[illegible] ವಿಷಯ ಲುಯಿಸ್ ಜಾನ್ಸನರೊಡನೆ ಹೇಳಿ[illegible]ರೆಂದು, ಆದರೆ ಲಿನ್‌ಲಿತ್‌ಗೋ, ವೇವೆಲ್, ಜಾನ್ಸ[illegible]ನ್ ಇವರಲ್ಲಿ ಯಾರಾದರೂ ಪ್ರಕಟಿಸಿ ಕೊ[illegible]ದ್ದರಿಂದ ಯಾವುದನ್ನೂ ನಂಬಲಾಗುವುದಿಲ್ಲ[illegible] ಸದ್ಯ ಅವರೀಗ ವೈಸರಾಯರಾಗಿ ಬಂದಿರುವು[illegible]ರಿಂದ ವೇವಲರ ನಿಜಸ್ಥಿತಿಯಲ್ಲಿ ಪರೀಕ್ಷೆಯಾ[illegible]ಗುತ್ತದೆ.

ವೇವಲರಿದನ್ನು ಮಾಡುವರೆ?

ಹೊಸ ವೈಸರಾಯ್ ಎಂದರೆ ಹೊಸ ಧೋ[illegible]ರಣೆ ಎನ್ನುವಷ್ಟು ಭ್ರಾಂತ ನಾನಲ್ಲ. ಭಾರತ[illegible] ಧೋರಣೆ ನಿಶ್ಚಯಿಸುವುದು ಚರ್ಚಿಲರ ಹ[illegible] ಮೊಡಲಾರದ ಮಂತ್ರಿಮಂಡಳಿ. ಚರ್ಚಿಲರ[illegible]ದರೂ, ಹಿಂದೆ ದ್ವೇಷಿಸುತ್ತಿದ್ದ ಸ್ಟಾಲಿನರೊಡ[illegible] ಈಗ ಕೈ ಕುಲುಕಲೇಬೇಕಾಗಿದೆ. ಅವರ[illegible] ಅಂಥಾ ಒಂದು ಬದಲಾವಣೆ ಹುಟ್ಟಿಸಲು ವೇ[illegible]ಲರು ಸಾಧನರಾಗಬಹುದು.

ಆದರೆ ಹಾಗೇಕೆ ಅವರು ಮಾಡಬೇಕು[illegible] ಅವರು ಮಾಡಲೇಬೇಕು. ಏಕೆಂದರೆ ಉದ್ಯೋ[illegible]ಗದಿಂದವರು ಸಾಮ್ರಾಜ್ಯಶಾಹಿಯಲ್ಲ; ಸೇನಾಪ[illegible]ಯಾಗಿ ಯುದ್ಧವನ್ನು ಗೆಲ್ಲುವುದು ಅವರಿ[illegible] ಮುಖ್ಯ; ಭಾರತದ ಜನರ ಸಹಕಾರ ಪಡೆ[illegible] ಯುದ್ಧವನ್ನು ಗೆಲಬೇಕಾದರೆ ಅವರು ಹಾ[illegible] ಮಾಡಲೇಬೇಕು, ಅವರ ಮುಖಂಡರನ್ನು ಸೆರೆ[illegible]ನೆಯಲ್ಲಿಟ್ಟು, ಜನರನ್ನು ರಶ್ಯದ, ಚೀನದ, ಬ್ರಿ[illegible]ನಿನ ಜನರಂತೆ ಹೋರಾಡಿಸಬಹುದೆಂದು ಸೇನಾ[illegible]ಪತಿಯಾಗಿ, ಅವರು ಭಾವಿಸುತ್ತಾರೊ? ಯಾ[illegible] ಸ್ವಾತಂತ್ರ್ಯಕ್ಕಾಗಿ ಅವರು ಹೋರಾಡಬೇಕೊ[illegible] ಆ ಸ್ವಾತಂತ್ರ್ಯ ಅವರಿಗೆ ಇಲ್ಲವಾದರೆ ಅವ[illegible] ಜನರು ಉಪವಾಸ ಬಿದ್ದು ಸಾಯುವಾಗ ಜ[illegible]ರು ಹೋರಾಡಿ ಯಾರೆಂದು ಸೇನಾಪತಿಯಾ[illegible] ಅವರು ಭಾವಿಸುತ್ತಾರೆಯೆ? ಭಾರತದ ಪೂರ್ವ[illegible] ರಂಗದಲ್ಲಿ ಮಹಾ ಸಂಗ್ರಾಮ ಪ್ರಾರಂಭಿಸ[illegible] ಭಾರತದ ಇಂದಿನ ಔದಾಸೀನ್ಯ ವಾತಾವರಣ[illegible] ಅನುಕೂಲವೆಂದು ಅವರು ತಿಳಿದಿರುವರೆ? [illegible]ಕರು ತಾವು ಯಾವುದಕ್ಕಾಗಿ ಹೋರಾಡಬೇಗ[illegible] ಸಾಯಬೇಕೆಂದು ತಿಳಿಯದೆ ಹೋರಾಡಲೂ [illegible] ಮಲೂ ಬರಲಾರರು' ಎಂಬ ತನ್ನ ಸಂಗಾ[illegible] ಮೆಕಾರ್ಥರ ಮಾತಿಗೆ ವೇವಲರ ಮನ್ನಣೆ ಕೆ[illegible]ಡುವುದಿಲ್ಲವೆ? ಭಾರತದ ಮಿಲಿಯಾಂತರ ಜನ[illegible] ಸಹಕಾರವನ್ನು ಈ ಯುದ್ಧಕ್ಕೆ ಒದಗಿಸಿ[illegible] ವೇವಲರು ಜಗತ್ಪ್ರಸಿದ್ಧ ವೈಸರಾಯರಾದಾರ[illegible] ವೇವಲರಿದನ್ನು ಸಾಧಿಸಲು ಧೈರ್ಯಮಾ[illegible]ವರೆ?

ಸಮರಭೂಮಿಯ ಸಂಚಾರ

ಕಳೆದ ಎರಡು ವಾರಗಳಿಂದ ಜಗದ ಜನತೆ
ಯ ದೃಷ್ಟಿ ಚರ್ಚಿಲ್, ರೂಸ್‌ವೆಲ್ಟ್, ಸ್ಟಾಲಿನ್
ಭೇಟಿಯ ಕಡೆಗೆ ಹೊರಳಿದೆ. ಅಲ್ಲಿ ಏನು ಚರ್ಚೆ
ನಡೆಯುವುದೋ, ಯಾವ ನಿರ್ಧಾರಕ್ಕೆ ಬರುವ
ರೋ, ಯುದ್ಧವನ್ನು ಬೇಗನೇ ಕೊನೆಗಾಣಿಸು
ವರೋ, ಹಿಟ್ಲರನನ್ನು ಸೋಲಿಸಲು ಸಮರ್ಥ
ರಾಗುವರೋ, ಯುದ್ಧದಲ್ಲಿ ಮಿತ್ರರು ಗೆದ್ದರೆ
ಪ್ರಪಂಚದ ಗತಿಯೇನಾಗುವುದೋ ವಿಚಾರಗಳೆ
ಲ್ಲಾ ಈ ತ್ರಿಮೂರ್ತಿಗಳ ಭೇಟಿಯ ಮಾತು
ಕತೆಯ ಫಲಿತಾಂಶವಾಗಿ ಏನಾದರೂ ತಿಳಿದೀತೇ
ಎಂದು ಎಲ್ಲರ ಕುತೂಹಲ. ಈ ಮೂವರು
ಮುಖಂಡರು ತೆಹರಾನಿನಲ್ಲಿ ಗುಪ್ತವಾಗಿ ಭೇಟಿ
ಯಾಗಿ ನಾಲ್ಕು ದಿನಗಳ ತನಕ ಮಾತುಕತೆ
ನಡೆಸಿದ ಹಾಗೂ ನಿರ್ಣಯಕ್ಕೆ ಬಂದ ಯುದ್ಧ
ಮತ್ತು ಶಾಂತಿಯ ಕುರಿತಾದ ಕೆಲವು ವಿಚಾರ
ಗಳನ್ನು ಈಗ ಒಂದು ಸರಿಯಾದ ಪ್ರಕಟಣೆಯು
ಪ್ರಕಟಿಸಿದಾರೆ. ಆ ಹೇಳಿಕೆಯಲ್ಲಿ ಜರ್ಮನ್
ಬಲ ಸರ್ವನಾಶಮಾಡಬೇಕೆಂಬ ಬಗ್ಗೆ ತ್ರಿರಾಷ್ಟ್ರ
ಗಳ ಸೇನಾಪತಿಗಳೂ ಒಪ್ಪಿರುವರೆಂದೂ, ಪೂ
ರ್ವ, ಪಶ್ಚಿಮ ಹಾಗೂ ದಕ್ಷಿಣ ದಿಕ್ಕುಗಳಿಂದ
ಶತ್ರುಗಳ ಮೇಲೆ ಹೂಡಲಿರುವ ಧಾಳಿಗಳ ಆಸ್ಪ
ದ ಮತ್ತು ಸಮಯಗಳ ಬಗ್ಗೆ ಒಮ್ಮತವಾಗಿರು
ವುದೆಂದೂ ಹೇಳಲಾಗಿದೆ.

ಇತರ ಅಂಶಗಳು

ಇನ್ನು ಮುಂದಿರುವ ಯುದ್ಧ ಮತ್ತು
ಶಾಂತಿ ಯೋಜನೆಗಳಲ್ಲಿ ನಮ್ಮ ಮೂರು ರಾ
ಷ್ಟ್ರಗಳೂ ಒಮ್ಮತದಿಂದಿರಬೇಕೆಂದು ನಿಶ್ಚಯಿಸಿ
ರುವೆವು. ನಮ್ಮಲ್ಲಿ ಬಂದ ಒಮ್ಮತದಿಂದ ಅಂತ್ಯ
ಜಯವು ನಮಗೆಂದು ಖಂಡಿತವಾಗುತ್ತದೆ.
ಶಾಂತಿ ವಿಷಯ ನಮ್ಮ ಮೇಲೆ ಅಧಿಕ ಹೊಣೆ
ಯಿದೆ. ಪ್ರಪಂಚದ ಜನರಿಗೆಲ್ಲಾ ಒಪ್ಪಿಗೆಯಾ
ಗುವಂಥಾ ಶಾಂತಿ ವ್ಯವಸ್ಥೆಯನ್ನೇ ಮಿತ್ರ ಮು
ಖಂಡರು ಬಹುಶಃ ಮಾಡುವರು ಹಾಗೂ ಇನ್ನು
ಮುಂದೆ ತಲೆ ತಲಾಂತರದ ವರೆಗೆ ಯುದ್ಧ
ಭಯವನ್ನು ಇಲ್ಲದೆ ಮಾಡುವೆವು. ದಬ್ಬಾಳಿಕೆ,
ದಾಸ್ಯ, ಅಸಹನೆಗಳನ್ನು ಸಹಿಸದ ಜನರೆಲ್ಲರ
ಸಹಕಾರವನ್ನು ನಾವು ಕೇಳುವೆವು. ಪ್ರಜಾಸ
ತ್ತಾತ್ಮಕ ರಾಷ್ಟ್ರಗಳ ಸಾಲಿನಲ್ಲಿ ಸೇರಿದಲು ನಾವು
ಅವರನ್ನು ಆಹ್ವಾನಿಸುವೆವು. ಭೂಜಲವಾಯು
ಸೇನೆಗಳನ್ನು ನಾಶಮಾಡುವ ಜರ್ಮನರ ಯಾವ
ಶಕ್ತಿಯೂ ನಮ್ಮನ್ನು ತಡೆಯಲಾರದು. ನಮ್ಮ
ಆಕ್ರಮಣಗಳು ಹೆಚ್ಚು ಉಗ್ರವಾಗಿರುವವಲ್ಲದೆ
ದಿನದಿನಕ್ಕೆ ಹೆಚ್ಚು ಹೆಚ್ಚಾಗುವವು. ನಮ್ಮ
ಸ್ನೇಹಮಯ ವಿಚಾರವಿನಿಮಯದ ಫಲಿತಾಂಶ
ವಾಗಿ ಇನ್ನು ಮುಂದೆ ದಬ್ಬಾಳಿಕೆಯ ಹೆದರಿಕೆ
ಯಿಲ್ಲದೆ ತಮ್ಮ ಮನಸ್ಸಿಗೆ ಬಂದಂತೆ ಸುಖ
ಸಮಾಧಾನದಿಂದ ಇರಬಹುದು. ಆಶೆ ನಿರ್ಧಾ
ರಗಳಿಂದ ನಾವಿಲ್ಲಿಗೆ ಬಂದೆವು; ಈಗ ಸ್ನೇಹದಿಂದ
ಲೇ ಆಗಲುತ್ತೇವೆ" ಹೀಗೆಂದು ಆ ಪ್ರಕಟಣೆ
ಯಲ್ಲಿ ಹೇಳಲಾಗಿದೆ.

ಭಾರತದ ಪ್ರತಿನಿಧಿ ಯಾರು?

ತೆಹರಾನಿನಲ್ಲಿ ಈ ತ್ರಿಮೂರ್ತಿಗಳು ಭೇಟಿಯಾ
ದರು. ಈ ನಿರ್ಣಯಗಳನ್ನು ಮಾಡಿದರು.
ಎಲ್ಲರಿಗೂ ಒಳ್ಳೇದು ಮಾಡುತ್ತೇವೆಂದು ಮಾತು
ಕೊಟ್ಟರು. ಈ ಮಾತನ್ನು ನಂಬುವವರು
ನಂಬಬಹುದು. ಆದರೆ ಈ ಸಲ ಸ್ಟಾಲಿನರನ್ನೂ
ಕೂಡಿ ಆಲೋಚನೆ ಮಾಡಿದ್ದು ಒಂದು ವಿಶೇಷದ
ಸಂಗತಿ. ಯುದ್ಧದ ಆರಂಭವಾದಂದಿನಿಂದ
ರಶ್ಯ ಯುದ್ಧಕ್ಕೆ ಸೇರಿದಂದಿನಿಂದಲೂ ಮಿತ್ರ
ಮುಖಂಡರು ಚರ್ಚಿಲ್ ರೂಸ್‌ವೆಲ್ಟರಿಬ್ಬರೇ
ಏನಾದರೊಂದು ನಿರ್ಣಯ ಮಾಡುವುದಿದ್ದರೆ
ಅದೆಲ್ಲಾ ತಮ್ಮ ತಮ್ಮೊಳಗೇ ಮಾಡಿ ಸುಧಾರಿಸಿ
ಬಿಡುತ್ತಿದ್ದರು. ಸ್ಟಾಲಿನರನ್ನಾಗಲಿ ಇನ್ನಾರನ್ನಾಗ
ಲಿ ಕೇಳುವುದು, ಅಥವಾ ಅವರ ಕೂಡಿ ಮಾತ
ನಾಡುವುದು ಇರಲಿಲ್ಲ. ಈಗ ಚರ್ಚಿಲ್ ರೂಸ್
ವೆಲ್ಟರು ಸ್ಟಾಲಿನರನ್ನು, ಕೈಶೇಕರನ್ನು ಸಾಲದ್ದಕ್ಕೆ
ಅವರ ಪತ್ನಿ ಮೇಡಂ ಕೈಶೇಕರನ್ನೂ ಕೂಡಿ
ಮಾತನಾಡಿದ್ದು ನಿಜವಾಗಿ ಪ್ರಶಂಸನೀಯ.
ಆದರೆ ಇಲ್ಲಿ ಒಂದು ವಿಷಾದವಾಗುತ್ತದೆ. ಮಿತ್ರ
ರು ಚರ್ಚಿಲ್, ರೂಸ್‌ವೆಲ್ಟ್, ಸ್ಟಾಲಿನ್ ಕೈಶೇ
ಕ್ ದಂಪತಿ ಇಷ್ಟು ಮಂದಿ ಬೇರೆ ಬೇರೆ ರಾಷ್ಟ್ರ
ಗಳ ಪ್ರತಿನಿಧಿಗಳಾಗಿ ಕೂಡಿ ಮಾತನಾಡಿದರಲ್ಲಾ
ಪ್ರಪಂಚದ ಐದನೇ ಒಂದಂಶ ಜನಸಂಖ್ಯೆಯುಳ್ಳ
ಯುದ್ಧರಂಗದಲ್ಲಿ ಪ್ರಬಲ ಶಕ್ತಿ ಸಾಮರ್ಥ್ಯ
ತೋರಿಸಿ ಮಿತ್ರರಿಗೆ ವಿಜಯ ತರಬಲ್ಲ ಭಾರತದ
ಪ್ರತಿನಿಧಿಯಾಗಿ ಯಾರೂ ಇರಲಿಲ್ಲವೆಂಬುದು
ಗಣನೀಯಲೋಪವಾಗಿದೆ. ಈ ಲೋಪವು
ಭಾರತೀಯರಿಗೆ ಹಾಗೂ ಪ್ರಜಾ ಪ್ರಭುತ್ವದ
ಭೂಪತಿಗಳಿಗಷ್ಟು ಗಣನೀಯವಾಗಲಿಲ್ಲವೆಂಬುದು
ವಿಷಾದಕರ.

ಎದೆನೋವು ಮತ್ತು ಬ್ರೊಂಕೈಟಿಸ್‌ಗಳನ್ನು ಗುಣಪಡಿಸಿರಿ.

ನೀವು ಬ್ರೊಂಕೈಟಿಸ್ ಅಥವಾ ಅಂಥಾ ಬೇರೆ ಯಾವುದೇ ಬೇನೆಯಿಂದ ನರಳುವಿರಾದರೆ ಪೆಪ್ಸು ನಿಮಗೆ ಒಳ್ಳೆಯ ಗುಣವನ್ನು ಕೊಡುವುದು. ಈ ವಿಷಹಾರೀ ಶ್ವಾಸಯೋಗ್ಯ ಮಾತ್ರೆಗಳು ಎಲ್ಲಾ ತರದ ಎದೆ ಶ್ವಾಸಕೋಶಗಳ ನೋವುಗಳನ್ನು ಗುಣಪಡಿಸುತ್ತವೆ. ಇದರಲ್ಲಿ ಪ್ರಸಿದ್ಧ ಪೈನ್ ಅರಣ್ಯಗಾಳಿಯ ಎಲ್ಲಾ ಗುಣಗಳೂ ಇವೆ.

ಬಾಯಲ್ಲಿ ಹಾಕಿದ ಕೂಡಲೇ ಪೆಪ್ಸು ಕರಗಿ, ಉತ್ತಮ ಔಷಧಿ ಸತ್ವವನ್ನು ಹೊರಗೆಡವಿ ಅದು ಶ್ವಾಸದೊಡನೆ ಶ್ವಾಸಕೋಶವನ್ನು ಸೇರುತ್ತವೆ. ಹೀಗೆ ಪೆಪ್ಸು ಉಪದ್ರವಕಾರೀ ಎದೆ ಶ್ವಾಸಗಳ ನೋವನ್ನು ಗುಣಪಡಿಸಿ ಶ್ವಾಸವನ್ನು ಸರಿಗೊಳಿಸುವುದು. ಪೆಪ್ಸು ನಿಮ್ಮ ಕಂಠನೋವನ್ನು ಸರಿಗೊಳಿಸುತ್ತದೆ. ರೋಗವು ತಾಗದಂತೆ ಶರೀರದಲ್ಲಿ ಶಕ್ತಿಯನ್ನುಂಟುಮಾಡುತ್ತದೆ.

ಪೆಪ್ಸನ್ನು ಕೊಂಡುಕೊಳ್ಳಿರಿ.

PEPS

ವಿಷಹಾರಿ ಶ್ವಾಸಯೋಗ್ಯ ಮಾತ್ರೆಗಳು.

★ ಮಾರಾಟಕ್ಕೆ ಸಿದ್ಧವಾಗಿವೆ ★

1944 ಶಾರದಾ ಡೈರಿಗಳು 1944

ಸಣ್ಣ ಸೈಜ್ (ಕೆಲಿಕೊ) 1-2-0 ದೊಡ್ಡ ಸೈಜ್ (ಕೆಲಿಕೊ) 1-12-0

(ಮುಚ್ಚಳದ್ದು) 1-6-0 ದೊಡ್ಡ ಸೈಜು (ಮುಚ್ಚಳದ್ದು) 2-0-0

ದೊರೆಯುವ ಸ್ಥಳ:—

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ಬೇಗನೇ ಮಾರಾಟಕ್ಕೆ ತಯಾರಾಗುತ್ತಿವೆ

1944ನೇ ಇಸವಿಯ

ಎರಡು ಬಣ್ಣದಲ್ಲಿ ಅಂದವಾಗಿ ಮುದ್ರಿತವಾದ

★ ಆಫೀಸು ಕೆಲೆಂಡರು ★

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

NOTICE BY SUBSTITUTED SERVICE

In the Court of the Subordinate Judge of South Kanara.

A. S. No. 455 of 1943.

Between:—

Parameshwari Amma . . *Appellant*

Vs.

Chekke Keshava Bhat and, others . *Respondents.*

To Respondents:—

4. Shankera Bhatta
5. Sham Bhatta

(Sons of Ven-katramana Bhatta, residing at Koipadi Village Kasargod Taluk)

Please take notice that the above appeal preferred from the order of the Court of the District Munsiff of Kasargod dated 15-12-1942 in R. E. P. No. 1123 of 1940 in O. S. No. 283 of 1933 by the appellant and registered in the above court, will come on for hearing at 11 A.M., on 31-12-1943 in the above Court.

If no appearance is made on your behalf by yourselves, your pleader, or by some one by law authorized to act for you in the said appeal, it will be heard and decided in your absence.

Mangalore, 9-12-1943. — S. Vaikunta Baliga, Vakil for Appellant.

ಸ್ವದೇಶಾಭಿಮಾನಿ

ತಾರೀಕು 10—12—1943

ಲಾಸ್ಕಿಯವರ ಹಿತವಚನ

"ಭಾರತಕ್ಕೆ ಮೊದಲು ಸ್ವಾತಂತ್ರ್ಯ ಕೊಡಿ, ಇದರಿಂದ ಯುದ್ಧದ ಗತಿಯೇ ಬೇರಾಗುವುದು; ಭಾರತದಲ್ಲಿನ ನಮ್ಮ ಸಾಮ್ರಾಜ್ಯ ಸತ್ತು ಹೋದರೂ ಭಾರತೀಯರ ಮೈತ್ರಿಯು ನಮಗೆ ದೊರೆಯುವುದು; ಸ್ವಾತಂತ್ರ್ಯಕ್ಕಾಗಿ ಹೋರಾಡುವ ನಮ್ಮ ಸದುದ್ದೇಶಗಳೂ ಖಚಿತವಾಗುವವು" ಹೀಗೆಂದು ಪ್ರೊ॥ ಹೆರಾಲ್ಡ್ ಲಾಸ್ಕಿಯವರು 'ನ್ಯೂ ಸ್ಟೇಟ್ಸ್‌ಮೆನ್ ಎಂಡ್ ನೇಶನ್' ಪತ್ರಿಕೆಯ ಒಂದು ಲೇಖನದಲ್ಲಿ ಸಾರಿದ್ದಾರೆ. ಆ ಲೇಖನದಲ್ಲಿ ಅವರು, ದಬ್ಬಾಳಿಕೆ ಮಾಡಿದರೆ ಅದರಿಂದ ಸಹಾಯಸಿಗದೆಂದೂ ಸರಕಾರ ಮತ್ತು ಕಾಂಗ್ರೆಸ್ ಇವುಗಳ ಧ್ಯೇಯ ಭೇದಗಳಿಗಿಂತಲೂ, ಅನ್ಯೋನ್ಯವಿರುವ ಅವಿಶ್ವಾಸ ಸಂಶಯಗಳೇ ಇಂದಿನ ತೊಡಕಿಗೆ ಕಾರಣವೆಂದೂ ಹೇಳಿ, ಭಾರತದ ಸ್ವಾತಂತ್ರ್ಯವನ್ನು ಮೊದಲಾಗಿ ಸಾರಬೇಕೆಂದು ಬ್ರಿಟಿಷರಲ್ಲಿ ಹಾಗೂ ಈ ಮೂಲಕ ಮಿತ್ರ ರಾಷ್ಟ್ರಾಧಿಪತಿಗಳಲ್ಲಿ ಕೇಳಿಕೊಂಡಿರುವರು.

"ಈ ರೀತಿಯ ಅವಿಶ್ವಾಸ ಸಂಶಯಗಳಿರುವುದರಿಂದ ಬ್ರಿಟಿಷ್ ಸರಕಾರ ಕಾಂಗ್ರೆಸಿನ ಕುರಿತು ನಿಜವಾಗಿ ಆಲೋಚನೆಮಾಡುವುದೇ ಇಲ್ಲ. ಹಾಗೆ ಮಾಡದಿದ್ದರೆ ಸಮಸ್ಯೆ ಬಗೆಹರಿಸಲೂ ಸಾಧ್ಯವಿಲ್ಲ. ಈ ಸಮಸ್ಯೆಯನ್ನು ಬಿಡಿಸುವುದರಿಂದ ತನ್ನ ಗೌರವಕ್ಕೆ ಹಾನಿ ಬರುತ್ತದೆಂದು ಅದು ಭದ್ರವಾಗಿ ಕುಳಿತಿದೆ. ಅದರ ನಿರ್ಧರಿತ ಉದ್ದೇಶಗಳ ಕುರಿತು ಆಕ್ಷೇಪವೆತ್ತಿದಾಗ ಅದು ಬಹಳ ಸಿಟ್ಟಿಗೆದ್ದಿತು. ಜಗತ್ತಿನ ಈ ಯುದ್ಧಕ್ಕಾಗಿ ತಮ್ಮ ಜನರು ಇಷ್ಟೊಂದು ಬಲಿದಾನ ಮಾಡುತ್ತಿರುವಾಗ, ಕಾಂಗ್ರೆಸು ಅದಕ್ಕೆ ತೊಂದರೆ ಮಾಡುವಂಥಾ ಧೋರಣ ವಹಿಸಿತೆಂದು ಕೆರಳಿತು. ಗಾಂಧಿ ಮತ್ತು ಕಾಂಗ್ರೆಸು ಮುಂದರಿಸಿದ ಧೋರಣೆಯನ್ನು ತನ್ನ ಹಳೆಯ ಕಾನೂನು ಅಡಳಿತಗಳ ದೃಷ್ಟಿಯಲ್ಲಿಯೇ ಇನ್ನಷ್ಟು ಜೋರಿನಿಂದ ನೋಡುತ್ತಿದೆ. ಇಂಥಾ ವಿಷಮ ಪರಿಸ್ಥಿತಿಯಲ್ಲಿ ನಿಜವಾದ ಸಮಸ್ಯೆಯ ಮೂಲವನ್ನರಿತುಕೊಂಡು ಅದಕ್ಕೆ ಸಂಪೂರ್ಣ ಪರಿಹಾರ ಮಾಡಲು ಸಮರ್ಥವಾಗಲಿಲ್ಲ. ಆ ಸಮಸ್ಯೆಯ ಮೂಲವೆಂದರೆ ಭಾರತವನ್ನು ಸ್ವತಂತ್ರವಮಾಡುವುದು. ಹಾಗಾದರೆ ಮಾತ್ರ ಭಾರತದ ಸಹಕಾರ ದೊರಕುವುದು" ಹೀಗೆಂದು ಲಾಸ್ಕಿಯವರು ವಿವೇಚಿಸಿದ್ದಾರೆ.

'ಸ್ವಾತಂತ್ರ್ಯಬೇಕು. ಇದಕ್ಕೆ ನಾವು ಉತ್ತರವಿತ್ತಿದ್ದೇವೆ. ವಿಜಯಾನಂತರವೇ ಇಂಥಾ ಸಮಸ್ಯೆಗಳ ವಿಚಾರಮಾಡುವುದು ಸಾಧ್ಯವಿದೆ. ಆದರೆ ಮೊದಲು ವಿಜಯ ಗಳಿಸುವ. ಯುದ್ಧಾನಂತರ ಭಾರತಕ್ಕೆ ಸ್ವಾತಂತ್ರ್ಯ ಸಿಗುವುದು; ಆಗಬೇಕಾದರೆ ಅದು ಕಾಮನ್‌ವೆಲ್ತಿನಿಂದ ಬೇರೆಯಾಗಿರಬಹುದೆಂದು ನಾವು ಹೇಳಿದ್ದೇವೆ. ಹೀಗೆ ಕೇವಲ ಮಾತು ಕೊಟ್ಟರೆ ಸಾಲದು. ನಮ್ಮ ಮಾತನ್ನು ಕಾಂಗ್ರೆಸು ಮಾತ್ರವಲ್ಲ ಭಾರತೀಯರಾರೂ ನಂಬುವುದಿಲ್ಲ. ಈಗಲೇ ಕೇಂದ್ರದಲ್ಲಿ ಪರಿಣಾಮಕಾರಿಯಾದ ಸ್ವರಾಜ್ಯವನ್ನು ಕೊಡುವುದರಿಂದ ಯುದ್ಧ ಪ್ರಯತ್ನಕ್ಕೆ ಭಾರತೀಯರು ತನುಮನಧನ ಅರ್ಪಿಸುವರು. ನೆಹರುಗಳ ಸೂಚನೆಯಂತೆ, ಸ್ವತಂತ್ರ ರಾಷ್ಟ್ರಗಳ ಮಿತ್ರರ ಒತ್ತಾಯದಿಂದ ಕಾಂಗ್ರೆಸು ಅಹಿಂಸಾತ್ಮಕ ಅಸಹಕಾರ ತತ್ವವನ್ನೂ ಬಿಟ್ಟು ಕೊಟ್ಟು, ಸ್ವತಂತ್ರವಾದ ಭಾರತವು ತನ್ನ ಸರ್ವಸ್ವವನ್ನೂ ಮಿತ್ರ ರಾಷ್ಟ್ರಗಳ ಸಲುವಾಗಿ ಮಾಡುವ ಯುದ್ಧಕ್ಕೆ ಅರ್ಪಿಸುವುದೆಂದು ನಿರ್ಣಯಿಸಿದೆ. ಈ ವಿಷಯವನ್ನು ನಾವು ಲಕ್ಷದಲ್ಲಿಡಬೇಕು' ಹೀಗೆಂದು ಲಾಸ್ಕಿಯವರು ಉಲ್ಲೇಖಿಸಿದ್ದಾರೆ.

'ಸ್ವೀಕರಿಸಿರಿ ಇಲ್ಲವೇ ಬಿಡಿರಿ' ಎಂಬೀ ಧೋರಣದಿಂದ ಭಾರತಕ್ಕೆ ಹೋದದ್ದು ಹೋಗಿ ಗಡಿಬಿಡಿಯಿಂದ ಹಿಂದೆ ಬಂದದ್ದು, ಬಂದದ್ದೆ ಕೊಟ್ಟ ಮಾತನ್ನು ಹಿಂದೆಗೆದಿರುವೆವೆಂದು ಸಾರಿದ್ದು ಇದೆಲ್ಲಾ ಅನರ್ಥವಾಗಿದೆ. ಭಾರತಕ್ಕೆ ಸ್ವಾತಂತ್ರ್ಯ ಕೊಡಲು ನಮಗೆ ಮನಸ್ಸಿರದೆ ಕೇವಲ ಇದೊಂದು ತರದ ಪ್ರಚಾರ ಮಾಡಿದೆವೆಂದು ಕ್ರಿಪ್ಸ್ ಸಂಧಾನದ ಕುರಿತು ತಿಳಕೊಳ್ಳುವಂತಾಗಿದೆ. ಫಿಲಿಪಯಿನೊಡವಿದ್ದ ಅಮೆರಿಕದ ಸಂಬಂಧ, ಭಾರತದೊಡನಿದ್ದ ಬ್ರಿಟಿಷರ ಸಂಬಂಧ ಇವುಗಳನ್ನು ಹೋಲಿಸಿ ನೋಡುವವರಿಗೆ ಉತ್ತರ ರೂಪವಾಗಿ ಈ ಆಟ ನಡೆಯಿತು" ಎಂದು ಲಾಸ್ಕಿಯವರು ನುಡಿದು, ಪುನಃ ಭಾರತೀಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಂಧಾನಕ್ಕೆ ಕರೆದು ಈಗಲೇ ಅವರನ್ನು ಸ್ವತಂತ್ರರಾಗಿ ಮಾಡಿರೆಂದು ಸಾರಿರುವರು.

ಸ್ವದೇಶ ಸಮಾಚಾರ

ಫರೀದಪುರದಲ್ಲಿ ೫ ಲಕ್ಷ ಜನರಿಗೆ ಮಲೇರಿಯ

ಬಂಗಾಳದ ಫರೀದಪುರದಲ್ಲಿ ೫ ಲಕ್ಷ ಜನರು ಮಲೇರಿಯ ಬಾಧೆಯಿಂದ ನರಳುವರೆಂದು ಅಮೃತ ಬಜಾರ್ ಪತ್ರಿಕೆ ಬರೆಯುತ್ತದೆ. ಕಳೆದ ಸೆಪ್ಟೆಂಬರದಲ್ಲಿ ೩೦೦೦೦ ಮತ್ತು ಅಕ್ಟೋಬರದಲ್ಲಿ ಕನಿಷ್ಠ ೨೦೦೦೦ ಜನರು ಇದರಿಂದ ಮೃತಪಟ್ಟರೆಂದು ಸರಕಾರೀ ಅಂಕೆ ಸಂಖ್ಯೆ ತಿಳಿಸುತ್ತದೆ.

ಪುಲಿಜರ್ ಪಾರಿತೋಷಿಕ ಪಡೆದ ಪ್ರಥಮ ಭಾರತೀಯ, ಗೋಬಿಂದ ಬಿಹಾರಿಲಾಲರು ಅಮೆರಿಕದಲ್ಲಿ

ಅಮೆರಿಕಕ್ಕೆ ಭಾರತವು ಐವತ್ತು ಮಂದಿ ಸಮರ್ಥ ವೈಜ್ಞಾನಿಕರನ್ನು ಕಳುಹಿಸಿದೆ. ಇವರಲ್ಲಿ ಜಗತ್ಪ್ರಸಿದ್ಧ ಗಣಿತ ಶಾಸ್ತ್ರ ವಿಶಾರದ ಗೋಬಿಂದ ಬೀಹಾರೀಲಾಲರು ಒಬ್ಬರು, ಲಾಲರು, ಇಂಟರ್‌ನೇಶನಲ್ ನ್ಯೂಸ್ ಸರ್ವಿಸ್, ಮತ್ತು ಇತರ ಹಲವು ಅಮೆರಿಕನ್ ಪತ್ರಿಕೆಗಳ ವಿಜ್ಞಾನ ಪುಟಗಳ ಸಂಪಾದಕರಾಗಿ ಕೆಲಸ ಮಾಡುತಿರುವರು. ಮಿಲಿಯಾಂತರ ಮಂದಿ ಅವರ ಲೇಖನಗಳನ್ನೋದಿದ್ದಾರೆ. ಹಲವು ವೈಜ್ಞಾನಿಕ ಸಭೆಗಳಲ್ಲಿ ಅವರು ತಮ್ಮ ಉದ್ಬೋಧಕ ಭಾಷಣಗಳನ್ನಿತ್ತಿದ್ದಾರೆ. ಹೀಗೆ ಭಾರತೀಯರಾಗಿ ಅಮೆರಿಕದಲ್ಲಿ ಬಹಳ ಪ್ರಸಿದ್ಧಿಗೇರಿದವರಲ್ಲಿ ಲಾಲರೊಬ್ಬರು.

ಇವರು ಡಿಲ್ಲಿಯಲ್ಲಿ ೧೮೮೯ರಲ್ಲಿ ಹುಟ್ಟಿದರು. ಪಂಜಾಬ್ ವಿಶ್ವ ವಿದ್ಯಾಲಯದಲ್ಲಿ ಪದವೀಧರರಾಗಿ ೧೯೩೭ರಲ್ಲಿ ಪತ್ರಿಕೋದ್ಯಮದ ನೈಪುಣ್ಯಕ್ಕಾಗಿ ಅಮೆರಿಕ ಪುಲಿಜರ್ ಪಾರಿತೋಷಿಕ ಪಡೆದರು. ಅವರು ಮೂರು ಗ್ರಂಥಗಳನ್ನು ಬರೆದಿದ್ದಾರೆ. ಪ್ರೊ॥ ಸುಬ್ರಹ್ಮಣ್ಯಂ ಚಂದ್ರಶೇಖರ್ (ಚಿಕಾಗೋ ವಿಶ್ವವಿದ್ಯಾಲಯ ಮತ್ತು ಯರ್ಕ್ಸ್ ಪ್ರಯೋಗಶಾಲೆ) ಇನ್ನೊಬ್ಬ ಪ್ರಸಿದ್ಧ ವೈಜ್ಞಾನಿಕ.

ಲಾಲರು ಫಿಸಿಕ್ಸ್, ಕೆಮಿಸ್ಟ್ರಿ, ಮೆಡಿಸಿನ್, ಬಯೋಲಜಿ, ಎಸ್ಟ್ರೋನಮಿ, ಸೈಕೋಲಜಿ, ಸೈಕ್ಯೋಟ್ರಿ, ಆರ್ಕ್ಯೋಲಜಿ ಮುಂತಾದ ಹಲವು ವೈಜ್ಞಾನಿಕ ವಿಷಯಗಳಲ್ಲಿ ಪಾಂಡಿತ್ಯಪೂರ್ಣರಾಗಿರುವರು. ೧೯೧೨ರಲ್ಲಿ ಲಾಲರು ಅಮೆರಿಕಕ್ಕೆ ತೆರಳಿದರು. ಅಲ್ಲಿ ಕೆಲಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ಪದವೀಧರರಾದರು.

ಲಾಲರು ಬ್ರಹ್ಮಚಾರಿ. ನ್ಯೂಯಾರ್ಕ್ ನಗರದ ಗ್ರೀನ್‌ವಿಚ್ ಹಳ್ಳಿಯ ಕುಟೀರದಲ್ಲಿ ವಾಸಿಸುತ್ತಾರೆ. ನಾಟಕ, ಕಲೆ, ಸಂಗೀತ ಮತ್ತು ಇತರ ವೈಜ್ಞಾನಿಕ ವಿಷಯಗಳಲ್ಲಿ ಅವರಿಗೆ ಆಸಕ್ತಿ ಬಹಳ. ೧೯೪೦-೪೧ರಲ್ಲಿ ಅವರು ಅಮೆರಿಕದ ರಾಷ್ಟ್ರೀಯ ವೈಜ್ಞಾನಿಕ ಲೇಖಕ ಸಂಘದ ಅಧ್ಯಕ್ಷರಾಗಿದ್ದರು.

U. S. O. W. I.

ರಂಗೂನ್ ಮೇಲೆ ಧಾಳಿ

ಇಡೀ ನವಂಬರ ತಿಂಗಳಲ್ಲಿ ಒಂದು ದಿನ ಬಿಟ್ಟು ಮಿಕ್ಕೆಲ್ಲಾ ದಿನಗಳಲ್ಲಿ ಒಟ್ಟು ೨೦೦ ಸಲ ರಂಗೂನಿನ ಮೇಲೆ ಧಾಳಿಯಾಗಿತ್ತೆಂದೂ, ೭೦ ಬೇರೆ ಬೇರೆ ಗುರಿಗಳ ಮೇಲೆ ಬಾಂಬಿಡಲಾಗಿದೆಯೆಂದೂ ೧೦೦೦ ಟನ್ ಬಾಂಬುಗಳನ್ನು ಒಗೆಯಲಾಗಿದೆಯೆಂದೂ ಆಗ್ನೇಯ ಏಶಿಯದ ಸನ್ನಿ

೧ ತಿಂಗಳಿಂದ ಒಂದು ಪ್ರಕಟನೆ ಹೊರಬಿದ್ದಿದೆ.

ಹಿಂದುಸ್ಥಾನದಿಂದ ರಕ್ತಕ್ಕೆ ಮಾರ್ಗ

ಬಂಗಾಳದಲ್ಲಿ ಅಕ್ಕಿ ಮಣಕ್ಕೆ ರೂಪಾಯಿ 80.

೧೯೪೧ ಡಿಸೆಂಬರದಲ್ಲಿ ಬಂಗಾಳದಲ್ಲಿ ಅಕ್ಕಿ ಮಣವೊಂದರ ರೂ. ೩-೮-೦ ಕ್ರಯವಿದ್ದದ್ದು ಈಗ ರೂ. ೮೦ ಆಗಿದೆ. ಇದರ ಪರಿಣಾಮ ಬಂಗಾಳದಲ್ಲಿ ಈಗಾಗಲೇ ಒಂದು ಲಕ್ಷ ಜನ ಸತ್ತಿದ್ದಾರೆ. ಬಂಗಾಳದ ಮನೆಗಳಲ್ಲಿ ಗಂಡುಸರಿಲ್ಲ; ಹಸಿವಿನಿಂದ ನರಳುವ ಮುದುಕಿಯರು ಶಿಶುಗಳು ಮೃತ್ಯುವನ್ನು ಎದುರು ನೋಡುತ್ತಿದ್ದಾರೆ. ಕೆಲವು ಮನೆಗಳು ಖಾಲಿ ಆಗಿವೆ. ಸಾವಿರಾರು ಮಂದಿ ಸ್ತ್ರೀಯರು ಹಸಿವಿನ ಬಾಧೆ ತಾಳಲಾರದೆ ವ್ಯಭಿಚಾರಕ್ಕಿಳಿದಿದ್ದಾರೆ. ಶ್ಯಾಮ ಹೀದಿತ ಬಂಗಾಳ ಹೀಗೆ ಸಂಕಷ್ಟದಿಂದ ನರಳುತ್ತಿದೆ.

Notice by Publication as per Order of Court

In the Court of the District Judge of South Kanara

O. S. No. 6/1943.
and R. I. A. No. 239/1943.

1. J. Ramappa,
2. Jarappa Pujari. } *Plaintiffs*

versus

K. Somappa Panditha
and others—*Defendants*

To

All Worshippers and Votaries of Kankanady BaidarleGaradi, Kankanady of Mangalore Taluk.

The abovenamed Plaintiffs have applied under order I, Rule 8 of the Code of Civil Procedure for permission to file and prosecute the above suit in their representative capacity for and on behalf of all worshippers and votaries of the Kankanady Baidarle Garadi, residing in Kankanady, Jeppoo, Maroli, Bajal and Alpe villages of Mangalore Taluk and that the above suit and the application stand posted for hearing at 11 a. m. on 13-12-1943 in the above Court. Worshippers and Votaries interested in the above matters may appear in person or by pleader on or before the said date and contest the same.

Mangalore, 1-12-1943. — K. Gopal Rao, Vakil for Plaintiffs.

ನಮ್ಮ ಸುವರ್ಣೋತ್ಸವ ಸಂಚಿಕೆಗೆ

1893 1943 GOLDEN JUBILEE

ದಯಮಾಡಿ ನಿಮ್ಮ ಪ್ರೀತಿಯ ಸಂದೇಶವನ್ನು ಕಳುಹಿಸಿರಿ

ಅಮೃತಾಂಜನ ಲಿಮಿಟೆಡ್,
ಮದ್ರಾಸ್, ಬೊಂಬಯಿ, ಕಲ್ಕತ್ತ.

FIRST AND FOREMOST

FIRST AND FOREMOST among the ideals of the CANARA BANK is the ideal of Service to its Customers.

ESTD. 1906.
CANARA BANK LTD.

ಜಿಲ್ಲಾ ಸಮಾಚಾರಗಳು

ಮಂಗಳೂರು

ಉದ್ಯೋಗಕ್ಕಾಗಿ ಲಂಚವೇ?

ಮಂಗಳೂರು ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟರಾದ ಶ್ರೀ. ಪಿ. ವಿ. ಮಾಧವ ರಾಯರ ಮುಂದೆ ಕಳೆದ ತಾ. ೪ರಲ್ಲಿ ಒಂದು ಅಪರೂಪವಾದ ಮೊಕದ್ದಮೆಯು ತೀರ್ಪಿಗೆ ಬಂದಿದ್ದು ಅದರ ಸಾರಾಂಶವು ಹೀಗಿದೆ:—

ಕಾಸರಗೋಡು ತಾಲೂಕಿನ ಕಿಕ್ಕಾನ್ ಗ್ರಾಮದವನೂ ಮಂಗಳೂರು ಗವರ್ನ್‌ಮೆಂಟ್ ಕಾಲೇಜಿನ ಒಂದನೇ ಯುನಿವರ್ಸಿಟಿ ಕ್ಲಾಸಿನ ಮಾಜಿ ವಿದ್ಯಾರ್ಥಿಯೂ ಆಗಿರುವ ಶ್ರೀ. ಪಿ. ರಾಮಚಂದ್ರನ್ ಎಂಬಾತನು, ತಾ. ೩—೩—೪೩ರಲ್ಲಿ ಮದ್ರಾಸಿನ ಕಲೆಕ್ಟರ್ ಆಫ್ ಕಸ್ಟಮ್ಸ್ ಅವರಿಗೆ, ತನ್ನನ್ನು ಕಸ್ಟಮ್ಸ್ ಶಾಖೆಯ ಒಬ್ಬ ಸಬ್ ಇನ್‌ಸ್ಪೆಕ್ಟರನನ್ನಾಗಿ ಚುನಾಯಿಸಲು ಅರ್ಜಿ ಬರೆಕೊಂಡಿದ್ದ. ಅನಂತರ ಅವನು ತಾ. ೨೪—೩—೪೩ರಲ್ಲಿ ಶ್ರೀ. ಎ. ಎಸ್. ಸತ್ಯನಾಥನ್ ಎಡಿಶನಲ್ ಕಲೆಕ್ಟರ್, ಸೆಂಟ್ರಲ್ ಎಕ್ಸೈಸ್, ಮದ್ರಾಸ್ (ಇವರು ಮೊದಲು ಎಡಿಶನಲ್ ಕಲೆಕ್ಟರ್, ಸಾಲ್ಟ್ ಕಸ್ಟಮ್ಸ್ (ಮದ್ರಾಸ್) ಆಗಿದ್ದರು) ಇವರ ಮುಂದೆ ಒಂದು ಭೇಟಿಗಾಗಿ ಹಾಜರಾಗಿದ್ದು ಅದರಲ್ಲಿ ಅವನಿಗೆ ಆ ಮೇಲೆ ಅವನು ಅಪೇಕ್ಷಿಸಿದಂತೆ ಚುನಾವಣೆಯಾಗಲಿಲ್ಲ. ಇದಿಷ್ಟರಲ್ಲಿ ರಾಮಚಂದ್ರನನು ತಾರೀಕು ೨೬—೪—೪೩ರಲ್ಲಿ ಅಥವಾ ಸುಮಾರು ಆ ತಾರೀಕಿನ ಹೊತ್ತಿಗೆ ೧೦೦ ರೂಪಾಯಿಗಳ ಒಂದು ಕರೆನ್ಸಿ ನೋಟನ್ನು ಮೇಲ್ಕಂಡ ಎಡಿಶನಲ್ ಕಲೆಕ್ಟರರಿಗೆ ಪೋಸ್ಟಿನಲ್ಲಿ ಮಂಗಳೂರಿನಿಂದ ಕಳುಹಿಸಿದ ಹಾಗೂ; ಒಬ್ಬ ಪಬ್ಲಿಕ್ ಸರ್ವೆಂಟಿಗೆ ಅವರ ಕಾನೂನಿಗೆ ಸಮ್ಮತವಾದ ಪ್ರತಿಫಲದ ಹೊರತು, ಇದೊಂದು ಸಂಭಾವನೆ ಅಥವಾ ಉಚಿತವನ್ನು—ಆ ಕಲೆಕ್ಟರರು ತಮ್ಮ ಕರ್ತವ್ಯ ನಿರ್ವಾಹಕಾಲದಲ್ಲಿ ತನ್ನನ್ನು ಒಬ್ಬ ಕಸ್ಟಮ್ಸ್ ಸಬ್ ಇನ್‌ಸ್ಪೆಕ್ಟರ್ ಅಥವಾ ಆ ಶಾಖೆಯ ಒಬ್ಬ ಕ್ಲಾರ್ಕನ್ನಾಗಿ ನಿಯಮಿಸುವ ಉದ್ದೇಶದಿಂದ—ರಾಮಚಂದ್ರನು ಹಾಗೆ ರವಾನಿಸಿರುವ ಹಾಗೂ ಅವನ ಮೇಲಿನ ಆರೋಪ.

ಕಳೆದ ತಾ ೪ರಲ್ಲಿ ಮೇಲ್ಕಂಡ ಮ್ಯಾಜಿಸ್ಟ್ರೇಟರ ಮುಂದೆ ಈ ವ್ಯವಹರಣೆಯು ಚರಿತ್ರ ಆರಂಭವಾಗಿ ಪ್ರಾಸಿಕ್ಯೂಶನಿನ ಕಡೆಯ ಮೊದಲನೆ ಸಾಕ್ಷಿಯಾದ ಕಲೆಕ್ಟರ್ ಆಫ್ ಕಸ್ಟಮ್ಸ್ ಅವರ ವಿಚಾರಣೆ ಬಹಳ ಹೊತ್ತು ನಡೆಯಿತು. ಅನಂತರ ವಿಚಾರಣೆ ನಡೆದ ಇಬ್ಬರು ಸಾಕ್ಷಿಗಳಲ್ಲಿ ಮೊದಲು ಸ್ಥಳೀಯ ಗ ಕಾಲೇಜಿನಲ್ಲಿ ಇದ್ದ ಆಗ ಪಾಲ್ಘಾಟಿನ ಗ. ವಿಕ್ಟೋರಿಯಾ ಕಾಲೇಜಿನಲ್ಲಿ ಇರುವ ಫಿಜಿಕ್ಸ್ ಲೆಕ್ಚರರೂ ಒಬ್ಬರು. ಉಳಿದ ಎರಡು ಸಾಕ್ಷಿಗಳಲ್ಲಿ ಒಬ್ಬರಾದ, ಸಂಬಂಧಪಟ್ಟ ದಾಖಲೆಗಳ ಸರಕಾರೀ ಪರೀಕ್ಷಕರು ಡಿಲ್ಲಿ (ಸಿಮ್ಲಾ) ಅವರು ಈ ತಾರೀಕು ಗಂದ ಗೈರು ಹಾಜರಿದ್ದುದರಿಂದ ಈ ಮೊಕದ್ದಮೆಯನ್ನು ಇದೇ ತಿಂಗಳ ತಾ. ೧೬ಕ್ಕೆ ಮುಂದರಿಸಿಡಲಾಗಿದೆ.

ಆರೋಪಿಯ ಕಡೆಯಿಂದ ರಾ ಬ. ಎನ್. ಎಸ್. ಸುವರ್ಣ, ಎಡ್ವೋಕೇಟ್ ಅವರೂ, ಪ್ರಾಸಿಕ್ಯೂಶನಿನ ಕಡೆಯಿಂದ ಪ್ರಾಸಿಕ್ಯೂಟಿಂಗ್ ಇನ್ಸ್‌ಪೆಕ್ಟರ್ ಆಫ್ ಪೋಲೀಸ್ ಅವರ ಸಹಾಯಪಡೆದು ಮಂಗಳೂರು ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ಮಿ. ಜೆ ಬಿ ಡಿ. ಸಿಲ್ವ ಬಿ. ಎ (ಆನರ್ಸ್) ಅವರೂ ವ್ಯವಹರಿಸಿದ್ದರು.

ಮ್ಯುನ್ಸಿಪಲ್ ಕೌನ್ಸಿಲ್ ಸಭೆ

ತಾ. ೬ರಂದು ಸಂಜೆ ಮಂಗಳೂರು ಮುನ್ಸಿಪಲ್ ಕೌನ್ಸಿಲಿನ ಸಭೆ ಅದರ ಕಾರ್ಯಾಲಯದಲ್ಲಿ ಕೌನ್ಸಿಲ್ ಚೆಯರ್‌ಮ್ಯಾನರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಎಸ್. ಬಸವ ಮ್ಯು. ಕೌನ್ಸಿಲರ್ ಇವರ ಬದಲಿಗೆ ನೇಮಿಸಲ್ಪಟ್ಟ ಶ್ರೀ. ಕೆ. ವಾಮನ ಇವರು ಕೌನ್ಸಿಲರರ ಪ್ರಮಾಣವಚನವನ್ನು ಕೈ ಕೊಂಡ ಮೇಲೆ, ಮ್ಯುನಿಸಿಪಾಲಿಟಿಯಲ್ಲಿ ನೀರು ಹಾಯಿಸಲೂ ಇತರ ಕಾರ್ಯಗಳಿಗಾಗಿಯೂ ಉಪಯೋಗಿಸಲ್ಪಡುವ ಲಾರಿಗಳು ಬಹಳ ಹಳೆಯದಾಗಿ ನಿರುಪಯೋಗಿಗಳಾಗಿರುವುದರಿಂದ ಅವುಗಳ ಬದಲಿಗೆ ಬೇರೆ ಹೊಸ ಲಾರಿಗಳನ್ನು ಒದಗಿಸುವಂತೆ ಸರಕಾರಕ್ಕೆ ಬರೆದುಕೊಳ್ಳುವ ಒಂದು ಠರಾವು ಮಂಜೂರಾಯಿತು.

೧೯೪೫—೪೬ನೇ ಇಸ್ವಿಯ ತಿದ್ದಿದ ಆಯವ್ಯಯ ಪಟ್ಟಿಯೂ ೪೬—೪೭ರ ಅಂದಾಜಿನ ಬಜೆಟೂ ಮಂಡಿಸಲಾಗುವ ಮುನ್ನ ಶ್ರೀ. ಸಿ. ಎಲ್. ಡಿಸೋಜ, ಮೊದಲಾದವರು ಕೆಲ ಹಿತಸೂಚನೆಗಳನ್ನು ಕೊಟ್ಟರು. ಕಮಿಶನರು ಬಜೆಟುಗಳಿಗೆ ಸಂಬಂಧಿಸುವ ಹಲವೊಂದು ಅಂಶಗಳನ್ನು ವಿವರಿಸಿ ಹೇಳಿದರು.

ವಿಷಯ ಸೂಚಿಪತ್ರದಲ್ಲಿದ್ದ ಹಲವೊಂದು ವಿಚಾರಗಳು ಮುಂದಿನ ಸಭೆ ಮುಂದರಿಸಲಾಯಿತು.

ದ. ಕ. ಜಿಲ್ಲಾ ಬೋರ್ಡ್ ಸಭೆ

ಈ ಬೋರ್ಡಿನ ಸಾಮಾನ್ಯವಾದ ಒಂದು ಸಭೆ ಬೋರ್ಡ್ ಆಫೀಸಿನಲ್ಲಿ ಇದೇ ತಾ. ೧೬ನೇ ಗುರುವಾರ ಗಂಟೆ ೧೧ಕ್ಕೆ ಜರಗುವುದು. ಅಂದು, ೧೯೪೫—೪೬ರ ತಿದ್ದಿದ ಬಜೆಟೂ ೪೬—೪೭ರ ಅಂದಾಜು ಬಜೆಟೂ ಚರ್ಚಿಸಲ್ಪಡುವವು.

ಈ ಕಾಲದಲ್ಲಿ ಸಭೆಯು ಶ್ರೀ ಎ. ಎಂ. ನಾಗಣ್ಣ ಹೆಗ್ಗಡೆಯವರು, (ಜಿ॥ ಬೋ॥ ಮೆಂಬರರು) "ಬೋರ್ಡಿನ ಅಡಳಿತಕ್ಕೊಳಪಟ್ಟಿರುವ ಯಾವುದೇ ಎಲ್. ಎಫ್. ಬಂಗಲೆ ಅಥವಾ ಕಟ್ಟಡಗಳನ್ನು ಬಾಡಿಗೆ ವಿನಾ (ಧರ್ಮಕ್ಕೆ) ಬೋರ್ಡಿನ ಪ್ರೆಸಿಡೆಂಟ್, ವೈಸ್ ಪ್ರೆಸಿಡೆಂಟ್, ಮೆಂಬರ್ ಅಥವಾ ಬೋರ್ಡಿನ ಯಾವ ಅಧಿಕಾರಿಗಳಿಗಾದರೂ ಕೊಡಬಾರದು" ಎಂಬ ಠರಾವನ್ನು ಮಂಡಿಸಲಿರುವರು.

ಎ. ಆರ್ ಪಿ. ಮುಕ್ತಾಯ

ಎ. ಆರ್ ಪಿ. ದಳವು ಅವಶ್ಯವಿಲ್ಲೆಂದು ಕಂಡುಬಂದು ಇದೇ ಜನವರಿ ಒಂದರಿಂದ ಅದನ್ನು ಮುಕ್ತಾಯಗೊಳಿಸಲಿರುವರೆಂದು ತಿಳಿದು ಬರುತ್ತದೆ. (ಮಂಗಳೂರು ಎ. ಆರ್. ಪಿ. ದಳದಲ್ಲಿ ಸುಮಾರು ೩೦೦ ಮಂದಿ ಕೆಲಸ ಮಾಡುತ್ತಿರುವರು) ಫಯರ್ ಬ್ರಿಗೇಡ್ ದಳವು ಇರುವುದಂತೆ.

'ಗನ್‌ಬೋಟ್ ಜೇಕ್' ಬರುವರೆ?

ಗನ್‌ಬೋಟ್ ಜೇಕರು ಪುನಃ ಮಂಗಳೂರಿಗೆ ಬರುವ ಮನಸ್ಸು ಮಾಡಿದ್ದಾರೆಂದೂ, ದಶಂಬರ ೧೫ರಿಂದ ಆರು ತಿಂಗಳ ತನಕ ಇಲ್ಲಿರಲು ಸೆಂಟ್ರಲ್ ಮೈದಾನಿನಲ್ಲಿ ಮುನ್ಸಿಪಾಲಿಟಿಯೊಡನೆ ಸ್ಥಳ ಕೇಳಿರುವರೆಂದೂ ತಿಳಿದಿದೆ.

ಕಳ್ಳ ತೂಕದ ಬಗ್ಗೆ ದಂಡನೆ

ಮಂಗಳೂರು ಬಂದರದಲ್ಲಿ ಕಳ್ಳತೂಕದ ಕಲ್ಲುಗಳನ್ನು ಉಪಯೋಗಿಸಿದ ಆರೋಪದ ಸಂಬಂಧವಾದ ಕೆಲ ಮೊಕದ್ದಮೆಗಳು ಇಲ್ಲಿಯ ಫಸ್ಟ್ ಕ್ಲಾಸ್ ಬೆಂಚ್ ಮ್ಯಾಜಿಸ್ಟ್ರೇಟ್ ಕೋರ್ಟಿನಮುಂದೆ ತೀರ್ಪಿಗೆ ಬಂದಿದ್ದು ಈ ಕೆಳಗಿನ ಆರೋಪಿಗಳಿಗೆ ಈ ರೀತಿ ದಂಡನೆ ವಿಧಿಸಲಾಗಿದೆ:-(೧) ಐದ್ರೋಸ್ ಬ್ಯಾರಿ ಜುಲ್ಮಾನೆ ರೂ ೧೦೦, ತಪ್ಪಿದರೆ ೧೫ ದಿನಗಳ ಸಾದಾ ಸಜೆ, (೨) ಯು. ಕೆ ಹಸನಬ್ಬ ಜುಲ್ಮಾನೆ ರೂ ೧೦೦ ತಪ್ಪಿದರೆ ೧೫ ದಿನಗಳ ಸಾದಾ ಸಜೆ, (೩) ಎಚ್. ಹುಸೇನಬ್ಬ ಜುಲ್ಮಾನೆ ರೂ ೭೫; ತಪ್ಪಿದರೆ ೧೪ ದಿನಗಳ ಸಾದಾ ಸಜೆ; (೪) ಎಂ. ಮೊಹಿದ್ದೀನ್ ಬ್ಯಾರಿ ಜುಲ್ಮಾನೆ ರೂ ೨೫; ತಪ್ಪಿದರೆ ೧೦ ದಿನಗಳ ಸಾದಾ ಸಜೆ; (೫) ಹುಸೇನ್, ಜುಲ್ಮಾನೆ ರೂ ೫; ತಪ್ಪಿದರೆ ೭ ದಿವಸಗಳ ಸಾದಾ ಸಜೆ; (೬) ಟಿ. ಎಸ್. ಅಬ್ದುಲ್ ಖಾದ್ರಿ ಜುಲ್ಮಾನೆ ರೂ ೧೨೫; ತಪ್ಪಿದರೆ ೧೫ ದಿನಗಳ ಸಾದಾ ಸಜೆ; (ಇವರೆಲ್ಲ ಕಟ್ಟಿಗೆ ವ್ಯಾಪಾರಿಗಳು) ಬೇನಸಿನ ವ್ಯಾಪಾರಿಯಾದ ಹನುಮಂತ ನಾಯ್ಕರಿಗೆ ಜುಲ್ಮಾನೆ ರೂ ೧೦೦, ತಪ್ಪಿದರೆ ೧೪ ದಿನಗಳ ಸಾದಾ ಸಜೆ.

ಉಪವಾಸ

ಉಪವಾಸದಿಂದ ಮೈ ಹುಣ್ಣಿನಿಂದ ಕೊರಗುತ್ತಿದ್ದ ಅನ್ಯಾನ್ಯಗತಿಕನಾದ ಒಬ್ಬನು ಈಚೆಗೆ ಮಿಶನ್ ಹ್ಯಾಸ್ಪಿಟಲ್ ರಸ್ತೆಯ ಒಂದು ಅಂಗಡಿಯ ಕೆಳಗೆ ಚರಂಡಿಯ ಮೇಲೆ ಹಾಸಿದ ಕಲ್ಲುಗಳ ಮೇಲೆ ಬಿದ್ದು ಕೊಂಡಿದ್ದ. ಉಸಿರಾಡುತ್ತಿದ್ದುದು ಮಾತ್ರ ಕಾಣುತ್ತಿತು. ಈ ಸಂಗತಿ ತಿಳಿಸಿದ ಮೇಲೆ ಇಲ್ಲಿನ ಹೆಲ್ತಾಫೀಸರರು ಕರಕೊಂಡು ಹೋದರೆಂದೂ ಅತನು ಕಾಸರಗೋಡು ಪ್ರಾಂತದ ಗೌ॥ ಸಾ॥ ಬ್ರಾಹ್ಮಣ ಸಮಾಜಕ್ಕೆ ಸೇರಿದವನೆಂದೂ ಹೇಳಲಾಗಿದೆ.

ಜೆ. ಸಿ. ಬೋಸರ ದಿನಾಚರಣೆ

ಈ ದಿನಾಚರಣೆ ಈಚೆಗೆ ಬೆಸೆಂಟ್ ರಾಷ್ಟ್ರೀಯ ಬಾಲಿಕಾ ಪಾಠ ಶಾಲೆಯಲ್ಲಿ ಶ್ರೀ ಸುಬ್ರಾಯ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಪಿ. ಕೆ ನಾರಾಯಣ ಅವರು ಬೋಸರ ಜೀವನ ಮತ್ತು ಕಾರ್ಯಗಳ ಕುರಿತು ಮಾತಾಡಿದರು ಶ್ರೀ ಎಚ್. ಎಸ್ ಉಡುಪರು ಬೋಸರ ಸಂಬಂಧರಾಗೋರರು ರಚಿಸಿದ ಒಂದು ಕವನ ಹಾಡಿದರು. ಶ್ರೀಮತಿ ರಾಧಾ ಸೆಟ್ಟಿ ಕೃತಜ್ಞತೆ ಹೇಳಿದರು.

ಸಕ್ಕರೆಯನ್ನು ಹೆಚ್ಚು ಕ್ರಯಕ್ಕೆ ಮಾರಿದ್ದು.

ಕುಡುಪಿಯ ಕೃಷ್ಣ ಭಟ್ಟರೆಂಬವರು ಸಕ್ಕರೆಯನ್ನು ನಿರ್ಧರಿಸಿದ ಬೆಲೆಗಿಂತ ಹೆಚ್ಚಿನ ದರದಲ್ಲಿ "ಲಲಿತ ವಿಲಾಸ"ದಲ್ಲಿ ವ್ಯಾಪಾರ ಮಾಡಿರುವರೆಂದು ರಿಸಪ್ಷನ್ ಇನ್ಸ್‌ಪೆಕ್ಟರರಿಂದ ಕಂಡು ಹಿಡಿಯಲಾಗಿದೆ.

ಅಹಲ್ಯಾಶ್ರಮ

ಗೌಡ ಸಾರಸ್ವತ ಸಮಾಜದ ಚಿಕ್ಕ ವಯಸ್ಸಿನ ಸುಂದರಿ ಎಂಬಾಕೆಯು ಆಶ್ರಯವಿಲ್ಲದವಳಾಗಿ ಪರಮಚಾಪಂಚಿಯಾಗುವ ಸಂದರ್ಭದಲ್ಲಿ ಕೊಡಿಯಾಲ ಬೈಲಿನ ಅಹಲ್ಯಾಶ್ರಮದ ಸಂಚಾಲಕರು ಆಕೆಗೆ ಆಶ್ರಯವನ್ನು ಕೊಟ್ಟು ರಕ್ಷಿಸಿರುವರೆಂದು ತಿಳಿದು ಬಂದಿದೆ. ಇದು ಆ ಸಂಸ್ಥೆಯ ಪ್ರಶಂಸನೀಯ ಕಾರ್ಯಗಳಲ್ಲೊಂದಾಗಿದೆ.

ಮ್ಯುನಿಸಿಪಲ್ ಹೆಲ್ತ್ ಆಫೀಸು

ಮುನಿಸಿಪಲ್ ಹೆಲ್ತಾಫೀಸು ಬಂದರದಲ್ಲಿರುವ ಮ್ಯುನ್ಸಿಪಲ್ ಆಫೀಸ್ ಕಟ್ಟಡಕ್ಕೆ ಈಗ ಒಯ್ಯಲಾಗಿದೆ.

ಕಳ್ಳ ತೂಕದ ಕಲ್ಲುಗಳನ್ನು ಹಿಡಿದರು

ತಪ್ಪಿನಲ್ಲಿ ಪಿ. ಮುಕುಂದ ನಾಯಕ್, ಪಿ. ಶ್ರೀನಿವಾಸ ನಾಯಕ್, ಪಿ. ಪದ್ಮನಾಭ ಭಟ್ಟ, ಜೆ. ವಿಠ್ಠಲ ಪ್ರಭು, ಕೆ. ರಾಮಚಂದ್ರರಾವ್, ಎ. ಕೃಷ್ಣ ಶೆಟ್ಟಿ, ಪದ್ಮನಾಭ ಶೆಟ್ಟಿ ಇವರಿಷ್ಟು ಮಂದಿ ಕಳ್ಳ ತೂಕದ ಕಲ್ಲುಗಳನ್ನು ಉಪಯೋಗಿಸಿರುವರೆಂಬ ಆರೋಪದ ಮೊಕದ್ದಮೆ ಇಲ್ಲಿಯ ಸಬ್ ಡಿ॥ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಸದ್ಯವೇ ವಿಚಾರಣೆಗೆ ಬರಲಿದೆ.

ವರ್ಗಾವರ್ಗಿ

ಶ್ರೀ. ಪಿ. ದೇವರಾವ್ ಪುತ್ತೂರಿನ ಅಸಿ॥ ಕಮರ್ಶಿಯಲ್ ಟ್ಯಾಕ್ಸ್ ಆಫೀಸರ್, ಅವರು ಜಿಲ್ಲಾ ಕಮರ್ಶಿಯಲ್ ಟ್ಯಾಕ್ಸ್ ಆಫೀಸರ್, ಮಂಗಳೂರು ಇವರ ಪರ್ಸನಲ್ ಅಸಿ॥ ರಾಗಿಯೂ, ಜಿಲ್ಲಾ ಕಮರ್ಶಿಯಲ್ ಟ್ಯಾಕ್ಸ್ ಆಫೀಸರರ ಪರ್ಸನಲ್ ಅಸಿಸ್ಟೆಂಟರಾದ ಶ್ರೀ. ಯು ಟಿ ಗೋಪಾಲಕೃಷ್ಣರಾವ್ ಬಿ ಎ ಇವರು ಕಾರ್ಕಳದ ಹಂಗಾಮಿ ಸ್ಪೇ॥ ಸಬ್ ಮ್ಯಾಜಿಸ್ಟ್ರೇಟರಾಗಿಯೂ ನೇಮಿಸಲ್ಪಟ್ಟಿದ್ದಾರೆ. ಕಾರ್ಕಳದ ಸ್ಪೇ॥ ಸಬ್ ಮ್ಯಾಜಿಸ್ಟ್ರೇಟ್ ಮಿ ಕೆ ಹುಸೇನ್ ಸಾಹೇಬ್ ಅವರು ಒಂದು ತಿಂಗಳ ರಜೆಗಾಗಿ ಅಪೇಕ್ಷಿಸಿದ್ದಾರೆ

ಪುತ್ತೂರಿನ ಹಂಗಾಮಿ ಅಸಿ॥ ತಹಶೀಲ್ದಾರ್ ಶ್ರೀ ಕೆ. ವೆಂಕಪ್ಪ ಅವರು ಪುತ್ತೂರಿನ ಅಸಿ॥ ಕಮ್ಶಿ ಟ್ಯಾಕ್ಸ್ ಆಫೀಸರರಾಗಿಯೂ;

ಉಡುಪಿಯ ಹೆಡ್ ಎಕೌಂಟಾಂಟ್ ಮಿ ಕೆ ಎ ಜೋಸೆಫ್ ಬಿ ಎ ಅವರು ಪುತ್ತೂರಿನ ಅಸಿ॥ ತಹಶಿಲ್ದಾರರಾಗಿಯೂ,

ಕಲೆಕ್ಟರ್ ಆಫೀಸಿನ ಇಂಗ್ಲಿಷ್ ಎಕೌಂಟಾಂಟ್ ಮಿ ಪಿ ಎಫ್. ಅಸ್ಟ್ರಾಡೆ ಅವರು ಕಾರ್ಕಳ ಅಸಿ॥ ತಹಶಿಲ್ದಾರರಾಗಿಯೂ,

ಕಲೆಕ್ಟರರ ಆಫೀಸಿನ ಮೆಜಿಸ್ಟೀರಿಯಲ್ ಕ್ಲಾರ್ಕ್ ಶ್ರೀ ಕಗ್ಗನಿಸೆ ಕೃಷ್ಣರಾವ್ ಅವರು ಉಡ್ಪಿ ಅಸಿ॥ ತಹಶಿಲ್ದಾರರಾಗಿಯೂ,

ಕಲೆಕ್ಟರರ ಆಫೀಸಿನ ಕ್ಲಾರ್ಕ್ ಶ್ರೀ ಎಚ್. ಜಿ ಕೆದಿಲಾಯ ಅವರು ಕುಂದಾಪುರದ ಅಸಿ॥ ತಹಶಿಲ್ದಾರರಾಗಿಯೂ,

ಕಾರ್ಕಳದ ತಹಶಿಲ್ದಾರರಾದ ಶ್ರೀ ಎಚ್ ಸುಂದರರಾವ್ ಬಿ ಎ ಅವರು ಮಂಗಳೂರು ತಹಶಿಲ್ದಾರರಾಗಿಯೂ;

ಮಂಗಳೂರು ತಹಶಿಲ್ದಾರ್ ಶ್ರೀ ಯು ಜನಾರ್ದನ ಬಿ ಎ ಅವರು ಕಾರ್ಕಳ ತಹಶಿಲ್ದಾರರಾಗಿಯೂ ವರ್ಗಾಯಿಸಲ್ಪಟ್ಟಿರುತ್ತಾರೆ

ಬಿಡುಗಡೆ

ನಮ್ಮ ಜಿಲ್ಲೆಯವರೂ ಆಂಧ್ರ ಪ್ರಾಂ॥ ಕಾಂ॥ ಕಮಿಟಿಯ ವರ್ಕಿಂಗ್ ಕಮಿಟಿ ಸದಸ್ಯರೂ ಆದ ಶ್ರೀ॥ ಡಾ॥ ಲಕ್ಷ್ಮಣ ಶೆಟ್ಟರು ಬಳ್ಳಾರಿ ಜೈಲಿನಿಂದ ಬಿಡುಗಡೆ ಹೊಂದಿರುವರು ಇವರು ಸ್ಥಾನಬದ್ಧರಾಗಿದ್ದರು ಇವರೊಡನೆ ಪ್ರಾಂತದ ಇನ್ನು ಕೆಲವು ಮಂದಿ ಸ್ಥಾನಬದ್ಧರ ಬಿಡುಗಡೆಯಾಗಿದೆ

WANTED

WANTED seperately for each of our Companies District Organiser for South Kanara and Special Agents on liberal commission and/or allowance basis. Suitable special encouragements will be given to deserving and experience men, who can furnish a reasonable guarantee. Selection to be made by personal interview.

Apply immediately to:

The General Manager,

The Mysore Insurance Company, Limited.

AND

The Mysore Provident Insurance Company, Limited.

BANGALORE CITY.

ದ. ಕ. ಜಿಲ್ಲೆಯ ಕೋಆಪರೇಟಿವ್ ಹೋಲ್‌ಸೇಲ್ ಸ್ಟೋರ್ಸ್, ಲಿಮಿಟೆಡ್ ಮಂಗಳೂರು

ವಿನಂತಿ

[illegible] ಅಕ್ಕಿ ಛತ್ರಗಳನ್ನು [illegible] ಸ್ಟೋರಿಗೆ [illegible] ಕೊಡುವ [illegible] ಅಕ್ಕಿ ಛತ್ರ [illegible] ಸ್ಟೋರಿಗೆ ಕೊಟ್ಟರೆ ಆಯಿತೆಂಬ [illegible] ಮನಸ್ಸಿನಲ್ಲಿರಬಹುದೆಂತ ತಿಳಿಯುವ [illegible] ರೇಶನ್ ಮಾಡ [illegible] ಅಕ್ಕಿ ಛತ್ರಗಳನ್ನು ಪಡೆಯುವರು, ಮೇಲೆ ಹೆಸರು ಕಾಣಿಸಿದ ಸಂಸ್ಥೆಯೊಂದಕ್ಕೆ ಮಾತ್ರ ಅಧಿಕಾರವಿರುವುದು. ಹೊರತು ಅಲ್ಲಲ್ಲಿರು [illegible] ಸಹಕಾರೀ ಸ್ಟೋರುಗಳಿಗೆ ಈ ಅಧಿಕಾರವಿಲ್ಲವೆಂಬುದು ಸ್ಪಷ್ಟವಾಗಿ ತಿಳಿಯತಕ್ಕದ್ದು. [illegible] ರೇಶನ್ ಅಕ್ಕಿ ಛತ್ರಗಳನ್ನು ಕೊಡ ಕೂಡದು. ನಮ್ಮ ಜಿಲ್ಲಾ ಸ್ಟೋರಿನ ಅಂಗಗಳು [illegible] ಅಕ್ಕಿ ಛತ್ರಗಳನ್ನು ಪಡೆದು ಮೌಲ್ಯವನ್ನು ಕೊಡುವರೆ ಅಧಿಕೃತವಾದ 'ಡಿಪೋ' ಎಂಬ ಹೆಸ[illegible] ಸಂಸ್ಥೆಗಳನ್ನು [illegible] ಅನುಕೂಲ [illegible] ಕೆಳಗೆ ಕಾಣಿಸಿದ ಕೇಂದ್ರಗಳಲ್ಲಿ ಸ್ಥಾಪಿಸಲಾಗಿವೆ. ಮತ್ತು ಆ ಡಿಪೋಗಳಿಗೆ ಏಜಂಟ[illegible]ನ್ನು ಕೂಡಾ ನೇಮಿಸಿಯದೆ. ಆ ಡಿಪೋಗಳ [illegible] ಆಯಾ ಏಜಂಟರುಗಳೇ ಕೂಡ ಈ ವ್ಯವಹಾರಗಳನ್ನು ನಡೆಸಬೇಕಾಗಿದೆ.

ಡಿಪೋಗಳಿರುವ ಸ್ಥಳಗಳು

ಗಂಗೊಳ್ಳಿ, ಕುಂದಾಪುರ, ಹಂಗಾರಕಟ್ಟೆ, [illegible], ಪಡುಬಿದ್ರಿ, ಕಾರ್ಕಳ, ಮೂಡುಬಿದ್ರಿ, ಮಂಗಳೂರು (ಬಂದರು), ಮುಲ್ಕಿ, ಬಂಟ್ವಾಳ, [illegible], ಪುತ್ತೂರು, ಉಪ್ಪಿನಂಗಡಿ, ಕಡಬ, [illegible], ಬೆಳ್ಳಾರೆ, ಸುಳ್ಯ, ಕಾಸರಗೋಡು.

ಬೆಜವಾಡದಿಂದ ಅಕ್ಕಿ?

ಬೆಜವಾಡದಿಂದ ದ. ಕ. ಜಿಲ್ಲೆಗೆ ೧೫,೦೦೦ [illegible] ಅಕ್ಕಿ ಬರುತ್ತದೆಂದೂ, ರೇಶನಿಂಗ್ [illegible] ಇದು ಒಂದು ತಿಂಗಳವರೆಗೆ ಮಂಗಳೂರು ನಗರಕ್ಕೆ ಸಾಕಾಗಬಹುದೆಂದೂ [illegible]ದುಬರುತ್ತದೆ.

ಮದ್ಯಪಾನ ನಿಷೇಧ ಬೇಕು

ಜಿಲ್ಲಾ ನೇಕಾರ ಸಂಘದ ಮಹಾಸಭೆ ಶ್ರೀ. [illegible]ಂಪ್ಸನ್ ಸೋನ್ಸರ ಅಧ್ಯಕ್ಷತೆಯಲ್ಲಿ ಸೇರಿ,

[illegible] ಸರಕಾರು [illegible] ಮಂಗಳೂರ [illegible] ಶಕ್ತಿಯನ್ನು [illegible] ದೆಸ್ಟು ಶಾಯ್ಲದೆಂದು ನಿರ್ಣಯಮಾಡಿದ. ಶ್ರೀಯುತರಾದ ಹೊಳ್ಳರು ಮತ್ತು ಕಾಮತರು [illegible]ರನ್ನು ಜಿಲ್ಲೆಗೆ ಹೊರಡಬೇಕೆನ್ನುವ [illegible]ಯವೂ ಆಯಿತು.

ಗೀತಾಜಯಂತಿ

[illegible]ಯು ವಿವೇಕಾನಂದ ಸಭೆಯ ಆಶ್ರಯದಲ್ಲಿ ತಾ. ೭ರಂದು ಶ್ರೀ. ಸುವಿಚಾರನಂದಜೀಯವರ ಅಧ್ಯಕ್ಷತೆಯುಳ್ಳ ಭುವನೇಂದ್ರ ಸಭಾಭವನದಲ್ಲಿ ಜರಗಿತು. ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನ ವಿತರಣೆಗಳಾದ ಬಳಿಕ ಶ್ರೀ. ಎಸ್. ಅನಂತೋಪಾಧ್ಯಾಯ ಡಾ. ಕೇಶವ ಪೈ ಮೊದಲಾದವರು ಮಾತನಾಡಿದರು.

ಕಬ್ ಮಾಸ್ತರರ ತರಬೇತಿ

ಜಿಲ್ಲಾ ಸ್ಕೌಟ್ ಎಸೋಸಿಯೇಶನಿನ ಆಶ್ರಯ ಕಬ್ ಮಾಸ್ತರರ ತರಬೇತಿಯು ಉಳ್ಳಾಲದಲ್ಲಿ ತಾ. ೧ರಿಂದ ೫ರ ತನಕ ಜರಗಿತು.

ಗುದಾಮ-ಕಳ್ಳರು

[illegible] ಮಂಗಳೂರು ನಗರದಲ್ಲಿ ಗುದಾಮಗಳು ಕಳವಾಗುತ್ತಿದ್ದು; ಈಗ ಪೋಲೀಸರು ಈ ಗುದಾಮ ಕಳ್ಳರ ಒಂದು ತಂಡವನ್ನು ಪತ್ತೆ ಹಚ್ಚಿರುವರೆಂದು ತಿಳಿದಿದೆ. ಗುದಾಮಗಳಂತೆ ಸೈಕಲುಗಳೂ ಈಗ ಕಳವಾಗುತ್ತಿದೆ.

ಪಡುಬಿದ್ರೆ

ಇಲ್ಲಿ ವರ್ಷಂಪ್ರತಿ ಮಾಮೂಲು ಪ್ರಕಾರ ಆಗುವ "ಶೀಮೊಯ ಕಂಬಳವು" ಇದೇ ಸುಭಾನು ಸಂ|ರದ ಧನುರ್ಮಾಸ ದಿನ ೨೮ ಸಲುವ ಪುಷ್ಯ ಶು| ೧೩ ಶನಿವಾರ (ತಾ. ೮-೧-೧೯೪೪)ನೇ ದಿವಸ ಜರುಗುವುದು" ಎಂದು ಒಂದು ಬಾತ್ಮಿ.

ಬದಿಯಡ್ಕಕ್ಕೆ ಹೈಸ್ಕೂಲ್

"ಪ್ರಾಥಮಿಕ ವಿದ್ಯಾಭ್ಯಾಸದೊಂದಿಗೆ ಸೆಕೆಂಡರಿ ಶಾಲೆಗಳ ಉಚ್ಚ ತರಗತಿಗಳ ವಿದ್ಯಾಭ್ಯಾಸವೂ ವೇಗದಿಂದ ಪ್ರಚಾರವಾಗುತ್ತಿರುವುದು ತುಂಬಾ ಸಂತೋಷಪಡತಕ್ಕ ವಿಷಯ. ನಮ್ಮ ಜಿಲ್ಲೆಯಲ್ಲಿ ಇನ್ನಂಜೆಯಲ್ಲಿ ಹೈಸ್ಕೂಲ್ ಸ್ಥಾಪನೆಯಾದದ್ದೇ ಹಿಂದೂ ಧರ್ಮದ ಏಳ್ಗೆಯ ಶುಭ ಚಿಹ್ನೆ ಎಂದು ಹೇಳಬಹುದು. ಅಂತೆಯೇ ಇಡ್ಕ, ಬಾಕೂರು, ಬದಿಯಡ್ಕದ ಮಹಾಜನರು ಈ ಕಡೆ ಗಮನ ಕೊಡುತ್ತಿರುವುದು ಹೆಮ್ಮೆ ಪಡತಕ್ಕ ಸಂಗತಿ. ಪ್ರಕೃತದ ಸ್ಥಿತಿಯಲ್ಲಿ ಜಿಲ್ಲೆಯ ಮೂಲೆಯಲ್ಲಿರುವ ಬೈಂದೂ

[illegible] ಶಿಕ್ಷಣಾಲಯದಲ್ಲಿ [illegible] ಬೇಕಾಗಿದೆ [illegible] ಸಂಬಂಧಪಟ್ಟವರು ಇತ್ತ ಗಮನಿಸುವರೇ?" ಎಂದು ಮಂಗಳೂರು ಸರಕಾರೀ ತರಬೇತಿ ಶಿಕ್ಷಣಾಲಯದಲ್ಲಿ ತರಬೇತಿ ಹೊಂದುವ ಅಧ್ಯಾಪಕರಾದ ಶ್ರೀ. ಪಿ. ಸಂಜೀವ ರಾವ್ ಬರೆಯುತ್ತಾರೆ.

ನಾಟಕಾಭಿನಯ

ಗಣಪತಿ ಹೈಸ್ಕೂಲಿನಲ್ಲಿ ತಾ. ೧೯ನೇ ಶಾಯಂಕಾಲ ಘಂಟೆ ೬-೩೦ಕ್ಕೆ ಹಿಂದೂಸ್ಥಾನಿ ಸಂಗೀತ ಶಾಲಾ ಈ ಸಂಸ್ಥೆಯವರು ತಮ್ಮ ಸಂಗೀತ ಶಾಲೆಯ ಸಹಾಯಾರ್ಥವಾಗಿ ಪ್ರಭಾತ್ ಎಂಬ ಸಾಮಾಜಿಕ ನಾಟಕವನ್ನು ಸ್ತ್ರೀಪುರುಷರು ಪಾತ್ರವಹಿಸಿ ಅಭಿನಯಿಸುವರು.

ಉಡುಪಿ

ಗೀತಾಜಯಂತಿ

ಯು ಇಲ್ಲಿ ವಿದ್ವಜ್ಜನರ ಭಾಷಣ, ಕೀರ್ತನೆ, ನರ್ತನಾದಿಗಳಿಂದ ಜೋಂಜಿ ಲ್ಯಾಥ್ ಉಪ್ಪಂಗೆಯಲ್ಲಿ ಯಶಸ್ವಿಯಾಗಿ ನೆರವೇರಿತು.

ಬೈಂದೂರು

ಚಿತ್ರಾಪುರ ಮಠಾಧೀಶ

ರಾದ ಶ್ರೀಮತ್ ಆನಂದಾಶ್ರಮ ಸ್ವಾಮಿಗಳವರು ಇಲ್ಲಿನ ಶಾಂತಾಶ್ರಮವನ್ನು ಸಂದರ್ಶಿಸಿದರು.

NOTICE

Canara High School Old Boys Association Mangalore

Notice is hereby given that the annual meeting of the General Body of the Association will be held on Saturday the 25th December 1943 at 3-30 p. m in the A Subba Rao Pai Memorial Hall, Canara High School Mangalore.

All members of the Association are earnestly requested to be present.

Resolutions to be moved at the meeting should reach the Hon. Secretary by 20th of December 1943.

Canara High School Mangalore 9—12—43. } M. Annappa Kamath, M. Venkatesh Pai, Hon. Joint secretaries.

NOTICE

One Chevrolet (General Motors Ltd.) 33 Model Van (Saloon body) M. D. X. 306 of 24 Horse power in running condition with seating capacity for 21 (including driver) will be disposed of by Public auction in the District Board office compound at Mangalore on 17-12-1943 at 5 p.m. by Overseer Mangalore South.

Intending bidders will have to deposit a sum of Rs. 100 before they bid. The deposit of unsuccessful bidders will be returned after the auction is over. The successful bidder will have to pay the balance amount of the bid within 24 hours and take delivery of the van, failing which the deposit amount will be forfeited to the District Board and the Van reauctioned by the President, District Board.

Dated 8-12-1943. } M. Sunder Rao, For President District Board, South Kanara.

ನೋಟೀಸು

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ

O. S. No. 309/1943.

ಸುಬ್ಬಯ್ಯ ಗೌಡ ಕೂಡಾ—ವಾದಿರು.

ಶ್ರೀನಿವಾಸ ಸಹಾ—ಪ್ರತಿವಾದಿರು.

ಪ್ರತಿವಾದಿರು 1. ಶ್ರೀನಿವಾಸ - ವೆಂಕಪ್ಪಾಚಾರಿ ಮಗ, ಕಾಸರಗೋಡು ತಾಲೂಕು [illegible] ಬಡಾಜೆ ಗ್ರಾಮದ ತಲೆಕ್ಕಳಯೆಂಬಲ್ಲಿ. 3. ಸರಸ್ವತಿ—ವೆಂಕಟಪ್ಪಾಚಾರಿ ಮಗಳು ವ ನಾರಾಯಣ ಆಚಾರಿ ಹೆಂಡತಿ, ಪುತ್ತೂರು ತಾಲೂಕು ಕನ್ಯಾನ ಗ್ರಾಮದಲ್ಲಿ. 4. ದೇವಕಿ ವೆಂಕಪ್ಪಾಚಾರಿ ಮಗಳು ವ ಬಾಬು ಆಚಾರಿ ಹೆಂಡತಿ ಪುತ್ತೂರು ತಾಲೂಕು ಕನ್ಯಾನ ಗ್ರಾಮದಲ್ಲಿ. [illegible] ವೆಂಕಪ್ಪಾಚಾರಿ ಮಕ್ಕಳು, 6. ರಾಮಣ್ಣಾಚಾರಿ 7. ಸುಬ್ರಾಯಾಚಾರಿ } ಕಾಸರಗೋಡು ತಾಲೂಕು, ಕನ್ಯಾನ ಗ್ರಾಮದಲ್ಲಿ. ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ವಾದಿರು ನಿಮ್ಮ ಮೇಲೆ ಕೂಡಾ ತಾರೀಕು 20—2—1938ರಲ್ಲಾದ ಆಧಾರದಿಂದ ಖುಲಾಸಪಡಿಸಿ ಆಸ್ತಿಯನ್ನು ಬಿಟ್ಟುಕೊಡಬೇಕಾಗಿ ವಸ್ಸೆರಿ ನಿವೃತ್ತಿಗಳ ಬಗ್ಗೆ ಮಾಡಿದ ಮೇಲ್ಕಂಡ ದಾವೆಯು ತಾ. 15-12-1943ಕ್ಕೆ ವ್ಯಾದೆಯಿರುವುದರಿಂದ ಆ ದಿನ ಪೂರ್ವಾಹ್ನ 11 ಘಂಟೆಗೆ ನೀವು ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಉದಾಹರಿಸಿಕೊಳ್ಳತಕ್ಕದ್ದು. ತಪ್ಪಿದರೆ ಕೋರ್ಟಿನವರಿಗೆ ಯುಕ್ತತೋರುವಂತೆ ನಿಮ್ಮನ್ನು ಶಿವಾಯಿ ಮಾಡಿ ತೀರ್ಮಾನಿಸಲಾದೀತುಯೆಂತ ಕೋರ್ಟು ಹುಕುಂ ಪ್ರಕಾರ ನಿಮಗೆ ಈ ಮೂಲಕ ತಿಳಿಯಪಡಿಸಿರುತ್ತದೆ.

Puttur, 1-12-1943. } N. V. Kolathaya, Vakil for Plaintiffs.

ನೋಟೀಸು

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ

ಮ್ಯಾನರ ವಾಮನ ಯಾನೆ ಬೊಬುರಾಯನ ಬಾಬಿನಲ್ಲಿ

O. P. No. 139/1943.

ಕೆ. ರಾಮಕೃಷ್ಣ ಶೆಣೈ—ಅರ್ಜಿದಾರ ಮತ್ತು

1. ಅಣ್ಣಪ್ಪ ಗಡಿಯಾರ 2. ಶ್ರೀನಿವಾಸ ಗಡಿಯಾರ— ರೆಸ್ಪೊಂಡೆಂಟರು.

ಸದ್ರಿ ರೆಸ್ಪೊಂಡೆಂಟರೀಗೆ ಮತ್ತು ಸಮ್ಬಂಧ ಪಟ್ಟ ಎಲ್ಲಾ ಜನರಿಗೆ ತಿಳಿಯಪಡಿಸುವುದೇನೆಂದರೆ—

ಮೃತಪಟ್ಟ ಆನಂದರಾಯ ಗಡಿಯಾರರ ಮಗ ಹಾಲಿ ಕುಂದಾಪುರ ಕಸಬೆಯಲ್ಲಿರುವ ಮ್ಯಾನರ ವಾಮನ ಯಾನೆ ಬಾಬುರಾಯನ ಆಸ್ತಿಯ ಬಾಬಿನಲ್ಲಿ ಯೋಗ್ಯರಾದ ಬೇರೆ ಯಾರನ್ನಾಗಲೀ ಯಾ ತನ್ನನ್ನಾಗಲೀ ಗಾರ್ಡಿಯನ್ನ ಆಗಿ ನೇಮಿಸತಕ್ಕದ್ದೆಂತ ಅರ್ಜಿದಾರನು ಮೇಲ್ಕಂಡ ಕೋರ್ಟಿನಲ್ಲಿ ಮೇಲ್ಕಂಡ ಅರ್ಜಿ ದಾಖಲು ಮಾಡಿದ್ದಾನೆ. ಸದ್ರಿ ಅರ್ಜಿಯು ಇದೇ 1943ನೇ ಇಸವಿ ಡಿಸಂಬರ ತಾರೀಕು 30ನೇ ಗುರುವಾರ ದಿವಸ ಹಗಲು ಘಂಟೆ 10ಕ್ಕೆ ತನಿಕೆಗೆ ಇಟ್ಟಿದೆ. ಆಕ್ಷೇಪವುಳ್ಳವರು ಮೇಲ್ಕಂಡ ತಾರೀಕಿಗೆ ಖುದ್ದಿನಿಂದಾಗಲೀ ವಕೀಲಮುಖ್ತರಿ ಆಗಲೀ ಹಾಜರಾಗಿ ತಮ್ಮ ಆಕ್ಷೇಪಣೆಗಳನ್ನು ಜ್ಯಾಹಿರು ಮಾಡಿಕೊಳ್ಳತಕ್ಕದ್ದು — ಹಾಜರಾಗದಿದ್ದರೆ ಸದ್ರಿ ವಿಷಯದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು.

ಮಂಗಳೂರು, ತಾ. 3—12—43. } A. Ranganatha Rao, Advocate for Ptr.

ರೈಲುಬಂಡಿಗಳ ಸಮಯ

ಮಂಗಳೂರಿಂದ ಹೊರಡುವ ಗಾಡಿಗಳು	ಸಮಯ	ಮಂಗಳೂರಿಗೆ ತಲಪುವ ಸಮಯ
ಗುಡ್ಸ್ ಬಂಡಿ ಬೆಳಿಗ್ಗೆ ೬. ೫೫.		ರಾತ್ರಿ ೭. ೩೦.
ಪಟಲೆ ಕನ್ಯಾನೂರು ಜಂಕ್ಷನ್ ಪ್ಯಾಸೆಂಜರ್		ಸಾಯಂ. ೫. ೩೫ ಬೆಳಿಗ್ಗೆ ೯. ೨೫.
ಮಲಬಾರ್ ಎಕ್ಸ್‌ಪ್ರೆಸ್ ಬೆಳಿಗ್ಗೆ ೭. ೫.		ಸಾಯಂ. ೭.

ಜಾಂಬಕನ್ನುಪ ಯೋಗಿಸಿ ನಿಮ್ಮ ಪಾದದ ನೋವನ್ನು ಗುಣಪಡಿಸಿರಿ

ಪ್ರತಿರಾತ್ರಿ ತಪ್ಪದೆ ಇದನ್ನು ಹಚ್ಚಿರಿ. ನೋವುಳ್ಳ ಪಾದಗಳಿಗೆ ಮತ್ತು ಬಾತುಹೋದ ಮಣಿಗಂಟಿಗೆ ಜಾಂಬಕನ್ನು ಉತ್ತಮ ಔಷಧಿ. ಬೆರಳುಗಳ ಮಧ್ಯಕ್ಕೆ ಮಣಿಗಂಟಿಗೆ ಪಾದಕ್ಕೆ ಬೆರಳುಗಳ ಮಧ್ಯಕ್ಕೆ ಇದನ್ನು ಮೆಲ್ಲಗೆ ಹಚ್ಚಿ ಉಜ್ಜಿರಿ. ಇದರಲ್ಲಿರುವ ಉತ್ತಮ ವನಸ್ಪತಿ ಸತ್ವವು ಚರ್ಮದೊಳಗೆ ಹೀರಲ್ಪಟ್ಟು ನೋವನ್ನು ಕಡಿಮೆಮಾಡಿ ಗಾಯವನ್ನು ಗುಣಪಡಿಸುತ್ತದೆ. ಚರ್ಮ ಗಟ್ಟಿಯಾದದ್ದು ಮೃದುವಾಗುತ್ತದೆ. ಆಳವಾದ ಗಾಯಗಳೂ ಕೂಡುತ್ತವೆ. ನೀವು ಇದರಿಂದ ಸಂತೋಷ ಪಡುವಿರಿ.

ಯಾವಾಗಲೂ ಜಾಂಬಕನ್ನೇ ಉಪಯೋಗಿಸಿರಿ.

ZAM-BUK

ಪ್ರಾಣಿಕೊಬ್ಬು ವಿರಹಿತವಾದುದು

ಕಾಸರಗೋಡು ನೇಕಾರ ಸಂಘ

ಕಾಸರಗೋಡು ತಾಲೂಕು ದೇಶೀಯ ನೇಕಾರರ ಸಭೆಯು ಕಳೆದ ಶನಿವಾರ ಕೇಯ್ಯೂರಲ್ಲಿ ಶ್ರೀ. ಮೇಲೋತ್ತು ನಾರಾಯಣ ನಂಬಿಯಾರರ ಅಧ್ಯಕ್ಷತೆಯಲ್ಲಿ ಜರಗಿತು. ಕಾಸರಗೋಡು ತಾಲೂಕು ದೇಶೀಯ ನೇಕಾರ ಸಂಘವನ್ನು ಸರ್ವಾನುಮತದಿಂದ ಸ್ಥಾಪಿಸಲು ನಿರ್ಣಯಿಸಲಾಯಿತು ಸಂಘದ ಆಡಳಿತ ಕಮಿಟಿಯ ಬಗ್ಗೆ ಈ ಕೆಳಗಿನವರನ್ನು ಚುನಾಯಿಸಲಾಯಿತು

ಶ್ರೀ. ಎನ್. ಕೆ. ಬಾಲಕೃಷ್ಣ (ಪ್ರೆಸಿಡೆಂಟ್) ಶ್ರೀ ಪಿ. ವಿ ಕೇಶವನ್ (ಸೆಕ್ರೆಟರಿ) ಶ್ರೀ. ಪಿ ವಿ ಕಡಂಬಳಿತ್ತಾಯ, ಶ್ರೀ ಕೆ ವಿ ಕುಂಞಿಕಣ್ಣ, ಶ್ರೀ. ವಿ ವಿ. ಕುಂಞಿಕಣ್ಣ, ಶ್ರೀ ವಿ ಕೋನ್ನನ್, ಶ್ರೀ ಛಾತು ಇವರು ಸದಸ್ಯರು

ಕಾಸರಗೋಡು ತಾಲೂಕು ದೇಶೀಯ ನೇಕಾರರಿಗೆ ಬೇಕಾದ ಆಹಾರ ಸಾಧನಗಳನ್ನು ಕೊ-ಓಪರೇಟಿವ್ ಸೊಸೈಟಿಯ ಮೂಲಕ ಒದಗಿಸಿ ಕೊಡುವುದರ ಕುರಿತು ಜಿಲ್ಲಾ ಡಿಪ್ಯುಟಿ ರಿಜಿಸ್ಟ್ರಾರ ಬಳಿಗೆ ಡೆಪ್ಯುಟೇಶನ್ ಕೊಡುವರೆ ನಿರ್ಣಯಿಸಲಾಯಿತು. ಈ ಬಗ್ಗೆ ಈ ಕೆಳಗಿನ ಮಹನೀಯರನ್ನು ಆರಿಸಲಾಯಿತು

ಶ್ರೀ ಮೇಲೋತ್ತು ನಾರಾಯಣ ನಂಬಿಯಾರ್, (ಪ್ರೆಸಿಡೆಂಟ್) ಶ್ರೀ ಎನ್. ಕೆ ಬಾಲಕೃಷ್ಣ, (ಪ್ರೆಸಿಡೆಂಟ್) ಶ್ರೀ. ಎ. ಅಚ್ಯುತನ್

ಹರಿಜನ ಸೇವಕ ಸಂಘ

ಕಾಸರಗೋಡು ತಾಲೂಕು ಹರಿಜನ ಸೇವಕ ಸಂಘದ ಮಹಾಸಭೆಯು ಕಳೆದ ಆದಿತ್ಯವಾರ ಸಂಘದ ವೈಸ್ ಪ್ರೆಸಿಡೆಂಟರಾದ ಶ್ರೀಯುತ ಬಿ ಎಸ್ ಕಕ್ಕಿಲ್ಲಾಯರ ಅಧ್ಯಕ್ಷತೆಯಲ್ಲಿ ಜರಗಿತು ವಾರ್ಷಿಕ ವರದಿಯನ್ನು ಕಾರ್ಯದರ್ಶಿಯವರು ಓದಿದರು ಹೊಸ ವರ್ಷದ ಬಗ್ಗೆ ಆಡಳಿತ ಕಮಿಟಿಗೆ ಈ ಕೆಳಗಿನವರನ್ನು ಆರಿಸಲಾಯಿತು

ಶ್ರೀ ಶ್ರೀನಿವಾಸ ಪೈ, (ಅಧ್ಯಕ್ಷರು) ಶ್ರೀ ಬಿ ಎಸ್ ಕಕ್ಕಿಲ್ಲಾಯ, (ಉಪಾಧ್ಯಕ್ಷರು) ಶ್ರೀ ಎಂ ಬಾಬು ಶೆಟ್ಟಿ, (ಕಾರ್ಯದರ್ಶಿ) ಶ್ರೀ. ಪಿ ವಿ ಕಡಂಬಳಿತ್ತಾಯ ಜತೆಕಾರ್ಯದರ್ಶಿ) ಹೊಸವರ್ಷದ ಬಗ್ಗೆ ಬಜೇಟನ್ನು ಮಂಜೂರು ಮಾಡಲಾಯಿತು

ವಿದ್ಯಾರ್ಥಿ ಸಂಘ

ಕಾಸರಗೋಡು ತಾಲೂಕು ದೇಶೀಯ ವಿದ್ಯಾರ್ಥಿಗಳ ಆಡಳಿತ ಕಮಿಟಿ ಸಭೆಯು ಆಫೀಸಿನಲ್ಲಿ ಎನ್ ಕೆ ನಂಬಿಯಾರರ ಅಧ್ಯಕ್ಷತೆಯಲ್ಲಿ ಜರಗಿತು

೧ ಪ್ರೊಫೆಸರ್ ರೆವರೆಂಡ್ ಕೈತಾನರವರು ಮದ್ರಾಸು ಸಂಸ್ಥಾನಕ್ಕೆ ಬರಕೂಡದೆಂದು ಸರಕಾರವು ಮಾಡಿರುವ ನಿಷೇದಾಜ್ಞೆಯನ್ನು ತೀವ್ರವಾಗಿ ಖಂಡಿಸಲಾಯಿತು ೨ ಕಾಸರಗೋಡು ತಾಲೂಕಿನಲ್ಲಿ ಮಾತ್ರ ೨ ತಿಂಗಳು ತನಕ ೧೪ನೇ ಸೆಂಕ್ಷನ್ ಜ್ಯಾರಿಮಾಡಿದ ಬಗ್ಗೆ ನಿಷೇಧ ಸೂಚಿಸಲಾಯಿತು 3 ತಾಲೂಕು ಕಮಿಟಿ ಆಶ್ರಯದಿಂದ ಕೈ ಬರಹದ "ದೇಶೀಯ ವಿದ್ಯಾರ್ಥಿ" ಎಂಬ ಹೆಸರಿನ ಮಾಸಿಕವನ್ನು ದಶೆಂಬರ ೧೫ರಿಂದ ಪ್ರಾರಂಭಿಸಲು ನಿರ್ಣಯಿಸಲಾಯಿತು ೪ ತಾಲೂಕು ಕಮಿಟಿಯಿಂದ ಸೆಂಟ್ರಲ್ ಕಮಿಟಿಯ ಮೆಂಬರರಾಗಿ ಶ್ರೀಯುತ ಕೆ. ಶ್ರೀಧರ ನಂಬಿಯಾರರನ್ನು ಚುನಾಯಿಸಲಾಯಿತು

ಗ್ರಾಮಸೇವಾ ಸಂಘ

ಕಾಸರಗೋಡು ತಾಲೂಕು ಗ್ರಾಮಸೇವಾ ಸಂಘದ ವರ್ಕಿಂಗ್ ಕಮಿಟಿ ಸಭೆಯು ನೀಲೇಶ್ವರದಲ್ಲಿ ಮೇಲೋತ್ತು ನಾರಾಯಣ ನಂಬಿಯಾರರ ಅಧ್ಯಕ್ಷತೆಯಲ್ಲಿ ತಾ ೫-೧೨-೪೩ರಲ್ಲಿ ಸಂಘದ ಆಫೀಸಿನಲ್ಲಿ ಜರಗಿತು

ಸೆಂಟ್ರಲ್ ಕಮಿಟಿಯಿಂದ ಬಂದ ಸರ್ಕ್ಯುಲಾರುಗಳನ್ನು ಓದಿ ರಿಕಾರ್ಡು ಮಾಡಲಾಯಿತು. ಈವರೇಗಿನ ಲೆಕ್ಕಪತ್ರಗಳನ್ನು ಮಂಜೂರು ಮಾಡಲಾಯಿತು. ಅತಿವೃಷ್ಟಿಯಿಂದ ಬೆಳೆನಷ್ಟ ಹೊಂದಿದ ಕೃಷಿಕರ ಕುರಿತು ಸರಿಯಾದ ಲೆಕ್ಕ ತಯಾರಿಸುವರೆ ರಚಿಸಿದ ಕಮಿಟಿಯ ರಿಪೋರ್ಟು ತಾ ೧೦ಕ್ಕೆ ತಲಪಿಸುವುದಾಗಿ ಬರೆದ ಪತ್ರ ಓದಲಾಯಿತು ಸದರಿ ರಿಪೋರ್ಟು ತಲಪಿದ ಮೇಲೆ "ಫ್ಲಡ್ ರಿಲೀಫ್ ಕಮಿಟಿಯನ್ನು ರಚಿಸಿ ಮುಂದಿನ "ಕಾರ್ಯವನ್ನು ಕೈಕೊಳ್ಳಲು ನಿರ್ಧರಿಸಲಾಯಿತು. ಗ್ರಾಮಸೇವಾ ಸಂಘದ ಮೆಂಬರರನ್ನು ಸೇರಿಸುವ ಅವಧಿಯು ತಾ. ೧೦ಕ್ಕೆ ಗುಜಾರಾಗುವುದರಿಂದ ಎಲ್ಲ ಕೆಲಸಗಾರರು ಸಾಧ್ಯವಿದ್ದಷ್ಟು ಮೆಂಬರರನ್ನು ಸೇರಿಸಬೇಕಾಗಿ ನಿರ್ಣಯಿಸಲಾಯಿತು.

ಕಾಸರಗೋಡಿಗೊಂದು ಸಿನೆಮಾ ಥಿಯೇಟರ್ ಅಗತ್ಯ

ಕಾಸರಗೋಡು ನಿವಾಸಿಕರ ಸಭೆಯು ತಾ. ೫-೧೨-೪೩ರ ಅಪರಾಹ್ನ ಶ್ರೀ ಮಹಾಲಕ್ಷ್ಮಿ ಮೋಟರ್ ಸರ್ವಿಸ್ ಆಫೀಸಿನಲ್ಲಿ ರಿಟಾಯರ್ಡ್ ಸ್ಟೇಶನರಿ ಸಬ್ ಮೆಜಿಸ್ಟ್ರೇಟರೂ, ಜಮಿನ್ದಾರರೂ ಆಗಿರುವ ಶ್ರೀ. ಬೇಕಲ ನರಸಿಂಹ ರಾಯರ ಅಧ್ಯಕ್ಷತೆಯಲ್ಲಿ ಜರಗಿ "ಕಾಸರಗೋಡಲ್ಲಿ ಸಿನೆಮಾ ಥಿಯೇಟರೊಂದು ಅತೀ ಅಗತ್ಯವೆಂದೂ, ಅದು ಒಬ್ಬೊಬ್ಬ ವ್ಯಕ್ತಿಯದಾಗದೆ ಸಾರ್ವಜನಿಕವಾಗಿರಬೇಕೆಂದೂ ಜೊಯಿಂಟ್ ಸ್ಟೋಕು ಕಂಪೆನೀಸ್ ಆಕ್ಟು ಪ್ರಕಾರ ಅದನ್ನು ರಿಜಿಸ್ತ್ರಿ ಮಾಡಬೇಕೆಂದೂ ಠರಾವುಗಳು ಮಂಜೂರಾದುವು

ಮಂಗಳೂರು

ಗ॥ ಟ್ರೈ॥ ಶಾ॥ ವರ್ಧಂತಿ

ಮಂಗಳೂರು ಗವರ್ನಮೆಂಟ್ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ವಾರ್ಷಿಕ ವರ್ಧಂತ್ಯುತ್ಸವವು ಇದೇ ದಶಂಬರ ತಾ ೧೨ನೇ ರವಿವಾರ ಅಪರಾಹ್ನ ೫-೧೫ಕ್ಕೆ ಖಾನ್ ಸಾಹೇಬ್ ಯಚ್ ಯುಸ್ ಹುಸೇನ್ ಸಾಹೇಬ್ ಬಹದ್ದೂರ್, ಬಿ ಎ, ಬಿ ಎಲ್ ಎಂ. ಎಲ್. ಎ ದಕ್ಷಿಣ ಕನ್ನಡ ಜಿಲ್ಲಾ ಶಾಸ್ತ್ರೀಯ ಯುದ್ಧ ಸಮ್ಮುಖದ ವ್ಯವಸ್ಥಾಪಕರಾದ ಇವರ ಅಧ್ಯಕ್ಷತೆಯಲ್ಲಿ ಜರಗಿಸಲ್ಪಡುವುದೆಂದೂ, ಶಾಲಾ ಹಿತಚಿಂತಕರೂ ಹಳೆ ವಿದ್ಯಾರ್ಥಿಗಳೂ ಉತ್ಸವದಲ್ಲಿ ಸಹಭಾಗಿಗಳಾಗಬೇಕೆಂದೂ ಶಾಲಾ ವರ್ಧಂತ್ಯುತ್ಸವದ ಕಮಿಟಿಯ ಪರವಾಗಿ ಮುಖ್ಯೋಪಾಧ್ಯಾಯರ ವಿನಂತಿ.

WANTED

Applications are invited from young men with good educational qualifications for the posts of Inspectors, Agents Clerks etc Applicants may be called for an interview by he Selection Committee in which case they will be required to proceed to this place at their own cost. Selected Candidates will be required to undergo a training course in Banking and allied subjects for one year prescribed by the Academy of General Education, Manipal in collaboration with the Syndicate Minimum qualification S S L C Standard Age limit 25 Preference will be given to candidates having relations in Commerce Application should reach the undersigned by 25 12-1943

For full particulars apply to

Udipi (S India)
15th Nov 1943

The Office Superintendent,
Canara Industrial & Banking Syndicate Limited UDIPI

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುವಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ

JOINT MANAGERS,

The Combined Booking Agency, MANGALORE
The Joint Booking Office, KODIALBAIL

ಕಾಮಶಾಸ್ತ್ರದ ಗ್ರಂಥಗಳು

ಅನಂಗರಂಗ ೧—೮—೦
ಸ್ತ್ರೀಪುರುಷರ ಲಕ್ಷಣ, ಸಂಭೋಗ ಕಾಲ ನಿರ್ಣಯ, ರತಿಸಮಯದ ಹಾವಭಾವಗಳು, ದ್ರವಣಾದಿ ಔಷಧಗಳು ಇವೇ ಮೊದಲಾದ ರತಿಶಾಸ್ತ್ರದ ರಹಸ್ಯಮಯ ವಿಷಯಗಳು

ವಿಕೃತ ಕಾಮ ೧—೮—೦
ಬಾಲ್ಯದ ಕಾಮವಿಕಾರಗಳು, ಸ್ವಾನುರತಿ, ಹಿಂಸಾರತಿ, ಪ್ರದರ್ಶನರತಿ, ಸಲಿಂಗರತಿ ಇತ್ಯಾದಿ

ಪೌರುಷ ೧—೮—೦
ನಪುಂಸಕರೆಂದು ಮರುಗಬೇಡಿ ಪುನಃ ಪೌರುಷ ಪ್ರಾಪ್ತಮಾಡಿಕೊಳ್ಳಲು ನೂರಾರು ಉಪಾಯಗಳಿವೆ

ಗರ್ಭನಿರೋಧ (ಅಚ್ಚಿನಲ್ಲಿದೆ) ೧—೮—೦
ಸಂತತಿ ನಿಯಮನಕ್ಕೆ ಸರಿಯಾದ ದಾರಿಬೇಕೆ? ಡಾ॥ ಗೋಪಾಲ ಕೃಷ್ಣರಾಯರು ಬರೆದ ಈ ಹೊಸ ಪುಸ್ತಕ ಓದಿರಿ

ದಾಂಪತ್ಯ ದರ್ಶನ ೧—೮—೦
ಸಂಭೋಗ ಸುಖ, ಗಂಡಹೆಂಡಿರಲ್ಲಾಗುವ ಐಕ್ಯೈಕ್ಯ, ಅತಿ ಲಂಪಟತನದ ದುಷ್ಪರಿಣಾಮ, ರತಿ ಸೌಖ್ಯಕ್ಕೂ ಸಂತಾನ ಸುದೃಢತೆಗಳಿಗೂ ಇರುವ ಸಂಬಂಧಗಳ ಬಗ್ಗೆ ದಿ॥ ಪಂಡಿತ ತಾರಾನಾಥರಾಯರ ಕಾಮ ಮನೋವೈಜ್ಞಾನಿಕ ಗ್ರಂಥ

ರತಿರಹಸ್ಯ ೧—೮—೦
ತಾರುಣ್ಯದ ಮಧ್ಯಸ್ತನಗಳ ಸೌಂದರ್ಯ, ಸಮಾಗಮ ಶಯನ ಇತ್ಯಾದಿ

ಪ್ರೇಮಕಲಾ ೧—೮—೦
ಅಶ್ಲೀಲವಲ್ಲ! ಶಾಸ್ತ್ರೀಯ ಗ್ರಂಥವೆಂದು ಕೋರ್ಟಿನ ನಿರ್ಣಯವೇ ಆಗಿದೆ

ಭ್ರಾಂತಿ ಮತ್ತು ಲೈಂಗಿಕ ಶಿಕ್ಷಣ ೧—೮—೦
ಪ್ರಸಿದ್ಧ ಡಾಕ್ಟರುಗಳ ಮೂರು ಶಾಸ್ತ್ರೀಯ ಪುಸ್ತಕಗಳು ಉನ್ಮಾದ, ವೇಶ್ಯಾವೃತ್ತಿಯ ಹಾವಳಿ ಲೈಂಗಿಕ ಹಾಗೂ ಗುಪ್ತ ರೋಗಗಳ ಚಿಕಿತ್ಸೆ

- ವಿ. ಪಿ. ವೆಚ್ಚ ಬೇರೆ. ನಮ್ಮ ಕ್ಯಾಟಲಾಗಿಗೆ ಒಂದಾಣೆ ಅಂಚೇಚೀಟು ಕಳಿಸಿರಿ.

ಸಮಾಜ ಪುಸ್ತಕಾಲಯ ಧಾರವಾಡ.

The Bank of Mangalore Limited, Mangalore.
ESTD: 1931
HEAD OFFICE — Mangalore *BRANCHES* — Moodabidri & Padubidri
The Bank Undertakes to Collect Cheques, Demand and Documentary Bills at Most Competitive Rates.
ISSUES DRAFTS ON ALL IMPORTANT TOWNS IN THE DISTRICT
and also on
BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.
at very favourable rates
All kinds of inland banking business undertaken

THE CANARA BANKING CORPORATION Ltd
(Incorporated in British India liability of members limited).
Estd:] Head office: UDIPI S. Kanara. [1906.

Authorised capital	Rs. 25,00,000
Issued & Subscribed	Rs. 16,00,000
Paid up Capital	Rs. 12,65,000
Reserves	Rs. 3,88,000

For your Banking requirements come to us and we will assist you. We undertake all kinds of king business.

33 YEARS OF DUTY AT THE POST OF SERVICE

Being actively in Insurance Service since the first decade of this century, we are in a position to suggest to those who wish to go in for insurance the best scheme to meet individual needs. Our large and evergrowing clientale is proof of our trusted service

Please write your requirements to:-

KOCHIKAR BROTHERS LTD.,

Chief Agents for South India including Indian States Madras Branch Secretaries.

THE BOMBAY LIFE ASSURANCE CO., LTD.

The "Bombay Life" Building UDIPI. S. K.

with offices at:-

BOMBAY ★ BANGALORE ★ CALICUT ★ MADRAS ★ MANGALORE ★ TRIVANDRUM ★
And Agencies all over South India.

'Bhuvanendra Products Limited
Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು; ವ ಗರ್ಭಾಶಯದ ಸರ್ವ ವಿಧದ ದೋಷಗಳನ್ನು ಗುಣಪಡಿಸುವ ದಿವ್ಯೌಷಧಿ, ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ, ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ ನ ಏಜೆಂಟರು:-
(1) ಡಾಕ್ಟರ್ ವಿ. ಬಿ. ಕಾಮತ್, ರಥಬೀದಿ. (2) ರಾಘುವೇಂದ್ರ ಷೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಪಿ. ಪಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್.

ಕಟಪಾಡಿ, ದ. ಕನ್ನಡ.
ಡಿಪೋ:—1. ಮರಾಠ ಗಲ್ಲಿ ಹುಬ್ಬಳ್ಳಿ.
2. 86 ಫ್ರಾನ್ಸಿಸ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೋಂಗರೆ ಬಾಲಾಮೃತವು

ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ಮೃತ್ಯುಂಜಯ ರಸ. ಕಾಲರಾ ರೋಗಕ್ಕೆ ಸಿದ್ಧೌಷಧ.
ಪಂಚವಟಿ ಮಾತ್ರೆ.
ಸೇವನಾ ಕ್ರಮಗಳು ಔಷಧಿಯೊಡನೆ ಇದೆ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಕು 17—12—1943 [ಸಂಚಿಕೆ 50]

★ ಕಸ್ತೂರ್ ಬಾ ಚಿರಾಯುವಾಗಲಿ! ★

ಎದೆ ಬಡಿತ! ಹಾ ಎದೆ ಬಡಿತ! ಮಹಾದೇವ ದೇಸಾಯಿಯವರ ನೆನಪು! ಪೂನದ ಆಗಾಖಾನ್ ಸೆರೆಮನೆ ಮೊದಲಿಗೇ ಒಂದು ದುರಂತವನ್ನುಂಟುಮಾಡಿದೆ. ಲೋಕಸ್ಮರಣೀಯರೂ ಮಹಾತ್ಮರಾದ ಆ ಮಹಾವ್ಯಕ್ತಿಯ ಚಿತಾ ಭಸ್ಮವಿನ್ನೂ ಅಲ್ಲಿ ಇದೆ. ಮಹಾದೇವ ದೇಸಾಯಿಯವರೊಬ್ಬರೇ ಮಹಾತ್ಮರ ಜೀವನ ಮತ್ತು ಕರ್ಮಗಳ ತತ್ವವನ್ನು ಬಲ್ಲವರಿದ್ದರು; ಬಲ್ಲಂತೆ ಜಗತ್ತಿಗೆ ತಿಳಿಸುವವರಿದ್ದರು. ಆ ದೇವತಾ ಪುರುಷನ ಧ್ಯೇಯ ಸಾಧನೆಗಳನ್ನು ತಿಳಿದು ತಿಳಿಸಬಲ್ಲವರು ಅವರಾಗಿದ್ದರು, ಮಹಾದೇವ ದೇಸಾಯಿಯವರು ತನ್ನ ಪಾರ್ಥಿವ ಶರೀರವನ್ನು ಕಾರಾಗಾರದಲ್ಲಿ ಕಳೆಗಿಡಲು ಗಾಂಧಿಜಿಗಾದ ನೋವು ಸಹ ಸಾವೇತವಿರಬೇಕು; ಆ ದುಃಖ ಮರಣ ವಾರ್ತೆಯನ್ನು ಬ್ರಿಟಿಷ್ ಪ್ರಭುತ್ವವು ಒಂದು ದಿನ ಹೇಗೋ ಹೊರ ಸಾರಿತು. ಅಹಿಂಸಾ ವೀರರೊಬ್ಬರನ್ನು ಹಾಗೆ ಅಂದು ಜಗತ್ತು ಕಳೆಕೊಂಡಿತು.

ಈಗ ಈ ಮಹಾಮಾತೆ

ಕಳೆದ ವಾರ ಬ್ರಿಟಿಷ್ ಬ್ರಿಟಿಷ್ ಪ್ರಭುತ್ವವು ಇನ್ನೊಂದು ದುಃಖದಾಯಕ ವಾರ್ತೆ ಹೊರ ಹಾಕಿದೆ. ಗಾಂಧಿಜಿಯ ಇನ್ನೊಂದು ಆತ್ಮೀಯ ವ್ಯಕ್ತಿ, ಅವರ ಧರ್ಮಪತ್ನಿ ಕಸ್ತೂರ್ ಬಾ ಎದೆ ನೋವಿನಿಂದ ನರಳುತಿದ್ದಾರೆಂದು! ಅವರ ಪುತ್ರ ಮಾತೆಯ ರುಗ್ಣ ಶಯ್ಯೆಯ ಬಳಿ ಧಾವಿಸಿರುವರೆಂದು! ಹಿಟ್ಲರನ ರಕ್ತಬಂಧುವಿನಂತಿರುವ ಫೇಸಿಸ್ಟ್ ಮುಖಂಡ ಒಸ್ವಾಲ್ಡ್ ಮೊಸ್ಲೆಯನ್ನಾದರೂ, ಆತನಿಗೆ ಆರೋಗ್ಯ ಚೆನ್ನಾಗಿಲ್ಲದ್ದರಿಂದ ಬಿಡುಗಡೆ ಮಾಡಲು ಸಿದ್ಧವಿರುವ ಬ್ರಿಟಿಷ್ ಪ್ರಭುತ್ವ, ಕಾಂಗ್ರೆಸ್ ಅಧ್ಯಕ್ಷ ಮೌಲಾನಾ ಅಬುಲ್ ಕಲಂ ಅಜಾದರಿಗೆ ಅವರ ಪತ್ನಿಯ ಕೊನೆಯ ದರ್ಶನವನ್ನೂ ಮಾಡಗೊಡಲಿಲ್ಲ. ಆಕೆ ಸಾವ ಕಾಲ ಎಷ್ಟೊಂದು ಪತಿಯ ದರ್ಶನಕ್ಕಾಗಿ ಹಂಬಲಿಸಿದರೂ ಆ ಭಾಗ್ಯ ಆ ವೀರಪತ್ನಿಗೆ ದೊರಕಲಿಲ್ಲ; ದೊರಕಿಸಲಿಲ್ಲ. ಕಳೆದ ಚಾರಿತ್ರಿಕ ಉಪವಾಸ ಕಾಲದಲ್ಲಿ ಮಹಾತ್ಮಾಜಿ ಮರಣಾಸನ್ನರಾಗಿದ್ದರೂ, ಅವರನ್ನು ಬ್ರಿಟಿಷ್ ಪ್ರಭುತ್ವ ಬಿಡುಗಡೆ ಮಾಡದೆ, ಸತ್ತರೂ ಬಿಡೆವು ಎಂದೇ ಪಣತೊಟ್ಟು ಕುಳಿತುಬಿಟ್ಟಿತು. ಆದರೀಗ ಗಾಂಧಿಜಿಯ ಪ್ರಿಯ ಪತ್ನಿ ಕಸ್ತೂರ್ ಬಾ ಅಸೌಖ್ಯದಲ್ಲಿರುವಾಗ, ಆಕೆಯನ್ನು, ಪ್ರಪಂಚದ ಎರಡು ಭೂಭಾಗಗಳಲ್ಲಿ ಯಾವನೊಡನೆ ಆಕೆ ದುಃಖ ಸುಖಗಳನ್ನು ಸಮಾನವಾಗಿ ಅನುಭವಿಸಿದರೋ ಆ ತನ್ನ ಪತಿಯನ್ನು, ಪತಿದೇವನಿಂದ ದೂರವಿಡಬಹುದೆ? ಎಪ್ಪತ್ತು ವರ್ಷಗಳ ಮುದುಕಿ ಕಸ್ತೂರ್ ಬಾ ಈಗ ಪೂರ್ಣಜೀವನ ಬದುಕಿದ್ದರೆನಬೇಕು. ಕಸ್ತೂರ್ ಬಾ ಕಿರುಬಾಲಕಿಯಿರುವಾಗಲೇ ಮೋಹನ ದಾಸರನ್ನು ಮದುವೆಯಾಗಿ ಬಾಲ್ಯಯೌವನ ವೃದ್ಧಾಪ್ಯಗಳೆಲ್ಲೂ ಅವರ ಸಹಭಾಗಿಯಾಗಿ, ಮೋಹನದಾಸರು ಮಹಾತ್ಮಾಪದವಿಗೇರುವುದನ್ನೂ ಕಣ್ಣಾರೆ ಕಂಡಿದ್ದಾರೆ. ಮೀರಾಬೆನ್, ರಾಣಿ ಅಮೃತಕಾರ್, ಸುಶೀಲಾ ನಾಯ್ಯರ್ ಇವರು ಮಹಾತ್ಮರ ಆಶ್ರಯದಲ್ಲಿ ಎಷ್ಟೋ ಚಾಕರಿ ಮಾಡಿದ್ದಾರಾದರೂ. ಉತ್ಕೃ

ಮಹಾತ್ಮರನ್ನು ನೆರಳಂತೆ ಹಿಂಬಾಲಿಸಿದರು!

ಗಾಂಧೀ ಪತ್ನಿಯ ಜೀವನ ಸ್ಮರಣೆಗಳು

ಆದರ್ಶ ಗೃಹಿಣಿಯಾಗಿ ಕಸ್ತೂರ್ ಬಾ ಮಹಾತ್ಮರ ಆಶ್ರಮದಲ್ಲಿ ಸಲ್ಲಿಸಿದ ಸೇವೆ ಅಪಾರವಾದುದು.

ಜೀವನದ ಹೋರಾಟಗಳು

ಗಾಂಧಿಜಿ ಸ್ಪಷ್ಟವಾಗಿ ಹೇಳಿದ್ದಾರೆ, ತಾನೊಬ್ಬ 'ಮತ್ಸರೀಪತಿ'ಯೆಂದು! 'ತನ್ನ ಮತ್ಸರದಿಂದ ತಾನು ವಿಚಾರಕ್ಕೂ ಎಡೆಗೊಡಲಿಲ್ಲ'ವೆಂದೂ ಅವರು ಹೇಳಿದ್ದಾರೆ. ಭಾರ ಚಟುವಟಿಕೆಗಳ ಮೇಲೆ ಅವರು ಅನೇಕ ಸಲ ನಿರ್ಬಂಧವನ್ನೂ ಹಾಕಿದ್ದಾರೆ. ಹೀಗೆ ಅನೇಕ ಸಲ ಹೋರಾಟ ನಡೆಸಿದ್ದಾರೆ. ಪತ್ನಿಮಿತ್ರರಲ್ಲಿಗೆ ದೇವಾಲಯಗಳಿಗೆ, ಹೋಗುವುದನ್ನೂ ಅವರು ತಡೆದಿದ್ದಾರೆ. ಅದಕ್ಕೆಲ್ಲಾ ಅವರ ಸ್ಪಷ್ಟೀಕರಣವೆಂದರೆ, 'ಈ ನಿರ್ಬಂಧಗಳನ್ನೆಲ್ಲಾ ತಾನು ಪ್ರೀತಿಯಿಂದಾಗಿ ಅವಳ ಮೇಲೆ ಹಾಕಿದ್ದು; ಏಕೆಂದರೆ ಆಕೆ ಓರ್ವ ಆದರ್ಶ, ಪತ್ನಿಯಾಗಿರಬೇಕೆಂದು ತನ್ನ ಅಭಿಲಾಷೆಯಿತ್ತು ಎಂದು. ಆಕೆಯನ್ನು ವಿದ್ಯಾಭ್ಯಾಸವಿಲ್ಲದವಳಾಗಿ, ಸರಳ ಪ್ರಾಕೃತಿಕ ಗುಣಭರಿತಳಾಗಿಯೇ ಅವರಿಟ್ಟರು. ಕೊನೆಗೆ ಈ ಕುರಿತು ಹೀಗೆಯೂ ಹೇಳಿದ್ದಾರೆ. 'ಅವಳ ಮೇಲಿರುವ ನನ್ನ ಪ್ರೇಮವು ಕಾಮದೃಷ್ಟಿಯದಾಗದೆ ಇರುತ್ತಿದ್ದರೆ ಇಂದು ನನ್ನಾಕೆ ಓರ್ವ ವಿದ್ಯಾವತಿಯಾಗಬಹುದಿತ್ತು' ಎಂದು. ಎಷ್ಟೋ ಸಲ ಅವರು ತನ್ನ ಹೆಂಡತಿಯ ಕುರಿತು ಸಂಶಯಗೊಂಡದ್ದೂ ಇದೆ. ಆ ಮೇಲೆ ಅವರು ಹಿಂದೂ ಗೃಹಿಣಿಯರ ದುರವಸ್ಥೆಗಾಗಿ ಮರುಗುತ್ತಾರೆ. 'ಪತ್ನಿಯು ಪತಿಯ ಕುರಿತು ಸಂಶಯಗೊಂಡರೆ ಸುಮ್ಮಗಿರುತ್ತಾಳೆ; ಆದರೆ ಪತಿಯು ಪತ್ನಿಯ ಮೇಲೆ ಸಂಶಯಗೊಂಡರೆ ಆಕೆಯ ಜೀವನ ಅಲ್ಲಿಯೇ ಕೊನೆಗೊಂಡಂತೆ' ಕಾನೂನು ಕಲಿಯಲು ಎಳೆತನದಲ್ಲಿಯೇ ಇಂಗ್ಲೆಂಡಿನ ಪ್ರವಾಸ ಮಾಡಿದರೂ ಅವರು ಈ ಮತ್ಸರವನ್ನು ದೂರ ವಿರಿಸಲಿಲ್ಲ. 'ಒಮ್ಮೆ ನಾನು ಆಕೆಯನ್ನು ಅವಳ ತಂದೆಯ ಮನೆಗೂ ಕಳಿಸಿಕೊಟ್ಟಿದ್ದೆ; ಆಕೆಯ ಜೀವನ ಅಲ್ಲಿ ಸಂಕಷ್ಟಕ್ಕೊಳಗಾಗುವಂತೆಯೂ ಗೈದಿದ್ದೆ; ಕೊನೆಗೆ ತಪ್ಪೆಲ್ಲಾ ನನ್ನದೆಂದು ನನಗೆ ತಿಳಿದುಬಂತು' ಹೀಗೆ ಗಾಂಧಿಜಿ ಕಸ್ತೂರ್ ಬಾನ ಕುರಿತು ಹೇಳಿದ್ದಾರೆ.

ಆಫ್ರಿಕದ ಜೀವನದಲ್ಲಿ

ಮಿತ್ರರು ಕೊಟ್ಟ ಸಂಭಾವನೆಗಳ ವಿಷಯ ಅವರಿಗೊಮ್ಮೆ ಜಗಳವೇ ಆಯಿತು. ಬಾಪು ಅದನ್ನು ಹಿಂದಿರುಗಿ ಕೊಡಬೇಕೆಂದರು. ಬಾ ಅದನ್ನು ಇಟ್ಟುಕೊಳ್ಳಬೇಕೆಂದರು. ಕೊನೆಗೆ ಅದನ್ನು ಕೊಟ್ಟವರ ಸಲುವಾಗಿ ತಾವಿಟ್ಟುಕೊಳ್ಳುವುದೆಂದು ನಿರ್ಣಯವಾಯಿತು. ಇನ್ನೊಮ್ಮೆ ಗಾಂಧಿಜಿ ಆಕೆ ಪಾತ್ರೆ ತೊಳೆದುಹಾಕಬೇಕೆಂದರು. ಮನೆಯಲ್ಲಿ ಹೊರಗಿನ ಜನರೂ ಇದ್ದರು. 'ನಿಮ್ಮ ಮನೆ ನಿಮಗೆ ಇರಲಿ; ನಾನು ಹೋಗುತ್ತೇನೆ' ಎಂದರು ಬಾ; ಗಾಂಧಿಜಿಗೂ ಸಿಟ್ಟು ಬಂದಿತ್ತು. ಆಕೆಯನ್ನು ಹೊರದಬ್ಬಲು ತೊಡಗಿದರು. 'ನಾನೆಲ್ಲಿಗೆ ಹೋಗಲಿ, ನನ್ನ ಹೆತ್ತವರೂ ಇಲ್ಲ; ಬಳಿಯಲ್ಲಿ ನನಗೆ ಬೇಕಾದವರು ಯಾರೂ ಇಲ್ಲ;' ಮಹಾತ್ಮರಿಗೇ ನಾಚಿಕೆ ಬಂತು; ಹೀಗೆ ದರ್ಬಾನಿನಲ್ಲಿ ಒಮ್ಮೆ ನಡೆಯಿತು. 'ಆಫ್ರಿಕದೀ ಕಾಡಿನಲ್ಲಿ ನಿಮ್ಮ ಹೆಂಡತಿಯನ್ನು ನೀವು ಹೊರದಬ್ಬಿದರೆ ಕಾಡು ಪ್ರಾಣಿಗಳು ತಿಂದುಬಿಟ್ಟಾವು' ಬಾ ಹೇಳಿದ್ದರು. ಕೊನೆಗೆ ಮಹಾತ್ಮರಿಗೇ ನಾಚಿಕೆಯಾಯಿತು. ಗಂಡುಸು ಎಂದೆಂದೂ ಹೆಂಗುಸಿನ ಮೇಲೆ ಬಲಾತ್ಕಾರ ಮಾಡುತ್ತಾನೆಂದೂ ಪತ್ನಿ ಸದಾ ಪತಿಯ ಗುಲಾಮಳಾಗಿ ವರ್ತಿಸುತ್ತಾಳೆಂದೂ ಗಾಂಧಿಜಿ ತಿಳಿದುಕೊಂಡರು.

ಆ ಆಡಿನ ಹಾಲು

ದಕ್ಷಿಣ ಆಫ್ರಿಕದಿಂದ ಮರಳುವಾಗ ಗಾಂಧಿಜಿ ಅಸೌಖ್ಯದಲ್ಲಿ ಬಿದ್ದರು; ದೇಹ ನಿರ್ಬಲವಾಗಿತ್ತು. ದನದ ಇಲ್ಲವೇ ಎಮ್ಮೆಯ ಹಾಲು ಕುಡಿಯಲಾರೆನೆಂದು ಅವರು ಶಪಥ ಹಾಕಿದ್ದರು; ಭಾರತೀಯ ವೈದ್ಯ ಲೋಕದಲ್ಲಿಯೇ ಪ್ರಸಿದ್ಧರಾದ ಗತಿಸಿದ ಡಾ| ದಲಾಲರನ್ನು ಕರೆದಿತ್ತು; ಕಸ್ತೂರ್ ಬಾ ಸೂಚಿಸಿದರು, 'ಆಡಿನ ಹಾಲು ತೆಗೆದುಕೊಳ್ಳಬಹುದಲ್ಲಾ' ಎಂದು. ದನದ ಎಮ್ಮೆಯ ಹಾಲು ಕುಡಿಯಲಾರೆನೆಂಬವರಿಗೆ ಆಡಿನ ಹಾಲಾಗದೆ? ಅಂದಿನಿಂದ ಆಡಿನ ಹಾಲು ಮಹಾತ್ಮರ ಜೀವನ ಪೋಷಣೆ ಮಾಡುತ್ತಿದೆ. ಅದು ಕಸ್ತೂರ್ ಬಾರ ಸೂಚನೆ. ಬ್ರಿಟಿಷ್ ಪ್ರಭುತ್ವವೂ ಅವರಿಗೆ ಆಡಿನ ಹಾಲು ಕೊಡಲೇ ಬೇಕಾಗಿ ಬಂದಿದೆ.

ಪುತ್ರನ ಮತಾಂತರ

ಅವರ ಮೊದಲನೆಯ ಮಗ, ಇಸ್ಲಾಮ್ ಧರ್ಮವನ್ನಂಗೀಕರಿಸಿ, ಅಬ್ದುಲ್ಲಾ ಗಾಂಧಿಯಾದ ಸಂದರ್ಭವೂ ಸ್ಮರಣೀಯವು. ತಂದೆ ಗಾಂಧಿಗೆ, ಮಗನು, ನಿಜವಾದ ಅಂತಃಕರಣಪೂರ್ವಕ ಮತಾಂತರ ಮಾಡಿಕೊಂಡರೆ ಅದರಲ್ಲಿ ತಪ್ಪೇನೂ ಕಾಣಿಸಲಿಲ್ಲ. ಅದರಿಂದ ಹಿಂದು ಧರ್ಮಕ್ಕೆ ಹಾನಿಯೂ ಇಲ್ಲ; ಇಸ್ಲಾಮಿಗೊಂದು ಲಾಭವೂ ಇಲ್ಲ. ಯಾರಿಗೆ ಯಾವ ಮತ ಬೇಕೆಂದಿದೆಯೋ ಆ ಮತಕ್ಕೆ ಅವರು ಹೋಗಲಾರರೇಕೆ? ಗಾಂಧಿಜಿ ಈ ಅಭಿಪ್ರಾಯದವರು. ಆದರೆ ತಾಯಿ ಹೃದಯ ಹಾಗಲ್ಲ. ಮಗ ಮತಾಂತರಗೊಂಡನೆಂದು ಕೇಳಿ, ಆಕೆ, ಮಗನನ್ನು ಸಂಬೋಧಿಸಿ ಬರೆದ ಪತ್ರವೊಂದು ಎಂಥಾ ಕಲ್ಲೆದೆಯನ್ನೂ ಕರಗಿಸುವಂತಾದ್ದು! ಅಬ್ದುಲ್ಲಾ ಗಾಂಧಿ ತಾಯಿಯ ಈ ಹೃದಯ ಸ್ಪರ್ಶೀ ಮಾತುಗಳಿಂದ ಎದೆ ಕರಗಿ ಪುನಃ ಹಿಂದೂ ಧರ್ಮವನ್ನು ಅಂಗೀಕರಿಸಿಕೊಂಡನು.

ಕಸ್ತೂರ್ ಬಾ ಸ್ವತಃ ಬಾಲ್ಯ ವಿವಾಹದ ಬಲಿಯಾಗಿದ್ದವರು. ಸಮಾಜದ, ದುರಾಚರಣೆಗೆ ವಿರುದ್ಧ ಹೋರಾಡಿದರು; ಪತಿಯೊಡನೆ ರಾಜಕೀಯ ಜೀವನದಲ್ಲಿಯೂ [illegible]ರು; ಎಷ್ಟೋ ಸಲ ಪಿಕೆಟಿಂಗ್, ಮೆರವಣಿಗೆ, ಜೈಲುವಾಸ, ಎಲ್ಲಾ ಕಷ್ಟಗಳನ್ನೂ ನಗುಮುಖದಿಂದ ಪತಿಯ ನೆರಳಾಗಿ ಅನುಭವಿಸಿದರು. ಗಾಂಧಿಜಿಯೊಡನೆ ಈ ಸಲವೂ ಆಗಾಖಾನ ಅರಮನೆಯಲ್ಲಿ ಬಂಧಿತರಾಗಿ ಸಂಕಟಪಡುತ್ತಿರುವರು.

ಗಾಂಧಿಜಿ ಆಗಾಖಾನ ಅರಮನೆಯಲ್ಲಿ ತನ್ನ ಪಟ್ಟ ಶಿಷ್ಯ ಮಹಾದೇವ ದೇಸಾಯಿಯನ್ನು ಕಳೆಕೊಂಡರು. ಆ ನೋವು ಮಹಾತ್ಮರ ಹೃದಯವನ್ನು ಬಹಳ ಮುಟ್ಟಿರಲೇಬೇಕು; ಪುನಃ ಅವರ ಧರ್ಮಪತ್ನಿ ಇಂದು ಇದೆ ನೋವಿನಿಂದ ನರಳುತ್ತಾರೆ: ಎದೆ ನೋವು! ಎದೆ ನೋವು!

ಮಹಾತ್ಮರ ಪಟ್ಟ ಶಿಷ್ಯ ಮಹಾದೇವ ದೇಸಾಯಿ ಆಗಾಖಾನ ಅರಮನೆಯಲ್ಲಿ ಗತಿಸಿದರು! ಆದರೆ ಕಸ್ತೂರ್ ಬಾ ದೇವರ ದಯೆಯಿಂದ ಬದುಕಿರಲಿ! ಏಕೆಂದರೆ, ಈ ಇಬ್ಬರೂ ಮಹಾತ್ಮರ ಪ್ರೇಮಪಾತ್ರರು ಮುಪ್ಪಿನ ಸಮಯದಲ್ಲಿ ಅವರ ಕೈಬಿಟ್ಟರೆ, ಗಾಂಧಿಜಿಯನ್ನು ನಾವು ಸೆರೆಮನೆಯಿಂದ ಹೊರಗೆ ಕಾಣಬಹುದೇ ಎಂಬ ಭೀತಿ ತಲೆದೋರುತ್ತದೆ!

ಕಸ್ತೂರ್ ಬಾ ಚಿರಾಯುವಾಗಲಿ!

ಕಾಂಗ್ರೆಸ್ ಮುಖಂಡರ ಬಿಡುಗಡೆ ಸಂಭವ?

ಹೊಸ ದಿಲ್ಲಿಯ ಊಹಾಪೋಹ

'ಕಾಂಗ್ರೆಸ್ ಮುಖಂಡರನ್ನು ಬಿಡುಗಡೆ ಮಾಡುವ ಸಂಭವ' ಎಂಬ ಶಿರೋನಾಮೆಯಿಂದ 'ನೇಶನಲ್ ಕಾಲ್' ಪತ್ರಿಕೆಯು ಒಂದು ವಿಸ್ತಾರದ ಲೇಖನ ಬರೆದು, ಕ್ರಿಪ್ಸ್ ಯೋಜನೆಯ ರೀತಿ ವೈಸರಾಯ್ ಕಾರ್ಯಕಾರೀ ಮಂಡಳದ ಹಿಂದೀಕರಣವಾಗಬಹುದೆಂದೂ, ಮಂತ್ರಿಗಳಲ್ಲಿ ಸಮ್ಮಿಶ್ರ ಮಂತ್ರಿಮಂಡಳನ್ನು ಸ್ಥಾಪಿಸಲು ಮುಖ್ಯ ಪಕ್ಷಗಳಿಗೆ ಆಮಂತ್ರಣ ಕೊಡಬಹುದುದೂ ಕಾಂಗ್ರೆಸ್ ಮುಖಂಡರ ಬಿಡುಗಡೆಯಾಗಬಹುದೆಂದೂ ತಿಳಿಸಿದೆ.

'ಕಲ್ಕತ್ತದಲ್ಲಿ ಕೂಡುವ ಬಂಗಾಲ ವಣಿಕ ಸಂಘದ ವಾರ್ಷಿಕೋತ್ಸವ ಸಭೆಯಲ್ಲಿಯೂ, ಫೆಬ್ರವರಿಯಲ್ಲಿ ಸೇರುವ ಕೇಂದ್ರ ಎಸೆಂಬ್ಲಿಯಲ್ಲಿ ಮತ್ತು ಕೌನ್ಸಿಲ್ ಅಧಿವೇಶನಗಳಲ್ಲಿಯೂ ವೈಸರಾಯರು ಸರಕಾರದ ಧೋರಣವನ್ನು ಸ್ಪಷ್ಟಪಡಿಸಬಹುದೆಂದೂ, ಆ ಮೇಲೆ ಗಾಂಧಿಜಿ ಮತ್ತೆ ಇತರ ಮುಖಂಡರ ಬಿಡುಗಡೆಯಾಗಬಹುದೆಂದೂ ಬಲ್ಲವರು ಊಹಿಸುತ್ತಾರೆ. ಕಾಂಗ್ರೆಸ್ ಮುಖಂಡರ ಮನೋಗತವನ್ನೀಗ ವೇವಲರು ತಿಳಿಯುವ ಕಾರ್ಯಕ್ರಮ ಮಾಡುತ್ತಿರುವರೆಂದು ತಿಳಿದುಬರುತ್ತದೆ. ಆ ಅಭಿಪ್ರಾಯವನ್ನು ಅನುಲಕ್ಷಿಸಿ ವೇವಲರು ಘೋಷಣವಹಿಸಬಹುದು' ಎಂದು 'ನೇಶನಲ್ ಕಾಲ್' ಪತ್ರಿಕೆ ಉಲ್ಲೇಖಿಸಿದೆ.

ಒಂದು ಸಣ್ಣ ಕಥೆ

ಉಸಾಬರಿ

ಕತೆಗಾರ: 'ರತ್ನಾಕರ'

[illegible] ಮುಟ್ಟಿದರೆ ಮುದು [illegible] ಟೀಕೆಯಾಗ [illegible] ಸಾವಿರಪಟ್ಟೀಗೀಯುಆಗದು— [illegible] ಸ್ವರ್ಗ [illegible] ವೆಂದೂನು [illegible] ಎಲ್ಲಿಯೋ ಕೇಳಿದ ನೆನಪು.

[illegible] ಬಗ್ಗಿದರೆ ನಮ್ಮ ಮುದಿಯತು, [illegible] ಮಂಡೆಯೊಡೆಯಿತು— [illegible] ಸ್ಥಿತಿಯಲ್ಲಿಯೇ ನಾನಿರುತಿದ್ದೆ. ನನಗಾ [illegible] ನನ್ನ ಬದಿಗಿರುವ ಸಹೋದ್ಯೋಗಿ [illegible] ವಿಚಿತ್ರ ವಿವಾಹ ಗೃದಂದಿನಿಂದ [illegible] ವಿಚಿತ್ರ ವಿವಾಹದ ಆಸೆಯುಂಟಾಗುತ್ತ [illegible] ಮಾತ್ರವಲ್ಲ; ಅವರನ್ನು ಬೊಟ್ಟಿಕ್ಕಿ [illegible] ದರೆಳು ಹಾಕಿ ಆಗಾಗ ನಮ್ಮವರೇ ನನ್ನನ್ನು ಪ್ರಶ್ನಿಸುತಿದ್ದರು—ಯಾವಾಗ ಮದುವೆ ಯಾಗುವದೆಂದು. ವಯಸ್ಸಾದ ತರುಣರನ್ನು ಕಂಡರೆ ವಯಸ್ಸು ಹೋದವರಿಗೆ ಏನೇನೋ ತೋರುತ್ತಿದೆ! ಅಂತೂ ವಯಸ್ಸು ಸಂದವರಿಗೆ ವಯಸ್ಸುದುಂಬಿದ ಹೆಮ್ಮಕ್ಕಳಿದ್ದರೆ ಹೇಳಬೇಕೆ, ವಯಸ್ಸಿನ ತರುಣರ ಫಜೀತಿ? ಮೆಟ್ಟನ್ನು ಮೆಟ್ಟಿ ಕೊಂಡು ಹೋಗುತ್ತ, ರಸ್ತೆಯ ಬದಿಯಲ್ಲಿ ಕೊಂಚು ಹಾಕುತ್ತಿರುವ ಸನುಗಾರನ ಕಣ್ಣು [illegible] ತಪ್ಪಲಾರದ ಪಥಿಕರ ಅವಸ್ಥೆ ಯಂತೆ! ನನ್ನ ಬದಿಯಲ್ಲಿದ್ದವರು ಮದುವೆ ಯಾದವರು; ನನ್ನ ಮುಂದೂ, ಹಿಂದೂ ಮತ್ತು ಮೇಲೂ ಕೆಳಗೂ ಸರ್ವ ವಿವಾಹಿತರಿರುವಾಗ ಅವಿವಾಹಿತನಾಗಿರುವುದು ಎಷ್ಟು ಪ್ರಯಾಸದ ನಾಕೆಂತ ವಾಡಿಕ ವೃಂದದಲ್ಲಿ ಬಹುಮುಂದಿಗೆ ತಿಳಿದಿರಬೇಕು. ಈ ಒಗಟನ್ನೇ ಹೇಗೆ ಬಿಚ್ಚಲೆಂದು ಮನಸ್ಸಿನೊಳಗೆ ಕೇಕೆ ಹಾಕುತ್ತ ಕುಳಿತಿದ್ದೆ.

ಅಷ್ಟರಲ್ಲಿ ಒಳಗಿಂದ ರಂಪಾಟವಾಯಿತು. ನನ್ನ ಚಿಕ್ಕ ತಂಗಿ ಅಳಲಾರಂಭ ಮಾಡಿದರೆ [illegible]ಲ್ಲಿಸಲಾರಳು. ನನ್ನ ತಾಯಿಯವರು ಅವಳನ್ನು ಸರಸರನೆ ಎಳೆದು ತಂದು ನನ್ನ ಎದುರಿಗೆ ನಿಲ್ಲಿಸಿ [illegible]ಲೋ, ಇವಳ ಮೇಷ್ಟ್ರಿಗೆ ಒಂದು ಚೀಟಿ ಬರೆದು ಕಳಿಸು—ತುಂಟೀಗೆ ಚಿತ್ರದ ಪೂಜೆಯಾಗದಿದ್ದರೆ [illegible]ಸಿಲ್ಲ' ಎಂದು ಅಪ್ಪಣೆಯಿತ್ತರು. ಉಪಾಯ [illegible]ಲ್ಲ. ಕೂಡಲೇ ಅವಳ ಮೇಷ್ಟ್ರಿಗೆ 'ನಮ್ಮ [illegible]ರಿಯ ಉಸಾಬರಿಯನ್ನು ಕೊಂಚ ತೆಗೆದು ಕೊಂಡರಾದೀತೆಂ'ದು ಒಂದು ಚಿಕ್ಕ ಚೀಟಿ ಯನ್ನು ಬರೆದು ಕೊಟ್ಟೆನು. ತಾಯಿಯವರ ಅಪ್ಪಣೆಯಂತೆ ಚಿತ್ರದ ಪೂಜೆಯ ಸುದ್ದಿಯನ್ನು ಚೀಟಿಯಲ್ಲಿ ಬರೆಯುವುದು ಅಷ್ಟು ಸಮಂಜಸ ವಲ್ಲವೆಂದು ತೋರಿದರಿಂದ ಅದರ ಸುದ್ದಿಯನ್ನೇ [illegible]ತ್ತಲಿಲ್ಲ. ಕೇವಲ ಉಸಾಬರಿ ತೆಗೆದುಕೊಂಡರೆ ಸಾಕೆಂದು ಮಾತ್ರ ಬರೆದಿದ್ದೆನು.

ಈಗಿನ ಕಾಲದ ಮೇಷ್ಟ್ರು ತಾನೇ? ಅದರಲ್ಲೂ ಹುಡುಗಿಯರ ಶಾಲೆಯ ಮೇಷ್ಟ್ರು! ಹುಡುಗರ ಶಾಲೆಯ ಮೇಷ್ಟ್ರ ಸಹವಾಸ ಸುಮಾರು ಹತ್ತು ಹನ್ನೆರಡು ವರ್ಷ ಕಾಲ ನನಗೆ ಸಾಕಷ್ಟು ದೊರ ಕಿದೆ. ಹುಡುಗಿಯರ ಮೇಷ್ಟ್ರ ಸಹವಾಸ ಮಾತ್ರ ತಿಳಿದಿರಲಿಲ್ಲ. 'When the quarters are strange, approach cautiously' ಎಂದೊಮ್ಮೆ ನನ್ನ ಮೇಷ್ಟ್ರು ನನಗೆ ಕಲಿಸಿದ್ದರು. 'ಉಸಾಬರಿ' ಎಂಬ ಶಬ್ದವು ಇತ್ತೀಚೆಗೆ ನನ್ನ ಕಿವಿಗೆ ಬಿದ್ದ ಶಬ್ದವು. ಎಂದರೆ ಈ ಮೊದಲು ಬಿದ್ದಿರಲಿಲ್ಲವೆಂದಲ್ಲವೆಂದಲ್ಲ. ನೋಡಿ, ಸರಿಯಾಗಿ ಕೇಳಿಸಬೇಕಾದರೆ ಕಿವಿಗೆ ಎರಡೆರಡು ಸಲ ಕೇಳಿಸಿಕೊಳ್ಳಬೇಕಾಗುವ್ವು ದಿಲ್ಲವೇ ನಮಗೆ? ಈ ನೀತಿಯಿಂದ ನಾನು ಅದನ್ನು ಈ ವರೆಗೂ ಪ್ರಯೋಗಿಸಿಸಲಿಲ್ಲ.

ಮನೆಗೆ ಬಂದು ಲಂಗರು ಹಾಕುವಾಗ ನನ್ನ ತಂಗಿ ಬಂದು—'ಅಣ್ಣಾ-ಮೇಷ್ಟ್ರು ನಿಂಗೊಂದು ಚೀಟಿ ಕೊಟ್ಟಿದ್ದಾಳೆ' ಎಂದು ಒಂದು ಚೀಟಿ ಯನ್ನಿತ್ತಳು. ಆ ಚೀಟಿಯನ್ನು ಓದಿನೋಡಿ ನನಗೆ ಕಿಡಿಕಿಡಿಯಾಯಿತು! 'ಉಸಾಬರಿ ತೆಗೆದು ಕೊಳ್ಳಲಿಕ್ಕೆ ಇದೇನೂ ಮುಸಾಬರಿ ಬಂಗಲೆ ಯಲ್ಲ!' ಎಂದು ಬರೆದಿದ್ದಳು., ಏನು ಕಾರಭಾರ! [illegible]ಲೇ, ನಿನ್ನ ಮೇಷ್ಟ್ರಿಗೆಷ್ಟೇ ವಯಸ್ಸು?' ಎಂದು ಕೇಳಿದೆ.

'ಇಪ್ಪತ್ತು! ಇಪ್ಪತ್ತ್ಯೆದು!'

ಏನು ಅಹಂಕಾರ! ಇಪ್ಪತ್ತು ಇಪ್ಪತ್ತ್ಯೆದು ವಯಸ್ಸಾಗುವಾಗಲೇ ಇಷ್ಟು ದರ್ಪ ತೋರಿಸಿ ದರೆ ಮತ್ತೇನು ಉಳಿಯಿತು, ಪ್ರಪಂಚದಲ್ಲಿ? ಉಸಾಬರಿ ತೆಗೆದುಕೊಳ್ಳಲಿಕ್ಕೆ ಮುಸಾಬರಿ ಬಂಗಲೆಯಲ್ಲ!' ಒಂದಿಷ್ಟು ಯೋಚನೆ ಮಾಡ ಬೇಡವೇ ಬರೆಯುವಾಗ? ಯಾರಿಗೆ ಬರೆಯು ವುದು, ಯಾಕೆ ಬರೆಯುವುದೆಂದು ಯೋಚಿಸ ಬೇಡವೇ? ಈಗಿನ ಕಾಲದಲ್ಲಿ ಶಿಷ್ಟ ಸಂಪ್ರದಾ ಯವು ಪುಸ್ತಕದ ಒಳಗೇ ಉಳಿಯಿತು. ಆಚಾರ ವಿಚಾರಗಳಲ್ಲಿ ಉಳಿದಿರುವುದು ದುಡ್ಡಿನ ಚೀಲ! ಇಲ್ಲಿ ಸ್ವಲ್ಪವಾದರೂ ವಿನಯ ಶೀಲತೆ ಇಲ್ಲವೆ ಸಭ್ಯತೆಯಿಲ್ಲದ ಆ ಮೇಷ್ಟ್ರು ಉಸಾಬರಿ ತೆಗೆದು ಕೊಳ್ಳದಿದ್ದರೆ ನನ್ನ ತಂಗಿಯ ಶಿಕ್ಷಣವು ಮೂಲೆಗೆ ಬಿದ್ದೀತೆಂಬ ಹೆದರಿಕೆಯೇ ಮರುದಿವಸ ನಾನ ವಳ ಶಾಲೆಗೆ ಹೋಗಲು ಕಾರಣ.

ಆ ಮೇಷ್ಟ್ರು ದರ್ಜೆಗೆ ಕಾಲಿಡುವಾಗ ಎದೆ ಧಸಕ್ಕೆಂದಿತು! ಇದೇ ಎದೆ ನನಗೆ ಆಗಾಗ ಮೋಸ ಕೊಟ್ಟದ್ದು. ನಾನೊಬ್ಬನೇ ಇರುವಾಗ ಅದು ಸ್ವಯಂ ಭೀಮಸೇನನನ್ನೂ ಎದುರಿಸಲು ಎದೆಗಾರಿಕೆ ಕೂಡುತ್ತದೆ. ನಾಲ್ಕೈದು ಮಂದಿ ಗಳೆಯರ ಮುಂದೂ ಅದೇ ರೀತಿ ಎದೆಗಾರಿಕೆ ಕೊಡುತಿದ್ದುದರಿಂದ ಅದನ್ನು ನಂಬಿ ಹಿಗ್ಗಿ ಕೊಂಡು ಬಂದು ಹೆಂಗಳೆಯರ ಮುಂದೆ ನಿಂತಾಗ ಮಾತ್ರ ಧಸಕ್ಕೆನ್ನುವುದೇಕೆ? ನಾನು ಪುರುಷನೆಂದೇ? ಅಥವಾ ಅವಳು ಸ್ತ್ರೀಯೆಂದೇ? ಆದರೂ ಈಜು ಬರುತ್ತದೆಯೆಂದು ನಂಬಿ ನೀರಿಗೆ ಧುಮುಕಿದಾಗ ಈಜುವುದಕ್ಕೆ ಪ್ರಯಾಸವಾದರೆ ತೆರೆಗೇನು ಬಂತು? ಇಲ್ಲವೆ ಕಡಲಿಗೇನು ಹೋ ಯಿತು? ಈಜುವವನಿಗೆ ತಾನೇ?

ಶಿಷ್ಟ ಸಂಪ್ರದಾಯ ಬದ್ಧವಾಗಿ ನಾನು ಅವ ಳನ್ನು ನಮಸ್ಕರಿಸಿದೆನು. ನನ್ನನ್ನು ನೋಡಿದ ವಳೇ ನಮಸ್ಕರಿಸಿ ನೆಟ್ಟಗೆ ಬಳಿಸಾರಿ ದುರದುರನೆ ನೋಡಿದಾಗ ಮತ್ತೂ ಧಸಕ್ಕೆಂದಿತು ಎದೆ! ಆದರೂ ಪುರುಷನು ಸದಾ ಕರ್ತವ್ಯಶಾಲಿ ಯೆಂದು ಬಲ್ಲಿದರ ಉಕ್ತಿ. 'ನೀವು ತಾನೇ ಇದನ್ನು ಬರೆದುದು?' ಎಂದು ಅವಳನ್ನು ಕೇಳಿದೆ ಅವಳ ಆ ಚೀಟಿ ತೋರಿಸಿ.

'ನಾನು ಬರೆದುದನ್ನು ಅಲ್ಲವೆಂದು ಹೇಳುವೆ ನೆಂದು ಭಾವಿಸಿದಿರಾ?'

'ಇಲ್ಲ—ಇಲ್ಲ. ನಿಮ್ಮನ್ನು ನೋಡುವಾಗ ಮಾತ್ರ ಕಾಣುವುದಿಲ್ಲ, ನೀವು ಹೀಗೆಲ್ಲ ಬರೆಯ ಬಲ್ಲಿರೆಂದು!' ಎಂದು ಅವಳನ್ನೇ ನೋಡುತ್ತಾ ಹೇಳಿದೆ. ಅವಳು ನಿಜವಾಗಿಯೂ ಸುಂದರವಾ ಗಿದ್ದಳು. ನಾನು ಎಂದೂ ಕಾಗೆಯನ್ನು ಕೋ ಗಿಲೆಯೆಂದು ಹೇಳುವುದಿಲ್ಲ. ಅವಳು ಆ ಸಮ ಯದಲ್ಲಿ ಒಳ್ಳೇ ಲಾವಣ್ಯವತಿಯಾಗಿ ತೋರುತಿ ದ್ದಳು! ಪಾಠ ಪ್ರಾರಂಭ ಮಾಡುವಾಗ ತಡೆ ಬಂದುದರಿಂದ ತೋರಿದ ಸಿಟ್ಟೆಲ್ಲಾ ಬೆವರಾಗಿ ಹನಿ ಹನಿಯಾಗಿ ಅವಳ ಮೂಗಿನ ತುದಿಯಲ್ಲಿ ನಿಂತು ನನ್ನನ್ನು ಹಿಯ್ಯಾಳಿಸುತಿತ್ತೋ ಎಂಬಂತೆ ತೋರುತಿತ್ತು. ಅವಳು ನನ್ನನ್ನು ಕೆಂಡದ ಕಣ್ಣುಗಳಿಂದ ನೋಡುತಿದ್ದರೂ ಆ ಕಣ್ಣುಗಳು ಆಗ ತಾನೇ ಅರಳಿದ ಕಮಲಗಳಂತೆ ತೋರು ತಿದ್ದರೆ ಅದು ನನ್ನ ತಪ್ಪೇ? ಇದರಿಂದ ನನ್ನಲ್ಲಿ ಕೋಪ ಮಿತಿಮೀರುವ ಬದಲು ಅವಳ ಬಗ್ಗೆ ಆದರ ಉತ್ಪನ್ನವಾಯಿತು.

'ನಮ್ಮ ತಂಗಿಯ ಉಸಾಬರಿ ತೆಗೆದುಕೊಳ್ಳ ಬೇಕೆಂದು ಬರೆದಿರಲ್ಲಾ? ಅದೇನು? ನಾವು ತೆಗೆದುಕೊಳ್ಳುವುದಿಲ್ಲವೆಂದೆ? ಎಲ್ಲರಂತೆಯೇ ನಿಮ್ಮ ತಂಗಿಗೂ ಚೆನ್ನಾಗಿ ಕಲಿಸುತ್ತೇವೆ. ಅದೇ ಕೆ ಹಾಗೆ ಕೇಳಿದಿರಿ? ಪ್ರತ್ಯೇಕವಾಗಿ ನಿಮ್ಮ ತಂಗಿ ಯ ಉಸಾಬರಿ ತೆಗೆದುಕೊಳ್ಳಲಿಕ್ಕೆ ಅವಳೇನು ಒಬ್ಬ ರಾಜಕುಮಾರಿಯೇ?' ಎಂದು ಬಿರುಸಾಗಿ ಬೀಸಿದಳು ಸುಳಿಗಾಳಿಯನ್ನು!

'ಅಲ್ಲವೆ ತಾನೆ! ವಿದ್ಯಾ ಮಂದಿರವು ಕೇವಲ ರಾಜಕುಮಾರಿಯರಿಗಾಗಿಯೇ ಇರುವುದಿಲ್ಲ. ಸರ್ವರಿಗೂ ಪ್ರವೇಶವಿದೆಯಲ್ಲ. ಉಸಾಬರಿ ತೆಗೆದುಕೊಳ್ಳಲಿಕ್ಕೆ ರಾಜಕುಮಾರಿಯೇ ಇರಬೇ ಕೇನು? ಬೇರೆವರಿಗೂ— — —'

'ಉಸಾಬರಿ, ಗಿಸಾಬರಿಯೆಂದು ವಿಚಿತ್ರ ಶಬ್ದಗಳನ್ನು ಉಪಯೋಗಿಸಲಿಕ್ಕೆ ಇದೊಂದು ಪ್ರಯೋಗ ಶಾಲೆಯೆಂದು ಭಾವಿಸಿದಿರಾ? ಇಷ್ಟು ಮಾತ್ರ ತಿಳಿಸುವಿರೇ? ಉಸಾಬರಿಯೆಂದರೇನು?'

'ಅಂ,—'ಉಸಾಬರಿ'-ಜಾಗ್ರತೆ ಇಲ್ಲವೆ ಕೊಂಚ ಮೇಲ್ವಿಚಾರಣೆಯೆಂದು ಹೇಳುತ್ತಾರೆ. ಅದು ತಪ್ಪಾಯಿತೇ? ಇಲ್ಲವೆ ತಿಳಿಯದೆ ಹೋಯಿತೇ? ಆದರೆ ಬರೆಯಬಹುದಿತ್ತಲ್ಲ—ಅರ್ಥವು ವಿಶದ ವಾಗಲಿಲ್ಲವೆಂದು. ಮುಸಾಬರಿ ಬಂಗಲೆಯಲ್ಲ ವೆಂದು ಹೆಮ್ಮಕ್ಕಳಂತೆ ಟಾಪುಟೀಪಾಗಿ ಬರೆದರೆ ಮುಂದಿನ ಶಾಸ್ತಿ ಮಾಡಲಿಕ್ಕೆ ನಮಗೆ ತಿಳಿಯು ವುದಿಲ್ಲವೆ?'

'ಏನು, ಬೆದರಿಕೆ ಹಾಕುತ್ತೀರಾ? ನೆಟ್ಟಗೆ ಈಗಲೇ ಹೋಗಿ ನಿಮ್ಮ ಮುಂದಿನ ಶಾಸ್ತಿ ಮಾಡಿರಿ; ನಮಗೂ ತಿಳಿದಿದೆ ತಕ್ಕ ಯೋಜನೆ ಯನ್ನು ನಡೆಸಲು—ತಿಳಿದಿರಲಿ, ಮುಸಾಬರಿ ಬಂಗಲೆಯಲ್ಲುಳಿದು ಬಾಡಿಗೆ ತೆರದೆ ಹೋದರೆ ಅದನ್ನು ವಸೂಲು ಮಾಡುವ ಉಸಾಬರಿ ತೆಗೆದುಕೊಳ್ಳಲು ನಮಗೂ ಗೊತ್ತಿದೆಯೆಂದು' ಅವಳು ಗರ್ಜಿಸಿದಾಗ ಇಮ್ಮಡಿ ಸೌಂದರ್ಯವಿತ್ತು ಅವಳಲ್ಲಿ. ಸಾಧುಗಳನ್ನು ಕೆಣಕಿಸಿದರೆ ಸೂಕ್ತಿ ಗಳು ಸೂಸುವವು; ಕವಿಗಳನ್ನು ಕೆಣಕಿದರೆ ಕೃತಿಗಳು ಉದಯಿಸುವವು; ಹೇಡಿಗಳನ್ನು ಕೆಣ ಕಿದರೆ ನಿಟ್ಟುಸಿರು ತೀಡುವವು, ಕುಜನರನ್ನು ಕೆಣಕಿದರೆ ಬೈಗಳ ಸುರಿಮಳೆಯಾಗುವುದು; ಕ್ಷೋಭ ಉದ್ದೀಪನಾದಿಗಳಿಂದ 'ಒಳಗಿದ್ದ ಸತ್ವವೇ ಪ್ರಜ್ವಲಿಸಿ ಹೊಮ್ಮಿ ಬರುವುದೆಂದು ಮುಂತಾಗಿ ಓದಿದ್ದೆ. ಅದೇ ಪ್ರಕಾರ ಸ್ತ್ರೀಯ ರನ್ನು ಸಿಟ್ಟಿಗೆಬ್ಬಿಸಿದರೆ ಹೊರಹೊಮ್ಮುವುದು ಸೌಂದರ್ಯ ತಾನೇ?

ಆದರೂ ಮುಂದಿನ ಶಾಸ್ತಿ ಮಾಡದಿದ್ದರೆ ಆಗುವುದು ಅವಮಾನ; ಮಾತ್ರವಲ್ಲ, ಅವಳ ಅಹಂಕಾರವು ಹೆಚ್ಚುವುದು. ಮುಖ್ಯೋಪಾ ಧ್ಯಾಯನಿ ಇಲ್ಲವೆ ಜಿಲ್ಲಾ ವಿದ್ಯಾಂಗ ಖಾತೆಗೆ ಬರೆದು ಹಾಕಬೇಕೆಂದು ಯೋಚನೆ ಬಂದು ಒಂದು ದೊಡ್ಡ ಅರ್ಜಿಯನ್ನು ತಯಾರು ಮಾಡಿದೆನು. ಅದು ಸರಿಯಾಗಲಿಲ್ಲವೆಂದು ಅದನ್ನು ತಿದ್ದಿ ಸರಿ ಬರೆಯಬೇಕಾಯಿತು. ಅದು ಸಾಕಾಗಲಿಲ್ಲವೆಂದಾಯಿತು. ಹೀಗೆ ತಿದ್ದುತ್ತಾ ತಿದ್ದುತ್ತಾ ನಾಲ್ಕಾರು ಹಾಳೆಗಳು ತುಂಬುವಾಗ ಇಂತಹ ಕ್ಷುಲ್ಲಕ ವಿಚಾರಗಳಿಗೆ ಕೈಹಾಕುವುದು ಲಕ್ಷಣವಲ್ಲವೆಂದು ಯಾಕೋ ಮನಸ್ಸಿಗೆ ತೋ ರಿತು. ಅದರೊಡನೆ ಅವಳ ಸಿಟ್ಟಿಗೆಬ್ಬಿದ ಸೌಂದ ರ್ಯದ ನೋಟ, ಬರೆಬರೆದು ಗೀಚಿ, ಕಡೆಗೆ ಹರಿದು ಬಿಸಾಡಿದಾಗ ನನ್ನಲ್ಲಿ ಒಂದು ಬಗೆಯ ಸಂತಾಪ, ನಾನೇಕೆ ಹಾಗೆ ಮಾಡಿದೆನೆಂದು. ನಾನು ಮಾಡಿ ದುದೇ ತಪ್ಪೆಂದು ತೋರಲಾರಂಭಿಸಿತು. ನಾನೇ ಸವಿಯಾಗಿ ಮೆದುವಾಗಿ ಬರೆದಿದ್ದರೆ ಅವಳೂ ಸವಿಯಾಗಿ ಸಿಹಿಯಾಗಿ ಬರೆಯುತಿದ್ದಿಲ್ಲವೆ? ಏನೇ ಆಗಲಿ, ನಾನಾಡಿದ ಮಾತುಗಳಿಗೆ ಅವಳ ಕ್ಷಮೆ ಪಡೆಯಬೇಕೆಂಬ ಆತುರತೆ ಹುಟ್ಟಿತು. ದಿನದಿಂದ ದಿನಕ್ಕೆ ಆ ಆಸೆ ಹೆಚ್ಚುತಿತ್ತು. ಅಂತೂ ಬಹುದಿನಗಳ ವರೆಗೆ ಅವಳನ್ನು ಪುನಃ ನೋಡಲು ಅವಕಾಶವು ದೊರಕಲಿಲ್ಲ.

ಅದೇ ಶಾಲೆಯಲ್ಲಿ ಕೆಲವು ದಿನಗಳ ನಂತರ ಒಂದು ತರಿಯರ ಕೂಟವನ್ನೇರ್ಪಡಿಸಿದರು. ನನ್ನ ತಂಗಿಯು ನನಗೊಂದು ಆಮಂತ್ರಣ ಪತ್ರವನ್ನು ತಂದಾಗ ನನಗೆ ಹರುಷವಾಯಿತು. ಏನಾದರೊಂದು ನೆವಮಾಡಿ ಹೋಗಬೇಕೆಂದಿದ್ದೆ ಇದೀಗ ಸಮಯವೊದಗಿತು ಅವಳನ್ನು ನೋಡಲು.

ಶಾಲೆಯ ಒಳಹೊಗುವ ಮೊದಲೇ ಅವಳು ಕಾಣಸಿಕ್ಕಿದಳು—ಕೂಡಲೇ 'ನನ್ನನ್ನು ಕ್ಷಮಿಸಿರಿ' ಎಂದು ಅವಳನ್ನು ಕೇಳಿಕೊಂಡೆ.—'ಅಯ್ಯೋ, ನೀವೇ ನನ್ನನ್ನು ಕ್ಷಮಿಸಬೇಕೆಂದು ನಾನು ಕೇಳುವವಳಿದ್ದೆ—ದಯವಿಟ್ಟು ನೀವೇ ಮೊದಲು ನನ್ನನ್ನು ಕ್ಷಮಿಸಿಬಿಡಿ' ಎಂದು ಅವಳು ನುಡಿ ಯುವಾಗ ಅವಳ ಮೋರೆಯಲ್ಲೊಂದು ಅಪೂರ್ವವಾದ ಕಾಂತಿಯು ಸೂಸುತಿತ್ತು. . .

ಈಗೀಗ ನಾನು ಅವಳನ್ನು ನೋಡದೆ ಇರುವ ದಿನವಿಲ್ಲ. ಅವಳೂ ಏನಾದರೊಂದು ನೆವಮಾಡಿ ನನ್ನನ್ನು ನೋಡಿಯೇ ನೋಡುವಳು—ನಮ್ಮಿಬ್ಬರ 'ಉಸಾಬರಿ'ಯನ್ನು ಪ್ರಪಂಚವು ತೆಗೆದು ಕೊಂಡಿತೇನು?

ಜಾನ್ ಹರ್ಬರ್ಟ್ ಸತ್ತರು!

ಬಂಗಾಳದ ಪ್ರಖ್ಯಾತ ಗವರ್ನರ್ ಸರ್ ಜಾನ್ ಹರ್ಬರ್ಟರು ಕಳೆದ ವಾರ ಸತ್ತು ಹೋ ದರು. ಈಗ ಆ ಸ್ಥಳಕ್ಕೆ ಅವರ ಉತ್ತರಾಧಿಕಾ ರಿಯೊಬ್ಬನನ್ನು ನೇಮಿಸುವ ವಿಚಾರ ಲಂಡನಿನ ಲ್ಲಿ ಪರ್ಯಾಲೋಚನೆ ನಡೆಯುತ್ತಿದೆಯಂತೆ. ಗತಿಸಿದ ಗವರ್ನರ್ ಹರ್ಬರ್ಟರನ್ನು, ಅವರ ಅಧಿಕಾರ ಕಾಲದಲ್ಲಿ ಉಂಟಾದ ಭೀಕರ ಬರ ಗಾಲ, ಹಕ್ ಮಂತ್ರಿ ಮಂಡಳದ ರಾಜಿನಾಮೆ ಪ್ರಕರಣ ಮೊದಲಾದ ಕೃತ್ಯಕ್ಕಾಗಿ ಯಾರೂ ಮರೆಯಲಾರರು.

★ ಮಾರಾಟಕ್ಕೆ ಸಿದ್ಧವಾಗಿವೆ ★

1944 ಶಾರದಾ ಡೈರಿಗಳು 1944

ಸಣ್ಣ ಸೈಜ್ (ಕೆಲಿಕೊ) 1-2-0 ದೊಡ್ಡ ಸೈಜ್ (ಕೆಲಿಕೊ) 1-12-0

(ಮುಚ್ಚಳದ್ದು) 1-6-0 ದೊಡ್ಡ ಸೈಜು (ಮುಚ್ಚಳದ್ದು) 2-0-0

ದೊರೆಯುವ ಸ್ಥಳ:—

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ಸಮರಭೂಮಿಯ ಸಂಚಾರ

ಜರ್ಮನ್, ಜಪಾನ್, ಇಟಲಿ ಈ ಮೂರು ರಾಷ್ಟ್ರಗಳ ಸೈನಿಕ ಒಪ್ಪಂದದ ದ್ವಿತೀಯ ವಾರ್ಷಿಕೋತ್ಸವ ಸಂಬಂಧ ಜರ್ಮನ್ ವಿದೇಶ ಮಂತ್ರಿ ರಿಬನ್ ಟ್ರಾಪ್ ಬರ್ಲಿನಿನಲ್ಲಿ ಭಾಷಣ ಮಾಡುತ್ತಾ, ಯುರೋಪ್ ಮತ್ತು ಪೂರ್ವ ಏಷ್ಯಾದಲ್ಲಿ ಈ ತ್ರಿರಾಷ್ಟ್ರಗಳು ಅಭೇದ್ಯವಿರುವವೆಂದು ನುಡಿದನು. ಅವನು ಮತ್ತೆ ಹೀಗಂದನು: 'ಜಪಾನು ಕಳೆದ ಒಂದೆರಡು ವರ್ಷಗಳಲ್ಲಿ ತಾನು ಗೆದ್ದುಕೊಂಡ ಸಾವಿರಾರು ಮೈಲು ಭೂಭಾಗವನ್ನು ಭದ್ರಪಡಿಸಿಕೊಂಡಿದೆ. ಇತ್ತ ಜರ್ಮನ್ ಸೈನಿಕರು ಶತ್ರುಗಳನ್ನು ಯೂರೋಪಿನಿಂದ ದೂರ ಅಟ್ಟಿರುವರು. ಪೂರ್ವದಲ್ಲಿಯೂ ಜರ್ಮನರ ವ್ಯೂಹವು ಭದ್ರವಾಗಿದೆ. ಅದನ್ನು ಮುರಿಯುವುದು ಶತ್ರುವಿಗೆ ಅಸಾಧ್ಯ.'

ಇದೇ ಸಂದರ್ಭದಲ್ಲಿ ಮುಸಲಿನಿಯೂ ಇಟಲಿಯಲ್ಲಿ ಒಂದು ಭಾಷಣವಿತ್ತನು. ಅದರ ಅಭಿಪ್ರಾಯ ಇಂತಿದೆ: 'ಕೆಲವರು ನಾಚಿಕೆಯಿಲ್ಲದೆ ಶರಣಾಗತರಾದರೂ ಕಳೆದ ಎರಡು ತಿಂಗಳ ಸಂಭವಗಳಿಂದ ತ್ರಿರಾಷ್ಟ್ರ ಒಪ್ಪಂದ ಮತ್ತು ಫೇಸಿಸ್ಟ್ ಪಕ್ಷದ ಸಂಬಂಧದಲ್ಲಿ ಏನೂ ವ್ಯತ್ಯಾಸವಾಗಿಲ್ಲ. ಈಗ ರಚಿತವಾಗಲಿರುವ ಇಟಲಿಯನ್ ರಿಪಬ್ಲಿಕ್ ಸೇನೆಗಳು ಪುನಃ ರಣರಂಗಕ್ಕೆ ಸಿದ್ಧವಾದ ಕೂಡಲೇ ಈ ಸಂಬಂಧವು ಮತ್ತಷ್ಟು ಭದ್ರವಾಗುವುದು. ರಿಪಬ್ಲಿಕ್ ದಳಗಳು ಶರಣಾಗತಿಯ ನಿಂದೆಯನ್ನು ತೊಳೆದುಬಿಡುವವು.'

ಕೀವ್ ಮಾರ್ಗದಲ್ಲಿ ನಡೆಯುತ್ತಿದ್ದ ಭೀಕರ ಹೋರಾಟವಿಂದು ಮುಗಿಯುತ್ತಾ ಬಂದಿದೆ. ಕೆಂಪು ಸೈನ್ಯ ಮೂವತ್ತು ದಿನಗಳಿಂದ ಕಾದಾಡುತ್ತಿದ್ದರೂ ಸ್ವಲ್ಪವೂ ಕದಲಲಿಲ್ಲ. ಇತ್ತ ಯುಕ್ರೇನಿನ ಎರಡನೇ ರಂಗದಲ್ಲಿಯೂ, ಎಂದರೆ ನೀಪರ್ ವಕ್ರದಲ್ಲಿ ಜರ್ಮನರೂ ಸೋವಿಯೆಟರ ಒತ್ತಟವನ್ನು ಆವೇಶದಿಂದ ಎದುರಿಸುತ್ತಿರುವರು. ಜರ್ಮನರ ರೈಲ್ವೆದಾರಿ ಕತ್ತರಿಸಲ್ಪಟ್ಟಿದೆ.

ಸೋವಿಯೆಟ್ ಜೆಕ್ ಒಪ್ಪಂದಕ್ಕೆ ಸಹಿ ಹಾಕಲ್ಪಟ್ಟಿತೆಂದು ಮೋಸ್ಕೋ ರೇಡಿಯೋದಲ್ಲಿ ಹೇಳಲಾಗಿದೆ. ಅಧ್ಯಕ್ಷ ಕಾಲಿನಿನ್, ಮಾರ್ಶಲ್ ಸ್ಟಾಲಿನ್, ವೊರೊಶಿಲೊವ್, ಜೆಕ್ಕರ ರಾಯಭಾರಿ ಲಿಟಿದೇವ್, ಅಧ್ಯಕ್ಷ ಬೆನೇಶ, ಪರರಾಷ್ಟ್ರ ಮಂತ್ರಿ ಕ್ರಾಸ್ ಮೊದಲಾದವರು ಈ ಸಹಿ ಮಾಡುವ ಕಾಲದಲ್ಲಿ ಹಾಜರಿದ್ದರು. ಜರ್ಮನರ ನಿರ್ದಯವಾದ ಘಾತಕ್ಕೊಳಗಾಗಿ ಕಷ್ಟಪಡುತ್ತಿರುವ ಜೆಕ್ಕರು, ಜರ್ಮನ್ ಧ್ವಂಸಕ್ಕಾಗಿ ಹೋರಾಡುತ್ತಿರುವ ರಶ್ಯನರೊಡನೀಗ ಒಪ್ಪಂದ ಮಾಡಿಕೊಂಡಿರುವದು ಕಾಲೋಚಿತವಿದೆ. ಇದರಿಂದ ಜರ್ಮನರು ಕೆರಳಬಹುದು. ತಮ್ಮ ಕೈಕೆಳಗಿರುವ ಗುಲಾಮ ಜನರು ಸ್ವತಂತ್ರರಾಗಬೇಕೆಂದು ಪ್ರಯತ್ನ ಮಾಡುವಾಗ, ಸಾಮ್ರಾಜ್ಯಶಾಹಿಗಳು ಕೆರಳುವುದು ಎಲ್ಲೆಲ್ಲಿಯೂ ಸಹಜವೇ ಇದೆ.

ಟಿಟೋ ಸರಕಾರವು ಯುಗೋಸ್ಲವಿಯದ ಪ್ರತಿನಿಧಿ ಸರಕಾರವೆಂದೀಗ ರಶ್ಯವು ನಿರ್ಧರಿಸಿದೆಯೆಂದು ಟರ್ಕಿಶ್ ರೇಡಿಯೋದಲ್ಲಿ ಇತ್ತೀಚೆಗೆ ಹೇಳಲಾಯಿತು. ಸೋಫಿಯದ ಮೇಲೆ ಮಿತ್ರರು ಮಾಡಿದ ವಿಮಾನ ದಾಳಿಯಿಂದಲೂ, ಕೈರೋ ಪರಿಷತ್ತಿನಿಂದಲೂ ಬಲ್ಗೇರಿಯದಲ್ಲೀಗ ಗಡಿಬಿಡಿ ಹುಟ್ಟಿರುವುದು. ಸೋವಿಯೆಟ್ ಸರಕಾರದೀ ನಿರ್ಣಯವು ಬಲ್ಗೇರಿಯದ ಮೇಲೆ ಒಳ್ಳೆ ಪರಿಣಾಮವನ್ನುಂಟು ಮಾಡಿರುವುದು. ಮಾರ್ಶಲ್ ಟಿಟೋರವರು ತಾತ್ಕಾಲಿಕವಾಗಿ ಸ್ಥಾಪಿಸಿರುವ ಸರಕಾರದ ತಳಹದಿಯು, ಯುಗೋಸ್ಲವಿಯದ ಜನರಿಗೆಲ್ಲ ಸಮಾನ ಸ್ವಾತಂತ್ರ್ಯ, ರಾಷ್ಟ್ರ ವಿಮೋಚನೆಗಾಗಿ ಯುದ್ಧ ಮುಗಿವತನಕ ಫೇಸಿಸ್ಟ್ ವಿರೋಧ ಕೌನ್ಸಿಲ್ ಸ್ಥಾಪಿಸುವುದು ಮೊದಲಾದ ತತ್ವಗಳ ಮೇಲಿದೆ.

ದ್ವಿತೀಯರಂಗವನ್ನು ಮಿತ್ರರು ತೆರೆವುದಿದ್ದರೆ, ಅದನ್ನು ವಿಫಲಗೊಳಿಸಲು ಜರ್ಮನರೀಗ ಭರದಿಂದ ಸಿದ್ಧತೆ ನಡೆಸುತ್ತಿರುವರೆಂದು ಹೇಳಲಾಗಿದೆ. ಫೀಲ್ಡ್ ಮಾರ್ಶಲ್ ರೊಮೆಲನು ದಾಳಿ ಪ್ರತಿಬಂಧಕ ಸಂರಕ್ಷಣಗಳನ್ನು ಪರಿಶೀಲಿಸಲು ಕಳೆದ ಆದಿತ್ಯವಾರ ನಾರ್ವೆಗೆ ಹೋದನೆಂದು ಇಲ್ಲಿಗೆ ಸುದ್ದಿ ಬಂದಿರುವುದು. ಫೀಲ್ಡ್ ಮಾರ್ಶಲ್ ಕಿಟಲ್, ಓವರ್ ಎಡ್ಮಿರಲ್ ಮತ್ತು ಹಲವು ಸೇನಾಪತಿಗಳು ಡೆನ್ಮಾರ್ಕ್ ಪ್ರವಾಸದಲ್ಲಿದ್ದರೆಂದೂ, ಮುಖ್ಯ ಸ್ಥಳಗಳಲ್ಲಿ ಜರ್ಮನ್ ಸೈನಿಕರು ದಾಳಿ ಪ್ರತಿಬಂಧಕ ಪ್ರಯೋಗ ಮಾಡಿ ತೋರಿಸಿದರೆಂದೂ ತಿಳಿಯುತ್ತದೆ.

ಜರ್ಮನರು ಕಳೆದ ೧೫ ದಿನಗಳಿಂದ ರಶ್ಯದ ಗಡಿಗೆ ಪೋಲೆಂಡ್ ಮುಖಾಂತರ ಭಾರವಾದ ಶಸ್ತ್ರಾಸ್ತ್ರಗಳನ್ನು ಕಳುಹಿಸುತ್ತಿರುವರೆಂದು ರಾಯಿಟರ್ ವಿಶೇಷ ಸುದ್ದಿಗಾರನು ಹೇಳುತ್ತಾನೆ. ಕೆಂಪು ಸೈನ್ಯವು ಚಳಿಗಾಲದ ದಾಳಿ ಪ್ರಾರಂಭಿಸುವ ಮುನ್ನವೇ ಜರ್ಮನರು ಪ್ರಚಂಡ ದಾಳಿ ಹೂಡುವಂತೆ ತೋರುತ್ತದೆ. ನವಂಬರ ತಿಂಗಳ ಅಂತ್ಯದಿಂದ, ಶಸ್ತ್ರ ಸೈನ್ಯಗಳಿಂದ ತುಂಬಿದ ಗಾಡಿಗಳು ಎಲ್ಲಾ ಮುಖ್ಯ ರೈಲು ದಾರಿಗಳಿಂದ ಮುಖ್ಯತಃ ವಾರ್ಸಾ-ಲೋ ಮಾರ್ಗದಿಂದ ಬಿಡುವಿಲ್ಲದೆ ಪೂರ್ವ ರಂಗಕ್ಕೆ ಹೋಗುತ್ತಿರುವವು, ಈ ಮಾರ್ಗಗಳಲ್ಲಿ ಈಗ ನಾಗರಿಕ ಮತ್ತು ಸರಕುಗಳ ವ್ಯವಹಾರ ಪೂರ್ಣ ನಿಲ್ಲಿಸಲಾಗಿದೆಯೆಂದೂ ಹೇಳಲಾಗಿದೆ.

ಇಟಲಿಯ ಮಂದ ಪಕ್ಷದ ಮುಖಂಡ ಕೌಂಟ್ ಸ್ಫೋರ್ಝಾ ಇವರು ಇಟಲಿಯ ಅರಸು ವಿಕ್ಟರ್ ಇಮಾನ್ಯುವೇಲರನ್ನು ಕಠಿಣವಾಗಿ ಟೀಕಿಸಿ ಕೂಡಲೇ ಅವರನ್ನು ಪದಚ್ಯುತರಾಗಿ ಮಾಡಬೇಕೆಂದು ಹೇಳಿರುವರು. 'ಮಿತ್ರರ ವಿರೋಧ ಹೋರಾಡುವಂತೆ ಕಳೆದ ಮೂರು ವರ್ಷಗಳಿಂದ ಪ್ರೇರೇಪಿಸಿದ ವ್ಯಕ್ತಿಯನ್ನು ನಾವಿನ್ನು ಸರಗೊಡುವುದರಿಂದ ಜಗತ್ತಿಗೆ ಅಸತ್ಯ ಸಾರುತ್ತೇವೆ. ನಮ್ಮ ಸೈನಿಕರು ಗ್ರೀಸ್, ಯುಗಸ್ಲವಿಯ, ರಶ್ಯಗಳಿಗೆ ಹೋಗಿ ಪ್ರಾಣಗಳನ್ನರ್ಪಿಸಿದ್ದು ಇಟಲಿಗಾಗಿ ಅಲ್ಲ; ಅವನಿಗಾಗಿ, ಅವನ ಮಿತ್ರ ಹಿಟ್ಲರನಿಗಾಗಿ; ಅವನು ಸಿಂಹಾಸನ ತ್ಯಾಗಮಾಡಬೇಕೆಂದು ಪ್ರತೀಕಾರ ಬುದ್ಧಿಯಿಂದ ಹೇಳುವುದಲ್ಲ. ಆತ ರಾಷ್ಟ್ರದ ಗೌರವ ಕಳೆದದ್ದರಿಂದ ಅದರ ಪ್ರತಿನಿಧಿಯಾಗಿರಲು ಅರ್ಹನಲ್ಲ. ಅಜ್ಞಲನರ ಅಪರಾಧವನ್ನು ಕ್ಷಮಿಸಬಹುದು. ಆದರೆ ಒಳಸಂಚುಗಾರರನ್ನು ಶಿಕ್ಷಿಸದಿದ್ದರೆ ಜಗತ್ತು ನಮ್ಮನ್ನು ನಿಂದಿಸುವುದು. ಜಗತ್ತಿನಲ್ಲಿ ನಮಗೆ ಗೌರವಬೇಕು. ನ್ಯಾಯ, ಸತ್ಯ ಮತ್ತು ಫೆಸಿಸ್ಟ್ ವಾದದ ಸಮಾಧಿಯ ಮೇಲೆ ನಾವದನ್ನು ರಚಿಸುವೆವು' ಹೀಗೆಂದು ಅವರು ಹೇಳಿದರು, ಕಟ್ಟುಗ್ರ ಟೀಕೆ ಮಾಡಿದ್ದಾರೆ.

ಮಿತ್ರರು ಕೈಕೊಂಡಿರುವ ಹೊಸ ದಾಳಿಯಿಂದ ರೋಮಿನ ಹೆಬ್ಬಾಗಿಲಿಗೆ ಗಂಡಾಂತರ ಬಂದಿದೆಯೆಂದು ಜರ್ಮನ್ ಅಧಿಕಾರಿಗಳು ಅಭಿಪ್ರಾಯ ಪಟ್ಟಿರುವುದಾಗಿ ರಾಯಿಟರ್ ವಿಶೇಷ ಸುದ್ದಿಗಾರನ ಹೇಳಿಕೆ. ಈ ಯುದ್ಧದಲ್ಲಿ ಅಸಂಖ್ಯ ಫಿರಂಗಿಗಳನ್ನುಪಯೋಗಿಸಲಾಗುತ್ತಿದೆಯೆಂದೂ, ಇಟಲಿ ಯುದ್ಧದಲ್ಲಿ ಇಷ್ಟು ಫಿರಂಗಿಗಳನ್ನು ಇದುವರೆಗೆ ಉಪಯೋಗಿಸಿಲ್ಲವೆಂದೂ, ಇದು ರೋಮ್ ನಗರಕ್ಕಾಗಿ ನಡೆವ ಕಾದಾಟವೆಂದೂ ಹೇಳಲಾಗಿದೆ. ಬ್ರಿಟಿಷ್ ಎಂಟನೆಂ ಸೈನ್ಯವು ಈಗಾಗಲೇ ಒರ್ಟೋನಾ ಗಾರ್ಡಿಯಾಗ್ರೆಲಿ ರಸ್ತೆಗೆ ಬಹಳ ಸಮೀಪಿಸಿದೆ. ಶತ್ರು ಪ್ರತಿದಾಳಿಗಳನ್ನು ಹಿಂದಕ್ಕಟ್ಟಿ ಎಂಟನೇ ದಲದ ತಂಡಗಳು ಕರಾವಳಿ ಮಾರ್ಗ ಮುಂದೊತ್ತಿದವು.

'ಭಾರತದ ಗಡಿ ಪ್ರದೇಶಗಳು ಭದ್ರವಿವೆ; ಶತ್ರು ರಾಜ್ಯದ ಮೇಲೆ ದಂಡೆತ್ತಿ ಹೋಗಲು ಬೇಕಾದ ಸಿದ್ಧತೆ ಮಾಡಿರುವೆವು,' ಹೀಗೆಂದು ಹಿಂದುಸ್ಥಾನದ ಸೇನಾಪತಿ ಸರ್ ಅಚಿನ್ ಲೆಕ್ಕರು ಹೇಳಿದರು. ಅವರು ತಮ್ಮ ಭಾಷಣದಲ್ಲಿ ಹಿಂದುಸ್ಥಾನದ ವಿಮಾನಬಲ, ಸೇನೆ ಇವುಗಳ ಶಕ್ತಿ ಬೆಳೆದಿದೆಯೆಂದು ತಿಳಿಸಿ, ಭೂಮಧ್ಯ ಸಮುದ್ರ ಭಾಗದಲ್ಲಿರುವ ಹಿಂದೀ ಸೇನೆಗೆ ಅವಶ್ಯವಿರುವ ಸಹಾಯ ಸಲಕರಣೆಗಳನ್ನೊದಗಿಸುವುದು ಹಾಗೂ ಅಮೆರಿಕನ್ ನೆಲ ಜಲ ಆಕಾಶದಳಗಳ ಅವಶ್ಯಕತೆಗಳನ್ನು ಪೂರೈಸುವ ಹೊಣೆ ಹಿಂದುಸ್ಥಾನದ ಮೇಲೆ ಬಿದ್ದಿದೆಯೆಂದರು.

'ಭಾರತದ ಮಹತ್ವ, ಮಿತ್ರರಿಗೆ ಇದರಿಂದ ದೊರೆತ ಅನುಕೂಲ ಇವುಗಳನ್ನೆಲ್ಲಾ ಜಪಾನರು ಬಲ್ಲರು; ಹಿಂದುಸ್ಥಾನದ ಯುದ್ಧ ಪ್ರಯತ್ನಕ್ಕೆ ಆತಂಕವನ್ನುಂಟುಮಾಡಿ ಮಿತ್ರರ ದಾಳಿಯನ್ನು ತಡೆಯಬೇಕೆಂಬುದೇ ಅವರ ಇಚ್ಛೆ. ಭಾರತದ ಮೇಲೆ ನೆಲ ಜಲ ಆಕಾಶಗಳಿಂದ ದಂಡೆತ್ತಿ ಬರುವ ಸಾಮರ್ಥ್ಯ ಜಪಾನಿಗಿಲ್ಲ. ಇದ್ದರೆ ಕಳೆದ ವರ್ಷವೇ ಅವರು ಅಂಥಾ ಸಾಹಸ ಮಾಡಬಹುದಿತ್ತು. ಆದರೆ ಅವರು ನಮ್ಮ ಬಂದರಗಳ ಮೇಲೆ ಬಾಂಬೆಸದು ಉಪದ್ರವ ಮಾಡಬಹುದು. ಇದನ್ನು ತಡೆಯಲು ನಾವು ಸದಾ ಸಿದ್ಧರಾಗಿರುವೆವು. ಇಷ್ಟರ ವರೆಗೆ ಜಪಾನರು ಗಡಿ ದಾಟಿ ನಮ್ಮ ದೇಶದೊಳಗೆ ನುಗ್ಗಿಲ್ಲ. ಅವರು ಅಶಕ್ತರಾಗಿ ಹಾಗೆ ಮಾಡಿಲ್ಲವೆಂದು ತಿಳಿವುದು ತಪ್ಪು. ಚಿಕ್ಕ ಚಿಕ್ಕ ಸೇನೆ ಕಳುಹಿಸಿ ಪ್ರಯೋಜನವಿಲ್ಲವೆಂದು ಬಿಟ್ಟಿದ್ದಾರೆ. ಜನರಲ್ಲಿ ಭೀತಿಯನ್ನುಂಟುಮಾಡಲು ಅವರು ಏನೂ ಮಾಡಬಹುದು ಆದರೆ ಶತ್ರುಗಳ ಮೇಲೆ ಬೇಗ ದಂಡೆ ಮಾಡಲು ನಾವು ನಿಶ್ಚಯಿಸಿದ್ದೇವೆ' ಎಂದೂ ಸೇನಾಪತಿಗಳು ಸಾರಿದರು.

'ಟರ್ಕಿಯು ತಟಸ್ಥ ರಾಷ್ಟ್ರವಲ್ಲ; ಅದು ಎಂದೂ ತಟಸ್ಥ ರಾಷ್ಟ್ರವಾಗಿರಲಿಲ್ಲ. ಅದು ಮಿತ್ರ ರಾಷ್ಟ್ರಗಳ ಮಾಲಿಕೆಯಲ್ಲಿ ಸೇರಿರುವುದು. ತನ್ನ ಶಕ್ತ್ಯಾನುಸಾರ ಅದು ಮಿತ್ರ ರಾಷ್ಟ್ರಗಳಿಗೆ ಸಹಾಯ ನೀಡುತ್ತಾ ಬಂದಿದೆ. ಯುದ್ಧವಾರಂಭವಾದಂದಿನಿಂದ ಟರ್ಕಿಯ ಯುದ್ಧ ನೀತಿಯು ಟರ್ಕಿ ಬ್ರಿಟಿಷ್ ಒಪ್ಪಂದಕ್ಕನುಗುಣವಾಗಿದೆ. ಬ್ರಿಟನಿನ ಸಲಹೆಯನ್ನು ಪಡೆದೇ ಟರ್ಕಿಯು ಪ್ರತಿಯೊಂದು ಕಾರ್ಯಕ್ರಮವನ್ನು ಕೈಕೊಂಡಿರುವುದು. ಯುದ್ಧದ ಇತಿಹಾಸದಲ್ಲಿ ಹೊಸ ಅಧ್ಯಾಯವು ಆರಂಭವಾಗಿದೆಯೋ ನೋ ನಿಜ; ಟರ್ಕಿಯು ಈಗ ಯುದ್ಧದಲ್ಲಿ ಹೆಚ್ಚಿನ ಚಟುವಟಿಕೆ ವಹಿಸುವುದೇ ಎಂಬ ಪ್ರಶ್ನೆ ಉದ್ಭವಿಸಿರುವುದು. ಕೈರೋ ಪರಿಷತ್ತಿನಲ್ಲಿ ಇದೇ ಪ್ರಶ್ನೆ ಚರ್ಚಿಸಲ್ಪಟ್ಟಿತು. ಅಡಗಿಸುವುದರಲ್ಲಿ ಹುರುಳಿಲ್ಲ. ಮಿತ್ರರಿಗೆ ಟರ್ಕಿಯಿಂದ ಹೆಚ್ಚಿನ ಅನುಕೂಲವುಂಟಾಗಲೆಂದೇ ಟರ್ಕಿಯ ಪ್ರಕೃತದ ನೀತಿ" ಹೀಗೆಂದು ಅಂಕಾರಾದ ಉಲೂಸ್ ಪತ್ರಿಕೆಯು ಒಂದು ಮಹತ್ವದ ಲೇಖನ ಬರೆದಿರುವುದಾಗಿ ಟರ್ಕಿ ರೇಡಿಯೋದಲ್ಲಿ ಹೇಳಲಾಗಿದೆ.

ಬ್ರಿಟನಿನ ವಿದೇಶ ಮಂತ್ರಿ ಈಡನರು ಯುದ್ಧ ಪರಿಸ್ಥಿತಿ ವಿಚಾರ ಪಾರ್ಲಿಮೆಂಟಿನಲ್ಲಿ ಚರ್ಚೆಯನ್ನು ಆರಂಭಿಸುತ್ತಾ ಪ್ರಧಾನ ಮಂತ್ರಿಗಳು ಹಾಜರಿಲ್ಲದುದಕ್ಕೆ ವಿಷಾದ ವ್ಯಕ್ತಪಡಿಸಿ ಅವರು ಮಹತ್ವದ ಕಾರ್ಯದಲ್ಲಿ ತೊಡಗಿರುವರೆಂದೂ ಅದರಲ್ಲಿಯ ಶಸ್ಸು ಸಿಗಲೆಂದೂ ಹೇಳಿದರು. ತ್ರಿರಾಷ್ಟ್ರ ಪರಿಷತ್ತಿನ ವೇಳೆ, ಚರ್ಚಿಲರು ಆ ಸಭೆ ನಡೆಯುವ ಸಮಯದಲ್ಲಿ ಹಗಲಿರುಳು ದುಡಿಯುತ್ತಿದ್ದರು. ಯುದ್ಧ ಪ್ರಾರಂಭವಾದಂದಿನಿಂದ ಇಷ್ಟರವರೆಗೆ ಅವರು ಈ ರೀತಿ ಒಂದೇ ಸವನೆ ಶ್ರಮಪಟ್ಟು ದುಡಿದುದಿಲ್ಲವೆಂದರು. ಕೈರೋದಲ್ಲಿ ತೆಹರಾನ್‌ನಲ್ಲಿಯೂ ನಡೆದ ಸಮ್ಮೇಳನಗಳಲ್ಲಿ ಮಿಲಿಟರಿ ವಿಷಯವೇ ಹೆಚ್ಚಾಗಿ ಚರ್ಚಿಸಲ್ಪಟ್ಟಿತೆಂದೂ ಈ ಯುದ್ಧದಲ್ಲಿ ಇಷ್ಟರ ವರೆಗೆ ನಡೆದುದಕ್ಕಿಂತ ಮಹತ್ಕಾರ್ಯ ಈ ಪರಿಷತ್ತಿನಲ್ಲಿ ಸಾಧಿಸಲಾಗಿದೆಯೆಂದೂ ಹೇಳಿದರು. "ಜರ್ಮನಿಯನ್ನು ನಿರ್ಮೂಲ ಮಾಡಿ ಆ ಮೇಲೆ ಜಪಾನನೊಡನೆ ಒಪ್ಪಂದ ಮಾಡಲಾರೆವು. ಎಷ್ಟು ಅಡ್ಡಿ ಆತಂಕಗಳುಂಟಾದರೂ ಜಪಾನಿನೊಡನೆ ನಾವು ಕೊನೆವರೆಗೆ ಹೋರಾಡುವೆವು" ಎಂದು ಅವರು ಸಾರಿದರು.

TIMES HAVE CHANGED!

ಕಾಲ ಬದಲಾವಣೆಯಾಗಿದೆ.
ಆಗ ಮತ್ತು ಈಗ ಸಮಯ
ನೋಡುವುದು.

ನ್ಯೂ ಕೆಲಿಬ್ರೆ 'ಇ' ನಿಕ್ಕಲ್ ಸಿಲ್ವರ್ ಕೇಸ್ ರೂ. 62, ಎವರ್‌ಬ್ರೈಟ್‌ಸ್ಟೀಲ್ ರೂ. 71
18 ಕ್ಯಾರಟ್ ಗಟ್ಟಿ ಬಂಗಾರ ರೂ. 197

ಸಮಯ ತಿಳಿಯಲು ಪ್ರಾಚೀನ ಕಾಲದಿಂದಲೇ ಸೂರ್ಯಬಿಂಬವು ಗೊತ್ತಾದ ಸಾಧನ. ಕ್ರಿ. ಪೂ. 800ರಿಂದಲೇ ಇದು ಪ್ರಚಾರದಲ್ಲಿತ್ತು. ಶತಮಾನಗಳ ನಂತರ ಸಮಯ ನೋಡುವ ಸಾಧನಗಳು ಬದಲಾಗುತ್ತಾ ಬಂತು. ಇಂದಿಗೆ ಸಮಯ ನೋಡುವ ಸಾಧನ ಪೂರ್ಣ ಪರಿಶುದ್ಧವಾದ ವೆಸ್ಟ್ ಎಂಡ್ ವಾಚನ್ನು ಆಧರಿಸಿದೆ.

ನಾವು ಜಾಹಿರು ಮಾಡಿದ ಎಲ್ಲಾ ತರದ ವಾಚುಗಳನ್ನೂ, ಸರಿಯಾಗಿ ಸಾಧನಗಳು ಬರದಿರುವುದರಿಂದ ಕೊಡಲಿಕ್ಕಾಗದಿದ್ದರೂ ನಮ್ಮಲ್ಲಿರುವ ಸ್ಟಾಕಿನಲ್ಲಿ ಉತ್ತಮವಾದುದನ್ನೇ ನಾವು ಕೊಡಲು ಯತ್ನಿಸುವೆವು.



ಗೇಟ್‌ಲೂಪ್ ರೆಕ್ಟೆಂಗುಲರ್
18 ಕ್ಯಾರಟ್ ಗಟ್ಟಿ ಬಂಗಾರ ರೂ. 304.

ವೆಸ್ಟ್ ಎಂಡ್ ವಾಚ್ ಕಂಪೆನಿ
ಬೊಂಬಾಯಿ ಮತ್ತು ಕಲ್ಕತ್ತ

WEST END WATCH Co
Bombay · Calcutta

ಸ್ವದೇಶಾಭಿಮಾನಿ

ತಾರೀಖು 17—12—1943

ಕೈರೋ ತೆಹರಾನ್‌ಗಳಲ್ಲಿ

ಕಳೆದ ವಾರಗಳಲ್ಲಿ, ಮಿತ್ರ ಮುಖಂಡರು ಚರ್ಚಿಲ್, ರೂಸ್‌ವೆಲ್ಟ್, ಸ್ಟಾಲಿನ್, ಕೈಶೇಕರೂ ಕೂಡಾ ಎರಡು ಸಮ್ಮೇಳನ ಸೇರಿಸಿದರು. ಮೊದಲನೆಯ ಸಮ್ಮೇಳನ ಕೈರೋದಲ್ಲಿ ನಡೆಯಿತು. ಅದಕ್ಕೆ ಸ್ಟಾಲಿನರನ್ನುಳಿದು ಮಿಕ್ಕವರೆಲ್ಲರೂ ಬಂದಿದ್ದರು. ಚಿಯಾಂಗ್‌ರೊಡನೆ ಮೇಡಮ್ಮರೂ ಆಗಮಿಸಿದ್ದರು. ಎರಡನೆಯ ಸಮ್ಮೇಳನ ತೆಹರಾನ್‌ನಲ್ಲಿ ನಡೆಯಿತು: ಇದಕ್ಕೆ ಸ್ಟಾಲಿನರೂ ಸೇರಿದ್ದರು. ಆಗ ಚಿಯಾಂಗ್ ದಂಪತಿಗಳು ತಮ್ಮೂರಿಗೆ ಮರಳಿ ಹೋಗಿರಬೇಕು. ಅಂತೂ ಎರಡು ಮಹತ್ವದ ಸಮ್ಮೇಳನಗಳು ಕಳೆದ ವಾರ ನಡೆದವು. ಕೆಲವು ಮಹತ್ವದ ಘೋಷಣೆಗಳೂ ಮಾಡಲ್ಪಟ್ಟವು.

ಕೈರೋದಲ್ಲಿ ಮುಂದಿನ ಹೋರಾಟದ ಪ್ರಗತಿವಿಷಯ ಮಾತನಾಡಿ, ಪೂರ್ವ ಯುದ್ಧವನ್ನೆಂತು ಸಾಗಿಸಬೇಕೆಂಬ ಬಗ್ಗೆ ನಿರ್ಣಯವಾದವು. ಆ ಕುರಿತು ಹೊರಬಿದ್ದ ಪ್ರಕಟಣೆಯಲ್ಲಿ, ಜಪಾನ್ ವಿರುದ್ಧ ನಡೆಸುವ ಯುದ್ಧದ ಕುರಿತು ಸೇನಾಪತಿಗಳಲ್ಲಿ ಒಮ್ಮತವಾಗಿದೆಯೆಂದೂ, ಭೂ ಜಲ ವಾಯು ಮಾರ್ಗಗಳಿಂದ ಶತ್ರುವಿನ ಮೇಲೆ ಭೀಕರ ಧಾಳಿ ಸುರುಮಾಡಲಾಗುವುದೆಂದೂ, ಇದರಲ್ಲಿ ಮಿತ್ರರಿಗೆ ಸಾಮ್ರಾಜ್ಯ ವಿಸ್ತರಣಾಕಾಂಕ್ಷೆಯಿಲ್ಲವೆಂದೂ, ಜಪಾನ್ ೧೯೧೪ರಿಂದ ಪೇಸಿಫಿಕ್‌ನಲ್ಲಿ ಪಡೆದ ದ್ವೀಪಗಳನ್ನೂ ಪುನಃ ಪಡೆವುದೂ, ಮಂಚೂರಿಯಾ, ಫರ್ಮೋಸಾ ಮೊದಲಾದ ಚೀನದ ಪ್ರಾಂತಗಳನ್ನು ಚೀನಕ್ಕೆ ತಿರುಗಿ ಕೊಡಿಸುವುದೂ, ಹಿಂಸೆ, ಬಲಾತ್ಕಾರಗಳಿಂದ ಜಪಾನ್ ಆಕ್ರಮಿಸಿದ ಎಲ್ಲಾ ಪ್ರದೇಶಗಳಿಂದ ಅದನ್ನು ಹೊರಗಟ್ಟುವುದೂ ಕೊರಿಯಕ್ಕೆ ಸ್ವಾತಂತ್ರ್ಯ ಕೊಡಿಸುವುದೂ, ಜಪಾನ್ ಶರತ್ತಿಲ್ಲದೆ ಶರಣು ಬರುವವರೆಗೆ ಹೋರಾಡುವುದೂ ಮಿತ್ರರಾಷ್ಟ್ರಗಳ ನಿರ್ಧಾರವೆಂದು ಹೇಳಲಾಗಿದೆ.

ತೆಹರಾನ್ ಸಮ್ಮೇಳನದಲ್ಲಿ ಸ್ಟಾಲಿನ್ ಚರ್ಚಿಲ್ ರೂಸ್‌ವೆಲ್ಟ್ ತ್ರಿಮೂರ್ತಿಗಳು ಮಾತನಾಡಿ ಒಂದು ಸಂಯುಕ್ತ ಹೇಳಿಕೆಯಿತ್ತಿದ್ದು ಅದರಲ್ಲಿ ಪ್ರಸ್ತುತದ ಯುದ್ಧದ ವಿಜಯ ಸಾಧನೆ ಮಾತ್ರವಲ್ಲದೆ ಮುಂದಿ ಜಗತ್ತಿನ ಶಾಂತಿ ವ್ಯವಸ್ಥೆಯ ವಿಚಾರವೂ ಹೇಳಲಾಗಿದೆ. ಮೂವರೂ ಮುಂದಿನ ಯುದ್ಧ ಮತ್ತು ಶಾಂತಿ ವ್ಯವಸ್ಥೆಗಳಲ್ಲಿ ಒಮ್ಮತದಿಂದಿರಬೇಕೆಂದೂ, ಯುದ್ಧ ಧೋರಣದ ವಿಷಯ ಸೈನಿಕ ಮುಂದಾಳುಗಳಲ್ಲಿ ವಿಚಾರವಿನಿಮಯವಾಗಿ, ಜರ್ಮನ ಸೇನೆಯ ಸರ್ವನಾಶಕ್ಕಾಗಿ ತಯಾರಿಸಿದ ಯೋಜನೆ ಒಪ್ಪಲಾಯಿತೆಂದೂ, ಪೂರ್ವ ಪಶ್ಚಿಮ ಮತ್ತು ದಕ್ಷಿಣ ದಿಕ್ಕುಗಳಿಂದ ಶತ್ರುಗಳ ಮೇಲೆ ಹೂಡಲಿರುವ ಧಾಳಿಯ ಕುರಿತು ಮತ್ತೈಕ್ಯವಿದೆಯೆಂದೂ, ಪ್ರಪಂಚದ ಜನರಿಗೆಲ್ಲಾ ಒಪ್ಪಿಗೆಯಾಗುವಂತೆ ಸಂಯುಕ್ತ ರಾಷ್ಟ್ರಗಳು ಶಾಂತಿಸ್ಥಾಪನೆ ಮಾಡಿ, ತಲೆತಲಾಂತರದವರೆಗೆ ಯುದ್ಧ ಭಯವನ್ನು ದೂರಮಾಡುವ ಬಗ್ಗೆ ದಬ್ಬಾಳಿಕೆ, ಅಸಹನೆ, ದಾಸ್ಯಗಳನ್ನು ಸಹಿಸದ ಜನರೆಲ್ಲರ ಸಹಕಾರ ಬಯಸುವೆವೆಂದೂ, ನಾವು ಅವರನ್ನೆಲ್ಲಾ ಪ್ರಜಾಪ್ರಭುತ್ವ ರಾಷ್ಟ್ರಗಳ ಸರಪಣಿಯಲ್ಲಿ ಸೇರಿಸಲು ಆಹ್ವಾನಿಸುವೆವೆಂದೂ, ನಮ್ಮಾ ಸ್ನೇಹಸಂಬಂಧದ ಫಲವಾಗಿ ಪ್ರಪಂಚದ ಜನರು ಇನ್ನು ಮುಂದೆ ದಬ್ಬಾಳಿಕೆಯ ಹೆದರಿಕೆಯಿಲ್ಲದೆ ಸುಖ ಸಮಾಧಾನದಿಂದ ಇರಬಹುದೆಂದೂ ಆ ಪ್ರಕಟಣೆಯಲ್ಲಿ ಸಾರಲಾಗಿದೆ.

ಮಿತ್ರ ಮುಖಂಡರು ಹೀಗೇ ಬಹಳ ಉದಾತ್ತ ತತ್ವಗಳನ್ನು ಸಾರಿದ್ದಾರೆ. ಈ ತತ್ವಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಎಷ್ಟರಮಟ್ಟಿಗೆ ಅವರು ಯಶಸ್ವಿಗಳಾಗುವರೋ ಅದರಲ್ಲಿ ಮಾತ್ರ ಜಗತ್ತು ಈ ತತ್ವಗಳ ನಿಜವಾದ ಬೆಲೆಯನ್ನು ಕಟ್ಟುವುದು.

ಚರ್ಚಿಲರ ಪರೀಕ್ಷೆಯಾಗಲಿ!

ಚರ್ಚಿಲ್, ರೂಸ್‌ವೆಲ್ಟ್ ಸ್ಟಾಲಿನರು ಯುದ್ಧದ ವಿಚಾರ, ಯುದ್ಧಾನಂತರದ ಶಾಂತಿ ವ್ಯವಸ್ಥೆಯ ವಿಚಾರ, ಜಗತ್ತಿನ ಎಲ್ಲಾ ಜನರಿಗೂ ಅನ್ಯಾಯ ಬಲಾತ್ಕಾರಗಳು ಹೋಗಿ ಸ್ವಾತಂತ್ರ್ಯ ಸಿಗಬೇಕೆಂಬ ವಿಚಾರ ಉದ್ದಾಮ ಘೋಷಣೆ ಮಾಡಿದರಷ್ಟೆ? ಚರ್ಚಿಲರು ಈ ಘೋಷಣೆಯನ್ನು ಹೃತ್ಪೂರ್ವಕ ಸಾರುವುದಿದ್ದರೆ, ಭಾರತದ ವಿಷಯ ಅವರ ಹೃದಯಪರೀಕ್ಷೆಯಾಗಲಿ ಎಂದು ಪೆನರ್ ಬ್ರಾಕ್‌ವೇಯವರು ಒಂದು ಹೇಳಿಕೆಯಿತ್ತಿದ್ದಾರೆ.

"ಜಗತ್ತಿನಲ್ಲಿ ಅನ್ಯಾಯ ಬಲಾತ್ಕಾರಗಳು ಮಾಯವಾಗಬೇಕು. ಸ್ವಾತಂತ್ರ್ಯ ಶಾಂತಿ ಸ್ಥಾಪಿತವಾಗಬೇಕೆಂದು ಚರ್ಚಿಲರು ಹೃತ್ಪೂರ್ವಕ ಇಚ್ಛಿಸುವುದಾದರೆ ಮೊದಲು ಅವರು ಭಾರತ ಹಾಗೂ ಅವರ ಇತರ ವಸಾಹತ್ತುಗಳಲ್ಲಿ ಆ ಕಾರ್ಯ ಕೈಕೊಳ್ಳಬೇಕು. ಕಾಂಗ್ರೆಸ್ ಮುಖಂಡರನ್ನು ಬಿಡುಗಡೆಮಾಡಬೇಕು. ಕಾಂಗ್ರೆಸಿನ ಮೇಲಿರುವ ನಿರ್ಬಂಧ ತೆಗೆಯಬೇಕು; ಭಾರತೀಯರ ಸ್ವಾತಂತ್ರ್ಯವನ್ನು ಮನ್ನಿಸಬೇಕು. ಭಾರತೀಯರಿಗೆ ಜವಾಬ್ದಾರವಾಗಿರುವ ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸಬೇಕು" ಹೀಗೆಂದು ಬ್ರಾಕ್‌ವೇಯವರು ಸೂಚಿಸಿದ್ದಾರೆ.

ದೊಡ್ಡ ದೊಡ್ಡ ಸಮ್ಮೇಳಗಳನ್ನು ಸೇರಿಸಿ ಉದ್ದುದ್ದ ಮಾತನಾಡಿದ ಮಾತ್ರದಿಂದ ಏನೂ ಪ್ರಯೋಜನವಿಲ್ಲ. ಅಂಥಾ ಮಾತುಗಳಿಂಥ ಯಾರೂ ವಂಚಿತರಾಗುವಂತೆಯೂ ಇಲ್ಲ. ಚರ್ಚಿಲರಿಗೆ ಈ ಕಾರ್ಯಗಳನ್ನು ಸ್ವತಃ ಮಾಡಲುಸಾಧ್ಯವಿರುವಾಗ ಅದದನ್ನು ಕೈಕೊಂಡು, ತಾವು ಹೇಳಿದ ಮಾತುಗಳಿಗೆ, ತಾವು ಸಾರಿದ ಘೋಷಣೆಗಳಿಗೆ ಬೆಲೆಯುಂಟು ಎಂಬುದನ್ನು ರುಜುಪಡಿಸಬಾರದೆ? ಚರ್ಚಿಲರ, ಹೃದಯ ಪರೀಕ್ಷೆ ಭಾರತದಲ್ಲಿ ಆಗಲಿ!

ಸ್ವದೇಶ ಸಮಾಚಾರ

ಸ್ವಾತಂತ್ರ್ಯಕ್ಕೆ ಅರ್ಹವಾದ ಮದ್ರಾಸ್ ಪ್ರಾಂತದ ೨ ಹಳ್ಳಿಗಳು

ಅನಂತಪುರ ಜಿಲ್ಲೆಯಲ್ಲಿ ತಾರವಾಲ ಮತ್ತು ಇಲ್ಲೂರು ಎಂಬ ಎರಡು ಹಳ್ಳಿಗಳಿವೆ. ಮೊದಲನೆಯದರ ಜನಸಂಖ್ಯೆ ೬೧೦೦೦, ಎರಡನೆಯದರ ಸಂಖ್ಯೆ ೧೪೦೦. ೧೯೩೦ರಲ್ಲಿ ಈ ಹಳ್ಳಿಗಳ ಜನತೆ ಜಾಗೃತರಾದರು. ತಾವಾಗಿಯೇ ಪಾನ ನಿಷೇಧ ಕೈಕೊಂಡರು, ಯಾರೂ ಹೇಳದೆ, ಸರಕಾರ ಸಾರದೆ, ತಾವಾಗಿಯೇ ಕಳ್ಳು ಕುಡಿವುದು ಬಿಟ್ಟರು. ಈ ಹಳ್ಳಿಗಳ ಮನಸ್ಸು ತಿರುಗಿಸಲು ಸರಕಾರ ಬೇಕಾದ ಮಾಟ ಮಾಡಿತು. ಆದರೆ ಅವುದೂ ಅಲ್ಲಿ ಅಸಾಧ್ಯವಾಯಿತು, ಯಾರೂ ಕಳ್ಳಿನಂಗಡಿಗಳನ್ನು ಏಲಮಿನಲ್ಲಿ ಪಡೆವದಿಲ್ಲ. ಇತರ ಹಳ್ಳಿಗಳು ಸಂಕಟಪಡುತ್ತಿರುವಾಗ ಈ ಎರಡು ಹಳ್ಳಿಗಳು ಆನಂದದಿಂದಿವೆ. ಈ ಗ್ರಾಮಗಳ ಜನರ ಯತ್ನ ಸಫಲವಾದುದನ್ನು ಕಂಡು ಸುತ್ತಲಿನ ೩೦ ಗ್ರಾಮಗಳ ಜನರೂ ತಾವೇ ಉದಾರರಾಗಿ ಪಾನ ನಿಷೇಧಕ್ಕೆ ಮುಂದಾದರು. ಪಾನ ನಿಷೇಧ ಸಮಿತಿ ಕಾರ್ಯ ಆರಂಭಿಸಿತು. ಸರಕಾರ ಅನುಮತಿ ಈಯಲಿಲ್ಲ, ಆದರೂ ಜನರು ಹಿಮ್ಮೆಟ್ಟಲಿಲ್ಲ. ಅವರು ತಮ್ಮ ಸಾಹಸ ಸಾಧಿಸಿಬಿಟ್ಟರು.

ಅಮೆರಿ ಮನೆಗೆ ಹೋಗಲಿ

ಬ್ರಿಟಿಷ್ ಕೂಲಿಗಾರ ಹೇಳಿಕೆ.

ಬ್ರಿಟಿಷ್ ಸರಕಾರಕ್ಕೆ ಭಾರತದ ಬರಗಾಲವನ್ನು ನಿವಾರಿಸುವುದು ಸಾಧ್ಯವಾಗದ್ದರಿಂದ ಅದು ರಾಜಕೀಯ ಬಿಳುಗಾಳಿಯಾಗಿ ಪರಿಣಮಿಸುತ್ತಿರುವುದೆಂದು ರೆನಾಲ್ಡ್ ಪತ್ರಿಕೆಯ ಸುದ್ದಿಗಾರನು ಬರೆಯುತ್ತಾನೆ. ಪ್ರಪಂಚದಲ್ಲಿಯೇ ಅತಿ ದೊಡ್ಡ ಕೂಲಿಗಾರ ಸಂಘವಾದ ಸಾರಿಗೆ ಮತ್ತು ಸಾಮಾನ್ಯ ಕೆಲಸಗಾರರ ಸಂಘದ ಕಾರ್ಯಕಾರೀ ಮಂಡಳಿಯು ಈ ವಿಚಾರ ದೀರ್ಘ ವಿಮರ್ಶಿಸಿ, ಭಾರತದ ವಿಷಯ ಬ್ರಿಟಿಷ್ ಧೋರಣದ ಬದಲಾವಣೆಯ ಪ್ರಥಮ ಹೆಜ್ಜೆಯೆಂದು ಅಮೆರಿಯವರನ್ನು ರಾಜಿನಾಮೆ ಕೊಡಿಸಬೇಕೆಂದು ಅವರು ಒಮ್ಮತದ ನಿರ್ಣಯ ಮಾಡಿ ಚರ್ಚಿಲರಿಗೆ ಕಳುಹಿಸಿದ್ದಾರೆ. ಇಷ್ಟು ದೊಡ್ಡ ಸಂಸ್ಥೆಯ ಈ ಒಮ್ಮತದ ನಿರ್ಣಯದ ವಿಚಾರ ಚರ್ಚಿಲರು ಪರ್ಯಾಲೋಚಿಸದಿರುವುದು ಸಾಧ್ಯವಿಲ್ಲವೆಂದು ಹೇಳಲಾಗಿದೆ.

ಅಮೆರಿ ಸಭೆಯಲ್ಲಿ ಗೊಂದಲ.

ಬಂಗಾಳದ ಪರಿಸ್ಥಿತಿ ವಿಚಾರ ಅಮೆರಿಯವರು ಬರ್ಮಿಂಗ್ ಹ್ಯಾಮಿನಲ್ಲಿ ಬಂದು ಭಾಷಣ ಮಾಡುತ್ತಿದ್ದಾಗ, ಶ್ರೋತೃಗಳತ್ತ ಕೂಗಾಟವೆದ್ದು ಗೊಂದಲವುಂಟಾಯಿತು. ಸಭೆಯಲ್ಲಿ ಓರ್ವನು ಎದ್ದು ನಿಂತು ಒಂದು ನಿರ್ಣಯ ಮಂಡಿಸಲು ಪ್ರಯತ್ನಿಸಿದನು. ಅವನನ್ನು ಹೊರದಬ್ಬಲಾಯಿತು. ಇನ್ನೊಬ್ಬನು ವೇದಿಕೆಗೇರಿ ಮಾತನಾಡಲು ಪ್ರಯತ್ನಿಸಿದನು. ಗುಲ್ಲು ಗಲಾಟೆ ಹೆಚ್ಚಾಯಿತು, ಜನರು ರಾಷ್ಟ್ರಗೀತೆ, ಕೂಲಿಗಾರ ಗೀತಗಳನ್ನು ಹಾಡಿ ಸಭೆ ಗೊಂದಲದಲ್ಲಿಯೇ ಮುಕ್ತಾಯವಾಯಿತು.

ಅಟ್ಲಾಂಟಿಕ್ ಶಾಸನ ಭಾರತಕ್ಕೂ ಅನ್ವಯಿಸುವುದು?

ಹಿಂದುಸ್ಥಾನವನ್ನು ಅಟ್ಲಾಂಟಿಕ್ ಶಾಸನದಿಂದ ಹೊರತು ಮಾಡಲಾಗುವುದೇ ಎಂದು ಅಮೆರಿಯವರೊಡನೆ ಕೇಳಿದ್ದಕ್ಕೆ, ಅದು ಹಿಂದುಸ್ಥಾನಕ್ಕೂ ಅನ್ವಯಿಸುತ್ತದೆಯೆಂದು ಅಮೆರಿ ಹೇಳಿದ್ದರಾಗಿ ಲಂಡನ್ ಟೈಮ್ಸ್‌ನ ಹಿಂದಿನ ಸಂಪಾದಕ ಹಾವ್ ಸ್ಟೀಡರು ಹೇಳಿದ್ದಾರೆ.

ಜಪಾನ್ ಬಾಂಬರು ಧಾಳಿ ಅಸಾಮಿನಲ್ಲಿ!

ಜಪಾನು ಬಾಂಬರುಗಳು ಯುದ್ಧ ವಿಮಾನಗಳ ಬೆಂಗಾವಲಿನಲ್ಲಿ ಬಂದು ತಾ. ೧೩ರಂದು ಉತ್ತರ ಅಸಾಮಿನ ಅಮೆರಿಕನ್ ವಿಮಾನಗೃಹದ ಮೇಲೆ ಧಾಳಿ ಮಾಡಿದವೆಂದು ಪ್ರಕಟಿಸಲಾಗಿದೆ. ಹಾನಿ ಮತ್ತು ಸಾವು ನೋವು ಬಹಳ [illegible]

ಸಾವರ್ಕಾರರ ಅನಾರೋಗ್ಯ

ಬ್ಯಾ. ಸಾವರ್ಕಾರರು ಶುಷ್ಕ ರೋಗದಿಂದ ಅಸ್ವಸ್ಥರಾಗಿರುವರು. ಜ್ವರ ೧೦೨ ಡಿಗ್ರಿಗಿಂತ ಇಳಿದಿಲ್ಲವೆಂದೂ ಹಾಗಾಗಿ ಅವರು ಕರಾಚಿ ಹಿಂದು ಮಹಾಸಭಾಧಿವೇಶನದ ಅಧ್ಯಕ್ಷಸ್ಥಾನ ವಹಿಸಲು ಹೋಗುವುದಿಲ್ಲವೆಂದೂ ಸುದ್ದಿ.

೧೨ ಕೋಟಿ ಚಿಲ್ಲರೆ ನಾಣ್ಯಗಳು

ಲಾಹೋರಿನ ಹೊಸ ಟಂಕಸಾಲೆಯಲ್ಲಿ ಕಳೆದ ಅಕ್ಟೋಬರಿನಿಂದ ಚಿಲ್ಲರೆ ನಾಣ್ಯಗಳನ್ನು ತಯಾರಿಸಲಾಗುತ್ತಿದೆ. ಮೂರೂ ಟಂಕಸಾಲೆಗಳಲ್ಲಿ ಪ್ರತಿ ತಿಂಗಳು ಒಟ್ಟು ೧೨ ಕೋಟಿ ಚಿಲ್ಲರೆ ನಾಣ್ಯಗಳು ರಚಿಸಲ್ಪಡುತ್ತವೆ. ಇದರಿಂದ ಬೇಗನೇ ಚಿಲ್ಲರೆ ನಾಣ್ಯಗಳ ಕೊರತೆ ಪರಿಹಾರವಾಗುವುದು ಎಂದು ಸರಕಾರೀ ಪ್ರಕಟಣೆಯೊಂದು ಸಾರುತ್ತದೆ.

ಕಲ್ಕತ್ತದ ಮೇಲೆ ಆಕ್ರಮಣ ನಿಶ್ಚಯ

ಪ್ರಧಾನ ಮಂತ್ರಿ ಹೇಳಿಕೆ

ಬಂಗಾಳದ ಪ್ರಧಾನ ಮಂತ್ರಿ ಸರ್ ನಾಜಿಮುದ್ದೀನರು ಮಾತನಾಡುತ್ತಾ, ಶತ್ರುಗಳು ಇನ್ನು ಕಲ್ಕತ್ತದ ಮೇಲೆ ಧಾಳಿಯಿಡುವುದು ನಿಶ್ಚಯ. ಹತ್ತು ದಿನಗಳ ಹಿಂದೆ ಬಲಿಷ್ಠ ಪಡೆಯೊಂದು ಬಂದು ಧಾಳಿಯಿಟ್ಟಿತು. ಆದರಿಂದಾದ ಹಾನಿಯನ್ನು ನೋಡಿ ಮುಂದಾದರೂ ನಾವು ನೋವುಂಟಾಗದೆಂದು ತಿಳಿವುದು ಮೂರ್ಖತನ ಎಂದರು.

ಪಿಕೆಟಿಂಗ್ ಮಾಡಬಾರದು

ಮದ್ರಾಸ್ ಸರಕಾರದಾಜ್ಞೆ

ಮದ್ಯಪಾನ ನಿರ್ಬಂಧವನ್ನು ತೆಗೆದುಹಾಕಿದ ವಿರುದ್ಧ ಪಿಕೆಟಿಂಗ್ ಮಾಡುವುದು ಕ್ರಮಬದ್ಧವಲ್ಲವೆಂದು ಮದ್ರಾಸು ಸರಕಾರವು ಪ್ರಕಟಿಸಿದೆ.

ಕಸ್ತೂರ್‌ಬಾರ ಬಿಡುಗಡೆ ಮಾಡುವರೆ?

ಲಾರ್ಡ್ಸ್ ಸಭೆಯಲ್ಲಿ ಪ್ರಶ್ನೆ

ಕಸ್ತೂರ್‌ಬಾರನ್ನು ಸರಕಾರ ಬಿಡುಗಡೆ ಮಾಡುವುದೇ ಎಂದು ಲಾರ್ಡ್ಸ್ ಸಭೆಯಲ್ಲಿ ಪ್ರಶ್ನಿಸಿದ್ದಕ್ಕೆ, ನವಂಬರದಲ್ಲಿ ಅವರಿಗೆ ಎರಡು ಸಲ ಹೃದಯವಿಕಾರವಾಯಿತು. ಆ ಮೇಲೆ ಒಮ್ಮೆ ಸೌಮ್ಯತರದಿಂದಾಯಿತು. ಅವರು ಅಶಕ್ತರಿದ್ದರೂ ಮೊದಲಿಗಿಂತ ಉತ್ತಮ ಸ್ಥಿತಿಯಲ್ಲಿರುವರು. ಸ್ವಲ್ಪ ಸಮಯದ ಹಿಂದೆ ಅವರನ್ನು ಬಿಡುಗಡೆ ಮಾಡುವ ವಿಚಾರ ಆಲೋಚಿಸಲಾಯಿತು. ಆದರೆ ಅವರ ಹತ್ತಿರ ಭಾರತದ ಅತ್ಯಂತ ಶ್ರೇಷ್ಠ ಹೃದಯ ತಜ್ಞರೊಬ್ಬರಿರುವುದರಿಂದ ಕಸ್ತೂರ್‌ಬಾ ಗಾಂಧಿಯವರು ಈಗ ಇದ್ದಲ್ಲೇ ಇರುವುದು ಶ್ರೇಷ್ಠವೆಂದು ಸರಕಾರ ತಿಳಿದಿದೆ ಎಂದು ಉತ್ತರ ಬಂತು.

'ಅಮೆರಿಯವರೇ! ರಾಜಿಕೊಡಿರಿ'

ಅವರ ಎದುರಲ್ಲೇ ನಿರ್ಣಯ.

ಲಂಡನಿನ ಬರಮಿಂಗ್ಯಾಮ್ ಸಭೆಯಲ್ಲಿ ಅಮೆರಿಯವರು ಭಾಷಣ ಕೊಡುತ್ತಿದ್ದಾಗ ಗೊಂದಲವಾಯಿತಷ್ಟೆ? ಅವರ ಎದುರಲ್ಲಿಯೇ, ಅಮೆರಿಯವರು ರಾಜಿನಾಮೆ ಕೊಡಬೇಕೆಂಬ ನಿರ್ಣಯವೂ ಮಂಜೂರಾಯಿತು. ಅಮೆರಿಯವರು ಭಾಷಣಮಾಡುತ್ತಿದ್ದಾಗ ಸಭಿಕರು ಛೀ, ಥೂ ಮಾಡುತ್ತಿದ್ದರೆಂದು ತಿಳಿದು ಬಂದಿದೆ. ಇಷ್ಟಾಗಿ ಇದು ಅಮೆರಿಯವರ ಮತದಾರ ಕ್ಷೇತ್ರವಾಗಿತ್ತು. ಅಮೆರಿಯವರು ಭಾಷಣಮಾಡಿದ ನಂತರ ಪ್ರಶ್ನೆಗಳಿಗೆ ಉತ್ತರ ಕೊಡಲಾಗುವುದೆಂದು ಮೊದಲು ಹೇಳಲಾಗಿತ್ತು. ಆದರೆ ಭಾಷಣ ಕೊಟ್ಟವರೇ ಅಮೆರಿಯವರು ಕುಳಿತು ಕೊಳ್ಳಲು, ಸಭಿಕರಲ್ಲಿ ಒಬ್ಬನು ಅಮೆರಿಯವರು ಕೂಡಲೇ ರಾಜಿನಾಮೆ ಕೊಡಬೇಕೆಂಬ ನಿರ್ಣಯ ಮಂಡಿಸಿದನು. ಅವನನ್ನು ಒತ್ತಾಯದಿಂದ ಹೊರದೂಡಿದರು. ಪೋಲೀಸರು ಅವನನ್ನು ಬಿಟ್ಟುಬಿಟ್ಟರು. ತಿರುಗಿ ಅವನು ಒಳಬಂದು ಆವೇಶಪೂರ್ಣ ಭಾಷಣಮಾಡಿ ಪುನಃ ಆ ನಿರ್ಣಯ ಮಂಡಿಸಿದನು. ಅದು ಪ್ರಚಂಡ ಬಹುಮತ ಹಾಗೂ ಹರ್ಷೋದ್ರೇಕದಿಂದ ಮಂಜೂರಾಯಿತು. ಅನಂತರ ಸಭೆಯಲ್ಲಿ ಗೊಂದಲವಾಗಿ ಪೋಲೀಸರೊಡನೆ ಕೈಕೈಯಾಗಿ ಗೊಂದಲದಲ್ಲಿ ಸಭೆ ಕೊನೆಗೊಂಡಿತು.

ಜಿಲ್ಲಾ ಸಮಾಚಾರಗಳು

ಧರ್ಮಸ್ಥಳ

ಲಕ್ಷದೀಪೋತ್ಸವ ಸಮಯದಲ್ಲಿ ಆಗುವ ವಿವಿಧ ಧರ್ಮ ಸಮ್ಮೇಳನವು ಈ ವರ್ಷ ನವಂಬರ ತಾ. 26, 27ರಂದು ಶ್ರೀ ಹೊಸಬೆಟ್ಟು ಶಾಮರಾಯರ ಅಧ್ಯಕ್ಷತೆಯಲ್ಲಿ ಜರುಗಿತು ಉಡುಪಿ ಫಲಿಮಾರು ಮಠದ ಶ್ರೀಗಳವರು ಉದ್ಘಾಟನಾ ಸಮಾರಂಭ ನೆರವೇರಿಸಿದರು. ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರು ಸ್ವಾಗತ ಭಾಷಣವಿತ್ತರು. ಮೊದಲನೆ ದಿನ 'ಸಂಸಾರಿ ಮತ್ತು ಮುಕ್ತಾತ್ಮ' ಎಂಬ ವಿಷಯವಾಗಿಯೂ, ಎರಡನೇ ದಿನ 'ಗೃಹಸ್ಥ ಧರ್ಮ'ದ ವಿಷಯವಾಗಿಯೂ ಅನೇಕ ವಿದ್ವಾಂಸರ ಭಾಷಣಗಳಾದುವು

ಮಂಗಳೂರು

ರೇಶನಿಂಗ್ ಆಫೀಸರ್

ದಕ್ಷಿಣ ಕನ್ನಡ ಜಿಲ್ಲಾ ರೇಶನಿಂಗ್ ಆಫೀಸರರಾಗಿ ಈ ಜಿಲ್ಲೆಯವರೇ ಆದ ಶ್ರೀ| ಕೆ. ಕೃಷ್ಣಯ್ಯರು ನೇಮಕ ಹೊಂದಿರುವರು.

ಅಕ್ಕಿಗೆ ಭತ್ತಕ್ಕೆ ಮಂಗಳೂರಲ್ಲಿ, ಖಂಡಿತ ಕ್ರಯ ನಿಶ್ಚಯ

ಆ ಬೆಲೆಗಿಂತ ಹೆಚ್ಚಿಗೆ ಮಾರಿದರೆ ದಂಡನೆ

ದಕ್ಷಿಣ ಕನ್ನಡದ ಜಿಲ್ಲಾ ಕಮರ್ಶಿಯಲ್ ಟ್ಯಾಕ್ಸ್ ಆಫೀಸರರು ಕಳೆದ ತಾ. ೧೧ರಲ್ಲಿ ಒಂದು ಅಪ್ಪಣೆಯನ್ನು ಹೊರಡಿಸಿದ್ದಾರೆ ಆ ಹುಕುಮಿನ ಮೇರೆಗೆ ಮಂಗಳೂರು ಮುನಿಸಿಪಾಲಿಟಿಯೊಳಗಿನ ಯಾವತ್ತು ಅಕ್ಕಿ ಬತ್ತಗಳ ವ್ಯಾಪಾರಿಗಳೂ—ಆಹಾರ ಧಾನ್ಯಗಳ ಕಂಟ್ರೋಲ್ ಆರ್ಡರಿನ ಫಾರ್ಮ "ಎ"ಯ ೯ನೇ ಶರ್ತಕ್ಕೆ ಅನುಗುಣವಾಗಿ,—ಇದೇ ತಾ. ೧೭ರಿಂದ ಅಕ್ಕಿಯನ್ನು ಈ ಕೆಳಗೆ ಕಾಣಿಸಿದ ದರಗಳಿಗೆ ಮಾರದೆ ಮಾರಬೇಕೆಂದು ವಿಧಿಸಿದ್ದಾರಲ್ಲದೆ, ಈ ಹುಕ್ಮು ಉಲ್ಲಂಘಿಸಿ ನಡೆಯುವವರನ್ನು ಅದೇ ಆಹಾರ ಧಾನ್ಯಗಳ ಕಂಟ್ರೋಲ್ ಆರ್ಡರಿನ ವಿಧಿನಿಯಮಗಳಿಗೆ ಅನುಸರಿಸಿ ವ್ಯವಹರಣೆಗೆ ಗುರಿಪಡಿಸಲಾಗುವದೆಂದು ಕೂಡ ತಿಳಿಸಿದ್ದಾರೆ

ಅಕ್ಕಿಗೆ ಖಂಡಿತ ಬೆಲೆ ಈ ರೀತಿ ನಿರ್ಧರಿಸಲಾಗಿದೆ—ಸುಗ್ಗಿ ರಾಶಿ ಮತ್ತು ಅದೇ ಜಾತಿಯವುಗಳಿಗೆ (ಕಯಮೆ ಮುಂತಾದುವಕ್ಕೆ) ಮುಡಿಗೆ ರೂ ೧೨—೮—೦, ಗುಡ್ಡ ಮುಡಿಗೆ ರೂ ೧೧, ಮಸ್ಕತಿ ರೂ ೧೧—೮—೦, ಬೆಳ್ತಿಗೆ ಮುಡಿಗೆ ರೂ ೧೨—೮ ೦, ಜೀಬಿ, ಸಣ್ಣಕ್ಕಿ, ಗಂಧಸಾಲೆ ಜಾತಿಯವುಗಳಿಗೆ ರೂ ೧೩—೮—೦ ಚಿಲ್ಲರೆ ಮಾರಾಟದ ಕ್ರಯ ಅನುಕ್ರಮವಾಗಿ, ಸೇರಿಗೆ ೦—೪—೦, ೦ ೪—೩, ೦—೪—೫, ೦—೪—೯, ೦—೫—೨, ಇವೆಲ್ಲ ಜಾತಿಯ ಅಕ್ಕಿಗೆ ಅನುಕ್ರಮವಾಗಿ ಮುಡಿಗೆ ರೂ ೪—೧೩—೦, ರೂ. ೫—೧—೩, ರೂ ೫—೬—೬, ರೂ ೫—೧೨—೦, ರೂ. ೬—೪—೦

ಅಕ್ಕಿ ಬಂದಿದೆ

ಬೆಜವಾಡದಿಂದ ಮಂಗಳೂರಿಗೆ ೧,೦೦೦ ಟನ್ ಅಕ್ಕಿ ಬಂದಿದೆಯೆಂದು ತಿಳಿದುಬರುತ್ತದೆ

ಪೇಟೆಯಲ್ಲಿ ಅಕ್ಕಿಯಿಲ್ಲ?

ಮೊನ್ನೆ ಶನಿವಾರ ಮಂಗಳೂರಲ್ಲಿ ಅಕ್ಕಿ ಬತ್ತಗಳಿಗೆ ಖಂಡಿತ ಕ್ರಯ ನಿಶ್ಚಯಿಸಲಾಯಿತು ಅನಂತರ ವ್ಯಾಪಾರಸ್ಥರಲ್ಲಿ ಅಕ್ಕಿಯಿಲ್ಲವೆಂದಾಗಿ ಸರಿಯಾದ ಹಂಚುವ ಏರ್ಪಾಡಿಲ್ಲದೆ ಜನರು ಅಕ್ಕಿ ಸಿಗದೆ ತೊಂದರೆಗೊಳಗಾಗಿದ್ದಾರೆ ಸಹಕಾರೀ ಸಂಘದಲ್ಲಿ ಮತ್ತು ಕೆಲವು ಕಡೆ ಜನರಿಗೆ ಸ್ವಲ್ಪ ಸ್ವಲ್ಪ ಅಕ್ಕಿ ಸಿಗುತ್ತದೆ ಅಕ್ಕಿಯಿಲ್ಲದೆ ಜನರು ಗಾಬರಿಗೊಂಡಿದ್ದಾರೆ.

ಲೈಸನ್ಸ್ ರದ್ದು

೪೫ ವ್ಯಾಪಾರಿಗಳಿಗೆ ಚಿಮಿಣಿ ಎಣ್ಣೆ ವ್ಯಾಪಾರಕ್ಕೆಂದು ಕೊಟ್ಟಿದ್ದ ರಖಂ ಲೈಸೆನ್ಸು ಹಿಂತೆಗೆದುಕೊಳ್ಳಲಾಗಿದೆಯೆಂದೂ, ಚಿಲ್ಲರೆ ವ್ಯಾಪಾರದ ಲೈಸನ್ಸಿದೆಯೆಂದೂ ತಿಳಿಯುತ್ತದೆ

ಜುಗಾರಾಟಕ್ಕಾಗಿ ಕೈದು

ಈಚೆಗೆ ಮಣ್ಣಗುಡ್ಡೆಯಲ್ಲಿ ಶ್ರೀ ಕದ್ರಿ ದಶಾವತಾರ ಮೇಳದವರು ಆಟವಾಡುತ್ತಿದ್ದ ಕಾಲದಲ್ಲಿ ಅಲ್ಲೇ ಸಮೀಪದಲ್ಲಿ ಜುಗಾರಾಡುತ್ತಿದ್ದರೆಂಬ ಆರೋಪದ ಮೇಲೆ ಟೌನ್ ಪೋಲೀಸರು ೩೩ ಮಂದಿಯನ್ನು ಕೈದು ಮಾಡಿ, ಜಾಮೀನಿನ ಮೇಲೆ ಬಿಟ್ಟಿರುವಂತೆ ತಿಳಿದುಬಂದಿದೆ

ಕಲೆಕ್ಟರರ ಪ್ರಕಟಣೆ

ಅಕ್ಕಿ ಭತ್ತಗಳ ಕುರಿತು

ತಾ ೧೭ನೇ ದಶಂಬರ ೧೯೪೩ರಿಂದ ಈ ಜಿಲ್ಲೆಯ ಒಂದು ತಾಲೂಕಿನಿಂದ ಇನ್ನೊಂದು ತಾಲೂಕಿಗೆ ಪರ್ಮಿಟು ಇಲ್ಲದೆ ಅಥವಾ ರಿವೆನ್ಯೂ ಡಿಪಾರ್ಟ್‌ಮೆಂಟಿನ ಡಿಪ್ಯುಟಿ ತಹಶಿಲ್ದಾರರಿಗಿಂತ ಹಾಗೂ ಕಮರ್ಶಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟಿನ ಅಸಿಸ್ಟಾಂಟ್ ಕಮರ್ಶಿಯಲ್ ಟ್ಯಾಕ್ಸ್ ಆಫೀಸರರಿಗಿಂತ ಕಡಿಮೆ ಯೋಗ್ಯತೆಯವರಾಗದ ಆಫೀಸರರ ಅನುಮತಿ ಇಲ್ಲದೆ ಅಕ್ಕಿ ಭತ್ತ ಸಾಗಿಸಿದರೆ ಅದನ್ನು ಸರಕಾರ ಸ್ವಾಧೀನ ಮಾಡಿಕೊಳ್ಳುವುದು

ಪರ್ಮಿಟು ಪಡೆಯದೆ ಜಿಲ್ಲೆಯ ಒಂದು ಸ್ಟೇಶನಿನಿಂದ ಇನ್ನೊಂದು ಸ್ಟೇಶನಿಗೆ ರೈಲಿನಿಂದ ಇಲ್ಲವೇ ಇನ್ನಾವುದೇ ರೀತಿಯಿಂದ ಅಕ್ಕಿ ಭತ್ತ ಸಾಗಿಸ ಕೂಡದು.

ನೇಮಕ

ಮಾಜಿ ಜಿಲ್ಲಾ ಮುನ್ಸಿಫ್‌ರಾದ ಶ್ರೀ. ಪಿ. ವ್ಯಾಸ್‌ರಾವ್ ಅವರ ಪುತ್ರರಾದ ಶ್ರೀ ಪಿ ವೆಂಕಟರಾವ್ ಎಂ ಎ ಎಸ್ ಸಿ ಇವರು ಹಿಂದೂಸ್ತಾನ ಎಯರ್ ಕ್ರಾಫ್ಟ್ ಲಿಮಿಟೆಡ್ (ಕಲ್ಕತ್ತ)ದ ಚೀಫ್ ಪರ್ಚೆಸ್ ಆಫೀಸರರಾಗಿ ತಿಂಗಳಿಗೆ ರೂ ೯೦೦ರ ಸಂಬಳದ ಮೇಲೆ ನೇಮಿಸಲ್ಪಟ್ಟಿದ್ದಾರೆಂದು ತಿಳಿದು ಬಂದಿದೆ

ವಿದ್ಯಾರ್ಥಿ ಪರಿಷತ್ತು

ಮಂಗಳೂರು ಸ್ಟೂಡೆಂಟ್ಸ್ ಯೂನಿಯನಿನವರು ೧೯೪೪ರ ಜನವರಿ ಮೂರನೆಯ ವಾರದಲ್ಲಿ ತಮ್ಮ ಪಂಚಮ ವಾರ್ಷಿಕ ಪರಿಷತ್ತು ಜರಗಿಸಲಿರುವರಾಗಿ ತಿಳಿಯುತ್ತದೆ

ಮಂಜೇಶ್ವರದಲ್ಲಿ ದೊಂಬಿ

ತಾ ೪ನೇ ಶನಿವಾರ ರಾತ್ರಿ ಕೆಲವರು ಮಂಜೇಶ್ವರ ಶ್ರೀ ಮದನಂತೇಶ್ವರ ದೇವಸ್ಥಾನದ ವಠಾರದಲ್ಲಿ ದೊಂಬಿ ನಡೆಸಿ, ದೇವಸ್ಥಾನದ ಮೇನೇಜರರ ಪ್ರಾಣಾಪಹರಣ ಮಾಡಲು ಯತ್ನಿಸಿದರೆಂದೂ, ಈ ಸಂಬಂಧ ವಾಮನಾಯ್ಕ, ರಾಮಯ್ಯ ನಾಯ್ಕ, ನಾರಾಯಣ ರಾವ್ ಮೊದಲಾದವರ ಕೈದಾಗಿದೆಯೆಂದೂ ಬಾತ್ಮಿ

ದಿ ಬ ಮಹಾಬಲ ಹೆಗ್ಡೆಯವರ ಭಾವಚಿತ್ರ

ಅನಾವರಣೋತ್ಸವವು ತಾ ೧೧ರಲ್ಲು ಮಂಗಳೂರು ಬಾರ್ ಎಸೋಸಿಯೇಶನ್ ಮಂದಿರದಲ್ಲಿ ಜಿಲ್ಲಾ ಜಡ್ಜ್ ಶ್ರೀ ಸೋಮನರಿಂದ ಶ್ರೀ ಕೆ ಸದಾಶಿವ ಅಡ್ಯಂತಾಯರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು ಶ್ರೀ ಎಸ್ ಶಂಕರ ಆಳ್ವರು ಮತ್ತು ದಿ. ಬ ಹೆಗ್ಡೆಯವರ ಇತರ ಸಂಬಂಧಿಕರೂ ಉಚಿತವಾಗಿ ಈ ಭಾವಚಿತ್ರವನ್ನು ಕೊಟ್ಟಿದ್ದರು ರಾ ಸಾ ರಂಗನಾಥ ಪೂಂಜ, ಎಂ ಕೆ. ನಂಬಿಯಾರ್, ಎ. ಶ್ರೀನಿವಾಸ ಪೈ, ಪಿ. ವಾಸುದೇವ ರಾವ್ ಇವರು ದಿವಂಗತರ ಗುಣಕಥನಮಾಡಿ ಭಾಷಣವಿತ್ತರು. ಶ್ರೀ ಜಿ. ಸೋಮಶೇಖರರಾಯರು ಕೃತಜ್ಞತೆ ಸಮರ್ಪಿಸಿದರು.

ಡಿಸ್ಟ್ರಿಕ್ಟ್ ಬೋರ್ಡಿನ ಸಭೆ

ತಾ. ೧೬ರಂದು ಪ್ರಾತಃ ೧೧ಗಂಟೆಗೆ ಡಿ. ಬೋ ಆಫೀಸಿನಲ್ಲಿ ಅಧ್ಯಕ್ಷರಾದ ಶ್ರೀ. ಆ. ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಿಂದ ಡಿ. ಬೋ ಸಭೆ ಜರಗಿತು. ಸಭಾ ಪ್ರಾರಂಭದಲ್ಲಿ ಶ್ರೀ ಸಿ ಎಲ್ ಲೋಬೋರವರು, ಶ್ರೀ ರಾಮ ಮೂರ್ತಿಗಳು ಬಂದು ಜನರು ಕೇಳಿದ ಕೇಳಿಕೆಗಳನ್ನೆಲ್ಲಾ ಮನ್ನಿಸಿದರೂ, ಜಿಲ್ಲಾಧಿಕಾರಿಗಳು ಯಾವುದೇ ಹಂಚುವ ಏರ್ಪಾಡು ಮಾಡದೆ ಕೂಡಲೇ ಅಕ್ಕಿಬತ್ತಗಳ ಖಂಡಿತ ಕ್ರಯ ನಿಶ್ಚಯಿಸಿದ್ದರಿಂದ, ಮಂಗಳೂರಲ್ಲಿ ವ್ಯಾಪಾರಸ್ಥರು ಅಕ್ಕಿಯಿಲ್ಲವೆಂದು ಹೇಳುವುದರಿಂದ ಬಡವರು ಉಪವಾಸ ಬೀಳ ತೊಡಗಿದ್ದಾರೆಂದು ಈ ವಿಷಯವನ್ನು ಕೂಡಲೇ ಸರಕಾರಕ್ಕೆ ತಿಳಿಸಿ ಪರಿಹಾರ ಕಾರ್ಯವನ್ನು ಕೈಕೊಳ್ಳುವಂತೆ ಸರಕಾರ ಮತ್ತು ಜಿಲ್ಲಾಧಿಕಾರಿಗಳನ್ನು ಕೇಳಿಕೊಳ್ಳಬೇಕೆಂದೂ ವಿನಂತಿಸಿದರು. ಈ ವಿಷಯದ ಠರಾವೊಂದು ಸಭಾಂತ್ಯದಲ್ಲಿ ಕೆಲ ಡಿ. ಬೋ ಸದಸ್ಯರಿಂದ ಮಂಜೂರಾಯಿತು

ಆ ಮೇಲೆ ಪ್ರೆಸಿಡೆಂಟರು ೧೯೪೪—೪೫ರ ಬಜೆಟ್ ಎಸ್ಟಿಮೇಟ್ ಮತ್ತು ೧೯೪೩—೪೪ರ ರಿವೈಸ್ಡ್ ಎಸ್ಟಿಮೇಟಿನ ವಿಷಯ ಪ್ರಾರಂಭಿಕ ಮಾತನಾಡಿದರು ದೇಶದ ರಾಜಕೀಯ ಆರ್ಥಿಕ ಸಂಕಷ್ಟ ಯುದ್ಧ ಪರಿಸ್ಥಿತಿಯಿಂದುಂಟಾದ ತೊಂದರೆಗಳನ್ನು ಪ್ರಸ್ತಾಪಿಸಿದರು

ಡಾ. ಪಿ ಜಿ ಆಚಾರ್ಯರು ಬಜೆಟಿನ ಕುರಿತು ಮಾತನಾಡುತ್ತಾ, ತೆರಿಗೆ ಹೆಚ್ಚಿಸಿ, ಕಡವಿನ ಚಾರ್ಜು ಗಾಡಿ ಬಾಡಿಗೆಗಳನ್ನು ಹೆಚ್ಚಿಸಿ, ಹೈಸ್ಕೂಲ್ ಮಿಡ್ಲ್ ಸ್ಕೂಲುಗಳ ೪ನೇ ತರಗತಿಗಳನ್ನು ರದ್ದುಮಾಡಿ ನಾವು ಬಜೆಟನ್ನು ಸರಿಪಡಿಸಕೂಡದೆಂದೂ ಈಗಾಗಲೇ ತೆರಿಗೆ ಸುಂಕಗಳಿಂದ ಹೊರೆ ಹೊತ್ತ ಜನರಿಗೆ ಇನ್ನೂ ಹೊರೆ ಹೊರಿಸಬಾರದೆಂದೂ, ಸರಕಾರಕ್ಕೆ ನಾವು ಕಡಿಮೆ ಬಿದ್ದ ಬಜೆಟನ್ನೇ ಕಳುಹಿಸಬಹುದೆಂದೂ, ಬೇಕಾದರೆ ಅವರೇ ದಾರಿ ಸೂಚಿಸಲೆಂದು ಹೇಳಿ, ನಮ್ಮಲ್ಲಿ ಹಣವಿಲ್ಲದಿರುವಾಗ ತುಟ್ಟಿ ಭತ್ತೆ ಕೊಡುವುದೇಕೆಂದೂ ಹೇಳಿದರು, ಖಾ ಬ ಚಮ್ನಾಡರು ಸೆಕೆಂಡರಿ ಸ್ಕೂಲುಗಳ ೪ನೇ ತರಗತಿಯನ್ನು ತೆಗೆಯಬಾರದೆನ್ನುವ ವಿನಾ ಮಿಕ್ಕೆಲ್ಲ ಡಾ| ಆಚಾರ್ಯರ ಮಾತಿಗೆ ತನ್ನೊಪ್ಪಿಗೆಯೆಂದರು ಶ್ರೀ ವೈ ಮಂಜಯ್ಯ ಶೆಟ್ಟರು ಬೈಂದೂರು ಮಿಡ್ಲ್‌ಸ್ಕೂಲಿನ ೪ನೇ ಕ್ಲಾಸು ತೆಗೆಯ ಬಾರದೆನ್ನುದಕ್ಕೆ ಪ್ರೆಸಿಡೆಂಟರೂ ಒಪ್ಪಿದರು ಶ್ರೀ ಕೃಷ್ಣ ಶೆಟ್ಟರು, ಬಜೆಟನ್ನು ಬೋರ್ಡಿನ ಮೆಂಬರರಿಗೆ ತಿಳಿಸದೆ, ಬಜೆಟ್ ಕಮಿಟಿಯವರಿಗೂ ಬೇಕಾದಷ್ಟು ಸಮಯ ಕೊಡದೆ ತಯಾರಿಸಲಾಗಿದ್ದೆಯೆಂದೂ, ಡಿ ಬೋ. ಸಭಾ ಭವನದಲ್ಲಿ ಪಂಚಾಯತು ಮತ್ತು ಹೆಲ್ತ್ ಆಫೀಸುಗಳನ್ನು ತಂದು ಖರ್ಚು ಕಡಿಮೆ ಮಾಡಬಹುದೆಂದೂ ಹೇಳಿದರು. ಶ್ರೀ ವೆಂಕಪ್ಪ ಶೆಟ್ಟರು ಮಾತನಾಡಿ ಹೆಚ್ಚಿನ ತೆರಿಗೆ ಹಾಕಬಾರದೆಂದೂ, ತುಟ್ಟಿ ಭತ್ತೆ ಕೊಡಬೇಕೆಂದೂ, ನಾವು ಕಡಿಮೆ ಬೀಳುವ ಬಜೇಟನ್ನು ಸರಕಾರಕ್ಕೆ ಕಳುಹಿಸಿ ಅವರೇ ಬೇಕಾದಂತೆ ಮಾಡಲು ಬಿಟ್ಟು ಬಿಡುವ ಎಂದರು. ಖಾ. ಬ. ಚಮ್ನಾಡರು ನಾವೇ ಬಜೆಟ್ ಸರಿಮಾಡಬೇಕೆಂದರು ಶ್ರೀ ವೆಂಕಪ್ಪ ಶೆಟ್ಟರು 'ಸರಕಾರ ಮದ್ಯಪಾನ ನಿಷೇಧ ಕಾನೂನು ತೆಗೆದು ಹಾಕಿದೆ, ತೆರಿಗೆ ಹೆಚ್ಚಿಸಿದೆ, ಕಮರ್ಶಿಯಲ್ ಟ್ಯಾಕ್ಸ್ ಅಧಿಕಮಾಡಿದೆ ಹೀಗಾಗಿ ಸರಕಾರವೇ ಹಣಕೊಡಬಹುದೆಂದರು. ಶ್ರೀ ಜತ್ತಪ್ಪ ರೈಗಳು ಉಡುಪಿ ಮುನ್ಸಿಪಾಲಿಟಿಯಲ್ಲಿರುವ ಹೈಸ್ಕೂಲನ್ನು ತೆಗೆದು ಹಾಕಿ ಹಣ ಉಳಿಸಬಹುದೆಂದರು ಬಹಳ ದೀರ್ಘಕಾಲ ಚರ್ಚೆಯಾದ ಮೇಲೆ, ಬೋರ್ಡು ಅಧಿಕ ತೆರಿಗೆ ಹಾಕಬಾರದೆಂದೂ, ಸೆಕೆಂಡರಿ ಶಾಲೆಗಳ ೪ನೇ ತರಗತಿ ತೆಗೆಯಬಾರದೆಂದೂ ಆಗಿ ತುಟ್ಟಿ ಭತ್ತೆ ಕೊಡುವ ವಿಷಯ ಸರಕಾರ ಬೋರ್ಡಿಗೆ ಗ್ರಾಂಟು ಕೊಡಬೇಕೆಂದೂ ಬಜೆಟ್ ಪಾಸಾಯಿತು ಬಂಗ್ಲೆಗಳನ್ನು ಮತ್ತು ಶೆಡ್ಡುಗಳನ್ನು ಪ್ರೆಸಿಡೆಂಟ್ ವೈಸ್ ಪ್ರೆಸಿಡೆಂಟ್ ಹೊರತಾಗಿ ಯಾವುದೇ ಆಫೀಸರರಿಗೆ ಉಚಿತಕೊಡಬಾರದೆಂಬ ಶ್ರೀ ನಾಗಣ್ಣ ಹೆಗ್ಡೆಯವರ ಠರಾವೂ, ಮದ್ರಾಸ್ ಸರಕಾರವು ಮದ್ಯಪಾನ ನಿಷೇಧ ಕಾನೂನನ್ನು ಹಿಂತೆಗೆದ ವಿಚಾರ ನಿಷೇಧ ತೋರಿಸಿ, ಪುನಃ ಆ ಕಾನೂನನ್ನು ಆ ಜಿಲ್ಲೆಗಳಲ್ಲಿ ಜಾರಿಮಾಡಬೇಕೆಂಬ ಶ್ರೀ ಜತ್ತಪ್ಪ ರೈಗಳ ಠರಾವೂ ಮಂಜೂರಾಯಿತು

ಕುಂಬಳೆ

ಬ್ರಾಂಚ್ ಪೋಸ್ಟ್ ಮಾಸ್ಟರರಿಗೆ ಮೂರು ವರ್ಷಗಳ ಕಠಿನ ಸಜೆ

ಮೊಗ್ರಾಲ್ ಪುತ್ತೂರಿನ ಬ್ರಾಂಚ್ ಪೋಸ್ಟ್ ಮಾಸ್ಟರ್ ಪಿ ಎಸ್. ಅಬ್ದುಲ್ ರಹಿಮಾನ್ ಅವರು ಮೂರು ಮನಿಯಾರ್ಡರುಗಳ ಪಾವತಿ ರಶೀದಿಗಳಲ್ಲಿ ಹಣ ಪಡೆದವರ ಹೆಬ್ಬೆರಳು ಎಂಬಂತೆ ತಮ್ಮ ಹೆಬ್ಬೆರಳ ಗುರುತನ್ನೇ ಹಾಕಿ ಹಾಗೆ ಫೋರ್ಜರಿ ನಡೆಸಿರುವರೆಂಬ ಆರೋಪದ ಒಂದು ಮೊಕದ್ದಮೆ ನಮ್ಮ ಪ್ರಿನ್ಸಿಪಾಲ್ ಸಬ್ ಜಡ್ಜರ ಮುಂದೆ ವಿಚಾರಣೆಗೆ ಬಂತು ಆ ಮೂರು ಮನಿಯಾರ್ಡರುಗಳ ಐವೇಜು ಅನುಕ್ರಮವಾಗಿ ರೂ ೯—೧೪—೦ ರೂ ೧೨ ಮತ್ತು ರೂ ೧೦೦ (ತಂತಿ ಮೂಲಕ) ಸಬ್ ಜಡ್ಜರು ಈ ಮೊಕದ್ದಮೆಯ ತೀರ್ಪನು ಮೊನ್ನೆ ಕೊಡುತ್ತಾ ಪ್ರತಿಯೊಂದು ಫೋರ್ಜರಿಯ ಬಾಬಿಗೂ ೩—೩ ವರ್ಷ ಕಠಿನ ಸಜೆ ಎಂದೂ ಆ ಸಜೆಯನ್ನು ಏಕಕಾಲದಲ್ಲಿ ಅನುಭವಿಸಬೇಕೆಂದೂ ವಿಧಿಸಿರುವರು. ಹಾಗೆ ಆರೋಪಿ ಒಟ್ಟಿಗೆ ೩ ವರ್ಷಗಳ ಕಾಲ ಕಠಿಣ ಸಜೆ ಅನುಭವಿಸಬೇಕಾಗಿದೆ

ತರುಣ ತರುಣಿಯರೇ,] **ಕಾಮಶಾಸ್ತ್ರದ ಗ್ರಂಥಗಳು** [ಓದಿ ಸುಖಪಡೆಯಿರಿ!

ಗರ್ಭನಿರೋಧ ೧—೪—೦
ಸಂತತಿ ನಿಯಮನಕ್ಕೆ ಉತ್ತಮ ಉಪಾಯಗಳು, ಆಸನಗಳುಳ್ಳಂಥ ಡಾ| ಗೋಪಾಲ ಕೃಷ್ಣರಾಯರ ಸಚಿತ್ರ ಪುಸ್ತಕ

ದಾಂಪತ್ಯ ದರ್ಶನ ೧—೮—೦
ಸಂಭೋಗ ಸುಖ, ಗಂಡಹೆಂಡಿರ ಆತ್ಮೈಕ್ಯ, ರತಿ ಸೌಖ್ಯ ಸುವ್ಯವಸ್ಥೆಗಳ ಬಗ್ಗೆ ದಿ| ಪಂಡಿತ ತಾರಾನಾಥರಾಯರ ಗ್ರಂಥ.

ಅನಂಗರಂಗ ೧—೮—೦
ಸ್ತ್ರೀಪುರುಷರ ಲಕ್ಷಣ, ಸಂಭೋಗ ಕಲೆ, ರತಿಸಮಯದ ಹಾವಭಾವಗಳು, ದ್ರವಣಾದಿ ಔಷಧಗಳು

ಪ್ರೇಮಕಲಾ ೧—೮—೦
ಅಶ್ಲೀಲವಲ್ಲ! ಶಾಸ್ತ್ರೀಯ ಗ್ರಂಥವೆಂದು ಕೋರ್ಟಿನ ನಿರ್ಣಯವೇ ಆಗಿದೆ. ಸಚಿತ್ರ ಕಾಮಶಾಸ್ತ್ರ

ಭ್ರಾಂತಿ ಮತ್ತು ಲೈಂಗಿಕ ಶಿಕ್ಷಣ ೧—೮—೦
ಪ್ರಸಿದ್ಧ ಡಾಕ್ಟರುಗಳ ಮೂರು ಶಾಸ್ತ್ರೀಯ ಪುಸ್ತಕಗಳ ಕಟ್ಟು ಗುಪ್ತ ರೋಗಗಳಿಗೆ ಚಿಕಿತ್ಸೆ ಸಹಿತ ಇವೆ

ಕಾಮಕುಂಜ ೧—೮—೦
ಕಾಮ, ಶೃಂಗಾರ, ಪ್ರೇಮದ ಸಾರ, ಪ್ರಥಮರಾತ್ರಿ, ಸಂಭೋಗಾಸನಗಳು, ಚಂದ್ರ ಮತ್ತು ಮದನ, ಚುಂಬನ

ವಿಕೃತ ಕಾಮ ೧—೮—೦
ಬಾಲ್ಯದ ಕಾಮವಿಕಾರಗಳು, ಸ್ವಾನುರತಿ, ಹಿಂಸಾರತಿ, ಪ್ರದರ್ಶನರತಿ, ಸಲಿಂಗರತಿ ಇತ್ಯಾದಿ ಗುಟ್ಟಿನ ಮಾತುಗಳಿವೆ

ರತಿರಹಸ್ಯ ೧—೮—೦
ತಾರುಣ್ಯದ ಮದ, ಸ್ತನಗಳ ಸೌಂದರ್ಯ, ಸಮಾಗಮ ಶಯನ ಇತ್ಯಾದಿ ರತಿಶಾಸ್ತ್ರದ ಪೂರ್ಣ ರಹಸ್ಯ

ಪೌರುಷ ೧—೮—೦
ನಪುಂಸಕರೆಂದು ಮರುಗಬೇಡಿ ಪುನಃ ಪೌರುಷ ಪ್ರಾಪ್ತಮಾಡಿಕೊಳ್ಳಲು ನೂರಾರು ಉಪಾಯಗಳಿವೆ.

ಅವಿವಾಹಿತರ ಸಮಸ್ಯೆ ೧—೦—೦
ಸ್ವೈರಾಚಾರ ವಿವೇಚನೆ, ವಿವಾಹಿತ ಮಾತೆ, ಹುಸಗೆಟ್ಟ ಆಟ ಪ್ರೀತಿ ವಿವಾಹ ಇತ್ಯಾದಿ ಸಮಗ್ರ ವಿವೇಚನೆ.

ವಿ. ಪಿ. ವೆಚ್ಚ ಬೇರೆ. ನಮ್ಮ ಕ್ಯಾಟಲಾಗಿಗೆ ಒಂದಾಣೆ ಅಂಚೇಚೀಟು ಕಳಿಸಿರಿ.

ಸಮಾಜ ಪುಸ್ತಕಾಲಯ ಧಾರವಾಡ.

ಗ್ರಾಮ ಸೇವಾ ಸಂಘ ಏತಕ್ಕೆ?

ಲೇಖಕ: ಶ್ರೀ ಪಿ. ವಿ. ಕಡಂಬಳಿತ್ತಾಯ,

ಭಾರತದ ಹಾಗಿರುವ ಕೃಷಿ ಪ್ರಧಾನವಾದ ಒಂದು ರಾಷ್ಟ್ರದ ಅಭಿವೃದ್ಧಿಯೂ ಕೀರ್ತಿಯೂ, ಅದರಲ್ಲಿರುವ ಗ್ರಾಮ ಸಂಘಟನೆಯನ್ನು, ಅದಕ್ಕೆ ಸಂಬಂಧಿಸಿದ ಇತರ ಕೆಲಸಗಳನ್ನೂ ಅವಲಂಬಿಸಿಕೊಂಡಿರುತ್ತದೆ. ನಮ್ಮ ಮುಂದಾಳುಗಳ ಈ ಅಭಿಪ್ರಾಯಕ್ಕೆ ನಾವು ತಕ್ಕಷ್ಟು ಮನ್ನಣೆ ಕೊಡದಾದೆವು. ಅದರ ಫಲವು ಈಗ ನಮಗೆ ಅನುಭವವಾಯಿತು. ಅನೈಕ್ಯದಿಂದಿರುವ ಗ್ರಾಮ ವ್ಯವಸ್ಥೆಯೂ, ಆಕ್ಷೇಪಾರ್ಹವಾದ ಪರಾಶ್ರಯ ಬುದ್ಧಿಯೂ, ಗ್ರಾಮಗಳನ್ನೂ, ಗ್ರಾಮದ ಜನರನ್ನೂ ಇಷ್ಟು ಅಧಃ ಪತನಕ್ಕೆ ಗುರಿಮಾಡಿತು. ಕೆಲಕಾಲದಿಂದ ಗ್ರಾಮಗಳಲ್ಲಿ ನಡೆದು ಬಂದಿರುವ ವರ್ಣ ವಿದ್ವೇಷವೂ, ಅಸಮತ್ವವಾದವೂ ಗ್ರಾಮನಿವಾಸಿಕರನ್ನು ರಾಜಕೀಯ ಹಾಗೂ ಸಾಂಪತ್ತಿಕವಾಗಿ ಬೆಳೆಯಗೊಡಲಿಲ್ಲ. ಇಂದಿನ ಭಯಂಕರ ಪರಿಸ್ಥಿತಿಯಲ್ಲಿ ರಕ್ಷಣೆ ಹೊಂದಲು ಅವರನ್ನು ಅಶಕ್ತರನ್ನಾಗಿ ಮಾಡಿತು. ಜೀವನೋಪಾಯಕ್ಕೆ ಅವಶ್ಯಕವಾದ ಸಾಧನ ಸಾಮಗ್ರಿಗಳು ಒಂದೆಡೆಯಲ್ಲಿ ಧಾರಾಳವಾಗಿರುವಾಗ, ನ್ಯೂನತೆಯನ್ನು ಪರಿಹರಿಸಲು ಬೇಕಾದ ಸೌಕರ್ಯಗಳು ಇನ್ನೊಂದೆಡೆಯಲ್ಲಿ ತುಂಬ ತುಳುಕುತ್ತಿರುವಾಗ ಹಣವನ್ನು ಪೆಟ್ಟಿಗೆಯಲ್ಲಿಟ್ಟು ಉಪವಾಸ ಬೀಳಬೇಕಾದ ಸಂದರ್ಭ ಬರುತ್ತದೆ. ಈ ಉಪವಾಸ ಪರಿಹಾರಕ್ಕೆ ದಾರಿಗಾಣದೆ ಊರನ್ನು ಮನೆಯನ್ನೂ ಬಿಡಬೇಕಾಗುತ್ತದಲ್ಲದೆ ಜೀವವನ್ನು ಕೂಡಾ ತೊರೆಯಬೇಕಾದ ಸಂಭವವು ಬರುತ್ತದೆ. ಇದಕ್ಕಿರುವ ಕಾರಣವೇನು? ಗ್ರಾಮಸ್ಥರಲ್ಲಿರುವ ಭಿನ್ನಭೇದ, ಅದರಿಂದುಂಟಾಗುವ ಸಹಾನುಭೂತಿಯ ಅಭಾವ ಇವೇ ಮುಖ್ಯ ಕಾರಣವಲ್ಲದೆ ಬೇರೆಯಲ್ಲ.

ಈ ಕೊರತೆಯನ್ನು ನಿವಾರಿಸಿ ಇಂದಿನ ವಿಷಮ ಸ್ಥಿತಿಗೆ ಪರಿಹಾರವನ್ನು ಕಂಡು ಹಿಡಿಯುವುದರೊಂದಿಗೆ ಗ್ರಾಮಗಳ ಮತ್ತು ಗ್ರಾಮಸ್ಥರ ಸಾಧಾರಣ ಸ್ಥಿತಿಯನ್ನು ಅಭಿವೃದ್ಧಿಗೊಳಿಸಲು ಪ್ರಯತ್ನಿಸುವುದೇ ಗ್ರಾಮಸೇವಾ ಸಂಘದ ಉದ್ದೇಶವಾಗಿದೆ. ಇದಕ್ಕಿರುವ ಒಂದೇ ಒಂದು ದಾರಿ ಎಂದರೆ ಜೀವನೋಪಾಯಕ್ಕೆ ಅವಶ್ಯಕವಾದ ಸಾಧನ ಸಾಮಗ್ರಿಗಳನ್ನು ಪ್ರತಿಯೊಂದು ಗ್ರಾಮದಲ್ಲಿಯೂ, ಬೆಳೆಯಿಸಿ, ಪರಾಶ್ರಯವನ್ನು ತಪ್ಪಿಸುವದಾಗಿದೆ. ಇದು ಒಂದು ವರ್ಗದ ತಾತ್ಕಾಲಿಕ ಕೆಲಸದಿಂದ ಮಾತ್ರ ಸಾಧ್ಯವಲ್ಲ. ಗ್ರಾಮಸೇವಾ ಸಂಘವು ಗ್ರಾಮಸ್ಥರ ಅಭಿವೃದ್ಧಿಯನ್ನು ಮುಂದಿಟ್ಟು ವರ್ಗಭೇದವಿಲ್ಲದೆ ಕಾರ್ಯವನ್ನು ನಿರ್ವಹಿಸುವುದು.

ಗ್ರಾಮಸೇವಾ ಸಂಘದ ಕಾರ್ಯಕ್ರಮಗಳು

೧. ಸಾರ್ವಜನಿಕ ಸಭೆಗಳನ್ನು ಜರಗಿಸಿ ಸಂಘೋದ್ದೇಶಗಳನ್ನು ಜನರಿಗೆ ತಿಳಿಸಿ ಕಮಿಟಿಗಳನ್ನು ಸ್ಥಾಪಿಸಿ ಹೆಚ್ಚಿನ ಮೆಂಬರರನ್ನು ಸೇರಿಸುವುದು.

೨. ವಾಚನಾಲಯವನ್ನು ತೆರೆದು ಜನರಲ್ಲಿ ದೇಶೀಯತ್ವವನ್ನು ಬೆಳೆಸಿ ಅವರ ಸಕಲ ವಿಧ ತಿಳುವಳಿಕೆಯನ್ನು ಅಭಿವೃದ್ಧಿಗೊಳಿಸುವುದು.

೩. ಜನರ ಮುಂದಿರುವ [illegible] ಬಗ್ಗೆ ಪರಿಹಾರ [illegible] ಕ್ರಮ ನಡೆಸುವುದು.

A. ಸಾಧಾರಣವಾಗಿ ಭತ್ತ ಮಾರಾಟ ಮಾಡುವವರು ಹಾಗೂ ಬೇಸಾಯಗಾರರು ಅತ್ಯಧಿಕ ಲಾಭವನ್ನು ಇಚ್ಛಿಸಿ ಭತ್ತವನ್ನು ಮಾರದೆ ಇರುವವರಾದರೆ ಅವರಿಂದ ಅದನ್ನು ಮಾರಾಟ ಮಾಡಿಸುವುದಕ್ಕೂ, ಚಿಲ್ಲರೆಯಾಗಿ ಕೊಂಡುಕೊಳ್ಳಲು ಸಾಧ್ಯವಾಗದಿರುವಲ್ಲಿ ಅದನ್ನು ಸಾಧ್ಯ ಮಾಡಿಸುವುದಕ್ಕೂ ಪ್ರಯತ್ನಿಸುವುದು.

B. ಅತ್ಯಧಿಕ ಲಾಭವನ್ನು ಇಚ್ಛಿಸಿ ವ್ಯಾಪಾರ ಮಾಡುವವರ ಬಳಿಗೆ ಸಿಲುಕಿ ಸಾಮಾನು ದೊರೆಯದೆ ಕಷ್ಟಪಡುತ್ತಿರುವ ಬಡವರನ್ನು ಅವರಿಂದ ಬಿಡಿಸಲು ಸಂಧಿ ನಡೆಸುವುದು.

C. ಜೀವನೋಪಾಯಕ್ಕೆ ಅತ್ಯಗತ್ಯವಾದ ಸಾಧನಗಳ ವ್ಯಾಪಾರವನ್ನು ಸ್ವಾರ್ಥ ಲಾಭಕ್ಕಾಗಿ ದುರುಪಯೋಗ ಪಡಿಸುವ ವ್ಯಕ್ತಿಗಳಿಂದಲೂ, ವ, ಸಂಸ್ಥೆಗಳಿಂದಲೂ ತಪ್ಪಿಸಿ ಆ ಅಧಿಕಾರವನ್ನು ಸಾರ್ವಜನಿಕ ಸಂಸ್ಥೆಗಳಿಗೆ ಕೊಡಲು ಅಧಿಕಾರಿಗಳನ್ನು ನಿರ್ಬಂಧಿಸುವುದು.

೪. ದೇಶದ ಹೊರಗೂ ಒಳಗೂ ಇರುವ ಆಪತ್ತುಗಳನ್ನು ಜನರಿಗೆ ತಿಳಿಸಿ ಸ್ವರಕ್ಷಣೆಗಾಗಿರುವ [illegible] ನಿರ್ಮಿಸುವುದು.

೫. ಅನುಕೂಲವಿರುವಲ್ಲೆಲ್ಲಾ ಬೆಳೆಗಳನ್ನು ಹೆಚ್ಚಿಸಲು ಪ್ರಯತ್ನಿಸುವುದು. ಕೃಷಿಕರಿಗೆ ಬೇಕಾದ ಜಮೀನನ್ನು ಕೊಡಿಸಿಯೂ, ಅಗತ್ಯವಿರುವಲ್ಲಿ ಖರ್ಚಿಗೆ ಸಹಾಯ ಮಾಡಿಯೂ ಅವರನ್ನು ಪ್ರೋತ್ಸಾಹಿಸುವುದು.

೬. ನೂಲುವುದು. ನೇಯುವುದು. ಕಾಗದ ತಯಾರಿ, ಸಾಬೂನು ತಯಾರಿ, ಹುರಿಹಗ್ಗ ತಯಾರಿ, ಜೇನುನೊಣ ಸಾಕುವಿಕೆ ಇವೇ ಮೊದಲಾದ ಗ್ರಾಮ ಕೈಗಾರಿಕೆಗಳಿಗೆ ಉತ್ತೇಜನವನ್ನು ಕೊಡುವುದರೊಂದಿಗೆ ಹತ್ತಿ ಬೆಳೆ, ಎಂಜೆ ಬೀಜ ಸಂಗ್ರಹ ಇತ್ಯಾದಿ ವಿಷಯಗಳಲ್ಲಿಯೂ ಗಮನವಿರುವಂತೆ ಜನರನ್ನು ಎಚ್ಚರಿಸುವುದು.

೭. ಉತ್ಪತ್ತಿಯನ್ನು ಮಿತವಾಗಿ ವ್ಯಯ ಮಾಡುವಂತೆ ಜನರಿಗೆ ಬೋಧನೆ ಕೊಡುವುದು.

೮. ವಾದ ವಿವಾದಗಳ ತೀರ್ಮಾನವನ್ನು ಮಾಡಲು ಸಂಘದ ಆಶ್ರಯದಲ್ಲಿ ಮಧ್ಯಸ್ತಿಕೆ ಮಾತಿಗೆ ಏರ್ಪಾಡು ಮಾಡುವುದು.

೯. ವಾತಾವರಣಕ್ಕನುಸಾರವಾಗಿ ಅಗತ್ಯವೆಂದು ಕಾಣುವ ಬೇರೆ ಸಂಗತಿಗಳಲ್ಲಿಯೂ ಶ್ರದ್ಧೆ ಇಡುವುದು.

[illegible] ಪತ್ರಿಕೋದ್ಯೋಗಿ ಸಮ್ಮೇಳನ, ಮಂಗಳೂರು.

ಈ ಸಮ್ಮೇಳನವನ್ನು ಯಶಸ್ವಿಗೊಳಿಸುವ ಬಗ್ಗೆ, ಪತ್ರಿಕೋದ್ಯೋಗಿಗಳೊಡನೆ ಸಹಾನುಭೂತಿ ತೋರಿಸಿ, ಈ ಕೆಳಗಿನ ಮಹನೀಯರು ಕೊಟ್ಟಿರುವ ಸಂಭಾವನೆಗಳನ್ನು ಸ್ವಾಗತ ಸಮಿತಿಯು ಕೃತಜ್ಞತಾ ಪೂರ್ವಕವಾಗಿ ಸ್ವೀಕರಿಸುತ್ತದೆ. ಹೀಗೆಯೇ ಇನ್ನೂ ಹಲವರು ಸಂಭಾವನೆಗಳನ್ನು ಕೊಡುವುದಾಗಿ ಮಾತು ಕೊಟ್ಟಿರುವರು. ಮುಂದಿನ ವಾರಪತ್ರಗಳಲ್ಲಿ ಆ ವಿವರವನ್ನು ಪ್ರಕಟಿಸಲಾಗುವುದು.

ಈ ತನಕ ಸಂಗ್ರಹವಾದ ನಿಧಿ.

ಶ್ರೀ। ಕಸ್ತೂರಿ ವಾಸುದೇವ ಪೈ ರೂ. ೧೦೦.
ಮೆಸರ್ಸ್ ಕೊಟ್ಟಕಾರ್ ಬ್ರದರ್ಸ್ ರೂ. ೧೦೦.
ಶ್ರೀ। ಮಿಜಾರ್ ಗೋವಿಂದ ಪೈ ರೂ. ೧೦೦.
ಕೆನರಾ ಬೇಂಕ್, ಲಿಮಿಟೆಡ್. ರೂ. ೧೦೦.
ಶ್ರೀ। ಸುಜೀರ್ ಪುಂಡಲೀಕ್ ನಾಯಕ್ ೧೦೦.
ಸಿ. ಪಿ. ಸಿ. ಕಂಪೆನಿ, ಲಿಮಿಟೆಡ್. ರೂ. ೧೦೦.
ಶ್ರೀಮತಿ ಇಂದಿರಾಬ್ಬಾ, ರೂ. ೧೦೦.
ನ್ಯೂಸ್ ಪೇಪರ್ ಪಬ್ಲಿಷರ್ಸ್ ಲಿಮಿಟೆಡ್ ರೂ. ೧೦೦.

ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಬೇಕೆಂದು, ನ್ಯೂ ಡಿಲ್ಲಿಯ "ಹಿಂದೂಸ್ಥಾನ್ ಟೈಮ್ಸ್" ಪತ್ರಿಕೆಯ ಸಂಪಾದಕರಾದ ಶ್ರೀ। ದೇವದಾಸ ಗಾಂಧಿ ಇವರನ್ನು, ಸ್ವಾಗತ ಸಮಿತಿಯು ವಿನಂತಿಸಿರುವುದು.

ಸಮ್ಮೇಳನದ ಸಮಯದಲ್ಲೇ, ಕರ್ನಾಟಕದಲ್ಲಿ ಪ್ರಕಟವಾದ–ಆಗುತ್ತಿರುವ, ಹಳೆಯ–ಹೊಸ, ಪತ್ರಿಕೆ–ವೃತ್ತ ಪತ್ರಿಕೆಗಳೆಲ್ಲದರ ಪ್ರದರ್ಶನವೊಂದನ್ನು ಏರ್ಪಡಿಸಲು ಸಮಿತಿಯು ನಿಶ್ಚೈಸಿದೆ. ಈಗ ಪ್ರಕಟವಾಗುತ್ತಿರುವ ಪತ್ರಿಕೆ–ವೃತ್ತ ಪತ್ರಿಕೆಗಳ ಇತ್ತೀಚೆಗಿನ ಸಂಚಿಕೆಗಳನ್ನೂ ವಿಶೇಷ ಸಂಚಿಕೆಗಳನ್ನೂ ಆ ಪ್ರದೇಶದಲ್ಲಿ ಹಿಂದೆ ಪ್ರಕಟವಾಗುತ್ತಿದ್ದ ಪತ್ರಿಕೆ–ವೃತ್ತಪತ್ರಿಕೆಗಳ ಮಾದರಿ ಸಂಚಿಕೆಗಳನ್ನೂ ಕಳುಹಿಕೊಟ್ಟು ಸಹಕರಿಸಿ, ಪ್ರದರ್ಶನವನ್ನು ಯಶಸ್ವಿಗೊಳಿಸಬೇಕೆಂದು ಕರ್ನಾಟಕದ ಪತ್ರಿಕೋದ್ಯೋಗಿಗಳೊಡನೆ ಸ್ವಾಗತ ಸಮಿತಿಯು ವಿನಂತಿ ಮಾಡುತ್ತದೆ.

ಸಮ್ಮೇಳನಕ್ಕೆ ಅವಶ್ಯವಿರುವ ಏರ್ಪಾಡುಗಳನ್ನೆಲ್ಲ ಸ್ವಾಗತ ಸಮಿತಿಯು ಮಾಡುತ್ತಲಿದ್ದು ಸಮ್ಮೇಳನಕ್ಕೆ ಬರುವ ಪ್ರತಿನಿಧಿಗಳಿಗೋಸ್ಕರ ಈ ಕೆಳಗಿನ ಕಾರ್ಯಕ್ರಮಗಳನ್ನು ಸಮಿತಿಯು ಗೊತ್ತುಮಾಡಿದ್ದು, ತಕ್ಕ ಸಿದ್ಧತೆಯನ್ನು ಮಾಡುತ್ತಿರುತ್ತದೆ.

೧. ಮಂಗಳೂರಿನ ಪ್ರಧಾನ ಚಾರಿತ್ರಿಕ ಮತ್ತು ಉದ್ಯೋಗಿಕ ಸ್ಥಳಗಳ ಸಂದರ್ಶನ.

೨. ದಶಾವತಾರ ಬಯಲಾಟ, ಗೊಂಬೆಯಾಟ, ಜಿಲ್ಲೆಯ ವೈಶಿಷ್ಟ್ಯವಾದ ಬೇರೆ ಕಲೆಗಳು ಮತ್ತಿತರ ವಿಷಯಗಳನ್ನೊಳಗೊಂಡ ವಿನೋದಾವಳಿ.

೩. ಪ್ರಮುಖ ಅತಿಥಿಗಳಿಂದ, ವಿವಿಧ ವಿಷಯಗಳ ಮೇಲೆ, ಸಾರ್ವಜನಿಕ ಭಾಷಣಗಳು.

—ಅಧ್ಯಕ್ಷ—ಸ್ವಾಗತಸಮಿತಿ.

ಸ್ವೀಕಾರ ವಿಮರ್ಶೆ

ಅನ್ನ–ಅನ್ನ–ಅನ್ನ (ಆಹಾರದ ಪ್ರಶ್ನೆ)

ಸಂಪಾದಕರು: ಶ್ರೀ. ವಿ. ಆರ್. ಕೆಷ್ಯಲೂರ್ಕಾರ್, ನಾಟ್ಯಾಚಾರ್ಯ, ಬೆಂಗಳೂರು ನಗರ. ಪ್ರಗತಿ ಸಾಹಿತ್ಯ ೧೩೧, ಸುಲ್ತಾನ್‌ಪೇಟೆ, ಬೆಂಗಳೂರು ಸಿಟಿ. ಬೆಲೆ ನಾಲ್ಕಾಣೆ.

ಭಾರತದಲ್ಲಿ ಇಂದು ಆಹಾರದ ಪ್ರಶ್ನೆಯೆದ್ದಿದೆ. ಬಂಗಾಳ, ಬಿಜಾಪುರ, ಮಲಬಾರುಗಳಲ್ಲಿ ಅದರ ಭೀಕರತೆ ಮಾಸಗಿದೆ. ಈ ವಿಚಾರಗಳನ್ನೆಲ್ಲಾ ರಾಜಕೀಯದ ಹಿನ್ನೆಲೆಯಿಂದ ಈ ಪುಸ್ತಕದಲ್ಲಿ ವಿವೇಚಿಸಲಾಗಿದೆ. ಜನಜೀವನದ ಸಮಸ್ಯೆಗಳನ್ನೆತ್ತಿ ಪುಸ್ತಕ ಪ್ರಕಟಿಸುವ ಈ ಪ್ರಗತಿ ಸಾಹಿತ್ಯದ ಸಾಹಸಕ್ಕೆ ಕನ್ನಡನಾಡು ಪ್ರೋತ್ಸಾಹ ನೀಯಲಿ.

ಕೊಡಗು (ಹುತ್ತರಿ ಸಂಚಿಕೆ)

ಸಂಪುಟ ೨೩ ಸಂಚಿಕೆ ೨೬. ಸಂಪಾದಕರು ಶ್ರೀ. ಬಿ. ಡಿ. ಗಣಪತಿ, ಕೊಡಗು ಪ್ರೆಸ್ ಮಡಿಕೇರಿ.

ಹುತ್ತರಿ ಹಬ್ಬವೆಂದರೆ ಕೊಡಗರ ರಾಷ್ಟ್ರೀಯ ಹಬ್ಬ. ಈ ಹಬ್ಬದ ನಿಮಿತ್ತ ಕೊಡಗು ಪತ್ರಿಕೆ ಕಾಗದದ ತುಟ್ಟಿಯ ಕಾಲದಲ್ಲಿಯೂ ಒಂದು ವಿಶೇಷಾಂಕ ಹೊರಡಿಸಿದ್ದು ಅಭಿನಂದನೀಯವಿದೆ. ಶ್ರೀಗಳಾದ ಗೋಕಾಕ, ತಿ. ತಾ. ಶರ್ಮ, ಅನಂತ ಪದ್ಮನಾಭರಾವ್, ಸ್ವಾಮಿ ವಿಶ್ವಂಭರಾನಂದಜೀ, ಮು[illegible]ಳಿ, ಡಾ। ಗೋಪಾಲಕೃಷ್ಣ ರಾವ್ ಮೊದಲಾದ ವಿದ್ವಾಂಸರ ಲೇಖನಗಳಿಂದ ಕೂಡಿದ್ದು [illegible] ವಿಶೇಷ ಸಂಚಿಕೆ ವಾಚನೀಯವಿದೆ.

NOTICE

The Gokuldas Farms, Ltd.
(In Voluntary Liquidation)

Notice as per Sec. 208 and 209

Notice is hereby given that Final Dissolution Meetings of the shareholders and of the Creditors of the Company will be held at the office of the Liquidator, Mangalore, on the 28th Friday January 1944, at 3 p. m., and 4 p. m., respectively, agenda being keeping the final accounts before both the meetings.

Mangalore, 16-12-'43.

M. Venkatraya Kamath
Advocate,
Liquidator.

ಇದ್ದು ಮಗುವಿನ ಚರ್ಮವನ್ನು ತಂಪಾಗಿಯೂ, ಮೃದುವಾಗಿಯೂ, ಇಡುವುದು.
ಮಕ್ಕಳಿಗೆ ಕುಟಿಕೂರ ಟಾಲ್ಕಮ್ ಪೌಡರನ್ನೇ ಉಪಯೋಗಿಸಿರಿ- ಅಷ್ಟು ಸುಖಕರ– ಅಷ್ಟು ಚರ್ಮ ಮೃದುಕರ–

ಕುಟಿಕೂರ ಟಾಲ್ಕಮ್ ಪೌಡರ್.
CUTICURA TALCUM POWDER

ನಮ್ಮ ಸುವರ್ಣೋತ್ಸವ ಸಂಚಿಕೆಗೆ

ದಯಮಾಡಿ ನಿಮ್ಮ
ಪ್ರೀತಿಯ ಸಂದೇಶವನ್ನು
ಕಳುಹಿಸಿರಿ

ಅಮೃತಾಂಜನ ಲಿಮಿಟೆಡ್,
ಮದ್ರಾಸ್, ಬೊಂಬಯಿ,
ಕಲ್ಕತ್ತ.

FIRST AND FOREMOST

FIRST AND FOREMOST among the ideals of the CANARA BANK is the ideal of Service to its Customers.

ESTD. 1906.
CANARA BANK LTD.

ರಾಷ್ಟ್ರ ಜೀವನದಲ್ಲಿದು ಮುನ್ನಡೆ

ಮೆರವಣಿಗೆ ಕುರಿತು ಬರವಣಿಗೆ

ರಾಷ್ಟ್ರಗೌರವವಾಗಿ ರಾಷ್ಟ್ರನಾಯಕರ ಗೌರವ
ಾಗಿ ಮೆರವಣಿಗೆಯು ಭಾರತೀಯ ರಾಜಕೀ
ು ಜೀವನದಲ್ಲಿ ಬಹಳ ಪ್ರಧಾನವಾದ ಪಾತ್ರ
ಹಿಸಿದೆ. ಸ್ವತಂತ್ರರಾಗುವೆವೆಂದು, ಮುಂದಡಿ
ಇಡುವ ಮೆರವಣಿಗೆಗಾರರನ್ನು ನೋಡುವುದೇ
ಂದು ಆನಂದ—ಮೆರವಣಿಗೆಯಲ್ಲಿ ಸೇರು
ದು ಮಹದಾನಂದ ಮಾತ್ರವಲ್ಲ ಸ್ಫೂರ್ತಿ
ಯು. ಮೆರವಣಿಗೆಯೆಂದರೆ ಒಂದು
ನಾಂಗ ಮುನ್ನಡೆವ ಚಿಹ್ನೆ.

ಭಾರತೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ
ಲವು ಇತಿಹಾಸ ಪ್ರಸಿದ್ಧ ಮೆರವಣಿಗೆಗಳಿವೆ.
೧೯೩೦-೩೧ರ ಶಾಸನಭಂಗ ಚಳವಳದಲ್ಲಿ ಬೊಂ
ಬಾಯಿಯಲ್ಲಿ ಹೊರಟ ಒಂದು ಮೆರವಣಿಗೆ;
ೋರ್ಟ್ ಸ್ಥಳಕ್ಕೆ ಮೆರವಣಿಗೆ ಹೋಗಬಾರ
ೆಂದು ಪೋಲೀಸ್ ಕಮಿಶನರು ನಿರ್ಬಂಧ
ಾಕಿದ್ದರು. ಬೋರಿ ಬಂದರಿನ ಸಮೀಪ
ಾಠೀ ಸಿದ್ಧರಾದ ಪೋಲೀಸರಿಂದ ಮೆರವಣಿಗೆ
ಲ್ಲಿಸಲ್ಪಟ್ಟಿತು. ಮೆರವಣಿಗೆ ಹೊರಟವರೂ,
ಹಿಂಸಾಶಸ್ತ್ರದಿಂದ ಹಾಗೂ ಅಚಲವಾದ
ೈರ್ಯದಿಂದ ಸನ್ನದ್ಧರೇ ಇದ್ದರು. ಅವರು
ದಾರಿಯಲ್ಲಿಯೇ ಕುಳಿತು ಬಿಟ್ಟರು; ಉರಿವ
ಬಿಸಿಲಿಗೂ, ಕೊರೆವ ಛಳಿಗೂ ರಾತ್ರಿ ಹಗಲೆನ್ನದೆ
ಸಾವಿರಾರು ಮಂದಿಯೂ ಅಚಲರಾಗಿ ಕುಳಿತು
ಟ್ಟರು. ಮಳೆಗಾಳಿಗಳೂ ಅವರನ್ನು ಕದ
ಿಸಲಿಲ್ಲ. ಅವರು ನಿಶ್ಚಯಮಾಡಿ ಬಂದಿದ್ದರು.
ಂದು ಹಜ್ಜೆ ಮುನ್ನಡೆವರಲ್ಲದೆ, ಹಿಂದಕ್ಕಡಿ
ಡುವಂತಿಲ್ಲ!

ರಾತ್ರಿಯೆನ್ನದೆ ಹಗಲೆನ್ನದೆ ಕುಳಿತು ಬಿಟ್ಟರು.
ಹೊಟ್ಟೆಯುಣಿಸಲು, ಅಲ್ಲಿಗೇ ಮಕ್ಕಳನ್ನು ಕರೆ
ರಲಾಯಿತು. ಕರುಣಾಹೃದಯರಾದ ಹೊಟೇ
ನವರು ಅಲ್ಲಿಗೇ ತಂದು ಸತ್ಯಾಗ್ರಹಿಗಳಿಗೆ
ಂಡಿತೀರ್ಥ ಬಡಿಸಿದರು! ಹೀಗೆ ಅಖಿಲ ಭಾರ
ದಲ್ಲಿ ಎಷ್ಟು ಕಡೆಗಳಲ್ಲಿ ಆಗಿಲ್ಲ? ಹೀಗೆ
ಷ್ಟು ಮಂದಿ ಮೆರವಣಿಗೆ ಹೊರಟು ಗಂಡು
ರೂ, ಹೆಂಗುಸರೂ, ಮಕ್ಕಳೂ, ಮುದು
ರೂ ಲಾಠಿ ಗುಂಡುಗಳಿಗೂ ಎದೆಗೊಡಲಿಲ್ಲ?
ಂಥಾ ನಗುಮುಖದಿಂದ ಅವರು ಆ ಎಲ್ಲಾ
ಷ್ಟಗಳನ್ನೂ ಸಹಿಸಿಕೊಂಡು ರಾಷ್ಟ್ರದ ಸ್ವಾತಂ
್ರ್ಯಕ್ಕಾಗಿ ಹೋರಾಡಲಿಲ್ಲ?

೧೯೩೦—೩೧ರ ಕಾಂಗ್ರೆಸ್ ಖಿಲಾಫತ್
ಮೆರವಣಿಗೆಯು ಚಂದವೇ ಬೇರಿತ್ತು. ಹಿಂದೂ
ಮುಸ್ಲಿಂ ಬಾಂಧವ್ಯ ಸೂಚನೆ ಆ ಮೆರವಣಿ
ಗೆಯ ಪ್ರಧಾನ ಚಿಹ್ನೆಯಾಗಿತ್ತು. ಯಜ್ಞೋಪ
ವೀತಧಾರೀ ಪಂಡಿತರೊಂದಿಗೆ ಮೌಲ್ವಿಗಳು
ಹೋಗುತಿದ್ದರು. ಹಿಂದುಗಳು, ಮುಸ್ಲಿಂ ಸೋದ
ರರು ಕುಡಿದ ಪಾತ್ರದಲ್ಲೇ ನೀರುಕುಡಿಯುತಿ
ದ್ದರು.

ಖಿಲಾಫತ್ ಕಾಲದ ಕೈದಿಗಳು, ಸೆರೆಮನೆ
ಹೊಗುವಾಗ ಇಲ್ಲವೇ ಅಲ್ಲಿಂದ ಮರಳುವಾಗ
ಒಂಟೆಯ ಮೇಲೇರಿ ಸವಾರಿಮಾಡಿ ಮೆರವಣಿಗೆ
ಹೋಗುತ್ತಿದ್ದರು

೧೯೩೨ರ ಅಸಹಕಾರ ಚಳವಳದ ಆರಂಭ
ದಲ್ಲಿ ಆ ಐಕ್ಯಬುದ್ಧಿ ಸ್ವಲ್ಪ ಕಡಿಮೆಯಾಗಿತ್ತು.
ಕಾಂಗ್ರೆಸ್ ಖಿಲಾಫತ್ ಬಾಂಧವ್ಯ ಕುಂಠಿತ
ವಾಗಿತ್ತು. ಕೆಲವು ಮುಸ್ಲಿಂ ಸೋದರರು
ಕಾಂಗ್ರೆಸಿನಿಂದ ಹೊರಬಂದರು. ಆದರೂ
ಕಾಂಗ್ರೆಸಿನೊಂದಿಗೆ ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ
ಹೋರಾಡಲು ಇನ್ನೂ ಎಷ್ಟೋ ಮುಸ್ಲಿಮರು
ಸಿದ್ಧರಾಗಿದ್ದರು. ಗಡಿನಾಡಿನ ಕೆಂಪಂಗಿಗಳು,
ಜಮಿಯತ್ ಉಲ್ ಉಲೇಮಾ ಮೊದಲಾದ
ಸಾಮ್ರಾಜ್ಯಶಾಹೀ ವಿರೋಧ ಪಂಗಡದವರು
ಭಾರತದ ಸ್ವಾತಂತ್ರ್ಯ ಸಾಧನೆಗೆ ಕಾಂಗ್ರೆಸಿನೊ
ಡನೆ ಕೂಡಿಕೊಂಡಿದ್ದರು.

ಅಂಥಾ ಸಮಯದಲ್ಲಿ ಡಿಲ್ಲಿಯಲ್ಲಿ ಒಂದು
ಮೆರವಣಿಗೆ ಹೊರಟಿತ್ತು. ಪಂಡಿತ ಜವಾಹರ
ಲಾಲ ನೆಹರುಗಳನ್ನು ಬಂಧಿಸಿದ ಬಗ್ಗೆ ನಿಷೇಧ
ಸೂಚಕವಾಗಿತ್ತು. ಭಿನ್ನ ಭಿನ್ನ ಜಾತಿಯ
ಬೇರೆ ಬೇರೆ ಮತಪಂಗಡಗಳ ಸಾವಿರಾರು
ಮಂದಿ, ಬೇರೆ ಬೇರೆ ಪ್ರಾಯದವರು, ಬಂಡ
ವಾಳಶಾಹಿ ಸಹಿತರಾದ ಮಧ್ಯಮ ವರ್ಗ,
ಕೂಲಿಗಾರರೂ, ಕವಿಗಳೂ, ಕಲಾಗಾರರೂ,
ವಿದ್ಯಾರ್ಥಿಗಳೂ, ಉಪಾಧ್ಯಾಯರೂ, ಆಸ್ತಿ
ಕರೂ, ನಾಸ್ತಿಕರೂ ಎಲ್ಲರೂ ಆ ದೊಡ್ಡ
ಅಹಿಂಸಾ ಸ್ವಾತಂತ್ರ್ಯ ಸೇನೆಯಲ್ಲಿ ಸೇರಿದ್ದರು.
ಪತಾಕೆಯೇ ಅವರ ಆರಾಧನೆ ಆಗಿತ್ತು. ಎಂಥಾ
ಶಿಸ್ತಿನಿಂದ, ಎಂಥಾ ಧೈರ್ಯದಿಂದ, ಆ ಜನ
ಸಮ್ಮರ್ದವು ಫಾತೆಪುರಿಯ ಬಳಿ ಮೈದಾನಿನಲ್ಲಿ
ಸಭೆ ಗೂಡಿ ನಿಷೇಧ ಪ್ರದರ್ಶಿಸಿತು!

ಅಂದಿನಾ ಮೆರವಣಿಗೆಯ ಕಾಲದಲ್ಲಿ ಹಲವು
ಘೋಷಣೆಗಳು ಹೇಳಲ್ಪಟ್ಟಿದ್ದವು. ಅವುಗಳಲ್ಲಿ
ಎಲ್ಲದಕಿಂತಲೂ ಪ್ರಧಾನವಾದುದು 'ಇಂಕಿ
ಲಾಬ್ ಜಿಂದಾಬಾದ್' (ಕ್ರಾಂತಿಗೆ ಜಯವಾ
ಗಲಿ) ಎಂಬುದು. ಈ ಘೋಷ ಹಲವು ಕಂಠ
ಗಳಲ್ಲಿ ಹಲವು ರೀತಿಗಳಲ್ಲಿ ಹಲವು ಕಾಲದಲ್ಲಿ
ಮೊಳಗಿ ಮೇಘ ನಿರ್ಘೋಷದಂತಿತ್ತು. ಒಂದೇ
ಕಾಲದಲ್ಲಿ ಶತಕೋಟಿ ಕಂಠಗಳಿಂದಲೂ ಆ
ಘೋಷ ಹೊರಡುತಿತ್ತು, 'ಇಂಕಿಲಾಬ್
ಜಿಂದಾಬಾದ್.'

ಅದು ಒಂದು ರೀತಿಯ ಮೆರವಣಿಗೆ; ಜನತೆ
ಮುನ್ನಡೆಯುವ ಸೂಚನೆ: ರಾಷ್ಟ್ರದ ನಾಯಕ
ರನ್ನು ಗೌರವಿಸಲು ಹೊರಡಿಸುವ ಮೆರವಣಿಗೆ
ಯುಂಟು; ಹೆಚ್ಚಾಗಿ ಕಾಂಗ್ರೆಸ್ ಅಧ್ಯಕ್ಷರನ್ನು;
ರಾಷ್ಟ್ರಪತಿಗಳನ್ನು. ಇಂಥಾ ಮೆರವಣಿಗೆಯಲ್ಲಿ
ಜನರು, ಯೋಧರಾಗಿರುವುದಕ್ಕಿಂತ ಹೆಚ್ಚಿನ
ಮಟ್ಟಿಗೆ ಅಲಂಕಾರ ಪ್ರಿಯರಾಗುತ್ತಾರೆ.

೧೯೩೮ರ ಕಲ್ಕತ್ತಾ ಕಾಂಗ್ರೆಸ್ ಅಧಿವೇಶ
ನದ ಮೆರಣಿಗೆ. ರಾಷ್ಟ್ರಪತಿ ಮೋತೀಲಾಲ
ನೆಹರುಗಳು ೪೩ ಕುದುರೆಗಳಿಂದ ಎಳೆಯ
ಲ್ಪಟ್ಟ ಗಾಡಿಯನ್ನೇರಿ ಮೆರವಣಿಗೆ ಹೊರಟರು.
ರಾಷ್ಟ್ರಪತಿಯನ್ನು ಗೌರವಿಸುವ ಮೆರವಣಿಗೆ
ಗಳಲ್ಲಿ ಇದು ಅತ್ಯಂತ ಸ್ಮರಣೀಯವಾದುದೆನ
ಬೇಕು, ಆಗ ಯುವಜನ ಮುಂದಾಳು,
ಸುಭಾಸಚಂದ್ರ ಬೋಸರು, ಸ್ವಯಂಸೇವಕ
ದಳದ ಸೇನಾಪತಿಯಾಗಿ ಕುದುರೆ ಮೇಲೇರಿ
ಹೋಗುತ್ತಿದ್ದರು.

ಮುಂದಿನ ವರ್ಷ ತಂದೆಯ ಪೀಠವನ್ನು
ಮಗ ಜವಾಹರಲಾಲ ನೆಹರು ಅಲಂಕರಿಸಿ
ದಾಗ, ಅವರು ಬಂಡಿಯ ಮೇಲೇರಿ ಹೋಗು
ವುದಕ್ಕಿಂತ ಸ್ವತಃ ಕುದುರೆ ಸವಾರರಾಗಿ ಮೆರ
ವಣಿಗೆ ಹೊರಟರು. ರಾಜ ಮಹಾರಾಜರಂತೆ
ಗಾಡಿಯೇರಿ ಹೋಗದೆ, ಯೋಧ ಸೇನಾಪತಿ
ಗಳಂತೆ ಜವಾಹರಲಾಲರು ಸ್ವತಃ ಕುದುರೆ
ಯೇರಿ ಹೋದದ್ದು ಹೊಸ ಸ್ಫೂರ್ತಿಯನ್ನು
ಉಂಟುಮಾಡಿತು. ಅದೂ ಬಹಳ ವಿಜೃಂಭ
ಣೆಯ ಮೆರವಣಿಗೆಯಾಗಿತ್ತು.

ಆ ಮೇಲೆ ಹರಿಪುರದ ೫೩ ಎತ್ತುಗಳ ಮೆರ
ವಣಿಗೆ; ಸುಭಾಸಬೋಸರನ್ನು ಗೌರವಿಸಲು!
೫೩ ಎಂಬುದು ಕಾಂಗ್ರೆಸಿನ ಪ್ರಾಯವನ್ನು
ತಿಳಿಸಲು; ಎತ್ತುಗಳು ಭಾರತವು ಹಳ್ಳಿ
ರಾಷ್ಟ್ರವೆಂಬುದನ್ನು ಸೂಚಿಸಲು. ಅದೂ
ಕೂಡಾ ಬಹಳ ವಿಜೃಂಭಣೆಯ ಉತ್ಸಾಹದ
ಮೆರವಣಿಗೆಯೆನಬೇಕು. ಎಷ್ಟೋ ಸಂದರ್ಭ
ಗಳಲ್ಲಿ ತಮ್ಮ ಪ್ರೀತಿಯ ರಾಷ್ಟ್ರೀಯ ಮುಖಂಡ
ರನ್ನು, ಪ್ರಾಣಿಗಳಲ್ಲ, ಮನುಷ್ಯರೇ ಹೊತ್ತು
ಕೊಂಡು ಮೆರವಣಿಗೆ ಹೊರಡಿಸಿದ್ದುಂಟು!

ಆದರೆ ಭಾರತದಲ್ಲಿ ಒಬ್ಬನೇ ಒಬ್ಬ ಮುಂ
ದಾಳುವಿದ್ದಾರೆ—ಅವರು ಎಂದೆಂದೂ ತನ್ನನ್ನು
ಮೆರವಣಿಗೆಯಲ್ಲಿ ಕೊಂಡು ಹೋಗಲು ಬಿಡಲೇ
ಇಲ್ಲ. ಆಡಂಬರವನ್ನು ಅವರು ಅಪೇಕ್ಷಿಸು
ವದಿಲ್ಲ. ಅವರು ಬೆಳಗಾಂ ಕಾಂಗ್ರೆಸ್ ಅಧ್ಯ
ಕ್ಷರಾದಾಗಲೂ ಮೆರವಣಿಗೆ ಹೊರಡಲೊಪ್ಪ
ಲಿಲ್ಲ; ಅವರೇ ಮಹಾತ್ಮಾ ಗಾಂಧಿ!

ರೈಲುಬಂಡಿಗಳ ಸಮಯ

ಗಾಡಿಗಳು.	ಮಂಗಳೂರಿಂದ ಹೊರಡುವ ಸಮಯ.	ಮಂಗಳೂರಿಗೆ ತಲಪುವ ಸಮಯ.
ಮದ್ರಾಸ್ ಮೈಲ್	ಬೆಳಿಗ್ಗೆ ೬-೪೫.	ರಾತ್ರಿ ೭-೩೦.
ಷಟಲ್ ಕನ್ನಾನ್ನೂರು ವರಿಯಂತ ಮಾತ್ರ	ಸಾಯಂ. ೫-೫೫	ಬೆಳಿಗ್ಗೆ ೯-೨೫.
ಮಲಬಾರ್ ಎಕ್ಸ್‌ಪ್ರೆಸ್	ಬೆಳಿಗ್ಗೆ ೭-೫.	ಸಾಯಂ. ೬.

ಬೇಗನೇ ಮಾರಾಟಕ್ಕೆ ತಯಾರಾಗುತ್ತಿವೆ

1944ನೇ ಇಸವಿಯ

ಎರಡು ಬಣ್ಣದಲ್ಲಿ ಅಂದವಾಗಿ ಮುದ್ರಿತವಾದ

★ ಆಫೀಸು ಕೆಲೆಂಡರು ★

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು-ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಗೆಯೇ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. **ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.**

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.

ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE.

The Joint Booking Office, KODIALBAIL.

The Bank of Mangalore Limited, Mangalore.

ESTD: 1931

HEAD OFFICE Mangalore. *BRANCHES* Moodabidri & Padubidri.

The Bank Undertakes to Collect Cheques, Demand and Documentary Bills at Most Competitive Rates.

ISSUES DRAFTS ON ALL IMPORTANT TOWNS IN THE DISTRICT and also on BOMBAY, MADRAS, CALICUT, BANGALORE, MYSORE, TIRUPPUR, COIMBATORE, ERODE, KUMBAKONUM, BELGAUM, DHARWAR HONAVAR etc.

at very favourable rates

All kinds of inland banking business undertaken

THE CANARA BANKING CORPORATION Ltd

(Incorporated in British India liability of members limited).

Estd.] Head office, UDIPI S. Kanara [1906.

Authorised capital	Rs. 25,00,000.
Issued & Subscribed	Rs. 16,00,000.
Paid up Capital	Rs. 12,65,000.
Reserves	Rs. 3,88,000.

For your Banking requirements come to us and we will assist you. We undertake all kinds of banking business.

33 YEARS OF DUTY AT THE POST OF SERVICE

Being actively in Insurance Service since the first decade of this century, we are in a position to suggest to those who wish to go in for insurance the best scheme to meet individual needs. Our large and evergrowing clientale is proof of our trusted service

Please write your requirements to:-

KOCHIKAR BROTHERS LTD.,

Chief Agents for South India including Indian States Madras Branch Secretaries

THE BOMBAY LIFE ASSURANCE CO., LTD

The "Bombay Life" Building UDIPI. S. K.

with offices at:-

BOMBAY ★ BANGALORE ★ CALICUT ★ MADRAS ★ MANGALORE ★ TRIVANDRUM ★

And Agencies all over South India.

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವ ವಿಧದ ದೋಷಗಳನ್ನು ಗುಣಪಡಿಸುವ ದಿವ್ಯಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ ವ ಏಜೆಂಟರು:—

(1) ಡಾಕ್ಟರ್ ವಿ. ಪಿ. ಕಾಮತ್, ರಥಬೀದಿ. (2) ರಾಘುವೇಂದ್ರ ಷೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ| ಯಂ. ಎಸ್. ಪ್ರಭು, M. B. B. S. ಸಿ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೋ:—1. ಮರಾಠ ಗಲ್ಲಿ ಹುಬ್ಬಳ್ಳಿ.

2. 86 ಫ್ರಾಕಪ್ರೇಟ್ ರೋಡ್, ಟ್ರಿಪ್ಲಿಕೇನ್, ಮದರಾಸು.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಖ್ಯಾತ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಮೃತ್ಯುಂಜಯ ರಸ. ಕೊಲೆರಾ ರೋಗಕ್ಕೆ ಸಿದ್ಧೌಷಧ. ಪಂಚವಟಿ ಮಾತ್ರೆ.

ಸೇವನಾ ಕ್ರಮಗಳು ಔಷಧಿಯೊಡನೆ ಇದೆ.

ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

Edited, Printed & Published by A. S. Kamath at the Sharada Press, Car Street, Mangalore.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಕು 24—12—1943 [ಸಂಚಿಕೆ 51]

ಕ್ರಿಪ್ಸರು ಹೇಳಿದ್ದು

ಒಬ್ಬರೊಡನೆ ಒಂದು--ಇನ್ನೊಬ್ಬರೊಡನೆ ಇನ್ನೊಂದು!

ಜಯಕರ್ ಬಹಿರಂಗಪಡಿಸುತ್ತಾರೆ.

ಮುಂದಪಕ್ಷದ ಮೂವರು ಮುಖಂಡರು

ಕೆಲವು ಜನರು ಬಹಳ ತಡವಾಗಿ ಹುಟ್ಟುತ್ತಾರೆ. ಕೆಲವರು ಬಹಳ ಮುಂದಾಗಿಯೇ ಹುಟ್ಟುತ್ತಾರೆ. ಸರ್ ತೇಜ್ ಬಹದ್ದೂರ್ ಸಪ್ರು, ರೈ॥ ಆ॥ ಶ್ರೀನಿವಾಸ ಶಾಸ್ತ್ರಿ ಮತ್ತು ಶ್ರೀ॥ ಎಂ. ಆರ್. ಜಯಕರ್ ಈ ಮೂವರು ಬಹಳ ಮುಂಚಿತವಾಗಿ ಹುಟ್ಟಿದರು. ಭಾರತವು ಸ್ವತಂತ್ರವಾದ ಮೇಲೆ ಇವರು ಹುಟ್ಟಿದ್ದರೆ, ಇವರಲ್ಲಿ ಪ್ರತಿಯೊಬ್ಬನೂ ತುಂಬಾ ಗೌರವ ಪಡೆಯುತ್ತಿದ್ದರು. ಮೂವರಲ್ಲಿ ಪ್ರತಿಯೊಬ್ಬನೂ ಅಸಾಧಾರಣ ಬುದ್ಧಿಶಾಲಿ. ಪ್ರತಿಯೊಬ್ಬನೂ ಸತ್ವಶಾಲಿ ಆದರೆ ಅವರ ಅದೃಷ್ಟವೆಂದರೆ ಅವರು ಹುಟ್ಟಿರುವುದು ದಾಸ್ಯ ಭೂಮಿಯಲ್ಲಿ. ವಿಯೆನ್ನಾದಲ್ಲಾಗಲಿ, ಪೇರಿಸಿನಲ್ಲಾಗಲಿ ಅವರು ಜನ್ಮಿಸಿದ್ದರೆ ಸಿಂಹ ಸಮಾನರಾಗುತಿದ್ದರು. ಆದರೆ ಅವರು ಹುಟ್ಟಿದುದು ಅಲ್ಲಾಬಾದ್, ಬೊಂಬಾಯಿ ಮತ್ತು ಮದ್ರಾಸುಗಳಲ್ಲಿ!

ಹಾಗಾಗಿ ಸರ್ ಸಪ್ರು, ಶ್ರೀ॥ ಜಯಕರ್, ರೈ॥ ಆ॥ ಶಾಸ್ತ್ರಿ ಈ ಮೂವರೂ ಇಂದಿನ ಭಾರತದಲ್ಲಿ ಬಾಹಿರರಾಗಿರುವರು. ಇಂದಿನ ಜನತೆಯ ಸಮಸ್ಯೆ ಅವರಿಗೆ ಅರ್ಥವಾಗುವುದಿಲ್ಲ. ಇಂದಿನ ಜನರಿಗೂ ಅವರನ್ನು ತಿಳಿಕೊಳ್ಳುವುದಾಗುವುದಿಲ್ಲ. ಹಾಗಾದರೂ ಅವರು ತಮ್ಮ ಯಥಾಶಕ್ತಿ ಕೆಲಸ ಮಾಡುತ್ತಲೇ ಇರುವರು. ಸಪ್ರು, ಜಿನ್ನದೇ ಆದ ಒಂದು ರೀತಿಯಲ್ಲಿ ಹಿಂದು ಮುಸ್ಲಿಂ ಐಕ್ಯ ಮಾಡುವುದರಲ್ಲಿದ್ದಾರೆ. ಶಾಸ್ತ್ರಿಗಳು ಮಹಾತ್ಮಾಜಿಯ ಇಂಗ್ಲಿಷನ್ನು ತಿದ್ದುತ್ತಾರೆ ಮತ್ತೆ ಒಮ್ಮೊಮ್ಮೆ ಮಹಾತ್ಮಾಜಿಗೆ, ವೈಸರಾಯರಿಗೆ, ಅಮೆರಿಗೂ ಬಹಿರಂಗ ಪತ್ರಗಳನ್ನು ಬರೆಯುತ್ತಾರೆ. ಆದರೆ ಇದರಿಂದೆಲ್ಲಾ ಏನೂ ಸಾಧಿಸುವುದಿಲ್ಲ. ಜಯಕರ್ ಇತ್ತೀಚೆಗೆ ಇದು ಪ್ರಯೋಜನವಿಲ್ಲದ ಕೆಲಸವೆಂದು ಬಿಟ್ಟು ಬಿಟ್ಟಂತಿದೆ. ಆದರೂ ಜಯಕರರು ತೆಗೆದು ಹಾಕಲು ಸಾಧ್ಯವಿಲ್ಲದ ಓರ್ವ ವ್ಯಕ್ತಿ. ಗೀತೆಯ ವಿಷಯ ಎಷ್ಟು ಅಧಿಕಾರಿಯುತರಾಗಿ ಮಾತನಾಡಬಲ್ಲರೋ ಅಷ್ಟೇ ಅಧಿಕಾರಯುತರಾಗಿ ಅವರು ಹಿಂದೂ ಕಾನೂನಿನ ಕುರಿತೂ ಮಾತನಾಡುವರು. ಮಹಾರಾಷ್ಟ್ರೀಯರಾಗಿ ತನ್ನ ಸಂಸ್ಕೃತಿ ವಿಚಾರವನ್ನೂ ಚೆನ್ನಾಗಿ ಬಲ್ಲರು. ಸಂಸ್ಕೃತಿ ಮತ್ತು ಕಲೆಯ ಕುರಿತು ಜಯಕರರು ಭಾಷಣ ಕೊಟ್ಟರೆ ಅದನ್ನು ಅಗತ್ಯವಾಗಿ ಆಲಿಸಲೇಬೇಕು.

ಒಮ್ಮೊಮ್ಮೆ ಜಯಕರರು ರಾಜನೀತಿಯ ಕುರಿತೂ ಚರ್ಚಿಸುವರು, ಹೀಗೆ ಈ ಮೂವರು ಮಾಡುತ್ತಾರೆ. ಇವರಿಗೆ ಮೂವರಲ್ಲಿಯೂ ಒಂದು ವಿಷಯ ಸಮಾನವಿದೆ. ಈ ಮೂವರೂ ಆಶಾವಾದಿಗಳು. ಇವರಿಗೂ ಟ್ರೇಡ್ ಯೂನಿಯನಿನವರಂತೆ ತಮ್ಮ ಬಂಧುಗಳ ಕುರಿತು ಬಹಳ ಆದರ. ಇತ್ತೀಚೆಗೆ ಜಯಕರ್ ಗತಿಸಿದ ರಾಘವೇಂದ್ರ ರಾಯರ ಭಾವಚಿತ್ರ ಅನಾವರಣ ಕಾಲದಲ್ಲಿ ಏನೋ ಹೇಳಿದರು. ಇಂದು ಈ ಮೂವರೂ ಸಹಜತಾ ಬುದ್ಧಿಯವರೆಂದು ಹೇಳಿಕೊಳ್ಳಲು ಪ್ರಯತ್ನಿಸುವರು. ಹಾಗೆಯೇ ತಮ್ಮ ಬಂಧುಗಳು ಸಹಜತಾ ಬುದ್ಧಿಯನು ಮೆಚ್ಚುವದರಲ್ಲಿಯೂ ಅವರು ಬಹಳ ಉತ್ಸುಕರು. ಗತಿಸಿದ ರಾಘವೇಂದ್ರ ರಾಯರ ಸಹಜತಾ ಬುದ್ಧಿಯನ್ನು ಬಹಳ ಕೊಂಡಾಡಿದರು.

ಜಯಕರ್ ಇನ್ನೂ ಸ್ವಲ್ಪ ಹೆಚ್ಚು ಹೇಳಿದರು: ೯೩ನೇ ನಿಯಮದಿಂದ ಅಧಿಕಾರವಾಡಿ ಸರಕಾರವು ಹೆಚ್ಚು ಸಮಯ ಬಾಳಲಿಕ್ಕಿಲ್ಲವೆಂದರು. ಆದರೆ ಜಯಕರರು ಇದಕ್ಕೆ ಕೊಟ್ಟ ಕಾರಣವನ್ನು ಇನ್ನಾರೂ ಕೊಡಲಿಲ್ಲ. ಜಯಕರರು ಹೇಳಿದರು: ಪ್ರಕೃತಿಯೇ ಈ ರೀತಿಯ ಅಧಿಕಾರಕ್ಕೆ ಎದುರು ನಿಲ್ಲುತ್ತದೆ ಎಂದು. ಪ್ರಕೃತಿ ಹಾಗೆ ಮಾಡುತ್ತದೇನೋ ನಿಜ. ಆದರೆ ಇವರು ಮಾತ್ರ ಪರಿಸ್ಥಿತಿಯನ್ನು ಉತ್ತಮಗೊಳಿಸಲಾರರು. ಪರಿಸ್ಥಿತಿ ಖಂಡಿತವಾಗಿಯೂ ಸುಧಾರಿಸಬೇಕು; ಸುಧಾರಿಸಿಯೇ ಸುಧಾರಿಸುತ್ತದೆ. ಆದರೆ ಈ ಮೂವರು ಸಹಜತಾ ಬುದ್ಧಿಯವರಿಂದ ಮಾತ್ರ ಅಲ್ಲ.'

ಜಯಕರರು ಕ್ರಿಪ್ಸ್ ಸಂಧಾನದ ಕುರಿತೂ ಸ್ವಲ್ಪ ಮಾತುಹೇಳಿದರು. ವೈಯುಕ್ತಿಕವಾಗಿ ಕ್ರಿಪ್ಸ್ ಭೇಟಿಕೊಟ್ಟ ವಿಷಯ ಹಲವರು ಹೇಳಿದ್ದಾರೆ. ಕ್ರಿಪ್ಸರು ಪ್ರತಿಯೊಂದು ಪಕ್ಷವನ್ನೂ ಬೇರೆ ಬೇರಾಗಿ ಭೇಟಿಯಾದರು. 'ನಾವು ಹೇಳಿದೆವು; ಹೀಗೆ ಬೇರೆ ಬೇರಾಗಿ ಚರ್ಚಿಸಿ ಪ್ರಯೋಜನವಿಲ್ಲ, ನಮ್ಮನ್ನೆಲ್ಲಾ ಒಟ್ಟುಸೇರಿಸಿ ಚರ್ಚಿಸಿರೆಂದು. ಹಾಗೆ ಮಾಡಿದರೆ ಒಬ್ಬನು ಇನ್ನೊಬ್ಬನನ್ನು ಆತನು ಯಾವುದನ್ನೂ ಮಾಡಬೇಕು, ಯಾವುದನ್ನು ಮಾಡಕೂಡದೆಂದು ಒತ್ತಾಯಪಡಿಸಬಹುದೆಂದೂ ಹಾಗಾದರೆ ಬೇಕಾದನ್ನು ಒಪ್ಪಿ, ಬೇಡದಿದ್ದದ್ದನ್ನು ಬಿಡಬಹುದೆಂದೂ ತಿಳಿಸಿದೆವು. ಹೀಗೆಂದು ಜಯಕರರಿಗೆ ರಾಘವೇಂದ್ರ ರಾಯರು ಹೇಳಿದ್ದು. ಜಯಕರ್ ಅದನ್ನು ಯಥಾರ್ಥವೆಂದು ತಿಳಕೊಂಡದ್ದು. ಎಚ್. ಪಿ. ಮೋಡಿ ಮತ್ತು ಎನ್. ಆರ್. ಸರ್ಕಾರರೂ ಹೀಗೆ ಬೇರೆ ಬೇರಾಗಿ ಕ್ರಿಪ್ಸರು ಭೇಟಿ ತೆಗೆದುಕೊಂಡ ವಿಷಯ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಕ್ರಿಪ್ಸರೆದ್ದು ಇದೊಂದೇ ಉಪಾಯವಲ್ಲ. ಫೋಟೊ ಮತ್ತು ಪ್ರೆಸ್ ವರದಿಗಳು ನಮಗೆ ತಿಳಿಸಿದ ರೀತಿಯಲ್ಲಿ, ಕ್ರಿಪ್ಸರು ಪ್ರತಿಯೊಂದು ಕೆಲಸವನ್ನೂ ಹುಡುಕಾಟಿಕೆಯಿಂದಲೇ ಮಾಡಿದರೆಂದು ತಿಳಕೊಳ್ಳಬಹುದಾಗುತ್ತದೆ. ಕ್ರಿಪ್ಸರ ಈ ಪ್ರದರ್ಶನದ ಕುರಿತು ರಾಘವೇಂದ್ರ ರಾಯರ ಅಭಿಪ್ರಾಯವೂ ಇದೇ. 'ಕ್ರಿಪ್ಸರು, ನಾವು ಭಾರತೀಯರು ಅಷ್ಟು ಸುಲಭವಾಗಿ ವಂಚಿಸಲ್ಪಡತಕ್ಕವರಲ್ಲವೆಂದು ತಿಳಿದುಕೊಂಡವರೇ, ಎಕ್ಸ್. ವೈ. ಜಡ್‌ಗಳನ್ನು ಕರೆದು ಒಂದು ಹೇಳಿದರು, ಎ.ಬಿ. ಸಿಗಳನ್ನು ಕರೆದು ಇನ್ನೊಂದು ಹೇಳಿದರು. ಎಕ್ಸ್. ವೈ, ಜಡ್. ಬಂದಾಗ ಎ. ಬಿ. ಸಿ. ಇಲ: ಹಾಗೂ ಎಕ್ಸ್. ವೈ. ಜಡ್ ಮತ್ತು ಎ. ಬಿ. ಸಿ. ಯವರೊಡನೆ ಹೇಳಿದ್ದು ಒಬ್ಬರೊಡನೆ ಹೇಳಿದ್ದು ಇನ್ನೊಬ್ಬರೊಡನಿಲ್ಲ. ಪ್ರತಿಯೊಬ್ಬನಿಗೂ ಬೇರೆ ಬೇರೆ ಹೇಳಿದರೆಂದು ನಮಗೆ ವಿಶಿತ್ತೆ ತಿಳಿಯಿತು' ಹೀಗೆ ಕ್ರಿಪ್ಸ್ ಸಂಧಾನದ ಕುರಿತು, ಅವರು ಎಷ್ಟು ಜನರಿಗೆ ಭೇಟಿಕೊಟ್ಟಿದ್ದಾರೋ ಅಷ್ಟು ವ್ಯಾಖ್ಯಾನಗಳು ಬರುತ್ತವೆ. ಡಿಲ್ಲಿಯ ಹೊಣೆಯಿಲ್ಲದ ವಾತಾವರಣದಲ್ಲಿ ಮಾತ್ರ ಅಂಥಾ ಸಂಗತಿಗಳು ಜರಗಬಹುದೆಂದು ತೋರುತ್ತದೆ.

ಜಯಕರರ ಅಭಿಪ್ರಾಯವೆಂದರೆ 93ನೇ ನಿಯಮದ ಸರಕಾರದ ಅಧಿಕಾರ ಬಹುಕಾಲ ಬಾಳಲಾರದೆಂದು; ಆದರೆ ಗೃಹ ಮಂತ್ರಿಗಳು ಹಾಗೇನೂ ಅಭಿಪ್ರಾಯಪಡುವುದಿಲ್ಲ. ಮಹಾತ್ಮಾಜಿ ಮತ್ತು ಕಾಂಗ್ರೆಸ್ ವರ್ಕಿಂಗ್ ಕಮಿಟಿ ಸದಸ್ಯರನ್ನು ಬಿಡುಗಡೆ ಮಾಡಲೂ ಇದು ಯೋಗ್ಯಸಮಯವಲ್ಲವೆಂದೇ ಅವರು ತಿಳಿಯುತ್ತಾರೆ. ಅಮೆರಿಯವರು ಇತ್ತೀಚೆಗೂ ಕೂಡಾ ರಾಷ್ಟ್ರ ಮುಖಂಡರನ್ನು ಬಿಡುಗಡೆ ಮಾಡುವ ವಿಚಾರವನ್ನು ಸರಕಾರ ಈಗ ಮಾಡುವುದೇ ಇಲ್ಲ. ಹೀಗಿರುವಾಗ ಪ್ರಾತಿನಿಧಿಕ ಸರಕಾರವನ್ನು ಹೇಗೆ ಸ್ಥಾಪಿಸಬಹುದೆಂದು ಜಯಕರರು ತಿಳಿಸುವರೆ?

ಭಾರತ ಸಮಸ್ಯೆ ಬಿಡಿಸಲು ಎಲ್ಲಾ ಪಕ್ಷಗಳೂ ಸಹಕರಿಸಬೇಕು

ವೇವಲರ ಭಾಷಣ

'ಭಾರತದಲ್ಲೀಗ ಪ್ರಬಲ ಸಮಸ್ಯೆಗಳಿವೆ. ಅವುಗಳನ್ನು ಪರಿಹರಿಸಲು ಭಾರತದಲ್ಲಿರುವ ಎಲ್ಲಾ ಪಕ್ಷಗಳೂ ಸಹಕರಿಸಬೇಕು. ಭಾರತದ ಭವಿಷ್ಯ ಉಜ್ವಲವಾಗುವಲ್ಲಿ ನನ್ನ ಆಳುವಿಕೆಯಲ್ಲಿ ಅದಕ್ಕೆ ಸಾಧ್ಯವಾದ ಸಹಾಯ ಸಲ್ಲಿಸುವೆನು' ಹೀಗೆಂದು ತಾ 20ರಂದು ಕಲ್ಕತ್ತ ಏಸೋಸಿಯೆಟೆಡ್ ಕಾಮರ್ಸ್ ಚೇಂಬರಿನ ವಾರ್ಷಿಕಾಧಿವೇಶನದಿಂದ ವೈಸರಾಯ್ ವೇವಲರು ವೈಸರಾಯರಾದ ಮೇಲೆ ಇದೇ ಮೊದಲನೆಯ ಸಲವಾಗಿ ಭಾಷಣಮಾಡಿದರು.

'ನಾನಿದುವರೆಗೂ ಏನೂ ಹೇಳದಿರುವುದರಿಂದ ನನ್ನ ಮನಸ್ಸಿನಲ್ಲೇನೂ ಇಲ್ಲವೆಂದಾಗಲಿ, ಭಾರತದ ಜನತಾ ಆಕಾಂಕ್ಷೆ ತೀರಿಸಲು ಯುದ್ಧಕಾಲದಲ್ಲೇನೂ ಸಾಧ್ಯವಿಲ್ಲೆಂದಾಗಲಿ ನನ್ನ ಅಭಿಪ್ರಾಯವೆಂದು ತಿಳಿಯದಿರಿ; ಸಮಸ್ಯೆಗಳು ಸರಿಯಾಗಿ ಬಿಡಿಸಬಲ್ಲೆನೆಂಬ ಭರವಸೆ ಇದುವರೆಗೆ ಇರದಿರುವುದರಿಂದ ಮೌನವಾಗಿದ್ದೆ. ಯುದ್ಧದಲ್ಲಿ ಜಯ, ಆರ್ಥಿಕ ವ್ಯವಸ್ಥೆ, ಭಾರತದ ಸಾಧನ ಸಾಮಗ್ರಿ ಉತ್ಸಾಹ ಶಕ್ತಿ ಭಾಗ್ಯಗಳನ್ನು ಹೆಚ್ಚಿಸುವುದು ಈಗ ಅವಶ್ಯವಿದೆ. ಈ ಸಮಸ್ಯೆ ಬಿಡಿಸುವಲ್ಲಿ ಭಾರತದ [illegible] ಸಹಾಯವನ್ನು ನಾನು ಸ್ವಾಗತಿಸುವೆನು. ಗಂಡಾಂತರದೀಕಾಲದಲ್ಲಿ ಎಲ್ಲಾ ಪಕ್ಷಗಳಿಗೆ ಸಾಮಾನ್ಯವಾದ ಆಡಳಿತದ ಉದ್ದೇಶ ಸಾಧನೆಗಾಗಿ ನಾವೆಲ್ಲ ಸಹಕರಿಸಿದರೆ ರಾಜಕೀಯ ಸಮಸ್ಯೆ ಬಿಡಿಸುವುದಕ್ಕೆ ಎಷ್ಟೋ ಸಹಾಯವಾಗುವುದು' ಎಂದು ಮೊದಲಾಗಿ ಅವರು ಹೇಳಿದರು.

ದೇಶದ ಆಹಾರ ಸಂಕಷ್ಟ, ಈ ಬಗ್ಗೆ ಸರಕಾರವು ಇಡೀ ದೇಶಕ್ಕೆ ಅನ್ವಯಿಸಿ ಮಾಡಿದ ಯೋಜನೆ, ನಗರಗಳಲ್ಲಿ ರೇಷನಿಂಗ್ ಮತ್ತು ಬೆಲೆ ನಿಯಂತ್ರಣ ಮಾಡಿದ ವಿಚಾರ ಹೇಳಿ ಬಂಗಾಳದ ಸಮಸ್ಯಾ ಪರಿಹಾರ, ಮಾಡುವೆವೆಂದು ತಿಳಿಸಿ ಭಾರತೀಯ ಸೈನಿಕರ ಪ್ರಶಂಸೆ ಗೈದು, ಯುದ್ಧದಲ್ಲಿ ನಮಗೆ ಜಯಸಿಗುವುದೆಂದು ಸಾರಿದರು.

ಕೇಂದ್ರ ಮತ್ತು ಸಿಂಧ ಸರಕಾರಗಳಲ್ಲಿ ತಿಕ್ಕಾಟ

ಆಹಾರ ಸಮಸ್ಯೆ ವಿಚಾರ

'ಕಾನೂನಿನಂತೆ ಕೆಲಸ ಮಾಡಲು ಹಿಂದುಸ್ಥಾನ ಸರಕಾರವು ನಮಗೆ ಅಡ್ಡಿ ಮಾಡುತ್ತದೆ. ನಾವು ಶಾಸನ ಮಂಡಳಕ್ಕೆ ಹೊಣೆಗಾರರಿರುವೆವು. ಆದರೊಡನೆ ಘರ್ಷಣೆಯುಂಟಾಗುವಂತೆಸಗಿ ನಮ್ಮ ಮಂತ್ರಿಮಂಡಳವು ಉರುಳುವಂತೆ ಮಾಡುತ್ತಿದ್ದಾರೆ. ಇದನ್ನು ನಾವು ಸೈರಿಸಲಾರೆವು. ಈ ಪ್ರಾಂತದ ಜನರು, ಹಿಂದುಸ್ತಾನದವರು, ಇಡೀ ಜಗತ್ತೇ ಸತ್ಯ ಮತ್ತು ನ್ಯಾಯ ಯಾರ ಕಡೆಗಿದೆಯೆಂದು ನೋಡಲಿ' ಹೀಗೆಂದು ಸಿಂಧ ಸರಕಾರವು ಒಂದು ವಿಸ್ತಾರ ಲೇಖನ ಪ್ರಕಟಿಸಿದೆ. ತಮ್ಮ ಅನುಮತಿಯಿಲ್ಲದೆ ಆಹಾರ ವಸ್ತುಗಳ ಬೆಲೆ ಏರಿಸಬಾರದೆಂದು ಹಿಂದುಸ್ಥಾನ ಸರಕಾರವು ಸಿಂಧ ಸರಕಾರಕ್ಕಿತ್ತ ಸೂಚನೆಯನ್ನು ಪ್ರಕಟಿಸಲು ವಿಷಾದವಾಗುತ್ತಿದೆಯೆಂದು ಅಲ್ಲಿನ ಪ್ರಧಾನ ಮಂತ್ರಿ ಸರ್ ಗುಲಾಮ್ ಹುಸೇನರು ಹೇಳಿದರು. ಕೇಂದ್ರ ಸರಕಾರದ ಸೂಚನೆಯಿಂದ ದೇಶದ ೩೦ ಲಕ್ಷ ರೈತರಿಗೆ ಹಾನಿಯಿದೆಯೆಂದೂ, ಕೇಂದ್ರ ಸರಕಾರವು ಹೀಗೆ ಮಾಡುವುದು ನ್ಯಾಯವಲ್ಲವೆಂದೂ ಅವರ ವಾದ. ಅವರು ಕೊನೆಗೆ ಹೀಗೆಂದು ಹೇಳಿದ್ದಾರೆ. "ನಾವು ಅಧಿಕಾರದಲ್ಲಿರುವುದು ಸರಕಾರಕ್ಕೆ ಬೇಡವಾದರೆ ನಮ್ಮನ್ನು ಕೆಲಸದಿಂದ ತಳ್ಳಿಹಾಕಲಿ." 'ಆಹಾರ ಸಮಸ್ಯೆ ವಿಚಾರ ಆಡಳಿತದಲ್ಲಿ ತೃಪ್ತಿಕರ ಕಾರ್ಯವಿಲ್ಲವೆಂದು ಅಮೆರಿಯವರು ಪ್ರಾಂತಿಕ ಆಡಳಿತವನ್ನು ದೂರಿದ್ದಾರೆ. ಈಗ ತೃಪ್ತಿಕರ ಆಡಳಿತ ನಡೆಸುವ ನಮ್ಮನ್ನು ಅಮೆರಿ ಏಜೆಂಟರೇ ಹೊರ ಹಾಕುತ್ತಾರೆ' ಎಂದೂ ಅವರು ತಿಳಿಸಿದ್ದಾರೆ. 'ಹಿಂದುಸ್ಥಾನ ಸರಕಾರವು ಆ ವಿಷಯ ತಮ್ಮ ಹಟವನ್ನೇ ಹಿಡಿದರೆ ನಾವು ಆಹಾರವನ್ನು ಸಂಗ್ರಹಿಸುವುದೂ ಇಲ್ಲ. ಬೆಲೆ ನಿಯಂತ್ರಣವನ್ನೂ ಜಾರಿಗೆ ತರುವುದಿಲ್ಲ. ಗವರ್ನರರು ತಮ್ಮ ವಿಶೇಷಾಧಿಕಾರವನ್ನುಪಯೋಗಿಸಿ ಬೇಕಾದಂತೆ ಮಾಡಲಿ, ಆದರೆ ಅದರಲ್ಲಿ ನಮ್ಮ ಸಂಬಂಧವಿಲ್ಲವೆಂದು ನಾವು ಎಸೆಂಬ್ಲಿಯಲ್ಲಿ ಹೇಳಿ ಬಿಡುತ್ತೇವೆ."

ದೈವಗತಿ

ಲೇಖಕಿ: ಶ್ರೀಮತಿ ವತ್ಸಲಾ ಕುಮಾರಿ.

[illegible] ಒಂದು [illegible] [illegible] ಗೋಪಾಲ ಶ್ಯಾನುಭೋಗರ [illegible] — ಆಕೆಯು ಅವರ [illegible] ಮಗಳಾದುದರಿಂದ ಅವರ ಪ್ರಾಣವೇ ಆಗಿದ್ದಳು. "ಸುಲೋಚನಾ" ಎನ್ನುವಾಗ ಶ್ಯಾನುಭೋಗರ ಬಾಯಿಯಿಂದ ನೀರೂಸರು ತಿತ್ತು. ಕಣ್ಣುಗಳಿಂದ ಆಶ್ರುಗಳು ತೊಟ್ಟಿಕ್ಕು ತಿದ್ದುವು. ಅವಳಿಗೆ ಯಾವ ಕಷ್ಟಗಳೂ ಬಾರದೆ ಸುಖದಿಂದರಬೇಕೆಂಬುದೇ ಅವರ ಹಿರಿ ದಾದ ಬಯಕೆ. ಮೇಲಿಟ್ಟರೆ ಕಾಗೆ ಕೊಂ ಡೊಯ್ಯುವುದೋ ನೆಲದ ಮೇಲಿಟ್ಟರೆ ಇಲಿಗಳು ಒಯ್ಯುವುವೋ ಎಂಬಂತೆ ಸದಾ ಬಳಿಯಲ್ಲಿ ಇಟ್ಟು ಸಾಕಿದ ಮಗುವದು. ಅದರಲ್ಲೂ ತಾಯಿಯನ್ನು ಕಳಕೊಂಡ ತಬ್ಬಲಿ. ಸುಲೋ ಚನೆಗೀಗ ೧೭ ವರುಷ ಪ್ರಾಯವಾದರೂ ಶ್ಯಾನುಭೋಗರಿಗೆ ಅವಳು ಮಗುವೇ ಆಗಿ ದ್ದಳು. ಅವಳನ್ನು ಒಂದು ದಿನವಾದರೂ ಬಿಟ್ಟಿರುತ್ತಿರಲಿಲ್ಲ.

ಇಂದು ಶ್ಯಾನುಭೋಗರು ತಮ್ಮ ಯಾವು ದೋ ಒಂದು ಪ್ರಿಯ ವಸ್ತು ಕಳಕೊಂಡವ ರಂತೆ ತಲೆಯ ಮೇಲೆ ಕೈಯಿಟ್ಟುಕೊಂಡು ಚಿಂತಾಮಗ್ನರಾಗಿದ್ದಾರೆ. ಅವರ ಸುತ್ತಲೂ ನೆರೆದ ಜನರು ತಮ್ಮಷ್ಟಕ್ಕೆ ಏನೋ ಮಾತನಾಡಿ ಕೊಂಡು ಸಂತೋಷದಿಂದ ದೂರದಾಗ ಅವರು ಮಾತ್ರ ತಮ್ಮದೇ ಕಲ್ಪನಾ ಸಾಮ್ರಾಜ್ಯದಲ್ಲಿ ತಿರುಗುತ್ತಿದ್ದಾರೆ. ಆ ನವಯುವಕರ ಮುದ್ದೋ ನೃತ್ಯ ಮಾತುಗಳ ಕಡೆಗೆ ಅವರ ಅರಿವೇ ಇಲ್ಲ.

ಅವರ ಮನಸ್ಸು ಹಿಸ್ಸೋಡಿತು. ತನ್ನ ಪೂರ್ವ ಜೀವನದ ನೆನಪು ಚಿತ್ರಪಟದಲ್ಲಿನ ಬಿಂ ಬಗಳಂತೆ ಅವರ ಕಣ್ಣಮುಂದೆ ಸರಿದುವು. ಅವರದು ಚಿಕ್ಕದಾದರೂ ಚೊಕ್ಕವಾದ ಸಂ ಸಾರ. ಅದೇ ಒಂದು ಸಾಮ್ರಾಜ್ಯ. ಅದರಲ್ಲಿ ತಾನೇ ರಾಜ. ಸುನೀತಿಯೇ ರಾಣಿಯಾಗಿದ್ದಳು. ತಮ್ಮ ಮೂವರು ಕನ್ನಿಕೆಯರು ತಮ್ಮ ಕಣ್ಮಣಿ ಗಳಾಗಿದ್ದರು. ಒಬ್ಬಳಿಗೆ ಆಗಲೇ ವಿವಾಹವಾ ಗಿತ್ತು. ಮತ್ತೊಬ್ಬಳು ವಿವಾಹಕ್ಕೆ ಯೋಗ್ಯ ಳಾಗಿ ನಿಂತಿದ್ದಳು. ಇನ್ನು ಕಿರಿಯವಳು, ಬರಿ ಚಿಕ್ಕವಳು; ಇನ್ನೂ ನಾಲ್ಕು ವರುಷ. ಒಂದು ದಿನ ನಡೆದ ಸಂಗತಿಯು ಥಕ್ಕನೆ ಅವರ ಕಣ್ಣ ಮುಂದೆ ಹಾದು ಹೋಯಿತು. ಅದು ಸುನೀತಿ ಅವರ ಪತ್ನಿಯು ಮಡಿದ ಕೆಲವೇ ದಿನ ಗಳ ಹಿಂದಿನ ಮಾತು:

ಎದುರು ಮನೆಯ ಮೇರಿಯು ಸುಲೋ ಚನೆಯ ಪ್ರಾಯದವಳು. ಮಲತಾಯಿಯ ಆಡಳಿತದಲ್ಲಿ ಬಿಗಿಯಲ್ಪಟ್ಟವಳು. ಮಲತಾ ಯಿಗೂ ಒಂದು ಮಗುವಿತ್ತು. ಅಂದು ಹಸಿವಿ ನಿಂದ ಬೊಬ್ಬಿಟ್ಟ ಮೇರಿಯು ಚಿಕ್ಕ ಮಗುವಿ ನಿಂದ ಒಂದು ತಿಂಡಿ ಬೇಡಿದಳೆಂಬ ಚಿಕ್ಕ ಕಾರಣ ದಲ್ಲಿ ಮಲತಾಯಿಯ ಅವಳ ವಧೆಮಾಡುವು ದರಲ್ಲಿದ್ದಳು. ಬೆತ್ತದಿಂದ ಹೊಡೆದ ಕಾರ್ಯ ಚಾಮುಂಡಿಗಳೆದ್ದಿದ್ದುವು.

ಆಗ ಸುಲೋಚನೆಯು ತನ್ನ ತಾಯಿಯೊಂ ದಿಗೆ ಚಾವಡಿಯ ಮೇಲೆ ಕುಳಿತಿದ್ದಳು. ಬಳಿ ಯಲ್ಲಿ ಆಡುತಿದ್ದ ಆಕೆಯ ಎದೆಯು ಮೇರಿಯ ಚೀರಾಟವನ್ನು ಕೇಳಿ ನಡುಗಿತು. ಬೆಚ್ಚಿಬಿದ್ದು ತನ್ನ ತಾಯಿಯ ಬಳಿ ಓಡಿ ಬಂದಳು. ಮೇರಿಯ ಚೀರಾಟವು ಇನ್ನೂ ಹೆಚ್ಚಿತು. ಆಗ ಸುಲೋಚನೆಯು ತನ್ನ ಕಣ್ಣುಗಳಿಂದ ನೀರನ್ನು ಸುರಿಸುತ್ತಾ ಕೇಳಿದಳು. "ಅಮ್ಮಾ ಮೇರಿಯು ಅಳುವುದೇಕೆ?"

"ಮಗೂ ಅವಳನ್ನು ಅವಳಮ್ಮ ಹೊಡೆಯು ತ್ತಾಳೆ." ತಾಯಿಯು ಕರುಣಾಸ್ವರದಲ್ಲಿ ಉತ್ತರ ವಿತ್ತಳು.

"ನೀನು ನನಗೆ ಅಮ್ಮನು. ನೀನು ನನಗೆ ಹೊಡೆಯುವುದಿಲ್ಲ. ಮೇರಿಯ ಅಮ್ಮನು ಮಾತ್ರ ಯಾಕಮ್ಮಾ ಅವಳಿಗೆ ಹೊಡೆಯುತ್ತಾಳೆ?"

"ಅದು ನಿನಗೆ ತಿಳಿಯದು ಮಗೂ! ಆ ಮೇರಿಯ ಅಮ್ಮನು ಸತ್ತು ಹೋಗಿದ್ದಾಳೆ. ಮೇರಿಗೆ ಅಮ್ಮನಿಲ್ಲ. ಈಗ ಇರುವವಳು ಅವಳ ಅಮ್ಮನಲ್ಲ. ಮಲತಾಯಿ."

"ಅಮ್ಮಾ ಮಲತಾಯಿ ಎಂದರೆ ಯಾರಮ್ಮಾ? ಅವಳೇಕೆ ಮೇರಿಯನ್ನು ಶಿಕ್ಷಿಸಬೇಕು?"

"ಮೇರಿಯ ತಾಯಿಯು ಸತ್ತು ಹೋದುದ ರಿಂದ ಮೇರಿಯ ತಂದೆಯು ಆಕೆಯನ್ನು ಮದುವೆಯಾದನು. ಮಲತಾಯಿಗೆ ಅವಳ ಮೇಲೆ ಮತ್ಸರವಿದೆ. ಮಗೂ."

"ಅಮ್ಮಾ, ನೀನು ಸತ್ತರೆ ನನ್ನ ಮಲತಾ ಯಿಯೂ ಹಾಗೆಯೇ ನನಗೂ ಮಾಡುವಳೇನು?"

"ಹೌದು ಮಗೂ."

"ಬೇಡವಮ್ಮ; ನಾನು ತಂದೆಯ ಹತ್ತಿರ ಹೇಳುತ್ತೇನೆ. ನನಗೆ ಹೊಡೆದರೆ ತಂದೆಯಿಂದ ಅವಳಿಗೆ ಹೊಡೆಸುತ್ತೇನೆ."

ಸುನೀತಿಯ ಕಣ್ಣುಗಳಿಂದ ನೀರಿನ ಹನಿಗಳು ಹರಿಯುತಿದ್ದುವು. ಅಷ್ಟರಲ್ಲಿ ಶ್ಯಾನುಭೋ ಗರು ಪ್ರವೇಶಿಸಿದರು. ಅವರು ಕಣ್ಣೀರಿನ ಕಾರಣವನ್ನು ಕೇಳಲು ಅವರಿಗೆ ವಿದಿತವಾಗು ವಂತೆ ಸುನೀತಿಯು ಮೆಲು ನಗೆಯಿಂದ ತನ್ನ ಮಗಳ ಬುದ್ಧಿವಂತಿಕೆಯನ್ನು ವಿಶದಗೊಳಿಸಿ ದಳು. ಅವರ ಮುಖದ ಮೇಲೆ ನಗುವಿ ದ್ದರೂ ಮನಸ್ಸಿನಲ್ಲಿ ಯಾವುದೋ ಒಂದು ಭಾವನೆಯು ವಿಪರೀತವಾಗಿ ಪೀಡಿಸುತಿತ್ತು. ಶ್ಯಾನುಭೋಗರು ಸುನೀತಿಯ ಮನೋಭಾವನೆ ಯನ್ನು ತಿಳಿದಿದ್ದರು. ಸುನೀತಿಗೆ ಕ್ಷಯರೋ ಗವು ಪೀಡಿಸುತಿತ್ತು. ಇನ್ನು ಆ ಕರ್ಪೂರದ ಬೆಂಕಿಯು ಯಾವಾಗ ನಿಲುತ್ತದೆಂದು ಯಾರು ಬಲ್ಲರು? ಅದ್ದುದರಿಂದ ಮೃತ್ಯುವು ತನ್ನ ತಲೆಯ ಮೇಲೆ ಸುತ್ತು ತಿರುಗುತ್ತಿದೆಯೆಂದು ಸುನೀತಿಯು ಬಲ್ಲವಳಾಗಿದ್ದಳು. ಅದುದ ರಿಂದ ತನ್ನ ಮುದ್ದು ಮಡಿಯ ಮುಖವು, ಮುಂದಿನ ಸ್ಥಿತಿಯು ಕಣ್ಣ ಮುಂದೆ ಆಗಾಗ್ಗೆ ಬಂದು ನಿಲ್ಲುತಿತ್ತು.

ಕಾಲನಿಗೆ ಯಾವುದೂ ಗಣ್ಯವಿಲ್ಲ. ಮಗು ವಿದೆ, ಗಂಡನಿದ್ದಾನೆ, ಎಂಬ ಅರಿವಿದೆಯೇ? ತನ್ನ ನ್ನು ಕಾಲನು ನುಂಗುವನೆಂದು ತಿಳಿದು ತನ್ನ ಕೊನೆಯ ಬಯಕೆಯನ್ನು ಪತಿಗರುಹಿದಳು. ಸುಲೋಚನೆಯ ಕಷ್ಟದ ಭಾರವನ್ನು ಪತಿ ಗೊಪ್ಪಿಸಿದಳು. ಶ್ಯಾನುಭೋಗರು ಎರಡನೆಯ ಮದುವೆಯನ್ನು ಮಾಡಿಕೊಳ್ಳುವುದಿಲ್ಲವೆಂದೂ ಸುಲೋಚನೆಯನ್ನು ತನ್ನ ಪ್ರಾಣಕ್ಕಿಂತಲೂ ಹೆಚ್ಚಾಗಿ ಪ್ರೀತಿಸುವೆನೆಂದೂ ಭಾಷೆಕೊಟ್ಟ ಮೇಲೆಯೇ ಆಕೆಯ ಆತ್ಮವು ಶಾಂತಿಯಿಂದ ಪ್ರಸ್ಥಾನಗೊಂಡಿತು.

ಸುಲೋಚನೆಯು ಆಗ ನಾಲ್ಕು ವರುಷದವಳಾ ದರೂ ತಾಯಿಯನ್ನು ನೋಡದ ನೆನಪು ಆಕೆಗೆ ಕೊಂಚ ಕೊಂಚವಿದ್ದಿತು. ತರೆಯ ತಂದೆ ಯನ್ನು ಹತ್ತಿ ಆತನ ಮುಖವನ್ನು ತನ್ನೆರಡು ಪುಟ್ಟ ಕೈಗಳಿಂದ ಹಿಡಿದು, ತನ್ನ ಮುದ್ದಾದ ಬಲ್ಲಿ ಮಾತುಗಳಿಂದ ತಾಯಿಯ ವಿಷಯವನ್ನು ಕೇಳುತಿದ್ದಳು. ಆ ವಿಷಯವನ್ನೆತ್ತಿದ ಕೂಡಲೇ ತಂದೆಯು ಮೌನವನ್ನೂ ಆತನ ಕಣ್ಣುಗಳು ಹೊಳೆಯುವುದನ್ನೂ ಕಂಡು ಬೆದರಿ ಆಕೆ ಸುಮ್ಮನಾಗುತಿದ್ದಳು. ಸುಲೋಚನೆಯು ಶಾಲೆಗೆ ಹೋಗಲು ಪ್ರಾರಂಭಿಸಿದಳು. ದಿನಗಳು ಕಳಿ ಯುತ್ತಾ ಹೋದುವು. ಇಬ್ಬರು ಅಕ್ಕಂದಿರು ಮದುವೆಯಾಗಿ ತಮ್ಮ ತಮ್ಮ ಗಂಡಂದಿರ ಮನೆಯಲ್ಲಿ ಸುಖವಾಗಿದ್ದರು. ಸುಲೋಚ ನೆಯು ೧೬ ವರುಷದವಳಾಗಿ ಸ್ಕೂಲ್ ಫೈನಲ್ ಪಾಸಾಗಿದ್ದರೂ ತಂದೆಗೆ ಇನ್ನೂ ಮದುವೆಯ ಯೋಚನೆಯಿಲ್ಲ. ಮನೆಯ ಇತರ ಸದಸ್ಯರು ಅದೆಷ್ಟೋ ಸಲ ಆತನನ್ನು ಚೇತನಗೊಳಿಸಿದರೂ ಅವನ ದೃಷ್ಟಿಯಲ್ಲಿ ಸುಲೋಚನೆಯು ಇನ್ನೂ ಮಗುವೇ ಆಗಿದ್ದಳು. "ಅವಸರವೇನು? ಇನ್ನೆ ರಡು ವರುಷಗಳು ಕಳೆಯಲಿ" ಎನ್ನುತಿದ್ದನು. 'ಆದರೆ ಎಷ್ಟರ ತನಕ ಕಳೆದೀತು?' ಒಂದು ದಿವಸ ಆತನ ತಾಯಿಯು ಕೇಳಿಯೇ ಬಿಟ್ಟಳು. ಈ ಅಪವಾದವು ನನ್ನಿಂದ ಸಹಿಸಲಾಗದು. ಮದುವೆಗೆ ಯೋಗ್ಯಳಾದ ಮಗಳನ್ನು ಎಷ್ಟು ಸಮಯ ಮನೆಯಲ್ಲಿಟ್ಟುಕೊಳ್ಳಬಹುದು? ಹೆಣ್ಣೆಂದರೆ ಹೆರವರ ಒಡವೆ. ಇಂದಲ್ಲ ನಾಳೆಯಾದರೂ ಹೊರಹೋಗತಕ್ಕವಳೇ! ನೆರೆ ಯವರ ಮಾತನ್ನು ಎಷ್ಟರ ತನಕ ಸಹಿಸ ಬಹುದು?

ಹೌದು ಗೋಪಾಲ ಶ್ಯಾನುಭೋಗರಿಗೆ ತನ್ನಿಂದಾದ ತಪ್ಪು ತಿಳಿಯಿತು. ಅವರ ಕಣ್ಣು ಗಳೆರಡೂ ತೆರೆದುವು. ಇನ್ನು ಸುಮ್ಮನಿರು ವುದು ತರವಲ್ಲವೆಂದು ಬೇಗ ಬೇಗನೆ ಜಾತಕ ಗಳನ್ನು ತರಿಸಿ ನೋಡಿದರು. ಸರಿಯಾಗಿ ಕೂಡಿಬಂದ ಜಾತಕವನ್ನು ನೋಡಿ ಅಲ್ಲಿಗೆ ಹೋಗಿ ಮಾತನಾಡಿ ಬರುವೆನೆಂದು ಹೇಳಿ ನಡೆದರು. ಅದರದು ಯಾವುದೋ ನೆವ ದಿಂದ ಕೂಡಿ ಬರಲಿಲ್ಲ.

ಗೃಹಚಾರಕ್ಕೆ ಎಲ್ಲಿಗೆ ಹೋದರೂ ಯೋಗ್ಯನಾದ ವರ ಸಿಕ್ಕುವುದೇ ಕಷ್ಟವಾಯಿತು. ಯೋಗ್ಯ ನೆಂದು ಕಂಡುಬಂದಲ್ಲಿ ಸುಲೋಚನೆಗೆ ಯಾವು ದಾದರೂ ಒಂದು ಊನವು ಕಂಡುಬರುತಿತ್ತು. ಸುಲೋಚನೆಯು ಒಪ್ಪಿದಲ್ಲಿ ಹುಡುಗನ ಕಡೆ ಯವರು "ತಾಯಿಯು ಕ್ಷಯರೋಗದಿಂದ ಸತ್ತಳು" ಎನ್ನುತಿದ್ದರು. ಹೀಗೆ ಸುಲೋಚ ನೆಯ ನೆಂಟಸ್ತಿಕೆಯನ್ನು ಹುಡುಕಲು ಮೊದಲು ಮಾಡಿ ಒಂದು ವರುಷವಾದರೂ ಎಲ್ಲಿಯೂ ಕೂಡಿ ಬರಲಿಲ್ಲ. ಹೇಳಿದ ಕಡೆ ಓಡಿ, ಶ್ಯಾನು ಭೋಗರ ಕಾಲಿನ ಚರ್ಮ ಸವೆಯಿತು. ಶ್ಯಾನುಭೋಗರು ಇದೇ ಯೋಚನೆಯಿಂದ ಕ್ಷೀಣವಾದರು. ಇಡೀ ದಿನ ಮನೆಯಲ್ಲಿ ಸುಲೋಚನೆಯ ನೆಂಟಸ್ತಿಕೆಯ ವಿಚಾರ. "ಅಲ್ಲಿಯವರು ಹೀಗೆಂದರು; ಇಲ್ಲಿಯವರು ಹೀಗೆಂದರು. ಆದರೆ ಎಲ್ಲಿಯೂ ಆಗುವಂಥ ಆಶೆಯು ಇರಲಿಲ್ಲ." ಸುಲೋಚನೆಯು ಈ ಮಾತುಗಳು ಈಟಿಯಂತೆ ತಿವಿಯುತಿದ್ದುವು. "ತನ್ನಿಂದಲ್ಲವೇ ತಂದೆಗೆ ಇಂಥಾ ಪೀಡೆ." ಸುಲೋ ಚನೆಗೆ ಇದೇ-ಮಾತು ಚಿಂತಿಸತೊಡಗಿತು. ಮನಸ್ಸಿನಲ್ಲಿ ಸದಾ ಇದೇ ವಿಚಾರ. ಆಕೆಗೆ ಜೀವನದಲ್ಲಿ ತಾತ್ಸಾರ ಹುಟ್ಟಿತು. ಇನ್ನು ಬದುಕಿದ್ದು ಬರಲಿ. ತಾನಿನ್ನು ಅದ್ದಿ ಥಾಕನು. ಎಂದು ಯೋಚಿಸಿದಳು. ಆದರೆ ಒಂದು ಕ್ಷಣ ಹೊತ್ತು ಮತ್ತೊಂದು ಕ್ಷಣ ತನ್ನ ಜೀವ [illegible] ಚಿತ್ರವು ಅವಳ ಕಣ್ಣ ಮುಂದೆ ಸುಳಿಯುವುದು. ಇಷ್ಟರ ವರೆಗೆ ಮಾಡಿದ [illegible] ನೀರಮೇಲಿನ ಗುಳ್ಳೆ ಗಳಂತೆ ಹಾಳಾಗುತ್ತವೆ. ಸುಲೋಚನೆಯ ಗತಿಯೂ ಶ್ಯಾನುಭೋಗರಂತೆಯೇ ಆಯಿತು. ಮೊದಲಿನ ಸುಲೋಚನೆಗೂ ಈಗಿನವಳಿಗೂ ವ್ಯತ್ಯಾಸವು ಒಡೆದು ಕಾಣುತಿತ್ತು. ಆಕೆಯು ಬಚ್ಚಿ ಕಡ್ಡಿಯಂತಾದಳು.

ಹೀಗೆ ಎಷ್ಟು ದಿನ ತಾನೇ ಹೀಗೆ ನಡೆಯ ಬಹುದು. ಸುಲೋಚನೆಯ ಮೊರೆಯನ್ನು ದೇವರು ಕೇಳಿದನೆಂಬಂತೆ ಹುಡುಗನ ಕಡೆಯ ವರು ಒಪ್ಪಿದರು. ಶ್ಯಾನುಭೋಗರ ಆನಂ ದಕ್ಕೆ ಪಾರವೇ ಇಲ್ಲ. ಹುಡುಗನನ್ನು ನೋಡಿ ಯಾಯಿತು. ದೀರ್ಘದೇಹಿ, ಹೃಷ್ಟಪುಷ್ಟನು, ತಕ್ಕ ಮಟ್ಟಿಗೆ ಸುಂದರನು. ಒಬ್ಬನೇ ಮಗನು. ಹೇರಳವಾದ ಆಸ್ತಿ ಇದೆ. ತಂದೆಯು ಬಂಡ ಸಾಲೆಯ ಯಜಮಾನನು. ಇನ್ನು ಕೇಳ ಬೇಕೆ? ಸುಲೋಚನೆಯ ಭಾಗ್ಯವು ಫಲಿಸಿ ದಂತೆಯೇ ಸರಿ. ಹುಡುಗ ನೋಡಿಯಾಯಿತು. ಎಲ್ಲರಂತೆ ತನ್ನ ಒಪ್ಪಿಗೆಯನ್ನು ಮುಂದುವರಿಸಿ ದನು. ತಂದೆತಾಯಿಗಳೂ ಒಪ್ಪಿದರು.

ವಧೂ ಪರೀಕ್ಷೆಯ ಸಮಯದಲ್ಲಿ ಸುಲೋ ಚನೆ ಉಮೇಶರ ಕಣ್ಣುಗಳು ಸೇರಿದುವು. ತಾನು ಆತನನ್ನು ಸೇರಿ ಸುಖಹೊಂದಲಾರೆ ನೆಂದೇ ಆಕೆಯ ಅಭಿಮತ. ಆದರೆ ಬೇರೆ ಯವರೊಡನೆ ಹೇಳಲು ಅಸಂತೋಷ. ವರನು ಯೋಗ್ಯನು. ಆದರೆ ವರನ ತಾಯಿಯು ಅತಿ ಪೂರ್ವಾಚಾರಗಳನ್ನು ಪಾಲಿಸತಕ್ಕವಳೆಂದು. ಆಕೆಯನ್ನು ಕಂಡ ಕೂಡಲೇ ಸುಲೋಚನೆಗೆ ಹೊಳೆಯಿತು. ಆಕೆಯ ಮನೆಯನ್ನು ಸೇರಿ ಕೆಲಕಾಲ ಹೇಗೆ ಸಂಸಾರವನ್ನು ಸಾಗಿಸಲಿ, ತಾನಾ ಚಾರಗಳನ್ನೇ ಬಲ್ಲವಳಲ್ಲ; ಏನು ಮಾಡಲಿ ಎಂದು ಆಕೆಯ ಮನಸ್ಸು ಕಲ್ಲಣಿಸುತಿತ್ತು.

ಸುಲೋಚನೆಯನ್ನು ಕಂಡು ಅವರೇನೋ ಒಪ್ಪಿದರು. ಸುಂದರಳೂ ಸುಕೋಮಲೆಯೂ ಸುಶೀಲೆಯೂ, ಸುಚ್ಚರಿತ್ರೆಯೂ ಆದ ಸುಲೋ ಚನೆಯನ್ನು ಯಾರು ತಾನೇ ಒಪ್ಪಲಿಕ್ಕಿಲ್ಲ! ಅವರು ಹೋದ ಕೂಡಲೇ ಸುಲೋಚನೆಯು ತನ್ನ ಕೋಣೆಯನ್ನು ಸೇರಿ ಕದವನ್ನಿಕ್ಕಿ ತನ್ನ ತಾಯಿಯ ಭಾವಚಿತ್ರದ ಕೆಳಗೆ ಮಸ್ತಕವ ನ್ನಿಟ್ಟು ಅಳಲು ಮೊದಲುಮಾಡಿದಳು. "ಅಮ್ಮಾ ನೀನಿಂದು ಜೀವಂತಳಾಗಿದ್ದರೆ ನನಗೀ ಸ್ಥಿತಿ ಬರುತಿದ್ದಿತೇ? ನನ್ನನ್ನು ಈ ಹಳ್ಳಿಗನ ಕುತ್ತಿಗೆಗೆ ಕಟ್ಟಲು ನೀನು ಬಿಡುತ್ತಿದ್ದೆಯೇ? ನನ್ನ ಸಂಸಾರವು ಈ ರೀತಿ ಮಣ್ಣುಪಾಲಾಗುತ್ತಿರ ಲಿಲ್ಲ. ಅಯ್ಯೋ! ಹುಡುಗಿಯರ ಬಾಳು ಹಾಳ ಲ್ಲವೇ? ಅವರ ಅಸ್ವತಂತ್ರ ಜೀವನವನ್ನು ಯಾರು ಕೇಳಬೇಕು?"

ಅಂದಿನಿಂದ ಸುಲೋಚನೆಯ ಸ್ಥಿತಿಯೇ ಬದಲಾಯಿತು. ಸುಲೋಚನೆಯು ಹೊತ್ತಿಗೆ ಸರಿಯಾಗಿ ಊಟಕ್ಕೆ ಬರುತ್ತಿರಲಿಲ್ಲ. ತಂದೆಯು ಕೂಗಿ ಕೂಗಿ ಕರೆದ ನಂತರ ಒಂದೆರಡು ತುತ್ತು ಗಳನ್ನು ಉಂಡಂತೆ ಮಾಡಿ ಹೋಗುತ್ತಿದ್ದಳು ಏನೋ ತಾನು ಮನೆಬಿಟ್ಟು ಹೋಗುವಳೆಂದು

(೩ನೇ ಪುಟಕ್ಕೆ ಮುಂದುವರಿಸಿಯದೆ)

★ ಮಾರಾಟಕ್ಕೆ ಸಿದ್ಧವಾಗಿವೆ ★

1944 ಶಾರದಾ ಡೈರಿಗಳು 1944

ಸಣ್ಣ ಸೈಜ (ಕೆಲಿಕೊ) 1-2-0 ದೊಡ್ಡ ಸೈಜ (ಕೆಲಿಕೊ) 1-12-0

(ಮುಚ್ಚಳದ್ದು) 1-6-0 ದೊಡ್ಡ ಸೈಜು (ಮುಚ್ಚಳದ್ದು) 2-0-0

ದೊರೆಯುವ ಸ್ಥಳ:—

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ಸಮರ ಭೂಮಿಯ ಸಂಚಾರ

ಚರ್ಚಿಲರಿಗೆ ಅನಾರೋಗ್ಯವುಂಟಾಗಿದೆ.
ಲ್ಪ ಕಾಲಕ್ಕಿಂತ ಮೊದಲೂ ಹೀಗೆ ಆಗಿತ್ತು.
ಾಗಿ ಈಗ ಅನಾರೋಗ್ಯದಲ್ಲಿ ಬಿದ್ದಿದ್ದಾರೆ ಹೀ
ಗ ಈಗ ಅವರ ಹೆಗಲ ಮೇಲಿಂದ ಮುಖ್ಯ
ಂತ್ರಿತ್ವದ ಭಾರವನ್ನು ತೆಗೆದು ಬೇರೆಯವ
ಬ್ಬರ ತಲೆ ಮೇಲೆ ಹಾಕುವ ಊಹಾ ಪೋ
ಹಲು ಸುದ್ದಿಗಳು ಲಂಡನಿನಿಂದ ಬರುತ್ತದೆ
ರ್ಚಿಲರ ಅಸೌಖ್ಯದಿಂದ ಬ್ರಿಟಿಷ ಜನತೆ ಬಹಳ
ಂತಾಮಗ್ನವಾಗಿದೆಯೆಂದು ಕೇಳುತ್ತವೆ ಈಗ
ಯುದ್ಧಕಾರ್ಯ ನಿರ್ವಹಿಸುವುದು ಅವ
ರಿಂದ ಸಾಧ್ಯವಿಲ್ಲವಾಗಿ, ಈ ಕುರಿತು ಬೇಗನೇ
ಯುದ್ಧ ಮಂಡಳವು ಒಂದು ಘೋಷಣೆ ಮಾ
ಡುವುದೆಂದೂ ಹೇಳಲಾಗಿದೆ.

ಚರ್ಚಿಲರು ಹೀಗೆ ಬೇನೆ ಬಿದ್ದಿರುವುದರಿಂದ,
ಯುದ್ಧದ ವಿಷಮ ಸಮಸ್ಯೆ ಬ್ರಿಟಿಷರ ಮುಂದಿ
ರುವುದರಿಂದ ಚರ್ಚಿಲರ ಉತ್ತರಾಧಿಕಾರಿ ಯಾ
ರು ಎಂಬ ವಿಷಯ ಈಗಾಗಲೇ ಚರ್ಚೆಯುಂಟಾಗಿ
ದ್ದರೂ ಅದರಲ್ಲಿ ಆಶ್ಚರ್ಯವೇನೂ ಇಲ್ಲ. ಈ
ಕುರಿತು ಜರ್ಮನ್ ವಿದೇಶ ಕಚೇರಿಯ ಅಧಿ
ಕಾರಿಗಳು ಒಂದು ಪ್ರಕಟಣೆ ಕೊಟ್ಟಿರುವುದನ್ನು
ಬರ್ಲಿನಿನಿಂದ ಪ್ರಕಟಿಸಲಾಗಿದೆ ಆ ಪ್ರಕಟಣೆ
ಯಲ್ಲಿ ಹೀಗಿದೆ 'ಚರ್ಚಿಲರ ಉತ್ತರಾಧಿಕಾರಿ
ವಿಷಯ ಬಲವಾದ ಚರ್ಚೆಯುಂಟಾಗಿದೆ ಉ
ತ್ತರಾಧಿಕಾರಿಯಾಗುವನು ಚರ್ಚಿಲರ ಸ್ಥಾನ
ಕ್ಕೆ ಯೋಗ್ಯನಿರಬೇಕು ಕೇವಲ ಕೈಗೊಂಬೆ
ಯಂತೆ ನಡೆದರೆ ಸಾಲದು ಚರ್ಚಿಲರಷ್ಟೇ
ಬುದ್ಧಿಶಾಲಿಯಾಗಿರಬೇಕು ಉಮೇದ್ವಾರರ
ಪಟ್ಟಿಯಲ್ಲಿ ಈಡನರ ಹೆಸರು ಮೊದಲಿಗಿದೆ
ವಿದೇಶ ನೀತಿಯಲ್ಲಿ ಮುಖ್ಯವಾಗಿ ಬ್ರಿಟನ್
ಮತ್ತು ರಶ್ಯಗಳ ಸಂಬಂಧದಲ್ಲಿ ಈಡನರು ಪಳ
ಗಿದ ಕೈಯೆಂದು ಪ್ರಸಿದ್ಧಿಯಿದೆ. ಆದರೆ ಈಡ
ನರು ಕನ್ಸರ್ ವೇಟಿವ್ ಪಕ್ಷದ ಮುದ್ದು
ಮಗುವಲ್ಲ'

ಹೀಗೆ ಈಡನರ ಹೆಸರು ಸದ್ಯ ಮುಂದಕ್ಕೆ
ಬಂದಂತೆ ತೋರುತ್ತದೆ ಈಡನರಲ್ಲದಿದ್ದರೆ
ಅಟ್ಲೀಯವರಿದ್ದಾರೆ 'ಅವರಾಗದಿದ್ದರೆ ಅಮೆರಿ
ಯಾದರೂ ಆಗ ಬಹುದು ಏಕೆಂದರೆ ಇವ
ರೆಲ್ಲಾ ಒಂದೇ ಜಾತಿಗೆ ಸೇರಿದವರು, ಪ್ರಬಲ
ಸಾಮ್ರಾಜ್ಯ ಶಾಹೀ ಪ್ರಭೃತಿಗಳು ಹಿಂದೊಮ್ಮೆ
ಕ್ರಿಪ್ಸರನ್ನು ಮುಂದಿನ ಬ್ರಿಟಿಷ್ ಪ್ರಧಾನ ಮಂ
ತ್ರಿಯೆಂದು ಜನರು ಹೇಳುತ್ತಿದ್ದರು ಆದರೆ
ಭಾರತದ ಸಂಧಾನಕ್ಕೆ ಕ್ರಿಪ್ಸರನ್ನು ಕಳುಹಿಸಿ,
ಲುಯಿಫಿಶರ್ ಹೇಳಿದಂತೆ 'ಕ್ರಿಪ್ಸರಿಗೆ ಬೆನ್ನಿನಿಂದ
ತಿವಿದು ಅವರ ಕೀರ್ತಿ ಕೆಡಿಸಿ ಬಿಟ್ಟಿದ್ದರಿಂದ
ಅವರಂಥಾ ಪ್ರಾಗತಿಕ ಮುಂದಾಳುವಿಗೆ ಸದ್ಯ
ಬ್ರಿಟಿಷ್ ಪ್ರಧಾನಿಯಾಗುವ ಸಂದರ್ಭ ಇದ್ದಂ
ತೆ ತೋರುವುದಿಲ್ಲ

ತ್ರಿಮೂರ್ತಿಗಳ ಕೊಲೆಯತ್ನ?

ತ್ರಿಮೂರ್ತಿಗಳೆಂದರೆ ಪುರಾಣದ ದೇವರ
ಸದೃಶ್ಯರೆಂದು ಅರ್ಥವಲ್ಲ ಹೇಗಿದ್ದರೂ ಪ್ರ
ಸಿದ್ಧರಾದ ಮೂರ್ಖುಮಂದಿಗಳು ಇತ್ತೀ
ಚೆಗೆ ಚರ್ಚಿಲ್, ರೂಸ್ ವೆಲ್ಟ್, ಸ್ಟಾಲಿನರು
ತೆಹ್ರಾನಿನಲ್ಲಿ ಕೂಡಿ ಮಾತಾಡಿದರಷ್ಟೆ? ಈ
ಸಂಧರ್ಭದಲ್ಲಿ ಇವರನ್ನು ಕೊಂದುಬಿಡಬೇ
ಕೆಂದು ಜರ್ಮನ್ ದ್ರೋಹಿಗಳು ಒಳಸಂಚು
ನಡೆಸಿದ್ದರೆಂದೂ ಆದರೆ ಈ ತ್ರಿಮೂರ್ತಿಗಳು
ಅದರಿಂದ ಪಾರಾದರೆಂದೂ, ಹೀಗೆ ಈಗ ಒಂದು
ಸುದ್ದಿ ಪ್ರಕಟಿಸಲಾಗಿದೆ 'ಜರ್ಮನರು ನಮ
ನ್ನು ಮೂವರನ್ನೂ ಕೊಲೆಮಾಡುವ ಒಳಸಂ
ಚು ಹಾಕಿದ್ದಾರೆಂದು ಸ್ಟಾಲಿನರಿಗೆ ತಿಳಿದದ್ದರಿಂದ
ಮತ್ತು ನಾನು ಅಮೆರಿಕನ್ ರಾಯಭಾರಿ ಕಚೇ
ರಿಯಲ್ಲಿ ಇಳಿದರೆ ಸಭೆಗಾಗಿ ಬರಾಗ ರಶ್ಯನ್
ರಾಯಭಾರಿ ಕಚೇರಿಗೆ ಬಂದು ಹೋಗುವುದು
ಗಂಡಾಂತರದ್ದಾಗುವುದೆಂದು ಅವರು ಹೇಳಿದ್ದ
ರಿಂದ ನಾನೂ ಸೋವಿಯೆಟ್ ರಾಯಭಾರಿ
ಕಚೇರಿಯಲ್ಲಿಯೇ ಇಳಿದುಕೊಂಡೆನು' ಎಂದು
ರೂಸ್ ವೆಲ್ಟರು ಸುದ್ದಿಗಾರರ ಸಭೆಯಲ್ಲಿ ಹೇಳಿ
ದರು. ಚರ್ಚಿಲರು ಸಹಾ ಸೋವಿಯೆಟ್
ರಾಯಭಾರಿ ಕಚೇರಿಯಲ್ಲಿಯೇ ಇದ್ದರೆಂದೂ
ಅವರು ಹೇಳಿದರು

ತೆಹರಾನ್ ಸುತ್ತಲೂ ಒಂದು ನೂರು ಜನ
ಜರ್ಮನ್ ಗುಪ್ತಚಾರರು ಸುಳಿಯುತ್ತಿದ್ದು
ತಾವು, ಮೂವರು ಕೂಡಿ ತೆಹರಾನ್
ಬೀದಿಗಳಲ್ಲಿ ಹೋಗುತ್ತಿದ್ದಾಗ ಜರ್ಮನರು
ನಮ್ಮ ಮೇಲೆ ಗುರಿ ಇಟ್ಟಿದ್ದರೆ ಅವರ ಆನಂ
ದಕ್ಕೆ ಪಾರವೇ ಇದ್ದಿಲ್ಲವೆಂದೂ, ಸೋವಿಯೆಟ್
ಮತ್ತು ರಶ್ಯನ್ ರಾಯಭಾರಿ ಕಚೇರಿಗೆ ಒಂದು
ಮೈಲು ಅಂತರವಿದೆಯೆಂದೂ ಈ ಕುರಿತು
ರೂಸ್ ವೆಲ್ಟ್ ಹೇಳಿದರು

ಬರ್ಮಾ ಯುದ್ಧವೆಂದು?

ಕೈರೋ ತೆಹರಾನ್ ನಿರ್ಣಯಗಳು ಕಾರ್ಯ
ರೂಪಕ್ಕೆ ಬರಲು ಎಷ್ಟು ಸಮಯಬೇಕಾದೀತು?
ಇಂಥಾ ಪ್ರಶ್ನೆ ಹಾಕುವುದು ಹುಡುಗ ಬುದ್ಧಿ
ಎಂದೇನೋ ಹೇಳಬಹುದು, ಏಕೆಂದರೆ ಪ್ರಮು
ಖ ನಾಲ್ಕು ರಾಷ್ಟ್ರಗಳು ಯಾವ ವಿಷಯದಲ್ಲಿ
ಮತಭೇದವಿಲ್ಲದೆ ಒಪ್ಪಿರುವವೋ ಅಂಥಾ
ವಿಷಯಗಳು ಬೇಗನೇ ಕಾರ್ಯರೂಪದಲ್ಲಿ
ಬರಬಹುದೆಂದು ಸಿದ್ಧಾಂತಿಸಲಾಗುತ್ತದೆ ಪೂರ್ವ
ಭಾಗದ ನಮಗೆ ಯುದ್ಧ ವಿಚಾರದಲ್ಲಿ ವರ್ಷದ
ಆರು ತಿಂಗಳು ಮಾತ್ರ ಪ್ರಾಮುಖ್ಯವಾದುದು
ಏಕೆಂದರೆ ಉಳಿದಾರು ತಿಂಗಳು ಮಳೆಗಾಲವಾ
ಯಿತು ಮಳೆಗಾಲ ಬಿಟ್ಟು ಮಿಕ್ಕಾರು ತಿಂಗ
ಳಲ್ಲಿ ಬರ್ಮವನ್ನು ಹಿಡಿವುದೋ, ಭೌಧ್ಧತವನ್ನು
ರಕ್ಷಿಸುವುದೋ ಚೀನಕ್ಕೆ ಸಹಾಯಮಾಡು
ವುದೋ, ಅಥವಾ ಜಪಾನನ್ನು ಜರ್ಮನಿಯೊಡನೆ
ನೆಲಸಮ ಮಾಡುವುದೋ ಈ ಎಲ್ಲಾ ಕೆಲಸ
ಗಳೂ ಆಗಬೇಕು

ಬರ್ಮಾವನ್ನು ಬೇಗನೇ ಸ್ವಾಧೀನಪಡಿಸಬೇ
ಕೆಂದು, ಯುದ್ಧನಿಪುಣರು, ರಾಜನೀತಿಜ್ಞರು,
ಸೇನಾಪತಿಗಳು, ವೈಸರಾಯರು, ಗವರ್ನರರು
ಅನ್ನವಿಲ್ಲದೆ ಉಪವಾಸ ಬೀಳುವ ಜನರೂ ಕೂ
ಡಾ ಹೇಳುತ್ತಲೇ ಇದ್ದಾರೆ ಆದರೆ ಇದುವರೆ
ಗೆ ಬರ್ಮವನ್ನು ಸ್ವಾಧೀನಪಡಿಸುವ ಕಾರ್ಯ
ದಲ್ಲಿ ನಮ್ಮ ಸೇನಾಪತಿಗಳು ಮುಂದುವರಿದಂತೆ
ತೋರುವುದಿಲ್ಲ ನಾವೀಗ ದಶಂಬರ ಕೊನೆ
ವಾರದಲ್ಲಿದ್ದೇವೆ ಎಂದರೆ ಆಕ್ರಮಣ ಕಾರ್ಯ
ಕೈಕೊಳ್ಳಲು ಕೇವಲ ಐದೇ ತಿಂಗಳು ಉಳಿ
ಯಿತು. ಬದಲು ಶತ್ರುವೇ ಆಗಾಗ ಮದ್ರಾಸಿ
ಗೂ, ಅಸಾಮಿಗೂ, ಸಾಲದ್ದಕ್ಕೆ ಹಗಲು ಹೊ
ತ್ತಿನಲ್ಲಿಯೇ ಕಲ್ಕತ್ತೆಗೂ ಬಾಂಬು ಸುರಿಸಿ
ಹೋಗುತ್ತಾನೆ. ಇದರಿಂದ ಆದ ಹಾನಿಯೆಂದ
ರೆ ಕೇವಲ ಎರಡು ಶತ್ರುವಿಮಾನಗಳುರುಳಿದ್ದೆಂ
ದು ಆಶ್ಚರ್ಯಕರ ಸುದ್ದಿ ಬಂದಿದ್ದರೂ, ಶತ್ರುವು
ಮುಂದೊತ್ತುವುದರಲ್ಲಿದ್ದಾನೆಂಬುದಿಷ್ಟು ವಿದಿತ
ವಲ್ಲವೆ?

ಸಾರ್ಜೆಂಟರ ಶಿಕ್ಷಣಾಯೋಜನೆ

ರಾಧಾಕೃಷ್ಣನರ ಅಭಿಪ್ರಾಯ

'ಶಿಕ್ಷಣವು ಹಿಂದೂಸ್ಥಾನದ ಉನ್ನತಿಯು
ವಿಶಾಲ ಪ್ರಪಂಚದಲ್ಲಿ ಹಿಂದೂಸ್ಥಾನದ
ಉನ್ನತಿ ತೋರಬೇಕಾದರೆ ಮೊದಲು ಶಿಕ್ಷಣದ
ಕಡೆಗೆ ಗಮನ ಕೊಡಬೇಕು' ಎಂದು ಸರ್
ರಾಧಾಕೃಷ್ಣನರು ಹೈದರಾಬಾದ್ ಉಸ್ಮಾನಿಯ
ವಿಶ್ವವಿದ್ಯಾಲಯದಲ್ಲಿ ಒಂದು ಭಾಷಣ ಮಾಡು
ತ್ತಾ ಹೇಳಿದರು ಅವರು ಮತ್ತೆ ಹೀಗಂದರು

"ಸಾರ್ಜೆಂಟರು ತಮ್ಮ ಬುದ್ಧಿವಂತಿಕೆ
ಯನ್ನು ಉಪಯೋಗಿಸಿ ಯುದ್ಧಾನಂತರ ಶಿಕ್ಷ
ಣದ ಯೋಜನೆ ಕೈಕೊಂಡಿರುವರು ಇದ
ಕ್ಕಾಗಿ ಭಾರತೀಯರು ಅವರಿಗೆ ಕೃತಜ್ಞರಾಗಿರ
ಬೇಕು ಸಾಮಾಜಿಕ ಹೊಣೆ ಮತ್ತು ದೂರ
ದೃಷ್ಟಿಯುಳ್ಳ ರಾಷ್ಟ್ರೀಯ ಸರಕಾರವು ಈ
ಯೋಜನೆಯನ್ನು ಅವಶ್ಯ ಕೈಕೊಳ್ಳಬೇಕು

ಕಸ್ತೂರ್ ಬಾರ ಆರೋಗ್ಯ ಚಿಂತಾಜನಕ

ವಾಗಿದೆಯೆಂದೂ, ಶ್ರೀ ದೇವದಾಸ ಗಾಂಧಿ
ಯವರು ತಮ್ಮ ಪತ್ನೀ ಪುತ್ರರು ಸಮೇತ ತಾ
ಯಿಯ ಹಾಸಿಗೆ ಬಳಿಯಲ್ಲಿ ಒಂದು ಗಂಟೆ
ಕಾಲ ಇದ್ದರೆಂದೂ ತಾ ೨೦ರ ವಾರ್ತೆ

ರಂಗನಾಥನರು ಅರಸರನ್ನು ಕಂಡರು

ಅಂತರಾಷ್ಟ್ರೀಯ ಕೂಲಿಗಾರ ಕಚೇರಿಯ
ಶ್ರೀ ಸಾಮುವೇಲ್ ರಂಗನಾಥನರು, ಬೇರೆ
ಅಧಿಕಾರಿಗಳೊಂದಿಗೆ ಒಕಿಂಗ್ಹ್ಯಾಮ್ ಅರಮನೆ
ಯಲ್ಲಿ ಜಾರ್ಜ್ ಸಾರ್ವಭೌಮರ ಭೇಟಿಮಾಡಿ
ದರು

TIMES HAVE CHANGED!



ಕಾಲ ಬದಲಾವಣೆಯಾಗಿದೆ
ಆಗ ಮತ್ತು ಈಗ ಸಮಯ
ನೋಡುವುದು

ಸಮಯ ತಿಳಿಯಲು ಪ್ರಾಚೀನ ಕಾಲ
ದಿಂದಲೇ ಸೂರ್ಯಬಿಂಬವು ಗೊತ್ತಾದ
ಸಾಧನ ಕ್ರಿ ಪೂ 800ರಿಂದಲೇ ಇದು
ವಿಚಾರದಲ್ಲಿತ್ತು. ಶತಮಾನಗಳ ನಂತರ
ಸಮಯ ನೋಡುವ ಸಾಧನಗಳು ಬದಲಾ
ಗುತ್ತಾ ಬಂತು ಇಂದಿಗೆ ಸಮಯ ನೋ
ಡುವ ಸಾಧನ ಪೂರ್ಣ ಪರಿಶುದ್ಧವಾದ
ವೆಸ್ಟ್ ಎಂಡ್ ವಾಚನ್ನು ಆಧರಿಸಿದೆ

ನಾವು ಜಾಹಿರು ಮಾಡಿದ ಎಲ್ಲಾ ತರದ
ವಾಚುಗಳನ್ನೂ, ಸರಿಯಾಗಿ ಸಾಧನಗಳು
ಬರದಿರುವುದರಿಂದ ಕೊಡಲಿಕ್ಕಾಗದಿದ್ದರೂ
ನಮ್ಮಲ್ಲಿರುವ ಸ್ಟಾಕಿನಲ್ಲಿ ಉತ್ತಮವಾದು
ದನ್ನೇ ನಾವು ಕೊಡಲು ಯತ್ನಿಸುವೆವು

ನ್ಯೂ ಕೆಲಿಬ್ರೆ 'ಇ' ನಿಕ್ಕಲ್ ಸಿಲ್ವರ್ ಕೇಸ್
ನಂ. 62, ಎವರ್ ಬ್ರೈಟ್ ಸ್ಟೀಲ್ ರೂ 71
8 ಕ್ಯಾರಟ್ ಗಟ್ಟಿ ಬಂಗಾರ ರೂ 197



ಗೇಟ್ ಲೂಷ್ ರೆಕ್ಟೆಂಗುಲರ್
8 ಕ್ಯಾರೆಟ್ ಗಟ್ಟಿ ಬಂಗಾರ ರೂ 304,

ವೆಸ್ಟ್ ಎಂಡ್ ವಾಚ್ ಕಂಪೆನಿ
ಬೊಂಬಾಯಿ ಮತ್ತು ಕಲ್ಕತ್ತ

WEST END WATCH Co
Bombay - Calcutta



ಲೋಕ ಪ್ರಸಿದ್ಧವಾ
ದ ಚರ್ಮರೋಗ
ನಿವಾರಕ

ಜಾಂಬಕ್ ತುರಿಕಜ್ಜಿ
ಗಾಯ ಬಾವುಗಳನ್ನು
ಗುಣಪಡಿಸುವುದ

ಚರ್ಮದ ರೋಗಗಳಿಗೆ
ಮತ್ತು ಗಾಯಗಳಿಗೆ ಇಡೀ
ಲೋಕದಲ್ಲೇ ಪ್ರಖ್ಯಾತವಾಗಿ
ರುವ ಔಷಧವೆಂದರೆ ಜಾಂಬಕ್
ಗಾಯವಾದರೆ ಇಲ್ಲವೆ ಕಜ್ಜಿ
ಯಾದರೆ ಇದನ್ನು ಅದರ
ಮೇಲೆ ಮೆಲ್ಲಗೆ ತಾಗಿಸಿರಿ,
ಅದು ಕೂಡಲೇ ಸುಲಭದಲ್ಲಿ
ಗುಣವಾಗುವುದು ಜಾಂಬಕಿ
ನಲ್ಲಿರುವ ಅಮೂಲ್ಯ ವನೌಷಧಿ ಸತ್ವವು ಚರ್ಮದ
ನರಗಳಲ್ಲಿ ಕೂಡಲೇ ಹೀರಿಕೊಂಡು, ಬೇನೆಯನ್ನು
ಕಡಿಮೆಮಾಡುವುದು ಬಾವನ್ನು ಇಳಿಸುವುದು, ಒಣ
ಗುವಂತೆ ಮಾಡಿ ಗುಣಕೊಡುವುದು ಕಳೆಯಬಳಿಯ
ದಂತೆ ಜಾಂಬಕ್ ಗುಣಮಾಡುತ್ತದೆ.

ಯಾವಾಗಲೂ ಜಾಂಬಕನ್ನೇ ಸೇವಿಸಿರಿ

ZAM-BUK

ಪ್ರಾಣಿ ಕೊಬ್ಬು, ವಿರಹಿತವಾದುದು.

ಸ್ವದೇಶಾಭಿಮಾನಿ
ತಾರೀಖು 24—12—1943

...ಸಮಸ್ಯೆ ... ಬೇಡವಾದ ... ಹೇಗೆ ಪರಿಹರಿಸಲ್ಪಡುತ್ತದೆ ... ಯೆಂದು ... ತಿಳಿಸುವುದು ಉಚಿತವಿದೆ.

'ಯುದ್ಧದಲ್ಲಿ ಜಯಿಸುವ, ಭಾರತದ ಆರ್ಥಿಕರಂಗ, ಶಾಂತಿವ್ಯವಸ್ಥೆ ಉತ್ಪಾದಕ ಶಕ್ತಿಗಳನ್ನು ಗಳಿಸುವ ಕೃತ್ಯದಲ್ಲಿ ತಾನು ತನ್ನ ಗಮನವನ್ನೀಗ ಕೊಡಬೇಕಾಗಿದೆ' ಎಂದು ವೇವಲರು ಸಾರಿದರು. ಈ ಉದ್ದೇಶಗಳನ್ನಾದರೂ ವೈಸರಾಯರು ಈಗ ಸಾಧಿಸಬೇಕಾಗಿದ್ದರೆ ರಾಷ್ಟ್ರದ ಮುಖಂಡರನ್ನು ಬಿಡುಗಡೆಮಾಡಿ ರಾಷ್ಟ್ರೀಯ ಸರಕಾರ ಸ್ಥಾಪಿಸಬೇಕಾಗಿದೆ. ಈ ಕುರಿತು, ಮುಖಂಡರ ಬಿಡುಗಡೆ ವಿಷಯವಾಗಿಯಾಗಲಿ, ರಾಷ್ಟ್ರೀಯ ಸರಕಾರ ವಿಷಯವಾಗಿ ಯಾಗಲಿ ಒಂದೇ ಒಂದು ಮಾತನ್ನೂ ಹೇಳದೆ, ಕೇವಲ ತನ್ನ ಪ್ರಕೃತದ ಗಮನದ ಕುರಿತು ಮಾತ್ರ ತಿಳಿಸಿದರೆ ಜನತೆ ಇದರಿಂದ ಏನೆಂದು ತಿಳಕೊಳ್ಳಬಹುದು? ಕಾಂಗ್ರೆಸ್ ಮುಖಂಡರನ್ನು ಬಿಡುಗಡೆ ಮಾಡದೆಯೇ, ರಾಷ್ಟ್ರೀಯ ಸರಕಾರವಿಲ್ಲದೆಯೇ, ವೈಸರಾಯರು ಮೇಲಿನ ಉದ್ದೇಶಗಳನ್ನೀಡೇರಿಸುವುದರಲ್ಲಿ ಆತುರರಿರುವರೆಂದೆ? ವೇವಲರು ಹೀಗೆ ಅಸ್ಪಷ್ಟವಾಗಿ ಹೇಳಿದ್ದು ಅಷ್ಟು ಸಮಾಧಾನಕರವಾಗಿಲ್ಲ.

ಜಪಾನನ್ನು ಸೋಲಿಸುವುದು ಜರ್ಮನಿಯನ್ನು ಸೋಲಿಸುವಷ್ಟೇ ಪ್ರಾಮುಖ್ಯ ವಿಚಾರವೆಂದು ವೇವಲರು ಹೇಳುವ ವಿಷಯದಲ್ಲಿ ಯಾರೂ ಭಿನ್ನಾಭಿಪ್ರಾಯ ಪಡುವವರಿಲ್ಲ. ಆದರೆ ಜಪಾನನ್ನು ಜರ್ಮನಿಯಂತೆ ಸೋಲಿಸಬೇಕಾದಲ್ಲಿ ಬ್ರಿಟಿಷ್ ಸರಕಾರ ಹಾಗೂ ವೇವಲರು ಭಾರತದಲ್ಲಿ ಏನು ಪ್ರಯತ್ನ ಮಾಡಿದ್ದಾರೆ ಎಂಬ ಕುರಿತು. ಮಾತನಾಡುವುದು ಅಗತ್ಯವಿದೆ. ವೇವಲರು ಒಪ್ಪುವಂತೆ, ಜಪಾನನ್ನು ಗೆಲ್ಲಬೇಕಾದರೆ, ಗೆದ್ದು ಪಶುಶಕ್ತಿಯನ್ನು ಅಡಗಿಸಬೇಕಾದರೆ, ಭಾರತವು ಇನ್ನಷ್ಟು ಕಷ್ಟಸಹಿಸಿ 'ಯುದ್ಧದಲ್ಲಿ ಸೇರಬೇಕು, ಹೀಗೆ ಆಗಬೇಕಾದರೆ ಸಾರ್ವಜನಿಕರು ಮತ್ತು ಪತ್ರಿಕೆಗಳು ನೆರವಾಗಬೇಕು. ಹೀಗೆ ನೆರವು ಸಿಗಲು, ರಾಷ್ಟ್ರದ ಮುಖಂಡರನ್ನು ಬಿಡುಗಡೆಮಾಡಿ, ರಾಷ್ಟ್ರೀಯ ಸರಕಾರ ಸ್ಥಾಪಿಸಿ ದೇಶದ ವಿಶ್ವಾಸಾರ್ಹ ಮುಂದಾಳುಗಳ ಕೈಯಲ್ಲಿ ಅಧಿಕಾರ ಮಾತ್ರವನ್ನೂ ಕೊಡಬೇಕು ಎಂಬ ವಿಚಾರವನ್ನೂ ವೇವಲರು ಏಕೆ ಮರೆತು ಬಿಟ್ಟರೋ ತಿಳಿಯಲಾರದು.

ವೇವಲರು ಮಾತನಾಡಿದರು. ಅವರು ವೈಸರಾಯರಾದ ಮೇಲೆ ಏನು ಮಾತನಾಡುತ್ತಾರೆಂದು ಕೇಳಲು ಹಲವರಿಗೆ ಕುತೂಹಲವೂ ಇತ್ತು. ಆ ಕುತೂಹಲವೇನೋ ಈಗ ನಿವಾರಣೆಯಾಯಿತು. ಆದರೆ ಜನರ ಆಕಾಂಕ್ಷೆ ನಿರಾಶೆಯಾಯಿತು. ರಾಷ್ಟ್ರ ಮುಖಂಡರ ಬಿಡುಗಡೆ, ರಾಷ್ಟ್ರೀಯ ಸರಕಾರ ಸ್ಥಾಪನೆ, ಭಾರತೀಯರಿಗೆ ಅಧಿಕಾರ ಕೊಡುವ ವಿಚಾರ ಯಾವುದನ್ನೂ ಮಾತನಾಡದೆ ಇರುವುದರಿಂದ ವೇವಲರ ಭಾಷಣವು ನಿರಾಶೆಯನ್ನೇ ಹುಟ್ಟಿಸಿದೆ.

ವೇವಲ್ ಭಾಷಣ

ಲಾರ್ಡ್ ವೇವಲರು ವೈಸರಾಯರಾಗಿ ಬಂದವರೇ, ಇದುವರೆಗೆ ಯಾವುದೇ ಮಾತನ್ನೂ ಆಡದೆ, ಕೇಂದ್ರ ಶಾಸನ ಸಭಾಧಿವೇಶನದಲ್ಲಿಯೂ ಮೌನವಾಗಿದ್ದವರು, ಕಲ್ಕತ್ತದ ಎಸೋಸಿಯೇಟೆಡ್ ಚೇಂಬರ್ಸ್ ಓಫ್ ಕಾಮರ್ಸಿನಲ್ಲಿ ಭಾಷಣ ಮಾಡಲು ಯಾವ ಮಹತ್ವದ ಮಾತುಗಳನ್ನು ಹೇಳುವರೋ, ಭಾರತದ ರಾಜಕೀಯದಲ್ಲಿ ಯಾವ ಬದಲಾವಣೆಗಳಾಗುವವೋ ಎಂದು ಭಾರತೀಯರು ಮಾತ್ರವಲ್ಲ, ಭಾರತದ ಹಿತಾಕಾಂಕ್ಷಿಗಳಾದ ಹಲವು ವಿದೇಶಿಯರೂ ನಿರೀಕ್ಷಿಸುತ್ತಿರಲು ಮೊನ್ನೆ ಕಲ್ಕತ್ತದ ಎ. ಚೇಂ. ಓಫ್ ಕಾಮರ್ಸಿನಲ್ಲಿ ಮಾಡಿದ ಭಾಷಣದಿಂದ, ನಿರೀಕ್ಷಕರನ್ನೆಲ್ಲಾ ನಿರಾಶೆಗೊಳಿಸಿದ್ದಾರೆ.

ಭಾರತೀಯರು ಸಕಲ ಪಕ್ಷದವರೂ, ಮುಂಧ ಪಕ್ಷದ ಸಪ್ರುಜಯಕರಾದಿಗಳೂ ಕೂಡಾ, ಭಾರತದ ಬಿಕ್ಕಟ್ಟು ಬಗೆಹರಿಸುವಂತೆ, ಬ್ರಿಟನಿಗೆ ಮೊರೆಯಿಡುತ್ತಿರುವಾಗ, ವೈಸರಾಯರು ಭಾರತದ ಸಮಸ್ಯೆ ಪರಿಹರಿಸಲು ಇಲ್ಲಿನ ಪಕ್ಷಪಂಗಡಗಳ ಸಹಕಾರ ಕೇಳಿದ್ದು ವಿಚಿತ್ರವಾದರೂ ಅಮೆರಿ ರಾಗವನ್ನಿದು ಅನುಸರಿಸಿಯೇ ಇರುವುದರಿಂದ, ವೇವಲರ ಆಡಳಿತದಲ್ಲಿಯೂ ಬ್ರಿಟಿಷರ ಧೋರಣದಲ್ಲಿ ಏನೇನೂ ಬದಲಾವಣೆಯಿಲ್ಲವೆಂದು ಈಗ ತಿಳಕೊಳ್ಳುವಂತಾಗಿದೆ.

ವೇವಲರು ಇದುವರೆಗೆ ಮಾತನಾಡದಿರುವುದಕ್ಕೆ ಕಾರಣ ಕೊಡುತ್ತಾ, ಪರಿಸ್ಥಿತಿಯನ್ನು ಸುಧಾರಿಸಲು ತಕ್ಕ ಹಂಚಿಕೆಯಿಲ್ಲದ್ದೆ ಕಾರಣವೆಂದು ಹೇಳಿದರು. ಹಾಗೆಂದರೆ, ಪರಿಸ್ಥಿತಿ ಸುಧಾರಿಸುವಲ್ಲಿ ನ್ಯಾಯದಿಂದ ಹೇಳುವಂಥಾ ವಿಷಯಗಳೇನೂ ಇಲ್ಲದಿದ್ದರೂ ಅವರು ಮೌನವಾಗಿ ಕಾರ್ಯರೂಪದಿಂದಲೇ ಎಲ್ಲವನ್ನೂ ಮಾಡುವರೆಂದು ಅರ್ಥವೆ? ಹಾಗಾದರೆ, ಈ ಕೆಲಸಕ್ಕೆ ಬೇಕಾದ ರುಜುವಾತುಗಳು ಸಾರ್ವಜನಿಕರ ಮುಂದೆ ಇಷ್ಟರಲ್ಲಿಯೇ ಇರಬೇಕಾಗಿತ್ತು. ಅಂಥಾದ್ದೇನೂ ಇಲ್ಲದಿರುವಾಗ ವೈಸರಾಯರು ಯಾವಾಗ ಸಮಸ್ಯೆ ಬಿಡಿಸಲು ಸಮರ್ಥರಾದಾರೆಂದು ಪ್ರಜೆಗಳು ತಿಳಕೊಳ್ಳಬಹುದೋ ಅರ್ಥವಾಗುವುದಿಲ್ಲ.

ಯುದ್ಧಕಾಲದಲ್ಲಿ ರಾಜಕೀಯ ಬಿಕ್ಕಟ್ಟು ಬಿಡಿಸಲು ಅಸಾಧ್ಯವೆಂದು ಅವರು ಅಭಿಪ್ರಾಯ ಪಡುವುದಿಲ್ಲವೆಂಬುದನ್ನು ಪುನಃ ಈಗ ಒತ್ತಿ ಹೇಳಿದ್ದಾರೆ. ಈ ಮಾತೇನೋ ಹಿಂದಿನವರ ಮಾತಿಗಿಂತ ಸ್ವಲ್ಪ ಭೇದವಿದೆ ಮಾತ್ರವಲ್ಲ ಇಲ್ಲಿ ಆಶಾಕಿರಣ ಮೂಡುವಂತಿದೆ. 'ಯುದ್ಧಕಾಲದಲ್ಲಿಯೂ ರಾಜಕೀಯ ಬಿಕ್ಕಟ್ಟನ್ನು ಬಗೆಹರಿಸಬಹುದೆಂದು ವೇವಲರು ಅಭಿ...

ಸ್ವದೇಶ ಸಮಾಚಾರ

ಗಾಂಧೀಜಿಯವರಿಗೆ ಚಿಯಾಂಗರ ವಿನಂತಿ

... ನಿವೃತ್ತರಾಗುವರೆ?

'ಡೈಲಿ ಮೇಲ್' (ಲಂಡನ್) ಪತ್ರಿಕೆಯು ತನ್ನ ದಿಲ್ಲಿಯ ಸುದ್ದಿಗಾರರಿಂದ ಬಂದ ವಾರ್ತೆಯನ್ನು ಪ್ರಕಟಿಸಿದೆ, ಅದರಲ್ಲಿ ಈ ಅಭಿಪ್ರಾಯವಿದೆ. 'ರಾಜಕೀಯ ಭಿನ್ನಾಭಿಪ್ರಾಯವನ್ನು ಬಗೆಹರಿಸಿಕೊಂಡು, ಜಪಾನ್ ವಿರುದ್ಧ ಹೋರಾಡುವಲ್ಲಿ, ನಿಮ್ಮ ಅನುಯಾಯಿಗಳು ಬೆಂಬಲ ಸಿಗುವಂತೆ ಮಾಡಿರಿ' ಎಂದು ಚಿಯಾಂಗ್ ಕೈಶೇಕರು ಕಾಂಗ್ರೆಸ್ ಮುಖಂಡರಿಗೆ ಮತ್ತು ಮಹಾತ್ಮಾಜಿಯವರಿಗೆ ವಿನಂತಿಸಿಕೊಂಡಿದ್ದಾರೆ. ಇತ್ತೀಚೆಗೆ ಚುಂಕಿಂಗಿಗೆ ಹೋಗಿದ್ದ ಒಬ್ಬ ಭಾರತೀಯ ರಾಯಭಾರಿಯ ಮುಖಾಂತರ ಕೈಶೇಕರು ಈ ವಿನಂತಿ ಕಳುಹಿಸಿರುವರು.

ಜಪಾನ್ ವಿರುದ್ಧ ನಡೆವ ದೊಡ್ಡ ಯುದ್ಧದಲ್ಲಿ ಹಿಂದುಸ್ಥಾನವು ಮುಖ್ಯ ರಾಣ್ಯವಾಗುವುದರಿಂದ, ಸೈನಿಕರಿಗೆ ಯಾವುದೇ ಬಗೆಯ ಆಂತರಿಕಕಲಹದಿಂದ ತೊಂದರೆಯಾಗಬಾರದೆಂದೂ ಇಂಥಾ ದೊಡ್ಡ ಸಮಸ್ಯೆ ಬಿಡಿಸುವ ಮುನ್ನ ಬಂಗಾಲದ ಸಮಸ್ಯೆ ಬಿಡಿಸಬೇಕೆಂದೂ ಚಿಯಾಂಗರ ಅಭಿಪ್ರಾಯವಿರುವುದೆಂದೂ ಆ ಸುದ್ದಿಗಾರನ ಹೇಳಿಕೆ.

ಅಮೆರಿಯವರು ಬರುವ ಜನವರಿಯಲ್ಲಿ ನಿವೃತ್ತರಾಗುವರೆಂದು ಸುದ್ದಿಯಿದೆಯಾಗಿಯೂ ಅವರು ರಾಜಿನಾಮೆಯಿತ್ತ ಕೂಡಲೇ ವೇವಲರು ಗಾಂಧಿಜಿ, ನೆಹರು, ಆಜಾದ್ ಇವರ ಬಿಡುಗಡೆ ಮಾಡಿ ರಾಷ್ಟ್ರೀಯ ಸರಕಾರ ಸ್ಥಾಪನೆಗೆ ಮಾರ್ಗ ಸುಗಮ ಮಾಡುವರೆಂದೂ, ಮಾತ್ರವಲ್ಲದೆ ವೈಸರಾಯರೂ ಬೇಗನೇ ತನ್ನ ಕಾರ್ಯಕಾರೀ ಮಂಡಳವನ್ನು ಪೂರ್ಣ ಭಾರತೀಯರಿಂದ ತುಂಬಿಸುವರೆಂದೂ ಶ್ರೀ. ರಾ. ಸ್ವಾ. ಮುದಲಿಯಾರರು ಅರ್ಥ ಸಚಿವರಾಗುವರೆಂದೂ ಅದರಲ್ಲಿ ಹೇಳಲಾಗಿದೆ.

೧೦ ಲಕ್ಷ ಭಾರತೀಯರ ಸಾವು!

ಬಂಗಾಳದ ಬರಗಾಲದಲ್ಲಿ.

ಅಮೆರಿಕದ ಪತ್ರಿಕೆ ಲೇಖನ

ರಾಯ್ಟರ್ ಸುದ್ದಿಗಾರನು ನ್ಯೂಯಾರ್ಕಿನಿಂದ ಒಂದು ಸುದ್ದಿ ಕಳುಹಿಸುತ್ತಾ, 'ಬಂಗಾಳದ ಬರಗಾಲದಿಂದ ೧೦ ಲಕ್ಷ ಜನರ ಮರಣ' ಎಂಬ ಶಿರೋನಾಮೆಯಲ್ಲಿ ಅಮೆರಿಕದ 'ಲೈಫ್' ಪತ್ರಿಕೆಯು ಒಂದು ಲೇಖನ ಬರೆದು ಅನ್ನವಿಲ್ಲದೆ ಸಾಯುವ ನಿರ್ಗತಿಕರ ಚಿತ್ರಗಳನ್ನು ನಾಲ್ಕು ಪುಟಗಳಲ್ಲಿ ಪ್ರಕಟಿಸಿರುವುದೆಂದೂ, ಈ ಅನಾಹುತಕ್ಕೆ ಅನೇಕ ಕಾರಣಗಳವೆಯೆಂದೂ, ನಿಜವಾಗಿಯೂ ಈ ವರ್ಷ ಕಳೆದ ವರ್ಷಗಳಿಂದ ಹೆಚ್ಚು ಆಹಾರ ಬೆಳೆಸಲಾಗಿತ್ತೆಂದೂ, ಹೀಗಿದ್ದರೂ ಈ ಬರಗಾಲ ಬರಲು ಬಂಗಾಳಕ್ಕೆ ಪ್ರತಿನಿಧಿ ಸರಕಾರವಿಲ್ಲದಿರುವುದೂ, ಬ್ರಿಟಿಷ್ ಸರಕಾರ ಮತ್ತು ಪ್ರಾಂತಿಕ ಸರಕಾರಗಳಲ್ಲಿ ಉಂಟಾದ ವೈಷಮ್ಯವೂ ನೋಟಿನ ಅತಿಪ್ರಸರಣಗಳೇ ಕಾರಣಗಳೆಂದೂ ಬರೆದಿರುವುದಾಗಿ ತಿಳಿಸುತ್ತಾನೆ.

ಭಾರತೀಯ ನಾವಿಕರ ಸಂಬಳದಲ್ಲೂ ವರ್ಣಭೇದ

ಬ್ರಿಟಿಷ್ ಹಡಗುಗಳಲ್ಲಿ ಕೆಲಸಕ್ಕಿರುವ ಭಾರತೀಯ ನಾವಿಕರಿಗೆ ಯೂರೋಪಿಯನ್ ನಾವಿಕರಿಗೆ ಕೊಡುವ ಸಂಬಳದ ⅓ ರಷ್ಟು ಮತ್ತು ವಾಸಸ್ಥಾನದಲ್ಲಿ ⅙ ರಷ್ಟು ಕೊಡುವರೆಂದು ಕಾಮನ್ಸ್ ಸಭೆಯ ಪ್ರಶ್ನೋತ್ತರ ಕಾಲದಲ್ಲಿ ಹೊರಬಿತ್ತು.

ಮಂಗಳೂರು

ಆಹಾರದ ವಿಚಾರ

ಕಲೆಕ್ಟರರ ಆಫೀಸಿನಲ್ಲಿ ಸಭೆ

ಕಲೆಕ್ಟರರು ಕೆಲ ಮಹನೀಯರನ್ನು ಸೇರಿಸಿ ಒಂದು 'ಆಹಾರ ಸಮಿತಿ' ರಚಿಸಿದ್ದಾರೆ. ಆಹಾರದ ವಿಷಯ ಕಲೆಕ್ಟರರಿಗೆ ಈ ಸಮಿತಿ ಸದಸ್ಯರು ಸೂಚನೆ ಕೊಡುವರು. ಈ ಸಮಿತಿ ಸಭೆ ಕಲೆಕ್ಟರರ ಆಫೀಸಿನಲ್ಲಿ ಅವರ ಅಧ್ಯಕ್ಷತೆಯಿಂದ ತಾ. ೨೧ರಂದು ಸೇರಿ ಕೆಳಗಿನ ನಿರ್ಣಯಗಳಾದವು.

(೧) ರಿಕ್ವಿಸಿಶನ್ ಮಾಡಿದ ಅಕ್ಕಿಯನ್ನು ಜಿಲ್ಲೆಯ ಕೃಷಿಯಿಲ್ಲದ ಪೇಟೆಯ ಜನರಿಗೆ ಉಪಯೋಗಕ್ಕೆ ಕೊಡುವುದು. ಈಗ ರಿಕ್ವಿಸಿಶನ್ ಮಾಡಿದ್ದು ಸುಮಾರು ಆರು ಲಕ್ಷ ಮುಡಿ. ಎಲ್ಲಾ ಪೇಟೆಯ ಜನರಿಗೆ ರೇಶನಿಂಗ್ ಮಾಡಲು ಇದು ಸಾಲದು. ಆದ್ದರಿಂದ ಈಗ ರಿಕ್ವಿಸಿಶನ್ ನೋಟೀಸು ರೂ. ೧೦೦ ತೀರ್ವೆ ಕೊಡುವವರಿಗಿಂತ ಮೇಲಿನವರಿಗೆ ಇದ್ದದ್ದನ್ನು, ಇನ್ನು ಮುಂದೆ ೫ ಎಕ್ರೆ ಭೂಮಿಗಿಂತ ಮೇಲಿನವರಿಗೂ ಕೊಡಲಾಗುವುದು. ಆದರೆ ರಿಕ್ವಿಸಿಶನ್ ಮಾಡುವಾಗ ಆಯಾಯ ಭೂಮಾಲಿಕರಿಗೆ ಅಕ್ಕಿ ಭತ್ತ ಎಷ್ಟು ಬೇಕೆಂದು ಗಮನಿಸಬೇಕು. ಹಳ್ಳಿಗಳಿಂದ ರಿಕ್ವಿಸಿಶನ್ ಮಾಡುವಾಗ ಅಲ್ಲಿಗೇ ಸಾಕಾಗದಿರಬಾರದು.

(೨) ಈಗ ರೇಶನಿಂಗ್ ಜಾರಿಗೆ ಬರಲಿರುವ ಪ್ರದೇಶಗಳಲ್ಲದೆ ಮಿಕ್ಕ ಪೇಟೆ ಪ್ರದೇಶಗಳಲ್ಲಿಯೂ ಅಕ್ಕಿ ಭತ್ತ ವ್ಯವಸ್ಥೆ ಬಗ್ಗೆ ಶ್ರೀ. ಮೊಳಹಳ್ಳಿ ಶಿವರಾಯರು ಒಂದು ಯೋಜನೆ ತಯಾರಿಸಿದ್ದು ೭೬ ಕೇಂದ್ರಗಳನ್ನು ತೆರೆಯಬೇಕೆಂದು ಮಾಡಿದ್ದು ಒಪ್ಪಲಾಯಿತು. ಅಲ್ಲಿಯೂ ಗುರುತು ಚೀಟಿಗಳನ್ನು ಕೊಟ್ಟು ವ್ಯವಸ್ಥೆ ಮಾಡಲಾಗುವುದು. ಅಲ್ಲಿಯೂ ಹಂಚುವ ವ್ಯವಸ್ಥೆ ಆದ ಮೇಲೆ ಅಕ್ಕಿಯ ಖಂಡಿತ ಬೆಲೆ ಇಡೀ ಜಿಲ್ಲೆಗೆ ಅನ್ವಯಿಸಲಾಗುವುದು.

(೩) ರಿಕ್ವಿಸಿಶನ್ ಮಾಡಿದ ಅಕ್ಕಿಯಲ್ಲಿ ⅙ ಭಾಗವನ್ನು ಜನವರಿ ೧೫ ರೊಳಗೆ ಹೇಳಿದ ಪೈಕಿ ಭೂಮಾಲಿಕರು ಅಕ್ಕಿ ಸಪ್ಲಾಯ ಮಾಡಿ ೧೨ ಸಾವಿರ ಮುಡಿ ಸಂಗ್ರಹಿಸಿ ಕೊಟ್ಟಿದ್ದಾರೆ. ⅙ ಕೊಡದಿದ್ದವರ ಅಕ್ಕಿ ಭತ್ತಗಳನ್ನು ಸರಕಾರ ಸ್ವಾಧೀನಪಡಿಸಬೇಕೆಂದಾಗಿದೆ.

(೪) ಮಠ ದೇವಸ್ಥಾನಾದಿಗಳಲ್ಲಿ ಧರ್ಮಾರ್ಥ ಊಟ ಉಪಚಾರ ಕೊಡುವ ವಿಷಯ ಕಾನೂನು ಪ್ರಕಾರ ಎಷ್ಟು ಅಗತ್ಯವಿದೆಯೋ ಅಷ್ಟೇ ಕೊಡಬೇಕೆಂದಾಯಿತು.

ಅಕ್ಕಿ ಭತ್ತಗಳ ಕುರಿತಾದ ಸರಕಾರೀ ನಿರ್ಣಯಗಳನ್ನೆಲ್ಲಾ ಗ್ರಾಮ ಉದ್ಯೋಗಸ್ಥರಿಗೆ ತಿಳಿಸಬೇಕೆಂದೂ, ಸ್ವತಃ ರೈತರು ಅಕ್ಕಿ ಭತ್ತವನ್ನು ಕೊಡುವುದಿಲ್ಲವಾದರೆ ಗ್ರಾಮ ಉದ್ಯೋಗಸ್ಥರು ಸಹಕರಿಸಬೇಕೆಂದೂ ಆಯಿತು.

ಮಂಗಳೂರು

ಮಂಗಳೂರಲ್ಲಿ ಈಗ ೩೬ ಡಿಪೋಗಳು ತೆರೆಯಲ್ಪಟ್ಟಿದ್ದು ಅವುಗಳಲ್ಲಿ ೨೦ ಕೋಪರೇಟಿವ್ ಡಿಪೋಗಳೂ ೧೬ ಲೈಸೆನ್ಸು ಪಡೆದ ವ್ಯಾಪಾರಿಗಳ ಡಿಪೋಗಳೂ ಇವೆ. ಇವುಗಳಲ್ಲಿ ಗುರುತು ಚೀಟಿ ಪಡೆದವರಿಗೆ ಅಕ್ಕಿ ಹಂಚಲಾಗುತ್ತದೆ.

ಬೆಂಕಿ ಅನಾಹುತ

ಬಂದರದಲ್ಲಿ ಕೃಷ್ಣಾಮಿಲ್ಸ್ ಸಮೀಪ ಬೈಹುಲ್ಲಿನ ರಾಶಿಗೆ ಬೆಂಕಿ ಬಿದ್ದು, ಎ. ಆರ್. ಪಿ. ದಳದವರ ಸಹಾಯದಿಂದ ಬೆಂಕಿ ಆರಿಸಲಾಗಿದೆ.

ಚರ್ಮವ್ಯಾಧಿಗಳು ಮೋಜಿಕಿನಂತೆ ಮಾಯವಾಗುವುವು!
ಕುಟಿಕೂರಾ ಮುಲಾಮು
(Cuticura Ointment)
ಚರ್ಮವ್ಯಾಧಿಗಳನ್ನು ಉಜ್ಜಿತ
ಗೊಳಿಸುವ ಕ್ರಿಮಿಗಳನ್ನು ನಾಶ
ಗೊಳಿಸುವುದು.


ಕುಟಿಕೂರಾ ಮುಲಾಮು
CUTICURA OINTMENT

ಜಿಲ್ಲಾ ಸಮಾಚಾರಗಳು

ಮಂಗಳೂರು

ಅಕ್ಕಿಯ ಹೊಸ ಡಿಪೋಗಳು

ಸೆಂಟ್ರಲ್ ಹೋಲ್ ಸೇಲ್ ಸಹಕಾರೀ ಸ್ಟೋರ್ಸಿನವರು ಈ ಮೊದಲು ಪ್ರಕಟಿಸಿದ ೧೬ ಅಕ್ಕಿ ಡಿಪೋಗಳಲ್ಲದೆ ಜಿಲ್ಲೆಯಲ್ಲಿ ಈ ಕೆಳಗಿನ ಸ್ಥಳಗಳಲ್ಲಿ ಹೊಸ ಡಿಪೋಗಳನ್ನು ತೆರೆದಿರುವರು (೧) ಕಡಬ (೨) ಬೆಳ್ಳಾರೆ (೩) ಪಂಜ, (೪) ಮುಂಡ್ಕೂರು. (೫) ಸುರತ್ಕಲ್ (೬) ಕೋಟೆಕಾರು (೭) ನೇರಳಕಟ್ಟೆ (೮) ಬದಿಯಡ್ಕ (೯) ನೀಲೇಶ್ವರ (೧೦) ಮಂಗಲ್ಪಾಡಿ (೧೧) ಮಂಜೇಶ್ವರ (೧೨) ಬ್ರಹ್ಮಾವರ (೧೩) ಪೆರ್ಡೂರು (೧೪) ಹಿರಿಯಡ್ಕ (೧೫) ಕಟಪಾಡಿ (೧೬) ಶಿರ್ವ (೧೭) ಸೂರಾಲು, (೧೮) ಶಂಕರನಾರಾಯಣ (೧೯) ಹೆಬ್ರಿ (೨೦) ಅಜೆಕಾರು (೨೧) ಬೈಲೂರು.

ಅಕ್ಕಿ ಭತ್ತದ ವಿಚಾರ ಕಲೆಕ್ಟರರ ಪ್ರಕಟಣೆ

ಮಂಗಳೂರು ಮುನ್ಸಿಪಾಲಿಟಿಯೊಳಗೆ ೧೦ ಖಂಡಿ ಮತ್ತು ಅದಕ್ಕಿಂತ ಹೆಚ್ಚು ಅಕ್ಕಿ ಅಥವಾ ಭತ್ತವಿಟ್ಟುಕೊಂಡವರು, ಅದರ ವಿವರವನ್ನು ತನಗೆ ತಾ ೩೧-೧೨-೧೯೪೪ರ ಒಳಗೆ ತಿಳಿಸಬೇಕೆಂದು ಜಿಲ್ಲಾ ಕಲೆಕ್ಟರರು ಪ್ರಕಟಣೆ ಹೊರಡಿಸಿದ್ದಾರೆ.

ಅಕ್ಕಿಯ ಪರಿಸ್ಥಿತಿ

ಮಂಗಳೂರಲ್ಲಿ ಅಕ್ಕಿಕ್ರಯ ನಿಶ್ಚಿತವಾದೊಡನೆ ಪೇಟೆಯಲ್ಲಿ ಎಲ್ಲಿ ಕೇಳಿದರೂ ಅಕ್ಕಿ ಇಲ್ಲವೆಂದಾಗಿ ಹಲವು ಜನರಿಗೆ, ಅದರಲ್ಲೂ ಬಡಜನರಿಗೆ ಬಹಳ ತಾಪತ್ರಯವಾಯಿತು. ಬೆಜವಾಡದಿಂದ ಅಕ್ಕಿ ಬಂದಿದ್ದರೂ. ವರ್ಗದಾರರು ಅಕ್ಕಿ ಕೊಟ್ಟಿದ್ದರೂ ಅದನ್ನು ಹಂಚುವ ಏರ್ಪಾಡು ಏನೂ ಮಾಡದೆ ಕ್ರಯ ನಿಶ್ಚಯಿಸಿದ ಕಾರಣ ಈ ತೊಂದರೆಯುಂಟಾಯಿತೆಂದು ತಿಳಿದುಬರುತ್ತದೆ. ಕೆಲದಿನ ಊಟಮಾಡಿದವರು ಮಾಡಿದರು, ಉಪವಾಸ ಬಿದ್ದವರು ಉಪವಾಸ ಬಿದ್ದರು, ಇನ್ನೇನು ಆಗುತ್ತದೋ ಎಂದು ಗಾಬರಿಗೊಂಡೇ ಬಡವರು ದಿನದೂಡಿದರು. ಬಂಗಾಳದ ಬವಣೆ ನಮಗೂ ಬಂತೇ ಎಂದು ಕೂಗೆದ್ದಿತು. ಕೂಡಲೇ ತಲಾ ಒಂದರ ೧೦ರೂಪಾಯಿ ಉತ್ಪತ್ತಿಯವರಿಗೆ ಗುರುತಿನ ಚೀಟು ಕೊಡುವ ಕೆಲಸ ಸುರುವಾಯಿತು. ಈ ಚೀಟುಗಳು ಈಗ ತುಂಬಾ ಜನರಿಗೆ ಸಿಕ್ಕಿ ಒಮ್ಮೆ ಬದುಕಿದೆವೆಂಬಂತಾಗಿದೆ. ಇನ್ನೂ ಈ ಚೀಟಿ ಕೆಲವರಿಗೆ ಸಿಕ್ಕಿಲ್ಲ. ಅವರಿಗೆ ತೊಂದರೆಯಿನ್ನೂ ಉಂಟು. ಅಲ್ಲಲ್ಲಿ ಕೋಓಪರೇಟಿವ್ ಸ್ಟೋರುಗಳು ತೆರೆಯಲ್ಪಟ್ಟು ಗುರುತು ಚೀಟಿಯವರಿಗೆ ಅಕ್ಕಿ ಸಿಗುತ್ತದೆ. ಜನರ ನೂಗ್ಗಾಟವೇನೋ ಬಹಳ ಇದೆ. ಸ್ಟೋರ್ಸುಗಳಲ್ಲಿರುವ ಈ ನೂಗ್ಗಾಟದಿಂದಾಗಿ ಬಡ ಕೂಲಿಗಾರರು ತಮ್ಮ ಪಾಲಿನ ಅಕ್ಕಿಪಡೆಯಬೇಕಾದರೆ ಮಧ್ಯಾಹ್ನ ಒಂದು ಹೊತ್ತಿನ ಕೆಲಸಬಿಟ್ಟು ಹೋಗಬೇಕಾಗುತ್ತದೆ. ಅಧಿಕಾರಿಗಳು ಸಂಬಂಧಪಟ್ಟವರು ಡಿಪೋಗಳಲ್ಲಿ ಇಡೀ ದಿನ ಅಕ್ಕಿ ಕೊಡುವ ವ್ಯವಸ್ಥೆ ಮಾಡಿದರೆ ಬಹಳ ಉಪಕಾರವಾಗುತಿತ್ತು.

(ವಾರ್ತಿ)

ಜಿಲ್ಲಾ ಹರಿಜನ ಸೇವಕ ಸಂಘ

ಇದರ ಸಭೆ ತಾ ೧೨ರಂದು ಡಿ. ಸಿ. ಎಂ. ಕಟ್ಟಡದಲ್ಲಿ ಶ್ರೀ ಎ. ಬಿ. ಶೆಟ್ಟರ ಅಧ್ಯಕ್ಷತೆಯಿಂದ ಜರಗಿ, ವಾರ್ಷಿಕ ವರದಿ ವಾಚನ, ಲೆಕ್ಕಪತ್ರಗಳ ಸ್ವೀಕಾರ, ಬಜೆಟ್ ಅಂದಾಜುಗಳಾದ ಮೇಲೆ ಹೊಸ ವರ್ಷದ ಕಾರ್ಯಕಾರೀ ಮಂಡಳದ ರಚನೆಯಾಯಿತು. ಶ್ರೀ ಎ. ಬಿ. ಶೆಟ್ಟರು ಅಧ್ಯಕ್ಷರು, ಶ್ರೀ ಎಂ. ಅಣ್ಣಪ್ಪರು ಉಪಾಧ್ಯಕ್ಷರು, ಶ್ರೀ ಬಿ. ಅನಂತರಾಯರು, ಕಾರ್ಯದರ್ಶಿ, ಮತ್ತು ೮ ಜನ ಕಾರ್ಯಕಾರೀ ಸಮಿತಿ ಸದಸ್ಯರು

ವರ್ಧಂತಿಗಳು

ಸರಕಾರೀ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲಾ ವರ್ಧಂತ್ಯುತ್ಸವವು ಕಳೆದ ಶನಿವಾರ ಸಂಜೆ ಖಾ। ಸಾ। ಎಚ್. ಎಸ್. ಹುಸೇನ್ ಸಾಹೇಬ್ ಎಂ. ಎಲ್. ಎ. ಇವರು ಅಧ್ಯಕ್ಷತೆಯಿಂದ ನೆರವೇರಿತು. ಶಾಲಾ ಹೆಡ್‌ಮಾಸ್ತರರು ಶ್ರೀ ರೋಬರ್ಟ್ಸ್ ಇವರು ಶಾಲಾ ವರದಿಯನ್ನೋದಿದರು. ಶ್ರೀ ಪಿ. ಶಿವಣ್ಣ ಹೆಗ್ಗಡೆಯವರು ಶಾಲಾ ಶ್ರೇಯ ಪ್ರಾರ್ಥನೆ ಮಾಡಿದರು. ವಿವಿಧ ವಿನೋದಾವಳಿಗಳಾದವು.

ಕೆನರಾ ಸ್ಕೂಲ್ ಒಫ್ ಕಾಮರ್ಸಿನ ವರ್ಧಂತಿ ಕಳೆದ ಆದಿತ್ಯವಾರ ಸಂಜೆ ಆ ಶಾಲೆಯಲ್ಲಿ ಗ। ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಕೆ. ಐ. ವರ್ಗೀಸ್, ಇವರ ಅಧ್ಯಕ್ಷತೆಯಲ್ಲಿ ಜರಗಿತು.

ಮುನ್ಸಿಪಲ್ ಸಭೆ

ಮಂಗಳೂರು ಮುನ್ಸಿಪಲ್ ಕೌನ್ಸಿಲಿನ ಸಭೆ ತಾ. ೨೦ರಂದು ಸಂಜೆ ಕೌನ್ಸಿಲ್ ಮಂದಿರದಲ್ಲಿ ಚೇರ್‌ಮೇನ್ ಪುತ್ತೂರ್ ಹುಸೇನ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿತು. ಕಂಕನಾಡಿ ಪ್ರಾಂತದ ತೆರಿಗೆದಾರರಿಂದ, ಬಲ್ಮಠದ ಸಮೀಪವಿರುವ ಮಲಸಂಗ್ರಹದ ಡಿಪೋವನ್ನು ಈಗಿರುವ ಜಾಗದಿಂದ ತೆಗೆಯಬೇಕೆಂದು ಬಂದ ವಿನಂತಿ ಕುರಿತು ಆಲೋಚಿಸಲಾಯಿತು. ಇದನ್ನು ತೆಗೆಯಲೇಬೇಕೆಂದು ಹಲವು ಕೌನ್ಸಿಲರು ಮಾತನಾಡಿದರು ಕಮಿಶನರು ಮತ್ತು ಹೆಲ್ತಾಫೀಸರರು ಮಾತನಾಡಿ, ಇಂಥಾ ಸಂಕಷ್ಟ ಮಂಗಳೂರಲ್ಲಿ ಹಲವು ಕಡೆಗಳಲ್ಲಿದೆಯೆಂದೂ ಆದರೆ ಅದನ್ನು ನಿವೃತ್ತಿ ಮಾಡುವುದು ಪ್ರಕೃತ ಅಸಾಧ್ಯವೆಂದೂ ತಿಳಿಸಿ ದುರ್ವಾಸನೆಯ ತೊಂದರೆಯನ್ನು ಲಾರಿಗಳ ಮೂಲಕ ಪರಿಹರಿಸಬಹುದೆಂದೂ ಹೇಳಿದ ಮೇಲೆ ಸರಕಾರವು ಹೊಸ ಲಾರಿಗಳನ್ನು ಒದಗಿಸಿಕೊಡಬೇಕೆಂಬ ಕುರಿತು ಪುನಃ ಸರಕಾರಕ್ಕೆ ಜ್ಞಾಪಕ ಮಾಡಬೇಕೆಂದಾಯಿತು.

ಗನ್‌ಬೋಟ್ ಜೇಕರು ಮೈದಾನಿನಲ್ಲಿ ಆಟವಾಡಲು ಜಾಗ ಕೇಳಿದ್ದರ ಕುರಿತು, ವಿಚಾರವಾಗಿ ಅವರಿಗೆ ಮೈದಾನಿನಲ್ಲಿ ಜಾಗಕೊಡಬಾರದೆಂದೂ ಹಿಂದುಸ್ಥಾನ್ ಸ್ಕೌಟ್ ಸಂಘಕ್ಕೆ ಅವರ ರಿಲೀಫಿನ ಸಂಬಂಧ ತಿಂಡಿಗಾಗಿ ಹಣ ಮಂಜೂರು ಮಾಡಬಾರದೆಂದೂ ಆಯಿತು. ಈ ಮುನ್ಸಿಪಲ್ ಕೌನ್ಸಿಲಿನ ಮೆಂಬರರ ಅವಧಿಯನ್ನು ಇನ್ನೊಂದು ವರ್ಷ ಹೆಚ್ಚಿಸಿದೆಯೆಂದು ಸರಕಾರ ಅಪ್ಪಣೆ ಮಾಡಿದ್ದನ್ನು ರಿಕಾರ್ಡು ಮಾಡಲಾಯಿತು. ಈಶ್ವರಾನಂದ ಮಹಿಳಾ ಸೇವಾಶ್ರಮಕ್ಕೆ ಅವರು ಕೇಳಿದ ರೂ. ೫೦೦ರ ಸಹಾಯ ಧನ ಮಂಜೂರಾಯಿತು.

ದ. ಕ. ಜಿಲ್ಲಾ ಬೋರ್ಡಿನ ಅಂದಾಜು ಪತ್ರ

ದ. ಕ. ಜಿಲ್ಲಾ ಬೋರ್ಡಿನ ೧೯೪೪-೪೫ರ ಅಂದಾಜು ಪತ್ರದಲ್ಲಿ ಬಜೆಟ್ ಕಮಿಟಿಯವರು ಶಿಫಾರಸು ಮಾಡಿದ ಈ ಕೆಳಗಿನ ವಿಷಯಗಳು ತೆಗೆದು ಹಾಕಲ್ಪಟ್ಟವು. (೧) ಸೆಕೆಂಡರಿ ಶಾಲೆಗಳ ಹುಡುಗರ ಸಂಬಳದಲ್ಲಿ ನಾಲ್ಕು ಆಣೆ ಏರಿಸುವುದು (೨) ಸೆಕೆಂಡರಿ ಶಾಲೆಗಳಲ್ಲಿ ಒನ್ನೇ ಕ್ಲಾಸುಗಳನ್ನು ತೆಗೆದು ಹಾಕುವುದು. (೩) ಕಡವು, ಗಾಡಿಚೌಕ; ಸಂತೆ ಇವುಗಳ ತೆರಿಗೆ ಹೆಚ್ಚುವುದು.

ಕೆಳಗಿನ ಅಂಶಗಳು ಮಂಜೂರಾದವು: (೧) ಜಿಲ್ಲಾ ಬೋರ್ಡಿಗೆ ಅರ್ಜಿ ಹಾಕುವಾಗ ಪ್ರತಿಯೊಬ್ಬ ಖಾಸಗಿ ಅರ್ಜಿದಾರನು ತನ್ನ ಅರ್ಜಿಯೊಂದಿಗೆ ಒಂದು ರೂಪಾಯಿ ಅರ್ಜಿ ಫೀಸಾಗಿ ಕೊಡಬೇಕು. (೨) ಲೋಕಲ್ ಫಂಡ್ ಬಂಗ್ಲೆಗಳ ಬಾಡಿಗೆ ಹೆಚ್ಚಿಸುವುದು. (೩) ಕಾಲರಾ ನಿವಾರಣೆಗಾಗಿ ರೂ ೩ ಸಾವಿರ ಪ್ರತ್ಯೇಕಿಸಿಡುವುದು.

೧೯೪೪-೪೫ರ ಪ್ರಾಥಮಿಕ ಶಿಕ್ಷಣದ ಅಂದಾಜು ಪತ್ರದಲ್ಲಿ ಬಜೆಟಿನಲ್ಲಿ ಸೂಚಿತವಾದ ಕಟ್ಟಡಗಳಿಗೆ ಪ್ರತ್ಯೇಕವಾಗಿ ತೆಗೆದಿಟ್ಟ ಹಣ ತೆಗೆದು ಹಾಕಲ್ಪಟ್ಟು ಮಿಕ್ಕಂಶಗಳು ಮಂಜೂರಾದವು.

ಸಾರಡ್ಕ ಮತ್ತು ಒಗ್ಗ ಸೇತುವೆಗಳಿಗೆ ರೂ ೧೮,೮೦೦-೦-೦ ಮತ್ತು ೧೯,೦೦೦-೦-೦ ಮಂಜೂರಾದವು.

ಕುಂದಾಪುರದಲ್ಲಿ ಶಿಶುಸಂಗೋಪನಾ ಕೇಂದ್ರವಿರಬೇಕೆಂದೂ, ಸೂಲಗಿತ್ತಿಯನ್ನು ನೇಮಿಸಬೇಕೆಂದೂ ಆಯಿತು.

ರೇಶನಿಂಗ್ ಚೀಟು ಸಿಗದವರು

ಮಂಗಳೂರು ನಗರದಲ್ಲಿ ಈಗ ಜಾರಿಯಲ್ಲಿರುವ ರೇಶನಿಂಗ್ ಕಾರ್ಡುಗಳ ಚೀಟಿ ಸಿಗದವರು ಕಲೆಕ್ಟರರ ಆಫೀಸಿಗೆ ಹೋಗಿ ತಮ್ಮ ಮನೆ ನಂಬ್ರ, ವಾರ್ಡು ನಂಬ್ರ, ಮನೆ ನಿವಾಸಿಕರ ವಿವರಗಳನ್ನು ಕೊಟ್ಟರೆ ಸಿಗುತ್ತದೆ. ಹೊಸತಾಗಿ ಮುನ್ಸಿಪಾಲಿಟಿಗೆ ಸೇರಿದ ಎಲ್ಲಾ ಭಾಗಗಳವರಿಗೆ ಕದ್ರಿಯಲ್ಲಿರುವ ವಕೀಲ್ ಶ್ರೀ। ಎಸ್. ನರ್ಸಪ್ಪಯ್ಯರ ಮನೆಯಲ್ಲಿ ಹಂಚುವ ಏರ್ಪಾಡಾಗಿದೆಯೆಂದೂ ಕೇಳುತ್ತೇವೆ.

ದಿವಂಗತರಾದರು

ಕೆ. ಗಣಪಯ್ಯನವರು

ಮಂಗಳೂರು ಮಿಶನ್ ಹೈಸ್ಕೂಲಿನಲ್ಲಿ ಅನೇಕ ವರ್ಷಗಳ ವರೆಗೆ ಗಣಿತಾಧ್ಯಾಪಕರಾಗಿದ್ದು ಜನಪ್ರಿಯರಾಗಿದ್ದ ಶ್ರೀ ಕೆ. ಗಣಪಯ್ಯನವರು ತಮ್ಮ ೭೩ನೇ ವಯಸ್ಸಿನಲ್ಲಿ ತಾ. ೨೧ರಂದು ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಜ್ಯೋತಿಶ್ಶಾಸ್ತ್ರದಲ್ಲಿ ಬಹಳ ಪ್ರಸಿದ್ಧ ವಿದ್ವಾಂಸರಿದ್ದರು.

ಡಾ। ಕೆ. ಪಿ. ರಾಘವೇಂದ್ರರಾಯರು

ಕಾಸರಗೋಡಿನ ಪ್ರಸಿದ್ಧ ಡಾಕ್ಟರರಾದ ಶ್ರೀ ಕೆ. ಪಿ. ರಾಘವೇಂದ್ರ ರಾಯರು ತಾ. ೧೬ರಂದು ರಾತ್ರಿ ತಮ್ಮ ೪೫ನೇಯ ಪ್ರಾಯದಲ್ಲಿ ದಿವಂಗತರಾದರೆಂದು ತಿಳಿಸಲು ವಿಷಾದಿಸುತ್ತೇವೆ ಇವರ ನಿಧನದ ಬಗ್ಗೆ ಮರುದಿನ ಕಾಸರಗೋಡು ಪೇಟೆಯಲ್ಲಿ ಸಂಪೂರ್ಣ ಹರತಾಳವಿತ್ತು.

ಉಳ್ಯಾಲ ವಾಸುದೇವ ಮಲ್ಯರು

ತಾ ೧೪ರಂದು ಮಂಗಳೂರಿನ ಪ್ರಸಿದ್ಧ ಸಾಹುಕಾರರಾದ ಶ್ರೀ ಉಳ್ಯಾಲ ವಾಸುದೇವ ಮಲ್ಯರು ದಿವಂಗತರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ವಯಸ್ಸು ಸುಮಾರು ೭೦ ವರ್ಷವಿರಬಹುದು.

ಇವರ ಆತ್ಮಗಳಿಗೆ ಭಗವಂತನು ಶಾಂತಿಯೀಯಲಿ!

ಚಲಚ್ಚಿತ್ರ ವಿಮರ್ಶಕ ಸಂಘ

ದ ಸಭೆ ಶ್ರೀ ಜೆ. ಎನ್. ಶೆಣೈಯವರ ಅಧ್ಯಕ್ಷತೆಯಲ್ಲಿ ಜರಗಿ, ಡಾಕ್ಟರ್ಸ್ ಚಿತ್ರದ ವಿಮರ್ಶೆಸಲ್ಪಟ್ಟು, ಹಳ್ಳಿಯ ಜೀವನ ಚಿತ್ರಣವಿತ್ತು, ಇದರಲ್ಲಿ ಜೀವನ್ ಖಾಕೀರವರು ಒಳ್ಳೆಯ ಅಭಿನಯ ಮಾಡಿದ್ದರೂ ಇದು ಸ್ಟೇಶನ್ ಮಾಸ್ಟರ್ ಮಟ್ಟಕ್ಕೆ ಬಂದಿಲ್ಲವೆಂದು ಸದಸ್ಯರು ಅಭಿಪ್ರಾಯ ಪಟ್ಟರು.

ಉಡುಪಿ

ವರ್ಧಂತಿ

ತಾ. ೧೮ರಂದು ಉಡುಪಿ ಕ್ರಿಶ್ಚಿಯನ್ ಹೈಸ್ಕೂಲಿನ ವರ್ಧಂತ್ಯುತ್ಸವವು ದ. ಕ. ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ। ಎನ್. ಸುಬ್ಬರಾಯರ ಅಧ್ಯಕ್ಷತೆಯಿಂದ ನೆರವೇರಿತು. ಡಾ। ಟಿ. ಮಾಧವ ಪೈಗಳು ಶಾಲಾವಿಷಯ ಭಾಷಣವಿತ್ತರು. ಅನಂತರ ಪಾರಿತೋಷಕ ವಿತರಣೆಯಾಗಿ ವಿವಿಧ ವಿನೋದಾವಳಿ ಜರಗಿದವು. ಕೊನೆಗೆ ಮುಖ್ಯೋಪಾಧ್ಯಾಯರಾದ ಶ್ರೀ। ಕಾರಟರು ಧನ್ಯವಾದವಿತ್ತರು.

ಕುಂಬಳೆ

ಮಂಗಳೂರು ಕಡೆಗೆ ಸುಮಾರು ೪೫೦ ಡಬ್ಬಿ ಚಿಮ್ನಿ ಎಣ್ಣೆ ತುಂಬಿಕೊಂಡು ಬರುತಿದ್ದ ಒಂದು ರೈಲ್ವೆ ವೇಗನಿಗೆ ಬೆಂಕಿ ಬಿದ್ದು ಸುಮಾರು ೪೨೦ ಡಬ್ಬಿ ಸುಟ್ಟು ಹೋಗಿದೆಯೆಂದೂ, ಬೆಂಕಿ ಹಬ್ಬದಂತೆ ರೈಲ್ವೆ ಸಿಬಂಧಿಯವರು ಬಹಳ ಸಾಹಸ ಮಾಡಿದ್ದರಿಂದ ಯಾರಿಗೂ ಏನೂ ಅಪಾಯವಾಗಲಿಲ್ಲವೆಂದೂ ತಿಳಿದಿದೆ.

ಜಾನುವಾರು ರೋಗ

ಜಿಲ್ಲೆಯ ಬೇರೆ ಬೇರೆ ಕಡೆಗಳಲ್ಲಿ ಹಳ್ಳಿಗಳಲ್ಲಿ ಜಾನುವಾರು ರೋಗ ಪ್ರಬಲವಾಗಿದೆ, ಹಟ್ಟಿ ಹಟ್ಟಿಗಳೇ ಖಾಲಿಯಾಗುತ್ತಿವೆ. ಕಾಸರಗೋಡು ತಾಲೂಕಿನಲ್ಲಿ ಜಾನುವಾರು ರೋಗ ಪ್ರಬಲವಾಗಿದೆ. ಜಾನುವಾರುಗಳಿಗೆ ಕ್ರಯ ಹೆಚ್ಚಾಗಿರುವಾಗ, ಹೆಚ್ಚಾದರೂ ಸಿಗುವುದೇ ಕಷ್ಟವಾಗಿರುವಾಗ ಹೀಗೆ ರೋಗವು ಪ್ರಬಲಿಸಿ ಜಾನುವಾರುಗಳೆಲ್ಲಾ ಮಡಿದು ಹೋದರೆ ಹಳ್ಳಿಯ ಬೇಸಾಯಗಾರರ ಬಾಳು ಗೋಳೇ ಸರಿ. ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಈ ಕುರಿತು ಬೇಗನೇ ಕಣ್ತೆರೆದು ಯೋಗ್ಯ ಕ್ರಮ ಕೈಕೊಳ್ಳುವುದು ಯುಕ್ತವಿದೆ. ಜಾನುವಾರುಗಳು ಸಾಯುವುದೆಂದರೆ ಕೃಷಿಕನ ಆಸ್ತಿಯೇ ಹೋದಂತೆ. ಬೆಳೆ ಮಾಡಲಿಕ್ಕಿಲ್ಲ ಮಾತ್ರವಲ್ಲದೆ ಶರೀರ ಪೋಷಣೆಗೆ ಹಾಲು ಮಜ್ಜಿಗೆಯೂ ಇಲ್ಲದೆ ಬಹಳ ತೊಂದರೆಯುಂಟಾಗುತ್ತದೆ.

ಸಾದರ – ಸ್ವೀಕಾರ

ಶ್ರೀಮುಖ:

(ಕವನಗಳ ಸಂಗ್ರಹ) ಬರೆದವರು: ಶ್ರೀ ಕಯ್ಯಾರ ಕಿಞ್ಞಣ್ಣ ರೈ,—ಪ್ರಕಾಶಕರು: ಪ್ರೇಮಕೂಟ, ಬದಿಯಡ್ಕ, ಪೆರಡಾಲ ಪೋಸ್ಟು, ದಕ್ಷಿಣ ಕನ್ನಡ ಬೆಲೆ. ಒಂದು ರೂಪಾಯಿ:

ವಿಮರ್ಶೆ ಯಥಾವಕಾ।

ತರುಣ-ತರುಣಿಯರೇ,] **ಕಾಮಶಾಸ್ತ್ರದ ಗ್ರಂಥಗಳು** [ಓದಿ ಸುಖಪಡೆಯಿರಿ!

ಗರ್ಭನಿರೋಧ ೧—೮—೦
ಸಂತತಿ ನಿಯಮನಕ್ಕೆ ಉತ್ತಮ ಉಪಾಯಗಳು, ಆಸನಗಳುಳ್ಳಂಥ ಡಾ। ಗೋಪಾಲ ಕೃಷ್ಣರಾಯರ ಸಚಿತ್ರ ಪುಸ್ತಕ.

ದಾಂಪತ್ಯ ದರ್ಶನ ೧—೮—೦
ಸಂಭೋಗ ಸುಖ, ಗಂಡಹೆಂಡಿರ ಆತ್ಮೈಕ್ಯ, ರತಿ ಸೌಖ್ಯ ಸುದೃಢತೆಗಳ ಬಗ್ಗೆ ದಿ। ಪಂಡಿತ ತಾರಾನಾಥರಾಯರ ಗ್ರಂಥ.

ಅನಂಗರಂಗ ೧—೪—೦
ಸ್ತ್ರೀಪುರುಷರ ಲಕ್ಷಣ, ಸಂಭೋಗ ಕಲೆ, ರತಿಸಮಯದ ಹಾವಭಾವಗಳು, ದ್ರವಣಾದಿ ಔಷಧಗಳು . . . .

ಪ್ರೇಮಕಲಾ ೧—೮—೦
ಅಶ್ಲೀಲವಲ್ಲ! ಶಾಸ್ತ್ರೀಯ ಗ್ರಂಥವೆಂದು ಕೋರ್ಟಿನ ನಿರ್ಣಯವೇ ಆಗಿದೆ. ಸಚಿತ್ರ ಕಾಮಶಾಸ್ತ್ರ.

ಭ್ರಾಂತಿ ಮತ್ತು ಲೈಂಗಿಕ ಶಿಕ್ಷಣ ೧—೮—೦
ಪ್ರಸಿದ್ಧ ಡಾಕ್ಟರುಗಳ ಮೂರು ಶಾಸ್ತ್ರೀಯ ಪುಸ್ತಕಗಳ ಕಟ್ಟು. ಗುಪ್ತ ರೋಗಗಳಿಗೆ ಚಿಕಿತ್ಸೆ ಸಹಿತ ಇವೆ.

ಕಾಮಕುಂಜ ೧—೮—೦
ಕಾಮ, ಶೃಂಗಾರ, ಪ್ರೇಮದ ಪಾಠ, ಪ್ರಥಮರಾತ್ರಿ, ಸಂಭೋಗಾಸನಗಳು, ಚಂದ್ರ ಮತ್ತು ಮದನ, ಚುಂಬನ . . . . . .

ವಿಕೃತ ಕಾಮ ೧—೪—೦
ಬಾಲ್ಯದ ಕಾಮವಿಕಾರಗಳು, ಸ್ವಾನುರತಿ, ಹಿಂಸಾರತಿ, ಪ್ರದರ್ಶನರತಿ, ಸಲಿಂಗರತಿ ಇತ್ಯಾದಿ ಗುಟ್ಟಿನ ಮಾತುಗಳಿವೆ.

ರತಿರಹಸ್ಯ ೧—೮—೦
ತಾರುಣ್ಯದ ಮದ, ಸ್ತನಗಳ ಸೌಂದರ್ಯ, ಸಮಾಗಮ ಶಯನ ಇತ್ಯಾದಿ ರತಿಶಾಸ್ತ್ರದ ಪೂರ್ಣ ರಹಸ್ಯ.

ಪೌರುಷ ೧—೪—೦
ನಪುಂಸಕರೆಂದು ಮರುಗಬೇಡಿ. ಪುನಃ ಪೌರುಷ ಪ್ರಾಪ್ತಮಾಡಿಕೊಳ್ಳಲು ನೂರಾರು ಉಪಾಯಗಳಿವೆ.

ಅವಿವಾಹಿತರ ಸಮಸ್ಯೆ ೧—೮—೦
ಸ್ವೈರಾಚಾರ ವಿವೇಚನೆ, ವಿವಾಹಿತ ಮಾತೆ, ಕಸಗೆಟ್ಟ ಆಟ, ಪ್ರೀತಿ ವಿವಾಹ ಇತ್ಯಾದಿ ಸಮಗ್ರ ವಿವೇಚನೆ.

ವಿ। ಪಿ. ವೆಚ್ಚ ಬೇರೆ. ನಮ್ಮ ಕ್ಯಾಟಲಾಗಿಗೆ ಒಂದಾಣೆ ಅಂಚೇಚೀಟು ಕಳಿಸಿರಿ.

ಸಮಾಜ ಪುಸ್ತಕಾಲಯ ಧಾರವಾಡ.

ಚತುರ್ಥ ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಳನ

ಕರ್ನಾಟಕ ಪತ್ರಿಕೋದ್ಯೋಗಿಗಳ ಸಮ್ಮೇಳನವು ಮೊದಲ ಬಾರಿ ಶ್ರೀ ಡಿ. ವಿ. ಗುಂಡಪ್ಪನವರು ಅಧ್ಯಕ್ಷತೆಯಲ್ಲಿ ೧೯೩೮ರಲ್ಲಿ ಬಾಗಲಕೋಟೆಯಲ್ಲಿ ಸೇರಿತು. ಕರ್ನಾಟಕ ಪತ್ರಿಕೋದ್ಯೋಗಿ ಸಂಘವೊಂದನ್ನು ಸ್ಥಾಪಿಸಿತು. ಪಾರಿಭಾಷಿಕ ಶಬ್ದಕೋಶವೊಂದನ್ನು ರಚಿಸಲು ಒಂದು ಉಪಸಭೆಯನ್ನು ನೇಮಿಸಿತು. ಪತ್ರಿಕೋದ್ಯೋಗದ ಬೆಳವಣಿಗೆಗೆ ಅಗತ್ಯವೆಂದು ಕಂಡ ಇನ್ನೂ ಹಲವು ನಿರ್ಣಯಗಳನ್ನು ಮಾಡಿತು. ಮಾರನೆಯ ವರ್ಷವೇ ಬೆಳಗಾಂವಿಯಲ್ಲಿ ಎರಡನೆಯ ಸಮ್ಮೇಳನ ಸೇರಿತು. ಶ್ರೀ [illegible] ಬ್ರಹ್ಮಯವರು ಅಧ್ಯಕ್ಷರಾಗಿದ್ದರು.

ಅನಂತರ ಸಮ್ಮೇಳನ ಮೂರನೇ ಬಾರಿ ಸೇರಿದುದು ರಾಣೆಬೆನ್ನೂರಲ್ಲಿ ೧೯೪೩ರಲ್ಲಿ ನಡೆದ ಈ ಪರಿಷತ್ತಿಗೆ ಶ್ರೀ| ಕೆ. ಚೆಂಗಲ್‌ರಾಯ ರೆಡ್ಡಿಯವರು ಅಧ್ಯಕ್ಷರು.

ಮೈಸೂರು ಸಂಸ್ಥಾನದ ಪತ್ರಿಕೋದ್ಯೋಗಿಗಳು ತಮ್ಮದೇ ಎರಡು ಸಮ್ಮೇಳನಗಳನ್ನು ಜರಗಿಸಿದರು. ಇದರಲ್ಲಿ ಎರಡನೆಯದು ಇತ್ತೀಚೆಗೆ [೧೯೪೩ನೇ ಸಪ್ಟಂಬರದಲ್ಲಿ] ನಡೆಯಿತು. ಶ್ರೀ| ಡಿ. ವಿ. ಗುಂಡಪ್ಪನವರೂ ಶ್ರೀ| ತಿರುಮಲೆ ತಾತಾಚಾರ್ಯ ಶರ್ಮರವರೂ ಕ್ರಮವಾಗಿ ಈ ಎರಡು ಅಧಿವೇಶನಗಳ ಅಧ್ಯಕ್ಷರಾಗಿದ್ದರು.

ಅಖಿಲ ಕರ್ನಾಟಕ ಪತ್ರಿಕೋದ್ಯೋಗಿಗಳ ಚತುರ್ಥ ಅಧಿವೇಶನವನ್ನೀಗ ಮಂಗಳೂರಲ್ಲಿ ಜರಗಿಸಲು ಏರ್ಪಾಡಾಗುತ್ತಿದೆ. ಅಖಿಲ ಕರ್ನಾಟಕದ ಅಂದರೆ ಬ್ರಿಟಿಷ್ ಕರ್ನಾಟಕ ಹಾಗೂ ಮೈಸೂರು ಸಂಸ್ಥಾನದ ಎಲ್ಲಾ ಜಿಲ್ಲೆಗಳ ಪತ್ರಿಕೋದ್ಯೋಗಿಗಳು ನಾಲ್ಕನೇ ಬಾರಿ ಇಲ್ಲಿ ಒಟ್ಟು ಸೇರಬೇಕಾಗಿದೆ.

ಲೋಕಶಿಕ್ಷಣದ ಭಾರವನ್ನು ವಹಿಸಿಕೊಂಡ ಪತ್ರಿಕೋದ್ಯೋಗಕ್ಕೆ ಈಗಿನ ಸಮಯದಲ್ಲಿ ಅಧಿಕ ಪ್ರಾಮುಖ್ಯತೆ ಇದೆ. ದೇಶದ ಮುಂದೆ, ಇಡೀ ಜಗತ್ತಿನ ಮುಂದೆ ಈಗಿರುವಷ್ಟು ಬಿಕ್ಕಟ್ಟಿನ ಪರಿಸ್ಥಿತಿ ಮತ್ತು ಜಟಿಲ ಪ್ರಶ್ನೆಗಳು ಹಿಂದೆ ಎಂದೂ ಇದ್ದಿಲ್ಲ. ನಮ್ಮ ಸುತ್ತಮುತ್ತಲು ಯಾವ ವೇಗದಿಂದ ಏನೆಲ್ಲ ಆಗುತ್ತಿದೆಯೆಂಬುದನ್ನು ಜನರಿಗೆ ನಮ್ಮ ಪತ್ರಿಕೆಗಳಲ್ಲದೆ ಮತ್ತಾರು ತಿಳಿಸಬೇಕು? ಇಂಥ ಸಮಯದಲ್ಲಿ ಯೋಗ್ಯ ರೀತಿಯಲ್ಲಿ ಜನರಿಗೆ ಅಗತ್ಯವುಳ್ಳ ಮಾಹಿತಿಯನ್ನು ಒದಗಿಸಬೇಕಾದರೆ ನಮ್ಮ ಪತ್ರಿಕೆಗಳ ಸ್ಥಿತಿಯು ದಕ್ಷತೆ ಎಷ್ಟು ಹೆಚ್ಚಾಗಬೇಕಾಗಿದೆ? ಇದಕ್ಕೆ ಉಪಾಯಗಳೇನು? ಇದನ್ನು ಎಲ್ಲರೂ ಸೇರಿ ನಿರ್ಧರಿಸುವುದು ಅವಶ್ಯ. ಇದಕ್ಕಾಗಿಯೇ ಸಮ್ಮೇಳನ ಈಗಲೇ ಸೇರಬೇಕಾಗುತ್ತದೆ.

ಇನ್ನೊಂದೆಡೆಯಿಂದ ಪತ್ರಿಕೆಗಳ ಅಸ್ತಿತ್ವವನ್ನು ಕಾಪಾಡಿಕೊಳ್ಳಲು ಸಾಹಸಪಡಬೇಕಾದ ಪ್ರಸಂಗಗಳು ಮೇಲಿಂದ ಮೇಲೆ ಬರುತ್ತಲೇ ಇವೆ. ಮುದ್ರಣದ ವೆಚ್ಚ—ಕಾಗದದ ಕುಟ್ಟ ಮೊದಲಾದ ಈಗಿನ ಪರಿಸ್ಥಿತಿಯ ಪ್ರಶ್ನೆಗಳೊಂದಿಗೆ, ಈ ಪರಿಸ್ಥಿತಿಯಲ್ಲಿ ಅನಿವಾರ್ಯವೆನ್ನಿಸಿ ಮೇಲಿಂದ ಮೇಲೆ ಬರುವ ಶಾಸನಗಳಿಂದ ಉತ್ಪನ್ನವಾಗುವ ಪ್ರಶ್ನೆಗಳೇನೂ ಕಡಿಮೆಯಿಲ್ಲ. ಇವನ್ನೆಲ್ಲಾ ಬಿಡಿಸಲು ಪತ್ರಿಕೋದ್ಯೋಗಿಗಳು ಒಟ್ಟು ಸೇರದೆ ಗತ್ಯಂತರವಿಲ್ಲವೆಂಬುದರಿಂದ ಈ ಅಧಿವೇಶನವು ಈಗಲೇ ಜರಗಬೇಕಾಗಿದೆ.

ಕರ್ನಾಟಕದ ಪತ್ರಿಕೆಗಳ ಮುಂದೆ ಬೇರೆ ವಿಶಿಷ್ಟ ಪ್ರಶ್ನೆಗಳೂ ಇವೆ. ಇತರ ಪ್ರಾಂತ್ಯಗಳಲ್ಲಿರುವ ಹಲ ಕೆಲವು ಅನುಕೂಲತೆಗಳೂ ನಮ್ಮಲ್ಲಿಲ್ಲ; ಏಕೆಂದರೆ ಕರ್ನಾಟಕ ಏಕೀಕರಣವಿನ್ನೂ ಆಗಿಲ್ಲ. ಇದರ ತೊಡಕುಗಳನ್ನು ಬಗೆಹರಿಸುವ ಸಮಸ್ಯೆಗಳು ಕರ್ನಾಟಕ ಪತ್ರಿಕೋದ್ಯೋಗಿಗಳ ಮುಂದೆ ಪ್ರತ್ಯೇಕವಾಗಿಯೇ ಇವೆ.

ಪರಿಷತ್ತು ಸೇರಿ, ನಿರ್ಣಯಗಳನ್ನು ಮಾಡಿ, ನಿರ್ಣಯಗಳನ್ನು ಕಾರ್ಯರೂಪಕ್ಕೆ ತರದೆ ಉಪಾಯವಿಲ್ಲ. ಕರ್ನಾಟಕ ಪತ್ರಿಕೋದ್ಯೋಗಿ ಸಂಘವು ಇದಕ್ಕಾಗಿ ಸತತ ದುಡಿಯಬೇಕಾಗಿದೆ. ಇದಕ್ಕೆ ಅವಶ್ಯವುಳ್ಳ ಏರ್ಪಾಡುಗಳನ್ನು ಸಾಧಿಸಬೇಕಾಗಿದೆ. ಈಗಿನ ಅಧಿವೇಶನದ ಮುಂದಿರುವ ಮುಖ್ಯ ವಿಚಾರಗಳಲ್ಲಿ ಇದೂ ಒಂದು. ಇಂಥ ವ್ಯವಸ್ಥಿತ ಕಾರ್ಯವು ನಮ್ಮಲ್ಲಾಗುವಂತಾದರೆ ಮಾತ್ರ ನಾವೂ ಅಖಿಲ ಭಾರತದ ಪತ್ರಿಕೋದ್ಯೋಗಿ ಪ್ರಪಂಚದಲ್ಲಿಯೂ ಯೋಗ್ಯ ರೀತಿಯ ಸಹಭಾಗಿಗಳಾಗುವುದು ಸಾಧ್ಯವಾಗುತ್ತದೆ.

ನಮ್ಮ ಸಂಸ್ಥಾನಗಳ ಪತ್ರಿಕೆಗಳ ಮುಂದೆ ಅವರದೇ ಆದ ವಿಶಿಷ್ಟ ಪ್ರಶ್ನೆಗಳು ಬೇರೆ ಇವೆಯೆಂಬುದನ್ನು ಒಪ್ಪಲೇಬೇಕು. ಅವರು ತಮ್ಮ ಸಮ್ಮೇಳನ ಸೇರಿಸಿ ಇವುಗಳ ತೀರ್ಮಾನಕ್ಕಾಗಿ ಯತ್ನಿಸುವುದು ಸಹಜವೇ ಇದೆ. ಇದರ ಜತೆಯಲ್ಲೆ ಅಖಿಲ ಕರ್ನಾಟಕಕ್ಕೆ ಸಾಮಾನ್ಯವಾದ ಪ್ರಶ್ನೆಗಳು ಸಂಸ್ಥಾನದವರಿಗೂ ಅನ್ವಯಿಸುತ್ತವೆಂಬುದು ಸ್ಪಷ್ಟವಾದ ವಿಷಯ. ಇವನ್ನು ಬಿಡಿಸಲು ಸಂಸ್ಥಾನದವರೂ ಇತರ ಕನ್ನಡಿಗರೂ ಸಹಕರಿಸಬೇಕೆಂಬುದು ನಿರ್ವಿವಾದ. ಆದುದರಿಂದಲೇ ಮೈಸೂರು ಸಂಸ್ಥಾನದ ಪತ್ರಿಕೋದ್ಯೋಗಿಗಳ ದ್ವಿತೀಯ ಸಮ್ಮೇಳನದಲ್ಲಿ ಮುಂಗಳೂರಲ್ಲಿ ಜರಗಲಿರುವ ಅಖಿಲ ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಳನವನ್ನು ಸ್ವಾಗತಿಸಿ [illegible] ಸಂಸ್ಥಾನದ ಪತ್ರಿಕೋದ್ಯೋಗಿಗಳೆಲ್ಲರೂ ಭಾಗವಹಿಸಬೇಕೆಂದು [illegible] ಮಾಡಲ್ಪಟ್ಟಿತು. ಆ ನಿರ್ಣಯಕ್ಕಾಗಿ ಚತುರ್ಥ ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಳನದ ಸ್ವಾಗತ ಸಮಿತಿಯವರು ಮೈಸೂರು ಸಂಸ್ಥಾನದ ಪತ್ರಿಕೋದ್ಯೋಗಿಗಳನ್ನು ಅಭಿನಂದಿಸುತ್ತಾರೆ.

ಚತುರ್ಥ ಕರ್ನಾಟಕ ಪತ್ರಿಕೋದ್ಯೋಗಿ ಸಮ್ಮೇಳನವು ಪತ್ರಿಕೋದ್ಯೋಗಿಗಳು ಪುನಃ ಒಟ್ಟು ಸೇರುವ ಸಂದರ್ಭವನ್ನು ಕಲ್ಪಿಸಿಕೊಡುವುದು ಮಾತ್ರವಲ್ಲ ಕರ್ನಾಟಕದ ಇತರ ಭಾಗದವರಿಗೆ ಮಂಗಳೂರನ್ನು ಸಂದರ್ಶಿಸುವ ಅಪೂರ್ವ ಸಂದರ್ಭವನ್ನೂ ಒದಗಿಸುತ್ತದೆ. ಮಂಗಳೂರಿನ ವಿಶಿಷ್ಟ ದೇವಾಲಯಗಳನ್ನು ಮತ್ತು ಐತಿಹಾಸಿಕ ಹಾಗೂ ಕೈಗಾರಿಕೆಯ ಸ್ಥಳಗಳನ್ನು ಅತಿಥಿಗಳು ಪ್ರೇಕ್ಷಿಸಲು ಅವಶ್ಯವಿರುವ ಅನುಕೂಲತೆಗಳನ್ನೂ ಸ್ವಾಗತ ಸಮಿತಿಯವರು ಒದಗಿಸುತ್ತಿದ್ದಾರೆ. ಇಲ್ಲಿಯ ವಿವಿಧ ಕಲೆಗಳ ಪರಿಚಯ ಮಾಡಿಕೊಡುವ ಏರ್ಪಾಡೂ ಆಗುತ್ತಿದೆ. ಪತ್ರಿಕೋದ್ಯೋಗ ಮಾತ್ರವಲ್ಲದೆ ಇತರ ಸಾರ್ವಜನಿಕ ಉಪನ್ಯಾಸಗಳಿಂದ ಪರಸ್ಪರ ವಿಚಾರವಿನಿಮಯದ ಸಂಧಿಯನ್ನೂ ಸಮಿತಿಯವರು ಕಲ್ಪಿಸುತ್ತಿದ್ದಾರೆ. ಕರ್ನಾಟಕದ ಎಲ್ಲ ಪತ್ರಿಕೆಗಳ ಪ್ರದರ್ಶನವನ್ನೂ ವ್ಯವಸ್ಥೆಗೊಳಿಸುತ್ತಿದ್ದಾರೆ. ಅಂದರೆ ಈಗಿನ ಕಷ್ಟದ ಪರಿಸ್ಥಿತಿಯಲ್ಲಿಯೂ ಈ ಅಧಿವೇಶನವನ್ನು ಸಾಧ್ಯವಿದ್ದಷ್ಟು ಆಕರ್ಷಕವಾಗಿ ಮಾಡಲು ಎಲ್ಲ ಪ್ರಯತ್ನಗಳೂ ನಡೆಯುತ್ತಿವೆ.

ಕರ್ನಾಟಕದ ಎಲ್ಲ ಪತ್ರಿಕೆಯವರೂ ಸನ್ನಿಹಿತರಾಗಿ ಸಮ್ಮೇಳನದಲ್ಲಿ ಭಾಗವಹಿಸಿ ಸಮ್ಮೇಳನವನ್ನು ಯಶಸ್ವಿಗೊಳಿಸಬೇಕು. ಮುಂದಿನ ಕೆಲಸಕ್ಕೆ ಯೋಗ್ಯ ವ್ಯವಸ್ಥೆ ಮಾಡಬೇಕು. ಸಂಸ್ಥಾನದವರೂ ಇತರ ಕನ್ನಡಿಗರೂ ಒಟ್ಟು ಸೇರಿ ಅಖಿಲ ಕರ್ನಾಟಕದ ಮುಂದಿರುವ ಪ್ರಶ್ನೆಗಳನ್ನು ಬಿಡಿಸಬೇಕು. ಕರ್ನಾಟಕ ಪತ್ರಿಕೋದ್ಯೋಗವು ದಕ್ಷತೆಯಿಂದ ಈಗಿನ ತನ್ನ ಮುಂದಿರುವ ಕರ್ತವ್ಯವನ್ನು ಪಾಲಿಸುವಂತಾಗಬೇಕು. ಪ್ರಕೃತ ನಮ್ಮ ಮುಂದಿರುವ ಅನೇಕ ತೊಂದರೆಗಳನ್ನು ಪರಸ್ಪರ ಸಹಾಯದಿಂದ ನಿವಾರಿಸಲು ಯತ್ನಿಸಬೇಕು.—ಇದು ಅಖಿಲ ಕರ್ನಾಟಕದ ಪತ್ರಿಕೋದ್ಯೋಗಿಗಳೊಡನೆ ಚ. ಅ. ಕ. ಪ. ಸಮ್ಮೇಳನದ ಸ್ವಾಗತ ಸಮಿತಿಯವರು ಮಾಡುವ ವಿನಂತಿ.

ಪುಸ್ತಕಾವಲೋಕನ

ಭಾರತೀಯ ಕತೆಗಳು

ಮೂಲಲೇಖಕರು: ಶ್ರೀ ಎ. ಎಸ್. ಪಂಚಪಕೇಶ ಐಯ್ಯರ್, ಎಂ. ಎ; ಐ. ಸಿ. ಎಸ್. ಬಾರ್ ಎಟ್ ಲಾ, ಎಫ್. ಆರ್. ಎಸ್. ಎಲ್. ಅನುವಾದಕರು: ಶ್ರೀ ಕೊರಡ್ಕಲ್ ಶ್ರೀನಿವಾಸರಾಯರು. ಕಿರಿಯರ ಪ್ರಪಂಚದ ತೊದಲ್ನುಡಿ ಗ್ರಂಥಮಾಲೆಯ ನುಡಿ ೧೮. ಪ್ರಕಾಶಕರು: ನವಭಾರತ ಪುಸ್ತಕ ಭಂಡಾರ, ಉಡುಪಿ. ಕ್ರಾನ್ 1/8 ಆಕಾರದ ೧೨೨ ಪುಟಗಳು. ಬೆಲೆ, ೧–೧೪–೦.

ಶ್ರೀ. ಪಂಚಪಕೇಶಯ್ಯರರು ಆಂಗ್ಲ ಭಾಷೆಯಲ್ಲಿ ಹಲವು ಗ್ರಂಥಗಳನ್ನು ಬರೆದು ಪ್ರಸಿದ್ಧರಾದ ಲೇಖಕರು. ಇವರು ಆಂಗ್ಲದಲ್ಲಿ ಬರೆದ Tales of Ind ಪುಸ್ತಕದ ಅನುವಾದವಿದು. ಶ್ರೀ ಕೊರಡ್ಕಲ್ ಶ್ರೀನಿವಾಸ ರಾಯರು ಇದರ ಅನುವಾದ ಮಾಡಿರುವರೆಂದರೆ ಮತ್ತು ಭಾಷೆಯ ಬೆಡಗು ಹೇಳಬೇಕಾಗಿಲ್ಲ.

ಇಲ್ಲಿ ಚಿಕ್ಕ ಚಿಕ್ಕ ಕತೆಗಳು, ಯಾವುದಾದರೊಂದು ನೀತಿಗಾಗಿ, ಸಮಾಜದೋಷದ ವಿಡಂಬನೆಗಾಗಿ, ಹಾಸ್ಯಪೂರಿತ ಮನೋರಂಜನೆಗಾಗಿ ಬರೆಯಲ್ಪಟ್ಟಿವೆ. ಚಿಕ್ಕಕತೆಗಳೆಂದರೆ ಬಹಳ ಚಿಕ್ಕವು. ಪತ್ರಿಕೆಗಳಲ್ಲಿ ಬರುವ ಒಂದು ಸಣ್ಣ ಕತೆಯಲ್ಲಿ ಇಲ್ಲಿನ ಚಿಕ್ಕ ಕತೆಗಳು ಹತ್ತುಪ್ಪತ್ತಕ್ಕಿಂತ ಹೆಚ್ಚೇ ಆಗಬಹುದು. ಹೇಗಿದ್ದರೂ ಓದಲು ಒಳ್ಳೆ ರುಚಿಕರವಾಗುತ್ತದೆ. ಇಲ್ಲಿ ೧೫೨ ಕತೆಗಳಿವೆ. Tales of Ind ನ ಇನ್ನುಳಿದ ಕತೆಗಳನ್ನು ಕಿರಿಯರ ಪ್ರಪಂಚದವರು ಪ್ರಕಟಿಸಿದರೆ ಒಳ್ಳೆಯದಿತ್ತು.

ಲೋಹಶಾಸ್ತ್ರ

ವಿಶೇಷಜ್ಞರಾದ ಡಾ| ಬೆರಾಮ್ ಡಿ. ಸಕ್ಲತ್‌ವಾಲರು ಅಮೆರಿಕದಲ್ಲಿ

ಯುದ್ಧಾನಂತರ, ವಾಹನಗಳ ಉದ್ಯಮದಲ್ಲಿ ಬಹಳ ಬದಲಾವಣೆಯಾಗಲಿದೆಯೆಂದು ನ್ಯೂಯಾರ್ಕಿನಲ್ಲಿ ಸೇರಿದ ಅಮೆರಿಕದ ಇಲೆಕ್ಟ್ರೋಕೆಮಿಸ್ಟರ ಸಭೆಯಲ್ಲಿ ಡಾ| ಬೆರಾಮ್ ಡಿ. ಸಕ್ಲತ್ ವಾಲರು ಹೇಳಿದರು. ಟ್ರೈನಿನ ಇಂದಿನ ಭಾರವು ಬಹಳ ಕಡಿಮೆಯಾಗುವುದೆಂದೂ, ಅಂಥಾ ಉಕ್ಕು ತಯಾರಾಗುವುದೆಂದೂ, ವಿಮಾನಗಳು ಇಂದಿಗಿಂತಲೂ ಹಗುರವಾಗುವವೆಂದೂ ಅವರ ಅಭಿಪ್ರಾಯವಾಗಿದೆ.

ಅಮೆರಿಕದ ಪ್ರಮುಖ ಇಲೆಕ್ಟ್ರೋ ಕೆಮಿಸ್ಟರು ಡಾ| ಸಕ್ಲತ್ ವಾಲರಿಗೆ ಯೋಗ್ಯ ಸ್ವಾಗತವಿತ್ತರು. ಅವರು ಸಕ್ಲತ್ ವಾಲರನ್ನು ಇಲೆಕ್ಟ್ರೋ ಕೆಮಿಕಲ್ ಸೊಸೈಟಿಯ ಸ್ಥಾಪಕರ ಹೆಸರಲ್ಲಿ ಏರ್ಪಾಡಾಗುವ ಜೋಸೆಫ್ ಡಬ್ಲ್ಯು. ರಿಚಾರ್ಡ್ಸ್ ಭಾಷಣಕೊಡಲು ಆಹ್ವಾನಿಸಿದ್ದರು.

ಡಾ| ಸಕ್ಲತ್‌ವಾಲರು ಬೊಂಬಾಯಿಯಲ್ಲಿ ೧೮೮೮ರಲ್ಲಿ ಹುಟ್ಟಿದರು, ೧೯೧೦ರಲ್ಲಿ ಅಮೆರಿಕದಲ್ಲಿ ತಮ್ಮ ಉದ್ಯಮ ಜೀವನವಾರಂಭಿಸಿದರು. ತಾತಾ ಕಂಪೆನಿ ಸ್ಥಾಪಕ ಜೆ. ಎನ್. ತಾತರ ತಂಗಿ ಇವರ ತಾಯಿ. ಈಗ ಅಮೆರಿಕದ ನಾಗರಿಕರೇ ಆಗಿ ಐರಿಷ್ ಮೂಲದ ಅಮೆರಿಕನಳನ್ನು ಮದುವೆಯಾಗಿದ್ದಾರೆ.

ಡಾ| ಸಕ್ಲತ್‌ವಾಲರು ಕೋರ್‌ನ್ಸ್‌ಟಿನ್ ಉಕ್ಕನ್ನು ಪೇಟೆಂಟ್ ಮಾಡಿದ್ದಾರೆ. ಅದು ಈಗ ಅಮೆರಿಕದ ಉಕ್ಕಿನ ಕಾರ್ಖಾನೆ ಮತ್ತು ಅದರ ಶಾಖಾ ಕಂಪೆನಿಗಳಲ್ಲಿ ತಯಾರಾಗುತ್ತದೆ. ಸಾವಿರಾರು ಕಾರುಗಳನ್ನು ಇದರಿಂದ ಈಗ ನಿರ್ಮಿಸುತ್ತಾರೆ. ಶೇಕಡಾ ೬೦ರಷ್ಟು ಪೇಸೆಂಜರ್ ರೈಲ್ ರೋಡುಗಳು ಈ ಉಕ್ಕಿನಿಂದ ಇತ್ತೀಚೆಗೆ ಆಗುತ್ತಿದೆ. ಯುದ್ಧದ ಮೊದಲೇ ಇದು ಬಸ್ಸು, ಟ್ರಕ್ಸ್, ಟ್ರೈಲರ್ಸ್‌ಗಳಿಗೆ ಉಪಯುಕ್ತವಾಗುತ್ತಿತ್ತು. ಅದೇ ಉಕ್ಕನ್ನು ಭಾರತದಲ್ಲಿ ತಾತಾ ಕಂಪೆನಿಯವರೂ ಮಾಡುತ್ತಾರೆ.

—U. S. O. W. I

ನಿಮ್ಮ ಎದೆನೋವನ್ನು ಗುಣಪಡಿಸಿರಿ.

ನಿಮಗೆ ಬಹುಬೇಗನೇ ಶೀತಬಾಧೆಯಾಗುವುದೆ? ನೀವು ಕಫ ಬಾಧೆಯಿಂದ ಹಾಗೂ ಶ್ವಾಸಕೋಶವನ್ನು ದುರ್ಬಲಗೊಳಿಸುವ ಶೀತಬಾಧೆಯಿಂದ ನರಳುತ್ತಿರುವಿರೆ? ಹಾಗಾದರೆ ಅದಕ್ಕೆ ಅತ್ಯುತ್ತಮ ಔಷಧಿಯಾಗಿರುವ ವಿಷಹಾರೀ ಶ್ವಾಸಯೋಗ್ಯ ಪೆಪ್ಸ ಮಾತ್ರೆಗಳನ್ನು ಸೇವಿಸಿರಿ.

ಬಾಯಿಗೆ ಹಾಕಿದ ಕೂಡಲೇ ಪೆಪ್ಸು ಕರಗಿ ಅತ್ಯುತ್ತಮ ಔಷಧಿ ಸತ್ವದಿಂದ ಕೂಡಿದ ರಸವನ್ನು ಹೊರಗೆಡವುತ್ತದೆ. ಅದು ಶ್ವಾಸದೊಂದಿಗೆ ಸೇರಿ ಶ್ವಾಸಕೋಶಕ್ಕೆ ಹೋಗುವುದು; ಹೀಗೆ ಪೆಪ್ಸು ಹಾನಿಕಾರಕ ಕ್ರಿಮಿಗಳನ್ನು ನಾಶಪಡಿಸುವುದು. ನೋವನ್ನು ಕಡಿಮೆಮಾಡುವುದು. ಶೀತ, ಕಂಠನೋವು ಇವುಗಳನ್ನು ಗುಣಮಾಡುವುದು. ಎದೆನೋವು ಅಸ್ತಮ ಮತ್ತು ನ್ಯುಮೋನಿಯಾಗಳಿಗೆ ಇದು ಅತ್ಯುತ್ತಮ ಔಷಧ.

ಪೆಪ್ಸು ಕೊಂಡುಕೊಳ್ಳಿರಿ.

PEPS

ವಿಷಹಾರಿ ಶ್ವಾಸಯೋಗ್ಯ ಮಾತ್ರೆಗಳು.

ನಮ್ಮ ಸುವರ್ಣೋತ್ಸವ ಸಂಚಿಕೆಗೆ



ದಯಮಾಡಿ ನಿಮ್ಮ ಪ್ರೀತಿಯ ಸಂದೇಶವನ್ನು ಕಳುಹಿಸಿರಿ

ಅಮೃತಾಂಜನ ಲಿಮಿಟೆಡ್,

ಮದ್ರಾಸ್, ಬೊಂಬಾಯಿ, ಕಲ್ಕತ್ತ.

ದೈವಗತಿ

(ತಿನೇ ಪುಟದಿಂದ ಮುಂದುವರಿದುದು)

ದುಃಖ ಎಂದು ನೆರೆದವರೆಲ್ಲಾ ಭಾವಿಸಿದರು. ಮದುವೆಯು ನಿಶ್ಚಯವಾಗಿ ಲಗ್ನವು ನಿಶ್ಚಯಿಸಲ್ಪಟ್ಟಿತು. ಇನ್ನೆರಡು ದಿನಗಳು ಉಳಿದಿವೆ. ತಂದೆಗೀಗ ಮಗಳ ಕೃತ್ಯಗಳು ಕಣ್ಣಿಗೆ ಬಿದ್ದವು. ಹೊತ್ತಿಗೆ ಸರಿಯಾಗಿ ಊಟವಿಲ್ಲ, ತಿಂಡಿಯಿಲ್ಲ, ಹೆರಳಿಲ್ಲ, ಬೊಟ್ಟಿಲ್ಲ, ಹರಕು ಸೀರೆಯನ್ನೇ ಉಡುತ್ತಿದ್ದಳು. ಮೊದಲು ಯಾವಾಗ ನೋಡಿದರೂ, ಚೆನ್ನಾಗಿ ತರತರದಲ್ಲಿ ಹೆರಳು ಹಾಕಿ, ಬೊಟ್ಟಿಟ್ಟು, ಒಳ್ಳೊಳ್ಳೆ ಸೀರೆಗಳನ್ನುಟ್ಟು ತನ್ನನ್ನೇ ಶೃಂಗರಿಸಿಕೊಳ್ಳುವುದರಲ್ಲಿ ಮಗ್ನಳಾಗಿರುತ್ತಿದ್ದ ಸುಲೋಚನೆಯ ಇಂದಿನ ವಿಲಕ್ಷಣ ಬದಲಾವಣೆಯನ್ನು ಕಂಡು ಶ್ಯಾನುಭೋಗರಿಗೆ ಅತ್ಯಾಶ್ಚರ್ಯವಾಯಿತು. ಅವರಿದನ್ನು ತಡೆಯದಾದರು. ಒಂದು ದಿನ ಅವರು ಸುಲೋಚನೆಯ ಕೋಣೆಪ್ರವೇಶಿದಾಗ ಆಕೆಯು ನತಮಸ್ತಕಳಾಗಿ ತನ್ನ ತಾಯಿಯ ಭಾವಚಿತ್ರದ ಕೆಳಗೆ ಕುಳಿತಿದ್ದಳು. ಶ್ಯಾನುಭೋಗರಿಗೆ ದುಃಖವು ಒತ್ತರಿಸಿ ಬಂದಿತು. ಇಂದಿನ ತನಕ ಹಕ್ಕಿಯಂತೆ ಬೆಳಸಿ, ಯಾವ ಕಷ್ಟವೂ ಇಲ್ಲದೆ ಬೆಳೆದ ಅವಳ ಇಂದಿನ ದಾರುಣ ಸ್ಥಿತಿಯನ್ನವರು ತಡೆಯದಾದರು. ಓಡಿ ಬಂದು ಸುಲೋಚನೆಯ ತಲೆಯನ್ನೆತ್ತಿ ತಮ್ಮೆದೆಗೆ ಅವಚಿಕೊಂಡರು. ಆಕೆಯ ಅಳುವನ್ನು ಕಂಡು ತಮ್ಮಳುವನ್ನೂ ತಡೆಯದಾದರು. ಎರಡು ನಿಮಿಷ ಅದೇ ಸ್ಥಿತಿಯಲ್ಲಿ ಆಕೆಯ ತಲೆಯ ಮೇಲೆ ತಮ್ಮ ತಲೆಯನ್ನಿಟ್ಟು ಅಳತೊಡಗಿದರು. ಆದರೆ ಎಷ್ಟರ ವರೆಗೆ ಹೀಗೆ ನಡೆದೀತು? ಕಡೆಗೆ ಗಂಡಸು ಧೈರ್ಯವನ್ನವಲಂಬಿಸಬೇಕಷ್ಟೆ?

ಕಡೆಗೆ ಶ್ಯಾನುಭೋಗರೆಂದರು. "ಸುಲೋಚನಾ, ಯಾವಾಗಲೂ ಕೂಡಿಯೇ ಇರಬೇಕೆಂದರೆ ಆಗತಿತ್ತದೆಯೇ? ನಾವು ಶಾಶ್ವತರೇನು? ಒಂದಲ್ಲ ಒಂದು ದಿನ ಅಗಲಲೇ ಬೇಕು. ಒಂದೆರಡು ದಿನ ದುಃಖ ತಡೆದುಕೊಳ್ಳಬೇಕು. ಅತ್ತೇನು ಲಾಭ? ಎಷ್ಟು ಸಮಯ ಹೀಗೆ ನಡೆದೀತು? ಸುಲೋಚನೆಯ ದುಃಖವು ಉಕ್ಕೇರಿ ಬಂತು. ಆಕೆಯು ತಂದೆಯ ಎದೆಗೆ ತನ್ನ ಮುಖವನ್ನೊತ್ತಿ ಅವಚಿಕೊಂಡು ಬಿಕ್ಕಿ ಬಿಕ್ಕಿ ಅಳತೊಡಗಿದಳು.

ಮಗೂ ಸುಮ್ಮನೆ ಉಣದೆ, ಉಡದೆ ಇನ್ನೆಷ್ಟು ಕಾಲ ಹೀಗೆ ಕಳೆಯ ಬಲ್ಲೆ? ನಿನ್ನ ಮುಖವನ್ನಾದರೂ ಒಂದು ಸಲ ಕನ್ನಡಿಯಲ್ಲಿ ನೋಡು. ಬಾಡಿ ಕಂದಿದೆ. ಹೀಗೆ ಅತ್ತರೆ ಯಾವ ಪ್ರಯೋಜನವಿದೆ? ದುಃಖವನ್ನು ತಡೆದುಕೊಂಡವನು ಧೀರನೆನಿಸುವನು. ನೀನು ಯಾವಾಗಲೂ ಇಲ್ಲಿ ಬರುತ್ತ ಇರುವಿಯಂತೆ. ನೀನೇನೂ ಅಲ್ಲಿಗೆ ಹೋದರೆ ಹೊಸದೆಯೇ ಆದೆಯೇನು?

ಸುಲೋಚನೆಯು ಮುಖವನ್ನೆತ್ತಿದಳು. ಆಕೆಯ ಕಣ್ಣುಗಳು ಹೊಳೆಯುತಿದ್ದುವು. ತಂದೆಯ ಮಾತುಗಳು ಆಕೆಯ ಮೇಲೆ ಪ್ರಭಾವವನ್ನು ತೋರಿಸಿದ್ದುವು. ಆದರೆ ಥಕ್ಕನೆ ಆ ಒಂದು ಭಾವನೆಯು ಎಲ್ಲವನ್ನೂ ಮರೆಸಿಬಿಟ್ಟಿತು. ದುಃಖವು ಒತ್ತರಿಸಿ ಬಂದಿತು.

ತಂದೆ ಎಂದನು, "ಮಗೂ ಅಳುವುದೇಕೆ? ನಿನಗಾನೆಂಟಸ್ತಿಕೆ ಒಪ್ಪದೇನು?". ಸುಲೋಚನೆಯು ಮೌನ.

"ಉತ್ತರ ಕೊಡು ಮಗೂ"

"ಇಲ್ಲ."

"ನನ್ನೊಡನೆ ಇಷ್ಟರಲ್ಲೇ ಹೇಳಲಿಲ್ಲವೇಕೆ? ಕಾರಣವೇನು?"

"ಒಪ್ಪುತ್ತದೆ." ಎಂದು ಕಿರುಧ್ವನಿಯಿಂದ ಅನನ್ಯ ಮನಸ್ಕಳಾಗಿ ಸುಲೋಚನೆಯು ಉತ್ತರವಿತ್ತಳು.

ತಂದೆಯು ಮೌನವ್ವಾದನು. ಇದು ಅಗಲುವಿಕೆಯ ವ್ಯಥೆಯೆಂದು ಆತನು ಭಾವಿಸಿದನು. ಪುತ್ರೀ ಪ್ರೇಮದಲ್ಲಿ ತನ್ಮಯನಾದ ಆತನಿಗೆ ಈ ಸಂದಿಗ್ಧ ಮಾತುಗಳು ಸಮಸ್ಯೆಯಾಗಿಯೇ ಉಳಿದುವು.

* * *

ಲಗ್ನದ ಸಿದ್ಧತೆಗಳು ನಡೆದಿವೆ. ಒಂದು ಕಡೆ ವಾದ್ಯದ ಗದ್ದಲ. ಇನ್ನೊಂದೆಡೆ ಭಟ್ಟರ ಮಂತ್ರಗಳು. ಓಡಾಡುವವರ ಸಂಖ್ಯೆಯು ಹೇಳತೀರದು. ಶ್ಯಾನುಭೋಗರು ಎಲ್ಲರ ಪರಿಚಿತರು. ಎಲ್ಲರಿಗೂ ಬೇಕಾದವರು. ಅಂದರೆ ಕೇಳಬೇಕೆ? ಇನ್ನೆರಡುಗಳಿಗೆಗಳು ಉಳಿದಿರುತ್ತವೆ.

"ಶ್ಯಾನುಭೋಗರೆ" ಭಟ್ಟರ ಬಿಚಾರ ಕರೆ ವಾಣಿಯಿಂದ ಶ್ಯಾನುಭೋಗರ ವಿಚಾರಸರಣಿಯು ಕಡಿಯಿತು. ಥಕ್ಕನೆ ಅತ್ತ ಕಡೆ ಓಡಿದರು. "ಹುಡುಗಿಯನ್ನು ಕರೆತನ್ನಿರಿ."

ಶ್ಯಾನುಭೋಗರು ಓಡಿದರು. ಸುಲೋಚನೆಯ ಕೋಣೆಯನ್ನು ಸೇರಿದರು. ಸುಲೋಚನೆಯ ಕೋಣೆಗೆ ಬಾಗಿಲು ಹಾಕಲ್ಪಟ್ಟಿದ್ದಿತು. ತಟ್ಟಿದರು. ಅಗಳಿಯು ಬಿಗಿದಿದೆ. ಕರೆದರು. "ಸುಲೋಚನಾ, ಸುಲೋಚನಾ." ಮಾತಿಲ್ಲ. ಕಿಟಕಿಯಿಂದ ಹಣಕಿ ನೋಡಿದರು; ಸುಲೋಚನೆಯು ನತಮಸ್ತಕಳಾಗಿ ಕುಳಿತಿದ್ದಳು. ಶ್ಯಾನುಭೋಗರ ಹೃದಯಕ್ಕೆ ಬರೆ ಎಳೆದಂತಾಯಿತು.

'ಅಮ್ಮಾ, ಬಾಗಿಲು ತೆಗೆ; ನನ್ನ ಮರ್ಯಾದೆ ತೆಗೆಯಬೇಡ, ಮಗೂ,' ಶ್ಯಾನುಭೋಗರು ಕೂಗಿದರು. ಹೆಂಗಸರ ಸಭೆಯೇ ನೆರೆಯಿತು. ಎಲ್ಲರೂ ಸಮಾಧಾನೋಕ್ತಿಯನ್ನೇ ಆಡುತ್ತಿದ್ದರು. ಆದರೆ ಸುಲೋಚನೆಯು ಮರುತ್ತರವಿಲ್ಲ.

ಸುಲೋಚನೆಯು ಧೈರ್ಯತಾಳಿದಳು. ಹೌದು, ಈಗ ಅತ್ತೇನು ಲಾಭ? ಬಂದುದನ್ನು ಅನುಭವಿಸಲೇ ಬೇಕು.' ಇಂತು ಎಷ್ಟು ಬಾಲತಿಯರ ಜೀವನ [illegible] ಹೊಸತೇನೆ ತನ್ನ ಅದೃಷ್ಟದಲ್ಲಿ ಬರೆದುದನ್ನು ಅನುಭವಿಸಲೇ ಬೇಕು. ಅವರೇ ಧೈರ್ಯಶಾಲಿಗಳು. ಮಹಾತ್ಮರು.

ಸುಲೋಚನೆಯು ಮದುವೆಯಾಯಿತು. ಆದರೆ ಇಂದವಳು ಮೊದಲಿನ ಸುಲೋಚನೆಯಲ್ಲ. ಮುಂತಿನ ಸೌಂದರ್ಯವಿದ್ದರೂ ಅದನ್ನು ಉಪಾಸಿಸುವ ಯೋಗ್ಯ ಉಪಾಸಕರಿಲ್ಲದೆ ಅದು ಮಾಸಿ ಹೋಗಿದೆ. ಮೊದಲಿನಂತೆ ನಗುನಗುವ ಮುಖವಿಲ್ಲ. ಯಾರೊಡನೆಯೂ ಮಾತಿಲ್ಲ. ತನ್ನಷ್ಟಕ್ಕೆ ಇರುವಳು. ಪತಿಯ ಬಂಧನವೇ ಇಂದದು ಎಂಬ ಮನವರಿಕೆಯಾಗಿದೆ.

ಪೂರ್ವಾಚಾರಗಳೆನ್ನೆಲ್ಲಾ ಈಗ ಆಕೆಯು ಬಲ್ಲಳು. ಅವನ್ನೇ ಅನುಕರಿಸುವಳು. ಸದಾ ಮಾವ, ಅತ್ತೆ, ಪತಿಯರ ಸೇವೆಯಲ್ಲೇ ತತ್ಪರಳು. ಇನ್ನು ಮನೆಗೆಲಸವೆಲ್ಲ ಆಕೆಯ ಪಾಲಿಗೆ ಸೇರಿವೆ. ಇಷ್ಟಾದರೂ ಅತ್ತೆ ಮತ್ತು ಗಂಡನ ಬಿರುನುಡಿಗಳು ತಪ್ಪಿದ್ದಿಲ್ಲ. ಅವನ್ನೆಲ್ಲಾ ಸಹಿಸುವಳು.

ಈಗವಳ ತವರಿನ ಆಶೆಯಿಲ್ಲ. ಎಲ್ಲವೂ ಮಾಯವಾಗಿದೆ. ತಂದೆಯ ಪ್ರೇಮವಿಲ್ಲ. ಆಕೆಯು ಎಂದಿಗೋ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಳು. ಆದರೆ ಒಂದೇ ಒಂದು — ತಂದೆಗೆ ಕೊಟ್ಟ ಭಾಷೆಗಾಗಿ — ಆತನ ಪ್ರೇಮಕ್ಕಾಗಿ ಜೀವಧಾರಣೆ ಮಾಡಿಕೊಂಡಿರುವಳು.

ದೈವಗತಿಯನ್ನು ಮೀರುವವರಾರು?

FIRST AND FOREMOST

FIRST AND FOREMOST among the ideals of the CANARA BANK is the ideal of Service to its Customers.

ESTD. 1906.

CANARA BANK LTD.

ಮಾರಾಟಕ್ಕೆ ತಯಾರಾಗಿವೆ

1944ನೇ ಇಸವಿಯ

ಎರಡು ಬಣ್ಣದಲ್ಲಿ ಅಂದವಾಗಿ ಮುದ್ರಿತವಾದ

★ ಆಫೀಸು ಕೆಲೆಂಡರು ★

ಬೆಲೆ. 0—4—0. ವ್ಯಾಪಾರಸ್ಥರಿಗೆ ಯೋಗ್ಯ ಕಮಿಷನು ಕೊಡಲಾಗುವುದು

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಆಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಯೇನೆ ಅಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು. ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE. **The Joint Booking Office,** KODIALBAIL.

Regd. No. M 3460

The Bank of Mangalore Limited, Mangalore.

ESTD. 1931

HEAD OFFICE Mangalore. *BRANCHES* Moodabidri & Padubidri.

ANNOUNCEMENT

Deposits accepted at the following rates from 1-1-1944.

Current Accounts (1% from Jan. to June) (½% from July to Dec.)

Savings bank Accounts 1½% p. a. on daily balances.

Fixed Deposits 6 months 2½% p. a.
12 months 3% p. a.
24 months 3½% p. a.

The Bank also accepts Season and short term deposits and many other lucrative schemes at most favourable rates of interest. For terms etc, apply to Head office or Branches.

THE CANARA BANKING CORPORATION Ltd

(Incorporated in British India liability of members limited)

Estd:] Head office: UDIPI. S. Kanara [1906.

Authorised capital	Rs. 25,00,000.
Issued & Subscribed	Rs. 16,00,000.
Paid up Capital	Rs. 12,65,000.
Reserves	Rs. 3,88,000.

For your Banking requirements come to us and we will assist you. We undertake all kinds of banking business.

33 YEARS OF DUTY AT THE POST OF SERVICE

Being actively in Insurance Service since the first decade of this century, we are in a position to suggest to those who wish to go in for insurance the best schemeto meet individual needs. Our large and evergrowing clientale is proof of our trusted service

Please write your requirements to:-

KOCHIKAR BROTHERS LTD.,

Chief Agents for South India including Indian States Madras Branch Secretaries.

THE BOMBAY LIFE ASSURANCE CO., LTD.

The "Bombay Life" Building UDIPI. S. K.

with offices at:-

BOMBAY ★ BANGALORE ★ CALICUT ★ MADRAS ★ MANGALORE ★ TRIVANDRUM ★
And Agencies all over South India.

'Bhuvanendra Products Limited

Katapadi, S. Kanara.

"BHUVANENDRA" Garbhapal

Tried and appreciated by eminent Doctors. Proved to be the best remedy where even allopathic medicines failed. A specific for threatened or habitualabortion andother uterine troubles Must be commense soon after conception andcontinued up to the time of delivery.

'ಭುವನೇಂದ್ರ ಗರ್ಭಪಾಲ'

ಅಕಾಲ ಗರ್ಭಪಾತ, ಗರ್ಭಧಾರಣೆಯಾಗದಿರುವುದು, ವ ಗರ್ಭಾಶಯದ ಸರ್ವ ವಿಧದ ದೋಷಗಳನ್ನು ಗುಣಪಡಿಸುವ ದಿವ್ಯ ಔಷಧಿ. ಗರ್ಭವತಿಯೆನಿಸಿದಂದಿನಿಂದ ಪ್ರಸವ ಕಾಲದ ವರೆಗೆ ಸೇವಿಸುವುದು ಅತ್ಯುತ್ತಮ.

ಸ್ಥಳೀಯ ಸ್ಟಾಕಿಸ್ಟ್ ಏಜೆಂಟರು:-
(1) ಡಾಕ್ಟರ್ ವಿ. ಟಿ. ಕಾಮತ್, ರಥಬೀದಿ. (2) ರಾಘವೇಂದ್ರ ಷೈ, ರಥಬೀದಿ. (3) ದಿ ಕರ್ನಾಟಕ ಸ್ಟಫ್ ವರ್ಕ್ಸ್, ರಥಬೀದಿ. (4) ಡಾ। ಯಂ. ಎಸ್. ಪ್ರಭು, M. B. B. S. ಒ. ಪಿ. ಸಿ. ಬಿಲ್ಡಿಂಗ್ಸ್. (5) ಸದಾಶಿವ ಮೆಡಿಕಲ್ ಸ್ಟೋರ್ಸ್, ಹಂಪನಕಟ್ಟೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೋ:-1. ಮರಾಠ ಗಲ್ಲಿ ಹುಬ್ಬಳ್ಳಿ.
2. 86 ಪ್ಯಾ... ರೋಡ್, ಟ್ರಿಪ್ಲಿಕೇನ್, ಮದರಾಸು.

ಡೋಂಗರೆ ಬಾಲಾಮೃತವು ಮಕ್ಕಳಿಗೆ

ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ಮೃತ್ಯುಂಜಯ ರಸ. ಕೊಲೆರಾ ರೋಗಕ್ಕೆ ಸಿದ್ಧೌಷಧ.
ಪಂಚವಟಿ ಮಾತ್ರೆ.
ಸೇವನಾ ಕ್ರಮಗಳು ಔಷಧಿಯೊಡನೆ ಇದೆ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು.

ಸ್ವದೇಶಾಭಿಮಾನಿ

SWADESHABHIMANI

ESTD. 1906

[ಸಂಪುಟ 37] ತಾರೀಕು 31—12—1943 [ಸಂಚಿಕೆ 52]

ಅನ್ನ ಕೊಡುವೆವೆಂದವರು ಬಾಂಬಿಕ್ಕಿ ಕೊಂದರು!

ಬಂಗಾಳದ ಉಪವಾಸ ಪೀಡಿತರಿಗೆ, ಅಕ್ಕಿ ಕಳುಹಿಸುತ್ತೇವೆಂದು ಜಪಾನಿಯರು ಭರವಸೆಯಿತ್ತರು, ನಿಜವಾಗಿ ಅವರು ಬಂಗಾಳಕ್ಕೆ ಕೆಲವು ಬಾಂಬುಗಳನ್ನು ಮಾತ್ರ ಕಳುಹಿಸಿದರು, ಅದರಿಂದ ೩೫೦ಮಂದಿ ಮಡಿದರು; ಅದಕ್ಕಿಂತ ಕಡಿಮೆಯಲ್ಲದಷ್ಟು ಜನ ಗಾಯಗೊಂಡರು.

ಫೇಸಿಸ್ಟ್ ಸೇನಾಪತಿಗಳ ಭರವಸೆಗಳನ್ನು, ಅವುಗಳಿಗೆ ಯೋಗ್ಯವಾದ ತಿರಸ್ಕಾರ ಬುದ್ಧಿಯಿಂದಲೇ ನಾವು ತಿರಸ್ಕರಿಸಬೇಕು ನಾನ್‌ಕಿಂಗ್ ದ್ರೋಹಕರು, ಭಾರತದ ಮೇಲೆ ಒಮ್ಮೆಲೇ ವಾತ್ಸಲ್ಯ ತೋರಿಸುವರೆಂದು ಹಾರೈಸುವುದು ಶುದ್ಧ ಮೂರ್ಖತನ.

'ಇಂಟರ್ ಸರ್ವಿಸ್ ಪಬ್ಲಿಕ್ ರಿಲೇಶನ್ಸ್ ಡೈರೆಕ್ಟರೇಟ್ ಇಂಡಿಯಾ' ಇವರು ಕೆಳಗೆ ತೋರಿದ ಮೂರು ಚಿತ್ರಗಳನ್ನು ಚಿತ್ರಿಸಿದ್ದಾರೆ. ಅವುಗಳ ಕಡೆಗೆ ದೃಷ್ಟಿ ಬೀರಿದರೆ, ಅವುಗಳು ಒಂದು ರುದ್ರ ಕಥೆಯನ್ನೇ ವರ್ಣಿಸುವವೆಂದು ನಾವು ತಿಳಕೊಳ್ಳಬಹುದು ಫೇಸಿಸ್ಟ್ ಮದಾಂಧರ, ಸಾಮ್ರಾಜ್ಯ ಶಾಹೀ ರಕ್ತತೃಷ್ಣರ ಹಾಗೂ ಇವರಿಬ್ಬರ ನಡುವಿನ ಸುಬಂಧದಲ್ಲಿರುವ ಒಂದು ನಿರ್ಗತಿಕ ರಾಷ್ಟ್ರದ ಕರುಣ ಕತೆಯನ್ನು ಆ ಚಿತ್ರಗಳು ಚಿತ್ರಿಸುತ್ತವೆ

ಆ ಚಿತ್ರದ ಎಡಗಡೆಯಲ್ಲಿ ಮೂರು ಜನ ಸತ್ತು ಬಿದ್ದಿದ್ದಾರೆ, ಅವರಿಬ್ಬರೂ ಬಡ ಕೂಲಿಗಾರರು. ಮಿಲ್ ಕೆಲಸಗಾರರು ಅಥವಾ ದಿನ ಕೂಲಿಯವರು ತಮ್ಮ ಬಡ ಗುಡಿಸಲಲ್ಲಿಯೇ ನಿಧನಗೊಳಿಸಲ್ಪಟ್ಟವರು ಬಹುಶಃ ತಮ್ಮ ದಿನದ ಕೆಲಸಕ್ಕೆ ಹೊರಡುವಾಗಲೇ ವಧೆ ಮಾಡಲ್ಪಟ್ಟವರು ಡಿಸೆಂಬರ ೫ರ ಆದಿತ್ಯವಾರ ೩೫೦ರಲ್ಲಿ ಆ ಇಬ್ಬರು ಕೆಲವೇ ನಿಮಿಷಗಳಲ್ಲಿ ವಧಿಸಲ್ಪಟ್ಟರು. ಬಂಗಾಳದ ಬಡಜನರಿಗೆ ಅನ್ನ ಕೊಡುತ್ತೇವೆಂದು ಭರವಸೆಯಿತ್ತ ಜಪಾನೀಯರ ಬಾಂಬಿನಿಂದಲೇ ವಧೆಗೊಳಿಸಲ್ಪಟ್ಟವರು. ನಿಜವಾಗಿ ಅವರಿಗೆ ದೊರಕಿದ್ದು ಮರಣದ ಅನ್ನ!

ಆ ಚಿತ್ರದ ಮಧ್ಯದಲ್ಲಿ ಅದೇ ಧಾಳಿಯಲ್ಲಿ ಸತ್ತ ಹಲವು ಮಂದಿಯಲ್ಲಿನ ಕೆಲವರು ಕಾಣುವರು.

ಅದರ ಬಲಗಡೆಯ ಚಿತ್ರದಲ್ಲಿ, ಆಧುನಿಕ ಯುದ್ಧದ ಪಾಶವಿಕ ಸ್ವರೂಪವನ್ನು ಚಿತ್ರಿಸುವ ಭೀಕರ ದೃಶ್ಯವಿದೆ. ಕೆಲ ನಿಮಿಷಗಳ ಮೊದಲು ಮಂದ ಹಾಸದಿಂದ ಮೆರೆಯುತ್ತಿದ್ದ ಮನುಷ್ಯ ಸತ್ತು ಸುಣ್ಣವಾಗಿದ್ದಾನೆ ಅವನ ರುಕೆಡ ಒಡೆದಿದೆ; ಬಟ್ಟೆ ಹರಿದಿದೆ ಅಂದವಾದ ಮನುಷ್ಯ ದೇಹವು ಹರಿದು ಚೂರ್ಣವಾಗಿದೆ; ಜಪಾನೀಯರ ವಿಷಮಯ ಬಾಂಬಿನ ಹೊಡೆತದಿಂದ!

ಲಂಡನ್ ಧಾಳಿಯಿಂದ ಗಾಯಗೊಂಡ ಆಂಗ್ಲೇಯರಿವರಲ್ಲ; ಜರ್ಮನ್ ಬಾಂಬಿನಿಂದ ಮಡಿದ ರಶ್ಯನ್ ಜನರಿವರಲ್ಲ; ಭಾರತದ ನಗರದಲ್ಲಿ, ಜಪಾನೀ ಬಾಂಬಿನಿಂದ ಮಡಿದ ಭಾರತೀಯರಿವರು. ಸೈಗನ್ ರೇಡಿಯೋಗೆ ಇನ್ನೊಂದು ಅಕ್ಕಿ ಕಳುಹಿಸುವ ಕಥೆಯನ್ನು ಸೃಷ್ಟಿಸಿ ನಮ್ಮನ್ನು ಇನ್ನು ಮುಂದೆ ವಂಚಿಸಲು ಎದೆಗಾರಿಕೆಯಿದೆಯೇ?

ಕಲ್ಕತ್ತಾ ಧಾಳಿಯ ಕೆಲವು ವಿಚಾರಗಳು

ದೇವದಾಸ ಗಾಂಧಿ ಗಾಂಧಿಜಿಯೊಡನೆ ಮಾತನಾಡಿದರೆ?

ಇದು ಚಿತ್ರದ ಒಂದು ಪಾರ್ಶ್ವದ ನೋಟ, ಅದರ ಇನ್ನೊಂದು ಬದಿಯನ್ನು ನೋಡಿರಿ:

(೧) ಬಲಗಡೆಯ ಚಿತ್ರ ನೋಡಬೇಕು, ಬಡ ಕುಟೀರಗಳು, ಕೊಳೆತು ನಾರುವ ಗರೀಬರ ಗುಡಿಸಲುಗಳು, ಜಪಾನೀಯರ ಸಾವಿರ ಪವನು ಬಾಂಬುಗಳ ಎದುರು ನಿಲ್ಲಲು ಈ ಗುಡಿಸಲುಗಳಿಗೆ ಶಕ್ತಿಯಿದೆಯೆ?

(೨) ಶತ್ರು ವಿಮಾನಗಳು ನಡುಹಗಲಲ್ಲಿ ಯೇಕಲ್ಕತ್ತದ ಮೇಲೆ ಬಾಂಬಿನ ಮಳೆ ಸುರಿಯುತ್ತಿದ್ದಾಗ, ಕಲ್ಕತ್ತವನ್ನು ರಕ್ಷಿಸುವವರು ನಿರುಪಾಯರಾಗಿದ್ದರು. ನಿಜವಾಗಿ ಏನು ನಡೆಯಿತೆಂಬುದು ನಮಗೆ ತಿಳಿಯದು; ಅಧಿಕಾರಿಗಳ ಗುಪಿತಕ್ಕಾಗಿ ನಮ್ಮ ಅಭಿವಂದನೆಗಳು ಕಲ್ಕತ್ತದ 'ಸ್ಟೇಟ್ಸ್‌ಮೇನ್' ಪತ್ರಿಕೆ ಅಧಿಕಾರಿಗಳ ವರ್ತನೆಯನ್ನು ಖಂಡಿಸಿದೆ. ಕಲ್ಕತ್ತವನ್ನು ರಕ್ಷಿಸುವ ಜನ ಪ್ರಯೋಜನವಿಲ್ಲವೆಂದು ಟೀಕಿಸಿದೆ ಎಷ್ಟುಮಂದಿ ಸೈನಿಕ ಆಫೀಸರರು ಶನಿವಾರ ಆದಿತ್ಯವಾರಗಳನ್ನು ರೆಸ್ಟೋರೆಂಟ್‌ಗಳಲ್ಲಿ ನೃತ್ಯ ಶಾಲೆಗಳಲ್ಲಿ ಕಳೆದರೆಂಬುದನ್ನು ಕೆಲವರು ತಿಳಿಕೊಳ್ಳಬೇಕಿತ್ತು. ಸ್ಟಾಲಿನ್‌ಗ್ರಾಡಿನಲ್ಲಿ ಯಾವನೇ ಸೈನಿಕ ಆಫೀಸರನು ವಾರಾಂತ್ಯವನ್ನು ನೃತ್ಯ ಭೋಗಗಳಲ್ಲಿ ಕಳೆಯಲಾರನು

(೩) ಕಲ್ಕತ್ತಕ್ಕೆ ಕಳೆದ ವರ್ಷ ಏಳು ಬಾರಿ ಬಾಂಬು ಬಿತ್ತು ಆದರೂ (ಬಂಗಾಳದ ಪ್ರಧಾನ ಮಂತ್ರಿ ಒಪ್ಪಿದಂತೆ) 'ಇನ್ನೂ ಅಲ್ಲಿ ಯೋಗ್ಯ ಆಶ್ರಯ ಸ್ಥಳಗಳಿಲ್ಲ, ಇದ್ದದ್ದೂ ಪ್ರಯೋಜನಕ್ಕೆ ಬರುವಂತಿಲ್ಲ (ಜಪಾನರು ತಮ್ಮ ವಿಷಮಯ ಬಾಂಬು ಹಾಕುವ ಸ್ಥಳದಲ್ಲಿ) ಇದಕ್ಕೆ ಇಟ್ಟಿಗೆಯ ಅಭಾವ ಕಾರಣವೆಂದು ಅವರು ಹೇಳಿದರು. ಅದು ಕಾರಣವಾದರೆ, ವಿಕ್ಟೋರಿಯಾ ಬಿಲ್ಡಿಂಗನ್ನು ಹಾಗೂ ನಗರದಲ್ಲಿ ಇನ್ನೆಲ್ಲಾ ಭವ್ಯ ಭವನಗಳನ್ನೂ ಒಡೆದುಹಾಕಿ ಅವುಗಳ ಇಟ್ಟಿಗೆಗಳನ್ನು ರಕ್ಷಣಾ ನಿಲಯಗಳಿಗಾಗಿ ಯಾಕೆ ಉಪಯೋಗಿಸಬಾರದು? ಒಬ್ಬ ಮಾನವ ಸಜೀವನವು, ಈ ಎಲ್ಲಾ ವೈಭವ ವಿಲಾಸ ಭವನಗಳಿಗಿಂತಲ್ಲಾ ಬಹಳ ಅಮೂಲ್ಯವಾದದ್ದು!

(೪) ಬಂಗಾಳ ಸರಕಾರವು ತನ್ನೊಂದು ಪ್ರಕಟಣೆಯಲ್ಲಿ, ಬಸ್ತಿ ಬಳಿಯ ಮನೆಯ ಮಾಲಿಕರಿಗೆಲ್ಲಾ ಒಂದು ವಿನಂತಿ ಕಳುಹಿಸಿ ತಮ್ಮ ಮನೆಗಳನ್ನು ಮನೆಯ ಕೋಣೆಗಳನ್ನು ಬಾಂಬು ರಕ್ಷಣಾ ನಿಲಯವಾಗಿ ಉಪಯೋಗಿಸಲು ವಿನಂತಿಸಿದ್ದಲ್ಲದೆ, ಅದರ ಬಳಿ ಆಶ್ರಯ ಹೊಂದಲು ಹೊಂಡ ತೋಡ ಬಿಡಬೇಕೆಂದೂ ತಿಳಿಸಿದೆ.

ಬೊಂಬಾಯಿಯಲ್ಲಿ, ಪೋಲೀಸರಿಗೆ ಉಳಕೊಳ್ಳಲು ಸ್ಥಳ ಬೇಕಾದರೆ ಬಡ ನಿರಾಶ್ರಿತರಿರುವ ಮನೆಗಳನ್ನು ಖಾಲಿಮಾಡಿಕೊಡಬೇಕೆಂದು ಡಿಫೆನ್ಸ್ ಕಾನೂನು ಜಾರಿಮಾಡಲಾಗಿದೆ. ಕಲ್ಕತ್ತದಲ್ಲಾದರೆ ಭವ್ಯ ಭವನಗಳ ಮಾಲಿಕರಿಗೆ, ಬಡ ಜನರು ಆಶ್ರಯ ಹೊಂದಲು ಸ್ವಲ್ಪ ಸ್ಥಳಕೊಡಿರೆಂದು ಸರಕಾರ ವಿನಂತಿಸಬೇಕಾಗಿದೆ ಸರಕಾರ ಬಡ ಜನರಿಗೆ ಆಜ್ಞೆ ಮಾಡಬಹುದು, ದೊಡ್ಡವರೊಡನೆ ವಿನಂತಿಸುವುದು ಮಾತ್ರ!

(೫) ವಿಮಾನ ಧಾಳಿ ದಶಂಬರ ೫ರ ಆದಿತ್ಯವಾರ ಪ್ರಾತಃಕಾಲ ನಡೆಯಿತು. ಸಂಯುಕ್ತ ನಿವಾಸ ಕೇಂದ್ರದಿಂದ ಒಂದು ಪ್ರಕಟಣೆ ಹೀಗೆಂದು ಹೊರಟಿತು 'ಕೆಲವು ಬಾಂಬುಗಳು ಹಾಕಲ್ಪಟ್ಟವು ಸ್ವಲ್ಪವೇ ಹಾನಿಯಾಯಿತು' ಮರುದಿವಸವೇ ಇನ್ನೊಂದು ಪ್ರಕಟಣೆ ಬಂತು '೫೦೦ ಮಂದಿ ಗಾಯಗೊಂಡರು, ಇವರಲ್ಲಿ ಮೂರುಪಾಲು ಅಪಾಯ ಸ್ಥಿತಿಯಲ್ಲಿದ್ದಾರೆ.' ಹತ್ತು ದಿನಗಳ ಮೇಲೆ ನಮಗೆ ತಿಳಿದುಬಂತು 'ಅದೇ ಸ್ಥಳದಲ್ಲಿ ಹಾಗೂ ಆಸ್ಪತ್ರೆಯಲ್ಲಿ ೩೩೪ ಜನ ಸತ್ತರು' ಅಧಿಕಾರೀ ಪ್ರಕಟಣೆಯಲ್ಲಿ ಒಂದೇ ರೀತಿಯಿರಬಾರದೆ? ಊಹೆಗಳನ್ನು ಹೊರಡಿಸುವಂತೆ, ಸರಕಾರೀ ಪ್ರಕಟಣೆಗಳೂ ಹೊರಟರೆ ಹೇಗೆ?

(೬) ವೈಸರಾಯ್ ಮಂತ್ರಿಮಂಡಳದಲ್ಲಿ ಓರ್ವ ಭಾರತೀಯ 'ರಕ್ಷಣಾ ಮಂತ್ರಿ' ಇರುವರೆಂದು ನಾವು ಕೇಳಿದ್ದೇವೆ. ಇಂಥಾ ಭೀಕರ ಧಾಳಿಯಾದ ಕೆಲವೇ ನಿಮಿಷಗಳಲ್ಲಿ ಇತರ ಯಾವುದೇ ರಾಷ್ಟ್ರದ 'ರಕ್ಷಣಾ ಮಂತ್ರಿ'ಯಾದರೂ ಬಿದರ ಸರೀ ವಿವರಗಳನ್ನು ತಿಳಕೊಳ್ಳಬಲ್ಲನು. ನಾವು ಕೇಳಿರುವ ಆ 'ರಕ್ಷಣಾ ಮಂತ್ರಿ'ಗಳಿಗೆ ಈ ವಿಮಾನಧಾಳಿ ಸುದ್ದಿ ಸಿಗಲು ಎಷ್ಟು ಸಮಯ ಬೇಕಾಗಿರಬಹುದು? ಕಡಿಮೆಯೆಂದರೆ ೮ ಅಥವಾ ೯ ಗಂಟೆಗಳು! ಅಧಿಕಾರೀ ಪ್ರಕಟಣೆಯೊಂದು ಹೀಗೆ ಹೇಳುತ್ತದೆ. 'ಆದಿತ್ಯವಾರ ರಾತ್ರಿ ಊಟವಾದ ಮೇಲೆ ಕಲ್ಕತ್ತೆಗೆ ಹಗಲತ ಹೊತ್ತಿನಲ್ಲಾದ ಈ ಧಾಳಿಯ ಸುದ್ದಿಯನ್ನು ಕೇಳಿ, ರಕ್ಷಣಾ ಮಂತ್ರಿಗಳಾದ ಆ। ಮಲಿಕ್ ಸರ್ ಫಿರೋಜ್‌ಖಾನ್ ನೂನರು .... ಡಿಲ್ಲಿಯಿಂದ ವಿಮಾನ ಮೂಲಕ ಹೊರಟು ಸೋಮವಾರ ಪ್ರಾತಃಕಾಲ ಬಂದಿಳಿದರು.'

ಸರಿ ಈ ಚಿತ್ರಗಳನ್ನು ಇನ್ನೊಮ್ಮೆ ನೋಡಿ ಈ ಚಿತ್ರಗಳನ್ನು ನೋಡಿ ೩೫೦ ಮಂದಿ ಭಾರತೀಯರು ಜಪಾನೀ ಬಾಂಬಿನಿಂದ ಮಡಿದರೆಂಬ ವಿಷಯ ನೆನಪಿನಲ್ಲಿಡಿರಿ ಈಗಲೂ ಕಲ್ಕತ್ತದ ಮೇಲೆ ವಿಮಾನಧಾಳಿ ಭೀತಿಯಿದೆಯೆಂಬ ಸುದ್ದಿ ಬರುತ್ತಿದೆ. ದೇಶಾಭಿಮಾನಿಗಳಾದ ನಿಮ್ಮ ರಕ್ತ ಈ ಸುದ್ದಿಕೇಳಿ ಕುದಿಯುವುದಿಲ್ಲವೆ? ಈ ೩೫೦ ನೀವು ಭಾವಿಸುತ್ತೀರಿ; ನಾವೆಲ್ಲರೂ ಹಾಗೆ ಭಾವಿಸುತ್ತೇವೆ

ಒಂದು ರಾಷ್ಟ್ರವು, ಆ ರಾಷ್ಟ್ರದ ಜನರಿಂದಲ್ಲದೆ ಪರಕೀಯರಿಂದ ರಕ್ಷಿಸಲ್ಪಡಲು ಸಾಧ್ಯವಿದೆಯೆ? ರಾಷ್ಟ್ರೀಯ ರಕ್ಷಣೆಯೆಂದರೆ ಕೆಲವು ಕೋವಿಗಳು ಮತ್ತು ಕೆಲವು ವಿಮಾನಗಳೆ? ಭಾರತವಿದು ನಮ್ಮ ರಾಷ್ಟ್ರ, ನಾವಿದನ್ನು ರಕ್ಷಿಸಬೇಕು, ಎಂದು ಭಾರತೀಯರು ಭಾವಿಸುವಾಗ ಮಾತ್ರ ಭಾರತದ ರಕ್ಷಣೆ ಸಾಧ್ಯ ಮಾತ್ರವಲ್ಲದೆ ಈ ೩೫೦ ಮಂದಿ ಮಡಿದ ಪ್ರತೀಕಾರ ಕಾರ್ಯವೂ ಸಾಧ್ಯವಲ್ಲವೆ? ಲಂಡನ್ ಆಡಳಿತದ ಸ್ಥಾನದಲ್ಲಿ ರಾಷ್ಟ್ರೀಯ ಸರಕಾರ ಸ್ಥಾಪಿತವಾದರೆ, ರಾಷ್ಟ್ರಮುಖಂಡರು ಬಿಡುಗಡೆಯಾಗಿ, ಜನರನ್ನು ಹುರಿದುಂಬಿಸಿದರೆ ಮಾತ್ರ ಈ ಕಾರ್ಯ ಸಾಧ್ಯವಲ್ಲವೆ?

ಹೌದು! ಈ ಚಿತ್ರಗಳನ್ನು ಇನ್ನೊಮ್ಮೆ ನೋಡಿ

(ಬೊಂಬೇ ಕ್ರಾನಿಕಲ್)

ಗಾಂಧಿಜಿಯೊಡನೆ ಮಾತನಾಡಲಿಲ್ಲ

ದೇವದಾಸ ಗಾಂಧಿಯರ ಹೇಳಿಕೆ

ಶ್ರೀ। ದೇವದಾಸ ಗಾಂಧಿಯವರು, ತಾಯಿ ಕಸ್ತೂರ್‌ಬಾರ ಅನಾರೋಗ್ಯದ ನಿಮಿತ್ತ ಪುನೆಯ ಆಗಾಖಾನ ಅರಮನೆಗೆ ಒರುವರು. ಅಲ್ಲಿ ಗಾಂಧಿಯೊಡನೆ ಅವರು ಏನೂ ಮಾತುಕತೆ ಮಾಡಿಲ್ಲವೆಂದು ಒಂದು ಹೇಳಿಕೆಯಿತ್ತು ತಿಳಿಸಿದ್ದಾರೆ

'ಭಾರತದ ರಾಜಕೀಯ ಪರಿಸ್ಥಿತಿ ವಿಚಾರ ನಾನು ಗಾಂಧಿಜಿಯೊಡನೆ ಮಾತನಾಡುತ್ತಿರುವೆನೆಂದು, ನನ್ನ ಮೂಲಕ ಸಾರ್ವಜನಿಕರಿಗೆ ಸಂದೇಶ ಕಳುಹಿಸಲು ಸರಕಾರ ಅನುಮತಿಯಿತ್ತಿದೆಯೆಂದೂ ಕೆಲವು ಮುಖ್ಯ ಪತ್ರಿಕೆಗಳಲ್ಲಿ ಸುದ್ದಿ ಬಂದಿದೆ ಇದು ನಿರಾಧಾರವಾದ ಸುದ್ದಿ. ನನ್ನ ತಾಯಿಯ ಅನಾರೋಗ್ಯದ ನಿಮಿತ್ತ ಅವರನ್ನು ಕಾಣಲು ನನಗೆ ಸರಕಾರ ಅನುಮತಿಯಿತ್ತಿದೆ. ಆದರೆ ಅವರ ಭೇಟಿ ಕಾಲದಲ್ಲಿ ನನಗೆ ಬಲವಾದ ಕಾವಲಿದೆ. ಅಲ್ಲಿ ನನ್ನ ತಂದೆಯಿರುವರೇನೋ ನಿಜ, ಆದರೆ ಗಾಂಧಿಜಿಯೊಡನೆ, ಹಾಗೂ ಅಲ್ಲಿರುವ ಇತರ ಯಾವ ಸ್ಥಾನಬದ್ಧರೊಡನಾಗಲಿ ಚರ್ಚಿಸ ಕೂಡದೆಂದು ಸರಕಾರವ ನಿರ್ಬಂಧಿಸಿದೆ ಈ ನಿಯಮವನ್ನು ಪ್ರಮಾಣಿಕತನದಿಂದ ಪಾಲಿಸಲಾಗುತ್ತದೆ ಆದ್ದರಿಂದ ಸಾರ್ವಜನಿಕರಿಗಾಗಲಿ ಇತರ ಯಾರಿಗೇ ಆಗಲಿ ಗಾಂಧಿಜಿಯವರ ಸಂದೇಶ ತರುವ ಸಂಭವವೇ ಇಲ್ಲ" ಹೀಗೆಂದು ದೇವದಾಸ ಗಾಂಧಿ ಪ್ರಕಟಿಸಿದ್ದಾರೆ.

ಚಿತಗಾಂಗ್ ಮೇಲೆ ವಿಮಾನ ಧಾಳಿ

ಅಲ್ಪ ಸ್ವಲ್ಪ ಹಾನಿಯಂತೆ

'ತಾ. ೨೬ರಂದು ಮುಂಜಾನೆ ಜಪಾನು ಬಾಂಬರುಗಳು ಬೆಂಗಾವಲಿನೊಂದಿಗೆ ಬಂದು ಚಿತಗಾಂಗ್ ಪ್ರದೇಶದ ಮೇಲೆ ಧಾಳಿಯಿಟ್ಟವು. ಶತ್ರು ವಿಮಾನಗಳಲ್ಲಿ ೫ದನ್ನು ನಾಶಪಡಿಸಲಾಯಿತು. ಮೂರು ಧಕ್ಕೆಗೊಂಡವು. ಈ ಧಾಳಿಯಿಂದ ಅಲ್ಪ ಸ್ವಲ್ಪ ಹಾನಿಯಾಗಿದೆ" ಹೀಗೆಂದು ಸರಕಾರೀ ಪ್ರಕಟಣೆ ಹೊರಟಿದೆ

ಒಂದು ಸಣ್ಣ ಕಥೆ

ಇಂದ್ರ ಪದವಿಯಲ್ಲಿ

ಲೇಖಕಿ:- ಶ್ರೀಮತಿ ವತ್ಸಲಾ ಕುಮಾರಿ

[illegible] ದಿವ್ಯ ವಾರೆಗೆ ಪ್ರಕಾಶದಿಂದ ಹೊಳೆಯು ಮೈಮೇಲಿನ ನವರತ್ನಖಚಿತ ಆಭರಣಗಳು ಝಗ ಝಗನೆ ಹೊಳೆಯುತ್ತಿದ್ದುವು. ಆಕೆಯ ಆಭರಣಗಳ ಹೊಳಪು ಸುತ್ತು ಮುತ್ತನ್ನು ಬೆಳಗುತ್ತಿತ್ತು. ಅವರೊಳಗೆ ತನ್ನ ಕಾಲಡಿಯಲ್ಲಿರುವ ಭೂಲೋಕದ ವಿಷಯವೇ ಮಾತುಕತೆಗಳಾಗುತ್ತಿದ್ದುವು.

ಲಕ್ಷ್ಮಿಯೆಂದಳು, "ನಾಥ! ನಿನ್ನ ಮಾಯೆಯು ವಿಚಿತ್ರವಾದುದು. ಸಕಲ ಜೀವಿಗಳ ಸೃಷ್ಟಿಗೆ ಕಾರಣನಾದ ಬ್ರಹ್ಮನು ತನ್ನ ಕರ್ತವ್ಯವನ್ನು ಚೆನ್ನಾಗಿ ಪರಿಪಾಲಿಸುತ್ತಿರುವನು. ಅವರ ಪಾಲಕನಾದ ನೀನು ಮಾತ್ರ ಸುಮ್ಮನಿರುವೆಯಲ್ಲ. ಎಷ್ಟೋ ಜನರು ಹೊಟ್ಟೆಗಿಲ್ಲದೆ ನರಳಿ ನರಳಿ ಸಾಯುತ್ತಿರುವರು. ಹೆಚ್ಚಾದ ಜನರು "ಹೊಟ್ಟೆಗಿದ್ದರೆ ಬಟ್ಟೆಗಿಲ್ಲ" ಎಂಬ ಸ್ಥಿತಿಯಲ್ಲಿರುವರು. ಬ್ರಹ್ಮನು ಮಾತ್ರ ಯಾವ ಪಕ್ಷಪಾತವಿಲ್ಲದೆ ಸೃಷ್ಟಿಸಿದಾಗ ನೀನು ಮಾತ್ರ ಇಂಥ ಭೇದವನ್ನು ಮಾಡಿರುವೆಯಲ್ಲ. ಆದರೂ ಆ ಬಡಪಾಯಿಗಳು ಸದಾ ನಿನ್ನ ಧ್ಯಾನದಲ್ಲೇ ಇರುವರು. ಆದರೆ ಅಲ್ಲಿ ನೋಡು, ಖರೇ ಕೆಲವರು ಅರಮನೆಯಂಥ ಕಟ್ಟಡದಲ್ಲಿ ಸುಖವಾಗಿದ್ದು ಯಾವಾಗಲೂ ಮೃಷ್ಟಾನ್ನ ಭೋಜನವನ್ನುಣ್ಣುತ್ತಿರುವರು. ಅವರ ವೈಭವವೇನು! ಹೆಮ್ಮೆಯೇನು? ಇದಕ್ಕೇನು ಕಾರಣ?"

ವಿಷ್ಣುವು ತನ್ನ ಪ್ರಿಯ ಪತ್ನಿಯ ಮಾತನ್ನು ಕೇಳಿ ನಸುನಕ್ಕನು. "ನಿನ್ನ ಕೈಯಲ್ಲಿ ಅವರಿಗೆ ಕಟಾಕ್ಷ ಬೀರುವ ಅಧಿಕಾರವು ಇರುವಾಗ ನಾನೇನು ಮಾಡಬೇಕು?"

"ಅದರೆ ನಾಥಾ, ನಿನ್ನಪ್ಪಣೆಯಿಲ್ಲದೆ ನಾನು ಯಾರಿಗೆ ಸಹಾಯವಾಗಬಲ್ಲೆ?"

"ಪ್ರಿಯೆ ನೀನರಿಯೆ, ಆಶೆಯೆಂಬುದು ಸೂಜಿಯ ಮೊನೆಯಷ್ಟು ದೊಡ್ಡದರೆ, ನಂತರ ಅದು ಒಂಟೆಯಷ್ಟು ದೊಡ್ಡದಾಗಬಲ್ಲುದು. ಆ ಮೇಲೆ ನಿನ್ನ ಪ್ರಾಣಕ್ಕೂ ಅವರು ಸಂಚುಕಾರರಾಗಬಹುದು. ಇದ್ದುದರಲ್ಲಿ ತೃಪ್ತಿಪಡುವವರಾಗಿದ್ದರೆ ಅದೆಷ್ಟೋ ಸುಖಿಗಳಾಗುತ್ತಿದ್ದರು."

"ಆದರೆ ಪ್ರಿಯಾ, ನಿನ್ನ ಮಾತನ್ನು ನಾನು ಸಮ್ಮತಿಸೆನು. ನಾನು ಪ್ರತ್ಯಕ್ಷವಾಗಿ ಕಾಣದೆ ಅದನ್ನು ಒಡಬಂಡೆನು.

"ಪಿನ್ನಿಚ್ಛೆ. ಅನಂತರ ನನ್ನನ್ನು ದೂರದಿರು."

"ಆಗಲಿ."

* * *

ಪ್ರಾತಃಕಾಲ, ಚಂದ್ರಮನು ಅದಾಗಲೇ ಪಶ್ಚಿಮ ದಿಗಂಗನೆಗೆ ಮನಸೋತು ಆಕೆಯ ಮನೆಯನ್ನು ಪ್ರವೇಶಿಸುತ್ತಿದ್ದನು. ಸೂರ್ಯನು ಜಗತ್ತನ್ನು ಬೆಳಗಿಸಲು ಬರುವನು ಎಂದು ತಿಳಿಸಲು ಆತನ ಸಾರಥಿಯು ಮುಂದೆ ಹೊರಟಿದ್ದನು. ಪೂರ್ವದಿಗಂತವೆಲ್ಲಾ ರಕ್ತವರ್ಣವಾಗಿತ್ತು. ಈ ಶುಭ ವರ್ತಮಾನದಿಂದ ಪುಲಕಿತನಾಗಿ ವಾಯುವು ಅತ್ತಿತ್ತ ಚಲಿಸುತ್ತಿದ್ದನು. ಆತನ ಮೃದು ಸ್ಪರ್ಶದಿಂದ ಹೂಗಳೂ ಪುಲಕಿತವಾದುವು. ಆತನನ್ನು ಕಂಡು ಮುಗುಳು ನಗೆ ಬೀರತೊಡಗಿದುವು. ಅರಳಿದ ಹೂಗಳನ್ನು ಕಂಡ ತುಂಬಿಗಳು ಮಧುವನ್ನು ಹೀರಲು ಧಾವಿಸತೊಡಗಿದುವು. ಇವರ ಝೇಂಕಾರವನ್ನಾಲಿಸಿದ ಪಕ್ಷಿಗಳು ತಾವೂ ಪ್ರತಿಸ್ಪರ್ಧಿಸುವುವೊ ಎಂಬಂತೆ ಗೂಡುಗಳಿಂದ ಹೊರಗೆ ಆಹಾರಾನ್ವೇಷಣೆಗೆ ಹೊರಟವು. ಇವರ ಚಿಲಿಪಿಲಿಯ ಕಲರವದಿಂದ ಎಚ್ಚೆತ್ತ ಸಾಧು ಪ್ರಾಣಿಗಳು ಕೂಗಿ ಕೂಗಿ ತಮ್ಮ ಯಜಮಾನರನ್ನು ಎಚ್ಚರಿಸುತ್ತಿದ್ದುವು. ಹೀಗೆ ಇಡೀ ಪ್ರಕೃತಿಯೇ ಎಚ್ಚರಗೊಳ್ಳುವಂತಿತ್ತು.

ಈ ನಸುಮುಸುಕಿನಲ್ಲಿ ಒಬ್ಬ ಮನುಷ್ಯನು ಮೆಲ್ಲ ಮೆಲ್ಲನೆ ಅಡಿಯಿಡುತ್ತಾ ಹೋಗುತ್ತಿದ್ದನು. ಆತನ ನಡೆಯನ್ನು ಕಂಡಾಗ ಬಹಳ ಆಯಾಸಗೊಂಡಂತಿದ್ದನು. ಚಳಿಯಿಂದ ನಡುಗುತ್ತಾ ಕಂಬಳಿಯನ್ನು ಬಿಗಿಯಾಗಿ ಹಿಡಿದುಕೊಂಡು ರಾಮನಾಮ ಹೇಳುತ್ತಾ ನಡೆಯುತ್ತಿದ್ದನು. ಆತನ ದೃಷ್ಟಿಯು ಚಂಚಲವಾಗಿತ್ತು. ಅಷ್ಟರಲ್ಲೇ, ಇದೇನು! ಬೇಯ ಅಶ್ವತ್ಥದ ಕಟ್ಟೆಯ ಮೇಲೆ ನಿಂತಿದ್ದ ಒಂದು ವ್ಯಕ್ತಿಯು ಆತನನ್ನು ಕೈಯೆತ್ತಿ ಕರೆದಂತಾಯಿತು. ಮೊದಲಿನ ವ್ಯಕ್ತಿಯು ಬೆದರಿದನು, ದೆವ್ವವಿರಬಹುದೇ ಎಂದು. ಇರಲಿ, ಸಾಯಲು ಹೊರಟವನಿಗೆ ನಿಶಿಸ ಚಿಂತೆ? ಕಟ್ಟೆಯು ಸಮೀಪಿಸುವಂತೆ ಕರೆದ ವ್ಯಕ್ತಿ ಹೆಂಗುಸೆಂದು ತಿಳಿದು ಬಂತು. ಆಕೆಯ ಮುಖವು ಲಕ್ಷಣಯುಕ್ತವಾಗಿತ್ತು. ಆದರಿಂದ ಒಂದು ತರದ ತೇಜವು ಕಂಡು ಬರುತ್ತಿತ್ತು. ಆಕೆಯು ಕೈಯೆತ್ತಿ ಏನೋ ಕೊಟ್ಟಂತಾಯಿತು. ಮೊದಲಿನ ವ್ಯಕ್ತಿಯು ನೋಡಿದನು, ಅರುಣೋದಯದ ಮುಂಬೆಳಕಿನಲ್ಲಿ ಅದು ಹೇಗೆ ಹೊಳೆಯುತಿತ್ತು! ಆತನ ಆನಂದಕ್ಕೆ ಪಾರವೇ ಇಲ್ಲ. ಮುಳುಗುತ್ತಿದ್ದವನಿಗೆ ತೃಣವೇ ಆಧಾರ, ಈಗಾದರೂ ತನ್ನ ಅದೃಷ್ಟ ಪರೀಕ್ಷೆ ಮಾಡುವೆನೆಂದು ಹೊರಟನು.

* * *

ಆ ವ್ಯಕ್ತಿಯು ನೆಟ್ಟಗೆ ಪೇಟೆಯತ್ತ ಹೊರಟನು. ಆತನಲ್ಲಿ ಈಗ ನವಚೈತನ್ಯವು ತುಂಬಿದೆ. ವೇಗವಾಗಿ ಒಳ್ಳೇ ಸ್ಫೂರ್ತಿಯಿಂದ ಆತನು ಹೆಜ್ಜೆಗಳನ್ನಿಕ್ಕುತ್ತಿದ್ದನು. ಆತನು ಪೇಟೆಯನ್ನು ಮುಟ್ಟುವಾಗ ಒಳ್ಳೇ ಬೆಳಕು ಹರಿಯಿತು. ಅಲ್ಲಿ ಒಂದು ರೂಪಾಯಿಯ ಕಾಯಿಪಲ್ಯಗಳನ್ನು ಕೊಂಡುಕೊಂಡನು.

ಒಂದು ವ್ಯಕ್ತಿಯು ಕಾಯಿಪಲ್ಯದ ಕುಕ್ಕೆಯನ್ನು ಹೊತ್ತುಕೊಂಡು ಬಾಗಿಲು ಬಾಗಿಲುಗಳಲ್ಲಿ ತಿರುಗುತ್ತಿದ್ದನು, ಅನೇಕರು ಆತನೊಡನೆಯೇ ತರಕಾರಿಗಳನ್ನು ಕೊಂಡುಕೊಳ್ಳುತ್ತಿದ್ದರು. ಎಲ್ಲರೂ ಆತನನ್ನೇ ಕರೆಯುತ್ತಿದ್ದರು. ಆತನ ಪ್ರತಿ ಕೆಲಸ ಗೆಲ್ಲುತ್ತಿತ್ತು. ಅಂದು ಒಂದು ರೂಪಾಯಿಯು ಇದ್ದಲ್ಲಿ ಈಗ ೩ ರೂಪಾಯಿಗಳಾದುವು. ಆತನ ಆನಂದಕ್ಕೆ ಪಾರವಿಲ್ಲ. ಆ ವ್ಯಕ್ತಿಯು ನಮ್ಮ ಪರಿಚಿತವಾದುದೇ.

* * *

ಆ ವ್ಯಕ್ತಿಯು ಈಗ ಬಂದರು! ಸಾಹುಕಾರನು. ಅನೇಕರು ಆತನ ಮಳಿಗೆಗೆ ಹೋಗುತ್ತಾ ಬರುತ್ತಾ ಇದ್ದಾರೆ. ಜೀನಸುಗಳ ರಾಶಿಯೇ ಬಿದ್ದಿದೆ. ಅಕ್ಕಿ ಮುಡಿಗಳನ್ನು ಒಂದು ಕೋಣೆಯಲ್ಲಿ ಅಟ್ಟಿ ಹಾಕಿಟ್ಟಿದ್ದಾರೆ. ಇನ್ನೊಂದು ಕೋಣೆಯಲ್ಲಿ ಸಕ್ಕರೆಯ ಗೋಣಿಗಳು ರಾಶಿಯಾಗಿ ಬಿದ್ದಿವೆ. ಎಣ್ಣೆಯ ಹೊಳೆಯೇ ಹರಿಯುತ್ತದೆ. ಬಿಳಿ ಬಿಳಿ ಹತ್ತಿ ಹಿಮದಂತೆ ಮುದ್ದೆಯಾಗಿ ಹರಡಿದೆ. ಆ ವ್ಯಕ್ತಿಯು ಮುಂಡದ ಮೇಲೆ ಆಸೀನನಾಗಿರುವನು. ಹಿಂದೆ, ಬದಿಗಳಲ್ಲಿ ಒರಗಲು ಲೋಡುಗಳೇನು! ಆತನ ಆಭರಣಗಳೇನು? ಯಾವನೋ ಮಹಾಪುರುಷನಂತೆ ಕಾಣುತ್ತಿರುವನು. ಯಾವನೋ ಸರಕಾರಿ ಆಫೀಸರನೊಡನೆ ಮಾತಾಡುತ್ತಿರುವನು. ಆತನು ಮಾತನಾಡುತ್ತಿರುವ ಇಂಗ್ಲಿಷೇನು? ಶೈಲಿಯೇನು?

* * *

ಸಿಂಹಾಸನದಲ್ಲಿ ವಿರಾಜಿಸುತ್ತಿರುವ ವ್ಯಕ್ತಿಯೂ ಅದೇ ತಾನೇ. ಆತನ ಕಣ್ಣಿನ ಕಾಂತಿಯೇನು! ಆತನ ಒಡ್ಡೋಲಗದ ಸೊಬಗೇನು? ಆತನ ವೈಖರಿಯೇನು! ಬಳಿಯಲ್ಲೇ ರತಿಯಂಥ ಪತ್ನಿಯು ಕುಳಿತಿದ್ದಾಳೆ. ಆಕೆಯ ತೊಡೆಯ ಮೇಲೆ ಒಂದು ಗಂಡು ಮಗುವು ಆಡುತ್ತಾ ಇದೆ. "ಆಲಸಿಯಾಗಿ ದುಡಿಯದೆ ಯಾರ ಯಾರ ಮನೆಯಲ್ಲಿ ಕನ್ನ ಹೊಡೆದು ಜೀವಿಸಿದರ ಫಲ ಉಣ್ಣು. ಕಟ್ಟ ಮೋರೆಯವನೇ ನಿನಗೆ ಒಂದು ವರ್ಷದ ಕಾರಾಗೃಹ!" ರಾಜನ ಬಾಯಿಯಿಂದ ನ್ಯಾಯ ತೀರ್ಮಾನವು ಹೊರಟಿತು.

* * *

ಒಂದು ಯಜ್ಞವು ನಡೆಯುತ್ತಾ ಇದೆ. ಬಳಿಯಲ್ಲಿ ಆ ವ್ಯಕ್ತಿಯು ಇದೆ. ಆತನ ಧರ್ಮಪತ್ನಿಯು ವಾಮ ಪಾರ್ಶ್ವದಲ್ಲಿಯೂ ಒಂದು ಗಂಡು ಮಗುವು ಇನ್ನೊಂದು ಬದಿಯಲ್ಲಿಯೂ ಒಂದೆರಡು ಇತರ ಮಕ್ಕಳು ಹಿಂದೆಯೂ ಕುಳಿತಿರುವರು. ಪುರೋಹಿತರು ಉಚ್ಚರಿಸುತ್ತಿರುವ ಮಂತ್ರಗಳ ಘೋಷವೇನು! ಹಲವು ದ್ರವ್ಯಗಳನ್ನು ಅದರೊಳಗೆ ಸಮರ್ಪಿಸುತ್ತಿರುವರು. ಘೃತ, ಹಾಲು, ಎಣ್ಣೆ ಇತ್ಯಾದಿ ಇತ್ಯಾದಿ.

ಮತ್ತೊಂದು ಕಡೆ ವಾದ್ಯದ ಗದ್ದಲವು ಕೇಳಿಸುತ್ತದೆ. ಇನ್ನೇನು ಈಗಲೇ ಊದುವ ಕೊಳವೆಯು ಒಡೆಯುವುದೋ! ಕಿವಿಗಳು ಒಡೆಯುವುವೋ! ಯಾವ ವಾದ್ಯ ಬೇಕೋ ಆ ವಾದ್ಯಗಳಿವೆ. ಡಂ ಡಂ, ಪೇ ಪೇ, ಪೊಂ ಪೊಂ ಯಾವುದಕ್ಕೂ ಕಮ್ಮಿ ಇಲ್ಲ.

ಇನ್ನೊಂದು ಕಡೆ ಹೆಂಗಳೆಯರ ಓಡಾಟ ನರ್ತನ, ಗಾಯನ, ನಗೆಯ ಕಿಲಕಿಲಾಟ. ಆನಂದವೇ ಆನಂದ. ಎತ್ತೆತ್ತಲೂ ಆನಂದ. ಅವರ ಜರತಾರಿ ಸೀರೆಗಳೇನು! ಕುಪ್ಪಸಗಳೇನು! ನವರತ್ನ ಖಚಿತ ಆಭರಣಗಳೇನು!

ಮಗುದೊಂದು ಬದಿಯಲ್ಲಿ ತರುಣರ ಸಭೆಯೇ ನೆರೆದಿದೆ. ಅವರ ಮಾತೇನು! ಪದಗಳೇನು! ತರುಣಿಯರನ್ನು ವರ್ಣಿಸುವ ಬಗೆಯೇನು! ಹಾಸ್ಯವೇನು?

ಹಾಸ್ಯ ತುಂಬುಗಿಯುತ್ತಾ ಬಂತು. ವಾದ್ಯದ ಗದ್ದಲವು ಕಡಿಮೆಯಾಯಿತು. ಮಂತ್ರ ಘೋಷಣದಿಂದ ಪುರೋಹಿತರ ಗಂಟಲು ಒಣಗುತ್ತ ಬಂದಂತಾಯಿತು. ಹೆಂಗಳೆಯರ [illegible] ಕಾಲುಗಳು ಸೋತವು. [illegible] ತಾವೇ ಕುಣಿಯುತ್ತಿದ್ದುವು. ಕಂಕಣ ಬದ್ಧನಾದ ಅರಸನು ಸಂತೋಷದ ಉಯ್ಯಾಲೆಯಲ್ಲಿದ್ದನು, ಇನ್ನೇನು ತಾನು ಇಂದ್ರನು ಸುರಲೋಕವು ಆತನ ಕೈಸೇರುವುದು. ಲಕ್ಷ್ಮಿಯು ಆತನ [illegible] ಮನೆಯಾಳು. ಇದೊ! ಇದೊ! ಇದು ಕಡೆಯ ಹವಿಸ್ಸು.

* * *

"ಮಗೂ! ಮಗೂ! ಹೊತ್ತೇರಿದರೂ ನಿನಗೆ ಏಳುವ ಗೊಡವೆಯೇ ಇಲ್ಲ." ಮಾದನನ ತಾಯಿಯು ಆತನನ್ನು ಮೈಮುಟ್ಟಿ ಎಬ್ಬಿಸಿದಳು. ಮಾದನು ಕೈಬಿಟ್ಟನು. ತಾನೆಲ್ಲಿರುವೆನೆಂದು ಆತನಿಗೆ ತಿಳಿಯಲೇ ಇಲ್ಲ. "ಇಂದ್ರಪದವಿಯಲ್ಲಿದ್ದ ನನ್ನನ್ನು ಇಲ್ಲಿಗೆ ಯಾರು ಕರೆತಂದರು." ಮಾದನು ತನ್ನ ಸುತ್ತಲೂ ನೋಡಿದನು. ಯಜ್ಞವೂ ಇಲ್ಲ. ಮೋಹವೂ ಇಲ್ಲ. ಆತನ ದುಃಖಕ್ಕೆ ಪಾರವೇ ಇಲ್ಲ. "ಅಮ್ಮಾ ನೀನು ನನ್ನನ್ನೇಕೆ ಎಬ್ಬಿಸಿದೆ. ಈಗಲೇ ಇಂದ್ರಪದವಿಯನ್ನೇರಲು ಸಿದ್ಧನಾಗಿದ್ದ ನನ್ನನ್ನು ಇಲ್ಲಿಗೇಕೆ ಎಳೆದು ತಂದೆ." ಆದರೆ ಆಕೆಗೆ ಒಂದೂ ತೋಚದಾಯಿತು. ಮನೆಯಲ್ಲೇ ಕೂತು ಗಾಳಿಗೋಪುರಗಳನ್ನು ಕಟ್ಟಿ, ಅವುಗಳ ಭಾರದಿಂದ ತಲೆ ಸರಿಯಾಗಿಲ್ಲವೆಂದು ಮನನ ಮಾಡಿಕೊಂಡಳು.

ಆದರೆ ಅಂದಿನಿಂದ ಮಾದನ ಸ್ಥಿತಿಯೇ ಬದಲಾಯಿತು. ಆತನೀಗ ದಿನಾಲೂ ಕೂಲಿ ಕೆಲಸಕ್ಕೆ ಹೋಗುವನು. ದಿನವೆಲ್ಲಾ ದುಡಿದು ಮನೆಗೆ ಹಿಂತಿರುಗುವನು. ದಣಿದು ಹಸಿದು ಬರುವಾಗ ನಗುನಗುತ್ತಾ ಸ್ವಾಗತಿಸುವ ಪತ್ನಿ, ತೊದಲ್ನುಡಿಗಳಿಂದ ಆತನ ಕಾಲುಗಳನ್ನು ದಾಟಿ ತಬ್ಬುವ ಮಗನನ್ನು ಕಂಡ ಕೂಡಲೇ ಆತನ ದಣಿವೆಲ್ಲವೂ ಪರಿಹಾರವಾಗುವುದು.

ಅಂದು, ಕನಸಿನ ಹೆಂಡತಿ ಮಕ್ಕಳು ಧನಸಂಪತ್ತುಗಳಿಂದೆಲ್ಲಾ ಕೂಡಿದ ಮಾದನಿಗಿಂತಲೂ ಇಂದಿನ ಪರಿಶ್ರಮಿ ಮಾದನು ಎಷ್ಟೋ ಸುಖಿಯು.

ರೈಲು ಬಂಡಿಗಳ ಸಮಯ

ಗಾಡಿಗಳು	ಮಂಗಳೂರಿಂದ ಹೊರಡುವ ಸಮಯ	ಮಂಗಳೂರಿಗೆ ತಲುಪುವ ಸಮಯ
ಗೂಡ್ಸ್ ಬಂಡಿ	ಬೆಳಿಗ್ಗೆ ೬-೩೫.	ರಾತ್ರಿ ೭-೩೦.
ಪಟೇಲ್ ಕನ್ನಾನ್ನೂರು ಪರಿಯಂತ ಮಾತ್ರ	ಸಾಯಂ. ೫-೫೫	ಬೆಳಿಗ್ಗೆ ೯-೩೫.
ಮಲಬಾರ್ ಎಕ್ಸ್‌ಪ್ರೆಸ್	ಬೆಳಗ್ಗೆ ೭-೫.	ಸಾಯಂ. ೭.

ತರುಣ-ತರುಣಿಯರೇ,] **ಕಾಮಶಾಸ್ತ್ರದ ಗ್ರಂಥಗಳು** [ಓದಿ ಸುಖಪಡೆಯಿರಿ!

ಗರ್ಭನಿರೋಧ ೧—೮—೦
ಸಂತತಿ ನಿಯಮನಕ್ಕೆ ಉತ್ತಮ ಉಪಾಯಗಳು, ಆಸನಗಳುಳ್ಳಂಥ ಡಾ। ಗೋಪಾಲ ಕೃಷ್ಣರಾಯರ ಸಚಿತ್ರ ಪುಸ್ತಕ.

ದಾಂಪತ್ಯ ದರ್ಶನ ೧—೮—೦
ಸಂಭೋಗ ಸುಖ, ಗಂಡಹೆಂಡಿರ ಆತ್ಮೈಕ್ಯ, ರತಿ ಸೌಖ್ಯ ಸುದೃಢತ್ವಗಳ ಬಗ್ಗೆ ದಿ। ಪಂಡಿತ ತಾರಾನಾಥರಾಯರ ಗ್ರಂಥ.

ಅನಂಗರಂಗ ೧—೮—೦
ಸ್ತ್ರೀಪುರುಷರ ಲಕ್ಷಣ, ಸಂಭೋಗ ಕಲೆ, ರತಿಸಮಯದ ಹಾವ ಭಾವಗಳು, ದ್ರವಹಾದಿ ಔಷಧಗಳು . . . .

ಪ್ರೇಮಕಲಾ ೧—೮—೦
ಅಶ್ಲೀಲವಲ್ಲ! ಶಾಸ್ತ್ರೀಯ ಗ್ರಂಥವೆಂದು ಕೋರ್ಟಿನ ನಿರ್ಣಯವೇ ಆಗಿದೆ. ಸಚಿತ್ರ ಕಾಮಶಾಸ್ತ್ರ.

ಭ್ರಾಂತಿ ಮತ್ತು ಲೈಂಗಿಕ ಶಿಕ್ಷಣ ೧—೮—೦
ಪ್ರಸಿದ್ಧ ಡಾಕ್ಟರುಗಳ ಮೂರು ಶಾಸ್ತ್ರೀಯ ಪುಸ್ತಕಗಳ ಕಟ್ಟು. ಗುಪ್ತ ರೋಗಗಳಿಗೆ ಚಿಕಿತ್ಸೆ ಸಹಿತ ಇವೆ.

ಕಾಮಕುಂಜ ೧—೮—೦
ಕಾಮ, ಶೃಂಗಾರ, ಪ್ರೇಮದ ಪಾಠ, ಪ್ರಥಮರಾತ್ರಿ, ಸಂಭೋಗಾಸನಗಳು, ಚಂದ್ರ ಮತ್ತು ಮದನ, ಚುಂಬನ . . .

ವಿಕೃತ ಕಾಮ ೧—೮—೦
ಬಾಲ್ಯದ ಕಾಮವಿಕಾರಗಳು, ಸ್ವಾನುರತಿ, ಹಿಂಸಾರತಿ, ಪ್ರದರ್ಶನರತಿ, ಸಲಿಂಗರತಿ ಇತ್ಯಾದಿ ಗುಟ್ಟಿನ ಮಾತುಗಳಿವೆ.

ರತಿರಹಸ್ಯ ೧—೮—೦
ತಾರುಣ್ಯದ ಮದ, ಸ್ತನಗಳ ಸೌಂದರ್ಯ, ಸಮಾಗಮ ಶಯನ ಇತ್ಯಾದಿ ರತಿಶಾಸ್ತ್ರದ ಪೂರ್ಣ ರಹಸ್ಯ.

ಪೌರುಷ ೧—೮—೦
ನಪುಂಸಕರೆಂದು ಮರುಗಬೇಡಿ. ಪುನಃ ಪೌರುಷ ಪ್ರಾಪ್ತಮಾಡಿಕೊಳ್ಳಲು ನೂರಾರು ಉಪಾಯಗಳಿವೆ.

ಅವಿವಾಹಿತರ ಸಮಸ್ಯೆ ೧—೮—೦
ಸ್ವೈರಾಚಾರ ವಿವೇಚನೆ, ವಿವಾಹಿತ ಮಾತೆ, ಹಸಗೆಟ್ಟ ಅತಿ ಪ್ರೀತಿ ವಿವಾಹ ಇತ್ಯಾದ ಸಮಗ್ರ ವಿವೇಚನೆ.

ವಿ. ಪಿ. ವೆಚ್ಚ ಬೇರೆ. ನಮ್ಮ ಕ್ಯಾಟಲಾಗಿಗೆ ಒಂದಾಣೆ ಅಂಚೆಚೀಟು ಕಳಿಸಿರಿ.

ಸಮಾಜ ಪುಸ್ತಕಾಲಯ ಧಾರವಾಡ.

ಸಮರ ಭೂಮಿಯ ಸಂಚಾರ

ಟರ್ಕಿ ಆ ಕಡೆ ಈ ಕಡೆ ಎಲ್ಲಿಗೆ ವಾಲುವುದು?

"ವೈಮಾನಿಕ ಧಾಳಿಯು ಬಹಳ ಶ್ರೇಷ್ಠವಾಗಿದ್ದರೂ ಅದರಿಂದಲೇ ಜರ್ಮನಿಯನ್ನು ಸೋಲಿಸಲು ಸಾಧ್ಯವಿಲ್ಲ' ಹೀಗೆಂದು ದ್ವಿತೀಯ ರಂಗದ ಮುಖ್ಯ ಸೇನಾಪತಿ ಜನರಲ್ ಐಸೆನ್ ಹೋವರು ಪತ್ರಿಕೋದ್ಯಮಿಗಳೊಡನೆ ಹೇಳಿ ...ಗಳೊಳಗಲ್ಲಿ ಯೂರೋಪಿನಲ್ಲಿ ನಮಗೆ ಜಯವಾಗುವುದೆಂದು ತಿಳಿಸಿದರು. ಯೂರೋಪಿನ ದಂಡಯಾತ್ರೆಯಲ್ಲಿ ಫ್ರೆಂಚ್ ಸೈನಿಕರು ಭಾಗವಹಿಸುವುದು ನಿಶ್ಚಯವೆಂದೂ, ಜನರಲ್ ಗಿರಾಡರು ರಣೋತ್ಸಾಹಗೊಂಡಿರುವರೆಂದೂ' ಅಭಿಪ್ರಾಯವಿದೆ.

ರೋಡ್ಸದ ಸಂರಕ್ಷಣ ದಲದ ಸಹಾಯಕ್ಕೆ ಜರ್ಮನರು ಹೆಚ್ಚಿನ ಸಹಾಯ ಕಳುಹಿಸುತ್ತಿರುವರೆಂದೂ, ಹಡಗಗಳಿಂದ ಸಾಮಗ್ರಿ ಕಳುಹಿಸಲು ಸಾಧ್ಯವಿರದುದರಿಂದ ವಿಮಾನಗಳಿಂದ ಅವುಗಳನ್ನು ಸಾಗಿಸತೊಡಗಿರುವರೆಂದೂ ಅಂಕಾರದ ಸುದ್ದಿ. ಅಲ್ಲಿ ಈಗ ೧೦ ಸಾವಿರ ಸೈನಿಕರಿದ್ದಾರೆ. ರೋಡ್ಸದ ಮೇಲೆ ಧಾಳಿಯು ಸಂಭವವಿದ್ದು ಸಂಜೆ ನಂತರ ಯಾರೂ ಹೊರ ಬೀಳಬಾರದಾಗಿ ಕರ್ಫ್ಯೂ ಆಜ್ಞೆ ಹೊರಟಿದೆ ಆಹಾರ ಸಂಗ್ರಹ ಸಾಕಷ್ಟಿಲ್ಲವೆಂದು ಹೇಳಲಾಗುತ್ತಿದೆ ಸುಮಾರು ೧೪ ಸಾವಿರ ಇಟೆಲಿಯನ್ ಸ್ಥಾನಬದ್ಧರು ಅಲ್ಲಿ ಬಂಧಿತರಾಗಿದ್ದು, ಇಟೆಲಿಯನ್ ಅಧಿಕಾರಿಗಳಲ್ಲಿ ಕೆಲವರನ್ನು ಆಗಲೇ ಜರ್ಮನಿಗೆ ಕಳುಹಿಸಲ್ಪಾಗಿದೆಯೆಂದೂ ತಿಳಿದಿದೆ

ಟರ್ಕಿ ಈಗ ತ್ರಿಶಂಕು ಸ್ವರ್ಗದಲ್ಲಿದೆ, ಯುದ್ಧ ಸಾಗರದ ಮಧ್ಯದಲ್ಲಿ ತಟಸ್ಥವಾಗಿ ನಿಂತ ಈ ದ್ವೀಪಕಲ್ಪ ದೇಶವು ಅಲ್ಲೋಲ ಕಲ್ಲೋಲಗಳಿಂದ ಆಚೀಚೆಗೆ ಬಡೆದುಕೊಳ್ಳುವ ಉಭಯ ಸಂಕಟದಲ್ಲಿದೆ ಯುದ್ಧಕ್ಕೆ ಸೇರುವುದೋ ಬೇಡವೋ, ಯಾರ ಕಡೆಗೆ ಸೇರಲಿ, ಯಾರನ್ನು ಬಿಡಲಿ ಇಂಥಾ ಧರ್ಮ ಸಂಕಟದಲ್ಲಿ ಟರ್ಕಿ ಬಿಂದು ತಳಮಳಿಸುತ್ತಿದೆ

ಇದೀಗಲೇ ಚರ್ಚಿಲ್ ರೂಸ್‌ವೆಲ್ಟ್ ಸ್ಟಾಲಿನರು ಒಂದು ಮಹಾ ಸಮ್ಮೇಳನ ನಡೆಸಿ ಮಹಾ ನಿರ್ಧಾರಗಳನ್ನು ಮಾಡಿದ್ದಾರೆ, ಟರ್ಕಿ ಇದರಿಂದ ಮಿತ್ರಪಕ್ಷಕ್ಕೆ ಸೇರಿದಂತಾಗಿದೆಯೆಂದು ಸಹಜವಾಗಿ ಊಹೆ ಹಬ್ಬಲು ಅವಕಾಶವಾಗಿದೆ ಆದರೂ ಟರ್ಕಿಯ ಮುಂದಾಳುಗಳು ಇನ್ನೂ ತಾಟಸ್ಥ್ಯ ನೀತಿಯುಳಿದಿದೆಯೆಂದು ಸಾರುತ್ತಲೇ ಇದ್ದಾರೆ ಟರ್ಕಿ ಬೇಗನೇ ಯಾವುದಾದರೊಂದು ಪಕ್ಷ ನಿಂತು, ಬಹುಶಃ ಮಿತ್ರ ಪಕ್ಷ ನಿಂತು ಯುದ್ಧಕ್ಕಿಳಿಯದೆ ನಿರ್ವಾಹವಿಲ್ಲವೆಂದು ಕೇಳಲಾಗಿದೆ

ಟರ್ಕಿ ಯುದ್ಧಕ್ಕಿಳಿಯುವುದೆ? ಅಥವಾ ಸುಮ್ಮಗಿರುವುದೆ? ಯುದ್ಧಕ್ಕಿಳಿವುದಾದರೆ ಯಾವಾಗ? ಹೇಗೆ? ಮಿತ್ರರೇನೋ ಪ್ರಾರಂಭದಿಂದಲೇ ಟರ್ಕಿ ತಮ್ಮ ಪಕ್ಷಕ್ಕೆ ಸೇರುವುದೆಂದು ಊಹಾಪೋಹ ಹರಡಿದ್ದರು, ಆದರೆ ಇದುವರೆಗೂ ಅದು ತಾಟಸ್ಥ್ಯ ನೀತಿ ಬಿಡದಿರುವುದರಿಂದ ಆ ಊಹೆ ಕಡಿಮೆಯಾಗುತ್ತಾ ಹೋಗುವ ಸಂಭವವಿದೆ ಆದರೆ ಅಂಕಾರಾದಲ್ಲಿ 'ನ್ಯೂಯಾರ್ಕ್ ಟೈಮ್ಸ್ ಪ್ರತಿನಿಧಿಯಾಗಿದ್ದ ರೇಬ್ರೋಕ್ ಎಂಬ ಪತ್ರಿಕೋದ್ಯಮಿಯು ಟರ್ಕಿ ಜರ್ಮನ್ ಕಡೆ ನಿಲ್ಲುವುದೆಂಬ ಕಥೆಯನ್ನು ಹೇಳಿದ್ದಾನೆ

ಮುಂದಿನ ದಿನಗಳು ಗಮನೀಯವಿವೆ ತೆಹರಾನ್‌ನಲ್ಲಿ ಕೂಡಿದ ಮಹಾ ನಾಯಕರು, ಜರ್ಮನಿಯೆದುರು ದ್ವಿತೀಯ ರಂಗವನ್ನೋ, ದ್ವಿತೀಯರಂಗವನ್ನು ಹೇಗಾದರೂ ಒಂದು ಯುದ್ಧರಂಗ ತೆರೆಯಲೆಬೇಕೆಂಬ ಮಹಾ ನಿರ್ಧಾರಕ್ಕೆ ಬಂದಿದ್ದಾರೆ ಇದು ಕೊನೆಯ ಕಾಳಗವಾಗಬಹುದೆಂದು ಭರವಸೆ ಹುಟ್ಟುವ ರೀತಿ ಸಾರಿದ್ದಾರೆ. ಹೀಗಿರುವಾಗ ಈ ಸಂದರ್ಭದಲ್ಲಿ ಟರ್ಕಿ ಯುದ್ಧಕ್ಕೆ ಸೇರದಿರುವುದೆ? ಸೇರಿದರೆ ಯಾರ ಕಡೆ ಯಾವಾಗ?

ಟರ್ಕಿ ಇದು ವರೆಗೆ ಯಾಕೆ ಸುಮ್ಮಗಿತ್ತು? ನಿಜವಾಗಿ ನೋಡಿದೆ ಟರ್ಕಿಯ ತಾಟಸ್ಥ್ಯ ನೀತಿಯಿದ್ದು, ಅದರ ದೌರ್ಬಲ್ಯವೆನಲಾಗುವುದಿಲ್ಲ, ಬದಲು ಇದು ಅದರ ಪರಾಕ್ರಮವೆನ್ನಲೇಬೇಕು ಏಕೆಂದರೆ ದುರ್ಬಲ ರಾಷ್ಟ್ರ ಯಾವುದಾದರೂ

ಬ್ರಿಟನು ಜರ್ಮನಿಗಳ ತ್ರಿಶಂಕು ಸ್ವರ್ಗದಲ್ಲಿದೆ

ಈ ಮಹಾ ಸಂಗ್ರಾಮದಲ್ಲಿ ಒಂದಲ್ಲ ಒಂದು ಪಕ್ಷಕ್ಕೆ ಸೆಳೆಯಲ್ಪಡುವುದೇ ಸಂಭವವಿತ್ತು. ಆದರಲ್ಲೂ ಟರ್ಕಿಯಂಥಾ ಕೇಂದ್ರ ಸ್ಥಳದಲ್ಲಿರುವ ರಾಷ್ಟ್ರವನ್ನು ಇಬ್ಬರಲ್ಲಿ ಪ್ರತಿಯೊಬ್ಬನೂ ತಮ್ಮ ಸ್ವಾಧೀನ ಮಾಡಿಕೊಳ್ಳಲು ಶತಪ್ರಯತ್ನ ಮಾಡುತ್ತಿರುವಾಗ ಟರ್ಕಿ ಇನ್ನೂ ತಾಟಸ್ಥ್ಯ ನೀತಿ ಕಾಪಾಡಿಕೊಂಡದ್ದು, ಅದರ ದೌರ್ಬಲ್ಯವೆಂದು ಯಾರು ಹೇಳುವರು? ಹೀಗೆ ಬ್ರಿಟನು ಮತ್ತು ಜರ್ಮನಿಗಳ ಮಧ್ಯೆ ಅವೆರಡರ ಸುಳಿಗುಂಡಿಗೆ ಸಿಲುಕದೆ, ಎರಡು ರಾಷ್ಟ್ರದೊಡನೆಯೂ ಸಮಬಲ ತಾಟಸ್ಥ್ಯ ಕಾಪಾಡಿಕೊಂಡ ಟರ್ಕಿಯ ಪೌರುಷವನ್ನು ಜಗತ್ತು ಕೊಂಡಾಡಬೇಕಾಗಿದೆ

ಟರ್ಕಿಯ ಅದೃಷ್ಟವನ್ನು ಮೂರು ಮಹಾ ನಾಯಕರು ತಿರುಗಿಸುತ್ತಿದ್ದಾರೆ ಅಟಟರ್ಕನ ಉತ್ತರಾಧಿಕಾರಿ, ಟರ್ಕಿಯ ಅಧ್ಯಕ್ಷ ಇನೋನು, ಸ್ಥಿರಚಿತ್ತ ಹಾಗೂ ವಿಚಕ್ಷಣ ಪ್ರಧಾನ ಮಂತ್ರಿ ಸುಕ್ರು ಸರ್ ಜೋಗ್ಲು, ಬುದ್ಧಿ ಶಾಲಿಯಾದ ವಿದೇಶಿ ಮಂತ್ರಿ ನ್ಯುಮೆನ್ ಮೆನೆಮೆಂಕಿಯೋಗ್ಲು ಈ ಮೂವರ ಭುಜದಲ್ಲಿ ತರುಣ ಟರ್ಕಿಯ ಅದೃಷ್ಟವಿಂದು ನಿಂತಿದೆ ಅವರು ಬಹಳ ವಿಚಕ್ಷಣತೆಯಿಂದ, ಬಹಳ ಧೈರ್ಯದಿಂದ ಅಧಿಕ ಸಾಹಸದಿಂದ, ಇದು ವರೆಗೂ ತಟಸ್ಥರಾಗಿದ್ದು ಬ್ರಿಟನು ಜರ್ಮನಿಗಳೆರಡರೊಡನೆಯೂ ಒಪ್ಪಂದವಿಟ್ಟುಕೊಂಡು, ಅದೇ ಕಾಲದಲ್ಲಿ ಅವುಗಳೆರಡರ ಬಲೆಗೂ ಬೀಳದೆ ಟರ್ಕಿಯ ಸ್ವಾತಂತ್ರ್ಯಧ್ವಜ ಹಾರಿಸುತ್ತಿದ್ದಾರೆ

ಟರ್ಕಿಯ ಪರಿಸ್ಥಿತಿ 1941ಕ್ಕಿಂತ ಇಂದು ಭದ್ರವಾಗಿದೆ. ಅದೊಂದು ಕಾಲವಿತ್ತು, ಜರ್ಮನ್ ಬಲವು ಬಾಲ್ಕನ್ ರಾಷ್ಟ್ರಗಳನ್ನು ನುಂಗುತ್ತಾ ಬಂದು, ಟರ್ಕಿಯನ್ನೂ, ಇಡೀ ಪೂರ್ವವನ್ನೇ ನುಂಗಿ ಬಿಡುವುದೆಂಬ ಬೆದರಿಕೆ ಅಂಥಿತ್ತು ಒಂದೋ ಟರ್ಕಿ ಬಾಲ್ಕನ್ ರಾಷ್ಟ್ರಗಳಂತೆ ಶರಣಾಗಬೇಕು, ಇಲ್ಲವೇ ಎದ್ದು ನಿಂತು ಹೋರಾಡಬೇಕು ಎಂಬ ಅವಸ್ಥೆ ಆಗ ಬಂದಿತ್ತು

ಆದರೆ ಆಗಲೂ ಅಂಕಾರಾದಲ್ಲಿ ಏನೂ ಗಲಿಬಿಲಿಯಿರಲಿಲ್ಲ ಇನೋನು ತನ್ನ ಅನುಯಾಯಿಗಳೊಂದಿಗೆ ಶಾಂತನಾಗಿ ಧೀರನಾಗಿ ದಿನ ಕಳೆಯುತ್ತಲೇ ಇದೆ ಒಂದು ಮಂಗಳ ಪ್ರಭಾತದಲ್ಲಿ ಸುದ್ದಿ ಬಂತು, ಜರ್ಮನ್ ಬಲ ಟರ್ಕಿ ಕಡೆಗೆ ಮುಂದುವರಿಯುವುದನ್ನು ಬಿಟ್ಟು ರಶ್ಯದ ಮೇಲೆ ಧಾಳಿಯಿಟ್ಟಿತೆಂದು ಕೇವಲ ಟರ್ಕಿ ವರೆಗೆ ಬಂದು ಸ್ಪರ್ಶ ಮಾತ್ರ ಮಾಡಿ ಅಲ್ಲಿಂದ ಜರ್ಮನ್ ಸೇನೆ ಕಾಲ್ಕಿತ್ತಿತು ಇದರಿಂದ ಟರ್ಕಿಯ ತಾಟಸ್ಥ ಹಿಂದಿದ್ದಂತೆಯೇ ಮತ್ತೂ ಮುಂದುವರಿಯಿತು ಹೀಗೆ ಸುಮ್ಮಗೆ ಕತ್ತೆತ್ತಿಕೊಂಡುದರಿಂದಲೇ ಟರ್ಕಿಗೆ ಒಂದು ಅಭೂತಪೂರ್ವ ಜಯ ಸಿಕ್ಕಿತೆನಬೇಕು.

ಒಂದು ವರ್ಷದ ಹಿಂದೆ ನಾಜೀದಳವು ಕಾಕಸಸ್ ಕಡೆಗೆ ಮುಂದೊತ್ತಿ, ಇನ್ನೇನು ರೊಮೆಲನ ಆಫ್ರಿಕಾ ದಳದ ಫಿರಂಗಿಗಳಿಗೆ ಅಲೆಕ್ಸಾಂಡ್ರಿಯಾ ಕೆಲವೇ ಅಂತರದಲ್ಲಿದೆಯೆಂಬ ಸ್ವರ ಮಟ್ಟಿಗೆ ಆಗಿತ್ತು ಮಧ್ಯ ಪೂರ್ವದಲ್ಲಿ ಜರ್ಮನ್ ದಳ ತಳವೂರಿ, ಟರ್ಕಿಯನ್ನನ್ನು ನುಂಗಿಬಿಡುವುದೇ ಎಂದು ಹಲವರು ಹೆದರಿದರು. ಈ ಅಂಜಿಕೆಯೂ ವ್ಯರ್ಥವಾಯಿತು ತಾಟಸ್ಥ್ಯ ನೀತಿಯು ಟರ್ಕಿ ಸರಕಾರದ ಬುದ್ಧಿವಂತಿಕೆಯ ನೀತಿಯಾಯಿತು ಏಕೆಂದರೆ ಅಸ್ತ್ರ ಹಿಡಿಯದೆಯೇ ಜರ್ಮನರನ್ನು ನೂರು ಮೈಲು ದೂರ ನಿಲ್ಲಿಸಿದ್ದೇವೆಂದು ಟರ್ಕರು ಹೇಳಬಹುದು

ಮಿತ್ರ ಪಕ್ಷದವರಿಗೆ ಟರ್ಕಿಯ ತಾಟಸ್ಥ್ಯ ನೀತಿ ಬೇಕಾಗಿಲ್ಲ ತಮ್ಮ ವಶ ಒಲಿಸಿಕೊಳ್ಳಬೇಕೆಂದು ಅವರು ಅಂದಿನಿಂದಲೂ ಶತಪ್ರಯತ್ನ ಮಾಡುತ್ತಿದ್ದಾರೆ ಟರ್ಕಿಗೆ ಬಹಳ ಸಹಾಯ ಮಾಡಿದ್ದಾರೆ, ಟರ್ಕಿಗೆ ಸಾಧನ ಸಾಮಗ್ರಿ ಕೊಟ್ಟಿದ್ದಾರೆ ಅದಕ್ಕೆ ಅಸ್ತ್ರ ಗುಂಡು ಒದಗಿಸಿದ್ದಾರೆ ತಮ್ಮೊಡನೆ ಸೇರಿ, ತಮ್ಮ ಹಾಗೆಯೇ ದ್ವೇಷದಿಂದ ಜರ್ಮನಿ ಯೆದುರು ಟರ್ಕಿ ಹೋರಾಡಬೇಕೆಂದು ಬ್ರಿಟನು ಸಾಧಿಸಿದೆ

ಈ ನೀತಿ ಬಹಳ ಮುಂದುವರಿದು, ಇತ್ತೀಚೆಯ ಕೈರೋ ಸಮ್ಮೇಳನದಲ್ಲಿ ಅದರ ಪರಮಾವಧಿಯನ್ನು ಕಾಣಬಹುದು ಈ ವರ್ಷದ ಆದಿಯಲ್ಲಿಯೇ ಚರ್ಚಿಲರು ಇನೋನುರನ್ನು ಕಾಣಬೇಕೆಂದು ಅಡಾನಾಕ್ಕೆ ತೆರಳಿದ್ದರು ಅವರ ಸೇನಾಧಿಪತಿಗಳು ಟರ್ಕಿಯ ಸೇನಾಪತಿಗಳೊಡನೆ ವಿಚಾರವಿನಿಮಯ ಮಾಡಿದ್ದಾರೆ ಕಳೆದ ಎಪ್ರಿಲ್‌ನಲ್ಲಿ ಮಧ್ಯಪೂರ್ವದಲ್ಲಿನ ಬ್ರಿಟಿಷ್ ಸೇನಾಪತಿ ಹೆನ್ರಿ ವಿಲ್ಸನರು ಅಂಕಾರಕ್ಕೆ ಅಧಿಕಾರಿಕ ಭೇಟಿಯಿತ್ತರು ಮೋಸ್ಕೋ ಸಮ್ಮೇಳನದಿಂದ ಮರಳುವ ಸಂದರ್ಭದಲ್ಲಿ ಈಡನರು ಮೆನೆಮೆಂಕಿಯೋಗ್ಲುರವರೊಡನೆ ಧೀರ್ಘ ಮಾತುಕತೆ ಮಾಡಿದ್ದಾರೆ ಈ ಎಲ್ಲಾ ಭೇಟಿ ಮಾತುಕತೆಗಳಿಗೆ ಕೈರೋಗೆ ಅಧ್ಯಕ್ಷ ಇನೋನುರವರು ಬಂದದ್ದು ಕಿರೀಟವಿಟ್ಟಂತಾಗಿದೆ

ಇತ್ತೀಚೆಯ ಈ ಮಾತುಕತೆಯಲ್ಲಿನ ಒಂದು ಪ್ರಧಾನ ವಿಷಯವೆಂದರೆ, ಇದು ಜರಗಿದ್ದು ಸ್ಟಾಲಿನರ ಬೆಂಬಲದಿಂದೆಂಬುದು. 1921ರಲ್ಲಿ ಟರ್ಕಿಯ ಹೊಸ ರಿಪಬ್ಲಿಕನ್ ಸರಕಾರವನ್ನು ರಶ್ಯವು ಮೊದಲನೆಯದಾಗಿ ಒಪ್ಪಿದ ರಾಷ್ಟ್ರವಾದರೂ ಕಳೆದ ವರ್ಷ ರಶ್ಯ ಟರ್ಕಿ ಸಂಬಂಧ ಅಷ್ಟೊಂದು ಚನ್ನಾಗಿರಲಿಲ್ಲ. ಟರ್ಕಿಯು ಆದಿಯಿಂದಲೇ ಸಮತಾವಾದಕ್ಕೆ ವಿರೋಧವಿತ್ತು

ಟರ್ಕಿ ಯುದ್ಧದಲ್ಲಿ ಸೇರಬೇಕೆನ್ನುವ ಮಿತ್ರರ ಆಮಂತ್ರಣ ಅಂಗೀಕರಿಸಲು ಸಿದ್ಧವಿಲ್ಲವಾದರೂ ಕೈರೋ ಮಾತುಕತೆಗಳು ಅವರ ಹಲವು ಸಂದೇಹ ಪಿಶಾಚಿಗಳನ್ನು ಓಡಿಸಿ, ಯುದ್ಧಾನಂತರದ ಜಗತ್ತಿನಲ್ಲಿ ಟರ್ಕಿಗೆ ಯೋಗ್ಯ ಮನ್ನಣೆ ಸಿಗುವ ಭರವಸೆ ದೊರೆತಿರಬಹುದು ಏಕೆಂದರೆ, ಮೆನೆಮೆಂಕಿಯೋಗ್ಲು ಸ್ವತಃ ಒಂದು ಪತ್ರಿಕಟಣೆಯಲ್ಲಿ,ನಮ್ಮ ಸಂಬಂಧವು ಅಮೆರಿಕ ರಶ್ಯಗಳೊಡನೆ ಬ್ರಿಟನಿನಷ್ಟೇ ಚನ್ನಾಗಿದೆ ಎಂದು ಹೇಳಿದ್ದಾನೆ ಇದು ಈ ವರ್ಷದ ಮಹತ್ವದ ಬದಲಾವಣೆ ಇದರಿಂದ ಯುದ್ಧಾನಂತರದ ಜಗತ್ತಿನಲ್ಲಿ ಬಾಲ್ಕನ್ ಮತ್ತು ಮಧ್ಯ ಪೂರ್ವಗಳ ವಿಷಯ ಮಹತ್ವದ ಪರಿಣಾಮವಾಗಬಹುದೆಂದು ಆಶಿಸಬಹುದು

ಟರ್ಕಿಯಲ್ಲಿ ಅಸಂಖ್ಯ ಸೇನೆಯಿದೆ, ಟರ್ಕಿಯ ಯುವಕರು ಎಲ್ಲರೂ ಯೋಧರಾಗಿದ್ದಾರೆ ಆಧುನಿಕ ಶಸ್ತ್ರೋಪಶಸ್ತ್ರಗಳಿಂದ ಟರ್ಕಿಯಿಂದ ಬಲಯುತವಾಗಿದೆ ಆದರೆ ಇದಕ್ಕಾಗಿ ಬ್ರಿಟನು ಟರ್ಕಿಯನ್ನು ಯುದ್ಧಕ್ಕೆ ಸೇರಿಸುವುದಿಲ್ಲ ಟರ್ಕಿಯ ಸ್ಥಾನವೇ ಅದನ್ನು ತಮ್ಮ ಕಡೆಗೆಳೆಯಬೇಕೆಂದು ಬ್ರಿಟನನ್ನು ಆಶೆಗೊಳಿಸಿದೆ ಜರ್ಮನರಿಗೆ ಟರ್ಕಿಯ ಮೂಲಕ ಒಂದು ಬಲವಂತವಾದ ಪೆಟ್ಟು ಕೊಡಬಹುದೆಂದು ಬ್ರಿಟನು ತಿಳಿದಿದೆ ಬಾಲ್ಕನಿನಿಂದ ಜರ್ಮನರನ್ನು ಓಡಿಸಲು ಈ ಪ್ರಯತ್ನವಾಗಿದೆ ಇದರಿಂದ ಹಲವು ಸಮಸ್ಯೆಗಳು ಪರಿಹಾರವಾಗಬಹುದು ನಾಜೀ ಸಾಮ್ರಾಜ್ಯವನ್ನು ಹೀಗೆ ಪತನಗೊಳಿಸಬಹುದು ಟೆಹರಾನ್ ಸಮ್ಮೇಳನದಲ್ಲಿ ಜರ್ಮನಿಯ ಮೇಲೆ ಪೂರ್ವ ಪಶ್ಚಿಮಗಳಿಂದ ಮಾತ್ರವಲ್ಲ ದಕ್ಷಿಣದಿಂದಲೂ ಆಕ್ರಮಣ ಮಾಡಬೇಕೆಂದು ನಿರ್ಧರಿಸಿದ ವಿಷಯ ಅತ್ಯಂತ ಗಮನಾರ್ಹವಿದೆ

ಟರ್ಕಿ ಇದಕ್ಕೆ ಏನುತ್ತರಕೊಡಬಹುದು? ಇಂದು ಮಿತ್ರರ ಬಲ ಬೆಳೆದಿದೆ ಟರ್ಕಿ ಯುದ್ಧಕ್ಕೆ ಸೇರಲಿ ಬಿಡಲಿ ಮಿತ್ರರು ಗೆಲಬಹುದು ಆದರೆ ಟರ್ಕಿ ಸೇರಿದರೆ ಯುದ್ಧ ಅವಧಿ ಇನ್ನಷ್ಟು ಕಡಿಮೆಯಾದಂತಾದೀತು ಇಂದು ಯುದ್ಧದಲ್ಲಿ ಟರ್ಕಿ ಮಿತ್ರರೊಡನೆ ಹೊಂದಿಕೊಂಡಿದ್ದರೆ ಮುಂದಿನ ಶಾಂತಿ ಪರಿಷತ್ತಿನಲ್ಲಿ ಅದಕ್ಕೆ ಯೋಗ್ಯಸ್ಥಾನ ಸಿಗಬಹುದು ಇಲ್ಲವಾದರೆ ಅದು ಮುಂದೆ ಏಕಾಂಗಿಯಾಗಿ ನರಳಬೇಕಾದೀತು ಟರ್ಕಿ ಈಗ ಏನು ಮಾಡುವುದು?

GREETINGS
AND
EVERY GOOD WISH
TO
All our advertisers, subscribers &
Well Wishers
For a
Happy & Prosperous New year.

ನಮ್ಮ ಸುವರ್ಣೋತ್ಸವ ಸಂಚಿಕೆಗೆ



ದಯಮಾಡಿ ನಿಮ್ಮ
ಪ್ರೀತಿಯ ಸಂದೇಶವನ್ನು
ಕಳುಹಿಸಿರಿ

ಅಮೃತಾಂಜನ ಲಿಮಿಟೆಡ್,
ಮದ್ರಾಸ್, ಬೊಂಬಯಿ,
ಕಲ್ಕತ್ತ.

ಸ್ವದೇಶಾಭಿಮಾನಿ

ತಾರೀಖು 31—12—1948

ಎರಡು ವಿರುದ್ಧ ಸ್ವರಗಳು

ಭಾರತದ ರಾಜಕೀಯ ವಾತಾವರಣದಲ್ಲಿ ಎರಡು ವಿರುದ್ಧ ಸ್ವರಗಳು ಹಲಕಾಲದಿಂದ ಗುಡುಗುತ್ತಿವೆ. ಹಿಂದೂ ಮಹಾಸಭೆ ಮುಸಲ್ಮಾನರ ವಿರುದ್ಧವಾಗಿ, ಮುಸ್ಲಿಂ ಲೀಗ್ ಹಿಂದುಗಳ ವಿರುದ್ಧವಾಗಿ ಕತ್ತಿಕಟ್ಟಿ ನಿಂತಂತೆ ಅಭಿಪ್ರಾಯ ಸಾರುತ್ತಿವೆ. ಎರಡೂ ಶುದ್ಧ ಜಾತೀಯ ಸಂಸ್ಥೆಗಳು ಯಾವುದೋ ಕಾಣದ ಕೈಯ ಪ್ರಭಾವದಿಂದ, ರಾಜಕೀಯ ಕ್ಷೇತ್ರವನ್ನು ಆಕ್ರಮಿಸಿಕೊಂಡು ಹಿಂದು ಮುಸ್ಲಿಂ ಪರವಾಗಿ ವಾದಿಸಿ, ವಾದವಾದಗಳಿಂದ ದ್ವೇಷ ಹೆಚ್ಚಿಸಿ/ಹಿಂದು ಮುಸ್ಲಿಂ ಸಮಾಜಗಳೆರಡರ ಹಿತಕ್ಕಿಂತ ಹೆಚ್ಚು ಅಹಿತವನ್ನೇ ಮಾಡುತ್ತೇವೆ.

ಕರಾಚಿಯಲ್ಲಿ ಮುಸ್ಲಿಂ ಲೀಗಿನ ೩೧ನೆಯ ಅಧಿವೇಶನ ನಡೆಯಿತು. ಜಿನ್ನರು ತಮ್ಮದಾದ ಪ್ರದೇಶವನ್ನು ಕಿತ್ತುಕೊಂಡು ಅದನ್ನು ತಾವೇ ಆಳುವವರಿಗೆ ಸಮಾಧಾನವಿಲ್ಲವೆಂದು ಆರ್ಭಟಿಸಿದರು; ಅರ್ಥಾತ್ ಪಾಕಿಸ್ಥಾನ ಪಡೆಯದೆ ತೃಪ್ತರಾಗಲಾರೆವೆಂದು ಹರಸಾರಿದರು. ಈ ಅಧಿವೇಶನದ ಸ್ವಾಗತಾಧ್ಯಕ್ಷರು ಜಿ. ಯಂ. ಸೈಯ್ಯದರು ಈ ಅಧಿವೇಶನದಲ್ಲಿ ಪಾಕಿಸ್ಥಾನಕ್ಕೆ 'ಸಿಂಧು' ಎಂಬ ಹೆಸರನ್ನು ಇಟ್ಟಿದ್ದಾರೆ. ಹಿಂದುಸ್ಥಾನದ ವಿರುದ್ಧ, ಪಾಕಿಸ್ಥಾನವಾದರೆ, 'ಹಿಂದು'ಗಳ ವಿರುದ್ಧ 'ಸಿಂಧು' ನಿಂತಿದೆ! ಹೇಗಿದ್ದರೂ ಇವೆಲ್ಲಾ ಹೋರಾಟಕ್ಕಾಗಿ ಹೂಡಿದ ಬಾಣಗಳೆಂಬುದರಲ್ಲಿ ಏನೇನೂ ಸಂಶಯವಿಲ್ಲ.

ಹಿಂದು ಮಹಾಸಭೆಯ ರಜತ ಮಹೋತ್ಸವವು ಡಾ। ಶ್ಯಾಮ ಪ್ರಸಾದ ಮುಖರ್ಜಿಯವರ ಅಧ್ಯಕ್ಷತೆಯಲ್ಲಿ ಕಳೆದ ತಾ. ೨೬ರಂದು ಅಮೃತಸರದಲ್ಲಿ ಸೇರಿತು. ಇದರ ಅಧ್ಯಕ್ಷ ಪೀಠದಿಂದ ಡಾ। ಮುಖರ್ಜಿಯವರು ಹೇಳಿದ ಮಾತುಗಳು ಪ್ರಗತಿ ಪರವಿವೆಯೆಂಬುದಕ್ಕೆ ಸಂಶಯವಿಲ್ಲ. ಹಿಂದೂ ಮಹಾಸಭೆಯ ಇತರ ಮುಖಂಡರಂತೆ ಮುಸ್ಲಿಮರನ್ನು ದೂರಿ ದ್ವೇಷ ಹೆಚ್ಚಿಸುವ ಮಾತನ್ನು ಅವರು ಹೇಳದೆ, ಭಾರತ ಸಮಸ್ಯೆ ಪರಿಹಾರವಾಗಬೇಕಾದರೆ ರಾಜಕೀಯ ರಂಗದಿಂದ ಜಾತೀಯತೆಯ ಪಿಶಾಚಿಯನ್ನು ಹೊಡೆದೋಡಿಸದೆ ಅನ್ಯೋಪಾಯವಿಲ್ಲವೆಂದು ಖಂಡ ತುಂಡ ನುಡಿದದ್ದು ಕ್ರಾಂತಿಕಾರವಿದೆ. ಅದರೊಡನೆಯೇ ಅವರು, ಜಾತಿ ಮತ ಭೇದವಿಲ್ಲದೆ ಸಕಲ ಬಾಂಧವರಿಗೂ ಸರಿಸಮಾನ ಹಕ್ಕು ದೊರೆಯಬೇಕೆಂದೂ, ಹಿಂದುಳಿದ ಜಾತಿಯ ಜನರಿಗೆ ಸೌಕರ್ಯ ರಕ್ಷಣೆ ಕೊಡಬೇಕೆಂದೂ, ಭಾರತದ ಭಾವೀ ಘಟನೆಯಲ್ಲಿ ಸಕಲ ಜಾತಿಮತಗಳ ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ ರಕ್ಷಣೆಯ ಭರವಸೆ ಕೊಡಲ್ಪಡಬೇಕೆಂದೂ ಹೇಳಿದ್ದಾರೆ. ಡಾ। ಮುಖರ್ಜಿಯವರ ಮುಂದಾಳುತನದಲ್ಲಿ ಹಿಂದು ಮಹಾಸಭೆಯು ಪ್ರಗತಿಯ ಹಾದಿಯಲ್ಲಿ ಮುಂದರಿಯುವಂತೆ ತೋರುತ್ತದೆ.

ಡಾ। ಮುಖರ್ಜಿಯವರ ಅಧ್ಯಕ್ಷ ಭಾಷಣವು ಪ್ರಗತಿ ಧೋರಣೆಯದಾಗಿದ್ದರೂ, ಹಿಂದು ಮಹಾಸಭೆಯ ಧೋರಣವೇನೇನೂ ಪ್ರಗತಿಪರವಾಗಿಲ್ಲ. ಇಂಥಾ ವಿರುದ್ಧ ಸ್ವರಗಳು ಎಷ್ಟರವರೆಗೆ ಅಡಗುವುದಿಲ್ಲವೋ ಅಷ್ಟರ ವರೆಗೆ ಭಾರತಕ್ಕೆ ಶಾಂತಿಯುಲ್ಲ ಮಾನವ ಮಾನವರಲ್ಲಿ ಸಮಾನ ಸೋದರರೆಂಬ ಭಾವವಳಿದಾಗ, ಮನುಷ್ಯನು ಪ್ರಾಣಿಯಾಗುವುದು ಸಹಜವಿದೆ. ಧಾರ್ಮಿಕ ಅಂಧಶ್ರದ್ಧೆಯು ಜನರ ಕಣ್ಣುಕಟ್ಟಿ ಮಹಾನರ್ಥವನ್ನು ಹುಟ್ಟಿಸಬಹುದಾಗಿದೆ. ಭಾರತೀಯರೆಲ್ಲರೂ ಈ ವಿಷಯವನ್ನು ಆಳವಾಗಿ ವಿಚಾರಿಸಿ, ಜಾತೀಯತೆಯ ಸಂಕೋಚ ತೆರೆಯನ್ನು ದೂರಮಾಡಿ ಸೋದರರಾಗಿ ಐಕ್ಯಗೊಂಡು ದೇಶದ ಉದ್ಧಾರ ಮಾಡುವಂತಾಗಲಿ ಎಂದು ನಮ್ಮ ಹಾರೈಕೆಯಾಗಿದೆ.

ಮದ್ಯ ನಿಷೇಧ ಸಮ್ಮೇಳನ

ಮದ್ರಾಸಿನಲ್ಲಿ ಈ ವಾರ ಮದ್ಯನಿಷೇಧ ಸಮ್ಮೇಳನವೊಂದು ಸೇರಿತು. ಕಾಂಗ್ರೆಸು ಮಂತ್ರಿಮಂಡಳದ ಕಾಲದಲ್ಲಿ, ಜನತೆಯ ಒಪ್ಪಿಗೆಯಿಂದ ಸೇಲಂ ಮೊದಲಾದ ನಾಲ್ಕು ಜಿಲ್ಲೆಗಳಲ್ಲಿ ಮದ್ಯನಿಷೇಧ ಕಾನೂನನ್ನು ಜಾರಿಮಾಡಿ, ಅದನ್ನು ಕ್ರಮಶಃ ಇಡೀ ಪ್ರಾಂತಕ್ಕೆ ಅನ್ವಯಿಸಬೇಕೆಂದು ನಿರ್ಧರಿಸಿದ ಆ ಜನತಾ ಮಂತ್ರಿಮಂಡಳವು ಅದಕ್ಕೆ ಬೇಕಾಗಿ ಇತರ ತೆರಿಗೆಗಳನ್ನೂ ಕೂಡಾ ಹೆಚ್ಚಿಸಿ ಬೇಕಾದ ವ್ಯವಸ್ಥೆ ಮಾಡಿತ್ತು; ಇಂದಿನ ಗವರ್ನರರ ಸರಕಾರವು ಜನತೆಯ ಒಪ್ಪಿಗೆ ಕೇಳದೆಯೇ ಮದ್ಯ ನಿಷೇಧ ಕಾನೂನು ಜಾರಿಯಲ್ಲಿದ್ದ ಆ ನಾಲ್ಕು ಜಿಲ್ಲೆಗಳಿಂದಲೂ ಆ ಕಾನೂನನ್ನು ಹಿಂತೆಗೆದ ಬಗ್ಗೆ ಜನತೆಯ ಅಭಿಪ್ರಾಯ ವಿರೋಧವಿರುವುದನ್ನು ಪ್ರದರ್ಶಿಸಲು ಈ ಸಮ್ಮೇಳನ ವೇರಿ ಯಶಸ್ವೀ ಕಾರ್ಯಮಾಡಿದೆ.

ಈ ಸಮ್ಮೇಳನದಲ್ಲಿ ಸಕಲ ಜಾತಿಯ ಎಲ್ಲಾ ರಾಜಕೀಯ ಪಂಗಡದವರೂ ಸೇರಿ ಸಹಕರಿಸಿದ್ದರು. ಸಮ್ಮೇಳನವನ್ನು ಮುಸ್ಲಿಂ ಮುಖಂಡರಿಗೆ ಉದ್ಘಾಟನೆಗೈದರು. ಕ್ರಿಶ್ಚಿಯನ್ ಮುಖಂಡರು ಹಾಗೂ ಮಾಜೀ ಜಡ್ಜರು ಇದರ ಅಧ್ಯಕ್ಷರಾಗಿದ್ದರು. ಹರಿಜನ ಪ್ರತಿನಿಧಿಗಳೂ ಹಾಜರಿದ್ದರು. ಪ್ರಾಂತದ ಹೀಗೆ ಎಲ್ಲಾ ಜನರ ಅಭಿಪ್ರಾಯವೂ ಸರಕಾರದ ಇಂದಿನೀ ಧೋರಣದ ಬಗ್ಗೆ ತಮ್ಮ ಸಮ್ಮತಿಯಿಲ್ಲವೆಂದು ಸ್ಪಷ್ಟವಾಗಿ ಸಾರುವಂತಿತ್ತು.

ರಾಜಾಜಿ ಈ ಕುರಿತು ಬಹಳ ಪ್ರಯತ್ನಮಾಡಿದ್ದಾರೆ. ಅವರ ಈ ಅಭಿಪ್ರಾಯದೊಡನೆ ಇಂದು ಇಡೀ ಪ್ರಾಂತವೇ ಧ್ವನಿಗೊಡುತ್ತಿದೆಯೆಂದು ಸಮ್ಮೇಳನವು ಸಾಕ್ಷಿಯಿತ್ತಿದೆ. ಗವರ್ನರರ ಸರಕಾರವು ಇಂದಾದರೂ ಕಣ್ತೆರೆವುದೆ?

ಸ್ವದೇಶ ಸಮಾಚಾರ

ಪತ್ರಿಕೋದ್ಯೋಗಿಗಳು ಸಂಘಟಿತರಾಗಬೇಕು

ಶ್ರೀ। ಪ್ರಿಲ್ಲಿಯವರ ಹೇಳಿಕೆ

'ಪತ್ರಿಕೋದ್ಯೋಗಿಗಳು ತಾವೇ ಸಂಘಟಿತರಾಗದಿದ್ದರೆ ಅ. ಭಾ. ಪತ್ರಿಕೋದ್ಯೋಗಿ ಸಂಘ ಅವರಿಗೆ ಸಹಾಯಮಾಡಿದರೂ ಅದರಿಂದ ಪ್ರಯೋಜನವಿಲ್ಲ. ಪತ್ರಿಕೋದ್ಯೋಗಿಗಳ ರಾಷ್ಟ್ರೀಯ ಸಂಘವೊಂದು ಇರಬೇಕು. ಪತ್ರಿಕೋದ್ಯೋಗಿಗಳಿಗೆ ಜೀವನ ನಡೆಸಲು ಯೋಗ್ಯ ಸಂಬಳ ದೊರೆಯಬೇಕೆಂದು ಮಾಲೀಕರೊಡನೆ ಕೇಳಬೇಕು' ಹೀಗೆಂದು ಅ. ಭಾ. ಸಂ. ಸಮ್ಮೇಳನದ ಅಧ್ಯಕ್ಷ ಶ್ರೀ। ಎಸ್. ಎ. ಬ್ರೆಲ್ವಿ ಹೇಳಿದರು.

ಮಲೇರಿಯಾದಿಂದ ತಿಂಗಳಿಗೆ ೨೫೦೦ ಮಂದಿ ಮರಣ!

ಅಸಾಮ್ ಪ್ರಾಂತದ ಬನಿಯಾ ಕೋಂಗ ಎಂಬ ಗ್ರಾಮ ಕಳೆದ ವರುಷ ಜಪಾನೀಯರ ಧಾಳಿಗೆ ಹಲವು ಸಲ ತುತ್ತಾಗಿತ್ತು. ಈ ನಡುವೆ ಬಹಳ ಅಲ್ಲಿ ಜಪಾನರು ಬಾಂಬಿಟ್ಟರು: ಇದು ಸಾಲದಕ್ಕೆ ಆ ಗ್ರಾಮದಲ್ಲಿ ಮಲೇರಿಯಾದಿಂದ ತಿಂಗಳೊಂದರ ೨೫೦೦ ಮಂದಿ ಮಡಿಯುತ್ತಿದ್ದಾರೆ. ಇಲ್ಲಿ ಜನಸಂಖ್ಯೆ ೪೨,೦೦೦. ಹೀಗೆ ಜನ ಬಾಂಬಿನಿಂದಲೂ ಮಲೇರಿಯಾದಿಂದಲೂ ಮಡಿದರೆ ಇಲ್ಲಿ ಪ್ರಳಯವಾಗಲು ಎಷ್ಟು ಸಮಯಬೇಕು? ಇಲ್ಲಿ ಬಡ ಜನರೇ ಹೆಚ್ಚು. ಬಡ್ಡಿಗೆ ಹಣ ಕೊಡುವ ದಲಾಲಿಗಳು ಇಲ್ಲಿನ ಕೃಷಿಕರನ್ನು ಹೀರುತ್ತಿದ್ದಾರೆ. ಅನ್ನವಿಲ್ಲದೆ ಉಪವಾಸದಿಂದ ಸಾಯುವ ಜನ ಬೇರೆಯೇ ಇದೆ.

ಕಾಂಗ್ರೆಸನ್ನು ಬಿಟ್ಟು ಸಂಧಾನ, ಸಾಧ್ಯವಿಲ್ಲ'

ಡಾ। ಮುಖರ್ಜಿಯವರ ಭಾಷಣ

'ಕಳೆದ ೬೦ ವರ್ಷಗಳಲ್ಲಿ ಕಾಂಗ್ರೆಸು ರಾಷ್ಟ್ರದ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಪಾತ್ರವಹಿಸಿದೆ. ಕಾಂಗ್ರೆಸನ್ನು ಮೂಲೆಗೆ ತಳ್ಳಿ ಭಾರತದ ರಾಜಕೀಯ ಸಂಧಾನ ಸಾಧ್ಯವಿಲ್ಲ.

ಕಾಂಗ್ರೆಸ್ ಮುಖಂಡರ ಬಂಧನ ಪ್ರದೇಶದ ಮಹತ್ವ ಕಾಲಾವಧಿಗೆ ಅತ್ಯಮೂಲ್ಯವಾದದ್ದೆಂದು ಡಾ। ಶ್ಯಾಮಪ್ರಸಾದ ಮುಖರ್ಜಿಯವರು ಅಮೃತಸರ ಹಿಂದೂ ಮಹಾಸಭಾಧಿವೇಶನದಲ್ಲಿ ಹೇಳಿದರು.

ಹಿಂದು ಮಹಾಸಭೆಯ ಅಧ್ಯಕ್ಷರ ಮೆರವಣಿಗೆಗೆ ಅಡ್ಡಿ

ಹಿಂದೂ ಮಹಾಸಭಾಧ್ಯಕ್ಷ ಡಾ। ಮುಖರ್ಜಿಯವರ ಮೆರವಣಿಗೆ ಹೊರಡಲು ಸಿದ್ಧತೆ ಮಾಡುವಾಗ, ಪೋಲೀಸ್ ಸುಪರಿಂಟೆಂಡೆಂಟರು, ಖಾಕಿ ಅರಿವೆ ಧರಿಸಿದ ಮಹಾವೀರ ದಳದವರು ಮೆರವಣಿಗೆಯಲ್ಲಿ ಭಾಗವಹಿಸಕೂಡದೆಂದು ಪಂಜಾಬ್ ಸರಕಾರವು ಜಾರಿಮಾಡಿದ ಆಜ್ಞೆಯನ್ನು ಸ್ವಾಗತ ಸಮಿತಿಯವರ ಹಸ್ತಕ್ಕೆ ತಂದು ಕೊಟ್ಟರು. ಆ ಆಜ್ಞೆ ಉಲ್ಲಂಘಿಸಬೇಕೇ ಪಾಲಿಸಬೇಕೇ ಎಂಬ ಚರ್ಚೆಯಾಗಿ ಉಲ್ಲಂಗಿಸಬೇಕೆಂದಾಯಿತು. ಅಧ್ಯಕ್ಷರು ಆನೆ ಮೇಲೆ ಮಂಡಿಸಿದ್ದರು. ಮಹಾವೀರ ದಳದವರು ಬಿಚ್ಚುಗತ್ತಿ ಹಿಡಿದು ಹೊರಟಿದ್ದರು. ಮೆರವಣಿಗೆ ಒಂದು ಫರ್ಲಾಂಗ್ ಮುಂದೆ ಹೋದಾಗ ಮೆಜಿಸ್ಟ್ರೇಟರು ಬಂದು, ಮೆರವಣಿಗೆ ಹೊರಡಲು ಕೊಟ್ಟ ಅಪ್ಪಣೆ ಹಿಂದೆಗೆಯಲಾಗಿದೆಯೆಂದರು. ಮೆರವಣಿಗೆ ಚದರಿತು.

ಭಾರತೀಯ ಚಲಚ್ಚಿತ್ರಗಳು

ಅಮೇರಿಕದ ಪ್ರಸಿದ್ಧ ಚಲಚ್ಚಿತ್ರ ನಟ ಮೆಲ್ವಿನ ಡಗ್ಲಸನು ಈಗ ಬೊಂಬಯಿಯಲ್ಲಿದ್ದಾನೆ. ಈಗ ಆತನು ಸೈನ್ಯಕ್ಕೆ ಸೇರಿರುವನು. 'ಹಾಲಿವುಡ್ಡಿನ ಅನೇಕ ನಟರೀಗ ಮಾಡಿಕೊಂಡ ಕರಾರು ಯುದ್ಧ ಮುಗಿವ ವರೆಗೆ ಮುಂದುವರಿಸಲಾಗಿದೆ. ಅವರು ಇಲ್ಲಿದ್ದು ಭಾರತದ ಹಳ್ಳಿಗಳನ್ನು ಸಂಚರಿಸಿ ಇಲ್ಲಿನ ಸಂಸ್ಕೃತಿ ಅಭ್ಯಾಸಿಸುತ್ತಾರೆ. ಭಾರತೀಯ ಮಹಿಳೆಯರು ಸುಂದರಿಯರಿರುವರು, ಅವರು ಸೀರೆ ಬಿಟ್ಟು ಪಾಶ್ಚಾತ್ಯ ಉಡುಪು ಧರಿಸುವುದು ಸರಿಯಲ್ಲ" ಹೀಗೆಂದು ಆತನು ಅಭಿಪ್ರಾಯಪಟ್ಟು, ಭಾರತೀಯ ಚಲಚ್ಚಿತ್ರ ಉದ್ಯಮವು ಇಷ್ಟು ಮುಂದುವರಿದ ಬಗ್ಗೆ ಪ್ರಶಂಸಿಸಿರುವನು.

FIRST AND FOREMOST

FIRST AND FOREMOST among the ideals of the CANARA BANK is the ideal of Service to its Customers.

ESTD. 1906.

CANARA BANK LTD.

ಮೃದುವಾದ ಚರ್ಮವನ್ನು ಬಹಳ ಜಾಗ್ರತೆಯಿಂದ ಕಾಪಾಡಬೇಕು

ಕುಟಿಕೂರಾ ಸಾಬೂನು ಮಗುವಿನ ಮೃದುಚರ್ಮವನ್ನು ರಕ್ಷಿಸಲಿ!



ಕುಟಿಕೂರಾ ಸೋಪು

CUTICURA SOAP.

ಜಿಲ್ಲಾ ಸಮಾಚಾರಗಳು

ಮಂಗಳೂರು

ಜಿಲ್ಲೆಯ ಆಹಾರ ಪರಿಸ್ಥಿತಿಯಲ್ಲಿ ವರ್ಗದಾರರ ಪ್ರಯತ್ನ

ಜಿಲ್ಲಾ ವರ್ಗದಾರ ಸಂಘದ ಕಾರ್ಯದರ್ಶಿಗಳು ಪತ್ರಿಕಾಸಂಪಾದಕರನ್ನೂ ಪ್ರತಿನಿಧಿಗಳನ್ನೂ ತಾ ೨೪ರಂದು ಕರೆಸಿ, ಜಿಲ್ಲೆಯ ಆಹಾರ ಪರಿಸ್ಥಿತಿ ಬಗ್ಗೆ ವಿಚಾರ ವಿನಿಮಯ ಮಾಡಿದರು. ಪಾನ ಫಲಾಹಾರವಾದ ಮೇಲೆ ಕಾರ್ಯದರ್ಶಿಗಳು ಶ್ರೀ. ರಾಮಮೂರ್ತಿಗಳಲ್ಲಿ ಒಪ್ಪಿದಂತೆ ಡಿಶಂಬರ ೧೫ರ ಒಳಗೆ ಅಕ್ಕಿ ಸಂಗ್ರಹಕ್ಕಾಗಿ ತಾವು ಮಾಡಿದ ಪ್ರಯತ್ನ, ಅದರಲ್ಲಿ ಸಿಕ್ಕಿದ ಪ್ರೋತ್ಸಾಹಗಳನ್ನು ತಿಳಿಸಿ, ಮಿಕ್ಕೆಲ್ಲಾ ತಾಲೂಕುಗಳಿಂದ ಅಕ್ಕಿ ಸಪ್ತಾಹದಲ್ಲಿ ಅಕ್ಕಿ ಸಂಗ್ರಹವಾಗಿದ್ದರೂ ಕಾಸರಗೋಡು ತಾಲೂಕಿನಿಂದ ಏನೂ ಬಂದಿಲ್ಲವೆಂದೂ, ಅಲ್ಲಿ ರಿಕ್ವಿಸಿಶನ್ ನೋಟೀಸೇ ಜಾರಿಯಾಗದೆ ಬಹಳ ತೊಂದರೆಯಾಗಿರುವುದಾಗಿಯೂ ತಿಳಿಸಿದರು ಹೀಗೆ ವರ್ಗದಾರರು ತಮ್ಮ ವಾಗ್ದಾನವನ್ನು ಪಾಲಿಸಿ ಕೆಲವು ಕಡೆ ವಿಶೇಷವಾಗಿ ಉಡುಪಿಯಲ್ಲಿ ವರ್ಗದಾರರು ಮಿತಿಮೀರಿ ಅಕ್ಕಿ ಕೊಡಬೇಕೆಂದು ಅಧಿಕಾರಿಗಳ ಆಜ್ಞೆ ಹೊರಟ ದೂರು ಬಂದಿರುವುದಾಗಿಯೂ ಈ ಕುರಿತು ಸಂಘವು ಗಮನಿಸುವುದಾಗಿಯೂ, ವರ್ಗದಾರರ ಆಕ್ಷೇಪಣೆ ಅರ್ಜಿಗಳಿಗೆ ನ್ಯಾಯ ದೊರೆಯುವಂತೆ ವರ್ಗದಾರರ ಸಂಘವು ಪ್ರಯತ್ನ ಮಾಡುವುದೆಂದೂ ಹೇಳಿದರು ಸಹಕಾರೀ ಸಂಘಗಳನ್ನು ಬಲಪಡಿಸುವ ಗ್ರಾಮ ನಿವಾಸಿಗಳಿಗೆ ತೊಂದರೆಯಾಗದ ಲಾಭ ಬಡಿಕತನದ ವ್ಯಾಪಾರವನ್ನು ವಿರೋಧಿಸುವ, ಅನೇಕ ವಿಚಾರಗಳು ಚರ್ಚಿತವಾದವು ಜಿಲ್ಲೆಯ ಆಹಾರ ಪರಿಸ್ಥಿತಿಯಲ್ಲಿ ವರ್ಗದಾರ ಸಂಘದವರಿಗೆ ಇರುವ ಅಧಿಕ ಆಸಕ್ತಿ ಈ ಮಾತುಕತೆಯಲ್ಲಿ ವ್ಯಕ್ತವಾಗುತಿತ್ತು

ಡಿಶಂಬರ ೨೨ರ ಒಳಗೆ ವರ್ಗದಾರ ಸಂಘದವರು ಬೇರೆ ಬೇರೆ ತಾಲೂಕುಗಳಿಂದ ಒದಗಿಸಿ ಕೊಟ್ಟ ಸಂಗ್ರಹ ಹೀಗಿದೆ

ಕಾರ್ಕಳ ೬೬೫೩ ಮುಡಿ ಅಕ್ಕಿ ಮಂಗಳೂರು ೪೧೫೮, ಉಡುಪಿ ೩೨೬೩, ಪುತ್ತೂರು ೨೧೯೬ ಮುಡಿ, ಅಕ್ಕಿ ಮತ್ತು ೧೦೮೦ ಮುಡಿ ಭತ್ತ, ಕುಂದಾಪುರ ೨೪೮೨ ಮುಡಿ

ಜಿಲ್ಲೆಯಲ್ಲಿ ಅಕ್ಕಿ ಡಿಪೋಗಳು

ಇದುವರೆಗೆ ಜಿಲ್ಲೆಯ ಬೇರೆ ಬೇರೆ ಭಾಗಗಳಲ್ಲಿ ತೆರೆಯಲಾದ ಸೆಂಟ್ರಲ್ ರಿಖಂ ಸಹಕಾರೀ ಸ್ಟೋರ್ಸಿನ ಅಕ್ಕಿ ಭತ್ತಗಳನ್ನು ಕೊಳ್ಳುವ ೩೩ ಡಿಪೋಗಳಲ್ಲದೆ, ಕೆಳಗೆ ಕಾಣಿಸಿದ ಸ್ಥಳಗಳಲ್ಲಿ ಹೊಸ ಡಿಪೋಗಳನ್ನು ತೆರೆಯಲಾಗಿದೆ ಕಿನ್ನಿಗೋಳಿ, ಪಣಂಬೂರು, ಬಜ್ಪೆ, ಪುಂಜಾಲ ಕಟ್ಟೆ, ಗುತ್ತಿಗಾರು, ಕುಂಬಳೆ, ಉದ್ಯಾ, ಕೋಟಿ ಚೇರಿ, ಹೊಸದುರ್ಗ, ಶೀರೂರು, ಬೈಂದೂರು, ಉಪ್ಪುಂದ, ಕಿರಿಮಂಜೇಶ್ವರ, ಬಸ್ರೂರು, ಕೋಟೇಶ್ವರ, ಪಂಡ್ಸೆ, ಕೋಟ್ಟ, ಕಾಪು, ವೇಣೂರು, ಕೈಕಂಬ, ಗುರುಪುರ, ಹೀಗೆ ಒಟ್ಟು ಈ ಜಿಲ್ಲೆಯಲ್ಲಿ ೫೯ ಡಿಪೋಗಳು ಈಗ ತೆರೆಯಲಾಗಿದೆ

ಕೆನರಾ ಹೈಸ್ಕೂಲ್ ವರ್ಧಂತಿ

ಇದು ತಾ. ೨೪ರಂದು ಜಿಲ್ಲಾ ಜಡ್ಜರಾದ ಶ್ರೀ। ಕೋವನ್ನರ ಅಧ್ಯಕ್ಷತೆಯಲ್ಲಿ ಜರಗಿತು ಡಾ। ಪಿ ಭವಾನಿರಾಯರು ಶಾಲಾ ಶ್ರೇಯಃ ಪ್ರಾರ್ಥನೆ ಮಾಡಿದರು ಹೆಡ್ ಮಾಸ್ತರರ ಪರವಾಗಿ ಶ್ರೀ ಜಿ ವಾಸುದೇವ ಪೈಗಳು ಶಾಲಾ ವರದಿಯೋದಿದರು ಬಹುಮಾನ ವಿತರಣೆ, ಅಧ್ಯಕ್ಷ ಭಾಷಣಗಳಾದ ಮೇಲೆ ವಿವಿಧ ವಿನೋದಾವಳಿಗಳಿದ್ದವು

ವರ್ಗಾವರ್ಗಿ

ಮಂಗಳೂರು ಸ್ಪೆಶಲ್ ಬ್ರೆಂಚ್ ಸಬ್ ಇನ್‌ಸ್ಪೆಕ್ಟರ್ ಶ್ರೀ. ಕೆ ಜಿ ನಾರಾಯಣ ಸ್ವಾಮಿ ಇವರು ಮದ್ರಾಸ್ ಸಿ ಐ ಡಿ ಗೂ, ಹೊಸದುರ್ಗ ಸ್ಪೆಶಲ್ ಬ್ರೆಂಚ್ ಸಬ್ ಇನ್‌ಸ್ಪೆಕ್ಟರ್ ಶ್ರೀ. ಎಂ. ಅಚ್ಯುತನ್ ನಾಯರ್ ಇವರು ಇಲ್ಲಿ ನಾರಾಯಣ ಸ್ವಾಮಿಯವರ ಬದಲಿಗೂ, ಜಿಲ್ಲಾ ಇಂಟಲಿಜೆನ್ಸ್ ಬ್ಯುರೋದ ಸಬ್ ಇನ್‌ಸ್ಪೆಕ್ಟರ್ ಶ್ರೀ. ಕೆ ಜಿ ನಾಥರು ಹೊಸದುರ್ಗ ಸ್ಪೆ. ಬ್ರಾಂ. ಸ. ಇನ್‌ಸ್ಪೆಕ್ಟರರ ಸ್ಥಾನಕ್ಕೂ, ಸ್ಪೆಶಲ್ ಬ್ರೇಂಚಿನ ಹೆಡ್ ಕಾನ್‌ಸ್ಟೇಬಲ್ ಶ್ರೀ. ಎಸ್. ಪಿ. ಜಿ. ನರಸಿಂಹ ಇವರು ಜಿಲ್ಲಾ ಇಂಟಲಿಜೆನ್ಸ್ ಬ್ಯುರೋ ಮಂಗಳೂರು ಇದರ ಸಬ್ ಇನ್‌ಸ್ಪೆಕ್ಟರರಾಗಿಯೂ ನೇಮಕ ಹೊಂದಿದ್ದಾರೆ.

ಗೌಡ ಸಾರಸ್ವತ ಬ್ರಾಹ್ಮಣ ಪರಿಷತ್ತು

ಇದರ ವಾರ್ಷಿಕ ಸಮ್ಮೇಳನವು ಕಳೆದ ತಾ. ೨೩ನೇ ಗುರುವಾರ ಬೆಳಗ್ಗೆ ಕೆನರಾ ಹೈಸ್ಕೂಲ್ ಭುವನೇಂದ್ರ ಸಭಾ ಭವನದಲ್ಲಿ ವೇದಘೋಷದೊಡನೆ ಪ್ರಾರಂಭವಾಯಿತು ಸಮ್ಮೇಳನದ ಆರಂಭೋತ್ಸವ ನೆರೆಸಬೇಕಾಗಿದ್ದ ಪರಮ ಪೂಜ್ಯ ಶ್ರೀ ಕಾಶೀ ಮಠಾಧೀಶ ಶ್ರೀಮತ್ ಸುಕೃತೀಂದ್ರ ತೀರ್ಥ ಶ್ರೀಪಾದಂಗಳವರು ಅನಾರೋಗ್ಯದ ನಿಮಿತ್ತ ದಯಮಾಡಿಸಿದ್ದರಿಂದ ಅವರ ಆರಂಭ ಭಾಷಣವನ್ನು ಪರಿಷದಧ್ಯಕ್ಷರಾದ ಶ್ರೀ ಎ ಶ್ರೀನಿವಾಸ ಪೈಗಳು ಓದಿದರು

ಆ ಭಾಷಣದಲ್ಲಿ ಶ್ರೀ ಶ್ರೀಗಳವರು ಗೋಕರ್ಣನಾಥ ಮಠಾಧಿಪತಿಗಳಾಗಿದ್ದ ವೃಂದಾವನಸ್ಥ ಶ್ರೀಮತ್ ಕಮಲಾನಾಥ ಶ್ರೀಪಾದಂಗಳವರ ಪುಣ್ಯ ಸ್ಮರಣೆ ಮಾಡಿ, ಬಿಸೆಂಟ್ ಬಾಲಿಕಾ ಶಾಲಾ ಸ್ಥಾಪನೆ, ಫೆಡರಲ್ ಹಿಂದೂ ಸ್ಕೂಲ್ ಬೋರ್ಡಿನ ಸ್ಥಾಪನೆ ಮುಂತಾದವುಗಳ ಮೂಲಕ ಈ ಪರಿಷತ್ತಿನ ನಿರ್ಣಯಗಳನ್ನು ಕಾರ್ಯರೂಪಕ್ಕೆ ಬಂದ ವಿಚಾರ ತಿಳಿಸಿ, ಆಗಮ ಕರಗತಿಗಳನ್ನು ಅಲ್ಲಲ್ಲಿ ತೆರೆದ ವಿಚಾರ ಪ್ರಸ್ತಾಪಿಸಿ, ಸಮಾಜದ ಬಡವರಿಗಾಗಿ ನಿಧಿ ಸಂಗ್ರಹಿಸುವ ಕುರಿತು ತಿಳಿಸಿ, ಕೊನೆಗೆ ಧೈರ್ಯಗೆಡದೆ ಮುಂದುವರಿದರೆ ಭಗವಂತನು ಬೆಂಬಲಕೊಡುವನೆಂದು ಭರವಸೆ ಹೇಳಿದ್ದರು

ಸಮ್ಮೇಳನಕ್ಕೆ ಜಿಲ್ಲೆಯ ಬೇರೆ ಬೇರೆ ಭಾಗಗಳಿಂದ ೧೨೦ ಮಂದಿ ಪ್ರತಿನಿಧಿಗಳು ಬಂದಿದ್ದರು ಗೌಡ ಸಾರಸ್ವತರೂ, ಸಾರಸ್ವತರೂ ಒಂದಾಗಬೇಕೆಂದೂ, ವಿವಾಹಾದಿಗಳ ಮೂಲಕ ಬಲಪಡಬೇಕೆಂದೂ ಆದ ಸಮಾಜ ಸುಧಾರಣೆಯ ನಿರ್ಣಯವು ಮಂಜೂರಾದ ನಿರ್ಣಯಗಳಲ್ಲೊಂದಾಗಿದೆ

ನಿಧನ

ಇಲ್ಲಿಯ ಪ್ರಸಿದ್ಧ ವಕೀಲರಾದ ಶ್ರೀ ಬಿ ವೈಕುಂಠ ಬಾಳಿಗರ ತಂದೆ ಶ್ರೀ ಬಿ ಲಕ್ಷ್ಮಣ ಬಾಳಿಗರು ತಾ ೨೪ರಂದು ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ

ಇಲ್ಲಿಯ ನಿವೃತ್ತ ಹಜೂರು, ಶಿರಸ್ತೆದಾರರಾಗಿದ್ದ ಶ್ರೀ। ಎಂ ಅಚ್ಯುತಯ್ಯನವರು ಗೋಪಿಚಟ್ಟಪಾಳೆಯಮಿನಲ್ಲಿ ಕಳೆದ ತಾ ೨೩ರಲ್ಲು ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ

ಮೃತರ ಆತ್ಮಗಳಿಗೆ ಶಾಂತಿಯಿರಲಿ!

ಕೆನರಾ ಹೈಸ್ಕೂಲ್ ಹಳೇ ವಿದ್ಯಾರ್ಥಿ ಸಂಘ

ದ ವಾರ್ಷಿಕ ಸಭೆಯು ಸಂಘದ ಅಧ್ಯಕ್ಷರಾದ ಶ್ರೀ ಎ ಬಿ ಶೆಟ್ಟರ ಅಧ್ಯಕ್ಷತೆಯಿಂದ ಜರಗಿತು. ಕಾರ್ಯದರ್ಶಿಗಳು ವಾರ್ಷಿಕ ವರದಿಯನ್ನೋದಿದರು ಆ ಮೇಲೆ ೧೯೪೪ರ ಅಂದಾಜು ಪತ್ರ ಮಂಜೂರಾಯಿತು ಶ್ರೀ ಎ ಬಿ ಶೆಟ್ಟರೇ ಸಂಘದ ಅಧ್ಯಕ್ಷರಾಗಿ ಆರಿಸಲ್ಪಟ್ಟರು ಹಲವರ ಭಾಷಣಗಳಾದುವು

ಕಡವು ಏಲಂಗಳು

ದಕ್ಷಿಣ ಕನ್ನಡ ಜಿಲ್ಲೆಯ ಕಡವುಗಳು ಬರುವ ವರ್ಷಕ್ಕಾಗಿ (೧೯೪೪-೪೯) ಏಲಂ ಮಾಡಲು ಕೆಳಗಿನ ಸ್ಥಳಗಳು ನಿಶ್ಚಯಿಸಲ್ಪಟ್ಟಿವೆ. ಮಂಗಳೂರು ತಾಲೂಕಿಗೆ ತಾ ೮ರಂದು ಮಂಗಳೂರು ಅಸಿಸ್ಟಾಂಟ್ ಇಂಜಿನಿಯರ ಆಫೀಸು, ಕಾಸರಗೋಡು ತಾಲೂಕಿಗೆ ತಾ. ೧೮ರಲ್ಲಿ ಕಾಸರಗೋಡು ಡಿಸ್ಟ್ರಿಕ್ಟ್ ಓವರ್ಸಿಯರ ಆಫೀಸಿನಲ್ಲಿ, ಪುತ್ತೂರು ತಾಲೂಕಿಗೆ ತಾ. ೧೨ರಲ್ಲಿ ಪುತ್ತೂರು ಲೋಕಲ್ ಫಂಡ್ ಅಸಿಸ್ಟಾಂಟ್ ಇಂಜಿನಿಯರರ ಆಫೀಸಿನಲ್ಲಿ. ಉಡುಪಿ ತಾಲೂಕಿಗೆ ತಾ ೧೦ರಲ್ಲು ಉಡುಪಿ ಎಲ್ ಎಫ್. ಅಸಿಸ್ಟಾಂಟ್ ಇಂಜಿನಿಯರ ಆಫೀಸಿನಲ್ಲಿ, ಕುಂದಾಪುರ ಡಿಸ್ಟ್ರಿಕ್ಟ್ ಬೋರ್ಡು ಓವರ್ಸೀಯರ ಆಫೀಸಿನಲ್ಲಿ, ಕಾರ್ಕಳ ತಾಲೂಕಿಗೆ ತಾ ೧೨ರಲ್ಲು ಕಾರ್ಕಳ ಡಿಸ್ಟ್ರಿಕ್ಟ್ ಬೋರ್ಡು ಓವರ್ಸಿಯರ ಆಫೀಸಿನಲ್ಲಿ ಜರಗುವವು ಈ ವಿಷಯ ಹೆಚ್ಚಿನ ಮಾಹಿತಿಯನ್ನು ಡಿ ಬೋ ಅಸಿಸ್ಟಾಂಟ್ ಇಂಜಿನಿಯರ್ ಮತ್ತು ಡಿ ಬೋ ಓವರ್ಸಿಯರರಿಂದ ಪಡೆಯಬಹುದು

ದಕ್ಷಿಣ ಕನ್ನಡ ರೈಲ್ವೆ ಲೇಬರ್ ಯೂನಿಯಾನ್

ಇದರ ಸಾಮಾನ್ಯ ಸಭೆಯು ಇದರ ಕಾರ್ಯಾಲಯದಲ್ಲಿ ಈಚೆಗೆ ಶ್ರೀ ಇ ಸಿ ಭರತನ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಜಿ ರಂಗ ಸ್ವಾಮಿಯವರು ವರದಿಯೋದಿದರು ಶ್ರೀ ಎಸ್ ಎನ್ ನಂಬೂದಿರಿಯವರು ಭಾಷಣವಿತ್ತರು ಮಂಗಳೂರಿನ ಕೆಲಸಗಾರರಿಗೆ ತಿಂಗಳಿಗೆ ೨ ಬಾಟಲಿ, ಇತರ ಕಡೆಯವರಿಗೆ ೧ ಬಾಟಲಿ ಚಿಮಿಣಿ ಎಣ್ಣೆ ಕೊಡಿಸುವುದಾಗಿ ಕಲೆಕ್ಟರರಿಂದ ಬಂದ ಪತ್ರವನ್ನೋದಲಾಯಿತು ಜನವರಿ ತಾ ೧ರಿಂದ ಮಾರ್ಚಿ ೩೧ರ ವರೆಗಿನ ಅಂದಾಜು ಪತ್ರ ಮಂಜೂರಾಯಿತು ಗೋಲ್ಡನ್ ರಾಕಿನಲ್ಲಿರುವ ರೈಲ್ವೆ ಧಾನ್ಯಗಳ ಅಂಗಡಿಯ ವ್ಯವಹಾರಗಳ ಕುರಿತು ಆಕ್ಷೇಪಿಸುವ ಠರಾವೊಂದು ಸಂಬಂಧ ಪಟ್ಟವರಿಗೆ ತಿಳಿಸಲ್ಪಾಯಿತು ಹೊಸ ವರ್ಷದ ಚುನಾವಣೆಯಾಗಿ ಶ್ರೀ ಇ ಸಿ ಭರತನ್ ಅಧ್ಯಕ್ಷರಾದರು ಮಂಗಳೂರಲ್ಲಿ ಒಂದು ಧಾನ್ಯ ಅಂಗಡಿಯನ್ನೂ ಯೂನಿಯನ್ ಸದಸ್ಯರಿಗಾಗಿ ತೆರೆಯಲು ಒಂದು ಉಪಸಮಿತಿ ಉಚಿತವಾಯಿತು ಅಧ್ಯಕ್ಷರ ಭಾಷಣವಾಗಿ ಕಾರ್ಯದರ್ಶಿ ಕೃತಜ್ಞತೆ ಹೇಳಿದರು

ಮುಸ್ಲಿಂ ಬಾಲಿಕಾ ಪಾಠಶಾಲೆ ಡೈರೆಕ್ಟರರಿಂದ ಉದ್ಘಾಟನೆ

ಮಂಗಳೂರಲ್ಲಿ ಹೊಸತಾಗಿ ತೆರೆದ ಮುಸ್ಲಿಂ ಬಾಲಿಕಾ ಮಿಡ್ಲ್ ಶಾಲೆಯ ಉದ್ಘಾಟನೆಯನ್ನು ತಾ ೨೪ರಂದು ಮದ್ರಾಸು ಪ್ರಾಂತಿಕ ವಿದ್ಯಾ ಖಾತೆಯ ಡೈರೆಕ್ಟರ್ ಸರ್ ಆರ್ ಎಮ್ ಸ್ಟೆತೆಮರು ಜರಗಿಸಿದರು ಶಾಲಾ ಬಾಲಕಿಯರಿಂದ ಪ್ರಾರ್ಥನೆ, ಸ್ವಾಗತ ಗೀತೆಗಳಾಗಿ ಅವರಿಂದಲೇ ಹಾರ ಮತ್ತು ಬಿನ್ನವತ್ತಳೆಗಳು ಪಿರ್ಸ್ಪಟ್ಟವು 'ಓನೇ ಸರ್ಕಲಿನ ಇನ್‌ಸ್ಪೆಕ್ಟರರಾದ ಮಿಸ್ ಸಿ ಡಿ ಸೋಜರು ಆ ಮೇಲೆ ಭಾಷಣಮಾಡಿ, ಮುಸ್ಲಿಂ ಬಾಲಿಕೆಯರ ಶಿಕ್ಷಣದಲ್ಲಿ ಆದ ಪ್ರಗತಿ, ಈ ಕುರಿತು ಡೈರೆಕ್ಟರರು ಸಲ್ಲಿಸಿದ ಸೇವೆಗಳನ್ನು ಪ್ರಶಂಸಿಸಿದರು ಈ ಶಾಲೆಯಲ್ಲಿ ೮೨ ಮಂದಿ ವಿದ್ಯಾರ್ಥಿನಿಯರು ಕಲಿಯುತ್ತಿರುವರೆಂದರು.

ಅನಂತರ ಡೈರೆಕ್ಟರು ಭಾಷಣವಿತ್ತು ಕಳೆದ ಎಂಟು ವರ್ಷಗಳಲ್ಲಿ ಮದ್ರಾಸು ಪ್ರಾಂತದಲ್ಲಾದ ವಿದ್ಯಾಪ್ರಚಾರದ ವಿಷಯ ವಿವರಿಸಿ, ಅದರಲ್ಲಿ ಬಾಲಿಕೆಯರ ವಿದ್ಯಾಭ್ಯಾಸದ ಕುರಿತು ಹೇಳಿ ಹಿಂದೆ ಶೇಕಡಾ ೨೦ಕ್ಕಿಂತಲೂ ಕಡಿಮೆಯಿದ್ದ ಅವರ ಸ್ಥಾನವಿಂದು ಶೇಕಡಾ ೭೦ಕ್ಕೂ ಮಿಕ್ಕಿದೆಯೆಂದೂ ಈ ರೀತಿಯಲ್ಲಿ ಅವರು ಮುಂದುವರಿದರೆ ಬೇಗನೇ ಬಾಲಿಕೆಯರು ಬಾಲಕರನ್ನು ಗೆಲ್ಲುವರೆಂದೂ ಹೇಳಿದರು. ೧೯೨೯ರಲ್ಲಿ ಒಂದೇ ಮುಸ್ಲಿಂ ಬಾಲಿಕಾ ಶಾಲೆಯಿತ್ತೆಂದೂ, ಇಂದು ಪ್ರಾಂತದಲ್ಲು ೧೦ ಶಾಲೆಗಳಿವೆಯೆಂದೂ ಹೇಳಿ, ಬಾಲಿಕೆಯರಿಗೆ ವಿದ್ಯಾಭ್ಯಾಸ ಕೊಡುವ ವಿಷಯ ತಾನು ಪ್ರೇಮಾಂಧನಾಗಿರುವೆನೆಂದೂ ತಿಳಿಸಿ, ಯುದ್ಧ ಸಮಯದಲ್ಲಿ ವಿದ್ಯಾರ್ಥಿಗಳಿಗಿಂತ ವಿದ್ಯಾರ್ಥಿನಿಯರೇ ಧೈರ್ಯಶಾಲಿಗಳಾಗಿರುವರೆಂದು ವಿವರಿಸಿದರು.

ಆ ಮೇಲೆ ಮಂಗಳೂರು ಮುಸ್ಲಿಂ ಶಿಕ್ಷಣ ಸಮಿತಿ ಅಧ್ಯಕ್ಷರಾದ ಜನಾಬ್ ಪುತ್ತೂರು ಹುಸ್ಸೇನ್ ಸಾಹೇಬರು ಡೈರೆಕ್ಟರರಿಗೆ ಮಾನಪತ್ರ ಅರ್ಪಿಸಿದರು ಖಾನ್ ಬಹದ್ದೂರ್ ಚೆಮ್ನಾಡ್ ಸಾಹೇಬರು ಜನಾಬ್ ಎಚ್ ಎಸ್ ಹುಸೇನ್ ಸಾಹೇಬರೂ ಮಾತನಾಡಿ ಡೈರೆಕ್ಟರರನ್ನು ಹೊಗಳಿ, ಮುಸ್ಲಿಮರು ಮಹಿಳೆಯರಿಗೆ ವಿದ್ಯಾಭ್ಯಾಸ ಕೊಡಿಸಬೇಕೆಂದು ಒತ್ತಿ ಹೇಳಿದರು ಡೈರೆಕ್ಟರರ ಕೊನೆಯ ಮಾತು ಮುಗಿದ ಮೇಲೆ ಜನಾಬ್ ಹಮ್ಮಬ್ಬರು ವಂದನಾರ್ಪಣೆ ಮಾಡಿದರು ಅನಂತರ ಡೈರೆಕ್ಟರರು ಉದ್ಘಾಟನೆ ನಡೆಸಿ, ಹೆತ್ತವರಿಂದ ಅನುಮತಿ ಪಡೆದು ಬಂದ ವಿದ್ಯಾರ್ಥಿನಿಯರಿರುವ ಕ್ಲಾಸುಗಳನ್ನು ಸಂದರ್ಶಿಸಿದರು

ಕಾರ್ಕಳ

ವಾಣಿಜ್ಯ ಸಂಘ

ತಾ ೨೪ರಂದು ಸಂಜೆ ಹಿಂದೂ ಬಾಲಿಕಾ ಪಾಠಶಾಲೆಯಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಕೆ ಗಣಪತಿ ಶೆಣೈಯವರ ಅಧ್ಯಕ್ಷತೆಯಲ್ಲಿ ಕಾರ್ಕಳ ವಾಣಿಜ್ಯ ಸಂಘದ ಮಹಾಸಭೆ ಜರಗಿವೆ ಹಲವರು ಭಾಷಣವಿತ್ತರು ಗತವರ್ಷದ ಲೆಕ್ಕಪತ್ರ ಪರಿಶೀಲನೆಯಾಗಿ ಮಂಜೂರಾಯಿತು ಪ್ರತಿ ತಿಂಗಳ ಆಖೈರಿ ಆದಿತ್ಯವಾರ ರಜಾದಿನವಾಗಿ ಆದರಿಸಬೇಕೆಂದಾಯಿತು

ಪುತ್ತೂರು

ಗುಂಡು ಹಾರಿಸಿ ಮರಣ

ಕಳೆದ ತಾ ೧೪ರಲ್ಲಿ ಪುಣಚ ಗ್ರಾಮದಲ್ಲಿ ಪೋಲೀಸ್ ಸಹಾಯ ಪಡೆದು ಆಸ್ತಿ ಡೆಲಿವರಿ ಬಗ್ಗೆ ಹೋದ ವೇಳೆ ಪೋಲೀಸರ ಮೇಲೆ ಗುಂಡು ಹಾರಿಸಲು ಇದು ದೈವಯೋಗದಿಂದ ತಪ್ಪಿ ಹೋಗಲು, ಅನಂತರ ಪೋಲೀಸರ ಗುಂಡಿನ ಹೊಡೆತದಿಂದ ಓರ್ವನು ಮೃತಪಟ್ಟು ಇನ್ನೋರ್ವನು ತೀವ್ರ ಜಖಂಗೊಂಡಿರುವನೆಂದೂ ತಿಳಿಯುತ್ತದೆ.

ಉಡುಪಿ

ಸರಕಾರದ ಧೋರಣೆ ಖಂಡನೆ

ಉಡುಪಿ ನಗರ ಸಭೆ ಶ್ರೀ ಆರೂರು ಲಕ್ಷ್ಮಿನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಸೇರಿ ಮದ್ರಾಸ್ ಸರಕಾರವು ಕಾಂಗ್ರೆಸ್ ಮಂತ್ರಿಮಂಡಳವು ಜಾರಿಮಾಡಿದ ಜಿಲ್ಲೆಗಳ ಮದ್ಯಪಾನ ನಿಷೇಧ ಕಾನೂನನ್ನು ಹಿಂತೆಗೆದ ಬಗ್ಗೆ ಮದ್ರಾಸ ಸರಕಾರದ ಧೋರಣವನ್ನು ಖಂಡಿಸಿ, ಇಡಿ ಪ್ರಾಂತದಲ್ಲೇ ಮದ್ಯಪಾನ ನಿರ್ಬಂಧಕಾನೂನು ಅನ್ವಯಿಸುವಂತಾಗಬೇಕೆಂದು ನಿರ್ಣಯಿಸಿತು ಉಡುಪಿ ನಗರಸಭೆಯ ಮುನ್ಸಿಪಲ್ ಮೈನ ಎಲಿಮೆಂಟರಿ ಶಾಲೆಗೆ ಆರೂರು ಲಕ್ಷ್ಮಿನಾರಾಯಣ ರಾವ್ ಶಾಲೆಯೆಂದು ನಾಮಕರಣ ಮಾಡಬೇಕೆಂದು ನಿರ್ಣಯಿಸಲಾಯಿತು

ರೇಶನಿಂಗ್ ವಿಚಾರ

ಸ್ಥಳೀಯ ಮುನ್ಸಿಪಲ್ ಆಫೀಸಿನಲ್ಲಿ ರೇಶನಿಂಗ್ ಅಫೀಸರರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಈ ಮುನ್ಸಿಪಾಲಿಟಿಯೊಳಗೆ ರೇಶನಿಂಗ್ ಜಾರಿಮಾಡುವರೆ ಜನ ಸಂಖ್ಯೆ ಖಾನೇಶುಮಾರಿ ತೆಗೆವರೆ ನಿಶ್ಚಯವಾಯಿತು.

ನಮ್ಮ ಎಲ್ಲಾ ಜಾಹಿರಾತುದಾರರಿಗೆ, ಚಂದಾದಾರರಿಗೆ ಮತ್ತು ಹಿತಚಿಂತಕರಿಗೆ
ಹೊಸ ವರ್ಷವು
ಆನಂದ ಮತ್ತು ಅಭಿವೃದ್ಧಿದಾಯಕವಾಗಲೆಂದು ನಾವು ಹಾರೈಸುತ್ತೇವೆ.

ಉಡುಪಿ
ಅ. ಕ. ಕಿರಿಯರ ಸಮ್ಮೇಳನ

ಇದು ಉಡುಪಿಯ ಕಿರಿಯರ ಸಾಹಿತ್ಯ ಸಂಘದ ಆಶ್ರಯದಲ್ಲಿ ಉಡುಪಿಯಲ್ಲಿ ಜನವರಿ ೧೫, ೧೬ ಮತ್ತು ೧೭ರಂದು ಜರಗುವುದು.

ಸಮ್ಮೇಳನಾಧ್ಯಕ್ಷರು ಶ್ರೀ. ಬಿ. ಉಮೇಶ ರಾವ್, ಧ್ವಜಾರೋಹಕರು ಶ್ರೀ. ಲಕ್ಷ್ಮಣ್ ರಾವ್, ಉದ್ಘಾಟಕರು ಶ್ರೀ. ಕೋ. ಶಿ. ಕಾರಂತ, ಉಪನ್ಯಾಸಕರು ಶ್ರೀ. ಎನ್. ಕೆ. ಕುಲಕರ್ಣಿ, ಸ್ವಾಗತಾಧ್ಯಕ್ಷರು ಶ್ರೀ. ಆರೂರು ರಮೇಶರಾವ್, ನಗರ ಸ್ವಾಗತ ಸಮಿತಿ ಅಧ್ಯಕ್ಷರು ಡಾ| ಟಿ. ಮಾಧವ ಪೈ.

ತಾ. ೧೫ರಂದು ಪೂರ್ವಾಹ್ನ ೧೦ ಗಂಟೆಗೆ ಧ್ವಜಾರೋಹಣ. ೧೦-೩೦ರಿಂದ ೧೨-೩೦ರ ವರೆಗೆ ಪಂದ್ಯಾಟಗಳು. ಅಪರಾಹ್ನ ೩ ಗಂಟೆಗೆ ಉದ್ಘಾಟನ ಭಾಷಣ. ಸ್ವಾಗತ ಗೀತ, ಸ್ವಾಗತ ಭಾಷಣ. ಸಂದೇಶ ವಾಚನ. ಹಿರಿಯರ ಪರವಾಗಿ ಮಾತುಗಳು. ಅಧ್ಯಕ್ಷರ ಆರಂಭ ಭಾಷಣ. ರಾತ್ರಿ ೮ರ ಅನಂತರ ನಾಟಕ ವಿನೋದಾದಳಿ.

ತಾ. ೧೬ರಂದು ಪೂರ್ವಾಹ್ನ ಸ್ಪರ್ಧೆಗಳು, ೩ ಗಂಟೆಗೆ ಉಪನ್ಯಾಸ. ಸಂಗೀತ ಸ್ಪರ್ಧೆ ೪ರಿಂದ ೬ರ ವರೆಗೆ. ರಾತ್ರಿ ೭-೩೦ರಿಂದ ಬಾಲಕಿಯರಿಂದ ನಾಟಕ ನೃತ್ಯ ವಿನೋದಾವಳಿ.

ತಾ. ೧೭ರಂದು ಪೂರ್ವಾಹ್ನ ೧೦ ಗಂಟೆಗೆ ಉಪನ್ಯಾಸ. ೧೦ ಗಂಟೆಗೆ ಹಿರಿಯರ ಭಾಷಣಗಳು. ೧೧-೩೦ಕ್ಕೆ ವಿಷಯ ನಿರ್ಣಯ ಸಭೆ. ಅಪರಾಹ್ನ ನಿರ್ಣಯಗಳು. ೫ ಗಂಟೆಗೆ ಅಧ್ಯಕ್ಷರ ಭಾಷಣ—೫-೩೦ಕ್ಕೆ. ಆ ಮೇಲೆ ನಾಟಕ ನೃತ್ಯಾದಿಗಳು. ಕೊನೆಗೆ ಬಹುಮಾನ ವಿತರಣ.

೨೦ ವರ್ಷಕ್ಕಿಂತ ಚಿಕ್ಕವರಾದ ಕಿರಿಯರು ಮಾತ್ರ ಭಾಗವಹಿಸಬಹುದು. ಇತರರು ಪ್ರೇಕ್ಷಕರಾಗಿ ಬರಬಹುದು, ಪ್ರತಿನಿಧಿಗಳು ಮಾತ್ರ ಚರ್ಚೆಯಲ್ಲಿ ಭಾಗವಹಿಸಬಹುದು. ಮಂಡಿಸಬೇಕಾದ ನಿರ್ಣಯಗಳನ್ನು ತಾ. ೧೦ರ ಒಳಗೆ ಕಳುಹಿಸಿಕೊಡಬೇಕು. ಪರವೂರಿನಿಂದ ಬರುವವರು ತಾ. ೧೦ರೊಳಗೆ ಸ್ವಾಗತ ಸಮಿತಿ, ಅಖಿಲ ಕರ್ನಾಟಕ ಕಿರಿಯರ ಸಮ್ಮೇಳನ ಉಡುಪಿ ಇವರಿಗೆ ತಿಳಿಸಬೇಕು.

ಬಂಗಾಳಕ್ಕೆ ಅಹಮ್ಮದಾಬಾದಿನಿಂದ ಸಹಾಯ
ಕಾಂಗ್ರೆಸಿನವರ ಪ್ರಯತ್ನ

ಬಂಗಾಳದ ದುರವಸ್ಥೆ ಅಹಮ್ಮದಾಬಾದಿನ ದೇಶಪ್ರೇಮಿಗಳ ಹೃದಯವನ್ನು ಕರಗಿಸಿದೆ. ಅಲ್ಲಿ ಬಂಗಾಳ ಸಂಕಷ್ಟನಿವಾರಣಾ ಸಮಿತಿ ಸ್ಥಾಪಿತವಾಗಿ ಕೆಲಸಮಾಡುತ್ತಿದೆ. ಕಾಂಗ್ರೆಸಿನವರು ಮುಂದಕ್ಕೆ ಈ ಕಾರ್ಯದಲ್ಲಿ ದುಡಿಯುತ್ತಿರುವರು. ಮಿಲ್ ಮಾಲಕರು, ಕೂಲಿಗಾರರೂ ಪತ್ರಿಕೋದ್ಯಮಿಗಳು ಇವರಿಗೆ ಬೆಂಬಲವಿದ್ದಾರೆ. ಇವರಲ್ಲಿ ಐದು ಮಂತ್ರಿ ಕಾಂಗ್ರೆಸ್ ದೇಶಪ್ರೇಮಿಗಳು ಬಂಗಾಳವನ್ನು ಸಂದರ್ಶಿಸಿ ಅಲ್ಲಿನ ಪರಿಸ್ಥಿತಿ ತಿಳಕೊಂಡು ಬಂದಿರುವರು.

ಹಳೆ ಅಕ್ಕಿ ಹೌರಾದಲ್ಲಿ ಹೊರ ಹರಿದಿದೆ

"ಕಳೆದ ಹದಿನೈದು ದಿನಗಳಿಂದ ಅಕ್ಕಿ ಸಂತೆಗೆ ಹರಿದು ಬರುತ್ತಿದೆ. ನವಂಬರ ಎರಡನೇ ವಾರದಲ್ಲಿ ಒಮ್ಮೆಲೇ ಹಲವು ತಿಂಗಳ ನಂತರ ಅಕ್ಕಿ ಸಂತೆಗೆ ಬಂದಿತು. ಮಣಕ್ಕೆ ೩೫ ರೂಪಾಯಿಗಿಂತಲೂ ಅಧಿಕವಿದ್ದ ಕ್ರಯ ಒಮ್ಮೆಲೇ ಇಳಿಯಿತು. ಇದೆಲ್ಲಾ, ಹಿಂದೊಮ್ಮೆ ಉಪವಾಸದಿಂದ ನರಳಿದ ನಗರದಲ್ಲಿ ಹೌರಾದಲ್ಲಿ ನಡೆಯುತ್ತದೆ. ಹಳೆ ಅಕ್ಕಿ ಒಮ್ಮೆಲೇ ಹೊರಗೆ ಹರಿಯತೊಡಗಿದೆ. ದಾಸ್ತಾನುದಾರರು ಒಮ್ಮೆಲೇ ತಮ್ಮ ಹಳೇ ಅಕ್ಕಿಯನ್ನು ಹೊರ ಹಾಕಿದ್ದಾರೆ; ಹೊಸ ಅಕ್ಕಿಯನ್ನು ಪಡಕೊಂಡು ತಿರುಗೊಮ್ಮೆ ದಾಸ್ತಾನಿಟ್ಟು ಬಡವರನ್ನು ಉಪವಾಸ ಬೀಳಿಸಿಕೊಳ್ಳುವ ಹಂಚಿಕೆ ಮಾಡುತ್ತಾರೆ." ಹೀಗೆಂದು, ಶ್ರೀ. ಮುಖರ್ಜಿ ಬರೆಯುತ್ತಾರೆ.

ಜಿನ್ನರ ಬಂಗ್ಲೆಗೆ ಕಾವಲು!

ಕರಾಚಿಯಲ್ಲಿ ಅ. ಭಾ. ಮುಸ್ಲಿಂ ಲೀಗ್ ಪರಿಷತ್ತಿಗಾಗಿ ಬಂದಿಳಿದ ಜಿನ್ನರ ಬಂಗ್ಲೆ ಸುತ್ತು [illegible]

ಮಾರಾಟಕ್ಕೆ ತಯಾರಾಗಿವೆ

1944ನೇ ಇಸವಿಯ

ಎರಡು ಬಣ್ಣದಲ್ಲಿ ಅಂದವಾಗಿ ಮುದ್ರಿತವಾದ

★ ಆಫೀಸು ಕೆಲೆಂಡರು ★

ಬೆಲೆ. 0—4—0. ವ್ಯಾಪಾರಸ್ಥರಿಗೆ ಯೋಗ್ಯ ಕಮಿಷನು ಕೊಡಲಾಗುವುದು

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ಯುದ್ಧಕಾಲದಲ್ಲಿ ಹಣಕ್ಕೆ ಬೆಲೆಯಿಲ್ಲ

ಅಂಗಡಿಗಳ ಅನೇಕ ಪದಾರ್ಥಗಳ ಬೆಲೆಗಳು ಇಂದಿಗೆ ಕಂಡಾಬಟ್ಟೆ ಹೆಚ್ಚಿದೆ. ಯುದ್ಧಕಾಲದಲ್ಲಿ ಅತ್ಯವಶ್ಯಕವಾದ ಪದಾರ್ಥಗಳ ವಿನಹಾ ಇತರ ಪದಾರ್ಥಗಳನ್ನು ಕೊಂಡರೆ ಗಿಟ್ಟುವುದೇ ಇಲ್ಲ. ಇದಕ್ಕೆ ಪ್ರತಿಯಾಗಿ ನೀವು ಕೂಡಿಡಬಹುದಾದ ಪ್ರತಿಯೊಂದು ಆಣೆಗೂ ಪೂರ್ಣ ಬೆಲೆಯು ದೊರೆಯಬೇಕೆಂದರೆ ಅದು ಸಾಧಾರಣ ಕಾಲ ಪುನಹಾ ಬಂದಾಗಲೇ ಸಾಧ್ಯ. ಶಾಂತಿಸಮಯದಲ್ಲಿ ವೆಚ್ಚಮಾಡಲು ಈಗಲೇ ಹಣವನ್ನು ಕೂಡಿಡಿ.

ಮುಂಬರುವ ದಿನಗಳಿಗಾಗಿ ಕ್ಷೇಮಕರವಾಗಿ ಕೂಡಿಡಿ

ಸ್ಥಿರತೆವಂತ ಭಂಗಾರ, ಬೆಳ್ಳಿಯ ಆಭರಣಗಳು, ಭೂಮಿ, ಕಟ್ಟಡಗಳು ಅಥವಾ ಸಾಮಾನುಗಳಮೇಲೆ ವಿನಿಯೋಗಿಸಿ ಶೇಖರಿಸಿದ ಎಷ್ಟೋ ಮೌಲ್ಯವು, ಬೆಲೆಗಳು ಸರಿಯಾದ ಸ್ಥಿತಿಗೆ ಬಂದಕೂಡಲೇ ತಗ್ಗಿಹೋಗುತ್ತವೆ

ಸುರಕ್ಷಿತ ಭದ್ರತೆಗೆ ಮತ್ತು ಶಾಶ್ವತ ಮೌಲ್ಯಕ್ಕೆ ಗೋಸ್ಕರ ನಿಮ್ಮ ಹಣವನ್ನು ಸಹಕಾರ ಸಂಸ್ಥೆ ಇನ್ಶೂರೆನ್ಸು ಬ್ಯಾಂಕ್ ಸೇವಿಂಗ್ಸು ಅಕೌಂಟನಲ್ಲಿ ಅಥವಾ ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕ್‌ನಲ್ಲಿ ಇಡಿ. ಇವೆಲ್ಲವುಗಳಿಗೂ ಉತ್ತಮವಾದುದೆಂದರೆ ಸರ್ಕಾರದ ಸಾಲಗಳಲ್ಲಿ ಮತ್ತು ಸೇವಿಂಗ್ಸ್ ಸರ್ಟಿಫಿಕೇಟುಗಳಲ್ಲಿ ವಿನಿಯೋಗಿಸುವುದು

ದಿನವೂ ನಾಲ್ಕು ಆಣೆ ಕೂಡಿಡಿ!
ಅಲ್ಪ ಹಣವನ್ನು ಒಂದೆಡೆ ತಪ್ಪದೆ ಕೂಡಿಡುತ್ತಾ ಬಂದಲ್ಲಿ ಎಷ್ಟು ಹಣ ಶೇಖರವಾಗುತ್ತದೆ ಎಂಬುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಒಂದು ಹಣದ ಪೆಟ್ಟಿಗೆಯನ್ನು ಈಗಲೇ ಆರಂಭಿಸಿ! ದಿನವೂ ನಾಲ್ಕು ಆಣೆ ಕೂಡಿಡಿ. ಅಥವಾ ಸಾಧ್ಯವಾದರೆ ಹೆಚ್ಚಾದರೂ ಸರಿಯೇ. ಅನಂತರ ಕೂಡಿಟ್ಟ ನಗದು ಹಣವನ್ನು ಸುರಕ್ಷಿತವಾಗಿ ಬಡ್ಡಿ ತರುವ ಕೆಳಗೆ ಕಂಡ ವಿನಿಯೋಗಗಳಲ್ಲಿ ಕ್ರಮವಾಗಿ ಮಾರ್ಪಡಿಸುತ್ತಾ ಬನ್ನಿ.

ರಾಷ್ಟ್ರೀಯ ಯುದ್ಧಮುಖದವರು ದೇಶೀಯರಿಗೆ ಮಾಡುವ ಮನವಿ

ಕನ್ನಡದಲ್ಲಿ

ತರುಣರ ದಂಡು ಮುಂದೆ ಬಂದಿದೆ

ಭವಿಷ್ಯತ್ತಿನ ಬಗ್ಗೆ ಹೆದರಬೇಕಾಗಿಲ್ಲ

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪೀಠದಿಂದ ಶ್ರೀ ಬೇಂದ್ರೆಯವರ ಭಾಷಣ.

"ಸಾಹಿತ್ಯದ ಸಂಜೀವನವು ಏತರಲ್ಲಿದೆ? ಪ್ರಪಂಚದಲ್ಲಿ ಸಾಮಾನ್ಯವಾಗಿ ಜನವೆಲ್ಲವೂ ಪ್ರಾಣಿಗಳಂತೆ ಜೀವಿಸುತ್ತಿವೆ. ಒಂದನ್ನೊಂದು ಕೊಂದು ಬದುಕುತ್ತಿದೆ. ನಮ್ಮ ಸಿಟ್ಟು, ಅಳುವು, ಬೆದರಿಕೆ, ಹೇಸಿಕೆಗಳು ಹೇಳಿ ಕೇಳಿ ನರಕದ ದ್ವಾರಗಳು. ನಮ್ಮ ಬೆರಗು ನಗೆಗಳು ಹೆಚ್ಚಾಗಿ ಅಜ್ಞಾನದ ವಿಲಾಸಗಳಲ್ಲದೆ ಮತ್ತೇನು? ನಮ್ಮ ರತಿ ಉತ್ಸಾಹಗಳು ಹೆಚ್ಚಾಗಿ ರತ್ಯುತ್ಸಾಹಗಳಾಗಿಯೇ ಪರಿಣಮಿಸುವವು. ಬೇರೆ ಕಡೆಗೆ ಹೊರಳಿದರೆ ರಣಾಂಗಣಕ್ಕೆಳೆಯುತ್ತಿವೆ. ಇದೇ ಪ್ರಾಣಿ ಜೀವನದ ಸಾರಸರ್ವಸ್ವ. ಸಾಹಿತ್ಯವು ತನ್ನ ರಸತಂತ್ರದಿಂದ ಇದನ್ನು ಮೇಲಕ್ಕೆತ್ತಲು ಹವಣಿಸುವುದು. ಒಂದನ್ನೊಂದು ತಿಂದು ಬದುಕುವುದು ಬದುಕಲ್ಲ; ನಾವು ಒಂದನ್ನೊಂದು ತಿಳಿದು ಬದುಕುವುದು ಬಾಳು; ಎಂದು ಸಾಹಿತ್ಯ ಸಾರುತ್ತದೆ. ಪ್ರಾಣಿಗಳಂತೆ ಬದುಕಬೇಡಿರಿ, ಜೀವಿಗಳಂತೆ ಬಾಳಿರಿ, ಪ್ರಾಣ ಹಿಂಡಿ ಜೀವ ತಿನ್ನಬೇಡಿ; ಜೀವಕ್ಕೆ ಜೀವ ಕೊಟ್ಟು ಜೀವಿಸಿರಿ, ಇದು ಸಾಹಿತ್ಯದ ಧ್ವನಿ." ಹೀಗೆಂದು ಶಿವಮೊಗ್ಗದಲ್ಲಿ ದಶಂಬರ ತಾ. ೨೬ ರಂದು ಸೇರಿದ ೨೭ನೆಯ ಕನ್ನಡ ಸಾಹಿತ್ಯ ಸಮ್ಮೇಲನದ ಅಧ್ಯಕ್ಷ ಪೀಠದಿಂದ ಶ್ರೀ। ದ. ರಾ. ಬೇಂದ್ರೆಯವರು ಹೇಳಿದರು.

ಶ್ರೀ। ಬೇಂದ್ರೆಯವರ ಅಧ್ಯಕ್ಷ ಭಾಷಣವು ತುಂಬ ಜ್ಞಾನಮಯವಾಗಿತ್ತು. ಅವರ ನುಡಿ ಸ್ಫೂರ್ತಿಮಯವಾಗಿತ್ತು; ಅವರ ಭಾಷಣ ಹೃದಯದಿಂದ ಹೊರಹೊಮ್ಮಿ ಬರುವಂತೆ ಹೃದಯಸ್ಪರ್ಶಿಯೂ ಆಗಿತ್ತು. ಅವರ ಭಾಷಣದ ಇನ್ನು ಕೆಲವು ಅಂಶಗಳನ್ನು ಕೆಳಗೆ ಕೊಡಲಾಗಿದೆ.

ಭಾಷಣದ ಪ್ರಾರಂಭದಲ್ಲಿ ಶ್ರೀ ಬೇಂದ್ರೆಯವರು ಸರ್ವರಿಗೂ ನಮಸ್ಕಾರ ಹೇಳಿ, ನಾಂದಿಯಾಗಿ ಗಾಯತ್ರೀ ಸೂಕ್ತದ ಚೆಲುವಾದ ಕನ್ನಡ ಅನುವಾದವನ್ನು ಹಾಡಿದರು. ತನ್ನನ್ನು ಪರಿಷದಧ್ಯಕ್ಷನನ್ನಾಗಿ ಆರಿಸಿದ್ದಕ್ಕೆ ಕೃತಜ್ಞತೆ ಹೇಳಿದರು. ಅಣ್ಣಾಶಾಸ್ತ್ರಿಯವರ ಸ್ನೇಹವನ್ನು ಕೊಂಡಾಡಿದರು. ಆ ಮೇಲೆ ಸಾಹಿತ್ಯವು ಹೇಗೆ ಜೀವಿಯನ್ನು ಪಶುತ್ವದಿಂದ ಮಾನವತ್ವಕ್ಕೊಯ್ಯುವುದೆಂಬುದನ್ನು ವಿವೇಚಿಸಿದರು. ಕನ್ನಡ ಸಾಹಿತ್ಯವು ಎಂದಿನಿಂದಲೂ ಈ ಕಾರ್ಯ ಮಾಡುತ್ತಿದೆಯೆಂದು ತಿಳಿಸಿದರು. ಪಂಪರನ್ನಾದಿಗಳನ್ನು, ಅಲ್ಲಮ ಬಸವಣ್ಣರನ್ನು, ಕುಮಾರವ್ಯಾಸಲಕ್ಷ್ಮೀಶರನ್ನು ಕನಕದಾಸ ಪುರಂದರದಾಸರನ್ನು, ಅಕ್ಕ ಹೊನ್ನಮ್ಮರನ್ನು, ಸರ್ವಜ್ಞ ಸೋಮೇಶ ಮೊದಲಾದವರನ್ನು ನೆನೆದರು. ಇತರ ಭಾಷೆ ಮಾತ್ರ ಭಾಷೆಯಾಗುಳ್ಳ ಪೈ, ಮಾಸ್ತಿ, ಕಸ್ತೂರಿ, ಸಿದ್ದಪ್ಪನ ಹಳ್ಳಿ, ಕೃಷ್ಣಕುಮಾರ ಇವರೇ ಮೊದಲಾದವರ ಕನ್ನಡ ಸೇವೆ ಕೊಂಡಾಡಿದರು.

'ನಮಗೆ ಮೂರು ಏಕೀಕರಣಗಳು ಬೇಕು; ಕನ್ನಡದ ಏಕೀಕರಣ, ಕರ್ನಾಟಕದ ಏಕೀಕರಣ. ತುಳು, ಕೊಡಗು, ಕೊಂಕಣಿ, ತೊದ, ಕೋಲ್, ಬಡಗ, ಇರುಳ, ಸೋಲಿಗರ ನುಡಿಯ ಪದರವು ಕನ್ನಡ ಶಬ್ದಕೋಶದಲ್ಲಿ ಹೊಂದಿಕೆಯಾಗಿ ಸೇರಬೇಕು. ಈ ಕೋಶ ಸಿದ್ಧವಾಗಬೇಕು. ಬೇಸಿಕ್ ಹಿಂದಿ, ಉರ್ದು, ಇಂಗ್ಲಿಷ್‌ಗಳೊಡನೆಯೂ ತನ್ನ ಸಾಮಂಜಸ್ಯವನ್ನು ಕಂಡುಕೊಳ್ಳಬೇಕು ಕನ್ನಡ. ಸಂಸ್ಕೃತವನ್ನು ಕನ್ನಡ ಮರೆಯಲಾರದು, ಬಾರದು. ಅದಕ್ಕೂ ಹೆಚ್ಚಾಗಿ ತಮಿಳು ತೆಲುಗುಗಳೊಡನೆಯೂ ತನ್ನ ಮೂಲ ಬಾಂಧವ್ಯವನ್ನು ಕಂಡುಕೊಳ್ಳುವ ದ್ರಾವಿಡ ಧಾತು ಕೋಶವೊಂದು ಕನ್ನಡದಲ್ಲಿ ಪ್ರಕಟವಾಗಬೇಕು. ಆದರೆ ಈ ಎಲ್ಲಾ ಮಾತಿನ ಸಂತೆಯಲ್ಲಿ ಕರ್ನಾಟಕದ ಮಟ್ಟಿಗೆ ಕನ್ನಡವೇ ಸಾರ್ವಭೌಮವೆಂಬುದನ್ನು ನಾವು ಆಚರಣೆಗೆ ತಂದಿದ್ದರೆ, ಕಟ್ಟೆಯಿಲ್ಲದ ಕೆರೆಯಂತೆ ದಂಡೆಯೊಡೆದ ನದಿಯಂತೆ ಕನ್ನಡವು ಹುಚ್ಚು ಹೊಳೆಯಾದೀತು" ಎಂದು ಶ್ರೀ ಬೇಂದ್ರೆಯವರು ಹೇಳಿದರು.

'ಕನ್ನಡ ಪ್ರಾಣ ಸಂಹಾರಕವಲ್ಲ. ಜೀವದಾಯಕವೆಂಬ ಸೊಲ್ಲು ಒಡನುಡಿದು ಪಡಿ ನುಡಿಯಲು ಪ್ರಾರಂಭಿಸಿದಾಗ ಕನ್ನಡದ ಏಕೀಕರಣ ಪ್ರಾರಂಭವಾಗುವುದು' ಎಂದು ಅವರು ಹೇಳಿ, 'ಕರ್ನಾಟಕದ ಏಕೀಕರಣವು ಸಾಹಿತ್ಯದ ಕಾರ್ಯವಲ್ಲ; ಅದು ಅದರ ಕಾರಣ, ಸಿದ್ಧಿ.' ಎಂದು ತಿಳಿಸಿ 'ನಮ್ಮ ನಾಡು ಇನ್ನೂ ನಮ್ಮದಾಗಿಲ್ಲ; ಒತ್ತೆಯ ಮನೆಯಲ್ಲಿ ಒಕ್ಕಲಂತೆ ನಾವು ಬದುಕು ಮಾಡುತ್ತಿದ್ದೇವೆ, ಇದು ಸಲ್ಲದು. ಕನ್ನಡದ ಕನ್ನಡಿ ಒಡೆದಿದೆ. ನಮ್ಮೊಳಗೆ ನಾವೇ ಒಂದಾಗಬೇಕು. ಎಲ್ಲರೊಡನೆ ಕೂಡಿ ಕಾರ್ಯ ಮಾಡಬೇಕು. ಇವು ಮೂರೂ ಸಾಧಿಸಬೇಕು; ಒಂದಾದ ಮೇಲೆ ಒಂದಲ್ಲ ಏಕಕಾಲದ ಯುಗಪತ್ ಸಿದ್ಧಿಯ ಇಕ್ಕಟ್ಟಿನ ಮುಕ್ಕಟ್ಟಿನ ಹಾದಿ ನಮ್ಮದಾಗಿದೆ. ಇದನ್ನು ಜೋಕೆಯಿಂದಲೂ ತೂಕದಿಂದಲೂ ಸಾಧಿಸಬೇಕು, ಇದನ್ನು ಸಾಧಿಸಬೇಕಾದರೆ ಕನ್ನಡಿಗರು ಹೊಸ ವ್ಯಕ್ತಿಗಳಾಗಬೇಕು' ಎಂದು ಎಚ್ಚರಿಸಿದರು.

ಈಗಿನ ಸಾಹಿತ್ಯ ಈ ಕಾರ್ಯವನ್ನು ಸಾಕಷ್ಟು ಅಲ್ಲದಿದ್ದರೂ ತಕ್ಕಷ್ಟು ಮಾಡುತ್ತಿದೆಯೆಂದು ಅವರು ಹೇಳಿ, ಗತಿಸಿದ, ವೆಂಕಟನಾರಾಯಣಪ್ಪರು, ಚೆನಗಲರು, ಸುಬ್ಬರಾಯರು ಜೋಶಿವಿನಾಯಕರಾಯರು, ತಾರಾನಾಥರು, ಶ್ಯಾಮಲ ದೇವಿಯವರು, ಶ್ರೀನಿವಾಸ ರಾಘವಾಚಾರ್ಯರು, ವರದಾಚಾರ್ಯರು, ಸುಬ್ಬರಾಯ ಶಾಸ್ತ್ರಿಗಳು ಮೊದಲಾದವರನ್ನು ಸ್ಮರಿಸಿ, ಈಗ ತರುಣರ ದಂಡು ಮುಂದೆ ಬರುತ್ತಿದೆಯೆಂದು ತಿಳಿಸಿ, ಅವರಿಗೆ ಸರಿಯಾಗಿ ಇಂಬುಗೊಟ್ಟರೆ ಕನ್ನಡ ಜನತೆ ಭವಿತವ್ಯದ ಬಗ್ಗೆ ಹೆದರಬೇಕಾಗಿಲ್ಲವೆಂದು ಸಾರಿದರು. ಅನಂತರ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ನಾನಾ ಕ್ಷೇತ್ರಗಳಲ್ಲಿ ದುಡಿದ ಹಲವರ ಹೆಸರೆತ್ತಿ ಹೇಳಿದರು.

'ತಾಯ್ಮಾತಾಗಿರುವ ಭಾಷೆಗಳಲ್ಲಿ ಹತ್ತು ವರ್ಷಗಳೊಳಗೆ ರಶ್ಯ ದೇಶವು ಕ್ರಾಂತಿಕರ ಹಲ್ಲಟವನ್ನು ಮಾಡಿದೆ. ಅವರ ಗ್ರಂಥ, ವಾಚನಾಲಯ, ಪತ್ರಿಕೆಗಳ ಅಂಕೆ ಸಂಖ್ಯೆ ಅಂಕ ಗಣಿತದೊಳಗಿನ ಲೆಕ್ಕಗಳಂತೆ ಕಾಲ್ಪನಿಕವೆಂಬಹಾಗೆ ತೋರುತ್ತದೆ. ಕನ್ನಡದ ೨೮,೦೦೦ ಹಳ್ಳಿಗಳಿಗೆ ಸಾಹಿತ್ಯ ಸಂಸ್ಕೃತಿ ಹಬ್ಬುವುದು ಎಂದು? ಕನ್ನಡ ನಾಡಿಗೆ ನಾಡೇ ಎಚ್ಚರುವುದೆಂದು?' ಹೀಗೆ ಶ್ರೀ ಬೇಂದ್ರೆಯವರು ನುಡಿದರು.

ಮೈಸೂರು ಕನ್ನಡ ನಾಡಿಗೆ ಕಿರೀಟ ಪ್ರಾಯವಾಗಿರುವ ವಿಷಯವನ್ನು ಅವರು ತಿಳಿಸಿ, ಸಾಹಿತ್ಯ ಪರಿಷತ್ತಿನ ಸೇವೆ, ಪ್ರಶಂಸಿಸಿ, ಕನ್ನಡ ವಿಶ್ವವಿದ್ಯಾಲಯದ ಮಹತ್ತ್ವ, ಕೊನೆಗೆ ಗಂಗಾವತರಣವೆಂಬ ಮನೋಹರ ಗೀತವನ್ನು ಹಾಡಿ ಭಾಷಣ ಕೊನೆಗಾಣಿಸಿದರು.

TIMES HAVE CHANGED!

ಕಾಲ ಬದಲಾವಣೆಯಾಗಿದೆ.
ಆಗ ಮತ್ತು ಈಗ ಸಮಯ ನೋಡುವುದು.

ಸಮಯ ತಿಳಿಯಲು ಪ್ರಾಚೀನ ಕಾಲದಿಂದಲೇ ಸೂರ್ಯಬಿಂಬವು ಗೊತ್ತಾದ ಸಾಧನ. ಕ್ರಿ. ಪೂ. 800ರಿಂದಲೇ ಇದು ವಿಚಾರದಲ್ಲಿತ್ತು. ಶತಮಾನಗಳ ನಂತರ ಸಮಯ ನೋಡುವ ಸಾಧನಗಳು ಬದಲಾಗುತ್ತಾ ಬಂತು. ಇಂದಿಗೆ ಸಮಯ ನೋಡುವ ಸಾಧನ ಪೂರ್ಣ ಪರಿಶುದ್ಧವಾದ ವೆಸ್ಟ್ ಎಂಡ್ ವಾಚನ್ನು ಆಧರಿಸಿದೆ.

ನಾವು ಜಾಹಿರು ಮಾಡಿದ ಎಲ್ಲಾ ತರದ ವಾಚುಗಳನ್ನೂ, ಸರಿಯಾಗಿ ಸಾಧನಗಳು ಬರದಿರುವುದರಿಂದ ಕೊರತೆಕ್ಕಾಗದಿದ್ದರೂ ನಮ್ಮಲ್ಲಿರುವ ಸ್ಟಾಕಿನಲ್ಲಿ ಉತ್ತಮವಾದುದನ್ನೇ ನಾವು ಕೊಡಲು ಯತ್ನಿಸುವೆವು.



ನೂ ಕೆಲಿಬ್ರೆ 'ಇ' ನಿಕ್ಕಲ್ ಸಿಲ್ವರ್ ಕೇಸ್ ರೂ. 62, ಎವರ್‌ಬ್ರೈಟ್‌ಸ್ಟೀಲ್ ರೂ. 71
18 ಕ್ಯಾರಟ್ ಗಟ್ಟಿ ಬಂಗಾರ ರೂ. 197



ಗೇಟ್‌ಲೂಪ್ ರೆಕ್ಟೆಂಗುಲರ್
18 ಕ್ಯಾರಟ್ ಗಟ್ಟಿ ಬಂಗಾರ ರೂ. 304.

ವೆಸ್ಟ್ ಎಂಡ್ ವಾಚ್ ಕಂಪೆನಿ
ಬೊಂಬಾಯಿ ಮತ್ತು ಕಲ್ಕತ್ತ

WEST END WATCH Co.
Bombay · Calcutta

ಅಗತ್ಯವಿದ್ದಾಗ ಮಾತ್ರ ಪ್ರಯಾಣಿಸಿರಿ

ಯುದ್ಧದ ಕಾರಣಗಳಿಂದ ಬಸ್ಸು ಸರ್ವಿಸುಗಳನ್ನು ಕಡಿಮೆಮಾಡುವ ಅಗತ್ಯ ಬಿದ್ದಿದೆ. ಬಸ್ಸುಗಳೂ ಅವುಗಳ ಉಪಯೋಗದ ಮತ್ತು ದುರಸ್ತಿಯ ಸಾಮಾನುಗಳೂ ಯುದ್ಧದ ಬಗ್ಗೇನೆ ಆಗತ್ಯವುಂಟಾಗಿದ್ದು ಸಾಮಾನ್ಯ ಬಸ್ಸು ಸರ್ವಿಸುಗಳನ್ನು ಪೂರ್ವದಂತೆ ಏರ್ಪಡಿಸುವದು ಅಸಾಧ್ಯವಿರುತ್ತದೆ. ಆದದರಿಂದ ಪ್ರತಿ ಒಬ್ಬರೂ ಅನಿವಾರ್ಯ ಪ್ರಸಂಗದಲ್ಲಿ ಮಾತ್ರ ಪ್ರಯಾಣಿಸಬಹುದಲ್ಲದೆ, ಇತರ ಸಂದರ್ಭದಲ್ಲಿ ಪ್ರಯಾಣ ಬೆಳೆಸದಿರುವದು ಅಗತ್ಯವಿದೆ.

ಪ್ರಯಾಣ ಮಾಡಲೇ ಬೇಕೆಂದಿರುವಾಗ,

ಅತ್ಯಲ್ಪ ಸಾಮಾನನ್ನು ನಿಮ್ಮೊಡನೆ ಇಟ್ಟುಕೊಳ್ಳಿರಿ.

ಟಾಯರು ಟ್ಯೂಬುಗಳು ದುರ್ಲಭವಾಗಿರುವ ಈ ದಿನಗಳಲ್ಲಿ ಬಸ್ಸುಗಳು ಹೆಚ್ಚು ಭಾರವನ್ನು ಹೊರಲಾರವು.
ಭಾರದ ಸಾಮಾನನ್ನು ನಿರಾಕರಿಸುವಾಗ ಸಿಟ್ಟೇರದೆ ಏಜಂಟರೊಡನೆ ಸಹಕರಿಸಿರಿ.

JOINT MANAGERS,

The Combined Booking Agency, MANGALORE
The Joint Booking Office, KODIALBAIL

The Bank of Mangalore Limited, Mangalore.

ESTD: 1931

HEAD OFFICE	*BRANCHES*
Mangalore.	Moodabidri & Padubidri.

ANNOUNCEMENT

Deposits accepted at the following rates from 1-1-1944.

Current Accounts (1% from Jan. to June)
(½% from July to Decr.)

Savings bank Accounts 1½% p. a. on daily balances.

Fixed Deposits 6 months 2½% p. a.
12 months 3% p. a.
24 months 3½% p. a.

The Bank also accepts Season and short term deposits and many other lucrative schemes at most favourable rates of interest. For terms etc, apply to Head office or Branches

TO GREET YOU

For the Past
REMEMBRANCE
For the Present
KIND THOUGHTS
For the Future
GOOD WISHES

From

THE CANARA BANKING CORPORATION Ltd

(Incorporated in British India with limited liability)

Estd:] Head office· UDIPI S. Kanara [1906.

HEARTY NEW YEAR GREETINGS

TO

All our Policy-holders, Agents, Medical Examiners and Well-wishers

We look forward to continue to serve every one of our clients in the New Year and Every Year to come.

KOCHIKAR BROTHERS LTD.,

Chief Agents for South India.

THE BOMBAY LIFE ASSURANCE CO., LTD.

The "Bombay Life" Building UDIPI. S K.

BOMBAY ★ MADRAS ★ CALICUT ★ MANGALORE ★ BANGALORE ★ Madura ★ TRIVANDRUM

And Agencies all over South India

Bhuvanendra Products Limited,

KATAPADI S. Kanara.

We wish a happy and prosperous new year to all our agents & stockists, customers and well wishers.

'Bhuvanendra Products Limited

Katapadi, S. Kanara.

Depot:*Maharata Galli, Hubli.*

ಡೋಂಗರೆ
ಬಾಲಾಮೃತವು
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ ವಿ ಪಂಡಿತರ
ಮೃತ್ಯುಂಜಯ ರಸ.
ಪಂಚವಟಿ ಮಾತ್ರೆ.
ಕೊಲೆರಾ ರೋಗಕ್ಕೆ ಸಿದ್ಧೌಷಧ.
ಸೇವನಾ ಕ್ರಮಗಳು ಔಷಧಿಯೊಡನೆ ಇದೆ.
ಸದ್ವೈದ್ಯಶಾಲಾ ನಂಜನಗೂಡು, ಬ್ರಾಂಚ್ ರಥಬೀದಿ ಮಂಗಳೂರು